1942

Estd 1906

ಸ್ವದೇಶಾಭಿಮಾನಿ

SWADESHABHIMANI

ಜರ್ಮನ್ ಕೈದಿಗಳು

ಪಶ್ಚಿಮ ಮರುಭೂಮಿ ಯಲ್ಲಿ ಬ್ರಿಟಿಷರು ಜರ್ಮನ್ ಕೈದಿಗಳನ್ನು ಹಿಡಿದರು. ಈ ಚಿತ್ರದಲ್ಲಿ ಜರ್ಮನ್ ಕೈದಿ ಗಳನ್ನು ಯುದ್ಧ ಶಿಬಿರಕ್ಕೆ ತರುವುದು ನೋಡಬಹುದು.

KANNADA ILLUSTRATED WEEKLY

ಪುಸ್ತಕ ವಿಮರ್ಶೆ

ಬೆಂಗಳೂರು ಸಿಟಿ, ಎಸ್ ಸ್ಟ್ರೀಟನಲ್ಲಿರುವ ಉಪಾಧ್ಯಾಯ ಬುಕ್ ಡಿಪೋದ ಪ್ರೊಪ್ರೈಟರ್ ಶ್ರೀ ಪಿ. ಎ. ಉಪಾಧ್ಯಾಯರು ಶ್ರೀ ಶ್ರೀನಿವಾಸ ತಂತ್ರಗಳಿಂದ ಸಂಶೋಧಿಸಿ ಕೆಲವು ಮಾಧ್ವಮತಕ್ಕೆ ಸಂಬಂಧಿಸಿದ ಧರ್ಮ ಪುಸ್ತಕಗಳನ್ನು ಆಗಾಗ ಪ್ರಕಟಿಸುತ್ತಾರೆ. ನಮ್ಮೆಡೆಗೆ ಇತ್ತೀಚೆಯ ನಾಲ್ಕು ಪುಸ್ತಕಗಳನ್ನು ಕಳುಹಿಸಿರುವರು.

ದಶಾವತಾರ ಸ್ತೋತ್ರ

ಇದು ಕೃಷ್ಣಾಷ್ಟಕ ಮತ್ತು ಕರಾವಲಂಬನ ಸ್ತೋತ್ರಗಳಿಂದ ಕೂಡಿದೆ. ಶ್ರೀ ವಾದಿರಾಜ ಸ್ವಾಮಿಗಳ ಮತ್ತು ಉಡುಪಿ ಶ್ರೀಕೃಷ್ಣ ಪ್ರತಿಮಾ ಚಿತ್ರವಿದೆ. ಶ್ರೀ ಮಧ್ವಾದಿರಾಜರು ಮೊದಲಿನ ಎರಡು ಸ್ತೋತ್ರಗಳನ್ನೂ, ಕರಾವಲಂಬನ ಸ್ತೋತ್ರವನ್ನು ಶ್ರೀ ಮದ್ವೇದೇಶ ತೀರ್ಥ ಪೂಜ್ಯಪಾದಾರಾಧಕ ಯದುಪತಿಯೂ ಬರೆದದ್ದಾಗಿದೆ. ಇದರ ಬೆಲೆ ಎರಡುವರೆ ಆಣೆ. ಕ್ರೌನ್ ೧/೮ ಆಕಾರದ ೧೬ ಪುಟಗಳಿವೆ.

ಸುಂದರ ಕಾಂಡ ಕಥಾ ಸಂಗ್ರಹ

ಶ್ರೀ ಹನುಮದ್ಭೀಮ ಮಧ್ವಾಷ್ಟೋತ್ತರ ಶತನಾಮ ಸ್ತೋತ್ರ ಅನುವಾಯು ಸ್ತುತಿ ಮಧ್ವ ವಚನ ಸಹಿತವಾದುದು. ಇದರಲ್ಲಿ ಸುಂದರ ಕಾಂಡ ಕಥಾ ಸಂಗ್ರಹವನ್ನು ಶ್ರೀ ಮದಾನಂದ ತೀರ್ಥ ಭಗವತ್ಪಾದಾಚಾರ್ಯರೂ ಮತ್ತಿನ ಮೂರು ಅಷ್ಟೋತ್ತರಗಳನ್ನು ಯದುವೀರ ಯತಿಗಳೂ ಮಧ್ವರ ವಚನವನ್ನು ಶ್ರೀ ನಾರಾಯಣ ಪಂಡಿತಾಚಾರ್ಯರೂ ಅನುವಾಯು ಸ್ತುತಿಯನ್ನು ಶ್ರೀ ಕಲ್ಯಾಣಿ ದೇವಿಯರೂ ಬರೆದರು. ಇದರ ಬೆಲೆ ಎರಡಾಣೆ. ಕ್ರೌನ್ ೧/೮ ಆಕಾರದ ಪುಟಗಳು ೧೯.

ಲಕ್ಷ್ಮೀ ಹೃದಯಂ

ನಾರಾಯಣ ಹೃದಯ-ನಾರಾಯಣವರ್ಮ ಸಮೇತ. ಸರಸ್ವತಿ ನಾರಾಯಣ ಪಟಗಳಿಗೆ ಲಕ್ಷ್ಮೀ ಹೃದಯ, ನಾರಾಯಣ ಹೃದಯಗಳು ಅಥರ್ವಣ ರಹಸ್ಯದಲ್ಲಿ ಭಾರ್ಗವ ಮಹರ್ಷಿ ಪ್ರೋಕ್ತ ಸ್ತೋತ್ರ ರೂಪಗಳು. ನಾರಾಯಣ ವರ್ಮವು ಭಾಗವತ ಷಷ್ಠಸ್ಕಂಧದಲ್ಲಿದೆ. ಕೊನೆಗೆ ದಶಾವತಾರ ಸ್ತೋತ್ರವಿದೆ. ಇದು ಕ್ರೌನ್ ೧/೮ ಆಕಾರದ ೨೮ ಪುಟಗಳಿಂದ ಕೂಡಿದ್ದು ೪ ಆಣೆ ಬೆಲೆಯುಳ್ಳದಿದೆ.

ಶ್ರೀ ಕೃಷ್ಣಾಷ್ಟೋತ್ತರ ಶತನಾಮ ಸ್ತೋತ್ರ

ನಾಮಾವಳೀ ಸಹಿತ ಉಡುಪಿ ಶ್ರೀಕೃಷ್ಣ ಪಟವಿದೆ ಇದರಲ್ಲಿ. ಇದು ಬ್ರಹ್ಮಾಂಡ ಪುರಾಣದ ಬ್ರಹ್ಮನಾರದ ಸಂವಾದದಿಂದ ಉದ್ಧೃತ ಮಾಡಿದುದು. ಇದು ಕ್ರೌನ್ ೧/೮ ಆಕಾರದ ೮ ಪುಟದ ಪುಸ್ತಕ ಬೆಲೆ ಒಂದಾಣೆಯಿದೆ.

ಕಾಂಗ್ರೆಸ್ ಸದಸ್ಯತ್ವ ಹಾಗೂ ಆಜ್ಞೆವಾರಿ

ಎಲ್ಲ ಜಿಲ್ಲಾ ಕಾಂಗ್ರೆಸ ಸಮಿತಿಗಳಿಗೆ ಮತ್ತು ಕಾಂಗ್ರೆಸ ಕಾರ್ಯಕರ್ತರಿಗೆ- ಸದ್ಯಕ್ಕೆ ಬಹುತರ ಎಲ್ಲ ಸತ್ಯಾಗ್ರಹಿಗಳು ಬಿಡುಗಡೆಯಾಗಿ ಬಂದಿರುವರು. ಈಗ ಆದ ನಾವನ್ನು ಬಿಡುಗಡೆಯಲ್ಲಿ ಬಂದ ಸತ್ಯಾಗ್ರಹಿಗಳು ಸ್ವಲ್ಪ ಕಾಲದವರೆಗೆ ತಮ್ಮ ತಮ್ಮ ಕಾರ್ಯಕ್ಷೇತ್ರಗಳಲ್ಲಿ ವಿಧಾಯಕ ಕಾರ್ಯಕ್ರಮವನ್ನು ಮಾಡುತ್ತಿರಬೇಕೆಂದು ಮಹಾತ್ಮರ ಅಪೇಕ್ಷೆಯಿದೆ. ಉಳಿದ ಸತ್ಯಾಗ್ರಹಿಗಳು ಎಂದಿನಂತೆ ಸತ್ಯಾಗ್ರಹವನ್ನು ಆಚರಿಸಬೇಕೆಂದೂ ಅವರನ್ನು ಕೈದುಮಾಡದೆ ಹೋದರೆ ಸಭೆಗಳಲ್ಲಿ ಕಾಂಗ್ರೆಸಿನ ಧ್ಯೋರಣೆಯ ಪ್ರಚಾರವನ್ನು ಮಾಡಬೇಕಾಗಿ ಮಹಾತ್ಮರು ಕೋರುತ್ತಾರೆ. ಸತ್ಯಾಗ್ರಹದಲ್ಲಿ ತೊಡಗದೇ ಇದ್ದವರೆಲ್ಲರೂ ಮತ್ತು ಸದ್ಯಕ್ಕೆ ಸತ್ಯಾಗ್ರಹ ಮಾಡದ ಸತ್ಯಾಗ್ರಹಿಗಳೂ ಕಾಂಗ್ರೆಸ್ ಸಭಾಸದರನ್ನು ಕೂಡಿಸುವುದು, ಆಣೇವಾರಿ ವಿಷಯಕ್ಕೆ ವಿಚಾರಮಾಡಿ ರೈತರಿಗೆ ಸಹಾಯಮಾಡುವದು ಅಲ್ಲಲ್ಲಿ ಸಭೆಗಳನ್ನು ಮಾಡಿ ಕಾಂಗ್ರೆಸಿನ ಕಸುವು ಬೆಳೆಸುವದು ಇವುಗಳನ್ನು ಮಾಡುವದು ಅತ್ಯವಶ್ಯಕವಾಗಿದೆ ದಿನೇ ದಿನೇ ಕಾಂಗ್ರೆಸಿನ ಕಸುವು ಬೆಳೆಯುವಂತೆ ಪ್ರಯತ್ನಿಸುವದು ಈಗಿನ ಸ್ಥಿತಿಯಲ್ಲಿ ಅತ್ಯವಶ್ಯವಿದೆ. ಇದನ್ನು ಮನಗಂಡು ಎಲ್ಲ ಕಾಂಗ್ರೆಸಕಾರ್ಯಕರ್ತರೂ ಈ ವಿಷಯದಲ್ಲಿ ಜಾಗರೂಕರಾಗಿ ಕಾರ್ಯವನ್ನು ಕೈಕೊಳ್ಳ ಬೇಕೆಂದು ವಿನಂತಿಸುತ್ತೇನೆ. ಎಂದು ಕ. ಪ್ರಾಂ. ಕಾಂ. ಕ. ಅಧ್ಯಕ್ಷರು ತಿಳಿಸುತ್ತಾರೆ.

ಸರಕಾರದ ಹೊಸ ಪಾಠಪಟ್ಟಿಗನುಸಾರವಾಗಿ ಬರೆದ

ನವೀನ ಭೂವಿವರಣೆ

ವಾಸುದೇವರಾವ್, ಎಂ. ಎ. ಎಲ್. ಟಿ. (Dip. Geogrhpy)
(ಭೂಗೋಳ ಶಾಸ್ತ್ರದಲ್ಲಿ ಡಿಪ್ಲೊಮಾ ಪಡೆದವರು)

ಈ ಪುಸ್ತಕಗಳನ್ನು ಪಡಕೊಂಡಲ್ಲಿ ವಿದ್ಯಾರ್ಥಿಗಳಿಗೆ ಎಟ್ಲಾಸ್ ಕೊಂಡುಕೊಳ್ಳುವ ಅವಶ್ಯವಿಲ್ಲ.

ಪ್ರತಿ ಪುಸ್ತಕದಲ್ಲಿ ಬಣ್ಣಬಣ್ಣದ ಭೂಪಟಗಳಿವೆ.

ಅನೇಕಾನೇಕ ಚಿತ್ರಪಟಗಳಿಂದ ಕೂಡಿದ್ದು, ಪ್ರತಿ ಪಾಠದ ಅಂತ್ಯದಲ್ಲಿ ಅಭ್ಯಾಸಗಳನ್ನೂ ಮಾದರಿ ಪ್ರಶ್ನೆಗಳನ್ನೂ ಕೊಟ್ಟಿದೆ.

4ನೆಯ ಪುಸ್ತಕ 0 6 0 5ನೆಯ ಪುಸ್ತಕ 0 7 0

6, 7 ಮತ್ತು 8ನೆಯ ಪುಸ್ತಕಗಳು ಅಚ್ಚಿನಲ್ಲಿವೆ.

ಪುಸ್ತಕಗಳು ಬೇಕಾದಲ್ಲಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:

ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

ಡಾ| ಜಸಾನಿಯವರ

ಜಗತ್ಪ್ರಸಿದ್ಧವಾದ ಔಷಧಿ

ಗೊನೊಕಿಲರ್ (ರಿಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ್' ಎಂಬ ಸೀಲು ನೋಡಿರಿ.

ಮೂತ್ರರೋಗಗಳ ಮೇಲೆ ಮತ್ತು ಧಾತುಸಂಬಂಧದ ರೋಗಗಳ ಮೇಲೆ 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನ್ನು ತೋರಿಸುತ್ತವೆ. ಸಾವಿರಾರು ರೋಗಿಗಳು ಇದರ ಗುಣವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿ ಇದನ್ನು ಹೊಗಳುತ್ತಿರುವರು. ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಇಲ್ಲ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ, ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರುವು ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, ಗೊನೆಡ-ಕೊಕಸ ಎಂಬ ವಿಷಹಾರಿ, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮ ನಾಶವಾಗುವುವು.

ಬೆಲೆ: 50 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 3-0-0 (ವಿ. ಪಿ. ಚಾರ್ಜು 8 ಆಣೆ ಬೇರೆ). ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಅಥವಾ ಮರಾಠಿಯಲ್ಲಿ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ ವಿಠಲ್ ಭಾಯಿ ಪಟೇಲ್ ರೋಡ್, ಮುಂಬಯಿ.

Sole Manufacturer: **Dr. D. N. JASANI,** Vithalbhai Patel Road, BOMBAY 4.

Madras Agent: **Appah & Co, China Bazar Madras.**

ಪತ್ರವ್ಯವಹಾರ ಇಂಗ್ಲೀಷ ಅಥವಾ ಮರಾಠಿಯಲ್ಲಿ.

"ಈ ದಿವಸ ನಿಮ್ಮ ಹಲ್ಲುಗಳನ್ನು ಮ್ಯಾಕ್‌ಲೀನ್ ಮಾಡಿದ್ದೀರೊ?"

"ಅಹಾ! ಹಲ್ಲುಗಳನ್ನು ಆಲಸ್ಯಮಾಡಬಾರದೆಂದು ನಿಮಗೆ ತಿಳಿದಿದೆ."

ನಿಮ್ಮ ಹಲ್ಲುಗಳನ್ನು ಆಲಸ್ಯ ಮಾಡಬೇಡಿ. ಮ್ಯಾಕ್‌ಲೀನ್ ಟೂತ್‌ಪೇಸ್ಟಿನ ಸಹಾಯದಿಂದ ಅವುಗಳನ್ನು ಬೆಳ್ಳಗೂ, ಥಳಥಳಕೆಯನ್ನೂ, ಆರೋಗ್ಯಯುತವಾಗಿಯೂ ಇಟ್ಟುಕೊಳ್ಳಿ. ಮ್ಯಾಕ್‌ಲೀನಿನ ದೊಡ್ಡ ಟ್ಯೂಬು ಮಿತವ್ಯಯವಾಗಿರುವುದು ಮತ್ತು ಅದರ ಪರಿಮಳವು ನಿಮಗೆ ಆನಂದವನ್ನುಂಟು ಮಾಡುವುದು.

ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ",

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

2—1—1942] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೨—೧—೧೯೪೨]

ಸಮರಭೂಮಿಯ ಸಂಚಾರ

ಜಪಾನರ ಯುದ್ಧವು ಈಗ ಬಲಗೊಳ್ಳುತ್ತಾ ಇದೆ. ಇಪ್ಪೋಹದ ದಕ್ಷಿಣದಲ್ಲಿ ಭಯಂಕರ ಕಾಳಗವಾಗುತ್ತಿದೆ. ಮಲಯದ ಕರಾವಳಿಯಲ್ಲಿರುವ ಬ್ರಿಟಿಷ್ ಸೈನ್ಯದ ಮೇಲೆ ಜಪಾನ್ ವೈಮಾನಿಕರು ಬಾಂಬಿನ ಮಳೆಗರೆದರು. ಬ್ರಿಟಿಷ್ ವಿಮಾನಗಳೂ ಸುಂಗಾಯಿ ಪಟಾನಿಯ ಮೇಲೆ ಬಾಂಬು ಸುರಿಸಿದವು. ಸಾರಾವಾಕದ ರಾಜಧಾನಿ ಕುಂಚಿಂಗವು ಈಗ ಜಪಾನರ ಕೈವಶ ಬಂದಿರುತ್ತದೆ. ಡಚ್ ಈಸ್ಟ್ ಇಂಡೀಸಿನಲ್ಲಿ ಅನೇಕ ಕಡೆಗಳಲ್ಲಿ ಜಪಾನರು ಬಂದಿಳಿದವರೆಂದು ಸುದ್ದಿ ಬಂದಿದೆ. ಸುಮಾತ್ರಾ ದ್ವೀಪದಲ್ಲಿ ಅವರು ಕೊಡೆ ವಿಮಾನಗಳಿಂದ ಇಳಿದಿರುವರು. ನ್ಯೂಗಿನಿಯ ಮೇಲೆಯೂ ಬಾಂಬು ಬಿದ್ದಿರುವುದು.

ಫಿಲಿಪಯಿನಿಗೆ ಸಂದೇಶ

ಫಿಲಿಪಯಿನ್ ರಕ್ಷಕರಿಗೆ ಅಮೇರಿಕದ ಅಧ್ಯಕ್ಷ ರೂಸ್‌ವೆಲ್ಟರು ಒಂದು ಧೈರ್ಯ ತುಂಬಿಸುವ ಸಂದೇಶ ಕಳುಹಿಸಿರುವರು. 'ಜಪಾನರ ವಿರುದ್ಧ ನೀವು ನಡೆಸುತ್ತಿರುವ ಘೋರ ಯುದ್ಧದಲ್ಲಿ ಪ್ರತಿಯೊಬ್ಬ ಅಮೇರಿಕನ ಮನಸ್ಸು ನಿಮ್ಮಲ್ಲಿದೆ. ಜಪಾನರನ್ನು ಅಡಗಿಸುವುದಕ್ಕಾಗಿ, ಬ್ರಿಟಿಷ ಸಾಮ್ರಾಜ್ಯ, ಡಚ್ ಈಸ್ಟ್ ಇಂಡೀಸ್ ಮತ್ತು ಚೀನ ಪ್ರಭುತ್ವಗಳು ಶಕ್ತಿ ಸಂಪತ್ತುಗಳು ಸಿದ್ಧವಾಗಿವೆ. ಅಮೇರಿಕದ ಅಧ್ಯಕ್ಷನಾದ ನಾನು ನಿಮ್ಮ ಹೋರಾಟವನ್ನು ಮೆಚ್ಚಿದ್ದೇನೆ. ನೀವು ಮಾಡುತ್ತಿರುವ ಸಾಹಸ ಕಾರ್ಯಗಳನ್ನು ನಾವೆಂದಿಗೂ ಮರೆಯುವುದಿಲ್ಲ. ನಿಮ್ಮ ದೇಶದ ಸ್ವಾತಂತ್ರ್ಯವನ್ನು ಅಮೇರಿಕವು ಖಂಡಿತವಾಗಿಯೂ ಪುನಃ ದೊರಕಿಸಿ ಕೊಡುವುದು' ಎಂದು ಅವರಲ್ಲಿ ಹೇಳಿರುವರು.

ಫಿಲಿಪಯಿನಿಗೆ ಸಂದೇಶ ಕಳುಹಿಸುವ ಮೊದಲು ರೂಸ್‌ವೆಲ್ಟರು ತಮ್ಮ ಸೈನ್ಯ ಮತ್ತು ನೌಕಾಧಿಕಾರಿಯೊಡನೆ ವಿಚಾರವಿನಿಮಯ ಮಾಡಿದರು. ಫಿಲಿಪಯಿನಿನಲ್ಲಿರುವ ಅಮೇರಿಕದ ಹೈ ಕಮಿಶನರೂ 'ಸಹಾಯ ಬರುತ್ತಿದೆ' ಎಂದು ಭರವಸೆ ಹೇಳಿದ್ದಾರೆ. ಲಿಂಗಾಯನ್ ಪ್ರದೇಶದಲ್ಲೂ ಜಪಾನರು ಹೆಚ್ಚು ಹೆಚ್ಚು ಸೈನ್ಯಗಳು ತಂದಿರುವರೆಂದು ತಿಳಿದಿದೆ. ಅಮೇರಿಕನರು ಅವರನ್ನು ಜೋರಾಗಿ ತಡೆಯುತ್ತಿದ್ದಾರೆ. ಇಪ್ಪೋಹದ ಮೇಲೆ ನಾಲ್ಕು ದಿನಗಳಲ್ಲಿ ಹದಿನೆಂಟು ಸಲ ಧಾಳಿಯಾಗಿದೆ. ಸೆಲೆಬಸ್ ದ್ವೀಪದ ಹತ್ತಿರ ಕೆಲವು ಆಸ್ಟ್ರೇಲಿಯನ್ ವಿಮಾನಗಳು ಒಂದು ಜಪಾನೀ ಕ್ರೂಜರ್ ಹಡಗವನ್ನು ಎದುರಿಸಿ ಅದರ ಮೇಲೆ ಬಾಂಬುಗಳನ್ನು ಹಾಕಿದವು.

ಮನಿಲಾಕ್ಕೆ ಗಂಡಾಂತರ

ಫಿಲಿಪಯಿನಿನಲ್ಲಿ ಜಪಾನರು ಮುಂದೊತ್ತಿ ಹೋಗುತ್ತಲೇ ಇದ್ದಾರೆ. ಮನಿಲಾದ ಮೇಲೆ ಮತ್ತೂ ಧಾಳಿಯಾಯಿತು. ಅದು ಹಿಂದಿನ ಧಾಳಿಗಿಂತಲೂ ಭಯಂಕರವಿತ್ತು. ನಗರದ ಕೆಲವು ಭಾಗಗಳನ್ನು ಖಾಲಿಮಾಡಲಾಗಿದೆ. ಮನಿಲವನ್ನು ಅರಕ್ಷಿತ ಪಟ್ಟಣವೆಂದು ಸಾರಿದ ಮೇಲೂ ಜಪಾನರು ಧಾಳಿಮಾಡಿದರೆಂದು ಸಾರಲಾಗಿದೆ. ಕಟ್ಟಡಗಳು ಸುಟ್ಟುಹೋಗಿವೆ. ಅಲ್ಲಿ ವಿಮಾನ ನಿರೋಧಕ ಫಿರಂಗಿಗಳಿಲ್ಲದಿರುವುದರಿಂದ ಬಾಂಬುಗಳನ್ನು ಮನಬಂದಂತೆ ಹಾಕುತ್ತಿರುವರು. ಉತ್ತರ ಮತ್ತು ದಕ್ಷಿಣ ಎರಡು ದಿಕ್ಕುಗಳಿಂದಲೂ ಜಪಾನರು ಫಿಲಿಪಯಿನಿನ ರಾಜಧಾನಿಯಾದ ಮನಿಲಾಕ್ಕೆ ಅತಿ ವೇಗದಿಂದ ಸಾಗುತ್ತಿದ್ದಾರೆ. ನಗರಕ್ಕೆ ಗಂಡಾಂತರ ಪರಿಸ್ಥಿತಿಯೊದಗಿದೆಯೆಂದು ಹೇಳಲಾಗಿದೆ. ಮನಿಲಾಕ್ಕೆ ೩೦ ಮೈಲು ದೂರದಲ್ಲಿರುವ ಲಿಮಾನ ಎಂಬಲ್ಲಿ ಯುದ್ಧ ನಡೆಯುತ್ತಿದೆ. ಮನಿಲಾ ಧಾಳಿಯಲ್ಲಿ ಎಷ್ಟು ಜನರು ಸತ್ತರೆಂದು ವಿವರ ಬಂದಿಲ್ಲ. ಲ್ಯುಜೋನ ಕಾಳಗದಲ್ಲಿಯೂ ಅಮೇರಿಕನರು ಹಿಂದೆ ಸರಿಯುತ್ತಿರುವರು.

ನಾರ್ವೆ ಕರಾವಳಿಯಲ್ಲಿ

ನಾರ್ವೆ ಕರಾವಳಿಯಲ್ಲಿ ಹೇಗ್ಸಂಡ್ ದ್ವೀಪಗಳ ಬಳಿಯಲ್ಲಿ ಶತ್ರು ಹಡಗುಗಳ ಮೇಲೆ ಬ್ರಿಟಿಷರು ಒಮ್ಮೆಲೇ ನೆಲ ಜಲ ವಾಯು ಸೈನ್ಯಗಳಿಂದ ಧಾಳಿ ಮಾಡಿದರು. ಈ ಸಂಯುಕ್ತ ಧಾಳಿಯಿಂದ ವಿಶೇಷ ಪರಿಣಾಮವುಂಟಾಗಿದೆಯೆಂದು ಸಾರಲಾಗಿದೆ. ಕರಾವಳಿಯ ಸಂರಕ್ಷಣೆಗಾಗಿ ನಿಂತ ಜರ್ಮನರು ಫಿರಂಗಿಗಳನ್ನು ಹಾರಿಸುತ್ತಿದ್ದರೂ, ಹ್ಯಾಂಪ್‌ಡನ್ ವಿಮಾನಗಳು ಅವರ ಮೇಲೆ ಸಿಡಿಗುಂಡುಗಳನ್ನು ಸುರಿಸಿದವು. ಜರ್ಮನರು ಬಹಳ ಆವೇಶದಿಂದ ಪ್ರತಿಭಟಿಸುತ್ತಿದ್ದರು. ಇಲ್ಲಿ ಬ್ರಿಟಿಷ್ ಸೈನ್ಯಕ್ಕೂ ಜರ್ಮನ್ ಸೈನ್ಯಕ್ಕೂ ಕೈಕೈ ಕಾಳಗವೂ ನಡೆಯಿತು. ಬ್ರಿಟಿಷರು ಅಲ್ಲಿನ ಎಣ್ಣೆಯ ಹಾಗೂ ಮದ್ದುಗುಂಡಿನ ಕಣಜಗಳನ್ನು ನಾಶಪಡಿಸಿದರು. ಕೆಲವು ಜರ್ಮನರನ್ನು ಕೈವಶಪಡಿಸಿದರು. ಹಡಗುಗಳನ್ನು ಮುಳುಗಿಸಲಾಯಿತು. ಇದರಲ್ಲಿ ೧೨೦ ಜರ್ಮನರು ಹತರಾಗಿ ೯೫ ಮಂದಿ ನೌಕಾಬಲದವರನ್ನು ಹಾಗೂ ಸೈನಿಕರನ್ನು ಸೆರೆಹಿಡಿಯಲಾಗಿದೆಯಂತೆ. ಹೀಗೆ ನಾರ್ವೆ ಕರಾವಳಿಯ ಧಾಳಿಯಲ್ಲಿ ಬ್ರಿಟಿಷರಿಗೆ ಪ್ರಚಂಡ ವಿಜಯ ದೊರಕಿದೆಯೆಂದು ಸುದ್ದಿ ಬಂದಿದೆ.

ಮೋಸ್ಕೋದಲ್ಲಿ ಸಂಧಾನ

ಮೋಸ್ಕೋದಲ್ಲಿ ಸಂಧಾನ ಮಾತುಕತೆಯು ಕೊಟ್ಟಕೊನೆಗೆ ಕೂಡಿದೆ. ಬ್ರಿಟಿಷ ವಿದೇಶ ಮಂತ್ರಿ ಆಂಥೋಣಿ ಈಡನ್ ಅಲ್ಲಿಗೆ ಹೋಗಿರುವರು. ಅವರು ಸ್ಟಾಲಿನನ್ನು ಭೇಟಿಯಾಗಿ ಮಹತ್ವದ ರಾಜಕಾರಣಗಳ ವಿಚಾರ ಮಾತನಾಡಿದರು. ವಾಶಿಂಗ್‌ಟನಿನಲ್ಲಿ ರೂಸ್‌ವೆಲ್ಟರೊಡನೆ ಚರ್ಚಿಲ್ಲರು ನಡೆಸುವ ಮಾತುಕತೆಯಂತೆಯೇ ಇದೂ ನಡೆಯುವುದೆಂದು ಹೇಳಲಾಗಿದೆ. ಈ ಚರ್ಚೆಯಲ್ಲಿ ರಶ್ಯದ ಅನೇಕ ಪ್ರಮುಖ ಅಧಿಕಾರಿಗಳು ಭಾಗವಹಿಸಿದರು. ಇತ್ತ ಮುಖ್ಯ ಟೋಕ್ಯೋ ಮತ್ತು ಸ್ಟಾಫೋರ್ಡ್ ಕ್ರಿಪ್ಸರಲ್ಲಿಯೂ ಮಾತುಕತೆ ನಡೆಯುತ್ತಲಿರುವುದು.

'ಯುದ್ಧ ನೀತಿಯ ವಿಚಾರ, ಅದರಲ್ಲೂ ಹಿಟ್ಲರ್‌ಶಾಹಿಯನ್ನು ನಿರ್ನಾಮ ಮಾಡಲು' ಈ ಮಾತುಕತೆಯಾಗಿದೆಯೆಂದು ಒಂದು ಪ್ರಕಟಣೆ ಸಾರಿದೆ. ಟರ್ಕಿ ಇರಾಣ್ ದೇಶಗಳ ರಾಯಭಾರಿಗಳೂ ಇದರಲ್ಲಿ ಭಾಗವಹಿಸಿದರು. ಮೋಸ್ಕೋ ಮಾತುಕತೆಯ ವಿವರಗಳನ್ನು ವಾಶಿಂಗ್‌ಟನ್ನಿಗೆ ತಿಳಿಸಿ ಅಲ್ಲಿನ ವಿವರಗಳನ್ನು ತಿಳಿದುಕೊಳ್ಳಲಾಯಿತು. ಚೀನದ ಪ್ರತಿನಿಧಿಯನ್ನೂ ಈಡನರು ಕಂಡರು.

ರಂಗೂನ್ ಧಾಳಿ

ರಂಗೂನಿನ ಮೇಲೆ ಧಾಳಿಯಾಗುತ್ತಿದೆ. ಅಲ್ಲಿ ಇಷ್ಟರಲ್ಲಿಯೇ ಧಾಳಿಗೆ ೬೦೦ ಜನರು [illegible] ಮರಣ ತಿಳಿದಿದೆ. ಜಪಾನರ ವಿಮಾನಗಳನ್ನು ಕೆಲವನ್ನು ನಿಲಕ್ಕುರುಳಿಸಲಾಯಿತು. [illegible] ಪ್ರದೇಶದಲ್ಲಿ [illegible] ಸಿಂಗಾಪುರದಲ್ಲಿ ಜಪಾನರು ಪ್ರಚಾರ ಪತ್ರಗಳನ್ನು ಬಿಸಾಡುತ್ತಿರುವರು. [illegible] ಯುದ್ಧವು ಸಾಗುತ್ತಿರುವುದು.

ಯಾರು ಯಾರು ಯಾರ ಮೇಲೆ ಯುದ್ಧ ಮಾಡುತ್ತಿದ್ದಾರೆ?

೧೯೩೯ನೆಯ ಇಸವಿ ಸಪ್ಟಂಬರ ತಿಂಗಳ ೧ನೆಯ ತಾರೀಕಿನ ದಿವಸ ಜರ್ಮನಿಯು ಪೋಲಂಡಿನ ಮೇಲೆ ಯುದ್ಧ ಸಾರಿತು. ಬ್ರಿಟನ್ ಫ್ರಾನ್ಸುಗಳು ಜರ್ಮನಿಯ ಮೇಲೆ ೩ ದಿನಗಳ ನಂತರ ಯುದ್ಧ ಸಾರಿದವು.

ರಶ್ಯವು ಫಿನ್‌ಲಂಡಿನ ಮೇಲೆ ಯುದ್ಧಮಾಡಿ ಸ್ವಲ್ಪ ಭಾಗವನ್ನು ಆಕ್ರಮಿಸಿಕೊಂಡಿತು. ಜರ್ಮನಿಯು ಹಾಲೆಂಡ್, ಬೆಲ್ಜಿಯಂ, ಲಕ್ಸೆಂಬರ್ಗ್‌ಗಳ ಮೇಲೆ ಯುದ್ಧ ಸಾರಿತು. ಇಟಲಿಯು ಬ್ರಿಟನಿನ ಮೇಲೂ ಫ್ರಾನ್ಸಿನ ಮೇಲೂ ಯುದ್ಧ ಹೂಡಿತು. ಫ್ರಾನ್ಸ್ ಪತನವಾಯಿತು.

ಜರ್ಮನಿಯು ಯುಗಸ್ಲವಿಯ ಗ್ರೀಸ್‌ಗಳ ಮೇಲೆ ಯುದ್ಧ ಹೂಡಿತು. ಅನಂತರ ಜರ್ಮನಿಯು ರಶ್ಯದ ಮೇಲೆ ಯುದ್ಧ ಹೂಡಿತು. ರುಮೇನಿಯ, ಹಂಗೇರಿ, ಫಿನ್‌ಲೆಂಡ್, ಇಟಲಿ, ಲಿಥುವೇನಿಯಾಗಳೂ ಜರ್ಮನಿಯೊಡನೆ ಸೇರಿಕೊಂಡವು.

ಜಪಾನು, ಅಮೇರಿಕ ಬ್ರಿಟನು ಡಚ್ ಈಸ್ಟ್ ಇಂಡಿಸ್ ಮುಂತಾದ ಒಪ್ಪಾರಗಳ ಮೇಲೆ ಯುದ್ಧ ಸಾರಿದೆ. ಥಾಯಿಲೆಂಡು ಶರಣಾಯಿತು. ಜರ್ಮನಿಯೂ ಇಟಲಿಯೂ, ಜಪಾನನ್ನನುಸರಿಸಿ ಅಮೇರಿಕ ಬ್ರಿಟನುಗಳ ಮೇಲೆ ಯುದ್ಧ ಸಾರಿವೆ. ಜಪಾನ್, ಜರ್ಮನಿ, ಇಟಲಿಗಳ ಮೇಲೆ ಚೀನ ಮತ್ತು ಅಮೇರಿಕಗಳೂ; ಜಪಾನಿನ ಮೇಲೆ ಆಸ್ಟ್ರೇಲಿಯ, ನೆದರ್‌ಲೆಂಡ್ಸ್, ಸ್ವತಂತ್ರ ಫ್ರಾನ್ಸ್, ಸಾಲ್ವಡಾರ್, ನಿಕರಾಗುವ, ಬ್ರಿಟಿಷ್ ಸಾಮ್ರಾಜ್ಯ, ಪನಮಾ, ಹಾಂಡುರಾಸ್, ಕೋಸ್ಟರಿಕ್; ಅಮೇರಿಕ ಮತ್ತು ಬ್ರಿಟನ್ ಮೇಲೆ ಮಂಚುಕೋ; ಈಜಿಪ್ಟ್, ಕೊಲಂಬಿಯ, ಮೆಕ್ಸಿಕೋಗಳು ಜಪಾನಿನೊಡನೆ ಬಾಂಧವ್ಯ ಕಡಿದುಹಾಕಿವೆ. ಬೊಲಿವಿಯ, ಚಿಲಿ ಮತ್ತು ಪೆರುಗಳು ಅಮೇರಿಕದ ಬೆಂಬಲ ನಿಂತಿವೆ. ಉರುಗ್ವೆ ಅರ್ಜೆಂಟೈನಗಳು ಅಮೇರಿಕಕ್ಕೆ ನೌಕಾ ಸಹಾಯನೀಡಿವೆ.

ಮಂಗಳೂರು ಪೇಟೆಯ ದವಸ ಧಾನ್ಯ ವಗೈರೆಗಳ ಧಾರಣೆಗಳು.

(ದ. ಕ. ಜಿಲ್ಲಾ ಟ್ರಿಜರಿ ಡಿ. ಕಲೆಕ್ಟರರಿಂದ ಬಂದದ್ದು.)

			ರಿಂದ	ವರೆಗೆ
1	(a)	ಭತ್ತ ಅವ್ವಲ್ ತರದ ಗುಡ್ಡು ಮುಡಿಗೆ	2—14—0	3—0—0
	(b)	,, ದುಯಂ ,, ,, ,,	—	—
2	(a)	ಅಕ್ಕಿ ಅವಲ್ ತರದ ಗುಡ್ಡು ಮುಡಿಗೆ	6—6—0	6—10—0
	(b)	,, ದುಯಂ ,, ,, ,,	6—2—0	6—4—0
3.	(a)	,, ಅವ್ವಲ್ ,, ಸುಗ್ಗಿ ,,	6—4—0	6—8—0
	(b)	,, ದುಯಂ ,, ,, ,,	6—4—0	—
4.	(a)	ತೆಂಗಿನಕಾಯಿ ಸುಲಿದದ್ದು 1000ಕ್ಕೆ	37—8—0	42—8—0
	(b)	,, ಸಿಪ್ಪೆಯಿದ್ದದ್ದು ,,	40—0—0	45—0—0
5	(a)	ಕೊಬ್ಬರಿ ಆಫೀಸು ಖಂಡಿಗೆ	66—4—0	—
	(b)	,, ದೀವಿ ,,	—	—
	(c)	,, ದಿಲ್‌ಪಸಂದ್ ,,	72—8—0	—
6.		ತೆಂಗಿನ ಎಣೆ ಮಣಕ್ಕೆ	5—2—0	—
7.	(a)	ಸಿಪ್ಪೆಯಿದ್ದ ಅಡಿಕೆ 1000ಕ್ಕೆ	3—0—0	3—8—0
	(b)	ಸುಲಿದ ಅಡಿಕೆ ಖಂಡಿಗೆ (ಹಳ್ತು)	190—0—0	200—0—0
		(ಹೊಸ್ತು)	140—0—0	170—0—0
8.		ಗೇರುಬೀಜ ಮುಡಿಗೆ	—	—
9.		ಕಬ್ಬಿನ ಬೆಲ್ಲ ಖಂಡಿಗೆ	32—8—0	37—8—0
10.		ಒಳ್ಳೆ ಮೆಣಸು ಹಂಡ್ರೆಡ್‌ವೇಟಿಗೆ	17—8—0	18—0—0
11.	(a)	ವೀಳ್ಯದೆಲೆಯ ಹೊಗೆಸೊಪ್ಪು ಮಣಕ್ಕೆ	5—0—0	7—0—0
	(b)	ಹುಡಿಯ ,, ,,	6—0—0	7—8—0
12.	(a)	ಮೈಸೂರು ಏಲಕ್ಕಿ ಮಣಕ್ಕೆ	58—0—0	63—0—0
	(b)	ಕೊಡಗಿನ ,, ,,	53—0—0	57—0—0
13.	(a)	ಕುಮಟೆಯ ಮೆಣಸು ಖಂಡಿಗೆ	90—0—0	95—0—0
	(b)	ಕಾಸರಗೋಡು ,, ಮಣಕ್ಕೆ	—	—
	(c)	ಊರಿನ ,, ,,	5—0—0	—

ಸ್ವದೇಶಾಭಿಮಾನಿ

ತಾರೀಖು 2—1—1942

ಸತ್ಯಮೂರ್ತಿಗಳ ಪ್ರಚಾರ

ಕಾಂಗ್ರೆಸು ಈಗ ಪಾರ್ಲಿಮೆಂಟರಿ ಕಾರ್ಯಕ್ರಮವನ್ನು ಅಂಗೀಕರಿಸುವ ಅವಶ್ಯಕತೆ ವಿಷಯ ಪ್ರಚಾರಮಾಡಲು ಗಾಂಧೀಜಿಯವರ ಅನುಮತಿ ಪಡೆದ ಮಹನೀಯರಾದ ಶ್ರೀ ಸತ್ಯಮೂರ್ತಿಗಳು ಈವಾರ ಮಂಗಳೂರಿಗೆ ಬಂದು ಇಲ್ಲಿನ ಸಾರ್ವಜನಿಕ ಸಭೆಯಲ್ಲಿ ಅವರ ಅಭಿಪ್ರಾಯವನ್ನು ವಿವರಿಸಿದರು. ತಮ್ಮ ವಿಶೇಷವಾದ ವಾಕ್‌ಸಾಮರ್ಥ್ಯದಿಂದ ಬೆರಗುಗೊಳಿಸುವಂತಹ ತರ್ಕಸರಣಿಯಿಂದ ತಮ್ಮ ವಿಚಾರಗಳನ್ನು ಜನರ ಮುಂದಿಟ್ಟಿರುವರು.

ಸತ್ಯಮೂರ್ತಿಗಳ ಅಭಿಪ್ರಾಯವು ಇಷ್ಟು: ಅವರು ಕೇಂದ್ರದಲ್ಲಿ ರಾಷ್ಟ್ರೀಯ ಸರಕಾರ, ಪ್ರಾಂತಗಳಲ್ಲಿ ಜನತೆಯ ಸರಕಾರವು ಈಗ ಇರಬೇಕೆಂದು ಅಭಿಪ್ರಾಯಪಡುತ್ತಾರೆ. ಯುದ್ಧವು ಭಾರತದ ಬಾಗಿಲಿಗೆ ಬಂದಿರುವಾಗ ನಾವು ತಟಸ್ಥರಾಗಿರುವುದು ನ್ಯಾಯವಲ್ಲವೆನ್ನುತ್ತಾರೆ. ಬ್ರಿಟಿಷ್ ಪ್ರಭುತ್ವದವರು ಇಂದು ನಮ್ಮ ಕೈಯಲ್ಲಿ ಅಧಿಕಾರ ಕೊಡಲು ಇಚ್ಛಿಸುವುದಿಲ್ಲವಾಗಿಯೇ ಸೂಚನೆಗಳು ತೋರುತ್ತಿದ್ದರೂ, ಚುನಾವಣೆ ಹೊಂದಿದ ಹಕ್ಕಿನಿಂದ ನಾವು ಪಡೆಯಬಹುದಾದಷ್ಟು ಅಧಿಕಾರವನ್ನಾದರೂ ನಮ್ಮ ಕೈವಶವಿಟ್ಟುಕೊಳ್ಳಬೇಕಾದುದು ನಮ್ಮ ಕರ್ತವ್ಯವೆನ್ನುತ್ತಾರೆ. ಮುಂದೆ ಚುನಾವಣೆಯಾದರೆ ಭಾರತದ ಹನ್ನೊಂದು ಪ್ರಾಂತಗಳಲ್ಲಿ ಹತ್ತು ಪ್ರಾಂತಗಳಲ್ಲೂ ಕಾಂಗ್ರೆಸಿಗೆ ಬಹುಮತ ಸಿಗುವುದಾದುದರಿಂದ, ಆಗ ಆ ಮಂತ್ರಿಮಂಡಳಗಳನ್ನೂ ಬ್ರಿಟಿಷ್ ಪ್ರಭುತ್ವವು ತಳ್ಳಿ ಹಾಕಿ ಅಧಿಕಾರ ನಡೆಸಿದರೆ- ಹಾಗೆಮಾಡುವದೂ ಶಕ್ಯವಿಲ್ಲ- ಅದೇ ನಮ್ಮ ಹೋರಾಟಕ್ಕೆ ಶಕ್ತಿ ಹೆಚ್ಚಿಸಬಹುದೆಂದರು.

ಬ್ರಿಟಿಷ್ ಪ್ರಭುತ್ವದವರು ಯಾವುದೇ ರಾಜಕೀಯ ಘಟನೆಯ ಕುರಿತು ಮಾತನಾಡುವಾಗಲೂ, ಜಿನ್ನ ಹಾಗೂ ಮುಸ್ಲಿಂ ಲೀಗು ಆಕ್ಷೇಪಿಸುತ್ತದೆಯೆಂದು ಹೇಳುವುದನ್ನು ಖಂಡಿಸಿ, ಜಿನ್ನರಿಗೆ ದೇಶದಲ್ಲಿ ಹಿಂಬಾಲಕರು ಎಷ್ಟಿದ್ದಾರೆ ಎಂದು ಪ್ರಶ್ನಿಸಿದರು. ಹಾಗೆ ಹೇಳಿ ಸೋದಾಹರಣವಾಗಿ ಜಿನ್ನರಿಗೆ ಇಂದು ಎಲ್ಲಿಯೂ ಪ್ರಬಲ ಬೆಂಬಲವಿಲ್ಲದಿರುವುದನ್ನು ವಿವರಿಸಿದರು. ಕಾಂಗ್ರೆಸು ಇಂದು ಸತ್ಯಾಗ್ರಹ ಆಂದೋಲನವನ್ನು ಮುಂದುವರಿಸುವುದು ಸರಿಯಲ್ಲವೆಂದೂ, ಸತ್ಯಾಗ್ರಹಿಗಳನ್ನು ಬಂಧಿಸದಿರುವುದರಿಂದ ಭಾಷಣ ಸ್ವಾತಂತ್ರ್ಯದ ಗುರಿ ಸಾಧಿಸದಂತಾಗುವುದೆಂದೂ, ಈ ಸಂದರ್ಭದಲ್ಲಿ ಕೈಕಟ್ಟಿ ಕುಳ್ಳಿರದೆ ಪಾರ್ಲಿಮೆಂಟರಿ ಕಾರ್ಯಕ್ರಮವನ್ನು ಕಾಂಗ್ರೆಸು ಕೈಕೊಂಡು ದೇಶದ ಶಕ್ತಿಯನ್ನು ಬಲಪಡಿಸಬೇಕೆಂದೂ ವಾದಿಸಿದರು.

ಶಿಸ್ತಿನ ವಿಷಯವಾಗಿ ಮಾತನಾಡುತ್ತಾ, ತಾನು ಕಾಂಗ್ರೆಸಿನ ಶಿಸ್ತು ಮೀರಿ ನಡೆಯುವುದಿಲ್ಲವೆಂದೂ, ಈಗ ಕಾಂಗ್ರೆಸಿನ ಕಾರ್ಯಕ್ರಮದಲ್ಲಿ ಬದಲಾವಣೆಯಾಗಬೇಕೆಂದು ಚರ್ಚೆನಡೆಯುತ್ತಿರುವುದರಿಂದ, ತಾನು ತನ್ನ ಅಭಿಪ್ರಾಯ ತಿಳಿಸಿರುವುದಾಗಿಯೂ ಕೊನೆಗೆ ಕಾಂಗ್ರೆಸು ಒಂದು ನಿರ್ಧಾರಕ್ಕೆ ಬಂದ ಮೇಲೆ ತಾನು ಒಟ್ಟೆನ್ನದೆ ನಿರ್ಧಾರದಂತೆಯೇ ನಡೆಯುವುದಾಗಿಯೂ ಹೇಳಿದರು.

ಕೆನರಾ ಹೈಸ್ಕೂಲಿನ ಸುವರ್ಣ ಮಹೋತ್ಸವ

ದಕ್ಷಿಣ ಕನ್ನಡದ ಪ್ರಾಮುಖ್ಯ ಹೈಸ್ಕೂಲುಗಳಲ್ಲೊಂದಾದ ಕೆನರಾ ಹೈಸ್ಕೂಲ್ ತನ್ನ ಐವತ್ತು ವರ್ಷಗಳ ಉತ್ತರೋತ್ತರ ಬೆಳವಣಿಗೆಯ ಉತ್ಸವವನ್ನು- ಸುವರ್ಣ ಮಹೋತ್ಸವವನ್ನು- ಈ ವಾರದಲ್ಲಿ ಬಹಳ ವಿಜೃಂಭಣೆಯಿಂದ ಆಚರಿಸಿತು. ಕೆನರಾ ಹೈಸ್ಕೂಲಿನ ಹಿತಚಿಂತಕರು, ಹಳೆಯ ವಿದ್ಯಾರ್ಥಿಗಳು ಹಲವರು ಬಂದು ಉತ್ಸವವನ್ನು ಸಾಂಗಗೊಳಿಸಿದರು. ಎಲ್ಲದಕ್ಕಿಂತಲೂ ವಿಶೇಷವೆನಿಸಿ, ಕೆನರಾ ಹೈಸ್ಕೂಲಿನ ಐವತ್ತು ವರ್ಷಗಳ ನೆನಪಿಗಾಗಿ, ಅದರ ಹಳೆಯ ವಿದ್ಯಾರ್ಥಿಗಳು ಹಾಗೂ ಹಿತಚಿಂತಕರೆಲ್ಲರೂ ಕೂಡಿ ಐವತ್ತು ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟ ನಿಧಿಯೊಂದನ್ನು ಎತ್ತಿ ಸಂಸ್ಥೆಯನ್ನು ಇನ್ನಷ್ಟು ಉನ್ನತಿಯಲ್ಲಿ ನಿಲ್ಲಿಸಲು ಕೈಗೊಟ್ಟರು.

ಕೆನರಾ ಹೈಸ್ಕೂಲ್ ಇದು ವರೆಗೆ ಸಲ್ಲಿಸಿದ ಸೇವಾ ಕಾರ್ಯಗಳನ್ನು ಈ ಉತ್ಸವ ಸಂದರ್ಭದಲ್ಲಿ ಶಾಲಾಧಿಕಾರಿಗಳು ವಿವರಿಸಿದರು. ಭಾಷಣಕಾರರು ಕೊಂಡಾಡಿದರು. ಅಧ್ಯಕ್ಷರು ಪ್ರಶಂಸಿಸಿದರು. ಇದುವರೆಗೆ ವಿದ್ಯಾ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆಗಿಂತ ಹೆಚ್ಚಿನ ಕಾರ್ಯಗಳನ್ನು ಇನ್ನು ಮುಂದೆ ಈ ಶಾಲೆಯು ಸಲ್ಲಿಸಬೇಕೆಂದು ಶಾಲಾಧಿಕಾರಿಗಳು ತಮ್ಮ ಆಶೆಯ ಸೂಚಿಸಿದ್ದಾರೆ; ಇತರರೂ ಹಾಗೆ ಹಾರೈಸಿದ್ದಾರೆ. ಕೆನರಾ ಹೈಸ್ಕೂಲ್ ಮುಂದಿನ ವಜ್ರೋತ್ಸವಕ್ಕೆ ಇನ್ನಷ್ಟು ಬಲಗೊಂಡು ಬೆಳೆಯಲಿ ಎಂದು ನಮ್ಮ ಹೃತ್ಪೂರ್ವಕವಾದ ಹಾರೈಕೆಯಾಗಿದೆ.

ಮನುಷ್ಯನ ಆಯುಸ್ಸಿನಲ್ಲಿ ಐವತ್ತು ವರ್ಷಗಳು ದೊಡ್ಡದಾದರೂ, ಒಂದು ಸಂಸ್ಥೆಯ ಆಯುಸ್ಸಿನಲ್ಲಿ ಅದು ಅಷ್ಟೊಂದು ಮಹತ್ವವೆನಲಾಗುವುದಿಲ್ಲ. ಮಾನವನ ರಜತೋತ್ಸವ, ಸುವರ್ಣೋತ್ಸವಗಳಿಗೆ ಹೋಲಿಸಿ ಸಂಸ್ಥೆಯ ಉತ್ಸವಗಳ ಮಹತ್ವವನ್ನು ಅಳೆಯಲು ಆಗುವುದಿಲ್ಲ. ವಿದ್ಯಾಸಂಸ್ಥೆಯಂತಹ ಚಿರಂತನ ಸಂಸ್ಥೆಯ ಆಯುಸ್ಸಿನಲ್ಲಿ ಸುವರ್ಣ ಮಹೋತ್ಸವದಂತಹ ಐವತ್ತು ವರ್ಷಗಳ ಹಬ್ಬವು ಬಹಳ ಹೆಚ್ಚಿನದೆಂದು ಹಿಗ್ಗದೆ ಅದರ ಹಿತಚಿಂತಕರೆಲ್ಲರೂ ಸೇರಿ ಈ ಸಂಸ್ಥೆಯು ನಿತ್ಯ ಶಾಶ್ವತವಾಗಿ ಬಾಳುವಂತಹ ಏರ್ಪಾಡುಗಳನ್ನು ಮಾಡಬೇಕೆಂದು ನಾವಿಲ್ಲಿ ಸೂಚಿಸುತ್ತೇವೆ.

ಕೆನರಾ ಹೈಸ್ಕೂಲಿನಂತಹ ಒಂದು ವಿದ್ಯಾಸಂಸ್ಥೆಯ ಏಳಿಗೆಯ ಕಾರ್ಯಕ್ಕೆ ಐವತ್ತು ಸಾವಿರ ರೂಪಾಯಿಗಳ ನಿಧಿಯು ಅಷ್ಟೊಂದು ಘನವಾದುದೆಂದು ಹೇಳಲಾಗುವುದಿಲ್ಲ. ವಿದ್ಯಾಸಂಸ್ಥೆಯಂತಹವುಗಳು ಸರಕಾರದ ಮಹಾಜನರ ಸಂಪೂರ್ಣ ಸಹಕಾರದಿಂದಲೇ ನಡೆಯಬೇಕಾಗಿದೆ. ಕೆನರಾ ಹೈಸ್ಕೂಲಿನ ವಿಷಯದಲ್ಲಿ ಹಲವು ಮಂದಿ ಉದಾರೀ ಶ್ರೀಮಂತರು ಮುಂದೆ ಬಂದು ನೆರವಾಗಿದ್ದಾರೆ. ಮಠಾಧಿಪರು ಬೆಂಬಲಕೊಟ್ಟಿದ್ದಾರೆ. ಈ ಸಲದ ಸುವರ್ಣೋತ್ಸವ ನಿಧಿಗೆ ಡಾ। ಎಂ. ಕೇಶವ ಪೈಗಳೊಬ್ಬರೇ ಹದಿನೈದು ಸಾವಿರ ರೂಪಾಯಿಗಳ ಉದಾರ ದಾನ ಮಾಡಿದ್ದು ಬಹು ಪ್ರಶಂಸನೀಯವಾಗಿದೆ. ಅಂತಹ ಧರ್ಮ ವೀರರು, ದಾನ ವೀರರು ಹೆಚ್ಚು ಹೆಚ್ಚಾಗಿ ಮುಂದೆ ಬಂದು ಶಾಲೆಗೆ ಬೆಂಬಲಕೊಡಬೇಕಾಗಿದೆ. ಸುವರ್ಣ ಮಹೋತ್ಸವ ಕಮಿಟಿಯವರು ತಮ್ಮ ನಿಧಿ ಸಂಗ್ರಹ ಕಾರ್ಯವನ್ನು ಇನ್ನೊಂದು ವರ್ಷಕ್ಕೆ ಮುಂದುವರಿಸಿ ಸಂಖ್ಯೆಯನ್ನು ಒಂದು ಲಕ್ಷ ರೂಪಾಯಿಗಳ ವರೆಗೆ ತಂದು ಮುಟ್ಟಿಸಬೇಕೆಂದು ಆಶಿಸಿದ್ದಾರೆ. ಈ ಕಾರ್ಯದಲ್ಲಿ ಎಲ್ಲರೂ ನೆರವಾಗಿ ತಮ್ಮ ಕರ್ತವ್ಯಗಳನ್ನು ಮಾಡಿ ಪುಣ್ಯಭಾಗಿಗಳಾಗಬೇಕೆಂದು ನಾವು ಬಿನ್ನವಿಸುತ್ತೇವೆ. ಕೆನರಾ ಹೈಸ್ಕೂಲ್ ನಮ್ಮ ಪ್ರಾಂತದಲ್ಲಿ ಮಾತ್ರವಲ್ಲ ಸಮಸ್ತ ಭಾರತದಲ್ಲಿಯೇ ಒಂದು ಆದರ್ಶ ವಿದ್ಯಾಶಾಲೆಯಾಗಿ ನಿಲ್ಲಲಿ ಎಂಬುದು ನಮ್ಮ ಹಾರ್ದಿಕ ಹಾರೈಕೆಯಾಗಿದೆ.

ನೋಟಗಳು.

ಈ ವಾರ ಎಲ್ಲೆಲ್ಲೂ ದೇಶವಿದೇಶಗಳಲ್ಲಿಯೂ ಕೂಡಾ- ಚರ್ಚೆಗಳೇ ಚರ್ಚೆಗಳು; ಕೂಟಗಳೇ ಕೂಟಗಳು; ಮುಖಂಡರು ಊರಿಂದ ಊರಿಗೆ, ಪ್ರಾಂತದಿಂದ ಪ್ರಾಂತಕ್ಕೆ, ದೇಶದಿಂದ ದೇಶಕ್ಕೆ ಓಡಾಡುತ್ತಾ ಇದ್ದಾರೆ. ಯಾವುದಾದರೂ ಒಂದು ನಿರ್ಧಾರಕ್ಕೆ ಬರುವುದು ಅವಶ್ಯವಾಗಿದ್ದರೂ, ಇಂದಿನ ಪರಿಸ್ಥಿತಿಯಲ್ಲಿ ಯಾವುದೇ ಒಂದು ನಿರ್ಧಾರ ಮಾಡುವುದು ಯಾರಿಗೂ ಸುಲಭವಾಗಿ ಕಂಡುಬರುವುದಿಲ್ಲ.

ವಾಶಿಂಗ್ ಟನಿನಲ್ಲಿ ರೂಸ್‌ವೆಲ್ಟರೂ ಚರ್ಚಿಲರೂ ಸೇರಿ ಮಾತುಕತೆ ಮಾಡುವುದು ಕಳೆದವಾರವೇ ಆರಂಭವಾಗಿದೆ. ಅದರಂತೆ ಮೋಸ್ಕೋದಲ್ಲಿ ಅಂತೋನಿ ಈಡನರೂ ಸ್ಟಾಲಿನರೂ ಕುಳಿತು ಚರ್ಚಿಸುತ್ತಿದ್ದಾರೆಂದು ಈಗ ತಿಳಿದುಬಂದಿದೆ. ಈ ಸಂದರ್ಭದಲ್ಲಿ ಮುಲುಟೋಫ್ ಸ್ಟಾಫರ್ಡ್ ಕ್ರಿಪ್ಸರೂ ಪ್ರತ್ಯೇಕ ಕೂಡಿ ಸಂಭಾಷಣೆ ನಡೆಸುತ್ತಿದ್ದಾರಂತೆ. ಬಾರ್ಡೋಲಿಯಲ್ಲಿ ಕಾಂಗ್ರೆಸ್ ಮುಂದಾಳುಗಳೂ ಕೂಡಿ ಆಲೋಚಿಸುತ್ತಿದ್ದಾರೆ.

'ಬಾರ್ಡೋಲಿಯಲ್ಲಿ ರಾಜಾಜಿ ಈಗ ತನ್ನ ಕೆಲಸವನ್ನು ಮಾಡುತ್ತಿರುವುದರಿಂದ, ಇಲ್ಲಿ ತಾನು ಅವರ ಕೆಲಸವನ್ನು ಮಾಡಲು ಬಂದಿರುವುದಾಗಿ' ಶ್ರೀ ಸತ್ಯಮೂರ್ತಿಗಳು ಕೆನರಾ ಹೈಸ್ಕೂಲಿನ ಸುವರ್ಣ ಮಹೋತ್ಸವದ ಅಧ್ಯಕ್ಷ ಭಾಷಣದಲ್ಲಿ ಪ್ರಸ್ತಾಪಿಸಿದರು.

'ಮಂಗಳೂರಲ್ಲಿ ತನ್ನ ಕೆಲಸವನ್ನು ಸತ್ಯಮೂರ್ತಿಗಳು ಮಾಡುತ್ತಿರುವುದರಿಂದ, ಇಲ್ಲಿ ತಾನು ಅವರ ಕೆಲಸ ಮಾಡುತ್ತಿದ್ದೇನೆ' ಎಂದು ಬಾರ್ಡೋಲಿಯಲ್ಲಿ ರಾಜಾಜಿ ಹೇಳಿದರೂ ಹೇಳಬಹುದು.

ರಾಜಾಜಿ ಮತ್ತು ಸತ್ಯಮೂರ್ತಿಗಳಿಬ್ಬರೂ ಅನ್ಯೋನ್ಯ ಮಾತನಾಡಿಕೊಂಡೇ ಕೆಲಸಮಾಡುತ್ತಾರೆಂದು ಇದರಿಂದ ಇತರರು ಅರ್ಥಮಾಡಿಕೊಳ್ಳಬಹುದು.

1942 ಶಾರದಾ 1942
ಪೋಕೆಟ್ ಡೈರಿಗಳು
ಸಣ್ಣ ಡೈರಿ 0-6-0 | ದೊಡ್ಡ ಡೈರಿ 0-12-0
ಮುಚ್ಚಳದ್ದು „ 0-8-0 | ಮುಚ್ಚಳದ್ದು „ 0-14-0
ಸಿಗುವ ಸ್ಥಳ: ಶಾರದಾ ಛಾಪಖಾನೆ,
ರಥಬೀದಿ ಮಂಗಳೂರು.

ಕೆನರಾ ಹೈಸ್ಕೂಲ್ ಸುವರ್ಣ ಮಹೋತ್ಸವ

ಶ್ರೀ। ಸತ್ಯಮೂರ್ತಿಗಳ ಅಧ್ಯಕ್ಷ ಭಾಷಣ

ಕೆನರಾ ಹೈಸ್ಕೂಲ್ ವರ್ಧಂತಿ

"ವಿದ್ಯಾಪ್ರಚಾರಕ್ಕೆ ನಮ್ಮಲ್ಲಿ ಹಣವಿಲ್ಲವೆನ್ನುವವರ ವಿಷಯ ನಾನು ಸಹಾನುಭೂತಿ ತೋರಿಸಲಾರೆ. ನಾವು ಹಣವನ್ನು ಹೇಗಾದರೂ ಒದಗಿಸಲೇ ಬೇಕು. ಇಂದಿನ ಸರಕಾರವು ಭಾರತದ ವಿದ್ಯಾಸಮಸ್ಯೆ ಪರಿಹರಿಸಲು ಎದೆಗಾರಿಕೆಯುಳ್ಳದ್ದಾಗಿಲ್ಲ. ನನಗೆ 'ಬೈಫರ್ಕೇಶನ್' ಪದ್ಧತಿಯಲ್ಲಿ ವಿಶ್ವಾಸವಿಲ್ಲ. ಹದಿಮೂರು ವರ್ಷ ಪ್ರಾಯದ ಹುಡುಗನು ತನ್ನ ಭವಿಷ್ಯ ನಿಶ್ಚಯಿಸಲಾರ. ಅಂತಹ ರೀತಿಯನ್ನು ನಾನು ವಿರೋಧಿಸುತ್ತೇನೆ. ನನ್ನ ಮಕ್ಕಳು ಅತ್ಯುತ್ತಮ ವಿದ್ಯಾಭ್ಯಾಸ ಹೊಂದಬೇಕೆಂದು ನನ್ನ ಇಚ್ಛೆ. ಉಚ್ಚ ವಿದ್ಯಾಭ್ಯಾಸದಿಂದ ನಿರುದ್ಯೋಗಿಗಳು ಹೆಚ್ಚುತ್ತಿರುವರೆಂದು ಹೇಳಲಾಗುತ್ತದೆ. ಸ್ವರಾಜ್ಯ ಸಿಕ್ಕಿದ ಐದೇ ವರ್ಷಗಳಲ್ಲಿ ನಿರುದ್ಯೋಗವನ್ನು ನಾವು ನಿವಾರಿಸಬಲ್ಲೆವು. ನಮ್ಮಲ್ಲಿ ನಿರುದ್ಯೋಗಕ್ಕಿಂತಲೂ ಅಜ್ಞಾನ ಮತ್ತು ಬಡತನವಿದೆ. ನಾನು ಸರಕಾರವನ್ನು ಈ ವಿಷಯದಲ್ಲಿ ಎಚ್ಚರಿಸುತ್ತೇನೆ."

—ಹೀಗೆಂದು ಕೆನರಾ ಹೈಸ್ಕೂಲ್ ಸುವರ್ಣೋತ್ಸವದ ಅಧ್ಯಕ್ಷ ಭಾಷಣದಲ್ಲಿ ತಾ. ೩೦ರಂದು ಸಂಜೆ ಶ್ರೀ ಎಸ್. ಸತ್ಯಮೂರ್ತಿ ಎಂ. ಎಲ್. ಎ. (ಕೇಂದ್ರ) ಇವರು ಹೇಳಿದರು. ಅವರು ಭಾಷಣ ಪ್ರಾರಂಭಿಸುತ್ತಾ ಕೆನರಾ ಹೈಸ್ಕೂಲಿನ ಚಟುವಟಿಕೆಗಳನ್ನು ಕೊಂಡಾಡಿ, ಈ ಶಾಲೆಯ ಏಳಿಗಾಗಿ ಅತುಲ ಬಲಿದಾನ ಮಾಡಿದ ಮಹನೀಯರನ್ನು ಪ್ರಶಂಸಿಸಿ, ಮಠಾಧೀಶ್ವರರೂ ಶಾಲೆಗಳಿಗೆ ಸಹಾಯ ನೀಡುತ್ತಿರುವ ವಿಷಯ ಮೆಚ್ಚಿಗೆಯ ಮಾತು ಹೇಳಿ ಉದಾರೀ ಶ್ರೀಮಂತರು ಬೆಂಬಲ ನಿಂತಿರುವ ವಿಷಯ ಅಭಿನಂದಿಸಿ, ಶ್ರೀ ಎ. ಬಿ. ಶೆಟ್ಟರಂತಹ ಮಹನೀಯರನ್ನು ಹಳೆ ವಿದ್ಯಾರ್ಥಿಗಳಾಗಿ ಪಡೆದ ಕೆನರಾ ಹೈಸ್ಕೂಲನ್ನು ಪ್ರಶಂಸಿಸಿದರು. ಶ್ರೀ ಸತ್ಯಮೂರ್ತಿಗಳು ಉಪಾಧ್ಯಾಯರ ಸಂಬಳದಲ್ಲಿ ಕಡಿತ ಮಾಡುವ ವಿಷಯ ಖಂಡಿಸಿದರು. ಸರಕಾರದ ಇಂದಿನ ವಿದ್ಯಾಭ್ಯಾಸ ಪದ್ಧತಿಯನ್ನು ದೂರಿದರು. ಜನಪ್ರಿಯ ಸರಕಾರವಿಲ್ಲದೆ ಇಂತಹ ತೊಂದರೆಯಾಗಿದೆಯೆಂದರು. ಕೆನರಾ ಹೈಸ್ಕೂಲ್ ಕನ್ನಡವನ್ನೇ ಶಿಕ್ಷಣ ಮಾಧ್ಯಮವಾಗಿ ಮಾಡಬೇಕೆಂದರು, ನಮ್ಮ ದೇಶದಂತಹ ದರಿದ್ರ ಭೂಮಿಯಲ್ಲಿ ಹುಡುಗರಿಗಾಗಿಯೂ ಹುಡುಗಿಯರಿಗಾಗಿಯೂ ಪ್ರತ್ಯೇಕ ಪ್ರತ್ಯೇಕ ಶಾಲೆ ನಡೆಸುವುದು ಸಾಧ್ಯವಿಲ್ಲವೆಂದರು. ಕೊನೆಗೆ ಕೆನರಾ ಹೈಸ್ಕೂಲ್‌ಗೆ ಚಿರಂತನ ಶ್ರೇಯಸ್ಸು ಬಯಸಿ, ಸುವರ್ಣೋತ್ಸವವು ಶಾಲೆಯ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆವ ಘಟನೆಯಾಗಲಿ ಎಂದು ಹಾರೈಸಿ ಭಾಷಣ ಮುಗಿಸಿದರು.

ಕೆನರಾ ಹೈಸ್ಕೂಲ್ ಸುವರ್ಣೋತ್ಸವವು ಮಂಗಳವಾರ ಸಂಜೆ ಪ್ರಾರಂಭವಾಯಿತು. ಗೀತಾ, ಕುರಾನ್, ಕನ್ನಡಗಳಲ್ಲಿ ಪ್ರಾರ್ಥನೆಗಳಾದವು. ಶ್ರೀ ರಾಜಾಜಿ, ಶ್ರೀಪಾನ್ ಮತ್ತು ಶ್ರೀಮತಿ ಕೆ. ಎಂ. ಮುನ್ಶಿ ಮೊದಲಾದವರಿಂದ ಸುವರ್ಣೋತ್ಸವವನ್ನು ಅಭಿವಂದಿಸಿ ಬಂದ ಸಂದೇಶಗಳನ್ನು ಓದಲಾಯಿತು. ಬಳಿಕ ಶ್ರೀ ಎ. ಬಿ. ಶೆಟ್ಟಿ ಎಂ. ಎಲ್. ಎ. ಇವರು ಶಾಲಾ ಸುವರ್ಣೋತ್ಸವದ ಶ್ರೇಯಃ ಪ್ರಾರ್ಥನೆ ಮಾಡಿ ದೀರ್ಘವೂ ವಿಚಾರಪೂರ್ಣವೂ ಆದ ಭಾಷಣವಿತ್ತರು. ೩೦ ದಿನ ತಮ್ಮ ವಿದ್ಯಾರ್ಥಿ ಜೀವನದ ಸವಿನೆ

...ಡಿದರು. ಇಂದಿನ ಶಾಲೆಯ ಏಳಿಗೆಯನ್ನು ವಿವರಿಸಿದರು. ಶಾಲೆಯನ್ನು ಇಷ್ಟು ಉರ್ಜಿತ ಸ್ಥಿತಿಗೆ ತರಲು ಸಾಹಸದಿಂದ ದುಡಿದ ಗೌಡ ಸಾರಸ್ವತ ಜಾತಿಯನ್ನು ಪ್ರಶಂಸಿಸಿದರು. ನಮ್ಮ ದೇಶದ ವಿದ್ಯಾಭ್ಯಾಸವು ತೀರಾ ಬದಲಾಗಬೇಕಾದದು ಅವಶ್ಯವೆಂದರು. ಪ್ರಜಾಪ್ರಭುತ್ವ ಪದ್ಧತಿಯ ಶಿಕ್ಷಣ ಸಿಗಬೇಕೆಂದರು. ಕೆನರಾ ಹೈಸ್ಕೂಲ್ ಬಡ ವಿದ್ಯಾರ್ಥಿಗಳಿಗೆ ಮಾಡುತ್ತಿರುವ ಸಹಾಯವನ್ನು ಕೊಂಡಾಡಿದರು.

ಅನಂತರ ಶಾಲಾ ಕರೆಸ್ಪೊಂಡೆಂಟರಾದ ಶ್ರೀ ಎ. ಶ್ರೀನಿವಾಸ ಪೈಗಳು ಶಾಲಾ ಇತಿಹಾಸವನ್ನು ಸಾರಾಂಶವಾಗಿ ಓದಿ ಹೇಳಿದರು. ಶ್ರೀ ಅಚ್ಯುತ ಬಾಳಿಗರೇ ಮೊದಲಾದ ಸಮರ್ಥ ಮುಖ್ಯೋಪಾಧ್ಯಾಯರ ಸೇವಾ ಧರ್ಮಗಳನ್ನು ಕೊಂಡಾಡಿದರು. ಈ ಸಲದ ಸುವರ್ಣೋತ್ಸವ ನಿಧಿಗೆ ನೆರವಾದವರನ್ನು ಪ್ರಶಂಸಿಸಿದರು. ಡಾ। ಕೇಶವ ಪೈಗಳೊಬ್ಬರೇ ೧೫ ಸಾವಿರ ರೂಪಾಯಿಗಳನ್ನು ಸುವರ್ಣೋತ್ಸವ ನಿಧಿಗೆ ಕೊಟ್ಟಿರುವರೆಂದೂ ಒಟ್ಟು ನಿಧಿ ರೂ. ೫೩ ಸಾವಿರಕ್ಕೆ ಈಗ ಏರಿರುವುದೆಂದೂ, ಸಂಸ್ಥೆಯ ಏಳಿಗೆಯ ದೃಷ್ಟಿಯಲ್ಲಿ ಇದು ಅಲ್ಪ ಧನವಾದ್ದರಿಂದ ಈ ನಿಧಿ ಸಂಗ್ರಹವನ್ನು ಒಂದು ವರ್ಷಕ್ಕೆ ಮುಂದುವರಿಸಿ ಒಂದು ಲಕ್ಷ ರೂಪಾಯಿ ವರೆಗೆ ಸಂಗ್ರಹಿಸಬೇಕೆಂದು ನಿರ್ಣಯಿಸಿರುವುದಾಗಿಯೂ ತಿಳಿಸಿದರು. ಶ್ರೀ ಮಾಧವರಾಯರ ಧನ ಸಹಾಯ ಮಾಡಿದವರ ಹೆಸರು ಪಟ್ಟಿಯನ್ನು ಓದಿ ಹೇಳಿದರು. ಆ ಮೇಲೆ ಅಧ್ಯಕ್ಷರು ಬಹುಮಾನ ವಿತರಣೆ ಮಾಡಿದರು. ಪ್ರಾರಂಭದಲ್ಲಿ ಅಧ್ಯಕ್ಷರು ಶ್ರೀ ವಿಠ್ಠಲ ಶಾಂತಾರಾಮ ಕುಲಕರ್ಣಿಯವರು ಕೆನರಾ ಹೈಸ್ಕೂಲಿಗೆ ಸ್ಟೇಜಿನ ಉದ್ಘಾಟನೆಯನ್ನು ಮಾಡಿದರು. ವಂದನಾರ್ಪಣೆಯೊಡನೆ ಸಮಾರಂಭವು ಕೊನೆಗೊಂಡಿತು. ರಾತ್ರಿ ಭೋಜನ ಸತ್ಕಾರವಾದ ಮೇಲೆ ವಿವಿಧ ವಿನೋದಾವಳಿಗಳಿದ್ದುವು.

ತಾ. ೨೬ನೇ ಶುಕ್ರವಾರ ಬೆಳಿಗ್ಗೆ ಕೆನರಾ ಹೈಸ್ಕೂಲಿನ ಹಳೆ ವಿದ್ಯಾರ್ಥಿಗಳ ಕಲಾ ಪ್ರದರ್ಶನ ಮತ್ತು ಈಗಿನ ವಿದ್ಯಾರ್ಥಿಗಳ ಕೈಗಾರಿಕೆಯ ವಸ್ತು ಪ್ರದರ್ಶನವು ಶ್ರೀ ಕಾಶೀ ಮಠಾಧೀಶ್ವರ ಶ್ರೀ ಸುಕೃತೀಂದ್ರತೀರ್ಥ ಸ್ವಾಮಿಜಿಯವರಿಂದ ತೆರೆಯಲ್ಪಟ್ಟಿತು. ಈ ಪ್ರದರ್ಶನವು ಮುಂದಿನ ದಿನಗಳಲ್ಲಿ ಪ್ರೇಕ್ಷಕರಿಗೆ ನೋಡಲು ಅನುಕೂಲ ಮಾಡಲಾಗಿತ್ತು.

ಶ್ರೀ। ಎ. ಶ್ರೀನಿವಾಸ ಪೈಗಳವರ ವಿಶೇಷ ಸೇವಾ ಕಾರ್ಯವನ್ನು ಮೆಚ್ಚಿ, ಶ್ರೀ ಕಾಶೀ ಮಠಾಧೀಶ್ವರರು, ಈ ಸಂ...

ಡಾ। ಎಂ. ಕೇಶವ ಪೈಗಳು

ಕೆನರಾ ಹೈಸ್ಕೂಲ್ ಸುವರ್ಣೋತ್ಸವ ನಿಧಿಗೆ ಇವರೊಬ್ಬರೇ ಹದಿನೈದು ಸಾವಿರ ರೂಪಾಯಿಗಳ ನಿಧಿಯನ್ನು ಕೊಟ್ಟಿರುವರು.

...ದರ್ಭದಲ್ಲಿ ಅವರಿಗೊಂದು ಬಂಗಾರದ ಮೆಡಲನ್ನು ಆಶೀರ್ವಾದ ಪೂರ್ವಕ ಅನುಗ್ರಹಿಸಿ ಮನ್ನಿಸಿದರು.

ಶ್ರೀ। ಶ್ರೀನಿವಾಸ ಪೈಗಳ ಕರೆಸ್ಪೊಂಡೆಂಟ್ ಶಿಪ್ಪಿನ ರಜತ ಮಹೋತ್ಸವ

ಅಂದು ಸಂಜೆಗೆ ಈ ರಜತ ಮಹೋತ್ಸವವು ಶ್ರೀ। ಕೆ. ಬಿ. ಜಿನರಾಜ ಹೆಗ್ಗಡೆ ಎಂ. ಎಲ್. ಎ. (ಕೇಂದ್ರ) ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಸಮಿತಿಯ ಪರವಾಗಿ ಶ್ರೀ। ಪೈಗಳ ಸೇವೆಯ ಕುರಿತು ಮೆನೇಜರರಾದ ಶ್ರೀ। ಎಂ. ಮಾಧವ ರಾಯರು ಮಾತಾಡಿದರು. ಶಾಲೆಯ ಹಳೆ ವಿದ್ಯಾರ್ಥಿ ಸಂಘದ ಪರವಾಗಿ ಶ್ರೀ। ಎ. ಬಿ. ಶೆಟ್ಟಿ ಎಂ. ಎಲ್. ಎ.ಯವರೂ ಶಾಲೆಯ ಉಪಾಧ್ಯಾಯರ ಪರವಾಗಿ ಶಾಲಾ ಹೆಡ್ಮಾಸ್ಟರ್ ಶ್ರೀ। ಯಶವಂತ ರಾಯರೂ, ಕೆನರಾ ಹುಡುಗಿಯರ ಶಾಲೆಯ ಪರವಾಗಿ ಅದರ ಹೆಡ್ ಮಿಸ್ಟ್ರೆಸ್ ಶ್ರೀ ಎಮ್ಮಿ ಡಿಸೋಜಾ ಅವರೂ ಶ್ರೀ। ಪೈಗಳಿಗೆ ಮಾನಪತ್ರಗಳನ್ನು ಒಪ್ಪಿಸಿದರು. ಶ್ರೀ। ಪೈಗಳು ಅವುಗಳಿಗೆ ಉತ್ತರ ಹೇಳಿದ ಬಳಿಕ ಅಧ್ಯಕ್ಷರು ಶ್ರೀ। ಪೈಗಳಿಗೆ ಗುಣಕಥನ ಮಾಡಿದರು. ಶ್ರೀ। ಮಾಧವರಾಯರು ವಂದನೆಗಳನ್ನು ಅರ್ಪಿಸಿದ ಬಳಿಕ ಕೆನರಾ ಹುಡುಗಿಯರ ಶಾಲೆಯ ಹಳೆಯ ವಿದ್ಯಾರ್ಥಿನಿ ಸಂಘದ ವಾರ್ಷಿಕೋತ್ಸವವು ಶ್ರೀ। ಜಿನರಾಜ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿಯೇ ಜರಗಿತು. ಶ್ರೀಮತಿ ಎಂ. ವೆಂಕಟೇಶ ಪೈಗಳು ಬಹುಮಾನವಿತರಣೆ ನಡೆಸಿದರು. ರಾತ್ರಿ ವಿವಿಧ ವಿನೋದಾವಳಿಗಳು ಇದ್ದುವು.

ಕೆನರಾ ಹೈಸ್ಕೂಲ್ ವರ್ಧಂತಿ

ಈ ಸಮಾರಂಭವು ತಾ. ೨೭ರಲ್ಲು ಶನಿವಾರ ಸಂಜೆ ಶ್ರೀ. ಸಾಮಿ ವೆಂಕಟಾಚಲಂ ಚೆಟ್ಟಿ, ಎಂ.ಎಲ್.ಎ., (ಕೇಂದ್ರ) ಅವರ ಅಧ್ಯಕ್ಷತೆಯಲ್ಲಿ ನೆರವೇರಿತು. ಜುಬಿಲಿಗೀತೆ, ಅಧ್ಯಕ್ಷರ ಭಾಷಣದೊಡನೆ ಡಾ। ಕೆ. ಎನ್. ಕಿಣಿಯವರು ಶಾಲಾ ಶ್ರೇಯಃ ಪ್ರಾರ್ಥನೆಯನ್ನು ಮಾಡುತ್ತಾ, ತಾವು ಈ ಶಾಲಾ ವಿದ್ಯಾರ್ಥಿಯಾಗಿದ್ದಾಗ ಇರುತಿದ್ದ ಹಲವು ಉಪಾಧ್ಯಾಯರ ಶಿಸ್ತು, ತಮ್ಮ ಅಂದಿನ ವಿದ್ಯಾರ್ಥಿ ಜೀವನದ ಅನುಭವಗಳನ್ನು ಸ್ವಾರಸ್ಯವಾಗಿ ವಿವರಿಸಿದರು. ಹೆಡ್ಮಾಸ್ತರರು ಶಾಲಾ ವರದಿ ಓದಿದರು. ಶಾಲೆಯಲ್ಲಿ ಸುಮಾರು ೧೨೦೦ಕ್ಕೂ ಮೇಲ್ಪಟ್ಟು ವಿದ್ಯಾರ್ಥಿಗಳು ಓದುತ್ತಿದ್ದು, ಶಾಲೆಗೆ ಕಳೆದ ಸಲ ಸರಕಾರದ ೭ ಲಕ್ಷ ರೂಪಾಯಿಗಳ ಗ್ರಾಂಟು ದೊರಕಿದ್ದರೂ ಶಾಲೆಗೆ "ಡಿಫಿಸಿಟ್" ತಪ್ಪಿಲ್ಲವೆಂದು ಮೊದಲಾಗಿ ಹೇಳಿ ಶಾಲೆಯ ಯಾವತ್ತು ಚಟುವಟಿಕೆಗಳನ್ನು ವಿವರಿಸಿದರು. ಅಧ್ಯಕ್ಷರ ಭಾಷಣ, ವಂದನಾರ್ಪಣೆ ಬಳಿಕ ವಿವಿಧ ವಿನೋದಗಳು ಜರಗಿದುವು.

ಮಂಗಳೂರು ಕೆನರಾ ಗರ್ಲ್ಸ್ ಸ್ಕೂಲಿನ ವರ್ಧಂತ್ಯುತ್ಸವವು

ಸೋಮವಾರ ಸಂಜೆ ಶ್ರೀ। ಸತ್ಯಮೂರ್ತಿ, ಎಂ. ಎಲ್. ಎ. (ಕೇಂದ್ರ) ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ। ಕೆ. ಸದಾಶಿವ ರಾಯರು ಈ ಶಾಲೆಯ ಚಟುವಟಿಕೆಗಳನ್ನು ತಿಳಿಸಿ, ಅಧ್ಯಕ್ಷರನ್ನು ಅಧ್ಯಕ್ಷ ಸ್ಥಾನವನ್ನು ಸ್ವೀಕರಿಸುವಂತೆ ಪ್ರಾರ್ಥಿಸಿದರು. ಶ್ರೀಮತಿ ಎಚ್. ಲಕ್ಷ್ಮೀಬಾಯಿಯವರು ಶಾಲಾ ಶ್ರೇಯಃ ಪ್ರಾರ್ಥನೆ ಮಾಡಿದರು. ಶ್ರೀ। ಕೃಷ್ಣಬಾಯಿಯವರು ಶಾಲಾ ವರದಿಯನ್ನೋದಿದರು. ಅಧ್ಯಕ್ಷರು ಬಹುಮಾನ ವಿತರಣ ಮಾಡಿದ ಬಳಿಕ ಭಾಷಣವಾರಂಭಿಸಿ, ಹೆಣ್ಣು ಮಕ್ಕಳ ಪ್ರಾಶಸ್ತ್ಯವನ್ನು ಪ್ರಸ್ತಾವಿಸಿ, ಎಲಿಮೆಂಟರಿ ಶಾಲೆಗಳಲ್ಲಿ ಕಲಿತವರಿಗೆ ನಾಲ್ಕನೇ ಫಾರ್ಮಿಗೆ ಸೇರಲು ತೊಡಕಿರಬಾರದೆಂದೂ, ಕೆನರಾ ಹೈಸ್ಕೂಲೂ, ಈ ಬಾಲಿಕಾ ಶಾಲೆಯೂ ಬೇರೆಬೇರೆಯಾಗಿರದೆ ಒಂದೇ ಆಗಿ ಸೇರಬೇಕೆಂದೂ ಹೇಳಿದರು. ರಾತ್ರಿ ವಿನೋದ ಅಭಿನಯವಿತ್ತು.

ವ್ಯಾಯಾಮ ಪ್ರದರ್ಶನ

ತಾ। ೩೦ರಂದು ಸಂಜೆ, ಸುವರ್ಣೋತ್ಸವದ ಕಾರ್ಯಕ್ರಮಗಳ ಅಂಗವಾಗಿ, ಸ್ಥಳೀಯ ಬಾಲಮಾರುತಿ ವ್ಯಾಯಾಮ ಮಂಡಳಿ ಮತ್ತು ಬಂಟ್ವಾಳ ಯಶವಂತ ವ್ಯಾಯಾಮ ಶಾಲಾ ಇವರ ಬೇರೆ ಬೇರೆ ವ್ಯಾಯಾಮ ಪ್ರದರ್ಶನಗಳು ಇದ್ದುವು. ಪ್ರೇಕ್ಷಕರನ್ನು ತುಂಬಾ ಹರ್ಷಗೊಳಿಸಿತು. ಬಾಲಮಾರುತಿ ಮತ್ತು ಯಶವಂತ ವ್ಯಾಯಾಮ ಶಾಲೆಗಳ ಸಂಚಾಲಕರು ತುಂಬಾ ಪ್ರಶಂಸಾರ್ಹರಾಗಿರುವರು. ಬಂಟ್ವಾಳದಂಥ ಸಣ್ಣ ಪಟ್ಟಣಗಳಲ್ಲಿಯೂ ಇಷ್ಟು ಕುಶಲವಾದ ವ್ಯಾಯಾಮ ಶಾಲೆಗಳನ್ನು ನಡೆಸಿಕೊಂಡು ಬರುವವರನ್ನು ಮಹಾಜನರು ಪ್ರೋತ್ಸಾಹಿಸುವುದು ಅತ್ಯವಶ್ಯವಿದೆ.

ಜಿಲ್ಲಾ ಸಮಾಚಾರಗಳು

ಮಂಗಳೂರು

ನಿಷೇಧ ಸಭೆ–ಕಯ್ಯೂರು ಮೊಕದ್ದಮೆಯ ಅಪರಾಧಿಗಳಲ್ಲಿ ಒಬ್ಬನಿಗೆ ಪೋಲೀಸಿನವರು ತಾ. ೨೪ರಲು ಹೊಡೆದು ಗಾಯಗೊಳಿಸಿದನೆಂಬ ನಿಮಿತ್ತವಾಗಿ ಮೈದಾನಿನಲ್ಲಿ ಸಾರ್ವಜನಿಕ ಸಭೆಯೊಂದು ಶ್ರೀ. ಎಸ್. ಎನ್. ಹೊಳ್ಳರ ಅಧ್ಯಕ್ಷತೆಯಲ್ಲಿ ತಾ. ೨೬ರಲ್ಲಿ ಸೇರಿ ನಿಷೇಧವನ್ನು ಸೂಚಿಸಿತು. ಅಂದು ಶ್ರೀ.ಗಳಾದ ಕೇಶವ ಕಾಮತ್, ಕೆ. ಕೃಷ್ಣರಾವ್, ಕು. ಶಿವರಾವ್ ಇವರು ಭಾಷಣಗಳನ್ನಿತ್ತರು. ಕೈದಿಗೆ ಪೋಲೀಸಿನವರು ಹೊಡೆದ ವಿಷಯ ಜಿಲ್ಲಾರ ಮುರಡೆ ವಕೀಲ್ ಶ್ರೀ. ರಂಗರಾಯರು ಒಂದು ಪಿರ್ಯಾದು ದಾಖಲು ಮಾಡಿರುವರೆಂದೂ ತಿಳಿದು ಬರುತ್ತದೆ.

ಸತ್ಯಮೂರ್ತಿಗಳ ಸಾರ್ವಜನಿಕ ಭಾಷಣ–ಶ್ರೀ. ಸತ್ಯಮೂರ್ತಿಗಳು ತಾ. ೨೮ರಂದು ಸಂಜೆ ಮೈಲಿನಲ್ಲಿ ಮಂಗಳೂರಿಗೆ ಬಂದವರನ್ನು ಆದರದಿಂದ ಕಾಂಗ್ರೆಸು ಮುಖಂಡರೂ ಇತರ ಮಹನೀಯರೂ ಸ್ವಾಗತಿಸಿ ಸತ್ಕರಿಸಿದರು. ಆ ದಿನ ಸಂಜೆ ಮೈದಾನಿನಲ್ಲಿ ಶ್ರೀ. ದಾಮೋದರ ಬಾಳಿಗರ ಅಧ್ಯಕ್ಷತೆಯಿಂದ ಸಾರ್ವಜನಿಕ ಭಾಷಣವಿತ್ತು. ಸತ್ಯಮೂರ್ತಿಗಳು ಪ್ರಕೃತ ಪರಿಸ್ಥಿತಿಯಲ್ಲಿ ಕಾಂಗ್ರೆಸಿನವರು ಪಾರ್ಲಿಮೆಂಟರಿ ಕಾರ್ಯಕ್ರಮವನ್ನು ಅಂಗೀಕರಿಸುವುದರ ಅವಶ್ಯಕತೆಯ ವಿಚಾರ ಭಾಷಣವಿತ್ತರು. ಪ್ರೇಕ್ಷಕರು ತುಂಬಾ ಮಂದಿ ನೆರೆದಿದ್ದರು. ಮರುದಿನ ಪ್ರಾತಃಕಾಲ ಕಾಂಗ್ರೆಸ್ ಕಚೇರಿಯಲ್ಲಿ ಸತ್ಯಮೂರ್ತಿಗಳಿಗೆ ಸತ್ಕಾರ ಕೂಟವಿತ್ತು. ಜಿಲ್ಲಾ ಕಾಂಗ್ರೆಸ್ ಮುಖಂಡರು ಸತ್ಯಮೂರ್ತಿಗಳೊಡನೆ ವಿಚಾರ ವಿನಿಮಯ ಮಾಡಿದರು.

ತೈಲ ಚಿತ್ರ ಅನಾವರಣ

ಕೆನರಾ ಹೈಸ್ಕೂಲಿನ ಅಧ್ಯಾಪಕರಲ್ಲೊಬ್ಬರಾಗಿದ್ದು, ಮದ್ರಾಸು ಪ್ರಾಂತದ ಪ್ರಖ್ಯಾತ ಕ್ರಿಕೆಟ್ ಆಟಗಾರರೆಂದು ಪ್ರಸಿದ್ಧಿ ಪಡೆದ ದಿವಂಗತ ಕೃಷ್ಣಪ್ಪನವರ ಭಾವಚಿತ್ರ ಅನಾವರಣೋತ್ಸವವು ಕೆನರಾ ಹೈಸ್ಕೂಲಿನಲ್ಲಿ ತಾ. 27ರಂದು ಡಾ| ಕೆ. ಎನ್. ಕಿಣಿಯವರಿಂದ ನೆರವೇರಿಸಲ್ಪಟ್ಟಿತು. ಶ್ರೀ ಎಂ. ಎ. ಕಾಮತರು ದಿವಂಗತರ ಗುಣಕಥನ ಮಾಡಿದರು.

"ವಂದೇ ಮಾತರಂ" ೨ನೇ ವಾರ

ಸ್ಥಳೀಯ ಬಾಲಾಜಿ ಟಾಕೀಸಿನಲ್ಲಿ 'ವಂದೇ ಮಾತರಂ' ಎಂಬ ತೆಲುಗು ಸಾಮಾಜಿಕ ಚಿತ್ರವು ಎರಡನೇ ವಾರ ನಡೆಯುತ್ತಿದೆ. ದಕ್ಷಿಣ ಭಾರತ ಚಿತ್ರಗಳು ಮಂಗಳೂರಲ್ಲಿ ಎರಡನೆಯ ವಾರ ನಡೆದಿರುವುದು ಇದೇ ಮೊದಲನೆಯ ಸಾರಿ ಎಂಬುದಾಗಿ ಹೇಳಬಹುದು. ಬಾಲಾಜಿಯಲ್ಲಿ ಬೇಗನೇ 'ಪುನರ್ಮಿಲನ' ಚಿತ್ರವು ಪ್ರದರ್ಶಿತವಾಗುವುದೆಂದೂ ತಿಳಿದುಬರುತ್ತದೆ.

ಗೌಡಸಾರಸ್ವತ ಬ್ರಾಹ್ಮಣ ವೈದಿಕರ ಸಂಘ

ಶ್ರೀ ವೆಂಕಟರಮಣ ದೇವಸ್ಥಾನ, ಮಂಗಳೂರು. ತಾ. 28ರಂದು ಈ ಸಂಘದ ವಾರ್ಷಿಕೋತ್ಸವವು ಮತ್ತು ಸಂಘದ ಕಡೆಯಿಂದ ಸ್ಥಾಪಿಸಲ್ಪಟ್ಟ ಶ್ರೀಮತ್ ವರದೇಂದ್ರ ವಾಚನಾಲಯದ ಉದ್ಘಾಟನಾ ಸಮಾರಂಭವು ಶ್ರೀ. ಅಮ್ಮೆಂಬಲ ಶ್ರೀನಿವಾಸ ಪೈಗಳವರ ಅಧ್ಯಕ್ಷತೆಯಲ್ಲಿ ಸ್ಥಳೀಯ ಶ್ರೀ ವೆಂಕಟ್ರಮಣ ದೇವಸ್ಥಾನದಲ್ಲಿರುವ ಶ್ರೀ. ಶ್ರೀನಿವಾಸ ನಿಗಮಾಗಮ ಪಾಠಶಾಲೆಯಲ್ಲಿ ಜರಗಿತು.

ಶ್ರೀಯುತರುಗಳಾದ ಎಮ್. ವೆಂಕಟೇಶ ಪೈ, ಎಂ. ಗೋಪಾಲ ಭಟ್ಟ, ಗೋಕರ್ಣ ಮಾಧವ ಭಟ್ಟ, ಎಂ. ಸುಬ್ಬರಾವ್, ಎಂ. ರಾಮ ಹೆಗ್ಡೆ, ಎಂ. ಆರ್. ಭಟ್ಟ, ಶ್ರೀ. ಬಿ. ನಾರಾಯಣ ಬಾಸಗರೇ ಮೊದಲಾದ ಮಹನೀಯರು ಸಂಘದ ಅಭಿವೃದ್ಧಿ ಕುರಿತು ಭಾಷಣ ಮಾಡಿದರು. ಸಂಘದ ಕಾರ್ಯದರ್ಶಿಗಳಾದ ಶ್ರೀ. ಗುರ್ಪುರ ದತ್ತಾತ್ರೇಯ ಭಟ್ಟರು ಸಂಘದ ವಾರ್ಷಿಕ ವರದಿಯನ್ನೂ, ಇದರ ಅಧ್ಯಕ್ಷರಾದ ಎಂ. ಕೇಶವ ಭಟ್ಟರು ತಮ್ಮ ಉಪನ್ಯಾಸವನ್ನು ಓದಿದರು. ಅಧ್ಯಕ್ಷರಾದ ಶ್ರೀ. ಎ. ಶ್ರೀನಿವಾಸ ಪೈಗಳವರು ಸಂಘದ ಚಟುವಟಿಕೆಗಳನ್ನೂ ಅಭಿವೃದ್ಧಿಯನ್ನು ಕುರಿತು ಪ್ರಶಂಸಿಸಿದರು.

ಉಪಾಧ್ಯಕ್ಷರಾದ ಶ್ರೀ. ಬಂಟ್ವಾಳ ಜನಾರ್ದನ ಭಟ್ಟ ಧನ್ಯವಾದಗಳೊಡನೆ ಸಭೆಯು ಮುಕ್ತಾಯ ಹೊಂದಿತು.

ಕುಂಬಳೆ

ಹರಿಜನ ಸೇವೆ–ತಾ. ೨೪ರಂದು ಇಚ್ಲಂಗೋಡು ಐಡೆಡ್ ಶಾಲೆಗೆ ಹರಿಜನರನ್ನು ತೆಗೆದುಕೊಳ್ಳುವ ವಿಚಾರದಲ್ಲಿದ್ದ ವಿವಾದವನ್ನು ತೀರಿಸಲು ಊರವರ ಸಭೆಯು ಶ್ರೀ. ದೇವಪ್ಪಾಳ್ವರ ಅಧ್ಯಕ್ಷತೆಯಲ್ಲಿ ಕೂಡಿ ಶ್ರೀ.ಗಳಾದ ನಾರಾಯಣ ಕಿಲ್ಲೆ, ಜಗನ್ನಾಥ ರೈಗಳು ಭಾಷಣವಿತ್ತು, ಊರವರು ಹರಿಜನರನ್ನು ತೆಗೆದುಕೊಳ್ಳಲು ಆಕ್ಷೇಪಿಸುವುದಿಲ್ಲವಾಗಿ ತೀರ್ಮಾನವಾಯಿತು.

ಕುಂಬಳೆಯಲ್ಲಿ ಹರಿಜನರಿಗೆ ಮಧ್ಯಾಹ್ನ ಊಟದ ಏರ್ಪಾಡಿಗಾಗಿ ತಾ. ೨೪ರಂದು ಶ್ರೀ. ನಾರಾಯಣ ಕಿಲ್ಲೆಯವರು ಧನಸಂಗ್ರಹ ಮಾಡಿರುವರು. ರೂ. ೨೨ ವಸೂಲಾಗಿರುತ್ತದೆಂದು ತಿಳಿದಿದೆ.

ಕಾಸರಗೋಡು

ಯಕ್ಷಗಾನ

ಕೂಡ್ಲುಕೋಡು "ಶ್ರೀ. ಮಹಾದೇವಿ ಕೃಪಾಪೋಷಿತ ಯಕ್ಷಗಾನ ಸಂಘ"ದ ಪ್ರಥಮ ವಾರ್ಷಿಕೋತ್ಸವವು ಶ್ರೀಯುತ ಬಿ. ಎಸ್. ಕಕ್ಕಿಲ್ಲಾಯ ಅಧ್ಯಕ್ಷತೆಯಲ್ಲಿ ತಾ. 26-12-41 ನೇ ಶುಕ್ರವಾರ ದಿನ ಜರಗಿತು. ಅಧ್ಯಕ್ಷರ ಮತ್ತು ಸಭಿಕರ ಭಾಷಣಾನಂತರ "ಸೀತಾಪಹಾರ ಮತ್ತು ಸುಗ್ರೀವ ಸಖ್ಯ" ಎಂಬ ಕಥಾಭಾಗವು ಪ್ರದರ್ಶಿಸಲ್ಪಟ್ಟಿತು.

ವರ್ಧಂತಿ–ತಾ. ೨೧ರಲ್ಲು ಕಾಸರಗೋಡು ಹಿಂದೂ ಮಹಾಸಭೆಯ ವಾರ್ಷಿಕೋತ್ಸವವು ಶ್ರೀ. ಮಲ್ಲಿಕಾರ್ಜುನ ದೇವಸ್ಥಾನದ ಮುಂಭಾಗದಲ್ಲಿ ಶ್ರೀ. ಕೆ. ವಿ. ರಾಮವರ್ಮ ರಾಜಾ, ಎಡ್ವಕೇಟ್, ಇವರ ಅಧ್ಯಕ್ಷತೆಯಲ್ಲಿ ಜರಗಿತು.

ಶಿರ್ವ

ಆರೋಗ್ಯ ಶಿಶು ಸಪ್ತಾಹ–ಶಿರ್ವಾ ಪಂಚಾಯತ್ ಬೋರ್ಡಿನಿಂದ ಶಾಲೆಗಳ ಹಾಗೂ ಮಹಾಜನರ ಸಹಕಾರ ಪಡೆದು ಇದೇ ತಾ. 20ರಿಂದ 3 ದಿನ ಆರೋಗ್ಯ ಮತ್ತು ಶಿಶು ಸಪ್ತಾಹವನ್ನು ಆಚರಿಸಲ್ಪಟ್ಟಿತು.

ತಾ. 20ರಂದು ಸಾವಿರಕ್ಕೆ ಮೇಲ್ಪಟ್ಟ ಬಾಲಕ ಬಾಲಕಿಯರು, ಅಧ್ಯಾಪಕ ಅಧ್ಯಾಪಕಿಯರೊಡನೆ ಮಂಚಕಲ್ಲು ಪೇಟೆಯನ್ನೊಳಗೊಂಡ ಅರ್ಧ ಮೈಲು ವಿಸ್ತೀರ್ಣದ ವರೆಗೆ ಆರೋಗ್ಯ ಗೀತೆಯನ್ನು ಹಾಡುತ್ತಾ ಮೆರವಣಿಗೆ ನಡೆಸಿದರು. ಅಸುಪಾಸಿನ ಹನ್ನೆರಡು ಶಾಲೆಯ ಮಕ್ಕಳು ಇದರಲ್ಲಿ ಭಾಗ್ಯವಹಿಸಿದ್ದರು. ನಂತರ ಮಕ್ಕಳಿಗೆ ತಿಂಡಿ ಹಂಚುವುದಿತ್ತು.

2 ವರ್ಷದೊಳಗಿನ ಮಕ್ಕಳನ್ನು ಶಿರ್ವಾ ಲೋಕಲ್ ಫಂಡ್ ಆಸ್ಪತ್ರೆಗೆ ತರಲ್ಪಟ್ಟು ಆಸ್ಪತ್ರೆ ಡಾಕ್ಟರರವರಿಂದ ಮಕ್ಕಳ ಆರೋಗ್ಯ ಪರೀಕ್ಷೆ ಮಾಡಿ ಉತ್ತಮ ಆರೋಗ್ಯವುಳ್ಳ ಮೂರು ಮಕ್ಕಳನ್ನು ಆರಿಸಲಾಯಿತು. ನಂತರ ಶಾಲಾ ಮಕ್ಕಳ ಪಂದ್ಯಾಟಗಳ ಸ್ಪರ್ಧೆ ನಡೆಸಲ್ಪಟ್ಟಿತು. ಇದರಲ್ಲಿ ಆಸುಪಾಸಿನ 10 ಶಾಲೆಯ ಮಕ್ಕಳು ಭಾಗವಹಿಸಿದ್ದರು. ಮಕ್ಕಳ ವಿವಿಧ ವಿನೋದಾವಳಿಯೊಂದಿಗೆ ಅಂದಿನ ಕಾರ್ಯಕ್ರಮ ಕೊನೆಗೊಂಡಿತು.

ತಾ. 22ರಂದು ಕಾಫಿ ಹೋಟೇಲ್, ತಿಂಡಿ ಅಂಗಡಿ ವಗೈರೆಗಳನ್ನು ಸಂದರ್ಶಿಸಿ ಆರೋಗ್ಯದ ಬಗ್ಗೆ ಉಪಯುಕ್ತ ಸೂಚನೆಯನ್ನು ಕೊಡಲಾಯಿತು. ಸಾಯಂಕಾಲ ಮಂಚಕಲ್ಲು ಪೇಟೆಯಲ್ಲಿ ಸಾರ್ವಜನಿಕ ಸಭೆಯು ಡಾಕ್ಟರ್ ಕೆ. ಕೆ. ರೈಗಳವರ ಅಧ್ಯಕ್ಷತೆಯಲ್ಲಿ ಕೂಡಿತು. ಸ್ಪರ್ಧೆಗಳಲ್ಲಿ ಗೆದ್ದವರಿಗೆ ಇನಾಮು ಹಂಚಲ್ಪಟ್ಟಿತು. ಸಭಿಕರಲ್ಲಿ ಕೆಲವರು ಮಾತನಾಡಿದ ಬಳಿಕ ಅಧ್ಯಕ್ಷರು ಭಾಷಣವಿತ್ತರು. ಪಂಚಾಯತ್ ಬೋರ್ಡ್ ಅಧ್ಯಕ್ಷರಾದ ಶ್ರೀ. ಯಸ್. ಅಣ್ಣಯ್ಯ ಹೆಗ್ಡೆಯವರು ಸಹಕರಿಸಿದ ಮಹನೀಯರಿಗೆ ಧನ್ಯವಾದಗಳನ್ನರ್ಪಿಸಿದರು.

TO OUR
Readers & Advertisers
A Happy
&
Prosperous New Year
Swadeshabhimani

ಕೆನರಾ ಚೆಂಬರ್ ಓಫ್ ಕಾಮರ್ಸಿನ ವರ್ಧಂತಿ

ಶ್ರೀ. ಸ್ವಾಮಿ ವೆಂಕಟಾಚಲಂ ಚೆಟ್ಟಿಯವರ ಭಾಷಣ

'ಇತರ ದೇಶಗಳಲ್ಲಿ ವಾಣಿಜ್ಯ ವೃತ್ತಿಯವರು, ವಿದೇಶ ವ್ಯವಹಾರ ಮತ್ತು ಒಳಗಿನ ಶಾಂತಿ ರಕ್ಷಣೆಗೆ ಹೆಚ್ಚಿನ ಹೊಣೆಗಾರರಾಗಿದ್ದಾರೆ. ಆದ್ದರಿಂದ ಈ ದೇಶವಾದರೂ ವ್ಯಾಪಾರೀ ಸಂಘಗಳ ಚಟುವಟಿಕೆಯ ಕಡೆಗೆ ಆಶಾದೃಷ್ಟಿಯಿಂದ ನೋಡಿದರೆ ವಿಶೇಷವಲ್ಲ. ನಮಗೆ ಅನೇಕ ಸಮಸ್ಯೆಗಳಿವೆ; ನಾವದನ್ನು ಬಗೆಹರಿಸಬೇಕು. ಆದ್ದರಿಂದು ವಾಣಿಜ್ಯ ಬುದ್ಧಿಯ ಜನರು ಸಂದರ್ಭವನ್ನರಿತುಕೊಂಡು ದೇಶದ ವ್ಯವಹಾರಗಳಲ್ಲಿ ಆಸಕ್ತಿವಹಿಸಿ ಕೆಲಸಮಾಡುವುದು ಅವಶ್ಯವಾಗಿದೆ.

–ಹೀಗೆಂದು ಶ್ರೀ. ಸಾಮಿ ವೆಂಕಟಾಚಲಂ ಚೆಟ್ಟಿ ಎಂ. ಎಲ್. ಎ. ಇವರು ಕೆನರಾ ಚೇಂಬರ್ ಓಫ್ ಕಾಮರ್ಸಿನ ವಾರ್ಷಿಕಾಧಿವೇಶನದಲ್ಲಿ ಹೇಳಿದರು. ಸಂಘವು ಜಾತೀಯ ಐಕ್ಯಸಾಧನೆಗಾಗಿ, ಬೆಲೆಯ ಹಿಡಿತಕ್ಕಾಗಿ ಯತ್ನ ಮಾಡಿದ್ದನ್ನು ಕೊಂಡಾಡಿದರು. ವ್ಯಾಪಾರದಲ್ಲಿ ಸಂಶೋಧಕ ವೃತ್ತಿಯಿರುವುದರಿಂದ ಅದರ ಅಭಿವೃದ್ಧಿ ಮಾಡಿಕೊಳ್ಳಬಹುದೆಂದರು! ಇಂದು ನಾವು ಇಡೀ ಜಗತ್ತಿನ ವ್ಯವಹಾರದೊಡನೆ ಸೇರಿಕೊಂಡಿರುವುದರಿಂದ ಹೆಚ್ಚಿನ ಸುತ್ತುಮುತ್ತಲಿನ ಪರಿಸ್ಥಿತಿಗಳ ಪರಿಶೀಲನೆಯಿರಬೇಕೆಂದರು. ಬೇಂಕ್ ವ್ಯವಹಾರದ ಸೌಕರ್ಯದ ವಿಷಯಕ ಹೇಳಿದರು.

ದೇಶದ ರಾಜಕೀಯ ಪರಿಸ್ಥಿತಿಯನ್ನು ಕುರಿತು ಹೇಳುತ್ತಾ, ದೇಶದ ಉನ್ನತಿಯಲ್ಲಿ ವ್ಯಾಪಾರ ಮತ್ತು ರಾಜಕೀಯಗಳಿಗಿರುವ ಪ್ರಾಮುಖ್ಯತೆಯನ್ನು ವಿವರಿಸಿದರು. ಹಿಂದಿನ ಕಾಲದಲ್ಲಿ ಧರ್ಮದ ಸಲುವಾಗಿ ಯುದ್ಧವಾಗುತ್ತಿದ್ದರೆ ಇಂದು ವ್ಯಾಪಾರದ ಸಲುವಾಗಿ ಆಗುತ್ತದೆಯೆಂದರು. ಬರ್ಮವನ್ನು ಭಾರತದಿಂದ ಬೇರೆ ಮಾಡಿರದಿದ್ದರೆ ಇಂದು ಭಾರತಕ್ಕೆ ಯುದ್ಧ ಬಂದರತೆಯೇ ಆಗಿದೆ ಎಂದರು. ಇಂತಹ ಸಮಯದಲ್ಲಿ ಜನಪ್ರಿಯ ಸರಕಾರವಿರಬೇಕಾದುದು ಅತ್ಯಂತ ಅವಶ್ಯವೆಂದರು. ಚರ್ಚಿಲ್ ಅಮೇರಿಯವರ ಧೋರಣವನ್ನು ಖಂಡಿಸಿದರು. ಅಹಿಂಸೆ ಮತ್ತು ಸತ್ಯಾಗ್ರಹದ ವಿಷಯ ಹೇಳಿದರು–ಇಂದಿನ ಸಂದರ್ಭದಲ್ಲಿ ದೇಶದ ಹಿತಕ್ಕೆ ಆಗುವಂತೆ ನೋಡುವುದು ಕರ್ತವ್ಯವೆಂದರು. ನೆಹರುಗಳ ಸ್ವಾತಂತ್ರ್ಯ ದೃಷ್ಟಿಯ ವಿಷಯ ಎತ್ತಿ ಹೇಳಿದರು. ರಾಜಾಜಿಯ ವ್ಯವಹಾರ ನೀತಿಯನ್ನು ದಾಹರಿಸಿದರು. ರಾಜಾಜಿಯ ರಾಜಕೀಯ ದೃಷ್ಟಿ ಇಂದಿನ ಕಾಲದಲ್ಲಿ ಅವಶ್ಯವಾಗಿದೆಯೆಂದು ಸೂಚಿಸಿದರು.

ಕೆನರಾ ಚೇಂಬರ್ ಓಫ್ ಕಾಮರ್ಸ್ ವರ್ಧಂತಿ–ಕೆನರಾ ಚೇಂಬರ್ ಓಫ್ ಕಾಮರ್ಸಿನ ವಾರ್ಷಿಕ ವರ್ಧಂತ್ಯುತ್ಸವವು ಕಳೆದ ಆದಿತ್ಯವಾರ ಶ್ರೀ. ಸಾಮಿ ವೆಂಕಟಾಚಲಂ ಚೆಟ್ಟಿ ಎಂ.ಎಲ್.ಎ. (ಸೆಂಟ್ರಲ್) ಇವರ ಅಧ್ಯಕ್ಷತೆಯಿಂದ ನೆರವೇರಿತು. ಬೆಳಗ್ಗೆ ಲಘು ಫಲಾಹಾರದಿಂದ ಕಾರ್ಯಕ್ರಮವು ಆರಂಭವಾಗಿ, ಆಟ, ವ್ಯಾಪಾರಸ್ಥರ ಸಭೆಗಳಿದ್ದು ಸಂಜೆಗೆ ಸಂಘದ ಅಧ್ಯಕ್ಷ ಶ್ರೀ. ಎಂ. ಅಣ್ಣಪ್ಪ ನಾಯಕರಿಂದ ಸ್ವಾಗತ ಭಾಷಣ, ಕಾರ್ಯದರ್ಶಿ ಶ್ರೀ. ರಾಘವೇಂದ್ರ ಪೈಗಳಿಂದ ವರದಿವಾಚನ, ಮಹನೀಯರಾದ ಶ್ರೀ.ಗಳಾದ ಶ್ರೀನಿವಾಸ ಪೈ, ಡಾ. ಕೆ. ಆರ್. ಕಿಣಿ, ಜನಾಬ್ ಅಬ್ದುಲ್ ರಹಿಮ್ ಇವರ ಭಾಷಣಗಳ ಮೇಲೆ ಅಧ್ಯಕ್ಷರ ಭಾಷಣವಾಗಿ ವಿವಿಧ ವಿನೋದಾವಳಿ ಭೋಜನ ಸತ್ಕಾರಗಳೊಡನೆ ಕಾರ್ಯಕ್ರಮವು ಕೊನೆಗೊಂಡಿತು. ಚೇಂಬರ್ಸಿನವರು ಕಳೆದ ವರ್ಷ ಮಾಡಿದ ಪಲವು ಜನೋಪಯುಕ್ತ ಕಾರ್ಯಕ್ರಮಗಳ ವಿಷಯ ವರದಿಯಲ್ಲಿ ಸೂಚಿಸಲಾಗಿತ್ತು. ರಾತ್ರೆ ಬೊಂಬೆಯಾಟ ಮೊದಲಾದ ವಿವಿಧ ವಿನೋದಾವಳಿಗಳಿದ್ದುವು. ನಗರದ ಹಾಗೂ ಜಿಲ್ಲೆಯ ಅನೇಕ ಮಂದಿ ವ್ಯಾಪಾರಸ್ಥರು ಈ ಉತ್ಸವದಲ್ಲಿ ಭಾಗವಹಿಸಿದ್ದರು.

ಬಾರಕೂರು

ಇಲ್ಲಿ ಶ್ರೀ. ಶ್ರೀನಿವಾಸ ಕಲ್ಕೂರರಿಂದ ನಡೆಯಿಸಲ್ಪಡುತ್ತಿರುವ ಶ್ರೀ. ಭಾರತೀ ಸಂಗೀತ ಶಾಲೆಯ ತೃತೀಯ ವರ್ಧಂತ್ಯುತ್ಸವವು ಕಳೆದ ತಾ. 21ರಂದು ಶ್ರೀ. ಎ. ವಿ. ಎಸ್. ಹೆಬ್ಬಾರರವರ ಅಧ್ಯಕ್ಷತೆಯಲ್ಲಿ ನೆರವೇರಿತು.

ಕಾರ್ಕಳ

ಭಾಗಲ್ಪುರ ದಿನ–ಕಳೆದ ತಾ. 25ನ್ನು ಭಾಗಲ್ಪುರ ದಿನವನ್ನಾಗಿ ಆಚರಿಸಿದರು. ಕೆಲವರು ಹರತಾಳವನ್ನು ಮಾಡಿದ್ದರು. ಸಾಯಂಕಾಲ ಸಾರ್ವಜನಿಕ ಸಭೆ ಕೂಡಿತ್ತು.

ಹೆತ್ತವರ ಸಭೆ–ಬೋರ್ಡ ಎಲಿಮೆಂಟರಿ ಮಿಸ್ಸನಿಯಾ ಮತ್ತು ಹೈದರಿಯಾ ಹಿಂದುಸ್ಥಾನಿ ಶಾಲೆಗಳನ್ನು ಉತ್ತಮ ಸ್ಥಿತಿಗೆ ತರುವ ಉದ್ದೇಶದಿಂದ ಆ ಶಾಲೆಗಳ ವಿದ್ಯಾರ್ಥಿಗಳ ಹೆತ್ತವರ ಸಂಘಗಳು ಸ್ಥಾಪಿತವಾಗಿವೆ.

ಸ್ಕೌಟರ ಸಂಚಾರ–ಬೋರ್ಡ ಹೈಸ್ಕೂಲಿನ ವಿಜಯಾ ಸ್ಕೌಟ್ ದಳವು ಕ್ರಿಸಮಸ್ ರಜಾ ಕಾಲದಲ್ಲಿ ತಮ್ಮ ಸ್ಕೌಟಮಾಸ್ತರ ಶ್ರೀ. ಕೆ. ಕೊರಗ ಶೆಟ್ಟಿರವರಿಂದೊಡಗೂಡಿ ಮಂಗಳೂರು, ಬೇಕಲ, ಹೊಸದುರ್ಗ, ಕಾಸರಗೋಡು ಮೊದಲಾದ ಸ್ಥಳಗಳಿಗೆ ಸಂಚಾರ ಮಾಡಿ ಬಂದರು.

ಉಡುಪಿ

ಮುನ್ಸಿಪಲ್ ಸಭೆ–ತಾ. ೧೬ರಲ್ಲು ಕೂಡಿತು. ನಮ್ಮ ಜಿಲ್ಲೆಗೆ ಮೈಸೂರು ಸಂಸ್ಥಾನದಿಂದ ವಿದ್ಯುಚ್ಛಕ್ತಿಯನ್ನೊದಗಿಸಲು ಮೈಸೂರು ಸರಕಾರವನ್ನು ಮದ್ರಾಸು ಸರಕಾರದ ಮೂಲಕ ಪ್ರಾರ್ಥಿಸುವುದೆಂದಾಯಿತು. ಡಿಸ್ಟ್ರಿಕ್ಟ ಟ್ರಾಫಿಕ ಬೋರ್ಡಿನಿಂದ ನಿಷೇಧಿಸಲ್ಪಟ್ಟ ರಸ್ತೆಗಳಲ್ಲೊಂದಾದ ಮಾರುತಿ ಓಣಿಯಲ್ಲಿ ಬಸ್ಸುಗಳು ಓಡಾಡುತ್ತಿರುವುದನ್ನು ನಿಲ್ಲಿಸುವಂತೆ ತಂದ ಠರಾವು ಸ್ವೀಕೃತವಾಗಲಿಲ್ಲ. ಫೆಬ್ರವರಿ ೧ರಿಂದ ಆಹಾರ ವಸ್ತುಗಳನ್ನು ಮಾರಾಟ ಮಾಡುವ ಹಕ್ಕು ಈ ಮುನ್ಸಿಪಾಲಿಟಿಯಲ್ಲಿ ಜಾರಿಗೆ ತರುವುದಾಗಿ ಸಕಾಲದಲ್ಲಿ ಲೈಸನ್ಸು ಅರ್ಜಿ ಮಾಡದಿದ್ದಲ್ಲಿ ಸೇಕಡಾ ೧೨ರಂತೆ ಜಾಸ್ತಿ ಫೀಸು ವಸೂಲು ಮಾಡಲು ನಿರ್ಧಾರವಾಯಿತು.

ಕುಂದಾಪುರ

ವರ್ಧಂತಿ–ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ ವರ್ಧಂತಿಯು ಶ್ರೀ. ಆರ್. ಪ್ರಸಾದ್ ಐ.ಸಿ.ಎಸ್.ರವರ ಅಧ್ಯಕ್ಷತೆಯಿಂದ ನೆರವೇರಿತು. ಈ ಭವನಕ್ಕೆ ಸ್ವತಂತ್ರ ಕಟ್ಟಡದ ಬಗ್ಗೆ ಸೂಚನೆ ಮಾಡಲಾಗಿತ್ತು.

ಮುಷ್ಕರ–ಇಲ್ಲಿ ಮಹಾಲಕ್ಷ್ಮಿ ಪ್ರೆಸ್ ಕೆಲಸಗಾರರು ಯುದ್ಧಭತ್ತೆ ಸಿಗಬೇಕೆಂದು ಬೇಡಿ ತಾ. ೧೬ರಂದು ಮುಷ್ಕರ ಹೂಡಿದ್ದು, ಮರುದಿನ ಮಧ್ಯಸ್ಥಿಕೆಯಿಂದ ಇತ್ಯರ್ಥವಾಯಿತೆಂದು ತಿಳಿಯುತ್ತದೆ.

ಸ್ಥಾಪನೆ: ೧೯೦೬.

ಕೆನರಾ ಬ್ಯಾಂಕ್ ಸಪ್ಲಿಮೆಂಟ್



ಕೆನರಾ ಬ್ಯಾಂಕಿನ ಸ್ಥಾಪಕರಾದ

ದಿವಂಗತ ಶ್ರೀ ಅಮ್ಮೆಂಬಳ ಸುಬ್ರಾವ್ ಪೈಗಳವರ ಜೀವನ ಚರಿತ್ರೆ!

by Sri A. Srinivasa Pai B.A., B.L. President of the Bank.

ನಮ್ಮ ಕೆನರಾ ಬ್ಯಾಂಕಿನ ಸ್ಥಾಪಕರು ಸಂದುಹೋಗಿ ಇಂದಿಗೆ ಸುಮಾರು ೩೫ ವರುಷಗಳು ಕಳೆದುಹೋದುವು. ಈ ದೊಡ್ಡ ಸಮಯಾಂತರದಲ್ಲಿ ನಮ್ಮ ಈ ತಾಯಿನಾಡಿನ ರಾಜಕೀಯ ಮತ್ತು ಸಾಮಾಜಿಕ ಪರಿಸ್ಥಿತಿಯಲ್ಲಿ ಮಹತ್ವದ ಮಾರುಪಾಟಗಳು ಆಗಿಹೋಗಿದೆಯೆಂಬುದು ಎಲ್ಲರಿಗೂ ತಿಳಿದ ಅಂಶ. ನಮ್ಮ ವಾಚಕವರ್ಗದಲ್ಲಿ ಬಹುಮಂದಿಗೆ ಮಾನ್ಯಸ್ಥಾಪಕರ ಕಾಲೀನ ಜೀವಿತಕ್ರಮವೂ ಪರಿಭಾವನೆಯ ಅಭ್ಯಾಸವೂ ಯಾವ ರೀತಿಯಲ್ಲಿತ್ತೆಂಬುದರ ಕುರಿತು ಸ್ವಂತ ಅರಿವು ಇಲ್ಲವೆಂದೆನ್ನಬಹುದು. ಆದುದರಿಂದ ಶ್ರೀ. ಸುಬ್ಬರಾಯರ ಜೀವಿತ ವೃತ್ತಾಂತವನ್ನೂ ಅವರು ನಿರ್ವರ್ತಿಸಿದ ಕಾರ್ಯಗಳನ್ನೂ ಗ್ರಹಣಮಾಡುವುದೆಂದರೆ ನಮ್ಮ ದೇಶದ ಆ ಕಾಲದ ಪರಿಸ್ಥಿತಿಯನ್ನು ನಮ್ಮ ಮಾನಸಿಕ ರಾಜ್ಯದಲ್ಲಿ ಕಲ್ಪಿಸಬೇಕಾಗುವುದು.

ನಮ್ಮ ಚರಿತ್ರ ನಾಯಕರು ಶಾಲಾ ಮತ್ತು ಕೊಲೇಜ್ ವಿದ್ಯಾಭ್ಯಾಸಂಗದಲ್ಲಿ ಅತ್ಯಂತ ನಿಪುಣರೆಂಬದಾಗಿ ಖ್ಯಾತಿಹೊಂದಿದ್ದರು. ಆದರೆ ಚಿಕ್ಕ ವಯಸ್ಸಿನಲ್ಲಿ ಮಾತ್ರ ಇತರ ದೊಡ್ಡ ಮನುಷ್ಯರಂತೆ ಶಾಲಾ ಪಾಠಗಳಿಗಿಂತ ಕೀಟಲೆಗಳ ಕಡೆಗನೇ ಮಾನ್ಯರ ಮನಸ್ಸು ಹೆಚ್ಚಿಗೆ. ೧೮೭೦ನೆಯ ಇಸವಿಯಲ್ಲಿ ಪ್ರೌಢ ವಿದ್ಯಾಭ್ಯಾಸಕ್ಕಾಗಿ ಮದ್ರಾಸಿನ ಪ್ರೆಸಿಡೆನ್ಸಿ ಕೊಲೇಜಿಗೆ ಪ್ರವೇಶವಾಗಿ ಬಿ. ಎ. ಪರೀಕ್ಷೆಯಲ್ಲಿ ಸಂಸ್ಥಾನದ ದ್ವಿತೀಯ ಸ್ಥಾನವನ್ನು ಪಡೆದದ್ದೂ ಆಯಿತು. ಆ ಪರೀಕ್ಷೆಯಲ್ಲಿ ಪ್ರಥಮ ಸ್ಥಾನವನ್ನು ಪಡೆದವರೆಂದರೆ ದಕ್ಷಿಣ ಹಿಂದೂಸ್ಥಾನದ ಪ್ರಥಮ ಐ. ಸಿ. ಎಸ್. ಪದವೀಧರರಾದ ಸ್ವರ್ಗವಾಸಿ ರತ್ನವೇಲು ಚೆಟ್ಟಿಯಾರರು. ಕೆಲವು ಕಾಲ ಮೈಸೂರು ಹ್ಯಾಕೋರ್ಟು ನ್ಯಾಯಾಧೀಶರಾದ ಶ್ರೀ. ರಾಮಚಂದ್ರ ಐಯ್ಯರರೂ ನಮ್ಮ ಚರಿತ್ರ ನಾಯಕರೂ ಮದ್ರಾಸಿನಲ್ಲಿ ಸಹಪಾಠಿಗಳೂ ಮೆಚ್ಚು ಮಿತ್ರರೂ ಆಗಿದ್ದರೆಂಬುದು ನಮ್ಮ ಮೈಸೂರು ನಾಡಿನ ವಾಚಕರಿಗೆ ಅನುರಂಜಿಸಲಿಕ್ಕೆ ಸಾಕು. ಬಿ. ಎ. ಪರೀಕ್ಷೆಯಲ್ಲಿ ತಪ್ಪಿಹೋದ ಪದವಿಯು ಮಾನ್ಯರಿಗೆ ಬಿ. ಎಲ್. ಪರೀಕ್ಷೆಯಲ್ಲಾದರೂ ಲಭಿಸಿತು. ಆ ಪರೀಕ್ಷೆಯಲ್ಲಿ ಅವರ ಹೆಸರು ಇಡೀ ಸಂಸ್ಥಾನದ ತೇರ್ಗಡೆ ಪಟ್ಟಿಯಲ್ಲಿ ಪ್ರಥಮಸ್ಥಾನವನ್ನು ಅಲಂಕರಿಸಿತು. ಬಿ. ಎಲ್. ಕ್ಲಾಸಿನಲ್ಲಿ ಕಲಿಯುವಾಗ ಮಾನ್ಯರ ವಿಚಕ್ಷಣತೆಯೂ ಬುದ್ಧಿಪ್ರಭೆಯೂ ಆಗಿನ ಮದ್ರಾಸ್ ಹ್ಯಾಕೋರ್ಟಿನ ನ್ಯಾಯಾಧೀಶರಾಗಿದ್ದ ಹೊಲ್ಲೋವೇ ದೊರೆಗಳ ದೃಷ್ಟಿಪಥದಲ್ಲಿ ಬಿದ್ದು, ದೊರೆಗಳ ಅಮೂಲ್ಯ ಕಾನೂನು ಪುಸ್ತಕ ಭಂಡಾರದ ಉಪಯೋಗವೂ, ಪ್ರತಿ ಶನಿವಾರ ನ್ಯಾಯಮೂರ್ತಿಗಳು ವಿದ್ಯಾರ್ಥಿಗಳೊಡನೆ ನಡೆಸುತ್ತಿದ್ದ ಬೋಧಪರ ಮತ್ತು ಸೊಗಸಾದ ಸಂಭಾಷಣೆಗಳ ಅಮೂಲ್ಯ ಲಾಭವೂ ಮಾನ್ಯರಿಗೆ ದೊರಕಿತು. ಕಡೆಗೆ ದೊರೆಗಳಿಗೆ ನಮ್ಮ ಸುಬ್ಬರಾಯರ ಮೇಲೆ ಎಷ್ಟೊಂದು ಪ್ರೀತಿ ಬಿತ್ತೆಂದರೆ ಅವರನ್ನು ಉಚ್ಚ ಶಿಕ್ಷಣಕ್ಕೋಸ್ಕರ ವಿಲಾಯಿತಿಗೆ ತನ್ನೊಡನೆ ಕರಕೊಂಡು ಹೋಗುವ ಇಚ್ಛೆಯನ್ನೂ ವ್ಯಕ್ತಪಡಿಸಿದರಂತೆ. ಆದರೆ ಅಂದಿನ ಗಡುಸು ಸಾಮಾಜಿಕ ಕಟ್ಟಳೆಗಳಿಂದ ಅದು ಸಾಧ್ಯವಾಗಲಿಲ್ಲ.

ವಿದ್ಯಾಭ್ಯಾಸಂಗವು ಮುಗಿದ ತರುವಾಯ ಮಾನ್ಯರು ಮಂಗಳೂರಿನಲ್ಲಿ ಹ್ಯಾಕೋರ್ಟು ವಕೀಲ ವೃತ್ತಿಯನ್ನು ಪ್ರಾರಂಭಿಸಿದರು. ಆದರೆ ಸಿವಿಲ್ ವ್ಯವಹರಣೆಗಳನ್ನಲ್ಲದೆ ಕ್ರಿಮಿನಲ್ ಖಟ್ಲೆಗಳಲ್ಲಿ, ಪ್ರಾರಂಭದಿಂದ ಅಂತ್ಯದ ವರೆಗೆ ವಕಾಲತು ಸ್ವೀಕರಿಸಲಿಲ್ಲ. ವಕೀಲಿ ವೃತ್ತಿಯಲ್ಲಿ ಸುಬ್ಬರಾಯರು ತುಂಬಾ ಶ್ರೇಯಸ್ಸನ್ನೂ ದ್ರವ್ಯಸಂಗ್ರಹವನ್ನೂ ಮಾಡಿ ಆಗಿನ ಪ್ರಾಮುಖ್ಯ ವಕೀಲರಲ್ಲಿ ಶ್ರೇಷ್ಠ ಪದವಿಯನ್ನು ಸಂಪಾದಿಸಿದರು. ಆದರೆ ಮಾನ್ಯರ ಒಂದು ವಿಚಿತ್ರ ನಡವಳಿ ಎಂದರೆ ಇತ್ತಂಡದ ಕಕ್ಷಿಗಾರರನ್ನು ಸಮಜಾಯಿಸಿ ರಾಜಿಯಿಂದಲೇ ಖಟ್ಲೆಗಳನ್ನು ಇತ್ಯರ್ಥಮಾಡುವುದೇ. ಇದರಿಂದಾಗಿ ನಾಡಿನ ಹಲವಾರು ಸಂಭಾವಿತ ಕುಟುಂಬಗಳು ಕೋರ್ಟು ಕಚೇರಿಗಳ ನಷ್ಟಕಷ್ಟಗಳಿಂದ ರಕ್ಷಿಸಲ್ಪಟ್ಟುವು.

೧೮೯೧ರಲ್ಲಿ ಮಾನ್ಯರು ಕೆಲವು ಉತ್ಸಾಹೀ ತರುಣರ ಒಂದು ಪಂಗಡವನ್ನು ಪ್ರೇರಿಸಿ ತನ್ನ ಮುಖಂಡತನದಿಂದ ಮಂಗಳೂರಿನಲ್ಲಿ ಕೆನರಾ ಹೈಸ್ಕೂಲ್ ಎಂಬ ಹೆಸರಿನಿಂದ ಒಂದು ವಿದ್ಯಾಪೀಠವನ್ನು ನಿರ್ಮಾಣ ಮಾಡಿದರು. ಇಂದು ಈ ಶಾಲೆಯು ಸಂಸ್ಥಾನದಲ್ಲಿ ಹೆಸರುವಾಸಿಯಾಗಿ ತನ್ನ ಜೀವಿತದ ೫೦ ವರ್ಷದ ಸುವರ್ಣ ಮಹೋತ್ಸವವನ್ನು ಆಚರಿಸುತ್ತಿದೆ. ಇದಾದ ಕೆಲವು ವರ್ಷಗಳಲ್ಲಿಯೇ ಕೆನರಾ ಗರ್ಲ್ಸ್ ಸ್ಕೂಲ್ ಎಂಬ ಹೆಸರಿನಿಂದ ಹುಡುಗಿಯರ ಶಾಖೆಯೊಂದನ್ನು ಸ್ಥಾಪಿಸಿದರು. ಸ್ತ್ರೀ ವಿದ್ಯಾಭ್ಯಾಸವೇ ದೇಶದ ಉನ್ನತಿ ಮಾರ್ಗವೆಂಬುದನ್ನು ಮಾನ್ಯರು ಸುಮಾರು ಅರ್ಧ ಶತಮಾನದ ಹಿಂದೆಯೇ ಲಕ್ಷಿಸಿ ಆಗಿನ ಕೆಲವು ಹಿಂದು ವಿತಂತುಗಳನ್ನು ಪೂನೆಯ ವಿಧವಾಶ್ರಮಕ್ಕೆ ಕಳುಹಿಸಿದರು.

ಆಗ್ಗೆ ದಕ್ಷಿಣ ಕನ್ನಡಾ ಜಿಲ್ಲೆಯಲ್ಲಿ ವ್ಯಾಪಾರಸ್ಥರಿಗೆ ಅನುಕೂಲತೆಗಳನ್ನು ಒದಗಿಸಿಕೊಡುವ ಬರೇ ಒಂದೇ ಒಂದು ಬ್ಯಾಂಕು ಇತ್ತು. ಅದೆಂದರೆ ಇಂದಿನ ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯದ ಪುರೋಗಾಮಿಯಾದ ಬೇಂಕ್ ಆಫ್ ಮದ್ರಾಸ್ ಎಂಬ ಸಂಸ್ಥೆಯಾಗಿತ್ತು. ಸಂಸ್ಥೆಯು ಪರಿಮಾಣಕ್ಕೆ ಅನುಗುಣವಾಗಿ ಆ ಬ್ಯಾಂಕು ದೊಡ್ಡ ವರ್ತಕರಿಗೂ ಶ್ರೇಷ್ಠತರಗತಿಯ ಗೃಹಸ್ಥರಿಗೂ ಮಾತ್ರ ಸಾಲಗಳನ್ನು ಕೆಲವೆಡೆ ೧೫ರಿಂದ ೧೮ರ ಸಲೆಯ ಬಡ್ಡಿಯಿಂದ ಕೊಡುವ ವಾಡಿಕೆ ಇತ್ತು. ಹೀಗಾಗಿ ಚಿಕ್ಕ ವ್ಯಾಪಾರಿಗಳ ಪಾಡು ತುಂಬಾ ಶೋಕಜನಕವಾಗಿತ್ತು. ಈ ಪರಿಸ್ಥಿತಿಯ ಸುಧಾರಣೆಗೋಸ್ಕರ ಮಾನ್ಯರು ೧೯೦೬ನೇ ಜುಲೈ ೧ನೇ ದಿನ ಕೆನರಾ ಬ್ಯಾಂಕೆಂಬ ದೇಶೀ ಬ್ಯಾಂಕಿಂಗ್ ವ್ಯವಹಾರದ ಸಂಸ್ಥೆಯನ್ನು ಪ್ರಾರಂಭಿಸಿದರು. ಈ ಬ್ಯಾಂಕಿನ ಪ್ರಾರಂಭದ ನಿಬಂಧನೆಯೆಂದರೆ ಯಾವ ಸಂದರ್ಭದಲ್ಲೂ ಯಾವ ಸಾಲಕ್ಕೂ ೧೨ರ ಸಲೆಗೆ ಮಿಕ್ಕಿದ ಬಡ್ಡಿಯನ್ನು ವಿಧಿಸಬಾರದೆಂಬುದೇ.

ಮಾನ್ಯರು ಆ ಕಾಲದಲ್ಲಿ ವಾಕ್ಚಾತುರ್ಯದಲ್ಲಿ ಪ್ರಸಿದ್ಧ ಪುರುಷರೆಂದೆನಿಸಿದ್ದರು. ಆಂಗ್ಲ ಭಾಷೆಯಲ್ಲಾಗಲೀ ದೇಶಭಾಷೆಗಳಲ್ಲಾಗಲೀ, ಎಡೆತಡೆ ಇಲ್ಲದ ವಾಕ್ಪಟುಗಳಾಗಿದ್ದರು. ಅಂದು ಕನ್ನಡದ ಕಡೆಗೆ ತುಂಬಾ ಉದಾಸೀನತೆ ಇದ್ದ ಸಮಯದಲ್ಲಿ ಮಾನ್ಯರ ಕನ್ನಡ ವ್ಯಾಸಂಗವೂ ಕನ್ನಡ ವಾಙ್ಮಯ ಜ್ಞಾನವೂ ಅವರನ್ನು ವಿಶ್ವವಿದ್ಯಾಲಯದ ಕನ್ನಡ ಪರೀಕ್ಷಕರನ್ನಾಗಿ ನೇಮಿಸುವಂತೆ ಸಾಧಿಸಿತು. ಬಿ. ಎಲ್. ಪರೀಕ್ಷೆಯಲ್ಲಿ ತೇರ್ಗಡೆಹೊಂದಿದ ಕೆಲವು ವರ್ಷಗಳ ವರೆಗೆ ಈ ರೀತಿ ಅವರು ಕನ್ನಡದಲ್ಲಿ ಪರೀಕ್ಷಕರಾಗಿದ್ದರು. ಆದರೆ ಪ್ರತಿಯೊಬ್ಬ ಕನ್ನಡಿಗನಿಗೆ ಸಂಸ್ಕೃತದ ಸ್ವಲ್ಪವಾದರೂ ಜ್ಞಾನವಿರಬೇಕೆಂಬುದೇ ಅವರ ಹೇಳಿಕೆಯಾಗಿತ್ತು. ಹೀಗಾಗಿ ಕೆನರಾ ಹೈಸ್ಕೂಲಿನಲ್ಲಿ ವಿದ್ಯಾರ್ಥಿವೇತನ (Scholarship)ವನ್ನು ಅಪೇಕ್ಷಿಸುವ ಪ್ರತಿಯೊಬ್ಬ ಬಡ ವಿದ್ಯಾರ್ಥಿಯು ಸಂಸ್ಕೃತವನ್ನು ಎರಡನೇ ಭಾಷೆಯಾಗಿ ಕಲಿಯಬೇಕೆಂಬ ನಿಕಟ ನಿಬಂಧನೆಯನ್ನು ಅವರು ಶಾಲೆಯಲ್ಲಿ ಏರ್ಪಡಿಸಿದ್ದರು. ಆದರೆ ದುರ್ಭಾಗ್ಯದಿಂದ ಅವರ ನಿಧನದ ತರುವಾಯ ಈ ನಿಬಂಧನೆಯೂ ರದ್ದಾಯಿತು.

ಮಂಗಳೂರಿನಂತಹ ಒಂದು ಪ್ರಾಂತಿಕ ಪಟ್ಟಣದ ಪರಿಮಾಣದಲ್ಲಿ ಮಾನ್ಯರ ವಕೀಲಿ ವೃತ್ತಿಯ ವರಮಾನವು ದೊಡ್ಡದಿದ್ದರೂ ಆ ಹುಟ್ಟಿನ ಹೆಚ್ಚಿನಂಶವು ಬಡ ಪ್ರಾಯಿಗಳ ಸುಖಜೀವನಕ್ಕೂ, ಬಡ ವಿದ್ಯಾರ್ಥಿಗಳ ವಿದ್ಯಾರ್ಜನೆಗೂ ವಿನಿಯೋಗಿಸಲ್ಪಡುತಿತ್ತು. ಕ್ರಿಸ್ತಿಯರ ವೇದಪುಸ್ತಕವಾದ ಬ್ಯಾಬಲ್ ಗ್ರಂಥದ ಹೇಳಿಕೆಯಂತೆ ತನ್ನ ಬಲಗೈ ಮಾಡಿದ ದಾನವು ಎಡಕೈಗೆ ತಿಳಿಯದಂತೆ ವರ್ತಿಸಿದವರೆಂದರೆ ಅದು ಮಾನ್ಯರೇ ಸರಿ. ಅವರ ದಾನಧರ್ಮಗಳಿಗೂ ಪರೋಪಕಾರಕ್ಕೂ ಜಾತಿಮತಗಳೆಂಬ ಮೇರೆಗಟ್ಟುಗಳಿದ್ದಿಲ್ಲ. ನಮ್ಮ ಮಕ್ಕಳಿಗೆ ಅವರ ಯೋಗ್ಯತಾನುಸಾರ ಉತ್ತಮ ತರದ ವಿದ್ಯಾಭ್ಯಾಸವನ್ನು ಕೊಟ್ಟು, ತಮ್ಮ ನಿಧನದ ತರುವಾಯದ ಆರು ತಿಂಗಳ ಅಶನವಸನಕ್ಕೆ ಸಾಕಷ್ಟಲ್ಲದೆ ಹೆಚ್ಚಿನ ಹಣ ಒದಗಿಸಿಕೊಡುವುದು ಉಚಿತವಲ್ಲವೆಂದು ಅವರು ಆಗಿಂದಾಗ್ಗೆ ಅನ್ನುವ ವಾಡಿಕೆ ಇತ್ತು. ಮತ್ತು ಅನೇಕ ಧನಿಕರ ಮಕ್ಕಳು ಯಾವ ರೀತಿಯಲ್ಲಿ ಹಿರಿಯರ ಧನಸಂಗ್ರಹದ ದೆಸೆಯಿಂದ ನಡತೆಯನ್ನೂ ಜೀವಮಾನವನ್ನೂ ಕಳಕೊಂಡ ಉದಾಹರಣೆಗಳನ್ನು ಪದೇ ಪದೇ ಎತ್ತಿ ಹೇಳುತ್ತಿದ್ದರು.

ಮಾನ್ಯರಿಗೆ ಚಿತ್ತಾಕರ್ಷಕವಾದ ರಾಜಯೋಗ್ಯ ಮುಖಚರ್ಯೆಯೂ ಇತ್ತು. ಇದರಿಂದಾಗಿ ೧೯೦೮ರಲ್ಲಿ ಜರುಗಿದ ಸ್ವಜಾತಿ ಸಮಾಜದ ಪರಿಷತ್ತಿಗೆ ಉತ್ತರದಲ್ಲಿ ಸತಾರದಿಂದ ತೊಡಗಿ ದಕ್ಷಿಣದಲ್ಲಿ ಕೊಚ್ಚಿನ್ ತನಕ ಊರುಗಳಿಂದ ಬಂದಿದ್ದ ಸಭಾಸದರು ಮಾನ್ಯರ ಪ್ರಥಗಾತ್ರತೆಗೆ ಮನಸೋತು ಹೋದರು. ಅನ್ನ ಜ

[೯ನೇ ಪುಟಕ್ಕೆ ಮುಂದುವರಿದಿದೆ.]

ಕೆನರಾಬೇಂಕ್ ಸಪ್ಲಿಮೆಂಟ್

ಜನವರಿ ೧೯ನೆಯ ತಾರೀಕಿಗೆ ಕೆನರಾ ಬೇಂಕ್ ಶೇಕಡಾ ೫ರ ಕ್ಯುಮುಲೇಟಿವ್ ಪ್ರಿಫರೆನ್ಸ್ ಶೇರ್ (Cumulative Preference Shares)ಗಳ ಪಟ್ಟಿಯನ್ನು ಪ್ರಾರಂಭಿಸುವುದು. ಈ ಶೇರುಗಳು ಅಧಿಕ ಜನರಿಂದ ಇಚ್ಛಿಸಲ್ಪಟ್ಟಿದ್ದರಿಂದ ಇದನ್ನು ತೆರೆದ ಕೆಲವೇ ಸಮಯದಲ್ಲಿ ಹಿಂದೆಗೆಯಲಾಗುವುದು.

ಹಣವು ಹಗುರವಾಗಿರುವೀ ಕಾಲದಲ್ಲಿ ಎಲ್ಲಾ ದೊಡ್ಡ ಬೇಂಕುಗಳಲ್ಲಿಯೂ ಫಿಕ್ಸೆಡ್ ಡಿಪೋಜಿಟ್‌ಗಳು ಸೇಕಡಾ ಮೂರಕ್ಕಿಂತ ಕಡಿಮೆಯಾಗಿರುವಾಗ, ಈ ಶೇರುಗಳು ಹೆಚ್ಚು ಆಕರ್ಷಕವಾಗುವವು. ಅವುಗಳು ಕ್ಯುಮುಲೇಟಿವ್ ಪ್ರಿಫರೆನ್ಸ್ ಶೇರುಗಳಾಗಿರುವುದರಿಂದ ವರ್ಷವೊಂದರ ಶೇಕಡಾ ೫ರ ಆದಾಯವು ಗ್ಯಾರಂಟಿ ಮಾಡಿದಂತೆಯೇ ಆಗಿದೆ.

ಡಿವಿಡೆಂಡ್ ಮತ್ತು ಕೆಪಿಟಲ್‌ಗಳಲ್ಲಿ ಪ್ರಿಫರೆನ್ಸ್ ಇರುವುದರಿಂದ, ಹಾಕಿದ ಹಣದ ವಿಷಯದಲ್ಲಿ ಯೋಗ್ಯಭದ್ರತೆಯಿದೆ.

ಕೆನರಾ ಬೇಂಕ್ ಹಳೆಯ ಒಂದು ಸಂಸ್ಥೆ. ಕಳೆದ ಐವತ್ತು ವರ್ಷಗಳಿಂದ ಅದು ಕ್ರಮಶಃ ಪ್ರಗತಿಪರವಾಗಿದೆ. ಈಗ ಅದರ ಡಿಪೋಜಿಟರು ಮತ್ತು ಗಿರಾಕಿಗಳು ಸಾವಿರಾರು ಮಂದಿಯಾಗಿದ್ದಾರೆ. ಅದರ ಬೆಳವಣಿಗೆಯ ಗುಟ್ಟು ಅದರ ಸೇವೆ. ಇವರ ೩೭ ಶಾಖೆಗಳಲ್ಲಿಯೂ ಈ ಬೇಂಕು ಬಹಳ ನಾಜೂಕಾದ ಸೇವೆಗಳನ್ನು ಸಲ್ಲಿಸುತ್ತಿದೆ. ಗಿರಾಕಿಗಳ ಸಮಯವು ಬಹಳ ಅಮೂಲ್ಯವಾದುದೆಂದು ತಿಳಿದು, ಅವರ ಅನುಕೂಲತೆಗಳನ್ನು ಒದಗಿಸಲು ಸಾಧ್ಯವಾದ ಪ್ರಯತ್ನಗಳನ್ನು ತೆಗೆದುಕೊಳ್ಳಲಾಗುತ್ತದೆ. ಚೆಕ್ಕುಗಳ ಹಣ ಸಿಗಬೇಕಾದರೆ ಅರ್ಧ ತಾಸುಗಳ ತನಕ ಕಾದು ನಿಲ್ಲುವುದು ಎಷ್ಟರಮಟ್ಟಿಗೆ ಗಿರಾಕಿಗಳಿಗೆ ಕಷ್ಟವೆಂದು ಹದಿನೈದು ವರ್ಷಗಳ ಹಿಂದೆ ಅನೇಕ ಬೇಂಕುಗಳಿಗೆ ತಿಳಿದಿರಲಿಲ್ಲ. ಕೆನರಾ ಬೇಂಕ್‌ನವರು ಅಂತಹ ಸುಲಭ ವ್ಯವಹಾರಗಳನ್ನು ಒಂದೆರಡು ಮಿನಿಟುಗಳಲ್ಲಿಯೇ ತೀರಿಸಿಬಿಡುವರು.

ಸಮರ್ಥ ಆಡಳಿತ, ಪ್ರಾಚೀನ ಪದ್ಧತಿ ಇವುಗಳೆರಡು ಸೇರಿ ಕೆನರಾ ಬೇಂಕು ಮೇಲ್ಪರಗತಿಯಿಂದ ನಡೆದುಕೊಂಡು ಬಂದು, ತನ್ನ ವ್ಯಾಪಾರ ವಹಿವಾಟುಗಳನ್ನು ಹೆಚ್ಚಿಸಿದೆ. ಅದರ ಸೇವೆ ಹೆಚ್ಚಾಗಿದೆ. ಇಂದು ಅದರ ವ್ಯಾಪಾರಾದಿಗಳು ಹೆಚ್ಚಿರುವುದರಿಂದ ಮೂಲಧನವು ಹೆಚ್ಚುವ ಅವಶ್ಯಕತೆಯುಂಟಾಗಿದೆ. ಇದರ ಡೈರೆಕ್ಟರರು ಮೇಲ್ತರಗತಿಯ ವ್ಯಾಪಾರೀಜನರು ಹಾಗೂ ವಕೀಲರು. ಇದರ ಜನರಲ್ ಮೆನೇಜರು ಲಂಡನಿನಲ್ಲಿ ಇಡೀ ಬ್ರಿಟಿಷ್ ಸಾಮ್ರಾಜ್ಯಗಳಲ್ಲಿ ಮೇಲಾದ ಮಿಡ್‌ಲೇಂಡ್ ಬೇಂಕಿನಲ್ಲಿ ಬೇಂಕಿಂಗ್ ವ್ಯವಹಾರ ಅಭ್ಯಾಸ ಮಾಡಿಬಂದವರು.

ಬ್ಯಾಂಕಿನ ಮೂರು ಮುಖ್ಯ ಸೇವೆಗಳು

By Sri. M. Mukunda Kini.

ಜನಸಾಮಾನ್ಯಕ್ಕೂ ವ್ಯಾಪಾರಿ ವರ್ಗಕ್ಕೂ ಹಲವು ವಿಧಗಳಿಂದ ಸಲ್ಲಿಸುವ ಬ್ಯಾಂಕಿನ ಸೇವೆಯು ಅತೀ ಅಗತ್ಯವಾಗಿದೆ ಮತ್ತು ಆದರ್ಶವಾಗಿದೆ. ಇದರ ಸಮಾನ ಸೇವೆಯು ಜನತೆಗೆ ಬೇರೊಂದಿಲ್ಲ. ಬ್ಯಾಂಕಿನಲ್ಲಿ ಲೆಕ್ಕಾಚಾರ ವಹಿವಾಟುಗಳನ್ನು ನಡೆಸುವುದು, ಹಣ ಪಾವತಿಯನ್ನು ಚೆಕ್ಕುಗಳ ಮುಖಾಂತರವೇ ಸಲ್ಲಿಸುವುದು ಮುಂತಾದವುಗಳಿಂದ ಸಿಗುವ ಪ್ರಯೋಜನಗಳು ಸರ್ವಸಾಧಾರಣವಾಗಿ ಎಲ್ಲರಿಗೂ ತಿಳಿದ ವಿಷಯವೇ ಆಗಿರುವುದರಿಂದ ಅವುಗಳನ್ನು ಇಲ್ಲಿ ವಿಸ್ತರಿಸುವುದಿಲ್ಲ. ಇತರ ಚಿಕ್ಕ ಚಿಕ್ಕ ಸೇವೆಗಳು_ಉದಾ: ಹಣದ ಸಂರಕ್ಷಣೆಯೋ ಜನ ವಿಮಾ ಕಂತು, ತೆರಿಗೆ ಮೊದಲಾದವುಗಳನ್ನು ಗಿರಾಕಿಗಳ ಪರವಾಗಿ ಪಾವತಿ ಮಾಡುವುದು—ಕುರಿತು ಟಿಪ್ಪಣಿಯನ್ನು ಬರೆಯುವ ಅಗತ್ಯವು ಇಲ್ಲ. ಆದರೂ ವರ್ತಕರು ಬ್ಯಾಂಕಿನಿಂದ ಪಡೆಯಬಹುದಾದ ಸಾಲಗಳನ್ನು ಯಾವ ರೀತಿಯಲ್ಲಿ ಹೇಗೆ ಉಪಯೋಗಿಸಬಹುದು ಎಂಬದನ್ನು ಸ್ವಲ್ಪ ವಿಸ್ತಾರವಾಗಿ ಹೇಳಬೇಕಾಗಿದೆ.

ಬ್ಯಾಂಕು ಸಾಲವನ್ನು ಕೊಡಲು ಅಪೇಕ್ಷಿಸುತ್ತದೆ

ಬ್ಯಾಂಕು ತನ್ನ ಗಿರಾಕಿಗಳಿಟ್ಟ ಠೇವಣಾತಿಗಳ ಮೇಲೆ ಹುಟ್ಟಿದ ಬಡ್ಡಿಯನ್ನು ಕೊಡಬೇಕು. ಅಲ್ಲದೆ ಬ್ಯಾಂಕಿನ ಕಾರ್ಯಕ್ರಮಗಳನ್ನು ಸಾಂಗವಾಗಿ ನಡೆಯಿಸಲು ತಗಲುವ ಖರ್ಚನ್ನು ಕಳೆದ ಮೇಲೆ ಸ್ವಲ್ಪ ಲಾಭಾಂಶವನ್ನು ಉಳಿಸಬೇಕಾಗಿದೆ. ಬ್ಯಾಂಕಿನಿಂದ ಕೊಟ್ಟ ಸಾಲಗಳಲ್ಲಿ ಹುಟ್ಟಿ ಬರುವ ಬಡ್ಡಿಯೇ ಬ್ಯಾಂಕಿನ ಮುನಾಫೆಯ ಅರ್ಧಕಿಂತಲೂ ಹೆಚ್ಚಾಗಿರುತ್ತದೆ. ಆದುದರಿಂದ ಬ್ಯಾಂಕು ತನ್ನಲ್ಲಿರುವ ಹಣವನ್ನು ಸಾಲವಾಗಿ ಕೊಡಲು ಅಪೇಕ್ಷಿಸುತ್ತದೆ. ಠೇವಣಾತಿ ಹಣವನ್ನು ಸಾಲವನ್ನಾಗಿ ಕೊಡುವುದರಿಂದ ಅದು ಸುರಕ್ಷಿತವಾಗಿರುವಂತೆಯೂ ಸುಲಭವಾಗಿ ಹಿಂದೆ ಪಡೆಯುವಂತೆಯೂ ಬ್ಯಾಂಕು ಜಾಗ್ರತೆ ತೆಗೆದುಕೊಳ್ಳಬೇಕು. ಕಾರಣ ಠೇವಣಾತಿದಾರರು ತಮ್ಮ ಹಣವನ್ನು ಯಾವ ಸಮಯದಲ್ಲಿ ಆಗಲೀ ಯಾ ನಿಶ್ಚಿತ ಸಮಯದ ಮೇಲಾಗಲೀ ಅಪೇಕ್ಷಿಸಿದಲ್ಲಿ ಅವರ ಹಣವನ್ನು ಪರತು ಕೊಡುವರೆ ತಯಾರಿರಬೇಕು.

ಭದ್ರತೆಯ ಸಾಲಗಳು ಯಾವಾಗಲೂ ಸುರಕ್ಷಿತ ಮತ್ತು ದ್ರವ ರೂಪವಾಗಿರುತ್ತವೆ

ಸಾಲವನ್ನು ಕೊಡುವಾಗ ಸಾಲಪಡೆಯುವವನಿಂದ ತಕ್ಕಷ್ಟು ಭದ್ರತೆಯನ್ನು ಯೋಗ್ಯ ಜವಾಬ್ದಾರಿಯನ್ನು ಪಡೆಕೊಂಡರೆ ಅಂಥಹ ಸಾಲವು ಯಾವಾಗಲೂ ಸುರಕ್ಷಿತವಾಗಿರುತ್ತದೆ. ಇದರಿಂದ ಕೇವಲ ಬ್ಯಾಂಕಿಗೆ ಮಾತ್ರವಲ್ಲದೆ ಸಾಲಗಾರನಿಗೂ ಬಹಳ ಪ್ರಯೋಜನವಿದೆ. ಕಾರಣ ಇಂಥ ಸಾಲಗಳು ಯಾವಾಗಲೂ ಕಮ್ಮಿ ದರದ ಬಡ್ಡಿಯಲ್ಲಿ ಸಿಗುತ್ತದೆ. ಅಕ್ಕಿ, ಬಂಗಾರ ಮೊದಲಾದವುಗಳ ಮೇಲೆ ಸಿಕ್ಕುವ ಸಾಲಗಳು ಮೇಲಿನ ತರಗತಿಗೆ ಸೇರುತ್ತವೆ. ಯೋಗ್ಯ ಜವಾಬ್ದಾರಿ ಇಲ್ಲದ ಮತ್ತು ವೈಸಾಲಗಳು ಯಾವಾಗಲೂ ಸುರಕ್ಷಿತವು ಅಲ್ಲ. ಮಾತ್ರವಲ್ಲದೆ ಅದರ ಬಡ್ಡಿಯ ದರವು ಮೇಲೆ ಹೇಳಿದ ಸಾಲದ ದರಕ್ಕಿಂತ ಎರಡು ಪಾಲು ಹೆಚ್ಚಾಗಿರುವುದು. ಹಿಂದೂದೇಶದಲ್ಲಿ ಜೀನಸು, ಚಿನ್ನಾಭರಣ, ದವಸದಾನ್ಯಗಳ ಈಡಿನ ಮೇಲೆ ಕೊಡುವ ಸಾಲಗಳು ಸರ್ವಸಾಮಾನ್ಯವಾಗಿ ಹೆಚ್ಚಿಗೆ ಬಳಕೆಯಲ್ಲಿರುತ್ತವೆ.

ಭಂಗಾರದ ಅಡವಿನ ಸಾಲ

ಸರಿಯಾಗಿ ನೋಡುವುದಾದರೆ ಭಂಗಾರದ ಅಡವಿನ ಮೇಲೆ ಸಾಲಕೊಡುವುದರಿಂದ ಬ್ಯಾಂಕಿಗೆ ಅಷ್ಟು ಪ್ರಯೋಜನವಿಲ್ಲ. ಆದರೂ, ಹಿಂದೂ ದೇಶದಲ್ಲಿ ಸರ್ವಸಾಧಾರಣವಾಗಿ ಚಿನ್ನವನ್ನೇ ಅಡವಿಟ್ಟು ಸಾಲವನ್ನು ಪಡೆಯುವುದು ರೂಢಿಯಲ್ಲಿರುವುದರಿಂದ ಜನರ ಅನ್ನುಕೂಲತೆಯ ಕಡೆಗೆ ತನ್ನ ದೃಷ್ಟಿಯನ್ನಿಡುವುದು ಬ್ಯಾಂಕಿನ ಕರ್ತವ್ಯವಾಗಿದೆ. ವಿಮರ್ಶಿಸಿ ನೋಡುವಲ್ಲಿ ನಮ್ಮಲ್ಲಿ ಕೇವಲ ಕಮ್ಮಿ ಜನರ ಹತ್ತಿರ ಇತರ ಸಂಸ್ಥೆಗಳ ಪಾಲು ವಗೈರೆಗಳು ಇರುವುದರಿಂದ ಇವುಗಳ ಆಧಾರದ ಮೇಲೆ ಸಾಲಗಳನ್ನು ಪಡೆಯುವುದು ಕಮ್ಮಿ. ಹೀಗಾಗಿ ಭಂಗಾರದ ಈಡಿನ ಮೇಲೆ ಸಾಲಕೊಡುವುದು ನಮ್ಮ ದೇಶದಲ್ಲಿ, ಬ್ಯಾಂಕಿನ ಪ್ರಧಾನ ಕಾರ್ಯಕಲಾಪವಾಗಿದೆ. ಅಂತರರಾಷ್ಟ್ರೀಯ ಪರಿಸ್ಥಿತಿಯ ದೆಸೆಯಿಂದಾಗಿ ಪ್ರತಿಯೊಂದು ಸಾಮಾನು ವಸ್ತು ವಗೈರೆಗಳ ಬೆಲೆಗಳು ಹೆಚ್ಚು ಕಡಿಮೆಯಾಗುತ್ತಾ ಹೋಗುವ ಈ ಸಮಯದಲ್ಲಿ ಭಂಗಾರದ ಧಾರಣೆ ಮಾತ್ರ ದಿನೇ ದಿನೇ ಹೆಚ್ಚಾಗಿ ಹೋಗುವುದರಿಂದ ಬಂಗಾರದ ಅಡವಿನ ಮೇಲೆ ಕೊಡುವ ಸಾಲಗಳಿಂದ ಬ್ಯಾಂಕಿಗೆ ಭದ್ರತೆಯು ಇನ್ನಷ್ಟು ಹೆಚ್ಚುವುದು.

ದವಸದಾನ್ಯಗಳ ಅಡವಿನ ಸಾಲಗಳು

ವರ್ತಕ ವರ್ಗಕ್ಕೆ ದವಸದಾನ್ಯ, ಜೀನಸು ಮೊದಲಾದವುಗಳ ಈಡಿನ ಮೇಲೆ ಕೊಡುವ ಸಾಲವು ಬಹಳ ಪ್ರಾಮುಖ್ಯವಾದುದು. ಈ ತರದ ಸಾಲವು ಈಗ ಇಡೀ ಜಗತ್ತಿನಲ್ಲಿ ಪ್ರಸಿದ್ಧವಾಗಿರುತ್ತದೆ. ಒಂದು ಸಮಯದಲ್ಲಿ ದಕ್ಷಿಣ ಹಿಂದೂ ದೇಶದ ವರ್ತಕರು ತಮ್ಮದೇ ಆಗಿರುವ ಭಂಡವಾಳದಿಂದ ವಹಿವಾಟು ನಡೆಸಬೇಕೆಂಬ ಭಾವನೆಯಿದ್ದುದರಿಂದ ಈ ಸಾಲಗಳು ಅಷ್ಟು ಬಳಕೆಯಲ್ಲಿರಲಿಲ್ಲ. ಒಂದು ಯೋಗ್ಯ ಬ್ಯಾಂಕಿನ ಸಲಹೆಗಳ ಮೇರೆಗೆ ಕ್ರಮವಾದ ರೀತಿಯಿಂದ ವ್ಯವಹಾರಕ್ಕೆ ಬೇಕಾದ ಭಂಡವಾಳವನ್ನು ಹೆಚ್ಚಿಸುವುದರಲ್ಲಿ ವ್ಯಾಪಾರದ ರಹಸ್ಯವು ಅಡಗಿರುತ್ತದೆ. ಇಂತಹ ಭಯಂಕರ ಮುಗ್ಗಾಟದ ದಿನಗಳಲ್ಲಿ ವ್ಯಾಪಾರದಲ್ಲಿ ಸಿಕ್ಕುವ ಲಾಭವು ಬಹಳ ಕಡಿಮೆಯಾಗಿರುವುದರಿಂದ ವ್ಯಾಪಾರದ ಮುಗಚಾಟವನ್ನು ಹೆಚ್ಚು ಹೆಚ್ಚು ಮಾಡಿದ ಹಾಗೆ ಲಾಭಾಂಶವು ಹೆಚ್ಚುವುದು. ಸಾಮಾನು ವಗೈರೆಗಳನ್ನು ಪಡೆದು ಬ್ಯಾಂಕಿನಲ್ಲಿ ಅಡವಿಟ್ಟು ಪಡೆದುಕೊಳ್ಳುವ ಸಾಲವು ನಮ್ಮ ಒಂದು ಬಂಡವಾಳದ ಹಾಗೆ ಆಗುತ್ತದೆ. ಇದರಿಂದ ಅಗ್ಗ ದರದಲ್ಲಿ ಸಾಮಾನನ್ನು ಪಡೆಕೊಂಡು ಸಾವಕಾಶದಿಂದ ಬೆಲೆ ಏರುವ ಸಮಯದಲ್ಲಿ ಮಾರಲು ಬಹಳ ಅನುಕೂಲವಾಗುತ್ತದೆ.

ಹುಂಡಿಗಳು

ವ್ಯಾಪಾರಿಗಳು ತಮ್ಮ ಸಾಮಾನನ್ನು ಒಬ್ಬರಿಗೊಬ್ಬರು ಮಾರಿ, ಪರಸ್ಪರ ಹುಂಡಿಗಳನ್ನು ಬ್ಯಾಂಕಿನಲ್ಲಿ ಮಟ್ಟಾಯಿಸಿ ಹಣ ಪಡೆಯುತ್ತಾರೆ. ಇದೊಂದು ತರದ ಬ್ಯಾಂಕಿನಿಂದ ಕೊಡುವ ಸಾಲವು. ಅಷ್ಟೊಂದು ಭದ್ರತೆಯಿಲ್ಲ—ಆದರೆ ವ್ಯಾಪಾರಿಗಳಿಗೆ ಬಹಳ ಅನುಕೂಲ ಮತ್ತು ಅತೀ ಅಗತ್ಯ. ಹುಂಡಿಯ ಅವಧಿಯು ಮುಗಿಯುವುದರೊಳಗೆ, ವ್ಯಾಪಾರಿಗಳು ತಮ್ಮಲ್ಲಿರುವ ಮಾಲನ್ನು ಸಾವಕಾಶದಿಂದ ಮಾರಿ ಹಣವನ್ನು ಜಮಾಯಿಸಿ ಹುಂಡಿಯ ಹಣವನ್ನು ಪರತು ಬ್ಯಾಂಕಿಗೆ ಪಾವತಿ ಮಾಡಲು ಇದರಿಂದ ಬಹಳ ಅನುಕೂಲ. ವ್ಯಾಪಾರಸ್ಥರ ಹಿತದೃಷ್ಟಿಯಿಂದ ಈ ಹುಂಡಿಗಳ ಉಪಯೋಗವು ಅಗತ್ಯವಾಗಿದೆ. ಉದಾಹರಣೆಗಾಗಿ ಒಬ್ಬ ರಖಂ ವ್ಯಾಪಾರಿಯು ಇನ್ನೊಬ್ಬ ಚಿಲ್ಲರೆ ವ್ಯಾಪಾರಿಗೆ ತನ್ನಲ್ಲಿರುವ ಸಾಮಾನನ್ನು ಮಾರಿ, ಅದರ ಬೆಲೆಯನ್ನು ಲೆಕ್ಕದ ಪುಸ್ತಕದಲ್ಲಿ ಖರ್ಚು ಬರೆದಿಟ್ಟರೆ ಚಿಲ್ಲರೆ ವ್ಯಾಪಾರಿಯು ಆತನ ಅನುಕೂಲತೆಯ ಮೇರೆಗೆ ಹಣ ಪಾವತಿ ಮಾಡುವ ವರೆಗೆ ಕಾಯಬೇಕಾಗುತ್ತದೆ. ಅಂತಹ ಪಾವತಿಗೆ ದೀರ್ಘ ಸಮಯ ಹೋಗಬಹುದು. ಇದರಿಂದ ರಖಂ ವ್ಯಾಪಾರಿಗೆ ಹಣದ ಅಡಚಣೆಯು ಹೆಚ್ಚುವುದು. ಬದಲಾಗಿ ರಖಂ ವ್ಯಾಪಾರಿಯು ಒಂದು ಹುಂಡಿಯನ್ನು ಚಿಲ್ಲರೆ ವ್ಯಾಪಾರಿಯ ಒಪ್ಪಿಗೆಯಿಂದ ನಿಶ್ಚಿತ ಸಮಯದ ಮೇಲೆ ಇಂತಿಷ್ಟು ಹಣವನ್ನು ಕೊಡುತ್ತೇನೆಂಬ ಶರ್ತಗಳಿಂದ ಬರಾಯಿಸಿದರೆ ತನಗೆ ಅಗತ್ಯವಿದ್ದಾಗ ಆ ರಖಂ ವ್ಯಾಪಾರಿಯು ಸದ್ರಿ ಹುಂಡಿಯನ್ನು ಬ್ಯಾಂಕಿನಲ್ಲಿ ಮಟ್ಟಾಯಿಸಿ ಹಣವನ್ನು ಪಡೆಯಬಹುದು. ಇಂಥ ಹುಂಡಿ ವಹಿವಾಟುಗಳು ಅಮೇರಿಕಾ, ಇಂಗ್ಲಾಂಡು, ದೇಶಗಳಲ್ಲಿ ಬಹಳವಾಗಿ ಪ್ರಸಿದ್ಧವಾಗಿರುವುದಲ್ಲದೆ, ಬ್ಯಾಂಕಿನ ಮುಖ್ಯ ಕಾರ್ಯಕಲಾಪವೂ ಆಗಿರುತ್ತದೆ.

ಕೆನರಾ ಬ್ಯಾಂಕು ಬಡ್ಡಿಯ ದರಗಳನ್ನು ವಿಶೇಷವಾಗಿ ತಗ್ಗಿಸಿ ಹುಂಡಿ ವಹಿವಾಟು ದವಸದಾನ್ಯಗಳ ಅಡವಿನ ಸಾಲಗಳ ಉಪಯೋಗವು ಎಲ್ಲರಿಗೂ ದೊರಕಲೆಂದು ಸದಾ ಪ್ರಯತ್ನಿಸುತ್ತದೆ.

ಕೆನರಾ ಬೇಂಕಿನ ಚಿಕ್ಕದೊಂದು ಚರಿತ್ರೆ

'ಕೆನರಾ ಬೇಂಕ್, ಲಿಮಿಟೆಡ್' ಎಂಬ ಈ ಸಂಸ್ಥೆಯು ೧೯೦೬ನೇ ಇಸವಿ ಜುಲಾಯಿ ತಾರೀಕು ೧ರಲ್ಲಿ ಪ್ರಥಮತಃ ಜನ್ಮವೆತ್ತಿತು. ಆಗ್ಯೆ ಒಂದು ವಿದೇಶಿ ಬೇಂಕು ಅತಿಕಯು ಬಡ್ಡಿಯನ್ನು ಠೇವಣಿಗರಿಗೆ ಕೊಟ್ಟು ಸಂಸ್ಥಾನದ ಯಾವತ್ತೂ ಧನಸಂಗ್ರಹವನ್ನು ತನ್ನ ಕೈಯೊಳಗೆ ಇರಿಸಿಕೊಂಡು, ಮುರಿದು ಬಿದ್ದುದರಿಂದ ಜಿಲ್ಲೆಯಲ್ಲಿ ಎಲ್ಲೆಲ್ಲಿಯೂ 'ಹಾ ಹಾ' ಕಾರವು ಎದ್ದು ಮಧ್ಯಮ ತರಗತಿಯವರಿಗೆ ಹೇಳಲಸದ ಕಷ್ಟನಷ್ಟಗಳು ಸಂಭವಿಸಿದುವು ಇದರಿಂದಾಗಿ ಅಂದಿನ ನಮ್ಮ ಜಿಲ್ಲೆಯ ಮುಖಂಡರೆಲ್ಲಾ ಕೂಡಿ ಕೆಲವು ನಿಶ್ಚಿತ ವ್ಯವಹಾರ ನೀತಿಯಿಂದೊಡಗೂಡಿದ್ದ ಜಿಲ್ಲೆಯದ್ದಾದದ್ದೊಂದು ಒಂದು ಬೇಂಕನ್ನು ಸ್ಥಾಪಿಸಬೇಕಾಗಿ ಎಣಿಸಿದರ ಫಲವಾಗಿ ಈ ಬೇಂಕು ಅಂದು ತನ್ನ ಕಾರ್ಯಕ್ರಮಕ್ಕೆ ತೊಡಗಿತು.

ಇದರ ಮೊದಲನೇ ನಿಶ್ಚಿತಾರ್ಥವೆಂದರೆ, ಠೇವಣಿಗರ ಹಣಗಳ ಭದ್ರತೆ ಈ ಧ್ಯೇಯವನ್ನು ಮನಗಂಡು, ಬೇಂಕಿನ ವರ್ಷಾವಧಿ ಮುನಾಫೆಯ ಶೇಕಡಾ ೨೫ರ ಅಂಶವನ್ನು ಅವರ್ಧನ ರೂಪದಿಂದ ಒಟ್ಟುಗೂಡಿಸುತ್ತಾ ಬಂದು, ಭಾವೀ ನಷ್ಟಗಳನ್ನು ಆಧರಿಸಲೋಸುಗ ಒಂದು ಕ್ಷೇಮನಿಧಿಯನ್ನು ನಿರ್ಮಾಣ ಮಾಡಬೇಕೆಂಬುದೇ ಮೊತ್ತಮೊದಲಿನಿಂದಲೂ ನಿಬಂಧನೆಯಾಗಿದ್ದು, ಇಂದು ಕೂಡಾ ೩೫ ವರ್ಷಗಳು ಸಂದುಹೋದರೂ ಈ ನಿಬಂಧನೆಯು ಜಾರಿಯಲ್ಲಿದೆ ಆದರಿಂದಾಗಿ ಅಂದು ೧೯೦೬ರಲ್ಲಿ ತೊಡಗಿದ ಈ ಕ್ಷೇಮನಿಧಿಯು ಇಂದು ೧೯೪೧ರಲ್ಲಿ ಮೂಲಧನಕ್ಕಿಂತ ಮಿಕ್ಕಿರುತ್ತದೆ. ಎರಡನೇ ಧ್ಯೇಯವೆಂದರೆ ಬೇಂಕಿನ ಯಾವತ್ತೂ ಮೊತ್ತವನ್ನು ಸಾಧ್ಯವಾದಷ್ಟು ದ್ರವರೂಪದಲ್ಲಿರಿಸುವುದೇ—ಅಂದರೆ ಯಾವ ಸಂದರ್ಭದಲ್ಲಿಯೂ ಮಾರ್ಪಡಿಸಬಹುದಾದ ಸರಕಾರಿ ಸಾಲಪತ್ರಗಳನ್ನು ಬೇಂಕು ಪಡಕೊಳ್ಳಬೇಕೆಂಬುದೇ. ಮೊದಲನೇ ಆದರ್ಶದಂತೆ ಈ ಎರಡನೇಧ್ಯೇಯವೂ ಇಂದು ಬೇಂಕಿನ ಆಡಳಿತೆ ಮಂಡಳಿಯವರಿಗೆ ಮಾನ್ಯವಿದೆ. ಇದರ ಫಲಿತಾಂಶವಾಗಿ ಬೇಂಕಿನ ಪರಿಮಾಣಕ್ಕನುಗುಣವಾದ ಮೊತ್ತವು ಸರಕಾರಿ ಸಾಲಪತ್ರಗಳಲ್ಲಿದೆ ಮೂರನೇ ಧ್ಯೇಯವೆಂದರೆ—ಲಾಭದ ದುರಭಿಲಾಷೆಯಿಂದ ಅತಿರೇಕ ಬಡ್ಡಿದರವನ್ನು ಸಾಲಪಡೆಕೊಳ್ಳುವ ವ್ಯಾಪಾರಿ ಮುಂತಾದ ಉದ್ಯಮಿಗಳ ಮೇಲೆ ಹೊರಿಸದೆ ಇರುವುದು. ಇದಕ್ಕನುಗುಣವಾಗಿ ಹತ್ತರ ಸಲಿಗೆ ಮಿಕ್ಕದ ಬಡ್ಡಿಯನ್ನು ಎಂದೂ ಬೇಂಕಿನವರು ಎತ್ತಲಾಗದೆಂಬ ನಿಬಂಧನೆಯು ಇಂದೂ ಜಾರಿಯಲ್ಲಿದೆ ಆದರೂ ಇಂದಿನ ವಾಣಿಜ್ಯ ಕಾರ್ಯಕ್ಷೇತ್ರದ ಪರಿಸ್ಥಿತಿಗೆ ಸರಿಯಾಗಿ ಹತ್ತರ ಬದಲಾಗಿ ಐದರ ಸಲಿಯ ಬಡ್ಡಿಯಿಂದಲೂ ಈ ಬೇಂಕು ಸಾಲ ಕೊಡುತ್ತಿರುವುದು.

ಪ್ರಾರಂಭದಲ್ಲಿ ಈ ಬೇಂಕಿನ ಮೂಲಧನವು ಬರೇ ಅರ್ಧ ಲಕ್ಷ ರೂಪಾಯಿಗಳಷ್ಟು. ಪ್ರಥಮ ವರುಷದಲ್ಲಿಯೇ ರೇವಣಾತಿಗಳು ರೂಪಾಯಿ ೪೦,೦೦೦ದಷ್ಟಕ್ಕೆ ಬಂದುವು. ಇದೇ ರೀತಿ ವರ್ಷಂಪ್ರತಿ ಠೇವಣಾತಿಗಳು ಯಾವ ಪರಿಮಾಣದಲ್ಲಿ ವೃದ್ಧಿಯಾದುವೆಂಬುದಕ್ಕೆ ಈ ಕೆಳಗಿನ ಪುರೋವೃದ್ಧಿ ಕೋಷ್ಟಕವು ಸಾಕ್ಷೀಭೂತವಾಗುವುದು.

ಷೆಯಿಂದ ವಜಾವಡಿಸುವ ನಿಪುಣನೀತಿಯನ್ನು ಈ ಬೇಂಕು ಇಂದೂ ಏನೊಂದೂ ಕುಂದಿಲ್ಲದೆ ಅನುಸರಿಸುತ್ತದೆ. ಇದರ ಫಲವಾಗಿ ಯಾವದೊಂದೂ ವರ್ಷದ ಸಾಲಮೂಲಗಳ ಪಟ್ಟಿಯಲ್ಲಿ (Balance Sheet) 'ಬ್ರೇಂಚ್ ಸ್ಥಾಪನಾ ಖರ್ಚು'

ವರ್ಷ	ವಂತಿಗೆ ಹಾಕಲ್ಪಟ್ಟ ಮೂಲಧನ	ತೆತ್ತ ಮೂಲಧನ	ಕ್ಷೇಮನಿಧಿ	ಠೇವಣಾತಿ	ವಹಿವಾಟಿನ ಮೊತ್ತ
1916	2,25,000	2,00,000	89,000	3,60,000	6,83,000
1920	3,00,000	3,00,000	1,61,000	8,99,000	14,19,000
1924	3,00,000	3,00,000	2,62,000	18,10,000	24,69,000
1928	3,00,000	3,00,000	3,88,000	37,42,000	46,99,000
1932	6,00,000	3,30,000	4,31,000	55,46,000	65,62,000
1936	6,00,000	3,33,000	4,50,000	79,64,000	97,25,000
1937	6,00,000	3,33,000	4,50,000	85,96,000	1,09,96,000
1940	6,00,000	3,92,550	4,50,000	86,71,700	1,03,44,450

ಪ್ರಥಮ ಎರಡು ದಶಕಗಳಲ್ಲಿ ಠೇವಣಿಗಳು ಅತೀ ತೀವ್ರಗತಿಯಿಂದ ವರ್ಧಿಸಿದರೂ, ಬೇಂಕಿನ ಶಾಖೆಗಳೆಂದೂ ತೆರೆಯಲ್ಪಡಲಿಲ್ಲ.

ಎಂದು ವೈನವನ್ನು ಯಾರೂ ಕಂಡಿಲ್ಲ.

ಬರೇ ಹದಿನೈದು ವರ್ಷಗಳ ಹಿಂದೆ ಈ ಬೇಂಕು ಆಗಿನ ವಾಡಿಕೆಯಂತೆ ತನ್ನ ಗಿರಾಕಿಗಳಲ್ಲಿ ಮುಕ್ಕಾಲು ವಾಲಿನವ

ತುಂಬಾ ಠೇವಣಾತಿಗಳುಳ್ಳ ಒಂದು ಬ್ಯಾಂಕು ಭದ್ರವಾದ ಸಾಧನಗಳ ಮೇಲೆಯೇ ಸಾಲಕೊಡಬೇಕೆಂದಿದ್ದರೆ ಪರಿಮಿತ ಕ್ಷೇತ್ರ ಫಲದಲ್ಲೇ ಉದ್ಯಮಿಸುವದು ಸಾಧ್ಯವಲ್ಲ. ಕೆಲವೆಡೆಯಲ್ಲಿ ಅದರ ಶಾಖೆಗಳನ್ನು ತೆರೆದು, ಹಲವು ವಿಧದ ಭದ್ರತೆಗಳ ಮೇಲೂ, ವಿಧವಿಧದ ಜನತೆಗಳ ಸಹಕಾರದಿಂದಲೂ ಅಂಥಾದ್ದೊಂದು ಬೇಂಕು ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸುವದು ಸ್ವಾಭಾವಿಕವಾದೊಂದು ಹವಣಿಕೆ ಇದರಂತೆ ಕೆನರಾ ಬೇಂಕು ತನ್ನ ಪ್ರಥಮ ಶಾಖೆಯನ್ನು ೧೯೨೬ರಲ್ಲಿ ಈ ಜಿಲ್ಲೆಯಲ್ಲಿ ಕಾರ್ಕಳದಲ್ಲಿ ತೆರೆಯಿತು. ಆ ತರುವಾಯ ಪರಂಪರೆಯಿಂದ ಪ್ರತಿ ವರ್ಷವೆಂಬಂತೆ ಶಾಖೆಗಳನ್ನು ತೆರೆದುಬಂದು ಇಂದಿಗೆ ಈ ಬೇಂಕಿನ ೩೭ ಶಾಖೆಗಳು ನಮ್ಮ ಈ ಭಾರತ ವರ್ಷದ ಪಶ್ಚಿಮ ಕರಾವಳಿಯ ಎಲ್ಲಾ ಠೇವುಗಳಲ್ಲಿಯೂ, ನೆರೆ ಊರಾದ ಮೈಸೂರು ಮತ್ತು ಕರ್ನಾಟಕದ ಪ್ರಾಮುಖ್ಯ ನಗರಗಳಲ್ಲೂ ಸ್ಥಾಪಿತವಾಗಿವೆ

ಪ್ರತಿಯೊಂದು ಹೊಸ ಶಾಖೆಯ ಸ್ಥಾಪನಾ ಖರ್ಚನ್ನು ಅದೇ ವರ್ಷದ ಮುನಾ-

ರಿಗೆ ಬರೇ ಪ್ರೋ ನೋಟುಗಳ ಮೇಲೆ ವೈಸಾಲಗಳನ್ನು ಕೊಡುತಿತ್ತು ಆದರೆ ೧೯೩೧ನೇ ಆರ್ಥಿಕ ಮುಗ್ಗಟ್ಟು ತಲೆದೋರಿದಂದಿನಿಂದ ಈ ಕಾರ್ಯಕ್ರಮವನ್ನು ಬದಲಾಯಿಸಿತು. ಇಂದು ಈ ಬೇಂಕಿಗೆ ಹೊರಗಿನಿಂದ ಬರತಕ್ಕ ಸಾಲಗಳನ್ನು ವಿಮರ್ಶಿಸಿದಲ್ಲಿ ಅಂಥಾ ವೈಸಾಲಗಳು ಬರೇ ಕಾಲಾಂಶಕ್ಕಿಂತ ಕಡಿಮೆ ಇದ್ದು ಉಳಿದ ಮುಕ್ಕಾಲಾಂಶ ಸಾಲಗಳು ಚಿನ್ನಾಭರಣಗಳು, ಸರಕುಜೀನಸುಗಳು, ಹೊಲಗದ್ದೆಗಳು ಮುಂತಾದ ನಿಶ್ಚಿತ ಭದ್ರತೆಗಳ ಮೇಲೆ ಕೊಟ್ಟವುಗಳಾಗಿವೆ. ಆದರೆ ಈ ಬದಲಾವಣೆಯನ್ನು ತಂದೊಡ್ಡಲು ಬೇಂಕು ಅದರ ಬಡ್ಡಿಯ ದರವನ್ನು ಶೇಕಡಾ ೧೦ರ ಧರಮಾನದಿಂದ ಕೆಳಗಿಳಿಸಿ, ಅದರ ಫಲಿತಾಂಶವಾಗಿ, ಠೇವಣಿಗಳ ಬಡ್ಡಿಯನ್ನೂ ಕಡಿಮೆಮಾಡಬೇಕಾಯಿತು. ಹೀಗಾಗಿ ಪ್ರಾರಂಭದಲ್ಲಿ ಎಣಿಸಿದ ಠೇವಣಿಗಳ ಏಳರ ಸಲಿಯ ಬಡ್ಡಿಯು ಇಂದು ಮೂರರ ಸಲಿಯಾದಂತೆ, ಸಾಲಗಳ ಮೇಲಿದ್ದ ೧೦ ಸಲಿಯ ಬಡ್ಡಿಯು ಇಂದು ಐದರ ಸಲಿಯಂತೆ ನಡೆಯುತ್ತದೆ. ಅಂತೆಯೇ ಅರ್ಧಕ್ಕರ್ಧ ಬಡ್ಡಿಯು

ಇಳಿತವಾದರೂ, ಈ ಬೇಂಕಿನ ಠೇವಣಾತಿದಾರರು ತಮ್ಮ ಹಣಗಳನ್ನು ಇನ್ನಷ್ಟು ಹೆಚ್ಚಿಗೆ ಈ ಬೇಂಕಿನಲ್ಲಿ ಡಿಪೊಸಿಟು ಮಾಡುವುದು ಈ ಪೋಷಕ ವರ್ಗದ ಉದಾರ ಬುದ್ಧಿಯ ಮತ್ತು ವಿಶಾಲದೃಷ್ಟಿಯ ಸೂಚಕಗಳಾಗಿವೆ ಅದರಿಂದಾಗಿ ಪ್ರಾರಂಭದ ಬರೇ ಒಂದು ಲಕ್ಷ ರೂಪಾಯಿ ಮೊತ್ತವಿದ್ದ ಈ ಬೇಂಕು ಇಂದು ತನ್ನ ದ್ರವ್ಯ ಸಂತತಿಯನ್ನು ಒಂದು ಕೋಟಿಗೆ ಮಿಕ್ಕಿ ವೃದ್ಧಿಸಿದೆ.

ಕಾಲಚಕ್ರವು ಒಂದೇ ಗತಿಯಿಂದ ತಿರುಗುವುದಿಲ್ಲ. ದಸ್ಮತ್ತನೇ ವಯದ ತನಕ ಈ ಬೇಂಕಿಗೆ ಚಿಕ್ಕಾಸೊಂದು ನಷ್ಟ ಒಂದಿದ್ದಿಲ್ಲ ಆದರೆ ೧೯೩೮ನೇ ವರ್ಷದಲ್ಲಿ ದಿಗಂತದಲ್ಲಿ ಆರ್ಥಿಕ ಕಾರ್ಮುಗಿಲುಗಳು ಮೂಡಿದವು ಆ ಚಂಡ ಮಾರುತವು ಬೀಸುವ ಮೊದಲೇ ಪ್ರಾಜ್ಞನಾವಿಕನಂತೆ ಈ ನಮ್ಮ ಚಿಕ್ಕ ಬೇಂಕಿನ ಆಗಿನ ಆಡಳಿತೆ ಮಂಡಳಿಯ ಡೈರೆಕ್ಟರರು ತಮ್ಮ ನಾವೆಯನ್ನು ಸುಸಜ್ಜಿತಪಡಿಸಿದುದರಿಂದ, ಈಶನ ಕೃಪೆಯಿಂದ ಏನೊಂದೂ ಹಾನಿಯಿಲ್ಲದೆ ಈ ಬೇಂಕು ದಡಸೇರಿತು ಈ ಹತ್ತು ವರ್ಷಗಳ ಅಂತರದಲ್ಲಿ ಅಪರಿಮಿತ ಬೇಂಕುಗಳು ಮುರಿದು ಬಿದ್ದುವು. ಮುಖ್ಯವಾಗಿ ಪ್ರಖ್ಯಾತಿಪಟ್ಟ ಟ್ರಾವನ್‌ಕೂರ್ ನೇಶನಲ್ ಎಂಡ್ ಕ್ವಿಲ್ಲನ್ ಬೇಂಕ್ ೧೯೩೮ರಲ್ಲಿ ತನ್ನ ಕಾರ್ಯಕ್ರಮವನ್ನು ನಿಲ್ಲಿಸಿ ಕದವನ್ನು ಮುಚ್ಚಿತು. ಆದರಿಂದಾಗಿ ಆಗಿನ ಪರಿಸ್ಥಿತಿಯು ತುಂಬಾ ಭಯಾಸ್ಪದವಾಗಿ ಮದ್ರಾಸಿನ ಆಗಿನ ಮುಖ್ಯ ಸಚಿವವರ್ಯರಾದ ಮಾನ್ಯ ಶ್ರೀ ರಾಜಗೋಪಾಲಾಚಾರ್ಯರು ಜನತೆಗೆ ಅಭಯ ದಾನವನ್ನು ಕೊಡಬೇಕಾಗಿ ಕೂಡಾ ಬಂತು. ಮಾನ್ಯರು ೧೯೩೮ನೇ ಜೂನ್ ತಾ ೨೫ರಲ್ಲಿ ಮದ್ರಾಸು ಸಂಸ್ಥಾನದ ಪ್ರಾಮುಖ್ಯ ಬೇಂಕುಗಳ ಲೆಕ್ಕಪತ್ರಗಳನ್ನು ರಿಜರ್ವ್ ಬೇಂಕಿನವರಿಂದ ಪರೀಕ್ಷಿಸಲ್ಪಡುವ ಬಗ್ಗೆ ಮದ್ರಾಸು ಸರಕಾರದವರು ಉಪಾಯಗಳನ್ನು ಕೈಕೊಳ್ಳುತಿದ್ದಾರೆಂಬ ಅಪ್ಪಣೆ ಕೊಡಿಸಿದ್ದರಿಂದ ಅಂದಿನ ಗಲಭೆಯು ನಿವಾರಣೆಯಾಗಿ ಜನತೆಗೆ ಸ್ವಲ್ಪ ಮನಃಶಾಂತಿಯು ಲಭಿಸಿತು. ಆದರೆ ಕಾನೂನು ಮೇರೆಗೆ ಬೇಂಕಿನ ಆಡಳಿತೆಯವರು ತಾವಾಗಿ ಒಪ್ಪದ ಹೊರತು ಅಂಥಹದೊಂದು ಲೆಕ್ಕ ವಿಮರ್ಶೆಯು ಸಾಧ್ಯವಿದ್ದಿಲ್ಲ. ಹಾಗಾಗಿ

(೬ನೆಯ ಪುಟವನ್ನು ನೋಡಿ)

This Prospectus has been filed with the Assistant Registrar of Joint Stock Companies, Mangalore and copies have been delivered to the Registrars of Joint Stock Companies, Mysore, Cochin and Travancore.

The Subscription List will open on Monday the 19th January 1942 and close on Saturday the 24th January 1942 or earlier as may be decided by the Directors of the Company

ESTABLISHED 1906

Canara Bank, Limited.

(Incorporated in British India under the Indian Companies Act 1882)
Liability of Members Limited

Registered Office:
LIGHT HOUSE HILL, MANGALORE

BRANCHES:

Alleppey Arsikere Bangalore City Belgaum, Bombay-Fort Bombay Mandvi, Bombay-Girgaum, Bombay Parel, Bombay Kalbadevi Badagara, Bantwal, Belthangady, Calicut, Cannanore, Chikmagalur Cochin Coondapoor, Cherai, Davangere Dharwar, Dodballapur, Ernakulam, Ganguli, Hubli Karkala Kasaragode Kumbla Kayamkulam Mangalore Bunder, Mangalore City, Manjeshwar, Moolky, Payyannur Puttur, Quilon, Udipi and Uppinangady

Authorised Capital Rs. 25,00,000

Divided into

20 000 Ordinary Shares of Rs 50 each

AND

30 000 five per cent Cumulative Preference Shares of Rs 50 each

The following special rights and privileges shall attach to the Preference Shares

1 The holders of such Preference Shares shall be entitled to receive out of the profits of the Company as a first charge a cumulat ve preferential dividend at the rate of 5% per annum on the capital for the time being paid up on such shares respec ively

2 In the event of the Company being wound up the surplus assets thereof shall be applied in the first place in repayment to the holders of the said Preference Shares and of any other shares entitled to rank pari passu w th them the full amount paid thereon and the arrears (if any) of the preferential dividend aforesaid to the commencement of w nd ng up and subject as aforesaid such surplus assets shall belong to and be d vided among the other members of the Company

The Company s to be at liberty from time to time to create and issue further Preference Shares rank ng in all respects pari passu with the above mentioned Preference shares

Issued and Subscribed Capital	Paid up Capital
12 000	6 000 Shares Rs 50 paid up
Ordinary Shares of	6 000 Shares Rs 20 paid up
Rs 50 each	Less calls in arrears Rs 1 863 12 11

Present Issue

8 000 f ve per cent Cumu at ve Preference Shares of Rs 50 each which number may be increased at the discretion of the Directo s

Ou of the above a sufficient number of shares have been offered in the fi st place to the holders of existing shares in the proportion of one Preference Share for every two Ordinary Shares held by them respectively

The amount payable in respect of he Preference Shares s as follows —
On applicat on Rs 5 per sha e with Rs 0 4 0 entrance fee for each share
On allo ment Rs 5 per share

The balance of Rs 40 per share s payable in eigh quar erly nstalments of Rs 5 each The f rst such instalmen w l fall due on 15 h May 1942 and he others on the 15 h of every succeed ng h d mon h hereafte

OR

The shares may be made fully pa d up at the opt on of he allo tee e ther on a lotmen or at any me before 15th May 1942

Board of Directors

Messrs

1 A Srinivasa Pai B A B L *Advocate Kasaragod (Chairman)*
2 B Venkatrao Baliga B A B L M L A *Vakil Mangalore*
3 U Srinivasa Malliah *Merchant Mangalore*
4 M Padmanabha Raghunatha Pai *Merchant Mangalore*
5 M Venkatesh Pai *Banker Mangalore*
6 H Laxminarayana Kamath *Merchant Ganguli*

Messrs

7 C Shrinivasa Rao *Satkar Nagar*
8 M Gopalkrishna Kamath *Merchant Coondapur*
9 A Damodara Pai B A B L *Vakil Mangalore*
10 V Venkat Rao B A *Retired Tahsildar Mangalore*
11 S Pundalika Nayak *Commission Agent Bombay*
12 K P Janardhan Prabhu B A *Land holder, Mangalore*

GENERAL MANAGER	AUDITOR
Mr P S Nayak B A B L *Fellow of the Indian Institute of Bankers*	Mr A Umanath Rao B A Dip Econ G D A R A *Registered Accountant & Auditor*

PROSPECTUS

Of the history of the Canara Bank, its service, its policies and the position it now occupies in banking circles, little need be said to those that will read this Prospectus

Increase of Capital

The business of the Company has during the last few years developed to such an extent that the Directors consider the time has arrived for increasing its capital Further the ever increasing contacts consequent on the development of business have justified the belief that there is an unsatisfied demand for shares of the Bank

Present Issue

The present issue is limited to 8000 Preference Shares (which number may be increased at the discretion of the Directors) issued at par Of these such number of shares as may be necessary are offered in the first instance to present Shareholders at the rate of one preference share for every two existing shares held by them respectively and the rest to our patrons and well wishers The terms are sufficiently attractive to justify an expectation that there will be a good demand for these shares

The subscription lists will open on Monday the 19th January 1942 and will be closed as soon as applications for the approximate number of shares which the Directors consider sufficient for the present are received but in no case will the lists be open after Saturday the 24th January 1942

Voting

No member shall be entitled to be present or vote on any question either personally or by proxy or as a proxy for another member at any general meeting, or upon a poll or be reckoned in a quorum until he shall have paid all calls and all other monies presently payable by him in respect of shares held by him singly or jointly with others

If two or more persons be jointly entitled to shares conferring the right to vote, any one of them may vote in respect thereof as if he were sole owner thereof but in case more than one of several joint holders be present personally or by proxy the member whose name stands first in the Register out of those present as one of the holders of such shares and no other shall be entitled to vote in respect of the same

At each general meeting at which he is entitled to be present a member has one vote on a show of hands and on a poll one vote for every Or l nary Share and one vote for every two Preference Shares of which he is the holder

Transfer of Shares

The following are the provisions in the articles re restrictions on transfer

An application for the registration of transfer of shares in the Bank may be made either by the transferor or transferee but the Directors may at any time, in their absolute and uncontrolled discretion, and without assigning any reasons decline to register any transfer of shares voluntary or otherwise (including court sales) whether fully paid up or not If the Directors decide to recognize any instrument of transfer and such application is made by the transferor no registration shall in the case of partly paid up shares be effected unless the Bank gives notice of the application to the transferee If within two weeks of the receipt of notice no objection is made by the transferee, the Bank shall enter in its Register of Members, the name of the transferee in the same manner and subject to the same conditions as if the application for registration was made by the transferee Where however the Bank refuses to register the transfer of any shares the Bank shall within two months of the date when the instrument of transfer was lodged with the Bank, send to the Transferee and Transferor notice of the refusal

For the purpose of this Article notice to the transferee or transferor shall be deemed to have been duly given, if dispatched by prepaid post to the address given in the instrument of transfer, and shall be deemed to have been delivered in the ordinary course of post '

Report of the Auditor

Under Section 93 1A (1) of the Indian Companies Act, 1913

I beg to report that the net profits of the Canara Bank Ltd , in each of the following three years have been as follows —

Year ending 31—12—1938	Rs.	67,443—14—1
Year ending 31—12—1939	Rs	55,003— 0—6
Year ending 31—12—1940	Rs	71,726— 5—0
	Rs.	1,94,173— 3—7

Out of its profits the Bank has paid dividends as follows –

For the year ending 31—12—1938
Dividend of 9% and bonus of 1% per annum on 6000 shares of Rs 50 paid up and 6000 shares Rs 10 paid up less calls in arrears Rs 225 — Rs 35,322— 5—6

For the year ending 31—12—1939
Dividend of 9% and bonus of 1% per annum on 6000 shares of Rs 50 paid up and 6000 shares of Rs. 15 paid up less calls in arrears Rs 1178 — Rs 38,131— 6—4

For the year ending 31—12—1940
Dividend of 8% per annum on 6000 shares of Rs 50 paid up and 6000 shares Rs 15 paid up less calls in arrears Rs 108—0—1 — Rs 31 180 – 0—6

The Bank has transferred the following amounts to one or other Reserves during each of the following three years

Year ending 31—12—1938	Rs	31 307— 9—0
Year ending 31—12—1939	Rs	18 200— 0—0
Year ending 31—12—1940	Rs	41 369— 3—
	Rs	**90 876—12—7**

The trading results and all charges and expenses incidental thereto exclud ing income or profits having no relation to the trading for the period covered and excluding also items of profit or income of a non recurring nature are as follows

		1938	1939	1940
Income	Rs	5 61 0 —13—	5 17 054—1 — 9	4 87 685—13—11
Expenditure		4 8 064—12—7	4 49 185 —11	4 1 36 —12— 3
Trading Results		4 011—0—0	6) — —10	6 323— 1— 8

The accounts for the year beginning with 1st January 1941 remain to be made up in due course

Place MANGALORE
Date 14 12 1941

(Sd) A Umanath Rao
AUDITOR

Application for Shares

Application for shares should be made upon the form accompanying the prospectus and sent to any office of the Bank together with a remittance of the amount due on application

Where no allotment is made the deposit will be returned in full and where the number of shares allotted is less than the number applied for the balance of the deposit will be applied towards the remaining payments and the balance if any returned

Failure to pay any future instalments on shares allotted when due will render previous payments liable to forfeiture

APPLICATIONS FOR 10 SHARES AND APPLICATIONS BY DEPOSITORS AND CUSTOMERS OF THE BANK WILL RECEIVE PREFERENTIAL CONSIDERATION

Brokerage

A brokerage of annas two per share will be paid to authorised brokers on all shares applied for through them and allotted

Prospectuses and forms of application can be obtained at any office of the Bank

Copies of the Memorandum and Articles of Association of the Bank are available for inspection during business hours at the Registered Office and at the Chickmagalur Cochin and Alleppey Offices of the Bank This prospectus is issued subject to the provisions contained in such Memorandum and Articles of Association

The company has places of business in the States of Mysore Cochin and Travancore and for the purposes of the Companies Acts in the several States the addresses of the principal offices are respectively as follows —

1 Syed Road Chikmagalur
2 Mattanchery Cochin
3 Gowri Mahal Alleppey

Share Certificates

Share Certificates will be ready within two months of payment in full of the shares to which they relate.

Sd K P Janardhan Prabhu	Sd U Sub aya Malliah Under Power of Attorney from Mr Ullal S nivas Malliah.
Sd A Damodara Pa	Sd V Venkat Rao
Sd H Laxminarayana Kama h	Sd M Venkatesh Pai
Sd B Venkatarao Baliga	Sd M Gopala Krishna Kamath
Sd M Madhava Rau Under Power of Attorney from Mr A Srinivasa Pai	Sd M Padmanabha Raghunath Pai.
Sd Sujir Damodar Nayak Under Power of Attorney from Mr Sujir Pandalik Nayak	Sd M Laxman Pai Under Power of Attorney from Mr C Srinivasa Rao

Mangalore

ಮಕ್ಕಳಿಗೆ ಹಣಕಾಸುಗಳ ಉಪಯೋಗವನ್ನು ಕಲಿಸಿರಿ

ಇಂದಿನ ಮಗುವು ನಾಳೆಯ ತಂದೆ

By B. Raghavendra Baliga—B. Com.

ಮಕ್ಕಳು ಹಣಕಾಸುಗಳ ವಿಚಾರವನ್ನು ಎತ್ತಬಾರದೆಂದು ಅನೇಕ ತಾಯ್ತಂದೆಗಳು ಅವರನ್ನು ಗದರಿಸುವುದುಂಟು. ಇದು ತಪ್ಪು.

ಮಗುವು ಮುಂದಿನ ತಂದೆ. ಮಗುವಿಗೆ ಸಹಜವಾಗಿ ಹಣಕಾಸುಗಳ ವಿಚಾರ ತಿಳಕೊಳ್ಳಬೇಕೆಂಬ ಉತ್ಕಟೇಚ್ಛೆ ಇರುತ್ತದೆ. ತಂದೆ ಅಥವಾ ಜಾಣರಾಗಿದ್ದರೆ ಮಕ್ಕಳಿಗೆ ಹಣಕಾಸುಗಳ ವಿಚಾರದಲ್ಲಿ ಸುಲಭ ಗಣಿತವನ್ನು ಕಲಿಸುವರು.

ಮಗುವಿಗೆ ಯಾವುದಕ್ಕೆ ಎಷ್ಟನ್ನು ವೆಚ್ಚಮಾಡಬೇಕೆಂದು ತಿಳಿಯುವುದಿಲ್ಲ. ಯಾವುದನ್ನು ಕೊಂಡುಕೊಳ್ಳಬೇಕೆಂದು ತಿಳಿಯದೆ, ಚಂಚಲವಾದ ಮನಸ್ಸು ಅತ್ತಿತ್ತ ಓಡಾಡಿ, ಈಗ ಒಂದು ಮತ್ತೆ ಮತ್ತೊಂದು ಹೀಗೆ ಒಂದೊಂದಾಗಿ ಎಲ್ಲವನ್ನೂ ಹೊಂದಲು ಯತ್ನಿಸುವುದು. ಅದು ಮಗುವಿನ ಮನೋಧರ್ಮ. ವಯೋಧರ್ಮಕ್ಕನುಗುಣವಾಗಿ ಮಗುವು ವರ್ತಿಸುತ್ತದೆ.

ಅಂತಹ ಮಗುವನ್ನು ಮೆಲ್ಲನೆ, ಸೌಮ್ಯವಾಗಿ ತಿದ್ದುವ ಕಾರ್ಯವು ಹೆತ್ತವರದು.

ಚಿಕ್ಕ ಮಕ್ಕಳಿಗೆ ಚಿಕ್ಕ ಪುಡಿಕಾಸುಗಳನ್ನು ಕೊಟ್ಟು, ಅವುಗಳನ್ನು ಶೇಖರಿಸಿಡುವಂತೆ ಬೋಧಿಸಬೇಕು ದಿನಕ್ಕೊಂದು ಕಾಸು- ತಿಂಗಳಿಗೆ ಮೂವತ್ತು— ವರುಷಕ್ಕೆ ಮುನ್ನೂರ ಅರ್ವತ್ತು— ಈ ಲೆಕ್ಕಗಳನ್ನು ತಿಳಿಸಬೇಕು

ಆರಂಭದಲ್ಲಿ, ಮಗುವಿಗೆ ಒಂದು ದಿನ ತಿಳಿಸಿರಿ. ಮಗೂ, ಒಂದು ತಿಂಗಳಿಂದ ನಿನಗೆ ತಿಳಿಯದಂತೆ ನಿನ್ನ ಹೆಸರಲ್ಲಿ ಒಂದೊಂದು ಕಾಸನ್ನು ಕೂಡಿಡುತ್ತಿದ್ದೆ. ಈಗ ಮೂವತ್ತು ಕಾಸುಗಳು ಒಟ್ಟಾಗಿವೆ. ಇದನ್ನು ನಿನ್ನ ಹೆಸರಲ್ಲಿ ನಿನ್ನ ಪೆಟ್ಟಿಗೆಯಲ್ಲಿರಿಸಿದೆ. ನಿತ್ಯವೂ ಒಂದೊಂದು ಕಾಸು ಕೊಟ್ಟದುದನ್ನು ಆ ಕಾಸುಗಳ ಡಬ್ಬಿಯಲ್ಲಿ ಹಾಕಿ ಅವು ಬೆಳೆದು ಬರುವುದನ್ನು ನೋಡು.

ಸಾಮಾನ್ಯವಾಗಿ ಎಲ್ಲ ಮಕ್ಕಳು ಇಂತಹ ಮಾತುಗಳಿಗೆ ಒಡಂಬಡುತ್ತವೆ.

ಮಕ್ಕಳೊಡನೆ ಸೌಮ್ಯವಾಗಿ ಮಾತಾಡುತ್ತಿದ್ದರೆ ಅವುಗಳ ಕೋಮಲ ಭಾವನೆಯು ಕೋಮಲವಾಗಿಯೇ ಉಳಿಯುವುದು. ಕರ್ಕಶವಾಗಿ ವರ್ತಿಸಿದರೆ ಅವುಗಳು ಕೂಡಾ ಕರ್ಕಶವಾಗಿ, ಬೆಳೆದು ಬಂದಂತೆ ಕ್ರೂರ ಹೃದಯಿಗಳೂ, ದೊರಗು ಸ್ವಭಾವದವರೂ ಆಗುವರು.

ಹಣ ಉಳಿಸಲು—ಹಣದ ಲೆಕ್ಕವಿಡಲು ಮಕ್ಕಳಿಗೆ ಕಲಿಸಿರಿ ಚಿಕ್ಕ ಪ್ರಾಯದಲ್ಲೇ ಅವುಗಳಿಗೆ ಪ್ರೌಢನಾದೆನೆಂಬ ಗೌರವವುಂಟಾಗಿ, ಅವು ಚಿಕ್ಕ ಪ್ರಾಯದಿಂದ ಘನಸ್ತಿಕೆ ಕಲಿಯುವುವು

'ಮಗು—ಅದಕ್ಕೇನು ಗೊತ್ತಿದೆ' ಎನ್ನುತ್ತ ಮಕ್ಕಳನ್ನು ಅಲಕ್ಷಿಸುತ್ತ ಬಂದರೆ, ಅವುಗಳ ಮನಸ್ಸೂ ಬುದ್ಧಿಯೂ ಬೆಳೆಯಲು ನೀವು ಸಹಾಯ ಮಾಡಿದಂತಾಗಲಿಲ್ಲ. ಬದಲಾಗಿ, ಸುಪುಷ್ಟವಾಗಿ ಚಿಗುರಿ ಬೆಳೆಯುತಿದ್ದ ಮರವನ್ನು ಕೃತ್ರಿಮವಾಗಿ ನಿಷ್ಠುರವಾಗಿ ಕಡೆದಂತಾಗುವುದು.

1941ನೇ ವರ್ಷವು ಉರುಳಿತು!

1941ನೇ ವರ್ಷವುರುಳಿತು! ಪ್ರತಿಯೊಬ್ಬನೂ ಒಂದೊಂದು ವರ್ಷಕ್ಕೆ ಹಿರಿಯನಾದನು

ಉರುಳಿ ಹೋದ ವರ್ಷದಲ್ಲಿ ನೀವು ಮಾಡಿದುದೇನು? ಹಣವುಳಿಸಿದಿರಾ? ಅಥವಾ ದುಂದು ವ್ಯಯ ಮಾಡಿದಿರಾ? ಆಪದ್ಧನದ ಆಲೋಚನೆಯಾಯಿತೇ? ಸಾಧಿಸಿದಿರಾ?

ವರ್ಷಗಳು ಉರುಳುವವು ಮನುಷ್ಯನು ಮುದಿಯನಾಗುವನು.

ಆಪದ್ಧನವಿರಬೇಕಿತ್ತೆಂದು ಸಮಯ ಮಿಂಚಿ ಹೋದಾಗ ಚಿಂತಿಸಿದಂತೆ ಸದಾ ಎಚ್ಚರವಿರಲಿ!

ಕೆನರಾ ಬ್ಯಾಂಕ್ ಲಿಮಿಟೆಡ್.

ಸ್ಥಾಪನೆ: ೧೯೦೬.

ಕೆನರಾ ಬೇಂಕಿನ ಚರಿತ್ರೆ

(೩ನೆಯ ಪುಟದಿಂದ ಮುಂದುವರಿದುದು)

ಅಂದಿನ ಬೇಂಕುಗಳ ಗಿರಾಕಿವರ್ಗದವರ ಮನೋಚಾಂಚಲ್ಯವನ್ನು ಹೋಗಲಾಡಿಸಿ ಶಾಂತಿನಿರ್ಮಾಣ ಉಂಟಾಗಬೇಕಾದರೆ ಬೇಂಕುಗಳು ತಾವಾಗಿಯೇ ರಿಜರ್ವ್ ಬೇಂಕಿನವರಿಂದ ಲೆಕ್ಕ ಪರೀಕ್ಷೆಯನ್ನು ಮಾಡಿಸಲಿಕ್ಕೆ ಮುಂದೊತ್ತಬೇಕೆಂಬುದೇ ಮಾನ್ಯ ಪ್ರಧಾನರ ಹೇಳಿಕೆಯ ಗೂಢಾರ್ಥ. ಅದರಂತೆ ಕೆನರಾ ಬೇಂಕಿನವರು ತಮ್ಮ ಯಾವತ್ತು ಲೆಕ್ಕ ಪತ್ರಗಳನ್ನೂ ಪುಸ್ತಕಗಳನ್ನೂ ರಿಜರ್ವ್ ಬೇಂಕಿನ ಯಾವನೊಬ್ಬ ಹುದ್ದೇದಾರನಿಂದ ಪರಿಶೋಧನೆ ನಡಿಸುವಂತೆ ತಾವಾಗಿಯೇ ರಿಜರ್ವ್ ಬೇಂಕಿನ ಗವರ್ನರರಿಗೆ ತಂತಿ ಕೊಟ್ಟರು. ಈ ಕುರಿತು ನವ್ಮೂರಿನ 'ಕಂಠೀರವವು' ತನ್ನ ಅಮೂಲ್ಯ ಪತ್ರಿಕೆಯಲ್ಲಿ ಅಂದು ಈ ರೀತಿ ಉಲ್ಲೇಖಿಸಿದೆ— 'ಇದೊಂದು ಈ ಬೇಂಕಿನ ಅಭೇದ್ಯವಾದ ಸುಭದ್ರ ಪರಿಸ್ಥಿತಿಯ ನಿಶ್ಚಿತ ಲಕ್ಷಣವೆಂದಷ್ಟೇ ಅಲ್ಲ, ಈ ಸಂಸ್ಥೆಯ ನಿಯೋಗಿಗಳು 'ಎಕ್ಸ್‌ಪರ್ಟರ' ಎಂಥಹ ಕಠಿಣ ಕ್ರಮದ ಪರಿಶೋಧನೆಗಾದರೂ ಒಳಗಾಗಬಲ್ಲುದು. ರಿಜರ್ವ್ ಬೇಂಕು ಅನ್ವಯಿಸಬಹುದಾದ ಎಂತಹ ಗಡುಸಾದ ನಿಯಮಾವಳಿಗಳ ಪರೀಕ್ಷೆಗಾದರೂ, ಅದು ಸಿದ್ಧವಾಗಿ ನಿಂತಿರುವುದು ಎಂಬ ದೃಢ ವಿಶ್ವಾಸವು ಈ ಸಂಸ್ಥೆಯ ಆಡಳಿತದ ಮಂಡಲಕ್ಕೆ ಸಂಪೂರ್ಣವಾಗಿ ಇದೆ ಎಂದೂ ಇದರಿಂದಲೇ ಸ್ಪಷ್ಟವಾಗುವುದು.''

ಆ ತರುವಾಯ—೧೯೩೬ರಲ್ಲಿ ರಿಜರ್ವ್ ಬೇಂಕಿನ ಒಬ್ಬ ಲೆಕ್ಕ ಪರಿಶೋಧಕರು ನಡೆಸಿದ ಲೆಕ್ಕ ಪರೀಕ್ಷೆಯ ಫಲಿತಾಂಶವಾಗಿ, ಈ ಬಿಕ್ಕಟ್ಟಿನಿಂದ ಈ ಬೇಂಕು ಜಯಶೀಲವಾಗಿ ಹೊರಬಿದ್ದು, ಇಂದಿಗೂ ಅದರ ಪೋಷಕ ವರ್ಗದವರ ಸೇವೆಯನ್ನು ನಿಶ್ಚಿಂತತೆಯಿಂದ ಸಲ್ಲಿಸುತ್ತದೆ

ಕಗ್ಗತ್ತಲಿನ ಹಿಂದೆಯೇ ಶುಭ್ರ ಪ್ರಭಾತವೆಂಬ ನಾಣ್ನುಡಿಯಂತೆ ಈ ಸಂಧಿಗ್ದ ಪರಿಸ್ಥಿತಿಯ ಹಿಂದೆಯೇ ಜನತೆಯ ಆಧಾರ ಸನ್ಮಾನ ಲಕ್ಷಣವಾಗಿ ಈ ಬೇಂಕಿನ ಠೇವಣಿಗಳು ಮತ್ತಷ್ಟು ಹೆಚ್ಚಿದವು ಇಂದಿಗೆ ಈ ಸಂಖ್ಯೆಯು ರೂಪಾಯಿ ೯೯ ಲಕ್ಷಕ್ಕೆ ಏರಿದೆ ಇಂಥಹ ಪರಿಸ್ಥಿತಿಯಿಂದ ಈ ಬೇಂಕಿನ ಪ್ರಾಚೀನ ಸಂಪ್ರದಾಯದ 'ಸುಭದ್ರತೆಯೇ ಪ್ರಥಮ ಧ್ಯೇಯ'ವೆಂಬ ಕಾರ್ಯನೀತಿಗೆ ಲೋಪ ಬಾರದಂತೆ ಠೇವಣಿಗರ ಹಣಗಳನ್ನು ಮತ್ತಷ್ಟು ಭದ್ರಪಡಿಸಬೇಕಾದುದರಿಂದ ಈಗ ತನ್ನ ಅಧಿಕೃತ ಮೂಲಧನವನ್ನು ೧೦ ಲಕ್ಷದಿಂದ ೨೫ ಲಕ್ಷಕ್ಕೆ ಏರಿಸಲು ದ್ಯುಕ್ತವಾಗಿದೆ.

ಅಂದಿನ ಈ ಚಿಕ್ಕಕಾಳು ಇಂದಿನ ಮಹಾವೃಕ್ಷವಾಗಿ ಚಿಗುರಿ, ಬೆಳೆದುದು ಪ್ರಾಮಾಣಿಕತೆಯ ಮತ್ತು ಕಾರ್ಯಕುಶಲತೆಯ ಪರಿಣಾಮವಲ್ಲದೆ ಮತ್ತೇನು?

ದಿವಂಗತ ಶ್ರೀ। ಸುಬ್ರಾವ್ ಪೈಗಳ ಜೀವನ ಚರಿತ್ರೆ!

[1ನೇ ಪುಟದಿಂದ ಮುಂದುವರಿದುದು]

ನಾಂಗದ ಕೈಯಾಳುಗಳಾಗಿರುವ ನಮ್ಮ ಪಾಡು ಅವರ ಮನಸ್ಸಿಗೆ ತುಂಬಾ ನಾಟಿತ್ತು. ಅದರಿಂದಾಗಿ ರಾಜ್ಯಭಾರಕ್ಕೆ ಸಂಬಂಧಪಟ್ಟ ಯಾವ ಕಾರ್ಯದಲ್ಲೂ ಗವರ್ನರುಗಳ ಆಗಮನ ಮುಂತಾದ ಯಾವ ಸಂದರ್ಭದಲ್ಲಿಯೂ ಎಷ್ಟಾದರೂ ಭಾಗವಹಿಸುತಿದ್ದಿಲ್ಲ.

ಮಾನ್ಯರಿಗೆ ನಮ್ಮ ಸನಾತನ ಧರ್ಮದಲ್ಲಿ ತುಂಬಾ ಶ್ರದ್ಧೆ ಶುದ್ಧ ಆಸ್ತಿಕರೂ ಧರ್ಮಾವಲಂಭಿಗಳೂ ಆಗಿದ್ದು ಸಂಕುಚಿತ ಶಾಸ್ತ್ರಾನುಸರಣವನ್ನು ಅವರು ಮೆಚ್ಚುತಿದ್ದಿಲ್ಲ. ಅಹಂಭಾವವಾಗಲೀ ಡಂಭಾಚಾರವಾಗಲೀ ಅವರಿಗೆ ಸಹನವಾಗುತಿದ್ದಿಲ್ಲ ಮಹಾನುಭಾವರ ಸಂಭಾಷಣೆಗಳ ಒಂದು ವಿಶೇಷತ್ವವೆಂದರೆ— 'ನಾನು' ಎಂಬ ಶಬ್ದದ ಅಭಾವವೇ. ಮತ್ತಿವರ ವಿಶಾಲ ಪುಸ್ತಕ ಜ್ಞಾನವೂ ರಸಿಕ ಮಾತುಗಳೂ ಸರಸವಾದ ನುಡಿಗಳೂ ಅವರ ಸಂಭಾಷಣೆಯನ್ನು ಅಮೂಲ್ಯವೆನಿಸುತಿದ್ದುವು.

ಕಾರುಣ್ಯದಿಂದಲೂ ಮಾನ್ಯರಿಗೆ ವಾತರೋಗವಿತ್ತು. ಅದರಿಂದಾಗಿ ಆಗಿಂದಾಗ್ಯೆ ಬಹಳ ಕಷ್ಟಗಳನ್ನನುಭವಿಸುತಿದ್ದರಾದರೂ, ಆ ಯಾತನೆಯನ್ನು ಮಾತಿಲ್ಲದೆ ಸಹಿಸುತಿದ್ದರು ಕಡೆಗೆ ತಮ್ಮ ೭೮ನೇ ವರ್ಷದಲ್ಲಿ ಬಡವರ ಬಂಧುಗಳೆಂತಿದ್ದ ಈ ಮಹಾನುಭಾವರು, ಹಿಂದುಗಳಿಗೆಲ್ಲಾ ಪವಿತ್ರವಾದ ನಾರಾಯಣ ಮಂತ್ರವನ್ನು ಉಚ್ಚರಿಸುತ್ತಾ ೧೯೦೯ನೇ ಇಸವಿ ಜುಲೈ ತಾರೀಕು ೨೫ನೇ ದಿನ ಇಹಲೋಕವನ್ನು ತ್ಯಜಿಸಿದರು. ಗೌಡ ಸಾರಸ್ವತ ಸಮಾಜದ ಮತ್ತು ನಮ್ಮ ದಕ್ಷಿಣಕನ್ನಡದ ಒಂದು ದಿವ್ಯ ಜ್ಯೋತಿಯೇ ಮಾಯವಾದಂತಾಯಿತು. ಮಾನ್ಯರ ಸ್ಮಶಾನಯಾತ್ರೆಯಲ್ಲಿ ಅವರ ಕಳೇಬರವನ್ನು ಜಾತಿಮತ ಭೇದವೆಣಿಸದೆ ಸಹಸ್ರಗಟ್ಲೆ ಪುರಜನರು ಹಿಂಬಾಲಿಸಿದರು. ಅವರ ಯೋಗ್ಯತೆಗೂ ಜನಪ್ರಿಯತೆಗೂ ಇದೊಂದು ಪವಿತ್ರ ನಿದರ್ಶನವಲ್ಲವೇ?

ಕೆಲೆಂಡರ್

ನಮ್ಮಲ್ಲಿ ಇಂಗ್ಲಿಷ್- ಕೆಲೆಂಡರ್ ಹೆಚ್ಚಾಗಿ ಬಳಕೆಯಲ್ಲಿದೆ ಹಾಗೆಯೇ ಜಗತ್ತಿನ ಇತರ ಭಾಗಗಳಲ್ಲಿ ಬೇರೆ ಬೇರೆ ಕೆಲೆಂಡರುಗಳೂ ಶಕಗಳೂ ಇದ್ದರೂ ವ್ಯವಹಾರದಲ್ಲಿ ಪ್ರಪಂಚಕ್ಕೆಲ್ಲಾ 'ಇಸವಿ'ಯ ಕೆಲೆಂಡರೇ ಇದೆ. ಹೀಗೆ ಒಂದೇ ಬಗೆಯ ಕೆಲೆಂಡರು ಇರುವುದರಿಂದ, ವ್ಯಾಪಾರ ವಹಿವಾಟುಗಳಿಗೆ ಎಲ್ಲರಿಗೂ ಅನುಕೂಲವಾಗಿದೆ.

ಈ ಕೆಲೆಂಡರಿನ ಮೂಲವು ರೋಮ್ ನಗರದಲ್ಲಾಯಿತು. ರೋಮ್ ನಗರವನ್ನು ಸ್ಥಾಪಿಸಿದ ರೋಮುಲಸನು ಕ್ರಿಸ್ತಪೂರ್ವ ೭೫೩ರಲ್ಲಿ ಇದನ್ನಾರಂಭಿಸಿದನು. ಅನಂತರ ಹಲವು ಮಾರ್ಪಾಟುಗಳಾಗಿ ಯೇಸುಕ್ರಿಸ್ತನ ಜನನದಿಂದ ವರ್ಷಗಳ ಎಣಿಕೆಯಾಯಿತು. ಇದೇ ನಮ್ಮ ಕೆಲೆಂಡರಿನ 'ಕ್ರಿಸ್ತಶಕ'.

'ಬ್ಯಾಂಕಿಂಗ್' ಎಂದರೇನು?

ಕೆನರಾ ಬ್ಯಾಂಕಿನ ವಿಸ್ತರಣದ ಮಹತ್ವ

by Sri P. Dasa Kini

ಮಾನವನ ಬೇಕುಗಳಿಗೆ ಅನುಕೂಲ ರೀತಿಯಲ್ಲಿ ಪೂರೈಕೆ ಮಾಡುವ ಆರ್ಥಿಕ ಸುವ್ಯವಸ್ಥೆಯೇ ಬ್ಯಾಂಕಿಂಗ್

ಉತ್ಪತ್ತಿ-ಸಂಗ್ರಹ – ವಿತರಣಗಳನ್ನು ಚೊಕ್ಕ ರೀತಿಯಲ್ಲಿ ನಡೆವಂತೆ ಸಹಾಯ ಮಾಡುವುದೇ 'ಬ್ಯಾಂಕಿಂಗ್'.

ಒಂದು ದೇಶವು ಮತ್ತೊಂದು ದೇಶದೊಡನೆ ಸುರಕ್ಷಿತವಾಗಿ ಕೊಟ್ಟುಕೊಳ್ಳುವ ವ್ಯವಹಾರ ನಡೆಸಲು ಮುಖ್ಯ ಸಾಧನವಾಗಿರುವುದೇ 'ಬ್ಯಾಂಕಿಂಗ್'

ಸರಕಿಗೆ ಪ್ರತಿಯಾಗಿ ಸರಕನ್ನು ಕೊಟ್ಟು ಕೊಂಡುಕೊಳ್ಳುವ ಪ್ರಾಚೀನ ಪದ್ಧತಿಯನ್ನು ನಿಲ್ಲಿಸಿದುದು ಲೋಹದ ನಾಣ್ಯಗಳು! ಆ ನಾಣ್ಯಗಳು ಯೋಗ್ಯರೀತಿಯಲ್ಲಿ ಬಳಕೆಯಲ್ಲಿರುವಂತೆ ಮಾಡಿದುದು 'ಬ್ಯಾಂಕಿಂಗ್'.

ಕೇವಲ ಹಣದಿಂದ ನಡೆಸಬಹುದಾದ ವ್ಯಾಪಾರವಹಿವಾಟುಗಳನ್ನು, ಶತಪಾಲು ವರ್ಧಿಸಿ, ವಾಣಿಜ್ಯದ ತಥಾಪಿ ದೇಶದ ಅಭ್ಯುದಯಕ್ಕೆ ಕಾರಣವಾದುದು 'ಬ್ಯಾಂಕಿಂಗ್'.

ಜನರು ಗಳಿಸಿ ಉಳಿಸಿದುದನ್ನು ಜನರಿಗೆ ಖರ್ಚು ಮಾಡಿದನಂತರ ತತ್ಕಾಲಕ್ಕೆ ಅವಶ್ಯವಿಲ್ಲದ ಹಣವನ್ನು ಒಂದು ಕಡೆ ಸಂಗ್ರಹಿಸಿ,– ಸಂಗ್ರಹಿಸಿಟ್ಟಲ್ಲಿ ಬೆಳೆದು ಬರುವಂತೆ ಮಾಡಿದುದು 'ಬ್ಯಾಂಕಿಂಗ್'

ಜನರು ದುಡಿದ ಹಣವನ್ನು ಬಚ್ಚಿಟ್ಟು ಕಳಕೊಳ್ಳುವ, ಅನ್ಯಾಯಕ್ಕೊಳಗಾಗುವ ಸಂಭವವನ್ನು ತಪ್ಪಿಸಿ, 'ಚೆಕ್'ಗಳ ಮೂಲಕ ತೆರುವ-ಪಡೆವ ಸಾಧನ ಕಲ್ಪಿಸಿ ಕೊಟ್ಟುದು 'ಬ್ಯಾಂಕಿಂಗ್'

'ಬ್ಯಾಂಕಿಂಗ್'–ಜನತೆಗೆ ಸರ್ವತೋಮುಖ ಸಹಾಯಕವಾಗಿದೆ, ಅವಶ್ಯವಿದೆ, ಜನರ ಹಣವು ಸುರಕ್ಷಿತವಾಗುತ್ತದೆ; ಸುಭದ್ರವಾಗುತ್ತದೆ. ಠೇವಣಾತಿದಾರರ ಹಣವು ನಿಷ್ಪ್ರಯೋಜಕವಾಗದು–ನಿಶ್ಚಿಂತತೆಯಿಂದಿರಬಹುದು.

'ಸುಧಾರಿತ ಬ್ಯಾಂಕುಗಳು' ಎನ್ನಬೇಕಾದರೆ, ಅವುಗಳಿಂದ ಜನರಿಗೆ ಚೆನ್ನಾದ ಉಪಯೋಗವಿರಬೇಕು. ಬ್ಯಾಂಕು ತನ್ನ ಶಾಖೆಗಳನ್ನು ಜನೋಪಯೋಗೀ ಸ್ಥಳಗಳಿಗೆ ಹರಡಿ, ಸಹಾಯಕವಾಗಬೇಕು

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೯೦೬ರಲ್ಲಿ 'ಕೆನರಾ ಬ್ಯಾಂಕು' ಸ್ಥಾಪನೆಯಾಗುವಾಗ, ಒಂದು ಪರಿಮಿತ ಸ್ಥಳಕ್ಕೆಂದೇ ಅದರ ಜನನದಾತರು ಅದನ್ನು ಹೊರಡಿಸಲಿಲ್ಲ. ಸರ್ವತ್ರ ಈ ಬ್ಯಾಂಕಿನ ಶಾಖೆಗಳು ಹರಡಿ ಸರ್ವ ಜನೋಪಯೋಗಿಯಾಗಲೆಂದು ಹೊರಡಿಸಿದರು. ಕೆನರಾ ಬ್ಯಾಂಕು, ಸ್ಥಾಪಕರ ಉದ್ದೇಶವನ್ನು ಇಂದು,–ಮೂವತ್ತೈದು ವರ್ಷಗಳೊಳಗೆ ಬಹುಮಟ್ಟಿಗೆ ಪೂರೈಸಿದೆ. ಬ್ಯಾಂಕಿನ ಶಾಖೆಗಳು ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಮುಖ್ಯ ಊರುಗಳಲ್ಲಿ ಮಾತ್ರವಲ್ಲ ಕೊಚ್ಚಿ, ಉತ್ತರ ಕನ್ನಡ, ಧಾರವಾಡ ಜಿಲ್ಲೆ, ಬೊಂಬಾಯಿಯಂತಹ ದೂರ ದೂರದ ಊರುಗಳಿಗೂ ಹರಡಿ, ಅಲ್ಲಿಗೂ ಇಲ್ಲಿಗೂ ಇರುವ ವ್ಯಾಪಾರವನ್ನು ವೃದ್ಧಿಗೊಳಿಸಲು, ಹಾಗೂ ಸೌಕರ್ಯಗಳನ್ನು ಏರ್ಪಡಿಸಲು ಸಹಾಯಕವಾಗಿದೆ ಬೊಂಬಾಯಿ ಮೊದಲಾದ ಕಡೆಗಳಲ್ಲಿನ ನಮ್ಮ ವರ್ತಕರು ಈ ಮೊದಲು ಪಡುತ್ತಿದ್ದ ಅನಾನುಕೂಲತೆಗಳನ್ನು ಕೆನರಾ ಬ್ಯಾಂಕು ನಿವಾರಿಸಿದೆ.

ನಮ್ಮ ಉಪಯುಕ್ತ ಶಾಖೆಗಳು

ನಮ್ಮ ಶಾಖೆಗಳು, ಪ್ರಾಮುಖ್ಯ ವ್ಯಾಪಾರಿ ಕೇಂದ್ರಗಳೆಲ್ಲಕ್ಕೆ ಹರೆಡಿವೆ. ಜಿಲ್ಲೆಯ ಜನರೂ, ಪರವೂರುಗಳಲ್ಲಿನ ಇತರರೂ ಈ ಶಾಖೆಗಳ ಉಪಯೋಗತೆಯನ್ನು ದಿನೇ ದಿನೇ ಹೆಚ್ಚು ಹೆಚ್ಚಾಗಿ ಕಾಣುತ್ತಿರುವರು. ಅವಶ್ಯವಿಲ್ಲದ ಒಂದು ಕಡೆಯಲ್ಲಾದರೂ ಕೆನರಾ ಬ್ಯಾಂಕಿನ ಶಾಖೆಗಳಿಲ್ಲ.

ಶಾಖೆಗಳನ್ನು ವಿಸ್ತರಿಸಿ ಕೆನರಾ ಬ್ಯಾಂಕು ದೂರ ದೂರದ ಊರುಗಳನ್ನು ನಮ್ಮ ಜಿಲ್ಲೆಗೆ ಸಂಬಂಧಿಸಿದೆ. ಬಹು ಅಂತರವನ್ನು ಹೋಗಲಾಡಿಸಿದೆ. ಜಿಲ್ಲೆಯ ಅಭಿವೃದ್ಧಿಗೆ ತನ್ನ ನಿಷ್ಕಪಟ ಅವಿಶ್ರಾಂತ ಸೇವಾಂಶವನ್ನು ಸಲಿಸಿದೆ.

ಕೆನರಾ ಬ್ಯಾಂಕ್ ಲಿಮಿಟೆಡ್.

ಸ್ಥಾಪನೆ: ೧೯೦೬.

ಠಣ್ ಠಣ್ ರೂಪಾಯಿ!

By Sri Surendra Shenoi

ರೂಪಾಯಿ–ನಾನು ರೂಪಾಯಿ!

ಚಿಕ್ಕ ಮಕ್ಕಳಿಗೆ ಆಡಲು ಬೇಕಾದ ಆಟದ ಸಾಮಾನು ನಾನೇ–ರೂಪಾಯಿ!

ಜಗದೊಳಗಿನ ಜನರ ಜೀವ ನಾನೇ– ರೂಪಾಯಿ!

ಠಣ್ ಠಣ್!–ನನ್ನ ಇಂಪಾದ ಸ್ವರವನ್ನು ಬಲ್ಲಿರಾ? ವೀಣಾಪಾಣಿಯ ಹಸ್ತದಲ್ಲಾವ ಸ್ವರ? ಲಕ್ಷ್ಮೀಪತಿಯ ಪಾಂಚಜನ್ಯದಲ್ಲಾವ ಸ್ವರ? ಕೋಕಿಲೆಯ ಸ್ವರವೆಂತಹುದು? ಕಾಮಿನಿಯರ ಕೋಮಲ ಕಂಠದಲ್ಲಿ ಸ್ವರ ಯಾವುದು? ಮುರಲೀಧರನ ಮುರಲಿಯಲ್ಲೇನಿದೆ? ಡಮರುಗಳ ಸ್ವರವೇನು? ಮೃದಂಗಗಳಲ್ಲೇನು? ಜಲತರಂಗವು ಯಾವ ಸ್ವರದಿಂದ ಉದ್ಭವಿಸಿದುದು? ಅಲ್ಲಿ–ಇಲ್ಲಿ–ಎಲ್ಲಿ ಸ್ವರಗಳಲ್ಲಿರುವವರಾರು? ನಾನು, ಏಳು ಸ್ವರಗಳಿಂದಲೂ ಉನ್ನತಿಯಲ್ಲಿರುವ ಅಷ್ಟಮ ಸ್ವರ—ಅತ್ಯಂತ ಮಧುರವಾಹಿಯು— ರೂಪಾಯಿ!

ಗೀತೆಯ ಗಾಯಕರೇ! ಚಂಡಿಯ ಸಪ್ತಶತಿಯ ಪಾಠಕರೇ! ಭಾಗವತದ ಭಕ್ತರೇ! ಸತ್ಯನಾರಾಯಣನ ಪ್ರೇಮಿಗಳೇ! ರಾಮಾಯಣದ ಅನುರಾಗಿಗಳೇ! ನನ್ನ ಗೀತವನ್ನೂ ಪಠಿಸಿರಿ, ನನ್ನ ಭಕ್ತರಾಗಿರಿ, ನನ್ನ ಕಥೆಯನ್ನು ಕೇಳಿರಿ, ನನ್ನಲ್ಲಿ ಅನುರಾಗ ಮಾಡಿರಿ, ನನಗೆ ಮಾನ ಕೊಡಿರಿ, ನನ್ನ ಶರಣುಹೊಂದಿರಿ! ನಾನು ರೂಪಾಯಿ!

ನ್ಯಾಯಾನ್ಯಾಯಗಳಲ್ಲಿದ್ದೇನೆ; ಭವ-ಭಯ-ಹರಣದಲ್ಲಿದ್ದೇನೆ, ಅಶರಣ– ಶರಣುಗಳಲ್ಲಿದ್ದೇನೆ, ದುಃಖ ಪರಿಹರಿಸುವುದರಲ್ಲಿದ್ದೇನೆ, ಮಂಗಲಾ ಮಂಗಲಗಳಲ್ಲಿದ್ದೇನೆ, ಪುಣ್ಯಾಚರಣಗಳಲ್ಲಿದ್ದೇನೆ, ನಾನು–ರೂಪಾಯಿ!

ನನ್ನನ್ನು ಕೆಟ್ಟ ದೃಷ್ಟಿಯಿಂದ ನೋಡಿದರೆ, ಕುಚೇಷ್ಟೆ ಮಾಡಿದರೆ, ದ್ರೋಹಮಾಡಿದರೆ, ಯಾರಿಗೂ ಸುಖವಿಲ್ಲ ನಾನು– ರೂಪಾಯಿ!

ಜಮೀನ್ದಾರನಲ್ಲಿದ್ದೇನೆ, ಬಾದಶಹನಲ್ಲಿದ್ದೇನೆ, ಚಕ್ರವರ್ತಿಯಲ್ಲಿದ್ದೇನೆ! ನಾನೇ ಈಶ್ವರ! ನಾನು ರೂಪಾಯಿ!

ಶ್ರೀ ಠಾಕೂರರು ಮಾತಾಡುವುದಲ್ಲ, ನಾನು–ನಾನೇ ಅವನಿಗಿಂತ ಶ್ರೇಷ್ಠ! ನಾನು ನಡೆಸುತ್ತೇನೆ. ಆತನಲ್ಲಿ ದೇವತೆಗಳಲ್ಲಿ ನನ್ನಲ್ಲಿರುವಂಥಾ ಆಕರ್ಷಣ ಶಕ್ತಿಯಿಲ್ಲ. ಈಶ್ವರನಲ್ಲಿ ನನ್ನಲ್ಲಿರುವಂಥಾ ತೇಜವಿಲ್ಲ. ನಾನು ಪ್ರತ್ಯಕ್ಷವಾಗಿದ್ದೇನೆ. ನಾನು ದಾದಿಯಾಗಿದ್ದೇನೆ ಪ್ರಭುವಾಗಿದ್ದೇನೆ ನಾನು–ರೂಪಾಯಿ!

ನಾನು ಮನುಜರನ್ನು ಸಾವಿರಸಲ ಕುಣಿಸಿದ್ದೇನೆ, ಕುಣಿಸುತ್ತಿದ್ದೇನೆ ಮುಂದಕ್ಕೂ ಕುಣಿಸುವೆನು. ಮಾನವನು ನನ್ನ ಗುಲಾಮನು! ಪ್ರಕೃತಿಯು ನನ್ನ ವಶವರ್ತಿನಿ. ನಾನು ಆಕೆಯನ್ನುಂಟುಮಾಡುತ್ತೇನೆ, ಸಾಕುತ್ತೇನೆ, ಬಿಡುತ್ತೇನೆ ನಾನು–ರೂಪಾಯಿ!

ನಾನು ಸರ್ವಶಕ್ತಿ ಸಂಪನ್ನನಾಗಿರುವೆನು! ನಾನು ರೂಪಾಯಿ!

ಮಾಮೇಕಂ ಶರಣಂ ವ್ರಜ!

ನಾಣ್ಯಗಳ ನಾಣ್ಣುಡಿಗಳು

ಅಧಿಕ ವ್ಯಯದ ಭಯವೇ ಜಿಪುಣದ ಆರಂಭ.

❀

ಹಣಕಂಡರೆ ಹೆಣ ಮಾತ್ರ ಬಾಯಿ ಬಿಡದು

❀

ಕಾಸನ್ನು ನೀವು ರಕ್ಷಿಸಿರಿ–ರೂಪಾಯಿಗಳು ತಮ್ಮನ್ನು ತಾವೇ ರಕ್ಷಿಸಿಕೊಳ್ಳುವುವು

❀

ಹೊತ್ತಿಗೆ ಹಾಕಿದ ಒಂದು ದಾರ— ಒಂಬತ್ತನ್ನು ಉಳಿಸುವುದು.

❀

ಅತಿವ್ಯಯವು ಗತಿಗೆಡಿಸಿತು

❀

ಹನಿಗೂಡಿ ಹಳ್ಳ, ತೆನೆಗೂಡಿ ಕೋಟಿ

❀

ಹಣವಂತನ ಗುಣವಂತನು ಬ್ಯಾಂಕಿನಲ್ಲಿಟ್ಟು ಪಾಲಿಸುವವನು ಜಾಣನು

❀

ಆರು–ಯೋಗ್ಯ ಭಾಗ್ಯವೇ ಭಾಗ್ಯ ೧ ಹಣಗಳಿಸುವುದು, ೨ ಸಂಚಯಿಸುವುದು, ೩ ವ್ಯಾಪಾರ, ೪ ಬ್ಯಾಂಕಿನಲ್ಲಿ ಡಿಪಾಜಿಟ್ಟು, ೫ ಆಯಕ್ಕಿಂತ ಕಡಿಮೆ ಖರ್ಚು ಮಾಡುವುದು, ೬ ವೃದ್ಧಾಪ್ಯದಲ್ಲಿ ತನ್ನ ದುಡಿತದ ಉಳಿತಾಯದಿಂದಲೇ ಕಾಲಹರಣ ಮಾಡುವುದು.

❀

ಇಂದಿನ ಮೊಗ್ಗು ನಾಳೆಯ ಹೂ ಇಂದಿನ ಕಾಸು ನಾಳೆಯ ರೂಪಾಯಿ.

❀

ಹಣವಿರುವನಕ ದೋಸ್ತಿ — ಹಣ ಹೋದಾಗ ನಾಸ್ತಿ.

ಬ್ಯಾಂಕ್ ವ್ಯವಹಾರ--ನಿಮ್ಮ ಗೌರವ

ಬ್ಯಾಂಕಿನಲ್ಲಿ ಠೇವಣಾತಿಯಿಟ್ಟು ನಿಮ್ಮ ಖಾತೆಯನ್ನಾರಂಭಿಸಿದರೆ ಹಣವನ್ನು ಹೇಗೆ ಗೌರವಿಸಬೇಕೆಂದು ಕಲಿಯುವಿರಿ! ಹಣವನ್ನು ನೀವು ಗೌರವಿಸಿದಂದು, ನಿಮ್ಮ ಗೌರವವೂ ಹೆಚ್ಚುವುದು!

ಇಲ್ಲಿ ವಿಚಾರಿಸಿರಿ: ಕೆನರಾ ಬ್ಯಾಂಕ್ ಲಿಮಿಟೆಡ್,

ಸ್ಥಾಪನೆ: ೧೯೦೬.

CANARA BANK SUPPLEMENT

“ಮಹಾಕಟ್ಟಡವು ದೃಗ್ಗೋಚರವಾಗದಂತೆ ಹುಗಿದಿರಿಸಿದ ಕಲ್ಲುಗಳ ಮೇಲೆ ಆಧರಿಸಿ ಎದ್ದು ನಿಂತಿದೆ. ಹಾಗೆಯೇ ಮಹಾನಿಧಿಯೂ ಕೂಡಾ ಬುನಾದಿಯಲ್ಲಿ ಉಳಿಸಿಟ್ಟ ರೂಪಾಯಿಗಳ ಮೇಲೆ ಆಧರಿಸಿದ್ದು. ಆ ಬುನಾದಿಯಿಂದ ಧನದ ಮಹಾಪ್ರಸಾದವು ಎದ್ದಿದೆ.”

ಮಹಾನಿಧಿಯ ಬುನಾದಿ

by Sri M. Mukunda Kini

ಬಾಲ್ಯದಲ್ಲಿ

ಈ ಮಾತುಗಳನ್ನು ಅಮೇರಿಕದ ಆರ್ಥರ್ ಬ್ರಿಸ್ಬೇನನು ಹತ್ತು ವರ್ಷಗಳ ಹಿಂದೆ ಬರೆದಿಟ್ಟಿದ್ದನು. ಜಗತ್ತಿನ ಪ್ರಸಿದ್ಧ ಶ್ರೀಮಂತ ಜೊನ್ ಡಿ ರೊಕ್‌ಫೆಲ್ಲರನ ಜೀವನವನ್ನು ಚೆನ್ನಾಗಿ ಮನನಮಾಡಿ ಆರ್ಥರನಿಂದ ಹೊರಟ ನುಡಿಗಳು ಅವು.

ಚಿಕ್ಕ ಬಾಲಕನಾಗಿದ್ದಾಗ ಜೊನ್ ಡಿ. ರೊಕ್‌ಫೆಲ್ಲರನು ತೀರ ಬಡವನು ನ್ಯೂಯೋರ್ಕ್ ಸ್ಟೇಟಿನಲ್ಲಿ ಮೂರು ಮನೆಗಳಲ್ಲಿ ಅವನ ಜೀವನ ನಡೆದಿದೆ

೧೮೩೯ನೇ ಇಸವಿಯ ಜುಲೈ ತಾ ೮ರಲ್ಲಿ ರೊಕ್‌ಫೆಲ್ಲರನ ಜನನವಾಯಿತು ಜನನವಾದುದು ರಿಚ್‌ಫರ್ಡಿನ ಒಂದು ಚಿಕ್ಕ ಗುಡಿಸಲಿನಲ್ಲಿ

ಕಾಸಿಕೊಳ್ಳಲು ಕಾಸಿರಲಿಲ್ಲ

ಮೊರೇವಿಯದಲ್ಲಿ ಅವನ ಎರಡನೆ ಮನೆ. ಚಿಕ್ಕಕೊರಡಿಯಲ್ಲಿ ರೊಕ್‌ಫೆಲ್ಲರನು ಜೀವಿಸಿದ್ದನು ಚಳಿಗಾಲದಲ್ಲಿ ಕಾಸಿಕೊಳ್ಳಲು ಸಾಧನವಿಲ್ಲದೆ ನರಳಿದ್ದನು

ಬಲುಚಿಕ್ಕ ಪ್ರಾಯದಲ್ಲಿ ರೊಕ್‌ಫೆಲ್ಲರನು ಗೋವಳಿಗನ ವೃತ್ತಿ ಹಿಡಿದನು, ದನದ ಆರೈಕೆ ಕಲಿತನು ಹಾಲುಕರೆಯ ಕಲಿತನು ತೋಟಗಾರಿಕೆಯಲ್ಲೂ ಸ್ವಲ್ಪ ಆಸಕ್ತಿ ತೋರಿದನು

ಒಮ್ಮೆಗೋ ಎಂಬಲ್ಲಿ ರೊಕ್‌ಫೆಲ್ಲರನ ಮೂರನೇ ನಿವಾಸ ಬೆಳಿಗ್ಗೆ ದನಗಳನ್ನು ಹೊಡಕೊಂಡು ಹೋಗುವನು ಚಳಿಗಾಲದ ಶೀತ ಸಹಿಸಿಕೊಳ್ಳಲು ಹೆಚ್ಚಿನ ಸಾಧನಗಳಿಲ್ಲ. ಕಾಲುಬುಡವು ಕಣ್ಣಾಗಾದಾಗ ದನವು ಮಲಗಿಕೊಂಡಿದ್ದ ಸ್ಥಳದಲ್ಲಿ ತಾನು ನಿಂತು ಅಲ್ಲಿ ಮಣ್ಣಿಗಿದ್ದ ಉಷ್ಣವನ್ನು ತನ್ನ ಕಾಲಿಗೆ ಕೊಡುವಷ್ಟು ಕಷ್ಟ ಸಹಿಸಿದನು.

ಎಂಟು ವರ್ಷ ಪ್ರಾಯದಲ್ಲಿ ರೊಕ್‌ಫೆಲ್ಲರನು ಮುಂದಿನ ಬೆಳೆಯ ಗುಣವು ಮೊಳಕೆಯಲ್ಲಿ ಕಾಣುವಂತೆ, ತನಗೆ ದೊರೆವ ಸ್ಥಳವನ್ನು ಫಲಭರಿತ ಕ್ಷೇತ್ರವಾಗಿ ಮಾರ್ಪಡಿಸುವ ಯತ್ನಕ್ಕೆ ಕೈಹಾಕಿದನಾಗಿ ಹೇಳಲಾಗಿದೆ

ಧನಾರ್ಜನೆಯ ಪ್ರಥಮ ಸೋಪಾನ

ಟರ್ಕಿ ಜಾತಿಯ ಕೋಳಿಯ ಪಾಲನೆಯು ಅಮೇರಿಕದಲ್ಲಿ ವಿಶೇಷವಾಗಿ ನಡೆಯುತ್ತಿದೆ. ರೊಕ್‌ಫೆಲ್ಲರನು ಸಾಕುತಿದ್ದ ಒಂದು ಕೋಳಿಯು ದಾರಿತಪ್ಪಿ ಹೋಯಿತು. ಆ ಟರ್ಕಿ ಕೋಳಿಯು ಎಲ್ಲಿಗೋ ಹೋಗಿ ಕತ್ತಿಯಿಟ್ಟಿದೆಯೆಂದೂ ಅದನ್ನು ಹುಡುಕಿ ತಂದರೆ ಅದರ ಸಂತಾನವರಂಪರೆ ದೊರಕುವಂತಾಗುವುದೆಂದೂ ರೊಕ್‌ಫೆಲ್ಲರನಿಗೆ ತಾಯಿ ಸೂಚಿಸಿದಳು ರೊಕ್‌ಫೆಲ್ಲರನ ಸೃಷ್ಟಿಸಾಧಕ ವಿದ್ಯೆಗೆ

ಇದು ಅಹುದೆನಿಸಿತು. ಬಾಲಕನು ದಾರಿತಪ್ಪಿದ ಆ ಕೋಳಿಯನ್ನು ಹುಡುಕುತ್ತ ಹೋದನು. ಪ್ರಯಾಸದಿಂದ ಕೋಳಿ ಸಿಕ್ಕಿತ. ಅದನ್ನು ತಂದು ತಾಯಿ ತನಗಿತ್ತ ಆಹಾರದಲ್ಲಿ ಅದಕ್ಕೆ ಕೊಟ್ಟು ಸಾಕಿದನು ಕೋಳಿಯು ಕಾಡಿನಲ್ಲಿ ಗೂಡು ಕಟ್ಟಿ ತತ್ತಿಯಿಟ್ಟಿತ್ತು ನಿಜ. ತತ್ತಿಗಳೊಡೆದು ಮರಿಗಳಾದ್ದುವು ರೊಕ್‌ಫೆಲ್ಲರನು ಅವುಗಳನ್ನು ಹಳ್ಳಿಯ ಸಂತೆಗೊಯ್ದು ಮಾರಿದನು ಹಣ ದೊರೆಯಿತು. ಮುಂದಿನ ವರ್ಷ ಹೆಚ್ಚು ಕೋಳಿಗಳನ್ನು ಕೊಂಡುಕೊಂಡನು ಇಲ್ಲಿ ಆರಂಭವಾಯಿತು ಆ ಮಹಾ ಕುಬೇರನ ಜೀವಮಾನದಲ್ಲಿನ ದುಡಿತದ ಪ್ರಥಮ ಸೋಪಾನ

ಮುಂದಿನ ಕೋಟಿಯ ಮೊದಲಿನ ಕಾಸುಗಳು

ಕಾಸುಗಳು ಬೆಳೆದು ಕೋಟಿಯಾಗುವುವು ರೊಕ್‌ಫೆಲ್ಲರನ ಅಪಾರಧನ ಸಂಪತ್ತಿನ ಮೂಲವಾದರೂ ಕಾಸುಗಳಲ್ಲೇ ಆರಂಭವಾದುದು ಬಾಲಕನು ಕಾಸುಗಳಿಸಿದ ಹಣವನ್ನು ತನ್ನ ಗುಡಿಸಲಿನಲ್ಲಿ ಚಿಕ್ಕ ಗಾಜಿನ ಪಾತ್ರದಲ್ಲಿ ಹಾಕಿ ಒಂದು ಹಲಗೆಯ ಮೇಲಿರಿಸುತಿದ್ದನು ಈ ಕಾಸುಗಳೇ ಬೆಳೆದು. ಮುಂದೆ ರೊಕ್‌ಫೆಲ್ಲರನು ಪ್ರಪಂಚದ ಶ್ರೇಷ್ಠ ಶ್ರೀಮಂತನಾಗುವನೆಂಬುದನ್ನು ಯಾರು ಬಲ್ಲರು! ರೊಕ್‌ಫೆಲ್ಲರನಿಗೆ ಆಗ ಬೇಂಕ್ ಸಹಿವಾಟುಗಳು ತಿಳಿದಿರಲಿಲ್ಲ

ಕಷ್ಟವಿಲ್ಲದೆ ಇಷ್ಟ ದೊರೆಯಿತು

‘ಕಷ್ಟವಿಲ್ಲದೆ ಇಷ್ಟ ದೊರೆಯಿತೆ’ಂದರೆ ರೊಕ್‌ಫೆಲ್ಲರನು ಕಾಯಕಷ್ಟ ಮಾಡಲಿಲ್ಲವೆಂದಲ್ಲ ಅದರರ್ಥವೇ ಬೇರೆ ಇದೆ ಹದಿನಾಲ್ಕನೇ ವರ್ಷದಲ್ಲಿ ರೊಕ್‌ಫೆಲ್ಲರನು ತನ್ನ ನೆರೆಕರೆಯವನೊಬ್ಬನ ಬಟಾಟೆ ಹೊಲಗಳಲ್ಲಿ ನೆಲ ಅಗೆದನು. ಬಟಾಟೆ ಅಗೆದು ತೆಗೆದುಕೊಡುವ ಕೆಲಸ ಮಾಡಿದನು. ದಿನಕ್ಕೆ ಹತ್ತು ತಾಸು ಕೆಲಸ ಮಾಡಬೇಕಾಗಿತ್ತು ಇದರಿಂದ ಅವನಿಗೆ ದಿನಕ್ಕೆ ೫೦ ಸೆಂಟ್ಸುಗಳು ಕೂಲಿ ದೊರೆಯುತ್ತಿತ್ತು ರೊಕ್‌ಫೆಲ್ಲರನಿಗೆ

“ಕೂಲಿ?” ಸಮಗಾಶ್ಚರ್ಯವಾಗಬಹುದು. ಆದರೆ, ಅಹುದು, ನಿಜವಾಗಿಯೂ “ಕೂಲಿ!” ಪ್ರಪಂಚದ ಹೆಚ್ಚಿನ ಶ್ರೀಮಂತರ ಧನಪ್ರಸಾದಗಳೆಲ್ಲಾ ಕೂಲಿಯ ಬುನಾದಿಯಲ್ಲಿ ಎದ್ದು ನಿಂತವು ಪ್ರಪಂಚದ ಶ್ರೇಷ್ಠ ಜನರೆಲ್ಲಾ ತಮ್ಮ ಬಾಲ್ಯದಲ್ಲಿ ತೀರ ಬಡವರಾಗಿದ್ದರು ರೊಕ್‌ಫೆಲ್ಲರನೂ ಅವರಲ್ಲೊಬ್ಬನು.

ಬಟಾಟೆಯ ಹೊಲಗಳಲ್ಲಿ ಅಗೆದು ದುಡಿವ ರೊಕ್‌ಫೆಲ್ಲರನು ಐವತ್ತು ಡಾಲರುಗಳಷ್ಟು ಕೂಡ ಹಾಕಿದ ಕೂಡಲೇ ಆ ಹಣವನ್ನು ನೆರೆಕರೆಯ ಮತ್ತೊಬ್ಬ ಬೇಸಾಯುಗಾರನಿಗೆ ಸಾಲವಾಗಿ ಕೊಟ್ಟನು ಹೀಗೆ ಕೊಟ್ಟು ಒಂದು ಸ್ವಾರಸ್ಯವಾದ ಶೋಧವನ್ನು ಮಾಡಿದನು

ಯಾವ ಶೋಧವದು?

ಬಟಾಟೆಯ ಹೊಲದಲ್ಲಿ ಏಳು ದಿನಗಳಲ್ಲಿ ಕಷ್ಟಪಟ್ಟು ಸಂಪಾದಿಸುವ ಹಣವನ್ನು ತಾನು ಯಾವ ಕಷ್ಟವೂ ಇಲ್ಲದೆ ಕೇವಲ ಐವತ್ತು ಡಾಲರು ಸಾಲಕೊಟ್ಟು ಅದರ ಬಡ್ಡಿಯ ರೂಪದಲ್ಲಿ (ವರ್ಷದ ಬಡ್ಡಿ) ಸಂಪಾದಿಸಿರುವೆನು

ಆಗ ರೊಕ್‌ಫೆಲ್ಲರನು ಎಣಿಸಿದನು ‘ಹಣಕ್ಕಾಗಿ ನೀವು ಕೆಲಸಮಾಡುವ ಬದಲು, ನಿಮಗಾಗಿ ಹಣವೇ ಕೆಲಸ ಮಾಡುವುದು ಸುಲಭ

ಮುಂದೆ ರೊಕ್‌ಫೆಲ್ಲರನು ಶ್ರೀಮಂತನಾದಾಗ ಹೀಗೆಂದಿರುವನು

“ನಾನು ತಿಳಕೊಂಡೆ ಹಣಕ್ಕೆ ನಾನು ಗುಲಾಮನಾಗುವ ಬದಲು ಹಣವು ನನ್ನ ಗುಲಾಮನಾಗುವುದೊಳ್ಳಿತು”

ಬ್ಯಾಂಕಿನಲ್ಲಿ ನೀವು ಇರಿಸುವ ಹಣವು ನಿಮಗೆ ಇಷ್ಟನ್ನು ಮಾಡುವುದು.

ಬಾಲ್ಯದಲ್ಲಿ ಪಡೆದ ಶಿಕ್ಷಣ

ಬಾಲ್ಯದಲ್ಲಿ ಪಡೆದ ಶಿಕ್ಷಣವು ಮನುಷ್ಯನಲ್ಲಿ ಬೇರೂರಿ ನಿಂತು ಮುಂದೆ ಫಲ ಕೊಡುವುದು ರೊಕ್‌ಫೆಲ್ಲರನು ಬಹು ವರ್ಷಗಳ ನಂತರ ಹೇಳಿದ ಮಾತುಗಳಲ್ಲಿ ಅವನ ಬಾಲ್ಯದ ಕುರಿತು ಈ ವಿಷಯವಿದೆ

> ## ರೊಕ್‌ಫೆಲ್ಲರನ ರೊಕ್ಕ
>
> **ರೊಕ್‌ಫೆಲ್ಲರನ ರೊಕ್ಕವು ಚೊಕ್ಕಲೆಕ್ಕದಿಂದ ಬೆಳೆಯಿತು**
>
> **ರೊಕ್‌ಫೆಲ್ಲರನು ಹೇಳಿದ್ದನು:**
>
> “ಲೆಕ್ಕವು ಚೊಕ್ಕವಿರಲಿ — ಆಗ ಕಕ್ಕುಲತೆಯಿಲ್ಲ.
> ಹಣದ ದಾಸರಾಗಬೇಡಿ — ಹಣವು ನಿಮ್ಮ ದಾಸನಾಗಲಿ.”
>
> **ದುಡಿದ ಹಣವನ್ನು ಬಡ್ಡಿಗೆ ಕೊಟ್ಟು—ಬಡ್ಡಿ ಬಂದಾಗ ಕಾಯಕಷ್ಟವಿಲ್ಲದೆ ಬಂದ ಹಣವನ್ನು ನೋಡಿ ರೊಕ್‌ಫೆಲ್ಲರನಿಂದ ಆ ಉದ್ಗಾರ ಹೊರಟಿತು.**
>
> **ನಿಮ್ಮ ಹಣವನ್ನು ಬಚ್ಚಿಡಬೇಡಿರಿ-ಚಿಗುರಿ, ಹೂವಾಗಿ ಫಲಬಿಡುವಂತೆ ನೋಡಿರಿ.**
>
> **ಕೆನರಾ ಬ್ಯಾಂಕ್ ಲಿಮಿಟೆಡ್,**
>
> ಸ್ಥಾಪನೆ: 1906

“ನನಗೆ ಮನೆಯಲ್ಲಿ ದೊರೆತ ಶಿಕ್ಷಣವು ವಿಚಿತ್ರ. ಮೊದಲಿಂದ ಅದು ವಾಣಿಜ್ಯ ಸಂಬಂಧವಾದ್ದ ಶಿಕ್ಷಣವೇನೆಂದು ಹೇಳುತ್ತೇನೆ. ನಾನು ಸ್ವಾವಲಂಬಿಯಾಗಲು ಕಲಿತೆನು. ನನ್ನಲ್ಲಿ ನನಗೆ ಭರವಸೆ ಹುಟ್ಟುವಂತೆ ತರಬೇತಿ ದೊರೆಯಿತು. ನನ್ನ ಹತ್ತನೇ-ಹನ್ನೊಂದನೇ ವಯಸ್ಸಿನಲ್ಲಿ, ನನ್ನಿಂದೆಷ್ಟು ಸಾಧ್ಯವಿದೆಯೋ ಅಷ್ಟು ವ್ಯಾಪಾರವಾಡಲು ನನಗೆ ಕಲಿಸಿದರು. ಮರಮುಟ್ಟುಗಳನ್ನು ಕೊಂಡುಕೊಳ್ಳಲು ನನ್ನನ್ನು ತೀರ ಚಿಕ್ಕ ಪ್ರಾಯದಲ್ಲಿ ಗುಡ್ಡಕಾಡುಗಳಿಗೆ ಕಳಿಸುತಿದ್ದರು ಅಳತೆ ಮೊದಲಾದುದರ ಬಗ್ಗೆ ಮಾಹಿತಿ ಕೊಡಲು ಅಥವಾ ಸಹಾಯಮಾಡಲು ನನಗೆ ಇತರ ಜನರು ಜತೆಯಲ್ಲಿ ಇರಬೇಕಾಗಿರಲಿಲ್ಲ. ಅದು ನನಗೆ ಉತ್ತಮ ತರದ ಶಿಕ್ಷಣವಾಯಿತು”

ಶಾಲಾ ಶಿಕ್ಷಣ

ಒಮ್ಮೆಗೊ ಪ್ರಾಂತ್ಯಕ್ಕೆ ತೆರಳಿದ ನಂತರ ರೊಕ್‌ಫೆಲ್ಲರನು ಶಾಲಾಶಿಕ್ಷಣ ಆರಂಭಿಸಿದನು ಅಲ್ಲಿಂದ ಅವನ ತಂದೆತಾಯಿಗಳು ಕ್ಲೀವ್ಲೆಂಡಿಗೆ ತೆರಳಿದರು ಅಲ್ಲಿ ೧೮೫೩ರಲ್ಲಿ ರೊಕ್‌ಫೆಲ್ಲರನು ಹೈಸ್ಕೂಲ್ ಶಿಕ್ಷಣಕ್ಕೆ ಹೋದನು ಒಂದೂವರೆ ವರ್ಷ ವಿದ್ಯಾಭ್ಯಾಸಂಗ ಮಾಡಿದನು ಅನಂತರ ಒಂದು ಕಮ್ಮರ್ಶಿಯಲ್ ಶಾಲೆಯಲ್ಲಿ ಲೆಕ್ಕಗಳಿಡುವ ಶಿಕ್ಷಣ ಪಡೆಯಲು ಸೇರಿದನು

ಶಿಕ್ಷಣ ಅಷ್ಟಕ್ಕೇ ಮುಗಿಯಿತು ರೊಕ್‌ಫೆಲ್ಲರನು ಉದ್ಯೋಗ ಹುಡುಕಿ ಹೋದನು. ಬಹುಕಾಲದ ಪ್ರಯಾಸದಿಂದ ಒಂದು ದಿನ, ಸಪ್ಟಂಬರ ತಾ ೨೬ರಲ್ಲಿ, ಒಂದು ಸಂಸ್ಥೆಯಲ್ಲಿ ಲೆಕ್ಕಗಳನ್ನಿಡುವ ಉದ್ಯೋಗದೊರೆಯಿತು ರೊಕ್‌ಫೆಲ್ಲರನು ಉದ್ಯೋಗ ದೊರೆತ ಆ ಸಪ್ಟಂಬರ ೨೬ನೇ ದಿನದ ವರ್ಧಂತ್ಯುತ್ಸವವನ್ನು ತನ್ನ ಜೀವಮಾನದಲ್ಲೆಲ್ಲಾ ಆಚರಿಸುತಿದ್ದನು

ಮೊದಲಿನ ತಲಬು

ಮೊದಲಿನ ಮೂರು ತಿಂಗಳುಗಳಿಗೆ ರೊಕ್‌ಫೆಲ್ಲರನಿಗೆ ೫೦ ಡಾಲರು ತಲಬು ದೊರೆಯಿತು ಎರಡನೇ ವರ್ಷದಲ್ಲಿ ತಿಂಗಳಿಗೆ ೨೫ ಡಾಲರಿನಂತೆ ದೊರೆಯಿತು. ಮೂರನೇ ವರ್ಷದಲ್ಲಿ ತಿಂಗಳಿಗೆ ೫೦ ಡಾಲರಿಗೆ ಬಡ್ತಿ ದೊರೆಯಿತು.

ಹದಿನೆಂಟನೇ ವಯಸ್ಸಿನಲ್ಲಿ ರೊಕ್‌ಫೆಲ್ಲರನು ತನ್ನ ದುಡಿತದಿಂದ ಉಳಿಸಿದ ಹಣ ೧೦೦೦ ಡಾಲರು ಮತ್ತೆ ೧೦೦೦ ಡಾಲರುಗಳನ್ನು ಸಾಲಪಡೆದು, ಆ ೨೦೦೦ ಡಾಲರುಗಳಿಂದ ಕಮಿಶನ್ (ದಲ್ಲಾಳಿ) ಉದ್ಯೋಗ ಆರಂಭಿಸಿದನು

ರೊಕ್‌ಫೆಲ್ಲರನ ಉದ್ಯೋಗ ಬೆಳೆಯಿತು. ಮುಂದೆ ಹಲವು ವರ್ಷಗಳ ಸ್ಥೈರ್ಯ, ಕಾಯಕಷ್ಟ, ನಿಷ್ಠೆಗಳಿಂದ ರೊಕ್‌ಫೆಲ್ಲರನ ನಿಧಿ ಬೆಳೆಯಿತು. ಅಮೇರಿಕದ ಶ್ರೇಷ್ಠ ವ್ಯಾಪಾರಿಯೆನಿಸಿದನು. ಪ್ರಪಂಚದ ಶ್ರೇಷ್ಠ ಶ್ರೀಮಂತನೆನಿಸಿದನು.

ನಿಮ್ಮ ಹಣವನ್ನುಳಿಸಿರಿ. ನಿಮ್ಮ ಭರವಸೆಯ ಬ್ಯಾಂಕಿನಲ್ಲಿ ಠೇವಣಾತಿಯಾಗಿರಿಸಿ. ಅದು ಬೆಳೆವುದನ್ನು ನೋಡಿರಿ.

GREETINGS

The Directors, Officers and Staff of the Canara Bank Limited join in sending you this message of appreciation for your goodwill and patronage during the last year. We sincerely wish you a Peaceful, Happy and Prosperous New year.

ESTD. 1906
CANARA BANK LTD.

ನಮ್ಮ 3 ಬ್ರಾಂಚುಗಳನ್ನು ಒಂದಾಗಿ ಸೇರಿಸಿ
ಮಂಗಳೂರಿಗೆ ಬರುತ್ತಾರೆ.

ಬೊಂಬ್ಬಾಯಿ ಜಿ. ಎ. ಸರ್ಕಸ್

ಕಂಪೆನಿಯವರು
ಮಂಗಳೂರು ಮೈದಾನಿನಲ್ಲಿ ಹಾಕಿರುವ
ತಮ್ಮ ಭವ್ಯವಾದ ಡೇರೆಯಲ್ಲಿ
ತಾ. 6-2-1942ನೇ ಮಂಗಳವಾರ ರಾತ್ರಿ
9-30 ಘಂಟೆಗೆ ಪ್ರಾರಂಭ

ಪಾಶ್ಚಾತ್ಯ ದೇಶಗಳೆಲ್ಲಾ ಸಂಚರಿಸಿ ಲಕ್ಷಾಂತರ ಜನಗಳಿಂದ ಎಲ್ಲಾ ವಿಧದಲ್ಲಿ ಅತ್ಯುತ್ತಮ ಪ್ರದರ್ಶನ ಎಂದು ಪ್ರಖ್ಯಾತಿಗಳಿಸಿರುವ ಸರ್ಕಸ್ ಕಂಪೆನಿಯು ಇದೊಂದೇ!

101 ಪ್ರಖ್ಯಾತರಾದ, ನಾನಾ ಜನಾಂಗದ ಆಕ್ಟರರು 101



85 ಭಾರಿ ಮೃಗಗಳು ... 22 ಕುದುರೆಗಳು, 7 ... 20 ... ಮತ್ತು ... ಇತರ ಪ್ರಾಣಿಗಳು ... ಪ್ರದರ್ಶನವನ್ನು ನೋಡುವಿರಿ

ನಿಮಗೆ ಮಲಬದ್ಧತೆಯು ಬಾಧಿಸುತ್ತಿದ್ದರೆ ನೀವು ಆಡುವಾಗಲಾಗಲಿ, ವಿಶ್ರಾಂತಿಯಿಂದಿರುವಾಗಲಿ ಸಂತೋಷದಿಂದಿರಲಾರಿರಿ. ಮಲಬದ್ಧತೆಯು ಆರೋಗ್ಯವನ್ನು ಕುಂದಿಸುತ್ತದೆ, ಮನಸ್ಸನ್ನು ಕಳವಳಗೊಳಿಸಿ ದೇಹಶಕ್ತಿಯನ್ನು ಕ್ಷೀಣಿಸುತ್ತದೆ. ಪ್ರತಿದಿನ ಒಂದು ಗ್ಲಾಸ್ ಎಂಡ್ರೂಸ್ ಲಿವರ್ ಸಾಲ್ಟನ್ನು ತೆಗೆದುಕೊಂಡು ನಿಮ್ಮ ದೇಹದ ಒಳಭಾಗವನ್ನು ತೊಳೆದುಬಿಡಿ. ಅದು ನಾಲಿಗೆ ಮತ್ತು ಬಾಯಿಗಳನ್ನು ಶುಚಿಗೊಳಿಸುತ್ತದೆ. ಹೊಟ್ಟೆಯೊಳಗೆ ಸೇರಿ, ಮಲಬಾಧೆಯನ್ನು ಸಂಪೂರ್ಣ ನಿವಾರಿಸುತ್ತದೆ, ವಾತವಿಲ್ಲದೆ ದೇಹಕ್ಕೆ ತಂಪುಕೊಟ್ಟು ರಕ್ತವನು ಶುದ್ಧಿಗೊಳಿಸುವುದು ಮತ್ತು ಇಡೀ ಶರೀರದಲ್ಲಿ ಹೊಸ ಚೈತನ್ಯವನ್ನು ತರುತ್ತದೆ.

ಶರೀರದ ಒಳಭಾಗವು ನಿರ್ಮಲವಾಗಿರಬೇಕಾದರೆ ದಿನ ನಿತ್ಯವೂ ನೀವು ಎಂಡ್ರೂಸ್ ಲಿವರ್ ಸಾಲ್ಟನ್ನು ತೆಗೆದುಕೊಳ್ಳಿರಿ.

ANDREWS LIVER SALT

ಆರೋಗ್ಯಕರ ಪಾನೀಯ ಮತ್ತು ಟಾನಿಕ್ ಗುಣಕಾರಿ—ಶುದ್ಧಿ—ತಂಪು—ಆರೋಗ್ಯ—ಆರೋಗ್ಯಕರ ಗುಣವುಳ್ಳದ್ದು.



ಸಣ್ಣ ಸೈಜು ಆ. 11
ದೊಡ್ಡ ಸೈಜು ರೂ. 1/4

Greetings

FOR

The New Year

The Directors, Officers, and the Staff of the Canara Industrial & Banking Syndicate, Ltd join in sending to their numerous shareholders, constituents, well-wishers and friends their hearty greetings for a Prosperous and Happy New Year and express gratitude for their increasing co-operation, good-will and support in the past and solicit the same in the future

The Canara Industrial & Banking Syndicate, Ltd. UDIPI. S. India.

ಜಪಾನಿನ ೧೬ ಹಡಗ ಮುಳುಗಿದವು

ಜಪಾನಿನ ಹದಿನಾರು ಹಡಗಗಳು ಪೆಸಿಫಿಕ್ ಯುದ್ಧದಲ್ಲಿ ಮುಳುಗಿದವೆಂದು ತಿಳಿದಿದೆ.

ಜನರಲ್ ಸಿಕೊರಿಸ್ಕಿ ಹಿಂದುಸ್ಥಾನಕ್ಕೆ

ಪೋಲೆಂಡಿನ ಸೇನಾಪತಿ ಜನರಲ್ ಸಿಕೊರಿಸ್ಕಿ ಹಿಂದುಸ್ಥಾನಕ್ಕೆ ಬೇಗನೇ ಬರುವರೆಂದು ಸುದ್ದಿಯಿದೆ.

ಚೀನೀಯರ ಧಾಳಿ ಪ್ರಬಲವಾಗಿದೆ

ಇತ್ತೀಚೆಗೆ ಚೀನೀಯರ ಧಾಳಿಕ್ರಮ ಪ್ರಬಲವಾಗುತ್ತಿದೆಯೆಂದು ಸುದ್ದಿ ಬಂದಿದೆ. ಹಾಂಕಾಂಗಿನೊಡನೆ ಮುಖ್ಯ ಸಂಬಂಧವನ್ನು ಚೀನೀಯರು ಕತ್ತರಿಸುತ್ತಿದ್ದಾರೆಂದು ಹೇಳಲಾಗಿದೆ.

ಪಶ್ಚಿಮ ಮರುಭೂಮಿಯ ಯುದ್ಧ

ಇದರ ಕುರಿತು ಮಧ್ಯಪೂರ್ವದ ಮಂತ್ರಿ ಆಲಿವರ್ ಲಿಟಲಟನರು ಒಂದು ಆಕಾಶ ಭಾಷಣದಲ್ಲಿ ಹೀಗೆಂದರು "ಬ್ರಿಟಿಷ ರಣಭೂಮಿಯು ಈಜಿಪ್ ಎಲ್ಲೆಯದಾಗಿದೆ. ದಕ್ಷಿಣ ಆಫ್ರಿಕದವರೂ ಆಬಿಸೀನಿಯದವರೂ ಅಲ್ಲಿ ಕೂಡಿರುವರು. ಹೈಲ್‌ಸಿಲಾಸಿನಿಗೆ ನಾವು ಮರಳಿ ಸಿಂಹಾಸನ ಕೊಡಿಸಿದ್ದೇವೆ. ಪೂರ್ವದಲ್ಲಿ ರಶೀದ್ ಆಲಿಯ ಪಂಗಡವನ್ನು ಸದೆಬಡಿದಿರುವೆವು. ಸಿರಿಯಾ ಲಿಬೆನಾಗಳಿಗೆ ಸ್ವಾತಂತ್ರ್ಯ ಕೊಟ್ಟಿರುವೆವು. ಇರಾನು ನಮ್ಮ ಧಾಳಿ ಚಕಿತಗೊಳಿಸುವಂತಹುದಲ್ಲ. ನಮಗೆ ಆಹಾರಾದಿಗಳು ತಡೆಯಿಲ್ಲದೆ ಬರುತ್ತಿವೆ" ಎಂದರು.

ಮದ್ರಾಸಿಗೆ ಭಯವಿಲ್ಲ

"ಮದ್ರಾಸಿಗೆ ಈಗ ಯುದ್ಧ ಭಯವೇನೂ ಇಲ್ಲ. ಕ್ರಿಸ್ಮಸ್ ಕಳೆದ ಕೂಡಲೆ ಎಂದಿನಂತೆ ಶಾಲೆ ಕಾಲೇಜುಗಳು ಪ್ರಾರಂಭವಾಗುತ್ತವೆ. ಜನರು ಗಾಬರಿಗೊಳ್ಳಬಾರದು" ಎಂದು ಸರಕಾರದ ಪ್ರಕಟಣೆ.

ಗಾಂಧೀಜಿ ಕಾಂಗ್ರೆಸಿನಿಂದ ದೂರಸಿಂತರು!

ಸಂಧಾನಕ್ಕೆ ಕಾಂಗ್ರೆಸು ದಾರಿ ತೋರಿಸಿತು!

ಕಾಂಗ್ರೆಸ್ ವರ್ಕಿಂಗ್ ಕಮಿಟಿ ಠರಾವುಗಳು

ವರ್ಕಿಂಗ್ ಕಮಿಟಿ ಸಭೆ ಗಾಂಧಿಜಿ ಹೊರಹೋದರು

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸಭೆಯು ಈಗ ಬಿಡದೆ ೪ ದಿನಗಳಿಂದ ನಡೆಯುತ್ತಾ ಬಂದಿದೆ. ಇದು ವರೆಗೂ ಒಂದು ನಿರ್ಣಯಕ್ಕೆ ಬಂದಿಲ್ಲ. ರಾಜಕೀಯ ಪರಿಸ್ಥಿತಿ ವಿಚಾರ ದೀರ್ಘ ಚರ್ಚೆ ನಡೆಯಿತು. (೧) ಪುನಾ ನಿರ್ಣಯವನ್ನು ತಿರುಗಿ ತಿಳಿಸುವುದು (೨) ಭಾರತದ ಸ್ವಾತಂತ್ರ್ಯದ ವಿಚಾರವನ್ನು ಬ್ರಿಟಿಷ್ ಪ್ರಭುತ್ವವು ಅಂಗೀಕರಿಸಿದರೆ ಹಿಟ್ಲರ್ ಶಾಹಿಯನ್ನು ಎದುರಿಸಲು ಪ್ರಯತ್ನಿಸುವುದು. (೩) ಮಹಾತ್ಮರ ಅಹಿಂಸಾ ಪ್ರಯತ್ನದಂತೆ ಎಲ್ಲ ಯುದ್ಧಗಳನ್ನೂ ಎದುರಿಸುವುದು, ಈ ಮೂರು ವಿಚಾರಗಳ ಕುರಿತು ವರ್ಕಿಂಗ್ ಕಮಿಟಿ ಗಾಢವಿಚಾರ ಮಾಡಿತು. ಕಾಂಗ್ರೆಸ್ ಕಮಿಟಿಯವರು ಬಹಳ ದೀರ್ಘ ಆಲೋಚನೆ ಮಾಡಿದ ಬಳಿಕ, ಒಂದು ನಿರ್ಣಯ ಮಾಡಿ ಗಾಂಧಿಜಿಯವರ ಮುಂದಿಟ್ಟಿರುವರೆಂದು ವಾರ್ತೆ ಬಂದಿದೆ. ಆ ನಿರ್ಣಯಗಳ ಅಂಶಗಳನ್ನು ಗಾಂಧಿಜಿಯವರ ಅತ್ಯಂತ ಅನುಯಾಯಿಗಳು ಕೆಲವರನ್ನು ಬಿಟ್ಟು ಮಿಕ್ಕವರೆಲ್ಲರೂ ಸಮ್ಮತಿಸಿರುವರೆಂದು ತಿಳಿದಿದೆ. ಕಾಂಗ್ರೆಸ್ ಮತ್ತು ಸರಕಾರಗಳ ನಡುವೆ ಸಂಧಾನದ ಸೂತ್ರವು ಮಾಡಲಾಗಿದೆ. ಶರತ್ತಿನ ಮೇಲೆ ಯುದ್ಧ ಪ್ರಯತ್ನಕ್ಕೆ ನೆರವಾಗಬೇಕೆಂದು ಈ ನಿರ್ಣಯದಲ್ಲಿರುವುದರಿಂದ ಗಾಂಧಿಜಿ ಮುಂದಾಳುತನವನ್ನು ಬಿಟ್ಟು ದೂರನಿಲ್ಲಬೇಕಾಯಿತು.

ಷಣ್ಮುಗಂ ಚೆಟ್ಟಿ ಏನು ಮಾಡುತ್ತಾರೆ

ಇವರು ಅಮೆರಿಕದಲ್ಲಿದ್ದಾರೆ. ನ್ಯೂಯಾರ್ಕಿನ ಸಭೆಯೊಂದರಲ್ಲಿ ಮಾತನಾಡುತ್ತಾ, ಅಮೆರಿಕವು ಬೇಕಾದಷ್ಟು ಸಾಧನ, ಉಕ್ಕು ಮೊದಲಾದುವನ್ನು ಸರಬರಾಯಿ ಮಾಡಿದರೆ ಹಿಂದೂದೇಶವು ದೊಡ್ಡದೊಂದು ಸೈನ್ಯವನ್ನು ರಚಿಸುವುದೆಂದರು. ಬ್ರಿಟಿಷರು ಭಾರತವನ್ನು ಶಸ್ತ್ರ ಸಜ್ಜಿತವಾಗಿ ಮಾಡಲು ಇಚ್ಛೆಯುಳ್ಳವರಾಗಿದ್ದಾರೆಯೋ ಎಂಬುದನ್ನು ಸಂಪೂರ್ಣ ವಿಚಾರಿಸಿಕೊಂಡು ಚೆಟ್ಟಿಯಾರರು ಈ ಸೂಚನೆ ಕೊಡಬಹುದಾಗಿತ್ತು.

ಪೋಪರ ಕ್ರಿಸ್‌ಮಸ್ ಸಂದೇಶ

(೧) ಹೊಸ ಜಗತ್ತಿನಲ್ಲಿ ಸ್ವಾತಂತ್ರ್ಯಕ್ಕೆ ಸ್ಥಳವಿರಬೇಕು. (೨) ದಬ್ಬಾಳಿಕೆಗೆ ಅಸ್ಪದವಿರಬಾರದು. (೩) ಅಲ್ಪ ಸಂಖ್ಯಾಕರ ಸ್ಥಾನಗಳನ್ನು ಗೌರವಿಸಬೇಕು. (೪) ಕಚ್ಚಾಮಾಲಿನ ಬಗ್ಗೆ ಎಲ್ಲಾ ರಾಷ್ಟ್ರಗಳಿಗೂ ಅವಕಾಶವಿರಬೇಕು. ಮತ್ತು ಯಾವ ರಾಷ್ಟ್ರಕ್ಕೂ ಅನ್ಯಾಯವಾಗಬಾರದು. (೫) ಸೈನ್ಯದ ಉಪಯೋಗ ಮಾಡಿ ಮಾನವ ಜಗತ್ತಿಗೆ ಅನ್ಯಾಯ ಮಾಡಕೂಡದು. (೬) ಶಸ್ತ್ರಾಸ್ತ್ರ ಸಿದ್ಧತೆಗೆ ಮಿತಿಯಿರಬೇಕು. (೭) ಒಪ್ಪಂದಗಳಿಗೆ ಗೌರವವಿರಬೇಕು. (೮) ಚರ್ಚಿನ ಸಂಬಂಧ ಅನ್ಯಾಯವಾಗಲಾರದು—ಹೀಗೆಂದು ಪೋಪರು ಕ್ರಿಸ್‌ಮಸ್ ಸಂದೇಶದಲ್ಲಿ ಯುದ್ಧ ನಂತರದ ಮುಂದಿನ ಜಗತ್ತಿನ ವಿಚಾರವಾಗಿ ಸಾರಿದ್ದಾರೆ.

ಅಸಾಮಿನಲ್ಲಿ ಗವರ್ನರರ ಆಡಳಿತ

ಅಸಾಮಿನ ಗವರ್ನರರು ಆ ಪ್ರಾಂತದ ಅಧಿಕಾರವನ್ನು ತಾವೇ ತಮ್ಮ ಕೈವಶ ತೆಗೆದುಕೊಂಡಿದ್ದಾರೆ; ಮಂತ್ರಿಮಂಡಳ ಮಾಡಲು ಸಾಧ್ಯವಾಗಲಿಲ್ಲವೆಂಬ ಹೇಳಿಕೆಯಿಂದ.

ಮುಸ್ಲಿಂ ಲೀಗ್ ನಿರ್ಣಯ

ಮುಸ್ಲಿಂ ಲೀಗ್ ವರ್ಕಿಂಗ್ ಕಮಿಟಿ ನಾಗಪುರದಲ್ಲಿ ಸೇರಿ ನಾಲ್ಕು ನಿರ್ಣಯಗಳನ್ನು ಮಾಡಿದೆ. ಯುದ್ಧದ ವಿಚಾರದಲ್ಲಿ ಲೀಗಿನ ಅಭಿಪ್ರಾಯ ಬದಲಾಗಿಲ್ಲ. ಹಕ್ಕರ ಮೇಲೆ ಜಿನ್ನರು ತೆಗೆದುಕೊಂಡ ಶಿಸ್ತು ಪುಷ್ಟೀಕರಿಸಲಾಗಿದೆ. ಪಾಕಿಸ್ಥಾನ ಯೋಜನೆ ವಿಘಾತುಕವಾಗುವ ಹಾಗೂ ಆಗಸ್ಟ ಘೋಷಣೆಯನ್ನು ರದ್ದುಗೊಳಿಸುವಂತಹ ಯಾವುದೇ ಹೊಸ ನೀತಿಯನ್ನು ಸರಕಾರದವರು ಕೈಕೊಳ್ಳಬಾರದೆಂದು ಉಚ್ಚರಿಸಲಾಗಿದೆ.

ಧಾಳಿಯಾದಾಗ ಏನು ಮಾಡಬೇಕು

ಸರಕಾರದ ಪ್ರಕಟಣೆ

ಧಾಳಿಯಾದಾಗ ಮುಸುಕು ಹಾಕಿ ಮಲಗಿಕೊಳ್ಳುವುದು ಉತ್ತಮವೆಂದು ತಿಳಿದುಬಂದಿದೆ. ಅದರಿಂದ ಬಾಂಬಿನ ಸಿಡಿತದಿಂದ ಪೆಟ್ಟಾಗುವುದಿಲ್ಲವಂತೆ. ತಗ್ಗು ಸ್ಥಳಗಳಲ್ಲಿ ಹಾಗೆ ಮಲಗಿಕೊಂಡರೆ ಅಪಾಯ ಕಡಿಮೆಯಂತೆ. ಧಾಳಿಯಾದಾಗ ಜನರು ಅತ್ತಿತ್ತ ಹೋಗುವುದು ಓಡುವುದು ಕೂಡದು.

ಶ್ರೀ ಶರತ್‌ಚಂದ್ರಬೋಸರನ್ನು ಮದ್ರಾಸಿಗೆ ರವಾನಿಸಿದರು

ಫಜಲುಲ್ ಹಕ್‌ರ ಕಳವಳ!

ಸರಕಾರದವರು ಬಂಧಿಸಿದ ಶ್ರೀ ಶರತ್‌ಚಂದ್ರ ಬೋಸರರನ್ನು ಬಂಗಾಳದಿಂದ ಮದರಾಸಿಗೆ ರವಾನಿಸಿರುವುದಾಗಿದೆ.

ಫಾರ್ವರ್ಡ್ ಬ್ಲಾಕಿನ ಪ್ರತಿನಿಧಿಗಳಾಗಿ ಬಂಗಾಳದ ಹೊಸ ಮಂತ್ರಿ ಮಂಡಳದಲ್ಲಿ ಶ್ರೀ ಸಂತೋಷಕುಮಾರ ಬಸು ಮತ್ತು ಶ್ರೀ ಪ್ರಮಥನಾಥ ಬೆನರ್ಜಿ ಇವರನ್ನು ನೇಮಿಸಲಾಗಿತ್ತು. ಈ ಇಬ್ಬರು ಮಂತ್ರಿಗಳೂ ಕೂಡಲೇ ರಾಜೀನಾಮೆ ಕೊಡಬೇಕೆಂದು ಶ್ರೀ ಶರತ್‌ಚಂದ್ರಬೋಸರು ತಮ್ಮನ್ನು ಮದರಾಸಿಗೆ ಕಳುಹಿಸಿಕೊಡುವ ಮುಂಚಿತವಾಗಿ ತಿಳಿಸಿದರೆಂದು ಗೊತ್ತಾಗಿದೆ.

ಹಕ್‌ರ ಪ್ರಾರ್ಥನೆ ನಿರಾಕರಣೆ

ಹಕ್‌ರವರು ವಿಚಾರ ನಡೆಸಿ ಶ್ರೀ ಶರತ್ ಬೋಸರನ್ನು ಮದ್ರಾಸಿಗೆ ಕಳುಹಿಸುವುದು ಒಂದು ದಿವಸ ಸಾವಕಾಶ ಮಾಡಲಾಗುವುದೇ ಎಂದು ಕೇಳಿದರು. ಬಂಗಾಳಾ ಸರಕಾರದವರು ಇಂಡಿಯಾ ಸರಕಾರದ ಆಜ್ಞೆಯಂತೆ ನಡೆಯುತ್ತಿದ್ದಾರೆಂದು ಉತ್ತರ ಬಂದಿತು.

ಹಕ್‌ರವರು ಕಲ್ಕತ್ತಾದಲ್ಲಿರುವ ಇಂಡಿಯಾ ಸರಕಾರದ ಹೋಂ ಮೆಂಬರರೊಡನೆ ಮಾತುಕತೆ ನಡೆಸಿದರು. ಶ್ರೀ ಶರತ್‌ಚಂದ್ರಬೋಸರನ್ನು ಒಂದೆರಡು ದಿವಸ ಕಲ್ಕತ್ತಾದಲ್ಲಿ ನಿಲ್ಲುವಂತೆ ಮಾಡಬೇಕೆಂದು ಹಕ್‌ರು ಮಾಡಿದ ಪ್ರಯತ್ನವು ಫಲಕಾರಿಯಾಗಲಿಲ್ಲ. ಬೋಸರನ್ನು ತಿರುಚಿನಾಪಳ್ಳಿ ಸೆರೆಮನೆಗೆ ತರಲಾಗಿದೆ.

ರಂಗೂನಿನಲ್ಲಿ ೬೦೦ ಜನರಿಗೆ ಗಾಯ

ರಂಗೂನಿನ ಮೇಲೆ ತಾ. 23ರಂದು ಮೊದಲನೆಯ ಧಾಳಿಯಾಯಿತು. ಅಂದು ಸುಮಾರು 600 ಜನರಿಗೆ ಗಾಯವಾಯಿತೆಂದು ತಿಳಿದಿದೆ. 25ನೆಯ ತಾರೀಕಿನ ದಿನ ನಡೆದ ದ್ವಿತೀಯ ಧಾಳಿಯಲ್ಲಿ ಅಷ್ಟು ಹೆಚ್ಚು ಮಂದಿ ಗಾಯ ಹೊಂದಲಿಲ್ಲವಾಗಿ ಸುದ್ದಿ.

ವೇವಲರು ಬರ್ಮಾ ದಳಪತಿ

ಹಿಂದೂಸ್ತಾನದ ಸೇನಾಪತಿ ವೇವೆಲ್ಲರು ಬರ್ಮಾ ರಕ್ಷಣೆಯ ಹೊಣೆ ಹೊತ್ತಿರುವರು.

ಸಿಂಗಾಪುರದ ಧಾಳಿ

ಕೌಲಾಲುಂಪುರದ ಹತ್ತಿರ ಜಪಾನ್ ಧಾಳಿಯಾಯಿತು. ಸಿಂಗಾಪುರದ ಮಸೀದಿಯೊಂದರ ಮೇಲೆ ಅವರು ಬಾಂಬು ಹಾಕಿದರು. ಸಿಂಗಾಪುರದ ಕೆಲವು ಕಟ್ಟಡಗಳಿಗೆ ಪೆಟ್ಟಾಗಿವೆ. ಕೆಲವು ಕಡೆ ಬೆಂಕಿ ಬಿದ್ದಿದೆ.

ಜಪಾನಿಗೆ ಆರಂಭ ಜಯವಾಗಲು ಕಾರಣಗಳು

ಚರ್ಚಿಲ್ಲರ ಹೇಳಿಕೆ

ಜಪಾನಿಗೆ ಆರಂಭದಲ್ಲಿ ಯುದ್ಧವು ಜಯವಾಗಲು ಕಾರಣಗಳನ್ನು ಹೇಳುತ್ತಾ, ಮಲಯಾ, ಈಸ್ಟ್ ಇಂಡೀಸ್‌ಗಳ ಕಡೆ ಸಾಕಷ್ಟು ಸೈನ್ಯ ಕಳುಹಿಸದಿರುವುದು ಲಿಬಿಯದ ಯುದ್ಧದ ವಿಜಯದ ಸಲುವಾಗಿಯೆಂದರು. ಎರಡು ಕಡೆಗೂ ಶಕ್ತಿಯನ್ನು ವಿಭಾಗಿಸುವುದಾಗುತ್ತಿರಲಿಲ್ಲವೆಂದರು. ಪೆಸಿಫಿಕಿನಲ್ಲಿ ಅಮೆರಿಕವು ಇನ್ನೂ ಸಿದ್ಧವಾಗದಿರುವುದು ಲಿಬಿಯದ ಯುದ್ಧಕ್ಕೆ ಅಮೇರಿಕವು ಸಾಮಾನು ಕಳುಹಿಸುತ್ತಾ ಇದ್ದುದರಿಂದ ಎಂದರು. ಬ್ರಿಟನು 1942ರಲ್ಲಿ ಪೂರ್ಣ ಸಿದ್ಧತೆ ಹೊಂದಿ 1943ರಲ್ಲಿ ಸಾರ್ವತ್ರಿಕ ಧಾಳಿ ಕ್ರಮ ಮಾಡುವುದೆಂದೂ ನುಡಿದರು.

ಹಾಂಕಾಂಗ್ ಶತ್ರುವಶ

ಹಾಂಕಾಂಗ್ ಪಟ್ಟಣವು ಜಪಾನೀಯರ ವಶವಾಗಿರುವುದೆಂದು ತಿಳಿದಿದೆ. ಇಲ್ಲಿ ಹದಿನೇಳು ದಿನಗಳ ವರೆಗೆ ಕಾದಾಟವಾಗಿತ್ತು.

ಬೆಂಗಾಸಿ ಬ್ರಿಟಿಷ್ ವಶ

೩೭ ದಿನಗಳ ಧಾಳಿ ನಡೆದಾದ ಮೇಲೆ ಬ್ರಿಟಿಷ್ ಸೈನ್ಯಗಳು ಬೆಂಗಾಸಿಯನ್ನು ಈಗ ಸ್ವಾಧೀನಪಡಿಸಿಕೊಂಡಿರುವವೆಂದು ತಿಳಿದಿದೆ.

ಹಾಂಕಾಂಗ್ ಪತನ

ಪೂರ್ವದೇಶದ ಒಂದು ರಣಕ್ಷೇತ್ರವಾದ ಹಾಂಕಾಂಗ್ ಜಪಾನರ ವಶವಾಗಿದೆಯೆಂದು ಸುದ್ದಿ ಬಂದಿದೆ. ಇದು ಜಪಾನರ ಸಮ್ಮಂಧ ಮಾರ್ಗದಲ್ಲಿನ ಒಂದು ಮುಖ್ಯ ಪ್ರದೇಶ. ಸಿಂಗಪುರದಿಂದ ೧೫೦೦ ಮೈಲುಗಳಲ್ಲಿದೆ. ಇಲ್ಲಿ ಬಲವಾದ ಕೋಟೆಗಳೂ ಫಿರಂಗಿಗಳೂ ಇವೆ.

ಶತಮಾನದ ಹಿಂದೆ ಚೀನಾ ಇದನ್ನು ಬ್ರಿಟಿಷರಿಗೆ ಬಿಟ್ಟುಕೊಟ್ಟಿತು. ಇಲ್ಲಿ ಗುಡ್ಡಗಾಡು ಪ್ರದೇಶ ಹೆಚ್ಚು. ಹಾಗಾಗಿ ಇಲ್ಲಿ ವಿಮಾನ ನಿಲ್ದಾಣ ಕಡಿಮೆ.

ಫಿಲಿಪಯಿನ್ ದ್ವೀಪಗಳು

ಇದು ಅಮೇರಿಕಕ್ಕೆ ಸೇರಿದ ದ್ವೀಪ. ಇದರ ಸಲುವಾಗಿ ಜಪಾನರು ಕಾದಾಟ ಮಾಡುತ್ತಿರುವರು. ಅಲ್ಲಿ ಈಗ ೭೫ ಸಾವಿರ ಮಂದಿ ಅಮೆರಿಕನರಿರುವರು. ೧೫,೦೦೦೦ ಮಂದಿ ದ್ವೀಪವಾಸಿಗಳಿದ್ದಾರೆ. ಇದು ಒಟ್ಟು ೭೦೮೩ ದ್ವೀಪಗಳ ಸಮೂಹದ ಊರು. ಅದು ಒಂದು ಕಾಲದಲ್ಲಿ ಸ್ಪೈನಿಗೆ ಸೇರಿತ್ತು. ೧೮೯೮ರಲ್ಲಿ ಅಮೇರಿಕಕ್ಕೆ ಬಂತು. ಈ ದ್ವೀಪಗಳ ಒಟ್ಟು ವಿಸ್ತೀರ್ಣ ೭೧೪, ೪೦೦ ಚದುರ ಮೈಲು. ಹಲವು ಒಂದು ಮೈಲು ವಿಸ್ತೀರ್ಣಕ್ಕೂ ಕಡಿಮೆಯಿವೆ. ಲೂಜಾನ್ ಬಹುದೊಡ್ಡ ದ್ವೀಪ. ಅದರ ರಾಜಧಾನಿಯಾದ ಮನಿಲವೇ ಈಗ ದೊಡ್ಡ ಕುರುಕ್ಷೇತ್ರವಾಗಿದೆ. ಫಿಲಿಪಯಿನ್ ಕರಾವಳಿಯ ಉದ್ದ ೧೭,೫೦೦ ಮೈಲು. ಅಲ್ಲಿ ಧಾರಾಳ ಅಕ್ಕಿ, ಹೊಗೆಸೊಪ್ಪು, ಸಕ್ಕರೆ, ಕಾಪಿ, ಕೊಕ್ಕೊ, ಸಣಬು, ತೆಂಗಿನೆಣ್ಣೆ ದೊರೆಯುತ್ತದೆ. ಮನಿಲವು ಫಿಲಿಪಯಿನಿನ ಮುಖ್ಯ ವ್ಯಾಪಾರಿ ಕೇಂದ್ರ.

ಕನ್ನಡದ ಹಬ್ಬಗಳು

ಈ ವಾರ ಮೂರು ಕನ್ನಡದ ಹಬ್ಬಗಳು ಜರಿಗಿದವು. ಧಾರವಾಡದಲ್ಲಿ ವಿದ್ಯಾವರ್ಧಕ ಸಂಘದ ಸುವರ್ಣ ಮಹೋತ್ಸವವು ಶ್ರೀಮಂತ ಬಸವಪ್ರಭು ದೇಸಾಯಿ ಪಂಟಮುರಿ ಇವರಿಂದ ಜರಗಿತು. ಲಕ್ಷ್ಮೇಶ್ವರದಲ್ಲಿ ಪಂಪನ ಸಾಹಸ ಸಾಂವತ್ಸರಿಕೋತ್ಸವವು ಶ್ರೀ ಮುಳಿಯ ತಿಮ್ಮಪ್ಪಯ್ಯನವರ ಅಧ್ಯಕ್ಷತೆಯಿಂದ ನೆರವೇರಿತು. ಹೈದರಾಬಾದಿನಲ್ಲಿ ಇಪ್ಪತ್ತಾರನೆಯ ಕನ್ನಡ ಸಾಹಿತ್ಯ ಸಮ್ಮೇಳನವು ಶ್ರೀ ಕೃಷ್ಣ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಸೇರಿತು. ಹೀಗೆ ಕನ್ನಡದ ಜನರಿಗೆ ಅಮಿತ ಆನಂದ ಉತ್ಸಾಹಗಳನ್ನೀವ ಮೂರು ಹಬ್ಬಗಳು ಕಳೆದ ವಾರ ಜರಗಿದವು.

ಮಂಗಳೂರು

ಸತ್ಯಮೂರ್ತಿಗಳಿಗೆ ಮಾನಪತ್ರ

ತಾ. ೩ರಂದು ಪ್ರಾತಃಕಾಲ ೧೦ ಗಂಟೆಗೆ ಡಿ. ಸಿ. ಎಮ್‌ನಲ್ಲಿ ದ. ಕ. ಹರಿಜನ ಲೇಬರ್ ಲೀಗಿನ ಪರವಾಗಿ ಶ್ರೀ ಸತ್ಯಮೂರ್ತಿಗಳಿಗೆ ಒಂದು ಮಾನಪತ್ರವು ಶ್ರೀ. ಕೆ. ಈಶ್ವರ ಬಿ. ಎಲ್. ಇವರಿಂದ ಅರ್ಪಿಸಲ್ಪಟ್ಟಿತು. ಸತ್ಯಮೂರ್ತಿಗಳು ಮಾನಪತ್ರಕ್ಕೆ ಉತ್ತರವೀಯುತ್ತಾ, ಮಂಗಳೂರಲ್ಲಿ ಹೊಟೇಲುಗಳಲ್ಲಿ ಹರಿಜನರಿಗೆ ಪ್ರವೇಶ ಕೊಡದಿರುವ ವಿಷಯವಾಗಿ ಖೇದಸೂಚಿಸಿ ಕಾಂಗ್ರೆಸು ಬಹುಮತವಿರುವ ಮಂಗಳೂರು ಮುನಿಸಿಪಾಲಿಟಿಯವರು, ಹರಿಜನರಿಗೆ ಪ್ರವೇಶಕೊಡಬೇಕೆಂದು ಸೂಚಿಸಿದರು. ಮತ್ತು ಜಿಲ್ಲೆಯ ಎಲ್ಲಾ ಮಠಾಧೀಶರೂ, ದೇವಾಲಯಗಳ ಅಧಿಕಾರಿಗಳೂ, ಹರಿಜನರಿಗೆ ದೇವಾಲಯ ಪ್ರವೇಶಕೊಟ್ಟು ಅವರನ್ನು ಮುಂದೆ ತರುವಂತೆ ಬೇಗನೇ ಮಾಡುವರಾಗಿ ಆಶಿಸಿದರು.

ಕೆನರಾ ಹೈಸ್ಕೂಲು ಹಳೆ ವಿದ್ಯಾರ್ಥಿ ಸಂಘದ ವರ್ಧಂತಿ

ಶ್ರೀ ಎ. ಬಿ. ಶೆಟ್ರ ಭಾವಚಿತ್ರ ಅನಾವರಣ

ಈ ಉತ್ಸವವು ತಾ. ೩೧ರಂದು ಸಂಜೆ ನೆರವೇರಿತು. ಪ್ರಾರಂಭದಲ್ಲಿ ಕಾಫಿ, ಫಲಾಹಾರಗಳಾಗಿ ಸಂಘದ ಅಧ್ಯಕ್ಷರಾದ ಶ್ರೀ ಎ. ಬಿ. ಶೆಟ್ಟಿ, ಎಂ. ಎಲ್. ಎ. ಇವರ ಭಾವಚಿತ್ರ ಅನಾವರಣೋತ್ಸವವು ನೆರವೇರಿತು. ಶ್ರೀಗಳಾದ ಎಂ. ಎನ್. ಕಿಣಿ ಮತ್ತು ಎಂ. ಮಾಧವಾಚಾರ್ಯರು ಶ್ರೀ ಶೆಟ್ರ ವಿವಿಧ ಸಾರ್ವಜನಿಕ ಚಟುವಟಿಕೆಗಳನ್ನು ಪ್ರಶಂಸಿಸಿ ಮಾತನಾಡಿದರು. ಆ ಮೇಲೆ ಇನ್ನಾದು ಹಂಚೋಣ, ವಿವಿಧ ವಿನೋದಾವಳಿಗಳಾಗಿ ರಾತ್ರಿ ಭೋಜನ ಕೂಟವಿತ್ತು. ವರ್ಧಂತಿಯ ಅಧ್ಯಕ್ಷತೆಯನ್ನು ಡಾ॥ ಎಂ. ಕೇಶವ ಪೈಗಳು ವಹಿಸಿದ್ದರು.

ಶ್ರೀ. ಎ. ಬಿ. ಶೆಟ್ಟಿ ಎಂ. ಎಲ್. ಎ.

ದೇಹಶಾಸ್ತ್ರಕ್ಕೆ ಸಂಬಂಧಿಸಿದ ಕೆಲವು ವಿಷಯಗಳು

ಮಾನವನ ದೇಹದಲ್ಲಿ ಸುಮಾರು ೨೪೦ ಎಲುಬುಗಳಿವೆ.

ಕ್ರಿಮಿನಾಶಕ ದ್ರಾವಕವನ್ನು ಬಾಯಿಯಲ್ಲಿ ಅರ್ಧ ಮಿನಿಟು ಹಿಡಿದರೆ, ೧೨,೦೦,೦೦ದಿಂದ ೧೫.೦೦,೦೦೦ರ ರೋಗಾಣುಗಳು ನಾಶವಾಗುವುವು.

ಮನುಷ್ಯನ ಹೃದಯವು ವರುಷಕ್ಕೆ ೬,೦೦೦,೦೦೦ ಬಾರಿ ಬಡಕೊಳ್ಳುವುದು.

ದೇಹದ ಒಂದು ಭಾಗದಿಂದ ಮಸ್ತಿಷ್ಕಕ್ಕೆ ಸಂದೇಶವು ಸೆಕುಂದಿಗೆ ೪೨೦ ಅಡಿಗಳ ವೇಗದಲ್ಲಿ ತಲುಪುವುದು.

ಸಾಮಾನ್ಯ ಮನುಷ್ಯನು ತನ್ನ ಮೊದಲನೇ ಕ್ಷೌರದಿಂದ ಕೊನೆಯ ಕ್ಷೌರದ ವರೆಗೆ ತೆಗೆದ ಕ್ಷೌರದ ಲೆಕ್ಕ ಹಾಕಿದರೆ ಸುಮಾರು ಇಪ್ಪತ್ತು ಚದರ ಮೈಲು ವಿಸ್ತೀರ್ಣದ ಮುಖದ ಮೇಲೆ ಕ್ಷೌರ ತೆಗೆದಂತಾಗುವುದು.

HALFTONE & LINE
BLOCK MAKING
UNDERTAKEN
Sharada Press,
MANGALORE.

ಸಿನೆಮಾ ಸುದ್ದಿ

'ಏಕ್‌ರಾತ್'

ಶಾಲಿಮಾರ್ ಪಿಕ್ಚರ್ಸಿನವರ 'ಏಕ್ ರಾತ್' ಚಿತ್ರದಲ್ಲಿ ಪೆರೋಜಳು ಮುಖ್ಯ ಪಾತ್ರವಹಿಸುವಳು ನೀನಾಳೂ ಅಭಿನಯಿಸುತ್ತಾಳೆ. ಬೊಂಬಯಿಯ ಶ್ರೀ ಸೌಂಡ್ ಸ್ಟುಡಿಯೋದಲ್ಲಿ ಚಿತ್ರ ಪೂರ್ಣವಾಗುತ್ತಿದೆ. ಬಾಳೆಹಣ್ಣುಗಳನ್ನು ಈ ಚಿತ್ರದ ಸಲುವಾಗಿ–ಆಕೆಗೆ ಹಿತವಿದ್ದರೂ ಇಲ್ಲದಿದ್ದರೂ, ಪೆರೋಜಾ ನುಂಗುತ್ತಿದ್ದಾಳಂತೆ!

ಲೀಲಾದೇಸಾಯ್ಗೆ ೩ ಸಾವಿರ ರೂಪಾಯಿ

ತಿಂಗಳೊಂದರ ೩ ಸಾವಿರ ರೂಪಾಯಿಗಳ ಸಂಬಳಕ್ಕೆ ಬೊಂಬಾಯಿ ಲಕ್ಷ್ಮಿ ಪಿಕ್ಚರ್ಸಿನವರು ಲೀಲಾದೇಸಾಯಿಯೊಡನೆ ಅಭಿನಯಿಸಲು ಕರಾರುಮಾಡಿಕೊಂಡಿರುವರಂತೆ ಆಕೆಯ ಸೋದರಿ ಮಾನಿಕಾದೇಸಾಯಿಯೂ ಅದೇ ಕಂಪನಿಯನ್ನು ತಿಂಗಳೊಂದರ ಸಾವಿರ ರೂಪಾಯಿ ಸಂಬಳಕ್ಕೆ ಸೇರಿರುವಳು ಕೆ ಸಿ ಡೇಯೂ ಆ ಕಂಪನಿಯಲ್ಲಿರುವನು.

ಸ್ನೇಹಪ್ರಭಾ 'ದೃಷ್ಟಿದೋಷ'

ಸ್ನೇಹಪ್ರಭಾಳಿಗೆ ದೃಷ್ಟಿದೋಷವುಂಟಾಗಿ ಮುಂದೆ ಐದಾರು ತಿಂಗಳ ವರೆಗೆ ಆಕೆಗೆ ಅಭಿನಯಿಸುವುದು ಸಾಧ್ಯವಿಲ್ಲವೆಂದು ಒಂದು ಸುದ್ದಿ

'ರಾಜಾರಾಣಿ' ಅತ್ರೆ ಚಿತ್ರ

ಅತ್ರೆ ಕಂಪೆನಿಯ ರಾಜಾರಾಣಿ' ಚಿತ್ರವು ಪೂರ್ತಿಯಾಗುತ್ತಾ ಇದೆ 'ಪುನರ್ಮಿಲನ'ದ ನಿರ್ದೇಶಕ ನಜಾಮುಲ್ ಹಸನ್ ನಾಕಿಯೇ ಇದರ ನಿರ್ದೇಶಕನು ಮ್ಯಜಾರ್ ಖಾನ್, ಗನವಾಲಾ, ಸುನಲಿನೀದೇವಿ, ನವೀನ ಯಾಗ್ನಿಕ್, ತ್ರಿಲೋಕ ಕಾಪೂರ್, ಮಾಯಾದೇವಿ, ಮೊದಲಾದವರು ಅಭಿನಯಿಸುತ್ತಾರೆ ಅತ್ರೆಯವರು ಕಥಾಲೇಖಕರು

'ನಾರಾಯಣೀ'

ಬೊಂಬೇ ಟಾಕೀಸಿನವರು ಜೂಲ್ ಚಿತ್ರ ಮುಗಿದ ಬಳಿಕ 'ನಾರಾಯಣೀ' ಚಿತ್ರವನ್ನ ತಯಾರಿಸುವರು. ಈ ಚಿತ್ರದ ಬಂಗಾಳ ಡಿಸ್ಟ್ರಿಬ್ಯೂಶನ್ ಹಕ್ಕಿಗೆ ೫೦ಸಾವಿರ ರೂಪಾಯಿ ಕೇಳಲಾಗಿದೆಯಂತೆ!

'ಪಡೋಶಿಗೆ ತೆರಿಗೆ ಇಲ್ಲ'

ಹಿಂದೂ ಮುಸ್ಲಿಂ ಐಕ್ಯದ ಕುರಿತು 'ಪಡೋಶಿ' ಚಿತ್ರವು ಮಾಡುತ್ತಿರುವ ಜನಸೇವೆಗಾಗಿ ಈಗ ಅಸಾಮ್ ಸರಕಾರವೂ ತೆರಿಗೆಯಿಲ್ಲದೆ ಆ ಪ್ರಾಂತದಲ್ಲಿ ಪ್ರದರ್ಶಿಸಲು ಸಮ್ಮತಿಕೊಟ್ಟಿರುವುದಾಗಿ ತಿಳಿದಿದೆ ಮದ್ರಾಸು, ಬಂಗಾಳ ಸರಕಾರಗಳೂ ಅದೇ ಯೋಜನೆ ಕೈಕೊಳ್ಳುವಂತೆ ಕೇಳಿಕೊಳ್ಳಲಾಗಿದೆ

'ದೇವತಾ' ರಜತೋತ್ಸವ

ಹಿಂದೀ ಚಿತ್ರ 'ಬಂಧನ್' ಮೊದಲಾದವು ಅಖಿಲಭಾರತದಲ್ಲಿ ವಾರವಾರಗಳಲ್ಲಿ ಪ್ರದರ್ಶಿಸಲ್ಪಟ್ಟವು. ಆದರೆ ಪ್ರಾಂತಿಕ ಭಾಷಾ ಚಿತ್ರಗಳಿಗೆ ಇಂತಹ ಯೋಗವು ಅಪೂರ್ವ ತೆಲುಗು ಚಿತ್ರಗಳಲ್ಲಿ ವಾಹಿನಿ ಪಿಕ್ಚರ್ಸಿನವರ 'ದೇವತಾ' ಬಿಡದೆ ೨೫ವಾರ ನಡೆದು ರಜತೋತ್ಸವ ಆಚರಿಸಿತು.

ಹೇಮಂತ ಕುಮಾರ್ ಚಟರ್ಜಿ

ನ್ಯೂಥಿಯೇಟರ್ಸಿನಲ್ಲಿ ೧೦ ವರ್ಷಗಳಿಂದ ಪ್ರಚಾರ ಶಾಖೆಯಲ್ಲಿದ್ದ ಶ್ರೀ. ಹೇಮಂತ ಕುಮಾರ ಚಟರ್ಜಿ ಬರುವಾರವರ ಕಾನನ್ ಬಾಲಾ ಮತ್ತೆ ಜಮುನಾ ಅಭಿನಯಿಸುವ ಚಿತ್ರದ ಪ್ರಚಾರಕಾರ್ಯಕ್ಕೆ ಒಪ್ಪಿಕೊಂಡಿರುವನು

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ ಮುನ್ಸಿಫ್ ಕೋರ್ಟಿನಲ್ಲಿ.

ಕ್ರಮ ನಂಬ್ರ 439/1941

ಜೆ ವೈಕುಂಠ ಭಟ್ಟ, ರಾಮಣ್ಣ ಭಟ್ಟರ ಮಗ ಹಾಲಿ ಪುದ್ರಾಸಿನಲ್ಲಿರುವವರು } ವಾದಿ

ಮತ್ತು

1 The S Kanara St. Ann's Society, Amem b b l, ಇದರ ಸೆಕ್ರಿಟರಿ ಜುವಾಂವು ರೇಗೊ, ಸಿಕ್ಲಾಂವು ರೇಗರ ಮಗ
2 ಸಾತುರ್ನಿನ್ ಸೆವರಿನ್ ರೇಗೊ, ಜುವಾಂವು ರೇಗರ ಮಗ
3 ಸೆಸಿಲಿನಾ ಮಿರಾಂದ ಬ್ಯಾ, ಸೋಂತು ಮಿರಾಂದರ ಹೆಂಡ್ತಿ
4 ಗಾಸ್ಪಾರ್ ನೊರೆಂಞಾ ಬಸ್ತ್ಯಾಂವ್ ನೊರೆಂಞಾರ ಮಗ 1, 2, 3ನೇಯವರು ಮಂಗಳೂರು ಕೃಷ್ಣ ಬಲ್ಮಠದಲ್ಲಿರುವವರು 4ನೇಯವರು ಸಜೀಪಪಡುಗ್ರಾಮಸ್ಥರು } ಪ್ರತಿವಾದಿ

ತಾ 2-೮ 1886ರ ರಜಿಸ್ತ್ರಿ ಮೂಲಗೇಣಿ ಚೀಟು ಪ್ರಕಾರ 1ನೇ ಪ್ರತಿವಾದಿಯಿಂದ ವಾದಿಗೆ ಸಲ್ಲತಕ್ಕ ತಾ 7 4-1940 ನ 27 3 1941ರ ಮೂಲಗೇಣಿ ಚೀಟಿಗೂ ಸಂತ್ರಪ್ತ ಬಾಕಿ ಸಮೇತ ದಾವಾ ಆಸ್ತಿ ಸ್ವಾಧೀನತೆಗೂ ವಾದಿಯು ದಾಖಲು ಮಾಡಿದ ಮೇಲ್ಕಂಡ ವ್ಯಾಜ್ಯವನ್ನು ತಾ 7-1-42 ನೇ ದಿವಸ ಪೂರ್ವಾಹ್ನ 10½ ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ತನ್ಖಿಗೆ ಇಟ್ಟಿರುತ್ತದೆಂತ ಸದ್ರಿವ್ಯಾಜ್ಯದ 2, 3ನೇ ಪ್ರತಿವಾದಿಗೆ ಈ ಮೂಲಕ ತಿಳಿಸಲಾಗುತ್ತದೆ

Mangalore } 19 12 1941 — M Madhava Rao, Vakil for Plaintiff

ರೈಲು ಬಂಡಿಗಳ ಸಮಯ

ಇದೇ ಜುಲ್ಯಾ ತಾ ೧ರಿಂದ ವ್ಯತ್ಯಾಸವಾದ ರೈಲು ಬಂಡಿಗಳ ಸಮಯಗಳು ಈ ಕೆಳಗಿನಂತಿವೆ—

ಗಾಡಿಗಳು	ಹೊರಡುವ ಗಂಟೆ	ತಲ್ಪುವ ಗಂಟೆ
ಗೂಡ್ಸು ಬಂಡಿ	3 45 ರಾತ್ರಿ	9 25 ರಾತ್ರಿ
ನೀಲೇಶ್ವರದವರೆಗೆ	7 32 ಬೆಳಿಗ್ಗೆ	1 0 ಅಪರಾಹ್ನ
ಮಲಬಾರು ಎಕ್ಸ್‌ಪ್ರೆಸ್ (ಮೈಲ್)	9 5 ಬೆಳಿಗ್ಗೆ	5 15 ಸಾಯಂ.
ಜಾಲಾರ್ಪೇಟೆ ಪೆಸೆಂಜರ್	12 0 ಮಧ್ಯಾಹ್ನ	2 55 ಸಾಯಂ
ಕಾಸರಗೋಡು ವರೆಗೆ	3 25 ಸಾಯಂ	6 50 ಸಾಯಂ.
ಕಣ್ಣನ್ನೂರು ವರೆಗೆ	5 52 ಸಾಯಂ	9 40 ಪೂರ್ವಾಹ್ನ

ನಿಮ್ಮ ಅತ್ಯುತ್ತಮ 'ಶೇವಿಂಗ್' ಸಾಧನ

ಕಡಿಮೆ ಕ್ರಯದ ರೇಜರ್ ಬ್ಲೇಡುಗಳಲ್ಲಿ ಗುಣ ಕಡಿಮೆಯಿರಬೇಕೆಂದೇನೂ ಇಲ್ಲವೆಂದು ನೆಸೆಟ್ ಬ್ಲೇಡು ಉಪಯೋಗಿಸಿದವರೆಲ್ಲರೂ ಬಲ್ಲರು ನೆಸೆಟ್ ಬ್ಲೇಡುಗಳಲ್ಲಿ ಗುಣವೆಂದರೆ ಎಲ್ಲವೂ ಒಂದೇ ತೆರನಾಗಿರುವುದು ಪ್ರತಿಯೊಂದು ಪೇಕೆಟಿನಲ್ಲಿರುವ ಪ್ರತಿಯೊಂದು ಬ್ಲೇಡು ಉತ್ತಮವೇ ಇರುತ್ತದೆ ಕೊನೆವರೆಗೆ ನಾಜೂಕಾಗಿ ನಯವಾಗಿ ಕ್ಷೌರವನ್ನು ಮಾಡಲು ನಸೆಟ್ ಬ್ಲೇಡುಗಳೇ ಉತ್ತಮ

"NACET"
ನೆಸೆಟ್ ಬ್ಲೇಡುಗಳು

ಡೋಂಗರೆ ಬಾಲಾಮೃತವು ಮಕ್ಕಳಿಗೆ ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ತೆಗೆದುಕೊಳ್ಳಿರಿ

ಎಂದು ನಂಬಿಗೆಯಿಂದ ಹೇಳಬರುವ ದಮ್ಮಿಗೆ ಒಂದೇಒಂದು ಉಪಾಯ

ದಮ್ಮು ಒಮ್ಮೆಲೇ ನಿಲ್ಲಬೇಕು ಎಂಬ ಆಶೆಯಿಂದ ಅನೇಕರು ಕ್ಷಣಿಕಗುಣ ಕೊಡುವ ಔಷಧ ತೆಗೆದುಕೊಂಡು ಸತ್ತು ಹೋಗಿದ್ದಾರೆ ಪುರೋಹಿತ ಶ್ವಾಸಹಾರೀಯು ಇಂಥದಲ್ಲ, ಆದರೆ ದಮ್ಮನ್ನು ಒಂದೆರಡು ದಿನ ನೋಂದಿಸದೆ ಮೆಲ್ಲಮೆಲ್ಲಗೆ ಸಮೂಲವಾಗಿ ಗುಣಮಾಡುವ ಉತ್ಕೃಷ್ಟಶಾಸ್ತ್ರೀಯ ಉಪಾಯವು ಅದನ್ನು ತೆಗೆದುಕೊಳ್ಳಲು ಆರಂಭಿಸಿದ ಕೂಡಲೇ ಕೆಮ್ಮು ಹೋಗುವುದು, ತೇಕು ಕಡಿಮೆಯಾಗುವುದು, ಶೌಚದ ತೊಂದರೆ ಉಳಿಯುವುದಿಲ್ಲ ಪಚನಕ್ರಿಯೆಯು ತಿದ್ದುವುದು, ಸಾವಕಾಶವಾಗಿ ಶಕ್ತಿ ಹೆಚ್ಚಾಗಿ ಪುಪ್ಪುಸ ಗಟ್ಟಿಮುಟ್ಟಾಗಿ ಕೊನೆಗೆ ದಮ್ಮು ಪೂರ್ಣವಾಗಿ ಗುಣವಾಗುವುದು

ದಮ್ಮು, ತೇಕು, ಥೇಕರಿಗೆ, ಗಂಟಲು ಉರಿಯುವಂಥದು ಮತ್ತೂ ಪುಪ್ಪುಸದ ಎಲ್ಲಾ ವಿಕಾರಗಳಿಗೆ ಪುರೋಹಿತ ಶ್ವಾಸಹಾರಿ ಫ್ಲೀನ (ನೀಲಿ ಪ್ಯಾಕಿಂಗ್) ಉಪಯೋಗಿಸಬೇಕು ಬದ್ಧಕೋಷ್ಠ ಮತ್ತೂ ಆಮ್ಲಪಿತ್ತ ಹೆಚ್ಚಾಗಿ ದಮ್ಮು ಹತ್ತಿದವರು ಶ್ವಾಸಹಾರಿ ಕಂಪೌಂಡ (ಕೆಂಪು ಪ್ಯಾಕಿಂಗ್) ತೆಗೆದುಕೊಂಡರೆ ಹೆಚ್ಚು ಗುಣ ರೂ. ೨-೮, ರೂ, ೬-೭ ಕಿಮ್ಮತ್ತಿನಲ್ಲಿ ಸಣ್ಣ ದೊಡ್ಡ ಬಾಟಲಿಗಳಲ್ಲಿ ಎಲ್ಲಕಡೆ ಸಿಗುವವು ತರಿಸಿಕೊಳ್ಳುವ ವಿಳಾಸ—

ಡಾ॥ ಪುರೋಹಿತ ಫಾರ್ಮಸಿ, ಕೊಲ್ಲಾಪುರ.
ಇಲ್ಲವೇ ಮೆ॥ ವನಮಾಳೀ ಭೀವಾ ಮತ್ತು ಕಂ, ಪ್ರಿನ್ಸೆಸ್‌ಸ್ಟ್ರೀಟ್, ಮುಂಬಯಿ.

ಪುರೋಹಿತ ಶ್ವಾಸಹಾರಿ

ವಿಚಿತ್ರ ಪ್ರಪಂಚ

ಸಂಗೀತ ಕೇಳಿದರೆ ದನ ಹೆಚ್ಚು ಹಾಲು ಕೊಡುತ್ತದೆ

ಕರೆಯುವ ದನವು ಸಂಗೀತ ಕೇಳುತ್ತಾ ಇದ್ದರೆ ಅದು ಹೆಚ್ಚು ಹಾಲು ಕೊಡುತ್ತದೆ ಎಂಬುದಾಗಿ ಇತ್ತೀಚೆಯ ಶೋಧನೆಗಳಿಂದ ತಿಳಿದುಬರುತ್ತದೆ. ಹಂಗೇರಿಯಲ್ಲಿ ದನಗಳು ಹಟ್ಟಿಗೆ ಬರುತ್ತಿರುವಾಗ ಒಂದು ಸಂಜೆ ಅವುಗಳು ರೇಡಿಯೋದ ಹತ್ತಿರ ಒಮ್ಮೆಗೇ ನಿಂತುಕೊಂಡವಂತೆ! ರೇಡಿಯೋದಲ್ಲಿ ಆಗ ಸಂಗೀತದ ಕಾರ್ಯಕ್ರಮವಿದ್ದಿತು. ಅಲ್ಲಿ ಅವುಗಳು ಆನಂದಗೊಂಡ ಆ ಸಮಯದಲ್ಲಿ ಹಾಲು ಕರೆದರೆ ನೇಕಡಾ ಹತ್ತರಷ್ಟು ಅವುಗಳು ಹೆಚ್ಚು ಹಾಲು ಕೊಡುತವೆಂದು ತಿಳಿದಿದೆ. ಕರೆಯಲು ಬಿಡದ ದನಗಳೂ ಸಂಗೀತ ಕೇಳಿದರೆ ಬಿಡುತ್ತವೆಯೆಂದು ಹೇಳಲಾಗಿದೆ.

ಬಹುಪತಿ ವಿವಾಹಪದ್ಧತಿ

ಅನೇಕ ಮಂದಿ ಹುಡುಗಿಯರನ್ನು ಗಂಡುಸರು ಮದುವೆಯಾಗುವಪದ್ಧತಿ ಹಿಂದುಗಳಲ್ಲೂ ಮುಸ್ಲಿಮರಲ್ಲೂ ಇದೆಯಷ್ಟೆ? ಆದರೆ ಅನೇಕ ಜನ ಗಂಡುಸರನ್ನು ಹುಡುಗಿಯೊಬ್ಬಳು ಮದುವೆಯಾಗುವಪದ್ಧತಿ ನೀಲಗಿರಿಯ ತೋಡರಲ್ಲೂ ತಿಬೆಟಿನ ಜನರಲ್ಲೂ ಇದೆ. ಅಲ್ಲಿ ಗಂಡುಸರು ಅಧಿಕವಾಗಿ ಹೆಂಗಸರು ಕಡಿಮೆಯಾಗಿರುವುದೇ ಇದು ಆಚರಣೆಗೆ ಬರಲು ಕಾರಣವಾಗಿದೆ.

ಒಂದು ಹುಡುಗಿಯನ್ನು, ಒಂದು ಮನೆತನದ ಸೋದರರೆಲ್ಲರೂ ಮದುವೆಯಾಗುವರು. ಅವಳಲ್ಲಿ ಹುಟ್ಟಿದ ಮಗುವಿನ ತಂದೆ ಯಾರು? ಎಂದರೆ ಆ ಮಗುವಿಗೆ ನಾಮಕರಣ ಮಾಡುವವನು. ನೀಲಗಿರಿಯ ತೋಡರ ಜಾತಿಯ ಅಣ್ಣತಮ್ಮಂದಿರೊಡನೆ ಹುಡುಗಿಯೊಬ್ಬಳ ಗಂಡನಾಗಲು ಬೇರೆಯ ಕೆಲವರೂ ಸೇರುತ್ತಾರೆ!

ನೆಪೋಲಿಯನ್ ಬೆಕ್ಕಿಗೆ ಹೆದರುತ್ತಿದ್ದ

ಕೆಲವು ಜನರಿಗೆ ಬೆಕ್ಕುಗಳನ್ನು ಕಂಡರೆ ಬಹಳ ಹೆದರಿಕೆ. ಅದೊಂದು ತರದ 'ಎಲುರೋಫೋಬಿಯಾ' ಹೆಸರಿನ ರೋಗವೆಂದು ಹೇಳುತ್ತಿದ್ದಾರೆ. ಆ ರೋಗವಿದ್ದವರು ಮಲಗುವ ಕೋಣೆಯಲ್ಲಿ ಬೆಕ್ಕು ಇದ್ದರೆ ಅವರಿಗೆ ನಿದ್ದೆ ಹತ್ತಲಾರದಂತೆ. ಹಲವುಸಲ ಅವರಿಗೆ ಶ್ವಾಸವು ಕಟ್ಟಿಹೋಗುವುದೂ ಸಂಭವವಿದೆಯಾಗಿ ತಿಳಿದುಬರುತ್ತದೆ.

ಇಂತಹ ರೋಗದಿಂದ ನರಳುವ ಜನರಲ್ಲಿ ನೆಪೋಲಿಯನ್ ಒಬ್ಬನಾಗಿದ್ದನೆಂದು ಹೇಳಲಾಗಿದೆ. ಅರ್ಧ ಯೂರೋಪನ್ನೇ ಜಯಿಸಿದ ವೀರನಾತನಿಗೆ ಬೆಕ್ಕೆಂದರೆ ಬಹಳ ಹೆದರಿಕೆಯಾಗುತ್ತಿತ್ತಂತೆ.

ಮುದುಕ ಗಂಡ ಬೇಡವೆಂದಳು

ಬಂಗಾಳದ ಕಾಂತ ಎಂಬಲ್ಲಿಂದ ಬಂದ ಸುದ್ದಿಯಿದು. ತಂದೆತಾಯಿಗಳಿಲ್ಲದ ಒಂದು ಹುಡುಗಿಯನ್ನು ಆಕೆಯ ತಂದೆಯ ಸೋದರನು ಒಬ್ಬ ಮುದುಕನಿಗೆ ಕೊಡಲು ನಿಶ್ಚಯ ಮಾಡಿದನು. ಮದುವೆಯ ದಿನ ಆ ಹುಡುಗಿ ಮುದುಕ ಗಂಡನನ್ನು ವರಿಸೆನೆಂದಳು. ಅದು ಪೋಲೀಸರಿಗೆ ತಿಳಿಸಲಾಯಿತು. ಅವರ ಮುಂದೆಯೂ ಅದೇ ಮಾತು ಆಕೆ ಹೇಳಿದಳು.

ಮುದುಕ ಗಂಡ ಕಾಲ್ತೆಗೆದ. ಸ್ಥಳೀಕ ವಕೀಲರು, ವ್ಯಾಪಾರಿಗಳು ಮತ್ತು ಮಹನೀಯರು ಚಂದಾ ಎತ್ತಿ ಆಕೆಯನ್ನು ವರದಕ್ಷಿಣೆಯಿಲ್ಲದೆ ಮದುವೆಯಾಗಲು ಮುಂದು ಬಂದ ಯುವಕನೊಬ್ಬನಿಗೆ ಅದೇ ದಿನ ಮದುವೆ ಮಾಡಿಕೊಟ್ಟರು.

ಸ್ವದೇಶಾಭಿಮಾನಿಯಲ್ಲಿ
ನಿಮ್ಮ ಜಾಹೀರಾತುಗಳನ್ನು
ಕೊಡಿರಿ.

ವಿಜ್ಞಾನಯುಗ

ಪರೆಚ್ಯೂಟ್‌ನಂತೆ ಸ್ಪೈಟ್‌ಚ್ಯೂಟ್

ಪೆರಚ್ಯೂಟ್ ಎಂಬ ಗಾಳಿ ಕೊಡೆಯ ಆಕಾಶ ಬುಟ್ಟಿಗಳ ವಿಷಯವನ್ನು ನಾವು ಯುದ್ಧ ಆರಂಭವಾದ ಬಳಿಕ ಬಹಳವಾಗಿ ಕೇಳುತ್ತಿದ್ದೇವಷ್ಟೆ? ಈಗ ಸ್ಪೈಟ್‌ಚ್ಯೂಟ್ ಎಂಬ ಪೆರಚೂಟ್ ಲಕ್ಷಣದ ಇನ್ನೊಂದು ತರದ ಆಕಾಶ ಬುಟ್ಟಿ ತಯಾರಾಗಿದೆ.

ಕಳೆದ ಎರಡುವರ್ಷಗಳಿಂದ ಪೆರಚ್ಯೂಟಿನಲ್ಲಿ ಕಂಡುಬರುವ ಲೋಪದೋಷಗಳೆಲ್ಲವನ್ನೂ ಪರೀಕ್ಷಿಸಿ, ಅವುಗಳಾವುವೂ ಇಲ್ಲದಂತೆ ಹೊಸದಾಗಿ ಬೇರೆ ರೀತಿಯಿಂದ ತಯಾರಿಸಿದ ಯಂತ್ರವಿದು. ಇದು ಆಕಾಶದಲ್ಲಿ ಹಾರುವುದು. ಇದನ್ನು ಭಾರತದಲ್ಲಿ ಸಿಗುವ ರೇಷ್ಮೆ ಮೊದಲಾದ ವಸ್ತುಗಳಿಂದ ತಯಾರಿಸಲಾಗಿದೆಯೆಂದು ತಿಳಿದಿದೆ.

ಬಾಂಬು ಬಿದ್ದಲ್ಲಿ ರೋಗ

ಬಾಂಬು ಬಿದ್ದ ಸ್ಥಳಗಳಲ್ಲಿ ಅಲ್ಲಲ್ಲಿ ನೆಲದಲ್ಲಿ ಹೊರಡ ತೂತುಗಳು ಬಿದ್ದು, ಕಶ್ಮಲಗಳು ಸೇರಿ ಅದರಿಂದ ರೋಗಾಣುಗಳು ಹರಡುತ್ತಾ ಜನರ ಆರೋಗ್ಯ ಹಾಳಾಗುತ್ತಿರುವುದಾಗಿ ಇತ್ತೀಚೆಯ ವರದಿ.

ಬಾಂಬು ಬೀಳಲು ಸುರುವಾದ ಮೇಲೆ ನೊಣ, ನುಸಿಗಳು ಬ್ರಿಟನು ಮೊದಲಾದ ಕಡೆಗಳಲ್ಲಿ ಬಹಳ ಹೆಚ್ಚಿದೆಯಂತೆ.

ನೊಣಗಳಿಂದ ಅನಾರೋಗ್ಯ

ನೊಣಗಳು, ಅನೇಕ ಬಗೆಯ ರೋಗಗಳನ್ನು ಹರಡುತ್ತವೆ. ಸನ್ನಿಪಾತ ಜ್ವರ, ಕ್ಷಯ, ವಾಂತಿಭೇದಿ, ಉಷ್ಣ, ಹೊರಕಡೆ ಮೊದಲಾದ ತೀವ್ರ ರೋಗಗಳನ್ನೂ ಇವು ಹರಡುವವು. ಆಹಾರಗಳಲ್ಲಿ ಇವು ಕುಳಿತುಕೊಂಡು ಕೆಟ್ಟ ವಸ್ತುಗಳನ್ನು ಅದರಲ್ಲಿ ಸೇರಿಸುವವು. ಒಂದು ನೊಣವು ಒಮ್ಮೆಗೆ 1,000,000 ಅಣುಗಳನ್ನು ಹೊತ್ತುಕೊಳ್ಳಬಲ್ಲುದಂತೆ. ಅವುಗಳ ಸಂತಾನವೂ ಬಹಳ ಜೋರಾಗಿ ಬೆಳೆಯುತ್ತದೆ.

ನೋಟೀಸು

ಉಡ್ಪಿ ಡಿ. ಮು ಕೋರ್ಟಿನಲ್ಲಿ

O. P. 67/1941.

ಯು. ರಾಮ ಪ್ರಭು — ಅರ್ಜಿದಾರ್

ಮತ್ತು

ಯು. ವೆಂಕಟೇಶ ಪ್ರಭು
ಕೂಡ 5 ಜನರು } ಯದ್ರಿರು.

ಅರ್ಜಿದಾರನ ತಮ್ಮ ಮತ್ತು 1ನೇ ಯದ್ರಿಯಾಳ ತಂದೆ ಮತ್ತು 2ನೇ ಯದ್ರಿಳ ಗಂಡ ಮತ್ತು 3ರಿಂದ 5ನೇ ಯದ್ರಿರ ತಂದೆ ಈಗ ಮೃತಪಟ್ಟ ಶ್ರೀನಿವಾಸ ಪ್ರಭುಗಳು 'ದಿ ಓರಿಯೆಂಟಲ್ ಲೈಫ ಯಿನ್ಶ್ಯೂರೆನ್ಸ ಕಂಪೆನಿ, ಲಿಮಿಟೆಡ್'ನಲ್ಲಿ ಇನ್ಶ್ಯೂರ್ ಮಾಡಿದ ಪೋಲಿಸಿ 18114ರ ಬಾಬ್ತು ಸದ್ರಿ ಕಂಪೆನಿಯಿಂದ ಬರತಕ್ಕ ಹಣವನ್ನು, ಕುಟುಂಬದ ಹಣವಾಗಿದ್ದು, ಅವಿಭಕ್ತ ಕುಟುಂಬದ ಪರವಾಗಿ ಕುಟುಂಬದ ಯಜಮಾನನಾಗಿ ಪಡೆಯುವರೆ ನಾನು ಹಕ್ಕುದಾರನೇ ತಲೂ ಆ ಕುರಿತು ನನಗೆ ಒಂದು ವಾರೀಸು ಸರ್ಟಿಫಿಕೇಟು ಕೊಡಬೇಕೆಂತಲೂ ಮನವಿ ಮಾಡಿ ಕೊಟ್ಟ ಸದ್ರಿ ಅರ್ಜಿಯು ತಾ. 26-1 42ಕ್ಕೆ ತನ್ನಿಗೆ ಇಟ್ಟಿದೆ ಎಂತಲೂ ಆ ಕುರಿತು ಆಕ್ಷೇಪವುಳ್ಳವರು ಈ ಕೋರ್ಟ ಮುಂದೆ ಸದ್ರಿ ತಾರೀಕು ಹಗಲು ಘಂಟೆ 11ಕ್ಕೆ ಹಾಜರಾಗಿ ತಮ್ಮ ಆಕ್ಷೇಪಗಳನ್ನು ಪ್ರಾಂಭಿರು ಮಾಡಬೇಕಾಗಿ ಈ ಮೂಲಕ ತಿಳಿಸೋಣಾಗುತ್ತದೆ.

UDIPI, 26-12 41 } K. Vittal Nayak, Pleader for Plaintiff

ಶೀತ ಮತ್ತು ಹಿಮಬಾಧೆಯಿಂದ ದೂರವಾಗಿರಿ

ಜಾಂಬಕನ್ನು ನಿಮ್ಮ ಎದೆಗೆ ಹಚ್ಚಿರಿ

ಯಾವಾಗಲೂ ಜ್ಯಾಂಬಕನ್ನು ಉಪಯೋಗಿಸಿರಿ ಅದು ಪ್ರಾಣಿಗಳ ಕೊಬ್ಬಿನಿಂದ ವಿರಹಿತವಾಗಿದೆ

ಶೀತ ಬಾಧೆಗಳಿಂದ ದೂರವಾಗಿರಲು, ಜಾಂಬಕನ್ನು ನಿಮ್ಮೆದೆಗೆ ಚೆನ್ನಾಗಿ ತಿಕ್ಕಿಕೊಳ್ಳಿರಿ. ಈ ಶುದ್ಧ ವನಸ್ಪತಿ ಲೇಪವು ಎರಡು ವಿಧದ ಪ್ರಯೋಜನವುಳ್ಳದ್ದಿದೆ ಇದು ಎದೆನೋವು ಮತ್ತು ಬಾಧೆಗಳನ್ನು ನಿವಾರಿಸಲು ಮತ್ತು ತಡೆಯಲು ಉಪಯೋಗವಾಗುತ್ತದೆ. ಜ್ಯಾಂಬಕಿನಲ್ಲಿರುವ ಉತ್ತಮ ತೈಲವು ಶ್ವಾಸಕೋಶಕ್ಕೆ ತಲಪಿದರೆ ತಲೆಭಾರವು ಕಡಿಮೆಯಾಗಿ ಶ್ವಾಸವು ಸುಲಭವಾಗುವುದು. ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ಇದು ಒಂದು ರೂಪಾಯಿ ಅಥವಾ 2—4—0ಕ್ಕೆ ದೊರಕುವುದು. ಜ್ಯಾಂಬಕ್ ಸೋಪಿಗೆ 1 ರೂಪಾಯಿ, ಜ್ಯಾಬಕ್ ಪೌಡರಿಗೆ ಒಂದು ರೂಪಾಯಿ.

ಏಜಂಟರು — ಮೆಸರ್ಸ್ ದಾಧಾ ಮತ್ತು ಕಂಪೆನಿ,
ಪಿ ಟಿ ಮದರಾಸು.

ಯಾವಾಗಲೂ ಜ್ಯಾಂಬಕನ್ನೇ ಕೇಳಿಕೊಳ್ಳಿರಿ

ZAM-BUK

ಪ್ರಾಣಿ ಕೊಬ್ಬು ವಿರಹಿತವಾದುದು

ಸೌಂದರ್ಯ ಮತ್ತು ಮುಖಕಾಂತಿಗೆ

ಹಿಮಾನಿ ಸ್ನೋ

ಹಿಂದೂದೇಶದಲ್ಲಿ ಪ್ರಥಮವಾಗಿ
— ತಯಾರಿಸಿದ ಸ್ನೋ —

ಅಂದಿನಿಂದಲೂ ಶ್ರೇಷ್ಠವಾಗಿಯೇ ಇದೆ — ಮುಖದ ಮೇಲಿನ ಯಾವತ್ತೂ ಕಲೆ, ಮಚ್ಚೆ ಛಿದ್ರ ಮುಂತಾದುವನ್ನು ಗುಣಪಡಿಸುವುದು

ಹಿಮಾನಿ ಗ್ಲಿಸರಿನ್ ಸಾಬೂನುಗಳು

ಪಾರದರ್ಶಕ—ಶುದ್ಧ

ಕೋಮಲವಾದ ಪರಿಮಳ

ದಕ್ಷಿಣ ಕನ್ನಡದ ಡಿಸ್ಟ್ರಿಬ್ಯೂಟರರು — ಕೊರನೇಶನ್ ಟ್ರೇಡಿಂಗ್ ಕೊ.

ಮಹಮ್ಮದಾಲಿ ರೋಡ್, ಮಂಗಳೂರು.

BHUVANENDRA PRODUCTS LTD.,

Head Office and Factory: KATAPADI, S Kanara.

Depots:
1. Maharatha Galli, Hubli.
2. 57 Big street, Triplicane, Madras.

"BHUVANENDRA"

Danthadavan Choorna

Economical in use. Cheapest in value Genuine in quality and choiced by all Antiseptic, astringent, aromatic. Useful in Pyorrhoea, Alveolaris. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ
ಹಲ್ಲುಗಳೇ ಮುಖ್ಯ ಕಾರಣ
"ಭುವನೇಂದ್ರ"

ದಂತದಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ವ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ.

ಸ್ಥಳೀಯ ಸೆಪ್ಲೀಕಸ್ಟರು —
ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್ ಲಿಮಿಟೆಡ್, ರಥಬೀದಿ.
ರಾಘವೇಂದ್ರ ರಂಗ ಶೈ, [illegible], ರಥಬೀದಿ
ಡಾ ಎಮ್. ಎಸ್. ಪ್ರಭು, M. B. B. S. [illegible]

THE PIE-MONEY BANK, LTD.

Maidan Road, MANGALORE

Undertakes all kinds of Banking Business. Current accou at 2½% per annum, Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction chit Funds ranging from Rs. 100/ to Rs. 5000 run regularly on systematic lines. Unique Banking faciliti to Businessmen and interested Public

Apply for particulars—

K. R. GURU, *Managing Director*

The Bank of Mangalore Limited.

Branches—MOODABIDRI & PADUBIDRI

HEAD OFFICE MANGALORE ESTD 1931

All kinds of Banking Business transacted.

Fixed Deposits received at rates ranging from 3% to 5%

INTEREST PAYABLE QUARTERLY

Interest on Savings Bank Deposits allowed at at 2½%

THE

Combined Booking Agency, Mangalore.

Our Present Timing Lists

ARE

Available for sale

Price 0-2-0 per Copy

For Particulars Apply to:—

THE JOINT MANAGERS,

The Combined Booking Agency, Mangalore.

ಬಿಡಿ ಸಂಚಿಕೆ ಬೆಲೆ ಒಂದಾಣೆ | ವಾರ್ಷಿಕ ಚಂದಾ ರೂ. 2-0-0 | ಅಂಚೆ ವೆಚ್ಚ ಸೇರಿ ರೂ. 2—13—0 | Regd. No. M 3460

ಸ್ವದೇಶಾಭಿಮಾನಿ

[ಸಂಪುಟ 36] ತಾರೀಕು 2—1—1942 [ಸಂಚಿಕೆ 1]

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

ಹೊಸ ವರ್ಷದ ಅಭಿವಂದನೆ

ನಮ್ಮ ಎಲ್ಲಾ ಪೊಲಿಸಿದಾರರಿಗೂ, ಏಜಂಟರಿಗೂ ಕಂಪೆನಿಯ ವೈದ್ಯರಿಗೂ ಹಿತಚಿಂತಕರಿಗೂ

★ ನ:ವ:ವ:ರ್ಷ:ವು ★

ಆನಂದದಾಯಕವಾಗಿಯೂ ಅಭಿವೃದ್ಧಿಕರವಾಗಿಯೂ ಪರಿಣಮಿಸಲೆಂದು

ನಾವು

ಹೃತ್ಪೂರ್ವಕವಾಗಿ ಹಾರೈಸುತ್ತೇವೆ.

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್.

ದಕ್ಷಿಣ ಹಿಂದೂಸ್ಥಾನದ ಪ್ರಾಮುಖ್ಯ ಏಜಂಟರು:

ಬೊಂಬಾಯಿ ಮ್ಯೂಚ್ಯುಅಲ್ ಲೈಫ್ ಎಶ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಉಡುಪಿ, ಮದ್ರಾಸು, ಬೆಂಗಳೂರು, ಟ್ರಿವೆಂಡ್ರಂ, ಮಂಗಳೂರು, ಕಲ್ಲಿಕೋಟೆ ಬೊಂಬಾಯಿ.

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

ESTD. 1906

ಸ್ವದೇಶಾಭಿಮಾನಿ

SWADESHABHIMANI



ಬ್ರಿಟಿಷ್ ವಿಮಾನ ಬಲದಲ್ಲಿರುವ ನಾಲ್ಕು ಎಂಜಿನುಗಳುಳ್ಳ ಲಿಬರೇಟರ್ ವಿಮಾನ

ಇದು ಅಮೆರಿಕದಿಂದ ಬ್ರಿಟನಿಗೆ ಕಳುಹಿಸಲ್ಪಟ್ಟಿದೆ ಇದು ಏಕವಾಹಿ ವಿಮಾನವಾಗಿದ್ದು ಟ್ರೈಸೈಕಲ್ ಅಂಡರ್ ಕೇರೇಜ್‌ವುಳ್ಳದ್ದಾಗಿದೆ ಇದರ ಪ್ರತಿಯೊಂದು ಎಂಜಿನಿಗೂ 12000 ಅಶ್ವಶಕ್ತಿಯಿದೆ ಏರ್‌ಕ್ರಾಫ್ ಉದ್ದ 66 ಫೀಟು ಇತಿ: ಉದ್ದ 110 ಫೀಟು

KANNADA ILLUSTRATED WEEKLY

ಪುಸ್ತಕಾವಲೋಕನ

ಪ್ರಚಾರ ಪುಸ್ತಕಗಳು

ಮೈಸೂರು ವಿಶ್ವವಿದ್ಯಾಲಯದವರು ಇತ್ತೀಚೆಗೆ, ವಿವಿಧ ವಸ್ತು ವಿಷಯಕವಾದ ಎರಡಾಣೆ ಬೆಲೆಯ ಪ್ರಚಾರ ಪುಸ್ತಕಗಳನ್ನು ಪ್ರಕಟಿಸುತ್ತಿದ್ದು ಅವು ಸಾಕಷ್ಟು ಜನಪ್ರಿಯವೂ ಆಗಿವೆ. ಈಚೆಗೆ ಕೆಳಗಿನ ಪುಸ್ತಕಗಳು ನಮ್ಮ ಕಡೆ ವಿಮರ್ಶೆಗಾಗಿ ಬಂದಿವೆ.

ಶಿಶುವಿಹಾರ

ಇದನ್ನು ಬರೆದರು ಶ್ರೀ. ಸಿ. ರಂಗಾಚಾರ್. ಮಕ್ಕಳು ಮೂರು ವರ್ಷದಿಂದ ಆರು ವರ್ಷಗಳವರೆಗೆ ಶಿಶುವಿಹಾರಗಳಲ್ಲಿ ಉತ್ತಮ ಶಿಕ್ಷಣ ಪಡೆಯುವಂತೆ, ಇತ್ತೀಚೆಗೆ ಯುರೋಪ್ ದೇಶಗಳಲ್ಲಿ ಅಭಿವೃದ್ಧಿ ಹೊಂದಿದ ಈ ಶಿಶು ವಿದ್ಯಾಭ್ಯಾಸ ಪದ್ಧತಿಯ ಪರಿಚಯವನ್ನು ಇದರಲ್ಲಿ ಲೇಖಕರು ಕೊಟ್ಟಿದ್ದಾರೆ ವಿಷಯ ವಿವರಣೆಯ ಸಲುವಾಗಿ ಅಲ್ಲಲ್ಲಿ ಚಿತ್ರಗಳನ್ನು ಅಂಕಸಂಖ್ಯೆಗಳನ್ನು ಕೊಟ್ಟು ಸಹಾಯಮಾಡಿರುವರು ಶಿಶುವಿಹಾರ ಮಕ್ಕಳ ಕೆಲವು ಚಟುವಟಿಕೆಗಳ ಫೋಟೋದಿಂದಲೂ ಪುಸ್ತಕದ ಅಂದವು ಹೆಚ್ಚಾಗಿದೆ ಮಕ್ಕಳ ವಿದ್ಯಾಭ್ಯಾಸದ ವಿಷಯ ಆಸಕ್ತಿಯುಳ್ಳವರು ಅವಶ್ಯ ಓದಬೇಕಾದ ಪುಸ್ತಕವಿದು

ಸಂಖ್ಯೋದ್ಯಾನ

ಇದರ ಲೇಖಕರು ಶ್ರೀ ಜಿ ಸೀತಾರಾಮ ಶಾಸ್ತ್ರಿಗಳು ಅಂಕಗಣಿತದ ವ್ಯವಸ್ಥೆಯನ್ನು ನಮ್ಮ ಹಿರಿಯರು ಹೇಗೆ ತಂದರು, ಅದರ ಉದ್ಯಾನ ಎಷ್ಟು ರಮ್ಯವಾಗಿದೆ, ಹೇಗೆ ವೃದ್ಧಿಹೊಂದಿದೆ, ಜನಜೀವನಕ್ಕೆ ಹೇಗೆ ಸಂಬಂಧಿಸಿದೆ ಎಂಬೀ ವಿಚಾರಗಳನ್ನು ಇದರಲ್ಲಿ ಲೇಖಕರು ಸಂಕ್ಷೇಪವಾಗಿ ವಿವರಿಸಿರುವರು ಇದರಲ್ಲಿ ಆರು ಪ್ರಕರಣಗಳಿವೆ, ಭಾಸ್ಕರರ ಕಲಾ ದೃಷ್ಟಿ ಮೊದಲಾದ ಪ್ರಕರಣಗಳು ಗಂಭೀರ ವಿಷಯಗಳನ್ನು ಒಳಗೊಂಡು ವಿಶೇಷ ಸ್ವಾರಸ್ಯವಾಗಿ ಲೇಖಕರಿಂದ ಕೊಡಲ್ಪಟ್ಟಿದೆ' ವಿವರಣೆಯನ್ನು ಸಚಿತ್ರ ಕೊಟ್ಟಿರುತ್ತದೆ ಗಣಿತ ವಿದ್ಯಾರ್ಥಿಗಳು ಓದಿನೋಡಬೇಕಾದ ಪುಸ್ತಕವಿದು.

ಸರ್ವಜ್ಞ ಕವಿ

ಇದರ ಲೇಖಕರು ಶ್ರೀ ಎ. ಆರ್ ಕೃಷ್ಣಶಾಸ್ತ್ರಿಗಳು ಸರ್ವಜ್ಞನ ನುಡಿಗಳನ್ನು ಕೇಳದ ಓದದ ಅಭ್ಯಾಸವಾಗದ ಕನ್ನಡಿಗರು ಸಿಗಲಾರರು ಸರ್ವಜ್ಞನು ಕನ್ನಡಿಗರ ಜೀವನದಲ್ಲಿ ಅಷ್ಟು ಹಾಸುಹೊಕ್ಕಾದವನು ಅಂತಹ ಮಹಕವಿಯ ಕಾಲ ದೇಶ, ಮತ, ಸಾಹಿತ್ಯ ಸೇವೆ, ಶೈಲಿ ಮೊದಲಾದ ವಿಚಾರಗಳನ್ನು ಆತನ ಮಾತಿನ ಉದಾಹರಣೆಗಳಿಂದಲೇ ಎತ್ತಿ ತೋರಿಸಿ ಲೇಖಕರು ಸ್ವಾರಸ್ಯವಾಗಿ ಈ ಕೆಲಸ ನಿರ್ವಹಿಸಿದ್ದಾರೆ ಕವಿಯ ಹಾಗೂ ಆತನ ಕೃತಿಯ ಸೂಕ್ಷ್ಮ ಪರಿ

ವಾಶಿಂಗ್‌ಟನ್ ಮತ್ತು ಮೋಸ್ಕೋ ಮಾತುಕತೆಗಳು

ಮೋಸ್ಕೋವಿನಿಂದ ಲಂಡನಿಗೆ ಈಡನರು ಬಂದ ಮೇಲೆ, ಅವರಿಗೂ ಸ್ಟಾಲಿನರಿಗೂ ಮೋಸ್ಕೋದಲ್ಲಿ ಆದ ಮಾತುಕತೆಯು, ಚರ್ಚಿಲರಿಗೂ ರೂಸ್‌ವೆಲ್ಟರಿಗೂ ವಾಶಿಂಗ್‌ಟನ್ನಿನಲ್ಲಿ ನಡೆದ ಮಾತುಕತೆಯ ವಿಷಯಕ್ಕೇ ಸಂಬಂಧಿಸಿದ್ದಾಗಿತ್ತೆಂಬ ವಿಷಯವು ತಿಳಿದುಬಂತು ಮೋಸ್ಕೋಗೆ ಈಡನರೇ ಹೋದದ್ದೂ, ವಾಶಿಂಗ್‌ಟನಿಗೆ ಚರ್ಚಿಲರೇ ಹೋದದ್ದೂ ನೋಡಿದರೆ ಇದು ವಿಶೇಷ ಪರಿಸ್ಥಿತಿಯೆನ್ನಬಹುದು ಯುದ್ಧ ಮಂತ್ರಿಮಂಡಳದವರೇ ಈಡನರು ಮೋಸ್ಕೋಗೆ ಹೋಗಬೇಕೆಂದು ನಿರ್ಣಯಮಾಡಿದ್ದರು ಪೆಸಿಫಿಕಿನಲ್ಲಿ ಯುದ್ಧ ಆರಂಭವಾಗುವ ಮೊದಲೇ ಅವರು ಪ್ರಯಾಣ ಸಿದ್ಧತೆಯನ್ನು ಮಾಡಿದ್ದರು.

ಈಡನರು ಈ ಕೆಲಸಕ್ಕೆ ಅತ್ಯಂತ ಯೋಗ್ಯರು 1935ರಿಂದ ಈಡನರಿಗೆ ಸ್ಟಾಲಿನರ ಪರಿಚಯವಿದೆ ಅವರು ಅತ್ಯಂತ ಆಪ್ತರೂ ಇದ್ದಾರೆ ಲಂಡನಿನಲ್ಲಿ ಚರ್ಚಿಲರ ನಂತರ ಈಡನರ ವಿಷಯ ಹೆಚ್ಚು ಗೌರವವಿದೆ ಚರ್ಚಿಲ್ ಮಂತ್ರಿಮಂಡಳದಲ್ಲಿ ಈಡನರು ಪ್ರಭಾವಶಾಲಿಗಳು ಈಡನರು ಮೋಸ್ಕೋಗೆ ತೆರಳುವಂದು, ಅವರ ದೃಷ್ಟಿಯ ಮುಂದೆ ಬ್ರಿಟನು ಮತ್ತು ರಶ್ಯಗಳು ಜರ್ಮನಿಯನ್ನು ನಾಶಗೊಳಿಸುವ ಹಂಚಿಕೆಹೂಡುವದೇ ಇತ್ತು. ಜಪಾನು ಪೆಸಿಫಿಕಿನಲ್ಲಿ ಉಗ್ರವಾದುದು ಅಮೆರಿಕ ಯುದ್ಧ ಸಾರಿದ್ದು ಇವೆಲ್ಲಾ ಅವರ ಯಾತ್ರೆಯ ಧ್ಯೇಯಗಳನ್ನು ಇಮ್ಮಡಿಸಿತು ಹೀಗಾಗಿ ಅಮೆರಿಕ, ಬ್ರಿಟನು, ರಶ್ಯ ಮತ್ತು ಚೈನಗಳ ಸಂಯುಕ್ತ ವಿಚಾರ ನಡೆಯಬೇಕಾಯಿತು

ಚರ್ಚಿಲರಾದರೂ ಅಮೆರಿಕಕ್ಕೆ ಹೋದ ವಿಚಾರ ಬಹಳ ಗಂಭೀರವಿದೆ ಲಾರ್ಡ್ ಬಿವರ್‌ಬ್ರೋಕರನ್ನು ಅವರು ಸಂಗಡ ಒಯ್ದಿದ್ದಾರೆ ಜಗತ್ತಿನ ಪರಿಸ್ಥಿತಿಗಳೆಲ್ಲವೂ ಈಗ ಅವರೊಳಗೆ ಚರ್ಚಿಲ್ ರೂಸ್‌ವೆಲ್ಟರೊಳಗೆ ನಡೆವ ಸಂಭಾಷಣೆಗಳಲ್ಲಿ ಅಡಕವಾಗಿವೆ ಜಪಾನು ಯುದ್ಧಕ್ಕಿಳಿದ ವಿಷಯದ ಕಡೆಗೆ ವಿಶೇಷ ಗಮನ ಹರಿದಿದೆ ಬಹಳ ದೀರ್ಘಕಾಲದ ಆಳವಾದ ವಿಚಾರವನ್ನು ಇವರು ಮಾಡುತ್ತಿದ್ದಾರೆಂದು ಸುದ್ದಿ ಬಂದಿದೆ

ಸಿಂಗಾಪುರದ ಮಹತ್ವವೇನು?

ಸಿಂಗಾಪುರ ಪಟ್ಟಣವು ಮಲಯಾ ದ್ವೀಪದ ತುದಿಯಲ್ಲಿರುವ ಒಂದು ಪಟ್ಟಣ ಪೂರ್ವದ ಕಡೆಗಿರುವ ಪೆಸಿಫಿಕ್ ಸಾಗರಕ್ಕೂ ಪಶ್ಚಿಮದ ಕಡೆಗಿರುವ ಹಿಂದೀ ಮಹಾಸಾಗರಕ್ಕೂ ನಡುವೆ ಇದು ಒಂದು ಹೆಬ್ಬಾಗಿಲಿನಂತೆ ಇದೆ ಇದು ವಿಸ್ತಾರವೂ ಸುರಕ್ಷಿತವೂ ಆಗಿರುವುದರಿಂಧ ಯೂರೋಪ್, ಹಿಂದುಸ್ತಾನ, ಚೀನ, ಜಪಾನ್ ಮತ್ತು ಆಸ್ಟ್ರೇಲಿಯ, ನ್ಯೂಜಿಲೆಂಡ್ ದೇಶಗಳಿಂದ ಬರಹೋಗುವ ಹಡಗಗಳಿಗೆ ಆಶ್ರಯಸ್ಥಾನವಾಗಿವೆ. ನೈಸರ್ಗಿಕ ಬಂದರಗಳಲ್ಲಿ ಅತ್ಯುತ್ತಮವಾದ ಬಂದರಗಳಂತೆ ಇದಕ್ಕೂ ಅನುಕೂಲತೆಗಳಿವೆ. ವಿಶಾಲವಾದ ಬಂದರವಾಗಿದ್ದು ಅತಿ ದೊಡ್ಡ ಯುದ್ಧ ಹಡಗವೂ ನಿಲ್ಲುವಷ್ಟು ದೊಡ್ಡ ನೌಕಾ ಠಾಣ್ಯವಾಗಿದೆ ಇಲ್ಲಿ ಎಲ್ಲಾ ತರದ ದುರಸ್ತಿ ಮಾಡಲು ಪುನಃ ಬಿಟ್ಟಕಟ್ಟಲೂ ಆಗತ್ಯವುಳ್ಳ ಅನುಕೂಲ ಯಂತ್ರಸಾಮಗ್ರಿಗಳಿವೆ. ತುಂಬಾ ಫಿರಂಗಿಗಳೂ ಇವೆ.

ಚಯವು ಇದರಿಂದ ಸಾಕಷ್ಟು ಆಗುವುದೆಂಬುದು ನಿರ್ವಿವಾದ

—ಕಯ್ಯಾರ

'ಇನ್ನೂ ಗಂಡಾಂತರ ಬರಲಿದೆ ಕೊನೆಗೆ ಜಯಸಿಗುವುದು'

ಚರ್ಚಿಲರ ಭರವಸೆ

ಚರ್ಚಿಲರು ತಾ 31ರಂದು ಒಟಾವಾದಲ್ಲಿ ಒಂದು ಭಾಷಣ ಮಾಡುತ್ತಾ ಕೆನಡವು ಕೊಟ್ಟ ಸಹಾಯವನ್ನು ಅಭಿನಂದಿಸಿದರು ನಾವಿನ್ನೂ ಅತ್ಯಾಚಾರ ಮಾಡಿಲ್ಲ, ಪ್ರಸಂಗಬಂದರೆ ನಾವೂ ಹಿಟ್ಲರನಷ್ಟೇ ಕಠಿಣರಾಗಬಲ್ಲೆವೆಂದೂ, ಹೋರಾಟದ ನಂತರ ಜಯಸಿಕ್ಕಿದ ಮೇಲೆ ಹೊಸ ಜಗತ್ತಿನ ಮಾತುಕತೆಯೆಂದೂ ಹೇಳ ನಾರ್ವೆ ಮುತ್ತಿಗೆಯ ಘಟನೆಯನ್ನು ವಿವರಿಸಿ ಫ್ರಾನ್ಸಿನ ಧೋರಣೆವನ್ನು ಟೀಕಿಸಿ, ಇನ್ನೂ ನಮಗೆ ಗಂಡಾಂತರ ಬರಲಿದೆಯಾದರೂ, ಕೊನೆಗೆ ಜಯ ದೊರಕದರದು ಎಂದರು

ಅಮೆರಿಕದಿಂದ ಹಡಗುಬರಬೇಕು ಅಲ್ಲಿವರೆಗೆ ಕಾಯುತ್ತೇವೆ!

— ಚರ್ಚಿಲ್ ಹೇಳಿಕೆ —

ಚರ್ಚಿಲರು ಅಮೆರಿಕದ ಪತ್ರಿಕೋದ್ಯಮಿಗಳ ಸಭೆಯಲ್ಲಿ ಮಾತನಾಡುತ್ತಾ ಬ್ರಿಟಿಷರ ಹಡಗುಪಡೆಯ ವಿಷಯ ವಿವರಿಸಿ, ಅಮೆರಿಕವು ಈಗ ಹಡಗುಗಳನ್ನು ಕಟ್ಟಲು ಆರಂಭಿಸಿದೆ ೧೯೪೩ರಲ್ಲಿ ಅವು ತಯಾರಾಗುವವು ಅದುವರೆಗೆ ನಾವು ಕಾಯುವೆವು ಎಂದರು

ಕೌಲಾಲಂಪುರದ ಮೇಲೆ ಆಪಘಾತ

ಮಲಯದಲ್ಲಿ ಬ್ರಿಟಿಷ್ ಸೈನ್ಯ ಹಿಂದಾಯಿತು'

ಸಿಂಗಾಪುರದ ಮೇಲೆ ಧಾಳಿ

ಜಪಾನ್ ಸೈನ್ಯಗಳು ದಕ್ಷಿಣ ಮಲಯದ ಕಡೆಗೆ ಅತಿ ವೇಗದಿಂದ ಮುನ್ನುಗ್ಗುತ್ತಿವೆ ಸೆಲಾಂಗಾರ ಪ್ರಾಂತದ ರಾಜಧಾನಿಯಾದ ಕೌಲಾಲಂಪುರವೇ ಅವರ ಮುಂದಿನ ಗುರಿಯಿದ್ದಂತೆ ತೋರುತ್ತದೆ ಇಪೋಹ ಮತ್ತು ಸೆಲಂಗಾರಗಳಲ್ಲಿದ್ದ ಬ್ರಿಟಿಷ್ ಸೈನ್ಯಗಳು ಇನ್ನೂ ದಕ್ಷಿಣಕ್ಕೆ ಹಿಂದೆ ಸರಿದಿವೆ

ಪೆರಾಕಿನಲ್ಲಿಯೂ ಜಪಾನರು ಮುನ್ನುಗ್ಗುತ್ತಿರುವರು ಉತ್ತರ ಬೋರ್ನಿಯದ ಪೈಸ್ಟನ್ ಒಲ್ಲಿ ಜಪಾನರು ಬಂದಿಳಿದರು ಸಿಂಗಾಪುರದ ಮೇಲೆಯೂ ರಾತ್ರಿ ಧಾಳಿಯಾಯಿತು. ಹಾಂಕಾಂಗ್ ಯುದ್ಧದಲ್ಲಿ ಅನೇಕ ಬ್ರಿಟಿಷ ಹಡಗುಗಳು ತಮ್ಮ ವಶವಾಗಿದೆಯೆಂದು ಜಪಾನರ ಹೇಳಿಕೆ. ಸೆಲಾಂಗೋರ ಪ್ರಾಂತದ ರಾಜಧಾನಿಯಾದ ಕೌಲಾಲಂಪೂರದ ಕಡೆಗ ಹೊರಟಿರುವ ಜಪಾನರು ಸ್ವಲ್ಪ ದೂರ ಮುನ್ನುಗ್ಗಿರುವರೆಂದು ಭಾವಿಸಲಾಗಿದೆ. ಮನಿಲಾ ಬಂದರದಲ್ಲಿ ಅಮೆರಿಕನ್ ಹಡಗಗಳಿಗೆ ಅಪಾರ ಹಾನಿಯಾಗಿದೆ

ನೋಟೀಸು

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

R E P 663/1941

In S C. 202/39 of Sub Court

ಅರ್ಜಿದಾರೆ- ತೂಲಾಧಾರ ಕೇಶಶೇಟ್

ಎದ್ರಿರು- 1) ಅಚ್ಯುತ ಭಟ್ಟ, 2) ಮಹಾದೇವಭಟ್ಟ ಕಣಂಗೋಲು ಎಷ್ಣಭಟ್ಟ ಮಕ್ಕಳು ಪುತ್ತೂರು ತಾಲೂಕು ಪಡುವಂಗಾಡಿ ಗ್ರಾಮಸ್ಥರು"

ಸದ್ರಿ 1-2ನೇ ಎದ್ರಿಂಗೆ ಈ ನೋಟೀಸು ಮೂಲಕ ತಿಳಿಯಪಡಿಸುವದೇನಂದ್ರೆ—

ಸದ್ರಿ ಕೋರ್ಟು R. E P 340/40ನೇ ಲೆಕ್ಕಕ್ಕೆ ಕೋರ್ಟು ಡಿಪೋಜಿಟಿನಲ್ಲಿನ ಇವರ ಪೈಕಿ ನಿಮ್ಮ ⅓ ಅಂಶದ ಹಿಸೆ ಹಕ್ಕಿನ ರೂಪಾಯಿ 751-8-0 ನ್ನು ಅರ್ಜಿದಾರನು ಅಪ್ತ ಮಾಡ್ಸಿತ್ತಿಂದ ಆ ಕುರಿತು ನಿಮ್ಮ ಆಕ್ಷೇಪ ಇದ್ದಲ್ಲಿ ತಾ. 12-1-42ನೇ ಹಗಲು 10 ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ತಪ್ಪದೆ ಹಾಜ್ರಾಗಿ ಉದಹರಿಸತಕ್ಕದ್ದು. ತಪ್ಪಿದ್ರೆ ಏಕಪಕ್ಷವಾಗಿ ತೀರ್ಮಾನಿಸಲಾಗುವದೆಂತ ಕೋರ್ಟು ಹುಕುಂ ಪ್ರಕಾರ ಈ ನೋಟೀಸು ಕೊಟ್ಟದ್ದಾಗಿರುತ್ತದೆ.

Puttur S.K. B Achutha Baliga,
27-12-41 Pleader for Petitioner.

The Canara Banking Corporation Ltd.

(Incorporated in British India with limited liability)

Estd 1906.

OUR RATES OF INTEREST ON DEPOSITS

Current	1%	p. a.
Savings Bank	2½%	„
Short-term	1¾%	„
FIXED FOR 3 MONTHS	2%	„
6 „	2½%	„
9 „	2¾%	„
12 „	3%	„
24 „	3½%	„

Advances made at cheap rates of interest against approved securities and Banking business of every description transacted.

"ಈ ದಿವಸ ನಿಮ್ಮ ಹಲ್ಲುಗಳನ್ನು ಮ್ಯಾಕ್‌ಲೀನ್ ಮಾಡಿದ್ದೀರೊ?"

"ಅಹಾ! ಹಲ್ಲುಗಳನ್ನು ಆಲಸ್ಯಮಾಡಬಾರದೆಂದು ನಿಮಗೆ ತಿಳಿದಿದೆ"

ನಿಮ್ಮ ಹಲ್ಲುಗಳನ್ನು ಆಲಸ್ಯ ಮಾಡಬೇಡಿ ಮ್ಯಾಕ್‌ಲೀನ್ ಟೂತ್‌ಪೇಸ್ಟಿನ ಸಹಾಯದಿಂದ ಅವುಗಳನ್ನು ಬೆಳ್ಳಗೂ, ಥಳಥಳಕೆಯೂ, ಆರೋಗ್ಯಯುತವಾಗಿಯೂ ಇಟ್ಟುಕೊಳ್ಳಿ. ಮ್ಯಾಕ್‌ಲೀನಿನ ದೊಡ್ಡ ಟ್ಯೂಬು ಮಿತವ್ಯಯವಾಗಿರುವುದು ಮತ್ತು ಅದರ ಪರಿಮಳವು ನಿಮಗೆ ಆನಂದವನ್ನುಂಟು ಮಾಡುವುದು.

"ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

9-1-1942] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೯—೧—೧೯೪೨]

ಸಮರಭೂಮಿಯ ಸಂಚಾರ

ರಷ್ಯ, ಲಿಬಿಯ,' ಪೆಸಿಫಿಕ್ ಸಮುದ್ರ ಈ ಮೂರು ಕಡೆಗಳಲ್ಲಿ ಆಗುವ ಯುದ್ಧ ವಿಚಾರಗಳು ಇಂದು ನಮ್ಮನ್ನು ಸಮಸ್ಯೆಗಳಿಂದ ತುಂಬಿಸಿವೆ. ರಷ್ಯದಲ್ಲಿ ಜರ್ಮನರು ಏಕೆ ಹಿಂದೆ ಸರಿದರು? ಲಿಬಿಯದಲ್ಲಿ ಬ್ರಿಟಿಷರು ಮುಂದೇನು ಮಾಡಲಿರುವರು? ಪೆಸಿಫಿಕ್ ಸಮುದ್ರದ ದ್ವೀಪಗಳು ಒಂದೊಂದಾಗಿ ಜಪಾನರ ಸ್ವಾಧೀನವಾದರೆ ಮುಂದಿನ ಗತಿಯೇನು? ರೂಸ್‌ವೆಲ್ಟರು ನಿದ್ರಿಸುತ್ತಿದ್ದಾರೆಯೆ? ಇವೆಲ್ಲಾ ಹಲವು ಪ್ರಶ್ನೆಗಳು ಸಹಜವಾಗಿ ವರ್ತಮಾನ ಪತ್ರಿಕೆಗಳನ್ನೋದುವ ಪ್ರತಿಯೊಬ್ಬನಿಗೂ ಹುಟ್ಟುತ್ತವೆ

ರಷ್ಯದಲ್ಲಿ ಕಳೆದ ಎರಡು ಮೂರು ವಾರಗಳಿಂದ ರಷ್ಯನರು ಜಯಶಾಲಿಗಳಾಗುತ್ತಾ ಬಂದಿದ್ದಾರೆ ಜರ್ಮನರನ್ನು ಎಷ್ಟೋ ಹಿಂದೆ ಸರಿಸಿರುವರು ಮೋಸ್ಕೋ ಲೆನಿನ್‌ಗ್ರಾಡ್‌ಗಳನ್ನು ಜರ್ಮನರು ಛಳಿಗಾಲದೊಳಗೆ ಕೈವಶಪಡಿಸಿಕೊಳ್ಳಬೇಕೆಂದು ಎಷ್ಟು ವೀರಾವೇಶದಿಂದ ಹೋರಾಡುತ್ತಾ ಬಂದರೂ ಅವರನ್ನು ಅಪ್ರತಿಮ ಸಾಹಸದಿಂದ ಎದುರಾಡಿ ಹೀಗೆ ಹಿಂದಕ್ಕಟ್ಟಿದ ರಷ್ಯನರ ಪರಾಕ್ರಮವನ್ನು ಕಂಡು ಜಗತ್ತೇ ಬೆರಗಾಗಿದೆ, ಕೊಂಡಾಡಿದೆ ಜರ್ಮನರಾದರೂ ಛಳಿಗಾಲ ಸನ್ನಿಹಿತವಾಗಲು ಕಾದಾಡಲಾರದೆ ಯುದ್ಧವನ್ನು ನಿಲ್ಲಿಸಿದರು. ಇದೇ ಸಂದರ್ಭವೆಂದು ಮನಗಂಡು ರಷ್ಯನರು ಇಮ್ಮಡಿ ಸಾಹಸದಿಂದ ಹೋರಾಟ ನಡೆಸಿ ಶತ್ರುಗಳನ್ನು ಈಗ ಹಿಂದೂಡುತ್ತ ಬಂದಿದ್ದಾರೆ ಛಳಿಗಾಲ ಮುಗಿದ ಮೇಲೆ ಜರ್ಮನರು ಏನು ಮಾಡುವರೆಂದು ತಿಳಿಯದು ಈಗಲೇ ರಷ್ಯನರು ಛಳಿಗಾಲದೊಳಗೆ ಶತ್ರುಗಳನ್ನು ಪರಾಜಯಗೊಳಿಸಬೇಕೆಂದು ಹಂಬಲದಿಂದ ಪೂರ್ವ ಸೈಬೀರಿಯದಲ್ಲಿದ್ದ ತಮ್ಮ ಸೈನ್ಯವನ್ನೂ ತರಿಸಿ ಕಾದಾಡುತ್ತಿರುವರು. ನೆಲದ ಮೇಲಿನ ಯುದ್ಧದಲ್ಲಿ ಇದೇ ಪ್ರಥಮ ಸಲವಾಗಿ ರಷ್ಯನರ ಕೈಯಲ್ಲಿ ಸೋತಿದ್ದಾರೆ, ಕಳೆದ ಯುದ್ಧದಲ್ಲಾದರೂ ಒಮ್ಮೆ ಜರ್ಮನರು ಸೋತುಹೋಗಲು ಮತ್ತೆ ಅವರಿಂದ ಕಾದಾಡುವುದಾಗಲಿಲ್ಲ ಆದಾಗಿ ಹಿಟ್ಲರನು ಈ ಅಪಜಯಕ್ಕೆ ವಿಶೇಷ ಗಮನಕೊಡುತ್ತಾನೆ ತಾನೇ ಸೇನಾಪತಿತ್ವವನ್ನು ವಹಿಸಿಕೊಂಡು ಹಿಟ್ಲರನು ರಷ್ಯನ್ ರಣಭೂಮಿಗೆ ಸಾಗಿರುವನೆಂದು ಈಗ ಸುದ್ದಿ ಬಂದಿದೆ ಹಿಮ್ಮೆಟ್ಟುತ್ತಿರುವ ತನ್ನ ಸೈನಿಕರನ್ನು ಹುರಿದುಂಬಿಸಿ ಮುನ್ನುಗ್ಗಿಸಲು ಆತನು ಹೀಗೆ ಅತ್ತ ಸಾಗಿರುವನು

ಲಿಬಿಯದಲ್ಲಿಯೂ ಜರ್ಮನರಿಗೆ ಅಪಜಯವೇ ಉಂಟಾಗಿದೆ, ರೊಮೆಲನು ಲಿಬಿಯದಲ್ಲಿ ಹಿಂದೆ ಹಿಂದೆ ಸರಿದಿರುವನು ಅವನನ್ನು ಹಿಂಬಾಲಿಸಿ ಹಿಂದಟ್ಟುತ್ತಾ ಬಂದ ಬ್ರಿಟಿಷರು ಬೆಂಗಾಸಿಯನ್ನೂ ಕೈವಶಪಡಿಸಿಕೊಂಡರು ಆದರೆ ಲಿಬಿಯದಂತಹ ಮರುಭೂಮಿಯಲ್ಲಿ ಬ್ರಿಟಿಷರು ಗೆದ್ದರೂ ಸೋತರೂ ಅಷ್ಟು ದೊಡ್ಡ ಮಹತ್ವದ ಸಂಗತಿಯಾಗುವುದಿಲ್ಲ ಒಟ್ಟು ಆಫ್ರಿಕದಲ್ಲಿ ಜರ್ಮನರ ಕೈವಾಟ ನಡೆಯದಂತೆ ಬ್ರಿಟಿಷರಿಗೆ ಅಲ್ಲಿ ಜಯವು ದೊರಕಿದರೆ ಮಾತ್ರ ಅದೊಂದು ವಿಶೇಷವೆನಬಹುದು

ಪ್ಯಾಸಿಫಿಕಿನಲ್ಲಿ ಜಪಾನರು ಸೊಕ್ಕಿನಿಂದ ಮುಂಬರುತ್ತಿದ್ದಾರೆ ಹಾಂಕಾಂಗ ಪತನವಾದ ಮೇಲೆ ಈಗ ಫಿಲಿಪಯಿನೂ ಕೈಬಿಟ್ಟಿತು! ಅಮೆರಿಕವು ಫಿಲಿಪಯಿನ್ ದೇಶದವರಿಗೆ ಅವರ ಸ್ವಾತಂತ್ರ್ಯವನ್ನು ಮರಳಿ ಕೊಡಿಸುವ ಆಶ್ವಾಸನ ಕೊಟ್ಟರೂ ಅಲ್ಲಿಂದ ವಿಶೇಷ ಸಹಾಯ ದೊರಕಲಿಲ್ಲ. ಪೆಸಿಫಿಕಿನಲ್ಲಿ ಅಮೆರಿಕದ ದೊಡ್ಡ ದ್ವೀಪಗಳಲ್ಲಿ ಫಿಲಿಪಯಿನ್ ಪ್ರಖ್ಯಾತವಾದುದು. ಇದು ಶತ ನವಾದುದರಿಂದ ಅಮೆರಿಕದ ಭದ್ರತೆಗೇ ಆತಂಕವಾಯಿತು ಜಪಾನು ಫಿಲಿಪಯಿನ್ ಆಕ್ರಮಿಸಿಕೊಂಡದ್ದರಿಂದ ಸಿಂಗಾಪುರದ ಮೇಲೆ ಗಂಡಾಂತರ ಹೆಚ್ಚಿದಂತೆಯೇ ಆಗಿದೆ ಫಿಲಿಪಯಿನ್ ಆಕ್ರಮಿಸಿಕೊಂಡ ಮೇಲೆ ಜಪಾನರು ಜಾವಾ, ಸುಮಾತ್ರಾ, ಬೋರ್ನಿಯೋಗಳನ್ನು ಹಿಡಿಯಲು ಹೋರಾಡಬಹುದು ಅವುಗಳೂ ಸ್ವಾಧೀನವಾದ ಮೇಲೆ ನೆಲ ಜಲ ಆಕಾಶಗಳಿಂದೆಲ್ಲಾ ಸಿಂಗಾಪುರದ ಮೇಲೆ ಧಾಳಿ ಮಾಡಲು ಸಾಧ್ಯವಾಗುತ್ತದೆ. ಆದರೆ ಪ್ರಾರಂಭದಲ್ಲಿ ಜಪಾನಿಗೆ ಅಲ್ಪಸ್ವಲ್ಪ ಜಯ ದೊರಕಿದ್ದರಿಂದ ಮುಂದೆ ಎಲ್ಲವೂ ಅವರಿಗೆ ಅನುಕೂಲವಾಗುವುದೆಂದು ಹೇಳಲಾಗುವುದಿಲ್ಲ ಜಪಾನರ ಆಕ್ರಮಣವನ್ನು ಎದುರಿಸಲು ಬ್ರಿಟನು ಅಮೆರಿಕಗಳು ಬಹಳ ಜೋರಿನಿಂದ ಮುಂದೆ ಯತ್ನಿಸಬೇಕಾಗಿದೆ ವಾಷಿಂಗ್‌ಟನ್ನಿನಲ್ಲಿ ಈಗ ರೂಸ್‌ವೆಲ್ಟರೂ ಚರ್ಚಿಲ್ಲರೂ ಬಹಳ ಕಾಲದಿಂದ ಮಾತುಕತೆ ಮಾಡುತ್ತಿರುವುದರಲ್ಲಿ ಈ ವಿಷಯವು ಅಡಕವಾಗಿದೆಯೆಂದೂ ಊಹಿಸುವುದು ಅಸಂಭವವಲ್ಲ. ಮುಂದೆ ಯಾವ ಯಾವ ಯೋಜನೆಗಳನ್ನು ಕೈಕೊಳ್ಳುವರೋ ಎಲ್ಲೆಲ್ಲಿ ಹೊಡೆದಾಡುವರೋ ನೋಡತಕ್ಕದ್ದಿದೆ ಅಂತೂ ಸಮರ ಯಜ್ಞದ ಜ್ವಾಲೆ ಇನ್ನು ಮತ್ತಷ್ಟು ಉಗ್ರವಾಗುವ ಸಂಭವವೇ ತೋರುತ್ತದೆ.

೧೯೪೧ರ ಯುದ್ಧದ ವರದಿ

ಶತ್ರುಗಳ ಹಾನಿಯ ವಿವರ

ಮಧ್ಯಪೂರ್ವದಲ್ಲಿ ೧೯೪೧ನೇ ವರ್ಷದಲ್ಲಿ ಇಟಲಿಯನ್ನರ ದಂಡುಗಳನ್ನು ಅಂದರೆ ಒಟ್ಟು ೬॥ ಲಕ್ಷ ಸೈನಿಕರನ್ನು ನಾಶಮಾಡಿತು ೪೬೦೦೦ ಜರ್ಮನ್ ಸೈನಿಕರು ಹತರಾದರೆಂದೂ ಹೇಳಲಾಗಿದೆ ಹೀಗೆ ಇಟಲಿಯ ಸೈನಿಕರು ನಾಶವಾದುದರಿಂದ ಇಟಲಿಯ ಪೂರ್ವ ಆಫ್ರಿಕದ ಸಾಮ್ರಾಜ್ಯವು ನಾಶವಾಯಿತು. ಸೈನ್ಯ ಸಿದ್ಧತೆಯ ಸಂಬಂಧ ಆದ ಪ್ರಗತಿಯನ್ನು ಕುರಿತು ಅದರಲ್ಲಿ ವಿವರಿಸಲಾಗಿದೆ. ಬ್ರಿಟಿಷ ದ್ವೀಪಗಳಲ್ಲಿ ಹಾಗೂ ಸಾಮ್ರಾಜ್ಯದಲ್ಲಿ ಯುದ್ಧ ಸಾಮಗ್ರಿ ಸಿದ್ಧತೆಯು ಯೋಗ್ಯ ರೀತಿಯಲ್ಲಿ ಹಾಗೂ ಹೆಚ್ಚು ಪ್ರಮಾಣದಲ್ಲಿ ನಡೆದಿತ್ತೆಂಬುದರಲ್ಲಿ ಅನುಮಾನವಿಲ್ಲ. ಬ್ರಿಟಿಷರಿಗೆ ಮಿತ್ರರಾಷ್ಟ್ರಗಳು ಹೆಚ್ಚು ಪ್ರಮಾಣದಲ್ಲಿ ಸಾಮಗ್ರಿ ಸಿದ್ಧತೆಯನ್ನು ಪೂರೈಸಿ ಕೊಡತಕ್ಕದೆಂದು ಮಹತ್ವದ ಗಂಡಾಂತರದ ಕಾಲದಲ್ಲಿ ಸಂಯುಕ್ತವಾದ ಏಕ ರೀತಿ ಧೋರಣೆಯಿಂದ ಸಾಮಗ್ರಿ ಸಿದ್ಧತೆಮಾಡಿ ತಕ್ಕ ಪ್ರಮಾಣದಲ್ಲಿ ಹಂಚಿಕೊಡುವುದು ಮುಖ್ಯವೆಂದೂ ಹೇಳಲಾಗಿದೆ

೧೯೪೧ರಲ್ಲಿ ಆರ್ ಎ ಎಫ್ ವೈಮಾನಿಕರ್ ತಮ್ಮ ತಮ್ಮ ವಿಮಾನ ವಿರೋಧಕ ತೋಪುಗಳ ಮೂಲಕ ಹಾಗೂ ಇನ್ನಿತರ ಬಗೆಬಗೆಯ ವಿಮಾನ ಮತ್ತು ಆಯುಧಗಳ ಮೂಲಕ ಶತ್ರುಗಳ [illegible] ವಿಮಾನಗಳನ್ನು ಈ ಅವಧಿಯಲ್ಲಿ ನಾಶಮಾಡಿದ್ದರು [illegible] ವೈಮಾನಿಕರನ್ನು ಸುರಕ್ಷಿತವಾಗಿ ಉಳಿಸಲಾಗಿದೆ ಪ್ರಾನ್ಸದಲ್ಲಿ ಉಳಿದ ಬ್ರಿಟಿಷ ವಿಮಾನಗಳ ವೈಮಾನಿಕರಲ್ಲಿ ಹೆಚ್ಚು ಜನರು ಸೆರೆಮನೆಯಲ್ಲಿರುವರೆಂದೂ ಹೇಳಲಾಗಿದೆ

ಒಟ್ಟು ೧೯೪೧ ವರ್ಷದ ಯುದ್ಧದಲ್ಲಿ [illegible] ಶತ್ರುವಿಮಾನಗಳನ್ನು ಬ್ರಿಟಿಷ ವೈಮಾನಿಕರು ತಮ್ಮ ವಿಮಾನ ವಿರೋಧಕ ತೋಪುಗಳಿಂದ ನಾಶಗೊಳಿಸಿದ್ದಾರೆ, ೧೯೪೧ನೇ ಇಸವಿಯಲ್ಲಿ ಬ್ರಿಟಿಷ ವೈಮಾನಿಕ ಪಡೆಯವರು ಹಗಲಲ್ಲಿ ವೈಮಾನಿಕ ಧಾಳಿ ನಡಿಸಿದ್ದು ರಾತ್ರಿಯಲ್ಲಿ ವ್ಯವಸ್ಥಿತವಾಗಿ ಸಂರಕ್ಷಣೆಯ ಕೆಲಸವನ್ನು ನಡಿಸಿದ್ದಾರೆ.

ಮೆನಿಲ್ಲಾ ಪತನ

ಫಿಲಿಪಯಿನ್ ದ್ವೀಪಗಳ ರಾಜಧಾನಿ ಮೆನಿಲಾದ ಪತನವಾಯಿತೆಂದು ಅಮೆರಿಕದ ಪ್ರಕಟಣೆಯಲ್ಲಿ ಹೇಳಲಾಗಿದೆ ಇದಕ್ಕೆ ಮೊದಲೇ ತಮ್ಮ ಸೈನ್ಯವು ಮೆನಿಲಾವನ್ನು ಪ್ರವೇಶಿಸಿತೆಂದು ಜಪಾನ್ ರೇಡಿಯೋದಲ್ಲಿ ಹೇಳಲ್ಪಟ್ಟಿದೆ ಜಪಾನರು ಮನಿಲಾವನ್ನು ನುಗ್ಗಲು ಬಹು ಸಾಹಸ ಮಾಡಿದರು ಮೆನಿಲವು ಕೈಬಿಟ್ಟರೂ ಉಳಿದ ಕಡೆಯಿಂದ ಯುದ್ಧಸಾಗುವುದಂತೆ ಫಿಲಿಫಯಿನ್ ಮತ್ತು ಅಮೆರಿಕದ ಸೈನ್ಯಗಳು ಮೆನಿಲವನ್ನು ರಕ್ಷಿಸಲು ಸಾಹಸದಿಂದ ಕಾದಾಡಿ ಸೋತವು

ಹಿಟ್ಲರನು ಪುನಃ ರಷ್ಯಕ್ಕೆ ಹೋದನು

ರಷ್ಯನರು ಕಾಲುಗಾಲಿಗೂ ಎಲ್ಲೆಲ್ಲಿಯೂ ಜಯಹೊಂದಿದ್ದನ್ನು ನೋಡಿ ಹಿಟ್ಲರನು ಸ್ವತಃ ರಷ್ಯನ್ ರಣಭೂಮಿಗೆ ಹೋದನೆಂದು, ಸೇನಾಪತಿತ್ವವನ್ನು ತಾನೆ ವಹಿಸಿರುವನೆಂದೂ ಹೇಳಲಾಗಿದೆ ರಷ್ಯನರು ಛಳಿಗಾಲದ ಉಪಯೋಗ ಮಾಡಿಕೊಂಡು ನಿರಂತರ ಕಾದಾಡಿ ಹಿಂದೆ ಹಿಂದೆ ಜರ್ಮನರನ್ನು ಹಿಂದಟ್ಟುತ್ತಿದ್ದಾರೆ



ಹೆಚ್ ಎಮ್ ಎಸ್ ಪರ್ತ್ ಎಂಬ ಆಸ್ಟ್ರೇಲಿಯನ್ ಹಡಗ
ಮೆಡಿಟರೇನಿಯನ್ನಿನಲ್ಲಿರುವ ಎಡ್ಮಿರಲ್ ಸರ್ ಏಂಡ್ರ್ಯೂ ಕನ್ನಿಂಗಾಮರ ನೌಕಾದಲದಲ್ಲಿರುವ ಹಡಗಗಳಲ್ಲೊಂದು. ಮಟಪಾನ್ ಯುದ್ಧದಲ್ಲಿ ಇದು ಭಾಗವಹಿಸಿದೆ ಅದರಲ್ಲಿ ಇಟಲಿಯನರು ಮೂರು ಹಡಗುಗಳನ್ನು ಹಲವು ಡಿಸ್ಟ್ರಾಯರುಗಳನ್ನೂ ಕಳಕೊಂಡಿದ್ದರು.

ರೈಲು ಬಂಡಿಗಳ ಸಮಯ

ಇದೇ ಜುಲೈ ತಾ 1ರಿಂದ ವ್ಯತ್ಯಾಸವಾದ ರೈಲು ಬಂಡಿಗಳ ಸಮಯಗಳು ಈ ಕೆಳಗಿನಂತಿವೆ__

ಗಾಡಿಗಳು	ಹೊರಡುವ ಗಂಟೆ	ತಲ್ಪುವ ಗಂಟೆ
ಗೂಡ್ಸು ಬಂಡಿ	8.15 ರಾತ್ರಿ	9.25 ರಾತ್ರಿ
ಸೀಲೋನ್ ಬಂದರವರೆಗೆ	7.32 ಬೆಳಿಗ್ಗೆ	1.0 ಅಪರಾಹ್ನ
ಮಲಬಾರು ಎಕ್ಸ್‌ಪ್ರೆಸ್ (ಮೈಲ್)	9.3 ಬೆಳಿಗ್ಗೆ	5.15 ಸಾಯಂ,
ಜಾಲಾರ್ ಪೇಟೆ ಪೆಸೆಂಜರ್	12.0 ಮಧ್ಯಾಹ್ನ	2.55 ಸಾಯಂ.
ಕಾಸರಗೋಡು ವರೆಗೆ	3.25 ಸಾಯಂ.	6.50 ಸಾಯಂ.
ಕಣ್ಣನ್ನೂರು ವರೆಗೆ	5.52 ಸಾಯಂ.	9.40 ಪೂರ್ವಾಹ್ನ

ಮಂಗಳೂರು ಪೇಟೆಧಾರಣೆ

(ದ.ಕ ಜಿಲ್ಲಾ ಟ್ರೇಡ ಬುಲೆಟಿನ್ನಿಂದ ಬಂದದ್ದು)

	ರಿಂದ	ವರೆಗೆ
ಛತ್ರ ಮುಡಿಗೆ	2-14-0	3- 0-0
ಅಕ್ಕಿ ಗುಡ್ಡ ಮು.	6- 0-0	6-10-0
,, ದುಯಂ ,,	6- 2-0	6- 4-0
,, ಆನ್ನಲ್ ಸುಗ್ಗಿ	6- 4-0	6- 8-0
,, ದುಯಂ ,,	6- 4-0	—
ತೆಂಗಿನಕಾಯಿ 1000ಕ್ಕೆ	37-8-0	42-8-0
,, ಸಿಪ್ಪೆ ಯಿದ್ದದ್ದು ,,	40-0-0	45-0-0
ಕೊಬ್ಬರಿ ಖಂಡಿಗೆ	60-4-0	—
ದಿಲ್‌ಪಸಂದ್ ,,	72-8-0	—
ತೆಂಗಿನ ಎಣ್ಣೆ ಮಣಕ್ಕೆ	5-2-0	—
ಸಿಪ್ಪೆಯ ಅಡಕೆ, ಸಾವಿರಕ್ಕೆ	3-0-0	3-8-0
ಸುಲಿದ ,, ಖಂ (ಹಳತು)	150-0-0	200-0-0
(ಹೊಸತು)	140-0-0	170-0-0
ಕಬ್ಬಿನ ಬೆಲ್ಲ ಖಂಡಿಗೆ	33-8-0	37-8-0
ಬಿಳಿ ಮೆಣಸು ಹಂ.	17-8-0	18-0-0
ಹೊಗೆಸೊಪ್ಪು ಮಣಕ್ಕೆ	5-0-0	7-0-0
ಹುಡಿಯ ,, ಮ.	6-0-0	7-8-0
ಮೈಸೂರು ಪಲಕ್ಕಿ, ಮ.	58-0-0	63-0-0
ಕೊಡಗಿನ ,, ಮ.	53-0-0	57-0-0
ಕುಮ್ಮಿಯಮೆಣಸು ಖಂ.	90-0-0	95-0-0
ಕಾಸರಗೋಡು ,, ಮ.	—	—
ಊರಿನ ,, ಮ.	5-0-0	

ಸ್ವದೇಶಾಭಿಮಾನಿ

ತಾರೀಕು 9—1—1942

ಬಾರ್ಡೋಲಿ ನಿರ್ಣಯ

“ಪರಕೀಯರ ಆಕ್ರಮಣಕ್ಕೆ ಗುರಿಯಾಗಿ, ತಮ್ಮ ಸ್ವಾತಂತ್ರ್ಯದ ಸಲುವಾಗಿ ಹೋರಾಡುತ್ತಿರುವ ಜನಾಂಗಗಳ ವಿಷಯ ಕಾಂಗ್ರೆಸಿಗೆ ಸಹಾನುಭೂತಿಯಿರುವುದು ಸ್ವಾಭಾವಿಕ. ಆದರೂ, ಸ್ವತಂತ್ರವಾಗಿದ್ದು, ಸ್ವಯಂ ನಿರ್ಣಯಾಧಿಕಾರವುಳ್ಳ ಹಿಂದುಸ್ಥಾನ ಮಾತ್ರ ರಾಷ್ಟ್ರೀಯತೆಯ ಅಡಿಗಟ್ಟಿನ ಮೇಲೆ ದೇಶದ ಸಂರಕ್ಷಣೆಯ ಕಾರ್ಯವನ್ನು ನಿರ್ವಹಿಸಿ, ಯುದ್ಧದ ಬಿರುಗಾಳಿಯಿಂದ ಸಂಭವಿಸುವ ಮುಂದಿನ ಮಹತ್ವದ ಕಾರಣಗಳನ್ನು ಕೈಕೊಳ್ಳಬಲ್ಲುದು. ಪ್ರಕೃತ ಇಡೀ ಹಿಂದುಸ್ಥಾನದ ಹಿನ್ನಲೆಯನ್ನು ಅವಲೋಕಿಸಿದಲ್ಲಿ ಬ್ರಿಟಿಷ್ ಪ್ರಭುತ್ವದ ವಿಷಯ ಎಲ್ಲರಿಗೂ ಅವಿಶ್ವಾಸವಿದೆ. ಎಂತಹ ದೂರದರ್ಶಿತವನ್ನು ತೋರಿಸುವ ಬರವಸೆಯ ಮಾತುಗಳನ್ನು ಈಗ ಹೇಳಿದರೂ ಯಾರೂ ನಂಬುವ ಹಾಗಿಲ್ಲ. ಪರತಂತ್ರ ರಾಷ್ಟ್ರವಾಗಿ ಉಳಿದುಕೊಂಡು ಹಿಂದೂದೇಶವು ಮನಃಪೂರ್ವಕವಾಗಿ ಬ್ರಿಟನಿಗೆ ಸಹಾಯಮಾಡುವಂತಿಲ್ಲ, ಏಕೆಂದರೆ ನೈ ಮರೆತಿರುವ ಸಾಮ್ರಾಜ್ಯಶಾಹಿಯು ಫ್ಯಾಸಿಸ್ಟ್ ಅಥವಾ ಏಕತಂತ್ರಾಧಿಕಾರಕ್ಕಿಂತ ಬಿನ್ನವಾಗಿಲ್ಲ. ಆದುದರಿಂದ ಅಂತಹ ಸರಕಾರದೊಡನೆ ಸಹಕರಿಸಲು ಹಿಂದೂದೇಶವು ಒಪ್ಪಬಾರದು. ಆದಕಾರಣ ಮುಂಬಯಿಯಲ್ಲಿ ಕಾಂಗ್ರೆಸ್ ಕಮಿಟಿಯು ಮಾಡಿದ ನಿರ್ಣಯವೇ ಇಂದೂ ಊರ್ಜಿತದಲ್ಲಿವೆ. ಅದರಲ್ಲಿ ಅಡಕವಾದ ಅಭಿಪ್ರಾಯದಂತೆಯೇ ಈಗಲೂ ಕಾಂಗ್ರೆಸ್ ಧೋರಣೆಯಿರುವುದಾಗಿ ಈ ಕಮಿಟಿಯು ಸ್ಪಷ್ಟಪಡಿಸುತ್ತವೆ.”

ಹೀಗೆಂದು ಕಳೆದವಾರ ಬಾರ್ಡೋಲಿಯಲ್ಲಿ ಕೂಡಿ ದೀರ್ಘ ವಿಚಾರ ಮಾಡಿ, ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ತನ್ನ ನಿರ್ಣಯದಲ್ಲಿ ತಿಳಿಯಪಡಿಸಿದೆ. ದೇಶಕ್ಕೆ 'ಸಂಪೂರ್ಣ ಸ್ವಾತಂತ್ರ್ಯ' ದೊರಕಿದಲ್ಲಿ ಇಂದಿನ ಈ ಯುದ್ಧಪ್ರಯತ್ನಕ್ಕೆ ಸಹಕರಿಸಬಹುದೆಂದು ಈ ನಿರ್ಣಯದ ಅರ್ಥವಾಗುವುದು. ಈ ಸಂದರ್ಭ, ಗಾಂಧೀಜಿ ತನ್ನ ಅಹಿಂಸಾ ವ್ರತದಂತೆ, ಹಿಂದೂದೇಶಕ್ಕೆ ಸ್ವಾತಂತ್ರ್ಯ ದೊರೆತರೂ, ಕಾಂಗ್ರೆಸು ಹಿಂಸಾರೂಪದಲ್ಲಿ ಯುದ್ಧಕ್ಕೆ ಸಹಾಯ ಕೊಡುವುದು ನ್ಯಾಯವಲ್ಲವೆಂದು ಅಭಿಪ್ರಾಯವುಳ್ಳವರಾದುದರಿಂದ ಕಾಂಗ್ರೆಸು ಯುದ್ಧಕ್ಕೆ ಹಿಂಸಾರೂಪದಲ್ಲಿ ಸಹಕರಿಸಲಿಚ್ಛಿಸುವಾಗ ಅದರ ಮುಂದಾಳುತನ ವಹಿಸಲು ನಿರ್ವಾಹವಿಲ್ಲವಾಗಿ ಅವರನ್ನು ವರ್ಕಿಂಗ್ ಕಮಿಟಿಯು ಆ ಹೊಣೆಗಾರಿಕೆಯಿಂದ ಮುಕ್ತಮಾಡಿತು. ಅಹಿಂಸಾ ವ್ರತದ ಸಲುವಾಗಿ ಗಾಂಧೀಜಿ ಕಾಂಗ್ರೆಸಿನ ಮುಂದಾಳುತನದಿಂದ ಹೀಗೆ ಈಗ ದೂರ ನಿಂತರೂ ಅವರು ಕಾಂಗ್ರೆಸಿಗೆ ಆಗಾಗ ಮುಂದೆ ಸಲಹೆ ಕೊಡುತ್ತಾ ಇರುವರು. ಈ ಸಂದರ್ಭದಲ್ಲಿ ಮುಂದಿನ ವಿಚಾರವು ಬ್ರಿಟಿಷ ಪ್ರಭುತ್ವವನ್ನೇ ಅವಲಂಬಿಸಿದೆ. ಅದು ಅಧಿಕಾರವನ್ನು ಬಿಟ್ಟುಕೊಡಲು ಮನಸ್ಸುಳ್ಳದ್ದಾಗಿದೆಯೋ ಎಂಬುದು ನೋಡತಕ್ಕದ್ದಿದೆ. ಜಗತ್ತಿನ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವಗಳ ರಕ್ಷಣೆಗಾಗಿ ತಾನು ಕಾದಾಡುತ್ತಿರುವೆನೆಂದು ಹೇಳುತ್ತಿರುವ ಬ್ರಿಟಿಷ್ ಪ್ರಭುತ್ವವು, ಭಾರತೀಯರನ್ನೂ ಅವರಿಗೆ ನ್ಯಾಯವಾಗಿ ಸಲಬೇಕಾದ ಸ್ವಾತಂತ್ರ್ಯದಾನದಿಂದ ತೃಪ್ತಿಪಡಿಸಿ ಇಂದಿನ ಯುದ್ಧ ಕಾರ್ಯದಲ್ಲಿ ತನ್ನ ಬೆಂಬಲಕ್ಕೆ ತೆಗೆದುಕೊಳ್ಳಲು ಅಸ್ಪದವಾಗುವಂತೆ, ಕಾಂಗ್ರೆಸು ಹೀಗೆ ಈ ನಿರ್ಣಯದಿಂದ ಒಂದು ಸಂಧಾನದ ರಾಜಮಾರ್ಗವನ್ನು ತೆರೆದಿಟ್ಟಿದೆ.

ವರ್ಕಿಂಗ್ ಕಮಿಟಿಯ ಸದಸ್ಯರು, ಗಾಂಧೀಜಿಯವರೇ ವಿವರಿಸಿದಂತೆ ಅವಸರವಸರವಾಗಿ ಈ ನಿರ್ಣಯವನ್ನು ಮಾಡಿಲ್ಲ, ಪರಿಸ್ಥಿತಿಗಳೆಲ್ಲವನ್ನೂ ಕೂಲಂಕಷವಾಗಿ ಅವರು ಪರ್ಯಾಲೋಚಿಸಿದರು, ರಾಷ್ಟ್ರದ ಅಂತರ್ರಾಷ್ಟ್ರದ ರಾಜಕೀಯಗಳನ್ನು ದೀರ್ಘ ವಿಚಾರಮಾಡಿ, ಯುದ್ಧವು ಭಾರತದ ಬಾಗಿಲಿಗೆ ಬಂದಿರುವುದೆಂಬುದನ್ನೂ ಸಂಪೂರ್ಣ ಗಮನಕ್ಕೆ ತಂದುಕೊಂಡು ಗಂಭೀರ ಆಲೋಚನೆ ಮಾಡಿದರು. ಹಿಂದುಸ್ಥಾನವು ಸಂಪೂರ್ಣ ಸ್ವತಂತ್ರವಾಗುವುದು ಇಂದಿನೀ ಗಂಡಾಂತರ ಕಾಲದಲ್ಲಿ ಹಿಂದುಸ್ಥಾನದ ಹಿತದ ಸಲುವಾಗಿ ಮಾತ್ರವಲ್ಲ, ಇಡೀ ಜಗತ್ತಿನ ಹಿತದ ಸಲುವಾಗಿಯೂ ಅತ್ಯಂತ ಅವಶ್ಯವಾದುದೆಂಬ ನಿರ್ಣಯಕ್ಕೆ ಬಂದರು. ಕಾಂಗ್ರೆಸು ಹಿಂದೆಯೇ ನಿರ್ಣಯಮಾಡಿದಂತೆ, ನಾಜಿ ಮತ್ತು ಫ್ಯಾಸಿಸ್ಟ್ ಆಕ್ರಮಣಗಳನ್ನು ಖಂಡಿಸುವುದೆಂದೂ, ಈ ಯುದ್ಧದ ಉದ್ದೇಶಗಳನ್ನು ಬ್ರಿಟಿಷ್ ಸರಕಾರವು ಸ್ಪಷ್ಟಪಡಿಸಿ ಅದನ್ನು ಸರಿಯಾಗಿ ಜ್ಯಾರಿಗೆ ತಂದಲ್ಲಿ ಹಿಂದುಸ್ಥಾನವು ಯುದ್ಧದಲ್ಲಿ ಸಹಕರಿಸುವುದೆಂದೂ ತಿಳಿಸಿದರು. ಬ್ರಿಟಿಷ್ ಪ್ರಭುತ್ವವು ಸಾಮ್ರಾಜ್ಯಶಾಹಿ ಧೋರಣವನ್ನು ಬಿಟ್ಟು ಭಾರತವನ್ನು ಸ್ವತಂತ್ರ ಮಾಡಬೇಕೆಂದು ಸಾರಿದರು. ಇದುವರೆಗೆ ಬ್ರಿಟಿಷ ಪ್ರಭುತ್ವವು ನಡೆಸಿದ ಏಕತಂತ್ರಾಧಿಕಾರವನ್ನು ಖಂಡಿಸಿದರು. ಕಾಂಗ್ರೆಸು ಸಂಧಾನದ ಸಲುವಾಗಿ ಎಲ್ಲಾ ಪ್ರಯತ್ನಗಳನ್ನು ಮಾಡಿದ್ದರೂ, ಬ್ರಿಟಿಷ್ ಸರಕಾರವೇ ತಿರಸ್ಕರಿಸಿ ಸತ್ಯಾಗ್ರಹದಂತಹ ಆಂದೋಲನವನ್ನು ಆಹ್ವಾನಿಸಿತೆಂದೂ ವಿವರಿಸಿರುವರು.

ಬಾರ್ಡೋಲಿಯ ನಿರ್ಣಯದಲ್ಲಿ ಈ ಸತ್ಯಾಗ್ರಹ ಚಳವಳದ ಪರ್ಯಾಲೋಚನೆಯೂ ನಡೆಯಿತು. ಗಾಂಧೀಜಿ ನಡೆಸಿದ ಸತ್ಯಾಗ್ರಹವು ಯಶಸ್ವಿಯಾಗಿತ್ತೆಂದೂ ಅದಕ್ಕೆ ಬೆಂಬಲ ಕೊಟ್ಟವರನ್ನು, ಅದರ ಮುಂದಾಳುವಾಗಿ ಕೆಲಸಮಾಡಿದ ಗಾಂಧೀಜಿಯವರನ್ನೂ ವರ್ಕಿಂಗ್ ಕಮಿಟಿಯು ಅಭಿನಂದಿಸಿತು. ಸತ್ಯಾಗ್ರಹಿಗಳನ್ನು ಬಿಡುಗಡೆ ಮಾಡಿದುದರ ವಿಷಯದಲ್ಲಿ ವರ್ಕಿಂಗ್ ಕಮಿಟಿ ಸಂತೋಷ ವ್ಯಕ್ತಪಡಿಸಲಿಲ್ಲ; ಏಕೆಂದರೆ ಇನ್ನೂ ಅನೇಕ ಮಂದಿ ಸ್ಥಾನಬದ್ಧರಾಗಿ ಸೆರೆಮನೆಯಲ್ಲಿಡಲ್ಪಟ್ಟ ಬಗ್ಗೆ ಅದು ತೀವ್ರ ಸಂತಾಪಗೊಂಡು ಸರಕಾರದ ನೀತಿಯನ್ನು ಖಂಡಿಸಿದೆ. ಬ್ರಿಟಿಷರ ಧೋರಣೆಯಲ್ಲಿ ಯಾವುದೇ ಬದಲಾವಣೆಯಾಗದ ವಿಷಯ ಕಾಂಗ್ರೆಸು ತನ್ನ ಅತ್ಯಂತ ವಿಷಾದವನ್ನು ವ್ಯಕ್ತಪಡಿಸಿದೆ.

ಮಲಯಾ ಬರ್ಮಾದೇಶ ಈಸ್ಟ್ ಇಂಡೀಸ್ ಮೊದಲಾದ ದೇಶಗಳಲ್ಲಿ ಧಾಳಿಗಾರರ ಆಕ್ರಮಣಕ್ಕೀಡಾದ ಜನರ ಬಗ್ಗೆ ಕಾಂಗ್ರೆಸು ತನ್ನ ಸಹಾನುಭೂತಿ ವ್ಯಕ್ತಮಾಡಿತು. ಗಾಂಧೀಜಿಯ ಪತ್ರದಂತೆ, ಮುಂಬಯಿ ನಿರ್ಣಯದ ಪ್ರಕಾರ ಅವರ ಮೇಲೆ ಹೊರಿಸಲಾದ ಮುಂದಾಳುತನದ ಭಾರವನ್ನು ಹಿಂತೆಗೆದುಕೊಳ್ಳಲಾಯಿತು. ಈ ಸಂದರ್ಭದಲ್ಲಿ ಪೂರ್ಣ ಸ್ವರಾಜ್ಯ ಸಿದ್ಧಿಗೆ, ಅವರ ಮುಂದಾಳುತನದಲ್ಲಿ ಸ್ವೀಕೃತವಾದ ಅಹಿಂಸಾ ತತ್ವವನ್ನು ಕಾಂಗ್ರೆಸು ಪಾಲಿಸುವುದಾಗಿಯೂ ಭರವಸೆ ಕೊಟ್ಟದ್ದಲ್ಲದೆ ಸವಿನಯ ಶಾಸನಭಂಗ ಚಳವಳಿದಲ್ಲಿ ಅವರಿಗೆ ಪೂರ್ಣ ಸಹಕಾರವನ್ನು ಕಾಂಗ್ರೆಸಿನವರು ಕೊಡುವುದಾಗಿಯೂ ಅಭಿವಚನವಿತ್ತಿದೆ.

ಹೀಗೆ ಕಾಂಗ್ರೆಸು ವರ್ಕಿಂಗ್ ಕಮಿಟಿಯು ಇಂದು ಸಂಧಾನದ ರಾಜಮಾರ್ಗವನ್ನು ತೆರೆದಿಟ್ಟಿದೆ. ಈ ಸಂದರ್ಭದಲ್ಲಿ ಗಾಂಧೀಜಿಯನ್ನು ಮತ್ತೊಮ್ಮೆ ದೂರಮಾಡಬೇಕಾದ ಸಂಕಟಮಯ ಕಾರ್ಯವನ್ನಾದರೂ ವರ್ಕಿಂಗ್ ಕಮಿಟಿಯು ಕೈಕೊಳ್ಳಬೇಕಾಯಿತೆಂದು ಕಾಂಗ್ರೆಸ್ ಹಾಗೂ ಗಾಂಧೀಜಿಯವರ ಸಂಬಂಧವನ್ನು ಬಲ್ಲವರೆಲ್ಲರೂ ತಿಳಿದುಕೊಳ್ಳಬಹುದು. ಪೂನಾ ನಿರ್ಣಯ ಮಾಡಿ ಅಪಮಾನಹೊಂದಿ ಸತ್ಯಾಗ್ರಹಕ್ಕೆ ಕೈಕೊಟ್ಟ ಕಾಂಗ್ರೆಸು ಇಂದೀ ತೆರದಲ್ಲಿ ಸಹಕಾರ ಹಸ್ತವನ್ನು ಪುನಃ ನೀಡಿದೆ, ಇದನ್ನೂ ತಿರಸ್ಕರಿಸಿ ಇನ್ನಷ್ಟು ವಿದ್ವೇಷ ಹೆಚ್ಚಿಸಿಕೊಳ್ಳುವ ರಾಜನೀತಿಯ ದಿವಾಳಿಕೋರತನವನ್ನು ಬ್ರಿಟಿಷ್ ರಾಜತಂತ್ರಜ್ಞರು ಮಾಡಲಾರರೆಂದು ನಾವು ನಂಬುತ್ತೇವೆ. ಕಾಂಗ್ರೆಸ್ಸಿನವರಾವರೂ 'ರಾಷ್ಟ್ರೀಯ ಸರಕಾರ'ದಿಂದ ತೃಪ್ತರಾಗಿ ದೇಶದ ಹಿತದ ದೃಷ್ಟಿಯಿಂದ ಯುದ್ಧಯತ್ನದಲ್ಲಿ ನೆರವಾಗುವ ಸಂದರ್ಭವು ಬಂದು ಬ್ರಿಟಿಷ್ ಭಾರತಗಳ ಸೌಹಾರ್ದ ದಿನವು ಬೇಗನೇ ಬರಲಿ ಎಂಬುದು ನಮ್ಮ ಹಾರೈಕೆಯಾಗಿದೆ.

ನೋಟಗಳು....

“ನನಗೆ ಬೇರೆ ದೇವರು ಬೇಡ; ಕನ್ನಡ ದೇವರಿದ್ದರೆ ಸಾಕು; ನನಗೆ ಜಗತ್ತೇ ಬೇಡ, ಕನ್ನಡವೊಂದಿದ್ದರೆ ಸಾಕು” ಹೀಗೆಂದು ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷ ಶ್ರೀ. ಎ. ಆರ್. ಕೃಷ್ಣ ಶಾಸ್ತ್ರಿಗಳ ಭಾಷಣದ “ಹಿಂದಿನ ಮನೋಧರ್ಮ”ವನ್ನು 'ವಿಶ್ವಕರ್ಣಾಟಕ'ವು ಸಾರಾಂಶೀಕರಿಸಿದೆ. “ಯಾವ ಅಭಿಮಾನವೇ ಆಗಲಿ ಮಿತಿಯ ಚೌಕಟ್ಟಿನಲ್ಲಿದ್ದರೆ ಶೋಭಿಸುತ್ತದೆ. ಆ ಮಿತಿಮೀರಿದರೆ ಬೇಸರಿಕೆಯನ್ನುಂಟು ಮಾಡುತ್ತದೆ. ಶ್ರೀ. ಎ ಆರ್ ಕೃಷ್ಣ ಶಾಸ್ತ್ರಿಗಳು ಹಾಗೆ ಬೇಸರಿಕೆಯನ್ನುಂಟು ಮಾಡಿದ್ದಾರೆ. . .

卐

“ಸಂಸ್ಕೃತಕ್ಕೂ ಕನ್ನಡಕ್ಕೂ ಇರಬೇಕಾದ ಬಾಂಧವ್ಯದ ಕುರಿತು ಶ್ರೀ. ಶಾಸ್ತ್ರಿಗಳು ಹೇಳುವ ಮಾತು ತೀರಾ ವಿಚಿತ್ರವಾಗಿದೆ. ಸಂಸ್ಕೃತ ಸಂಸ್ಕೃತಿಯನ್ನು ಬಿಟ್ಟುಬಿಟ್ಟರೆ ಕನ್ನಡಿಗರಿಗೆ ಉಳಿಯುವುದೇನು? . ಯುರೋಪಿಯನ್ ಜೀವನ! ಏಕೆಂದರೆ ಶ್ರೀ ಶಾಸ್ತ್ರಿಗಳು ಆಂಗ್ಲ ಸಂಸ್ಕೃತಿಗೆ ಶರಣು ಹೊಕ್ಕಿದ್ದಾರೆ. ಅವರ ಆಂಗ್ಲ ಭಾಷಾ ವ್ಯಾಮೋಹವು ಕನ್ನಡದ ಅಭಿಮಾನದ ಮಟ್ಟವನ್ನು ಸಹ ಕೊಂಚ ತಗ್ಗಿಸಿಬಿಟ್ಟಿದೆ.

卐

“ಹಿಂದಿ ವೈರಭಾವವಂತೂ ಹುಚ್ಚು ಹೊಳೆಯಾಗಿ ಹರಿದಿದೆ. ಏಕ ಭಾಷೆ ದೇಶಕ್ಕೆ ಅವಶ್ಯಕವಿಲ್ಲವೆನ್ನುವವರಿಗೆ ಏಕ ಲಿಪಿಯೇಕೆ ಬೇಕಾಯಿತು? ದೇವನಾಗರಿಗಿಂತ ರೋಮನ್ ಲಿಪಿ ಅವರೆದೆಗೆ ಮೆಚ್ಚಾದುದೂ ಸಹ ಆಶ್ಚರ್ಯವೆ ಸರಿ.

卐

“ . ಶ್ರೀ. ಶಾಸ್ತ್ರಿಗಳು ಬೇಕೆಂದರೆ ಸಂಸ್ಕೃತ ಇರುವುದಿಲ್ಲ ಬೇಡವೆಂದರೆ ಹೋಗುವುದಿಲ್ಲ, ಅದಕ್ಕೆ ಸತ್ವವಿದ್ದರೆ ಅದಕ್ಕೆ ಆಯುಸ್ಸಿದ್ದರೆ ಶಾಸ್ತ್ರಿಗಳಂತವರು ಸಾವಿರ ಮಂದಿ ಬೇಡವೆಂದರೂ ಸಂಸ್ಕೃತಕ್ಕೇನೂ ಚ್ಯುತಿಯಿಲ್ಲ. ರಾಷ್ಟ್ರಭಾಷೆ ಬೇಕು ಬೇಡವೆನ್ನುವ ಅಧಿಕಾರ ಶ್ರೀ ಶಾಸ್ತ್ರಿಗಳಿಗಿಂತ ಹೆಚ್ಚಾಗಿ ಗಾಂಧಿ, ನೆಹರೂ, ಮಾಳವೀಯ ಮೊದಲಾದ ರಾಷ್ಟ್ರಸೇವಕರಿಗಿದೆ. ಶ್ರೀ. ಶಾಸ್ತ್ರಿಗಳ ಹಿಂದೀ ಪ್ರತಿಭಟನೆಯನ್ನು ಕಂಡರೆ ಸಮುದ್ರವನ್ನೆಲ್ಲಾ ಗುಡಿಸಿಹಾಕುತ್ತೇನೆಂದು ಶಸ್ತ್ರಪಾಣಿಯಾಗಿ ಎದ್ದ ವೃದ್ಧ ನಾರಿಯೊಬ್ಬಳ ಕತೆ ನೆನಪಿಗೆ ಬರುತ್ತದೆ.”

卐

ಮೇಲಿನ ಮಾತುಗಳೆಲ್ಲಾ ವಿಶ್ವಕರ್ಣಾಟಕದ ಸಂಪಾದಕೀಯ ಸೂಚನೆಗಳು. ಶ್ರೀ. ಶಾಸ್ತ್ರಿಗಳು 'ಕೋಪತಾಪ' ಬಿಟ್ಟು ವಿಷಯಗಳನ್ನು ತಿಳಿಸಬಹುದಾಗಿತ್ತು ಎಂದು ಆಶಿಸಿದ ಸಂಪಾದಕರೇ 'ಕೋಪತಾಪ' ಬಿಟ್ಟಂತೆ ಕಾಣ್ಡು ಬರುವುದಿಲ್ಲ!

1942 ಶಾರದಾ 1942
ಪೋಕೆಟ್ ಡೈರಿಗಳು
ಸಣ್ಣ ಡೈರಿ 0-6-0 | ದೊಡ್ಡ ಡೈರಿ 0-12-0
ಮುಚ್ಚಳದ್ದು ,, 0-8-0 | ಮುಚ್ಚಳದ್ದು ,, 0-14-0
ಸಿಗುವ ಸ್ಥಳ: ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.

'ಹಿಂಸಾ ಯುದ್ಧದಲ್ಲಿ ನಾನು ಭಾಗವಹಿಸಲಾರೆ'

ಗಾಂಧಿಜಿ ನಿವೃತ್ತರಾದುದೇಕೆ?

'ಕಾಂಗ್ರೆಸು ಸಂಧಾನದ ಬಾಗಿಲು ಮುಚ್ಚಿಲ್ಲ'

ಮೌಲಾನರಿಗೆ ಮಹಾತ್ಮರ ಪತ್ರ

'ನಾನು ನಿವೃತ್ತನಾದುದೇಕೆ?'

ಗಾಂಧಿಜಿ ಹೇಳಿಕೆ

ಬಾರ್ಡೋಲಿಯ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮಾಡಿದ ಠರಾವಿನ ಕುರಿತು ಗಾಂಧಿಜಿ ಪತ್ರಿಕಾ ಪ್ರತಿನಿಧಿಗಳಿಗೆ ಹೀಗೆಂದು ಹೇಳಿಕೆಯೊಂದನ್ನಿತ್ತಿರುವರು

'ಕಳೆದ ೨೦ ವರ್ಷಗಳಲ್ಲಿ ಅಹಿಂಸೆಯಿಂದ ಕಾಂಗ್ರೆಸು ಗಳಿಸಿದ ಕೀರ್ತಿಯು ಉಜ್ವಲವಾಗಿದೆ ಅದನ್ನೆಂದೂ ನಾನು ಕಳೆದುಕೊಳ್ಳಲಾರೆ, ವಿಷ ಕೊಟ್ಟರೂ ಅದನ್ನು ಕೊಡಲಾರೆ, ಹಿಂದುಸ್ಥಾನದ ಸ್ವಾತಂತ್ರ್ಯ ಕೊಟ್ಟರೂ ಅದನ್ನು ಕೊಡಲಾರೆ ಏಕೆಂದರೆ ಅಂತಹ ಸ್ವಾತಂತ್ರ್ಯವು ನಿಜವಾದ ಸ್ವಾತಂತ್ರ್ಯವಾಗಲಾರದು, ಹಿಂಸಾಮಯ ರಣಕುಂಡದಲ್ಲಿ ಕುದಿಯುತ್ತಿರುವ ಈ ಜಗತ್ತಿಗೆ ಹಿಂದುಸ್ಥಾನವೇ ಹಾದಿತೋರಿಸಬಲ್ಲುದೆಂದು ನನ್ನ ಅಭಿಪ್ರಾಯ, ಕಾಂಗ್ರೆಸು ಅಹಿಂಸಾ ಧೋರಣೆಯನ್ನು ಸ್ವೀಕರಿಸಿತೆಂದು ಜನರಿಗೆ ಭಾವನೆಯಾದಾಗ ಇಷ್ಟು ಬೇಗನೇ ಭಯಂಕರ ಯುದ್ಧವು ಹಿಂದುಸ್ಥಾನದ ಬಾಗಿಲಿಗೆ ಬರುವುದೆಂದು ಯಾವ ಕಾಂಗ್ರೆಸಿನವನೂ ಭಾವಿಸಿರಲಿಲ್ಲ ಈಗ ಅಂತಹ ಪರೀಕ್ಷಾ ಕಾಲವು ಬಂದಿದೆ, ನನಗೆ ಅಹಿಂಸೆಯಲ್ಲಿ ಅಚಲ ವಿಶ್ವಾಸವಿದೆ ಹಿಂಸೆಯಿಂದ ನರಳುತ್ತಿರುವ ಜಗತ್ತಿಗೆ ಅಹಿಂಸೆಯೊಂದೇ ಮಾರ್ಗವೆಂದು ನನ್ನ ದೃಢ ನಿರ್ಧಾರವಾಗಿದೆ ಆದ್ದರಿಂದ ನಾನು ಈ ಯುದ್ಧದಲ್ಲಿ ಪ್ರತ್ಯಕ್ಷವಾಗಲಿ ಅಪ್ರತ್ಯಕ್ಷವಾಗಲಿ ಭಾಗವಹಿಸುವುದು ಸಾಧ್ಯವಿಲ್ಲ, ಆದ್ದರಿಂದ ನಾನು ಹೊರಗುಳಿಯುವೆನು ಆದರೆ ಕಾಂಗ್ರೆಸಿನಲ್ಲಿ ಬೇರೆ ಬೇರೆ ಬಗೆಯ ಜನರಿರುವರು, ಬೇರೆ ಬೇರೆ ಅಭಿಪ್ರಾಯಗಳನ್ನು ಪ್ರತಿಬಿಂಬಿಸುವ ಜನರಿರುವರು, ಆದ್ದರಿಂದ ವರ್ಕಿಂಗ್ ಕಮಿಟಿಯು ಮೂರು ಒಗೆಯ ಅಭಿಪ್ರಾಯಗಳನ್ನೂ ಗಮನಕ್ಕೆ ತಂದುಕೊಂಡು ಠರಾವು ಮಾಡಿದೆ, ಕಾಂಗ್ರೆಸಿನವರೂ, ಸಾರ್ವಜನಿಕರೂ ಈ ಅಭಿಪ್ರಾಯವನ್ನು ಲಕ್ಷ್ಯದಲ್ಲಿಡಬೇಕು ವರ್ಕಿಂಗ್ ಕಮಿಟಿಯು ಗಡಿಬಿಡಿಯಿಂದ ನಿರ್ಣಯ ಮಾಡಿಲ್ಲ, ಎಲ್ಲಾ ವಿಚಾರಗಳನ್ನು ಲಕ್ಷ್ಯಕ್ಕೆ ತಂದುಕೊಂಡು ಪೂರ್ಣ ವಿಚಾರಿಸಿ ಈ ನಿರ್ಣಯಕ್ಕೆ ಬಂದಿದೆ, ಮತ್ತು ಕಾಂಗ್ರೆಸಿಗೆ ಗೌರವ ತರುವಂತಹ ಠರಾವು ಮಾಡಿದೆ, ಅಹಿಂಸೆಯ ವಿಷಯದಲ್ಲಿ ನನ್ನಂತೆ ಅಭಿಪ್ರಾಯವಿರುವವರು ಅದನ್ನು ವ್ಯಕ್ತಮಾಡಲು ಅಂಜಬಾರದು"

'ಕಾಂಗ್ರೆಸು ಸಂಧಾನ ಬಾಗಿಲು ಮುಚ್ಚಿಲ್ಲ'

ಬಾರ್ಡೋಲಿ ನಿರ್ಣಯದ ವಿಚಾರ, ಕಾಂಗ್ರೆಸು ಮತ್ತು ಸರಕಾರಗಳ ಕರ್ತವ್ಯವನ್ನೆತ್ತಿ ಒರೆಯುತ್ತಾ, ಗಾಂಧಿಜಿಯು ಒಂದು ಹೇಳಿಕೆಯಲ್ಲಿ ಹೀಗೆಂದಿರುವರು

'ನಾನು ಎಣಿಸಿದಂತೆ, ಮುಂಬಯಿ ನಿರ್ಣಯದ ಪ್ರಕಾರ, ಅಹಿಂಸಾತತ್ವದ ಮೇರೆಗೆ ಕಾಂಗ್ರೆಸಿಗೆ ಯುದ್ಧದಲ್ಲಿ ಭಾಗವಹಿಸಲು ಆಗುವುದಿಲ್ಲವೆಂದು ಯಾರಿಗಾದರೂ ಭಾವನೆಯಾಗಿದ್ದರೆ ಅದು ಪರಿಹಾರವಾಗಿ, ಮುಂಬಯಿ ಠರಾವಿನಲ್ಲಿ ಸಂಧಾನದ ಮಾರ್ಗವು ಪೂರ್ಣ ಮುಚ್ಚಿಲ್ಲವೆಂಬುದು ನಿಶ್ಚಯವೆಂದು ಈಗ ನಿರ್ಧಾರವಾದಂತಾಯಿತು ೬ ಠರಾವಿನಲ್ಲಿ ಪುಣೆ ನಿರ್ಣಯದ ಅವಧಿ ಮುಗಿಯಿತು ಎಂದು ಹೇಳಿದ್ದರಿಂದ ಅದರ ಅವಧಿ ಮಾತ್ರ ಮುಗಿದಂತಾಯಿತು ಎಂದು ಸ್ಪಷ್ಟವಾಗಿದೆ. ಈಗ ವರ್ಕಿಂಗ್ ಕಮಿಟಿಯ ನಿರ್ಣಯದ ಮೂಲಕ, ಯುದ್ಧದಲ್ಲಿ ಭಾಗವಹಿಸದಂತೆ, ಅಹಿಂಸಾತತ್ವದ ಆಧಾರದ ಮೂಲಕ, ಖಂಡಿತವಾಗಿ ಕಾಂಗ್ರೆಸು ಬಾಗಿಲು ಮುಚ್ಚಿಲ್ಲವೆಂದು ಕಾಂಗ್ರೆಸು ಸ್ಪಷ್ಟಪಡಿಸಿತು. ಬಾಗಿಲನ್ನು ತೆರೆಯುವ ಬೀಗದ ಕೈ ಈಗ ಬ್ರಿಟಿಷ ಸರಕಾರದ ಹಸ್ತವಿದೆ.

'ವರ್ಕಿಂಗ್ ಕಮಿಟಿಯಾದರೂ ಯಾವ ರೀತಿಯಲ್ಲಿ ಮಾರ್ಗಮಾಡಲು ಅನುಕೂಲವಾಗುವುದೆಂಬುದನ್ನು ಈಗ ಹೇಳುದು ಯೋಗ್ಯವಾಯಿತು. ಅದು ಬೇರೆ ಬೇರೆ ಕಾರಣಗಳನ್ನು ಅವಲಂಬಿಸಿಕೊಂಡಿದೆ ಅವುಗಳಲ್ಲಿ ಮುಖ್ಯ ಕಾರಣವೆಂದರೆ ಸರಕಾರವೆಂದು ನನ್ನ ಅಭಿಪ್ರಾಯ, ಈ ವರೆಗೆ ವರ್ಕಿಂಗ್ ಕಮಿಟಿಯೂ ಅನೇಕ ಸಾರಿ ಅವಮಾನಕ್ಕೆ ಗುರಿಯಾದುದರಿಂದ, ಪುನಃ ಅಂತಹ ಸೂಚನೆ ಮಾಡಿ ಅಪಮಾನವನ್ನು ಆಲಿಂಗಿಸಿಕೊಳ್ಳುವುದು ಸರಿಯಲ್ಲ ಅದರ ಧೋರಣೆಯೇನಿದೆಯೆಂಬುದು ಸಂಪೂರ್ಣ ಗೊತ್ತಿದೆ ಅದರ ಗುರಿಗೆ ಕಡಿಮೆಯಾದುದನ್ನು ಅದು ಎಂದೂ ಸ್ವೀಕರಿಸಲಾರದೆಂದು ಪ್ರತಿಯೊಬ್ಬನೂ ಅರ್ಥಮಾಡಿಕೊಳ್ಳಬೇಕು ಆದಕಾರಣ ಮುಂದಿನ ಹೊಣೆ ಸರಕಾರದ ಮೇಲಿದೆ ಈಗ ಅದೇ ಮುಖ್ಯವಾಗಿದೆ

'ಹಿಂದುಸ್ಥಾನದ ಸ್ವಾತಂತ್ರ್ಯದ ವಿಷಯ ಆಸಕ್ತರಾಗಿದ್ದು ತಮ್ಮವರನ್ನು ಪ್ರೀತಿಸುವ ಕೆಲವು ಇಂಗ್ಲಿಷ್ ಮಿತ್ರರು ನನ್ನ ಅಭಿಪ್ರಾಯ ತಿಳಿಸುವಂತೆ ಬರೆದಿದ್ದರು ಅವರಿಗೆ ನಾನು ಉತ್ತರ ಬರೆದಿಲ್ಲ ಅವರು ಆಂಡ್ರೂಸರ ರಿಕ್ತದಾಯದ ವಿಷಯ ನನ್ನೊಡನೆ ಕೇಳಿದ್ದರು, ಅವರು ನನ್ನ ವರಾಡಿದ್ದರ ಅರ್ಥವೇನಿದ್ದರೂ ನನ್ನ ಅರ್ಥದಲ್ಲಿ ಬದಲಾಗಲಿಲ್ಲ ಆಂಡ್ರೂಸ್ ಹಾಗೂ ನನ್ನ ನಡುವೆ ಎಂದೂ ಮುರಿಯಲಾರದ ಸಂಬಂಧವಿತ್ತು, ಆದರೂ ನಮ್ಮ ಮನಸ್ಸಾಕ್ಷಿಗೆ ಸರಿಯಾದ ಮಾರ್ಗದಲ್ಲಿ ನಾವು ನಡಕೊಂಡಾಗ ನಾವೆಂದೂ ಒಪ್ಪಂದಕ್ಕೆ ಬರಲಿಲ್ಲ ನಾನು ಮೌಲಾನ ಸಾಹೇಬರಿಗೆ ಬರೆದ ಪತ್ರದಲ್ಲಿಯೂ ಯುದ್ಧ ಪ್ರಯತ್ನದಲ್ಲಿ ಭಾಗಿಯಾಗುವುದಕ್ಕೆ ತೆರೆದಿಟ್ಟ ಮಾರ್ಗದಲ್ಲಿ ನಾನು ಯಾವುದೇ ರೀತಿಯಿಂದಲೂ ಸಮ್ಮತಿಸಲು ಶಕ್ಯವಿಲ್ಲವೆಂದು ಸ್ಪಷ್ಟಪಡಿಸಿದ್ದೇನೆ. ಏಕೆಂದರೆ ಹಾಗೆ ಮಾಡುವುದರಿಂದ ಯಾರಿಗೆ ನನ್ನ ಮಾರ್ಗವು ಸರಿಯೆನಿಸುವುದೋ, ಅಂಥವರಿಗೆ ಅದನ್ನನುಸರಿಸುವಂತೆ ಹೇಳಲು ಅನುಕೂಲವಾಗುವುದೆಂದು ನಾನು ತಿಳಿದುಕೊಂಡಿದ್ದೇನೆ ಒಟ್ಟಿನಲ್ಲಿ ಎಷ್ಟರ ವರೆಗೆ ಯುದ್ಧಕ್ಕೆ ಸಹಾಯ ಮಾಡಲು ಕಾಂಗ್ರೆಸಿನಿಂದ ಕರೆ ಬರುವುದಿಲ್ಲವೋ ಅಷ್ಟರ ವರೆಗೆ ಅವರು ಕಾಂಗ್ರೆಸಿನಲ್ಲಿ ಉಳಿಯುವರು ಎಲ್ಲಿ ಕಾಂಗ್ರೆಸಿನವರನ್ನೂ ಅಹಿಂಸೆಗೆ ಪರಿವರ್ತನೆ ಮಾಡುವುದು ಕಾಂಗ್ರೆಸಿನವರಿಗೆ ಶಕ್ಯವಿದೆ ಇಂಥ ಪರಿವರ್ತನೆಯನ್ನು ವರ್ಕಿಂಗ್ ಕಮಿಟಿಯು ಸ್ವಾಗತಿಸುವುದೆಂದು ನನ್ನ ನಂಬಿಗೆಯಿದೆ, ರಾಷ್ಟ್ರೀಯ ಜೀವನದ ಸಂದಿಗ್ಧ ಸಮಯದಲ್ಲಿ ಯಾವುದೇ ಒಂದು ನಿರ್ಣಯಕ್ಕೆ ಕಾಂಗ್ರೆಸಿನವರು ಒಳದಿರುವುದು ಸರಿಯಲ್ಲವೆಂದು ನಾನು ಎಚ್ಚರಿಸುತ್ತೇನೆ ಸುಮ್ಮನೇ ಏನೋ ದೌರ್ಬಲ್ಯದಿಂದ ಒಂದಲ್ಲ ಒಂದು ನಿರ್ಣಯವನ್ನು ಹಿಂಬಾಲಿಸುವುದೂ ಸರಿಯಲ್ಲವೆಂದೂ ನಾನು ಎಚ್ಚರಿಸುವೆನು, ಅಧಿಕಾರ ಪಡೆವ ಸಲುವಾಗಿ ಕಾಂಗ್ರೆಸಿನ ಒಳಹೋಗುವುದೂ ಸರಿಯಲ್ಲ. ಈ ಅಪೇಕ್ಷೆಯಿಂದ ಒಳಬಂದವರು ರಾಷ್ಟ್ರದ ಸಲುವಾಗಿ ತಮ್ಮ ಇಚ್ಛಿತ ಬಲ ಪಡೆಯದೆ ತೀರಾ ಹತಾಶರಾಗುವರು. ಹೇಡಿತನಕ್ಕೆ ಅವಕಾಶವಿಲ್ಲ. ಹೇಡಿಗಳಾಗುವ ಬದಲು ಹಿಂಸಾ ಮಾರ್ಗಾನುಯಾಯಿಗಳಾಗುವುದುತ್ತಮ. ಆದ್ದರಿಂದ ಪ್ರತಿಯೊಬ್ಬ ಕಾಂಗ್ರೆಸಿನವನೂ ತನ್ನ ಮನಸ್ಸಾಕ್ಷಿಗೆ ಸರಿಯಾಗಿ ಧೈರ್ಯದಿಂದ ನಡೆಯಬೇಕೆಂದು ನಾನಾಶಿಸುತ್ತೇನೆ"

'ಹೊಣೆಯಿಂದ ನನ್ನನ್ನು ಬಿಡುಗಡೆ ಮಾಡಿರಿ'

ಮೌಲಾನರಿಗೆ ಗಾಂಧಿಜಿ ಪತ್ರ

ಮಹಾತ್ಮಾಜಿಯವರು ರಾಷ್ಟ್ರಪತಿ ಮೌಲಾನಾ ಆಜಾದ್ ಕಲಂ ಅಜಾದರಿಗೆ ಈ ತೆರನ ಪತ್ರವೊಂದನ್ನು ಬರೆದಿರುವರು

'ಪ್ರಿಯ ಮೌಲಾನಾ ಸಾಹೇಬ್,

ಮುಂಬಯಿ ನಿರ್ಣಯದ ಅರ್ಥವನ್ನು ನಾನು ತಪ್ಪಾಗಿ ತಿಳಕೊಂಡಿರುವೆನೆಂದು ವರ್ಕಿಂಗ್ ಕಮಿಟಿಯಲ್ಲಿ ನಡೆದ ಚರ್ಚೆಯಿಂದ ನನಗೆ ತಿಳಿದು ಬಂತು ಕಾಂಗ್ರೆಸು ಅಹಿಂಸಾತತ್ವದಂತೆ ಇಂದಿನ ಹಾಗೂ ಎಲ್ಲಾ ಯುದ್ಧಗಳಲ್ಲಿ ಭಾಗವಹಿಸತಕ್ಕುದಲ್ಲ ಎಂದು ನಾನು ಅರ್ಥಮಾಡಿಕೊಂಡಿದ್ದೆ ಆದರೆ ವರ್ಕಿಂಗ್ ಕಮಿಟಿಯ ಬಹುಸಂಖ್ಯಾಕರ ಅರ್ಥವು ಬೇರೆಯಾಗಿತ್ತೆಂದು ತಿಳಿದು ನನಗೆ ಆಶ್ಚರ್ಯವಾಯಿತು ಅಲ್ಲದೆ ಅಹಿಂಸೆಯ ವಿಷಯವಾಗಿ ಈ ಭಿನ್ನಾಭಿಪ್ರಾಯವೇನೂ ಬಾರಿಲ್ಲವೆಂದು ಅವರು ಹೇಳುತ್ತಾರೆ ಪುನಃ ಬೊಂಬಾಯಿ ನಿರ್ಣಯವನ್ನು ಓದಿ ನೋಡಲಾಗಿ ಅವರ ಅಭಿಪ್ರಾಯವು ಸರಿಯೆಂದೂ ನಾನು ತಿಳಕೊಂಡದ್ದು ತಪ್ಪೆಂದೂ ಹೊಳೆಯಿತು. ಈ ಶೋಧನೆಯ ಫಲವಾಗಿ ನಾನು ಸತ್ಯಾಗ್ರಹ ಆಂದೋಲನದ ನೇತೃತ್ವವನ್ನು ವಹಿಸೆನು ಏಕೆಂದರೆ ಅಹಿಂಸೆಯು ಅನಾವಶ್ಯಕವೆನಿಸಿದಲ್ಲಿ, ಯುದ್ಧವನ್ನು ಆ ರೀತಿ ವಿರೋಧಿಸುವುದು ಕಠಿಣವಾಗುವುದು. ಬ್ರಿಟಿಸರಿಗ ದ್ವೇಷ ಬಯಸಿ ನಾನು ಯುದ್ಧ ಪ್ರಯತ್ನವನ್ನು ವಿರೋಧಿಸಲಾರೆನು ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ಕೊಟ್ಟರೆ ಯುದ್ಧ ಯತ್ನದಲ್ಲಿ ಸಹಕರಿಸಲಾಗುವುದೆಂದು ನಿರ್ಣಯದಲ್ಲಿ ಸೂಚಿಸಲಾಗಿದೆ ನನ್ನ ಅಭಿಪ್ರಾಯವೂ ಸಹ ಅದೇ ರೀತಿಯಾಗಿದ್ದರೆ ಮತ್ತು ಹಿಂಸೆಯಿಂದ ಸ್ವಾತಂತ್ರ್ಯಗಳಿಸುವುದು ಸಾಧ್ಯವೆಂದು ನಂಬಿದ್ದರೆ, ಮತ್ತು ಆ ಮೇಲೂ, ಸ್ವಾತಂತ್ರ್ಯದ ಬೆಲೆಯಿಂದ ಯುದ್ಧ ಪ್ರಯತ್ನದಲ್ಲಿ ಸಹಕರಿಸಲು ನಿರಾಕರಿಸಿದ್ದರೆ ನಾನು ದೇಶದ್ರೋಹ ಮಾಡಿದಂತಾಗುತಿತ್ತು. ಆದರೆ ಅಹಿಂಸೆಯೇ ಹಿಂದುಸ್ಥಾನವನ್ನೂ ಜಗತ್ತನ್ನೂ ವಿನಾಶದಿಂದ ರಕ್ಷಿಸುವುದೆಂದು ನನ್ನ ನಿಶ್ಚಿತ ಅಭಿಪ್ರಾಯ ಪರಿಸ್ಥಿತಿ ಹೀಗಿರುವಾಗ ನಾನು ಒಬ್ಬಂಟಿಗನಿರಲಿ, ನನಗೆ ಯಾವುದೊಂದು ಸಂಸ್ಥೆಯ ಹಾಗೂ ವ್ಯಕ್ತಿಗಳ ಬೆಂಬಲವಿರಲಿ ಅಥವಾ ಇರದಿರಲಿ ನಾನು ನನ್ನ ಕಾರ್ಯವನ್ನು ಮಾತ್ರ ಮುಂದುವರಿಸಲೇ ಬೇಕಾಗುವುದು. ಆದ್ದರಿಂದ ಮುಂಬಯಿ ನಿರ್ಣಯವು ನನ್ನ ಮೇಲೆ ಹೊರಿಸಿದ ಹೊಣೆಯಿಂದ ದಯಮಾಡಿ ನನ್ನನ್ನು ವಿಮೋಚನೆ ಮಾಡಿರೆಂದು ಬಿನ್ನವಿಸುತ್ತೇನೆ ನನ್ನ ಅಹಿಂಸಾತತ್ವಕ್ಕೆ ಒಪ್ಪುವ ಹಾಗೂ, ನಾನು ವಿಧಿಸುವ ಶರತಗಳಿಗೆ ಒಪ್ಪುವ ಕಾಂಗ್ರೆಸಿನವರ ಅಥವಾ ಇತರರ ಸಹಾಯದಿಂದ ನಾನು ಎಲ್ಲಾ ಯುದ್ಧಗಳನ್ನು ವಿರೋಧಿಸುವ ವಾಕ್ಸ್ವಾತಂತ್ರ್ಯ ಪಡೆಯಬೇಕೆನ್ನುವ ಆಂದೋಲನ ಮುಂದೆ ಸಾಗಿಸಲೇ ಬೇಕಾಗಿದೆ. ನಾಗರಿಕ ಸಹಾಯ ಅವಶ್ಯವಿದ್ದ ಜನರನ್ನು ಸಾರ್ವಜನಿಕ ಸತ್ಯಾಗ್ರಹಿಗಳಾಗಿ ಆರಿಸುವುದಿಲ್ಲ.

ನಿಮ್ಮ ವಿಶ್ವಾಸ ಪಾತ್ರ,

ಎಂ. ಕೆ. ಗಾಂಧಿ.

ಸೌಂದರ್ಯ ಮತ್ತು ಮುಖಕಾಂತಿಗೆ

ಹಿಮಾನಿ ಸ್ನೋ

ಹಿಂದೂದೇಶದಲ್ಲಿ ಪ್ರಥಮವಾಗಿ

— ತಯಾರಿಸಿದ ಸ್ನೋ —

ಅಂದಿನಿಂದಲೂ ಶ್ರೇಷ್ಠವಾಗಿಯೇ ಇದೆ — ಮುಖದ ಮೇಲಿನ ಯಾವತ್ತೂ ಕಲೆ, ಮಚ್ಚೆ ಛಿದ್ರ ಮೊದಲಾದುವನ್ನು ಗುಣಪಡಿಸುವುದು

ಹಿಮಾನಿ ಗ್ಲಿಸರಿನ್ ಸಾಬೂನುಗಳು

• ಪಾರದರ್ಶಕ—ಶುದ್ಧ

• ಕೋಮಲವಾದ ಪರಿಮಳ



ದಕ್ಷಿಣ ಕನ್ನಡದ ಡಿಸ್ಟ್ರಿಬ್ಯೂಟರರು —

ಕೊರನೇಶನ್ ಟ್ರೇಡಿಂಗ್ ಕೊ.

ಮಹಮ್ಮದಾಲಿ ರೋಡ್ಡ್, ಮಂಗಳೂರು.

HALFTONE & LINE
BLOCK MAKING
UNDERTAKEN
Sharada Press,
MANGALORE.

ಜಿಲ್ಲಾ ಸಮಾಚಾರಗಳು

ಮಂಗಳೂರು

ಮಿಶನ್ ಹೈಸ್ಕೂಲ್ ಹಳೆ ವಿದ್ಯಾರ್ಥಿ ಸಂಘ—ಇದರ ಸಭೆಯೊಂದು ತಾ. ೪ರಲ್ಲು ಸಂಜೆ ಸಂಘದ ಅಧ್ಯಕ್ಷ ಶ್ರೀ. ಮಂಜಪ್ಪನವರ ಅಧ್ಯಕ್ಷತೆಯಿಂದ ಸೇರಿ, ಕಳೆದ ವರ್ಷದ ಲೆಕ್ಕಪತ್ರಗಳು ಪಾಸಾಗಿ, ಹೊಸ ವರ್ಷದ ಅಧಿಕಾರೀ ವರ್ಗದ ಚುನಾವಣೆ ನಡೆಯಿತು. ಶ್ರೀ. ಮಂಜಪ್ಪನವರು ಅಧ್ಯಕ್ಷರಾಗಿಯೂ ಶ್ರೀಗಳಾದ ಎನ್. ಎಸ್. ಕಿಲ್ಲೆ ಮತ್ತು ಶ್ರೀ. ಪುತ್ರನ್ ಇವರು ಉಪಾಧ್ಯಕ್ಷರಾಗಿಯೂ ಶ್ರೀಗಳಾದ ಸಿ. ಇ. ಸುಮಿತ್ರ ಮತ್ತು ಎಂ. ಸದಾನಂದಸ್ವಾಮಿಯರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು.

ಲೇಬರ್ ಶಾಲಾ ಅಧ್ಯಾಪಕರ ಪರಿಷತ್ತು—ತಾ. ೨೮ರಲ್ಲು ಡಿ. ಸಿ. ಎಂ.ನಲ್ಲಿ ಶ್ರೀ. ಉಳ್ಳಾಲ ಮಂಗೇಶರಾಯರ ಅಧ್ಯಕ್ಷತೆಯಿಂದ ಜರಗಿತು. ಎಲ್ಲಾ ಠರಾವುಗಳು ಮಂಜೂರಾದವು. ಲೇಬರ್ ಶಾಲಾ ಅಧ್ಯಾಪಕರ ಸಂಕಷ್ಟಗಳನ್ನು ಸರಕಾರಕ್ಕೆ ತಿಳಿಸುವರೆ ಒಂದು ಕಮಿಟಿ ರಚಿತವಾಯಿತು. ಪ್ರತಿ ಲೇಬರ್ ಶಾಲಾ ಅಧ್ಯಾಪಕರೂ ಯೂನಿಯನಿಗೆ ಸದಸ್ಯರಾಗಬೇಕಾಗಿ ಕೋರಲಾಯಿತು.

ಸತ್ಕಾರ ಕೂಟ—ಕೆನರಾ ಚೇಂಬರ್ ಒಫ್ ಕೊಮರ್ಸಿನ ವರ್ಧಂತ್ಯುತ್ಸವ ಸಮಾರಂಭದ ಸಮಯದಲ್ಲಿ ನಾಟಕ ಪ್ರಯೋಗ ಮಾಡಿದ ಪ್ರಭಾತ ಕಲಾ ಮಂಡಲದವರನ್ನು ಶ್ರೀಯುತ ಮಣೇಲ ಶ್ರೀನಿವಾಸ ನಾಯ್ಕರು, ಸುಖನಿವಾಸದಲ್ಲಿ ಭೋಜನ ಸತ್ಕಾರದಿಂದ ಸನ್ಮಾನಿಸಿದರು.

ನೇಮಕ—ಶ್ರೀ. ಟಿ. ಶೀನಪ್ಪ ಹೆಗ್ಡೆ ಬಿ. ಓ. ಎಲ್. ಎಲ್. ಟಿ. ಇವರಿಗೆ ಗವರ್ನಮೆಂಟ್ ಟ್ರೇನಿಂಗ್ ಸ್ಕೂಲಿನಿಂದ ಉಡುಪಿ ತಾಲೂಕು ಶಾಲಾ ಡಿ। ಇನ್ಸ್ಪೆಕ್ಟರರಾಗಿ ನೇಮಕವಾಗಿರುವುದೆಂದು ತಿಳಿದಿದೆ.

ವಾರ್ಷಿಕ ಜಾತ್ರೆ—ಕಂಕನಾಡಿ ಬೈದ್ಯರ್ಕಳ ಗರೋಡಿಗೆ ಹೊಸದಾಗಿ ಗೋಪುರಾದಿಗಳನ್ನು ಚಲೋದಾಗಿ ಕಟ್ಟಿಸಿ ಈ ವರ್ಷ ತಾ. ೧ರಿಂದ ೫ರ ವರೆಗೆ ಜಾತ್ರಾ ಕಮಿಟಿಯವರು ವಾರ್ಷಿಕ ಜಾತ್ರೆಯನ್ನು ನೆರವೇರಿಸಿದರು.

ಹರಿಕಥೆ—ಸ್ಥಳೀಯ ಮುಖ್ಯಪ್ರಾಣ ದೇವಸ್ಥಾನದಲ್ಲಿ ತಾ. ೬ರಿಂದ ಶ್ರೀ. ಮ. ಶ. ಸಾಮಗ ಹರಿದಾಸರ ಮಹಾಭಾರತ ಹರಿಕಥೆ ನಡೆಯುವುದು.

ವರ್ಗ—ಮಂಗಳೂರಿನ ಡಿಪ್ಯುಟಿ ಕಲೆಕ್ಟರರಾದ ಶ್ರೀ. ಕೆ. ಕೃಷ್ಣಯ್ಯ ಬಿ. ಎ. ಅವರಿಗೆ ಪುತ್ತೂರಿಗೆ ವರ್ಗವಾಗಿ ಅವರ ಬದಲಿಗೆ ಪುತ್ತೂರಿನಿಂದ ಶ್ರೀ. ಬಿ. ಜೋಗಪ್ಪ ಎಂ. ಎ. ಅವರು ಬರಲಿರುವರು.

ಗೌ। ಬೆಂಚ್ ಮ್ಯಾಜಿಸ್ಟ್ರೇಟರು—ಶ್ರೀ. ಎಸ್. ಸಖಾರಾಮ ಅದ್ಯಂತಾಯರು ಕಾರ್ಕಳ ಗೌ। ಬೆಂಚ್ ಮ್ಯಾಜಿಸ್ಟ್ರೇಟರಾಗಿಯೂ ಶ್ರೀಗಳಾದ ಕೆ. ಸೀತಾರಾಮ ಬಲ್ಲಾಳ, ಕಲ್ಯಾಡಿ ರಾಮರಾವ್, ಪಿ. ಗೋಪಾಲ ನಾಯ್ಕ ಅವರು ಉಡುಪಿಯ ಆ. ಮ್ಯಾಜಿಸ್ಟ್ರೇಟರಾಗಿಯೂ, ಶ್ರೀ. ಸಿ. ಜಿ. ನಾಯ್ಕರು ಪ್ರೆಸಿಡೆಂಟ್ ಮತ್ತು ಶ್ರೀ. ಕೆ. ರಾಮರಾವ್ ಎಡಿಶನೆಲ್ ವೈಸ್ ಪ್ರೆಸಿಡೆಂಟರಾಗಿಯೂ ನೇಮಕಹೊಂದಿದ್ದಾರೆ.

ತುಳುವ ಬ್ರಾಹ್ಮಣ ಸಮೂಹ—ಇದರ ವಾರ್ಷಿಕ ಕೂಟವು ಕಳೆದ ಆದಿತ್ಯವಾರ ಜರಗಿತು. ಬೇಗನೇ ವರ್ಗವಾಗಿ ಹೋಗಲಿರುವ ಜಿಲ್ಲಾ ಕಲೆಕ್ಟರ್ ಶ್ರೀ. ಎಂ. ವಿ. ಸುಬ್ರಹ್ಮಣ್ಯನವರಿಗೆ ವಿದಾಯ ಸತ್ಕಾರವೂ ಇತ್ತು. ಜಿಲ್ಲಾ ಜಡ್ಜ ಶ್ರೀ. ಪಾರ್ಥಸಾರಥಿ ಅಯ್ಯರ್ ಅಧ್ಯಕ್ಷತೆ ವಹಿಸಿದ್ದರು. ಸಮೂಹದ ಅಧ್ಯಕ್ಷ ಶ್ರೀ. ಟಿ. ಆರ್. ಸುಬ್ರಹ್ಮಣ್ಯ ಅಯ್ಯರ್ ಸ್ವಾಗತ ಹೇಳಿದರು. ಕಾರ್ಯದರ್ಶಿ ಶ್ರೀ. ಎ. ಶಂಕರ ಅಯ್ಯರ್ ಗತವರ್ಷದ ವರದಿ ಓದಿದರು. ಹಲವು ಮಹನೀಯರ ಭಾಷಣಗಳಾದವು.

ವರ್ಷಾವಧಿ ಮಹಾಸಭೆ—ಮಂಗಳೂರು ಕೋಪರೇಟಿವ್ ಟೌನ್ ಬೇಂಕಿನ ವರ್ಷಾವಧಿ ಮಹಾಸಭೆಯು ತಾ. ೪ರಂದು ಜರಗಿ ಫೆಬ್ರವರಿ ತಿಂಗಳಲ್ಲಿ ಬೇಂಕಿನ ರಜತೋತ್ಸವನ್ನು ಆಚರಿಸುವುದಾಗಿ ನಿರ್ಣಯವಾಗಿದೆ.

ಶ್ರೀಮತಿ ಕಮಲಾದೇವಿಯವರಿಗೆ ಮಾನಪತ್ರ

ಮಾನಪತ್ರ—ಶ್ರೀಮತಿ ಕಮಲಾದೇವಿಯವರು ಇತ್ತೀಚೆಗೆ ಪರದೇಶ ಪ್ರವಾಸಮಾಡಿ ಮರಳಿದವರಿಗೆ ತಾ. ೬ರಂದು ಮಂಗಳೂರು ಮುನ್ಸಿಪಾಲಿಟಿಯವರು ಅವರ ಸಾರ್ವಜನಿಕ ಸೇವೆಯನ್ನು ಕೊಂಡಾಡಿ ಒಂದು ಮಾನಪತ್ರವನ್ನರ್ಪಿಸಿದರು. ವೈಸ್ ಛೇರ್ ಮೇನರಾದ ಶ್ರೀ. ಎಲ್. ಸಿ. ಪಾಯಸರು ಮಾನಪತ್ರವನ್ನು ಓದಿದರು. ಶ್ರೀಮತಿ ಕಮಲಾದೇವಿಯರು ಅದಕ್ಕೆ ಉತ್ತರ ಕೊಡುತ್ತಾ ಪರದೇಶಗಳಲ್ಲಿ ನಗರಸಭೆಗಳು ಮಾಡುವ ಹಲವು ವಿಧದ ಸಾಮಾಜಿಕ ಸಾಂಸ್ಕೃತಿಕ ಚಟುವಟಿಕೆಗಳನ್ನು ವಿವರಿಸಿ ನಮ್ಮ ದೇಶದಲ್ಲಿಯೂ ಅಂತಹ ಕಾರ್ಯಗಳು ಬೇಗನೇ ಆಗಲೆಂದು ಆಶಿಸಿದರು. ಮಂಗಳೂರು ಮುನ್ಸಿಪಾಲಿಟಿಯಲ್ಲಿ ಸರ್ವರೂ ಸೌಹಾರ್ದದಿಂದ ಕೆಲಸ ಮಾಡುತ್ತಿರುವ ಬಗ್ಗೆ ಸಂತೋಷ ವ್ಯಕ್ತಪಡಿಸಿದರು.

ವಾಚನ—ಶ್ರೀ. ಮುಳಿಯ ತಿಮ್ಮಪ್ಪಯ್ಯನವರು ತಾ. ೬ರಂದು ಸಂಜೆ ಸ್ಥಳೀಯ ಕೆನರಾ ಕ್ಲಬ್ಬಿನಲ್ಲಿ ಹಳೆಗನ್ನಡ ಕಾವ್ಯಗಳಿಂದ ಕೆಲವು ಭಾಗಗಳನ್ನೆತ್ತಿ ವಾಚನಮಾಡಿದರು. ಜಿಲ್ಲಾ ಜಡ್ಜರೇ ಮೊದಲಾದವರು ಬಂದಿದ್ದರು. ಸಭಿಕರೆಲ್ಲರೂ ವಾಚನವನ್ನು ವಿಶೇಷವಾಗಿ ಮೆಚ್ಚಿದರು.

ಲೇಬರ್ ಕೋಪರೇಟಿವ್ ಯೂನಿಯನ್—ಹರಿಜನರಿಗೆ ಲೇಬರ್ ಕೋಪರೇಟಿವ್ ಯೂನಿಯನನ್ನು ಸ್ಥಾಪಿಸುವ ನಿಮಿತ್ತವಾಗಿ ತಾ. ೩ರಂದು ಸ್ಥಳೀಯ ಸೆಂಟ್ರಲ್ ಕೋಪರೇಟಿವ್ ಬೇಂಕಿನಲ್ಲಿ ಜಿಲ್ಲಾ ಹರಿಜನ ಸೇವಕ ಸಂಘ, ಡಿಪ್ರೆಸ್ಡ್ ಕ್ಲಾಸ್ ಮಿಶನ್, ಜಿಲ್ಲಾ ಸಹಕಾರಿ ಅಭಿವೃದ್ಧಿ ಸಂಘ ಮತ್ತು ಇತರ ಹರಿಜನ ಕಾರ್ಯಗಳಲ್ಲಿ ಆಸಕ್ತರಾದವರ ಒಂದು ಸಭೆಯು ಶ್ರೀ. ಎಂ. ಶಿವರಾಯರ ಅಧ್ಯಕ್ಷತೆಯಲ್ಲಿ ಸೇರಿತು. ಈಗಿರುವ ಕ್ರೆಡಿಟ್ ಸೊಸೈಟಿಗಳು ಹರಿಜನರ ಸಂಕಷ್ಟ ನಿವಾರಣೆಗೆ ಸಾಲದಾಗಿದ್ದು, ಅವರಿಗೆ ಸಾಕಷ್ಟು ಕೆಲಸ ಕೊಡಿಸುವ ಉದ್ದೇಶದಿಂದ ಲೇಬರ್ ಯೂನಿಯನುಗಳನ್ನು ಸ್ಥಾಪಿಸಿ ಕಂಟ್ರಾಕ್ಟ್ ಕೆಲಸ ಮೊದಲಾದವುಗಳು ಅದರ ಸದಸ್ಯರಿಗೆ ಸಿಗುವಂತೆ ಮಾಡಿದರೆ ಅವರ ಆರ್ಥಿಕ ಸ್ಥಿತಿ ಅಭಿವೃದ್ಧಿ ಹೊಂದಬಹುದಾಗಿ ಅಭಿಪ್ರಾಯ ಪಡಲಾಯಿತು. ಕೋಪರೇಟಿವ್ ಡಿ. ರಿಜಿಸ್ಟ್ರಾರರು ಸೂಚನೆಗಳನ್ನು ವಿವರಿಸಿದ ಮೇಲೆ ಯೂನಿಯನನ್ನು ಪ್ರಾರಂಭಿಸುವುದಾಗಿ ನಿರ್ಣಯವಾಡಲಾಯಿತು.

ಸ್ಥಳೀಯ ಸಿನೆಮಗಳು—ಸ್ಥಳೀಯ ಬಾಲಾಜಿ ಟಾಕೀಸಿನಲ್ಲಿ 'ಡೋಟರ್ ಓಫ್ ಇಂಡಿಯಾ' ಚಿತ್ರವೂ, ಸೆಂಟ್ರಲ್ ಟಾಕೀಸಿನಲ್ಲಿ 'ಸಂಸ್ಕಾರ್' ಚಿತ್ರವೂ ಪ್ರದರ್ಶಿತವಾಗುತ್ತಲಿದೆ. ಕಳೆದ ಕೆಲವು ವಾರಗಳಿಂದ ಮಂಗಳೂರ ಸಿನೆಮಾ ಮಂದಿರಗಳಲ್ಲಿ ಹಲವು ಉತ್ತಮ ಚಿತ್ರಗಳು ಪ್ರದರ್ಶಿತವಾದವು.

ಜಿಲ್ಲಾ ಕಾಂಗ್ರೆಸ್ ಕಮಿಟಿ ವಿಶೇಷ ಸಭೆ

ತಾ. ೧ರಂದು ಜಿಲ್ಲಾ ಕಾಂಗ್ರೆಸ್ ಕಛೇರಿಯಲ್ಲಿ ಶ್ರೀ. ಯು. ಶ್ರೀನಿವಾಸ ಮಲ್ಯರ ಅಧ್ಯಕ್ಷತೆಯಿಂದ ಅಪರಾಹ್ನ ೩ ಗಂಟೆಗೆ ಜರಗಿತು. ಪ್ರಾರಂಭದಲ್ಲಿ ಸತ್ಯಾಗ್ರಹ ಸಂಚಾಲಕರಾಗಿದ್ದು ಈಗ ಅಧ್ಯಕ್ಷರಿಗೆ ಅಧಿಕಾರಬಿಟ್ಟುಕೊಟ್ಟ ಶ್ರೀ. ದಾಮೋದರ ಬಾಳಿಗರು ಸತ್ಯಾಗ್ರಹ ಕಾಲದ ವರದಿಯನ್ನು ಓದಿದರು. ಅದರಲ್ಲಿ ಅವರು ಜಿಲ್ಲೆಯಲ್ಲಿ ಒಟ್ಟು ೧೧೬ ಮಂದಿ ಸತ್ಯಾಗ್ರಹ ಮಾಡಿರುವರಾಗಿಯೂ ಅವರಲ್ಲಿ ೩೮ ಮಂದಿ ಜಿಲ್ಲೆಯಲ್ಲಿಯೇ ಬಂಧಿತರಾಗಿದ್ದು, ೬೮ ಮಂದಿ ಹೊರ ಜಿಲ್ಲೆಗಳಲ್ಲಿ ಬಂಧಿತರಾಗಿದ್ದು ೫ ಮಂದಿ ಕಡೆವರೆಗೆ ಬಂಧಿತರಾಗದೆ ಜಿಲ್ಲೆಯಲ್ಲಿಯೇ ಪ್ರಚಾರಕಾರ್ಯನಡೆಸಿದರೆಂದೂ ತಿಳಿಸಿದರು. ಎಲ್ಲಾ ಸತ್ಯಾಗ್ರಹಿಗಳೂ ಹೊರಗಡೆಯೂ ಸೆರೆಮನೆಯೊಳಗೂ ಒಳ್ಳೆಯ ನಡತೆಯಿಂದಲೇ ನಡೆದಿರುವರೆಂದೂ ಹೇಳುತ್ತಾ, ಜಿಲ್ಲೆಯಲ್ಲಿ ಬಂಧಿತರಾಗದೆ ವಿಶೇಷ ಕಷ್ಟನಷ್ಟಗಳನ್ನು ವಹಿಸಿ, ಕಾಂಗ್ರೆಸ್ ಪ್ರಚಾರ ಮಾಡಿ, ರಾಷ್ಟ್ರಧ್ವಜದ ಕೀರ್ತಿ ಹೆಚ್ಚಿಸಿದ ಸತ್ಯಾಗ್ರಹಿಗಳ ಸೇವೆಯನ್ನು ಪ್ರಶಂಸಿಸುತ್ತಾ, ಸತ್ಯಾಗ್ರಹದಿಂದಲೂ, ಇತರ ಪರಿಸ್ಥಿತಿಗಳಿಂದಲೂ ಜನತೆಯಲ್ಲಿ ಉಂಟಾದ ರಚನಾತ್ಮಕ ಕಾರ್ಯದ ಆಸಕ್ತಿಯನ್ನು ಸರಿದಾರಿಗೆ ತೆಗೆದುಕೊಂಡುಹೋಗಬೇಕಾಗಿದೆಯೆಂದೂ ಸೂಚಿಸುತ್ತಾ, ಇಂದು ದೇಶದ ರಾಜಕೀಯದಲ್ಲಿ "ಅನುತ್ಸಾಹಪರಿಸ್ಥಿತಿ" ಮೀರಲಿಲ್ಲವೆಂದೂ ಇನ್ನೂ ಬರಲಿದೆಯೆಂದೂ ಒತ್ತಿ ಹೇಳಿದರು. ವರದಿಯಲ್ಲಿ; ಕಯ್ಯೂರು ಕೇಸಿನ ವಿಚಾರದಲ್ಲಿ, ನೆರೆಹಾವಳಿ ಕೆಲಸದಲ್ಲಿ ಮಾಡಿದ ಕಾರ್ಯಗಳನ್ನು ಅವರು ವಿವರಿಸಿದರು. ಆ ಬಗ್ಗೆ ಸಹಕಾರ ಕೊಟ್ಟವರನ್ನು ಅಭಿನಂದಿಸಿದರು. ಅನಂತರ ಕಮಿಟಿಯವರು ಶ್ರೀ. ಬಾಳಿಗರು ಸಲ್ಲಿಸಿದ ಸೇವೆಯನ್ನು ಪ್ರಶಂಸಿಸಿ, ಜಿಲ್ಲೆಯ ಮಹಾಜನರು ಸತ್ಯಾಗ್ರಹಕ್ಕಿತ್ತ ಬೆಂಬಲವನ್ನು ಅಭಿವಂದಿಸಿ, ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಬಾರ್ಡೋಲಿಯಲ್ಲಿ ಮಾಡಿದ ಠರಾವಿನಲ್ಲಿ, ಪ್ರಕೃತದ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ಧೋರಣೆಯಲ್ಲಿ ಬದಲಾವಣೆ ಬೇಡವೆಂದು ನಿಶ್ಚಯಿಸಿದ್ದನ್ನು ಸಮರ್ಥಿಸಿ, ಇಂದಿನೀ ಗಂಡಾಂತರ ಕಾಲದಲ್ಲಿ ಗಾಂಧಿಜಿಯವರೆ ಮುಂದಾಳುತನವೇ ಬೇಕಾಗಿದೆಯೆಂದು ಉದ್ಘೋಷಿಸಿ ಠರಾವುಗಳನ್ನು ಮಾಡಿದರು. ಆ ಮೇಲೆ ಶ್ರೀಮತಿ ಕಮಲಾದೇವಿಯವರಿಗೆ ಮುನ್ಸಿಪಾಲಿಟಿಯಲ್ಲಿ ಮಾನಪತ್ರ ಕೊಡುವರೆ ಇದ್ದುದರಿಂದ ಸಭೆ ಮುಂದುವರಿಸಿ, ಸಂಜೆ ೭ ಗಂಟೆಗೆ ಸೇರಿತು. ಶ್ರೀಮತಿ ಕಮಲಾದೇವಿಯವರು ಆ ಸಭೆಯ ಪ್ರಾರಂಭದಲ್ಲಿ ಬಾರ್ಡೋಲಿ ನಿರ್ಣಯದ ವಿಚಾರ ಮಾತನಾಡಿದರು. ಕಾಂಗ್ರೆಸ್ ಕಮಿಟಿಯ ಲೆಕ್ಕಪತ್ರ ಒಡಿಟಿಗೆ ಒಪ್ಪಿಸಲು ನಿರ್ಣಯವಾಯಿತು. ಧವಸಧಾನ್ಯಗಳ ಬೆಲೆಯೇರದಂತೆ ಮಹಾಜನರು, ಸಾಹುಕಾರರು, ಶ್ರೀಮಂತರು ಸಹಕರಿಸಬೇಕಾಗಿಯೂ ಒಂದು ನಿರ್ಣಯ ಮಾಡಲಾಯಿತು.

ಪೆರಡಾಲ

ಚಂಪೋತ್ಸವ—ತಾ. ೨೪ರಂದು ಮಹಾಜನ ಸಂಸ್ಕೃತ ಕಾಲೇಜಿನಲ್ಲಿ ಶ್ರೀ. ಉಗ್ರಾಣ ಮಂಗೇಶರಾಯರ ಅಧ್ಯಕ್ಷತೆಯಿಂದ ನೆರವೇರಿತು. ಶ್ರೀಗಳಾದ ಡಿ. ನಾರಾಯಣ ಭಟ್ಟ, ಪಿ. ಕೃಷ್ಣಯ್ಯ ಇವರು ಚಂಪೂ ಕವಿಯ ವಿಚಾರ ಮಾತನಾಡಿದರು. ಅಧ್ಯಕ್ಷರ ಭಾಷಣವಾದ ಬಳಿಕ ಧನ್ಯವಾದ ಸಮರ್ಪಣೆಯೊಡನೆ ಸಮಾರಂಭವು ಕೊನೆಗಂಡಿತು. ರಾತ್ರಿ ಕಾಲೇಜಿನ ವಿದ್ಯಾರ್ಥಿಗಳು ಸಾಮಾಜಿಕ ನಾಟಕವೊಂದನ್ನಾಡಿದರು.

GREETINGS

The Directors, Officers and Staff of the Canara Bank Limited join in sending you this message of appreciation for your goodwill and patronage during the last year. We sincerely wish you a Peaceful, Happy and Prosperous New year.

ESTD. 1906

CANARA BANK LTD.

ಕಾಸರಗೋಡು

ಯುವಜನ ಸಂಘ—ಇದರ ಆಶ್ರಯದಲ್ಲಿ ಪುಸ್ತಕ ಭಂಡಾರವೊಂದು ಕಾಸರಗೋಡು ಡಿ। ಮುರಾದ ನಾಗಿ ರೆಡ್ಡಿಯವರಿಂದ ತೆರೆಯಲ್ಪಟ್ಟಿತು. ಸಂಘದ ಅಧ್ಯಕ್ಷರಾದ ಶ್ರೀ. ಬಿ. ಎಸ್. ಕಕ್ಕಿಲ್ಲಾಯವರು ಸಂಘದ ವರದಿಯೊಪ್ಪಿಸಿದರು. ಮಹನೀಯರ ಭಾಷಣಗಳಾಗಿ, ಯಕ್ಷಗಾನ ಕಾಲಕ್ಷೇಪ ನಡೆದು ಕೃತಜ್ಞತಾ ಸಮರ್ಪಣೆಯೊಡನೆ ಸಭೆ ಕೊನೆಗಂಡಿತು.

ಕೊಡ್ಲಮೊಗರು—ಈ ಕೇಂದ್ರದ ಉಪಾಧ್ಯಾಯ ಸಂಘದ ವಾರ್ಷಿಕೋತ್ಸವವು ಮಂಜೇಶ್ವರ ಹಾ. ಎ. ಶಾಲಾ ಹೆಡ್ಮಾಸ್ತರ್ ಶ್ರೀ। ಪುರುಷೋತ್ತಮ ಶೆಣೈ ಬಿ. ಎ. ಎಲ್. ಟಿ.ಯವರ ಅಧ್ಯಕ್ಷತೆಯಿಂದ ಕೊಡ್ಲಮೊಗರು ವಾಣಿವಿಜಯ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ತಾ. ೨೭ರಂದು ಜರಗಿತು.

ಕಯ್ಯೂರು ಕೇಸು ಡಿಫೆನ್ಸ್ ಕಮಿಟಿ—ಕಯ್ಯೂರು ಸಂಬ್ರದಲ್ಲಿ ಆಲೆಯರ ರಕ್ಷಕರಿಂದ ಕೂಡಿದ ಒಂದು ಡಿಫೆನ್ಸ್ ಕಮಿಟಿಯನ್ನು ಏರ್ಪಡಿಸಲಾಗಿತ್ತು. ಕಮಿಟಿಯನ್ನು ಮಾಡುವ ಮೊದಲೇ ಕೆಲವು ಆಲೆಯರ ರಕ್ಷಕರು ೧೧೦೦ ರೂಪಾಯಿ ಫೀಸುಕೊಡುವರೆ ನಿಶ್ಚಯಿಸಿ ಶ್ರೀಯುತ ಸುವರ್ಣರನ್ನು ವಕೀಲರಾಗಿ ನೇಮಿಸಿದ್ದರು. ಆ ನೇಮಕವನ್ನೇ ಕಮಿಟಿಯು ಒಪ್ಪಿಕೊಂಡು ಆ ಹಣವನ್ನು ಆಲೆಯರ ರಕ್ಷಕರು ಕೊಡುವಂತೆ ಅವರೊಳಗೆ ಹಂಚಿಹಾಕಲಾಗಿತ್ತು. ಆದರೆ ಅವರಿಂದ ರೂಪಾಯಿ ೪೪೯ ಮಾತ್ರ ವಸೂಲು ಮಾಡಲಾಯಿತು. ಅನಂತರ ಏನೂ ಕೊಡಲು ಸಾಧ್ಯವಿಲ್ಲವಾಗಿ ಅವರು ತಿಳಿಸಿದುದರಿಂದ ಕಮಿಟಿಯ ಕೆಲಸವನ್ನು ಮುಂದರಿಸಲಾಗಲಿಲ್ಲ. ಕಮಿಟಿಗೆ ರೂ. ೫೭೩—೬—೩ ಜಮೆಯಾಗಿ ಅಷ್ಟು ಖರ್ಚಾಗಿದೆ ಎಂದು ಕಮಿಟಿ ಅಧ್ಯಕ್ಷ ಶ್ರೀ. ಯಂ. ಉಮೇಶರಾಯರು ತಿಳಿಸುತ್ತಾರೆ.

ಪುತ್ತೂರು

ತಾಲೂಕು ಧಾರಣೆ ಸಮಿತಿ ಸಭೆ—ಇದು ಕಳೆದ ವಾರ ಸ್ಥಳೀಯ ತಾಲೂಕು ಆಫೀಸಿನಲ್ಲಿ ಸೇರಿತು. ಅಕ್ಕಿಯ ಧಾರಣೆ ಹೆಚ್ಚು ಮಾಡಬಾರದಾಗಿಯೂ, ಮುಡಿಗೆ ಐದು ರೂಪಾಯಿಗಿಂತ ಹೆಚ್ಚು ಕ್ರಯಕ್ಕೆ ಕೊಂಡುಕೊಳ್ಳಬಾರದಾಗಿಯೂ ಸೂಚಿಸಲಾಯಿತು. ಬಡವರಿಗೆ ೨ಆಣೆ ದರದಲ್ಲಿ ಅಕ್ಕಿ ಮಾರುವರೆ ನಿರ್ಣಯವಾಯಿತೆಂದೂ ತಿಳಿದಿದೆ.

ಉಡುಪಿ

ಪರ್ಯಾಯ—ಉಡುಪಿ ಪರ್ಯಾಯವು ಈ ತಿಂಗಳ ತಾ. ೧೮ಕ್ಕೆ ಪ್ರಾರಂಭವಾಗುವುದು. ಕಾಲಾವಧಿ ಜರಗತಕ್ಕ ಸಪ್ತೋತ್ಸವವು ತಾ. ೮ರಲ್ಲು ಜರಗುವುದು.

ಹೊಸ ಕಮಿಶನರ್—ಚಿತ್ತೂರಿನ ಅಸಿ। ಪಂಚಾಯತ್ ಆಫೀಸರರಾಗಿದ್ದ ಶ್ರೀ. ಟಿ. ವಿಶ್ವನಾಥ ರೆಡ್ಡಿಯವರು ಉಡುಪಿ ಮುನ್ಸಿಪಾಲಿಟಿಯ ಕಮಿಶನರಾಗಿ ವರ್ಗಾಯಿಸಲ್ಪಟ್ಟಿದ್ದಾರೆ.

ಲ್ಯಾಸಿಯಮಿನಲ್ಲಿ ಸಂತೋಷ ಕೂಟ—ನವವರ್ಷಾರಂಭದ ನೆಲೆವಾಗಿ ಉಡುಪಿ ಲ್ಯಾಸಿಯಮಿನಲ್ಲಿ ಸಂತೋಷ ಕೂಟವೊಂದು ಶ್ರೀ. ರಾಮಕೃಷ್ಣಾಚಾರರ ಅಧ್ಯಕ್ಷತೆಯಲ್ಲಿ ಸೇರಿತು. ಲ್ಯಾಸಿಯಮ್ ಮೆಂಬರರಲ್ಲೊಬ್ಬರಾದ ಶ್ರೀ. ಮಾಧವಾಚಾರ್ಯರ ಅಕಾಲ ನಿಧನದ ಬಗ್ಗೆ ಸಂತಾಪಸೂಚಕ ಠರಾವಾಯಿತು. ಸ್ವಸ್ತಿವಾಚನ, ಭಾಷಣ, ಉಪಹಾರ, ಕೃತಜ್ಞತಾಸಮರ್ಪಣೆಗಳಿಂದ ಕೂಟವು ಕೊನೆಗಂಡಿತು.

ಹಸ್ತಲಿಖಿತ ಪತ್ರಿಕೆ—ಉಡುಪಿಯ ಬೋರ್ಡ್ ಹೈಸ್ಕೂಲಿನ ಉತ್ಸಾಹಿ ಕೆಲಮಂದಿ ವಿದ್ಯಾರ್ಥಿಗಳು ಹಸ್ತಲಿಖಿತ 'ವಿದ್ಯಾರ್ಥಿ'ಯೆಂಬ ಪತ್ರಿಕೆಯನ್ನು ಹೊರಡಿಸಿರುವರೆಂದೂ, ಇದರಲ್ಲಿ ಬಾಲಕರದೇ ಆದ ಹಲವು ಕತೆ, ಕವನ, ಹಾಸ್ಯವೇ ಮೊದಲಾದ ಸಾಹಿತ್ಯವಿಭಾಗಗಳಿವೆಯೆಂದೂ ಒಟ್ಟು ೩೦೦ ಪುಟಗಳುಳ್ಳ ಈ ಪತ್ರಿಕೆಯು ಸರ್ವಾಂಗ ಸುಂದರವೂ ನಯನ ಮನೋಹರವಾಗಿ ಇದೆಯೆಂದು ಒಂದು ವಾರ್ತೆ.

ಬೆಳ್ಳಾರೆ

ಪಂಚ ಹವ್ಯಕ ಬ್ರಾಹ್ಮಣರ ಉತ್ತಮ ಜೀವನ ಸಂಘದ ವರ್ಷಾವಧಿ ಮಹಾಸಭೆಯು ಕೋಟೆಯಲ್ಲಿ ಜರಗಿತು. ಶ್ರೀಮದ್ರಾಮಚಂದ್ರಾಪುರ ಮಠದ ಸ್ವಾಮಿಗಳು ಬರುವಾಗ ಒಂದು ವಿಶೇಷ ಸಭೆ ಜರಗಿಸಬೇಕಾಗಿ ನಿರ್ಣಯಿಸಲಾಗಿದೆ.

ಸಿಂಗಾಪುರದ ಕಡೆಗೆ ಜಪಾನರು ಮುಂದೊತ್ತುತ್ತಿದ್ದಾರೆ!

ಅಮೆರಿಕದಲ್ಲಿ ೯೦ ಲಕ್ಷ ಜನರು ಸೈನ್ಯಕ್ಕೆ

ಅಧ್ಯಕ್ಷ ರೂಸ್‌ವೆಲ್ಟರ ಆಜ್ಞೆಯಂತೆ ಅಮೆರಿಕದಲ್ಲಿ ೯೦ ಲಕ್ಷ ಜನರು ಸೈನ್ಯಕ್ಕೆ ಸೇರಿದರಾಗಿ ತಿಳಿದಿದೆ ರೂಸ್‌ವೆಲ್ಟರು ಕಾಂಗ್ರೆಸ ಅಧಿವೇಶನದಲ್ಲಿ ಭಾಷಣ ಮಾಡಿ ಚರ್ಚಿಲರಿಗೂ ತಮಗೂ ಆದ ಮಾತುಕತೆಯ ವಿಷಯ ವಿವರಿಸಿದರು ರೂಸ್‌ವೆಲ್ಟರನ್ನು ಇಂಗ್ಲಂಡಿಗೆ ಆಮಂತ್ರಿಸಬೇಕೆಂದು ಬರುವ ಬ್ರಿಟಿಷ್ ಪಾರ್ಲಿಮೆಂಟ್ ಸಭೆಯಲ್ಲಿ ಸೂಚನೆ ಬರುವುದಂತೆ. ಬ್ರಿಟಿಷ್ ಪಾರ್ಲಿಮೆಂಟು ಕೂಡಿದಾಗ ಹಿಂದುಸ್ತಾನದ ವಿಚಾರವೂ ಬರುವುದೆಂದು ಸುದ್ದಿ ವಾಶಿಂಗ್‌ಟನ್ ಒಪ್ಪಂದಕ್ಕೆ ಜನರಲ್ ದಿಗಾಲನ ಫ್ರೀಫೆಂಚ್ ಕಮಿಟಿಯವರೂ ಸೇರಲಿರುವರಂತೆ. ರೂಸ್‌ವೆಲ್ಟರು ೨೦, ೪೪ ವಯಸ್ಸಿನೊಳಗಿನವರು ಫೆಬ್ರವರಿ ೧೬ನೇ ತಾರೀಕಿನ ದಿನ ಮಿಲಿಟರಿ ಕೆಲಸಕ್ಕಾಗಿ ತಮ್ಮ ಹೆಸರನ್ನು ದಾಖಲೆ ಮಾಡಿಸಬೇಕೆಂದು ಆಜ್ಞೆ ಹೊರಡಿಸಿದ್ದಾರೆ

ಕಾರಿಗಿದೋರ ಕೋಟೆಮೇಲೆ ಧಾಳಿ

ಸಿಂಗಾಪುರದಲ್ಲಿ ಜಪಾನ್ ಮುನ್ನಡೆ

ಸಿಂಗಾಪುರದ ಕಡೆಗೆ ಅತಿ ವೇಗದಿಂದ ಧಾವಿಸಿ ಬರುತ್ತಿರುವ ಜಪಾನರನ್ನು ಬ್ರಿಟಿಷರು ಎದುರಿಸುತ್ತಿರುವರು ಪೆರಾಕ ಮತ್ತು ಬರ್ನಾರ್ಮ್ ನದಿಗಳ ಮುಖದಲ್ಲಿ ಜಪಾನರು ಬಂದಿಳಿದರು ಜಪಾನ್ ಸೈನಿಕರು ಸಿಂಗಾಪುರದ ಉತ್ತರಕ್ಕಿರುವ ಜೆಹೋರದ ಮೇಲೆ ಧಾಳಿ ಮಾಡಿದರು ಸಿಂಗಾಪುರದ ಮೇಲೆಯೂ ಧಾಳಿಯಾಯಿತು ಕಾರಿಗಿದೋರ ಕೋಟೆಯ ಮೇಲೆ ಜಪಾನರು ಮೂರು ತಾಸುಗಳ ವರೆಗೆ ಉಗ್ರ ಧಾಳಿಮಾಡಿದರು ಜಪಾನೀ ಸೈನ್ಯಗಳು ಸಿಂಗಾಪುರದ ಕಡೆ ಜರೂರಿನಿಂದ ಬರುತ್ತಿವೆ ಪ್ರಾಂತದ ರಾಜಧಾನಿಯಾದ ಕೌಲಾಲಂಪುರಕ್ಕೆ ಹತ್ತಿರವಾಗಿದೆಯಂತೆ ರಂಗೂನಿನ ಮೇಲೆ ಒಂದೇಸವನೆ ಧಾಳಿಯಾಗುತ್ತಿದೆ

ಜಪಾನರು ಕಾಂಟನ್ ವಿಮಾನ ನಿಲ್ದಾಣವನ್ನು ಆಕ್ರಮಿಸಿದರು

ಮಲಯದ ಪೂರ್ವಕರಾವಳಿಯಲ್ಲಿದ್ದ ಕಾಂಟನ್ ವಿಮಾನ ನಿಲ್ದಾಣವನ್ನು ಜಪಾನರು ಆಕ್ರಮಿಸಿದರಾಗಿ ಸುದ್ದಿ ಬಂದಿದೆ ಕ್ಯಾಂಟನ್ ಸಿಂಗಾಪುರದಿಂದ ಕೇವಲ ೨೦೦ ಮೈಲು ದೂರದಲ್ಲಿರುವುದರಿಂದ ಅದರ ಪತನವು ದೊಡ್ಡ ಹಾನಿಯೆಂದು ಹೇಳಲಾಗಿದೆ

ಹಿಟ್ಲರ್ ಓಶಿಮಾ ಭೇಟಿ

ಹಿಟ್ಲರನೂ ಬರ್ಲಿನಲ್ಲಿರುವ ಜಪಾನೀ ರಾಯಭಾರಿ ಓಶಿಮಾನು ಭೇಟಿಯಾಗಿ ಪರಸ್ಪರ ವಿಚಾರವಿನಿಮಯ ಮಾಡಿಕೊಂಡಿರುವರೆಂದು ತಿಳಿದಿದೆ

ರಶ್ಯದಲ್ಲಿ ಜರ್ಮನ್ ಪರಾಜಯ

ದಿನದಿಂದ ದಿನಕ್ಕೆ ಹೆಚ್ಚುತ್ತಿದೆ ಜರ್ಮನರನ್ನು ಕರ್ಚಿನಿಂದಲೂ ಹಿಂಝೋಡಿಸಿದ್ದಾರೆ

ಹಿಂದೂ ಮಹಾಸಭೆಯವರ ಬಿಡುಗಡೆ

ಸಾವರ್ಕರಾದಿ ಹಿಂದು ಮಹಾಸಭಾ ಧುರೀಣರನ್ನು ಭಾಗಲ್ಪುರ ಅಧಿವೇಶನ ನಿಮಿತ್ತ ಬಂಧಿಸಿದವರನ್ನು ಸೆರೆಮನೆಯಲ್ಲಿ ೧೯ ದಿನಗಳ ವರೆಗೆ ಇಟ್ಟು ತಾ ೫ರಂದು ಬಿಡುಗಡೆಮಾಡಿದರು ಜೈಲು ಗೇಟಿನಲ್ಲಿ ಅವರಿಗೆಲ್ಲಾ ಸಂಭ್ರಮದ ಸ್ವಾಗತವಿತ್ತು

ಚಾಂಗಷಾ ಕಾಳಗ

ಉತ್ತರ ಹುನಾನ ಹತ್ತಿರ ಚಾಂಗಷಾಎಂಬಲ್ಲಿ ಘೋರ ಕಾಳಗವಾಗುತ್ತಿದೆ ಇದುವರೆಗೆ ಇಲ್ಲಿ ೬ ಸಾವಿರ ಜಪಾನರು ಮಡಿದರಂತೆ ಅಸಂಖ್ಯಾತ ಚೀನೀ ಸೈನಿಕರು ಇದರಲ್ಲಿ ಭಾಗವಹಿಸುತ್ತಿದ್ದಾರೆ

ಮೊರ್ಝಾಸ್ಕದಲ್ಲಿ ಜರ್ಮನ್ ಸೈನ್ಯಕ್ಕೆ ಗಂಡಾಂತರ

ಜರ್ಮನರನ್ನು ವಿಶ್ರಾಂತಿ ತೆಗೆದುಕೊಳ್ಳಲು ಬಿಡದೆ ರಶ್ಯನರು ಹಿಂದಟ್ಟುತ್ತಿದ್ದಾರೆ ಕಾಲುಗಾವು ರಶ್ಯನರ ವಶ ಬಂದ ಮೇಲೆ ಮೋಸ್ಕೋದ ಪಶ್ಚಿಮಕ್ಕಿರುವ ಮೊರ್ಝಾಸ್ಕದಲ್ಲಿ ಸುಮಾರು

ಚರ್ಚಿಲ್ ರೂಸ್‌ವೆಲ್ಟ್ ದೀರ್ಘ ವಿಚಾರಮಾಡುತ್ತಾರೆ

ಹಿಟ್ಲರನು ರಣರಂಗಕ್ಕೆ ಹೊರಡಿದ್ದಾನೆ

ರಶ್ಯದಲ್ಲಿ ಜರ್ಮನರಿಗೆ ಸೋಲುಂಟಾಗಿದೆ

೧೦೦,೦೦೦ ಜರ್ಮನ್ ಸೈನಿಕರು ರಶ್ಯನರಿಂದ ಸುತ್ತುಗಟ್ಟಲ್ಪಟ್ಟಿರುವ ಸಂಭವವುಂಟಂತೆ. ಕ್ರಿಮಿಯಾದಲ್ಲಿಯೂ ಜರ್ಮನರಿಗೆ ಅಪಾರ ಹಾನಿಯಾಗಿದೆ

ಸಿಂಗಾಪುರದ ಮೇಲೆ ಕಣ್ಣು

ಸಿಂಗಾಪುರದ ಮೇಲೆ ಜಪಾನರು ಈಚೆಗೆ ವಿಶೇಷ ದಕ್ಷಿಣಾಕುತ್ತಿದ್ದು, ಇನ್ನು ಮುಂದೆ ಅವರ ಘೋರ ಸಂಗ್ರಾಮವು ಅಲ್ಲಿಯೇ ನಡೆಯುವುದಾಗಿ ಊಹಿಸಲಾಗಿದೆ

ಮಲಯದಲ್ಲಿ ಜಪಾನೀ ಸೈನ್ಯ ಮುನ್ನಡೆಯಿತು

ಮಧ್ಯ ಮಲಯದ ಕ್ವಾರಿದರ್ ಎಂಬ ಪಟ್ಟಣವು ತಮ್ಮ ವಶವಾಯಿತೆಂದು ಜಪಾನರು ಅನ್ನುತ್ತಾರೆ ಬ್ರಿಟಿಷ್ ಸೈನ್ಯಗಳು ಸ್ವಲ್ಪ ಹಿಂದೆ ಸರಿದು ಜಪಾನರು ಮುನ್ನುಗ್ಗುತ್ತಿರುವರಾಗಿ ತಿಳಿದುಬಂದಿದೆ

ಇಪೋಹ ನಗರ ಖಾಲಿಮಾಡಿದರು

ಮಲಯದಲ್ಲಿರುವ ತವರದ ಕೇಂದ್ರವಾದ ಇಪೋಹ ನಗರವನ್ನು ಬ್ರಿಟಿಷ್ ಸೈನಿಕರು ಖಾಲಿಮಾಡಿದರು

ಜಪಾನ್ ಜರ್ಮನಿಗಳಿಂದ ಒಪ್ಪಂದದ ಸೂಚನೆಗೆ ಬರಬಹುದು

ಬ್ರಿಟಿಷ್ ಮಂತ್ರಿ ಭವಿಷ್ಯ

ಅಚ್ಚಿನ ರಾಷ್ಟ್ರಗಳು ಇಷ್ಟರಲ್ಲಿಯೇ ಒಪ್ಪಂದದ ಇಚ್ಛೆ ಮಾಡಬಹುದೆಂದು ಬ್ರಿಟಿಷ್ ಸುದ್ದಿ ಖಾತೆಯ ಮಂತ್ರಿ ಸರ್ ಕ್ಯಾಂಬೆಲರು ಹೇಳುತ್ತಾರೆ ಇಪ್ಪತ್ತಾರು ರಾಷ್ಟ್ರಗಳು ವಾಶಿಂಗ್‌ಟನಿನಲ್ಲಿ ಮಾಡಿದ್ದ ಒಪ್ಪಂದದಿಂದ ಗಾಬರಿಗೊಂಡು ಒಪ್ಪಂದಕ್ಕೆ ಅವು ಬರಬಹುದಂತೆ!

ಪೆರಾಕ್ ಕಾಳಗದಲ್ಲಿ ಜಪಾನರ ಒತ್ತಡ

ಪೆರಾಕ್ ರಣರಂಗದಲ್ಲಿ ಜಪಾನರ ಒತ್ತಡ ಹೆಚ್ಚುತ್ತಿದೆಯೆಂದು ಸಿಂಗಾಪುರ್ ಸುದ್ದಿ ಸಿಂಗಾಪುರದ ಮೇಲೆ ಈಗಲೂ ರಾತ್ರಿಕಾಲದಲ್ಲಿ ಧಾಳಿಯಾಗುತ್ತಲೇ ಇದೆ ಪೆರಾಕ್ ರಣರಂಗದ ಕೆಳಎಡಿಯಲ್ಲಿ ಜಪಾನರು ಬಂದಿಳಿದಿರುವರಂತೆ ಈ ಕಡೆಯಲ್ಲಿ ಬ್ರಿಟಿಷರು ಸ್ವಲ್ಪ ಹಿಂದೆ ಗೆದ್ದಿರುವರು

ಬಂಗಾಳದ ಮಂತ್ರಿ ಮಂಡಳದ ಬಿಕ್ಕಟ್ಟು ಬಗೆಹರಿಯಿತು

ಕಾಂಗ್ರೆಸ್ ಫಾರ್ವರ್ಡ್ ಬ್ಲಾಕ್ ಪಕ್ಷದ ಮುಂದಾಳು ಶ್ರೀ ಶರತ್ ಬೋಸರನ್ನು ಬಂಧಿಸಿ ಬಂಗಾಳದ ಹೊರಪ್ರಾಂತಕ್ಕೆ ಕೊಂಡೊಯ್ದುದು ನಿಮಿತ್ತ ನಿಷೇಧಸೂಚನೆಯಾಗಿ, ಅವರು ತಮ್ಮ ಪಕ್ಷದ ಮಂತ್ರಿಗಳಾದ ಸಂತೋಷ ಕುಮಾರ ಬಸು ಮತ್ತು ಪಿ. ಎಸ್ ಬೆನರ್ಜಿಯವರು ಮಂತ್ರಿ ಪದವಿಗೆ ರಾಜೀನಾಮೆ ಕೊಡಬೇಕೆಂದು ಹೇಳಿಕಳುಹಿಸಿದಂತೆ, ಅವರಿಬ್ಬರೂ ಪ್ರಧಾನ ಮಂತ್ರಿ ಹಕ್ಕರಲ್ಲಿ ರಾಜೀನಾಮೆ ಕೊಡಲು, ಅವರು ಅದನ್ನು ಅಂಗೀಕರಿಸದೆ, ಸರತ್ ಬೋಸರಿಗೆ ತಂತಿ ಕಳಿಸಿ, ಪರಿಸ್ಥಿತಿಗಳೆಲ್ಲವನ್ನೂ ಅವರಿಗೆ ವಿವರಿಸಿ, ರಾಜೀನಾಮೆ ಹಿಂತೆಗೆದುಕೊಳ್ಳಲು ಸಮ್ಮತಿಸುವಂತೆ ಮಾಡಿದರಾಗಿ ತಿಳಿದಿದೆ

ಬ್ರಿಟಿಷ್ ಸೈನಿಕರ ಸಾಹಸ

ಟ್ಯಾಂಕ್ ವಿರುದ್ಧ ಫಿರಂಗಿಯಿಂದ ಸಹಿತವಾದ ಬ್ರಿಟಿಷ್ ದಲದವರು ಎರಡು ದೋಣಿಗಳನ್ನು ಜೋಡಿಸಿ ಇಲ್ಲಿ ನದಿ ದಾಟುತ್ತಿದ್ದಾರೆ ಈ ಜನರು ಯುದ್ಧರಂಗದಲ್ಲಿದ್ದು, ಹೊಸ ಹೊಸ ವಿಧಾನ, ತಂತ್ರಗಳನ್ನು ಶೋಧಿಸಿ ಸೈನಿಕರಿಗೆ ಆಗಾಗ ತಿಳಿಸುವರು

ಪೆಸಿಫಿಕಿನ ಯುದ್ಧ ಧೋರಣೆ ಸಂಯುಕ್ತ ಸೇನಾಪತಿತ್ವ

ವೇವಲ್ಲರು ವಹಿಸುವರು

ವಾಶಿಂಗ್‌ಟನಿನಲ್ಲಿ ರೂಸ್‌ವೆಲ್ಟ್ ಚರ್ಚಿಲರು ಮಾತುಕತೆ ನಡೆಸಿದ ಫಲವಾಗಿ, ಸಂಯುಕ್ತ ಸೇನಾಪತಿತ್ವವು ವೇವಲರ ವಶಕೊಡಲಾಯಿತು, ಮೇಜರ್ ಜನರಲ್ ಎಚ್ ಜಿ. ಬ್ರೆಟರು ಅವರ ಕೈಕೆಳಗಿನ ಅಧಿಕಾರಿಗಳಾಗಿ ನೇಮಕ ಹೊಂದಿದರು

ಬಾರ್ಡಿಯಾದಲ್ಲಿ 5 ಸಾವಿರ ಶತ್ರುಗಳ ಕೈಸೆರೆ

ಬಾರ್ಡಿಯಾದಲ್ಲಿ 5 ಸಾವಿರ ಇಟಲಿಯನ್ ಜರ್ಮನ್ ಜನರನ್ನು ಕೈಸೆರೆ ಹಿಡಿಯಲಾಯಿತೆಂದು ತಿಳಿದಿದೆ

ಕೊರೆಗಿಡರ್ ಮೇಲೆ ಧಾಳಿ

ಜಪಾನರು 5 ಗಂಟೆಗಳ ವರೆಗೆ ಕೊರೆಗಿಡರಿನ ಮೇಲೆ ಧಾಳಿ ಮಾಡಿದರೆಂದು ವಾಶಿಂಗ್‌ಟನ್ ವಾರ್ತೆ, ಮೂರು ಶತ್ರುವಿಮಾನಗಳು ಇದರಲ್ಲಿ ಉರುಳಿದವಂತೆ. ಮನಿಲಾ ಆಖಾತದಲ್ಲಿ ಈ ಕೊರೆಗಿಡರ್ ಪ್ರದೇಶವಿದೆ.

'ರಕ್ಷಣೆಯ ಭಾರ ನಮಗೊಪ್ಪಿಸಲಿ ಹೋರಲು ಸಿದ್ಧರಿರುವೆವು'

ರಾಜಾಜಿ ಹೇಳಿದರು

"ಹಿಂದುಸ್ತಾನದ ರಕ್ಷಣೆಯ ಭಾರವನ್ನು ಬ್ರಿಟಿಷ ಸರಕಾರದವರು ನಮಗೆ ಒಪ್ಪಿಸಿದರೆ ಮತ್ತು ಅದಕ್ಕೆ ಅವಶ್ಯವಾದ ಅಧಿಕಾರಗಳನ್ನು ನಮ್ಮ ವಶಬಿಟ್ಟರೆ ಆ ಜವಾಬ್ದಾರಿಯನ್ನು ಹೊರಲು ನಾವು ಸಿದ್ಧರಿದ್ದೇವೆ. ನಮ್ಮ ಸಂರಕ್ಷಣೆಯನ್ನು ನಾವೇ ಸಂಘಟಿಸಬೇಕು. ಅದೇ ಬಾರ್ಡೋಲಿ ನಿರ್ಣಯದ ಸಾರಾಂಶ" ಎಂದು ರಾಜಾಜಿ ಮದ್ರಾಸಿನ ಭಾಷಣವೊಂದರಲ್ಲಿ ಹೇಳಿದರು.

"ಜಪಾನರ ಧಾಳಿ, ಗಾಂಧಿಜಿಯನ್ನು ಕಾಂಗ್ರೆಸ್ ತ್ಯಜಿಸಿತೆಂಬ ಈ ವಿಚಾರ ಜನರು ಗಾಬರಿಗೊಂಡಿದ್ದರೆ, ಅವೆರಡು ನಿಜವಲ್ಲ ಜಪಾನಧಾಳಿಯೂ ಆಗುವುದಿಲ್ಲ, ಮಹಾತ್ಮರು ಕಾಂಗ್ರೆಸನ್ನು ಬಿಟ್ಟು ಹೋಗುವುದೂ ಇಲ್ಲ" ಎಂದೂ ಅವರು ಭಾಷಣ ಹೇಳಿದರು

ಭಾರತವನ್ನು ಸಮಾನ ಮಿತ್ರವಾಗಿ ಮಾಡಿ

ಮೂನ್ಜಿ ಹೇಳಿಕೆ

ಬಾರ್ಡೋಲಿಯ ನಿರ್ಣಯದ ಕುರಿತು ಮಾತನಾಡುತ್ತ ಶ್ರೀ ಮೂನ್ಜಿಯವರು ಈಗ ಭಾರತವನ್ನು ಬ್ರಿಟಿಷರು ಸಮಾನ ಮಿತ್ರನಾಗುವಂತೆ ಮಾಡುವುದು ವಿಹಿತವಾಗಿದೆಯೆಂದರು.

ಕರ್ನಾಟಕ

ಕೆ. ಪಿ. ಸಿ. ಸಿ ಸಭೆ

ಕರ್ನಾಟಕ ಪ್ರಾಂತೀಯ ಕಾಂಗ್ರೆಸ ಸಮಿತಿಯ ವಿಶೇಷ ಸಭೆಯು ಶನಿವಾರ ತಾರೀಕು ೧೦-೧-೪೨ನೇ ದಿವಸ ಮಧ್ಯಾಹ್ನ ೧ ಗಂಟೆಗೆ ಧಾರವಾಡದಲ್ಲಿ ಕಾಂಗ್ರೆಸ ಭವನದಲ್ಲಿ ಸೇರುವುದು. ಎಲ್ಲ ಸಭಾಸದರು ಸಭೆಗೆ ಬರಬೇಕಾಗಿ ಬಿನ್ನವಿಸುತ್ತೇನೆ ೧ ಸದ್ಯದ ಪರಿಸ್ಥಿತಿಯ ಸಮಾಲೋಚನೆ ೨ ಕಳೆದ ವರ್ಷ ನಡೆದ ಕಾರ್ಯದ ಪರಿಶೀಲನೆ ಮತ್ತು ಮುಂದಿನ ಕಾರ್ಯಕ್ರಮದ ಯೋಜನೆ ೩ ಅಧ್ಯಕ್ಷರ ಅಪ್ಪಣೆಯಿಂದ ಮುಂದೆ ಬಂದ ವಿಷಯಗಳ ವಿಚಾರಗಳನ್ನು ಇದರಲ್ಲಿ ನಿರ್ಮಿಸಲಾಗುವದೆಂದು ಶ್ರೀ ದತ್ತಾತ್ರೇಯ ಕರಮರಕರರು ತಿಳಿಸುತ್ತಾರೆ

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಕೌನ್ಸಿಲ್ ಸಭೆಯು ತಾ ೯ರಂದು ಧಾರವಾಡ ಕಾಂಗ್ರೆಸ್ ಆಫೀಸಿನಲ್ಲಿ ಅಪರಾಹ್ನ ೪ ಗಂಟೆಗೆ ಸೇರಲಿರುವದೆಂದೂ ತಿಳಿಸಿರುವರು

NOTICE

In the Court of the Subordinate Judge of South Kanara

O S No. 64/1941.

Between

1 Mis Cyrilla Rebello
2. Marjorius Rebello } Plaintiffs

and

1 Mis Bridgit Mathias 2 Charles Mathias } Defendants

To

The 2nd Defendant Charles Mathias son of the late Mr. D. Mathias Coffe planter, residing at 'Bloomfield' Kankanady Mangalore Town

Please take notice that the abovenamed Plaintiffs have filed the above suit for the recovery of Rs 4484-7-10 due under a pronote dated 10-1-36 executed by you and the 1st defendant in favour of plaintiffs. You are hereby informed that the said suit stands posted to 16-1-1942 for your appearance. If you fail to appear on that day you will be declared exparte and the suit will be decided accordingly.

(By order of Court)

Mangalore 7-1-1942. (Sd) P. D. Souza, B A B L (Sd) L. C. Pais, B A B L. Vakils for Plaintiffs

ಸಪ್ರು ಸಮಿತಿಯವರು ಚರ್ಚಿಲರಿಗೆ ತಂತಿ ಕಳುಹಿಸಿದ್ದಾರೆ!

ಸಪ್ರು ಮನವಿಗೆ ಒಪ್ಪಲು ಚರ್ಚಿಲರಿಗೆ ಒತ್ತಾಯ

ದಿಲ್ಲಿಯಲ್ಲಿ ಊಹೆ

ಸಪ್ರು ಮೊದಲಾದ ಮುಂದ್ರ ಪಕ್ಷದ ಮುಖಂಡರು ಕಳುಹಿಸಿದ ತಂತಿ ಮೂಲಕದ ಮನವಿಗೆ ಒಪ್ಪುವಂತೆ ಚರ್ಚಿಲರಿಗೆ ಇಂಡಿಯಾ ಸರಕಾರದ ಕಡೆಯಿಂದ ಒತ್ತಾಯ ಹಾಕಲಾಗಿದೆಯೆಂದು ದಿಲ್ಲಿಯಲ್ಲಿ ಊಹಾಪೋಹೆಯುಂಟಾಗಿದೆ.

"ನಾನು ಕಾಂಗ್ರೇಸನ್ನು ಬಿಟ್ಟಿಲ್ಲ ಕಾಂಗ್ರೆಸು ಅಹಿಂಸೆಯನ್ನೂ ಉಲ್ಲಂಘಿಸಿಲ್ಲ"

'ಬ್ರಿಟಿಷರೊಡನೆ ಒಪ್ಪಂದಕ್ಕೆ ರಿಯಾಯಿತಿಮಾಡಿದೆ'

ಗಾಂಧಿಜಿ ಹೇಳಿಕೆ

"ನನ್ನ ಅಭಿಮತವೇನಿದ್ದರೂ ನೀವೂ ನಿಮಗೆ ತೋರಿದಂತೆ ಈ ವಿಷಯದಲ್ಲಿ ವರ್ತಿಸಬೇಕು. ನಾನು ಕಾಂಗ್ರೆಸನ್ನು ಬಿಟ್ಟಿಲ್ಲ, ನನ್ನ ಸ್ಥಾನವು ಬೊಂಬಯಿ ನಿರ್ಣಯದಂದು ಇದ್ದಂತೆಯೇ ಇದೆ. ನಾನು ಕಾಂಗ್ರೆಸಿನ ಸೇವಕ. ಸತ್ಯ ಅಹಿಂಸೆಗಳಿಗೆ ಅನ್ವಯಿಸಿಕೊಂಡು ನಾನು ಕಾಂಗ್ರೆಸಿನ ಸೇವೆಮಾಡಲು ಇನ್ನೂ ಇಚ್ಛಿಸುತ್ತೇವೆ ವರ್ಕಿಂಗ್ ಕಮಿಟಿಯು, ಭಾರತಕ್ಕೆ ಸ್ವರಾಜ್ಯ ದೊರೆತರೆ ಯುದ್ಧದಲ್ಲಿ ಸಹಕರಿಸುವುದಾಗಿ ಹೇಳಿತು; ಇದರಿಂದ ಕಾಂಗ್ರೆಸು ಅಹಿಂಸಾ ತತ್ವವನ್ನು ಮುರಿದಂತೇನೂ ಆಗಲಿಲ್ಲ. ಇದರಿಂದ ಬ್ರಿಟಿಸಿನೊಡನೆ ಒಪ್ಪಂದ ಮಾಡಲು ಕೆಲವು ರಿಯಾಯಿತಿ ಮಾಡಿದಂತೆ ಮಾತ್ರ ಆಗಿದೆ. ರಾಜಾಜಿಯವರು ನಾವೆಲ್ಲರೂ ಶಸ್ತ್ರಬದ್ಧರಾಗಿ ಯುದ್ಧಕ್ಕೆ ತೆರಳಬೇಕೆನ್ನುತ್ತಾರೆ ಆದರೆ ಅದು ಎಲ್ಲರ ಅಭಿಪ್ರಾಯವಲ್ಲ." ಹೀಗೆಂದು ಮಹಾತ್ಮಾ ಗಾಂಧಿಜಿ ಗುಜರಾತ್ ಪ್ರಾಂತಿಕ ಕಾಂಗ್ರೆಸ್ ಕಮಿಟಿ ಆಶ್ರಯದಲ್ಲಿ ನಡೆದ ಸಭೆಯೊಂದರಲ್ಲಿ ಹೇಳಿದರು. "ಇಂದಿನ ಧಾಳಿಯ ಬೆದರಿಕೆಯ ಸಂಕಷ್ಟದ ಕಾಲದಲ್ಲಿ ನಾನು ಕೆಲಸಗಾರರನ್ನು ಸೆರೆಮನೆಗೆ ಕಳುಹಿಸಬಿಡುವುದಿಲ್ಲ"ವೆಂದೂ ಗಾಂಧಿಜಿ ಹೇಳಿದರು.

ಬರ್ಮೀಯರಿಗೆ ಆಣೆಯವರ ಭರವಸೆ

ಬರ್ಮ ರಂಗೂನುಗಳಲ್ಲಿ ನೆಲಸಿರುವ ಭಾರತೀಯರ ಬಗ್ಗೆ ಸಹಾನುಭೂತಿ ತೋರಿಸಿ, ಬ್ರಿಟಿಷ ಸಾಮ್ರಾಜ್ಯದ ಬೇರೆ ಬೇರೆ ದೇಶಗಳಲ್ಲಿರುವ ಹಿಂದೀಯರ ಖಾತೆಯ ಮಂತ್ರಿ ಶ್ರೀ ಎಂ. ಎಸ್. ಆಣೆಯವರು, ನಮ್ಮಿಂದ ಸಾಧ್ಯವಾದಷ್ಟು ಸಹಾಯ ಮಾಡುತ್ತೇವೆಂದು ಹೇಳಿ ಕಳುಹಿಸಿರುವರು.

ಮೆಹರಾಲಿಯನ್ನು ಕೈದು ಮಾಡಿದರು

ಅಖಿಲಭಾರತ ಕಾಂಗ್ರೆಸ್ ಸೋಶಯಲಿಸ್ಟ ಪಕ್ಷದ ಕಾರ್ಯದರ್ಶಿ ಯೂಸಫ್ ಮೆಹರಾಲಿಯವರನ್ನು ಲಾಹೋರಲ್ಲಿ ಬಂಧಿಸಿದರು.

ಬರುವ ಕಾಂಗ್ರೆಸ್ ಅಧಿವೇಶನ ಸೇರಲೇಬೇಕು

ರಾಮಗಡ್ ಕಾಂಗ್ರೆಸಿನಲ್ಲಿ ಮುಂದಿನ ಕಾಂಗ್ರೆಸ್ ಅಧಿವೇಶನಕ್ಕೆ ಪಂಜಾಬಿನಲ್ಲಾಗಲಿ ಮದ್ರಾಸಿನಲ್ಲಾಗಲಿ ಸ್ಥಳನೋಡಬೇಕೆಂದು ಮೌಲನಾ ಅಜಾದರಿಗೆ ಆ ಕೆಲಸ ಒಪ್ಪಿಸಿರುವುದಾಗಿ, ಯುದ್ಧಕಾಲದಲ್ಲಾದರೂ ಅಧಿವೇಶನ ಸೇರಬೇಕೆಂದೂ ತಕ್ಕ ಸ್ಥಳ ಬೇಗನೇ ನೋಡಿ ನಿಶ್ಚಯಿಸಬೇಕಾಗಿದೆಯೆಂದೂ ಮೌಲನಾ ಅಬುಲ್ ಕಲಂ ಅಜಾದರು ಹೇಳಿದರು.

ಎಚ್. ಜಿ. ವೆಲ್ಸರಿಗೆ ನೆಹರುಗಳ ಉತ್ತರ

ನೆಹರುಗಳು ಲಂಡನಿನ ನ್ಯೂಸ್ ಕ್ರಾನಿಕಲ್ ಪತ್ರಿಕೆಗೆ ಕೊಟ್ಟ ಲೇಖನವೊಂದನ್ನು ಶ್ರೀ. ಎಚ್. ಜಿ. ವೆಲ್ಸರು ಟೀಕಿಸಿ ಬರೆದ ವಿಷಯ ನೆಹರು ಉತ್ತರಕೊಡುತ್ತಾ, ವೆಲ್ಸರು ದೊಡ್ಡ ತತ್ವಜ್ಞರೂ

'ನಾನು ಕಾಂಗ್ರೆಸನ್ನು ಬಿಟ್ಟಿಲ್ಲ; ಕಾಂಗ್ರೆಸ್ ಅಹಿಂಸೆಯನ್ನು ಬಿಡಲಿಲ್ಲ!'

— ಗಾಂಧಿಜಿ ಹೇಳುತ್ತಾರೆ —

ಸಾವರ್ಕರ್ ಪ್ರಭೃತಿಗಳನ್ನು ಬಿಡುಗಡೆ ಮಾಡಿದರು ಕಲ್ಕತ್ತದಲ್ಲಿ ವಿಮಾನ ಧಾಳಿಯ ಎಚ್ಚರಿಕೆ

ಇತಿಹಾಸಕಾರರೂ ಇದ್ದು ತಾನು ಅವರ ಹಲವು ಪುಸ್ತಕಗಳನ್ನೋದಿ ಆನಂದಪಟ್ಟಿರುವೆನೆಂದೂ, ಆದರೆ ಅವರಿಗೆ ಭಾರತದ ವಿಷಯ ಬಹಳ ಸಂಕುಚಿತಜ್ಞನವಿರುವುದೆಂದೂ ಹೇಳಿ ಬ್ರಿಟಿಷ್ ಸರಕಾರವೆಂದರೆ ಎಚ್. ಜಿ. ವೆಲ್ಸರಲ್ಲವೆಂದು ತಾನು ತಿಳಿದಿರುವುದಾಗಿ ತಿಳಿಸುತ್ತೇನೆಂದೂ ಹೇಳಿರುವರು.

ಪೆಟ್ರೋಲ್ ಖಾಸಗಿ ಕಾರುಗಳಿಗೆ ಕಡಿಮೆ

ಪೆಟ್ರೋಲಿನ ಪೂರೈಕೆ ಮತ್ತಷ್ಟು ಕಡಿಮೆಯಾಗಿರುವುದರಿಂದ ಇನ್ನು ಮುಂದೆ ಕಡಿಮೆ ಪೆಟ್ರೋಲ್ ಕೊಡಲಾಗುವುದೆಂದೂ, ೧೯೪೧ರಲ್ಲಿ ಬಟ್ಟನು ಎಷ್ಟು ಪೆಟ್ರೋಲ್ ಉಪಯೋಗಿಸಿದನೋ ಅದರಲ್ಲಿ ಸೇಕಡಾ 60% ರಷ್ಟು ಇನ್ನು ಮುಂದೆ ಖಾಸಗಿ ಕಾರುಗಳಿಗೆ ಮೊದಲಿನ ಅರ್ಧದಷ್ಟು ಮಾತ್ರ ಕೊಡಲಾಗುವುದೆಂದೂ ಸರಕಾರವು ಪ್ರಕಟಿಸಿದೆ.

ಭಾರತದಲ್ಲಿ ಸಿರ್ಬಂಧ ಶಾಸ್ತ್ರೇ

ಸರಕಾರಕ್ಕೆ ಯುಕ್ತವೆಂದು ತೋರುವ ಯಾವ ಕಾರ್ಯದಲ್ಲಾದರೂ, ಯಾರನ್ನೂ ನೇಮಿಸಲೂ ಸರಕಾರಕ್ಕೆ ಅಧಿಕಾರವಿದೆ. ಇದಕ್ಕೆ ಆತಂಕಮಾಡಿದಲ್ಲಿ ಶಿಕ್ಷೆವಿಧಿಸಲಾಗುವುದೆಂದು ಇಂಡಿಯಾ ಸರಕಾರವು ಪ್ರಕಟಣೆ ಹೊರಡಿಸಿದೆ.

ಭಾರತಕ್ಕೆ ಬರ್ಮಾ ಅಕ್ಕಿ

ರಫ್ತು ಆಗುವಂತೆ ಇಂಡಿಯಾ ಸರಕಾರದವರು ಬರ್ಮಾ ಸರಕಾರದೊಡನೆ ಒಂದು ವ್ಯವಸ್ಥೆ ಮಾಡಿಕೊಂಡಿದ್ದಾರೆ.

ವಿನೋಬಬಾವೆ ಮದ್ರಾಸಿನಲ್ಲಿ

ವಿನೋಬಬಾವೆ ಮದ್ರಾಸಿನಲ್ಲಿ ಕಳೆದವಾರ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಭಾಷಣ ಮಾಡಿದರು. ಅವರು ಹಿಂದಿಯ ಅಂತರ್ ಪ್ರಾಂತೀಯ ಭಾಷೆಯಾಗಿರಬೇಕಾದ ಅವಶ್ಯಕತೆಯನ್ನು ತಿಳಿಸಿದರು ಭಾರತವು ಬಹುಕಾಲದ ಕಷ್ಟ ನಿಷ್ಠುರಗಳನ್ನು ಸಹಿಸಿ ಮುಂದೆ ಬೆಳಗಬೇಕಾಗಿದೆಯೆಂದರು.

ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು

ಕೋಕನಾಡಿನಲ್ಲಿ ಜರಗಿದ ಮಹಿಳಾ ಪರಿಷತ್ತಿಗೆ ಅಧ್ಯಕ್ಷೆಯರಾಗಿ ಆಗಮಿಸಿದ್ದು ಸ್ತ್ರೀ ಸಮಾಜದ ಏಳಿಗೆಯ ವಿಷಯ ವಿಚಾರ ಪಂಪೂರ್ಣ ಭಾಷಣವಿತ್ತರು.

ಬರ್ಮಾ ರಕ್ಷಣೆ ಬಗ್ಗೆ ಭರವಸೆ

"ಬರ್ಮಾ ರಕ್ಷಣೆ ವ್ಯವಸ್ಥೆಗಳು ಚೆನ್ನಾಗಿವೆ. ಅವುಗಳನ್ನು ಭದ್ರಪಡಿಸಲಾಗಿದೆ. ಬರ್ಮಾದ ಮೇಲೆ ಆಕ್ರಮಣ ಮಾಡಿ ಬರುವ ಯಾವ ಶತ್ರುವನ್ನೇ ಆಗಲೀ ಹಿಂದಕ್ಕೆ ಓಡಿಸಲು ಬರ್ಮಾಕ್ಕೆ ಶಕ್ತಿಯಿದೆ" ಎಂಬುದಾಗಿ ಬರ್ಮಾದ ಹೊಸ ಕಮಾಂಡರ್-ಇನ್-ಚೀಫರು ಭರವಸೆ ಕೊಟ್ಟಿದ್ದಾರೆ.

"ಸಿಂಗಾಪುರ-ಇಂಡಿಯಾ ಮತ್ತು ಬರ್ಮಾಗಳಲ್ಲಿ ಏರ್ಪಡಿಸಿರುವ ಸೈನ್ಯ ಬಲಗಳಿಂದ ಯಾವ ಶತ್ರುಗಳೂ ಬರ್ಮಾದ ಮೇಲೆ ಬರಲಾರರು. ಶತ್ರುಗಳನ್ನು ಸೋಲಿಸಿ ಓಡಿಸಬಹುದು" ಎಂದು ಹೇಳಲಾಗಿದೆ.

ಪುಂಡು ಪೋಕರಿಗಳಿಗೆ ಮರಣ ಶಿಕ್ಷೆ ಶತ್ರು ಧಾಳಿ ಕಾಲದಲ್ಲಿ ಸರಕಾರದ ಎಚ್ಚರಿಕೆ

ಶತ್ರು ಧಾಳಿ ಕಾಲದಲ್ಲಿ ಬರಬಹುದಾದ ಆನಂತರ ಪರಿಸ್ಥಿತಿಯಲ್ಲಿ ಹದ್ದು ಮೀರಿ ವರ್ತಿಸುವ ಪುಂಡು ಪೋಕರಿಗಳಿಗೆ ಮರಣ ದಂಡನೆಯನ್ನು ವಿಧಿಸಲು ಭಾರತ ಸರಕಾರದವರು ಶಾಸನ ವಿಧಾಯಿಸಿದ್ದಾರೆ. ಲೂಟಿಮಾಡುವುದು, ಬೆಂಕಿ ಹಚ್ಚುವುದು, ಶಸ್ತ್ರಾಸ್ತ್ರಗಳಿಂದ ಜನರನ್ನು ಗಾಯಗೊಳಿಸುವುದು, ಶತ್ರುಗಳಿಗೆ ಅನುಕೂಲವಾದ ಕಾರ್ಯಮಾಡುವುದು, ಹೆಂಗಸರ ಮೇಲೆ ಅತ್ಯಾಚಾರ ನಡೆಸುವುದು ಈ ಅಪರಾಧ ಮಾಡಿದವರಿಗೆ ಅಪರಾಧದ ಪ್ರಮಾಣದ ಪ್ರಕಾರ ಮರಣ ಶಿಕ್ಷೆಯನ್ನು ವಿಧಿಸಬಹುದು ಅಥವಾ ಈ ಅಪರಾಧಿಗಳಿಗೆ ಸಾಧಾರಣವಾಗಿ ಕೊಡುವ ಶಿಕ್ಷೆಗಳ ಜತೆಗೆ ಛಡೀ ಏಟನ್ನು ವಿಧಿಸಬಹುದು.

ಹೈದರಿ ಪರಿಸ್ಥಿತಿ ಚಿಂತಾಜನಕ

ಕೆಲವು ದಿನಗಳಿಂದ ಸರ್ ಅಕ್ಬರ್ ಹೈದರಿಯವರು ಅನಾರೋಗ್ಯದಿಂದ ಬಿದ್ದಿದ್ದು ಈಗ ಅವರ ಪರಿಸ್ಥಿತಿ ಚಿಂತಾಜನಕವಾಗಿಯೆಂದು ಸುದ್ದಿಬಂದಿದೆ

ಸೈನ್ಯಕ್ಕಾಗಿ ಡಾಕ್ಟರರ ಒತ್ತಾಯ

ಸೈನ್ಯಕ್ಕಾಗಿ ಹಿಂದುಸ್ಥಾನದಲ್ಲಿ ಡಾಕ್ಟರರನ್ನು ಒತ್ತಾಯದಿಂದ ಸಂಗ್ರಹಿಸುವುದಾಗಿ ದಿಲ್ಲಿಯ ಕೆಲವು ಪತ್ರಿಕೆಗಳಲ್ಲಿ ಪ್ರಸಿದ್ಧವಾಗಿದೆ ಆದರೆ ಸದ್ಯಕ್ಕೆ ಈ ಬಗೆಯ ವಿಚಾರವಿಲ್ಲವೆಂದು ತಿಳಿದಿದೆ. ಸರಕಾರದವರ 'ಸ್ವಯಂಪ್ರೇರಿತ' ಯೋಜನೆಯಿಂದಲೇ ಅನೇಕ ಜನ ಡಾಕ್ಟರರು ಸೇರಿರುವರಂತೆ. ಆಯ್. ಎಂ. ಎಸ್ ನಲ್ಲಿ ಸ್ತ್ರೀಯರನ್ನೂ ಸೇರಿಸುವ ಬಗ್ಗೆ ಭಾರತ ಮಂತ್ರಿ ಒಪ್ಪಿಗೆ ದೊರಕಿದೆಯಂತೆ

'ಅಹಿಂಸಾತತ್ವವನ್ನು ಕಾಂಗ್ರೆಸು ಬಿಡಬಾರದು'

ಎ. ಐ. ಸಿ. ಸಿ. ನಿರ್ದಾಕ್ಷಿಣ್ಯ ವಿಚಾರಿಸಬೇಕು. ಪ್ರಸಾದ, ಪಟೇಲ, ಕೃಪಲಾನಿ, ಘೋಷ ಇವರ ಹೇಳಿಕೆ

'ನಮ್ಮ ವೈಯುಕ್ತಿಕ ಅಭಿಪ್ರಾಯವು ಕಾಂಗ್ರೆಸು ಅಹಿಂಸೆಯನ್ನು ಬಿಡಬಾರದು ಎಂದಿದೆ ನಮ್ಮ ಅಭಿಪ್ರಾಯ ಪ್ರಚಾರಕ್ಕೆ ವರ್ಕಿಂಗ್ ಕಮಿಟಿ ಸಮ್ಮತಿಸಿದೆ ನಾವು ಅಭಿಪ್ರಾಯ ಪ್ರಚಾರಕ್ಕೆ ಹೊರಡುವುದಿಲ್ಲ. ಆದರೆ ಎ. ಐ. ಸಿ. ಸಿಯವರು ತಮ್ಮ ನಿರ್ದಾಕ್ಷಿಣ್ಯ ವಿಚಾರದಿಂದ ವರ್ಕಿಂಗ್ ಕಮಿಟಿ ನಿರ್ಣಯವನ್ನು ತೆಗೆದುಹಾಕುವರೆಂದು ನಾವು ನಂಬಿದ್ದೇವೆ ವರ್ಕಿಂಗ್ ಕಮಿಟಿ ನಿರ್ಣಯವನ್ನು ಮನ್ನಿಸುವುದು ದೇಶದ ಹಿತದೃಷ್ಟಿಯಿಂದ ಘಾತವಾಗಿದೆ' ಹೀಗೆಂದು ರಾಜೇಂದ್ರ ಪ್ರಸಾದ ವಲ್ಲಭಭಾಯಿ ಪಟೇಲ, ಆಚಾರ್ಯ ಕೃಪಾಲನಿ, ಪ್ರಫುಲ್ಲಚಂದ್ರ ಘೋಷ್ ಇವರು ಒಂದು ಪ್ರಕಟಣೆಯಿತ್ತಿರುವರು.

ಇಪ್ಪತ್ತಾರು ರಾಷ್ಟ್ರಗಳ ಸಂಯುಕ್ತ ಘೋಷಣೆ

ಹಿಂದುಸ್ಥಾನವು ಸಹಿ ಹಾಕಿದೆ!

ಹಿಟ್ಲರ್ ಶಾಹಿಯನ್ನು ನಿರ್ಮೂಲಮಾಡಲು ತಮ್ಮ ಶಕ್ತಿಯೆಲ್ಲವನ್ನೂ ವ್ಯಯಿಸುವುದಾಗಿ ಮತ್ತು ವೈರಿಯೊಡನೆ ಪ್ರತ್ಯೇಕ ಒಪ್ಪಂದ ಮಾಡಿಕೊಳ್ಳುವುದಿಲ್ಲವಾಗಿ ಚರ್ಚಿಲ್ ರೂಸ್‌ವೆಲ್ಟ್ ಸಹಿತ ೨೬ ರಾಷ್ಟ್ರಗಳ ಪ್ರತಿನಿಧಿಗಳು ವಾಶಿಂಗ್‌ಟನಿನಲ್ಲಿ ಒಂದು ಕರಾರು ಮಾಡಿದರಂತೆ. ಇದಕ್ಕೆ ಹಿಂದುಸ್ಥಾನದ ಪರವಾಗಿ ಗಿರಿಜಾಶಂಕರ ವಾಜಪೇ ದಸ್ಕತ್ತು ಹಾಕಿದರಂತೆ! ಚರ್ಚಿಲ್ ರೂಸ್‌ವೆಲ್ಟರ ಮಹತ್ವದ ಮಾತುಕತೆಯ ಒಂದು ಫಲಿತಾಂಶವು ಇದೀಗ ಹೊರಬಿದ್ದಂತಾಯಿತು.

ರಂಗೂನಿನಿಂದ ೫ ಸಾವಿರ ಜನರು ಮದ್ರಾಸಿಗೆ ಬಂದರು ೫೦೦ ಮಂದಿ ಗಾಯಗೊಂಡವರು

ರಂಗೂನಿನ ಮೇಲೆ ವಿಮಾನ ಧಾಳಿಯಾದುದರಿಂದಾಮು ಸುಮಾರು ೫ಸಾವಿರ ಮಂದಿ ಮದ್ರಾಸಿಗೆ ಬಂದಿರುವರು. ಅವರಲ್ಲಿ ೫೦೦ ಮಂದಿ ಗಾಯಗೊಂಡಿರುವರು. ಗುಜರಾತಿ, ಉತ್ತರ ಹಿಂದುಸ್ಥಾನ ದಕ್ಷಿಣ ಹಿಂದುಸ್ಥಾನದ ಜನರೆಲ್ಲಾ ಇರುವರು. ರಂಗೂನಿನಲ್ಲಿ ಇನ್ನೂ ಧಾಳಿಯಾಗುತ್ತಿರುವಾಗಲೇ; ಇವರು ಹಡಗ ಹತ್ತಿ ಹೊರಟರು.

'ಬರ್ಮಾ ಮತ್ತು ಭಾರತವನ್ನು ಸ್ವತಂತ್ರವಾಡಬೇಕು'

ಜಪಾನನ್ನು ಸೋಲಿಸುವ ಆಯುಧ, ಬಾರ್ಡೋಲಿ ನಿರ್ಣಯ ಕುರಿತು ರಾಜಾಜಿ

'ಪೂರ್ವಾಂಕ್ಷದ ಯುದ್ಧದಲ್ಲಿ ಒಳ್ಳೆಯ ಯಶಸ್ವಿ ಯುದ್ಧಮಾಡಬೇಕೆಂದು ಮನಸ್ಸಿದ್ದರೆ ಬರ್ಮ ಮತ್ತು ಭಾರತಗಳನ್ನು ಸ್ವತಂತ್ರವೆಂದು ಘೋಷಿಸಬೇಕು. ಹಾಗೆ ಮಾಡುವುದರಿಂದ ಇಡೀ ಯುದ್ಧದ ವಿಷಯವೂ ಜಾಣ್ಮೆ ವಹಿಸಿದಂತಾಗುವುದು. ಭಾರತದ ಅಸಂತುಷ್ಟಿಯನ್ನು ಸರಕಾರವು ಲಕ್ಷಿಸಿಕೊಂಡು ಅದರಂತೆ ಅವರು ಕೆಲಸಮಾಗಿಸದೆ, ಒತ್ತಾಯ ಮತ್ತು ಸುಲಿಗೆಯಿಂದ ಕಾರಭಾರ ನಡೆಸಿದರೆ ಹಿತವಾಗಲಾರದು ಇದೇ ಬಾರ್ಡೋಲಿಯ ಸಭೆಯಲ್ಲಿ ನಮ್ಮ ಗುರಿಯಾಗಿತ್ತು' ಎಂದು ಮೊದಲಾಗಿ ರಾಜಾಜಿ ಮೊನ್ನೆ ಮೊನ್ನೆ ಮದ್ರಾಸಿನಲ್ಲಿ ಹೇಳಿದರು

ಯುದ್ಧಕ್ಕೆ ಸಹಾಯಮಾಡಿರೆಂದು ನೆಹರುಗಳೊಡನೆ ಬಿನ್ನಹ

ಎಡ್ವರ್ಡ್ ಥಾಮ್ಸನರೆಂಬ ಪ್ರಸಿದ್ಧ ಇಂಗ್ಲಿಷ ಲೇಖಕರು ನೆಹರುಗಳಿಗೆ ಒಂದು ಪತ್ರಬರೆಯುತ್ತ, ಹಿಂದೂದೇಶದೊಡನೆ ಕೇಳಡಿ ಮಾಡಿದ ಬ್ರಿಟನಿನ ಯುದ್ಧ ಮುಗಿಯಿತೆಂದೂ ಇಂದು ಚೀನ ರಷ್ಯಗಳಂತೆ ಪ್ರತಿಯೊಂದು ರಾಷ್ಟ್ರವೂ ಅಸ್ತಿತ್ವಕ್ಕಾಗಿ ಹೋರಾಡಬೇಕಾಗಿದೆಯೆಂದೂ ವಿವರಿಸಿ ನೆಹರುಗಳನ್ನು ಸಹಾಯಕೊಡುವರೆ ಕೇಳಿರುವರು

ಚರ್ಚಿಲರಿಗೆ ಮುಂದಪಕ್ಷದವರ ತಂತಿ

ಕೂಡಲೇ ಬದಲಾವಣೆಯಾಗಬೇಕು

ಸಪ್ರು ಮೊದಲಾದ ಹನ್ನೆರಡು ಮಂದಿ ಮುಂದ್ರಪಕ್ಷದ ಮುಖಂಡರು, ಕೂಡಲೇ ಬ್ರಿಟಿಷರು ಭಾರತದ ಧೋರಣೆಯಲ್ಲಿ ಬದಲಾವಣೆ ಮಾಡಬೇಕೆಂದು ನಿವೇದಿಸಿ ಚರ್ಚಿಲರಿಗೆ ಒಂದು ತಂತಿಬಿಟ್ಟಿರುವರು. ಈ ತಂತಿಗೆ ಶ್ರೀನಿವಾಸ ಶಾಸ್ತ್ರಿ ಶಿವಸ್ವಾಮಿ ಅಯ್ಯರ್, ವೆಂಕಟ್ರಮಣ ಶಾಸ್ತ್ರಿ, ಜಗದೀಶ ಪ್ರಸಾದ್, ಸರ್ ಮಹಾರಾಜ ಸಿಂಗ್, ಜಯಕರ್, ಚುನಿಲಾಲ್ ಮೇಹ್ತಾ, ರಹಿಮ್‌ತೂಲ್ ಚಿನೋಯಿ, ಡಾ। ಸಚಿದಾನಂದ ಸಿಹಂ, ಮಹಮ್ಮದ್ ಯೂಸೆಫ್, ಎಸ್. ರಾಧಾಕೃಷ್ಣನ್ ಸರ್. ಎಂ. ವಿ. ಜೋಶಿ ಮತ್ತು ಸಪ್ರು ಇವರು ಸಹಿಹಾಕಿದ್ದಾರೆ.

ಕಲ್ಕತ್ತದಲ್ಲಿ ಯುದ್ಧ ಭಯದಿಂದ ಕಾಲೇಜುಗಳನ್ನು ಮುಚ್ಚಲಾಗಿದೆ ಪರೀಕ್ಷೆಗಳನ್ನು ಮುಂದಕ್ಕೆ ಹಾಕಲಾಗಿದೆ

ಕಲ್ಕತ್ತಾ ವಿಶ್ವವಿದ್ಯಾನಿಲಯದ ಆಜ್ಞೆ

ಕಲ್ಕತ್ತಾ ಮತ್ತು ಇತರ ಕೆಲವು ಮುಖ್ಯ ಪಟ್ಟಣಗಳ ಸುತ್ತಲೂ ಯುದ್ಧ ಪರಿಸ್ಥಿತಿ ದೆಸೆಯಿಂದ ಭಯವಿರುವುದರಿಂದ, ಚಿತ್ತಗಾಂಗ್, ಅಸಾನ್ಸಲ್ ಪಟ್ಟಣಗಳಿಗೆ ಮೂವತ್ತು ಮೈಲು ಸುತ್ತಳತೆಯುಳ್ಳ ಪ್ರದೇಶಗಳಲ್ಲಿ ಸ್ಕೂಲುಗಳನ್ನು, ಕಾಲೇಜುಗಳನ್ನು ಜನವರಿ ೧೫ನೆಯ ತಾರೀಖಿನವರೆಗೆ ಕಲ್ಕತ್ತಾ ವಿಶ್ವವಿದ್ಯಾನಿಲಯದ ಅಧಿಕಾರಿಗಳು ಮುಚ್ಚಿರುತ್ತಾರೆ ಮತ್ತು, ಕೆಲವು ತಿಂಗಳಿನಲ್ಲಿ ನಡೆಯತಕ್ಕ ವಿಶ್ವವಿದ್ಯಾನಿಲಯದ ಪರೀಕ್ಷೆಗಳನ್ನು ಮುಂದಕ್ಕೆ ಹಾಕಿರುತ್ತಾರೆ.

ಸಿನೆಮಾ ಪುಟ

ಸ್ನೇಹಪ್ರಭಾ—ಶಾಹು

ಸ್ನೇಹಪ್ರಭಾ ಕಿಶೋರ ಶಾಹು ಇವರ ಸುಂದರ ಸಮ್ಮಿಲನವಾದದ್ದು 'ಪುನರ್ ಮಿಲನ'ದಲ್ಲಿ ಈ ಚಿತ್ರದಲ್ಲಿ ಪ್ರಣಯಿ ಪ್ರಣಯಿನಿಯರಾಗಿ ಕಿಶೋರ ಶಾಹು ಮತ್ತು ಸ್ನೇಹಪ್ರಭಾ ನಟಿಸಿದರು. ಆದರೆ ಮುಂದೆ ಈ ಚಿತ್ರ ತೆಗೆದ ಕೆಲವೇ ದಿನಗಳಲ್ಲಿ ಅವರು ವಿವಾಹ ಮಂಟಪದಲ್ಲಿ ಪುನರ್ ಮಿಲನವಾದಾಗ ಮಾತ್ರ ಎಲ್ಲರಿಗೂ ಅರ್ಥವಾಯಿತು, ಅವರು ಅಷ್ಟೊಂದು ಪ್ರೇಮಾಭಿನಯ ಮಾಡಿದ್ದು ಅದು ಕೇವಲ ರಂಗಭೂಮಿಯ ನಟನೆಗಾಗಿಯಲ್ಲ, ಅವರ ಹೃದಯವನ್ನೇ ಬಿಚ್ಚಿ

'ಪುನರ್ಮಿಲನ್' ಚಿತ್ರದಲ್ಲಿ ಒಂದು ದೃಶ್ಯ
ಬೇಗನೇ ಬಾಲಾಜಿ ಟಾಕೀಸಿಗೆ ಬರಲಿದೆ

ತೋರಿಸಲೆಂದು. ಹಾಗೆಯೇ ಪುನರ್ಮಿಲನ ಚಿತ್ರವು ಪ್ರೇಮಿಗಳ ಸುಂದರಸಮ್ಮೇಳನವಾಗಿದೆ ಬೊಂಬಾಯಿ ಟಾಕೀಸಿನವರ ಚಿತ್ರ ಪಂಕ್ತಿಯಲ್ಲಿ ಇದು ಅದ್ವಿತೀಯವಾಗಿ ಜನರ ಮನಸ್ಸನ್ನು ಆಕರ್ಷಿಸುತ್ತದೆ ... ನೃತ್ಯ ನಿರ್ದೇಶಕನಾಗಿ ಸ್ನೇಹಪ್ರಭಾಳ ನರ್ತನಕ್ಕೆ ಹೊಸ ... ಕೊಟ್ಟಿದ್ದಾನೆ ಇದರ ಹಾಡುಗಳು ಸಂಗೀತ ಮಧುರವಾಗಿವೆ ಬೊಂಬಾಯಿ ಟಾಕೀಸಿನವರು ಈ ಚಿತ್ರದ ಬಳಿಕ ನಯ ಸಂಸಾರ ಜೂಲಾ 'ಅಂಜಾನ್' ಚಿತ್ರಗಳನ್ನು ತಯಾರಿಸಿದರು ಅವರ ಮುಂದಿನ ಚಿತ್ರ ನ ...

ಬೇಗನೇ 'ಉಜಾಲಾ' ಚಿತ್ರವನ್ನು ರಂಗಸ್ಥಳಕ್ಕೆ ತರಲಿರುವುದಾಗಿ ತಿಳಿದಿದೆ. ಬಹಳ ವಿನೋದಭರಿತವಾದ ಈ ಸರಳ ಕಥೆಯು ಇದರಲ್ಲಿ ಪ್ರೇಕ್ಷಕರನ್ನು ಸಂತೋಷಗೊಳಿಸುವುದು ನಾಸೀಮ್ ಪೃಥ್ವಿರಾಜ್ ಇವರು ಪ್ರಮುಖ ಪಾತ್ರದಲ್ಲಿ ತಮ್ಮ ಹಿಂದಿನ ನಟನೆಗಳನ್ನು ಮೀರಿ ನಿಂತಿರುವರು.

'ಮುನ್ಸಿಪಾಲಿಟಿ' ಮರಾಠಿ ಚಿತ್ರ

ಬ್ರಿಲಿಯೆಂಟ್ ಪಿಕ್ಚರ್ಸ್ ಲಿಮಿಟೆಡಿನವರ ಮರಾಠಿ ಚಿತ್ರ 'ಮುನ್ಸಿಪಾಲಿಟಿ' ಕೋಲಾಪುರದ ಚಿತ್ರಮಂದಿರದಲ್ಲಿ ಪ್ರಕಟಿಸಲಾಗಿದೆ ಇದನ್ನು ಹಿಂದಿಯಲ್ಲಿಯೂ ಮಾರ್ಪಡಿಸಲು ಯೋಜನೆ ನಡೆದಿದೆ 'ಪೂಜಾರಿ' ಎಂಬ ಕಥೆಯನ್ನು ಚಿತ್ರಿಸುವುದರಲ್ಲಿ ಶ್ರೀ ಕುಮಾರ ಸೇನ ಸಮರ್ಥರು ಈಗ ತತ್ಪರರಾಗಿರುವರು

'ಸಾಜನ್'

ಸುದರ್ಶನ್ ಪಿಕ್ಚರ್ಸಿನವರ ಈ ಚಿತ್ರವು ಬೊಂಬಾಯಿಯಲ್ಲಿ ಪ್ರದರ್ಶಿಸಲಾಗುತ್ತದೆ ಜಗದೀಶ ಶೆಟ್ಟಿ ಮತ್ತು ಹಸ್ನಾಬಾನು ಇದರಲ್ಲಿ ಮುಖ್ಯ ಪಾತ್ರ ವಹಿಸುತ್ತಾರೆ ಪ್ರೇಮ ಸಂಗೀತ, ವಿನೋದಗಳಿಂದ ಚಿತ್ರವು ಆಕರ್ಷಣೀಯವಾಗಿದೆ

'ತುಳಸೀ' ಸಿಕ್ರೋರ್ರೀ ಚಿತ್ರ

ಸಿರ್ಕೋರೀ ಚಿತ್ರಕಂಪೆನಿಯ ತುಳಸೀ ಬಹಳ

★

'ಅಮೃತ' ಚಿತ್ರದ ಒಂದು ದೃಶ್ಯ

★

ಬೇಗನೇ ಸೆಂಟ್ರಲ್ ಟಾಕೀಸಿಗೆ ಬರಲಿದೆ

★

'ಜೂಲಾ' ಪ್ರದರ್ಶಿತವಾಯಿತು

ಕಳೆದವಾರ 'ಜೂಲಾ' ಚಿತ್ರವು ಪ್ರದರ್ಶಿತವಾಯಿತು ಸುಂದರ ಸಂಭಾಷಣೆ, ಮನೋಹರ ಸಂಗೀತ, ಹಾಸ್ಯವಿನೋದಗಳಿಂದ ಇದು ರಂಜಿತವಾಗಿದೆ ಲೀಲಾ ಅಶೋಕರ ಸಮ್ಮೇಳನವು ಇದರಲ್ಲಿ ನವನವೀನವೆನಿಸಿದೆ ವಿ ಎಚ್ ದೇಸಾಯಿ ಸಹಾನವಾಜ್, ಮುಮ್ತಾಜಾಲಿ, ಮತ್ತು ಶಹಜಾದಿ ಇವರೂ ನಟಿಸುತ್ತಾರೆ. ಮುಮ್ತಾಜಾಲಿ ಶಹಜಾದಿ ನರ್ತನ ಮತ್ತು ಸಂಗೀತ ರಮಣೀಯವಿದೆ. ಬೊಂಬೇ ಟಾಕೀಸಿನ ಚಿತ್ರವೆಂದರೆ ಅದಕ್ಕೆ ಬೇರೆ ಪ್ರಶಂಸೆಯೇ ಬೇಕಾಗಿಲ್ಲ.

'ಉಜಾಲಾ' ಪೂರ್ತಿಗೊಳ್ಳುತ್ತಿದೆ,

ನಿರ್ದೇಶಕ ಕೆ. ಎಂ ಮುಲ್ತಾನಿಯವರು ಯಶಸ್ವಿಯಾಗಿ ನಡೆಯುತ್ತದೆ. ಮುಂಬಯಿಯಲ್ಲಿ ಪ್ರಾರಂಭವಾದ ವಾರದಲ್ಲಿಯೇ ಇದರಿಂದ ಐದುಸಾವಿರ ರೂಪಾಯಿಗಳು ಸಂಗ್ರಹವಾಗಿದೆ. ಶಾಲಿನಿ ಮತ್ತು ಲೀಲಾ ಎಂಬ ಹೊಸ ತಾರೆಗಳು ಇದರಲ್ಲಿ ಹೊಸತಾಗಿ ಚಲುವಾಗಿ ಅಭಿನಯಿಸುತ್ತಾರೆ ತುಳಸಿ ಎಂಬವಳು ಕಲ್ಲು ಮತ್ತು ಮೋಹನರನ್ನು ಚಿಕ್ಕಂದಿನಿಂದಲೇ ಒಲ್ಲವಳಾಗಿ ಬೆಳೆದ ಮೇಲೆ ಅವರಿಬ್ಬರನ್ನೂ ಆಕೆ ಸಮಾನವಾಗಿ ಪ್ರೀತಿಸುವುದರಿಂದ ಅವರಲ್ಲಿ ಯಾರನ್ನು ವರಿಸುವದೆಂಬ ವಿಷಯವೇ ಆಕೆಗೆ ತಿಳಿಯಲೊಲ್ಲದು. ಇಂತಹ ಸಂಕಟಮಯ ಸನ್ನಿವೇಶದಿಂದ ಕತೆ ಬೆಳೆಯುತ್ತದೆ ಶಾಲಿನಿ ತುಳಸೀ ಪಾತ್ರದಲ್ಲಿಯೂ ತ್ರಿಲೋಕ ಮೋಹನ ಪಾತ್ರದಲ್ಲಿಯೂ ನಟಿಸಿದ್ದಾರೆ.

'ಪಿಕ್ಚರ್ ಷೋ'

ಬೆಂಗಳೂರಲ್ಲಿ ಸಿನೆಮಾ ಪತ್ರಿಕೆ

ಬೆಂಗಳೂರಲ್ಲಿ ಪಿಕ್ಚರ್ ಷೋ ಎಂಬ ಹೆಸರಿನ ಹೊಸ ಸಿನೆಮಾ ಪತ್ರಿಕೆಯೊಂದು ಪ್ರಕಟವಾಗುವುದಾಗಿ ತಿಳಿದಿದೆ. ಚಿತ್ರ ಸಮಾಚಾರ ಪತ್ರಿಕೆಯ ಸಂಪಾದಕ ಶ್ರೀ ಎಚ್ ಆರ್ ಕೃಷ್ಣಮೂರ್ತಿಯವರು ಸಂಪಾದಕರಾಗಿಯೂ, ಕಥಾವಳಿ ಪತ್ರಿಕಾ ಸಂಪಾದಕ ಶ್ರೀ ಸುಬ್ಬರು ಪ್ರಕಾಶಕರಾಗಿಯೂ ಇರುವರೆಂದು ವಾರ್ತೆಯಿದೆ

ನಮ್ಮ 3 ಬ್ರಾಂಚುಗಳನ್ನು ಒಂದಾಗಿ ಸೇರಿಸಿ ಮಂಗಳೂರಿಗೆ ಬರುತ್ತಾರೆ.

ಬೊಂಬಾಯಿ ಜಿ. ಎ. ಸರ್ಕಸ್

ಕಂಪೆನಿಯವರು

ಮಂಗಳೂರು ಮೈದಾನಿನಲ್ಲಿ ಹಾಕಿರುವ ತಮ್ಮ ಭವ್ಯವಾದ ಡೇರೆಯಲ್ಲಿ

ತಾ. 6-1-1942ನೇ ಮಂಗಳವಾರ ರಾತ್ರಿ

9-30 ಘಂಟೆಗೆ ಪ್ರಾರಂಭ

ಪಾಶ್ಚಾತ್ಯ ದೇಶಗಳೆಲ್ಲಾ ಸಂಚರಿಸಿ ಲಕ್ಷಾಂತರ ಜನಗಳಿಂದ ಎಲ್ಲಾ ವಿಧದಲ್ಲಿ ಅತ್ಯುತ್ತಮ ಪ್ರದರ್ಶನ ಎಂದು ಪ್ರಖ್ಯಾತಿಗಳಿಸಿರುವ ಸರ್ಕಸ್ ಕಂಪೆನಿಯು ಇದೊಂದೇ!

101 ಪ್ರಖ್ಯಾತರಾದ ನಾನಾ ಜನಾಂಗದ ಆಕ್ಟರರು 101



85 ಭಾರಿ ಪ್ರ... ಪುಲಿ... —22 ಕುದುರೆಗಳು 7 ಆನೆಗಳು 20 ಸಿಂಹ ಮತ್ತು ... ಪ್ರಾಣಿಗಳು ಬಹಳ ಚಮತ್ಕಾರವಾದ ರೀತಿಯಲ್ಲಿ ಪ್ರದರ್ಶನವನ್ನು ಮಾಡುವುವು

ಕಫ, ಶೀತ ಮತ್ತು ಎದೆನೋವುಗಳನ್ನು ದಿನಂಪ್ರತಿ ಪೆಪ್ಸು ತೆಗೆದುಕೊಳ್ಳುವುದರಿಂದ ಗುಣಪಡಿಸಿರಿ

ಸಾಂಕ್ರಾಮಿಕ ಕಫ ಎದೆನೋವ, ಶೀತಾದಿಗಳನ್ನು ಬೆಳೆಯಬಿಡಬೇಡಿರಿ ಅದು ನಿಮ್ಮ ಜೀವನಾನಂದವನ್ನು ಕೆಡಿಸುವುದು ಕೆಲವು ಪೆಪ್ಸುಗಳನ್ನು ಕೈಯಲ್ಲಿ ತೆಗೆದುಕೊಳ್ಳಿ ಅಗತ್ಯವಿದ್ದಾಗೆಲ್ಲಾ ಈ ವಿಷಹಾರೀ ಶ್ವಾಸಯೋಗ್ಯ ಮಾತ್ರೆಗಳನ್ನು ಸೇವಿಸಿರಿ.

ಬಾಯಲ್ಲಿ ಹಾಕಿದ ಕೂಡಲೇ ಕರಗುವ ... ಪೆಪ್ಸು ಮಾತ್ರೆಗಳು ಉತ್ತಮ ಔಷಧಿ ಸತ್ವದಿಂದ ಕೂಡಿದ ರಸವನ್ನು ನಿಮ್ಮ ಶ್ವಾಸಕೋಶಕ್ಕೆ ತಲುಪಿಸುವವು ಹೀಗೆ ಶ್ವಾಸನಾಳದ ನೋವನ್ನು ಪೆಪ್ಸು ಗುಣಗೊಳಿಸಿ ಕಫವನ್ನು ನಿಲ್ಲಿಸುವುದು ಕಂಠನಾಳವನ್ನು ಸರಿಗೊಳಿಸುವುದು ಕೆಟ್ಟ ಶೀತ, ಇಂಪ್ಲುಯೆಂಜಾ ಕಫ ಮೊದಲಾದುವುಗಳಿಗೆಲ್ಲ ಇದು ಅತ್ಯುತ್ತಮ ಔಷಧಿ. ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ಪೆಪ್ಸು ಒಂದು ರೂಪಾಯಿ ಬೆಲೆಗೆ ದೊರಕುತ್ತವೆ



ಏಜಂಟ್ಸ್ ಮೆಸರ್ಸ್ ರಾಧಾ ಎಂಡ್ ಕೊ,
ಪೋ. ಬಾ. ಮದರಾಸು

ಪೆಪ್ಸು ಸೇವಿಸಿರಿ

PEPS

ವಿಷಹಾರೀ ಶ್ವಾಸಯೋಗ್ಯ ಮಾತ್ರೆಗಳು

ವಿಚಿತ್ರ ಪ್ರಪಂಚ

ಕಲ್ಲಿನಲ್ಲಿ ಕಾಲಡಿ ಗುರುತು

ಮಧ್ಯ ಅಮೆರಿಕನ್ ರಾಷ್ಟ್ರಗಳಲ್ಲಿ ಒಂದಾದ ನಿಕರಾಗುವದಲ್ಲಿ ಶತಮಾನಗಳ ಹಿಂದೆ ಒನ್ನು ಭೂಕಂಪವುಂಟಾಗಿ ಅನೇಕ ಮಂದಿ ಸತ್ತರೆಂದು ಇತಿಹಾಸವಿದೆ. ಅದರಲ್ಲಿ ಇಬ್ಬರು ಜೀವವುಳಿಸುವ ಸಲುವಾಗಿ ಕೆಸರಲ್ಲಿ ಉರುಳಿಕೊಂಡು ಸಮೀಪದ ಸರೋವರ ಬಂದನ್ನು ತಲುಪಿ ಜೀವಬದುಕಿಸಿ ಕೊಂಡರಂತೆ.

ಈಗ ಆ ಕೆಸರ ಸ್ಥಳವು ಕಲ್ಲಾಗಿದೆ. ಅಲ್ಲಿ ಕಾಲಡಿಯ ಗುರುತು ಇದೆ. ಕೆಸರು ಕ್ರಮೇಣ ಕಲ್ಲಾದಂತೆ ಅವರ ಹೆಜ್ಜೆಯ ಗುರುತು ಹಾಗೆಯೇ ಉಳಿದಿರಬೇಕೆಂದು ಊಹನೆ. ಈ ಗುರುತು ಸುಮಾರು ಐದು ಸಾವಿರ ವರ್ಷಗಳ ಹಿಂದಿನ ಕಾಲಗುರುತುಗಳೆಂಬುದಾಗಿ ಸಂಶೋಧಕರ ಅಭಿಪ್ರಾಯವಾಗಿರುವುದು.

ಹಿಂದೂದೇಶದ ಜನಗಣನೆ

ಹಿಂದೂದೇಶದ ಜನಗಣನೆಯಲ್ಲಿ ವರ್ಷ ವರ್ಷವೂ ಅಧಿಕ್ಯವು ತೋರುತ್ತದೆ. ಮೊದಲನೆಯ ಜನಗಣನೆಯಾದದ್ದು 1871ನೆಯ ನವಂಬರ 17ರಲ್ಲು. ಕಳದ 70 ವರ್ಷಗಳಿಂದ ಹೇಗೆ ಜನಸಂಖ್ಯೆ ಹೆಚ್ಚಾಗಿದೆಯೆಂಬುದನ್ನು ಕೆಳಗಿನ ಲೆಕ್ಕದಿಂದ ತಿಳಿದುಕೊಳ್ಳಬಹುದು.

1871ರಲ್ಲು	— 206	ಮಿಲ್ಲಿಯ
1881 ,,	— 253	,,
1891 ,,	— 287	,,
1901 ,,	— 294	,,
1911 ,,	— 315	,,
1921 ,,	— 318	,,
1931 ,,	— 352	,,
1941 ,,	— 388	,,

ವಿದ್ಯುತ್ ಕಿವಿ

ವಿದ್ಯುತ್ತಿನ ಕಿವಿಯನ್ನು ಈಗ ತಯಾರಿಸಿದ್ದಾರೆ ವೈಜ್ಞಾನಿಕರು. ಇದರಿಂದ ಶಬ್ದವನ್ನು ಅಳೆಯಬಹುದಂತೆ. ಮನುಷ್ಯನ ಕಿವಿಗೆ ಸೂಕ್ಷ್ಮ ಶಬ್ದಗಳನ್ನು ಗ್ರಹಿಸಲು ಅನೇಕ ಕಾರಣಗಳಿಂದ ಶಕ್ತಿಸಾಲದೆಂದು ಈ ಹೊಸ ತರದ ಯಂತ್ರಮಾಡಿದ್ದಾರೆ.

ಮೆಲ್ಲಗೆ ಶ್ವಾಸ ಎಳೆಯುವ, ಮರದ ಎಲೆ ಅಲ್ಲಾಡುವ ಇಂತಹ ಶಬ್ದಗಳನ್ನೂ ಈ ವಿದ್ಯುತ್ತಿನ ಕಿವಿಯಿಂದ ಗ್ರಹಿಸಬಹುದಾಗಿ ತಿಳಿದುಬಂದಿದೆ. ಇದು ಮಾತ್ರವಲ್ಲದೆ ಇನ್ನೂ ಕೆಲವು ಪ್ರಯೋಜನಗಳಿವೆ. ಎಂಜಿನಿಯರನಿಗೆ ಶಬ್ದ ಕಡಿಮೆ ಮಾಡಲಿಕ್ಕೂ, ಕಾರ್ಖಾನೆಯಿಂದ ಹೊರಡುವ ಸಾಮಾನುಗಳ ಶಬ್ದ ಗ್ರಹಿಸಿಕೊಳ್ಳಲಿಕ್ಕೂ ಇದರಿಂದ ಸಹಾಯವಾಗುವುದೆಂದೂ ತಿಳಿದಿದೆ.

ಹಿಂದೂದೇಶಕ್ಕೆ ಹಳದಿಜ್ವರ

ಇಂದಿನ ಯುದ್ಧವೇಗದಲ್ಲಿ ಹಿಂದೂದೇಶಕ್ಕೂ ಹಳದಿ ಜ್ವರವು ಹರಡುವ ಹೆದರಿಕೆ ಕೆಲವರಿಗೆ ಹುಟ್ಟಿದೆ. ಹಳದಿ ಜ್ವರವೆಂಬುದು ಅದ್ಭುತ ಮಾರಣ ಜ್ವರ. ಅದು ಹಿಡಿದವರು ಬದುಕುವುದಿಲ್ಲ. ಇಂದು ಒಂದೂರಿಂದ ಇನ್ನೊಂದೂರಿಗೆ ವಿಮಾನಗಳು ಹಾರಾಡುತ್ತಿರುವಾಗ ರೋಗ ಕ್ರಿಮಿಗಳು ಅವುಗಳ ಮೂಲಕ ಪಸರಿಸಲು ಆಸ್ಪದವಿದೆ. ಅದ್ದರಿಂದ ಇತ್ತೀಚೆಗೆ ಕರಾಚಿಯಲ್ಲಿ ಬಂದಿಳಿವ ವಿಮಾನಗಳನ್ನು ಬಹಳ ಸೂಕ್ಷ್ಮವಾಗಿ ಪರೀಕ್ಷೆಸುತ್ತಾರೆ. ಅದನ್ನು ತಡೆಯುವಂತಹ ದಾಕಳಿಗಳನ್ನು ಅಮೆರಿಕದಿಂದ ತರಿಸಲಾಗಿದೆ. ಡಿಲ್ಲಿಯ ಸರಕಾರೀ ಆಫೀಸಿನ ನೌಕರರಿಗೆ ದಾಕುಹಾಕಲಾಗಿದೆ. ಅಮೆರಿಕಕ್ಕೆ ಈ ರೋಗ ನಿವಾರಣಾ ಕಾರ್ಯದಲ್ಲಿ ತರಬೇತಿ ಹೊಂದಲು ಜನರನ್ನು ಕಳುಹಿಸುವ ಯೋಚನೆ ನಡೆದಿದೆ.

ವಿಜ್ಞಾನಯುಗ

ಜೀವವುಳಿಸುವ ಶೋಧನೆಗಳು

ಇಂದಿನೀ ಯುದ್ಧದಲ್ಲಿ ಜೀವವುಳಿಸುವ ಸಲುವಾಗಿ ಕಂಡುಹಿಡಿದ ಅನೇಕ ಶೋಧನೆಗಳು ಬಹುಕಾಲ ನಿಲ್ಲತಕ್ಕವುಗಳಾಗಿವೆ. ಗಾಯಗೊಂಡವರಿಗೆ ಹೊಸ ರೀತಿಯ ಆರೈಕೆಯ ಹೊಸ ಶೋಧನೆಯ ವಿಷಯ ಉದಾಹರಣೆಗಾಗಿ ಇಲ್ಲಿ ಕೊಡಲಾಗಿದೆ.

ಒಂದು ವಿಮಾನಧಾಳಿಯಾಗಿ ಗಾಯಗೊಂಡ ವರನೇಕರನ್ನು ಆಸ್ಪತ್ರೆಯೊಂದಕ್ಕೆ ಲಂಡನಿನಲ್ಲಿ ಸೇರಿಲಾಯಿತು. ಕೈಕಾಲು ಮುರಿದವರನೇಕರು ಇದ್ದರು. ಹಿಂದಿನ ಯುದ್ಧದಲ್ಲಾದರೆ ಹಾಗೆ ಕೈಕಾಲು ಗಾಯವಾದವರ ಕೈಗಳು ತುಂಡಾಗಿಯೇ ಹೋಗುತ್ತಿತ್ತು. ಈ ಸಲ ಹಾಗೆ ಆಗುವುದಿಲ್ಲ. ಸಲ್ಫೋನಮೈಡ್ ಎಂಬ ಹೊಸ ತರದ ಔಷಧಿಯಿಂದ ಅವರು ಕೈಕಾಲು ಉಳಿಸಕೊಂಡು ಗುಣ ಹೊಂದುವರು.

ಕಳದ ಸಲದ ಯುದ್ಧದಲ್ಲಿ ಹಲವು ಸಿಪಾಯಿಗಳು ಗುಂಡುಗಳಿಂದ ಸತ್ತದ್ದಕ್ಕಿಂತ ಹೆಚ್ಚು ಆದ ಗಾಯದ ನೋವಿನಿಂದ ಸತ್ತಿದ್ದಾರೆ. ಹಲವು ದಿನಗಳ ವರೆಗೆ ದೂರಗಾದೆ ಪ್ರಥಮ ಚಿಕಿತ್ಸೆ ಮಾತ್ರ ಅವರಿಗೆ ದೊರಕುತಿತ್ತು. ಆದರೆ ಈಗ ಅವರು ಬಹಳ ಬೇಗನೇ ಗುಣಹೊಂದುವಂತಹ ಔಷಧಿಗಳನ್ನು ಕಂಡುಹಿಡಿದಿರುವರು. ಸಲ್ಫೋನಮೈಡಿನಿಂದ ಬೆಕ್ಟೀರಿಯ ಹುಟ್ಟುವುದು. ಕೂಡಲೇ ನಿಲ್ಲುತ್ತದೆ. ಶರೀರಕ್ಕೆ ಏನೂ ಕಲೆ ಉಳಿಯದೆ ಗಾಯಹೋಗುವುದು.

ಚಾಕಲೇಟಿನಿಂದ ಗುಣ

ರಾಯ್‌ಕರ್ಟಿಸ್ ಎಂಬ ಏಳು ವರ್ಷಪ್ರಾಯದ ವೆಲ್ಸ್ ಹುಡುಗನು ಒಂದು ಪೆಟ್ಟಿಗೆ ಚಾಕಲೆಟಿನಿಂದ ಗುಣಹೊಂದಿದನು. ಆ ಹುಡುಗನು ಬಾಂಬಿನ ಪೆಟ್ಟಿನಿಂದ ಮೈಮರೆತಿದ್ದ; ಚಾಕಲೆಟಿನ ರುಚಿ ಸವಿದು ಆತನು ಗುಣಹೊಂದಿದ್ದಲ್ಲ; ಅದನ್ನು ನೋಡಿ ಆದ ಆನಂದದಿಂದ ಹುಡುಗ ಹುಷಾರಾದ.

ರಾಯ್ ಬಾಂಬಿನ ಧಾಳಿಗೆ ತುತ್ತಾದಾಗ, ಆವನ ಅಜ್ಜಿ, ಸೋದರಿ ಮೊದಲಾದವರು ಸತ್ತಿದ್ದರು; ಆತನ ತಲೆಗೂ ಗಾಯವಾಗಿತ್ತು. ನಾಲ್ಕು ವಾರ ಮೈ ಮರತೇ ಇದ್ದ. ಸುಲ್ಲಗೆ ಮತ್ತೆ ಎಚ್ಚರಗೊಂಡರೂ ಆತನಿಂದ ಮಾತನಾಡುವುದಾಗಲಿಲ್ಲ.

ಆತನ ಮಿದುಳನ್ನು ಅಮೆರಿಕದ ಸರ್ಜನ್ ಒಬ್ಬ ಒಪರೇಶನ್ ಮಾಡಿದ. ಅದರೂ ಮಾತು ಕತೆ ಆಡಲಿಲ್ಲ. ಆತನ ಚಿಕ್ಕಮ್ಮ ಆತನಿಗೆ ಒಂದು ಪೆಟ್ಟಿಗೆ ಚಾಕಲೆಟ್ ತಂದುಕೊಟ್ಟಳು. ಅದನ್ನು ಆತ ಹಲಕಾಲದಿಂದ ನೋಡಿರಲಿಲ್ಲ. ನೋಡಿದ ಕ್ಷಣವೇ ಚಾಕಲೆಟ್ ಎಂದು ಬೊಬ್ಬಿಟ್ಟ. ಒಂದು ವರ್ಷಗಳ ದೀರ್ಘ ಮೌನದ ಬಳಿಕ ಹುಡುಗ ಹೀಗೆ ಮಾತನಾಡಿದ. ಚಾಕಲೇಟ್ ಆತನನ್ನು ಮಾತನಾಡುವಂತೆ ಮಾಡಿತು.

ಟೆಲಿಫೋನಿನಿಂದ ರೋಗ

ಟೆಲಿಫೋನಿನ ಮೂಲಕ ಸಂಭಾಷಣೆ ಮಾಡುವಾಗ ಕ್ಷಯರೋಗವು ಹರಡುವುದೆಂಬ ಹೊಸ ಶೋಧನೆ ಬ್ರಿಟನಿನಲ್ಲಿ ನಡೆದು ಆ ಕುರಿತು ಅಲ್ಲಿ ಈಗ ಹೆಚ್ಚು ಜಾಗ್ರತೆ ತೆಗೆದುಕೊಳ್ಳುತ್ತಿದ್ದಾರೆ. ಬ್ರಿಟನಿನಲ್ಲಿ ಹಾಗಾದರೆ ನಮ್ಮ ದೇಶದಲ್ಲಂತೂ ಅಧಿಕ ಸಂಖ್ಯೆಯಿಂದ ಆಗಬೇಕಾಗಿದೆ. ಶೀತ ಜ್ವರ ಮೊದಲಾದ ರೋಗ ಕ್ರಿಮಿಗಳೂ ಟೆಲಿಫೋನಿನ ಮೂಲಕ ಅದರಲ್ಲಿ ಸಂಭಾಷಿಸುವವರಿಗೆ ಅನ್ಯೋನ್ಯ ಹರಡಲು ಆಸ್ಪದವಿರುವುದಾಗಿ ಈಗ ತಿಳಿದಿದೆ. ಇದರ ಕುರಿತು ಸಾರ್ವಜನಿಕ ಆರೋಗ್ಯ ಖಾತೆಯವರು ವಿಶೇಷ ಗಮನಕೊಡಬೇಕಾಗಿದೆ.

ಸ್ವದೇಶಾಭಿಮಾನಿಗೆ
ಜಾಹೀರಾತು ಕೊಡಿರಿ

ಸರಕಾರದ ಹೊಸ ಪಾಠಪಟ್ಟಿಗನುಸಾರವಾಗಿ ಬರೆದ
ನವೀನ ಭೂವಿವರಣೆ
ವಾಸುದೇವರಾವ್, ಎಂ. ಎ. ಎಲ್. ಟಿ. (Dip. Geogrhpy)
(ಭೂಗೋಳ ಶಾಸ್ತ್ರದಲ್ಲಿ ಡಿಪ್ಲೊಮಾ ಪಡೆದವರು)
ಈ ಪುಸ್ತಕಗಳನ್ನು ಪಡೆಕೊಂಡಲ್ಲಿ ವಿದ್ಯಾರ್ಥಿಗಳಿಗೆ ಎಟ್ಲಾಸ್ ಕೊಂಡುಕೊಳ್ಳುವ ಅವಶ್ಯವಿಲ್ಲ.
ಪ್ರತಿ ಪುಸ್ತಕದಲ್ಲಿ ಬಣ್ಣಬಣ್ಣದ ಭೂಪಟಗಳಿವೆ.
ಅನೇಕಾನೇಕ ಚಿತ್ರಪಟಗಳಿಂದ ಕೂಡಿದ್ದು, ಪ್ರತಿ ಪಾಠದ ಅಂತ್ಯದಲ್ಲಿ ಅಭ್ಯಾಸಗಳನ್ನೂ ಮಾದರಿ ಪ್ರಶ್ನೆಗಳನ್ನೂ ಕೊಟ್ಟಿದೆ.
4ನೆಯ ಪುಸ್ತಕ 0 6 0 5ನೆಯ ಪುಸ್ತಕ 0 7 0
6, 7 ಮತ್ತು 8ನೆಯ ಪುಸ್ತಕಗಳು ಅಚ್ಚಿನಲ್ಲಿವೆ.
ಪುಸ್ತಕಗಳು ಬೇಕಾದಲ್ಲಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.
ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.

ಡೋಂಗರೆ
ಬಾಲಾಮೃತವು
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ತೆಗೆದುಕೊಳ್ಳಿರಿ
ಎಂದು ನಂಬಿಗೆಯಿಂದ ಹೇಳಬರುವ
ದಮ್ಮಿಗೆ ಒಂದೇಒಂದು ಉಪಾಯ

ದಮ್ಮು ಒಮ್ಮೆಲೇ ನೆಟ್ಟಗಾಗಬೇಕು ಎಂಬ ಆಶೆಯಿಂದ ಅನೇಕರು ಕ್ಷಣಿಕಗುಣಕೊಡುವ ಔಷಧ ತೆಗೆದುಕೊಂಡು ಸತ್ತು ಹೋಗಿದ್ದಾರೆ. ಪುರೋಹಿತ ಶ್ವಾಸಹಾರೀಯು ಇಂಥದಲ್ಲ; ಆದರೆ ದಮ್ಮನ್ನು ಒಂದೆರಡು ದಿನ ನೊಂದಿಸದೆ ಮೆಲ್ಲಮೆಲ್ಲಗೆ ಸಮೂಲವಾಗಿ ಗುಣಮಾಡುವ ಉತ್ಕೃಷ್ಟಶಾಸ್ತ್ರೀಯ ಉಪಾಯವು. ಅದನ್ನು ತೆಗೆದುಕೊಳ್ಳಲು ಆರಂಭಿಸಿದ ಕೂಡಲೇ ಕೆಮ್ಮು ಹೋಗುವುದು, ತೇಕು ಕಡಿಮೆಯಾಗುವುದು; ಶೌಚದ ತೊಂದರೆ ಉಳಿಯುವುದಿಲ್ಲ. ಪಚನಕ್ರಿಯೆಯು ತಿದ್ದುವುದು, ಸಾವಕಾಶವಾಗಿ ಶಕ್ತಿ ಹೆಚ್ಚಾಗಿ ಪುಪ್ಪುಸ ಗಟ್ಟಿಮುಟ್ಟಾಗಿ ಕೊನೆಗೆ ದಮ್ಮು ಪೂರ್ಣವಾಗಿ ಗುಣವಾಗುವುದು.
ದಮ್ಮು, ತೇಕು, ಕೆಮ್ಮು, ಗಂಟಲು ಉರಿಯುವಂಥದು ಮುತ್ತೂ ಪುಪ್ಪುಸದ ಎಲ್ಲಾ ವಿಕಾರಗಳಿಗೆ ಪುರೋಹಿತ ಶ್ವಾಸಹಾರಿ ಪ್ಲೇನ (ನೀಲಿ ಪ್ಯಾಕಿಂಗ್) ಉಪಯೋಗಿಸಬೇಕು. ಬದ್ಧಕೋಷ್ಠ, ಮತ್ತೂ ಆಮ್ಲಪಿತ್ತ ಹೆಚ್ಚಾಗಿ ದಮ್ಮು ಹತ್ತಿದವರು ಶ್ವಾಸಹಾರಿ ಕಂಪೌಂಡ (ಕೆಂಪು ಪ್ಯಾಕಿಂಗ್) ತೆಗೆದುಕೊಂಡರೆ ಹೆಚ್ಚು ಗುಣ. ರೂ. 1-8; ರೂ. 4-2 ಕಿಮ್ಮತ್ತಿನಲ್ಲಿ ಸಣ್ಣ ದೊಡ್ಡ ಬಾಟಲಿಗಳಲ್ಲಿ ಎಲ್ಲಕಡೆ ಸಿಗುವವು. ತರಿಸಿಕೊಳ್ಳುವ ವಿಳಾಸ:—
ಡಾ॥ ಪುರೋಹಿತ ಫಾರ್ಮಸಿ, ಕೊಲ್ಲಾಪುರ.
ಇಲ್ಲವೇ ಮೆ॥ ವನಮಾಳೀ ಛೇಹಾ ಮತ್ತು ಕಂ., ಪ್ರಿನ್ಸೆಸ್‌ಸ್ಟ್ರೀಟ್, ಮುಂಬಯಿ.

ಪುರೋಹಿತ ಶ್ವಾಸಹಾರಿ

BHUVANENDRA PRODUCTS LTD.,

Head Office and Factory:

KATAPADI S. Kanara

Depots:

1 Maharatha Galli, Hubli

2 57 Big street, Triplicane, Madras

"BHUVANENDRA"

Danthadavan Choorna

Economical in use. Cheapest in value Genuine in quality and choiced by all Antiseptic, astringent, aromatic. Useful in Pyorrhoea, Alveolaris. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ
ಹಲ್ಲುಗಳೇ ಮುಖ್ಯ ಕಾರಣ
"ಭುವನೇಂದ್ರ"

ದಂತದಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ವ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸುವುದು

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಸ್ಥಳೀಯ ಸ್ಟಾಕಿಸ್ಟರು —

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್ ಲಿಮಿಟೆಡ್, ರಥಬೀದಿ
ರಾಘವೇಂದ್ರ ರಂಗ ಶೈ, ಮರ್ಚೆಂಟ್, ರಥಬೀದಿ
ಡಾ। ಎಮ್. ಎಸ್. ಪ್ರಭು, M B B ...

THE PIE-MONEY BANK, LTD

Maidan Road MANGALORE

Undertakes all kinds of Banking Business Current accoun at 2½% per annum Savings Bank Deposits at 1½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction chit Funds ranging from Rs 100 to Rs 5000 run regularly on systematic lines Unique Banking facilities to Businessmen and interested Public

Apply for particulars

K. R. GURU, *Managing Director*

The Bank of Mangalore Limited.

Branches MOODABIDRI & PADUBIDRI

HEAD OFFICE MANGALORE ESTD 1931

All kinds of Banking Business transacted

Fixed Deposits received at rates ranging from 3 to 5%

INTEREST PAYABLE QUARTERLY

Interest on Savings Bank Deposits allowed at at 2½%

THE

Combined Booking Agency, Mangalore.

Our Present Timing Lists

ARE

Available for sale

Price 0-2-0 per Copy

For Particulars Apply to :-

THE JOINT MANAGERS,

The Combined Booking Agency, Mangalore.

ಬಿಡಿ ಸಂಚಿಕೆ ಬೆಲೆ ಒಂದಾಣೆ | ವಾರ್ಷಿಕ ಚಂದಾ ರೂ. 3-0-0 | ಅಂಚೆ ವೆಚ್ಚ ಸೇರಿ ರೂ. 3—12—0 | Regd. No. M 3460

ಸ್ವದೇಶಾಭಿಮಾನಿ

[ಸಂಪುಟ 36] ತಾರೀಕು 9—1—1942 [ಸಂಚಿಕೆ 2]

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೊವಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ.

ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

AMRUTANJAN DEPOTS BOMBAY, MADRAS, CALCUTTA

ಹೊಸ ವರ್ಷದ ಅಭಿವಂದನೆ

ನಮ್ಮ ಎಲ್ಲಾ ಪೊಲಿಸಿದಾರರಿಗೂ, ಏಜಂಟರಿಗೂ ಕಂಪೆನಿಯ ವೈದ್ಯರಿಗೂ ಹಿತಚಿಂತಕರಿಗೂ

★ ನ★ವ★ವ★ರ್ಷ★ವು ★

ಆನಂದದಾಯಕವಾಗಿಯೂ ಅಭಿವೃದ್ಧಿಕರವಾಗಿಯೂ ಪರಿಣಮಿಸಲೆಂದು

ನಾವು

ಹೃತ್ಪೂರ್ವಕವಾಗಿ ಹಾರೈಸುತ್ತೇವೆ.

ಕೊಟ್ಟಿಕಾರ್ ಬ್ರದರ್ಸ್ ಲಿಮಿಟೆಡ್

ದಕ್ಷಿಣ ಹಿಂದೂಸ್ಥಾನದ ಪ್ರಾಮುಖ್ಯ ಏಜಂಟರು:

ಬೊಂಬಾಯಿ ಲ್ಯಾಫ್ ಎಶ್ಯೂರೆನ್ಸ ಕಂಪೆನಿ ಲಿಮಿಟೆಡ್.

ಉಡುಪಿ, ಮದ್ರಾಸು, ಬೆಂಗಳೂರು, ಟ್ರಿವೆಂಡ್ರಂ, ಮಂಗಳೂರು, ಕಲ್ಲಿಕೋಟೆ ಬೊಂಬಾಯಿ.

ಇಂದು ಮಲೆಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

ESTD. 1906

ಸ್ವದೇಶಾಭಿಮಾನಿ

SWADESHABHIMANI

್ರಟನಿನ ಹೊಸ ಟ ಕುಗಳು

KANNADA ILLUSTRATED WEEKLY

ದೇಶರಕ್ಷಣಾ ಕ್ರಮ ಪ್ರದರ್ಶನದ ಬಂಡಿ

18--1--1942

ಈ ಬಂಡಿಯು ಇಂಡಿಯಾ ಸರಕಾರದ ದೇಶರಕ್ಷಣಾ ಇಲಾಖೆಯವರು ಏರ್ಪಡಿಸಿದ ಒಂದು ಪ್ರದರ್ಶನದ ಬಂಡಿ ಅದರ ಉದ್ದೇಶವು ಹಿಂದುಸ್ಥಾನದ ರಕ್ಷಣಾಪಡೆಯ ಸಿದ್ಧತೆಯ ಸ್ಥಿತಿಯನ್ನು ತೋರ್ಪಡಿಸುವುದೇ ಇದೆ ಈ ಪಡೆಯಲ್ಲಿ ರೋಯಲ್ ಇಂಡಿಯನ್ ನೌಕಾಪಡೆ, ಭೂಸೈನ್ಯ ಮತ್ತು ವಿಮಾನ ಸೈನ್ಯಗಳ ಕಾರ್ಯಕ್ರಮವು ಸೇರಿದೆ

ಈ ಪ್ರದರ್ಶನದಲ್ಲಿ ಮೂರು ಭಾಗಗಳಿವೆ, ಮೊದಲನೆಯದು ಈ ರೈಲು ಬಂಡಿಯಲ್ಲಿಯೇ ಇರುವ ವಸ್ತು ಸಂಗ್ರಹ, ಎರಡನೆಯದು ಮಂಗಳೂರು ಸೆಂಟ್ರಲ್ ಮೈದಾನಿನಲ್ಲಿ ಒಂದು ರಂಗಸ್ಥಳದಲ್ಲಿ ತೋರಿಸುವ ಪ್ರದರ್ಶನ, ಮೂರನೆಯದು ಅದೇ ಮೈದಾನದಲ್ಲಿ ತೋರಿಸುವ ಸಿನೆಮಾ ಪ್ರದರ್ಶನ

1ನೆ ಬಂಡಿ—ರೊಯಲ್ ನೌಕಾಪಡೆಯ ವಸ್ತುಗಳ ಪ್ರದರ್ಶನ ಇವುಗಳಲ್ಲಿ ಹಿಂದುಸ್ಥಾನದಲ್ಲಿಯೇ ಕಟ್ಟಿ, ಸಮುದ್ರದಲ್ಲಿ ಇಳಿಸಿದ ಒಂದು ಸಣ್ಣ ಪರಿಮಾಣದ ಮಾದರಿ ಹಡಗು, ಬಾರೂದು, ಕಡಲಿನಲ್ಲಿ ಮುಳುಗುವುದಕ್ಕೆ ಇರುವ ಸಾಹಿತ್ಯ, ಕಡಲ ಆಳದಲ್ಲಿ ಸ್ಫೋಟಿಸುವ ಮದ್ದು ಇತ್ಯಾದಿ

2ನೆ ಮತ್ತು 3ನೆ ಬಂಡಿ–ಇವುಗಳಲ್ಲಿ ಸರಂಜಾಮುದ ಖಾತೆಯ ಮಾಸ್ಟರ್ ಜನರಲರು ತೋರಿಸುವ ವಸ್ತುಗಳು ಇವುಗಳಲ್ಲಿ ಬೇರೆ ಬೇರೆ ರೀತಿಯ ಮೋಟರ್ ಸಾಗುಬಂಡಿಗಳು, ಮೋಟರ್ ಬಂಡಿಗಳ ತುಂಡುಗಳು ಕೋವಿಗಳು, ಫಿರಂಗಿ ಮದ್ದು, ಬ್ರೆನ್‌ಗನ್, ಟೊಮ್ಮಿಗನ್, 2 ಇಂಚು ಅಗಲದ ಬಾಯಿಯುಳ್ಳ ಹವಿಟ್ಜರುಗಳು

4ನೆ ಬಂಡಿ–ಇದರ ನಿಶಾನಿ ಸಂಜ್ಞೆಗಳಿಂದ ಮಾತನಾಡುವ ರೋಯಲ್ ಪಡೆಯ ವಸ್ತುಗಳು ಇಂಡಿಯನ್ ಮೆಡಿಕಲ್ ಸರ್ವಿಸ್ (ಲಷ್ಕರಿ ವೈದ್ಯ ಖಾತೆಯ) ಸಾಹಿತ್ಯಗಳು ಇವುಗಳಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ವರ್ತಮಾನ ತಿಳಿಸುವ ಆಕಾಶವಾಣಿ ನಿಶಾನಿ ಮತ್ತು ಚಲಾವಣೆಯ ಸಾಹಿತ್ಯಗಳು ವೈದ್ಯಕೀಯ ಸಾಹಿತ್ಯಗಳಲ್ಲಿ ಅಪಘಾತ ಉಂಟಾದ ಸ್ಥಳದಿಂದ ಆಸ್ಪತ್ರೆ ವರೆಗೆ ಸಾಗಿಸುವ ಏರ್ಪಾಡುಗಳು ವೈದ್ಯಕೀಯ ಶಸ್ತ್ರ ಇತ್ಯಾದಿಗಳು

5ನೆ ಬಂಡಿ–ಇಂಡಿಯನ್ ವಿಮಾನಪಡೆ ಮತ್ತು ಇಂಡಿಯದ ಕ್ವಾರ್ಟರ್ ಮಾಸ್ತರ ಜನರಲರ ಸಾಹಿತ್ಯ ಸನ್ನಾಹಗಳ ಮೊದಲನೆಯದರಲ್ಲಿ ವಿಮಾನಗಳ ಮಾದರಿಗಳು ಎಂಜಿನುಗಳು ಬೋಂಬುಗಳು ರಾತೆ ಹಾರಾಡುವುದಕ್ಕೆ ಬೇಕಾ ಸಾಹಿತಗಳು ಎರಡನೆಯದರಲ್ಲಿ ಶಾಂತಿಯ ಕಾಲದಲ್ಲಿ ಇಂಡಿಯದ ಸೈನ್ಯಕ್ಕೆ ಸಿಗುವ ಆಹಾರದ, ಯುದ್ಧರಂಗದಲ್ಲಿ ಸಿಗುವ ಆಹಾರದ ಮಾದರಿಗಳು ಸಿಗುತ್ತವೆ

6ನ ಬಂಡಿ–ಕೆರೆನದಲ್ಲಿ ಜರಗಿದ ಯುದ್ಧದ ಒಂದು ಮಾದರಿಯನ್ನು ಮಧ್ಯೆಮಧ್ಯೆ ವಿವರಿಸಲಾಗುವುದು

ಚಪ್ಪಟೆ ಬಂಡಿ ನಂಬ 1—ಇದರಲ್ಲಿ 4 ಇಂಚು ಅಗಲದ ಬಾಯಿಯುಳ್ಳ ನೌಕಾಫಿರಂಗಿ ಇದೆ ಇದನ್ನು ವಿವರಿಸಲಾಗುವುದು.

ಚಪ್ಪಟೆ ಬಂಡಿ ನಂಬ್ರ2— ವಿಮಾನದಲ್ಲಿನ ತೋಟೆ ಹಾರಿಸುವ ವಿಧಾನವನ್ನು ಜನತೆಗೆ ವಿವರಿಸಲಾಗುವುದು

ಚಪ್ಪಟೆ ಬಂಡಿ ನಂಬ್ರ3—ಹತ್ಯಾರು ಸರಿಗೊಳಿಸುವ ಲೋರಿ

ಚಪ್ಪಟೆ ಬಂಡಿ4– ಸಿನೆಮಾ ಲೊರಿ ಮತ್ತು ಅದರ ಬೆಂಬಲವಾದ ಬಂಡಿ

ಚಪ್ಪಟೆ ಬಂಡಿ5–ಇದರಲ್ಲಿರುವ 30 ಹಂಡ್ರಡ್‌ವೆಟ್ ಲೊರಿಯೊಂದನ್ನು ಕೆಳಗಿಳಿಸಿ ರಂಗಸ್ಥಳದಲ್ಲಿ ಭಾಗ ಬೇರೆ ಬೇರೆಯಾಗಿ ವಿಂಗಡಿಸಿ ಪುನಃ ಜೋಡಿಸಿ ಓಡಿಸಿ ತೋರಿಸಲಾಗುವುದು

ಚಪ್ಪಟೆ ಬಂಡಿ6–ಇದರಲ್ಲಿರುವ ತಗಡುಗಳಿಂದ ಭದ್ರಪಡಿಸಿದ ಕೆರಿಯರನ್ನು ಕೆಳಕ್ಕಿಳಿಸಿ, ಜನತೆಗೆ ತೋರಿಸಿ ವಿವರಿಸಲಾಗುವುದು

ಚಪ್ಪಟೆ ಬಂಡಿ7–25 ರಾತ್ಲಿನ ಹವಿಟ್ಜರ್ ಮತ್ತು 3 7 ಇಂಚು ಅಗಲ ಬಾಯಿಯ ಹವಿಟ್ಜರ್ ಇದರಲ್ಲಿವೆ ಇವನ್ನು ರೈಲುಬಂಡಿಯಿಂದ ಕೆಳಗಿಳಿಸಿ ವಿವರಿಸಲಾಗುವುದು

ಚಪ್ಪಟೆ ಬಂಡಿ 8–ಇತ್ತೀಚೆಗೆ ತಯಾರಾದ ಹೊಸ ಮಾದರಿಯ ಟೆಂಕ್ ಇದನ್ನು ವಿವರಿಸಲಾಗುವುದು

ಮೈದಾನಿನಲ್ಲಿ ಆಗುವ ಪ್ರದರ್ಶನದಲ್ಲಿ ಟೆಂಕುಗಳು ಕೆರಿಯರುಗಳು, ಫೀಲ್ಡ್ ಮತ್ತು ಮೌಂಟನ್ ಗನ್ನು (ಫಿರಂಗಿ)ಗಳು ಮಾಡುವ ಕೆಲಸವನ್ನು ತೋರಿಸುವುದಲ್ಲದೆ ಬಗೆ ಬಗೆಯ ಬಕ್ಷಿಗಳನ್ನು ಇರಗೊಡಿಸುವ ವಿಧಾನ, ರಸ್ತೆ ಅಡ್ಡಗಟ್ಟುವ ಮತ್ತ ಸಿಡಿಮದ್ದು ತೋಟೆಗಳನ್ನು (ಇಂಡಿಯದ ಪ್ರಥಮ ವಿ ಸಿ ಯಾದ ಲೆಫ್ಟಿನೆಂಟ್ ಭಗತ್ ಮಾಡಿ ತೋರಿಸಿದಂತೆ) ಪ್ರದರ್ಶಿಸುವುದು ಈ ಪ್ರದರ್ಶನದಲ್ಲಿ ಇತ್ತಲಾಗೆ ತಯಾರಾದ ನೂತನ ಆಯುಧಗಳನ್ನು ಉಪಯೋಗಿಸುವ ವಿಧಾನ, ನಿಃಶಸ್ತ್ರ ಮಲ್ಲಯುದ್ಧ, ಯುದ್ಧರಂಗದಲ್ಲಿ ವೈದ್ಯಕೀಯ ಸೌಕರ್ಯಗಳು, ಶಸ್ತ್ರಾಸ್ತ್ರಗಳ ತಯಾರಿ ಮನೆಯುಳ್ಳ ಲೋರಿ ಇವುಗಳನ್ನೆಲ್ಲ ತೋರಿಸಲಾಗುವುದು

ಕತ್ತಲಾದ ನಂತರ ಮೈದಾನಿನ ಮಧ್ಯೆ ಒಂದು ಸಿನೆಮಾ ಪ್ರದರ್ಶನವಿದೆ ಇದರಲ್ಲಿ ಸೈನ್ಯವು ತರಬೇತಾಗುವ ಮತ್ತು ಯುದ್ಧಮಾಡುವ ವಿಧಾನವನ್ನು ತೋರಿಸಲಾಗುವುದು ವರ್ತಮಾನಗಳ ಫಿಲ್ಮುಗಳೂ ವಿನೋದಾವಳಿಯ ಫಿಲ್ಮುಗಳೂ ತೋರಿಸುವುದಲ್ಲದೆ ಸ್ಥಳೀಯ ಬ್ರೊಡ್‌ಕಾಸ್ಟಿಂಗ್ ಸ್ಟೇಶನಿನಿಂದ ಸಂಗ್ರಹಿಸಿದ ಸಮಾಚಾರವನ್ನು ತಿಳಿಸಲಾಗುವುದು

ಈಗಿನ ಯುದ್ಧರಂಗಗಳ ಸ್ಥಿತಿಯಲ್ಲಿ ಅದಿಗೆ ತಯಾರಾಗುವ ವಿಧಾನವನ್ನು ತೋರಿಸಲಾಗುವುದು

ಒಬ್ಬ ರಿಕ್ರೂಟಿಂಗ್ ಆಫೀಸರ್ ಮತ್ತು ಅವನ ಹಸ್ತಕರು ಭಂಡಿಯಲ್ಲಿದ್ದು ಕೇಳಿದ ವಿವರವನ್ನು ಹೇಳಿಕೊಡುವುದಲ್ಲದೆ ಸೈನ್ಯಕ್ಕೆ ಸೇರಲು ಉಮೇದ್ವಾರರಿಗೆ ವೈದ್ಯಕೀಯ ಪರೀಕ್ಷೆಯನ್ನು ಕೂಡಾ ಮಾಡಿಸುವರು

ದ ಕ ಜಿಲ್ಲಾ ಕಲೆಕ್ಟರವರಿಂದ ಮೈದಾನಿನ ಲ್ಲಿನ ಪ್ರದರ್ಶನವು 12 ಗಂಟೆಗೆ ತೆರೆಯಲಾಗುವುದು

GREETINGS

The Directors, Officers and Staff of the Canara Bank Limited join in sending you this message of appreciation for your goodwill and patronage during the last year. We sincerely wish you a Peaceful, Happy and Prosperous New year.

ESTD. 1906

CANARA BANK LTD.

ಯಾವಾಗಲೂ ಆತನು ಉತ್ಸಾಹಹೀನನಾಗಿದನು.

★ ಶರೀರದೊಳಗಡೆ ನಿರ್ಮಲವಾದುದರಿಂದ ಆತನು ಉತ್ತಮ ಸ್ಕೌಟಾದನು' ★

ಅಗ್ರೇಯ ಸ್ಕೌಟ್ ಆಗಬೇಕಾಗಿದ್ದರೆ ನೀವು ಶಕ್ತಿ ಮತ್ತು ಆರೋಗ್ಯಶಾಲಿಗಳಾಗಿರಬೇಕು ಆದ್ದರಿಂದ ನಿಮ್ಮ ಶರೀರದೊಳಭಾಗವು ನಿತ್ಯ ಶುಚಿಯಾಗಿರುವುದು ಅತ್ಯಂತ ಅವಶ್ಯವೆಂದು ನೆನಪಿನಲ್ಲಿಡಿರಿ ನಿಮ್ಮ ಶರೀರದೊಳಭಾಗವನ್ನು ನಿರ್ಮಲವಾಗಿಟ್ಟರೆ ಅಶುದ್ಧ ವಸ್ತುಗಳು ಹೊಟ್ಟೆಯೊಳಗೆ ಸೇರಿ ನಿಮ್ಮ ಆರೋಗ್ಯವು ಹಾಳಾಗಲಾರದು ನಿಮ್ಮ ಮೆದುಳು ಮತ್ತು ಶರೀರಗಳ ಶಕ್ತಿಗಳು ಕುಂದಲರವು ದಿನನಿತ್ಯ ಒಂದು ಗ್ಲಾಸು ತಂಪುಕೊಡುವ ಅಂಡ್ರೂಸ್ ಲಿವರ್ ಸಾಲ್ಟನ್ನು ತೆಗೆದುಕೊಳ್ಳುವುದರಿಂದ ಮಲಬದ್ಧತೆಯು ಬರಲಾರದು ಹಾಗಾಗಿ ಮತ್ತೆ ದೇಹದೊಳಗಿನ ಕೊಳೆಯು ಉಳಿಯಲಾರದು ಶರೀರವು ನಿರ್ಮಲವಾಗಿರುವುದು ದೇಹವು ಶಕ್ತಿಗೊಳ್ಳುವುದು.

ಅಂತರಂಗ ನೈರ್ಮಲ್ಯಕ್ಕೆ ದಿನನಿತ್ಯವೂ ನೀವು ಅಂಡ್ರೂಸ್ ಲಿವರ್ ಸಾಲ್ಟನ್ನು ತೆಗೆದುಕೊಳ್ಳಿರಿ

ANDREWS LIVER SALT



ಆರೋಗ್ಯಕರ ಮತ್ತು ಶುಚಿಕರಪಾನೀಯವುದ್ಧವಾದ ತಂಪುಕರ, ಮತ್ತು ಹಿತಕರ ಆನಂದಕರವಾದುದು ಸಣ್ಣ ಸೈಜಿಗೆ ಆ 11 ದೊಡ್ಡ ಸೈಜಿಗೆ ರೂ 1-4 0.

ಈ ಬೆಳಿಗ್ಗೆ ಮ್ಯಾಕ್ಲೀನ್ ಮಾಡಿದೆಯೋ?

ಓಹೊ! ಆರೋಗ್ಯಕರವಾದ ಹಲ್ಲುಗಳ ಲಾಭವು ನಿನಗೆ ತಿಳಿದಿದೆ

ಈ ಮನುಷ್ಯನಿಗೆ ಹಲ್ಲುಗಳು ಕೊಳೆತರೆ ಮತ್ತು ಬೆಳಿಯುವುದಿಲ್ಲವೆಂದು ತಿಳಿದಿದೆ ಅವನು ಪ್ರತಿ ರಾತ್ರಿಯೂ ಮತ್ತು ಬೆಳಗ್ಗೆಯೂ ಅತನು ಮ್ಯಾಕ್ಲೀನ್ ಪೆರಾಕ್ಸೈಡ್ ಟೂತ್‌ಪೇಸ್ಟನ್ನೇ ಉಪಯೋಗಿಸುತ್ತಾನೆ ನೀವು ರುಚಿಕರವಾದ ಬಾಯಿಯನ್ನೂ ಥಳಥಳ ಹೊಳೆಯುವ ಬಿಳಿಯ ಹಲ್ಲುಗಳನ್ನೂ ಹೊಂದಬಹುದು ಮ್ಯಾಕ್ಲೀನ್ ಉಪಯೋಗಿಸುವುದರಿಂದ

ಎಲ್ಲಾ ಕೆಮಿಸ್ಟರಲ್ಲಿ ದೊರೆ ಸ್ಟೋರುಗಳಲ್ಲಿ, ಗುತ್ತದೆ.

ಇಂಗ್ಲೆಂಡಿಗೆ ಅಮೆರಿಕದ ಸೈನ್ಯ
ರೂಸ್‌ವೆಲ್ಟರ ಘೋಷಣೆ

"ಜಪಾನ್, ಜರ್ಮನಿ, ಇಟಲಿ ಸರ್ವಾಧಿಕಾರಿತ್ವವು ನಾಶವಾಗುವವರೆಗೆ ನಾವು ಹೋರಾಡುವೆವು 'ಅದೇ ಉದ್ದೇಶದಿಂದ ಚರ್ಚಿಲರೊಡನೆ ವಿಚಾರವಿನಿಮಯ ಮಾಡಲಾಯಿತು. ಇಬ್ಬರೂ ಒಂದೇ ಬಗೆಯ ಕಾರ್ಯಕ್ರಮವಿಟ್ಟು ಹೋರಾಡುವೆವು. ರಶ್ಯ ಮತ್ತು ಚೀನಗಳು ನಮಗೆ ಬೆಂಬಲಕೊಡುವವು" ಎಂದು ಹೇಳುತ್ತಾ ರೂಸ್‌ವೆಲ್ಟರು ಇಂಗ್ಲೆಂಡಿಗೆ ಅಮೆರಿಕದ ಸೈನ್ಯ ಕಳುಹಿಸುವುದಾಗಿ ತಿಳಿಸಿದರು.

"ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

16—1—1942] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೧೬—೧—೧೯೪೨]

ಸಮರಭೂಮಿಯ ಸಂಚಾರ

ಮಲಯದಲ್ಲಿ ಜಪಾನರು ಈಗ ಅತ್ಯುಗ್ರ ಕಾದಾಟ ಹೂಡಿದ್ದಾರೆ. ಅಲ್ಲಿನ ರಬ್ಬರ್ ಕೇಂದ್ರವಾದ ಕೌಲಾಲಂಪುರದ ಮೇಲೆ ಜಪಾನರ ಧ್ವಜವು ಹಾರಾಡುತ್ತಿದೆಯೆಂದು ಜಪಾನಿ ಅಧಿಕಾರಿಗಳು ಹೇಳುತ್ತಾರೆ. ಕೌಲಾಲಂಪುರದ ಸಲುವಾಗಿ ಜಪಾನರು ಮಾಡಿದ ಹೋರಾಟವು ಅಪ್ರತಿಮವಾಗಿತ್ತು. ಈ ಪಟ್ಟಣವು ಸಿಂಗಾಪುರದಿಂದ ಕೇವಲ ೧೮೦ ಮೈಲು ದೂರವಿದೆ. ಸಿಂಗಾಪುರದ ಕಡೆಗೆ ಧಾವಿಸುತ್ತಿರುವ ಜಪಾನರು ೧೨ ಟನ್ ಭಾರದ ಟೇಂಕುಗಳನ್ನು ಉಪಯೋಗಿಸುತ್ತಿದ್ದಾರಂತೆ. ಮಲಯದಲ್ಲಿ ಅನೇಕ ವಸುಗಳನ್ನು ನಾಶಮಾಡಲಾಗಿದೆ. ೪೬ ವರ್ಷಗಳಿಂದ ನಡೆಯುತ್ತಿದ್ದ 'ಮಲಯ ಮೈಲ್' ಎಂಬ ಪತ್ರಿಕೆಯು ತನ್ನ ಕೊನೆಯ ಸಂಚಿಕೆಯನ್ನು ಮುದ್ರಿಸಿ ಮುದ್ರಣಾಲಯವನ್ನೇ ನಾಶಪಡಿಸಿದೆ. ಕಾರ್ಖಾನೆಗಾರರು ಕಾರ್ಖಾನೆಗಳನ್ನು ನಾಶಗೊಳಿಸಿದರು. ವೈರಿಗಳು ಬಂದಾಗ ಅವರ ಕೈಗೆ ಏನೂ ದೊರೆಯಲಾರದೆಂದು ಹೀಗೆ ಮಾಡಲಾಗುತ್ತದೆ.

ಬರ್ಮಾ ದೇಶದಲ್ಲಿ ಜಪಾನಿ ವಿಮಾನಗಳು ಅಲ್ಲಲ್ಲಿ ಬಾಂಬುಗಳನ್ನು ಸುರಿಸುತ್ತಿವೆ. ವೈರಿ ವಿಮಾನಗಳು ತೀರಾ ಕೆಳಗೆ ಹಾರಾಡಿ ಬಾಂಬುಗಳನ್ನೆಸೆದು ಹೋದವು. ಬರ್ಮಾದ ಗಡಿನಾಡಿನಲ್ಲಿ ಜಪಾನೀ ವಿಮಾನಗಳನ್ನೋಡಿಸುವ ಬ್ರಿಟಿಷ್ ವಿಮಾನ ದಳದವರು ಧಾಳಿಮಾಡಿದರೆಂದು ಹೇಳಲಾಗಿದೆ. ಉತ್ತರ ಮತ್ತು ಥಾಯಿಲೆಂಡುಗಳಲ್ಲಿ ಜಪಾನರು ಆಕ್ರಮಿಸಿದ ವಿಮಾನ ನಿಲ್ದಾಣಗಳ ಮೇಲೆ ಬ್ರಿಟಿಷರು ಹೆಚ್ಚುಹೆಚ್ಚಾಗಿ ಧಾಳಿಮಾಡುತ್ತಿರುವರೆಂದು ಹೇಳಲಾಗಿದೆ. ಸ್ಲೋನ್ ನದಿಯ ಭಾಗದಲ್ಲಿ ಬ್ರಿಟಿಷ್ ಸೈನ್ಯಗಳು ಮತ್ತಷ್ಟು ಹಿಂದಕ್ಕೆ ಸರಿಯುತ್ತಿವೆ. ಇಲ್ಲಿಯೂ ಕಾಳಗವು ಭೀಕರವಾಗಿದೆ.

ಬೋರ್ನಿಯೋದ ಈಶಾನ್ಯದಲ್ಲಿರುವ ಸಮೃದ್ಧ ಎಣ್ಣೆ ಕಣಿಗಳಿಂದ ಕೂಡಿರುವ ತಾರಾಕಾನ ದ್ವೀಪವು ನಿನ್ನಿನ ದಿವಸ ನಮಗೆ ಶರಣು ಬಂದಿತೆಂದು ಜಪಾನರು ಹೇಳುತ್ತಾರೆ. ಅದಲ್ಲದೆ ಮಿನಾಡೋ ಎಂಬ ಮಹತ್ವದ ಪಟ್ಟಣವನ್ನು ಜಪಾನರು ಸ್ವಾಧೀನಪಡಿಸಿಕೊಂಡರೆಂದೂ ಅವರು ಸಾರುತ್ತಿರುವರು. ಸೆರೆಂಬನ್‌ನ ಮೇಲೆ ಬಾಂಬುಗಳು ಒಗೆಯಲ್ಪಟ್ಟವು. ಜೋಹೋರದ ಆಗ್ನೇಯದಲ್ಲಿ ಒಂಬತ್ತು ಜಪಾನಿಗಳು ಮಲಯಿಗಳ ವೇಷದಲ್ಲಿ ಬಂದಿಳಿದಿದ್ದವರನ್ನು ಕೂಡಲೇ ಸೆರೆಹಿಡಿಯಲಾಯಿತು. ಮ್ಯಾಕ್‌ಸಾರದಲ್ಲಿಯೂ ಕಾರಾಕಾನದಲ್ಲಿಯೂ ಜೋರಿನ ಯುದ್ಧವೇ ನಡೆಯಿತು. ಮ್ಯಾಕಸಾರದಲ್ಲಿ ಇನ್ನೂ ಜಪಾನರು ಬಹಳ ಸೈನ್ಯಗಳನ್ನು ತಂದಿಳಿಸುತ್ತಿರುವರು. ನೆದರ್ಲಾಂಡಿನವರು ತಾರಕಾನವನ್ನು ಸಂರಕ್ಷಿಸಿಕೊಳ್ಳಲು ಅಶಕ್ತರಾದರೆ ಎಲ್ಲಾ ಕಾರಖಾನೆಗಳನ್ನೂ ಎಣ್ಣೆ ಕಣಿಗಳನ್ನೂ ನಾಶಪಡಿಸುವ ಯೋಚನೆ ಮಾಡಿರುವರು. ಸೆಲನಗೋರ ಪ್ರದೇಶದಲ್ಲಿ ತೀವ್ರ ಯುದ್ಧ ನಡೆಯುತ್ತಿರುವುದೆಂದೂ ಬ್ರಿಟಿಷ್ ಸೈನಿಕರು ಸೆರೆಂಬನದ ಉತ್ತರಕ್ಕೆ ಸರಿದ ಕೂಡಲೇ ವೈರಿಗಳ ಕಾಲಾಳುಗಳು ಟೇಂಕ್ ಹಾಗೂ ವಿಮಾನಗಳೊಂದಿಗೆ ಅವರ ಬೆನ್ನುಹತ್ತಿದರೆಂದೂ ಗೊತ್ತಾಗಿದೆ. ಜಪಾನಿಗಳು ಮೊರೆಯಾ ಬಂದರದ ಮೇಲೆ ಬಾಂಬೆಸೆದರು.

ಜಪಾನರು ಡಚ್ ಈಸ್ಟ್ ಇಂಡೀಸಿನ ಮೇಲೆ ಮುತ್ತಿಗೆ ಹಾಕಿರುವರೆಂದು ಅಧಿಕೃತವಾಗಿ ತಿಳಿದಿದೆ. ಜಪಾನರು ತಮ್ಮ ನೌಕಾಬಲದ ಸಹಾಯದಿಂದ ಎರಡೂ ಕಡೆಗಳಲ್ಲಿ ಬಂದಿಳಿದರು. ಸೆಲಬಸದಲ್ಲಿರುವ ತರಾಕಾನಾದಲ್ಲಿ ಅವರು ಬಂದಿಳಿದಿರುವರು. ಡಚ್ ಸೈನ್ಯಗಳು ವೈರಿಗಳನ್ನೆದುರಿಸಿದವು. ವೈರಿಗಳು ಉತ್ತರ ಸೆಲೆಬಸದಿಂದಲೂ ಬಂದಿರುವರು. ಕೊಡೆ ವೈಮಾನಿಕರೂ ಇಳಿದಿರುವರು. ಎಲ್ಲಾ ಕಡೆಗಳಲ್ಲಿಯೂ ಅವರನ್ನು ಎದುರಿಸಿ, ಉಪಯುಕ್ತ ಸಾಧನಗಳೆಲ್ಲವನ್ನೂ ನಾಶಪಡಿಸಲಾಗಿದೆ. ಒಂದು ಡಚ್ ಉಗಿ ಹಡಗದ ಮೇಲೆ ಧಾಳಿ ಮಾಡಲಾಗಿದೆ. ಡಚ್ ಇಂಡಿಸಿನಲ್ಲಿ ಬಂದಿಳಿದ ಜಪಾನೀ ಸೈನಿಕರು ತರಾಕಾನ ಮತ್ತು ಮಿಡೋನ ಎಂಬ ರಡು ಪಟ್ಟಣಗಳನ್ನು ವಶಪಡಿಸಿಕೊಂಡರೆಂದು ಜಪಾನೀ ಸುದ್ದಿ ಸಾರುತ್ತದೆ.

ಮತ್ತೆ ಚೇರಿ ಸೈನ್ಯವು ಹೊರಟಿರುವುದು. ಜರ್ಮನರು ನಿರ್ವಾಹವಿಲ್ಲದೆ ಪಶ್ಚಿಮದ ಕಡೆಗೆ ಹಿಂದೆ ಸರಿಯುತ್ತಾರೆ. ಲಿಟಾವಿಯಾ ಲಿಥುವೇನಿಯಗಳ ಗಡಿಗಳ ವರೆಗೂ ರಶ್ಯನ್ ವಿಮಾನಗಳ ಕಾರ್ಯಾಚರಣೆ ನಡೆಯುತ್ತಿದೆಯೆಂದು ಸುದ್ದಿ ಬಂದಿದೆ.

ಆಸ್ಟ್ರೇಲಿಯ ಮತ್ತು ಯುದ್ಧ

ಆಸ್ಟ್ರೇಲಿಯವು ಇವತ್ತು ಎಂದಿಲ್ಲದಷ್ಟು ಯುದ್ಧದ ಸಮೀಪ ಬಂದಿದೆ. ಅಲ್ಲಿಗೆ ಧಾಳಿಯ ಭಯವು ಉಂಟು, ಎಂದು ಮುಖ್ಯಮಂತ್ರಿ ಹೇಳುತ್ತಾರೆ.

ಗಳನ್ನು ಸಿದ್ಧಪಡಿಸಲು ಅಪ್ಪಣೆಕೊಡಲಿದೆ. ೧೯೪೩ರಲ್ಲಿ ಈ ಪ್ರಮಾಣವು ಇಮ್ಮಡಿಯಾಗುವುದು. ಟ್ಯಾಂಕುಗಳು ಈ ವರ್ಷ ೪೫೦೦೦, ವಿಮಾನ ನಿರೋಧಕ ಫಿರಂಗಿಗಳು ಈ ವರ್ಷ ೨೦೦೦೦, ಮುಂದಿನ ವರ್ಷ ೩೫ ಸಾವಿರ. ಹಡಗಗಳು ಈ ವರ್ಷ ೮ ದಶಲಕ್ಷ ಟನ್, ಮುಂದಿನ ವರ್ಷ ಹತ್ತು ದಶಲಕ್ಷ ಟನ್, ಹೋದ ವರ್ಷ ಒಂದೇ ದಶಲಕ್ಷ ಟನ್ ಭಾರದ ಹಡಗ ಕಟ್ಟಲಾಗಿತ್ತು. ಹೀಗೆಂದು ಅಧ್ಯಕ್ಷ ರೂಸ್‌ವೆಲ್ಟರು ಘೋಷಿಸಿದರು.

ಇತಿಹಾಸ ಪ್ರಸಿದ್ಧವಾದ ಅಮೆರಿಕದ ಅಂದಾಜು ಪತ್ರಿಕೆ

ಈ ಸಾರಿಯ ಅಮೆರಿಕದ ಯುದ್ಧವೆಚ್ಚದ



ಅಮೆರಿಕದಿಂದ ಬಂದಿವೆ

ಬ್ರಿಟನಿಗಾಗಿ ಅಮೆರಿಕವು ಬಹಳ ತೀವ್ರವೇಗದ ಬಾಂಬು ಧಾಳಿ ಮಾಡುವ ವಿಮಾನಗಳನ್ನು ಕಳುಹಿಸುತ್ತಿದೆ. ಮೇಲೆ, ಅಂತಹ ಒಂದು ವಿಮಾನವನ್ನು ಕಾಣಬಹುದು. ಈಗಾಗಲೇ ಈ ವಿಮಾನಗಳನ್ನು ಬ್ರಿಟನಿನ ವೈಮಾನಿಕರು ಉಪಯೋಗಿಸುತ್ತಿದ್ದಾರೆ.

ರಶ್ಯದಲ್ಲಿ ಜರ್ಮನರು ಹಿಂದೆ ಸರಿಯುತ್ತಿದ್ದಾರೆ. ಹಿಂದೆ ಸರಿವ ವೈರಿಗಳನ್ನು ಶ್ವಾಸ ಬಿಡಲು ಸಮಯ ಕೊಡದೆ ರಶ್ಯನರು ಬೆನ್ನಟ್ಟುತ್ತಲೇ ಇರುವರು. ಹಿಟ್ಲರನು ಜರ್ಮನ್ ಸೇನಾಪತಿತ್ವವನ್ನು ವಹಿಸಿಕೊಂಡ ಮೊದಲನೆಯ ಯುದ್ಧದಲ್ಲಿಯೇ ಆತನು ಪರಾಭವ ಹೊಂದಿದನೆಂದು ಹೇಳಲಾಗುತ್ತದೆ. ರಶ್ಯನರು ಮಿಯೊಡೆಸೋವನ್ನು ಸ್ವಾಧೀನಪಡಿಸಿಕೊಂಡಿರುವುದು ಬಹಳ ಮಹತ್ವದ ವಿಜಯವೆನ್ನಬೇಕು. ಈ ಸ್ಥಳವು ವ್ಯಾಝ್ಮಾ ಮತ್ತು ಬಿಯಾನ್ಸ್‌ಗಳ ನಡುವೆ ಇದ್ದು, ಶತ್ರು ವ್ಯವಹಾರಕ್ಕೆ ಬಹಳ ಆತಂಕವನ್ನುಂಟುಮಾಡುತ್ತದೆ. ದಕ್ಷಿಣ ರಣಭೂಮಿಯಲ್ಲಿ ಜರ್ಮನರ ಅನೇಕ ಫಿರಂಗಿಗಳು, ಶಸ್ತ್ರಗಳು, ಟ್ಯಾಂಕುಗಳು ರಶ್ಯನರ ವಶವಾಗಿವೆಯಂತೆ. ಕ್ರಿಮಿಯದಲ್ಲಿ ರಶ್ಯನರು ಸೆಬೆಸ್ಟಪೋಲಿನ ಕಡೆಗೆ ಮುಂದುವರಿಯುತ್ತಿದ್ದಾರೆ. ಅಲ್ಲಿನ ಅನೇಕ ಆಯಕಟ್ಟಿನ ಸ್ಥಳಗಳನ್ನು ಈಗಾಗಲೇ ಕೈವಶಪಡಿಸಿಕೊಳ್ಳಲಾಗಿದೆ. ಈ ಸಂದರ್ಭದಲ್ಲಿ ಫಿಡೋಸಿಯಾ ಮತ್ತು ಕರ್ಚಗಳಲ್ಲಿ ಇಳಿದ ಸೈನ್ಯಗಳು ಇತಾಪೋಟೋರಿಯಾದಲ್ಲಿ ಇಳಿದಿದ್ದ ಸೈನಿಕರನ್ನು ಕಾಪಿಕೊಳ್ಳಲು ಮುಂದೆ ಸಾಗುತ್ತಿರುವವು. ಇಲ್ಲಿ ಜರ್ಮನರ ಸೈನ್ಯಗಳು ಬಹು ಪೇಚಾಟದಲ್ಲಿ ಬಿದ್ದಿರುವವಂತೆ. ಲೆನಿನ್‌ಗ್ರಾಡಿನ ನೈಋತ್ಯಕ್ಕೆ ೧೦೦ ಮೈಲು ದೂರದಲ್ಲಿರುವ ನೊವ್‌ಗ್ರಾಡಿನ ಕಡೆಗೆ

ಜರ್ಮನಿ ಒಪ್ಪಂದಮಾಡಿಕೊಳ್ಳುವುದು? ಹಿಟ್ಲರ್ ಸೇನಾಪತಿಗಳಲ್ಲಿ ಮತಭೇದ?

ಜರ್ಮನಿಯ ಸೈನಿಕ ಮತ್ತು ಅಂತರಿಕ ಪರಿಸ್ಥಿತಿ ಬಹಳ ಕೆಟ್ಟಿರುವುದರಿಂದ ಅಲ್ಲಿ ವಿಶೇಷ ಘಟನೆಗಳಾಗುವ ಸಂಭವವಿದೆಯೆಂದು ವಾಶಿಂಗ್‌ಟನಿನ ವಾರ್ ಕರೆಸ್ಪೋಂಡೆಂಟ್ ಎಂಬ ಪತ್ರಿಕೆ ಬರೆಯುತ್ತದೆ.

ಅಕ್ಟೋಬರ ತಿಂಗಳ ಮಧ್ಯದಲ್ಲಿ ಜರ್ಮನರಿಗೆ ಅಪಾರ ಪ್ರಾಣಹಾನಿಯಾಗಿರುವುದನ್ನು ಮನಗಂಡು ಜರ್ಮನ್ ಸೇನಾಪತಿಗಳು ಯುದ್ಧವನ್ನು ನಿಲ್ಲಿಸಬೇಕೆಂದು ಹಿಟ್ಲರನಿಗೆ ವಿನಂತಿಸಿಕೊಂಡರೆಂದು, ಹಿಟ್ಲರನು ಅದಕ್ಕೆ ಒಪ್ಪಲಿಲ್ಲವೆಂದೂ ಆದರಿಂದ ಜರ್ಮನಿಯಲ್ಲಿ ಗಲಿಬಿಲಿಯಾಗಿದೆಯೆಂದೂ, ರಶ್ಯನರಿಗೆ ದೊಡ್ಡ ಪರಾಜಯವೊದಮದ ಕೂಡಲೇ ಸೈನ್ಯವು ಸರಕಾರವನ್ನು ಸ್ವಾಧೀನಪಡಿಸಿ ರಶ್ಯ ನಾರ್ವೆಗಳನ್ನು ಖಾಲಿಮಾಡುವುದೆಂದೂ, ಸೈನ್ಯದಲ್ಲಿರುವ ನಾಜೀ ದಳಪತಿಗಳನ್ನು ತೆಗೆದುಹಾಕುವುದೆಂದೂ ಹೀಗೆಲ್ಲಾ ಆ ಪತ್ರಿಕೆ ಬರೆದಿದೆ.

ಅಮೆರಿಕದ ಪ್ರಚಂಡ ಶಸ್ತ್ರ ಸನ್ನಾಹ

ಅಮೆರಿಕದಲ್ಲಿ ೧೯೪೨ರಲ್ಲಿ ೬೦ ಸಾವಿರ ವಿಮಾನ

ಅಂದಾಜು ಪತ್ರವು ಜಗತ್ತಿನ ಇತಿಹಾಸದಲ್ಲಿಯೇ ಮಹತ್ವದಿದ್ದು ಇಷ್ಟು ದೊಡ್ಡ ಪ್ರಮಾಣದಲ್ಲಿ ಎಂದೂ ಯಾರೂ ವೆಚ್ಚಮಾಡಿಲ್ಲವೆಂದು ತಿಳಿದಿದೆ. ಜರ್ಮನಿಯ ಯುದ್ಧವೆಚ್ಚದ ಇಮ್ಮಡಿಯಿದೆಯಂತೆ. ಅಮೆರಿಕದ್ದು. ಮಿತ್ರರಾಷ್ಟ್ರಗಳ ಹಂಚಿಕ ರಕ್ಷಣೆಗಳು ಹಾಗೂ ಅಮೆರಿಕ ರಕ್ಷಣೆಗಳು ಒಟ್ಟಾಗಿ ವಿಮಾನ ಸಿದ್ಧತೆ ಮಾಡುವವು. ಬೇಗನೇ ಚರ್ಚಿಲ್ ರೂಸ್‌ವೆಲ್ಟ್ ಘೋಷಣೆಯಾಗುವುದೆಂದೂ ನಿರೀಕ್ಷಿಸಲಾಗಿದೆ.

ಅಮೆರಿಕದಲ್ಲಿ ಹೊಸ ತೆರಿಗೆ

ಈಗ ಅಮೆರಿಕದಲ್ಲಿ 6 ಸಾವಿರ ಮಿಲ್ಯ ಡಾಲರುಗಳ ಹೊಸ ತೆರಿಗೆ ಇರುವದು, ಮುಂದೆ 1943ರಲ್ಲಿ ೧೮ ಸಾವಿರ ಮಿಲ್ಯ ಡಾಲರುಗಳಷ್ಟು ಏರಬಹುದೆಂದು ರೂಸ್‌ವೆಲ್ಟರು ಹೇಳಿದರು.

P. N. RAO'S
BOMBAY ELECTRIC PHOTO STUDIO
Kuloor Ferry Road, Alakay, Mangalore.

ಸ್ವದೇಶಾಭಿಮಾನಿ

ತಾರೀಕು 16—1—1942

ಜಪಾನಿನ ಜಂಭ

ಮಲಯದಲ್ಲಿ ಮತ್ತು ಪೆಸಿಫಿಕಿನಲ್ಲಿ ಜಪಾನರು ಇತ್ತೀಚೆಗೆ ಜಂಭದಿಂದ ಮುಂದೊತ್ತಿ ಬರುತ್ತಿರುವುದು ಎಲ್ಲರಿಗೂ ವಿದಿತವಾಗಿರುವ ವಿಷಯವೇ ಆಗಿದೆ. ಇದರಲ್ಲಿ ಅಡಕಿರುವ ಪ್ರಾಮುಖ್ಯ ಸೂಗತಿಗಳೇನು ಎಂಬುದನ್ನು ಸರ್ವರೂ ಇಷ್ಟರಲ್ಲಿಯೇ ಊಹಿಸುತ್ತಿದ್ದಾರೆ. ಎಲ್ಲದಕ್ಕಿಂತಲೂ ಮಿಗಿಲಾಗಿ, ಅಮೆರಿಕ ಮತ್ತು ಬ್ರಿಟಿಷ್ ಹಡಗಗಳು ಪೆಸಿಫಿಕಿನಲ್ಲಿ ಸಂಚರಿಸದಂತೆ ಗೈದು ವ್ಯಾಪಾರದ ಮಾರ್ಗವು ಅಮೆರಿಕಾ ಬ್ರಿಟಿಷರಿಗೆ ಬಂಧಿತವಾಗುವಂತೆ ಮಾಡುವುದೇ ಜಪಾನಿನ ಉದ್ದೇಶವಿದೆಯೆಂಬುದು ಸರ್ವವಿದಿತವಾಗಿದೆ. ಹೀಗೆ ಮೊದಲು ಜಪಾನು ಸಮರ್ಥವಾದರೆ, ಈ ದಾರಿಯಲ್ಲಿ ವ್ಯಾಪಾರ ವಹಿವಾಟನ್ನು ತನ್ನ ಅಧೀನದಲ್ಲಿ ಇಟ್ಟುಕೊಂಡಂತೆ ಆಗುತ್ತದೆ

ಪೆಸಿಫಿಕಿನ ವಿಶಾಲತೆಯಲ್ಲಿ, ಎಂದರೆ ಸುಮಾರು ನಾಲ್ಕು ಸಾವಿರ ಮೈಲುಗಳ ದೂರದ ಪ್ರಯಾಣದಲ್ಲಿ ಬ್ರಿಟನು ಅಮೇರಿಕಗಳ ಹಡಗಗಳು ಮಧ್ಯಮಾರ್ಗದಲ್ಲಿ ನಿಲ್ಲದೆ ಒಂದೇ ವೇಗದಿಂದ ಹೊರಟು ಗುರಿಯನ್ನು ಸೇರುವುದು ಸಾಧ್ಯವಿಲ್ಲ ಹಾಗಾಗಿ ಇತ್ತೀಚೆಗೆ ಪೆಸಿಫಿಕಿನ ನೌಕಾರಾಣ್ಯಗಳಿಗೆ ಹೆಚ್ಚಿನ ಪ್ರಾಮುಖ್ಯತೆ ಬಂದಿತ್ತು, ಅಮೆರಿಕವು ಅದೇ ಉದ್ದೇಶದಿಂದ ಪರ್ಲ್ ಬಂದರವನ್ನು ಮತ್ತು ಹವಾಯಿ ಸ್ಟೇಶನನ್ನು ಭದ್ರಪಡಿಸತೊಡಗಿತ್ತು ಮಾತ್ರವಲ್ಲದೆ ಅಮೇರಿಕವು ಮಿಡ್ವೇ ದ್ವೀಪಗಳು, ಗ್ವಾಮ್ ಮೊದಲಾದ ಸಣ್ಣ ದ್ವೀಪಗಳನ್ನು ಬಲಪಡಿಸಲೂ ಸಾವಿರಾರು ರೂಪಾಯಿಗಳನ್ನು ವ್ಯಯಿಸಿತ್ತು ಇದರಿಂದ ಅಮೇರಿಕವು ಅನೇಕ ನೌಕಾರಾಣ್ಯಗ್ಳನ್ನು ನಿರ್ಮಿಸಿಕೊಂಡಿತ್ತು

ಅದು ಜಪಾನಿನ ಕಣ್ಣನ್ನು ಕುಕ್ಕದಿರಲಿಲ್ಲ ಜಪಾನಿಗೆ ಅಂದಿನಿಂದಲೇ ಸ್ಪರ್ಧೆಯುಂಟಾಯಿತ. ಜಪಾನು ಇಂದಿನ ಕಾಳಗದಲ್ಲಿ ಇಂತಹ ನೌಕಾರಾಣ್ಯಗಳನ್ನೇ ಆಕ್ರಮಿಸತೊಡಗಿದೆ ಹೀಗೆ ಅಮೆರಿಕ ನೌಕಾರಾಣ್ಯಗಳನ್ನು ಪೆಸಿಫಿಕಿನಲ್ಲಿಆಕ್ರಮಿಸಿಕೊಂಡ ಮೇಲೆ ಅಮೆರಿಕದ ಮಾರ್ಗಸಂಚಾರವೇ ಬಂಧಿತವಾಗುತ್ತದೆ. ಅದರಿಂದ ಜಪಾನು ತಾನೇತಾನಾಗಿ ಪೆಸಿಫಿಕಿನಲ್ಲಿ ವಿಜೃಂಭಿಸಲು ಜಂಭಪಡುವಂತೆ ತೋರುತ್ತದೆ. ಜಪಾನು ಈಗ ಇಂತಹ ಉದ್ದೇಶದಿಂದ ಕಾದಾಡುವುದಾಗಿ ಕಂಡುಬರುತ್ತದೆ.

ಒಂದೇ ಸ್ವರ!

'ಮಂದಪಕ್ಷದ ಮುಖಂಡರ ವಿನಂತಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ನಿರ್ಣಯ, ಪ್ರಭಾವಶಾಲಿಗಳಾದ ಹಲವು ಭಾರತದ ಮುಖಂಡರು ಹೊರಡಿಸಿದ ಪ್ರಕಟಣೆಗಳು ಮತ್ತ ಬ್ರಿಟಿಷ್ ಪತ್ರಿಕೆಗಳು ಮತ್ತು ಪಾರ್ಲಿಮೆಂಟ್ ಸದಸ್ಯರು ಕೆಲವರು ಹೇಳಿದ ಹೇಳಿಕೆಗಳು ಇವುಗಳೆಲ್ಲವೂ ಅಮೆರಿಯವರಲ್ಲಿ ಯಾವುದೇ ಬದಲಾವಣೆಯನ್ನುಂಟುಮಾಡಿದಂತೆ ತೋರುವುದಿಲ್ಲ. ಹಾಗಾಗಿಭಾರತವು ತಿಳಿಯಬೇಕೆಂದರೆ ಬ್ರಿಟಿಷ್ ಪ್ರಭುತ್ವವು ಭಾರತದ ರಾಷ್ಟ್ರೀಯತೆಯ ಸಂಪೂರ್ಣ ಶರಣಾಗುವಿಕೆಯನ್ನುಬಯಸುತ್ತದೆಂದು ಅಮೆರಿಯವರು ಅಧಿಕಾರ ವಹಿಸಿದ ಮೇಲೆ ಏನನ್ನೂ ಹೇಳುತ್ತಾ ಬಂದಿದ್ದಾರೋ ಅದನ್ನೇ ಅವರು ಇಂದೂ ಹೇಳಿದರು. ಅಮೆರಿಯವರಲ್ಲಿ ಏನಾದರೂ ಬದಲಾವಣೆಯಾಗಬಹುದೆಂದು ಆಶಿಸುವ ಭಾರತೀಯರು 'ಕಲ್ಲಿನಗೋಡೆ'ಗೆ ತಲೆಬಡಿದುಕೊಂಡಂತೆ ಅದರ ಪರಿಣಾಮವೆಂದರೆ ! ಗೋಡೆಗೆ ಯಾವುದೇ ಪರಿಣಾಮವನ್ನುಂಟುಮಾಡದೆ ತಮ್ಮ ತಲೆಯನ್ನು ಒಡೆದುಕೊಳ್ಳುವುದೇ ಆಗಿದೆ ಯಾರಿಗೆ ಆ ವಿಷಯ ಹೆಚ್ಚಿನ ವಿಚಾರವಿಲ್ಲವೋ ಅವರು ಆ ಗೋಜಿಗೇ ಹೋಗುವುದಿಲ್ಲ"

—ಹೀಗೆಂದು ಮೊನ್ನೆ ಪಾರ್ಲಿಮೆಂಟಿನಲ್ಲಿ ಕೆಲ ಸದಸ್ಯರು ಕೇಳಿದ ಪ್ರಶ್ನೆಗಳಿಗೆ ಭಾರತಮಂತ್ರಿ ಅಮೆರಿಯವರು ಕೊಟ್ಟ ಉತ್ತರದ ವಿಷಯ ಬಾಬು ರಾಜೇಂದ್ರ ಪ್ರಸಾದರು ಅಭಿಪ್ರಾಯವಿತ್ತರು ಬಾಬು ರಾಜೇಂದ್ರ ಪ್ರಸಾದರು ತೀಕ್ಷ್ಣಬುದ್ಧಿಯ ವಿಚಾರಕರು ಪರಿಸ್ಥಿತಿಗಳೆಲ್ಲವನ್ನೂ ಸಾಕಷ್ಟು ವಿಮರ್ಶಿಸಿ ಅಮೆರಿಯವರ ಒಂದೇಸ್ವರದ ರಾಜನೀತಿಯ ಮಥಿತಾರ್ಥವನ್ನುಮೇಲಿನ ಹೇಳಿಕೆಯಲ್ಲಿ ಸಾರಾಂಶೀಕರಿಸಿದ್ದಾರೆ. ಅಮೆರಿಯವರ ಹೇಳಿಕೆ ವಿಷಯದಲ್ಲಿ ಅದಕ್ಕಿಂತ ಚೆನ್ನಾದ ಬೇರೆ ವ್ಯಾಖ್ಯಾನ ಮಾಡುವುದು ಸಾಧ್ಯವಿಲ್ಲ

ಸುಸ್ವಾಗತ

ಗಾಂಧಿಜಿ ಪುನಃ ತನ್ನ 'ಹರಿಜನ' ಮೊದಲಾದ ಮೂರು ಪತ್ರಿಕೆಗಳನ್ನು ಪ್ರಾರಂಭಿಸುವುದಾಗಿ ತಿಳಿಯುತ್ತದೆ. ಭಾರತದ ಮಾತ್ರವಲ್ಲ ಇಡೀ ಪ್ರಪಂಚದ ವಾಚಕಲೋಕ, ಪತ್ರಿಕಾಲೋಕವೇ ಗಾಂಧಿಜಿಯವರ ಈ ಪತ್ರಿಕೆಗಳ ಪ್ರಕಟಣೆಯ ಕಾರ್ಯವನ್ನು ವಿಶೇಷ ಸಂತೋಷದಿಂದ ಸ್ವಾಗತಿಸದಿರಲಿಕ್ಕಿಲ್ಲ

ಗಾಂಧಿಜಿ ಒಂದು ಉದಾತ್ತ ತತ್ವವಾದಿ, ಗಾಂಧಿಜಿಯ ತತ್ವವು ಈಗಾಗಲೇ ಜಗತ್ತಿನ ಮುಂದೆ ವಿಶಿಷ್ಟ ಸ್ಥಾನವನ್ನು ಪಡೆದು ನಿಂತಿದೆ ಗಾಂಧಿಜಿ ಎಷ್ಟರಮಟ್ಟಿಗೆ ರಾಜನೀತಿಜ್ಞರೋ ಅದಕ್ಕಿಂತಲೂ ಮಿಗಿಲಾಗಿ ತತ್ವಪ್ರಚಾರಕರಾಗಿದ್ದಾರೆ. ಸತ್ಯ ಅಹಿಂಸೆಗಳ ವಿಷಯದಲ್ಲಿ ಜಗತ್ತನ್ನು ಇಂದು ಎಚ್ಚರಿಸುವಂತಹ ವಿಭೂತಿ ಪುರುಷರು ಅವರಾಗಿದ್ದಾರೆ

ಜಗತ್ತು ಹಿಂಸಾಯುದ್ಧದ ಪ್ರಳಯ ತಾಂಡವವಾಡುತ್ತಿರುವೀ ಕಾಲದಲ್ಲಿ ಅಹಿಂಸೆಯ—ನಿಶ್ಶಲತತ್ವ ಪ್ರಚಾರಕರಾದ ಗಾಂಧಿಜಿಯವರ ಪ್ರಚಾರವು ಜಗತ್ತಿಗೆ ಅಮೃತಮಯ ಸಂದೇಶವಾಗಿದೆ. ಮಹಾತ್ಮರು ಇದನ್ನು ತಮ್ಮ ಪತ್ರಿಕೆಯ ಮೂಲಕ ಲೋಕದ ಮೂಲೆಮೂಲೆ ಸಾರಬಲ್ಲರು; ಇಂತಹ ಸಂದರ್ಭದಲ್ಲಿ ಅವರನ್ನು ನಿರ್ಬಂಧಿಸುವಂತಹ ಅಧಿಕಾರವು ಸರಕಾರಕ್ಕಿದೆ. ಆದರೆ ಸತ್ಯದ ನಿರ್ಬಂಧವನ್ನು ಗಾಂಧಿಜಿ ಸತ್ಯಾಗ್ರಹದಿಂದ ಎದುರಿಸಿದ ಎದುರಿಸುವ ಮಹಾವೀರರು ಇಂದಿನೀ ಲೋಕನಾಶಕ ಹಿಂಸಾಯುಗದಲ್ಲಿ ಅಹಿಂಸೆಯ ಅಮೃತ ಸಂದೇಶವನ್ನು ಹರಿಜನ ಪತ್ರಿಕೆಯ ಮೂಲಕ ಗಾಂಧಿಜಿ ಜಗತ್ತಿಗೆ ಸಾರುವಾಗ ಯಾವುದೇ ತರದ ನಿರ್ಬಂಧವು ಯಾರಿಂದಲೂ ಒದಗದೆ ಅನಿರ್ಬಂಧಿತವಾಗಿ ಅವರ ಪ್ರಚಾರಕಾರ್ಯವು ಸಾಗಲಿ ಎಂಬುದು ನಮ್ಮ ಹಾರೈಕೆಯಾಗಿದೆ.

ಹೊರಗೆ ಹೋಗಿಲ್ಲ

"ನಾನು ಕಾಂಗ್ರೆಸಿನ ಒಬ್ಬ ಸೇವಕ, ನಾನು ಸತ್ಯ ಅಹಿಂಸೆಗಳನ್ವಯ ಕಾಂಗ್ರೆಸಿನ ಸೇವೆ ಸಲ್ಲಿಸಲು ಬಯಸುತ್ತೇನೆ. ಬ್ರಿಟನು ಸ್ವರಾಜ್ಯಕೊಟ್ಟಲ್ಲಿ ಯುದ್ಧದಲ್ಲಿ ಸಹಕರಿಸಬಹುದಾಗಿ ವರ್ಕಿಂಗ್ ಕಮಿಟಿಯು ನಿರ್ಣಯ ಮಾಡಿತು. ಇದರಿಂದ ಕಾಂಗ್ರೆಸು ಅಹಿಂಸೆಯನ್ನು ಭಂಗಮಾಡಿತು ಎಂದು ಹೇಳುವುದು ಸರಿಯಲ್ಲ, ಇದರಿಂದ ಬ್ರಿಟಿಷರೊಡನೆ ಒಮ್ಮೆ ಸಂಧಾನಮಾಡಲು ಮಾರ್ಗ ಮಾಡಿಟ್ಟಂತೆ ಮಾತ್ರ ಆಯಿತು"

—ಗಾಂಧಿಜಿ ಗುಜರಾತ್ ಪ್ರಾಂತಿಕ ಕಾಂಗ್ರೆಸ್ ಕಮಿಟಿಯಲ್ಲಿ ಮಾಡಿದ ಭಾಷಣದಲ್ಲಿ ಈ ರೀತಿಯಾಗಿ ಹೇಳಿ ಸಂಶಯವನ್ನುಪರಿಹರಿಸಿದರು ಗಾಂಧಿಜಿ ಬಾರ್ಡೋಲಿ ನಿರ್ಣಯದಂತೆ ಕಾಂಗ್ರೆಸಿನಿಂದ ಹೊರಹೋದರು ಎಂಬ ಮಾತಿಗೆ ಇನ್ನು ಆಧಾರವಿಲ್ಲ ಗಾಂಧಿಜಿಯನ್ನು ಬಿಟ್ಟು ಕಾಂಗ್ರೆಸಿನ ವಿಷಯವನ್ನು ವಿಚಾರಮಾಡುವಂತಹವನು ಭಾರತದಲ್ಲಾಗಲಿ-ಹೊರಗಡೆಯಾಗಲಿ ಯಾರಾದರೂ ಇರುವನೇ ಎಂದು ರಾಷ್ಟ್ರಪತಿ ಅಜಾದರೇ ಈಗ ಕೇಳಿದ್ದಾರೆ. ನಾವು ಕೂಡಾ ಅದೇ ಪ್ರಶ್ನೆಯೆತ್ತುತ್ತೇವೆ, ಹಾಗಾಗಿ ಕಾಂಗ್ರೆಸಿನಿಂದ ಗಾಂಧಿಜಿ ತೊಲಗಿ ದೂರನಿಂತರು ಎಂಬ ಮಾತಿಗೆ ಏನೇನೂ ಆಧಾರವಿಲ್ಲವೆಂಬುದಿಷ್ಟು ಸ್ಪಷ್ಟವಾಯಿತು

ಬಿಶಪರ ಶಿಷ್ಯ ವೃಂದದವರೇ ಕೆಲವರು—ಕ್ರೈಸ್ತ ಮಹನೀಯರು—ನೈಲರ ಈ ಅಸಂಬದ್ಧ ಅರಚಿಕ್ಕಾಗಿ ಅಸಂತೋಷ ತೋರ್ಪಡಿಸಿದ್ದು ತುಂಬಾ ಅಭಿನಂದನೀಯ. ಧರ್ಮಗುರುವೆಂಬಾತನು ಮಾಡಿದ ಪ್ರಮಾದಕ್ಕೆ ಆತನ ಶಿಷ್ಯ ಕೋಟಿಯು ಹೊಣೆಗಾರವಾಗುವುದಿಲ್ಲವೆಂದು ಇವರು ಈ ರೀತಿಯಲ್ಲಿ ವ್ಯಕ್ತಪಡಿಸಿದರು. ಬಿಶಪರು ಸಾರ್ವಜನಿಕಕ್ಷಮೆಕೇಳುವವರೆಗೆ—ತಾವು ಕಾರಿದ್ದನ್ನು ತಾವೇ ನುಂಗಿಕೊಳ್ಳದ ವರೆಗೆ-ಈ ಶಿಷ್ಯವರ್ಗದವರು ತಮ್ಮ ಅತೃಪ್ತಿಯನ್ನು ಇನ್ನಷ್ಟು ಸೂಚಿಸಲು ಉದಾಸೀನರಾಗಬಾರದು.

ನೋಟಗಳು

ಯುದ್ಧ ಯತ್ನದ ವಿಷಯದಲ್ಲಿ ಪ್ರಚಾರಮಾಡುವುದೆಂದರೆ 'ಅಸಂಬದ್ಧ ಅರಚುವುದೆಂದು' ಕೆಲವರು ಅರ್ಥಮಾಡಿಕೊಂಡಂತೆ ತೋರುತ್ತದೆ! ಅದರಲ್ಲೂ ಒಬ್ಬ ಜವಾಬ್ದಾರಿಯುಳ್ಳ, ದೇವಸಾಮೀಪ್ಯವುಳ್ಳ (?) ಧರ್ಮ ಗುರುವೊಬ್ಬರು ಹಾಗೆ ಮಾತನಾಡುವುದು, ಅವರಧರ್ಮಾನುಯಾಯಿಗಳಿಗೇ ಒಂದು ದೊಡ್ಡ ಅಪಮಾನ ಮಾಡಿದಂತೆ!

卐

ತಿನ್ನವೆಲ್ಲಿಯ ಬಿಶಪ್‌ರಾದ ರೈಟ್ ರೆವರೆಂಡ್ ಎಸ್ ಸಿ ನೈಲ್ ಎಂಬ ಮಹಾಶಯರು ಒಂದು ಸಭೆಯಲ್ಲಿ ಮಾತನಾಡುತ್ತಾ, 'ತನ್ನ ಅಭಿಪ್ರಾಯದಲ್ಲಿ, ಬ್ರಿಟನಿನಲ್ಲಿರುವ ಯಾವನೇ ದಾರಿಹೋಕನೊಡನೆ 'ಸಾರ್ವಜನಿಕ ಶತ್ರು'ಗಳಲ್ಲಿ ಮೂರನೆಯವನು ಯಾರೆಂದು ಕೇಳಿದರೆ ಆತನು ಜವಾಹಿರಲಾಲರ ಹೆಸರು ಹೇಳುವನು' ಎಂದು ಹೇಳಿದರು

卐

ಇತ್ತೀಚೆಗೆ ಉತ್ತರ ಹಿಂದುಸ್ಥಾನದಲ್ಲಿ ಐ ಸಿ ಎಸ್ ಪಾಲನೊಬ್ಬನು ನೆಹರುಗಳನ್ನು 'ದೇಶದ್ರೋಹಿ' ಎಂದು ಹೇಳಿದ್ದ! ಅವನಿಗೆ ಅದೇ ಸಭೆಯಲ್ಲಿ ಸಾಕಷ್ಟು ಪಾದರಕ್ಷೆಗಳ ಅಭಿಷೇಕವೂ ನಡೆದು ಹೋಗಿತ್ತು! ಸಾಲದ್ದಕ್ಕೆ ಮತ್ತೆ ಅವನೇ ತಾನು ನೆಹರುಗಳ ವಿಷಯ ಅಂತಹ ಶಬ್ದವನ್ನು ಉಪಯೋಗಿಸಿದ ಬಗ್ಗೆ ಸಾರ್ವಜನಿಕ ಕ್ಷಮಾಪಣೆಯನ್ನು ಕೇಳಿ, ತಾನು ಒಮ್ಮೆ ಕಾರಿದ ಶಬ್ದವನ್ನು ತಾನೇ ತಿರುಗಿ ನುಂಗಿಕೊಂಡನು!

卐

ತಿನ್ನವೆಲ್ಲಿಯ ಬಿಶಪರಿಗೆ ಅಂತಹ ಅಭಿಷೇಕವನ್ನು ಅಲ್ಲಿನ ಸಭಿಕರು ಯಾರೂ ಮಾಡದಿರುವ ವಿಷಯದಲ್ಲಿ ನಾವು ದಕ್ಷಿಣ ಹಿಂದುಸ್ಥಾನದ ಜನರ ಕ್ಷಮೆಯ ಬಗ್ಗೆ ಬಹಳ ಅಭಿಮಾನ ಪಡುತ್ತೇವೆ. ಬಿಶಪರ ಅಭಿಪ್ರಾಯಕ್ಕಿಲ್ಲದಿದ್ದರೂ, ಅವರ ಸ್ಥಾನಕ್ಕೆ ಹಾಗೆ ಗೌರವ ಕೊಟ್ಟದ್ದು ನಿಜವಾಗಿಯೂ ಶ್ಲಾಘ್ಯವೇ ಆಯಿತು!

卐

ಮಾನವ ಕುಲದ ಸಂಕಷ್ಟ ನಿವಾರಣೆಯ ಬಗ್ಗೆ ಅಸಂಖ್ಯ ತಾಪತ್ರಯಗಳ ನ್ನೆದುರಿಸಿ ಹೋರಾಡುತ್ತಿರುವ ವೀರ ಮಾನವಾಗ್ರಣಿಯನ್ನು—ಪಂಡಿತ ನೆಹರುಗಳನ್ನು ಸಾರ್ವಜನಿಕ ಶತ್ರು ಎಂದು ಹೆಸರಿಟ್ಟ ಬಗ್ಗೆ ನೈಲರು ಸಾರ್ವಜನಿಕ ಕ್ಷಮೆಯನ್ನು ಎಷ್ಟು ಬೇಗ ಕೇಳುವರೋ ಅಷ್ಟು ಅವರ ಸ್ಥಾನಕ್ಕೆ ಬೆಲೆಯಿದೆಯೆಂದು ನಾವು ಸೂಚಿಸದಿರಲಾಗುವುದಿಲ್ಲ.

卐

(4ನೆಯ ಕಲಂನ್ನು ನೋಡಿ)

ಹರಿಜನ ಪತ್ರಿಕೆಯು ಪುನಃ ಆರಂಭ ಆಗುವುದು

ರಚನಾತ್ಮಕ ಕಾರ್ಯಕ್ರಮವೇ ಅಹಿಂಸೆಯೇ ಮೂರ್ತಸ್ವರೂಪ

ಸತ್ಯಾಗ್ರಹದ ಭವಿಷ್ಯ

ಮಹಾತ್ಮಾ ಗಾಂಧಿಜಿ ಹೀಗೆಂದು ಒಂದು ಪ್ರಕಟಣೆ ಕೊಟ್ಟಿರುವರು.

—ವರ್ಕಿಂಗ್ ಕಮಿಟಿಯ ನಿರ್ಣಯದ ಬಗ್ಗೆ ದೇಶದಲ್ಲಿ ಮತ್ತು ದೇಶದ ಹೊರಗೆ ಪ್ರತಿಕ್ರಿಯೆಗಳಾಗುವವೆಂಬುದನ್ನು ನಾನು ಸಾಧ್ಯವಿದ್ದಷ್ಟು ಅವಲೋಕಿಸುತ್ತಿದ್ದೇನೆ ಕಾಂಗ್ರೆಸಿನ ಪರವಾಗಿ ಸತ್ಯಾಗ್ರಹ ಚಳವಳಿ ಮಾಡುವುದರಿಂದ ನನ್ನನ್ನು ಮುಕ್ತನನ್ನಾಗಿ ಮಾಡಲಾಗಿದೆ ಆದರೆ ನನ್ನ ಜವಾಬ್ದಾರಿ ಕಡಿಮೆಯಾಯಿತೆಂದು ಯಾರೂ ತಿಳಿಯಬಾರದು ಅಷ್ಟೇಕೆ ನನ್ನ ಜವಾಬ್ದಾರಿಯು ಇದರಿಂದ ಮತ್ತಷ್ಟು ಹೆಚ್ಚಿರುವುದು ನಾನು ಕಾಂಗ್ರೆಸಿನಿಂದ ಅಧಿಕೃತನಾಗಿ ನಿವೃತ್ತನಾದುದರಿಂದ ನನ್ನ ಅಲಿಪ್ತತೆ ಹೆಚ್ಚಿದ್ದರೂ ಇದರಿಂದ ನಾನು ಕಾಂಗ್ರೆಸಿನ ವಿಷಯದಲ್ಲಿ ಉದಾಸೀನನಾದೆನೆಂದು ಭಾವಿಸಬಾರದು ಇನ್ನು ಮುಂದೆ ಕಾಂಗ್ರೆಸಿನವರೊಡನೆ ನನ್ನ ಸಂಬಂಧವು ಮತ್ತಷ್ಟು ಹೆಚ್ಚುವುದು. ಅವರೊಡನೆ ಇನ್ನು ಮುಂದೆ ಹೆಚ್ಚು ಮಾತನಾಡಬೇಕಾಗಿದೆ ಸತ್ಯಾಗ್ರಹ ಚಳವಳಿವನ್ನು ನಡೆಸುವುದಕ್ಕೆ ಮೌನವು ಸಾಕಾಗಿತ್ತು ಆದರೆ ಇತ್ತೀಚೆಗೆ ನಡೆದ ಕೆಲವು ಘಟನೆಗಳಿಂದ ಕಾಂಗ್ರೆಸಿಗರ ಮನಸ್ಸಿನಲ್ಲಿ ಉಪಸ್ಥಿತವಾಗಿರುವ ಸಾವಿರಾರು ಪ್ರಶ್ನೆಗಳಿಗೆ ಸಮಾಧಾನಕರ ಉತ್ತರ ಕೊಡುವುದಕ್ಕೆ ಮೌನದಿಂದಿದ್ದರೆ ಸಾಲದು

'ಬರ್ಮಾ ದೇಶವು ಬ್ರಿಟಿಷ್ ಹಿಂದುಸ್ಥಾನದ ಒಂದು ಭಾಗವಾಗುವುದಕ್ಕಿಂತ ಮೊದಲು ಸಹ ರಂಗೂನು ಸಾಂಸ್ಕೃತಿಕ ದೃಷ್ಟಿಯಿಂದ ನಮ್ಮದಾಗಿತ್ತು ಈಗಲಾದರೂ ಅದು ನಮ್ಮದೇ ಆಗಿರುವುದು ಅಲ್ಲಿ ನಡೆದ ಘಟನೆಗಳು ಹಿಂದುಸ್ಥಾನದಲ್ಲೆಲ್ಲ ಪ್ರತಿಕ್ರಿಯೆಯನ್ನುಂಟುಮಾಡಿವೆ

'ಇದು ವರೆಗೆ ಕಾಂಗ್ರೆಸಿನ ಪರವಾಗಿ ನಡೆಯುತ್ತಿದ್ದ ಸತ್ಯಾಗ್ರಹ ಚಳವಳಿವು ಯುದ್ಧ ಮುಗಿಯುವವರೆಗೆ ಪ್ರಾರಂಭವಾಗಲಿಕ್ಕಿಲ್ಲವೆಂದು ನನಗಂತೂ ತೋರುತ್ತದೆ ಆದರೆ ಕಾಂಗ್ರೆಸಿನ ಹೆಸರಿನಿಂದ ಅಲ್ಲದಿದ್ದರೂ, ಯುದ್ಧಗಳನ್ನು ಕೇವಲ ಅಹಿಂಸೆಯ ಆಧಾರದಿಂದ ವಿರೋಧಿಸುವವರಾದರೂ ಈ ಚಳವಳಿವನ್ನು ಮುಂದೆ ಸಾಗಿಸಬೇಕಾಗಿದೆ ಯುದ್ಧಗಳನ್ನು ವಿರೋಧಿಸುವವರು ತಮ್ಮ ಹಕ್ಕನ್ನು ಕಾಯ್ದುಕೊಳ್ಳುವುದಕ್ಕಾಗಿ ಈ ಆಂದೋಲನವನ್ನು ನಡೆಸಬೇಕಾಗಿದೆ ಅಮಾನುಷ ಅತ್ಯಾಚಾರ ನಡೆಯುತ್ತಿದ್ದರೂ ಅದನ್ನು ನೋಡಿ ಅವರು ಸುಮ್ಮನಿರುವುದು ಸಾಧ್ಯವಿಲ್ಲ ರಕ್ತದ ಕಾಲುವೆ ಹರಿಯುವುದನ್ನು ತಡೆಯುವುದಕ್ಕಾಗಿ ಅವರು ಬಲಿದಾನವನ್ನಾದರೂ ಮಾಡಬೇಕಾಗುವುದು. ಅವರು ಸ್ವಲ್ಪ ಜನರಿರಲಿ, ಬಹುಜನರಿರಲಿ, ತಮ್ಮ ಧ್ಯೇಯಕ್ಕನುಗುಣವಾಗಿ ನಡೆಯಲೇ ಬೇಕಾಗುವುದು

'ಸತ್ಯಾಗ್ರಹ ಚಳವಳದ ಬಗ್ಗೆ ಮುಂದಿನ ಕಾರ್ಯ ಕೈಕೊಳ್ಳುವ ಮೊದಲು ನಾನು 'ಹರಿಜನ ಮೊದಲಾದ ಮೂರು ಪತ್ರಿಕೆಗಳನ್ನು ಪುನಃ ಪ್ರಾರಂಭಿಸುತ್ತೇನೆ ಮತ್ತು ಅಗ್ಗೆ ಸರಕಾರದ ಧೋರಣವೇನಿದೆಯೆಂಬುದನ್ನು ತಿಳಿದುಕೊಳ್ಳುತ್ತೇನೆ ಅಹಿಂಸಾತ್ಮಕ ರೀತಿಯಲ್ಲಿ ಪ್ರತಿಯೊಂದು ಯುದ್ಧವನ್ನು ಎದುರಿಸುವುದಕ್ಕಾಗಿ ಸರಕಾರದ ಆಕ್ಷೇಪಣೆಯೇನೂ ಇರಲಿಕ್ಕಿಲ್ಲವೆಂದು ನಾನು ಆಶಿಸುತ್ತೇನೆ. ಈ ನನ್ನ ಪ್ರಚಾರವು ಸರಕಾರಕ್ಕೆ ತೊಂದರೆಯನ್ನುಂಟುಮಾಡಲಾರದು ಯಾಕೆಂದರೆ ಮದ್ದಿನ ಕಾರ್ಖಾನೆ ಮತ್ತು ಸೈನ್ಯಕ್ಕೆ ಜನ ಗೂಡಿಸುವ ಕಚೇರಿಯ ಹತ್ತಿರ ಪಿಕೆಟಿಂಗ್ ಮಾಡುವುದು ಯಾವಾಗಲೂ ನನ್ನ ಉದ್ದೇಶವಲ್ಲ.

'ಈ ಸ್ವಾತಂತ್ರ್ಯ ಸಿಗದಿದ್ದರೆ ಲಾಕ್ಷಣಿಕ ಸತ್ಯಾಗ್ರಹ ಚಳವಳವನ್ನು ಸಣ್ಣ ಪ್ರಮಾಣದಲ್ಲಿ ಯಾದರೂ ಪ್ರಾರಂಭಿಸಲೇ ಬೇಕು ಒಂದಿಬ್ಬರು ಅಚ್ಚ ಸತ್ಯಾಗ್ರಹಿಗಳಿದ್ದರೂ ಸಾಲದಿಲ್ಲ. ಬಹಳ ಜನರನ್ನು ಆರಿಸುವ ಇಚ್ಛೆಯಂತೂ ಈಗ ನನಗೆ ಇಲ್ಲ. ಜನರಿಗೆ ಶಿಕ್ಷಣ ಕೊಡುವ ಕೆಲಸಗಾರರಂತೂ ಈಗ ಹೆಚ್ಚು ಬೇಕಾಗಿದೆ. ಇಂದಿನ ಗಂಡಾಂತರವನ್ನೆದುರಿಸಲು ನಿರಂತರ ರಚನಾತ್ಮಕ ಕಾರ್ಯದಲ್ಲಿ ತೊಡಗಿರುವುದೇ ಉಪಾಯವೆಂದು ಹೇಳಿದರೆ ವಿಚಿತ್ರವೆನಿಸಬಹುದಾದರೂ ಅದು ನಿಜವಾದುದು. ಏಕೆಂದರೆ ಇದರಿಂದ ಪಟ್ಟಣವಾಸಿಗಳು ಹಳ್ಳಿಗಳಿಗೆ ಹೋಗಿ ಅಲ್ಲಿ ಉತ್ಪಾದಕ ಕಾರ್ಯಗಳಲ್ಲಿ ತೊಡಗಿರುವರು ಆದರಿಂದ ನಿರುದ್ಯೋಗ ನಿವಾರಣೆಯಾಗುವುದು. ಹೊಸ ಸಮಾಜದ ರಚನೆಯಾಗುವುದು ಆದರಿಂದ ಭೀತಿಜನಕ ಶಾಸನಗಳು ನಿರುಪಯೋಗಿಯಾಗುವವು'

'ಮಹಾತ್ಮರು ಕಾಂಗ್ರೆಸ್ ಧುರೀಣತ್ವ ಬಿಟ್ಟಿಲ್ಲ'

'ಕಾಂಗ್ರೆಸೂ ಅವರನ್ನು ಬಿಟ್ಟಿಲ್ಲ'

ಬಾರ್ಡೋಲಿ ನಿರ್ಣಯದ ಸ್ಪಷ್ಟೀಕರಣ

ರಾಷ್ಟ್ರಪತಿ ಅಜಾದರ ಹೇಳಿಕೆ

ರಾಷ್ಟ್ರಪತಿ ಮೌಲಾನಾ ಅಬುಲ್ ಕಲಂ ಅಜಾದರು ಒಂದು ಪ್ರಕಟಣೆ ಹೊರಡಿಸಿ ಅದರಲ್ಲಿ ಬಾರ್ಡೋಲಿ ನಿರ್ಣಯದ ಸ್ಪಷ್ಟೀಕರಣ ಮಾಡಿರುವರು

ಆ ಪ್ರಕಟಣೆಯಲ್ಲಿ ಅವರು ಹೀಗೆ ಹೇಳಿರುವರು

'ಮಹಾತ್ಮಾ ಗಾಂಧಿಯವರು ಕಾಂಗ್ರೆಸಿನ ಧುರೀಣತೆಯಿಂದ ನಿವೃತ್ತರಾದರೆಂದು ಬಾರ್ಡೋಲಿ ನಿರ್ಣಯದ ಅರ್ಥಮಾಡುವವರು ಈ ದೇಶದಲ್ಲಿ ಅಥವಾ ಹೊರಗೆ ಯಾರಾದರೂ ಇದ್ದರೆ ಅಂಥವರಿಗೆ ಗಾಂಧಿಜಿಯವರ ಹಾಗೂ ಕಾಂಗ್ರೆಸಿನ ವಿಚಾರದಲ್ಲಿ ಏನೂ ಗೊತ್ತಿಲ್ಲವೆಂದು ಹೇಳಬಯಸುತ್ತೇನೆ ಗಾಂಧಿಜಿಯವರು ಕಾಂಗ್ರೆಸಿನ ಧುರೀಣತೆಯಿಂದ ನಿವೃತ್ತರಾಗಿಲ್ಲವಲ್ಲದೆ, ಕಾಂಗ್ರೆಸು ಅವರ ಮಾರ್ಗದರ್ಶಿತ್ವದ ಹೊರತು ಉಳಿಯಲಾರದು

ಕಾಂಗ್ರೆಸಿನ ಪರವಾಗಿ ಸತ್ಯಾಗ್ರಹ ನಡೆಸುವುದು ಗಾಂಧಿಜಿಯವರಿಗೆ ಈಗ ಬೇಡವಾಗಿದೆ

ಇದೇ ಬಾರ್ಡೋಲಿ ನಿರ್ಣಯದ ಸರಳ ಅರ್ಥ. ಅಹಿಂಸಾ ತತ್ವದಂತೆ ಎಲ್ಲಾ ಯುದ್ಧಗಳ ವಿರುದ್ಧ ಹಾಗೂ ತಾವು ನಿರ್ಧರಿಸಿಕೊಂಡ ಮಟ್ಟಿನ ಕಾಂಗ್ರೆಸಿಗರ ಸಹಾಯದಿಂದ ಅವರು ಸತ್ಯಾಗ್ರಹವನ್ನು ಮುಂದುವರಿಸುವರು ಭಾರತದ ಇಂದಿನ ರಾಷ್ಟ್ರೀಯ ಜೀವನವು ಗಾಂಧಿಜಿಯವರ ಕಲ್ಪನಾಶಕ್ತಿಯ ಪ್ರತಿಫಲವಾಗಿರುವುದು ಹಾಗಿರುವಾಗ ಅವರಾದರೂ ಕಾಂಗ್ರೆಸನ್ನು ಹೇಗೆ ಬಿಡಬಲ್ಲರು? ಕಾಂಗ್ರೆಸಿಗಾದರೂ ಅದು ಹೇಗೆ ಆದೀತು? ವರ್ಕಿಂಗ್ ಕಮಿಟಿಯವರು ಎಂದಿನಂತೆ ಎಲ್ಲಾ ವಿಷಯಗಳಲ್ಲಿಯೂ ಅವರ ಸಲಹೆಯನ್ನು ಕೇಳಿರುವರು ನಮ್ಮ ಮತ್ತು ಅವರಲ್ಲಿ ಮತಭೇದವಾದ ವಿಷಯದಲ್ಲಿ ಸಹ ಅವರ ಸಲಹೆಯನ್ನು ಕೇಳಿದ್ದೇವೆ ವರ್ಕಿಂಗ್ ಕಮಿಟಿಯವರು ಈಗ ಸ್ವೀಕರಿಸಿದ ನಿರ್ಣಯವನ್ನು ಬರೆಯಲು ನಾನು ಅವರೊಡನೆ ಕೇಳಿದ್ದೆನು ಅದರಂತೆ ಅವರು ಬೆಳಗಾಗುವುದರೊಳಗಾಗಿ ಸಿದ್ಧಪಡಿಸಿದ್ದರು ಮುಂಬಯಿ ನಿರ್ಣಯದಲ್ಲಿ ವಿವರಿಸಿದಂತೆ ಅಹಿಂಸೆಯ ಬಗ್ಗೆ ನಮ್ಮ ಧೋರಣವಿರುವುದೆಂಬುದನ್ನು ಅವರಿಗೆ ತಿಳಿಸಲು ನಾವು ಅದರಲ್ಲಿ ಒಂದೆರಡು ವಾಕ್ಯಗಳನ್ನು ಸೇರಿಸಿದೆವು'

"ಮಹಾತ್ಮರೇ ಪುನಃ ನಾಯಕರಾಗಬೇಕು"

ಅಹಿಂಸೆಯನ್ನು ಬಿಡುವುದು ಅಶಕ್ಯ!

ದೇಶಪಾಂಡೆಯವರ ಹೇಳಿಕೆ

ಕರ್ನಾಟಕದ ಮುಖಂಡರಾದ ಶ್ರೀ ಗಂಗಾಧರರಾವ್ ದೇಶಪಾಂಡೆಯವರು ಒಂದು ದೀರ್ಘ ಪ್ರಕಟಣೆಯಲ್ಲಿ ಬಾರ್ಡೋಲಿ ನಿರ್ಣಯದ ಬಗ್ಗೆ ಅಸಮ್ಮತಿ ತೋರಿಸಿ ಗಾಂಧಿಜಿಯವರೇ ತಿರುಗಿ ಕಾಂಗ್ರೆಸಿನ ನಾಯಕರಾಗಬೇಕೆಂದೂ ಅಹಿಂಸೆಯನ್ನು ಬಿಡುವುದು ಸಾಧ್ಯವಿಲ್ಲವೆಂದೂ ಅಭಿಪ್ರಾಯಪಟ್ಟಿದ್ದಾರೆ. ಈ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಮಹಾತ್ಮರೊಬ್ಬರೇ ದಾರಿತೋರಿಸಬಲ್ಲರೆಂದಿರುವರು. ಅವರು ಪುನಃ ಕಾಂಗ್ರೆಸಿನ ನಾಯಕರಾಗುವಂತೆ ವರ್ಧಾದಲ್ಲಿ ಸೇರುವ ಅಖಿಲಭಾರತ ಕಾಂಗ್ರೆಸ್ ಕಮಿಟಿಯಲ್ಲಿ ತಿದ್ದುಪಡಿಯಾಗಬೇಕೆಂದು ಸೂಚಿಸಿದ್ದಾರೆ ಬಾರ್ಡೋಲಿ ನಿರ್ಣಯವು ಒಮ್ಮತದಿಂದ ಆದುದಲ್ಲವೆಂದೂ ಪ್ರಸ್ತಾಪಿಸಿರುವರು

ಮುಂದಿನ ಮಹಾಸಭಾಧಿವೇಶನ

ಮುಂದಿನ ಅಖಿಲ ಭಾರತ ಹಿಂದು ಮಹಾಸಭಾಧಿವೇಶನವು ಪಂಜಾಬಿನಲ್ಲಿ ಜರಗಬೇಕಾಗಿ ಆಮಂತ್ರಣವಿದೆ

ಜಿನ್ನರ ದಸ್ತತು ಇಂಗ್ಲೀಷಿನಲ್ಲಿ, ಗಾಂಧಿ ಉರ್ದುವಿನಲ್ಲಿ

ಏಳು ವರ್ಷಗಳ ಹಿಂದೆ ಮಹಾತ್ಮಾಗಾಂಧಿ ಆಲಿಗರ್ ವಿಶ್ವವಿದ್ಯಾನಿಲಯವನ್ನು ಸಂದರ್ಶಿಸಿದಾಗ ಅವರು ಉರ್ದುವಿನಲ್ಲಿ ದಸ್ತತು ಹಾಕಿದರಂತೆ ಜಿನ್ನರು ಅಲ್ಲಿಗೆ ಹೋಗಿದ್ದಾಗ ಇಂಗ್ಲಿಷಿನಲ್ಲಿಯೇ ದಸ್ಕತ್ತು ಹಾಕಿದ್ದರು ಆಲಿಗರ್ ವಿದ್ಯಾರ್ಥಿ ಸಂಘವು ಶ್ರೀ ಹಕ್ಕರನ್ನು ಆ ಜೀವ ಸದಸ್ಯತೆಯಿಂದ ರದ್ದುಮಾಡಿದೆ. ಅವರು ಜಿನ್ನರಿಗೆ ವಿರೋಧ ನಿಂತುದಕ್ಕಾಗಿ ಆಲಿಗರ್‌ನ ಆಜೀವ ಸದಸ್ಯರ ಹಾಲಿನಲ್ಲಿ ಮಹಾತ್ಮಾ ಗಾಂಧಿ ಸರೋಜಿನಿ ನಾಯ್ಡು ಮೊದಲಾದವರು ಇರುವರೆಂದು ತಿಳಿಯುತ್ತದೆ.

ಗಾಂಧಿಜಿ ವಾರಪತ್ರಿಕೆಗಳು

ಗಾಂಧಿಜಿಯವರ ಮೂರು ವಾರ ಪತ್ರಿಕೆಗಳು 'ಹರಿಜನ್', ಇಂಗ್ಲಿಷಿನಲ್ಲಿ, 'ಹರಿಜನ್ ಬಂಧು', ಗುಜರಾತಿನಲ್ಲಿ, 'ಹರಿಜನ್ ಸೇವಕ್' ಹಿಂದಿಯಲ್ಲಿ, ಅಹಮ್ಮದಾಬಾದಿನಿಂದ ಜನವರಿ 11ರಲ್ಲು ಪ್ರಕಟವಾಗುವವು

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

ಡಾ। ಜಸಾನಿಯವರ

ಜಗತ್ಪ್ರಸಿದ್ಧವಾದ ಔಷಧಿ

ಗೊನೊಕಿಲರ್ (ರಿಜಿಸ್ಟರ್ಡ್)

GONO KILLER

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ್' ಎಂಬ ಸೀಲು ನೋಡಿರಿ.

ಮೂತ್ರ ರೋಗಗಳ ಮೇಲೆ ಮತ್ತು ಧಾತುಸಂಬಂಧದ ರೋಗಗಳ ಮೇಲೆ 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನ್ನು ತೋರಿಸುತ್ತದೆ ಸಾವಿರಾರು ರೋಗಿಗಳು ಇದರ ಗುಣವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿ ಇದನ್ನು ಹೊಗಳುತ್ತಿರುವರು ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಇಲ್ಲ

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ, ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರುಪು ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, ಗೊನೊ-ಕೊಕಸ್ ಎಂಬ ವಿಷಹಾರಿ, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಖಚಿತವಾಗಿ ನಾಶವಾಗುವವು

ಬೆಲೆ 50 ಗುಳಿಗೆಗಳ ಬಾಟ್ಲಿ 1ಕ್ಕೆ ರೂ 3-0-0 (ವಿ ಪಿ ಚಾರ್ಜು 8 ಆಣೆ ಬೇರೆ). ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ ವಿಠಲ್ ಭಾಯಿ ಪಟೇಲ್ ರೋಡ್, ಮುಂಬಯಿ

Sole Manufacturer. **Dr D N JASANI,** Vithalbhai Patel Road, BOMBAY 4

Madras Agent **Appah & Co, China Bazar Madras**

ಪತ್ರವ್ಯವಹಾರ ಇಂಗ್ಲೀಷ್ ಅಥವಾ ಮರಾಠಿಯಲ್ಲಿ.

ಮಿಶ್ಶನ್ ಹೈಸ್ಕೂಲ್ ವರ್ಧಂತ್ಯುತ್ಸವ

[illegible]

[illegible] ಶ್ರೀ. ಎಸ್. [illegible] ಸುಬ್ಬರಾಯರ ಅಧ್ಯಕ್ಷತೆಯಿಂದ ನೆರವೇರಿತು. ಈ ಸಂದರ್ಭದಲ್ಲಿ ಶ್ರೀ. ಕೆ. [illegible] ಮೊದಲಾದವರ ಭಾಷಣಗಳಾದುವು.

ಇರ್ದೆ—ಇಲ್ಲಿನ ದರ್ಭೆ ಶಾಲೆಯ ಹೆತ್ತವರ ಕೂಟದ ಸಭೆಯು ಶ್ರೀ. ದೇವಪ್ಪಾಳ್ವರ ಅಧ್ಯಕ್ಷತೆಯಲ್ಲಿ ನೆರವೇರಿತು.

ಕೈರಂಗಳ ಶಾಲಾ ವರ್ಧಂತಿ—ಕೈರಂಗಳ ಶಾಲಾ ವರ್ಧಂತಿಯು ದಾ। ಆನಂದ ರಾಯರ ಅಧ್ಯಕ್ಷತೆಯಿಂದ ನೆರವೇರಿತು.

ಕುಲಾಲರ ಪರಿಷತ್ತು—ಜಿಲ್ಲಾ ಮೂಲ್ಯ ಯಾನೆ ಕುಲಾಲರ ಜಾತ್ಯಭ್ಯುದಯ ಸಂಘದ ವರು ತಾ. ೨೭—೨೮ರಂದು ಕುಲಾಲರ ಜಿಲ್ಲಾ ಪರಿಷತ್ತು ಮಾರ್ನಮಿ ಕಟ್ಟೆಯಲ್ಲಿರುವ ಪರಮೇಶ್ವರಿ ಭವನದಲ್ಲಿ ಜರಗಿಸುವರಾಗಿ ತಿಳಿದಿದೆ.

ಜಿ. ಎ. ಸರ್ಕಸ್—ಬೊಂಬಾಯಿಯ ಜಿ. ಎ. ಸರ್ಕಸಿನವರು ತಾ. 6ರಿಂದ ಮಂಗಳೂರು ಮೈದಾನಿನಲ್ಲಿ ತಮ್ಮ ಪ್ರದರ್ಶನಗಳನ್ನು ತೋರಿಸುತ್ತಾ ಇದ್ದಾರೆ. ಇದಕ್ಕಿಂತ ಮೊದಲು ಒಂದೆರಡು ಸಲ ಮಂಗಳೂರಿಗೆ ಬಂದಿದ್ದು ಈ ಸರ್ಕಸಿನ ವಿಷಯವಾಗಿ ಜನರಿಗೆ ಹೆಚ್ಚಿನ ಪ್ರಶಸ್ತಿ ಬೇಕಾದ ಅವಶ್ಯವಿಲ್ಲ. ಈ ಸಲದಲ್ಲಿ ಅವರು ಮೊದಲಿಗಿಂತಲೂ ವಿಶೇಷವಾದ ಕೆಲವು ಪ್ರದರ್ಶನಗಳನ್ನು ತೋರಿಸುತ್ತಿರುವ ನಿಮಿತ್ತ ಪ್ರತಿಯೊಂದು ಪ್ರದರ್ಶನಕ್ಕೂ ಕಿಕ್ಕಿರಿದು ಜನಸಂದಣಿ ಹೋಗುತ್ತಲಿದೆ.

ಚೀನೀಯರ ಕುಶಲತೆಯ ಆಟಗಳು, ಸರಿಗೆಯಲ್ಲಿ ನೇರವಾಗಿ ಮೇಲೆ ನಡಕೊಂಡು ಹೋಗುವುದು, ಕಬ್ಬಿಣದ ಮುಳ್ಳಿನ ಮೇಲೆ ಮನುಷ್ಯನು ಮಲಗಿ ಆನೆ ಅದರ ಮೇಲಿಟ್ಟ ಹಲಗೆಯನ್ನು ಮೆಟ್ಟಿ ಅಡ್ಡ ಹಾಯುವುದು, ಒಂಟೆಗಳ ಆಟ, ಕುದುರೆ, ಹುಲಿ, ಆನೆಗಳ ಆಟ, ಸೈಕಲು ಸವಾರಿ, ಮೊದಲಾದವು ವಿಶೇಷ ಪ್ರಶಂಸನೀಯವಾಗಿವೆ. ಮಹಿಳೆಯರ ನೃತ್ಯಗಳೂ ಇವೆ. ನಮ್ಮ ಊರವರೂ ಕೆನರಾ ಹೈಸ್ಕೂಲ್ ಹಳೇ ವಿದ್ಯಾರ್ಥಿಗಳೂ ಆದ ಶ್ರೀ. ಎಂ. ಕೆ. ಶೆಟ್ಟಿ ಇವರು ಈ ಸರ್ಕಸಿನ ಮೆನೇಜರರಾಗಿ ಬಹಳ ಜನಪ್ರಿಯರಾಗಿರುವರು. ಸರ್ಕಸ್ ಕಂಪೆನಿಯವರಿಗೆ ಹೆಚ್ಚಿನ ಪ್ರೋತ್ಸಾಹ ದೊರೆಯಲೆಂದು ನಮ್ಮ ಹಾರೈಕೆ. ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಿಂದ ತಾ. 17ರಂದು ಇವರು ವಿಶೇಷ ಪ್ರದರ್ಶನ ತೋರಿಸುವರು.

ಕದ್ರಿ

ವರ್ಧಂತ್ಯುತ್ಸವ—ಕದ್ರಿ ಮುನ್ಸಿಪಲ್ ಬಾಲಿಕಾ ಪಾಠಶಾಲೆಯ ವರ್ಧಂತ್ಯುತ್ಸವವು ತಾ. [illegible]ರಂದು ಶ್ರೀ. ಗೋಪಾಲರಾಯರ ಅಧ್ಯಕ್ಷತೆಯಿಂದ ಜರಗಿತು.

ಆಟ—ಕಂಬಳಗಳು—ಕಣ್ಣೀರುತೀರ್ಥ ಬೋರ್ಡ್ ಶಾಲೆಯ ಹತ್ತಿರ ಮರೆಕ್ಕಟ್ಟು ಎಂಬಲ್ಲಿ ಕಟೀಲು ಮೇಳದವರಿಂದ ತಾ. [illegible], ೨೨, ೨೮ ಈ ದಿನಗಳಲ್ಲಿ ಗ್ರಾಮಸ್ಥರು ಆಟ ಆಡಿಸುವರೆಂತಲೂ, ಮತ್ತು ಸದ್ರಿ ದಿವಸಗಳಲ್ಲಿ ಕೋಳಿ ಕಟ್ಟವೂ, ತಾ. ೧೯ರಂದು ಉಪ್ಪಕ್ಕಿ ಸೆಂಕದ ಬಳಿ ಕರಿಯನ ಕಂಬಳದಲ್ಲಿ ಓಟದ ಕೋಣಗಳನ್ನು ಓಡಿಸುವುದೆಂತಲೂ ನಿರ್ಣಯಿಸಿರುವುದರಿಂದ ಸರ್ವರಿಗೂ ಆಮಂತ್ರಣವಿರುವುದಾಗಿಯೂ ಕಂಬಳದಲ್ಲಿ ೭೧ ಕೋಲಿನ ನಿಶಾನಿಗೆ ನೀರು ಹಾಕಿದ ಕೋಣಗಳಿಗೆ ಪ್ರಥಮ ಚಿನ್ನದ ಪದಕದ ಬಹುಮಾನವೂ, ಬಾಳೆದ ಓಟದಲ್ಲಿ ಮುಂದಿನ ಕೋಣಗಳಿಗೆ ದ್ವಿತೀಯ ಚಿನ್ನದ ಪದಕದ ಬಹುಮಾನವೂ ಕೊಡಲಾಗುವುದೆಂದು ಕ್ರಂಬಳದ ವ್ಯವಸ್ಥಾಪಕರು ತಿಳಿಸುತ್ತಾರೆ.

[illegible]

ಮಂಗಳೂರು [illegible] ಹೈಸ್ಕೂಲಿನ ವರ್ಧಂತ್ಯುತ್ಸವ [illegible] ತಾ. [illegible] ಸಂಜೆ ೫ ಗಂಟೆಗೆ ಮದ್ರಾಸ್ [illegible] ರೆವರೆಂಡ್ [illegible] ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಅಧ್ಯಾಪಕರಲ್ಲೊಬ್ಬರಾದ ಶ್ರೀ. ಯಂ. ಅನಂತ ಶೆಟ್ಟಿಗಳು ಶಾಲಾ ವರದಿಯನ್ನು ಓದಿದರು. ಆ ಮೇಲೆ ಶಾಲೆಯ ಹಳೆ ವಿದ್ಯಾರ್ಥಿಗಳಲ್ಲೊಬ್ಬರಾದ ಶ್ರೀ. ಕೆ. [illegible] ಶಾಲಾ ಸ್ತುತಿ ವಾಚನ ಮಾಡಿದರು. ಅವರು ತಮ್ಮ ಸ್ತುತಿ ವಾಚನದಲ್ಲಿ ಮಿಶ್ಶನ್ ಹೈಸ್ಕೂಲು ಕಳೆದ ಒಂದು ಶತಮಾನದಿಂದ ಮೇಲ್ಪಟ್ಟು ಶಾಲಾ ಜೀವನದಲ್ಲಿ ಮಾಡಿದ ಸಾರ್ವಜನಿಕ ಸೇವೆಗಳನ್ನು ಕೊಂಡಾಡಿ, ಹೆಚ್ಚಾಗಿ ಬಡ ಬಾಲಕರಿಗೆ ಆಶ್ರಯನೀಯುವಂತಹ ಈ ತೆರದ ವಿದ್ಯಾಸಂಸ್ಥೆಯು ಸಾವಿರಾರು ವರ್ಷ ಬಾಳಲಿ ಎಂದು ಹಾರೈಸಿದರು. ಅನಂತರ ಒಂದರಿಂದ ಐದನೆಯ ತರಗತಿಗಳ ವರೆಗಿನ ವಿದ್ಯಾರ್ಥಿ ವಿದ್ಯಾರ್ಥಿನಿಗಳಿಗೆ ಅಧ್ಯಕ್ಷರ ಹಸ್ತದಿಂದ ಇನಾಮು ಹಂಚಲಾಯಿತು. ಅನಂತರ ಅಧ್ಯಕ್ಷರು ಬಹಳ ಗಂಭೀರವೂ ವಿಚಾರಪರಿಪ್ಲುತವೂ ಆದ ಭಾಷಣ ಮಾಡಿ, ವಿದ್ಯಾರ್ಥಿಗಳು ವಿನಯ ಶೀಲರೂ, ಪ್ರಾಮಾಣಿಕರೂ ಆಗಿರಬೇಕೆಂದು ಸೂಚಿಸಿ, ಮಿಶ್ಶನ್ ಹೈಸ್ಕೂಲು ನಡೆಸುತ್ತಿರುವ ವಿದ್ಯಾದಾನದ ಮಹತ್ವವನ್ನು ಕೊಂಡಾಡಿ, ಶಾಲೆಗೂ ಅಧ್ಯಾಪಕರಿಗೂ, ವಿದ್ಯಾರ್ಥಿ ವೃಂದಕ್ಕೂ ಭಗವಂತನು ಆಯುರಾರೋಗ್ಯಗಳನ್ನು ದಯಪಾಲಿಸಲೆಂದು ಹಾರೈಸಿ ಭಾಷಣ ಕೊನೆಗಾಣಿಸಿದರು. ಮತ್ತೆ ಶಾಲಾ ಬಾಲಕರಿಂದ ನಾಟಕ ನೃತ್ಯ ಕೋಲಾಟ ಮೊದಲಾದ ವಿವಿಧ ವಿನೋದಾವಳಿಗಳಿದ್ದುವು. ಶ್ರೀ. ಎಂ. ಅನಂತ ಶೆಟ್ಟಿಗಳು ಕೃತಜ್ಞತೆ ಹೇಳಿದರು.

ತಾ. ೧೪ರಂದು ಶಾಲಾ ವರ್ಧಂತ್ಯುತ್ಸವವು ಗವರ್ನಮೆಂಟ್ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ. ಕೆ. ಎಸ್. ಯು. ಪಾಯರರ ಅಧ್ಯಕ್ಷತೆಯಿಂದ ಜರಗಿತು. ಪ್ರಾರ್ಥನೆಯ ಬಳಿಕ, ಶಾಲಾ ಮುಖ್ಯೋಪಾಧ್ಯಾಯ ಶ್ರೀ. ಎಸ್. ಎ. ಫರ್ನಾಂಡೀಸರವರು ವರದಿ ವಾಚನಮಾಡಿದರು. ಅವರ ವರದಿಯಲ್ಲಿ ಈ ವಿಷಯಗಳು ಇದ್ದುವು:

ಈಗ ಶಾಲೆಯಲ್ಲಿ ೩೯ ಮಂದಿ ಟ್ರೈನ್ ಆದ ಉಪಾಧ್ಯಾಯರಿದ್ದಾರೆ; ಅವರಲ್ಲಿ ಮೂವರು ಮಹಿಳೆಯರು. ಒಟ್ಟು ಕಳೆದ ವರ್ಷದ ವಿದ್ಯಾರ್ಥಿ ಸಂಖ್ಯೆ ೬೪೨ ಶಾಲೆಯ ಸ್ಥಳ ಅನುಕೂಲ ಚೆನ್ನಾಗಿದೆ. ಗಣಿತ, ಫಿಸಿಕ್ಸ್, ಚರಿತ್ರೆ, ಕಮರ್ಶಿಯಲ್ ಪ್ರೇಕ್ಟಿಸ್ ಇವು ಐಚ್ಛಿಕ ವಿಷಯಗಳಾಗಿ ಕಲಿಸಲಾಗುತ್ತವೆ. III ಫಾರ್ಮಿನ ವರೆಗೆ ಕನ್ನಡವೇ ಶಿಕ್ಷಣ ಮಾಧ್ಯಮವಾಗಿದೆ. ೨ ಮೇಲಿನ IV, V, VI ಫಾರ್ಮುಗಳಲ್ಲಿಯೂ ಒಂದು ವಿಭಾಗಕ್ಕೆ ಕನ್ನಡ ಶಿಕ್ಷಣ ಮಾಧ್ಯಮವಿದೆ. ಲೈಬ್ರರಿ, ಲೆಬರೆಟರಿ, ಮ್ಯೂಸಿಯಮ್ ಗಾರ್ಡನಿಂಗ್ ಇವು ತೃಪ್ತಿಕರವಿವೆ. ಇತರ ಚಟುವಟಿಕೆಗಳಲ್ಲಿ ವಿಶೇಷವಾಗಿ ನಾಟಕ, ತರ್ಕಸಭೆ ಮೊದಲಾದವುಗಳಲ್ಲಿ ಶಾಲಾ ವಿದ್ಯಾರ್ಥಿಗಳು ಉತ್ತಮ ಅಭ್ಯಾಸ ಹೊಂದುತ್ತಾರೆ. ಕಳೆದ ಸಾರ್ವಜನಿಕ ಪರೀಕ್ಷೆಯಲ್ಲಿ ನೇಕಡಾ [illegible] ರಷ್ಟು ಫಲಿತಾಂಶ ದೊರೆತಿದೆ.

ಬಳಿಕ ಶ್ರೀ. ಎನ್. ಎಸ್. ಕಿಲ್ಲೆಯವರು ಶಾಲೆಯ ಸ್ತುತಿವಾಚನ ಮಾಡಿ ಬಹು ದೀರ್ಘವೂ ಸ್ವಾರಸ್ಯಕರವೂ ಆದ ಭಾಷಣಮಾಡಿದರು. ಮಿಶನ್ ಹೈಸ್ಕೂಲು ಕಳೆದ ೧೦೦ ವರ್ಷಗಳಿಂದ ಮಾಡುತ್ತಿರುವ ಜನಸೇವೆ, ತನ್ನ ವಿದ್ಯಾರ್ಥಿ ಜೀವನದಲ್ಲಿದ್ದ ಉಪಾಧ್ಯಾಯರ ಗುಣ ಗೌರವಗಳು ಮೊದಲಾದವುಗಳನ್ನು ವಿವರಿಸಿ ಶಾಲೆಯನ್ನು ಇದುವರೆಗೆ ಶ್ರೇಯಸ್ಕರವಾಗಿ ನಡೆಸಿಕೊಂಡು ಬಂದಿರುವಂತಹವರನ್ನು ಅಭಿನಂದಿಸಿ ಜನರು ಇನ್ನು ಮುಂದೆ ಸಾಕಷ್ಟು ಪ್ರೋತ್ಸಾಹವಿತ್ತು ಈ ಸಂಸ್ಥೆಯನ್ನು ಅಭಿವೃದ್ಧಿಗೊಳಿಸಬೇಕಾಗಿದೆಯೆಂದು ಹಾರೈಸಿದರು. ಆ ಮೇಲೆ ಅಧ್ಯಕ್ಷರ ; ಹಸ್ತದಿಂದ [illegible] ಬಳಿಕ ಅಧ್ಯಕ್ಷರು [illegible] ಭಾಷಣ ಮಾಡಿ, ಈ [illegible] ಎಲ್ಲ [illegible]

[illegible] ಶಾಲಾ ವಿದ್ಯಾರ್ಥಿಗಳು [illegible] ಕರಲ್ಲೊಬ್ಬರಾದ ಶ್ರೀ. ಬಿ. ಅಪ್ಪಯ್ಯ ಇವರಿಂದ ರಚಿತವಾದ "ರಮೇಶಬಾಬು" ಎಂಬ ಸಾಮಾಜಿಕ ನಾಟಕವೊಂದನ್ನು ಬಹಳ ಚಲೋದಾಗಿ ಅಭಿನಯಿಸಿದರು. ಭರತ ನಾಟ್ಯದ ಅಭಿನಯವಿತ್ತು.

ದ. ಕ. ಜಿಲ್ಲಾ ಗಾಣಿಗರ ಯಾನೆ ಸಪಲ್ಯರ ಸಮಾಜ ಸುಧಾರಕ ಸಂಘ. ಮಂಜೇಶ್ವರ

ಇದರ ತೃತೀಯ ವಾರ್ಷಿಕೋತ್ಸವವು ಸಂಘದ ಮಂದಿರದಲ್ಲಿ ತಾ. 1ರಂದು ಬೆಳಗ್ಗೆ ಶ್ರೀ. ಯಂ. ನರಸಿಂಗರಾಯರ ಸ್ವಾಗತಾಧ್ಯಕ್ಷತೆಯಿಂದ ಡಾಕ್ಟರ್ ಕೆ. ನೇಮಿರಾಜಾಳ್ವರ ಅಗ್ರಾಸನದಲ್ಲಿ ಪ್ರಾರಂಭವಾಯಿತು. ಶ್ರೀ ದೇವರ ಪ್ರಾರ್ಥನೆಯಾಗಿ ಕಾರ್ಯದರ್ಶಿಯವರಿಂದ ವರದಿ ಓದಿ ಹೇಳಲಾಗಿ, ಗತವರ್ಷಗಳಲ್ಲಿ ಸಂಘಕ್ಕೆ ಉದಾರ ಧನ ಸಹಾಯವನ್ನಿತ್ತ ಮಹನೀಯರುಗಳ ಉಪಕಾರವನ್ನು ಸ್ಮರಿಸಿಕೊಂಡ ಮೇಲೆ, ಶ್ರೀ. ಯಂ. ಶ್ರೀನಿವಾಸರಾಯರು, ಶ್ರೀ. ಕೆ. ಶ್ರೀನಿವಾಸ ಪೆಡಸ್ಕರರು, ಶ್ರೀ. ಯಸ್. ವಿ. ಮಾನರು, ಶ್ರೀ. ಯಂ. ಆರ್. ಬಂಗೇರರು ಭಾಷಣಗಳನ್ನಿತ್ತರು.

ಶ್ರೀ. ಅಧ್ಯಕ್ಷರು ಅಮೂಲ್ಯ ಭಾಷಣವನ್ನಿತ್ತು, ಸಂಘಕ್ಕೆ ಧನಸಹಾಯವನ್ನು ಕೂಡಾ ಮಾಡಿ ಆಶೀರ್ವದಿಸಿದರು.

ದ. ಕ. ಜಿಲ್ಲಾ 4ನೇ ವಿದ್ಯಾರ್ಥಿ ಪರಿಷತ್ತು—ಮಂಗಳೂರ ವಿದ್ಯಾರ್ಥಿ ಸಂಘದವರ ಮಹಾಸಭೆಯು ಇದೇ ತಾ. ೨ರಲ್ಲು ಸಂಘದ ಖಚೇರಿಯಲ್ಲಿ ಸೇರಿ. ದ. ಕ. ಜಿಲ್ಲಾ 4ನೇ ಪರಿಷತ್ತನ್ನು ತಾ. ೩೧ನೇ ಜನವರಿ ಮತ್ತು ೧ನೇ ಫೆಬ್ರವರಿ ಈ ಎರಡು ದಿವಸಗಳಲ್ಲಿ ಜರಗಿಸುವುದಾಗಿ ನಿರ್ಣಯಿಸಲಾಗಿದೆ. ಇದಕ್ಕಾಗಿ ಹದಿನೆರಡು ಮಂದಿಯಿಂದ ಕೂಡಿದ ಒಂದು ಸ್ವಾಗತ ಸಮಿತಿಯನ್ನು ರಚಿಸಲಾಗಿದೆ. ಸ್ವಾಗತ ಅಧ್ಯಕ್ಷರು ಬಿ. ಯಸ್. ಭಾಸ್ಕರ ರೈ. ಪ್ರ. ಕಾರ್ಯದರ್ಶಿ ನಾರಾಯಣ ನೆಪ್ಪಾರ್, ಉಪಾಧ್ಯಕ್ಷರು ಎಸ್. ರಾಮಚಂದ್ರ ಭಟ್‌ರು, ಕಾರ್ಯದರ್ಶಿಗಳು ಬಿ. ಸುಬ್ಬಯ್ಯ ಶೆಟ್ಟಿ, ಬಿ. ಶ್ರೀನಿವಾಸ ರಾವ್, ಬಿ. ಶ್ರೀನಿವಾಸ ಬಲ್ಲಾಳ್, ಡಿ. ವಿಟ್ಟಲ ಆಳ್ವ, ಲೋರೆನ್ಸ್ ರಷ್ಮಿಂ[illegible]. ಸದಸ್ಯರು: ನರಸಿಂಹ ಆಚಾರ್; ನಾರಾಯಣ ನಾಯ್ಕ; ಪ್ರಭಾಕರ ರೈ. ವೈ. ಸುಬ್ಬಣ್ಣ; ರಾಮಣ್ಣ ಮಲ್ಲಿ; ನಾರಾಯಣ ರಾವ್; ಫ್ರಾನ್ಸಿಸ್ ಡಿ'ಸೋಜ; ಮಾಧವ ರಾವ್; ಪುರುಷೋತ್ತಮ ರಾವ್; ಅನಂತ ಭಟ್ಟ, ಡಿ. ಕೃಷ್ಣ.

ಈ ಸಂದರ್ಭದಲ್ಲಿ ಜಿಲ್ಲೆಯ ವಿದ್ಯಾರ್ಥಿ ಬಂಧುಗಳು ತಮ್ಮ ಪ್ರತಿನಿಧಿಗಳನ್ನು ಕಳುಹಿಸಿ ಸಹಕರಿಸಬೇಕಾಗಿಯೂ, ಎಲ್ಲಾ ಮಹಾಜನರೂ ಸಹಾನುಭೂತಿ ಸಹಾಯಗಳನ್ನಿತ್ತು ಪರಿಷತ್ತನ್ನು ಯಶಸ್ವಿಗೊಳಿಸಬೇಕಾಗಿ ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ. ಬಿ. ಯಸ್. ಭಾಸ್ಕರ ರೈಗಳವರು ವಿನಂತಿಸಿಕೊಳ್ಳುತ್ತಾರೆ.

ಸಾದರ-ಸ್ವೀಕಾರ

ನವಭಾರತ ವಾರಪತ್ರಿಕೆ

ಮಂಗಳೂರು ನ್ಯೂಸ್ ಪೇಪರ್ ಪಬ್ಲಿಶರ್ಸ್ ಲಿಮಿಟೆಡಿನವರಿಂದ ಪ್ರಕಾಶಿಸಲ್ಪಟ್ಟು ಶ್ರೀ. ಶುದ್ಧಿ ಸ್ವಾಸಹೇನ [illegible] ಸಂಪಾದಕತ್ವದಿಂದ ನವಭಾರತವು ಈಗ ವಾರಪತ್ರಿಕೆಯಾಗಿ ಹೊರಟಿದೆ. ಸ್ವತಂತ್ರಭಾರತ ವಾರಪತ್ರಿಕೆಯ ಆಕಾರದ ನಾಲ್ಕು ಪುಟಗಳಿದ್ದು, ಕೆನರಾ ಡೇಂಲ್ [illegible] ಸ್ಸು ಮಂಟಿನಿಂದ ಹೊರಡುತ್ತದೆ. ಕಾಗದವು ಬಹಳ ತುಟ್ಟಿಯಾಗಿರುವ ಕಾಲದಲ್ಲಿ ಇಂತಹ ಸಾಹಸಕ್ಕೆ ಹೊರಟ ನ್ಯೂಸ್ ಪೇಪರ್ ಪಬ್ಲಿಶರ್ಸ್ [illegible]

[illegible]

ಅಂಗಡಿಗಾರರ [illegible] —[illegible] ಅಂಗಡಿಗಳನ್ನು ಮುಚ್ಚುವ [illegible] ಮಾಡುವದಾಗಿ [illegible] ಮಂಗಳೂರಲ್ಲಿ ಕೆಲವು ಅಂಗಡಿಗಳನ್ನು ಮುಚ್ಚಿದ್ದರು.

ಪುತ್ತೂರು

ಸಭೆ

ಪುತ್ತೂರು ರೇಂಜಿನ ಉಪಾಧ್ಯಾಯರ ಸಭೆಯು ಕಳೆದವಾರ ಬೊಳುವಾರ ಪಂಚಾಯತ ಶಾಲೆಯಲ್ಲಿ ಶ್ರೀ. ಗಣಪತಿ ಹೊಳ್ಳರ ಅಧ್ಯಕ್ಷತೆಯಲ್ಲಿ ಜರಗಿತು. ಇಲ್ಲಿಯ ಡಿ। ಕಲೆಕ್ಟರರಾದ ಶ್ರೀ. ಜೋಗಪ್ಪನವರು ಉಪಾಧ್ಯಾಯರ ಕರ್ತವ್ಯದ ಕುರಿತು ಭಾಷಣವಿತ್ತರು.

ವಿನೆಕಲ್ಲು ಹೆತ್ತವರ ಸಭೆ

ಇಲ್ಲಿಯ ಪಂಚಾಯತ ಬೋರ್ಡ್ ಶಾಲೆಯಲ್ಲಿ, ಆ ಶಾಲೆಯ ಮಕ್ಕಳ ಹೆತ್ತವರ ಸಭೆಯು, ಎಡ್ವೊಕೆಟ್ ಶ್ರೀ ಕೆ. ವೆಂಕಟರಮಣ ಗೌಡರ ಅಧ್ಯಕ್ಷತೆಯಿಂದ ನೆರವೇರಿತು. ಗ್ರಾಮೋದ್ಧಾರ ಮೊದಲಾದ ವಿಷಯಗಳಲ್ಲಿ ಭಾಷಣಗಳಾದುವು. ಶಾಲಾ ಕಟ್ಟಡವನ್ನು ಕಟ್ಟಿಸುವ ಬಗ್ಗೆ ಮನೆ ತೆರಿಗೆ ಕೊಡುವರೆ ಗ್ರಾಮಸ್ಥರು ಒಪ್ಪಿಕೊಂಡಿರುವರು. ಹೆತ್ತವರ ಸಂಘದ ಆಡಳಿತ ಕಮಿಟಿಯೊಂದು ನೇಮಕವಾಯಿತು. ರಾತ್ರಿ ಯಕ್ಷಗಾನ ಕಾಲಕ್ಷೇಪವಿತ್ತು.

ಕಾರ್ಕಳ

ಉದ್ಘಾಟನ ಉತ್ಸವ:—ಇಲ್ಲಿ ಸ್ಥಾಪಿತವಾಗಿರುವ ಕರ್ನಾಟಕ ಸಾಹಿತ್ಯ ಸಂಘದ ಉದ್ಘಾಟನ ಸಮಾರಂಭವು ಇದೇ ಫೆಬ್ರವರಿ ತಿಂಗಳ 1ರಂದು ಶ್ರೀ ಮುಳಿಯ ತಿಮ್ಮಪ್ಪಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಬೇಕೆಂದು ನಿಶ್ಚಯವಾಗಿದೆ. ಸಿದ್ಧತೆಗಳು ನಡೆಯುತ್ತಿವೆ.

ಉಪಾಧ್ಯಾಯರ ಸಭೆ:—ಕಾರ್ಕಳ ಕೇಂದ್ರದ ಪ್ರಾಥಮಿಕ ಶಾಲೆಗಳ ಉಪಾಧ್ಯಾಯರ ತಿಂಗಳ ಸಭೆಯು ಡಿಪ್ಟಿ ಇನ್ಸ್‌ಪೆಕ್ಟರ್ ಶ್ರೀ ಯು. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ಮಾರ್ಚ್ ತಿಂಗಳಲ್ಲಿ ಶೇಷವ್ರ ದಿನವನ್ನು ಆಚರಿಸಬೇಕೆಂದು ನಿರ್ಣಯವಾಯಿತು.

ಚುನಾವಣೆ:—ಕಾರ್ಕಳ ಪಂಚಾಯತ ಕೋರ್ಟಿನಲ್ಲಿ ಖಾಲಿಬಿದ್ದ ಸದಸ್ಯಸ್ಥಾನದ ಚುನಾವಣೆಯು ತಾ. 10ರ ದಿನ ನಡೆದು ಮುನ್ಸಿಫ್ ಕೋರ್ಟು ನಿವೃತ್ತ ನಾಜಿರ ಶ್ರೀ ಕೆ. ಶ್ರೀನಿವಾಸ ಪೈಗಳವರು ಪ್ರತಿಸ್ಪರ್ಧಿಗಳಿಲ್ಲದೆ ಆರಿಸಲ್ಪಟ್ಟರು.

ಅವಳಿಕರು:—ಇಲ್ಲಿಯ ಶ್ರೀ ಕೆ. ಲಕ್ಷ್ಮಣ ಪೈ ಎಂಡ್ ಸನ್ಸ್‌ರವರ ಮನೆಯ ಒಂದು ದನವು ಒಮ್ಮೆಗೇ ಎರಡು ಗಂಡು ಮತ್ತು ಹೆಣ್ಣು ಕರುಗಳನ್ನು ಹೆತ್ತಿದೆ. ಎರಡೂ ಕರುಗಳೂ ಆರೋಗ್ಯವಾಗಿವೆ.

ಉಡುಪಿ

ಕಮಿಶನರಿಗೆ ವಿದಾಯ ಸತ್ಕಾರ—ಉಡುಪಿ ಮುನ್ಸಿಪಲ್ ಕಮಿಶನರ್ ಶ್ರೀ. ಡಿ. ಹರಿಶ್ಚಂದ್ರ ರಾಯರಿಗೆ ವರ್ಗವಾದ ಕಾರಣ ಮುನ್ಸಿಪಲ್ ಟೀಚರ್ಸ್ ಯೂನಿಯನಿನ ಸದಸ್ಯರು ಒಂದು ವಿದಾಯ ಸತ್ಕಾರವಿತ್ತರು.

ಯಾತ್ರಾರ್ಥಿಗಳಿಗೆ ಶಿಬಿರ—ಉಡುಪಿ ಹಿಂದುಸ್ಥಾನ ಸ್ಕೌಟ್ ಎಸೋಸಿಯೇಶನಿನ ನೇತೃತ್ವದಲ್ಲಿ ಉಡುಪಿಗೆ ಬರತಕ್ಕ ಪರ್ಯಾಯ ಯಾತ್ರಾರ್ಥಿಗಳ ಸಲುವಾಗಿ ಎರಡು ಶಿಬಿರಗಳು ತೆರೆಯಲಾಗಿದೆಯೆಂದು ತಿಳಿಯುತ್ತದೆ.

ಪರ್ಯಾಯ—ವಿಷ್ಣು ಸಂವತ್ಸರದ ಮಾಘ ಶುದ್ಧ ೧ (ತಾ. ೧೭—೧—೪೨ನೇ) [illegible] ವಾರ ಶ್ರೀಮದುಡುಪಿ ಶ್ರೀಕೃಷ್ಣದೇವರ ಸನ್ನಿಧಿಯಲ್ಲಿ ಶ್ರೀಮನ್ಮಧ್ವಾಚಾರ್ಯರ ಶೇಕಡ್ಯಾ[illegible] ಸಾರಪದ್ಧತಿಯಂತೆ, ಶ್ರೀಮದ್ವಿದ್ಯಾ[illegible] ಶ್ರೀಪಾದಂಗಳವರ ಪರ್ಯಾಯ [illegible] ವವು ನಡೆಯುವುದು.

ಬ್ರಹ್ಮಾವರ

ವಾರ್ಷಿಕ ಸಭೆ—[illegible] ವಾರ್ಷಿಕ ಸಭೆಯು ತಾ. [illegible] [illegible] ಶಾಲೆಯಲ್ಲಿ ಶ್ರೀ. [illegible]

[illegible]ಲಾಲಂಪುರವು ಜಪಾನರ ಸ್ವಾಧೀನವಾಯಿತು

[illegible] ಗುಪ್ತ [illegible] ಹಾಂಗ್‌ಕಾಂಗಿನಲ್ಲಿ

[illegible] ಗುಪ್ತ [illegible] ಸುದ್ದಿ [illegible] ಮೇಲೆ ಧಾಳಿ ನಡೆದರೂ [illegible] ಹೇಳುತ್ತಾರೆ

[illegible] ಗ್ರಾಡಿನಿಂದ ಹಿಮ್ಮೆಟ್ಟಿದರು

[illegible] ಕೆಲವು ದಿನಗಳಲ್ಲಿ ರಷ್ಯನ್ ಸೈನ್ಯಗಳು [illegible] ಪಟ್ಟಣಗಳನ್ನು ಆಕ್ರಮಿಸಿಕೊಂಡು ಬಂದು ತಿಳಿದಿದೆ. ಜರ್ಮನರನ್ನು ಲೆನಿನ್‌ಗ್ರಾಡಿನ [illegible] ರಷ್ಯನರು ಹಿಮ್ಮೆಟ್ಟಿಸಿದರು.

ರಂಗೂನ್ ಮೇಲಿನ ಧಾಳಿಯಲ್ಲಿ ಆಕಾಶದಲ್ಲಿ ವಿಚಿತ್ರ ದೀಪಗಳು

[illegible] ವಿಮಾನಗಳು ರಂಗೂನಿನ ಮೇಲೆ ಧಾಳಿ ಮಾಡಲು ಬಂದಾಗ ಆಕಾಶದಲ್ಲಿ ದೀಪಗಳು ಕಾಣಿಸಿದ ಬಗ್ಗೆ ಬರ್ಮೀಯ ಪತ್ರಿಕೆಗಳು ಸಂಶಯ [illegible] ದಲ್ಪವರ ಚಟುವಟಿಕೆಯಿರಬಹುದೆಂದೇ [illegible] ಅನೇಕ ಪಟ್ಟಣಗಳಲ್ಲಿ ಇಂತಹ ಚಟುವಟಿಕೆಗಳು ತಿಳಿದುಬಂದಿದೆ.

ಹಡಗ ಮುಳುಗಿತು

ನೋವಾಸ್ಕೋಟಿಯಾದಿಂದ ೧೯೦ ಮೈಲಿನ ಮೇಲೆ ದೊಡ್ಡದೊಂದು ಉಗಿಹಡಗವು ಸಬ್‌ಮೆರಿನಿಂದ ಮುಳುಗಿಸಲ್ಪಟ್ಟಿತು

ಸಾರವಾಕದವರು ಶರಣರಾದರು

ಸಾರಾವಾಕ ಸೈನ್ಯದವರು ಜಪಾನರಿಗೆ ಶರಣಾ

[illegible]ರಕಾನ ಸೈನ್ಯದವರು ಜಪಾನರ ಶರಣಾದರು
ಮಲಯದಲ್ಲಿ ಭೀಕರ ಕಾಳಗ
ರಶ್ಯದಲ್ಲಿ ಜರ್ಮನರು ಹಿಂದೆ ಸರಿಯುತ್ತಿದ್ದಾರೆ

ದರೆಂದು ಸುದ್ದಿ ಬಂದಿದೆ. [illegible] ಮುಖ್ಯ ವಿಮಾನಕೇಂದ್ರವಾದ [illegible]ವನ್ನು ಜಪಾನರು ಸ್ವಾಧೀನಪಡಿಸಿಕೊಂಡಿರುವರೆಂದು ಹೇಳಲಾಗಿದೆ.

ಸಿಂಗಾಪುರದ ಮೇಲೆ ಧಾಳಿ

ಜಪಾನಿಯರು ಸಿಂಗಾಪುರದ ಮೇಲೆ ಪ್ರಚಂಡ ಧಾಳಿ ನಡೆಸಿರುವರು

[illegible] ಇಂಗ್ಲೆಂಡಿಗೆ ಧಾಳಿ

[illegible] ಆಗಿದೆಯೆಂದು ಸುದ್ದಿ ಬಂದಿದೆ. ಕೆಲವರು ಸತ್ತು ಹೋಗಿರುವರೆಂದು ಕೆಲವರಿಗೆ ಗಾಯವಾಗಿದೆಯೆಂದೂ ಸುದ್ದಿ.

ಜರ್ಮನರ ಹೊಸ ಯುದ್ಧ ವಿಮಾನಗಳು
ಎಫ್ ಡಬ್ಲ್ಯೂ 190

ಉತ್ತರ ಫ್ರಾನ್ಸು ಹಾಗೂ ಇಂಗ್ಲಿಷ್ ಕಾಲುವೆಯಲ್ಲಿ ಜರ್ಮನರು ಹೊಸ ತರದ ಯುದ್ಧ ವಿಮಾನಗಳನ್ನು ಉಪಯೋಗಿಸುತ್ತಿರುವರು. ಈ ವಿಮಾನಗಳಿಗೆ ಫೋಕೆವುಲ್ಫ್ ಎಫ್ ಡಬ್ಲ್ಯೂ ಎಂದು ಹೆಸರು. ಇದನ್ನು ಒಬ್ಬನೇ ನಡೆಸುವುದು

ರಶ್ಯದಲ್ಲಿ ಹಿಟ್ಲರನ ಅಪಜಯ

ರಶ್ಯನರು ಡೊನೆಜ್ ನದಿಯನ್ನು ಅನೇಕ ಕಡೆಗಳಲ್ಲಿ ದಾಟಿ [illegible] ಸ್ಥಳಗಳನ್ನು ಸ್ವಾಧೀನಪಡಿಸಿಕೊಂಡಿರುವರಲ್ಲದೆ ಕೆಲವು ಪಟ್ಟಣಗಳನ್ನೂ [illegible] ವಶಪಡಿಸಿರುವರು. ಜರ್ಮನ್ ದಳಪತಿತ್ವವನ್ನು ಹಿಟ್ಲರನು ವಹಿಸಿಕೊಂಡ ಮೇಲೆ ಮೊದಲನೇ ಯುದ್ಧದಲ್ಲಿಯೇ ಅಪಜಯವಾಯಿತಂತೆ.

ಕೌಲಾಲಂಪುರದಲ್ಲಿ ಭೀಕರ ಕಾಳಗ

ಕೌಲಾಲಂಪುರದ ಕಾಳಗವು ಇನ್ನೂ ಭೀಕರವಾಗುತ್ತಿದೆ. ಎರಡು ಪಕ್ಷದವರಿಗೂ ಬಹಳ ಹಾನಿ ಸಂಭವಿಸಿರುವುದು. ಜಪಾನರು ಬ್ರಿಟಿಶ್ ವ್ಯೂಹವನ್ನು ಭೇದಿಸಲು ಅಗಣಿತ ಶಕ್ತಿ ಉಪಯೋಗಿಸುತ್ತಿರುವರು

ಲಿಟ್ವಿನಾಫ್ ಹಲ್ಲರ ಚರ್ಚೆ

ರಶ್ಯನ್ ರಾಯಭಾರಿ ಲಿಟ್ವಿನಾಫರು ವಾಶಿಂಗ್ಟನಿನಲ್ಲಿ ಕಾರ್ಡೆಲ್ ಹಲ್ಲರನ್ನು ಕಂಡು ಪ್ರಕೃತ ಪರಿಸ್ಥಿತಿಯ ವಿಚಾರ ಮಾತನಾಡಿದರೆಂದು ತಿಳಿದಿದೆ

ಲಿಬಿಯದಲ್ಲಿ ಜರ್ಮನರು ಇನ್ನೂ ಹಿಂದೆ ಸರಿದರು

ಲಿಬಿಯದಲ್ಲಿ ಜರ್ಮನರು ಜಡಬಾಯಾದಿಂದ ಎಲ್ ಅಜೀಲಾದ ಕಡೆಗೆ ಓಡಿಹೋಗುತ್ತಿರುವರೆಂದು ತಿಳಿದಿದೆ. ಎಲ್ ಅಜೀಲಾದ ಮೇಲೆ ದಕ್ಷಿಣ ಆಫ್ರಿಕದ ವಿಮಾನಗಳು ಧಾಳಿ ಮಾಡಿದವು

ಡಚ್ ಇಂಡೀಸ್ ಮೇಲೆ ಧಾಳಿ?

ಬೇಗನೇ ಆರಂಭವಾಗಬಹುದಾಗಿ ಅಲ್ಲಿನ ಅಧಿಕಾರಿಗಳ ಊಹೆಯಾಗಿದೆ. ಅಮೇರಿಕದಿಂದ ಅಲ್ಲಿಗೆ ಸೈನ್ಯ ಸಹಾಯದ ಪ್ರಯತ್ನವಾಗುತ್ತಿದೆ

ಸಿಪಾಯಿಗಳ ಮೇಲೆ ಆರೋಪ

ಕ ಡಿಮ ಮತ್ತರಾದ ಬ್ರಿಟಿಷ್ ಸಿಪಾಯಿಗಳ

[illegible] ಇನ್ನೂ [illegible] ಸುದ್ದಿ ಬಂದಿದೆ.

ಮಲಯದಲ್ಲಿ ಉಗ್ರ ಕದನ

ಕೌಲಾಲಂಪುರದ ಉತ್ತರದಲ್ಲಿ [illegible] ಯುದ್ಧ ಚಟುವಟಿಕೆ ನಡೆದಿದೆ. [illegible] ಪ್ರದೇಶದಲ್ಲಿ ಜೋರಾಗಿ ಯುದ್ಧ ನಡೆಯುತ್ತಿದೆ. ಸಿಂಗಾಪುರದ ಮೇಲೆ ಮತ್ತೂ ಶತ್ರು ವಿಮಾನಗಳು ಧಾಳಿಮಾಡಿವೆ. ಮಲಯಾದ [illegible] ಎರಡನ್ನಂಗಳು ಶತ್ರುವಶವಾಗಿವೆ.

NOTICE

In the Court of District Munsiff, Puttur

O. P 3/1942.

Subbanna Bhatta and 3 others — Petrs.

Please take notice that the above petition, for grant of a 'Succession Certificate under Sec 372 of Indian Succession act XXXIX of 19 5 empowering 1st petr Subbanna Bhatta to collect the debt and receive the amount Rs 1017-0-0 due under Policy No 185400 with profits on the life of J Krishna Bhatta stands posted for hearing to 26 1 1942 at 11 a. m in the above court. If persons interested fail to appear and contest on the said date orders will be passed exparte.

Puttur 12 1 42 (sd) [illegible] Pleader for Petrs.

ಸೌಂದರ್ಯ ಮತ್ತು ಮುಖಕಾಂತಿಗೆ

ಹಿಮಾನಿ ಸ್ನೋ

ಹಿಂದೂದೇಶದಲ್ಲಿ ಪ್ರಥಮವಾಗಿ — ತಯಾರಿಸಿದ ಸ್ನೋ —

ಅಂದಿನಿಂದಲೂ ಶ್ರೇಷ್ಠವಾಗಿದೆ. ಇದೆ — ಮುಖದ ಮೇಲಿನ ಮೊಡವೆ, ಕಲೆ, ಮಚ್ಚೆ ಛಿದ್ರ ಮುಂತಾದುವನ್ನು ಗುಣಪಡಿಸುವುದು

ಹಿಮಾನಿ ಗ್ಲಿಸರಿನ್ ಸಾಬೂನುಗಳು

ಪಾರದರ್ಶಕ—ಶುದ್ಧ

ಕೋಮಲವಾದ ಪರಿಮಳ



[illegible]ಕ್ಕೆ ಸಿಗುವ ಸ್ಥಳ:—

[illegible] ಟ್ರೇಡಿಂಗ್ ಕಂ.

[illegible] ಮಂಗಳೂರು.

ಬೇನೆಕೊಡುವ ಮೂಲವ್ಯಾಧಿಯಿಂದ ನರಳಬೇಡಿ

ಈ ಶ್ರೇಷ್ಠ ಲೇಪವು ನೋವನ್ನು ಬೇಗನೇ ಗುಣಪಡಿಸುತ್ತದೆ

[illegible] ಕೊಟ್ಟಿದೆ. ಇದಕ್ಕೆ ಅದ್ಭುತ ಶಕ್ತಿಯಿರುವುದು [illegible] ಮೂಲವ್ಯಾಧಿಯು ನಿರ್ಮೂಲವಾಗುತ್ತದೆ. [illegible] ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿ [illegible] ಅಥವಾ 2 4-0 ಬೆಲೆಗೆ ದೊರಕುತ್ತದೆ. [illegible]

ಏಜೆಂಟ್ಸ್, ಮೆಸರ್ಸ್ ರಾಧಾ ಎಂಡ್ ಕಂ.

[illegible] ಮದರಾಸು.

[illegible]

ZAM-BUK

[illegible]

ಮಂಗಳೂರು

ವಿದಾಯ ಸತ್ಕಾರ—ಮಂಗಳೂರು ರೇಂಜಿನ ಸೀನಿಯರ್ ಡಿ. ಇನ್ಸ್ಪೆಕ್ಟರಾಗಿ ನೇಮಕ ಹೊಂದಿದ ಶ್ರೀ. ಎಚ್. ನಾಗೇಶ ರಾಯರನ್ನು ಉಡುಪಿ ಡಿ. ಇನ್ಸ್ಪೆಕ್ಟರರಾಗಿ ನೇಮಕ ಹೊಂದಿದ ಶ್ರೀ. ಡಿ. ತೀನಪ್ಪ ಹೆಗ್ಡೆಯವರನ್ನೂ ಬೀಳ್ಕೊಡುವ ಸಮಾರಂಭವು ಗವರ್ನಮೆಂಟ್ ಟ್ರೈನಿಂಗ್ ಶಾಲೆಯಲ್ಲಿ ಮುಖ್ಯೋಪಾಧ್ಯಾಯರಾದ ಶ್ರೀ. ಎನ್. ಸುಬ್ಬರಾಯರ ಅಧ್ಯಕ್ಷತೆಯಿಂದ ನೆರವೇರಿತು. ಈ ಸಂದರ್ಭದಲ್ಲಿ ಶ್ರೀ. ಕೆ. ಗೋಪಾಲರಾವ್ ಮೊದಲಾದವರ ಭಾಷಣಗಳಿದ್ದುವು.

ಇರ್ದೆ—ಇಲ್ಲಿನ ದರ್ಭೆ ಶಾಲೆಯ ಹೆತ್ತವರ ಕೂಟದ ಸಭೆಯು ಶ್ರೀ. ದೇವಪ್ಪಾಳ್ವರ ಅಧ್ಯಕ್ಷತೆಯಲ್ಲಿ ನೆರವೇರಿತು.

ಕೈರಂಗಳ ಶಾಲಾ ವರ್ಧಂತಿ—ಕೈರಂಗಳ ಶಾಲಾ ವರ್ಧಂತಿಯು ಡಾ। ಆನಂದ ರಾಯರ ಅಧ್ಯಕ್ಷತೆಯಿಂದ ನೆರವೇರಿತು.

ಕುಲಾಲರ ಪರಿಷತ್ತು-ಜಿಲ್ಲಾ ಮೂಲ್ಯ ಯೂನೆ ಕುಲಾಲರ ಜಾತ್ಯಭ್ಯುದಯ ಸಂಘದವರು ತಾ. ೧೭—೧೮ರಂದು ಕುಲಾಲರ ಜಿಲ್ಲಾ ಪರಿಷತ್ತು ಮಾರ್ನಮಿ ಕಟ್ಟೆಯಲ್ಲಿರುವ ಪರಮೇಶ್ವರ ಭವನದಲ್ಲಿ ಜರಗಿಸುವರಾಗಿ ತಿಳಿದಿದೆ.

ಜಿ. ಎ. ಸರ್ಕಸ್—ಬೊಂಬಾಯಿಯ ಜಿ. ಎ. ಸರ್ಕಸಿನವರು ತಾ. 6ರಿಂದ ಮಂಗಳೂರು ಮೈದಾನಿನಲ್ಲಿ ತಮ್ಮ ಪ್ರದರ್ಶನಗಳನ್ನು ತೋರಿಸುತ್ತಾ ಇದ್ದಾರೆ. ಇದಕ್ಕಿಂತ ಮೊದಲು ಒಂದೆರಡು ಸಲ ಮಂಗಳೂರಿಗೆ ಬಂದಿದ್ದ ಈ ಸರ್ಕಸಿನ ವಿಷಯವಾಗಿ ಜನರಿಗೆ ಹೆಚ್ಚಿನ ಪ್ರಶಸ್ತಿ ಬೇಕಾದ ಅವಶ್ಯವಿಲ್ಲ. ಈ ಸಲದಲ್ಲಿ ಅವರು ಮೊದಲಿಗಿಂತಲೂ ವಿಶೇಷವಾದ ಕೆಲವು ಪ್ರದರ್ಶನಗಳನ್ನು ತೋರಿಸುತ್ತಿರುವ ನಿಮಿತ್ತ ಪ್ರತಿಯೊಂದು ಪ್ರದರ್ಶನಕ್ಕೂ ಕಿಕ್ಕಿರಿದು ಜನಸಂದಣಿ ಹೋಗುತ್ತಲಿದೆ.

ಚೀನೀಯರ ಕುಶಲತೆಯ ಆಟಗಳು, ಸರಿಗೆಯಲ್ಲಿ ನೇರಾಗಿ ಮೇಲೆ ನಡಕೊಂಡು ಹೋಗುವುದು, ಕಬ್ಬಿಣದ ಮುಳ್ಳಿನ ಮೇಲೆ ಮನುಷ್ಯನು ಮಲಗಿ ಆನೆ ಅದರ ಮೇಲಿಟ್ಟ ಹಲಗೆಯನ್ನು ಮೆಟ್ಟಿ ಅತ್ತ ಹಾಯುವುದು, ಒಂಟೆಗಳ ಆಟ, ಕುದುರೆ, ಹುಲಿ, ಆನೆಗಳ ಆಟ, ಸೈಕಲು ಸವಾರಿ, ಮೊದಲಾದವು ವಿಶೇಷ ಪ್ರಶಂಸನೀಯವಾಗಿವೆ. ಮಹಿಳೆಯರ ನೃತ್ಯಗಳೂ ಇವೆ. ನಮ್ಮ ಊರವರೂ ಕೆನರಾ ಹೈಸ್ಕೂಲ್ ಹಳೇ ವಿದ್ಯಾರ್ಥಿಗಳೂ ಆದ ಶ್ರೀ. ಎಂ. ಕೆ. ಶೆಟ್ಟಿ ಇವರು ಈ ಸರ್ಕಸಿನ ಮೆನೇಜರರಾಗಿ ಬಹಳ ಜನಪ್ರಿಯರಾಗಿರುವರು. ಸರ್ಕಸ್—ಕಂಪೆನಿಯವರಿಗೆ ಹೆಚ್ಚಿನ ಪ್ರೋತ್ಸಾಹ ದೊರೆಯಲೆಂದು ನಮ್ಮ ಹಾರೈಕೆ. ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಿಂದ ತಾ. 17ರಂದು ಇವರು ವಿಶೇಷ ಪ್ರದರ್ಶನ ತೋರಿಸುವರು.

ಕದ್ರಿ

ವರ್ಧಂತ್ಯುತ್ಸವ-ಕದ್ರಿ ಮುನ್ಸಿಪಲ್ ಬಾಲಿಕಾ ಪಾಠಶಾಲೆಯ ವರ್ಧಂತ್ಯುತ್ಸವವು ತಾ. ೫ರಂದು ಶ್ರೀ. ಗೋಪಾಲರಾಯರ ಅಧ್ಯಕ್ಷತೆಯಿಂದ ಜರಗಿತು.

ಆಟ – ಕಂಬಳಗಳು—ಕಣ್ಣೀರುಪಂತ ಬೋರ್ಡು ಶಾಲೆಯ ಹತ್ತಿರ ಮಡ್ಲೊಟ್ಟು ಎಂಬಲ್ಲಿ ಕಟೀಲು ಮೇಳದವರಿಂದ ತಾ: ೨೩, ೨೭, ೨೮ ಈ ದಿನಗಳಲ್ಲಿ ಗ್ರಾಮಸ್ಥರು ಆಟ ಆಡಿಸುವುದೆಂತಲೂ, ಮತ್ತು ಸದ್ರಿ ದಿವಸಗಳಲ್ಲಿ ಕೋಳಿ ಕಟ್ಟವೂ, ತಾ. ೩೧ರಂದು ಕುಪ್ಪೆಟ್ಟಿ ಸಂಕದ ಬಳಿ ಕೆರೆಯನ ಕಂಬಳದಲ್ಲಿ ಓಟದ ಕೋಣಗಳನ್ನು ಓಡಿಸುವುದೆಂತಲೂ ನಿರ್ಣಯಿಸಿರುವುದರಿಂದ ಸರ್ವರಿಗೂ ಆಮಂತ್ರಣವಿರುವುದಾಗಿಯೂ ಕಂಬಳದಲ್ಲಿ ೬॥ ಕೋಲಿನ ನಿಶಾನಿಗೆ ನೀರು ಹಾಕಿದ ಕೋಣಗಳಿಗೆ ಪ್ರಥಮ ಚಿನ್ನದ ಪದಕದ ಬಹುಮಾನವೂ, ಬಾಲದ ಓಟದಲ್ಲಿ ಮಿಗಿಲಾದ ಕೋಣಗಳಿಗೆ ದ್ವಿತೀಯ ಚಿನ್ನದ ಕೇದಿಗೆ ಬಹುಮಾನವೂ ಕೊಡಲಾಗುವುದೆಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಮಜೂರರ ಸಭೆ—ದವಸಧಾನ್ಯದ ಕ್ರಯ ನಿಯಂತ್ರಣದ ವಿಷಯ ಸರಕಾರದಿಂದೇನೂ ಪ್ರಯತ್ನ ನಡೆಯದಿರುವ ಬಗ್ಗೆ ಮಂಗಳೂರ ಮಜೂರರ ಸಭೆಯು ಶ್ರೀ. ಎಸ್. ಎನ್. ಹೊಳ್ಳರ ಅಧ್ಯಕ್ಷತೆಯಿಂದ ಸೇರಿ, ಸರಕಾರದವರು ಬೇಗನೇ ಅದನ್ನು ಕೈಗೂಡಿಸಬೇಕೆಂದು ನಿರ್ಣಯಿಸಲಾಯಿತು.

ಮಿಶ್ಯನ್ ಹೈಸ್ಕೂಲ ವರ್ಧಂತ್ಯುತ್ಸವ

ಮಂಗಳೂರು ಬಿ. ಇ. ಎಂ. ಹೈಸ್ಕೂಲಿನ ವರ್ಧಂತ್ಯುತ್ಸವದ ಅಂಗವಾಗಿ ತಾ. ೧೪ರಂದು ಸಂಜೆ ೫ ಗಂಟೆಗೆ ಮಕ್ಕಳ ದಿನಾಚರಣೆಯು ರೆವರೆಂಡ್ ಸೋನ್ನರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಅಧ್ಯಾಪಕರಲ್ಲೊಬ್ಬರಾದ ಶ್ರೀ. ಯಂ. ಅನಂತ ಶೆಣೈಗಳು ಶಾಲಾ ವರದಿಯನ್ನು ಓದಿದರು. ಆ ಮೇಲೆ ಶಾಲೆಯ ಹಳೆ ವಿದ್ಯಾರ್ಥಿಗಳಲ್ಲೊಬ್ಬರಾದ ಶ್ರೀ. ಕೆ. ಕಿಙ್ಞಣ್ಣ ರೈಗಳು ಶಾಲಾ ಸ್ವಸ್ತಿ ವಾಚನ ಮಾಡಿದರು. ಅವರು ತಮ್ಮ ಸ್ವಸ್ತಿ ವಾಚನದಲ್ಲಿ ಮಿಶ್ಯನ್ ಹೈಸ್ಕೂಲು ಕಳೆದ ಒಂದು ಶತಮಾನದಿಂದ ಮೇಲ್ಪಟ್ಟ ಶಾಲಾ ಜೀವನದಲ್ಲಿ ಮಾಡಿದ ಸಾರ್ವಜನಿಕ ಸೇವೆಗಳನ್ನು ಕೊಂಡಾಡಿ, ಹೆಚ್ಚಾಗಿ ಬಡ ಬಾಲಕರಿಗೆ ಆಶ್ರಯವೀಯ್ಯುವಂತಹ ಈ ತರದ ವಿದ್ಯಾಸಂಸ್ಥೆಯು ಸಾವಿರಾರು ವರ್ಷ ಬಾಳಲಿ ಎಂದು ಹಾರೈಸಿದರು. ಅನಂತರ ಒಂದರಿಂದ ಐದನೆಯ ತರಗತಿಗಳ ವರೆಗಿನ ವಿದ್ಯಾರ್ಥಿ ವಿದ್ಯಾರ್ಥಿನಿಗಳಿಗೆ ಅಧ್ಯಕ್ಷರ ಹಸ್ತದಿಂದ ಇನಾಮು ಹಂಚಲಾಯಿತು. ಅನಂತರ ಅಧ್ಯಕ್ಷರು ಬಹಳ ಗಂಭೀರವೂ ವಿಚಾರಪರಿಪ್ಲುತವೂ ಆದ ಭಾಷಣ ಮಾಡಿ, ವಿದ್ಯಾರ್ಥಿಗಳು ವಿನಯ ಶೀಲರೂ, ಪ್ರಾಮಾಣಿಕರೂ ಆಗಿರಬೇಕೆಂದು ಸೂಚಿಸಿ, ಮಿಶ್ಯನ್ ಹೈಸ್ಕೂಲು ನಡೆಸುತ್ತಿರುವ ವಿದ್ಯಾದಾನದ ಮಹತ್ವವನ್ನು ಕೊಂಡಾಡಿ, ಶಾಲೆಗೂ ಅಧ್ಯಾಪಕರಿಗೂ, ವಿದ್ಯಾರ್ಥಿ ವೃಂದಕ್ಕೂ ಭಗವಂತನು ಆಯುರಾರೋಗ್ಯಗಳನ್ನು ದಯಪಾಲಿಸಲೆಂದು ಹಾರೈಸಿ ಭಾಷಣ ಕೊನೆಗಾಣಿಸಿದರು. ಮತ್ತೆ ಶಾಲಾ ಬಾಲಕರಿಂದ ನಾಟಕ ನೃತ್ಯ ಕೋಲಾಟ ಮೊದಲಾದ ವಿವಿಧ ವಿನೋದಾವಳಿಗಳಿದ್ದುವು. ಶ್ರೀ. ಎಂ. ಅನಂತ ಶೆಣೈಗಳು ಕೃತಜ್ಞತೆ ಹೇಳಿದರು.

ತಾ. ೧೫ರಂದು ಶಾಲಾ ವರ್ಧಂತ್ಯುತ್ಸವವು ಗವರ್ನಮೆಂಟ್ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ. ಕೆ. ಎಸ್. ಯು. ನಾಯರರ ಅಧ್ಯಕ್ಷತೆಯಿಂದ ಜರಗಿತು. ಪ್ರಾರ್ಥನೆಯ ಬಳಿಕ, ಶಾಲಾ ಮುಖ್ಯೋಪಾಧ್ಯಾಯ ಶ್ರೀ. ಎಸ್. ಎ. ಫುರ್ಟಾಡೋರವರು ವರದಿ ವಾಚನಮಾಡಿದರು. ಅವರ ವರದಿಯಲ್ಲಿ ಈ ವಿಷಯಗಳು ಇದ್ದುವು:

ಈಗ ಶಾಲೆಯಲ್ಲಿ ೨೯ ಮಂದಿ ಟ್ರೈನ್ಡ್ ಆದ ಉಪಾಧ್ಯಾಯರಿದ್ದಾರೆ; ಅವರಲ್ಲಿ ಮೂವರು ಮಹಿಳೆಯರು. ಒಟ್ಟು ಕಳೆದ ವರ್ಷದ ವಿದ್ಯಾರ್ಥಿ ಸಂಖ್ಯೆ ೬೩೨ ಶಾಲೆಯ ಸ್ಥಳ ಅನುಕೂಲ ಚನ್ನಾಗಿದೆ. ಗಣಿತ, ಫಿಸಿಕ್ಸ್, ಚರಿತ್ರೆ, ಕಮರ್ಶಿಯಲ್ ಪ್ರೇಕ್ಟಿಸ್ ಇವು ಐಚ್ಛಿಕ ವಿಷಯಗಳಾಗಿ ಕಲಿಸಲಾಗುತ್ತವೆ. III ಫಾರ್ಮಿನವರೆಗೆ ಕನ್ನಡವೇ ಶಿಕ್ಷಣ ಮಾಧ್ಯಮವಾಗಿದೆ. ಆ ಮೇಲಿನ IV, V, VI ಫಾರ್ಮುಗಳಲ್ಲಿಯೂ ಒಂದು ವಿಭಾಗಕ್ಕೆ ಕನ್ನಡ ಶಿಕ್ಷಣ ವ್ಯವಸ್ಥೆಯಿದೆ. ಲೈಬ್ರರಿ ಲಿಟರರಿ ಸೊಸೈಟಿ ಮ್ಯೂಸಿಯಮ್ ಗಾರ್ಡನಿಂಗ್ ಇವು ತೃಪ್ತಿಕರವಿವೆ. ಇತರ ಚಟುವಟಿಕೆಗಳಲ್ಲಿ ವಿಶೇಷವಾಗಿ ನಾಟಕ, ತರ್ಕಸಭೆ ಮೊದಲಾದವುಗಳಲ್ಲಿ ಶಾಲಾ ವಿದ್ಯಾರ್ಥಿಗಳು ಉತ್ತಮ ಅಭ್ಯಾಸ ಹೊಂದುತ್ತಾರೆ. ಕಳೆದ ಸಾರ್ವಜನಿಕ ಪರೀಕ್ಷೆಯಲ್ಲಿ ನೇಕಡಾ ೫೭ರಷ್ಟು ಫಲಿತಾಂಶ ದೊರೆತಿದೆ.

ಬಳಿಕ ಶ್ರೀ. ಎನ್. ಎಸ್. ಕಿಲ್ಲೆಯವರು ಶಾಲೆಯ ಸ್ವಸ್ತಿವಾಚನ ಮಾಡಿ ಬಹು ದೀರ್ಘವೂ ಸ್ವಾರಸ್ಯಕರವೂ ಆದ ಭಾಷಣವಿತ್ತರು. ಮಿಶನ್ ಹೈಸ್ಕೂಲು ಕಳೆದ ೧೦೦ ವರ್ಷಗಳಿಂದ ಮಾಡುತ್ತಿರುವ ಜನಸೇವೆ, ತನ್ನ ವಿದ್ಯಾರ್ಥಿ ಜೀವನದಲ್ಲಿದ್ದ ಉಪಾಧ್ಯಾಯರ ಗುಣ ಗೌರವಗಳು ಮೊದಲಾದವುಗಳನ್ನು ವಿವರಿಸಿ ಶಾಲೆಯನ್ನು ಇದುವರೆಗೆ ಶ್ರೇಯಸ್ಕರವಾಗಿ ನಡೆಸಿಕೊಂಡು ಬಂದಿರುವಂತಹವರನ್ನು ಅಭಿನಂದಿಸಿ ಜನರು ಇನ್ನು ಮುಂದೆ ಸಾಕಷ್ಟು ಪ್ರೋತ್ಸಾಹವಿತ್ತು ಈ ಸಂಸ್ಥೆಯನ್ನು ಊರ್ಜಿತಗೊಳಿಸಬೇಕಾಗಿದೆಯೆಂದು ಹಾರೈಸಿದರು. ಆ ಮೇಲೆ ಅಧ್ಯಕ್ಷರ ಹಸ್ತದಿಂದ ಇನಾಮು ಹಂಚಲಾಯಿತು. ಬಳಿಕ ಅಧ್ಯಕ್ಷರು ಬಹಳ ವಿಚಾರ-ಗರ್ಭಿತ ಭಾಷಣ ಮಾಡಿ, ಈ ಶಾಲೆಯು ಸಂಕಷ್ಟಗಳ ಎಡೆಯಲ್ಲಾದರೂ ತಲೆಯೆತ್ತಿ ನಿಂತಿರುವ ವಿಷಯವನ್ನು ಮುಖ್ಯೋಪಾಧ್ಯಾಯರು ವರದಿಯಲ್ಲಿ ಹೇಳಿದಂತೆ, ಪರೀಕ್ಷೆಯ ಫಲಿತಾಂಶವೊಂದರ ಕಡೆಗೆ ಮಾತ್ರ ಗಮನ ಕೊಡದೆ, ವಿದ್ಯಾರ್ಥಿಗಳ ನೀತಿ ಮತ್ತು ಆತ್ಮ ಶಕ್ತಿಯ ಬೆಳವಣಿಗೆಗಳ ಕಡೆಗೆ ಗಮನ ಕೊಡುವ ವಿಚಾರವನ್ನೂ ಬಹಳ ಸ್ಪಷ್ಟವಾಗಿ ಎತ್ತಿ ಹೇಳಿದರು. ಬಳಿಕ ಶಾಲಾ ಹೆಡ್ ಮಾಸ್ಟರರಿಂದ ಕೃತಜ್ಞತಾ ಸಮರ್ಪಣೆಯಾಗಿ ರಾತ್ರಿ ನಾಟಕಾದಿ ವಿವಿಧ ಮನೋರಂಜನೆಯಿತ್ತು. ಶಾಲಾ ವಿದ್ಯಾರ್ಥಿಗಳು ಶಾಲಾಧ್ಯಾಪಕರಲ್ಲೊಬ್ಬರಾದ ಶ್ರೀ. ಬಿ. ಅಪ್ಪಯ್ಯ ಇವರಿಂದ ರಚಿತವಾದ "ರಮೇಶಬಾಬು" ಎಂಬ ಸಾಮಾಜಿಕ ನಾಟಕವೊಂದನ್ನು ಬಹಳ ಚಲೋದಾಗಿ ಅಭಿನಯಿಸಿದರು. ಭರತ ನಾಟ್ಯದ ಅಭಿನಯವಿತ್ತು.

ದ. ಕ. ಜಿಲ್ಲಾ ಗಾಣಿಗರ ಯಾನೆ ಸಪಲ್ಯರ ಸಮಾಜ ಸುಧಾರಕ ಸಂಘ. ಮಂಜೇಶ್ವರ

ಇದರ ತೃತೀಯ ವಾರ್ಷಿಕೋತ್ಸವವು ಸಂಘದ ಮಂದಿರದಲ್ಲಿ ತಾ. 1ರಂದು ಬೆಳಗ್ಗೆ ಶ್ರೀ। ಯಂ. ನರಸಿಂಗರಾಯರ ಸ್ವಾಗತಾಧ್ಯಕ್ಷತೆಯಿಂದ ಡಾಕ್ಟರ್ ಕೆ. ನೇಮಿರಾಜಾಳ್ವರ ಅಗ್ರಾಸನತ್ವದಲ್ಲಿ ಪ್ರಾರಂಭವಾಯಿತು. ಶ್ರೀ ದೇವರ ಪ್ರಾರ್ಥನೆಯಾಗಿ ಕಾರ್ಯದರ್ಶಿಯವರಿಂದ ವರದಿ ಓದಿ ಹೇಳಲಾಗಿ, ಗತವರ್ಷಗಳಲ್ಲಿ ಸಂಘಕ್ಕೆ ಉದಾರ ಧನ ಸಹಾಯವನ್ನಿತ್ತ ಮಹನೀಯರುಗಳ ಉಪಕಾರವನ್ನು ಸ್ಮರಿಸಿಕೊಂಡ ಮೇಲೆ, ಶ್ರೀ. ಯಂ. ಶ್ರೀನಿವಾಸರಾಯರು, ಶ್ರೀ. ಕೆ. ಶ್ರೀನಿವಾಸ ಮಾಸ್ಟರರು, ಶ್ರೀ। ಯಸ್. ವಿ. ಮಾನರು, ಶ್ರೀ. ಯಂ. ಆರ್. ಬಂಗೇರರು ಭಾಷಣಗಳನ್ನಿತ್ತರು.

ಶ್ರೀ. ಅಧ್ಯಕ್ಷರು ಅಮೂಲ್ಯ ಭಾಷಣವನ್ನಿತ್ತು ಸಂಘಕ್ಕೆ ಧನಸಹಾಯವನ್ನು ಕೂಡಾ ಮಾಡಿ ಆಶೀರ್ವದಿಸಿದರು.

ದ. ಕ ಜಿಲ್ಲಾ 4ನೇ ವಿದ್ಯಾರ್ಥಿ ಪರಿಷತ್ತು—ಮಂಗಳೂರ ವಿದ್ಯಾರ್ಥಿ ಸಂಘದವರ ಮಹಾಸಭೆಯು ಇದೇ ತಾ. ೨೨ರಲ್ಲು ಸಂಘದ ಖಚೇರಿಯಲ್ಲಿ ಸೇರಿ ದ. ಕ. ಜಿಲ್ಲಾ 4ನೇ ಪರಿಷತ್ತನ್ನು ತಾ. ೩೧ನೇ ಜನವರಿ ಮತ್ತು ೧ನೇ ಫೆಬ್ರವರಿ ಈ ಎರಡು ದಿವಸಗಳಲ್ಲಿ ಜರಗಿಸುವುದಾಗಿ ನಿರ್ಣಯಿಸಲಾಗಿದೆ. ಇದಕ್ಕಾಗಿ ಹದಿನೆರಡು ಮಂದಿಯಿಂದ ಕೂಡಿದ ಒಂದು ಸ್ವಾಗತ ಸಮಿತಿಯನ್ನು ರಚಿಸಲಾಗಿದೆ. ಸ್ವಾಗತ ಅಧ್ಯಕ್ಷರು ಬಿ. ಯಸ್. ಭಾಸ್ಕರ ರೈ. ಪ್ರ. ಕಾರ್ಯದರ್ಶಿ ನಾರಾಯಣ ನೆಟ್ಟಾರ್, ಉಪಾಧ್ಯಕ್ಷರು ಎಸ್. ರಾಮಚಂದ್ರ ಭಟ್ ರು, ಕಾರ್ಯದರ್ಶಿಗಳು ಬಿ. ಸುಬ್ಬಯ ಸೆಟ್ಟಿ, ಬಿ. ಶ್ರೀನಿವಾಸ ರಾವ್, ಬಿ. ಶ್ರೀನಿವಾಸ ಬಲ್ಲಾಳ್, ಡಿ. ವಿಟ್ಠಲ ಆಳ್ವ, ಲೋರೆನ್ಸ್ ರಸ್ಕಿಂಞ. ಸದಸ್ಯರು: ನರಸಿಂಹ ಆಚಾರ್; ನಾರಾಯಣ ನಾಯ್ಕ; ಪ್ರಭಾಕರ ರೈ; ವೈ. ಸುಬ್ಬಣ್ಣ; ರಾಮಣ್ಣ ಮಲ್ಲಿ; ನಾರಾಯಣ ರಾವ್; ಫ್ರಾನ್ಸಿಸ್ ಡಿ'ಸೋಜ; ಮಾಧವ ರಾವ್; ಪುರುಷೋತ್ತಮ ರಾವ್; ಅನಂತ ಭಟ್ಟ; ಡಿ. ಕೃಷ್ಣ.

ಈ ಸಂದರ್ಭದಲ್ಲಿ ಜಿಲ್ಲೆಯ ವಿದ್ಯಾರ್ಥಿ ಬಂಧುಗಳು ತಮ್ಮ ಪ್ರತಿನಿಧಿಗಳನ್ನು ಕಳುಹಿಸಿ ಸಹಕರಿಸಬೇಕಾಗಿಯೂ, ಎಲ್ಲಾ ಮಹಾಜನರೂ ಸಹಾನುಭೂತಿ ಸಹಾಯಗಳನ್ನಿತ್ತು ಪರಿಷತ್ತನ್ನು ಯಶಸ್ವಿಗೊಳಿಸಬೇಕಾಗಿ ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ. ಬಿ. ಯಸ್. ಭಾಸ್ಕರ ರೈಗಳವರು ವಿನಂತಿಸಿಕೊಳ್ಳುತ್ತಾರೆ.

ಸಾದರ-ಸ್ವೀಕಾರ

ನವಭಾರತ ವಾರಪತ್ರಿಕೆ

ಮಂಗಳೂರು ನ್ಯೂಸ್ ಪೇಪರ್ ಪಬ್ಲಿಶರ್ಸ್ ಲಿಮಿಟೆಡಿನವರಿಂದ ಪ್ರಕಾಶಿಸಲ್ಪಟ್ಟು ಶ್ರೀ ಕುಡ್ವ ವಾಸುದೇವ ಶೆಣೈಗಳ ಸಂಪಾದಕತ್ವದಿಂದ ನವಭಾರತವು ಈಗ ವಾರಪತ್ರಿಕೆಯಾಗಿ ಹೊರಟಿದೆ. ಸ್ವತಂತ್ರಭಾರತ ವಾರಪತ್ರಿಕೆಯ ಆಕಾರದ ನಾಲ್ಕು ಪುಟಗಳಿದ್ದು, ಕೆನರಾ ಬೇಂಕ್ ಸಪ್ಲಿಮೆಂಟನಿಂದ ಕೂಡಿರುತ್ತದೆ. ಕಾಗದವು ಬಹಳ ತುಟ್ಟಿಯಾಗಿರುವೀ ಕಾಲದಲ್ಲಿ ಇಂತಹ ಸಾಹಸಕ್ಕೆ ಹೊರಟ ನ್ಯೂಸ್ ಪೇಪರ್ ಪಬ್ಲಿಶರ್ಸ್ ಲಿಮಿಟೆಡಿನವರ ಕಾರ್ಯವು ಅಭಿನಂದನೀಯ. ಹೊಸ ಪತ್ರಿಕೆಗೆ ನಮ್ಮ ಸ್ವಾಗತವಿದೆ. ಪ್ರಿಂಟು ಮೊದಲಾದ ಅಚ್ಚು ಕಟ್ಟು ಆಕರ್ಷಕವಾಗಿದೆ.

ಅಂಗಡಿಗಾರರ ಸಾಪ್ತಾಹಿಕ ರಜೆ—ತಾ. ೨೬—೧—೪೧ರಂದು ಜರಗಿದ ಕೆನರಾ ಚೇಂಬರ್ ಓಫ್ ಕಾಮರ್ಸಿನ ಸಭೆಯಲ್ಲಿ ತಿಂಗಳೆರಡು ರವಿವಾರಗಳಲ್ಲಿ ಅಂಗಡಿಗಳನ್ನು ಮುಚ್ಚುವ ನಿರ್ಣಯ ಮಾಡಿರುವದಾಗಿ ಆ ಪ್ರಕಾರ ಮಂಗಳೂರಲ್ಲಿ ಕೆಲವು ಅಂಗಡಿಗಳನ್ನು ಮುಚ್ಚಿದ್ದರು.

ಪುತ್ತೂರು

ಸಭೆ

ಪುತ್ತೂರು ರೇಂಜಿನ ಉಪಾಧ್ಯಾಯರ ಸಭೆಯು ಕಳೆದವಾರ ಬೊಳುವಾರ ಪಂಚಾಯತ ಶಾಲೆಯಲ್ಲಿ ಶ್ರೀ. ಗಣಪತಿ ಹೊಳ್ಳರ ಅಧ್ಯಕ್ಷತೆಯಲ್ಲಿ ಜರಗಿತು. ಇಲ್ಲಿಯ ಡಿ। ಕಲೆಕ್ಟರರಾದ ಶ್ರೀ. ಜೋಗಪ್ಪನವರು ಉಪಾಧ್ಯಾಯರ ಕರ್ತವ್ಯದ ಕುರಿತು ಭಾಷಣವಿತ್ತರು.

ಪನೆಕಲ್ಲು ಹೆತ್ತವರ ಸಭೆ

ಇಲ್ಲಿಯ ಪಂಚಾಯತ ಬೋರ್ಡು ಶಾಲೆಯಲ್ಲಿ, ಆ ಶಾಲೆಯ ಮಕ್ಕಳ ಹೆತ್ತವರ ಸಭೆಯು ಎಡ್ವೊಕೆಟ್ ಶ್ರಿ ಕೆ. ವೆಂಕಟರಮಣ ಗೌಡರ ಅಧ್ಯಕ್ಷತೆಯಿಂದ ನೆರವೇರಿತು. ಗ್ರಾಮೋದ್ಧಾರ ಮೊದಲಾದ ವಿಷಯಗಳಲ್ಲಿ ಭಾಷಣಗಳಾದುವು ಶಾಲಾ ಕಟ್ಟಡವನ್ನು ಕಟ್ಟಿಸುವ ಬಗ್ಗೆ ಮನೆ ತೆರಿಗೆ ಕೊಡುವರೆ ಗ್ರಾಮಸ್ಥರು ಒಪ್ಪಿಕೊಂಡಿರುವರು. ಹೆತ್ತವರ ಸಂಘದ ಆಡಳಿತ ಕಮಿಟಿಯೊಂದು ನೇಮಕವಾಯಿತು. ರಾತ್ರಿ ಯಕ್ಷಗಾನ ಕಾಲಕ್ಷೇಪವಿತ್ತು.

ಕಾರ್ಕಳ

ಉದ್ಘಾಟನ ಉತ್ಸವ:—ಇಲ್ಲಿ ಸ್ಥಾಪಿತವಾಗಿರುವ ಕರ್ನಾಟಕ ಸಾಹಿತ್ಯ ಸಂಘದ ಉದ್ಘಾಟನ ಸಮಾರಂಭವು ಇದೇ ಫೆಬ್ರವರಿ ತಿಂಗಳ 1ರಂದು ಶ್ರೀ ಮುಳಿಯ ತಿಮ್ಮಪ್ಪಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಬೇಕೆಂದು ನಿಶ್ಚಯವಾಗಿದೆ. ಸಿದ್ಧತೆಗಳು ನಡೆಯುತ್ತಿವೆ.

ಉಪಾಧ್ಯಾಯರ ಸಭೆ:—ಕಾರ್ಕಳ ಕೇಂದ್ರದ ಪ್ರಾಥಮಿಕ ಶಾಲೆಗಳ ಉಪಾಧ್ಯಾಯರ ತಿಂಗಳ ಸಭೆಯು ಡಿಪ್ಟಿ ಇನ್ಸ್ಪೆಕ್ಟರ್ ಶ್ರೀಯುತ ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ಮಾರ್ಚ ತಿಂಗಳಲ್ಲಿ ಕೇಂದ್ರ ದಿನವನ್ನು ಆಚರಿಸಬೇಕೆಂದು ನಿರ್ಣಯವಾಯಿತು.

ಚುನಾವಣೆ:—ಕಾರ್ಕಳ ಪಂಚಾಯತ ಕೋರ್ಟಿನಲ್ಲಿ ಖಾಲಿಬಿದ್ದ ಸದಸ್ಯಸ್ಥಾನದ ಚುನಾವಣೆಯು ತಾ. 10ರ ದಿನ ನಡೆದು ಮುನ್ಸಿಫ್ ಕೋರ್ಟು ನಿವೃತ್ತ ನಾಜರ ಶ್ರೀ ಕೆ. ಶ್ರೀನಿವಾಸ ಪೈಗಳವರು ಪ್ರತಿಸ್ಪರ್ಧಿಗಳಿಲ್ಲದೆ ಆರಿಸಲ್ಪಟ್ಟರು.

ಅವಳಿಕರು:—ಇಲ್ಲಿಯ ಶ್ರೀ ಕೆ. ಲಕ್ಷ್ಮಣ ಪೈ ಎಂಡ್ ಸನ್ಸ್‌ರವರ ಮನೆಯ ಒಂದು ದನವು ಒಮ್ಮೆಗೇ ಎರಡು ಗಂಡು ಮತ್ತು ಹೆಣ್ಣು ಕರುಗಳನ್ನು ಹೆತ್ತಿದೆ. ಎರಡೂ ಕರುಗಳೂ ಆರೋಗ್ಯವಾಗಿವೆ.

ಉಡುಪಿ

ಕಮಿಶನರಿಗೆ ವಿದಾಯ ಸತ್ಕಾರ—ಉಡುಪಿ ಮುನ್ಸಿಪಲ್ ಕಮಿಶನರ್ ಶ್ರೀ. ಡಿ. ಹರಿಶ್ಚಂದ್ರ ರಾಯರಿಗೆ ವರ್ಗವಾದ ಕಾರಣ ಮುನ್ಸಿಪಲ್ ಟೀಚರ್ಸ್ ಯೂನಿಯನಿನ ಸದಸ್ಯರು ಒಂದು ವಿದಾಯ ಸತ್ಕಾರವಿತ್ತರು.

ಯಾತ್ರಾರ್ಥಿಗಳಿಗೆ ಶಿಬಿರ—ಉಡುಪಿ ಹಿಂದುಸ್ಥಾನ ಸ್ಕೌಟ್ ಎಸೋಸಿಯೇಶನಿನ ನೇತೃತ್ವದಲ್ಲಿ ಉಡುಪಿಗೆ ಬರತಕ್ಕ ಪರ್ಯಾಯ ಯಾತ್ರಾರ್ಥಿಗಳ ಸಲುವಾಗಿ ಎರಡು ಶಿಬಿರಗಳು ತೆರೆಯಲಾಗಿದೆಯೆಂದು ತಿಳಿಯುತ್ತದೆ.

ಪರ್ಯಾಯ—ವಿಷು ಸಂವತ್ಸರದ ಮಾಘ ಶುದ್ಧ ೧ (ತಾ. ೧೭—೧—೪೨ನೇ) ಶನಿವಾರ ಶ್ರೀಮದುಡುಪಿ ಶ್ರೀಕೃಷ್ಣದೇವರ ಸನ್ನಿಧಿಯಲ್ಲಿ ಶ್ರೀಮನ್ಮಧ್ವಾಚಾರ್ಯರ ಸಂಕಲ್ಪಾನುಸಾರ ಪದ್ಧತಿಯಂತೆ, ಶ್ರೀಮದ್ವಿದ್ಯಾರತ್ನ ತೀರ್ಥ ಶ್ರೀಪಾದಂಗಳವರ ಪರ್ಯಾಯ ಮಹೋತ್ಸವವು ನಡೆಯುವುದು.

ಬ್ರಹ್ಮಾವರ

ವಾರ್ಷಿಕ ಸಭೆ—ಮಟ್ಪಾಡಿ ಜೋಳಿ ಕ್ಲಬ್ಬಿನ ವಾರ್ಷಿಕ ಸಭೆಯು ತಾ. ೬ರಂದು ಶ್ರೀನಿಕೇತನ ಶಾಲೆಯಲ್ಲಿ ಶ್ರೀ ರಾಮಣ್ಣ ಹೆಬ್ಬಾರರ ಅಧ್ಯಕ್ಷತೆಯಿಂದ ನೆರವೇರಿತು.

ಕೌಲಾಲಂಪುರವು ಜಪಾನರ ಸ್ವಾಧೀನವಾಯಿತು

ತಾರಕಾನ ಸೈನ್ಯದವರು ಜಪಾನರ ಶರಣಾದರು

ಮಲಯದಲ್ಲಿ ಭೀಕರ ಕಾಳಗ

ರಶ್ಯದಲ್ಲಿ ಜರ್ಮನರು ಹಿಂದೆ ಸರಿಯುತ್ತಿದ್ದಾರೆ

ಆಯರ್ಲೆಂಡು ಗುಪ್ತ ಒಪ್ಪಂದ ಮಾಡಿಕೊಂಡಿಲ್ಲ

ಡಿವೆಲರ ಹೇಳಿಕೆ

ಆಯರ್ಲೆಂಡು ಗುಪ್ತ ಒಪ್ಪಂದ ಮಾಡಿಕೊಂಡಿದೆಯೆಂಬ ಸುದ್ದಿ ನಿರಾಧಾರವೆಂದೂ, ಯಾರು ನಮ್ಮ ಮೇಲೆ ಧಾಳಿಮಾಡಿದರೂ ನಾವದನ್ನು ಎದುರಿಸುವೆವೆಂದು ಡಿವೆಲರು ಹೇಳುತ್ತಾರೆ

ಲೆನಿನ್‌ಗ್ರಾಡಿನಿಂದ ಹಿಮ್ಮೆಟ್ಟಿದರು

ಕಳೆದ ಕೆಲದಿನಗಳಲ್ಲಿ ರಶ್ಯನ್ ಸೈನ್ಯಗಳು ೧೫೭ ಹಳ್ಳಿಪಟ್ಟಣಗಳನ್ನು ಆಕ್ರಮಿಸಿಕೊಂಡವೆಂದು ತಿಳಿದಿದೆ. ಜರ್ಮನರನ್ನು ಲೆನಿನ್‌ಗ್ರಾಡಿನ ಬಳಿಯಿಂದ ರಶ್ಯನರು ಹಿಮ್ಮೆಟ್ಟಿಸಿದರು

ರಂಗೂನ್ ಮೇಲಿನ ಧಾಳಿಯಲ್ಲಿ ಆಕಾಶದಲ್ಲಿ ವಿಚಿತ್ರ ದೀಪಗಳು

ವೈರಿ ವಿಮಾನಗಳು ರಂಗೂನಿನ ಮೇಲೆ ಧಾಳಿಮಾಡಲು ಬಂದಾಗ ಆಕಾಶದಲ್ಲಿ ದೀಪಗಳು ಕಾಣಿಸಿದ ಬಗ್ಗೆ ಬರ್ಮಾದ ಪತ್ರಿಕೆಗಳು ಸಂಶಯಗೊಳ್ಳಾಗಿ ಚಿಂತೆ ವ್ಯಕ್ತಪಡಿಸಿವೆ ಪಂಚಮ ದಳದವರ ಚಟುವಟಿಕೆಯಿರಬಹುದೆಂದೇ ಕಾರಣ, ಅನೇಕ ಪಟ್ಟಣಗಳಲ್ಲಿ ಇಂತಹ ಚಟುವಟಿಕೆಗಳು ತಿಳಿದುಬಂದಿದೆ.

ಹಡಗ ಮುಳುಗಿತು

ನೋವಾಸ್ಕೋಶಿಯಾದಿಂದ ೧೫೦ ಮೈಲಿನ ಮೇಲೆ ದೊಡ್ಡದೊಂದು ಉಗಿಹಡಗವು ಸಬ್‌ಮೆರಿನಿಂದ ಮುಳುಗಿಸಲ್ಪಟ್ಟಿತು.

ತಾರಕಾನದವರು ಶರಣರಾದರು

ತಾರಾಕಾನ ಸೈನ್ಯದವರು ಜಪಾನರಿಗೆ ಶರಣಾದರೆಂದು ಸುದ್ದಿ ಬಂದಿದೆ. ಸೆಲೆಬಸದಲ್ಲಿರುವ ಮುಖ್ಯ ವಿಮಾನಕೇಂದ್ರವಾದ ಮಿನಾಡೋವನ್ನು ಜಪಾನರು ಸ್ವಾಧೀನಪಡಿಸಿಕೊಂಡಿರುವರೆಂದು ಹೇಳಲಾಗಿದೆ

ಸಿಂಗಾಪುರದ ಮೇಲೆ ಧಾಳಿ

ಜಪಾನಿಯರು ಸಿಂಗಾಪುರದ ಮೇಲೆ ಪ್ರಚಂಡ ಧಾಳಿಮಾಡಿರುವರು

ಈಶಾನ್ಯ ಇಂಗ್ಲೆಂಡಿಗೆ ಧಾಳಿ

ಆಗಿದೆಯೆಂದು ಸುದ್ದಿ ಬಂದಿದೆ ಕೆಲವರು ಸತ್ತುಹೋಗಿರುವರೆಂದು ಕೆಲವರಿಗೆ ಗಾಯವಾಗಿದೆಯೆಂದೂ ಸುದ್ದಿ

ಜರ್ಮನರ ಹೊಸ ಯುದ್ಧ ವಿಮಾನಗಳು

ಎಫ್ ಡಬ್ಲ್ಯೂ 190

ಉತ್ತರ ಫ್ರಾನ್ಸು ಹಾಗೂ ಚಾನೆಲ್ ಕರಾವಳಿಯಲ್ಲಿ ಜರ್ಮನರು ಹೊಸ ತರದ ಯುದ್ಧವಿಮಾನಗಳನ್ನು ಉಪಯೋಗಿಸುತ್ತಿರುವರು. ಈ ವಿಮಾನಗಳಿಗೆ ಫೋಕವ್ರ ಎಫ್ ಡಬ್ಲ್ಯೂ ಎಂದು ಹೆಸರು. ಇದನ್ನು ಒಬ್ಬನೇ ನಡೆಸುವುದು.

ರಶ್ಯದಲ್ಲಿ ಹಿಟ್ಲರನ ಅಪಜಯ

ರಶ್ಯನರು ಡೊನೆಜ್ ನದಿಯನ್ನು ಅನೇಕ ಕಡೆಗಳಲ್ಲಿ ದಾಟಿ ೪೫ ಸ್ಥಳಗಳನ್ನು ಸ್ವಾಧೀನಪಡಿಸಿಕೊಂಡಿರುವರಲ್ಲದೆ ಕೆಲವು ಹಳ್ಳಿಗಳನ್ನೂ ಪುನಃ ವಶಪಡಿಸಿರುವರು ಜರ್ಮನ್ ದಳಪತಿತ್ವವನ್ನು ಹಿಟ್ಲರನು ವಹಿಸಿಕೊಂಡ ಮೇಲೆ ಮೊದಲನೇ ಯುದ್ಧದಲ್ಲಿಯೇ ಅಪಜಯವಾಯಿತಂತೆ.

ಕೌಲಾಲಂಪುರದಲ್ಲಿ ಭೀಕರ ಕಾಳಗ

ಕೌಲಾಲಂಪುರದ ಕಾಳಗವು ಇನ್ನೂ ಭೀಕರವಾಗುತ್ತಿದೆ. ಎರಡು ಪಕ್ಷದವರಿಗೂ ಬಹಳ ಹಾನಿ ಸಂಭವಿಸಿರುವುದು ಜಪಾನರು ಬ್ರಿಟಿಷ್ ವ್ಯೂಹವನ್ನು ಭೇದಿಸಲು ಅಗಣಿತ ಶಕ್ತಿ ಉಪಯೋಗಿಸುತ್ತಿರುವರು

ಲಿಟ್ವಿನಾಫ್ ಹಲ್ಲರ ಚರ್ಚೆ

ರಶ್ಯನ್ ರಾಯಭಾರಿ ಲಿಟ್ವಿನಾಫರು ವಾಶಿಂಗ್‌ಟನಿನಲ್ಲಿ ಕರ್ಡೆಲ್ ಹಲ್ಲರನ್ನು ಕಂಡು ಪ್ರಕೃತ ಪರಿಸ್ಥಿತಿಯ ವಿಚಾರ ಮಾತನಾಡಿದರೆಂದು ತಿಳಿದಿದೆ

ಲಿಬಿಯದಲ್ಲಿ ಜರ್ಮನರು ಇನ್ನೂ ಹಿಂದೆ ಸರಿದರು

ಲಿಬಿಯದಲ್ಲಿ ಜರ್ಮನರು ಜದಭಾಯಾದಿಂದ ಎಲ್ ಅಜೀಲಾದ ಕಡೆಗೆ ಓಡಿಹೋಗುತ್ತಿರುವರೆಂದು ತಿಳಿದಿದೆ ಎಲ್ ಅಜೀಲಾದ ಮೇಲೆ ದಕ್ಷಿಣ ಆಫ್ರಿಕದ ವಿಮಾನಗಳು ಧಾಳಿ ಮಾಡಿದವು

ಡಚ್ ಇಂಡೀಸ್ ಮೇಲೆ ಧಾಳಿ?

ಬೇಗನೇ ಆರಂಭವಾಗಬಹುದಾಗಿ ಅಲ್ಲಿನ ಅಧಿಕಾರಿಗಳ ಊಹೆಯಾಗಿದೆ ಆಸ್ಟ್ರೇಲಿಯದಿಂದ ಅಲ್ಲಿಗೆ ಸೈನ್ಯ ಸಹಾಯದ ಪ್ರಯತ್ನಮಾಡಲಾಗುತ್ತದೆ.

ಸಿಪಾಯಿಗಳ ಮೇಲೆ ಆರೋಪ

ಕದಿದು ಮುತ್ತರಾದ ಬ್ರಿಟಿಷ್ ಸಿಪಾಯಿಗಳು ಮೂರು ಜನರನ್ನು ತಿವಿದುಕೊಂದರೆಂದೂ ನಾಲ್ಕು ಜನರನ್ನು ಗಾಯಗೊಳಿಸಿದರೆಂದೂ ಕಾನ್‌ಪುರದಿಂದ ಒಂದು ಸುದ್ದಿ ಬಂದಿದೆ.

ಮಲಯದಲ್ಲಿ ಉಗ್ರ ಕದನ

ಕೌಲಾಲಂಪುರದ ಉತ್ತರದಲ್ಲಿ ವಿಶೇಷ ಯುದ್ಧ ಚಟುವಟಿಕೆ ನಡೆದಿದೆ. ಸ್ಲಿಮ್ ನದಿಯ ಪ್ರದೇಶದಲ್ಲಿ ಜೋರಾಗಿ ಯುದ್ಧ ಯತ್ನ ಆಗುತ್ತಿದೆ ಸಿಂಗಾಪುರದ ಮೇಲೆ ಮತ್ತೂ ಶತ್ರು ವಿಮಾನಗಳು ಧಾಳಿಮಾಡಿವೆ ಮಲಯಾದ ೧೫ ಎರೋಡ್ರಂಗಳು ಶತ್ರುವಶವಾಗಿವೆ

NOTICE

In the Court of District Munsiff, Puttur

O P 8/1942

Subbanna Bhatta and 8 others — Petrs.

Please take notice that the above petition for grant of a 'Succession Certificate' under Sec 372 of Indian Succession act XXXIX of 1925, empowering 1st petr Subbanna Bhatta to collect the debt and receive the amount Rs 1017 0-0 due under Policy No 185400 with profits on the life of J Krishna Bhatta stands posted for hearing to 26 1 1942 at 11 a m in the above court If persons interested fail to appear and contest on the said-date orders will be passed exparte

Puttur 12 1 42 (sd) H Pundarik Bhat Pleader for Petrs

ಸೌಂದರ್ಯ ಮತ್ತು ಮುಖಕಾಂತಿಗೆ
ಹಿಮಾನಿ ಸ್ನೋ
ಹಿಂದೂದೇಶದಲ್ಲಿ ಪ್ರಥಮವಾಗಿ — ತಯಾರಿಸಿದ ಸ್ನೋ —
ಅಂದಿನಿಂದಲೂ ಶ್ರೇಷ್ಠವಾಗಿಯೇ ಇದೆ — ಮುಖದ ಮೇಲಿನ ಯಾವತ್ತು ಕಲೆ, ಸುಕ್ಕು ಛಿದ್ರ ಮುಂತಾದುವನ್ನು ಗುಣಪಡಿಸುವುದು
ಹಿಮಾನಿ ಗ್ಲಿಸರಿನ್ ಸಾಬೂನುಗಳು
ಪಾರದರ್ಶಕ—ಶುದ್ಧ
ಕೋಮಲವಾದ ಪರಿಮಳ

ದಕ್ಷಿಣ ಕನ್ನಡದ ಡಿಸ್ಟ್ರಿಬ್ಯೂಟರರು — ಕೊರನೇಶನ್ ಟ್ರೇಡಿಂಗ್ ಕೊ.
ಮುಹಮ್ಮದಾಲಿ ರೋಡ್, ಮಂಗಳೂರು.


ಬೇನೆಕೊಡುವ ಮೂಲವ್ಯಾಧಿಯಿಂದ ನರಳಬೇಡಿ
ಈ ಪ್ರಸಿದ್ಧ ಲೇಪವು ನೋವನ್ನು ಬೇಗನೇ ಗುಣಪಡಿಸುತ್ತದೆ.
ನೀವು ಮೂಲವ್ಯಾಧಿಯ ಭಯಂಕರ ನೋವಿನಿಂದ ನರಳುತ್ತಿದ್ದರೆ ಜಾಂಬಕನ್ನು ಉಪಯೋಗಿಸಿ ಗುಣಪಡೆಯಿರಿ ಈ ಅದ್ಭುತ ವನೌಷಧಿಯು ಸಾವಿರಾರು ರೋಗಿಗಳಿಗೆ ತೀವ್ರ ಗುಣ ಕೊಟ್ಟಿದೆ. ಇದಕ್ಕೆ ಅದ್ಭುತ ಶಕ್ತಿಯುಂಟು, ನೆತ್ತರು ಬರುವುದು ಕೂಡಲೇ ನಿಂತುಹೋಗಿ ಮೂಲವ್ಯಾಧಿಯು ನಿರ್ಮೂಲ ಹೊಂದುತ್ತದೆ ಹಾಗಾಗಿ ಜಾಂಬಕನ್ನು ದಿನವೊಂದರ ಎರಡೋ ಮೂರೋ ಸಲ ಉಪಯೋಗಿಸಿರಿ ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ಇದು ಒಂದು ರೂಪಾಯಿ ಅಥವಾ 2-4-0 ಬೆಲೆಗೆ ದೊರಕುತ್ತದೆ. ಜಾಂಬಕ್ ಸಾಬೂನಿಗೆ ಒಂದು ರೂಪಾಯಿ, ಜಾಂಬಕ್ ಪೌಡರಿಗೆ ಒಂದು ರೂಪಾಯಿ
ಏಜೆಂಟ್ಸ್: ಮೆಸರ್ಸ್ ದಾಧಾ ಎಂಡ್ ಕೊ, ಪಾರ್ಕ್‌ಟೌನ್ ಮದರಾಸು
ಯಾವಾಗಲೂ ಜಾಂಬಕನ್ನೇ ಉಪಯೋಗಿಸಿರಿ
ZAM-BUK
ಪ್ರಾಣಿಕೊಬ್ಬು ವಿರಹಿತವಾದುದು.

ವಾರ್ಧಾದಲ್ಲಿ ಕಾಂಗ್ರೆಸ್ ಕಮಿಟಿಯ ಸಭೆ ಸೇರಿದೆ!

ಬಾರ್ಡೋಲಿ ನಿರ್ಣಯವು ಅಂಗೀಕಾರವಾಗುವುದೆ?

ಸಂಪೂರ್ಣ ಸ್ವಾತಂತ್ರ್ಯ ಪ್ರತಿಜ್ಞೆ ಮಾಡಲು ಪ್ರಕಟಣೆ

ಸಂಪೂರ್ಣ ಸ್ವಾತಂತ್ರ್ಯ ಪ್ರತಿಜ್ಞೆ ಮಾಡಿರಿ

ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ವಾರ್ಧಾದಲ್ಲಿ ಕೂಡಿ ಕಾಂಗ್ರೆಸ ಕಾರ್ಯಕ್ರಮಕ್ಕೆ ಸಂಬಂಧಿಸಿದ ಅನೇಕ ವಿಚಾರಗಳನ್ನು ವಿಮರ್ಶಿಸಿತು. ಜನವರಿ ೨೬ರಂದು ಸ್ವಾತಂತ್ರ್ಯ ದಿನವನ್ನು ಆಚರಿಸುವ ಸಂಬಂಧ ಮತ್ತು ಕಾಂಗ್ರೆಸ್ ಕಮಿಟಿಗಳು ಪುನಃ ಮೊದಲಿನಂತೆ ಕೆಲಸ ಮಾಡುವ ಸಂಬಂಧ ಕಾಂಗ್ರೆಸಿನವರಿಗೆ ಸೂಚನೆ ಪ್ರಕಟಿಸಲಾಗಿದೆ. ಕಾಂಗ್ರೆಸಿನ ಪ್ರಾಥಮಿಕ ಸದಸ್ಯರನ್ನು ಮಾಡುವ ಬಗ್ಗೆಯೂ ಸೂಚನೆಮಾಡಲಾಯಿತು. ಸ್ವಾತಂತ್ರ್ಯ ದಿನದ ಪ್ರತಿಜ್ಞೆಯಲ್ಲಿ ವೈಯುಕ್ತಿಕ ಸತ್ಯಾಗ್ರಹ ಚಳವಳದ ಬಗ್ಗೆ ಇದ್ದ ಅಂಶವನ್ನು ವರ್ಕಿಂಗ್ ಕಮಿಟಿ ತೆಗೆದುಹಾಕಿದೆ. ಕಾಂಗ್ರೆಸ್ ಸದಸ್ಯರು ಜೂನ್ ತಿಂಗಳ ೨೦ನೇ ತಾರೀಕಿನೊಳಗೆ ಸದಸ್ಯರಾಗಿ ಸೇರಬೇಕೆಂದು ಸೂಚಿಸಲಾಗಿದೆ.

ವಾರ್ಧಾದಲ್ಲಿ ಎ. ಐ. ಸಿ. ಸಿ. ಕೂಡಿದೆ

ಬಾರ್ಡೋಲಿ ನಿರ್ಣಯವು ಮಂಜೂರಾಗಬಹುದೆ?

ವರ್ಕಿಂಗ್ ಕಮಿಟಿಯು ವಾರ್ಧಾದಲ್ಲಿ ತಾ. ೧೩ರಂದು ಸೇರಿತು. ಅಲ್ಲಿ ಬಾರ್ಡೋಲಿ ನಿರ್ಣಯದ ಬಗ್ಗೆ ಪುನಃ ಚರ್ಚೆಮಾಡಲಾಯಿತು. ಎ. ಐ. ಸಿ. ಸಿಯಲ್ಲಿ ಬಾರ್ಡೋಲಿ ನಿರ್ಣಯಕ್ಕೆ ಬೆಂಬಲ ಸಿಗಬಹುದೆಂದೂ, ವರ್ಕಿಂಗ್ ಕಮಿಟಿಯಲ್ಲಿ ವಿರೋಧಿಸಿದಂತ ಸದಸ್ಯರು ಎ.ಐ.ಸಿ.ಸಿಯಲ್ಲಿ ತಟಸ್ಥರಿರುವರೆಂದೂ ಹೇಳಲಾಗಿದೆ. ಸೋಶಯಲಿಸ್ಟರು ಸಭೆ ಸೇರಿ ಮುಖ್ಯ ನಿರ್ಣಯದ ವಿಚಾರ ಏನು ಮಾಡಬೇಕೆಂದು ಅಭಿಪ್ರಾಯ ಮಾಡುತಿದ್ದಾರೆ. ಅವರಲ್ಲಿ ಬಹುಮಂದಿ ಬಾರ್ಡೋಲಿ ನಿರ್ಣಯವನ್ನು ವಿರೋಧಿಸಬೇಕೆಂದಿರುವರೆಂದು ಊಹೆ.

ಮೊಹರಾಲಿಗಳಿಗೆ ಶಿಕ್ಷೆ

ಯೂಸಫ್ ಮೆಹರಾಲಿಗಳಿಗೆ ೬ ತಿಂಗಳ ಕಠಿಣ ಶಿಕ್ಷೆ ಮತ್ತು ೫೦೦ ರೂಪಾಯಿ ದಂಡ ವಿಧಿಸಿದ್ದಾರೆ.

ಹಿಂದುಸ್ಥಾನಕ್ಕೆ ಜಪಾನರ ಧಾಳಿ ಭಯವಿಲ್ಲ

ಸಿಂಗಾಪುರವು ಬ್ರಿಟಿಷರ ವಶಬರುವ ವರೆಗೆ ಹಿಂದುಸ್ಥಾನಕ್ಕೆ ಜಪಾನರ ಧಾಳಿಯ ಭಯವಿಲ್ಲವೆಂದು ಮದ್ರಾಸು ಗವರ್ನರರು ಹೇಳುತ್ತಾರೆ. ಮದ್ರಾಸಿನಲ್ಲಿ ಧಾಳಿಯಾಗುವ ಹೆದರಿಕೆಯಿಂದ ಇತ್ತೀಚೆಗೆ ಜನರು ನಗರಬಿಟ್ಟು ಓಡಿಹೋಗುತ್ತಿರುವರು.

ಯುದ್ಧಕ್ಕೆ ಸಹಾಯ ಮಾಡುವುದು ಅವಶ್ಯ

ಶ್ರೀ. ಬಿ. ಜಿ. ಖೇರರ ಅಭಿಪ್ರಾಯ

ಮುಂಬಯಿಯ ಹಿಂದಿನ ಪ್ರಧಾನ ಮಂತ್ರಿಗಳಾದ ಶ್ರೀ. ಬಿ. ಜಿ. ಖೇರರು ಧಾರವಾಡದಲ್ಲಿ ಮಾತನಾಡುತ್ತಾ, ಬಾರ್ಡೋಲಿ ನಿರ್ಣಯದ ವಿಚಾರ ವಿವರಿಸಿ, ಮುಂಬಯಿ ನಿರ್ಣಯವನ್ನೇ ಅಲ್ಲಿ ಮಾನ್ಯಮಾಡಲಾಯಿತೆಂದೂ, ಆದರೆ ಗಾಂಧಿ ನೆಹರು, ರಾಜಾಜಿಗಳು ಮಾಡಿದ ವ್ಯಾಖ್ಯಾನದಿಂದ ಜನರಿಗೆ ಸಂದೇಹವುಂಟಾಗಲು ಕಾರಣವಾಯಿತೆಂದೂ, ಸದ್ಯದ ಪರಿಸ್ಥಿತಿಯಲ್ಲಿ ಕಾಂಗ್ರೆಸಿನ ಧೋರಣವನ್ನು ಬದಲುಮಾಡಬಾರದೆಂದು ನಾನು ಹೇಳುವವನಲ್ಲವೆಂದು ತಿಳಿಸುತ್ತಾ, ಅಮೆರಿಯವರು ಹೇಳುವುದನ್ನು ನೋಡಿದರೆ ಬ್ರಿಟಿಷರ ಧೋರಣದಲ್ಲಿ ಯಾವುದೇ ಬದಲಾವಣೆಯಾಗಿಲ್ಲವೆಂದು ತೋರುತ್ತದೆಂದೂ, ಬಾರ್ಡೋಲಿ ನಿರ್ಣಯದಲ್ಲಿ ಕೇವಲ ಸತ್ಯಾಗ್ರಹ ನಿಲ್ಲಿಸಲ್ಪಟ್ಟಿದೆಯೆಂದೂ, ಅನ್ಯಾಯವನ್ನು ತಡೆಯುವಲ್ಲಿ ಅದನ್ನು ತಡೆಗಟ್ಟುವುದು ಶಕ್ಯವಿದ್ದರೆ ಹಿಂಸೆಯಿಂದ ಇಲ್ಲವೇ ಅಹಿಂಸೆಯಿಂದಾದರೂ ತಡೆವುದು ನಮ್ಮ ಕರ್ತವ್ಯವೆಂದೂ ಹೇಳಿದರು. ಕೊನೆಗೆ ಭಾರತವು ಸ್ವತಂತ್ರವಾದರೆ, ಮುಂದೇನು ಮಾಡಬೇಕೆಂಬುದನ್ನು ಭಾರತೀಯರೇ ನಿರ್ಣಯಿಸುವರೆಂದರು. ಅಂತೂ ಸದ್ಯದ ಪರಿಸ್ಥಿತಿಯಲ್ಲಿ ನಾವು ಯುದ್ಧದಲ್ಲಿ ಭಾಗವಹಿಸದಿರುವುದೇ ಸರಿಯೆಂದರು. ಆ ಬಳಿಕ ಹಲವರು ಅನೇಕ ಪ್ರಶ್ನೆಗಳನ್ನು ಕೇಳಿದರು. ಈ ಸಭೆಗೆ ಕರ್ನಾಟಕ ಪ್ರಾಂತದ ಅನೇಕ ಮುಂದಾಳುಗಳು ಬಂದಿದ್ದರು. ಶ್ರೀ ಖೇರರು ಮಾತನಾಡುತ್ತಾ, 'ಬಾರ್ಡೋಲಿ ನಿರ್ಣಯದ ಬಳಿಕ, ನಾನು ಏಳೆಂಟುದಿನ ಅರಣ್ಯಗಳಲ್ಲಿ ವಾಸಮಾಡಿ ಒಂದು ನಿರ್ಣಯಕ್ಕೆ ಬಂದಿರುವೆನು' ಎಂದು ಹೇಳುತ್ತಾ ಪ್ರತಿಯೊಬ್ಬರೂ ಈ ಕಾಲದಲ್ಲಿ ಗಂಭೀರ ವಿಚಾರಮಾಡಬೇಕಾಗಿದೆಯೆಂದರು.

ಪುನಃ ಎಮರಿಯವರ ಅದೇ ಸ್ವರ

ಭಾರತದಲ್ಲಿ ಏಕಮತ್ಯವಿಲ್ಲ

ಭಾರತದ ಬದಲಾದಸ್ಥಿತಿಯಿಂದ ಏನೂ ಅನುಕೂಲವಿಲ್ಲ

ಕಾಮನ್ಸ್ ಸಭೆಯಲ್ಲಿ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರ ಹೇಳಿಕೆ

ಕಳೆದ ತಿಂಗಳ ಅಂತ್ಯದಲ್ಲಿ ಭಾರತದ ರಾಜಕೀಯ ಪಕ್ಷವು ಮಾಡಿದ ಠರಾವನ್ನೂ ರಾಜಕೀಯ ಮುಖಂಡರುಗಳು ಮಾಡಿದ ವಿವಿಧ ಹೇಳಿಕೆಗಳನ್ನೂ ತಾವು ಪರಿಶೀಲಿಸಿದುದಾಗಿಯೂ ಆದರೆ ಈಗಿನ ಅಪಾಯ ಪರಿಸ್ಥಿತಿಯಲ್ಲಿ ಸಹಕಾರ ಮತ್ತು ಐಕಮತ್ಯಕ್ಕಾಗಿ ಮಾಡಿರುವ ಪ್ರಾರ್ಥನೆಗೆ ತೃಪ್ತಿಕರವಾದಷ್ಟು ಗಮನಕೊಟ್ಟಂತೆ ಕಾಣಬರುವುದಿಲ್ಲವೆಂದೂ ಇಂಡಿಯಾ ಸೆಕ್ರೆಟರಿ ಆಫ್ ಸ್ಟೇಟರಾದ ಅಮೆರಿಯವರು ಕಾಮನ್ಸಿನಲ್ಲಿ ತಿಳಿಸಿದರು.

ಅಟ್ಲಾಂಟಿಕ್ ಘೋಷಣೆಗೆ ಸರಿಸಮಾನಾಗಿರುವಂತೆ ಭಾರತಕ್ಕೆ ಸರಕಾರವು ಕೊಟ್ಟಿರುವ ವಾಗ್ದಾನಗಳನ್ನು ನಡೆಸಿಕೊಡುವುದಕ್ಕೆ ಒಪ್ಪಂದದ ಅವಕಾಶವನ್ನೇರ್ಪಡಿಸಲು ಸರಕಾರವು ತನ್ನ ಪ್ರಯತ್ನವನ್ನು ಸ್ವಲ್ಪವೂ ಇಳಿಸುವುದಿಲ್ಲವೆಂದೂ ಅವರು ಹೇಳಿದರು.

ಎಮರಿಯವರ ಹೇಳಿಕೆ

ಕಾಮನ್ಸಿನಲ್ಲಿ ಪ್ರಶ್ನೋತ್ತರ

'ಡಿಸೆಂಬರ್ ತಿಂಗಳ ಅಂತ್ಯಭಾಗದಲ್ಲಿ ಭಾರತದ ರಾಜಕೀಯ ಸಂಸ್ಥೆಗಳಲ್ಲಿ ಆಗಿರುವ ಠರಾವುಗಳನ್ನೂ ಮತ್ತು ಅವಕ್ಕೆ ಸಂಬಂಧಿಸಿದ್ದಂತೆ ರಾಜಕೀಯ ಮುಖಂಡರುಗಳು ಕೊಟ್ಟಿರುವ ವಿವಿಧ ಹೇಳಿಕೆಗಳನ್ನೂ ನಾನು ಪರಿಶೀಲಿಸಿದ್ದೇನೆ. ಆದರೆ ಈಗ ಉಂಟಾಗಿರುವ ಅಪಾಯ ಪರಿಸ್ಥಿತಿಯಲ್ಲಿ ವೈಸರಾಯರು ಐಕಮತ್ಯ ಮತ್ತು ಸಹಕಾರಕ್ಕಾಗಿ ಸೂಚಿಸಿದ ಪ್ರಾರ್ಥನೆಗೆ ತೃಪ್ತಿಕರವಾದಂತಹ ಯಾವ ಗಮನವನ್ನೂ ಕೂಡ ಈ ಹೇಳಿಕೆಗಳು ಮತ್ತು ಠರಾವುಗಳು ಕೊಟ್ಟಿಲ್ಲ.

'ಭಾರತಕ್ಕೆ ಸರಕಾರವು ಕೊಟ್ಟಿರುವ ವಾಗ್ದಾನಗಳನ್ನು ಪೂರ್ತಿಮಾಡಿಕೊಡಲು ಒಂದು ಒಪ್ಪಂದವನ್ನು ಏರ್ಪಡಿಸುವ ಸಲುವಾಗಿ ತನ್ನ ಪ್ರಯತ್ನವನ್ನು ಸ್ವಲ್ಪವೂ ಕಡಿಮೆಮಾಡುವುದಿಲ್ಲ. ಭಾರತಕ್ಕೆ ಸರಕಾರವು ಕೊಟ್ಟಿರುವ ವಾಗ್ದಾನಗಳು ಅಟ್ಲಾಂಟಿಕ್ ಘೋಷಣೆಗೆ ಸೇರಿದ್ದಾವಾದರೂ ಆ ಘೋಷಣೆಯ ಸಾಮಾನ್ಯ ತತ್ವಗಳ ಮೇಲೆಯೇ ಅವು ಆಧಾರವಾಗಿವೆ' ಎಂಬುದಾಗಿ ಇಂಡಿಯಾ ಸೆಕ್ರೆಟರಿ ಆಫ್ ಸ್ಟೇಟ್ ಎಲ್. ಎಸ್. ಎಮರಿಯವರು ಕಾಮನ್ಸಿನಲ್ಲಿ ತಿಳಿಸಿದರು.

ಭಾರತದ ವಿಷಯವಾಗಿ ಹೇಳಿಕೆ ಕೊಡಬೇಕೆಂದು ಗ್ರಹಾಂ ವೈಟ್‌ರವರೂ, ಮೇಜರ್ ಮಿಲ್ನರ್‌ರವರೂ ಎಮರಿಯವರನ್ನು ಕೇಳಿದರು. ಅದರ ಮೇಲೆಯೇ ಎಮರಿಯವರು ಮೇಲ್ಕಂಡ ಹೇಳಿಕೆ ಕೊಟ್ಟರು.

ಭಾರತದ ಈಗಿನ ಪರಿಸ್ಥಿತಿಯನ್ನು ಉಪಯೋಗಿಸಿಕೊಳ್ಳುವುದಿಲ್ಲವೆ?

ಗ್ರಹಾಂ ವೈಟ್‌ರವರು ಉಪಪ್ರಶ್ನೆಯನ್ನು ಕೇಳುತ್ತಾ 'ಭಾರತದಲ್ಲಿ ಈಗ ಉಂಟಾಗಿರುವ ಒಳ್ಳೆಯ ಪರಿಸ್ಥಿತಿಯನ್ನು ಸದುಪಯೋಗಪಡಿಸಿಕೊಳ್ಳಲು ಏನಾದರೂ ಕಾರ್ಯ ಕೈಗೊಳ್ಳಬೇಕೆಂದು ಅಭಿಲಾಷೆ ಭಾರತದಲ್ಲಿಯೂ ಮತ್ತು ಈ ದೇಶದಲ್ಲಿಯೂ ಉಂಟಾಗಿರುವುದಾದ್ದರಿಂದ ಮುಖ್ಯ ಮಂತ್ರಿಯು ವಾಪಸು ಬಂದ ಮೇಲೆ ಭಾರತದಲ್ಲಿಯ ತೊಂದರೆಯನ್ನು ನಿವಾರಿಸಲು ಈ ಸಮಯದಲ್ಲಾದರೂ ಏನಾದರೂ ಮಾಡಲು ನೀವು ಪ್ರಯತ್ನಿಸುವಿರಾ' ಎಂದು ಕೇಳಿದರು.

ರಾಜಕೀಯ ಪಕ್ಷಗಳಲ್ಲಿ ನಿಜವಾದ ಅಭಿಲಾಷೆ ಬೇಕು

ಎಮರಿ:—ರಾಜಕೀಯ ಪಕ್ಷಗಳವರು ಒಪ್ಪಂದಕ್ಕೆ ಬರಲು ನಿಜವಾದ ಅಭಿಲಾಷೆಯನ್ನು ವ್ಯಕ್ತಪಡಿಸುವುದಾದರೆ ಅಗ್ಗೆ ಆ ಪರಿಸ್ಥಿತಿಯನ್ನು ಸದುಪಯೋಗಪಡಿಸಿಕೊಳ್ಳಲು ಸರಕಾರವು ಸಹಜವಾಗಿಯೇ ಉತ್ಸುಕತೆ ಹೊಂದಿರುವದು.

ಈಗಿನ ಜಡತೆಯ ನೀತಿಯ ತ್ಯಾಗವಿಲ್ಲವೆ?

ಮೇಜರ್ ಮಿಲ್ನ:—ಈಗಿನ ಜಡತೆಯ ನೀತಿಯನ್ನು ತ್ಯಜಿಸಿ ನೀವೇ ಏತಕ್ಕಾಗಿ ಸರಿಯಾದ ಚಟುವಟಿಕೆಯ ಕಾರ್ಯಕ್ರಮವನ್ನು ಕೈಕೊಳ್ಳಕೂಡದು?

ಉ:—ಫಲವು ದೊರೆಯುವುದೆಂಬ ಸೂಚನೆ ತೋರಿದಾಗ ನಾನು ಆ ಕ್ರಮ ಕೈಕೊಳ್ಳುವೆನು.

ಭಾರತದ ಮುಖಂಡರುಗಳ ಅಭಿಪ್ರಾಯ

ಸೊರೆನ್‌ಸೆನ್:—ಈಗಿನ ಪರಿಸ್ಥಿತಿಯಲ್ಲಿ ಈ ದೇಶದ ಸರಕಾರವೇ ಮುಂದೆಬರಬೇಕೆಂದೂ, ಮತ್ತು ಅಟ್ಲಾಂಟಿಕ್ ಘೋಷಣೆಯು ಇತರ ರಾಷ್ಟ್ರಗಳಿಗೆ ಅನ್ವಯಿಸುವಂತೆಯೇ ಭಾರತಕ್ಕೂ ಅನ್ವಯಿಸುವಂತೆ ಕೇಳುತ್ತಿರುವುದಕ್ಕೆ ಬ್ರಿಟಿಷ್ ಸರಕಾರವು ಅಟ್ಲಾಂಟಿಕ್ ಘೋಷಣೆ ಬಗ್ಗೆ ಮಾಡಿರುವ ಪ್ರತಿಪಾದನೆಯು ಎಳ್ಳಷ್ಟೂ ತೃಪ್ತಿಕರವಾಗಿಲ್ಲವೆಂದೂ ಭಾರತದ ವಿವಿಧ ರಾಜಕೀಯ ಸಂಘಟನಗಳ ಮುಖಂಡರುಗಳು ಕೂಡ ಏಕವಾಕ್ಯದಿಂದ ನುಡಿಯುತ್ತಿರುವುದರ ಮಹತ್ವವನ್ನು ನೀವು ಅರಿಯುವುದಿಲ್ಲವೆ?

ಉ: ನೀವು ಪ್ರಸ್ತಾಪಿಸಿರುವ ಠರಾವುಗಳು ಏಕವಾಕ್ಯದಿಂದಿಲ್ಲವೆಂದು ನಾನು ಹೇಳಬೇಕಾಗಿದೆ. ಮುಸ್ಲಿಂ ಲೀಗಿನ ಠರಾವುಗಳೂ ಕಾಂಗ್ರೆಸಿನ ಠರಾವುಗಳೂ ಪರಸ್ಪರ ವಿರುದ್ಧವಾಗಿವೆ.

ಒಗ್ಗಟ್ಟಾಗಲು ಅಭಿಲಾಷೆ ತೋರುವವರೆಗೂ ಸಾಧ್ಯವಿಲ್ಲ

ಉ: ಭಾರತದಲ್ಲಿಯ ಪ್ರಮುಖ ಪಕ್ಷಗಳು ಒಗ್ಗಟ್ಟಾಗಿ ಕೆಲಸಮಾಡಲು ಅಭಿಲಾಷೆಯನ್ನು ತೋರಿಸುವ ವರೆಗೂ ಭಾರತದಲ್ಲಿ ರಾಜ್ಯಾಂಗ ಬೆಳವಣಿಗೆ ಯಾವುದನ್ನೂ ನಾವು ಮಾಡಲು ಸಾಧ್ಯವಿಲ್ಲ. ಅವರನ್ನೆಲ್ಲಾ ಒಟ್ಟು ಗೂಡಿಸುವ ಅಧಿಕಾರ ನಮ್ಮಲ್ಲಿಲ್ಲ.

ಪಿನ್‌ವೆಲ್ ಸದ್ಯಕ್ಕೆ ವೈಸರಾಯರು ಸಹಕಾರಕ್ಕಾಗಿ ಮಾಡಿರುವ ಪ್ರಾರ್ಥನೆಯ ಮೇಲೆಯೇ ಪೂರ್ಣವಾಗಿ ಸರಕಾರದ ನೀತಿಯು ಉಳಿಯುವುದೆಂದು ನಾವು ಈ ಉತ್ತರದಿಂದ ಅರಿಯಬೇಕೆ?

ಶ್ರೀ ದಿವಾಕರ, ಹರ್ಡೀಕರರೂ ಬಾರ್ಡೋಲಿ ನಿರ್ಣಯ ಒಪ್ಪುವುದಿಲ್ಲ

ಕರ್ನಾಟಕದ ಇನ್ನಿಬ್ಬರು ಮುಖಂಡರಾದ ಶ್ರೀಗಳಾದ ದಿವಾಕರ ಹರ್ಡೀಕರರೂ ಬಾರ್ಡೋಲಿ ನಿರ್ಣಯವು ಸಮಂಜಸವಾಗಿಲ್ಲವೆಂದು ಅಭಿಪ್ರಾಯ ಪ್ರಕಟಿಸಿ ಹೇಳಿಕೆಯಿತ್ತಿರುವರು.

ಸರ್ ಅಕ್ಬರ್ ಹೈದರಿಯವರ ನಿಧನ

ವೈಸರಾಯ ಕಾರ್ಯಕಾರಿ ಮಂಡಳದ ಸದಸ್ಯರಾದ ಸರ್ ಅಕ್ಬರ್ ಹೈದರಿಯವರು ತಾ. 8ರಂದು ನಿಧನಹೊಂದಿದರು. ಇವರು 1867ರಲ್ಲಿ ಜನಿಸಿದರು. 1888ರಲ್ಲಿ ಅವರು ಅರ್ಥಿಕ ಖಾತೆಯನ್ನು ಸೇರಿದರು. ಸಂಯುಕ್ತಪ್ರಾಂತದ ಎಕೌಂಟೆಂಟ್ ಜನರಲರಾಗಿದ್ದರು. ಮದರಾಸ್ ಮತ್ತು ಮುಂಬಯಿ ಸರಕಾರಗಳ ಡಿಪ್ಯೂಟಿ ಎಕೌಂಟೆಂಟ ಜನರಲರಾಗಿದ್ದರು. ಆ ಮೇಲೆ ಹಿಂದುಸ್ಥಾನ ಸರಕಾರದ ಗೃಹಖಾತೆ ಮತ್ತು ಆರೋಗ್ಯ ಖಾತೆ ಮಂತ್ರಿಗಳಾಗಿದ್ದರು. ೧೯೦೫ರಲ್ಲಿ ಹೈದರಾಬಾದ್ ಅಕೌಂಟೆಂಟ್ ಜನರಲರಾದರು. ೧೯೨೦ರಲ್ಲಿ ಮುಂಬಯಿ ಎಕೌಂ. ಜನರಲರಾದರು. ೧೯೨೧ರಲ್ಲಿ ಹೈದರಾಬಾದ್ ರೈಲ್ವೆ ಮೆಂಬರ್ ಮತ್ತು ಎಕ್ಸಿಕ್ಯೂಟಿವ್ ಕಮಿಟಿ ಮೆಂಬರರಾದರು. ೧೯೧೭ರಲ್ಲಿ ಅಖಿಲ ಭಾರತ ಮುಸ್ಲಿಂ ವಿದ್ಯಾ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಉಸ್ಮಾನಿಯಾ ವಿಶ್ವವಿದ್ಯಾಲಯದ ಅಭಿವೃದ್ಧಿಗೆ ಕೆಲಸಮಾಡಿರುವರು. ಮೂರು ರೌಂಡ್‌ಟೇಬಲ್ ಕಾನ್ಫರೆನ್ಸ್‌ಗಳಿಗೂ ಹೋಗಿದ್ದರು. ೧೯೩೭ರಲ್ಲಿ ಹೈದರಾಬಾದು ಮುಖ್ಯ ಮಂತ್ರಿಯಾಗಿದರು.

ಮದ್ರಾಸಿನಲ್ಲಿ ವಿಮಾನ ಧಾಳಿ ಎಚ್ಚರಿಕೆ

ಮದ್ರಾಸಿನಲ್ಲಿ ಬೇರೆ ಬೇರೆ ಖಾತೆ ಹಾಗೂ ಕಚೇರಿಗಳ ಮುಖ್ಯಾಧಿಕಾರಿಗಳಿಗೆ ಕಚೇರಿಯ ಬಾಗಿಲು ಹಾಗೂ ಕಿಟಕಿಗಳ ಗಾಜುಗಳನ್ನು ತೆಗೆದಿಡಬೇಕೆಂದು ಇಲ್ಲವೇ ಅವುಗಳಿಗೆ ಧಕ್ಕೆಯಾಗದಂತೆ ನೋಡಿಕೊಳ್ಳಬೇಕೆಂದೂ, ಗಾಜುಗಳು ಚೂರುಚೂರಾಗಿ ಸಿಡಿದು ಕಚೇರಿಯ ನೌಕರರಿಗೆ ಅಪಾಯವೊದಗಬಹುದೆಂದು ಸರಕಾರದವರು ಎಚ್ಚರಿಕೆಯಿತ್ತಿರುವರು. ಅಗ್ನಿ ನಿವಾರಕ ಸಂಬಂಧ ಮರಳ ಹೊಯಿಗೆಯ ಚೀಲವನ್ನು ಕಟ್ಟಡಗಳ ಸುತ್ತಲೂ ಇಟ್ಟುಕೊಳ್ಳಬೇಕಾಗಿಯೂ ಹೇಳಿರುವರು.

ಸಿಂಗಾಪುರದ ರಕ್ಷಣೆಗೆ

ಮಿತ್ರ ರಾಷ್ಟ್ರಗಳು ಸಿಂಗಾಪುರದ ರಕ್ಷಣೆಗೆ ಸಹಕರಿಸುತ್ತಿವೆಯೆಂದು ಹೇಳಿದರು. ಆಸ್ಟ್ರೇಲಿಯಾ, ಅಮೆರಿಕ, ಬ್ರಿಟನ್, ನೆದರ್‌ಲೆಂಡ್, ಈಸ್ಟ್ ಇಂಡೀಸ್ ಈ ರಾಷ್ಟ್ರಗಳು ಒಂದೇ ನೇತೃತ್ವದಲ್ಲಿ ಸಹಕರಿಸಿ ಕಾದಾಡುವವೆಂದು ಅಭಿಪ್ರಾಯವಿತ್ತರು.

ರಶೀದ ಆಲಿಗೆ ಮರಣದಂಡನೆ

ಇರಾಕಿನಲ್ಲಿ ಜರ್ಮನ್ ಪರವಾಗಿ ದಂಗೆ ಎಬ್ಬಿಸಿದ ರಶೀದ್ ಆಲಿಗೆ ಇರಾಕಿನ ಕೋರ್ಟಿನಲ್ಲಿ ಮರಣದಂಡನೆ ವಿಧಿಸಿದೆ. ಅವನಿಗೆ ಸೇರಿದ ಇನ್ನೂ ಆರು ಜನರಿಗೆ ಅದೇ ಶಿಕ್ಷೆ ವಿಧಿಸಲಾಗಿದೆ.

ಭಾರತಕ್ಕೆ ರೂಸ್‌ವೆಲ್ಟರ ವಿಶೇಷ ರಾಯಭಾರಿ

ಅಮೆರಿಕದ ಅಧ್ಯಕ್ಷ ರೂಸ್‌ವೆಲ್ಟರ ವಿಶೇಷ ರಾಯಭಾರಿ ವಿಲಿಯಂ ಬುಲ್ಲಿಟರು ಬಾಗದಾದಿನಿಂದ ಟೆಹರಾನಿಗೆ ವಿಮಾನದಲ್ಲಿ ಹೋದರು. ಅವರು ಟರ್ಕಿಗೆ ಭೇಟಿ ಕೊಡುವರು. ಅವರು ಭಾರತಕ್ಕೂ ಬರುವರೆಂದು ತಿಳಿದಿದೆ.

ದೀಪ ಪ್ರಕಾಶ ಕಡಿಮೆಯಾಗಿರಬೇಕು

ಬೊಂಬಾಯಿ ಆಜ್ಞೆ

ಬೊಂಬಾಯಿ ನಗರದಲ್ಲಿ ದೀಪ ಪ್ರಕಾಶವು ಬಹು ಕಡಿಮೆಯಾಗಿರಬೇಕೆಂದು ಆಜ್ಞೆ ಹೊರಟಿದೆ.

ಕಲ್ಕತ್ತದಲ್ಲಿ ೨೦೦ ಶಾಲೆಗಳನ್ನು ಮುಚ್ಚಿತು.

ಯುದ್ಧ ಭೀತಿಯಿಂದಾಗಿ ಕಲ್ಕತ್ತದಲ್ಲಿ ೨೦೦ ಮುನ್ಸಿಪಲ್ ಪ್ರಾಥಮಿಕ ಶಾಲೆಗಳನ್ನು ಮೂರು ತಿಂಗಳ ಕಾಲ ಮುಚ್ಚಲಾಗಿದೆ. ಈ ಶಾಲೆಗಳ ಒಂದು ಸಾವಿರ ಮಂದಿ ಉಪಾಧ್ಯಾಯರನ್ನು ವಿಮಾನ ಧಾಳಿ ಮುಂಜಾಗ್ರತೆಗೆ ನೇಮಿಸಲಾಗಿದೆ.

ಪಿನಾಂಗಿನ ಭಾರತೀಯರು

ಅಲ್ಲೀ ಸುಖವಾಗಿರುವರೆಂದೂ, ತಮ್ಮ ಪ್ರದೇಶವನ್ನು ಬಿಟ್ಟು ಹೋಗಲಿಲ್ಲವೆಂದೂ ಸರಕಾರವು ಪ್ರಕಟಿಸಿದೆ.

ಸಿನೆಮಾ ಪುಟ

ನಾಸೀಮ್ ಪೃಥ್ವೀರಾಜರು ಪ್ರಣಯಿನಿಗಳಾಗಿ

ನಾಸೀಮ್-ಪೃಥ್ವೀರಾಜರು ಪ್ರಣಯಿನಿಗಳಾಗಿ ತಾಜ್‌ಮಹಾಲ್ ಪಿಕ್ಚರ್ಸ್ ಲಿಮಿಟೆಡಿನ 'ಉಜಾಲ'ದಲ್ಲಿ ಅಭಿನಯಿಸುವರು. ಇದು ವಾಡಿಯಾ ಸ್ಟುಡಿಯೋದಲ್ಲಿ ಚಿತ್ರಿತವಾಗುತ್ತಿದೆ. ರತನ್ ಬಾಯಿ, ಮುಬಾರಕ್ ಮತ್ತು ಮಿರ್ಜಾ ಮುಶ್ರಫ್ ಮೊದಲಾದವರೂ ಇದರಲ್ಲಿ ಪಾತ್ರವಹಿಸುವರು. ಶ್ರೀ. ಕೆ. ಎಂ. ಮುಲ್ತಾನಿಯವರು ಇದರ ನಿರ್ದೇಶಕರು.

ರಾಜಾರಾಣಿ

ಅತ್ರಿ ಪಿಕ್ಚರ್ಸ್‌ನ 'ರಾಜಾರಾಣಿ' ಈಗ ಬಹಳ ಪ್ರಸಿದ್ಧಿ ಪಡೆಯುತ್ತಿದೆ. ಅತ್ರಿಯವರು ಈ ಕಥಾಲೇಖಕರು. ಇದು ಬೇಗನೇ ಬೊಂಬಾಯಿಯಲ್ಲಿ ಪ್ರಕಟಿಸಲ್ಪಡುವುದು. ಇದು ಸುಖಾಂತ ಕಥೆ. ಸಂಯುಕ್ತ ಕುಟುಂಬ ಜೀವನದ ಚಿತ್ರವಿದರಲ್ಲಿದೆ. ತ್ರಿಲೋಕ ಕಪೂರ್, ಸುನಲಿನೀದೇವಿ, ಮಾಯಾದೇವಿ ನವೀನ ಯಾಗ್ನಿಕ್, ದೇವಿಡ್, ಬೇಬಿ ವಿಮಲಾ ಮತ್ತು ಗೋವಿಂದ ಮೊದಲಾದ ಪ್ರಸಿದ್ಧ ನಟವರ್ಗದವರು ಅಭಿನಯಿಸುವರು.

ಬಾರ್ಡೋಲಿ ಚಿತ್ರ

ಮೊನ್ನೆ ಬಾರ್ಡೋಲಿಯ ವರ್ಕಿಂಗ್ ಕಮಿಟಿ ಸೇರಿದ ಸಂದರ್ಭದಲ್ಲಿ ಒಂದು ಸಣ್ಣ ಚಿತ್ರವನ್ನು ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ತೆಗೆದಿರುವರಾಗಿ ತಿಳಿದಿದೆ. ಇದು ಅಖಿಲ ಭಾರತದಲ್ಲಿ ಬೇಗನೇ ಪ್ರದರ್ಶಿತವಾಗುವುದೆಂದು ತಿಳಿದಿದೆ. ಕಲ್ಕತ್ತದಲ್ಲಿ ಮೊನ್ನೆ ಪ್ರದರ್ಶಿಸಿದಾಗ ನೆಹರು ಚಿತ್ರನೋಡಲು ಬಂದಿದ್ದರು.

ಕೆ. ಸಿ. ಡೇ

ಬಂಗಾಳದ ಕುರುಡ ಗಾಯಕ ಕೆ. ಸಿ. ಡೇಯು ಗುಜರಾಥೀ ಚಿತ್ರದಲ್ಲಿ ಭಾಗವಹಿಸುತ್ತಿರುವನು. ಚಿಮನ್‌ಲಾಲ ತ್ರಿವೇದಿಯವರು ಈ ಕಥೆಯನ್ನು ಲಕ್ಷ್ಮೀ ಪ್ರೊಡಕ್ಷನ್ಸನವರಿಗಾಗಿ ಬರೆದರು. ಇವರಲ್ಲಿ ಗುಜರಾಥಿಯಲ್ಲಿ ಹಾಡುಹಾಡುವುದು ಮಾತ್ರ ಅವನ ಕೆಲಸವಾಗಿದೆ. ಕೆ. ಸಿ. ಡೇ ಮೊದಲನೆ ದಿನ ಸ್ವಲ್ಪ ಅಂಜಿ ಅಳುಕಿದಂತೆ ಮಾಡಿದರೂ ಮತ್ತೆ ನಿರ್ಭಯದಿಂದ ಹಾಡುತ್ತಿದ್ದಾನೆ. ಗುಜರಾಥೀ ಉಚ್ಚಾರವು ಚೆನ್ನಾಗಿದೆಯಂತೆ.

ಅಹಮ್ಮದ್ ಅಬ್ಬಾಸ್ ಚಿತ್ರ ತಯಾರಿಸುವುದು

ಸಲ್ಪ ಲೇಖಕನಾದ ಖ್ವಾಜಾ ಅಹಮ್ಮದ್ ಅಬ್ಬಾಸ್ ಈಗ ಚಿತ್ರ ವಿಮರ್ಶಕನ ನೆಲೆಯಿಂದ ಚಿತ್ರಲೇಖಕನ ನೆಲೆಯಿಂದ, ಚಿತ್ರ ನಿರ್ಮಾಪಕನಾಗಿ ನಿಂತಿದ್ದಾನೆ. ನೇಶನಲ್ ಸ್ಟುಡಿಯೋದವರು ಅಲಿಗರ್ ವಿಶ್ವವಿದ್ಯಾಲಯದ ಸ್ಥಾಪಕರಾದ ಸರ್ ಸಯ್ಯದ್ ಅಹಮ್ಮದ್ ಖಾನರ ಜೀವನ ಚಿತ್ರವನ್ನು ತಯಾರಿಸುವಂತೆ ಅಬ್ಬಾಸಿಗೆ ಹೇಳಿರುವರು. ಇದಕ್ಕಾಗಿ ಅಲಿಗರಿಗೆ ಚಿತ್ರ ಸಿದ್ಧತೆಗಾಗಿ ಈಗ ತೆರಳಿರುವರು. ಅಬ್ಬಾಸ್ ಆ ವಿಶ್ವವಿದ್ಯಾಲಯದ ಒಬ್ಬ ವಿದ್ಯಾರ್ಥಿ. ಬೊಂಬಾಯಿ ಸ್ಟುಡಿಯೋದವರು ಲೋಕಮಾನ್ಯ ತಿಲಕರ ಜೀವನವನ್ನು ಚಿತ್ರಿಸುವಂತಹ ಒಂದು ಚಿತ್ರವನ್ನು ತಯಾರಿಸಲಾರಂಭಿಸುವರೆಂಬ ವದಂತಿಯಿದೆ.

ಪುನರ್ಮಿಲನ್

ಸ್ನೇಹಪ್ರಭಾ ಪ್ರಧಾನ

ನರ್ತಕಿ ಕೋಯಿಲಿ ಕಣ್ಣೆಸೆದು ಕುಮಾರನ ಹೃದಯವನ್ನು ಸೂರೆಗೊಂಡಳು; ಪ್ರಣಯಿನಿ ಸ್ನೇಹಪ್ರಭಾ ನಲಿನಲಿದು ಕಿಶೋರ ಸಾಹುವಿನ ಅಂತರಂಗವನ್ನು ಅಪಹರಿಸಿದಳು. ಬಾಲಾಜಿ ಟೋಕೀಸಿನಲ್ಲಿ ಪ್ರದರ್ಶಿಸಲ್ಪಡುವ 'ಪುನರ್ಮಿಲನ'ದಲ್ಲಿ ಈ ಪ್ರೇಮ ರಹಸ್ಯವನ್ನು ತಿಳಿದುಕೊಳ್ಳಬಹುದು.

'ಅಮೃತ'

ಕೊಂಕಣಸೀಮೆ, ಬಾಪ್ಪ ಗ್ರಾಮದ ಮುಖಂಡ. ತಾಳೆಮರಗಳನ್ನು ಗುತ್ತಿಗೆ ಕೊಟ್ಟು ಬಾಪ್ಪನು ಹಣವಂತನಾಗಿದ್ದನು. ಲೋಕವು ಕುಡಿದರೆ ಅದಕ್ಕೆ ತಾನು ಹೊಣೆಯಲ್ಲವೆನ್ನುತ್ತಿದ್ದ. ಅವನಿಗೆ ಇಬ್ಬರು ಮಕ್ಕಳು—ಲಲಿತಾ ಮತ್ತು ವಿಲಾಸ. ವಿಲಾಸನು ಬೊಂಬಾಯಿಯಲ್ಲಿ ಕಲಿಯುತ್ತಿದ್ದನು. ಇಬ್ಬರಿಗೂ ವಿವಾಹಮಾಡಬೇಕೆಂದು ಬಾಪ್ಪನು ಮಗನನ್ನು ಕರೆಸಿದನು. ವಿಲಾಸನು ಬರುವಾಗ ತನ್ನ ತಂದೆಗೆ "ಉಡುಗರೆ"ಯಾಗಿ ಸದಾನಂದನೆಂಬ ತನ್ನ ಸ್ನೇಹಿತನನ್ನು ಕರೆಕೊಂಡು ಬಂದಿದ್ದನು. ಇವರಿಬ್ಬರೂ ಬರುವಾಗ, ಓರ್ವ ಬಡವಿಯು ಹಸಿದ ತನ್ನ ಮಗಳಿಗೆ ಏನಾದರೂ ಕೊಡೆಂದು ಬೇಡಿದಳು. ವಿಲಾಸನು ಕರುಣೆಯಿಂದ ಹತ್ತು ರೂಪಾಯಿ ನೋಟನ್ನು ಕೊಟ್ಟನು. ಆ ಬಡವಿಯು ಮನೆಗೆ ತೆರಳಿ, ಮುಂದಿನ ಜೀವನೋಪಾಯವೆಂದು ಪಾದರಕ್ಷೆಗಳನ್ನು ಹೊಲೆದು, ಮೊದಲನೆ ಪಾದರಕ್ಷೆಯನ್ನು ವಿಲಾಸನಿಗೆ ಕೊಡಲು ಬಂದಳು. ಬಾಪ್ಪನಿಗೆ ಹತ್ತು ರೂಪಾಯಿ ದಾನದ ಕಥೆ ತಿಳಿದುಬಂತು. ಮಗನ ಮೇಲೆ ಕೋಪಗೊಂಡನು. ಇತ್ತ ಸದಾನಂದನು ಲತೆಯ ಕಡೆಗೆ ವಿಶೇಷ ಗಮನಕೊಟ್ಟುದೂ ಬಾಪ್ಪನಿಗೆ ಹಿತಕರವೆನಿಸಲಿಲ್ಲ. ಸದಾನಂದನ ಮೇಲೂ ತನ್ನ ಅಗ್ನಿ ಕಾರಿದನು. ಸ್ಥಿತಿಯು ವಿಷಮಕ್ಕೆ ಮುಟ್ಟಿತು. ಮುಂದಿನ ಸ್ವಾರಸ್ಯದ ಘಟನೆಗಳಿಗೆ ಸೆಂಟ್ರಲ್ ಟಾಕೀಜಿನಲ್ಲಿ ಪ್ರದರ್ಶಿಸಲ್ಪಡುವ 'ಅಮೃತ' ಚಿತ್ರವನ್ನು ನೋಡಿರಿ.

'ಸಿಕಂದರ್' ಸರ್ವರನ್ನೂ ಮೆಚ್ಚಿಸುತ್ತದೆ

ವಿಶೇಷವಾಗಿ ಮಹಿಳಾ ವರ್ಗವನ್ನು

ಸಿಕಂದರ್ ಚಿತ್ರವು ಜನಸಾಮಾನ್ಯರಿಂದ ತೊಡಗಿ ವಿಶೇಷ ಕಲಾವಂತರನ್ನೂ ಎಲ್ಲಾ ತರಗತಿಯ ಜನರನ್ನು ಮೆಚ್ಚಿಸುವ ಚಿತ್ರವಾಗಿ ಮಿನರ್ವದವರ ಅಪ್ರತಿಮ ಕೃತಿಯೆಂದು ಪ್ರಸಿದ್ಧವಾಗಿದೆ. ಮಹಿಳಾ ವರ್ಗವು ಇದನ್ನು ಎಲ್ಲೆಲ್ಲೂ ಬಹು ಮೆಚ್ಚುತ್ತಿದೆ. ಭಾರತದ ಮಹಿಳೆಯರ ಗೌರವ ಗುಣಗಳು ಈ ಚಿತ್ರಕತೆಯಲ್ಲಿ ಅನುಪಮವಾಗಿ ವರ್ಣಿತವಾಗಿರುವುದೇ ಅದರ ಕಾರಣ. ರಾಣೀ ಸುಂದರಿ ರುಕ್ಸಾನಾ ಪ್ರೇಮ ಇತ್ಯಾದಿಗಳ ಮೂರ್ತಿಯಾಗಿದ್ದಾಳೆ. ಆಕೆಯ ಪ್ರಣಯ ಸಿಕಂದರನ ಜೀವ ಉಳಿಸಲು ಮಾಡಿದ ಅವಳ ಸಹಾಸ ಇವು ಎಲ್ಲರನ್ನೂ ತಲೆದೂಗಿಸುವುದು. ಪ್ರಾರ್ಥನಾ, ದೇಶಭಕ್ತಿಯ ಪ್ರತಿಮೂರ್ತಿ. ದೇಶದ್ರೋಹಿಯಾದ ಸೋದರ—ರಾಜಾ ಅಂಬಿಯನ್ನು ತ್ಯಜಿಸಿ ಆಕೆ ಮಾತೃಭೂಮಿಯ ಸ್ವಾತಂತ್ರ್ಯಕ್ಕಾಗಿ ಹೋರಾಡಿದಳು. ಸವಿತಾ ರಾಣಿಯು ಭಾರತೀಯ ಮಾತೃಪ್ರೇಮವನ್ನು ಬೆಳಗಿಸುವಳು. ಸುಮಧುರ ಕೃಷಿಕ ಕನ್ಯೆ ಪ್ರೇಮ ಯೌವನ ನಗಳ ಬೊಂಬೆ. ಹೀಗೆ ಸ್ತ್ರೀ ಗುಣಗಳನ್ನು ಸರ್ವಾಂಗವಾಗಿ ಚಿತ್ರಿಸುವೀ ಚಿತ್ರವು ಮಹಿಳಾ ವರ್ಗವನ್ನು ವಿಶೇಷ ಆಕರ್ಷಿಸುತ್ತದೆ.

ರೈಲು ಬಂಡಿಗಳ ಸಮಯ

ಇದೇ ಜುಲೈ ತಾ. 1ರಿಂದ ವ್ಯತ್ಯಾಸವಾದ ರೈಲು ಬಂಡಿಗಳ ಸಮಯಗಳು ಈ ಕೆಳಗಿನಂತಿವೆ—

ಗಾಡಿಗಳು	ಹೊರಡುವ ಗಂಟೆ	ತಲ್ಪುವ ಗಂಟೆ
ಗೂಡ್ಸ್ ಬಂಡಿ ನೀಲೇಶ್ವರದವರೆಗೆ	3.45 ರಾತ್ರಿ 7.32 ಬೆಳಗ್ಗೆ	9.25 ರಾತ್ರಿ 1.0 ಅಪರಾಹ್ನ
ಮಲಬಾರು ಎಕ್ಸ್‌ಪ್ರೆಸ್ (ಮೈಲ್)	9.5 ಬೆಳಗ್ಗೆ	5 15 ಸಾಯಂ.
ಜಾಲಾರ್ ಪೇಟೆ — ಪೆಸೆಂಜರ್	12.0 ಮಧ್ಯಾಹ್ನ	2.55 ಸಾಯಂ
ಕಾಸರಗೋಡು ವರೆಗೆ	3.25 ಸಾಯಂ.	6·50 ಸಾಯಂ.
ಕಣ್ಣನ್ನೂರು ವರೆಗೆ	5·52 ಸಾಯಂ.	9·40 ಪೂರ್ವಾಹ್ನ

ಸರಕಾರದ ಹೊಸ ಪಾಠಪಟ್ಟಿಗನುಸಾರವಾಗಿ ಬರೆದ

ನವೀನ ಭೂವಿವರಣೆ

ವಾಸುದೇವರಾವ್, ಎಂ. ಎ. ಎಲ್. ಟಿ. (Dip. Geogrhpy)

(ಭೂಗೋಳಶಾಸ್ತ್ರದಲ್ಲಿ ಡಿಪ್ಲೊಮಾ ಪಡೆದವರು)

ಈ ಪುಸ್ತಕಗಳನ್ನು ಪಡಕೊಂಡಲ್ಲಿ ವಿದ್ಯಾರ್ಥಿಗಳಿಗೆ ಎಟ್ಲಾಸ್ ಕೊಂಡುಕೊಳ್ಳುವ ಅವಶ್ಯವಿಲ್ಲ

ಪ್ರತಿ ಪುಸ್ತಕದಲ್ಲಿ ಬಣ್ಣಬಣ್ಣದ ಭೂಪಟಗಳಿವೆ.

ಅನೇಕಾನೇಕ ಚಿತ್ರಪಟಗಳಿಂದ ಕೂಡಿದ್ದು, ಪ್ರತಿ ಪಾಠದ ಅಂತ್ಯದಲ್ಲಿ ಅಭ್ಯಾಸಗಳನ್ನೂ ಮಾದರಿ ಪ್ರಶ್ನೆಗಳನ್ನೂ ಕೊಟ್ಟಿದೆ

4ನೆಯ ಪುಸ್ತಕ 0 6 0 5ನೆಯ ಪುಸ್ತಕ 0 7 0

6, 7 ಮತ್ತು 8ನೆಯ ಪುಸ್ತಕಗಳು ಅಚ್ಚಿನಲ್ಲಿವೆ

ಪುಸ್ತಕಗಳು ಬೇಕಾದಲ್ಲಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.

The Canara Banking Corporation Ltd.

(Incorporated in British India with limited liability)

Estd 1906

OUR RATES OF INTEREST ON DEPOSITS

Current	1%	p. a.
Savings Bank	2½%	,,
Short-Term	1¾%	,,
FIXED FOR 3 MONTHS	2%	,,
6 ,,	2½%	,,
9 ,,	2¾%	,,
12 ,,	3%	,,
24 ,,	3½%	,,

Advances made at cheap rates of interest against approved securities and Banking business of every description transacted

ತೆಗೆದುಕೊಳ್ಳಿರಿ

ಎಂದು ನಂಬಿಗೆಯಿಂದ ಹೇಳಬರುವ

ದಮ್ಮಿಗೆ ಬಂದೇಬಂದು ಉಪಾಯ



ದಮ್ಮು ಒಮ್ಮೆಲೇ ನಿಲ್ಲಬೇಕು ಎಂಬ ಆಶೆಯಿಂದ ಅನೇಕರು ಕ್ಷಣಿಕಗುಣಕೊಡುವ ಔಷಧ ತೆಗೆದುಕೊಂಡು ಸತ್ತು ಹೋಗಿದ್ದಾರೆ. ಪುರೋಹಿತ ಶ್ವಾಸಹಾರೀ ಹೀಗಲ್ಲ, ಅದರ ದಮ್ಮನ್ನು ಒಂದೆರಡು ದಿನ ನಿಂದಿಸದೆ ಮೆಲ್ಲಮೆಲ್ಲಗೆ ಸಮೂಲವಾಗಿ ಗುಣವಾಗುವ ಉತ್ಕೃಷ್ಟ ಶಾಸ್ತ್ರೀಯ ಉಪಾಯವು. ಅದನ್ನು ತೆಗೆದುಕೊಳ್ಳಲು ಆರಂಭಿಸಿದ ಕೂಡಲೇ ಕೆಮ್ಮು ಹೋಗುವುದು, ತೇಕು ಕಡಿಮೆಯಾಗುವುದು, ಶೌಚದ ತೊಂದರೆ ಉಳಿಯುವುದಿಲ್ಲ, ಪಚನಕ್ರಿಯೆಯು ತಿದ್ದುವುದು, ಸಾವಕಾಶವಾಗಿ ಶಕ್ತಿ ಹೆಚ್ಚಾಗಿ ಪುಪ್ಪುಸ ಗಟ್ಟಿಯಾಗಿ ಕೊನೆಗೆ ದಮ್ಮು ಪೂರ್ಣವಾಗಿ ಗುಣವಾಗುವುದು.

ದಮ್ಮು, ತೇಕು, ಕೆಮ್ಮು, ಗಂಟಲು ಉರಿಯುವಂಥದು ಮತ್ತೂ ಪುಪ್ಪುಸದ ಎಲ್ಲಾ ವಿಕಾರಗಳಿಗೆ ಪುರೋಹಿತ ಶ್ವಾಸಹಾರಿ ಹೀನ (ನೀಲಿ ಪ್ಯಾಕಿಂಗ್) ಉಪಯೋಗಿಸಬೇಕು. ಬದ್ಧಕೋಷ್ಠ ಮತ್ತೂ ಅಮ್ಲಪಿತ್ತ ಹೆಚ್ಚಾಗಿ ದಮ್ಮು ಹತ್ತಿದವರು ಶ್ವಾಸಹಾರಿ ಕಂಪೌಂಡ (ಕೆಂಪು ಪ್ಯಾಕಿಂಗ್) ತೆಗೆದುಕೊಂಡರೆ ಹೆಚ್ಚು ಗುಣ. ರೂ. 2-8, ರೂ. 4-2 ಕಿಮ್ಮತ್ತಿನಲ್ಲಿ ಸಣ್ಣ ದೊಡ್ಡ ಬಾಟಲಿಗಳಲ್ಲಿ ಎಲ್ಲ ಕಡೆ ಸಿಗುವವು. ತರಿಸಿಕೊಳ್ಳುವ ವಿಳಾಸ—

ಡಾ|| ಪುರೋಹಿತ ಫಾರ್ಮಸಿ, ಕೊಲ್ಲಪುರ.

ಇಲ್ಲವೇ ಮೆ|| ವನಮಾಳೀ ಛೀಬಾ ಮತ್ತು ಕಂ, ಪ್ರಿನ್ಸೆಸ್ ಸ್ಟ್ರೀಟ್, ಮುಂಬಯಿ.

ಪುರೋಹಿತ ಶ್ವಾಸಹಾರಿ

ವಿಜ್ಞಾನಯುಗ

ಹಸಿ ತಿಂದರೆ ಆಯುಸ್ಸು ಹೆಚ್ಚುವುದೆ?

ಹಿಂದಿನ ಕಾಲದ ಜನರು ತಿನ್ನುತ್ತಿದ್ದ ಆಹಾರವೆಂದರೆ ನಾವು ಅಸಹ್ಯ ಪಡುತ್ತೇವೆ. ಅವರು ಹಸಿ ಹಸಿ ಮಾಂಸಗಳನ್ನು, ಇರುವೆ ನೊಣ ಮೊದಲಾದವುಗಳನ್ನು, ಸೊಪ್ಪು ಸೊದೆಗಳನ್ನು ತಿನ್ನುತ್ತಿದ್ದರಾಗಿ ಚರಿತ್ರಕಾರರು ತಿಳಿಸುತ್ತಾರಷ್ಟೆ? ಇದನ್ನು ನೆನಸಿದರೇ ನಾವೆಷ್ಟು ಅಸಹ್ಯ ಪಡುತ್ತೇವೆ? ಆದರೆ ಕೆಲಿಫೋರ್ನಿಯಾ ಯುನಿವರ್ಸಿಟಿಯ ಡಾ। ಆನೆಸ್ ಫೇ ಮೋರ್ಗನ್ ಎಂಬವರು ಅಂತಹ ಆಹಾರವನ್ನು ಮನುಷ್ಯನು ಅಂಗೀಕರಿಸಿದರೆ ಬೇಗನೇ ಮುದುಕನಾಗದೆ, ಬಹುಕಾಲ ಬಾಳಬಲ್ಲನು ಎಂದು ಅಭಿಪ್ರಾಯ ಪಡುತ್ತಾರೆ. ಅವರು ಪ್ರಾಕೃತಿಕ ವಸ್ತುಗಳಲ್ಲಿರುವ ವಿಟಮಿನ್‌ಗಳ ವಿಷಯವಾಗಿ ಪ್ರತ್ಯೇಕ ಸಂಶೋಧನೆ ಮಾಡಿರುವರು. ಈಗಿನ ಹೊಸ ಮತ್ತು ನೂತನ ತಯಾರಿಕೆಯ ಆಹಾರವು ಮನುಷ್ಯನನ್ನು ಅಲ್ಪಾಯುಷಿಯಾಗಿ ಮಾಡುತ್ತದೆಯೆಂದು ಆಕೆಯ ಅಭಿಪ್ರಾಯವಿದೆ. ಮನುಷ್ಯನ ಕೆಲವು ಇಂದ್ರಿಯಗಳು ಸರಿಯಾಗಿ ಪೋಷಣೆಯಿಂದ ಬಲು ಕಾಲ ಬೆಳೆಯುತ್ತಾ ಇರಬಹುದು. ಆದರೆ ಈಗಿನ ನಮ್ಮ ಆಹಾರದಿಂದ ಅವು ಬೇಗನೇ ಬೆಳವಣಿಗೆ ನಿಲ್ಲಿಸಿಬಿಡುತ್ತವೆ. ಆದ್ದರಿಂದ ಮನುಷ್ಯನು ಅಲ್ಪಾಯುಷಿಯಾಗುತ್ತಾನೆ. ಮುಖ್ಯವಾಗಿ ಇದಕ್ಕೆ ಆಹಾರ ಕ್ರಮವೇ ಕಾರಣ. ಇಂದಿನ ಕೃತ್ರಿಮ ಆಹಾರಕ್ಕಿಂತ ನೈಸರ್ಗಿಕ ಆಹಾರವೇ ಯೋಗ್ಯವಾದುದು ಎಂದು ಆಕೆ ಒತ್ತಿ ಹೇಳುವರು. ನಮ್ಮಲ್ಲಿ ಹಲವರು ಬೇಗನೇ ಮುದುಕರಾಗಲು ಇಚ್ಛಿಸುವುದಿಲ್ಲವಷ್ಟೆ? ಅಂತಹವರು ಈ ವಿಚಾರ ಸ್ವಲ್ಪ ದೀರ್ಘ ಆಲೋಚನೆ ಮಾಡಿದರಾಯಿತು.

ಜಗತ್ತಿನ ಅತಿ ದೊಡ್ಡ ಬಾಂಬು ಬಿಸಾಡುವ ವಿಮಾನ

B 19 ಎಂಬ, ಡೊಗ್ಲಸ್ ಏರ್ ಕ್ರಾಫ್ಟ್ ಕಂಪೆನಿಯವರು ತಯಾರಿಸಿದ, ಮಹತ್ತಾದ ಬಾಂಬು ಬಿಸಾಡುವ ವಿಮಾನವೊಂದು ಎಷ್ಟು ದೊಡ್ಡದಾಗಿದೆಯೆಂಬುದು ಹಲವರಿಗೆ ಆಶ್ಚರ್ಯವನ್ನು ಹುಟ್ಟಿಸಿದೆ. ೧೭ ಮಹಳಿಗೆಯ ಕಟ್ಟಡಕ್ಕಿಂತ ದೊಡ್ಡದು. ಅದರ ರೆಕ್ಕೆಯೊಂದೇ ಇದೆಯೆಂದು ತಿಳಿದಿದೆ. ಪ್ರತಿಯೊಂದು ರೆಕ್ಕೆಯೊಳಗೆ ಒಂದು ಸಂಪೂರ್ಣ ಪ್ಯಾಸೆಂಜರ್ ಅಡಗಬಹುದಂತೆ.

ಇದರ ಚುಕ್ಕಾಣಿ ೩೪೭ ಚದರ ಫೀಟು, ರೆಕ್ಕೆಗಳ ಅಗಲ ೨೧೨ ಫೀಟು, ಇಡೀ ವಿಮಾನದ ಭಾರ ೬೧॥ ಟನ್ನು, ಪ್ರೊಪೆಲ್ಲರ್ಸಿನ ಡೈಮೆಟರು ೧೦ ಫೀಟು. ಪ್ರತಿಯೊಂದು ಮುಖ್ಯ ಟಯರು ೨೪ ಪ್ಲೈ ಮತ್ತು ೮ ಫೀಟು ಎತ್ತರ. ಇದರಲ್ಲಿ ೧೫೦ ಮೈಲು ಉದ್ದದ ರೇಯನ್ ಕೋರ್ಡು ಮತ್ತು ೩ ಮೈಲು ಉದ್ದದ ಉಕ್ಕಿನ ಸರಿಗೆಯೂ ಇದೆ. ನಾಲ್ಕು ಇದರ ಮುಖ್ಯ ಇಂಜಿನುಗಳು ೮,೦೦೦ ಅಶ್ವಶಕ್ತಿಯುಳ್ಳವುಗಳು. ಇದರ ಮುಖ್ಯ ... ಮತ್ತು ಮೂತಿಯನ್ನು ಮಾಡಲಿಕ್ಕೆ ಎರಡು ಟನ್ ಉಕ್ಕನ್ನು ಉಪಯೋಗಿಸಿದೆ. ಇದರಲ್ಲಿ ೧೦ ಜನರು ಹಾರಾಡಬಹುದು. ಅನೇಕ ಫಿರಂಗಿಗಳನ್ನು ಹಿಡಿಕೊಳ್ಳಬಹುದು. ೨೪ ಸ್ಟೇಶನುಗಳಿಗೆ ಇದರಿಂದ ಟೆಲಿಫೋನು ಮಾಡಲಾಗುತ್ತದೆ. ನಿಲ್ಲದೆಯೇ ಇಡೀ ಜಗತ್ತಿನ ಮೂರನೆಯ ಒಂದಂಶದಷ್ಟು ಸ್ಥಳಗಳನ್ನು ಇದು ಒಮ್ಮೆಗೇ ಸಂಚರಿಸಬಹುದು.

'ವಿದ್ಯುತ್ ದೃಷ್ಟಿ' ಗೋಧಿಯನ್ನು ಪರೀಕ್ಷಿಸುತ್ತದೆ.

'ವಿದ್ಯುತ್ ದೃಷ್ಟಿ'ಯ ಇತ್ತೀಚೆಯ ಒಂದು ಸಂಶೋಧನೆಯೆಂದರೆ ಗೋಧಿಯಲ್ಲಿರುವ ಪ್ರೊಟೀನನ್ನು ಕಂಡುಹಿಡಿಯುವುದಾಗಿದೆ. ಧಾನ್ಯವನ್ನು ಬೀಸಿದ ಮೇಲೆ ಅದರ ಮೇಲೆ ಬೆಳಕು ಬೀರಿ ಬೆಳಕಿನ ಸಹಾಯದಿಂದ ಇದರಲ್ಲಿರುವ ಪ್ರೊಟೀನನ್ನು ಪರೀಕ್ಷಿಸಲಾಗುತ್ತದೆ. ಇದನ್ನು ಅಳೆವ ಕೆಲಸವು ವಿದ್ಯುತ್ ದೃಷ್ಟಿಗೆ ತಾಗಿಸಿರುವ ಫೋಟೋ ಸೆಲ್ಲಿನಿಂದ ಆಗತಕ್ಕದ್ದಿದೆ.

ವಿಚಿತ್ರ ಪ್ರಪಂಚ

ಜಗತ್ತಿನ ಅತಿ ವಿಚಿತ್ರ ಶಾಲೆ

ಜಗತ್ತಿನ ಒಂದು ಮೂಲೆಯಲ್ಲಿ ಅಸ್ಟ್ರೇಲಿಯಾ ದೇಶದ ಒಂದು ಭಾಗದಲ್ಲಿ ಲೋಕದಲ್ಲಿಯೇ ಬಹಳ ವಿಚಿತ್ರವೆನಿಸಿದ ಒಂದು ಶಾಲೆಯು ಸ್ಥಾಪಿತವಾಗಿದೆ. ಶಾಲೆಯ ಹುಡುಗರು ಆ ದೇಶದ ಮೂಲನಿವಾಸಿಕರಾದ ಪಿಟ್ ಜಾಂತಾರಾ ಎಂಬ ಜಾತಿಯವರು. ಅವರು ವಸ್ತ್ರ ಉಡುವುದಿಲ್ಲ. ಅವರು ಬರುವುದು ಹೋಗುವುದೆಲ್ಲಾ ಅವರಿಗೆ ಇಷ್ಟಬಂದ ಹಾಗೆ. ಆ ಶಾಲೆ ಸ್ಥಾಪಿತವಾಗಿ ಒಂದು ವರ್ಷವೂ ಆಗಲಿಲ್ಲ. ಆದರೆ ಇಷ್ಟರಲ್ಲಿಯೇ ಅದರಲ್ಲಿ ನೂರಕ್ಕೆ ಮಿಕ್ಕಿದ ವಿದ್ಯಾರ್ಥಿಗಳು ಇದ್ದಾರೆ. ಸರಾಸರಿ ಹಾಜರಿ 40. ಎಲ್ಲಾ ಸೂಚನೆಗಳನ್ನು ಸ್ಥಳೀಕ ಭಾಷೆಯಲ್ಲಿ ಕೊಡುವುದು. ಬರೆಯುವುದು, ಓದುವುದು, ಲೆಕ್ಕ ಇವು ಮುಖ್ಯ ಪಾಠಗಳು. ಜಾತಿಯ ಮಾತುಕತೆಯಿಂದ ಶಾಲೆ ಪ್ರಾರಂಭವಾಗುತ್ತದೆ. ಆ ಮೇಲೆ ಹುಡುಗರನ್ನು ಚನ್ನಾಗಿ ಸ್ನಾನಮಾಡಿಸುವುದು. ಆ ಹುಡುಗರ ತಂದೆ ತಾಯಿಗಳು ಪ್ರಾಕೃತಿಕ ಆಹಾರದ ಜೀವಿಗಳು. ಪೊದೆಗಳಲ್ಲಿ ಕಾಡುಗಳಲ್ಲಿ ಸಿಕ್ಕಿದ್ದನ್ನು ತಿನ್ನುವವರು. ನೆಲ ಹುಲ್ಲುಗಳ ಮೇಲೆ ರಾತ್ರಿಕಾಲ ಮಲಗುವರು. ಅವರಲ್ಲಿ ಎಲ್ಲಾ ಹುಡುಗರೂ ಒಳ್ಳೆಯ ಆರೋಗ್ಯಶಾಲಿಗಳಾಗಿದ್ದಾರೆ. ಒಳ್ಳೆಯ ರೂಪಸೌಂದರ್ಯವಿದೆ. ಬಹಳ ಚುರುಕೂ ಇದ್ದಾರೆ. ಪ್ರೀತಿಯಿಂದ ವರ್ತಿಸುತ್ತಾರೆ ಎಂಬಿತ್ಯಾದಿ ಅವರ ಕುರಿತು ಅಲ್ಲಿನ ಉಪಾಧ್ಯಾಯರೊಬ್ಬರೇ ಬರೆದಿರುವರು.

ಪಕ್ಕೆಲುಬುಗಳನ್ನು ಬದಲಿಸುವುದು

ಮೋಸ್ಕೋ ಆಸ್ಪತ್ರೆಯಲ್ಲಿರುವ ಒಬ್ಬ ರೋಗಿಗೆ ಬೇರೊಬ್ಬನ ಪಕ್ಕೆಲುಬು ತಾಗಿಸಿ ಗುಣ ಹೊಂದಿದ ಸುದ್ದಿ ಒಂದಿದೆ. ಆ ಪಕ್ಕೆಲುಬು ಇನ್ನೊಬ್ಬ ರೋಗಿಯಿಂದ ತೆಗೆದದ್ದು. ಆ ಇಬ್ಬರಿಗೂ ಶಸ್ತ್ರ ಚಿಕಿತ್ಸೆ ಮಾಡಿ, ಅವೆರಡು 'ಕೇಸು'ಗಳೂ ತೃಪ್ತಿಕರವಾಗಿವೆಯೆಂದು ರೋಗಿಗಳೇ ಒಪ್ಪಿಕೊಂಡರು.

ಮೊದಲನೆಯ ರೋಗಿಯು ಮೂರು ವರ್ಷಗಳ ಹಿಂದೆ ಪಕ್ಕೆಲುಬಿನ ಮೂರು ತೀಲುಗಳನ್ನು ಕಳಕೊಂಡಿದ್ದ. ಅದರಿಂದ ಅವನಿಗೆ ತನ್ನ ಹೃದಯಕ್ಕೆ ಸಾಕಷ್ಟು ರಕ್ಷಣೆಯಿಲ್ಲವೆಂಬ ಹೆದರಿಕೆ ಇದ್ದೇ ಇತ್ತು. ಎರಡನೆಯ ರೋಗಿಯು ಎದೆ ವಿಪರೀತವಾಗಿ ಉಬ್ಬಿದವನಾಗಿದ್ದು, ತನ್ನ ಪಕ್ಕೆಲುಬುಗಳಲ್ಲಿ ಕೆಲವನ್ನು ತೆಗೆದರೆ ತಾನು ಸರಿಯಾಗಿ ಕಾಣುವೆನೆಂದು ಅಭಿಪ್ರಾಯದಲ್ಲಿದ್ದ. ಹೀಗೆ ಇಬ್ಬರಿಗೆ ಉಂಟಾಗಿದ್ದ ಸಮಸ್ಯೆ ಅವರಿಬ್ಬರ ಉಪಕಾರಕ್ಕೇ ಒದಗಿತು. ಇಬ್ಬರಿಗೂ ತೃಪ್ತಿಯಾಯಿತು.

ವಿಟಮಿನ್ ಬಿ ಇಂದ ಬಿಳಿ ಕೂದಲು ಕಪ್ಪಾಗುವುದು, ಬಾಣೆ ತಲೆ ನಿಲ್ಲುವುದು

ಕೂದಲು ಬಿಳಿಯಾಗುವುದನ್ನು ಕಪ್ಪಾಗಿ ಮಾಡುವ ವಿಷಯದಲ್ಲಿ ಹಲವರಿಗೆ ಸಮಸ್ಯೆಯೇ ಇದೆ. ಯಶಸ್ವಿಯಾಗಿ ಈ ಪ್ರಯೋಗ ಮಾಡಿದವರು ಯಾರೂ ಇಲ್ಲ. ಇತ್ತೀಚೆಗೆ ನ್ಯೂಯೋರ್ಕಿನ ಇಂಟರ್ನೇಶನಲ್ ವಿಟಮಿನ್ ಕಾರ್ಪರೇಶನಿನ ಡಾಕ್ಟರುಗಳು ಜೆ ಎಂ ಮಾರ್ಟಿನ್ ಮತ್ತು ಸಿ ಟಿ ಇಟಿನ್ನೋ ವಿಸ್ಕಿಯವರು ವಿಟಮಿನ್ ಬಿ ಇಂದ ಅದು ಗುಣವಾಗುತ್ತದೆಂದು ಪ್ರಕಟಿಸುತ್ತಾರೆ. ಎರಡು ವಾರಗಳ ವರೆಗೆ 50 ಮಂದಿ ಅಪ್ರಾಯಸ್ಥರಾಗಿದ್ದೂ ಕೂದಲು ಬಿಳಿಯಾಗಿರುವವರು 'ಪರಮಿನೋ ಬೆಂಜೋಯಿಕ್ ಎಸಿಡ್' ಎಂಬ ಹೊಸ ವಿಟಮಿನ್ ಬಿಯನ್ನು ಉಪಯೋಗಿಸಿ ಸಾಕಷ್ಟು ಗುಣಹೊಂದಿರುವರೆಂದು ಡಾ। ಅನ್ಸ್ಬಾಚರ್ ಕಂಡುಹಿಡಿದರು.

ಬಾಣೆ ತಲೆಯಾಗುವುದನ್ನು ಪೆಂಟೋತೆನಿಕ್ ಎಸಿಡ್ ಎಂಬ ಇನ್ನೊಂದು ತರದ ವಿಟಮಿನ್ ಬಿ ಇಂದ ಗುಣಮಾಡಲಾಗುವುದಂತೆ. ರೋಕ್ ಫೆಲ್ಲರ್ ಇನ್‌ಸ್ಟಿಟ್ಯೂಟಿನಲ್ಲಿ ಡಾ। ಡಿ ಡಬ್ಲ್ಯೂ ವೂಲ್ಲಿ ಎಂಬವರು ಸಂಶೋಧನೆ ನಡೆಸಿದರು. ಆಹಾರದಲ್ಲಿ ಇದನ್ನು ಸೇರಿಸಿ ಉಪಯೋಗಿಸುವ ಕ್ರಮವಾಗಿದೆ.

ಕನಸಿನಿಂದ ಕೊಲೆಯಪತ್ತೆ

ಇದು ಲಾಹೋರಿನಿಂದ ಕೃಷ್ಣ ನಗರವೆಂಬಲ್ಲಿಂದ ಬಂದ ಸುದ್ದಿ. 8 ವರ್ಷದ ಮಗನೊಬ್ಬನು ಸತ್ತು ಹೋಗಿದ್ದ. ಹೇಗೆ ಸತ್ತುಹೋದನೆಂದು ಯಾರಿಗೂ ತಿಳಿದಿರಲಿಲ್ಲ. ಆ ವಿಷಯ ಆತನ ದುಃಖಿತ ತಾಯಿ ದಿನವೂ ರಾತ್ರಿ ಕನಸು ಕಾಣುತ್ತಿದ್ದಳು. ಅಂತ ಕನಸಿನ ವಿವರವನ್ನು ಆಕೆ ಪ್ರತಿದಿನವೂ ಬಲವಂತ ಸಿಂಗನಿಗೆ, ತನ್ನ ಗಂಡನಿಗೆ ಹೇಳುವಳು. ಒಂದು ನದೀತೀರದಲ್ಲಿ ಮಗು ತಾಯಿಯೊಡನೆ ಮಾತನಾಡುವುದೇ ಕನಸಿನಲ್ಲಿ ಕಾಣುತ್ತಿತ್ತು. ಅಲ್ಲಿಂದ ಕನಸು ಮುಗಿಯುತ್ತಿತ್ತು. ಒಂದು ದಿನ ಆಕೆಯ ಗಂಡ ಆ ಸ್ಥಳಕ್ಕೆ ಹೋಗಿ ಹುಡುಕಾಡಿದ. ಅಲ್ಲಿ ಮಗುವಿನ ತಲೆಬುರುಡೆ, ಸೈಜಾಮುಗಳು ಸಿಕ್ಕಿದವು. ಕನಸಿನಿಂದ ಕೊಲೆ ಪತ್ತೆಯಾದ ವಿಷಯವು ಎಲ್ಲರಿಗೂ ಅಚ್ಚರಿ ಹುಟ್ಟಿಸಿದೆ.

ನಮ್ಮ 3 ಬ್ರಾಂಚುಗಳನ್ನು ಒಂದಾಗಿ ಸೇರಿಸಿ
ಬೊಂಬಾಯಿ ಜಿ. ಎ. ಸರ್ಕಸ್
ಕಂಪೆನಿಯವರು
ಮಂಗಳೂರು ಮೈದಾನಿನಲ್ಲಿ ಹಾಕಿರುವ
ತಮ್ಮ ಭವ್ಯವಾದ ಡೇರೆಯಲ್ಲಿ
ತಾ. 6-1-1942ನೇ ಮಂಗಳವಾರ ರಾತ್ರಿ
9-30 ಘಂಟೆಗೆ ಪ್ರಾರಂಭ
ಪಾಶ್ಚಾತ್ಯ ದೇಶಗಳೆಲ್ಲಾ ಸಂಚರಿಸಿ ಲಕ್ಷಾಂತರ ಜನಗಳಿಂದ ಎಲ್ಲಾ ವಿಧದಲ್ಲಿ ಅತ್ಯುತ್ತಮ ಪ್ರದರ್ಶನ ಎಂದು ಪ್ರಖ್ಯಾತಿಗಳಿಸಿರುವ ಸರ್ಕಸ್ ಕಂಪೆನಿಯು ಇದೊಂದೇ!
101 ಪ್ರಖ್ಯಾತರಾದ ನಾನಾ ಜನಾಂಗದ ಆಕ್ಟರರು 101



85 ಜಾನುವಾರುಗಳ ಗುಂಪು—22 ಕುದುರೆಗಳು, 7 ಆನೆಗಳು, 20 ಸಿಂಹ ಮತ್ತು ಹುಲಿಗಳು ಇತರ ಪ್ರಾಣಿಗಳ ಬಹಳ ಚಮತ್ಕಾರವಾದ ರೀತಿಯ ಪ್ರದರ್ಶನವನ್ನು ಮಾಡುವುವು.

ಡೋಂಗರೆ
ಬಾಲಾಮೃತವು
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

BHUVANENDRA PRODUCTS LTD.,

Head Office and Factory:
KATAPADI S. Kanara.

Depots:
1. Maharatha Galli, Hubli.
2. 57 Big street, Triplicane, Madras.

"BHUVANENDRA"

Danthadvana Choorna

Economical in use. Cheapest in value
Genuine in quality and choiced by all
Antiseptic, astringent, aromatic. Useful in
Pyorrhoea, Alveolaris. Removes tartar.
Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ
ಹಲ್ಲುಗಳೇ ಮುಖ್ಯ ಕಾರಣ
"ಭುವನೇಂದ್ರ"

ದಂತಧಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ವ ಕೀವು
ಬರುವುದು, ಹಲ್ಲು ಅಲ್ಲಾಡುವುದು ಮುಂತಾದ
ದೋಷಗಳನ್ನು ನಿವಾರಿಸುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ.

ಸ್ಥಳೀಯ ಸ್ಟೋಕಿಸ್ಟರು:—
ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್ ಲಿಮಿಟೆಡ್, ರಥಬೀದಿ.
ರಾಘವೇಂದ್ರ ರಂಗ ಶೈ, ಮರ್ಚಂಟ್, ರಥಬೀದಿ.
ಡಾ। ಎಮ್. ಎಸ್. ಪ್ರಭು, M. B B. S. ಸಿ ಪಿ ಸಿ. ಬಿಲ್ಡಿಂಗ್.

THE PIE-MONEY BANK, LTD.
Maidan Road, MANGALORE.
Undertakes all kinds of Banking Business. Current accoun at 2½% per annum. Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%
Auction chit Funds ranging from Rs. 100/ to Rs. 5000 un regularly on systematic lines Unique Banking facilitie to Businessmen and interested Public

Apply for particulars—
K R. GURU, *Managing Director.*

The Bank of Mangalore Limited.
Branches—MOODABIDRI & PADUBIDRI.
HEAD OFFICE MANGALORE. ESTD. 1931.
All kinds of Banking Business transacted.
Fixed Deposits received at rates ranging from 3% to 5%.
INTEREST PAYABLE QUARTERLY.
Interest on Savings Bank Deposits allowed at at 2½%.

THE
Combined Booking Agency, Mangalore.

Our Present Timing Lists

ARE

Available for sale

Price 0-2-0 per Copy

For Particulars Apply to:—

THE JOINT MANAGERS,
The Combined Booking Agency, Mangalore.

ಬಿಡಿ ಸಂಚಿಕೆ ಬೆಲೆ ಒಂದಾಣೆ | ವಾರ್ಷಿಕ ಚಂದಾ ರೂ. 2-0-0 | ಅಂಚೆ ವೆಚ್ಚ ಸೇರಿ ರೂ. 2-13-0 | *Regd. No. M. 3460*

ಸ್ವದೇಶಾಭಿಮಾನಿ

[ಸಂಪುಟ 36] ತಾರೀಕು 16-1-1942 [ಸಂಚಿಕೆ 3]

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೋವು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಗುಳ್ಳೆ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ.

ಬೊಂಬಾಯಿ, ಮದರಾಸು, ಕಲ್ಕತ್ತ.

(ಶ್ರೀ) ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

ಹೊಸ ವರ್ಷದ ಅಭಿವಂದನೆ

ನಮ್ಮ ಎಲ್ಲಾ ಪೋಲಿಸಿದಾರರಿಗೂ, ಏಜಂಟರಿಗೂ ಕಂಪೆನಿಯ ವೈದ್ಯರಿಗೂ ಹಿತಚಿಂತಕರಿಗೂ

★ ನ★ವ★ವ★ರ್ಷ★ವು ★

ಸಂತೋಷದಾಯಕವಾಗಿಯೂ ಅಭಿವೃದ್ಧಿಕರವಾಗಿಯೂ ಪರಿಣಮಿಸಲೆಂದು

ನಾವು

ಹೃತ್ಪೂರ್ವಕವಾಗಿ ಹಾರೈಸುತ್ತೇವೆ

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ದಕ್ಷಿಣ ಹಿಂದೂಸ್ಥಾನದ ಪ್ರಾಮುಖ್ಯ ಏಜಂಟರು:

ಬೊಂಬಾಯಿ ಮ್ಯೂಚ್ಯುವಲ್ ಎಶ್ಯೂರೆನ್ಸ ಕಂಪೆನಿ ಲಿಮಿಟೆಡ್.

ಉಡುಪಿ, ಮದ್ರಾಸು, ಬೆಂಗಳೂರು, ಟ್ರಿವೆಂಡ್ರಂ, ಮಂಗಳೂರು, ಕಲ್ಲಿಕೋಟೆ, ಬೊಂಬಾಯಿ.

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ, ಮಂಗಳೂರು

ಸ್ವದೇಶಾಭಿಮಾನಿಗೆ

ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

Estd. 1906

ಸ್ವದೇಶಾಭಿಮಾನಿ

SWADESHABHIMANI

"ವಸಂತಸೇನಾ" (ಕನ್ನಡ) ಚಿತ್ರದ ಒಂದು ದೃಶ್ಯ

KANNADA ILLUSTRATED WEEKLY

ಪುಸ್ತಕಾವಲೋಕನ.

ಆರತಿ*

'ನಮ್ಮ ಅಕ್ಕ ತಂಗಿಯರ ಕಥಾ ಸಂಕಲನವ ನ್ನು ಸಂಪಾದಿಸಿ ಪ್ರಕಟಿಸುವುದರಲ್ಲಿ ಧಾರವಾಡದ ಮನೋಹರ ಗ್ರಂಥಭಂಡಾರದವರು ಬಹಳ ಮುಂದರಿಯುತ್ತಿದ್ದಾರೆ. ಇದು ಮೊದಲು 'ರಂಗ ವಲ್ಲಿ' 'ಕಂಬನಿ'ಗಳೆಂಬ ಅಂತಹ ಎರಡು ಉತ್ತಮ ಕಥಾಪುಸ್ತಕಗಳನ್ನು ಕನ್ನಡಿಗರಿಗೊದ ಗಿಸಿ ಕೊಟ್ಟು ಎಲ್ಲರ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಈಗ ಒಂಬತ್ತು ಮಂದಿ ಕನ್ನಡ ಮಹಿಳೆಯರ ಸಣ್ಣ ಕತೆಗಳನ್ನು ಒಟ್ಟುಗೂಡಿಸಿ ವೃಷ ಸಂವತ್ಸ ರದ ದೀಪಾವಳಿಯ ಕಾಲದಲ್ಲಿ ಈ 'ಆರತಿ' ಯೆತ್ತಿರುವರು ನಮ್ಮ ನಾಡಿನ ಸಾಹಿತ್ಯ ಸಹೃ ದಯರೆಯರುಂದ ಬರೆಹಗಾರ್ತಿಯರ ಕಥಾಶಕ್ತಿ ಯನ್ನು ಈ ಆರತಿಯ ಬೆಳಕು ಸಾಕಷ್ಟು ತೋ ರಿಸಿಕೊಡುತ್ತದೆ

ಮೊದಲ ಕತೆ 'ನನ್ನ ಪರೀಕ್ಷೆ'ಯೆಂಬುದು, ಬೆಂಗಳೂರಿನ ಶ್ರೀಮತಿ ಸುಮಿತ್ರಮ್ಮನವರು ಬರೆ ದುದು, ಒಂದು ರಸಿಕ ದಾಂಪತ್ಯ ಜೀವನವನ್ನು ಬಹಳ ಚಲುವಾಗಿ ಇಲ್ಲಿ ಚಿತ್ರಿಸಿದ್ದಾರೆ 'ಕನಸೋ ನೆನಸೋ' ಈ ಕತೆ ಬರೆದವರು ಮೈಸೂರಿನ ಶ್ರೀ 'ವಾಣಿ' ಇವರು, ದಿವಂಗತೆಯರಾದ ಹೆಸ ರಾಂತ ಕತೆಗಾರ್ತಿ ಗೌರಮ್ಮನವರನ್ನು ಕನಸಿನಲ್ಲಿ ಕಂಡು ಸಂಭಾಷಿಸಿದಂತೆ ಕತೆ ಬರೆಯಲಾಗಿದೆ ಕತೆ ಒಂದು ಕರುಣೆಯ ಕತೆಯಾಗಿದೆ 'ಶಾಲ್ಯ ಲೆಗೆ' ಎಂಬ ಕತೆ ಬರೆದವರು ಹುಬ್ಬಳ್ಳಿಯ ಸೌ। ಕುಸುಮ ದೇಶಪಾಂಡೆಯವರು, ಮೆಚ್ಚಿದ ಯುವಕ ಯುವತಿಯರು ವಿಷಮ ವಿವಾಹಕ್ಕೆ ಹೇಸಿ, ಇಬ್ಬರೂ ಇದರಲ್ಲಿ ನದಿಸಂಗಮವಾಗು ತ್ತಾರೆ ಪ್ರೇಮ ಮತ್ತು ಕರುಣೆಗಳ ಮಿಶ್ರಣ ಗೊಂಡ ಕತೆಯಿದು 'ಅಂದು—ಇಂದು' ಎಂಬೀ ಕತೆ ಬರೆದವರು ಧಾರವಾಡದ ಶ್ರೀಮತಿ ಗೀತಾ ದೇವಿ ಕುಲಕರ್ಣಿಯವರು, ಮಲತಾಯಿಯ ಕೈಯ್ಯಲ್ಲಿ ತಾಯನ್ನು ಕಳಕೊಂಡ ನಳಿನಿ ಬಹಳ ಬೇಸರಪಟ್ಟರೂ ಕೆಲವೇ ದಿನಗಳ ಮೇಲೆ ಸತೀಶನ ಜೊತೆಗಾರ್ತಿಯಾಗಿ ನಲಿವ ಆನಂದವು ಆವಳ ಹಿಂದಿನ ಬೇಸರವನ್ನು ಮಾಯಗೊಳಿಸಿತ 'ಚೆನ್ನಿ' ಎಂಬೀ ಕತೆ ಬರೆದವರು ಚಿಕ್ಕೋಡಿನ ಶ್ರೀಮತಿ ಅವ ರತ್ನಾಬಾಯಿಯವರು, ಹಳ್ಳಿಯ ಹುಡುಗಿ ಚೆನ್ನಿ ಎಳೆಯ ಒಂದ ಈರನನ್ನು ಬಿಟ್ಟು ಮಾದನನ್ನು ಮೆಚ್ಚಿ ಮದುವೆಯಾದಳು ಮಾದ ಚೆನ್ನಿಯ ಬಸುರಲ್ಲಿ ಮಕ್ಕಳಿಲ್ಲವೆಂದು ಅಳೆ ಯ ನೀಲೆಯೋ ಒಟ್ಟುಗೂಂಡನು ಚೆನ್ನಿ ಮಾದನ ದುಗುಡವನ್ನು ಪರಿಹರಿಸುವ ಸಲುವಾಗಿ ಕಷ್ಟಪಾಡಿದಳು ಈರನನ್ನು ಒಂದು ರಾತ್ರಿ ಯಲ್ಲಿ ಹೋಗಿ ಕಂಡಳು, ಚೆನ್ನಿ ಬಸುರಾಗಿ ಕೃಶಳಾಗಿ ಚಿಂತೆಯಿಂದ ಹಡೆದು ತೀರಿಹೋಗು ವಳು ಕತೆಗಾರ್ತಿಯರು ಪಾತ್ರಗಳ ಭಾವನೆಗ ಳನ್ನು ಬಹಳ ಸೂಕ್ಷ್ಮ ಸುಂದರವಾಗಿ ಇದರಲ್ಲಿ ತೋರಿಸಿದ್ದಾರೆ 'ಹುಚ್ಚಿ ಯಾರು?' ಎಂಬೀ ಕತೆ ಬೆಂಗಳೂರಿನ ಶ್ರೀಮತಿ ವಸಂತಾದೇವಿಯ ರದು, ಗಂಡ ಮಾಡಿದ ಅನ್ಯಾಯದಿಂದ ಸ್ತ್ರೀಯು ಹುಚ್ಚಿಯಾದಳು ಸ್ತ್ರೀ ಜಾತಿಯ ಕಡೆಗೆ ಪುರುಷ ಸಮಾಜದ ಕ್ರೂರ ವರ್ತನೆಯನ್ನು ಇಲ್ಲಿ ತೋರಿ ಸಿದ್ದಾರೆ ಮಾತೃಹೃದಯ ಉಡುಪಿಯ ಸರ ಸ್ವತಿಬಾಯಿ ರಾಜವಾಡೆಯವರು ಬರೆದ ಕತೆ ಕತೆ ಮೊದಲಿಂದ ಕಡೆ ವರೆಗೆ ಎಳೆಯ ಕುತೂ ಹಲವನ್ನು ಹುಟ್ಟಿಸುತ್ತದೆ, ಹೆತ್ತ ಮಗುವಿನ ಮೇಲೆ ತಾಯ ಕರುಳಿಗಿರುವ ಪ್ರೀತಿಯನ್ನು ಇದ ರಲ್ಲಿ ಬಹಳ ಮರ್ಮಿಕವಾಗಿ ಚಿತ್ರಿಸಿದ್ದಾರೆ, ಮಕ್ಕಳಿಲ್ಲದ ಮಹಿಳೆಯರು ಈ ಕತೆಯನ್ನು ಓದಿದಲ್ಲಿ ಸಹಜವಾಗಿ ಕಣ್ಣೀರು ಸುರಿಸಬೇಕು 'ಒಂದು ಎರಡು ಮೂರು' ಈ ಕತೆ ಬರೆದವರು ಧಾರವಾಡದ ಶ್ರೀಮತಿ ಶಕುಂತಲಾದೇವಿ ಮಾಳವಾಡ ಇವರು, ಬಹುಪತ್ನೀತ್ವ ಸಂಪ್ರದಾಯದ ಮೇಲೆ ಕಥಾರೂಪವಾಗಿ ಬರೆಹಗಾರ್ತಿಯರು ತೀವ್ರ ಟೀಕೆ ಖಂಡನೆ ಮಾಡಿದ್ದಾರೆ, ಕೊನೆಯ ಕತೆ 'ವೇಣೀ ಸಂಹಾರ' ಎಂಬುದು; ಗೋಕರ್ಣದ ಕುಮಾರಿ ದೇವಾಂಗನಾ ಶಾಸ್ತ್ರಿ ಇದನ್ನು ಬರೆದ ವರು ಬಾಲ್ಯವಿವಾಹದಿಂದ ವಿಧವೆಯಾದ ಹು ಡುಗಿ ಪ್ರಾಯಕ್ಕೆ ಬಂದಾಗ ಪ್ರಕೃತಿಯ ನೈಸರ್ಗಿ ಕ ಗುಣದಂತೆ ಪುರುಷ ಸಮಾಗಮವನ್ನು ಬಯ ಸಿದಳು; ಒಂದು ವೈದಿಕ ಕುಲದ ಕನ್ಯೆ ಅಂತಹ ನೈಸರ್ಗಿಕ ಪ್ರವಾಹದಲ್ಲಿ ಕೊಚ್ಚಿಹೋದ ಕತೆ ಯಿದು, ಬಹಳ ಹೃದಯಸ್ಪರ್ಶಿಯಾಗಿದೆ

ಇದರಲ್ಲಿರುವ ಹೆಚ್ಚಿನ ಎಲ್ಲಾ ಕತೆಗಳೂ ಒಂದು ತರಗತಿಗೆ ಮುಟ್ಟಿದ ಕತೆಗಳೇ ಆಗಿವೆ ಕೇವಲ ಸಾಮಾನ್ಯ ಎನ್ನುವಂತಿಲ್ಲ ಇಷ್ಟು ಚೆನ್ನಾದ, ಇಷ್ಟು ಸ್ವಾರಸ್ಯವಾದ ಕತೆಗಳನ್ನು ನಮ್ಮ ನಾಡಿನ ಅಕ್ಕತಂಗಿಯರು ಬರೆಯುತ್ತಿರುವ ರೆಂಬುದು ನಾವು ಅಭಿಮಾನಪಟ್ಟುಕೊಳ್ಳತಕ್ಕ ವಿಷಯ, ಕನ್ನಡಿಗರೆಲ್ಲರೂ ಈ ಪುಸ್ತಕವನ್ನು ಓದಬೇಕು, ಮನೋಹರ ಗ್ರಂಥಭಂಡಾರದ ಈ ತರದ ವಿಶಿಷ್ಟ ಕಾರ್ಯಕ್ಕೆ ಪ್ರೋತ್ಸಾಹವೀಯ ಬೇಕು ಎಂಬುದು ನಮ್ಮ ಬಿನ್ನಹವಾಗಿದೆ

—ಕಯ್ಯಾರ

*ಮಹಿಳೆಯರ ಕಥಾಸಂಕಲನ ಸಂಪಾದಕ ರು—ಮೇವುಂಡಿ ಮಲ್ಲಾರಿ ಮತ್ತು ದತ್ತಾತ್ರೇಯ ಕುಲಕರ್ಣಿ—ಧಾರವಾಡದ ಮನೋಹರ ಗ್ರಂಥ ಭಂಡಾರದ ೧೮ನೆಯ ಪ್ರಕಟನೆ, ಕ್ರೌನ್ ೧/೮ ಆಕಾರದ ೬೪+೬ ಪುಟಗಳು, ಬೆಲೆ ಹನ್ನೆರಡಾಣೆ.

ಸಾದರ ಸ್ವೀಕಾರ

ರವೀಂದ್ರಾಂಕ (ಜಯಕರ್ನಾಟಕ)

೬೦ ಪುಟಗಳಿಗೆ ಮಿಕ್ಕಿದೆ ಬೆಲೆ ಹತ್ತಾಣೆ ಹಲವು ಚಿತ್ರಗಳು ಇವೆ

ಯುದ್ಧದಿಂದಾಗಿ ಪತ್ರಿಕಾ ಪ್ರಕಟನೆಗೇ ಅತ್ಯಂತ ತೊಂದರೆ ಬಂದಿರುವೀ ಕಾಲದಲ್ಲಿ, ಜಯಕರ್ನಾಟಕವು 'ರವೀಂದ್ರಾಂಕ'ದಂತಹ ಮಹತ್ತ್ವದ ವಿಶೇಷ ಸಂಚಿಕೆಯ ಕಾರ್ಯವನ್ನು ಕೈಕೊಂಡು ಯಶಸ್ವಿಯಾಗಿ ನೆರವೇರಿಸಿದ್ದು ಜಯ ಕರ್ನಾಟಕದ ಕೀರ್ತಿಯನ್ನು ಹತ್ತುಪಾಲು ಹೆಚ್ಚಿ ಸಿದೆಯೆನ್ನುವುದರಲ್ಲಿ ಸಂಶಯವಿಲ್ಲ ಕಲ್ಕ ತ್ತದ ಶ್ರೀ ನಾರಾಯಣ ಸ್ವಾಮಿ ಅಯ್ಯರರಂತಹವ ರು ಸಹ ಸಂಪಾದಕರಾಗಿ ದೊರೆತು ಈ ಸಂಚಿಕೆ ಯ ಅಂದವು ಹೆಚ್ಚಿದೆ ಬಂಗಾಳದ ಲೇಖಕರ ನೇಕರು ಇದಕ್ಕೆ ಲೇಖನ ಕೊಟ್ಟಿರುವರು

ಸಾದರ-ಸ್ವೀಕಾರ

ವಿದ್ಯಾದಾಯಿನಿ ಸಭಾ

ಬೊಂಬಯಿ ವಿದ್ಯಾದಾಯಿನಿ ಸಭೆಯ 1940 11ನೆಯ ವರ್ಷಕ್ಕೆ ಅಂತ್ಯವಾಗುವ 21ನೆಯ ವರ್ಷದ ವಾರ್ಷಿಕ ವರದಿಯು ನಮ್ಮ ಹಸ್ತಗತ ವಾಗಿದೆ ದಕ್ಷಿಣ ಕನ್ನಡದಲ್ಲೂ ಹಿಂದೂದೇಶದ ಇತರ ಪ್ರಾಂತಗಳಲ್ಲೂ ವಿದ್ಯಾ ಹಾಗೂ ಔದ್ಯೋ ಗಿಕ ಶಿಕ್ಷಣವಲ್ಲಿ ಅಭಿರುಚಿಯಿದ್ದ ದಾರಿದ್ರ್ಯ ದೆಸೆ ಯಿಂದ ಶಿಕ್ಷಣಹೊಂದಲು ಅಸಮರ್ಥರಾದ ಬಿಲ್ಲವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಕೊ ಡುವ, ಸಹಾಯ್ಯಮಾಡುವ ಮೊದಲಾದ ಉದ್ದೇ ಶಗಳಿಂದ ಸ್ಥಾಪಿತವಾದೀ ಸಂಸ್ಥೆಯು ಮಾಡು ತ್ತಿರುವ ಕಾರ್ಯಗಳಿಗೆ ಹೆಚ್ಚಿನ ಜನತಾ ಸಹಕಾ ರವು ದೊರಕಲಿ ಎಂಬುದು ನಮ್ಮ ಹಾರೈಕೆಯಾ ಗಿದೆ

ರೈಲು ಬಂಡಿಗಳ ಸಮಯ

ಇದೇ ಜುಲೈ ತಾ 1ರಿಂದ ವ್ಯತ್ಯಾಸವಾದ ರೈಲು ಬಂಡಿಗಳ ಸಮಯಗಳು ಈ ಕೆಳಗಿ ನಂತಿವೆ—

ಗಾಡಿಗಳು	ಹೊರಡುವ ಗಂಟೆ	ತಲ್ಪುವ ಗಂಟೆ
ಗೂಡ್ಸು ಬಂಡಿ	8 45 ರಾತ್ರಿ	9 25 ರಾತ್ರಿ
ನೀಲೇಶ್ವರದವರೆಗೆ	7 32 ಬೆಳಿಗ್ಗೆ	1 0 ಅಪರಾಹ್ನ
ಮಲಬಾರು ಎಕ್ಸ್ಪ್ರೆಸ್ (ಮೈಲ್)	9 5 ಬೆಳಿಗ್ಗೆ	5.15 ಸಾಯಂ
ಜಾಲ್ಸೂರ್ ಪೇಟೆ ಪೆಸೆಂಜರ್	12 0 ಮಧ್ಯಾಹ್ನ	2 55 ಸಾಯಂ
ಕಾಸರಗೋಡು ವರೆಗೆ	3.25 ಸಾಯಂ.	6·50 ಸಾಯಂ.
ಕಣ್ಣಾನ್ನೂರು ವರೆಗೆ	5·53 ಸಾಯಂ.	9·40 ಪೂರ್ವಾಹ್ನ

ಸಂಕಾರದ ಹೊಸ ಪಾಠಪಟ್ಟಿಗನುಸಾರವಾಗಿ ಬರೆದ

ನವೀನ ಭೂವಿವರಣೆ

ವಾಸುದೇವರಾವ್, ಎಂ. ಎ. ಎಲ್. ಟಿ (Dip Geogrhpy)

(ಭೂಗೋಳ ಶಾಸ್ತ್ರದಲ್ಲಿ ಡಿಪ್ಲೊಮಾ ಪಡೆದವರು)

ಈ ಪುಸ್ತಕಗಳನ್ನು ಪಡಕೊಂಡಲ್ಲಿ ವಿದ್ಯಾರ್ಥಿಗಳಿಗೆ ಎಟ್ಲಾಸ್ ಕೊಂಡುಕೊಳ್ಳುವ ಅವಶ್ಯವಿಲ್ಲ.

ಪ್ರತಿ ಪುಸ್ತಕದಲ್ಲಿ ಬಣ್ಣ ಬಣ್ಣದ ಭೂಪಟಗಳಿವೆ.

ಅನೇಕಾನೇಕ ಚಿತ್ರಪಟಗಳಿಂದ ಕೂಡಿದ್ದು, ಪ್ರತಿ ಪಾಠದ ಅಂತ್ಯದಲ್ಲಿ ಅಭ್ಯಾಸಗಳನ್ನೂ ಮಾದರಿ ಪ್ರಶ್ನೆಗಳನ್ನೂ ಕೊಟ್ಟಿದೆ

4ನೆಯ ಪುಸ್ತಕ 0 6 0 5ನೆಯ ಪುಸ್ತಕ 0 7 0

6, 7 ಮತ್ತು 8ನೆಯ ಪುಸ್ತಕಗಳು ಅಚ್ಚಿನಲ್ಲಿವೆ

ಪುಸ್ತಕಗಳು ಬೇಕಾದಲ್ಲಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.

The Canara Banking Corporation Ltd.

(Incorporated in British India with limited liability)

Estd 1906

OUR RATES OF INTEREST ON DEPOSITS

Current	1%	p a
Savings Bank	2½%	,,
Short-term	1¾%	,,
FIXED FOR 3 MONTHS	2%	,,
6 ,,	2¼%	,,
9 ,,	2¾%	,,
12 ,,	3%	,,
24 ,,	3½%	,,

Advances made at cheap rates of interest against approved securities and Banking business of every description transacted.

ಬ್ರಿಟಿಷರ ಆಳ್ವಿಕೆಯಿಂದ ಹಳ್ಳಿ ಸರಕಾರ ಹಾಳಾಯಿತು

ಪಂಜಾಬ್ ಮಂತ್ರಿಯ ಹೇಳಿಕೆ

ಬ್ರಿಟಿಷರ ಆಳ್ವಿಕೆಯಲ್ಲಿ ಹಲವು ಒಳ್ಳೆಯ ಸಂಗತಿಗಳು ಆಗಿದ್ದರೂ ಹಳ್ಳಿ ಸರಕಾರವು ಹಾ ಳಾಯಿತು ಎಂದು ಪಂಜಾಬ್ ಸರಕಾರದ ಸ್ಥಾನಿಕ ಖಾತೆಯ ಮಂತ್ರಿ ಮೇಜರ ಮಝರ್ ಖಾನರ ಹೇಳಿಕೆ.

ನೆಹರು ವಾಣಿ

'ಗಂಡಾಂತರ ಒದಗಿದೆ ಎಚ್ಚರಿಕೆಯಿಂದಿರ ಬೇಕು' ಎಂಬುದಾಗಿ ಪಂಡಿತ ನೆಹರುಗಳು ವಾರ್ಧಾದಲ್ಲಿ ರಾಷ್ಟ್ರಧ್ವಜಾರೋಹಣ ಮಾಡುತ್ತಾ ಹೇಳಿದರು ಭಾರತದ ಉದ್ಧಾರಕ್ಕಾಗಿ ಒಕ್ಕಟ್ಟಿ ನಿಂದ ಹೋರಾಡಬೇಕೆಂದರು

ಬಾರ್ಡೋಲಿ ನಿರ್ಣಯದಿಂದ ಪರಿಸ್ಥಿತಿ ಕಠಿಣವಾಗುವುದು

ಕಾಂಗ್ರೆಸ್ಸಿನ ಶಕ್ತಿ ಕುಂದುವುದು ಸಮತಾವಾದಿಗಳ ಹೇಳಿಕೆ

'ಸರಕಾರವು ಸಂಧಾನಮಾಡಲು ಒಪ್ಪಿದಾಗ, ಕಾಂಗ್ರೆಸು ಯುದ್ಧಕಾರ್ಯದಲ್ಲಿ ಭಾಗವಹಿಸಿ ದರೆ, ಕಾಂಗ್ರೆಸಿನ ಕೆಲವು ಪ್ರಮುಖ ಪಂಗಡ ಗಳು ದೂರ ಸರಿಯುವವು. ಕಾಂಗ್ರೆಸಿನ ಶಕ್ತಿ ಕುಂದುವುದು. ಇದರಿಂದ ಕಾಂಗ್ರೆಸಿನ ಪರಿಸ್ಥಿತಿ ಕಠಿಣವಾಗುವುದು, ಬ್ರಿಟನಿನ ಯುದ್ಧದಲ್ಲಿ ಭಾಗವಹಿಸುವುದರಿಂದ ಭಾರತಕ್ಕೆ ಸ್ವಾತಂತ್ರ್ಯ ಸಿಗಲಾರದು ಎಂದಿತ್ಯಾದಿಯಾಗಿ ವಾರ್ಧಾದಲ್ಲಿ ಕೂಡಿದ ಸಮತಾವಾದಿಪಕ್ಷವು ಒಂದು ಪ್ರಕಟಣೆ ಹೊರಡಿಸಿದೆ.

ಸರ್ ಸ್ಟಾಫರ್ಡ್ ಕ್ರಿಪ್ಸರು ಭಾರತದ ಬಿಕ್ಕಟ್ಟು ಬಿಡಿಸಲು ಪ್ರಯತ್ನಮಾಡುವರು

ಸರ್ ಸ್ಟಾಫರ್ಡ್ ಕ್ರಿಪ್ಸರು ಮೋಸ್ಕೋದಿಂದ ತಿರುಗಿ ಬಂದವರು ರಾಜಕೀಯದಲ್ಲಿ ಪ್ರವೇಶಿಸಿ, ಭಾರತದ ಒಂದು ವಿಶೇಷ ಕಾರ್ಯದಲ್ಲಿ ತೊಡ ಗುವರೆಂದು ಕೆಲವರ ನಂಬಿಗೆಯಾಗಿದೆ ಈ ನಂಬಿಗೆಗೆ ಕ್ರಿಪ್ಸರು ಹಿಂದೆ ಭಾರತದ ವಿಷಯ ಲಕ್ಷ್ಯ ಹಾಕಿದ್ದು ಹಾಗೂ ನೆಹರುಗಳ ಭೇಟಿ ತೆಗೆದುಕೊಂಡುದು ಕಾರಣವಾಗಿದೆ ರಾಯ ಭಾರಿ ಸ್ಥಾನದಿಂದ ಕ್ರಿಪ್ಸರು ರಾಜಕೀಯ ಕ್ಷೇತ್ರಕ್ಕೆ ಮರಳಿ ಬರುವ ನಿರ್ಧಾರ ಮಾಡಿರುವರೆಂದು ತಿಳಿದಿದೆ ಅಮೆರಿಯವರ ಸ್ಥಾನದಲ್ಲಿ ಕ್ರಿಪ್ಸರನ್ನು ನಿಯೋಜಿಸಲಾಗುವುದೆಂದು ಒಂದು ವದಂತಿ ಯಿದೆ

ಕಾಂಗ್ರೆಸಿನವರಿಗೆ ವರ್ಕಿಂಗ್ ಕಮಿಟಿ ಸಲಹೆ

ರಚನಾತ್ಮಕ ಕಾರ್ಯಕ್ರಮ ಜೋರಿನಿಂದ ನಡೆಸುವುದು

ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ವಾರ್ಧಾ ದಲ್ಲಿ ಸೇರಿ ರಚನಾತ್ಮಕ ಕಾರ್ಯಕ್ರಮಗಳನ್ನು ಈಗಿಗಿಂತ ಹೆಚ್ಚು ಜೋರಿನಿಂದ ಸಾಗಿಸುವ ಮತ್ತು ಅವುಗಳನ್ನು ಪುನರುಜ್ಜೀವನಗೊಳಿಸುವ ಅವಶ್ಯಕತೆಯು ಚರ್ಚಿಸಲ್ಪಟ್ಟಿತೆಂದು ತಿಳಿದಿದೆ. ಕಾಂಗ್ರೆಸು ಸತ್ಯಾಗ್ರಹವನ್ನು ಹಿಂತೆಗೆದುಕೊಂಡಿದ್ದ ರಿಂದಲೂ, ಪಾರ್ಲಿಮೆಂಟರಿ ಕಾರ್ಯಕ್ರಮಗ ಳಲ್ಲಿ ಭಾಗವಹಿಸತಕ್ಕದ್ದಲ್ಲವೆಂದು ನಿಶ್ಚಯಿಸಿದ್ದ ರಿಂದ ಕಾಂಗ್ರೆಸಿನ ಚಟುವಟಿಕೆಗಳು ಇನ್ನುಮೇಲೆ ಕೆಲವು ಕಾಲ ರಚನಾತ್ಮಕ ಕಾರ್ಯಕ್ರಮ ನಿರ್ವ ಹಿಸುವಲ್ಲಿ ನಡೆಸಲ್ಪಡುವುದೆಂದು ಹೇಳಲಾಗು ತ್ತದೆ.

“ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ”

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

23—1—1942] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೨೩—೧—೧೯೪೨]

ಸಮರಭೂಮಿಯ ಸಂಚಾರ

ಜಪಾನರು ಈಗ ಫಿಲಿಪೈನ್ಸ್, ಮಲಯ ಮತ್ತು ಡಚ್ ಇಂಡೀಸ್‌ಗಳ ಮೇಲೆ ಆಕ್ರಮಣ ಕಾರ್ಯವನ್ನು ಕೈಕೊಂಡಿರುವರು. ಇದರಲ್ಲಿ ಫಿಲಿಪೈನ್ ಕಾಳಗವು ಈಗ ಕೊನೆಗಂಡಂತೆ ಆಗಿದೆ. ಫಿಲಿಪೈನ್ ದೇಶದವರು ಬಹಳ ಕಲಿತನದಿಂದ ಕಾದಾಡಿದರೂ, ಹೊರಗಿನ ವಿಶೇಷ ಸಹಾಯ ದೊರಕದಿರುವುದರಿಂದ ಅವರ ಪ್ರತಿಭಟನೆಯು ಯಾವ ಪ್ರಯೋಜನವನ್ನೂ ಉಂಟುಮಾಡಲಿಲ್ಲ. ಇನ್ನಾದರೂ ಅವರಿಗೆ ಹೊರಗಿನ ಸಹಾಯ ಬರುವಂತೆ ಕಂಡುಬರುವುದಿಲ್ಲ. ಫಿಲಿಪೈನ್ ಜಪಾನರ ಜಗ್ಗಾಟಕ್ಕೆ ಸೋತು ಶರಣಾಗುವ ಸಂದರ್ಭದಲ್ಲಿ ಅಮೆರಿಕದ ಪ್ರೆಸಿಡೆಂಟರಾದ ರೂಸ್‌ವೆಲ್ಟರು ಬಹಳ ಭರವಸೆಯ ಮಾತೊಂದನ್ನು ಹೇಳಿದರು. ಎಂದರೆ, ಫಿಲಿಪೈನಿನ ಸ್ವಾತಂತ್ರ್ಯವನ್ನು ತಾವು ಅವರಿಗೆ ತಿರುಗಿ ಸಂಪಾದಿಸಿ ಕೊಡುವೆವೆಂದು. ಆ ಮಾತಿನ ಮಥಿತಾರ್ಥದ ವಿಷಯ ನಾವು ಇನ್ನು ಮುಂದೆ ನೋಡಬೇಕಾಗಿದೆ. ಅಮೆರಿಕವು ಸುಮಾರು ಏಳು ಸಾವಿರ ಮೈಲುಗಳ ದೂರದಲ್ಲಿರುವುದರಿಂದ, ಅದಕ್ಕೆ ಒಮ್ಮೆಲೇ ಫಿಲಿಪೈನಿಗೆ ಸಹಾಯ ಕಳುಹಿಸಲಾಗಲಿಲ್ಲವೆಂಬುದೇನೋ ನಮಗೂ ತಿಳಿದುಕೊಳ್ಳಲು ಆಗುತ್ತದೆ. ಈಗಲೂ ಫಿಲಿಪೈನಿನಲ್ಲಿ ಅಲ್ಲಿ ಇಲ್ಲಿ ಜಪಾನರನ್ನೆದುರಿಸಿ ಕಾಳಗವು ನಡೆಯುತ್ತಲೇ ಇದೆಯೆಂಬುದರಿಂದ ಹೊರಗಿನ ಹೆಚ್ಚಿನ ಸಹಾಯವು ಇನ್ನಾದರೂ ಒದಗಿದರೆ ಫಿಲಿಪೈನು ತಲೆಯೆತ್ತಬಹುದು.

ಇತ್ತೀಚೆಗೆ ಜಪಾನರ ಆಕ್ರಮಣದಲ್ಲಿ ಹತವಾಗುತ್ತಿರುವ ರಾಷ್ಟ್ರವೆಂದರೆ ಮಲಯ. ಮಲಯದ ಯುದ್ಧದಿಂದ ಭಾರತೀಯರು ತೀವ್ರ ಜಾಗೃತರಾಗಬೇಕಾಗಿದೆ. ಮಲಯವು ಬರ್ಮಕ್ಕೆ ಸಮೀಪದಲ್ಲಿದ್ದು ಭಾರತದ ಬಾಗಿಲುಗಳಲ್ಲೊಂದಾಗಿದೆ. ಅಲ್ಲಿ ಲಕ್ಷಾಂತರ ಮಂದಿ ಹಿಂದೀಯರೂ ಅನೇಕ ಕಾಲಗಳಿಂದ ಹೋಗಿ ನೆಲಸಿ ವಾಸಿಸುತ್ತಿದ್ದಾರೆ. ಇಷ್ಟರಲ್ಲಿಯೇ ಜಪಾನರ ಕೈವಶವಾಗಿರುವ ಪೆನಾಂಗ್, ಕೌಲಾಲಂಪುರ, ಇಪೋಗಳಲ್ಲಿ ಹಲವು ಮಂದಿ ಹಿಂದೀಯರು ತುಂಬಾ ನಷ್ಟಕ್ಕೊಳಗಾಗಿರುವರು. ಇಲ್ಲಿಗೆ ಜಪಾನರ ಆಕ್ರಮಣ ಭೀತಿಯು ಬಹುಕಾಲದಿಂದಲೇ ಇತ್ತು. ಹದಿನೆಂಟು ತಿಂಗಳ ಹಿಂದೆಯೇ ಯುದ್ಧದ ಸಿದ್ಧತೆ ನಡೆಯುತ್ತಿತ್ತು. ಬ್ರಿಟಿಷರಾದರೂ ಮಲಯವನ್ನುಳಿಸಲು ಸಾಕಷ್ಟು ಸಾಹಸಮಾಡದಿದ್ದರೆ, ಶಾಂತಸಾಗರದ ಭದ್ರತೆ ಕೆಡುವಂತಾಗುವುದು. ಆದರೆ ಜಪಾನರು ಯಾವುದೇ ತರದ ಮಲಯನರ, ಬ್ರಿಟಿಷರ ಎದುರಾಟವನ್ನೂ ಗಣಿಸದೆ ಒಮ್ಮೆಲೇ ಮುನ್ನುಗ್ಗಿ ಬಂದರು. ಇದರಿಂದ ಅಲ್ಲಿನ ಬ್ರಿಟಿಷ್ ಸೈನ್ಯವೂ ಹಿಂದೆ ಸರಿದು ನಿಲ್ಲಬೇಕಾಯಿತು. ಜಪಾನರು ಮಲಯದ ಪೂರ್ವ ಮತ್ತು ಪಶ್ಚಿಮ ಕರಾವಳಿ ಪ್ರದೇಶಗಳಲ್ಲಿಯೇ ಹೆಚ್ಚಾಗಿ ಮುನ್ನುಗ್ಗುತ್ತಿರುವರು. ಇಂತಹ ಇಕ್ಕೆಳ ಆಕ್ರಮಣ ಕ್ರಮದಿಂದ ಬ್ರಿಟಿಷ್ ಸೈನಿಕರು ಬಹಳ ಪೇಚಾಟಕ್ಕೆ ಬೀಳಬೇಕಾಯಿತು. ಜಪಾನರು ಪೂರ್ವ ಕರಾವಳಿಯಲ್ಲಿ ಕ್ವಾಂಟನ್ ವಿಮಾನಗೃಹವನ್ನು ಸ್ವಾಧೀನಪಡಿಸಿಕೊಂಡು ರೋಂಪಿನ ನದಿವರೆಗೆ ಮುನ್ನುಗ್ಗಿದ್ದಾರೆ. ಪಶ್ಚಿಮ ಕರಾವಳಿಯಲ್ಲಿ ಕೆಡಾ ಪೆರಾಕ್, ಸೆಲಾಂಗೋರ್ ಮತ್ತು ಸೆಂಬಿಲೀನಗಳನ್ನು ಹಿಡಕೊಂಡು ಟ್ಯಾಂಪಿನ್ ಹತ್ತಿರದವರೆಗೆ ಬಂದಿರುವರು. ಹೀಗೂ ಇದರಿಂದೆಲ್ಲ ಸಿಂಗಾಪುರದ ಮೇಲೆ ಭಾರಿ ಹೆಚ್ಚಾಗಿದೆ. ಜಪಾನ್ ಸೈನ್ಯವು ಸಿಂಗಾಪುರದಿಂದ ಕೇವಲ ನೂರು ಮೈಲುಗಳ ಅಂತರದಲ್ಲಿದೆ. ಮಲಯದಲ್ಲಿ ಬ್ರಿಟಿಷರು ಹೀಗೆ ಹಿಂದೋಡುತ್ತಿರುವ ವಿಷಯದಲ್ಲಿ ಬೋರ್ನಿಯೋ ದೇಶದ ಸಾರವಾಕದ ರಾಜನು—ಆತನು ಇಂಗ್ಲಿಷ್ ರಾಜನು—ಈ ರೀತಿ ಹೇಳಿದ್ದಾನೆ. ‘ಮಲಯದ ಇಂದಿನ ಪರಿಸ್ಥಿತಿಯು ಹೆಚ್ಚಿನ ಅಯೋಗ್ಯತೆ ಹಾಗೂ ಕೊಲೆಪಾತಕ ಸ್ವಭಾವದ ಅಲಕ್ಷ್ಯತನದಿಂದ ಆಗಿದೆ. ಸಿಂಗಾಪುರದ ಕಂಚು ಟೋಪಿಯವರನ್ನು ಕೂಡಲೇ ಹಿಂತೆಗೆಯಬೇಕು.’ ಗವರ್ನರರು ಮತ್ತು ಸೈನ್ಯಾಧಿಪತಿಗಳಲ್ಲಿ ಒಮ್ಮತವಿಲ್ಲ. ಆರ್ ಎ ಎಫ್ ಮತ್ತು ನೌಕಾದಳಗಳು ಸಹಕರಿಸಲಿಲ್ಲ. ಇದರಿಂದ ಮಲಯದ ದುರಂತವು ಬಂದೊದಗಿತು ಎಂದು ವೈರಿಗಳನ್ನು ಎದುರಿಸಲು ತಾವು ಸಂಪೂರ್ಣ ಸಿದ್ಧರಿರುವೆವು ಎಂದು ಕೊಚ್ಚಿಕೊಳ್ಳುವವರ ಮಾತಿನ ಮಹತ್ವವನ್ನು ಈ ಹೇಳಿಕೆಯು ಬಯಲಿಗೆಳೆದಿದೆ. ಮಲಯದಲ್ಲಿ ಈಗ ಗೇಮಾಸದ ಬಳಿ ಯುದ್ಧ ನಡೆಯುತ್ತಿದೆ. ಮಾಪುರ್ ನದಿಯ ಬಳಿ ಬ್ರಿಟಿಷರು ಹಿಂದೆ ಸರಿದರೆಂದು ಇತ್ತೀಚೆಯ ಒಂದು ಸುದ್ದಿ.

ಸಿಂಗಾಪುರಕ್ಕೆ ಕೇವಲ ೨೫ ಮೈಲುಗಳ ದೂರಕ್ಕೆ ಈಗ ಜಪಾನು ಸೈನ್ಯವು ಬಂದಿದೆಯೆಂದು ಅನಧಿಕೃತ ಸುದ್ದಿ ಬಂದಿರುವುದು. ಮಲಯದಲ್ಲಿ ಜಪಾನರು ಒಂದೇ ರೀತಿಯಲ್ಲಿ ಮುಂದುವರಿಯುತ್ತಲೇ ಇದ್ದಾರೆ. ಮಧ್ಯ ಮಲಯದಿಂದ ಸರಿಯಾಗಿ ಸಿಂಗಾಪುರದ ಕಡೆಗೆ ಮುನ್ನುಗ್ಗುತ್ತಿರುವುದನ್ನು ಬಿಟ್ಟು, ಜಪಾನರು ಜೋಹೋರ ಕರಾವಳಿಯ ಕಡೆಗಳಲ್ಲಿ ಸೈನ್ಯ ಸ್ಥಾಪಿಸಲು ಸಾಹಸಪಡುತ್ತಿರುವರು. ಮಲಯದಲ್ಲಿ ಜಪಾನರು ಒಂದು ಹೊಸ ತಂತ್ರವನ್ನು ಮಾಡುತ್ತಿರುವರಾಗಿ ಹೇಳಲಾಗಿದೆ. ಪಶ್ಚಿಮ ರಣಭೂಮಿಯ ಗುಪ್ತಸ್ಥಳಗಳಲ್ಲಿ ತಮ್ಮ ಸೈನ್ಯಗಳನ್ನು ಇಳಿಸಿ ಇಡೀ ಪ್ರಾಂತವನ್ನು ಇಬ್ಭಾಗಿಸಿ ಅನಂತರ ಬ್ರಿಟಿಷರನ್ನು ಹಿಂದೋಡಿಸುವ ಆಲೋಚನೆ ಮಾಡುತ್ತಿರುವರೆಂದು ಸುದ್ದಿ. ಸಿಂಗಾಪುರದ ಮೇಲೆ ಜಪಾನು ವಿಮಾನಗಳು ಧಾಳಿಮಾಡುತ್ತಲಿವೆ. ಹಲವು ಹಾನಿಗಳೂ ಆಗಿರುವುದು.

ಬೋರ್ನಿಯೋ ಜಾವಾ ಸುಮಾತ್ರಾ ಮತ್ತು ಸೆಲೆಬಿಸಗಳಿಂದ ಕೂಡಿದ ಡಚ್ ಇಂಡೀಸನ್ನು ಜಪಾನರು ಆಕ್ರಮಣ ಮಾಡಿರುವರು. ಡಚ್ ಇಂಡೀಸು ಅಪಾರ ಸಂಪತ್ಸಮೃದ್ಧ ದೇಶ. ಸಕ್ಕರೆ, ರಬ್ಬರು, ಕಾಫಿ, ಹೊಗೆಸೊಪ್ಪು, ತವರ ಮತ್ತು ಎಣ್ಣೆ ಇವು ಇಲ್ಲಿ ಧಾರಾಳ ದೊರಕುತ್ತವೆ. ಇವೆಲ್ಲಾ ಈಗ ಜಪಾನಿಗೆ ಬೇಕಾಗಿದೆ. ಮಾತ್ರವಲ್ಲದೆ ಸಿಂಗಾಪುರವನ್ನು ಪಡೆಯಬೇಕಾದರೂ ಡಚ್ ಇಂಡೀಸನ್ನು ಕೈವಶ ತೆಗೆದುಕೊಳ್ಳಬೇಕಾಗಿದೆ. ಡಚ್ ಇಂಡೀಸನ್ನು ಜಪಾನರು ಸ್ವಾಧೀನಪಡಿಸಿದರೆ ಸಿಂಗಾಪುರದ ಭವಿತವ್ಯ ಕೆಟ್ಟುಹೋದಂತೆಯೇ ಆಗುವುದೆಂದು ಅನೇಕ ರಾಜಕಾರಣಿಗಳೇ ಒಪ್ಪಿದ್ದಾರೆ. ಜಾವಾ ಒಂದು ದ್ವೀಪವನ್ನು ಬಿಟ್ಟರೆ ಮಿಕ್ಕ ಯಾವ ದ್ವೀಪಗಳಲ್ಲಿಯೂ ಜಪಾನರಿಗೆ ಹೆಚ್ಚಿನ ಪ್ರತಿಬಂಧಕವುಂಟಾಗಿರುವುದಿಲ್ಲ. ಸುಮಾತ್ರಾ, ಬೋರ್ನಿಯೋ ಸೆಲೆಬಿಸ್‌ಗಳು ಜಪಾನರ ಕೈವಶಬಂದಿರುವುದರಿಂದ ಅಲ್ಲಿ ಮುಂದಕ್ಕೆ ಜಪಾನ್ ನೌಕಾಸಂಚಾರವಾಗಲು ಆತಂಕವುಂಟಾಗಲಾರದು. ಮಲಯದಲ್ಲಿ ಮುನ್ನುಗ್ಗುತ್ತಿರುವ ಜಪಾನೀ ಸೈನಿಕರೂ, ಡಚ್ ಇಂಡೀಸಿನಲ್ಲಿ ಮುನ್ನುಗ್ಗುತ್ತಿರುವವರೂ ಮುಂದೆ ಒಂದೇ ಸಮಯದಲ್ಲಿ ಪ್ರಬಲವಾಗಿ ಸಿಂಗಾಪುರವನ್ನು ಭೇದಿಸಲು ಆಕ್ರಮಿಸಬಹುದು.

ರಶ್ಯ ಜರ್ಮನ್ ಯುದ್ಧದಲ್ಲಿ ಜರ್ಮನರಿಗೆ ಸೋಲೇ ಒದಗುತ್ತಿದೆ. ಮೋಸ್ಕೋ ಮಾರ್ಗದಲ್ಲಿ ಜರ್ಮನರ ಭದ್ರವಾದ ಠಾಣ್ಯವಾಗಿದ್ದ ಮೊಜಾಯಿಸ್ಕ ನಗರವು ಈಗ ಉರಿಯುತ್ತಿರುವುದಾಗಿ ಸುದ್ದಿ ಬಂದಿದೆ. ಜರ್ಮನರು ಈಗ ಹಿಟ್ಲರನು ಸೇರೆ ಬಿಟ್ಟಿರುವ ಸ್ಮೋಲೆನ್‌ಸ್ಕ್‌ದ ಕಡೆಗೆ ಹಿಂಜರಿಯುತ್ತಿದ್ದಾರಂತೆ. ಹೀಗೆ ೧೪೨ ಹಳ್ಳಿ ನಗರಗಳು ಜರ್ಮನ್ ದಾಸ್ಯದಿಂದ ಈಗ ಮುಕ್ತಹೊಂದಿರುವ ವರದಿ ಬಂದಿರುವುದು. ಕ್ರಿಮಿಯದಲ್ಲಿಯೂ ರಶ್ಯನರೇ ಮುಂದೊತ್ತಿದ್ದಾರೆ. ಸೆಬಾಸ್ಟಪೋಲಿಗೆ ಮುತ್ತಿಗೆ ಹಾಕಿದ ಇಟೆಲಿಯ ರುಮೇನಿಯದ ಸೈನಿಕರೂ ಹಿಂದೋಡಿದ್ದಾರೆ. ಖಾರಕೋವ ಭಾಗದಲ್ಲಿ ಜರ್ಮನ ಪ್ರತಿದಾಳಿಗಳು ಬಹಳ ಜೋರಾಗಿದ್ದವು. ಮೋಸ್ಕೋ ರಣರಂಗದಲ್ಲಿಯೂ ಯುದ್ಧ ಸಾಗುತ್ತಲೇ ಇದೆ. ಕ್ರಿಮಿಯದಲ್ಲಿರುವ ಫಿಯೋದೋಸಿಯಾ ಪುನಃ ಜರ್ಮನರ ಕೈವಶ ಬಂತೆಂದು ಹೇಳಲಾಗಿದೆ.

ಲಿಬಿಯದ ರಣಭೂಮಿಯಲ್ಲಿ ಮುಂದಲಗೆ ಚಟುವಟಿಕೆಯು ಹೊರತು—ಬೇರೇನೂ ಇರಲಿಲ್ಲವಾಗಿ ಸುದ್ದಿ. ಎಲ್ ಅಜೀಲಾ ರಣಭೂಮಿಯೂ ಶಾಂತರೀತಿಯಲ್ಲಿರುವುದು. ಹೆಲ್ಫಾಯದಲ್ಲಿ ಅಸಂಖ್ಯ ಶತ್ರುಗಳನ್ನು ಸೆರೆಹಿಡಿದಿರುವರು. ಬಾರ್ಡಿಯಾ, ಸೊಲ್ಲಮ್ ಮತ್ತು ಹೆಲ್ಫಾಯಗಳಲ್ಲಿ ಒಟ್ಟು ಸುಮಾರು ೧೪ ಸಾವಿರಕ್ಕೆ ಮಿಕ್ಕಿದ ಇಟಲಿ ಜರ್ಮನಿ ಸೈನಿಕರು ಸೆರೆಸಿಕ್ಕಿರುವರು. ಬ್ರಿಟಿಷರ ವಿಮಾನ ನೌಕಾಪಡೆಗಳು ಇಲ್ಲಿ ಅತ್ಯಂತ ಯಶಸ್ವಿಯಾಗಿ ಹೋರಾಡಿರುವವು.

ಬರ್ಮಾದೇಶದ ಮುಖ್ಯಮಂತ್ರಿ ಯೂಸಾರನ್ನು ಯೂರೋಪಿನಿಂದ ಅವರ ದೇಶಕ್ಕೆ ಈಗ ಮರಳಿ ಬರದಂತೆ ನಿರ್ಬಂಧಿಸಿರುವರೆಂಬ ವಾರ್ತೆಯು ಎಲ್ಲರನ್ನೂ ಆಶ್ಚರ್ಯಗೊಳಿಸಿದೆ. ಜಪಾನು ಬ್ರಿಟನಿನ ಮೇಲೆ ಯುದ್ಧ ಸಾರಿದ ಬಳಿಕ ಯೂ ಸಾರವರು ಜಪಾನ್ ಅಧಿಕಾರಿಗಳ ಸಂಬಂಧವಿಟ್ಟುಕೊಂಡಿರುವರೆಂದು ಅವರಮೇಲೆ ಆರೋಪ ಹಾಕಿ ಹೀಗೆ ನಿರ್ಬಂಧಿಸಲಾಗಿರುವುದು. ಅವರು ಅನೇಕ ಮಂದಿ ಜಪಾನೀ ಮಿತ್ರರನ್ನು ಕಂಡು ಮಾತನಾಡುತ್ತಿದ್ದರು. ಅದನ್ನು ಅವರೇ ಈಗ ಒಪ್ಪಿಕೊಂಡಿರುವರೆಂದು ಸರಕಾರವು ಪ್ರಕಟಿಸುತ್ತದೆ. ಆದ್ದರಿಂದ ಅವರನ್ನು ಬರ್ಮಕ್ಕೆ ಬರದಂತೆ ತಡೆಗಟ್ಟುವುದು ಅನಿವಾರ್ಯವಾಯಿತೆಂದು ಪ್ರಕಟಿಸಲಾಗಿದೆ. ಯೂ ಸಾರವರು ಕಳೆದ ಅಕ್ಟೋಬರು ತಿಂಗಳಲ್ಲಿ ಬರ್ಮದ ಭವಿಷ್ಯದ ವಿಚಾರ ಮಾತನಾಡಲು ಲಂಡನಿಗೆ ಹೋಗಿದ್ದರು. ಅವರು ಅಲ್ಲಿ ೩, ೪ ವಾರಗಳವರೆಗೆ ಪ್ರಧಾನ ಮಂತ್ರಿ ಚರ್ಚಿಲರೊಡನೆ ಮಾತುಕತೆ ಮಾಡಿದರು. ಈ ವಿಚಾರ ವಿನಿಮಯದಿಂದ ತಮಗೆ ಅತೃಪ್ತಿಯಾಗಿದೆಯೆಂದೂ ಅವರು ಹೇಳಿದ್ದರು. ಆ ಮೇಲೆ ಮಾತೃಭೂಮಿಗೆ ಮರಳಿ ಬರುವಾಗ ಮಾರ್ಗದಲ್ಲಿ ಅಮೆರಿಕ ಆಸ್ಟ್ರೇಲಿಯ ಮತ್ತು ನ್ಯೂಜಿಲೆಂಡುಗಳನ್ನು ಸಂದರ್ಶಿಸಬೇಕೆಂದು ಬಯಸಿದ್ದರು. ಜಪಾನರು ಯುದ್ಧ ಸಾರುವಾಗ ಅವರು ಹೊನಲುಲುನಲ್ಲಿದ್ದರು. ಅವರನ್ನು ಈಗ ಅಲ್ಲಿ ನಿರ್ಬಂಧಿಸಲಾಗಿದೆ. ಯೂ ಸಾರವರನ್ನು ಈ ಕಾಲದಲ್ಲಿ ನಿರ್ಬಂಧಿಸಿದ್ದರಿಂದ ಬ್ರಿಟನು ಬರ್ಮೀದ ಜನರನ್ನು ಹೆಚ್ಚು ಅತೃಪ್ತಿಪಡಿಸಿದಂತೆಯೇ ಆಗುತ್ತದೆ.

Ten Lacs In Ten Minutes

The lists of our 5% Cumulative Preference Shares which opened on 19th January closed the same day before noon

The subscriptions received within those few minutes totalled over Rupees Fourteen Lacs.

We thank our customers, friends and depositors whose unstinted support enabled us to close the lists in so short a time.

We thank them for this proof of their sympathy and confidence and assure them that we will try to deserve this confidence in every way possible

Canara Bank Limited.

Estd. 1906.

ಪುಸ್ತಕಾವಲೋಕನ.

ಆರತಿ*

'ನಮ್ಮ ಅಕ್ಕ ತಂಗಿಯರ ಕಥಾ ಸಂಕಲನವನ್ನು ಸಂಪಾದಿಸಿ ಪ್ರಕಟಿಸುವು'ದರಲ್ಲಿ ಧಾರವಾಡದ ಮನೋಹರ ಗ್ರಂಥಭಂಡಾರದವರು ಬಹಳ ಮುಂದಡಿಯಿಟ್ಟಿದ್ದಾರೆ. ಇದು ಮೊದಲು 'ರಂಗವಲ್ಲಿ' 'ಕಂಬನಿಗಳೆಂಟ' ಅಂತಹ ಎರಡು ಉತ್ತಮ ಕಥಾಪುಸ್ತಕಗಳನ್ನು ಕನ್ನಡಿಗರಿಗೊದಗಿಸಿ ಕೊಟ್ಟು ಎಲ್ಲರ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಈಗ ಒಂಬತ್ತು ಮಂದಿ ಕನ್ನಡ ಮಹಿಳೆಯರ ಸಣ್ಣ ಕತೆಗಳನ್ನು ಒಟ್ಟುಗೂಡಿಸಿ ವೃಷ ಸಂವತ್ಸರದ ದೀಪಾವಳಿಯ ಕಾಲದಲ್ಲಿ ಈ 'ಆರತಿ' ಯೆತ್ತಿರುವರು ನಮ್ಮ ನಾಡಿನ ಸಾಹಿತ್ಯ ಸಹೃದಯೆಯರಾದ ಬರೆಹಗಾರ್ತಿಯರ ಕಥಾಶಕ್ತಿಯನ್ನು ಈ ಆರತಿಯ ಬೆಳಕು ಸಾಕಷ್ಟು ತೋರಿಸಿಕೊಡುತ್ತದೆ.

ಮೊದಲ ಕತೆ 'ನನ್ನ ಪರೀಕ್ಷೆ'ಯೆಂಬುದು ಬೆಂಗಳೂರಿನ ಶ್ರೀಮತಿ ಸುಮಿತ್ರಮ್ಮನವರು ಬರೆದುದು, ಒಂದು ರಸಿಕ ದಾಂಪತ್ಯ ಜೀವನವನ್ನು ಬಹಳ ಚಲುವಾಗಿ ಇಲ್ಲಿ ಚಿತ್ರಿಸಿದ್ದಾರೆ 'ಕನಸೋ ನೆನಸೋ' ಈ ಕತೆ ಬರೆದವರು ಮೈಸೂರಿನ ಶ್ರೀ 'ವಾಣಿ' ಇವರು, ದಿವಂಗತೆಯರಾದ ಹೆಸರಾಂತ ಕತೆಗಾರ್ತಿ ಗೌರಮ್ಮನವರನ್ನು ಕನಸಿನಲ್ಲಿ ಕಂಡು ಸಂಭಾಷಿಸಿದಂತೆ ಕತೆ ಬರೆಯಲಾಗಿದೆ ಕತೆ ಒಂದು ಕರುಣೆಯ ಕತೆಯಾಗಿದೆ 'ಶಾಲ್ಮಲೆಗೆ' ಎಂಬ ಕತೆ ಬರೆದವರು ಹುಬ್ಬಳ್ಳಿಯ ಸೌ। ಕುಸುಮ ದೇಶಪಾಂಡೆಯವರು, ಮೆಚ್ಚಿದ ಯುವಕ ಯುವತಿಯರು ವಿಷಮ ವಿವಾಹಕ್ಕೆ ಹೇಸಿ, ಇಬ್ಬರೂ ಇದರಲ್ಲಿ ನದಿಸಂಗಮವಾಗುತ್ತಾರೆ ಪ್ರೇಮ ಮತ್ತು ಕರುಣೆಗಳ ಮಿಶ್ರಣಗೊಂಡ ಕತೆಯಿದು 'ಅಂದು ಇಂದು' ಎಂಬೀ ಕತೆ ಬರೆದವರು ಧಾರವಾಡದ ಶ್ರೀಮತಿ ಗೀತಾದೇವಿ ಕುಲಕರ್ಣಿಯವರು, ಮಲತಾಯಿಯ ಕೈಯಲ್ಲಿ ತಾಯನ್ನು ಕಳಕೊಂಡ ನಳಿನಿ ಬಹಳ ಬೇಸರಪಟ್ಟರೂ ಕೆಲವೇ ದಿನಗಳ ಮೇಲೆ ಸತೀಶನ ಜೊತೆಗಾರ್ತಿಯಾಗಿ ನಲಿವ ಆನಂದವು ಅವಳ ಹಿಂದಿನ ಬೇಸರವನ್ನು ಮಾಯಗೊಳಿಸಿತು. 'ಚೆನ್ನಿ' ಎಂಬೀ ಕತೆ ಬರೆದವರು ಚಿತ್ತೂರಿನ ಶ್ರೀಮತಿ ಆರ್ ರತ್ನಾಬಾಯಿಯವರು, ಹಳ್ಳಿಯ ಹುಡುಗಿ ಚೆನ್ನಿ ಒಲಿದು ಬಂದ ಈರನನ್ನು ಬಿಟ್ಟು ಮಾದನನ್ನು ಮೆಚ್ಚಿ ಮದುವೆಯಾದಳು ಮಾದ, ಚೆನ್ನಿಯ ಬಸುರಲ್ಲಿ ಮಕ್ಕಳಾಗಲಿಲ್ಲವೆಂದು ಆಕೆಯ ಮೇಲೆಯೇ ಸಿಟ್ಟುಗೊಂಡನು ಚೆನ್ನಿ ಮಾದನ ದುಗುಡವನ್ನು ಪರಿಹರಿಸುವ ಸಲುವಾಗಿ ತಪ್ಪುಮಾಡಿದಳು ಈರನನ್ನು ಒಂದು ರಾತ್ರಿಯಲ್ಲಿ ಹೋಗಿ ಕಂಡಳು, ಚೆನ್ನಿ ಬಸುರಾಗಿ ಕೃಶಳಾಗಿ ಚಿಂತೆಯಿಂದ ಹಡೆದು ತೀರಿಹೋಗುವಳು ಕತೆಗಾರ್ತಿಯರು ಪಾತ್ರಗಳ ಭಾವನೆಗಳನ್ನು ಬಹಳ ಸೂಕ್ಷ್ಮ ಸುಂದರವಾಗಿ ಇದರಲ್ಲಿ ತೋರಿಸಿದ್ದಾರೆ 'ಹುಚ್ಚಿ ಯಾರು' ಎಂಬೀ ಕತೆ ಬೆಂಗಳೂರಿನ ಶ್ರೀಮತಿ ವಸಂತಾದೇವಿಯರದು, ಗಂಡ ಮಾಡಿದ ಅನ್ಯಾಯದಿಂದ ಸ್ತ್ರೀಯು ಹುಚ್ಚಿಯಾದಳು ಸ್ತ್ರೀ ಜಾತಿಯ ಕಡೆಗೆ ಪುರುಷ ಸಮಾಜದ ಕ್ರೂರ ವರ್ತನೆಯನ್ನು ಇಲ್ಲಿ ತೋರಿಸಿದ್ದಾರೆ 'ಮಾತೃಹೃದಯ' ಉಡುಪಿಯ ಸರಸ್ವತಿಬಾಯಿ ರಾಜವಾಡೆಯವರು ಬರೆದ ಕತೆ ಕತೆ ಮೊದಲಿಂದ ತುದಿ ವರೆಗೆ ಒಳ್ಳೆಯ ಕುತೂಹಲವನ್ನು ಹುಟ್ಟಿಸುತ್ತದೆ, ಹೆತ್ತ ಮಗುವಿನ ಮೇಲೆ ತಾಯ ಕರುಳಿಗಿರುವ ಪ್ರೀತಿಯನ್ನು ಇದರಲ್ಲಿ ಬಹಳ ಮಾರ್ಮಿಕವಾಗಿ ಚಿತ್ರಿಸಿದ್ದಾರೆ, ಮಕ್ಕಳಿಲ್ಲದ ಮಹಿಳೆಯರು ಈ ಕತೆಯನ್ನು ಓದಿದಲ್ಲಿ ಸಹಜವಾಗಿ ಕಣ್ಣೀರು ಸುರಿಸಬೇಕು 'ಒಂದು ಎರಡು ಮೂರು' ಈ ಕತೆ ಬರೆದವರು ಧಾರವಾಡದ ಶ್ರೀಮತಿ ಶಾಂತಾದೇವಿ ಮಾಳವಾಡ ಇವರು, ಬಹುಪತ್ನಿತ್ವ ಸಂಪ್ರದಾಯದ ಮೇಲೆ ಕಥಾರೂಪವಾಗಿ ಬರೆಹಗಾರ್ತಿಯರು ತೀವ್ರ ಟೀಕೆ ಖಂಡನೆ ಮಾಡಿದ್ದಾರೆ. ಕೊನೆಯ ಕತೆ 'ವೇಣೀ ಸಂಹಾರ' ಎಂಬುದು, ಗೋಕರ್ಣದ ಕುಮಾರಿ ದೇವಾಂಗನಾ ಶಾಸ್ತ್ರಿ ಇದನ್ನು ಬರೆದವರು ಬಾಲ್ಯವಿವಾಹದಿಂದ ವಿಧವೆಯಾದ ಹುಡುಗಿ ಪ್ರಾಯಕ್ಕೆ ಬಂದಾಗ ಪ್ರಕೃತಿಯ ನೈಸರ್ಗಿಕ ಗುಣದಂತೆ ಪುರುಷ ಸಮಾಗಮವನ್ನು ಬಯಸಿದಳು; ಒಂದು ವೈದಿಕ ಕುಲದ ಕನ್ಯೆ ಅಂತಹ ನೈಸರ್ಗಿಕ ಪ್ರವಾಹದಲ್ಲಿ ಕೊಚ್ಚಿಹೋದ ಕತೆಯಿದು, ಬಹಳ ಹೃದಯಸ್ಪರ್ಶಿಯಾಗಿದೆ,

ಇದರಲ್ಲಿರುವ ಹೆಚ್ಚಿನ ಎಲ್ಲಾ ಕತೆಗಳೂ ಒಂದು ತರಗತಿಗೆ ಮುಟ್ಟಿದ ಕತೆಗಳೇ ಆಗಿವೆ. ಕೇವಲ ಸಾಮಾನ್ಯ ಎನ್ನುವಂತಿಲ್ಲ. ಇಷ್ಟು ಚೆನ್ನಾದ, ಇಷ್ಟು ಸ್ವಾರಸ್ಯವಾದ ಕತೆಗಳನ್ನು ನಮ್ಮ ನಾಡಿನ ಅಕ್ಕತಂಗಿಯರು ಬರೆಯುತ್ತಿರುವರೆಂಬುದು ನಾವು ಅಭಿಮಾನಪಟ್ಟುಕೊಳ್ಳತಕ್ಕ ವಿಷಯ ಕನ್ನಡಿಗರೆಲ್ಲರೂ ಈ ಪುಸ್ತಕವನ್ನು ಓದಬೇಕು, ಮನೋಹರ ಗ್ರಂಥಭಂಡಾರದ ಈ ತರದ ವಿಶಿಷ್ಟ ಕಾರ್ಯಕ್ಕೆ ಪ್ರೋತ್ಸಾಹವೀಯಬೇಕು ಎಂಬುದು ನಮ್ಮ ಬಿನ್ನಹವಾಗಿದೆ

-ಕಯ್ಯಾರ

*ಮಹಿಳೆಯರ ಕಥಾಸಂಕಲನ- ಸಂಪಾದಕರು ಮೇವುಂಡಿ ಮಲ್ಲಾರಿ ಮತ್ತು ದತ್ತಾತ್ರೇಯ ಕುಲಕರ್ಣಿ- ಧಾರವಾಡದ ಮನೋಹರ ಗ್ರಂಥ ಭಂಡಾರದ ೧೮ನೆಯ ಪ್ರಕಟಣೆ ಕ್ರೌನ್ ೧/೮ ಆಕಾರದ ೮೪+೬ ಪುಟಗಳು, ಬೆಲೆ ಹನ್ನೆರಡಾಣೆ.

ಸಾದರ ಸ್ವೀಕಾರ

ರವೀಂದ್ರಾಂಕ (ಜಯಕರ್ನಾಟಕ)

೬೦ ಪುಟಗಳಿಗೆ ಮಿಕ್ಕಿದೆ ಬೆಲೆ ಹತ್ತಾಣೆ ಹಲವು ಚಿತ್ರಗಳು ಇವೆ.

ಯುದ್ಧದಿಂದಾಗಿ ಪತ್ರಿಕಾ ಪ್ರಕಟಣೆಗೆ ಅತ್ಯಂತ ತೊಂದರೆ ಬಂದಿರುವೀ ಕಾಲದಲ್ಲಿ, ಜಯಕರ್ನಾಟಕವು 'ರವೀಂದ್ರಾಂಕ'ದಂತಹ ಮಹತ್ತಾದ ವಿಶೇಷ ಸಂಚಿಕೆಯ ಕಾರ್ಯವನ್ನು ಕೈಕೊಂಡು ಯಶಸ್ವಿಯಾಗಿ ನೆರವೇರಿಸಿದ್ದು ಜಯಕರ್ನಾಟಕದ ಕೀರ್ತಿಯನ್ನು ಹತ್ತುಪಾಲು ಹೆಚ್ಚಿಸಿದೆಯೆನ್ನುವುದರಲ್ಲಿ ಸಂಶಯವಿಲ್ಲ ಕಲ್ಕತ್ತದ ಶ್ರೀ ನಾರಾಯಣ ಸ್ವಾಮಿ ಅಯ್ಯರರಂತಹವರು ಸಹ ಸಂಪಾದಕರಾಗಿ ದೊರೆತು ಈ ಸಂಚಿಕೆಯ ಅಂದವು ಹೆಚ್ಚಿದೆ ಬಂಗಾಳದ ಲೇಖಕರನೇಕರು ಇದಕ್ಕೆ ಲೇಖನ ಕೊಟ್ಟಿರುವರು

ಸಾದರ-ಸ್ವೀಕಾರ

ವಿದ್ಯಾದಾಯಿನಿ ಸಭಾ

ಬೊಂಬಯಿ ವಿದ್ಯಾದಾಯಿನಿ ಸಭೆಯ 1940-41ನೆಯ ವರ್ಷಕ್ಕೆ ಅಂತ್ಯವಾಗುವ 21ನೆಯ ವರ್ಷದ ವಾರ್ಷಿಕ ವರದಿಯು ನಮ್ಮ ಹಸ್ತಗತವಾಗಿದೆ ದಕ್ಷಿಣ ಕನ್ನಡದಲ್ಲೂ ಹಿಂದೂದೇಶದ ಇತರ ಪ್ರಾಂತಗಳಲ್ಲೂ ವಿದ್ಯಾ ಹಾಗೂ ಔದ್ಯೋಗಿಕ ಶಿಕ್ಷಣದಲ್ಲಿ ಅಭಿರುಚಿಯಿದ್ದು ದಾರಿದ್ರ್ಯ ದೆಸೆಯಿಂದ ಶಿಕ್ಷಣಹೊಂದಲು ಅಸಮರ್ಥರಾದ ಬಿಲ್ಲವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಕೊಡುವ, ಸಹಾಯಮಾಡುವ ಮೊದಲಾದ ಉದ್ದೇಶಗಳಿಂದ ಸ್ಥಾಪಿತವಾದೀ ಸಂಸ್ಥೆಯು ಮಾಡುತ್ತಿರುವ ಕಾರ್ಯಗಳಿಗೆ ಹೆಚ್ಚಿನ ಜನತಾ ಸಹಕಾರವು ದೊರಕಲಿ ಎಂಬುದು ನಮ್ಮ ಹಾರೈಕೆಯಾಗಿದೆ

ರೈಲು ಬಂಡಿಗಳ ಸಮಯ

ಇದೇ ಜುಲ್ಯಾ ತಾ 1ರಿಂದ ವ್ಯತ್ಯಾಸವಾದ ರೈಲು ಬಂಡಿಗಳ ಸಮಯಗಳು ಈ ಕೆಳಗಿನಂತಿವೆ__

ಗಾಡಿಗಳು	ಹೊರಡುವ ಗಂಟೆ	ತಲ್ಪುವ ಗಂಟೆ
ಗೂಡ್ಸು ಬಂಡಿ	3 45 ರಾತ್ರಿ	9 25 ರಾತ್ರಿ
ನೀಲೇಶ್ವರದವರೆಗೆ	7.32 ಬೆಳಿಗ್ಗೆ	10 ಅಪರಾಹ್ನ
ಮಲಬಾರು ಎಕ್ಸ್‌ಪ್ರೆಸ್ (ಮೈಲ್)	9 5 ಬೆಳಿಗ್ಗೆ	5 15 ಸಾಯಂ
ಜೊಲಾರ್ ಪೇಟೆ		
ಪೆಸೆಂಜರ್	12 0 ಮಧ್ಯಾಹ್ನ	2.55 ಸಾಯಂ
ಕಾಸರಗೋಡು ವರೆಗೆ	3.25 ಸಾಯಂ.	6·50 ಸಾಯಂ.
ಕಣ್ಣನ್ನೂರು ವರೆಗೆ	5·52 ಸಾಯಂ.	9·40 ಪೂರ್ವಾಹ್ನ

ಸರಕಾರದ ಹೊಸ ಪಾಠಪಟ್ಟಿಗನುಸಾರವಾಗಿ ಬರೆದ

ನವೀನ ಭೂವಿವರಣೆ

ವಾಸುದೇವರಾವ್, ಎಂ. ಎ. ಎಲ್. ಟಿ. (Dip Geogrhpy)
(ಭೂಗೋಳ ಶಾಸ್ತ್ರದಲ್ಲಿ ಡಿಪ್ಲೊಮಾ ಪಡೆದವರು)

ಈ ಪುಸ್ತಕಗಳನ್ನು ಪಡಕೊಂಡಲ್ಲಿ ವಿದ್ಯಾರ್ಥಿಗಳಿಗೆ ಎಟ್ಲಾಸ್ ಕೊಂಡುಕೊಳ್ಳುವ ಅವಶ್ಯವಿಲ್ಲ.

ಪ್ರತಿ ಪುಸ್ತಕದಲ್ಲಿ ಬಣ್ಣಬಣ್ಣದ ಭೂಪಟಗಳಿವೆ.

ಅನೇಕಾನೇಕ ಚಿತ್ರಪಟಗಳಿಂದ ಕೂಡಿದ್ದು, ಪ್ರತಿ ಪಾಠದ ಅಂತ್ಯದಲ್ಲಿ ಅಭ್ಯಾಸಗಳನ್ನೂ ಮಾದರಿ ಪ್ರಶ್ನೆಗಳನ್ನೂ ಕೊಟ್ಟಿದೆ

4ನೆಯ ಪುಸ್ತಕ 0 6 0 5ನೆಯ ಪುಸ್ತಕ 0 7 0

6, 7 ಮತ್ತು 8ನೆಯ ಪುಸ್ತಕಗಳು ಅಚ್ಚಿನಲ್ಲಿವೆ

ಪುಸ್ತಕಗಳು ಬೇಕಾದಲ್ಲಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.

The Canara Banking Corporation Ltd.

(Incorporated in British India with limited liability)

Estd 1906

OUR RATES OF INTEREST ON DEPOSITS

Current	1%	p. a.
Savings Bank	2½%	,,
Short-term	1¾%	,,
FIXED FOR 3 MONTHS	2%	,,
6 ,,	2¼%	,,
9 ,,	2¾%	,,
12 ,,	3%	,,
24 ,,	3½%	,,

Advances made at cheap rates of interest against approved securities and Banking business of every description transacted.

ಬ್ರಿಟಿಷರ ಆಳ್ವಿಕೆಯಿಂದ ಹಳ್ಳಿ ಸರಕಾರ ಹಾಳಾಯಿತು

ಪಂಜಾಬ್ ಮಂತ್ರಿಯ ಹೇಳಿಕೆ

ಬ್ರಿಟಿಷರ ಆಳ್ವಿಕೆಯಲ್ಲಿ ಹಲವು ಒಳ್ಳೆಯ ಸಂಗತಿಗಳು ಆಗಿದ್ದರೂ ಹಳ್ಳಿ ಸರಕಾರವು ಹಾಳಾಯಿತು ಎಂದು ಪಂಜಾಬ್ ಸರಕಾರದ ಸ್ಥಾನಿಕ ಖಾತೆಯ ಮಂತ್ರಿ ಮೇಜರ ಮಝಾರ್ ಖಾನರ ಹೇಳಿಕೆ.

ನೆಹರು ವಾಣಿ

'ಗಂಡಾಂತರ ಒದಗಿದೆ ಎಚ್ಚರಿಕೆಯಿಂದಿರಬೇಕು' ಎಂಬುದಾಗಿ ಪಂಡಿತ ನೆಹರುಗಳು ವಾರ್ಧಾದಲ್ಲಿ ರಾಷ್ಟ್ರಧ್ವಜಾರೋಹಣ ಮಾಡುತ್ತಾ ಹೇಳಿದರು ಭಾರತದ ಉದ್ಧಾರಕ್ಕಾಗಿ ಒಕ್ಕಟ್ಟಿನಿಂದ ಹೋರಾಡಬೇಕೆಂದರು.

ಬಾರ್ಡೋಲಿ ನಿರ್ಣಯದಿಂದ ಪರಿಸ್ಥಿತಿ ಕಠಿಣವಾಗುವುದು

ಕಾಂಗ್ರೆಸಿನ ಶಕ್ತಿ ಕುಂದುವುದು

ಸಮತಾವಾದಿಗಳ ಹೇಳಿಕೆ

'ಸರಕಾರವು ಸಂಧಾನವಾಡಲು ಒಪ್ಪಿದಾಗ, ಕಾಂಗ್ರೆಸು ಯುದ್ಧಕಾರ್ಯದಲ್ಲಿ ಭಾಗವಹಿಸಿದರೆ, ಕಾಂಗ್ರೆಸಿನ ಕೆಲವು ಪ್ರಮುಖ ಪಂಗಡಗಳು ದೂರ ಸರಿಯುವವು ಕಾಂಗ್ರೆಸಿನ ಶಕ್ತಿ ಕುಂದುವುದು. ಇದರಿಂದ ಕಾಂಗ್ರೆಸಿನ ಪರಿಸ್ಥಿತಿ ಕಠಿಣವಾಗುವುದು. ಬ್ರಿಟನಿನ ಯುದ್ಧದಲ್ಲಿ ಭಾಗವಹಿಸುವುದರಿಂದ ಭಾರತಕ್ಕೆ ಸ್ವಾತಂತ್ರ್ಯ ಸಿಗಲಾರದು ಎಂದಿತ್ಯಾದಿಯಾಗಿ ವಾರ್ಧಾದಲ್ಲಿ ಕೂಡಿದ ಸಮತಾವಾದಿಗಳು ಒಂದು ಪ್ರಕಟಣೆ ಹೊರಡಿಸಿದೆ.

ಸರ್ ಸ್ಟಾಪರ್ಡ್ ಕ್ರಿಪ್ಸರು ಭಾರತದ ಬಿಕ್ಕಟ್ಟು ಬಿಡಿಸಲು ಪ್ರಯತ್ನಮಾಡುವರು

ಸರ್ ಸ್ಟಾಪರ್ಡ್ ಕ್ರಿಪ್ಸರು ಮೋಸ್ಕೋದಿಂದ ತಿರುಗಿ ಬಂದವರು ರಾಜಕೀಯದಲ್ಲಿ ಪ್ರವೇಶಿಸಿ, ಭಾರತದ ಒಂದು ವಿಶೇಷ ಕಾರ್ಯದಲ್ಲಿ ತೊಡಗುವರೆಂದು ಕೆಲವರ ನಂಬಿಗೆಯಾಗಿದೆ ಈ ನಂಬಿಗೆಗೆ ಕ್ರಿಪ್ಸರು ಹಿಂದೆ ಭಾರತದ ವಿಷಯ ಲಕ್ಷ್ಯ ಹಾಕಿದ್ದು ಹಾಗೂ ನೆಹರುಗಳ ಭೇಟಿ ತೆಗೆದುಕೊಂಡುದು ಕಾರಣವಾಗಿದೆ ರಾಯಭಾರಿ ಸ್ಥಾನದಿಂದ ಕ್ರಿಪ್ಸರು ರಾಜಕೀಯ ಕ್ಷೇತ್ರಕ್ಕೆ ಮರಳಿ ಬರುವ ನಿರ್ಧಾರ ಮಾಡಿರುವರೆಂದು ತಿಳಿದಿದೆ, ಅಮೆರಿಯವರ ಸ್ಥಾನದಲ್ಲಿ ಕ್ರಿಪ್ಸರನ್ನು ನಿಯೋಜಿಸಲಾಗುವುದೆಂದು ಒಂದು ವದಂತಿಯಿದೆ

ಕಾಂಗ್ರೆಸಿನವರಿಗೆ ವರ್ಕಿಂಗ್ ಕಮಿಟಿ ಸಲಹೆ

ರಚನಾತ್ಮಕ ಕಾರ್ಯಕ್ರಮ ಜೋರಿನಿಂದ ನಡೆಸುವುದು

ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ವಾರ್ಧಾದಲ್ಲಿ ಸೇರಿ ರಚನಾತ್ಮಕ ಕಾರ್ಯಕ್ರಮಗಳನ್ನು ಈಗಿಗಿಂತ ಹೆಚ್ಚು ಜೋರಿನಿಂದ ಸಾಗಿಸುವ ಮತ್ತು ಅವುಗಳನ್ನು ಪುನರುಜ್ಜೀವನಗೊಳಿಸುವ ಅವಶ್ಯಕತೆಯು ಚರ್ಚಿಸಲ್ಪಟ್ಟಿತೆಂದು ತಿಳಿದಿದೆ, ಕಾಂಗ್ರೆಸು ಸತ್ಯಾಗ್ರಹವನ್ನು ಹಿಂತೆಗೆದುಕೊಂಡದ್ದರಿಂದಲೂ, ಪಾರ್ಲಿಮೆಂಟರಿ ಕಾರ್ಯಕ್ರಮಗಳಲ್ಲಿ ಭಾಗವಹಿಸತಕ್ಕದ್ದಲ್ಲವೆಂದು ನಿಶ್ಚಯಿಸಿದ್ದರಿಂದ ಕಾಂಗ್ರೆಸಿನ ಚಟುವಟಿಕೆಗಳು ಇನ್ನುಮೇಲೆ ಕೆಲವು ಕಾಲ ರಚನಾತ್ಮಕ ಕಾರ್ಯಕ್ರಮ ನಿರ್ವಹಿಸುವಲ್ಲಿ ನಡೆಸಲ್ಪಡುವುವೆಂದು ಹೇಳಲಾಗುತ್ತದೆ.

“ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ”

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

23-1-1942] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೨೩-೧-೧೯೪೨]

ಸಮರಭೂಮಿಯ ಸಂಚಾರ

ಜಪಾನರು ಈಗ ಫಿಲಿಪಯಿನ್, ಮಲಯ ಮತ್ತು ಡಚ್ ಇಂಡೀಸ್‌ಗಳ ಮೇಲೆ ಆಕ್ರಮಣ ಕಾರ್ಯವನ್ನು ಕೈಕೊಂಡಿರುವರು ಇದರಲ್ಲಿ ಫಿಲಿಪಯಿನ್ ಕಾಳಗವು ಈಗ ಕೊನೆಗಂಡಂತೆ ಆಗಿದೆ ಫಿಲಿಪಯಿನ್ ದೇಶದವರು ಬಹಳ ಕಲಿತನದಿಂದ ಕಾದಾಡಿದರೂ, ಹೊರಗಿನ ವಿಶೇಷ ಸಹಾಯ ದೊರಕದಿರುವುದರಿಂದ ಅವರ ಪ್ರತಿಭಟನೆಯು ಯಾವ ಪ್ರಯೋಜನವನ್ನೂ ಉಂಟುಮಾಡಲಿಲ್ಲ ಇನ್ನಾದರೂ ಅವರಿಗೆ ಹೊರಗಿನ ಸಹಾಯ ಬರುವಂತೆ ಕಂಡುಬರುವುದಿಲ್ಲ ಫಿಲಿಪಯಿನ್ ಜಪಾನರ ಜಗ್ಗಾಟಕ್ಕೆ ಸೋತು ಶರಣಾಗುವ ಸಂದರ್ಭದಲ್ಲಿ ಅಮೆರಿಕದ ಪ್ರೆಸಿಡೆಂಟರಾದ ರೂಸ್‌ವೆಲ್ಟರು ಬಹಳ ಭರವಸೆಯ ಮಾತೊಂದನ್ನು ಹೇಳಿದರು ಎಂದರೆ, ಫಿಲಿಪಯಿನಿನ ಸ್ವಾತಂತ್ರ್ಯವನ್ನು ತಾವು ಅವರಿಗೆ ತಿರುಗಿ ಸಂಪಾದಿಸಿ ಕೊಡುವೆವೆಂದು ಆ ಮಾತಿನ ಮಥಿತಾರ್ಥದ ವಿಷಯ ನಾವು ಇನ್ನು ಮುಂದೆ ನೋಡಬೇಕಾಗಿದೆ ಅಮೆರಿಕವು ಸುಮಾರು ಏಳು ಸಾವಿರ ಮೈಲುಗಳ ದೂರದಲ್ಲಿರುವುದರಿಂದ, ಅದಕ್ಕೆ ಒಮ್ಮೆಲೇ ಫಿಲಿಪಯಿನಿಗೆ ಸಹಾಯ ಕಳುಹಿಸಲಾಗಲಿಲ್ಲವೆಂಬುದೇನೋ ನಮಗೂ ತಿಳಿದುಕೊಳ್ಳಲು ಆಗುತ್ತದೆ ಈಗಲೂ ಫಿಲಿಪಯಿನಿನಲ್ಲಿ ಅಲ್ಲಿ ಇಲ್ಲಿ ಜಪಾನರನ್ನೆದುರಿಸಿ ಕಾಳಗವು ನಡೆಯುತ್ತಲೇ ಇದೆಯೆಂಬುದರಿಂದ ಹೊರಗಿನ ಹೆಚ್ಚಿನ ಸಹಾಯವು ಇನ್ನಾದರೂ ಒದಗಿದರೆ ಫಿಲಿಪೈನು ತಲೆಯೆತ್ತಬಹುದು

ಇತ್ತೀಚೆಗೆ ಜಪಾನರ ಆಕ್ರಮಣದಲ್ಲಿ ಹತವಾಗುತ್ತಿರುವ ರಾಷ್ಟ್ರವೆಂದರೆ ಮಲಯ ಮಲಯದ ಯುದ್ಧದಿಂದ ಭಾರತೀಯರು ತೀವ್ರ ಜಾಗ್ರತರಾಗಬೇಕಾಗಿದೆ ಮಲಯವು ಬರ್ಮೆಕ್ಕೆ ಸಮೀಪದಲ್ಲಿದ್ದು ಭಾರತದ ಬಾಗಿಲುಗಳಲ್ಲೊಂದಾಗಿದೆ ಅಲ್ಲಿ ಲಕ್ಷಾಂತರ ಮಂದಿ ಹಿಂದೀಯರೂ ಅನೇಕ ಕಾಲಗಳಿಂದ ಹೋಗಿ ನೆಲಸಿ ವಾಸಿಸುತ್ತಿದ್ದಾರೆ. ಇಷ್ಟರಲ್ಲಿಯೇ ಜಪಾನರ ಕೈವಶವಾಗಿರುವ ಪೆನಾಂಗ್, ಕೌಲಾಲಂಪುರ, ಇಪ್ಪೋಹಗಳಲ್ಲಿ ಹಲಮಂದಿ ಹಿಂದೀಯರು ತುಂಬಾ ನಷ್ಟಕ್ಕೊಳಗಾಗಿರುವರು ಇಲ್ಲಿಗೆ ಜಪಾನರ ಆಕ್ರಮಣ ಭೀತಿಯು ಬಹುಕಾಲದಿಂದಲೇ ಇತ್ತು ಹದಿನೆಂಟು ತಿಂಗಳ ಹಿಂದೆಯೇ ಯುದ್ಧದ ಸಿದ್ಧತೆ ನಡೆಯುತ್ತಿತ್ತು ಬ್ರಿಟಿಷರಾದರೂ ಮಲಯವನ್ನುಳಿಸಲು ಸಾಕಷ್ಟು ಸಾಹಸಮಾಡದಿದ್ದರೆ, ಶಾಂತಸಾಗರದ ಭದ್ರತೆ ಕೆಡುವಂತಾಗುವುದು ಆದರೆ ಜಪಾನರು ಯಾವುದೇ ತರದ ಮಲಯನರ, ಬ್ರಿಟಿಷರ ಎದುರಾಟವನ್ನೂ ಗಣಿಸದೆ ಒಮ್ಮೆಲೇ ಮುನ್ನುಗ್ಗಿ ಬಂದರು ಇದರಿಂದ ಅಲ್ಲಿನ ಬ್ರಿಟಿಷ್ ಸೈನ್ಯವೂ ಹಿಂದೆ ಸರಿದು ನಿಲ್ಲಬೇಕಾಯಿತು ಜಪಾನರು ಮಲಯದ ಪೂರ್ವ ಮತ್ತು ಪಶ್ಚಿಮ ಕರಾವಳಿ ಪ್ರದೇಶಗಳಲ್ಲಿಯೇ ಹೆಚ್ಚಾಗಿ ಮುನ್ನುಗ್ಗುತ್ತಿರುವರು ಇಂತಹ ಇಕ್ಕೆಳ ಆಕ್ರಮಣ ಕ್ರಮದಿಂದ ಬ್ರಿಟಿಷ್ ಸೈನಿಕರು ಬಹಳ ಪೇಚಾಟಕ್ಕೆ ಬೀಳಬೇಕಾಯಿತು ಜಪಾನರು ಪೂರ್ವ ಕರಾವಳಿಯಲ್ಲಿ ಕ್ವಾಂಟನ್ ವಿಮಾನಗೃಹವನ್ನು ಸ್ವಾಧೀನಪಡಿಸಿಕೊಂಡು ಫೋರಸಿನ ನದಿವರೆಗೆ ಮುನ್ನುಗ್ಗಿದ್ದಾರೆ ಪಶ್ಚಿಮ ಕರಾವಳಿಯಲ್ಲಿ ಕೆಡಾ ಪೆರಾಕ್, ಸೆಲಾಂಗೋರ್ ಮತ್ತು ಸೆಂಬಿಲಾನ್ ಪ್ರಾಂತಗಳನ್ನು ಇಟ್ಟುಕೊಂಡು ಟಾಂಪಿನ್ ನದಿವರೆಗೆ ಬಂದಿರುವರು ಅಂತೂ ಇದರಿಂದೆಲ್ಲ ಸಿಂಗಾಪುರದ ಮೇಲೆ ಭೀತಿ ಹೆಚ್ಚಾಗಿದೆ, ಜಪಾನ್ ಸೈನ್ಯವು ಸಿಂಗಾಪುರದಿಂದ ಕೇವಲ ನೂರು ಮೈಲುಗಳ ಅಂತರದಲ್ಲಿದೆ ಮಲಯದಲ್ಲಿ ಬ್ರಿಟಿಷರು ಹೀಗೆ ಹಿಂದೋಡುತ್ತಿರುವ ವಿಷಯದಲ್ಲಿ ಬೋರ್ನಿಯೋ ದ್ವೀಪದ ಸಾರವಾಕದ ರಾಜನು—ಆತನು ಇಂಗ್ಲಿಷ್ ರಾಜನು—ಈ ರೀತಿ ಹೇಳಿದ್ದಾನೆ ‘ಮಲಯದ ಇಂದಿನ ಪರಿಸ್ಥಿತಿಯು ಹೆಚ್ಚಿನ ಅಯೋಗ್ಯತೆ ಹಾಗೂ ಕೊಲೆಪಾತಕ ಸ್ವಭಾವದ ಅಲಕ್ಷ್ಯತನದಿಂದ ಆಗಿದೆ ಸಿಂಗಾಪುರದ ಕಂಚು ಟೊಪ್ಪಿಯವರನ್ನು ಕೂಡಲೇ ಹಿಂತೆಗೆಯಬೇಕು. ಗವರ್ನರರು ಮತ್ತು ಸೈನ್ಯಾಧಿಪತಿಗಳಲ್ಲಿ ಒಮ್ಮತವಿಲ್ಲ ಆರ್ ಎ ಎಫ್ ಮತ್ತು ನೌಕಾದಲಗಳು ಸಹಕರಿಸಲಿಲ್ಲ ಇದರಿಂದ ಮಲಯದ ದುರಂತವು ಬಂದೊದಗಿತು’ ಎಂದು. ವೈರಿಗಳನ್ನು ಎದುರಿಸಲು ತಾವು ಸಂಪೂರ್ಣ ಸಿದ್ಧರಿರುವೆವು ಎಂದು ಕೊಚ್ಚಿಕೊಳ್ಳುವವರ ಮಾತಿನ ಮಹತ್ವವನ್ನು ಈ ಹೇಳಿಕೆ ಬಯಲಿಗೆಳೆದಿದೆ ಮಲಯದಲ್ಲಿ ಈಗ ಗೇಮಾಸದ ಬಳಿ ಯುದ್ಧ ನಡೆಯುತ್ತಿದೆ ಮಾಫುರ್ ನದಿಯ ಬಳಿ ಬ್ರಿಟಿಷರು ಹಿಂದೆ ಸರಿದರೆಂದು ಇತ್ತೀಚಿನ ಒಂದು ಸುದ್ದಿ

ಸಿಂಗಾಪುರಕ್ಕೆ ಕೇವಲ ೨೫ ಮೈಲುಗಳ ದೂರಕ್ಕೆ ಈಗ ಜಪಾನು ಸೈನ್ಯವು ಬಂದಿದೆಯೆಂದು ಅನಧಿಕೃತ ಸುದ್ದಿ ಬಂದಿರುವುದು ಮಲಯದಲ್ಲಿ ಜಪಾನರು ಒಂದೇ ರೀತಿಯಲ್ಲಿ ಮುಂದುವರಿಯುತ್ತಲೇ ಇದ್ದಾರೆ ಮಧ್ಯ ಮಲಯದಿಂದ ಸರಿಯಾಗಿ ಸಿಂಗಾಪುರದ ಕಡೆಗೆ ಮುನ್ನುಗ್ಗುತ್ತಿರುವುದನ್ನು ಬಿಟ್ಟು ಜಪಾನರು ಜೋಹೋರ ಕರಾವಳಿಯ ಕಡೆಗೆಲ್ಲ ಸೈನ್ಯವನ್ನಿಳಿಸಲು ಸಾಹಸಪಡುತ್ತಿರುವರು ಮಲಯದಲ್ಲಿ ಜಪಾನರು ಒಂದು ಹೊಸ ತಂತ್ರವನ್ನು ಮಾಡುತ್ತಿರುವರಾಗಿ ಹೇಳಲಾಗಿದೆ ಪಶ್ಚಿಮ ರಣಭೂಮಿಯ ಗುಪ್ತಸ್ಥಳಗಳಲ್ಲಿ ತಮ್ಮ ಸೈನ್ಯಗಳನ್ನು ಇಳಿಸಿ ಇಡೀ ಪ್ರಾಂತವನ್ನು ಇಬ್ಭಾಗಿಸಿ ಅನಂತರ ಬ್ರಿಟಿಷರನ್ನು ಹಿಂದೋಡಿಸುವ ಆಲೋಚನೆ ಮಾಡುತ್ತಿರುವರೆಂದೂ ಸುದ್ದಿ ಸಿಂಗಾಪುರದ ಮೇಲೆ ಜಪಾನು ವಿಮಾನಗಳು ಧಾಳಿಮಾಡುತ್ತಲಿವೆ ಹಲವು ಹಾನಿಗಳೂ ಆಗಿರುವುದು

ಬೋರ್ನಿಯೋ ಜಾವಾ ಸುಮಾತ್ರಾ ಮತ್ತು ಸೆಲಿಬಿಸಗಳಿಂದ ಕೂಡಿದ ಡಚ್ ಇಂಡೀಸನ್ನು ಜಪಾನರು ಆಕ್ರಮಣ ಮಾಡಿರುವರು ಡಚ್ ಇಂಡೀಸು ಅಪಾರ ಸಂಪತ್ಸಮೃದ್ಧ ದೇಶ ಸಕ್ಕರೆ, ರಬ್ಬರು, ಕಾಫಿ, ಹೊಗೆಸೊಪ್ಪು ತವರ ಮತ್ತು ಎಣ್ಣೆ ಇವು ಇಲ್ಲಿ ಧಾರಾಳ ದೊರಕುತ್ತವೆ ಇವೆಲ್ಲಾ ಈಗ ಜಪಾನಿಗೆ ಬೇಕಾಗಿದೆ ಮಾತ್ರವಲ್ಲದೆ ಸಿಂಗಾಪುರವನ್ನು ಮುತ್ತಬೇಕಾದರೂ ಡಚ್ಚ ಇಂಡೀಸನ್ನು ಕೈವಶ ತೆಗೆದುಕೊಳ್ಳಬೇಕಾಗಿದೆ ಡಚ್ ಇಂಡೀಸನ್ನು ಜಪಾನರು ಸ್ವಾಧೀನಪಡಿಸಿದರೆ ಸಿಂಗಾಪುರದ ಭವಿತವ್ಯ ಕೆಟ್ಟುಹೋದಂತೆಯೇ ಆಗುವುದೆಂದು ಅನೇಕ ರಾಜಕಾರಣಿಗಳೇ ಒಪ್ಪಿದ್ದಾರೆ ಜಾವಾ ಒಂದು ದ್ವೀಪವನ್ನು ಬಿಟ್ಟರೆ ಮಿಕ್ಕ ಯಾವ ದ್ವೀಪಗಳಲ್ಲಿಯೂ ಜಪಾನರಿಗೆ ಹೆಚ್ಚಿನ ಪ್ರತಿಬಂಧಕವುಂಟಾಗಿರುವುದಿಲ್ಲ ಸುಮಾತ್ರಾ, ಬೋರ್ನಿಯೋ ಸೆಲಿಬೆಸ್‌ಗಳು ಜಪಾನರ ಕೈವಶಬಿದ್ದಿರುವುದರಿಂದ ಅಲ್ಲಿ ಮುಂದಕ್ಕೆ ಜಪಾನ್ ನೌಕಾಸಂಚಾರವಾಗಲು ಆತಂಕವುಂಟಾಗಲಾರದು ಮಲಯದಲ್ಲಿ ಮುನ್ನುಗ್ಗುತ್ತಿರುವ ಜಪಾನೀ ಸೈನಿಕರೂ, ಡಚ್ ಇಂಡೀಸಿನಲ್ಲಿ ಮುನ್ನುಗ್ಗುತ್ತಿರುವವರೂ ಮುಂದೆ ಒಂದೇ ಸಮಯದಲ್ಲಿ ಪ್ರಬಲವಾಗಿ ಸಿಂಗಾಪುರವನ್ನು ಭೇದಿಸಲು ಆಕ್ರಮಿಸಬಹುದು

ರಶ್ಯ ಜರ್ಮನ್ ಯುದ್ಧದಲ್ಲಿ ಜರ್ಮನರಿಗೆ ಸೋಲೇ ಒದಗುತ್ತಿದೆ ಮೋಸ್ಕೋ ಮಾರ್ಗದಲ್ಲಿ ಜರ್ಮನರ ಭದ್ರವಾದ ಠಾಣ್ಯವಾಗಿದ್ದ ಮೊಜಾಯಿಸ್ಕ ನಗರವು ಈಗ ಉರಿಯುತ್ತಿರುವುದಾಗಿ ಸುದ್ದಿಬಂದಿದೆ ಜರ್ಮನರು ಈಗ ಹಿಟ್ಲರನು ಏರಿ ಬಿಟ್ಟಿರುವ ಸ್ಮೋಲೆನ್ಸ್ಕ್‌ದ ಕಡೆಗೆ ಹಿಂಜರಿಯುತ್ತಿದ್ದಾರಂತೆ ಹೀಗೆ ಹಲವು ಹಳ್ಳಿ ನಗರಗಳು ಜರ್ಮನ್ ದಾಸ್ಯದಿಂದ ಈಗ ಮುಕ್ತಹೊಂದಿರುವ ವರದಿ ಬಂದಿರುವುದು ಕ್ರಿಮಿಯದಲ್ಲಿಯೂ ರಶ್ಯನರೇ ಮುಂದೊತ್ತಿದ್ದಾರೆ ಸೆಬಾಸ್ತಪೋಲಿಗೆ ಮುತ್ತಿಗೆ ಹಾಕಿದ ಇಟೆಲಿಯ ರುಮೇನಿಯದ ಸೈನಿಕರೂ ಹಿಂದೋಡಿದ್ದಾರೆ ಖಾರಕೋವ ಭಾಗದಲ್ಲಿ ಜರ್ಮನ ಪ್ರತಿಧಾಳಿಗಳು ಬಹಳ ಜೋರಾಗಿದ್ದವು ಮೋಸ್ಕೋ ರಣರಂಗದಲ್ಲಿಯೂ ಯುದ್ಧವಾಗುತ್ತಲಿದೆ ಇದೆ ಕ್ರಿಮಿಯದಲ್ಲಿರುವ ಫಿಯೋಡೋಸಿಯಾ ಪುನಃ ಜರ್ಮನರ ಕೈವಶ ಬಂತೆಂದು ಹೇಳಲಾಗಿದೆ

ಲಿಬಿಯದ ರಣಭೂಮಿಯಲ್ಲಿ ಮುಂದಲಗಳ ಚಟುವಟಿಕೆಯ ಹೊರತು ಬೇರೇನೂ ಇಲ್ಲವಾಗಿ ಸುದ್ದಿ ಎಲ್ ಅಜೇರಾ ರಣಭೂಮಿಯೂ ಶಾಂತರೀತಿಯಲ್ಲಿರುವುದು. ಹೆಲ್ಫಾಯದಲ್ಲಿ ಅಸಂಖ್ಯ ಶತ್ರುಗಳನ್ನು ಸೆರೆಹಿಡಿದಿರುವರು ಬಾರ್ಡಿಯಾ, ಸೊಲ್ಲುಮ್ ಮತ್ತು ಹೆಲ್ಫಾಯಗಳಲ್ಲಿ ಒಟ್ಟು ಸುಮಾರು ೨೪ ಸಾವಿರಕ್ಕೆ ಮಿಕ್ಕಿದ ಇಟಲಿ ಜರ್ಮನಿ ಸೈನಿಕರು ಸೆರೆಸಿಕ್ಕಿರುವರು ಬ್ರಿಟಿಷರ ವಿಮಾನ ನೌಕಾಪಡೆಗಳು ಇಲ್ಲಿ ಅತ್ಯಂತ ಯಶಸ್ವಿಯಾಗಿ ಹೋರಾಡಿರುವವು

ಬರ್ಮಾದೇಶದ ಮುಖ್ಯಮಂತ್ರಿ ಯೂಸಾರನ್ನು ಯೂರೋಪಿನಿಂದ ಅವರ ದೇಶಕ್ಕೆ ಈಗ ಮರಳಿಬರದಂತೆ ನಿರ್ಬಂಧಿಸಿರುವರೆಂಬ ವಾರ್ತೆಯು ಎಲ್ಲರನ್ನೂ ಆಶ್ಚರ್ಯಗೊಳಿಸಿದೆ ಜಪಾನು ಬ್ರಿಟನಿನ ಮೇಲೆ ಯುದ್ಧ ಸಾರಿದ ಬಳಿಕ ಯೂ ಸಾರವರು ಜಪಾನ್ ಅಧಿಕಾರಿಗಳ ಸಂಬಂಧವಿಟ್ಟುಕೊಂಡಿರುವರೆಂದು ಅವರಮೇಲೆ ಆರೋಪ ಹಾಕಿ ಹೀಗೆ ನಿರ್ಬಂಧಿಸಲ್ಪಟ್ಟಿರುವುದು ಅವರು ಅನೇಕ ಮಂದಿ ಜಪಾನೀ ಮಿತ್ರರನ್ನು ಕಂಡು ಮಾತನಾಡುತ್ತಿದ್ದರು ಅದನ್ನು ಅವರೇ ಈಗ ಒಪ್ಪಿಕೊಂಡಿರುವರೆಂದು ಸರಕಾರವು ಪ್ರಕಟಿಸುತ್ತದೆ ಆದ್ದರಿಂದ ಅವರನ್ನು ಬರ್ಮಕ್ಕೆ ಬರದಂತೆ ತಡೆಗಟ್ಟುವುದು ಅನಿವಾರ್ಯವಾಯಿತೆಂದು ಪ್ರಕಟಿಸಲಾಗಿದೆ ಯೂ ಸಾರವರು ಕಳೆದ ಅಕ್ಟೋಬರ್ ತಿಂಗಳಲ್ಲಿ ಬರ್ಮದ ಭವಿಷ್ಯದ ವಿಚಾರ ಮಾತನಾಡಲು ಲಂಡನಿಗೆ ಹೋಗಿದ್ದರು ಅವರು ಅಲ್ಲಿ ೩, ೪ ವಾರಗಳವರೆಗೆ ಪ್ರಧಾನ ಮಂತ್ರಿ ಚರ್ಚಿಲರೊಡನೆ ಮಾತುಕತೆ ಮಾಡಿದರು ಈ ವಿಚಾರ ವಿನಿಮಯದಿಂದ ತಮಗೆ ಅತೃಪ್ತಿಯಾಗಿದೆಯೆಂದೂ ಅವರು ಹೇಳಿದ್ದರು ಆ ಮೇಲೆ ಮಾತೃಭೂಮಿಗೆ ಮರಳಿ ಬರುವಾಗ ಮಾರ್ಗದಲ್ಲಿ ಅಮೆರಿಕ ಆಸ್ಟ್ರೇಲಿಯ ಮತ್ತು ನ್ಯೂಜಿಲೆಂಡುಗಳನ್ನು ಸಂದರ್ಶಿಸಬೇಕೆಂದು ಬಯಸಿದ್ದರು ಜಪಾನರು ಯುದ್ಧ ಸಾರುವಾಗ ಅವರು ಹೊನಲುಲುವಿನಲ್ಲಿದ್ದರು ಅವರನ್ನು ಈಗ ಅಲ್ಲಿ ನಿರ್ಬಂಧಿಸಲಾಗಿದೆ ಯೂ ಸಾರವರನ್ನು ಈ ಕಾಲದಲ್ಲಿ ನಿರ್ಬಂಧಿಸಿದ್ದರಿಂದ ಬ್ರಿಟನು ಬರ್ಮದ ಜನರನ್ನು ಹೆಚ್ಚು ಅತೃಪ್ತಿಪಡಿಸಿದಂತೆಯೇ ಆಗುತ್ತದೆ

Ten Lacs In Ten Minutes

The lists of our 5% Cumulative Preference Shares which opened on 19th January closed the same day before noon

The subscriptions received within those few minutes totalled over Rupees Fourteen Lacs

We thank our customers, friends and depositors whose unstinted support enabled us to close the lists in so short a time

We thank them for this proof of their sympathy and confidence and assure them that we will try to deserve this confidence in every way possible.

Canara Bank Limited.

ESTD. 1906.

ಸ್ವದೇಶಾಭಿಮಾನಿ

ತಾರೀಕು 23—1—1942

ವಿಭಾಗವಾಗಲಿಲ್ಲ

'ವರ್ಧಾದಲ್ಲಿ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಸಭೆ ಸೇರುವ ಸಂದರ್ಭದಲ್ಲಿ ಹಲವರು ಬಗೆದಿದ್ದರು, ಬಾರ್ಡೋಲಿ ನಿರ್ಣಯದ ವಿಷಯವಾಗಿ ಕಾಂಗ್ರೆಸಿನಲ್ಲಿ ಶುದ್ಧ ಅಹಿಂಸಾವಾದಿಗಳೆಂದರೆ ಗಾಂಧಿ ಪಕ್ಷದವರ ಹಾಗೂ ಇತರರ ಎರಡು ಪಂಗಡಗಳಾಗಿ ವಿಭಾಗವುಂಟಾಗಬಹುದೆಂದು. ಸ್ವತಃ ಮಹಾತ್ಮರೇ ಆದರೂ ಅಂತಹ ವಿಭಾಗವಾಗುವುದನ್ನು ಮೊತ್ತಮೊದಲು ಯೋಚಿಸಿದ್ದರೆಂದರೆ ಇತರರು ಊಹಿಸುತ್ತಿದ್ದುದರಲ್ಲಿ ಆಶ್ಚರ್ಯಪಡಬೇಕಾಗಿಲ್ಲ. ಇದಕ್ಕೆ ಆಧಾರವೆಂಬಂತೆ ಸರ್ದಾರ್ ರಾಜೇಂದ್ರಬಾಬು ಮೊದಲಾಗಿ ನಾಲ್ವರು ವರ್ಕಿಂಗ್ ಕಮಿಟಿಯ ಸದಸ್ಯರೇ ಬಾರ್ಡೋಲಿ ನಿರ್ಣಯವನ್ನು ಅಖಿಲ ಭಾರತ ಕಾಂಗ್ರೆಸ್ ಕಮಿಟಿಯಲ್ಲಿ ವಿರೋಧಿಸಬೇಕೆಂಬ ಪ್ರಕಟಣೆ ಹೊರಡಿಸಿದ್ದರು. ಆದರೆ ಅಂತಹ ವಾತಾವರಣವೆಲ್ಲವೂ ಒಮ್ಮೆಗೇ ಮಾಯವಾಗಿ, ಕಾಂಗ್ರೆಸಿನಲ್ಲಿ ವಿಭಾಗವಾಗದೆ, ಒಮ್ಮತದಿಂದ, ಗಾಂಧಿಜಿಯವರ ಸಮ್ಮತಿಯಿಂದಲೇ ಬಾರ್ಡೋಲಿ ನಿರ್ಣಯವು ಮಂಜೂರಾಗಿರುವ ವಿಷಯವು ಕಾಂಗ್ರೆಸಿನ ಐಕ್ಯ ಶಕ್ತಿಯನ್ನು ಇನ್ನಷ್ಟು ಬಲಪಡಿಸಿದೆ. ದೇಶದ ಮುಖಂಡರ ಹೆಚ್ಚಾಗಿ ಗಾಂಧಿಜಿಯವರ ಹೃದಯ ವಿಶಾಲತೆಯನ್ನು ಇದು ವ್ಯಕ್ತಪಡಿಸುತ್ತದೆ.

ಗಾಂಧಿಜಿಗೆ ಮನಸ್ಸಿದ್ದರೆ, ಗಾಂಧಿಜಿ ತನ್ನ ಅಹಿಂಸಾ ತತ್ವದ ಸಲುವಾಗಿ ವಾದಿಸಿ ಕಳಕಳಿಯ ಬಿನ್ನಹ ಹೊರಡಿಸಿದ್ದರೆ ಬಾರ್ಡೋಲಿ ನಿರ್ಣಯವನ್ನು ರದ್ದುಗೊಳಿಸುವುದು ಶಕ್ಯವಿರಲಿಲ್ಲವೆಂದು ನಾವು ಭಾವಿಸುವುದಿಲ್ಲ. ಆದರೆ ಮಹಾತ್ಮರು ಅಂತಹ ಪ್ರಸಂಗವನ್ನು ಉಂಟುಮಾಡಲಿಲ್ಲವೆಂಬುದು ಅವರ ಗೌರವವನ್ನೇ ಹೆಚ್ಚಿಸಿದೆಯೆನಬೇಕು. ಬಹು ಪಕ್ಷದವರ ಅಭಿಪ್ರಾಯವನ್ನವಲಂಬಿಸಿ, ಅದು ತನಗೆ ಹಿತವಾಗಿರಲಿ ಇಲ್ಲದಿರಲಿ, ಕಾರ್ಯ ಸಾಧಿಸುವುದು ದೇಶದ ಏಳಿಗೆಗೆ ಯೋಗ್ಯವೆಂಬುದನ್ನು ಮಹಾತ್ಮರು ತಿಳಿದು ವರ್ತಿಸಿದರು. ಆದರಿಂದಲೇ ವರ್ಧಾದಲ್ಲಿ ಕಾಂಗ್ರೆಸ್ ಮುಖಂಡರಲ್ಲಿ ವಿಭಾಗವಾಗಲಿಲ್ಲ. ಎಲ್ಲರೂ ಒಮ್ಮತದಿಂದ ಏಕ ಬುದ್ಧಿಯಿಂದ ಬಾರ್ಡೋಲಿ ನಿರ್ಣಯವನ್ನು ಮಂಜೂರು ಮಾಡಿದರು. ಕಾಂಗ್ರೆಸು ಕೇವಲ ಅಹಿಂಸಾ ತತ್ವವನ್ನವಲಂಬಿಸಿ ನಮ್ಮೊಡನೆ ಸಹಕರಿಸಲೊಪ್ಪದೆ, ದೇಶರಕ್ಷಣೆ ಮಾಡಲು ತಯಾರಿಲ್ಲದೆ ಇದ್ದುದರಿಂದ ಭಾರತೀಯರು ಸ್ವತಂತ್ರ ಸರಕಾರವನ್ನು ಪಡೆಯಲಾರದಾದರು ಎಂದು ಬ್ರಿಟಿಷರು ಹೇಳಬಹುದಾಗಿದ್ದ ಅಪವಾದದ ಹೊರೆಯನ್ನು ಕಾಂಗ್ರೆಸಿನ ಮುಖಂಡರು ತಮ್ಮ ಮೇಲಿಂದ ತಪ್ಪಿಸಿಕೊಂಡು, ಬ್ರಿಟಿಷ್ ಸರಕಾರದ ಮೇಲೆಯೇ ಹಾಕಿದ್ದಾರೆ. ಬಾರ್ಡೋಲಿ ನಿರ್ಣಯವನ್ನು ವರ್ಧಾದಲ್ಲಿ ಸೇರಿದ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯೂ ಮಂಜೂರು ಮಾಡಿ ಸರಕಾರವನ್ನು ಸಂಧಕ್ಕೆ ಕರೆದಿದೆ. ಇದಕ್ಕೆ ಯಾವ ರೀತಿಯ ಉತ್ತರ ಬರುವುದೋ ಮುಂದೆ ನೋಡಬೇಕಾಗಿರುವುದು.

ಪಾರ್ಲಿಮೆಂಟರಿ ಕಾರ್ಯಕ್ರಮ

ಕಾಂಗ್ರೆಸಿನವರು ಪಾರ್ಲಿಮೆಂಟರಿ ಕಾರ್ಯಕ್ರಮವನ್ನು ಕೈಕೊಳ್ಳಲು ಆತುರರಿರುವರೆಂದು ಕೆಲವರಲ್ಲಿ ಇತ್ತೀಚೆಗೆ ಅಭಿಪ್ರಾಯವುಂಟಾಗಿತ್ತು. ರಾಜಾಜಿ ಮೊದಲಾದವರ ಮೇಲೆ ಅವರ ಟೀಕಾಕಾರರು ಅಂತಹ ದೂರನ್ನು ಹೊರಿಸದಿರಲಿಲ್ಲ. ಆದರೆ ರಾಜಾಜಿಯೇ ಈಗ ಆ ವಿಷಯದಲ್ಲಿ ಸ್ಪಷ್ಟೀಕರಣವಿತ್ತಿದ್ದಾರೆ. ಸಂಪೂರ್ಣ ಅಧಿಕಾರವಿಲ್ಲದೆ-ಕೇಂದ್ರದಲ್ಲಿ ಅಧಿಕಾರಸಿಗದೆ ಪ್ರಾಂತಿಕ ಆಡಳಿತವನ್ನು ಅಂಗೀಕರಿಸುವುದಿಲ್ಲವೆಂದು ಖಂಡಿತವಾಗಿ ಹೇಳಿದ್ದಾರೆ.

ನೆಹರುಗಳೂ ಅದೇ ರೀತಿಯಾಗಿ ಸಾರಿರುವರು. ಈಗಿನ ಸಂದರ್ಭದಲ್ಲಿ ಪ್ರಾಂತಿಕ ಆಡಳಿತವನ್ನು ಅಂಗೀಕರಿಸುವುದರಿಂದ ದೇಶಕ್ಕೆ ಏನೂ ಹಿತ ಮಾಡಲಾಗುವುದಿಲ್ಲವೆಂಬುದನ್ನು ಕಾಂಗ್ರೆಸಿನ ಮುಂದಾಳುಗಳು ಬಲ್ಲರು. ಕಾಂಗ್ರೆಸು ಅಲ್ಪಸ್ವಲ್ಪ ಅಧಿಕಾರದಿಂದ ತೃಪ್ತಿ ಹೊಂದುವಂತಿಲ್ಲ. ಕೇಂದ್ರದ ಆಡಳಿತವು ದೇಶೀಯರ ಕೈಗೆ ಬರದ ವಿನಾ ಪಾರ್ಲಿಮೆಂಟರಿ ಕಾರ್ಯಕ್ರಮವನ್ನು ಕಾಂಗ್ರೆಸು ಕೈಕೊಳ್ಳುವ ವಿಚಾರವೇ ಹುಟ್ಟುವಂತಿಲ್ಲ. ಸಂಪೂರ್ಣ ಸ್ವಾತಂತ್ರ್ಯವನ್ನು ಹಿಂದೂದೇಶಕ್ಕೆ ಕೊಡದ ಹೊರತು-ಕೊಡುವೆವೆನ್ನುವ ಭರವಸೆ ಸಾಲದು, ಕೃತಿಬೇಕು-ಯುದ್ಧಯತ್ನದಲ್ಲಿ ಭಾರತೀಯರು ಸಹಕರಿಸುವಂತೆಯೂ ಇಲ್ಲವೆಂಬುದು ಈಗ ನಿಶ್ಚಯವಾಗಿರುವುದು.

ಕೆನರಾ ಬ್ಯಾಂಕಿನ ಶೇರುಗಳು

ಕೆನರಾ ಬ್ಯಾಂಕ್ ಲಿಮಿಟೆಡ್‌ನವರು ಶೇಕಡಾ ಐದರ ಕ್ಯುಮುಲೆಟಿವ್ ಪ್ರಿಫರೆನ್ಸ್ ಶೇರು ಲಿಸ್ಟುಗಳನ್ನು ಪ್ರಾರಂಭಿಸಿ ತೆರೆದ ಕೆಲವೇ ತಾಸುಗಳಲ್ಲಿ ಮುಚ್ಚಿದರಾಗಿಯೂ, ಆ ಅಲ್ಪ ಅವಧಿಯೊಳಗೆ ೧೪ ಲಕ್ಷ ರೂಪಾಯಿಗಳಿಗೆ ಮಿಕ್ಕಿದ ಶೇರ್ ಅರ್ಜಿಗಳು ಬಂದಿರುವುದಾಗಿಯೂ ತಿಳಿದು ನಾವು ಬೇಂಕಿನ ಆಡಳಿತವನ್ನು ಅಭಿನಂದಿಸುತ್ತೇವೆ. ತಿಂಗಳು ವರ್ಷಗಟ್ಟಲೆ ಶೇರ್ ಲಿಸ್ಟುಗಳನ್ನು ತೆರೆದಿಡುವಂತಹ ಪರಿಸ್ಥಿತಿ ಕೆಲವು ಕಡೆಗಳಲ್ಲಿರುವಾಗ, ಕೆನರಾ ಬ್ಯಾಂಕು ಹೊಂದಿದ ಈ ಯಶಸ್ಸು ಅದರ ಹಲಗಾಲದ ಸೇವೆ ಸಾರ್ವಜನಿಕ ಪ್ರೀತಿಗೆ ನಿದರ್ಶನವೆನ್ನಬಹುದು.

ಸಮಯಕ್ಕೆ ಸರಿಯಾಗಿ ತಮ್ಮ ಅರ್ಜಿಗಳನ್ನು ಕಳುಹಿಸಲಾಗದ ಹಲವರು ನಿರಾಶರಾಗಲು ಕಾರಣವಿದೆ. ಆದರೆ ನಮ್ಮ ಜಿಲ್ಲೆಯ ಒಂದು ಬ್ಯಾಂಕ್ ಇಷ್ಟೊಂದು ಜನಪ್ರಿಯವಾಗಿದೆಯೆಂಬುದರಿಂದ ಅವರು ತಮ್ಮ ನಿರಾಶೆಯನ್ನು ನೀಗಾಡಿಸಿಕೊಳ್ಳಬಹುದು. ನಾವು ಈ ಸಂದರ್ಭದಲ್ಲಿ ಕೆನರಾ ಬೇಂಕಿನ ಸಮರ್ಥ ಆಡಳಿತ ಮಂಡಳಿಯನ್ನು, ಕೆಲಸಗಾರರನ್ನು ವಿಶೇಷವಾಗಿ ಈಗಿನ ಅದರ ಸಂಚಾಲಕರಾದ ಶ್ರೀ ಸರ್ವೋತ್ತಮ ನಾಯಕ್ ಇವರನ್ನು ಅಭಿನಂದಿಸದಿರಲಾರೆವು.

ನೋಟಗಳು....

ರೂಸ್‌ವೆಲ್ಟರೊಡನೆ ಮಾತನಾಡಲು ಅಮೇರಿಕಕ್ಕೆ ತೆರಳಿದ್ದ ಚರ್ಚಿಲ್ಲರು ಅಲ್ಲಿನ ಮಾತುಕತೆಗಳೆಲ್ಲವನ್ನೂ ಮುಗಿಸಿಕೊಂಡು, ಕೆಲವೇ ನಿಮಿಷಗಳಲ್ಲಿ ಹಲವು ಮೈಲುಗಳನ್ನು ಹಾರಿ (ವಿಮಾನದಲ್ಲಿ ಕುಳಿತು) ಈಗ ಮರಳಿ ಬಂದಿರುವರು

卐

ಚರ್ಚಿಲ್ಲರು ಮತ್ತು ರೂಸ್‌ವೆಲ್ಟರು ಮಾತುಕತೆ ನಡೆಸುತ್ತಿದ್ದಾಗ, ಅಮೇರಿಕದ ಹಾಗೂ ಬ್ರಿಟನಿನ ಹಲವು ಪ್ರಮುಖ ಪತ್ರಿಕೆಗಳು ಚರ್ಚಿಲ್ಲರು ಹಿಂದೂಸ್ಥಾನದ ಸಮಸ್ಯೆಯನ್ನು ಈಗಲಾದರೂ ಪರಿಹರಿಸುವುದು ಅವಶ್ಯವಿದೆಯೆಂದು ಪ್ರಬಲವಾಗಿ ವಾದಿಸುತ್ತಿದ್ದವು

卐

ಆದರೆ ಚರ್ಚಿಲರನ್ನು ಅಮೇರಿಕದ ಪತ್ರಿಕೋದ್ಯೋಗಿಗಳು ಭೇಟಿಯಾಗಿ ಗಾಂಧಿಜಿ ಕಾಂಗ್ರೆಸಿನ ಮುಂದಾಳುತನದಿಂದ ದೂರನಿಂತು ಬಾರ್ಡೋಲಿ ಠರಾವಿನಂತೆ, ಕಾಂಗ್ರೆಸು ಯುದ್ಧಯತ್ನದಲ್ಲಿ ಸಹಕರಿಸಲು ಸಿದ್ಧರಿರುವ ನಿರ್ಣಯ ಮಾಡಿದ ವಿಚಾರದಲ್ಲಿ ಅಭಿಪ್ರಾಯ ಕೇಳಲು, ಅವರು ಗಾಂಧಿಜಿ ಮತ್ತು ಕಾಂಗ್ರೆಸಿನ ವಿಚಾರ ತನಗೀಗ ಗೊತ್ತಿಲ್ಲವೆಂದು ಹೇಳಿದರಾಗಿ ಪ್ರಕಟವಾಗಿದೆ

卐

ಈಗ ಕಾಮನ್ಸಿನಲ್ಲಿ ಮರಳಿಬಂದ ಚರ್ಚಿಲರೊಡನೆ ಹಿಂದೂಸ್ಥಾನದ ವಿಷಯ ಪ್ರಶ್ನೆ ಕೇಳಿದಾಗ, 'ಸಪ್ರು ಮೊದಲಾದವರು ಮಾಡಿದ ಮನವಿ ತನಗೆ ಅಮೇರಿಕದಿಂದ ಮರಳಿದ ಬಳಿಕ ದೊರಕಿತು, ಕಾಲಾನುಕ್ರಮದಲ್ಲಿ ಆ ವಿಷಯ ಯೋಗ್ಯ ಆಲೋಚನೆ ಮಾಡಲಾಗುತ್ತದೆ ಆದರೆ ಯುದ್ಧವು ಹಿಂದೂದೇಶದ ಬಾಗಿಲಿಗೆ ಬಂದಿರುವಾಗ ಹೆಚ್ಚಿನ ರಾಜಕೀಯ ಬದಲಾವಣೆಗಳ ಪ್ರಶ್ನೆಯೆತ್ತಬಾರದು' ಎಂದು ಹೇಳಿದರಾಗಿ ಸುದ್ದಿ ಬಂದಿದೆ

卐

'ಬ್ರಿಟಿಷ್ ಸಾಮ್ರಾಜ್ಯದ ಮುಖ್ಯ ಮಂತ್ರಿಯೊಬ್ಬನನ್ನು ಬಂಧಿಸಿ ಅವರು ತಮ್ಮ ದೇಶಕ್ಕೆ ಬರದಂತೆ ತಡೆಗಟ್ಟುವುದಕ್ಕಿಂತ ಬ್ರಿಟಿಷ್ ಸರಕಾರವು ಮತ್ತೇನನ್ನಾದರೂ ಮಾಡಬಹುದಿತ್ತು' ಎಂಬುದಾಗಿ ಬರ್ಮದ ಪ್ರಧಾನ ಮಂತ್ರಿ ಯೂಸಾರನ್ನು ಹೊನಲುಲಿನಲ್ಲಿ ಬಂಧಿಸಿದ ವಿಚಾರ ರಾಜಾಜಿ ಅಭಿಪ್ರಾಯವಿತ್ತಿರುವರು.

卐

ಯೂಸಾರವರು ಚರ್ಚಿಲರೊಡನೆ ಮಾತನಾಡಲು ಲಂಡನಿಗೆ ಹೋಗಿದ್ದಾಗ ಅವರಿಗೆ ಒಂದು ಪೆಟ್ಟಿಗೆ ಸಿಗಾರ್ ಕೊಟ್ಟಿದ್ದರಂತೆ! ಸಿಗಾರ್ ಎಂದರೆ ಚರ್ಚಿಲರಿಗೆ ಬಹಳ ಪ್ರೀತಿಯ ವಸ್ತುವೆಂದು ಯೂಸಾರಿಗೆ ಗೊತ್ತು! ಸಿಗಾರ್ ಕೊಟ್ಟರೂ ಬರ್ಮದ ರಾಜಕೀಯ ಬದಲಾವಣೆ ವಿಷಯ ಮಾತನಾಡಬೇಡಿ ಎಂದು ಚರ್ಚಿಲರು ಹೇಳಿ ಯೂಸಾರರನ್ನು ನಿರಾಶೆಗೊಳಿಸಿದರೆಂದು ಪ್ರಕಟವಾಗಿದೆ.

卐

'ನನಗೆ ನಿರಾಶೆಯಾದರೂ ಬ್ರಿಟಿಷರ ಬಗ್ಗೆ ಸಿಟ್ಟಿಲ್ಲ!' ಎಂದು ಲಂಡನನ್ನು ಬಿಡುವಾಗ ಯೂಸಾರು ಹೇಳಿದ್ದರು. "ತಮಗೆ ಪರಿಚಯವಿಲ್ಲದ ಪಿಶಾಚಿಗಿಂತ ನಾವು ಪರಿಚಯವಿರುವ ಪಿಶಾ

(3ನೇ ಕಲಮನ್ನು ನೋಡಿರಿ)

ಚಿಯನ್ನೇ ನಂಬುವೆವು" ಇದು ಅವರು ಹಿಂದೊಮ್ಮೆ ಜಪಾನರ ಬಗ್ಗೆ ಮಾತನಾಡುತ್ತಾ ಹೇಳಿದ ಶಬ್ದಗಳು!

卐

"ಪರಿಚಯವಿಲ್ಲದ ಪಿಶಾಚಿಗಳು", ಎಂದು ಅವರು ಜಪಾನಿನವರನ್ನು ಉದ್ದೇಶಿಸಿ ಹೇಳಿದರು. 'ಪರಿಚಯವಿರುವ ಪಿಶಾಚಿಗಳನ್ನು ನಂಬುತ್ತಿದ್ದ ಅವರನ್ನು 'ಪರಿಚಯವಿಲ್ಲದ ಪಿಶಾಚಿಗಳೊಡನೆ ಒಳಸಂಚು ಮಾಡುತ್ತಿರುವರೆಂಬ ಆಪಾದನೆಯ ಮೇಲೆ ನಿರ್ಬಂಧಿಸಲಾಗಿದೆಯೆಂದು ತಿಳಿದಿದೆ

ತೆಗೆದುಕೊಳ್ಳಿರಿ

ಎಂದು ನಂಬಿಗೆಯಿಂದ ಹೇಳಬರುವ

ದಮ್ಮಿಗೆ ಒಂದೇಒಂದು ಉಪಾಯ



ದಮ್ಮು ಒಮ್ಮೆಲೇ ನೆಟ್ಟಗಾಗಬೇಕು ಎಂಬ ಆಶೆಯಿಂದ ಅನೇಕರು ಕ್ಷಣಿಕಗುಣಕೊಡುವ ಔಷಧ ತೆಗೆದುಕೊಂಡು ಸತ್ತು ಹೋಗಿದ್ದಾರೆ **ಪುರೋಹಿತ ಶ್ವಾಸಹಾರಿಯು** ಇಂಥದಲ್ಲ, ಆದರೆ ದಮ್ಮನ್ನು ಒಂದೆರಡು ದಿನ ನೊಂದಿಸದೆ ಮೆಲ್ಲಮೆಲ್ಲಗೆ ಸಮೂಲವಾಗಿ ಗುಣಪಡಿಸುವ ಉತ್ಕೃಷ್ಟಶಾಸ್ತ್ರೀಯ ಉಪಾಯವು ಅದನ್ನು ತೆಗೆದುಕೊಳ್ಳಲು ಆರಂಭಿಸಿದ ಕೂಡಲೇ ಕೆಮ್ಮು ಹೋಗುವುದು, ತೇಕು ಕಡಿಮೆಯಾಗುವುದು, ಶೌಚದ ತೊಂದರೆ ಉಳಿಯುವುದಿಲ್ಲ ಪಚನಕ್ರಿಯೆಯು ಶುದ್ಧವಾಗುವುದು, ಸಾವಕಾಶವಾಗಿ ಶಕ್ತಿ ಹೆಚ್ಚಾಗಿ ಪುಪ್ಪುಸ ಗಟ್ಟಿಮುಟ್ಟಾಗಿ ಕೊನೆಗೆ ದಮ್ಮು ಪೂರ್ಣವಾಗಿ ಗುಣವಾಗುವುದು

ದಮ್ಮು, ತೇಕು, ಕೆಮ್ಮು, ಘೇಕರಿಗೆ, ಗಂಟಲು ಉರಿಯುವಂಥದು ಮತ್ತೂ ಪುಪ್ಪುಸದ ಎಲ್ಲಾ ವಿಕಾರಗಳಿಗೆ **ಪುರೋಹಿತ ಶ್ವಾಸಹಾರಿ** ಕ್ಷೀನ (ನೀಲಿ ಪ್ಯಾಕಿಂಗ್) ಉಪಯೋಗಿಸಬೇಕು, ಬದ್ಧಕೋಷ್ಠ, ಮತ್ತೂ ಆಮ್ಲಪಿತ್ತ ಹೆಚ್ಚಾಗಿ ದಮ್ಮು ಹತ್ತಿದವರು **ಶ್ವಾಸಹಾರಿ ಕಂಪೌಂಡ** (ಕೆಂಪು ಪ್ಯಾಕಿಂಗ್) ತೆಗೆದುಕೊಂಡರೆ ಹೆಚ್ಚು ಗುಣ ರೂ. ೨-೬; ರೂ. ೪-೭ ಕಿಮ್ಮತ್ತಿನಲ್ಲಿ ಸಣ್ಣ ದೊಡ್ಡ ಬಾಟಲಿಗಳಲ್ಲಿ ಎಲ್ಲಕಡೆ ಸಿಗುವವು. ತಂತಿಕೊಳ್ಳುವ ವಿಳಾಸ—

ಡಾ॥ ಪುರೋಹಿತ ಫಾರ್ಮಸಿ, ಕೊಲ್ಲಾಪುರ.

ಇಲ್ಲವೇ ಮೆ॥ ವನಮಾಳೀ ಭೀಖಾ ಮತ್ತು ಕಂ., ಪ್ರಿನ್ಸೆಸ್‌ಸ್ಟ್ರೀಟ್, ಮುಂಬಯಿ.

ಪುರೋಹಿತ ಶ್ವಾಸಹಾರಿ

“ಬಾರ್ಡೋಲಿ ನಿರ್ಣಯ ಕಾಂಗ್ರೆಸಿನ ಕನ್ನಡಿಯಂತಿದೆ”

ಗಾಂಧಿಜಿಯವರು ವರ್ಧಾದಲ್ಲಿ ಸೇರಿದ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಸಭೆಯಲ್ಲಿ ಮಾತನಾಡುತ್ತಾ, ಬಾರ್ಡೋಲಿ ನಿರ್ಣಯವನ್ನು ಸರ್ವಾನು ಮತದಿಂದ ಮಂಜೂರು ಮಾಡಬೇಕೆಂದು ಕೇಳಿಕೊಂಡರು. ತಾವು ಕಾಂಗ್ರೆಸನ್ನು ಬಿಟ್ಟಿಲ್ಲವೆಂಬುದನ್ನೂ ಕಾಂಗ್ರೆಸಿನಲ್ಲಿ ಬಿರುಕುಂಟಾಗಲಿಲ್ಲವೆಂಬುದನ್ನೂ ವಿವರಿಸಿದ ನಂತರ ಬಾರ್ಡೋಲಿ ನಿರ್ಣಯವು ಕಾಂಗ್ರೆಸಿನ ಕನ್ನಡಿಯಂತಿದೆಯೆಂದರು. ಸತ್ಯಾಗ್ರಹ ಚಳವಳದ ವಿಷಯ ಮಾತನಾಡುತ್ತಾ ಗಾಂಧಿಜಿಯವರು ‘ನನ್ನ ಮನಸ್ಸಿಗೆ ತೋರಿದಾಗ ಈ ಚಳವಳವನ್ನು ನಡೆಸಲು ನನಗೆ ಸ್ವಾತಂತ್ರ್ಯ ದೊರೆತಿದೆ, ಅವಶ್ಯವೆನಿಸಿದಾಗ ಅದನ್ನು ನಡೆಸುವೆನು’ ಎಂದರು. ತಮ್ಮ ಭಾಷಣದ ಕೊನೆಯಲ್ಲಿ ಮಹಾತ್ಮರು ವಿಧಾಯಕ ಕಾರ್ಯಕ್ರಮವನ್ನು ಎತ್ತಿ ಹೇಳಿ ಅದನ್ನು ಸರಿಯಾಗಿ ಪಾಲಿಸಿದ್ದರೆ ಆರು ತಿಂಗಳಲ್ಲಿಯೇ ಹಿಂದುಸ್ಥಾನಕ್ಕೆ ಸ್ವರಾಜ್ಯ ಸಿಗುತ್ತಿತ್ತೆಂದರು.

ಅವರ ಭಾಷಣದ ಸಾರಾಂಶವು ಇಂತಿದೆ:

‘ಅಹಿಂಸೆಯಲ್ಲಿ ನನ್ನ ಅಚಲ ವಿಶ್ವಾಸವಿರುವುದನ್ನು ಎಲ್ಲರೂ ಒಬ್ಬರು. ಆದರೆ ಕಾಂಗ್ರೆಸಿನ ಮುಂದೆ ಮಾತ್ರ ನಾನದನ್ನು ರಾಜಕೀಯ ದೃಷ್ಟಿಯಿಂದಲೇ ಇಟ್ಟಿದ್ದೇನೆ. ಕಾಂಗ್ರೆಸಿಗೆ ಅದೊಂದು ರಾಜಕೀಯ ಸಾಧನವಾಗಿತ್ತು. ಉಪಯೋಗಿಸಲೂ ಬಿಡಲೂ ಅದಕ್ಕೆ ಸಾಧ್ಯವಿತ್ತು. ನನ್ನ ಮಟ್ಟಿಗೆ ಹೇಳುವುದಾದರೆ ಅಹಿಂಸೆಗೆ ಅಡ್ಡಿಬರುವಂತಹ ಸ್ವರಾಜ್ಯವನ್ನು ಸ್ವೀಕರಿಸಲು ನಾನು ಸಿದ್ಧನಿಲ್ಲ.

‘ಬಾರ್ಡೋಲಿ ನಿರ್ಣಯಕ್ಕೆ ನೀವೆಲ್ಲರೂ ಬೆಂಬಲ ಕೊಡಬೇಕು. ಪುನಃ ಠರಾವು ಮಂಜೂರಾದಾಗ ಅದನ್ನು ನಾನು ತಪ್ಪೆಂದಿದ್ದೆ. ಆದರೆ ಬಾರ್ಡೋಲಿ ನಿರ್ಣಯದಲ್ಲಿ ಅಂತಹ ತಪ್ಪಿಗೆ ಆಸ್ಪದವಿಲ್ಲ. ಈ ವಿಷಯ ಚರ್ಚೆಯಾಗಿ ವಿಭಜನೆಯಾಗಬಾರದೆಂದು ನನಗೆ ತೋರಿತು. ಸಂಪೂರ್ಣ ಅಹಿಂಸಾವಾದಿಗಳೂ ತಟಸ್ಥರಾಗದೆ ವಿಭಜನೆಗೊಳ್ಳದೆ ಈ ಠರಾವಿಗೆ ಬೆಂಬಲ ಕೊಡಬೇಕೆಂದು ನಾನು ಹೇಳುತ್ತೇನೆ. ವರ್ಕಿಂಗ್ ಕಮಿಟಿಯು ಈ ನಿರ್ಣಯದಿಂದ ಒಂದು ಹೆಜ್ಜೆಯನ್ನು ಹಿಂದಿಟ್ಟಿದೆ. ಆದರೆ ಅದು ಮುಂದೆ ತೀವ್ರದಲ್ಲಿ ಮುಂದಡಿಯಿಡುವ ಸಲುವಾಗಿಯೇ ಇದೆ. ಕಾಂಗ್ರೆಸಿನ ನಿಜವಾದ ಪರಿಸ್ಥಿತಿಯೇನೆಂಬುದು ಈ ನಿರ್ಣಯದಲ್ಲಿ ತೋರಿಸಲ್ಪಟ್ಟಿದೆ. ಕಾಂಗ್ರೆಸಿನ ಸ್ಥಾನವು ಅತ್ಯಂತ ಮಹತ್ವದ್ದು. ಇಡೀ ಜಗತ್ತೇ ನಮ್ಮ ಕಡೆಗೆ ನೋಡುತ್ತದೆ. ಕಾಂಗ್ರೆಸನ್ನು ಒಂದು ಧಾರ್ಮಿಕ ಸಂಸ್ಥೆಯಾಗಿ ಮಾರ್ಪಡಿಸುತ್ತೇನೆಂದು ಈ ದೇಶದಲ್ಲಿ ಹಾಗೂ ಹೊರದೇಶದಲ್ಲಿಯೂ ಕೆಲವರು ತಿಳಿದಿದ್ದಾರೆ. ಇದು ಸರಿಯಲ್ಲ. ಕಳೆದ ಇಪ್ಪತ್ತು ವರ್ಷಗಳನ್ನು ವ್ಯರ್ಥವಾಗಿ ಕಳೆದಿದ್ದ ಕಾಂಗ್ರೆಸಿಗೆ ನಾನೆಂದೂ ಹಾನಿಮಾಡಿಲ್ಲ. ಕಳೆದ ಐವತ್ತು ವರ್ಷಗಳಲ್ಲಿ ಒಮ್ಮೆಯಾದರೂ ನಾನು ಕಾಂಗ್ರೆಸಿನ ವಿಷಯ ಅಹಿತ ಬಗೆದಿಲ್ಲ.

‘ಕೆಲವರು ಕಾಂಗ್ರೆಸನ್ನು ನಾನು ಬಿಟ್ಟೆನೆನ್ನುತ್ತಾರೆ. ಅದೂ ಸರಿಯಲ್ಲ. ನೀವು ನನ್ನನ್ನೆಂದೂ ಕಳೆದುಕೊಳ್ಳಲಾರಿರಿ. ಹಿಂದೆ ನಾನು ಕಾಂಗ್ರೆಸನ್ನು ಬಿಟ್ಟು ಹೋದಾಗಲೂ ಕಾಂಗ್ರೆಸಿಗೆ ಹಿತವಾಗಬೇಕೆಂದು ನಾನು ಹಾಗೆ ಮಾಡಿದೆ. ಇತ್ತೀಚೆಗೆ ನೀವು ನನ್ನನ್ನು ಬಿಡುಗಡೆ ಮಾಡಿದ್ದು ಇದೇ ದೃಷ್ಟಿಯಿಂದ. ಕಾಂಗ್ರೆಸಿನಿಂದ ಹೊರಗೆ ಹೋಗಲು ಇಚ್ಛಿಸಿದವರಿಗೆ ಅವರು ಹಾಗೆ ಮಾಡಕೂಡದೆಂದು ನಾನು ಎಷ್ಟೋ ಸಲ ಹೇಳಿದ್ದೇನೆ. ಆದರೆ ಕೆಲವು ವ್ಯಕ್ತಿಗಳು ಹೋದಮಾತ್ರಕ್ಕೆ ಕಾಂಗ್ರೆಸಿಗೆ ಹಾನಿಯಿಲ್ಲ. ಹೀಗಿರುವಾಗ ನನ್ನನ್ನು ಕಾಂಗ್ರೆಸಿನಲ್ಲಿರಿಸಬೇಕೆಂದು ಪುನಃ ನೀವು ಮತ್ತೊಂದು ನಿರ್ಣಯ ತರುವುದು ಸರಿಯಲ್ಲ. ಆದ್ದರಿಂದ ನೀವು ಬಾರ್ಡೋಲಿ ನಿರ್ಣಯಕ್ಕೆ ಬೆಂಬಲಕೊಡಬೇಕು. ಆ ನಿರ್ಣಯದಿಂದ ಈ ದೇಶದ ಹಾಗೂ ಹೊರದೇಶದ ಹಲವರಿಗೆ ಆನಂದವಾಗಿದೆ. ಅವರನ್ನು ನಿರಾಶೆಗೊಳಿಸಬೇಡಿರಿ.

ನೆಹರು ನನ್ನ ಉತ್ತರಾಧಿಕಾರಿಗಳು;

ಕಾಂಗ್ರೆಸಿನಲ್ಲಿ ವಿಭಜನೆಯಾಗಬಾರದು

ಹರಿಜನ ಪತ್ರಿಕೆ ಪ್ರಾರಂಭಿಸಿದ್ದೇಕೆ

ಗಾಂಧಿಜಿಯವರ ಭಾಷಣ ಮತ್ತು ಲೇಖನ

‘ಬಾರ್ಡೋಲಿ ನಿರ್ಣಯದ ಬಗ್ಗೆ ವರ್ಕಿಂಗ್ ಕಮಿಟಿಯಲ್ಲಿ ಒಡಕು ಉಂಟಾಗಿದೆಯೆನ್ನುವುದೂ ಸರಿಯಲ್ಲ. ನನ್ನ ಮತ್ತು ಜವಾಹರಲಾಲರ ಮತಭೇದವು ಎಲ್ಲರಿಗೂ ಗೊತ್ತಿದೆ. ಆದರೆ ಅದರಿಂದಾಗಿ ನಾವು ಬೇರ್ಪಡುವುದು ಸಾಧ್ಯವಿಲ್ಲ. **ಜವಾಹರಲಾಲರು ನನ್ನ ಉತ್ತರಾಧಿಕಾರಿಗಳು. ನನ್ನ ತರುವಾಯ ನನ್ನ ಕೆಲಸವನ್ನು ಅವರೇ ವಹಿಸಿಕೊಳ್ಳುವರೆಂದು ನನಗೆ ಗೊತ್ತಿದೆ. ಅವರು ಒಳ್ಳೆಯ ಧೈರ್ಯಶಾಲಿಗಳು.** ರಾಜಾಜಿ ನನ್ನ ಸಂಬಂಧಿಕರು.

ಬಾರ್ಡೋಲಿ ನಿರ್ಣಯವು ಕಾಂಗ್ರೆಸಿನ ಕನ್ನಡಿಯಂತಿದೆ. ರಾಜೇಂದ್ರ ಬಾಬು ಮೊದಲಾದವರೂ ಈ ಠರಾವಿಗೆ ಒಪ್ಪಬಹುದು. ಅಹಿಂಸೆಗೆ ಭಂಗಬರುವುದೆಂದು ಕೆಲವರು ಇದರಿಂದ ಅಂಜಿದ್ದಾರೆ. ಆದರೆ ಯಾರೂ ಅಂಜಬೇಕಾಗಿಲ್ಲ. ಕೊನೆಗೆ ಅಹಿಂಸೆಗೆ ಜಯವಾಗುವುದು. ಇದುವರೆಗೆ ನಾವು ಗಳಿಸಿದ್ದು ಎಲ್ಲಾ ಅಹಿಂಸೆಯ ಫಲವೆಂದು ಎಲ್ಲರೂ ಒಪ್ಪುತ್ತಾರೆ. ಆದ್ದರಿಂದ ಅದಕ್ಕೆ ಮುಂದೆ ನಿಂಶ್ಚಿತ ಜಯವಿದೆ. ಈ ದೇಶದಲ್ಲಿ ಕಾಂಗ್ರೆಸಿಗೆ ಸೇರದ ಕೋಟ್ಯಂತರ ಜನರಿದ್ದಾರೆ. ಕಾಂಗ್ರೆಸಿಗೆ ಅವರು ಸೇರದಿದ್ದರೂ ಅವರ ಬೆಂಬಲದಿಂದಲೇ ಕಾಂಗ್ರೆಸಿಗೆ ಇಷ್ಟು ಬಲವಿದೆ. ನೀವೆಲ್ಲರೂ ಕಾಂಗ್ರೆಸಿಗೆ ಸೇರಿದ ಜನರ ಪ್ರತಿನಿಧಿಗಳು. ನಾನು ಕಾಂಗ್ರೆಸಿಗೆ ಸೇರದ ಅಂತಹ ಮಂದಿಯ ಪ್ರತಿನಿಧಿಯಾಗಿರುವೆನು.

“ಸತ್ಯಾಗ್ರಹದ ವಿಷಯ ನನ್ನ ಮನಸ್ಸಿಗೆ ಬಂದಂತೆ ಮಾಡಲು ಕಾಂಗ್ರೆಸು ನನಗೆ ಸ್ವಾತಂತ್ರ್ಯವಿತ್ತಿದೆ. ಅದನ್ನು ಅವಶ್ಯ ಬಿದ್ದಾಗ ಪುನಃ ಪ್ರಾರಂಭಿಸುವೆನು. ಈಗ ಪ್ರತಿದಿನವೂ ನನಗೆ ಅರ್ಜಿ ಕಳುಹಿಸುವವರಲ್ಲಿ ನಾನು ಕೆಲವರನ್ನು ಆರಿಸುತ್ತೇನೆ. ಅಹಿಂಸೆಯ ಸಂದೇಶವನ್ನು ಸಾರಲು ಅದಕ್ಕಾಗಿ ಕೆಲಸಮಾಡಲು ಬ್ರಿಟಿಷ್ ಸರಕಾರವು ನನಗೆ ಆತಂಕ ಮಾಡಿದರೂ ನಾನು ಅವರನ್ನು ದ್ವೇಷಿಸುವುದಿಲ್ಲ. ‘ಇಟಲಿಯನ್ ಜರ್ಮನರ ವಿಷಯದಲ್ಲಿ’ ನಾನು ದ್ವೇಷಿಸದಿರುವಾಗ ಬ್ರಿಟಿಷರನ್ನು ಹೇಗೆ ದ್ವೇಷಿಸಬಹುದು. ನನಗೆ ಯಾರ ಮೇಲೂ ವೈರವಿಲ್ಲ. ಸತ್ಯಾಗ್ರಹವನ್ನು ನಿಲ್ಲಿಸಿದ್ದಕ್ಕೂ ಬಾರ್ಡೋಲಿ ನಿರ್ಣಯಕ್ಕೂ ಸಂಬಂಧವಿಲ್ಲ. ಈಗಿನ ಪರಿಸ್ಥಿತಿಯನ್ನನುಸರಿಸಿ ಸತ್ಯಾಗ್ರಹ ತಾತ್ಕಾಲಿಕವಾಗಿ ನಿಲ್ಲಿಸಲಾಯಿತು. ರಚನಾತ್ಮಕ ಕಾರ್ಯಕ್ರಮವನ್ನು ನೀವೆಲ್ಲರೂ ಅನುಸರಿಸಿದರೆ ಕೇವಲ ಆರು ತಿಂಗಳಲ್ಲಿಯೇ ಸ್ವರಾಜ್ಯ ಪಡೆಯಬಹುದು.”

ಪ್ರತಿಯೊಬ್ಬ ಕಾಂಗ್ರೆಸಿನವನು ಮಾಡಬೇಕಾದುದೇನು?

ಹರಿಜನ ಪತ್ರಿಕೆ ಪ್ರಾರಂಭಿಸಿದ್ದೇಕೆ?

ಮಹಾತ್ಮರ ಲೇಖನ

‘ಶಾಂತಿ ಸಂಘಟನೆ’ ಎಂಬ ಲೇಖನವನ್ನು ‘ಹರಿಜನ’ದಲ್ಲಿ ಬರೆಯುತ್ತಾ ಗಾಂಧಿಜಿ ಹೀಗೆಂದಿರುವರು:

‘ಸೈನಿಕ ನೆಲಗಟ್ಟಿನ ಮೇಲೆ ಕಾಂಗ್ರೆಸು ಸಂಘಟಿಸಲ್ಪಟ್ಟರೆ ಇಂದು ಅದು ಸಂಪೂರ್ಣ ಸೈನ್ಯವಾಗಬೇಕು. ಪ್ರತಿಯೊಬ್ಬ ಸದಸ್ಯನು ಒಳ್ಳೆಯ ಶಿಕ್ಷಣ ಹೊಂದಿದ ಸೈನಿಕನಾಗಬೇಕು. ಕಾಂಗ್ರೆಸು ಇಪ್ಪತ್ತೆರಡು ವರ್ಷಗಳಿಂದ ಅಹಿಂಸಾ ಮಾರ್ಗದಿಂದ ಸ್ವರಾಜ್ಯ ಸಂಪಾದಿಸಬೇಕೆಂದು ನಿರ್ಧರಿಸಿದೆ. ಸಾಮ್ರಾಜ್ಯಶಾಹಿಯ ಇದಿರಾಗಿ ಈ ಸಂಸ್ಥೆಯು ಹೋರಾಡುವುದರಿಂದ ಹೆಚ್ಚು ಜನಪ್ರಿಯವಾಗಿದೆ. ಆದರೆ ಇಂದು ಹಳೆಯ ದಾರಿ ಸರಿಯಲ್ಲ. ಸದ್ಯದ ಪರಿಸ್ಥಿತಿಯಲ್ಲಿ ಸಾರ್ವತ್ರಿಕ ಬಂಡಾಯವಾಗುವ ವಿಚಾರವನ್ನು ಯಾರೂ ಮಾಡುವುದಿಲ್ಲ. ಉತ್ತಮವಾದ ಮಾರ್ಗವೆಂದರೆ ಕೆಳಗಿಂದ ಮೇಲಕ್ಕೇರುವುದು. ಯೋಗ್ಯ ನಿರ್ಣಯವನ್ನು ಮಾಡತಕ್ಕ ಸಮಯವು ಎಲ್ಲಾ ದೃಷ್ಟಿಗಳಿಂದಲೂ ಈಗ ಬಂದಿದೆ. ಪ್ರತಿಯೊಂದು ಹಳ್ಳಿಯೂ ಸ್ವಾವಲಂಬಿಯಾಗಿ ಸ್ವತಂತ್ರ ಘಟಕವಾಗಬೇಕು. ಇದಕ್ಕಾಗಿ ದೊಡ್ಡ ನಿರ್ಣಯ ಮಾಡಬೇಕಾಗಿಲ್ಲ. ಒಳ್ಳೆಯ ಧೈರ್ಯದಿಂದ ಸಂಘಟನೆಗೆ ತೊಡಗಬೇಕಾಗಿದೆ. ಇದು ಸದ್ಯಕ್ಕೆ ರಾಜರಿಗೂ ಸಾಮಾನ್ಯವಾದ ವಿಚಾರ. ತಾನು ಸೈನಿಕನಾಗಬೇಕೋ ಇಲ್ಲವೇ ಶಾಂತಿ ದೂತನಾಗಬೇಕೋ ಅಥವಾ ಸ್ವರಾಜ್ಯ ಮಂದಿರ ಕಟ್ಟುವಲ್ಲಿ ಯಾವುದೇ ಒಂದು ಕಾರ್ಯ ಮಾಡತಕ್ಕವನಾಗಬೇಕೋ ಎಂಬುದನ್ನು ಪ್ರತಿಯೊಬ್ಬ ಕಾಂಗ್ರೆಸಿನವನೂ ವಿಚಾರಮಾಡಿ ಉತ್ತರಕೊಡಬೇಕಾಗಿದೆ.

ಹರಿಜನ ಪತ್ರಿಕೆ ಪ್ರಾರಂಭಿಸಿದ್ದೇಕೆ?

‘ಗಾಂಧಿಜಿಯವರು ಈ ವಿಷಯದಲ್ಲಿ ಒಂದು ಲೇಖನ ಬರೆದು ಈ ರೀತಿ ವಿವರಿಸಿರುವರು:

ಈ ಪತ್ರಿಕೆಯನ್ನು ಇನ್ನು ಮುಂದೆ ಹಾಗೆಯೇ ತಡೆದಿಡುವ ಕಾರಣವಿಲ್ಲ. ನಾನೀಗ ಪತ್ರಿಕೆಯನ್ನು ಹೊರಡಿಸದಿದ್ದರೆ ಕರ್ತವ್ಯದಿಂದ ತಪ್ಪಿದಂತಾಗುವುದು. ನಾನು ಅನೇಕ ಸಲ ಹೇಳಿದಂತೆ ನಾನು ಬ್ರಿಟಿಷರ ವೈರಿಯಲ್ಲ. ಬ್ರಿಟಿಷರಲ್ಲಿ ಅನೇಕರು ನನ್ನ ಮಿತ್ರರಿರುವರು. ಬ್ರಿಟನಿಗೆ ನಾನು ಅಹಿತ ಬಗೆಯಲಾರೆ. ಯುದ್ಧದಲ್ಲಿ ಭಾಗವಹಿಸುವವರಿಗೆ ಅಡ್ಡಿ ಮಾಡಬೇಕೆಂದು ನಾನು ಯುದ್ಧವನ್ನು ವಿರೋಧಿಸುವುದಿಲ್ಲ. ನಾನು ಅವರೊಡನೆ ಚರ್ಚಿಸುವೆನು. ಅವರಿಗೆ ಉಚಿತ ಮಾರ್ಗವನ್ನು ತೋರಿಸುವೆನು. ಮುಂದೆ ಬೇಕಾದ ಹಾದಿಯನ್ನು ಆರಿಸಿಕೊಳ್ಳಲು ಅವರಿಗೆ ಸ್ವಾತಂತ್ರ್ಯವಿಡುವೆನು. ನಾನು ಎಲ್ಲಾ ಬಗೆಯ ಅರಾಜಕತೆಯನ್ನೂ ವಿರೋಧಿಸುವೆನು. ಸತ್ಯ ಮತ್ತು ಅಹಿಂಸೆಯಿಂದ ಸ್ವರಾಜ್ಯವನ್ನು ಗಳಿಸಬೇಕೆಂದು ನಾನು ಬಯಸಿದರೆ ರಚನಾತ್ಮಕ ಕಾರ್ಯಕ್ರಮದಿಂದ ಸಾವಕಾಶವಾಗಿ ನಾವು ಕೆಳಗಿಂದ ಮೇಲಿನವರೆಗೆ ಕಟ್ಟಡ ಕಟ್ಟಬೇಕಾಗಿದೆ. ಇದೊಂದೇ ಆದರ ಮಾರ್ಗವು. ದೇಶದಲ್ಲಿ ಉಂಟಾದ ಅವ್ಯವಸ್ಥೆಯನ್ನು ಯುದ್ಧದ ಬಲಾತ್ಕಾರದಿಂದ, ಹೋಗಲಾಡಿಸಿ ಆಳುತ್ತಿರುವ ಸರ್ವಾಧಿಕಾರತ್ವವನ್ನು ಪರಿಷ್ಕೃತ ಮಾಡುವ ಆಸೆಯಿರುವ ಪ್ರಜಾಸತ್ತ ಪದ್ಧತಿಯನ್ನು ಕೊಡಲಾರಳು. ಅರಾಜಕತೆಯನ್ನು ಬೇಕಾದಂತೆ ಹುಟ್ಟಿಸುವುದು ಈ ಧೋರಣೆಗೆ ಸರಿಯೆನಿಸುವುದಿಲ್ಲ. ಜನತೆ ಈಗ ಎದುರಿಸುತ್ತಿರುವ ಸಮಸ್ಯೆಗಳನ್ನು ವಿಚಾರಿಸುವ ಸಲುವಾಗಿಯೇ ಈ ಪತ್ರಿಕೆಯನ್ನು ಆರಂಭಿಸಲಾಗಿದೆ. ಯುದ್ಧ ಪ್ರಯತ್ನವನ್ನು ಎದುರಿಸುತ್ತಿರುವ ಸಮಯವಷ್ಟೇ ಈಗಿರುವುದಿಲ್ಲ. ಯುದ್ಧದಲ್ಲಿ ಭಾಗವಹಿಸುತ್ತಿರುವವರನ್ನು ಎದುರಿಸುತ್ತಿರುವ ಸಮಸ್ಯೆಗಳು ಯುದ್ಧ ವಿರೋಧಿಗಳನ್ನು ಎದುರಿಸುತ್ತಿರುವವು. ಆದ್ದರಿಂದ ಈ ಸಮಸ್ಯೆಗಳನ್ನು ಇಬ್ಬರೂ ಬಿಡಿಸಬೇಕಾಗಿದೆ. ಆದರೆ ಅವರವರು ಬಿಡಿಸುವ ಮಾರ್ಗ ಮಾತ್ರ ಭಿನ್ನವಾಗಿದೆ. ಆಹಾರದ ಬಟ್ಟೆಯ ಕೊರತೆ ಲೂಟಿ ಮೊದಲಾದವುಗಳು ಈ ತರದ ಸಮಸ್ಯೆಗಳು. ಈ ಬಗ್ಗೆ ನನ್ನ ಕೆಲವು ವಿಚಾರಗಳಿರುವವು. ಅವುಗಳನ್ನು ಜನತೆಗೆ ತಿಳಿಸುವ ಸಲುವಾಗಿ ಈ ಪತ್ರಿಕೆ ಹೊರಡಿಸುವುದವಶ್ಯವೆನಿಸಿತು. ಜನತೆಯು ನನ್ನೊಡನೆ ಸಹಕರಿಸಲು ಮುಂದೆ ಬರುವಿದ್ದರೆ ಲಕ್ಷಾವಧಿ ಜನರನ್ನು ಎದುರಿಸುತ್ತಿರುವ ಸಮಸ್ಯೆಗಳನ್ನು ಕೇವಲ ಯುದ್ಧ ಪ್ರಯತ್ನದಿಂದ ಸರಕಾರವು ಬಿಡಿಸುವುದು ಸಾಧ್ಯವಿಲ್ಲ.

ನಮ್ಮ 3 ಬ್ರಾಂಚುಗಳನ್ನು ಒಂದಾಗಿ ಸೇರಿಸಿ

ಬೊಂಬಾಯಿ ಜಿ. ಎ. ಸರ್ಕಸ್

ಕಂಪೆನಿಯವರು

ಮಂಗಳೂರು ಮೈದಾನಿನಲ್ಲಿ ಹಾಕಿರುವ

ತಮ್ಮ ಭವ್ಯವಾದ ಡೇರೆಯಲ್ಲಿ

ತಾ. 25-1-1942ನೇ ಆದಿತ್ಯವಾರ

ಕಡೇ ದೇಖಾವೆ

101 ಪ್ರಖ್ಯಾತರಾದ ನಾನಾ ಜನಾಂಗದ ಆಕ್ಟರರು **101**



85 ಭಾರಿ ಮೃಗಗಳ ಗುಂಪು—22 ಕುದುರೆಗಳು, 7 ಆನೆಗಳು, 20 ಸಿಂಹ ಮತ್ತು ಹುಲಿಗಳು ಇತರ ಪ್ರಾಣಿಗಳು ಬಹಳ ಚಮತ್ಕಾರವಾದ ರೀತಿಯಲ್ಲಿ ಪ್ರದರ್ಶನವನ್ನು ಮಾಡುವುವು.

ಪಾಶ್ಚಾತ್ಯ ದೇಶಗಳೆಲ್ಲಾ ಸಂಚರಿಸಿ ಲಕ್ಷಾಂತರ ಜನಗಳಿಂದ ಎಲ್ಲಾ ವಿಧದಲ್ಲಿ ಅತ್ಯುತ್ತಮ ಪ್ರದರ್ಶನ ಎಂದು ಪ್ರಖ್ಯಾತಿಗಳಿಸಿರುವ ಸರ್ಕಸ್ ಕಂಪೆನಿಯು ಇದೊಂದೇ!

ಮಲಯದಲ್ಲಿ ಅತ್ಯಂತ ಉಗ್ರ ಕಾಳಗವಾಗುತ್ತಿದೆ

ಸಿಂಗಾಪುರದ ಮೇಲೆ ಜಪಾನರ ಆಕ್ರಮಣಪ್ರಯತ್ನ

ಬರ್ಮಾದ ಪ್ರಧಾನಮಂತ್ರಿಯನ್ನು ಬಂಧಿಸಿದರು

ಹಿಂದುಸ್ತಾನದ ವಿಚಾರ ಕಾಲಾನುಭಾಗದಲ್ಲಿ ಆಲೋಚಿಸುವರು!

ಕಾಮನ್ಸಿನಲ್ಲಿ ಚರ್ಚಿಲರ ಹೇಳಿಕೆ.

ಸೋವಿಯಟ್ ಯುನಿಯನ್ ಮಿತ್ರಸಂಘ

ನೆಹರುಗಳಿಂದ ಪ್ರಾರಂಭೋತ್ಸವ

ಮೇಲಿನ ಹೆಸರಿನಿಂದ ಸಂಸ್ಥೆಯ ಪ್ರಾರಂಭೋತ್ಸವವು ಫೆಬ್ರವರಿ ೮ರಂದು ನೆಹರುಗಳಿಂದ ಲಕ್ನೋದಲ್ಲಿ ಜರಗುವುದು. ಸರ್ ರಾಧಾಕೃಷ್ಣನರು ಈ ಸಮ್ಮೇಳನದ ಅಧ್ಯಕ್ಷತೆ ವಹಿಸುವರು.

ಬರ್ಮಾ ಜಪಾನರ ಮೇಲೆ ಧಾಳಿ ಮಾಡುವ

ಆಲೋಚನೆ ನಡೆಯುತ್ತಿದೆಯಂತೆ ರಂಗೂನಿನ ಸೈನ್ಯಾಧಿಕಾರಿ ಹೀಗೆ ಹೇಳಿದನು.

ಬರ್ಮಾದಲ್ಲಿ ಹೊಸ ಮಂತ್ರಿ ಮಂಡಳ

ಬರ್ಮಾದ ಪ್ರಧಾನಿಯೂಸಾರವರನ್ನು ಬಂಧಿಸಿದ ಪ್ರಕಾರ ಅಲ್ಲಿ ಹೊಸ ಮಂತ್ರಿ ಮಂಡಳವನ್ನು ರಚಿಸಲಾಗಿದೆ.

ಸಿಂಗಾಪುರದಲ್ಲಿ ಬ್ರಿಟಿಷ್ ಸೈನ್ಯ ಹಿಂಜರಿಯಿತು

ಮಲಯದ ಪರಿಸ್ಥಿತಿ ತುಂಬಾ ಚಿಂತಾಜನಕವಿರುವುದಾಗಿ ಹೇಳಲಾಗಿದೆ. ಮಧ್ಯ ಜಹೊರು ಜಿಲ್ಲೆಯಲ್ಲಿ ಸುಮಾರು 20 ಸಾವಿರ ಆಸ್ಟ್ರೇಲಿಯನ್ ಸೈನಿಕರನ್ನು ಜಪಾನರು ಹಿಡಿದಿರುವರು. ಮಲಯದಲ್ಲಿ ಬ್ರಿಟಿಷ್ ಸೈನ್ಯಗಳು ಹಿಂದೆ ಸರಿದವಾಗಿ ತಿಳಿದಿದೆ. ಸಿಂಗಾಪುರದ ಮೇಲೆ ಉಗ್ರಧಾಳಿಯಾಗುತ್ತಿದೆ.

ಮಾಲ್ಟಾ ನಡುಗಡ್ಡೆಯ ಮೇಲೆ ನಾಜೀ ದೃಷ್ಟಿ

ಭೀಕರ ಧಾಳಿ ಪ್ರಾರಂಭವಾಗಿದೆ.

ಮಾಲ್ಟಾ ದ್ವೀಪದ ಮೇಲೆ ಭೀಕರ ಧಾಳಿಯಾಗಿದೆ. ಬಾಂಬುಗಳು ಕಂಡ ಕಂಡಲ್ಲಿ ಒಗೆಯಲ್ಪಟ್ಟವು.

ವಿಮಾನ ಧಾಳಿಯಾದರೆ ಮನೆಯೊಳಗಿರಬೇಕು

ಎಂದು ರಂಗೂನಿಗೆ ಹೋಗಿ ಅಲ್ಲಿನ ಪರಿಸ್ಥಿತಿ ತಿಳಿದುಬಂದ ಸಿಮಿಂಗ್‌ಟನರು ಅಭಿಪ್ರಾಯಪಟ್ಟದ್ದಾರೆ. ಕಲ್ಕತ್ತೆಯ ಬಳಿ ಕಾರ್ಖಾನೆಗಳ ಪ್ರದೇಶದಲ್ಲಿ ವಿಮಾನ ಧಾಳಿಯಾಗಿ ಜನರು ಸತ್ತರೆ ಶವ ಸಂಸ್ಕಾರ ಮಾಡಲು ಸ್ಥಳವಿಲ್ಲದ್ದು.

ಮಲಯದಲ್ಲಿ ಘೋರ ಕಾಳಗ

ಮಲಯಾದಲ್ಲಿ ಜಪಾನರು ವಿಶೇಷವಾಗಿ ಹೋರಾಟ ಹೂಡುತ್ತಿರುವರು. ಆಸ್ಟ್ರೇಲಿಯಾ ಸೈನ್ಯವು ಅವರನ್ನು ಅಲ್ಲಿ ಪರಾಕ್ರಮದಿಂದ ಎದುರಿಸುತ್ತಿದೆ. ಅಲ್ಲಿ ಮೂರು ಭಾರತೀಯ ಪದಾತಿ ದಳಗಳು ಹೋರಾಡುವವು.

ಲಿಬಿಯಾ ಯುದ್ಧ

ಎಲ್‌ಅಜೀಲ್‌ದಲ್ಲಿ ಜರ್ಮನರು ಬ್ರಿಟಿಷರ ಹೊಡೆತ ತಡೆದು ನಿಲ್ಲದಾಗಿರುವರೆಂದು ತಿಳಿದಿದೆ.

ಮಾಲ್ಟಾದ ಮೇಲೆ ೭ ಸಾರಿ ದಾಳಿ

ಆಯಿತೆಂದು ಸುದ್ದಿ ಬಂದಿದೆ. ಒಂದು ವಾರದಿಂದ ಸತತ ಧಾಳಿ ನಡೆಯಿತಂತೆ.

ಡ್ಯೂಕ್ ಕೇನಟರ ನಿಧನ

ವಿಕ್ಟೋರಿಯಾ ಮಹಾರಾಣಿಯ ತೃತೀಯ ಪುತ್ರರಾದ ಡ್ಯೂಕ್ ಓಫ್ ಕೇನಟರು ತಮ್ಮ ೯೧ನೆಯ ವಯಸ್ಸಿನಲ್ಲಿ ಮರಣಹೊಂದಿದರು. ಇವರು ಒಳ್ಳೆಯ ಸೈನಿಕರಾಗಿ ಹೆಸರುವಾಸಿಯಾಗಿದ್ದರು.

ಚಾಂಗ್‌ಶಾ ಕಾಳಗ ಕೊನೆಗೊಂಡಿತು

ಎಂದು ಈಗ ಸುದ್ದಿ ಬಂದಿರುವುದು. ಇಲ್ಲಿಗೆ ಬಂದಿದ್ದ ೬೦,೦೦೦ ಜಪಾನಿ ಸೈನಿಕರಲ್ಲಿ ೮೦ ಸಾವಿರ ಮಾತ್ರ ಮರಳಿದವಂತೆ. ಮಿಲೋ ನದಿಯ ದಕ್ಷಿಣ ಭಾಗವನ್ನು ಚೀನೀಯರು ಆಕ್ರಮಿಸಿಕೊಂಡಿರುವರು.

ಫಿಲಿಪೈನ್ ಗ್ರಾಮಾಂತರಗಳಲ್ಲಿ

ಜಪಾನರು ಲೂಟಿಮಾಡುತ್ತಿರುವರೆಂದು ಸುದ್ದಿ ಹರಡಲಾಗಿದೆ. ಮನಿಲಾದ ವಾಯುವ್ಯ

ದಲ್ಲಿ ಜಪಾನರು ಧಾಳಿಮಾಡಿ ಮುನ್ನುಗ್ಗುವ ಯತ್ನಮಾಡಿರುವರು.

ಸಪ್ರು ಮನವಿಯನ್ನು ಬದಿಗೆ ಸರಿಸುವರೆ?

ಡಫ್ ಕೂಪರರಿಗೆ ಭೇಟಿ ಕೊಡಲಿಲ್ಲ

ಬ್ರಿಟನಿನ ಮಂತ್ರಿಗಳಲ್ಲೊಬ್ಬರಾದ ಡಫ್ ಕೂಪರರು ಈಗ ಭಾರತಕ್ಕೆ ಬಂದಿದ್ದು ಅವರು ಭಾರತದ ರಾಜಕೀಯ ಸಮಸ್ಯೆಯ ಪರಿಹಾರದಲ್ಲಿ ವಿಶೇಷ ಕೆಲಸವಹಿಸುವಂತೆ ತೋರುವುದಿಲ್ಲವೆಂದು ಊಹಿಸಲಾಗಿದೆ. ಸಪ್ರು ಮೊದಲಾದವರ ಮನವಿಯನ್ನು ಬದಿಗೆ ಸರಿಸುವ ಪ್ರಯತ್ನವಿದೆಯಂತೆ. ಸುದ್ದಿಗಾರರಿಗೆ ಅವರು ಭೇಟಿಕೊಡಲು ಒಪ್ಪಲಿಲ್ಲ.

ರಾನಡೆಯವರ ಸ್ಮರಣೆ

ಶ್ರೀ. ಮಹಾದೇವ ಗೋವಿಂದ ರಾನಡೆಯವರ ಶತಮಾನ ಸ್ಮರಣೋತ್ಸವವು ಮುಂಬಯಿಯಲ್ಲಿ ತಾ. ೧೮ರಂದು ಶ್ರೀನಿವಾಸ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಜರಗಿತು. ಹಿಂದೂದೇಶದ ಪ್ರಸಿದ್ಧ ಪುರುಷರಲ್ಲೊಬ್ಬರಾದ ಅವರ ಗುಣಕಥನ ನಡೆಯಿತು.

ಆಸ್ಟ್ರೇಲಿಯನ್ ಯೋಧ

ತೋಬ್ರುಕ್ ಲಿಬಿಯಾ ಮೊದಲಾದ ಕಡೆಗಳಲ್ಲಿ ಆಸ್ಟ್ರೇಲಿಯದ ವೀರರು ಇಟಲಿಯನರನ್ನು ಹೆಜ್ಜೆ—ಮುಂದಿಡಲು ಬಿಡುವುದಿಲ್ಲ. ಚಿತ್ರದಲ್ಲಿ ಕೋವಿ ಹಿಡಿದು ಮುನ್ನುಗ್ಗುವ ಆಸ್ಟ್ರೇಲಿಯ ವೀರನೊಬ್ಬನನ್ನು ಕಾಣಬಹುದು.

NOTICE

In the Court of the District Munsif of Mangalore.

R. E. P. No. 678/1941.
in O. S. No. 327/39.

Between
Korapulu Hengsu & others—
Plaintiffs. Petitioners.
and
Pammakke & others—
Defendants. Respondents.

To
Respts:—14. Ramayya, son of Akkamma, 21. Manjappa Rai, son of Manakke. Both reside in Kunjathoor Village, Kasargod Taluk.

Whereas in the abovenamed execution petition the petitioners, the decree-holders have applied for the sale of the immovable properties detailed in the sale proclamation; you are hereby informed that the 7th day of February 1942 has been fixed for settling the terms of the proclamation of sale.

Mangalore, 21-1-1942. H. Keshava Kamath, Vakil for Petitioners.

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. 407/1941

ರಾಮ ಪ್ರಭು . . . . . ವಾದಿ.
ಮತ್ತು
ಶಂಕರ ಭಟ್ಟ ಕೂಡಾ . ಪ್ರತಿವಾದಿರು

1. ಶಂಕರ ಭಟ್ಟ, ವೆಂಕಟ್ರಮಣ ಭಟ್ಟರ ಮಗ, ಕಾಸರಗೋಡು ಕಸಬಾ.
6. ಪಾರ್ವತಿ ಅಮ್ಮ, ಗೋಪಾಲಕೃಷ್ಣ ಶಾಸ್ತ್ರಿಯರ ವಿಧವೆ, ಪೊಕ್ಕಾಡಿ ಕಸಬಾ ಗ್ರಾಮ.
7. ನಾರಾಯಣ ಪ್ರಭು, ಗೋವಿಂದ ಪ್ರಭು, ಮುಂಚಿ ಗ್ರಾಮಸ್ಥ ಇವರಿಗೆ—

ಮೇಲ್ಕಂಡ ವಾದಿಯು ಆಸ್ತಿ ಆಧಾರದಿಂದ ಬರತಕ್ಕ ರೂಪಾಯಿ 500 ವಗೈರೆ ಬರಮಾಡಿಕೊಳ್ಳುವರೆ ದಾಖಲ್ಮಾಡಿದ ಮೇಲಿನ ವ್ಯಾಜ್ಯದ ತನಿಖೆಗೆ ತಾ. 26-1-42ಕ್ಕೆ ಇಟ್ಟಿದೆ. ಆ ಕುರಿತು ನೀವು ಗೇನಾದರೂ ಆಕ್ಷೇಪಣೆಯಿದ್ದರೆ ಸದ್ರಿ ದಿವಸ ಹಗಲು 10-30 ಘಂಟೆಗೆ ಮೇಲಿನ ಕೋರ್ಟಿನಲ್ಲಿ ಖುದ್ದಾಗಲೀ ವಕೀಲರ ದ್ವಾರ ಹಾಜರಾಗಿ ಉಜ್ರು ಹೇಳತಕ್ಕದ್ದು. ತಪ್ಪಿದರೆ ನಿಮ್ಮ ಗೈರುಹಾಜರಲ್ಲಿ ವ್ಯಾಜ್ಯವು ತೀರ್ಮಾನಿಸಲ್ಪಡುವುದು.

(By order of the court)

Mangalore 16-1-42. S. Narsapaya, Vakil for Plff.

ಗಾಂಧಿಜಿ ಕಾಶಿಗೆ ಹೊರಟರು

ಕಾಶಿ ವಿದ್ಯಾಲಯದ ಜ್ಯುಬಿಲಿ ಸಮಾರಂಭದಲ್ಲಿ ಭಾಗವಹಿಸಲು ಗಾಂಧಿಜಿ ಕಾಶಿಗೆ ಹೊರಟರು.

ಎಲ್ಲಾ ರಾಜಕೀಯ ಕೈದಿಗಳ ಬಿಡುಗಡೆ

ಆಗಬೇಕೆಂದೂ ಮತ್ತು ಇಂಡಿಯಾವನ್ನು ಎರಡು ಹಂಗಡಗಳಾಗಿ ವಿಭಾಗಿಸಬಾರದೆಂದೂ ಸೂಚಿಸುವ ನಿರ್ಣಯವಾಗಲು ಕಾಂಗ್ರೆಸ್ ನೇಶನಲಿಸ್ಟ್ ಪಾರ್ಟಿಯ ಸದಸ್ಯರಾದ ಶ್ರೀ ಅಖಿಲಚಂದ್ರ ದತ್ತರು ಬರುವ ಕೇಂದ್ರ ಎಸೆಂಬ್ಲಿ ಅಧಿವೇಶನಕ್ಕೆ ಒಂದು ನೋಟೀಸು ಕೊಟ್ಟಿರುವರು.

ಈ ದಿನ ನೀನು ಹಲ್ಲುಗಳನ್ನು ಮೆಕ್ಲೀನ್ ಮಾಡಿದೆಯಾ

ಆಹಾ! ನೀನು ಬುದ್ಧಿವಂತಳೇ ಸರಿ.

ಈ ಸಣ್ಣ ಹುಡುಗಿಯನ್ನು ನೋಡಿ ಬುದ್ಧಿ ಕಲಿತುಕೊಳ್ಳಿ! ಮ್ಯಾಕ್ಲಿನ್ ಪೆರಾಕ್ಸೈಡ್ ಟೂತ್‌ಪೇಸ್ಟಿನಿಂದ ನಿಮ್ಮ ಹಲ್ಲುಗಳು ಬೆಳ್ಳಗೆ ಮಿಂಚುವಂತೆಯೂ ಹಲ್ಲಿನ ಗಾರೆಯು ಗಟ್ಟಿಯಾಗಿ ಆರೋಗ್ಯಯುತವಾಗಿಯೂ ಮತ್ತು ಬಾಯಿ ಚೊಕ್ಕಟವಾಗಿಯೂ ಮತ್ತು ಇಂಪಾಗಿಯೂ ಆಗುತ್ತದೆ. ಅದೇ ನಿಮಗೆ ಬೇಕಾದ ಟೂತ್‌ಪೇಸ್ಟು. ಬೆಳಿಗ್ಗೆಯಾದರೂ ಸರಿ, ರಾತ್ರಿಯಾದರೂ ಸರಿ.



ಮೂವರು ಮುಖಂಡರ ಮಾತುಗಳು

ನೆಹರು, ರಾಜಾಜಿ, ಅಜಾದ್ ಭಾಷಣಗಳು

ವರ್ಧಾದ ಎ. ಐ. ಸಿ. ಸಿ. ಸಭೆಯಲ್ಲಿ

ಎ. ಐ. ಸಿ. ಸಿ. ಯಲ್ಲಿ ನೆಹರು ಭಾಷಣ

'ವರ್ಕಿಂಗ್ ಕಮಿಟಿ ಸದಸ್ಯರಲ್ಲಿ ಒಮ್ಮತವಿಲ್ಲ, ಒಡಕುಂಟಾಗಿದೆಯೆಂದು ಕೆಲವರು ಟೀಕಿಸುತ್ತಾರೆ. ಅಂತಹ ಭಿನ್ನ ಪಂಗಡಗಳಲ್ಲಿ ನನ್ನದೂ ಒಂದು ಪಂಗಡವುಂಟೆಂದು ಹೇಳಲಾಗಿದೆ. ನಾನು ಗುಟ್ಟು ರಟ್ಟು ಮಾಡುತ್ತೇನೆ: ವರ್ಕಿಂಗ್ ಕಮಿಟಿಯಲ್ಲಿ ಒಂದಲ್ಲ, ಎರಡಲ್ಲ, ಹದಿನೈದು ಪಂಗಡಗಳಿವೆ. (ಹದಿನೈದು ಸದಸ್ಯರಿದ್ದಾರೆ) ಭಿನ್ನಾಭಿಪ್ರಾಯವಿರುವುದು ಶುಭಲಕ್ಷಣ. ನಾವೆಲ್ಲರೂ ನಮ್ಮ ನಮ್ಮ ಅಭಿಪ್ರಾಯದ ಬೆಳಕಿನಿಂದ ಕಾಂಗ್ರೆಸಿನ ಮಾರ್ಗವನ್ನು ಸ್ಪಷ್ಟಮಾಡುತ್ತೇವೆ. ಈ ನಿರ್ಣಯವನ್ನು ಮಂಡಿಸಲು ನನಗೆ ಹೆಮ್ಮೆಯಿದೆ' ಹೀಗೆಂದು ಬಾರ್ಡೋಲಿ ನಿರ್ಣಯವನ್ನು ಮಂಡಿಸುತ್ತಾ ವರ್ಧಾದ ಎ. ಐ. ಸಿ. ಸಿ. ಸಭೆಯಲ್ಲಿ ನೆಹರು ಹೇಳಿದರು. ಅವರ ಭಾಷಣದ ಸಾರಾಂಶವಿದು.

'ಲಂಡನಿನ ಕನ್ನಡಕ ಹಾಕಿಕೊಂಡು ಭಾರತದ ಪರಿಸ್ಥಿತಿ ಇಂದು ನಿರೀಕ್ಷಿಸುವುದಲ್ಲ. ಭಾರತದ ಅಭಿಪ್ರಾಯಕ್ಕೂ ಈಗ ಮಹತ್ವವಿದೆ. ಬ್ರಿಟಿಷ್ ಸರಕಾರವು ನಮ್ಮ ಮೇಲೆ ಮಾಡಿದ ಅನ್ಯಾಯದ ಪರಂಪರೆ ಇರುವಾಗ ಉಭಯ ರಾಷ್ಟ್ರಗಳಿಗೂ ಸೌಹಾರ್ದವಿರುವುದು ಹೇಗೆ? ನಿಜ ಸ್ಥಿತಿಯನ್ನು ಕಣ್ತೆರೆದು ನೋಡಲು ಬ್ರಿಟನು ಇಂದಿಗೂ ಸಿದ್ಧವಿಲ್ಲ. ಸ್ವತಂತ್ರ ಹಿಂದುಸ್ಥಾನವೂ ಬ್ರಿಟಿಷ್ ಮಿತ್ರರೊಡನೆ ಸಹಕರಿಸಬಹುದು. ಜಪಾನರು ಮತ್ತು ಜರ್ಮನಿಯವರು ಆಕ್ರಮಣ ಮಾಡುವರೆಂಬ ಬೆದರಿಕೆಯಿಂದ ಬ್ರಿಟಿಷರ ದಾಸ್ಯದಲ್ಲಿ ನಿತ್ಯ ಕೊಳೆಯಲು ನಾನು ಸಿದ್ಧನಿಲ್ಲ! ಪಾರ್ಲಿಮೆಂಟರಿ ಕಾರ್ಯಕ್ರಮವನ್ನು ಪುನಃ ಪ್ರಾರಂಭಿಸುವುದೆಂಬ ಮಾತು ಸುಳ್ಳು. ಪ್ರಾಂತ ಮತ್ತು ಹಳ್ಳಿಗಳನ್ನು ಸಂಭವಗಳನ್ನು ಎದುರಿಸಲು ತಯಾರು ಮಾಡುವುದೇ ನಮ್ಮ ಮುಂದಿನ ಕಾರ್ಯ. ಸ್ವಯಂ ಸೇವಕರನ್ನು ಸಂಗ್ರಹಿಸಬೇಕಾಗಿದೆ.'

ಎ. ಸಿ. ಸಿ. ಸಿ. ಯಲ್ಲಿ ರಾಜಾಜಿ ಭಾಷಣ

'ಸ್ವರಾಜ್ಯದ ಹೋರಾಟದ ಮಟ್ಟಿಗೆ ಮತ್ತು ನಾನನ್ನ ಮಟ್ಟಿಗೆ ನಾನು ಇನ್ನೂ ಅಹಿಂಸೆಯ ತತ್ವಕ್ಕೇ ಅಂಟಿಕೊಂಡಿದ್ದೇನೆ. ಅಹಿಂಸೆಯ ತತ್ವಗಳನ್ನು ಜೀವನದ ಯಾವತ್ತೂ ಅಂಗಗಳಿಗೆ ಅನ್ವಯಿಸುವ ಮಹಾತ್ಮರ ವಿಶ್ವಾಸಕ್ಕೆ ನಾನು ಒಳಗಾಗುವುದಿಲ್ಲವೆಂಬುದು ನಿಜವಿದೆ. ಹೊರಗಿನವರು ನಮ್ಮ ಮೇಲೆ ಆಕ್ರಮಣ ಮಾಡಿದರೆ, ಅಥವಾ ಬ್ರಿಟನನ್ನು ಬಿಟ್ಟು ಹೊಸ ಎಡರುಗಳನ್ನು ಎದುರಿಸಬೇಕಾದರೆ ಯಾವ ಉಪಾಯ ಕೈಕೊಳ್ಳಬೇಕಾಗುವುದೆಂದು ಯೋಚಿಸುವ ಪ್ರಸಂಗ ಇದುವರೆಗೆ ಬಂದಿರಲಿಲ್ಲ. ಸ್ವರಾಜ್ಯದ ಬಗ್ಗೆ ಶಾಸನಭಂಗ ಚಳವಳ ಮಾಡುವಾಗ ಅಹಿಂಸೆಯನ್ನು ನಾವು ಮೀರಬಾರದು; ಆದರೆ ದೇಶವನ್ನು ಮೂರನೆಯವರ ಆಕ್ರಮಣದಿಂದ ರಕ್ಷಿಸುವ ವಿಚಾರ ಬಂದಾಗ ವಿಚಾರವಾಡಬೇಕಾಗುತ್ತದೆ.' ಹೀಗೆಂದು ವಾರ್ಧಾದಲ್ಲಿ ಸೇರಿದ ಅಖಿಲ ಭಾರತ ಕಾಂಗ್ರೆಸು ಕಮಿಟಿ ಸಭೆಯಲ್ಲಿ ಬಾರ್ಡೋಲಿ ನಿರ್ಣಯವನ್ನು ಸಮರ್ಥಿಸುತ್ತಾ ರಾಜಾಜಿ ಹೇಳಿದರು.

ಅವರ ಭಾಷಣದ ಮಿಕ್ಕ ಕೆಲವು ಸಂಗತಿಗಳು ಇಂತಿವೆ: 'ಕಾಲಘಟನೆಗಳಿಗನುಸರಿಸಿ ಅಂತರಾಷ್ಟ್ರೀಯ ಪರಿಸ್ಥಿತಿ ಬದಲಾವಣೆಯಾಗಿದ್ದರೂ ಬ್ರಿಟಿಷ್ ಸರಕಾರದ ಧೋರಣವು ಬದಲಾಗಿಲ್ಲ. ಆಕ್ರಮಣದ ಗಂಡಾಂತರದ ವಿಷಯ ಭಾರತವು ಜಾಗೃತವಾಗಿದೆ. ಹಿಂದುಸ್ಥಾನದಂತಹ ದೊಡ್ಡ ರಾಷ್ಟ್ರವು ನಮ್ಮಲ್ಲಿ ಸೈನ್ಯವಿಲ್ಲ, ಆದ್ದರಿಂದ ನಾವೇನೂ ಮಾಡಲಾರೆವು ಎಂದು ಹೇಳುವುದು ಜಾಣತನವಲ್ಲ. ೪೦ ಕೋಟಿ ಜನರು ನಾವು ಬೇಕಾದನ್ನು ಮಾಡಬಲ್ಲೆವು. ಕೆಲವರು ಈಗ ಬ್ರಿಟಿಷರು ರಾಜಿಮಾಡಿ ದೇಶರಕ್ಷಣೆ ಭಾರ ವೊಪ್ಪಿಸಿದರೆ ನಾವೇನು ಮಾಡಬಹುದು ಎಂದು ಕೇಳುತ್ತಾರೆ. ಅವರೆ ಇದರಿಂದ ತಪ್ಪಿಸುವುದು ಸಾಧ್ಯವೇ ಎಂದು ನಾನು ಕೇಳುತ್ತೇನೆ. ಒಂದು ವಿಷಯವನ್ನು ಅಪೇಕ್ಷಿಸಿ ಇದ್ದು ಬರುತ್ತಿರುವಾಗ ಅದನ್ನು ಬೇಡವೆನ್ನುವುದು ಸಾಧ್ಯವಿದೆಯೆ? ಸ್ವಾತಂತ್ರ್ಯವೆಂಬುದು ಜವಾಬ್ದಾರಿಯೆಂಬುದು ನಿಜವಿದ್ದರೆ ನಾವದಕ್ಕೆ ಯೋಗ್ಯರಿರಲಿ ಅಯೋಗ್ಯರಿರಲಿ ಜವಾಬ್ದಾರಿಯನ್ನು ವಹಿಸಲೇ ಬೇಕು.

'ನಾವು ಅನ್ಯವಹಾರ್ಯ ಜನರಲ್ಲ. ಕೇವಲ ಘೋಷಣೆ ಆಶ್ವಾಸನಗಳಿಂದ ನಾವು ತೃಪ್ತರಾಗಲಾರೆವು. ನಮಗೆ ಈಗ ಪ್ರತ್ಯಕ್ಷ ಕೃತಿ ಬೇಕಾಗಿದೆ. ಅಂದಂತೆ ಮಾಡಿ ತೋರಿಸಬೇಕಾಗಿದೆ. ನಮ್ಮಿಂದ ಸಹಾಯ ದೊರೆತಿಲ್ಲವೆಂದೂ, ನಾವು ಅಹಿಂಸಾವಾದಿಗಳೆಂದೂ ಭಾವಿಸಿ ನಮ್ಮನ್ನು ಬಿಟ್ಟು ನಡೆಯುವುದು ಬ್ರಿಟಿಷರಿಗೆ ಶಕ್ಯವಿಲ್ಲ. ಅವರು ನಮಗೆ ಸಹಾಯ ಮಾಡದಿರುವುದರಿಂದಲೇ ನಾವು ಅವರೊಡನೆ ಸಹಕರಿಸಿಲ್ಲ.

'ಪಾರ್ಲಿಮೆಂಟರಿ ಕಾರ್ಯಕ್ರಮದ ಮಾತು ತೆಗೆದ ಕೂಡಲೇ ನಾವು ಕೇವಲ ಅಧಿಕಾರಲಾಲಸೆಯವರೆಂದು ಹೇಳಲಾಗುತ್ತದೆ. ಕೇಂದ್ರ ಸರಕಾರವು ನಮಗೆ ಒಪ್ಪಿಸಲ್ಪಡದಿದ್ದರೆ, ನಾವು ಪ್ರಾಂತಿಕ ಸರಕಾರವನ್ನು ಅಂಗೀಕರಿಸಲಾರೆವು. ಸದ್ಯದ ಪರಿಸ್ಥಿತಿಯಲ್ಲಿ ಪ್ರಾಂತಿಕ ಅಧಿಕಾರ ವಹಿಸಿಕೊಳ್ಳುವುದರಲ್ಲಿ ಏನೂ ಅರ್ಥವಿಲ್ಲ. ಅಧಿಕಾರವಿಲ್ಲದ ಪಾರ್ಲಿಮೆಂಟರಿ ಕಾರ್ಯಕ್ರಮದ ಕುರಿತು ವಿಚಾರಮಾಡುವುದೇ ಇಲ್ಲ.

'ಬ್ರಿಟನು ಬೇಗನೆ ಸೋಲುವುದಾದರೆ ನಾವು ಬೇರೆ ರಾಷ್ಟ್ರವರೊಡನೆ ಯಾಕೆ ದ್ವೇಷ ಕಟ್ಟಿಕೊಳ್ಳಬೇಕೆಂದು ಕೆಲವರು ಹೇಳುತ್ತಾರೆ. ಜಿತರಾಷ್ಟ್ರದವರಿಗೆ ನೀವು ಹಿಂದೀ ಸೈನಿಕರನ್ನು ಒತ್ತಾಯದಿಂದ ಹೊರಗೆಯ್ಯಲ್ಪಟ್ಟು ಯುದ್ಧದಲ್ಲಿ ನೂಕಲಾಯಿತು ಎನ್ನುವಿರೋ? ಹಿಂದುಸ್ಥಾನದ ವಸ್ತುಗಳು ಬಲಾತ್ಕಾರದಿಂದ ಹಿಂದುಸ್ಥಾನದ ಹೊರಗೊಯ್ಯಲ್ಪಟ್ಟುವೆಂದೂ, ಕಾಂಗ್ರೆಸಿನವರಾದ ನಾವು ಆಗ ವಾರ್ಧಾದಲ್ಲಿ ಕೂಡಿ ಯುದ್ಧದಲ್ಲಿ ಹಿಂದುಸ್ಥಾನವು ಭಾಗವಹಿಸಕೂಡದೆಂದು ಠರಾವು ಮಾಡಿದೆವೆಂದೂ ಹೇಳುವಿರೋ ಹೇಗೆ? ಬಾರ್ಡೋಲಿ ನಿರ್ಣಯದಲ್ಲಿ ದೇಶದ ಗೌರವಕ್ಕೆ ಕುಂದು ತರುವಂತಹುದೇನೂ ಇಲ್ಲ. ವರ್ಕಿಂಗ್ ಕಮಿಟಿಯವರಿಗೆ ಇದಕ್ಕಿಂತ ಉತ್ತಮವಾದ ಬೇರೆ ಮಾರ್ಗವಿಲ್ಲ.'

ಎ. ಐ. ಸಿ. ಸಿ. ಯಲ್ಲಿ ರಾಷ್ಟ್ರಪತಿ ಆಜಾದರ ಭಾಷಣ.

ಅಹಿಂಸಾ ತತ್ವಕ್ಕೆ ಅನ್ವಯಿಸಿ ಈ ಯುದ್ಧದಲ್ಲಿ ಹಾಗೂ ಯಾವುದೇ ಯುದ್ಧದಲ್ಲಿ ಹಿಂದುಸ್ಥಾನವು ಭಾಗವಹಿಸಕೂಡದೆಂಬ ಧೋರಣ ಕಾಂಗ್ರೆಸಿನದಿರಬೇಕೆಂದು ಮಹಾತ್ಮರ ಅಭಿಪ್ರಾಯವಿತ್ತು. ಆದರೆ ನಮಗೆ ಅದು ಸಮ್ಮತವಾಗಲಿಲ್ಲ. ಈ ವರೆಗೆ ನಮ್ಮ ದೇಶವು ಸಂಪಾದಿಸಿದ ಶ್ರೇಯಸ್ಸಿಗೆ ಮಹಾತ್ಮರ ಮುಖಂಡತ್ವ, ಅಹಿಂಸಾ ತತ್ವವೂ ಕಾರಣವಿರುವುದೆಂಬುದು ನಿಜ. ಆದರೆ ಜೀವನದ ಎಲ್ಲಾ ಘಟನೆಗಳಲ್ಲೂ ಅಹಿಂಸೆಯನ್ನೇ ಆಚರಿಸಬೇಕೆನ್ನುವುದು ತಾತ್ವಿಕ ದೃಷ್ಟಿ. ಜೀವನಕ್ಕೆ ತರ್ಕವು ಸರಿಹೋಗುತ್ತದೆ. ಒಟ್ಟಿನಲ್ಲಿ ಹಿಂದುಸ್ಥಾನವನ್ನು ರಕ್ಷಿಸುವುದರಲ್ಲಿ ಅಹಿಂಸೆಯಾಗಬೇಕೆನ್ನುವುದನ್ನು ನಾವೊಪ್ಪಲಿಲ್ಲ. ಈ ವಿಷಯ ನಮ್ಮಲ್ಲಿ ಗಾಂಧೀಜಿಯವರಲ್ಲಿ ಭಿನ್ನಾಭಿಪ್ರಾಯವಾಗಿದ್ದರೂ ಅದರಿಂದ ವೈಯುಕ್ತಿಕ ಸಂಬಂಧಕ್ಕೆ ಹಾನಿಯೊದಗಲಿಲ್ಲ. ಗಾಂಧಿ ಹಾಗೂ ನಮ್ಮ ಆಪ್ತತ್ವವು ಅಪೂರ್ವವಾದುದು. ಮರಣವೊಂದೇ ನಮ್ಮನ್ನೂ ಅವರನ್ನೂ ಅಗಲಿಸುವುದು'' ಹೀಗೆಂದು ರಾಷ್ಟ್ರಪತಿ ಅಜಾದರು ಎ. ಐ. ಸಿ. ಸಿ. ಯ ಪ್ರಾರಂಭದಲ್ಲಿ ಭಾಷಣ ಮಾಡುತ್ತಾ ಹೇಳಿದರು. ಅವರ ಭಾಷಣದ ಕೆಲವು ವಿವರಗಳು ಇಂತಿವೆ.

''ಯುದ್ಧವಿರಲಿ ಶಾಂತಿಯಿರಲಿ ಹಿಂದೂದೇಶದ ನಿಯಂತ್ರಣವು ನಮ್ಮ ಕೈಗೆ ಬರಬೇಕಾಗಿದೆ. ಗಾಂಧಿಜಿ ಭಾರತದ ಉದ್ಧಾರ ಮಾತ್ರವಲ್ಲ ಇಡೀ ಲೋಕದ ಉದ್ಧಾರಕ್ಕೇ ಹೊರಟವರು. ಯುದ್ಧ ನಡೆಯುತ್ತಿರುವಾಗ, ಅದರ ನೆರಳಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಸಂಪಾದಿಸುವುದು ತಮ್ಮ ಇಚ್ಛೆ ಇಲ್ಲವೆಂದೂ, ಅದಕ್ಕೆ ಸಹಾಯ ಮಾಡುವ ಶರತ್ತಿನಲ್ಲಿ ಸ್ವಾತಂತ್ರ್ಯ ಬೇಡವೆಂದೂ ಅವರು ಅಂದಿರುವರು. ಆದರೆ ನನ್ನ ಮತ್ತು ಇತರರ ವಿಚಾರ ಮಹಾತ್ಮರಂತೆ ಇಲ್ಲ. ಯುದ್ಧವಿರಲಿ ಶಾಂತಿಯಿರಲಿ ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ದೊರೆತರೆ ಅದನ್ನು ತೆಗೆದುಕೊಳ್ಳಲು ಸಿದ್ಧನಿರುವೆನು. ನನ್ನ ಒಂದೇ ಒಂದು ಉದ್ದೇಶವು ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ಸಂಪಾದಿಸುವುದೇ ಇರುತ್ತದೆ. ಯುದ್ಧದ ನೆರಳಲ್ಲಿ ಅದು ದೊರೆತರೂ ಅದನ್ನು ಸ್ವೀಕರಿಸುವೆನು. ಆದರೆ ಅದು ನಿಜವಾದ ಸ್ವಾತಂತ್ರ್ಯವಿರಬೇಕು.''

ಕುಂಭಮೇಳದಲ್ಲಿ ೮೦೦,೦೦೦ ಹಿಂದುಗಳು

ಕುಂಭಮೇಳದ ನಿಮಿತ್ತ ಸುಮಾರು ೮೦೦,೦೦೦ ಹಿಂದುಗಳು ಬಂದಿದ್ದರು. ಗಂಗಾ ಯಮುನಾ ನದಿಗಳ ಸಂಗಮ ಸ್ಥಳಗಳಲ್ಲಿ ಕೂಡಿ ಸ್ನಾನ ಮಾಡಿದರು. ಅದೇ ಸಮಯದಲ್ಲಿ ಗವರ್ನರರು ಆನೆಯ ಮೇಲೆ ಸವಾರಿ ಮಾಡಿ ಬಂದರು.

ಧಾಳಿಗಿಂತ ಭೀತಿಯಿಂದಲೇ ಹಾನಿ ಹೆಚ್ಚು

ಬರ್ಮಾ ದೇಶದಲ್ಲಿ ನಡೆದ ವಿಮಾನಧಾಳಿಯನ್ನು ನೋಡಿ ಬಂದ ಡಾ. ಸಿಮಿಂಗ್ಟನರು ಹೇಳುವುದೇನೆಂದರೆ: ಜನರು ಧಾಳಿಗಿಂತಲೂ, ಅದರ ಭೀತಿಯಿಂದಲೇ ಹೆಚ್ಚಿನ ತಳಮಳಗೊಳ್ಳುತ್ತಾರೆಂದು. ಯೋಗ್ಯ ರಕ್ಷಣೆಗಳನ್ನು ಕೈಕೊಂಡರೆ ಧಾಳಿಯಾದರೂ ವಿಶೇಷ ತೊಂದರೆಯಾಗುವುದಿಲ್ಲವಂತೆ.

ಕಲ್ಕತ್ತಕ್ಕೆ ಜಪಾನೀ ಯುದ್ಧ ಕೈದಿಗಳನ್ನು

ಹಲವರನ್ನು ತರಲಾಗಿದೆ. ಇವರನ್ನು ದೇಶದ ಬೇರೆ ಬೇರೆ ಶಿಬಿರಗಳಿಗೆ ಕಳುಹಿಸಲಾಗುವುದು.

ಮಂಗಳೂರು ಪೇಟೆಧಾರಣೆ

(ದ. ಕ. ಜಿಲ್ಲಾ ಟ್ರೇಡರ್ಸು ಕಲೆಕ್ಟರರಿಂದ ಬಂದದ್ದು)

	ರಿಂದ	ವರೆಗೆ
ಭತ್ತ ಮುಡಿಗೆ	2–10–0	
ಅಕ್ಕಿ ಗುಡ್ಡು ಮು.	6– 2–0	6– 4–0
,, ದುಯಂ ,,	5–14–0	6– 2–0
,, ಅನ್ವಲ್ ಸುಗ್ಗಿ	—	
,, ದುಯಂ ,,	5–14–0	—
ತೆಂಗಿನಕಾಯಿ 1000ಕ್ಕೆ	37–8–0	42–8–0
,, ಸಿಪ್ಪೆಯಿದ್ದದ್ದು ,,	40–0–0	45–0–0
ಕೊಬ್ಬರಿ ಖಂಡಿಗೆ	58–12–0	—
ದಿಲ್‌ಪಸಂದ್ ಖ.	63–12–0	—
ತೆಂಗಿನ ಎಣ್ಣೆ ಮಣಕ್ಕೆ	4–12–0	—
ಸಿಪ್ಪೆಯ ಅಡಿಕೆ ಸಾವಿರಕ್ಕೆ	3–0–0	3–8–0
ಸುಲಿದ ,, ಖ. (ಹಳ್ತು)	140–0–0	160–0–0
,, (ಹೊಸ್ತು)	120–0–0	145–0–0
ಕಜ್ಜಿನ ಬೆಲ್ಲ ಖಂಡಿಗೆ	30–0–0	35–0–0
ಒಳ್ಳೆಮೆಣಸು ಹಂ.	17–0–0	17–8–0
ಹೊಗೆಸೊಪ್ಪು ಮಣಕ್ಕೆ	6–0–0	7–0–0
ಹುಡಿಯ ,, ಮು.	–0–0	–0
ಮೈಸೂರು ಪಲಕ್ಕಿ ಮು.	40–0–0	50–0–0
ಕೊಡಗಿನ ,, ಮು.	40–0–0	45–0–0
ಕುಮ್ಟೆಯ ಮೆಣಸು ಖ.	90–0–0	95–0–0
ಕಾಸರಗೋಡು ,, ಮು.	—	
ಊರಿನ ,, ಮು.	4–14–0	

ಗಾಯಗಳಲ್ಲಿರುವ ಹೊಲಸು ವಿಷಕಾರಿಯಾಗಿ ಪರಿಣಮಿಸಬಹುದು

ಸೂಜಿಯ ಕಣ್ಣಿನ ಒಂದು ಚುಚ್ಚುವಿಕೆಯೋ-ಭಯಂಕರವಾದ ಗಾಯ—ಎರಡೂ ಒಂದೇ ಸಮಾನ. ಅಂಥಾ ಚಿಕ್ಕ ದೊಡ್ಡ ಗಾಯಗಳಲ್ಲಿರಬಹುದಾದ ವಿಷಕಾರಿ ಕ್ರಿಮಿಗಳನ್ನು ನಾಶಮಾಡಲು ಕೂಡಲೆ ವಿಷಹಾರಿ ಔಷಧಿಯನ್ನು ಹಾಗಿಸದಿದ್ದರೆ—ಭಯಂಕರವಾದ ಹಾನಿಯು ತೋರಬಹುದು. ಅಂಥಾ ಗಾಯಗಳನ್ನು ಗಮನಿಸದಿದ್ದರೆ ಅಂಗಾಂಗಗಳಿಗೆ ಹಾನಿಯಾಗುವುದು ಮಾತ್ರವಲ್ಲದೆ ಜೀವಕ್ಕೂ ಕೆಡುಕುಂಟು. ಹಾಗಾದರೆ ಇಲ್ಲದ ಸಂಕಷ್ಟಗಳನ್ನು ಯಾಕೆ ಅನುಭವಿಸಬೇಕು? ಇಂಥ ಬಾಧೆಗಳನ್ನು ಬರಗೊಡದಂತೆ ಮಾಡಲು ಉತ್ತಮವಾದುದೆಂದರೆ, ಕುಟಿಕೂರಾ ಮುಲಾಮು (cuticura ointment) ಕುಟಿಕೂರಾ (cuticura) ಮುಲಾಮು ಹಾಗಿಸಿದ ಭಾಗವ ಕಲೆಗಳು ಹಾಸಿಸುವುದಿಲ್ಲ. ಒಂದೂ ಲೋಪವಿಲ್ಲದ ಇಂಥಾ ರಕ್ಷಣೆಯ ಔಷಧಿಯನ್ನು ಉಪಯೋಗಿಸಿದರೆ ಗಾಯಗಳಲ್ಲಿ ಹುಣ್ಣಾದೀತೆಂಬ ಭಯವೇ ಇರುವುದಿಲ್ಲ.

ಗಜ್ಜಿ, ಗಾಯ, ವ್ರಣ, ಕುರು, ಹುಣ್ಣು, ಚರ್ಮರೋಗ ಮರ್ದನ, ವಿಷಕಾರಿ ಗಾಯ, ಬೆಂಕಿಯ ಹುಣ್ಣು ಮೊದಲಾದ ಚರ್ಮರೋಗಗಳನ್ನು ನಾಶಮಾಡಲು ಕುಟಿಕೂರಾ ಮುಲಾಮನ್ನು (cuticura ointment) ಉಪಯೋಗಿಸಿರಿ.

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ.

ಕುಟಿಕೂರಾ ಮುಲಾಮು

CUTICURA OINTMENT

ಜಿಲ್ಲಾ ಸಮಾಚಾರಗಳು

ವಿದಾಯ ಸತ್ಕಾರ – ವಾಚನ— ಮಂಗಳೂರು ಮಹಿಳಾ ಸಭೆಯಲ್ಲಿ ಮಿಸೆಸ್ ಸುಬ್ರಹ್ಮಣ್ಯನರಿಗೆ ಒಂದು ವಿದಾಯ ಸತ್ಕಾರ ವಿತ್ತು. ಆ ಸಂದರ್ಭ ಶ್ರೀ. ಮುಳಿಯ ತಿಮ್ಮಪ್ಪಯ್ಯನವರು ರಾಮಾಯಣ ಭಾರತಗಳಿಂದ ಸೀತಾ ದ್ರೌಪದೀ ಮೊದಲಾದ ಸ್ತ್ರೀಯರ ಸ್ವಭಾವ ಪರಿಚಯ ಮಾಡುವಂತಹ ಭಾಗಗಳನ್ನೆತ್ತಿ ವಾಚನ ಮಾಡಿದರು. ಶ್ರೀ. ಎನ್. ಎಸ್. ಕಿಲ್ಲೆಯವರು ಅವರಿಗೆ ಸಹಾಯಕರಾಗಿದ್ದರು. ಸಭಿಕರೆಲ್ಲರೂ ಅತ್ಯಂತ ಸಂತೋಷಪ್ರದರ್ಶಿಸಿದರು.

ಮೊಳಲಿ—ಇಲ್ಲಿಯ ಬೋರ್ಡು ಎಲಿಮೆಂಟರಿ ಶಾಲಾ ಬಾಲಕರ ಹೆತ್ತವರ ಕೂಟವು ಈ ಶಾಲಾ ವಠಾರದಲ್ಲಿ ಕಳೆದ ತಾ. ೮ರಲ್ಲು ಈ ಶಾಲಾ ಉಪಾಧ್ಯಾಯರ ಹಾಗೂ ಶಾಲಾ ಕಮಿಟಿಯರವರ ಪ್ರೋತ್ಸಾಹದಿಂದ ಜರಗಿತು. ಕೆ. ಆರ್. ಬಲ್ಲಾಳ್ ರವರು ಸಭಾಧ್ಯಕ್ಷರಾಗಿದ್ದರು. ಶಾಲಾವಿದ್ಯಾರ್ಥಿಗಳ ಲೇಜಿಮ್, ಡ್ರಿಲ್, ಕುಣಿತ ನಾಟ್ಯ, ನರ್ತನ ಮೊದಲಾದವುಗಳಿಂದ ಸಭಿಕರನ್ನು ಸಂತೋಷಗೊಳಿಸಿದರು. ಹೆತ್ತವರ ಕೂಟಕ್ಕೆ ಶ್ರೀ. ಕೆ. ಆರ್. ಬಲ್ಲಾಳ್ ರವರನ್ನು ಪ್ರೆಸಿಡೆಂಟರಾಗಿ ಚುನಾಯಿಸಲಾಯಿತು.

ವರ್ಧಂತಿ—ತಾ. 25ರಂದು ಸಂಜೆ 5 ಗಂಟೆಗೆ ಶ್ರೀ ಬಾಲ ಮಾರುತಿ ವ್ಯಾಯಾಮ ಶಾಲೆಯು ಹದಿನೈದನೆಯ ವಾರ್ಷಿಕೋತ್ಸವವು ಶ್ರೀ. ಎಂ. ಪಿ. ಪೈ ಐ. ಸಿ. ಎಸ್. ಕಾಪಿಕಂಟ್ರೋಲಿಂಗ್ ಆಫೀಸರ್, ಇವರ ಅಧ್ಯಕ್ಷತೆಯಲ್ಲಿ ಜರಗುವುದು.

ದ. ಕ. ಜಿಲ್ಲಾ ರೈತರ ಯಾನೆ ಭೂಮಾಲಕರ ಸಂಘ—ಇದರ ಸಭೆಯು ಸ್ಥಳೀಯ ಜೈನ ವಿದ್ಯಾರ್ಥಿ ಭವನದಲ್ಲಿ ಶ್ರೀ. ಪಿ. ಆರ್. ಪೂಂಜರ ಅಧ್ಯಕ್ಷತೆಯಿಂದ ಸೇರಿ, ಬತ್ತದ ಹಾಗೂ ಅಕ್ಕಿಯ ಕ್ರಯವನ್ನು ನಿರ್ಬಂಧಿಸುವುದರಿಂದ ರೈತರ ಹಿತಕ್ಕೆ ಹಾನಿಯುಂಟೆಂದೂ ಬಟ್ಟೆ, ಚಿಮಿಣಿ ಎಣ್ಣೆ, ಹಂಚು ಮೊದಲಾದವುಗಳಿಗೆ ಕ್ರಯವೇರಿದ ಮಟ್ಟದಲ್ಲಿ ಅಕ್ಕಿಗೆ ಕ್ರಯವೇರಿಲ್ಲವೆಂದೂ, ಅಕ್ಕಿ ಬತ್ತಗಳ ಲೂಟಿಯು ಕುರಿತಿರುವ ಭಯಪ್ರದರ್ಶನವು ನ್ಯಾಯವಲ್ಲವೆಂದೂ, ಅಕ್ಕಿಯನ್ನು ಕೂಲಿಯಾಗಿ ಕೊಡುವ ಮಾಮೂಲು ಅಕ್ಕಿಯ ಕ್ರಯದ ಹಿಡಿತದಿಂದ ಹೋಗುವುದೆಂದೂ, ಅಕ್ಕಿಯ ಬೆಲೆ ಹಿಡಿತವು ರೈತರ ಒಪ್ಪಿಗೆಯಿಂದಾಗಬೇಕೆಂದೂ ಸರಕಾರವೇ ಕಿಸ್ತಿನ ತಿಂಗಳಲ್ಲಿ ಅಕ್ಕಿಯನ್ನು ತಕ್ಕೊಂಡು ಪೇಟೆಯಲ್ಲಿ ಚಿಲ್ಲರೆಯಾಗಿ ಮಾರಬೇಕೆಂದೂ ಮುಂತಾಗಿ ನಿರ್ಣಯಗಳಾದವು. ದಿವಂಗತ ದಿ| ಬ| ಮಹಾಬಲ ಹೆಗ್ಡೆ ಮತ್ತು ಮೂಡಬಿದ್ರೆ ಶಂಕರ ನಾರಾಯಣರಾಯರ ನಿಧನದ ಬಗ್ಗೆ ಸಂತಾಪಸೂಚನೆಗಳಾದವು.

ದ. ಕ. ಜಿಲ್ಲಾ ಮೂಲ್ಯರ ಯಾನೆ ಕುಲಾಲರ ಜಾತ್ಯಭ್ಯುದಯ ಸಂಘ—ಇದರ ಹದಿನೇಳನೆಯ ವಾರ್ಷಿಕೋತ್ಸವ ಮತ್ತು ಮೊದಲನೆಯ ಪರಿಷತ್ತು ತಾ. 18ರಂದು ಸ್ಥಳೀಯ ಮಾರ್ನಮಿಕಟ್ಟೆಯಲ್ಲಿ ಶ್ರೀ. ಕೆ. ಬಿ. ಜಿನರಾಜಹೆಗ್ಡೆ ಎಂ. ಎಲ್. ಎ. (ಕೇಂದ್ರ) ಇವರ ಅಧ್ಯಕ್ಷತೆಯಿಂದ ಜರಗಿತು. ಪ್ರತಿನಿಧಿಗಳು ಪ್ರೇಕ್ಷಕರು ತುಂಬಾ ಮಂದಿ ಬಂದಿದ್ದರು. ಕುಲಾಲರ ಆರ್ಥಿಕ ಸ್ಥಿತಿ ಅಭಿವೃದ್ಧಿಗಳ ವಿಚಾರದಲ್ಲಿ ಹೆಚ್ಚಿನ ಸೂಚನೆಗಳನ್ನಿತ್ತು ಭಾಷಣಕರ್ತರು ಅಧ್ಯಕ್ಷರೂ ಮಾತನಾಡಿದರು.

ನೀರೇಶ್ವಾಲ್ಯ ಶ್ರೀ ಪ್ರಭಾಕರ ಭಜನೆ ಸಂಘದ ಕಳೆದ ತಾ. 2ನೇ ದಿನ ನಡೆದ ಸಭೆಯಲ್ಲಿ ನಿರ್ಣಯಿಸಲ್ಪಟ್ಟಂತೆ (ಎರಡು ಎರಡು ವಾರಗಳಿಗೊಮ್ಮೆ ಭಾಷಣ, ಮತ್ತು ಎರಡು ವಾರಗಳಿಗೊಮ್ಮೆ ಚರ್ಚಾಸಭೆ) ಸಂಘದ ಕಾರ್ಯದರ್ಶಿ ಶ್ರೀ. ಬಿ. ಸುಂದರನ್ನವರು ಚಿಕ್ಕಭಾಷಣ ಮಾಡಿದರು.

ಕಯ್ಯೂರು ಮೊಕದ್ದಮೆ-ಸೆಶ್ಯನ್ಸ್ ಕೋರ್ಟಿನಲ್ಲಿ ವಿಚಾರಣೆಯಾಗುತ್ತಿರುವ ಕಯ್ಯೂರು ಮೊಕದ್ದಮೆಯಲ್ಲಿ ಪ್ರೊಸಿಕ್ಯೂಶನ್ ಕಡೆಯ ಸಾಕ್ಷಿಗಳ ವಿಚಾರಣೆಯು ಮುಗಿದಿರುವುದು. ೬೦ ಮಂದಿ ಆಪಾದಿತರೂ ತಮ್ಮ ಹೇಳಿಕೆಗಳನ್ನು ಕೊಟ್ಟಿರುವರು. ಪ್ರೊಸಿಕ್ಯೂಶನ್ [illegible] ವಾದಗಳು ಸದ್ಯದಲ್ಲಿ ಆರಂಭವಾಗಲಿರುವುದು.

ಅಖಿಲ ಭಾರತ ಹಿಂದುಸ್ಥಾನ ಸ್ಕೌಟು ದಿನಾಚರಣೆಗಳು—ಜನವರಿ ತಾ. ೨೨ರಿಂದ ೨೯ರ ತನಕ ಜರಗುವವು. ಕಾರ್ಯಕ್ರಮವು ತಾ. ೨೩ ಸ್ಥಾಪನಾ ದಿನ. ತಾ. ೨೪ ವಿನೋದಾವಳಿಗಳು ತಾ. ೨೫ ಹಟ್ಟಿಗೆ ಹೊಸ ಸ್ಕೌಟುಗಳನ್ನು ಸೇರಿಸುವುದು. ತಾ. ೨೬ ಸಾರ್ವಜನಿಕ ಭಾಷಣಗಳು. ತಾ. ೨೭ ಭಾಷಣಗಳು, ತಾ. ೨೮ ಪ್ರದರ್ಶನ, ತಾ. ೨೯ ಸಾರ್ವಜನಿಕರೆದುರು ಪ್ರದರ್ಶನ.

ದೇಶ ರಕ್ಷಣಾಕ್ರಮ ಪ್ರದರ್ಶನದ ರೈಲು ಬಂಡಿಯು ತಾ. ೧೮ರಂದು ರೈಲೆ ಗುಡ್ಸ್ ಶೆಡ್ಡಿನಲ್ಲಿ ಮಧ್ಯಾಹ್ನ ೧ರಿಂದ ೬ ಗಂಟೆಯ ವರೆಗೆ ಪ್ರದರ್ಶನಕ್ಕಿತ್ತು. ಸಂಜೆ ಯುದ್ಧ ಸಂಬಂಧಿಸಿದ ಮತ್ತಿತರ ಚಲಚ್ಚಿತ್ರಗಳ ಪ್ರದರ್ಶನವಿತ್ತು.

ಮಂಗಳೂರು ನಗರ ಸಭೆ—ತಾರೀಕು ೧೫ನೇ ಸಾಯಂ. ಉಪಾಧ್ಯಕ್ಷರಾದ ಶ್ರೀ. ಎಲ್. ಸಿ. ಪಾಯಸ್ ರವರ ಅಧ್ಯಕ್ಷತೆಯಲ್ಲಿ ಜರಗಿತು. ಮಂಗಳೂರಿಗೆ ನೀರಿನ ಸರಬರಾಯಿ ಮತ್ತು ಚರಂಡಿ ಮಾಡಿಸುವ ವಿಷಯದಲ್ಲಿ ಸರಕಾರದವರು 'ಅದು ತಮ್ಮ ಪಟ್ಟಿಯಲ್ಲಿ ಇಲ್ಲ. ಆದ್ದರಿಂದ ಅದನ್ನು ಈಗ ಗಮನಿಸಲಾಗುವುದಿಲ್ಲ' ಎಂದು ತಿಳಿಸಿದ ವಿಷಯದಲ್ಲಿ 'ಅದನ್ನು ಯಾವಾಗ ಪಟ್ಟಿಯಲ್ಲಿ ಸೇರಿಸಲಾಗುವುದು' ಎಂದು ಬರೆದು ತಿಳಿಯಬೇಕೆಂದು ನಿರ್ಧಾರವಾಯಿತು. ಈಗ ನೀರಿನ ಮತ್ತು ಡ್ರೈನೇಜ್ ತೆರಿಗೆಯನ್ನು ವಸೂಲು ಮಾಡುವುದನ್ನು ನಿಲ್ಲಿಸುವುದುತ್ತಮವೆಂದು ಬೇರೆ ಕೆಲವರ ಅಭಿಪ್ರಾಯ. ಮೂರು ಮಂದಿ ಸೂಲಗಿತ್ತಿಯರನ್ನು 'ರಿಫ್ರೆಶರ್' ಕೋರ್ಸಿಗೆ ಕಳುಹಿಸಬೇಕೆಂಬ ವಿಷಯದಲ್ಲಿ ಸದ್ಯಃ ಒಬ್ಬರನ್ನು ಕಳುಹಿಸಿದರೆ ಸಾಕೆಂದಾಯಿತು.

ರಥೋತ್ಸವ— ಮಂಗಳೂರು ಶ್ರೀ ವೆಂಕಟ್ರಮಣ ದೇವಸ್ಥಾನದ ರಥೋತ್ಸವವು ಪ್ರಾರಂಭವಾಗಿದೆ. ಡೋಂಗರ್ ಕೇರಿ ಹಾಮಿನ್ ರಸ್ತೆಯಲ್ಲಿ ವಾದ್ಯಸಹಿತ ಮೆರವಣಿಗೆಯನ್ನೊಯ್ಯುವರೆ ಜಿಲ್ಲಾ ಪೋಲೀಸ್ ಸುಪರಿಂಟೆಂಡೆಂಟರಿಂದ ದೇವಸ್ಥಾನದ ಟ್ರಸ್ಟಿಗಳು ಲೈಸನ್ಸು ಪಡೆದುಕೊಳ್ಳಬೇಕಾಗಿ ನೋಟೀಸು ಬಂದಿರುವುದಾಗಿ ತಿಳಿದಿದೆ. ಕಳೆದ ವರ್ಷ ಮೃಗಬೇಟೆ ಉತ್ಸವದಂದು ಉಂಟಾದ ಗಲಾಟೆಯೇ ಇದರ ಕಾರಣವೆಂದು ಊಹಿಸಲಾಗಿದೆ.

ಸೆಂಟ್ರಲ್ ಟೋಕೀಸ್:—ಸ್ಥಳೀಯ ಸೆಂಟ್ರಲ್ ಟೋಕೀಸಿನಲ್ಲಿ ತಾ. 22ರಿಂದ ರಣಜಿತ್ ನವರ 'ನದಿಕಿನಾರೆ' ಎಂಬ ಚಿತ್ರವು ಪ್ರದರ್ಶಿಸಲ್ಪಡುತ್ತದೆ.

ಸ್ವಾತಂತ್ರ್ಯ ದಿನಾಚರಣೆ:—ಎಂದಿನಂತೆ ಈ ವರ್ಷವು ಇದೇ ಜನವರಿ ತಾ. 26ನೇ ದಿನ ದೇಶಾಭಿಮಾನಿಗಳೆಲ್ಲರೂ ಸ್ವಾತಂತ್ರ್ಯ ಪ್ರತಿಜ್ಞೆಯನ್ನು ಸ್ವೀಕರಿಸಬೇಕಾಗಿದೆ. ಜಿಲ್ಲೆಯಲ್ಲಿನ ಸರ್ಕಲ್ ಕಾಂಗ್ರೆಸ್ ಕಮಿಟಿಗಳು, ಗ್ರಾಮ ಕಮಿಟಿಗಳು ಮಾತ್ರವಲ್ಲದೆ ಇತರ ಯಾವತ್ತು ಕಾಂಗ್ರೆಸಿಗರು ತಮ್ಮ ತಮ್ಮ ಕಾರ್ಯಕ್ಷೇತ್ರಗಳಲ್ಲಿ ಈ ದಿನದ ಆಚರಣೆಯನ್ನು ಯಶಸ್ವೀ ರೀತಿಯಿಂದ ಜರಗಿಸಬೇಕೆಂದು ವಿನಂತಿಯಿದೆ. ಅವತ್ತು ಬೆಳಗ್ಗೆ ಪ್ರಭಾತಫೇರಿ ಧ್ವಜವಂದನೆ ಮತ್ತು ಸಾಯಂಕಾಲ ಮೆರವಣಿಗೆ ಸಾರ್ವಜನಿಕ ಸಭೆಗಳನ್ನು ಜರಗಿಸಿ, ಸಭಾಧ್ಯಕ್ಷರು ಪ್ರತಿಜ್ಞಾ ಪತ್ರವನ್ನು ಓದಿ ಸಭಿಕರಿಗೆ ವಿವರಿಸಿ ಕೊನೆಗೆ ಎಲ್ಲರೂ ಎದ್ದುನಿಂತು ಗಂಭೀರವಾಗಿ ಪ್ರತಿಜ್ಞೆಯನ್ನು ಸ್ವೀಕರಿಸತಕ್ಕದ್ದು ಎಂಬುದಾಗಿ ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿ ಪ್ರಕಟಣೆಯಿದೆ.

ಮಕರ ಸಂಕ್ರಾಂತಿ ಉತ್ಸವವು— ಸ್ಥಳೀಯ ರಾಷ್ಟ್ರೀಯ ಸ್ವಯಂಸೇವಕ ಸಂಘದವರಿಂದ ಕಳೆದ ವಾರ ಕೆನರಾ ಹೈಸ್ಕೂಲಿನ ಶ್ರೀ ಕೃಷ್ಣ ಮಂದಿರದ ವಠಾರದಲ್ಲಿ ಜರಗಿಸಲ್ಪಟ್ಟಿತು. ಶ್ರೀ. ರಂಗನಾಥಪೂಂಜರು ಅಧ್ಯಕ್ಷತೆ ವಹಿಸಿದ್ದರು. ಸಂಚಾಲಕರಾದ ಶ್ರೀ. ಅನ್ನಾಶೇಷರು ಸಂಘದ ಮುಖ್ಯ ಉದ್ದೇಶಗಳನ್ನು ವಿವರಿಸಿದರು. ಶ್ರೀ. ಕಾರ್ಕಳ ಸದಾಶಿವರಾಯರು ಸಂಘದ ಉದ್ದೇಶವನ್ನು ವಿವರಿಸಿ ಸಂಘಕ್ಕೆ ಮಹಾಜನರ ಸಹಾಯವನ್ನು ಬೇಡಿದರು.

ದ. ಕ. ಶರೀರ ಶಿಕ್ಷಣದ ಉಪಾಧ್ಯಾಯರು—ಇವರ ರಿಫ್ರೆಶರ್ ಕೋರ್ಸ [illegible]

ಕೊನೆಯ ಅಧಿವೇಶನವು ಗವರ್ನಮೆಂಟ್ ಕಾಲೇಜಿನಲ್ಲಿ ಅಲ್ಲಿನ ಪ್ರಿನ್ಸಿಪಾಲ್ ಶ್ರೀ. ಕೆ. ಎಸ್. ಯು. ನಾಯರ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ಎಂ. ಎಸ್. ಏಕಾಂಬರಾಯರು ಒಂದು ಭಾಷಣವಿತ್ತರು. ಈ ತರಬೇತಿಯ ಮುಖ್ಯಸ್ಥರಾದ ಮದ್ರಾಸ್ ಸರಕಾರ ಸೀನಿಯರ್ ಫಿಸಿಕಲ್ ಡೈರೆಕ್ಟರ್ ಡಾ. ಎಂಡ್ರ್ಯೂಸ್ ಇವರು ಈ ವಿಚಾರ ವರದಿಯನ್ನೋದಿ ಧನ್ಯವಾದವನ್ನರ್ಪಿಸಿದ ಬಳಿಕ ಅಧ್ಯಕ್ಷ ಭಾಷಣಗಳಿಂದ ಸಭೆ ಕೊನೆಗಂಡಿತು.

ವರ್ಧಂತ್ಯುತ್ಸವ—ಇಲ್ಲಿಯ ಬೋರ್ಡ್ ಹೈಸ್ಕೂಲಿನ ವರ್ಧಂತಿ ಉತ್ಸವವು ಇದೇ ತಾ. 24ರ ದಿನ ಶ್ರೀ. ಎ. ಬಿ. ಶೆಟ್ಟಿ ಎಂ.ಎಲ್.ಎ.ರವರ ಅಧ್ಯಕ್ಷತೆಯಲ್ಲಿ ಯಥೋಚಿತ ಕಾರ್ಯಕ್ರಮಗಳಿಂದ ನಡೆಯುವುದು.

ಉಳ್ಳಾಲ–ಹುರಿಹಗ್ಗ ತರಬೇತಿ ಕ್ಲಾಸುಗಳು:—ಇಲ್ಲಿ ಹುರಿಹಗ್ಗ ಸಹಕಾರೀ ಸಂಘದ ಆಶ್ರಯದಲ್ಲಿ ತಾ. 20ರಿಂದ ಆರು ತಿಂಗಳುಗಳ ವರೆಗೆ ಹುರಿಹಗ್ಗ ತರಬೇತಿ ಕ್ಲಾಸುಗಳು ಆರಂಭವಾಗಿವೆ. ಇದರ ಪ್ರಾರಂಭೋತ್ಸವ ಶ್ರೀ ಜಿನರಾಜ ಹೆಗ್ಡೆ ಎಂ. ಎಲ್. ಎ. (ಕೇಂದ್ರ) ಇವರ ಅಧ್ಯಕ್ಷತೆಯಲ್ಲಿ ತಾ. 20ರಂದು ಸಂಜೆ ನೆರವೇರಿತು. ಮದ್ರಾಸು ಸರಕಾರದ ರಿಸರ್ಚ್ ಕೆಮಿಸ್ಟ್ ಇಲಾಖೆಯ ಶ್ರೀ ಚೌಧರಿಯವರು ಪ್ರಾಚೀನ ಮತ್ತು ಆಧುನಿಕ ಕಾಲದ ಹುರಿಹಗ್ಗ ಮಾಡುವ ವಿಧಾನಗಳ ಕುರಿತು ವಿವರಿಸಿದರು. ಶ್ರೀ ಅಚ್ಯುತ ನಾಯರರು ಊರಜನರು ಈ ತರಬೇತಿ ಕ್ಲಾಸುಗಳ ಉಪಯೋಗಮಾಡಿಕೊಳ್ಳಬೇಕಾಗಿ ಅಪೇಕ್ಷಿಸಿದರು. ಅಧ್ಯಕ್ಷರು ಗ್ರಾಮಕೈಗಾರಿಕೆಗಳ ವಿಷಯವಾಗಿ ಮಾತನಾಡಿದರು. ಉಳ್ಳಾಲ ಹುರಿಹಗ್ಗ ಸಹಕಾರಿ ಸಂಘದ ಅಧ್ಯಕ್ಷರು ಕೃತಜ್ಞತೆ ಹೇಳಿದರು.

ಕಾಸರಗೋಡು

ನೀಲೇಶ್ವರ: ಬಿಡುಗಡೆ—ಇಲ್ಲಿ ಎರಡನೆ ಬಾರಿ ಸತ್ಯಾಗ್ರಹ ಹೂಡಿ ಕಾರಾಗೃಹವನ್ನು ಸೇರಿದ ಶ್ರೀ. ಎಂ. ಕುಞಂಬು ನಾಯರ್ ರವರು ಆಲಿಪುರಮ್ ಜೈಲಿನಿಂದ ಬಿಡುಗಡೆಹೊಂದಿ ಇಲ್ಲಿಗೆ ಬಂದಿರುವರು.

ಕಾರ್ಕಳ

ಬಸ್ ಅಪಘಾತ—ಕಳೆದ ತಾ. ೧೯ರ ದಿನ ರಾತ್ರೆ ಸುಮಾರು ೯॥ ಗಂಟೆಗೆ ಮಂಗಳೂರಿನಿಂದ ಪ್ರಯಾಣಿಕರನ್ನು ತೆಗೆದುಕೊಂಡು ಬರುತಿದ್ದ ಹನುಮಾನ್ ಕಂಪೆನಿಯ ಬಸ್ಸು ಇಲ್ಲಿಂದ ಸುಮಾರು ೪ ಮೈಲುಗಳ ದೂರದಲ್ಲಿರುವ ಚಿಲುಮಿಯ ಏರಿನ ಸಮೀಪದಲ್ಲಿ ಮಗುಚಿಬಿದ್ದು ಕಂಡಕ್ಟರ್ ಶಿವಪ್ಪ ಎಂಬವನು ತಕ್ಷಣ ಮೃತನಾದನೆಂದು ತಿಳಿಸಲು ವಿಷಾದವಾಗುತ್ತದೆ.

ಉಡುಪಿ

ಪರ್ಯಾಯ ಸಂಚಿಕೆಗಳು:— ಉಡುಪಿಯಿಂದ ಈ ವರ್ಷ ಎರಡು ಪರ್ಯಾಯ ಸಂಚಿಕೆಗಳು ಹೊರಟಿವೆ. 'ನವಯುಗ' ವಾರಪತ್ರಿಕೆ ಈಗ ಕೆಲವು ವರ್ಷಗಳಿಂದ ಪ್ರಕಟಿಸುತ್ತಿದ್ದಂತೆ ವಿಶೇಷ ಲೇಖನ, ಚಿತ್ರ ಸುಂದರವಾಗಿ ಹೃದಯಂಗಮವಾದ ಪರ್ಯಾಯ ಸಂಚಿಕೆ ಹೊರಡಿಸಿದೆ. ಅದರಲ್ಲಿ ಅನೇಕ ಕನ್ನಡದ ಹೆಸರಾಂತ ಕವಿಗಳ ಲೇಖಕರ, ಕತೆಗಾರರ ಕವಿತೆ, ಕತೆ ಲೇಖನಾದಿಗಳಿವೆ. ಉಡುಪಿಯ ವಿಚಾರದಲ್ಲಿ ಉಪಯುಕ್ತ ಲೇಖನವಿದೆ. ಇದರ ಬೆಲೆ ಎಂಟಾಣೆ. ಸುಮಾರು ನೂರು ಪುಟಗಳಿವೆ. ಯುದ್ಧದಿಂದಾಗಿ ಕಾಗದ ತುಟ್ಟಿಯಾಗಿರುವೀ ಕಾಲದಲ್ಲಿಯೂ ಇಂತಹ ಸಾಹಸವನ್ನು ಬಿಡದೆ ನಡೆಸಿದ ನವಯುಗದ ಸಂಚಾಲಕರು ಅಭಿನಂದನೀಯರು. ಎರಡನೇಯ ಪರ್ಯಾಯ ಸಂಚಿಕೆ 'ಉದಯ ಭಾರತ' ಮಾಸ ಪತ್ರಿಕೆಯದು. ಇದರ ಬೆಲೆ ನಾಲ್ಕಾಣೆ. ಇವರಲ್ಲಿ ಉಡುಪಿ ಕ್ಷೇತ್ರಮಾಹಾತ್ಮ್ಯ, ಹಿಂದೂ ಮಹಾಸಭೆಯ ವಿಚಾರ ಲೇಖನ ಕವಿತೆಗಳು ಇದ್ದು ಸಂಚಿಕೆ ವಾಚನೀಯವಿದೆ. ಸುಮಾರು ನಲ್ವತ್ತು ಪುಟಗಳಿವೆ.

ಸಪ್ತೋತ್ಸವ ಸಮಾರಂಭ—ಶ್ರೀ ಕೃಷ್ಣ ಮಠದಲ್ಲಿ ಜರಗಲ್ಪಡುವ ಸಪ್ತೋತ್ಸವವು ಕಳೆದ ತಾ. [illegible] ಆರಂಭವಾಗಿ ತಾ. [illegible] ತೀಲವಾಗಿ ಕೊನೆಗೊಂಡಿತು. ಕೊನೆಯ ದಿನ ಚತುರ್ಮಾಸ್ಯದ ಅವಭೃತ ಸ್ನಾನಾದಿಗಳು ಮುಗಿದ ಬಳಿಕ ಅನ್ನ ಸಂತರ್ಪಣೆ ನಡೆಯಿತು. ತಮ್ಮ ಪರ್ಯಾಯ ಕಾಲವು ನಿರ್ವಿಘ್ನದಿಂದ ಕಳೆದುದಕ್ಕೂ ಲೋಕ ಕಲ್ಯಾಣಕ್ಕಾಗಿಯೂ ಶ್ರೀ ಅದಮಾರ್ ಸ್ವಾಮಿಗಳವರು ಮಹಾ ರಂಗಪೂಜಾ ಮಹೋತ್ಸವ, ಅನ್ನದಾನಾದಿಗಳನ್ನು ಜರಗಿಸಿದರು.

ದ. ಕ. ಜಿಲ್ಲಾ ಫ್ಲಡ್ ರಿಲೀಫ್ ಫಂಡಿಗೆ ಬೊಂಬಯಿಯಿಂದ ತಿರುಗಿ ರೂ. ೧,೨೨೫ ಬಂದಿದೆ

ದಿ. ಕರ್ನಾಟಕ ಫ್ರೆಂಡ್ಸ್ ಯೂನಿಯನ್ ನವರ ಪ್ರಯತ್ನದಿಂದ ಬೊಂಬಯಿಯಲ್ಲಿ ಸಾರ್ವಜನಿಕರಿಂದ ಸಂಗ್ರಹಿಸಿದ ಹಣ ರೂ. ೧,೨೨೫-೧೨-೧ ಯನ್ನು ದ. ಕ. ಜಿಲ್ಲೆಯಲ್ಲಿ ಕಳೆದ ಜೂನ್ ತಿಂಗಳಲ್ಲಿ ನೆರೆಹಾವಳಿಯಿಂದ ಸಂಕಷ್ಟ ಪಟ್ಟವರಿಗೆ ಸಲುವಾಗಿ ಕಳುಹಿಸಲಾಗಿದೆ ಎಂದು ಸುದ್ದಿ ಬಂದಿದೆ.

ನೆರೆ ನಿರಾಶ್ರಿತರಿಗೆ ಸಹಾಯ—ಇತ್ತೀಚೆಗೆ ಬಂದ ಮಳೆಯ ನೆರೆಯಿಂದಾಗಿ ಚಕ್ರವರ್ತ್ತೂರು ಮೊದಲಾದ ಗ್ರಾಮಗಳಲ್ಲಿ ಪೈರು, ಬಿತ್ತಿದ ಬೀಜ ಮೊದಲಾದವುಗಳು ನಾಶವಾಗಿ ತುಂಬಾ ನಷ್ಟವಾಗಿರುವುದರಿಂದ ಅಲ್ಲಿನ ಬಡ ರೈತರ ಸಹಾಯಾರ್ಥವಾಗಿ ಮಲಬಾರು ಸೈಕ್ಲೋನ್ ರಿಲೀಫ್ ಕಮಿಟಿಯವರು ಸುಮಾರು ೫೦೦ ರೂಪಾಯಿಗಳನ್ನು ದಾನವಾಗಿತ್ತಿರುವರೆಂದು ತಿಳಿದುಬರುತ್ತವೆ.

ಕರ್ನಾಟಕ

ಕರ್ನಾಟಕ ಪ್ರಾಂತೀಯ ಕಾಂಗ್ರೆಸ ಸಮಿತಿ ಸಭೆ

ಕರ್ನಾಟಕ ಪ್ರಾಂತೀಯ ಕಾಂಗ್ರೆಸ ಸಮಿತಿ ಸಭೆಯು ಸಾಧಾರಣ ಅಧಿವೇಶನವು ಒಂದು ವರ್ಷದ ನಂತರ ತಾ. ೧೦ರಂದು ಧಾರವಾಡದಲ್ಲಿ ಪ್ರಾಂತೀಯ ಅಧ್ಯಕ್ಷರಾದ ಡಾ. ಆರ್. ನಾಗನಗೌಡರ ಅಧ್ಯಕ್ಷತೆಯಲ್ಲಿ ನೆರೆದಿದ್ದಿತು. ಸಭೆಗೆ ೨೦೦ ಜನರು ಬಂದಿದ್ದರು. ಮುಂಬೈ ಇಲಾಖೆಯ ಮಾಜಿ ಪ್ರಧಾನ ಮಂತ್ರಿಗಳಾದ ಮಾನ್ಯ ಬಾಲಗಂಗಾಧರ ಖೇರರು ಸಭೆಗೆ ಆಗಮಿಸಿದ್ದರು. ಮೊದಲು ಮಾನ್ಯ ಖೇರರು ಸದ್ಯದ ಪರಿಸ್ಥಿತಿ ಬಾರ್ಡೋಲಿ ನಿರ್ಣಯ ಮತ್ತು ಆದರಿಂದ ಎದ್ದ ಪ್ರಶ್ನೆಗಳನ್ನು ವಿವರಿಸಿ ತಿಳಿಸಿದರು. ರವೀಂದ್ರನಾಥ ಠಾಕೂರರ ನಿಧನಕ್ಕಾಗಿ ಈ ಸಭೆಯು ಶೋಕವನ್ನು ವ್ಯಕ್ತಮಾಡಿತು. ಹಿಂದುಸ್ಥಾನದ ಸ್ವಾತಂತ್ರ್ಯಕ್ಕಾಗಿ ಪರರಾಷ್ಟ್ರಗಳಲ್ಲಿ ಶ್ರೀಮತಿ ಕಮಲಾದೇವಿಯವರು ನಡೆಸಿದ ಕಾರ್ಯಕ್ಕೆ ಈ ಸಭೆಯು ಮೆಚ್ಚುಗೆಯನ್ನಿತ್ತಿತು. ಸತ್ಯಾಗ್ರಹ ಸಮಯದಲ್ಲಿ ಶ್ರೀಮತಿ ಕೃಷ್ಣಾಬಾಯಿ ಪಂಜೀಕರ ಹಾಗೂ ಶ್ರೀಯುತ ದ. ಪ. ಕರಮರಕರರು ಅನುಕ್ರಮವಾಗಿ ಪ್ರಾಂತೀಯ ಅಧ್ಯಕ್ಷರಾಗಿ ಕಾರ್ಯ ಮಾಡಿದ್ದಕ್ಕೆ ಈ ಸಭೆಯು ಅವರನ್ನು ಅಭಿನಂದಿಸಿತು. ವರ್ಕಿಂಗ್ ಕಮಿಟಿಯ ಬಾರ್ಡೋಲಿ ನಿರ್ಣಯದ ಬಗ್ಗೆ ಈ ಸಭೆಯು ಕೆಳಗಿನಂತೆ ಅಭಿಪ್ರಾಯಪಟ್ಟಿತು. 'ಸದ್ಯದಲ್ಲಿ ಹಿಂದುಸ್ಥಾನ ಹಾಗು ಇಡೀ ಪ್ರಪಂಚಕ್ಕೇ ಒದಗಿರುವ ಕೆಡಕು ಆಪತ್ತುಗಳನ್ನು ನಿವಾರಿಸಲು ಅಹಿಂಸೆಯೇ ಪರಮೌಷಧವೆಂದು ನಾವು ಪುನಃ ಸಾರಿ ಹೇಳುತ್ತೇವೆ. ಸದ್ಯದ ಪರಿಸ್ಥಿತಿಯಲ್ಲಿ ಈ ಯುದ್ಧದಲ್ಲಿ ಭಾಗವಹಿಸುವದು ಹಿಂದುಸ್ಥಾನದ ದೃಷ್ಟಿಯಿಂದ ಹಿತಕರವಾಗುವದಿಲ್ಲವೆಂದು ನಮ್ಮ ಮತವಿದೆ. ಈ ಯುದ್ಧ ಅಥವಾ ಇನ್ನಾವುದೇ ಯುದ್ಧದಲ್ಲಿಯಾದರೂ ಭಾಗವಹಿಸಬೇಕೋ ಬೇಡವೋ ಎಂಬುದನ್ನು ಸ್ವತಂತ್ರ ಭಾರತವೇ ನಿರ್ಧರಿಸಬಲ್ಲದು. ಮಹಾತ್ಮ ಗಾಂಧಿಯವರ ವಿಧಾಯಕ ಕಾರ್ಯಕ್ರಮದ ಯೋಜನೆಯನ್ನು ಅದರಲ್ಲೂ ಗ್ರಾಮೋದ್ಯೋಗ ಯೋಜನೆಯನ್ನು ಪ್ರಾಂತದಲ್ಲೆಲ್ಲಾ ಕಾರ್ಯರೂಪದಲ್ಲಿ ತಂದು ಜನತೆಯು ಅವರ ನಿಶ್ಚಿತ ಪ್ರಶ್ನೆಗಳಲ್ಲಿ ಅದಕ್ಕೆ ಸಹಾಯ ಮಾಡಬೇಕೆಂದು ಈ ಸಭೆಯು ಎಲ್ಲಾ ಕಾಂಗ್ರೆಸ್ ಕಮಿಟಿಗಳಿಗೂ ಅನ್ವಯಿಸಿಕೊಳ್ಳುತ್ತದೆ.

ಸಿನೆಮಾ ಪುಟ

'ಪುನರ್ಮಿಲನ'ವಾಗುವುದು ಯಾರು ಯಾರಿಗೆ?

'ಬಂಧನ್' ಎಂದರೆ ಪ್ರೇಮಬಂಧನವೆಂದು ಬಗೆದಿದ್ದವರು, ಆ ಚಿತ್ರವನ್ನು ಕಂಡು ಬೆರಗಾದರು. ಬಂಧನ್‌ದಲ್ಲಿ ಪ್ರೇಮದ ಪರಿಪೂರ್ಣತೆಯಿದ್ದರೂ ಆ ಹೆಸರು ಅದರ ಸಲುವಾಗಿಯಾಗಿರಲಿಲ್ಲ. ಅದೂ ಒಂದು ವಿಶಿಷ್ಟತೆಯನ್ನು ಚಮತ್ಕಾರವನ್ನೇ ಚಿತ್ರಕ್ಕೆ ತಂದೊಡ್ಡಿತು. ಈಗ ಅದೇ ಕಂಪನಿಯವರು, ಬಾಂಬೇ ಟಾಕೀಸಿನವರು ಆ ಚಿತ್ರಕ್ಕೆ ಸರಿಸಮಾನವಾದ ಇನ್ನೊಂದು ಚಿತ್ರವನ್ನು ಪುನರ್ಮಿಲನವನ್ನು ತಯಾರಿಸಿದ್ದಾರೆ. ಸ್ಥಳೀಯ ಭಾಲಾಜಿ ಟಾಕೀಸಿನಲ್ಲಿ ಅದು ಕಳೆದ ತಾ. 15ರಿಂದ ಪ್ರದರ್ಶಿಸಲ್ಪಡುತ್ತಿದೆ. ಮಂಗಳೂರ ಮಹಾಜನರನ್ನು ಇದೂ ಬಹಳ ಆಕರ್ಷಿಸಿದೆ. 'ಪುನರ್ಮಿಲನ್' ಎಂದರೆ ಅಗಲಿದ ನಾಯಿಕಾ ನಾಯಕರು, ವಿರಹ ವ್ಯಥೆಯಿಂದ ಬೆಂದು ಬಳಲಿ ಬೇಸತ್ತು ಕೊನೆಗೆ ಪುನರ್ಮಿಲನ ಹೊಂದಿದರೆಂದು ಸಾಮಾನ್ಯವಾಗಿ ನಾವು ಕಲ್ಪಿಸುವುದು ಸಹಜವಾಗಿದೆ. ಆದರೆ ಇಲ್ಲಿ, ನಾಯಕಾನಾಯಿಕೆಯರಿದ್ದರೂ, ಶೃಂಗಾರವಿದ್ದರೂ, ಪ್ರೇಮವಿದ್ದರೂ ಎಲ್ಲದಕ್ಕಿಂತಲೂ ಮಿಗಿಲಾಗಿ ಕುಮಾರನೊಬ್ಬನ ಪಿತೃಭಕ್ತಿ, ಸೋದರಿಯೊಬ್ಬಳ ಸೋದರ ಪ್ರೇಮ ಇವುಗಳು ಕತೆಗೆ ಕಿರೀಟವಿಟ್ಟಿವೆ. ತಂದೆಯ ಮೇಲೆ ಬಂದೊದಗಿದ ಅಪರಾಧದ ಹೊರೆ ಹೊತ್ತು ಮನೆ ಬಿಟ್ಟು ಅಗಲಿದ ಸೋದರನೊಡನೆ—ಕುಮಾರನೊಡನೆ, ಆತನ ಸೋದರಿ—ಜಯಂತಿಯು ಕಥೆಯ ಕೊನೆಯಲ್ಲಿ ಪುನರ್ಮಿಲನ ಹೊಂದುತ್ತಾಳೆ. ತನ್ನ ಸಲುವಾಗಿ ದುಷ್ಕೃತ್ಯದ ಅಪವಾದವನ್ನು ಹೊತ್ತು ಅಜ್ಞಾತವಾಸದಲ್ಲಿ ಬಳಲಿದ ಪುತ್ರನೊಡನೆ ಆತನ ತಂದೆಗೆ ಸಾವ ಸೊಪ್ಪಿನ ಜಾವದಲ್ಲಿ ಪುನರ್ಮಿಲನವಾಗುತ್ತದೆ!! ಕಿಶೋರ ಸಾಹು ಕುಮಾರನಾಗಿ ಅದ್ಭುತ ರೀತಿಯಿಂದ ನಟಿಸಿರುವನು ಸ್ನೇಹಪ್ರಭಾಳ ನರ್ತನ, ಹಾಡು, ಅಭಿನಯ ಈ ಮೂರೂ ಶೀರ್ಷಸ್ಥಾನವನ್ನೇರಿ ನಿಂತಿದೆ ಅಂಜಲಿದೇವಿ, ಜಗನ್ನಾಥ್ ಇವರ ಅಭಿನಯವು ತಲೆದೂಗಿಸುವಂತಿದೆ. ಫೋಟೋಗ್ರಫಿ, ನಿರ್ದೇಶಕತ್ವ, ಕತೆ, ಸಂಗೀತ, ಸಂಭಾಷಣೆ ಇವೆಲ್ಲವೂ ಅಸಾಮಾನ್ಯವಿವೆ' ಮೊದಲಿಂದ ಕೊನೆಯವರೆಗೂ ಚಿತ್ರವು ಮನೋರಂಜಕವಾಗಿದೆ

'ಜೂಲಾ' ಚಿತ್ರದ ಯಶಸ್ವಿತೆ

ಕಂಗನ್, ಬಂಧನ್, ನಯಾಸಂಸಾರ್ ಮೊದಲಾದ ಅತ್ಯುತ್ತಮ ಚಿತ್ರಗಳನ್ನು ಪ್ರಕಟಿಸಿ ಪ್ರಸಿದ್ಧಿ ಪಡೆದ ಬೊಂಬಾಯಿ ಟಾಕೀಸಿನವರ ಇತ್ತೀಚೆಯ ಚಿತ್ರ 'ಜೂಲಾ' ಬೊಂಬಾಯಿಯ ರೋಕ್ಸಿ ಥಿಯೇಟರಿನಲ್ಲಿ ಪ್ರದರ್ಶಿತವಾಗಿದೆ ಚಲಚ್ಚಿತ್ರ ಪ್ರದರ್ಶನದ ಇತಿಹಾಸದಲ್ಲಿ ಇದು ಒಂದು ವಿಶಿಷ್ಟಸ್ಥಾನವನ್ನು ಪಡೆದಿರುವುದು ಮೊದಲನೆಯ ವಾರದ ಪ್ರದರ್ಶನದಲ್ಲಿಯೇ ಈಚಿತ್ರದಿಂದ ರೂ. 24,147 ಸಂಗ್ರಹವಾಗಿರುತ್ತದೆ ಇದು ಚಿತ್ರದ ಉತ್ಕೃಷ್ಟತೆಯನ್ನು ಸಾರುತ್ತದೆ. ಎರಡನೆಯ ವಾರದಲ್ಲಿ 19,416 ರೂ ಗಳ ಸಂಗ್ರಹವಾಗಿದೆ. ಬೊಂಬಾಯಿಯಲ್ಲಿ ಇದುವರೆಗೆ ಯಾವುದೇ ಚಿತ್ರದಿಂದಾದರೂ ಇಷ್ಟು ಹಣ ಸಂಗ್ರಹವಾಗಿರುವುದಿಲ್ಲ ಲೀಲಾ ಚಿಟ್ನೀಸ್, ಅಶೋಕ್ ಕುಮಾರ್ ಇದರಲ್ಲಿ ನಾಯಿಕಾ ನಾಯಕರಾಗಿರುವರು. ವಿ. ಎಚ್. ದೇಸಾಯಿ, ಶಾ ನವಾಜ್ ಮತ್ತು ಕರುಣಾದೇವಿ ಇವರು ಸಹಾಯಕ ಪಾತ್ರವರ್ಗದವರಾಗಿದ್ದಾರೆ

ಉದಯಶಂಕರ್ ಸಿನೆಮಾ ತಯಾರಿಸಬಹುದು

ಎಂಬುದಾಗಿ ಪುಣೆಯಲ್ಲಿ ಅವರೊಡನೆ ಮಾತನಾಡಿದ ವರದಿಗಾರರ ಹೇಳಿಕೆ. ಅವರು ತಯಾರಿಸುವ ಸಿನೇಮಾ ನೃತ್ಯಕಲೆಯ ಅಭಿವೃದ್ಧಿಯ ಸಲುವಾಗಿರುವುದಂತೆ.

ಸುವರ್ಣಲತಾ

ಶಾಂತಾ ಆಪ್ಟೆಯನ್ನು ಬೆಳಕಿಗೆ ತಂದ ಸಿನೆಮಾ ಸಂಸ್ಥೆ—ಸರಸ್ವತೀ ಚಿತ್ರ ಸಂಸ್ಥೆಯವರು ತಮ್ಮ ಇತ್ತೀಚೆಯ ಚಿತ್ರ 'ಅವಾಜ್'ನಲ್ಲಿ ಸುವರ್ಣಲತಾ ಎಂಬ ಹೆಸರಿನ ಹೊಸ ತಾರೆಯನ್ನು ರಂಗಭೂಮಿಗೆ ತಂದಿರುವರು

ನವಯುಗ ಚಿತ್ರಪಟ ಪೂನಕ್ಕೆ

ನವಯುಗ ಚಿತ್ರಪಟ ಲಿಮಿಟೆಡ್ ಕೊಲ್ಲಾಪುರದಿಂದ ಪೂನಕ್ಕೆ ಬಿಜ್ಜಯಿಸಿದ್ದಾರೆ. ಅಲ್ಲಿನ 'ನವಯುಗ ಸ್ಟುಡಿಯೋ'ಕ್ಕೆ ಸಾಗಿಸುವ ಕೆಲಸದಲ್ಲಿ ಕಳೆದ ಕೆಲವು ವಾರಗಳಿಂದ ಅದರ ಸಂಚಾಲಕರು ಬಹಳ ಜರೂರಿನಲ್ಲಿದ್ದರು. ಅಲ್ಲಿ ಕೆಲಸ ಮಾಡುವ ಜನರು ಹಲವರು ಈಗಾಗಲೇ ಪೂನೆಕ್ಕೆ ಸಾಗಿದ್ದಾರೆ. ಸಿನಾಯಕರಿಗೆ ದಿನನಿತ್ಯವೂ ಅವರ ಕೊಲ್ಲಾಪುರದ ಮಿತ್ರರ ವಿದಾಯ ಸತ್ಕಾರಗಳು ಆಗುತ್ತಿವೆ. 'ರಾಜಅತಿಥಿಗಳು' ಎಂಬೀಗಿನ ಅವರ ಚಿತ್ರದ ಪೂರ್ಣತೆಯು ಪೂನದಲ್ಲಿ ಆಗಲಿದೆ. ಫೆಬ್ರವರಿ ತಿಂಗ್ಳಳಲ್ಲಿ ಅದು ಪೂರ್ಣವಾಗುವುದೆಂದು ತಿಳಿದಿದೆ.

ಅಶೋಕ ಪಿಕ್ಚರ್ಸಿನ 'ಚಂದನ್'

ಇದು ಬೊಂಬಯಿಯಲ್ಲಿ ಈಗ ಪ್ರದರ್ಶಿತವಾಗಿದೆ. ಇದೊಂದು ಉತ್ತಮ ಸಾಮಾಜಿಕ ಕತೆ. ಕೌಲಾ, ನಾಜಿರ್, ಅಶಿಕ್ ಹುಸೇನ್, ಮಾಯಾದೇವಿ, ಬೇಬಿ ಲಲಿತಾ ಇವರು ಪ್ರಶಂಸಾರ್ಹವಾಗಿ ಇದರಲ್ಲಿ ನಟಿಸಿರುವರು.

ನ್ಯೂ ಥಿಯೇಟರ್ಸಿನ ಡೋಕ್ಟರ್

ಈ ಚಿತ್ರವು ಪ್ರದರ್ಶಿಸಲ್ಪಟ್ಟಿದೆ. ಡೋಕ್ಟರ್ ಚಿತ್ರದ ಸಂಗೀತ ಮತ್ತು ಹಾಡುಗಳು ಪಂಕಜ ಮಲ್ಲಿಕರದು ಹೊಸ ತಾರೆ ಭಾರತದೇವಿಯು ಉತ್ತಮ ಹಾಡುಗಾರ್ತಿ, ಸುಂದರ ಸ್ವರೂಪಳು, ಉತ್ತಮ ಅಭಿನಯಕಾರಳೂ ಆಗಿದ್ದಾಳೆ. ಜ್ಯೋತಿ ಪ್ರಕಾಶ್ ಇನ್ನೊಬ್ಬ ತಾರೆ. ಅಹಿನ್ ಚೌಧುರಿ, ಅಮರ ಮಲ್ಲಿಕ್, ನೇಮೋ, ಇವರೆಲ್ಲರೂ ಇದರಲ್ಲಿ ಚೆನ್ನಾಗಿ ನಟಿಸಿರುತ್ತಾರೆ.

ಶಾಂತಾ ಆಪ್ಟೆಗೆ ಲಾಯರ್ ನೋಟೀಸು

ಶಾಂತಾ ಆಪ್ಟೆ ಸಿರೋರ್ಕ್ ಪಿಕ್ಚರ್ಸಿನವರಲ್ಲಿ ಅಭಿನಯಿಸಿದಾಗ ಅವಳಿಗೆ ಕೊಟ್ಟಿದ್ದ ಸೀರೆಗಳನ್ನೂ ವಸ್ತುಗಳನ್ನೂ ತಿರಗಿ ಕೊಟ್ಟಿಲ್ಲವಾಗಿ ಆ ಸಂಸ್ಥೆಯ ಮುಖ್ಯಸ್ಥರಾದ ರಾಮದತ್ತ ಪಟೇಲರು ಅವಳ ಮೇಲೆ 'ಲಾಯರ್ ನೋಟೀಸು' ಬಿಟ್ಟಿರುವರೆಂದು ತಿಳಿದಿದೆ.

ಚಾರ್ಲಿ—ಕೋಪ್ರಾ

ಚಾರ್ಲಿ ಚಿಪ್ಲಿನ್ ಪ್ರಸಿದ್ಧ ಸಿನೆಮಾ ನಟ. ಕೋಪ್ರಾ ಪ್ರಸಿದ್ಧ ಸಿನೆಮಾ ತಯಾರಕ. ಕೋಪ್ರಾ ತನ್ನ ತಯಾರಿಕೆ ಚಿತ್ರದಲ್ಲಿ ಚಾರ್ಲಿ ಬನ್ನು ಅಭಿನಯಿಸಬೇಕೆಂದು ಕೇಳಿಕೊಂಡದ್ದನ್ನು ಚಾರ್ಲಿ ಮನ್ನಿಸಿರುವನಂತೆ.

NOTICE

The Bombay Life Assurance Company, Limited.

Notice having been given of the loss of Policy No 56313 on the life of Aroor Subba Achar, Indian Refreshment Room, Trichinapoly Junction, S. I. R.—a duplicate policy will be issued unless objection is lodged with us within one month from this date.

Bombay, 23-1-42. **Jyotendr L Mehta,** *Managing Director.*

HALFTONE & LINE BLOCK MAKING UNDERTAKEN

Sharada Press, MANGALORE.

ಸೌಂದರ್ಯ ಮತ್ತು ಮುಖಕಾಂತಿಗೆ

ಹಿಮಾನಿ ಸ್ನೋ

ಹಿಂದೂದೇಶದಲ್ಲಿ ಪ್ರಥಮವಾಗಿ — ತಯಾರಿಸಿದ ಸ್ನೋ —

ಅಂದಿನಿಂದಲೂ ಶ್ರೇಷ್ಠವಾಗಿಯೇ ಇದೆ — ಮುಖದ ಮೇಲಿನ ಯಾವತ್ತೂ ಕಲೆ, ಮಚ್ಚೆ ಛಿದ್ರ ಮುಂತಾದುವನ್ನು ಗುಣಪಡಿಸುವುದು.

ಹಿಮಾನಿ ಗ್ಲಿಸರಿನ್ ಸಾಬೂನುಗಳು

ಪಾರದರ್ಶಕ—ಶುದ್ಧ

ಕೋಮಲವಾದ ಪರಿಮಳ



ದಕ್ಷಿಣ ಕನ್ನಡದ ಡಿಸ್ಟ್ರಿಬ್ಯೂಟರರು.—

ಕೊರನೇಶನ್ ಟ್ರೇಡಿಂಗ್ ಕೊ.

ಮಹಮ್ಮದಾಲಿ ರೋಡ್, ಮಂಗಳೂರು

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಅಮೇರಿಕದಿಂದ ಲಂಡನಿಗೆ ಚರ್ಚಿಲರು ಬಂದರು

ಅಮೆರಿಕಕ್ಕೆ ಹೋಗಿದ್ದ ಚರ್ಚಿಲರು ಲಂಡನಿಗೆ ಮರಳಿಬಂದರು ಅವರು ಈ ಪ್ರಯಾಣದಲ್ಲಿ 18 ಗಂಟೆಯಲ್ಲಿ ವಿಮಾನದ ಮೂಲಕ 3787 ಮೈಲು ಪ್ರಯಾಣ ಮಾಡಿದರಂತೆ. ಚರ್ಚಿಲರಿಗೂ ರೂಸವೆಲ್ಟರಿಗೂ ಅಮೆರಿಕದಲ್ಲಿ ಆದ ಮಾತುಕತೆಯಿಂದ ಬ್ರಿಟಿಷ್ ಮಂತ್ರಿಮಂಡಳದಲ್ಲಿ ಕೂಡಲೇ ಬದಲಾವಣೆಯಾಗತಕ್ಕದ್ದಿಲ್ಲವೆಂದೂ ಆದರೆ ಅವರ ವ್ಯವಹಾರದಲ್ಲಿ ಬದಲಾವಣೆಯಾಗತಕ್ಕದ್ದಿದೆಯೆಂದೂ ತಿಳಿದುಬಂದಿದೆ.

ವಿಚಿತ್ರ ಪ್ರಪಂಚ

ಆತ್ಮಹತ್ಯೆಯೋ ಕೊಲೆಯೋ?

ಉತ್ತರ ಭಾರತದ ಒಂದು ಬಾಲಿಕಾ ಪಾಠಶಾಲೆಯ ವಿದ್ಯಾರ್ಥಿನಿಯೊಬ್ಬಳು ಒಂದು ವಿಚಿತ್ರ ಪರಿಸ್ಥಿತಿಯಲ್ಲಿ ಆತ್ಮಹತ್ಯೆ ಮಾಡಿಕೊಂಡಿರುವ ಸುದ್ದಿ ಬಂದಿದೆ. ಆಕೆಗೆ ಬಹಳ ಸಣ್ಣ ಪ್ರಾಯದಲ್ಲಿಯೇ ಅವಳಿಗಿಂತ ಇಪ್ಪತ್ತು ವರ್ಷ ಹಿರಿಯ ಪ್ರಾಯದವನೊಡನೆ ವಿವಾಹವಾಗಿತ್ತು. ಆಕೆ ಆತ್ಮಹತ್ಯೆ ಮಾಡುವುದರ ಮೊದಲು ಬರೆದಿದ್ದ ಒಂದು ಪತ್ರದಲ್ಲಿ ಇಂತಹ ವಿಷಮ ವಿವಾಹವು ಎಷ್ಟರ ಮಟ್ಟಿಗೆ ಮಾನಸಿಕ ಸಂಕಷ್ಟವನ್ನು ಅವಳಿಗೆ ಕೊಡುತಿತ್ತು ಎಂಬುದನ್ನು ತಿಳಿಸಿದ್ದಾಳೆ. ಆಕೆ ಗಂಡನೊಡನೆ ತನ್ನನ್ನು ಶಾಲೆಗೆ ಕಳುಹಿಸಬೇಕೆಂದು ಒತ್ತಾಯಪಡಿಸಿ ಶಾಲೆ ಸೇರಿದಳು. ಕೊನೆಗೆ ಕಾಲೇಜಿಗೂ ಹೋದಳು. ಆದರಿಂದಲೂ ಅವಳಿಗೆ ಮನಶ್ಶಾಂತಿ ಸಿಗಲಿಲ್ಲ. ಕಾಲೇಜಿನ ಮತ್ತು ಮನೆಯ ಜೀವನಗಳ ವಿರೋಧವು ಅವಳಿಗೆ ಗ್ರಹಿಕೆಗೆ ಬಂದಾಗ ಬಹಳ ಭೀತಿ ಜಿಗುಪ್ಸೆ ಹುಟ್ಟುತಿತ್ತು. ಕೊನೆಗೆ ಆಕೆ ತನ್ನ ಜೀವವನ್ನು ಗಂಡನ ಕೋವಿಗೆ ಬಲಿಕೊಡಬೇಕಾಯಿತು. ಇದು ಆತ್ಮಹತ್ಯೆಯೋ ಕೊಲೆಯೋ?

'ತ್ರೈರಂಬಡೆ'ಯ ಕ್ರಯ ರೂ. ೩೦

ಕಲ್ಕತ್ತದಿಂದ ಹೊರಟು ಹೋಗುವಾಗ, ಬೆಳ್ಳಿ ಬಂಗಾರಗಳ ನಾಣ್ಯಗಳನ್ನು ತುಂಬಾ ತೆಗೆದುಕೊಂಡು ಹೋಗಬಾರದಾಗಿ ಸರಕಾರದ ಕಾನೂನು... ಅಲ್ಲಿಗೆ ಜಪಾನಿನ ಧಾಳಿಯಾಗುತ್ತದೆಂದು ...ದ ಒಬ್ಬ ಮಿಲಿಯಾಧಿಪತಿ ಒಂದು ಹೊಸದ ಹಾಗು ಮಾಡಿದನು. ಹೆಂಡತಿಯೊಡನೆ ಹೊಸುವುದರಿಂ...ಗಳನ್ನು ತಯಾರು ಮಾಡಲು ಹೇದೂ ಬಟ್ಟೆರೊಳಗೆ ಒಂದೊಂದು ಪವನುಗಳನ್ನು ವುಗಳಗ್ಟ್ಟಿ ಪಟ್ಟಣ ಬಿಟ್ಟು ಹೋಗುವಾಗ ಅದಷ್ಟ ಒಂದು ದೊಡ್ಡ ಪೆಟ್ಟಿಗೆಯಲ್ಲಿ ಹಾಕಿ ಸೇವಕನ ಕೈಗಿತ್ತನು. ರೈಲ್ವೇ ಅಧಿಕಾರಿಗಳ ಕೈಯಿಂದ ಸುಲಭದಲ್ಲಿ ತಪ್ಪಿಸಿದ. ಆದರೆ ದಿಲ್ಲಿ ರೈಲ್ವೇ ಸ್ಟೇಶನಿಗೆ ಮುಟ್ಟಬೇಕೆಂದರೆ ಮಿಲಿಯಾಧಿಪತಿ ತ್ರೈರಂಬಡೆ ಹಿಡಕೊಂಡ ಸೇವಕನನ್ನು ಕಳಕೊಂಡಿದ್ದ. ಸೇವಕನನ್ನು ಹುಡುಕುವುದೇ ಆತನ ಕೆಲಸವಾಗಿತ್ತು. ರೈಲ್ವೇ ಅಧಿಕಾರಿಗಳು ವಿಚಾರಿಸಿದಾಗ ವಿಷಯವು ಹೊರಬಿತ್ತು. ಅಂತೂ ಕೊನೆಗೂ ರೈಲ್ವೆ ಅಧಿಕಾರಿಗಳಿಗೆ ತಿಳಿಸದೇ ಇರಲು ಆತನಿಂದ ಸಾಧ್ಯವಾಗಲಿಲ್ಲ. ಸೇವಕನು ಎತ್ತಿಕೊಂಡು ಹೋದ ಒಂದೊಂದು ತ್ರೈರಂಬಡೆಗೆ ಕದಿಮೊಂ...

ವಿಜ್ಞಾನಯುಗ

ವಿದ್ಯುತ್‌ದೃಷ್ಟಿಯ ಪ್ರಯೋಜನ

ಇತ್ತೀಚೆಗೆ ಬ್ರಿಟನಿನಲ್ಲಿ ಬೆಂಕಿಯ ಭೀತಿ ಹೆಚ್ಚುತ್ತಾ ಇದೆ. ಮೋಸ್ಕೋದಿಂದ ಒಂದು ಸುದ್ದಿ ಈಗ ಬಂದಿದೆ. ವಿದ್ಯುತ್ ದೃಷ್ಟಿಯು ಬೆಂಕಿಯ ಎಚ್ಚರಿಕೆಯನ್ನು ಕೊಡುತ್ತದೆಂಬು. ಈ ಸಾಧನವನ್ನು ಬೇಕಾದಲ್ಲಿಗೆ ಒಯ್ಯಬಹುದು. ಇದು ನೋಡಲು ಸಾಮಾನ್ಯವಾದೊಂದು ಓದುವ ದೀಪದಂತೆ ತೋರುವುದು. ಇದರ ಒಳಗಡೆ ಎಚ್ಚರ ಕೊಡುವಂತಹ ಒಂದು ಗಂಟೆ ಇಡಲಾಗಿದೆ. ಬೆಂಕಿ ಬಿದ್ದಾಗ ಆ ಯಂತ್ರಕ್ಕೆ ಅದರ ಕಾವು ತಾಗಿ ಅದರ ಗಂಟೆ ಬಡೆಯುತ್ತದೆ. ಇದರಿಂದ ತಾಗಿದರೆ ಎಚ್ಚರವಾಗುವುದು. ಇದನ್ನು ಪ್ರತಿಯೊಂದು ಮನೆಯಲ್ಲಿಯೂ ಇಟ್ಟುಕೊಳ್ಳಬಹುದಾಗಿದೆ.

ಆಯುಷ್ಯ ಹೆಚ್ಚಿಸುವ ಪ್ರಯತ್ನ

ಮನುಷ್ಯನ ಆಯುಷ್ಯವನ್ನು ಹೆಚ್ಚಿಸುವ ಸಲುವಾಗಿ ಈಗ ವೈಜ್ಞಾನಿಕರು ನಿರಂತರ ಸಾಹಸಪಡುತ್ತಿದ್ದಾರೆ. ಮನುಷ್ಯನ ಶರೀರದಲ್ಲಿರುವ ರಾಸಾಯನಿಕ ವಸ್ತುಗಳನ್ನು ಬಹಳ ಸೂಕ್ಷ್ಮವಾಗಿ ಪರಿಶೀಲಿಸುವುದರಲ್ಲಿ ಹಲವರು ನಿರತರಾಗಿರುವರು. ನಾವೆಲ್ಲರೂ ದೀರ್ಘಕಾಲ ಬದುಕಬೇಕೆಂದು ಬಯಸುತ್ತೇವೆ. ನೂರು ವರ್ಷವಾದರೂ ಬದುಕಿಯೇವೆಂಬುದಾಗಿ ನಮ್ಮಲ್ಲಿ ಕೆಲವರಾದರೂ ಆಶಿಸುತ್ತಿರಬಹುದು. ಆದರೆ ನೂರು ವರ್ಷಕ್ಕಿಂತ ಮಿಕ್ಕಿದ ಆಯುಷ್ಯ ಬಾಳಿಯೇನೆಂದು ಬಯಸುವವರು ದುರ್ಲಭವು. ಆದರೆ ಮನುಷ್ಯನ ಆಯುಸ್ಸು ಹೆಚ್ಚಿಸಲು ಸಾಧಿಸುವ ವೈಜ್ಞಾನಿಕ... ಕೊನೆಯಪಕ್ಷ ೫೦೦ ವರ್ಷವಾದರೂ ಮನುಷ್ಯ ಬದುಕಬೇಕೆಂದು ಹಟದಿಂದ ಶೋಧಿಸುತ್ತಿರುವರು. ಮನುಷ್ಯನ ಶರೀರದಲ್ಲಿರುವ ರಾಸಾಯನಿಕ ವಸ್ತುಗಳ ಕಾರ್ಯದಿಂದ ಆತನು ಮುದಿತನ ಹೊಂದುವುದಾಗಿದೆಯೆಂದು ಅವರು ಹೇಳುತ್ತಾರೆ. ಈ ರಾಸಾಯನಿಕ ಕಾರ್ಯದಿಂದಲೇ ಪ್ರಾಯಹೋದಂತೆ ರೋಗವನ್ನು ತಡೆವ ಶಕ್ತಿ ಕುಂದುವುದಾಗಿದೆಯೆಂದೂ ಅವರ ಅಭಿಪ್ರಾಯವಾಗಿದೆ.

ದರೆ ೫ ೩೦೦ರಷ್ಟು ಕ್ರಯವಾಗುತ್ತದೆ

ಮಗುವೇ ಮಾತನಾಡುವುದು

ಯಾರಿಂದಲೂ ಕೇಳದೆ ಕಲಿಯದೆ ಸಣ್ಣ ಮಕ್ಕಳೇ ಮಾತನಾಡುವುದು, ಕಾವ್ಯಹೇಳುವುದು ಕೆಲವೆಡೆ ನಡೆಯುತ್ತದೆ. ಇಂಗ್ಲಿಷ್ ಮಗು ತೊಟ್ಟಿಲಲ್ಲೇ ಲೇಟಿನ್ ಮಾತನಾಡುವುದು, ಮಗುವು ಶೇಕ್ಸ್‌ಪೀಯರನ ಕವಿತೆಯನ್ನು ಹೇಳುವುದು, ಕೂಗುವುದಕ್ಕಿಂತ ಮೊದಲೇ ಶಿಶುಗಳು ಇಂಗ್ಲಿಷ್ ಮಾತನಾಡುವುದು. ಇಂತಹ ವಿಚಿತ್ರಗಳು ನಡೆದಂತಹ ನಿದರ್ಶನಗಳು ಯೂರೋಪಿನಲ್ಲಿ ಹಲವು ತೋರಿಬಂದಿವೆ.

ಪ್ರತಿ ದಿನವೂ ಪೆಪ್ಸನ್ನು ತಗೆದುಕೊಂಡು ಕೊರಳು ಮತ್ತು ಶ್ವಾಸಕೋಶಗಳ ನೋವನ್ನು ತಡೆಯಿರಿ

ನೀವು ಕಫ, ಶೀತ, ಕೆಮ್ಮು ಬಾಧೆಗಳಿಂದ ನರಳುವಿರಾದರೆ ಕಂಠದ ಬೇನೆಯೇನಾದರೂ ಇದ್ದರೆ ವಿಷಹಾರಿ ಪೆಪ್ಸು ಮಾತ್ರೆಗಳನ್ನು ತೆಗೆದುಕೊಳ್ಳಿರಿ. ಪೆಪ್ಸು ತೀವ್ರವಾದ ಮತ್ತು ಖಂಡಿತವಾದ ಗುಣಕಾರಿ ಔಷಧವಾಗಿದೆ.

ಬಾಯಿಗೆ ಹಾಕಿದ ಕೂಡಲೇ ಕರಗಿ ಅವುಗಳು ಉತ್ತಮ ಔಷಧಿ ಸತ್ವವನ್ನು ಹೊರಡಿಸಿ ಶ್ವಾಸಕೋಶಗಳಿಗೆ ಆ ಔಷಧಿ ಸತ್ವವು ಶ್ವಾಸದೊಡನೆ ಹೋಗಿ, ಗುಣಪಡಿಸುತ್ತದೆ. ಪೆಪ್ಸು ಹೀಗೆ ರೋಗಾಣುಗಳನ್ನು ಹುಡುಕಿ ಅವುಗಳನ್ನು ನಿವಾರಿಸುತ್ತದೆ. ಶ್ವಾಸನಾಳದ ನೋವನ್ನು ಗುಣಪಡಿಸುವುದು. ಕುತ್ತಿಗೆಯನ್ನು ಪೆಪ್ಸು ಸರಿಯಾಗಿಡುವುದು. ಎದೆ ಮತ್ತು ಶ್ವಾಸಕೋಶಕ್ಕೆ ಒಳ್ಳೆಯ ರಕ್ಷಣೆ ಕೊಡುವುದು. ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ಇದು ಒಂದು ರೂಪಾಯಿ ಬೆಲೆಗೆ ದೊರಕುವುದು.

ಏಜಂಟ್ಸ್ ಮೆಸರ್ಸ್ ದಾಧಾ ಎಂಡ್ ಕೊ, ಪಾರ್ಕ್ ಟೌನ್ ಮದರಾಸು

ಪೆಪ್ಸನ್ನು ಕೊಂಡುಕೊಳ್ಳಿರಿ

PEPS

ವಿಷಹಾರಿ ಶ್ವಾಸನೀಯ ದುಳಿಗೆಗಳು

ಆರು ವಾರಗಳ ಯುದ್ಧದ ನಂತರ ಜಪಾನರು ಪಡೆದದ್ದೇನು?

ಪ್ಯಾಸಿಫಿಕ್ಕಿನಲ್ಲಿ ಯುದ್ಧ ಸುರುವಾಗಿ ಆರು ವಾರಗಳು ಕಳೆದವು. ಈಗ ಅವರು ಡಚ್ ಇಂಡೀಸ್ ಹೊರಪ್ರಾಂತಗಳ ಮೇಲೆ ಮಾತ್ರ ಧಾಳಿ ಮಾಡಲು ಸಮರ್ಥರಾದರೆಂದು ಹೇಳಲಾಗಿದೆ. ಈ ದ್ವೀಪವನ್ನು ಹೊಕ್ಕು ಅಲ್ಲಿಂದ ಸಿಂಗಾಪುರವನ್ನು ಸ್ವಾಧೀನಪಡಿಸುವುದೇ ಅವರ ಗುರಿಯಿತ್ತು.

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O P No 2/1942

1 ಕಟೀಲು ಬಾಬುರಾವ್ ಯಾನೆ ಮಂಜುನಾಥ ಪೈ, 2 ಕಟೀಲು ನಾರಾಯಣ ಪೈ, 3 ಕ ದೇವದಾಸ ಪೈ, ಕಟೀಲು ನರಸಿಂಹ ಪೈರ ಮಗಂದಿರು 4 ಅಪ್ಪಾ ಯಾನೆ ಸರಸ್ವತಿ ಬಾಯಿ ಕಟೀಲು ನರಸಿಂಹ ಪೈರ ವಿಧವೆ ಕುಂದಾಪುರ ಕಸಬ ಗ್ರಾಮದಲ್ಲಿರುವವರು — ಅರ್ಜಿದಾರರು

ಎದ್ರಿ — ಇಲ್ಲ

ಈ ಮೂಲಕ ಸರ್ವರಿಗೂ ತಿಳಿಯಪಡಿಸುವದೇನೆಂದರೆ

1, 2, 3ನೇ ಅರ್ಜಿದಾರ್ರ ತಂದೆ ವ 4ನೇ ಅರ್ಜಿದಾರಳ ಗಂಡ ಕಟೀಲ ನರಸಿಂಹ ಪೈಗಳು ತಾ 16-6-1941ರಲ್ಲು ಮೃತಪಟ್ಟಿರುತ್ತಾರೆಂತಲೂ ಅವರಿಗೆ ಅರ್ಜಿದಾರರು ವಾರಿಸ್‌ದಾರರೆಂತಲೂ, ಅವರಿಗೆ Empire of India Life Assurance Co, Ltd. ಇದರ ನಂಬ್ರ 83438, 83441, 85405ನೇ ಪೋಲಿಸಿಗಳ ಪ್ರಕಾರ ಬರತಕ್ಕ ಹಣಗಳಿಗೆ ತಾವು ಹಕ್ಕುದಾರರೆಂತಲೂ ಆ ಕುರಿತು ಅರ್ಜಿದಾರರ ಬಗ್ಗೆ 1ನೇ ಅರ್ಜಿದಾರನ ಹೆಸರಿಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿಯೂ ಸದಾ ಅರ್ಜಿ ಕೊಟ್ಟಿರುವದರಿಂದ ಆ ಕುರಿತು ಯಾರದ್ದಾದ್ರು ಆಕ್ಷೇಪ ಇದ್ದಲ್ಲಿ ತಾ. 9-2-1942ನೇ ದಿವ್ಸ ಹಗಲು 11 ಗಂಟೆಗೆ ಈ ಕೋರ್ಟಿನ ಮುಂದೆ ಹಾಜರಾಗಿ ಜಾಹೀರ್ಮಾಡಿಕೊಳ್ಳತಕ್ಕದ್ದೆಂತ ಈ ಮೂಲಕ ತಿಳಿಸಲಾಗುತ್ತದೆ.

Coondapoor, 15-1-1942. K Narasimha Kamath, Pleader for Petitioners.

7 ಓ ಕ್ಲೋಕ್ ತೂತುಳ್ಳ ಬ್ಲೇಡುಗಳು ದಿನ ದಿನವೂ ನಿಮ್ಮ ಮುಖದ ಮೇಲೆ ಬಹಳ ನಯವಾಗಿ ಹರಿದು ಹಿಂದೆಂದೂ ಅನುಭವಿಸದಂತಹ ಕ್ಷೌರ ಸುಖವನ್ನುಂಟು ಮಾಡುತ್ತವೆ. ಅವನ್ನು ಪಡಕೊಂಡು ನೋಡಿರಿ. ಅವುಗಳು ಮೂರು ತೂತುಳ್ಳ ರೇಜರುಗಳಿಗೂ ಬಾರ್ ರೇಜರುಗಳಿಗೂ ಸರಿಯಾಗುತ್ತವೆ. ಅಪ್‌ಟುಡೇಟ್ ಶೇವಿಂಗನ್ನು ಅವು ಒದಗಿಸುತ್ತವೆ. 7 ಓ ಕ್ಲೋಕ್ ತೂತುಳ್ಳ ಬ್ಲೇಡುಗಳು



BHUVANENDRA PRODUCTS LTD.,

Head Office and Factory:
KATAPADI S Kanara

Depots:
1 Maharatha Galli, Hubli
2 57 Big street, Triplicane, Madras

"BHUVANENDRA"

Danthadvana Choorna

Economical in use. Cheapest in value
Genuine in quality and choiced by all
Antiseptic, astringent, aromatic. Useful in
Pyorrhoea, Alveolaris. Removes tartar.
Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ
ಹಲ್ಲುಗಳೇ ಮುಖ್ಯ ಕಾರಣ
"ಭುವನೇಂದ್ರ"

ದಂತಧಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ವ ಕೀವು
ಬರುವುದು, ಹಲ್ಲು ಅಲ್ಲಾಡುವುದು ಮುಂತಾದ
ದೋಷಗಳನ್ನು ನಿವಾರಿಸುವುದು

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ.

ಸ್ಥಳೀಯ ಸ್ಟೋಕಿಸ್ಟರು —
ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್ ಲಿಮಿಟೆಡ್, [illegible]
, ರಾಘವೇಂದ್ರ ರಂಗ ಷೈ, [illegible]
ಡಾ। ಎಮ್. ಎಸ್. ಪ್ರಭು, M B B S [illegible]

THE PIE-MONEY BANK, LTD
Maidan Road, MANGALORE

Undertakes all kinds of Banking Business Current account 2½% per annum Savings Bank Deposits at 4¼% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction chit Funds ranging from Rs 100/ to Rs 5000 run regularly on systematic lines Unique Banking facilities to Businessmen and interested Public

Apply for particulars—
K R. GURU, *Managing Director*

The Bank of Mangalore Limited.

Branches —MOODABIDRI & PADUBIDRI
HEAD OFFICE MANGALORE ESTD 1931

All kinds of Banking Business transacted.
Fixed Deposits received at rates ranging from 3 to 5%
INTEREST PAYABLE QUARTERLY
Interest on Savings Bank Deposits allowed at at 2%

'Feast of St. Lawrence' - Karkal

Tuesday 27th Jan. '42 — 5-30 p. m —Solemn Vespers & Benedictions

Wednesday 28th Jan. '42 — 10 a. m. — Solemn High Mass,
Sermon, Procession & Benedictions

Thursday 29th Jan '42 — 10 a. m.— Comfraternity, Feast of
B. V Mary, Solemn High Mass, Sermon,
Procession & Benedictions

Joint Managers,

The Combined Booking Agency,
MANGALORE.

The Joint Booking Office.
KODIALBAIL.

ಸ್ವದೇಶಾಭಿಮಾನಿ

[ಸಂಪುಟ 36] ತಾರೀಕು 28—1—1942 [ಸಂಚಿಕೆ 4]

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು ಘಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ ಪಕ್ಷವಾತ, ಸೋಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಜ್ಜಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ. ಬೊಂಬಾಯಿ, ಮದರಾಸು, ಕಲ್ಕತ್ತ

ಶ್ರೀ ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

ಹೊಸ ವರ್ಷದ ಅಭಿವಂದನೆ

ನಮ್ಮ ಎಲ್ಲಾ ಪೊಲಿಸಿದಾರರಿಗೂ, ಏಜಂಟರಿಗೂ ಕಂಪೆನಿಯ ವೈದ್ಯರಿಗೂ ಹಿತಚಿಂತಕರಿಗೂ

★ ನ*ವ*ವ*ರ್ಷ*ವು ★

ಆನಂದದಾಯಕವಾಗಿಯೂ ಅಭಿವೃದ್ಧಿಕರವಾಗಿಯೂ ಪರಿಣಮಿಸಲೆಂದು

ನಾವು

ಹೃತ್ಪೂರ್ವಕವಾಗಿ ಹಾರೈಸುತ್ತೇವೆ

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್.

ದಕ್ಷಿಣ ಹಿಂದೂಸ್ಥಾನದ ಪ್ರಾಮುಖ್ಯ ಏಜಂಟರು:

ಬೊಂಬಾಯಿ ಮ್ಯೂಚ್ಯುವಲ್ ಎಶ್ಶೂರೆನ್ಸ ಕಂಪೆನಿ ಲಿಮಿಟೆಡ್.

ಉಡುಪಿ, ಮದ್ರಾಸು, ಬೆಂಗಳೂರು, ಟ್ರಿವೆಂಡ್ರಂ, ಮಂಗಳೂರು, ಕಲ್ಲಿಕೋಟೆ ಬೊಂಬಾಯಿ.

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Estd. 1906

ಸ್ವದೇಶಾಭಿಮಾನಿ

SWADESHABHIMANI



ಜರ್ಮನಿ ಮೇಲೆ ಧಾಳಿಮಾಡಲು—

ಬ್ರಿಟಿಷ್ ವೈಮಾನಿಕ ದಳದ ವೀರರು ಹೋರಾಡುತ್ತಿದ್ದಾರೆ. ಹೋಗಲು ಸಿದ್ಧನಾಗಿ ಇಂತ ಯೋಧನಿಗೆ ಆತನ ಸಂಗಾತಿಯು ಎರಡು ಕೋವಿಯುಳ್ಳ ಮೆಷಿನ್ ಗನ್ನನ್ನು ವಿಮಾನದಲ್ಲಿಡಲು ಸಹಾಯಮಾಡುತ್ತಿರುವನು.

KANNADA ILLUSTRATED WEEKLY

ಸರ್. ಪಿ. ಆರ್. ರಾಯರ ಶೋಚನೀಯ ನಿಧನ!

ಹಿಂದುಸ್ಥಾನ ಸರಕಾರದ ಎಡಿಶನಲ್ ಫಿನಾನ್ಶಿಯಲ್ ಸೆಕ್ರೆಟರಿಗಳೂ ಸುಪ್ರಸಿದ್ಧ ಕನ್ನಡಿಗರೂ ಆದ ಸರ್. ಪಣಂಬೂರು ರಾಘವೇಂದ್ರ ರಾಯರು ತಾ. ೨೫ರಂದು ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದವಾಗುತ್ತದೆ.

ಜೀವನ ಚರಿತ್ರೆ

ಸರ್ ರಾಘವೇಂದ್ರರಾವ್ ಇವರ ಊರು ಮಂಗಳೂರಿನಿಂದ ಆರು ಮೈಲು ದೂರದಲ್ಲಿರುವ ಪಣಂಬೂರು ಎಂಬುದು. ೧೮೮೯ನೆಯ ಇಸವಿಯ ಮೇ ೨೪ನೇ ತಾರೀಖಿನ ದಿನ ಜನಿಸಿ ಕುಂದಾಪುರ ಹ್ಯಾಸ್ಕೂಲಿನಲ್ಲಿ ಮಾಧ್ಯಮಿಕ ಶಿಕ್ಷಣವನ್ನು ಪಡೆದರು. ಮುಂದೆ ಮಂಗಳೂರಿನ ಗವರ್ನಮೆಂಟ್ ಕಾಲೇಜಿನಲ್ಲಿಯೂ ಮದ್ರಾಸ್ ಕ್ರಿಶ್ಚನ್ ಕಾಲೇಜಿನಲ್ಲಿಯೂ ಉಚ್ಚ ಶಿಕ್ಷಣವನ್ನು ಪಡೆದರು. ಇವರಿಗೆ ಮೊದಲಿನಿಂದಲೂ ಗಣಿತ ವಿಷಯದಲ್ಲಿ ತುಂಬಾ ಪ್ರೀತಿ. ಆದರೂ ಬಿ. ಎ. ಪರೀಕ್ಷೆಗೆ ಕನ್ನಡವನ್ನು ತೆಗೆದುಕೊಂಡಿದ್ದರು. ಎಂ. ಎ. ಪರೀಕ್ಷೆಗೆ ಅಭ್ಯಾಸ ಮಾಡುವಾಗ ಇವರು ಸಂಸ್ಕೃತ ಹಾಗೂ ಫ್ರೆಂಚ್ ವಿಷಯಗಳನ್ನು ಐಚ್ಛಿಕವನ್ನಾಗಿ ಅಭ್ಯಾಸಮಾಡುತಿದ್ದರು. ಸರ್ ಪಿ. ಆರ್. ರಾಯರು ತಮ್ಮ ವರ್ಗದಲ್ಲಿ ಮೊದಲಿನಿಂದಲೂ ಅಗ್ರಗಣಿಗಳು. ಮದ್ರಾಸ್ ಯುನಿವರ್ಸಿಟಿಯ ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಇವರು ಪ್ರಥಮ ಸ್ಥಾನವನ್ನು ಪಡೆದರು. ಮುಂದೆ ಮಂಗಳೂರು ಕಾಲೇಜಿನ ಎಫ್. ಎ. ಪರೀಕ್ಷೆಯಲ್ಲಿಯೂ, ಯುನಿವರ್ಸಿಟಿಯ ಬಿ. ಎ. ಪರೀಕ್ಷೆಯಲ್ಲಿಯೂ ತಮ್ಮ ಮೊದಲನೆಯ ಸ್ಥಾನವನ್ನೇ ಹೊಂದಿದರು.

೧೯೧೩ನೆಯ ಇಸವಿಯಲ್ಲಾದ ಕಾಂಪಿಟೀಟಿವ್ ಪರೀಕ್ಷೆಯಲ್ಲಿ ರಾಘವೇಂದ್ರರಾಯರ ಆಯ್ಕೆಯಾಗಿ ಇವರು ಇಂಡಿಯನ್ ಆಡಿಟ್ ಮತ್ತು ಎಕೌಂಟ್ಸ್ ಖಾತೆಯನ್ನು ಸೇರಿದರು. ಮುಂದೆ ಎಕೌಂಟ್ಸಿನ ವಿವಿಧ ಕಚೇರಿಗಳಲ್ಲಿ ಇವರು ಕೆಲಸಮಾಡಿ ೧೯೩೦ರಲ್ಲಿ ಹಿಂದುಸ್ಥಾನ ಸರಕಾರದ ಸೆಕ್ರೆಟರಿಯೇಟಿನ ಹಣಕಾಸಿನ ಖಾತೆಯಲ್ಲಿ ಪ್ರವೇಶಿಸಿದರು. ಆ ಸ್ಥಳದ ೫ ವರ್ಷಗಳ ಅವಧಿಯಲ್ಲಿಯೇ ಲೀ ಕಮಿಶನ್ನಿನ ಕಾರ್ಯದರ್ಶಿಯೆಂದೂ ಕೆಲಸಮಾಡಿದರು. ಮುಂದೆ ೧೯೩೬ರಲ್ಲಿ ರೈಲ್ವೇ ಡಿಪಾರ್ಟ್‌ಮೆಂಟಿನಲ್ಲಿ ಹೋಗಿ ೧೯೩೭ರಲ್ಲಿ ಡೈರೆಕ್ಟರ್ ಆಫ್ ಫಿನೇನ್ಸ್ ಎಂದೂ ೧೯೩೭—೪೧ರ ವರೆಗೆ ಫಿನೇನ್ಶಿಯಲ್ ಕಮಿಶನರ್ ಎಂದೂ ಆಗಿದ್ದರು. ಈ ಸ್ಥಾನವು ದೊರೆತ ಮೊದಲನೆಯ ಭಾರತೀಯರೆಂದರೆ ಇವರೇ. ಆ ಸ್ಥಳದ ಐದು ವರ್ಷಗಳು ಮುಗಿಯುತ್ತಲೇ, ಇವರು ಮುಂಬಯಿ ಪ್ರಾಂತದ ಎಕೌಂಟೆಂಟ್ ಜನರಲರೆಂದು ನಿಯಮಿಸಲ್ಪಟ್ಟರು. ೧೯೪೧ನೆಯ ಇಸವಿಯ ಫೆಬ್ರವರಿ ತಿಂಗಳಲ್ಲಿ ಇವರಿಗೆ 'ಸರ್' ಪದವಿಯು ದೊರಕಿತು. ಸರ್ ರಾಘವೇಂದ್ರರಾಯರು ಪೌರ್ವಾತ್ಯ ಪಾಶ್ಚಾತ್ಯ ರಾಷ್ಟ್ರಗಳನ್ನು ಸಂಚರಿಸಿದ್ದರು. ಮರಣದ ಸಮಯದಲ್ಲಿ ಅವರಿಗೆ ೫೨ ವರ್ಷಗಳಾಗಿದ್ದುವು.

ಸ್ವಾತಂತ್ರ್ಯ ಕೊಟ್ಟರೆ ಯುದ್ಧಕ್ಕೆ ಸಹಾಯ

ಯುದ್ಧಕ್ಕೆ ಸಹಕರಿಸಬಾರದೆಂಬ ನೈತಿಕ ಧ್ಯೇಯದಿಂದ ನಾವು ಬ್ರಿಟನಿನೊಡನೆ ಸಹಕರಿಸದಿರುವುದಲ್ಲ; ಬ್ರಿಟಿಷರು ಭಾರತದ ವಿಷಯ ಮಾಡುವ ಅಪರಾಧದ ಬಗ್ಗೆ. ನಮಗೆ ಸ್ವಾತಂತ್ರ್ಯ ಕೊಟ್ಟಲ್ಲಿ ನಾವು ಯುದ್ಧದಲ್ಲಿ ಸಹಕರಿಸಲು ಸಿದ್ಧರಿರುವೆವು ಎಂಬುದಾಗಿ ರಾಜಾಜಿ ಮದ್ರಾಸಿನಲ್ಲಿ ಹೇಳಿದರು. ಅವರು ನಮಗೆ ಸ್ವಾತಂತ್ರ್ಯ ಕೊಡದಿದ್ದರೆ ನಮ್ಮದಲ್ಲದ ಈ ಯುದ್ಧದಲ್ಲಿ ಸೇರಲಾರೆವು ಎಂದರು.

ಕಾಂಗ್ರೆಸು ಸ್ವಯಂಸೇವಕರನ್ನು ಸೇರಿಸುತ್ತದೆ

ಕಾಂಗ್ರೆಸು ಈಗ ಹಳ್ಳಿ ಪಟ್ಟಣಗಳಲ್ಲಿ ಸಾವಿರಾರು ಸಂಖ್ಯೆಯಿಂದ ಸ್ವಯಂಸೇವಕರನ್ನು ಸೇರಿಸುವ ಕೆಲಸ ಮಾಡುತ್ತದೆ. ಇವರು ಜನರ ಭೀತಿಯನ್ನು ಹೋಗಲಾಡಿಸಿ, ಇಂದಿನ ಯುದ್ಧದ ದುರಂತಕಾಲದಲ್ಲಿ ಅವರಿಗೆ ಸಹಾಯ ಮಾಡುವರು.

ಅಮೇರಿ ಸ್ಥಳದಲ್ಲಿ ಕ್ರಿಪ್ಸರು

ಮೋಸ್ಕೋದಿಂದ ಮರಳಿ ಬಂದ ನಂತರ ಸರ್ ಸ್ಟಾಫೋರ್ಡ್ ಕ್ರಿಪ್ಸರನ್ನು ಚರ್ಚಿಲರು ಮಂತ್ರಿಮಂಡಳದಲ್ಲಿ ಸೇರಿಸಿಕೊಳ್ಳುವರೆಂದೂ, ಅಮೇರಿಯವರಿಗೆ ಅಪ್ಪಣೆ ಕೊಟ್ಟು ಕ್ರಿಪ್ಸರನ್ನು ಭಾರತ ಮಂತ್ರಿಯಾಗಿ ಮಾಡುವರೆಂದೂ ದಟ್ಟ

'ಒಬ್ಬ ಬ್ರಿಟಿಷನ ಮೇಲೆ ಧಾಳಿಯಾದರೆ ಒಂದು ಲಕ್ಷ ಸೈನ್ಯ ಕಳುಹಿಸುವೆನು'

ಈಗ ೨೫ ವರ್ಷಗಳ ಹಿಂದೆ ಲಾರ್ಡ್ ಹಾರ್ಡಿಂಜರು ವೈಸರಾಯರಾಗಿದ್ದರು. ಮಾಲವೀಯರು ಅವರಲ್ಲಿಗೆ ಹೋಗಿ ಹಿಂದೂ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಅಪ್ಪಣೆ ಕೇಳಿದರು. ಆಗ,

ಲಾರ್ಡ್ ಹಾರ್ಡಿಂಜರು:—ನೀವು ಬ್ರಿಟಿಷ್ ಸರಕಾರದ ಹಿತಶತ್ರುಗಳೆಂದು ತಕರಾರುಗಳು ಬಂದಿರುತ್ತವೆ.

ಮಾ:—ಅದು ನಿಜವಲ್ಲ. ನನ್ನ ಭಾಷಣ ಮತ್ತು ಲೇಖನಗಳನ್ನು ಪರಿಶೀಲಿಸಲು ಒಬ್ಬ ಸ್ಪೇಶಲ್ ಅಧಿಕಾರಿಯನ್ನು ನೇಮಿಸಿರಿ. ಬ್ರಿಟಿಷ್ ಸರಕಾರದ ಬಗ್ಗೆ ದ್ವೇಷ ಹುಟ್ಟಿಸಲು ಪ್ರಯತ್ನಿಸಿದ್ದೆನೆಂದು ಅವರು ಹೇಳಿದರೆ ತಿದ್ದಿಕೊಳ್ಳಲು ಸಿದ್ಧನಿದ್ದೇನೆ.

ಇದರಿಂದ ಲಾರ್ಡ್ ಹಾರ್ಡಿಂಜರಿಗೆ ತೃಪ್ತಿಯಾಯಿತು. ಮುಂದಿನ ಕೆಲಸಕ್ಕೆ ತೊಂದರೆಯಾಗಲಿಲ್ಲ.

ಚಕ್ರವರ್ತಿಗಳೊಡನೆ ಸಂದರ್ಶನ

ಪಂಡಿತ ಮಾಲವೀಯರವರು ಎರಡನೇ ದುಂಡುಮೇಜಿನ ಪರಿಷತ್ತಿಗೆ ಹೋದಾಗ ಆಗಿನ ಚಕ್ರವರ್ತಿಗಳಾದ ಪಂಚಮ ಜಾರ್ಜರ ಭೇಟಿಗೆ ಹೋಗಿದ್ದರು. ಆಗ ಅವರಲ್ಲಿ ಹೀಗೆ ಮಾತುಕತೆಗಳು ನಡೆದವು.

ಚ:—ನೀವು ಗಾಂಧಿಯವರ ಅನುಯಾಯಿಗಳಲ್ಲವೆ?

ಮಾ:—ಅಲ್ಲ; ನಾನು ಅವರ ಸಹೋದ್ಯೋಗಿ.

ಚ:—ಮಾಲವಿಯವರೇ ಇಲ್ಲಿ ಕೇಳಿರಿ; ಹಿಂದುಸ್ಥಾನದಲ್ಲಿರುವ ನಮ್ಮ ಒಬ್ಬ ಬ್ರಿಟಿಷ್ ಮನುಷ್ಯನ ಮೇಲೆ ಧಾಳಿಯಾದರೆ, ನಾನು ಇಲ್ಲಿಂದ ಒಂದು ಲಕ್ಷ ಸೈನ್ಯವನ್ನು ಕಳಿಸಬೇಕಾಗುವುದು.

ಮಾ: ಚಕ್ರವರ್ತಿಗಳು ಹೇಳುವುದು ಕೇಳಿ ನನಗೆ ಆಶ್ಚರ್ಯವಾಗುತ್ತದೆ. ನೀವು ನಮ್ಮ ಹಕ್ಕುಗಳಿಗೆ ಮನ್ನಣೆ ಕೊಡಲೇ ಬೇಕು. ಹಿಂದುಸ್ಥಾನಕ್ಕೆ ಬಂದು ದರಬಾರವನ್ನು ಸೇರಿಸಿ ಹಿಂದುಸ್ಥಾನಕ್ಕೆ ವಸಾಹತು ಸ್ವರಾಜ್ಯವನ್ನು ಕೊಡಲಾಗಿದೆಯೆಂದು ಸಾರಿರಿ. ಆಂದರೆ ಹಿಂದೀಯರು ಕೃತಜ್ಞರಾಗುವರು. ಏಶಿಯಾ ಖಂಡದ ಜನರು ನಿಮ್ಮನ್ನು ಸ್ತುತಿಸುವರು. ನಿಮ್ಮೀರ್ವ ಮನುಷ್ಯನ ಮೇಲೆ ಹಿಂದುಸ್ಥಾನದಲ್ಲಿ ಧಾಳಿಯಾದರೆ ನೀವು ಒಂದು ಲಕ್ಷ ಸೈನ್ಯವನ್ನು ಕಳಿಸಬೇಕಾಗುವದೆಂದು ಹೇಳುವ ಸಮಸ್ಯೆಯನ್ನು ಬಿಡಿಸಲು ನಾವು ಇಲ್ಲಿಗೆ ಬಂದಿರುವುದಿಲ್ಲ.

ಜಪಾನರ ಅಗ್ನಿಬಾಣ

ಜಪಾನ್ ಯುದ್ಧಾಸ್ತ್ರಗಳಲ್ಲಿ ಅಗ್ನಿಬಾಣದಂತಿರುವ ಒಂದು ಅತ್ಯಂತ ಪರಿಣಾಮಕಾರಿಯಾದ ಅಸ್ತ್ರವನ್ನು ಅವರು ತಯಾರಿಸುವರಂತೆ. ಗುಂಡು ಬಿಡುವ ವಿದ್ಯೆಯನ್ನು ಅವರು ಜರ್ಮನರಿಂದ ಕಲಿತಿರುವರಾಗಿ ಹೇಳಲಾಗಿದೆ.

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

1040ನೇ ಇಸವಿ ವ್ಯಾಜ್ಯ ನಂಬ್ರ O. S. 45

(Balkudru P. C.)

1941ನೇ ಇಸವಿ ಅಮಲ್ಜಾರಿ ಅರ್ಜಿ ನಂಬ್ರ.

R. E. A. 994.

ಕೃಷ್ಣಯ್ಯ ಕಲ್ಕೂರ— ವಾದಿ

ತೀರಿದ್ದು ಯಾನೆ ಪದ್ಮಮ್ಮ ಕೂಡಾ—.

ಪ್ರತಿವಾದಿರು

1. ನಾರಾಯಣ ಭಟ್ಟ, ರಾಮಕೃಷ್ಣ ಭಟ್ಟರ ಮಗ,
2. ಶ್ರೀನಿವಾಸ ಭಟ್ಟ ಕಾಳಪ್ಪ ಭಟ್ಟರ ಮಗ,

ಮೂಡು ತೋನ್ಸೆ ಗ್ರಾಮದ ಕಲ್ಯಾಣಪುರದಲ್ಲಿರುವವರು, ಇವರಿಗೆ—

ಸದರೀ ಡಿಕ್ರಿಯ ಅಮಲ್ಜಾರಿ ಬಗ್ಗೆ ಅರ್ಜಿದಾರನು ಈ ಕೋರ್ಟಿಗೆ ಅರ್ಜಿಮಾಡಿಕೊಂಡಿದ್ದಾನೆ. ಆದುದರಿಂದ ಅಮಲ್ಜಾರಿಯು ಯಾಕೆ ನಡೆಸಕೂಡದು ಎಂಬುದಕ್ಕೆ ಸಬಬು ತೋರಿಸಲಿಕ್ಕೆ 1942ನೇ ಇಸವಿ ಫೆಬ್ರವರಿ ತಿಂಗಳು ೩ನೇ ತಾರೀಕಿನಲ್ಲಿ ಈ ಕೋರ್ಟಿನ ಮುಂದೆ ನೀವು ಹಾಜರಾಗಬೇಕೆಂತ ಇದರಿಂದ ನಿಮಗೆ ನೋಟೀಸು ಕೊಡಲಾಗುತ್ತದೆ.

(By order of the Court)

Kundapur } (Sd) A. V. M. Bekkar,

ಸರಕಾರದ ಹೊಸ ಪಾಠಪಟ್ಟಿಗನುಸಾರವಾಗಿ ಬರೆದ

ನವೀನ ಭೂವಿವರಣೆ

ವಾಸುದೇವರಾವ್, ಎಂ. ಎ. ಎಲ್. ಟಿ. (Dip. Geogrhpy)

(ಭೂಗೋಳ ಶಾಸ್ತ್ರದಲ್ಲಿ ಡಿಪ್ಲೊಮಾ ಪಡೆದವರು)

ಈ ಪುಸ್ತಕಗಳನ್ನು ಪಡಕೊಂಡಲ್ಲಿ ವಿದ್ಯಾರ್ಥಿಗಳಿಗೆ ಎಟ್ಲಾಸ್ ಕೊಂಡುಕೊಳ್ಳುವ ಅವಶ್ಯವಿಲ್ಲ.

ಪ್ರತಿ ಪುಸ್ತಕದಲ್ಲಿ ಬಣ್ಣಬಣ್ಣದ ಭೂಪಟಗಳಿವೆ.

ಅನೇಕಾನೇಕ ಚಿತ್ರಪಟಗಳಿಂದ ಕೂಡಿದ್ದು, ಪ್ರತಿ ಪಾಠದ ಅಂತ್ಯದಲ್ಲಿ ಅಭ್ಯಾಸಗಳನ್ನೂ ಮಾದರಿ ಪ್ರಶ್ನೆಗಳನ್ನೂ ಕೊಟ್ಟಿದೆ.

4ನೆಯ ಪುಸ್ತಕ 0 6 0 5ನೆಯ ಪುಸ್ತಕ 0 7 0

6, 7 ಮತ್ತು 8ನೆಯ ಪುಸ್ತಕಗಳು ಅಚ್ಚಿನಲ್ಲಿವೆ.

ಪುಸ್ತಕಗಳು ಬೇಕಾದಲ್ಲಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

"ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

30—1—1942] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೩೦—೧—೧೯೪೨]

ಸಮರಭೂಮಿಯ ಸಂಚಾರ

ಕಳೆದ ಒಂದೂವರೆ ತಿಂಗಳಿಂದ ಜಪಾನರು ಪೆಸಿಫಿಕ್ ಸಾಗರದಲ್ಲಿ ತಮ್ಮ ವಿದ್ಯುತ್ ಯುದ್ಧವನ್ನು ನಡೆಸುತ್ತಾ ಬಂದಿದ್ದಾರೆ. ಮಿಂಚಿನಂತೆ ದ್ವೀಪದಿಂದ ದ್ವೀಪಕ್ಕೆ ಹಾರಾಡಿ ಧಾಳಿಯಿಡುತ್ತಿರುವರು. ಹಾಂಕಾಂಗ್, ಫಿಲಿಪಯಿನ್, ವೇಕ್, ಗ್ವಾಮ್ ಇವುಗಳನ್ನು ಸ್ವಾಧೀನಪಡಿಸಿಕೊಂಡ ನಂತರ ಮಲಯದಲ್ಲಿ ಉಗ್ರ ಆಕ್ರಮಣ ನಡೆಯಿತು. ಮಲಯದ ಆಕ್ರಮಣದ ಉಗ್ರತೆಯನ್ನೆದುರಿಸಲಾರದೆ ಬ್ರಿಟಿಷರು ಹಿಂದೆ ಹಿಂದಕ್ಕೆ ಸರಿದು ಹೋಗಿರುವರು. ಆ ಮೇಲೆ ಜಪಾನರು ಡಚ್ ಇಂಡೀಸ್ ದ್ವೀಪಗಳನ್ನೂ ಮುತ್ತಿದರು. ಅಲ್ಲಿನ ಮಿನ್‌ಹಾಸಾ, ತಾರಕಾನಾ, ಸೆಲಿಬಸ್ ಮತ್ತು ಬೋರ್ನಿಯೋಗಳು ಜಪಾನರ ಕೈವಶವಾದವು. ಅಲ್ಲಿನ ಯುದ್ಧವು ಮುಗಿಯುವ ಮೊದಲೇ ಬರ್ಮಕ್ಕೂ ಆಕ್ರಮಣ ಆರಂಭವಾಯಿತು. ಅತ್ತ ಆಸ್ಟ್ರೇಲಿಯಕ್ಕೂ ಈಗ ಧಾಳಿ ಪ್ರಾರಂಭವಾಗಿರುತ್ತದೆ. ನ್ಯೂಗಿನಿ, ನ್ಯೂಬ್ರಿಟನ್ ಮತ್ತು ಸಾಲೊಮನ್ ದ್ವೀಪಗಳ ಮೇಲೆ ಜಪಾನರು ಬಾಂಬು ಎಸೆದಿರುವರು. ಅಂತೂ ಜಪಾನಿನ ಯುದ್ಧಜ್ವಾಲೆಯು ಇತ್ತ ಬರ್ಮಾದಿಂದ ಅತ್ತ ಆಸ್ಟ್ರೇಲಿಯದ ವರೆಗೆ ಹರಡಿ ಪ್ರಜ್ವಲಿಸುತ್ತಿರುವುದು. ಇದುವರೆಗಿನ ಪ್ರತಿಯೊಂದು ಯುದ್ಧದಲ್ಲಿಯೂ ಜಪಾನರು ಗೆಲ್ಲುತ್ತಾ ಬಂದಿದ್ದು, ಮಿತ್ರರು ಸೋತು ಹಿಂದೆಗೆದಿರುವುದೇ ಕಾಣುವಾಗ ಪರಿಸ್ಥಿತಿ ಬಹಳ ಗಂಭೀರವೂ ಚಿಂತಾಜನಕವೂ ಆಗಿದೆಯೆನ್ನದೆ ನಿರ್ವಾಹವಿಲ್ಲ.

ಜಪಾನು ಬ್ರಿಟನು ಮತ್ತು ಅಮೆರಿಕಗಳ ದೌರ್ಬಲ್ಯವನ್ನು ಪರಿಗಣಿಸಿಕೊಂಡು ಹೀಗೆ ಹಾರಾಡುತ್ತಿದೆ! ಪೆಸಿಫಿಕ್ ಸಾಗರದಲ್ಲಿ ಬ್ರಿಟಿಷ್ ಮತ್ತು ಅಮೆರಿಕದ ನೌಕಾಸೈನ್ಯಗಳು ತಲೆದೋರಲು ಆಸ್ಪದವಿಲ್ಲದಂತೆ ಮಾಡುವ ಸಲುವಾಗಿ ಹೀಗೆ ಪ್ರಮುಖ ಸ್ಥಳಗಳನ್ನು ಜಪಾನು ಕೈವಶ ಮಾಡಲು ಸಾಹಸಮಾಡುವಂತೆ ತೋರುವುದು. ಆದ್ದರಿಂದ ಈಗ ಸಿಂಗಾಪುರವನ್ನು ಭೇದಿಸುವುದು, ರಂಗೂನ್ ಸಿಂಗಾಪುರ ರಸ್ತೆ, ಹಾಗೂ ಬರ್ಮಾ ದೇಶಗಳ ರಸ್ತೆಯನ್ನು ಮುರಿಯುವುದು ಡಚ್ ಇಂಡೀಸನ್ನು ಕೈವಶಪಡಿಸಿಕೊಳ್ಳುವುದು ಇವಿಷ್ಟು ಜಪಾನು ಉದ್ದೇಶಪಟ್ಟಿರುವಂತೆ ತೋರುತ್ತದೆ. ಇವಿಷ್ಟು ಸಾಧಿಸಿಬಿಟ್ಟರೆ ಜಪಾನು ಪೆಸಿಫಿಕಿನಲ್ಲಿ ವಿಜೃಂಭಿಸಿಬಿಡುವುದೆಂಬುದಕ್ಕೆ ಏನೇನೂ ಸಂಶಯವುಳಿಯಲಾರದು. ಸಿಂಗಾಪುರದ ಕಡೆಗೆ ಜಪಾನರು ಎಲ್ಲಾ ಕಡೆಗಳಿಂದಲೂ ತಮ್ಮ ಸೈನ್ಯವನ್ನು ಮುಂದೂಡುತ್ತಿರುವುದು ಕಂಡುಬರುತ್ತದೆ. ಜೀವದ ಆಶೆ ತೊರೆದು ಹೋರಾಡದಿದ್ದರೆ ಸಿಂಗಾಪುರವು ಉಳಿಯುವ ಹಾಗಿಲ್ಲವೆಂದು ಟೈಮ್ಸ್ ಪತ್ರಿಕೆಯೇ ಉದ್ಗಾರ ತೆಗೆದಿದೆ. ಹಾಗಾಗಿ ಸಿಂಗಾಪುರವನ್ನು ರಕ್ಷಿಸಬೇಕಾದರೆ ಅಲ್ಲಿಗೆ ವಿಮಾನ, ಸೈನ್ಯ, ನೌಕಾಬಲಗಳು ಭರದಿಂದ ಇನ್ನಷ್ಟು ಸಾಗಿ ಹೋಗಬೇಕಾಗಿರುವುದು. ಆದರೆ ಇವು ಅಲ್ಲಿಗೆ ಬರದಂತೆ ಜಪಾನು ಸರ್ವ ಸಾಹಸವನ್ನೂ ಮಾಡುತ್ತಿದೆ. ಡಚ್ ಇಂಡೀಸ್, ಬರ್ಮಾ, ನ್ಯೂಗಿನಿ ಇವುಗಳ ಮೇಲೆ ಆಕ್ರಮಣದಿಂದಲೇ ಅದಕ್ಕೆ ಆತಂಕವೇ ಆಗಿದೆ. ಬರ್ಮಾ ರಸ್ತೆಯನ್ನು ಬಂದು ಮಾಡಿ ಚೀನಕ್ಕೆ ಸಹಾಯ ದೊರೆಯದಂತೆ ಮಾಡಬೇಕೆಂದೂ ಜಪಾನರ ಉದ್ದೇಶವಿದೆ. ರಂಗೂನ್ ಜಪಾನರ ವಶ ಹೋದರೆ ಹಿಂದುಸ್ಥಾನದಿಂದ ಪೂರ್ವ ದಿಕ್ಕಿಗೆ ಯುದ್ಧಸಾಮಗ್ರಿಗಳನ್ನು ಸಾಗಿಸುವುದು ಕಷ್ಟವೇ ಆಗುವುದು. ಹೀಗೆ ಸಿಂಗಾಪುರವನ್ನುಳಿಸಲು ಬ್ರಿಟಿಷರು ಯತ್ನಪಡಬೇಕಾದರೆ, ಸಿಂಗಾಪುರವನ್ನು ಮುರಿಯಲು ಜಪಾನರು ಸಾಹಸಮಾಡುತ್ತಿರುವರು. ಪೆಸಿಫಿಕಿನಲ್ಲಿ ಬ್ರಿಟನು ಅಮೆರಿಕಗಳ ಅದೃಷ್ಟವು ಸಿಂಗಾಪುರದ ಮೇಲೆ ಬಹಳ ಮಟ್ಟಿಗೆ ಆಧರಿಸಿಕೊಂಡಿರುವುದು. ಸಿಂಗಾಪುರದಂತೆ, ಪ್ರಸಿದ್ಧ ನೌಕಾ ಕೇಂದ್ರವಾದ ಮಾಲ್ಟಾದ ಮೇಲೂ ಬಿಡದೆ ಬಾಂಬೆಸೆಯುತ್ತಾ ಇರುವರು. ಇಟಲಿ ಮತ್ತು ಜರ್ಮನ್ ವಿಮಾನಗಳು ಇಲ್ಲಿ ಹಾವಳಿ ಮಾಡುತ್ತಿರುವುದನ್ನು ನೋಡಿದರೆ, ಜಪಾನು ಸಿಂಗಾಪುರದಲ್ಲಿ ಕಾದಾಡುತ್ತಿರುವಾಗ ಜರ್ಮನಿಯು ಮಾಲ್ಟಾವನ್ನು ಮುರಿಯಲು ಮುನ್ನುಗ್ಗುತ್ತಿರುವಂತೆ ತೋರುವುದು.

ಮಿತ್ರರ ಸೈನ್ಯವು ಇಷ್ಟಾದರೂ ಪೆಸಿಫಿಕಿನಲ್ಲಿ ಬಹಳ ಮಂದಗತಿಯಿಂದ ಸಾಗುತ್ತಿರುವುದು ಹಲವರಿಗೆ ಆಶ್ಚರ್ಯವನ್ನೇ ಉಂಟುಮಾಡಿದೆ. ಜಪಾನು ಯುದ್ಧ ಸಾರುವ ಮೊದಲು ಅಮೆರಿಕದ ಶಕ್ತಿ ಸಾಮರ್ಥ್ಯಗಳ ಕುರಿತು ಜಗತ್ತಿಗೆ ಬಹಳ ದೊಡ್ಡ ಅಭಿಪ್ರಾಯವೇನೋ ಇತ್ತು. ಬ್ರಿಟಿಷ್ ಮತ್ತು ಅಮೆರಿಕಾ ನೌಕಾಬಲಗಳು ಸೇರಿದರೆ ಜಪಾನು ಧ್ವಂಸವಾಗಿಬಿಡುವುದೆಂದು ಹಲವರು ಬಗೆದಿದ್ದರು. ಆದರೆ ಇತ್ತೀಚೆಯ ಘಟನೆಗಳಿಂದ ಅಮೆರಿಕದ ಸಾಹಸದ ಬಗ್ಗೆ ಒಳ್ಳೆಯ ಅಭಿಪ್ರಾಯವುಳಿದಿಲ್ಲ. ಫಿಲಿಪಯಿನಿಗೆ ಬೆಂಬಲ ಕಳುಹಿಸದೆ ಜಪಾನು ನುಂಗುತ್ತಿರುವುದನ್ನು ನೋಡಿ ನಿಂತದ್ದು ಬಹಳ ಪ್ರಮಾದದ ಕೆಲಸವಾಯಿತೆಂದು ರಾಜನೀತಿಜ್ಞರು ಹೇಳುತ್ತಿದ್ದಾರೆ. ಬಹುಶಃ ಅಮೆರಿಕದಲ್ಲಿ ಇನ್ನೂ ಸಾಕಷ್ಟು ಯುದ್ಧಸಾಮಗ್ರಿ ತಯಾರಾಗದಿರುವುದೇ ಇಂತಹ ಉದಾಸೀನತೆಯ ಕಾರಣವೋ ಎಂದು ಊಹಿಸಲವಕಾಶವಿದೆ. ಅಂತೂ ಈಗ ಸಿದ್ಧತೆ ಜರೂರಿನಿಂದ ಆಗುತ್ತಿದೆಯೆಂಬುದಿಷ್ಟು ಸುದ್ದಿ ಬರುತ್ತದೆ. ಅದು ಪೂರ್ಣವಾಗಲು, ಪೂರ್ಣವಾಗಿ ಜಪಾನರನ್ನು ಪ್ರಬಲವಾಗಿ ಎದುರಿಸಲು ಎಷ್ಟು ಕಾಲ ಬೇಕೋ ತಿಳಿಯಲಾರದು. ಅಷ್ಟರ ವರೆಗೆ ಜಪಾನಾದರೂ ಕಾಯುವಂತೆ ಕಂಡುಬರುವುದಿಲ್ಲ. ಒಮ್ಮೆ ಪೆಸಿಫಿಕ್ಕಿನ ಹಲವು ಮುಖ್ಯ ಸ್ಥಳಗಳು ಜಪಾನರ ಕೈವಶ ಬಂದುಬಿಟ್ಟರೆ ಮತ್ತೆ ಅದನ್ನು ಅವರಿಂದ ಕಿತ್ತು ತೆಗೆದುಕೊಳ್ಳುವುದು ಬಹಳ ಪ್ರಯಾಸದ ಕೆಲಸವೇ ಆದೀತು.

ಥಾಯಿಲೆಂಡು ಜರ್ಮನಿ, ಇಟಲಿ ಜಪಾನುಗಳೊಡನೆ ಸೇರಿಕೊಂಡು ಬ್ರಿಟನು ಅಮೆರಿಕಗಳ ಮೇಲೆ ಯುದ್ಧ ಸಾರಿರುವುದಷ್ಟೆ. ಇಷ್ಟರಲ್ಲಿಯೇ ಬ್ರಿಟಿಷ್ ವೈಮಾನಿಕರು ಥಾಯಿಲೆಂಡಿನ ಮೇಲೆ ಪ್ರಚಂಡ ಧಾಳಿಯಿಡಲು ಪ್ರಾರಂಭಿಸಿರುವರು. ಆಸ್ಟ್ರೇಲಿಯದ ರಾಬುಲ್ ಎಂಬಲ್ಲಿ ಈಗಾಗಲೇ 10,000 ಜಪಾನರು ಬಂದಿಳಿದಿರುವರೆಂದು ಸುದ್ದಿಯಿದೆ. ರಾಬುಲಿನ ಹಿಂಬದಿಯಲ್ಲಿರುವ ಪರ್ವತಾವಳಿಗಳಲ್ಲಿ ಜಪಾನರನ್ನು ಆಸ್ಟ್ರೇಲಿಯನರು ಎದುರಿಸಿ ಕಾದಾಡುತ್ತಿದ್ದಾರೆ. ಜಪಾನರು ಇಷ್ಟರಲ್ಲಿ ನೌಕಾ ಮೂಲಕ ಸೈನಿಕರನ್ನು ಕಾವಿಂಗಿನಲ್ಲಿ ತಂದಿಳಿಸಿರುವರು. ನ್ಯೂಗಿನಿಗೆ ಜಪಾನರ ಬಾಂಬುಗಳಿಂದ ಪಿರಂಗಿಗಳಿಂದ ಪೆಟ್ಟು ಬಿದ್ದಿದೆ. ರಾಬುಲಿನಲ್ಲಿ ಬಂದಿಳಿದಿರುವ ಜಪಾನೀ ದಳದ ಮೇಲೆ ಆಸ್ಟ್ರೇಲಿಯನ್ ವೈಮಾನಿಕರು ಬಾಂಬುಗಳನ್ನೆಸೆದರು.

ಮಲಯದ ಕಾಳಗವು ಎಂದಿನಂತೆ ಭರದಿಂದಲೇ ಸಾಗುತ್ತಿದೆ. ಜಪಾನರ ಮುಂದೊತ್ತು ಈಗ ಬಹಳ ಜೋರಾಗಿದೆ. ಆಸ್ಟ್ರೇಲಿಯನ್ ವೀರರೂ ಭಾರತದ ಯೋಧರೂ ಮಲಯದಲ್ಲಿ ಜಪಾನರೆದುರು ಪ್ರಚಂಡವಾಗಿ ಹೋರಾಡುತ್ತಿರುವರು. ಕೇಂದ್ರದಲ್ಲಿ, ಕ್ಲಾಂಗ್‌ನ ಉತ್ತರಕ್ಕೆ ಬ್ರಿಟಿಷ್ ದಳವು ಯಶಸ್ವಿಯಾಗಿ ಕಾದಾಡಿತು. ಬಾಟುಪಹತ್‌ನಲ್ಲಿ ಯುದ್ಧವು ಸಾಗುತ್ತಲೇ ಇದೆ. ಅನೇಕ ವಿಮಾನಗಳು ಕೆಳಗಿನ ವರೆಗೂ ಬಂದು ಬಾಂಬುಗಳನ್ನು ಬಿಸುಡಿ ಹಾರಿಹೋದವು. ಸಂಕ್ರೈಲ್ವೆ ಮಾರ್ಗಗಳು ಅಲ್ಲಲ್ಲಿ ಬಾಂಬಿನ ಪೆಟ್ಟಿನಿಂದ ಸಿಡಿದು ಭಗ್ನವಾಗಿರುತ್ತವೆ. ಸಿಂಗಾಪುರದ ಮೇಲೆಯೂ ಬಾಂಬುಗಳು ಬೀಳುತ್ತಿವೆ. ಸಿಂಗಾಪುರಕ್ಕೆ ಅರವತ್ತೈದು ಮೈಲುಗಳ ದೂರದಲ್ಲಿ ಜಪಾನರು ಬಂದಿರುವರೆಂದು ಸುದ್ದಿ. "ನಾವು ಸಿಂಗಾಪುರವನ್ನು ಬಿಟ್ಟುಬಿಡಲಾರೆವು" ಎಂಬುದಾಗಿ ಅಲ್ಲಿನ ರೇಡಿಯೋ ಸಾರುತ್ತದೆ. ಮಲಯದ ಕೇಂದ್ರ ರಣಭೂಮಿಯಲ್ಲಿ ಜಪಾನರ ಹುಮ್ಮಸ್ಸು ಸ್ವಲ್ಪ ಕಡಿಮೆಯಾಗಿದೆಯೆಂದು ಹೇಳಲಾಗಿದೆ. ಆದರೂ ಪರಿಸ್ಥಿತಿಯು ಬಹಳ ಗಂಭೀರವೇ ಇದೆ. ಮಲಯ ಮತ್ತು ಬರ್ಮಾಗಳಲ್ಲಿ ವಿಮಾನ ಧಾಳಿಯ ರಕ್ಷಣೋಪಾಯವು ಈಗ ಯಶಸ್ವಿಯಾಗಿದೆಯೆಂದು ತಿಳಿಸಲಾಗಿದೆ. ಇಷ್ಟಿದ್ದರೂ ಇದುವರೆಗಿನ ಯುದ್ಧಗತಿಯು ಜಪಾನಿಯರಿಗೇ ಉಪಕಾರಿಯಾಗಿದೆ. ಅವರಿನ್ನು ಮುಂದಿನ ಯುದ್ಧಗಳಲ್ಲಿ ಅವರಿಗೆ ಹೆಚ್ಚು ಹೆಚ್ಚಿನ ಪ್ರತಿರೋಧವು ಸಿಗಬಹುದೆಂದು ಭರವಸೆಪಟ್ಟುಕೊಳ್ಳಲಾಗಿದೆ. ರಂಗೂನಿಗೂ ಈಗ ಆಕ್ರಮಣಗಳು ಆಗುತ್ತಲೇ ಇವೆ.

ಆಸ್ಟ್ರೇಲಿಯವು ಈಗ ಸಂಪೂರ್ಣ ಧೈರ್ಯದಿಂದ ಜಪಾನಿನೆದುರು ಯುದ್ಧ ಮಾಡಲು ನಿಶ್ಚಯಿಸಿ ಯುದ್ಧ ಸಾರಿರುವುದು. ಆಸ್ಟ್ರೇಲಿಯದ ಹಂಗಾಮಿ ಪ್ರಧಾನ ಮಂತ್ರಿ ಫೋರ್ಡೆಯವರು ತಾವು ಏಕಾಂಗಿಯಾದರೂ ಯುದ್ಧ ಮಾಡದೆ ಹಿಂದುಳಿಯಲಾರೆವು ಎಂದು ಹೇಳಿದ್ದಾರೆ. ಆಸ್ಟ್ರೇಲಿಯದ ಈ ನಿರ್ಧಾರವನ್ನು ಕೊಂಡಾಡಿ ಮಾರ್ಷಲ್ ಚಿಯಾಂಗ್ ಕೈಶೇಕರು ಒಂದು ಸಂದೇಶ ಕಳುಹಿಸಿರುವರು. ಫೋರ್ಡೆಯವರು ಹೀಗೆ ಯುದ್ಧ ಸಾರುವ ಸಂದರ್ಭದಲ್ಲಿ ತಮಗೆ ಮಿತ್ರರ ಹೆಚ್ಚಿನ ಸಹಾಯ ಸಿಗಬೇಕಾಗಿದೆಯೆಂದು ಬಿನ್ನಹ ಮಾಡಿಕೊಂಡಿರುವರು. ಡಚ್ ಬೋರ್ನಿಯೋದ ಮೇಲೆ ಆಕ್ರಮಣ ಮಾಡಿದರೆಂದು ಈಗ ಸುದ್ದಿ ಬಂದಿರುವುದು. ಕೆಂಡಾರಿ ಮತ್ತು ಬಲಿಕ್‌ಪೇಪನ್ ಸ್ಥಳಗಳಲ್ಲಿ ಜಪಾನರ ಸೈನ್ಯವು ಈಗಲೇ ಬಂದಿಳಿದಿರುವುದಂತೆ.

ಚೈನೀಯರು ಈಗ ಮುಂದೊತ್ತುತ್ತಾ ಇದ್ದಾರೆ. ಮೂರು ಕ್ಷೇತ್ರಗಳಲ್ಲಿ ಅವರು ಹೋರಾಡುತ್ತಿರುವರು. ಯುನಾನ್‌ನಲ್ಲಿ ಚೈನದ ಸೈನ್ಯ ಮುಂದೊತ್ತಿ ಹೋಗಿದೆ. ಮಿತ್ರರಿಂದ ಹೆಚ್ಚಿನ ಸಹಾಯ ಸಿಗಬೇಕಾಗಿದೆಯೆಂದು ಚೈನದ ಪ್ರಮುಖ ಪತ್ರಿಕೆಯೊಂದು ಹೇಳುತ್ತದೆ. ಹೊನೊಯಿಯಲ್ಲಿರುವ ಜಪಾನ್ ನೌಕಾದಳದ ಮೇಲೆ ಚೈನೀಯರು ಧಾಳಿಮಾಡಿದರು.

ಮುಂದಿನ ವೈಸರಾಯ್ ಹೆಲಿಫಾಕ್ಸರು

ಅಮೆರಿಕದಲ್ಲಿ ಈಗ ಬ್ರಿಟಿಷ್ ರಾಯಭಾರಿಯಾಗಿರುವ ಲಾರ್ಡ್ ಹೆಲಿಫಾಕ್ಸರು ಪುನಃ ಹಿಂದುಸ್ಥಾನದ ವೈಸರಾಯರಾಗುವರೆಂದು ಸುದ್ದಿಯಿದೆ. ಸರ್ ಆರ್ಚಿಬಾಲ್ಡ್ ಸಿಂಕ್ಲೇರರು ಅಮೆರಿಕದಲ್ಲಿ ಬ್ರಿಟಿಷ್ ರಾಯಭಾರಿಯಾಗುವರಂತೆ.

Ten Lacs In Ten Minutes

The lists of our 5% Cumulative Preference Shares which opened on 19th January closed the same day before noon.

The subscriptions received within those few minutes totalled over Rupees Fourteen Lacs.

We thank our customers, friends and depositors whose unstinted support enabled us to close the lists in so short a time.

We thank them for this proof of their sympathy and confidence and assure them that we will try to deserve this confidence in every way possible.

Canara Bank Limited.

Estd. 1906.

ಸ್ವದೇಶಾಭಿಮಾನಿ

ತಾರೀಕು 30—1—1942

ಸ್ವಾತಂತ್ರ್ಯ ದಿನ

ಜನವರಿ ಇಪ್ಪತ್ತಾರು ಸ್ವಾತಂತ್ರ್ಯ ದಿನ. ಭಾರತದ ಸ್ವಾತಂತ್ರ್ಯಕ್ಕಾಗಿ ಭಾರತೀಯರು ಆತ್ಮಾರ್ಪಣೆ ಮಾಡಲು ಧೀರ ನಿರ್ಧಾರ ಮಾಡುವ ಪವಿತ್ರ ದಿನ. ದೇಶದ ಉದ್ದಗಲದಲ್ಲಿ ಸ್ವಾತಂತ್ರ್ಯ ದಿನಾಚರಣೆಯು ಎಂದಿನಂತೆ ಈ ವರ್ಷವೂ ಭಾಷಳ ವೈಭವದಿಂದ ಆಚರಿಸಲ್ಪಟ್ಟಿತು.

ಅಮೆರಿಕಕ್ಕೆ ಜೂಲಾಯಿ ನಾಲ್ಕು, ರಶ್ಯಕ್ಕೆ ನವಂಬರ ಆರು ಎಂತು ಚಿರಸ್ಮರಣೀಯ ದಿನಗಳೋ ಅಂತೆಯೆ ಹಿಂದುಸ್ಥಾನಕ್ಕೆ ಜನವರಿ ಇಪ್ಪತ್ತಾರು. ಹನ್ನೆರಡು ವರ್ಷಗಳ ಹಿಂದೆ ಈ ದಿನದ ಪ್ರಥಮ ಆಚರಣೆ ಮಾಡಿ ಭಾರತೀಯರು ರಾಜಕೀಯ ಸ್ವಾತಂತ್ರ್ಯ ಪ್ರತಿಜ್ಞೆ ಮಾಡಿದ್ದರು. ಅದಕ್ಕಾಗಬೇಕಾದ ಬಲಿದಾನಮಾಡಲು ಪಣತೊಟ್ಟಿದ್ದರು!

ಜಗತ್ತು ಇಂದು ಹಿಂಸೆ ಅಕ್ರಮ ಅಶಾಂತಿಗಳಿಂದ ಕುದಿಯುತ್ತಿದೆ ಈ ಕಾಲದಲ್ಲಿ ಭಾರತವೂ ಅಂತಹ ಅಸಾಮಾನ್ಯ ಪರಿಸ್ಥಿತಿಯನ್ನು ಎದುರಿಸುತ್ತಾ ಇದೆ ಈ ವರ್ಷದ ಸ್ವಾತಂತ್ರ್ಯ ಪ್ರತಿಜ್ಞೆಯನ್ನು ಭಾರತೀಯರು ಈ ಅಸಾಮಾನ್ಯ ಪರಿಸ್ಥಿತಿಯಲ್ಲಿ ಮಾಡುತ್ತಿರುವುದರಿಂದ ಇದಕ್ಕೆ ಪ್ರತ್ಯೇಕವಾದ ವಿಶಿಷ್ಟವಾದ ಪ್ರಾಧಾನ್ಯತೆ ಕೊಡಬೇಕಾಗಿದೆ

ಲೋಕದಲ್ಲಿ ಸರ್ವಾಧಿಕಾರವು ಹೆಡೆಯೆತ್ತಿ ನರ್ತನಮಾಡುತ್ತಿದೆ ಮಿಲಿಯಾಂತರ ಜೀವಿಗಳು ಈ ಆಹುತಿಗೆ ಬಲಿಯಾಗಿದ್ದಾರೆ ರಕ್ತವು ಕಾಲಿವೆಗಟ್ಟಿ ಹರಿದಿದೆ ಬಾಂಬುಗಳು ಅನ್ಯಾಯವನ್ನು, ಅಶಾಂತಿಯನ್ನು, ಹತ್ಯಾಕಾಂಡವನ್ನು ನಿರರ್ಗಳವಾಗಿ ಮಾಡುತ್ತಿವೆ ಈ ಭಯಾನಕ ದೃಶ್ಯಕ್ಕೆ ಕೊನೆಯಿಲ್ಲದಾಗಿದೆ ಯುದ್ಧವು ಮೂರನೆಯ ವರ್ಷಕ್ಕೆ ಬಂದು ಮುಟ್ಟಿದೆ. ಜಯವು ದೊರೆವ ತನಕ ಪ್ರಜಾಪ್ರಭುತ್ವ ರಾಷ್ಟ್ರಗಳು ಹೋರಾಡುವ ದೃಢ ನಿರ್ಧಾರ ಮಾಡಿವೆ ಅವುಗಳು ಮಾಡುವ ಯುದ್ಧವು ನ್ಯಾಯಕ್ಕೆಂದು ಸ್ವಾತಂತ್ರ್ಯದ ಸಲುವಾಗಿ ಎಂದು— ಅವುಗಳಿಗೆ ಚೆನ್ನಾಗಿ ತಿಳಿದಿರುವುದರಿಂದ ಈ ದೃಢ ನಿರ್ಧಾರ ಮಾಡಿ ಹೋರಾಡಲು ಪಣತೊಟ್ಟಿವೆ!

ಭಾರತವಾದರೂ ಹಲವು ವರ್ಷಗಳಿಂದ ದಾಸ್ಯದ ನೊಗದ ಭಾರವನ್ನು ತಪ್ಪಿಸಿ ಸ್ವತಂತ್ರವಾಗಲು ಹೋರಾಟ ನಡೆಸಿದೆ. ಸ್ವಾತಂತ್ರ್ಯವು ದೊರೆವ ತನಕ ಅಹಿಂಸಾಮಯ ಹೋರಾಟವನ್ನು ನಡೆಸುವ ದೃಢ ನಿರ್ಧಾರವನ್ನು ಭಾರತೀಯರೂ ಮಾಡಿರುತ್ತಾರೆ. ಸ್ವಾತಂತ್ರ್ಯ ದಿನದಂದು ಭಾರತೀಯರು ತಮ್ಮ ಅದೇ ನಿರ್ಧಾರವನ್ನು ಪುನಃ ಮತ್ತೊಮ್ಮೆ ಏಕಕಂಠದಿಂದ ಸಾರಿ ಹೇಳುತ್ತಾರೆ.

ನಮ್ಮ ಮುಂದಿನ ದಿನಗಳು ಅನಿಶ್ಚಿತತೆಯಿಂದ ತುಂಬಿವೆ. ತಲೆ ಮೇಲೆ ಯುದ್ಧದ ಕಾರ್ಮೋಡಗಳು ಕೂಡಿ ಕವಿದಿರುತ್ತಿವೆ. ಆದರೆ ಇದರಿಂದೆಲ್ಲಾ ನಿರಾಶೆಗೊಳ್ಳುವ ಸಮಯವಿದಲ್ಲ. ಇಂದಿನೀ ವಿಷಮ ದುರಂತ ಪರಿಸ್ಥಿತಿಯಲ್ಲಾದರೂ ನಾವು ಭಾರತೀಯರು ಪೂರ್ಣ ಸ್ವರಾಜ್ಯದ ಹಾದಿಯಲ್ಲಿ ಸ್ವಾತಂತ್ರ್ಯ ಪ್ರತಿಜ್ಞೆ ಮಾಡಿ ದೃಢ ನಿರ್ಧಾರದಿಂದ ಮುಂದಡಿಯಿಟ್ಟು ಸಾಗಬೇಕಾಗಿದೆ.

ಹಿಂದೂ ವಿಶ್ವವಿದ್ಯಾಲಯ

ಭಾರತದ ಪವಿತ್ರ ಕ್ಷೇತ್ರವಾದ ಕಾಶಿಯಲ್ಲಿ, ಹಿಂದೂ ವಿಶ್ವವಿದ್ಯಾಲಯವು ಇಪ್ಪತ್ತೈದು ವರ್ಷಗಳ ಹಿಂದೆ ಸ್ಥಾಪಿತವಾಗಿ ಈಗ ಊರ್ಜಿತೋನ್ನತ ಸ್ಥಿತಿಗೇರಿ ನಿಂತಿದೆಯೆಂಬುದು ಅಖಿಲ ಭಾರತಕ್ಕೆ ಕೀರ್ತಿಯನ್ನು ತರುವಂತಹ ವಿಷಯ ಪಂಡಿತ ಮದನಮೋಹನ ಮಾಲವೀಯರಂತಹ ಸಾಹಸೀ ದೇಶಭಕ್ತರ ಪ್ರಯತ್ನದಿಂದ ತಲೆಯೆತ್ತಿದ ಈ ವಿದ್ಯಾ ಸಂಸ್ಥೆಯು ಕಳೆದ ವಾರ ತನ್ನ ರಜತೋತ್ಸವವನ್ನು ಆಚರಿಸಿತು ಎಂಬುದು ಸಂತೋಷದಾಯಕವಾದ ವಾರ್ತೆ ಮಹಾತ್ಮಾ ಗಾಂಧಿಜಿಯವರು ಈ ರಜತೋತ್ಸವದ ಸಂದರ್ಭದಲ್ಲಿ ಅಲ್ಲಿಗೆ ಹೋಗಿ ಭಾಷಣ ಮಾಡಿ ವಿಶ್ವವಿದ್ಯಾಲಯವನ್ನು ಹರಸಿದರೆಂಬುದು ಎಲ್ಲದಕ್ಕಿಂತಲೂ ಹೆಚ್ಚಿನ ಅಭಿಮಾನದ ಸಂಗತಿ.

'ಹಿಂದೂವಿಶ್ವವಿದ್ಯಾಲಯದ ಮೂಲಕ ಶ್ರೀ ವಿಶ್ವನಾಥನು ನನಗೆ ಪ್ರಸನ್ನನಾಗಬೇಕೆಂದು ನಾನು ಪ್ರಾರ್ಥಿಸಿಕೊಂಡೆನು. ಪ್ರಭುವು ದಯಾಮಯನು ಅವನ ಕೃಪೆಯಿಂದ ಕಾಶಿಯಲ್ಲಿ ಈ ವಿಶ್ವವಿದ್ಯಾಲಯವು ಸ್ಥಾಪಿತವಾಯಿತು. ಒಬ್ಬ ಮಹಾತ್ಮರು ಈ ಕೆಲಸವನ್ನು ಕೈಕೊಳ್ಳುವಾಗ ಮೊದಲು ನನಗೆ ನೂರೊಂದು ರೂಪಾಯಿಗಳನ್ನು ಕೊಟ್ಟು ಕೋಟಿಯೊಂದು ರೂಪಾಯಿಯಾಗಿ ಭವಿಸಲಿ ಎಂದು ಆಶೀರ್ವದಿಸಿದರು ಅದು ಹಾಗೆಯೇ ಆಯಿತು' ಹೀಗೆಂದು ಪಂಡಿತ ಮದನಮೋಹನ ಮಾಲವೀಯರು ಕಾಶೀ ವಿಶ್ವವಿದ್ಯಾಲಯದ ಕುರಿತು ಮಾತನಾಡುತ್ತಾ ಹೇಳಿದರು

ಧನಿಕರಿಂದ ಹಿಡಿದು ಬಡವರ ವರೆಗೆ, ರಾಜರಿಂದ ಹಿಡಿದು ಬೇಸಾಯಗಾರರ ವರೆಗೆ ಹೋಗಿ ಅಂದು ಪಂಡಿತ ಮಾಲವೀಯರು ಹಿಂದೂ ವಿಶ್ವವಿದ್ಯಾಲಯದ ಸಲುವಾಗಿ ಭಿಕ್ಷೆಯೆತ್ತಬೇಕಾಗಿತ್ತು! ಅವರು ಸಂಗ್ರಹಿಸಿದ ನಿಧಿ ಕೋಟ್ಯಂತರದ ಮೇರೆ ಮೀರಿತು. ಅದರ ಪರಿಣಾಮವೇ ಇಂದಿನ ಭವ್ಯ ಹಿಂದೂವಿಶ್ವವಿದ್ಯಾಲಯ ಇಂದಿನ ಇದರ ವೈಸ್ ಚಾನ್ಸಲರು ತತ್ವಜ್ಞಾನಿ ಶ್ರೀ ರಾಧಾಕೃಷ್ಣನ್ ಆಗಿದ್ದಾರೆ. ಮಾಲವೀಯರ ಭಿಕ್ಷಾಪಾತ್ರವು ರಾಧಾಕೃಷ್ಣನರ ಕೈಗೆ ಬಂದಿದೆ. ವಿಶ್ವವಿದ್ಯಾಲಯದಂತಹ ಉನ್ನತ ಸಂಸ್ಥೆಯ ಸಲುವಾಗಿ ಮಹಾತ್ಮರೋ, ಮಾಲವೀಯರೋ, ರಾಧಾಕೃಷ್ಣನರೋ ಕೈನೀಡಿ ನಿಂತರೆ— ಕೊಡಲು ಹಿಂದೆ ಮುಂದೆ ನೋಡುವ ಭಾರತೀಯನು ಯಾರೂ ಇರಲಾರನು. ಕಾಶೀ ವಿಶ್ವವಿದ್ಯಾಲಯವು ಭಾರತದ ಸಂಸ್ಕೃತಿಯ ಕೇಂದ್ರವಾಗಿ ಪರಿಣಮಿಸಿ ಇಡೀ ಭರತಖಂಡಕ್ಕೆ ಆ ಮೂಲಕ ಇಡಿಯ ವಿಶ್ವಕ್ಕೆ ಜ್ಞಾನದ ಬೆಳಕನ್ನು ಪಸರಿಸಲಿ ಎಂಬುದು ನಮ್ಮ ಆಶೋತ್ತರವಾಗಿದೆ.

ಸರ್ ಪಣಂಬೂರು ರಾಘವೇಂದ್ರರಾಯರು

ಸರ್ ಪಣಂಬೂರು ರಾಘವೇಂದ್ರ ರಾಯರು ಅಕಾಲದಲ್ಲಿ ನಿಧನಹೊಂದಿದರೆಂಬ ವಾರ್ತೆಯು ಅಖಿಲ ಕನ್ನಡಿಗರನ್ನು ವಿಶೇಷವಾಗಿ ದಕ್ಷಿಣ ಕನ್ನಡಿಗರನ್ನು ಚಿಂತಾಸಾಗರದಲ್ಲಿ ಅದ್ದಿತು ಕನ್ನಡ ನಾಡಿನ ಜನರಲ್ಲಿ ಇಷ್ಟೊಂದು ಉಚ್ಚ ಅಧಿಕಾರಕ್ಕೆ ಏರಿದವರು ಕಡಿಮೆ ಸರ್ ರಾಯರನ್ನು ಕಳಕೊಂಡು ಕನ್ನಡ ಲೋಕವು ಇಂದು ಬಹಳ ಬಡವಾಗಿದೆ.

ದಿವಂಗತರು ಸರಕಾರದ ಅತ್ಯುಚ್ಚ ಅಧಿಕಾರಕ್ಕೇರಿದ್ದರೂ ಬಹಳ ದಯಾಳುಗಳೂ ಉದಾರಿಗಳೂ ಆಗಿದ್ದರೆಂಬುದು ಅವರ ಕೀರ್ತಿಯನ್ನು ಹತ್ತುಬಾಯಲ್ಲಿ ಕೊಂಡಾಡುವಂತೆ ಮಾಡಿದೆ ಅವರನ್ನು ಸಂದರ್ಶಿಸಿದ ಯಾವನೇ ಆದರೂ ಅವರ ವ್ಯಕ್ತಿತ್ವ, ಆದರಭಾವ, ಗೌರವ ಗುಣಗಳಿಗೆ ಮೆಚ್ಚದೆ ಮರಳುವಂತಿರಲಿಲ್ಲ ಅಂತಹ ಪ್ರಸನ್ನ ಹೃದಯದ ಕನ್ನಡಿಗರೊಬ್ಬರು ಅಕಾಲದಲ್ಲಿ ಕಣ್ಮರೆಯಾದುದು ನಮ್ಮ ನಾಡಿನ ದೌರ್ಭಾಗ್ಯ!

ಸರ್ ರಾಯರು ವಿಶೇಷ ಬುದ್ಧಿಶಾಲಿಗಳಾಗಿದ್ದರೆಂಬುದಕ್ಕೆ ಅವರು ಅಲಂಕರಿಸಿದ ಅಧಿಕಾರಸ್ಥಾನಗಳೇ ಸಾಕ್ಷಿಗಳಾಗಿವೆ ಅವರು ಆಯಾಯ ಅಧಿಕಾರಗಳಲ್ಲಿದ್ದು ಮಾಡಿದ ಹಲವು ಮುಖವಾದ ಜನಸೇವೆಯೂ ಸಾಕ್ಷಿಯಾಗಿದೆ ದಿವಂಗತರ ಆತ್ಮಕ್ಕೆ ಚಿರಶಾಂತಿಯನ್ನೂ ಅವರ ನಿಧನದಿಂದ ಕಂಗೆಡುತ್ತಿರುವ ಅವರ ಕುಟುಂಬದವರಿಗೆ ಬಂದೊದಗಿದ ಅಪಾರ ದುಃಖವನ್ನು ಸಹಿಸುವ ಶಕ್ತಿಯನ್ನೂ ಪರಮಾತ್ಮನು ದಯಪಾಲಿಸಲೆಂದು ನಾವು ಪ್ರಾರ್ಥಿಸುತ್ತೇವೆ.

THE VIJAYA BANK, LIMITED.

Head Office MANGALORE.

BRANCHES:

KADRI-MANGALORE, HAMPANKATTA-MANGALORE, UDIPI, COONDAPUR, KARKAL, KAUP, & BRAHMAVAR.

SEASON DEPOSITS

are now accepted at all our Offices, at 4% per annum, for 4 or more months, maturing on 31st July, 1942.

ನೋಟಗಳು

ಮದ್ರಾಸಿನಲ್ಲಿ ಕಳೆದವಾರ ರಾಜಾಜಿಯವರು 'ದೇಶರಕ್ಷಣೆ ಮತ್ತು ರಾಜಕೀಯ ಬಿಕ್ಕಟ್ಟ'ನ ವಿಷಯವಾಗಿ ಒಂದು ಸ್ವಾರಸ್ಯವಾದ ಭಾಷಣವಿತ್ತರು. ವಿದ್ಯಾರ್ಥಿಗಳನ್ನುದ್ದೇಶಿಸಿ ಆ ಭಾಷಣ ಮಾಡಿದ್ದರಿಂದ ತಾನು 'ಶಿಸ್ತು'ಮೀರಿ ಮಾತನಾಡುವುದಿಲ್ಲವೆಂದೂ; ವಿದ್ಯಾರ್ಥಿ ಜೀವನದಲ್ಲಿ ತಾನು 'ಶಿಸ್ತುಪಾಲಿಸು'ವವನೆಂಬ ಮೆಚ್ಚುಗೆ ಪಡೆದಿದ್ದೆನೆಂದೂ ಮುಂಚಿತವಾಗಿ ಅವರು ತಿಳಿಸಿದರು

卐

'ರಾಜಕೀಯ ಬಿಕ್ಕಟ್ಟು' ಎಂಬುದಕ್ಕೆ 'ಪೊಲಿಟಿಕಲ್ ಡೆಡ್‌ಲಾಕ್' ಎಂಬುದು ಆಂಗ್ಲ ಭಾಷಾಂತರ. 'ಡೆಡ್‌ಲಾಕ್' ಎಂದರೆ 'ಸತ್ತ ಬೀಗ' ಎಂದು ಸಾಮಾನ್ಯವಾದ ಅರ್ಥ ಭಾರತದಲ್ಲಿ 'ಡೆಡ್‌ಲಾಕ್' ಇರುತ್ತಾ ದೇಶರಕ್ಷಣೆ ಮಾಡಲು ಬಯಸುವ ಬ್ರಿಟಿಷ್ ಪ್ರಭುತ್ವದವರ ಕೆಲಸವು ಮನೆಗೆ ಬೀಗ ಹಾಕಿ ಅದನ್ನು ರಕ್ಷಿಸಿಕೊಳ್ಳಲಿಚ್ಛಿಸುವವನಂತೆಯೆಂಬುದು ರಾಜಾಜಿಯವರ ಹೋಲಿಕೆ

卐

ಹೋಲಿಸಿ ಮಾತನಾಡುವುದರಲ್ಲಿ ಹಾಗೂ ಕತೆ ಹೇಳಿ ಮೆಚ್ಚಿಸುವುದರಲ್ಲಿ ರಾಜಾಜಿಯನ್ನು ಮೀರಿದ ಬೇರೆ ಮಾತುಗಾರರೇ ಇಲ್ಲವೆನ್ನಬಹುದು

卐

'ಮನೆಗೆ ಬೀಗ ಹಾಕಿಕೊಂಡರೆ, ಕೆಲವೊಮ್ಮೆ ಮನೆಯೊಳಗೆ ಯಾರೂ ಪ್ರವೇಶಿಸದಂತೆ ಮಾಡಿದರೂ ಮಾಡಬಹುದು, ಆದರೆ ಅದು ಎಲ್ಲಾ ಸಂದರ್ಭಗಳಲ್ಲಿಯೂ ಸರಿಯಾಗಲಾರದು. ಮನೆಯ ಮಾಲಿಕನು ಮಾತ್ರ ಹಾಕಿದ ಬೀಗವನ್ನು 'ಕೀ'ಯಿಂದ ತೆಗೆಯುತ್ತಾನೆ ಆದರೆ ಕಳ್ಳರು 'ಕೀ'ಯಿಲ್ಲದೆಯೂ ಬೀಗ ತೆಗೆಯಬಲ್ಲರು' ಎಂದರು ರಾಜಾಜಿ.

卐

ಹೀಗೆ ಹೇಳುತ್ತಾ ತನ್ನ ಈ ಮಾತಿನ ಅರ್ಥವನ್ನು ಸರಿಯಾಗಿ ತಿಳಿದುಕೊಳ್ಳಬೇಕೆಂದು ವಿದ್ಯಾರ್ಥಿಗಳಿಗೆ ಉಪದೇಶಿಸಿದರು ಆಚಾರ್ಯರು.

卐

'ಮನೆಯ ಹತ್ತಿರ ಇರುವವರೆಲ್ಲರೂ ತನ್ನ ಮಿತ್ರರು, ಬಳಗದವರು ಬೇಕಾದವರೇ ಆಗಿದ್ದು ತನ್ನ ಸೇವಕನೊಬ್ಬನು ಮಾತ್ರ ಅಪಾಯ ಕಾರಣನಾಗಿದ್ದರೆ ಮನೆಗೆ ಬೀಗ ಹಾಕಿದ್ದರೂ ಗಾಬರಿಯಿಲ್ಲ ಆದರೆ ದರೋಡೆಕೋರರು, ಕಳ್ಳರು ಹಾಗೂ ತಮಗೆ ಬೇಕಾದ್ದು ಸಿಗುವ ವರೆಗೆ ಮನೆಯ ವಸ್ತು ಒಡವೆಗಳನ್ನು ಏನು ಬೇಕಾದರೂ ಮಾಡಲು ಹಿಂಜರಿಯದ ಜನರೂ ಇರುವಲ್ಲಿ ಈ 'ಬೀಗ ಹಾಕು'ವ ಪದ್ಧತಿಯು ಅಪಾಯಕರವಾದುದು' ಎಂದು ಎಚ್ಚರಿಸಿದರು ರಾಜಾಜಿ.

卐

ಚರ್ಚಿಲ್ ಹಾಗೂ ಅಮೆರಿಯವರು ಭಾರತದ ರಾಜಕೀಯ ವಿಚಾರದಲ್ಲಿ 'ಕಿವುಡುತನ' ತೋರಿಸಬಾರದೆಂದು ಅನೇಕ ಮಂದಿ ಆಂಗ್ಲೇಯರೇ ಈಗ ಹೇಳತೊಡಗಿದ್ದಾರೆ.

卐

'ಸತ್ತ ಬೀಗ'ವನ್ನು ಹಾಕಿಕೊಂಡು 'ಕಿವುಡ'ರನ್ನು ಮನೆಯ ಕಾವಲಾಗಿರಿಸುವುದು ಇನ್ನಷ್ಟು ಅಪಾಯಕರವಾದುದು!

'ಹಸಿದವರಿಗೆ ಅನ್ನ ಹಾಕು; ನಗ್ನರಿಗೆ ಬಟ್ಟೆಯುಡಿಸು'

ಕಾಂಗ್ರೆಸಿನವರ ಇಂದಿನ ಕರ್ತವ್ಯವೆಂದರೆ ಹಸಿದವರಿಗೆ ಅನ್ನವನ್ನೀಯುವುದು, ನಗ್ನರಾದವರಿಗೆ ಬಟ್ಟೆಯುಡಿಸುವುದು ಎಂಬುದಾಗಿ ಗಾಂಧಿಜಿ ಹರಿಜನದಲ್ಲಿ ಒಂದು ದೀರ್ಘ ಲೇಖನ ಬರೆದು ತಿಳಿಸಿರುವರು. ಇದರಲ್ಲಿ ರಚನಾತ್ಮಕ ಕಾರ್ಯಕ್ರಮಗಳನ್ನು ಎಲ್ಲರೂ ಮಾಡಬೇಕೆಂದು ವಿನಂತಿಸಿದ್ದಾರೆ. ಅವರ ಲೇಖನದ ಸಾರಾಂಶ ಇಂತಿದೆ.

'ನಮ್ಮ ನಾಡಿನಲ್ಲಿ ಅನ್ನ ಮತ್ತು ಬಟ್ಟೆಗಳ ಅಭಾವ ಹೆಚ್ಚಾಗಿದೆ. ಯುದ್ಧವು ಬೆಳೆದಂತೆ ಆ ಅಭಾವಗಳೂ ಹೆಚ್ಚಿವೆ. ಹೊರಗಣಿಂದ ನಮ್ಮ ದೇಶಕ್ಕೆ ಆಹಾರವಾಗಲಿ ಬಟ್ಟೆಯಾಗಲಿ ಬರುವುದಿಲ್ಲ. ಬಡವರು ಈ ಕೊರತೆಯಲ್ಲಿ ಕಷ್ಟಪಡುವಷ್ಟು ದೊಡ್ಡವರು ಕಷ್ಟಪಡಲಿಕ್ಕಿಲ್ಲ; ದೊಡ್ಡವರು ಬಡವರಂತಾಗಿ ಬದುಕುತ್ತಾರೆ. ಯಾರು ಬಡವರಿಗಾಗಿ ಸಂಕಟಪಡುತ್ತಾರೋ ಅಂಥವರು ಅವರ ಕಷ್ಟಸುಖಗಳಲ್ಲಿ ಸೇರಬೇಕು. ತಮ್ಮ ಸುಖಗಳನ್ನು ಕಡಿಮೆಮಾಡಬೇಕು. ದೊಡ್ಡವರು ಅಧಿಕ ಆಹಾರ ತಿಂದು ಹಾಳುಮಾಡುತ್ತಿದ್ದಾರೆ. ಮನೆಯಲ್ಲಿ ಅನಾವಶ್ಯಕ ಅಧಿಕ ಆಹಾರ ತಕ್ಕೊಳ್ಳಬಾರದು. ಸಿಹಿ ಭಕ್ಷ್ಯಗಳನ್ನು ಸಂಪೂರ್ಣ ಬಿಡಬೇಕು. ಅದರ ಬದಲು ಬೇಕಾದರೆ ಸ್ವಲ್ಪ ಸಕ್ಕರೆ ತಕ್ಕೊಳ್ಳಬಹುದು, ಹಣ್ಣು ತಿನ್ನಬಹುದು; ಆದರೆ ಶರೀರಕ್ಕೆ ಸ್ವಲ್ಪವೇ ಸಾಕು. ಶರೀರಕ್ಕೆ ಅವಶ್ಯವಿಲ್ಲದಷ್ಟು ಇಂದು ಕೆಲವರು ಉಪಯೋಗಿಸುತ್ತಾರೆ. ಅದನ್ನು ಕಡಿಮೆಮಾಡಬೇಕು. ಧಾನ್ಯವ್ಯಾಪಾರಿಗಳಾದರೂ ಅಧಿಕ ಲಾಭದ ಆಸೆಗೆ ಹೋಗದೆ ಆದಷ್ಟು ಕಡಿಮೆ ಲಾಭದಿಂದ ಆಹಾರವಸ್ತುಗಳನ್ನು ಮಾರಾಟ ಮಾಡಬೇಕು. ವ್ಯಾಪಾರಿಗಳು ನೆರೆಕರೆಯವರ ಸಂಕಷ್ಟವನ್ನು ವಿಚಾರಿಸಬೇಕು; ಕಾಂಗ್ರೆಸಿನವರು ಈ ಕೆಲಸದಲ್ಲಿ ದುಡಿಯಬೇಕು. ಹಳ್ಳಿಯ ಜನರು ಹೊಸ ಹೊಸ ಕೃಷಿ ಮಾಡುವಂತೆ ಅವರಿಗೆ ತಿಳಿಸಬೇಕು. ಸುಲಭದಲ್ಲಿ ಬೆಳೆಸುವಂತಹ ಹಲವು ಆಹಾರವಸ್ತುಗಳಿವೆ. ಅವುಗಳನ್ನು ಹೆಚ್ಚುಹೆಚ್ಚಾಗಿ ಬೆಳೆಸಬೇಕು. ನಮ್ಮಲ್ಲಿ ಹಣ ಬಹಳ ಕಡಿಮೆ. ಧಾನ್ಯ ಸಿಗಬಹುದು. ಉದ್ಯೋಗವಿಲ್ಲದಿರುವುದರಿಂದ ಹಣವಿಲ್ಲ. ಇದಕ್ಕಾಗಿ ನೂಲುವ ಕಸುಬು ಕೈಕೊಳ್ಳಬೇಕು. ಆಲಸ್ಯಗಾರರಿಗೆ ಮಾತ್ರ ಕೆಲಸವಿಲ್ಲ. ಅವರು ಉಪವಾಸ ಬೀಳಬೇಕಾಗುವುದು. ಬಟ್ಟೆಯ ಸಮಸ್ಯೆ ಊಟದ ಸಮಸ್ಯೆಗಿಂತ ಸುಲಭ. ಮಿಲ್ಲನ್ನು ನಾವು ನಂಬಿರಬಾರದು. ಹಿಂದೂದೇಶದಲ್ಲಿ ಧಾರಾಳ ಹತ್ತಿ ಹುಟ್ಟುತ್ತದೆ. ಈಗ ಹೊರದೇಶದ ಸಂತೆಯಿಲ್ಲದಿರುವುದರಿಂದ ಹತ್ತಿ ಬೆಳೆಸುವವರಿಗೆ ಗಿರಾಕಿ ಬೇಕಾಗಿದೆ. ದೇಶವು ನೂಲುವುದನ್ನು ಕೈಗೊಂಡರೆ ಒಳ್ಳೆಯದಾಗುತ್ತದೆ. ಇದರ ಸಂಬಳವೆಂದರೆ ನಗ್ನರಿಗೆ ಬಟ್ಟೆ ಕೊಡುವುದೇ. ಉದ್ಯೋಗ ಬೇಕಾದವರು ಲಾಭಕ್ಕಾಗಿಯೂ ನೂಲಬಹುದು. ಈಗ ಚರಕ ಸಿಗುವುದೂ ಕಷ್ಟವಾಗಿದೆ. ಆದರ ಬದಲು ಧನುಸ್ತಕ್ಲಿ ಇಲ್ಲವೇ ಸಾಮಾನ್ಯ ತಕ್ಲಿ ಉಪಯೋಗಿಸಬಹುದು. ಪ್ರತಿಯೊಬ್ಬನೂ ದಿನವೊಂದರ ಒಂದು ತಾಸು ನೂತರೆ ಸಾಕು. ಮಗ್ಗದವರಿಗೆ ಕೆಲಸ ದೊರೆಯುತ್ತದೆ. ಅವರು ಉಪವಾಸ ಬಿದ್ದು ಸಾಯುವುದೂ ಉಳಿಯುತ್ತದೆ. ಪ್ರತಿಯೊಬ್ಬ ಕಾಂಗ್ರೆಸಿನವನೂ ಈ ಕುರಿತು ಮಾಡಬೇಕಾದ ಕೆಲಸ ತುಂಬಾ ಇದೆ. ಪ್ರತಿಯೊಬ್ಬ ಕಾಂಗ್ರೆಸಿನವನೂ ಈ ವಿಚಾರದಲ್ಲಿ ಸ್ವತಃ ತಾನು ಮನೆಯಲ್ಲಿ, ನೆರೆಕರೆಯವರಲ್ಲಿ ಇದನ್ನು ಪ್ರಾರಂಭಿಸಲಿ. ಹಾಗೆಯೇ ದೇಶ ಸರ್ವತ್ರ ಹರಡಲಿ. ಈ ಕಾರ್ಯವನ್ನು ಕೈಗೊಂಡ ಸಂಸ್ಥೆ ಜನರ ಪ್ರೀತಿಯನ್ನು ಸಂಪಾದಿಸಬಹುದು. ಆಶ್ರಿತ ರಾಜರೂ ತೊಂದರೆಕೊಡರು ಈ ಕೆಲಸವನ್ನು. ತಮ್ಮ ಪ್ರಜೆಗಳು ಮಾಡಬಿಡಲಾರರೆ? ಇಂತಹ ಅರಾಜಕೀಯರಹಿತ ಹಾಗೂ ಜನಸೇವೆಯ ಕಾರ್ಯದಲ್ಲಿ ಮುಸ್ಲಿಂ ಲೀಗಿನವರು ಸಹಕರಿಸುವಂತೆ ಜಿನ್ನಾರವರೂ ಆಕ್ಷೇಪಿಸಲಿಕ್ಕಿಲ್ಲವಷ್ಟೆ? ಈಗ ಅಖಿಲ ಭಾರತ ಚರಕಾ ಸಂಘದ ಮೂಲಕ ೩,೦೦೦ ಮುಸ್ಲಿಂ ಬಂಧುಗಳು ಜೀವನ ಮಾಡುತ್ತಿದ್ದಾರೆ.'

—ಕಾಂಗ್ರೆಸಿನ ರಚನಾತ್ಮಕ ಕಾರ್ಯಕ್ರಮ

ಕಾಂಗ್ರೆಸಿನವರು ಮಾಡತಕ್ಕ ಕರ್ತವ್ಯ

ಬಾರ್ಡೋಲಿ ನಿರ್ಣಯಕ್ಕೆ ಗಾಂಧಿಜಿ ಸಮ್ಮತಿಸಿದ್ದೇಕೆ?

ಯುದ್ಧ ಸಹಕಾರ ಮತ್ತು ಕಾಂಗ್ರೆಸ್ ಕೆಲಸಗಾರರು

['ಹರಿಜನ'ದಿಂದ]

ನ್ನು ಕೈಕೊಳ್ಳುವಲ್ಲಿ ಸರಕಾರದೊಡನೆ ಸಂಘರ್ಷ ಉಂಟಾಗುವುದು ಸಾಧ್ಯವಿಲ್ಲವೆಂಬುದಾಗಿ ಗಾಂಧಿಜಿ ಹೇಳಿರುವರು.

'ನಾನು ಬಾರ್ಡೋಲಿ ನಿರ್ಣಯಕ್ಕೆ ಸಮ್ಮತಿ ಕೊಟ್ಟದ್ದೇಕೆ?' ಗಾಂಧಿಜಿ ಹೇಳಿಕೆ

ಯುದ್ಧ ಸಹಕಾರ ಮತ್ತು ಕಾಂಗ್ರೆಸಿಗರು

ಕಾಂಗ್ರೆಸಿನವರು, ಸರಕಾರದ ಎ. ಆರ್. ಪಿಗೆ ಸೇರಬಹುದೋ, ಯುದ್ಧಸಾಮಾನುಗಳ ಕೇಳಿಕೆ (ಆರ್ಡರು) ಗಳನ್ನು ಪೂರೈಸಬಹುದೋ, ನಮ್ಮ ಜನರಿಗೆ ದಾರಿ ಹೇಗೆ ಒದಗಿಸಬೇಕು, ಮೊದಲಾದ ವಿಚಾರವಾಗಿ ಗಾಂಧಿಜಿ ಸಂಯುಕ್ತ ಪ್ರಾಂತದ ಕಾಂಗ್ರೆಸ್ ಕಮಿಟಿ ಸಭೆಯಲ್ಲಿ ಮಾತನಾಡುತ್ತಾ ಕೆಲವು ವಿಷಯ ಹೇಳಿದರು. ಬಾರ್ಡೋಲಿ ನಿರ್ಣಯಕ್ಕೆ ಅಸಮ್ಮತಿ ವ್ಯಕ್ತಪಡಿಸಿದ ವಾರ್ಧಾದಲ್ಲಿ ಅದಕ್ಕೆ ನಿಮ್ಮ ಒಪ್ಪಿಗೆ ಹೇಗೆ ಕೊಟ್ಟಿರಿ ಎಂದು ಪ್ರಶ್ನಿಸಿದ್ದಕ್ಕೆ ಗಾಂಧಿಜಿ ಹೀಗಂದರು: 'ನಾನು ಬಾರ್ಡೋಲಿ ನಿರ್ಣಯಕ್ಕೆ ಅಸಮ್ಮತಿ ತೋರಿಸಿದ್ದು ನಿಜ; ಆದರೆ ಬಹುಸಂಖ್ಯಾಕರು ಪೂರ್ಣ ಅಹಿಂಸೆಯನ್ನು ಪಾಲಿಸುವುದು ಸಾಧ್ಯವಿಲ್ಲವೆಂದು ಹೇಳುತ್ತಿರುವಾಗ ನಾನು ತನ್ನೊಬ್ಬನ ಅಭಿಪ್ರಾಯವನ್ನೇ ಎತ್ತಿ ಹಿಡಿದು ವಾದಿಸುವುದು ಸಮಂಜಸವೆನಿಸಲಿಲ್ಲ. ನಾನು ಹಟ ತೊಟ್ಟಿದ್ದರೆ ಬಹುಸಂಖ್ಯಾಕರಾದರೂ ತಮ್ಮ ಮನಸ್ಸಿನ ವಿರುದ್ಧ ನನಗೆ ಮತ ಕೊಡುತ್ತಿದ್ದರೆಂಬ ವಿಶ್ವಾಸ ನನಗಿತ್ತು. ಆದರೆ ಅಂತಹ ನಿರ್ಣಯವು ನಿಜಪರಿಸ್ಥಿತಿಯನ್ನು ಮುಚ್ಚಿಡುತ್ತಿತ್ತು. ಆದರಿಂದ ಬಹಳ ಘಾತವಾಗುತ್ತಿತ್ತು. ಅದಕ್ಕಾಗಿ ನಾನು ಒಮ್ಮೆ ಬಾರ್ಡೋಲಿ ನಿರ್ಣಯಕ್ಕೆ ಅಸಮ್ಮತಿ ತೋರಿಸಿದರೂ ಮತ್ತೆ ಒಪ್ಪಿಗೆಯಿತ್ತೆನು.

ಅಖಿಲ ಭಾರತ ಚರಕಾ ಸಂಘದವರು ಸೈನ್ಯದ ಉಪಯೋಗಕ್ಕಾಗಿ ಕೈಯಿಂದ ನೇಯ್ದ ಕಂಬಳಿಗಳನ್ನು ಒದಗಿಸಿಕೊಡಬಹುದೆಂದು ಗಾಂಧಿಜಿ ಹಿಂದೆ ಪ್ರಕಟಿಸಿದ ವಿಚಾರದಲ್ಲಿ ಕಾಂಗ್ರೆಸಿನವರು ಯುದ್ಧಯತ್ನದಲ್ಲಿ ಎಷ್ಟರ ಮಟ್ಟಿಗೆ ಸಹಕರಿಸಬಹುದೆಂದು ಪ್ರಶ್ನೆ ಕೇಳಿದ್ದಕ್ಕೆ ಗಾಂಧಿಜಿ ಹೀಗಂದರು: 'ನಾವು ಒದಗಿಸುವ ಸಾಮಾನುಗಳ ಉಪಯೋಗವು ಹೇಗಾಗುವುದೆಂಬುದನ್ನು ಯೋಚಿಸಬೇಕು. ಕಂಬಳಿಗಳು ಯುದ್ಧ ಮಾಡಲು ಸಹಕಾರಿಯಾಗುವುದಿಲ್ಲ. ಮಾನವ ಸಹಾನುಭೂತಿಯು ಅದರಲ್ಲಿ ಅಡಕವಾಗಿದೆ.

ಸರಕಾರದವರು ನಡೆಸುತ್ತಿರುವ ಎ. ಆರ್. ಪಿ. ಸಂಸ್ಥೆಯಲ್ಲಿ ಕಾಂಗ್ರೆಸಿನವರು ಭಾಗವಹಿಸಬಹುದೋ ಎಂದು ಕೇಳಿದ್ದಕ್ಕೆ ಗಾಂಧಿಜಿ ಇಂತೆಂದರು: 'ಎ. ಆರ್. ಪಿ. ಸಂಸ್ಥೆಗಳು ಸರಕಾರದ ಅಧೀನವಿದ್ದು ಅವುಗಳ ಮೇಲೆ ನಮ್ಮ ಅಧಿಕಾರವಿರುವುದಿಲ್ಲ. ನಾವು ಅವುಗಳಲ್ಲಿ ಒಂದುವೇಳೆ ಸೇರಿದರೂ ಕೈಗೊಂಬೆಗಳಾಗಿ ಕೆಲಸಮಾಡಬೇಕು. ಆದ್ದರಿಂದ ಕಾಂಗ್ರೆಸಿನವರು ಅಂತಹ ಸಂಸ್ಥೆಗಳಿಗೆ ಸೇರಬಾರದು. ಅಲ್ಲದೆ ಅವು ಯುದ್ಧಸಂಬಂಧ ಸಂಸ್ಥೆಗಳಾಗಿದ್ದು ಅವುಗಳ ಬಗ್ಗೆ ಕಾಂಗ್ರೆಸಿನ ಘೋಷಣೆ ಹಿಂದೆಯೇ ಪ್ರಕಟಿಸಲಾಗಿದೆ. ನಾವು ಸರಕಾರೀಸಂಸ್ಥೆಯ ಸಹಾಯವಿಲ್ಲದಿದ್ದರೂ ಪರಿಣಾಮದ ಕಡೆಗೆ ಲಕ್ಷ್ಯವಿಟ್ಟು ಸಾಧ್ಯವಿದ್ದ ಎಲ್ಲಾ ಸಹಾಯ ಮಾಡಬೇಕು. ಆದ್ದರಿಂದ ಶಾಂತಿಸೇನೆಯನ್ನು ಸಂಘಟಿಸಬೇಕೆಂದು ನಾನು ಹೇಳುತ್ತ ಬಂದಿದ್ದೇನೆ.' ಅನಂತರ ಗಾಂಧಿಜಿ ಐಕ್ಯ ವಿಚಾರ ಹೇಳಿದರು.

ಪ್ರತ್ಯೇಕ ಮತದಾರ ಸಂಘಗಳು ನಮ್ಮ ಹೃದಯಗಳನ್ನು ಪ್ರತ್ಯೇಕಿಸಿತು

ಹಿಂದುಮುಸ್ಲಿಂ ಐಕ್ಯದ ಕುರಿತು ಗಾಂಧಿಜಿ

'ಶಾಸನ ಸಭೆಗಳನ್ನು ಸೇರಿ ಹೋರಾಡಿದರೆ ಸ್ವಾತಂತ್ರ್ಯವು ಸಿಗಲಾರದು. ಹೃದಯದ ಐಕ್ಯವಿಲ್ಲದೆ ಜಾತಿ ಒಪ್ಪಂದ ಮಾಡಿಕೊಂಡರೆ ಉಪಯೋಗವಿಲ್ಲ. ಪರಸ್ಪರ ಸೇವೆ ಮತ್ತು ಸಹಕಾರದಿಂದ ಶಾಂತಿ ಸ್ಥಾಪಿತವಾಗುವುದು' ಹೀಗೆಂದು ಗಾಂಧಿಜಿ ಹಿಂದು ಮುಸ್ಲಿಂ ಐಕ್ಯದ ವಿಚಾರದಲ್ಲಿ ಹರಿಜನ ಪತ್ರಿಕೆಯಲ್ಲಿ ಬರೆದಿರುವರು. ಅವರು ಬರೆದ ಇನ್ನು ಕೆಲವು ಮಾತುಗಳು ಇಂತಿವೆ:

'ಪ್ರತ್ಯೇಕ ಮತದಾರ ಸಂಘಗಳು ನಮ್ಮ ಹೃದಯಗಳನ್ನು ಪ್ರತ್ಯೇಕ ಮಾಡಿದವು. ಪರಸ್ಪರರಲ್ಲಿ ಅವಿಶ್ವಾಸವಿರುವುದೆಂದು ಅವು ತಿಳಿಸಿದವು. ಕಾಂಗ್ರೆಸಿನವರು ಹಿಂದುಗಳಲ್ಲಿ ಹಿಂದುಗಳಿಂದು ಸೇರುವ ಇಚ್ಛೆಯಿಲ್ಲದಿದ್ದರೆ ಪ್ರತ್ಯೇಕ ಮತದಾರ ಸಂಸ್ಥೆಗಳಿರುವ ಶಾಸನಸಭೆ ಹಾಗೂ ಸ್ಥಾನಿಕ ಸಂಸ್ಥೆಗಳಿಂದ ದೂರ ನಿಲ್ಲಬೇಕು. ಹಿಂದು ಮತ್ತು ಮುಸಲ್ಮಾನರ ಹಿತಸಂಬಂಧಗಳು ಭಿನ್ನವೆಂದೂ ಪರಸ್ಪರ ವಿರುದ್ಧವೆಂದೂ ಗ್ರಹಿಸುವ ಚುನಾವಣೆಗಳಲ್ಲಿ ಭಾಗವಹಿಸತಕ್ಕದ್ದಲ್ಲ. ಸಮಸ್ತ ಹಿಂದುಗಳು 'ಕಾಂಗ್ರೆಸ್ ಮನೋವೃತ್ತಿ'ಯವರಾಗುವಂತೆ, ಪ್ರತಿಯೊಬ್ಬ ಹಿಂದುವನ್ನು ರಾಜಿಮಾಡಿ ಕೊಡಿಸಿ, ನಾನು ಯಶಸ್ವಿಯಾದರೆ, ಆ ಸ್ಥಳಗಳಿಗೆ ಮುಸಲ್ಮಾನರನ್ನು ಕಳುಹಿಸುತ್ತಿದ್ದೆ. ಆ ನಂತರ ಹೊರಗೆ ಮುಸಲ್ಮಾನ ಬಂಧುಗಳ ಸ್ನೇಹ ಮಾಡಿ ಮತ್ತು ಫಲಾಪೇಕ್ಷೆಯಿಲ್ಲದೆ ಅವರ ಸೇವೆ ಮಾಡಿ ಅವರ ಮೇಲೆ ವರ್ಚಸ್ಸು ಉಪಯೋಗಿಸಲು ಪ್ರಯತ್ನಿಸುತ್ತಿದ್ದೆ.'

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

ಡಾ॥ ಜಸಾನಿಯವರ

ಜಗತ್ಪ್ರಸಿದ್ಧವಾದ ಔಷಧಿ

ಗೊನೊಕಿಲರ್ (ರಿಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ್' ಎಂಬ ಸೀಲು ನೋಡಿರಿ.

ಮೂತ್ರರೋಗಗಳ ಮೇಲೆ ಮತ್ತು ಧಾತುಸಂಬಂಧದ ರೋಗಗಳ ಮೇಲೆ 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು. ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನ್ನು ತೋರಿಸುತ್ತದೆ. ಸಾವಿರಾರು ರೋಗಿಗಳು ಇದರ ಗುಣವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿ ಇದನ್ನು ಹೊಗಳುತ್ತಿರುವರು. ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಇಲ್ಲ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ, ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರುವು ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, ಗೊನೊ—ಕೊಕಸ್ ಎಂಬ ವಿಷಹಾರಿ, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಖಾತ್ರಿ ನಾಶವಾಗುವುವು.

ಬೆಲೆ: 50 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 3-0-0 (ವಿ. ಪಿ. ಚಾರ್ಜು 8 ಆಣೆ ಬೇರೆ). ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ ವಿಠಲ್ ಭಾಯ್ ಪಟೇಲ್ ರೋಡ್, ಮುಂಬಯಿ.

Sole Manufacturer: **Dr. D. N. JASANI,** Vithalbhai Patel Road, BOMBAY 4.

Madras Agent: **Appah & Co, China Bazar Madras.**

ಪತ್ರವ್ಯವಹಾರ ಇಂಗ್ಲೀಷ್ ಅಥವಾ ಮರಾಠಿಯಲ್ಲಿ.

“ಶತ್ರುವು ಬಾಗಿಲ ಬಳಿ ಬಂದು ನಿಂತಿರುವನು”

- ಆಸ್ಟ್ರೇಲಿಯದ ಪ್ರಧಾನಮಂತ್ರಿಯ ಕರೆ -

ಮಲಯದಲ್ಲಿ ಜಪಾನರು ಮುಂದೊತ್ತುವರು

ಶತ್ರುವು ಬಾಗಿಲಿಗೆ ಬಂದಿರುವನು

ಎಂಬುದಾಗಿ ಆಸ್ಟ್ರೇಲಿಯದ ಪ್ರಧಾನ ಮಂತ್ರಿ ಟ೯ನರು ತನ್ನ ದೇಶದ ಜನರಿಗೆ ಒಂದು ಸಂದೇಶ ಕೊಡುತ್ತಾ ಹೇಳಿದರು. ಆಕ್ರಮಣದ ಜವಾದ ಅಪಾಯ ಕಾಲವು ಬಂದೊದಗಿದೆಯೆಂದೂ ಈ ಕಾಲದಲ್ಲಿ ಅಮೇರಿಕವು ಸೈನ್ಯ ಸಹಾಯ ಕಳುಹಿಸಬೇಕೆಂದೂ ಕೇಳಿಕೊಂಡಿರುವರು

ಲಿಬಿಯದ ಯುದ್ಧ

ಲಿಬಿಯದಲ್ಲಿ ಘೋರ ಯುದ್ಧ ನಡೆದು ರೋಮೆಲನು ಬ್ರಿಟಿಷ್ ಸೈನಿಕರನ್ನು ಬೆಂಗಾಜಿಯ ಕಡೆಗೆ ಹಿಂದಕ್ಕಟ್ಟಿರುವನೆಂದು ತಿಳಿದಿದೆ

ಜಪಾನೀ ಹಡಗ ನಾಶ

ಮಕಾಸರ್ ಜಲಸಂಧಿಯಲ್ಲಿ ಅನೇಕ ಜಪಾನೀ ಹಡಗಗಳು ಮುಳುಗಿಸಲ್ಪಟ್ಟವು ಅಮೇರಿಕನ್ ಸೈನ್ಯ ಚಟುವಟಿಕೆ ಜೋರಾಗಿದೆ. ಶತ್ರುಗಳ ಯುದ್ಧ ಸಾಮಗ್ರಿ ಸಾಗಿಸುವ ಹಡಗವೊಂದನ್ನು ಮುಳುಗಿಸಲಾಯಿತು

ಫಿಲಿಪಯಿನಿನಲ್ಲಿ ೨೦೦ ಸಾವಿರ ಜಪಾನರು

ಒಟ್ಟು ಬಂದಿಳಿದಿರುವರೆಂದು ತಿಳಿದಿದೆ ಈ ಎಲ್ಲಾ ಸೈನಿಕರೂ ಒಂದನೇ ವರ್ಗನವರು ಇವರಿಗೆ ಫಾರ್ಮೋಸಾದಲ್ಲಿ ಶಿಕ್ಷಣ ಕೊಟ್ಟಿರುವರಂತೆ

ಅಮೇರಿಕನ್ ಅಧಿಕಾರಿಗಳ ಅಜಾಗ್ರತೆ

ಜಪಾನಿ ವಿಮಾನಗಳು ಹವಾಯಿ ಬಂದರದ ಮೇಲೆ ಧಾಳಿ ಮಾಡಿದ ವಿಷಯದಲ್ಲಿ ಅಮೇರಿಕನ್ ಅಧಿಕಾರಿಗಳ ಅಜಾಗ್ರತೆಯೇ ಕಾರಣವಾಗಿದೆಯೆಂಬುದಾಗಿ ಮುಂದಿಯೊಂದು ಪ್ರಕಟವಾಗಿದೆ

ನ್ಯೂಗಿನಿಯಲ್ಲಿ ೧೦೦೦೦ ಸೈನಿಕರು

ಬಂದಿಳಿದಿರುವರೆಂದು ಪ್ರಕಟವಾಗಿದೆ ಜಪಾನಿಗಳು ನ್ಯೂಗಿನಿಯಲ್ಲಿ ಸ್ಥಳ ಪರೀಕ್ಷೆಯ ಚಟುವಟಿಕೆಗಳನ್ನು ಕೈಕೊಂಡಿರುವರು

ಯುದ್ಧ ನಿರ್ವಹಣದಲ್ಲಿ ಅಧಿಕಾರ ಬೇಕು

ಕರ್ಟಿನರ ಕೇಳಿಕೆ

ಶಾಂತಿಸಾಗರದ ಯುದ್ಧ ನಿರ್ವಹಣದಲ್ಲಿ ಆಸ್ಟ್ರೇಲಿಯಕ್ಕೆ ಅಧಿಕಾರ ಬೇಕೆಂಬುದಾಗಿ ಕರ್ಟಿನರು ಹೇಳಿರುವರು ಈ ವಿಷಯ ಬೇಗನೇ ಆಲೋಚಿಸಲಾಗುವುದೆಂದು ಚರ್ಚಿಲರು ಉತ್ತರ ಕೊಟ್ಟಿರುವರು ಈ ವಿಚಾರ ಲಂಡನ್ ಪತ್ರಿಕೆಗಳು ತಮ್ಮ ಸಹಾನುಭೂತಿ ತೋರಿಸಿ ಲೇಖನ ಬರೆದಿವೆ

“ಕೊನೆಗೆ ನಮಗೇ ಜಯ”

ಈ ವರ್ಷ ನಮಗೆ ಅನೇಕ ಹಾನಿಯೊದಗಿದ್ದರೂ ಅಮೇರಿಕದ ಸಹಾಯದಿಂದ ಕೊನೆಗೆ ನಮಗೇ ಜಯಸಿಗುವುದು ಎಂಬುದಾಗಿ ಬ್ರಿಟಿಷ್ ನೌಕಾ ಮಂತ್ರಿ ಹೇಳಿದರು

ಮೊಲುಕಾ ಜಲಸಂಧಿಯಲ್ಲಿ ಹೋಗುತ್ತಿದ್ದ ಜಪಾನೀ ಹಡಗಗಳ ಮೇಲೆ ಮಿತ್ರಪಕ್ಷದ ವಿಮಾನಗಳು ಮತ್ತು ಹಡಗಗಳು ಧಾಳಿಮಾಡಿದವೆಂದೂ ಜಪಾನರು ಎಂಟು ಹಡಗಗಳನ್ನು ಕಳೆಕೊಂಡರೆಂದೂ ಸುದ್ದಿ ಬಂದಿವೆ ಮಕಾಸರ ಜಲ ಸಂಧಿಯಲ್ಲಿಯೂ ಜಪಾನರು ಐದು ಹಡಗಗಳನ್ನು ಕಳೆಕೊಂಡರಂತೆ ಎಣ್ಣೆಯ ಸಲುವಾಗಿ ಇಡೀ ಬೋರ್ನಿಯೋವನ್ನು ಆಕ್ರಮಿಸಿಕೊಳ್ಳಲು ಜಪಾನರು ಯೋಚಿಸುತ್ತಿರುವುದರಿಂದ ಇತ್ತೀಚೆಗೆ ಆ ಭಾಗದಲ್ಲಿ ಜಪಾನರ ಹಡಗಗಳ ಸಂಚಾರವು ಜೋರಾಗಿದೆ ಲಿಬಿಯದದಲ್ಲಿ ತ್ರಿಪೊಲಿಟಾನಿಯ ಗಡಿನಾಡಿನಲ್ಲಿ ಪ್ರಾರಂಭವಾಗಿರುವ ಯುದ್ಧವು ಅತ್ಯಂತ ಜೋರಿನಿಂದಲೇ ನಡೆಯುತ್ತಿದೆ ಜನರಲ್ ರೊಮೆಲನು ಬ್ರಿಟಿಷ್ ಬಲದ ಮೇಲೆ ಬಲವಂತವಾಗಿ ಆಕ್ರಮಣ ಮಾಡುತ್ತಾನೆ ಪೇಸಿಫಿಕ್ ಸಾಗರದ ಯುದ್ಧದಲ್ಲಿ ಆಸ್ಟ್ರೇಲಿಯದ ಮಾತನ್ನು ಕೇಳಬೇಕೆಂದೂ, ಬ್ರಿಟಿಷ ಯುದ್ಧ ಮಂಡಲದಲ್ಲಿ ಆಸ್ಟ್ರೇಲಿ

ಲಿಬಿಯದಲ್ಲಿ ಪ್ರಚಂಡ ಯುದ್ಧ

ಸಿಂಗಾಪುರದ ಪರಿಸ್ಥಿತಿ ಭೀಕರವಾಗಿದೆ

ಯದ ಬಗ್ಗೆ ಪ್ರಾತಿನಿಧ್ಯವಿರಬೇಕೆಂದೂ, ಆಸ್ಟ್ರೇಲಿಯಕ್ಕೆ ಯುದ್ಧ ಸಾಮಗ್ರಿಯ ಸಹಾಯವಾಗಬೇಕೆಂದೂ ಮುಖ್ಯ ಮಂತ್ರಿ ಕರ್ಟಿನರು ಕೇಳಿದ ವಿಚಾರ ಚರ್ಚಿಲರು ಆಲೋಚಿಸುತ್ತಿರುವರೆಂದು ಸುದ್ದಿಯಿದೆ

ರಯೊ ಜೆನೈರೋ ಒಪ್ಪಂದ

ಅಮೇರಿಕನ್ ರಾಷ್ಟ್ರಗಳು ರಯೊಡಿ ಜೆನೈರೊದಲ್ಲಿ ಸೇರಿ ಅಚ್ಚಿನ ರಾಷ್ಟ್ರಗಳ ಸಂಬಂಧ ಕಡಿದುಕೊಳ್ಳಬೇಕೆಂದು ನಿರ್ಧರಿಸಿದ ಬಗ್ಗೆ ಎಲ್ಲ ಕಡೆಗಳಲ್ಲಿಯೂ ತೃಪ್ತಿಯುಂಟಾಗಿದೆ

ಆಸ್ಟ್ರೇಲಿಯಾದ ರಕ್ಷಣಾ ಸಿದ್ಧತೆ ಗಂಡುಸರಿಗೆ ಕರೆ

ರೂಸ್‌ವೆಲ್ಟರೊಡನೆ ಸಹಾಯ ಬಿನ್ನಹ

ಆಸ್ಟ್ರೇಲಿಯದ ರಕ್ಷಣಾಸಿದ್ಧತೆಯ ವ್ಯವಸ್ಥೆಯು ಭರದಿಂದ ಸಾಗುತ್ತಿದೆ ಅದಕ್ಕಾಗಿ ೪೫ ವರ್ಷದೊಳಗಿನ ಅವಿವಾಹಿತ ಗಂಡುಸರನ್ನು ಒತ್ತಾಯದಿಂದ ಸೈನ್ಯಕ್ಕೆ ಸೇರಿಸಿಕೊಳ್ಳುವ ಆಜ್ಞೆ ಹೊರಟಿದೆ ಶತ್ರುವನ್ನು ಧೈರ್ಯದಿಂದ ಎದುರಿಸಲು ಆಸ್ಟ್ರೇಲಿಯವು ತಯಾರು ಮಾಡುತ್ತಿದೆ ಆಸ್ಟ್ರೇಲಿಯದ ಮಂತ್ರಿ ಕ್ಯಾಸೆಯವರು ಅಧ್ಯಕ್ಷ



‘ಬ್ರಿಟಿಷರ ಒಂದು ಪ್ರಚಂಡ ಟೇಂಕ್’

ಜಗತ್ತಿನಲ್ಲಿಯೇ ಬಹಳ ದೊಡ್ಡದಾದ ಬ್ರಿಟಿಷರ ‘ಕ್ರುಸೆಡರ್’ ಟೇಂಕು ಇದು ಹೊಸ ರೀತಿಯದಾಗಿದ್ದು ಇದರ ವೇಗಶಕ್ತಿಗಳು ಭಯಂಕರವಾಗಿವೆಯೆಂದು ಹೇಳಲಾಗಿದೆ

ರಶ್ಯ ಯುದ್ಧ

ಜರ್ಮನ ಹೇಳಿಕೆ

ಲೆನಿನ್‌ಗ್ರಾಡ್ ಸ್ಮೊಲೆನ್‌ಸ್ಕ್ ಭಾಗಗಳಲ್ಲಿ ರಶ್ಯನರು ಮುಂದುವರಿಯುತ್ತಿರುವುದರಿಂದ ಅವರಿಗೆ ಮಹತ್ವದ ಜಯ ದೊರೆತಿರುವುದಲ್ಲದೆ ಮುಂದಿನ ಯುದ್ಧವನ್ನು ಸಾಗಿಸಲು ಆಯಕಟ್ಟಿನ ಸ್ಥಳಗಳೂ ದೊರೆತಿವೆ ರಶ್ಯನರು ಇನ್ನೂ ಹಲವು ಊರುಗಳನ್ನು ಸ್ವಾಧೀನಪಡಿಸಿಕೊಂಡರು ಮಜಾಯಿಸ್ಕ್ ಪತನವಾಗಿದೆ

ರೂಸ್‌ವೆಲ್ಟರೊಡನೆ ವಿಚಾರ ವಿನಿಮಯ ಮಾಡಲಿರುವರೆಂದೂ ಜಪಾನನ್ನು ಎದುರಿಸಲು ಅವರು ಸಹಾಯ ಕೇಳುವರೆಂದೂ ತಿಳಿದಿದೆ

ಪರ್ಲ್ ಬಂದರದ ಮೇಲೆ ಧಾಳಿ

ಅಮೇರಿಕನರು ಸಿದ್ಧರಿದ್ದಿಲ್ಲ

ಜಪಾನರು ದೆಸಂಬರ ೭ರಲ್ಲು ಪರ್ಲ್ ಮತ್ತು ಹವಾಯ್ ಬಂದರಗಳ ಮೇಲೆ ಆಕಸ್ಮಿಕ ಧಾಳಿಮಾಡಿದಾಗ ಅಮೇರಿಕನರು ಸಿದ್ಧರಿರಲಿಲ್ಲವೆಂದು ಈಗ ವಿಚಾರಣಾ ಸಮಿತಿಯು ವರದಿ ಪ್ರಕಟಿಸಿದೆ

The Canara Banking Corporation Ltd.

(Incorporated in British India with limited liability)

Estd 1906.

OUR RATES OF INTEREST ON DEPOSITS

Current	1%	p. a.
Savings Bank	2½%	,,
Short-term	1½%	,,
FIXED FOR 3 MONTHS	2%	,,
6 ,,	2¼%	,,
9 ,,	2¾%	,,
12 ,,	3%	,,
24 ,,	3½%	,,

Advances made at cheap rates of interest against approved securities and Banking business of every description transacted.

ಯುದ್ಧವು ಸಿಂಗಾಪುರವನ್ನು ಸಮೀಪಿಸಿತು

ಜೊಹೊರ ಪ್ರಾಂತದ ಬಾಟುಪಾಹಾತ ಜಿಲ್ಲೆಯಲ್ಲಿ ಈಗ ಕಾಳಗವಾಗುತ್ತಿದೆ. ಈ ಭಾಗದಲ್ಲಿ ಬ್ರಿಟಿಷರು ಹಿಂದೆ ಸರಿದಿರುವರು ಪೂರ್ವ ಕರಾವಳಿಯಲ್ಲಿ ಜಪಾನೀ ಸೈನಿಕರು ಒಳನುಗ್ಗುತ್ತಿರುವರು. ಸಿಂಗಾಪುರವು ಈಗ ಕೊನೆಯ ಅವಸ್ಥೆಯನ್ನು ಹೊಂದಿರುವುದೆಂದು ಡೈಲಿ ಟೆಲಿಗ್ರಾಫ್ ಪತ್ರಿಕೆಯ ವರದಿಯಿದೆ. ಜಪಾನರು ಎಷ್ಟು ಕಷ್ಟವಾದರೂ ಸಿಂಗಾಪುರದ ಹತ್ತಿರಹತ್ತಿರ ಬರುತ್ತಿರುವರಂತೆ ಸಿಂಗಾಪುರದ ರಕ್ಷಣೆಯನ್ನು ಸಂಪೂರ್ಣ ಈಗ ವ್ಯವಸ್ಥೆಗೊಳಿಸದಿದ್ದರೆ ಬಹಳ ಗಂಡಾಂತರವಿರುವುದೆಂಬುದಾಗಿ ಸಹಾಯ ಕಳುಹಿಸದಿದ್ದರೆ ಅದನ್ನು ರಕ್ಷಿಸುವುದು ಕಷ್ಟವಾಗಬಹುದೆಂಬುದಾಗಿಯೂ ಅದರಲ್ಲಿ ಬರೆಯಲಾಗಿದೆ

ಅಚ್ಚುರಾಷ್ಟ್ರಗಳ ಸಂಬಂಧವನ್ನು ಉರುಗ್ವೆ ಸರಕಾರವು ಕಡಿಯಿತು

ಎಂಬುದಾಗಿ ಸುದ್ದಿ ಬಂದಿದೆ ಈ ನಿರ್ಣಯವು ಬೃಹತ್ ಅಮೇರಿಕನ್ ಪರಿಷತ್ತಿನಲ್ಲಿ ಆಗಿದ್ದು, ಈಗ ಉರುಗ್ವೇ ಅಧ್ಯಕ್ಷರು ಅಚ್ಚುರಾಷ್ಟ್ರಗಳ ಸಂಬಂಧ ಕಡಿದುಕೊಂಡರು

ರಶ್ಯನರು ವಿಶ್ರಾಂತಿ ಕೊಡಲಿಲ್ಲ

ರಶ್ಯ ರಣಭೂಮಿಯಲ್ಲಿ ಇದುವರೆಗೆ ಜರ್ಮನರು ಕೇವಲ ಸಂರಕ್ಷಣೆ ಮಾತ್ರ ತೊಡಗಿರುವ ಬಗ್ಗೆ ಜರ್ಮನ್ ಪತ್ರಿಕೆಯು ಎಚ್ಚರಿಕೆಯಿತ್ತಿದೆ. ರಶ್ಯನರು ಜರ್ಮನರಿಗೆ ವಿಶ್ರಾಂತಿ ಕೊಡದೆ ಈ ಛಳಿಗಾಲದಲ್ಲಿ ಅವರನ್ನು ಹಿಂದಕ್ಕೆ ಓಡಿಸುತ್ತಿದ್ದಾರೆ

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

O S 219/ 39, R E P 1049/'41

ಅರ್ಜಿದಾರರು—ಕೃಷ್ಣ ಉಡುಪ ಕಟಪಾ

ಮೆದ್ರಿರು—ಸರಸ್ವತಿ ಅಂದು ಕಟಪಾ

2ನೇ ಯದ್ರಿ ಸೀತಂವಾ ಕಾಳಿಂಗ ಉಡುಪರ ವಿಧವೆ ಗುಂಡಿ ಗ್ರಾಮ

ಮೇಲಿನ ಡಿಕ್ರಿಯಲ್ಲಿ ಮಾರಾಟಕ್ಕೆ ವಿಧಿ ಇರುವ ಸ್ಥಿರಾಸ್ತಿಯ ಯೇಲಂಮಿನ ಬಗ್ಗೆ ಅರ್ಜಿದಾರರು ಇಸ್ತಿಯಾರನ್ನು ದಾಖಲ್ಲು ಮಾಡಿರುತ್ತಾರೆ ಆ ಇಸ್ತಿಯಾರಿನ ಕುರಿತು 2ನೇ ಯದ್ರಿಗೆ ಆಕ್ಷೇಪಣೆಗಳಿದ್ದರೆ ತಾರೀಕು 16-2-1942ನೇ ದಿನ ಕೋರ್ಟಿನ ಮುಂದೆ ಹಾಜರಾಗಿ ಜಾಹೀರು ಮಾಡತಕ್ಕದ್ದು ಯೆಂಬ ಸಂಗತಿ ಈ ಮೂಲಕ ತಿಳಿಯಪಡಿಸಿಯದೆ.

ಕುಂದಾಪುರ, 27-1-'42 } M. M Urala, ಅರ್ಜಿದಾರರ ವಕ್ಕೀಲರು.

ಮಂಗಳೂರು ಪೇಟೆಧಾರಣೆ

(ದ ಕ ಜಿಲ್ಲಾ ಟ್ರೆಜರಿ ಡಿ. ಕಲೆಕ್ಟರರಿಂದ ಬಂದದ್ದು)

	ರಿಂದ	ವರೆಗೆ
ಭತ್ತ ಮುಡಿಗೆ	2-10-0	
ಅಕ್ಕಿ ಗುಡ್ಡು ಮು	6- 2-0	6- 4-0
,, ದುಯಂ ,,	5-14-0	6- 2-0
,, ಅವ್ವಲ್ ಸುಗ್ಗಿ	—	
,, ದುಯ್ಯಂ ,,	5-14-0	—
ತೆಂಗಿನಕಾಯಿ 1000ಕ್ಕೆ	37-8-0	42-8-0
,, ಸಿಪ್ಪೆಯಿದ್ದದ್ದು ,,	40-0-0	45-0-0
ಕೊಬ್ಬರಿ ಖಂಡಿಗೆ	58-12-0	—
ದಿಲ್‌ಪಸಂದ್ ಖ	63-12-0	—
ತೆಂಗಿನ ಎಣ್ಣೆ ಮಣಕ್ಕೆ	4-12-0	—
ಸಿಪ್ಪೆಯ ಅಡಿಕೆ ಸಾವಿರಕ್ಕೆ	3-0-0	3-8-0
ಸುಲಿದ ,, ಖ (ಹಳ್ತು)	140-0-0	160-0 0
(ಹೊಸ್ತು)	120-0-0	145-0-0
ಕಬ್ಬಿನ ಬೆಲ್ಲ ಖಂಡಿಗೆ	30-0-0	35-0-0
ಒಣ ಮೆಣಸು ಹಂ.	17-0-0	17-8-0
ಹೊಗೆಸೊಪ್ಪು ಮಣಕ್ಕೆ	6-0-0	7-0-0
ಹುಡಿಯು ,, ಮ.	-0-0	--0
ಮೈಸೂರು ಏಲಕ್ಕಿ, ಮ	40-0-0	50-0-0
ಕೊಡಗಿನ ,, ಮ.	40-0-0	45-0-0
ಕುಮ್ಟೆಯ ಮೆಣ್ಸು ಖ	90-0-0	95-0-0
ಕಾಸರಗೋಡು ,, ಮ.		
ಊರಿನ ,, ಮ.	4-14-0	—

ಹುಂಡಿ ವಿಷ್ಣು ಕಾಮತರು ಬಂಧಿಸಲ್ಪಟ್ಟರು!

ಸ್ವಾತಂತ್ರ್ಯ ದಿನಾಚರಣೆಯ ಭಾಷಣಕ್ಕಾಗಿ

'ಆಕ್ರಮಣವನ್ನು ನಾವು ಎದುರಿಸಲು ಸಿದ್ಧರಿರಬೇಕು'

ಮೊಹರಮ್ ಹಬ್ಬದಲ್ಲಿ ನೆಹರು ಭಾಷಣ

ಸವ್ರುಗಳ ತಂತಿ ಚರ್ಚಿಲರಿಗೆ ಮುಟ್ಟಿರುವುದಂತೆ!

ಎಚ್. ವಿ. ಕಾಮತರ ಬಂಧನ

ಫಾರ್ವರ್ಡ್ ಬ್ಲಾಕಿನ ಜನರಲ್ ಸೆಕ್ರೆಟರಿ ಹುಂಡಿ ವಿಷ್ಣು ಕಾಮತ್ (ಐ. ಸಿ. ಎಸ್. ದವಿಗೆ ರಾಜಿನಾಮೆಯಿತ್ತವರು) ಇವರು ನಾಗ ರದಲ್ಲಿ ಸ್ವಾತಂತ್ರ್ಯ ದಿನಾಚರಣೆಯ ನಿಮಿತ್ತ ಕೊ ಒಂದು ಭಾಷಣದ ಸಲುವಾಗಿ ಬಂಧಿಸಲ್ಪಟ್ಟ ವರು. ಅವರನ್ನು ಬೀಹಾರಿಗೆ ಒಯ್ದಿದುವರಂತೆ

ಚರ್ಚಿಲರಿಗೆ ಸವ್ರುಗಳ ತಂತಿ ತಲಪಿದೆಯಂತೆ

ಸವ್ರು ಮೊದಲಾದವರು ಚರ್ಚಿಲರಿಗೆ ಒಂದು ತಂತಿ ಕಳುಹಿಸಿದ್ದರಷ್ಟೆ? ಅದು ಅವರಿಗೆ ತಲಪಿದೆ ಯೆಂಬುವಾಗಿ ಭಾರತ ಮಂತ್ರಿಗಳು ವೈಸರಾಯ ಮೂಲಕ ಸವ್ರುಗಳಿಗೆ ತಿಳಿಸಿರುವರಂತೆ

ಆಕ್ರಮಣವನ್ನು ಎದುರಿಸಲು ಸಿದ್ಧರಿರಬೇಕು

ಯಾವುದೇ ಆಕ್ರಮಣವಾಗಲಿ ಅದನ್ನು ನಾವು ಧೀರ ಹೃದಯದಿಂದ ಎದುರಿಸಲು ಸಿದ್ಧರಿರ ಬೇಕು. ಹಳ್ಳಿಹಳ್ಳಿಗಳನ್ನು ಸಂಘಟಿಸಿ ಆಕ್ರಮಣ ಕಾಲದ ಸಂಕಷ್ಟಗಳನ್ನು ಎದುರಿಸಲು ನಾವು ತಯಾರು ಆಗಬೇಕು ಎಂದು ನೆಹರು ಹೇಳಿದರು

ಅಲ್ಲಾ ಭಕ್ಷ-ನೆಹರು ಚರ್ಚೆ

ನೆಹರುಗಳೊಡನೆ ಸಿಂಧದ ಮುಖ್ಯಮಂತ್ರಿ ಅಲ್ಲಾಭಕ್ಷರು ದೀರ್ಘ ಚರ್ಚೆ ನಡೆಸಿದರು ಬ ಳಿಕ ಅವರಿಬ್ಬರೂ ಸವ್ರುಗಳಲ್ಲಿ ಹೋದರು

ಗಾಂಧಿ ಸಭೆಯಲ್ಲಿ ಗೊಂದಲ

ನಾಗಪುರದ ಹರಿಜನ ವಿದ್ಯಾರ್ಥಿ ಭವನದಲ್ಲಿ ಗಾಂಧಿಜಿ ಭಾಷಣ ನಡೆಯುತ್ತಿದ್ದಾಗ ಅಂಬಡೇಕ ರ್ ಪಂಗಡದವರು ಕೆಲವರು ಗಲಭೆ ಮಾಡಿದು ದರಿಂದ ಗಾಂಧಿಜಿ ಸಮಾರಂಭವನ್ನು ಮುಗಿಸಿ ಸೇವಾಗ್ರಾಮಕ್ಕೆ ಹೊರಟರು

ಬಂಗಾಳ ಉಪಸಾಗರದಲ್ಲಿ ವೈರಿ ಚಟುವಟಿಕೆ

ಬಂಗಾಳ ಉಪಸಾಗರದಲ್ಲಿ ವೈರಿ ಟಾರ್ಪೆ ಡೋಗಳು ಎರಡು ವ್ಯಾಪಾರೀ ಹಡಗಗಳನ್ನು ಮುಳುಗಿಸಿದವೆಂದು ಸುದ್ದಿ ಬಂದಿದೆ.

ಮೊಹರಮ್ ಸಭೆಯಲ್ಲಿ ನೆಹರು ಭಾಷಣ

ಅಲ್ಲಾಬಾದಿನಲ್ಲಿ ಮೊಹರಮ್ ಹಬ್ಬದ ನಿಮಿತ್ತ ಕೂಡಿದ ಸಭೆಯಲ್ಲಿ ಪಂಡಿತ ಜವಾಹರಲಾಲ ನೆಹರುಗಳು ಭಾಷಣಮಾಡಿ ಸ್ವಾತಂತ್ರ್ಯಕ್ಕಾಗಿ ಹೋರಾಡಲು ಎಲ್ಲರೂ ಒಗ್ಗಟ್ಟಾಗಬೇಕೆಂದು ಹೇಳಿದರು

ಸ್ತ್ರೀ ಸ್ಥಾನಬದ್ಧೆಯರ ಉಪವಾಸ

ಪುಣೆ ಸೆರೆಮನೆಯಲ್ಲಿ ಸ್ಥಾನಬದ್ಧೆಯರಾಗಿರು ವ ಕುಮಾರಿ ಗೋದಾವರಿ ಗೋಖಲೆ, ಶ್ರೀಮತಿ ಬಾಟ್ಲಿವಾಲ ಮತ್ತು ಶ್ರೀಮತಿ ಮೀನಾಕ್ಷಿ ಶಿರೋಡ ಕರ ಇವರು ಕೆಲವು ಸೌಕರ್ಯಗಳನ್ನು ಸರಕಾ ರವು ತಮಗೆ ಕೊಡದಿದ್ದರೆ ಉಪವಾಸ ಮಾಡು ದಾಗಿ ಶ್ರೀ ಎಸ್. ಎಂ ಜೋಶಿಯವರಿಗೆ ತಂತಿ ಬಿಟ್ಟಿರುವರು

ಹತ್ತಿ ಬೆಳೆಯುವುದನ್ನು ಕಡಿಮೆ ಮಾಡಬೇಕು

ಎಂಬುದಾಗಿ ಹಿಂದೀ ಹತ್ತಿ ಕಮಿಟಿಯವರ ಸರಕಾರಕ್ಕೆ ಮನವಿ ಕಳುಹಿಸಿದ್ದಾರೆ. ಹತ್ತಿಯ ಬದಲು ಧಾನ್ಯಗಳನ್ನು ಬೆಳೆಸಲು ಪ್ರೋತ್ಸಾಹ ಕೊಡಬೇಕಂತೆ.

ಕಲ್ಕತ್ತದ ಜನರು ಹೋಗುತ್ತಿದ್ದಾರೆ ೭ ದಿನಗಳಲ್ಲಿ ೬ ಲಕ್ಷ

ಡಿಸೆಂಬರ್ ೧೩ರಿಂದ ೨೦ರ ಒಳಗಾಗಿ ಕಲ್ಕತ್ತ ದಿಂದ ೬ ಲಕ್ಷ ಜನರು ಹೊರಟುಹೋದರೆಂದು ತಿಳಿದಿದೆ ರೈಲ್ವೆಯವರು ಜನರನ್ನು ಸಾಗಿಸಲು ಹೊಸ ವ್ಯವಸ್ಥೆಯನ್ನು ಮಾಡಿದರಂತೆ. ದಿನವೊಂ ದಕ್ಕೆ ೫ ಸಾವಿರ ಜನರು ಹೊರಗೆ ಹೋಗುತ್ತಿ ದ್ದಾರೆಂದು ತಿಳಿದಿದೆ

ಹಿಂದು ವಿಶ್ವವಿದ್ಯಾಲಯಕ್ಕೆ ೧ ಲಕ್ಷ ರೂಪಾಯಿ ದಾನ

ಹಿಂದು ವಿಶ್ವವಿದ್ಯಾಲಯದ ರಜತೋತ್ಸವ ಸಂದರ್ಭದಲ್ಲಿ ಮೂರ್ವಿಯ ಮಹಾರಾಜರು ಒಂ ದು ಲಕ್ಷ ರೂಪಾಯಿ ದಾನಕೊಟ್ಟಿರುವರು.

ಹಿಂದುಸ್ಥಾನಕ್ಕೆ ಕೂಡಲೇ ಸ್ವಾತಂತ್ರ್ಯ ಕೊಡಿರಿ

ಇಂಡಿಯಾ ಲೀಗಿನ ಒಮ್ಮತದ ಹೇಳಿಕೆ

ಬ್ರಿಟಿಷ್ ಸರಕಾರವುದು ಹಿಂದುಸ್ಥಾನಕ್ಕೆ ಕೂಡಲೇ ಸ್ವಾತಂತ್ರ್ಯ ಕೊಡಬೇಕೆಂದು ಲಂಡನ ನಲ್ಲಿ ಸ್ವಾತಂತ್ರ್ಯ ದಿನಾಚರಣೆಯ ನಿಮಿತ್ತ ಸೇರಿ ದ ಇಂಡಿಯಾ ಲೀಗಿನ ಸಭೆಯಲ್ಲಿ ಒಮ್ಮತದ ಠರಾವಾಯಿತು. ಕಾಂಗ್ರೆಸು ತಾತ್ಕಾಲಿಕ ಸರಕಾ ರವನ್ನು ಸ್ಥಾಪಿಸುವಂತೆ ಸರಕಾರದವರು ಒಪ್ಪಂ ದ ಮಾಡಿಕೊಳ್ಳಬೇಕೆಂದು ಸೂಚಿಸಲಾಯಿತು. ಮಿತ್ರಪಕ್ಷದವರಿಗೆ ಜಯವಾಗಬೇಕಾದರೆ ಹಿಂದು ಸ್ಥಾನವನ್ನು ಸ್ವತಂತ್ರ ಮಾಡಬೇಕೆಂದು ಹ್ಯಾರಿ ಪಾಲಿಟರು ಹೇಳಿದರು. ಅಟ್ಲಾಂಟಿಕ್ ಘೋಷ ಣೆಯಿಂದ ಹಿಂದುಸ್ಥಾನವನ್ನು ದೂರವಿರಿಸಿದರೆ ಅದರ ಪರಿಣಾಮವು ಭಯಂಕರವಾಗುವುದೆಂದು ಚೇಮ್ಸ್‌ಫೋರ್ಡಿನ ಬಿಶೋಪರು ಸಂದೇಶ ಕಳು ಹಿಸಿದ್ದರು. ಫೇಸಿಸ್ಟ ರಾಷ್ಟ್ರಗಳ ವಿರುದ್ಧ ನಾವು ಹೋರಾಡುವ ತತ್ವಕ್ಕೆ ಹಿಂದುಸ್ಥಾನದ ವಿಮೋ ಚನೆ ಒರೆಗಲ್ಲಾಗಿದೆಯೆಂದು ಪಾರ್ಲಿಮೆಂಟ್ ಸದಸ್ಯರಾದ ಪಿಟ್ಟರು ಬರೆದಿದ್ದರು.

ಹಿಂದುಸ್ಥಾನದಲ್ಲಿ ಹೊಸದೇನೂ ಇಲ್ಲ

ಅಮೆರಿ ಹೇಳಿದರು

ಹಿಂದುಸ್ಥಾನದ ರಾಜಕೀಯ ಪರಿಸ್ಥಿತಿಯ ವಿ ಚಾರದಲ್ಲಿ ಹೊಸತೇನೂ ಹೇಳುವುದಿಲ್ಲವೆಂದು ಕಾಮನ್ಸ್ ಸಭೆಯಲ್ಲಿ ಅಮೆರಿ ಹೇಳಿದರು ಹಿಂ ದುಸ್ಥಾನದ ಪರಿಸ್ಥಿತಿ ಬಿಕ್ಕಟ್ಟಿನಲ್ಲಿರುವುದರಿಂದ ಅದರ ಸ್ಪಷ್ಟೀಕರಣ ಯಾವಾಗ ಆಗುವುದೆಂದು ತಿಳಿಸುವಿರಾ ಎಂದು ಸೋರೆನ್ಸನರು ಕೇಳಿದ್ದಕ್ಕೆ ಅದು ನನ್ನ ಅಧಿಕಾರದಲ್ಲಿಲ್ಲವೆಂದರು ಹಿಂದು ಸ್ಥಾನದಲ್ಲಿ ಅಮೆರಿಕನ್ ಸಂಸ್ಥೆಯವರು ಅಮೆರಿ ಕದ ಹಣದಿಂದ ಮೋಟರ್ ಕಾರ್ಖಾನೆಯನ್ನು ಸ್ಥಾಪಿಸಿದರೆ ಅದಕ್ಕೆ ಸರಕಾರವು ಸಹಾ ಯ ಕೊಡುವರೋ, ಅಂಥ ಸಂಸ್ಥೆಯನು ಹಿಂ ದೀಯರು ಸ್ಥಾಪಿಸಿದರೆ ಅದೊಂದು ಯುದ್ಧಯ ತ್ನದ ಅಂಗವೆಂದು ತಿಳಿದು ಸಹಾಯ ಮಾಡುವ ರೋ ಎಂದು ವಿಮನರು ಕೇಳಿದರು.

ಕೆನಾಡದಲ್ಲಿ ಒತ್ತಾಯದ ಸೈನ್ಯ ಸಂಗ್ರಹ

ಮಾಡುವ ವಿಚಾರದಲ್ಲಿ ಜನರ ಅಭಿಪ್ರಾಯ ವನ್ನು ತಿಳಕೊಳ್ಳುತ್ತಿರುವರೆಂದು ಸುದ್ದಿಯಿದೆ

To every Mangalorean - to every Kanarite, this deserving appreciation conveys a convincing appeal-

The Managing Director,
The Popular Insurance Co., Ltd.,
MANGALORE

Dear Sir,

Death Claims on Policy Nos 57 & 1745 Late Mr. A. C. Mascarenhas

I thank you for your cheque of Rs 5,761-9-0 on the Canara Banking Corporation, Ltd, Mangalore, in full and final settlement of the above death claims.

The advantages of effecting life assurance in the "POPULAR"—a Company of our own district—are amply proved by the fact that out of the many policies held by my husband in different companies, yours was the first to settle my claims. Your promptness and assistance throughout has been impressive.

I wish you more popularity and greater business—especially in our own district.

Yours faithfully,
(Sd) Cecilia F. Mascarenhas.

Sturrock Road
Mangalore 20—1—1942

In insuring with or working for the "POPULAR" you help the progress of a LIFE OFFICE of your own District.

The Popular Insurance Company, Ltd.,

MANGALORE

ಜಿಲ್ಲಾ ಸಮಾಚಾರಗಳು

ಸ್ವಾತಂತ್ರ್ಯ ದಿನಾಚರಣೆ

ತಾ. 26ರಂದು ಸಂಜೆ ಮೈದಾನಿನಲ್ಲಿ ಶ್ರೀ. ಎ. ಬಿ. ಶೆಟ್ಟಿ ಎಂ. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಸಂಬಂಧ ಒಂದು ಸಾರ್ವಜನಿಕ ಸಭೆ ಸೇರಿತ್ತು. ಅಧ್ಯಕ್ಷರು ಹಿಂದುಸ್ಥಾನದ ಸ್ವಾತಂತ್ರ್ಯ ಮತ್ತು ಈ ದಿನಾಚರಣೆಯ ಮಹತ್ವದ ಕುರಿತು ವಿವರಿಸಿದ ಮೇಲೆ, ಶ್ರೀ. ಜಿನರಾಜ ಹೆಗ್ಗಡೆ ಎಂ. ಎಲ್. ಎ. (ಕೇಂದ್ರ) ಅವರೂ, ಶ್ರೀ. ಎಸ್. ಎನ್. ಹೊಳ್ಳ ಅವರೂ ಅದೇ ವಿಷಯದ ಕುರಿತು ಭಾಷಣ ಮಾಡಿದರು. ಅಧ್ಯಕ್ಷರ ಸೂಚನೆಯ ಮೇರೆಗೆ ಶ್ರೀ. ಎಸ್. ಎನ್. ಹೊಳ್ಳರು ಸ್ವಾತಂತ್ರ್ಯದ ಪ್ರತಿಜ್ಞೆಯನ್ನು ಓದಿ ಹೇಳಿದರು. ಅಧ್ಯಕ್ಷರ ಕೊನೆಯ ಮಾತುಗಳೊಂದಿಗೆ ಸಭೆ ಮುಗಿಯಿತು. ಅಂದು ಬೆಳಿಗ್ಗೆ ಡಾ. ಯು. ಪಿ. ಮಲ್ಯರು ಧ್ವಜವಂದನೆ ನಡೆಸಿದ್ದರು. ಪ್ರಭಾತಫೇರಿ ಧ್ವಜ ಮಾರಾಟ ಮೊದಲಾದವುಗಳು ಇದ್ದವು.

ದ. ಕ. ಜಿಲ್ಲಾ ನಾಲ್ಕನೇ ವಿದ್ಯಾರ್ಥಿ ಪರಿಷತ್ತು:

ತಾ. 31ರಂದು ಸಂಜೆ ಶ್ರೀ. ಎ. ಕೆ. ಪಿಳ್ಳೈ, ಬಾರ್-ಎಟ್-ಲಾ ಇವರ ಅಧ್ಯಕ್ಷತೆಯಿಂದ ಕೆನರಾ ಹೈಸ್ಕೂಲು ಗ್ರಾಂಡಿನಲ್ಲಿ ಜರಗುವುದು. ಶ್ರೀ ಎ. ಬಿ. ಶೆಟ್ಟಿ, ಎಂ. ಎಲ್. ಎ. ಇವರು ಪರಿಷದುದ್ಘಾಟನೆ ಮಾಡಲಿರುವರು.

ಪರಿಷತ್ತಿನ ಕಾರ್ಯಗಳು ಹೀಗಿವೆ: ಪ್ರಾತಃಕಾಲ 6 ಗಂಟೆಗೆ ಪ್ರಭಾತಫೇರಿ, 8 ಗಂಟೆಗೆ ಧ್ವಜವಂದನೆ, ಸಂಜೆ 6-30 ಗಂಟೆಗೆ ಪರಿಷದುದ್ಘಾಟನೆ-ಮತ್ತು ಅಧ್ಯಕ್ಷರ ಭಾಷಣ 8-30 ಗಂಟೆಗೆ ಸಬ್‌ಜೆಕ್ಟ್ ಕಮಿಟಿ ಸಭೆ; ಮರುದಿನ ಪ್ರಾತಃ 9ಕ್ಕೆ ಉಪಸಂಹಾರ ಸಭೆ, ಅಪರಾಹ್ನ 3ಕ್ಕೆ ಭಾಷಣ ಸ್ಪರ್ಧೆ, 5ಕ್ಕೆ ವ್ಯಾಯಾಮ ಆಟಗಳು, 9ಕ್ಕೆ ವಿವಿಧ ವಿನೋದಾವಳಿಗಳು.

ಮುನಿಸಿಪಾಲಿಟಿ

ಫೆಬ್ರುವರಿ ತಾ. 2ರಂದು ಮಂಗಳೂರು ಮುನ್ಸಿಪಲ್ ಕೌನ್ಸಿಲಿನ ಸಭೆಯು ಸಂಜೆ 5-30 ಗಂಟೆಗೆ ಸೇರಲಿದೆ.

ಬೆಡ್‌ಮಿಂಟನ್ ಪಂದ್ಯಾಟ

ಸ್ಥಳೀಯ ಸ್ಟೂಡೆಂಟ್ಸ್ ಹಾಸ್ಟೆಲ್ ಬಿಲ್ಲವರ ಬೆಡ್‌ಮಿಂಟನ್ ಎಸೋಸಿಯೇಷನಿನ ಆಶ್ರಯದಲ್ಲಿ ಫೈವ್ಸ್, ಡಬ್ಲ್ಸ್ ಮತ್ತು ಸಿಂಗಲ್ಸ್‌ಗಳಲ್ಲಿ ಬೇಡ್‌ಮಿಂಟನ್ ಪಂದ್ಯಾಟವು ಬೇಗನೇ ಜರಗಲಿರುವುದು. ಫೆಬ್ರುವರಿ 1ರ ತನಕ ಇದಕ್ಕೆ ಪ್ರವೇಶಕೊಡಲಾಗುವುದರಿಂದ, ಸೇರಲಿಚ್ಛಿಸುವ ಎಲ್ಲಾ ಬಿಲ್ಲವ ಬಾಂಧವರು ತಮ್ಮ ಹೆಸರುಗಳನ್ನು ಕೊಡಬೇಕಾಗಿ ವಿನಂತಿ. ಪ್ರವೇಶ ಹಾಸಲು ಪ್ರತಿಯೊಂದು ಹೆಸರಿಗೆ ಆಣೆ 4 ಎಂದು ಕಾರ್ಯದರ್ಶಿಗಳಾದ ವೈ. ಚೆಂದಪ್ಪನವರು ತಿಳಿಸುತ್ತಾರೆ.

ಜಿಲ್ಲಾ ಬೋರ್ಡು ಸಭೆ

ಫೆಬ್ರುವರಿ ತಾ. 12ಕ್ಕೆ ಅಪರಾಹ್ನ 9-55ಕ್ಕೆ ಶ್ರೀ. ಎಸ್. ಎಸ್. ಹೊಳ್ಳರ ಗೈರುಹಾಜರಿಯಿಂದ ಖಾಲಿಬಿದ್ದ ಜಿಲ್ಲಾ ಬೋರ್ಡ್ ರೂರಲ್ ಡೆವಲಪ್‌ಮೆಂಟ ಸ್ಟಾಂಡಿಂಗ್ ಕಮಿಟಿ ಮೆಂಬರರ ಸ್ಥಾನಕ್ಕೆ ಹೊಸ ಮೆಂಬರರನ್ನು ಆರಿಸುವ ದ. ಕ. ಜಿಲ್ಲಾ ಬೋರ್ಡಿನ ಸ್ಪೆಶಲ್ ಸಭೆ ಸೇರಲಿದೆ.

ಸ್ಥಳೀಯ ಸಿನೆಮಗಳು

ಬಾಲಾಜಿ ಟಾಕೀಸಿನಲ್ಲಿ 'ಪುನರ್ಮಿಲನ' ಚಿತ್ರವು ಯಶಸ್ವಿಯಾಗಿ ಮೂರನೆಯ ವಾರ ಈಗ ಪ್ರದರ್ಶಿಸಲ್ಪಡುತ್ತಿದೆ. ವಸಂತಸೇನಾ ಕನ್ನಡ ಚಿತ್ರವು ಬಾಲಾಜಿಯಲ್ಲಿ ಬೇಗನೇ ಪ್ರದರ್ಶಿಸಲ್ಪಡುವುದೆಂದು ತಿಳಿದಿದೆ. ಸೆಂಟ್ರಲ್ ಟಾಕೀಸಿನಲ್ಲಿ 'ಭೋಲಿ ಭಾಲಿ' ಚಿತ್ರವು ಪ್ರದರ್ಶಿಸಲ್ಪಡುತ್ತಿದೆ.

ಜನ್ಮದಿನೋತ್ಸವ

ಶ್ರೀ. ಈಶ್ವರಾನಂದ (ಶೀರ್ಷೆಕೆ ಕುದ್ಮುಲ್ ರಂಗರಾವ್) ಅವರ 68ನೇ ಜನ್ಮದಿನೋತ್ಸವವು ಇದೇ ತಾ. 31ರಂದು ಶ್ರೀ ರಘುನಾಥಯ್ಯ ಮೆಮೋರಿಯಲ್ ಹೋಲ್‌ನಲ್ಲಿ ಶ್ರೀ. ಟಿ. ಮೋನಪ್ಪ ತಿಂಗಳಾಯರ ಅಧ್ಯಕ್ಷತೆಯಲ್ಲಿ ಹರಿಜನ ಬಂಧುಗಳಿಂದ ಆಚರಿಸಲ್ಪಟ್ಟಿತು.

ರಥೋತ್ಸವ

ಮಂಗಳೂರು ಶ್ರೀ ವೆಂಕಟ್ರಮಣ ದೇವಳದ ರಥೋತ್ಸವ ಸಮಾರಂಭವು ಇದೇ ತಾ. 24ರಂದು ಅತಿ ವಿಜೃಂಭಣೆಯಿಂದ ಜರಗಿತು. ಮಾಮೂಲಿನಂತೆ ರಥೋತ್ಸವದ ಮೊದಲಿನ ದಿವಸ ರಾತ್ರಿ ನಡೆಯಲಿರುವ ಮೃಗಬೇಟೆ ಮೆರವಣಿಗೆಯು ಸರಕಾರದ ನಿರ್ಬಂಧದಿಂದಾಗಿ ಈ ವರ್ಷ ಜರಗಿಸಲಿಲ್ಲವೆಂದು ತಿಳಿದಿದೆ.

ಹೊಸ ಕಲೆಕ್ಟರ್

ನಮ್ಮ ಜಿಲ್ಲೆಗೆ ಕಲೆಕ್ಟರರಾಗಿ ವರ್ಗಾಯಿಸಲ್ಪಟ್ಟ ಜನಾಬ್ ಕರಮತುಲ್ಲಾ ಅವರು ಇದೇ ತಾ. 24ರಂದು ಚಾರ್ಜು ವಹಿಸಿರುವರು.

ಸರ್ಕಲ್ ಕೊಂಗ್ರೆಸ್

ಇದೇ ತಾ. 23ರಂದು ಮಂಗಳೂರು ಸರ್ಕಲ್ ಕೊಂಗ್ರೆಸ್ ಕಮಿಟಿಯ ಮಹಾಸಭೆಯು ಶ್ರೀ ಕೊಂಚಾಡಿ ಕೇಶವ ಶೆಣೈ ಅವರ ಅಧ್ಯಕ್ಷತೆಯಲ್ಲಿ ಜರಗಿ ಕಮಿಟಿಯ ಪುನರ್ ನಿರ್ಮಾಣವಾಯಿತು. ತಾ. 26ರಂದು ಸ್ವತಂತ್ರ ದಿನಾಚರಣೆಯ ಕಾರ್ಯಕ್ರಮ ನಿರ್ಧಾರವಾಯಿತು.

ಡಿ। ಕ್ಲಾ। ಮಿಶನ್

ಡಿಪ್ರೆಸ್ಡ್ ಕ್ಲಾಸ್ ಮಿಶನಿನ 45ನೇ ವಾರ್ಷಿಕೋತ್ಸವವು ಜಿಲ್ಲಾ ಜಡ್ಜರಾದ ಶ್ರೀಮಾನ್ ಎಲ್. ಎಸ್. ಪಾರ್ಥ ಸಾರಥಿ ಅಯ್ಯರ್ ಬಿ.ಎ., ಬಿ.ಎಲ್. ಅವರ ಅಧ್ಯಕ್ಷತೆಯಲ್ಲಿ ಇದೇ ತಾ. 24ನೇ ಸಂಜೆ ಜರಗಿತು.

ಮಿಶನ್ ಹೈಸ್ಕೂಲ್ ಹಳೆವಿದ್ಯಾರ್ಥಿ ಸಂಘ

ಇದರ ವಾರ್ಷಿಕೋತ್ಸವವು ಕಳೆದ ಆದಿತ್ಯವಾರ ಸಂಜೆ ಬಿ. ಎ. ಎಂ. ಹೈಸ್ಕೂಲಲ್ಲಿ ಶ್ರೀ. ಬಿ. ಆನಂದ ಬಾಳಿಗರ ಅಧ್ಯಕ್ಷತೆಯಿಂದ ಜರಗಿತು. ಜನಾಬ್ ಎಂ. ಅಬ್ದುಲ್ ಕರೀಮರು ಸ್ವಸ್ತಿ ವಾಚನ ಮಾಡಿದರು.

ಮಂಗಳೂರು ಮುನಿಸಿಪಾಲಿಟಿ-

"ಮಂಗಳೂರು ಮುನಿಸಿಪಲ್ ಕೌನ್ಸಿಲು ತನ್ನ 1941ನೇ ಇಸವಿ ಡಿಸೆಂಬರ ತಿಂಗಳ ತಾರೀಕು 17ರಲ್ಲು ನಡೆದ ಸಭೆಯ 4ನೇ ನಿರ್ಣಯದ ಪ್ರಕಾರ 1942ನೇ ಇಸವಿ ಎಪ್ರಿಲು ತಿಂಗಳ 1ನೇ ತಾರೀಕಿನ ಲಾಗ್ಯಾತು ಮಂಗಳೂರು ಮುನಿಸಿಪಾಲಿಟಿಯೊಳಗಿರುವ ಪ್ರತಿಯೊಂದು ಸ್ಥಳ ಮತ್ತು ಕಟ್ಟೋಣಗಳ ವರ್ಷಾವಧಿ ಮೌಲ್ಯದ ಮೇಲೆ ಪ್ರತಿಯೊಂದು ಅರ್ಧ ವರ್ಷಕ್ಕೆ ಈಗ ಇದ್ದ ಶೇಕಡಾ 4 ದರದ ದೀಪದ ತೆರಿಗೆಯನ್ನು ಶೇಕಡಾ 1ರ ದರದಂತೆ ಹೆಚ್ಚಿಸುವ ನಿರ್ಧಾರವನ್ನು ಪ್ರಕಟಿಸುವುದಾಗಿ ನಿಶ್ಚಯಿಸಿರುತ್ತದೆ. ಈ ರೀತಿ ಹೆಚ್ಚಿನ ದರದಲ್ಲಿ ತೆರಿಗೆಯನ್ನು ಹೊರಿಸುವ ವಿಷಯವನ್ನು ಮಂಗಳೂರು ಮುನಿಸಿಪಲ್ ಕೌನ್ಸಿಲಿನವರು ಈ ನೋಟೀಸನ್ನು ದಕ್ಷಿಣ ಕನ್ನಡ ಜಿಲ್ಲಾ ಗಜೇಟಿನಲ್ಲಿ ಪ್ರಕಟಿಸಿದ ತಾರೀಕಿನಿಂದ ಒಂದು ತಿಂಗಳ ನಂತರ ಪುನಃ ವಿಮರ್ಶಿಸುವರು. ಈ ಒಂದು ತಿಂಗಳ ಸಮಯದೊಳಗೆ ಆಕ್ಷೇಪಣೆಗಳೇನಾದರೂ ಬಂದಲ್ಲಿ ಅಂಥವುಗಳು ಕೌನ್ಸಿಲಿನವರಿಂದ ಗಮನಿಸಲ್ಪಡುವುವು" ಎಂದು ಮಂಗಳೂರು ಮುನಿಸಿಪಲ್ ಕಮಿಶನರು ತಿಳಿಸುತ್ತಾರೆ.

ಪಾಣೆಮಂಗಳೂರು

ಎಸ್. ವಿ. ಎಸ್. ಹಾಯರ್ ಎಲಿಮೆಂಟರಿ ಶಾಲೆಯ ವರ್ಧಂತ್ಯುತ್ಸವವು ತಾ. 31ರಂದು ಶ್ರೀ. ವೆಂಕಟ್ರಾಯ ಬಾಳಿಗ, ಎಂ. ಎಲ್. ಎ. ಇವರ ಅಧ್ಯಕ್ಷತೆಯಿಂದ ಜರಗಲಿರುವುದು.

ಕಾಸರಗೋಡು

ಶಾಲಾ ವರ್ಧಂತಿ:- ಇಲ್ಲಿಯ ನುಳ್ಳಿಪಾಡಿ ಎಯ್ಡೆಡ್ ಎಲಿಮೆಂಟರಿ ಶಾಲೆಯ ವಾರ್ಷಿಕೋತ್ಸವವು ಅತಿ ವಿಜೃಂಭಣೆಯಿಂದ ಜರುಗಿತು. ಗಂಡಸರ ದಿನ ಶ್ರೀ. ನಾಗಿರೆಡ್ಡಿಯವರೂ, ಹೆಂಗಸರ ದಿನ ಶ್ರೀಮತಿ ಸರೋಜಿನಿ ಕಕ್ಕಿಲ್ಲಾಯರೂ ಅಧ್ಯಕ್ಷಸ್ಥಾನವನ್ನಲಂಕರಿಸಿದ್ದರು.

ನೀಲೇಶ್ವರ

ಶಾಲಾ ವರ್ಧಂತ್ಯುತ್ಸವ:- ಇಲ್ಲಿಯ ರಾಜಾಸ್ ಹೈಸ್ಕೂಲಿನ ವರ್ಧಂತ್ಯುತ್ಸವವು ಫೆಬ್ರುವರಿ ತಾ. 6ರಂದು ಶ್ರೀ. ಕೆ. ಆರ್. ಕಾರಂತ, ಎಂ. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗುವುದು.

ಬೆಳ್ತಂಗಡಿ

ಬೆಳ್ತಂಗಡಿ ಸಹಕಾರಿ ಸಂಘದ ನೂತನ ಕಟ್ಟೋಣದ ಪ್ರವೇಶೋತ್ಸವ ಸಮಾರಂಭವನ್ನು ಶ್ರೀಮಾನ್ ಧರ್ಮಸ್ಥಳ ಮಂಜಯ್ಯ ಹೆಗ್ಗಡೆ, ಯಂ. ಎಲ್. ಸಿ. ಇವರಿಂದ ಫೆಬ್ರುವರಿ ತಿಂಗಳ ತಾ. 6ನೇ ಶುಕ್ರವಾರ ಪೂರ್ವಾಹ್ನ ಘಂಟೆ 10-30ಕ್ಕೆ ಜರಗಿಸುವುದಾಗಿ ನಿಶ್ಚಯಿಸಿರುವುದು.

ಪುತ್ತೂರು

ಋಣಪರಿಹಾರ ತೀರ್ಮಾನ ಬೋರ್ಡು.

ಇದರ ಸಭೆಯು ಪುತ್ತೂರಲ್ಲಿ ಸೇರಿ, ಮಂಗಳೂರಿನ ಡೆಟ್ಟ್ ಕೊನ್ಸಿಲಿಯೇಶನ್ ಬೋರ್ಡಿನೊಂದಿಗೆ ಸೇರಿಸಲಾಯಿತೆಂದೂ ಈ ಬೋರ್ಡಿಗೆ ಡಾ. ರಾಯಪ್ಪ ಕಾಮತ್ ಮತ್ತು ಶ್ರೀ. ಎಫ್. ಸಿ. ಎಸ್. ಆಲ್ವುಕರ್ಕರು ಸದಸ್ಯರಾಗಿ ನೇಮಿಸಲ್ಪಟ್ಟಿರುವರೆಂದು ತಿಳಿದಿದೆ.

ಚೊಕ್ಕಾಡಿ

ಇಲ್ಲಿಯ ವರ್ಗದಾರರ ಸಂಘದ ಆಶ್ರಯದಲ್ಲಿ ಫೆಬ್ರುವರಿ 6ರಿಂದ 13ರ ತನಕ ಕೃಷಿ, ಕೈಗಾರಿಕೆ ಮತ್ತು ಉತ್ತಮ ಜಾತಿಯ ದನಗಳ ಪ್ರದರ್ಶನವು ಜರಗಲಿರುವುದಾಗಿ ಕೃಷಿ ಮತ್ತು ಕೈಗಾರಿಕೆಗೆ ಸಂಬಂಧಪಟ್ಟ ವಸ್ತುಗಳನ್ನು ಪ್ರದರ್ಶನಕ್ಕೆ ಕಳುಹಿಸಿ ಪ್ರೋತ್ಸಾಹಿಸಬೇಕಾಗಿ ಮಹನೀಯರಲ್ಲಿ ಸಂಘದವರ ವಿನಂತಿಯಿದೆ. ಈ ಸಮಯದಲ್ಲಿ ಪುತ್ತೂರು ತಾಲೂಕು ಜೇನುನೊಣ ಸಾಕುವವರ ಸಹಕಾರ ಸಂಘದವರು ಜೇನುನೊಣ ಸಾಕುವ ವಿಚಾರ ವಿಶೇಷ ಮಾಹಿತಿಯನ್ನು ಕೊಡಲು ಸಮ್ಮತಿಸಿರುವರು. ಯಕ್ಷಗಾನ, ಹರಿಕಥೆ, ಭಾಷಣಗಳು, ಮಾಯಾಲಾಂದ್ರ ಪ್ರದರ್ಶನ, ವಿವಿಧ ವಿನೋದಾವಳಿಗಳು ಮೊದಲಾಗಿ ಕಾರ್ಯಕ್ರಮದಲ್ಲಿವೆ.

ಉಡುಪಿ

ತಾ. 19ರಲ್ಲು ಉಡುಪಿ ಬೋರ್ಡ್ ಹೈಸ್ಕೂಲಿನ ವಿದ್ಯಾರ್ಥಿಗಳ ಸಭೆಯು ಹೆಡ್‌ಮಾಸ್ತರರೊಕೀ ಫೆರ್ನಾಂಡೀಸರ ಅಧ್ಯಕ್ಷತೆಯಲ್ಲಿ ಜರಗಿತು. 4ನೇ ದ. ಕ. ವಿದ್ಯಾರ್ಥಿ ಪರಿಷತ್ತಿನ ಸ್ವಾಗತಾಧ್ಯಕ್ಷರಿಂದ ಬಿ. ಎಸ್. ಭಾಸ್ಕರ ಪೈಗಳು ವಿದ್ಯಾರ್ಥಿ ವೃಂದದ ಆವಶ್ಯಕತೆಯ ವಿಷಯ ಭಾಷಣವಿತ್ತರು. ಅನಂತರ ಉಡುಪಿ ವಿದ್ಯಾರ್ಥಿ ಸಂಘವನ್ನು ಸ್ಥಾಪಿಸಬೇಕೆಂಬುದಾಗಿ ನಿರ್ಣಯಿಸಿ ಶ್ರೀ. ಬಿ. ಶಾಮರಾಯ ಶೆಟ್ರನ್ನು ಅಧ್ಯಕ್ಷರನ್ನಾಗಿ ಆರಿಸಿದರು. ಶ್ರೀ. ಟಿ. ರಮೇಶ ಪೈ ಇವರನ್ನು ಅಧ್ಯಕ್ಷರನ್ನಾಗಿಯೂ, ಶ್ರೀ. ಯಂ. ಕೃಷ್ಣ ಹೆಬ್ಬಾರ್ ಇವರನ್ನು ಕಾರ್ಯದರ್ಶಿಯನ್ನಾಗಿಯೂ ಮತ್ತು 10 ಜನರ ಒಂದು ಕಾರ್ಯಕಾರಿ ಕಮಿಟಿಯನ್ನೂ ಆರಿಸಲಾಯಿತು.

ಸಹಕಾರಿ ಸಂಘದ ಸಭೆ

ಉಡುಪಿ ತಾಲೂಕು ಸಹಕಾರಿ ಸಂಘ ಕೂಟದ ವರ್ಷಾವಧಿ ಮಹಾಸಭೆಯು ಇದೇ ತಾ. 18ರಲ್ಲಿ ಶ್ರೀ. ಕೆ. ಜಿ. ಬಲ್ಲಾಳರ ಅಧ್ಯಕ್ಷತೆಯಲ್ಲಿ ಜರಗಿ ರಜಿಸ್ಟ್ರಾರರ ಆಡಿಟ್ ಸರ್ಟಿಫಿಕೇಟ್ ಸ್ವೀಕಾರ, ಗತವರ್ಷದ ವರದಿ ಮತ್ತು ಚಾಲ್ತಿ ವರುಷದ ಬಜೇಟು ಮಂಜೂರಾತಿಗಳಾದ ಅನಂತರ ಆಡಳಿತೆಯ ಮಂಡಳಿಗೆ ಸದಸ್ಯರ ಚುನಾವಣೆ ನಡೆಯಿತು.

ಯಕ್ಷಗಾನ ಸಮಾರಂಭ

ಇದೇ ತಾ. 31ನೇ ಶನಿವಾರ ರಾತ್ರಿ 10 ತಾಸಿಗೆ ಮೋಡರ್ನ್ ಹಾ। ಎಲಿಮೆಂಟರಿ ಶಾಲಾ ವಠಾರದಲ್ಲಿ ಜಿಲ್ಲೆಯ ಪ್ರಸಿದ್ಧ ಅರ್ಥಧಾರಿಗಳ ಕೂಡುವಿಕೆಯಿಂದ 'ಭೀಷ್ಮಾರ್ಜುನ ಕಾಳಗ'ವೆಂಬ ಪ್ರಸಂಗದ ತಾಳಮದ್ದಳೆ ನಡೆಯಲಿರುವುದೆಂದೂ, ಬಂದ ಉತ್ಪತ್ತಿಯು ಉಡುಪಿ ತಾಲೂಕು ಹರಿಜನ ವಿದ್ಯಾರ್ಥಿ ಭವನದ ಸಲುವಾಗಿ ಉಪಯೋಗಿಸಲ್ಪಡುವುದೆಂದೂ ತಿಳಿದಿದೆ.

ದಿ ಸೌತ್ ಕೆನರಾ ಫಿಶರೀಸ್ ಟೀಚರ್ಸ್ ಯೂನಿಯನ್

ಇದರ ವಾರ್ಷಿಕ ಮಹಾಸಭೆಯು ಕಲ್ಯಾಣಪುರ ಫಿಶರೀಸ್ ಶಾಲೆಯಲ್ಲಿ ಸಂಘದ ಸ್ಥಿರಾಧ್ಯಕ್ಷರಾದ ಶ್ರೀ. ಎಸ್. ಡಿ'ಸೋಜರವರ ಅಧ್ಯಕ್ಷತೆಯಲ್ಲಿ ಜರಗಿತು. ಅಂದಿನ ಸಭೆಯಲ್ಲಿ ಸ್ವೀಕೃತವಾದ ನಿರ್ಣಯಗಳಲ್ಲಿ, ಈಗಿನ ಯುದ್ಧ ಸಂಬಂಧ ಸಾಮಾನುಗಳ ಧಾರಣೆಯು ಏರಿರುವುದರಿಂದ ಪ್ರತಿಯೊಬ್ಬ ಫಿಶರೀಸ್ ಉಪಾಧ್ಯಾಯನಿಗೆ ಕನಿಷ್ಠಪಕ್ಷ ತಿಂಗಳೊಂದರ ರೂ. 3ರಂತೆ ತುಟ್ಟಿ ಭತ್ತೆಯನ್ನು ಕೊಡಬೇಕೆಂಬುದು ಮುಖ್ಯದ್ದಾಗಿದೆ. ಮುಂದಿನ ವರ್ಷದ ಕಾರ್ಯಕಾರಿ ಮಂಡಳಿಯೂ ರಚಿಸಲ್ಪಟ್ಟಿತು.

ಕುಂದಾಪುರ

ಹಿಂದೀ ಪ್ರೇಮಿ ಮಂಡಳಿದ ಆಶ್ರಯದಲ್ಲಿ ತಾ. 31ರಂದು ಪ್ರಮಾಣಪತ್ರ ವಿತರಣೋತ್ಸವವು ಶ್ರೀ. ಆರ್. ಪ್ರಸಾದ್, ಕುಂದಾಪುರ ಡಿವಿಜನಿನ ಸಬ್ ಕಲೆಕ್ಟರ್ ಇವರ ಅಧ್ಯಕ್ಷತೆಯಿಂದ ಜರಗಲಿರುವುದು.

ಡೋಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಸ್ವದೇಶಾಭಿಮಾನಿಯಲ್ಲಿ

ನಿಮ್ಮ ಜಾಹೀರಾತುಗಳನ್ನು

ಕೊಡಿರಿ.

ಸಿನೆಮಾ ಪುಟ

ಅತ್ರೆಯವರ 'ರಾಜಾರಾಣಿ'

ಅತ್ರೆ ಪಿಕ್ಚರ್ಸಿನವರ 'ರಾಜಾರಾಣಿ'ಯು ಈಗ ಪೂರ್ತಿಗೊಂಡಿದೆ ನಿರ್ದೇಶಕ ನಾಪ್ಕಿ ಇವರು ಇದನ್ನು ತಯಾರಿಸಿದ್ದಾರೆ ನಿರ್ದೇಶಕ ನಾಪ್ಕಿ ಚಲಚ್ಚಿತ್ರ ಕೈಗಾರಿಕೆಯ ಸಂಪೂರ್ಣ ಪರಿಚಯವುಳ್ಳ ಮೇಧಾವಿಗಳು ಪ್ರೊ ಅತ್ರೆಯವರು ಇದರ ನಿರ್ಮಾಪಕರು ಮತ್ತು ಕಥಾಲೇಖಕರು ಅತ್ರೆಯವರು ಸಿನೆಮಾಲೋಕಕ್ಕೆ ಸಾಹಿತ್ಯ ಲೋಕಕ್ಕೆ ಹೊಸಬರಲ್ಲ ವನಮಾಲಾ, ಮಜಾರ್ ಖಾನ್, ನವೀನ ಯಾಗ್ನಿಕ್, ಮಾಯಾದೇವಿ ಬೇಬಿ ವಿಮಲಾ, ದಾವಿದ್ ಮತು ಗೋವಿಂದ್ ಇವರು ಇದರ ನಟವರ್ಗದವರಾಗಿರುತ್ತಾರೆ ಅವಿಭಕ್ತ ಕುಟುಂಬದ ಜೀವನ ಚಿತ್ರವು ಇದರಲ್ಲಿ ಚಿತ್ರಿಸಲಾಗಿದೆ 'ರಾಜಾರಾಣಿ' ಈ ವರ್ಷದ ಚಿತ್ರಗಳಲ್ಲಿ ಪ್ರಸಿದ್ಧಿಯನ್ನು ಪಡೆಯುವುದಾಗಿ ಊಹಿಸಲಾಗಿದೆ.

ಸಿಕಂದರನ್ನು ನೋಡಿ ತಲೆದೂಗಿದರು

ಗುಜರಾಥಿನ ವಿದ್ಯಾವತೀ ಮಹಿಳೆ ಲೇಡಿ ವಿದ್ಯಾಗೌರಿ ಎಂಬಾಕೆ ಮಿನೆರ್ವಾದ ಸಿಕಂದರ್ ಚಿತ್ರವನ್ನು ನೋಡಿ ಮೆಚ್ಚಿ ಈ ರೀತಿ ಬರೆದಿರುವರು —

ಹಲವು ಶತಮಾನಗಳ ಹಿಂದೆ ಭಾರತದಲ್ಲಿ ನಡೆದ ಐತಿಹಾಸಿಕ ಘಟನೆಗಳನ್ನು ಇದು ತೋರಿಸುತ್ತದೆ ನಿರ್ದೇಶಕರು ಇದನ್ನು ತಯಾರಿಸುವಲ್ಲಿ ಹಣ ಪ್ರಯತ್ನಗಳನ್ನಾವುದನ್ನೂ ವ್ಯಯಿಸಲು ಹಿಂದೆ ಮುಂದೆ ನೋಡಲಿಲ್ಲ ಗ್ರೀಸಿನ ಮತ್ತು ಭಾರತದ ಹಲವು ಐತಿಹಾಸಿಕ ದೃಶ್ಯಗಳಿವೆ ಯುದ್ಧ ಚಿತ್ರ ಮತು ಹಳ್ಳಿಯ ಚಿತ್ರ ಅಷ್ಟು ಸಾಹಜಿಕವಾಗಿದೆ ಕಥೆಯು ಚರಿತ್ರೆಯಲ್ಲಿ ಪ್ರಸಿದ್ಧವಾಗಿದ್ದು ಆಬಾಲವೃದ್ಧ ಸಂತೋಷಜನಕವಾಗಿದೆ

ವಸಂತಸೇನಾ (ಕನ್ನಡ) ಚಿತ್ರದಲ್ಲಿ ಅಭಿನಯಿಸಿದ ಶ್ರೀಮತಿ ಲಕ್ಷ್ಮೀಬಾಯಿ

ತಮಿಳು 'ಸಾವಿತ್ರಿ'

ಶಾಂತಾ ಆಪ್ಟೆ ಅಭಿನಯಿಸಿದ ತಮಿಳು ಸಾವಿತ್ರಿ ಚಿತ್ರವು ಅತ್ಯಂತ ಪ್ರಸಿದ್ಧಿಯನ್ನೇರುತ್ತಿದೆ ತಮಿಳು ಭಾಷೆಯನ್ನಾದರೂ ಶಾಂತಾ ಆಪ್ಟೆ ತಮಿಳಿಯಳಂತೆ ಸ್ವಚ್ಛವಾಗಿ ಆಡುತ್ತಾಳೆ ಹೆಚ್ಚಾಗಿ ಹಿಂದುಸ್ಥಾನೀ ಸಂಗೀತ ಪ್ರಿಯಳಾದ ಅವಳು ದಕ್ಷಿಣಾದಿ ಸಂಗೀತದಲ್ಲಿಯೂ ಬಹಳ ನಿಪುಣಳಾಗಿದ್ದಾಳೆ ಸುಬ್ಬುಲಕ್ಷ್ಮಿ ನಾರದನ ಪಾತ್ರಾಭಿನಯ ಮಾಡಿರುವಳು ಗಂಡುಸು ವೇಷದಲ್ಲಿ ಹೆಂಗುಸು ಅಭಿನಯಿಸಿದ್ದು ಇದೇ ಹೊಸತಾದರೂ ಆಶ್ಚರ್ಯಕರವಾಗಿದೆ ಆಕೆಯೂ ಅನೇಕ ಹಾಡು ಹಾಡುತ್ತಾಳೆ

ಸ್ನೇಹಪ್ರಭಾ ಪ್ರಧಾನ

ಎಂಬೀ ಹೆಸರಿನ ಹೊಸ ನಟಿಯೊಬ್ಬಳು ನೇಶನಲ್ ಪಿಕ್ಚರ್ಸಿನವರ 'ನಿರ್ದೋಷ'ದಲ್ಲಿ ಪಾತ್ರವಹಿಸುವಳು

ನಾಸೀಮಳ ಗೃಹಜೀವನ

ಪ್ರಸಿದ್ಧ ಸಿನೆಮಾ ತಾರೆ ನಾಸೀಮಳ ವಿಷಯದಲ್ಲಿ ಸಿನೆಮಾ ಪತ್ರಿಕೆಯೊಂದು ಹೀಗೆ ಬರೆದಿದೆ

'ಅವಳ ಮನೆಯೊಳಗೆ ಮೊದಲ್ ರೀತಿ ಉಡುಪು ಉಡುವಳು, ಹೊರಗೆ ಸೀರೆ ಉಟ್ಟುಕೊಳ್ಳುತ್ತಾಳೆ ಜನರನ್ನು ಸಂದರ್ಶಿಸಿದರೆ ಬಹಳ ನಾಚಿಕೆಪಡುತ್ತಾಳೆ ಕ್ಲಬ್ಬುಗಳಿಗೆ ಹೋಗುವುದೇ ಇಲ್ಲ ಡಿಲ್ಲಿಯಲ್ಲಿ ಹುಟ್ಟಿದಳು ಡಿಲ್ಲಿ ರಾಜನ ರಾಣಿಯಾಗಿ ನಟಿಸಿದಳು ತಿಂಗಳಿಗೆ ೨,೫೦೦ ರೂಪಾಯಿ ಸಂಪಾದಿಸುತ್ತಾಳೆ ಮದ್ಯಪಾನ ಮಾಡುವುದಿಲ್ಲ ಚಾ ಕಾಫಿ ಕೂಡಾ ಕುಡಿಯುವುದಿಲ್ಲ ಪೃಥ್ವಿರಾಜ ಮತು ಚಂದ್ರಮೋಹನ್ ಇವರೊಂದಿಗೆ ಅಭಿನಯಿಸಲು ಇಚ್ಛಿಸುತಾಳೆ ಉಡಿಗೆ ತೊಡಿಗೆಗಳಿಗೆ ಬಹಳ ವೆಚ್ಚಮಾಡುತಾಳೆ ಸರ್ದಾರ್ ಅಖ್ತಾರಳು ಆಕೆಯ ಸ್ನೇಹಿತಳು

ಛಾಯಾ ಪಿಕ್ಚರ್ಸ್

ಎಂಬ ಹೆಸರಿನ ಹೊಸ ಚಲಚಿತ್ರ ಕಂಪೆನಿಯೊಂದು ಮುಂಬಯಿಯಲ್ಲಿ ಪ್ರಾರಂಭವಾಗಿದೆ ಗಜಾನನ ಜಾಗಿರ್ದಾರ್ ಪಂಡಿತ ಆನಂದ ಕುಮಾರ್ ಮತ್ತು ರಾಜಾ ಪಂಡಿತ್ ಇವರು ಇದನ್ನು ಸ್ಥಾಪಿಸಿದರು ಇವರ ಮೊದಲನೆಯ ಚಿತ್ರ 'ಗೋರಾ ಕುಂಬಾರ್' ಎಂದು ತಿಳಿದಿದೆ ಲಲಿತಾ ಪವಾರಳು ಇದರಲ್ಲಿ ನಟಿಸುವಳಂತೆ

ಹಿಂದೀ ನಟರ ವಾರ್ಷಿಕ ಸಂಬಳ

ಚಂದ್ರಮೋಹನ್ ರೂ 45,000, ಜಗದೀಶ್ ರೂ 40,000, ಪೃಥ್ವಿರಾಜ್ ರೂ 36,000, ಮುಝಾರ್ ಖಾನ್ ರೂ 36,000 ಶೋಭನಾ ಸಮರ್ಥ ರೂ 36,000, ಮೋತಿಲಾಲ್ ರೂ 30,000 ಮಾಧುರಿ ರೂ 30,000, ನಾಸೀಮ್ ರೂ 30,000, ಶಾಂತಾ ಹುಬ್ಳಿಕರ್ ರೂ 30,000 ಸರ್ದಾರ್ ಅಖ್ತಾರ್ ರೂ 30,000

ರೈಲು ಬಂಡಿಗಳ ಸಮಯ

ಇದೇ ಜುಲೈ ತಾ 1ರಿಂದ ವ್ಯತ್ಯಾಸವಾದ ರೈಲು ಬಂಡಿಗಳ ಸಮಯಗಳು ಈ ಕೆಳಗಿನಂತಿವೆ—

ಗಾಡಿಗಳು	ಹೊರಡುವ ಗಂಟೆ	ತಲ್ಪುವ ಗಂಟೆ
ಮೂಡ್ರಾಸ್ ಒಂದಿ	3 45 ರಾತ್ರಿ	9 25 ರಾತ್ರಿ
ಸೀಲೋನ್ ಬೋಟ್ ಮೇಲ್	12 ಬೆಳಗ್ಗೆ	10 ಅಪರಾಹ್ನ
ಮಂಗಳೂರು ಎಕ್ಸ್		
ಪ್ರೆಸ್ (ಮೈಲ್)	9 ಬೆಳಗ್ಗೆ	1 ಸಾಯಂ
ಜಾಲಾರ್ ಪೇಟೆ		
ಪೆಸೆಂಜರ್	12 0 ಮಧ್ಯಾಹ್ನ	2 ಸಾಯಂ
ಕಾಸರಗೋಡು		
ಪರಿಗೆ	2 ಸಾಯಂ	6 ಸಾಯಂ
ಕಣ್ಣನೂರು		
ವರೆಗೆ	2 ಸಾಯಂ	40 ಪೂರ್ವಾಹ್ನ

ಸೌಂದರ್ಯ ಮತ್ತು ಮುಖಕಾಂತಿಗೆ

ಹಿಮಾನಿ ಸ್ನೋ

ಹಿಂದೂದೇಶದಲ್ಲಿ ಪ್ರಥಮವಾಗಿ — ತಯಾರಿಸಿದ ಸ್ನೋ —

ಅಂದಿನಿಂದಲೂ ಶ್ರೇಷ್ಠವಾಗಿಯೇ ಇದೆ ಮುಖದ ಮೇಲಿನ ಯಾವತ್ತೂ ಕಲೆ, ಮಚ್ಚೆ ಛಿದ್ರ ಮುಂತಾದುವನ್ನು ಗುಣಪಡಿಸುವುದು

ಹಿಮಾನಿ ಗ್ಲಿಸರಿನ್ ಸಾಬೂನುಗಳು

ಪಾರದರ್ಶಕ—ಶುದ್ಧ

ಕೋಮಲವಾದ ಪರಿಮಳ



ದಕ್ಷಿಣ ಕನ್ನಡದ ಡಿಸ್ಟ್ರಿಬ್ಯೂಟರರು —

ಕೊರ್ಪೊರೇಶನ್ ಟ್ರೇಡಿಂಗ್ ಕೊ.

ಮಹಮ್ಮದಾಲಿ ರೋಡ್, ಮಂಗಳೂರು.

ಇದು ನಿಮ್ಮ ಚರ್ಮವನ್ನು ತಂಪಾಗಿರಿಸುವುದು ಅಲ್ಲದೆ ಅಧಿಕ ಉಷ್ಣತೆಯಿಂದ ಚರ್ಮವನ್ನು ರಕ್ಷಿಸುವುದು.

ಅಧಿಕ ಉಷ್ಣತೆಯನ್ನು ಪರಿಹರಿಸಲು ತಕ್ಕ ಹಂಚಿಕೆಗಳಿಲ್ಲದೆ ಅಸೌಖ್ಯವನ್ನು ಹೊಂದಿದ್ದಾಕೆ ಬಹಳ ಸ್ತ್ರೀ ಸಾವಿರಾರು ಮಹಿಳೆಯರು ಆನಂದದಾಯಕವಾದ ಸೌಖ್ಯವನ್ನು ಪಡೆಯಲು ಕುಟಿಕೂರಾ ಟಾಲ್ಕಮ್ ಪೌಡರನ್ನು (Cuticura Talcum Powder) ಶೋಧನೆ ಮಾಡಿ ಉಪಯೋಗಿಸುತ್ತಿದ್ದಾರೆ ಬಹಳ ಕೋಮಲವಾದ ಚರ್ಮವನ್ನು ಕೂಡ ಸಂತವಿಸುವುದು ಕುಟಿಕೂರಾ ಟಾಲ್ಕಮ್ ಪೌಡರನ್ನು (Cuticura Talcum) ವಿಶಿಷ್ಟ ರೀತಿಯಿಂದ ತಯಾರಿಸಿ ತಕ್ಕುದಾದ ಪರಿಮಳ ದ್ರವ್ಯ ಮತ್ತು ತೈಲಗಳಿಂದ ಓಷಧೀಕರಿಸಲ್ಪಟ್ಟಿದೆ ಸಾಮಾನ್ಯ ಪೌಡರುಗಳಿಗಿಂತ ಉತ್ತಮ ಗುಣವುಳ್ಳದ್ದಾಗಿ ಚರ್ಮವನ್ನು ತಂಪಾಗಿರಿಸಿ ಸಂತವಿಸುವ ಶಕ್ತಿ ಇರುವುದು ಉಷ್ಣದಿಂದ ಬೆಂದಂತ ಚರ್ಮದ ಭಾಗಕ್ಕೆ ಸ್ವಲ್ಪ ಪೌಡರನ್ನು ಹಚ್ಚಿದಾಕ್ಷಣ ತಂಪಾದ ಸ್ಪರ್ಶದಂತೆ ಭಾಸವಾಗುತ್ತದೆ ಬೆವರನ್ನು ಹೀರಿಕೊಂಡು ಅನೇಕ ತಾಸುಗಳ ಪರ್ಯಂತರ ಆನಂದವನ್ನೀಯುವುದು ಎಲ್ಲಾ ಮಹಿಳೆಯರು ಇದರ ಸುಮಧುರವಾದ ಪರಿಮಳವನ್ನು ಹೆಚ್ಚುತ್ತಿರುವರು

ಇಂದೇ ಒಂದು ಕುಟಿಕೂರಾ ಟಿನ್ನನ್ನು (Cuticura) ಕೊಂಡುಕೊಳ್ಳಿರಿ ಕುಟುಂಬದ ಪ್ರತೀ ಒಬ್ಬನಿಗೂ ಬಹು ಅಮೂಲ್ಯವಾದದ್ದು.

ಎಲ್ಲಾ ಕೆಮಿಸ್ಟರಲ್ಲಿಯೂ ಅಂಗಡಿಗಳಲ್ಲಿಯೂ ಮಾರಲ್ಪಡುತ್ತದೆ.

ಕುಟಿಕೂರಾ ಟಾಲ್ಕಮ್ ಪೌಡರು

CUTICURA TALCUM POWDER

ವಿಜ್ಞಾನಯುಗ

ಕಾಗದ ತಯಾರಿಸಿದ್ದು ಕವಿತೆ ಬರೆಯಲಿಕ್ಕೆ

ಸುಮಾರು 3,000 ವರ್ಷಗಳ ಹಿಂದೆ ಚೀನೀಯರು ಕಾಗದವನ್ನು ತಯಾರಿಸಿದ್ದರು. ಅವರು ಕಾಗದವನ್ನು ತಯಾರಿಸಿದ್ದು ಕವಿತೆಗಳನ್ನು ಬರೆಯುವುದಕ್ಕಾಗಿ. ಬ್ರಿಟಿಷರು, ಯುರೋಪಿಯನರು ಆಗ ಕಾಡು ಗುಡ್ಡಗಳಲ್ಲಿ ಅರಣ್ಯವಾಸಿಗಳಂತೆ, ಮೃಗಗಳಂತೆ ಜೀವಿಸುತ್ತಿದ್ದ ಕಾಲದಲ್ಲಿ ಕಾಗದವನ್ನು ಏಷ್ಯದ ಜನರು ಕಂಡುಹಿಡಿದರು. ತ್ಸಾಯಿಲುನ್ ಎಂಬುದು ಕಾಗದವನ್ನು ಕಂಡುಹಿಡಿದವನ ಹೆಸರು. ಹೋರೀ ಎಂಬ ಚೀನದ ದೊರೆಯ ಆಸ್ಥಾನದಲ್ಲಿದ್ದನು. ಕಂಡುಹಿಡಿದ ಹಿಂದೆ ವರ್ಷಗಳ ವರೆಗೆ ಚೀನಿಯರು ಅದರ ಗುಟ್ಟನ್ನು ಯಾರಿಗೂ ಹೇಳದೆ ತಮ್ಮಲ್ಲಿಯೇ ಇಟ್ಟುಕೊಂಡಿದ್ದರು. ಈ ಮೇಲೆ ಸಾವಿರ ವರ್ಷಗಳು ಕಳೆದ ಬಳಿಕ ಕಾಗದ ತಯಾರಿಕೆಯು ಸಂಪೂರ್ಣ ಸ್ಥಿತಿಗೆ ಬಂದಿತು. ತ್ಸಾಯಿಲುನ್ ಎಂಬವನು ಕಾಗದವನ್ನು ಪ್ರಥಮವಾಗಿ ತಯಾರಿಸಿದ್ದು ಕವಿತೆ ಬರೆಯಲಿಕ್ಕಾಗಿ ಆದರೆ ಪಾಶ್ಚಿಮಾತ್ಯರು ಅದನ್ನು ತಮ್ಮ ರಾಜಕೀಯ ಪ್ರಚಾರಕ್ಕಾಗಿ ಉಪಯೋಗಿಸಿಕೊಂಡರು.

◆

ಹಿಂದೂದೇಶದಲ್ಲಿ ೧,೪೭,೦೦೦ 'ಬ್ರಾಡ್‌ಕಾಸ್ಟ್ ರಿಸೀವಿಂಗ್ ಸೆಟ್ಟು'ಗಳಿವೆ

ಈ ವರ್ಷ ದಶಂಬರ ೧೯೪೧ರಲ್ಲಿ ೧೬,೦೪೧ ಬ್ರಾಡ್‌ಕಾಸ್ಟ್ ರಿಸೀವರ್ ಲೈಸನ್ಸುಗಳು ಕೊಡಲ್ಪಟ್ಟಿವೆ, ಕಳೆದ ವರ್ಷ ದಶಂಬರಕ್ಕೆ ಕೇವಲ ೧೨,೭೩೭ ಆಗಿತ್ತು. ೧೯೪೧ನೇ ಇಸವಿ ನವಂಬರದಲ್ಲಿ ೧೩,೫೧೪ ಕೊಡಲ್ಪಟ್ಟಿತ್ತು. ಹೀಗೆ ದಿವಸ ಹೋದಂತೆ ಹಿಂದೂದೇಶದಲ್ಲಿ ಬ್ರಾಡ್‌ಕಾಸ್ಟ್ ರಿಸೀವಿಂಗ್ ಸೆಟ್ಟುಗಳು ಹೆಚ್ಚಾಗುತ್ತಾ ಇವೆ ಹೀಗೆ ಒಟ್ಟಿನಿಂದ ಹಿಂದೂದೇಶದಲ್ಲಿ ೧೪೭೦೩೧ ಸೆಟ್ಟುಗಳು ಬ್ರಿಟಿಷ ಹಿಂದೂಸ್ಥಾನದಲ್ಲಿ (ಅಶ್ರಿತ ರಾಜ್ಯಗಳನ್ನು ಬಿಟ್ಟು) ಇವೆಯೆಂದು ತಿಳಿದಿದೆ. ೧೯೪೦ನೆಯ ಇಸವಿಯಲ್ಲಿ ಇದರ ಸಂಖ್ಯೆ ೧೧೯,೪೧೭ ಮಾತ್ರ ಇತ್ತು. ಹೀಗೆ ಒಂದೇ ವರ್ಷದಲ್ಲಿ ೨೭ ಅಂಶ ಸಂಖ್ಯೆ ಹೆಚ್ಚಿರುವುದು

◆

ಮೋಟರು ಕೈಗಾರಿಕೆ ಸುರುಮಾಡಲು ವಿದೇಶೀಯರಿಗೆ ಒಪ್ಪಿಗೆ

ಮೋಟರು ಕೈಗಾರಿಕೆಯನ್ನು ಹಿಂದೂದೇಶದಲ್ಲಿ ಪ್ರಾರಂಭಿಸಲು ಸರಕಾರದವರು ಸಮ್ಮತಿ ಕೊಡಲೊಪ್ಪಲಿಲ್ಲವೆಂಬುದು ಸರ್ವರಿಗೂ ತಿಳಿದ ವಿಚಾರ. ಈ ವಿಷಯದಲ್ಲಿ ತಜ್ಞರಾದ ಸರ್ ವಿಶ್ವೇಶ್ವರಯ್ಯನವರು ಮಾಡಿದ ಪ್ರಯತ್ನಗಳೆಲ್ಲವೂ ನಿರರ್ಥಕವಾಗಿ ಹೋದಂತಾಗಿ, ಸರಕಾರವೂ ಈ ಕಾಲದಲ್ಲಿ ಮೋಟರು ಕೈಗಾರಿಕೆಯನ್ನು ಹಿಂದೂದೇಶದಲ್ಲಿ ಪ್ರಾರಂಭಿಸಿದರೆ, ಯುದ್ಧಕ್ಕೆ ಬೇಕಾದ ಸೌಕರ್ಯಕ್ಕೆ ತೊಂದರೆಯಾಗಬಹುದೆಂದು ಆಕ್ಷೇಪವೆತ್ತಿತ್ತು. ಆದರೆ ಈಗ ಒಂದು ವಿದೇಶೀಯ ಸಂಸ್ಥೆಗೆ ಹಿಂದೂದೇಶದಲ್ಲಿ ಮೋಟರು ಕೈಗಾರಿಕೆ ಪ್ರಾರಂಭಿಸಲು ಸರಕಾರದ ಸಮ್ಮತಿ ದೊರಕಿದೆಯೆಂದು ತಿಳಿದು ಬಂದಿದೆ. ಈ ವಿಷಯದಲ್ಲಿ ಹಲವು ಮಂದಿ ಹಿಂದೀಯರು ಈಗ ಬಹು ಉದ್ವಿಗ್ನರಾಗಿದ್ದಾರೆ. ಪರದೇಶೀಯ ಸಂಸ್ಥೆಗೆ ಹಿಂದೂದೇಶದಲ್ಲಿ ಈ ಕೈಗಾರಿಕೆ ಪ್ರಾರಂಭಿಸಲು ಸಮ್ಮತಿ ಕೊಟ್ಟರೆ ಯುದ್ಧಯತ್ನಕ್ಕೆ ತೊಂದರೆಯಾಗುವುದಿಲ್ಲವೇ ಎಂದು ಆಕ್ಷೇಪವೆತ್ತಲಾಗಿದೆ. ಈ ವಿಚಾರದಲ್ಲಿ ಈಗ ಸರ್ ವಿಶ್ವೇಶ್ವರಯ್ಯನವರು ಸರಕಾರದೊಡನೆ ಪತ್ರವ್ಯವಹಾರ ಮಾಡುತ್ತಿದ್ದಾರೆ. ಬರುವ ಕೇಂದ್ರ ಎಸೆಂಬ್ಲಿ-ಅಧಿವೇಶನಕ್ಕೆ ಸದಸ್ಯರೊಬ್ಬರು ಹಿಂದೂದೇಶದಲ್ಲಿ ಮೋಟರು ಕೈಗಾರಿಕೆ ಪ್ರಾರಂಭಿಸಬೇಕೆಂಬ ವಿಚಾರವಾಗಿ ಒಂದು ನಿರ್ಣಯವನ್ನು ತರಲಿರುವರಾಗಿ ತಿಳಿದಿದೆ.

◆

ವಿಚಿತ್ರ ಪ್ರಪಂಚ

ಬಂಗಾಳಿಗಳು ಉಪ್ಪು ಉಪಯೋಗಿಸಲಿಲ್ಲ

ಬಂಗಾಳವು ಚರಿತ್ರೆಯಲ್ಲಿ ಹೆಸರು ಹೊಂದಿದೆ. ಅಲ್ಲಿನ ವೀರ, ಪರಾಕ್ರಮಗಳು ಹೆಸರು ಪಡೆದಿವೆ. ಪ್ರಾಂತ್ಯದ ದೇಶದ ಅಭಿಮಾನವು ಅವರನ್ನು ಆವೇಶಗೊಳಿಸುತ್ತದೆ. ಬಂಗಾಳವನ್ನು ಲಾರ್ಡ್ ಕರ್ಜನರು ವಿಭಜನೆ ಮಾಡಿದ ಸಂದರ್ಭದಲ್ಲಿ ಬಂಗಾಳದವರಲ್ಲಿ ದೇಶಾಭಿಮಾನದ ದೀಪವು ಉಜ್ವಲವಾಗಿ ಬೆಳಕು ಬೀರಿತು. ಆಗಿನ ಕಾಲದ ಬಂಗಾಳದ ಜನರ ಮುಖಂಡರಲ್ಲಿ ಅಶ್ವಿನಿ ಕುಮಾರದತ್ತರು ಪ್ರಧಾನರಾಗಿದ್ದರು. ಬಂಗಾಳವು ಉಪ್ಪಿಗಾಗಿ ಪರದೇಶವನ್ನು ಅವಲಂಬಿಸಿಕೊಂಡಿರುವುದು. ಆ ವಿಭಜನೆಯಾದ ಕಾಲದಲ್ಲಿ ಬಂಗಾಳದ ಜನರು ಸ್ವದೇಶದ ಉಪ್ಪು ಸಿಗದಿರುವಾಗ, ಪರದೇಶದ ಉಪ್ಪನ್ನು ಅಂಗಡಿಗಳಲ್ಲಿ ಮಾರಾಟ ಮಾಡಲು ಬಹಿಷ್ಕರಿಸಿ ಉಪ್ಪಿಲ್ಲದೆಯೇ ಊಟಮಾಡುತ್ತಿದ್ದರಂತೆ. ಒಮ್ಮೆ ಅಲ್ಲಿನ ಕಲೆಕ್ಟರರೊಬ್ಬರು ಉಪ್ಪಿಲ್ಲದೆ ಊಟ ಮಾಡಲಾರದವರಾಗಿ ಅಶ್ವಿನಿ ಕುಮಾರದತ್ತರೊಡನೆ ಒಂದು ಅಂಗಡಿಯಲ್ಲಾದರೂ ಪರದೇಶದ ಉಪ್ಪನ್ನು ಮಾರಾಟ ಮಾಡುವಂತೆ ಅಂಗಡಿಗಾರರಿಗೆ ಹೇಳಬೇಕೆಂದು ವಿನಂತಿಸಿಕೊಂಡರೆಂದು ಸರ್. ಸಿ. ವೈ. ಚಿಂತಾಮಣಿಯವರು ಒಂದು ಲೇಖನದಲ್ಲಿ ಬರೆದಿರುವರು. ಸ್ವತಃ ಅಶ್ವಿನೀ ಕುಮಾರದತ್ತರೇ ಸ್ವದೇಶದ ಉಪ್ಪು ದೊರಕದಿದ್ದರೆ ಉಪ್ಪಿಲ್ಲದೆ ಊಟ ಮಾಡುತ್ತಿದ್ದರಂತೆ! ಎಂತಹ ಅನುಪಮ ದೇಶಾಭಿಮಾನ!

❧

ಭಕ್ಷ್ಯವೆಂದರೆ ಬಾಂಬೆಂದು ಸಿ.ಐ.ಡಿ ಗಳು ತಿಳಕೊಂಡಿದ್ದರು!

ಕ್ರಾಂತಿಕಾರರಾದ ಬಂಗಾಳೀ ಯುವಕರು ಬಾಂಬಿಗೆ ಸಿಹಿ ಭಕ್ಷ್ಯವೆಂದು ಗುಪ್ತಸಂಕೇತವಾಗಿ ಹೇಳುತ್ತಿದ್ದರೆಂಬುದು ಪ್ರಸಿದ್ಧವಾಗಿದ್ದು ಸರಕಾರದ ಸಿ ಐ ಡಿ ಗಳಿಗೆ ಅದು ಗೊತ್ತಿತ್ತು. ಒಮ್ಮೆ ಸರ್ ಸಂಕರನ್ ನಾಯರರು ಲಾರ್ಡ್ ಹಾರ್ಡಿಂಜರಿಗೆ ಒಂದು ಔತಣ ಕೊಡಲೆಂದು, ಬಂಗಾಳದ ಕೆಲವು ಭಕ್ಷ್ಯಗಳನ್ನು ಕಳುಹಿಸಬೇಕೆಂದು ಸರ್ ಭೂಪೇಂದ್ರನಾಥ ಬಸುಗಳಿಗೆ ಒಂದು ಪತ್ರ ಬರೆದಿದ್ದರಂತೆ. ಅದಕ್ಕೆ ಉತ್ತರವಾಗಿ ಬಸುಗಳು ಪಾರ್ಸೆಲ್ ಮಾಡಿ ಭಕ್ಷ್ಯಗಳನ್ನು ಕಳುಹಿಸುವುದಾಗಿ ಸರ್. ನಾಯರರಿಗೆ ತಂತಿ ಬಿಟ್ಟರಂತೆ. ಆ ತಂತಿಯಿಂದ ಸಿ. ಐ. ಡಿ. ಗಳು ಗಾಬರಿಗೊಂಡರು. ಬಂಗಾಳದಿಂದ ಭಕ್ಷ್ಯ ಬರುವುದೆಂದರೆ ಬಂಗಾಳೀ ಕ್ರಾಂತಿಕಾರರ ಸಂಕೇತವಾದ ಬಾಂಬು ಬರುವುದೆಂದು ಭಾವಿಸಿ ಸರ್. ನಾಯರರನ್ನೂ, ಸರ್. ಭೂಪೇಂದ್ರರನ್ನೂ ಕ್ರಾಂತಿಕಾರರೆಂದು ಸಂಶಯಪಟ್ಟು, ಆ ತಂತಿಯನ್ನೂ, ಪಾರ್ಸೆಲನ್ನೂ ಶೋಧಿಸಿದರೆಂದು ಎಸ್. ಎಸ್. ಮೋಂಟೆಗೋ ಇವರು ಬರೆದಿರುವರು

❧

HALFTONE & LINE
BLOCK MAKING
UNDERTAKEN
Sharada Press.
MANGALORE.

ಸ್ವದೇಶಾಭಿಮಾನಿಗೆ
ಜಾಹೀರಾತು ಕೊಡಿರಿ

ಆಪತ್ತು ಸನ್ನಿಹಿತವಾದಾಗ ಯಾವ ಆಲೋಚನಾಪರ ವ್ಯಕ್ತಿಯೂ ತನಗೆ ಅತ್ಯಂತ ಪ್ರಿಯತಮವಾದ ವಸ್ತುಗಳನ್ನು ಸಂರಕ್ಷಿಸಲು ಹಿಂಜರಿಯುವುದಿಲ್ಲ ಯುದ್ಧವು ನಿಮ್ಮ ಆಪ್ತಬಾಂಧವರ ಹತ್ತಿರಕ್ಕೆ ಬರುತ್ತದೆ. ನಿಮ್ಮ ಸೌಖ್ಯವನ್ನು ಮತ್ತು ಅವರ ಸೌಖ್ಯವನ್ನು ಅಪಾಯಕ್ಕೀಡುಮಾಡಿ, ಸ್ವಾತಂತ್ರ್ಯತೆಯನ್ನೂ ಆಸ್ತಿಪಾಸ್ತಿಗಳನ್ನೂ ಭಾವಿ ಭದ್ರತೆಯನ್ನೂ ಧ್ವಂಸಗೊಳಿಸಲು ಸಿದ್ಧವಾಗಿದೆ ಶತ್ರುದಾಳಿಯನ್ನು ತಡೆಯಲು ನಿಮ್ಮ ಶಕ್ತಿಮೀರಿ ನಿಮ್ಮ ದೇಶಕ್ಕೆ ಸಹಾಯ ಮಾಡಲು ಈಗಲೇ ನೀವು ಕಾರ್ಯೋನ್ಮುಖರಾಗಬೇಕು.

ಪ್ರತಿ ೧೦
ರೂಪಾಯಿನ
ಡಿಫೆನ್ಸ್ ಸೇವಿಂಗ್ಸ್
ಸರ್ಟಿಫಿಕೇಟಿಗೂ
ರೂ ೩/೯/-
ಲಾಭ ಬರುವುದು
ಪೂರ್ತಿ ವಿವರಗಳು
ಪೋಸ್ಟಾಫೀಸಿನಿಂದ

ಕೊಳ್ಳಿರಿ
ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟುಗಳನ್ನು

ನೀವು ಕೊಡುವ ಪ್ರತಿಯೊಂದು ಕಾಸಿನಿಂದಲೂ ಹಿಂದೂಸ್ಥಾನದ ಸೈನಿಕ, ನೌಕಾ, ವೈಮಾನಿಕ ಬಲವನ್ನು ಹೆಚ್ಚಿಸಿ, ಶತ್ರುಗಳ ದಾಳಿಯನ್ನು ಎದುರಿಸಲು ಹಿಂದೂಸ್ಥಾನವನ್ನು ಬಲಪಡಿಸುವುದು.

BHUVANENDRA PRODUCTS LTD.,

Head Office and Factory:

KATAPADI S Kanara

Depots:

1 Maharatha Galli, Hubli.
2 57 Big street, Triplicane, Madras

" BHUVANENDRA '

Danthadvana Choorna

Economical in use. Cheapest in value Genuine in quality and choiced by all Antiseptic, astringent, aromatic. Useful in Pyorrhoea, Alveolaris. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ
ಹಲ್ಲುಗಳೇ ಮುಖ್ಯ ಕಾರಣ
"ಭುವನೇಂದ್ರ"

ದಂತಧಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ವ ಕೀವು ಬರುವುದು ಹಲ್ಲು ಅಲ್ಲಾಡುವ್ರದು ಮುಂತಾದ ದೋಷಗಳನ್ನು ನಿವಾರಿಸುವುದು

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ.

ಸ್ಥಳೀಯ ಸ್ಟೋಕಿಸ್ಟರ —
ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್ ಲಿಮಿಟೆಡ್, ರಥಬೀದಿ
ರಾಘವೇಂದ್ರ ರಂಗ ಪೈ, ಪ ಚರಂಟ್, ರಥಬೀದಿ
ಡಾ। ಎಮ್. ಎಸ್ ಪ್ರಭು, M B ... [illegible]

THE PIE-MONEY BANK, LTD
Maidan Road, MANGALORE

Undertakes all kinds of Banking Business. Current accour at 2½% per annum Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%
Auction chit Funds ranging from Rs 100/ to Rs 5000 n regularly on systematic lines Unique Banking facilities to Businessmen and Interested Public

Apply for particulars—
K R. GURU, *Managing Director*

The Bank of Mangalore Limited.
Branches —MOODABIDRI & PADUBIDRI
HEAD-OFFICE MANGALORE ESTD 1931
All kinds of Banking Business transacted.
Fixed Deposits received at rates ranging from 3 to 5%
INTEREST PAYABLE QUARTERLY
Interest on Savings Bank Deposits allowed at at 2½

ಕಡಿಮೆ ಖರ್ಚು ಮಂಗಳೂರಿನಿಂದ- ಬೆಂಗಳೂರು, ತಿರುಪತಿ, ಮದರಾಸು. ಅತೀ ಶೀಘ್ರ ಪ್ರಯಾಣ

ಬಸ್ಸ್ ಪ್ರಯಾಣವು

ಅತೀ ಸುಖಕರ! ನಿರಾಯಾಸಕರ!! ಮನೋಲ್ಲಾಸಕರವಾಗಿದೆ!!!

ಊರುಗಳ ಬದಲಾವಣೆ! ನೋಟಗಳ ಬದಲಾವಣೆ! ಜನತೆಯ ಸಂಪರ್ಕ! ಆಯಾಸ ಅನುಕೂಲತೆ!

ಇವೆಲ್ಲವೂ ಬಸ್ಸ್ ಪ್ರಯಾಣದಲ್ಲಿವೆ.

ಪ್ರಯಾಣಿಕರ ಹೆಚ್ಚಿನ ಪ್ರೋತ್ಸಾಹದೊಡನೆ ಇನ್ನೂ ಹೆಚ್ಚಿನ ಸೌಕರ್ಯಗಳನ್ನು ಒದಗಿಸುವೆವು

Joint Managers,

The Combined Booking Agency, MANGALORE.
The Joint Booking Office, KODIALBAIL.

ಬಿಡಿ ಸಂಚಿಕೆ ಬೆಲೆ ಒಂದಾಣೆ   ವಾರ್ಷಿಕ ಚಂದಾ ರೂ. 2-0-0   ಅಂಚೆ ವೆಚ್ಚ ಸೇರಿ ರೂ. 2-13-0   Regd. No. M 3460

ಸ್ವದೇಶಾಭಿಮಾನಿ

[ಸಂಪುಟ 36]   ತಾರೀಕು 30-1-1942   [ಸಂಚಿಕೆ 5]

ಅಮೃತಾಂಜನ ಲಿಮಿಟೆಡ್

ಇವರು, ತಮ್ಮ ಅಸಂಖ್ಯ ಗಿರಾಕಿಗಳಿಗೆ ಈ ಮೂಲಕ ವಿನಂತಿಸಿಕೊಳ್ಳುವುದೇನೆಂದರೆ: – ಯುದ್ಧದಿಂದಾಗಿ 'ಟಿನ್ ಕಂಟ್ರೋಲ್' ಆದ ನಿಮಿತ್ತ ಯುದ್ಧಾವಧಿಯಲ್ಲಿ ಕಾರ್ಡ್ ಬೋರ್ಡ್ ಪೆಟ್ಟಿಗೆಗಳಲ್ಲಿ ನಾವು ಪೇಕಿಂಗ್ ಮಾಡುತ್ತೇವೆ. ನಮ್ಮ ಗಿರಾಕಿಗಳು ಹಿಂದಿನ ರೀತಿಯ ಸಹಕಾರವನ್ನೇ ನಮಗಿತ್ತು ಪ್ರೋತ್ಸಾಹಿಸಬೇಕು, ನಾವು ಪೆಟ್ಟಿಗೆ ಬದಲಾಯಿಸಿದರೂ ಅಮೃತಾಂಜನ ಮುಲಾಮಿನ ಶಕ್ತಿ ಗುಣಗಳು ಹಿಂದಿನಂತೆಯೇ ಉಳಿದಿರುತ್ತವೆ.

ಅಮೃತಾಂಜನ

ಹೊಸ ವರ್ಷದ ಅಭಿವಂದನೆ

ನಮ್ಮ ಎಲ್ಲಾ ಪೊಲಿಸಿದಾರರಿಗೂ, ಏಜಂಟರಿಗೂ ಕಂಪೆನಿಯ
ವೈದ್ಯರಿಗೂ ಹಿತಚಿಂತಕರಿಗೂ

★ ನ★ವ★ವ★ರ್ಷ★ವು ★

ಆನಂದದಾಯಕವಾಗಿಯೂ ಅಭಿವೃದ್ಧಿಕರವಾಗಿಯೂ ಪರಿಣಮಿಸಲೆಂದು

ನಾವು

ಹೃತ್ಪೂರ್ವಕವಾಗಿ ಹಾರೈಸುತ್ತೇವೆ.

ಕೊಟ್ಟಿಕಾರ್ ಬ್ರದರ್ಸ್ ಲಿಮಿಟೆಡ್.

ದಕ್ಷಿಣ ಹಿಂದೂಸ್ಥಾನದ ಪ್ರಾಮುಖ್ಯ ಏಜಂಟರು:

ಬೊಂಬಾಯಿ ಲ್ಯಾಫ್ ಎಶ್ಯೂರೆನ್ಸ ಕಂಪೆನಿ ಲಿಮಿಟೆಡ್.

ಉಡುಪಿ, ಮದ್ರಾಸು, ಬೆಂಗಳೂರು, ಟ್ರಿವೆಂಡ್ರಂ, ಮಂಗಳೂರು, ಕಲ್ಲಿಕೋಟೆ, ಬೊಂಬಾಯಿ.

ಇಂದು ಹಳ್ಳಿಯುಗಳಲ್ಲಿ ಜನರ ಪ್ರತಿದಿನದ
ಉಪಯೋಗದಲ್ಲಿರುವ ವಸ್ತುವೆಂದರೆ
ನಂಜನಗೂಡು ಟೂತ್ ಪೌಡರ್
ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ
ಇಂದೇ ಚಂದಾದಾರರಾಗಿರಿ!

Estd. 1906

ಸ್ವದೇಶಾಭಿಮಾನಿ

SWADESHABHIMANI

ಬ್ರಿಟನಿನ ಮರುಭೂಮಿಯ ಯುದ್ಧ ವಾಹನ

ಒಬ್ಬ ಬ್ರಿಟಿಷ್ 'ಟೇಂಕ್' ಆಪೀಸರನು ಈಜಿಪ್ತ್ ಗಡಿನಾಡಿನ ಯುದ್ಧ ನೀತಿಯನ್ನು ಜನರಿಗೆ ವಿವರಿಸುತ್ತಾನೆ

KANNADA ILLUSTRATED WEEKLY

ಹಿಂದುಸ್ಥಾನದ ಮೇಲೆ ಬಾಂಬು ಬಿದ್ದರೆ?
ಜನರು ಏನುಮಾಡಬೇಕು?

ಬರ್ಮಾ ದೇಶದಲ್ಲಿ ಜಪಾನರು ಆಕ್ರಮಿಸಿ ಬಾಂಬುಹಾಕುತ್ತಿರುವುದರಿಂದ ಹಿಂದೂದೇಶದ ಜನರಿಗೂ ವಿಮಾನ ಧಾಳಿಯಾಗುವ ಹೆದರಿಕೆ ಹುಟ್ಟುವುದು ಸಹಜವಿದೆ. ಆದ್ದರಿಂದ ಜನರು ವಿಮಾನ ಧಾಳಿಯುಂಟಾದರೆ ಹೇಗೆ ವರ್ತಿಸಿಕೊಳ್ಳಬೇಕೆಂಬ ವಿಚಾರ ಅನುಭವಶಾಲಿಗಳಾದ ಜನರು ಕೊಟ್ಟ ಕೆಲವಂಶಗಳನ್ನು ಕೊಡಲಾಗಿದೆ

ವಿಮಾನ ಧಾಳಿಯಲ್ಲಿ ನಾಲ್ಕು ಬಗೆಯ ಅಸ್ತ್ರಗಳಿಂದ ಹಾನಿಗಳುಂಟಾಗುತ್ತವೆ ಗುಂಡು, ಗೇಸು, ಅಗ್ನಿಜನಕ ಬಾಂಬು ಮತ್ತು ಭಯಂಕರ ಸ್ಫೋಟಕ ಬಾಂಬು ಇವುಗಳಿಂದ ವಿಮಾನಗಳು ಹಾನಿಯನ್ನುಂಟುಮಾಡುತ್ತವೆ ನಾಗರಿಕರು ಬೆದರಿ ಅತ್ತಿತ್ತ ಓಡಾಡಲು ತೊಡಗಿದಾಗ ವಿಮಾನಗಳು ಗುಂಡುಗಳನ್ನು ಹಾರಿಸುವುದರಿಂದ ವಿಶೇಷ ಹಾನಿಯಾಗುತ್ತದೆ ಬಾಂಬುಗಳ ಮೂಲಕ ಇಲ್ಲವೇ ಸಿಂಚಕ ಯಂತ್ರಗಳಿಂದ ಗೇಸುಗಳನ್ನು ವಿಮಾನಗಳಿಂದ ಕೆಳಗೆ ಬಿಡಬಹುದು ಗ್ಯಾಸಿನ ಮುಖವಾಡ (gas mask)ಗಳಿಂದ ಇದರ ಹಾನಿಯನ್ನು ತಪ್ಪಿಸಿಕೊಳ್ಳಬಹುದು ಅಗ್ನಿಜನಕ ಬಾಂಬುಗಳನ್ನು ಮನೆಕಟ್ಟಡಗಳಿಗೆ ಬೆಂಕಿ ಹಚ್ಚಲು ಬಿಸಾಡುತ್ತಾರೆ ಆ ಬಾಂಬು ಬಿದ್ದ ಕೂಡಲೇ ಬೇಗ ಉರಿಯೆದ್ದು ಎಲ್ಲಾ ಕಡೆಯೂ ಚಿಮ್ಮುವುದು ಇದನ್ನು ತಡೆಯಲು ನೀರು ಮಾತ್ರ ಸಾಲದು, ಹೊಯಿಗೆಯನ್ನೂ ಉಪಯೋಗಿಸಬೇಕು ಕೊನೆಯ ಘಾತಕಾಸ್ತ್ರವೆಂದರೆ ಸ್ಫೋಟಕ ಬಾಂಬು ಈ ಬಾಂಬುಗಳು 10 ಪೌಂಡುಗಳಿಂದ 1 ಟನ್ ಭಾರದ ವರೆಗೆ ಇರುತ್ತವೆ ತೂಕದ ಸುಮಾರು ಕಾಲುಪಾಲಿನಷ್ಟು ಸ್ಫೋಟವಾದ ಕೂಡಲೇ ಒಡೆದು ಅದರಲ್ಲಿದ್ದ ಸಿಡಿಮದ್ದೆಲ್ಲ ಹಾರಿಹೋಗಿ ಎಷ್ಟೋ ನೂರು ಫೀಟುಗಳ ಮೇಲಿರುವ ಜನರನ್ನು ಕೊಲ್ಲಬಹುದು 6 ಇಂಚು ದಪ್ಪದ ಇಟ್ಟಿಗೆಯ ಗೋಡೆಯೊಳಗೆ ತೂತುಮಾಡಿ ಹೊರಗೆ ಹೋಗಬಲ್ಲುದು. ಜನನಿಬಿಡವಾದ ಬೀದಿಗಳಲ್ಲಿ ಇವುಗಳಿಂದ ವಿಶೇಷ ಹಾನಿಯಿದೆ ರಂಗೂನಿನ ಬೀದಿಗಳಲ್ಲಿ ನೆರೆದಿದ್ದ ಜನರು ವಿಶೇಷವಾಗಿ ಈ ಬಾಂಬಿನಿಂದ ಹತರಾದರು

ವಿಮಾನ ಧಾಳಿಯಿಂದ ರಕ್ಷಣೆ ಮಾಡಿಕೊಳ್ಳಬೇಕಾದರೆ ಕೆಲವು ಕೆಲವು ಮುಖ್ಯ ಸಂಗತಿಗಳನ್ನು ನೆನಪಿನಲ್ಲಿಟ್ಟುಕೊಳ್ಳಬೇಕು ೧) ಆತ್ಮರಕ್ಷಣೆ ಮಾಡಿಕೊಳ್ಳುವುದು ೨) ವಾರ್ಡನ್ ಮತ್ತು ಪೋಲೀಸರು ಹೇಳಿದಂತೆ ಕೇಳುವುದು ೩) ಎರಡನೆಯವರಿಗೂ ಸಹಾಯಮಾಡಬೇಕೆಂಬುದನ್ನು ಮರೆಯದಿರುವುದು ೪) ಶಾಂತ ರೀತಿಯಿಂದ ಇರುವುದು

ಮೊದಲನೆಯ ಸಲ ಧಾಳಿಯಾದಾಗ ವಿಶೇಷ ಬೆದರಿಕೆಯಾಗುವುದು, ಬಾಂಬು ಧಾಳಿಯಾದಾಗ ಯಾರೂ ಹೊರಗೆ ನಿಲ್ಲಬಾರದು, ಯೋಗ್ಯ ಆಶ್ರಯ ಸ್ಥಳಗಳೊಳಗೆ, ಅಥವಾ ಕಂದಕಗಳೊಳಗೆ ಇಲ್ಲವೇ ತಗ್ಗಿನೊಳಗೆ ಹೋಗಿರಬೇಕು, ಇಲ್ಲವೇ ಬಯಲು ಸ್ಥಳದಲ್ಲಿ ದುರ್ದೈವದಿಂದ ಸಿಕ್ಕಿಬಿದ್ದರೆ, ನೀವು ನಿಮ್ಮ ಮೊಳಕೈಗಳನ್ನು ನೆಲದ ಮೇಲಿಟ್ಟು ಕೈಗಳಿಂದ ಕಿವಿಗಳನ್ನು ಮುಚ್ಚಿಕೊಂಡು ತಲೆಯ ಹಿಂಭಾಗವನ್ನು ನೆಲಕ್ಕೆ ಹಚ್ಚಿ ಮಲಗಿಕೊಂಡಿರಬೇಕು ಆಗ ಬಾಯಿಯನ್ನು ಮುಚ್ಚಬೇಕು ಹಲ್ಲುಗಳನ್ನು ಬಿಗಿಹಿಡಿಯಬೇಕು ಹೀಗೆ ಮಾಡಿದರೆ ಬಾಂಬಿನ ಹಾನಿ ಬಹಳವಾಗಿ ತಪ್ಪಿಹೋಗಬಹುದು. ಬಾಂಬು ಬಿದ್ದಾಗ ಮೇಲೆ ನೋಡದೆ ಆಶ್ರಯ ಸ್ಥಳವನ್ನು ಸೇರಿಬಿಡಬೇಕು ಸಮೀಪದಲ್ಲಿ ಆಶ್ರಯವಿಲ್ಲದಿದ್ದರೆ, ಇದ್ದಲ್ಲಿಯೇ ಮಲಗಿಕೊಳ್ಳಬೇಕು ಆಕ್ರಮಣ ಮುಗಿವ ವರೆಗೆ ಶಾಂತರೀತಿಯಿಂದ ವರ್ತಿಸುವುದು ಆಗಾಗ ಬಾಂಬುಗಳು ಬೀಳುತ್ತಾ ಇದ್ದರೆ ಗಾಬರಿ ಕಡಿಮೆಯಾಗುವುದು' ಎಂಬಿತ್ಯಾದಿಯಾಗಿ ಒಬ್ಬ ಮೇಜರನು ಬರೆದಿರುವನು

★ ವಸಂತಸೇನಾ ★

ಉಜ್ಜಯಿನಿಯಲ್ಲಿ ಸುಂದರಳು ಸಚ್ಚರಿತಳೂ ಆದ ವಸಂತಸೇನೆಯೆಂಬ ವೇಶ್ಯೆಯಿದ್ದಳು. ರಾಜನ ಭಾವನಾದ ಶಕಾರನೆಂಬವನು ಆಕೆಯನ್ನು ಒಮ್ಮೆ ಬೆನ್ನಟ್ಟಿಬರುವನು. ಚಾರುದತ್ತನೆಂಬ ಬ್ರಾಹ್ಮಣ ಶ್ರೇಷ್ಠನು ಆಕೆಯನ್ನು ಕಾಪಾಡುವನು ಚಾರುದತ್ತನ ಗುಣಗಳನ್ನು ಕೇಳಿ ವಸಂತಸೇನೆ ಆತನಲ್ಲಿ ಅನುರಕ್ತಳಾಗುವಳು ತನ್ನ ಕೆಲವು ಒಡವೆಗಳನ್ನು ಆತನು ಮಾಡಿದ ಉಪಕಾರಕ್ಕೆ ಪ್ರತ್ಯುಪಕಾರವೆಂದು ಆತನಿಗೆ ಕೊಡುವಳು ಮದನಿಕೆ ವಸಂತಸೇನೆಯ ದಾಸಿ ಶರ್ವಿಳಕನೆಂಬ ಬ್ರಾಹ್ಮಣನಲ್ಲಿ ಆಕೆಗೆ ಅನುರಾಗ ಆವಳನ್ನು ದಾಸ್ಯದಿಂದ ಬಿಡಿಸಲು ಶರ್ವಿಳಕನು ಚಾರುದತ್ತನ ಮನೆಯಲ್ಲಿದ್ದ, ವಸಂತಸೇನೆ ಕೊಟ್ಟಿದ್ದ ಒಡವೆಗಳನ್ನು ಕಳವುಮಾಡಿದನು ವಸಂತಸೇನೆಗೆ ಈ ವಿಚಾರ ತಿಳಿಯಿತು ಉದಾರ ಹೃದಯದವಳಾದ ಆಕೆ ಮದನಿಕೆಯನ್ನು ತನ್ನ ದಾಸ್ಯದಿಂದ ಬಿಡುಗಡೆಮಾಡಿದಳು ವಸಂತಸೇನೆ ಕೊಟ್ಟಿದ್ದ ಆಭರಣಗಳು ಕಳವಾದುವಲ್ಲಾ ಎಂದು ಚಾರುದತ್ತನು ಬಹಳ ದುಃಖಪಡುವನು ಆತನ ಪತ್ನಿ ಪರಮ ಪತಿವ್ರತೆ ಧೂತಾದೇವಿಯು ತನ್ನ ಕಂಠದ ಮುಕ್ತಾಹಾರವನ್ನು ತೆಗೆದು ಮೈತ್ರೇಯನ ಮೂಲಕ ಪತಿಗೆ ಕಳುಹಿಸುವಳು ಋಣಮುಕ್ತನಾಗಬೇಕೆಂದು ಚಾರುದತ್ತನು ಅದನ್ನು ವಸಂತಸೇನೆಗೆ ಕೊಟ್ಟನು. ಈ ವರ್ತನೆಯಿಂದ ವಸಂತಸೇನೆಗೆ ಗುಣಶಾಲಿಯಾದ ಚಾರುದತ್ತನಲ್ಲಿ ವಿಶೇಷ ಅನುರಾಗವುಂಟಾಗಿ ಒಮ್ಮೆ ಆಕೆ ಆತನನ್ನು ಸಂಧಿಸಲು ಆತುರಗೊಂಡು ಏನೋ ನೆವನಮಾಡಿ ಚಾರುದತ್ತನ ಮನೆಗೆ ಹೋದಳು ಪ್ರೇಮಿಗಳು ಸುಖಸಲ್ಲಾಪಮಾಡುತ್ತಿದ್ದಾಗ ಒಮ್ಮೆಲೇ ಮಳೆ ಸುರಿಯಿತು. ಪ್ರಕೃತಿಯೂ ಸಹಾಯಮಾಡಿತು ಆ ರಾತ್ರಿಯನ್ನು ವಸಂತಸೇನೆ ಚಾರುದತ್ತನ ಸಹವಾಸದಲ್ಲಿ ಸುಖದಿಂದ ಕಳೆದಳು ಬೆಳಗಾದ ಕೂಡಲೇ ತನ್ನ ಗಾಡಿಯಲ್ಲಿ ವಸಂತಸೇನೆಯನ್ನು ಪುಷ್ಪಕರಂಡಕೋದ್ಯಾನಕ್ಕೆ ಕರತರಲು ಚಾರುದತ್ತನು ಹೇಳಿ ಮುಂಚಿತವಾಗಿ ಅಲ್ಲಿಗೆ ಹೋದನು ಚಾರುದತ್ತನ ಮಗ ರೋಹಸೇನನು ತನಗೆ ಆಡಲು ಚಿನ್ನದ ಬಂಡಿಬೇಕೆಂದು ಹಟಹಿಡಿದು ಅಳುವನು. ಇದನ್ನು ನೋಡಿ ಮನೆ ಕರಗಿದ ವಸಂತಸೇನೆ ಆತನಿಗೆ ತನ್ನ ಆಭರಣಗಳನ್ನು ಕೊಟ್ಟು ಚಿನ್ನದ ಬಂಡಿಯನ್ನು ಮಾಡಿಸಿಕೊಳ್ಳುವಂತೆ ಹೇಳಿ ಸಮಾಧಾನಪಡಿಸಿ ಬರುವಷ್ಟರಲ್ಲಿ ಪಾಲಕರಾಜನಿಂದ ಸೆರೆಹಿಡಿಯಲ್ಪಟ್ಟ ಆರ್ಯಕನೆಂಬ ಗೊಲ್ಲರವನು ಶರ್ವಿಳಕನ ಸಹಾಯದಿಂದ ಸೆರೆಯಿಂದ ತಪ್ಪಿಸಿಕೊಂಡು ಒಂದು, ವಸಂತಸೇನೆಗಾಗಿ ಚಾರುದತ್ತನ ಮನೆಯಮುಂದೆ ನಿಂತಿದ್ದ ಗಾಡಿಯಲ್ಲಿ ಅವಿತುಕೊಳ್ಳುವನು. ವಸಂತಸೇನೆಯೇ ಕುಳಿತುಕೊಂಡಳೆಂದು ಗ್ರಹಿಸಿ ಸೇವಕನು ಗಾಡಿಯನ್ನು ಹೊಡೆದುಕೊಂಡುಹೋಗುವನು. ಗಾಡಿಯಲ್ಲಿ ಆರ್ಯಕನನ್ನು ನೋಡಿ ಉದಾರಹೃದಯನಾದ ಚಾರುದತ್ತನು ಆತನಿಗೆ ಅಭಯವಿತ್ತು ಅವನನ್ನು ಸುರಕ್ಷಿತ ಸ್ಥಾನಕ್ಕೆ ಕಳುಹಿಸುವನು ಆ ಸಮಯದಲ್ಲಿ, ಶಕಾರನ ಮನೆಯ ಮುಂದೆ ನಿಂತಿದ್ದ ಶಕಾರನ ಗಾಡಿಯನ್ನೇ ಚಾರುದತ್ತನ ಗಾಡಿಯೆಂದು ತಿಳಿದು ವಸಂತಸೇನೆ ಅದರಲ್ಲಿ ಕುಳಿತುಕೊಳ್ಳುವಳು ಶಕಾರನ ಸೇವಕನು ಅದನ್ನು ಹೊಡೆದುಕೊಂಡು ಹೋಗುವನು. ಗಾಡಿಗೋಸ್ಕರ ಕಾದಿದ್ದ ಶಕಾರನು ಅದರಲ್ಲಿ ವಸಂತಸೇನೆಯನ್ನು ನೋಡಿ ಪ್ರಣಯಚೇಷ್ಟೆಗೆ ಆರಂಭಿಸುವನು ಆಕೆ ಆತನ ಪ್ರಣಯವನ್ನು ತಿರಸ್ಕರಿಸಲು ಅವಳನ್ನು ಕೊಂದು ಅವಳನ್ನು ಚಾರುದತ್ತನೇ ಕೊಂದನೆಂದು ನ್ಯಾಯಸ್ಥಾನದಲ್ಲಿ ದೋಷಾರೋಪಣೆ ಮಾಡುವನು ವಿಚಾರಣೆ ನಡೆದು ಚಾರುದತ್ತನೆ ಅಪರಾಧಿಯೆಂದು ತೀರ್ಮಾನವಾಗಿ ಚಾರುದತ್ತನಿಗೆ ಮರಣದಂಡನೆ ವಿಧಿಸಲಾಗುವುದು ಆದರೆ ಚಾರುದತ್ತನ ಶಿರಚ್ಛೇದವಾಗುವುದೆ? ವಸಂತಸೇನೆ ನಿಜವಾಗಿಯೂ ಸತ್ತಿರುವಳೆ? ಇಬ್ಬರೂ ಪಾರಾಗಿ ತುದಿಗೆ ವಿವಾಹವಾಯಿತೆ? ಈ ವಿಚಾರವನ್ನು ಬೇಗನೇ ಸ್ಥಳೀಯ ಬಾಲಾಜಿ ಟಾಕೀಸಿನಲ್ಲಿ ಪ್ರದರ್ಶಿತವಾಗುವ ವಸಂತಸೇನಾ ಚಿತ್ರಪಟವನ್ನು ನೋಡಿ ತಿಳಿಯಿರಿ.

★

'ವಸಂತಸೇನಾ'
ಕನ್ನಡ ಚಿತ್ರದಲ್ಲಿ
ಶ್ರೀಮತಿ ಚಂದ್ರಮ್ಮ

★

ಸೌಂದರ್ಯ ಮತ್ತು
ಮುಖಕಾಂತಿಗೆ

ಹಿಮಾನಿ ಸ್ನೋ

ಹಿಂದೂದೇಶದಲ್ಲಿ ಪ್ರಥಮವಾಗಿ
— ತಯಾರಿಸಿದ ಸ್ನೋ —

ಅಂದಿನಿಂದಲೂ ಶ್ರೇಷ್ಠವಾಗಿಯೇ ಇದೆ — ಮುಖದ ಮೇಲಿನ ಯಾವತ್ತೂ ಕಲೆ, ಮಚ್ಚೆ ಛಿದ್ರ ಮುಂತಾದುವನ್ನು ಗುಣಪಡಿಸುವುದು

ಹಿಮಾನಿ ಗ್ಲಿಸರಿನ್ ಸಾಬೂನುಗಳು

ಪಾರದರ್ಶಕ—ಶುದ್ಧ

ಕೋಮಲವಾದ ಪರಿಮಳ

ದಕ್ಷಿಣ ಕನ್ನಡದ ಡಿಸ್ಟ್ರಿಬ್ಯೂಟರರು:—
ಕೊರನೇಶನ್ ಟ್ರೇಡಿಂಗ್ ಕೊ.
ಮಹಮ್ಮದಾಲಿ ರೋಡ್, ಮಂಗಳೂರು.

ಸರಕಾರದ ಹೊಸ ಪಾಠಪಟ್ಟಿಗನುಸಾರವಾಗಿ ಬರೆದ

ನವೀನ ಭೂವಿವರಣೆ

ವಾಸುದೇವರಾವ್, ಎಂ ಎ ಎಲ್ ಟಿ (Dip Geogrhpy)
(ಭೂಗೋಳ ಶಾಸ್ತ್ರದಲ್ಲಿ ಡಿಪ್ಲೊಮಾ ಪಡೆದವರು)

ಈ ಪುಸ್ತಕಗಳನ್ನು ಪಡಕೊಂಡಲ್ಲಿ ವಿದ್ಯಾರ್ಥಿಗಳಿಗೆ ಎಟ್ಲಾಸ್ ಕೊಂಡುಕೊಳ್ಳುವ ಅವಶ್ಯವಿಲ್ಲ

ಪ್ರತಿ ಪುಸ್ತಕದಲ್ಲಿ ಬಣ್ಣಬಣ್ಣದ ಭೂಪಟಗಳಿವೆ.

ಅನೇಕಾನೇಕ ಚಿತ್ರಪಟಗಳಿಂದ ಕೂಡಿದ್ದು, ಪ್ರತಿ ಪಾಠದ ಅಂತ್ಯದಲ್ಲಿ ಅಭ್ಯಾಸಗಳನ್ನೂ ಮಾದರಿ ಪ್ರಶ್ನೆಗಳನ್ನೂ ಕೊಟ್ಟಿದೆ.

4ನೆಯ ಪುಸ್ತಕ 0 6 0   5ನೆಯ ಪುಸ್ತಕ 0 7 0
6, 7 ಮತ್ತು 8ನೆಯ ಪುಸ್ತಕಗಳು ಅಚ್ಚಿನಲ್ಲಿವೆ.

ಪುಸ್ತಕಗಳು ಬೇಕಾದಲ್ಲಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

“ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ”

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

6–2–1942] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೬–೨–೧೯೪೨]

ಸಮರಭೂಮಿಯ ಸಂಚಾರ

ಈಗ ಎಲ್ಲರೂ ಕುತೂಹಲಾಶ್ಚರ್ಯಗಳಿಂದ ಕೇಳುತ್ತಿರುವುದು ಸಿಂಗಾಪುರದ ವಿಚಾರವನ್ನು ಪೇಸಿಫಿಕ್ ಸಾಗರದ ಒಡೆತನಕ್ಕೆ ಅತ್ಯಂತ ಅವಶ್ಯವೆನಿಸಿದ ಈ ಕೇಂದ್ರ ಸ್ಥಳವನ್ನು ಸ್ವಾಧೀನಪಡಿಸಿಕೊಳ್ಳುವ ಸಲುವಾಗಿ ಜಪಾನರು ಪೂರ್ವ ಪಶ್ಚಿಮ ಮತ್ತು ಮಧ್ಯ ಮಾರ್ಗಗಳಿಂದ ಮುನ್ನುಗ್ಗುತ್ತಿರುವರು ಈ ಮೂರು ದಿಕ್ಕುಗಳಿಂದಲೂ ದಿನದಿಂದದಿನಕ್ಕೆ ಜಪಾನರು ಸಿಂಗಾಪುರದ ಹತ್ತಿರಹತ್ತಿರ ಬರುತ್ತಿರುವರೆಂಬ ವಾರ್ತೆ ಚಿಂತಾಜನಕವಿರುತ್ತದೆ ಸಿಂಗಾಪುರದ ನೌಕಾಕೇಂದ್ರದ ಮೇಲೆ, ಇಷ್ಟರಲ್ಲಿಯೇ ಜೋಹಾರ್ ಕರಾವಳಿಯ ವರೆಗೆ ಬಂದ ಜಪಾನರಿಗೆ ಗುಂಡಿನ ಮಳೆಗರೆಯಲು ವಿಶೇಷ ಪ್ರಯಾಸವಿಲ್ಲ ವಿಮಾನದಲ್ಲಂತೂ ಕೇವಲ ಕೆಲವೇ ನಿಮಿಷಗಳಲ್ಲಿ ಹಾರಿ ಹೋಗಿ ಬಾಂಬು ಸುರಿಸಬಹುದು ಹೀಗೆ ಉಭಯ ರೀತಿಯಿಂದಲೂ ಸಿಂಗಾಪುರದ ಮೇಲೆ ಈಗಲಪಾಯ ಬಲವಂತವಾಗಿರುವುದು

ಸಿಂಗಾಪುರವು ಹೋದರೆ ಸೂರಬಾಯಾ ಇದೆಯೆಂದೂ, ಬರ್ನಾರ್ಥಸ್ತ್ ಕೈಬಿಟ್ಟರೆ ಛಸಾವರ್ ರಸೆ ಪ್ರಾರಂಭಿಸಬಹುದೆಂದೂ ಈಗ ಬ್ರಿಟಿಷರು ಮಾತನಾಡತೊಡಗಿರುವುದನ್ನು ಕೇಳಿದರೆ ಅತ್ಯಂತ ವ್ಯಸನವಾಗುತ್ತದೆ ಸೂರಾಬಾಯಾ ಎಂಬುದು ಜಾವಾದಲ್ಲಿದೆ ಅಲ್ಲಿ ಬ್ರಿಟಿಷ್ ಹಡಗಗಳನ್ನು ನಿಲ್ಲಿಸುವ ವ್ಯವಸ್ಥೆ ಈಗಾಗಲೇ ಮಾಡಲಾಗಿದೆ. ಹಾಗಾಗಿ ಸಿಂಗಾಪುರವು ಉಳಿಯುವ ಆಶೆಯಿಲ್ಲವೆಂದು ತಿಳಿದ ಕೂಡಲೇ ಬ್ರಿಟಿಷ್ ಹಡಗಗಳನ್ನೆಲ್ಲಾ ಅಲ್ಲಿಗೊಯ್ಯಬಹುದು ಅಂತೂ ಇಂತಹ ಹೊಸತೊಂದು ಯೋಜನೆಯಿಂದ ಸಿಂಗಾಪುರದ ರಕ್ಷಣೆಯ ವಿಷಯ ಸಂಶಯ, ಭೀತಿಗಳೇ ಹೆಚ್ಚಾಗಲು ಆಸ್ಪದವಾಗಿದೆ ಸಿಂಗಾಪುರವು ಕೈಬಿಟ್ಟರೆ ಪೇಸಿಫಿಕ್ ಸಾಗರದಲ್ಲಿ ಜಪಾನರ ನೌಕಾ ಪ್ರಭುತ್ವವು ಶಾಶ್ವತವಾದಂತೆಯೇ ಸರಿ

ಸಿಂಗಾಪುರದಂತೆ ಬರ್ಮಾರಸ್ತೆಯ ವಿಚಾರವೂ ಗಹನವಿದೆ ಏಕೆಂದರೆ ಇಂದಿಗೆ ಜಪಾನನ್ನು ಸಶಕ್ತವಾಗಿ ಎದುರಿಸುವಂತಹ ಶಕ್ತಿವಂತ ರಾಷ್ಟ್ರವೆಂದರೆ ಚೀನವೊಂದೇ ಮಿತ್ರರಾಷ್ಟ್ರಗಳು ಚೀನಕ್ಕೆ ಸಹಾಯ ಕಳುಹಿಸಿ ಕೊಡುತ್ತಿದ್ದರೆ ಚೀನಿಯರ ಪ್ರತಿಭಟನೆಗೆ ಮತ್ತಷ್ಟು ಹುರುಪು ಕೊಡಬಹುದು ಚೀನಕ್ಕೆ ಬರ್ಮಾ ರಸ್ತೆಯ ಮೂಲಕ ಮಿತ್ರರಾಷ್ಟ್ರಗಳ ಹೆಚ್ಚಿನ ಸಹಾಯ ಹೋಗುತ್ತಿದೆ ಅದನ್ನು ಹೇಗಾದರೂ ತಡೆಗಟ್ಟಬೇಕೆಂದು ಮೊದಲಿಂದಲೇ ಜಪಾನರು ಸಾಹಸಪಡುತ್ತಿದ್ದಾರೆ ಅಂತೂ ಈ ಸಂದರ್ಭದಲ್ಲಿ ಅದಕ್ಕೂ ಗಂಡಾಂತರ ತಪ್ಪಿದ್ದಲ್ಲವೆಂದು ವ್ಯಕ್ತವಾಗುತ್ತದೆ ಈಗ ಜಪಾನರು ಸಯಾಮಿ ಸೈನ್ಯಸಹಾಯದಿಂದ ಥಾಂಗೆಯೇನ ನದಿಯನ್ನು ದಾಟಿ ಬರ್ಮಾದ ಅತ್ಯಂತ ಪ್ರಮುಖ ವಿಮಾನ ಕೇಂದ್ರವಾದ ಮೌಲ್ಮೇನದ ಕಡೆಗೆ ಮುನ್ನುಗ್ಗುತ್ತಿದ್ದಾರೆ ದಕ್ಷಿಣ ಬರ್ಮಾ ದೇಶದಲ್ಲಿಯೂ ಅವರು ಒಂದೊಂದೇ ಊರುಗಳನ್ನು ಹಿಡಿದು ಮೇಲೇರಿ ಬರುತ್ತಿದ್ದಾರೆ ಮೌಲ್ಮೇನದ ಪೂರ್ವದಲ್ಲಿ ಬ್ರಿಟಿಷ್ ಸೈನ್ಯಗಳು ಹಿಂದೆ ಸರಿಯುತ್ತಿರುವವು ಇದರಿಂದೆಲ್ಲಾ ಬರ್ಮಾ ರಸ್ತೆಗೆ ಅಪಾಯ ಹೆಚ್ಚುಹೆಚ್ಚಾಗಿದೆ ರಂಗೂನಿಗೆ ಭೀತಿ ಬಹಳವಾಗಿದೆ ಅಂತೂ ಈ ಕಾಲದಲ್ಲಿಯೇ ಬ್ರಿಟಿಷರು ಬರ್ಮಾ ದೇಶದ ಪ್ರಧಾನಮಂತ್ರಿಯಾದ ಸಾರನ್ನು ಬಂಧಿಸಿದ್ದು ಬಹಳ ಶೋಚನೀಯವೇ ಆಯಿತು.

ಇದೇ ಸಂದರ್ಭದಲ್ಲಿ, ಈ ವಾರ ಪಾರ್ಲಿಮೆಂಟಿನಲ್ಲಿ ನಡೆದ ಪ್ರಾಮುಖ್ಯ ಚರ್ಚೆಯು ವಿಚಾರಮಾಡುವುದು ವಿಹಿತವಾಗುವುದು ಅತಿಪೂರ್ವದಲ್ಲಿ ಚರ್ಚಿಲ್ ಮಂತ್ರಿಮಂಡಳವು ಕೈಗೊಂಡ ಕಾರ್ಯನೀತಿಯು ಪ್ರಯೋಜನಹೀನವೆಂಬುದಾಗಿ ಅಲ್ಲಿ ಪ್ರಬಲವಾದ ಟೀಕೆ ಬಂದಿತ್ತು ಬ್ರಿಟಿಷರು ಎಲ್ಲಾ ಕಡೆ ಹಿಂತೆರಳುತ್ತಿರುವುದನ್ನು ನೋಡಿ ಬ್ರಿಟಿಷ್ ಮುಂದಾಳುಗಳು ಸಿಟ್ಟಿಗೆದ್ದು ಟೀಕಿಸಿದರು ಆದರೆ ಚರ್ಚಿಲರು ಒಳ್ಳೆಯ ಬುದ್ಧಿವಂತ ರಾಜನೀತಿಜ್ಞರು ತಪ್ಪೆಲ್ಲಾ ತನ್ನದೆಂದು ಮೊದಲೇ ಅವರು ಒಪ್ಪಿಕೊಂಡರು ತಪ್ಪು ಒಪ್ಪಿಕೊಳ್ಳದೆ ಬೇರೆ ನಿಷ್ಕೃತಿಯಿಲ್ಲವೆಂದೂ, ಹಾಗೆ ಒಪ್ಪಿಕೊಂಡಲ್ಲಿ ಮಾತ್ರ ಪಾರ್ಲಿಮೆಂಟಿನ ವಿಶ್ವಾಸಗಳಿಸಿಕೊಳ್ಳಬಹುದೆಂದೂ ಚರ್ಚಿಲರು ಚೆನ್ನಾಗಿ ಬಲ್ಲರು ಗಂಡಾಂತರವು ಕಡುತರವಾಗಿರಲು ಒಣ ಮಾತುಗಳಿಂದ ಆವೇಶಕರ ವಾಗ್ವೈಖರಿಯಿಂದ, ಟೊಳ್ಳು ಭರವಸೆಗಳಿಂದ ರಾಷ್ಟ್ರವನ್ನು ವಂಚಿಸಲು ಸಾಧ್ಯವಿಲ್ಲವೆಂದು ತಿಳಿದ ಅವರು, ವೈರಿಯ ಶಕ್ತಿಯನ್ನು ವ್ಯರ್ಥವಾಗಿ ಹಳಿಯದೆ, ತಮ್ಮ ಸಿದ್ಧತೆಯನ್ನು ಅನರ್ಗಲವಾಗಿ ಸಾರದೆ, ಇದ್ದ ಸ್ಥಿತಿಯನ್ನು ಇದ್ದಂತೆ ತಿಳಿಸಲು ಪ್ರಯತ್ನಮಾಡಿದರು ಪೂರ್ವದೇಶದಲ್ಲಿ ಇಷ್ಟೊಂದು ಭಯಂಕರ ಯುದ್ಧವು ಪ್ರಾರಂಭವಾಗುವುದೆಂದು ನಾವು ತಿಳಿದಿರಲಿಲ್ಲವೆಂದೂ, ಅಮೆರಿಕದ ಶಕ್ತಿಯಲ್ಲಿ ತಮಗೆ ಹೆಚ್ಚಿನ ವಿಶ್ವಾಸವಿತ್ತೆಂದೂ ಚರ್ಚಿಲರ ಭಾಷಣದಿಂದ ವ್ಯಕ್ತವಾಗುತ್ತದೆ ಲಿಬಿಯ ರಶ್ಯಗಳಿಂದ ನಾವು ಸಹಾಯ ಕಳುಹಿಸುತ್ತಿದ್ದುದರಿಂದ ಪೂರ್ವದಲ್ಲಿ ಹೆಚ್ಚಿನ ಸಿದ್ಧತೆಮಾಡಲಾಗಲಿಲ್ಲವೆಂದು ತಮ್ಮ ಪರಾಜಯದ ಕಾರಣವನ್ನು ತಿಳಿಸಿದರು

ಜಪಾನರು ಇಷ್ಟು ತೀವ್ರವಾಗಿ ಪೇಸಿಫಿಕಿನಲ್ಲಿ ಮುಂದೊತ್ತಲು, ಬ್ರಿಟಿಷರ ಅಸಿದ್ಧತೆ, ಅಮೆರಿಕದ ಅಜಾಗ್ರತೆಗಳೇ ಕಾರಣವಲ್ಲ, ಪರದಾಸ್ಯದಲ್ಲಿದ್ದು ನರಳುತ್ತಿರುವ ಆಕ್ರಮಿತ ರಾಷ್ಟ್ರಗಳ ಜನರ ಉದಾಸೀನಭಾವವೂ ಹೇತುವೆನ್ನಬಹುದು ಸಾಮ್ರಾಜ್ಯಶಾಹಿಯ ತುಳಿತದಲ್ಲಿ ನರಳುತ್ತಿರುವ ರಾಷ್ಟ್ರಗಳ ಜನರ ಮನಸ್ಸಿನಲ್ಲಿ ಯಾರು ಆಕ್ರಮಿಸಿದರೇನು ಎಂಬ ಭಾವನೆ ಬರುವುದು ನ್ಯಾಯವಲ್ಲದಿದ್ದರೂ ಸಹಜವಿದೆ ಚೀನರಷ್ಯದಂತಹ ರಾಷ್ಟ್ರಗಳ ಪ್ರತಿಭಟನೆಯನ್ನು ವಿಮರ್ಶಿಸಿದರೆ ತದ್ವಿರುದ್ಧ ಮನೋಭಾವವುಳ್ಳ ರಾಷ್ಟ್ರಗಳ ಸ್ವಭಾವವೂ ತಿಳಿಯುತ್ತದೆ ಚೀನವು ಕಳೆದ ನಾಲ್ಕುವರ್ಷಗಳಿಂದ ಜಪಾನನ್ನು ಇಷ್ಟು ಸಾಹಸಮಯ ಹೋರಾಟದಿಂದ ಎದೆಯೊಡ್ಡಿ ಎದುರಿಸಿನಿಂತದ್ದು, ಅದು ಹಾಗೆ ಹೋರಾಡುವುದು ತನ್ನ ಸ್ವಾತಂತ್ರ್ಯಕ್ಕಾಗಿ ಎಂದು ಚೆನ್ನಾಗಿ ತಿಳಕೊಂಡಿರುವುದರಿಂದ, ರಶ್ಯವಾದರೂ ಭೀಕರಾಕೃತಿಯಲ್ಲಿ ಪ್ರಚಂಡ ಸನ್ನಾಹದಿಂದ ಮುಂದೊತ್ತಿ ಮುನ್ನುಗ್ಗಿ ಬಂದ ಜರ್ಮನಿಯನ್ನು ಪ್ರತಿಭಟಿಸಿ ಹಿಂದಟ್ಟುತ್ತಿರುವುದು ತಾನುಂಡ ಸ್ವಾತಂತ್ರ್ಯವನ್ನು ಹೋಗಲಾಡಿಸಲಾರೆನೆಂಬ ದೃಢ ಬುದ್ಧಿಯಿಂದ ಆದರೆ ಗುಲಾಮಗಿರಿಯಲ್ಲಿಯೇ ತಳ್ಳಲ್ಪಟ್ಟು ತಿರಸ್ಕೃತರಾಗಿ ಆಳಲ್ಪಟ್ಟ ರಾಷ್ಟ್ರದ ಜನರು ಯಾರು ಬಂದರೇನೆಂದು ಉದಾಸೀನವಾಗಿದ್ದರೆ ಆಶ್ಚರ್ಯವೇನು? ಮಲಯದವರು ಬರ್ಮೀಯರು ಫಿಲಿಫಯಿನಿನವರು ಡಚ್ ಇಂಡೀಸಿನ ಜನರು ಇವರೆಲ್ಲಾ ಸಾಮ್ರಾಜ್ಯಶಾಹಿಗಳ ಅಂಕಿತಕ್ಕೊಳಪಟ್ಟ ಗುಲಾಮ ರಾಜ್ಯಗಳ ನಿವಾಸಿಕರು ಅವರ ಮನೋಭಾವದಲ್ಲಿ ಬದಲಾಗಬೇಕಾದರೆ ಮಿತ್ರರಾಷ್ಟ್ರಗಳ ಅಧಿಕಾರಿಗಳ ಮನೋಬದಲಾವಣೆಯಾಗಬೇಕು ಅದು ಆಗುವ ಲಕ್ಷಣಗಳಿಲ್ಲ ಮೊನ್ನೆ ಪಾರ್ಲಿಮೆಂಟಿನಲ್ಲಿ ಅಷ್ಟೊಂದು ಉದ್ದ ಭಾಷಣ ಮಾಡಿ ಚರ್ಚಿಲರು ತಮ್ಮ ಇತರ ತಪ್ಪುಗಳನ್ನೆಲ್ಲಾ ಒಪ್ಪಿಕೊಂಡರೂ ಭಾರತದ ಕುರಿತು ಮಾಡಿದ ಅಕ್ಷಮ್ಯ ಅಪರಾಧವನ್ನು ಒಪ್ಪಿಕೊಳ್ಳುವಷ್ಟು ಮನೋವೈಶಾಲ್ಯವುಳ್ಳವರಾಗಲಿಲ್ಲ ಹೀಗಿರುವಾಗ ಪೂರ್ವದ ರಾಷ್ಟ್ರಗಳು ಎಂತಹ ಮನೋಭಾವದಿಂದ ಆಕ್ರಮಿಸಿ ಬರುವ ಜಪಾನರನ್ನು ಎದುರಿಸಲು ಸೊಂಟಕಟ್ಟಿ ನಿಲ್ಲಬಹುದುದೋ ನಮಗೆ ಯೋಚಿಸಲು ಆಗುತ್ತದೆ

ಪೇಸಿಫಿಕ್ ಸಾಗರದಲ್ಲಿ ದಿನೇ ದಿನೇ ಜಪಾನರು ಮುಂದಡಿಯಿಡುತ್ತಿರುವುದನ್ನು ಕಂಡು ಅತ್ತ ಆಸ್ಟ್ರೇಲಿಯವೂ ಅಂಜಿಕೊಂಡಂತೆ ತೋರುತ್ತದೆ ತನ್ನ ರಕ್ಷಣೆಗೆ ಸಿಂಗಾಪುರ ಮತ್ತು ಬ್ರಿಟಿಷ್ ನೌಕಾಬಲಗಳನ್ನು ಮಾತ್ರ ಆಧರಿಸಿಕೊಂಡಿದ್ದ ಆ ರಾಷ್ಟ್ರವು, ಸಿಂಗಾಪುರ ಮತ್ತು ಬ್ರಿಟಿಷ್ ನೌಕಾಬಲಗಳಿಗೊದಗಿದ ಗಂಡಾಂತರಕಾಲವನ್ನು ನೋಡಿಕೊಂಡು ಹೀಗೆ ಗಾಬರಿಗೊಳ್ಳುವುದು ಸಹಜವಿದೆ ಜಪಾನಾವರು ಆಸ್ಟ್ರೇಲಿಯವನ್ನು ಆಕ್ರಮಿಸಿಬಿಟ್ಟರೆ, ಅದನ್ನು ಏಕಾಂಗಿಯಾಗಿ ಎದುರಿಸುವಷ್ಟು ಶಕ್ತಿ ಆಸ್ಟ್ರೇಲಿಯಕ್ಕಿಲ್ಲ ಅಲ್ಲಿ ಸಾಕಷ್ಟು ಸೈನ್ಯಸಂಗ್ರಹವಿಲ್ಲ ಇದ್ದ ಅಲ್ಪಸ್ವಲ್ಪವನ್ನು ಲಿಬಿಯ, ಸಿರಿಯ, ಮಲಯಗಳಿಗೆ ಕಳುಹಿಸಿ ಕೊಟ್ಟಿರುತ್ತದೆ ಈಗಾಗಲೇ ಜಪಾನೀ ದಂಡುಗಳು ನ್ಯೂ ಬ್ರಿಟನ್ ದ್ವೀಪಗಳನ್ನು ಆಕ್ರಮಿಸಿಕೊಂಡು ಆಸ್ಟ್ರೇಲಿಯವನ್ನು ಬ್ರಿಟಿಷ್ ಸಾಮ್ರಾಜ್ಯದ ಉಳಿದ ಪ್ರದೇಶಗಳಿಂದ ಬೇರ್ಮಾಡಲು ಪ್ರಯತ್ನಿಸುತ್ತಿದೆ ಸಿಂಗಾಪುರದ ಪತನವಾದರೆ ಆಸ್ಟ್ರೇಲಿಯವು ಖಂಡಿತವಾಗಿ ಅಪರಿಮಿತ ಗಂಡಾಂತರವನ್ನೆದುರಿಸಬೇಕಾಗುವುದು ಆದ್ದರಿಂದ ತನಗೆ ಸಹಾಯಮಾಡಬೇಕೆಂದು ಆಸ್ಟ್ರೇಲಿಯವು ಬ್ರಿಟನು ಅಮೆರಿಕಗಳಿಗೆ ಬಹಳ ವಿನಯಪೂರ್ವಕ ವಿನಂತಿಸಿಕೊಂಡಿದೆ ಮಿತ್ರರಾಷ್ಟ್ರಗಳು ಈಗ ಅಪರಿಮಿತ ಸೈನ್ಯ ಸಾಧನ ಸಿದ್ಧತೆಗಳನ್ನು ಮಾಡುತ್ತಿರುವವೆಂದು ಕೇಳಿ ಬರುತ್ತಿರುವುದಾದರೂ, ತಮ್ಮ ರಕ್ಷಣೆ ಹಾಗೂ ಇತರ ಸಾಮ್ರಾಜ್ಯಾಂತರ್ಗತ ರಾಷ್ಟ್ರಗಳ ಭದ್ರತೆಗಾಗಿ ಕಾದಾಡಬೇಕಾಗಿರುವಾಗ, ಅವುಗಳಿಂದ ಆಸ್ಟ್ರೇಲಿಯಕ್ಕೆ ಎಷ್ಟರಮಟ್ಟಿಗೆ ಸಹಾಯ ಬರಬಹುದೋ ನೋಡಬೇಕಾಗಿದೆ ಅಂತೂ ಆಸ್ಟ್ರೇಲಿಯವು ಜಪಾನರ ಆಕ್ರಮಣದ ಭೀತಿಯಿಂದ ಈಗ ಕಳವಳಗೊಂಡಿದೆ

ಹೀಗೆ ಸಿಂಗಾಪುರ, ಮಲಯ, ಬರ್ಮಾ, ಡಚ್ ಇಂಡೀಸ್, ಫಿಲಿಪಯಿನ್, ಆಸ್ಟ್ರೇಲಿಯ ಈ ಎಲ್ಲಾ ಕಡೆಗಳಲ್ಲಿಯೂ ಕಂಗಾಲು ಪರಿಸ್ಥಿತಿ ಹೆಚ್ಚಿರುವಾಗ, ಅಮೆರಿಕವು ಇಂಗ್ಲೆಂಡಿಗೆ ಸೈನ್ಯ ಸಹಾಯ ಕಳುಹಿಸಿದೆ ಎಂಬ ಸುದ್ದಿ ಬಂದಿದೆ ಅಂತೂ ಬ್ರಿಟಿಷ್ ಸಾಮ್ರಾಜ್ಯದ ಕೇಂದ್ರವನ್ನು ಕಾಪಾಡಲು ಈ ಸೈನ್ಯವು ಹೋಗಿರಬಹುದೆಂದು ತಿಳಿಯುವುದು ಕಷ್ಟವೇನೂ ಅಲ್ಲ ಬ್ರಿಟಿಷ್ ಸಾಮ್ರಾಜ್ಯಕ್ಕಿಂತಲೂ ಬ್ರಿಟನೇ ಮೇಲೆಂದು ಅಮೆರಿಕ ತಿಳಕೊಂಡಿದ್ದರೂ ಇರಬಹುದು ಇಂಗ್ಲೆಂಡೊಂದನ್ನುಳಿಸಿದರೆ ಮಿಕ್ಕವೆಲ್ಲವೂ ತಾನಾಗಿಯೇ ಉಳಿಯುವವೆಂದು ಅಮೆರಿಕನರು ತಿಳಕೊಳ್ಳುವುದೂ ಸಹಜವಿದೆ ಅಮೆರಿಕವು ಹೀಗೆ ಇಂಗ್ಲೆಂಡಿಗೆ ಸೈನ್ಯ ಕಳುಹಿಸಲು ಇಂಗ್ಲೆಂಡಿಗೆ ಆಕ್ರಮಣವಾಗಬಹುದೆಂಬ ಅಂಜಿಕೆಯೇ ಕಾರಣವಿರಬಹುದೆಂದೂ ಹೇಳಲಾಗುತ್ತದೆ ಹಿಟ್ಲರ್‌ಶಾಹಿಯನ್ನು ಮುರಿಯಬೇಕೆಂದು ಬ್ರಿಟನ್ ಅಮೆರಿಕಗಳು ಒಳ್ಳೆಯ ಆವೇಶದಿಂದ ಮಾತನಾಡುತ್ತವೆ ಆದರೆ ಹಿಟ್ಲರ್‌ಶಾಹಿಯನ್ನು ಮುರಿಯುವುದು ಹೇಗೆಂದು ಕಾರ್ಯರೂಪದಲ್ಲಿ ತೋರಿಸುತ್ತಿರುವ ರಶ್ಯಕ್ಕೆ ಇನ್ನೂ ಹೆಚ್ಚು ಸಹಾಯ ಕಳುಹಿಸುತ್ತಿದ್ದರೆ ನಿಜವಾದ ಪುರುಷಾರ್ಥ ದೊರಕುತ್ತಿರಲಿಲ್ಲವೇ ಎಂದು ಹಲವರ ಪ್ರಶ್ನೆಯಾಗಿದೆ

ಇದು ವರೆಗೆ ನಾವು ದೂರದೂರದ ಯುದ್ಧ ಸುದ್ದಿಗಳನ್ನು ಓದುತ್ತಿದ್ದೆವು ಈಗ ಯುದ್ಧವು ನಮ್ಮ ಬಾಗಿಲಿಗೆ ಬಂದಿದೆ, ಹಿಂದುಸ್ಥಾನಕ್ಕೂ ಬಾಂಬು ಬೀಳಬಹುದೆಂಬ ಭೀತಿ ಹೆಚ್ಚಿದೆ ಮದರಾಸು ನಮ್ಮ ಪ್ರಾಂತದ ಮುಖ್ಯ ರಾಜಧಾನಿ ಅದರ ಎದುರಾಗಿ ಬಂಗಾಳಕೊಲ್ಲಿಯಿದೆ, ಅದರ ಆಚೆಯ ದಡದಲ್ಲಿ ಮಲಯ ದೇಶವಿರುವುದು ಮಲಯ ದೇಶವನ್ನು ಈಗ ಜಪಾನಿನವರು ಸ್ವಾಧೀನಪಡಿಸಿಕೊಂಡಿದ್ದಾರೆ. ಇಷ್ಟು ಮಾತ್ರವಲ್ಲ, ಕಲ್ಕತ್ತಾ ನಗರದ ಆಗ್ನೇಯಕ್ಕೆ ಕೇವಲ 700–800 ಮೈಲುಗಳ ದೂರದಲ್ಲಿರುವ ಬರ್ಮಾ ದೇಶದ ರಂಗೂನ್ ನಗರಕ್ಕೆ ಜಪಾನರು ಎಡೆಬಿಡದೆ ಬಾಂಬುಗಳನ್ನು ಹಾಕುತ್ತಿರುವರು ಮಲಯ ಹಾಗೂ ಬರ್ಮಾ ಈ ಎರಡು ದೇಶಗಳಲ್ಲೂ ಅನೇಕ ಮಂದಿ ಭಾರತೀಯರು ಮುಖ್ಯವಾಗಿ ಮದರಾಸು, ಬಂಗಾಳಾ ದೇಶಗಳ ಜನರು ಹೋಗಿ ನೆಲೆನಿಂತಿದ್ದವರು ಜಪಾನರ ಬಾಂಬಿನ ಪೆಟ್ಟುಗಳಿಗೆ ಗುರಿಯಾಗಿ ರಣಯಜ್ಞದಲ್ಲಿ ಆಹುತಿಯಾಗಿದ್ದಾರೆ, ಇನ್ನು ಕೆಲವರು ಕೈಕಾಲು ಮುರಿದುಕೊಂಡರು, ಅವರಲ್ಲಿ ಈಗಾಗಲೇ ಕೆಲವರು ಮದ್ರಾಸಿಗೂ ಕಲ್ಕತ್ತೆಗೂ ಬಂದಿದ್ದಾರೆ

ಹೀಗೆ ಪಶ್ಚಿಮದಲ್ಲಿ ಹುಟ್ಟಿದ ಯುದ್ಧದ ಬೆಂಕಿ ಪೂರ್ವದಲ್ಲಿಯೂ ಹರಡುತ್ತಾ ಬಂದು ಈಗ ಹಿಂದೂದೇಶವನ್ನೂ ಸುಡಲು ಸಮೀಪಿಸಿದೆ ಕಲ್ಕತ್ತವೊ, ಮದ್ರಾಸೋ, ಮುಂಬಯಿಯೋ, ಕರಾಚಿಯೋ ಹೀಗೆ ಹಿಂದೂದೇಶದ ಮುಖ್ಯ ಮುಖ್ಯ ಪಟ್ಟಣಗಳು ಬಾಂಬಿಗೆ ಬೇಗನೇ ಆಹುತಿಯಾಗಲೂ ಬಹುದೆಂದು–ಆಹುತಿಯಾಗುವ ಸಂಭವವಿಲ್ಲವೆಂದು ಧೈರ್ಯ ಹೇಳುತ್ತಿದ್ದರೂ–ಜನರು ಬಹಳ ಗಾಬರಿಗೊಂಡಿದ್ದಾರೆ ದೊಡ್ಡ ದೊಡ್ಡ ನಗರಗಳನ್ನು ಬಿಟ್ಟು, ಅನೇಕರು ಸಕುಟುಂಬರಾಗಿ ಹೊರಟುಹೋಗುತ್ತಿರುವರು ಹೀಗೆ ಹಿಂದೂದೇಶದ ಹಲವು ಪ್ರಾಮುಖ್ಯ ಪಟ್ಟಣಗಳು ಖಾಲಿಯಾಗುತ್ತಾ ಇವೆ ಇಂತಹವುಗಳಲ್ಲಿ ಕಲ್ಕತ್ತಾ ಮದ್ರಾಸು ಪಟ್ಟಣಗಳಲ್ಲಿ ಗಾಬರಿ ಹೆಚ್ಚು ಏಕೆಂದರೆ ಇವುಗಳಿಗೆ ಬಾಂಬಿನ ಧಾಳಿಯಾಗುವ ಭೀತಿ ಬಹಳ ಜನರಾದರೂ ಈ ರೀತಿ ಕಂಗಾಲಾಗಬೇಕಾದ ಅವಶ್ಯವಿಲ್ಲ, ಏಕೆಂದರೆ ಇಂತಹ ಸಂದರ್ಭಗಳಲ್ಲಿ ಕೈಕಾಲು ಬಿಟ್ಟು ಏನು ಮಾಡಲೂ ಸಾಧ್ಯವಿಲ್ಲ, ಆದಷ್ಟು ಶಾಂತರೀತಿಯಿಂದ ಇರುವುದೇ ಉಚಿತವಾದುದು ಆದರೆ ಓಡಲು ಆಶ್ರಯವಿಲ್ಲದೆ, ಎದುರಿಸಲು ಎದೆಯಿಲ್ಲದೆ ಇರುವಾಗ ಜನರು ಕಂಗಾಲಾಗಿ ಕೈಕಾಲು ಬಿಡುವುದು ಸಹಜವಾದುದು.

ಸ್ವದೇಶಾಭಿಮಾನಿ

ತಾರೀಕು 6—2—1942

ಹಿಂದುಸ್ಥಾನ ಮತ್ತು ಚರ್ಚಿಲ್

ಪಾರ್ಲಿಮೆಂಟಿನ ವಿಶ್ವಾಸವನ್ನು ಚರ್ಚಿಲರು ಕೇಳಿಪಡಕೊಂಡರು ಆದ ಪ್ರಮಾದಗಳಿಗೆಲ್ಲಾ ಹೊಣೆಗಾರ ತಾನೆಂದು ಒಪ್ಪಿಕೊಂಡು ಹೆಚ್ಚಿನ ಸತ್ಯಾತ್ಮರಾದರು. ಅತಿ ಪೂರ್ವದಲ್ಲಿ ಬ್ರಿಟಿಷ್ ಸೈನ್ಯವು ಸೋತು ಹಿಂತೆರಳಿದ್ದು ತಮ್ಮ ಅಸಿದ್ಧತೆಯಿಂದೆಂದು ನಿಜನುಡಿದರು ಮಾತ್ರವಲ್ಲದೆ ಇನ್ನು ಹೆಚ್ಚಿನ ಗಂಡಾಂತರವೊದಗಲಿದೆಯೆಂದೂ ಭವಿಷ್ಯ ಸಾರಿದರು ಬ್ರಿಟಿಷ್ ಸಾಮ್ರಾಜ್ಯದ ಶಕ್ತಿಯನ್ನು ಬಲಗೊಳಿಸುವ ನಿರ್ಧಾರ ಸೂಚಿಸಿದರು ಆದರೆ ಒಂದೇ ಒಂದು ಚಕಾರ ಶಬ್ದವನ್ನಾದರೂ ಹಿಂದುಸ್ಥಾನದ ವಿಷಯ ಅವರು ನುಡಿಯಲಿಲ್ಲ. ಚರ್ಚಿಲ್ ಮತ್ತು ಹಿಂದುಸ್ಥಾನ ಇವುಗಳ ಗ್ರಹಗತಿ ಹೀಗೆ ಏಕೆ ಪ್ರತಿಕೂಲವಾಗಿದೆಯೋ ತಿಳಿಯುವುದಿಲ್ಲ.

ಕಾಮನ್ಸ್ ಸಭೆಯಲ್ಲಿ ಹಿಂದುಸ್ಥಾನದ ವಿಷಯ ಸಾಕಷ್ಟು ಚರ್ಚೆ ನಡೆಯಿತು ಬೇರೆಬೇರೆ ಸದಸ್ಯರು ಭಾಷಣ ಮೂಲಕ, ಪ್ರಶ್ನೆಗಳ ಮೂಲಕ ಭಾರತದ ಸಮಸ್ಯೆಗಳನ್ನು ಬೇಗನೇ ಪರಿಹರಿಸಬೇಕೆಂದು ಬಿನ್ನವಿಸಿಕೊಂಡರು. ಈಗ ಭಾರತದ ಬಿಕ್ಕಟ್ಟನ್ನು ಸಮಾಧಾನಕರವಾಗಿ ಪರಿಹರಿಸಿ ಯುದ್ಧ ಮುಗಿದ ಮೇಲೆ ಸಮಾನ ಸ್ವಾತಂತ್ರ್ಯಕೊಡಬೇಕೆಂದು ಲಾರೆನ್ಸರು ಸ್ಪಷ್ಟವಾಗಿ ಹೇಳಿದರು. ಡೆವಿಸರು ಭಾರತದ ವಿಚಾರ ಬ್ರಿಟಿಷ ಪ್ರಭುತ್ವವು ತಳೆದ ಧೋರಣೆಯನ್ನು ಕಟುವಾಗಿ ಟೀಕಿಸಿ, ಹಿಂದುಸ್ಥಾನದ ಅಪಾರ ಸಂಪತ್ತು ನಿರುಪಯೋಗಿಯಾಗುತ್ತದೆಯೆಂದುದು ಮಾತ್ರವಲ್ಲದೆ ಪೂರ್ವದೇಶದಲ್ಲಿ ಆದ ಬ್ರಿಟಿಷರ ಅಪಜಯಕ್ಕೆ ಹಿಂದುಸ್ಥಾನದ ಕುರಿತು ಬ್ರಿಟಿಷ್ ಪ್ರಭುತ್ವವು ತಳೆದ ಅವಿವೇಕ ಧೋರಣೆಯೇ ಕಾರಣವೆಂದೂ ತಿಳಿಸಿದರು. ಹೀಗೆ ಹಲವು ಸದಸ್ಯರು ಪಾರ್ಲಿಮೆಂಟಿನಲ್ಲಿ ಹಿಂದುಸ್ಥಾನದ ವಿಚಾರವಾಗಿ ಸರಕಾರವು ತಾಳಿದ ವರ್ತನೆಯನ್ನು ಖಂಡಿಸಿಮಾತನಾಡಿದರು.

ಇವುಗಳಿಗೆಲ್ಲಾ ಅಟ್ಲೀಯವರು ಉತ್ತರವಿತ್ತರು. ಹಿಂದುಸ್ಥಾನದ ಮನುಷ್ಯ ಸೈನ್ಯಶಕ್ತಿಗಳನ್ನು ಸಾಕಷ್ಟುಉಪಯೋಗಿಸಿಕೊಂಡಿಲ್ಲವಾದರೂ, ಆ ಬಗೆಯ ಪ್ರಯತ್ನಗಳು ನಡೆದಿದೆಯೆಂದರು. ಹಿಂದುಸ್ಥಾನದ ಅಪಾರ ಶಕ್ತಿಯನ್ನು ಯುದ್ಧಯತ್ನದಲ್ಲಿ ಒಟ್ಟು ಸೇರಿಸಲು ಏನು ಮಾಡಬೇಕಾಗಿದೆಯೆಂಬುದನ್ನು ಅಟ್ಲೀಯವರು ಹೇಳಲಿಲ್ಲ ಇದರಿಂದ ಶ್ರೀ ಚರ್ಚಿಲ್ ಪ್ರಭುತ್ವದ ಮನಸ್ಸಿನಲ್ಲಿ ಹಿಂದುಸ್ಥಾನದ ವಿಚಾರ ಎಂತಹ ಅಭಿಪ್ರಾಯವಿದೆಯೆಂದು ವ್ಯಕ್ತವಾಗುತ್ತದೆ. ಚರ್ಚಿಲರಂತೂ ಕೊನೆಗೆ ಕೊಟ್ಟ ಉತ್ತರದಲ್ಲಿ ಹಿಂದುಸ್ಥಾನದ ವಿಚಾರವಾಗಿ ಒಂದೇ ಒಂದು ಮಾತನ್ನಾದರೂ ಹೇಳಲಿಲ್ಲವೆಂಬುದು ಅತ್ಯಂತ ಗಮನಾರ್ಹವಾಗಿದೆ.

ಸಪ್ರು ಪ್ರಭೃತಿ ಮಂದ ಪಕ್ಷದ ಮುಂದಾಳುಗಳು ಚರ್ಚಿಲರಿಗೆ ಕಳುಹಿಸಿದ ತಂತಿಯ ವಿಷಯದಲ್ಲಿ ಈಗ ಭಾರತ ಮಂತ್ರಿಗಳು ವೈಸರಾಯರೂ ಕೂಡಿ ವಿಚಾರಮಾಡುತ್ತಿರುವರೆಂದು ತಿಳಿಯುತ್ತಿದೆ. ಚರ್ಚಿಲ್ ಮಂತ್ರಿ ಮಂಡಳದ ಮನೋಗತವನ್ನರಿತವರಿಗೆ ಅವರ ಈ ವಿಚಾರ ಗೋಷ್ಠಿಯ ಬಳಿಕ ಯಾವರೀತಿಯ ಉತ್ತರ ಸಿಗಬಹುದೆಂದೂಹಿಸುವುದು ಕಷ್ಟವಾಗಲಿಕ್ಕಿಲ್ಲ. ಅತಿ ಪೂರ್ವದಲ್ಲಿ ಜಪಾನು ಬೆನ್ನಟ್ಟಿಬರುತ್ತಿರುವಾಗ ಹಿಂದುಸ್ಥಾನದ ಕುರಿತು ಹೀಗೆ ನಿರ್ಲಕ್ಷ್ಯಭಾವದಿಂದ ಚರ್ಚಿಲರು ವರ್ತಿಸುವುದು ಅವರ ಘನ ವ್ಯಕ್ತಿತ್ವಕ್ಕೆ ಭೂಷಣಾಸ್ಪದವಾಗಿಲ್ಲ.

ರಾಷ್ಟ್ರ ಸಂಘಟನಾ ಕಾರ್ಯ

ಕಾಂಗ್ರೆಸು ಇಂದು ವಾಕ್ಸ್ವಾತಂತ್ರ್ಯಕ್ಕಾಗಿ ಹೂಡಿದ ಸತ್ಯಾಗ್ರಹವನ್ನು ನಿಲ್ಲಿಸಿ ಹೊಸ ಕಾರ್ಯಕ್ರಮವನ್ನು ಎಂದರೆ ರಾಷ್ಟ್ರ ಸಂಘಟನಾ ಕಾರ್ಯವನ್ನು ಕೈಕೊಂಡಿದೆ. ಹದಿನಾಲ್ಕು ಸೂತ್ರಗಳುಳ್ಳ ರಚನಾತ್ಮಕ ಕಾರ್ಯಕ್ರಮಗಳು ಹಾಗೂ ಇಂದಿನ ಅನಿಶ್ಚಿತ ಪರಿಸ್ಥಿತಿಯಲ್ಲಿ, ಯುದ್ಧಭೀತಿಯ ಸಂದರ್ಭದಲ್ಲಿ ಮಾಡತಕ್ಕ ಕರ್ತವ್ಯಗಳು ಇಂದು ಕಾಂಗ್ರೆಸಿನವರ ಮುಂದಿರುವ ಜವಾಬ್ದಾರಿಗಳಾಗಿವೆ.

ರಾಜಗೋಪಾಲಾಚಾರ್ಯರು, ಒಂದೆಡೆಯಲ್ಲಿ ದೇಶದ ಆದ್ಯಂತವೂ ಪ್ರಚಾರ ಮಾಡುತ್ತಾ ಇಂದಿನ ಸಂದರ್ಭದಲ್ಲಿ ಜನತಾ ಪ್ರತಿನಿಧಿಗಳ ವಶ ಭಾರತದ ರಕ್ಷಣಾ ವ್ಯವಸ್ಥೆಯೊಪ್ಪಿಸಲು ಬ್ರಿಟಿಷ್ ಸರಕಾರವು ಸಿದ್ಧವಿದ್ದರೆ, ಎಂದರೆ, ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಿ ರಾಜ್ಯ ಘಟನೆಯ ಬದಲಾವಣೆ ಮಾಡಬಲ್ಲುದಾದರೆ ಯುದ್ಧ ಪ್ರಯತ್ನದಲ್ಲಿ ಸಹಕರಿಸಬಹುದೆಂಬ ಕಾಂಗ್ರೆಸಿನ ಬಾರ್ಡೋಲೀ ನಿರ್ಣಯವನ್ನು ವಿವರಿಸುತ್ತಾ ಬರುತ್ತಾರೆ. ಕಾಂಗ್ರೆಸಿನ ಬಾರ್ಡೋಲಿ ನಿರ್ಣಯಕ್ಕೂ, ರಾಜಗೋಪಾಲಾಚಾರ್ಯರ ಈ ರೀತಿಯ ಸಂಧಾನ ಸೂಚನೆಗೂ, ಬ್ರಿಟಿಷ ಸರಕಾರವು ಎಷ್ಟರ ಮಟ್ಟಿಗೆ ಮಾನ್ಯತೆ ಕೊಡುವುದೋ ನೋಡಬೇಕಾಗಿದೆ.

ರಾಜಕೀಯ ಬದಲಾವಣೆಯ ವಿಷಯದಲ್ಲಿ ಸರಕಾರವು ಏನು ವಿಚಾರ ಮಾಡದಿದ್ದರೂ, ಕಾಂಗ್ರೆಸಿನಂತಹ ಪ್ರಭಾವಶಾಲೀ ಸಂಸ್ಥೆಯು ಇಂದು ಮೂಕ ಮೌನವಾಗಿರಲು ಸಾಧ್ಯವಿಲ್ಲವೆಂಬುದನ್ನು ಮನಗಂಡು, ಕಾಂಗ್ರೆಸ್ ಮುಂದಾಳುಗಳು ಹೊಸ ಕಾರ್ಯಕ್ರಮನ್ನು ಜನತೆಯ ಮುಂದಿಟ್ಟಿದ್ದಾರೆ. ಆ ಕಾರ್ಯಕ್ರಮಗಳುಎರಡು. ಒಂದು ರಚನಾತ್ಮಕ ಕಾರ್ಯಕ್ರಮಗಳನ್ನು ಮಾಡುತ್ತಿದ್ದು ಕಾಂಗ್ರೆಸ್ ಸಂಸ್ಥೆಯ ಮಹಿಮೆಯನ್ನು ಹೆಚ್ಚಿಸುವುದು ಆ ಮೂಲಕ ಆದಷ್ಟು ಜನತಾ ಸಂಪರ್ಕ ಬೆಳೆಸುವುದು, ಇನ್ನೊಂದು ಇಂದಿನ ಯುದ್ಧ ಪ್ರಸಂಗದಲ್ಲಿ ಗಾಬರಿಗೊಳ್ಳುವ ಜನತೆಗೆ ಧೈರ್ಯದಿಂದಿರಲು ಸಹಾಯಮಾಡುವುದು, ಹಾಗೆ ಅವರ ಕಷ್ಟಕಾಲದಲ್ಲಿ ಹೋಗಿ ನೆರವಾಗುವುದು.

ರಚನಾತ್ಮಕ ಕಾರ್ಯಗಳನ್ನು ಬಲಪಡಿಸುವುದರಿಂದ ಮಾತ್ರ ಯಾವುದೇ ಸಂಸ್ಥೆಯಾದರೂ ನಿಜವಾಗಿ ಜನತೆಯ ಆದರವನ್ನುಗಳಿಸಬಹುದಾಗಿದೆ ಕಾಂಗ್ರೆಸಿನ ಹದಿನಾಲ್ಕು ಸೂತ್ರಗಳುಳ್ಳ ರಚನಾತ್ಮಕ ಕಾರ್ಯಕ್ರಮದಲ್ಲಿ ಖಾದಿ, ಅಸ್ಪೃಶ್ಯತಾ ನಿವಾರಣೆ, ಮದ್ಯಪಾನ ನಿಷೇಧ, ಹಿಂದೂ ಮುಸ್ಲಿಂ ಐಕ್ಯ, ಹಿಂದೀ ಪ್ರಚಾರ ಮೊದಲಾದುವು ಪ್ರಾಮುಖ್ಯವಾದವುಗಳು ಭಾರತದ ಸರ್ವಾಂಗೀನ ಉನ್ನತಿಗೆ ಇಂತಹ ಸೂತ್ರಗಳನ್ನುಬಿಟ್ಟು ಬೇರೆ ದಾರಿಯಿರುವುದಿಲ್ಲ

ಯುದ್ಧ ಪರಿಸ್ಥಿತಿಯಿಂದ ಭಾರತದ ಜನರು ಬಹಳಗಾಬರಿಗೊಂಡಿದ್ದಾರೆಯೆಂಬುದರಲ್ಲಿ ಏನೇನೂ ಸಂಶಯವಿಲ್ಲ ಭಾರತದ ಮುಖ್ಯ ಮುಖ್ಯ ಪಟ್ಟಣಗಳಿಂದ ಅಸಂಖ್ಯ ಜನರು ಬೀಡುಬಿಟ್ಟು ಹೊರಡುತ್ತಿದ್ದಾರೆ ಆಹಾರ ವಸ್ತುಗಳ ಧಾರಣೆಯೇರುತ್ತಿದೆ., ಇದರಿಂದ ಲೂಟಿ ಕಳವು ದರೋಡೆಗಳು ಹೆಚ್ಚಲು ಅವಕಾಶವಿದೆ. ಇಂತಹ ಸಂದರ್ಭದಲ್ಲಿ ಕಾಂಗ್ರೆಸು ಹಳ್ಳಿಹಳ್ಳಿಗಳಿಂದ ತೊಡಗಿ, ರಾಷ್ಟ್ರ ಸಂಘಟನೆಯ ಕಾರ್ಯವನ್ನು ಕೈಕೊಂಡು ಜನತಾ ಹಿತದ ಸಲುವಾಗಿ ದೇಶಸೇವೆಯ ಸಲುವಾಗಿ ಸೊಂಟಕಟ್ಟಿ ದುಡಿಯಲು ನಿರ್ಧಾರಮಾಡಿರುವುದು ಸ್ತುತ್ಯವಾಗಿದೆ

ನೋಟಗಳು....

ಅಯರ್ಲೆಂಡಿನ ಮುಂದಾಳು ಡಿವೆಲರಾ ಅಯರ್ ಪಾರ್ಲಿಮೆಂಟಿನಲ್ಲಿ ಜರ್ಮನಿಗೆ ತಾನು ಸಹಾಯಮಾಡುವ ಅಭಿಪ್ರಾಯ ಕೆಲವರಿಗಿದೆ ಎಂದು ಹೇಳಿದ್ದು ಹಲವರಿಗೆ ಆಶ್ಚರ್ಯವನ್ನುಂಟುಮಾಡಿದೆ.

卐

ಅಯರ್ಲೆಂಡು ಇಂಗ್ಲೆಂಡಿಗೆ ಸಮೀಪವಿರುವ ಸ್ವತಂತ್ರ ರಾಷ್ಟ್ರ ಮೊನ್ನೆ ಮೊನ್ನೆ ಅದು ಬ್ರಿಟಿಷರ ದಾಸ್ಯ ಬಂಧನದಿಂದ ಬಿಡುಗಡೆಹೊಂದಿತು. ದಾಸ್ಯ ವಿಮೋಚನೆಗಾಗಿ ಅಯರಿಷ್ ಜನರು ಸ್ವಾತಂತ್ರ್ಯದ ಹೋರಾಟದಲ್ಲಿ ರಕ್ತದ ಚೆಲ್ಲಾಟವಾಡಿದ್ದರು. ಅಯರ್ಲೆಂಡಿನ ಜನರು ಅಷ್ಟೊಂದು ಸಾಹಸದಿಂದ ಸ್ವಾತಂತ್ರ್ಯಗಳಿಸಿಕೊಂಡವರು.

卐

ಬ್ರಿಟನು ಜರ್ಮನಿಯೊಡನೆಯುದ್ಧ ಸಾರಿದಾಗ, ಅಯರ್ಲೆಂಡು ಬ್ರಿಟನಿನ ಬೆಂಬಲ ನಿಲ್ಲಬಹುದೆಂದು ಬ್ರಿಟಿಷರು ಆಶಿಸಿದ್ದರೂ, ಅದು ತಾನು ತಟಸ್ಥವಾಗಿಯೇ ಉಳಿಯುವುದೆಂದು ಸಾರಿಬಿಟ್ಟಿತು

卐

ಮೊನ್ನೆ ಮೊನ್ನೆ ತನ್ನ ಅಧೀನದಲ್ಲಿದ್ದ ಅಯರ್ಲೆಂಡು, ಈಗ ತಾನು ಹೇಳಿದಂತೆ ಕೇಳುವುದಿಲ್ಲವಲ್ಲಾ ಎಂಬ ವಿಷಯ ಬ್ರಿಟನಿಗೆ ಅತೃಪ್ತಿ ಹುಟ್ಟಿದ್ದೂ ಸಹಜವೇ!

卐

ಅಯರ್ಲೆಂಡಿಗೆ ಬ್ರಿಟನು ಸ್ವಾತಂತ್ರ್ಯ ಕೊಡುವಾಗ ಅಯರ್ ಮತ್ತು ಅಲ್‌ಸ್ಟರ್ ಎಂದು ಆ ದೇಶವನ್ನು ಎರಡಾಗಿ ವಿಂಗಡಿಸಿ ಬಿಟ್ಟಿತ್ತು!

卐

ಹಿಂದುಸ್ಥಾನಕ್ಕೆ ಯಾವಾಗಲಾದರೊಂದು ಕಾಲದಲ್ಲಿ ಸ್ವಾತಂತ್ರ್ಯಕೊಡುವುದಿದ್ದರೆ, ಹಿಂದುಸ್ಥಾನ ಪಾಕಿಸ್ತಾನಗಳೆಂಬ ವಿಭಜನೆ ಮಾಡಿಕೊಡುವ ಹಂಚಿಕೆ ಈಗ ನಡೆಯುತ್ತಿರುವಂತೆ!

卐

ಅಯರ್ಲೆಂಡಿನಲ್ಲಿ ಹಾಗೆ ಪಾಕಿಸ್ತಾನಮಾಡಿದ ವಿಷಯದಲ್ಲಿ ಅಂದಿನಿಂದಲೇ ಡಿವೆಲರಾ ಪ್ರತಿಭಟಿಸಿದ್ದರು. ಪ್ರತಿಭಟನೆಮಾಡಿದ್ದರೂ ಅಲ್‌ಸ್ಟರಿನಲ್ಲಿ ಪ್ರತ್ಯೇಕ ಪಾರ್ಲಿಮೆಂಟು ಸ್ಥಾಪಿತವಾಗಿ ಪ್ರತ್ಯೇಕ ಆಡಳಿತ ಸಾಗತ್ತಲಿತ್ತು

卐

ಅಲ್‌ಸ್ಟರ್ ಬ್ರಿಟನು ಹೇಳಿದಂತೆ ಕೇಳುವ ಅಯರ್ಲೆಂಡಿನ ವಿಭಾಗವೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಈಗ ಅಲ್ಲಿ ಅಮೆರಿಕನ್ ಸೈನ್ಯವು ಬಂದಿಳಿದಿದೆ. ಇದರಿಂದ ಅಯರ್ಲೆಂಡಿನ ತಟಸ್ಥನೀತಿಗೆ ಭಂಗಮಾಡಿದಂತಾಯಿತು ಎಂದೂ, ಹೀಗೆ ಬ್ರಿಟನು ಅಲ್‌ಸ್ಟರನ್ನು ಕೈವಶಮಾಡಿಕೊಂಡು ತಾಟಸ್ಥ್ಯ ಮುರಿದು ಜರ್ಮನಿಯೆದುರು ಹೋರಾಡಬಯಸುವುದಿದ್ದರೆ, ಅಯರಿನ ಕೆಲವರು ಜರ್ಮನಿಗೆ ಸಹಾಯಮಾಡಬಯಸುವರೆಂದೂ ಡಿವೆಲರಾ ಅಯರಿನ ಪಾರ್ಲಿಮೆಂಟಿನಲ್ಲಿ ತಿಳಿಸಿದ್ದಾರೆ.

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

'ಆತ್ಮಶಕ್ತಿ ಶಾಶ್ವತವಾದುದು; ಪಶುಶಕ್ತಿ ಕ್ಷಣಿಕವಾದುದು'

ಕಾಂಗ್ರೆಸಿನವರು ಅಧಿಕಾರ ವಹಿಸುವುದಿದ್ದರೆ, ದು ಅಹಿಂಸೆಯಿಂದ ಹಾಗೂ ಆತ್ಮಶಕ್ತಿಯಿಂ ಮಾತ್ರ ಎಂಬುದಾಗಿ ನನ್ನ ಬಲವಂತವಾದ ಶ್ವಾಸವಾಗಿದೆ. ಹೀಗೆಂದು ಗಾಂಧಿಜಿ ಹರಿಜನದ ಒಂದು ಲೇಖನ ಬರೆಯುತ್ತಾ ವಿವರಿಸಿರುವ ು. ಅವರು ಅದರಲ್ಲಿ ಕೆಳಗಿನ ವಿಷಯ ತಿಳಿಸಿ ುವರು.

'ಸರ್ದಾರರು ಸೇವಾಗ್ರಾಮದಿಂದ ಹೊರಡು ಾಗ ನನಗೆ ಗುಜರಾಥಿನಲ್ಲಿ ನಡೆದ ಒಂದು ಕಾಯಿತಿ ಸುದ್ದಿ ಹೇಳಿದರು ಅದು ಬಹಳ ೇಕರವಾದುದಿತ್ತು. ಅಂತಹ ಸಂದರ್ಭದಲ್ಲಿ ಾನು ಏನು ಮಾಡಬೇಕು ಎಂದು ಯೋಚಿಸಿದೆ ಮೇಲೆ ಕಾಂಗ್ರೆಸಿನವರು ಏನು ಮಾಡತಕ್ಕದ್ದು ಂದು ಯೋಚಿಸಿದೆ ಕಾಂಗ್ರೆಸು ೧೯೨೦ರಿಂದ ಹಿಂಸೆಯನ್ನು ಅಂಗೀಕರಿಸಿದೆ. ಗುಜರಾಥಿನಲ್ಲಿ ದಾರರಂತಹ ಮುಖಂಡರಿದ್ದಾರೆ ಹೀಗಿದ್ದು ೂ ಅಂತಹ ಕೆಲಸಗಳು ಅಲ್ಲಿ ಆಗುತ್ತಿವೆ. ಹಾಗಾ ದರೆ ಕಾಂಗ್ರೆಸಿನ ಪ್ರಭಾವ ಎಷ್ಟರಮಟ್ಟಿಗೆ ಹರಡಿ ? ಬ್ರಿಟಿಷ್ ಸರಕಾರವು ಈಗ ಹೊರಟುಹೋದರೆ ಹಿಂಸಾಮಯರಾದ ಕಾಂಗ್ರೆಸಿನವರು ಅಧಿಕಾ ಕ್ಕೆ ಬರುವುದೆಂದು ವಿಚಾರಿಸಿರಿ ಆದರೆ ನಿಜವಾಗಿ ೀಗಿಲ್ಲ. ಅದಕ್ಕಾಗಿ ಕಳೆದ ೨೦ ವರ್ಷಗಳಿಂದ ಾನು ಕೆಲಸಮಾಡುತ್ತಿದ್ದೇನೆ ನನ್ನ ಕನಸು ಇದು ವರೆಗೆ ಕೃತಾರ್ಥವಾಗಿಲ್ಲ. ಕಾಂಗ್ರೆಸಿಗೆ ೧೯೨೦ ಲ್ಲಿ ಅಂಗೀಕರಿಸಿದ ತತ್ವದಲ್ಲಿ ಜೀವಂತ ವಿಶ್ವಾಸ ಲ್ಲ. ಕಾಂಗ್ರೆಸಿನ ಅಹಿಂಸೆ ದುರ್ಬಲರ ಅಹಿಂಸೆ. ಸರಕಾರವನ್ನು ಶಕ್ತಿವಂತರು ಮಾತ್ರ ನಡೆಸಬ ಹುದು ಜಗತ್ತಿನ ಶಕ್ತಿಗಳಲ್ಲಿ ಅಹಿಂಸೆ ಪ್ರಬಲ ಶಕ್ತಿಯೆಂದು ತಿಳಿದ ಅಹಿಂಸಾಮಯರಿಂದ ಮಾತ್ರ ಅಹಿಂಸಾತ್ಮಕ ಸರಕಾರ ನಡೆಸಲು ಸಾಧ್ಯ ವಿದೆ. ನಮ್ಮಲ್ಲಿ ಇಂತಹ ವಿಶ್ವಾಸವಿದ್ದರೆ ಹಿಂದು ಮುಸ್ಲಿಂ ದೊಂಬಿ ಆಗುತ್ತಿರಲಿಲ್ಲ ನಮ್ಮಲ್ಲಿ ಕಳ್ಳರು ದರೋಡೆಗಾರರು ಇರುತ್ತಿರಲಿಲ್ಲ ಅಂತ ಹ ಶಕ್ತಿ ಸಂಪಾದಿಸಲು ಯೇಸು ಇಲ್ಲವೇ ಬುದ್ಧ ನೇ ಈಗ ಬರಬೇಕೆಂದು ಕೆಲವರು ಹೇಳಬಹು ದು. ಇದು ಸರಿಯಲ್ಲ. ಯೇಸುವಾಗಲಿ ಬುದ್ಧ ನಾಗಲಿ ಹಿಂಸೆಯನ್ನು ರಾಜಕೀಯದಲ್ಲಿ ಪ್ರಯೋ ಗಿಸಲಿಲ್ಲ. ಇಂದಿನ ಸಾಮಗ್ರಿಯು ಅಂದಿರಲಿಲ್ಲ ಆದ್ದರಿಂದ ಕಾಂಗ್ರೆಸು ಮಾಡುವ ಸಂಶೋಧನೆ ಹೊಸ ತರದ್ದು ಇಂದಿನ ವಿಷಾದ ಘಟನೆಯಿಂ ದರೆ ಕಾಂಗ್ರೆಸಿನವರು ಇದನ್ನು 'ಸಂಪೂರ್ಣ ವಿಶ್ವಾಸದಿಂದ ಪ್ರಯೋಗಿಸದಿರುವುದು ಅವರು ಅಂತಹ ವಿಶ್ವಾಸದಿಂದ ಮಾಡಿದ್ದರೆ ಕಾಂಗ್ರೆಸಿನ ಘನತೆ ಇಂದು ಇದಕ್ಕಿಂತ ಹೆಚ್ಚುತ್ತಿತ್ತು. ನಾವಿ ದುವರೆಗೆ ಅಹಿಂಸೆಯನ್ನು ದುರ್ಬಲರ ಸಲುವಾ ಗಿ ಉಪಯೋಗಿಸಿದ್ದರೆ ಒಮ್ಮೆಲೇ ಅದನ್ನು ಸಶ ಕ್ತರ ಸಲುವಾಗಿ ಹೇಗೆ ಉಪಯೋಗಿಸಬಲ್ಲೆವು? ಹೇಗಿದ್ದರೂ ಈ ಪರಿಸ್ಥಿತಿಯಲ್ಲಿ ಈ ಪ್ರಯೋಗ ವೇ ನಮಗೆ ನ್ಯಾಯವಾದದ್ದು. ಅಹಿಂಸೆಯ ದಾರಿಯಲ್ಲಿ ಅಪಜಯ ಹೊಂದಿದರೂ ಸೋಲಾ ಗುವುದಿಲ್ಲ. ಹಿಂಸಾ ಮಾರ್ಗದಲ್ಲಿ ಜಯವೂ ಅಪಜಯವೂ ಹತ್ಯಾಕಾಂಡವನ್ನೇ ಮಾಡುತ್ತದೆ. ಆದ್ದರಿಂದ ಕಳ್ಳರನ್ನು ದರೋಡೆಕಾರರನ್ನು ನಾವು ಬದಲಾವಣೆ ಮಾಡಬೇಕು. ಅಂತಹ ಜನರು ಸಿಗುವುದು ಅಪರೂಪ. ಆದರೂ ಕಾಂಗ್ರೆಸಿನವರು ಮಾಡತಕ್ಕ ಕೆಲಸವಿದು. ಇಂತಹ ಕೆಲಸಗಾರರ ನ್ನು ತಯಾರಿಸುವಾಗ ಬರಬಹುದಾದ ವಿಪತ್ತುಗ ಳನ್ನು ಎದುರಿಸಲೂ ತಯಾರಿರುವವರನ್ನು ಆರಿಸ ಬೇಕು. ಅಲ್ಲಿ ಮರಣವೊದಗಿದರೂ ಒದಗಬ ಹುದು. ಇಂತಹ ಶಾಂತಿದಳವು ದೇಶದಲ್ಲಿ ಅಗತ್ಯವಿದೆ. ಇಲ್ಲವಾದರೆ ಅಶಾಂತಿಯ ಕಾಲದಲ್ಲಿ ಕಾಂಗ್ರೆಸಿನವರು ತಮಗಿದ್ದ ಕೀರ್ತಿಯನ್ನು ಕಳಕೊಳ್ಳಬೇಕಾಗುವುದು. ಇಲ್ಲಿ ಹಣವಂತರೂ ಪಾಠಕಲಿಯಬೇಕಾಗಿದೆ ಐಶ್ವರ್ಯವನ್ನು ಶೇಖರಿಸಿ ಕಾಪಾಡುವವರು, ಕಾವಲಿರಿಸಿದ ಜನರೇ ತಮಗೆದುರು ನಿಲ್ಲುವುದ ನ್ನು ನೋಡಬೇಕಾಗಿದೆ. ಇದನ್ನು ಪಶುಶಕ್ತಿ ಯಿಂದ ತಡೆಯದೆ ಅಹಿಂಸೆಯಿಂದ ಎದುರಿಸಲು

'ಅಹಿಂಸೆಯ ಶಕ್ತಿಯೇ ಆತ್ಮಶಕ್ತಿ'

ಮಹಾತ್ಮರು ಮಾತನಾಡುವಾಗ ಕಲ್ಲು ಬಿಸಾಡಿದರು!

ಗಾಂಧಿಜಿ ಮತ್ತು ರಾಜಾಜಿ ದೂರ ಸರಿಯುತ್ತಾರೆಯೆ?

['ಹರಿಜನ'ದಿಂದ]

ಬಯಸುವ ಹಣವಂತರು ತಮ್ಮದೆಲ್ಲವನ್ನೂ ತ್ಯಾಗಮಾಡಲು ಸಿದ್ಧರಿರಬೇಕು 'ನಿಮ್ಮ ಕೋಟಿಯನ್ನು ಎಲ್ಲಾ ಬಗೆಯಿಂದಲೂ ಸಂಪಾದಿಸಿರಿ, ಆದರೆ ಆ ಕೋಟಿ ನಿಮ್ಮದಲ್ಲವೆಂದು ತಿಳಿದಿರಲಿ ಅದು ಜನರದು, ನಿಮಗೆ ಅತ್ಯಂತ ಅವಶ್ಯವಾಗಿ ಬೇಕಾದುದನ್ನು ತೆಗೆದುಕೊಳ್ಳಿ, ಮಿಕ್ಕುದನ್ನು ಸಮಾಜಕ್ಕೆ ಬಿಟ್ಟುಬಿಡಿ, ಇದುವರೆಗೆ ಈ ಸತ್ಯವನ್ನು ಯಾರೂ ಕಾಣಲಿಲ್ಲ ಆದರೆ ಅಶಾಂತಿಯ ಕಾಲದಲ್ಲಿ ಹಣವಂತರು ಈ ಸತ್ಯವನ್ನು ಓದಿಯದಿದ್ದರೆ ಅನರ್ಥಕ್ಕೆ ಗುರಿಯಾಗಬೇಕಾದೀತು ಈ ಯುದ್ಧದ ಅಂತ್ಯವೆಂದರೆ ಹಣಕೂಡಿಸುವಿಕೆಯ ಅಂತ್ಯವೆಂದು ನನ್ನ ವಿಶ್ವಾಸ, ನಾನು ಬಡವರ ಆಳಿಕೆಯ ದಿನವು ಬರುತ್ತಿದೆಯೆಂದು ತಿಳಿಯುತ್ತೇನೆ ಅದು ಬಲತ್ಕಾರದಿಂದಾಗಲಿ, ಹಿಂಸೆಯಿಂದಾಗಲಿ, ಅಹಿಂಸೆಯಿಂದಾಗಲಿ ಹೇಗೂ ಇರಬಹುದು ಪಶುಶಕ್ತಿಯು ತಮ್ಮ ಶರೀರದಂತೆ ಕ್ಷಣಿಕವೆಂದು ತಿಳಿದಿರಲಿ ಆದರೆ ಆತ್ಮಶಕ್ತಿ ಶಾಶ್ವತವು ಆತ್ಮವು ನಿತ್ಯವಾದುದು

ರಾಜಾಜಿ ಮತ್ತು ಗಾಂಧಿ

"ರಾಜಾಜಿಗೆ ಏನಾಗಿದೆ? ನೀವು ಮತ್ತು ರಾಜಾಜಿ ದಿನದಿಂದ ದಿನಕ್ಕೆ ದೂರವಾಗುತ್ತಿರುವಂತೆ ತೋರುತ್ತದೆಯಲ್ಲಾ' ಎಂಬೀ ಒಬ್ಬರ ಪ್ರಶ್ನೆಗೆ ಗಾಂಧಿ ಹರಿಜನದಲ್ಲಿ ಉತ್ತರ ಕೊಡುತ್ತಾರೆ "ನಾವು ದೂರವಾಗುವಂತೆ ತೋರುತ್ತದೆ, ಆದರೆ ನಾವು ದೂರವಾಗಿಲ್ಲ ಕಾಣುವ ಈ ಭೇದವು ಮುಂದಿನ ಶಾಶ್ವತಬಂಧನಕ್ಕೆ ಹಾಗೂ ಶುದ್ಧತೆಯುಳ್ಳಿಕೆಗೆ ಸಹಕಾರಿಯು. ಅವರ ಪ್ರೀತಿ ಸಂದೇಹಾತೀತ ತನ್ನನ್ನು ಅವರು ಸಂತೋಷದಿಂದ ಹಿಡಕೊಳ್ಳುತ್ತಿದ್ದರು ಆದರೆ ಸಾರ್ವಜನಿಕರ ಅಂಗೀಕಾರಕ್ಕೆ ಅವರ ಸೂಚನೆಗಳು ಹಿತವಾಗುವುದಿದ್ದರೆ ಸೂಚಿಸಿರೆಂದು ನಾನೇ ಪ್ರೋತ್ಸಾಹಿಸಿದೆ ನಮ್ಮ ಆರಾಧ್ಯದೇವತೆ ಒಂದೇ; ನಮ್ಮ ವ್ಯಾಖ್ಯಾನ ಮಾತ್ರ ಬೇರೆಯಾಗಿದೆ. ಅವರು ತಪ್ಪುಮಾಡುವುದಿದ್ದರೆ, ಹಾಗೆ ತಿಳಿದುಬಂದ ಕೂಡಲೆ ಅವರು ಅದರಿಂದ ಹಿಂತೆಗೆವರು. ಹಾಗೆಯೇ ನಾನು ನನ್ನ ತಪ್ಪನ್ನು ತಿಳಕೊಂಡರೂ ಮಾಡುವೆನೆಂದು ಅವರಿಗೂ ಗೊತ್ತು ಆದ್ದರಿಂದ ಅವರ ವಿಷಯ ನಾನು ಭದ್ರತೆಯುಳ್ಳವನಿದ್ದೇನೆ. ಈ ಪ್ರಶ್ನೆಕರ್ತರೂ ಹಾಗೆಯೇ ತಿಳಕೊಳ್ಳಬೇಕೆಂದು ನಾನು ಭಾವಿಸುತ್ತೇನೆ'

ಅನಿರೀಕ್ಷಿತ ಅನುಭವ

ನಾಗಪುರದ ಗೋಕಮೇಲಾ ಹರಿಜನ ವಿದ್ಯಾರ್ಥಿ ಭವನದ ರಜತೋತ್ಸವ ಸಂದರ್ಭದಲ್ಲಿ ಗಾಂಧಿಜಿ ಭಾಷಣ ಕೊಡುತ್ತಿದ್ದಾಗ ಅವರನ್ನು ನಿಷೇಧಿಸಿ, ಅಲ್ಲಿ ನೆರೆದ ಕೆಲವರು ಕಲ್ಲು ಬೀಸಾಡಿದ್ದೇ ಮೊದಲಾದ ಕೆಟ್ಟ ಕೆಲಸವನ್ನು ಮಾಡಿದ ವಿಷಯದಲ್ಲಿ ಮಹಾದೇವದೇಸಾಯಿಯವರು 'ಹರಿಜನ'ದಲ್ಲಿ ಒಂದು ಲೇಖನ ಬರೆದಿರುವರು. ಗಾಂಧಿಜಿ ಮಾತನಾಡಲು ಆರಂಭವಾದಾಗ ಕೆಲವರು ಅಪಶಬ್ದವಾಡಿದರು ಒಬ್ಬ ಯುವಕನು ಎದ್ದು ನಿಂತು 'ನಾವು ನಿಮ್ಮ ಆಗಮನದ ವಿಷಯ ನಿಷೇಧಿಸುತ್ತೇವೆ' ಎಂದನು ಗಾಂಧಿಜಿಯನ್ನು ಅಲ್ಲಿಗೆ ಬರಮಾಡಿದ್ದು ಕಮಿಟಿಯ ನಿರ್ಣಯದಂತಿದ್ದರೂ, ಹಾಗೆ ನಿರ್ಣಯ ಮಾಡುವಾಗ ಕೆಲವರು ಆ ನಿರ್ಣಯಕ್ಕೆ ವಿರೋಧ ಮಾಡಿದ್ದರೆಂದು ತಿಳಿಯಿತು. ಗಾಂಧಿಜಿ ಬಹಳ ವಿನಯದಿಂದ ಕೇಳಿದರು 'ನೀವು ಯಾವುದರ ಸಲುವಾಗಿ ನನ್ನನ್ನು ನಿಷೇಧಿಸುತ್ತೀರಿ' ಎಂದು ಅವರಲ್ಲಿ ಒಬ್ಬನು ಹೇಳಿದನು 'ನೀವು ಹರಿಜನರ ಸಲುವಾಗಿ ಏನೂ ಮಾಡಲಿಲ್ಲ ಎಂಬುದಕ್ಕಾಗಿ' ಎಂದು ಗಾಂಧಿಜಿ ಆ ಮಾತಿಗೆ ಮುಗುಳುನಗುತ್ತಾ ಮಾತನಾಡುತ್ತಿರುವಾಗ ಕಲ್ಲುಗಳನ್ನು ಬಿಸಾಡತೊಡಗಿದರು. ಅದರಿಂದ ಕೆಲವರಿಗೆ ಗಾಯವಾಯಿತು ಒಂದು ಮಗುವನ್ನು ಆಸ್ಪತ್ರೆಗೆ ಒಯ್ಯಲಾಯಿತು ಇದನ್ನೆಲ್ಲಾ ನೋಡಿ ಗಾಂಧಿಜಿ ತನ್ನ ಅಹಿಂಸೆಯ ಪರೀಕ್ಷೆಯೆಂದು ತಿಳಿದು, ಅಲ್ಲಿ ಸ್ವಲ್ಪ ಸಮಯ ಮಾತ್ರ ಮಾತನಾಡಲು ಒಪ್ಪಿಕೊಂಡಿದ್ದರೂ, ಮತ್ತೆ ಹೆಚ್ಚು ಹೊತ್ತು ಮಾತನಾಡಿದ್ದಲ್ಲದೆ ಸಭಿಕರು ಯಾರೂ ಅಶಾಂತರಾಗಬಾರದಾಗಿ ಹೇಳಿದರು ಕೊನೆಗೆ ಗಲಭೆನಿಂತಿತು. ಎಲ್ಲವೂ ಶಾಂತವಾಯಿತು. ಗಾಂಧಿಜಿಯನ್ನು ಜಗತ್ತೇ ಕೊಂಡಾಡುತ್ತಿರುವಾಗ ಅವರ ಮೇಲೆ ಕಲ್ಲು ಬೀಸಾಡುವ ಭಾರತೀಯರೂ ಕೆಲವರಿದ್ದಾರೆ!

ಹಿಂದುಸ್ತಾನಿ

ಗಾಂಧಿಜಿ 'ಹಿಂದುಸ್ತಾನಿ' ಭಾಷೆಯನ್ನು ರಾಷ್ಟ್ರಭಾಷೆಯಾಗಿ ಸ್ವೀಕರಿಸುವ ವಿಷಯ ಈ ಸಲದ ಹರಿಜನದಲ್ಲಿ ಒಂದು ಲೇಖನ ಬರೆದಿರುವರು. ಅದರಲ್ಲಿ, ಅವರು, ಕಾಂಗ್ರೆಸು ಹಿಂದುಸ್ತಾನೀ ಭಾಷೆಯನ್ನಂಗೀಕರಿಸುವುದಾಗಿ ಠರಾವು ಮಾಡಿದ್ದರೂ ಅದನ್ನು ಇದುವರೆಗೆ ಸಾಕಷ್ಟು ಫಲಕಾರಿಯಾಗಿ ಪ್ರಯೋಗಕ್ಕೆ ತರಲಿಲ್ಲವೆಂಬ ವಿಷಯ ವಿಷಾದಸೂಚಿಸಿದ್ದರೆ ಅದರಲ್ಲಿ ಹಿಂದೀ ಉರ್ದು ವಿವಾದವು ಜಾತೀಯ ಪ್ರಶ್ನೆಯಾಗಿ ಸಂಭವಿಸಿದ ವಿಚಾರದಲ್ಲಿಯೂ ಖೇದ ಸೂಚಿಸುವರು

ಪ್ರಶ್ನೋತ್ತರ

ನೀವು ಇತರ ಸಂಸ್ಥೆಗಳೊಡನೆ ಸಹಕರಿಸಬಹುದೆಂದು ಹೇಳುವುದರ ಅರ್ಥವೇನು? ನೀವು ಜಾತೀಯ ಸಂಸ್ಥೆಗಳನ್ನು ಸೇರಿಸುತ್ತೀರೋ? ಎಂದು ಗಾಂಧಿಜಿಯವರಿಗೆ ಒಂದು ಪ್ರಶ್ನೆ. "ದೌರ್ಭಾಗ್ಯದಿಂದ ನಮ್ಮಲ್ಲಿ ಜಾತೀಯವಲ್ಲದ ಸಂಸ್ಥೆಗಳಿರುವುದು ಕಡಿಮೆ. ಹಾಗಾಗಿ ನೀವು, ಗಾಯಗೊಂಡವನಿಗೆ ಸಹಾಯಮಾಡುವಾಗ, ಬೆಂಕಿ ಆರಿಸುವಾಗ, ಮುಸ್ಲಿಂ ಲೀಗು, ಹಿಂದು ಮಹಾಸಭಾ ಇತ್ಯಾದಿ ಸಂಸ್ಥೆಗಳ ಸ್ವಯಂಸೇವಕರ ಸಹಾಯಪಡೆಯಬಹುದು ಅವರಿಗೆ ಸಹಾಯವೂ ಮಾಡಬಹುದು." ಎಂದು ಗಾಂಧಿಜಿ ಅದಕ್ಕೆ ಉತ್ತರವಿತ್ತಿದ್ದಾರೆ.

The

Canara Industrial & Banking Syndicate, Ltd.

(Incorporated in British India Liability of shareholders limited)

Estd. Head Office: UDIPI (S. India) 1925

Authorised Capital	Rs 50,00,000
Subscribed Capital	Rs 14,73,620
Paid up Capital	Rs 6,12,250
Reserves	Rs. 2,10,000

Branches in the important commercial centres of Karnatak, Malabar, and Rayalaseema Districts and in Bombay and Secunderabad

All kinds of Banking business transacted

Our new Issue of Rs 40 Lakhs of 5% Tax-free Cumulative Preference Shares of Rs. 10 each is an ideal form of safe and remunerative investment with unique features

INVESTORS PLEASE NOTE

From about the middle of April 1942, premium will be levied also on applications for 100 shares and above at Rs 5 per every hundred shares Details will be notified in the Prospectus.

Apply for Prospectus.

NOTICE

In the Court of the District Munsiff of Mangalore

O S No 443/41

Between —

Lazarus Fernandes—Plaintiff

and

Benjamin T. Martis & others —Defendants

To

The 1st Defendant Benjamin T. Martis son of Inas Martis, of Kadri village Mangalore

Please take notice that the plaintiff has filed the above mortgage suit against you for Rs. 897—12—0 and that the same stands posted to 11-2-'42 for settlement of issues. If you fail to appear on that date, the same will be decided exparte.

Mangalore 30—1—'42 A. M. D'M. B.A., LL.B. Vakil for Plaintiff.

ಸಿಂಗಾಪುರದ ಸಲುವಾಗಿ ಪ್ರಚಂಡ ಕಾಳಗವಾಗುತ್ತಿದೆ

ಲಿಬಿಯದಲ್ಲಿ ರೊಮೆಲನು ಮುಂದೊತ್ತಿದನು

ಯುಕ್ರೇನಿನಲ್ಲಿ ರಶ್ಯನರು ಮುಂದರಿದರು

ಇಜಿಪ್ತ ಮಂತ್ರಿಮಂಡಳದ ಬಿಕ್ಕಟ್ಟು

ಯುಕ್ರೈನಿನಲ್ಲಿ ರಶ್ಯನರ ಮುನ್ನಡೆ

ದಕ್ಷಿಣ ರಶ್ಯದಲ್ಲಿ ಮುನ್ನುಗ್ಗುತ್ತಿರುವ ಮಾರ್ಶಲ್ ಟಿಮೊಶಂಕೋನ ಸೈನ್ಯಗಳು ಈಗ ಅತಿ ವೇಗದಿಂದ ಮುನ್ನುಗ್ಗಿ ಅಝೋವ್ ಕರಾವಳಿಯಲ್ಲಿರುವ ಜರ್ಮನ್ ಸೈನ್ಯವನ್ನು ಸುತ್ತುಗಟ್ಟಿರುವವು. ಬೆರಿಸ್ಲೊವಿಯದಿಂದ ರಶ್ಯನರು ಪಶ್ಚಿಮಕ್ಕೆ ನುಗ್ಗುತ್ತಿರುವರು. ಖಾರ್ಖಾವಿನಲ್ಲಿ ರಶ್ಯನರು ಗೋರಿಲ್ಲಾ ಜನರು ಜರ್ಮನರ ಒಂದು ಇಡೀ ಸೈನ್ಯವನ್ನೇ ನಾಶಮಾಡಿದರು. ಟಾಗರಾನದ ಮೇಲೆ ಗಂಡಾಂತರವುಂಟಾಗಿದೆಯೆಂದು ಹೇಳಿಕೆ. ಅಮೆರಿಕದಿಂದ ರಶ್ಯಕ್ಕೆ ಸಹಾಯ ಬರುತಿದೆಯಂತೆ. ರಶ್ಯನ್ ರಣಭೂಮಿಗೆ 13 ಜರ್ಮನ್ ಸೈನ್ಯಗಳು ಕಳುಹಿಸಲ್ಪಟ್ಟವೆಂದು ಸುದ್ದಿ. ರಶ್ಯನರು ಈಗ ಮತ್ತೆ 20 ಸ್ಥಳಗಳನ್ನು ತಿರಿಗಿ ಪಡಕೊಂಡರಂತೆ.

ರೊಮೆಲ್ಲನ ಮುನ್ನಡೆ

ಲಿಬಿಯದಲ್ಲಿ ರೊಮೆಲನ್ನು ಮುಂದೊತ್ತುತ್ತಿರುವನು. ಬಾರ್ಖೀಯವು ಆಕ್ರಮಿಸಲ್ಪಟ್ಟಿದೆ.

ಮೌಲ್ಮಿನ ಕಾಳಗ

ಇದು ಭೀಕರವಾಗಿದೆ. ಬ್ರಿಟಿಷ್ ಸೈನ್ಯಗಳು ಹಿಂದೆ ಸರಿದವು. ಜಪಾನರು ಎಲ್ಲಾ ದಿಕ್ಕುಗಳಿಂದಲೂ ಮುನ್ನುಗ್ಗುತ್ತಿರುವರು. ಅಂಬಾಯ್ನದಲ್ಲಿ ಜಪಾನರು ಮುನ್ನಡೆದಿರುವರು.

ವೈಸರಾಯರ್ ಕಾರ್ಯಕಾರೀ ಮಂಡಳದ ಪುನರ್ರಚನೆ

ಹಿಂದುಸ್ಥಾನದ ರಾಜಕೀಯ ಬಿಕ್ಕಟ್ಟನ್ನು ಬಿಡಿಸುವ ಬಗ್ಗೆ ಏನು ಮಾಡಬೇಕೆಂದು ವೈಸರಾಯರೂ ಭಾರತ ಮಂತ್ರಿಯವರೂ ದೀರ್ಘ ಆಲೋಚನೆ ಮಾಡುತಿದ್ದಾರಂತೆ. ಸದ್ಯದ ಪರಿಸ್ಥಿತಿಯಲ್ಲಿ ಶಾಸನ ಮಂಡಳಕ್ಕೆ ವಿಶೇಷ ಅಧಿಕಾರ ಕೊಡಲು ಸರಕಾರವು ಸಿದ್ಧವಿಲ್ಲವಂತೆ. ಆರು ಜನ ಹಿಂದೀಯರನ್ನು ಹೊಸದಾಗಿ ತೆಗೆದುಕೊಳ್ಳಲಾಗುವುದೆಂದು ಊಹಿಸಲಾಗಿದೆ.

ಈಜಿಪ್ತಿನ ಮಂತ್ರಿಮಂಡಳದಲ್ಲಿ ಬಿಕ್ಕಟ್ಟು

ಉಂಟಾಗಿ, ಸಿರಿಪಾಶಾ ಮಂತ್ರಿಮಂಡಳವು ರಾಜೀನಾಮೆ ಕೊಟ್ಟಿರುವುದಾಗಿ ತಿಳಿದಿದೆ. ಈ ಬಿಕ್ಕಟ್ಟಿಗೆ ಕಾರಣವು, ಈಜಿಪ್ತ ಸರಕಾರವು ವಿಚಿಸರಕಾರದ ಸಂಬಂಧ ಮುರಿದ ಮೇಲೆ ಉಂಟಾಯಿತು.

ಸಿಂಗಾಪುರದ ಆಕ್ರಮಣಕ್ಕಾಗಿ

ಜಪಾನರು ಮಾಡುವ ಸಾಹಸವು ಹೆಚ್ಚುತ್ತಾ ಇದೆ. ಶತ್ರುಗಳು ಒಂದೇ ಸಮನೆ ಬಾಂಬುಗಳನ್ನು ಎಸೆಯುತ್ತಿರುವರು.

'ನಾನೇ ತಪ್ಪುಗಳಿಗೆ ಹೊಣೆಗಾರ'

ನನ್ನಮೇಲೆ ವಿಶ್ವಾಸವುಂಟೋ ಕೇಳುತ್ತೇನೆ

ಚರ್ಚಿಲ್ಲರ ಮಾತು

ಪಾರ್ಲಿಮೆಂಟನಲ್ಲಿ ಮೊನ್ನೆ ಮಾತನಾಡುತ್ತಾ ಚರ್ಚಿಲರು ಪ್ರಕೃತದ ಯುದ್ಧ ಪರಿಸ್ಥಿತಿಯನ್ನು ವಿಮರ್ಶಿಸಿ, ಇಷ್ಟರ ವರೆಗೆ ಬ್ರಿಟಿಷ್ ಸರಕಾರವು ಯುದ್ಧ ಯತ್ನದಲ್ಲಿ ಮುಂದೊತ್ತಲಾಗಲಿಲ್ಲವೆಂಬ ತಪ್ಪುಗಳಿಗೆ ನಾನೇ ಹೊಣೆಗಾರನಿದ್ದೇನೆಂದೂ ಅತಿ ಪೂರ್ವ ರಣರಂಗದಲ್ಲಿ ಇನ್ನು ಹೆಚ್ಚಿನ ತಪ್ಪು ಆಗುವ ಸಂಭವವಿದೆಯೆಂದೂ ಆದ್ದರಿಂದ ನನ್ನ ಮೇಲೆ ವಿಶ್ವಾಸವಿದೆಯೋ ಇಲ್ಲವೋ ಎಂಬ ವಿಶ್ವಾಸಸೂಚನೆಯನ್ನು ನಾನು ಕೇಳುತ್ತೇನೆಂದೂ ಹೇಳಿದರು. ಅತಿ ಪೂರ್ವದಲ್ಲಿ ಶಾಂತಿಭಂಗವಾಗುವುದಕ್ಕೆ ಮೊದಲು ಎಲ್ಲಾ ಉಪಕರಣಗಳನ್ನು ರಶ್ಯ, ಲಿಬಿಯ ಹಾಗೂ ಇತರ ಕಡೆಗಳಿಗೆ ಕೊಟ್ಟು ಮತ್ತೆ ಸಿಂಗಾಪುರದತ್ತ ಕಳುಹಿಸಿದ್ದೇ ಕಾರಣ, ಆ ತಪ್ಪಿಗೆ ನಾನೇ ಹೊಣೆ. ಆಸ್ಟ್ರೇಲಿಯ ನ್ಯೂಜಿಲೆಂಡುಗಳಿಗೆ ಅವರ ಕೇಳಿಕೆ ಮೇರೆಗೆ ಎಲ್ಲಾ ಸಮಾನಾಧಿಕಾರ ಕೊಡಲಾಗಿದೆ. ಬ್ರಿಟಿಷ್ ದ್ವೀಪಗಳ ರಕ್ಷಣೆ ಬಗ್ಗೆ ಅಮೆರಿಕದಿಂದ ಸೈನ್ಯಗಳು ಬಂದಿವೆ. ಪರ್ಲ್ ಬಂದರದ ಜಪಾನರ ಆಕ್ರಮಣದಿಂದಾಗಿ ಅಮೆರಿಕದ ನೌಕಾಬಲವು ತಾತ್ಕಾಲಿಕವಾಗಿ ಕುಗ್ಗಿತು ಮೊದಲಾಗಿ ಹೇಳಿದರು.

ರಶ್ಯದ ೬ ವಾರಗಳ ಯುದ್ಧ

ಜನವರಿ 16ರಿಂದ 22ರ ವರೆಗಿನ ರಶ್ಯದ ಯುದ್ಧದಲ್ಲಿ 694 ಜನಭರಿತ ಪ್ರದೇಶಗಳನ್ನು ಹಿಡಿದು ಜರ್ಮನರ ೪೪ ಟ್ಯಾಂಕ್ ಮೋಟಾರ್ ೭೬೮ ಫಿರಂಗಿ, ೧೪೪೩ ರೈಫಲ್‌ಗಳನ್ನು ರಶ್ಯನರು ಧ್ವಂಸಮಾಡಿದರೆಂದೂ ತಿಳಿದಿದೆ. ಆ ಆರು ವಾರದ ಯುದ್ಧದಲ್ಲಿ ರಶ್ಯದವರಲ್ಲಿ ೧೦ ಲಕ್ಷ ಮಂದಿ ಸತ್ತರೆಂದೂ, ಜರ್ಮನರೂ ೨೦ ಸಾವಿರ ಮಂದಿ ಮಾತ್ರ ಸತ್ತವರೆಂದು ರಶ್ಯನರೂ ಹೇಳುತ್ತಾರೆ.

ಐರ್ಲೆಂಡು ಜರ್ಮನಿಗೆ ಸಹಾಯ ಮಾಡಬಹುದು

ಡಿವೆಲರ ಹೇಳುತ್ತಾರೆ.

ಅಮೆರಿಕದಿಂದ ಇಂಗ್ಲೆಂಡಿನ ರಕ್ಷಣೆಗೆಂದು ಬಂದ ರೂಸ್‌ವೆಲ್ಟ್ ಸೈನ್ಯವು ಉತ್ತರ ಐರ್ಲೆಂಡಿನಲ್ಲಿ ಬಂದಿಳಿದಿದೆ. ಇದನ್ನು ನೋಡಿ ಸ್ವತಂತ್ರ ಐರ್ಲೆಂಡಿಗೆ ತುಂಬಾ ಅತೃಪ್ತಿಯಾಗಿದೆ. ತಾಟಸ್ಥ್ಯಕ್ಕೆ ಇದರಿಂದ ಹಾನಿಯುಂಟೆಂದು ಸುಮ್ಮನೆ ವೈರಿಗೆ ನಮ್ಮ ಮೇಲೆ ಕಣ್ಣು ಬೀಳುವಂತಾಗಿದೆಯೆಂದೂ ಈ ಸೈನ್ಯವನ್ನು ತಂದಿರಿಸುವ ವಿಚಾರ ನಮ್ಮೊಡನೆ ಒಂದು ಮಾತನ್ನೂ ಬ್ರಿಟನಾಗಲಿ ಅಮೆರಿಕವಾಗಲಿ ಕೇಳಲಿಲ್ಲವೆಂದೂ, ಐರ್ಲೆಂಡನ್ನು ಎರಡಾಗಿ ವಿಂಗಡಿಸಿ ಬ್ರಿಟಿಷ್ ಸರಕಾರವು ಕ್ರೂರ ಕೃತ್ಯವನ್ನು ಮಾಡಿದೆಯೆಂದೂ, ಇದರಿಂದ ನಾವು ಜರ್ಮನಿಗೆ ಸಹಾಯಮಾಡಬೇಕಾಗುತ್ತದೆಂದೂ ಐರಿಷ್ ಪಾರ್ಲಿಮೆಂಟಿನಲ್ಲಿ ಡಿವೆಲರಾ ಹೇಳಿರುವರು. ಐರ್ಲೆಂಡಿಗೆ ಹೀಗೆ ಬ್ರಿಟಿಷರ ಮೇಲೆ ತುಂಬಾ ಅತೃಪ್ತಿಯಾಗಿರುವುದು.

ಮಲಯಾ ಮುಗಿಯಿತು

'ಮಲಯಾ ಯುದ್ಧ ಮುಗಿಯಿತು, ಸಿಂಗಾಪುರದ ಕಾಳಗ ಪ್ರಾರಂಭವಾಗಿದೆ' ಎಂಬುದಾಗಿ ಜನರಲ್ ವೇವೆಲ್ಲರು ತಂತಿ ಕಳಹಿಸಿದರು.

ಹಿಟ್ಲರನ ಭಾಷಣ

'ನಮ್ಮ ಉತ್ಸವವು ಶ್ರಮ ಮತ್ತು ತ್ಯಾಗಗಳಿಂದ ಬಂದುದು, ಯಾರೀ ಯುದ್ಧವನ್ನು ಗೆಲ್ಲುವನು ನೋಡೋಣ. ನಾನು ಬದುಕಿರುವ ವರೆಗೆ ೧೯೧೮ರ ದುರ್ಘಟನೆ ಪುನರಾವೃತ್ತಿಯಾಗದು. ರಶ್ಯದ ಕದನವು ರಶ್ಯನ್ ಸೈನಿಕರ ಪ್ರಭಾವದಿಂದಲ್ಲ, ವಿಪರೀತವಾದ ಹಿಮದಿಂದಾಗಿ. ರಶ್ಯನರು ಹಿಂದುರಿಗಿ ಪಡೆದ ಊರುಗಳು ಹಾಳು ಬಿದ್ದವುಗಳು. ಯುದ್ಧ ಯಾವಾಗ ಮುಗಿಯುವುದೋ ಹೇಳಲಾರೆ. ಶತ್ರುವು ಎಲ್ಲೆಲ್ಲಿ ಎದುರಿಸಿ ಬರುವನೋ ಅಲ್ಲಲ್ಲಿ ಆತನನ್ನು ಎದುರಿಸುವೆವು. ಅಧಿಕಾಧಿಕ ಸಬ್‌ಮೆರಿನುಗಳು ಹೊರಡಿವೆ. ಈ ಯುದ್ಧಕ್ಕೆ ಬ್ರಿಟನೇ ಕಾರಣ. ಬ್ರಿಟನಿನ ಸ್ವಾರ್ಥವೇ ಇದಕ್ಕೆ ಕಾರಣ. ಇಂಗ್ಲೆಂಡು ನಿನ್ನೆ ಮೊನ್ನೆ ರಾಜ್ಯ. ಇಂಗ್ಲೆಂಡು ಚಿಕ್ಕ ದಸುರುದ್ವೀಪವಾಗಿದ್ದಾಗ ಜರ್ಮನಿ ಸಾಮ್ರಾಜ್ಯ ಕಟ್ಟಿತ್ತು' ಎಂಬಿತ್ಯಾದಿಯಾಗಿ ಹಿಟ್ಲರ್ ಅಧಿಕಾರಕ್ಕೇರಿದ ಉತ್ಸವದಂದು ಎರಡು ತಾಸುಗಳ ತನಕ ಭಾಷಣಮಾಡಿದನು.

ಚಾಂಗಾಶ ಕಾಳಗದಲ್ಲಿ

೩೩,೯೪೧ ಜಪಾನರ ಮರಣ

ಸಂಭವಿಸಿದೆಯೆಂದು (ಡಿಸೆಂಬರಿನಿಂದ ಜನವರಿ 16ರ ವರೆಗೆ) 2300 ಜನರು ಗಾಯಗೊಂಡಿರುವರೆಂದೂ ತಿಳಿದಿದೆ.

ಅಂಬಾಯ್ನದ ಮೇಲೆ ಆಕ್ರಮಣ

ಡಚ್ ಇಂಡೀಸಿನ ಅಂಬಾಯ್ನಾ ಎಂಬ ದ್ವೀಪದ ಮೇಲೆ ಜಪಾನರು ಆಕ್ರಮಣ ಮಾಡಲು ಮುನ್ನುಗ್ಗುತ್ತಿರುವರೆಂದು ತಿಳಿದಿದೆ.

ಮೋಸ್ಕೋ ಪಶ್ಚಿಮದಲ್ಲಿ ಕಾಳಗ

ಆಗುತ್ತಿದೆಯೆಂದೂ, ಒಂದು ವಿಮಾನ ನಿಲ್ದಾಣವು ರಶ್ಯನರ ವಶವಾಯಿತೆಂದೂ ಸುದ್ದಿ.

ಬರಾಮ್ ಹಡಗದ ಜಲಸಮಾಧಿ

ಯು ಬಹಳ ಬೇಗನೆ ಆಯಿತೆಂದೂ, ಜಲಸುರಂಗವು ಬಡಿದು 4 ಮಿನಿಟು 45 ಸೆಕೆಂಡಗಳಲ್ಲಿಯೇ ಅದು ಮುಳುಗಲಾಯಿತೆಂದೂ, ತಿಳಿದಿದೆ.

ಅಮೆರಿಕನ್ ವೈಮಾನಿಕರು

ಜಪಾನಿನ ವಿಮಾನದಲದ ಮೇಲೆ ಹಾಗೂ ನೌಕಾ ದಲದ ಮೇಲೆ ಯಶಸ್ವೀ ಧಾಳಿಮಾಡಿದರು.

ಬಾರ್ಸಿಯನ್ನು ಜರ್ಮನರು ಹಿಡಿದೆವೆಂದು

ಹೇಳುತ್ತಿದ್ದಾರೆ. ಇದು ದಕ್ಷಿಣ ಆಫ್ರಿಕದಲ್ಲಿ ಎಲ್ ಅಬೇರನ್ನು ತಾವು ಹಿಡಿದುದಾಗಿ ಜರ್ಮನರು ಹೇಳುತ್ತಾರೆ. ಜೆಬೆಲ್ ಅಕ್ದಾರಿನಿಂದ ಬ್ರಿಟಿಷ್ ದಲವು ಹಿಂದೆಗೆಯುತಿದೆಯಾಗಿ ಸುದ್ದಿ.

ಸೌರಬಾಯಾದ ಮೇಲೆ ಜಪಾನರ ಬಾಂಬುಗಳು

ಬೀಳತೊಡಗಿದೆ. ಸೌರಬಾಯಾ ಜಾವಾದ ಮುಖ್ಯ ಬಂದರ. ಇದೇ ಜನರಲ್ ವೇವಲರ ಕೇಂದ್ರ ಸ್ಥಳ. ಜಾವಾ ದ್ವೀಪದ ಮೇಲೆ ಜಪಾನರು ಆಕ್ರಮಣ ಮಾಡಿದ್ದು ಇದೇ ಮೊದಲನೆಯ ಸಲ. ಮೇನಿಲಾದ ಉತ್ತರದಲ್ಲಿರುವ ಮೆಕಾರ್ಥರ ಸೈನ್ಯದ ಮೇಲೆ ಜಪಾನರ ಆಕ್ರಮಣ ಪ್ರಾರಂಭವಾಗಿದೆಯೆಂದು ಸಾರಲಾಗಿದೆ.

ಚೀನದ ವಿಜಯ

ನಾಚಾಂಗದ ಪಶ್ಚಿಮದಲ್ಲಿ ಚಿನರು ಜಪಾನರನ್ನು ಪರಾಜಯಗೊಳಿಸಿದರಾಗಿ ತಿಳಿದುಬರುತ್ತದೆ.

ಹಿಂದುಸ್ಥಾನ ಇರಾಣ್‌ಗಳ ಮೇಲೆ ಧಾಳಿಯಾಗುವ ಸಂಭವ

ಉಂಟೆಂದು ಲಂಡನಿನಲ್ಲಿರುವ ಚೀನೀ ರಾಯಭಾರಿ ಅಭಿಪ್ರಾಯ ಸೂಚಿಸಿರುವನು. ಜಪಾನರು ಪೇಸಿಫಿಕನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಗಳಾದರೆ ಆ ಮೇಲೆ ಅವರು ಜರ್ಮನರನ್ನು ಕೂಡಿಕೊಂಡು ವ್ಯಾಪಕ ಪ್ರಮಾಣದಲ್ಲಿ ತಮ್ಮ ಆಕ್ರಮಣ ಕಾರ್ಯವನ್ನು ಪ್ರಾರಂಭಿಸುವರೆಂದೂ, ಅವರು ಒಂದು ಕಡೆಗೆ ಪೂರ್ವದಲ್ಲಿ ಯೂರೋಪಿನಿಂದ ಕಾಕಸಸ್ ಮುಖಾಂತರ ಉತ್ತರ ಆಫ್ರಿಕೆ ಹಾಗೂ ಅತಿ ಪೂರ್ವದ ಮುಖ್ಯ ಇನ್ನೊಂದು ಕಡೆ ಹೊಸತಾಗಿ ತೆಗೆದುಕೊಂಡ ಮಲಯಾ ಹಾಗೂ ದಕ್ಷಿಣ ಸಮುದ್ರಗಳ ಸ್ಥಾನದಿಂದ ಹಿಂದುಸ್ಥಾನ ಹಾಗೂ ಇರಾಣಿಗೂ ನುಗ್ಗಬಹುದೆಂದೂ ಅವರು ಹೇಳುವರು.

ಅಮೆರಿಕನ್ ಎಣ್ಣೆ ಹಡಗ ಮುಳುಗಿತು

ಎಂದು ತಿಳಿದಿದೆ. ಇದರ ಹೆಸರು ರಾಚೆಸ್ಟರ್ ಎಂದು, ಅಟ್ಲಾಂಟಿಕ ಸಾಗರದಲ್ಲಿ ಇದು ಸಂಚರಿಸುತ್ತಿತ್ತು. ವೈರಿ ಜಲಾಂತರ್ಗಾಮಿಗಳು ಇದನ್ನು ಮುಳುಗಿಸಿದವು.

ಬ್ರಿಟಿಷ್ ಸೈನಿಕರು ಸಿಂಗಾಪುರ ಕೋಟೆಯೊಳಗೆ

ಸೇರಿರುವರೆಂದೂ ಮಲಯವನ್ನು ಬಿಟ್ಟು ಬಂದಿರುವರೆಂದು ತಿಳಿದಿದೆ. ಮಲಯ ಯುದ್ಧ ಮುಗಿದು, ಇನ್ನು ಮುಂದೆ ಸಿಂಗಾಪುರ ಯುದ್ಧವು ಪ್ರಾರಂಭವಾಗಿದೆ. ಸಿಂಗಾಪುರದ ಮೇಲೆ ಜಪಾನೀ ವಿಮಾನಗಳು ಆಕ್ರಮಣ ಮಾಡುತ್ತಾ ಇವೆ.

ತೆಹರಾನ್ ಒಪ್ಪಂದ

ವು ಬ್ರಿಟನ್, ರಶ್ಯ, ಇರಾಣ್‌ಗಳೊಳಗೆ ಆಯಿತು. ಇರಾಣಿನ ಸ್ವತಂತ್ರ್ಯ ಮತ್ತು ಸಾರ್ವಭೌಮತವನ್ನು ಮಾತ್ರ ಮಾನ್ಯವಾದಾಗಿ ಮಿತ್ರ ರಾಷ್ಟ್ರಗಳು ಘೋಷಿಸುತ್ತಿವೆ. ಮಿತ್ರ ರಾಷ್ಟ್ರಗಳು ಇರಾಣಿನಲ್ಲಿ ಸೈನ್ಯ ವಿಮಾನ ನೌಕಾ ಬಲಗಳನ್ನಿಡಬಹುದು. ಆದರೆ ಯುದ್ಧ ಮುಗಿದ ೬ ತಿಂಗಳೊಳಗೆ ಅವನ್ನು ಹಿಂದೆಗೆದುಕೊಳ್ಳಬೇಕು. ಇದಕ್ಕೆ ಪ್ರತಿಯಾಗಿ ಇರಾಣವು ಮಿತ್ರರೊಡನೆ ಸ್ನೇಹದಿಂದಿಲ್ಲದ ರಾಷ್ಟ್ರಗಳ ಸಂಬಂಧ ಕಡಿದುಕೊಳ್ಳುವುದು.

ಒಪ್ಪಂದ ಮಾಡಲು ನಕಾರ

ಫಿಲಿಪಾಯಿನ್ ಕಾಳಗ

ಫಿಲಿಪಾಯಿನಿನಲ್ಲಿ ಇನ್ನೂ ಹೋರಾಡುತ್ತಿರುವ ಜನರಲ್ ಮೆಕಾರ್ಥರನ್ನು ಒಪ್ಪಂದ ಮಾಡಿಕೊಳ್ಳಲು ಜಪಾನರು ಒತ್ತಾಯ ಮಾಡುವುದಿದ್ದರೂ ಅವರು ಅದಕ್ಕೆ ನಕಾರ ಹೇಳಿರುವರೆಂದು ತಿಳಿದಿದೆ.

ರಕ್ತ ವಿಷಮಯವಾಗುವುದನ್ನು ಹಾಗೂ ಬೇನೆಗೊಳ್ಳುವುದನ್ನು, ಗುಣಪಡಿಸಿರಿ

ಜಾಂಬಕ್ ವಿಷಹಾರೀ ಔಷಧ

ಜಾಗ್ರತೆ ತೆಗೆದುಕೊಳ್ಳದ ಗಾಯವು ವಿಷಮಾರಿತವಾಗಿ ಹಲವು ಕಾಲಗಳ ತನಕ ನೋವು ಮತ್ತು ಸಂಕಷ್ಟಗಳನ್ನುಂಟು ಮಾಡುವುದು. ಸಿಪ್ಪಲ್ಲಾ ಗಾಯಗಳನ್ನು ಜಾಂಬಕ್ ಲೇಪ ಹಚ್ಚುವುದರಿಂದ ತೀವ್ರಗುಣಪಡಿಸಲಾಗುತ್ತದೆ. ಜಾಂಬಕಿನಲ್ಲಿರುವ ಅತ್ಯುತ್ತಮ ವನಸ್ಪತಿ ಸತ್ವವು ನರಗಳ ಮೂಲಕ ಬೇಗನೆ ಎಳೆಕೊಂಡು ಬಾತುಹೋದುದನ್ನು ಕೂಡಲೇ ಕಡಿಮೆಮಾಡಿ, ನೋವನ್ನು ಗುಣಪಡಿಸಿ ಎಲ್ಲಾ ತರದ ಆತುಚಿಯನ್ನೂ ತೊಳೆದು ಗುಣಮಾಡುವುದು. ಗಾಯವುಳಿಯದಂತೆ ಜಾಂಬಕ್ ಗುಣಪಡಿಸುತ್ತದೆ. ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ಜಾಂಬಕ ಒಂದು ರೂಪಾಯಿಗೆ ಸಿಗುತ್ತದೆ. ಇಲ್ಲವೆ ರೂ 2-8 0 ಜಾಂಬಕ ಸೋಪಿಗೆ ಒಂದು ರೂಪಾಯಿ, ಜಾಂಬಕ ಪೌಡರಿಗೆ ಒಂದು ರೂಪಾಯಿ.

ಎಜಂಟ್ಸ್ ಮೆಸರ್ಸ್ ದಾಧಾ ಮತ್ತು ಕಂಪೆನಿ,
ಪಾರ್ಕ್ ಟೌನ್ ಮದ್ರಾಸು.

ಯಾವಾಗಲೂ ಜಾಂಬಕನ್ನು ಉಪಯೋಗಿಸಿರಿ

ZAM-BUK

ಚರ್ಬಿ ವಿರಹಿತವಾದುದು.

ಸ್ವಯಂಸೇವಕದಲವನ್ನು ಹಳ್ಳಿಹಳ್ಳಿಗಳಲ್ಲಿ ಸ್ಥಾಪಿಸುವುದು

ಯುದ್ಧ ಕಾಲದಲ್ಲಿ ಕಾಂಗ್ರೆಸಿನವರ ಕರ್ತವ್ಯ

ಅಮೇರಿಕದಲ್ಲಿ ಗಿರಿಜಾಶಂಕರರ ಭಾಷಣ

ಸಪ್ರು-ಅಜಾದರ ಭೇಟಿ

ಅಮೇರಿಕದಲ್ಲಿ ಗಿರಿಜಾಶಂಕರ ಭಾಷಣ

ಅಮೇರಿಕದಲ್ಲಿ ಹಿಂದುಸ್ಥಾನದ ಏಜೆಂಟರಾಗಿರುವ ಶ್ರೀ. ಗಿರಿಜಾಶಂಕರ ವಾಜಪೇಯಿಯವರು ಮಾತನಾಡುತ್ತಾ ಯುದ್ಧದ ಸಾಕಷ್ಟು ಸಲಕರಣೆಗಳು ಹಿಂದುಸ್ಥಾನಕ್ಕೆ ದೊರೆತದ್ದಾದರೆ ಹಿಂದುಸ್ಥಾನದಿಂದ ಅಗಣಿತ ಜನ ಸಹಾಯವು ದೊರೆಯುವುದೆಂದರು. ವಿಮಾನ ಮೊದಲಾದವುಗಳಲ್ಲಿ ಹಿಂದುಸ್ಥಾನವು ಅಮೇರಿಕ ಮೊದಲಾದವುಗಳನ್ನು ಅವಲಂಬಿಸಬೇಕಾಗಿದ್ದು ಆ ಸಹಾಯ ದೊರೆತಲ್ಲಿ ಹಿಂದುಸ್ಥಾನವು ಸ್ವಸಂರಕ್ಷಣೆ ಮಾಡಿಕೊಳ್ಳುವುದೆಂದರು.

ಸ್ವಯಂ ಸೇವಕ ದಲವಾಗಲಿ

ನೆಹರು ಸಂದೇಶ

ಇಂಥಿಣೀ ಗಂಡಾಂತರ ಕಾಲದಲ್ಲಿ ಜನರಿಗೆ ಸಹಾಯ ಮಾಡಲು ಪ್ರತಿಯೊಂದು ಸ್ಥಳ ಪ್ರದೇಶಗಳಲ್ಲಿಯೂ ಕಾಂಗ್ರೆಸಿನವರು ಸ್ವಯಂ ಸೇವಕ ದಲವನ್ನು ಮಾಡಬೇಕೆಂದು ನೆಹರು ಹೇಳಿದರು

ಸಪ್ರು ಅಜಾದ್ ಭೇಟಿ

ಈ ವಾರ ಅಲ್ಹಾಬಾದ್ ಆನಂದ ಭವನದಲ್ಲಿ ಜರಗಿತು. ಕೃಪಾಲನಿ, ಸಿದಕ್ ಅಲ್ಲಿ ಮೊದಲಾದವರು ಇದ್ದರು

ಕಾಂಗ್ರೆಸಿನ ವಿಶೇಷಸಭೆ ಕರೆಸಬೇಕು

ವ ಕ ಸದಸ್ಯರು ರಾಜಿ ಕೊಡಬೇಕು

ಪ್ರಕಾಶಂರವರ ಪ್ರಕಟಣೆ

ಕಾಂಗ್ರೆಸಿನ ವಿಶೇಷ ಅಧಿವೇಶನವನ್ನು ಕರೆಯಬೇಕೆಂದು ಹೇಳಿಕೆ ಕೊಡುತ್ತಾ ಶ್ರೀ ಟಿ ಪ್ರಕಾಶಂ ಇವರು 'ರಾಜಗೋಪಾಲಾಚಾರ್ಯರು ಏನದಿನವೂ, ಸರಕಾರದೊಡನೆ ಕಾಂಗ್ರೆಸಿನ ಸ್ನೇಹ ಹಸ್ತವನ್ನು ಸ್ವೀಕರಿಸಬೇಕೆಂದು ಬೇಡಿಕೊಳ್ಳುತ್ತಿದ್ದರೂ ಬ್ರಿಟಿಷರು ಅವುಗಳನ್ನು ಗಮನಿಸದಾಗಿರುವರು, ಆದ್ದರಿಂದ ಬಾರ್ಡೋಲಿ ವರ್ಕಿಂಗ್ ಕಮಿಟಿಗೆ ಬೆಂಬಲ ಕೊಟ್ಟ ವರ್ಕಿಂಗ್ ಕಮಿಟಿ ಸದಸ್ಯರೆಲ್ಲರೂ ರಾಜಿನಾಮೆ ಕೊಟ್ಟು ಹೊರ ಬರಬೇಕು, ಹಾಗಾದರೆ ರಾಷ್ಟ್ರಕ್ಕೆ ಸರಿದಾರಿ ತೋರುವ ಜನರು ಅದರಲ್ಲಿ ಸೇರಲು ಅನುಕೂಲವಾಗುವುದು ಹಾಗೂ ಇಂದಿನ ಪರಿಸ್ಥಿತಿಗಳನ್ನು ಅರಿತುಕೊಂಡು ಮುಂದಿನ ಕಾರ್ಯಕ್ರಮವನ್ನು ನಿರ್ಧರಿಸಿಕೊಳ್ಳಲು ಬೇಗನೇ ಕಾಂಗ್ರೆಸಿನ ವಿಶೇಷ ಸಭೆಯೊಂದನ್ನು ಕರೆಯಬೇಕೆಂದು ಪ್ರಕಟಿಸಿರುತ್ತಾರೆ,

ಕಾಂಗ್ರೆಸಿನ ರಚನಾತ್ಮಕ ಕಾರ್ಯಕ್ರಮ

ರಾಷ್ಟ್ರಪತಿಗಳ ಹೇಳಿಕೆ

'ಬಾರ್ಡೋಲಿ ನಿರ್ಣಯದಂತೆ ಕಾಂಗ್ರೆಸು ಒಂದು ಹೊಸ ಕಾರ್ಯಕ್ರಮವನ್ನು ತಯಾರಿಸುವುದು ಯುದ್ಧಕಾಲದಲ್ಲಿ ಕಾಂಗ್ರೆಸಿನವರ ಕರ್ತವ್ಯವೇನೆಂದು ಅದು ತಿಳಿಸುವುದು. ಜನರ ಆರ್ಥಿಕ ಹಾಗೂ ಸಾಮಾಜಿಕ ಜೀವನವು ಹಾಳಾಗದಂತೆ ಕಾಂಗ್ರೆಸಿನವರು ನೋಡಿಕೊಳ್ಳಬೇಕು ಸದ್ಯಕ್ಕೆ ಸರಕಾರದೊಡನೆ ಜಗಳಾಡುವ ಮನಸ್ಸಿಲ್ಲ ಯುದ್ಧ ಕಾಲದಲ್ಲಿ ಜನರಿಗೆ ಪರಿಹಾರ ಕೊಡುವ ವಿಷಯ ಯಾವ ಸಂಸ್ಥೆಯೂ ಕಾಂಗ್ರೆಸಿನೊಡನೆ ಸಹಕರಿಸಬಹುದು ಇಂದಿನೀ ಬಿಕ್ಕಟ್ಟಿನ ಕಾಲದಲ್ಲಿ ನಮ್ಮ ದೇಶವು ದುರ್ಬಲವಾಗಿರುವುದನ್ನು ಕಂಡು ವ್ಯಥೆಯಾಗುತ್ತದೆ ನಮ್ಮ ದೇಶದ ರಕ್ಷಣೆಗಾದಿ ಹೋರಾಡಲು ಸಾವಿರಾರು ಮಂದಿ ಹಿಂದೀಯರು ತಯಾರಿದ್ದಾರೆ ಆದರೆ ಬ್ರಿಟಿಷ್ ಸರಕಾರವು ಮಾತ್ರ ಇದಕ್ಕೆ ಅವಕಾಶ ಕೊಡುವುದಿಲ್ಲ' ಎಂದು ರಾಷ್ಟ್ರಪತಿ ಅಜಾದರು ಹೇಳಿದರು

ಜಪಾನೀ ಕೈದಿಗಳನ್ನು

ಕಲ್ಕತ್ತದಿಂದ ಹಿಂದುಸ್ಥಾನದ ಬೇರೆ ಬೇರೆ ಕಡೆಗಳಿಗೆ ಕಳುಹಿಸಲಾಗಿದೆಯೆಂದು ತಿಳಿದಿದೆ

ಕಾಂಗ್ರೆಸಿನವರು ಹಾಗೂ ಸ್ಥಳೀಕ ಸಂಸ್ಥೆಗಳು

ಜನರಲ್ ಸೆಕ್ರೆಟರಿ ಪ್ರಕಟಣೆ

ಯುದ್ಧಯತ್ನದಲ್ಲಿ ಅಸಹಕಾರ ಧೋರಣೆಯು ಇನ್ನೂ ಹಾಗೇ ಇದೆ. ಆದ್ದರಿಂದ ಯುದ್ಧ ಯತ್ನದಲ್ಲಿ ಸಹಕರಿಸುವ ಸ್ಥಳೀಕ ಸಂಸ್ಥೆಗಳಿಂದ ಕಾಂಗ್ರೆಸಿನವರು ಹೊರಬೀಳಬೇಕು ಹೀಗೆ ಹೊರಬಿದ್ದವರ ಉಪಚುನಾವಣೆ ನಡೆಯಬೇಕು ಹೊಸ ಚುನಾವಣೆಗಳಲ್ಲಿ ಕಾಂಗ್ರೆಸ್ ಕಮಿಟಿಗಳು ಹೋರಾಡಬೇಕೋ ಎಂಬ ವಿಚಾರದಲ್ಲಿ ಪ್ರಾಂತ ಹಾಗೂ ಸ್ಥಳ ಪರಿಸ್ಥಿತಿಗೆ ಗಮನ ಕೊಡಬೇಕು ಚುನಾವಣೆಯನ್ನು ಹೋರಾಡಲು ಅಡ್ಡಿಯಿಲ್ಲ, ಆದರೆ ಇದರಿಂದ ಯುದ್ಧ ಯತ್ನದಲ್ಲಿ ಸಹಕರಿಸದಿರುವ ಧೋರಣದ ಮೇಲೆ ಮತ್ತು ಕಾಂಗ್ರೆಸಿನ ಸಾಮಾನ್ಯ ಕಾರ್ಯಕ್ರಮದ ಮೇಲೆ ಆಗುವ ಪರಿಣಾಮವನ್ನು ಅನುಲಕ್ಷಿಸಿಕೊಂಡು ಅದನ್ನು ಪ್ರಾಂತಿಕ ಕಾಂಗ್ರೆಸ್ ಕಮಿಟಿಗಳು ನಿರ್ಣಯಿಸಬೇಕು

ರಾಷ್ಟ್ರೀಯ ಸರಕಾರದ ಕುರಿತು

ಕೇಂದ್ರ ಅಸೆಂಬ್ಲಿಯಲ್ಲಿ ಠರಾವು

ಶ್ರೀ ಜೋಶಿಯವರು ತರಲಿರುವರೆಂದೂ ಅದು ಫೆಬ್ರವರಿ ೧೧ನೆಯ ತಾರೀಕಿನ ದಿನ ಚರ್ಚೆಗೆ ಬಂದಿರುವುದೆಂದೂ ತಿಳಿದಿದೆ ಎಸೆಂಬ್ಲಿಯ ಗುಪ್ತ ಸಭೆಯೊಂದನ್ನು ಸೇರಿಸಲು ಸದಸ್ಯರು ಸರಕಾರಕ್ಕೆ ಒತ್ತಾಯ ಮಾಡುವರೆಂದು ತಿಳಿದಿದೆ ಅತಿ ಪೂರ್ವದ ಅಘಟಿತ ಘಟನೆ ಹಾಗೂ ಮದ್ರಾಸಿನಂತಹ ಪಟ್ಟಣಗಳಲ್ಲಿ ಉಂಟಾಗಿರುವ ಗಾಬರಿಗಳ ವಿಚಾರ ವಿಚಾರಿಸಲು ಇದರಿಂದ ಎಸೆಂಬ್ಲಿ ಸದಸ್ಯರು ತಮ್ಮ ಮತದಾರ ಕ್ಷೇತ್ರಗಳಿಗೆ ಹೋಗಿ ಜನರಲ್ಲಿ ಧೈರ್ಯ ತುಂಬಿಸಲು ಅನುಕೂಲವಾಗುತ್ತದೆಯೆಂದೂ ಊಹಿಸಲಾಗಿದೆ

ಸಪ್ರುಗಳಿಗೆ ಚರ್ಚಿಲರ ಉತ್ತರ

ಪತ್ರವೀ ತಿಂಗಳಲ್ಲಿ ಬರಬಹುದೆಂದು ತಿಳಿದಿದೆ ಉತ್ತರವು ಒಟ್ಟಿನಲ್ಲಿ ನಕರಾತ್ಮಕವಿರಬೇಕೆಂದು ಈಗಾಗಲೇ ಅಂದಾಜು ಮಾಡಲಾಗಿದೆ ಹಿಂದುಸ್ಥಾನಕ್ಕೆ ಒಂದ ಡಫ್ ಕೂಪರರು ವೈಸರಾಯರ ಅತಿಥಿಗಳಾಗಿದ್ದಾಗ ಹಿಂದೀ ಮಂತ್ರಿಗಳು ರಾಜಕೀಯದ ಕುರಿತು ದೀರ್ಘ ಚರ್ಚೆ ಮಾಡಲು ಅವಕಾಶವ ಗಲಿಲ್ಲವೆಂದು ತಿಳಿದಿದೆ

ಅಕ್ಬರಿಯವರ ಸ್ಥಾನದಲ್ಲಿ ಮಿರ್ಜಾರೇ?

ಸರ್ ಅಕ್ಬರಿಯವರ ನಿಧನದಿಂದ ಖಾಲಿ ಬಿದ್ದ ವೈಸರಾಯ್ ವಿಸ್ತರಿತ ಕೌನ್ಸಿಲಿನ ಕೇಂದ್ರ ಸರಕಾರದ ಸುಪ್ಲೈ ತೆಯ ಸ್ಥಾನಕ್ಕೆ ಯಾರನ್ನು ನಿಯಮಿಸುವರೆಂಬ ವಿಚಾರ ತರ್ಕವಿತರ್ಕಗಳುಂಟಾಗಿವೆ. ಆ ಸ್ಥಳಕ್ಕೆ ಸರ್ ಮಿರ್ಜಾರಲ್ಲದೆ ಸರ್ ಗುಲಾಮುಹುಸೇನ್ ಹಿದಯತುಲ್ಲಾ, ಸರ್ ಎ ಎಫ್. ರಹಿಮಾನ್, ಸರ್ ಉಸ್ಮಾನ್, ಮೊದಲಾದವರ ಹೆಸರುಗಳೂ ಸೂಚಿತವಾಗಿವೆಯಂತೆ. ಸರ್ ಮಿರ್ಜಾರಂತ ಸಾರ್ವಜನಿಕ ಕಾರ್ಯಗಳಲ್ಲಿ ಪ್ರಸಿದ್ಧರಾದ ವ್ಯಕ್ತಿಗಳನ್ನು ಆ ಸ್ಥಳದಲ್ಲಿ ನೇಮಿಸುವ ವಿಷಯ ಹಿಂದೀ ಮಂತ್ರಿಗಳಾದರೂ ಆತುರರಿರುವರೆಂದು ಸುದ್ದಿ.

ಭಾಗಲ್ಪುರದಲ್ಲಿ ಅಶಾಂತಿ

ಭಾಗಲ್ಪುರದಲ್ಲಿ ಕಳೆದವಾರ ಹಿಂದುಮುಸ್ಲಿಂ ಅಶಾಂತಿಯುಂಟಾಗಿ ಕೆಲವು ಕೊಲೆಗಳು ಮತ್ತು ಗಾಯಗಳುಂಟಾದವು

ಮಾರಾಟಕರದ ಕುರಿತು ಸತ್ಯಾಗ್ರಹ

ಪಂಜಾಬು ಪ್ರಾಂತ್ಯದಲ್ಲಿರುವ ಪಂಜಾಬ್ ಸೇಲ್ಸ್‌ಟೇಕ್ಸಿನ ಕುರಿತು ವ್ಯಾಪಾರಿಗಳು ನಿಷೇಧ ಸೂಚಿಸಿ ಸತ್ಯಾಗ್ರಹಮಾಡುವುದಾಗಿ ನಿರ್ಣಯಿಸಿದ್ದಾರೆ

ಸುಭಾಸರ ಸ್ಥಳದಲ್ಲಿ

ಶ್ರೀ ಕ್ಷಿತೀಶಚಂದ್ರನಿಯೋಗಿಯವರು ಡಾಕಾ ಮತದಾರರ ಕ್ಷೇತ್ರದಿಂದ ಕೇಂದ್ರ ಎಸೆಂಬ್ಲಿಗೆ ಸದಸ್ಯರಾಗಿ ಆರಿಸಿಬಂದರು

ಅ ಭಾ ಪತ್ರಿಕಾಕರ್ತರ ಪರಿಷತ್ತು

ಮಾರ್ಚ ತಿಂಗಳಲ್ಲಿ ಹೊಸದಿಲ್ಲಿಯಲ್ಲಿ ಸೇರುವುದು.

ಚರ್ಚಿಲರ ಮೇಲೆ ವಿಶ್ವಾಸ

ಚರ್ಚಿಲ್ ಮಂತ್ರಿಮಂಡಳದಲ್ಲಿ ವಿಶ್ವಾಸ ವ್ಯಕ್ತಮಾಡುವ ಠರಾವು ಪಾರ್ಲಿಮೆಂಟನಲ್ಲಿ ತರಲ್ಪಟ್ಟು ೪೬೪ ವಿರುದ್ಧ ೧ ಮತಗಳಿಂದ ಠರಾವು ಸ್ವೀಕೃತವಾಯಿತು ಮ್ಯಾಕ್ಸಟನರೆಂಬ ಒಬ್ಬ ಸ್ವತಂತ್ರ ಪಕ್ಷದ ಸದಸ್ಯರು ಮಾತ್ರ ವಿರುದ್ಧ ಮತಕೊಟ್ಟರು ೨೪ ಸದಸ್ಯರು (ಇವರು ಹೆಚ್ಚಾಗಿ ಕೂಲಿಗರ ಪಕ್ಷದವರು) ತಟಸ್ಥರಿದ್ದರು. ಪಾರ್ಲಿಮೆಂಟ್ ಚರ್ಚೆಯಲ್ಲಿ ಚರ್ಚಿಲ್ ಮಂತ್ರಿಮಂಡಳದ ಮೇಲೆ ಕಟುತರವಾದ ಟೀಕೆಗಳಾಗಿದ್ದವು

ಕಾಂಗ್ರೆಸಿನ ಪ್ರಾಥಮಿಕ ಸದಸ್ಯತ್ವ

ಕಳೆದ ವರ್ಷ ಹಾಗೂ ಈ ವರ್ಷದ ಬಾಬ್ತು ವಂತಿಗೆಗಳನ್ನು ಕೊಟ್ಟಲ್ಲಿ ಚುನಾವಣೆಗೆ ನಿಲ್ಲಲು ಅರ್ಹರಾಗುವರು, ಈ ವರ್ಷ ಪಟ್ಟಿಯಲ್ಲಿ ಸೇರುವವರು ನಾಲ್ಕಾಣೆ ಮಾತ್ರಕೊಡತಕ್ಕದ್ದು. ಈ ಪ್ರಕಾರ ತಮ್ಮ ಸದಸ್ಯತ್ವದ ಹಣವನ್ನು ಜೂನ್ ೩೦ರ ಒಳಗೆ ಪಾವತಿಮಾಡುವವರು ಕಾಂಗ್ರೆಸಿನ ಪ್ರಾಥಮಿಕ ಸದಸ್ಯರಾಗುವರೆಂದು ಪ್ರಕಟಿಸಲಾಗಿದೆ.

ಕಾಶಿ ಸಂಸ್ಥಾನ ಸತ್ಯಾಗ್ರಹ ನಿಂತಿತು

ಪಂಡಿತ ನೆಹರುಗಳ ಹಿತವಚನದಂತೆ, ಕಾಶಿ ಸಂಸ್ಥಾನ ಕಾಂಗ್ರೆಸಿನವರು ಸತ್ಯಾಗ್ರಹವನ್ನು ನಿಲ್ಲಿಸಿದರು ಈ ಸತ್ಯಾಗ್ರಹವು ಕಳೆದ ಮೇ ತಿಂಗಳಲ್ಲಿ ಪ್ರಾರಂಭಿಸಲ್ಪಟ್ಟಿತು ಸರಕಾರದ ಸೆಟ್ಲ್‌ಮೆಂಟ್ ಸ್ಕೀಮಿಗೆ ವಿರುದ್ಧವಾಗಿ ಹೂಡಿದ ಈ ಸತ್ಯಾಗ್ರಹದಲ್ಲಿ 195 ಸತ್ಯಾಗ್ರಹಿಗಳು ಬಂಧಿಸಲ್ಪಟ್ಟಿದ್ದರು ರೂ 7,500 ಜುಲ್ಮಾನೆ ತೆರಲಾಗಿತ್ತು

ಈ ದಿನ ನಿಮ್ಮ ಹಲ್ಲುಗಳನ್ನು ಮೆಕ್ಲೀನಿನಿಂದ ಶುಚಿಗೊಳಿಸಿದ್ದೀರಾ?

ಖಂಡಿತವಾಗಿ, ಹೊಸತು!

ಹುಬ್ಬವಾದ ಬಿಳಿಯ ಹಲ್ಲುಗಳಿಗೆ, ಆರೋಗ್ಯಕರವಾದ ಧನವಂತ ಮಾಂಸಗಳಿಗೆ, ತಂಪಾದ ಹೊಸ ಮುಖಕ್ಕೆ ಮೆಕ್ಲೀನನ್ನು ಉಪಯೋಗಿಸುವುದೊಂದೇ ಉಪಾಯ ಅಶುದ್ಧವನ್ನು ಇದು ಕೂಡಲೇ ತೆಗೆದು, ಹಲ್ಲುಗಳನ್ನು ಶುಚಿಗೊಳಿಸುತ್ತದೆ, ಉಪಯೋಗಿಸಲು ಖರ್ಚು ಕಡಿಮೆಯಾಗಿದೆ.

Ten Lacs In Ten Minutes

The lists of our 5% Cumulative Preference Shares which opened on 19th January closed the same day before noon

The subscriptions received within those few minutes totalled over Rupees Fourteen Lacs.

We thank our customers, friends and depositors whose unstinted support enabled us to close the lists in so short a time.

We thank them for this proof of their sympathy and confidence and assure them that we will try to deserve this confidence in every way possible.

Canara Bank Limited.

Estd. 1906.

ನಾಲ್ಕನೇ ಜಿಲ್ಲಾ ವಿದ್ಯಾರ್ಥಿ ಪರಿಷತ್ತು

(ಶ್ರೀ. ಎ. ಕೆ. ಪಿಳ್ಳೆ ಬಾರ್-ಎಟ್-ಲಾ)

ಕಳೆದ ಶನಿವಾರ ತಾ. ೩೧ರಲ್ಲಿ ಈ ಜಿಲ್ಲಾ ಪರಿಷತ್ತು ಕೆನರಾ ಹೈಸ್ಕೂಲಿನ ಭುವನೇಂದ್ರ ಸಭಾಸದನದಲ್ಲಿ ಶ್ರೀ ಎ. ಕೆ. ಪಿಳ್ಳೆ, ಬಾರ್-ಎಟ್-ಲಾ, ಮದ್ರಾಸು ಅವರ ಅಧ್ಯಕ್ಷತೆಯಲ್ಲಿ ಆರಂಭವಾಯಿತು. ಅಂದು ಬೆಳಗ್ಗೆ "ಪ್ರಭಾತ ಫೇರಿ"ಯೂ, ಮತ್ತು ಶ್ರೀ. ಬಿ. ವೈಕುಂಠಬಾಳಿಗರಿಂದ ಧ್ವಜವಂದನೆಯೂ ನಡೆದು, ಅಪರಾಹ್ನ ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ ಬಿ. ಎಸ್. ಭಾಸ್ಕರರೈಗಳವರು ಸ್ವಾಗತಭಾಷಣಮಾಡಿದರು. ಶ್ರೀ. ರೈಗಳು ಅಧ್ಯಕ್ಷರನ್ನೂ ಪ್ರತಿನಿಧಿಗಳನ್ನೂ ಸ್ವಾಗತೀಕರಿಸುತ್ತಾ ದ. ಕ. ಜಿಲ್ಲಾ ವಿದ್ಯಾರ್ಥಿ ಚಳವಳದ ಕಳೆದ ೨೦ ವರ್ಷಗಳ ಇತಿಹಾಸವನ್ನು ಹೇಳಿದರು. ಇತರ ದೇಶದ ವಿದ್ಯಾರ್ಥಿಗಳಂತೆಯೇ ನಮ್ಮ ದೇಶದ ವಿದ್ಯಾರ್ಥಿಗಳೂ ರಾಷ್ಟ್ರೀಯ ಜೀವನದಲ್ಲಿ ಭಾಗವಹಿಸಬೇಕಾಗಿ ಕೇಳಿಕೊಂಡರು. ಪರಿಷತ್ತಿನ ಉದ್ಘಾಟನೆಯನ್ನು ಶ್ರೀ ಎ. ಬಿ. ಶೆಟ್ಟಿ ಎಂ. ಎಲ್. ಎ. ಅವರು ನೆರವೇರಿಸಿದರು. ಅವರು ತಮ್ಮ ಭಾಷಣದಲ್ಲಿ ವಿದ್ಯಾರ್ಥಿಗಳು ಎಲ್ಲಾ ಪಕ್ಷಗಳ ಹೇಳಿಕೆಯನ್ನು ಕೇಳಿ ಸ್ವತಂತ್ರ ಬುದ್ಧಿಯಿಂದ ನಡೆಯಬೇಕೆಂದೂ ವಿದ್ಯಾರ್ಥಿಗಳಾಗಿದ್ದಾಗ ಜೀವನದ ಪ್ರತಿಯೊಂದು ಸಮಸ್ಯೆಯನ್ನು ತಿಳಿದುಕೊಂಡು ಭಾವೀ ಜೀವನಕ್ಕೆ ಸಿದ್ಧರಾಗಬೇಕೆಂದೂ ಹೇಳಿದರು. ನೆರೆದವರಲ್ಲಿ ಶ್ರೀ. ಕೆ. ಶಿವರಾಮ ಕಾರಂತರು ಭಾಷಣಮಾಡಿದರು. ಅಧ್ಯಕ್ಷರ ಭಾಷಣದೊಂದಿಗೆ, ದಿವಂಗತ ಠಾಗೂರ್, ಸರ್ ಅಕ್ಬರ್ ಹೈದ್ರಿ, ಶ್ರೀ ಕೃಷ್ಣಪ್ಪ ಮೊದಲಾದವರ ನಿಧನದ ಕುರಿತು ಅನುತಾಪಸೂಚಕವಾದ ಠರಾವು ಮಂಜೂರಾಯಿತು.

ಮರುದಿನ ಆದಿತ್ಯವಾರ ಬೆಳಿಗ್ಗೆ ವಿಷಯ ನಿಯಾಮಕ ಕಮಿಟಿಯ ಅಧಿವೇಶನನಾದ ಬಳಿಕ ಶ್ರೀ ಎಸ್. ಸರ್ವೋತ್ತಮ ಶೆಟ್ಟರೂ "ಕರ್ನಾಟಕ ಏಕೀಕರಣ"ದ ಕುರಿತು ಶ್ರೀ ಕೆ. ಕೃಷ್ಣರಾಯರೂ ಭಾಷಣಮಾಡಿದರು. ಒಟ್ಟಿಗೆ ೧೪ ಠರಾವುಗಳು ಮಂಜೂರಾದುದರಲ್ಲಿ ವಿದ್ಯಾರ್ಥಿ ಸಂಘಗಳು, ಸಂಘರೂಪವಾಗಿ ರಾಜನೀತಿಯಲ್ಲಿ ಭಾಗವಹಿಸಬಾರದು, ವಿದ್ಯಾರ್ಥಿಗಳಿಗೆ ಕಡ್ಡಾಯ ಸೈನಿಕ ಶಿಕ್ಷಣ ಕೊಡಬೇಕು, ಡಿಟೆನ್ಯೂಗಳ ಬಹಿರಂಗ ವಿಚಾರಣೆಯಾಗಬೇಕು, ರಾಜಕೀಯ ಬಂದಿಗಳನ್ನೆಲ್ಲ ಬಿಡುಗಡೆಮಾಡಬೇಕು ಮುಂತಾಗಿ ಇವೂ ಕೆಲವು ಇರುವುದಲ್ಲದೆ, ಹೈಸ್ಕೂಲ್ ಶಾಲಾ ಸಂಬಳದ ೯ ಕಂತುಗಳಿಂದ ೮ ಕಂತುಗಳಿಗೆ ಇಳಿಸಬೇಕು; ಸಾಕ್ಷರತೆ ಪ್ರಚಾರ ಮಾಡಬೇಕು, ಟ್ರೈನಿಂಗ್ ಶಿಕ್ಷಣದ ಅವಧಿ, ಎರಡು ಹೊತ್ತೂ ಬಿಡದೆ ಸರಕಾರೀ ಪರೀಕ್ಷೆ ನಡೆಸುವ ವಿಚಾರ ಇವುಗಳ ಕುರಿತೂ ಪ್ರಸ್ತಾಪವಾದುವುದು. ಶ್ರೀ. ಪಿಳ್ಳೆಯವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಪ್ರಜಾಸತ್ತೆಯ ವಿನಾಶವು ಹೇಗಾಯಿತೆಂದು ವಿವರಿಸಿದರು. ಬಂಡವಾಳ ಶಾಹಿಯ ಅಪ್ರಾಗತಿಕ ಸ್ಥಿತಿಯನ್ನು ತಿಳಿಸಿದರು. ಮತ್ತು ಇಂದಿನ ಅಂತರ್ರಾಷ್ಟ್ರೀಯ ಪರಿಸ್ಥಿತಿಯನ್ನು ವಿವರಿಸಿ ಇಂದಿನದು ಒಂದು ಅಂತರ್ ರಾಷ್ಟ್ರೀಯ ಯಾದವೀ ಕಲಹವೆಂದರು. ಶ್ರೀ ನಾರಾಯಣರಾವ್ ಸೆಟ್ಲೂರ್ ಅವರು ಧನ್ಯವಾದಗಳನ್ನು ಅರ್ಪಿಸಿದರು.

ಈ ಸಮಾರಂಭದ ಸಂಬಂಧ ವಾಕ್ಪಟುತ್ವದ ಸ್ಪರ್ಧೆ, ಆಟಗಳ ಸ್ಪರ್ಧೆ, ವಿವಿಧ ವಿನೋದಾವಳಿಗಳೂ ಇದ್ದುವು. ಪರಿಷತ್ತಿಗೆ ಜಿಲ್ಲೆಯ ಎಲ್ಲಾ ಕಡೆಗಳಿಂದ ಪ್ರತಿನಿಧಿಗಳು ಬಂದಿದ್ದರು.

ಮಂಗಳೂರು

ನೀರೇಶ್ವಾಲ್ಯ ಹರಿಜನ ಕಾಲೋನಿಯ ಶ್ರೀ ಪ್ರಭಾಕರ ಭಜನೆ ಸಂಘದಲ್ಲಿ ಕಳೆದ ಶನಿವಾರ ರಾತ್ರಿ ಭಜನೆ ತೀರಿದ ನಂತರ ಶ್ರೀನಿವಾಸ್ ತಿಮ್ಮಪ್ಪ ಮಲ್ಯರವರ ಅಧ್ಯಕ್ಷತೆಯಲ್ಲಿ "ಹರಿಜನರಿಗೆ ದೇವಸ್ಥಾನ ಪ್ರವೇಶವು ಅನಗತ್ಯ" ಎಂಬ ವಿಷಯ ಚರ್ಚಾ ಸಭೆಯೊಂದು ಜರಗಿತು.

ಡಿ। ಬೋ। ಮೀಟಿಂಗ್

ಫೆಬ್ರವರಿ ತಾ. 12ಕ್ಕೆ ಅಪರಾಹ್ನ 9-45ಕ್ಕೆ ಸೇರುವುದು. ಶ್ರೀಮತಿ ರಮಾಬಾಯಿ ಮಾಧವರಾವ್ ಇವರ ಗೈರುಹಾಜರಿಯಿಂದ ಖಾಲಿಬಿದ್ದ ಎಡ್ಯುಕೇಶನಲ್ ಸ್ಟಾಂಡಿಂಗ್ ಕಮಿಟಿ ಸದಸ್ಯತ್ವಕ್ಕೆ ಚುನಾವಣೆ ನಡೆಯಲಿರುವುದು.

ಬೆಲೆ ನಿಯಂತ್ರಣದ ವಿಚಾರದಲ್ಲಿ ಸರಕಾರದ ನಕಾರ

ಮಂಗಳೂರು ಕೂಲಿಗಾರರ ಸಂಘದ ಆಶ್ರಯದಲ್ಲಿ ವ್ಯವಸ್ಥಿತವಾಗಿ ಮಂಗಳೂರು ಮಹಾಜನರು ಸಭೆ ಸೇರಿ ಶ್ರೀ. ಕೆ. ಆರ್. ಕಾರಂತರ ಮೂಲಕ ಸರಕಾರದ ಮುಂದೆ ಇರಿಸಲಾದ ಆಹಾರವಸ್ತುಗಳ ಬೆಲೆ ನಿಯಂತ್ರಣ ವಿಷಯಕ್ಕೆ ಈಗ ಸರಕಾರದಿಂದ ನಕಾರ ಉತ್ತರ ಬಂದಿದೆಯೆಂದು ತಿಳಿದಿದೆ. ಜಿಲ್ಲೆಯ ಸಾಮಾನ್ಯ ವ್ಯಾಪಾರ ವ್ಯವಹಾರದಲ್ಲಿ ಕಾನೂನು ಪ್ರಕಾರ ನಿರ್ಬಂಧ ಹಾಕಲು ಸರಕಾರವು ಸಿದ್ಧವಿಲ್ಲವಂತೆ, ಜಿಲ್ಲೆಯ ಧಾನ್ಯ ಹೊರಗೆ ಹೋಗದಂತೆ ಮಾಡಲೂ ಸದ್ಯ ಸಾಧ್ಯವಿಲ್ಲವಂತೆ. ಕಡಿಮೆ ದರದಿಂದ ಧವಸಧಾನ್ಯ ಮಾರುವ ಡಿಪೋ ತೆರೆಯಲು ಸರಕಾರಕ್ಕೆ ಸಾಧ್ಯವಿಲ್ಲವಂತೆ. ಈ ಜಿಲ್ಲೆಗೆ ಬರಗಾಲ ಬಂದಿಲ್ಲವೆಂಬುದೇ ಇವಕ್ಕೆ ಕಾರಣವಂತೆ. ಕ್ರಯ ನಿಯಂತ್ರಣದ ವಿಚಾರದಲ್ಲಿ ಎಡ್ವೈಸರಿ ಬೋರ್ಡುಗಳು ತಾಲೂಕು ಕೇಂದ್ರಗಳಲ್ಲಿರುವುದರಿಂದ, ಅವರು ಕ್ರಯ ಗೊತ್ತುಮಾಡುವರೆಂದೂ, ಆ ದರದಲ್ಲಿ ಎಲ್ಲಾ ಕಡೆಗಳಲ್ಲಿಯೂ ಧವಸಧಾನ್ಯಗಳು ಸಿಗುವುದಿಲ್ಲವೆಂದೂ ಕಂಪ್ಲೇಂಟು ಬಂದಲ್ಲಿ ಆ ಕಮಿಟಿ ಆಡಳಿತದ ಆಶ್ರಯದಲ್ಲಿ ಕಡಿಮೆ ದರದಲ್ಲಿ ಎಲ್ಲಾ ಸಾಮಾಗ್ರಿಗಳು ಸಿಗುವ ಡಿಪೋಗಳನ್ನು ತೆರೆಯಿಸುವ ಸೂಚನೆ ಮಾಡಲಾಗುವುದೆಂದು ಸರಕಾರವು ತಿಳಿಸಿ ಶ್ರೀ ಕಾರಂತರಿಗೆ ಸರಕಾರದವರು ಉತ್ತರ ಕಳುಹಿಸಿರುವರೆಂದೂ ತಿಳಿದುಬಂದಿದೆ.

ಶ್ರೀ. ಬಿ. ಎಸ್. ಭಾಸ್ಕರರೈ

(ವಿದ್ಯಾರ್ಥಿ ಪರಿಷತ್ ಸ್ವಾಗತಾಧ್ಯಕ್ಷರು)

ಬೆಲೆ ಹಿಡಿತ

ಪದಾರ್ಥಗಳ ಬೆಲೆ ಹಿಡಿತದ ವಿಚಾರದಲ್ಲಿ ಕಳೆದ ಆದಿತ್ಯವಾರ ಸಂಜೆ ಮೈದಾನಿನಲ್ಲಿ ಸಾರ್ವಜನಿಕ ಸಭೆಯೊಂದು ಸೇರಿ ಶ್ರೀ ಎಸ್. ಎನ್. ಹೊಳ್ಳರು ಕಲೆಕ್ಟರರಿಂದ ಬಂದ ಉತ್ತರದ ಕುರಿತು ವಿವರಿಸಿ ಹೇಳಿದರು.

ಕಯ್ಯೂರು ಮೊಕದ್ದಮೆ ವಿಚಾರಣೆ

— ಎಸೆಸರರ ಅಭಿಪ್ರಾಯ —

ಪೋಲೀಸ್ ಕಾನ್ಸ್‌ಟೇಬಲ್ ಸುಬ್ರಾಯನೆಂಬವನನ್ನು ಕೊಂದ ಅಪಾದನೆಯ ಕಯ್ಯೂರು ಮೊಕದ್ದಮೆಯ ಹೇರಿಂಗ್ ತಾ. ೩೧ರಂದು ಮುಗಿದು, ಎಸೆಸರರು ಕೊಟ್ಟ ಅಭಿಪ್ರಾಯ. (೧) ಅಕ್ರಮ ಕೂಟ—ಈ ಅಪಾದನೆಯಲ್ಲಿ ೧ನೇ ೫೧ನೇ ಮತ್ತು ೩ನೇ ಅಪಾದಿತರುಮಾತ್ರ ತಪ್ಪಿತಸ್ಥರೆಂದು ೧ನೇ ಮತ್ತು ೨ನೇ ಎಸೆಸರರು ಅಭಿಪ್ರಾಯಪಟ್ಟಿರುವರು. ೪ನೇ ಎಸೆಸರರು ೧ ಮತ್ತು ೫೨ನೆ ಅಪಾದಿತರಿಬ್ಬರು ಮಾತ್ರ ತಪ್ಪಿತಸ್ಥರೆಂದು ಅಭಿಪ್ರಾಯವಿತ್ತರು. ೬೦ ಮಂದಿ ಅಪಾದಿತರಲ್ಲಿ ಮಿಕ್ಕವರೆಲ್ಲಾ ನಿರಪರಾಧಿಗಳೆಂದು ಹೇಳಿರುವರು. (೨) ಸರಕಾರಿ ಉದ್ಯೋಗಸ್ಥನು ಸರಕಾರೀ ಕೆಲಸದಲ್ಲಿ ಪ್ರವೃತ್ತನಾಗಿರುವ ಸಮಯ ಆತನಿಗೆ ಗಾಯಪಡಿಸಿದ ಅಪಾದನೆಯಲ್ಲಿ ೧ನೇ ಎಸೆಸರರು ೧, ೫, ೬, ೩೪, ೪೦, ೪೧, ೪೨ ಮತ್ತು ೫೧ ಈ ಅಪಾದಿತರು ಮಾತ್ರ ಸರಕಾರೀ ಉದ್ಯೋಗಸ್ಥನಿಗೆ ಸಾಮಾನ್ಯ ಗಾಯಗೊಳಿಸಿರುವರೆಂಬ ಅಪಾದನೆ ಮೇಲೆ ಮೇಲ್ಕಂಡವರು ತಪ್ಪಿತಸ್ಥರೆಂದು ಹೇಳಿರುವರು. ಮಿಕ್ಕೆರಡು ಜನ ಎಸೆಸರರು ಎಲ್ಲರೂ ನಿರಪರಾಧಿಗಳೆಂದು ಅಭಿಪ್ರಾಯವಿತ್ತರು. (೩) ಹೀಗೆ ಗಾಯಗೊಳಿಸುವ ಸಮಯ ಅಂಥಾ ಅಕ್ರಮದಲ್ಲಿ ಭಾಗವಹಿಸಿದ ಅಪಾದನೆಯಲ್ಲಿ; ಎಲ್ಲರೂ ನಿರಪರಾಧಿಗಳೆಂದು ಎಲ್ಲಾ ಎಸೆಸರರೂ ಹೇಳಿರುವರು. (೪ ಮತ್ತು ೫) ಸದ್ರಿ ಕಾನ್ಸ್‌ಟೇಬಲನನ್ನು ಕೊಂದಿಲ್ ಕವವು ಬಳಿ ಕೊಂದ ಮತ್ತು ಅದರಲ್ಲಿ ಭಾಗವಹಿಸಿ ಕೊಲ್ಲಲು ಉತ್ತೇಜನೆ ಕೊಟ್ಟ ಅಪಾದನೆಯಲ್ಲಿ ಎಲ್ಲರೂ ನಿರಪರಾಧಿಗಳೆಂದು ಎಲ್ಲಾ ಎಸೆಸರರೂ ಅಭಿಪ್ರಾಯವಿತ್ತರು. ಸಂದೇಹಾಸ್ಪದವಾದ ಪ್ರೊಸಿಕ್ಯೂಶನ್ ಸಾಕ್ಷಿಗಳ ಹೇಳಿಕೆಯ ಆಧಾರಗಳ ಮೇಲೆ ಎಸೆಸರರು ಕೊಟ್ಟ ಅಭಿಪ್ರಾಯ: (೧) ಇಂಕ್ವೆಸ್ಟ್ ರಿಪೋರ್ಟು ಪ್ರಕಾರ ಕೊಲೆಯು ದೊಣ್ಣೆ, ಕತ್ತಿ, ಕಲ್ಲು, ಲಾಠಿಗಳಿಂದ ಮಾಡಲ್ಪಟ್ಟಿರಬೇಕೆಂದು ಸೂಚಿಸಲಾಗಿದೆ. ಅಂಥಾ ಇಂಕ್ವೆಸ್ಟ್ ಸಮಯದಲ್ಲಿ ಕೋರ್ಟಿನಲ್ಲಿ ಸಾಕ್ಷಿ ನುಡಿದಿರುವವರನ್ನು ತನಿಖೆ ಮಾಡಿ ಅವರು ಕೊಟ್ಟ ಹೇಳಿಕೆಯಂತೆ ಇಂಕ್ವೆಸ್ಟ್ ರಿಪೋರ್ಟನ್ನು ತಯಾರಿಸಲ್ಪಟ್ಟದ್ದಾಗಿದೆಯೆಂದು ಇಂಕ್ವೆಸ್ಟ್ ರಿಪೋರ್ಟಿನಲ್ಲಿ ನಮೂದಿಸಲ್ಪಟ್ಟಿದೆ. ಸದ್ರಿ ಸಾಕ್ಷಿದಾರರೇ ಕೋರ್ಟಿನಲ್ಲಿ ಕೊಲೆಯನ್ನು ಲಾಠಿ ಮತ್ತು ಕಲ್ಲುಗಳಿಂದ ಮಾಡಿದ್ದಾಗಿರುತ್ತದೆಂದು ಹೇಳಿರುವರು. (೨) ಡಾಕ್ಟರರ ಹೇಳಿಕೆಯಲ್ಲಿ ಮೃತನ ಹೊಟ್ಟೆಯಲ್ಲಾಗಲಿ ಶ್ವಾಸಕೋಶದಲ್ಲಾಗಲಿ ನೀರಿಲ್ಲವೆಂದು ಹೇಳಲಾಗಿದೆ. ಜೀವವಿದ್ದಾಗಲೆ ಸದ್ರಿ ಕಾನ್ಸ್ಟೇಬಲನನ್ನು ನೀರಿನಲ್ಲಿ ಬಿಸಾಡಿರುತ್ತದೆಂದೂ, ಮತ್ತು ಹಾಗೆ ಬಿಸಾಡಲ್ಪಟ್ಟವನು ನೀರಿನಲ್ಲಿ ಈಜಾಡುತ್ತಿರುವಾಗ ಅಪಾದಿತರು ಕಲ್ಲೆಸೆದುದರ ಪರಿಣಾಮವಾಗಿ ಆತನು ನೀರಿನಲ್ಲಿ ಸತ್ತನೆಂದೂ ಹೇಳಿಕೆಯನ್ನು ಕೊಟ್ಟಿದ್ದಾರೆ. ನೀರಿನಲ್ಲಿ ಶ್ವಾಸ ಕಟ್ಟಿ ಸತ್ತದ್ದಾದ ಪಕ್ಷದಲ್ಲಿ ಹೊಟ್ಟೆಯಲ್ಲಿ ಮತ್ತು ಶ್ವಾಸಕೋಶದಲ್ಲಿ ನೀರು ಇರುತಿತ್ತೆಂದು ಎಸೆಸರರ ಸಂದೇಹ. (೩) ಕೋರ್ಟಿನಲ್ಲಿ ಸಾಕ್ಷಿ ನುಡಿದಿರುವ ಸಾಕ್ಷಿಗಾರರು ಕೊಲೆಯಲ್ಲಿ ಭಾಗವಹಿಸಿದ ಹಲವು ಅಪಾದಿತರ ಹೆಸರುಗಳನ್ನು ಹೇಳಿ ಅವರನ್ನು ಕೋರ್ಟಿನಲ್ಲಿ ಗುರುತಿಸಿ ಕೊಡುವಾಗ ತಪ್ಪಿರುವರು. (೪) ಏಳು ಜನ ಸಾಕ್ಷಿಗಾರರು ಯೆತ್ತಿಲ್ ಕಡವಿನ ೧೬೦ ಮಾರು ದೂರವಿರುವ ಇನ್ನೊಂದು ದಡದಲ್ಲಿ ನಿಂತು ಈ ದೃಶ್ಯವನ್ನು ನೋಡಿರುವೆವೆಂದು ಹೇಳಿಕೆಯಾಗಿತ್ತು. ಹೀಗೆ ೧೬೦ ಮಾರು ದೂರದಿಂದ ಅಪಾದಿತರನ್ನು ಗುರುತಿಸಲು ಸಾಧ್ಯವೋ ಎಂಬ ಸಂದೇಹ. ಇವೇ ಮೊದಲಾದವು.

ಶ್ರೀಗಳಾದ ಎ. ಕೆ. ಪಿಳ್ಳೆ, ಬಾರ್-ಎಟ್-ಲಾ ಶ್ರೀ. ಆರ್. ಆರ್. ತಲ್ಚೇರಿಕರ್, ಗಂಗಾಧರದಾಸ್, ಎಸ್. ನರ್ಸಪ್ಪಯ್ಯ—ಇವರು ಡಿಫೆನ್ಸ್ ಕಡೆ ವಕೀಲರು. ಪ್ರೊಸಿಕ್ಯೂಶನ್ ವಕೀಲರು ಶ್ರೀಗಳಾದ ಎಂ. ಕೆ. ನಂಬಿಯಾರ್, ಬಾರ್-ಎಟ್-ಲಾ, ಮತ್ತು ಶ್ರೀ. ಎಂ ಆನಂದ ತಲ್ವಾರ್ ಇವರು. ಶ್ರೀಗಳಾದ ಕೆ. ಎಸ್. ಭಂಡಾರ್‌ಕರ್, ಕೆ. ನಾರಾಯಣ ನಾಯಕ್, ಎ. ಅನಂತಭಟ್ ಇವರು ಎಸೆಸರರು. ಈ ಸೈಶ ಒಂದನೆಯ ಎಸೆಸರರು ಮೇಲಿನ ಕಾರಣಗಳನ್ನು ಕೋರ್ಟಿನ ಮುಂದೆ ಅಭಿಪ್ರಾಯವಿತ್ತರು. ತಾ. ೯ಕ್ಕೆ ಜಜ್ಮೆಂಟು ಕೊಡುವುದಾಗಿ ತಿಳಿದಿದೆ.

ಮುನ್ಸಿಪಲ್ ಮೀಟಿಂಗ್

ಮಂಗಳೂರು ಮುನ್ಸಿಪಲ್ ಮೀಟಿಂಗ್ ಸೋಮವಾರ ಸಂಜೆ ಚೇರ್‌ಮೆನರಾದ ಶ್ರೀ ವೆಂಕಟ್ರಾಯ ಬಾಳಿಗ ಎಂ. ಎಲ್. ಸಿ. ಇವರ ಅಧ್ಯಕ್ಷತೆಯಿಂದ ಜರಗಿತು. ಮುನ್ಸಿಪಲ್ ಕಮಿಶನರ್ ಶ್ರೀ ಎಂ. ನಾರಾಯಣ ಶೆಟ್ಟಿಯವರಿಗೆ ತಿರುಗಿ ಇಲ್ಲೇ ನೇಮಕವಾದುದನ್ನು ತಿಳಿಸಿ, ಅವರ ಗ್ರೇಡನ್ನು ಹೆಚ್ಚಿಸುವಂತೆ ಸರಕಾರಕ್ಕೆ ಬರೆದುಕೊಳ್ಳಬೇಕೆಂಬ ಸೂಚನೆ ಮಾನ್ಯಮಾಡಿ, ಶ್ರೀ. ಬಿ. ವ್ಯಾಸರಾಯಾಚಾರ್ಯರು ಕಟ್ಟಿಸಿದ ಪಾಯಿಖಾನೆ ಇತ್ಯಾದಿಗಳ ಕುರಿತು ಡಾ। ಎಫ್. ಎಲ್. ಡಿ'ಸೋಜರು ಮಾಡಿದ ಆಕ್ಷೇಪಣೆಗಳ ಕುರಿತು ಎರಡು ಕಡೆಯ ವಕೀಲರ ಹೇಳಿಕೆಗಳನ್ನೂ ಕೇಳಿ, ಅದರ ತೀರ್ಮಾನದ ಬಗ್ಗೆ ಒಂದು ಕಮಿಟಿಯನ್ನು ರಚಿಸಲಾಯಿತು.

ಜಿಲ್ಲಾ ಬೋರ್ಡ್ ಸಭೆ

ತಾ. 12ರಲ್ಲು ಬೆಳಿಗ್ಗೆ 10 ಗಂಟೆಗೆ ಜಿಲ್ಲಾ ಬೋರ್ಡ್ ಆಫೀಸಿನಲ್ಲಿ ಜರಗಲಿದೆ.

ನೀಲೇಶ್ವರ

ರಾಜಾಸ್ ಹಯರ್ ಸ್ಕೂಲಿನ ವರ್ಧಂತ್ಯುತ್ಸವವು

ಶ್ರೀ. ಕೆ. ಆರ್. ಕಾರಂತ ಎಂ. ಎಲ್. ಎ ಅವರ ಅಧ್ಯಕ್ಷತೆಯಲ್ಲಿ ಇದೇ ಕಳೆದ ತಾ. ೧೮ರಂದು ಅತ್ಯಂತವಿಜೃಂಭಣೆಯಿಂದ ಜರಗಿತು. ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ. ಕೆ. ರಾಮಕೃಷ್ಣರಾಯರು ಶಾಲಾ ಕಾರ್ಯಕಲಾಪಗಳ ವರದಿಯನ್ನು ಓದಿದರು. ಬಹುಮಾನವಿತರಣದ ಬಳಿಕ ಶ್ರೀ. ಪಿ. ಕೆ. ಕೊರರವರು ಭಾಷಣವಿತ್ತರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ವಿದ್ಯಾರ್ಥಿಗಳು ಶಿಷ್ಯಸಂಪ್ರದಾಯದಲ್ಲಿದ್ದು ಗುರುಹಿರಿಯರಿಗೆ ವಿಧೇಯರಾಗಿರಬೇಕು—ಸ್ವದೇಶಿ ವಸ್ತ್ರಗಳನ್ನೇ ಧರಿಸಲು ಪ್ರಯತ್ನಿಸಬೇಕು ಎಂದರು. ಶಾಲೆಯು ವಿಶೇಷವಾಗಿ, ಇದನ್ನು ಕಟ್ಟಿಸಿದ ರಾಜರನ್ನು ಕೃತಜ್ಞತೆಯಿಂದ ಮಹಾಜನರೆಲ್ಲರೂ ಇಂತಹ ವಿದ್ಯಾಸಂಸ್ಥೆಗಳಿಗೆ ಬೆಂಬಲವೀಯಬೇಕೆಂದು ಸೂಚಿಸಿದರು. ಬಡ ವಿದ್ಯಾರ್ಥಿಗಳಿಗೆ ಸಂಬಳದಲ್ಲಿ ಸುಮಾರು ೩೦೦-೪೦೦ ವರೆಗೆ ರಿಯಾಯತಿ ತೋರಿಸಿ ಇಷ್ಟು ಸೂತ್ರವಾಗಿ ಆಡಳಿತವನ್ನು ನಡೆಸುತ್ತಿರುವ ಶಾಲಾ ಮುಖ್ಯೋಪಾಧ್ಯಾಯರು ನಿಜವಾಗಿಯೂ ಪ್ರಶಂಸನೀಯರು ಎಂದರು. ಕನ್ನಡ ನಾಟಕವನ್ನು ಮಳೆಯಾಳ ಪ್ರಹಸನವನ್ನೂ ಪ್ರದರ್ಶಿಸಿ ಸಭಿಕರನ್ನು ವಿದ್ಯಾರ್ಥಿಗಳು ಸಂತೋಷಗೊಳಿಸಿದರು.

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ ಕೋರ್ಟಿನಲ್ಲಿ

R. I. A. 1354/1941 in
O. P. 202/37

ಶ್ರೀನಿವಾಸ ಪ್ರಭು — ಅರ್ಜಿದಾರ

ಮತ್ತು

ಕಿಂಞಾಳುವ ಕೂಡಾ — ರೆಸ್ಪಾಂಡೆಂಟರು

1. ಕಿಂಞಣ್ಣಾಳುವ, ಸಣ್ಣಾಲು ಸುಬ್ಬಯ ಆಳುವರ ಅಳಿಯ, ಮಂಗಳೂರು ತಾಲ್ಲೂಕು ಬಾಳೆಪುಣಿಗ್ರಾಮ. 2. ಸೋಮಕ್ಕ ಹೆಂಗ್ಸು ಬಂಟುಶೆಟ್ಟಿ ನೊಮ್ಮಗಳು. 6. ವೆಂಕಪ್ಪನಾಯ್ಕ, ಚನ್ನಪ್ಪ ನಾಯ್ಕನ ಮಗ. ಮಂಗಳೂರು ತಾಲ್ಲೂಕು ಯಿರ ಗ್ರಾಮದ ಕೊಡಂಗೆ ಯವರಿಗೆ

ಮೇಲ್ಕಂಡ ಅರ್ಜಿದಾರನು ಮೇಲಿನ ವ್ಯಾಜ್ಯದಲ್ಲಾದ ಪ್ರಿಲಿಮಿನರಿ ಡಿಕ್ರಿಯನ್ನು ಫೈನಲ್ ಮಾಡಬೇಕಾಗಿ ವಗೈರೆ ದಾಖಲ್ಲೆ ಮಾಡಿದ ಮೇಲ್ಕಂಡ ಅರ್ಜಿಯು ತಾರೀಕು 19-2-1942ಕ್ಕೆಯಿಟ್ಟದೆ. ಆ ಕುರಿತು ನಿಮಗೇನಾದರೂ ಆಕ್ಷೇಪಣೆಯಿದ್ದರೆ ಸದ್ರಿ ದಿವ್ಸ ಮೇಲಿನ ಕೋರ್ಟ್ ಮುಂದೆ ಹಗಲು 10½ ಗಂಟೆಗೆ ಖುದ್ದು ಯಾ ವಕೀಲ್ ದ್ವಾರಾ ಹಾಜರಾಗಿ ಉದಾಹರಿಸುವದೆ ತಪ್ಪಿದ್ರೆ ನಿಮ್ಮ ಗೈರು ಹಾಜರಲ್ಲಿ ಅರ್ಜಿಯು ತೀರ್ಮಾನ ಮಾಡಲ್ಪಡುವದು.

(By order of court)

Mangalore 5—2—42 } S. Narsapaya, Vakil for Petitioner

ಸಿನೆಮಾ ಪುಟ

ಅಶೋಕ್, ಸುರೇಂದ್ರ ಮತ್ತು ಮೋತಿಲಾಲ ಇವರ ಸ್ವಭಾವ ಪರಿಚಯ

ಈ ಮೂವರ ವಿಷಯವಾಗಿ 'ಫಿಮೆನ್ಸ್ ಓನ್ ಮೆಗಜಿನ್'ನಲ್ಲಿ ಒಂದು ಸ್ವಾರಸ್ಯದ ಲೇಖನ ಬಂದಿದೆ. ಅಶೋಕ ಕುಮಾರನನ್ನು ಬಹಳ ಸುಂದರ, ದೀರ್ಘ ದೇಹದ ಯುವಕನನ್ನಾಗಿ ಸ್ಟುಡಿಯೋದಲ್ಲಿ ಮಾತ್ರ ಕಾಣಬಹುದು, ಅದರಲ್ಲೂ ಹುಡುಗಿಯರು ಆತನ ಹಸ್ತಾಕ್ಷರ ಕೇಳಲು ಹೋದಾಗ ಅತ್ಯಂತ ಚಲೋದಾಗಿ ಕಾಣುತ್ತಾನೆ. ಆದರೆ ವಿವಾಹಿತನಾಗಿ ಸುಖದಿಂದ ತನ್ನ ಮಗುವನ್ನು ಆಡಿಸುತ್ತಾ ಮನೆಯಲ್ಲಿಯೇ ಇದ್ದು ಬಿಡುತ್ತಾನೆ. ಟೆಲಿಫೋನನ್ನು ಆತನು ಇಟ್ಟುಕೊಂಡೇ ಇಲ್ಲ. ಸಾರ್ವಜನಿಕ ಸ್ಥಳಗಳಲ್ಲಿ ಆತನನ್ನು ಕಾಣುವುದು ದುರ್ಲಭ. ಸುರೇಂದ್ರನು ವಿಧುರ. ೩೫ ವರ್ಷ ವಯಸ್ಸು. ಯಾವಾಗಲೂ ಫೋನಿನಲ್ಲಿ ಮಾತನಾಡುತ್ತಿರುವನು. ಹುಡುಗಿಯರನ್ನು ಹೆಕ್ಕುತ್ತಾನೆ. ಆದರೆ ತನ್ನನ್ನು ಹೆಕ್ಕಿದ ಹುಡುಗಿಯರ ವಿಷಯ ಸಹಿಸಿಕೊಳ್ಳಲಾರ. ಚಂದ್ರನೆಂದರೆ ಬಹಳ ಪ್ರೀತಿ. ತಿರುಗಿ ಮದುವೆಯಾಗಲು ಇಚ್ಛಿಸಲೂ ಬಹುದು. ಆದರೆ ಹುಡುಗಿ ಬಹಳ ನಾಜೂಕಿನವಳಿರಬೇಕು. ಮೋತಿಲಾಲ್ ಬಹಳ ವಿಲಾಸಿ ಮನುಷ್ಯ. ಕಾರು ಕೊಂಡುಕೊಳ್ಳುವುದೊಂದು ಚಟ. ಅವನಿಗೆ ಗೃಹಜೀವನದಲ್ಲಿ ನಟನೆಗಿಂತ ಕಡಿಮೆ ಹಿಂಸಾಪ್ರಕೃತಿಯವ. ಹುಡುಗಿಯರ ವಿಷಯ ಹೆಚ್ಚು ತಾತ್ಪರವಿಲ್ಲ. ನೃತ್ಯವೆಂದರೆ ಬಹಳ ಇಷ್ಟ. ಗುರುವಾರ ಆದಿತ್ಯವಾರ ಕ್ರಿಕೆಟ್ ಕ್ಲಬ್ಬಿನಲ್ಲಿರುತ್ತಾನೆ. ಮನೆಯ ವಿಳಾಸ ಕೊಡುವುದಿಲ್ಲ. ಮದುವೆ ಮಾಡಿಕೊಂಡಿದ್ದಾನೆ. ಹೆಂಡತಿ ಇರುವ ವರೆಗೆ ಬೇರೆ ಜತೆಗಾತಿಯರೊಡನೆ ತಿರುಗಾಟಕ್ಕೆ ಬರಲಾರ.

ವಿಷಾದ ವಾರ್ತೆ

ಪೂನದ ನಿರ್ದೇಶಕರೊಬ್ಬರಾದ ಬಾಬುರಾವ್ ಆಪ್ಟೆ ಎಂಬವರು ಹೃದ್ರೋಗದ ಬಾಧೆಯಿಂದ ಮರಣಹೊಂದಿದರೆಂಬ ವಿಷಾದಕರ ವಾರ್ತೆ ಬಂದಿದೆ.

'ನೀನಾ'

'ಏಕ್ ರಾತ್' ಚಿತ್ರದಲ್ಲಿ ನೀನಾ ಎಂಬ ಹೊಸ ತಾರೆ ಅಭಿನಯಿಸುತ್ತಾಳೆ. ಪೃಥ್ವೀರಾಜ್ ಇವಳ ಜತೆಗಾರ. ಸೌಂದರ್ಯದಲ್ಲಿ ನೀನಾ ನಾಸೀಮಳನ್ನು ಹೋಲುವಳೆಂದು ಪ್ರಸಿದ್ಧಿಯಿದೆ.

ಬರುವಾ ಮತ್ತು ಮಲ್ಲಿಕ್

ಪಿ ಸಿ ಬರುವಾ ಮತ್ತು ಅಮರಮಲ್ಲಿಕ್ ಇವರು ಕಲ್ಕತ್ತದ ಎ ಆರ್. ಓ.ಗೆ ಸೇರಿರುವರೆಂದು ಸುದ್ದಿಯಿದೆ.

ಮಾಲತಿ

ಸುಮಂಗಲಿ ಪ್ರಖ್ಯಾತ ನಟಿಯಾದ ಮಾಲತಿಯು ರೇಣುಕಾ ಫಿಲ್ಮ್ಸನವರ ತೆಲುಗು ಚಿತ್ರ ಭಾಗ್ಯಲಕ್ಷ್ಮಿಯಲ್ಲಿ ನಾಗಯ್ಯನೊಡನೆ ಪಾತ್ರ ವಹಿಸಿರುವಳು.

ಬೊಂಬೇ ಟಾಕೀಸಿನ ಹೊಸ ತಾರೆ

ಬೊಂಬಾಯಿ ಟಾಕೀಸಿನ ದೇವಿಕಾರಾಣಿ ತಯಾರಿಸುವ ಮುಂದಿನ ಚಿತ್ರದಲ್ಲಿ ಮುಮ್ತಾಜ್ ಶಾಂತಿ ಎಂಬ ಹೊಸ ತಾರೆ ಅಭಿನಯಿಸುವಳೆಂದು ತಿಳಿದಿದೆ. ಆ ಕಥೆಯ ಹೆಸರು ಮಾತ್ರ ಇದುವರೆಗೆ ಪ್ರಕಟವಾಗಿಲ್ಲ. ನೃತ್ಯದಲ್ಲಿ ಮುಮ್ತಾಜ್ ಶಾಂತಿ ಪ್ರಸಿದ್ಧಳಿದ್ದು ಉತ್ತರ ಭಾರತದಲ್ಲಿ ಒಳ್ಳೆಯ ಹೆಸರು ಪಡೆದಿರುವಳೆಂದು ತಿಳಿದಿದೆ. ಕೆಲವು ಪಂಜಾಬೀ ಚಿತ್ರಗಳಲ್ಲಿ ಆಕೆ ಇದು ಮೊದಲು ಅಭಿನಯಿಸಿರುವಳು. ಶ್ರೀ ಕರಣ ದಿವಾನ್ ಬಿ ಎ, ಶ್ರೀ ಕಾಣುರ್ಕೆ ಬಿ ಎ, ಎಲ್ ಎಲ್ ಬಿ ಎಂಬೀ ಹೊಸ ನಟರಿಬ್ಬರು ಬೊಂಬೇ ಟಾಕೀಸಿಗೆ ಸೇರಿರುವರೆಂದು ತಿಳಿದಿದೆ.

ಇಮ್ಮಡಿ ಉದ್ದೇಶವಿರುವ

ಈ ಸಾಬೂನನ್ನುಪಯೋಗಿಸಿರಿ

ಛಿದ್ರವಾದ ಚರ್ಮದಿಂದ ರಕ್ಷಿಸಲು ಉತ್ತಮವಾದ ನಿಮ್ಮ ಭದ್ರತೆಯ ಸಾಧನ!

ನಿಮ್ಮ ಮೈಚರ್ಮದ ಮೇಲೆ ಮಚ್ಚೆಯಾ ಚಿಬ್ಬುಗಳಿರುವವೆ, ಚರ್ಮವು ಒರಟಾಗಿರುವುದೇ ಅಥವಾ ತುರಿಗಜ್ಜಿಯಿಂದ ಕೆಟ್ಟಿರುವುದೆ? ಅದಕ್ಕೆ ಚರ್ಮವನ್ನು ಸರಿಯಾದ ರೀತಿಯಲ್ಲಿ ಸ್ವಚ್ಛವಾಗಿಡದಿದ್ದುದೇ ಕಾರಣ. ನಿಮ್ಮ ಸೂಕ್ಷ್ಮವಾದ ಚರ್ಮರಂಧ್ರಗಳು ಧೂಳು, ಕೈಸ್ಸು ಮತ್ತು ಬೆವರಿನಿಂದ ಮುಚ್ಚಿಕೊಂಡಿರುತ್ತವೆ. ಯೋಗ್ಯವಾದ ಚರ್ಮದ ಆರೋಗ್ಯ ಮತ್ತು ಸೌಂದರ್ಯತೆಗೆ ನಿಮ್ಮ ಮೈಚರ್ಮವನ್ನು ಯಾವಾಗಲೂ ಕುಟಿಕೂರಾ ಸಾಬೂನಿನಿಂದ (Cuticur Soap) ತೊಳೆಯಿರಿ. ಇದು ಇಮ್ಮಡಿ ಉದ್ದೇಶಗಳನ್ನು ಈಡೇರಿಸುತ್ತದೆ. ಯಾಕೆಂದರೆ ಇದು ಔಷಧಿಯುಕ್ತವಾದುದು ಮತ್ತು ಶೃಂಗಾರಯುಕ್ತವಾದ ಪರಿಮಳ ಸಾಬೂನಾಗಿರುತ್ತದೆ. ಆಗಾಗ ಸೂರ್ಯನ ತಾಪಕ್ಕೆ ಮತ್ತು ಹವೆಗೆ ಮೈಚರ್ಮ ಒಡ್ಡಲ್ಪಟ್ಟರೂ ಇದು ಸೌಂದರ್ಯವನ್ನು ಕೆಡಿಸದು. ಆದಕಾರಣ ಇಮ್ಮಡಿ ಉದ್ದೇಶದ ಈ ಸೌಂದರ್ಯದ ಸಾಬೂನನ್ನು ಇಂದೇ ಉಪಯೋಗಿಸಲು ಪ್ರಾರಂಭಿಸಿ. ಸೌಂದರ್ಯ ಮತ್ತು ಆರೋಗ್ಯಕರವಾದ ಚರ್ಮವನ್ನು ಪಡೆಯಲು ಇದನ್ನುಪಯೋಗಿಸುವುದೇ ಉತ್ತಮ. ಹಾಗೆ ಕುಟಿಕೂರಾ ಮುಲಾಮು (Cuticura Ointment)ನಿಂದ ಮೊಡವೆ, ಛಿದ್ರ, ಗಜ್ಜಿಗಳನ್ನು ನಾಶಮಾಡಿ ಇದರ ವಿಷಹಾರ ಗುಣವು ಕ್ರಿಮಿಗಳನ್ನು ನಾಶಮಾಡಿ ತುರಿಸುವಿಕೆಯನ್ನು ಶಾಂತಗೊಳಿಸಿ ಆಶ್ಚರ್ಯಕರವಾದ ಅತ್ಯಲ್ಪ ಸಮಯದೊಳಗಾಗಿ ಚರ್ಮವನ್ನು ಗುಣಪಡಿಸುವುದು. ಸ್ನಾನನಂತರ ಕುಟಿಕೂರಾ ಟಾಲ್ಕಮ್ ಪೌಡರು (Cuticura Talcum Powder) ಬಹಳ ಹಿತಕರವಾದುದು.

ಎಲ್ಲಾ ಕೆಮಿಸ್ಟರಲ್ಲಿಯೂ ಅಂಗಡಿಗಳಲ್ಲಿಯೂ ಮಾರಲ್ಪಡುವುದು.

ಕುಟಿಕೂರಾ ಸಾಬೂನು

Cuticura Soap

ಕುಟಿಕೂರಾ ಸಾಬೂನುಗಳು ದೊಡ್ಡ ಸೈಜಿನಲ್ಲಿಯೂ (ಸ್ನಾನಕ್ಕೆ) ಸಣ್ಣ ಸೈಜಿನಲ್ಲಿಯೂ (ಪ್ರಯಾಣಕ್ಕೆ) ದೊರೆಯುತ್ತದೆ.

ನೇಶನಲ್ ಸ್ಟುಡಿಯೋದವರ 'ಪೂಜಾ' ಚಿತ್ರದಲ್ಲಿ ಸಿತಾರಾ ಮತ್ತು ಸರ್ದಾರ್ ಅಖ್ತಾರ್

The Canara Banking Corporation Ltd.

(Incorporated in British India with limited liability)

Estd 1906

OUR RATES OF INTEREST ON DEPOSITS

Current	1%	p. a.
Savings Bank	2½%	,,
Short-term	1¾%	,,
FIXED FOR 3 MONTHS	2%	,,
6 ,,	2½%	,,
9 ,,	2¾%	,,
12 ,,	3%	,,
24 ,,	3½%	,,

Advances made at cheap rates of interest against approved securities and Banking business of every description transacted.

ನಾಸೀಮಳು ಪ್ರಣಯಿಗಳ ಕುರಿತು ಪರಿತಾಪ ಪಡುತ್ತಾಳೆ

'ಮಿಲಿಯ ರೂಪಾಯಿ ಮುಖ'ದವಳು, ರೂಪರಾಣಿ ನಾಸೀಮಳು ತನ್ನ ಕುರಿತು ಪ್ರಣಯಗೊಳ್ಳುವವರ ಕುರಿತು ಬಹಳ ಅನುತಾಪ ಪಡುತ್ತಿದ್ದಾಳಂತೆ. ಮೊದಮೊದಲು ಅವಳಿಗೆ ಪ್ರಣಯ ಪತ್ರಗಳನ್ನು ನೋಡಿದರೆ ನಗೆ ಬರುತ್ತಿತ್ತಂತೆ, ಆದರೆ ಇತ್ತೀಚೆಗೆ ಅಂತಹ ಪಾಪಿಗಳ ಕುರಿತು ಸಂತಾಪವುಂಟಾಗಿದೆಯೆಂದು ಆಕೆ ಹೇಳುತ್ತಾಳೆ. ಕರಾಚಿಯ ಒಬ್ಬ ಹುಡುಗನು 120 ಕಾಗದ ಬರೆದನಂತೆ ನಾಸೀಮಳಿಗೆ. ಎಲ್ಲವೂ ಪ್ರಣಯ ಪತ್ರಗಳೇ. ಯಾವುದಾದರೊಂದು ದಿನ ನಾಸೀಮಳನ್ನು ಮದುವೆಯಾಗುವೆನೆಂಬುದು ಆತನ ಆಸೆಯಂತೆ. ಆತನಿದ್ದ ಊರಿಗೆ ಪುಕಾರ್ ಚಿತ್ರ ಬಂದಿದ್ದಾಗ ಅದನ್ನು ಪ್ರತಿಯೊಂದು ಪ್ರದರ್ಶನದಲ್ಲಿಯೂ ಹೋಗಿ ನೋಡಿ ನಾಸೀಮಳ ನಾಮಸ್ಮರಣೆ ಮಾಡುತ್ತಿದ್ದನಂತೆ. ಇಂತಹ ಹುಚ್ಚು ಪ್ರೇಮಿಗಳ ಕುರಿತು ತಾನು ಬಹಳ ಸಂಕಟ ಪಡುತ್ತಿರುವೆನೆಂದು ನಾಸೀಮಳು ಹೇಳುತ್ತಾಳೆ.

ಪಂಚಾಮೃತಂ

ಬಾಲಾಜಿ ಈಶ್ವರ ಫಿಲ್ಮ್ಸನವರ 'ಪಂಚಾಮೃತಂ' ಚಿತ್ರದಲ್ಲಿ ಸಾರಂಗಪಾಣಿ ಮತ್ತು ಛಾಯಾ ನಟಿಸುತ್ತಾರೆ. ಕಾಳಿ ಎನ್ ರತ್ನಂ ಮತ್ತು ರಾಜಕಾಂತಂ ಇವರ ಹಾಸ್ಯವೂ ಇರುವುದು.

ರೈಲು ಬಂಡಿಗಳ ಸಮಯ

ಇದೇ ಜುಲೈ ತಾ. 1ರಿಂದ ವ್ಯತ್ಯಾಸವಾದ ರೈಲು ಬಂಡಿಗಳ ಸಮಯಗಳು ಈ ಕೆಳಗಿನಂತಿವೆ—

ಗಾಡಿಗಳು	ಹೊರಡುವ ಗಂಟೆ	ತಲ್ಪುವ ಗಂಟೆ
ಗೂಡ್ಸು ಬಂಡಿ	3.45 ರಾತ್ರಿ	9.25 ರಾತ್ರಿ
ಮಲಬಾರು ಎಕ್ಸ್‌ಪ್ರೆಸ್ (ಮೈಲ್)	9.5 ಬೆಳಿಗ್ಗೆ	5.15 ಸಾಯಂ.
ಜಾಲಾರ್ ಪೇಟೆ ಪೆಸೆಂಜರ್	12.0 ಮಧ್ಯಾಹ್ನ	2.55 ಸಾಯಂ.
ಕಣ್ಣಾನ್ನೂರು ವರೆಗೆ	5.53 ಸಾಯಂ.	9.40 ಪೂರ್ವಾಹ್ನ

ಹಿಟ್ಲರ ಶಿಬಿರದ ಮೇಲೆ ಗಂಡಾಂತರ

ಮೋಸ್ಕೋದ ಆಗ್ನೇಯಕ್ಕೆ ಜಯಪಡೆದ ರಶ್ಯನ್ ಸೈನ್ಯಗಳು ಮುಂದೊತ್ತುತ್ತಿದ್ದು, ಬಹುಶಃ ಅವು ಹಿಟ್ಲರನ ಶಿಬಿರವಿರುವ ಸ್ಮೊಲೆನ್‌ಸ್ಕದ ಕಡೆಗೆ ಮುನ್ನುಗ್ಗುತ್ತಿರುವರೆಂದು ಸುದ್ದಿ. ಜರ್ಮನರು ರಶ್ಯನ್ ರಣಭೂಮಿಯಲ್ಲಿ ಪ್ರತಿಘಾತಿಯನ್ನು ಪ್ರಾರಂಭಿಸಿದ್ದಾರೆ. ಇದರಿಂದ ರಶ್ಯನರ ಮನ್ನಡೆಗೆ ತಡೆಯುಂಟಾಗಿಲ್ಲವೆಂದು ಹೇಳಲಾಗಿದೆ.

ಜರ್ಮನಿಯ ಮೇಲೆ ಅಮೆರಿಕದ ವಿಮಾನಾಕ್ರಮಣ

ಮಾಡುವರೆಂದು ತಿಳಿದು ಇಂಗ್ಲೆಂಡಿನಲ್ಲಿ ಆನಂದವುಂಟಾಗಿದೆ. ನ್ಯೂಯಾರ್ಕಿನ ಪತ್ರಿಕೆಗಳು ಈ ಸುದ್ದಿಯನ್ನು ಮೊದಲನೇ ಪುಟದಲ್ಲಿ ದೊಡ್ಡಕ್ಷರದಲ್ಲಿ ಪ್ರಕಟಿಸಿವೆ.

ರೊಮೆಲನ ಮುನ್ನಡೆ

ಬೆಂಗಾಜಿಯನ್ನು ಆಕ್ರಮಿಸಿದ ರೊಮೇಲನು ಇನ್ನೂ ಪೂರ್ವಕ್ಕೆ ಮುಂದುವರಿದಿರುವನು. ಹಿಟ್ಲರನು ರೊಮೆಲನನ್ನು ಫೀಲ್ಡ್ ಮಾರ್ಶಲ್ ಹುದ್ದೆಗೇರಿಸಿರುವನು.

ರೈಲ್ವೆಯಲ್ಲಿ ೨೦ ಕೋಟಿ ರೂ. ಲಾಭ

ಈ ವರ್ಷ ಆಗಿದೆಯೆಂದೂ ಈಗ ಹೊರಬಿದ್ದ ಅಂಕಸಂಖ್ಯೆಗಳಿಂದ ತಿಳಿದಿದೆ. ಈ ವರ್ಷದ ಉತ್ಪನ್ನ ಹೋದ ವರ್ಷಕ್ಕಿಂತ ೧೩ ಕೋಟಿ ಹೆಚ್ಚಿದೆ. ಆದಾಗ್ಯೂ ವೆಚ್ಚ ಒಂದು ಮುಕ್ಕಾಲು ಕೋಟಿ ಮಾತ್ರ ಹೆಚ್ಚಿದೆ. ಹೀಗಿದ್ದರೂ ೨೦ ಕೋಟಿ ರೂಪಾಯಿಗಳಿಗಿಂತ ಮಿಕ್ಕಿ ಈ ವರ್ಷ ಹಿಂದುಸ್ಥಾನದ ರೈಲ್ವೆ ಲಾಭವಿದೆ.

ವಿಜ್ಞಾನಯುಗ

ಬಿಸಾಡುವ ಮೀನಿನಿಂದ ಆಹಾರ

ಬಿಸಾಡುವ ಮೀನಿನ ಪದಾರ್ಥದಿಂದ ಆಹಾರ ವಸ್ತುಗಳನ್ನು ತಯಾರಿಸುತ್ತಿರುವರು. ಮೀನಿನ ಹಾಳು ಪದಾರ್ಥವನ್ನು ಬಿಸಾಡುವುದಾಗಲಿ ಗೊಬ್ಬರಕ್ಕಾಗಲಿ ಈಗ ಉಪಯೋಗಿಸುತ್ತಿರುವರು. ಡಾ। ಫೋರ್ಬಿನ ಎಂಬವರು ಹೇಳುವುದೇನೆಂದರೆ ಬಿಸಾಡುವ ಮೀನಿನ ವಸ್ತುಗಳಲ್ಲಿ ವಿಟಮಿನ್‌ಗಳು ತುಂಬಾ ಇರುವುದರಿಂದ ಅದನ್ನು ಆಹಾರಕ್ಕಾಗಿ ಉಪಯೋಗಿಸಬಹುದೆಂದು. ಮೀನಿನ ಎಲುಬಿನಿಂದ ಬ್ರೆಡ್ಡು ಮಾಡಬಹುದೆಂದೂ, ಇತರ ಅನೇಕ ಪದಾರ್ಥಗಳಿಂದ ರುಚಿಯಾದ ಆಹಾರ ವಸ್ತುಗಳನ್ನು ಒದಗಿಸಬಹುದೆಂದೂ ಅವರ ಹೇಳಿಕೆ. ಸ್ಕೋಟ್ಲೆಂಡಿನ ವಿಜ್ಞಾನಿಗಳು ಈಗ ಈ ವಿಚಾರದಲ್ಲಿ ಯೋಚಿಸುತ್ತಿರುವರು.

ಎದೆ ಗಟ್ಟಿಮಾಡುವುದು.

ಸಿಪಾಯಿಗಳಿಗೆ ಹೆದರಿಕೆ ಇರಬಾರದಷ್ಟೆ? ಆದರೆ ಮನುಷ್ಯನ ಪ್ರಕೃತಿಯಲ್ಲಿ ಭಯವೆಂಬುದೂ ಇದೆ. ಈಗ ಅಂತಹ ಭಯಕಾರಣವಾದ ನರಗಳನ್ನು ಕಡಿದು ತೆಗೆದು ಮನುಷ್ಯರನ್ನು ಭಯರಹಿತರನ್ನಾಗಿ ಮಾಡುವ ಉಪಾಯವನ್ನು ಕಂಡುಹಿಡಿದಿದ್ದಾರೆ. ಭಯವಿದ್ದ ಜನರ ನರಗಳನ್ನು ಹೀಗೆ ಕಡಿದು ತೆಗೆಯುವುದರಿಂದ ೧೨೭ ಕೇಸುಗಳಲ್ಲಿ ೧೧೯ ಕೇಸುಗಳು ಯೋಗ್ಯ ಪರಿಣಾಮಕಾರಿಯಾಗಿವೆಯೆಂದೂ ತಿಳಿದುಬಂದಿದೆ ಎಂದು ನ್ಯೂಯಾರ್ಕಿನ ಮುಲಿಬುರಿ ಸರ್ಜನರ ಪ್ರಕಟಣೆಯಾಗಿದೆ. ಭೀತಿಯಿಂದ ಅಶಾಂತಿ, ಬೆವರು, ಶೀತ ಇಂತಹ ಅನೇಕ ಉಪದ್ರವಗಳುಂಟಾಗುವವು. ಅವುಗಳೆಲ್ಲವೂ ಈ ಒಪರೇಶನಿನಿಂದ ಗುಣಹೊಂದುವವು. ಇಂತಹ ಭಯ ಕಾರಣ ಸಂಗತಿಗಳು ಹೆಚ್ಚಾಗಿ ನಾಗರಿಕ ಜನರಲ್ಲಿ ಮಾತ್ರ ಇದು ಅಲ್ಲದೆ, ವನ್ಯ ಜೀವಿಗಳಂತಿರುವವರಲ್ಲಿ ಇರುವುದಿಲ್ಲವೆಂದು ಹೇಳಲಾಗಿದೆ.

ಆಕಾಶ ಮೋಟರು

'ಆಕಾಶದ ಮೋಟರು' ಎಂಬ ಹೆಸರಿನ ವಿಮಾನವು ತಯಾರಾಗಿದೆ. ಇದಕ್ಕೆ ಈ ಹೆಸರು ಏಕೆಂದರೆ, ಮೋಟರುಕಾರು ಬಂದು ನೆಲದಲ್ಲಿ ಮಾಡಬಲ್ಲ ಕೆಲಸಗಳೆಲ್ಲವನ್ನೂ ಇದು ಆಕಾಶದಲ್ಲಿ ಮಾಡಬಲ್ಲುದು. ಇದು ಅಮೆರಿಕದಲ್ಲಿ ತಯಾರಾದ ಹೊಸ ತರದ ವಿಮಾನ. ಇವೋರ್ ಜಿಗೋರ್ಸ್ಕಿ ಎಂಬ ರಶ್ಯನ್ ಇಂಜಿನಿಯರನು ಇದನ್ನು ತಯಾರು ಮಾಡಿದನು. ಇದು ಆಕಾಶದಲ್ಲಿಯೇ ನಿಲ್ಲಬಲ್ಲುದೆಂದೂ ಹಿಂದುಗಡೆಯೂ ಹಾರಬಲ್ಲುದೆಂದೂ ಆತನು ಹೇಳುತ್ತಾನೆ. ಈ ವಿಮಾನವು ಶಬ್ದವಿಲ್ಲದೆ ಆಕಾಶದಲ್ಲಿ ಚಲಿಸಬಲ್ಲುದೆಂದೂ, ಹಿಂದಿನ ವಿಮಾನಗಳಿಗಿಂತ ಹೆಚ್ಚು ಸ್ಪಷ್ಟವಾಗಿ ನಿಶ್ಚಿತ ಸ್ಥಳಕ್ಕೇ ಬಾಂಬೆಸೆಯಬಲ್ಲುದೆಂದೂ ನಂಬಲಾಗಿದೆ.

ಜಗತ್ತಿನ ಅತ್ಯಂತ ಸಣ್ಣ ಮೋಟರು

ಮೂರು ವರ್ಷಗಳ ಹಿಂದೆ ಒಬ್ಬ ಅಮೆರಿಕನ್ ಸಂಶೋಧಕನು ಒಂದು ಇಲೆಕ್ಟ್ರಿಕ್ ಮೋಟರನ್ನು ಸೃಷ್ಟಿಮಾಡಿದನು. ಇದರ ಭಾರ ಒಂದು ಔನ್ಸು. ಇದರಲ್ಲಿ ೪೫ ಅಂಗಗಳೂ ಇದ್ದುವು. ಇದು ಒಂದು ಸಾವಿರನೇ ಎಂಟು ಅಂಶ ಶಕ್ತಿಯಿಂದ ಕೂಡಿದ್ದು ಒಂದು ಬೆರಳ ಉಗುರಲ್ಲಿ ನಿಲ್ಲುವಷ್ಟು ಸಣ್ಣದಿತ್ತು.

ಗ್ಲಾಸ್ಗೊದಲ್ಲಿ ಇನ್ನೊಬ್ಬ ಎಂ. ಹುಗಿನಿನ್ ಎಂಬ ವಿಜ್ಞಾನಿಯು ಅದಕ್ಕಿಂತ ಸಣ್ಣ ಮೋಟರು ಕಾರೊಂದನ್ನು ಮಾಡಿ ಪ್ರದರ್ಶಿಸಿದನು. ಇದರ ಭಾರ 0·16 ಗ್ರಾಮ್ಸ್. ಅರ್ಧ ಔನ್ಸಿನಷ್ಟು ಕಡಿಮೆ, ಸಣ್ಣ ಬೆಂಕಿಪೆಟ್ಟಿಗೆಯೊಳಗೆ ಹಿಡಿಯಬಹುದಾದಷ್ಟು ಕಿರಿದು. ಈಗ ಇನ್ನೊಂದು ಮೋಟರು ಕಾರು ತಯಾರಾಗಿದೆ. ಅದನ್ನು ಮಾಡಿದವರು ಮೇಲಿನವರೇ. ಇದರ ಭಾರ 0·06 ಗ್ರಾಮ್ಸ್. ಒಂದೌನ್ಸಿನ ಐದನೆಯ ಒಂದಂಶ. ಒಂದು ಮುತ್ತಿನ ಚಿಪ್ಪಿನೊಳಗೆ ಇದನ್ನು ಇರಿಸಲಾಗಿದೆ. ಸರಿಯಾಗಿ ಕೆಲಸ ಮಾಡುವ 42 ಅಂಗಗಳೂ ಇದರಲ್ಲಿವೆ.

ವಿಚಿತ್ರ ಪ್ರಪಂಚ

ಕತೆ ಹೇಳುತ್ತಾ ನಿದ್ರಿಸುವನು

ಒಬ್ಬನು ಕತೆ ಹೇಳುತ್ತಿದ್ದರೆ, ಕೇಳುವವರಿಗೆ ನಿದ್ದೆ ಬರುವುದು ಸಾಮಾನ್ಯವಾಗಿ ಇರುವಂಥಾದ್ದು. ಆದರೆ ಕತೆ ಹೇಳಿದವನೇ ನಿದ್ರಿಸುತ್ತಿರುವುದು ಇದೊಂದು ಹೊಸ ರೀತಿ. ಇಂತಹ ಸುದ್ದಿಯೊಂದು ಈಗ ಪ್ರಸಿದ್ಧವಾಗಿದೆ. ಇದರ ಕಾರಣವೆಂದರೆ ನಿದ್ರೆಬೀಳುವ ರೋಗದಿಂದ ಎಂಬುದಾಗಿ ತಿಳಿದಿದೆ. ನಲ್ವತ್ತು ವರ್ಷದ ಒಬ್ಬ ಸಿಪಾಯಿ ಅಕಸ್ಮಾತ್ತಾಗಿ ಒಂದು ದಿನ ಗಾಢ ನಿದ್ರೆಮಾಡಿದನು. ಮತ್ತೆ 18 ತಿಂಗಳ ವರೆಗೆ ಅವನಿಗೆ ನಿದ್ರೆ ಮಾಡುವುದೇ ಕೆಲಸವಿತ್ತಂತೆ. ಮತ್ತೆ ಆ ರೋಗ ಗುಣವಾಗುತ್ತಾ ಬಂತು. ಈಗ ಆಗಾಗ ನಿದ್ದೆಬೀಳುವುದು. ನಿದ್ದೆಮಾಡಿದರೆ ಹತ್ತು ಮಿನಿಟು ವರೆಗೆ ಇರುತ್ತದೆ. ಮತ್ತೆ ಎಚ್ಚರವಾಗುವುದು. ಆತನು ನಿದ್ರೆಯಿಂದ ಎಚ್ಚತ್ತ ಮೇಲೆ ಬಹಳ ಹುಷಾರಾಗಿ ವಿನೋದಪಟುವಾಗಿರುತ್ತಾನೆ. ಆತನ ಆರೋಗ್ಯ ಚನ್ನಾಗಿದೆಯಂತೆ.

ಎರಡು ತಲೆಯ ಹಲ್ಲಿ

ಇಂಗ್ಲಿಷ್ ದಕ್ಷಿಣ ಪ್ರಾಂತದಲ್ಲಿ ಅನೇಕ ವಿಚಿತ್ರಗಳಿವೆ. ಇತ್ತೀಚೆಗೆ ಒಂದೆಡೆಯಲ್ಲಿ, ಸಸೆಕ್ಸ್ ಊರಿನಲ್ಲಿ ಮೂರು ಇಂಚು ಉದ್ದದ ಎರಡು ತಲೆಯುಳ್ಳ ಹಲ್ಲಿಯೊಂದು ಕಾಣಸಿಕ್ಕಿದೆ. ಎರಡು ತಲೆಗಳೂ ಸರಿಯಾಗಿ ಬೆಳೆದಿರುತ್ತವೆಯೆಂದೂ ತಿಳಿದಿದೆ. ಈ ಎರಡು ತಲೆಗಳು ಹಲ್ಲಿ ಚಲಿಸುವಾಗ ಆಚೀಚೆಗೆ ಎಳೆಯುವಂತೆ ಇರುತ್ತವೆಯೆಂದು ಅದನ್ನು ಪರೀಕ್ಷಿಸಿದವರು ಹೇಳುತ್ತಾರೆ.

ಕೃತ್ರಿಮ ಭೂಕಂಪ

ಭೂಗರ್ಭ ಶಾಸ್ತ್ರಜ್ಞರು ಭೂಮಿಯ ವಿಷಯವಾಗಿ ಕಂಡುಹಿಡಿದ ಅನೇಕ ಶೋಧಗಳಿಂದ ಅನೇಕ ಸಂಗತಿಗಳನ್ನು ಪ್ರಕಾಶಪಡಿಸಿರುವರು. ಅವರ ಸಂಶೋಧನೆಯ ಫಲವಾಗಿ ಕೃತ್ರಿಮ ಭೂಕಂಪ ಮಾಡಲು ಆಗುತ್ತದೆಂದು ತಿಳಿದಿದೆ.

ಗುಪ್ತ ಕೇಳುವ ಯಂತ್ರ

ಒಬ್ಬ ಸಂಶೋಧಕನು ಬಹಳ ಗುಪ್ತವನ್ನು ಕೇಳುವ ಸಣ್ಣ ಧ್ವನಿಯ ಒಂದು ಮಯಕ್ರೊಫೋನ್ ಯಂತ್ರವನ್ನು ತಯಾರಿಸಿದ್ದಾನೆ. ಇದನ್ನು ಲಿಪ್ಸಿಗ್ ಪ್ರದರ್ಶನದಲ್ಲಿ ತೋರಿಸಲಾಯಿತು. ಗಟ್ಟಿಯಾಗಿ ಹೇಳುವುದರಿಂದ ಹತ್ತಿರ ಇರುವವರಿಗೆಲ್ಲಾ ವಿಷಯ ಗೊತ್ತಾಗಬಹುದು. ಅದನ್ನು ನಿವಾರಿಸುವ ಸಲುವಾಗಿ ಈ ಯಂತ್ರವು ಉಪಯೋಗಿಸಲ್ಪಟ್ಟಿರುವುದು. ಇದನ್ನು ತಲೆದಿಂಬಿನ ಅಡಿಯಲ್ಲಿಯೂ ಇಟ್ಟುಕೊಳ್ಳಬಹುದು. ಅಲ್ಲಿಂದಲೇ ಅದನ್ನು ಉಪಯೋಗಿಸುವವರು ಸ್ಪಷ್ಟವಾಗಿ ಸಪೂರವಾಗಿ ಕೇಳಬಹುದಾಗಿದೆ. ಇದರಿಂದ ಗುಟ್ಟು ರಟ್ಟಾಗುವ ಸಂದರ್ಭವಿಲ್ಲ. ಈ ಉಪಕರಣದಿಂದ ಮನೆಯಲ್ಲಿ ಹಾಗೂ ಆಸ್ಪತ್ರೆಗಳಲ್ಲಿ ರೋಗಿಗಳಿದ್ದರೆ ಅವರಿಗೆ ತೊಂದರೆಯಾಗದಂತೆ ಅವರೂ ಉಪಯೋಗಿಸಬಹುದಾದಂತೆ ಪ್ರಯೋಜನ ಹೊಂದಬಹುದಾಗಿದೆ. ಈಗಾಗಲೇ ಈ ಯಂತ್ರದ ಬಗ್ಗೆ ಅನೇಕ ಗಿರಾಕಿಗಳು ಒದಗಿರುವರೆಂದು ಪ್ರಕಟವಾಗಿದೆ.

ಮರದ ಮೇಲಿಂದ ಬಾಂಬು

ನಾಲ್ಕು ಮೈಲು ಮೇಲ್ಗಡೆಯಿಂದ ವಿಮಾನದಲ್ಲಿ ಹಾಕುವ ಬಾಂಬುಗಳನ್ನು ಒಂದು ಮರದ ಮೇಲಿಂದ ಹಾಕಿದಷ್ಟು ಸರಿಯಾಗಿ ಹಾಕುವಂತಹ ಒಂದು ಸಂಶೋಧನೆ ಆಗಿದೆ. ಒಂಭತ್ತು ವರ್ಷಗಳ ವರೆಗೆ ಸಾಧಿಸಿ ಒಬ್ಬ ಕೆನಡದ ವೈಮಾನಿಕನು ಇಂತಹ ಪ್ರಯೋಗವನ್ನು ಮಾಡಿರುತ್ತಾನೆ. ಸರಿಯಾಗಿ ಯಾವ ಸ್ಥಳಕ್ಕೆ ಬಾಂಬು ಬೀಳಬೇಕೋ ಅಲ್ಲಿಗೇ ನಾಲ್ಕು ಮೈಲು ಎತ್ತರದಿಂದ ಹಾಕಿದರೂ ಬೀಳುವಂತೆ ಇದರಿಂದ ಆಗಿರುತ್ತದೆ.

ಯಾವ ಆಲೋಚನಾಪರ ಮನುಷ್ಯನೂ

ತನಗೆ ಅತ್ಯಂತ ಪ್ರಿಯತಮವಾದ ತನ್ನ ಸಂಸಾರ, ತನ್ನ ಮನೆ, ತನ್ನ ಭಾವೀ ಸುರಕ್ಷತೆ ಇವುಗಳು ಇದಿನ ಮಹೋಪದ್ರವಕ್ಕೆ ಗುರಿಯಾಗಿವೆಯೆಂಬುದನ್ನು ತಿಳಿಯದಿರನು: ಅಲ್ಲದೆ, ಅವನು ಅಮೂಲ್ಯವಾದ ಪ್ರಾಣವನ್ನೂ ಸ್ವಾತಂತ್ರ್ಯವನ್ನೂ ಸಂರಕ್ಷಿಸಬಲ್ಲನು. ಅವನು ದೇಶರಕ್ಷಣೆಯ ಕ್ರಮವನ್ನು ಹೆಚ್ಚಿಸುವುದರ ಮೂಲಕ ಹಿಂದೂಸ್ಥಾನದ ಬಲವನ್ನು ವೃದ್ಧಿಪಡಿಸಲು ಸಹಾಯಮಾಡಬಲ್ಲನು--- ಆದರೆ-ಆಲಸ್ಯವಿಲ್ಲದೆ ಕಾರ್ಯೋನ್ಮುಖನಾಗಬೇಕು. ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟುಗಳನ್ನು ಕೊಳ್ಳಲು ಈಗಲೇ ಸುಸಮಯ.

ನೀವು ಕೊಡುವ ಪ್ರತಿಯೊಂದು ಆಣೆಯೂ ಹಿಂದೂಸ್ಥಾನದ ಸೈನಿಕ, ನೌಕ, ವೈಮಾನಿಕ ಬಲವನ್ನು ಹೆಚ್ಚಿಸಿ ಶತ್ರುಗಳ ದಾಳಿಯನ್ನು ಎದುರಿಸಲು ಹಿಂದೂಸ್ಥಾನವನ್ನು ಬಲಪಡಿಸುವುದು.

ಪೂರ್ತಿ ವಿವರಗಳು ಪೋಸ್ಟಾಫೀಸಿನಿಂದ

ಪ್ರತಿ ೧೦ ರೂಪಾಯಿನ ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟಿಗೂ ರೂ ೪/೮/- ಲಾಭ ಬರುವುದು

GI 74. Kn

THE VIJAYA BANK, LIMITED.

Head Office: MANGALORE.

BRANCHES:

KADRI-MANGALORE, HAMPANKATTA-MANGALORE, UDIPI, COONDAPUR, KARKAL, KAUP, & BRAHMAVAR.

SEASON DEPOSITS

are now accepted at all our Offices, at 4% per annum, for 4 or more months, maturing on 31st July, 1942.

ಪುಸ್ತಕಗಳು ಗೊಬೆಲ್ಸನಿಗೆ ಉತ್ತರವಾಗಿ

ಪ್ರತಿ ವರ್ಷವೆಂಬಂತೆ ಸಾಧಾರಣ ೫೦೦,೦೦೦ ಪವನು ವೆಚ್ಚದಷ್ಟು ಪುಸ್ತಕಗಳು ಬ್ರಿಟನಿನಲ್ಲಿ ಆಗುತ್ತವೆ. ಎಷ್ಟೆಂದರೂ ಈ ಪುಸ್ತಕಗಳಲ್ಲಿ ಮೂರನೆಯ-ಒಂದಂಶದಷ್ಟು ಪುಸ್ತಕಗಳು ಹೊರದೇಶಕ್ಕೆ ಕಳುಹಿಸಲ್ಪಡುವುವು. ಯುದ್ಧ ಸುರುವಾದ ಮೇಲೆ ಬ್ರಿಟನಿನಲ್ಲಿ ಆಗುವ ಪುಸ್ತಕಗಳಲ್ಲಿ ಹಲವು ಯುದ್ಧವಿಚಾರದವುಗಳು. ಅವುಗಳಲ್ಲಿಯೂ ಗೊಬೆಲ್ಸನಿಗೆ ಉತ್ತರ ರೂಪವಾಗಿರುವುವು. ಜರ್ಮನ್ ಪ್ರಚಾರ ಮಂತ್ರಿ ಗೊಬೆಲ್ಸನ ಹೇಳಿಕೆಯನ್ನು ಅಲ್ಲಗಳೆದು ಬ್ರಿಟಿಷರ ಸತ್ಯ ಸ್ಥಾಪಿಸುವಂತಹ ಪುಸ್ತಕಗಳು. ಇಂತಹ ಪುಸ್ತಕಗಳನ್ನು ಹೊರದೇಶಕ್ಕೆ ಕಳುಹಿಸುವ ಪ್ರಯತ್ನವಾಗಿ ಆ ಪುಸ್ತಕಗಳ ಪ್ರಕಾಶಕರಿಗೆ ಬೇಕಾದಷ್ಟು ಕಾಗದಗಳನ್ನು ಸರಕಾರದ ಸಪ್ಲೈ ಖಾತೆಯ ಮಂತ್ರಿಯು ಒದಗಿಸುತ್ತಾರೆ. ಹೊರದೇಶಕ್ಕೆ ಕಳುಹಿಸುವಂತಹವುಗಳಲ್ಲಿ ಅನೇಕ ಪತ್ರಪುಸ್ತಕಗಳು, ಚಿತ್ರ ಭೂಗೋಳ ಪುಸ್ತಕಗಳೂ ಸೇರುತ್ತವೆ.

BHUVANENDRA PRODUCTS LTD.,

Head Office and Factory:

KATAPADI S. Kanara.

Depots:

1. Maharatha Galli, Hubli.
2. 57 Big street, Triplicane, Madras.

" BHUVANENDRA '

Danthadvana Choorna

Economical in use. Cheapest in value Genuine in quality and choiced by all Antiseptic, astringent, aromatic. Useful in Pyorrhoea, Alveolaris. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ
ಹಲ್ಲುಗಳೇ ಮುಖ್ಯ ಕಾರಣ

"ಭುವನೇಂದ್ರ"

ದಂತಧಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ವ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಸ್ಥಳೀಯ ಸ್ಟೋಕಿಸ್ಟರು —

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್ ಲಿಮಿಟೆಡ್, ರಥಬೀದಿ
ರಾಘವೇಂದ್ರ ರಂಗ ಶೈ, ಮರ್ಚಂಟ್, ರಥಬೀದಿ
ಡಾ। ಎಮ್. ಎಸ್. ಪ್ರಭು, M. B. B. S. ...

THE PIE-MONEY BANK, LTD.

Maidan Road, MANGALORE.

Undertakes all kinds of Banking Business. Current accoun at 2½%per annum. Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction chit Funds ranging from Rs. 100/ to Rs. 5000 n regularly on systematic lines Unique Banking facilities to Businessmen and interested Public

Apply for particulars-

K R. GURU, *Managing Director*

The Bank of Mangalore Limited.

Branches —MOODABIDRI & PADUBIDRI

HEAD OFFICE MANGALORE ESTD 1931

All kinds of Banking Business transacted.

Fixed Deposits received at rates ranging from 3% to 5%

INTEREST PAYABLE QUARTERLY

Interest on Savings Bank Deposits allowed at at 2½%

ಕಡಿಮೆ ಖರ್ಚು — ಮಂಗಳೂರಿನಿಂದ- ಬೆಂಗಳೂರು, ತಿರುಪತಿ, ಮದರಾಸು. — ಅತೀ ತೀವ್ರ ಪ್ರಯಾಣ

ಬಸ್ಸ್ ಪ್ರಯಾಣವು

ಅತೀ ಸುಖಕರ!. ನಿರಾಯಾಸಕರ!! ಮನೋಲ್ಲಾಸಕರವಾಗಿದೆ!!!

ಊರುಗಳ ಬದಲಾವಣೆ! ನೋಟಗಳ ಬದಲಾವಣೆ! ಜನತೆಯ ಸಂಪರ್ಕ! ಆಯಾಸ ಅನುಕೂಲತೆ!

ಇವೆಲ್ಲವೂ ಬಸ್ಸ್ ಪ್ರಯಾಣದಲ್ಲಿವೆ.

ಪ್ರಯಾಣಿಕರ ಹೆಚ್ಚಿನ ಪ್ರೋತ್ಸಾಹದೊಡನೆ ಇನ್ನೂ ಹೆಚ್ಚಿನ ಸೌಕರ್ಯಗಳನ್ನು ಒದಗಿಸುವೆವು

Joint Managers,

The Combined Booking Agency, MANGALORE.

The Joint Booking Office, KODIALBAIL.

ಬಿಡಿ ಸಂಚಿಕೆ ಬೆಲೆ ಒಂದಾಣೆ   ವಾರ್ಷಿಕ ಚಂದಾ ರೂ. 2-0-0   ಅಂಚೆ ವೆಚ್ಚ ಸೇರಿ ರೂ. 2-13-0   Regd. No. M 3460

ಸ್ವದೇಶಾಭಿಮಾನಿ

[ಸಂಪುಟ 36]   ತಾರೀಕು 6-2-1942   [ಸಂಚಿಕೆ 6]

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಸೊಂಟನೋವು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

CONFIDENCE

IS A GREAT ASSET IN BUILDING BUSINESS.

The Bombay Life Assurance Co. Ltd.

Has created Public Confidence by its

Fair Dealings
Prompt Settlement of Claims
Liberal Terms
Long Experience &
Sound Investments.

To Insure or to represent, it pays you to consult us:

KOCHIKAR BROTHERS, LTD.,

Chief Agents for South India Including Indian States

UDIPI,—MANGALORE,—CALICUT—MADRAS,
TRIVANDRUM,—BANGALORE City,—and BOMBAY 4.

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ
ಉಪಯೋಗದಲ್ಲಿರುವ ವಸ್ತುವೆಂದರೆ
ನಂಜನಗೂಡು ಟೂತ್ ಪೌಡರ್
ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

★

ಸ್ವದೇಶಾಭಿಮಾನಿಗೆ
ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

ESTD. 1906

ಸ್ವದೇಶಾಭಿಮಾನಿ

SWADESHABHIMANI

ಚೀನದ ಕೈಶೇಕ್ ದಂಪತಿಗಳು

ಚೀನಾ ರಿಪಬ್ಲಿಕಿನ ಸೇನಾಪತಿ ಜಿಯಾಂಗ್ ಕೈಶೇಕ್ ಮತ್ತು ಅವರ ಪತ್ನಿ ಮೆ. ಡಂ ಚಿಯಾ — ಕೈಶೆ ಕತ್ತು ಪರಿವಾರ ಸಮೇತ ಹಿಂದೂಸ್ಥಾನಕ್ಕೆ ಬಂದಿರುವರು ಭಾರತ ಚೀನಾ ಸಂಬಂಧವಾಗಿ ಇಂಡಿಯಾ ಸರಕಾರದೊಡನೆ ಮಾತುಕತೆ ನಡೆಸುವರೆಂದು ತಿಳಿದಿದೆ ನೆಹರು ಗಾಂಧಿ ಮೊದಲಾದ ಕಾಂಗ್ರೆಸು ಮುಖಂಡರನು ಅವರು ಕಂಡು ಮಾತನಾಡುವರಾಗಿ ರಾಜಕೀಯ ಕ್ಷೇತ್ರದಲ್ಲಿ ವಿಶೇಷ ಕುತೂಹಲವುಂಟಾಗಿದೆ

KANNADA ILLUSTRATED WEEKLY

ವಸಂತಸೇನಾ

ಬಾಲಾಜಿ ಟಾಕೀಸಿನಲ್ಲಿ ಪತ್ರಿಕಾ ಪ್ರದರ್ಶನ

ಮದ್ರಾಸಿನ ಪ್ರಗತಿ ಪಿಕ್ಚರ್ಸ್ ಲಿಮಿಟೆಡಿನವರು, ಸಾಹಿತ್ಯ ಸಾಮ್ರಾಜ್ಯ ಸಂಗೀತ ನಾಟಕ ಮಂಡಳಿಯವರೂ ಕೂಡಿ ತಯಾರಿಸಿದ ಕನ್ನಡ ವಸಂತಸೇನಾ ಚಿತ್ರವು ತಾ. ೧೨ರಂದು ಮೊದಲ್ಗೊಂಡು ಸ್ಥಳೀಯ ಬಾಲಾಜಿ ಟಾಕೀಸಿನಲ್ಲಿ ಪ್ರದರ್ಶಿಸಲ್ಪಡುವುದು. ಅದರ ಸಲುವಾಗಿ ತಾ. ೧೧ರಂದು ಬೆಳಿಗ್ಗೆ ೧೦ ಗಂಟೆಗೆ ಮಂಗಳೂರ ಪತ್ರಿಕೋದ್ಯಮಿಗಳ ಸಲುವಾಗಿ ವಸಂತಸೇನಾ ಚಿತ್ರದ ಪ್ರದರ್ಶನವೊಂದನ್ನು ಬಾಲಾಜಿ ಟಾಕೀಸಿನವರು ಏರ್ಪಡಿಸಿದ್ದರು.

'ವಸಂತಸೇನಾ'ದ ಕಥೆಯು ಸಂಸ್ಕೃತ ಸಾಹಿತ್ಯದಲ್ಲಿ ಪ್ರಸಿದ್ಧವಾದ ಮೃಚ್ಛಕಟಿಕ ನಾಟಕದ ಕಥೆ. ಕವಿಶೂದ್ರಕನ ಆ ನಾಟಕವು ಅಖಿಲಭಾರತದ ಪ್ರಸಿದ್ಧ ನಾಟಕಗಳಲ್ಲೊಂದಾಗಿದ್ದು ಪಾಶ್ಚಿಮಾತ್ಯರಿಂದಲೂ ಮುಕ್ತಕಂಠದಿಂದ ಪ್ರಶಂಸಿಸಲ್ಪಟ್ಟಿದೆ. ಎರಡುಸಾವಿರ ವರ್ಷಗಳ ಹಿಂದಿನ ಭಾರತದ ಸಾಮಾಜಿಕ ಜೀವನದ ಚಿತ್ರವನ್ನು ನಾವು ಈ ಕಥೆಯಲ್ಲಿ ಕಂಡು ಆನಂದಿಸಬಹುದಾಗಿದೆ. ಕಥೆಯು ಸಾಮಾಜಿಕವಾದುದರಿಂದ ಹೆಚ್ಚಾಗಿ ಪ್ರೇಕ್ಷಕರನ್ನು ತಲ್ಲೀನವಾಗಿ ಮಾಡುತ್ತದೆ.

ಪ್ರಾರಂಭದಲ್ಲಿ 'ಚಿತ್ರಮಯವಾದ ವಸಂತಸೇನೆಯ ನರ್ತನದಿಂದ ಕಥೆ ಪ್ರಾರಂಭವಾಗುತ್ತದೆ. ಒಬ್ಬ ಬ್ರಾಹ್ಮಣನನ್ನು ವೇಶ್ಯಾಸ್ತ್ರೀಯ ಕನ್ನಿಕೆಯೊಬ್ಬಳು ಪ್ರೀತಿಸುತ್ತಾಳೆ; ಶುದ್ಧ ಹೃದಯದಿಂದ ಪ್ರೀತಿಸುತ್ತಾಳೆ; ಬ್ರಾಹ್ಮಣನಾದರೂ ಆಕೆಯ ನಿರ್ಮಲ ಪ್ರೇಮವನ್ನು ಮನಗಂಡು ಪ್ರತಿಯಾಗಿ ಪ್ರೇಮಿಸುತ್ತಾನೆ. ಧೂರ್ತ ಶಕಾರನು ಕಂಟಕನಾಗಿ ಬಂದರೂ ವಸಂತಸೇನೆಯ ಪ್ರೇಮಕ್ಕೆ ಭಂಗಬರುವುದಿಲ್ಲ. ದರಿದ್ರ ಚಾರುದತ್ತನನ್ನು ವೇಶ್ಯಾಕನ್ಯೆ ನಿರ್ಮಲಹೃದಯದಿಂದಲೇ ಪ್ರೀತಿಸುವಳು. ಇದೊಂದು ಸಾಮಾಜಿಕಕ್ರಾಂತಿಯನ್ನುಂಟುಮಾಡುವ ಕಥೆಯಾಗಿದೆ.

ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಳಿಯ ನಟಿ ಲಕ್ಷ್ಮೀ ಬಾಯಿ ಇದರಲ್ಲಿ ವಸಂತಸೇನೆಯ ಪಾತ್ರ ಅಭಿನಯಿಸಿರುವಳು. ಸುಬ್ಬಯ್ಯನಾಯಿಡು ಚಾರುದತ್ತನಾಗಿಯೂ, ನಾಗೇಂದ್ರರಾವ್ ಶಕಾರನಾಗಿಯೂ ಉತ್ತಮ ರೀತಿಯಿಂದ ಅಭಿನಯಿಸಿರುವರು. ಗಮಕಿ ರಾಮಕೃಷ್ಣಶಾಸ್ತ್ರಿಗಳು ಸಂಗೀತಗಾರರು. ಇನ್ನುಳಿದ ಹದಿನೇಳು ಪಾತ್ರವರ್ಗಗಳಿವೆ. ಫೋಟೋಗ್ರಾಫಿ, ಅಭಿನಯ, ಸಂಗೀತಗಳೂ ಚೆನ್ನಾಗಿವೆ. ಇದರ ನಿರ್ದೇಶಕರು, ಎರಡು ಸಾವಿರ ವರ್ಷಗಳ ಹಿಂದಿನ ಕಥೆಯನ್ನು ಚಿತ್ರಿಸುವಲ್ಲಿ ಆಧುನಿಕ ಕಾಲದ ಉಡಿಗೆತೊಡಿಗೆಗಳನ್ನು ಮಾಡದೆ, ಅಂದಿನ ಕಾಲಕ್ಕೆ ಅನುರೂಪವಾದ ಉಡುಗೆತೊಡಿಗೆ ಆವರಣಾದಿಗಳಿಂದ ಚಿತ್ರದಲ್ಲಿ ಸಹಜತೆಯನ್ನು ತುಂಬಿಸಿದ್ದು ಪ್ರಶಂಸನೀಯವಾಗಿದೆ.— ಮಂಗಳೂರ ಮಹಾಜನರನ್ನು ಈ ಕನ್ನಡ ಸಾಮಾಜಿಕ ಚಲಚ್ಚಿತ್ರವು ವಿಶೇಷವಾಗಿ ಆಕರ್ಷಿಸುವುದೆಂದು ನಾವು ಹಾರೈಸುತ್ತೇವೆ.

ತಲೆ ನೋಯುತ್ತದೆ. ರುಚಿಯಿಲ್ಲ. ನಾಲಗೆ ಒಣಗಿದೆ. ಹೊಟೆ ಸರಿಯಿಲ್ಲ.

ಮಲಬದ್ಧತೆ, ತಲೆನೋವು, ಹೆಚ್ಚಾಗಿ ಆರೋಗ್ಯ ಕೆಡುವ ಪರಿಸ್ಥಿತಿ, ಶಕ್ತಿ ಕ್ಷೀಣವಾಗುವುದು ಇವುಗಳೆಲ್ಲಾ ನಿಮ್ಮ ಶರೀರದಲ್ಲಿ ಕಶ್ಮಲಗಳಿವೆಯೆಂಬದನ್ನು ತೋರಿಸುತ್ತವೆ. ದಿನನಿತ್ಯವೂ ಒಂದು ಗ್ಲಾಸು ತಂಪುಕೊಡುವ ಎಂಡ್ರೂಸ್ ಲಿವರ್ ಸಾಲ್ಟನ್ನು ತೆಗೆದುಕೊಂಡು, ಶರೀರದೊಳಗಿನ ಈ ವಿಷವಸ್ತುಗಳನ್ನು ಹೊರಹಾಕಿರಿ. ಕೂಡಲೆ ನೀವು ಹೊಸ ಮನುಷ್ಯರೇ ಆಗುವಿರಿ. ಬುದ್ಧಿ ತೀವ್ರವಾಗುವುದು, ಶರೀರ ಶಕ್ತಿಗೊಳ್ಳುವುದು. ಶ್ವಾಸಕೋಶವನ್ನು ಎಂಡ್ರೂಸ್ ಲಿವರ್ ಸಾಲ್ಟ್ ನಿರ್ಮಲಗೊಳಿಸುವುದು. ಶರೀರದೊಳಭಾಗವು ಶುಚಿಗೊಳ್ಳುವುದು. ಇದರಿಂದ ಖಂಡಿತವಾಗಿಯೂ ಉತ್ತಮ ಆರೋಗ್ಯವುಂಟಾಗುವುದು.

ಶರೀರದೊಳಭಾಗದ ನೈರ್ಮಲ್ಯಕ್ಕೆ ದಿನನಿತ್ಯ ಎಂಡ್ರೂಸ್ ಲಿವರ್ ಸಾಲ್ಟನ್ನು ಉಪಯೋಗಿಸಿರಿ.

ANDREWS
LIVER SALT



ಆರೋಗ್ಯಕರ ಪಾನೀಯ ಮತ್ತು ಪುಷ್ಟಿಕರವಾದುದು.
ಚುಟಿ, ತಂಪು, ಸುಖ, ಶಕ್ತಿದಾಯಕ [illegible]
ಸಣ್ಣ ಸೈಜಿಗೆ ಆ. ೧೩, ದೊಡ್ಡ ಸೈಜಿಗೆ [illegible]

ಪೆಪ್ಸನ್ನು ದಿನನಿತ್ಯವೂ ತೆಕ್ಕೊಳ್ಳುವುದರಿಂದ ಹೃದ್ರೋಗವು ಗುಣ ಹೊಂದುವುದು.

ನೀವು ಹೃದ್ರೋಗ, ಶ್ವಾಸಕೋಶದ ದೌರ್ಬಲ್ಯ ಶೀತಗಳಿಂದ ನರಳುತ್ತೀರಾದರೆ ದಿನನಿತ್ಯವೂ ಪೆಪ್ಸನ್ನು ತೆಕ್ಕೊಳ್ಳಿರಿ. ಈ ಅದ್ಭುತ ಮಾತ್ರೆಗಳು, ಪ್ರಸಿದ್ಧ ಪೈನ್ ಅರಣ್ಯವಾಯುವಿನ ಆಶ್ಚರ್ಯಕರ ಗುಣವನ್ನುಂಟು ಮಾಡುವವು.

ಪೆಪ್ಸ ಬಾಯಿಗೆ ಹಾಕಿದ ಕೂಡಲೇ ಕರಗಿ, ಉತ್ತಮ ಔಷಧಿ ಸತ್ವವನ್ನು ಹೊರಗೆಡುವುದು. ಆಶ್ವಾಸ ಯೋಗ್ಯವಾಯುವು ಹೃದಯಕೋಶವನ್ನು ಸೇರುತ್ತದೆ. ಕಂಠನಾಳಗಳನ್ನು ಶುದ್ಧಗೊಳಿಸುತ್ತದೆ. ಕೆಲವು ಪೆಪ್ಸ ಮಾತ್ರೆಗಳನ್ನಿಟ್ಟುಕೊಳ್ಳಿರಿ. ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ಪೆಪ್ಸ ಒಂದು ರೂಪಾಯಿ ಬೆಲೆಗೆ ಸಿಗುತ್ತದೆ.

ಏಜೆಂಟರು:—
ಮೆಸರ್ಸ್ ದಾಧಾ ಮತ್ತು ಕಂಪೆನಿ, ಪಿ. ಟಿ. ಮದರಾಸು.

ಪೆಪ್ಸನ್ನು ಕೊಂಡುಕೊಳ್ಳಿರಿ

PEPS

ವಿಷಹಾರಿ ಶ್ವಾಸನೀಯ ಗುಳಿಗೆಗಳು

ಸೌಂದರ್ಯ ಮತ್ತು ಮುಖಕಾಂತಿಗೆ

ಹಿಮಾನಿ ಸ್ನೋ

ಹಿಂದೂದೇಶದಲ್ಲಿ ಪ್ರಥಮವಾಗಿ
— ತಯಾರಿಸಿದ ಸ್ನೋ —

ಅಂದಿನಿಂದಲೂ ಶ್ರೇಷ್ಠವಾಗಿಯೇ ಇದೆ.— ಮುಖದ ಮೇಲಿನ ಯಾವತ್ತೂ ಕಲೆ, ಮಚ್ಚೆ ಛಿದ್ರ ಮುಂತಾದುವನ್ನು ಗುಣಪಡಿಸುವುದು.

ಹಿಮಾನಿ ಗ್ಲಿಸರಿನ್ ಸಾಬೂನುಗಳು

ಪಾರದರ್ಶಕ—ಶುದ್ಧ
ಕೋಮಲವಾದ ಪರಿಮಳ

ದಕ್ಷಿಣ ಕನ್ನಡದ ಡಿಸ್ಟ್ರಿಬ್ಯೂಟರರು:—
ಕೊರನೇಶನ್ ಟ್ರೇಡಿಂಗ್ ಕೊ.
ಮಹಮ್ಮದಾಲಿ ರೋಡ್, ಮಂಗಳೂರು.

"ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

13–2–1942] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೧೩–೨–೧೯೪೨]

ಸಮರಭೂಮಿಯ ಸಂಚಾರ

ಮಲಯದ ಮಾತು ಮುಗಿಯಿತು, ಕಳೆದ ... ರ ಮಲಯ ಜಪಾನರ ವಶವಾಯಿತು. ...ಳಿದ್ದ ಬ್ರಿಟಿಷ್ ಸೈನ್ಯಗಳು ಜೋಹೋರ ಮಾ...ವಾಗಿ ಸಿಂಗಾಪುರ ದ್ವೀಪಕ್ಕೆ ಹೋಗಿ ಸಾ...ಮುದ್ರಧುನಿಯ ಸೇತುವೆಯನ್ನು ಭಗ್ನಗೊಳಿಸಿ...ವು ಆಷ್ಟರಲ್ಲಿ ಜಪಾನರೂ ಜೋಹೋರಕ್ಕೆ ...ದರು ಬ್ರಿಟಿಷರು ಸಿಂಗಾಪುರದೊಳಹೋಗು...ದರೊಳಗೆ ಅವರನ್ನು ಹಿಡಿಯಬೇಕೆಂದು ಜಪಾ...ನ ಸಾಹಸಮಾಡಿದ್ದರೂ ಅದು ಪೂರೈಸಲಿಲ್ಲ. ...ರು ಮೂರು ದಿನಗಳ ವರೆಗೆ ಜೋಹೋರ ...ತೀರದಲ್ಲಿ ತಮ್ಮ ಫಿರಂಗಿಗಳನ್ನಿಟ್ಟು ಕಾದು ...ತಿದ್ದರು ಈಗ ಕಳೆದ ಬುಧವಾರದಿಂದ ಸಿಂ...ಪುರದ ಮೇಲೆ ಜಪಾನರು ಭೀಕರ ಮುತ್ತಿಗೆ ...ಹಾಕಿದ್ದಾರೆ. ಜಪಾನರ ಮುತ್ತಿಗೆಯು ಯಾವ ರೀತಿ ನಡೆಯುತ್ತದೆ, ಬ್ರಿಟಿಷರು ಹೇಗೆ ಹೇಗೆ ...ದುರಿಸುತ್ತಾರೆಂಬ ವಿವರ ತಿಳಿದಿಲ್ಲವಾದರೂ ...ವ ೩೦೦೦ ಮೈಲು ದೂರದ ವ್ಯಾಪಾರ ...ಮಾರ್ಗದ ಮುಖ್ಯ ಕೇಂದ್ರ ಸ್ಥಳವಾಗಿದ್ದು, ...ಬ್ರಿಟಿಷ್ ಸಾಮ್ರಾಜ್ಯದ ಬೆನ್ನೆಲುಬಿನಂತಿರುವ ...ಸಿಂಗಾಪುರವನ್ನು ಬ್ರಿಟಿಷರು ಕಡೆತನಕ ಬಿಡಲಾರ...ರೆಂದು ಹೇಳಲಾಗುತ್ತದೆ

ಸಿಂಗಾಪುರದ ಸಂರಕ್ಷಣೆಯು ಇತ್ತೀಚೆಗೆ ...ಬ್ಬಾಗತೊಡಗಿತ್ತು ಆದರೆ ಸಾರವಾಕ ...ದ ಸುಮಾತ್ರಾ ದ್ವೀಪದ ವರೆಗೆ ಇರುವ ಕೇಂದ್ರ ...ಳೆಲ್ಲವೂ ಜಪಾನರ ವಶವಾಗಿರುವುದರಿಂದ, ...ಲ್ಲಿಂದಲೂ ಸಿಂಗಾಪುರವನ್ನು ಜಪಾನರು ಮುತ್ತ...ಬಹುದು, ಸಿಂಗಾಪುರದ ಮೇಲೆ ನಿರಂತರ ವಿಮಾ...ನ ನಡೆಸಿ ಜನರು ಕಂಗಾಲಾಗುವಂತೆಯೂ ಮಾಡ...ಬಹುದು, ಅಂಬಾಯ್ನಾ ದ್ವೀಪಗಳನ್ನು ಸೆರೆಹಿಡಿದ ...ಪೂರ್ವ ಮತ್ತು ಪಶ್ಚಿಮ ಕರಾವಳಿಗಳನ್ನು ಆಕ್ರ...ಮಿಸಿಕೊಂಡು ಸಿಂಗಾಪುರ ಆಸ್ಟ್ರೇಲಿಯ ಸಂಬಂಧ...ವನ್ನು ತಪ್ಪಿಸಲೂಬಹುದು ಇಷ್ಟರಲ್ಲಿಯೇ ಸಿಂ...ಗಾಪುರಕ್ಕೆ ಜಪಾನರ ಆಕ್ರಮಣ ಬಲವಂತವಾಗಿದೆ...ಯೆಂದು ಸುದ್ದಿ ಬಂದಿದೆ, ಸಿಂಗಾಪುರವು ಜಪಾ...ನರ ವಶವಾದರೆ ಬ್ರಿಟಿಷರ ಅವಸ್ಥೆ ಕಠಿಣವಾಗ...ಬಹುದು ಪೆಸಿಫಿಕ್ಕಿನ ಯುದ್ಧವನ್ನು ಗೆಲ್ಲಬೇ...ಕಾದರೆ ನೌಕಾಬಲ ಅವಶ್ಯ ನೌಕಾಬಲವನ್ನು ...ಡಿಸಿಕೊಳ್ಳಲು ನೌಕಾಕೇಂದ್ರಗಳು ಕೈವಶವಿರಬೇ...ಕಾಗಿದೆ ಈಗಾಗಲೇ ಪೆಸಿಫಿಕ್ಕಿನ ಹಲವು ನೌಕಾ...ಕೇಂದ್ರಗಳು ಕೈಬಿಟ್ಟಿದ್ದು ಸಿಂಗಾಪುರವೂ ಬ್ರಿಟಿ...ಷರ ವಶದಿಂದ ತಪ್ಪಿದರೆ ಪರಿಸ್ಥಿತಿ ವಿಷಮವಾ...ಗುವುದು. ಸದ್ಯದ ಪರಿಸ್ಥಿತಿಯಲ್ಲಿ ನಾಲ್ಕು ದಿಕ್ಕುಗ...ಳಿಂದಲೂ ಜಪಾನರು ಸಿಂಗಾಪುರವನ್ನು ಆಕ್ರಮಿ...ಸಲು ಅನುಕೂಲವಾಗಿದೆ

ಸಿಂಗಾಪುರ ದ್ವೀಪದಲ್ಲಿ ಜಪಾನರ ಸೈನ್ಯವು ... ೩ ಕಡೆಯಿಂದ ಬಂದಿಳಿಯಿತು ಎಂಬ ವಿಷಾದಕರ ...ವಾರ್ತೆ ಬಂದಿದೆ, ಸಿಂಗಾಪುರ ದ್ವೀಪದ ಪಶ್ಚಿಮ ...ಕರಾವಳಿಯಲ್ಲಿ ಇವು ಬಂದಿಳಿದವು ಈ ಸೈನ್ಯವು ...ಬಂದಿಳಿವ ಮೊದಲು ಜಪಾನರು ಬಂದೇ ಬಗೆ...ಯಿಂದ ಗುಂಡಿನ ಮಳೆ ಸುರಿಸುತ್ತಾ ಇದ್ದರು. ...ಬ್ರಿಟಿಷ್ ಸೈನ್ಯದ ಮೇಲೂ ಮಾರ್ಗ ಸೌಕರ್ಯ...ವಿರುವಲ್ಲಿಯೂ ಹೆಚ್ಚು ಹೆಚ್ಚಾಗಿ ಗುಂಡುಗಳನ್ನು ...ಸುರಿಸಿದರು. ಹೀಗೆ ಎರಡು ತಾಸು ಗುಂಡು ...ಸುರಿಸಿದ ಬಳಿಕ ಆ ದಿನ ಎಲ್ಲವೂ ಶಾಂತವಾಯಿ...ತಾದರೂ ಮರುದಿನ ತಿರುಗಿ ಗುಂಡು ಬೀಳ...ತೊಡಗಿತು. ಜಪಾನೀ ಹಡಗುಗಳು ಸೈನಿಕರನ್ನು ...ತುಂಬಿಸಿ ಬಂದು, ಸಿಂಗಾಪುರದಲ್ಲಿ ತಮ್ಮ ಸೈನಿಕ...

ರನ್ನೂ ತಂದಿಳಿಸಿದವು. ಜಪಾನರು ಇಳಿದ ಮೊದಲು ಮಾಡಿದ ಯುದ್ಧವು ಅತ್ಯಂತ ಉಗ್ರವಾಗಿತ್ತೆಂದು ಆಸ್ಟ್ರೇಲಿಯ ಸುದ್ದಿಗಾರನೊಬ್ಬನು ವಿವರಿಸುತ್ತಾನೆ. ಜಪಾನರ ಟೇಂಕ್ ದಳಗಳೂ ಜೋಹೋರ ಸಮುದ್ರ ಧುನಿಯನ್ನು ದಾಟಿವೆಯೆಂದು ತಿಳಿದಿದೆ ಕೆಲವು ಕಡೆಗಳಲ್ಲಿ ಬ್ರಿಟಿಷ್ ಸೈನ್ಯಗಳು ಹಿಂದೂಡಲ್ಪಟ್ಟಿವೆಯೆಂದು ಸುದ್ದಿ. ಜಪಾನರಿಂದ ದ್ವೀಪವನ್ನು ಸಂರಕ್ಷಿಸಿಕೊಳ್ಳಲು ಈಗ ಹೊರಗಿನಿಂದ ಸಹಾಯಬರುತ್ತಿದೆಯೆಂದು ಮಲಯದ ಸೇನಾಪತಿ ಪರ್ಸೀವಲರು ತಿಳಿಸುತ್ತಾರೆ

ಜಪಾನರು ತಾ. ೯ರಂದು ರಾತ್ರಿ 11 ಗಂಟೆಯ ಹೊತ್ತಿಗೆ ಸಿಂಗಾಪುರ ದ್ವೀಪದಲ್ಲಿಳಿದರೆಂದೂ ಬೆಳಗು ಮುಂಜಾನೆ 1 ಗಂಟೆಗೆ ಮತ್ತೊಮ್ಮೆ ಇಳಿದರೆಂದೂ ತಿಳಿದಿದೆ ಮೊದಲು ಇಳಿದ ಜಪಾನ ಸೈನಿಕರ ಮೇಲೆ ಬ್ರಿಟಿಷ್ ಮುಂಪಳಿಯವರು ಬಹಳ ಜೋರಿನಿಂದ ಗುಂಡಿನ ಮಳೆ ಸುರಿ...

...ಸಲು ಜಪಾನರು ಪ್ರಯತ್ನಮಾಡುತ್ತಿರುವರು. ಈಗ ಜಪಾನರಿಗೆ ಸಾಲವೀನ್ ನದಿಯು ಅಡ್ಡಿಯಿದ್ದರೂ ಅದು ಬಹುಕಾಲವಿರಲಾರದು. ಆ ನದಿ ದಾಟಿದರೆ ಜಪಾನರು ರಂಗೂನನ್ನು ನುಗ್ಗಿ ಬರುವರ. ಚೀನಕ್ಕೆ ಹೋಗುತ್ತಿರುವ ಯುದ್ಧ ಸಾಮಗ್ರಿಗಳು ಹೆಚ್ಚಾಗಿ ರಂಗೂನ್ ದಾರಿಯಿಂದಲೇ ಹೋಗುತ್ತಿರುವುದರಿಂದ, ಅದನ್ನು ತಡೆಗಟ್ಟುವುದಕ್ಕಾಗಿ ಜಪಾನರು ರಂಗೂನಿಗೆ ಮುನ್ನುಗ್ಗುತ್ತಿದ್ದಾರೆ – ನೆಲದಲ್ಲೂ ಆಕಾಶದಲ್ಲೂ ರಂಗೂನಿಗೆ ಜಪಾನರು ಪ್ರಚಂಡ ಮುತ್ತಿಗೆ ಹಾಕಬಹುದಾಗಿದೆ ಜಪಾನರು ಹಲವು ಸಲ ರಂಗೂನಿಗೆ ಭೀಕರವಾಗಿ ಬಾಂಬೆಸೆದರೆಂದು ಈಗ ಸುದ್ದಿ ಬರುತಿದೆ.

ಇದು ವರೆಗಿನ ಜಪಾನೀಯರ ಸಾಹಸಕ್ಕೆ ಪ್ರತಿರೋಧವಿಲ್ಲದಷ್ಟು ಅವರು ಮುಂದೊತ್ತಿದ್ದು ಕಂಡುಬರುತ್ತದೆ ಮಲಯ ಫಿಲಿಪೈನ್ಸ್, ಡಚ



ಬ್ರಿಟನಿನ ಭಾರತ ಸೈನ್ಯ

ಈ ಬ್ರಿಟಿಷ್ ಸೈನ್ಯದಲ್ಲಿ ಪ್ರಖ್ಯಾತ ಸೈನಿಕರಾದ ಸಿಕ್ಖ ಸಿಪಾಯಿಗಳು, ಪೂರ್ವ ಆಫ್ರಿಕ ಎರಿಟ್ರಿಯಾದಲ್ಲಿ ಭೀಕರ ಹೋರಾಟ ಹೂಡಿ, ಮತ್ತು ಪಶ್ಚಿಮ ಮರುಭೂಮಿಯ ಲಿಬಿಯದಲ್ಲಿಯೂ ಕಾಳಗ ಹೂಡಿದರು

...ಸಿದರು ಆದರೆ ಕಡೆಗೆ ಜಪಾನರು ಬ್ರಿಟಿಷರನ್ನು ಹಿಂದಟ್ಟುತ್ತಾ ಹೋದರೆಂದು ವಾರ್ತೆ ಎಷ್ಟು ಮಂದಿ ಜಪಾನರು ಬಂದಿಳಿದರೆಂದು ಇದುವರೆಗೆ ತಿಳಿದುಬಂದಿಲ್ಲ ಜಪಾನಿನ ಟೇಂಕ್ ಸೈನಿಕರೂ ಸಿಂಗಾಪುರದಲ್ಲಿ ಬಂದಿಳಿದರೆಂಬ ವಿಷಯ ಅಧಿಕೃತ ಸುದ್ದಿ ಬಂದಿರುವುದಿಲ್ಲ

ಇದರಂತೆ ಬರ್ಮಾ ದೇಶದ ಪರಿಸ್ಥಿತಿಯೂ ಕಠಿಣವಿರುವುದು ಜಪಾನರು ಇಲ್ಲಿಯೂ ತೀವ್ರವಾಗಿ ಮುಂದಡಿಯಿಡುತ್ತಿರುವರು. ಉತ್ತರ ಬರ್ಮಾವನ್ನು ನುಗ್ಗಲು ಜಪಾನರು ಸಿದ್ಧತೆನಡೆದಂತಿದೆ. ಮೌಲ್ಮಿನಿನ ಪತನದಿಂದ ಸಾಲವೀನ ನದಿಯ ಕೆಳಭಾಗದಲ್ಲಿರುವ ಬರ್ಮಾದೇಶವೆಲ್ಲ ಜಪಾನರ ಕೈವಶವಾದಂತಾಯಿತು. ರಂಗೂನಿಗೆ ಗಂಡಾಂತ್ರರಸವಿಲ್ಲಿ ಸಾಲವೀನ ನದಿಯ ಆಚೆಯ ದಡದಲ್ಲಿರುವ ಮರ್ತಾಬಾನಿನಿಂದ ರಂಗೂನಿಗಿರುವ ರೈಲ್ವೆಮಾರ್ಗವನ್ನು ವಶಪಡಿ...

...ಇಂಡೀಸ್‌ಗಳಲ್ಲಿ ಅವರು ಮುಂದೊತ್ತಿದರು. ಜಪಾನೀ ಸೈನಿಕರು ತಮಗಿಷ್ಟ ಬಂದಲ್ಲಿ ಬಂದಿಳಿದರು ಅವರಿಳಿಯುವಾಗ, ಅವರನ್ನು ಹಿಂದಟ್ಟುವಷ್ಟು ಸಶಕ್ತ ಪ್ರತಿಭಟನೆ ಕಂಡುಬರಲಿಲ್ಲ. ಈಗ ಸಿಂಗಾಪುರದಲ್ಲಿಯೂ ಕಾಲಿಟ್ಟಿದ್ದಾರೆ. ಅಲ್ಲಿನ ಅವಸ್ಥೆಯೇನೆಂದು ನೋಡಬೇಕಾಗಿದೆ ಮಲಯ, ಡಚ್ ಇಂಡೀಸ್, ಫಿಲಿಪೈನುಗಳಿಗಿಂತಲೂ ಸಿಂಗಾಪುರದ ರಕ್ಷಣೆ ಹತ್ತುಪಾಲಿಗೂ ಹೆಚ್ಚಿನದು. ಮಿತ್ರರಾಷ್ಟ್ರದವರು ಪೆಸಿಫಿಕ್ಕಿನಲ್ಲಿ ಎಲ್ಲಿಯೋ ಒಂದು ಕಡೆ ವಿಶಿಷ್ಟ ನೌಕಾ ಬಲವನ್ನು ಒಟ್ಟುಗೂಡಿಸಿಕೊಂಡಿರುವರೆಂಬ ಸುದ್ದಿಯಿದೆ. ಆ ಬಲವು ಯಾವ ಕಡೆಯಲ್ಲಿದೆಯೆಂಬ ಗೊತ್ತುಗುರಿ ತಿಳಿದಿಲ್ಲವಾದರೂ ಅವುಗಳ ಮುಂದಿನ ಕಾರ್ಯಾಚರಣೆಯಿಂದ ನಾವು ಆ ವಿಷಯವನ್ನು ಇತ್ಯರ್ಥಿಸಿಕೊಳ್ಳಬೇಕಾಗಿದೆ. ಸಿಂಗಾಪುರದ ರಕ್ಷಣೆಗೆ ಆ ನೌಕಾಬಲವು ಬಂದೊದಗಬಹುದೆಂದು ನಂಬಲಾಗಿದೆ ಅಂತೆಯೇ ಎಲ್ಲಿಯೋ ಗುಪ್ತವಾದೊಂದು ಕಡೆಯಲ್ಲಿ ಜಪಾನರ ಪ್ರಬಲ ನೌಕಾಬಲವೂ ಅಡಗಿರುವುದೆಂಬ ಸುದ್ದಿಯಿದೆ ಅಮೆರಿಕವು ಪ್ರಬಲವಾದ ನೌಕಾಬಲವನ್ನು ಪೆಸಿಫಿಕ್ಕಿನಲ್ಲಿರಿಸಿದೆಯೆಂದು ಕೆಲವು ದಿನಗಳ ಹಿಂದೆ ಆಶಾದಾಯಕ ವಾರ್ತೆ ಬಂದಿತ್ತು ಈ ವಿಷಯಗಳೆಲ್ಲವೂ ಮುಂದಿನ ಸಮರ...ದ ಸ್ವರೂಪ...ಗಿವೆ

ರಶ್ಯದ ರಣರಂಗದಲ್ಲಿ ಜರ್ಮನರು ಈಗಲೂ ಪರಾಜಯ ಹೊಂದುತ್ತಿರುವರಾಗಿ ತಿಳಿದಿದೆ ಹೊಸದಾಗಿ ಸಹಾಯ ಬಂದದ್ದರಿಂದ, ರಶ್ಯನರು ಬಲಿಷ್ಠರಾಗಿ ಕಾದಾಡುತ್ತಿರುವರು ಲೆನಿನ್‌ಗ್ರಾಡ್ ಮೋಸ್ಕೋಗಳ ನಾಯವ್ಯದಲ್ಲಿ ರೆಜೆವ್ ಭಾಗದಲ್ಲಿ ಜರ್ಮನರ ಮೇಲೆ ಜೋರಿನ ಧಾಳಿ ನಡೆಯುತ್ತಿದೆ ಜರ್ಮನರ ಕೆಲವು ದುರ್ಗ...ಗಳನ್ನು ರಶ್ಯನರು ವಶಪಡಿಸಿಕೊಂಡಿರುವರು ರಶ್ಯನ್ ಯೋಧರು ... ಗ್ರಾಮಗಳಲ್ಲಿ ಚಟುವಟಿಕೆ ನಡೆಸಿ ಮೂರು ತಿಂಗಳ ಬಳಿಕ ಈ... ತಿರುಗಿ ಬಂದಿರುವರೆಂದು ಸುದ್ದಿ. ಈ ಅವಧಿಯಲ್ಲಿ ಅವರು ಅನೇಕ ಜರ್ಮನರನ್ನು ಹತಿಸಿ... ರಂತೆ ... , ಸೇತುವೆಗಳೂ ಹಾ... ಮಾಡಿ ಶತ್ರುಗಳನ್ನು ಕಂಗಾಲುಮಾಡಿದರಂತೆ ರಶ್ಯದ ಎಲ್ಲಾ ರಣಾಂಗಣದಲ್ಲಿಯೂ ಜರ್ಮನರು ಹೀಗೆ ಹಿನ್ನಡೆಯುತ್ತಿರುವರು ಮಹತ್ವದ ಆಯಕಟ್ಟಿನ ಸ್ಥಳಗಳಲ್ಲಿ ಜರ್ಮನರು ಜೋರಿನಿಂದ ಪ್ರತಿಧಾಳಿ ನಡೆಸಿದರೂ ರಶ್ಯನರ ಮುನ್ನೊತ್ತುವಿಕೆಯು ಹಿಂದಿನಂತೆಯೇ ನಡೆಯುತ್ತಲಿದೆ

ಭಾರತದ ಕುರಿತು ಬ್ರಿಟಿಷ್ ಸರಕಾರವು ತಳೆದ ಧೋರಣದ ವಿಷಯ ಲಾರ್ಡ್ಸ್ ಸಭೆಯಲ್ಲಿ ... ವಾದ ಟೀಕೆ ಮಾಡಲ್ಪಟ್ಟಿತು. ಹಿಂದುಸ್ತಾನವನ್ನು ಸ್ವತಂತ್ರವಾಗಿ ಮಾಡಿ ಅಲ್ಲಿನ ಸಹಕಾರವನ್ನು ಬ್ರಿಟಿಷ್ ಸರಕಾರವು ಪಡೆದುಕೊಳ್ಳಬೇಕೆಂದು ಅನೇಕ ಮಂದಿ ಸದಸ್ಯರು ಸೂಚಿಸಿದರು. ರಶ್ಯದಲ್ಲಿ ಬ್ರಿಟಿಷ್ ರಾಯಭಾರಿಗಳಾಗಿದ್ದ ಸರ್ ಸ್ಟಾಫೋರ್ಡ್ ಕ್ರಿಪ್ಸರು ಒಂದು ಭಾಷಣ ಮಾಡುತ್ತಾ ಭಾರತಕ್ಕೆ ಯುದ್ಧ ಮುಗಿದ ಕೂಡಲೇ ಸ್ವಾತಂತ್ರ್ಯಕೊಡುವ ಭರವಸೆಕೊಡಬೇಕೆಂದು ಹೇಳಿ... ವಿಷಯ ಭಾರತದಲ್ಲಿ ಹೆಚ್ಚಿನ ಉಲ್ಲಾಸವುಂಟಾಗಿದೆ ಬ್ರಿಟಿಷ್ ಸಾಮ್ರಾಜ್ಯದಲ್ಲಿ ಇರುವ ದೇಶಗಳು, ಜಿಸುವುದಕ್ಕಾಗಿ ಸಂಯುಕ್ತ ರಾಷ್ಟ್ರಗಳ ಸ್ವಾತಂತ್ರ್ಯವುಂಟೆಂದು ಆವಲವಾದಿಸಿದರು. ಹಿಂದುಸ್ತಾನಕ್ಕೆ ಸ್ವಾತಂತ್ರ್ಯದ ಭರವಸೆಕೊಡುವುದರಿಂದ ಬ್ರಿಟನಿಗೆ ಹೆಚ್ಚಿನ ಸಹಕಾರ ದೊರೆಯುವುದೆಂದು ಅವರು ಸೂಚಿಸಿರುವರು ಚೀನದ ದಳಪತಿ ಚಿಯಾಂಗ್ ಕೈಶೇಕರು ಪತ್ನೀ ಪರಿವಾರ ಸಮೇತ ಭಾರತಕ್ಕೆ ಬಂದಿದ್ದು ಹೊಸದಿಲ್ಲಿಯಲ್ಲಿರುವರೆಂದು ಸುದ್ದಿ ಎಲ್ಲರಲ್ಲಿಯೂ ಹೆಚ್ಚಿನ ಕುತೂಹಲ ಹುಟ್ಟಿಸಿದೆ ಅವರು ಚೀನ ಭಾರತಗಳ ಸಂಬಂಧದಲ್ಲಿ ಮಾತುಕತೆ ನಡೆಸಲು ಬಂದಿರುವರು. ಈ ಸಂದರ್ಭದಲ್ಲಿ ಅವರು ತಮ್ಮ ಮಿತ್ರರಾದ ನೆಹರುಗಳನ್ನೂ, ಗಾಂಧಿ ಮೊದಲಾದ ಕಾಂಗ್ರೆಸ್ ಮುಖಂಡರನ್ನೂ ಕಂಡು ಮಾತುಕತೆ ನಡೆಸುವರೆಂದು ಸುದ್ದಿಯುಂಟು. ಚುಂಕಿಂಗ್‌ನಲ್ಲಿ ಭಾರತದ ಸೇನಾಪತಿ ವೇವಲ್ಲರೊಡನೆ ಮಾತುಕತೆ ನಡೆಸಿದ್ದು ಅದನ್ನೇ ಇಲ್ಲಿನ ಸರಕಾರದೊಡನೆ ಮುಂದುವರಿಸುವರೆಂದು ತಿಳಿಯುತ್ತದೆ. ಚೀನ ದಳಪತಿಯ ಮಾತುಕತೆ ಭೇಟಿಗಳಿಂದ ಭಾರತದ ರಾಜಕೀಯ ಸ್ವರೂಪದಲ್ಲಿ ಏನಾದರೂ ಬದಲಾವಣೆಗಳುಂಟಾಗುವ ಸಂಭವವಿದೆಯೇ ಎಂದು ಹಲವರು ಹಾರೈಸುತ್ತಿದ್ದಾರೆ.

ವಸಂತಸೇನಾ

ಬಾಲಾಜಿ ಟಾಕೀಸಿನಲ್ಲಿ ಪತ್ರಿಕಾ ಪ್ರದರ್ಶನ

ಮದ್ರಾಸಿನ ಪ್ರಗತಿ ಪಿಕ್ಚರ್ಸ್ ಲಿಮಿಟೆಡಿನವರು, ಸಾಹಿತ್ಯ ಸಾಮ್ರಾಜ್ಯ ಸಂಗೀತ ನಾಟಕ ಮಂಡಳಿಯವರೂ ಕೂಡಿ ತಯಾರಿಸಿದ ಕನ್ನಡ ವಸಂತಸೇನಾ ಚಿತ್ರವು ತಾ. ೧೩ರಂದು ಮೊದಲ್ಗೊಂಡು ಸ್ಥಳೀಯ ಬಾಲಾಜಿ ಟಾಕೀಸಿನಲ್ಲಿ ಪ್ರದರ್ಶಿಸಲ್ಪಡುವುದು. ಅದರ ಸಲುವಾಗಿ ತಾ. ೧೦ರಂದು ಬೆಳಿಗ್ಗೆ ೧೧ ಗಂಟೆಗೆ ಮಂಗಳೂರ ಪತ್ರಿಕೋದ್ಯಮಿಗಳ ಸಲುವಾಗಿ ವಸಂತಸೇನಾ ಚಿತ್ರದ ಪ್ರದರ್ಶನವೊಂದನ್ನು ಬಾಲಾಜಿ ಟಾಕೀಸಿನವರು ಏರ್ಪಡಿಸಿದ್ದರು.

'ವಸಂತಸೇನಾ'ದ ಕಥೆಯು ಸಂಸ್ಕೃತ ಸಾಹಿತ್ಯದಲ್ಲಿ ಪ್ರಸಿದ್ಧವಾದ ಮೃಚ್ಛಕಟಿಕ ನಾಟಕದ ಕಥೆ. ಕವಿಶೂದ್ರಕನ ಆ ನಾಟಕವು ಅಖಿಲಭಾರತದ ಪ್ರಸಿದ್ಧ ನಾಟಕಗಳಲ್ಲೊಂದಾಗಿದ್ದು ಪಾಶ್ಚಿಮಾತ್ಯರಿಂದಲೂ ಮುಕ್ತಕಂಠದಿಂದ ಪ್ರಶಂಸಿಸಲ್ಪಟ್ಟಿದೆ. ಎರಡುಸಾವಿರ ವರ್ಷಗಳ ಹಿಂದಿನ ಭಾರತದ ಸಾಮಾಜಿಕ ಜೀವನದ ಚಿತ್ರವನ್ನು ನಾವು ಈ ಕಥೆಯಲ್ಲಿ ಕಂಡು ಆನಂದಿಸಬಹುದಾಗಿದೆ. ಕಥೆಯು ಸಾಮಾಜಿಕವಾದುದರಿಂದ ಹೆಚ್ಚಾಗಿ ಪ್ರೇಕ್ಷಕರನ್ನು ತಲ್ಲೀನವಾಗಿ ಮಾಡುತ್ತದೆ.

ಪ್ರಾರಂಭದಲ್ಲಿ ಚಿತ್ರಮಯವಾದ ವಸಂತಸೇನೆಯ ನರ್ತನದಿಂದ ಕಥೆ ಪ್ರಾರಂಭವಾಗುತ್ತದೆ. ಒಬ್ಬ ಬ್ರಾಹ್ಮಣನನ್ನು ವೇಶ್ಯಾಸ್ತ್ರೀಯು ಕನ್ನಿಕೆಯೊಬ್ಬಳು ಪ್ರೀತಿಸುತ್ತಾಳೆ; ಶುದ್ಧ ಹೃದಯದಿಂದ ಪ್ರೀತಿಸುತ್ತಾಳೆ; ಬ್ರಾಹ್ಮಣನಾದರೂ ಆಕೆಯ ನಿರ್ಮಲ ಪ್ರೇಮವನ್ನು ಮನಗಂಡು ಪ್ರತಿಯಾಗಿ ಪ್ರೇಮಿಸುತ್ತಾನೆ. ಧೂರ್ತ ಶಕಾರನು ಕಂಟಕನಾಗಿ ಬಂದರೂ ವಸಂತಸೇನೆಯ ಪ್ರೇಮಕ್ಕೆ ಭಂಗಬರುವುದಿಲ್ಲ. ದರಿದ್ರ ಚಾರುದತ್ತನನ್ನು ವೇಶ್ಯಾಕನ್ಯೆ ನಿರ್ಮಲಹೃದಯದಿಂದಲೇ ಪ್ರೀತಿಸುವಳು. ಇದೊಂದು ಸಾಮಾಜಿಕಕ್ರಾಂತಿಯನ್ನುಂಟುಮಾಡುವ ಕಥೆಯಾಗಿದೆ.

ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಳಿಯ ನಟಿ ಲಕ್ಷ್ಮೀ ಬಾಯಿ ಇದರಲ್ಲಿ ವಸಂತಸೇನೆಯ ಪಾತ್ರ ಅಭಿನಯಿಸಿರುವಳು. ಸುಬ್ಬಯ್ಯನಾಯುಡು ಚಾರುದತ್ತನಾಗಿಯೂ, ನಾಗೇಂದ್ರರಾವ್ ಶಕಾರನಾಗಿಯೂ ಉತ್ತಮ ರೀತಿಯಿಂದ ಅಭಿನಯಿಸಿರುವರು. ಗಮಕಿ ರಾಮಕೃಷ್ಣಶಾಸ್ತ್ರಿಗಳು ಸಂಗೀತಗಾರರು. ಇನ್ನುಳಿದ ಹದಿನೇಳು ಪಾತ್ರವರ್ಗಗಳಿವೆ. ಫೊಟೊಗ್ರಾಫಿ, ಅಭಿನಯ, ಸಂಗೀತಗಳೂ ಚೆನ್ನಾಗಿವೆ. ಇದರ ನಿರ್ದೇಶಕರು, ಎರಡು ಸಾವಿರ ವರ್ಷಗಳ ಹಿಂದಿನ ಕಥೆಯನ್ನು ಚಿತ್ರಿಸುವಲ್ಲಿ ಆಧುನಿಕ ಕಾಲದ ಉಡಿಗೆತೊಡಿಗೆಗಳನ್ನು ಮಾಡದೆ, ಅಂದಿನ ಕಾಲಕ್ಕೆ ಅನುರೂಪವಾದ ಉಡುಗೆತೊಡಿಗೆ ಆವರಣವಾದಿಗಳಿಂದ ಚಿತ್ರದಲ್ಲಿ ಸಹಜತೆಯನ್ನು ತುಂಬಿಸಿದ್ದು ಪ್ರಶಂಸನೀಯವಾಗಿದೆ. ಮಂಗಳೂರ ಮಹಾಜನರನ್ನು ಈ ಕನ್ನಡ ಸಾಮಾಜಿಕ ಚಲಚ್ಚಿತ್ರವು ವಿಶೇಷವಾಗಿ ಆಕರ್ಷಿಸುವುದೆಂದು ನಾವುಹಾರೈಸುತ್ತೇವೆ.

ತಲೆ ನೋಯುತ್ತದೆ. ರುಚಿಯಿಲ್ಲ. ನಾಲಗೆ ಬಣಗಿದೆ. ಹೊಟ್ಟೆ ಸರಿಯಿಲ್ಲ.

ಮಲಬದ್ಧತೆ, ತಲೆನೋವು, ಹೆಚ್ಚಾಗಿ ಆರೋಗ್ಯ ಕೆಡುವ ಪರಿಸ್ಥಿತಿ, ಶಕ್ತಿ ಕ್ಷೀಣವಾಗುವುದು ಇವುಗಳೆಲ್ಲಾ ನಿಮ್ಮ ಶರೀರದಲ್ಲಿ ಕಶ್ಮಲಗಳಿವೆಯೆಂಬುದನ್ನು ತೋರಿಸುತವೆ. ದಿನನಿತವೂ ಒಂದು ಗ್ಲಾಸು ತಂಪುಕೊಡುವ ಎಂಡ್ರೂಸ್ ಲಿವರ್ ಸಾಲ್ಟನ್ನು ತೆಗೆದುಕೊಂಡು, ಶರೀರದೊಳಗಿನ ಈ ವಿಷವಸ್ತುಗಳನ್ನು ಹೊರಹಾಕಿರಿ. ಕೂಡಲೆ ನೀವು ಹೊಸ ಮನುಷ್ಯರೇ ಆಗುವಿರಿ. ಬುದ್ಧಿ ತೀವ್ರವಾಗುವುದು, ಶರೀರ ಶಕ್ತಿಗೊಳ್ಳುವುದು. ಶ್ವಾಸಕೋಶವನ್ನು ಎಂಡ್ರೂಸ್ ಲಿವರ್ ಸಾಲ್ಟ್ ನಿರ್ಮಲಗೊಳಿಸುವುದು. ಶರೀರದೊಳಭಾಗವು ಶುಚಿಗೊಳ್ಳುವುದು. ಇದರಿಂದ ಖಂಡಿತವಾಗಿಯೂ ಉತ್ತಮ ಆರೋಗ್ಯವುಂಟಾಗುವುದು.

ಶರೀರದೊಳಭಾಗದ ನೈರ್ಮಲ್ಯಕ್ಕೆ ದಿನನಿತ್ಯ ಎಂಡ್ರೂಸ್ ಲಿವರ್ ಸಾಲ್ಟನ್ನು ಉಪಯೋಗಿಸಿರಿ.

ANDREWS LIVER SALT

ಆರೋಗ್ಯಕರ ಪಾನೀಯ ಮತ್ತು ಪುಷ್ಟಿಕರವಾದುದು.

ಶುಚಿ, ತಂಪು, ಸುಖ, ಶಕ್ತಿದಾಯಕವಾದುದು.

ಸಣ್ಣ ಸೈಜಿಗೆ ೮. ೧೨, ದೊಡ್ಡ ಸೈಜಿಗೆ ರೂ. ೧-೬-೦

ಪೆಪ್ಸನ್ನು ದಿನನಿತ್ಯವೂ ತೆಕ್ಕೊಳ್ಳುವುದರಿಂದ ಹೃದ್ರೋಗವು ಗುಣಹೊಂದುವುದು.

ನೀವು ಹೃದ್ರೋಗ, ಶ್ವಾಸಕೋಶದ ದೌರ್ಬಲ್ಯ, ಶೀತಗಳಿಂದ ನರಳುತ್ತೀರಾದರೆ ದಿನನಿತ್ಯವೂ ಪೆಪ್ಸನ್ನು ತೆಕ್ಕೊಳ್ಳಿರಿ. ಈ ಅದ್ಭುತ ಮಾತ್ರೆಗಳು ಪ್ರಸಿದ್ಧ ಪೈನ್ ಅರಣ್ಯವಾಯುವಿನ ಆಶ್ಚರ್ಯಕರ ಗುಣವನ್ನುಂಟುಮಾಡುವವು.

ಪೆಪ್ಸ್ ಬಾಯಿಗೆ ಹಾಕಿದ ಕೂಡಲೇ ಕರಗಿ, ಉತ್ತಮ ಔಷಧಿ ಸತ್ವವನ್ನು ಹೊರಗೆಡುವುದು. ಆಶ್ವಾಸ ಯೋಗ್ಯವಾಗುವ ಹೃದಯಕೋಶವನ್ನು ಸೇರುತ್ತದೆ. ಕಂಠನಾಳಗಳನ್ನು ಶುದ್ಧಗೊಳಿಸುತ್ತದೆ. ಕೆಲವು ಪೆಪ್ಸ ಮಾತ್ರೆಗಳನ್ನಿಟ್ಟುಕೊಳ್ಳಿರಿ. ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ಪೆಪ್ಸ್ ಒಂದು ರೂಪಾಯಿ ಬೆಲೆಗೆ ಸಿಗುತ್ತದೆ.

ಏಜೆಂಟರು:—

ಮೆಸರ್ಸ್ ದಾಥಾ ಮತ್ತು ಕಂಪೆನಿ, ಪಿ. ಟಿ. ಮದರಾಸು.

ಪೆಪ್ಸನ್ನು ಕೊಂಡುಕೊಳ್ಳಿರಿ

PEPS

ವಿಷಹಾರಿ ಶ್ವಾಸನೀಯ ಗುಳಿಗೆಗಳು

ಸೌಂದರ್ಯ ಮತ್ತು ಮುಖಕಾಂತಿಗೆ

ಹಿಮಾನಿ ಸ್ನೋ

ಹಿಂದೂದೇಶದಲ್ಲಿ ಪ್ರಥಮವಾಗಿ

— ತಯಾರಿಸಿದ ಸ್ನೋ —

ಅಂದಿನಿಂದಲೂ ಶ್ರೇಷ್ಠವಾಗಿಯೇ ಇದೆ.— ಮುಖದ ಮೇಲಿನ ಯಾವತ್ತೂ ಕಲೆ, ಮಚ್ಚೆ ಛಿದ್ರ ಮುಂತಾದುವನ್ನು ಗುಣಪಡಿಸುವುದು.

ಹಿಮಾನಿ ಗ್ಲಿಸರಿನ್ ಸಾಬೂನುಗಳು

ಪಾರದರ್ಶಕ—ಶುದ್ಧ

ಕೋಮಲವಾದ ಪರಿಮಳ



ದಕ್ಷಿಣ ಕನ್ನಡದ ಡಿಸ್ಟ್ರಿಬ್ಯೂಟರರು:—

ಕೊರನೇಶನ್ ಟ್ರೇಡಿಂಗ್ ಕೊ.

ಮಹಮ್ಮದಾಲಿ ರೋಡ್, ಮಂಗಳೂರು.

“ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ”

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

13–2–1942] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೧೩—೨—೧೯೪೨]

ಸಮರಭೂಮಿಯ ಸಂಚಾರ

ಮಲಯದ ಮಾತು ಮುಗಿಯಿತು, ಕಳೆದ ವಾರ ಮಲಯ ಜಪಾನರ ವಶವಾಯಿತು. ಅಲ್ಲಿದ್ದ ಬ್ರಿಟಿಷ್ ಸೈನ್ಯಗಳು ಜೋಹೋರ ಮಾರ್ಗವಾಗಿ ಸಿಂಗಾಪುರ ದ್ವೀಪಕ್ಕೆ ಹೋಗಿ ಸಾಮುದ್ರಧುನಿಯ ಹೆದ್ದಾರಿಯನ್ನು ಭಗ್ನಗೊಳಿಸಿದವು ಅಷ್ಟರಲ್ಲಿ ಜಪಾನರೂ ಜೋಹಾರಕ್ಕೆ ಬಂದರು. ಬ್ರಿಟಿಷರು ಸಿಂಗಾಪುರದೊಳಹೋಗುವುದರೊಳಗೆ ಅವರನ್ನು ಹಿಡಿಯಬೇಕೆಂದು ಜಪಾನರು ಸಾಹಸಮಾಡಿದ್ದರೂ ಅದು ಪೂರೈಸಲಿಲ್ಲ. ಎರಡು ಮೂರು ದಿನಗಳ ವರೆಗೆ ಜೋಹಾರ ಕರಾವಳಿಯಲ್ಲಿ ತಮ್ಮ ಫಿರಂಗಿಗಳನ್ನಿಟ್ಟು ಕಾದು ಕುಳಿತಿದ್ದರು ಈಗ ಕಳೆದ ಬುಧವಾರದಿಂದ ಸಿಂಗಾಪುರದ ಮೇಲೆ ಜಪಾನರು ಭೀಕರ ಮುತ್ತಿಗೆ ಹಾಕಿದ್ದಾರೆ ಜಪಾನರ ಮುತ್ತಿಗೆಯು ಯಾವ ಯಾವ ರೀತಿ ನಡೆಯುತ್ತದೆ, ಬ್ರಿಟಿಷರು ಹೇಗೆ ಹೇಗೆ ಎದುರಿಸುತ್ತಾರೆಂಬ ವಿವರ ತಿಳಿದಿಲ್ಲವಾದರೂ ಸುಮಾರು ೨೦೦೦ ಮೈಲು ದೂರದ ವ್ಯಾಪಾರ ಮಾರ್ಗದ ಮುಖ್ಯ ಕೇಂದ್ರ ಸ್ಥಳವಾಗಿದ್ದು, ಬ್ರಿಟಿಷ್ ಸಾಮ್ರಾಜ್ಯದ ಬೆನ್ನೆಲುಬಿನಂತಿರುವ ಸಿಂಗಾಪುರವನ್ನು ಬ್ರಿಟಿಷರು ಕಡೆತನಕ ಬಿಡಲಾರರೆಂದು ಹೇಳಲಾಗುತ್ತದೆ

ಸಿಂಗಾಪುರದ ಸಂರಕ್ಷಣೆಯು ಇತ್ತೀಚೆಗೆ ಹೆಚ್ಚಾಗತೊಡಗಿತ್ತು ಆದರೆ ಸಾರವಾಕದಿಂದ ಸುಮಾತ್ರಾ ದ್ವೀಪದ ವರೆಗಿರುವ ಕೇಂದ್ರಗಳೆಲ್ಲವೂ ಜಪಾನರ ವಶವಾಗಿರುವುದರಿಂದ, ಅಲ್ಲಿಂದಲೂ ಸಿಂಗಾಪುರವನ್ನು ಜಪಾನರು ಮುತ್ತಬಹುದು, ಸಿಂಗಾಪುರದ ಮೇಲೆ ನಿರಂತರ ಬಾಂಬೆಸೆದು ಜನರು ಕಂಗಾಲಾಗುವಂತೆಯೂ ಮಾಡಬಹುದು, ಅಂಬಾಯ್ನಾ ದ್ವೀಪಗಳನ್ನು ಸೆಲೆಬಿಸದ ಪೂರ್ವ ಮತ್ತು ಪಶ್ಚಿಮ ಕರಾವಳಿಗಳನ್ನು ಆಕ್ರಮಿಸಿಕೊಂಡು ಸಿಂಗಾಪುರ ಆಸ್ಟ್ರೇಲಿಯ ಸಂಬಂಧಗಳನ್ನು ತಪ್ಪಿಸಲೂಬಹುದು ಇಷ್ಟರಲ್ಲಿಯೇ ಸಿಂಗಾಪುರಕ್ಕೆ ಜಪಾನರ ಆಕ್ರಮಣ ಬಲವಂತವಾಗಿದೆಯೆಂದು ಸುದ್ದಿ ಬಂದಿದೆ ಸಿಂಗಾಪುರವು ಜಪಾನರ ವಶವಾದರೆ ಬ್ರಿಟಿಷರ ಅವಸ್ಥೆ ಕಠಿಣವಾಗದಿರದು. ಪೆಸಿಫಿಕ್ಕಿನ ಯುದ್ಧವನ್ನು ಗೆಲ್ಲಬೇಕಾದರೆ ನೌಕಾಬಲ ಅವಶ್ಯ ನೌಕಾಬಲವನ್ನು ಬಳಸಿಕೊಳ್ಳಲು ನೌಕಾಕೇಂದ್ರಗಳು ಸ್ವವಶವಿರಬೇಕಾಗಿದೆ ಈಗಾಗಲೇ ಪೆಸಿಫಿಕ್ಕಿನ ಹಲವು ನೌಕಾಕೇಂದ್ರಗಳು ಕೈಬಿಟ್ಟಿದ್ದು ಸಿಂಗಾಪುರವೂ ಬ್ರಿಟಿಷರ ವಶದಿಂದ ತಪ್ಪಿದರೆ ಪರಿಸ್ಥಿತಿ ವಿಷಮವಾದೀತು. ಸದ್ಯದ ಪರಿಸ್ಥಿತಿಯಲ್ಲಿ ನಾಲ್ಕು ದಿಕ್ಕುಗಳಿಂದಲೂ ಜಪಾನರು ಸಿಂಗಾಪುರವನ್ನು ಆಕ್ರಮಿಸಲು ಅನುಕೂಲವಾಗಿದೆ

ಸಿಂಗಾಪುರ ದ್ವೀಪದಲ್ಲಿ ಜಪಾನರ ಸೈನ್ಯವು ತಾ. ೮ರಂದು ಬಂದಿಳಿಯಿತು ಎಂಬ ವಿಷಾದಕರ ವಾರ್ತೆ ಬಂದಿದೆ. ಸಿಂಗಾಪುರ ದ್ವೀಪದ ಪಶ್ಚಿಮ ಕರಾವಳಿಯಲ್ಲಿ ಇವು ಬಂದಿಳಿದವು ಈ ಸೈನ್ಯವು ಬಂದಿಳಿವ ಮೊದಲು ಜಪಾನರು ಒಂದೇ ಬಗೆಯಿಂದ ಗುಂಡಿನ ಮಳೆ ಸುರಿಸುತ್ತಾ ಇದ್ದರು, ಬ್ರಿಟಿಷ್ ಸೈನ್ಯದ ಮೇಲೂ ಮಾರ್ಗ ಸೌಕರ್ಯವಿರುವಲ್ಲಿಯೂ ಹೆಚ್ಚು ಹೆಚ್ಚಾಗಿ ಗುಂಡುಗಳನ್ನು ಸುರಿಸಿದರು. ಹೀಗೆ ಎರಡು ತಾಸು ಗುಂಡು ಸುರಿಸಿದ ಬಳಿಕ ಆ ದಿನ ಎಲ್ಲವೂ ಶಾಂತವಾಯಿತಾದರೂ ಮರುದಿನ ತಿರುಗಿ ಗುಂಡು ಬೀಳತೊಡಗಿತು. ಜಪಾನೀ ಹಡಗುಗಳು ಸೈನಿಕರನ್ನು ತುಂಬಿಸಿ ಬಂದು, ಸಿಂಗಾಪುರದಲ್ಲಿ ತಮ್ಮ ಸೈನಿಕರನ್ನು ತಂದಿಳಿಸಿದವು ಜಪಾನರು ಇಳಿದ ಮೊದಲು ಮಾಡಿದ ಯುದ್ಧವು ಅತ್ಯಂತ ಉಗ್ರವಾಗಿತ್ತೆಂದು ಆಸ್ಟ್ರೇಲಿಯ ಸುದ್ದಿಗಾರನೊಬ್ಬನು ವಿವರಿಸುತ್ತಾನೆ ಜಪಾನರ ಟೇಂಕ್ ದಳಗಳೂ ಜೋಹೋರ ಸಮುದ್ರ ಧುನಿಯನ್ನು ದಾಟಿವೆಯೆಂದು ತಿಳಿದಿದೆ. ಕೆಲವು ಕಡೆಗಳಲ್ಲಿ ಬ್ರಿಟಿಷ್ ಸೈನ್ಯಗಳು ಹಿಂದೂಡಲ್ಪಟ್ಟಿವೆಯೆಂದು ಸುದ್ದಿ. ಜಪಾನರಿಂದ ದ್ವೀಪವನ್ನು ಸಂರಕ್ಷಿಸಿಕೊಳ್ಳಲು ಈಗ ಹೊರಗಿನಿಂದ ಸಹಾಯಬರುತ್ತಿದೆಯೆಂದು ಮಲಯದ ಸೇನಾಪತಿ ಪರ್ಸಿವಲರು ತಿಳಿಸುತ್ತಾರೆ

ಜಪಾನರು ತಾ. ೯ರಂದು ರಾತ್ರಿ 11 ಗಂಟೆಯ ಹೊತ್ತಿಗೆ ಸಿಂಗಾಪುರ ದ್ವೀಪದಲ್ಲಿಳಿದರೆಂದೂ ಬೆಳಗು ಮುಂಜಾನೆ 1 ಗಂಟೆಗೆ ಮತ್ತೊಮ್ಮೆ ಇಳಿದರೆಂದೂ ತಿಳಿದಿದೆ. ಮೊದಲು ಇಳಿದ ಜಪಾನ ಸೈನಿಕರ ಮೇಲೆ ಬ್ರಿಟಿಷ್ ಮುಂದಳದವರು ಒಳ್ಳೆಯ ಜೋರಿನಿಂದ ಗುಂಡಿನ ಮಳೆ ಸುರಿಸಿದರು, ಆದರೆ ಕಡೆಗೆ ಜಪಾನರು ಬ್ರಿಟಿಷರನ್ನು ಹಿಂದಟ್ಟುತ್ತಾ ಹೋದರೆಂದು ವಾರ್ತೆ. ಎಷ್ಟು ಮಂದಿ ಜಪಾನರು ಬಂದಿಳಿದರೆಂದು ಇದುವರೆಗೆ ತಿಳಿದುಬಂದಿಲ್ಲ ಜಪಾನಿನ ಟೇಂಕ್ ಸೈನಿಕರೂ ಸಿಂಗಾಪುರದಲ್ಲಿ ಬಂದಿಳಿದರೆಂಬ ವಿಷಯ ಅಧಿಕೃತ ಸುದ್ದಿ ಬಂದಿರುವುದಿಲ್ಲ.

ಬ್ರಿಟನಿನ ಭಾರತ ಸೈನ್ಯ

ಈ ಬ್ರಿಟಿಷ್ ಸೈನ್ಯದಲ್ಲಿ ಪ್ರಖ್ಯಾತ ಸೈನಿಕರಾದ ಸಿಕ್ಖ ಸಿಪಾಯಿಗಳು, ಪೂರ್ವ ಆಫ್ರಿಕ ಎರಿಟ್ರಿಯಾದಲ್ಲಿ ಭೀಕರ ಹೋರಾಟ ಹೂಡಿ, ಮತ್ತು ಪಶ್ಚಿಮ ಮರುಭೂಮಿಯ ಲಿಬಿಯದಲ್ಲಿಯೂ ಕಾಳಗ ಹೂಡಿದರು

ಇದರಂತೆ ಬರ್ಮ ದೇಶದ ಪರಿಸ್ಥಿತಿಯೂ ಕಠಿಣವಿರುವುದು ಜಪಾನರು ಇಲ್ಲಿಯೂ ತೀವ್ರವಾಗಿ ಮುಂದುವರಿಯುತ್ತಿರುವರು ಉತ್ತರ ಬರ್ಮವನ್ನು ನುಗ್ಗಲು ಜಪಾನರು ಸಿದ್ಧತೆಮಾಡಿದರಂತೆ. ಮೌಲ್ಮೀನಿನ ಪತನದಿಂದ ಸಾಲವೀನ ನದಿಯ ಕೆಳಭಾಗದಲ್ಲಿರುವ ಬರ್ಮದೇಶವೆಲ್ಲ ಜಪಾನರ ಕೈವಶವಾದಂತಾಯಿತು. ರಂಗೂನಿಗೆ ಗಂಡಾಂತರಸಮೀಪಿಸಿದೆ. ಸಾಲವೀನ ನದಿಯ ಆಚೆಯ ದಡದಲ್ಲಿರುವ ಮರ್ತಬಾನಿನಿಂದ ರಂಗೂನಿಗಿರುವ ರೈಲ್ವೆಮಾರ್ಗವನ್ನು ವಶಪಡಿಸಲು ಜಪಾನರು ಪ್ರಯತ್ನಮಾಡುತ್ತಿರುವರು ಈಗ ಜಪಾನರಿಗೆ ಸಾಲವೀನ್ ನದಿಯು ಅಡ್ಡಿಯಿದ್ದರೂ ಅದು ಬಹುಕಾಲವಿರಲಾರದು, ಆ ನದಿ ದಾಟಿದ್ದರೆ ಜಪಾನರು ರಂಗೂನನ್ನು ನುಗ್ಗಬರುವರ ಚೀನಕ್ಕೆ ಹೋಗುತ್ತಿರುವ ಯುದ್ಧಸಾಮಗ್ರಿಗಳು ಹೆಚ್ಚಾಗಿ ರಂಗೂನ್ ಮಾರಿಯಿಂದಲೇ ಹೋಗುತ್ತಿರುವುದರಿಂದ ಅದನ್ನು ತಡೆಗಟ್ಟುವುದಕ್ಕಾಗಿ ಜಪಾನರು ರಂಗೂನಿಗೆ ಮುನ್ನುಗ್ಗುತ್ತಿದ್ದಾರೆ ನೆಲದಲ್ಲೂ ಆಕಾಶದಲ್ಲೂ ರಂಗೂನಿಗೆ ಜಪಾನರು ಪ್ರಚಂಡ ಮುತ್ತಿಗೆ ಹಾಕಬಹುದಾಗಿದೆ ಜಪಾನರು ಹಲವು ಸಲ ರಂಗೂನಿಗೆ ಭೀಕರವಾಗಿ ಬಾಂಬೆಸೆದರೆಂದು ಈಗ ಸುದ್ದಿ ಬಂದಿದೆ.

ಇದು ವರೆಗಿನ ಜಪಾನೀಯರ ಸಾಹಸಕ್ಕೆ ಪ್ರತಿರೋಧವಿಲ್ಲದಷ್ಟು ಅವರು ಮುಂದೊತ್ತಿದ್ದು ಕಂಡುಬರುತ್ತದೆ ಮಲಯ, ಫಿಲಿಪೈನ್ಸ್, ಡಚ ಇಂಡೀಸ್‌ಗಳಲ್ಲಿ ಅವರು ಮುಂದೊತ್ತಿದರು. ಜಪಾನೀ ಸೈನಿಕರು ತಮಗಿಷ್ಟ ಬಂದಲ್ಲಿ ಬಂದಿಳಿದರು ಅವರಿಳಿಯುವಾಗ, ಅವರನ್ನು ಹಿಂದಟ್ಟುವಷ್ಟು ಸಶಕ್ತ ಪ್ರತಿಭಟನೆ ಕಂಡುಬರಲಿಲ್ಲ. ಈಗ ಸಿಂಗಾಪುರದಲ್ಲಿಯೂ ಕಾಲಿಟ್ಟಿದ್ದಾರೆ. ಅಲ್ಲಿನ ಅವಸ್ಥೆಯೇನೆಂದು ನೋಡಬೇಕಾಗಿದೆ ಮಲಯ, ಡಚ್ ಇಂಡೀಸ್, ಫಿಲಿಪೈನುಗಳಿಗಿಂತಲೂ ಸಿಂಗಾಪುರದ ರಕ್ಷಣೆ ಹತ್ತುಪಾಲಿಗೂ ಹೆಚ್ಚಿನದು. ಮಿತ್ರರಾಷ್ಟ್ರದವರು ಪೆಸಿಫಿಕ್ಕಿನಲ್ಲಿ ಎಲ್ಲಿಯೋ ಒಂದು ಕಡೆ [illegible] ನೌಕಾಬಲವನ್ನು ಒಟ್ಟುಗೂಡಿಸಿಕೊಂಡಿರುವರೆಂಬ ಸುದ್ದಿಯಿದೆ. ಆ ಬಲವು ಯಾವ ಕಡೆಯಲ್ಲಿದೆಯೆಂಬ ಗೊತ್ತುಗುರಿ ತಿಳಿದಿಲ್ಲವಾದರೂ ಅವುಗಳ ಮುಂದಿನ ಕಾರ್ಯಾಚರಣೆಯಿಂದ ನಾವು ಆ ವಿಷಯವನ್ನು ಇತ್ಯರ್ಥಿಸಿಕೊಳ್ಳಬೇಕಾಗಿದೆ. ಸಿಂಗಾಪುರದ ರಕ್ಷಣೆಗೆ ಆ ನೌಕಾಬಲವು ಬಂದೊದಗ ಒದಗುವದೆಂದು ನಂಬಲಾಗಿದೆ ಅಂತೆಯೇ ಎಲ್ಲಿಯೋ ಗುಪ್ತವಾದೊಂದು ಕಡೆಯಲ್ಲಿ ಜಪಾನರ ಪ್ರಬಲ ನೌಕಾಬಲವೂ ಅಡಗಿರುವುದೆಂಬ ಸುದ್ದಿಯಿದೆ ಅಮೇರಿಕವು ಪ್ರಬಲವಾದ ನೌಕಾಬಲವನ್ನು ಪೆಸಿಫಿಕ್ಕಿನಲ್ಲಿರಿಸಿದೆಯೆಂದು ಕೆಲವು ದಿನಗಳ ಹಿಂದೆ [illegible] ವಾರ್ತೆ ಬಂದಿತ್ತು. ಈ ವಿಷಯ ಎಲ್ಲವೂ ಮುಂದಿನ ಸಮರ ಸಮಯ [illegible]

ರಷ್ಯದ ರಣರಂಗದಲ್ಲಿ ಜರ್ಮನರು ಸೋಲಿನ ಮೇಲೆ ಸೋಲು ಹೊಂದುತ್ತಿರುವರಾಗಿ ತಿಳಿದಿದೆ. ಹೊಸದಾಗಿ ಸಹಾಯ ಬಂದದ್ದರಿಂದ ರಷ್ಯನರು ಬಲಿಷ್ಠರಾಗಿ ಕಾದುತ್ತಿರುವರು. ಲೆನಿನ್‌ಗ್ರಾಡ್ ಮೋಸ್ಕೋಗಳ ವಾಯವ್ಯದಲ್ಲಿ ರಷ್ಯದ ಭಾಗದಲ್ಲಿ ಜರ್ಮನರ ಮೇಲೆ ಜೋರಿನ ಧಾಳಿ ನಡೆಯುತ್ತಿದೆ ಜರ್ಮನರ ಕೆಲವು ದುರ್ಗಗಳನ್ನು ರಷ್ಯನರು ವಶಪಡಿಸಿಕೊಂಡಿರುವರು. ರಷ್ಯನ್ ಯೋಧರು [illegible] ಗಳಲ್ಲಿ ಚಟುವಟಿಕೆ ನಡೆಸಿ ಮೂರು ತಿಂಗಳ ಬಳಿಕ ಈಗ ತಿರುಗಿ ಬಂದಿರುವರೆಂದು ಸುದ್ದಿ. ಈ ಅವಧಿಯಲ್ಲಿ ಅವರು ಅನೇಕ ಜರ್ಮನರನ್ನು [illegible] ಹಾನಿ ಮಾಡಿ [illegible] ಕಂಗಾಲುಮಾಡಿದರಂತೆ. ರಷ್ಯದ ಎಲ್ಲಾ ರಣಾಂಗಣದಲ್ಲಿಯೂ ಜರ್ಮನರು ಹೀಗೆ ಹಿನ್ನಡೆಯುತ್ತಿರುವರು ಮಹತ್ವದ ಆಯಕಟ್ಟಿನ ಸ್ಥಳಗಳಲ್ಲಿ ಜರ್ಮನರ ಮೇಲಿಂದ ಪ್ರಹಾರ ನಡೆಯುವುದು ರಷ್ಯನರ ಮುಂದೊತ್ತುವಿಕೆಯು ಎಂದಿನಂತೆಯೇ ಸಾಗುತ್ತಲಿದೆ

ಭಾರತದ ಕುರಿತು ಬ್ರಿಟಿಷ್ ಸರಕಾರವು ವಹಿಸಿದ ಧೋರಣದ ವಿಷಯ ಲಾರ್ಡ್ಸ್ ಸಭೆಯಲ್ಲಿ ಕಟುವಾದ ಟೀಕೆಮಾಡಲ್ಪಟ್ಟಿತು ಹಿಂದುಸ್ಥಾನವನ್ನು ಸ್ವತಂತ್ರವನ್ನಾಗಿ ಅಲ್ಲಿನ ಸಹಕಾರವನ್ನು ಬ್ರಿಟಿಷ್ ಸರಕಾರವು ಪಡೆದುಕೊಳ್ಳಬೇಕೆಂದು ಅನೇಕ ಮಂದಿ ಸದಸ್ಯರು ಸೂಚಿಸಿದರು ಚರ್ಚೆಯಲ್ಲಿ ಬ್ರಿಟಿಷ್ ರಾಯಭಾರಿಯಾಗಿದ್ದ ಸರ್ ಸ್ಟಾಫೋರ್ಡ್ ಕ್ರಿಪ್ಸರು ಒಂದು ಭಾಷಣ ಮಾಡುತ್ತಾ, ಭಾರತಕ್ಕೆ ಯುದ್ಧ ಮುಗಿದ ಕೂಡಲೇ ಸ್ವಾತಂತ್ರ್ಯಕೊಡುವ ಭರವಸೆಕೊಡಬೇಕೆಂದು ಹೇಳಿದ ವಿಷಯ ಭಾರತದಲ್ಲಿ ಹೆಚ್ಚಿನ ಉಲ್ಲಾಸವುಂಟಾಗಿದೆ ಬ್ರಿಟಿಷ್ ಸಾಮ್ರಾಜ್ಯದಲ್ಲಿ ಇರುವುದಕ್ಕಾಗಲಿ, ಬಿಡುವುದಕ್ಕಾಗಲಿ ಸ್ವಯಂತ ರಾಷ್ಟ್ರಗಳಿಗೆ ಸ್ವಾತಂತ್ರ್ಯವುಂಟೆಂದು ಅವರು ವಾದಿಸಿದರು ಹಿಂದುಸ್ಥಾನಕ್ಕೆ ಸ್ವಾತಂತ್ರ್ಯದ ಭರವಸೆಕೊಡುವುದರಿಂದ ಬ್ರಿಟನಿಗೆ ಹೆಚ್ಚಿನ ಸಹಕಾರ ದೊರೆಯುವುದೆಂದು ಅವರು ಸೂಚಿಸಿರುವರು. ಚೀನದ ದಳಪತಿ ಚಿಯಾಂಗ್ ಕೈಶೇಕರು ಪತ್ನೀ ಪರಿವಾರ ಸಮೇತ ಭಾರತಕ್ಕೆ ಬಂದಿದ್ದು ಹೊಸ ದಿಲ್ಲಿಯಲ್ಲಿರುವರೆಂಬ ಸುದ್ದಿ ಎಲ್ಲರಲ್ಲಿಯೂ ಹೆಚ್ಚಿನ ಕುತೂಹಲ ಹುಟ್ಟಿಸಿವೆ. ಅವರು ಚೀನ ಭಾರತಗಳ ಸಂಬಂಧದಲ್ಲಿ ಮಾತುಕತೆ ನಡೆಸಲು ಬಂದಿರುವರಂತೆ ಈ ಸಂದರ್ಭದಲ್ಲಿ ಅವರು ತಮ್ಮ ಮಿತ್ರರಾದ ನೆಹರುಗಳನ್ನೂ, ಗಾಂಧಿ ಮೊದಲಾದ ಕಾಂಗ್ರೆಸ್ ಮುಖಂಡರನ್ನೂ ಕಂಡು ಮಾತುಕತೆ ನಡೆಸುವರೆಂದು ಸುದ್ದಿಯಿದೆ. ಚಂಕಿಂಗ್‌ನಲ್ಲಿ ಅವರು ಸೇನಾಪತಿ ವೇವೆಲ್ಲರೊಡನೆ ಮಾತುಕತೆ ನಡೆಸುತ್ತಿದ್ದು ಅದನ್ನೇ ಇಲ್ಲಿನ ಸರಕಾರದೊಡನೆ ಮುಂದುವರಿಸುವರೆಂದು ತಿಳಿಯುತ್ತದೆ. ಚೀನದ ದಳಪತಿಯ ಮಾತುಕತೆ ಭೇಟಿಗಳಿಂದ ಭಾರತದ ರಾಜಕೀಯ ಸ್ವರೂಪದಲ್ಲಿ ಏನಾದರೂ ಬದಲಾವಣೆಗಳುಂಟಾಗುವ ಸಂಭವವಿದೆಯೋ - ಎಂದು ಹಲವರು ಹಾರೈಸುತ್ತಿದ್ದಾರೆ.

ಸ್ವದೇಶಾಭಿಮಾನಿ

ತಾರೀಕು 13—2—1942

ಸ್ವತಂತ್ರವಾಗಿದ್ದರೆ--

'ಹಿಂದುಸ್ಥಾನವು ಸ್ವತಂತ್ರವಾಗಿದ್ದರೆ ಅದು ತನ್ನ ಸ್ವಯಂಪ್ರೇರಣೆಯಿಂದ ಬ್ರಿಟನಿನ ಜೊತೆಯಲ್ಲಿ ಶತ್ರುಗಳೊಡನೆ ಹೋರಾಡುತ್ತಲಿತ್ತು. ಆದರೆ ಇಂದಿನ ಪರಿಸ್ಥಿತಿಯಲ್ಲಿ ನಮ್ಮನ್ನು ಗುಲಾಮಗಿರಿಯಲ್ಲಿಡಲು ಪ್ರಯತ್ನಿಸುತ್ತಿರುವವರೊಡನೆ ಹೋರಾಡದೆ ಬೇರೆ ದಾರಿಯಿಲ್ಲ. ಜರ್ಮನರ ರಾಜ್ಯನೀತಿ ಮತ್ತು ನಾಸಿಸಮ್ಮುಗಳನ್ನು ನಾನು ಪ್ರಬಲವಾಗಿ ಖಂಡಿಸುತ್ತೇನೆ. ಆದರೆ ಹಿಂದುಸ್ಥಾನವು ಯಾವುದೇ ತೆರದಲ್ಲಿಯೂ ಆತ್ಮರಕ್ಷಣೆ ಮಾಡಿಕೊಳ್ಳದಂತೆ ಬ್ರಿಟನೇ ನಮ್ಮನ್ನು ಅಸಮರ್ಥರನ್ನಾಗಿ ಮಾಡಿತು. ಯಾರಾದರೂ ಭಾರತವನ್ನು ಮುತ್ತಲು ಬಂದರೆ ಅವರನ್ನು ಭಾರತೀಯರು ಎದುರಿಸುವರು. ಭಾರತವು ಸ್ವತಂತ್ರವಾಗುವ ವರೆಗೆ ಭಾರತೀಯರು ಎಲ್ಲರನ್ನೂ ವಿರೋಧಿಸುವರು'.

—ಹೀಗೆಂದು ಕಾನ್‌ಪುರದಲ್ಲಿ ನೆರೆದ ಅಖಿಲ ಭಾರತದ ಟ್ರೇಡ್ ಯೂನಿಯನ್ ಕಾಂಗ್ರೆಸಿನ ಅಧಿವೇಶನದಲ್ಲಿ ಪಂಡಿತ ಜವಾಹಿರಲಾಲರು ಒಂದು ಉದ್ರೋದಕ ಭಾಷಣವಿತ್ತರು. ಇಂದಿನ ಯುದ್ಧದ ಭೀಷಣ ಚಿತ್ರವನ್ನು ಚಿತ್ರಿಸಿ, ಹರಿಯುತ್ತಿರುವ ರಕ್ತದ ಕಾಲುವೆಯನ್ನು ತಡೆಗಟ್ಟಲು ಭಾರತೀಯರು ಸ್ವತಂತ್ರರಾಗಿದ್ದರೆ ಆತ್ಮಸಂತೋಷದಿಂದ ಮುಂದಡಿಯಿಟ್ಟು ರಣರಂಗಕ್ಕಿಳಿಯುತ್ತಿದ್ದರು ಎಂದು ಸಮರ್ಥಿಸಿ ಹೇಳಿದರು. ಆದರೂ ಇಂದು ಜಗತ್ತಿನಲ್ಲಿ ಈ ತೆರದ ಹತ್ಯಾಕಾಂಡವು, ಅನ್ಯಾಯವು ನಡೆಯುತ್ತಿರುವಾಗ ಭಾರತೀಯರು ಕಣ್ಣುಮುಚ್ಚಿಕೊಂಡು ಸುಮ್ಮಗಿರಬಾರದು ಎಂದು ಎಚ್ಚರಿಸಿದರು.

ಹಿಂದುಸ್ಥಾನವು ಸ್ವತಂತ್ರವಾಗಿದ್ದರೆ ಅದು ಎಷ್ಟೋ ಕೈಗಾರಿಕೆಗಳನ್ನು ಅಭಿವೃದ್ಧಿಗೊಳಿಸಿ ಇಂದು ಒಂದು ಪ್ರಬಲವಾದ ಜನಾಂಗವಾಗುತಿತ್ತು ಎಂದು ನೆಹರು ಹೇಳಿದರು. ಇಂದಿನೀ ನಿಸ್ಸಹಾಯಕವಾದ ರಾಷ್ಟ್ರದ ಅವಸ್ಥೆಗಾಗಿ ಅವರು ಮರುಕಪಟ್ಟರು. ಭಾರತದಲ್ಲಿ ಔದ್ಯೋಗಿಕ ಪ್ರಗತಿಯಾಗಲು ಬ್ರಿಟಿಷರು ಅವಕಾಶ ಕೊಡುವುದಿಲ್ಲವೆಂದು ಸ್ಪಷ್ಟವಾಗಿ ಹೇಳಿದರು. ರಾಷ್ಟ್ರೀಯ ಸಂಯೋಜನೆಯ ಕಾರ್ಯಕ್ಕೆ, ಬ್ರಿಟಿಷ್ ಪ್ರಭುತ್ವವು ಎಷ್ಟರ ಮಟ್ಟಿಗೆ ಅಡಚಣೆಗಳನ್ನು ಉಂಟುಮಾಡುತ್ತಿದೆಯೆಂದು, ಅದರ ಅಧ್ಯಕ್ಷನಾಗಿ ತನಗೆ ಗೊತ್ತಿದೆಯೆಂದೂ ನೆಹರು ತಿಳಿಸಿದರು. ನೆಹರುಗಳ ಈ ಮಾತುಗಳು, ಭಾರತದ ಮೂರ್ತಿಮಂತಪ್ರತಿನಿಧಿಯ ಮಾತುಗಳು. ಬ್ರಿಟಿಷ್ ಸರಕಾರವು ಕಿವಿಗೊಟ್ಟು, ಮನಗೊಟ್ಟು ಕೇಳಿ ತಿಳಕೊಳ್ಳಬೇಕಾದ ಹಿತವಚನಗಳು.

ಪುನಃ ಪ್ರಮಾದ ಬೇಡ

'ನಮ್ಮ ಹಿರಿಯರು ಮುಸಲ್ಮಾನರ ಆಳ್ವಿಕೆಗೆ ಬೇಸತ್ತು, ಈಸ್ಟ್ ಇಂಡಿಯಾ ಕಂಪನಿಗೆ ಆಶ್ರಯವಿತ್ತು, ಮುಂದಿನ ಸಂತತಿಯನ್ನು ನಿರಂತರ ಕಷ್ಟಕೂಪದಲ್ಲಿ ತಳ್ಳಿದಂತೆ, ನಾವೂ ವೈರಿಯ ವೈರಿಗೆ ಸಹಾಯ ಮಾಡಿ ಪುನಃ ಆ ಪ್ರಮಾದವನ್ನು ಮಾಡಿಕೊಳ್ಳುವುದು ಬೇಡ. ಹೊಸಬರನ್ನು ನಾವು ಸ್ವಾಗತಿಸಲಾರೆವು. ನಮ್ಮ ಗುರಿ ನಮ್ಮ ದೇಶದ ಸ್ವಾತಂತ್ರ್ಯ. ನಮ್ಮ ಹೇಳಿಕೆಯನ್ನು ಒಪ್ಪುವ ಬುದ್ಧಿವಂತಿಕೆ ಬ್ರಿಟನಿಗೆ ಬರದೆ ಹೋದರೆ, ಪ್ರತಿಯೊಂದು ಹಳ್ಳಿ ಹಳ್ಳಿಗಳಲ್ಲಿಯೂ ರಚನಾತ್ಮಕ ಕಾರ್ಯ ಕೈಕೊಂಡು ಅದನ್ನು ಸಾಧಿಸಿ. ಜಪಾನರನ್ನು ವಿರೋಧಿಸಿ ನಾಗರಿಕರನ್ನು ಕಾಪಾಡಿರಿ. ಸಿಂಗಾಪುರ ರಂಗೂನುಗಳಲ್ಲಿ ಆದಂತೆ, ಈ ಕೆಲಸವನ್ನು ಅವ್ಯವಸ್ಥೆ ಆರಂಭವಾಗುವವರೆಗೆ ಮುಂದೆ ಹಾಕಬೇಡಿರಿ. ಹಳ್ಳಿಗಳಲ್ಲಿ ಪೋಲೀಸರ ಕೊರತೆಯಿರುವುದರಿಂದ ಪ್ರತಿಯೊಬ್ಬ ಹಳ್ಳಿಗನೂ ಪೊಲೀಸನಾಗಬೇಕು.'

ಹೀಗೆಂದು ಮದ್ರಾಸಿನ ಹಿಂದಿನ ಪ್ರಧಾನ ಮಂತ್ರಿ ಚಕ್ರವರ್ತಿ ರಾಜಗೋಪಾಲಾಚಾರ್ಯರು ಬಳ್ಳಾರಿಯ ಒಂದು ಸಾರ್ವಜನಿಕ ಸಭೆಯಲ್ಲಿ ಹೇಳಿದರು. ತಮ್ಮ ದೇಶದ ಜನರಿಗೆ ಇಂದಿನೀ ಸಂದೇಹ ಕಾಲದಲ್ಲಿ ಏನು ಮಾಡುವುದು ಯೋಗ್ಯವೆಂದು ತಿಳಿಸಿದರು. ಆಕ್ರಮಿಸಿ ಬರಲು ಆತುರಪಡಬಹುದಾದ ಜಪಾನರ ವಿಷಯದಲ್ಲಿ ಎಂತಹ ಭಾವನೆಯುಳ್ಳವರಾಗಿರಬೇಕೆಂದು ಎಚ್ಚರಿಸಿದರು. ದೇಶದಲ್ಲಿ ಶಾಂತಿರಕ್ಷಣೆಯಾಗುವಂತೆ ಪ್ರತಿಯೊಬ್ಬ ನಾಗರಿಕನೂ ತೆಗೆದುಕೊಳ್ಳಬೇಕಾದ ಎಚ್ಚರವೇನೆಂದು ಉಪದೇಶಿಸಿದರು. ವೈರಿಯ ವೈರಿಗೆ ಸಹಾಯ ಮಾಡಬೇಕೆಂಬ ಹಳೆಯ ರಾಜಕೀಯ ತತ್ವವು ಇಂದಿನ ಕಾಲಕ್ಕೆ ಸರಿಯಾಗಿಲ್ಲವೆಂದು ಎಚ್ಚರ ಕೊಟ್ಟರು. ಜರ್ಮನಿ ಅಥವಾ ಜಪಾನಿಗೆ ಸಹಾಯ ಮಾಡಿದರೆ ಬ್ರಿಟನಿನೊಡನೆ ಭಾರತೀಯರು ಹೂಡಿದ ಸ್ವಾತಂತ್ರ್ಯ ಹೋರಾಟಕ್ಕೆ ಸಹಾಯಮಾಡಿದಂತಾಗುವುದು ಎಂದು ಭಾವಿಸುವ ಪ್ರಮಾದ ನೀತಿಯನ್ನು ಅಲ್ಲಗಳೆದರು. ಈ ಸಂದರ್ಭದಲ್ಲಿ ಬ್ರಿಟಿಷ್ ಪ್ರಭುತ್ವವು ಭಾರತದ ಸ್ವಾತಂತ್ರ್ಯದ ವಿಷಯದಲ್ಲಿ ತೋರಿಸುವ ನಿರ್ಲಕ್ಷ್ಯ ಬುದ್ಧಿಯನ್ನು ಕಟ್ಟುಗ್ರವಾಗಿ ಖಂಡಿಸಿದರು.

ಅಮೆರಿ ಹೋಗಲಿ

'ಪರದೆಯ ಹಿಂದೆ ಅಮೆರಿ ಹೋಗಲಿ ಎಂಬುದಾಗಿ ದೊಡ್ಡ ಬಿರುಗಾಳಿಯೆದ್ದಿದೆ. ಅಮೆರಿ ಆ ಸ್ಥಾನ ಬಿಡುವುದೇನೋ ನಿಜ. ಈಗಿನ ಪರಿಸ್ಥಿತಿಯನ್ನು ಕಂಡು ಕೂಲಿಗಾರ ಮಂತ್ರಿಗಳಲ್ಲಿ ಹೆಚ್ಚಿನ ಕಳವಳವುಂಟಾಗಿರುವುದರಿಂದ, ಅವರು ಒಂದು ನಿರ್ಧಾರಕ್ಕೆ ಬರುವಂತೆ ಒತ್ತಾಯಮಾಡಬಹುದು' ಎಂಬುದಾಗಿ 'ರೆನಾಲ್ಡ್ಸ್ ನ್ಯೂಸ್' ಎಂಬ ಬ್ರಿಟಿಷ್ ಪತ್ರಿಕೆಯು ಭವಿಷ್ಯ ನುಡಿದಿದೆ.

ಅಮೆರಿಯವರು ಭಾರತದ ಕುರಿತು ವಹಿಸಿದ ಧೋರಣೆಯಿಂದ ಭಾರತೀಯರಿಗೆ ಹೆಚ್ಚಿನ ಅತೃಪ್ತಿಯೇ ಉಂಟಾಗಿದೆಯೆಂಬುದಕ್ಕೆ, ಅವರು ಆಗಾಗ ಕೊಟ್ಟ ಹೇಳಿಕೆಗಳ ವಿಷಯ ಮುಖಂಡರೂ, ಪ್ರಮುಖ ಪತ್ರಿಕೆಗಳೂ ಪ್ರಕಟಿಸಿರುವ ಅಭಿಪ್ರಾಯಗಳೇ ನಿದರ್ಶನಗಳಾಗಿವೆ. ಭಾರತದಲ್ಲಿ ರಾಜಕೀಯ ಬಿಕ್ಕಟ್ಟು ಉಂಟಾಗಿರಲು, ಅದನ್ನು ಬಿಡಿಸುವರೆ, ಅಮೆರಿ ಕೃತಾರ್ಥರಾಗಿಲ್ಲವೆಂಬ ವಿಷಯ ಬ್ರಿಟಿಷ್ ಮುಂದಾಳುಗಳೂ ಈಗ ತೀರಾ ಅತೃಪ್ತರಾದಂತೆ ತೋರುತ್ತದೆ. ಆದ್ದರಿಂದ ಅವರು ತನ್ನ ಸ್ಥಾನವನ್ನು ಬಿಟ್ಟು ಹೋಗಲಿ ಎಂಬುದಾಗಿ ದೇಶ ವಿದೇಶಗಳಲ್ಲಿ ಕೂಗೆದ್ದರೆ ಅದರಲ್ಲಿ ಆಶ್ಚರ್ಯವೇನೂ ತೋರುವುದಿಲ್ಲ.

ಇತ್ತೀಚೆಗೆ ಸರ್ ಸ್ಟಾಫೋರ್ಡ್ ಕ್ರಿಪ್ಸರು ಬ್ರಿಟಿಷ್ ಪ್ರಭುತ್ವವು ಭಾರತದ ವಿಷಯ ತಳೆದ ಧೋರಣೆಯ ಕುರಿತು ಉಗ್ರವಾಗಿ, ಧೈರ್ಯವಾಗಿ ಟೀಕಿಸುತ್ತಿದ್ದಾರೆ. ಭಾರತೀಯರನ್ನು ತೃಪ್ತಿಪಡಿಸಿ; ಇಂದಿನ ಯುದ್ಧಕ್ಕೆ ಅವರ ಸಂಪೂರ್ಣ ಬೆಂಬಲವನ್ನು ಪಡೆಯದಿರುವ ಪ್ರಭುತ್ವದ ಪ್ರಮಾದವನ್ನು ಬಯಲಿಗೆಳೆದಿದ್ದಾರೆ. ಅಮೆರಿಯಂತಹ ನಿರ್ಲಕ್ಷ್ಯಭಾವದ, ಅದೂರದರ್ಶಿತ್ವದ ಭಾರತಸಚಿವರಿರುವ ತನಕ ಭಾರತದ ಪರಿಸ್ಥಿತಿ ಸುಧಾರಿಸುವಂತೆ ಯಾರಿಗೂ ಕಂಡುಬರುವುದಿಲ್ಲ. ಆದ್ದರಿಂದ 'ಅಮೆರಿ ಹೋಗಲಿ' ಎಂಬ ಕೂಗಿಗೆ ದೇಶ ವಿದೇಶಗಳಲ್ಲಿ ದನಿಗೂಡುತ್ತಿದೆ.

ನೋಟಗಳು....

ಬ್ರಿಟಿಷ್ ಪ್ರಭುತ್ವವು ಭಾರತದ ವಿಷಯ ನ್ಯಾಯವಾದ ಧೋರಣೆವಹಿಸಲಿಲ್ಲವೆಂದು ಲಾರ್ಡ್ಸ್ ಸಭೆಯಲ್ಲಿ ಹಲವುಸದಸ್ಯರು ಟೀಕೆಮಾಡಿದರು.

卐

ಡ್ಯೂಕ್ ಡಿವ್ರೋನ್‌ಶಯರು ಲಾರ್ಡ್ಸ್ ಸಭೆಯ ಟೀಕೆಗೆ ಉತ್ತರಕೊಡುತ್ತಾ, ಹಿಂದೂದೇಶಕ್ಕೆ ಸ್ವಾತಂತ್ರ್ಯಕೊಡಲು ಹಾತೊರೆಯುತ್ತಿರುವ ಬ್ರಿಟಿಷ್ ಸರಕಾರದ ಇಂದಿನ 'ಉಭಯ ಸಂಕಟ'ವನ್ನು ವರ್ಣಿಸಿ ಹೇಳಿದರು.

卐

ಬ್ರಿಟಿಷರ ಆಡಳಿತ ಮುಗಿದ ಬಳಿಕ ಕಾಂಗ್ರೆಸಿನ ಆಡಳಿತ ಆರಂಭವಾಗಬೇಕೆಂದೂ ಕಾಂಗ್ರೆಸಿನವರು ಹೇಳುತ್ತಿದ್ದರೂ ತಮ್ಮ ಹಕ್ಕು ಬಾಧ್ಯತೆಗಳನ್ನು ಕಾಪಾಡದೆ ಕಾಂಗ್ರೆಸಿನವರ ಕೈಯ್ಯಲ್ಲಿ ಅಧಿಕಾರಕೊಟ್ಟರೆ ಜೋಕೆಯೆಂಬುದಾಗಿ ಮುಸ್ಲಿಂ ಲೀಗೂ ವಾದಿಸಿ 'ಪಾಕಿಸ್ತಾನ' ಆಗಬೇಕೆನ್ನುವುದರಿಂದ ಯಾರಿಗೆ ನಾವು ಅಧಿಕಾರ ಕೊಡಲಿ, ಎಂದು ಅವರು ತಿಳಿಸಿದರು.

卐

ಭಾರತೀಯರಿಗೆ ಸ್ವಾತಂತ್ರ್ಯ ಕೊಡಬೇಕೆಂದು ನಮಗೆ ಅಷ್ಟೊಂದು ಆತುರವಿದ್ದರೂ, ಸ್ವಾತಂತ್ರ್ಯ ಕೊಡಲು ನಿರ್ವಾಹವಿಲ್ಲದೆ, ಹೀಗೆ ಬ್ರಿಟಿಷ್ ಸರಕಾರವು ಉಭಯ 'ಸಂಕಟ'ಪಡುತ್ತಿರುವುದೆಂಬುದನ್ನು ಡ್ಯೂಕರ ಬಾಯಿಂದ ಕೇಳಿ ಇನ್ನಾದರೂ ಸ್ವಾತಂತ್ರ್ಯ ಕೇಳದೆ ಭಾರತೀಯರು ಸುಮ್ಮಗಿರಬಾರದೆ?

卐

ಈಗಾಗಲೇ ಹೀಗೆ 'ಸಂಕಟ'ಪಡುತ್ತಿರುವ ಬ್ರಿಟಿಷ್ ಸರಕಾರದೊಡನೆ, ಮತ್ತೂ ಮತ್ತೂ ಸ್ವಾತಂತ್ರ್ಯ ಕೊಡಬೇಕೆಂದು ಕೇಳುತ್ತಿರುವುದು 'ಅಹಿಂಸಾ' ತತ್ವದ ಅನುಯಾಯಿಗಳಾದ ಭಾರತೀಯರಿಗೆ ಭೂಷಣವೆನಿಸಲಾರದು.

卐

ಬ್ರಿಟಿಷರ ಆಡಳಿತವು ಮುಗಿದ ಬಳಿಕ ತಾವು ಆಡಳಿತ ವಹಿಸುವೆನೆಂದು ಗ್ರಹಿಸುತ್ತಿರುವ ಕಾಂಗ್ರೆಸಿನ ಹಾಗೂ ಮುಸ್ಲಿಂ ಲೀಗಿನ ಉದ್ಧಟತನವಾದರೂ ಏನು? ಹಿಂದೂದೇಶದ ಗದ್ದುಗೆಯಲ್ಲಿ 'ಬಿಳಿಯ ದೇವತೆ'ಗಳು ಶೋಭಿಸಿದಂತೆ 'ಕರಿಯ ಮನುಷ್ಯ'ರು ಕಾಣಲಾರರೆಂಬುದನ್ನು, ಕಾಂಗ್ರೆಸಿನವರಾಗಲಿ, ಮುಸ್ಲಿಂ ಲೀಗಿನವರಾಗಲಿ ಅರಿತುಕೊಂಡಿರಬೇಡವೆ?

卐

'ಇಂತಹ ಆತ್ಮವಂಚನೆಯಿಂದ ಬ್ರಿಟನಿಗೆ ಶಕ್ತಿ ಬರಲಾರದು. ಬರ್ಮ ದೇಶದ ಪ್ರಧಾನಮಂತ್ರಿ ಬ್ರಿಟನಿಗೆ ಹೋಗಿ ಸ್ವಾತಂತ್ರ್ಯ ಕೊಡಿರೆಂದರು. ಬರ್ಮದಲ್ಲಿ ಮುಸ್ಲಿಂ ಲೀಗು ಇರಲಿಲ್ಲ. ಆದರೂ ಬರ್ಮಕ್ಕೆ ಸ್ವಾತಂತ್ರ್ಯ ಕೊಡಲಿಲ್ಲ. ಇಂತಹ ಮಾತುಗಳಿಂದ ಯಾವ ಭಾರತೀಯನೂ ಮೋಸಹೋಗನು, ಜಗತ್ತೂ ಮೋಸಹೋಗದು' ಹೀಗೆಂದು ರಾಜಾಜಿಯವರು ಡ್ಯೂಕರನ್ನು ಟೀಕಿಸದಿರಲಿಲ್ಲ!

The Canara Banking Corporation Ltd.

(Incorporated in British India with limited liability)

Estd. 1906.

OUR RATES OF INTEREST ON DEPOSITS

Current	1%	p. a.
Savings Bank	2½%	„
Short-term	1¾%	„
FIXED FOR 3 MONTHS	2%	„
6 „	2½%	„
9 „	2¾%	„
12 „	3%	„
24 „	3½%	„

Advances made at cheap rates of interest against approved securities and Banking business of every description transacted.

ಗೋ ಸಂರಕ್ಷಣೆಗಾಗಿ ಗಾಂಧಿಜಿಯ ಪ್ರಯತ್ನಗಳು

ಬೆಲೆ ನಿರ್ಬಂಧದ ಕುರಿತು ಮಹಾದೇವ ದೇಸಾಯಿ ಲೇಖನ

ಮಹಾತ್ಮರೊಡನೆ ಪ್ರಶ್ನೋತ್ತರಗಳು

[‘ಹರಿಜನ’ದಿಂದ]

‘ಬೆಲೆ ನಿರ್ಬಂಧ’

‘ಬೆಲೆ ನಿರ್ಬಂಧದ ಕುರಿತು ಹರಿಜನದಲ್ಲಿ ಮಹಾದೇವ ದೇಸಾಯಿಯವರು ಒಂದು ಲೇಖನವನ್ನು ಬರೆಯುತ್ತಾ, ಹೀಗೆಂದಿರುವರು:

“ಕಳವಳ ಮತ್ತು ಅಶಾಂತಿ ಹುಟ್ಟಬಾರದೆಂದು ಹೇಳುವ ಸರಕಾರವು ಅದನ್ನು ತಡೆಯಲು ಯಾಕೆ ಪ್ರಯತ್ನಿಸುತ್ತಿದಿಲ್ಲವೆಂಬ ವಿಷಯ ಯಾರಾದರೂ ಆಶ್ಚರ್ಯಗೊಳ್ಳಬೇಕಾಗಿದೆ. ಜಪಾನ್ ರೇಡಿಯೋ ರಂಗೂನಿಗೆ ಬಾಂಬು ಹಾಕಿದೆಂದು ಹೇಳಿದ ಎರಡು ಮೂರು ದಿನಗಳ ವರೆಗೂ ಆ ವರ್ತಮಾನದ ವಿಷಯ ಏನೂ ಹೇಳಲೇ ಇಲ್ಲ ಆ ಸುದ್ದಿಯನ್ನು ಕೂಡಲೇ ವಿರೋಧಿಸಬಹುದಿತ್ತು. ಇದು ಜಪಾನರ ಉದ್ದೇಶವೆಂದೂ, ಒಂದು ಪಕ್ಷ ಹಾಗೆ ಧಾಳಿಯಿಟ್ಟರೆ, ಅದಕ್ಕೆ ತಕ್ಕ ಜಾಗ್ರತೆ ತೆಗೆದುಕೊಳ್ಳಬೇಕೆಂದೂ ಸರಕಾರವು ಜನರಿಗೆ ಹೇಳಬಹುದಿತ್ತು ಆ ಮೇಲೆ ಅನೇಕ ತರದ ಕತೆಗಳು ಹುಟ್ಟಿದವು. ಸಾವಿರಾರು ಜನರು ಕೊಲ್ಲಲ್ಪಟ್ಟರೆಂದು ಒಂದು ಕತೆ ಸರಕಾರವು ಸತ್ಯ ಸಂಗತಿಯನ್ನು ಕೂಡಲೇ ಪ್ರಕಟಿಸಿ ಜನರ ಕಳವಳವನ್ನು ನಿಲ್ಲಿಸಬಹುದಾಗಿತ್ತು

ಬೆಲೆಯನ್ನು ನಿರ್ಬಂಧಿಸುವ ವಿಷಯವೂ ಅಂತೆಯೇ. ಪೋಲೀಸರು ಹಲವೊಮ್ಮೆ ಸಣ್ಣ ವ್ಯಾಪಾರಿಯನ್ನು ಹಿಡಿದು ಅಧಿಕಾರಿಗಳ ಮುಂದೆ ಕೊಂಡೊಯ್ಯುತ್ತಾರೆ. ಇದೆಲ್ಲಾ ಆತನಿಗೆ ಬುದ್ಧಿ ಕಲಿಸಲು ಅಂತೆ! ಬುದ್ಧಿ ಕಲಿಸುವುದೆಂಬುದರ ಅರ್ಥವೇನೆಂದು ನಮಗೆ ಗೊತ್ತು. ಇಂಡಿಯನ್ ಚೇಂಬರ್ ಓಫ್ ಕಾಮರ್ಸ್ ಸರಕಾರಕ್ಕೆ ಕಳುಹಿಸಿದ ಒಂದು ಪತ್ರದಲ್ಲಿ ಬೆಲೆ ನಿರ್ಬಂಧದಿಂದ ತೊಂದರೆ ಸೂಚಿಸಲ್ಪಟ್ಟಿದೆ ಬೆಲೆ ನಿರ್ಬಂಧದ ಉದ್ದೇಶವೆಂದರೆ, ಜೀವನಕ್ಕೆ ಅಗತ್ಯವಿರುವ ವಸ್ತುಗಳು ನ್ಯಾಯವಾದ ಕ್ರಯಕ್ಕೆ ಸಿಗುವಂತೆ ಮಾಡುವುದು. ಹೆಚ್ಚು ಲಾಭ ಮಾಡುವುದನ್ನು ತಡೆಯುವುದು. ಆದರೆ ಇದುವರೆಗೆ ಸರಕಾರವು ಮಾಡಿದ ಧೋರಣೆಯಿಂದ ಆ ಉದ್ದೇಶವೇ ಹಾಳಾಗಿದೆ. ಕ್ರಯವನ್ನು ನಿರ್ಬಂಧಿಸಿದ್ದರಿಂದ ವಸ್ತುಗಳೇ ಬರುವುದು ಕಡಿಮೆಯಾಗಿದೆ. ಕಲ್ಕತ್ತದಲ್ಲಿ ಇತ್ತೀಚೆಗೆ ಗೋಧಿಗೆ ಕ್ರಯ ನಿರ್ಬಂಧಿಸಿದ್ದರಿಂದ ಗೋಧಿ ಬರುವುದೇ ಕಡಿಮೆಯಾಗಿ ಬಹಳ ತೊಂದರೆಯುಂಟಾಯಿತು.’ ಅಮೇರಿಕದಲ್ಲಿಯೂ ಇಂಥಾದ್ದೇ ಪ್ರಸಂಗ ಬಂದಿತ್ತು. ಈಗ ಪೋಲೀಸಿನವರು ಮಾಡುವುದೇನೆಂದರೆ, ಮಾರ್ಕೆಟಿನಲ್ಲಿ ಸಿಕ್ಕದಿರುವ ಕೆಲವು ವಸ್ತುಗಳಿಗೆ, ಕೆಲವು ವ್ಯಾಪಾರಿಗಳು ಹೆಚ್ಚು ಕ್ರಯ ಹೇಳಿದರೆ ಅಂಥವರಿಗೆ ಹೋಗಿ ಉಪದ್ರವ ಕೊಡುವುದು. ಹೀಗೆ ಕಡಿಮೆಯಿರುವ ಸಾಮಾನುಗಳನ್ನು ಹೆಚ್ಚು ಕ್ರಯಕ್ಕೆ ಮಾರುವುದು ತಪ್ಪು; ಆದರೂ ಈ ರೀತಿಯಲ್ಲಿ ಅವರನ್ನು ಹೋಗಿ ಉಪದ್ರವಿಸುವ ಕಾರಣ, ಅವರು ಯೋಚಿಸುತ್ತಾರೇನೆಂದರೆ ಅಂಥಾ ವಸ್ತುಗಳ ಮಾರಾಟ ಮಾಡುವುದೇ ಯೋಗ್ಯವಲ್ಲವೆಂದು ಹೀಗೆ ಚೇಂಬರ್ ಓಫ್ ಕಾಮರ್ಸ್ ಅಭಿಪ್ರಾಯಪಡುತ್ತದೆ.

ಮಾತ್ರವಲ್ಲದೆ ಬೇರೆ ಬೇರೆ ಸರಕಾರಗಳಾದರೂ ಸರಿಯಿಲ್ಲದ ಕಾರ್ಯಗಳನ್ನು ಕೈಕೊಳ್ಳುತ್ತಿವೆ ಸರಕಾರವು ಯಾವ ವಸ್ತುವಿಗೆ ಬೆಲೆ ನಿರ್ಬಂಧ ಮಾಡುತ್ತದೋ ಅದರ ಪೂರ್ವಾಪರಗಳನ್ನು ತಿಳಕೊಳ್ಳಬೇಕು ಹಾಗೆ ನಿರ್ಬಂಧಿಸಿದ ಬೆಲೆಗೆ ಸರಕಾರವು ಮಾರಾಟ ಮಾಡಲು ಸಿದ್ಧವಿರಬೇಕು. ಕಮಿಟಿ ಇತ್ಯಾದಿಯಾಗಿ ಸರಕಾರಕ್ಕೆ ಸೂಚನೆ ಮಾಡಿದ್ದು ಯೋಗ್ಯವೇ ಇದೆ

ಗೋ ಸೇವಾ ಸಂಘ

ಮೊದಲನೆಯ ಗೋ ಸೇವಾ ಸಂಘವು ಬೆಳಗಾವಿಯಲ್ಲಿ ಗಾಂಧಿಜಿ ಅಧ್ಯಕ್ಷರಾಗಿ ೧೯೨೪ರಲ್ಲಿ ಸ್ಥಾಪಿತವಾಯಿತು ಈ ಸಂಘವು ಗೋವುಗಳು ಭಾರತದ ಆರ್ಥಿಕ ಜೀವನದಲ್ಲಿ ಎಷ್ಟರ ಮಟ್ಟಿಗೆ ಪ್ರಧಾನ ಪಾತ್ರ ವಹಿಸುತ್ತವೆಯೆಂಬುದನ್ನು ತಿಳಿಸುವ ಉದ್ದೇಶದಿಂದ ಸ್ಥಾಪಿತವಾಗಿ ಕೆಲಸಮಾಡುತ್ತಿದೆ ಗಾಂಧಿಜಿ ಆರೋಗ್ಯದ ನಿಮಿತ್ತ ಸೆರೆಮನೆವಾಸಕ್ಕೆ ಹೋಗಬಾರದೆಂದು ಜಮುನಾಲಾಲರು ಹೇಳಿದ ಮೇಲೆ ಕಳೆದ ವರ್ಷದಿಂದ ಗಾಂಧಿಜಿ ಈ ಗೋ ಸೇವಾ ಸಂಘದ ವಿಷಯ ಹೆಚ್ಚು ಗಮನ ಕೊಡುತ್ತಿದ್ದಾರೆ ಅದನ್ನು ಒಂದು ಅಖಿಲ ಭಾರತ ಸಂಸ್ಥೆಯಾಗಿ ಮಾಡುವ ಯೋಜನೆಯಲ್ಲಿದ್ದಾರೆ. ‘ಅಖಿಲ ಭಾರತ ಗೋ ಸೇವಾ ಸಂಘ’ ಎಂಬ ಹೆಸರಿನಿಂದ ಅದು ಸ್ಥಾಪಿತವಾಗಿದೆ ಈ ತಿಂಗಳ ಮೊದಲಲ್ಲಿ ಈ ವಿಷಯ ಆಲೋಚನೆಗಾಗಿ ಹಿಂದೂದೇಶದ ಹಲವು ಅನುಭವಿಗಳನ್ನು ಕರೆದು ಮಾತನಾಡಲಾಗಿತ್ತು. ಈ ಪರಿಷತ್ತಿಗೆ ಹಲವರು ಬಂದಿದ್ದರು. ಶ್ರೀ ವಿನೋಬ ಭಾವೆ ಅಧ್ಯಕ್ಷರಾಗಿದ್ದು ಗಾಂಧಿಜಿ ಪರಿಷತ್ತನ್ನು ಉದ್ಘಾಟನೆ ಮಾಡಿದರು. ಗಾಂಧಿಜಿ ತನ್ನ ಮನಸ್ಸಿನ ಮರುಕವನ್ನೇ ಬಿಚ್ಚಿ ಹೇಳುವಂತೆ ಸಕಾರಣವಾಗಿ ಭಾಷಣ ಮಾಡಿದರು. ಹಿಂದುಗಳು ದನವನ್ನು ಕೇವಲ ಆರಾಧಿಸಿದರೆ ಸಾಲದು, ನಿಜವಾಗಿ ಅದರ ರಕ್ಷಣೆಯನ್ನು ಮಾಡುವುದು ಅವಶ್ಯವೆಂದರು ಪೇಟೆಯಲ್ಲಿ ಅಶುದ್ಧವಾಗಿ ಮಾರಾಟಮಾಡುವ ಹಾಲು ಮತ್ತು ತುಪ್ಪದ ಪದ್ಧತಿಯನ್ನು ಗಾಂಧಿಜಿ ಖಂಡಿಸಿದರು ಶುದ್ಧ ಹಾಲು ಶುದ್ಧ ತುಪ್ಪ ನಮ್ಮೂರಲ್ಲಿ ಸಿಗದಿರುವುದು ನಮ್ಮ ದೌರ್ಭಾಗ್ಯ ಎಂದರು

ಪ್ರತಿಯೊಂದು ಜೀವಿಯನ್ನೂ ನಾವು ಸಲಹಬೇಕು. ಆದರೆ ದೇಶದ ಆರ್ಥಿಕ ಅಭಿವೃದ್ಧಿಗೆ ಯಾವುದು ಹೆಚ್ಚು ಸಹಾಯವೋ ಅದನ್ನು ನಾವು ರಕ್ಷಿಸದಿದ್ದರೆ ಮಹಾ ಅನರ್ಥ ಮಾಡಿದಂತಾಗುವುದು ಗೋರಕ್ಷಣೆಯಲ್ಲಿರುವ ನಿಜವಾದ ವಿಜ್ಞಾನ ಮತ್ತು ಆರ್ಥಿಕ ದೃಷ್ಟಿ ತಿಳಕೊಳ್ಳಬೇಕು. ನಮ್ಮ ಆರ್ಥಿಕ ದೃಷ್ಟಿ ಅದೂರ ದೃಷ್ಟಿ. ತಾತ್ಕಾಲಿಕ ಲಾಭವನ್ನು ನಾವು ನೋಡುವುದು. ಎಮ್ಮೆಯ ಹಾಲನ್ನು ಯೂರೋಪಿನಲ್ಲಿ ಉಪಯೋಗಿಸುವುದಿಲ್ಲ. ನಾವು ಮಾತ್ರ ಉಪಯೋಗಿಸುತ್ತೇವೆ ದನದ ಹಾಲಿನ ಮಹತ್ವ ನಮಗೆ ಗೊತ್ತಿಲ್ಲ ದನದ ಹಾಲು ತುಪ್ಪಗಳಿಗೆ ಹೆಚ್ಚಿನ ಮಹತ್ವ ನಾವು ಕೊಡದಿದ್ದರೆ ಅವುಗಳನ್ನು ರಕ್ಷಿಸುವುದು ಸಾಧ್ಯವಿಲ್ಲ ದನವು ಸತ್ತ ಮೇಲೂ ನಮಗೆ ಪ್ರಯೋಜನ ಕೊಡುತ್ತದೆ ಈ ಸಂಘವು ಕೆಲವು ಪ್ರತಿಜ್ಞೆಗಳನ್ನು ಬರೆದು ಅದನ್ನು ಅನುಸರಿಸುವವರು ಅದರ ಸದಸ್ಯರಾಗಬಹುದಾಗಿ ವಿಧಿಸಿದೆ.

ಗಾಂಧಿಜಿಯವರೊಡನೆ ಪ್ರಶ್ನೆಗಳು

ಪ್ರ —ನಿಮ್ಮ ಕೊನೆಯ ಉದ್ದೇಶವೇನು, ಕಾಂಗ್ರೆಸು ನಿಮ್ಮ ತತ್ವವನ್ನು ಅಂಗೀಕರಿಸಬೇಕೆಂದೊ? ಅದು ಅದರ ಗುರಿಯನ್ನು ಹೊಂದಬೇಕೆಂದೊ?

ಉ:—ನಾನು ಮುಂದಿಟ್ಟ ಪ್ರತಿಯೊಂದು ಕಾರ್ಯಕ್ರಮಗಳೂ ಸ್ವಾತಂತ್ರ್ಯ ಸಂಪಾದನೆಗಾಗಿವೆ. ಸತ್ಯ ಅಹಿಂಸೆಗಳು ನನ್ನ ಧರ್ಮ. ಕಾಂಗ್ರೆಸಿನ ಮೂಲಕ ನನ್ನ ಈ ಧರ್ಮವನ್ನು ಪ್ರಚಾರಮಾಡಬೇಕೆಂದು ನಾನು ಇಚ್ಛಿಸಿಲ್ಲ. ಕಾಂಗ್ರೆಸಿನೆದುರೂ ರಾಜಕೀಯ ಉದ್ದೇಶಕ್ಕಾಗಿ ಒಂದು ಕಾರ್ಯಕ್ರಮವನ್ನಿಟ್ಟಿದೆ. ಅದಲ್ಲವಾದರೆ ನಾನೊಬ್ಬ ರಾಜನೀತಿಜ್ಞನಾಗುವುದಕ್ಕಿಂತಲೂ ಧರ್ಮಗುರುವೆನಿಸುತ್ತಿದ್ದೆ ರಾಜಕೀಯ ಕ್ರಮಗಳನ್ನು ಬೇಕಾದಾಗ ಬದಲಾಯಿಸಬಹುದು ಆದರೆ ಬದಲಾವಣೆ ಮನಸ್ಸಾಕ್ಷಿಗೆ ಸರಿಯಾಗಿರಬೇಕು ಆದರೆ ಕಾರ್ಯರೂಪದಲ್ಲಿ ಒಂದನ್ನು ಬಿಟ್ಟು ಬಿಟ್ಟು ತಾನಿನ್ನೂ ಅದನ್ನೇ ನಂಬುತ್ತೇನೆಂದು ಬಾಯಲ್ಲಿ ಹೇಳುವುದು ಅದು ಆತ್ಮವಂಚನೆ, ಲೋಕವಂಚನೆಯಾಗಿದೆ.

ಪ್ರ —ಮುಂದಿನ ಆರು ತಿಂಗಳಲ್ಲಿ, ಅಥವಾ ಒಂದು ವರ್ಷದಲ್ಲಿ ಏನಾಗಬಹುದೆಂದು ನಿಮ್ಮ ಊಹೆ ನೀವು ಇದು ಕೊನೆಯ ಹೋರಾಟವೆಂದಿದ್ದೀರಿ. ನಿಮ್ಮ ಊಹೆಯಲ್ಲಿ ಮುಂದಿನ ಕಾರ್ಯಕ್ರಮವೇನು?

ಉ —ಈ ಯುದ್ಧವು ಕೊನೆಯ ಯುದ್ಧವೆಂದು ನಾನು ಹೇಳುವುದಿಲ್ಲ. ಜವಾಹಿರಲಾಲರು ಇದು ಕೊನೆಯದೆನ್ನುತ್ತಾರೆ. ಆದರೆ ನಾನು ಹಾಗೆ ತಿಳಿಯುವುದಿಲ್ಲ. ಆದರೆ ನಾವು ಈಗ ಕೈಕಟ್ಟಿ ಕುಳಿತುಕೊಳ್ಳುವುದು ಸರಿಯಲ್ಲ. ಈ ಕಾಲದಲ್ಲಿ ಸುಮ್ಮಗಿದ್ದರೆ, ಶಾಂತಿಕಾಲದಲ್ಲಿ ನಮಗೇನೂ ದೊರೆಯಲಾರದು. ನಾನಿದು ನನ್ನ ಕೊನೆಯ ಹೋರಾಟವೆಂದಿದ್ದೇನೆ. ಆದರೆ ನಮ್ಮ ಕಾರ್ಯಕ್ರಮಗಳನ್ನು ಆಗಾಗ ಬದಲಾಯಿಸಬೇಕಾಗಿದೆ ನಮ್ಮ ಮುಂದಿನ ನಿಮಿಷದಲ್ಲಿ ಏನಾಗಬಹುದೆಂದು ತಿಳಿಯದಿರುವಾಗ, ಮುಂದಿನ ಆರು ತಿಂಗಳ ವರ್ಷದ ವಿಚಾರವನ್ನು ನಾನು ಏನೆಂದು ಹೇಳಲಿ?

ಪ್ರ —ನೀವು ಎ ಐ ಸಿ ಸಿ. ಯನ್ನು ವಿಭಾಗ ಮಾಡಲಿಚ್ಛಿಸಲಿಲ್ಲವೇಕೆ? ಬಾರ್ಡೋಲಿ ನಿರ್ಣಯಕ್ಕೆ ಸಮ್ಮತಿ ಕೊಡಬೇಕೆಂದುದೇಕೆ? ರಾಜಾಜಿಯ ಈಗಿನ ಮಾತುಗಳು ಬೊಂಬಾಯಿ ನಿರ್ಣಯದ ವಿರೋಧವಿವೆ. ಸಾಯುವ ಸಾಮ್ರಾಜ್ಯದೊಡನೆ ಸಹಕಾರವಿಲ್ಲವೆನ್ನುವಂತಿದೆ.

ಉ.—ಎ. ಐ. ಸಿ ಸಿ. ಯನ್ನು ವಿಭಾಗಿಸುವುದೂ ಒಂದು ರೀತಿಯ ಹಿಂಸೆಯೆಂದು ನಾನು ತಿಳಿದಿದ್ದೆ. ಪ್ರತಿಯೊಬ್ಬ ಎ. ಐ. ಸಿ. ಸಿ. ಸದಸ್ಯನೂ ಅಹಿಂಸೆಯಲ್ಲಿ ಅಚಲ ವಿಶ್ವಾಸವುಳ್ಳವನಾಗಿದ್ದರೆ ಆ ವಿಷಯ ಬೇರೆಯಿತ್ತು. ಬಾರ್ಡೋಲಿ ನಿರ್ಣಯ ಈಗಿನ ಕಾಂಗ್ರೆಸಿಗರ ಮನೋಭಿಪ್ರಾಯದ ನಿಜವಾದ ಪ್ರತಿಫಲವೆಂದು ನಾನು ತಿಳಿದೆ. ಬ್ರಿಟನಿನೊಡನೆ ಸಹಕಾರವೆಂಬುದು ದೂರದ ವಿಷಯ. ಅಲ್ಲಿವರೆಗೆಲ್ಲರೂ ಅಹಿಂಸೆಯಿಂದಲೇ ಇರಬೇಕು.

THE VIJAYA BANK, LIMITED.
Head Office: MANGALORE

BRANCHES:
KADRI-MANGALORE, HAMPANKATTA-MANGALORE, UDIPI, COONDAPUR, KARKAL, KAUP, & BRAHMAVAR.

SEASON DEPOSITS
are now accepted at all our Offices, at 4% per annum, for or more months, maturing on 31st July, 1942.

ಸಿಂಗಾಪುರದ ಪರಿಸ್ಥಿತಿ ಬಹಳ ವಿಷಮವಾಗಿದೆ!

ಜರ್ಮನರ ೧೪೦ ಯುದ್ಧ ಹಡಗಗಳ ನಾಶ

ರಂಗೂನಿಗೆ ನಿರಂತರ ಆಕ್ರಮಣ

ಅಮೆರಿಕಕ್ಕೆ ಆಕ್ರಮಣ ಭಯ

೧೪೦ ಜರ್ಮನ್ ಯುದ್ಧ ಹಡಗುಗಳು

ರಶ್ಯದ ಏಳು ತಿಂಗಳ ಯುದ್ಧದಲ್ಲಿ ಮುಳುಗಿದವೆಂದು ಸುದ್ದಿ ಬಂದಿದೆ.

ಸಿಂಗಾಪುರ ಪರಿಸ್ಥಿತಿ

ಬಹಳ ವಿಷಮವಾಗಿದೆಯೆಂದೂ, ಜಪಾನರು ಇಡೀ ದಿನ ಗುಂಡು ಹಾರಿಸುತ್ತಿದ್ದರೆಂದೂ, ಬ್ರಿಟಿಷ್ ಸೈನಿಕರು ಹಿಂದೆ ಸರಿದಿರುವರೆಂದೂ ಸುದ್ದಿಯಿದೆ. ಜಪಾನರು ಸಿಂಗಾಪುರದಲ್ಲಿ ಬಂದಿಳಿದು ಮುನ್ನುಗ್ಗುತ್ತಿರುವರು.

ಜಪಾನೀಯರು ಬೌದ್ಧರೆನ್ನುವುದು ತಪ್ಪು

ಎಂಬುದಾಗಿಯೂ, ಅವರು ಅಹಿಂಸೆಯನ್ನೂ, ಮೈತ್ರಿಯನ್ನೂ ಆಚರಿಸುತ್ತಿಲ್ಲವೆಂದೂ ಗಾಲೇ ನಗರದ ಪ್ರಮುಖರಾದ ಶ್ರೀ ಡಬ್ಲ್ಯೂ ಡಿ ಹನಾಯಕೆಯವರು ಹೇಳಿದರು.

ಚೀನಕ್ಕೆ ಅಮೆರಿಕಾ ಬ್ರಿಟನ್ ಸಾಲ

ಕೊಟ್ಟ ವಿಷಯ ಚುಂಕಿಂಗ್‌ನಲ್ಲಿ ಸಂತೋಷವುಂಟಾಗಿದೆ. ಅಮೆರಿಕಾ ೫೦೦ ಮಿಲಿಯನ್ ಡಾಲರ್ ಸಾಲ ಮಂಜೂರು ಮಾಡಿದೆ, ಬ್ರಿಟನ್ ೫೦ ಮಿಲಿಯ ಡಾಲರು ಸಾಲ ಬಂದಿದೆ.

ಇರಾಣಿನ ಪರಿಸ್ಥಿತಿ

ಕೆಲವು ಕಡೆಗಳಲ್ಲಿ ಆಹಾರ ವಸ್ತುಗಳ ಅಭಾವದಿಂದ ದಂಗೆಯುಂಟಾಗಿದೆಯಂತೆ. ವಿದೇಶೀಯರ ಮೇಲೆ ಹಾಕಿದ್ದ ಬಹಿಷ್ಕಾರ ತೆಗೆಯಲಾಗಿದೆ.

ಲಿಬಿಯ ಕದನ

ಉತ್ತರ ಆಫ್ರಿಕದಲ್ಲಿ ಜರ್ಮನರು ರೊಮೆಲರ ನಾಯಕತ್ವದಲ್ಲಿ ತಿರುಗಿ ಬಿದ್ದಿರುವರು. ಜಡಬಾಯ, ಬೆಂಗಾಜಿ, ಬಾರ್ಸ್ ಮುಂತಾದ ಸ್ಥಳಗಳನ್ನು ಆಕ್ರಮಿಸಿಕೊಂಡು ಮುಂದೆನುಗ್ಗಿದ್ದಾರೆ. ಬ್ರಿಟಿಷರು ಜರ್ಮನರನ್ನು ಅನಿರೀಕ್ಷಿತವಾಗಿ ಮುತ್ತಿ ಎಲ್ ಅಜೀಲಾ ವರೆಗೆ ಅಟ್ಟಿದರೂ ಅದೇ ರೀತಿ ರೊಮೆಲರೂ ಈಗ ಅಟ್ಟುತ್ತಿದ್ದಾರೆ.

ವೈಸರಾಯ್ ಕೌನ್ಸಿಲಿನ ಪುನಃ ವಿಸ್ತರಣೆ

ವಿಷಯ ದಿಲ್ಲಿಯಲ್ಲಿ ಊಹಾಪೋಹವುಂಟಾಗಿದೆ. ಎರಡನೆಯ ಸಲ ವಿಸ್ತರಣಮಾಡಿ ಹೆಚ್ಚು ಮಂದಿ ಭಾರತೀಯರನ್ನು ಸೇರಿಸಿಕೊಳ್ಳುವರೆಂದು ಊಹೆ. ಈ ಬಗ್ಗೆ ವೈಸರಾಯರಿಗೂ ವೈಟಹಾಲಿಗೂ ಮಾತುಕತೆಗಳಾಗುತ್ತಿವೆಯಂತೆ. ಅಲ್ಲಿನ ಹಲವು ಯುರೋಪಿಯನ್ ಆಫೀಸರರನ್ನು ಬೇರೆ ಕಡೆಗೆ ವರ್ಗಾಯಿಸುವರಂತೆ.

ಫ್ಯೂಕಿನ್ ಚೀನಾವಶ

ಉತ್ತರ ಹುನಾನ್ ರಣಕ್ಷೇತ್ರದ ಫ್ಯೂಕಿನ್ ಪಟ್ಟಣವನ್ನು ಚೀನೀಯರು ವಶಪಡಿಸಿಕೊಂಡರು. ಕ್ಯಾಂಟನ್‌ಗೂ ಹಾಂಕಾಂಗಿಗೂ ಇರುವ ಜಪಾನಿನ ಮಾರ್ಗಾನುಕೂಲ ಸಂಬಂಧವನ್ನು ಚೀನೀಯರು ಕತ್ತರಿಸಿರುವರೆಂದು ತಿಳಿದಿದೆ.

ಬ್ರಿಟನಿನ ಯುದ್ಧ ತಯಾರಿಸುವ ಮಂತ್ರಿ

ಆಗಿ ಲಾರ್ಡ್ ಬೀವರ್ ಬ್ರೂಕರು ನೇಮಕ ಹೊಂದಿದ್ದಾರೆ. ಸರ್ ಆಂಡ್ರ್ಯೂಡನ್ ಕರ್ನರವರು ಸರಬರಾಜು ಮಂತ್ರಿಯಾಗಿರುವರು. ಲಾರ್ಡ್ ಬೀವರ್ ಬ್ರೂಕರ ಮುಖ್ಯ ಕೆಲಸವೆಂದರೆ ಅಮೆರಿಕದ ಯುದ್ಧ ತಯಾರಿಸುವ ಮಂತ್ರಿ ಡೊನಾಲ್ಡರೊಡನೆ ಸಮೀಪ ಸಂಬಂಧ ಇಟ್ಟುಕೊಳ್ಳುವುದು.

ಮುಸಲನಿ ಭಾಷಣ

ಫ್ಯಾಸಿಸ್ಟ್ ಮಿಲಿಶಿಯದ ೧೯ನೇ ವಾರ್ಷಿಕೋತ್ಸವದ ಸಂದರ್ಭ ಸಿನಾರ್ ಮುಸಲನಿ ಭಾಷಣ ಮಾಡುತ್ತಾ, ಹಿಂದಿನಂತೆ ಮುಂದೆಯೂ ತಮಗೆ ಜಯ ದೊರಕುವುದೆಂದು ವಿಶ್ವಾಸಪೂರ್ವಕ ಪಡಿಸಿದನು. ಸ್ಪೈನಿನಲ್ಲಿಯೂ ರಶ್ಯದಲ್ಲಿಯೂ ಇಟಲಿ ಸೈನ್ಯಗಳು ಜಯಪಡೆದಿವೆಯೆಂದು ತನ್ನ ವಿಶ್ವಾಸ ಹೇಳಿದನು.

ಫಿಲಿಪ್ಪೈನಿನಲ್ಲಿ ಜಪಾನರ ಪ್ರಚಾರ

ಫಿಲಿಪ್ಪೈನಿನಲ್ಲಿರುವ ಅಮೆರಿಕನ್ ಫಿಲಿಪ್ಪಿನ್ ಸೈನಿಕರ ಮೇಲೆ ಶರಣಾಗತರಾಗಬೇಕೆಂದು ಜಪಾನರು ಬಲವಾದ ಪ್ರಚಾರ ಮಾಡುತ್ತಿದ್ದಾರೆ.

ನ್ಯೂಜಿಲೇಂಡ್ ಮಹಿಳೆಯರು ಸೈನ್ಯಕ್ಕೆ

ಸೇರುತ್ತಿದ್ದಾರೆ. 18 ವರ್ಷದಿಂದ 45 ವಯಸ್ಸಿನೊಳಗಿನವರು, ಅಡಿಗೆ, ಕ್ಲಾರ್ಕ್, ಡ್ರೈವರು ಮತ್ತು ಇದೇ ತರದ ಅನೇಕ ಕೆಲಸಗಳನ್ನು ಅವರು ಮಾಡುವರು.

ಅಮೆರಿಕಕ್ಕೆ ಧಾಳಿಯಾಗುವ ಭಯ

ಅಮೆರಿಕದ ಮೇಲೆ ವಿಮಾನ ಧಾಳಿಯಾಗುವ ಭಯವುಂಟಾಗಿದೆಯೆಂದು ಸುದ್ದಿ. ಈ ನಗರ ರಕ್ಷಣೆಗೆ ೧೦ ಕೋಟಿ ಡಾಲರನ್ನು ಮಂಜೂರು ಮಾಡಲಾಗಿದೆ.

ಪೆಸಿಫಿಕ್ ಬಗ್ಗೆ ಲಂಡನ್ ವಾಶಿಂಗ್‌ಟನ ಸಹಕಾರ

ಪೆಸಿಫಿಕ್ ಯುದ್ಧ ಮಂಡಲಗಳು ವಾಶಿಂಗ್‌ಟನ್‌ನಲ್ಲಿಯೂ ಲಂಡನಿನಲ್ಲಿಯೂ ಕಳೆದ ತಿಂಗಳಿನಿಂದ ಕಾರ್ಯಾಚರಣೆ ನಡೆಸುತ್ತಲಿವೆಯೆಂದು ರೂಸ್‌ವೆಲ್ಟರು ಹೇಳಿದರು.

ಸಾಮರಿಂಡಾ ಶತ್ರುವಶ

ಒಟ್ಟಿನಿಯದ ಸಮರಿಂಡಾ ಎಂಬ ದೇಶವನ್ನು ಜಪಾನೀಯರು ಹಿಡಿದಿರುವರು. ಸಾಮರಿಂಡಾವು ಡಚ್ ಬೋರ್ನಿಯೋದ ಪೂರ್ವದಲ್ಲಿ ಮಕಸಾರ್ ಜಲಸಂಧಿಯ ದಡದಲ್ಲಿದೆ. ಜಾವಾದಲ್ಲಿ ಸಮರಾಂಗ್, ಮಡಿಯೂನ್, ಮಗೆಲನ್, ಸೋಲೋ ಮತ್ತು ಟೆಗಾಲ್ ಮುಂತಾದ ಪ್ರದೇಶಗಳ ಮೇಲೆ ಜಪಾನ್ ವಿಮಾನಗಳು ಹಾರಾಡುತ್ತಿವೆ.

ಜಪಾನೀ ಫಿರಂಗಿಗಳ ನಾಶ

ಮೇನಿಲಾ ಕೊಲ್ಲಿಯ ಆಗ್ನೇಯ ತೀರದಲ್ಲಿ ಜಪಾನೀಯರು ಸ್ಥಾಪಿಸಿದ್ದ ಫಿರಂಗಿಗಳನ್ನೆಲ್ಲಾ ಅಮೇರಿಕನ್ ಸೈನ್ಯಗಳು ಗುಂಡು ಹೊಡೆತದಿಂದ ಸಂಪೂರ್ಣ ನಾಶಗೊಳಿಸಿದವೆಂದು ಸುದ್ದಿ.

ಅಮೆರಿಕದ ಅಧಿಕ ಖರ್ಚಿನ ನಿರ್ಣಯ

ವು ಸಿನೇಟಿನಲ್ಲಿ ಮಂಜೂರಾಯಿತು. ನೌಕಾ ಸರಬರಾಜಿಗೆ ೨೬೪೯ ಕೋಟಿ ಡಾಲರುಗಳ ಖರ್ಚನ್ನು ಒಪ್ಪುವ ಮಸೂದೆಯಿದೆ. ಅಂದರೆ, ಈ ಮೊದಲನೆಯ ತಿಂಗಳಲ್ಲಿ ಸೈನಿಕ ಖರ್ಚಿಗಾಗಿ ಒಟ್ಟು ೩೯೦೦ ಕೋಟಿ ಡಾಲರು ಒಪ್ಪಿದಂತಾಗಿದೆ. ಈ ಮಸೂದೆಯು ಯಾವುದೇ ಶಾಸನ ಸಭೆ ಮಾಡದಷ್ಟು ಅಧಿಕ ಖರ್ಚನ್ನು ಒಪ್ಪಿದೆ.

ಗಡಿನಾಡಿಗೆ ರಾಷ್ಟ್ರಪತಿ

ಆಜಾದರು ತಾ. ೧೦ರಂದು ಲಾಹೋರಿಗೆ ತೆರಳಿ ಅಲ್ಲಿಂದ ಗಡಿನಾಡಿಗೆ ಹೋಗುವರೆಂದು ತಿಳಿದಿದೆ. ಅಲ್ಲಿಂದ ಅವರು ಕಲ್ಕತ್ತೆಗೆ ಬಂದು, ಬೀಹಾರ್, ಒರಿಸ್ಸಾ, ಸಾಧ್ಯವಾದರೆ ಮದ್ರಾಸು ಪ್ರಾಂತವನ್ನೂ ಸಂಚರಿಸುವರಂತೆ.

ಭಾರತ ಬರ್ಮಾ ಮಾರ್ಗ

ನಿರ್ಮಾಣಯೋಜನೆ ನಡೆದಿದೆ. ಬರ್ಮಾದ ಭಾರತೀಯ ನಿರಾಶ್ರಿತರ ಪ್ರಯೋಜನಕ್ಕಾಗಿ ಬರ್ಮಾ ಅಲ್ಲಿರುವ ಭಾರತೀಯರು ಅಲ್ಲಿನ ಪರಿಸ್ಥಿತಿಯಿಂದಾಗಿ ಭಾರತಕ್ಕೆ ಬರಲು ಅತ್ಯಂತ ಆತುರರಾಗಿರುವರು.

ಅಮೆರಿ ಪುನಃ ಹಾಡಿದ್ದನ್ನೇ ಹಾಡಿದರು

ತಾ ೩ರಂದು ಭಾರತ ಮಂತ್ರಿ ಅಮೆರಿಯವರು ಆಕಾಶ ಭಾಷಣಮಾಡಿ, ಭಾರತವು ತನ್ನ ಕಾರ್ಯಭಾರವನ್ನು ತಾನೇ ಸಾಗಿಸಿಕೊಂಡು ಹೋಗುವ ಹಾಗೂ ತನ್ನ ಭವಿತವ್ಯವನ್ನು ತಾನೇ ನಿಶ್ಚಯಿಸಿಕೊಳ್ಳುವ ದಿನ ಬೇಗನೇ ಬರಲೆಂದೇ ನಾವು ಆಶಿಸುತ್ತಿರುವೆವೆಂದೂ, ಯುದ್ಧ ಮುಗಿದ ಕೂಡಲೇ ಹಿಂದೂಸ್ಥಾನಕ್ಕೆ ನಮ್ಮ ವಸಾಹತುಗಳು ಉಪಯೋಗಿಸುವಂತಹ ಸಮಾನಸ್ವಾತಂತ್ರ್ಯ ಕೊಡಬೇಕು ವಚನ ಬದ್ಧರಾಗಿರುವೆವೆಂದೂ, ಅಲ್ಲಿನ ಸ್ವಾತಂತ್ರ್ಯದ ಪ್ರಶ್ನೆ ಹಿಂದೀಯರ ಕೈಯಲ್ಲಿದೆಯೆಂದೂ, ಅವರು ವಸ್ತುಸ್ಥಿತಿಯನ್ನು ಅರಿತುಕೊಂಡು ವರ್ತಿಸುವರೆಂದೂ ಹೇಳಿದರು. ಸ್ವಾತಂತ್ರ್ಯವು ಹಿಂದೀಯರಿಗೆ ಎಂದಾದರೂ ದೊರೆಯದೆ ಹೋಗದೆಂದರು.

ಹಿಂದುಸ್ಥಾನದ ಯುದ್ಧ ಖರ್ಚು ದಿನಕ್ಕೆ 3 ಲಕ್ಷ ರೂಪಾಯಿ

ಎಂಬುದಾಗಿ ತಿಳಿದಿದೆ. ಒಟ್ಟು ಹಿಂದುಸ್ಥಾನದಲ್ಲಿ ೧೦ ಲಕ್ಷ ಜನರು ಸಶಸ್ತ್ರರಾಗಿರುವರಂತೆ. ಎರಡನೇ ಹತ್ತು ಲಕ್ಷ ಬೇಗನೇ ಕೂಡಿಸಲಾಗುವುದಂತೆ.

'ನಾಜಿಗಳೂ ಬೇಡ, ಜಪಾನರೂ ಬೇಡ'

ಸ್ವಾತಂತ್ರ್ಯ ಬೇಕು ಎಂದರು ರಾಜಾಜಿ ಮಧುರೆಯಲ್ಲಿ ಮಾತನಾಡುತ್ತಾ 'ರಾಜಾಜಿಯವರು ನಮಗೆ ನಾಜಿಗಳೂ ಬೇಡ, ಜಪಾನಿಯರೂ ಬೇಡ, ನಮಗೆ ನಮ್ಮ ದೇಶದ ಸ್ವಾತಂತ್ರ್ಯ ಬೇಕು ಎಂದರು.

ಗೋ ಸಂಪತ್ತು ಹೆಚ್ಚಿಸಬೇಕು

ಎಂಬುದಾಗಿ ಅಖಿಲ ಭಾರತ ಗೋಸೇವಾ ಸಂಘದ ಸಮ್ಮೇಳನದಲ್ಲಿ ಗಾಂಧೀಜಿ ಭಾಷಣ ಮಾಡಿದರು. ಪಂಡಿತ ಮಾಲವೀಯರ ಗೈರು ಹಾಜರಿಯಿಂದ ವಿನೋಬ ಭಾವೆಯವರು ಅಧ್ಯಕ್ಷತೆ ವಹಿಸಿದ್ದರು.

ರಾಜಕೀಯ ಕೈದಿಗಳನ್ನು ಬಿಡಿರಿ

ಎಂಬುದಾಗಿ ಪೂನಾದಲ್ಲಿ ಶ್ರೀ. ಕೇಳ್ಕರ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯಲ್ಲಿ ಒಂದು ನಿರ್ಣಯ ಮಂಜೂರಾಯಿತು.

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

GONO KILLER ORIGINAL

ಡಾ| ಜಸಾನಿಯವರ

ಜಗತ್ಪ್ರಸಿದ್ಧವಾದ ಔಷಧಿ

ಗೊನೊಕಿಲರ್ (ರಜಿಸ್ಟರ್ಡ್)

ಮೂತ್ರರೋಗಗಳ ಮೇಲೆ ಮತ್ತು ಧಾತುಸಂಬಂಧದ ರೋಗಗಳ ಮೇಲೆ 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು. ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನ್ನು ತೋರಿಸುತ್ತದೆ. ಸವಿರಾರು ರೋಗಿಗಳು ಇದರ ಗುಣವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿ ಇದನ್ನು ಹೊಗಳುತ್ತಿರುವರು. ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಇಲ್ಲ.

ನಕಲಿ ಮದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ್' ಎಂಬ ಸೀಲು ನೋಡಿರಿ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಶರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ, ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರುಪು ಚುಳುಕುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, ಗೊನೊ-ಕೊಕಸ್ ಎಂಬ ವಿಷಹಾರಿ, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಪೂರ್ಣ ನಾಶವಾಗುವುವು.

ಬೆಲೆ: 50 ಮಾತ್ರೆಗಳ ಬಾಟ್ಲಿ 1ಕ್ಕೆ ರೂ 3—0—0 (ವಿ. ಪಿ. ಚಾರ್ಜು 8 ಆಣೆ ಬೇರೆ). ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ

ತಯಾರಿಸುವ ಏಕವಾಪಾರಿಗಳು: ಡಾಕ್ಟರ್ ಡಿ. ಎನ್. ಜಸಾನಿ ವಿಠಲ್ ಭಾಯಿ ಪಟೇಲ್ ರೋಡ್, ಮುಂಬಾಯಿ.

Sole Manufacturer: **Dr. D. N JASANI,** Vithalbhai Patel Road, BOMBAY 4

Madras Agent. **Appah & Co, China Bazar Madras.**

ಪತ್ರವ್ಯವಹಾರ ಇಂಗ್ಲೀಷ್ ಅಥವಾ ಮರಾಠಿಯಲ್ಲಿ.

ಭಾರತದ ಬಿಕ್ಕಟ್ಟು ಬಿಡಿಸಲು ಚಿಯಾಂಗ್ ಕೈಶೇಕರ ಸಂಧಾನವೆ?

ವೈಸರಾಯರ ಸ್ವಾಗತ, ಕಾಂಗ್ರೆಸು ಮುಖಂಡರ ಭೇಟಿ

ರಾಜಾಜಿ ಒಪ್ಪಂದ ನಡೆಸಲಿ; ಮುಸ್ಲಿಂ ಲೀಗ್ ಪತ್ರಿಕೆ ಹೇಳಿಕೆ

ಚಿಯಾಂಗ್ ಕೈಶೇಕರು

೯೦ ನಿಮಿಷ ತನಕ ದಿಲ್ಲಿಯಲ್ಲಿ ನೆಹರುಗಳನ್ನು ಭೇಟಿಯಾಗಿ ಮಾತನಾಡಿದರು. ಆ ಮೇಲೆ ಅಜಾದ್ ಮೊದಲಾದವರನ್ನು ಭೇಟಿಯಾದರು

ಸ್ವತಂತ್ರರಾಗಿದ್ದರೆ ಶತ್ರುಗಳೊಡನೆ ಹೋರಾಡುತ್ತಿದ್ದೆವು

ನೆಹರು ವಾಣಿ

ಅಖಿಲ ಟ್ರೇಡ್ ಯೂನಿಯನ್ ಕಾಂಗ್ರೆಸಿನಲ್ಲಿ ಭಾಷಣ ಮಾಡುತ್ತಾ ನೆಹರುಗಳು, ಇಂದಿನ ಯುದ್ಧವು ಹೀಗೆಯೇ ನೋಡುತ್ತಾ ಕುಳಿತುಕೊಳ್ಳುವುದು ನ್ಯಾಯವಲ್ಲವೆಂದೂ, ಸ್ವತಂತ್ರರಾಗಿದ್ದರೆ ನಾವೂ ಯುದ್ಧಮಾಡುತ್ತಿದ್ದೆವೆಂದೂ ಹೇಳಿದರು. ಹಿಂದುಸ್ಥಾನವು ಯಾವುದೇ ತೆರದಲ್ಲಿ ಆತ್ಮರಕ್ಷಣೆ ಮಾಡದಂತೆ ಬ್ರಿಟನೇ ಅದನ್ನು ಅಸಮರ್ಥ ಮಾಡಿತು ಎಂದರು.

ಅಬ್ದುಲ್ ಗಫರಖಾನರ ರಾಜಿನಾಮೆ

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸದಸ್ಯತ್ವಕ್ಕೆ ಗಡಿನಾಡಿನ ಗಾಂಧಿಯೆನಿಸಿದ ಖಾನ್ ಅಬ್ದುಲ್ ಗಫರ್ ಖಾನರು ರಾಜಿನಾಮೆ ಕೊಟ್ಟಿರುವರು. ಅಹಿಂಸೆಯಲ್ಲಿ ಅಚಲ ಶ್ರದ್ಧೆಯಿರುವುದರಿಂದ, ಕಾಂಗ್ರೆಸಿನಲ್ಲಿದ್ದು ಕೆಲಸ ಮಾಡುವುದು ತಮಗೆ ಸಾಧ್ಯವಿಲ್ಲವಾಗಿ ರಾಜಿನಾಮೆ ಕೊಟ್ಟಿರುವರೆಂದು ತಿಳಿದಿದೆ.

ಹರಿಕೃಷ್ಣ ಮೆಹತಾಬರ ಬಂಧನ

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಹಿಂದಿನ ಸದಸ್ಯರಾದ ಹರಿಕೃಷ್ಣ ಮೆಹತಾಬರನ್ನು ಕಟಕಿನಲ್ಲಿ ಹಿಂದುಸ್ಥಾನ ರಕ್ಷಣೆ ಕಾನೂನಿನ ಪ್ರಕಾರ ಬಂಧಿಸಲಾಗಿದೆ. ಅವರ ಮನೆಯೊಳಗಿನ ಕಾಗದ ಪತ್ರಗಳೂ ಜಪ್ತಿಯಾಗಿದೆ

ಕಾಂಗ್ರೆಸ್ ವರ್ಕಿಂಗ್ ಕಮಿಟೀ

ಮಾರ್ಚಿಯಲ್ಲಿ ಕೂಡಬಹುದೆಂದು ಸುದ್ದಿ. ಅದಕ್ಕೆ ಮೊದಲು ಕೂಡುವುದಾದರೆ ಅಂತಹ ಸಂದರ್ಭಗಳುಂಟಾಗಬೇಕು

ಭಾರತದಲ್ಲಿ ಚಿಯಾಂಗ್ ಕೈಶೇಕರು

ವೈಸರಾಯರ ಸ್ವಾಗತ

ಮುಖಂಡರನ್ನು ಕಾಣುವರು

ಚೀನದ ದಳಪತಿ ಚಿಯಾಂಗ್ ಕೈಶೇಕರು ಪತ್ನೀ ಪರಿವಾರ ಸಮೇತ ಹಿಂದೂದೇಶಕ್ಕೆ ಬಂದ ವಿಷಯ ಎಲ್ಲರಲ್ಲಿಯೂ ಒಂದು ಬಗೆಯ ಉಲ್ಲಾಸವೇ ಉಂಟಾಗಿದೆ. ಅವರಿಗೆ ವೈಸರಾಯರು ಸ್ವಾಗತವಿತ್ತರು. ವೈಸರಾಯರ ಸ್ವಾಗತಕ್ಕೆ ಉತ್ತರ ಕೊಡುತ್ತಾ ಕೈಶೇಕರು ಭಾರತವನ್ನು ಆಕ್ರಮಣದಿಂದ ತಪ್ಪಿಸಲು ಚೀನವು ಸಹಾಯ ಮಾಡುವುದೆಂದರು. ಅವರು ಪಂಜಾಬಿಗೆ ತೆರಳಿ ಅಲ್ಲಿ ಅವರಿಗೆ ಭಾರೀ ಸ್ವಾಗತವಾಯಿತು ಪಂಜಾಬ್ ಪ್ರಾಂತಿಕ ಕಾಂಗ್ರೆಸ್ ಮುಖಂಡರಾದ ಮಿಯಾನ್ ಇಫ್ತಿಕರುದ್ದೀನರು ಸ್ವಾಗತದಲ್ಲಿ, ತಾವು ಸ್ವತಂತ್ರ ಭಾರತದ ಪ್ರಜೆಗಳಾಗಿ ಚಿಯಾಂಗ್ ದಂಪತಿಗಳಿಗೆ ಸ್ವಾಗತವೀಯಲಾರದ ದೌರ್ಭಾಗ್ಯಕ್ಕಾಗಿ ತಮ್ಮ ದುರ್ದೆಶೆಯನೆತ್ತಿ ಹೇಳಿದರು

ಚಿಯಾಂಗ್ ಕೈಶೇಕರು ಸರಕಾರೀ ಮೆಂಬರರನ್ನು ಕಂಡು ಮಾತನಾಡಿದರು ಪಂಡಿತ ನೆಹರುಗಳೊಡನೆ ಅವರು ಬೇಗನೇ ಭೇಟಿಯಾಗಿರುವರು, ಗಾಂಧಿಜಿಯವರೊಡನೆಯೂ ಮಾತುಕತೆ ನಡೆಯಲಿರುವುದಾಗಿ ತಿಳಿದಿದೆ ಅವರ ಆಗಮನಾದಿಗಳು ಬಹಳ ಗುಪ್ತವಾಗಿರಿಸಲಾಗಿದೆ

ಸರತ್ ಬೋಸರ ಭೇಟಿ

ನವಾಬ್ ಖ್ವಾಜಾ ಹಬಿಬುಲ್ಲಾ ಮತ್ತು ಸಂತೋಷಕುಮಾರ ಬಸು ಈ ಇಬ್ಬರು ಬಂಗಾಳ ಮಂತ್ರಿಗಳು ಡಾ। ಬಿ ಮುಖರ್ಜಿಯವರೊಡಗೂಡಿ ತ್ರಿಚಿನಾಪಳ್ಳಿ ಸೆರೆಮನೆಯಲ್ಲಿಟ್ಟಿರುವ ಸರತ್ ಬೋಸರನ್ನು ಭೇಟಿಯಾಗಲು ಬಂದಿರುವರು

ಕೇಂದ್ರ ಶಾಸನ ಸಭೆಯ ಮತದಾರರ ಪಟ್ಟಿ

ಯು ಮದ್ರಾಸು ಅಧಿಸತ್ಯದ ಎಲ್ಲ ಕ್ಷೇತ್ರಗಳಲ್ಲಿಯೂ ಮಾರ್ಚಿ 27ರೊಳಗೆ ಮುಗಿಯಬೇಕೆಂದು ಪ್ರಕಟಿಸಲಾಗಿದೆ

ಮಾರಾಟ ಕರದ ಸತ್ಯಾಗ್ರಹ

೧೦೮ ವ್ಯಾಪಾರಿಗಳ ಕೈದು

ಪಂಜಾಬಿನಲ್ಲಿ ವ್ಯಾಪಾರ ಕರದ ವಿರುದ್ಧ ವ್ಯಾಪಾರಿಗಳು ಹೂಡಿದ ಸತ್ಯಾಗ್ರಹದಲ್ಲಿ ೧೦೮ ಜನರು ಕೈದುಮಾಡಲ್ಪಟ್ಟಿರುವರು

'ನಾನೆಲ್ಲಿಯೂ ಹೋಗಿಲ್ಲ, ಇಲ್ಲಿಯೇ ಇರುವೆನು'

ರಂಗೂನ್ ಗವರ್ನರರ ಹೇಳಿಕೆ

ನಾನು ರಂಗೂನಿನಲ್ಲಿಲ್ಲವೆಂದು ದಟ್ಟವಾಗಿ ಸುದ್ದಿ ಹರಡಿದೆ, ಆದರೆ ನಾನು ರಂಗೂನನ್ನು ಬಿಟ್ಟು ಬೇರೆಲ್ಲಿಯೂ ಹೋಗಿಲ್ಲ ಅಲ್ಲಿಯೇ ಇರುವೆನೆಂದು ಬರ್ಮಾದ ಗವರ್ನರರು ಸಾರಿ ಹೇಳಿದ್ದಾರೆ

ಕ್ರಾಂತಿಕಾರರ ಉಪವಾಸ

ಬರ್ಲೈಲಿ ಜಿಲ್ಲೆಯ ಸೆರೆಮನೆಯಲ್ಲಿಡಲ್ಪಟ್ಟ ಎಂಟು ಮಂದಿ ಕ್ರಾಂತಿಕಾರ ಕೈದಿಗಳು ಫೆಬ್ರವರಿ ಒಂಬತನೆಯ ತಾರೀಕಿನಿಂದ ಉಪವಾಸ ಮುಷ್ಕರ ಹೂಡಿದ್ದಾರೆ. ಇವರು ತಮ್ಮ ಅವಶ್ಯಕವಾದ ಅಪೇಕ್ಷೆಗಳನ್ನು ಅಧಿಕಾರಿಗಳ ಮುಂದಿಡಲು ಇವುಗಳಿಗೆ ಯೋಗ್ಯ ಏರ್ಪಾಡು ಆಗಲಿಲ್ಲವೆಂದು ತಿಳಿದಿದೆ. ಡಿಯೋಲಿ ಬಂಧನ ಶಿಬಿರದ 28 ಮಂದಿ ಸೆಕ್ಯೂರಿಟಿ ಕೈದಿಗಳು ಫತೇಗಢ್ ಸೆಂಟ್ರಲ್ ಸೆರೆಮನೆಗೆ ವರ್ಗಾಯಿಸಲ್ಪಟ್ಟಿರುವರು.

ರಾಜಾಜಿ ಒಪ್ಪಂದ ನಡೆಸಲಿ

ಮುಸ್ಲಿಂ ಲೀಗ್ ಪತ್ರಿಕೆ ಹೇಳಿಕೆ

ಮುಸ್ಲಿಂ ಲೀಗ್ ಪತ್ರಿಕೆ 'ಮನ್‌ಶೂರ್' ರಾಜಾಜಿಯವರು ಮಾಡುತ್ತಿರುವ ಭಾಷಣಗಳ ವಿಷಯ ಬರೆಯುತ್ತಾ, ಇತ್ತೀಚೆಗೆ ಅವರು ಮಾಡುತ್ತಿರುವ ಭಾಷಣಗಳು ಯಥಾರ್ಥವಾಗಿವೆಯೆಂದೂ ಅವರು ಮುಸ್ಲಿಂ ಲೀಗಿನ ಹಾಗೂ ಜಿನ್ನರ ಕುರಿತು ಆಡಿದ ಮಾತುಗಳು ಯೋಗ್ಯವಾಗಿವೆಯೆಂದೂ, ದೇಶದಲ್ಲಿ ಮುಸ್ಲಿಂ ಲೀಗ್ ಹಾಗೂ ಕಾಂಗ್ರೆಸುಗಳೆಂಬ ಎರಡು ಮುಖ್ಯ ಪಂಗಡಗಳಿವೆಯೆನ್ನುವುದರಿಂದ ಮುಸ್ಲಿಂ ಲೀಗಿನ ಸ್ಥಾನವು ಎಷ್ಟು ದೊಡ್ಡದಿದೆಯೆಂದು ಗೊತ್ತಾಗುವುದೆಂದೂ ಹೇಳಿ, ಕಾಂಗ್ರೆಸು ಮತ್ತು ಮುಸ್ಲಿಂ ಲೀಗುಗಳೊಳಗೆ ಒಪ್ಪಂದ ಮಾಡಲು ರಾಜಗೋಪಾಲಾಚಾರ್ಯರು ಪ್ರಯತ್ನಿಸಬೇಕೆಂದು ಸೂಚಿಸಿದೆ ಭಾರತದ ರಕ್ಷಣೆ ಜವಾಬ್ದಾರಿಯು ಕೇವಲ ಭಾರತೀಯರದಾಗಿರಬೇಕೆಂಬುದು ಕಾಂಗ್ರೆಸ್ ಮುಸ್ಲಿಂ ಲೀಗುಗಳೆರಡರ ಅಭಿಪ್ರಾಯವಾಗಿದೆಯೆಂದೂ, ಭಾರತೀಯರೇ ಈ ಜವಾಬ್ದಾರಿಯನ್ನು ವಹಿಸಿಕೊಂಡಾಗ ಭಾರತದ ರಕ್ಷಣೆ ಯಶಸ್ವಿಯಾದೀತೆಂದೂ ನಾವು ಐಕ್ಯರಾಗಿ ಮತ್ತೆ ಬ್ರಿಟಿಷರನ್ನು ಎದುರಿಸೋಣವೆಂದೂ ಮೊದಲಾಗಿ ಸೂಚಿಸಿದೆ

ರಾಜಾಜಿ ಹೇಳಿದರು

ಹೊಸಪೇಟೆಯಲ್ಲಿ ನೆರೆದ ಸಾರ್ವಜನಿಕ ಸಭೆಯಲ್ಲಿ ಮಾತನಾಡುತ್ತಾ ರಾಜಾಜಿಯವರು, ಬ್ರಿಟಿಷರು ಸ್ವಾತಂತ್ರ್ಯ ಕೊಟ್ಟು ಸಹಾಯ ಪಡೆಯ ಪಡೆಯಬಹುದೆಂದೂ, ಸ್ವಾತಂತ್ರ್ಯ ಘೋಷಣೆ ಮಾಡಿದರೆ 40 ಕೋಟಿ ಭಾರತೀಯರೂ ಬಂದೂಕು ಹಿಡಿಯುವರೆಂದೂ ಹೇಳಿದರು

ಭಾರತಕ್ಕೆ ಸ್ವಾತಂತ್ರ್ಯ ಕೊಡಲು ಬ್ರಿಟಿಷ್ ಸರಕಾರದ ನಕಾರ

ಒಮ್ಮೆಯೇ ಸ್ವಾತಂತ್ರ್ಯವಿತ್ತರೆ ದೇಶ ಹಾಳಾಗುವುದಂತೆ

ಲಾರ್ಡ್ಸ್ ಸಭೆಯಲ್ಲಿ ಚರ್ಚೆ

ಲಾರ್ಡ್ಸ್ ಸಭೆಯಲ್ಲಿ ಭಾರತದ ಸ್ವಾತಂತ್ರ್ಯದ ವಿಷಯ ಚರ್ಚೆ ನಡೆದು, ಅನೇಕ ಮಂದಿ ಸದಸ್ಯರು ಮಾತನಾಡಿ, ಈ ಪ್ರಶ್ನೆಯನ್ನು ಬಿಡಿಸಲು ಕೂಡಲೇ ಏನಾದರೊಂದು ಯೋಜನೆಯನ್ನು ಕಂಡುಹುಡುಕಬೇಕೆಂದು ಅಂದರು. ಡೆವನ್‌ಶಾಯರ್ ಡ್ಯೂಕರು ಸರಕಾರದ ಪರವಾಗಿ ಉತ್ತರವಿತ್ತು ಭಾರತದ ಸಮಸ್ಯೆ ಬಗೆಹರಿಯದಿರುವುದಕ್ಕೆ ಭಾರತೀಯರೇ ಕಾರಣರೆಂದರು ಲಾರ್ಡ್ ಪ್ಯಾರೂರ್ ಎನ್ನುವರು ಮಾತನಾಡುತ್ತಾ ಭಾರತದ ಪ್ರಶ್ನೆ ಗಂಭೀರವಿದೆ, ಆದರೂ ಅದನ್ನು ಬಿಡಿಸುವ ವಿಚಾರ ಮಾಡಿಲ್ಲ, ಭಾರತೀಯರ ಸಮ್ಮತಿ ತೆಗೆದುಕೊಳ್ಳದೆ ಅವರ ಪರವಾಗಿ ಯುದ್ಧ ಹೂಡಿದ್ದು ಸರಿಯಲ್ಲ, ಈಗಲಾದರೂ ಹಿಂದೂಸ್ಥಾನಕ್ಕೆ ಸ್ವರಾಜ್ಯ ಕೊಡುವುದಾಗಿ ಬ್ರಿಟಿಷ್ ಸರಕಾರವು ಹೇಳಬಾರದೇ? ಸರಕಾರವು ಕೇವಲ ಮುಸ್ಲಿಂ ಲೀಗಿನ ಕೈಯ್ಯಲ್ಲಿ ಕುಣಿಯದೆ ಭಾರತದ ಸಮಸ್ಯೆಯನ್ನು ಬಿಡಿಸಬೇಕು ಎಂದು ವಾದಿಸಿದರು. ಮಾರ್ಕಿಸ್ ಕ್ರ್ಯೂರವರು ಮಾತನಾಡುತ್ತಾ 'ಕಾಂಗ್ರೆಸೊಂದೇ ಭಾರತದ ಪ್ರತಿನಿಧಿ ಸಂಸ್ಥೆಯೆಂದೂ ಭಾರತದ ಪ್ರಾಂತೀಯ ಅಧಿಕಾರಗಳನ್ನು ಕ್ರಮಪ್ರಕಾರ ಹೆಚ್ಚಿಸುವುದರಿಂದಲೆ ಭಾರತದ ಪ್ರಗತಿಯಾಗುವುದೆಂದೂ' ಹೇಳಿದರು. ವೆಜ್‌ವುಡ್ಡರು ಮಾತನಾಡಿ 'ಹಿಂದುಸ್ಥಾನವು ಜಪಾನರ ಸ್ವಾಧೀನವಾಗುವುದನ್ನು ತಪ್ಪಿಸಬೇಕು, ಹಿಂದುಸ್ಥಾನದಿಂದ ಸಂಪೂರ್ಣ ಸಹಾಯ ಸಿಗುವಂತೆ ಮಾಡಬೇಕು, ಹಿಂದುಸ್ಥಾನವು ಸ್ವತಂತ್ರವಾಗಿ ಬ್ರಿಟನಿನೊಡನೆ ಸಹಕರಿಸಬೇಕು' ಎಂದರು ಹಿಂದೀಯರ ಒಪ್ಪಿಗೆಯಿಲ್ಲದೆ ವೈಸರಾಯರು ಕೆಲಸಮಾಡುವುದು ಸರಿಯಲ್ಲವೆಂದು ರಾನ್‌ಕೀಲೋರವರು ನುಡಿದರು ಯುದ್ಧಕಾಲದಲ್ಲಿ ರಾಜಕೀಯ ಬದಲಾವಣೆ ಆಗಬಾರದೆಂಬುದು ಸರಿಯಲ್ಲವೆಂದೂ, ಇಂಗ್ಲೆಂಡು ಹಿಂದುಸ್ಥಾನದ ರಾಜಕೀಯ ಘೋಷಣೆ ಮಾಡಿದ್ದು ಯುದ್ಧಕಾಲದಲ್ಲಿಯೇ ಎಂದೂ ಲಾರ್ಡ್ ಹೈಲೆಯವರಂದರು ಕ್ಯಾಟೋ ಎಂಬವರು ಮಾತನಾಡುತ್ತಾ, ಭಾರತದ ಸಮಸ್ಯೆಯನ್ನು ಬಿಡಿಸಲು ಸಾಮಂತ ಸ್ವರಾಜ್ಯವನ್ನು ಕೊಡುವುದೊಂದೇ ಉಪಾಯವಂದರು

ಇದಕ್ಕೆಲ್ಲಾ ಬ್ರಿಟಿಷ್ ಸರಕಾರದ ಪರವಾಗಿ ಡೆವನ್‌ಶಯರಿನ ಡ್ಯೂಕರು ಉತ್ತರ ಹೇಳಿ ಅಗಸ್ಟ್ ಘೋಷಣೆಯನ್ನೆತ್ತಿ ಮಾತನಾಡುತ್ತಾ, ಹಿಂದುಸ್ಥಾನಕ್ಕೆ ಅಧಿಕಾರ ಕೊಟ್ಟರೆ ಅದನ್ನು ಅಲ್ಲಿಯವರೂ ಸ್ವೀಕರಿಸಬೇಕೆಂದೂ, ಈ ವಿಷಯ ಹಿಂದುಸ್ಥಾನದ ಪಕ್ಷಗಳು ಒಕ್ಕಟ್ಟಾಗಿ ಒಪ್ಪಂದ ಮಾಡಿಕೊಳ್ಳತಕ್ಕದೆಂದೂ, ಹೀಗಾಗದೆ ಸ್ವಾತಂತ್ರ್ಯ ಕೊಟ್ಟರೆ ಹಿಂದೂ ದೇಶವು ಅನಾಯಕತ್ವದಲ್ಲಿ ಮುಳುಗುವುದೆಂದು ನುಡಿದರು. ಇವರ ಭಾಷಣವನ್ನು ಅನೇಕ ಬ್ರಿಟಿಷ್ ಪತ್ರಿಕೆಗಳು ಟೀಕಿಸುತ್ತಾ 'ಇದು ಹಳೆಯ ಮತ್ತು ಹಳಸಿದ ಪಲ್ಲವಿ' ಎಂದು ನುಡಿದಿವೆ ವೈರಿಯು ಹತ್ತಿರ ಬಂದಾಗ ಹೀಗೆ ವರ್ತಿಸಬಾರದೆಂದು ಸೂಚನೆಯಿತ್ತಿವೆ.





ಜಿಲ್ಲಾ ಸಮಾಚಾರಗಳು

ಡಿ. ಬೋ. ಸಭೆ

ಈ ದಿನ ಬೆಳಗ್ಗೆ ಜಿಲ್ಲಾ ಬೋರ್ಡು ಆಫೀಸಿನಲ್ಲಿ ಸೇರಿ, ಉಡುಪಿ ಹೈಸ್ಕೂಲಿನ ವಿಚಾರ, ಕೆಲವು ಸಮಿತಿಗಳಿಗೆ ಹೊಸ ಸದಸ್ಯರನ್ನು ಆರಿಸುವ ವಿಚಾರ ಹಾಗೂ ಇತರ ಹಲವು ಕಾರ್ಯಗಳು ಜರಗಲಿವೆ.

ಶ್ರೀ ರಾಮಕೃಷ್ಣ ವಿದ್ಯಾರ್ಥಿ ವಿದ್ಯಾರ್ಥಿನೀ ಭವನದ ದಿನಾಚರಣೆ

ಆರೋಗ್ಯಕರವಾದ ಶರೀರ ಶಕ್ತಿ, ಬ್ರಹ್ಮಚರ್ಯ, ರಾಷ್ಟ್ರೀಯ ಮನೋಭಾವ ಇವುಗಳ ಬೆಳೆಸಿಕೊಂಡು ವಿದ್ಯಾರ್ಥಿಗಳು ಪೂರ್ಣತೆ ಹೊಂದಬೇಕು. ವಿದ್ಯಾರ್ಥಿಗಳಾಗಿರುವಾಗ ಶರೀರ ಶಕ್ತಿಯ ಕಡೆಗೆ ಹೆಚ್ಚಿನ ಗಮನಕೊಡಬೇಕು, ಉತ್ತಮ ಶರೀರ ಶಕ್ತಿಯುಳ್ಳವರು ಉತ್ತಮ ಬುದ್ಧಿಶಕ್ತಿಯನ್ನೂ ಗಳಿಸಿಕೊಂಡು ದೇಶದ ಸೇವೆಗೆ ಸಾಧಿಸಬಹುದು. ಬಂಟರ ವಿದ್ಯಾರ್ಥಿ ವಿದ್ಯಾರ್ಥಿನಿ ಭವನದ ಆಡಳಿತಗಾರರು ಈ ಕಡೆಗೆ ವಿಶೇಷ ಗಮನಕೊಟ್ಟು ಕೆಲಸಮಾಡುತ್ತಿರುವರೆಂದು ಕೇಳಿ ನಾನು ತುಂಬಾ ಸಂತೋಷಿಸುತ್ತೇನೆ" ಹೀಗೆಂದು ಕಳೆದ ಆದಿತ್ಯವಾರ ಸಂಜೆ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ (ಬಂಟರ ...ನೆ ನಾತವರ ವಿದ್ಯಾರ್ಥಿ ಭವನ) ಸೇರಿದ ಶ್ರೀ ರಾಮಕೃಷ್ಣ ವಿದ್ಯಾರ್ಥಿ ವಿದ್ಯಾರ್ಥಿನಿ ಭವನದ ವಾರ್ಷಿಕ ದಿನಾಚರಣೆಯ ಅಧ್ಯಕ್ಷಸ್ಥಾನದಿಂದ ಜಿಲ್ಲಾ ಜಡ್ಜರಾದ ಶ್ರೀ ಪಾರ್ಥಸಾರಥಿ ಅಯ್ಯರ್ ಉಪದೇಶವಿತ್ತರು. ಉತ್ಸವವು ಬಾಲಕರ ಈಶ ಪ್ರಾರ್ಥನೆಯಿಂದ ಆರಂಭವಾಯಿತು. ವಿದ್ಯಾರ್ಥಿ ಭವನದ ಮೇಲ್ವಿಚಾರಕರಾದ ಶ್ರೀ ...ಗ್ಗಪ್ಪ ಶೆಟ್ಟರು ಅಧ್ಯಕ್ಷರನ್ನು ಪೀಠವನ್ನಲಂಕರಿಸುವಂತೆ ಕೇಳಿಕೊಂಡು ಅವರ ಪರಿಚಯಮಾಡಿಕೊಟ್ಟರು. ಜತೆಕಾರ್ಯದರ್ಶಿಗಳಲ್ಲೊಬ್ಬರಾದ ಶ್ರೀ. ಶಿವರಾಮ ಹೆಗ್ಡೆಯವರು ವಿದ್ಯಾರ್ಥಿ ಭವನದ ವರದಿಯನ್ನೋದಿದರು. ವಿದ್ಯಾರ್ಥಿ ಭವನದ ವಿವಿಧ ಚಟುವಟಿಕೆಗಳು, ಮೇಲ್ವಿಚಾರದೊಂದಿಗೆ ಭವನದ ನಿವಾಸಿಗಳ ಸಹಕಾರ ಮೊದಲಾದ ವಿಷಯಗಳನ್ನೆತ್ತಿ ಹೇಳಿದರು. ಆ ಮೇಲೆ ವಿದ್ಯಾರ್ಥಿನೀ ಭವನದ ವರದಿಯನ್ನು ಓದಲಾಯಿತು. ಹೊಸತಾಗಿ ಸ್ಥಾಪಿತವಾದ ಈ ವಿದ್ಯಾರ್ಥಿನೀ ಭವನಕ್ಕೆ ಮಹಾಜನರು ಹೆಚ್ಚಿನ ಸಹಕಾರ ನೀಡಬೇಕೆಂದು ವರದಿಯಲ್ಲಿ ಕೇಳಿಕೊಳ್ಳಲಾಯಿತು. ಬೊಂಬಯಿ ಜಿ. ಎ. ಸರ್ಕಸ್ಸಿನವರು ರೂ 57-ರಷ್ಟು ಈ ವಿದ್ಯಾರ್ಥಿನೀ ಭವನದ ಸಲುವಾಗಿ ಸಹಾಯ ಪ್ರದರ್ಶನ ಮಾಡಿ ಧನ ಕೊಟ್ಟುದು ಪ್ರಶಂಸನೀಯವಾಗಿದೆ. ಹಾಗೆ ಏರ್ಪಡಿಸಿದ ಆ ಸರ್ಕಸು ಮೆನೇಜರ್ ಎಂ. ಕೆ. ಶೆಟ್ಟರನ್ನು ಅಭಿನಂದಿಸಲಾಯಿತು. ಆ ಮೇಲೆ ಭವನದ ಪ್ರಶಂಸನೆಯನ್ನು ಶ್ರೀ ರಾಮಕೃಷ್ಣ ಮಲ್ಲಿ...ಯವರು ಮಾಡಿದರು. ಅವರು ಅಳಿಯ ಸಂತಾನ ಕಟ್ಟಿನಲ್ಲಿ ಸುಧಾರಣೆಯಾಗಬೇಕೆಂದರು. ಬಂಟ ಸಮಾಜವು ಆಧುನಿಕ ವಿದ್ಯಾಭ್ಯಾಸದಲ್ಲಿ ಹಿಂದುಳಿದ ವಿಚಾರವನ್ನೆತ್ತಿ ಮಾತನಾಡಿದರು. ಆ ಮೇಲೆ ಬಂಟ ವಿದ್ಯಾರ್ಥಿಗಳ ಸಲುವಾಗಿ ಇಂತಹ ಉತ್ತಮ ವಿದ್ಯಾರ್ಥಿ ಭವನವನ್ನೇರ್ಪಡಿಸಿದ ಶ್ರೀ ಎ. ಬಿ. ಶೆಟ್ಟಿ ಮೊದಲಾದವರನ್ನು ಪ್ರಶಂಸಿಸಿದರು. ಅದಕ್ಕೆ ಉತ್ತರವನ್ನು ಜತೆಕಾರ್ಯದರ್ಶಿಗಳಲ್ಲೊಬ್ಬರಾದ ಶ್ರೀ ಮುತ್ತಯ್ಯ ಹೆಗ್ಡೆಯವರು ಕೊಟ್ಟರು. ಆ ಮೇಲೆ ವಿವಿಧ ಚಟುವಟಿಕೆಗಳಲ್ಲಿ ಭಾಗವಹಿಸಿದ ಸ್ಪರ್ಧಾಳುಗಳಿಗೆ ಅಧ್ಯಕ್ಷರಿಂದ ಇನಾಮು ಹಂಚೋಣವಾಯಿತು. ಅನಂತರ ಅಧ್ಯಕ್ಷ ಭಾಷಣವಾಗಿ, ವಿದ್ಯಾರ್ಥಿ ವಿದ್ಯಾರ್ಥಿನಿ ಭವನದವರಿಂದ ನಾಟಕ (ಇಂಗ್ಲಿಷ್ ಮತ್ತು ಕನ್ನಡ) ನೃತ್ಯ ಸಂಗೀತಾದಿಗಳಾದ ಮೇಲೆ ವಂದೇ ಮಾತರಂದಿಂದ ಸಭಾಂತ್ಯವಾಯಿತು. ಆ ದಿನ ಪ್ರಾತಃ 8 ಗಂಟೆಗೆ ಲಘೂಪಹಾರವಿತ್ತು.

ಶ್ರೀ ಎಸ್. ಎನ್. ಹೊಳ್ಳರ ಬಂಧನ

ಭಾರತ ಸಂರಕ್ಷಣೆ ಕಾನೂನಿನ ನ್ವಯ ಮಂಗಳೂರು ಬೀಡಿಲೇಬರ್ ಯೂನಿಯನ್ ಅಧ್ಯಕ್ಷರಾದ ಶ್ರೀ ಎಸ್. ಎನ್. ಹೊಳ್ಳರನ್ನು ತಾ. 7ರಂದು ಬೆಳಗ್ಗೆ ಬಂಧಿಸಿ, ವೆಲ್ಲೂರು ಸೆರೆಮನೆಗೆ ಕೊಂಡೊಯ್ದರೆಂದು ತಿಳಿದಿದೆ.

ಪ್ರಕಾಶ ಎಸೋಸಿಯೇಶನ್

ಇದರ ವರ್ಧಂತ್ಯುತ್ಸವವು ಕಳೆದ ಆದಿತ್ಯವಾರ ಕೆನರಾ ಹೈಸ್ಕೂಲ್ ಭುವನೇಂದ್ರ ಸಭಾಸದನದಲ್ಲಿ ಡಾ. ಗಿಂಧರ ರಾಯರ ಅಧ್ಯಕ್ಷತೆಯಿಂದ ನೆರವೇರಿತು. ಪ್ರಾತಃ ಸ್ಪರ್ಧೆಗಳೇ ಮೊದಲಾದವಿದ್ದು, ಸಂಜೆಗೆ ಫಲಹಾರ, ಗ್ರೂಪ್ ಫೋಟೋ, ಭಾಷಣವೇ ಮೊದಲಾದವುಗಳಿದ್ದುವು. ಪ್ರಕಾಶ ಎಸೋಸಿಯೇಶನಿನವರು ಸಾಹಿತ್ಯ ಸಂಬಂಧಿಸಿದ ವಿವಿಧ ಚಟುವಟಿಕೆಗಳನ್ನು ನಡೆಸುತ್ತಿರುವರು.

ಹರಿಕೀರ್ತನೆ.

ಕಳೆದ ತಾ. 8ನೇ ಆದಿತ್ಯವಾರ ಸಾಯಂಕಾಲ ನಾಲ್ಕು ಗಂಟೆಗೆ ಸ್ಥಳೀಯ ಶ್ರೀ ವಿಟೋಬ ದೇವಸ್ಥಾನದಲ್ಲಿ ಶ್ರೀ. ವೆಂಕಟ ಕವಿ ಕೀರ್ತನಕೇಸರಿ ನಿತ್ಯಾನಂದ ದಾಸರವರ 'ಭಕ್ತ ಪುರಂದರದಾಸ" ಎಂಬ ಹರಿಕೀರ್ತನೆಯು ನಡೆಯಿತು. ಇವರು ಬೇಗನೇ 'ಸಂತ ತುಕಾರಾಮ್" ಎಂಬ ಹರಿಕೀರ್ತನೆಯನ್ನು ಒಂದು ದಿಂಗಳ ತನಕ ನಡೆಸಲಿರುವರು.

ಹಿಂದುಸ್ಥಾನ ಸ್ಕೌಟ್ ಎಸೋಸಿಯೇಶನ್

ಇದರ ಸಾಮಾನ್ಯ ಸಭೆಯು ಕಳೆದ ಆದಿತ್ಯವಾರ ಬೆಸೆಂಟ್ ಗರ್ಲ್ಸ್ ಸ್ಕೂಲಿನಲ್ಲಿ ಶ್ರೀಮತಿ ಎಂ. ಮಾಧವರಾಯರ ಅಧ್ಯಕ್ಷತೆಯಲ್ಲಿ ಜರಗಿ ಜಿಲ್ಲಾ ಸ್ಕೌಟ್ಸ್ ಕಮಿಶನರಾದ ಶ್ರೀ ಎಂ. ಯಸ್. ಮಾಧವರಾಯರು ವರದಿಯನ್ನೋದಿದ ಬಳಿಕ ಮುಂದಿನ ವರ್ಷದ ಕಾರ್ಯಕಾರೀ ಮಂಡಳವನ್ನು ಆರಿಸಲಾಯಿತು.

ಆರ್ಯ ಸಮಾಜ

ಇದರ ..ನೇ ವಾರ್ಷಿಕೋತ್ಸವವೂ, ಶ್ರೀ ಶ್ರದ್ಧಾನಂದ ಅನಾಥಾಶ್ರಮದ ದ್ವಿತೀಯ ವರ್ಧಂತ್ಯುತ್ಸವವೂ ತಾ. 1..ರಂದು ಬೆಳಗ್ಗೆ ಸನ್ಯಾಸಿಗುಡ್ಡೆಯ ಸಮಾಜ ಮಂದಿರದಲ್ಲಿ ಶ್ರೀ ಪಾರ್ಥಸಾರಥಿ ಅಯ್ಯರ ಅಧ್ಯಕ್ಷತೆಯಿಂದ ಜರಗಲಿರುವುದು.

ಈಶ್ವರಾನಂದ ಮಹಿಳಾ ಸೇವಾಶ್ರಮ

ಇದರ ಡಿ. ಎನ್. ಸಿರೂರ್ ಬ್ಲಾಕಿನ ಪ್ರವೇಶೋತ್ಸವವೂ, ಹ್ಯಾಂಡಿಕ್ರಾಫ್ಟ್ ಪ್ರದರ್ಶನವೂ ತಾ. 1..ರಂದು ಬೆಳಗ್ಗೆ ಮತ್ತು ಸಂಜೆ ಹೊತ್ತು ಕ್ರಮವಾಗಿ ಜರಗಲಿರುವವು.

ದಕ್ಷಿಣ ಕನ್ನಡ ಜಿಲ್ಲೆ ಮತ್ತು ಅಳಿಯ ಕಟ್ಟು ಸಂಪ್ರದಾಯ

ಎಂಬೀ ವಿಷಯವನ್ನೆತ್ತಿ ಶ್ರೀ ಎಸ್. ಎಸ್. ಕಿಲ್ಲೆಯವರು ಸೈಂಟ್ ಎಲಾಶಿಯಸ್ ಕಾಲೇಜಿನ ಎಕಡಮಿ ಹಾಲಿನಲ್ಲಿ ಯೂನಿವರ್ಸಿಟಿ ಎಕ್ಸ್ಟೆಂಶನ್ ಬೋರ್ಡಿನ ಆಶ್ರಯದಲ್ಲಿ ಭಾಷಣ ಕೊಟ್ಟರು. ಶ್ರೀ ರಾಮಚಂದ್ರ ಅಯ್ಯರು ಉಪನ್ಯಾಸಕರನ್ನು ಪರಿಚಯ ಮಾಡಿಕೊಟ್ಟ ಮೇಲೆ ಶ್ರೀ. ಕಿಲ್ಲೆಯವರು ದಕ್ಷಿಣ ಕನ್ನಡದ ಈ ವಿಶಿಷ್ಟ ಕಟ್ಟಿನ ವಿಷಯ ಸುಮಾರು ಒಂದು ತಾಸಿನ ತನಕ ಮಾತನಾಡಿದರು. ಅಳಿಯ ಕಟ್ಟು ಕ್ರಮಬದ್ಧವಾಗಿದ್ದು ಹೇಗೆ ಹಿಂದಿನ ಕಾಲದಲ್ಲಿ ಸಮಾಜದ ವ್ಯವಸ್ಥೆಗೆ ಉಪಯುಕ್ತವಾಗಿತ್ತೆಂದು ವಿವರಿಸುತ್ತಾ, ಇಂದಿನ ಕಾಲ ಪರಿಸ್ಥಿತಿಗನುಸಾರವಾಗಿ ಅದರಲ್ಲಿ ಬದಲಾವಣೆಯಾಗಬೇಕಾಗಿದೆಯೆಂದು ಅಭಿಪ್ರಾಯವಿತ್ತರು. ಶ್ರೀ ಅಯ್ಯರು ಕೃತಜ್ಞತೆ ಹೇಳಿದರು.

ಶಿವರಾತ್ರಿ

ಈ ಹಬ್ಬದ ಹೆಸರಲ್ಲಿ, ಕೆಲವರು ತಂಟೆ ಪೋಕರಿಗಳನ್ನು ಮಾಡುವುದು ಬಹಳ ಕಾಲದ ಕೆಟ್ಟ ಅಭ್ಯಾಸವಾಗಿ ಬಿಟ್ಟಿದೆ. ಇಂತಹ ತಂಟೆಪೋಕರಿಗಳಿಂದ ನಗರನಿವಾಸಿಗಳಿಗೆ ಎಷ್ಟರ ಮಟ್ಟಿಗೆ ತೊಂದರೆಗಳುಂಟಾಗುತ್ತದೆಯೆಂಬುದನ್ನು ವಿಚಾರಿಸಬೇಕು. ಕಳೆದ ವರ್ಷ ನಮ್ಮ ಮಂಗಳೂರು ಮುನ್ಸಿಪಾಲಿಟಿಯವರು ಈ ಕುರಿತು ಒಂದು ಮನವಿ ಹೊರಡಿಸಿದಂತೆ, ನಾವೂ ಪತ್ರಿಕೆಯಲ್ಲಿ ಆ ಕುರಿತು ಪ್ರಕಟಣೆ ಕೊಟ್ಟಿದ್ದೆವು. ಕಳೆದ ಶಿವರಾತ್ರಿಯಲ್ಲಿ ತಂಟೆ ತಕರಾರುಗಳು ಬಹಳ ಮಟ್ಟಿಗೆ ಕಡಿಮೆಯಾಗಿತ್ತೆಂದು ಮುನ್ಸಿಪಲ್ ಕಮಿಶನರು ತಿಳಿಸುತ್ತಾರೆ. ಈ ವರ್ಷವೂ ನಾಗರಿಕರು ಶಿವರಾತ್ರಿಯ ಸಂದರ್ಭದಲ್ಲಿ ನಗರದ ಶಾಂತಿ ಸೌಕರ್ಯಗಳನ್ನು ಕಾಪಾಡುವುದರಲ್ಲಿ ಮುನ್ಸಿಪಾಲಿಟಿಯ ವರೊಡನೆ ಸಹಕರಿಸಬೇಕಾಗಿ ನಾವು ವಿನಂತಿಸಿಕೊಳ್ಳುತ್ತೇವೆ.

ಕಯ್ಯೂರು ಮೊಕದ್ದಮೆಯ ತೀರ್ಮಾನ

ಒಂಭತ್ತು ಜನರಿಗೆ ಫಾಶಿ; ಒಬ್ಬನ ಕುರಿತು ಸರಕಾರಕ್ಕೆ ಬರೆಯಲಾಗುವುದು

೧೭ ಮಂದಿಗೆ ಕಠಿಣ ಶಿಕ್ಷೆ

ದಶಂಬರ 1ರಿಂದ ಜನವರಿ 31ರ ತನಕ ಎರಡು ತಿಂಗಳ ವರೆಗೆ ಜಿಲ್ಲಾ ಕೋರ್ಟಿನಲ್ಲಿ ಜಿಲ್ಲಾ ಜಡ್ಜ್ ಶ್ರೀ. ಪಾರ್ಥಸಾರಥಿ ಅಯ್ಯರ ಮುಂದೆ ವ್ಯವಹರಣೆ ನಡೆಯುತ್ತಿದ್ದ ಕಯ್ಯೂರು ಮೊಕದ್ದಮೆಯ (ಪೋಲೀಸ್ ಕಾನ್‌ಸ್ಟೇಬಲ್ ಸುಬ್ರಾಯನೆಂಬವನನ್ನು ಕೊಂದ ಆರೋಪದ) ತೀರ್ಮಾನವನ್ನು ಕಳೆದ ಸೋಮವಾರ ಅಪರಾಹ್ನ ಓದಿ ಹೇಳಲಾಯಿತು. ಇದರಲ್ಲಿನ ಒಟ್ಟು ಆರೋಪಿತರು 60 ಮಂದಿ; ಅವರಲ್ಲಿ 22 ಮಂದಿಗೆ ಶಿಕ್ಷೆ ವಿಧಿಸಿ 38 ಮಂದಿಯನ್ನು ಬಿಡುಗಡೆ ಮಾಡಿರುವರು. ಆರೋಪಿಗಳಲ್ಲಿ ನಂಬ್ರ 1, 13, 31, 32, 51ನೆಯವರಾದ ಮಠತ್ತಿಲ್ ಅಪ್ಪು, ಪೊಡವರ ಕುಂಞಂಬು ನಾಯರ್, ಚಿರುಕಂಡನ್, ಚೂರಿಕಾಡನ್ ಕೃಷ್ಣನ್ ನಾಯರ್ ಅಬೂಬಕರೆ ಇವರಿಗೆ ಮರಣ ದಂಡನೆಯನ್ನೂ ಮೂರು ವರ್ಷ ಕಠಿಣ ಶಿಕ್ಷೆಯನ್ನೂ ವಿಧಿಸಲಾಯಿತು. ಇವರಲ್ಲಿ ನಂ 32ನೇ ಚೂರಿಕಾಡನ್ ಕೃಷ್ಣನ್ ನಾಯರ್ ಮೈನರಾಗಿರುವುದರಿಂದ ಅವನ ಕೊಲೆಯ ಆರೋಪ ದಂಡನೆಯ ಕುರಿತು ಸರಕಾರಕ್ಕೆ ಬರೆದುಕೊಳ್ಳುವುದೆಂದೂ, ಅಲ್ಲಿ ವರೆಗೆ ಕನ್ನಾನೂರು ಜೈಲಿನಲ್ಲಿರಿಸುವುದೆಂದೂ ವಿಧಿಸಲಾಯಿತು. ಆರೋಪಿ ನಂಬ್ರ 26 ಮತ್ತು 47ನೆಯವರಾದ ಕೋರನ್ ಮತ್ತು ಕೊಟ್ಟನ್ ಇವರಿಬ್ಬರು ಮೈನರಾದುದರಿಂದ ಅವರನ್ನು ಪ್ರತಿಯೊಬ್ಬನಿಗೆ ಮೂರು ವರ್ಷ ಪ್ರಕಾರ ಸೀನಿಯರ್ ಸರ್ಟಿಫೈಡ ಶಾಲೆಯಲ್ಲಿಡುವುದಾಗಿ ವಿಧಿಸಲಾಗಿದೆ. ಆರೋಪಿ ನಂಬ್ರ 3, (ಪಯ್ಯನ್ ಕೇಳು ನಾಯರ್) 5, (ಬೆಳ್ಳುಂಗ) 9, (ಮೊಸವನ್ ಅಂಬು) 23, (ವಣ್ಣತ್ತಾನ್ ಚಂದು) 24 (ಕರಿಂಬು ವಲಪ್ಪಿಲ್ ಅಂಬು) 23 (ಪೊಕ್ಕ) 29 (ಕಂಡತ್ತಿಲ್ ಬೆಳುಂಗ) 0 (ಅಂಬಾಡಿ ಕುಂಞ) ಇವರಿಗೆ ಪ್ರತಿಯೊಬ್ಬರಿಗೂ 5 ವರ್ಷ ಕಠಿಣ ಶಿಕ್ಷೆಯೂ, ಆರೋಪಿ ನಂಬ್ರ 4 (ಕೊಟ್ಟುವಾಳ ಕೋರನ್) 6 (ಕುಟ್ಟಂಬಿ ವಳಪ್ಪಿಲ್ ರಾಮನ್) 35 (ಕೋಯನ್ ಕಣ್ಣನ್,) 36 (ಇಲಿಚ್ಚಿ ಕಣ್ಣನ್) 41 (ಕುಂಞಂಬು) 44 (ಟಾಜತ್ ಅಂಬಾಡಿ) 49 (ಕನ್ನಸ್‌ಗಲ್ ಯಾನೆ ಚೆಯನ್ ಪೊಕ್ಕನ್) ಇವರಿಗೆ ಪ್ರತಿಯೊಬ್ಬರಿಗೆ 3 ವರ್ಷ ಕಠಿಣ ಶಿಕ್ಷೆಯೂ ವಿಧಿಸಲಾಗಿದೆ.

ಈ ಮೊಕದ್ದಮೆಯು ಈ ಕೋರ್ಟಿನ ಇತಿಹಾಸದಲ್ಲಿಯೇ ಹೊಸತಾಗಿ ಬಹಳ ದೀರ್ಘ ಕಾಲದ ತನಕ ಇದರ ವ್ಯವಹರಣೆ ನಡೆಯಿತು. ತೀರ್ಮಾನಕೊಡುವ ಸಮಯ ಕೋರ್ಟು ತುಂಬ ಜನರು ಬಂದು ನೆರೆದಿದ್ದರು. ಇದರಲ್ಲಿ 74 ಮಂದಿ ಸಾಕ್ಷಿಗಳಿದ್ದರು. ಎಸೆಸರೆಲ್ಲರೂ ಆರೋಪಿತರು ಕೊಲೆಯ ಅಪರಾಧದಲ್ಲಿ ಅಪರಾಧಿಗಳೆಂದು ಹೇಳಿದ್ದರು.

ಮುನ್ಸಿಪಲ್ ಮೀಟಿಂಗು

ಕಳೆದ ಶನಿವಾರ ಸಂಜೆ ಚೇರ್‌ಮೇನ್ ಶ್ರೀ ವೆಂಕಟ್ರಾಯ ಬಾಳಿಗ ಎಂ. ಎಲ್. ಎ. ಇವರ ಅಧ್ಯಕ್ಷತೆಯಿಂದ ಜರಗಿ ಹಿಂದಿನ ಸಭೆಯಲ್ಲಿ ಬಾಕಿಯುಳಿದ ವಿಷಯಗಳನ್ನು ತೀರ್ಮಾನಿಸಲಾಯಿತು. ಲಾರಿಕಾರುಗಳ ಓಡಾಟಕ್ಕೆ ಅನಾನುಕೂಲವೆಂದು ಬಾಲಸಾಹಿತ್ಯದಿಂದ ಸೇವಿಗುಡ್ಡೆ ಜಂಕ್ಷನ್, ಮಹಮ್ಮಾಯಿ ದೇವಸ್ಥಾನದಿಂದ ಕೆನರಾ ಹೈಸ್ಕೂಲ್ ರಾಮರಾಯರಲ್ಲಿಯಿಂದ ವೆಬ್‌ಸ್ಟರ್ ಮಾರ್ಕೆಟ್‌ಗೆ ಹೋಗುವ ರಸ್ತೆಗಳನ್ನು ಆ ವಹಿವಾಟಿಕ್ಕೆ ಮುಚ್ಚಿಡುವ ಆಲೋಚನೆ ಮಾಡಲಾಯಿತು. ಅಸ್ಥಿತಿಕ ವ್ಯಾಪಾರದ ಕಾನೂನಿನ ನಿರ್ಬಂಧನೆಗಳನ್ನು ಮುನ್ಸಿಪಾಲಿಟಿಯ 5 ಮೈಲು ವಿಸ್ತೀರ್ಣದೊಳಗೆ ಅನ್ವಯಿಸುವಂತೆ, ಸರಕಾರಕ್ಕೆ ಅರಿಕೆಮಾಡಿಕೊಂಡು ವಿಜಿಲೆನ್ಸ್ ಕಮಿಟಿಗಳ ನಿರ್ಮಾಣವಾಗಬೇಕೆಂದೂ, ರಕ್ಷಣೆಯ ಕಾರ್ಯಗಳಿಗಾಗಿ ಭಗಿನೀ ಸಮಾಜದವರನ್ನು ಕೇಳಿಕೊಳ್ಳಬೇಕೆಂದೂ ಸೂಚಿಸಲಾಯಿತು. ನಗರದ ನೀರ ಸರಬರಾಯಿ ಮತ್ತು ಚರಂಡಿಗಳ ವ್ಯವಸ್ಥೆಯ ವಿಚಾರದಲ್ಲಿ ಒಂದು ಶಿಷ್ಟಮಂಡಳವು ಒಂದು ಮೆಮೊರಾಂಡಮ್ ಸಹಿತ ಜಿಲ್ಲಾ ಕಲೆಕ್ಟರರನ್ನು ಭೇಟಿಮಾಡಬೇಕೆಂದಾಯಿತು. ಮುನ್ಸಿಪಾಲಿಟಿ ಸಣ್ಣ ನೌಕರರ ವಸತಿಗಳಿಗಾಗಿ ಗ್ರೇಂಟು ದೊರಕದಿರುವುದರಿಂದ ಸರಕಾರವನ್ನು ಕೇಳಬೇಕೆಂದಾಯಿತು. ವೆಬ್‌ಸ್ಟರ್ ಮಾರ್ಕೆಟಿನ ಎರಡು ಬ್ಲಾಕುಗಳು ಪ್ರತ್ಯೇಕವಾಗಿದ್ದು, ಅವುಗಳ ಕೆಲಸವನ್ನು ಪೂರೈಸ ಬಹುದಾದ್ದರಿಂದ ಆ ಕುರಿತು ಸರಕಾರಕ್ಕೆ ಬರೆದುಕೊಳ್ಳುವುದೆಂದಾಯಿತು. ಹಂಪನಕಟ್ಟೆಯ ಗುಳಿಗಹಿತ್ತಿಲಿನಲ್ಲಿ ಹೊಸತಾಗಿ ತೆರೆದ ನಿಲ್ದಾಣದಲ್ಲಿ ಸ್ಪ್ರಿಂಗು ಇಲ್ಲದ ಗಾಡಿಗಳಿಗೆ ದಿನಕ್ಕೆ ೯ ಪೈಯಂತೆ, ಸ್ಪ್ರಿಂಗು ಇರುವುದಕ್ಕೆ ೯ ಪೈಯಂತೆ, ಮತ್ತು ಮೋಟರು ಕಾರಿಗೆ ದಿನಕ್ಕೆ ೧॥ ಆಣೆಯಂತೆ ಫೀಸು ಹೊರಿಸುವ, ಹಾಗೂ ತಿಂಗಳಿಗೆ ೧೦ ರೂಪಾಯಿ ಸಂಬಳದ ಒಬ್ಬ ಟೋಲ್ ಕಲೆಕ್ಟರರನ್ನು ನೇಮಿಸುವ ಸೂಚನೆ ಮಂಜೂರಾಯಿತು. ಧೂಳಿಲ್ಲದ ರಸ್ತೆ ತಯಾರಿಗೆ ಆಗತ್ಯವಿರುವ ಡಾಮ್ಬಾರ್ ಈಗ ದೊರೆಯದೆ ಇರುವುದರಿಂದ, ಅಂಥ ಕೆಲ ರಸ್ತೆಗಳಿಗಾಗಿ ಮಂಜೂರಾದ ಗ್ರಾಂಟಿನ ವಾಯಿದೆಯನ್ನು ಮುಂದುವರಿಸುವಂತೆ ಸರಕಾರಕ್ಕೆ ಬರೆದುಕೊಳ್ಳಬೇಕಾಗಿಯೂ, ಇಂಥ ಹಲವು ರಸ್ತೆಗಳ ಸಲುವಾಗಿ ಸರಕಾರದಿಂದ ಸಾಲವಾಗಿ ಪಡೆದ ರೂ ೩.., ೦೦೦ನ್ನು ಸರಕಾರಕ್ಕೆ ಹಿಂದೆ ಕಳುಹಿಸಬೇಕಾಗಿಯೂ ನಿರ್ಧರಿಸಲಾಯಿತು. ಎ. ಆರ್. ಪಿ. ಮತ್ತು ಇತರ ರಕ್ಷಣಾ ಯೋಜನೆಗಳನ್ನು ತಾವು ಜಾರಿಗೆ ತರುವೆವೆಂದು ಸರಕಾರದವರು ಹೇಳಿದ್ದನ್ನು ಒಪ್ಪಿಕೊಳ್ಳಲಾಯಿತು.

ಪಾಣೆಮಂಗಳೂರು

ಇಲ್ಲಿ ಇದೇ ತಿಂಗಳ ತಾ 31-1-42ರಂದು ಸರ್ಕಲಿನ ಕೊಂಗ್ರೆಸ್ ಆಫೀಸಿನಲ್ಲಿ ಕಮಿಟಿಯ ಅಧ್ಯಕ್ಷರಾದ ಶ್ರೀ ಪಿ. ಮಾಧವ ಶೆಡಿಯಾರರ ಅಧ್ಯಕ್ಷತೆಯಲ್ಲಿ ಕಮಿಟಿಯ ವಿಶೇಷ ಸಭೆಯು ಜರಗಿ ಕಮಿಟಿಯನ್ನು ಪುನರ್ಘಟಿಸಲ್ಪಟ್ಟಿತು. ಸಭೆಗೆ ಈ ಸರ್ಕಲಿನ ಜಿಲ್ಲಾ ಸತ್ಯಾಗ್ರಹಿಗಳನ್ನು ಆಮಂತ್ರಿಸಲಾಗಿತ್ತು. ಈ ಸರ್ಕಲಿನಲ್ಲಿ ರಾಜಕೀಯ ಪರಿಷತ್ತನ್ನು ಕರೆಯಬೇಕೆಂಬ ವಿಷಯ ಚರ್ಚಿಸಲ್ಪಟ್ಟು ಸರ್ವಾನುಮತದಿಂದ ಮಂಜೂರಾಯಿತು. ಈ ಬಗ್ಗೆ ಸ್ವಾಗತ ಸಮಿತಿಯೊಂದನ್ನು ಸ್ಥಾಪಿಸಲಾಯಿತು.

ಮಿತ್ರ ಮಂಡಳಿ — ಕೋಟೇಶ್ವರ.

ಮುದ್ದಣ ಜಯಂತಿ. ಕನ್ನಡ ಕವಿವರ ಮುದ್ದಣನ ಜಯಂತಿಯು ಮಿತ್ರಮಂಡಳಿ ಕೋಟೇಶ್ವರ ಇವರಿಂದ ತಾ 8ರಂದು ಕೋಟೇಶ್ವರ ಶಾಲಾ ವಠಾರದಲ್ಲಿ ಶ್ರೀ ವಿಷ್ಣುಕೈದಿಲಾಯರ ಅಧ್ಯಕ್ಷತೆಯಲ್ಲಿ ಆಚರಿಸಲ್ಪಟ್ಟಿತು. ಶಾಲಾ ಹುಡುಗರು ಮತ್ತು ಆಮಂತ್ರಿತರಿಂದೊಡಗೂಡಿ ಮುದ್ದಣನ ಭಾವಚಿತ್ರದೊಡನೆ ಮೆರವಣಿಗೆಯಾದಮೇಲೆ ಸಭೆಯ ನಡವಳಿಗೆ ಆರಂಭವಾಯಿತು. ಬೇಡಿಕೆ ಅಧ್ಯಕ್ಷರನ್ನು ಸೂಚಿಸೋಣ, ಸ್ವಾಗತ ಗೀತೆಯದನಂತರ ಮುದ್ದಣನವಿಷಯಭಾಷಣಗಳಾದುವು. ಕೋಟೇಶ್ವರ ಶಾಲಾಹುಡುಗರಿಂದ 'ಮುದ್ದಣ ಮನೋರಮೆ'ಯರ ಸಂವಾದ, ಕೋಲಾಟ 'ಮುದ್ದಣನ ನೆನಹು' ಎಂಬ ದೃಶ್ಯ ನಾಟಕಗಳಾದ ಮೇಲೆ ಶ್ರೀ ... ರಾಣೆಕರು ಧನ್ಯವಾದಗಳನ್ನರ್ಪಿಸಿದರು. 'ವಂದೇಮಾತರಂ' ಗೀತೆಯೊಂದಿಗೆ ಸಭೆ ಮುಗಿಯಿತು.

ಸಿನೆಮಾ ಪುಟ

ಪ್ರದೀಪ ಕವಿಯ 'ನಯಾಸಂಸಾರ'!

'ಚಲ್ ಚಲ್‌ರೆ ನವ್‌ಜವಾನ್' ಹಾಗೂ 'ಏಕ ನೈಯಾ ಸಂಸಾರ್' ಮೊದಲಾದ ಲೋಕಪ್ರಿಯ ಗೀತಗಳನ್ನು ಬರೆದು ಪ್ರಸಿದ್ಧರಾಗಿರುವ ಬಾಂಬೇ ಟಾಕೀಸ್‌ನ ಶ್ರೀ ಪ್ರದೀಪರು ತಮ್ಮ 'ನಯಾಸಂಸಾರ'ಕ್ಕಾರಂಭಿಸಿದ್ದಾರೆ. ಮೊನ್ನೆ ಬೊಂಬಾಯಿ ವಿಲೆಪಾರ್ಲೆಯಲ್ಲಿ ಅವರ ವಿವಾಹ ಸಮಾರಂಭ ನೆರವೇರಿತು.

ಶ್ರೀಮತಿ. ಪ್ರದೀಪ್ ನುರಿತ ನರ್ತಕಿಯರಲ್ಲೊಬ್ಬರಾಗಿದ್ದಾರೆ. ಪ್ರಖ್ಯಾತ ನರ್ತಕ ಉದಯಶಂಕರರು ಅವರ ನರ್ತನವನ್ನು ಕಂಡ ಬಳಿಕ ತಮ್ಮ ನರ್ತಕರ ಸಮೂಹಕ್ಕೆ ಅವರನ್ನು ಸೇರಿಸುವಂತೆ ಕೇಳಿಕೊಂಡರು. ಆದರೆ ಅವರ ತಾಯಿ ತಂದೆಗಳು ಅದಕ್ಕೆ ಸಮ್ಮತಿಸಲಿಲ್ಲ.

'ಏಕ ನಯಾಸಂಸಾರ ಬಸಾಲೆ' ಎಂದು ಹಾಡಿ ಜನರಿಗೆಲ್ಲ ಹುಚ್ಚುಹಿಡಿಸಿದ ಕವಿ ಪ್ರದೀಪರೇ ಇದೀಗ ತಮ್ಮ 'ನಯಾಸಂಸಾರ್' ಕಟ್ಟಿಕೊಂಡಿದ್ದಾರೆ. ಅವರ ಸಂಸಾರ ಸುಖಮಯವಾಗಲಿ!

೧೯೪೧ರಲ್ಲಿ ಉತ್ಕೃಷ್ಟವಾದುದೇನು?

ಅತ್ಯಂತ ಮನರಂಜಕ ಚಿತ್ರ: ಪರದೇಸಿ. ಅತ್ಯುತ್ಕೃಷ್ಟ ಚಿತ್ರ: ಲಗನ್. ವೈಭವಪೂರಿತ ಚಿತ್ರ: ಸಿಕಂದರ್. ಉತ್ಕೃಷ್ಟ ಅಭಿನಯ: 'ಲಗನ್'ನಲ್ಲಿ ಕಾನನ್. 'ಲಗನ್'ನಲ್ಲಿ ನವಾಬ್. ಉತ್ಕೃಷ್ಟ ನಿರ್ದೇಶನ: ಶ್ರೀ ನಿತಿನ್‌ಬೋಸ್. (ಲಗನ್) ತಾರಾಜನನ: ನಲಿನಿ ಜಯವಂತ. ಉತ್ಕೃಷ್ಟ ನರ್ತನ: ಸಾಧನಾಬೋಸ್. ಉತ್ಕೃಷ್ಟ ಹಾಸ್ಯಾಭಿನಯ: ಶ್ರೀ ವಿ. ಎಚ್ ದೇಸಾಯಿ. (ಬಂಧನ್) ಉತ್ಕೃಷ್ಟ ಸಂಗೀತ ಚಿತ್ರ: 'ಲಗನ್' ಹಾಗೂ 'ಖಜಾಂಚಿ'. ಉತ್ಕೃಷ್ಟ ಸಂಗೀತ: 'ಲಗನ್'ನಲ್ಲಿ ಕಾನನದೇವಿ. ಅತೀವ ನಿರಾಶೆ: ಸಬಿತಾದೇವಿ. ಯಶಸ್ವಿ ನಿರ್ಮಾತೃಗಳು: ಬಾಂಬೇ ಟಾಕೀಸ್. ಬಹುಕಾಲ ಸ್ಮರಣೆಯಲ್ಲಿರಬಲ್ಲ ಚಿತ್ರ: ಲಗನ್. ಶೋಚನೀಯ ಅಭಾವ: ಬಾರುವಾ ಚಿತ್ರ. ಅನೇಕ ಬಾರಿ ನೋಡಬಹುದಾದ ಚಿತ್ರಗಳು: ಲಗನ್, ನಯಸಂಸಾರ್, ಪಡೋಸಿ, ಸಿಕಂದರ್, ಪರದೇಸಿ, ಕೋಲಾಹಲಕಾರಕ ಬದಲಾವಣೆ: ನ್ಯೂಥಿಯೇಟರ್ಸಿನಿಂದ ಕಾನನ್, ಪ್ರಭಾತ್‌ನಿಂದ ಶಾಂತಾರಾಮ್, ನ್ಯೂಥಿಯೇಟರ್ಸಿನಿಂದ ಲೀಲಾ ದೇಸಾಯಿ. ವರ್ಷದ ಅತ್ಯಂತ ಲೋಕಪ್ರಿಯ ನಟ: ಮೋತೀಲಾಲ್. ಅತ್ಯಂತ ಲೋಕಪ್ರಿಯ ನಟಿ: ಲೀಲಾ ಚಿಟ್ನೀಸ್. ಲೋಕಪ್ರಿಯ ಗೀತ: ಚಲ್ ಚಲ್‌ರೆ ನವಜವಾನ್-ಹಾಗೂ 'ಏಕ್ ನಯಾ ಸಂಸಾರ್'. ಉತ್ಕೃಷ್ಟ ಸಿನೆಮಾ ಕತೆ: ನಯಾ ಸಂಸಾರ್. (ಶ್ರೀ ಕೆ. ಅಹಮ್ಮದ ಅಬ್ಬಾಸ್) ಉತ್ಕೃಷ್ಟ ಗೀತ ಲೇಖಕ: ಶ್ರೀ ಪ್ರದೀಪ. (ಬಾಂಬೆ ಟಾಕೀಸ್) ಸಂದೇಶಾತ್ಮಕ ಚಿತ್ರ: ಪಡೋಸಿ.

ಆಚಾರ್ಯರ ಆರ್ಟ್ ಪ್ರೊಡಕ್ಶನ್

ಎಂಬ ಹೆಸರಿನಿಂದ ಬೊಂಬಯಿ ಟಾಕೀಸಿನಲ್ಲಿದ್ದ ನಿರ್ದೇಶಕ ಆಚಾರ್ಯರು ತಮ್ಮದೇ ಆದ ಹೊಸ ಸಿನೆಮಾ ಕಂಪೆನಿಯನ್ನು ಪ್ರಾರಂಭಿಸಿದವರೆಂದೂ, ಬೊಂಬಯಿ ಟಾಕೀಸನ್ನು ಈಗ ಬಿಟ್ಟಿರುವರೆಂದೂ ಅವರ ಮೊದಲನೆಯ ಚಿತ್ರದಲ್ಲಿಯೇ ಕಿಶೋರ್‌ಸಾಹು, ಪ್ರತಿಮಾದಾಸ್‌ಗುಪ್ತ ಇವರು ಜತೆಯಾಗಿ ಅಭಿನಯಿಸಲಿರುವರೆಂದೂ, ಬಾಕ್ಸಿ ಮತ್ತು ಸುರೇಂದ್ರ ಬೆನರ್ಜಿಯವರು ಕಥಾಲೇಖಕರಾಗಿರುವರೆಂದೂ ತಿಳಿದಿದೆ.

ಮನೋರಮಾ ಮಾನನಷ್ಟ ವ್ಯಾಜ್ಯ

ದಲ್ಲಿ 'ಅಧಿಕಾರ' ಪತ್ರದ ಸಂಪಾದಕ ಶ್ರೀ ಹಸ್ನಿಯವರಿಗೆ ರೂ. ೫೦೦ ಜುಲ್ಮಾನೆಯಾಗಿದ್ದು ಅವರು ಲಾಹೋರಿನ ಸೆಶ್ಶನ್ ಜಡ್ಜರ ಕೋರ್ಟಿನಲ್ಲಿ ಅಪೀಲು ಮಾಡಿದ್ದು ಈಗ ರದ್ದಾಗಿದೆಯೆಂದೂ, ಜಡ್ಜರು ಕೆಳಕೋರ್ಟಿನ ತೀರ್ಮಾನವನ್ನು ಒಪ್ಪಿ ಜುಲ್ಮಾನೆಯ ರೂ. ೫೦೦ರಲ್ಲಿ ರೂ. ೩೦೦ ಮನೋರಮಾಳಿಗೆ ಸಲ್ಲಬೇಕೆಂದು ತೀರ್ಮಾನವಿತ್ತಿರುವರೆಂದೂ ಸುದ್ದಿ.

ಇನ್ನೊಂದು ತಾರೆ ಬೇಕು

ನಲಿನೀ ಜಯವಂತ್, ಶೇಕ್ ಮುಖ್ತಾರ್, ಯಶೋಧರಾ ಕಟ್ಜು ಮೊದಲಾದ ತಾರೆಗಳನ್ನು ಕಂಡುಹಿಡಿದ ನೇಶನಲ್ಸ್‌ನವರು 'ಅಪ್ನಾ ಪರಾಯಾ' ಎಂಬ ತಮ್ಮ ಮುಂದಿನ ಚಿತ್ರದ ಸಲುವಾಗಿ ಹೊಸ ತಾರೆಯನ್ನೊಬ್ಬಳನ್ನು ಹುಡುಕುತ್ತಿದ್ದಾರೆ. ಇದರಲ್ಲಿ ಸಾಹುಮೋದಕ್ ಮತ್ತು ಹಂಸಾವಾಡ್ಕರ್ ಪ್ರಮುಖ ಪಾತ್ರವಹಿಸುವರು.

ಭಾರತೀಯರು ಜಗತ್ತಿನ ಉತ್ತಮ ಫಿಲ್ಮ್ ರಚಯಿತರು

ಅಲೆಕ್ಸಾಂಡರ್ ಶಾರ ಪ್ರಶಂಸೆ

ಫಿಲ್ಮ್ ಎಡ್ವೈಸರಿ ಬೋರ್ಡಿನ ಕೆಲಸದಿಂದ ಸ್ವದೇಶಕ್ಕೆ ಮರಳಿದ ಅಲೆಕ್ಸಾಂಡರ್ ಶಾರವರು, ಹಿಂದುಸ್ಥಾನದ ಫಿಲ್ಮ್ ಸ್ಟುಡಿಯೋ, ಫಿಲ್ಮ್ ಟೆಕ್ನಿಶಿಯನ್ನರು ಇವರ ಕುರಿತು ಮಾತನಾಡುತ್ತಾ, ಜಗತ್ತಿನ ಉತ್ತಮ ಫಿಲ್ಮ್ ರಚಯಿತರ ಸಾಲಿನಲ್ಲಿ ಭಾರತೀಯರೂ ಇಂದು ಇರುವರೆಂದು ಹೇಳಿದರೆಂಬುದಾಗಿ ಡೇಲಿ ಟೆಲಿಗ್ರಾಫ್ ಸುದ್ದಿ.

ಶಾಂತಾಆಪ್ಟೆ ಎಲ್ಲಿದ್ದಾಳೆ?

ಶಾಂತಾಆಪ್ಟೆ ಈಗ ಪಂಚೋಲಿ ಆರ್ಟ್ ಪಿಕ್ಚರ್ಸಿನವರ ಜಮೀನ್ದಾರ್ ಚಿತ್ರದಲ್ಲಿ ಅಭಿನಯಿಸುತ್ತಿದ್ದಾಳೆ. ಆಪ್ಟೆಯ ಸಲುವಾಗಿ, ಪಂಚೋಲಿಯವರು ತಮ್ಮ 'ಪೂಂಜೀ' ಚಿತ್ರದ ತಯಾರಿಯನ್ನು ಮುಂದುವರಿಸಿರುವರು. ಮೋತಿ ಬಿ. ಗಿದ್ವಾನಿ ಮತ್ತು ಗುಲಾಮ್ ಹೈದರರು ಜಮೀನ್ದಾರ್ ನಿರ್ದೇಶಕರು. ಇವರಿಬ್ಬರು ಖಜಾಂಚಿ ಪ್ರಖ್ಯಾತರು.

ಇಂಗ್ಲೀಷನ್ನು ಬಹು ಸುಲಭವಾಗಿ ಕಲಿಸುವ ಸೆಲ್ಫ್ ಇಂಗ್ಲೀಷ್ ಸ್ಟಡಿ 2-2-0

SELF ENGLISH STUDY

ಕನ್ನಡ ಓದಲಿಕ್ಕೆ ತಿಳಿದವರು ಈ ಪುಸ್ತಕದಿಂದ ಒಬ್ಬರ ಸಹಾಯವಿಲ್ಲದೆ



ಇಂಗ್ಲೀಷು ಓದುವುದನ್ನೂ, ಮಾತನಾಡುವುದನ್ನೂ, ಇಂಗ್ಲೀಷಿನಲ್ಲಿ ಪತ್ರವ್ಯವಹಾರ ಮಾಡುವುದನ್ನೂ, 2 ತಿಂಗಳಲ್ಲಿ ಕಲಿತುಕೊಳ್ಳಬಹುದು. ಇಂಥಾ ಪುಸ್ತಕವನ್ನು ಇದುವರೆಗೆ ಯಾರೂ ತಯಾರಿಸಲಿಲ್ಲ. ೬೮೪ ಪೇಜುಗಳು ಇರುವ ದೊಡ್ಡ ಪುಸ್ತಕ.

ಕ್ರಯ ಪುಸ್ತಕ ಒಂದಕ್ಕೆ ರೂ. 2-2-0

M. G. ರಾಜನ್ ಅಂಡ್ ಕೊ.,
ಪೋಸ್ಟ್ ಬಾಕ್ಸ್ 231 ಮದರಾಸ್

ರೈಲು ಬಂಡಿಗಳ ಸಮಯ

ಇದೇ ಜುಲ್ಯಾ ತಾ. 1ರಿಂದ ವ್ಯತ್ಯಾಸವಾದ ರೈಲು ಬಂಡಿಗಳ ಸಮಯಗಳು ಈ ಕೆಳಗಿನಂತಿವೆ—

ಗಾಡಿಗಳು	ಹೊರಡುವ ಗಂಟೆ	ತಲ್ಪುವ ಗಂಟೆ
ಗೂಡ್ಸು ಬಂಡಿ	3.45 ರಾತ್ರಿ	9.25 ರಾತ್ರಿ
ಮಲಬಾರು ಎಕ್ಸ್‌ಪ್ರೆಸ್ (ಮೈಲ್)	9.5 ಬೆಳಿಗ್ಗೆ	5.15 ಸಾಯಂ.
ಜಾಲಾರ್ ಪೇಟೆ ಪೆಸೆಂಜರ್	12.0 ಮಧ್ಯಾಹ್ನ	3.55 ಸಾಯಂ.
ಕಣ್ಣನ್ನೂರು ವರೆಗೆ	5·52 ಸಾಯಂ.	9·40 ಪೂರ್ವಾಹ್ನ

HALFTONE & LINE
BLOCK MAKING
UNDERTAKEN
Sharada Press,
MANGALORE.

ಹುಣ್ಣುಗಳನ್ನು ತೀವ್ರವಾಗಿ ನಾಶಪಡಿಸಿರಿ

ಅತ್ಯಂತ ಬೇನೆಯ ಹುಣ್ಣು ಮತ್ತು ಚರ್ಮದ ನೂನತೆಗಳನ್ನು ತಕ್ಕುದಾದ ಸುಲಭ ರೀತಿಯಲ್ಲಿ ನಾಶಮಾಡಿರಿ. ಕುರು ಯಾ ಹುಣ್ಣನ್ನು ಬಿಸಿನೀರು ಮತ್ತು ಕುಟಿಕೂರಾ ಸಾಬೂನಿನಿಂದ (cuticura soap) ಚೆನ್ನಾಗಿ ತೊಳೆಯಿರಿ. ನಂತರ ಕುಟಿಕೂರಾ ಮುಲಾಮನ್ನು (cuticura ointment) ಚೆನ್ನಾಗಿ ಅದರ ಮೇಲೆ ಸವರಿ ಬಿಡಿರಿ. ಇದು ಕುರುಹುಣ್ಣು, ಮುದ್ದಣ ಕಾಲುಕುಂಟು ಮುಂತಾದ ಭಯಂಕರ ವ್ರಣಗಳಿಗೂ ಗುಣಕಾರಿಯಾದ ಚಿಕಿತ್ಸೆಯಾಗಿದೆ. ಕುಟಿಕೂರಾ ಮುಲಾಮು (cuticura ointment) ಚರ್ಮವ್ಯಾಧಿಯ ಮೂಲವನ್ನೇ ಹೊಕ್ಕು ತೀವ್ರವಾಗಿ ನೋವನ್ನೂ ಬಾತುವಿಕೆಯನ್ನೂ ಗುಣಮಾಡುತ್ತದೆ.

ಕುಟೂರಾ ಮುಲಾಮಿ (cuticura ointment) ನೆದುರು ಯಾವ ಕ್ರಿಮಿಗಳು ತಡೆಯವು. ಆದುದರಿಂದ ಕೊಳೆತು ವಿಷಕಾರಿಯಾಗಿ ಪರಿಣಮಿಸದಂತೆ ಇದು ಖಂಡಿತ ರಕ್ಷಿಸುವುದು. ರಕ್ಷಣೆಯ ಸಲುವಾಗಿ ಒಂದು ಟಿನ್ನು (cuticura) ಮುಲಾಮನ್ನು ಇಟ್ಟುಕೊಳ್ಳಿರಿ. ಕುಟಿಕೂರವು (cuticura) ಇತರ ಔಷಧಗಳಿಂದ ಗುಣಪಡಿಸಲಾಗದಂಥ ಚರ್ಮವ್ಯಾಧಿಗಳನ್ನು ನಾಶಪಡಿಸುವುದು ಒಂದು ವರ್ಷಕಾಲದಿಂದಿದ್ದುವ ಚರ್ಮವ್ಯಾಧಿಯನ್ನು ಒಂದೇ ಟಿನ್ನು ಮುಲಾಮು ಗುಣಪಡಿಸುವುದು

ಕುಟಿಕೂರಾ ಮುಲಾಮನ್ನು (cuticura ointment) ಗಜ್ಜಿ, ಕುರು, ವ್ರಣ, ಹುಣ್ಣು, ಮುದ್ದಣ, ವಿಷಕಾರಿಗಾಯ, ಉರಿ ಮುಂತಾದ ಎಲ್ಲಾ ಚರ್ಮಛಿದ್ರಗಳನ್ನೂ ಗುಣಪಡಿಸುತ್ತದೆ.



ಎಲ್ಲಾ ಕೆಮಿಸ್ಟರಲ್ಲಿಯೂ ಅಂಗಡಿಗಳಲ್ಲಿಯೂ ಮಾರಲ್ಪಡುತ್ತದೆ.

ಕುಟಿಕೂರಾಮುಲಾಮು
Cuticura Ointment

CANARA BANK LIMITED

Estd: 1906

(Incorporated in British India with limited liability)

ABSTRACT BALANCE SHEET AS AT 31st DECEMBER 1941

CAPITAL:	Rs.	As.	Ps.		Rs.	As.	Ps.
Subscribed	6,00,000	0	0	Fixed Capital Expenditure:—			
Paid up	4,21,676	3	1	Premises & Furniture	99,431	3	8
Reserve Funds	4,50,000	0	0	Advances to Customers			
Deposits	96,06,082	6	0	secured by Valuable securities	39,15,162	0	5
Due to Banker	Nil.			„ „ Bills of Exchange, etc.	12,50,722	1	11
Bills including liability for foreign bills as per contra.	13,71,976	12	9	Investments:	21,94,812	1	5
Items in transit & sundries	4,26,670	15	6	Bills, including foreign bills negotiated.	13,71,976	12	9
Net Profits	57,864	11	1	Branch adjustment & sundries.	3,17,345	6	8
				Cash on hand and at call with Bankers:	31,84,821	6	0
	1,23,33,771	0	5		1,23,33,771	0	5

On 19th January 1942 an issue of New Shares to the value of Rupees Fourteen lacs was oversubscribed within a few minutes of opening the lists.

ವಿಜ್ಞಾನಯುಗ

ಅಡಿಗೆ ಮನೆ ಸುಧಾರಣೆ

ಈ ವಿಷಯ ವೈಜ್ಞಾನಿಕರು ಹೆಚ್ಚಿನ ಮನಕೊಡಬೇಕಾಗಿದೆಯೆಂದು, ಇತ್ತೀ ೯ ಸೇರಿದ ಬ್ರಿಟಿಷ್ ವೈಜ್ಞಾನಿಕ ಪ್ರಗತಿ ಷತ್ತಿನ ಸಭೆಯಲ್ಲಿ ಡಾ। ಅಗ್ನೆಸ್ ಹೆಮ ನರು ಅಭಿಪ್ರಾಯಪಿತ್ತರು. ಇಂದಿನ ಡಿಗೆ ಮನೆ ಸಾಮಾನುಗಳು, ಗೃಹಿಣಿಗೆ ಂದು ಹೊರೆಯಾಗಿದೆಯೆಂದು ಅವರ ೀಳಿಕೆ. ಹಿಂದಿನ ಕ್ರಮದ ಅಡಿಗೆ ರೀತಿ ಳು ಇಂದು ಉಪಯುಕ್ತವಾಗಿಲ್ಲ. ಊಸ ತರದ ಅಡಿಗೆ ತಯಾರಿಸುವ ರೀತಿ ು ಈಗ ಬಹಳ ಖರ್ಚಿನದ್ದಾಗಿದೆ. ದರಲ್ಲಿ ಸೌಕರ್ಯವಿದ್ದರೆ ಅದನ್ನು ಶ್ವಿರ್ಯ ನಂತರು ಮಾತ್ರ ಇಟ್ಟುಕೊಳ್ಳ ಹುದು. ಆದರೆ ಬಡವರಿಗೂ ಉಪ ಯೋಗಮಾಡಲು ಸಾಧ್ಯವಾಗುವಂತೆ ಡಿಗೆ ಮನೆಯ ಸುಧಾರಣೆಗಳನ್ನು ಪ್ರ ಯೋಗಕ್ಕೆ ತರುವ ವಿಚಾರವಾಗಿ ವೈಜ್ಞಾ ಕರು ತೀವ್ರ ಆಲೋಚನೆಮಾಡಬೇಕಾ ದೆಯೆಂದು ಅವರು ಸೂಚನೆಯಿತ್ತಿರು ರು. ಒಟ್ಟಿನಿಂದ ಗೃಹಿಣಿಯರಿಗೆ ಹೆಚ್ಚು ಪ್ರಯಾಸವೂ ಆಗದೆ, ಗೃಹಸ್ಥರಿಗೆ ಹೆಚ್ಚು ಖರ್ಚೂ ತಗಲದ ರೀತಿಯಲ್ಲಿ ಆಗತ ಕ್ಕದ್ದು ಎಂಬುದು ಆ ಮಹನೀಯರ ಅಭಿಪ್ರಾಯ.

ಬ್ಲೇಕ್ ಔಟ್, ಆದಾಗ ಪೈಂಟುಗಳು

ಬ್ಲೇಕ್ ಔಟಿನ ಕತ್ತಲೆಯ ಕಾಲದಲ್ಲಿ ಈಗ ಪೈಂಟುಮಾಡುವಂತಹ ಒಂದು ಹೊಸ ತರದ ಉಪಯೋಗವನ್ನು ಕಂಡು ಹಿಡಿದಿದ್ದಾರೆ. ಈ ಪೈಂಟು ಕೊಟ್ಟಲ್ಲಿ ಒಳಗಿರುವ ವಸ್ತುಗಳು ಶುಭ್ರವಾಗಿ ಕಾ ಣುತ್ತವೆಯಂತೆ. ೧೦೦ ಫೀಟುಗಳಿಗಿಂತ ಎತ್ತರದಲ್ಲಿ ಇವು ಕಾಣಲಾರವು. ಹಗ ಲಿನ ಬೆಳಕಿನಿಂದ ಈ ಪೈಂಟುಗಳಿಗೆ ತನ್ನ ಪ್ರಕೃತೀ ಶಕ್ತಿ ಕೂಡುವುದರಿಂದ ಇದನ್ನು ಶಿಲ್ಟರುಗಳ ಗೋಡೆಗಳಿಗೆ ಮಾಡಿಬಿಟ್ಟರೆ ಬೇರೆ ಬೆಳಕು ಬೇಕೆಂದಿರುವುದಿಲ್ಲವೆಂದು ತಿಳಿದಿದೆ. ಆದಕಾರಣ ಈ ಪೈಂಟುಕೊ ಡುವ ಪ್ರಯೋಗವನ್ನು ಸರಕಾರದವರು ಈಗ ಆಲೋಚಿಸಿರುವರು.

ವಿಮಾನಧಾಳಿಯ ಭೀತಿ ಹೋಗಲು

ದಿನಂಪ್ರತಿ ಐದು ಮಿನಿಟುಗಳ ವರೆಗೆ ವಿಮಾನ ಧಾಳಿಯಾಗುವಾಗ ಉಂಟಾ ಗುವ ನಾನಾ ತರದ ಶಬ್ದಗಳನ್ನು ಪ್ರತಿ ಯೊಂದು ನಗರದ ರೇಡಿಯೋಗಳಲ್ಲಿ ಏರ್ಪಡಿಸಬೇಕೆಂದು ಡಾ। ಎ. ವಿ. ಕರ್ಶಿ ಲ್ ಎಂಬ ನರ ಮತ್ತು ಮಿದುಳು ಡಾಕ್ಟ ರರು ಬರೆಯುತ್ತಾರೆ. ಅಂತಹ ಶಬ್ದವ ನ್ನು ದಿನಂಪ್ರತಿ ಕೇಳುವುದೊಂದೇ ವಿಮಾ ನ ಧಾಳಿಯ ಭೀತಿಯನ್ನು ಹೋಗಲಾಡಿ ಸಲು ಉಪಾಯವೆಂದು ಅವರ ಅಭಿಪ್ರಾ ಯ. ದಿನಂಪ್ರತಿ ಅಂತಹ ಕಾರ್ಯಕ್ರಮ ವನ್ನು ರೇಡಿಯೋದಲ್ಲಿ ಡುವುದರಿಂದ,

ವಿಚಿತ್ರ ಪ್ರಪಂಚ

ಲೋಕಶಾಂತಿಗಾಗಿ ಯಜ್ಞ

ಹಿಂದುಗಳಲ್ಲಿ ಪುರಾತನ ಕಾಲದಿಂದ ಲೇ ಇಂತಹ ವಿಶ್ವಾಸವಿದೆ. 'ಕುಂಭಮೇ ಳ'ದ ಕಾಲದಲ್ಲಿ ಈ ವರ್ಷ ಇಂತಹ ಒಂದು ಮಹಾಯಜ್ಞವು ಆಚರಿಸಲ್ಪಟ್ಟಿ ತು. ಇದಕ್ಕೆ ಪರಮೇಶ್ವರ ದ್ವಿವೇದಿ ಎಂ ಬವರು ಪುರೋಹಿತರಾಗಿದ್ದರು. ಈ ಮ ಹನೀಯರು ಡಾಕ್ಕಾದ ಪ್ರಸಿದ್ಧ ಭೃಗು ಜ್ಯೋತಿಷ್ ಶಾಸ್ತ್ರಿಗಳು. ಈ ಯಜ್ಞವು ತ್ರಿವೇಣಿಯಲ್ಲಿ ಹದಿನೈದು ದಿನಗಳ ವರೆಗೆ ನಡೆಯಿತು. ಅಸಂಖ್ಯ ಜನಸಂದಣಿ ಈ ಯಜ್ಞವನ್ನು ಬಂದು ನೋಡುತ್ತಾ ಇದ್ದ ರು. ಪಂಡಿತ ದ್ವಿವೇದಿಯವರೊಡನೆ ಇನ್ನು ಎಂಟು ಮಂದಿ ಉಪಪುರೋಹಿತ ರೂ ಯಜ್ಞಮಾಡುತ್ತಿದ್ದರು. ಈ ಯಜ್ಞ ದ ಉದ್ದೇಶವೆಂದರೆ, 'ವಿಶ್ವಶಾಂತಿ' ಮ ತ್ತು 'ಭಾರತಮಂಗಲ' ಎಂದು ತಿಳಿದಿದೆ. ಅಲ್ಲಿ ನೆರೆದಿದ್ದ ಜನಸಮೂಹಕ್ಕೆ ಪ್ರತಿದಿ ನವೂ ಪ್ರಸಾದವನ್ನು ಹಂಚುತ್ತಿದ್ದರು.

ನಾಗರಿಕರು ತಾವು ಕೇಳುವ ಶಬ್ದವು ನಿಜವಾದುದೋ ರೇಡಿಯೋದ್ದೋ ಎಂ ದು ಗಮನಿಸದೆ ಸಾವಕಾಶವಾಗಿ ಭಯ ಭೀತಿಯಿಲ್ಲದೆ ಇರುವರೆಂದು ಅವರ ಊಹೆ. ಆದ್ದರಿಂದ ಇದನ್ನು ಬಿ. ಬಿ. ಸಿ. ಯವರು ಏರ್ಪಡಿಸಬೇಕೆಂದು ಅವರ ಸೂಚನೆ.

ಸ್ತ್ರೀ ಮನುಷ್ಯರು ಮತ್ತು ಕತ್ತಲು ಕುರುಡರು

ಬ್ರಿಟಿಷ್ ಸೈನ್ಯದಲ್ಲಿ ಕೆಲವು ಸ್ತ್ರೀ ಮ ನುಷ್ಯರು, ಎಂದರೆ ಹೆಂಗುಸು ಸ್ವಭಾವ ದ ಗಂಡುಸರು ಮತ್ತು ಕತ್ತಲು ಕುರು ಡರು ಎಂದರೆ ಕತ್ತಲೆಯಲ್ಲಿ ಸಂಪೂರ್ಣ ಕುರುಡಾಗಿ ಬಿಡುವ ಜನರು ಹಲವರು ಇರುವರು, ಅವರಿಗೆ ಈಗ ಚಿಕಿತ್ಸೆಮಾ ಡುತ್ತಿದ್ದಾರೆ. ಈ ತರದ ಜನರ ಮಾನ ಸಿಕ ಹಾಗೂ ಶಾರೀರಕ ದೌರ್ಬಲ್ಯಗಳ ಕುರಿತು ನುರಿತ ಡಾಕ್ಟರರು ಸಂಶೋಧನೆ ಗಳನ್ನು ಮಾಡುತ್ತಿದ್ದಾರೆ. ಸ್ತ್ರೀ ಸ್ವಭಾವ ದ ಪುರುಷರೆಂದರೆ ಹೆಚ್ಚಾಗಿ ಅವರು ಹುಡುಗಿಯರಂತೆಯೇ ನಟಿಸುವರು. ತಮ್ಮ ತಾಯಂದಿರ ಬಳಿಯೇ ಇರಲು ಆಶಿಸುವರು. ಹುಡುಗರ ಸಹವಾಸಕ್ಕೆ ಅಂಜುವರು. ಅವರು ಮದುವೆ ಮಾಡಿ ಕೊಂಡರೂ ಹೆಂಗುಸರ ಸಹವಾಸ ಮಾ ಡಲು ಹಿಂಜರಿವರು. ಎಂದರೆ ಹಲವರು ಇಂತಹವರಲ್ಲಿ, ಸಣ್ಣವರಿರುವಾಗಲೇ ತಂದೆಯನ್ನು ಕಳಕೊಂಡು ತಾಯ ಆರೈಕೆ ಯಲ್ಲಿದ್ದವರೋ, ಇಲ್ಲವೇ ತಂದೆ ಕೋ ಪಿಷ್ಟನಾಗಿ ತಾಯಿ ಬಳಿಯೇ ಇದ್ದವ ರೋ ಆಗಿರುತ್ತಾರೆ. ಕತ್ತಲಾದ ಕೂಡಲೇ ಸಂಪೂರ್ಣ ಕುರುಡರಾಗಿ ಬಿಡುವವರ ವಿಷಯವೆಂದರೆ, ಅವರು ಸೂರ್ಯ ಕಂ ತಿದರೆ ಸಾಕು, ಒಂದು ಹಜ್ಜೆ ಮುಂದಿಡ ಬೇಕಾದರೆ ಯಾರಾದರೂ ಅವರಿಗೆ ಕೈ ಕೊಟ್ಟು ನಡೆಸಬೇಕು.



ಕೊಳ್ಳಿರಿ

ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟುಗಳನ್ನು

BHUVANENDRA PRODUCTS LTD.,

Head Office and Factory:
KATAPADI S. Kanara

Depots:
1 Maharatha Galli, Hubli.
2 57 Big street, Triplicane, Madras.

" BHUVANENDRA "

Danthadvana Choorna

Economical in use. Cheapest in value Genuine in quality and choiced by all Antiseptic, astringent, aromatic. Useful in Pyorrhoea, Alveolaris. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ ಹಲ್ಲುಗಳೇ ಮುಖ್ಯ ಕಾರಣ

"ಭುವನೇಂದ್ರ"

ದಂತಧಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ವ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಸ್ಥಳೀಯ ಸ್ಟೋಕಿಸ್ಟರ —

ಮಂಗಳೂರು ಟ್ರೇಡಿಂಗ್ ಎಸ್ಸೋಸಿಯೇಶನ್ ಲಿಮಿಟೆಡ್, ರಥಬೀದಿ
ರಾಘವೇಂದ್ರ ರಂಗ ಶೈ, ಮರ್ಚಂಟ್, ರಥಬೀದಿ
ಡಾ। ಎಮ್. ಎಸ್. ಪ್ರಭು, M B B S ಸಿ ಪಿ ಸಿ ಬಿಲ್ಡಿಂಗ್.

The Bank of Mangalore Limited

HEAD OFFICE Mangalore

BRANCHES Moodabidri & Badubidri

ANNOUNCEMENT

On and from 1st February 1942 fixed deposits will be accepted at the following attractive rates

One year	4%
Two years or above	4½%

Interest Payable Quarterly

ಸರಕಾರದ ಹೊಸ ಪಾಠಪಟ್ಟಿಗನುಸಾರವಾಗಿ ಬರೆದ

ನವೀನ ಭೂವಿವರಣೆ

ವಾಸುದೇವರಾವ್, ಎಂ. ಎ. ಎಲ್. ಟಿ. (Dip Geography)
(ಭೂಗೋಳ ಶಾಸ್ತ್ರದಲ್ಲಿ ಡಿಪ್ಲೊಮಾ ಪಡೆದವರು)

ಈ ಪುಸ್ತಕಗಳನ್ನು ಪಡಕೊಂಡಲ್ಲಿ ವಿದ್ಯಾರ್ಥಿಗಳಿಗೆ ಎಟ್ಲಾಸ್ ಕೊಂಡುಕೊಳ್ಳುವ ಅವಶ್ಯವಿಲ್ಲ

ಪ್ರತಿ ಪುಸ್ತಕದಲ್ಲಿ ಬಣ್ಣಬಣ್ಣದ ಭೂಪಟಗಳಿವೆ

ಅನೇಕಾನೇಕ ಚಿತ್ರಪಟಗಳಿಂದ ಕೂಡಿದ್ದು, ಪಾಠ ಪಾಠದ ಅಂತ್ಯದಲ್ಲಿ ಅಭ್ಯಾಸಗಳನ್ನೂ ಮಾದರಿ ಪ್ರಶ್ನೆಗಳನ್ನೂ ಕೊಟ್ಟಿದೆ

4ನೆಯ ಪುಸ್ತಕ 6 ಆಣೆ, 5ನೆಯ ಪುಸ್ತಕ 7 ಆಣೆ 6, 7ನೆಯ ಪುಸ್ತಕಗಳು ಅಚ್ಚಿನಲ್ಲಿವೆ ಪುಸ್ತಕಗಳು ಬೇಕಾದಲ್ಲಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.

ದಿ ಕಂಬೈಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೋಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು

ಮಘೆ ಜಾತ್ರೆ

1ನೇ ಮಘೆ
ತಾರೀಕು 13-2-'42
ಮತ್ತು
14-2-'42

3ನೇ ಮಘೆ
ತಾರೀಕು 9-3-'42
ಮತ್ತು
10-3-'42

2ನೇ ಮಘೆ
ತಾರೀಕು 2-3-'42
ಮತ್ತು
3-3-'42

ಪುಣ್ಯ ಪ್ರದಾಯಿನಿ ನೇತ್ರಾವತಿ ಮತ್ತು ಕುಮಾರಧಾರಿ ನದಿಗಳ ಸಂಗಮಸ್ಥಾನವಾದ ಉಪ್ಪಿನಂಗಡಿಯಲ್ಲಿ ನಡೆಯುವ ಮಘೆ ಜಾತ್ರೆ ಸಮಯದಲ್ಲಿ ಉಪ್ಪಿನಂಗಡಿಗೆ ಅತ್ಯಲ್ಪ ಖರ್ಚಿನಲ್ಲಿ ಹೋಗಿ ಸಂಗಮ ಸ್ನಾನಮಾಡಿ ಪುಣ್ಯಾರ್ಜನೆ ಮಾಡಲಿಕ್ಕನುಕೂಲ ಸಮಯ.

ಇಂತಹ ಅತ್ಯಪೂರ್ವ ಸಂದರ್ಭವನ್ನು ಕಳಕೊಳ್ಳದಿರಿ

ಪ್ರಯಾಣಿಕರ ಪ್ರಯಾಣ ಸೌಕರ್ಯಗಳ ಕಡೆಗೆ ಹೆಚ್ಚಿನ ಗಮನಕೊಡಲಾಗುವುದು

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

ಬಿಡಿ ಸಂಚಿಕೆಗೆ ಒಂದಾಣೆ ವಾರ್ಷಿಕ ಚಂದಾ ರೂ. 2-0-0 ಅಂಚೆವೆಚ್ಚ ಸೇರಿ ರೂ. 2-13-0 Regd. No. M 3460

ಸ್ವದೇಶಾಭಿಮಾನಿ

[ಸಂಪುಟ 36] ತಾರೀಕು 13-2-1942 [ಸಂಚಿಕೆ 7]

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಸೊಂಟನೋವು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪ್ಪೋ.

ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

CONFIDENCE

IS A GREAT ASSET IN BUILDING BUSINESS.

The Bombay Life Assurance Co. Ltd.

Has to its credit such Confidence earned by its progress and service of over 33 years

It, therefore, pays you to insure or to represent by applying to:—

KOCHIKAR BROTHERS, LTD.,

Chief Agents for South India, Including Indian States, UDIPI.

Or any of their Branches at:—

MANGALORE,—CALICUT—MADRAS,

TRIVANDRUM,—BNGALORE, —and BOMBAY.

N. B: **Take advantage of our free advice based on 32 years experience**

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

★

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath, at the Sharada Press, Car Street, Mangalore.

Estd. 1906

ಸ್ವದೇಶಾಭಿಮಾನಿ

SWADESHABHIMANI

'ಬಂಧನ್'ದ ಭಾಗ್ಯನಟಿ
ಲೀಲಾ ಚಿಟ್ನಿಸ್

KANNADA ILLUSTRATED WEEKLY

ಕಾಂಗ್ರೆಸಿನ ಕೋಶಾಧಿಕಾರಿ

ಜಮ್ನಾಲಾಲ ಬಜಾಜರ ನಿಧನ

ಅಖಿಲ ಭಾರತ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸದಸ್ಯರೂ, ಭಾರತಧೀರಯೋಧರೂ ಮಹಾತ್ಯಾಗಿಗಳೂ, ನಿಸ್ಸೀಮ ದೇಶಭಕ್ತರೂ ಆದ ಸೇಠ್ ಜಮ್ನಾಲಾಲ ಬಜಾಜರು ತಾ. ೧೧ರಂದು ಅಪರಾಹ್ನ ೪ ಗಂಟೆಗೆ ಆಕಸ್ಮಾತ್ ಹೃದಯಸ್ತಂಭನದಿಂದ ವಿಧಿವಶರಾದರೆಂದು ಕೇಳಿ ದೇಶದ ಆದ್ಯಂತವೂ ದುಃಖಸಾಗರದಲ್ಲಿ ಅದ್ದಿದೆ. ಇವರು ಕಾಂಗ್ರೆಸಿನ ಕೋಶಾಧ್ಯಕ್ಷರಾಗಿದ್ದರು ಇವರಿಗೆ ೫೩ ವರ್ಷಗಳ ವಯಸ್ಸಾಗಿತ್ತು. ನಿರಂತರ ಚಟುವಟಿಕೆಯಿಂದಿದ್ದು, ದೇಶ

ಸೇವೆಯಲ್ಲಿ ಅತ್ಯಂತ ಉತ್ಸಾಹದಿಂದ ಪಾತ್ರವಹಿಸಿದ್ದು, ರಾಷ್ಟ್ರಸೇವೆಯನ್ನ ಜೀವನದ ಉಸಿರಾಗಿ ಮಾಡಿಕೊಂಡಿದ್ದರು ದೇಶಸೇವೆಯೇ ಈಶಸೇವೆಯೆಂದು ಮನಗಂಡ ಈ ಅತಿ ಶ್ರೈಶ್ವರ್ಯಶಾಲಿಗಳಾದ ಮಹನೀಯರು, ದೇಶಸೇವೆಯ ಸಲುವಾಗಿ ತನ್ನ ಐಶ್ವರ್ಯದ ಬಹಳ ಭಾಗವನ್ನು ರಾಷ್ಟ್ರಕ್ಕೆ ದಾನಮಾಡುತ್ತಿದ್ದರು ಕಳೆದ ಇಪ್ಪತ್ತು ವರ್ಷಗಳಿಂದ ಇವರು ಕಾಂಗ್ರೆಸಿನಲ್ಲಿ ಚಟುವಟಿಕೆಯಿಂದ ಕಾರ್ಯಗಳಲ್ಲಿ ಸೇರಿಕೊಂಡಿದ್ದು ಕಾಂಗ್ರೆಸಿಗೆ ಇವರ ನಿಧನದಿಂದ ಮಹಾನಷ್ಟವುಂಟಾಗಿದೆ ಬಜಾಜರು ಗಾಂಧಿಜಿಯವರ ಬಲಗೈಯ್ಯಂತಿದ್ದರು.

ಜೀವನ ಚರಿತ್ರೆ

ಸೇಠ್ ಜಮ್ನಾಲಾಲ ಬಜಾಜರು ಜಯಪುರ ಸಂಸ್ಥಾನದಲ್ಲಿ ೧೮೮೯ರ ನವಂಬರ ತಿಂಗಳಲ್ಲಿ ಕುಲೀನ ಮಾರ್ವಾಡಿ ಕುಟುಂಬದಲ್ಲಿ ಜನ್ಮವೆತ್ತಿದ್ದರು ೧೯೨೦ರಿಂದ ಇವರು ಕಾಂಗ್ರೆಸಿಗೆ ಸೇರಿ ಸಾರ್ವಜನಿಕ ಚಟುವಟಿಕೆಗಳಲ್ಲಿ ಆಸಕ್ತಿ ತೋರಿಸಿದರು. ತಮ್ಮ ರಾವ್ ಬಹದ್ದೂರ್ ಬಿರುದನ್ನು ಅಲ್ಲಗಳೆದರು ಬಜಾಜರು ನಾಗಪುರ ಕಾಂಗ್ರೆಸಿನ ಸ್ವಾಗತಾಧ್ಯಕ್ಷರಾಗಿದ್ದರು ಅನೇಕ ವೇಳೆ ಕಾಂಗ್ರೆಸಿಗೆ ಬಜಾಜರು ಸಹಾಯಮಾಡಿದ್ದರು ರಚನಾತ್ಮಕ ಕಾರ್ಯಕ್ರಮಗಳಲ್ಲಿ ವಿಶೇಷ ಶ್ರದ್ಧೆ ವಹಿಸುತ್ತಿದ್ದರು ಇವರು ದಾನವಾಗಿ ಕೊಟ್ಟಿರುವ ನಿಧಿಗಳ ಪಟ್ಟಿ ನೋಡಿದರೆ ೨೫ ಲಕ್ಷ ರೂಪಾಯಿಗಳಿಗಿಂತ ಮಿಗಿಲಾಗುವುದು. ಖಾದಿ ಕೈಗಾರಿಕೆಯನ್ನು ಒಂದು ಜೀವಂತ ಸ್ಥಿತಿಗೆ ತರುವುದರಲ್ಲಿ ಇವರು ಬಹಳ ಯತ್ನಿಸಿದವರು. ವಾರ್ಧಾದಲ್ಲಿ ಗಾಂಧಿ ಸೇವಾಸಂಘವನ್ನು ಸ್ಥಾಪಿಸಿದರು ಅಖಿಲ ಭಾರತ ಚರಕಾ ಸಂಘಕ್ಕೆ ಇವರು ೧೯೨೫ರಿಂದ ಕೆಲಕಾಲ ಅಧ್ಯಕ್ಷರಾಗಿದ್ದರು ಎಂಟುಸಲ ಇವರು ಸತ್ಯಾಗ್ರಹಮಾಡಿ ಕಾರಾಗೃಹದ ಸಂಕಷ್ಟಗಳನ್ನು ಅನುಭವಿಸಿದ್ದಲ್ಲದೆ ಸರಕಾರಕ್ಕೆ ತುಂಬಾ ಜುಲ್ಮಾನೆ ತೆತ್ತು ನಷ್ಟ ಹೊಂದಿರುವರು ವಾರ್ಧಾದಲ್ಲಿ ಇವರು ಹರಿಜನರಿಗಾಗಿ ಲಕ್ಷ್ಮೀನಾರಾಯಣ ದೇವಸ್ಥಾನವೊಂದನ್ನು ಕಟ್ಟಿಸಿರುವರು. ಕಾಂಗ್ರೆಸಿಗೆ ಇವರು ೧೨ ಲಕ್ಷ ರೂಪಾಯಿ ದಾನಮಾಡಿದ್ದಾರೆ ಬಜಾಜರು ಪತ್ನೀ ಪುತ್ರರೆಲ್ಲರೂ ನಿಶ್ಚಲ ದೇಶಪ್ರೇಮಿಗಳು, ಕಾಂಗ್ರೆಸ್ ಭಕ್ತರು ಹೀಗೆ ರಾಜರ್ಷಿಯಂತೆ ಮೆರೆದ ಬಜಾಜರು ಇಂದು ಕಣ್ಮರೆಯಾದ ವಿಷಯ ದೇಶದ ಆದ್ಯಂತದಲ್ಲಿ ಅಪಾರ ಸಂತಾಪವುಂಟಾಗಿದೆ ಭಗವಂತನು ಅವರ ಆತ್ಮಕ್ಕೆ ಚಿರಶಾಂತಿಯನ್ನೀಯಲಿ!

ಅದು ಮುಂದೆ ಅಪಾಯಕರ-ತುರಿ ಕಜ್ಜಿ ಆಗುವುದು

ಜಾಂಬಕ್ ನಿಮ್ಮ ಚರ್ಮ ಬಾಧೆಯನ್ನು ಪರಿಹರಿಸಿ ಗುಣಪಡಿಸುತ್ತದೆ.

ಆ ಸಣ್ಣ, ದೊರಗು ಕಜ್ಜಿಗಳೇ ಮುಂದೆ ಅಪಾಯ ತುರಿ ಕಜ್ಜಿಯ ಪೂರ್ವ ಚಿಹ್ನೆಗಳು ಆದ್ದರಿಂದ ಅಂತಹ ತುರಿಸುವಿಕೆಯ ಕಜ್ಜಿಗಳನ್ನು ಮರೆಯಬೇಡಿರಿ ಪ್ರತಿದಿನ ರಾತ್ರಿ ಅದರ ಮೇಲೆ ಜಾಂಬಕ್ ಲೇಪ ಹಚ್ಚಿರಿ ಜಾಂಬಕ್ ಶುದ್ಧಿ ಮಾಡಿದ ವನೌಷಧಿ ಸತ್ವವಾಗಿದೆ, ನೋವನ್ನು ಕಡಿಮೆ ಮಾಡಿ ಬಾತುಹೋದುದನ್ನು ಗುಣಪಡಿಸುತ್ತದೆ ವಿಷಕಾರಕ ಕ್ರಿಮಿಗಳನ್ನು ಜಾಂಬಕ್ ನಾಶಗೊಳಿಸಿ ಕಲೆಯಿಲ್ಲದಂತೆ ಕಜ್ಜಿಗಳನ್ನು ಗುಣಮಾಡುವುದು, ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ಜಾಂಬಕ್ ಒಂದು ರೂಪಾಯಿ ಬೆಲೆಗೆ ಇಲ್ಲವೇ 2-1-0ಗೆ ಸಿಗುತ್ತದೆ ಜ್ಯಾಂಬಕ್ ಸೋಪಿಗೆ ಒಂದು ರೂಪಾಯಿ ಪೌಡರಿಗೆ ಒಂದು ರೂಪಾಯಿ

ಏಜಂಟ್ಸ್

ಮೆಸರ್ಸ್ ದಾಧಾ ಎಂಡ್ ಕೊ
ಓ. ಟಿ ಮದರಾಸು.

ಯಾವಾಗಲೂ ಜಾಂಬಕನ್ನುಪಯೋಗಿಸಿರಿ

ZAM-BUK

ಪ್ರಾಣಿಕೊಬ್ಬು ವಿರಹಿತವಾದುದು

ಗರ್ಭಾಶಯ ರೋಗ ನಿವಾರಿಣಿ

ಋತುಶೂಲೆ
ಅಕಾಲ ಬಹಿಷ್ಟೆ
ಮುಟ್ಟಾಗದಿರುವಿಕೆ
ವಿಪರೀತ ರಕ್ತಸ್ರಾವ
ಸ್ರಾವ ಕಮ್ಮಿಯಾಗಿ ಹೋಗುವುದು
ಸಂತಾನ ಹೀನತೆ
ಬಿಳೀ ಸೆರಗು
ಶರೀರವು ಸ್ಥೂಲವಾಗುವುದು

ಮುಂತಾದ ವ್ಯಾಧಿಗಳನ್ನು ಹೋಗಲಾಡಿಸುವುದು

ಎಲ್ಲಾ ಕೆಮಿಸ್ಟರಲ್ಲಿಯೂ ದೊರೆಯುವುದು

ಆಯುರ್ವೇದಾಶ್ರಮಂ
ಮದರಾಸು.

ಇಂಗ್ಲಿಷ್ ಭಾಷೆಯನ್ನು ಬಹು ಸುಲಭವಾಗಿ ಕಲಿಸುವ ಪುಸ್ತಕ

SELF ENGLISH TUTOR

ಸ್ವಯಂ ಇಂಗ್ಲಿಷ್ ಬೋಧಿನಿ

(ದ್ವಿತೀಯ ಮುದ್ರಣವು)

ನವೀನ ವಿಷಯಗಳ ಸೇರಿಸಲ್ಪಟ್ಟಿವೆ.

ಕನ್ನಡ ಓದಲಿಕ್ಕೆ ತಿಳಿದವರು ಈ ಪುಸ್ತಕದಿಂದ ಒಬ್ಬರ ಸಹಾಯವಿಲ್ಲದೆ ಇಂಗ್ಲಿಷು ಓದುವುದನ್ನೂ ಮಾತಾಡುವುದನ್ನೂ ಇಂಗ್ಲಿಷಿನಲ್ಲಿ ಪತ್ರವ್ಯವಹಾರ ಮಾಡುವುದನ್ನೂ ಬಹು ಶೀಘ್ರದಲ್ಲಿ ಕಲಿತುಕೊಳ್ಳಬಹುದು

ಇಂಥಾ ಪುಸ್ತಕವನ್ನು ಇದುವರೆಗೂ ಯಾರೂ ತಯಾರಿಸಿರಲಿಲ್ಲ 880 ಪೇಜುಗಳು ಇರುವ ದೊಡ್ಡ ಪುಸ್ತಕ ಸ್ವಲ್ಪ ಪ್ರತಿಗಳು ಮಾತ್ರ ಮುದ್ರಿಸಿದೆ ಬೇಗನೆ ಬರೆಯಿರಿ

ಕ್ರಯ ಪುಸ್ತಕ ಒಂದಕ್ಕೆ ರೂ ೩-೦-೦

ಜಿನೆವ ಟ್ರೇಡಿಂಗ್ ಕಂಪೆನಿ,
260 ಚೈನಾಬಜಾರ್ ರೋಡ್ ಮದರಾಸು

Geneva Trading Co,
260 China Bazar Road Madras

ಮಂಗಳೂರು ಮುನ್ಸಿಪಾಲಿಟಿ

ದೀಪತೆರಿಗೆ

ಬರುವ ೧-೪-೪೨ರಿಂದ ಅರ್ಧ ವಾರ್ಷಿಕವಾಗಿ ಶೇಕಡಾ ೩ರಿಂದ ಶೇಕಡಾ ೧೮ ವರೆಗೆ ದೀಪತೆರಿಗೆ ಏರಿಸಲಾಗುವುದೆಂದು ಪ್ರಕಟವಾಗಿತ್ತಷ್ಟೆ? ಇದರಿಂದ ತೆರಿಗೆಯು ಹೆಚ್ಚಾಯಿತೆಂಬ ಆಪವಾದವುಂಟಾಗಿದೆ. ಆದರೆ ಜನರಲ್ ತೆರಿಗೆ ಅಥವಾ ಸ್ಕೇವೆಂಜಿಂಗ್ ತೆರಿಗೆಗಳಲ್ಲಿ ವಾರ್ಷಿಕ ಶೇಕಡಾ ೧ರಷ್ಟು ಕಡಿಮೆಮಾಡುವ ಪ್ರಕಟನೆಯು ಬೇಗನೇ ಪ್ರಕಟಿಸಲ್ಪಡಲಿದೆ. ಆದ್ದರಿಂದ ಒಟ್ಟಾರೆ ತೆರಿಗೆಯಲ್ಲಿ ಹೆಚ್ಚುಕಡಿಮೆ ಇಲ್ಲ, ಯಾವುದೇ ತೆರಿಗೆಯನ್ನಾದರೂ ಕಡಿಮೆ ಮಾಡುವುದಿದ್ದ ಪಕ್ಷದಲ್ಲಿ ಪ್ರಿಲಿಮಿನರಿ ನೋಟೀಸು ಪ್ರಕಟಿಸುವ ಅವಶ್ಯವಿಲ್ಲ, ಆದ್ದರಿಂದ ಹಾಗೆ ಕಡಿಮೆ ಮಾಡುವ ತೆರಿಗೆ ವಿಷಯ ನೋಟೀಸು ಪ್ರಕಟಿಸಲಿಲ್ಲ. ಅದು ದೀಪ ತೆರಿಗೆಯನ್ನು ಹೆಚ್ಚಿಸುವ ಕೊನೆಯ ಪ್ರಕಟಣೆಯೊಡನೆ ಪ್ರಕಟಿಸಲಾಗುವುದು ತಾಸೀ ಪತ್ರಿಕಾ ಪ್ರಕಟನೆಯನ್ನು ಕೌನ್ಸಿಲಿನವರ ಅಪ್ಪಣೆ ಮೇರೆಗೆ ಪ್ರಕಟಿಸುವುದಾಗಿ ಮ.ರಾ. ಕಮಿಶನರ್ ಶ್ರೀ ಎಂ. ನಾರಾಯಣ ಶೆಟ್ಟಿ ಇವರು ತಿಳಿಸುತ್ತಾರೆ

ಮಹಿಳೆಯರಿಗೆ ತರಬೇತಿ ಕೇಂದ್ರ

ಕೋಕನಾಡದಲ್ಲಿ ನಡೆದ ಅಖಿಲಭಾರತ ಮಹಿಳಾ ಪರಿಷತ್ತಿನ ಅಧಿವೇಶನದಲ್ಲಿ ನಿರ್ಣಯವಾದಂತೆ, ಸಾಕ್ಷರ ಪ್ರಚಾರ ಆರೋಗ್ಯ ಸೂತ್ರ ಪ್ರಚಾರ, ಗುಡಿ ಕೈಗಾರಿಕೆ ಅಭಿವೃದ್ಧಿಗಳ ವಿಷಯ ಮಹಿಳೆಯರು ಕೆಲಸಮಾಡುವರೆ ಅವರಿಗೆ ಶಿಕ್ಷಣ ಕೊಡುವರೆ, ಆ ಪರಿಷತ್ತಿನ ಆಶ್ರಯದಲ್ಲಿ ಮಾರ್ಚ ತಾ 12ರಿಂದ ಜೂನ್ 30ರ ವರೆಗೆ ತರಬೇತಿಗೆ ಶಿಬಿರವೊಂದು ಸೂರತಿನಲ್ಲಿ (ಮುಂಬಯಿ ಸಂಸ್ಥಾನ) ತೆರೆಯಲ್ಪಡುವುದು ಇದರಲ್ಲಿ ಶಿಕ್ಷಣ ಪಡೆಯಲಿಚ್ಛಿಸುವವರು ತಿಂಗಳ ರೂ 30 ಕೊಟ್ಟು ಶಿಬಿರಕ್ಕೆ ಸೇರಬೇಕು ಇಂಗ್ಲಿಷ್ ಹಿಂದೀ ಭಾಷೆಗಳಲ್ಲಿ ಶಿಕ್ಷಣ ಶಿಬಿರಕ್ಕೆ ಸೇರಲಿಚ್ಛಿಸುವವರು ಹೆಚ್ಚಿನ ಮಾಹಿತಿಗಾಗಿ ಶ್ರೀಮತಿ ಕಮಲಾದೇವಿ, ಮಿಸ್ ಎಂ ಸಾಮಟಾಯಿ, ದಿ, ಸ್ಟ್ರೀಟ್ ಶಾಹೀಬಾಗ್, ಅಹಮ್ಮದಾಬಾದ್ ಇಲ್ಲಿಗೆ ಬರೆಯಬೇಕೆಂದು ಶ್ರೀಮತಿ ಕಮಲಾ ದೇವಿಯರು ತಿಳಿಸುತ್ತಾರೆ

ಬೀಡಿಲೇಬರ್ ಯೂನಿಯನ್

ಇದರ ವಾರ್ಷಿಕ ಮಹಾಸಭೆಯು ಜನಾಬ್ ಕೆ. ಎಸ್ ಅಹಮ್ಮದ್ ಬಾವಾರ ಅಧ್ಯಕ್ಷತೆಯಲ್ಲಿ ಜರಗಿ, ಯೂನಿಯನಿನ ಅಧ್ಯಕ್ಷರಾದ ಶ್ರೀ ಎಸ್. ಎನ್. ಹೊಳ್ಳರನ್ನು ಬಂಧಿಸಿದ ವಿಷಯ ನಿಷೇಧ ಸೂಚಿಸಿ, ವಾರ್ಷಿಕ ವರದಿ, ಲೆಕ್ಕಪತ್ರಗಳ ಮಂಜೂರಾತಿಯಾದ ಮೇಲೆ ಈ ವರ್ಷಕ್ಕೆ ಜನಾಬ್ ಅಹಮ್ಮದ್ ಬಾವಾರನ್ನು ಅಧ್ಯಕ್ಷರನ್ನಾಗಿಯೂ ಶ್ರೀ ಕೇಶವ ಕಾಮತರನ್ನು ಕಾರ್ಯದರ್ಶಿಗಳಾಗಿಯೂ ಆರಿಸಲಾಯಿತು.

ಸ್ವದೇಶಾಭಿಮಾನಿಯಲ್ಲಿ,
ನಿಮ್ಮ ಜಾಹೀರಾತುಗಳನ್ನು
ಕೊಡಿರಿ.

“ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ”

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

20-2-1942] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೨೦-೨-೧೯೪೨]

ಕಡೆಗೆ, ಸಿಂಗಾಪುರವೂ ಸೋತು ಶರಣಾಯಿತು ಎಂಬೀ ಮರ್ಮಭೇದಕವಾದ ಸುದ್ದಿಯೂ ಬಂತು! ಕಳೆದ ಹನ್ನೊಂದನೆಯ ತಾರೀಕು ಬುಧವಾರ ಬೆಳಗ್ಗೆ ಎಂಟು ಗಂಟೆಗೆ ಸರಿಯಾಗಿ ಜಪಾನೀ ಸೈನ್ಯವು ಸಿಂಗಾಪುರದ ಒಳ ನುಗ್ಗಿತು ಎಂಬ ದಿಗಿಲುಗೊಳಿಸುವ ವಾರ್ತೆ ಹರಡಿತ್ತು. ಫೆಬ್ರವರಿ ಎಂಟನೆಯ ತಾರೀಕಿನ ರಾತ್ರಿಯಲ್ಲಿ ಜಪಾನರು ಸಿಂಗಾಪುರದ ಮೇಲೆ ಬಲವಂತವಾಗಿ ಆಕ್ರಮಿಸ ತೊಡಗಿದ್ದು, ಕೇವಲ ಮೂರೇ ದಿನಗಳಲ್ಲಿ ಭದ್ರವಾಗಿದ್ದ, ಬ್ರಿಟಿಷ್ ಸಾಮ್ರಾಜ್ಯದ ಬೆನ್ನೆಲುಬಿನಂತಿದ್ದ ಸಿಂಗಾಪುರದಂತಹ ಕೋಟೆಗೆ ಈ ತರದ ದುರವಸ್ಥೆಯೊದಗಬಹುದೆಂದು ಯಾರೂ ನೆನೆಸಿರಲಿಲ್ಲ. ಬ್ರಿಟಿಷ್ ಪ್ರಭುತ್ವಕ್ಕೆ ಇದೀಗ ಯುದ್ಧದಲ್ಲಿ ಹಲವು ಬಗೆಯ ಹಾನಿಯಾಗಿರಬಹುದು. ಯುದ್ಧಕ್ಷೇತ್ರದ ಮೇಲೆ ತಮಗೊದಗುವ ಹಾನಿಗಳೆಲ್ಲವನ್ನೂ ತಪ್ಪಿಸಿಕೊಂಡಿರಲು ಸಾಧ್ಯವಿಲ್ಲ. ಅಲ್ಲಿ ಇಲ್ಲಿ ಅಪಜಯವೊದಗಬಹುದು. ಎಲ್ಲಾ ಸಮಯದಲ್ಲೂ ವಿಜಯಿಯಾಗಿಯೇ ಇರುವೆನೆಂದು ಯಾರೂ ನೆನೆಸುವುದೂ ನ್ಯಾಯವಲ್ಲ. ಆದರೆ ಸಿಂಗಾಪುರದಂತಹ ಭದ್ರವೆಂದೂ ಅಭೇದ್ಯವೆಂದೂ ಸಾರಲ್ಪಟ್ಟ ಕೋಟೆಯು ಹೀಗೆ ಬ್ರಿಟಿಷರ ಕೈಯಿಂದ ಸಡಿಲಾಗಿ ಹೋಗುತ್ತಿರುವ ದೃಶ್ಯವು ನಿಜವಾಗಿಯೂ ಕಳವಳಜನಕವಾಗಿದೆ. ಸಿಂಗಾಪುರದ ಪತನದೊಡನೆ ಬ್ರಿಟಿಷ ಸಾಮ್ರಾಜ್ಯದ ತಳಹದಿಗೆ ಬಲವಾದೊಂದು ಪೆಟ್ಟು ಬಿದ್ದಂತಾಯಿತು.

ಸಿಂಗಾಪುರದ ಈ ದುರ್ಘಟನೆಯು ಕೇವಲ ಅನಿರೀಕ್ಷಿತವಾದುದು, ಆಕಸ್ಮಿಕವಾದುದು. ಮಹಾ ಪ್ರಮಾದ, ಧೀರ ಸಂಯಮಶಾಲಿಗಳಾದ ಚರ್ಚಿಲರಿಗಾದರೂ ಇದು ಒಂದು ಭಯಾನಕ ವಾರ್ತೆಯಾಗಿ ಪರಿಣಮಿಸಬಹುದು. ಏಕೆಂದರೆ ಸಿಂಗಾಪುರವು ಕೈಬಿದ್ದುದರಿಂದ ಬ್ರಿಟಿಷರಿಗೆ ಇನ್ನೂ ಕಷ್ಟಗಳೇ ಹೆಚ್ಚಿದಂತಾಗಿದೆ. ಇನ್ನು ಮುಂದೆ ಪೆಸಿಫಿಕಿನಲ್ಲಿ ಅವರ ಹಡಗುಗಳಿಗೆ ಯೋಗ್ಯ ಆಶ್ರಯ ಸ್ಥಾನವೇ ಇಲ್ಲದಂತಾಗಿದೆ. ಇಷ್ಟರಲ್ಲಿಯೇ ಜಪಾನರು ಜಾವಾ ಸುಮಾತ್ರಗಳ ಮೇಲೂ ಆಕ್ರಮಿಸ ಹೋಗಿರುವರೆಂದು ಸುದ್ದಿ ಬಂದಿದೆ. ಜಾವಾ ಜಪಾನರ ಕೈವಶವಾಗಿ ಬಿಟ್ಟರೆ ಸೌರಬಾಯಾ ಮೊದಲಾದ ಕೇಂದ್ರಗಳೂ ಜಪಾನರ ಕೈವಶ ಬಂದರೆ ಪೆಸಿಫಿಕ್ ಸಾಗರದಲ್ಲಿ ಜಪಾನರದೇ ಪೂರ್ಣ ಪ್ರಭುತ್ವ ಸ್ಥಾಪಿತವಾದಂತಾಯಿತು. ಸಿಂಗಾಪುರದ ಪತನದ ಮೇಲೆ ಜಪಾನರಿಗೆ ಜಾವಾವನ್ನು ಆಕ್ರಮಿಸಲು ಬಹಳ ಸುಲಭವಾಗಿದೆ. ಮಾತ್ರವಲ್ಲದೆ ಅತ್ತ ಬರ್ಮಾ ಹಿಂದೂಸ್ಥಾನಗಳ ಮೇಲೂ ಇತ್ತ ಆಸ್ಟ್ರೇಲಿಯದ ಮೇಲೂ ಜಪಾನು ಮುಂದೊತ್ತಿ ಬರಲು ಹೆಚ್ಚಿನ ಅನುಕೂಲ ಒದಗಿದೆ. ಇದನ್ನೆಲ್ಲಾ ಪರ್ಯಾಲೋಚಿಸಿದರೆ ಸಿಂಗಾಪುರವೂ ಬ್ರಿಟಿಷರ ಕೈಬಿಟ್ಟು ಹೋದ ಇಂದಿನ ಪರಿಸ್ಥಿತಿಯು ಬ್ರಿಟಿಷರಿಗೂ ಬ್ರಿಟಿಷ್ ಸಾಮ್ರಾಜ್ಯದ ಜನರಿಗೂ ಬಹಳ ದುಃಖ ಸಂಕಟಗಳನ್ನುಂಟುಮಾಡದಿರದು.

ಲಿಬಿಯದ ಕಾಳಗವು ಒಂದು ವಿಚಿತ್ರವಾಗಿದೆ. ಒಮ್ಮೆ ಬ್ರಿಟಿಷರು ಮುಂದೊತ್ತಿದರೆ, ಒಮ್ಮೆ ಜರ್ಮನರು ಮುನ್ನುಗ್ಗುವರು. ಹೀಗೆ ಎರಡು ಪಕ್ಷದವರೂ ಆ ಮರುಭೂಮಿಯಲ್ಲಿ ಅತುಲ ಸಾಹಸ ನಡೆಸುತ್ತಾ ಆಶೆ ನಿರಾಶೆಗಳ ಮಧ್ಯೆ ತೂಗಾಡುತ್ತಿದ್ದಾರೆ. ಗ್ರಜಿಯಾನಿ, ವೇವೆಲ್

ಸಮರಭೂಮಿಯ ಸಂಚಾರ

ರೊಮೆಲ್ ಮತ್ತು ಆಚಿನ್‌ಲೆಕ್ ಈ ಸಾಹಸಿ ಸೇನಾನಿಗಳು ಲಿಬಿಯವನ್ನು ಜಯಿಸಲು ಹೋರಾಡಿ ಸರಾಸರಾದರು. ಆಚಿನ್‌ಲೆಕ್‌ರ ಸೇನಾಪತಿತ್ವದಲ್ಲಿ ನಡೆದ ಮೊದಲ ಆಕ್ರಮಣದಲ್ಲಿ ದೊರೆತ ಬ್ರಿಟಿಷರ ವಿಜಯವು ಇಡೀ ಜಗತ್ತನ್ನೇ ಬೆರಗುಗೊಳಿಸಿತು. ಸೈರೀನಾಯಿಕ ಪ್ರಾಂತದ ಸಂಧಿಸ್ಥಳವನ್ನು ಸಾಗಿ ಆಚಿನ್‌ಲೆಕ್‌ರು ಆಕ್ರಮಿಸಿ ಕೆಲವು ಸಮಯ ಯಶಸ್ಸು ಗಳಿಸಿದರು. ಜರ್ಮನರು ಮೊದಲು ಹಿಂದೆಹಿಂದೆ ಸರಿದರು, ಯುದ್ಧ ಮಾಡಲಾರದೆ ರೊಮೆಲನು ಎಲ್ ಅಗೆಲ ವರೆಗೆ ಓಡಿಹೋದನು. ಹೀಗೆ ಏಳೇ ದಿನಗಳಲ್ಲಿಯೇ ಬ್ರಿಟಿಷರು ಸಿರೆನೈಕವನ್ನು ಸ್ವಾಧೀನಪಡಿಕೊಂಡರು. ಆದರೆ ಅಲ್ಲಿಂದ

ಬ್ರಿಟಿಷರೂ ಜರ್ಮನರೂ ಒಮ್ಮೆ ಮುಂದೊತ್ತಿ ಒಮ್ಮೆ ಹಿಂದೋಡಿ ಅಪೂರ್ವ ಸಾಹಸದಿಂದ ಹೋರಾಡುತ್ತಿರುವರು.

ಕಳೆದ ಎರಡು ತಿಂಗಳಿಂದ ರಷ್ಯನರು ಜರ್ಮನರನ್ನು ಹಿಂದಟ್ಟುವಲ್ಲಿ ತೋರಿಸಿದ ಅತುಲ ಶೌರ್ಯವನ್ನು ಕಂಡು ಪ್ರಪಂಚವೇ ಬೆರಗಾಗಿದೆ. ಸ್ವಾತಂತ್ರ್ಯ ಪ್ರೇಮಿಗಳ ಎದೆಯುಬ್ಬಿದೆ. ಜರ್ಮನರ ರಾಕ್ಷಸೀ ಆಕ್ರಮಣದಿಂದ ಕಂಗೆಟ್ಟು ಹಿಂದೆ ಸರಿಯಬೇಕಾಗಿ ಹೋಗಿದ್ದ ರಷ್ಯನರು ತಮಗೆ ಸಿಕ್ಕಿದ ಸಂದರ್ಭವನ್ನು ಹೀಗೆ ಸದುಪಯೋಗಪಡಿಸಿಕೊಳ್ಳುವರೆಂದು ಯಾರೂ ಭಾವಿಸಿರಲಿಲ್ಲ. ಮಾಸ್ಕೋವನ್ನು ಕೈವಶ ಪಡಿಸಬೇಕೆಂದು ಬಯಸಿದ್ದ ಜರ್ಮನರು



ಬ್ರಿಟನಿನ ಸೈನ್ಯದಳದ ನೂತನ ಟೇಂಕ್ ವಾಹನ

ಇದರ ವೇಗ ಭಯಾನಕವಿದೆ, ಎಲ್ಲಾ ಕಡೆಗಳಿಗೂ ಗುಂಡು ಹಾರಿಸುವ ಇದರ ಶಕ್ತಿ ಅನುಪಮವಾಗಿರುವುದು

ಮುಂದೆ ಬ್ರಿಟಿಷರ ಪ್ರತಾಪ ಕಡಿಮೆಯಾಗತೊಡಗಿತು. ಏಕೆಂದರೆ ಇಜಿಪ್ತಿನ ಗಡಿನಾಡಿನಿಂದ ಬೇರೆಯಾದ ಪರೆಗಿರುವ ಸುಮಾರು ಏಳ್ನೂರು ಮೈಲು ವಿಸ್ತೀರ್ಣದ ಮರುಭೂಮಿಯಲ್ಲಿ ಸಾಮಗ್ರಿಗಳನ್ನು ಸಾಗಿಸುವುದು ಬ್ರಿಟಿಷರಿಗೆ ಸುಲಭವಾಗಲಿಲ್ಲ. ಅಷ್ಟರಲ್ಲಿಯೇ ಪೂರ್ವ ಏಶಿಯದ ಯುದ್ಧವೂ ಆರಂಭವಾಯಿತು. ಇಂಗ್ಲೆಂಡಿನಿಂದ ನಿರೀಕ್ಷಿಸಿದಷ್ಟು ಯುದ್ಧಸಾಮಗ್ರಿಗಳು ಬರಲಿಲ್ಲ. ಅಮೇರಿಕದಿಂದ ಸಾಮಗ್ರಿಗಳು ಬರುತ್ತಿದ್ದರೂ ಸಕಾಲಕ್ಕೆ ಒದಗುತ್ತಿರಲಿಲ್ಲ. ಇಂತಹ ಅಸಿದ್ಧತೆಗಳನ್ನು ಕಂಡು ರೊಮೆಲನು ಒಮ್ಮೆಲೇ ಪ್ರತಿ ಆಕ್ರಮಣವನ್ನು ಕೈಕೊಂಡನು. ಇಟಲಿ ಜರ್ಮನಿಗಳಿಂದ ಆತನಿಗೆ ಬೇಕಾದ ಯುದ್ಧ ಸಾಮಗ್ರಿಗಳೂ ಬರತೊಡಗಿದವು. ಒಂದೇ ವಾರದಲ್ಲಿ ಬೆಂಗಾಜಿಯ ವರೆಗೆ ಮುನ್ನುಗ್ಗಿ ಒಂದಷ್ಟು ಬ್ರಿಟಿಷ್ ಬಲವು ಹಿಂದೆ ಸರಿಯಿತು. ತೋಬ್ರುಕದ ಸಮೀಪದಲ್ಲಿ ಈಗ ಬ್ರಿಟಿಷ್ ಜರ್ಮನ್ ಸೈನ್ಯಗಳು ಕಳವಳಿಸಿವೆ. ಆದರೆ ಸದ್ಯ ರೊಮೆಲನ ಹೋರಾಟ ಕಡಿಮೆಯಾಗಿದೆಯೆಂದು ಕೇಳಬರುತ್ತದೆ. ಈಗ ಬ್ರಿಟಿಷರು ಇನ್ನೊಮ್ಮೆ ರೊಮೆಲನನ್ನು ಹಿಂದಟ್ಟುವರೋ ಹೋರಾಡುವರೋ ನೋಡಬೇಕಾಗಿದೆ. ಈ ಮರುಭೂಮಿಯಲ್ಲಿ ಹೀಗೆ

ಅದಕ್ಕೆ ಸುಮಾರು ಅರುವತ್ತು ಮೈಲುಗಳ ದೂರದಲ್ಲಿರುವ ಮೊಝೈಸ್ಕದ ಹತ್ತಿರ ತಮ್ಮ ಸೈನ್ಯ ಬಿಟ್ಟಿದ್ದರು. ಆದರೆ ರಷ್ಯನರು ತಮ್ಮ ಪ್ರತಿ ಆಕ್ರಮಣದಿಂದ ಅದನ್ನು ಸ್ವಾಧೀನಪಡಿಸಿಕೊಂಡರು. ಜರ್ಮನರು ಆತುರದಲ್ಲಿಯೇ ವ್ಯಾಜ್ಮಾವನ್ನು ಸೇರಿಕೊಂಡರು. ಜರ್ಮನ್ ಸೈನ್ಯವು ಅಲ್ಲಿಗೆ ಬಂದಿತು. ಹಿಟ್ಲರನು ಆಗಲೇ ಸ್ಮೊಲೆನ್ಸ್ಕಕ್ಕೆ ಒಂದು ವ್ಯಾಪಕವಾದ ಸೈನ್ಯಕ್ಕೆ ಸಹಾಯವಿತ್ತನು. ಇದರ ಪರಿಣಾಮವಾಗಿ ರಷ್ಯನರ ಮುನ್ನಡೆಯು ಮಧ್ಯ ರಣಭೂಮಿಯಲ್ಲಿ ಸ್ವಲ್ಪ ತಡೆಯುಂಟಾಯಿತು. ಆ ಮೇಲೆ ರಷ್ಯನರು ಮಹತ್ವದ ವಿಜಯ ಪಡೆಯಲಿಲ್ಲ. ಆದರೆ ಇಷ್ಟರಲ್ಲಿಯೇ ಯುಕ್ರೇನ್ ಕ್ರಿಮಿಯ ಮತ್ತು ಉತ್ತರದಲ್ಲಿ ಲೆನಿನ್‌ಗ್ರಾಡ್ ಪ್ರದೇಶದಲ್ಲಿ ರಷ್ಯನರು ಬಹಳ ಮುಂದೊತ್ತುವರು. ಇಲ್ಲಿಯೂ ಇತ್ತೀಚೆಗೆ ಜರ್ಮನರ ಪ್ರತಿಭಟನೆ ಜೋರಾಗಿರುವುದು.

ಇಷ್ಟರ ವರೆಗಿನ ರಷ್ಯನರ ವಿಜಯವನ್ನು ನೋಡಿ ಸಂತೋಷಪಡಬೇಕಾಗಿದೆ. ಆದರೆ ಇದು ಛಳಿಗಾಲದಲ್ಲಿ ಜರ್ಮನರು ವಿಶ್ರಾಂತಿ ಪಡೆಯುತ್ತಿರುವಾಗ ಗಳಿಸಿದ ವಿಜಯವೆಂಬುದನ್ನು ನಾವು ತಿಳಕೊಳ್ಳಬೇಕು. ಛಳಿಗಾಲ ಮುಗಿದ ಕೂಡಲೇ ಜರ್ಮನರು ಪ್ರತಿ ಆಕ್ರಮಣವನ್ನು ಕೈಕೊಳ್ಳಲಿರುವರೆಂಬುದು ನಿಶ್ಚಯ. ಹಿಟ್ಲರನು ಮೊದಲಿನಂತೆಯೇ ತನ್ನ ವಸಂತಕಾಲದ ಸಿದ್ಧತೆಯ ವಿಷಯದ ಅಭಿಪ್ರಾಯವನ್ನಾಡುತ್ತಿದ್ದಾನೆ. ಇದಕ್ಕಾಗಿ ಸಿದ್ಧತೆಗಳನ್ನೂ ಮಾಡುತ್ತಿರುವನು. ಮಾರ್ಚ್ ತಿಂಗಳ ಕೊನೆಯಲ್ಲಿ ಹಿಟ್ಲರನು ಪ್ರಚಂಡ ಆಕ್ರಮಣವನ್ನು ಆರಂಭಿಸಬಹುದೆಂದು ಊಹಿಸಲಾಗಿದೆ. ಮಾಸ್ಕೋ ಲೆನಿನ್‌ಗ್ರಾಡುಗಳನ್ನು ಹಿಡಿಯಲು ಭೀಕರ ಪ್ರಯತ್ನ ನಡೆಯಬಹುದು. ಜರ್ಮನರ ಪ್ರತಿ ಆಕ್ರಮಣವನ್ನು ಯಶಸ್ವಿಯಾಗಿ ಎದುರಿಸಬೇಕಾದರೆ ಫೆಬ್ರವರಿಯೊಳಗೆ ರಷ್ಯನರು ಡೊನೆಟ್ಸ್ ನದಿಯ ಪೂರ್ವ ಭಾಗವನ್ನು ಸ್ವಾಧೀನಪಡಿಸಿಕೊಳ್ಳಬೇಕು. ಸ್ಮೊಲೆನ್ಸ್ಕದಿಂದ ಜರ್ಮನರನ್ನು ಹಿಮ್ಮೆಟ್ಟಿಸಬೇಕು. ಇಷ್ಟು ಬೇಗ ಈ ಕೆಲಸ ರಷ್ಯನರಿಗೆ ಮಾಡಲು ಸಾಧ್ಯವೇ ಎಂಬುದು ವಿಚಾರಣೀಯವಾಗಿದೆ. ಅಲ್ಲವಾದರೆ ರಷ್ಯಕ್ಕೆ ತಿರುಗಿ ಗಂಡಾಂತರ ತಪ್ಪಿದ್ದಲ್ಲವೆನ್ನಬಹುದು. ಈ ಸಮಯದಲ್ಲಿ ಬ್ರಿಟನು ಅಮೇರಿಕಗಳು ಹೆಚ್ಚು ಹೆಚ್ಚಿನ ಸಹಾಯವನ್ನು ರಷ್ಯಕ್ಕೆ ಕಳುಹಿಸಬೇಕು. ಇರಾನಿನಿಂದ ಎದುರಿಸದೆ ಹೋಗುವ ರಷ್ಯನರಿಗೆ ಬ್ರಿಟಿಷ್ ಅಮೇರಿಕನ್ ಸಹಾಯವೊದಗಿದರೆ ಅವರು ಹೆಚ್ಚಿನ ಸಾಹಸದಿಂದ ಹೋರಾಡಿ ಜರ್ಮನರನ್ನು ಸೋಲಿಸಲು ಸಾಧ್ಯವಾದೀತು.

ಈಗ ಹಿಂದೂದೇಶದ ವಿಚಾರ. ಸಿಂಗಾಪುರದ ಪತನದ ಬಳಿಕ ಹಿಂದುಸ್ಥಾನಕ್ಕೆ ಜಪಾನರು ಆಕ್ರಮಿಸಬಹುದಾದ ಭೀತಿ ಹೆಚ್ಚಿದೆ. ಬರ್ಮವು ಜಪಾನರ ನಿತ್ಯದ ದಾಳಿಯ ಕ್ಷೇತ್ರವಾಗಿದೆ. ಚೀನವೂ ಬರ್ಮಕ್ಕೆ ಸಹಾಯ ಕಳುಹಿ ಜಪಾನನ್ನು ಎದುರಿಸಲು ಹೋರಾಡುತ್ತಿದೆ. ಮಾರ್ಷಲ್ ಚಿಯಾಂಗ್ ಕೈಶೇಕರು ಹಿಂದೂದೇಶಕ್ಕೆ ಬಂದದ್ದು ವೈಸರಾಯರೊಡನೆಯೂ, ಹಿಂದೂ ನಾಯಕರೊಡನೆಯೂ ರಾಜಕೀಯ ಮಾತುಕತೆ ನಡೆಸುತ್ತಿರುವ ಕತೆಗೆ ಹಲವರ ಕುತೂಹಲ ಕೆರಳಿದೆ. ಈ ಸಲ ಪೂರ್ವದ ಯುದ್ಧದಲ್ಲಿ ಬರ್ಮಾ ಹಿಂದೂಸ್ಥಾನಗಳೊಡನೆ ಚೀನವೂ ಹೆಚ್ಚಿನ ಸಹಾಯಗೈದು ಜಪಾನನ್ನು ಸರಿಯಾಗಿ ಎದುರಿಸುವುದೇ ಇವರ ಉದ್ದೇಶವೆಂದು ಊಹಿಸಲಾಗಿದೆ. ಜಪಾನರು ಹಿಂದುಸ್ಥಾನಕ್ಕೆ ಬರುವ ಮೊದಲು ಜಾವಾ ಸುಮಾತ್ರಗಳ ಕಡೆಗೆ ಹೋಗುವರೆಂದೂ ಆಸ್ಟ್ರೇಲಿಯವನ್ನು ಆಕ್ರಮಿಸುವರೆಂದೂ ಪರಕೀಯ ಪತ್ರಿಕೆಗಳು ಬರೆಯುತ್ತಿವೆ. ಆದರೆ ಹಿಂದುಸ್ಥಾನದ ಮುಖ್ಯ ಪಟ್ಟಣಗಳಲ್ಲಿ ಗಾಬರಿಯುಂಟಾಗಿರುವುದೆಂದು ತಿಳಿದುಬಂದರೂ, ಸರಕಾರದವರು ರಕ್ಷಣೆಯ ಕಾರ್ಯವನ್ನು ಮಾಡುತ್ತಿರುವರೆಂದೂ ಕೇಳುತ್ತಿದೆ. ಹಾಗಾಗಿ ಜನರು ಇಂತಹ ಕಾಲದಲ್ಲಿ ಅನಾವಶ್ಯಕ ಗಾಬರಿಗೊಳ್ಳಬಾರದು. ಆದಷ್ಟು ಶಾಂತರೀತಿಯಿಂದಿದ್ದರೆ ಎಂತಹ ಪರಿಸ್ಥಿತಿಯನ್ನಾದರೂ ಎದುರಿಸಬಹುದಾಗಿದೆ. ಅಶಾಂತಿಗೊಂಡು ಗಾಬರಿಪಡುವುದರಿಂದ ಇದ್ದ ಅನುಕೂಲಗಳೂ ಕೆಡುವುವು. ಒಟ್ಟು ತೊಂದರೆಗಳೇ ಹೆಚ್ಚುವುವೆಂಬುದನ್ನು ನಾಗರಿಕರು ಚೆನ್ನಾಗಿ ತಿಳಿದಿರಬೇಕು. ಅಶಾಂತಿಯುಂಟಾಗುವುದು ಸದ್ಯ ಸಂಭವವಿಲ್ಲದಿದ್ದರೂ, ಅಶಾಂತಿಯುಂಟಾದ ಕಾಲದಲ್ಲಿಯೂ ನಾವು ಧೈರ್ಯದಿಂದಲೂ ವಿಚಕ್ಷಣತೆಯಿಂದಲೂ ವರ್ತಿಸಿ ದೇಶದ ಶಾಂತಿ ರಕ್ಷಣೆಯಲ್ಲಿ ನೆರವಾಗಬೇಕಾಗಿದೆ.

ಸ್ವದೇಶಾಭಿಮಾನಿ

ತಾರೀಕು 20—2—1942

ಚಿಯಾಂಗ್ ಸಂದರ್ಶನ

ಚೀನ ರಿಪಬ್ಲಿಕಿನ ದಳಪತಿ ಚಿಯಾಂಗ್ ಕೈಶೇಕರು ತಮ್ಮ ಪತ್ನಿ ಪರಿವಾರ ಸಮೇತ, ಅಕಸ್ಮಾತ್ತಾಗಿ ಭಾರತವನ್ನು ಸಂದರ್ಶಿಸಿದ ವಿಷಯ ದೇಶದ ಎಲ್ಲೆಡೆಗಳಲ್ಲಿಯೂ ಅಭೂತಪೂರ್ವ ಉತ್ಸಾಹವುಂಟಾಗಿದೆ. ಚಿಯಾಂಗ್ ದಂಪತಿಗಳಿಗೆ ಹಿಂದುಸ್ಥಾನದಲ್ಲಿ, ಹೋದಹೋದೆಡೆಗಳಲ್ಲಿ ರಾಜವೈಭವದ ಸ್ವಾಗತಸನ್ಮಾನಗಳು ದೊರೆಕಿವೆ. ತನ್ನ ರಾಷ್ಟ್ರದ ಸ್ವಾತಂತ್ರ್ಯರಕ್ಷಣೆಯ ಸಲುವಾಗಿ ಕಳೆದ ನಾಲ್ಕುವರೆ ವರ್ಷಗಳಿಂದ, ಆಕ್ರಮಿಸಿ ಬರುವ ಜಪಾನರ ಸಾಮ್ರಾಜ್ಯ ದಾಹವನ್ನು ಪ್ರತಿಭಟಿಸಿ, ಅಗಣಿತ ಸಂಕಷ್ಟಗಳನ್ನು ಧೀರ ಸಾಹಸದಿಂದ ಎದುರಿಸಿ ಹೋರಾಡುವ ಚೀನದ ಸ್ವಾತಂತ್ರ್ಯ ಮೂರ್ತಿಯೂ, ಅನಭಿಷಿಕ್ತ ಸಾಮ್ರಾಟರೂ ಆಗಿರುವ ಚಿಯಾಂಗ್ ಕೈಶೇಕರಿಗೆ, ಅವರ ಯೋಗ್ಯತೆಗೆ ಉಚಿತವಾದ ಸ್ವಾಗತ ಸತ್ಕಾರಗಳೇ ಲಭಿಸಿದವು. ವೈಸರಾಯರಿಂದ ಮೊದಲ್ಗೊಂಡು, ಗಾಂಧೀಜಿ, ನೆಹರು, ಅಜಾದ್ ಮೊದಲಾದ ರಾಷ್ಟ್ರ ಮುಖಂಡರಾದಿಯಾಗಿ ಅವರನ್ನು ಸರ್ವರೂ ಸ್ವಾಗತಿಸಿದರು; ಸನ್ಮಾನಿಸಿದರು. ಚಿಯಾಂಗ್ ಸಂದರ್ಶನವು ಅಧಿಕಾರೀ ವರ್ಗಕ್ಕಿಂತಲೂ ಹೆಚ್ಚಾಗಿ ಜನಸಾಮಾನ್ಯರಲ್ಲಿ, ರಾಷ್ಟ್ರವನ್ನು ಪಾರತಂತ್ರ್ಯದಿಂದ ಬಿಡುಗಡೆ ಮಾಡಬೇಕೆಂದು ಬಯಸುವ ಜನತಾ ಜೀವನದಲ್ಲಿ ಹೊಸ ಚೈತನ್ಯ ಶಕ್ತಿಯನ್ನು ತುಂಬಿಸಿದೆ.

ಚಿಯಾಂಗ್ ಕೈಶೇಕರು ಭಾರತವನ್ನು ಸಂದರ್ಶಿಸಿದ ಸಂದರ್ಭವು ಜಗತ್ತಿನ ಇತಿಹಾಸದಲ್ಲಿಯೇ ಒಂದು ಸಂದಿಗ್ಧ ಕಾಲ; ಅದರಲ್ಲೂ ಜಪಾನರು ಅತಿ ಪೂರ್ವದಲ್ಲಿ ನುಗ್ಗಿಬಂದು ಭಾರತದ ಬಾಗಿಲಿಗೆ ಬಂದು ನಿಂತಿರುವ ಕಾಲ. ಚೀನದಂತೆ ಬರ್ಮೆಯರೂ ಜಪಾನರನ್ನು ಪ್ರತಿಭಟಿಸಿ ತಮ್ಮ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ಕಾಲ; ನಾಳೆ ಭಾರತವಾದರೂ, ಜಪಾನರು ತಮ್ಮ ಸಾಮ್ರಾಜ್ಯದಾಹವನ್ನು ತೀರಿಸಲು ಆಕ್ರಮಿಸಿ ಬಂದರೆ! (ಅಂತಹ ದುಷ್ಕಾಲವು ಬರದಿರಲಿ!) ಅದನ್ನು ಎದುರಿಸಬೇಕಾಗಿರುವ ಕಾಲ! ಇಂತಹ ಪರಿಸ್ಥಿತಿಯಲ್ಲಿ ಚೀನವು ಬರ್ಮ ಭಾರತಗಳಿಗೆ ಆದರ್ಶವಾಗಿದೆ. ಸ್ಫೂರ್ತಿದಾಯಕವಾಗಿದೆ; ಚೀನದ ಸ್ವಾತಂತ್ರ್ಯ ಸಮರವನ್ನು ಯಶಸ್ವಿಯಾಗಿ ನಡೆಸಿದ ಧೀರ ಸೇನಾನಿಯ ಸಂದರ್ಶನವು ಉತ್ತೇಜಕವಾಗಿದೆ.

ಚೀನವು ಜಪಾನಿನೆದುರು ತನ್ನ ಪ್ರತಿಭಟನೆಯನ್ನು ಇಂದಿಗೂ ಮುಂದುವರಿಸುತ್ತಿದ್ದರೂ ಬರ್ಮಕ್ಕೆ ಸೇನಾಸಹಾಯವನ್ನು ಕಳುಹಿಸಿದೆ. ಇದರಿಂದ ಅದರ ಉದಾರಬುದ್ಧಿ ತಿಳಿಯುವುದು. ಚೀನಾ ಭಾರತ ಬರ್ಮಾಗಳು ಹಳೆಯ ಒಂದೇ ಸಂಸ್ಕೃತಿಯಿಂದ ಕೂಡಿರುವ ರಾಷ್ಟ್ರಗಳು; ಇವುಗಳ ಮಧುರಬಾಂಧವ್ಯದಿಂದ, ಆಯಾಯ ರಾಷ್ಟ್ರಗಳಿಗೇ ಉಪಕಾರವಲ್ಲದೆ ಅಖಿಲ ಜಗತ್ತಿನ ಶಾಂತಿಗೂ ಸಹಕಾರವಾಗುವುದು. ಚಿಯಾಂಗ್ ದಂಪತಿಗಳ ಆಗಮನವು ಅಂತಹ ಮಧುರ ಸಂಬಂಧವನ್ನು ಹೆಚ್ಚಿಸುವಂತಾಗಿದೆ. ಚೀನವು ಹೇಗೆ ತನ್ನ ಸ್ವಾತಂತ್ರ್ಯದ ಸಲುವಾಗಿ ಜಪಾನನ್ನು ಎದುರಿಸಿ ನಿಂತಿದೆಯೋ ಅಂತೆಯೇ ಮುಂದೆ ಬರ್ಮಾ ಭಾರತಗಳಾದರೂ ಜಪಾನಿನ ಸಾಮ್ರಾಜ್ಯದಾಹವನ್ನು ತಮ್ಮ ಸ್ವಾತಂತ್ರ್ಯಕ್ಕಾಗಿ ಆವೇಶದಿಂದ ಹೋರಾಡಲು ಸಿದ್ಧವಾಗುವಂತೆ ಚಿಯಾಂಗ್ ದಂಪತಿಗಳ ಸಂದರ್ಶನವು ಫಲಕಾರಿಯಾಗಲಿ ಭಾರತವು ಸ್ವಾತಂತ್ರ್ಯದ ಹಾದಿಯಲ್ಲಿ ಮುಂದುವರಿಯುವಂತಾಗಲಿ ಎಂಬುದು ನಮ್ಮ ಹಂಬಲವಾಗಿದೆ.

ಚರ್ಚಿಲ್ ಭಾಷಣ

'ಇದುವರೆಗೆ ನಾವು ಅಪಜಯ ಹೊಂದಿಲ್ಲ; ಇನ್ನುಮುಂದೆಯೂ ಅಪಜಯಹೊಂದಲಾರೆವು. ಇಂದಿನೀ ವಿಪ್ಲವದಲ್ಲಿ ನಾವು ಸಾಹಸದಿಂದ ಮುನ್ನುಗ್ಗಿ ವಿಜಯವನ್ನು ಸಂಪಾದಿಸುವ' ಎಂಬೀ ರೀತಿಯಲ್ಲಿ ಸ್ಫೂರ್ತಿಯನ್ನು ಕೊಡುವಂತಹ ಮಾತನ್ನು ಚರ್ಚಿಲ್ಲರು ಒಂದು ಆಕಾಶ ಭಾಷಣ ಮಾಡುತ್ತಾ ಹೇಳಿದರು. ಚರ್ಚಿಲರು ಆ ಭಾಷಣದಲ್ಲಿ 1940ರ ಬಳಿಕದ ಯುದ್ಧಪರಿಸ್ಥಿತಿಯ ಸಿಂಹಾವಲೋಕನ ಮಾಡಿದರು. ಅವರು ತಮ್ಮ ಭಾಷಣದಲ್ಲಿ ಜಪಾನಿನೊಡನೆ ತಾವು ಪರಿಣಾಮಕಾರಕ ಯುದ್ಧವನ್ನು ಯಾಕೆ ಹೂಡಲಿಲ್ಲ ಎಂಬ ವಿಷಯವನ್ನು ವಿಶದಗೊಳಿಸಿದರು. 1940ರ ಬಳಿಕ ವರ್ಷವರ್ಷವೂ ಬ್ರಿಟನಿನ ಪರಿಸ್ಥಿತಿಯು ಉತ್ತಮವಾಗುತ್ತಾ ಬಂತು ಎಂದು ಉತ್ಸಾಹ ಹುಟ್ಟುವಂತೆ ಹೇಳಿದರು.

"1940ರಲ್ಲಿ ಫ್ರಾನ್ಸಿನ ಪತನವಾಯಿತು; ಅದರಿಂದ ಬ್ರಿಟನಿನ ಅವಸ್ಥೆ ಕಠಿಣವಾಯಿತು ಎಂದು ಹಲವರು ಬಗೆದಿದ್ದರು. ಆದರೆ ಹಾಗೇನೂ ಆಗಲಿಲ್ಲ. 1941ರಲ್ಲಿ ಅಮೆರಿಕವು ಬ್ರಿಟನಿನ ಬೆಂಬಲ ನಿಂತಿತು; ರಶ್ಯದ ಕೆಂಪು ಸೈನ್ಯವು ಇನ್ನೂ ಅಪಜಯಹೊಂದಿಲ್ಲ. ಜಪಾನು ಯುದ್ಧಕ್ಕೆ ಇಳಿದು ಅತಿ ಪೂರ್ವದಲ್ಲಿ ಹಲವು ಫಲವತ್ತಾದ ಮತ್ತು ಜನನಿಬಿಡ ಪ್ರದೇಶಗಳನ್ನು ಹಾಳುಗೆಡವಿಬಿಟ್ಟಿತು. ಬಹುಕಾಲದಿಂದ ಬ್ರಿಟನು ಇಟಲಿ ಜರ್ಮನಿಗಳೊಡನೆ ಯುದ್ಧಸಿದ್ಧತೆ ಮಾಡಿ ಹೋರಾಡುತ್ತಿರುವಾಗ ಆ ಪ್ರದೇಶಗಳನ್ನು ಜಪಾನಿನ ಆಕ್ರಮಣದಿಂದ ನಮಗೆ ರಕ್ಷಿಸುವುದಾಗಲಿಲ್ಲ. ಲಿಬಿಯದಲ್ಲಿ ನಾವು ಕಠಿಣ ಪರಿಸ್ಥಿತಿಯಲ್ಲಿರುವುದರಿಂದ ಅಲ್ಲಿ ಇನ್ನೊಂದು ಪ್ರಚಂಡ ಯುದ್ಧ ಮಾಡಬೇಕಾಗುವುದು. ಜಪಾನಿನೆದುರು ಅಮೇರಿಕ ನಿಲ್ಲುವುದೆಂದು ನಮ್ಮ ಹಾರೈಕೆಯಿತ್ತು. ನಾವೇಕಾಕಿಯಾಗಿ ಶತ್ರುವಿನ ವಿರುದ್ಧ ಹೋರಾಡುವುದನ್ನು ತಪ್ಪಿಸಬೇಕೆಂದು ನಮ್ಮಿಚ್ಛೆಯಿತ್ತು; ಬ್ರಿಟನು ಅಮೆರಿಕಗಳ ವಿರುದ್ಧ ಹೋರಾಡುವುದು ಜಪಾನಿಗೆ ಹಿತವಲ್ಲ." ಇವು ಚರ್ಚಿಲರ ಭಾಷಣದ ಕೆಲವು ಅಂಶಗಳು.

ಭಾಷಣದ ಕೊನೆಗೆ ಚರ್ಚಿಲರು ಚೀನದ ಸಾಹಸವನ್ನು ಪ್ರಶಂಸಿಸಿದರು. ಇನ್ನುಮುಂದೆ ನಾವು ಏಕಾಂಗಿಗಳಾಗಿ ಹೋರಾಡುವುದಿಲ್ಲವೆಂದರು. ಇಡೀ ಜಗತ್ತಿನ ನಾಲ್ಕರಲ್ಲಿ ಮೂರಂಶದ ಜನರ ಸಹಾಯ ಸಹಕಾರ ನಮಗಿದೆಯೆಂದು ನುಡಿದರು. ಆದ್ದರಿಂದಲೇ ಇದುವರೆಗೆ ನಾವು ಅಪಜಯಪಡೆಯದಂತೆ ಮುಂದೆಯೂ ಅಪಜಯ ಹೊಂದಲಾರೆವು ಎಂದು ಆವೇಶ ಹುಟ್ಟಿಸುವ ಭಾಷಣ ಮಾಡಿದರು! ಮಾತುಗಳಿಂದ ಏನಾದರೂ ಕಾರ್ಯಸಾಧನೆಯಾಗುವುದಿದ್ದರೆ, ಚರ್ಚಿಲರ ಮಾತುಗಳಿಂದ ಆಗಬೇಕು!

ANNOUNCEMENT

We have great pleasure in announcing an all round reduction in rates of interest on advances.

Our present rates are:

Personal Loans & Overdrafts	7½% p. a.
Usance Bills	7% „
Trade Bills	6% „
Loans on Produce	5½% „
Loans on Insurance Policies Stocks & shares	5% „
Loans on Gold	4½% „

The above rates are for medium-sized loans. The rates for small loans will however be slightly higher since the cost of time, labour and stationery consumed in such cases is proportionately higher.

CANARA BANK, LIMITED.

ESTD. 1906.

ನೋಟಗಳು....

ಕಳೆದ ವಾರ ಸಿಂಗಾಪುರ ಮೊದಲಾದೆಡೆಗಳಲ್ಲಿ ದೊರಕಿದ ಅಪಜಯಗಳಿಂದ ಬ್ರಿಟನಿನ ಪತ್ರಿಕೆಗಳು ಬಹಳ ಚಿಂತೆಗೊಳಗಾಗಿವೆ. ಅಂತ್ಯದಲ್ಲಿ ಬ್ರಿಟನಿಗೇ ಜಯವಾಗುವುದು ಖಂಡಿತವಾದರೂ ಇಂದಿನ ಅಪಜಯದ ಕಾರಣವನ್ನು ಕಂಡು ಹುಡುಕಿ ಸರಿಪಡಿಸಿಕೊಳ್ಳಬೇಕಾದುದು ಅವಶ್ಯವಲ್ಲವೆ?

卐

ಹಾಗಾಗಿ ಬ್ರಿಟನಿನ ಕೆಲವು ಪತ್ರಿಕೆಗಳು ಈ ವಿಷಯ ಹಲವು ಸೂಚನೆಗಳನ್ನೀಯುತ್ತಿವೆ. "ಲಂಡನಿನ 'ಸಂಡೇ ಟೈಮ್ಸ್' ಪತ್ರಿಕೆ, ಚರ್ಚಿಲರ ಮೇಲಿನ ಭಾರವನ್ನು ಈಗಲಾದರೂ ಸ್ವಲ್ಪ ಕಡಿಮೆಮಾಡುವುದು ಒಳ್ಳೆಯದೆಂದು ಬರೆದಿದೆ.

卐

'ಚರ್ಚಿಲರು ಎಲ್ಲದಕ್ಕೂ ತಲೆಕೊಟ್ಟು ನಿಂತಿದ್ದಾರೆ. ಅವರು ಬಹಳ ಭಾರ ಹೊತ್ತಿದ್ದಾರೆ. ಕಳೆದ ಎರಡು ವರ್ಷ ಅವರು ಹೊರಲಾರದ ಹೊರೆ ಹೊತ್ತು, ಇನ್ನೂ ಅದನ್ನು ಅವರೇ ಹೊರಬೇಕೆಂದರೆ ಸಾಧ್ಯವಿಲ್ಲ. ಅದರಿಂದ ನಮಗೆಲ್ಲಾ ಗಂಡಾಂತರವೊದಗುವ ಸಂಭವವಿದೆ.' ಸಂರಕ್ಷಣಾ ಮಂತ್ರಿಗಳು ಬೇರೆ ಯಾರಾದರೂ ಆಗುವುದು ಅತ್ಯಂತ ಅವಶ್ಯ' ಇದು ಆ ಪತ್ರಿಕೆಯ ಹಿತಸೂಚನೆಯಾಗಿದೆ.

卐

'ಚರ್ಚಿಲರ ಸಂರಕ್ಷಣಾ ಕಾರ್ಯವು ನಿಷ್ಪ್ರಯೋಜನವಾಗಿದೆ; ಅವರು ಕಳೆದ ಎರಡು ವರ್ಷಗಳಿಂದ ಹೊಣೆಗಾರಿಕೆ ಹೊತ್ತುಕೊಂಡು ಏನೂ ಮಾಡಲಿಲ್ಲ. ಈಗ ಅವರು ತಮ್ಮ ಪದವಿಗೆ ರಾಜಿನಾಮೆಯಿತ್ತು ತನ್ನ ಸನ್ಮಾನವನ್ನು ಕಾಪಾಡಿಕೊಳ್ಳುವುದು ಒಳ್ಳೆಯದು' ಹೀಗೆಂದು ಸ್ಪಷ್ಟವಾಗಿ ಹೇಳಿದರೆ ಎಲ್ಲಿ ಚರ್ಚಿಲರು ನೊಂದುಕೊಳ್ಳುತ್ತಾರೋ ಎಂದು 'ಸಂಡೇ ಟೈಮ್ಸ್' ಸಂದೇಹಪಟ್ಟಂತೆ ತೋರುತ್ತದೆ.

卐

ಚರ್ಚಿಲರು ಮಹಾಧೀರರೆಂಬುದೇನೋ ನಿಶ್ಚಯ. ಹಿಟ್ಲರನ ಹೆಮ್ಮೆಯನ್ನೂ, ಜಪಾನಿನ ಜಂಭವನ್ನೂ, ಇಟಲಿಯ ಅಟ್ಟಹಾಸವನ್ನೂ ಚರ್ಚಿಲರು ಚರ್ಚಿಸಿಯೇ ಗೆಲ್ಲುವವರು. ಪ್ರಾಯದಲ್ಲಿ ಮುದುಕರಾದರೂ ಚರ್ಚಿಲರು ಮಾತಿನಲ್ಲಿ ಮಲ್ಲರು; ಈ ಕಾರಣದಿಂದಲೇ ಚರ್ಚಿಲರು ಬ್ರಿಟನಿನ ಮಹಾಮುಂದಾಳುಗಳು!

卐

ಆದರೆ ಇಂದು ಬರಿಯ ಮಾತಿನಿಂದ ಕಾರ್ಯ ಸಾಧಿಸುವಂತಿಲ್ಲವೆಂಬುದು ಖಚಿತವಾಗಿದೆ. ಚರ್ಚಿಲರು ಮಾತನಾಡುತ್ತಿದ್ದಂತೆಯೇ, ಜರ್ಮನಿ ಜಪಾನುಗಳು ಕೊಬ್ಬುತ್ತಾ ಇವೆ; ರಾಷ್ಟ್ರಗಳ ಬಳಿಕ ರಾಷ್ಟ್ರಗಳನ್ನು ನುಂಗುತ್ತಿವೆ; ಹಾಗಾಗಿ ಇಂದಿಗೆ ಅವರ ಮುಂದಾಳುತನವು ಸಮರ್ಥವಾಗಿಲ್ಲವೆಂದೂ, ಅದರಲ್ಲೂ ಅವರ ಸಂರಕ್ಷಣಾ ಕಾರ್ಯವು ಸಾಲದೆಂದೂ ಬ್ರಿಟನಿನ ಪತ್ರಿಕೆಗಳೇ ಹೀಗೆ ಚರ್ಚಿಲರ ಕುರಿತು ಚರ್ಚಿಸತೊಡಗಿವೆ.

ಜರ್ಮನಿಯು ಯುದ್ಧದಲ್ಲಿ ಗೆದ್ದರೆ?

ಹಿಂದೂದೇಶದ ಪರಿಸ್ಥಿತಿಯೇನು?

ಗಾಂಧಿಜಿ ಲೇಖನ

"ಹಿಂದೂದೇಶವು ಯುದ್ಧಕ್ಕೆ ಸೇರಲಿಲ್ಲವೆಂಬುದರಿಂದ, ಜರ್ಮನಿ ಒಂದು ಪಕ್ಷ ಈ ಯುದ್ಧದಲ್ಲಿ ಗೆದ್ದರೆ ಹಿಂದೂಸ್ಥಾನವನ್ನು ಹಿಟ್ಲರನು ಬಿಟ್ಟುಬಿಟ್ಟಾನೆ? ನನ್ನ ಪ್ರಿಯ ಮಿತ್ರ ಗಾಂಧಿಜಿ, ಖಂಡಿತವಾಗಿಯೂ ಆತನು ಹಿಂದೂದೇಶವನ್ನು ಅದರಷ್ಟಕ್ಕೆ ಬಿಟ್ಟುಬಿಡಲಾರ. ಬ್ರಿಟಿಷರಿಗಿಂತಲೂ ಆತನು ಹಿಂದೂದೇಶದಲ್ಲಿ ಭಯಂಕರ ಮಾಡಬಲ್ಲನು. ಬ್ರಿಟಿಷ್ ಜರ್ಮನರ ವಿಷಯದಲ್ಲಿ ಹಿಂದೂಸ್ಥಾನದವರಿಗೆ ಇರುವ ವ್ಯತ್ಯಾಸವೆಂದರೆ ಇದು. ನೀವು ಬ್ರಿಟಿಷರೊಡನೆ ಜಗಳ ಮಾಡಿದಂತೆ, ಒಮ್ಮೆ ಜರ್ಮನನ್ನು ಹಿಂದೂಸ್ಥಾನಕ್ಕೆ ಕಾಲಿಟ್ಟನೆಂದರೆ ಆತನೊಡನೆ ಜಗಳಾಡಲಾರಿರಿ. ಇಂಗ್ಲಿಷರನ್ನು ಶಾಸನಭಂಗವು ಒಂದು ಹೆದರಿಸುವುದಾದರೆ, ಜರ್ಮನರಿಗೆ ಅದು ದಿನಸತ್ಯದ ಹೊಟ್ಟೆಯಾಗುವುದು."

—ಇದು ದಕ್ಷಿಣ ಆಫ್ರಿಕದಿಂದ ಗಾಂಧಿಜಿಯವರಿಗೆ ಒಬ್ಬ ಇಂಗ್ಲಿಷ್ ಪತ್ರಲೇಖಕನು ಬರೆದ ಪತ್ರದ ಒಂದಂಶವಾಗಿದೆ. ಇದರ ಕುರಿತು ಗಾಂಧಿಜಿ ಹರಿಜನದಲ್ಲಿ ಹೀಗೆಂದು ಬರೆಯುತ್ತಾರೆ: "ಮೊದಲನೆ ವಿಷಯವೆಂದರೆ, ಕಾಂಗ್ರೆಸಿನ ಪ್ರತಿಷೇಧವಿದ್ದರೂ, ಎಲ್ಲಾ ರೀತಿಯಲ್ಲಿಯೂ ಹಿಂದೂಸ್ಥಾನವು ಯುದ್ಧದಲ್ಲಿದ್ದಂತೆ ತೋರಿದರೂ ಅದು ಯುದ್ಧದಲ್ಲಿ ಸೇರಲಿಲ್ಲವೆಂಬುದು ತಿಳಿಯುವುದು. ಹಿಂದೂದೇಶದಲ್ಲಿ ಸಿಗುವ ಯುದ್ಧಸಾಮಗ್ರಿಗಳನ್ನೂ, ಹಣವನ್ನೂ ಉಪಯೋಗಿಸಿ ಶಿಕ್ಷಣಕೊಟ್ಟು ಇಂದು ಯುದ್ಧಕ್ಕೆ ಸಹಾಯಕೊಡುವುದರಿಂದ, ಅದು ಯುದ್ಧದಲ್ಲಿ ಸೇರುವುದೆಂದು ಹೇಳಬಹುದು. ರಾಜಕೀಯ ಬುದ್ಧಿಯ ಭಾರತೀಯರು, ಆಳುವ ಅರಸರ ಬರವಣಿಗೆ ಕೆಲಸಮಾಡಲು ತರಬೇತುಗೊಳಿಸಲ್ಪಟ್ಟಿದ್ದಾರಲ್ಲದೆ ನಿಜವಾಗಿ ಶಿಕ್ಷಣ ಹೊಂದಿಲ್ಲ. ಏನಾದರೂ ವಿಶೇಷವಾದ ಪರಿಸ್ಥಿತಿಯುಂಟಾಗದಿದ್ದರೆ ಅವರು ತಾವು ದೂರವೇ ನಿಂತುಕೊಳ್ಳುವರು. ಮಿತ್ರಪಕ್ಷದವರು ಯಾವ ಸ್ವಾತಂತ್ರ್ಯದ ಸಲುವಾಗಿ ಹೋರಾಡುತ್ತಾರೋ ಆ ಸ್ವಾತಂತ್ರ್ಯವನ್ನು ಅವರೂ ಕೇಳಿದರೆ ಅದರಲ್ಲಿ ತಪ್ಪೇನು ಎಂದು ನಾನು ಕೇಳುತ್ತೇನೆ. ಭಾರತೀಯರ ಕೇಳಿಕೆಯನ್ನು ಕೊಟ್ಟರೂ ಅವರು ಮಾಡಬಲ್ಲರೇನೆಂದರೆ, ಯುದ್ಧಕ್ಕೆ ತಮ್ಮ ನೈತಿಕ ಸಹಾಯವನ್ನೀಯುವುದು. ಈ ವಿಷಯದಲ್ಲಿ ಆಳುವ ಜನಾಂಗದವರು ಗಣ್ಯಮಾಡುವುದೇ ಇಲ್ಲ. ಹಾಗಾಗಿ, ಅವರ ಅಭಿಪ್ರಾಯದಂತೆ, ಅವರ ಹಿತಕ್ಕಾಗಿ ನನ್ನ ಶಕ್ತಿ ತಿರುಗಿಸಲಾರೆ. ಪ್ರತಿಯೊಂದು ಪಕ್ಷವೂ ತನ್ನ ಪದಾರ್ಥ ಮತ್ತು ಶಾರೀರಿಕ ವಸ್ತುಗಳ ಕಡೆಗೇ ಹೆಚ್ಚು ಗಮನಕೊಡುವಾಗ ನೈತಿಕ ಸಹಾಯಕ್ಕೆ ಬೆಲೆಯಿಲ್ಲವೆಂದಾಗಿದೆ. ಕಾಂಗ್ರೆಸು ನಾಜೀತತ್ವವನ್ನು ಖಂಡಿಸುವುದಾದರೂ, ಯಾವ ಸಹಾಯವನ್ನು ಬ್ರಿಟನು ಬೇಡುವನ್ನೋ, ಅಥವಾ ಯಾವ ಸಹಾಯದ ಕುರಿತು ಬ್ರಿಟನು ನಿರೀಕ್ಷಿಸುತ್ತಿರುವುದೋ, ಆ ಸಹಾಯವನ್ನು ಕಾಂಗ್ರೆಸ್ಸು ಒಮ್ಮೆಲೇ ಬ್ರಿಟನಿಗೆ ಕೊಡಲಾರದು. ಆದ್ದರಿಂದ ಬ್ರಿಟನು ಇದರಲ್ಲಿ ಅಪಜಯ ಹೊಂದುವುದಿದ್ದರೆ, ಅದು ಕಾಂಗ್ರೆಸು ಸಹಾಯಕೊಡದಿರುವುದರಿಂದಲ್ಲ; ಕಾಂಗ್ರೆಸಿನ ಹಿತಕ್ಕೆ ಸಿಗದ ಕೆಲವು ವಿಷಯಗಳ ಸಲುವಾಗಿಯಾಗಿದೆ.

"ನಾಜಿಗಳು ಭಾರತಕ್ಕೆ ಬಂದರೆ, ಕಾಂಗ್ರೆಸು ಇದುವರೆಗೆ ಬ್ರಿಟಿಸನೆದುರು ಮಾಡಿದಂತಹ ಹೋರಾಟವನ್ನೇ ಹೂಡುವುದು. ಪ್ರಶ್ನೆಕರ್ತರು ಹೇಳಿದಷ್ಟು ನಾನು ಸತ್ಯಾಗ್ರಹದ ಶಕ್ತಿ ಹೀನತರವಾಗಿದೆಯೆಂದು ಒಪ್ಪಿಕೊಳ್ಳಲಾರೆ. ಆದರೆ ಇದು ಒಂದು ದೃಶ್ಯಮಾತ್ರ. ಸಾಮ್ರಾಜ್ಯಶಾಹಿಯು ೧೫೦ ವರ್ಷಗಳಿಂದ ಹಿಂದೂದೇಶವನ್ನು ಹಿಡಕೊಂಡಿದೆ. ಆ 'ಶಾಹಿ'ತ್ವವನ್ನು ಅವಕ್ಕಿಂತ ಕೆಟ್ಟ ಶಾಹಿತ್ವವೊಂದು ಉರುಳಿಸಿ, ಹಿಂದೂದೇಶದಲ್ಲಿ ಆಳುವುದಿದ್ದರೆ, ಯಾವುದೇ 'ಶಾಹಿ'ತ್ವವಾದರೂ ಕೆಲವೇ ವರ್ಷಗಳ ಮೇಲೆ ಉಳಿಯಲಾರದು ಎಂಬ ವಿಷಯವನ್ನು ತಿಳಕೊಳ್ಳುವ ವಿರುದ್ಧ ಜ್ಞಾನದ ತೃಪ್ತಿಯು ಕಾಂಗ್ರೆಸಿಗೆ ಸಿಗುವುದು. ಹೀಗೆಂದು ನಾನು ಕಾಂಗ್ರೆಸಿನ ಬುದ್ಧಿಯನ್ನು ತಿಳಕೊಂಡಿರುವೆನು. ಪುರಾಣದಲ್ಲಿ ಮಹಾಭಾರತದ ಯುದ್ಧದ ಅಂತ್ಯವು ಹೇಗಾಯಿತೋ ಈ ಯುದ್ಧದ ಅಂತ್ಯವೂ ಹಾಗೆಯೇ ಆಗುವುದೆಂದು ನನ್ನ ಕಲ್ಪನೆಯಾಗಿದೆ. ಮಹಾಭಾರತದ ವಿಷಯವಾಗಿ ತಿರುವಾಂಕೂರಿನವರೊಬ್ಬರು ಮನುಷ್ಯನ ಉತ್ತಮ ಇತಿಹಾಸವೆಂದು ಬರೆದಿದ್ದಾರೆ. ಆ ಮಹಾಭಾರತದಲ್ಲಿ ವರ್ಣಿತವಾದ ವಿಷಯವು ಇಂದು ನಮ್ಮ ಮುಂದೆ ಪ್ರತ್ಯಕ್ಷವಾಗಿ ಸಂಭವಿಸುತ್ತದೆ. ಅತ್ಯಧಿಕ ಕೋಪ ಉಗ್ರಗಳಿಂದ ಹೋರಾಡುತ್ತಿರುವ ಎರಡು ಪಕ್ಷದವರು ಕೊನೆಗೆ ತಮ್ಮ ವಿನಾಶವನ್ನೇ ಮಾಡಿಕೊಂಡು ಕೊನೆಗೊಳಿಸಲಿದ್ದಾರೆ. ಪಾಂಡವರಿಗೆ ಬಂದೊದಗಿದ ಅವಸ್ಥೆ ವಿಜಯಿಯಾದವನಿಗೆ ಒದಗಲಿದೆ. ಒಬ್ಬ ಸಣ್ಣ ಕಳ್ಳನೊಬ್ಬನಿಂದ, ಮಹಾವೀರನಾದ ಅರ್ಜುನನು ಹಗಲು ಹೊತ್ತಿನಲ್ಲಿ ಸುಲಿಗೆಮಾಡಲ್ಪಟ್ಟನು. ಆದರೆ ಈ ಮಹಾನರ್ಥದ ಮೇಲೆ, ಮಿಲಿಯಾಂತರ ಸಂಕಷ್ಟ ಜೀವಿಗಳು ಹಾರೈಸುತ್ತಿರುವ ಹೊಸ ಜಗತ್ತು ಪ್ರಾರಂಭವಾಗುವುದು. ಶಾಂತಿಯನ್ನು ಬಯಸುವವರ ಪ್ರಾರ್ಥನೆ ವ್ಯರ್ಥವಾಗಲಾರದು. ಸಂಕಟಪಡುವ ಜೀವಿಯ ಮೌನಪ್ರಾರ್ಥನೆಯೇ ಸತ್ಯಾಗ್ರಹವೂ ಆಗಿದೆ."

ಬಜಾಜರ ನಿಧನದ ಬಗ್ಗೆ ಗಾಂಧಿಜಿ ಹೇಳಿಕೆ

ಆದಿವಾಸಿಗಳ ವಿಚಾರ

['ಹರಿಜನ'ದಿಂದ]

ಬಜಾಜರ ನಿಧನ ಕುರಿತು ಗಾಂಧಿಜಿ

ತನ್ನ ವಿಷಾದವನ್ನು ತಿಳಿಸುತ್ತಾ, ಸಿರಿವಂತರು ಬಡವರ 'ಟ್ರಸ್ಟಿ'ಗಳಾಗಿರಬೇಕೆಂದು ನಾನು ಹೇಳುತ್ತಿದ್ದಾಗ ಯಾವಾಗಲೂ ಬಜಾಜರು ನನ್ನ ಕಣ್ಣ ಮುಂದೆ ಇರುತ್ತಿದ್ದರು ಎಂದು ಹೇಳುತ್ತಾರೆ. ನಿಜವಾದ ಟ್ರಸ್ಟಿಗಳಾಗಲು, ಬಜಾಜರು ಕೃತಾರ್ಥರಾಗಿರದಿದ್ದರೆ, ಅದು ಅವರ ತಪ್ಪಲ್ಲ; ನನ್ನದು ಎಂದು ಗಾಂಧಿಜಿ ತಿಳಿಸುತ್ತಾ, ಅವರ ಉತ್ಸಾಹಕ್ಕೆ ನಾನು ತಣ್ಣೀರೆರಚುತ್ತಿದ್ದೆನೆಂದೂ, ಅವರು ಸರಳ ಜೀವಿಗಳೆಂದೂ, ತಮಗಾಗಿ ಅವರು ಕಟ್ಟಿದ ಪ್ರತಿಯೊಂದು ಮನೆಯೂ ಧರ್ಮಶಾಲೆಯಾಯಿತೆಂದೂ, ಸತ್ಯಾಗ್ರಹಕ್ಕೆ ಅವರ ಸೇವೆ ಅಪಾರವಾದುದೆಂದೂ ಅವರ ಮರಣದಿಂದ ಲೋಕವೇ ಬಡವಾಗಿದೆಯೆಂದೂ ಬರೆಯುತ್ತಾರೆ.

ಸೈನಿಕರ ಅಸಭ್ಯ ವರ್ತನೆ

ವಿಷಯವಾಗಿ ಗಾಂಧಿಜಿ ಒಂದು ಲೇಖನದಲ್ಲಿ ಬರೆದು, ದೋಹಾದ್ ಮತ್ತು ರುತ್ಲಾಮ್ ಸ್ಟೇಶನುಗಳಿಂದ ನನಗೆ ಅಂತಹ ಪತ್ರಗಳು ಬಂದಿರುವುದಾಗಿ ತಿಳಿಸಿ, ಮಾರಾಟಗಾರರಿಂದ ಸಾಮಾನುಗಳನ್ನು ಎಳೆದು ತೆಗೆಯುವುದು ಮೊದಲಾದವು ಆ ಪತ್ರದಲ್ಲಿರುವುದೆಂದೂ, ಇಂತಹ ವಿಷಯ ಅಧಿಕಾರಿಗಳು ಹೆಚ್ಚಿನ ಗಮನ ಕೊಡಬೇಕಾಗಿದೆಯೆಂದೂ ಗಾಂಧಿಜಿ ಎಚ್ಚರಿಸುತ್ತಾರೆ.

ಹೈದರಾಬಾದ್ ಸಂಸ್ಥಾನದ

ವಿಷಯ ಬರೆಯುತ್ತಾ ಗಾಂಧಿಜಿಯವರು ಅಲ್ಲಿನ ಜನರಿಗೆ ರಾಜಕೀಯ ಮಾರ್ಗದಲ್ಲಿ ಜವಾಬ್ದಾರಿ ಸರಕಾರದ ಸಲುವಾಗಿ ಆಂದೋಲನ ಮಾಡುವರೆ ಸಂಸ್ಥಾನ ಸರಕಾರದವರು ಅನುಮತಿ ಕೊಡಬೇಕೆಂದೂ, ಈಗ ಸಂಸ್ಥಾನ ಕಾಂಗ್ರೆಸಿನ ಮೇಲೆ ಹಾಕಿರುವ ನಿರ್ಬಂಧವನ್ನು ತೆಗೆದುಹಾಕಬೇಕೆಂದೂ ಸೂಚಿಸಿದ್ದಾರೆ.

ಆದಿವಾಸಿಗಳು

ರಚನಾತ್ಮಕ ಕಾರ್ಯಕ್ರಮಗಳಲ್ಲಿ ಹದಿನಾಲ್ಕನೆಯ ಸೂತ್ರವಾದ ಆದಿವಾಸಿಗಳ ವಿಚಾರ ಈ ಸಲದ ಹರಿಜನದಲ್ಲಿ ಮಹಾದೇವದೇಸಾಯಿ ಹೀಗೆಂದು ಬರೆಯುತ್ತಾರೆ.

'ಆದಿವಾಸಿಗಳು ಹಿಂದೂದೇಶದಲ್ಲಿ ಒಟ್ಟು ೨ ಕೋಟಿ ಇದ್ದಾರೆ. ಥಾನಾ ಜಿಲ್ಲೆಯಲ್ಲಿ ಈ ಕೆಲಸವನ್ನು ಬಾಳಾ ಸಾಹೇಬ್ ಖೇರರು ಪ್ರಾರಂಭಿಸಿದ್ದಾರೆ. ಹಲವರು ಆದಿವಾಸಿಗಳು 'ಗುಲಾಮ'ರಾಗಿದ್ದಾರೆ. ಜಮೀನ್ದಾರರು ಸಾಹುಕಾರರು ಮತ್ತು ಕಾಡಿನ ಕಂಟ್ರಾಕ್ಟರರು ಇವರನ್ನು ಗುಲಾಮರಾಗಿ ನಡೆಸಿಕೊಂಡು ದುಡಿಸುತ್ತಾರೆ. ೧೯೩೯ರಲ್ಲಿ ಸರಕಾರವು ಪ್ರಕಟಿಸಿದ ಸಿಮಿಂಗ್‌ಟನ್ ವರದಿಯಿಂದ ಅವರಿಗೆ ಹೆಚ್ಚಿನ ಶಿಕ್ಷೆ ವಿಧಿಸುವುದಾಗಿ ತಿಳಿದಿದೆ. ಶಿಕ್ಷೆಕೊಟ್ಟು ಕೊಲ್ಲುವ ಸಂದರ್ಭವೂ ಉಂಟು. ಜಮೀನ್ದಾರರು ಅವರ ಹೆಂಗುಸರನ್ನು ತಮ್ಮ ಕಾಮವಾಸನೆಯನ್ನು ತೀರಿಸಿಕೊಳ್ಳಲು ಉಪಯೋಗಿಸುವುದೂ ಉಂಟು. ಹೀಗಾಗಿ 'ಯಾವಾಗಲೂ ಭೀತಿ, ಸಂಕಷ್ಟ ಅನಾರೋಗ್ಯಗಳಲ್ಲಿಯೇ ಕೊಳೆತಿರಬೇಕಾಗಿದೆ. ಬಾಳ ಸಾಹೇಬರು ಆದಿವಾಸಿಗಳ ವಿಷಯ ಹೆಚ್ಚಿನ ಗಮನ ತೆಗೆದುಕೊಂಡಿದ್ದಾರೆ.'

ಗೋಸೇವಾ ಸಂಘ

ಗಾಂಧಿಜಿ ಇತ್ತೀಚೆಗೆ ಗೋಸೇವೆಯ ಕುರಿತು ಹೆಚ್ಚಿನ ಗಮನ ಕೊಟ್ಟಂತೆ ತೋರುತ್ತದೆ. ಹರಿಜನದಲ್ಲಿ ಆ ಕುರಿತು ಹಲವು ಲೇಖನಗಳಿವೆ. ಗೋ ಸಂಪತ್ತು ಹೆಚ್ಚುವುದರಿಂದ, ಭಾರತದ ಆರ್ಥಿಕ ಸ್ಥಿತಿಯಲ್ಲಿ ಅಭಿವೃದ್ಧಿಯುಂಟಾಗುವುದೆಂದು ಗಾಂಧಿಜಿ ಅಭಿಪ್ರಾಯಪಟ್ಟಿದ್ದಾರೆ.

[illegible]

ಕೈಬರ್ ಕಣಿವೆಗೆ ಕೈಶೇಕರ ಭೇಟಿ

ಆಯಿತು. ಅಲ್ಲಿನ ರಕ್ಷಣಾ ವ್ಯವಸ್ಥೆಗಳನ್ನು ಅವರು ನೋಡಿಬಂದರು. ಅಲ್ಲಿ ಆಫ್ರಿದಿ [illegible] ಅವರಿಗೆ ಮಾನಪತ್ರವನ್ನರ್ಪಿಸಿದರು. ಖೈಬರ್ ಶೂರರು ಆಕ್ರಮಣಗಾರರನ್ನು ಎದುರಿಸುವಲ್ಲಿ ಹೆಚ್ಚಿನ ಪಾತ್ರವ ವಹಿಸಬೇಕೆಂಬುದಾಗಿ ಕೈಶೇಕರು ಹೇಳಿದರು. ಗಡಿನಾಡಿನ ಗವರ್ನರರಲ್ಲಿ ಅವರಿಗೆ ಆತಿಥ್ಯವಾಯಿತು. ದಿಲ್ಲಿಯಲ್ಲಿ ಚಿಯಾಂಗ್ ಕೈಶೇಕರು ಎಲ್ಲಾ ಪಕ್ಷ ಜನರ ಸ್ವಾಗತವನ್ನೂ ಸ್ವೀಕರಿಸಿದರು.

ಪಾಪ ಪೂರ್ಣ ಪಟ್ಟಣಗಳು
ಎಂಬ ಕಳಾಶಾಸ್ತ್ರ
ರಹಸ್ಯಗಳು ರೂ. ೧-೪-೦
ಕನ್ನಡ ಭಾಷೆಯಲ್ಲಿ ಸ್ತ್ರೀಪುರುಷರ ಪ್ರೀತಿಯ ಫೋಟೋಗಳೊಡನೆ ಮುದ್ರಿಸಿದೆ. ಇದರಲ್ಲಿ ಎಲ್ಲ

ದೇಶದ ವೇಶ್ಯೆಯರು ಕನ್ಯೆಗಳು ತೋರಿಸುವ ರಹಸ್ಯಗಳು ಹಾಸಿಗೆಯ ಸುಖಾಸನಗಳು, ಸ್ತ್ರೀ ಪುರುಷರು ದಿಗಂಬರರಾಗಿರುವ ಗುಟ್ಟುಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶಗಳ ವ್ಯಭಿಚಾರಿಗಳು ಪ್ರೀತಿಸುವ ರಹಸ್ಯಗಳು, ಮುತ್ತಿಡುವ ವಿಧಗಳು, ಕನ್ಯೆಗಳ ಪ್ರೇಮ ಮತ್ತು ಸಂಯೋಗ ಕಾಲದ ಮರ್ಮಗಳು ಇನ್ನೂ ಅನೇಕ ಪ್ರೀತಿಯ ಮುತ್ತಿಡುವ, ಮಲಗುವ ಮನೆಯ ಶೃಂಗಾರ ರಹಸ್ಯ 20 ಫೋಟೋಗಳು ಅಡಗಿವೆ. [illegible]
ಈ ಪುಸ್ತಕ ಒಂದಕ್ಕೆ ರೂ. ೧-೪-೦
M. G. ರಾಜನ್ ಅಂಡ್ ಕೊ.,
ಮದರಾಸು.
ಪೋಸ್ಟ್ ಬಾಕ್ಸ್ ನಂ. 231

ಗಾಂಧಿಜಿ ಮತ್ತು ಚಿಯಾಂಗ್ ದಂಪತಿಗಳ ಸಂದರ್ಶನ

ಚರ್ಚಿಲರಿಂದ ಸಪ್ರುಗಳಿಗೆ ಉತ್ತರ

ಕೆಲಸವಿಲ್ಲದವರು ಮದ್ರಾಸನ್ನು ಬಿಡಬೇಕು

ಅಜಾದ್ ಸಿಕಂದರ ಮಾತುಕತೆ

ಚಿಯಾಂಗರ ಸೇವೆ ಮಾಡಲು ಬಂದಿರುವೆನು

ನೆಹರು ಹೇಳಿಕೆ

ಕಲ್ಕತ್ತೆಗೆ ಬಂದ ನೆಹರುಗಳೊಡನೆ ಪತ್ರಿಕಾ ಪ್ರತಿನಿಧಿಗಳು ಭೇಟಿಯಾಗಿ ಅಲ್ಲಿಗೆ ಬಂದ ಕಾರಣ ಕೇಳಲು ನಾನು ನಮ್ಮೂರಿಗೆ ಆಗಮಿಸಿದ ಅತಿಥಿಗಳಾದ ಚಿಯಾಂಗ್ ದಂಪತಿಗಳ ಸೇವೆ ಮಾಡಲು ಬಂದಿರುವೆನೆಂದರು.

ಕೇಂ. ಪ್ರ. ಎಸೆಂಬ್ಲಿಯಲ್ಲಿ

ಚಿಯಾಂಗ್ ದಂಪತಿಗಳಿಗೆ ಅಭಿನಂದನೆ

ಸಲ್ಲಿಸುವ ನಿರ್ಣಯವೊಂದು ಬಂದು ಸರ್ವಾನು ಮತದಿಂದ ಮಂಜೂರಾಯಿತು. ಶ್ರೀ ಆಣೆಯವರು ಈ ಸೂಚನೆ ತಂದವರು. ಶ್ರೀ ಆಣೆಯವರು ಚಿಯಾಂಗ್ ದಂಪತಿಗಳ ಅಪ್ರತಿಮ ಸಾಹಸವನ್ನು ಸ್ವಾತಂತ್ರ್ಯ ಪ್ರೇಮವನ್ನೂ ಕೊಂಡಾಡಿ ಮಾತನಾಡಿದರು.

ಕ್ರಿಮಿನಲ್ ಅಪರಾಧದಲ್ಲಿ ರೇವಾ ಮಹಾರಾಜರ ಭಾಗ

ಇದೆಯೆಂದು ಅವರ ಅಧಿಕಾರವನ್ನು ವೈಸರಾಯರು ರದ್ದುಗೊಳಿಸಿರುವರು. ಅದರ ವಿಚಾರಣೆಗಾಗಿ ಒಂದು ಸ್ವತಂತ್ರ ವಿಚಾರಣಾ ಸಮಿತಿಯೇರ್ಪಡಿಸುವರು.

ಮುಂಬಯಿಯಲ್ಲಿ ಹೊಯಿಗೆ ಚೀಲ ಹೆಂಭುವಿಕೆ

ಕೆಲಸವು ಬೇಗನೇ ಪ್ರಾರಂಭವಾಗಲಿದೆಯೆಂದು ತಿಳಿದುಬಂದಿದೆ. ಅದರ ಜೊತೆಗೆ ಆಕ್ರಮಣ ಕಾಲದ ಸೂಚನೆಗಳೂ ಹಂಚಲಾಗುವವು. ಬೊಂಬಾಯಿಗೆ ಆಕ್ರಮಣದ ಭೀತಿಯಿಲ್ಲವೆಂದೂ ತಿಳಿಸಲಾಗಿದೆ.

ಚೀನಾ-ಭಾರತ ಬಾಂಧವ್ಯ

ಚೀನಾ ಪತ್ರಿಕೆ ಭರವಸೆ

ಚಿಯಾಂಗ್ ಕೈಶೇಕರ ಭೇಟಿಯಿಂದ ಚೀನಾ ಭಾರತ ಬಾಂಧವ್ಯ ಹೆಚ್ಚು ಬೆಳೆವುದೆಂದೂ, ಆರ್ಥಿಕ ಸಹಾಯವೂ ಹೆಚ್ಚಾಗುವುದೆಂದೂ, ಚಿಯಾಂಗ್ ಕೈಶೇಕರ ಭೇಟಿಯಿಂದ ಬ್ರಿಟಿಷು ಭಾರತಗಳ ಸಹಕಾರವಾಗುವುದೆಂದು ಚೀನದ ಅಧಿಕಾರೀ ಪತ್ರಿಕೆಯೊಂದು ಬರೆಯುತ್ತದೆ.

ನೆಹರು-ಚಿಯಾಂಗ್ ಭೇಟಿ

ಅನೇಕ ಸಲ ಆಯಿತು. ಅವರು ಅನ್ಯೋನ್ಯ ವಿಚಾರ ವಿನಿಮಯ ಮಾಡಿದರು. ನೆಹರುಗಳು ಮೇಡಂ ಚಿಯಾಂಗ್ ಕೈಶೇಕರಿಗೆ ಕುಮಾರಿ ಇಂದಿರಾ ಮತ್ತು ಸೋದರಿ ವಿಜಯಲಕ್ಷ್ಮಿಯರನ್ನು ಸಂಪರ್ಕಪಡಿಸಿ ಕೊಟ್ಟಿದ್ದು, ವಿಜಯಲಕ್ಷ್ಮಿಯರೊಡನೆ ಮೇಡಂ ಚಿಯಾಂಗ್ ಕೈಶೇಕರು ತಾಜ್‌ಮಹಾಲಿನಲ್ಲಿ ಮೂರು ತಾಸುಗಳ ತನಕ ಇದ್ದರು.

ಲಾಹೋರಿನಲ್ಲಿ

ಚಿಯಾಂಗ್ ಕೈಶೇಕರಿಗೆ ಸಂಭ್ರಮ ಸ್ವಾಗತ ವಿತ್ತು. ಸರ್ ಸಿಕಂದರರೂ ಅವರ ಭೇಟಿಯಾದರು.

ಕೈಶೇಕರಿಗೆ ಕಾಂಗ್ರೆಸಿನ ಅಭಿವಂದನೆ

ಚಿಯಾಂಗ್ ಕೈಶೇಕರಿಗೆ ಗಾಂಧಿಜಿಯವರಿಂದ ಹೊರತಾಗಿ ಕಾಂಗ್ರೆಸಿನ ಸಕಲ ಮುಖಂಡರು ತಮ್ಮ ಅಭಿನಂದನೆ ಕಳುಹಿಸಿರುವರು.

ಸರತ್ ಬೋಸರಿಗೆ ೧೦೦೦ರೂ. ಭತ್ತೆ

ತಿಂಗಳೊಂದಕ್ಕೆ ಕೊಡಬೇಕೆಂದು ಹಿಂದುಸ್ಥಾನ ಸರಕಾರದವರು ನಿರ್ಧರಿಸಿರುವರಾಗಿ ತಿಳಿದಿದೆ. ಅವರನ್ನು ತ್ರಿಚಿನಾಪಳ್ಳಿಯಿಂದ ಬೇರೆ ಕಡೆಗೆ ಸ್ಥಳಾಂತರಿಸುವ ವಿಚಾರವೂ ಮಾಡಲಾಗುತ್ತದೆಯಂತೆ.

ಲೇಖಕ ಪ್ರಕಾಶಕರಲ್ಲಿ ರಾಷ್ಟ್ರಪತಿಗಳ ವಿಜ್ಞಾಪನೆ

ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಅಭ್ಯಾಸ ಮಾಡಲು ಮತ್ತು ಸಂಶೋಧನೆ ನಡೆಸಲು ಅ. ಭಾ. ಕಾಂಗ್ರೆಸ್ ಕಚೇರಿಯಲ್ಲಿ ಒಂದು ಪುಸ್ತಕ ಭಂಡಾರವನ್ನು ಸ್ಥಾಪಿಸುವುದರಿಂದ ಅದಕ್ಕೆ ಲೇಖಕ ಪ್ರಕಾಶಕರು ಸಹಕರಿಸಿ ಧರ್ಮಾರ್ಥ ಪುಸ್ತಕ ಕಳುಹಿಸಬೇಕೆಂಬುದಾಗಿ ರಾಷ್ಟ್ರಪತಿ ಅಜಾದರು ಒಂದು ಪ್ರಕಟಣೆ ಕೊಟ್ಟಿದ್ದಾರೆ.

ಕೇಂದ್ರ ಎಸೆಂಬ್ಲಿ ಅಧಿವೇಶನವು

ಕಳೆದ ಬುಧವಾರ ಸೇರಿದೆ. ಕಾಂಗ್ರೆಸ್ ಪಕ್ಷದ ಸದಸ್ಯರು ಈ ಸಲದ ಅಧಿವೇಶನಕ್ಕೆ ಬಹಿಷ್ಕಾರ ಹಾಕಿದ್ದರಿಂದ ಒಟ್ಟು ಜೀವ ಕಳೆಯಿಲ್ಲದಂತಾಗಿದೆ. ಮೊದಲನೆಯ ದಿನದ ಸಭೆಯಲ್ಲಿ ಒಟ್ಟು 25 ಮಂದಿ, ಜನರಿಂದ ಆರಿಸಲ್ಪಟ್ಟ ಪ್ರತಿನಿಧಿಗಳಿದ್ದರು.



...ಲ್ಲನಂತೆ! ಕೇಂದ್ರದಲ್ಲಿ ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಬೇಕೆಂದು ಶ್ರೀ ಜೋಷಿಯವರು ತರಲಿದ್ದ ಸೂಚನೆ, ಇತ್ತೀಚಿನ ಭಾರತ ಮಂತ್ರಿಯ ಹೇಳಿಕೆಯಿಂದಾಗಿ ಸಭೆಯ ಮುಂದಿಡಲ್ಪಡಲಿಲ್ಲವೆಂದು ತಿಳಿದಿದೆ. ಆದರೂ ಸದಸ್ಯರನೇಕರು ಆ ವಿಷಯದಲ್ಲಿ ಚರ್ಚೆ ಮಾಡಿದರು. ರಾಷ್ಟ್ರೀಯ ಸರಕಾರ ಸ್ಥಾಪಿಸದಿದ್ದರೆ ಬ್ರಿಟನಿಗೂ ಕೆಡುಕಾಗುವುದೆಂದು ಎಚ್ಚರವಿತ್ತರು.

ಗಾಂಧಿ ಚಿಯಾಂಗ್ ಭೇಟಿ

ಮಹತ್ವದ ಮಾತುಕತೆ

ಮಹಾತ್ಮಾ ಗಾಂಧಿಜಿ ಕಲಕತ್ತೆಗೆ ಹೋಗಿ ಅಲ್ಲಿ ಚಿಯಾಂಗ್ ಕೈಶೇಕರೊಡನೆ ಭೇಟಿಯಾದರೆಂದು ತಿಳಿದಿದೆ. ಜಿನ್ನರನ್ನೂ ಅಲ್ಲಿ ಅವರು ಭೇಟಿಯಾಗಿರುವರು. ಜವಾಹಿರಲಾಲರೂ ಅಲ್ಲಿ ಬಂದಿರುವರು. ಆದ್ದರಿಂದ ಇವರೆಲ್ಲರೂ ಕೂಡಿ ಏನಾದರೂ ಮಹತ್ವದ ರಾಜಕೀಯ ಚರ್ಚೆ ಮಾಡಲಿರುವರಾಗಿ ತಿಳಿದಿದೆ.

ಚೀನಾ ವಿದ್ಯಾರ್ಥಿಗಳಿಗೆ ಕಾಣಿಕೆ

ಯಾಗಿ ಅಖಿಲ ಭಾರತ ವಿದ್ಯಾರ್ಥಿ ಸಂಘದವರು ತಮ್ಮ ಒಂದು ಧ್ವಜವನ್ನು ಮೇಡಂ ಚಿಯಾಂಗ್ ಕೈಶೇಕರಿಗರ್ಪಿಸಿದ್ದನ್ನು ಅವರು ಸಾದರ ಸ್ವೀಕರಿಸಿದರು.

ಕೆಲಸವಿಲ್ಲದವರು ಊರುಬಿಡಿ

ಮದ್ರಾಸಿನ ಜನರಿಗೆ ಆಜ್ಞೆ

ಸಿಂಗಾಪುರವು ಪತನವಾದ್ದರಿಂದ ಮದ್ರಾಸಿಗೆ ಜಪಾನರು ಆಕ್ರಮಣ ಮಾಡುವ ಸಂಭವ ಹೆಚ್ಚಾಗಿರುವುದರಿಂದ, ಕೆಲಸವಿಲ್ಲದ ಜನರೆಲ್ಲರೂ ಊರು ಬಿಟ್ಟು ಹೋಗಿರೆಂದು ಮದ್ರಾಸು ಸರಕಾರವು ಆಜ್ಞೆ ಹೊರಡಿಸಿದೆ.

ಸಪ್ರುಗಳಿಗೆ ಚರ್ಚಿಲರ ಉತ್ತರ

ಕಾರ್ಯಕಾರೀ ಮಂಡಳದಲ್ಲಿ ಹೆಚ್ಚಿನ ಹಿಂದೀಕರಣ

ಸರ್ ತೇಜ ಬಹದ್ದೂರ್ ಸಪ್ರುಗಳು ಭಾರತದ ಬಿಕ್ಕಟ್ಟನ್ನು ಬಿಡಿಸುವ ವಿಚಾರ ಚರ್ಚಿಲರಿಗೆ ಬರೆದ ಪತ್ರದ ವಿಚಾರದಲ್ಲಿ ಈಗ ಅವರಿಂದ ಉತ್ತರ ಬಂದಿರುವುದು. ವೈಸರಾಯರ ಕಾರ್ಯಕಾರೀ ಮಂಡಳದಲ್ಲಿ ಹಿಂದೀ ಮನುಷ್ಯರನ್ನು ಹೆಚ್ಚು ಜನರನ್ನು ಕೂಡಿಸಿಕೊಡಲಾಗುವುದೆಂದೂ, ಪ್ರಾಂತಗಳಲ್ಲಿ ೯೩ನೇ ಕಲಮಿನಂತೆ ಈಗ ಜಾರಿಯಲ್ಲಿರುವ ಆಡಳಿತದಲ್ಲಿ ಬದಲಾವಣೆ ಮಾಡಲಾಗುವುದೆಂದೂ, ಇಷ್ಟರಲ್ಲಿಯೇ ಒಂದು ಘೋಷಣೆ ಮಾಡುವರೆಂದೂ ಸುದ್ದಿ. ಸಪ್ರುಗಳು ಬೇಗನೇ ಉತ್ತರವನ್ನು ಪ್ರಕಟಿಸುವರೆಂದು ತಿಳಿದಿದೆ.

ಅಜಾದ್-ಸಿಕಂದರ್ ಮಾತುಕತೆ

ಲಾಹೋರಿನಲ್ಲಿ ನಡೆಯಿತು. ಪಂಜಾಬಿನ ಕಾಂಗ್ರೆಸ್ ಧುರೀಣರಾದ ಮಿಯಾನ್ ಇಫ್ತಿಕರುದ್ದೀನರೂ ಹಾಜರಿದ್ದರು. ಸರ್ ಸಿಕಂದರರು ಅಜಾದರೊಡನೆ ರಾಜಕೀಯ ಮಾತುಕತೆ ಮಾಡಿದರು.

ಮಂಗಳೂರು

ಕೊಸ್ಮೊಪೊಲಿಟನ್ ಕ್ಲಬ್ ನೇತೃತ್ವದಲ್ಲಿ

ಲೇಡಿನ್ ಸಿಂಗಲ್ಸ್ ವಗೈರೆ ಟೆನಿಸ್ ಪಂದ್ಯಾಟಗಳು ಮಾರ್ಚ ತಾ. 1ರಲ್ಲಿ ಜರಗುವವು. ದಕ್ಷಿಣ ಹಿಂದೂಸ್ಥಾನದ ಎಮೆಚೂರ್ ಆಟಗಾರರಿಗೆ ಮಾತ್ರ ಪ್ರವೇಶವಿದೆ. ಸಿಂಗಲ್ಸ್ ಮತ್ತು ಡಬ್ಬಲ್ಸಗಳಿಗೆ ರೂ. 3 ಮತ್ತು 5ರಂತೆ ಪ್ರವೇಶ ಧನವನ್ನು ಕಮಿಟಿ ಸೆಕ್ರೆಟರಿಗಳಿಗೆ ತಾ. 23-2-42ರೊಳಗಾಗಿ ಕಳುಹಿಸಿಕೊಡತಕ್ಕದ್ದು. ಹೆಚ್ಚಿನ ಮಾಹಿತಿಯನ್ನು ಕಾರ್ಯದರ್ಶಿಯರಿಂದ ಪಡೆಯಬಹುದು.

"ವಸಂತಸೇನಾ" 2ನೇ ವಾರ!

ಸ್ಥಳೀಯ ಬಾಲಾಜಿ ಟಾಕೀಸಿನಲ್ಲಿ ಯಶಸ್ವಿಯಾಗಿ ಪ್ರದರ್ಶಿಸಲ್ಪಡುವ ಕನ್ನಡ ಚಲಚಿತ್ರ 'ವಸಂತಸೇನಾ' ಈಗ ಎರಡನೆಯ ವಾರದಲ್ಲಿ ಪ್ರದರ್ಶಿಸಲ್ಪಡುತ್ತಿದ್ದು ಮಂಗಳೂರಿನ ಮಹಾಜನರನ್ನು ಬಹಳವಾಗಿ ಮೆಚ್ಚಿಸಿದೆ.

ಎಸ್. ಆರ್. ಎಸ್. ಹೋವಿನ ಹಳೆ ನಿವಾಸಿಕರ ಸಂಘ

ದ ಕಾರ್ಯಕಾರೀ ಸಭೆಯು ತಾ. ...ರಲ್ಲಿ ಜರಗಿ ರಾವ್ ಬಹದ್ದೂರ್ ಕೆ. ಟಿ. ಆಳ್ವ (ಅಧ್ಯಕ್ಷ) ಶ್ರೀ ಚಂದ್ರಶೇಖರ ಹೆಗ್ಡೆ, ಶ್ರೀ ಕೆ. ಕೆ. ರೈ, ಮತ್ತು ಶ್ರೀ ಎಚ್. ರಾಮಯ್ಯ ನಾಯ್ಕರೊಂದೊಡಗೂಡಿದ ಪ್ರೊಪಗಾಂಡ ಬೋರ್ಡನ್ನು ಶ್ರೀಗಳಾದ ಪಿ. ಯಂ. ಹೆಗ್ಡೆ, ಎಂ. ಎನ್. ಚೌಟ, ಮತ್ತು ಕುಶಲ ಶೆಟ್ಟರೊಂದೊಡಗೂಡಿದ ಇನ್‌ಫೋರ್ಮೇಶನ್ ಬ್ಯೂರೋವನ್ನೂ ರಚಿಸಿತು.

ಗೆಳೆಯರ ಕೂಟದ ವಾರ್ಷಿಕೋತ್ಸವ

ಬಾಬುಗುಡ್ಡೆ ಡಿ. ಸಿ. ಯಂ. ಶಾಲೆಯಲ್ಲಿ ಗೆಳೆಯರ ಕೂಟದ ೪ನೇ ವಾರ್ಷಿಕೋತ್ಸವವು ಶ್ರೀಮಾನ್ ಎ. ಬಿ. ಶೆಟ್ಟಿ, ಯಂ. ಎಲ್. ಎ. ಅವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನೆ, ವರದಿವಾಚನ, ಬಹುಮಾನ ವಿತರಣೆಗಳಾದ ತರುವಾಯ ಮಾನ್ಯ ಅಧ್ಯಕ್ಷರು ಹರಿಜನ ತರುಣರ ಏಳಿಗೆಗಾಗಿ ಗೆಳೆಯರ ಕೂಟದವರು ಮಾಡುತ್ತಿರುವ ಪ್ರಯತ್ನಗಳನ್ನು ಕೊಂಡಾಡಿ ಗೆಳೆಯರ ಕೂಟಕ್ಕೆ ಉತ್ತರೋತ್ತರ ಅಭಿವೃದ್ಧಿಯನ್ನು ಕೋರಿದರು. ಅನಂತರ ಚಾರ ಸ್ಕೌಟ್ ದಳದವರ ಆಟಪಟಕೆಗಳೂ ಶಿಬಿರಾಗ್ನಿಯೂ ನಡೆದುವು. ವಿವಿಧ ವಿನೋದಾವಳಿಗಳಾಗಿ ಸಮಾರಂಭವು ಮುಕ್ತಾಯವಾಯಿತು.

ಪಂದ್ಯಾಟ

'ಹ್ಯಾಮಿಲ್ಟನ್ ಟೋರ್ನಮೆಂಟಿನ ಆಶ್ರಯದಲ್ಲಿ ಫುಟ್‌ಬಾಲ್ ಪಂದ್ಯಾಟವು ಜಪ್ಪ ಚ್ಯಾಂಬರ್ಸ್‌ ಪೋಲೀಸ್ ಇವರೊಳಗೆ ನಡೆದು ಮೊದಲನೆಯವರು ಎರಡನೆಯವರಿಗೆ ಒಂದು ಗೋಲ್ ಹೊಡೆದು ಜಯಶೀಲರಾದರು. ಶಾರಿ ಕೋಷಕವು ಜನಾಬ್ ಅಬ್ದುಲ್‌ರಹೀಂ ಅಹ್ಮದ್ ಅವರಿಂದ ಹಂಚಲ್ಪಟ್ಟಿತು.

ಪೆರಡಾಲ

ಬದಿಯಡ್ಕದಲ್ಲಿ ಇತ್ತೀಚೆಗೆ ಡಾ. ಪಿ. ಎಸ್. ಶಾಸ್ತ್ರಿಗಳು ಹೊಸತಾಗಿ ಕಟ್ಟಿಸಿದ ಆಸ್ಪತ್ರೆಯ ಪ್ರವೇಶೋತ್ಸವ ಸಮಾರಂಭವು ಕಳೆದ ಗುರುವಾರ ತಾ. 12ರಂದು ಮುಂಜಾನೆ ನೆರವೇರಿತು.

ಉಡುಪಿ

ಶ್ರೀ ರಾಮಕೃಷ್ಣ ಭವನದ ವರ್ಧಂತಿ

ಶ್ರೀಮಾನ್ ಎ. ಬಿ. ಶೆಟ್ಟಿ, ಎಂ. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ತಾ. 13-2-'42ರಲ್ಲಿ ಸಂಭ್ರಮದಲ್ಲಿ ಜರಗಿತು. ಬಾಲಕಿಯರಿಂದ ಪ್ರಾರ್ಥನೆಯಾದ ಮೇಲೆ ವಕೀಲ್ ಶ್ರೀ ಕೆ. ಜಿ. ಬಲ್ಲಾಳರು ಸೂಚಿಸಿ, ವಕೀಲ್ ಶ್ರೀ ಬಿ. ಸೀನಪ್ಪ ಹೆಗ್ಡೆಯವರು ಅನುಮೋದಿಸಿದಂತೆ ಶ್ರೀ ಎ. ಬಿ. ಶೆಟ್ಟರು ಅಧ್ಯಕ್ಷತೆ ವಹಿಸಿ ಪುಷ್ಪಮಾಲಾಲಂಕೃತರಾದರು. ವರದಿ ವಾಚನವಾದ ಮೇಲೆ, ಶ್ರೀ ಜಿ. ಶ್ಯಾಮರಾಯ ಶೆಟ್ಟಿ, ಬಿ. ಎ. ಎಲ್. ಟಿ. ಯವರು ಶ್ರೇಯಃಸೂಚನೆ ಮಾಡಿದರು. ಶ್ರೀ ಶ್ಯಾಮರಾಯ ಶೆಟ್ಟರೂ ಶ್ರೀ ಎ. ಬಿ. ಶೆಟ್ಟರ ಗುಣನಡತೆಗಳನ್ನು ಕೃತಜ್ಞತಾನಂದಕರನಾಗಿ ಶ್ಲಾಘಿಸಿ, ಭವನದ ಅಭಿವೃದ್ಧಿಯನ್ನು ಹಾರೈಸಿ, ಮನೋರಂಜಕ ಶೈಲಿಯಲ್ಲಿ ಭಾಷಣವಿತ್ತರು. ಭವನದ ಓರ್ವ ವಿದ್ಯಾರ್ಥಿಯು ಅದನ್ನು ಉತ್ತರಿಸಿದ ಮೇಲೆ ಅಧ್ಯಕ್ಷರಿಂದ ಬಹುಮಾನಗಳು ಹಂಚಲ್ಪಟ್ಟವು. ಅಧ್ಯಕ್ಷರ ಭಾಷಣವು ಬೋಧಪ್ರದವೂ, ಮಾರ್ಗದರ್ಶಕವೂ ಆಗಿತ್ತು. ಭವನದ ಮೇಲ್ವಿಚಾರಕರ ಹಾಗೂ ಹೆತ್ತವರ ಕರ್ತವ್ಯವನ್ನು ತಿಳಿಸಿ, ವಿದ್ಯಾರ್ಥಿಗಳ ಊಟ, ಆಟ ಮತ್ತು ಅಭ್ಯಾಸದ ಕಡೆಗೆ ಲಕ್ಷ್ಯವೀಯುವ ರೀತಿನೀತಿಗಳನ್ನು ಮಂದಟ್ಟಾಗುವಂತೆ ವಿವರಿಸಿದರು. ಸದ್ಯದ ಕಾಲ ಪ್ರಗತಿಗೆ ತಕ್ಕಂತೆ ಭವನವನ್ನು ಎಲ್ಲಾ ಜಾತಿಯವರಿಗೂ ತೆರೆದಿಡುವದುತ್ತಮವೆಂಬ ಸೂಚನೆಯಿತ್ತರು. ಆ ಮೇಲೆ ಬಾಲಕಿಯ ನರ್ತನ, ಬಾಲಕರಿಂದ 'ಗುರಿತಪ್ಪಿ' ಎಂಬ ನಾಟಕ, ಹಾಗೂ 'ಜಾಂಬವತಿ ಸಂಧಾನ' ಎಂಬ ಯಕ್ಷಗಾನ ಪ್ರಹಸನಗಳು ಅಭಿನಯಿಸಲ್ಪಟ್ಟುವು. ಉತ್ತಮ ಅಭಿನಯಗಾರರಿಗೆ ಬಹುಮಾನಗಳು ಕೊಡಲ್ಪಟ್ಟವು.

ಸಿಂಗಾಪುರವು ಶರಣಾಗಿ ಒಪ್ಪಂದಕ್ಕೆ ಸಹಿಯಾಯಿತು!

ಮಲಯದ ಗವರ್ನರರ ಬಂಧನ

ಆಸ್ಟ್ರೇಲಿಯದಲ್ಲಿ ಸಂರಕ್ಷಣೆಯ ಸಿದ್ಧತೆಗಳು

ಜಾವಾ ಸುಮಾತ್ರಗಳಿಗೆ ಜಪಾನರ ಭಯ

ಬಿವರ್ ಬ್ರೂಕರನ್ನು ಹೊರಗೆ ಹಾಕುವುದು

ಮಲಯದ ಗವರ್ನರರ ಬಂಧನ

ಮಲಯದ ಗವರ್ನರರಾದ ಸರ್ ಶೇಂಟನ್ ಥಾಮಸರನ್ನೂ, ಅವರ ಪತ್ನಿಯನ್ನೂ, ಸಿಂಗಾಪುರದಲ್ಲಿ ಬಂಧಿಸಲಾಯಿತೆಂದು ಸುದ್ದಿ.

ಅಮೆರಿಕನ್ ಎಣ್ಣೆ ಹಡಗ ಮುಳುಗಿತು

ಶತ್ರು ಜಲಾಂತರ್ಗಾಮಿಯ ಧಾಳಿಯಿಂದ ಅಮೆರಿಕನ್ ಎಣ್ಣೆ ಹಡಗವೊಂದು ಡಚ್ ವೆಸ್ಟ್ ಇಂಡೀಸಿನ ಅರೂಬಾ ದ್ವೀಪದ ಮೇಲೆ ಮುಳುಗಿಸಲ್ಪಟ್ಟಿತೆಂದು ತಿಳಿದಿದೆ.

ವೈರಿ ಜಲಾಂತರ್ಗಾಮಿ ನಾಶ

ಅಮೆರಿಕದ ಕರಾವಳಿಯಲ್ಲಿ ವೈರಿ ಜಲಾಂತರ್ಗಾಮಿಯೊಂದನ್ನು ನಾಶಗೊಳಿಸಲಾಗಿದೆ. ಎರಡು ಕೆನೇಡಿಯನ್ ನೌಕೆಗಳು ಎರಡು ಜರ್ಮನ್ ಜಲಾಂತರ್ಗಾಮಿಗಳನ್ನೆದುರಿಸಿದವೆಂದು ಸುದ್ದಿ.

ಡಚ್ ವೆಸ್ಟ್ ಇಂಡೀಸಿನ ಮೇಲೆ ಆಕ್ರಮಣ

ವಾಗಿದೆ. ಶತ್ರು ಸಬ್ ಮೆರಿನು ಗುಂಡುಗಳನ್ನು ಸುರಿಸಿತು. ಮೂರು ಎಣ್ಣೆ ಹಡಗುಗಳಿಗೆ ಜಲಸುರಂಗ ಹಾಕಿ, ಸ್ಟಾಂಡಾರ್ಡ್ ಎಣ್ಣೆ ಕಂಪೆನಿಯ ವಿಶುದ್ಧೀಯಂತ್ರಕ್ಕೆ ಗುಂಡಿಟ್ಟಿತು.

ಬರ್ಮದಲ್ಲಿ ಬ್ರಿಟಿಷ್ ಸೈನ್ಯ

ಡಾಯನಸಿಂಗ ಪ್ರದೇಶದಿಂದ ಹಿಂಜರಿದವೆಂದು ಸುದ್ದಿಯಿದೆ.

ಈಜಿಪ್ತು ಇಂಗ್ಲಂಡಕ್ಕೆ ಸಹಾಯ ಮಾಡುವುದೆ?

ಇಂಗ್ಲಂಡ್ ಈಜಿಪ್ಟ್ ಒಪ್ಪಂದದ ಕರಾರುಗಳನ್ನು ಈಜಿಪ್ಟ್ ಸರಕಾರವು ಪಾಲಿಸುವುದೆಂದು ಹೊಸ ಮುಖ್ಯಮಂತ್ರಿ ನಹಾಸ್ ಪಾಶಾರವರು ಹೇಳಿದರು. ಈಜಿಪ್ತು ಇಂಗ್ಲೆಂಡಿನಂತೆ ಪ್ರಜಾಸತ್ತಾತ್ಮಕ ರಾಷ್ಟ್ರವಾದ್ದರಿಂದ ಅದು ಇಂಗ್ಲೆಂಡಿಗೆ ನೆರವಾಗುವುದೆಂದರು.

ಬಿವರ್ ಬ್ರೂಕರನ್ನು ಮನೆಗೆ ಕಳುಹಿಸಿರಿ

ಅವರಿದ್ದರೆ ನಾಶ ಖಂಡಿತ

ಆರ್ಥರ್ ಮೂರರ ಉಗ್ರ ಟೀಕೆ

ಕಲ್ಕತ್ತ ಸ್ಟೇಟ್ಸ್‌ಮನ್ ಪತ್ರಿಕೆಯ ಸಂಪಾದಕರಾದ ಆರ್ಥರ್‌ಮೂರರು ಒಂದು ಲೇಖನ ಬರೆಯುತ್ತಾ, ಸರಬರಾಯಿ ಖಾತೆಯ ಮಂತ್ರಿ ಬಿವರ್ ಬ್ರೂಕರನ್ನು ಕಟುವಾಗಿ ಟೀಕಿಸಿ, ಅವರಿದ್ದರೆ ಇಂಗ್ಲೆಂಡಿಗೆ ನಾಶ ನಿಶ್ಚಯವೆಂದೂ, ಅವರನ್ನು ಮನೆಗೆ ಕಳುಹಿಸಿರೆಂದೂ ಟೀಕಿಸಿದೆ. ಲಾರ್ಡ್ ಬಿವರ್ ಬ್ರೂಕರು ಲಾರ್ಡ್ಸ್ ಸಭೆಯಲ್ಲಿ ಮಾಡಿದ ಭಾಷಣವನ್ನು ಓದಿದರೆ ಅವರು ಸಾಮ್ರಾಜ್ಯಕ್ಕೆ ಘಾತಕರೆಂದು ತಿಳಿಯುವುದೆಂದೂ, ಅವರು ಇನ್ನೂ ಮಂತ್ರಿ ಪದವಿಯಲ್ಲಿ ಉಳಿದರೆ ಬ್ರಿಟನು ಇನ್ನೊಂದು ಸಿಂಗಾಪುರವಾಗುವುದೆಂದೂ ಅದರಲ್ಲಿ ಹೇಳಿದ್ದಾರೆ. ಬ್ರಿಟಿಷ್ ಮತ್ತು ಡಚ್ ಸಾಮ್ರಾಜ್ಯದ ಏಳ್ಗೆಯನ್ನು ಅವರು ಕಳೆಕೊಳ್ಳುತ್ತಿರುವರೆಂದೂ, ಲಿಬಿಯಾದ ಸೋಲು, ಗೆಲವು, ಕ್ರೀಟಿನ ದುರಂತ, ಸಿಂಗಾಪುರದ ಪತನ, ಇವುಗಳಿಗೆಲ್ಲಾ ಅವರೇ ಕಾರಣರೆಂದೂ ಒಳಮಂತ್ರಿಮಂಡಳದಲ್ಲಿ ಅವರು ಶಕುನಿಯಾಗಿರುವರೆಂದೂ, ಅವರು ಬೇಗನೇ ರಾಜೀನಾಮೆ ಕೊಡಬೇಕೆಂದೂ ಲೇಖನದಲ್ಲಿ ಸೂಚಿಸಲಾಗಿದೆ.

ಪಲೆಮಂಗನ್ನು ಜಪಾನರು ಹಿಡಿದರು

ಸುಮಾತ್ರದ ಆಗ್ನೇಯದಲ್ಲಿರುವ ಮಿತ್ರರಾಷ್ಟ್ರದ ಒಂದು ಪ್ರಮುಖ ಕೇಂದ್ರವಾಗಿದೆ. ಮೊದಲು ಜಪಾನ್ ಪೆರಾಶೂಟ್ ದಳದವರಿಳಿದರು. ಪ್ರತಿ ವರ್ಷ ಇಲ್ಲಿ 4½ ಮಿಲಿಯ ಟನ್ ಎಣ್ಣೆ ತಯಾರಾಗುತ್ತಿತ್ತು. ಟರವನ್ ಮತ್ತು ಬಳಿಕ್‌ಪೆಪನಿನ ಎಣ್ಣೆ ಕ್ಷೇತ್ರಗಳು ಜಪಾನರ ವಶವಾದ ಮೇಲೆ ಈ ಪ್ರದೇಶದಲ್ಲಿ ಉಳಿದ ಏಕಮಾತ್ರ ಎಣ್ಣೆ ಕೇಂದ್ರವೇ ಪೆಲೆಮಂಗ್.

ಒರಿಸ್ಸಾದಲ್ಲಿ ದಬ್ಬಾಳಿಕೆ

ಒರಿಸಾ ಅಸೆಂಬ್ಲಿಯ ಕಾಂಗ್ರೆಸ ಪಕ್ಷದ ಮುಖಂಡರಾದ ನಿತ್ಯಾನಂದ ದಾಸರು ಒರಿಸಾ ಅಸೆಂಬ್ಲಿಯಲ್ಲಿ ಅಸೆಂಬ್ಲಿ ಸದಸ್ಯರಾದ ಸರ್ ಕೃಷ್ಣದಾಸ ಚೌಧರಿ ಮತ್ತು ಮಹತಾಬರ ಬಂಧನ ಕುರಿತು ಸೂಚನೆ ತಂದರು. ಅದನ್ನು ಅಧ್ಯಕ್ಷ

ಜರ್ಮನ್ ಹಡಗಗಳ ಸಾಹಸ

ಡೋವರಿನ ಮಾರ್ಗವಾಗಿ

ಕಳೆದ ಸುಮವಾರ ಮೂರು ಜರ್ಮನ್ ಯುದ್ಧ ಹಡಗಗಳಲ್ಲಿ ಬ್ರೆಸ್ಟ್ ಬಂದರದಿಂದ ಡೋವರಿನ ಮಾರ್ಗವಾಗಿ ಜರ್ಮನಿಗೆ ಹೋಗಿ ಮುಟ್ಟುವ ವಾರ್ತೆ ಬಂದು ಬ್ರಿಟನಿನ ಅಧಿಕಾರಿಗಳಲ್ಲಿ ಬಹಳ ಕಳವಳ ಹುಟ್ಟಿದೆ. ಅವುಗಳನ್ನು ಪತ್ತೆ ಹಚ್ಚಲು ಮಿತ್ರರ ಸೈನ್ಯಗಳು ಸಾಹಸ ಪಡುತ್ತಿವೆ. ಈ ಜರ್ಮನ್ ಯುದ್ಧ ಹಡಗಗಳು ಅಟ್ಲಾಂಟಿಕ್ ಸಾಗರದಲ್ಲಿಯೂ ಹಾವಳಿ ಮಾಡುವವೇ ಎಂಬ ಹೆದರಿಕೆ ಹುಟ್ಟಿದೆ. ಈ ಕುರಿತು ಬ್ರಿಟಿಷ್ ಪತ್ರಿಕೆಗಳೂ ಕಳವಳಗೊಂಡಿವೆ.

ಫ್ರೆಂಕೋನಿಂದ ಹಿಟ್ಲರನಿಗೆ ಸಹಾಯ ಭರವಸೆ

ರಷ್ಯದಲ್ಲಿ ಹಿಟ್ಲರನಿಗೆ ಅಪಜಯವಾದರೆ ಕಮ್ಯೂನಿಸಮಿನ ವಿರೋಧ ಹೋರಾಡಲು, ಒಂದು ಮಿಲಿಯ ಸ್ಪೆನಿಶ್ ಸ್ವಯಂಸೇವಕರನ್ನು ತಾನು ಕಳುಹಿಸಿಕೊಡುವೆನೆಂದು ಸ್ಪೈನಿನ ಜನರಲ್ ಫ್ರಾಂಕೋ ಭರವಸೆಕೊಡುತ್ತಾನೆ. ಸ್ಪೈನಿನ ಕುರಿತು ಬ್ರಿಟನು ಅಮೆರಿಕಗಳು ತಮ್ಮ ಧೋರಣೆಯನ್ನು ಬದಲಾಯಿಸದಿರುವವೇ ಎಂದು ನೋಡಬೇಕಾಗಿದೆ.

ಸುಮಾತ್ರಾ ಮೇಲೆ ಜಪಾನ್ ಮುತ್ತಿಗೆ

ಆಗಿದೆ. ಪೆರಿಬಾಂಗ ಎಂಬಲ್ಲಿ ಜಪಾನೀ ಕೊಡೆ ಸೈನಿಕರು ಬಂದಿಳಿದರು. ಸುಮಾತ್ರಾದ ಕೆಲ ಪಟ್ಟಣಗಳಲ್ಲಿ ವಿಮಾನ ಆಕ್ರಮಣ ನಡೆದಿದೆ.

ಜಪಾನಿನ ಗುರಿಯೆಲ್ಲಿ?

ಜಪಾನ್ ಮೆಡ್‌ಗಾಸ್ಕರ್ ದ್ವೀಪದ ಮೇಲೆ ಗುರಿ ಇಟ್ಟಿರಬಹುದೆಂದೂ, ಇಂಡೋ ಚೀನದಲ್ಲಿ ಅವರು ಮಾಡಿದ ತಂತ್ರವನ್ನೇ ಮೆಡಗಾಸ್ಕರಿನಲ್ಲಿಯೂ ಮಾಡಬಹುದೆಂದೂ, ವಿಚಿ ಸರಕಾರವನ್ನು ಜಪಾನು ಒತ್ತಾಯಪಡಿಸಿ ಮೆಡಗಾಸ್ಕರಿನ ನೌಕಾ ನಿಲ್ದಾಣವನ್ನು ತೆಗೆದುಕೊಳ್ಳಲು ಪ್ರಯತ್ನಿಸಬಹುದೆಂದೂ ಅಮೆರಿಕನ್ ಪತ್ರಿಕೆಯೊಂದು ಬರೆಯುತ್ತದೆ. ಮೆಡಗಾಸ್ಕರ್ ದ್ವೀಪವು ಹಿಂದೂ ಮಹಾಸಾಗರದ ನೈರುತ್ಯ ಭಾಗದಲ್ಲಿ ದಕ್ಷಿಣ ಆಫ್ರಿಕದ ಪೂರ್ವ ತೀರಕ್ಕೆ ಸಮೀಪವಿರುವ ದ್ವೀಪ. ಗುಡ್‌ಹೋಪ್ ಭೂಶಿರದ ಮಾರ್ಗವಾಗಿ ಹೋಗುವ ಬ್ರಿಟಿಷ ಹಡಗಗಳು ಈ ದ್ವೀಪಕ್ಕೆ ಸಮೀಪವಾಗಿಯೇ ಹೋಗಬೇಕು.

ಆಸ್ಟ್ರೇಲಿಯದಲ್ಲಿ ಗಡಿಬಿಡಿ

ಸಿಂಗಾಪುರ ಪತನದಿಂದ ಆಸ್ಟ್ರೇಲಿಯಕ್ಕೆ

ಪಶ್ಚಿಮ ಮರುಭೂಮಿಯಲ್ಲಿ ಸೆರೆಸಿಕ್ಕಿದ ಜರ್ಮನ್ ಯುದ್ಧ ಕೈದಿಗಳು

ಬಲವಾದ ಪೆಟ್ಟು ಬಿದ್ದಂತಾಗಿದೆ. ಆದ್ದರಿಂದ ಮುಂದೇನು ಮಾಡುವುದು ಎಂದು ಅಲ್ಲಿ ಆಲೋಚನೆ ಗಡಿಬಿಡಿಗಳೆದ್ದಿವೆ. ಆಸ್ಟ್ರೇಲಿಯದ ಯುದ್ಧ ಮಂಡಳದ ಸಭೆ ಸೇರಿ ಸಂರಕ್ಷಣೆ ವಿಷಯ ಹಲವು ಮಹತ್ವದ ಉಪಾಯಗಳನ್ನು ಯೋಚಿಸಲಾಗುತ್ತದೆ.

ಮಕಾಸರ ಉರಿಯುತ್ತಿದೆ

ಎಂದು ಸುದ್ದಿ ಬಂದಿದೆ. ಡಚ್ ವಿಮಾನಗಳು ಉಗ್ರವಾಗಿ ಧಾಳಿಮಾಡಿದುದರಿಂದ ಬಲಾಂಗನೀಪಾ ಎಂಬಲ್ಲಿ ಜಪಾನರು ಬಂದಿಳಿದರಂತೆ.

ಜಾವಾಕ್ಕೆ ಅಮೆರಿಕನ್ ಸೈನ್ಯಗಳು

ಹೋದುವೆಂದೂ, ನೇದರ್ಲೆಂಡ್ ಈಸ್ಟ್ ಇಂಡೀಸ್‌ಗಳಲ್ಲಿ ಬಂದಿಳಿದುವೆಂದೂ ನ್ಯೂಯೋರ್ಕ್ ಟೈಮ್ಸ್ ಪತ್ರಿಕೆ ಬರೆಯುತ್ತದೆ. ಅಲ್ಲಿರುವ ಬ್ರಿಟಿಷ್ ಆಸ್ಟ್ರೇಲಿಯನ್ ಸೈನಿಕರೊಡನೆ ಇವರೂ ಸೇರಿರುವರಂತೆ!

ಡೋವರ್ ಕಾಳಗ

ಡೋವರ್ ಸಮುದ್ರಧುನಿಯಲ್ಲಿ ಜರ್ಮನ್ ಬ್ರಿಟನ್ ನೌಕಾಬಲ ಮತ್ತು ವೈಮಾನಿಕ ಬಲಗಳೊಳಗೆ ಅತ್ಯದ್ಭುತ ಕಾಳಗ ನಡೆಯಿತು. ಡೋವರ್ ಕಡೆ ಜರ್ಮನ್ ಹಡಗಗಳ ಸಂಚಾರವಾದ ವಿಷಯ ಗಾಬರಿಯುಂಟಾಗಿದೆ.

ಹಿಟ್ಲರನೊಡನೆ ಭೇಟಿ

ಯನ್ನು ನಾರ್ವೆಯ ಕೈಗೊಂಬೆ ಸರಕಾರದ ಮುಖ್ಯಮಂತ್ರಿಯೂ, ರುಮೇನಿಯಾ ಸರ್ವಾಧಿಕಾರಿಯೂ ಮಾಡಿದರು. ರಾಜಕೀಯ ಚರ್ಚೆ

ಜಪಾನರು ಆನಂದದಿಂದ ಮೈಮರೆಯಬೇಡಿರಿ

ಎಂಬುದಾಗಿ ಸಿಂಗಾಪುರ ಕೈವಶವಾದ್ದರಿಂದ ಹಿಗ್ಗುತ್ತಿರುವ ಜಪಾನೀ ಜನರಿಗೆ ಜಪಾನು ಸರಕಾರವು ಎಚ್ಚರಿಕೆಯಿತ್ತು, ಇನ್ನೂ ಹಲವು ಕಾಲದ ವರೆಗೆ ಯುದ್ಧವು ಸಾಗಲಿರುವುದು ಎಂದು ತಿಳಿಸಿದೆ.

ಸುಮಾತ್ರದ ಮೇಲೆ ಜಪಾನ್ ಮುತ್ತಿಗೆ

ಯು ಇತ್ತೀಚೆಗೆ ಬಲವಂತವಾಗಿದೆ. ಆ ದ್ವೀಪದ ದೊಡ್ಡ ಎಣ್ಣೆಯ ಕೇಂದ್ರವಾದ ಪಲೆಂಬಾಂಗ್ ಎಂಬಲ್ಲಿಗೆ ಪೆರಚೂಟುಗಳು ಬಂದಿಳಿದಿವೆ. ಬೋರ್ನಿಯೋದಲ್ಲಿ ಶತ್ರುವು ಮುಂದೊತ್ತಿರು



“ಈ ದಿವಸ ನಿಮ್ಮ ಹಲ್ಲುಗಳನ್ನು ಮ್ಯಾಕ್‌ಲೀನ್ ಮಾಡಿದ್ದೀರೊ?”

“ಅಹಾ! ಹಲ್ಲುಗಳನ್ನು ಆಲಸ್ಯಮಾಡಬಾರದೆಂದು ನಿಮಗೆ ತಿಳಿದಿದೆ.”

ನಿಮ್ಮ ಹಲ್ಲುಗಳನ್ನು ಅಲಕ್ಷ್ಯ ಮಾಡಬೇಡಿ. ಮ್ಯಾಕ್‌ಲೀನ್ ಟೂತ್‌ಪೇಸ್ಟಿನ ಸಹಾಯದಿಂದ ಅವುಗಳನ್ನು ಬೆಳ್ಳಗೂ, ಥಳಥಳಿಕೆಯೂ, ಆರೋಗ್ಯಯುತವಾಗಿಯೂ ಇಟ್ಟುಕೊಳ್ಳಿ. ಮ್ಯಾಕ್‌ಲೀನಿನ ದೊಡ್ಡ ಟ್ಯೂಬು ಮಿತವ್ಯಯವಾಗಿರುವುದು ಮತ್ತು ಅದರ ಪರಿಮಳವು ನಿಮಗೆ ಆನಂದವನ್ನುಂಟು ಮಾಡುವುದು.

ಜಿಲ್ಲಾ ಸಮಾಚಾರಗಳು

ಮಂಗಳೂರು

ವರ್ಗಾವರ್ಗಿಗಳು

ಮಂಗಳೂರು ತಾಲೂಕು ತಹಶಿಲ್ದಾರರಾದ ಶ್ರೀ ಜೆ. ಎಲ್. ಡಿ'ಸೋಜಾ, ಬಿ. ಎ. ಅವರು ೧೫ ದಿನ ರಜೆ ಪಡೆದಿರುವುದರಿಂದ, ಕಾಸರಗೋಡು ಸಬ್ ಮ್ಯಾಜಿಸ್ಟ್ರೇಟರಾದ ಶ್ರೀ. ಯು. ಜನಾರ್ಧನ ಬಿ. ಎ. ಅವರು ಮಂಗಳೂರು ತಹಶಿಲ್ದಾರರಾಗಿಯೂ, ಬೆಳ್ತಂಗಡಿ ಡೆ॥ ತಹಶಿಲ್ದಾರ್ ಶ್ರೀ. ಟಿ. ವೆಂಕಟರಾವ್ ಅವರು ಕಾಸರಗೋಡು ಸಬ್ ಮ್ಯಾಜಿಸ್ಟ್ರೇಟರಾಗಿಯೂ ನೇಮಕ ಹೊಂದಿರುತ್ತಾರೆ.

ಬಳ್ಳಾರಿಯ ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ. ಯು. ಕಣ್ಣಪ್ಪ, ಎಂ. ಎ., ಎಲ್. ಟಿ. ಅವರು ತಮ್ಮ ಉದ್ಯೋಗ ನಿವೃತ್ತಿಗೆ ಪೂರ್ವದಲ್ಲಿ ನಾಲ್ಕು ತಿಂಗಳ ರಜೆ ಪಡೆದಿರುತ್ತಾರೆ.

ಮಂಗಳೂರಿನ ಪೋರ್ಟ್ ಆಫೀಸರ್ ಶ್ರೀ ಮಾರ್ಕ್ ಪ್ಯಾಸ್ ಅವರು, ನೆಗಪಟ್ಟಾಮಿನ ಪೋರ್ಟ್ ಆಫೀಸರರಾಗಿ ವರ್ಗ ಹೊಂದಿ, ಅಲ್ಲಿ ಕೋಟೆಯ ಪೋರ್ಟ್ ಆಫೀಸರರಾದ ಶ್ರೀ ಸಿ. ಎಫ್. ಸಿಮ್ಸ್ ಅವರು, ಮಂಗಳೂರು ಪೋರ್ಟ್ ಆಫೀಸಿನ ಕಾರ್ಯನಿರ್ವಾಹವನ್ನೂ ತಮ್ಮ ಕೆಲಸದ ಜತೆಗೆ ಮಾಡಬೇಕಾಗಿದೆ.

ಜಿಲ್ಲಾ ಪಿರಿಯಾಡಿಕಲ್ ಕಾನ್ಫರೆನ್ಸ್

ನಮ್ಮ ಜಿಲ್ಲಾ ಪಿರಿಯಾಡಿಕಲ್ ಕಾನ್ಫರೆನ್ಸ್ ನಮ್ಮ ಕಲೆಕ್ಟರರ ಆಫೀಸಿನಲ್ಲಿ ಜಿಲ್ಲಾ ಕಲೆಕ್ಟರರಾದ ಶ್ರೀ ಎಂ. ಕರಮತುಲ್ಲಾ, ಅವರ ನೇತೃತ್ವದಲ್ಲಿ ಜರುಗಿತು. ಮದ್ರಾಸ್ ಆದಿಪತ್ಯದಲ್ಲಿ ಧಾನ್ಯಗಳ ಬೆಳೆ, ಸಾಮಾನ್ಯವಾಗಿ ಅದಕ್ಕೆ ಅಗತ್ಯವಿರುವುದಕ್ಕಿಂತ ನೇಕಡಾ ೧೦ರಷ್ಟು ಕಡಿಮೆಯಾಗುತಿದ್ದು, ಅದು ಬರ್ಮಾ ಸಿಯಾಂಗಳ ಅಕ್ಕಿಯ ಸರಬರಾಯಿಯ ಮೂಲಕ ಇಷ್ಟು ಕಾಲ ತುಂಬುತ್ತಿದ್ದರೂ ಯುದ್ಧಾರಂಭವಾದ ನಂತರ, ಆ ಸರಬರಾಯಿ ತೀರಾ ಕಡಿಮೆಯಾಗಿ, ಹಾಗೆ ಸ್ಥಳೀಯ ಉತ್ಪತ್ತಿಯನ್ನೇ ಹೆಚ್ಚಿಸಿಕೊಳ್ಳುವುದು ಅಗತ್ಯವಾದುದರಿಂದ, ದಕ್ಷಿಣ ಕನ್ನಡದಲ್ಲಿ ಆಹಾರ ಸಾಮಗ್ರಿಗಳನ್ನು, ಧಾನ್ಯಗಳನ್ನು ಅಧಿಕ ಪ್ರಮಾಣದಿಂದ ಬೆಳೆಸುವ ಯೋಜನೆಗಳ ಕುರಿತು ಇಲ್ಲಿ ಸಮಾಲೋಚಿಸಲಾಯಿತು. ಉತ್ತಮ ತರದ ಬತ್ತದ ಬೀಜವನ್ನು ಬೆಳೆಯುವಂತೆ ಶ್ರೀಮಂತ ಜಮೀನುದಾರರನ್ನು ಪ್ರೋತ್ಸಾಹಿಸಬೇಕೆಂದೂ, ಕೆಲವೊಂದು ಕೃಷಿ ವಿಚಾರಗಳಲ್ಲಿ ಕೃಷಿ ಶಾಖೆಯ ಡೆಮೋನ್‌ಸ್ಟ್ರೇಟರುಗಳು ತಕ್ಕ ಪ್ರಚಾರ ಕಾರ್ಯ ನಡೆಸಬೇಕೆಂದೂ ನಿರ್ಧರಿಸಲಾಯಿತಲ್ಲದೆ, ಹೊಸ ಕ್ಷೇತ್ರಗಳನ್ನು ಕೃಷಿಗೆ ತರುವ ಹಳೆಯ ಕೃಷಿಯ ಕ್ಷೇತ್ರದಲ್ಲಿ ವೃದ್ಧಿಸಾಧಕ ಏರ್ಪಾಡುಗಳನ್ನು ಮಾಡುವ, ಮಣ್ಣಿನ ಸಾರವನ್ನು ಹೆಚ್ಚಿಸುವ ಇತ್ಯಾದಿ ಹಲವು ಅಂಶಗಳ ಕುರಿತೂ ವಿಮರ್ಶೆ ನಡೆಸಲಾಯಿತು.

ಜಿಲ್ಲಾ ಲೇಬರ್ ಎಡ್ವೈಜರಿ ಕಮಿಟಿಯ ಮೀಟಿಂಗ್

ಈ ಕಮಿಟಿಯ ಮೀಟಿಂಗ್ ಜಿಲ್ಲಾ ಕಲೆಕ್ಟರರ ಆಫೀಸಿನಲ್ಲಿ ನಮ್ಮ ಜಿಲ್ಲಾ ಕಲೆಕ್ಟರರವರ ಅಧ್ಯಕ್ಷತೆಯಲ್ಲಿ ಜರಗಿ, ಜಿಲ್ಲೆಯ ಮೂವತ್ತು ಲೇಬರ್ ಶಾಲೆಗಳ ವಿದ್ಯಾರ್ಥಿಗಳಿಗೆ ಬೇಸಿಗೆಯಲ್ಲಿ ಕುಡಿಯುವ ನೀರನ್ನು ಒದಗಿಸುವ ಏರ್ಪಾಡನ್ನು ಮಂಜೂರುಮಾಡಿ, ಮಳೆಗಾಲದಲ್ಲಿ ಆ ವಿದ್ಯಾರ್ಥಿಗಳಿಗೆಲ್ಲ ಓಲೆಯ ಕೊಡೆಗಳನ್ನು ಒದಗಿಸುವ ಏರ್ಪಾಡನ್ನು ಆಲೋಚಿಸುವ ಹಾಗೆ ಲೇಬರ್ ಕಮಿಶನರಿಗೆ ಬರೆದುಕೊಳ್ಳುವುದಾಗಿ ನಿರ್ಧರಿಸಲಾಯಿತು. ಅಲ್ಲದೆ ಆರೋಗ್ಯವಾದ ಲೇಬರ್ ಶಾಲೆಗಳನ್ನು ಮುಚ್ಚುವ, ಅಗತ್ಯವಿದ್ದಲ್ಲಿ ಹೊಸ ಶಾಲೆಗಳನ್ನು ತೆರೆಯುವ ಈ ಕಾರ್ಯವನ್ನಾಗಲೇ ಪೂರೈಸಿದೆ ಎಂದೂ ತಿಳಿಸಲಾಯಿತು.

ಚೀನಾ ದಿನಾಚರಣೆ

ಇದು ತಾ. 15ರಂದು ಸಂಜೆ ಮಂಗಳೂರು ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ಸಾರ್ವಜನಿಕ ಮೈದಾನದಲ್ಲಿ ನೆರವೇರಿತು. ವಿದ್ಯಾರ್ಥಿಗಳು ಮೆರವಣಿಗೆಯಿಂದ ಅಲ್ಲಿಗೆ ಬಂದರು. ಶ್ರೀ ಶಂಕರನ್, ಅಧ್ಯಕ್ಷತೆ ವಹಿಸಿದ್ದರು. ಚೀನದ ದಳಪತಿ ಚಿಯಾಂಗ್ ಕೈಶೇಕ್ ಮತ್ತು ಅವರ ಪತ್ನಿಯರಿಗೆ ಸ್ವಾಗತ ಹೇಳಿ ಚೀನದ ಸ್ವಾತಂತ್ರ್ಯ ಹೋರಾಟದಲ್ಲಿ ಸಹಾನುಭೂತಿ ತೋರಿಸುವ ವಿಷಯ ಶ್ರೀಗಳಾದ ಶಿವರಾವ್, ಪದ್ಮನಾಭನ್, ರಾಮಚಂದ್ರ ಭಟ್ಟ ಮತ್ತು ಬಿ. ವಿ. ಕಕ್ಕಿಲ್ಲಾಯ ಇವರು ಮಾತನಾಡಿದರು.

ಸೈ॥ ಅ॥ ಕಾಲೇಜ್ ಯೂನಿಯನ್

ಇದರ ವಾರ್ಷಿಕೋತ್ಸವವು ತಾ. 14ರಂದು ಸಂಜೆ ಜಿಲ್ಲಾ ಕಲೆಕ್ಟರ್ ಶ್ರೀ ಎಂ. ಕರಮತುಲ್ಲಾರವರ ಅಧ್ಯಕ್ಷತೆಯಿಂದ ಕಾಲೇಜ್ ಗ್ರೌಂಡಿನಲ್ಲಿ ನೆರವೇರಿತು. ಪ್ರಾರಂಭದಲ್ಲಿ ಟೀಪಾರ್ಟಿಯಾದ ಮೇಲೆ, ಯೂನಿಯನ್ ಅಧ್ಯಕ್ಷ ಶ್ರೀ ಲೆಸ್ಲಿ ಅಲ್ವರಿಸ್ ಇವರು ಸ್ವಾಗತ ಭಾಷಣಮಾಡಿ ಸಂಘದ ಚಟುವಟಿಕೆ ಮೊದಲಾದ ವಿಷಯ ಹೇಳಿದರು. ಕಾರ್ಯದರ್ಶಿ ಶ್ರೀ ಕೇಶವರಾವ್ ಗೋಖಲೆಯ ವರದಿಯನ್ನೋದಿದರು. ಅನಂತರ ಅಧ್ಯಕ್ಷರಿಂದ ಇನಾಮು ಹಂಚೋಣವಾಯಿತು. ಸಂಘದ ಶ್ರೇಯಃ ಪ್ರಾರ್ಥನೆಯನ್ನು ಶ್ರೀ. ಸಿ. ಎಲ್. ಲೋಬೋ ಮಾಡಿದರು. ಅದಕ್ಕೆ ಸಂಘದ ಗವರ್ನರರಾದ ಶ್ರೀ. ವಿ. ಜೆ. ಜೋಸೆಫರು ಉತ್ತರವಿತ್ತರು. ಮಾತೃಭೂಮಿಯ ಶ್ರೇಯ ಪ್ರಾರ್ಥನೆ ಶ್ರೀ. ಅಪ್ಪಯ್ಯ ಇವರು ಮಾಡಿದರು. ಉಪಾಧ್ಯಾಯರ ಶ್ರೇಯಃ ಪ್ರಾರ್ಥನೆ ಶ್ರೀಹರಿ ರಾಮರಾವ್ ಮಾಡಿದರು. ಅದಕ್ಕೆ ಎ. ಪಿ. ಮಥಾಯಿ ಉತ್ತರವಿತ್ತರು. ಹೊರಗೆ ಹೋಗುವ ವಿದ್ಯಾರ್ಥಿಗಳ ಶ್ರೇಯಃ ಪ್ರಾರ್ಥನೆ ಶ್ರೀ. ವಿ. ಸಿ. ಸುವರ್ಣರು ಮಾಡಿದರು. ಅದಕ್ಕೆ ಉತ್ತರ ಶ್ರೀ. ಜಗನ್ನಾಥ ಹೆಗ್ಡೆ ಕೊಟ್ಟರು. ಕಾಲೇಜ್ ಶ್ರೇಯಃ ಪ್ರಾರ್ಥನೆ ಶ್ರೀ. ಶ್ರೀನಿವಾಸರಾವ್ ಮಾಡಿದರು. ಇದರ ಮಧ್ಯೆ ವಿದ್ಯಾರ್ಥಿಗಳ ಹಲವು ತರದ ವಿವಿಧ ವಿನೋದಾವಳಿಗಳಿದ್ದವು. ಅನಂತರ ಅಧ್ಯಕ್ಷ ಭಾಷಣವಾಗಿ ಕಾರ್ಯದರ್ಶಿಗಳಿಂದ ಕೃತಜ್ಞತೆ ಹೇಳಲಾಯಿತು.

ದಕ್ಷಿಣ ಕನ್ನಡ ಜಿಲ್ಲಾ ಬೋರ್ಡ್ ಮೀಟಿಂಗ್

ತಾ. ೧೪ರಂದು ಬೆಳಗ್ಗೆ ನಮ್ಮ ಜಿಲ್ಲಾ ಬೋರ್ಡ್ ಮೀಟಿಂಗ್ ಅದರ ಅಧ್ಯಕ್ಷರಾದ ಡಾ. ಕೆ. ವಿಠಲ ಶೆಟ್ಟರ ಅಧ್ಯಕ್ಷತೆಯಲ್ಲಿ ಜರುಗಿತು. ಮದ್ರಾಸ್ ಕೊ ಆ. ಲ್ಯಾಂಡ್ ಮಾರ್ಗೇಜ್ ಬ್ಯಾಂಕಿನ ೪% ಡಿಬೆಂಚರುಗಳನ್ನು (ಇದರ ಮೌಲ್ಯ ರೂ. ೧೧ ಸಾವಿರ) ೩½% ಯ ೩೦ ವರ್ಷದ ಡಿಬೆಂಚರುಗಳನ್ನಾಗಿ ಮಾರ್ಪಡಿಸುವ ಸೂಚನೆ ಮಂಜೂರಾಯಿತು. ಉಡುಪಿ ಶಾಲೆಯ ಸಂಬಂಧ ಬೋರ್ಡಿನ ಹಿಂದಿನ ಠರಾವಿನಿಂದ ಅಲ್ಲಿನ ಜನರಲ್ಲಿ ಭೀತಿಯೂ, ನಿರಾಶೆಯೂ ಉಂಟಾಗಿದೆ ಎಂಬುದು ತಿಳಿದು, ಆ ಕುರಿತು ಆ ಶಾಲಾ ಹೆಡ್ಮಾಸ್ತರರ ವರದಿಗೆ ಗಮನವಿತ್ತು, ಬೋರ್ಡ್ ಇದುವರೆಗೆ ನಡೆಸಿಕೊಂಡು ಬಂದಂತೆಯೇ ಇನ್ನು ಮುಂದಕ್ಕೂ ನಡೆಸಲು ತನಗೆ ಶಕ್ಯವಾದಷ್ಟು ಯತ್ನಿಸುವುದೆಂದೂ, ಜನತೆಯ ಹಿತರಕ್ಷಣೆಯಾಗುವ ರೀತಿ ಜಾಗರೂಕತೆಯಿಂದ ಇದನ್ನು ಸಮಾಲೋಚಿಸಲಾಗುವುದೆಂದೂ ತಿಳಿಸುವ ನಿರ್ಣಯ ಮಂಜೂರು ಮಾಡಿತು. ನಿಬಂಧನೆಯಂತೆ ರದ್ದಾದ ಬೋರ್ಡಿನ ಹಲವು ಸ್ಥಾಯಿ ಸಮಿತಿಗಳ ಶ್ರೀ ಎಸ್. ಎನ್. ಹೊಳ್ಳ, ಶ್ರೀಮತಿಗಳಾದ ಎಂ. ರಮಾಬಾಯಿ, ಶ್ಯಾಂಭವಿ ಆರ್. ಭೂಂಜಾ ಮೊದಲಾದವರ ಸದಸ್ಯತನವನ್ನು ಊರ್ಜಿತಗೊಳಿಸಿ, ಒಂದು ಸ್ಥಾನಕ್ಕೆ ಶ್ರೀ ಡಿ. ಕೋಟಣ್ಣ ಶೆಟ್ಟರ ಬದಲಿಗೆ ಶ್ರೀ ರಘುಚಂದ್ರ ಬಲ್ಲಾಳರನ್ನು ಆರಿಸಿದ್ದಾಯಿತು. ಶ್ರೀ ಜಮುನಾಲಾಲ ಬಜಾಜರ ನಿಧನದ ಬಗೆಗೆ ಒಂದು ಶೋಕ ಸೂಚನೆಯ ಠರಾವೂ, ಮಾರ್ಶಲ್ ಚಿಯಾಂಗ್ ಕೈಶೇಕ್ ದಂಪತಿಗಳನ್ನು ಸ್ವಾಗತಿಸುವ ಒಂದು ಠರಾವೂ ಮಂಜೂರಾಯಿತು.

ಮೀಟಿಂಗುಗಳಿಗೆ ಗೈರಹಾಜರಾದುದರಿಂದ ರದ್ದಾದ ಶ್ರೀ ಎಂ. ಅನ್ನಂತ ಕೃಷ್ಣರಾಯರ ಸದಸ್ಯತನವನ್ನು ಊರ್ಜಿತಗೊಳಿಸಿ, ಹಳೆಯಂಗಡಿ ರೂರಲ್ ಡಿಸ್ಪೆನ್ಸರಿಯ ಕುರಿತು ಬೋರ್ಡಿನ ಅಧ್ಯಕ್ಷರಿಂದ ಸೂಚನೆಗಳನ್ನು ಹಾರೈಸಿ, ಯಡಿಯೂರಿನ ಬೋ॥ ಎ॥ ಶಾಲೆಯಲ್ಲಿ ೬ನೇ ಸ್ಟಾಂಡಾರ್ಡನ್ನು ತೆರೆಯಲು ಸರಕಾರದ ಅಪ್ಪಣೆಗಾಗಿ ಬರೆಯಬೇಕೆಂದಾಯಿತು. ೩೬ ಶಾಲೆಗಳ (ಬೋ. ಹಾ. ಎ. ಶಾಲೆ) ಬಡ ವಿದ್ಯಾರ್ಥಿಗಳಿಗೆ ತಿಂಗಳಿಗೆ ರೂ. ೨೧-೩-೫-೦ರಂತೆ, ಒಂದು ವರ್ಷದ ಮಟ್ಟಿಗೆ ಫೀಸಿನ ರಿಯಾಯಿತಿ ತೋರಿ, ಕಾಸರಗೋಡು ಜನತೆಯದಾಗಿದ್ದು, ಈಗ ಬೋರ್ಡಿನ ವಶವಿರುವ ೨ ಸಾವಿರ ರೂಪಾಯಿಗಳನ್ನು ಅಗ್ಗವಾದ ದರದಲ್ಲಿ ಅಕ್ಕಿಯನ್ನು ಮತ್ತು ಇತರ ಆಹಾರ ಸಾಧನಗಳನ್ನು ಅಲ್ಲಿನವರಿಗೆ ಒದಗಿಸುವಂತೆ ಅಲ್ಲಿನವರು ಮಾಡಿಕೊಂಡ ಆ ಅರ್ಜಿಯ ಇತ್ಯರ್ಥಕ್ಕಾಗಿ ಬೋರ್ಡಿನ ಅಧ್ಯಕ್ಷರೇ ಮೊದಲಾದ ಹಲವು ಬೋರ್ಡ್ ಮೆಂಬರರಿಂದ ಕೂಡಿದ ಒಂದು ಕಮಿಟಿಯ ರಚನೆಯಾಯಿತು. ವೃತ್ತಿ ತೆರಿಗೆಯ ತಿದ್ದಿದ ದರಗಳನ್ನು ಜಾರಿಗೆ ತರಲು ನಿಷ್ಕರ್ಷಿಸಲಾಯಿತು.

ಸಂತಾಪ ಸೂಚಕ ಸಭೆ

ಸೇಟ್ ಜಮುನಲಾಲ್ ಬಜಾಜರ ನಿಧನದ ಬಗ್ಗೆ ದುಃಖ ಸೂಚಕ ಸಭೆಯೊಂದು ತಾ. 15ರಂದು ವಿಟ್ಲದಲ್ಲಿ ಜರಗಿತು. ಶ್ರೀ. ವಾಸುದೇವ ನಾಯ್ಕರು ಅಧ್ಯಕ್ಷರಾಗಿದ್ದರು. ಶ್ರೀಗಳಾದ ಜಿ. ತಿರುಮಲೇಶ್ವರ ಭಟ್ಟ, ಬಿ. ವಿಠಲದಾಸ ಶೆಟ್ಟಿ, ಕೆ. ಬಿ. ರಾಮನಾಯ್ಕ ಮುಂತಾದವರು ಭಾಷಣ ಮಾಡಿದರು.

ಫೇಸಿಸ್ಟ್ ವಿರೋಧ ದಿನಾಚರಣೆ

ಮಂಗಳೂರ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ತಾ. 16ರಂದು ಸಂಜೆ ಮೈದಾನಿನಲ್ಲಿ ಫೇಸಿಸ್ಟ್ ವಿರೋಧ ದಿನಾಚರಣೆ ಸಭೆಯು ಶ್ರೀ. ಶಂಕರನ್ ಇವರ ಅಧ್ಯಕ್ಷತೆಯಿಂದ ಜರಗಿತು. ಶ್ರೀಗಳಾದ ಪದ್ಮನಾಭನ್ ಮತ್ತು ಶ್ರೀ. ಬಿ. ವಿ. ಕಕ್ಕಿಲ್ಲಾಯರು ಮಾತನಾಡಿದರು. ಫೇಸಿಸ್ಟ್ ವಿರೋಧ ಘೋಷಣೆಯ ಕರಪತ್ರಗಳೂ ಹಂಚಲಾಗಿವೆ.

ಈಶ್ವರಾನಂದ ಮಹಿಳಾ ಸೇವಾಶ್ರಮ

ಕಳೆದ ತಾ. 14ರಲ್ಲಿ ಈ ಸೇವಾಶ್ರಮದವರ "ಡಿ. ಎನ್. ಕೀರೂರು ಕಟ್ಟಡದ ಉದ್ಘಾಟನಾ ಸಮಾರಂಭವು ಡಾ. ಎಂ. ಕೇಶವ ಪೈಯವರ ಹಸ್ತದಿಂದ ನೆರವೇರಿತು. ಡಾ॥ ಪೈಗಳವರು ಇದರ ಅನಾಥಾಶ್ರಮದ ಬಗೆಗಾಗಿ ಸಾರ್ವಜನಿಕರ ಉದಾರ ಸಹಾಯವು ಅಗತ್ಯವೆಂದು ಪ್ರಾರ್ಥಿಸಿದರು. ಶ್ರೀ. ಎನ್. ರಾಮರಾಯರು ಧನ್ಯವಾದಗಳನ್ನು ಅರ್ಪಿಸಿದರು.

ಆರ್ಯ ಸಮಾಜ

ಸ್ಥಳೀಯ ಆರ್ಯಸಮಾಜದ 22ನೇ ವಾರ್ಷಿಕೋತ್ಸವವೂ, ಶ್ರೀ. ಶ್ರದ್ಧಾನಂದ ಅನಾಥಾಶ್ರಮದ ದ್ವಿತೀಯ ವರ್ಧಂತಿಉತ್ಸವವೂ, ಸಮಾಜ ಮಂದಿರದಲ್ಲಿ ಕಳೆದ ತಾ. 13ನೇ ಶುಕ್ರವಾರ ಜರಗಿತು.

ನಮ್ಮ ಯುದ್ಧ ಕಾರ್ಯಗಳ ಕಮಿಟಿ

ತಾ. 17ರಂದು ನಮ್ಮ ಜಿ॥ ಕಲೆಕ್ಟರರ ನೇತೃತ್ವದಲ್ಲಿ ಯುದ್ಧ ಕಾರ್ಯ ಕಮಿಟಿಯ ಒಂದು ಮೀಟಿಂಗ್, ಇಲ್ಲಿಯ ಬೆಂಟ್ ಕೋರ್ಟ್ ಹಾಲ್‌ನಲ್ಲಿ ಜರಗಿ, ಜಿ॥ ಕಲೆಕ್ಟರರು ಅಧ್ಯಕ್ಷರಾಗಿಯೂ, ಶ್ರೀ. ಎಂ. ಕೆ. ನಂಬಿಯಾರರು ಕಾರ್ಯದರ್ಶಿಗಳಾಗಿಯೂ, ಡೆ॥ ಡಿ॥ ಕಲೆಕ್ಟರರು ಖಜಾನ್ಚಿಗಳಾಗಿಯೂ ಇರುವ ಅಫೀಶಿಯಲ್, ನಾನ್ ಅಫೀಶಿಯಲ್ ಸದಸ್ಯರು 40 ಮಂದಿಯಿಂದ ಕೂಡಿದ ಒಂದು "ಎಗ್ಜಿಕ್ಯೂಟಿವ್" ಸಮಿತಿಯ ರಚನೆಯಾಯಿತು.

ಬಹುಮಾನ ವಿನಿಯೋಗ

ತಾ. 17ರಂದು ಸಂಜೆ ದ. ಕ. ಜಿಲ್ಲಾ ಎರಡನೇ ರೇಫಲಿನ ಬಹುಮಾನ ವಿನಿಯೋಗವು ಮಿಸೆಸ್ ಫೌಲರವರ ಹಸ್ತದಿಂದ ನೆರವೇರಿತು. ಜಿ. ಕಲೆಕ್ಟರರು ಮಿಸೆಸ್ ಫೌಲರವರು ಬಹುಮಾನ ವಿನಿಯೋಗಬೇಕೆಂದು ಸೂಚಿಸಿ, ಶ್ರೀ. ಎಮ್. ವೆಂಕಟೇಶ ಪೈಗಳವರು ತರೇಫಲಿನ ವಿಚಾರ ಮಾತಾಡಿದ ಮೇಲೆ, ಸುಮಾರು 40 ಮಂದಿಗೆ ಬಹುಮಾನ ಹಂಚಿದ್ದಾಯಿತು. ಮಿ॥ ಫೌಲರರು ವಂದನಾರ್ಪಣೆ ನಡೆಸಿದರು.

ವರ್ಗ

ಅನಂತಪುರದ ಡೆ॥ ಕಲೆಕ್ಟರರಾದ ಶ್ರೀ ರಾಮುಲು ನಾಯಿಡು ಅವರು ಅಲ್ಲಿಂದ ದಕ್ಷಿಣಕನ್ನಡಕ್ಕೂ, ದಕ್ಷಿಣ ಕನ್ನಡದಿಂದ (ಪುತ್ತೂರು) ಡೆ॥ ಕಲೆಕ್ಟರ್ ಶ್ರೀ. ಕೆ. ಕೃಷ್ಣಯ್ಯ ಅವರು ತಿನ್ನವೆಲ್ಲಿಗೂ ವರ್ಗಾಯಿಸಲ್ಪಟ್ಟಿದ್ದಾರೆ.

ಕಾರ್ಕಳ

ವರ್ಧಂತಿ ಉತ್ಸವ

ಇಲ್ಲಿಯ ಶ್ರೀ ವೆಂಕಟ್ರಮಣ ಹಾಯರ್ ಎಲಿಮೆಂಟರಿ ಶಾಲೆಯ ವರ್ಧಂತಿ ಉತ್ಸವವು ತಾ. 14ರ ದಿನ ಈರೇಂಜಿನ ಡೆಪ್ಟಿ ಇನ್ಸಪೆಕ್ಟರ ಶ್ರೀ. ಯು. ಕೃಷ್ಣರಾಯ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ. ಆರ್. ವೈಕುಂಠ ಶೆಣೈಯವರು ಶಾಲೆಯ ಸ್ವಸ್ತಿವಾಚನ ಮಾಡಿದ್ದರು.

ಉಪಾಧ್ಯಾಯರ ಸಭೆ

ಈ ಕೇಂದ್ರದ ಉಪಾಧ್ಯಾಯರ ತಿಂಗಳ ಸಭೆಯು ಶ್ರೀ. ಯು. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಜರಗಿತು.

ಹಿಂದೀ ಪರೀಕ್ಷೆಗಳು

ಈ ಬಾರಿಯ ಹಿಂದೀ ಪರೀಕ್ಷೆಗಳು ಬೋರ್ಡ್ ಹ್ಯಾಸ್ಕೂಲಿನಲ್ಲಿ ನಡೆದುವು. ಪ್ರಾಥಮಿಕ 23 ಮಧ್ಯಮ 10 ಮತ್ತು ರಾಷ್ಟ್ರಭಾಷಾ 4 ಒಟ್ಟಿಗೆ 37 ಮತ್ತು ಮಂಗಳೂರು ಕೇಂದ್ರದಲ್ಲಿ ಇಲ್ಲಿಂದ ಪ್ರವೇಶ, ಮತ್ತು ವಿಶಾರದ 2 ಒಟ್ಟು 40 ಮಂದಿ ಪರೀಕ್ಷೆಗಳನ್ನು ಕೊಟ್ಟಿರುವರು.

ಉಡುಪಿ

ಮುನ್ಸಿಪಾಲಿಟಿ

ಕೌನ್ಸಿಲ್ ಸಭೆಯು ತಾ. 6ರಂದು ಚೇರ್‌ಮೇನ್ ಶ್ರೀ ಎ. ಲಕ್ಷ್ಮೀ ನಾರಾಯಣರಾಯರ ಅಧ್ಯಕ್ಷತೆಯಿಂದ ಸೇರಿತು. ಮುನ್ಸಿಪಲ್ ನೌಕರರ ಪ್ರೊವಿಡೆಂಟ್ ಫಂಡಿನ ಹಣವನ್ನು ವಾರ್ ಬೋಂಡಿನ ಮೇಲಿರಿಸಬೇಕಾಗಿ ಸೂಚಿಸಿದ ಕಮಿಶನರ ನೋಟಿಸ್‌ಗೆ ಸಮ್ಮತಿ ದೊರೆಯಲಿಲ್ಲ.

ಕಡೆಕಾರು

ನಿಂಬೂರು ಪಂಚಾಯತ ಬೋರ್ಡಿನ ಸೋಮವಾರದ ಹೊಸ ಸಂತೆ ಮಾರ್ಕೆಟ್ ಕಡೇಕಾರಲ್ಲಿ ಜುವನಾದಿ ಕಟ್ಟೆಯ ಪಡು ಕೆರೆಯ ಮೂಡು ಮೈದಾನಿನಲ್ಲಿ ತಾ. 2ನೇ ಮಾರ್ಚಿ 942 ಸೋಮವಾರ ಬೆಳಗಿನ ಗಂಟೆ 7ಕ್ಕೆ ಜಿಲ್ಲಾ ಪಂಚಾಯತ್ ಆಫೀಸರರಿಂದ ಆ ಮೇಲೆ ಪ್ರತಿ ಸೋಮವಾರ ಬೆಳಗಿನಿಂದ ಸಂಜೆಯ ವರೆಗೆ ತೆರೆಯಲಿದೆ.

ಮಂಗಳೂರು ಪೇಟೆಧಾರಣೆ

(ದ. ಕ. ಜಿಲ್ಲಾ ಟ್ರಿಜರಿ ಡಿ॥ ಕಲೆಕ್ಟರರಿಂದ ಬಂದದ್ದು)

	ರಿಂದ	ವರೆಗೆ
ಭತ್ತ ಮುಡಿಗೆ	2-10-0	
ಅಕ್ಕಿ ಗುಡ್ಡೆ ಮು.	6- 2-0	6- 4-0
,, ದುಯಂ ,,	5-14-0	6- 2-0
,, ಅವ್ವಲ್ ಸುಗ್ಗಿ	—	
,, ದುಯಂ ,,	5-14-0	—
ತೆಂಗಿನಕಾಯಿ 1000ಕ್ಕೆ	37-8-0	42-8-0
,, ಸಿಪ್ಪೆಯದ್ದು ,,	40-0-0	45-0-0
ಕೊಬ್ಬರಿ ಖಂಡಿಗೆ	58-12-0	—
ದಿಲ್‌ಪಸಂದ್ ,,	63-12-0	—
ತೆಂಗಿನೆಣ್ಣೆ ಮುಡಿಕ್ಕೆ	4-13-0	—
ಸಿಪ್ಪೆಯ ಅಡಿಕೆ, ಸಾವಿರಕ್ಕೆ	3-0-0	3-8-0
ಸುಲಿದ ,, ಖ. (ಹಳ್ಳು)	140-0-0	160-0-0
(ಹೊಸ್ಸು)	120-0-0	145-0-0
ಕಬ್ಬಿನ ಬೆಲ್ಲ ಖಂಡಿಗೆ	80-0-0	85-0-0
ಒಣ ಮೆಣಸು ಹಂ.	17-0-0	17-8-0
ಹೊಗೆಸೊಪ್ಪು ಮುಡಿಕ್ಕೆ	6-0-0	7-0-0
ಹುಡಿಯ ,, ಮ.	-0-0	—
ಮೈಸೂರು ಎಲೆಕ್ಕೆ, ಮ.	40-0-0	50-0-0
ಕೊಡಗಿನ ,, ಮ.	40-0-0	45-0-0
ಕುಮ್ಮೆಯ ಮೆಣಸು ಖ.	90-0-0	95-0-0
ಕಾಸರಗೋಡು ,, ಖ.	—	—
ಊರ ,, ಮ.	4-14-0	—

ಸಿನೆಮಾ ಪುಟ

‘ಭರತ ವಿಲಾಪ್’ ಮತ್ತು ‘ಗರೀಬ್’ ಪ್ರಕಟಹೊಗಿದೆ

ಈ ಹೊಸ ಎರಡು ಚಿತ್ರಗಳು ಕಳೆದ ವಾರ ಪ್ರದರ್ಶಿತವಾಗಿವೆ. ಭರತ ವಿಲಾಪ್ ಪ್ರಕಾಶ ಪಿಕ್ಚರ್ಸಿನವರ ಚಿತ್ರ. ಗರೀಬ್ ನೇಶನಲ್ಸ್ ಚಿತ್ರ. ಭರತ ವಿಲಾಪ್‌ನ ಹಿಂದೀ ಮರಾಠೀ ಎರಡು ಭಾಷಾಂತರಗಳಿವೆ. ಇದು ರಾಮಾಯಣ ಕಥೆಯನ್ನಾಧರಿಸಿದೆ. ಹೃದಯದ್ರಾವಕ ಘಟನೆಗಳಿಂದ ಕೂಡಿದೆ. ದುರ್ಗಾ ಖೋಟೆ ಕೈಕೇಯಿಯಾಗಿ, ಶೋಭನಾ ಸಮರ್ಥ ಸೀತೆಯಾಗಿ, ವಿಮಲಾ ವಸಿಷ್ಠ ಮಂಥರೆಯಾಗಿ, ಶಾಹು ಮೋಡಕ್ ಭರತನಾಗಿ, ಪ್ರೇಮ ಅದೀಬ್ ರಾಮನಾಗಿ, ಉಮಾಕಾಂತ್ ಲಕ್ಷ್ಮಣನಾಗಿ ಇದರಲ್ಲಿ ನಟಿಸುತ್ತಾರೆ. ‘ಗರೀಬ್’ನಲ್ಲಿ ಸುರೇಂದ್ರ ಮತ್ತು ರೋಸ್ ಇವರು ನಟಿಸುವರು. ಧನಿಕರ ಬಡವರ ಸಮಸ್ಯೆಯ ಕಥೆಯಿದು. ಸುಶೀನೋರಾ ಬೋಸ್, ವೀಣಾ ಕುಮಾರಿ ಮತ್ತು ಸಕಿಕಟಿ ಪ್ರಸಾದ್ ಇವರು ಇತರ ನಟವರ್ಗದವರು.

ರಣಜಿತ್ ‘ಬೇಟಿ’

ಈ ವಾರ ಪ್ರದರ್ಶಿತವಾಗಲಿದೆ. ಜಯಂತ್ ದೇಸಾಯಿ ಇವರ ನಿರ್ದೇಶಕ. ಖುರ್ಶಿದ್, ವಸಂತಿ, ಅರುಣ, ಇ. ಬಿಲ್ಲಿಮೋರಿಯ, ಘೋರಿ, ಕೇಸರಿ, ಭಗವಾನ್ ದಾಸ್ ಮೊದಲಾದವರು ಇತರ ನಟನಟೀವರ್ಗದವರು.

‘ಅಪ್ನಾ ಘರ್’ನಲ್ಲಿ ಶಾಂತಾ ಆಪ್ಟೆ

ಅಭಿನಯಿಸುತ್ತಾಳೆ. ಇದು ಸಿರ್ಕೋ ಚಿತ್ರ. ಇದು ಈಗ ಪ್ರದರ್ಶಿತವಾಗುತ್ತಿದೆ. ಚಂದ್ರಮೋಹನನು ಆಪ್ಟೆಯ ಜತೆ ನಟನು. ದೇವಕೀ ಬೋಸರ ನಿರ್ದೇಶಕತ್ವ. ನಾನಾ ಪಳಸೀಕರ್, ಜಗದೀಶ್, ಡೇವಿಡ್, ಸಿಂಬಾಲ್ಕರ್, ವಿಮಲಾ, ವಸಿಷ್ಠ ಇವರು ಇತರ ನಟನಟೀ ವರ್ಗದವರು.

ಅತ್ರೆ ಚಿತ್ರದಲ್ಲಿ ಕಥೆ ಮತ್ತು ನಟನೆ

ಎರಡೂ ಕೂಡಿವೆಯೆಂದು ಹೇಳಲಾಗುತ್ತದೆ. ಅತ್ರೆ ಚಿತ್ರ ‘ರಾಜಾರಾಣಿ’ ಈಗ ಬೊಂಬಾಯಿಯಲ್ಲಿ ಯಶಸ್ವಿಯಾಗಿದೆ. ಆಚಾರ್ಯ ಅತ್ರೆಯವರು ಈ ಕಥೆಯ ಲೇಖಕರೆಂದರೆ ಕಥೆಯ ಮಹತ್ವ ಬೇರೆ ಹೇಳಬೇಕಾಗಿಲ್ಲ. ವನಮಾಲಾ, ಮಜಾರ್ ಖಾನ್, ತ್ರಿಲೋಕ ಕಾಪೂರ್, ಸುನಲಿನೀ ದೇವಿ, ನವೀನಯಾಗ್ನಿಕ್, ಮಾಯಾದೇವಿ ಮೊದಲಾದವರು ನಟನಟಿಯರು. ಕಥೆಯು ಅವಿಭಕ್ತ ಕುಟುಂಬದ ಸಮಸ್ಯೆ ಹೊಸತಾಗಿ ಮದುವೆಯಾದ ದಂಪತಿಗಳ ಅನುರಾಗ ಘಟನೆಯೂ ಇದರಲ್ಲಿ ತೋರಿಸಲ್ಪಟ್ಟಿದೆ.

ನಲಿನೀ ಜಯವಂತ್

ಇನ್ನೆರಡೇ ವರ್ಷ -

ಮಾತ್ರ ಅಭಿನಯಿಸುವಳೆಂದೂ, ಅಷ್ಟರಲ್ಲಿ ಅವಳಿಗೆ ವಿವಾಹವಾಗಲಿರುವುದರಿಂದ, ಅವಳ ನಟನೆ ಮುಂದೆ ನಿಂತು ಹೋಗಬಹುದೆಂದೂ ‘ಫಿಲ್ಮಿಂಡಿಯಾ’ ಎಂಬ ಪತ್ರಿಕೆಯಲ್ಲಿ ಒಂದು ಲೇಖನ ಬಂದಿದೆ. ಆಕೆ ಒಂದು ಕುಲೀನ ಮರಾಠಾ ಕುಟುಂಬದಲ್ಲಿ ಹುಟ್ಟಿದವಳು. ಈಗ ಅವಳ ವಯಸ್ಸು ಕೇವಲ 16. ತಿಂಗಳ ಸಂಬಳ ರೂ. 1,800 ರಾಧಿಕಾದಲ್ಲಿ ಆಕೆ ಅಭಿನಯಿಸಿ ಪ್ರಸಿದ್ಧಳಾಗಿದ್ದಾಳೆ.

ಅಶೋಕ ಕುಮಾರ

ನಿಗೆ ಬೊಂಬೇ ಟಾಕೀಸಿನವರು ಬೇರೊಂದು ಚಿತ್ರದಲ್ಲಿ ಅಭಿನಯಿಸಲು ಅನುಮತಿ ಕೊಟ್ಟಿರುವರಂತೆ. ಸಿರ್ಕೋದವರು ತಮ್ಮೊಂದು ಚಿತ್ರಕ್ಕೆ ರೂ. 15 ಸಾವಿರ ಆತನಿಗೆ ಕೊಡಲೊಪ್ಪಿರುವರೆಂದು ತಿಳಿದಿದೆ.

ಹುಬ್ಳೀಕರ್-ಅ. ನ. ಕೃಷ್ಣರಾವ್

ಶಾಂತಾ ಹುಬ್ಳಿಕರ್ ಮತ್ತು ಅ. ನ. ಕೃಷ್ಣರಾವ್ ಇವರು ಕನ್ನಡ ಸಾಮಾಜಿಕ ಚಿತ್ರವೊಂದರಲ್ಲಿ ನಟಿಸುವರೆಂದು ತಿಳಿದಿದೆ.

ರೈಲು ಬಂಡಿಗಳ ಸಮಯ

ಇದೇ ಜುಲೈ ತಾ. 1ರಿಂದ ವ್ಯತ್ಯಾಸವಾದ ರೈಲು ಬಂಡಿಗಳ ಸಮಯಗಳು ಈ ಕೆಳಗಿನಂತಿವೆ—

ಗಾಡಿಗಳು	ಹೊರಡುವ ಗಂಟೆ	ತಲ್ಪುವ ಗಂಟೆ
ಗೂಡ್ಸು ಬಂಡಿ	3.45 ರಾತ್ರಿ	9.25 ರಾತ್ರಿ
ಮಲಬಾರು ಎಕ್ಸ್‌ಪ್ರೆಸ್ (ಮೈಲ್)	9.5 ಬೆಳಿಗ್ಗೆ	5.15 ಸಾಯಂ.
ಜೋಲಾರ್ ಪೇಟೆ ಪೆಸೆಂಜರ್	12.0 ಮಧ್ಯಾಹ್ನ	2.55 ಸಾಯಂ.
ಕಣ್ಣನ್ನೂರು ವರೆಗೆ	5-52 ಸಾಯಂ.	9-40 ಪೂರ್ವಾಹ್ನ

ತಾಯಿಯೇ! ನಿನಗೆ ಆಗಾಗ ಅಗತ್ಯಬೀಳುವ ಸ್ನೇಹಿತಳಿಲ್ಲಿರುವಳು.

ಮಕ್ಕಳಿಗೆ ಆಗಾಗ ಕೆಳಗೆ ಬಿದ್ದು ಗಾಯ, ಪೆಟ್ಟುಗಳಾಗುತ್ತವೆ. ಇದಕ್ಕಾಗಿ ಪ್ರತೀ ಒಂದು ಮನೆಯಲ್ಲಿಯೂ ಅಗತ್ಯ ಬೇಕಾಗುವುದಾವುದೆಂದರೆ ಕ್ರಿಮಿನಾಶಕ ಔಷಧಿ. ಒಂದು ಟಿನ್ನು ಕುಟಿಕೂರಾ ಮುಲಾಮನ್ನು (Cuticura Ointment) ನಿಮ್ಮ ಬಳಿ ಕ್ಷರಿಸಿ ನಂತರ ಯಾವ ಪೆಟ್ಟು ಗಾಯಗಳಿಗೂ ತಯಾರಾಗಿರಿ.



ಗಾಯವು ಕೂಡಲೇ ಗುಣವಾಗಬೇಕಾದರೆ, ಬಾತುವಿಕೆಯು, ಮಾಯವಾಗಬೇಕಾದರೆ ಕುಟಿಕೂರಾ ಮುಲಾಮನ್ನು (Cuticura Ointment) ಉಪಯೋಗಿಸಿರಿ. ಗಾಯದ ಪೆಟ್ಟು, ತರಚುವಿಕೆ, ಮಗ್ದಣ ಇವುಗಳಿಗೆ ಹಚ್ಚಿರಿ. ರಶಿಗೆ ಯಾದೀತೆಂಬ ಬೆದರಿಕೆಯಿಲ್ಲ. ಕುಟಿಕೂರಾ ಮುಲಾಮು (Cuticura Ointment) ಸುಟ್ಟುಹೋದ ಮಾ ಬೆಂದುಹೋದ ಭಾಗಗಳಿಗೆ ಹಚ್ಚಲು ಕೂಡಾ ಬಹಳ ಉತ್ತಮ. ಸಹಿಸಲಸದಳವಾದ ವೇದನೆಯನ್ನು ನಿಲ್ಲಿಸಿ ಗಾಯಗಳು ಹತಡದಂತೆ ಮಾಡುತ್ತದೆ. ಚರ್ಮರೋಗಗಳಿಗೆ ಕೂಡಾ ಉತ್ತಮ ಔಷಧಿ. ಅಸಹ್ಯವಾದ ತುರಿಗಜ್ಜಿಗಳು ಇದರ ಸ್ಪರ್ಶದಿಂದಲೇ ಮಾಯವಾಗುತ್ತವೆ. ಇಷ್ಟಲ್ಲದೆ ದೀರ್ಘಕಾಲದ ಚರ್ಮವ್ಯಾಧಿಗಳು ಕೂಡ ಕುಟಿಕೂರಾ ಮುಲಾಮಿನಿಂದ (Cuticura Ointment) ಗುಣವಾಗುತ್ತವೆ. ನಿಮ್ಮ ಕೆಮಿಸ್ಟರಲ್ಲಿಂದ ಒಂದು ಟಿನ್ನನ್ನು ಕೊಂಡುಕೊಳ್ಳಿರಿ.

ಕುಟಿಕೂರಾ ಮುಲಾಮನ್ನು (Cuticura Ointment) ಕಜ್ಜಿ, ತುರಿ, ಗಾಯ, ಪೆಟ್ಟು, ವ್ರಣ, ಮುದ್ದಣ, ಬಾತುವಿಕೆ, ಕ್ರಿಮಿಕಜ್ಜಿ ವಿಷಪ್ರಾಯವಾದ ಗಾಯ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉಪಯೋಗಿಸಿರಿ.

ಕುಟಿಕೂರಾ ಮುಲಾಮು
Cuticura Ointment



The Canara Banking Corporation Ltd.

(Incorporated in British India with limited liability)

Estd. 1906.

OUR RATES OF INTEREST ON DEPOSITS

Current	1%	p. a.
Savings Bank	2½%	„
Short-term	1¾%	„
FIXED FOR 3 MONTHS	2%	„
6 „	2¼%	„
9 „	2½%	„
12 „	3%	„
24 „	3½%	„

Advances made at cheap rates of interest against approved securities and Banking business of every description transacted.

THE VIJAYA BANK, LIMITED.

Head Office: MANGALORE.

BRANCHES:

KADRI-MANGALORE, HAMPANKATTA-MANGALORE, UDIPI, COONDAPUR, KARKAL, KAUP, & BRAHMAVAR.

SEASON DEPOSITS

are now accepted at all our Offices, at 4% per annum, for or more months, maturing on 31st July, 1942.

ಜಪಾನಿನ ಮುಂದಿನ ಹೆಜ್ಜೆ? ಹಿಂದುಸ್ಥಾನವೋ? ಆಸ್ಟ್ರೇಲಿಯವೋ? ನ್ಯೂಜೀಲೆಂಡೋ?

ಎಂಬ ವಿಚಾರ ಬರೆಯುತ್ತಾ ಅಮೆರಿಕನ್ ಎಡ್ಮಿರಲ್ ಯಾರೆಯು ಅದು ಬೇಗನೇ ಆಕ್ರಮಿಸುವುದೆಂದಿರುವರು. ಶಾಂತಿ ಸಾಗರಕ್ಕೆ ಹೆಚ್ಚು ಸಹಾಯ ಕಳುಹಿಸುವುದೆಂದು ತಿಳಿದು ನ್ಯೂಜಿಲೆಂಡ್ ಆಸ್ಟ್ರೇಲಿಯಗಳ ಕಡೆಗೆ ಜಪಾನು ಬೇಗನೇ ಆಕ್ರಮಿಸುವುದೆಂದವನ ತರ್ಕವಾಗಿದೆ.

ಬರ್ಮಕ್ಕೆ ಗಂಡಾಂತರ ಆದರೂ ರಕ್ಷಿಸಬಹುದು

ಎಂದು ಹೇಳಲಾಗಿದೆ. ಜನರು ತಟ್ಟನೆ ಪ್ರಯತ್ನ ಮಾಡಬೇಕೆಂದು ತಿಳಿಸಲಾಗಿದೆ. ರೇವಲರಿಗೆ ಈ ಗಂಡಾಂತರ ಗೊತ್ತಿದ್ದರೂ ಅವರು ಶಾಂತವಾಗಿದ್ದು ಹೆದರಿಕೊಂಡಿಲ್ಲವಂತೆ.

ಸ್ವದೇಶಾಭಿಮಾನಿಗೆ ಜಾಹೀರಾತು ಕೊಡಿರಿ

ವಿಜ್ಞಾನಯುಗ

ಹುಲ್ಲನ್ನು ತಿನ್ನಕೂಡದೆ?

ಆಹಾರ ಸಮಸ್ಯೆಯ ವಿಷಯ ಬ್ರಿಟನಿನಲ್ಲಿ ಆಗಾಗ ಚರ್ಚೆಯಾಗುತ್ತದೆ. ಹಲವೊಮ್ಮೆ ಈ ಮಾತನ್ನು ಆ ಚರ್ಚೆಯ ಕಾಲದಲ್ಲಿ ನಾವು ಕೇಳಬಹುದು. 'ಸರಿ, ಎಲ್ಲಾ ತೀರಿಹೋದರೆ, ನಾವು ಹುಲ್ಲನ್ನು ತಿನ್ನಲು ಯಾಕೆ ತೊಡಗಬಾರದು?' ಎಂದು. ಹುಲ್ಲನ್ನು ಮನುಷ್ಯನು ಯಾಕೆ ಆಹಾರವಾಗಿ ಉಪಯೋಗಿಸಬಾರದು ಎಂಬೀ ಪ್ರಶ್ನೆ ಇತ್ತೀಚೆಗೆ ವೈಜ್ಞಾನಿಕರ ಗೋಚರಕ್ಕೆ ಬಂದಿದೆ. ಸಾಮಾನ್ಯವಾಗಿ ಹುಲ್ಲನ್ನು ಆಹಾರವಾಗಿ ತೆಗೆದುಕೊಳ್ಳುವುದರಲ್ಲಿ ಇರುವ ಒಂದು ಆತಂಕವೆಂದರೆ, ಹುಲ್ಲು ಈಗಿದ್ದ ಪರಿಸ್ಥಿತಿಯಲ್ಲಿ ಶರೀರದೊಳಗೆ ಕರಗುವಂಥಾದ್ದಲ್ಲವೆಂದು (ಆದರೆ ಇದನ್ನು ಕೆಲವರು ಒಪ್ಪುವುದಿಲ್ಲ) ಹುಲ್ಲಿನಲ್ಲಿರುವಂತಹ ಕೆಲವು ವಸ್ತುಗಳು ಪ್ರಾಣಿಗಳಿಗೆ ಹೇಗೆ ಅವಶ್ಯ ಆಹಾರವಾಗಿವೆಯೋ, ಹಾಗೆ ಮನುಷ್ಯನಿಗೆ ಆಗಿಲ್ಲವೆಂಬುದು ಎರಡನೆಯ ಕಾರಣ. ಹುಲ್ಲಿನಲ್ಲಿ ಕಾರ್ಬೋಹೈಡ್ರೇಟ್ ಇರುವಂತೆ, ಶರೀರವನ್ನು ಬೆಳೆಸುವ ಕೆಲವು ವಸ್ತುಗಳು ಸೇರಿವೆಯೆಂದು ಹೇಳಲಾಗಿದೆ. ಹಲವು ಈ ಹುಲ್ಲಿನ ಸತ್ವಗಳು ಮನುಷ್ಯನಿಗೆ ಆತನು ಕುಡಿಯುವ ಹಾಲು ಮತ್ತು ಮಾಂಸಗಳ ಮೂಲಕ ಆತನ ಶರೀರದೊಳಗೆ ಸೇರುತ್ತವೆಯೆಂದು ಹೇಳಲಾಗುತ್ತದೆ. ಹೀಗೆ ದನದ ಮೂಲಕ ಹುಲ್ಲಿನಲ್ಲಿರುವ ಶೇಕಡಾ ೧೫ರ ಅಂಶ ಮನುಷ್ಯನಿಗೆ ಬರುವುದಾದರೂ ಶೇಕಡಾ ೮೫ ಅಂಶ ಹಾಳಾಗುತ್ತದೆ. ಹಾಗಾಗಿ ನಾವು ಶೇಕಡಾ ೮೫ ಅಂಶವನ್ನು ಪಡೆಕೊಳ್ಳುವಂತೆ ಹುಲ್ಲನ್ನು ಆಹಾರವಾಗಿ ಉಪಯೋಗಿಸಕೂಡದೇಕೆ ಎಂಬೀ ವಿಚಾರವಾಗಿ ಆಹಾರ ವಿಜ್ಞಾನಿಗಳು ಆಲೋಚಿಸುತ್ತಿರುವರು.

ರಶ್ಯದ ಹೊಸ ಗುಪ್ತಾಸ್ತ್ರ

ರೋಕೆಟ್ ಗನ್

ರಶ್ಯವು ರೋಕೆಟ್ ಗನ್ ಎಂಬ ಹೊಸ ಗುಪ್ತಾಸ್ತ್ರವನ್ನು ಕಂಡುಹುಡುಕಿರುವುದು. ಇದರ ಮೂಲಕ ಒಂದೇ ಸಲ ಎಡೆಬಿಡದೆ ೬೦ ಗುಂಡುಗಳನ್ನು ಹಾರಿಸಬಹುದು. ಈ ಹೊಸ ಕೋವಿಯ ವಿವರವು ಇದುವರೆಗೆ ಪ್ರಕಟವಾಗಿಲ್ಲ. ಇತ್ತೀಚೆಗೆ M G ಎಂಬ ರಶ್ಯನ್ ವಿಮಾನ ಮತ್ತು ಸ್ಟೋರ್ಮವಿಕ್ ಡೈವ್ ಬಾಂಬರ್ ಇವುಗಳು ಇನ್ನೂ ಕೆಲವು ತರದ ಗುಪ್ತಾಸ್ತ್ರಗಳನ್ನು ಉಪಯೋಗಿಸಿವೆಯೆಂದು ಸುದ್ದಿ ಬಂದಿವೆ. ಇವುಗಳ ವಿಷಯವೂ ತಿಳಿದುಬಂದಿಲ್ಲ. ಅಂತೂ ಇತ್ತೀಚೆಗೆ ಶತ್ರುಗಳಿಗೆ ತಿಳಿಯದ ತೆರದಲ್ಲಿ ಅನೇಕ ಬಗೆಯ ಗುಪ್ತಾಸ್ತ್ರಗಳನ್ನು ಕಂಡುಹುಡುಕಲು ವೈಜ್ಞಾನಿಕರು ಸಾಹಸಪಡುತ್ತಿರುವರು.

ವಿಚಿತ್ರ ಪ್ರಪಂಚ

ಹಾವು ಬೇಸಾಯಗಾರನ ಮಿತ್ರ

ಎಂಬುದಾಗಿ ವಿಸ್‌ಕೋನ್‌ಸಿನ ಪ್ರಕೃತಿ ಶಾಸ್ತ್ರಜ್ಞರೊಬ್ಬರು ಲೆಕ್ಕಹಾಕಿ ಹೇಳುತ್ತಾರೆ. ಹಾವು ಗದ್ದೆ ತೋಟಗಳಲ್ಲಿರುವುದರಿಂದ ವರ್ಷ ಒಂದರ ಕಡಿಮೆಯೆಂದರೆ ನೂರು ಪವನಿನಷ್ಟಾದರೂ ಬೇಸಾಯಗಾರನಿಗೆ ಲಾಭವಿದೆಯಂತೆ. ಕೃಷಿಗೆ ಹಾನಿಯನ್ನುಂಟುಮಾಡುವ ಇಲಿ ಮೊದಲಾದ ಅನೇಕ ಜಂತುಗಳನ್ನು ಹಾವು ತಿನ್ನುವುದರಿಂದ ಬೇಸಾಯಗಾರನು ಬಹಳ ಲಾಭ ಹೊಂದುವನೆಂದು ಅವರ ಹೇಳಿಕೆ. ಒಂದು ಇಲಿಯಿಂದ ವರ್ಷ ಒಂದರ ಹತ್ತು ಶಿಲಿಂಗಿನಿಂದ ೧೫ ಪವನುಗಳ ತನಕ ನಷ್ಟವಿರುವುದಾಗಿ ಅವರು ಲೆಕ್ಕಾಚಾರ ಮಾಡಿದ್ದಾರೆ. ಹಾಗಾಗಿ ಯಾವ ತೋಟ ಗದ್ದೆಗಳ ಬಳಿಯಲ್ಲಿ ಹಾವುಗಳು ಕಡಿಮೆಯಿರುತ್ತವೋ ಆ ಬೇಸಾಯಗಾರನ ಆದಾಯ ವರ್ಷವರ್ಷಕ್ಕೆ ಕಡಿಮೆಯಾಗುತ್ತದೆಂದೂ ಅವರು ತಿಳಿಸುವರು. ನಮ್ಮ ಜಿಲ್ಲೆಯಲ್ಲಿ ಗದ್ದೆಗಳ ಬದಿಯಲ್ಲಿ 'ನಾಗಬನ' ಮಾಡಿರುವ ಹಿರಿಯರಲ್ಲಿ ವೈಜ್ಞಾನಿಕ ದೃಷ್ಟಿಯಿತ್ತೆ?

1944ರಲ್ಲಿ ಯುದ್ಧ ಮುಗಿವುದು?

1555ರಲ್ಲಿ ಹೇಳಿದ ಭವಿಷ್ಯ

1555ರಲ್ಲಿ ಪ್ರಸಿದ್ಧಿಸಿದ 'ದಿ ಸೆಂಚುರೀಸ್ ಎಂಡ್ ಟ್ರುಪ್ರೊಫೆಸೀಸ್ ಓಫ್ ಮೈಕಲ್ ಡಿ ನಾಸ್ಟ್ರೆಡೆಮುನ್' ಎಂಬ ಪುಸ್ತಕದಲ್ಲಿ 1944ರಲ್ಲಿ ಯುದ್ಧ ಮುಗಿವುದೆಂದು ಬರೆದಿದೆ. 1940ರಲ್ಲಿ ಗಂಡಾಂತರ ಬರುವುದೆಂದೂ, 1944ರಲ್ಲಿ ಯುದ್ಧ ಮುಗಿವುದೆಂದೂ ಬರೆಯುತ್ತಾ ಅದರ ಅವಧಿಯಲ್ಲಿ ಅನೇಕ ಸಾಮ್ರಾಜ್ಯಗಳುರುಳುವವೆಂದೂ ಯುರೋಪಿನಲ್ಲಿ, ಫ್ರೆಂಚ್ ಸರಕಾರದಲ್ಲಿ ವಿಶೇಷತಃ ಬದಲಾವಣೆಯಾಗುವುದೆಂದೂ, ಜರ್ಮನಿ ಇಟಲಿಗಳಲ್ಲಿ ಸರ್ವಾಧಿಕಾರಿಗಳು ಆಡಳಿತ ನಡೆಸುವರೆಂದೂ, ಫ್ರಾನ್ಸ್ ಪತನವಾಗುವುದೆಂದೂ ಬರೆಯಲಾಗಿದೆ. ನಾಸ್ಟ್ರಡಮುನ್ ಎಂಬವನು ಇದನ್ನು ಬರೆದನು. ಆತನು ಅನೇಕ ಭವಿಷ್ಯ ಹೇಳಿ ಜನರನ್ನು ಚಕಿತಗೊಳಿಸಿರುವನಂತೆ! ಇಡೀ ಯುರೋಪನ್ನು ಯುದ್ಧದಲ್ಲಿ ದೂಡುವವನು 'ಹಿಟ್ಲರ್' ಎಂಬವನೆಂದು ಆತನು ಬರೆದಿರುವನು. ಆತನು ತನ್ನ ಮರಣದ ಭವಿಷ್ಯವನ್ನು ಹೇಳಿದನು.

HALFTONE & LINE BLOCK MAKING UNDERTAKEN

Sharada Press, MANGALORE.

ಯಾವ ಆಲೋಚನಾಪರ ಮನುಷ್ಯನೂ

ತನಗೆ ಅತ್ಯಂತ ಪ್ರಿಯತಮವಾದ ತನ್ನ ಸಂಸಾರ, ತನ್ನ ಮನೆ, ತನ್ನ ಭಾವೀ ಸುರಕ್ಷತೆ ಇವುಗಳು ಈದಿನ ಮಹೋಪದ್ರವಕ್ಕೆ ಗುರಿಯಾಗಿವೆಯೆಂಬುದನ್ನು ತಿಳಿಯದಿರನು. ಅಲ್ಲದೆ, ಅವನು ಅಮೂಲ್ಯವಾದ ಪ್ರಾಣವನ್ನೂ ಸ್ವಾತಂತ್ರ್ಯವನ್ನೂ ಸಂರಕ್ಷಿಸಬಲ್ಲನು. ಅವನು ದೇಶರಕ್ಷಣೆಯ ಕ್ರಮವನ್ನು ಹೆಚ್ಚಿಸುವುದರ ಮೂಲಕ ಹಿಂದೂಸ್ಥಾನದ ಬಲವನ್ನು ವೃದ್ಧಿಪಡಿಸಲು ಸಹಾಯಮಾಡಬಲ್ಲನು— ಆದರೆ ಆಲಸ್ಯವಿಲ್ಲದೆ ಕಾರ್ಯೋನ್ಮುಖನಾಗಬೇಕು. ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟುಗಳನ್ನು ಕೊಳ್ಳಲು ಈಗಲೇ ಸುಸಮಯ.

ನೀವು ಕೊಡುವ ಪ್ರತಿಯೊಂದು ಆಣೆಯೂ ಹಿಂದೂಸ್ಥಾನದ ಸೈನಿಕ, ನೌಕ, ವೈಮಾನಿಕ ಬಲವನ್ನು ಹೆಚ್ಚಿಸಿ, ಶತ್ರುಗಳ ದಾಳಿಯನ್ನು ಎದುರಿಸಲು ಹಿಂದೂಸ್ಥಾನವನ್ನು ಬಲಪಡಿಸುವುದು.

ಪ್ರತಿ ೧೦ ರೂಪಾಯಿನ ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟುಗೂ ರೂ ೩/೯/- ಲಾಭ ಬರುವುದು

ಪೂರ್ಣ ವಿವರಗಳು ಪೋಸ್ಟಾಫೀಸಿನಿಂದ

GI 74. KN

ಡೋಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Bhuvanendra Products Limited,

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitual abortion and other uterine troubles. Must be commensed soon after conception and continued up to the time of delivery.

"ಭುವನೇಂದ್ರ ಗರ್ಭಪಾಲ"

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವವಿಧದ ದೋಷಗಳನ್ನು ಗುಣಪಡಿಸುವ ದಿವ್ಯಔಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ ವ ಏಜೆಂಟರು:—

(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಫೈ, ರಥಬೀದಿ., (3) ಬಿ. ನಾರಾಯಣ ಆಚಾರ್ಯ, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಡಿಪೊ:—1. ಮರಾಠ ಗಲ್ಲಿ ಹುಬ್ಬಳ್ಳಿ.

2. 36 ಫ್ಲಾಕ್ರೋಫ್ಟ್ಸ್ ರೋಡ್, ಟ್ರಿಪ್ಲಿಕೇನ್, ಮದರಾಸು.

The Bank of Mangalore Limited

HEAD OFFICE	*BRANCHES*
Mangalore.	Moodabidri & Padubidri

ANNOUNCEMENT

On and from 1st February 1942, fixed deposits will be accepted at the following attractive rates.

One year 4%

Two years or above 4½%.

Interest Payable Quarterly

ಸರಕಾರದ ಹೊಸ ಪಾಠಪಟ್ಟಿಗನುಸಾರವಾಗಿ ಬರೆದ

ನವೀನ ಭೂವಿವರಣೆ

ವಾಸುದೇವರಾವ್, ಎಂ. ಎ. ಎಲ್. ಟಿ. (Dip. Geogrhpy)

(ಭೂಗೋಳ ಶಾಸ್ತ್ರದಲ್ಲಿ ಡಿಪ್ಲೊಮಾ ಪಡೆದವರು)

ಈ ಪುಸ್ತಕಗಳನ್ನು ಪಡಕೊಂಡಲ್ಲಿ ವಿದ್ಯಾರ್ಥಿಗಳಿಗೆ ಎಟ್ಲಾಸ್ ಕೊಂಡುಕೊಳ್ಳುವ ಅವಶ್ಯವಿಲ್ಲ.

ಪ್ರತಿ ಪುಸ್ತಕದಲ್ಲಿ ಬಣ್ಣಬಣ್ಣದ ಭೂಪಟಗಳಿವೆ.

ಅನೇಕಾನೇಕ ಚಿತ್ರಪಟಗಳಿಂದ ಕೂಡಿದ್ದು, ಪ್ರತಿ ಪಾಠದ ಅಂತ್ಯದಲ್ಲಿ ಅಭ್ಯಾಸಗಳನ್ನೂ ಮಾದರಿ ಪ್ರಶ್ನೆಗಳನ್ನೂ ಕೊಟ್ಟಿದೆ.

4ನೆಯ ಪುಸ್ತಕ 6 ಆಣೆ, 5ನೆಯ ಪುಸ್ತಕ 7 ಆಣೆ 6, 7 ಮತ್ತು 8ನೆಯ ಪುಸ್ತಕಗಳು ಅಚ್ಚಿನಲ್ಲಿವೆ.

ಪುಸ್ತಕಗಳು ಬೇಕಾದಲ್ಲಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:

ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.

ಡಿ ಡಿ

ಕಂಬೈಂಡು ಬುಕ್ಕಿಂಗ್ ಏಜನ್ಸಿ ಮತ್ತು ಜೋಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು

ಮಖೆ ಜಾತ್ರೆ

1ನೇ ಮಖೆ	3ನೇ ಮಖೆ	2ನೇ ಮಖೆ
ತಾರೀಕು 13-2-'42	ತಾರೀಕು 9-3-'42	ತಾರೀಕು 2-3-'42
ಮತ್ತು	ಮತ್ತು	ಮತ್ತು
14-2-'42	10-3-'42	3-3-'42

ಪುಣ್ಯ ಪ್ರದಾಯಿನಿ ನೇತ್ರಾವತಿ ಮತ್ತು ಕುಮಾರಧಾರಿ ನದಿಗಳ ಸಂಗಮಸ್ಥಾನವಾದ ಉಪ್ಪಿನಂಗಡಿಯಲ್ಲಿ ನಡೆಯುವ ಮಖೆ ಜಾತ್ರೆ ಸಮಯದಲ್ಲಿ ಉಪ್ಪಿನಂಗಡಿಗೆ ಅತ್ಯಲ್ಪ ಖರ್ಚಿನಲ್ಲಿ ಹೋಗಿ ಸಂಗಮ ಸ್ನಾನಮಾಡಿ ಪುಣ್ಯಾರ್ಜನೆ ಮಾಡಲಿಕ್ಕನುಕೂಲ ಸಮಯ.

ಇಂತಹ ಅತ್ಯಪೂರ್ವ ಸಂದರ್ಭವನ್ನು ಕಳಕೊಳ್ಳದಿರಿ.

ಪ್ರಯಾಣಿಕರ ಪ್ರಯಾಣ ಸೌಕರ್ಯಗಳ ಕಡೆಗೆ ಹೆಚ್ಚಿನ ಗಮನಕೊಡಲಾಗುವುದು.

JOINT MANAGERS,

The Combined Booking Agency,	The Joint Booking Office,
MANGALORE.	KODIALBAIL.

Regd. No. M 3400

ಸ್ವದೇಶಾಭಿಮಾನಿ

[ಸಂಪುಟ 36] ತಾರೀಖು 20—2—1942 [ಸಂಚಿಕೆ 8]

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೋವು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ತಜ್ಜು, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ಕಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ, ಬೊಂಬಾಯಿ, ಮದರಾಸು, ಕಲ್ಕತ್ತ.

(ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.)

AMRUTANJAN DEPOTS, BOMBAY · MADRAS · CALCUTTA

CONFIDENCE

IS A GREAT ASSET IN BUILDING BUSINESS.

The Bombay Life Assurance Co. Ltd.

Has to its credit such Confidence earned by its progress and service of over 33 years

It, therefore, pays you to insure or to represent by applying to:—

KOCHIKAR BROTHERS, LTD.,

Chief Agents for South India, Including Indian States, UDIPI.

Or any of their Branches at:—

MANGALORE,—CALICUT—MADRAS,

TRIVANDRUM,—BANGALORE,—and BOMBAY.

N. B: Take advantage of our free advice based on 32 years experience

ಇಂದು ನೂರಾರುಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

★

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

ESTD 1906

ಸ್ವದೇಶಾಭಿಮಾನಿ

SWADESHABHIMANI



ರಷ್ಯಕ್ಕೆ ಕಳುಹಿಸಲಾಗುವ ಬ್ರಿಟಿಷ್ ಟೇಂಕುಗಳು

KANNADA ILLUSTRATED WEEKLY

"ಹೇಡಿಗಳಂತೆ ಅಂಜದೆ ಶೂರರಂತೆ ಪರಿಸ್ಥಿತಿಯನ್ನೆದುರಿಸುವ"

ಗಾಂಧಿಜಿ ಹೇಳಿಕೆ

'ಇತ್ತೀಚೆಗೆ ಬ್ರಿಟಿಷರು ಹೊಂದಿದ ಅಪಜಯದಿಂದ ದೇಶದಲ್ಲಿ ಯಾವುದೇ ತರದ ಭೀತಿಯು ಉಂಟಾಗಬಾರದು. ಬ್ರಿಟಿಷರ ಸಹವಾಸದಿಂದ ಇದುವರೆಗೆ ನಾವೇನಾದರೂ ಮಹತ್ವದ್ದನ್ನು ಕಲಿತಿದ್ದರೆ, ಎಂಥಾ ಸಂಕಷ್ಟಗಳಲ್ಲೂ ಅತ್ಯಂತ ಶಾಂತರೀತಿಯಿಂದ ವರ್ತಿಸುವ ಗುಣವೊಂದನ್ನಾದರೂ ಈಗ ನಾವು ಕಲಿಯುವ' ಹೀಗೆಂದು ಇಂದಿನ ಹಿಂದೂದೇಶದ ಭಯ ಪರಿಸ್ಥಿತಿಯ ಕುರಿತು ಗಾಂಧಿಜಿ ಬರೆಯುತ್ತಾರೆ.

ಅವರು ಆ ಲೇಖನದಲ್ಲಿ ಹೇಳಿದ ಬೇರೆ ವಿವರಗಳು ಇಂತಿವೆ:

'ಬ್ರಿಟಿಷರು ಹೋರಾಡಿದ ಎಲ್ಲಾ ಯುದ್ಧಗಳಲ್ಲಿ, ಇಲ್ಲವೇ ಅವರು ಭಾಗವಹಿಸಿದ ಯುದ್ಧಗಳಲ್ಲಿ ಹಲವು ಅಪಜಯಗಳುಂಟಾಗಿವೆ. ಅವುಗಳಲ್ಲಿ ಕೆಲವು ಅಪಜಯಗಳು ತುಂಬಾ ಘಾತುಕ ಪರಿಣಾಮವನ್ನುಂಟುಮಾಡಿವೆ. ಆದರೆ ಅವುಗಳನ್ನೆಲ್ಲಾ ಎದುರಿಸಿ ಅವುಗಳು ಮುಂದಿನ ವಿಜಯದ ಮೆಟ್ಟಲುಗಳೆಂದು ಅವರು ತಿಳಿದುಕೊಂಡಿರುವರು. ಅಪಜಯಗಳಿಂದ ಅವರು ಎದೆಗುಂದಿಲ್ಲ. ಅವುಗಳನ್ನೆಲ್ಲಾ ಶಾಂತರೀತಿಯಿಂದ ಮತ್ತು ಲೀಲಾಜಾಲವಾಗಿ ಅವರು ಎದುರಿಸುತ್ತಿರುವರು. ಯುದ್ಧವೆಂದರೆ ಅವರು, ಒಂದು ಕಾಲ್ಚೆಂಡಿನ (ಫುಟ್‌ಬಾಲ್) ಆಟದಂತೆ ರಾಷ್ಟ್ರೀಯ ಆಟವೆಂದು ತಿಳಿಯುವರು. ಪರಾಜಯಹೊಂದಿದ ಪಂಗಡವು (ಟೀಮು) ವಿಜಯೀ ಪಂಗಡವನ್ನು ಅಭಿನಂದನೆ ಮಾಡುತ್ತದೆ. ಅದೊಂದು ಇಬ್ಬರ ಸಂಯುಕ್ತ ವಿಜಯವೆಂದು ತಿಳಿಯುವುದುಂಟು; ಕಡೆಗೆ ಪರಾಜಯದ ದುಃಖವನ್ನೆಲ್ಲಾ ವಿಸ್ಕಿ ಕುಡಿದು ನುಂಗಿಕೊಳ್ಳುವುದುಂಟು.

'ಈಗ ಗಾಬರಿಗೊಳ್ಳಲು ಸ್ವಲ್ಪವಾದರೂ ಕಾರಣವುಂಟೆ? ಅಹಿಂಸೆಯಲ್ಲಿ ಶ್ರದ್ಧೆಯುಳ್ಳವರು ಕುಸುಮಾತ್ರರೂ ಅಂಜಬೇಕಾದುದಿಲ್ಲ. ಸ್ವಂತದ ಹೆದರಿಕೆ ಹಾಗೂ ಅವಿಶ್ವಾಸವು ಅಹಿಂಸಾ ವ್ರತಿಗಳಿಗುಂಟಾಗದು. ಹಿಂಸೆಯಲ್ಲೇ ಮುಳುಗುತ್ತಿರುವ ಯಾವ ಪಂಗಡವಾದರೂ ಯಾವುದೇ ಬಗೆಯ ಭೀತಿ ಇಲ್ಲವೇ ಅವಿಶ್ವಾಸವನ್ನು ತಳೆದಿಲ್ಲೆಂದು ಇಂದಿನ ಯುದ್ಧದಿಂದ ಗೊತ್ತಾಗುವುದು. ಎರಡೂ ಪಕ್ಷಗಳ ವೀರರು ತೋರಿಸಿದ ಅನುಪಮ ಪರಾಕ್ರಮಕ್ಕಾಗಿ ನನಗೆ ಆಶ್ಚರ್ಯವಾಗಿದೆ. ಆ ಬಗ್ಗೆ ಅವರನ್ನು ಮನಃಪೂರ್ವಕ ಅಭಿನಂದಿಸುತ್ತೇನೆ. ಮಾನವನಲ್ಲಿ ಎಷ್ಟೊಂದು ಸಹನಾಶಕ್ತಿಯದೆಯೆಂಬುದನ್ನು ಇಂದಿನ ಯುದ್ಧವು ತೋರಿಸಿಕೊಡುತ್ತದೆ. ಯಾವುದೇ ದೃಷ್ಟಿಯಿಂದ ನೋಡಿದರೂ ಗಂಡಾಂತರ ಪರಿಸ್ಥಿತಿಯಲ್ಲಿ ನಾವು ಅಂಜಿದರೆ, ಅವಿಶ್ವಾಸಪಟ್ಟರೆ ಕೈಕಾಲು ಬಿಟ್ಟರೆ ಅತ್ಯಂತ ನಾಚಿಕೆಗೇಡಾಗುವುದು. ಆದುದರಿಂದ ಪ್ರತಿಯೊಬ್ಬ ಕೆಲಸಗಾರನೂ ಹೇಡಿತನವನ್ನು ತೆಗೆದುಹಾಕಿ ಯಾರೂ ಧೈರ್ಯಗೆಡದಂತೆ ಪ್ರಯತ್ನಿಸಬೇಕು. 'ಹೇಡಿಗಳು ಮರಣಕ್ಕಿಂತ ಮೊದಲೇ ಅನೇಕ ಸಲ ಸಾಯುವರು' ಎಂಬ ನಾಣ್ಣುಡಿಯು ನಮಗೆ ಅನ್ವಯಿಸದಂತೆ ನೋಡಿಕೊಳ್ಳಬೇಕು.

ಸಪ್ರುಗಳಿಗೆ ಚರ್ಚಿಲ್ಲರ ಹಾರಿಕೆಯ ಉತ್ತರ

ಮುಖ್ಯ ಸಮಸ್ಯೆಗಳಿಗೆ ಇನ್ನೂ ಉತ್ತರವಿಲ್ಲ

ಸರ್ ತೇಜ ಬಹದ್ದೂರ ಸಪ್ರುಗಳು ತಮ್ಮ ಮನವಿಗೆ ಚರ್ಚಿಲ್ಲರು ಕಳಿಸಿದ ಉತ್ತರವನ್ನು ಪ್ರಕಟಿಸಿದರು. ಈ ಉತ್ತರವು ವೈಸರಾಯರ ಮುಖಾಂತರ ಕಳಿಸಲ್ಪಟ್ಟಿರುವದು. ಚರ್ಚಿಲ್ಲರು ಆ ಪತ್ರದಲ್ಲಿ ಹೀಗೆ ಬರೆದಿರುವರು.

'ನೀವು ಹಾಗೂ ನಿಮ್ಮ ಪ್ರತಿಷ್ಠಿತ ಸಹಕಾರಿಗಳು ನಾನು ವಾಶಿಂಗ್‌ಟನ್‌ನಲ್ಲಿದ್ದಾಗ್ಗೆ ಕಳಿಸಿಕೊಟ್ಟ ತಂತಿಯ ಮನವಿಗೆ ನಾನು ಈ ಮೊದಲೇ ಉತ್ತರ ಕೊಡಬೇಕಾಗಿತ್ತು. ಆದರೆ ಕಾರ್ಯಬಾಹುಳ್ಯ ಹಾಗೂ ಇತ್ತೀಚಿನ ಘಟನೆಗಳ ಪರಿಣಾಮವಾಗಿ ತಡವಾಯಿತು. ಅಂದ ಮಾತ್ರಕ್ಕೆ ನಾನು ನಿಮ್ಮ ಮನವಿಯ ಬಗ್ಗೆ ವಿಚಾರ ಮಾಡಿಲ್ಲವೆಂದು ನೀವು ಊಹಿಸುವದಿಲ್ಲವೆಂದು ನಂಬುತ್ತೇನೆ.

"ನೀವು ಆ ಮನವಿಯಲ್ಲಿ ಎತ್ತಿದ ಎರಡು ಬೇಡಿಕೆಗಳನ್ನು ಪೂರೈಸಿದ್ದು ಈಗಾಗಲೆ ನಿಮ್ಮ ಗಮನಕ್ಕೆ ಬಂದಿರಬಹುದು. ಅದೇನೆಂದರೆ, ಲಂಡನಿನಲ್ಲಿಯ ಯುದ್ಧಮಂಡಲ ಹಾಗೂ ಶಾಂತಿಸಾಗರದ ಯುದ್ಧ ಕೌನ್ಸಿಲದಲ್ಲಿದ್ದುಕೊಂಡು ಯುದ್ಧ ಧೋರಣೆಯನ್ನು ರೂಪಿಸುವದರಲ್ಲಿ ಭಾಗವಹಿಸಬೇಕೆಂದು ಹಿಂದುಸ್ಥಾನ ಸರಕಾರವು ಇಚ್ಛೈಸಿದರೆ ಪ್ರತಿನಿಧಿಯನ್ನು ಕಳಿಸಲು ಆಮಂತ್ರಣವನ್ನು ಕೊಡಲಾಗಿದೆ. ಹಿಂದುಸ್ಥಾನದ ಪ್ರತಿನಿಧಿಯನ್ನು ಸ್ವಾಗತಿಸಲು ನಾವು ಸಿದ್ಧರಿದ್ದೇವೆ. ಬೇರೆ ಸಮಸ್ಯೆಗಳು ಬಹಳ ವಿಚಾರಣೀಯವಿರುವುದರಿಂದ ಅವುಗಳ ವಿಷಯ ಆಲೋಚಿಸಿ ಬೇಗನೇ ಉತ್ತರ ಕಳುಹಿಸುತ್ತೇನೆ."

ಸ್ವತಂತ್ರರಾಗಲು ಪರರ ಬೆಂಬಲ ಬೇಡ

ನೆಹರು ಹೇಳಿಕೆ

"ಜರ್ಮನಿ ಜಪಾನಿಗಳು ಬ್ರಿಟಿಷರ ವಿರೋಧಿಯಾಗಿರುವುದರಿಂದ, ನಾವು ಅವುಗಳಿಗೆ ಸಹಾನುಭೂತಿ ತೋರಿಸಬೇಕೆಂದು ಕೆಲವು ಜನರು ಹೇಳುತ್ತಿರುವರು. ಆದರೆ ಹಾಗೆ ಭಾವಿಸುವುದು ಸರಿಯಲ್ಲ. ನಾನು ಜಪಾನೀ ಜರ್ಮನಿಗಳ ಅತ್ಯಾಚಾರವನ್ನು ಖಂಡಿಸುತ್ತೇನೆ. ಬ್ರಿಟಿಷ್ ಸಾಮ್ರಾಜ್ಯಶಾಹಿಯನ್ನು ವಿರೋಧಿಸುವಂತೆ ನಾವು ನಾಜಿಸಂ ಫೇಸಿಸಂಗಳನ್ನೂ ವಿರೋಧಿಸುತ್ತೇವೆ. ಸ್ವತಂತ್ರರಾಗಲು ಪರರ ಸಹಾಯ್ಯ ಬೇಡ" ಎಂದು ನೆಹರುಗಳು ಕಲ್ಕತ್ತೆಯಲ್ಲಿ ಮಾತನಾಡುತ್ತಾ ಹೇಳಿದರು.

ಹಿಂದುಸ್ತಾನದ ಮೇಲೆ ದಬ್ಬಾಳಿಕೆ ಮಾಡುವವರನ್ನು ಎದುರಿಸುವ

ನೆಹರು ಹೇಳಿದರು

"ನಾವು ಸಾಹಸಿಗಳಾಗಬೇಕು; ಚೀನೀ ಬಂಧುಗಳಿಂದ ಈ ಪಾಠ ಕಲಿಯಬೇಕು; ನಮ್ಮ ಮೇಲೆ ದಬ್ಬಾಳಿಕೆ ಮಾಡುವವರನ್ನು ಎದುರಿಸಬೇಕು. ನಮ್ಮ ಒಕ್ಕಟ್ಟನ್ನು ಉಳಿಸಿಕೊಳ್ಳಬೇಕು" ಎಂದು ನೆಹರು ಕಲ್ಕತ್ತದ ಭಾಷಣವೊಂದರಲ್ಲಿ ಹೇಳಿದರು.

ಅಸೆಂಬ್ಲಿ ಗುಪ್ತ ಸಭೆ

ಅಧಿಕಾರೇತರ ಬಹುಸಂಖ್ಯಾತ ಸದಸ್ಯರ ಇಚ್ಛೆಯ ಮೇರೆಗೆ ಯುದ್ಧಪರಿಸ್ಥಿತಿಯನ್ನು ಕುರಿತು ಚರ್ಚಿಸಲು ಕೇಂದ್ರ ಎಸೆಂಬ್ಲಿಯು ಗುಪ್ತ ಸಭೆಯೊಂದನ್ನು ಮಾಡುವರೆಂದು ಅಪೇಕ್ಷೆಯುಂಟಾಗಿದೆ.

THE VIJAYA BANK, LIMITED.

Head Office: MANGALORE.

BRANCHES:

KADRI-MANGALORE, HAMPANKATTA-MANGALORE, UDIPI, COONDAPUR, KARKAL, KAUP, & BRAHMAVAR.

SEASON DEPOSITS

are now accepted at all our Offices, at 4% per annum, for or more months, maturing on 31st July, 1942.

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

GONO KILLER ORIGINAL

ಡಾ| ಜಸಾನಿಯವರ

ಜಗತ್ಪ್ರಸಿದ್ಧವಾದ ಔಷಧಿ

ಗೊನೊಕಿಲರ್ (ರಿಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ್' ಎಂಬ ಸೀಲು ನೋಡಿರಿ.

ಮೂತ್ರರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು. ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನ್ನು ತೋರಿಸುತ್ತದೆ. ಸಾವಿರಾರು ರೋಗಿಗಳು ಇದರ ಗುಣವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿ ಇದನ್ನು ಹೊಗಳುತ್ತಿರುವರು. ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಇಲ್ಲ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ, ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರುಪು ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, ಗೊನೊ—ಕೊಕಸ' ಎಂಬ ವಿಷಹಾರಿ, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾಸದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ವಸು ನಾಶವಾಗುವುವು.

ಬೆಲೆ: 50 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 3-0-0 (ವಿ. ಪಿ. ಚಾರ್ಜು 8 ಆಣೆ ಬೇರೆ). ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ ವಿಠಲ್ ಭಾಯಿ ಪಟೇಲ್ ರೋಡ್, ಮುಂಬಯಿ.

Sole Manufacturer: **Dr. D. N. JASANI,** Vithalbhai Patel Road, BOMBAY 4

Madras Agent: **Appah & Co, China Bazar Madras.**

ಪತ್ರವ್ಯವಹಾರ ಇಂಗ್ಲೀಷ್ ಅಥವಾ ಮರಾಠಿಯಲ್ಲಿ.

“ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ”

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

27—2—1942] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೨೭—೨—೧೯೪೨]

ಸುವರ್ಣಭೂಮಿಯ ಸಂಚಾರ

ಸಿಂಗಾಪುರಕ್ಕೆ ಶತಮಾನಗಳಿಂದ ಇದ್ದ ಆ ಹೆಸರು ಹೋಗಿ ಈಗ 'ಶೋನಾನ್' ಎಂಬ ಹೊಸ ನಾಮಕರಣವಾಗಿದೆ. ಅಂದರೇನು? ಜಪಾನರು ಅಲ್ಲಿನ ಬ್ರಿಟಿಷರ ಅಧಿಕಾರವನ್ನು ಕಿತ್ತೊಗೆದು ತಮ್ಮ ಪ್ರಭುತ್ವವನ್ನು ಸ್ಥಾಪಿಸಿದರು. ಮಲಯದ ಗವರ್ನರರಾದ ಶೇಂಟನ್ ಥಾಮಸರು ಪತ್ನೀ ಸಮೇತ ಜಪಾನರ ಬಂಧನಕ್ಕೊಳಗಾದರು. ಹೀಗೆ ಸಿಂಗಾಪುರವು ಕೈವಶವಾದದ್ದೇ ತಡ, ಜಪಾನರು ಸುಮಾತ್ರಾಕ್ಕೆ ಹಾರಿದುವು. ಅಲ್ಲಿನ ಮಣ್ಣು ಎಣ್ಣೆಯ ಕೇಂದ್ರವಾದ ಪಲೆಂಬಾಂಗವನ್ನು ಸ್ವಾಧೀನ ಪಡಿಸಿದ್ದಾರೆ. ಜಾವಾ, ನ್ಯೂ ಗಿನಿಗಳ ಮೇಲೆ ವಿಮಾನ ಆಕ್ರಮಣಗಳು ಅಧಿಕಾಧಿಕವಾಗುತ್ತಿವೆ.

ಸಿಂಗಾಪುರದ ಪತನದಿಂದ ಬ್ರಿಟಿಷ್ ಸಾಮ್ರಾಜ್ಯಕ್ಕೆ ಬಂದೊದಗಿದ ಅಪಜಯಕ್ಕೆ, ಇಂಗ್ಲಿಷ್ ಕಡಲ್ಗಾಲುವೆಯಿಂದ ಜರ್ಮನ್ ನೌಕಾ ಸೈನ್ಯವು ಹಾದುಹೋದ ಸಂಭವವು ಸೇರಿ ಅಪಮಾನವನ್ನೇ ಉಂಟುಮಾಡಿತು! 'ಶಾರ್ನ್‌ಹಾರ್ಸ್ಟ್', 'ಗ್ನೈಸೆನಾವ್' ಮತ್ತು 'ಪ್ರಿನ್ಸ್ ಯೂಜೆನ್' ಎಂಬೀ ಮೂರು ಜರ್ಮನ್ ಪ್ರಬಲ ಯುದ್ಧ ನೌಕೆಗಳು ತಕ್ಕ ಸಹಾಯ ನೌಕೆಗಳೊಡನೆ, ಕಳೆದ ಒಂದು ವರ್ಷದಿಂದಿತ್ತ ಹೊರಕ್ಕೆ ತಲೆಹಾಕಲಾರದೆ ಬ್ರೆಸ್ಟ್ ಬಂದರಿನಲ್ಲಿ ಸಿಕ್ಕಿಬಿದ್ದಿದ್ದುವು. ಅವು ಈಗ ಅಲ್ಲಿಂದ ಬ್ರಿಟಿಷ್ ಕಡಲ್ಗಾಲುವೆ ಮೂಲಕ ತಪ್ಪಿಸಿಕೊಂಡು ಹಾದು ಹೋಗಿ ತಿರುಗಿ ಜರ್ಮನಿಯನ್ನು ಸೇರಿಕೊಂಡಿರುವುದರಿಂದ, ಇರುವ ಜರ್ಮನ್ ನೌಕಾ ಬಲವು ಮತ್ತಷ್ಟು ಬಲಯುತವಾದಂತಾಯಿತು. 600 ವಿಮಾನಗಳ ಸಹಾಯದಿಂದ ಹೋರಾಡಿದರೂ ಬ್ರಿಟಿಷರಿಗೆ ಈ ನೌಕಾ ಸೈನ್ಯವನ್ನು ಚದರಿಸಲು ಸಾಧ್ಯವಾಗಲಿಲ್ಲ. ಈ ನೌಕಾ ಸೈನ್ಯವು ತಪ್ಪಿಸಿಕೊಂಡು ಹೋಗಿರುವುದರಿಂದ, ಅಟ್ಲಾಂಟಿಕ್ ಸಾಗರದಲ್ಲಿ ಮಿತ್ರ ರಾಷ್ಟ್ರಗಳ ನೌಕಾ ಪ್ರಯಾಣಕ್ಕೆ ಹಾಗೂ ಉತ್ತರ ಸಾಗರದ ನೌಕಾ ಪ್ರಯಾಣಕ್ಕೆ ವಿಪತ್ತು ಹೆಚ್ಚಾಗಿದೆ. ಬ್ರಿಟಿಷರಿಗಿಂತ ಅಮೆರಿಕನರು ಇದರಿಂದ ಗಾಬರಿಗೊಂಡಿದ್ದಾರೆ. ಬ್ರಿಟಿಷರಿಗಾದರೂ ವಿಪತ್ತು ಕಡಿಮೆಯೆನ್ನುವಂತಿಲ್ಲ. ಎಲ್ಲದಕ್ಕಿಂತಲೂ, ಇದು ಬ್ರಿಟಿಷ್ ನೌಕಾ ಪ್ರತಿಷ್ಠೆಗೆ ದೊಡ್ಡದೊಂದು ಕಲಂಕಪ್ರಾಯವಾಗಿದೆ. ನೆಪೋಲಿಯನನ ಕಾಲದಿಂದ, ಬ್ರಿಟಿಷ್ ಕಡಲ್ಗಾಲುವೆಯನ್ನು ಹಾದುಹೋಗುವಷ್ಟು ಸಾಹಸದ ಕಾರ್ಯವನ್ನು ಯಾವ ಶತ್ರು ನೌಕಾ ಬಲವೂ ಮಾಡಿರಲಿಲ್ಲ!

ಸಿಂಗಾಪುರವು ಹೋದ ಮೇಲೆ ಈಸ್ಟ್ ಇಂಡೀಸ್ ದ್ವೀಪಗಳಲ್ಲಿರುವ ಜಾವಾ, ಆಸ್ಟ್ರೇಲಿಯಾ, ನ್ಯೂಜಿಲೇಂಡುಗಳಿಗೆ ಬಂದೊದಗಿದ ವಿಪತ್ತು ಅಪಾರವಾಗಿದೆ. ಅಮೆರಿಕದಿಂದ ಇವುಗಳ ರಕ್ಷಣೆಗೆ ಸಹಾಯ ಬರುತ್ತಿದೆಯೆಂದು ಹೇಳಲಾಗಿದೆ. ಇವುಗಳನ್ನಾದರೂ ಉಳಿಸಿಕೊಳ್ಳದಿದ್ದರೆ ಪೆಸಿಫಿಕ್ಕಿನಲ್ಲಿ ಮಿತ್ರರಾಷ್ಟ್ರದವರು ತಮ್ಮ ಪ್ರತಿಷ್ಠೆಯನ್ನು ಸ್ಥಾಪಿಸಲು ಸಾಧ್ಯವಿಲ್ಲ. ಆದ್ದರಿಂದ ಇವುಗಳಿಗಾದರೂ ಸಹಾಯ ಕಳುಹಿಸದಿದ್ದರೆ, ಆ ಮೇಲೆ, ಜಾವಾ, ಆಸ್ಟ್ರೇಲಿಯಾ, ನ್ಯೂಜಿಲೇಂಡುಗಳೂ ಜಪಾನರ ಕೈವಶವಾದರೆ, ಮಿತ್ರರಾಷ್ಟ್ರದವರು ಪೆಸಿಫಿಕ್ಕಿಗೆ ಕಾಲಿಡುವಂತಿಲ್ಲ! ಬ್ರಿಟನು ಪೂರ್ವದೇಶದಲ್ಲಿ ರಾಷ್ಟ್ರಗಳನ್ನು ಕಳಕೊಳ್ಳುವ ವಿಚಾರ ಇಂಗ್ಲೆಂಡಿನಲ್ಲಿ ಸಾರ್ವಜನಿಕಾಭಿಪ್ರಾಯವು ಉಗ್ರವಾಗಿದೆ. ಇಂಗ್ಲೆಂಡಿನ ರಕ್ಷಣೆ ಮಾತ್ರ ನೋಡಿಕೊಂಡು, ಬೇರೆ ಕಡೆಗೆ ಸಾಧನ ಸಾಮಗ್ರಿಗಳ ಸರಬರಾಯಿ ಮಾಡದಿರುವುದರಿಂದ ಹೀಗಾಯಿತೆಂದು ಬ್ರಿಟಿಷ್ ಪತ್ರಿಕೆಗಳು ಪ್ರಬಲ ಟೀಕೆ ಮಾಡಿವೆ. ಆಸ್ಟ್ರೇಲಿಯದಲ್ಲಿ ಜಪಾನನ್ನು ಎದುರಿಸಲು ಬಹಳ ಸಿದ್ಧತೆ ನಡೆಯುತ್ತದೆ. ಆದರೆ ಅಲ್ಲಿನ ಸಿದ್ಧತೆಗಳು ಎಷ್ಟರಮಟ್ಟಿಗೆ ಸಾಕಾಗುವವೆಂದು ನೋಡಬೇಕಾಗಿದೆ. ಏಕೆಂದರೆ ಅಲ್ಲಿನ ರಕ್ಷಣಾ ಮಂತ್ರಿಗಳನ್ನೇ ಕೇಳಿದರೆ, ಆಸ್ಟ್ರೇಲಿಯವು ಡಂಕರ್ಕ್ ಸಂರಕ್ಷಣೆಗಾಗಿ ಬಂದೂಕುಗಳನ್ನೆಲ್ಲಾ ಕೊಟ್ಟದ್ದು ಇಂದು ಬಹಳ ನಿಸ್ಸಹಾಯಕವಾಗಿದೆಯೆಂದು ತಿಳಿದು ಬರುತ್ತದೆ. ಜಪಾನಂತೂ ಆಸ್ಟ್ರೇಲಿಯದ ಸುತ್ತುಮುತ್ತಲೂ ಈಗ ಆಕ್ರಮಣ ಸಿದ್ಧತೆ ಕೈಕೊಂಡಿದೆ.

ಸಿಂಗಾಪುರದ ಪತನದ ಬಳಿಕ ಜಪಾನರು ಬರ್ಮಾದ ಮೇಲೆ ಅತ್ಯುಗ್ರ ಆಕ್ರಮಣ ಮಾಡಿದರು. ಜಪಾನರು ಚೀನಾ ಬರ್ಮಾ ರಸ್ತೆಯ ಉದ್ದಕ್ಕೂ ಹರಿಯುವ ಸಾಲ್ವೀನ್ ನದಿಯನ್ನು ದಾಟಿ ಮುಂದಕ್ಕೆ ನುಗ್ಗಿದ್ದಾರೆ. ಪರಿಸ್ಥಿತಿಯು ತೀರಾ ವಿಷಮವಾಗಿರುತ್ತದೆ. ಬ್ರಿಟಿಷರ ಸಹಾಯಕ್ಕೆ ಚೀನದವರೂ ಬಂದಿರುವರು. ಭಾರತೀಯ ಸೈನಿಕರಂತೂ ಅನುಪಮ ಸಾಹಸದಿಂದ ಹೋರಾಡುತ್ತಾರೆ. ಜಪಾನರಾದರೂ 20 ಸಾವಿರ ಸೈನ್ಯವನ್ನು ಥಾಯಿಲೇಂಡಿನ ಗಡಿ ಕಡೆಗೆ ತಂದಿರುವರೆಂದು ಸುದ್ದಿ. ಸಿಂಗಾಪುರದ ಮಲಯದಿಂದ ಹೆಚ್ಚಿನ ಸೈನ್ಯಗಳನ್ನೂ ಇಲ್ಲಿಗೆ ತರಲಾಗಿದೆ. ಬರ್ಮಾ ಹೋದರೆ ಚೀನಕ್ಕೆ ಬಹಳ ಗಂಡಾಂತರವಾದಂತೆಯೇ, ಮಿತ್ರರಾಷ್ಟ್ರಗಳಿಂದ ಚೀನಕ್ಕೆ ಕಳುಹಿಸುವ ಸಾಧನ ಸಾಮಗ್ರಿಗಳ ಪ್ರಧಾನ ಮಾರ್ಗವಿರುವುದು ಬರ್ಮಾದ ಮೂಲಕ. ಹಾಗಾಗಿ ಚೀನೀಯರು ಬರ್ಮಾದ ರಕ್ಷಣೆಯಲ್ಲಿ ಅಷ್ಟೊಂದು ಆಸಕ್ತಿ ವಹಿಸಿದ್ದಾರೆ. ಚೀನಕ್ಕೆ ಮಿತ್ರರಾಷ್ಟ್ರಗಳು ಬರ್ಮಾ ರಸ್ತೆಯ ಮೂಲಕ ಕಳುಹಿಸುವ ಸಹಾಯವನ್ನು ತಡೆಯುವುದು ಜಪಾನಿನ ಬರ್ಮಾ ಆಕ್ರಮಣದ ಒಂದು ಪ್ರಧಾನ ಉದ್ದೇಶವಾಗಿದೆ.

ಹೀಗೆ ಇಂದು ಶತ್ರು ಚಟುವಟಿಕೆಯು ಬಂಗಾಲಾ ಕೊಲ್ಲಿಗೂ ಚಾಚಿದೆ. ದಕ್ಷಿಣ ಹಿಂದೂಸ್ಥಾನದ ಪೂರ್ವ ತೀರದ ಪ್ರದೇಶಗಳಿಗೂ ಸಿಲೋನಿಗೂ ವಿಪತ್ತು ಹೆಚ್ಚು ಸಮೀಪಿಸುತ್ತಾಗಿದೆ. ಸಿಲೋನಿನಿಂದ ಹೆಂಗುಸರು ಮಕ್ಕಳನ್ನು ಸಾಗಿಸುವ ಕೆಲಸವು ಮಾರ್ಚ್ ತಿಂಗಳಿಂದ ಆರಂಭವಾಗುವುದು. ಮಲಯ ಯುದ್ಧವು ಮುಗಿದು, ಬರ್ಮಾವು ವಿಷಮತೆಯಲ್ಲಿರುವುದರಿಂದ ಭಾರತಕ್ಕೆ ಜಪಾನರು ವಿಮಾನ ಆಕ್ರಮಣವನ್ನು ಮಾಡಬಹುದೆಂಬುದೂ ಧೃಢವಾಗುತ್ತಾ ಹೋಗಿದೆ. ಮುಂದಿನ ಕೆಲ ತಿಂಗಳುಗಳು ಭಾರತೀಯರಿಗೆ ಬಹಳ ಸಂಕಷ್ಟಕಾಲವಾಗಿದ್ದು ಕಷ್ಟವಾಗುವಂತಾಗಿದೆ. ಬಂಗಾಳಕೊಲ್ಲಿಯೂ ಹಿಂದೂಸಾಗರವೂ ಈಗ ಶತ್ರು ನೌಕಾ ಸಂಚಾರಕ್ಕೆ ಸಿಲುಕಿದಂತಾಗಿದೆ. ಈಗಾಗಲೇ ಜಪಾನರು ಬಂಗಾಳಕೊಲ್ಲಿಯ ಮೂಲಕ ಬರ್ಮಾಕ್ಕೆ ಸೈನ್ಯ ಸರಬರಾಯಿ ಮಾಡಲು ಪ್ರಾರಂಭಿಸಿರುವರೆಂದು ಹೇಳಲಾಗಿದೆ. ಹೀಗೂ ವಿಜಯದಿಂದ ಕೊಬ್ಬಿದ ಜಪಾನರು ಹಿಂದೂಸ್ಥಾನದ ಮೇಲೆ ಆಕ್ರಮಣ ಮಾಡಲಿಕ್ಕಿಲ್ಲವೆಂದೇನೂ ಹೇಳಬರುವಂತಿಲ್ಲ. ಒಂದು ವೇಳೆ ಆಕ್ರಮಣ ಮಾಡಿದರೆ ನಮ್ಮ ಗತಿಯೇನು ಎಂದು ಜನರು ಅಂಜುತ್ತಿದ್ದಾರೆ. ಅಂಜುವಂತೆಯೆ ಜನರು ಅನೇಕ ಕಾಲಿಸಿದ್ದವರು 'ಪಟ್ಟಣಗಳನ್ನು ಬಿಟ್ಟುಹೋಗಬಹುದು' ಎಂದು ಮದ್ರಾಸು ಸರಕಾರ ಸೂಚಿಸಿದ ಪಟ್ಟಣಗಳ ಜನರಿಗೆ ಸರಕಾರದವರೇ ಆಜ್ಞೆಯಿತ್ತಿದ್ದಾರೆ. ಆದರೆ ಇಂತಹ ಸಂದರ್ಭದಲ್ಲಿ ಜನರು ಗಾಬರಿಗೊಳ್ಳಬಾರದು ಎಂದು, ಕಾಂಗ್ರೆಸ್ ಮುಖಂಡರೆಲ್ಲರೂ ಧೈರ್ಯ ಹೇಳುತ್ತಿದ್ದಾರೆ. ಜಪಾನರು ಆಕ್ರಮಿಸಿದರೆ ನಮ್ಮ ಪರಿಸ್ಥಿತಿ ಏನಾಗುವುದಾದರೂ ಅದಕ್ಕಾಗಿ ಕೈಚೆಲ್ಲಿ ಬಿಟ್ಟು ಮಾಡುವುದೇನೆಂದು ವಿಚಾರವಂತರಾದವರು ತಿಳಿಯದಿರಲಾರರು.

ಸಾಮ್ರಾಜ್ಯ ಶಾಹೀ ಧೋರಣೆಯನ್ನು ಬ್ರಿಟಿಷ್ ಪ್ರಭುತ್ವವು ಬಿಡದ ವಿನಾ ಅದಕ್ಕೆ ವಿಜಯ ದೊರಕಿಸಿಕೊಳ್ಳಲು ಕಷ್ಟವಾಗುವುದೆಂದು ಹಿಂದಿನಿಂದಲೇ ಅನೇಕರು ಎಚ್ಚರಿಕೆಯಿತ್ತಿದ್ದಾರೆ. ಹಾಂಕಾಂಗ್, ಫಿಲಿಪೈನ್ಸ್, ಡಚ್ ಈಸ್ಟ್ ಇಂಡೀಸ್‌ಗಳು ಇಂದು ಜಪಾನರಿಗೆ ಅಷ್ಟೊಂದು ಸುಲಭದಿಂದ ಕೈವಶವಾದದ್ದು ನೋಡಿದರೆ, ಗೋಚರಿಸುವುದು ಪರದಾಸ್ಯದಲ್ಲಿರುವ ರಾಷ್ಟ್ರಗಳನ್ನು ಶತ್ರುಗಳು ಹೀಗೆ ಲೀಲಾಜಾಲವಾಗಿ ಕೈವಶ ಮಾಡಿಕೊಂಡರೆಂದು. ಅಂತೆಯೇ ಚೀನಾ ದೇಶದ ಹೋರಾಟವನ್ನು ಕ್ರಮವರಿತು ತಿಳಿಯುವುದು ಸ್ವಾತಂತ್ರ್ಯಕ್ಕಾಗಿ ಜನರು ಎಂತಹ ಬಲಿದಾನ ಮಾಡುತ್ತಿರುವರೆಂದು. ಇಷ್ಟು ಗೊತ್ತಿದ್ದರೂ ಬ್ರಿಟಿಷರು ಭಾರತದ ಬಾಗಿಲಿಗೆ ಇಂದು ಶತ್ರುಗಳು ಬಂದಿದ್ದಾಗಲೂ ತಮ್ಮ ಧೋರಣೆಯನ್ನು ಬದಲಾಯಿಸುವಂತೆ ಕಂಡುಬರುವುದಿಲ್ಲ. ಬರ್ಮಾದ ಇಂದಿನ ವಿಷಮ ಪರಿಸ್ಥಿತಿಯನ್ನು ಕೇಳುವಾಗ ನಮಗೆ ಯೂ. ಸಾರವರ ಬಂಧನದ ನೆನಪಾಗುತ್ತದೆ. ನಮ್ಮ ದೇಶದ ಸ್ವಾತಂತ್ರ್ಯವನ್ನು ನಮಗೆ ಕೊಡಿರಿ ಎಂದು ಕೇಳಲು ಹೋದ ಯೂ ಸಾರನ್ನು ನಿರಾಕರಿಸಿದ್ದು ಮಾತ್ರವಲ್ಲ, ಅಮೆರಿಕದಲ್ಲಿ ಬಂಧಿಸಿಯೂ ಬ್ರಿಟಿಷರು ಎಂತಹ ಪ್ರಮಾದ ಮಾಡಿದರೆಂದು ಈಗ ಗೊತ್ತಾಗದಿದ್ದು. ಬರ್ಮಾದ ರಕ್ಷಣೆಯನ್ನು ಬರ್ಮೀಯರಿಗೇ ಒಪ್ಪಿಸಿದ್ದರೆ ಅವರು ಅದರ ಸಲುವಾಗಿ ನೂರ್ಮಡಿ ಶಕ್ತಿಯಿಂದ ಹೋರಾಡುತ್ತಿದ್ದರು. ತನ್ನ ಮನೆಯನ್ನು ತಾನು ರಕ್ಷಿಸುವಂತೆ ಬೇರೆಯವನು ರಕ್ಷಿಸಲಾರನು. ಹಿಂದುಸ್ಥಾನದ ವಿಚಾರದಲ್ಲಿಯೂ ಅದೇ ಪ್ರಮಾದವು ಪುನರಾವೃತ್ತಿಯಾಗದಂತೆ ಮಾಡಲು ಬ್ರಿಟಿಷರು ಈಗಲಾದರೂ ಭಾರತೀಯರಿಗೆ ಭಾರತದ ಸಂಪೂರ್ಣ ಸಂರಕ್ಷಣೆಯ ಭಾರವನ್ನು—ದೇಶದ ಸ್ವಾತಂತ್ರ್ಯವನ್ನು—ಕೊಡುವರೋ ನೋಡಬೇಕು.

ದಿನಂಪ್ರತಿ ಪೆಪ್ಸು ತೆಗೆದುಕೊಂಡು ಕಂಠಬೇನೆಯನ್ನು ಗುಣಪಡಿಸಿರಿ.

ನೀವು ಕಂಠವು ಬೇನೆಗೊಂಡಿದ್ದರೆ ನೋವಾಗುತ್ತಿದ್ದರೆ, ಎಲ್ಲಿಯಾದರೂ ಬಾತುಹೋಗಿದ್ದರೆ ಖಂಡಿತವಾಗಿ ಪೆಪ್ಸು ಉಪಯೋಗಿಸಿರಿ. ಏಕೆಂದರೆ ಪೆಪ್ಸು ಶ್ವಾಸಯೋಗ್ಯ ವಿಷಹಾರಿ ಮಾತ್ರೆಗಳು ಇಂತಹ ಬೇನೆಗಳನ್ನು ಕಂಠನಾಳದ ನೋವನ್ನು ಖಂಡಿತ ಗುಣಪಡಿಸುವುದು. ಪೆಪ್ಸು ಮಾತ್ರೆಗಳನ್ನು ಬಾಯಿಗೆ ಹಾಕಿದ ಕೂಡಲೇ ಕರಗಿ, ಒಳ್ಳೆಯ ಶ್ವಾಸಯೋಗ್ಯ ರಸವನ್ನು ಅದು ಹೊರಡಿಸಿ, ಅದು ಶ್ವಾಸಕೋಶಕ್ಕೆ ಹೋಗಿ ಅಂಟಿಕೊಳ್ಳುತ್ತದೆ. ಆದರಿಂದ ಕಂಠನಾಳದ ಸಕಲ ರೋಗಗಳೂ ಗುಣವಾಗುವವು. ವಿಷಕಾರೀ ಕ್ರಿಮಿಗಳು ನಾಶವಾಗುವುವು. ಪೆಪ್ಸು ತಕ್ಕೊಳ್ಳಲು ಒಳ್ಳೆಯದು. ಹೆಚ್ಚುಕಾಲ ಬಾಳಿಕೆಯುಳ್ಳದ್ದು ಆಗಿದೆ. ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ಪೆಪ್ಸು ಒಂದು ರೂಪಾಯಿ ಬೆಲೆಗೆ ದೊರಕುತ್ತದೆ.

ಏಜಂಟ್ಸ್:

ಮೆಸರ್ಸ್ ದಾಧಾ ಎಂಡ್ ಕೊ.,
ಪಾರ್ಕ್ ಟೌನ್ ಮದರಾಸು.

ಪೆಪ್ಸನ್ನು ಕೊಂಡುಕೊಳ್ಳಿರಿ.

PEPS

ವಿಷಹಾರಿ ಶ್ವಾಸನೀಯ ಗುಳಿಗೆಗಳು

ಸ್ವದೇಶಾಭಿಮಾನಿ

ತಾರೀಕು 27—2—1942

'ಮೊಗಲ್ ದರ್ಬಾರ್' ಮುಗಿಯಲಿ!

ಮಂದಪಕ್ಷದ ಮುಖಂಡರಾದ ಸರ್ ತೇಜಬಹದ್ದೂರ್ ಸಪ್ರುಗಳು ಇತ್ತೀಚೆಗೆ ಉಗ್ರವಾದಿಗಳಂತೆ ಮಾತನಾಡುತಿದ್ದಾರೆ. ಮೊನ್ನೆ ಡಿಲ್ಲಿಯಲ್ಲಿ ಸೇರಿದ ಪಕ್ಷಾತೀತ ಪರಿಷತ್ತಿನ ಸಂದರ್ಭದಲ್ಲಿ ಅವರು ಮಾಡಿದ ಭಾಷಣವು ಭಾರತದ ಉಗ್ರಗಾಮಿ ಮುಖಂಡರ ಮಾತುಗಳನ್ನೂ ಮೀರಿರುತ್ತದೆ. ತನ್ನ ರಾಜಕೀಯ ಜೀವನದ ಪ್ರಾರಂಭ ಕಾಲದಿಂದಲೇ ಬ್ರಿಟಿಷ್ ಪ್ರಭುತ್ವದೊಡನೆ ಬೇಡಿ ಬೇಡಿ, ಸಂಧಾನ ಮಾಡಿ ಬೇಸತ್ತ ಇವರು ಇಂದು 'ಮೊಗಲ್ ಚಕ್ರವರ್ತಿಯ ದರ್ಬಾರ್ ಇನ್ನು ಸಾಕು; ಭಾರತದ ರಕ್ಷಣೆಯನ್ನು ಭಾರತೀಯರಿಗೇ ಒಪ್ಪಿಸಿರಿ' ಎಂದು ಬ್ರಿಟಿಷ್ ಸರಕಾರಕ್ಕೆ ಎಚ್ಚರಿಕೆಯ ಮಾತನ್ನು ಹೇಳಿದ್ದಾರೆ.

ಲಂಡನಿನಲ್ಲಿ ಕುಳಿತುಕೊಂಡು ಅಮೆರಿ ಹಿಂದುಸ್ಥಾನವನ್ನು ಆಳುವ ರಾಜನೀತಿ ಸಲ್ಲದು ಎಂದು ಸಪ್ರುಗಳ ಅಭಿಪ್ರಾಯ. ಸಪ್ರುಗಳು ಇಂದು ಹೀಗೆ ನಿರ್ಧಾರವಾಗಿ, ಉಗ್ರವಾಗಿ ಹೇಳಿದ ಮಾತನ್ನು ಇತರ ಕಾಂಗ್ರೆಸ್ ಮೊದಲಾದ ರಾಜಕೀಯ ಪಕ್ಷದವರು ಬಹಳ ಹಿಂದೆಯೇ ಸಾರಿರುತ್ತಾರೆ. ಅದರಲ್ಲೂ ಅಮೆರಿಯ ಕಾರಭಾರವು ಚರ್ಚಿಲರೊಬ್ಬರನ್ನುಳಿದು ಸಕಲರಿಗೂ ಸಾಕಾಗಿಹೋಗಿದೆ. 'ಅಮೆರಿಯನ್ನು ಹೊರಹಾಕಿರಿ' ಎಂದು ಹಿಂದುಸ್ಥಾನದ ಪ್ರಜೆಗಳು ಹೇಳುತ್ತಿದ್ದುದರೊಡನೆ ಇಂದು ಬ್ರಿಟಿಷ್ ಜನತೆಯೂ ದನಿಗೂಡಿಸಿರುವುದು. ಜನಾಭಿಪ್ರಾಯವನ್ನು ಅರಿತುಕೊಳ್ಳುವಷ್ಟು ಸೂಕ್ಷ್ಮಬುದ್ಧಿಯಿದ್ದರೆ ಸ್ವತಃ ಅಮೆರಿಯವರೇ ತನ್ನ ಪದವಿಗೆ ರಾಜಿನಾಮೆ ಕೊಡುತ್ತಿದ್ದರು. ಚರ್ಚಿಲರಾದರೂ ಅವರನ್ನು ಹೊರಗಟ್ಟುತ್ತಿದ್ದರು. ಸರ್ ಸಪ್ರುಗಳಂತಹ ಮಂದಪಕ್ಷದ ಮುಖಂಡರೂ ಇಂದು ಹೀಗೆ ಹೇಳಿದ ಬಳಿಕವಾದರೂ ಚರ್ಚಿಲರು ಈ ಕುರಿತು ಕಿವಿಗೊಡುವುದಿಲ್ಲವಾದರೆ ಇದು ಕೇವಲ ಪ್ರಮಾದಕಾರಿಯಾದ ಪ್ರತಿಗಾಮಿ ಧೋರಣೆಯೆನ್ನದೆ ಬೇರೆ ನಿರ್ವಾಹವಿಲ್ಲ.

ಚಿಯಾಂಗ್ ಕೈಶೇಕರು ಸ್ವದೇಶಕ್ಕೆ ಮರಳುವ ಸಂದರ್ಭದಲ್ಲಿ ಭಾರತೀಯರಿಗಿತ್ತ ಸಂದೇಶದಲ್ಲಿ ಬ್ರಿಟಿಷ್ ಜನತೆಗೆ ಎಚ್ಚರಿಕೆಯ ಮಾತೊಂದನ್ನು ಹೇಳಿದ್ದಾರೆ. ಭಾರತೀಯರಿಗೆ ಸಂಪೂರ್ಣ ಅಧಿಕಾರವನ್ನು ಬಿಟ್ಟುಕೊಡಬೇಕೆಂದು ಬ್ರಿಟಿಷರಿಗುಪದೇಶಿಸಿದ್ದಾರೆ. ಯುದ್ಧವು ಇಂದು ಭಾರತದ ಬಾಗಿಲಿಗೆ ಬಂದಿರುವಾಗ, ಇಂದಾದರೂ ಭಾರತೀಯರ ಕೈಯ್ಯಲ್ಲಿ ಅವರ ರಕ್ಷಣೆಯನ್ನೊಪ್ಪಿಸದೆ ಇದ್ದರೆ ಎಂತಹ ಪ್ರಮಾದವಾದೀತೆಂದು ಬ್ರಿಟಿಷ್ ಸರಕಾರಕ್ಕೆ ಎಲ್ಲೆಡೆಗಳಿಂದಲೂ ಹಿತಸೂಚನೆಗಳು ಬರುತ್ತಿವೆ. ಇತ್ತೀಚೆಗೆ ಭಾರತ ಮಂತ್ರಿಯ ಕಚೇರಿ ತೆಗೆದುಹಾಕಲಾಗುವುದೆಂಬ ಸುದ್ದಿಯೊಂದು ಕೇಳಿಬರುತ್ತದೆ. ಆದರೆ ಇದರ ಅರ್ಥವೇನೆಂದು ಇನ್ನೂ ಅಧಿಕೃತವಾಗಿ ನಮಗೆ ತಿಳಿದಿಲ್ಲ. ಬ್ರಿಟಿಷ್ ಪ್ರಭುತ್ವವು ಭಾರತದ ರಾಜಕೀಯದ ವಿಷಯ ಈಗಲಾದರೂ ಧೋರಣೆ ಬದಲು ಮಾಡುವುದೇ, ಇಂದಾದರೂ ಚರ್ಚಿಲ್ಲರು 'ಮೊಗಲ್ ದರ್ಬಾರ'ನ್ನು ಕೊನೆಗಾಣಿಸಿ ಭಾರತೀಯರಿಗೆ ಭಾರತದ ಅಧಿಕಾರವಿತ್ತು ಅವರನ್ನು ತೃಪ್ತಿಗೊಳಿಸುವರೇ ಎಂಬುದು ನೋಡಬೇಕಾಗಿದೆ.

ಬ್ರಿಟಿಷ್ ಮಂತ್ರಿಮಂಡಳದಲ್ಲಿ

ಈ ವಾರ ಬ್ರಿಟಿಷ್ ಮಂತ್ರಿ ಮಂಡಳದಲ್ಲಿ ಮಹತ್ವದ್ದಲ್ಲದಿದ್ದರೂ ಕೆಲವು ಬದಲಾವಣೆಗಳು ಆಗಿವೆ. ಸರ್ ಸ್ಟಾಫೋರ್ಡ್ ಕ್ರಿಪ್ಸರಂತಹ ಹಿಂದುಸ್ಥಾನದ ಹಿತವಾದಿಗಳನ್ನೂ ಮಂತ್ರಿ ಮಂಡಳಕ್ಕೆ ಸೇರಿಸಿಕೊಂಡಿರುವುದರಿಂದ ಕೆಲವು ಕಡೆಗಳಲ್ಲಿ ಹೆಚ್ಚಿನ ಕುತೂಹಲವುಂಟಾಗಿದೆ. ಚರ್ಚಿಲರು ಯುದ್ಧ ಮಂತ್ರಿ ಮಂಡಳದಲ್ಲಿ ಹೀಗೆ ಬದಲಾವಣೆ ಮಾಡಲು ಇತ್ತೀಚೆಗೆ ಬ್ರಿಟನಿನಲ್ಲಿ ತಲೆಯೆತ್ತಿದ ಚಳವಳವೇ ಕಾರಣವೆನಬೇಕಾಗಿದೆ.

ಚರ್ಚಿಲರು ಒಬ್ಬರೇ ಮುಖ್ಯ ಮಂತ್ರಿಗಳೂ ಸಂರಕ್ಷಕ ಮಂತ್ರಿಗಳೂ ಆಗಿರುವುದು ನ್ಯಾಯವಾಗಿಲ್ಲವೆಂದು ಈಚೆಗೆ ಟೀಕೆಗಳುಂಟಾಗಿದ್ದವು. ಬಿವರ್ ಬ್ರೂಕರಂತಹವರ ಆಡಳಿತವು ಚನ್ನಾಗಿಲ್ಲವೆಂದೂ ಅವರನ್ನು ಅಧಿಕಾರದಿಂದ ತೆಗೆದುಹಾಕಬೇಕೆಂದು ಜೋರಾಗಿ ಟೀಕೆ ಮಾಡಲಾಗಿತ್ತು. ಭಾರತ ಮಂತ್ರಿ ಅಮೆರಿಯವರನ್ನು ಪದಚ್ಯುತರನ್ನಾಗಿ ಮಾಡಿ, ಭಾರತದ ಕುರಿತು ಬ್ರಿಟಿಷ್ ಪ್ರಭುತ್ವದ ಧೋರಣೆ ಬದಲು ಮಾಡಬೇಕೆಂದು ಹಿತೋಕ್ತಿ ಹೇಳಲಾಗಿತ್ತು. ಅಂತೂ ಈಗ ಬ್ರಿಟಿಷ್ ಮಂತ್ರಿ ಮಂಡಳದಲ್ಲಿ ಕೆಲವು ಬದಲಾವಣೆಗಳಾದುವು.

ಪ್ರಸಿದ್ಧ ಸಮತಾವಾದಿಗಳೂ, ರಶ್ಯದ ರಾಯಭಾರಿಗಳೂ, ಹಿಂದೂಸ್ಥಾನದ ಹಿತವನ್ನು ಹಾರೈಸುವವರೂ ಆದ ಸರ್ ಸ್ಟಾಫೋರ್ಡ್ ಕ್ರಿಪ್ಸರು ಈಗಿನ ಯುದ್ಧ ಮಂತ್ರಿಮಂಡಳದಲ್ಲಿ ಹೊಸದಾಗಿ ಸೇರಿಸಲ್ಪಟ್ಟಿದ್ದಾರೆ. ಅವರು ಅಧಿಕಾರ ವಹಿಸಬೇಕಾದರೆ, ಭಾರತದ ವಿಷಯ ಬ್ರಿಟಿಷ್ ಧೋರಣದ ಬದಲಾವಣೆಗಾಗಿ ಶರತ್ತುಗಳನ್ನು ಹಾಕಿರಬಹುದೆಂದು ಊಹಿಸಲಾಗಿದೆ. ಆ ಶರತ್ತುಗಳೇನೋ ತಿಳಿದಿಲ್ಲ. ಇತ್ತೀಚೆಗೆ 'ಇಂಡಿಯಾ ಆಫೀಸ'ನ್ನು ತೆಗೆದುಹಾಕಿ 'ವೈಸರಾಯರಿಗೆ ಹೋಮ್‌ರೂಲ್' ಕೊಡುವ ವಿಚಾರವಾಗಿ ಒಂದು ವದಂತಿ ಬಂದಿದೆ. ಇದರಿಂದೆಲ್ಲಾ ಎಷ್ಟರಮಟ್ಟಿಗೆ ಭಾರತದ ಹಿತವನ್ನು ನಿಜವಾಗಿ ಸಾಧಿಸಿದಂತೆ ಆಗುವುದು ಎಂಬುದು ಮುಂದಿನ ಕಾರ್ಯಕ್ರಮಗಳಿಂದ ನೋಡಬೇಕಾಗಿದೆ.

ಬಿವರ್ ಬ್ರೂಕರನ್ನು, ಕಿಂಗ್ಸ್ಲೆ ವುಡ್ಡರನ್ನು ಮತ್ತು ಆರ್ಥರ್ ಗ್ರೀನ್ ವುಡ್ಡರನ್ನು ಮನೆಗೆ ಕಳುಹಿಸಲಾಗಿದೆ. ಅಟ್ಲೆಯವರಿಗೆ ಉಪಮುಖ್ಯ ಮಂತ್ರಿ ಪದವಿ ಕೊಡಲಾಗಿದೆ. ಚರ್ಚಿಲರು ಮುಖ್ಯ ಮಂತ್ರಿತ್ವ ಹಾಗೂ ಸಂರಕ್ಷಕ ಮಂತ್ರಿತ್ವ ಇವೆರಡನ್ನೂ ತಾವೇ ಇಟ್ಟುಕೊಂಡಿದ್ದಾರೆ. ಅಂತೂ ಈಗ ಆದ ಬದಲಾವಣೆಯಿಂದ ಜನಾಭಿಪ್ರಾಯಕ್ಕೆ ತುಸುವಾದರೂ ಸರಕಾರವು ಮನ್ನಣೆ ಕೊಡುತ್ತದೆಯೆಂದು ತಿಳಿದು ಬ್ರಿಟಿಷ್ ಜನತೆ ಸ್ವಲ್ಪ ಸಮಾಧಾನಪಟ್ಟಂತೆ ತೋರುತ್ತದೆ. ಆದರೆ ಅಮೆರಿ ಹೋಗದೆ, ಭಾರತದ ಕುರಿತು ಬ್ರಿಟಿಷ್ ಧೋರಣೆ ಬದಲಾಗದೆ ಭಾರತದ ಜನಮತವು ತೃಪ್ತಿಯಾಗುವಂತೆ ಕಾಣುವುದಿಲ್ಲ.



ನೋಟಗಳು....

ಚಿಯಾಂಗ್ ಕೈಶೇಕರು, ಭಾರತ ಪ್ರವಾಸ ಮುಗಿಸಿ, ಸ್ವದೇಶಕ್ಕೆ ಮರಳುವ ಸಂದರ್ಭದಲ್ಲಿ ಒಂದು ಸ್ಫೂರ್ತಿದಾಯಕ ಸಂದೇಶವಿತ್ತರು! ಭಾರತವನ್ನು ಸ್ವತಂತ್ರ ಮಾಡಿರಿ ಎಂದು ಅವರು ಬ್ರಿಟಿಷರಿಗೆ ಉಪದೇಶವಿತ್ತರು!

卐

ಚಿಯಾಂಗ್‌ರಿತ್ತ ಸಂದೇಶದ ಕುರಿತು ದೇಶ ಸರ್ವತ್ರ ತೃಪ್ತಿಯುಂಟಾಗಿದೆ! ಆದರೆ ಅವರು ತನ್ನ 'ಪಾಕಿಸ್ಥಾನ'ದ ವಿಷಯವಾಗಿ ಏನೂ ಹೇಳಲಿಲ್ಲವಲ್ಲಾ ಎಂದು ಜಿನ್ನರು ತುಂಬಾ ಕಳವಳಗೊಂಡಿದ್ದಾರೆ!

卐

'ಪಾಕಿಸ್ಥಾನ'ವನ್ನು ಚಿಯಾಂಗರು ಕೊಂಡಾಡದೆ ಇದ್ದ ಕಾರಣವೇ ಇರಬೇಕು, ಅವರಿಗೆ ಭಾರತದ ರಾಜಕೀಯ ವಿಚಾರ ಏನೂ ಗೊತ್ತಿಲ್ಲವೆಂದೂ ಜಿನ್ನರು ಅಭಿಪ್ರಾಯ ಪಡುತ್ತಾರೆ!

卐

'ಪಾಕಿಸ್ಥಾನ'ದ ಕುರಿತು ಚಿಯಾಂಗರು ಮಾತನಾಡದಂತೆ, ಅವರನ್ನು ಮುತ್ತಿಕೊಂಡಿದ್ದ ಜನರೇ (ನೆಹರು ಮೊದಲಾದ ಧುರೀಣರು) ಮಾಡಿರಬೇಕೆಂದೂ ಜಿನ್ನರು ದೂರತೊಡಗಿದ್ದಾರೆ.

卐

ಅಂತೂ ಜಿನ್ನರು ಈಗ ವಿಕಾರವಶರಾಗಿದ್ದಾರೆ.

卐

ಕೈಶೇಕರನ್ನು ಭೇಟಿಯಾಗಲು ಜಿನ್ನರೂ ಹೋಗಿದ್ದರು. ಅವರ ಮುಂದೆಯೂ, ತನ್ನ ಸಹಜ ಸ್ವಭಾವದಂತೆ ಜಿನ್ನರು ತಮ್ಮ 'ಪಾಕಿಸ್ಥಾನ'ದ ಗಂಟು ಬಿಚ್ಚಿರಬೇಕು. 'ನನಗೆ ಅಂತಹ ವಿಷಯಗಳೇನೂ ತಿಳಿಯದು; ಆ ಕುರಿತು ಬರೆದ ಸಾಹಿತ್ಯಗಳೇನಾದರೂ ಇದ್ದರೆ ನನಗೆ ಕಳುಹಿಸಿ. ನಾನು ಅವುಗಳನ್ನು ಓದಿ ತಿಳಕೊಳ್ಳುವೆನು' ಹೀಗೆಂದು ಕೈಶೇಕರು ಜಿನ್ನರಿಗೆ ಹೇಳಿದ್ದರಾಗಿ ಪ್ರಕಟವಾಗಿತ್ತು.

卐

"ಪಾಕಿಸ್ಥಾನದಂತಹ ಅಸಂಬದ್ಧ ವಿಚಾರಗಳಲ್ಲಿ ಹೊತ್ತು ಕಳೆಯಲು ನನಗೆ 'ಪುರುಸೊತ್ತಿಲ್ಲ'. ಬೇಕಾದರೆ, ನೀವು ಅದರ ಸಾಹಿತ್ಯಗಳೇನಾದರು ಇದ್ದರೆ ಕಳುಹಿಸಿ; ಸಮಯವಿದ್ದರೆ ನಾನು ಮುಂದೆ ಅವುಗಳನ್ನು ಓದಿನೋಡಿ ಅರ್ಥಮಾಡಿಕೊಳ್ಳಬಹುದು" ಹೀಗೆಂದು ಕೈಶೇಕರ್ರ ಆ ಮಾತುಗಳಿಗೆ ಇತರರಂತೆ ಜಿನ್ನರೂ ಅರ್ಥಮಾಡಿಕೊಳ್ಳದಷ್ಟು ಪೆದ್ದರೇನೂ ಅಲ್ಲ!

卐

ಕೈಶೇಕರೂ ತನ್ನನ್ನು ಈ ರೀತಿ 'ತಾತ್ಸಾರ' ಮಾಡಿ ಬಿಟ್ಟರಲ್ಲಾ ಎಂದು ಜಿನ್ನರು ಈಗ ಸಿಡಿಮಿಡಿಗೊಂಡಿದ್ದಾರೆ!

卐

ಬಂಗಾಳದ ಪ್ರಧಾನ ಮಂತ್ರಿ ಫಜ್ಲುಲ್ ಹಕ್ಕರು, ಅವರನ್ನು ಮುಸ್ಲಿಂ ಲೀಗಿನಿಂದ ತೆಗೆದು ಹಾಕಿದ ವಿಷಯವಾಗಿ, ಜಿನ್ನರ ಮೇಲೆ ಒಂದು ಲಕ್ಷ ರೂಪಾಯಿಗಳ ಮಾನನಷ್ಟದ ವ್ಯಾಜ್ಯ ಹೂಡಿರುವರೆಂದು ಸುದ್ದಿ.

卐

ಒಂದು ಲಕ್ಷ ರೂಪಾಯಿ. ದೊರೆತರೆ ಮುಸ್ಲಿಂ ಲೀಗಿನಿಂದ ಹೊರಹೋದರೂ ಚಿಂತೆಯಿಲ್ಲವೆಂದು ಹಕ್ಕರು ಭಾವಿಸಿರಬೇಕು; ಒಂದು ಲಕ್ಷ ರೂಪಾಯಿ ತೆತ್ತರೂ ಚಿಂತೆಯಿಲ್ಲ ಹಕ್ಕರನ್ನು ಹೊರಹಾಕದೆ ಬಿಡುವುದಿಲ್ಲವೆಂದು ಜಿನ್ನರು ಹಠತೊಡುತ್ತಾರೋ ನೋಡಬೇಕು.

卐

ಅಂತೂ ಈಗ 'ಜಿನ್ನಾ-ಹಕ್ಕರ ಕಾಳಗ' ಆರಂಭವಾಗಿದೆ.

ಇಷ್ಟರ ವರೇಗೆ ತಯಾರಾದ ಕನ್ನಡ ಚಿತ್ರಗಳಲ್ಲೆಲ್ಲಾ ಅತ್ಯಂತ ಶ್ರೇಷ್ಠವಾದುದೆಂದು ಪತ್ರಿಕಾ ಪ್ರಪಂಚವೇ ಮುಕ್ತಕಂಠವಾಗಿ ಹೊಗಳುತ್ತಿದೆ!

★ ವ ಸಂ ತ ಸೇ ನಾ ★

ನಿಮ್ಮ ಮನೆಯ ಮಾತಾಗಿರುವ ಮುದ್ದು ಕನ್ನಡದಲ್ಲಿ!

ಮದ್ರಾಸಿನ ಪ್ರಗತಿ ಪಿಕ್ಚರ್ಸ್ ಮತ್ತು S S S ನಾಟಕ ಮಂಡಳಿಯವರ ಅತ್ಯುಚ್ಚ ತಯಾರಿಕೆ

ತಾ 19-2 1942ರಿಂದ
ಬೆಂಗಳೂರಿನ ಸಾಗರ್ ಟಾಕೀಸಿನಲ್ಲಿ ಪ್ರಾರಂಭವಾಗಿದೆ

ತಾ. 26-2-1942ರಿಂದ
ಮಂಗಳೂರಿನ ಬಾಲಾಜಿ ಟಾಕೀಸ್‌ನಲ್ಲಿ
ಅಮೋಘವಾದ 3ನೇ ವಾರ

ತಾ. 22-2-1942ರಿಂದ
ಮೈಸೂರ್ ರಣಜಿತ್ ಟಾಕೀಸ್‌ನಲ್ಲಿ 11ನೇ ವಾರ

ಬಿಜಾಪುರ ತ್ರಿಪುರ ಸುಂದರಿ ಟಾಕೀಸ್‌ನಲ್ಲಿ	4ನೇ ವಾರ
ದಾರ್‌ವಾರ ರೀಗಲ್ ಟಾಕೀಸಿನಲ್ಲಿ	3ನೇ ವಾರ
ಸಂಗಮೇಶ್ವರ ಟಾಕೀಸ್, ಬಾಗಲಕೋಟೆ	3ನೇ ವಾರ
ಹುಬ್ಬಳ್ಳಿ ಮೋಹನ್ ಟಾಕೀಸ್‌ನಲ್ಲಿ	3ನೇ ವಾರ
ಗದಗ್ ಮಹಾಲಕ್ಷ್ಮೀ ಟಾಕೀಸ್‌ನಲ್ಲಿ	3ನೇ ವಾರ

ತಾ. 27-2-1942ರಿಂದ
ರಾಯಚೂರ್ ರಣಜಿತ್ ಟಾಕೀಸ್‌ನಲ್ಲಿ ಪ್ರಾರಂಭ!

ನಿಮ್ಮ ಅಚ್ಚುಮೆಚ್ಚಿನ ಹೆಸರಾಂತ
ನಟ-ನಟಿಯರು

ಶ್ರೀ ಸುಬ್ಬಯ್ಯನಾಯ್ಡು
ಶ್ರೀಮತಿ ಲಕ್ಷ್ಮೀಬಾಯಿ
ಶ್ರೀ ನಾಗೇಂದ್ರರಾವ್

ಜಿ. ವಿ. ಕೃಷ್ಣಮೂರ್ತಿರಾವ್
ಪದ್ಮಾದೇವಿ - ಭೂತಾದೇವಿ
ಬೇಬಿ ವಿನೋದ
ಜಿ. ಆರ್. ಸೇಂಡೊ
ಮೊದಲಾದವರು.

ಚಿತ್ರದ ದಿಗ್ದರ್ಶಕರು:
ರಾಮಯ್ಯರ್ ಮತ್ತು ಶಿರೂರ್



Distributors:

FAMOUS TALKIE DISTRIBUTORS.

ರಂಗೂನ್ ಕಡೆಗೆ ಜಪಾನರು ಮುಂದೊತ್ತುತ್ತಿರುವರು

ಅಮೇರಿಕದ ಕೆಲಿಫೋರ್ನಿಯ ಕರಾವಳಿಯಲ್ಲಿ ಜಪಾನರು ಜಲಾಂತರ್ಗಾಮಿಯ ನಾವೆಯಿಂದ ಗುಂಡು ಹಾರಿಸಿದರು. ಡಚ್ ಟಿಮೋರದ ರಾಜಧಾನಿ ಕುಂಪಾಂಗದ ಮೇಲೆ ಜಪಾನರು ಸೈನ್ಯವಿಳಿಸಿದರು. ಸಧ್ಯಕ್ಕೆ ಲಿಬಿಯಾದಲ್ಲಿ ಎರಡೂ ಪಕ್ಷದವರೂ ಸುಮ್ಮನಿದ್ದಾರೆ. ಅಮೇರಿಕದ ಅಧ್ಯಕ್ಷ ರೂಸ್‌ವೆಲ್ಟರು ಒಂದು ಪ್ರಚಂಡ ಭಾಷಣವನ್ನಿತ್ತು, ನಮ್ಮ ಸಿದ್ಧತೆ ಕಡಿಮೆಯಾಗದೆ ಶತ್ರುವು ವಿಜಯಹೊಂದಲಾರನೆಂದು, ಅಟ್ಲಾಂಟಿಕ್ ಘೋಷಣೆಯು ಎಲ್ಲಾ ದೇಶಗಳಿಗೂ ಅನ್ವಯಿಸುವುದೆಂದೂ ಹೇಳಿದರು. ರಂಗೂನಿನಲ್ಲಿ ಜಪಾನರು ಮುಂದೊತ್ತಿ ಬ್ರಿಟಿಷ್ ಸೈನ್ಯ ಹಿಂದೆಸರಿದಿದೆ. ಬ್ರಿಟನ್ ಅಮೇರಿಕಗಳೊಳಗೆ ಒಂದು ಹೊಸ ಒಪ್ಪಂದವಾಗಿದೆ. ವಸಂತಕಾಲದ ಹಿಟ್ಲರನ ಧಾಳಿ ಬ್ರಿಟನಿನ ಮೇಲೆ ಆಗುವುದೇ ಎಂಬ ಅಂಜಿಕೆಯಿದೆ. ಆಸ್ಟ್ರೇಲಿಯದ ಯುದ್ಧ ಸಿದ್ಧತೆ ಜೋರಾಗಿ ನಡೆಯುತ್ತಿದೆ. ಸಾವಿರ ಟನ್ನು ಭಾರವಿದ್ದ ಅಮೇರಿಕದ 'ರಿಪಬ್ಲಿಕನ್' ಎಂಬ ಟ್ಯಾಂಕರು ಶತ್ರುಗಳಿಂದ ಮುಳುಗಿಸಲ್ಪಟ್ಟಿತು.

ಪೆಗೂ ಪಟ್ಟಣವು ಜಪಾನರ ವಶ

ಬರ್ಮಾ ಯುದ್ಧ

ಸಿಟ್ಟಾಂಗ್ ಮತ್ತು ಬಲೀನ ನದಿಗಳ ನಡುವೆ ಇರುವ ಪ್ರದೇಶದಲ್ಲಿ ಕಾಳಗವು ಜೋರಾಗಿದೆ. ರಂಗೂನಿನ ಕಡೆಗೆ ಹೋಗಲು ಜಪಾನರು ಸಿಟ್ಟಾಂಗ್ ನದಿಯನ್ನು ದಾಟಿದರೆ ತೀರಿತು. ಅಲ್ಲಿಂದ 25 ಮೈಲು ದೂರದ ಪೆಗೂ ಪಟ್ಟಣವು ಜಪಾನರ ವಶವಾಯಿತೆಂದು ಹೇಳಲಾಗಿದೆ. ರಂಗೂನ್ ಕಡೆಗೆ ಜಪಾನ್ ಹಡಗಗಳು ಹಾನಿಯನ್ನು ಲೆಕ್ಕಿಸದೆ ಸಾಗುತ್ತಿವೆ.

ರಶ್ಯದಲ್ಲಿ ಇನ್ನೂ ಘೋರ ಕಾಳಗವಾಗಬೇಕು

ಸ್ಟಾಲಿನರ ವೀರವಾಣಿ

"ಹಿಟ್ಲರನು ಇನ್ನೂ ಸೋತಿಲ್ಲ; ನಾವು ಹಿಂದಿಗಿಂತಲೂ ಹೆಚ್ಚು ಘೋರ ಕಾಳಗಮಾಡಬೇಕಾಗುವುದು. ಅದ್ದರಿಂದ ಸಿದ್ಧರಾಗಿರಿ ಎಂಬುದಾಗಿ ಸ್ಟಾಲಿನರು ಕೆಂಪು ಸೈನ್ಯದ 24ನೆಯ ವಾರ್ಷಿಕೋತ್ಸವದ ಸಂದರ್ಭ ಭಾಷಣವೊಂದರಲ್ಲಿ ಸ್ಟಾಲಿನ್ ಹೇಳಿದರು.

ಬಾಲೀ ದ್ವೀಪ ಪ್ರವೇಶ

ಜಾವಾದ ಬಾಲೀ ದ್ವೀಪವನ್ನು ಜಪಾನರು ಪ್ರವೇಶಿಸಿ ಮುನ್ನಡೆಯುತ್ತಿದ್ದಾರೆ. ವೈಮಾನಿಕ ನಿಲ್ದಾಣವನ್ನು ಕೈವಶಮಾಡಿಕೊಂಡಿರುವರೆಂದು ಸುದ್ದಿ. ಬಾಲೀ ದ್ವೀಪದ ಹತ್ತಿರ ಭೀಕರ ನೌಕಾಯುದ್ಧವಾಗಿ ಎರಡೂ ಪಕ್ಷದ ಹಡಗಗಳೂ ಮುಳುಗಿದವು. ಬಂಡೋವಾಸಿ ನಗರದ ಮೇಲೆ ಜಪಾನರು ಮುತ್ತಿಗೆ ಹಾಕಿದ್ದಾರೆ.

ಬರ್ಮಾ ಕಾಳಗ

ಬಲೀನ್ ನದಿಯ ಹಿಂದೆ ಘೋರ ಯುದ್ಧವಾಯಿತು. ಬಿಲೀನ್ ನದಿಯಲ್ಲಿ ದೋಣಿಗಳನ್ನು ದಾಟಿಸಲು ಜಪಾನರು ಪ್ರಯತ್ನಮಾಡಿದ್ದರು.

ಅಮೆರಿಕದ ಕರಾವಳಿ ಮೇಲೆ ಜಪಾನರ ಗುಂಡು!

ರೂಸ್‌ವೆಲ್ಟ್ ಸ್ಟಾಲೀನರ ಭಾಷಣ

ವಸಂತಕಾಲದ ಆಕ್ರಮಣವು ಬ್ರಿಟನಿನ ಮೇಲೆಯೆ?

ಟಿಮೋರ ಆಕ್ರಮಣ

ಪೇಸಿಫಿಕ್ ಸಾಗರದಲ್ಲಿರುವ ಟಿಮೋರ ಎಂಬ ದ್ವೀಪವನ್ನು ಜಪಾನರು ಆಕ್ರಮಿಸಿಕೊಂಡಿರುವರೆಂದು ಸುದ್ದಿ. ಪೋರ್ಚುಗೀಸ್ ಸೈನ್ಯವು ಟಿಮೋರಕ್ಕೆ ಬೇಗನೇ ಮುಂದರಿವುದೆಂದು ತಿಳಿದಿದೆ.

ಜಪಾನರು ಬಾಲಿ ದ್ವೀಪದಲ್ಲಿಳಿದರು

ಎಂದು ತಿಳಿದಿದೆ. ಜಾವಾ ಆಕ್ರಮಣದ ಪೂರ್ವ ಪೀಠಿಕೆಯಿದೆಯೆಂದು ಹೇಳಲಾಗಿದೆ. ಈ ಕಾಳಗದಲ್ಲಿ ಜಪಾನರ ಎರಡು ದೊಡ್ಡ ಹಡಗಗಳು ಮುಳುಗಿಸಲ್ಪಟ್ಟಿವೆಯೆಂದು ಸುದ್ದಿ.

ಉರುಗ್ವೇಯಲ್ಲಿ ಗಡಿಬಿಡಿ

ಉಂಟಾಗಿದೆ. ಸರಕಾರದ ಧೋರಣವನ್ನು ನಿರಾಕರಿಸಿದ್ದರಿಂದ ಅಲ್ಲಿನ ಕಾಂಗ್ರೆಸನ್ನು ಅಧ್ಯಕ್ಷರು ವಿಸರ್ಜಿಸಿದರು. ಅಧ್ಯಕ್ಷರ ಅಪ್ಪಣೆಯಂತೆ ಕಾಂಗ್ರೆಸಿನ ಕಟ್ಟಡಾದಿಗಳನ್ನು ಪೋಲೀಸರು ಮುತ್ತಿದರು. ಹಾಗೂ ಗಡಿಬಿಡಿಯುಂಟಾಗಿದೆ.

ಸಲ್ವೀನಿನಲ್ಲಿ ಚೀನೀ ಸೈನ್ಯಗಳು

ಮಿತ್ರಪಕ್ಷದ ಸೈನಿಕರೊಡನೆ ನುಗ್ಗಿ ಜಪಾನರನ್ನು ಯಶಸ್ವಿಯಾಗಿ ಎದುರಿಸಿದರೆಂದು ತಿಳಿದಿದೆ. ಮೆಕಾಂಗ್ ನದಿಯ ಹತ್ತಿರ ಈ ಯುದ್ಧ ನಡೆಯಿತು. ಜಪಾನರು ಉತ್ತರ ದಿಕ್ಕಿಗೆ ನುಗ್ಗಲು ಸಾಹಸ ಪಟ್ಟಿರುವರು. ಬರ್ಮಾದಲ್ಲಿ ಚೀನೀಯರು ಸಾಲವೀನ್ ನದಿಯ ದಂಡೆಯ ಮೇಲೆ ಬೀಡುಬಿಟ್ಟಿರುವರು. ಅತ್ತ ಚೀನದಲ್ಲಿಯೂ ಘೋರ ಯುದ್ಧ ನಡೆಯುತ್ತಲೇ ಇದೆ.

ಬಂಗಾರ ತುಂಬಿದ ಹಡಗದ ಜಲಸಮಾಧಿ

ಆಸ್ಟ್ರೇಲಿಯದ ಕರಾವಳಿಯ ಆಚೆಗೆ ಮುಳುಗಿದ ಬಂಗಾರದಿಂದ ತುಂಬಿದ್ದ ಒಂದು ಹಡಗದ ಉದ್ಧರಣ ಕಾರ್ಯವು ಯಶಸ್ವಿಯಾಗಿ ಆಯಿತೆಂದು ಆಸ್ಟ್ರೇಲಿಯದ ಮುಖ್ಯಮಂತ್ರಿ ಹೇಳಿದರು. ನಾಯಗ್ರಾ ಎಂಬ ಹಡಗವು ಬಂಗಾರವನ್ನು ತುಂಬಿಸಿಕೊಂಡು ಹೋಗುತ್ತಿರುವಾಗ ನ್ಯೂಜಿಲೆಂಡ್ ಕರಾವಳಿಯಲ್ಲಿ ಶತ್ರುಗಳು ಹಾಕಿದ ಜಲಸುರಂಗಕ್ಕೆ ತಾಗಿ ೪೦೦ ಅಡಿ ನೀರಲ್ಲಿ ಮುಳುಗಿತು. ನ್ಯೂಜಿಲೆಂಡ್ ಸರಕಾರದವರು ಮತ್ತು ಆಸ್ಟ್ರೇಲಿಯ ಸರಕಾರದವರು ಅದನ್ನು ಮೇಲೆ ತೆಗೆದರು.

ಆಸ್ಟ್ರೇಲಿಯದಲ್ಲಿ ಒತ್ತಾಯದ ಸೈನ್ಯಸಂಗ್ರಹ

ಕೆಲಸವು ನಡೆಯುತ್ತಿದೆ; ಕೆಲವು ಹೊಸ ನಿಯಮಗಳನ್ನು ಅಲ್ಲಿ ಜಾರಿಮಾಡಲಾಗಿದೆ.

ಬರ್ಮಾ ರಸ್ತೆ ಕೈಬಿಟ್ಟರೆ?

ಹಿಂದುಸ್ಥಾನದ ಯುದ್ಧ ಸಾಮಗ್ರಿಗಳನ್ನು ತರಿಸಿಕೊಳ್ಳುವುದಕ್ಕಾಗಿ, ಬರ್ಮಾ ರಸ್ತೆ ಕೈಬಿಟ್ಟರೆ ಬೇರೊಂದು ದಾರಿ ವ್ಯವಸ್ಥೆ ಮಾಡಲು ಚಿಯಾಂಗ್ ಕೈಶೇಕರು ಯೋಚಿಸುತ್ತಿರುವರಂತೆ.

ಆಸ್ಟ್ರೇಲಿಯದ ಮೇಲೆ ಜಪಾನರು ಆಕ್ರಮಿಸಿದರು

ಡಾರ್ವಿನ್ ಬಂದರದ ಮೇಲೆ ಧಾಳಿ

ಕರ್ಟಿನರ ಕರೆ

ಆಸ್ಟ್ರೇಲಿಯದ ಉತ್ತರ ಕರಾವಳಿಯಲ್ಲಿರುವ ಡಾರ್ವಿನ್ ಬಂದರದ ಮೇಲೆ ಬಾಂಬೆಸೆದು ಜಪಾನರು ಉಗ್ರ ಆಕ್ರಮಣ ಮಾಡಲು ಆರಂಭಿಸಿದ್ದಾರೆ. ಪಟ್ಟಣದ ಮೇಲೆ ಬಾಂಬುಗಳು ಬಿದ್ದುವು. ಡಾರ್ವಿನದ ಮೇಲೆ ವಿಮಾನ ಆಕ್ರಮಣವಾದ ವಾರ್ತೆ ಕೇಳಿ, ಆಸ್ಟ್ರೇಲಿಯದ ಮುಖ್ಯ ಮಂತ್ರಿ ಕರ್ಟಿನರು, ಆಸ್ಟ್ರೇಲಿಯನರು ಇದಕ್ಕೆ ಯೋಗ್ಯ ಉತ್ತರಕೊಡಬೇಕೆಂದೂ, ಪ್ರತಿಯೊಬ್ಬ ಪ್ರಜೆಯೂ ಬಲಿದಾನ ಮಾಡಲು ಸಿದ್ಧನಾಗಬೇಕೆಂದೂ ಹೇಳಿದರು.

ಅಜೀರ್ಣ ಅರುಚಿಗಳ ಬಾಧೆಯಿಂದ ಅವನ ಬುದ್ಧಿ ಮತ್ತು ಶರೀರಗಳು ಜಾಡ್ಯ ಹೊಂದಿದ್ದವು—ಹಾಗಾಗಿಯೇ ಆತನು ಅಷ್ಟು ಹುಷಾರಾಗಿರಲಿಲ್ಲ!



ಅಜೀರ್ಣ ಅರುಚಿ ಮತ್ತು ತಲೆನೋವು ಇನ್ನು ಮುಂದೆ ಆತನನ್ನು ಬಾಧಿಸಲಾರವು

ಏಕೆಂದರೆ ಈಗ ಆತನ ಒಳಗೂ ನಿರ್ಮಲತೆಯುಂಟಾಗಿದೆ.

ನಿಮ್ಮ ಹೊಟ್ಟೆಯೊಳಗಡೆ ಅಶುದ್ಧ ವಸ್ತುಗಳಿದ್ದರೆ ನೀವು ಜಯಶೀಲರಾಗಿರಲೂ ಸಂತುಷ್ಟರಾಗಿರಲೂ ಸಾಧ್ಯವಿಲ್ಲ. ಆಗಾಗ ಅಜೀರ್ಣ ಅರುಚಿ ತಲೆನೋವುಗಳು ನಿಮ್ಮನ್ನು ಯಾವ ಕೆಲಸದಲ್ಲಿಯೂ ನಿಷ್ಪ್ರಯೋಜನಕರವನ್ನಾಗಿ ಮಾಡುವವು. ಮೆದುಳು ಮತ್ತು ಶರೀರದೊಳಭಾಗವನ್ನು ನೀವು ಶುಚಿಯಾಗಿಡಬೇಕು. ದಿನನಿತ್ಯ ತಂಪಾದ ಅಂಡ್ರೂಸ್ ಲಿವರ್ ಸಾಲ್ಟಿನ ಒಂದು ಪಾನೀಯ ತೆಗೆದುಕೊಳ್ಳುವುದರಿಂದ ನೀವು ಸಂಪೂರ್ಣ ಆನಂದಗೊಳ್ಳುವಿರಿ. ಅದು ಬಾಯಿ ಮತ್ತು ನಾಲಗೆಗಳನ್ನು ರುಚಿಗೊಳಿಸುತ್ತದೆ. ಹೊಟ್ಟೆಯನ್ನು ಕ್ರಮದಲ್ಲಿರಿಸುತ್ತದೆ. ಹೊಟ್ಟೆಯ ಸರ್ವಾಯವಗಳನ್ನೂ ಶುದ್ಧಿಗೊಳಿಸುತದೆ. ಹೊಟ್ಟೆಗೆ ತಂಪನ್ನುಂಟುಮಾಡಿ ರಕ್ತವನ್ನು ಶುದ್ಧಿಗೊಳಿಸುತ್ತದೆ.

ಹೊಟ್ಟೆಯೊಳಗಡೆಯ ನೈರ್ಮಲ್ಯಕ್ಕೆ ದಿನನಿತ್ಯ ಅಂಡ್ರೂಸ್ ಲಿವರ್ ಸಾಲ್ಟನ್ನು ಉಪಯೋಗಿಸಿರಿ

ANDREWS LIVER SALT

ಆರೋಗ್ಯಕರ - ಪಾನೀಯ—ಶಕ್ತಿವರ್ಧಕವಾದ ಔಷಧಿ—ಶುಚಿಕರ—ತಂಪುಕರ—ಆನಂದಕರ—ಆಮೋದಕರ

NOTICE

In the Court of the District Munsiff of Mangalore

S. C. 871/1941.

Mrs. Lucy Mascarenhas —*Plaintiff.*

and

Thimma Gatty —*Defendant.*

Notice is hereby given that the above suit is posted for notice to the defendant on 16-3-1942. If he fails to appear in person or by pleader on the said date at 11 A. M. in the above court he will be declared exparte.

Mangalore | A. M. D'Sa B.A., LL.B.
25-2-1942. | Vakil for the Plaintiff.

ನೋಟೀಸು

ಪುತ್ತೂರು ತಾಲ್ಲೂಕು ಕೆಯ್ಯೂರು ಗ್ರಾಮದಲ್ಲಿರುವ ಕುಂಜತ್ತು ಲಕ್ಷ್ಮಣ ಗೌಡರ ಏಳನೆ ಗೌಡ್ತಿ 1. ಕುಂಜತ್ತು ರಾಮ ಗೌಡರ ಮಗ ಕೃಷ್ಣಪ್ಪ ಗೌಡ 1, ಕೃಷ್ಣ 2 ಜನರು ಸರ್ವ ಜನರಿಗೆ ಈ ಮೂಲಕ ಆವೇದಿಸಿಕೊಳ್ಳುವದೇನೆಂದರೆ

ನಮ್ಮ ಪೈಕಿ 1ನೇಯವಳ ಮಗ ಮತ್ತು 2ನೇಯವಳಿಗೆ ತಮ್ಮನಾಗುವ ವೆಂಕಪ್ಪ ಎಂಬವನು ಈಗ ಕೆಲವು ದಿವಸಗಳ ಲಾಗಾಯ್ತು ಬುದ್ಧಿ ಸ್ವಾಸ್ಥ್ಯತೆಯಲ್ಲಿರುವದಿಲ್ಲ. ಆತನನ್ನು ದುರ್ಭೋಧನೆ ಮಾಡಿ ಆತನ ಹೆಸರಲ್ಲಿರುವ ಸೊತ್ತುಗಳನ್ನು ಸ್ವಾಧೀನಪಡಿಸಿಕೊಳ್ಳಲು ಕೆಲವು ಸಾಧಾರಿಗಳು ಆತನ ಹೆಸರು ಮಾಡುವರು ಪ್ರಯತ್ನದಲ್ಲಿದ್ದಾರೆ. ಆತನಿಗೇನೂ ಸಾಲವಿಲ್ಲ. ಸಾಲ ಮಾಡುವ ಅಗತ್ಯದ ಗರ್ಜಿಯಿಲ್ಲ. ಕುಟುಂಬದ ಮನೆಯಲ್ಲಿಯೇ ಆತನ ಹೆಂಡತಿಯು ಜೀವನ ಹೋಗುತ್ತದೆ. ಆತನಿಂದೇನಾದರೂ, ಹೊಸದ ದಸ್ತಾವೇಜು ಮಾಡಿಸಿಕೊಂಡರೆ ಅದು ಸಿಂಧುವಾಗತಕ್ಕದ್ದಲ್ಲ. ಆತ ಬುದ್ಧಿ ಶೂನ್ಯನಾಗಿ ಇತ್ತೀಚೆಗೆ ವರ್ತಿಸುತ್ತಾನೆ. ಆತನಿಗೆ ಬುದ್ಧಿ ಸ್ವಾಸ್ಥ್ಯತೆ ತಿಳುವಳಿಕೆ ಇಲ್ಲ. ಯಾರೊಂದು ಮೋಸಕ್ಕೆ ಒಳಗಾಗದಂತೆ ಈ ನೋಟೀಸು ಮುಂದಾಗಿ ಈ ಸಂಗತಿ ಪ್ರಕಟಿಸಿಯದೆ ತಿಳಿಸಿದೆ.

ಕೆಯ್ಯೂರು | ಈ ಮೂರುಗಳ
20-2-42. | ಗೌರಮ್ಮನ ರುಜು
| ಕೆ. ಕೃಷ್ಣಪ್ಪ ಗೌಡನ ರುಜು

'ಇಂಡಿಯಾ ಆಫೀಸು' ತೆಗೆದುಹಾಕಲಾಗುವುದೆ?

ಅಮೆರಿ ಅಧಿಕಾರಚ್ಯುತರಾಗುವರೆ?

ಕ್ರೈಶೇಕರ ಹೇಳಿಕೆಗೆ ಚರ್ಚಿಲರ ಉತ್ತರವೇನು?

'ಸಾಧ್ಯವಾದಷ್ಟು ಬೇಗನೇ ಹಿಂದೂದೇಶಕ್ಕೆ ಸ್ವಾತಂತ್ರ್ಯ ಕೊಡಿರಿ' ಎಂದು ಕ್ರೈಶೇಕರು ಬ್ರಿಟಿಷ್ ಸರಕಾರಕ್ಕೆ ಹೇಳಿದ ವಿಷಯ ಲಂಡನಿನಲ್ಲಿ ಸಹಾನುಭೂತಿ ಪರವಿಚಾರವಾಗುತ್ತಿದೆಯಂತೆ. ಆದರೆ ಹಿಂದುಸ್ತಾನದಲ್ಲಿ ಮೊದಲು ಐಕ್ಯತೆವಾಗಬೇಕೆಂದು ಬ್ರಿಟಿಷ್ ಪ್ರಭುತ್ವದ ಇಚ್ಛೆಯಂತೆ. ಇಂಡಿಯಾ ಆಫೀಸು ಬೇಗನೇ ರದ್ದಾಗುವುದೆಂದು ದಟ್ಟ ಸುದ್ದಿಯಿದೆ.—ಕ್ರೈಶೇಕರು ಪಾಕಿಸ್ತಾನದ ವಿಷಯ ಏನೂ ಹೇಳಲಿಲ್ಲವೆಂದು ಹೇಳಿದ ಜಿನ್ನರಿಗೆ ಅಸಫ್ ಅಲಿಯವರು ಉತ್ತರ ಕೊಡುತ್ತಾ ಜಿನ್ನರ ಮಂದಮತಿಯನ್ನು ಬಹಿರಂಗಪಡಿಸಿದ್ದಾರೆ.

ಕೂಡಲೇ ರಾಷ್ಟ್ರೀಯ ಸರಕಾರ ಸ್ಥಾಪಿಸಿರಿ

ಕೈಮೀರುವ ಮೊದಲು ಕೆಲಸಮಾಡಿರಿ

ಸಪ್ರು ಪರಿಷತ್ತು ಸೂಚನೆ

ದಿಲ್ಲಿಯಲ್ಲಿ ಸೇರಿದ ಪಕ್ಷಾತೀತರ ಪರಿಷತ್ತಿನಲ್ಲಿ ಸರಕಾರವು ಕೈಮೀರುವ ಮೊದಲು ಕೆಲಸ ಮಾಡಿ, ಕೂಡಲೇ ರಾಷ್ಟ್ರೀಯ ಸರಕಾರ ಸ್ಥಾಪಿಸುವದು ಹಿತವಾಗಿದೆಯೆಂದು ನಿರ್ಣಯಮಾಡಲಾಗಿದೆ. ಸದ್ಯದ ಸರಕಾರವು ಜನರ ಬೆಂಬಲವಿಲ್ಲದಿರುವುದರಿಂದ ನಿಜವಾದ ಸರಕಾರವಾಗಿಲ್ಲವೆಂದು ಹೇಳಲಾಗಿದೆ. ಪ್ರಾಂತಗಳಲ್ಲಿ 93ನೇ ಕಲಮಿನ ನ್ಯಾಯ ನಡೆವ ಸರಕಾರವು ಕೊನೆಗಾಣಬೇಕೆಂದು, ಜನರ ಬೆಂಬಲವುಳ್ಳ ಮಂತ್ರಿಮಂಡಳವು ರಚಿತವಾಗಬೇಕೆಂದೂ ಸೂಚಿಸಲಾಗಿದೆ.

ಕೇಂದ್ರ ಅಸೆಂಬ್ಲಿ ಗುಪ್ತ ಸಭೆ

ಸೇರಿ ಇದೇ ಶುಕ್ರವಾರ ಯುದ್ಧ ಪರಿಸ್ಥಿತಿಯ ವಿಚಾರ ಚರ್ಚಿಸುವುದೆಂದು ತಿಳಿದಿದೆ.

ಹಿಂದುಸ್ತಾನದ ಪ್ರಶ್ನೆ ಬಿಡಿಸಿರಿ

ಮೆಂಚೆಸ್ಟರ್ ಗಾರ್ಡಿಯನ್ ಸೂಚನೆ

ಬ್ರಿಟನಿನ ಹೊಸ ಮಂತ್ರಿ ಮಂಡಳಕ್ಕೆ ಲಂಡನಿನ ಮೆಂಚೆಸ್ಟರ್ ಗಾರ್ಡಿಯನ್ ಪತ್ರಿಕೆಯು ಸೂಚನೆಕೊಡುತ್ತಾ ಹಿಂದುಸ್ತಾನದ ಪ್ರಶ್ನೆಯನ್ನು ಕೂಡಲೇ ಬಿಡಿಸಿರಿ ಎಂದು ಹೇಳಿದೆ.

ವೈಟ್‌ಹಾಲಿನ ಮೊಗಲ್ ಚಕ್ರವರ್ತಿ ದರ್ಬಾರ್ ನಿಲ್ಲಲಿ!

ಡಿಲ್ಲಿಯಿಂದಲೇ ರಾಜ್ಯಭಾರ ನಡೆಯಲಿ!

ಸರ್ ಸಪ್ರುರವರ ಭಾಷಣ

ಬ್ರಿಟಿಷ್ ಸರಕಾರದ ನೀತಿಯ ಖಂಡನೆ

'ಇನ್ನು ಬ್ರಿಟಿಷ್ ಸರಕಾರವು ಲಂಡನಿನಿಂದ ಹಿಂದುಸ್ತಾನದ ರಾಜ್ಯಭಾರ ಮಾಡುವುದನ್ನು ನಿಲ್ಲಿಸಬೇಕು. ವೈಟ್‌ಹಾಲಿನ ಮೊಗಲ್ ಚಕ್ರವರ್ತಿಯು ಅಧಿಕಾರಚ್ಯುತರಾಗಬೇಕು' ಎಂದು ಸರ್ ತೇಜಬಹದ್ದೂರ್ ಸಪ್ರುರವರು ದಿಲ್ಲಿಯಲ್ಲಿ ಕೂಡಿದ ಪಕ್ಷಾತೀತ ಪರಿಷತ್ತಿನಲ್ಲಿ ಭಾಷಣ ಮಾಡುತ್ತಾ ಹೇಳಿದರು.

ಅವರು ಮೊದಲು ರಾಜಕೀಯ ಪರಿಸ್ಥಿತಿಯನ್ನು ಸಾದ್ಯಂತವಾಗಿ ವಿವರಿಸಿ 'ದೇಶದ ಸ್ಥಾಯಿ ರಾಜ್ಯಘಟನೆಯ ಬಗ್ಗೆ ಈಗ ನಾನು ಮಾತಾಡುವುದಿಲ್ಲ. ಯುದ್ಧಕಾರ್ಯಗಳು ಹೆಚ್ಚು ಉತ್ಸಾಹದಿಂದ ನಡೆಯಬೇಕಾದರೆ ಕೂಡಲೇ ದೇಶದ ರಾಜ್ಯಪದ್ಧತಿಯಲ್ಲಿ ಸುಧಾರಣೆಯಾಗಬೇಕು' ಎಂದು ಅಂದರು.

ಬ್ರಿಟಿಷ್ ಸರಕಾರದ ಧೋರಣವನ್ನು ದೀರ್ಘವಾಗಿ ಟೀಕಿಸಿದ ನಂತರ ಸರ್ ಸಪ್ರುಗಳು 'ನಮ್ಮಲ್ಲಿ ಮತಭೇದಗಳಿರುವುದು ನಿಜ.—ಆದರೆ ಜಗತ್ತಿನ ಎಷ್ಟೋ ದೇಶಗಳಲ್ಲಿ ಈ ಬಗೆಯ ಮತಭೇದಗಳಿವೆ. ಸದ್ಯದ ಪರಿಸ್ಥಿತಿ ಗಂಭೀರವಾಗಿದ್ದರೂ ಆದರಿಂದ ಬ್ರಿಟಿಷರು ಇನ್ನೂ ಬುದ್ಧಿಗಲಿತಂತೆ ತೋರುವುದಿಲ್ಲ. ಇದು ಸರಿಯಲ್ಲ. ಇನ್ನಾದರೂ ಅವರು ಧೈರ್ಯದಿಂದ ಹಿಂದೀಯರನ್ನು ತಮ್ಮ ವಿಶ್ವಾಸಕ್ಕೆ ತೆಗೆದುಕೊಂಡು ಸದ್ಯದ ತೊಡಕನ್ನು ಬಿಡಿಸಬೇಕು. ಇದು ಸಾಧ್ಯವಾಗದಿದ್ದರೆ ವೈಟ್‌ಹಾಲಿನ (ಲಂಡನದಲ್ಲಿರುವ ಹಿಂದೀ ಕಚೇರಿಯ) 'ಮೊಗಲ ಚಕ್ರವರ್ತಿ' (ಭಾರತ ಮಂತ್ರಿ) ಅಧಿಕಾರದಿಂದ ಚ್ಯುತನಾಗಲೇಬೇಕು' ಎಂದು ಅಂದರು.

ಬಜಾಜರ 1 ಲಕ್ಷ ರೂಪಾಯಿ ಆಸ್ತಿ ಸಾರ್ವಜನಿಕ ಉಪಯೋಗಕ್ಕಾಗಿ

ವಿನಿಯೋಗವಾಗುವಂತೆ ಮಾಡಲಾಗುವದೆಂದು ವರ್ಧಾದಿಂದ ಸುದ್ದಿ ಬಂದಿದೆ.

ಸಪ್ರು ಪರಿಷತ್ತಿನ ನಿರ್ಣಯ

ಮಂತ್ರಿಗಳು ಬದಲಾದ್ದರಿಂದ ಧೋರಣ ಬದಲಾಗದು

ನೆಹರು ಹೇಳಿಕೆ

ಬ್ರಿಟಿಷ್ ಮಂತ್ರಿ ಮಂಡಳದಲ್ಲಿ ಬದಲಾವಣೆಯಾದ್ದರಿಂದ ಹಿಂದೂದೇಶದ ಬಗ್ಗೆ ಅವರ ಧೋರಣ ಬದಲಾಗಲಾರದು. ನಮ್ಮ ಬೇಡಿಕೆಯನ್ನು ಮನ್ನಿಸಲು ಸರಕಾರವು ಸಿದ್ಧವಿಲ್ಲ. ಆದ್ದರಿಂದ ಕಾಂಗ್ರೆಸು ಮತ್ತು ಸರಕಾರಗಳಲ್ಲಿ ಒಪ್ಪಂದವಾಗುವ ಪ್ರಶ್ನೆಯೇ ಬರುವುದಿಲ್ಲ ಎಂದು ನೆಹರು ಭಾಷಣವೊಂದರಲ್ಲಿ ಹೇಳಿದರು. "ಈಗಲಾದರೂ ನಾವು ಹೊಣೆಹೊರಲು ಸಿದ್ಧರು. ನಿರೀಕ್ಷಿಸಿದಷ್ಟು ಕೆಲಸವನ್ನು ಈಗಮಾಡಲು ಸಾಧ್ಯವಿಲ್ಲದಿದ್ದರೂ ನಮ್ಮ ಹೊಣೆಯು ನಮ್ಮ ಮೇಲೆ ಹೊರಿಸಲ್ಪಟ್ಟರೆ ನಾವು ಹಿಂಜರಿಯಲಾರೆವು" ಎಂದರು.

ಕುಮಾರಿ ಇಂದಿರಾ ವಿವಾಹ

ಪಾರ್ಸಿ ತರುಣನೊಡನೆ

ಪಂಡಿತ ನೆಹರುಗಳ ಮಗಳಾದ ಕುಮಾರಿ ಇಂದಿರಾ ನೆಹರು ಶ್ರೀ. ಫಿರೋಜ ಜಿ. ಗಾಂಧಿ ಎಂಬ ಪಾರ್ಸಿ ತರುಣನೊಡನೆ ವಿವಾಹವಾಗುವಳೆಂದು ತಿಳಿದುಬರುತ್ತದೆ. ಈ ಮದುವೆ ಮಾರ್ಚಿ ತಿಂಗಳಲ್ಲಿ ಸಿವಿಲ್ ಮೆರೇಜ್ ಕಾಯದೆ ಪ್ರಕಾರ ನಡೆಯುವುದೆಂದು ಸುದ್ದಿ. ಶ್ರೀ. ಗಾಂಧಿ ಇತ್ತೀಚೆಗೆ ಯೂರೋಪಿನಿಂದ ಕುಮಾರಿ ಇಂದಿರಾಳೊಡನೆ ಮರಳಿದ್ದನು.

ಚಿಯಾಂಗ್ ಸಂದೇಶದ ಕುರಿತು

ಸಪ್ರು-ಜಯಕರ್

ಇವರು ಅಭಿಪ್ರಾಯ ಪ್ರಕಟಿಸುತ್ತಾ, ನಾವು ಬಹಳ ದಿನಗಳ ವರೆಗೆ ಮರೆಯದಂತಹ ಸಂದೇಶವನ್ನು (ಹಿಂದುಸ್ತಾನಕ್ಕೆ ಬ್ರಿಟಿಷರು ನಿಜವಾದ ಅಧಿಕಾರ ಕೊಡಬೇಕು ಎಂದು) ಚಿಯಾಂಗರು ಕೊಟ್ಟಿರುವರು, ಹಿಂದುಸ್ತಾನ ಮತ್ತು ಚೀನಗಳು ಸ್ವತಂತ್ರವಾಗದೆ ಜಗತ್ತಿನಲ್ಲಿ ಶಾಂತಿ ನೆಲೆಗೊಳ್ಳಲಾರದು, ಅವರು ಹಿಂದೀಯರಿಗೆ ನಿಜವಾದ ಅಧಿಕಾರ ಕೊಡಬೇಕೆಂದು ಹೇಳಿದ್ದನ್ನು ಬ್ರಿಟಿಷ್ ಸರಕಾರದವರು ಮನ್ನಿಸಬೇಕು ಎಂದು ಹೇಳಿಕೆಯಿತ್ತಿರುವರು. ಡಿಲ್ಲಿಯಲ್ಲಿ ಕೂಡಿದ ಪಕ್ಷಾತೀತ ಪರಿಷತ್ತಿನಲ್ಲಿಯೂ ಈ ಅಭಿಪ್ರಾಯದ ಠರಾವು ಆಗಿದೆ. ಯುದ್ಧ ಮಂತ್ರಿ ಮಂಡಳದಲ್ಲಿ ಹಿಂದೀ ಅಧಿಕಾರೇತರ ಮತ್ತು ಜನತಾ ವಿಶ್ವಾಸಕ್ಕೆ ಪಾತ್ರರಾದ ಪ್ರತಿನಿಧಿಗಳನ್ನು ತೆಗೆದುಕೊಳ್ಳಬೇಕೆಂದು ಪಕ್ಷಾತೀತ ಪರಿಷತ್ತು ಠರಾವು ಮಾಡಿದೆ.

ಅಮೆರಿಯನ್ನು ಹೊರಹಾಕುವರೆ?

'ಇಂಡಿಯಾ ಆಫೀಸು ತೆಗೆದು ಹಾಕಲಾಗುವುದು?

ವೈಸರಾಯರಿಗೆ ಹೋಮ್‌ರೂಲ್?

ಲಂಡನಿನಿಂದ ಈಚೆಗೆ ಒಂದು ಸುದ್ದಿ ಬಂದಿದೆ. ಅದರಂತೆ ಲಂಡನನಲ್ಲಿರು ಇಂಡಿಯಾ ಆಫೀಸು, ಪ್ರತ್ಯೇಕವಿರುವುದು ತೆಗೆದು ಹಾಕಲ್ಪಟ್ಟು, ಅಟ್ಲಿಯವರು ಈಗ ಮಂತ್ರಿಗಳಾಗಿರುವ ಡೊಮಿನಿಯನ್ಸ್ ಆಫೀಸಿಗೆ ಬದಲಾವಣೆ ಮಾಡಲಾಗುವುದೆಂದು ತಿಳಿದಿದೆ. ಹಲವು ಪ್ರಾಮುಖ್ಯ ಬದಲಾವಣೆಗಳಾಗುವವೆಂದೂ ಸುದ್ದಿ. ವೈಸರಾಯರಿಗೆ ಹೋಮ್‌ರೂಲ್ ಕೊಡುವ ವಿಷಯವೂ ಈ ಬದಲಾವಣೆಯಲ್ಲದಕವಾಗಿರುವುದಾಗಿ ವಾರ್ತೆ. ಹೀಗೆ ಹಿಂದೂದೇಶವನ್ನು ಡೊಮಿನಿಯನ್‌ಗಳ ಸಮಾನ ಸ್ಥಾನದಲ್ಲಿರಿಸುವ ವಿಚಾರ ಮಾಡಲಾಗುತ್ತಿದ್ದರೂ, ಅದನ್ನು ಹಿಂದೀಯರಿಗೆ ಒಪ್ಪಿಸುವ ವಿಚಾರವೇನೂ ತಿಳಿದಿಲ್ಲ. ಹೇಗಿದ್ದರೂ, ಲೋಕದ

ಕಣ್ಣಿಗೆ, ಹಿಂದುಸ್ತಾನಕ್ಕೂ ನಾವು ಡೊಮಿನಿಯನುಗಳ ಸಮಾನತೆ ಕೊಟ್ಟಿರುವೆವೆಂಬ, ಮಣ್ಣು ಹಾಕುವ ಯತ್ನ ಸರಕಾರ ಮಾಡಬಹುದು. ಸರ್ ಸ್ಟಾಫೋರ್ಡ್ ಕ್ರಿಪ್ಸ್‌ರು ಅಧಿಕಾರವನ್ನು ಕೈಕೊಳ್ಳಬೇಕಾದರೆ, ಇಂಡಿಯಾ ಸರಕಾರದಲ್ಲಿ ಬದಲಾವಣೆಯಾಗಬೇಕೆಂದು ಹಟತೊಟ್ಟ ಕಾರಣ ಹಾಗೂ ಲೇಬರ್ ಪಕ್ಷದ ಒತ್ತಾಯದಿಂದ ಈ ಬದಲಾವಣೆಗಳಾಗುವವೆಂದು ಊಹಿಸಲಾಗಿದೆ. ಅಮೆರಿಯವರು ಬಹುಶಃ ಹೊರಹೋಗಬಹುದು. ಆದರೆ ವೈಸರಾಯರ ಬದಲಾವಣೆ ವಿಷಯವೇನೂ ಮಾತಿಲ್ಲ.

ರಜೆಯ ದಿನ ಕಡಿಮೆ

ಯುದ್ಧ ಕಾಲದ ನಿಮಿತ್ತದಿಂದ, ಮದ್ರಾಸು ಸರಕಾರವು ಕೆಲವು ರಜಾದಿನಗಳನ್ನು ಕಡಿಮೆ ಮಾಡಿದೆ. ಅವು ಇವುಗಳು:—ಪೊಂಗಲ್, ಸೂರ್ಯಗ್ರಹಣ, ಈಸ್ಟರ್ ಮಂಡೇ, ಬ್ಯಾಂಕುಗಳ ಅರ್ಧವರ್ಷದ ಲೆಕ್ಕತೀರಿಸುವ ದಿನ, (ಜುಲಾಯಿ 1) ಕ್ರಿಸ್‌ಮಸ್ ರಜೆ, (ದಶಂಬರ 24, 27; 28, 29, 30 ಮತ್ತು 31,) ಚಕ್ರವರ್ತಿ ಜನ್ಮದಿನ, ಶ್ರೀ ರಾಮನವಮಿ, ಎಲ್ಲಾ ಮೂರನೆಯ ಶನಿವಾರ, ಸಾಮ್ರಾಜ್ಯ ದಿನ, ಚಂದ್ರಗ್ರಹಣ ಮತ್ತು ಮೊಹರಮ್

ಗಾಂಧಿ ಚಿಯಾಂಗ್ ಭೇಟಿ

ಕಲ್ಕತ್ತದಲ್ಲಿ ಜರಗಿತು. ಅವರು ನಾಲ್ಕು ತಾಸುಗಳಿಗೆ ಮಿಕ್ಕಿ ಮಾತನಾಡಿದರು. ಅವರ ಮಾತುಕತೆಯ ಫಲಿತಾಂಶದ ಕುರಿತು ಪ್ರಕಟಿಸಲು ನೆಹರು ಅಧಿಕೃತರಾಗಿರುವರು. ನೆಹರು ಪತ್ರಿಕಾ ಪ್ರತಿನಿಧಿಗಳ ಪ್ರಶ್ನೆಗೆ ಉತ್ತರವಾಗಿ, ಅವರಿಬ್ಬರೂ ಚೀನ ಭಾರತಗಳ ಹಾಗೂ ಇಡೀ ಜಗತ್ತಿನ ವಿಷಯ ಮಾತನಾಡಿದರೆಂದರು.

ಅನುಕೂಲವಿದ್ದವರು ಕರಾಚಿಯನ್ನು ಬಿಡಬಹುದು

ನಗರವನ್ನು ಬಿಟ್ಟುಹೋಗಲು ಅನುಕೂಲವಿದ್ದವರು ಕರಾಚಿಯನ್ನು ಬಿಟ್ಟುಹೋಗಬಹುದೆಂದು ಸರಕಾರ ಪ್ರಕಟಿಸಿದೆ.

ಮದ್ರಾಸಿನ ಶಾಲೆಗಳು ಬರಿದಾಗುವವು:-

ಯುದ್ಧ ಪರಿಸ್ಥಿತಿಯ ಮೂಲಕ ಮದ್ರಾಸು ನಗರದ ಎಲ್ಲಾ ಕಾಲೇಜುಗಳನ್ನು (ಜ್ಯೂನಿಯರ್) ಮಾರ್ಚಿ 1ನೆಯ ತಾರೀಕಿನಿಂದ ಬಂದುಮಾಡಬೇಕೆಂದೂ ವಾರ್ಷಿಕ ಪರೀಕ್ಷೆಗಳ ಫಲಿತಾಂಶವನ್ನು ಹಿಂದಿನ ಪರೀಕ್ಷೆಗಳ ಆಧಾರದ ಮೇಲೆ ನಿರ್ಣಯ ಮಾಡಬೇಕೆಂದೂ ವಿಶ್ವವಿದ್ಯಾಲಯದವರು ಸಲಹೆ ಕೊಟ್ಟಿರುವರು.

NOTICE

In the Court of the District Munsiff of Mangalore

S. C. 855/1941

Mrs. Lucy Mascarenhas —*Plaintiff.*

and

Somappa Moolia. —*Defendant.*

Notice is hereby given that the above suit is posted for notice to the defendant on 11—3—1942. If he fails to appear on the said date in person or by pleader at 11 A. M. in the above court, he will be declared exparte.

Mangalore } A. B. D'Sa B.A., LL.B.
25–2–1942. } Pleader for Plaintiff.

ಜಾಹೀರು ನಾಮೆ

ಸಂ 1942ನೇ ಇಸವಿ ಫೆಬ್ರವರಿ ತಾರೀಕು 23 ರಲ್ಲು ಪುತ್ತೂರು ತಾಲೂಕು ಬಂದಾರು ಗ್ರಾಮದಲ್ಲಿರುವ ಬಟ್ಟಡ್ಕ ಹಂಮದೆ ಬ್ಯಾರಿಗಳ ವಾರಿಸ್ದಾರ ವಿಧವೆ ಬೀ ಪಾತುಮ್ಮಳು ತನ್ನ ಕಾದೆಯಲ್ಲಿರುವ ಅಪ್ರಾಪ್ತ ಮಕ್ಕಳ ರಕ್ಷಕಳಾಗಿ ಸದಾ ಸರ್ವರಿಗೆ ಜಾಹೀರುಮಾಡಿ ತಿಳಿಸುವದೇನಂದ್ರೆ:

ನನ್ನ ಗಂಡ ಮೃತಪಟ್ಟ ಬಟ್ಟಡ್ಕ ಹಂಮದೆ ಬ್ಯಾರಿಗಳಿಗೆ ಬಂದಾರು, ಬೆಳತ್ತೂರು, ಕೊಯ್ಲ, ಕಾಕ್ಕೆ, ಮಾಲಾಡಿ, ಉಪ್ಪಿನಂಗಡಿ, ಹಿರೆಬಂಡಾಡಿ, ಗೋಳಿತಟ್ಟು, ಕೊಡಾಲು, ಪಟ್ರಮೆ ಮೊಗ್ರು ಧರ್ಮಸ್ಥಳ ಗ್ರಾಮಗಳಲ್ಲಿ ಸ್ಥಿರಾಸ್ತಿ ಇದೆ. ಅದರ ಎಲ್ಲಾ ಆಡಳಿತೆಯನ್ನು ನಾನೇ ನೋಡುತ್ತೇನೆ. ಕಳದ 1941ನೇ ಇಸವಿ ತನಕ ನನ್ನ ಅಣ್ಣ ಅರ್ಕುಳ ಮೊಯಿದಿನ್ ಬ್ಯಾರಿ ಮಗ ಪುಂಜಾಲಕಟ್ಟೆ ಮೂಸೆಬ್ಯಾರಿ ಮತ್ತು ನನ್ನ ಅಳಿಯ ಸೇಂತಾರು ಇಬ್ರಾಯಿ ಬ್ಯಾರಿಯು ಆಡಳಿತೆ ಸಹಾಯಕರೆಂತ ತೋರಿಸಿಕೊಂಡು ಗೇಣಿಗಳನ್ನು ವಸೂಲ್ ಮಾಡಿ ಸರಿಯಾಗಿ ನನಗೆ ಕೊಡದೆಯೂ ನನ್ನ ಮುಖ್ಯ ಕೆಲವು ರಿಕಾರ್ಡುಗಳನ್ನು ವ ಗೇಣಿ ಚೀಟುಗಳನ್ನು ಅವರು ಸ್ವಾಧೀನ ಪಡೆದು ವಾಪಸು ಕೊಡದೆಯೂ ನನಗೆ ವಿರೋಧವಾಗಿ ವರ್ತಿಸಿ, ಒಕ್ಕಲುಗಳಿಗೆ ದುರ್ಬೋಧನೆ ವ ಪಿತೂರಿ ಕೊಟ್ಟು ಅತ್ಯಂತ ನಷ್ಟ ಮಾಡುವದ್ರಿಂದ ನಾನು ಅವರ ಸಹಾಯವನ್ನು ಈ ದಿವಸ ತ್ಯಜಿಸಿದ್ದೇನೆ. ನನ್ನ ಆಸ್ತಿಗಳ ಆಡಳಿತೆಯಲ್ಲಿ ವ ಗೇಣಿ ವಸೂಲಿಯಲ್ಲಿ—ಅವರಿಗೇನೂ ಯಾವ ಅಧಿಕಾರ ವ ಹಕ್ಕಿಲ್ಲಾ—ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ ನಾನು ಮಾಡಿದ ಕ್ರಮ ಸಂ. 463/39ನೇ ಮುಕದ್ದಮೆಯಲ್ಲಿ ಅವರು ನನ್ನಿಂದ ಅರ್ಜಿಗಳಿಗೆಂತ ಸಹಿಯಿಟ್ಟ ಖಾಲಿ ಕಾಗದಗಳನ್ನು ಇನ್ನೂ ಇಟ್ಟುಕೊಂಡಿರುತ್ತಾರೆ. ಅವರೀಗ ನೋಟು ವಗೈರೆ ಸುಳ್ಳು ರಿಕಾರ್ಡು ಸೃಷ್ಟಿಸಿ ಮಾಡುವದರಲ್ಲಿದ್ದಾರೆ. ಇತರರಿಗೇನೂ ಏನು ನನ್ನಿಂದ ಸಲ್ಲತಕ್ಕದ್ದಿಲ್ಲ—ವ ಏನೊಂದೂ ರಿಕಾರ್ಡು ಮಾಡಿಕೊಟ್ಟದ್ದಿಲ್ಲ—ನನಗೇನೂ ಸಾಲವಿಲ್ಲ—ಯಾರಿಂದಲೂ ಸಾಲ ಪಡೆದದ್ದಿಲ್ಲ—ರಿಕಾರ್ಡು ಮಾಡಿಕೊಡಲೂ ಇಲ್ಲ. ಆದ್ದರಿಂದ ಸೃಷ್ಟಿಸಿದ ರಿಕಾರ್ಡುಗಳು ಮಾಡಿದ್ರೆ ಅವುಗಳು ನನಗೂ ನನ್ನ ಮಕ್ಕಳಿಗೂ ಬಾಧಿಸತಕ್ಕದ್ದಲ್ಲ—ಮಹಾಜನರು ಮೋಸಕ್ಕೆ ತುತ್ತಾಗದಂತೆ ಮುಂದಾಗಿ ತಿಳಿಸಿದ್ದೇನೆ. ನನಗೆ ಬರತಕ್ಕ ಸರ್ವ ಗೇಣಿ ನನಗೇ ಮಾತ್ರ ಕೊಟ್ಟರೆ ತೀರ್ಥು. ನನ್ನ ಹಿರಿಯ ಮಗ 18 ವರುಷ ಪ್ರಾಯದ ಮೈದುಕುಂಞ ಮತ್ತು ನನ್ನ ಅಳಿಯ ಎಚ್. ಅಬ್ದುಲ್ಲ ರಹಿಮಾನ್ ಕೂಡೆ ನಾನು ಹೇಳಿ ಕಳುಹಿಸಿದ್ರೆ ಮಾತ್ರ ಗೇಣಿ ನನಗೆ ಕೊಡತಕ್ಕದ್ದು. ಒಕ್ಕಲುಗಳಿಗೆಲ್ಲಾ ಈ ಸಂಗ್ತಿ ತಿಳಿದಿರಲಿ. ನನ್ನ ಸ್ವಹಸ್ತ ರಶೀದಿ ಅಲ್ಲದೆ ವ ಸಂಪೂರ್ಣ ಅಬ್ದುಲ್ ರಹಿಮಾನನ ಸಾಕ್ಷಿ ಇಲ್ಲದೆ ಗೇಣಿ ವ ರಶೀದಿ ಕೊಟ್ಟರೆ ಅದು ಸಿಂಧುವಲ್ಲ—ಸರ್ವರಿಗೂ ಈ ಸಂಗ್ತಿ ಜಾಗ್ರತೆಯಿಂದ ತಿಳಿದಿರಲಿ.

ಬಂದಾರು ಗ್ರಾಮ } ಇದು ಈ ಮೂರು ಬಳೆ
23–2 '42 } ಬಿ ಪಾತುಮ್ಮಳ ರುಜು.

A. R. P.

APPEAL

It has been decided to extend A. R. P. measures to the town of Mangalore. The approved scheme requires the voluntary services of a large number of Wardens. It is hoped that a large number of public-spirited gentlemen will come forward to offer their services for this noble and humanitarian service.

Persons physically fit and over 21 years of age are required for work as Wardens. They may either apply in person daily at 11 A. M. at the office of the District Magistrate or by post. The application should state age, profession and complete address with ward and house number. Applications by post should reach the District Magistrate by 28–2–'42. Selected candidates will be given instruction by trained A. R. P. Instructors. Wardens will as far as possible be appointed to Air Raid Wardens' posts near their residences.

M. KARAMATULLAH,
District Magistrate.

ಜಿಲ್ಲಾ ಸಮಾಚಾರಗಳು

ಮಂಗಳೂರು

ಮಂಗಳೂರು ಕೋ-ಒಪರೇಟಿವ್ ಟೌನ್ ಬೇಂಕ್ ಲಿಮಿಟೆಡ್

ರಜತ ಮಹೋತ್ಸವ

ತಾ. 22ನೇ ಆದಿತ್ಯವಾರ, ಈ ಬ್ಯಾಂಕಿನ ರಜತ ಮಹೋತ್ಸವವು ಕೋ-ಒಪರೇಟಿವ್ ಸೊಸೈಟಿಗಳ ರಿಟಾಯರ್ಡ ರಿಜಿಸ್ಟ್ರಾರರಾದ ರಾವ್ ಬಹದ್ದೂರ್ ಎಮ್. ಗಿರಿಯಪ್ಪ, ಇವರ ಅಧ್ಯಕ್ಷತೆಯಲ್ಲಿ ಜರಗಿತು. ಲಘು ಫಲಾಹಾರ ಬ್ಯಾಂಕಿನ ಸೆಕ್ರೆಟರಿಗಳಾದ ಶ್ರೀ ಯು ಶ್ರೀನಿವಾಸ ರಾಯರ ಭಾವಚಿತ್ರ ಅನಾವರಣ, ಸ್ವಾಗತ ಭಾಷಣ, ಬ್ಯಾಂಕಿನ ಸಂಕ್ಷಿಪ್ತ ಇತಿಹಾಸ ವಾಚನಗಳಾಗಿ ಅಧ್ಯಕ್ಷರ ಭಾಷಣ, ಸಭಿಕ ವಂದನಾರ್ಪಣೆಯೊಡನೆ ಉತ್ಸವವು ಕೊನೆಗೊಂಡಿತು

ಸರ್ಜನ್ ಜನರಲ್

ನಮ್ಮ ಸಂಸ್ಥಾನದ ಸರ್ಜನ್ ಜನರಲರಾದ ಮೇಜರ್ ಜನರಲ ಹ್ಯೂಸ್ಟಕ್ ಸಿ ಐ ಎಸ್. ಸಿ ಬಿ ಇ ಒ ಬಿ ಇ ಕೆ ಎಚ್ ಎಸ್ ಅವರು, ಕಳೆದ ತಾ. 17ನೇ ಮೈಲಿನಲ್ಲಿ ಇಲ್ಲಿಗೆ ದಯೆಮಾಡಿಸಿ, ಕೆನರಾ ಹೈಸ್ಕೂಲಲ್ಲಿ ಜಿಲ್ಲಾ ಮೆಡಿಕಲ್ ಸಂಘದವರು ಏರ್ಪಡಿಸಿದ್ದ ಮೀಟಿಂಗಿನಲ್ಲಿ ಭಾಗವಹಿಸಿ ಮರುದಿನ ಸ್ಥಳೀಯ ಆಸ್ಪತ್ರೆಗಳನ್ನು ಸಂದರ್ಶಿಸುವದರೊಡನೆ, ಕಾರ್ಕಳ ಮೂಡಬಿದ್ರೆಗೂ ತೆರಳಿ ಅಲ್ಲಿಂದ ಮರಳಿ, ತಾ 20ರಂದು ಮೈಲಿನಲ್ಲಿ ಹಿಂದಿರುಗಿದರು

ನೇಣಿನಿಂದ ಮರಣ

ಸ್ಥಳೀಯ ಶ್ರೀ ಗೋಕರ್ಣನಾಥ ದೇವಸ್ಥಾನದ ಬಳಿ ಚಿಕ್ಕ ವಯಸ್ಸಿನವನೊಬ್ಬನು ನೇಣಿನ ಮೂಲಕ ಮೃತನಾದನೆಂದೂ ಪೋಲೀಸ್ ತನಿಖೆ ನಡೆದಿದೆ ಎಂದೂ ತಿಳಿದುಬಂದಿದೆ.

ರುಜಾರಿಯೋ ಸ್ಕೌಟ್ ದಳದ ವಾರ್ಷಿಕೋತ್ಸವ

ಇದು ಈಚೆಗೆ ರೆ ಫಾ ಐ ಫೆರ್ನಾಂಡಿಸ್, ಎಸ್ ಜೆ, ಇವರ ಅಧ್ಯಕ್ಷತೆಯಲ್ಲಿ ಜರಗಿತು

ಶಾಲಾ ವರ್ಧಂತಿ

ಜೆಪ್ಪು ಸೈಂಟ್ ಜೋನ್ಸ್ ಹಾಯರ್ ಎಲಿಮೆಂಟರಿ ಶಾಲೆಗಳ ವಾರ್ಷಿಕ ವರ್ಧಂತಿ ಉತ್ಸವವು, ಈಚೆಗೆ ಶ್ರೀ ಯೆಲ್ ಸಿ. ಪಾಯಿಸ್, ವೈಸ್ ಚೆಯರ್‌ಮೇನ್, ಮುನ್ಸಿಪಲ್ ಕೌನ್ಸಿಲ್, ಮಂಗಳೂರು ಇವರ ಅಧ್ಯಕ್ಷತೆಯಲ್ಲಿ ಜರಗಿತು.

ದಿವಂಗತರಾದರು

ನಿವೃತ್ತ ಟ್ರೆಜರಿ ಡೆ. ಕಲೆಕ್ಟರರಾದ ರಾವ್ ಸಾಹೇಬ್ ಎಕ್ಸ್ ಕೋಜೋಸರವರೂ ನಿವೃತ್ತ ಡಿ ಫೋರಿಸ್ಟ್ ಆಫೀಸರರೂ ಮಾಜಿ ಎಂ ಎಲ್ ಸೀ ಗಳೂ ಆದ ರಾವ್ ಸಾಹೇಬ್ ಇ ಸಿ ಎಂ. ಮಸ್ಕರೆಂಞಸ್ ಅವರೂ ದಿವಂಗತರಾದರು ಮೃತರ ಆತ್ಮಗಳಿಗೆ ಚಿರಶಾಂತಿ ಇರಲಿ!

ಮದ್ರಾಸ್ ವಿಶ್ವವಿದ್ಯಾನಿಲಯದ ಸೆನೆಟ್

ಮದ್ರಾಸ್ ವಿಶ್ವವಿದ್ಯಾನಿಲಯದ ಸೆನೆಟ್ಟಿಗೆ, ಒಬ್ಬ ಸದಸ್ಯರಾಗಿ ಶ್ರಿ ಕೆ ಈಶ್ವರ ಎಂ ಎಲ್. ಎ. ಅವರು ಮದ್ರಾಸು ಎಸೆಂಬ್ಲಿ ಮೆಂಬರರ ತಂಡದಿಂದ ನಾಮಕರಣ ಹೊಂದಿದ್ದಾರೆಂದು ತಿಳಿದಿದೆ

ಕಬ್ ಮಾಸ್ತರರ ತರಬೇತಿ

ದ ಕ ಜಿಲ್ಲಾ ಸ್ಕೌಟ್ ಕೌನ್ಸಿಲಿನವರು ಏರ್ಪಡಿಸಿದ ಕಬ್ ಮಾಸ್ತರರ ತರಬೇತಿ ಶಿಬಿರವು ಫೆಬ್ರವರಿ ೨೭ರಿಂದ ಆರಂಭವಾಗಿ ಮಾರ್ಚ ೫ರ ವರೆಗೆ ಇರುವುದೆಂದು ತಿಳಿದಿದೆ

ಪಂದ್ಯಾಟ

ದ. ಕ. ಜಿಲ್ಲಾ ಎಥ್ಲೆಟಿಕ್ ಎಸೋಸಿಯೇಶನಿನ ಆಶ್ರಯದಲ್ಲಿ ವರ್ಷಂಪ್ರತಿ ಜರಗಲಿರುವ ಪಂದ್ಯಾಟಗಳು ತಾ. ೨೮ ಮತ್ತು ೨೯ರಂದು ಸ್ಥಳೀಯ ಮೈದಾನಿನಲ್ಲಿ ಜರಗಿದವು.

ರಿಕ್ರೂಟಿಂಗ್ ಆಫೀಸರರು

ಮದ್ರಾಸಿನ ಏರ್‌ಫೋರ್ಸ ರಿಕ್ರೂಟಿಂಗ್ ಆಫೀಸರರು ಮಾರ್ಚ ಮೊದಲನೆಯ ವಾರದಲ್ಲಿ ಮಂಗಳೂರಿಗೆ ಆಗಮಿಸಲಿರುವರೆಂದು ತಿಳಿದಿದೆ.

ಮುನ್ಸಿಪಲ್ ಸಭೆ

ಮಂಗಳೂರು ಮುನ್ಸಿಪಲ್ ಕೌನ್ಸಿಲಿನ ಮುಂದಿನ ಸಭೆ ಮಾರ್ಚ ೩ರಂದು ಸಂಜೆ ಜರಗಲಿದೆ.

ಆಟ

ಮಂಗಳೂರು ಟೌನು ಯುದ್ಧ ಕಾರ್ಯದ ಆರ್ಥಿಕ ಸಮಿತಿಯವರ ಆಶ್ರಯದಲ್ಲಿ ದಶಾವತಾರದ ಜೋಡಾಟಗಳು ಮದ್ರಾಸ್ ಗವರ್ನರರ ಯುದ್ಧನಿಧಿಯ ಬಗ್ಗೆ ಬರುವ ಶನಿವಾರ ಮತ್ತು ಆದಿತ್ಯವಾರಗಳಲ್ಲಿ ಮಂಗಳೂರು ಪೋಲೀಸು ಲೈನು ಮೈದಾನಿನಲ್ಲಿ ಜರಗುವವು. ಕಟೀಲು ಮತ್ತು ಕದ್ರಿ ಮೇಳಗಳು ಭಾಗವಹಿಸುವವು ಎಂದು ಸಂಬಂಧ ಪಟ್ಟವರು ತಿಳಿಸುತ್ತಾರೆ.

ಶ್ರೀ ಬಾಲಮಾರುತಿ ವ್ಯಾಯಾಮ ಮಂಡಲ, ಮಂಗಳೂರು

ವ್ಯಾಯಾಮ ಶಿಕ್ಷಣ ಶಿಬಿರ

ಇದೇ ಬರುವ ಎಪ್ರಿಲ್ ತಿಂಗಳಲ್ಲಿ ವ್ಯಾಯಾಮ ಶಿಕ್ಷಕರನ್ನು ತರಬೇತಿಗೊಳಿಸುವರೆ ಒಂದು ತಿಂಗಳ ಅವಧಿಯ ಶಿಕ್ಷಣ ಶಿಬಿರವು ನಡೆಸಲ್ಪಡುವುದು ಸಂಸ್ಥೆಯು ಕೈಕೊಂಡ ಈ ಉಪಯುಕ್ತ ಕಾರ್ಯದಲ್ಲಿ ಜಿಲ್ಲೆಯ ಮಹಾ ಜನರು ಸಹಕರಿಸಬೇಕಾಗಿ ಕೋರಿಕೆ. ಶಿಬಿರಕ್ಕೆ ಸಂಬಂಧಪಟ್ಟ ಸರ್ಕ್ಯುಲರ್‌ಗಳಿಗೂ, ವ ಇತರ ಮಾಹಿತಿಗೂ, ಮಂಡಲದ ಸೆಕ್ರೆಟರಿ, ಶ್ರೀ ವಿಠೋಬ ದೇವಸ್ಥಾನದ ರಸ್ತೆ, ಮಂಗಳೂರು, ಇವರಿಗೆ ಬರೆದು ತಿಳಿಯುವುದು.

ವರ್ಷಾವಧಿ ಮಹೋತ್ಸವ

ಸ್ಥಳೀಯ ಶ್ರೀ. ಶಾಂತೀಶ್ವರ ಸ್ವಾಮಿ ಚೈತ್ಯಾಲಯದಲ್ಲಿ ಜರಗುವ ಕಾಲಾವಧಿ, ಮಹೋತ್ಸವವು ಇದೇ ಬರುವ ಮಾರ್ಚ ತಾ ೧ರಿಂದ ತಾ ೩ರ ವರೆಗೆ ಮೂರು ದಿನಗಳ ವರೆಗೆ ವೈಭವದಿಂದ ನಡೆಯಲಿದೆ

ಹರಿಜನೋದ್ಧಾರಕರಲ್ಲಿ ವಿನಂತಿ

"ಹರಿಜನರ ನಿಜವಾದ ಉದ್ಧಾರಕ್ಕೆ, ಅವರ ಆರ್ಥಿಕ ಸ್ಥಿತಿಯು ಸುಧಾರಿಸಲ್ಪಡಬೇಕು. ಆರ್ಥಿಕ ಸ್ಥಿತಿಯಲ್ಲಿ ಹರಿಜನರು ಬಹಳ ಕೆಳಮಟ್ಟದಲ್ಲಿದ್ದಾರೆ. ಅವರಲ್ಲಿ ಹೆಚ್ಚಿನವರು ದಿನಕ್ಕೆ ಒರಡು ಊಟವನ್ನು ಕೂಡ ಸರಿಯಾಗಿ ಮಾಡುವದಿಲ್ಲ. ಈ ಪರಿಸ್ಥಿತಿಯಿಂದ ಹರಿಜನರನ್ನು ಮೇಲಕ್ಕೆತ್ತಬೇಕಾದರೆ ಹರಿಜನರಿಗೆ ಮುಖ್ಯವಾಗಿ ಕೈಗಾರಿಕೆಗಳನ್ನು ಕಲಿಸಬೇಕು. ದಕ್ಷಿಣಕನ್ನಡ ಜಿಲ್ಲಾ ಹರಿಜನ ಲೇಬರ್ ಲೀಗಿನವರು ಕೆಲವು ಮಂದಿ ಹರಿಜನ ತರುಣರಿಗೆ ಬೀಡಿಕಟ್ಟುವ ಕೈಗಾರಿಕೆಗಳನ್ನು ಇದೇ ಬರುವ ಮಾರ್ಚ ತಿಂಗಳಲ್ಲಿ ತರಬೇತಿ ಮಾಡಬೇಕೆಂದು ನಿರ್ಧರಿಸಿದ್ದಾರೆ ಈ ಕೈಗಾರಿಕೆಯನ್ನು ಕಲಿಸುವ ಏರ್ಪಾಡು ಮಾಡುವುದಕ್ಕಾಗಿ ಕೂಡ, ಜನಸಹಾಯ ಧನಸಹಾಯವಿಲ್ಲದೆ ಸಾಧ್ಯವಿಲ್ಲ. ಹರಿಜನರ ಏಳಿಗೆಯಲ್ಲಿ ಆಸಕ್ತರಾದ ನಮ್ಮದೇಶಬಾಂಧವರು ಈ ಕಾರ್ಯಕ್ಕೆ ತಮ್ಮಿಂದ ಕೂಡಿದಷ್ಟು ಧನಸಹಾಯ ಮಾಡಬೇಕೆಂದು ಬೇಡುತ್ತೇವೆ. ನಮ್ಮ ಜಿಲ್ಲೆಯಲ್ಲಿರುವ ಬೀಡಿ ಕಾರ್ಖಾನೆಗಳ ಮಾಲಿಕರು ಉಮೇದ್ವಾರರಲ್ಲಿ ಕೆಲವರನ್ನಾದರೂ, ತಮ್ಮ ಕಾರ್ಖಾನೆಗಳಲ್ಲಿ ತರಬೇತಿ ಮಾಡುವ ಕೃಪೆಮಾಡಿದರೆ ನಮಗೆ ತುಂಬಾ ಸಹಾಯಮಾಡಿದಂತಾಗುವುದಲ್ಲದೆ ಕೆಲವು ಹರಿಜನ ಕುಟುಂಬಗಳಿಗೆ ಜೀವನದ ದಾರಿಯನ್ನು ಕಲ್ಪಿಸಿಕೊಟ್ಟ ಪುಣ್ಯವು ಆ ಕಾರ್ಖಾನೆಗಳ ಮಾಲಿಕರಿಗೆ ಬರುವುದು" ಹೀಗೆಂದು ದ. ಕ ಜಿಲ್ಲಾ ಹರಿಜನ ಲೇಬರ್ ಲೀಗಿನವರು ವಿನಂತಿಸಿಕೊಂಡಿರುವರು.

ಉಚ್ಚಿಲ

ಇದೇ ಕಳೆದ ವಾರ ಉಚ್ಚಿಲ ಬೋವಿ ಶಾಲೆಯಲ್ಲಿ ದ. ಕ ಮಳೆಯಾಳ ಬೋವಿ ಮಹಾಜನ ಸಂಘದ ತೃತೀಯ ವಾರ್ಷಿಕ ಮಹಾ ಸಭೆಯು ಸಂಘದ ಅಧ್ಯಕ್ಷ ಶ್ರೀ. ಯು. ಅಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು. ವರದಿ ವಾಚನ, ಜಮಾ ಖರ್ಚುಗಳ ಮಂಜೂರಾತಿ, ಸಂಘದ ಮೆಂಬರರಾಗಿದ್ದು ಮೃತರಾದ ಮಾಣಿಕ್ಯೋತು, ಕರಿಯಕ್ಕೆ ಕೊಟ್ಯನ್ ಮತ್ತು ಎಸ್. ಸಿ ಉದ್ಯಾವರ ಇವರ ಆತ್ಮಕ್ಕೆ ಚಿರಶಾಂತಿ ದೊರಕಲೆಂದು ಪ್ರಾರ್ಥಿಸಿ ದುಃಖಿತರಾವಾಗಿ ಅಧ್ಯಕ್ಷರ ಭಾಷಣವಾಗಿ ಸಭೆಯು ಮುಕ್ತಾಯವಾಯಿತು.

MANGALORE MUNICIPALITY

Notice under Section 78 (3) of the Madras District Municipalities Act V of 1920 as amended.

MANGALORE MUNICIPALITY

It is hereby notified for the information of the public that the Municipal council in its Resolution No. 4, dated the 17th December 1941, resolved to notify its intention to increase the Lighting tax on all the lands & buildings in the Mangalore Municipality from ½% per half year to 1% per half year of the annual value of lands and buildings in the Municipality from 1st April 1942. The matter of levying the tax at the aforesaid amended rate will be further proceeded with by the council after one month from the date of publication of this notice in South Kanara district Gazette and any objection received within the period of the said one month or before the date of the meeting of the council convened for the purpose of considering the confirmation of the levy will be considered by the Council.

This notice was circulated separately with this newspaper.

Municipal office, Mangalore. 22-2-42. — M. Narayana Shenoy, Commissioner, M. M.

ತಿದ್ದುಪಡಿಯಾದ ಮದ್ರಾಸು ಡಿಸ್ಟ್ರಿಕ್ಟ್ ಮುನಿಸಿಪಾಲಿಟಿಗಳ 1920 ನೇ ಇಸವಿ Vನೇ ಆಕ್ಟಿನ ಸೆಕ್ಷನ್ 78 (3) ಪ್ರಕಾರ ಪ್ರಕಟಿಸಲ್ಪಟ್ಟ ನೋಟೀಸು

ಮಂಗಳೂರು ಮುನಿಸಿಪಾಲಿಟಿ

ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸುವುದೇನೆಂದರೆ —

ಮಂಗಳೂರು ಮುನಿಸಿಪಲ್ ಕೌನ್ಸಿಲು ತನ್ನ 1941ನೇ ಯಿಸ್ವಿ ದಶಂಬರ ತಿಂಗಳ ತಾರೀಕು 17ರಲ್ಲು ನಡೆದ ಸಭೆಯ 4ನೇ ನಿರ್ಣಯದ ಪ್ರಕಾರ 1942ನೇ ಯಿಸ್ವಿ ಎಪ್ರಿಲು ತಿಂಗಳ 1ನೇ ತಾರೀಕಿನ ಲಾಗ್ಯಾತು ಮಂಗಳೂರು ಮುನಿಸಿಪಾಲಿಟಿಯೊಳಗಿರುವ ಪ್ರತಿಯೊಂದು ಸ್ಥಳ ಮತ್ತು ಕಟ್ಟೋಣಗಳ ವರ್ಷಾವಧಿ ಮೌಲ್ಯದ ಮೇಲೆ ಪ್ರತಿಯೊಂದು ಅರ್ಧ ವರ್ಷಕ್ಕೆ ಈಗ ಇದ್ದ ಶೇಕಡಾ ½ ದರದ ದೀಪದ ತೆರಿಗೆಯನ್ನು ಶೇಕಡಾ 1ರ ದರದಂತೆ ಹೆಚ್ಚಿಸುವ ನಿರ್ಧಾರವನ್ನು ಪ್ರಕಟಿಸುವುದಾಗಿ ನಿಶ್ಚಯಿಸಿರುತ್ತದೆ ಈ ರೀತಿ ಹೆಚ್ಚಿನ ದರದಲ್ಲಿ ತೆರಿಗೆಯನ್ನು ಹೊರಿಸುವ ವಿಷಯವನ್ನು ಮಂಗಳೂರು ಮುನಿಸಿಪಲ್ ಕೌನ್ಸಿಲಿನವರು ಈ ನೋಟೀಸನ್ನು ದಕ್ಷಿಣ ಕನ್ನಡ ಜಿಲ್ಲಾ ಗಜೇಟಿನಲ್ಲಿ ಪ್ರಕಟಿಸಿದ ತಾರೀಕಿನಿಂದ ಒಂದು ತಿಂಗಳ ನಂತರ ಯಾ ಈ ರೀತಿ ತೆರಿಗೆಯನ್ನು ಕೆರುವ ನಿರ್ಧಾರವನ್ನು ಮಾಡುವ ಬಗ್ಗೆ ಕೌನ್ಸಿಲಿನವರು ಸಭೆಯನ್ನು ಮಾಡುವುದರೊಳಗಾಗಿ ಪುನಃ ವಿಮರ್ಶಿಸುವರು. ಈ ಒಂದು ತಿಂಗಳ ಸಮಯದೊಳಗೆ ಆಕ್ಷೇಪಣೆಗಳೇನಾದರೂ ಪಡೆದ್ದಲ್ಲಿ ಅಂಥವುಗಳು ಕೌನ್ಸಿಲಿನವರಿಂದ ಗಮನಿಸಲ್ಪಡುವುವು. ಈ ನೋಟೀಸು ಈ ಮೊದಲೇ ಈ ಪತ್ರದಲ್ಲಿ ಪ್ರಚಾರ ಮಾಡಲ್ಪಟ್ಟಿರುವುದು.

ಮುನ್ಸಿಪಲ್ ಆಫೀಸು, ಮಂಗಳೂರು, ತಾ. 23—2—42. — ಯಂ. ನಾರಾಯಣ ಶೆಣ್ಯೆ, ಕಮಿಶನರ್, ಮು. ಮು.

ಬಾಲಾಜಿ ಟೋಕೀಸ್

ಸ್ಥಳೀಯ ಬಾಲಾಜಿ ಟೋಕೀಸಿನಲ್ಲಿ ತಾ. 26 ರಿಂದ ೩ನೇ ವಾರ 'ವಸಂತಸೇನಾ' ಎಂಬ ಕನ್ನಡ ಚಿತ್ರವು ಯಶಸ್ವಿಯಾಗಿ ನಡೆಯುತ್ತದೆ

ಉಪ್ಪಿನಂಗಡಿ

ಮಖೆ ಜಾತ್ರೆಯು ಇದೇ ತಾ 13ರಿಂದ ಆರಂಭವಾಗಿದೆ ಪುತ್ತೂರಿಂದ ತಹಶಿಲ್ದಾರರೂ ಡಿ ಕಲೆಕ್ಟರರೂ ಆಗಮಿಸಿದ್ದರು. ಯುದ್ಧ ಕಮಿಟಿಯ ಪರವಾಗಿ ಭಾಷಣ ಏರ್ಪಾಡು ನಡೆದಿತ್ತು.

ಕಾರ್ಕಳ

ಸಹಾಯ ನಾಟಕ

ಇಲ್ಲಿನ ಯಸ್ ಯನ್. ಹರಿದಾಸರವರು ವ್ಯವಸ್ಥಾಪಕರಾಗಿ ಆರಂಭವಾಗಿರುವ ಸಂಗೀತ ಕಲಾ ಮಂದಿರದ ಸಹಾಯಾರ್ಥ ಸ್ಥಳೀಯ ಕಿರಿಯ ಕೂಟದವರು ತಾ ೨1ರ ದಿನ ನರವೀರ ನೇತಾಜಿ ಎಂಬ ಐತಿಹಾಸಿಕ ನಾಟಕವನ್ನು ಪ್ರದರ್ಶಿಸಿದರು

ಹಿಂದೀ ಕ್ಲಾಸುಗಳು

ಬರುವ ಆಗೋಸ್ತು ತಿಂಗಳ ಹಿಂದೀ ಪರೀಕ್ಷೆಗಳನ್ನು ಕೊಡಲಿರುವವರಿಗಾಗಿ ಹೊಸ ಹಿಂದೀ ಕ್ಲಾಸುಗಳ ವ್ಯವಸ್ಥೆಯಾಗುತ್ತ ಇದೆ ಮಹಿಳೆಯರಿಗಾಗಿ ಪ್ರತ್ಯೇಕ ಕ್ಲಾಸುಗಳ ವ್ಯವಸ್ಥೆಯಾಗುವದು ಭಾಷಾಭ್ಯಾಸಿಗಳು ಹೆಚ್ಚಿನ ವಿವರಗಳನ್ನು ಸ್ಥಳೀಯ ಹಿಂದೀ ಪ್ರಚಾರಕ ಶ್ರೀ. ಕಟಪಾಡಿ ಶ್ರೀನಿವಾಸ ಶೆಣೈಯವರಿಂದ ಪಡೆಯಬಹುದು

ವರ್ಧಂತಿ ಉತ್ಸವ

ಸ್ಥಳೀಯ ಹಿಂದು ಬಾಲಿಕಾ ಪಾಠಶಾಲೆಯ ವರ್ಧಂತಿ ಉತ್ಸವವು ಇದೇ ತಾ 1 3 42ರ ದಿನ ಬಾಲೀ. ಪಾಠಶಾಲೆಗಳ ಸಬ್ ಅಸಿಸ್ಟಾಂಟ್ ಇನ್ಸಪೆಕ್ಟ್ರೆಸ ಶ್ರೀಮತಿ ಇ ಡ್ರಿಟೊ ಬಿ ಎ. ಯಲ್. ಟಿ ಯವರ ಅಧ್ಯಕ್ಷತೆಯಲ್ಲಿ ನಡೆಯುವದು. ಕುಮಾರಿ ಕೆ ಧರ್ಮಾಬಾಯಿಯವರು ಶಾಲೆಯ ಸ್ವಸ್ತಿ ವಾಚನ ಮಾಡಲಿರುವರು.

ಬ್ರಹ್ಮಾವರ

ರಜತ ಮಹೋತ್ಸವ

ಇಲ್ಲಿನ ಕೊಸ್ಮೊಪೊಲಿಟನ್ ಹೈಯರ. ಎಲಿಮೆಂಟರಿ ಶಾಲೆಯ ರಜತ ಮಹೋತ್ಸವ ಮತ್ತು ಹಳೆ ವಿದ್ಯಾರ್ಥಿ ಸಂಘದ ದಿನಾಚರಣೆಯು ತಾ. ೧ರಂದು ಶ್ರೀ ಸಂಜೀವ ಭಟ್ಟರ ಅಧ್ಯಕ್ಷತೆಯಿಂದ ಜರಗಿತು.

ಕರ್ನಾಟಕ

ಶ್ರೀ ಉತ್ತಂಗಿ ಚನ್ನಪ್ಪನವರ ಷಷ್ಠ್ಯಬ್ದಿ ಪೂರ್ತಿ

ಕನ್ನಡ ಸಾಹಿತ್ಯ ಸಂಶೋಧನೆಯಲ್ಲಿ ಬಹು ಪರಿಶ್ರಮದಿಂದ ಕೆಲಸಮಾಡಿ, ಮಹಾಕವಿ ಸರ್ವಜ್ಞನ ವಚನಗಳನ್ನು ಪ್ರಕಟಿಸಿ, ಕನ್ನಡ ನಾಡು ನುಡಿಗಳಿಗೆ ಮಹದುಪಕಾರ ಮಾಡಿದ ಪೂಜ್ಯ (ರೆವ್ಹರೆಂಡ್) ಉತ್ತಂಗಿ ಚನ್ನಪ್ಪನವರ ಷಷ್ಠ್ಯಬ್ದಿ ಪೂರ್ತಿ ಸಮಾರಂಭವು ನಿವೃತ್ತ ಕನ್ನಡ ಮಂತ್ರಿಗಳಾದ ಸರ್ ಸಿದ್ದಪ್ಪ ಕಂಬಳಿಯವರ ಅಧ್ಯಕ್ಷತೆಯಲ್ಲಿ ಹುಬ್ಬಳ್ಳಿಯಲ್ಲಿ ಬೇಗನೆ ನೆರವೇರಲಿದೆಯೆಂದು ಕೇಳುತ್ತೇವೆ. ಆ ಸಮಯಕ್ಕೆ ಭಾಷಣ ಮಾಡಲು ಸುಪ್ರಸಿದ್ಧ ಸಾಹಿತಿಗಳನೇಕರು ಆಮಂತ್ರಿತರಾಗಿರುವರೆಂದೂ ತಿಳಿದುಬರುತ್ತದೆ.

ಶಾಂತಿನಿಕೇತನದಲ್ಲಿ ಕನ್ನಡ ಭಾಷಣ

ಶಾಂತಿನಿಕೇತನದ ಹಿಂದೀ ಸಮಾಜದ ಆಶ್ರಯದಲ್ಲಿ ಶ್ರೀ. ಎ. ನಾರಾಯಣ ಸ್ವಾಮಿ ಅಯ್ಯರ್ ಇವರು ಕನ್ನಡ ಸಾಹಿತ್ಯ ಸಂಸ್ಕೃತಿಗಳ ವಿಷಯ ಉಪನ್ಯಾಸ ಮಾಡಿದರು. ಬಸವಣ್ಣನವರ ಕೆಲವು ವಚನಗಳು ಮತ್ತು ಬೇರೆಯವರ ಕೆಲವು ಕವನಗಳನ್ನು ಓದಿ ವಿವರಿಸಿದರು.

ಸಿನೆಮಾ ಪುಟ

ಲೀಲಾಚಿಟ್ನಿಸಳು ಸತ್ತು ಬದುಕಿದಳೆ?

ಪ್ರಸಿದ್ಧ ಸಿನೆಮಾ ನಟಿ ಲೀಲಾ ಚಿಟ್ನೀಸಳ ಕುರಿತು ಕಳೆದ ವಾರ ಹಲವು ತರದ ಹಲವು ಸುದ್ದಿಗಳು ದೇಶ ಸರ್ವತ್ರ ಹರಡಿತ್ತು. ಆ ಸುದ್ದಿಗಳಲ್ಲೆಲ್ಲಾ ಕೊನೆಯ ಸುದ್ದಿ ಆಕೆ ಮೃತಪಟ್ಟಳೆಂದು. ಆದರೆ ಈಗ ಆ ಸುದ್ದಿ (ಮೃತಪಟ್ಟದ್ದು) ಸತ್ಯವಲ್ಲವೆಂದು, ಬೊಂಬಾಯಿಯ ಹಾಗೂ ಮದ್ರಾಸಿನ ಪತ್ರಿಕೆಗಳೇ ಬರೆದಿವೆ. ಹಾಗಾಗಿ ಲೀಲಾ ಚಿಟ್ನಿಸಳು ಒಮ್ಮೆ ಸತ್ತು ಬದುಕಿದಳು. ಹೀಗೆ ಸತ್ತು ಬದುಕಿದವರಿಗೆ ಆಯುಷ್ಯ ಹೆಚ್ಚುವುದೆಂದು ಹೇಳಿಕೆಯಿದೆ. ಲೀಲಾ ಚಿಟ್ನಿಸಳ ಕುರಿತು ಗಾಬರಿಗೊಳಿಸುವ ಸುದ್ದಿಗಳನ್ನು ಕೇಳಿ, ಇನ್ನಷ್ಟು ಗಾಬರಿಗೊಂಡ ಸಿನೆಮಾ ಪ್ರೇಮಿಗಳು ನಿಜವಾಗಿಯೂ ಆಕೆಯ ಕುರಿತು ತಮಗಿರುವ ಅಭಿಮಾನವನ್ನೇ ವ್ಯಕ್ತಪಡಿಸಿದ್ದಾರೆ, ಆದುದರಿಂದ ಅವಳು ಆಯುಷ್ಮಂತಳಾಗಿರಬೇಕೆಂದು ಸಹಜವಾಗಿ ಬಯಸಿದ್ದಾರೆ. 'ಸಾವಿರ ಪವನುಗಳ ನಗು ಮೊಗ'ದ ಲೀಲಾ ಬಹುಕಾಲ ಬಾಳಿ ಆಕೆಯ ಆರಾಧಕರನ್ನು ಸಂತೋಷಪಡಿಸುತ್ತಿರಲಿ!

ಪ್ರಭಾತ ಕಂಪನಿಯ ಕಲಹ

ಪ್ರಭಾತ ಕಂಪನಿಯ ಪಾಲುಗಾರರಲ್ಲಿ ಕಲಹವುಂಟಾಗಿ, ಈಗ ಅದು ಒಂದು ನಿರ್ಣಯಕ್ಕೆ ಬರುವ ಕಾಲಬಂದಿದೆಯೆಂದೂ, ಶಾಂತರಾಮರೇ ಪ್ರಭಾತ ಕಂಪನಿಯನ್ನು ಕೊಂಡುಕೊಂಡು ಇತರರಿಗೆ ಕಂತುಪ್ರಕಾರ ಹಣ ಸಲ್ಲಿಸುವರೆಂದೂ ಸುದ್ದಿ.

ಮಜ್ಹಾರ್ ಖಾನನ ಪರಿಚಯ

ಮಜ್ಹಾರ್ ಖಾನನು ಧಾರ್ ಸಂಸ್ಥಾನದಲ್ಲಿ ಪೋಲೀಸ್ ಖಾತೆಯಲ್ಲಿ ಕೆಲಸಕ್ಕಿದ್ದ. ಚಿಕ್ಕಂದಿನಲ್ಲಿಯೇ ಆತನಿಗೆ ಒಳ್ಳೆಯ ಪ್ರತಿಭೆಯಿತ್ತು. ಈಗ ಸುಮಾರು ೧೦೦ಕ್ಕೆ ಮಿಕ್ಕಿದ ಚಿತ್ರಗಳಲ್ಲಿ ಆತನು ಅಭಿನಯಿಸಿದ್ದಾನೆ. ವೇಷಗಾರಿಕೆಯಲ್ಲಿ (Makeup) ಮಜ್ಹಾರ್ ಖಾನನು ಅತ್ಯಂತ ನುರಿತ ನಟನು. ಧ್ವನಿಚಿತ್ರಗಳು ಬರುವ ಮುನ್ನವೇ ಮಜ್ಹಾರ್ ಖಾನನು ಪ್ರಸಿದ್ಧನಾಗಿದ್ದನು. ಆತನ ಮೈಕಟ್ಟು, ಹಾವಭಾವ, ನಟನೆ, ವಿನಯಶೀಲತೆ ಇವುಗಳೆಲ್ಲಾ ಆತನನ್ನು ಕೀರ್ತಿ ಶಿಖರಕ್ಕೇರಿಸಿವೆ. ಆತನು ಯಾವ ಪಾತ್ರವಹಿಸಿದರೂ ಅದಕ್ಕೆ ಸರಿಯಾದ ವೇಷಗಾರಿಕೆ ಮಾಡುವುದರಲ್ಲಿ ಜಾಣ. ಹದಮೀರಿ ನಟಿಸುವುದಿಲ್ಲ. ಮೊದಮೊದಲು ಗಂಭೀರ ಪಾತ್ರವಹಿಸುತ್ತಿದ್ದವನು ಇತ್ತೀಚೆಗೆ ಹಾಸ್ಯ ಪಾತ್ರಾಭಿನಯಕ್ಕೂ ಆರಂಭಿಸಿದ್ದಾನೆ. ಈತನು ಸಂಯುಕ್ತ ಸಂಸ್ಥಾನಕ್ಕೆ ಸೇರಿದ. ಬೇರಿಲಿ ಎಂಬಲ್ಲಿ ೧೯೦೫ರಲ್ಲಿ ಜನ್ಮವೆತ್ತಿದನು. ಆತನಿಗೆ ಮೆಟ್ರಿಕ್‌ವರೆಗೆ ಶಿಕ್ಷಣವಾಗಿತ್ತು. ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಕೆಲಸ ಮಾಡುತ್ತಿದ್ದನು

ಬೊಂಬೇ ಟಾಕೀಸ್ ಕಥೆಗಳಲ್ಲಿ ಜಮೀನ್ದಾರರು

ಇಲ್ಲದೆ ಇಲ್ಲ. 'ಕಂಗನ್'ನಲ್ಲಿ ಜಮೀನ್ದಾರನೊಬ್ಬನು ಹುಡುಗಿಯೊಬ್ಬಳನ್ನು ಪ್ರೀತಿಸುತ್ತಾನೆ 'ಬಂಧನ್'ದಲ್ಲಿ ಜಾಗೀರ್ದಾರರನ ಮಗಳು ಶಾಲಾ ಉಪಾಧ್ಯಾಯನೊಬ್ಬನನ್ನು ಪ್ರೀತಿಸುತ್ತಾಳೆ. 'ಪುನರ್ಮಿಲನ್'ನಲ್ಲಿ ಜಮೀನ್ದಾರನ ಮಗನೊಬ್ಬನು ನರ್ತಕಿಯೊಬ್ಬಳನ್ನು ಪ್ರೀತಿಸುತ್ತಾನೆ. 'ಜೂಲಾ'ದಲ್ಲಿ ಜಮೀನ್ದಾರನ ಸೇವಕನು ನಾಯಕಿಯನ್ನು ಪ್ರೀತಿಸುವುದು. ಹೀಗೆ ಬಾಂಬೆ ಟಾಕೀಸಿಗೆ ಜಮೀನ್ದಾರ ರೋಗ ಹಿಡಿದಂತಿದೆ ಕಥೆಯಾದರೂ 'ಕಂಗನ್' 'ಬಂಧನ್'ದಂತೆ 'ಜೂಲಾ'ದ ಕಥೆಯೂ ಅದಕ್ಕೆ ಅಪವಾದವಿಲ್ಲ. ಆದರೂ ಬಾಂಬೇ ಟಾಕೀಸ್ ಚಿತ್ರಗಳ ಯಶಸ್ವಿತೆಗೆ ಕಾರಣವೇನು?

ಸುಲೋಚನಾ ಎಲ್ಲಿ?

ಒಮ್ಮೆ ಪ್ರಖ್ಯಾತ ನಟಿಯಾಗಿದ್ದ ಸುಲೋಚನಾ ಈಗ ಎಲ್ಲಿ? ಅಮರ್ ಪ್ರೊಡಕ್ಷನ್ಸಿನವರ 'ಅಂಖ್ ಮಿಚೋಲಿ' ಎಂಬ ಸಾಮಾಜಿಕ ಚಿತ್ರದಲ್ಲಿ ಆಕೆ ಈಗ ಅಭಿನಯಿಸುತ್ತಾಳೆಂದು ಸುದ್ದಿಯಿದೆ.

ರತನ್‌ಬಾಯಿ

ಬಹಳಕಾಲದ ಬಳಿಕ ಈಕೆ ಜಾನಕ್ ಪಿಕ್ಚರ್ಸಿನವರ 'ರಾಯಿಸಾಹೆಬ್' ಎಂಬ ಚಿತ್ರದಲ್ಲಿ ಈಗ ನಟಿಸಿರುವಳು.

The Canara Banking Corporation Ltd.

(Incorporated in British India with limited liability)

Estd 1906.

OUR RATES OF INTEREST ON DEPOSITS

Current	1%	p. a.
Savings Bank	2½%	,,
Short-term	1¾%	,,
FIXED FOR 3 MONTHS	2%	,,
6 ,,	2¼%	,,
9 ,,	2¾%	,,
12 ,,	3%	,,
24 ,,	3½%	,,

Advances made at cheap rates of interest against approved securities and Banking business of every description transacted.

ಆರೋಗ್ಯ ಮತ್ತು ಸೌಂದರ್ಯಕ್ಕೆ

ಈ ಇಮ್ಮಡಿ ಗುಣದ ಸಾಬೂನನ್ನೇ ಉಪಯೋಗಿಸಿರಿ

ಕಾಂತಿಯನ್ನುಂಟುಮಾಡುವ ಮತ್ತು ಔಷಧಿಯುಕ್ತವಾದ ಇಮ್ಮಡಿ ಗುಣಗಳಿರುವ ಸಾಬೂನು ಕುಟಿಕೂರಾ ಟಾಯ್ಲೆಟ್ ಸಾಬೂನಿನ (Cuticura Toilet Soap) ನಿಮ್ಮ ಮೈಯ ಚರ್ಮವನ್ನು ಸೌಂದರ್ಯಮಯವಾಗಿಯೂ ಆರೋಗ್ಯ ಸ್ಥಿತಿಯಲ್ಲಿರಿಸುವಂತೆಯೂ ಔಷಧೀಕರಿಸಿರುತ್ತದೆ. ಈ ಸಾಬೂನಿನಿಂದ ಹೊರಟ ಮಹತ್ತಾದ ನೊರೆಯು ಚರ್ಮರಂಧ್ರಗಳಿಂದ ಕಲ್ಮಶಗಳನ್ನು ತೆಗೆಯುತ್ತದೆ. ಈ ಇಮ್ಮಡಿ ಗುಣಗಳಿರುವ ಸೌಂದರ್ಯಯುಕ್ತವಾದ ಸಾಬೂನನ್ನು ಉಪಯೋಗಿಸಿ ಸೌಂದರ್ಯವನ್ನು ಗಳಿಸಿರಿ.

ಕುಟಿಕೂರಾ ಸಾಬೂನು (Cuticura Soap) ಬೆಣ್ಣೆಯಂತೆ ಗುಣವುಳ್ಳದಾಗಿದೆ. ದೊರಗಾದ ಚರ್ಮವನ್ನು ನುಣುಪಾಗಿರಿಸುತ್ತದೆ.

ಸೌಮ್ಯ ಕ್ರಿಮಿನಾಶಕ ಗುಣವುಳ್ಳದ್ದು—ಚರ್ಮವನ್ನು ಸ್ವಚ್ಛವಾಗಿರಿಸುವುದು. ಮುದ್ದಣ, ಚರ್ಮವ್ಯಾಧಿಗಳಿದ್ದರೆ ಕುಟಿಕೂರಾ ಮುಲಾಮನ್ನು (Cuticura Ointment) ಉಪಯೋಗಿಸಿರಿ. ಇದರ ಕ್ರಿಮಿನಾಶಕಗುಣಯುಕ್ತವಾದ ಔಷಧಿಯು ಚರ್ಮವ್ಯಾಧಿಯನ್ನು ಕೂಡಲೇ ಗುಣಪಡಿಸುವುದು. ಸ್ನಾನದ ನಂತರ ಕುಟಿಕೂರಾ ಟಾಲ್ಕಮ್ ಪೌಡರು (Cuticura Talcum Powder) ಬಹಳ ಉತ್ತಮವಾದದು.

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರುಗಳಲ್ಲಿಯೂ ಮಾರಲ್ಪಡುತ್ತದೆ.

ಕುಟಿಕೂರಾ ಸಾಬೂನು
CUTICURA SOAP

ANNOUNCEMENT

We have great pleasure in announcing an all round reduction in rates of interest on advances.

Our present rates are

Personal Loans & Overdrafts	7½%	p a
Usance Bills	7%	,,
Trade Bills	6%	,,
Loans on Produce	5½%	,,
Loans on Insurance Policies Stocks & shares	5%	,,
Loans on Gold	4½%	,,

The above rates are for medium-sized loans. The rates for small loans will however be slightly higher since the cost of time, labour and stationery consumed in such cases is proportionately higher.

CANARA BANK, LIMITED

ESTD. 1906.

ಅಶೋಕಕುಮಾರನ ಜೀವನ

'ಜೀವನ ನಯ್ಯಾ'ದಲ್ಲಿ ಪ್ರಾರಂಭವಾಯಿತು. ಇದುವರೆಗೆ ಹನ್ನೆರಡು ಚಿತ್ರಗಳಲ್ಲಿ ಭಾಗವಹಿಸಿದನು.

'ಪ್ಯಾಸ್' ಸ್ನೇಹಪ್ರಭಾ ಚಿತ್ರ

ಸುಪ್ರೀಮ್ ಚಿತ್ರಪಟದವರ 'ಪ್ಯಾಸ್' ಚಿತ್ರದಲ್ಲಿ ಸ್ನೇಹಪ್ರಭಾ ನಟಿಸುತ್ತಾಳೆ. ರಾಮ ದರ್ಯಾನಿ ಇದರ ನಿರ್ದೇಶಕ.

ಇತ್ತೀಚೆಗೆ ಸಿನೆಮಾ ಲೋಕದಲ್ಲಿ ಕಾಲಿಟ್ಟ ಈಕೆ ಇಷ್ಟರಲ್ಲಿಯೇ ಒಬ್ಬ ಪ್ರಸಿದ್ಧ ನಟಿಯೆನಿಸಿರುವಳು.

'ಖಿಲೌನಾ'ದಲ್ಲಿ ಸ್ನೇಹಪ್ರಭಾ ನಟಿಸುತ್ತಾಳೆ. ಇದು ಅಮರ ಪ್ರೊಡಕ್ಷನ್ ಚಿತ್ರ. ಜಯರಾಜ್ ಇದರಲ್ಲಿ ನಾಯಕನಾಗಿರುವನು.

ವಿಜ್ಞಾನಯುಗ

ಅದ್ಭುತ ಕಾರ್ಯಶಕ್ತಿ

ಮನುಷ್ಯನಲ್ಲಿ ಅದ್ಭುತ ಕಾರ್ಯಶಕ್ತಿ (genius) ಯನ್ನು ನಾವು ಕಾಣುತ್ತೇವೆ ಹಲವಾರು ಜನರು, ತಮ್ಮ ಯಾವುದಾದರೂ ಕೆಲಸವೊಂದರಿಂದ ಇಡೀ ಜಗತ್ತನ್ನೇ ಕಂಪಿಸಿಬಿಡುವಂತೆ ಮಾಡಬೇಕೆಂದು ಆಲೋಚಿಸುತ್ತಾರೆ ಆದರೆ ಅದು ಆಗುವುದಿಲ್ಲ ಇದಕ್ಕೆಲ್ಲಾ ಮಾನವ ಶಾಸ್ತ್ರಜ್ಞರು ಹೇಳುವುದೇನೆಂದರೆ, ಇಂತಹ ಅದ್ಭುತ ಕಾರ್ಯಶಕ್ತಿಯನ್ನು ಸಂಪಾದಿಸುವುದು ವಿಶೇಷ ಬುದ್ಧಿಶಾಲಿಗಳ ಕೆಲಸವೆಂದು ಹೇಳಲಾಗುವುದಿಲ್ಲವೆಂದು ಏಕೆಂದರೆ ಹಲವು ಮಂದಿ ವಿಶೇಷ ಬುದ್ಧಿಶಾಲಿಗಳಾದ ಜನರನ್ನು ನಾವು ಲೋಕದಲ್ಲಿ ನೋಡುತಿದ್ದರೂ ಅವರಿಂದ ಅದ್ಭುತ ಕಾರ್ಯಗಳನ್ನು ಮಾಡಲು ಆಗುವುದಿಲ್ಲ ಅದ್ಭುತ ಕಾರ್ಯಶಕ್ತಿಯು ಮನುಷ್ಯನಿಗೊದಗುವುದು ವಿಶೇಷ ಬುದ್ಧಿವಂತಿಕೆಯಿಂದೊಡಗೂಡಿದ ಪ್ರಮಾದವಶವಾದ ಬುದ್ಧಿಯಿಂದ ಎಂಬುದಾಗಿ ಮಾನಸ ಶಾಸ್ತ್ರಜ್ಞರು ಹೇಳುತ್ತಾರೆ ಅದ್ಭುತ ಕಾರ್ಯ ಮಾಡಿದ ಹಲವು ಮಂದಿಯ ಜೀವನ ವಿಚಾರಮಾಡಿದರೆ ನಮಗೆ ಗೊತ್ತಾಗುತ್ತದೆ ಅವರಲ್ಲಿ ಸ್ವಲ್ಪಮಟ್ಟಿಗೆ ಹುಚ್ಚುಬುದ್ಧಿಯಿತ್ತೆಂದು ಹೆಚ್ಚಾಗಿ ತಾನು ಅಲ್ಪನಾಗಿರುವೆನೆಂಬ ಬುದ್ಧಿಯಿಂದ ವ್ಯಕ್ತಿಯು ಜೀವನದಲ್ಲಿ ಮಾಡುವ ಹೋರಾಟದ ಫಲವಾಗಿ ಮುಂದೆ ಆತನು ಅದ್ಭುತ ಕೆಲಸಗಳನ್ನು ಮಾಡಿಬಿಡುತ್ತಾನೆ ಅದ್ಭುತ ಕಾರ್ಯಶಕ್ತಿಯು ಸಮಾಜದ ವ್ಯಕ್ತಿಗಳಲ್ಲಿ ಇರಬೇಕು ಅದರಿಂದ ಅದು ಇರುವ ವ್ಯಕ್ತಿಯೊಬ್ಬನನ್ನುಳಿದು ಆತನ ಸಮೀಪದವರನ್ನುಳಿದು ಇತರರಿಗೆಲ್ಲಾ ಸುಖವುಂಟು

ದನಿಯನ್ನು ಕಳಕೊಂಡ ಸಿಪಾಯಿ

ಒಬ್ಬ ಸಿಪಾಯಿಯನ್ನು ಮಿಲಿಟರಿ ಆಸ್ಪತ್ರೆಗೆ ತಂದರು ಆತನಿಗೆ ಮೊದಲು ಕಾಲು ವಶವಿರಲಿಲ್ಲ, ಕಡೆಗೆ ದನಿಯೇ ನಿಂತುಹೋಯಿತು ಆತನ ಈ ಅವಸ್ಥೆಯು ಹಿಸ್ಟೀರಿಯದ ಕಾರಣದಿಂದ ಎಂದು ಡಾಕ್ಟರರು ಹೇಳುತ್ತಾರೆ. ಆ ಸಿಪಾಯಿಗೆ 'ರಾತ್ರಿ ಕುರುಡುತನ'ವಿತ್ತು ಆದ್ದರಿಂದ ಮುಂದೆ ಆತನು ಹಿಸ್ಟೀರಿಯಾ ವಶನಾದನು. ಮೊದಲನೆಯ ಯುದ್ಧದಲ್ಲಿಯೂ ಜರ್ಮನ್ ಸೈನ್ಯದಲ್ಲಿ ಇಂತಹ ಪ್ರಸಂಗಗಳು ಅನೇಕವಾಗಿತ್ತು ಎಂದು ಬ್ರಿಟಿಷ್ ಮೆಡಿಕಲ್ ಜರ್ನಲಿನಲ್ಲಿ ಒಂದು ಲೇಖನ ಬಂದಿದೆ

ಬ್ಲೇಕ್ ಔಟಿಗೆ ಬದಲು ಶುಭ್ರ ಬೆಳಕು

ನಗರದಲ್ಲಿ 'ಬ್ಲೇಕ್ ಔಟ್' ಮಾಡುವುದರಿಂದ, ಶತ್ರು ವಿಮಾನಗಳಿಗೆ ನಗರದ ಗುರುತು ಸಿಗುವುದಿಲ್ಲವಾಗಿ, ಅಪಾಯವು ಕಡಿಮೆಯಾಗಿದೆಯಷ್ಟೆ? ಆದರೆ ಅದರ ಬದಲು ನಗರದ ಮೇಲೆ ಶುಭ್ರ ಬೆಳಕು ತುಂಬಿರುವಂತೆ ಮಾಡಿ ಶತ್ರು ವೈಮಾನಿಕರ ಕಣ್ಣು ಕುಕ್ಕುವಂತೆ ಗೈಯ್ಯುವುದರಿಂದಲೂ ಅಪಾಯ ತಪ್ಪಿಸಬಹುದೆಂದು ಈಗ ಹೇಳಲಾಗಿದೆ. ಇದರಿಂದ ನಗರಕ್ಕೆ ಬ್ಲೇಕ್ ಔಟಿಗಿಂತ ಹೆಚ್ಚಿನ ರಕ್ಷಣೆ ಸಿಗುವುದಂತೆ. ಬಹಳ ಶಕ್ತಿಯುಳ್ಳ ಸರ್ಚ್ ಲೈಟುಗಳಿಂದ ಅಂತಹ ಬೆಳಕನ್ನು ಒದಗಿಸಬಹುದಂತೆ ಸಂಪೂರ್ಣ ಕಪ್ಪಾಗಿರಿಸುವುದರಿಂದ ಶತ್ರುವಿಗೆ ಧಾಳಿಯಿಡಲು ಅನುಕೂಲವಾಗುವುದೆಂದು ಹೇಳಲಾಗುತ್ತದೆ ಈ ಹೊಸ ಅಭಿಪ್ರಾಯವಿತ್ತವರು ಅಮೆರಿಕದ ಪ್ರಸಿದ್ಧ ಮಹನೀಯರಾದ ಎಫ್ ಡಿಕರ್ಸನರವರು

ಹಿಂದುಸ್ಥಾನಕ್ಕೆ ಅಧಿಕಾರ ಕೊಡಬೇಕು

ಚಿಯಾಂಗ್-ಕೈ-ಶೇಕರ ಸಂದೇಶ

ಬ್ರಿಟಿಷ ಮುತ್ಸದ್ದಿಗಳಿಗೆ ಬುದ್ಧಿವಾದ

"ಹಿಂದುಸ್ಥಾನ ಇಲ್ಲವೆ ಚೀನಗಳಿಗೆ ಸ್ವಾತಂತ್ರ್ಯವನ್ನು ನಿರಾಕರಿಸಿದರೆ, ಜಗತ್ತಿನಲ್ಲಿ ನಿಜವಾದ ಶಾಂತಿಯು ಸ್ಥಾಪಿತವಾಗಲಾರದು. ಹಿಂದೀಯರು ಮುಂದೆ ಬಂದು ಬೇಡುವ ವರೆಗೆ ಮಾರ್ಗ ನಿರೀಕ್ಷಿಸದೆ ಬ್ರಿಟಿಷ ಸರಕಾರದವರು ಅವರಿಗೆ ನಿಜವಾದ ರಾಜಕೀಯ ಅಧಿಕಾರವನ್ನು ಕೊಡಬೇಕು. ಅಂದರೆ ಅವರು ತಮ್ಮ ಆಧ್ಯಾತ್ಮಿಕ ಮತ್ತು ಭೌತಿಕ ಶಕ್ತಿಯನ್ನು ವೃದ್ಧಿಗೊಳಿಸಲು ಅನುವಾಗುವದು ಮತ್ತು ಆಕ್ರಮಣವನ್ನು ವಿರೋಧಿಸಿ ವಿಜಯ ಸಂಪಾದಿಸುವದರಲ್ಲಿ ಸಹಕರಿಸಿದೆವೆಂದು ಅವರಿಗೆ ಎನಿಸುವುದಲ್ಲದೆ ಅವರ ಸ್ವಾತಂತ್ರ್ಯ ಹೋರಾಟದ ಅಧ್ಯಾಯವೂ ಮುಗಿಯುವದು ಇದೇ ಧೋರಣೆಯು ಅತ್ಯಂತ ಸಮಂಜಸವೆಂದೂ ಬ್ರಿಟಿಷ ಸಾಮ್ರಾಜ್ಯಕ್ಕೆ ಇದರಿಂದ ಹಿತವಾಗುವುದೆಂದೂ ನನಗನಿಸುತ್ತದೆ." ಹೀಗೆಂದು ಜನರಲ್ ಚಿಯಾಂಗ್ ಕೈಶೇಕರು ಹೊರಡುವ ಮೊದಲು ಹಿಂದೀಯರಿಗೆ ಕೊಟ್ಟ ಒಂದು ಸಂದೇಶದಲ್ಲಿ ತಿಳಿಸಿದರು ಅವರು ಹೇಳಿದ ಕೆಲವಿಚಾರ ಇಂತಿದೆ.

"ಸ್ವತಂತ್ರ ಜಗತ್ತಿನಲ್ಲಿ ಮಾತ್ರ ಚೀನ ಮತ್ತು ಹಿಂದುಸ್ಥಾನಗಳಿಗೆ ಸ್ವಾತಂತ್ರ್ಯವು ಲಭಿಸುವುದು. ಪಾಶವೀ ಶಕ್ತಿಯ ತಾಂಡವವು ನಡೆದ ಈ ಸಮಯದಲ್ಲಿ ಸಂಸ್ಕೃತಿ ಮತ್ತು ಮಾನವ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ಹಿಂದೀಯರು ಮತ್ತು ಚೀನೀಯರು ಅಟಲಾಂಟಿಕ್ ಶಾಸನ ಹಾಗೂ ಇಪ್ಪತ್ತಾರು ರಾಷ್ಟ್ರಗಳ ಘೋಷಣೆಗೆ ಒಮ್ಮತದಿಂದ ಬೆಂಬಲಕೊಟ್ಟು ಫೇಸಿಸ್ಟರ ವಿರೋಧಿಗಳೊಡನೆ ಸಹಕರಿಸಬೇಕು ಆದುದರಿಂದ ಹಿಂದಿಯರು ಚೀನ, ಬ್ರಿಟನ ಅಮೇರಿಕ ಮತ್ತು ರಶಿಯ ಇವುಗಳ ಜೊತೆಯಲ್ಲಿ ಸ್ವತಂತ್ರ ಜಗತ್ತನ್ನು ಉಳಿಸಿಕೊಳ್ಳಲು. ನಡೆದ ಈ ಸಂಗ್ರಾಮದಲ್ಲಿ ಯಶಸ್ಸು ದೊರೆಯುವ ವರೆಗೆ ಕಾದುವರೆಂದೂ ಈ ಕಷ್ಟಮಯ ಕಾಲದಲ್ಲಿ ತಮ್ಮ ಮೇಲಿದ್ದ ಹೊಣೆಯನ್ನು ನಿರ್ವಹಿಸುವರೆಂದೂ ನಾನು ಆಶಿಸುತ್ತೇನೆ ಹಿಂದುಸ್ಥಾನ ಮತ್ತು ಚೀನಗಳ ಜನರು ಇಂದಿನ ಗಂಡಾಂತರ ಪರಿಸ್ಥಿತಿಯಲ್ಲಿ ಮಾನವ ಸಂಸ್ಕೃತಿಯನ್ನುಳಿಸಲು ಶಕ್ತಿಮೀರಿ ಸಾಹಸ ಮಾಡಬೇಕು."

ಸಿಂಗಾಪುರದ ಹೊಸ ಹೆಸರು 'ಶೋನಾನ್'

ಸಿಂಗಾಪುರಕ್ಕೆ ಜಪಾನರು ಶೋನಾನ್ ಎಂಬ ಹೊಸ ಹೆಸರನ್ನಿಟ್ಟಿರುವರು. ಜಪಾನಿ ಭಾಷೆಯಲ್ಲಿ ಶೋನಾನ್ ಎಂದರೆ 'ದಕ್ಷಿಣ ದಿಕ್ಕಿನ ಉಜ್ವಲ ಬೆಳಕು' ಎಂದು ಅರ್ಥವಾಗುತ್ತದೆ.





Bhuvanendra Products Limited,

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitual abortion and other uterine troubles. Must be commensed soon after conception and continued up to the time of delivery.

"ಭುವನೇಂದ್ರ ಗರ್ಭಪಾಲ"

ಅಕಾಲ ಗರ್ಭಪಾತ್ರ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವವಿಧದ ದೋಷಗಳನ್ನು ಗುಣಪಡಿಸುವ ದಿವ್ಯಔಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ ವ ಏಜೆಂಟರು:–

(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ (2) ರಾಘವೇಂದ್ರ ಪೈ, ರಥಬೀದಿ (3) ದಿ ಕರ್ನಾಟಕ ಸ್ನಫ್ ವರ್ಕ್ಸ್, ರಥಬೀದಿ (4) ಡಾ। ಯಂ ಎಸ್ ಪ್ರಭು, M. B B S ಪಿ ಪಿ ಬಿಲ್ಡಿಂಗ್ಸ (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಡಿಪೊ —1 ಮುರಾರ ಗಲ್ಲಿ ಹುಬ್ಬಳ್ಳಿ

2. 36 ಫ್ಲಾಕ್ರೊಫ್ಟ್ಸ್ ರೋಡ್, ಟ್ರಿಪ್ಲಿಕೇನ್, ಮದರಾಸು

The Bank of Mangalore Limited

HEAD OFFICE	*BRANCHES*
Mangalore	Moodabidri & Padubidri

ANNOUNCEMENT

On and from 1st February 1942, fixed deposits will be accepted at the following attractive rates

One year	4%
Two years or above	4½%

Interest Payable Quarterly

ಸರಕಾರದ ಹೊಸ ಪಾಠಪಟ್ಟಿಗನುಸಾರವಾಗಿ ಬರೆದ

ನವೀನ ಭೂವಿವರಣೆ

ವಾಸುದೇವರಾವ್, ಎಂ ಎ ಎಲ್ ಟಿ (Dip Geography)

(ಭೂಗೋಳ ಶಾಸ್ತ್ರದಲ್ಲಿ ಡಿಪ್ಲೊಮಾ ಪಡೆದವರು)

ಈ ಪುಸ್ತಕಗಳನ್ನು ಪಡಕೊಂಡಲ್ಲಿ ವಿದ್ಯಾರ್ಥಿಗಳಿಗೆ ಎಟ್ಲಾಸ್ ಕೊಂಡುಕೊಳ್ಳುವ ಅವಶ್ಯವಿಲ್ಲ

ಪ್ರತಿ ಪುಸ್ತಕದಲ್ಲಿ ಬಣ್ಣಬಣ್ಣದ ಭೂಪಟಗಳಿವೆ

ಅನೇಕಾನೇಕ ಚಿತ್ರಪಟಗಳಿಂದ ಕೂಡಿದ್ದು ಪ್ರತಿ ಪಾಠದ ಅಂತ್ಯದಲ್ಲಿ ಅಭ್ಯಾಸಗಳನ್ನು ಮಾಡುವ ಪ್ರಶ್ನೆಗಳನ್ನು ಕೊಟ್ಟಿದೆ

4ನೆಯ ಪುಸ್ತಕ 6 ಅಣೆ, 5ನೆಯ ಪುಸ್ತಕ 7 ಅಣೆ, 7ಮತ್ತು 8ನೆಯ ಪುಸ್ತಕಗಳು ಅಚ್ಚಿನಲ್ಲಿವೆ, ಪುಸ್ತಕಗಳು ಬೇಕಾದಲ್ಲಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.

ದಿ ಕಂಬೈಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೋಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

ಮಖೆ ಜಾತ್ರೆ

1ನೇ ಮಖೆ	3ನೇ ಮಖೆ	2ನೇ ಮಖೆ
ತಾರೀಕು 13-2-'42 ಮತ್ತು 14-2-'42	ತಾರೀಕು 9-3-'42 ಮತ್ತು 10-3-'42	ತಾರೀಕು 2-3-'42 ಮತ್ತು 3-3-'42

ಪುಣ್ಯ ಪ್ರದಾಯಿನಿ ನೇತ್ರಾವತಿ ಮತ್ತು ಕುಮಾರಧಾರಿ ನದಿಗಳ ಸಂಗಮಸ್ಥಾನವಾದ ಉಪ್ಪಿನಂಗಡಿಯಲ್ಲಿ ನಡಿಯುವ ಮಖೆ ಜಾತ್ರೆ ಸಮಯದಲ್ಲಿ ಉಪ್ಪಿನಂಗಡಿಗೆ ಅತ್ಯಲ್ಪ ಖರ್ಚಿನಲ್ಲಿ ಹೋಗಿ ಸಂಗಮ ಸ್ನಾನಮಾಡಿ ಪುಣ್ಯಾರ್ಜನೆ ಮಾಡಲಿಕ್ಕನುಕೂಲ ಸಮಯ.

ಇಂತಹ ಅತ್ಯಪೂರ್ವ ಸಂದರ್ಭವನ್ನು ಕಳಕೊಳ್ಳದಿರಿ.

ಪ್ರಯಾಣಿಕರ ಪ್ರಯಾಣ ಸೌಕರ್ಯಗಳ ಕಡೆಗೆ ಹೆಚ್ಚಿನ ಗಮನಕೊಡಲಾಗುವುದು.

JOINT MANAGERS,

The Combined Booking Agency, MANGALORE. **The Joint Booking Office,** KODIALBAIL.

ಬಿಡಿ ಸಂಚಿಕೆ ಬೆಲೆ ಒಂದಾಣೆ   ವಾರ್ಷಿಕ ಚಂದಾ ರೂ. 3-0-0   ಅಂಚೆ ವೆಚ್ಚ ಸೇರಿ ರೂ. 3-13-0   *Regd. No. M 3460*

ಸ್ವದೇಶಾಭಿಮಾನಿ

[ಸಂಪುಟ 36]   ತಾರೀಕು 27-2-1942   [ಸಂಚಿಕೆ 9]

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು ಘಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

CONFIDENCE

IS A GREAT ASSET IN BUILDING BUSINESS.

The Bombay Life Assurance Co. Ltd.

Has to its credit such Confidence earned by its progress and service of over 33 years

It, therefore, pays you to insure or to represent by applying to:—

KOCHIKAR BROTHERS, LTD.,

Chief Agents for South India, Including Indian States, UDI. I.

Or any of their Branches at:—

MANGALORE,—CALICUT—MADRAS,

TRIVANDRUM,—BANGALORE, and BOMBAY.

N. B: Take advantage of our free advice based on 32 years experience

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

★

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath, at the Sharada Press, Car Street, Mangalore.

Estd. 1906

ಸ್ವದೇಶಾಭಿಮಾನಿ

SWADESHABHIMANI

—ಬೊಂಬಿನ ಆಘಾತದಿಂದ ಪಟ್ಟಣವು ಉರಿಯುತ್ತಿರುವ ದೃಶ್ಯ—

KANNADA ILLUSTRATED WEEKLY

ಹಿಂದುಸ್ಥಾನ ಸರಕಾರದ ಅಂದಾಜುಪಟ್ಟಿ

೪೭ ಕೋಟಿ ರೂಪಾಯಿ ಕೊರತೆ!

೧೨ ಕೋಟಿ ರೂಪಾಯಿ ಹೊಸ ಕರ!

ಇನ್‌ಕಮ್‌ಟೇಕ್ಸ್, ಪೆಟ್ರೋಲ್ ಚಿಮ್ಣಿಎಣ್ಣೆ ಕರ ಹೆಚ್ಚಿದವು!

ತಂತಿ ಟೆಲಿಫೋನ್ ದರ ಹೆಚ್ಚಿದವು!

ಅರ್ಥ ಸಚಿವರು ಕೇಂದ್ರ ಅಸೆಂಬ್ಲಿಯಲ್ಲಿ ಬರುವ ವರ್ಷದ ಹಿಂದುಸ್ಥಾನ ಸರಕಾರದ ಅಂದಾಜು ಪತ್ರವನ್ನು ಮಂಡಿಸಿದರು. ೪೭ ಕೋಟಿ ರೂಪಾಯಿ ಕೊರತೆಯಾಗುವುದೆಂದೂ ತಿಳಿಸಿದರು. ಅಧಿಕ ಸುಂಕ ವಿಧಿಸಿ ೧೨ ಕೋಟಿ ಪಡೆ ಕೊಳ್ಳಲಾಗುವುದೆಂದೂ ಹೇಳಿದರು. ಈ ಹನ್ನೆರಡು ಕೋಟಿ ರೂಪಾಯಿಯಲ್ಲಿ ಟಪ್ಪಾಲು ಮತ್ತು ತಂತಿ ಖಾತೆಯು ದರ ಏರಿಸಿ ಅಂದಾಜು ಮಾಡಲಾದ ೧ ಕೋಟಿ ರೂಪಾಯಿಯೂ ಸೇರಿದೆ. ಪೋಸ್ಟಲ್ ಕವರಿಗೆ ಮುಂದೆ ೦-೧-೬ ಆಗುವುದು. ಸಾಮಾನ್ಯ ತಂತಿಯ ಕನಿಷ್ಟ ದರ ೦-೧೦-೦ಯಿಂದ ೦-೧೨-೦ ವರೆಗೆ ಆಗುವುದು ಎಕ್ಸ್‌ಪ್ರೆಸ್ ತಂತಿದರ ೧-೪-೦ಯಿಂದ ೧-೮-೦ಗೆ ಏರುವುದು.

೧೯೪೧-೪೨ನೆಯ ವರ್ಷಕ್ಕೆ ಪುನರಾಲೋಚನೆ ಮಾಡಿ ಸಂರಕ್ಷಕ ವೆಚ್ಚವು ೧೦೨ ಕೋಟಿ ರೂಪಾಯಿ ಅಂದಾಜು ಮಾಡಲಾಗಿತ್ತು. ಈ ವೆಚ್ಚವು ಬರುವ ವರ್ಷಕ್ಕೆ ೧೩೩ ಕೋಟಿ ರೂಪಾಯಿ ಅಂದಾಜು ಮಾಡಲಾಗಿದೆ. ಇದು ಹಿಂದುಸ್ಥಾನದಲ್ಲಿ ಖರ್ಚಾಗುವ ಸಂರಕ್ಷಕ ವೆಚ್ಚದ ಒಟ್ಟು ಹಣದ ಒಂದಂಶ ಮಾತ್ರ. ಸಂರಕ್ಷಕ ವೆಚ್ಚಕ್ಕೆ ಹ ಗೂ ಹಿಂದುಸ್ಥಾನಕ್ಕೆ ಆ ಬಾಬ್ತು ಆಮದಾಗತಕ್ಕ ಸಾಮಗ್ರಿಗಳನ್ನು ಕೊಳ್ಳುವುದಕ್ಕೆ ಸಾರ್ವಭೌಮ ಸರಕಾರದಿಂದ ೪೦೦ ಕೋಟಿ ರೂಪಾಯಿಗಳನ್ನು ಕೊಡುವ ವ್ಯವಸ್ಥೆ ಮಾಡಿದೆ.

ಈ ವರ್ಷ ಇನ್‌ಕಮ್ ಟೇಕ್ಸಿನಿಂದ ಬೇರೆ ಬೇರೆ ಪ್ರಾಂತಗಳಿಂದ ೬೪೯ ಲಕ್ಷ ರೂಪಾಯಿ ದೊರಕುವುದು. ಬರುವ ವರ್ಷ ೮೪೯ ಲಕ್ಷ ರೂಪಾಯಿ ಬರಬಹುದೆಂದು ಅಂದಾಜು ಮಾಡಲಾಗಿದೆ. ಇನ್‌ಕಮ್ ಟೇಕ್ಸಿನ ಸರ್ ಚಾರ್ಜ್ ಮತ್ತು ಅಧಿಕ ಸುಂಕವನ್ನು ನೂರಕ್ಕೆ ೩೩ ಒಂದು ಮೂರಂಶ ಇದ್ದುದನ್ನು ಸಾಧಾರಣ ನೂರಕ್ಕೆ ೫೦ರಂತೆ ಏರಿಸಲಾಗುವುದಲ್ಲದೆ ಈಗಿದ್ದ ಆಮದಿನ ಮೇಲೆ ಎಲ್ಲದಕ್ಕೂ ನೂರಕ್ಕೆ ೨೦ರಂತೆ ಸರ್ ಚಾರ್ಜ್ ವಿಧಿಸಲಾಗುವುದು. ಹತ್ತಿ ಪೆಟ್ರೋಲ್ ಮತ್ತು ಉಪ್ಪಿನ ಮೇಲೆ ಈ ಸರ್ ಚಾರ್ಜ್ ವಿಧಿಸಲಾಗುವುದಿಲ್ಲ. ಪೆಟ್ರೋಲ್ ಸುಂಕವನ್ನು ಪ್ರತ್ಯೇಕ ನೂರಕ್ಕೆ ೨೫ರಂತೆ ಏರಿಸಲಾಗುವುದು. ತಂತಿ ಟಪ್ಪಾಲು ದರ ಏರಿಸಲಾಗುವುದು ಹೀಗೆ ಒಟ್ಟು ಕರದಿಂದ ೧೨ ಕೋಟಿ ಸಿಕ್ಕುವುದರಿಂದ ಉಳಿದ ೩೫ ಕೋಟಿ ರೂಪಾಯಿ ಕೊರತೆಯನ್ನು ಸಾಲ ಪಡೆದು ಭರ್ತಿ ಮಾಡಲಾಗುವುದು. ಲಾಭದ ಹಣದ ೧೦೦೦ಕ್ಕೆ ಮೇಲ್ಪಟ್ಟು ೨೦೦೦ ರೂಪಾಯಿಗಳ ವರೆಗೆ ಒಟ್ಟು ಉತ್ಪನ್ನದ ಮೊದಲಿನ ೬೫೦ ರೂಪಾಯಿಗಳ ಮೇಲೆ ರೂಪಾಯಿಗೆ ೬ ಪೈಯಂತೆ ವಿಧಿಸಲಾಗುವುದು. ಸುಂಕವಿಧಿಸಲ್ಪಡುವವನಲ್ಲಿ ಡಿಫೆನ್ಸ್ ಸೇವಿಂಗ್ಸಿನಲ್ಲಿ ತಾನು ಕೊಡತಕ್ಕ ಆದಾಯ ತೆರಿಗೆಯ ಒಂದು ನಾಲ್ಕಂಶದಷ್ಟು ಹಣವನ್ನು ಬ್ಯಾಂಕಿನಲ್ಲಿಟ್ಟು ಯುದ್ಧ ನಂತರ ಒಂದು ವರ್ಷದ ವರೆಗೆ ತೆಗೆದುಕೊಳ್ಳುವುದಿಲ್ಲವೆಂದು ಭರವಸೆಯಿತ್ತರೆ ಮೇಲೆ ಸೂಚಿಸಿದ ಸುಂಕ ತೆರಬೇಕಾಗಿಲ್ಲ.

ಇನ್‌ಕಮ್ ಟೇಕ್ಸಿನ ಮೇಲೆ ವಿಧಿಸಲಾದ ಸದ್ಯದ ೧೦೦ಕ್ಕೆ 33⅓ರಷ್ಟು ಸುಂಕದ ಸಂಪಾದಿಸುವ ವ್ಯವಸ್ಥೆಯನ್ನು ಯೋಚಿಸಲಾಗಿದೆ. ಈ ಯೋಜನೆಯಂತೆ ೧೫೦೦ —೫೦೦೦ ರೂಪಾಯಿ ವರೆಗೆ ರೂಪಾಯಿಗೆ ೬ ಪೈಯಂತೆ, ನಂತರದ ೫೦೦೦ ರೂಪಾಯಿಗೆ ಪ್ರತಿರೂಪಾಯಿಯ ಮೇಲೆ ೯ ಪೈಯಂತೆ, ಅನಂತರದ ೫೦೦೦ ರೂಪಾಯಿಗೆ ಪ್ರತಿ ರೂಪಾಯಿಯ ಮೇಲೆ ೦-೧-೩ ಪೈಯಂತೆ ಕರ ವಿಧಿಸಲಾಗುವುದು. ಅನಂತರ ೧೫೦೦ ರೂ.ಗೆ ಮೇಲ್ಪಟ್ಟು ಲಾಭವಿದ್ದಲ್ಲಿ ೧೦೦೦೦ ನಂತರದ ರೂ.ಗೆ ೦-೧-೩ ಪೈಯಂತೆ ಕರವಿಧಿಸಲಾಗುವುದು ಅಂದರೆ ಕೊನೆಯದು ಸರ್ ಚಾರ್ಜಿನ ಅರ್ಧಾಂಶ

ದಷ್ಟಾಗುವುದು. ಕೋರ್ಪರೇಶನ್ ಸುಂಕವನ್ನು ಏರಿಸಿ ರೂ.ಗೆ ೦-೧-೬ ಪೈಯಂತೆ ಏರಿಸಲಾಗುವುದು.

ಲಾಭದ ಹಣವು ೬೦೦೦ಕ್ಕೆ ಮೀರಿದ್ದರೆ ಸುಂಕ ಕೊಡುವವನ ಲಾಭದ ಹಣದಲ್ಲಿ ನೂರಕ್ಕೆ ೦-೮-೦ಯಂತೆ ಸುಂಕದ ಹಣದಿಂದ ಯುದ್ಧಾನಂತರ ಕೊಡಲಾಗುವುದು. ಅಧಿಕ ಲಾಭದ ಸುಂಕವನ್ನು ೧೦೦ಕ್ಕೆ ೬6⅔ರಂತೆ ನಿಲ್ಲಿಸಲಾಗುವುದು. ಆದರೆ ಆತನ ವ್ಯವಹಾರಕ್ಕೆ ಪ್ರೋತ್ಸಾಹಿಸುವ ರೀತಿಯಲ್ಲಿ ಅಧಿಕ ಲಾಭದ ಸುಂಕದ ಹಣವನ್ನು ಸರಕಾರವು ಯುದ್ಧಾನಂತರ ಕೈಗಾರಿಕೆಯ ಪುನರ್ವ್ಯವಸ್ಥೆಯ ಬಗ್ಗೆ ರಿಸರ್ವಾಗಿ ಇಡುವುದು ಹೀಗೆ ಮಾಡಬೇಕಾದರೆ ಸುಂಕ ಕೊಡುವವನು ಇಮ್ಮಡಿ ಹಣ ಡಿಪೋಜಿಟ್ ಇಡಬೇಕು. ಈ ಹಣವನ್ನು ಯುದ್ಧಾನಂತರ ಒಂದು ವರ್ಷದಲ್ಲಿ ಹಿಂದೆ ಕೊಡಲಾಗುವುದು.

ಎಲ್ಲಾ ಆಮದು ಸುಂಕದ ಮೇಲೆ ೧೦೦ಕ್ಕೆ ೨೦ರಂತೆ ಎಮರ್ಜನ್ಸಿ ಚಾರ್ಜ್ ವಿಧಿಸಲಾಗುವುದು. ಹತ್ತಿ ಸುಂಕ ಕಡಿಮೆಯಾಗಿದೆ. ಆಮದಾಗುವ ಉಪ್ಪಿನ ಮೇಲೆ ಈಗಿನ ಸುಂಕವೇ ಉಳಿಯುವುದು. ಏರಿಸಿದ ಆಮದು ಸುಂಕದ ಮೇರೆಗೆ ಚಿಮಿಣಿ ಎಣ್ಣೆಯ ಮೇಲೆ ಸುಂಕ ಏರಿಸಲಾಗುವುದು.

ಟಪ್ಪಾಲು ಟೆಲಿಗ್ರಾಫ್ ದರವನ್ನು ಏರಿಸಿ ೧ ಕೋಟಿ ರೂಪಾಯಿ ಭರ್ತಿಮಾಡಲಾಗುವುದು. ಟ್ರಂಕ್ ಟೆಲಿಫೋನ್ ಮೇಲೆ ಸರ್ ಚಾರ್ಜ್ ವಿಧಿಸಿ ಈಗಿದ್ದ ದರಕ್ಕಿಂತ ನೂರಕ್ಕೆ ೧೦-೨೦ರಂತೆ ಏರಿಸಲಾಗುವುದು. ಒಟ್ಟು ಅಧಿಕ ಸುಂಕದಿಂದ ೨೨ ಕೋಟಿ ಕೂಡಿಸುವ ಯೋಜನೆಯಿದೆ. ಉಳಿದ ೩೫ ಕೋಟಿ ಸಾಲ ತೆಗೆದು ಭರ್ತಿಮಾಡಲಾಗುವುದಂತೆ! ಸಾಮಾನ್ಯ ಸಂದರ್ಭದಲ್ಲಿ ಈ ಸುಂಕವು ಹೆಚ್ಚಾಗಬಹುದಾದರೂ ಯುದ್ಧದ ಪರಿಸ್ಥಿತಿಯಿದ್ದುದರಿಂದ ಹೀಗೆ ಸುಂಕ ಹೆಚ್ಚಿಸದೆ ನಿರ್ವಾಹವಿಲ್ಲವಾಗಿದೆಯೆಂದು ತಿಳಿಸಲಾಗುತ್ತದೆ.

NOTICE

In the Court of the District Munsif of Mangalore addl.

S. C. Suit no. 836/1941.

Between—

Mrs. Jane B. Fernandes represented by her General Power of Attorney holder Dr. L. P. Fernandes . *Plaintiff*

and

Rama Naika son of Padmanabha Naika, Clerk, residing in Codialbail Mangalore Town . *Defendant*

To the Defendant

Please take notice that the abovenamed Plaintiff has filed the above suit for recovery of Rs. 155-13-4 due in respect of arrears of rent you are hereby informed that the above suit stands posted to 7-3-1942 for your appearance and if you fail to appear on that date, you will be declared exparte and the suit will be decided accordingly.

(By order of Court)

Mangalore, (Sd.) P. D'Souza, B.A.B.L.,
28-2-1942. Vakil for Plaintiff.

ಅರುಣ

ಗರ್ಭಾಶಯ ರೋಗ ನಿವಾರಿಣಿ

ಮುಟ್ಟುಶೂಲೆ
ಅಕಾಲ ಬಹಿಷ್ಟೆ
ಮುಟ್ಟಾಗದಿರುವಿಕೆ
ವಿಪರೀತ ರಕ್ತಸ್ರಾವ
ಸ್ರಾವ ಕಮ್ಮಿಯಾಗಿ ಹೋಗುವುದು
ಸಂತಾನ ಹೀನತೆ
ಬಿಳೀ ಸೆರಗು
ಶರೀರವು ಸ್ಥೂಲವಾಗುವುದು
ಮುಂತಾದ ವ್ಯಾದಿಗಳನ್ನು ಹೋಗಲಾಡಿಸುವುದು

ಎಲ್ಲಾ ಕೆಮಿಸ್ಟರಲ್ಲಿಯೂ ದೊರೆಯುವುದು

ಆಯುರ್ವೇದಾಶ್ರಮಂ ಮದರಾಸು.

FRENCH RAISO CUPID CREAM

Rs. 2—0—0.

Powerful Sexual Cream (External use for men)

A few minutes after application enables rapid development of size of male organ and improves erection never experienced before and gives abundant pleasure by long retentive power to old and young. It is much patronised by all rich men of many wives. Simple application strengthens weak nerves and restores lost vitality. It is also excellent treatment for partial impotency, too rapid ejaculation or deformity of the organ, curved shrivelled condition, or shortness in size, week erection owing to various causes, gives lasting pleasure and increases sexual desire. Per Bottle Rs. 2

Sexual Secret English Books

Secret of Sexual Bliss—*Illustrated 8th edition* Re. 1. Sex and the girl of 18—*Illustrated* Rs. 2. Rati Shastra—*thoroughly illustrated*, Re. 1-12. Sex organs in men—*Illustd. 2nd edn.* As. 12. Sex organ in women—*Illustd 3rd edn.* As. 12. Sexual science secrets—*Illustrated As. 8.*

CHANDRABHAN & Co.,
No. 3 Krishnappa Naick Tank St., G. T., Madras.

HALFTONE & LINE BLOCK MAKING UNDERTAKEN

Sharada Press, MANGALORE.

ಸ್ವದೇಶಾಭಿಮಾನಿಗೆ ಜಾಹೀರಾತು ಕೊಡಿರಿ

ಈ ಬೆಳಿಗ್ಗೆ ಮ್ಯಾಕ್ಲಿನ್ ಮಾಡಿದೆಯೋ?

ಓಹೋ! ಆರೋಗ್ಯಕರವಾದ ಹಲ್ಲುಗಳ ಲಾಭವು ನಿನಗೆ ತಿಳಿದಿದೆ.

ಈ ಮನುಷ್ಯನಿಗೆ ಹಲ್ಲುಗಳು ಕೊಳೆತರೆ ಮತ್ತು ಬೀಳುವುದಿಲ್ಲವೆಂದು ತಿಳಿದಿದೆ ಆದುದರಿಂದ ಪ್ರತಿ ರಾತ್ರಿಯೂ ಮತ್ತು ಬೆಳಿಗ್ಗೆಯೂ ಆತನು ಮ್ಯಾಕ್ಲಿನ್ ಪೆರಾಕ್ಸೈಡ್ ಟೂತ್‌ಪೇಸ್ಟನ್ನೇ ಉಪಯೋಗಿಸುತ್ತಾನೆ. ನೀವು ಶುಚಿಯಾದ ಬಾಯಿಯನ್ನೂ ಥಳಥಳ ಹೊಳೆಯುವ ಬಿಳಿಯ ಹಲ್ಲುಗಳನ್ನೂ ಹೊಂದಬಹುದು ಮ್ಯಾಕ್ಲಿನ್ ಉಪಯೋಗಿಸುವುದರಿಂದ.

ರೈಲು ಬಂಡಿಗಳ ಸಮಯ

ಇದೇ ಜುಲೈ ತಾ. 10ರ ವ್ಯತ್ಯಾಸವಾದ ರೈಲು ಬಂಡಿಗಳ ಸಮಯಗಳು ಈ ಕೆಳಗಿನಂತಿವೆ—

ಗಾಡಿಗಳು	ಹೊರಡುವ ಗಂಟೆ	ತಲ್ಪುವ ಗಂಟೆ
ಗೂಡ್ಸು ಬಂಡಿ	3.45 ರಾತ್ರಿ	9.25 ರಾತ್ರಿ
ಮಲಬಾರು ಎಕ್ಸ್‌ಪ್ರೆಸ್ (ಮೈಲ್)	9.5 ಬೆಳಿಗ್ಗೆ	5.15 ಸಾಯಂ.
ಪಾಲಾಟ್ ಪೇಟೆ ಪೆಸೆಂಜರ್	12.0 ಮಧ್ಯಾಹ್ನ	2.55 ಸಾಯಂ.
ಕಣ್ಣನ್ನೂರು ವರೆಗೆ	5.52 ಸಾಯಂ.	9.40 ಪೂರ್ವಾಹ್ನ

“ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ”

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

6-3-1942] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೬-೩-೧೯೪೨]

ಸಮರಭೂಮಿಯ ಸಂಚಾರ

ಸುಮಾತ್ರಾ ಜಪಾನರಿಗೆ ಶರಣಾಯಿತು, ಬರ್ಮಾ ಯುದ್ಧವು ಸಮಾಪ್ತಿಗೊಳ್ಳುವ ಸಂಧಿಯಲ್ಲಿದೆ. ರಂಗೂನಿಗೆ ಪ್ರವೇಶಿಸಿ ಜಪಾನರು ಉಗ್ರ ಕಾಳಗ ಕೊಡುತ್ತಿದ್ದಾರೆ. ಜಾವಾದಲ್ಲಿ ಜಪಾನರು ಜೋರಾಗಿ ಹೋರಾಡುತ್ತಾರೆ ಆಸ್ಟ್ರೇಲಿಯಕ್ಕೆ ಆಕ್ರಮಣ ಭೀತಿ ಅಧಿಕಾಧಿಕವಾಗುತ್ತಿದೆ ಜಪಾನ್ ಸಬ್‌ಮೆರಿನುಗಳು ಇದೇ ಮೊದಲನೆಯ ಸಲವಾಗಿ ಅಸಮ ಸಾಹಸದಿಂದ ದೂರ ಅಮೆರಿಕದ ಭೂಮಿಯ ಮೇಲೆ, ಕೆಲಿಫೋರ್ನಿಯದ ಮೇಲೆ ಗುಂಡು ಹೊಡೆದುಬಿಟ್ಟವು ಈ ಪರಿಸ್ಥಿತಿಗಳಿಂದೆಲ್ಲ ಹಿಂದೂದೇಶಕ್ಕೂ ಹೆದರಿಕೆ ಹೆಚ್ಚಾಗಿದೆ ಹೀಗೆ ಸಂಕಟವು ಸನ್ನಿಹಿತವಾಗುತ್ತಿರುವಾಗ, ಶತ್ರುವು ಮುಂದೊತ್ತುತ್ತಿರುವಾಗ ಬ್ರಿಟನು ಅಮೆರಿಕ ರಷ್ಯಗಳ ಮುಂದಾಳುಗಳು ಕಳೆದ ವಾರ ಹುರುಪು ಹುಟ್ಟಿಸುವ ಭಾಷಣಗಳನ್ನು ಮಾಡಿ, ಈಗ ವೈರಿಯು ವಿಜೃಂಭಿಸುವನಾದರೂ ಅಂತ್ಯ ಜಯವು ನಮಗೇ ಎಂದು ಎದೆ ತಟ್ಟಿ ಹೇಳಿದರು! ಚರ್ಚಿಲರಂತೂ ತುಂಬಾ ಆಶಾವಾದಿಗಳು, ಯುದ್ಧಾರಂಭ ಕಾಲದಿಂದ ಇದುವರೆಗೆ ಬ್ರಿಟನಿನ ಶಕ್ತಿ ಹೆಚ್ಚುತ್ತ ಹೋಗಿದೆಯೆಂದೂ ಇನ್ನು ಮುಂದೆ ಕೆಲವೇ ಕಾಲದಲ್ಲಿ ಇದು ಪೂರ್ಣ ವಿಧಿಸುವುದೆಂದೂ ತಿಳಿಸಿದರು ಸಾಧ್ಯವಿದ್ದಷ್ಟು ಸಿದ್ಧ ಮಾಡಿಕೊಂಡು ಸಾಧ್ಯವಾದಷ್ಟು ಕಡೆ ಶತ್ರುವನ್ನು ಎದುರಿಸುವುದಾಗಿ ರೂಸ್‌ವೆಲ್ಟರು ಭಾಷೆ ತೊಟ್ಟರು! ಲೆನಿನ್‌ಗ್ರಾಡ್ ಕ್ರಿಮಿಯ ಯುಕ್ರೇನ್ ಮೋಸ್ಕೋ ಈ ಎಲ್ಲಾ ಕಡೆಗಳಲ್ಲಿರುವ ಶತ್ರುಗಳನ್ನೂ ಬಡಿದಟ್ಟಿ, ಹಿಟ್ಲರನ ವಿನಾಶ ಕಾರ್ಯವನ್ನು ತಾವು ಮಾಡುವ ಪಂಥ ಹಾಕಿರುವುದಾಗಿ ಸ್ಟಾಲಿನ್ ಗರ್ಜಿಸಿದರು! ಅಂತೂ ಈಗ ಹೀಗೆ ಏಕವಾಣಿಯಲ್ಲಿ ಏಕ ಕಾಲದಲ್ಲಿ ಬ್ರಿಟನು ಅಮೆರಿಕ ರಷ್ಯಗಳು ಶತ್ರುವಿನ ಮೇಲೆ ಪ್ರತೀಕಾರ ಮಾಡಲು ಪ್ರತಿಜ್ಞಾಬದ್ಧವಾಗಿರುವವು.

ಸಿಂಗಾಪುರದ ಪತನದ ಬಳಿಕ ಬರ್ಮಾದೇಶದ ಪರಿಸ್ಥಿತಿಯು ಬಹಳ ವಿಷಮವಾಯಿತು! ಆ ಕಡೆ ಡಚ್ ಇಂಡೀಸಿನಲ್ಲಿ ಯುದ್ಧ ಮಾಡುತ್ತಿದ್ದಂತೆಯೇ ಜಪಾನರು ಬರ್ಮಾದ ಮೇಲೂ ಮುತ್ತಿಗೆ ಹಾಕಿದ್ದರು. ಮಲಯ ಸಿಂಗಾಪುರಗಳಿಂದಲೂ ಜಪಾನು ಸೈನ್ಯಗಳು ಬರ್ಮಕ್ಕೆ ಬಂದವು ಮರ್ತಬಾನದಿಂದ ಬಲೀನ ನದಿಯವರೆಗೆ ನುಗ್ಗಿದ ಜಪಾನರು ಬ್ರಿಟಿಷ್ ಬಲವನ್ನು ಹಿಂದಕ್ಕಟ್ಟಿದರು ಆಗಲೇ ಜಪಾನರಿಗೆ ಹೊಸ ಸೈನ್ಯವೂ ಬಂದೊದಗಿದ್ದರಿಂದ ಬ್ರಿಟಿಷ್ ಬಲವು ಮತ್ತಷ್ಟು ಹಿಂದೆ ಸರಿಯಬೇಕಾಯಿತು ಈಗ ಜಪಾನರು ಸಿಟಾಂಗ್ ನದಿಯನ್ನೂ ದಾಟಿ ಪೆಗೂ ರೈಲ್ವೆ ರಸ್ತೆಯನ್ನು ಕತ್ತರಿಸಿದರೆಂದು ಸುದ್ದಿ ಬಂದಿದೆ. ಸಿಟಾಂಗ್ ರಂಗೂನಿಗೆ ನೂರು ಮೈಲು ದೂರದಲ್ಲಿದ್ದರೂ, ಜಪಾನರಿಗೆ ಅತಿ ಪ್ರಾಮುಖ್ಯವಾಗಿರುವ ಬರ್ಮಾರಸ್ತೆಯು ಅಲ್ಲಿಂದ ಕೇವಲ ಇಪ್ಪತ್ತೈದು ಮೈಲುಗಳ ಅಂತರದಲ್ಲಿದೆ. ಬರ್ಮಾರಸ್ತೆಯನ್ನೂ ಜಪಾನರು ಬಂದಲ್ಲಿ ಕತ್ತರಿಸಿರುವುದಾಗಿ ಈಗ ಸುದ್ದಿ ಬಂದಿದೆ.

ಸಿಂಗಾಪುರದ ಪತನದ ಬಳಿಕ ಜಪಾನೀ ಯುದ್ಧ ಹಡಗುಗಳು ಬಂಗಾಲ ಉಪಸಾಗರದಲ್ಲಿ ಸಂಚರಿಸುತ್ತಿದ್ದು, ಈಗಾಗಲೇ ಮರ್ತಬಾನದ ಹತ್ತಿರ ಬಂದಿರುವವೆಂದು ಸುದ್ದಿಯುಂಟು. ಇದು ಸತ್ಯವಾದರೆ ಇರಾವತಿನದಿಯ ಮೂಲಕ ಜಪಾನರ ಹಡಗುಗಳು ರಂಗೂನಿನಲ್ಲಿ ಬಂದಿಳಿಯಬಹುದು ಅಂತೂ ಜಪಾನರ ಉದ್ದೇಶವು ಕೇವಲ ರಂಗೂನ್ ಆಕ್ರಮಣ ಮಾತ್ರವಲ್ಲ ಎಂದು ನಾವು ಊಹಿಸಲು ಸಾಧ್ಯವಿದೆ ರಂಗೂನು ಜಪಾನರ ಕೈವಶವಾದರೆ ಬಂಗಾಳಾ ಉಪಸಾಗರದಲ್ಲಿ ಒಂದು ಮಹತ್ವದ ಕೇಂದ್ರವು ಜಪಾನರ ವಶವಾದಂತಾಗುತ್ತದೆ. ಅಂತೂ ಮೊದಲಾಗಿ ಈಗ ಜಪಾನರಿಗೆ ಚೀನಕ್ಕೆ ಬ್ರಿಟನು ಅಮೆರಿಕೆಗಳಿಂದ ಸಹಾಯ ಸಾಗುತ್ತಿರುವ ಬರ್ಮಾ ರಸ್ತೆಯನ್ನು ನಾಶಪಡಿಸಬೇಕಾಗಿರುವುದರಿಂದ ರಂಗೂನ್ ಪತನದಿಂದ ಚೀನವನ್ನು ಹದಗೊಳಿಸಲು ಜಪಾನರು ಬಗೆದಿದ್ದಾರೆ ಈ ಪರಿಸ್ಥಿತಿಯನ್ನೆದುರಿಸುವುದಕ್ಕಾಗಿ ಬ್ರಿಟಿಷರು ಆಸಾಮ್ ರಸ್ತೆಯೆಂಬ ಇನ್ನೊಂದು ರಸ್ತೆಯನ್ನು ತೆರೆಯುವರಾಗಿ ಸುದ್ದಿಯಿದೆ ಆಸಾಮ್ ರಸ್ತೆಯನ್ನು ಪೂರ್ಣಗೊಳಿಸಬೇಕಾದ ಕಾರ್ಯ ಇನ್ನೂ ಸಾಗಬೇಕಾಗಿದೆ ಹಾಗಾಗಿ ಆಸಾಮ್ ರಸ್ತೆ ಸಿದ್ಧವಾದ ಮೇಲೆ ಚೀನಕ್ಕೆ ಸಹಾಯ ಹೋಗುವ ವಿಷಯ ಖಂಡಿತ ಹೇಳಬಹುದು. ಅಷ್ಟರಲ್ಲಿ ಏನೆಲ್ಲಾ ಆಗುವುದೋ ಹೇಳಬರುವಂತಿಲ್ಲ

ಬರ್ಮಾ ಯುದ್ಧಕ್ಕೆ ಚೀನೀಯರು ಸೈನ್ಯ ಸಹಾಯ ಕಳುಹಿಸುತ್ತಿರುವರೆಂಬುವನ್ನು ವಿವರಿಸುವಾಗ, ಚೀನದ ದಳಪತಿ ಹಿಂದುಸ್ಥಾನವನ್ನು ಸಂದರ್ಶಿಸಿದ ವಿಷಯವನ್ನು ವಿವರಿಸುವಾಗ ನಾವು ಹಿಂದೆ ಬರ್ಮಾ ರಸ್ತೆಯ ವಿಷಯವನ್ನು ಪ್ರಸ್ತಾಪಿಸಿದ್ದೇವೆ. ಬರ್ಮವು ಜಪಾನರ ಕೈವಶವಾಗುವುದರಿಂದ ಚೀನಕ್ಕೆ ಎಷ್ಟರ ಮಟ್ಟಿಗೆ ತೊಂದರೆಯಾಗುವುದೆಂಬುದನ್ನು ಉಲ್ಲೇಖಿಸಿದ್ದೆವು. ಬರ್ಮದೇಶವು ಶತ್ರುಗಳಾದ ಜಪಾನರ ಸ್ವಾಧೀನಕ್ಕೊಳಪಟ್ಟರೆ ಚೀನವು ಮುಖ್ಯ ಮಾರ್ಗಗಳಲ್ಲಿ ಸುತ್ತುಗಟ್ಟಲ್ಪಟ್ಟಂತೆ ಆಗುವುದಲ್ಲದೆ, ಅದಕ್ಕೆ ಒದಗುತ್ತಿದ್ದ ಸಹಾಯವೂ ಸಿಗದಂತಾಗುವುದು ಇದರಿಂದ ಚೀನೀಯರ ಹೋರಾಟವು ಕುಗ್ಗಬೇಕಾಗುವುದು. ಚೀನೀಯರು ಎಂತಹ ಅಸಮ ಸಾಹಸಿಗಳಾದರೂ ಜಪಾನರ ಯಂತ್ರಗಳ ಮುಂದೆ ಅವರ ಪರಾಕ್ರಮವು ಬಹುಕಾಲ ಉಳಿಯಲಾರದು. ಚೀನವು ಯುದ್ಧ ಸಾಮಗ್ರಿಗಳ ವಿಷಯದಲ್ಲಿ ಮೊದಲಿಂದಲೇ ನರಳುತ್ತಿದ್ದು ಇತ್ತೀಚೆಗೆ ಸ್ವಲ್ಪ ಚೇತರಿಸಿತ್ತು ಮಾತ್ರ. ಎಂದರೆ ಇಂದಿನ ಮಹಾಯುದ್ಧವು ಪ್ರಾರಂಭವಾಗುವ ಮೊದಲು ರಷ್ಯವೊಂದನ್ನುಳಿದು ಮಿಕ್ಕ ಯಾವ ಮಹಾರಾಷ್ಟ್ರಗಳೂ ಚೀನದ ಸಂಕಟದ ಕುರಿತು ಹೆಚ್ಚಿನ ಸಹಾಯ ಕಳುಹಿಸಿರಲಿಲ್ಲ ಬ್ರಿಟನು ಅಮೆರಿಕಗಳಂತೂ ಕೊನೆ ವರೆಗೆ ಜಪಾನಿನೊಡನೆ ಸ್ನೇಹದಿಂದಿರಲು ಪ್ರಯತ್ನ ಮಾಡುತ್ತಿದ್ದವು. ಚೇಂಬರ್ಲೇನರು ಜಪಾನಿನ ಪ್ರೀತಿಯನ್ನು ಸಂಪಾದಿಸಲು ಕೊನೆ ವರೆಗೆ ಪ್ರಯತ್ನಿಸಿದ್ದು ಸಾಲದೆ, ಚರ್ಚಿಲರೂ, ಅಧಿಕಾರಕ್ಕೇರಿದ ಕೂಡಲೇ ನಾಲ್ಕು ತಿಂಗಳ ವರೆಗೆ ಬರ್ಮಾ ರಸ್ತೆಯನ್ನು ಮುಚ್ಚಿ ಜಪಾನಿನ ಬೆನ್ನು ತಟ್ಟಿದರೆಂಬುದನ್ನು ಯಾರೂ ಮರೆಯಲಾರರು. ರೂಸ್‌ವೆಲ್ಟರಂತೂ ಮೊನ್ನೆ ಮೊನ್ನೆಯ ವರೆಗೆ ಜಪಾನಿನೊಡನೆ ಸಂಧಾನವನ್ನೇ ನಡೆಸುತ್ತಿದ್ದರು. ಕೊನೆಗೆ ಇವುಗಳೆಲ್ಲಾ ನಿಷ್ಫಲವಾಗಲು, ಜಪಾನು ವಿಜೃಂಭಿಸಿ ಬಂದು ಬ್ರಿಟನು ಅಮೆರಿಕಗಳನ್ನು ರಣರಂಗಕ್ಕೆ ಆಹ್ವಾನಿಸಿದ ಬಳಿಕ ಒಮ್ಮೆಲೇ ಬ್ರಿಟನು ಅಮೆರಿಕಗಳಿಗೆ ಚೀನದ ಹೋರಾಟದ ವಿಷಯ ಸಹಾನುಭೂತಿ ಹುಟ್ಟತೊಡಗಿತು! ಅಂತೂ ಆ ಮೇಲೆ ಚೀನಕ್ಕೆ ಬ್ರಿಟನು ಅಮೆರಿಕಗಳಿಂದ ಸ್ವಲ್ಪ ಮಟ್ಟಿಗೆ ಹೆಚ್ಚಿನ ಸಾಧನ ಸಹಾಯವೂ ದೊರಕಿತು. ಅದರ ಒಳ್ಳೆಯ ಉಪಯೋಗವನ್ನು ಚಿಯಾಂಗ್ ಕೈಶೇಕರೂ ಮಾಡಲು ಮನಸ್ಸು ಮಾಡಿದ್ದರು ಹಿಂದುಸ್ಥಾನದ ವರೆಗೆ ಧಾವಿಸಿ ಬಂದರು. ಅಂತೂ ಬರ್ಮಾ ರಸ್ತೆಯ ಮೂಲಕ ಚೀನಕ್ಕೆ ಸಹಾಯವು ಇತ್ತೀಚೆಗೆ ಬರತೊಡಗಿದ್ದು ಬಹಳ ಮಟ್ಟಿನ ಅನುಕೂಲವುಂಟಾಗಿತ್ತೆನ್ನಲು ಅಡ್ಡಿಯಿಲ್ಲ. ಹೀಗಿರುವಾಗ ಈಗ ಬರ್ಮದ ಪತನವಾದರೆ ಬರ್ಮಾ ರಸ್ತೆಯು ಮುಚ್ಚಲ್ಪಡುವುದೆಂದು ತಿಳಿದು ಚೀನೀಯರು ಬಹಳ ಗಾಬರಿಗೊಂಡಿದ್ದಾರೆ.

ಬರ್ಮಾ ಪತನದಿಂದ ಚೀನಕ್ಕೆ ಮಾತ್ರವಲ್ಲ ಹಿಂದುಸ್ತಾನಕ್ಕೂ ಅಪಾಯ ಸನ್ನಿಹಿತವಾಗುವುದು ಹೇಗೆಂದರೆ ಜಪಾನರು ಕೂಡಲೇ ಹಿಂದುಸ್ಥಾನವನ್ನು ಆಕ್ರಮಿಸಿ ಬರುವರೆಂದು ಅಭಿಪ್ರಾಯವಲ್ಲ. ಆ ವಿಚಾರವಾಗಿ ಯಾರಿಗೂ ಈಗ ಯಾವ ನಿರ್ಧಾರವನ್ನೂ ಹೇಳಬರುವಂತಿಲ್ಲ. ಬರ್ಮದ ಕಾಳಗ ಮುಗಿಸಿದ ಬಳಿಕ ಜಪಾನರು ಹಿಂದುಸ್ತಾನವನ್ನು ಆಕ್ರಮಿಸಬಹುದೆಂದು ಕೆಲವರು ಊಹಿಸುತ್ತಾರೆ. ಒಂದುವೇಳೆ ಹಿಂದುಸ್ತಾನವನ್ನು ಜಪಾನರು ಮುತ್ತುವುದಾದರೆ ಯಾವ ದಿಕ್ಕಿನಿಂದ ಬರಬಹುದು ಎಂದು ಊಹಿಸುವುದು ಪ್ರಸ್ತುತವಾಗಿದೆ. ಹೆಚ್ಚಾಗಿ ಇತಿಹಾಸ ಕಾಲದಿಂದಲೇ ನಮ್ಮ ದೇಶಕ್ಕೆ ವಾಯುವ್ಯ ದಿಕ್ಕಿನಿಂದ ಆಕ್ರಮಣಗಳು ನಡೆದಿವೆ. ಖೈಬರ್ ಕಣಿವೆಯ ಮೂಲಕ ಆಕ್ರಮಣಗಾರರು ಬಂದಿದ್ದಾರೆ. ಹಾಗಾಗಿ ಎಲ್ಲರ ದೃಷ್ಟಿ ಆ ಕಡೆ ಹೋಗುವುದು ಸಹಜವಿದೆ. ಸರ್ಕಾರವಾದರೂ ಅಲ್ಲಿ ಹೆಚ್ಚಿನ ರಕ್ಷಣಾ ಸಿದ್ಧತೆಗಳನ್ನು ತಯಾರಿಸಿಟ್ಟಿದೆ. ದಾಟಲಸಾಧ್ಯವಾದ ಗುಡ್ಡಗಳಿಂದ ಕೂಡಿದ ಈ ಮಾರ್ಗದಿಂದಲೇ ಜಪಾನರು ಬರಬೇಕಾದ ಅವಶ್ಯವೇನೂ ಇಲ್ಲ. ಅವರಿಗೆ ಹಾಗೆ ಬರುವುದು ಸುಲಭವೂ ಅಲ್ಲ. ಅವರು ಹಿಂದುಸ್ತಾನವನ್ನು ಸಮುದ್ರ ಹಾಗೂ ವಿಮಾನ ಮೂಲಕ ಆಕ್ರಮಿಸಬಹುದು. ಈಗಾಗಲೇ ಬಂಗಾಲ ಉಪಸಾಗರದಲ್ಲಿ ಶತ್ರು ಜಲಾಂತರ್ಗಾಮಿಗಳ ಸಂಚಾರದ ಸುದ್ದಿಯುಂಟು. ಹೇಗಿದ್ದರೂ, ಜಪಾನರಿಗೆ ಹಿಂದುಸ್ತಾನವನ್ನು ಆಕ್ರಮಿಸುವ ಇಚ್ಛೆ ಇರಬಹುದಾದರೂ ಅವರು ಕೂಡಲೇ ಇಲ್ಲಿಗೆ ಬರುವರೆಂದು ಊಹಿಸಲು ಕಾರಣವಿಲ್ಲ. ಏಕೆಂದರೆ ಅವರಿಗೆ ಇದಕ್ಕಿಂತ ಮಹತ್ವದ ಹಲವು ಕೆಲಸಗಳು ಇವೆ. ಹಿಟ್ಲರನ ವಸಂತಕಾಲದ ಆಕ್ರಮಣವು ಈಗ ಸುರುವಾಗಲಿದೆ. ಹಿಟ್ಲರನ ಜಯದಲ್ಲಿ ಜಪಾನಿನ ಜಯವೂ ಈಗ ಬೆರೆತಿರುವುದರಿಂದ, ವಸಂತಕಾಲದ ಆಕ್ರಮಣವನ್ನು ಜಯಶೀಲ ಮಾಡಲು ಹಿಟ್ಲರನಿಗೆ ಜಪಾನರು ಹೆಚ್ಚು ಸಹಾಯ ಕೊಡಬಹುದಾಗಿದೆ. ಆದುದರಿಂದ ಅವರು ಬ್ರಿಟನ್ ಅಮೆರಿಕಗಳ ನೌಕಾಸಂಚಾರಕ್ಕೆ ಬಹಳ ತಡೆಗಳನ್ನುಂಟುಮಾಡಲು ಸಾಧಿಸಬಹುದು ಅದರ ಸಲುವಾಗಿ ಅಂಡಮಾನ ದ್ವೀಪವನ್ನು ಆಕ್ರಮಿಸಿಕೊಂಡರೆ ಸಿಲೋನನ್ನು ಸ್ವಾಧೀನಪಡಿಸಲು ಯತ್ನಿಸಬಹುದು. ಮಧ್ಯ ಏಶಿಯದಲ್ಲಿ ಬ್ರಿಟಿಷರ ಶಕ್ತಿ ಕುಗ್ಗಿಸಲು ಹಿಟ್ಲರನಾದರೂ ಜಪಾನಿಗೆ ಈ ಕೆಲಸವನ್ನು ಒಪ್ಪಿಸಿರಬಹುದೆಂದು ತರ್ಕಿಸಲವಕಾಶವಿದೆ. ಹಾಗಾಗಿ ಜಪಾನೀ ನೌಕಾದಳವು ತನ್ನ ಕಾರ್ಯಾಚರಣೆಗಳನ್ನು ಮುಂದೆ ತೀವ್ರ ವಿಸ್ತರಿಸಬಹುದು. ಅಂತೂ ಹಿಟ್ಲರನ ವಸಂತಕಾಲದ ಆಕ್ರಮಣ ಕಾರ್ಯಕ್ರಮವನ್ನು ಹೊಂದಿಕೊಂಡು ಜಪಾನು ಮುಂದಿನ ಯೋಜನೆಯನ್ನು ನಿಶ್ಚಯಿಸಬಹುದೆಂದು ಊಹಿಸಲಾಗಿದೆ.

ವಸಂತಕಾಲವು ಈಗ ಆರಂಭವಾಗುತ್ತಿದೆ. ಹಿಟ್ಲರನು ಹಿಮಕಾಲವು ತನ್ನ ಮುನ್ನಡೆಗೆ ಅನುಕೂಲವಿಲ್ಲದಿರುವುದರಿಂದ, ಮುಂದೆ ವಸಂತಕಾಲದಲ್ಲಿ ಪ್ರಚಂಡ ಆಕ್ರಮಣ ಮಾಡಲು ಹೆಚ್ಚಿನ ಸಿದ್ಧತೆ ಮಾಡುತ್ತಿರುವನೆಂದು ಪತ್ರಿಕೆಗಳಲ್ಲಿ ಹಿಂದೆಯೇ ಪ್ರಕಟವಾಗಿತ್ತು. ರಷ್ಯದಲ್ಲಿ ಹಿಟ್ಲರನಿಗೆ ಹಿಮಕಾಲದಲ್ಲಿ ಉಂಟಾದ ಅಪಜಯವು ಗಣನೀಯವಾದುದು. ಆತನು ತನ್ನ ವಿಜಯೋತ್ಸಾಹದಲ್ಲಿ ಬರುವ ರಷ್ಯದ ಚಳಿಗೆ ಹೆಚ್ಚಿನ ಗಮನ ಕೊಡಲಿಲ್ಲವೋ, ಚಳಿಗಾಲವು ಅವನಿಗೆ ಅನುಕೂಲವಾಗಲಿಲ್ಲವೋ, ಹೇಗಿದ್ದರೂ ಆತನಿಗೆ ಅಲ್ಲಿ ಒದಗಿದ ಅಪಜಯದ ಪ್ರತೀಕಾರವಾಗಿ ಪ್ರತಿ ಆಕ್ರಮಣ ಕಾರ್ಯವನ್ನು ಆತನು ವಸಂತಕಾಲದಲ್ಲಿ ಕೈಕೊಳ್ಳುವನೆಂದು ಎಲ್ಲ ಕಡೆಗಳಲ್ಲಿಯೂ ದಟ್ಟ ಸುದ್ದಿಯುಂಟು. ಹಿಟ್ಲರನಿಗಾದರೂ ಇತ್ತ ಜಪಾನರು ಪೂರ್ವದಲ್ಲಿ ಒಂದೇ ಸಮನೆ ವಿಜಯ ಸಂಪಾದಿಸುತ್ತಾ ಬರುವುದರಿಂದ ಹೆಚ್ಚಿನ ಸಂತೋಷವಾಗಿರಬೇಕು. ಪಶ್ಚಿಮದಲ್ಲಿ ತಾನೂ, ಪೂರ್ವದಲ್ಲಿ ಜಪಾನರೂ ಹೀಗೆ ಮುಂದುವರಿಸಿ ಬ್ರಿಟಿಷರ ಬಲವನ್ನು ಮುರಿಯಲು ಸಮರ್ಥರಾಗುವೆವೆಂದು ಆತನು ಹಿಗ್ಗಿಕೊಳ್ಳುತ್ತಿರಬಹುದು. ಅಂತೂ ಆದರೆ ಆತನ ವಸಂತಕಾಲದ ಧಾಳಿಯು ಎಂತಹ ಸಿದ್ಧತೆಯದಿರುತ್ತದೋ ಎಂದು ಹಲವರು ಕುತೂಹಲಾವಿಷ್ಟರಾಗಿ ನೋಡುತ್ತಿದ್ದಾರೆ. ಹಿಟ್ಲರನಿಗೆ ಮೊದಲಿಂದಲೇ ಕಾಕಸಸ ಎಣ್ಣೆಯ ಮೇಲೆ ಕಣ್ಣಿತ್ತು! ಈಗಿನ ಯುದ್ಧದಲ್ಲಿ ಎಣ್ಣೆಗೆ ಎಷ್ಟರ ಮಟ್ಟಿಗೆ ಪ್ರಾಮುಖ್ಯತೆಯಿದೆಯೆಂಬುದು ಎಲ್ಲರಿಗೂ ತಿಳಿದಿದೆ. ಹಾಗಾಗಿ, ಆತನು ಕಾಕಸಸನ್ನು ಕೈವಶಪಡಿಸಲು ಮುಂದಿನ ವಸಂತಕಾಲದ ಧಾಳಿಯಲ್ಲಿ ಯೋಚಿಸುತ್ತಿರುವನೆಂದು ಹೇಳಲಾಗುತ್ತದೆ. ಭೂಮಧ್ಯಸಮುದ್ರದಲ್ಲಿ ಯು-ಬೋಟುಗಳ ಹಾವಳಿಯನ್ನು ಹೆಚ್ಚುವಂತೆ ಮಾಡಿ ಬ್ರಿಟಿಷರ ನೌಕಾಬಲವು ಅಲ್ಲಿ ತಲೆಯೆತ್ತದಂತೆ ಗೈಯುವುದೂ ಅವನ ಇನ್ನೊಂದು ಯೋಜನೆಯೆಂದು ತಿಳಿಯಲಾಗಿದೆ. ಇಟಲಿಯನ್ನೂ ಈ ವಿಷಯದಲ್ಲಿ ಹಿಟ್ಲರನು ತಯಾರಾಗಿರಲು ಎಚ್ಚರಿಸಿರಬಹುದು ಹಾಗಾಗಿ ಇನ್ನು ಮುಂದಿನ ವಸಂತಕಾಲದ ಧಾಳಿಯಲ್ಲಿ ಕಾಕಸಸ್ ಮತ್ತು ಭೂಮಧ್ಯ ಸಮುದ್ರಗಳ ಸಲುವಾಗಿ ಉಗ್ರ ಹೋರಾಟ ನಡೆಯಬಹುದೆಂದು ಹಲವರು ಈಗಲೇ ಊಹಿಸುತ್ತಿರುವರು.

ಸ್ವದೇಶಾಭಿಮಾನಿ

ತಾರೀಕು 6—3—1942

ಸರಕಾರದ 'ಬಜೆಟ್'

ಹಿಂದುಸ್ಥಾನ ಸರಕಾರದ 'ಬಜೆಟ್'ನ್ನು ಕೇಂದ್ರ ಎಸೆಂಬ್ಲಿ ಅಧಿವೇಶನದಲ್ಲಿ ಅರ್ಥಸಚಿವರಾದ ಜೆರೆಮ್ ರೈಸ್‌ಮೆನರು ಮಂಡಿಸಿದರು. ಮುಂದಿನ ವರ್ಷ ಹನ್ನೆರಡು ಕೋಟಿ ರೂಪಾಯಿಗಳ ಹೊಸ ಕರವನ್ನು ಹೊರಿಸಬೇಕಾಗಿ ಯೋಚಿಸಲಾಗಿದೆಯೆಂದು ಇದರಿಂದ ತಿಳಿದುಬರುತ್ತದೆ. ಈ ವರ್ಷ ಸುಮಾರು ಹದಿನೇಳು ಕೋಟಿ ರೂಪಾಯಿ ಮುಂದಿನ ವರ್ಷ ಸುಮಾರು ನಲ್ವತ್ತೇಳು ಕೋಟಿ ರೂಪಾಯಿ ಕೊರತೆಯೊದಗಬಹುದೆಂದು ಅಂದಾಜು ಮಾಡಲಾಗಿದೆ. ಸಂರಕ್ಷಕ ಖಾತೆಯ ತಿದ್ದುಪಡಿ ವೆಚ್ಚವು ೧೯೪೧-೪೨ರಲ್ಲಿ ೧೦೩ ಕೋಟಿ ರೂಪಾಯಿ ಇದ್ದು ಮುಂದಿನ ವರ್ಷದ ಅಂದಾಜು ೧೩೩ ಕೋಟಿ ರೂಪಾಯಿಯಾಗಿರುವುದೆಂದೂ ತಿಳಿಯಲಾಗಿದೆ.

ಯುದ್ಧ ನಿಮಿತ್ತದಿಂದ ಸರಕಾರದವರು ಆದಾಯ ಕರವನ್ನು ಹೆಚ್ಚಿಸಿದ್ದರಿಂದ ಪ್ರಾಂತಗಳಲ್ಲಿ ಆ ಮೂಲಕ ಆದಾಯ ಹೆಚ್ಚು ಒದಗಲಿದೆಯೆಂದೂ, ಪರದೇಶೀ ಸಾಲಗಳನ್ನು ಈ ದೇಶದ ಸಾಲಗಳಾಗಿ ರೂಪಾಂತರಗೊಳಿಸುವುದರಿಂದಲೂ ಹಿಂದೂಸ್ಥಾನ ಸರಕಾರಕ್ಕೆ ಲಾಭವೇ ಆಗುವುದೆಂದು ಅರ್ಥಸಚಿವರು ತಿಳಿಸಿದರು. ತಿದ್ದುಪಡಿ ಅಂದಾಜಿನಂತೆ ಈ ವರ್ಷದ ಆದಾಯದಲ್ಲಿ ೧೯೬೨ ಲಕ್ಷ ರೂಪಾಯಿ ಹೆಚ್ಚಳವಿದ್ದರೆ ವೆಚ್ಚವು ೨೦೦೪ ಲಕ್ಷ ರೂಪಾಯಿಯಾಗಿತ್ತೆಂದೂ ಇದಕ್ಕೆ ಮುಖ್ಯವಾಗಿ ಸಂರಕ್ಷಕ ವೆಚ್ಚವೇ ಕಾರಣವೆಂದೂ ಸ್ಪಷ್ಟಮಾಡಿದರು. ಇನ್ನು ಮುಂದಿನ ವರ್ಷದ ಒಟ್ಟು ಉತ್ಪನ್ನ ೧೪೦೦೦ ಲಕ್ಷ ರೂಪಾಯಿಯೆಂದೂ ಒಟ್ಟು ವೆಚ್ಚವು ೧೮೭೦೭ ರೂಪಾಯಿಯಾಗುವುದೆಂದೂ ಹೀಗೆ ಯುದ್ಧಕಾರಣವಾಗಿ ಸರಕಾರದ ವೆಚ್ಚವು ಮಿತಿಮೀರಿರುವುದರಿಂದ, ಅದನ್ನು ಸರಿಗೊಳಿಸುವರೆ ಅರ್ಥಸಚಿವರು ಹಲವು ಹೊಸ ಕರಗಳನ್ನು ಹಾಕಲು ಯೋಜನೆ ಮಾಡಿದ್ದಾರೆ.

ಅರ್ಥಸಚಿವರು ಯೋಜನೆಮಾಡಿದ ಹೊಸ ಕರದ ರೀತಿಯು ಈ ಪ್ರಕಾರವಾಗಿದೆ: ಈಗ ಆದಾಯದ ಮೇಲೆ ಎತ್ತುವ ಸರ್ ಚಾರ್ಜ್ ಮತ್ತು ಸುಪರ್ ಟೇಕ್ಸ್ ೩೩⅓ ಇದ್ದುದನ್ನು ಸಾಧಾರಣ ೫೦ಕ್ಕೆ ಏರಿಸಲಾಗುವುದು; ೧೦೦೦ ರೂಪಾಯಿಗಳಿಂದ ೨೦೦೦ ರೂಪಾಯಿಗಳ ಉತ್ಪನ್ನದ ಮೇಲೆ ರೂಪಾಯಿಗೆ ಅರ್ಧಾಣೆಯಂತೆ ಹೊಸ ಕರವನ್ನು ಹಾಕಲಾಗುವುದು, ಹತ್ತಿ, ಪೆಟ್ರೋಲ್ ಮತ್ತು ಉಪ್ಪನ್ನು ಬಿಟ್ಟು ಉಳಿದ ಪದಾರ್ಥಗಳ ಆಮದು ಕರವನ್ನು ೧೦೦ಕ್ಕೆ ೨೦ರಂತೆ ಹೆಚ್ಚಿಸಲಾಗುವುದು, ಪೆಟ್ರೋಲ್ ಕರವನ್ನು ೧೦೦ಕ್ಕೆ ೫೦ರಷ್ಟು ಹೆಚ್ಚಿಸಲಾಗುವುದು. ಪೋಸ್ಟ್ ಮತ್ತು ತಂತಿ ದರಗಳನ್ನು ಏರಿಸಲಾಗುವುದು. ಹೀಗೆ ಆಮದು ಕರದಿಂದ ೫೩೦ ಲಕ್ಷ ರೂಪಾಯಿ, ಆದಾಯ ಕರದಿಂದ ೫೭೦ ಲಕ್ಷ ರೂಪಾಯಿ ಮತ್ತು ಪೋಸ್ಟಲಿನಿಂದ ೧೦೦ ಲಕ್ಷ ರೂಪಾಯಿ ಹೆಚ್ಚಿಸಿ ಒಟ್ಟು ಹನ್ನೆರಡು ಕೋಟಿ ರೂಪಾಯಿ ಅಧಿಕ ಸಂಪಾದಿಸುವಂತೆ ಅರ್ಥಸಚಿವರು 'ಬಜೆಟ್' ತಯಾರಿಸಿದ್ದಾರೆ.

ಹೀಗೆ ಹೆಚ್ಚಿನ ಕರಗಳನ್ನು ಹಾಕುವುದರಿಂದ ಹಿಂದುಸ್ಥಾನದ ಜನತೆಯ ಮೇಲೆ ಹೆಚ್ಚಿನ ಭಾರ ಬೀಳುವುದೆಂಬುದನ್ನು ಯಾರೂ ಅಲ್ಲಗಳೆಯಲಾರರು. ಮೊದಲೇ ನಮ್ಮ ದೇಶವು ಬಹಳ ಶೋಷಣೆಗೊಳಗಾಗಿದ್ದು ಇತ್ತೀಚೆಗೆ ಅನೇಕ ರೀತಿಯ ಕ್ಷಾಮ ಡಾಮರಗಳಿಗೂ ದೇಶವು ತುತ್ತಾಗಿ, ಆಹಾರ ಪದಾರ್ಥಗಳ ಬೆಲೆ ಏರಿದ್ದು, ಕೈಗಾರಿಕೆಗಳು ಕುಗ್ಗುತ್ತಾ ಬಂದು ಜನರು ಕಂಗೆಟ್ಟಿರುವಾಗ ಈ ಹೊಸ ಕರವೂ ನಮ್ಮ ಮೇಲೆ ಹಾಕಲಾಗುವುದು! ಯುದ್ಧ ಆರಂಭವಾದಂದಿನಿಂದಲೇ ಸುಮಾರು ೨೦ ಕೋಟಿ ರೂಪಾಯಿಗಳ ಕರವು ಈ ಮೊದಲೇ ಹೊರಿಸಲಾಗಿದೆ! ತಿರುಗಿ ಈಗ ೧೨ ಕೋಟಿ ರೂಪಾಯಿ ಹೆಚ್ಚಿಗೆ ಕರ ಹಾಕಲು ಅರ್ಥಸಚಿವರು ಯೋಜನೆ ಮಾಡಿದ್ದಾರೆ! ಶ್ರೀಮಂತರ ಮೇಲೆ ಬಿದ್ದ ಕರವನ್ನು ಅವರು ಒಂದು ಪಕ್ಷ ಸಹಿಸಿದರೂ ಸಹಿಸಬಹುದಾಗಿದೆ. ಆದರೆ ಪೆಟ್ರೋಲ್ ಟಿನ್ನು ಎಣ್ಣೆ ಮೊದಲಾದವುಗಳಿಗೆ ಕರ ಬೀಳುವುದರಿಂದ ಬಡಜನರು ಕಂಗೆಡುವಂತಾಗುವುದಲ್ಲದೆ ವಾಹನಾದಿ ಸೌಕರ್ಯಗಳಿಗೂ ತೊಂದರೆ ತಗಲುವುದು. ಯುದ್ಧಕಾಲವಾದ್ದರಿಂದ ಇದನ್ನೆಲ್ಲಾ ಸಹಿಸಿಕೊಳ್ಳಬೇಕೆಂದು ಹೇಳುವ ವಾದಾಂಶವೊಂದಿದೆ. ಆದರೆ ಬ್ರಿಟಿಶ ಪ್ರಭುತ್ವ, ಇದು ಭಾರತೀಯರ ಯುದ್ಧವೆಂಬ ಬುದ್ಧಿಯನ್ನು ಜನತೆಯಲ್ಲಿ ಹುಟ್ಟುವಂತೆ ಮೊದಲು ಪ್ರಯತ್ನಿಸಿ ಆ ಮೇಲೆ ಕರ ಹಾಕಬೇಕಿತ್ತು ಎಂಬ ವಿಚಾರವನ್ನೂ ಮರೆಯಬಾರದು. ಭಾರೀ ಸಂಬಳ ತಿನ್ನುವ ಐ ಸಿ ಎಸ್. ಅಧಿಕಾರಿಗಳ ಸಂಬಳವನ್ನು ಕಡಿಮೆ ಮಾಡಿದ್ದರೆ ಈ ಹೊಸ ಕರವನ್ನು ಹಾಕುವ ಅವಶ್ಯವಿತ್ತೆ? ಕಾಂಗ್ರೆಸ್ ಮಂತ್ರಿಗಳು ತಿಂಗಳೊಂದರ ೫೦೦ ರೂಪಾಯಿ ಸಂಬಳದಿಂದ ದುಡಿದಿರಲಿಲ್ಲವೇ ಎಂಬುದನ್ನು ಹೀಗೆ ಹೊಸ ಕರವನ್ನು ಹಾಕಲು ಯೋಚಿಸುವ ಮೊದಲು ಅರ್ಥಸಚಿವರು ಪರಾಂಬರಿಸಬಹುದಾಗಿತ್ತಲ್ಲವೆ? ಈಗಾಗಲೇ ಶೋಷಣೆಗೊಂಡು ದರಿದ್ರವಾಗಿರುವ ಹಿಂದೂಸ್ಥಾನವು ಹೊಸ ಕರದಿಂದ ಇನ್ನಷ್ಟು ಶೋಷಣೆಗೊಳ್ಳಲು ಸಮರ್ಥವಿದೆಯೇ ಎಂಬುದನ್ನು ಸರಕಾರವು ಯೋಚಿಸಬೇಕಾಗಿದೆ.

'ಭಾರತ ನೀತಿ ಬದಲಾಗಬೇಕು'

ಇತ್ತೀಚೆಗೆ ಪಾರ್ಲಿಮೆಂಟಿನ ಕಾಮನ್ಸ್ ಸಭೆ ಸೇರಿದಾಗ ನಡೆದ ಚರ್ಚೆಗಳಿಂದ ಬ್ರಿಟಿಷ್ ಪ್ರಭುತ್ವವು ಭಾರತದ ಕುರಿತು ತಾಳಿರುವ ನೀತಿ ಬದಲಾಗಬೇಕೆಂದು ತೀವ್ರ ವಾದಗಳುಂಟಾದವು. ಇದುವರೆಗೆ ಅನುಸರಿಸಿ ಬಂದ ಕ್ರಮವು ಸಮ್ಮತವಲ್ಲವೆಂದ ಹಲವರು ಕಂಠೋಕ್ತ ಸಾರಿದರು. ಈಗಲಾದರೂ ಭಾರತವನ್ನು ಸ್ವತಂತ್ರ ಮಾಡುವ ಭರವಸೆ ಕೊಟ್ಟು ತೃಪ್ತಿಪಡಿಸಬೇಕೆಂದು ಹಲವರು ನುಡಿದರು. ಇಂದು ಭಾರತದಲ್ಲಿ 'ರಾಷ್ಟ್ರೀಯ ಸರಕಾರ'ವನ್ನು ರಚಿಸಿ ಅಲ್ಲಿನ ಆಡಳಿತ ರಕ್ಷಣೆಗಳನ್ನು ಭಾರತೀಯರಿಗೊಪ್ಪಿಸಬೇಕೆಂದು ಉಪದೇಶಿಸಿದರು. ಬ್ರಿಟಿಷ್ ಪಾರ್ಲಿಮೆಂಟಿನ ಸದಸ್ಯರು ಇಂದಿನೀ ಯುದ್ಧದ ವಿಷಮ ಪ್ರಸಂಗದಲ್ಲಾದರೂ ಭಾರತದ ಕುರಿತು ಇಷ್ಟೊಂದು ಪ್ರಾಮುಖ್ಯತೆಯನ್ನು ಕೊಟ್ಟು ಚರ್ಚಿಸಿರುವುದನ್ನು ನೋಡಿದರೆ, ಬ್ರಿಟಿಷ್ ಜನತೆಯ ಮನೋಭಾವವು ಭಾರತದ ಕುರಿತು ಈಗ ಕಿಂಚಿತ್ ಬದಲಾವಣೆಹೊಂದಿರುವುದೆಂದು ಊಹಿಸಲು ಸಾಧ್ಯವಿದೆ.

'ಭಾರತದಲ್ಲಿ ಪ್ರಬಲವಾದ ರಾಷ್ಟ್ರೀಯ ಸರಕಾರವು ಈ ಯುದ್ಧಕಾಲದಲ್ಲಿ ಸ್ಥಾಪಿತವಾಗಲಿ, ೪೦ ಮಿಲಿಯ ಭಾರತೀಯರಲ್ಲಿ ಕೇವಲ ಒಂದು ಮಿಲಿಯ ಸೈನಿಕರು! ಇದು ಬಲಿದಾನದ ನಿದರ್ಶನವೇ? ಚೀನರಷ್ಯಗಳಲ್ಲಿ ಕಂಡು ಬರುವ ಆ ಬಲಿದಾನದ ಬುದ್ಧಿ, ಶಕ್ತಿ ಸ್ಫೂರ್ತಿಗಳನ್ನು ಭಾರತದಲ್ಲಿಯೂ ನೋಡಬೇಕಾದರೆ ಭಾರತದಲ್ಲಿ ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಿರಿ' ಎಂದು ಸರ್ ಜಾರ್ಜ್ ಶೂಸ್ಟರು ಹೇಳಿದರು.

'ಭಾರತೀಯರು ನಮ್ಮೊಡನೆ ಸಹಕರಿಸುವಂತೆ ಯಾವಾಗ ಮಾಡುವಿರಿ? ಹಾಗೆ ನಮ್ಮೊಡನೆ ಅವರು ಸಹಕರಿಸುವಂತೆ ಮಾಡಲು ಯಾವ ಪ್ರಯತ್ನ ಗೈದಿದ್ದೀರಿ? ಚೀನಾದಲ್ಲಿ ಇದ್ದ ಉತ್ಸಾಹ ಮಲಯಾ ಬರ್ಮಗಳಲ್ಲಿ ನಾವು ಕಾಣಲಿಲ್ಲ. ಆ ಉತ್ಸಾಹವು ಭಾರತದಲ್ಲಾದರೂ ಹುಟ್ಟುವಂತೆ ಮಾಡಿರಿ' ಎಂದು ಮಿ. ಡೇವಿಸರು ಸಾರಿದರು! 'ಮಾರ್ಶಲ್ ಚಿಯಾಂಗ್ ಕೈಶೇಕರು ಅಟ್ಲಾಂಟಿಕ್ ಶಾಸನಕ್ಕೆ ಭಾರತವೂ ಬೆಂಬಲ ಕೊಡಬೇಕೆಂದರು. ಆದರೆ ಅದು ಭಾರತಕ್ಕೆ ಅನ್ವಯಿಸುವುದಿಲ್ಲವಾದರೆ ಅವರು ಏಕೆ ಬೆಂಬಲ ಕೊಡಬೇಕು? ಕೃಸ್ತ ಶಪಥಗಳನ್ನು ಬಾಯುಪಚಾರದಿಂದಲೇ ಮನ್ನಿಸ ನೋಡದೆ ಕಾರ್ಯರೂಪಕ್ಕೆ ತಂದರೆ ನಮ್ಮ ಕಷ್ಟ ಪರಿಹಾರವಾಗುವುದು' ಎಂದು ನುಡಿದರು ಸ್ಟೋಕ್ಸರು.

'ಚರ್ಚಿಲರ ಭಾಷಣದಲ್ಲಿ ಭಾರತದ ವಿಚಾರ ಒಂದು ಮಾತೂ ಇಲ್ಲವೇಕೆ?' ಎಂದು ಕೇಳುತ್ತಾ ಮೇಜರ್ ಮಿಲ್ನರರು ಭಾರತದ ಸೈನ್ಯ ಸಿದ್ಧತೆಯ ವಿಷಯ ತಪ್ಪು ಗ್ರಹಿಕೆ ಬರುವ ಹೇಳಿಕೆಯನ್ನು ಹಿಂದೆಯಿತ್ತ ವಿಷಯ ಉಗ್ರ ಟೀಕಿಸಿದ್ದಲ್ಲದೆ, ಭಾರತದ ಸೈನ್ಯ ಸಂಗ್ರಹದ ಕುರಿತು ತೋರಿಸಿದ ಅತೃಪ್ತೆಯನ್ನೂ ಸಿಂಗಾಪುರವೇ ಮೊದಲಾದ ಯುದ್ಧರಂಗಕ್ಕೆ ಏನೂ ಶಿಕ್ಷಣವಿಲ್ಲದ ಸೈನಿಕರನ್ನು ಕಳುಹಿಸಿ ಮಾಡಿದ ಪ್ರಮಾದದ ವಿಷಯವನ್ನೂ, ಭಾರತದಲ್ಲಿ ಏನೂ ದಕ್ಷತೆ ಅಭ್ಯಾಸಗಳಿಲ್ಲದಿದ್ದರೂ ಅಲ್ಲಿ ಧಾರಾಳ ಮದ್ದುಗುಂಡು ಇದೆಯೆಂದು ಅಮೆರಿ ಹೇಳಿ ಜನರನ್ನು ತಪ್ಪುದಾರಿಗೆ ಎಳೆದ ಸಂಗತಿಯನ್ನೂ ತೀವ್ರ ಖಂಡಿಸಿ ಭಾರತದ ವಿಷಯ ಬ್ರಿಟಿಷ್ ಪ್ರಭುತ್ವದ ನೀತಿ ಬದಲಾಗಬೇಕೆಂದೂ ಸಾರಿ ಹೇಳಿದರು.

ನೋಟಗಳು ...

"ಏನೋ ಪ್ರಮಾದವೊಂದು ಆಗಿದೆ; ಚರ್ಚಿಲರಿಗೆ ಏನೋ ಆಗಿರಬೇಕು, ಸಿಂಹಸದೃಶ ಚರ್ಚಿಲ್ ಈಗ ನರಿಯಂತೆ ಮಾತನಾಡುತ್ತಾರೆ. ನರಿಯ ಕುತಂತ್ರಕ್ಕೂ ಒಂದು ಕಾಲವುಂಟು; ಗಾಯಗೊಂಡ ಸಿಂಹದ ಉಗ್ರತೆಯೊಂದೇ ಫಲಿಸುವ ಕಾಲವೂ ಒಂದುಂಟು, ಇಂದಿನದು ಸಿಂಹದ ಕಾಲ. ಈಗಿನ ಬ್ರಿಟಿಷ್ ಜನತೆಗೆ ಬಂದೊದಗಿದ ಒಂದು ಗಂಡಾಂತರವೆಂದರೆ, ನರಿಯ ಕುತಂತ್ರವು ಇನ್ನೂ ಉಳಿದಿರುವುದು"

卐

ಚರ್ಚಿಲರ ಕುರಿತು ಇಂತಹ ಮಾತುಗಳನ್ನು ನ್ಯೂಯಾರ್ಕಿನ ಪತ್ರಿಕೆಯೊಂದರಲ್ಲಿ ಅದರ ಸಂಪಾದಕರಾದ ರಾಲ್ಫ್ ಇಂಗರ್ಸೋಲ್ ಎಂಬವರು ಬರೆದಿರುವರು. ರಾಲ್ಫ್ ಇಂಗರ್ಸೋಲರು ಒಂದು ಕಾಲದಲ್ಲಿ ಚರ್ಚಿಲರನ್ನು ದೇವತಾ ಮನುಷ್ಯರೆಂದು ಕೊಂಡಾಡುತ್ತಿದ್ದವರು, ಇಂದು ಚರ್ಚಿಲರ ಮುಂದಾಳುತನದಲ್ಲಿ ಬ್ರಿಟನಿಗೆ ಬಂದೊದಗಿದ ಗಂಡಾಂತರದ ಕುರಿತು ಬ್ರಿಟಿಷರನ್ನು ಎಚ್ಚರಿಸುವ ಸಲುವಾಗಿ ಹೀಗೆ ಉಗ್ರ ಟೀಕೆಯ ಅಗ್ರಲೇಖನವನ್ನು ಬರೆದಿದ್ದಾರೆ.

卐

'ಆ ಮನುಷ್ಯನು ಸ್ವಾಮಿಭಕ್ತನಾಗಿದನು' ಎನ್ನುವುದಕ್ಕೆ, 'ಅವನು ನಾಯಿಯಂತೆ ಸ್ವಾಮಿಭಕ್ತನಾಗಿದ್ದನು' ಎಂದರೆ ಹೀನೋಪಮೆಯಾಯಿತು. ಹೀನೋಪಮೆಯು ಸಾಹಿತ್ಯದಲ್ಲಿ ಒಂದು ದೋಷ. ಹಾಗಾಗಿ ಚರ್ಚಿಲರಿಗೆ [illegible] ಅವರು ಸಿಂಹ ಸದೃಶರಾಗಿಲ್ಲ ಎಂದು ಹೇಳುವುದೇನೋ [illegible] ಆದರೆ ಅವರು ಕುತಂತ್ರದವರು ಎಂದು ಹೇಳುವುದಕ್ಕೆ ನರಿಯಂತೆ ನಟಿಸುತ್ತಾರೆ ಎನ್ನುವುದು ಚಂದವಾಗಿಲ್ಲ. ಚರ್ಚಿಲರನ್ನು ರಾಲ್ಫ್ ಇಂಗರ್ಸೋಲರಿಗೆ ಕಟುವಾಗಿ ಟೀಕಿಸಬೇಕೆಂದಿದ್ದರೂ, ಸ್ವಲ್ಪ ಚಂದವಾದ ಭಾಷೆಯಲ್ಲಿ, ಆಲಂಕಾರಿಕರು ಒಪ್ಪುವಂತಹ ಭಾಷೆಯಲ್ಲಿ ಟೀಕಿಸಬಹುದಿತ್ತಲ್ಲವೆ?

卐

ರಾಲ್ಫ್ ಇಂಗರ್ಸೋಲರ ಲೇಖನದ ಈ ಅಂಶವು ಲಂಡನಿನ ಪತ್ರಿಕೆಗಳಿಗಾಗಿ, ನ್ಯೂಯಾರ್ಕಿನಿಂದ ತಂತಿ ಮಾಡಲ್ಪಟ್ಟಿದೆಯಂತೆ! ಚರ್ಚಿಲರ ವಿರೋಧಿಗಳು ಯಾರೋ ಹೀಗೆ ಮಾಡಿರಬೇಕು, ಸ್ವತಃ ಚರ್ಚಿಲರೇ ಇದನ್ನು ಓದಿನೋಡಿ ಚಕಿತರಾಗಬೇಕು!

卐

ಚರ್ಚಿಲರ ವಿರೋಧಿಗಳು ಬ್ರಿಟಿಷರ ವಿರೋಧಿಗಳಾಗಿರಬೇಕೆಂದೇನೂ ಇಲ್ಲ. ಆದರೆ ಹಿಟ್ಲರನೊಡನೆ ಹೋರಾಡಲು [ಸಿಂಹದ ಉಗ್ರತೆಯಿಂದಾಗಲಿ, ನರಿಯ ಕುತಂತ್ರದಿಂದಾಗಲಿ] ಹೊರಟ ಚರ್ಚಿಲರು ಇಂತಹ ವಿರೋಧ ಪ್ರಚಾರಗಳಿಂದ ಗಾಬರಿಗೊಳ್ಳುವಂಥವರಲ್ಲ!

卐

ಮಾತಿಗೆ ಪ್ರತಿಮಾತು ಕೊಡುವುದರಲ್ಲಿ ಚರ್ಚಿಲರಂತಹ ವೀರರು ಬೇರಿಲ್ಲ! ಹಿಟ್ಲರನನ್ನೂ ತನ್ನ ಮಾತಿನಿಂದಲೇ ಗೆಲ್ಲುವೆನೆಂದು ಚರ್ಚಿಲರು ಭರವಸೆ ಪಡುತ್ತಿರುವಾಗ ರಾಲ್ಫ್ ಇಂಗರ್ಸೋಲರಂತವರಿಗೆ ಅವರು ಸೋಲುವುದುಂಟೆ?

ಸಿಪಾಯಿಗಳು ಹೆಂಗುಸರ ಮೇಲೆ ಕೈಮಾಡಿದರೆ?

ಹಿಂಸೆಯಿಂದ-ಅಹಿಂಸೆಯಿಂದಾಗಲಿ ಮಾನರಕ್ಷಿಸಿರಿ!

ಹೆದರಿಕೆಯನ್ನು ಹೋಗಲಾಡಿಸಿ ಧೀರರಾಗಿರಿ

ಮಹಿಳೆಯರಿಗೂ ಸಾರ್ವಜನಿಕರಿಗೂ ಗಾಂಧಿಜಿ ಉಪದೇಶ

[ಹರಿಜನದಿಂದ]

ಹಿಂದೂದೇಶದ ನಗರಗಳಲ್ಲಿ ಇತ್ತೀಚೆಗೆ ಸೈನಿಕ ಸಿಪಾಯಿಗಳು, ಹೆಂಗುಸರ ಮೇಲೆ ಬಲಾತ್ಕಾರಮಾಡುವ, ಅಂಗಡಿಗಳನ್ನು ಲೂಟಿಮಾಡುವ ಸುದ್ದಿ ಕೇಳಿ ಬರುತ್ತಿದೆಯಷ್ಟೆ? ಇಂತಹ ಸಂದರ್ಭದಲ್ಲಿ ಸೋದರಿಯೊಬ್ಬಳು ಗಾಂಧಿಜಿಯವರಿಗೆ ಹೆಂಗುಸರು ತಮ್ಮ ಮಾನ ರಕ್ಷಣೆ ಮಾಡಿಕೊಳ್ಳುವ ಹಾಗೂ ನಾಗರಿಕರು ಮಾಡತಕ್ಕ ಕರ್ತವ್ಯವೇನೆಂಬ ವಿಚಾರದ ಕೆಳಗಿನ ಪ್ರಶ್ನೆಗಳನ್ನು ಕೇಳಿದ್ದಾಳೆ.

(೧) ಒಬ್ಬ ಸಿಪಾಯಿಯು ಹೆಂಗುಸೊಬ್ಬಳ ಮೇಲೆ ಬಲಾತ್ಕಾರ ನಡೆಸಿಬಿಟ್ಟನೆಂದಾದರೆ ಆಕೆ ಮಾನವನ್ನು ಕಳಕೊಂಡ ಹಾಗಾಯಿತೆ? (೨) ಅಂತಹ ಹೆಂಗುಸನ್ನು ಸಮಾಜವು ಟೀಕಿಸಬಹುದೇ? ದೂರೀಕರಿಸಬಹುದೇ? (೩) ಅಂತಹ ಬಲಾತ್ಕಾರ ನಡೆಯುವ ಸಂದರ್ಭದಲ್ಲಿ ಹೆಂಗುಸಾಗಲಿ, ಸಾರ್ವಜನಿಕರಾಗಲಿ ಮಾಡತಕ್ಕ ಕರ್ತವ್ಯವೇನು?—

ಇದಕ್ಕೆ ಗಾಂಧಿಜಿ ಹೀಗೆಂದು ಉತ್ತರ ಕೊಡುತ್ತಾರೆ ''ಒಬ್ಬ ಹೆಂಗುಸಿನ ಮೇಲೆ ಬಲಾತ್ಕಾರ ನಡೆಸಿದರೆ ಆಕೆ ಮಾನವನ್ನು ಕಳಕೊಳ್ಳುವುದಿಲ್ಲ. ಆಕೆಯನ್ನು ಸಮಾಜವು ಟೀಕಿಸಲೂ ಬಹಿಷ್ಕರಿಸಲೂ ಬಾರದು. ಒಬ್ಬ ಗಾಯಗೊಂಡವನ ಮೇಲೆ ಹೇಗೆ ಇತರರು ಸಹಾನುಭೂತಿ ತೋರಿಸುತ್ತಾರೋ ಹಾಗೆ ಆಕೆಯ ಮೇಲೆ ಬಲಾತ್ಕಾರದ ಬಗ್ಗೆ ಸಹಾನುಭೂತಿ ತೋರಿಸಬೇಕು. ಅಂತಹ ಅಗೌರವ ಕಾರ್ಯದಲ್ಲಿ ಹೆಂಗುಸು ಮನಃಪೂರ್ವಕ ಸಹಕರಿಸಿದರೆ ಮಾತ್ರ ಆಕೆಯನ್ನು ದೂರೀಕರಿಸಬಹುದು. ಅಂತಹ ವಿಷಯಗಳಾದರೆ ಅಡಗಿಸಕೂಡದು. ಹೆಂಗುಸರ ಮಾನರಕ್ಷಣೆ ವಿಷಯ ಸಾರ್ವಜನಿಕರಲ್ಲಿ ಒಳ್ಳೆಯ ಧೀರ ಅಭಿಪ್ರಾಯವು ಹುಟ್ಟುವಂತೆ ಆಗಬೇಕು. ಪತ್ರಿಕೆಗಳು ಜೋರಿನಿಂದ ಈ ಕುರಿತು ಪ್ರಚಾರ ಮಾಡಿದ ಪಕ್ಷದಲ್ಲಿ ಬಿಳಿಯ ಸಿಪಾಯಿಗಳಾಗಲಿ ಕಪ್ಪು ಸಿಪಾಯಿಗಳಾಗಲಿ ತಮ್ಮ ಆ ದುರ್ನಡತೆಯನ್ನು ನಿಲ್ಲಿಸುವರು. ಅವರ ಅಧಿಕಾರಿಗಳು ಅಂತಹ ದುರ್ನಡತೆಯನ್ನು ತಡೆಯಲೇಬೇಕಾಗುವುದು.

''ಹೆಂಗುಸರಿಗೆ ನನ್ನ ಉಪದೇಶವೆಂದರೆ, ಅವರು ನಗರಗಳನ್ನು ಬಿಟ್ಟು ಹಳ್ಳಿಗಳಿಗೆ ಹೋಗಬೇಕು. ಅವರ ಸೇವಾ ಕಾರ್ಯಕ್ಕೆ ಅಲ್ಲಿ ವಿಸ್ತಾರ ಕ್ಷೇತ್ರವು ಕಾದಿದೆ. ಹಳ್ಳಿಗಳಲ್ಲಿ ಇಂತಹ ಅಪಮಾನಕ್ಕೆ ಏನೂ ಆಸ್ಪದವಿಲ್ಲ. ಅವರು ಅಲ್ಲಿ ಸರಳ ಜೀವನ ನಡೆಸಿ ಬಡವರೊಡನೆ ತಾವೂ ಒಬ್ಬರಾಗಿ ಸೇರಿಕೊಳ್ಳಬೇಕು. ಅಲ್ಲಿಯೂ ಅವರು ತಮ್ಮ ಸಿರಿವಂತಿಕೆಯನ್ನು ಮೆರೆಸಲು ಸಿಲ್ಕಿನ ಬಟ್ಟೆಗಳನ್ನೂ ಬಂಗಾರದ ಆಭರಣಗಳನ್ನೂ ಹಾಕಿಕೊಂಡು ಮೆರೆದರೆ, ಅವರು ಒಂದು ಅಪಾಯದಿಂದ ತಪ್ಪಿಸಿ ಉಭಯ ಅಪಾಯಕ್ಕೆ ಬಿದ್ದಂತೆ ಆಗುವುದು. ಆದರೆ ಯಾರಿಗೆ ನಗರಗಳಲ್ಲಿ ಕರ್ತವ್ಯ ಕರ್ಮವಿದೆಯೋ ಅಂಥವರು ನಗರಗಳನ್ನು ಬಿಡಬೇಕೆಂದು ನಾನು ಹೇಳಲಾರೆ. ಆದ್ದರಿಂದ ಹೆಂಗುಸರು ಭಯಬಿಟ್ಟು ಜೀವಿಸಲು ಮುಖ್ಯವಾಗಿ ಕಲಿಯಬೇಕು. ಯಾವ ಹೆಂಗುಸು ತನ್ನ ಮಾನವೇ ತನಗೆ ಕವಚವೆಂದು ತಿಳಕೊಂಡು ನಿರ್ಭಯಳಾಗಿರುವಳೊ ಅವಳಿಗೆ ಏನೂ ಅಪಮಾನ ಎಲ್ಲಿಯೂ ಆಗಬಾರದು ಎಂದು ನನ್ನ ದೃಢ ನಂಬಿಕೆ. ಅಂತಹ ನಿರ್ಭಯ ನಿರ್ಮಲ ನಡತೆಯ ಹೆಂಗುಸಿನೆದುರು ಎಂತಹ ಮಾನವ ಪಶುವಾದರೂ ನಾಚಿಕೆಯಿಂದ ತಲೆತಗ್ಗಿಸಬೇಕಾಗುವುದು. ಇಂತಹ ರೀತಿಯಲ್ಲಿ ಆತ್ಮ ರಕ್ಷಣೆ ಮಾಡಿಕೊಂಡಿರುವ ಹೆಂಗುಸರ ಉದಾಹರಣೆ ಆಧುನಿಕ ಕಾಲದಲ್ಲಿಯೂ ಕೆಲವಿದೆ. ಆದ್ದರಿಂದ ಈ ಲೇಖನವನ್ನು ಓದುವ ಹೆಂಗುಸರೆಲ್ಲ ನಾನು ಬೋಧಿಸುವುದೇನೆಂದರೆ— ಅವರು ತಾವು ಧೀರೆಯರಾಗಿರಲು ಅಭ್ಯಾಸಮಾಡಬೇಕು. ಅಂತಹ ದುರ್ನಡತೆಗಳ ಸುದ್ದಿ ಕೇಳಿದ ಕೂಡಲೇ ಇಂದು ನಡುಗುವ ಈ ರೀತಿಯ ಅಧೀರತನವು ಅವರಿಂದ ಮಾಯವಾದರೆ ಖಂಡಿತವಾಗಿಯೂ ಅವರು ತಾವೇ ತಮ್ಮನ್ನು ರಕ್ಷಿಸಿಕೊಳ್ಳಬಲ್ಲರು. ಇಂತಹ ಧೀರತನವನ್ನು ತೋರಿಸುವ ಸಲುವಾಗಿ ಹೆಂಗುಸರು ದುರಂತ ಅನುಭವಕ್ಕೆ ಬಲಿಬೀಳಬೇಕೆಂದೇನೂ ಇಲ್ಲ. ಅಂತಹ ದುರದೃಷ್ಟ ಅನುಭವವು ಲಕ್ಷಾಂತರ ಮಂದಿಗೆ ಆಗುವುದೇ ಇಲ್ಲ. ಪ್ರತಿಯೊಬ್ಬ ಸಿಪಾಯಿಯೂ ಒಂದು ಮೃಗವಲ್ಲ. ಅವರಲ್ಲಿ ಬಹಳ ಸ್ವಲ್ಪ ಮಂದಿ ಮಾತ್ರ ಎಲ್ಲಾ ತರದ ಸಭ್ಯ ವರ್ತನೆಯಿಂದ ದೂರರಾದವರಿದ್ದಾರೆ. ಶೇಕಡಾ ಇಪ್ಪತ್ತರಷ್ಟು ಹಾವುಗಳು ಮಾತ್ರ ವಿಷಮಯವಾದವುಗಳು. ಅವುಗಳಲ್ಲಿಯೂ ಕೆಲವು ಮಾತ್ರ ಕಚ್ಚುತ್ತವೆ. ಅವುಗಳ ಮೇಲೆ ಕಾಲಿರಿಸದ ವಿನಾ ಅವುಗಳೂ ಕಚ್ಚಲಾರವು. ಆದರೆ ಹಾವನ್ನು ನೋಡಿದ ಕೂಡಲೇ ಹೆದರಿ ಹಾರುವವರಿಗೆ ಈ ಅನುಭವವು ಪ್ರಯೋಜನಕ್ಕೆ ಬೀಳುವುದಿಲ್ಲ. ಹೆಂಗುಸರು ಭಯಹೀನೆಯರಾಗಿರುವಂತೆ ಗಂಡಂದಿರೂ ಹೆತ್ತವರೂ ಅವರನ್ನು ತರಬೇತಿಗೊಳಿಸಬೇಕು. ದೇವರಲ್ಲಿ ಅಚಲ ವಿಶ್ವಾಸವಿಡುವುದರಿಂದ ಧೀರರಾಗಲು ಉತ್ತಮ ಸಹಾಯವಾಗುವುದು. ದೇವರು ಅದೃಶ್ಯನಾಗಿದ್ದರೂ ಆತನೇ ನಮ್ಮ ರಕ್ಷಕನು. ಇಂತಹ ವಿಶ್ವಾಸ ಯಾವನಲ್ಲಿದೆಯೋ ಆತನು ಎಲ್ಲರಿಗಿಂತಲೂ ಧೀರನು.

''ಆದರೆ ಅಂತಹ ವಿಶ್ವಾಸ ಮತ್ತು ಧೈರ್ಯಗಳನ್ನು ಒಂದೇ ದಿನ ಗಳಿಸಿಕೊಳ್ಳಲು ಸಾಧ್ಯವಿಲ್ಲ. ಆ ಮಧ್ಯೇ ನಾವು ಮಾಡತಕ್ಕ ಕಾರ್ಯಗಳ ಕುರಿತು ಯೋಚಿಸಬೇಕು. ಒಬ್ಬ ಹೆಂಗುಸಿನ ಮೇಲೆ ಬಲಾತ್ಕಾರವಾದರೆ, ಆಕೆ ಆಗ ಹಿಂಸೆ ಅಹಿಂಸೆಗಳ ವಿಚಾರ ತರ್ಕಿಸಕೂಡದು. ಅವಳ ಮುಖ್ಯ ಕಾರ್ಯವೆಂದರೆ ಆತ್ಮರಕ್ಷಣೆ. ತನ್ನ ಮಾನವನ್ನು ರಕ್ಷಿಸುವ ಸಲುವಾಗಿ ಆಗ ಆಕೆಗೆ ದೊರಕಿದ ಹಾಗೂ ಆಕೆಯ ಯೋಚನೆಗೆ ಬಂದ ಪ್ರತಿಯೊಂದು ಸಾಧನವನ್ನೂ ವಿಚಾರವನ್ನೂ ಉಪಯೋಗಿಸಬಹುದು. ದೇವರು ಆಕೆಗೆ ಉಗುರುಗಳನ್ನೂ ಹಲ್ಲುಗಳನ್ನೂ ಕೊಟ್ಟಿದ್ದಾನೆ. ಆಕೆ ತನ್ನ ಎಲ್ಲಾ ಶಕ್ತಿಗಳಿಂದ ಆ ಸಮಯದಲ್ಲಿ ಅವುಗಳನ್ನು ಉಪಯೋಗಿಸಬಹುದು, ಅಗತ್ಯಬಿದ್ದರೆ ಆ ಕೆಲಸದಲ್ಲಿ ಸಾಯಲೂ ಬೇಕಾಗುವುದು. ಧೀರರಾದ ಗಂಡುಸರಾಗಲಿ ಹೆಂಗುಸರಾಗಲಿ ಆತ್ಮ ಬಲಿದಾನ ಮಾಡಲು ಸಿದ್ಧರಿರುವುದರಿಂದ ತಾವು ಮಾತ್ರ ಆತ್ಮರಕ್ಷಣೆ ಮಾಡಿಕೊಳ್ಳುವುದಲ್ಲದೆ ಇತರರ ರಕ್ಷಣೆಯನ್ನೂ ಮಾಡಬಲ್ಲರು. ಸತ್ಯವಾಗಿ ನೋಡಿದರೆ, ನಾವು ಮರಣಕ್ಕೆ ಬಹಳ ಅಂಜುತ್ತೇವೆ. ಹಾಗಾಗಿ ಪ್ರಬಲ ಶಕ್ತಿಗೆ ಕೊನೆಯಲ್ಲಿ ನಾವು ಶರಣುಹೋಗುತ್ತೇವೆ. ಆಕ್ರಮಣಗಾರರಿಗೆ ಕೆಲವರು ಮೊಣಕಾಲೂರಬಹುದು, ಕೆಲವರು ಅವರ ಲಂಚಕ್ಕೆ ವಶವಾಗಬಹುದು, ಕೆಲವರು ಹೊಟ್ಟೆಹೊರುವ ಸಲುವಾಗಿ ಎಂತಹ ಕೆಲಸವನ್ನೂ ಮಾಡಬಹುದು, ಕೆಲವು ಹೆಂಗುಸರು ಸಾಯುವುದಕ್ಕಿಂತ ತಮ್ಮ ದೇಹವನ್ನಾದರೂ ಮಾರಿಬಿಡುತ್ತಾರೆ. ನಾನಿದನ್ನು ಮನನೋಯಿಸಲು ಬರೆದದ್ದಲ್ಲ, ಮಾನವ ಪ್ರಕೃತಿಯನ್ನು ನಾನು ಚಿತ್ರಿಸಿದ್ದು. ಹೊಟ್ಟೆಯ ಸಲುವಾಗಿ ಎಂತಹ ಕೆಲಸಕ್ಕೂ ಬಗ್ಗುವವರಲ್ಲಿಯೂ ಗಂಡುಸರ ಕಾಮವಾಸನೆಗೆ ಶರಣಾಗುವ ಹೆಂಗುಸರಲ್ಲಿಯೂ ಜೀವನವನ್ನು ಅತ್ಯಂತ ಪ್ರಿಯವಾಗಿ ಎಣಿಸುವ ಭಾವನೆಯಿದೆ. ಆದರೆ ಯಾರು ಜೀವನವನ್ನು ಕಳಕೊಳ್ಳಬಲ್ಲನೋ ಆತನೇ ಅದನ್ನು ರಕ್ಷಿಸಲಾಪನು. ''ತೇನತ್ಯಕ್ತೇನ ಭುಂಜೀಥಾ'' ಪ್ರತಿಯೊಬ್ಬ ವಾಚಕನೂ ಈ ಅಸದೃಶ ಶ್ಲೋಕವನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಆದರೆ ಬರಿಯ ಮುಖೋದ್ಗತ ಮಾಡಿ ಪ್ರಯೋಜನವಿಲ್ಲ. ಅದು ಆತನ ಹೃದಯಾಂತರಾಳವನ್ನು ಸೇರಿಬಿಡಬೇಕು. ಜೀವನದಲ್ಲಿ ಸುಖಿಸಲಿಚ್ಛೆಯಿದ್ದರೆ, ಜೀವನ ಮೋಹವನ್ನು ಬಿಡಬೇಕು. ಅದು ನಮ್ಮ ಪ್ರಕೃತಿಯ ಒಂದು ಅಂಗವಾಗಿರಬೇಕು.

'ಇವಿಷ್ಟು ಒಂದು ಹೆಂಗುಸು ಏನು ಮಾಡತಕ್ಕದ್ದು ಎಂಬ ವಿಷಯವಾಗಿ. ಅಂತಹ ಅಪರಾಧಗಳನ್ನು ಪ್ರತ್ಯಕ್ಷ ನೋಡುವ ಗಂಡುಸು ಏನು ಮಾಡಬೇಕು? ಹಿಂದಿನ ವಿವರಣೆಯಲ್ಲಿಯೇ ಅದರ ಉತ್ತರ ಅಡಕವಾಗಿದೆ. ಆತನು ಅದನ್ನು ಕ್ರಿಯಾಶೂನ್ಯನಾಗಿ ನೋಡಿಕೊಂಡಿರಕೂಡದು. ಆತನು ಹೆಂಗುಸನ್ನು ರಕ್ಷಿಸಲೇಬೇಕು. ಆತನು ಪೋಲೀಸರ ಸಹಾಯಕ್ಕಾಗಿ ಓಡಕೂಡದು. ರೈಲ್ವೆ ಗಾಡಿಯಲ್ಲಿ ಎಲಾರ್ಮ್ ಚೈನನ್ನು ಎಳೆದು ಮಾತ್ರ ತೃಪ್ತಿಪಡಬಾರದು. ಆತನು ಅಹಿಂಸೆಯನ್ನು ಉಪಯೋಗಿಸಲು ಶಕ್ತನಿದ್ದರೆ ಅದನ್ನು ಉಪಯೋಗಿಸಿ ಹೆಂಗುಸನ್ನು ರಕ್ಷಿಸುವುದು. ಆತನು ಅಹಿಂಸೆಯಲ್ಲಿ ವಿಶ್ವಾಸವಿಡುವುದಿಲ್ಲವಾದರೆ ಅಥವಾ ಅದನ್ನು ಉಪಯೋಗಿಸಲಾರನಾದರೆ ಆತನು ತನ್ನೆಲ್ಲಾ ಶಕ್ತಿಯನ್ನೂ ಉಪಯೋಗಿಸಿ ಹೆಂಗುಸನ್ನು ರಕ್ಷಿಸಬೇಕು. ಈ ಎರಡು ರೀತಿಗಳಲ್ಲಿಯೂ ತನ್ನ ಜೀವವನ್ನು ಬಲಿದಾನ ಮಾಡಲು ಆತನು ಸಿದ್ಧನಿರಬೇಕು. ಆದರೆ ಮುದುಕರು, ಹಲ್ಲಿಲ್ಲದವರು, ಶಕ್ತಿಯಿಲ್ಲದ ನನ್ನಂಥವರು ಸೋದರಿಯೊಬ್ಬಳ ಮಾನ ಹೋಗುತ್ತಿರುವಾಗ, ಅಹಿಂಸೆಯನು ಮಾತ್ರ ಬೋಧಿಸಿ ಸುಮ್ಮನಿದ್ದರೆ ಎಂತಹ ಮಹಾತ್ಮಾ ಬಿರುದೂ ಕಳಚಿಹೋಗುವುದು, ಅಪಮಾನವಾಗುವುದು, ನಿಂದೆಯಾಗುವುದು. ನನ್ನ ಹಾಗಿದ್ದ ಮುದುಕರೂ ಅಂಥಾ ಸಮಯದಲ್ಲಿ ಹಿಂಸೆಯಿಂದಾಗಲಿ ಅಹಿಂಸೆಯಿಂದಾಗಲಿ, ಸೋದರಿಯೊಬ್ಬಳ ಮಾನರಕ್ಷಣೆ ಮಾಡಲು ಜೀವಕೊಡಲು ಸಿದ್ಧರಾದರೆ ನಾವು ಅಂಥಾ ಹೆಂಗುಸರ ಮಾನವನ್ನು ರಕ್ಷಿಸಬಹುದಾಗಿದೆ.

'ಇವಿಷ್ಟು ನೋಡುತ್ತಿರುವವರ ಕುರಿತು. ಆದರೆ ನಮ್ಮ ದೇಶದ ವಾತಾವರಣದಲ್ಲಿ ಧೀರಬುದ್ಧಿ ನೆಲೆನಿಂತಿರುವುದಾದರೆ- ಯಾವುದೇ ಭಾರತೀಯನೂ ಸ್ತ್ರೀಯರ ಮಾನಹಾನಿಯನ್ನು ನೋಡಲಾರನು. ನಾನುಹೇಳುವುದೇನೆಂದರೆ ಯಾವನೇ ಸಿಪಾಯಿಯೂ ಹೆಂಗುಸನ್ನು ಸ್ಪರ್ಶಿಸಲು ಧೈರ್ಯಗೊಳ್ಳಲಾರನು. ಆದರೆ ಅಂತಹ ಧೀರ ಚೈತನ್ಯ ನಮ್ಮಲ್ಲಿಲ್ಲವಾದರೆ ಅದು ನಾಚಿಕೆಗೇಡಿತನ. ಮುಂದೆ ಇಂತಹ ದುರ್ನಡತೆಗಳನ್ನು ಜನರು ದೂರೀಕರಿಸಲು ಸಮರ್ಥರಾದರೆ ಅದು ಸ್ವಲ್ಪವಾದರೂ ಸಾಹಸವೆನಬಹುದು. ಯಾರಿಗೆ ಸರಕಾರದಲ್ಲಿ ಪ್ರಭಾವವುಂಟೋ ಅಂಥವರು ಸರಕಾರೀ ಅಧಿಕಾರಿಗಳ ಮೂಲಕ ಅಗತ್ಯವಿರುವ ಮುಂಜಾಗ್ರತೆ ತೆಗೆದುಕೊಳ್ಳಲು ಪ್ರಯತ್ನಿಸುವರು. ಆದರೆ ಸ್ವಸಹಾಯವು ಉತ್ತಮ ಸಹಾಯ. ಇಂತಹ ಸಂದರ್ಭದಲ್ಲಿ ನಾವು ನಮ್ಮ ಶಕ್ತಿ ಮತ್ತು ದೇವರ ಸಹಾಯವನ್ನು ಮಾತ್ರ ನಂಬಿರಬೇಕಾಗಿದೆ."

''ಇಡೀ ಜಗತ್ತು ಅಗ್ನಿಪರೀಕ್ಷೆಯಲ್ಲಿದೆ, ಯಾರೂ ಯುದ್ಧದಿಂದ ತಪ್ಪಿಸಿಕೊಳ್ಳಲಾರದು. ರಾಮಾಯಣ ಮತ್ತು ಮಹಾಭಾರತಗಳು ಕವಿಗಳ ಊಹನೆಯ ಕೃತಿಗಳಾಗಿದ್ದರೂ, ಅವುಗಳನ್ನು ಬರೆದವರು ಕೇವಲ ಛಂದೋಶಾಸ್ತ್ರಜ್ಞರು ಮಾತ್ರವಲ್ಲ, ಅವರು ಋಷಿಗಳು. ಅವರು ಯಾವುದನ್ನು ನುಡಿದರೋ ಅದು ಇಂದು ನಮ್ಮ ಕಣ್ಣ ಮುಂದೆ ನಡೆಯುತ್ತದೆ. ಹಲವು ರಾವಣರು ಈಗ ಹೊಡೆದಾಡುತ್ತಿದ್ದಾರೆ. ಅವರು ಅನುಪಮ ಶಕ್ತಿಯನ್ನು ತೋರಿಸುತ್ತಿದ್ದಾರೆ. ಅವರು ಆಕಾಶದಿಂದ ಮೃತ್ಯುಕಾರಕ ಅಸ್ತ್ರಗಳನ್ನು ಎಸೆಯುತ್ತಿದ್ದಾರೆ. ಅಂದಿನ ಊಹೆಗೆ ಹೊರತಾಗಿರುವ ಧೈರ್ಯವು ಇಂದಿನ ಯುದ್ಧರಂಗದಲ್ಲಿ ಕಾಣಲಾರದು. ಮನುಷ್ಯನು ಈ ರೀತಿಯಲ್ಲಿ ಯುದ್ಧಮಾಡಲಾರನು. ಖಂಡಿತವಾಗಿಯೂ ದೇವರೂ ಈ ರೀತಿ ಮಾಡಲಿಕ್ಕಿಲ್ಲ. ಪಶುಗಳು ಮಾತ್ರ ಈ ರೀತಿ ಮಾಡಬಲ್ಲವು. ಸಿಪಾಯಿಗಳು ತಮ್ಮ ದೇಹ ಶಕ್ತಿಯಿಂದ ಅಹಂಭಾವಗೊಂಡವರಾಗಿ ಅಂಗಡಿಗಳನ್ನು ಲೂಟಿಮಾಡುವುದು ಮಾತ್ರವಲ್ಲ ಹೆಂಗುಸರ ಮೇಲೂ ಕೈಮಾಡಲು ನಾಚಿಕೆ ಪಡುವುದಿಲ್ಲ. ಇಂತಹ ಸಂಭವಗಳನ್ನು ತಡೆಯಲು ಈ ಯುದ್ಧಕಾಲದಲ್ಲಿ ಸರಕಾರವು ಬಲಹೀನವಿದೆ. ಸೈನ್ಯವು ಅವರ ಪ್ರಾಥಮಿಕ ಕೆಲಸವನ್ನು ಮಾಡುವುದು, ಆದ್ದರಿಂದ ಸೈನಿಕರ ದುರ್ನಡತೆಯ ವಿಷಯ ಸರಕಾರವು ಕಣ್ಣುಮುಚ್ಚುತ್ತಿದೆ. ಯಾವ ದೇಶದಲ್ಲಿ ಇಡೀ ಜನಾಂಗವೇ ಸೈನಿಕವಾಗಿ ಮಾರ್ಪಟ್ಟಿದೆಯೋ ಅಲ್ಲಿ ಸೈನ್ಯವೆಂಬುದು ಜನಾಂಗದ ಒಂದು ಮುಖ್ಯ ಭಾಗವೇ ಆಗುವುದು. ಆದ್ದರಿಂದ ಅಲ್ಲಿ ಒಬ್ಬ ಸಿಪಾಯಿ ಅಂತಹ ಸ್ವಾತಂತ್ರ್ಯ ತೆಕ್ಕೊಳ್ಳುವುದು ನಿಂದನೀಯವಲ್ಲ. ಆದರೆ ಭಾರತವು ಹಾಗಾಗಲು ಹಲವು ತಲೆಮಾರುಗಳು ದಾಟಬೇಕಾಗುವುದು.

ಚರಿತ್ರಾರ್ಹವಾದ ಭೇಟಿ

(ಗಾಂಧಿ ಚಿಯಾಂಗ್ ಭೇಟಿ)

ಗಾಂಧಿಜಿ ಚಿಯಾಂಗ್ ದಂಪತಿಗಳು ಇತ್ತೀಚೆಗೆ ಕಲ್ಕತ್ತದಲ್ಲಿ ಭೇಟಿಯಾದ ವಿಷಯ ವಿಸ್ತಾರವಾದೊಂದು ಲೇಖನವನ್ನು ಮಹಾದೇವ ದೇಸಾಯಿಯವರು ಹರಿಜನದಲ್ಲಿ ಬರೆದಿರುವರು. ಅವರು ಅದರಲ್ಲಿ, ಮೊದಲು ವಾರ್ಧಾಕ್ಕೆ ಚಿಯಾಂಗ್ ದಂಪತಿಗಳು ಬರುವುದಾಗಿ ಗೊತ್ತಾಗಿದ್ದು ಎಲ್ಲಾ ಸಿದ್ಧತೆ ನಡೆದಿದ್ದರೂ, ಯಾವುದೋ ಅನಿವಾರ್ಯ ನಿಮಿತ್ತದಿಂದ ಅವರಿಗೆ ಬರಲಾಗದಿದ್ದು ಕಡೆಗೆ ನೆಹರುಗಳ ಒತ್ತಾಸೆಯಿಂದ ಗಾಂಧಿಜಿ ಕಲ್ಕತ್ತದಲ್ಲಿ ಬಿರ್ಲಾಭವನದಲ್ಲಿ ನಾಲ್ಕು ಗಂಟೆಗಳ ವರೆಗೆ ಅವರೊಡನೆ ಮಾತನಾಡಿದ ವಿಷಯ ವಿವರಿಸಿರುತ್ತಾರೆ. ಆ ಲೇಖನದಲ್ಲಿ ಚಿಯಾಂಗ್ ದಂಪತಿಗಳ ಜೀವನ ಪರಿಚಯವೂ ಇದೆ. ಮಾತುಕತೆಯ ವಿಚಾರ ಅವರು ಹೀಗೆ ಬರೆಯುತ್ತಾರೆ.

'ಅವರು ಇಬ್ಬರೂ ಪರಸ್ಪರ ಪರಿಚಯವಾಗಿಕೊಳ್ಳಲು ಆತುರರಿದ್ದರು. ಸ್ವಲ್ಪ ಸಮಯ ಗಾಂಧಿಜಿ, ಯುದ್ಧಾಸ್ತ್ರವಾಗಿ ತಾನು ಸತ್ಯಾಗ್ರಹ ಮತ್ತು ಅಸಹಕಾರವನ್ನು ಉಪಯೋಗಿಸುವ ವಿಚಾರ ವಿವರಿಸಿದರು. ಮೇಡಂ ಶೈಕೇಕರು ಧನುಷ್ತಕ್ಲಿಯಲ್ಲಿ ನೂಲು ತಿದುವುದನ್ನು ಕುತೂಹಲದಿಂದ ನೋಡುತ್ತಿದ್ದರು. ನೀವಿದನ್ನು ನನಗೆ ಕಲಿಸಬೇಕಾಗುವುದು ಎಂದರು. ಅವರು ಗಾಂಧಿಜಿಯೊಡನೆ 'ಇನ್ನಿ ಸ್ವಲ್ಪ ಸಮಯ ಸೇವಾಗ್ರಾಮದಲ್ಲಿ ಉಳಕೊಳ್ಳಿ ನನ್ನ ಮಗಳಾಗಿ ನಾನು ನಿಮ್ಮನ್ನು ಸ್ವೀಕರಿಸಿಕೊಳ್ಳುವೆನು ಎಂದು ಆಮಂತ್ರಣವಿತ್ತರು. ಗಾಂಧಿಜಿ "ಮಹಾತ್ಮರು ನನ್ನನ್ನು ಬಹಳ ಆಕರ್ಷಿಸಿದರು" ಎಂದು ಮೇಡಂ ಉದ್ಗಾರವೆತ್ತಿದರು. ಗಾಂಧಿಜಿಯವರ ಸತ್ಯಾಗ್ರಹವು ಇಂದಿನ ಆಕ್ರಮಣಗಾರರೆದುರು ಸಫಲವಾಗುವುದೇ ಎಂದು ಶೈಕೇಕರು ಸಂಶಯ ಸೂಚಿಸಿದ್ದಕ್ಕೆ, ಗಾಂಧಿಜಿ ಹೇಳಿದರು. ಜಪಾನು ಬದಲಿ ಜರ್ಮನಿ ಬರಲಿ ಅದನ್ನು ಅಹಿಂಸೆಯಿಂದ ಹೇಗೆ ಎದುರಿಸುವುದೆಂಬ ವಿಷಯ ಹಿಂದಿನಂತೆ ದೇವರು ನನಗೆ ಆಗ ಬುದ್ಧಿ ಕೊಡುವನು. ನಾನೀಗ ಅದನ್ನು ಹೇಳಲಾರೆ ಎಂದರು. ಮೇಡಂ ತನ್ನೊಡನೆ ಧನುಷ್ತಕ್ಲಿಯನ್ನು ಹೋಗುವಾಗ ಕೊಂಡೊಯ್ದರು. ನಾಲ್ಕು ತಾಸಿನ ಭೇಟಿಯಲ್ಲಾದರೂ ಅವರು ಅತ್ಯಂತ ಆಪ್ತ ಭಾವವನ್ನು ತೋರಿದರು.

ಬರ್ಮದಿಂದ ಹಿಂದೂಸ್ಥಾನಕ್ಕೆ ಹೊಸ ರಸ್ತೆ

ಎರಡನ್ನು ಕಡಿಸಲು ಬರ್ಮಾ ಸರಕಾರವು ಉದ್ಯಮಿಸಿರುವುದಾಗಿ ತಿಳಿದಿದೆ. ಅಲ್ಲಿಂದ ಇಲ್ಲಿಗೆ ಬರುವ ಮಾರ್ಗಗಳು ದುರ್ಗಮ. ಇರುವುದರಿಂದ ಈ ರಸ್ತೆ ಕಡಿಸುವ ಆಲೋಚನೆ ಮಾಡಲಾಗಿದೆಯಂತೆ.

ನೀಲೇಶ್ವರ

ವಿದಾಯ ಸತ್ಕಾರ ಕೂಟ

ಇಲ್ಲಿಯ ರಾಜಾಸ್ ಹಯ್ ಸ್ಕೂಲಿನ ಎಸ್. ಎಸ್. ಎಲ್. ಸಿ. ವಿದ್ಯಾರ್ಥಿಗಳನ್ನು ಬೀಳ್ಕೊಡುವ ಸಮಾರಂಭವು ಇದೇ ಕಳೆದ ತಾ. ೨೭ರಂದು ಜರಗಿತು. ವಿದ್ಯಾರ್ಥಿಗಳಲ್ಲಿ ಹಲವರು, ಉಪಾಧ್ಯಾಯರು ವಿದ್ಯಾರ್ಥಿಗಳ ಏಳ್ಗೆಗಾಗಿ ಪಡುವ ಶ್ರಮವನ್ನು ಪ್ರಶಂಸಿಸಿ ಮಾತನಾಡಿದರು. ಅನಂತರ ಉಪಾಹಾರ, ಗ್ರೂಪ್ ಫೋಟೊ ಮೊದಲಾದವು ನಡೆದುವು.

ಜಾವಾದಲ್ಲಿ ಜಪಾನರು ಮುನ್ನಡೆಯುತ್ತಿದ್ದಾರೆ

ಬರ್ಮಾ ರಸ್ತೆಯನ್ನು ಕತ್ತರಿಸುವ ಯತ್ನ!

ಡಚ್ ಇಂಡೀಸ್ ರಾಜಧಾನಿ ಸ್ಥಳಾಂತರ

ಆಸ್ಟ್ರೇಲಿಯದ ಮೇಲೆ ಆಕ್ರಮಣ

ಗಾಯಗೊಂಡ ಜನರಲ್ ವೇವೆಲರು

ಪೂರ್ವದ ಮಿತ್ರರಾಷ್ಟ್ರಗಳ ಸೇನೆಗಳ ಮುಖ್ಯ ಸೇನಾನಾಯಕರಾಗಿ ನೇಮಿಸಲ್ಪಟ್ಟಿದ್ದರಷ್ಟೆ. ಈಗ ಪುನಃ ಹಿಂದೂಸ್ಥಾನದ ಪ್ರಧಾನ ಸೇನಾನಾಯಕರಾಗಿ ನೇಮಿಸಲ್ಪಟ್ಟಿರುತ್ತಾರೆ. ವೇವೆಲರು, ಕೊನೆಯ ವರೆಗೂ ಸಿಂಗಾಪುರದಲ್ಲಿದ್ದು, ಅದು ಜಪಾನರಿಗೆ ಶರಣಾಗತವಾಗುವುದಕ್ಕಿಂತ ೩೬ ಘಂಟೆಗಳ ಮೊದಲು ಅದನ್ನು ಬಿಟ್ಟು ವಿಮಾನ ಮೂಲಕ ಬರುವಾಗ, ವೈರಿಯ ಗುಂಡೊಂದು ಅವರ ಎದೆ ಎಲುಬಿಗೆ ತಾಗಿ ಪೆಟ್ಟಾಗಿರುವುದೆಂದು ತಿಳಿದುಬರುತ್ತದೆ. ಅವರು ಫಿಲಿಪ್ಪೈನಿಗೆ ಹೋಗಿ ಜನರಲ್ ಮೆಕ್ ಆರ್ಥರರೊಂದಿಗೆ ಕೂಡಿ ಹೋರಾಟ ನಡಿಸಲು ಸಿದ್ಧರಿದ್ದರಂತೆ. ಅಂತಹ ಅಪಾಯಕ್ಕೊಳಗಾಗುವುದು ಯುಕ್ತವಲ್ಲವೆಂದು ಜನರಲ್ ಮೆಕ್ ಆರ್ಥರರೇ ಅದಕ್ಕೊಪ್ಪಲಿಲ್ಲೆಂದು ತಿಳಿದುಬರುತ್ತದೆ.

ಆಸ್ಟ್ರೇಲಿಯದ ಅಂಡಮಾನಗಳ ಮೇಲೆ ವಿಮಾನ ಧಾಳಿ

ಆಸ್ಟ್ರೇಲಿಯದ ಪ್ರಾಮುಖ್ಯವಾದ ಡಾರ್ವಿನ್ ಬಂದರದ ಮೇಲೆ ಈ ಮೊದಲೊಮ್ಮೆ ಜಪಾನರು ಧಾಳಿ ನಡಿಸಿ ಹಾವಳಿಯಾಗಿರುವುದಷ್ಟೆ. ಈಗ ಪುನಃ ೪೭ ಜಪಾನ ವಿಮಾನಗಳು ಪಶ್ಚಿಮ ಆಸ್ಟ್ರೇಲಿಯದ ಮೇಲೇರಿ ಹೋಗಿ ಎರಡು ವಿಮಾನನಿಲಯಗಳ ಮೇಲೆ ಧಾಳಿ ನಡಿಸಿ, ಹಾವಳಿ ಮಾಡಿರುತ್ತವೆ. ಇನ್ನು ಮುಂದೆ ಬ್ರಿಟನು ಮತ್ತು ಅಮೆರಿಕಗಳು ಒಟ್ಟಾಗಿ ಜಪಾನನ್ನು ವಿರೋಧಿಸಬಹುದಾದ ಏಕಮಾತ್ರ ದೇಶವೆಂದರೆ ಆಸ್ಟ್ರೇಲಿಯ. ಆದುದರಿಂದಲೇ ಜಪಾನರ ದೃಷ್ಟಿಯು ಅದರ ಕಡೆಗೆ ಹರಿದಿದೆ. ಜಪಾನ್ ವಿಮಾನಗಳು ಕಳೆದ ಫೆಬ್ರವರಿ ತಾ. ೨೪ ಮತ್ತು ೨೬ರಲ್ಲೂ ಅಂಡಮಾನಿನ ಬ್ಲೇರ್ ಬಂದರದ ಮೇಲೆ ಧಾಳಿ ನಡಿಸಿರುತ್ತವೆ.

ಜಾವಾದಲ್ಲಿ ತೀವ್ರ ಕಾಳಗ

ಜಾವಾದಲ್ಲಿ ತೀವ್ರ ಜಲ, ನೆಲ ಮತ್ತು ಆಕಾಶ ಯುದ್ಧವು ನಡೆಯುತ್ತಿರುವುದು. ಜಪಾನರು ಹೆಚ್ಚು ಹೆಚ್ಚು ಸೇನೆಯನ್ನು ಕಂಡು ಭರದಿಂದ ಮುಂದೊತ್ತುವವರು. ಡಚ್ ಸೈನಿಕರು ಜಪಾನರ ಮೇಲೇರಿ ಹೋಗಿ ಹೋರಾಟ ನಡಿಸುತ್ತಿರುವರು. ಇದೇ ತಾ. ೧ರಲ್ಲು ಮಿತ್ರರಾಷ್ಟ್ರಗಳ ವಿಮಾನಗಳು ವಿಮಾನಧಾಳಿ ನಡಿಸಿ ಸೈನಿಕರನ್ನೊಯ್ಯುವ ೧೭ ಜಪಾನ ಹಡಗಗಳಿಗೆ ಮತ್ತು ಮಧ್ಯಪ್ರಮಾಣದ್ದೊಂದು ಹಡಗಗಳಿಗೆ ಪೆಟ್ಟು ಆಗಿರುವುದೆಂದು ತಿಳಿದುಬರುತ್ತದೆ. ೫ ಸೈನ್ಯವಾಹಕ ಹಡಗಗಳು ಮುಳುಗಿಸಲ್ಪಟ್ಟಿವೆ. ಒಂದು ಯುದ್ಧ ಹಡಗವು ಸುಟ್ಟುಹೋಗಿರುತ್ತದೆ. ಡಚ್ಚರು ಪೆಟ್ರೋಲು ತಯಾರಿಸುವ ಯಂತ್ರ ಮೊದಲಾದುವುಗಳನ್ನು ನಾಶಮಾಡುತ್ತಿರುತ್ತಾರೆ. ಇನ್ನು ಹೆಚ್ಚು ದಿನಗಳ ವರೆಗೆ ಜಾವದ ಡಚ್ ಮತ್ತು ಮಿತ್ರರಾಷ್ಟ್ರಗಳ ಸೈನಿಕರಿಗೆ ಜಪಾನರನ್ನೆದುರಿಸಲು ಸಾಧ್ಯವಾಗುವ ಸಂಭವ ತೋರುವುದಿಲ್ಲ. ಆದಷ್ಟು ಹೆಚ್ಚು ದಿನಗಳ ವರೆಗೆ ಅವರನ್ನು ತಡೆಗಟ್ಟುವುದೇ ಜಾವಾದ ಯುದ್ಧದ ಉದ್ದೇಶವಿರುವಂತಿದೆ.

ರಂಗೂನಿನ ಯುದ್ಧವು

ರಂಗೂನು ಪಟ್ಟಣವನ್ನು ವಶಪಡಿಸಿಕೊಂಡು ಚೈನದ ರಕ್ತನಾಡಿಯಂತಿರುವ ಬರ್ಮಾ ರಸ್ತೆಯನ್ನು ಕಡಿದು ಹಾಕಲು ಜಪಾನರು ಪ್ರಯತ್ನಿಸುತ್ತಿರುವರು. ಬರ್ಮದ ಶಾಂಕಮಯ ಭತ್ತದ ಗದ್ದೆಗಳಿಂದು ಅತ್ಯಂತ ತೀವ್ರ ಹೋರಾಟದ ಕಳವಾಗಿ ಪರಿಣಮಿಸಿರುತ್ತವೆ. ರಂಗೂನಿನಲ್ಲಿ ಸೈನ್ಯದಳಿತವು ಸ್ಥಾಪಿಸಲ್ಪಟ್ಟಿದೆ. ಜನರೆಲ್ಲ ಸಹಸ್ರಗಟ್ಟಲೆಯಲ್ಲಿ ಪಟ್ಟಣ ಬಿಟ್ಟು ಹೋಗುತ್ತಿದ್ದಾರೆ. ರೈಲುಗಳಲ್ಲಿ ಜಾಗಸಿಗುವುದೇ ಕಷ್ಟವಾದುದರಿಂದ ನೂರಾರು ಮಂದಿ ಆದಷ್ಟು ನಡೆದು ಹೋಗುತ್ತಿದ್ದಾರೆ.

ಡಚ್ ಸರಕಾರದ ರಾಜಧಾನಿ ಸ್ಥಳಾಂತರ

ಆಗಿದೆಯೆಂದು ತಿಳಿದಿದೆ. ರಾಜಧಾನಿ ಬಟೇವಿಯದಿಂದ ಬಾಂಡಾಂಗಕ್ಕೆ ಆಗಿದೆಯೆಂದು ಸುದ್ದಿ. ಬಾಂಡಾಂಗದ ಮೇಲೂ ಜಪಾನರು ಉಗ್ರ ಆಕ್ರಮಣವನ್ನು ಆರಂಭಿಸಿದ್ದಾರೆ. ಪರಿಸ್ಥಿತಿಯು ಇಂದು ತೀರಾ ಹದಗೆಟ್ಟಿರುವುದಾಗಿ ತಿಳಿದಿದೆ.

ಜಾವಾದಲ್ಲಿ ಜಪಾನರು ಮುನ್ನಡೆಯುತ್ತಾರೆ

ಜಾವಾ ಕಾಳಗದಲ್ಲಿ ಜಪಾನರು ಜೋರಾಗಿ ಮುನ್ನಡೆಯುತ್ತಿರುವರು. ಮಿತ್ರ ದಂಡು ಮಹತ್ವದ ಪ್ರತಿಭಟನೆ ಮಾಡುತ್ತಿದೆ. ಜಾವಾದಲ್ಲಿ ಮಿತ್ರಪಕ್ಷದ ಮುಖ್ಯ ಶಿಬಿರ ರದ್ದಾಗಿ ಸೇನಾಪತಿ ವೇವೆಲರು ಅಲ್ಲಿಂದ ಹಿಂತಿರುಗಿದರು.

ಫ್ರೆಂಚ್ ಕರಾವಳಿಯ ಮೇಲೆ ಬ್ರಿಟಿಷರ ಧಾಳಿ

ಕಳೆದ ಶನಿವಾರ ಬ್ರಿಟಿಷ್ ವಿಮಾನಗಳು ಫ್ರೆಂಚ್ ಕರಾವಳಿಯ ಮೇಲೇರಿ ಹೋಗಿ, ಪೆರಚೂಟಿನ ಮೂಲಕ ಕೆಲ ಮಂದಿ ಸೈನಿಕರನ್ನು ಕೆಳಗಿಳಿಸಿ, ಬ್ರುನೆವಲ್ ಎಂಬಲ್ಲಿ ಜರ್ಮನರು ಸ್ಥಾಪಿಸಿದ್ದ ರೇಡಿಯೋ ಸ್ಟೇಶನನ್ನು ನಾಶಮಾಡಿರುವರು. ಈ ಸೈನಿಕರು ರೇಡಿಯೋ ಸ್ಟೇಶನನ್ನು ಕಾಯುತ್ತಿದ್ದ ಜರ್ಮನರನ್ನು ಕೊಂದು ಅದನ್ನು ನಾಶಮಾಡಿಕೂಡಲೇ ಸಮುದ್ರ ಕರಾವಳಿಯ ಕಡೆಗೆ ಧಾವಿಸಿದರು. ಅಲ್ಲಿ ತಮ್ಮನ್ನು ತಡೆದ ಜರ್ಮನರನ್ನು ಕೊಂದು ಶೀಘ್ರವಾಗಿ ತಮಗಾಗಿ ಕಾದಿದ್ದ ಬೋಟುಗಳಲ್ಲಿ ಸುರಕ್ಷಿತವಾಗಿ ಇಂಗ್ಲೆಂಡಿಗೆ ತೆರಳಿದರು. ಬ್ರಿಟಿಷ್ ಸೈನಿಕರ ಈ ಸಾಹಸವು ಜರ್ಮನರನ್ನು ಸಂಪೂರ್ಣವಾಗಿ ಆಶ್ಚರ್ಯಗೊಳಿಸಿರುವುದು. ಬ್ರಿಟಿಷ್ ಜನತೆಯು ಅದರಿಂದ ಉತ್ತೇಜಿತರಾಗಿರುವರು. ಅಂತಹ ಸಾಹಸವನ್ನು ಬ್ರಿಟಿಷ್ ಸೈನಿಕರು ಹೆಚ್ಚುಹೆಚ್ಚಾಗಿ ಮಾಡಿ, ಹಿಟ್ಲರನು ಫ್ರಾನ್ಸ್ ಮೊದಲಾದ ದೇಶಗಳಲ್ಲಿರುವ ಸೇನೆಯನ್ನು ಪೂರ್ವ ರಣರಂಗಕ್ಕೊಯ್ಯದಂತೆ ಮಾಡಬೇಕೆಂದು ಸೂಚಿಸಲಾಗಿದೆ.

ಆಸ್ಟ್ರೇಲಿಯದ ಮೇಲೆ ಜಪಾನರ ಧಾಳಿ

ಮೊತ್ತಮೊದಲನೆಯದಾಗಿ ಸಂಕ್ರಮಿ... ಬ್ರೂಮ್ ಮತ್ತು ವಿಂಡ್ ಹಾಮ್‌ಗಳ ಮೇಲೆ ಗುಂಡು ಸುರಿಸಲ್ಪಟ್ಟಿತು.

ಫಿಲಿಪ್ಪೈನಿನ ಯುದ್ಧ

ಫಿಲಿಪ್ಪೈನಿನಲ್ಲೀಗ ಹೆಚ್ಚಿನ ಹೋರಾಟವೇನೂ ನಡೆಯುವುದಿಲ್ಲ. ಉತ್ತರ ಲೂಜನಿನಲ್ಲಿ ಜಪಾನರು ಹಿಂದಕ್ಕಟ್ಟಲ್ಪಟ್ಟಿರುತ್ತಾರೆ. ಜನರಲ್ ಮೆಕ್ ಆರ್ಥರರ ಸೇನೆಯು ಜಪಾನರ ಮೇಲೆ ಬಿದ್ದು ಈಚೆಗೆ ಗೆದ್ದ ಸ್ಥಳಗಳನ್ನು ಸುರಕ್ಷಿತವಾಗಿ ಕಾಪಾಡಿಕೊಂಡಿರುವುದು. ಫಿಲಿಪ್ಪೈನಿನ ಪ್ರೆಸಿಡೆಂಟರಾದ ಕ್ವೆಝೊನರು, ಫಿಲಿಪ್ಪೈನರ ಧೈರ್ಯದ ಕುರಿತು ಮೆಚ್ಚುಗೆ ಸೂಚಿಸಿ, ವಿಜಯ ಸಾಧನೆಯ ವರೆಗೆ ಕಾದಾಡುವ ಸಂದೇಶವಿತ್ತಿರುವರು.

ANNOUNCEMENT

We have great pleasure in announcing an all round reduction in rates of interest on advances.

Our present rates are:

Personal Loans & Overdrafts	7½% p. a.
Usance Bills	7% „
Trade Bills	6% „
Loans on Produce	5½% „
Loans on Insurance Policies Stocks & shares	5% „
Loans on Gold	4½% „

The above rates are for medium-sized loans. The rates for small loans will however be slightly higher since the cost of time, labour and stationery consumed in such cases is proportionately higher.

CANARA BANK, LIMITED.

ESTD. 1906.

APPLICATIONS are invited from Gentlemen of the Gowd Saraswath Brahman Community for the post of a Manager of the Sri Venkatramana Temple, Mangalore. Applicants are requested to state their age, qualifications and past administrative experience if any and minimum salary desired.

Applicants must have passed atleast the F. A. or Intermediate Examination. Applications with testimonials should reach the Office of the Temple on or before 20-3-1942.

Trustees,
Sri Venkatramana Temple,
Mangalore.

Sri Venkatramana Temple,
Mangalore, 4-3-1942.

Birth Control Rubber Sheath
Secret French Leathers

ಸುಖಾನಂದ ಎಂಬ ಮಾರ್ಕಾದ ರಬ್ಬರ್ ಚೀಲ

ಫ್ರೆಂಚ್ ದೇಶದಲ್ಲಿ ತಯಾರಿಸಿದ ಸುಖಸಾಧನಗಳು. ಅನೇಕರು ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಸ್ತ್ರೀ ವ್ಯಾಧಿಗಳನ್ನು ಅಂಟಿಸಿಕೊಂಡು ಮರೆ... ಕಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥವರು ಎಷ್ಟು ಹಣವನ್ನು ಖರ್ಚುಮಾಡಿ ಔಷಧವನ್ನು ಉಪಯೋಗಿಸಿದಾಗ್ಯೂ ಪ್ರಯೋಜನವಿಲ್ಲದೆ ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ ಸ್ತ್ರೀ ಸುಖವನ್ನು ಮರೆತು ಬಿಡುವಂತೆ ಮಾಡುವರು. ಆದ್ದರಿಂದ ಸ್ತ್ರೀವ್ಯಾಧಿಗಳು ಯಾವದೂ ಸೇರದಂತೆ ಫ್ರೆಂಚ್ ಡಾಕ್ಟರುಗಳು ಈ ರಹಸ್ಯ ರಬ್ಬರ್ ಚೀಲವನ್ನು ಕಂಡು ಹಿಡಿದಿರುವರು. ಈ ಚೀಲವನ್ನು ಸಂಭೋಗ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವುವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದಲ್ಲದೆ ಸ್ತ್ರೀ ಸಂಗದಲ್ಲಿ ಆನಂದವನ್ನು ಕೊಡುವುದು. ರತಿಕ್ರೀಡೆಗೆ ಆತಂಕವಿಲ್ಲ. ಮೇಹ ರೋಗದ ಹೆದರಿಕೆಯಿಲ್ಲ. ಗರ್ಭದ ಹೆದರಿಕೆ ಇಲ್ಲ.

ಗಂಡಸರ ಮಾರ್ಕಾದ ರಬ್ಬರ್ ಚೀಲ ರೂ. 1-...
ಹೆಂಗಸರ ಮಾರ್ಕಾದ ರಬ್ಬರ್ ಚೀಲ ರೂ. 2-...

ಜೀವ ಟ್ರೇಡಿಂಗ್ ಕಂಪೆನಿ,
290 ಚೈನಾ ಬಜಾರ್ ರೋಡ್ ಮದರಾಸು

ವೇವಲರು ಹಿಂದುಸ್ಥಾನದ ಸೇನಾಪತಿಗಳಾದರು

ರಂಗೂನ್ ಖಾಲಿಯಾಗುತ್ತಿದೆ

ನೆಹರುಗಳಿಗೆ ಲೇಟಿನ್ ಅಮೆರಿಕಾ ಕೂಲಿಗಾರರ ಅಭಿನಂದನೆ

ಕ್ರಿಪ್ಸರಿಂದ ವಿಜಯನಗರದ ರಾಜಕುಮಾರರಿಗೆ ತಂತಿ!

ಲೀಗು ಮತ್ತು ಜಿನ್ನರಲ್ಲಿ ಮುಸ್ಲಿಮರಿಗೆ ವಿಶ್ವಾಸವಿಲ್ಲ

ಕಾಂಗ್ರೆಸು ಲೀಗುಗಳಲ್ಲಿ ಸಂಧಾನ?

ಈ ಬಗ್ಗೆ ಪ್ರಯತ್ನಗಳಾಗುತ್ತಿದೆಯೆಂದು ಓರಿಯಂಟಲ್ ಪತ್ರಿಕೆ ಬರೆಯುತ್ತದೆ. ಆದರೆ ಆ ಸೂಚನೆಗಳೇನೂ ತೋರಿಬರುವುದಿಲ್ಲ. ಕಾಂಗ್ರೆಸು ಲೀಗು ಮುಂದಾಳುಗಳೊಳಗೆ ಈ ವಿಷಯವಾಗಿ ಇಷ್ಟರೊಳಗೇ ಮಾತುಕತೆ ನಡೆದಿರುವುದಂತೆ! ಈ ಸಂಧಾನಕ್ಕೆ ರಾಜಾಜಿ ಬಹಳ ಯೋಗ್ಯರೆಂದು ನಂಬಲಾಗಿದೆ. ಮದ್ರಾಸಿನಲ್ಲಿ ಅವರು ಮಾಡಿದ ಭಾಷಣಗಳಿಂದ ಲೀಗಿನ ಮೇಲೆ ಒಳ್ಳೆಯ ಪರಿಣಾಮವಾಗಿದೆಯೆಂದು ತಿಳಿಯುತ್ತದೆ. ಹಿಂದೂದೇಶಕ್ಕೆ ಸ್ವಾತಂತ್ರ್ಯ ಕೊಡುವ ವಿಚಾರದಲ್ಲಿ ಸರಕಾರವು ಇಲ್ಲಿ ಐಕ್ಯವಿಲ್ಲವೆಂದು ಹೇಳುವುದನ್ನು ಬಾಯಿಮುಚ್ಚಿಸಲು ಈ ಪ್ರಯತ್ನ ನಡೆಯುವುದು ಅಗತ್ಯವಾಗಿದೆ.

ಸರಕಾರದ ಮೂರ್ಖ ಧೋರಣೆ

ಸರ್ ವಿಶ್ವೇಶ್ವರಯ್ಯರ ಟೀಕೆ

ಹಿಂದುಸ್ಥಾನದಲ್ಲಿ ಮೋಟರು ಕೈಗಾರಿಕೆಯನ್ನು ಸ್ಥಾಪಿಸಬೇಕೆಂದು ವಿಚಕ್ಷಣರಾದ ಸರ್ ವಿಶ್ವೇಶ್ವರಯ್ಯನವರು ಪ್ರಯತ್ನಿಸಿದ್ದು ಸರಕಾರವು ಇದಕ್ಕೆ ಯುದ್ಧಕಾಲದ ನೆವನ ಹೇಳುತ್ತಾ ಅಡ್ಡಗಾಲು ಹಾಕಿರುವುದು ಸರಿಯಲ್ಲವೆಂದೂ, ಬೇರೆಬೇರೆ ಬ್ರಿಟಿಷ್ ಸಾಮಂತ ರಾಜ್ಯಗಳು ಈ ಯುದ್ಧಕಾಲದಲ್ಲಿ ಅನೇಕ ಹೊಸ ಕೈಗಾರಿಕೆಗಳನ್ನು ಸ್ಥಾಪಿಸಿ ವಿಮಾನ ಟೇಂಕ್ ಮೊದಲಾದುವನ್ನು ತಯಾರಿಸುತ್ತಿರುವಾಗ ಬ್ರಿಟಿಷ್ ಸರಕಾರವು ಭಾರತದ ವಿಷಯ ತಳೆದ ಈ ಧೋರಣೆ ಅರ್ಥರಹಿತವೂ ಮೂರ್ಖವೂ ಆಗಿದೆಯೆಂದು ಅವರು ಪ್ರಕಟಿಸುತ್ತಿರುವರು.

ವಿಜಯನಗರದ ಮಹಾರಾಜರಿಗೆ ಕ್ರಿಪ್ಸರ ತಂತಿ

ಹಿಂದುಸ್ಥಾನದ ಸಂಬಂಧದಲ್ಲಿ ಕಾಮನ್ಸಿನಲ್ಲಿ ಸರ್ ಕ್ರಿಪ್ಸರು ಹೇಳಿದಂತೆ ನಡೆದುಕೊಳ್ಳಬೇಕೆಂದು ವಿಜಯನಗರದ ಮಹಾರಾಜರು ಕೇಬಲ್ ಕಳುಹಿಸಿದ್ದರು. ಅದಕ್ಕೆ ಉತ್ತರವಾಗಿ ಕ್ರಿಪ್ಸರು ತಿರುಗಿ ಹೀಗೆಂದು ತಿಳಿಸಿರುವರು: ಬ್ರಿಟನು ಭಾರತಗಳೊಳಗಿರುವ ಬಿಕ್ಕಟ್ಟನ್ನು ಬಿಡಿಸಲು ನನ್ನಿಂದ ಸಾಧ್ಯವಿದ್ದಷ್ಟು ಸಹಕರಿಸಿ ಕೆಲಸಮಾಡುವೆನು. ನೀವು ಮತ್ತು ಇತರ ನಮ್ಮ ಹಿಂದೀ ಮಿತ್ರರು ನನಗೆ ನೆರವಾಗಿ ಹಿಂದೂಸ್ಥಾನದಲ್ಲಿ ಬೇರೆಬೇರೆ ಪಕ್ಷಗಳಲ್ಲಿ ನ್ಯಾಯ ಸಮ್ಮತ ಒಪ್ಪಂದ ಮಾಡಲು ಯತ್ನಿಸಿರಿ.

ವೇವಲರು ಚೆನ್ನಾಗಿದ್ದಾರೆ

ವಿಮಾನದಿಂದ ಬಿದ್ದು ಪೆಟ್ಟಾಗಿರುವ ವೇವಲರು ಈಗ ಹುಷಾರಾಗಿದ್ದಾರಂತೆ.

ನೆಹರುಗಳಿಗೆ ಲೇಟಿನ ಅಮೆರಿಕನ್ ಕೂಲಿಗಾರರ ಅಭಿವಂದನೆ

ಲೇಟಿನ ಅಮೆರಿಕನ್ ಲೇಬರ್ ಫೆಡರೇಶನಿನ ಅಧ್ಯಕ್ಷರು ಪಂಡಿತ ಜವಾಹಿರಲಾಲರಿಗೆ ಕಳಗಿನಂತೆ ಕೇಬಲ್ ಕಳುಹಿಸಿದ್ದಾರೆ.

'ಲೇಟಿನ್ ಅಮೆರಿಕನ್ ಕೂಲಿಗಾರರಾದ ನಾವು ಹಿಂದುಸ್ಥಾನದಲ್ಲಿರುವ ತಮ್ಮ ಸೋದರರನ್ನು ಹಾಗೂ ಅವರ ನಾಯಕರಾದ ನಿಮ್ಮನ್ನು ನೀವು ಸದ್ಯದಲ್ಲಿ ಮಹತ್ವದ ನಿಮ್ಮ ದೇಶಕ್ಕೆ ಗಳಿಸಲಿರುವ ಸ್ವಾತಂತ್ರ್ಯದ ಬಗ್ಗೆ ಈ ಮೂಲಕ ಅಭಿನಂದಿಸುತ್ತೇವೆ. ಈ ಕಾಲದ ಫೇಸಿಸಂ ಹಾವಳಿ ತನ್ನ ಭೀಕರತೆಯಿಂದ ಹಬ್ಬಿ ಜಗತ್ತನ್ನೇ ವ್ಯಾಪಿಸಿರುವಾಗ ಅದನ್ನು ನಾಶಗೊಳಿಸಲು ನಿಮ್ಮ ದೇಶದಿಂದ ಜನರನ್ನು ಕಳುಹಿಸಿ ನೀವು ಮಾಡಿದ ತ್ಯಾಗಕ್ಕಾಗಿ ನಿಮಗೆ ಋಣಿಗಳಾಗಿದ್ದೇವೆ.'

ಲೀಗ್ ಮತ್ತು ಜಿನ್ನರು ನಮ್ಮ ನಾಯಕರಲ್ಲ

ಮೋಮಿನರು ಚರ್ಚಿಲ್, ಕ್ರಿಪ್ಸ, ಅಮೆರಿಯವರಿಗೆ ತಂತಿಕಳುಹಿಸಿದರು!

ಅಖಿಲ ಭಾರತ ಮೋಮಿನ್ ಪರಿಷತ್ತಿನ ಅಧ್ಯಕ್ಷ ಶೇಖ್ ಮಹಮ್ಮದ್ ಜಹಿರುದ್ದೀನ್ ಮತ್ತು ಉಪಾಧ್ಯಕ್ಷ ಅಬ್ದುಲ್ ಕೋಯಂ ಇವರು ಚರ್ಚಿಲ್ ಅಮೆರಿ ಮತ್ತು ಕ್ರಿಪ್ಸರಿಗೆ ಲೀಗ್ ನಮ್ಮ ಸಂಸ್ಥೆಯಲ್ಲ ಮತ್ತು ಜಿನ್ನರು ನಮ್ಮ ನಾಯಕರಲ್ಲವೆಂದೂ ಹೇಳಿ ತಂತಿಬಿಟ್ಟಿರುವರು. ಮುಸ್ಲಿಂ ಲೀಗೇ ಮುಸ್ಲಿಮರ ಏಕಮಾತ್ರ ಸಂಸ್ಥೆಯೆಂದು ಜಿನ್ನರು ಹೇಳುವುದು ಸರಿಯಲ್ಲವೆಂದೂ ಜಿನ್ನರಿಗೆ ಹಾಗೆ ಹೇಳುವ ಹಕ್ಕಿಲ್ಲವೆಂದೂ ಅವರು ವಿವರಿಸಿದರು.

ರಂಗೂನ್ ಅರ್ಧ ಖಾಲಿಯಾಗಿದೆ

ಎಂದೂ ಸರಕಾರೀ ಕಚೇರಿಗಳು ಹಾಗೂ ವ್ಯಾಪಾರದಂಗಡಿಗಳು ಒಳ ಪ್ರದೇಶಕ್ಕೆ ಒಯ್ಯಲ್ಪಟ್ಟಿವೆಯೆಂದೂ ತಿಳಿದಿದೆ.

ಅಗ್ನಿಪರೀಕ್ಷೆ

[ಮಹಾತ್ಮಾಜಿಯವರಿಂದ]

ಮಹಾತ್ಮಾಜಿಯವರು, ತಾ ೨೨-೨-೪೨ನೆ 'ಹರಿಜನ' ಪತ್ರಿಕೆಯಲ್ಲಿ ಹೀಗೆ ಬರೆದಿರುವರು.

ಇಪ್ಪತ್ತೆರಡು ವರ್ಷಗಳ ಹಿಂದೆ, ಮೂವತ್ತು ವರ್ಷ ಪ್ರಾಯದ ತರುಣನೊಬ್ಬನು ನನ್ನ ಬಳಿಗೆ ಬಂದು, 'ನಿಮ್ಮೊಡನೆ ಏನೋ ಕೇಳಬೇಕೆಂದಿದ್ದೇನೆ' ಎಂದನು.

ನಾನು ತುಸು ಅಚ್ಚರಿಯಿಂದ ಹೇಳಿದೆ 'ಕೇಳು, ಕೊಡುವಂಥಾದ್ದು ನನ್ನ ಶಕ್ತಿಯೊಳಗಿದ್ದರೆ, ಕೊಟ್ಟೇ ಕೊಡುವೆನು.'

ತರುಣನೆಂದನು, 'ನನ್ನನ್ನು, ನಿಮ್ಮ ಪುತ್ರ ದೇವದಾಸನಂತೆ ತಿಳಿದುಕೊಳ್ಳಿರಿ.'

'ಒಪ್ಪಿದೆ. ಆದರೆ, ನಾನು ಏನೂ ಕೊಡಲಾರೆ. ಕೊಡುವವನು ನೀನು'—ಎಂದು ನಾನು ಉತ್ತರವಿತ್ತೆ.

ತರುಣನು ಮತ್ತಾರೂ ಅಲ್ಲ, ಜಮ್ನಾಲಾಲ ಬಜಾಜ್. ಕೆಲವೇ ಮಂದಿ ಮಾತ್ರ, ಈ ನನ್ನ ದತ್ತಪುತ್ರನು ಸಲಿಸಿದ ಕಾರ್ಯಭಾಗವನ್ನು ಬಲ್ಲರು. ಯಾವ ಕಾಲಕ್ಕೂ ಮಾನವನಿಗೆ ಇಂತಹ ಪುತ್ರರತ್ನ ದೊರೆತಿಲ್ಲ. ನನ್ನ ಕಾರ್ಯವನ್ನು ಸ್ವಲ್ಪಮಟ್ಟಿಗೆ ಪೂರೈಸಿದ ಪುತ್ರ ಪುತ್ರಿಯರು ನನಗೆ ಹಲವರಿರುವರು, ನಿಜ. ಆದರೆ, ಜಮ್ನಾಲಾಲಜಿಯು ತನ್ನನ್ನೂ, ತನ್ನ ಸರ್ವಸ್ವವನ್ನೂ ಯಾವ ಸಂಕೋಚವೂ ಇಲ್ಲದೆ ಒಪ್ಪಿಸಿಕೊಂಡನು. ನನ್ನ ಯಾವ ಕಾರ್ಯ ಯೋಜನೆಗಳಲ್ಲೂ ಜಮ್ನಾಲಾಲಜಿಯ ಸಹಕಾರವಿಲ್ಲದಿರಲಿಲ್ಲ. ಮತ್ತು ಅಂತಹ ಸಹಕಾರವು ಅತ್ಯಂತ ಮೌಲ್ಯದ್ದೇ ಆಗಿತ್ತು. ಜಮ್ನಾಲಾಲಜಿಯು ವಾಣಿಜ್ಯ ನೃಪತಿ. ನಾನು ಮನಬಂದಂತೆ ವ್ಯಯಿಸಬೇಕೆಂದು ಜಮ್ನಾಲಾಲ ಬಜಾಜಿಯು ಹೇರಳ ದ್ರವ್ಯವನ್ನಿತ್ತಿದ್ದನು. ನನ್ನ ಸುಖವು ಮತ್ತು ಆರೋಗ್ಯದ ಪಾಲಕನೂ ಜಮ್ನಾಲಾಲಜಿ. ಇದನ್ನೆಲ್ಲ ಸಾರ್ವಜನಿಕ ಹಿತಕ್ಕಾಗಿಯೇ ಮಾಡಿದನು.

ಜಮ್ನಾಲಾಲಜಿ ಮರಣಪಟ್ಟ ದಿನದಂದು, ಜಾನಕಿದೇವಿಯೂ ಜಮ್ನಾಲಾಲಜಿಯೂ ನನ್ನ ಬಳಿಗೆ ಬರುವವರಿದ್ದರು. ನನ್ನೊಂದಿಗೆ ಯಾವ ಸಮಯದಲ್ಲಿ, ಯಾವ ಘಂಟೆಯಲ್ಲಿ ಇರಬೇಕೆನ್ನುತ್ತೇ, ಆ ಸಮಯದಲೇ ಅವರು ಪ್ರಾಣತ್ಯಾಗ ಮಾಡಿದರು. ಹದಿನಾಲ್ಕು ವರ್ಷಗಳ ಹಿಂದೆ ಮಗನ್‌ಲಾಲನು ನನ್ನಿಂದ ಸೆಳೆದೊಯ್ಯಲ್ಪಟ್ಟಾಗ ವಿನಾ ಮತ್ತಾವ ಕಾಲದಲ್ಲೂ ಇಷ್ಟರಮಟ್ಟಿಗೆ ಏಕಾಕಿಯಂತೆ ನನಗೆ ಭಾಸವಾದುದಿಲ್ಲ. ಇದನ್ನು ದುಃಖವೆಂದು ತಿಳಿಯಲಾರೆ. ದೇವರು ನನ್ನನ್ನು ಆಗಾಗ್ಗೆ ಪರೀಕ್ಷಿಸುತ್ತಿರುವನು. ಈ ಅಗ್ನಿಪರೀಕ್ಷೆಯಲ್ಲಿ ತೇರ್ಗಡೆ ಹೊಂದುವಂತೆ ಅವನೇ ನನಗೆ ಶಕ್ತಿಯೀಯುವನೆಂಬ ಭರವಸೆಯಲ್ಲಿದ್ದೇನೆ.

ಜಾವಾ ದ್ವೀಪದ ಮೇಲೆ ಮೂರು ಕಡೆಯಿಂದ ಮುತ್ತಿಗೆ

ಕೆಲವು ದಿನಗಳಿಂದ ನಿರೀಕ್ಷಿಸುತ್ತಿದ್ದ ಜಾವಾ ದೇಶದ ಆಕ್ರಮಣವು ಈಗ ಉಗ್ರವಾಗಿ ಪ್ರಾರಂಭವಾಗಿದೆ. ಜಪಾನೀ ಸೈನಿಕರು ಜಾವಾದ ಉತ್ತರ ಕರಾವಳಿಯಲ್ಲಿ ಮೂರು ಕಡೆಗಳಿಂದಲೂ ಮುತ್ತಿಗೆ ಹಾಕಿದರು. ಜಾವಾದ ಪಶ್ಚಿಮ ತದಿಯಲ್ಲಿರುವ ಬಾಟಂ ಪ್ರಾಂತದಲ್ಲಿ ಬಟೇವಿಯದ ಪೂರ್ವಕ್ಕೆ ಸುಮಾರು 120 ಮೈಲು ದೂರದಲ್ಲಿರುವ ಇಂದ್ರಮಾಯೂ ಎಂಬಲ್ಲಿ ಮತ್ತು ಸೌರಬಾಯಾ ಬಂದರದ ಪಶ್ಚಿಮಕ್ಕೆ ಸುಮಾರು 100 ಮೈಲು ದೂರದಲ್ಲಿರುವ ರೆಂಬಾಂಗ್ ಎಂಬಲ್ಲಿ ಜಪಾನೀ ಸೈನಿಕರು ಬಂದಿರುವರೆಂದು ತಿಳಿದಿದೆ. ಮಿತ್ರರ ವಿಮಾನ ನೌಕಾಬಲಗಳು ಉಗ್ರ ಪ್ರತಿಭಟನೆ ಮಾಡಿವೆ. ಅಪಾರ ಹಾನಿಗೊಳಗಾಗಿವೆ.

ಜಾವಾ ಡಚ್ ಇಂಡೀಸಿನ ಒಂದು ದ್ವೀಪ. ಸುಮಾರು 700 ಮೈಲು ಉದ್ದವಿದೆ. 60 ಅಥವಾ 70 ಮೈಲು ಅಗಲವಿರುವುದು. ಈ ದ್ವೀಪದಲ್ಲಿ ಸುಮಾರು 400 ಲಕ್ಷ ಜನರು ವಾಸಿಸುತ್ತಾರೆ. ಸೌರಬಾಯವು ಇದರ ಒಂದು ಉತ್ತಮ ಬಂದರ. ಡಚ್ ಇಂಡೀಸ್ ಸೈನ್ಯದ ಮುಖ್ಯ ಕಚೇರಿ ಬಾಂಡೋಂಗ್ ಎಂಬಲ್ಲಿದೆ. ಬಾಂಡೋಂಗವು ಬಟೇವಿಯದ ಆಗ್ನೇಯದಲ್ಲಿರುವುದು. ಬ್ರಿಟನು ಅಮೆರಿಕ ಆಸ್ಟ್ರೇಲಿಯಗಳಿಂದ ಇಲ್ಲಿಗೆ ಸೈನ್ಯ ಸಹಾಯ ಒದಗಿಸುವುದಾಗಿ ತಿಳಿದಿದೆ. ಜಾವದಲ್ಲಿ ಈಗ ನೌಕಾಯುದ್ಧ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿರುವುದು. ಜಾವಾಕ್ಕೆ ಕನಿಷ್ಟ ಪಕ್ಷ ಜಪಾನರ ನಾಲ್ಕು ಸೈನ್ಯಗಳಾದರೂ ಒಂದಿದಬಹುದೆಂದು ಅಂದಾಜು ಮಾಡಲಾಗಿದೆ.

'ಗಂಡಾಂತರ' ಸಂದರ್ಭದಲ್ಲಿ ಕಾಂಗ್ರೆಸಿನವರ ಕರ್ತವ್ಯ

ರಾಷ್ಟ್ರಪತಿ ಆಜಾದರ ಹೇಳಿಕೆ

ಕಾಕಸಸ್ ಮುಖಾಂತರ ಹಿಂದು ಸ್ಥಾನಕ್ಕೆ ಆಕ್ರಮಣ?

ಸದ್ಯದಲ್ಲಿ ಒದಗಲಿರುವ ಗಂಡಾಂತರವನ್ನು ಕಾಂಗ್ರೆಸಿನವರು ಹೇಗೆ ಎದುರಿಸಬೇಕೆಂದು ರಾಷ್ಟ್ರಪತಿ ಮೌಲಾನಾ ಅಬುಲ್ ಕಲಂ ಆಜಾದರು ಒಂದು ಭಾಷಣದಲ್ಲಿ ಹೇಳಿದರು. ಅದು ಹೀಗಿದೆ.

'ಕಾಕಸಸ್ ಮೂಲಕ ಈ ದೇಶಕ್ಕೆ ಧಾಳಿಯಾಗುವ ಸಂಭವವಿದೆಯೆಂದು ಲಕ್ಷ್ಯದಲ್ಲಿಡಬೇಕು. ಕಳೆದ ಎರಡು ವರ್ಷಗಳಿಂದ ಕೇವಲ ಪ್ರೇಕ್ಷಕರಂತೆ ಇದ್ದು ಈಗಲೂ ಹಾಗಿರಲು ಸಾಧ್ಯವಿಲ್ಲ. ಪರಿಸ್ಥಿತಿ ಅಪಾಯಕರವಿದೆ. ಆದರೆ ಅಂಜಿಕೆಯುಂಟಾದಕ್ಕಿಂತಲೂ ಹೆಚ್ಚಿನ ಅಪಾಯ ಸಾವಿಗೆ ಅಂಜುವ ರಾಷ್ಟ್ರಗಳು ವಿಶೇಷ ಹಾನಿಗೊಳಗಾಗುವವು. ಕಲ್ಕತ್ತದ ಮೇಲೆ ಗಂಡಾಂತರ ಬರುವ ಸಂಭವ ಹೆಚ್ಚಾಗಿದೆ. ಆದ್ದರಿಂದ ಈ ಪರಿಸ್ಥಿತಿಗಳನ್ನೆದುರಿಸಲು ಕಾಂಗ್ರೆಸಿನವರು ಅನೇಕ ಸಮಿತಿಗಳನ್ನೇರ್ಪಡಿಸಿದ್ದಾರೆ. ನಾಗರಿಕ ರಕ್ಷಣೆಯ ಜವಾಬ್ದಾರಿ ಹೊತ್ತಿದ್ದಾರೆ. ಜನರ ಸೇವೆ ಮಾಡುವುದೇ ನಮ್ಮ ಇಚ್ಛೆ.'

ಅಟ್ಲಾಂಟಿಕ ಸಾಗರದಲ್ಲಿ ಸಬ್‌ಮೆರೀನ ಯುದ್ಧ

ಮಧ್ಯ ಅಟ್ಲಾಂಟಿಕ ಸಾಗರದಲ್ಲಿ ಜರ್ಮನ್ ಯು ಬೋಟುಗಳು ಇಂಗ್ಲೆಂಡಿಗೆ ಸಾಮಾನು ಸಾಗುವ ಹಡಗುಗಳನ್ನು ಮುಳುಗಿಸಲು ೩ ದಿನ ಎಡೆಬಿಡದೆ ಪ್ರಯತ್ನಮಾಡಿ ೬ರಿಂದ ೯ ವರೆಗಣ ಹಡಗುಗಳು ಮುಳುಗಿಸಲ್ಪಟ್ಟಿರುವವೆಂದು ತಿಳಿದುಬರುತ್ತದೆ.

ಪ್ರಕಟಣೆ

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

O. S 82/'42 R I A 285/'42

ವಾದಿರು—1 ಗೋಪಾಲ ಕಾರಂತ 2 ಅನಂತ ಕಾರಂತ, 3 ವಾಸ್ತೇವ ಕಾರಂತ 4 ಸುಬ್ರಾಯ ಕಾರಂತ

ಪ್ರತಿವಾದಿರು—1 ಕಷ್ಣ 2 ದೇವಿ ಹೆಂಗ್ಸು 3 ಅಕ್ಕಮ್ಮ ಹೆಂಗ್ಸು 4 ಗೋವಿಂದ 5 ಮಾಲಾನಾ ಶೇಕ್ ನ್ಯಾಬ 6 ರಾಮ

ಮೇಲ್ಕಂಡ ದಾವೆಯ 1ರಿಂದ 4ನೆ ವರೆಗಿನ ಪ್ರತಿವಾದಿರು 5ನೆ ಪ್ರತಿವಾದಿಯು ಹೆಸರಿಗೆ ತಾರೀಕು 11 9-41ರಲ್ಲು ಬೈಂದೂರು ಸ ರಿ ಆ ನಂಬ್ರ 387/1941ನೆಗೆ ರಿಜಿಸ್ತರು ಮಾಡಿದ ರೂಪಾಯಿ 2000ದ ದೋಗ್ರಾಧಿ ಅದನ್ನು ದಸ್ತೈವಜು ಮೋಸದ್ದಾಗಿರುವದರಿಂದ ಅದು ವಾದಿರ ಮೇಲೂ ಮ 1ರಿಂದ 4ನೇವರೆಗಿನ ಪ್ರತಿವಾದಿರ ಕುಟುಂಬದಿಂದ ಸಲತಕ್ಕ ಬೇರೆ ಸಾಲಗಾರರ ಮೇಲೂ ಗೇಡಸಲ್ಲತಕ್ಕ ಬೇರೆ ಧನಿಗಳ ಮೇಲೂ ಕರಾರು ಬದ್ಧವಾದದ್ದಲ್ಲವೆಂತ ಡಿಕ್ಲೇರೇಶನ್ ವಗೈರೆ ನಿವೃತ್ತಿ ಕೇಳಿ ಸದ್ರಿ ಎಲ್ಲಾ ಸಾಲಗಾರರ ಮ ಧನಿಗಳ ಕಡೆಯಿಂದ ಮೇಲ್ಕಂಡ ದಾವೆ ಹ್ಯಾಡುವರೆ ಪರ್ಮಿಶನ್ ಕೊಡಿಸಬೇಕಾಗಿ ವಾದಿರು ಮೇಲ್ಕಂಡ ಅರ್ಜಿ ದಾಖಲುಮಾಡಿದ್ದಾರೆ. ಆ ಅರ್ಜಿಯು ತಾರೀಕು 28-3-42ಕ್ಕೆ ತನ್ನಿಗೆ ಇಟ್ಟಿಯದೆ.

ಕುಂದಾಪುರ } B Mahabala Holla
2? 2 '42 } Advocate for Plffs Petrs

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

R E P ?0/1?41
S C 2 0/1932

ವಾದಿ—ಕುಂದಾಪುರ ಪೇಟೆ ಶ್ರೀ ವೆ ಕಟ್ರಮಣ ದೇವರ ಮೊಕ್ತೇಸರ್ ವಕೀಲ್ ಕೆ ನರಸಿಂಹ ಕಾಮತ್

ಪ್ರತಿವಾದಿರು—ಸುಬ್ರಾಯ ಶೆಟ್ಟಿ ವಗೈರೆ ಕೂಡಾ 12ನೇ ಪ್ರತಿವಾದಿ ನರಸಿಂಹ ಶೆಟ್ಟಿ 1 ನೇ ಪ್ರತಿವಾದಿ ರಾಘವೇಂದ್ರ ಶೆಟ್ಟಿ ಸುಬ್ರಾಯ ಶೆಟ್ಟಿ ಮಕ್ಕಳು

1? ಲಕ್ಷ್ಮಣ ಶೆಟ್ಟಿ 1? ನರಸಿಂಹ ಶೆಟ್ಟಿ, 1? ವೆಂಕಟೇಶ ಶೆಟ್ಟಿ—2?ನೇ ಪ್ರತಿವಾದಿ ನಾಗಪ್ಪ ಶೆಟ್ಟಿ ಮಕ್ಕಳು ಕುಂದಾಪುರ ಕಸಬಾ ಗ್ರಾಮ

ಸದ್ರಿ ಪ್ರತಿವಾದಿರಿಗೆ ಈ ಮೂಲಕ ತಿಳಿಸಲಾಗುವುದೇನೆಂದರೆ

ಸದ್ರಿ ವ್ಯಾಜ್ಯದಲ್ಲಿ ಡಿಕ್ರಿ ಹೊಂದಿದವರಾದ ವಾದಿ ದೇವರ ಮೊಕ್ತೇಸರರು ಪ್ರತಿವಾದಿ ಬಾಬ್ತು ಸ್ಥಿರಾಸ್ತಿ ಏಲಂ ಬಗ್ಗೆ ಅರ್ಜಿ ಮಾಡಿದ್ದಾರೆ. ಆದುದರಿಂದ ಏಲಂ ಇಸ್ತಿಹಾರಿನ ಶರ್ತುಗಳನ್ನು ನಿರ್ಣಯಮಾಡುವ ಬಗ್ಗೆ ತಾರೀಕು 2?-3-1?42ಕ್ಕೆ ಇಡಲ್ಪಟ್ಟಿದೆ. ಆ ದಿವಸ ಏನಾದರೂ ಆಕ್ಷೇಪವಿದ್ದರೆ ಸದ್ರಿ ಕೋರ್ಟಿನಲ್ಲಿ ಸದ್ರಿ ತಾರೀಕು 2? ?42ರ ದಿವಸ ಹಗಲು 11 ಘಂಟೆಗೆ ಹಾಜರಾಗಿ ತಿಳಿಸತಕ್ಕದ್ದು.

ಮೊಕಾಂ ಕುಂದಾಪುರ } K Narayana Shenai,
ತಾ 2—3—42 } ವಾದಿದೇವರ ಕಡೆ ವಕೀಲ್

ನೋಟೀಸು

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

R. I A 1434 41 O S 180/40

ಮಹಂಮದಾಯಿ ಯಾನೆ ಪದ್ಮಾವತಿ—**ವಾದಿ ಅರ್ಜಿದಾರಳು.**

ವೆಂಕಟ್ರಮಣಾಚಾರ್ಯ ಕೂಡಾ—**ಪ್ರತಿವಾದಿರು ಎದ್ರಿರು.**

4ನೇ ಎದ್ರಿ ತಿಮ್ಮಕ್ಕ ಭಟ್ಟ ಹಿರಿಯರ ಹೆಸರು ಗೊತ್ತಿಲ್ಲ ಮಂಗಳೂರು ತಾಲೂಕು ಉಳ್ಳಾಲ ಕಸಬಾ

ಮೇಲ್ಕಂಡ ಡ್ರಿಮಿನರ ಡಿಕ್ರಿ ವಿಧಿಪ್ರಕಾರ ಫೈನಲ್ ಡಿಕ್ರಿಕೊಡಿಸಬೇಕಾಗಿ ಅರ್ಜಿದಾರಳು ಮಾಡಿದ ಮೋಶನ್ ಅರ್ಜಿಯು ತಾ 11-3 '42 ಕ್ಕೆ ತನ್ನಿ ಇಟ್ಟಿರುವುದರಿಂದ ಆ ಕುರಿತು ನಿಮ್ಮ ಆಕ್ಷೇಪವಿದ್ದರೆ ಸದ್ರಿ ವಾಯಿದೆಗೆ ಈ ಕೋರ್ಟು ಮುಂದೆ ಹಾಜರಾಗಿ ಹುದರ್ಸಿಕೊಳ್ಳತಕ್ಕದ್ದೆಂತಲೂ ತಪ್ಪಿದ್ರೆ ನಿಮ್ಮ ಗೈರುಹಾಜರಿಯಿಂದ ತೀರ್ಮಾನಿಸಲಾಗುವುದೆಂತಲೂ ಈ ಮೂಲಕ ತಿಳಿಯಪಡಿಸಲಾಗಿದೆ.

Puttur } B Chidanand Rao,
28-2-'42 } Pleader for Petitioner.

ಜಿಲ್ಲಾ ಸಮಾಚಾರಗಳು

ಮಂಗಳೂರು

ಡಿ. ಬೋ. ಸೆಕೆಂಡರೀ ಶಾಲೆಗಳ ಹೆಡ್‌ಮಾಸ್ತರರುಗಳ ಸಮ್ಮೇಳನ

ಕಳೆದ ತಾ. ೨೮ರಂದು ಡಿ. ಬೋ. ಆಫೀಸಿನಲ್ಲಿ ಡಿ. ಬೋ. ಪ್ರೆಸಿಡೆಂಟ್, ಡಾ॥ ವಿಟ್ಠಲ ಶೆಟ್ಟರ ಅಧ್ಯಕ್ಷತೆಯಲ್ಲಿ ಬೋರ್ಡ್ ಸೆಕೆಂಡರೀ ಶಾಲಾ ಹೆಡ್ಮಾಸ್ತರರುಗಳ ಸಮ್ಮೇಳನವು ಯಶಸ್ವಿಯಾಗಿ ಜರಗಿತು. ಪ್ರತಿಯೊಂದು ಶಾಲೆಯ ಅವಶ್ಯಕಗಳ ಪೂರೈಕೆ ಕುಂದುಕೊರತೆಗಳ ನಿವಾರಣೆ, ಶಿಕ್ಷಣದ ವಿಚಕ್ಷಣತೆ ಮುಂತಾಗಿ ಶಾಲೆಯ ಸರ್ವತೋಮುಖವಾದ ಅಭಿವೃದ್ಧಿಗೆ ಕಾರಣಗಳಾದ ವಿಷಯಗಳನ್ನು ಪತ್ರ ವ್ಯವಹಾರದ ಮೂಲಕವೇ ತಿಳಿದುಕೊಂಡು ಆವಳಿತ ನಡೆಯಿಸುವುದಕ್ಕಿಂತ ಈ ವಿದ್ಯಾ ಸಂಸ್ಥೆಗಳೆಲ್ಲ ಸಂಬಂಧಪಟ್ಟ ಸರ್ವ ಸಾಮಾನ್ಯ ವಿಷಯಗಳನ್ನೂ ಆಯಾ ಸಂಸ್ಥೆಯ ಪರಿಸ್ಥಿತಿ ವೈಶಿಷ್ಟ್ಯದಿಂದ ಬರುವ ಸಮಸ್ಯೆಗಳನ್ನೂ ಮುಖ್ಯೋಪಾಧ್ಯಾಯರುಗಳ ಸಮ್ಮೇಳನದಲ್ಲಿ ಮುಖತಃ ಚರ್ಚಿಸಿ ವಿಚಾರವಿನಿಮಯ ಮಾಡಿ ನಿರ್ಧರಿಸುವುದು ಎಷ್ಟೋ ಸುಲಭವೂ ಸಮರ್ಪಕವೂ ಪರಿಣಾಮಕಾರಿಯೂ ಆದ ಮಾರ್ಗವೆಂದು ತಿಳಿದು ಈ ಸಮ್ಮೇಳನವನ್ನು ಮಾನ್ಯ ಅಧ್ಯಕ್ಷರು ಜರಗಿಸಿದ ಉದ್ದೇಶ. ಮೊದಲಾಗಿ ಅಧ್ಯಕ್ಷರು ಸೆಕೆಂಡರೀ ಶಾಲೆಗಳ ಆರ್ಥಿಕ ಪರಿಸ್ಥಿತಿಯನ್ನು ಸಮ್ಮೇಳನದ ಗಮನಕ್ಕೆ ತಂದು ಆ ದೃಷ್ಟಿಯಿಂದ ವ್ಯವಹಾರ್ಯವಾದ ವಿಷಯಗಳ ವಿಚಾರ ವಿನಿಮಯವಾಗಬೇಕೆಂದು ಸೂಚಿಸಿದರು. ಶಾಲಾ ಕಟ್ಟೋಣಗಳ ವೈಶಾಲ್ಯ, ವಠಾರಗಳು, ಶಿಕ್ಷಣದ ಉಪಕರಣಗಳು, ಪಠ್ಯಪುಸ್ತಕಗಳ ನಿರ್ಣಯ, ಪುಸ್ತಕಭಂಡಾರ, ವಾಚನಾಲಯ ಆಟದ ಸ್ಥಳ ಮತ್ತು ಶಾರೀರಿಕ ಶಿಕ್ಷಣ ವ್ಯವಸ್ಥೆ, ಪರಿಕ್ಷಾ ಕ್ರಮ, ಸಂಬಳದ ರಿಯಾಯತಿಯ ರೀತಿ ನೀತಿ, ಶಿಸ್ತು, ಆಡಳಿತೆ ಮುಂತಾದ ಶಾಲಾ ವಿಷಯಕ ಹಲವು ವಿಷಯಗಳು ಒಂದೊಂದಾಗಿ ಎತ್ತಲ್ಪಟ್ಟು ಆ ಕುರಿತು ಪ್ರತಿಯೊಂದು ಶಾಲೆಯ ಪರಿಸ್ಥಿತಿಯೂ ಅವಶ್ಯಕತೆಗಳೂ ಸಮ್ಮೇಳನದಲ್ಲಿ ವಿಚಾರಿಸಲ್ಪಟ್ಟುವು. ಎಲ್ಲ ಶಾಲೆಗಳಲ್ಲಿಯೂ ಆಡಳಿತೆ, ಶಿಸ್ತು, ಶಿಕ್ಷಣದ ರೀತಿನೀತಿ ಮುಂತಾದುವುಗಳಲ್ಲಿ ಒಂದು ಬಗೆಯ ಏಕತೆ ಹಾಗೂ ಸರ್ವ ಸಮಾನತೆ ಇರುವಂತೆಯೂ ಪ್ರತಿಯೊಂದು ಶಾಲೆಯ ಅನಿವಾರ್ಯವಾದ ಅತ್ಯಾವಶ್ಯಕಗಳು ಪೂರೈಕೆಯಾಗುವಂತೆಯೂ ಕೈಗೊಳ್ಳಬೇಕಾದ ಕಾರ್ಯಕ್ರಮಗಳ ವಿಚಾರವಾಗಿಯೂ ಚರ್ಚೆಗಳು ನಡೆದುವು.

ನಗರದಲ್ಲಿ ವಿಮಾನ ಧಾಳಿಯ ರಕ್ಷಣೋಪಾಯಗಳು:—ಮಂಗಳೂರು ನಗರದಲ್ಲಿ ವಿಮಾನಧಾಳಿಯ ರಕ್ಷಣೋಪಾಯ ಕಾರ್ಯಕ್ರಮಗಳನ್ನು ಸರಕಾರದವರು ಕೈಕೊಳ್ಳುವ ನಿರ್ಧಾರಮಾಡಿದ್ದಾರೆ. ಈ ಯೋಜನೆಗೆ ವಾರ್ಡನರಾಗಿ ನಾಗರಿಕರಲ್ಲಿ ಧಾರಾಳ ಮಂದಿಯ ಸ್ವಯಂಸೇವೆಯನ್ನು ಅಪೇಕ್ಷಿಸಲಾಗಿದೆ.

ಜಿಲ್ಲಾ ಯುದ್ಧ ಸಮಿತಿಯ ಎಕ್ಸಿಕ್ಯೂಟಿವ್ ಸಮಿತಿ:—ಇದರ ಸಭೆಯು ಇತ್ತೀಚೆಗೆ ಕೆನರಾ ಕ್ಲಬ್ಬಿನಲ್ಲಿ ಸೇರಿ ಮಾರ್ಚಿ ೭ಕ್ಕೆ ಚೀನಾ ದಿನಾಚರಣೆ ಮಾಡುವುದಾಗಿ ನಿರ್ಧರಿಸಲಾಯಿತು.

ವಿದ್ಯಾರ್ಥಿ ಮುಖಂಡರಲ್ಲಿ ಭಿನ್ನಮತ

ನಾಲ್ಕನೆಯ ಜಿಲ್ಲಾ ವಿದ್ಯಾರ್ಥಿ ಪರಿಷತ್ತಿನಿಂದ ಮೊದಲ್ಗೊಂಡು, ಮಂಗಳೂರ ಕೆಲವು ವಿದ್ಯಾರ್ಥಿ ಮುಖಂಡರಲ್ಲಿ ಭಿನ್ನಮತ ಹುಟ್ಟಿದ್ದು, ಕಳೆದ ಆದಿತ್ಯವಾರ, ಆ ವಿದ್ಯಾರ್ಥಿ ಮುಖಂಡರು ಎರಡು ಪಕ್ಷಗಳಾಗಿ ಗುಂಪುಗೂಡಿ ಎರಡು ಬೇರೆ ಬೇರೆ ಸಭೆಗಳನ್ನು ಜರಗಿಸಿ ಚೆದರಿಹೋದರೆಂದು ಕೇಳುತ್ತೇವೆ.

ಶಿಬಿರಾಗ್ನಿ:—ಮಂಗಳೂರು ಗ. ಕಾಲೇಜಿನ ಸ್ಕೌಟುಗಳು ಇಲ್ಲಿಗೆ ಬಂದಿದ್ದು ಬೇಲೂರು ಮೊದಲಾದ ಆಕರ್ಷಕ ಸ್ಥಳಗಳನ್ನು ಸಂದರ್ಶಿಸಿ ಬಿ. ಎಂ. ಸೆಕೆಂಡರಿ ಶಾಲೆಯ ಸ್ಕೌಟುಗಳೊಡನೆ ಶಿಬಿರಾಗ್ನಿ ಜರಗಿಸಿದರು.

ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್

ನಮ್ಮ ಅಧಿಪತ್ಯದ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್‌ರಾದ ಶ್ರೀ॥ ಎ. ಜೆ. ಹೆಪ್ಪೆಲ್ ಅವರು ಕಳೆದ ೨೭ಕ್ಕೆ ಮಂಗಳೂರಿಗೆ ಬಂದು ತಾ. ೨೮ರಂದು ಇಲ್ಲಿಂದ ಮರಳಿದರು.

ಬಾಲಾಜಿ ಟಾಕೀಸ್

ಸ್ಥಳೀಯ ಬಾಲಾಜಿ ಥಿಯೇಟರಿನಲ್ಲಿ ಕೆಲ ವಾರಗಳಿಂದ ನಡೆಯುತಿದ್ದ "ವಸಂತಸೇನಾ" ಎಂಬ ಕನ್ನಡ ಚಲಚ್ಚಿತ್ರವು ತಾ. ೫ನೇ ಗುರುವಾರದಿಂದ ಯಶಸ್ವಿಯಾಗಿ ೪ನೇ ವಾರ ನಡೆಯುತ್ತಿದೆ.

ನೇ---ಕ

ಈಗ ಪೂರ್ವ ಗೋದಾವರಿಯಲ್ಲಿರುವ ರಾ॥ ಸಾ॥ ಎಂ. ರಂಗಪ್ಪ ಬಂಗೇರರ ಸರ್ವೀಸನ್ನು ಕಾಫಿ ಕಂಟ್ರೋಲಿನ ಸಂಬಂಧವಾದ ವ್ಯಾಪಾರದ ಇಲಾಖೆಗಾಗಿ ಇಂಡಿಯಾ ಸರಕಾರವು ಉಪಯೋಗಿಸಿಕೊಳ್ಳುವುದೆಂದು ತಿಳಿದುಬಂದಿದೆ. ರಾ॥ ಸಾ॥ ಬಂಗೇರರು ಮಂಗಳೂರಿನವರು

ವಿದ್ಯಾರ್ಥಿ ಮತ್ತು ಹೆತ್ತವರ ಸಂಘಗಳ ಸ್ಥಾಪನೆ

ಕದ್ರಿ ವಿದ್ಯಾಬೋಧಿನಿ ಶಾಲೆಯಲ್ಲಿ ಮಾರ್ಚಿ ತಾ. ೧ರಲ್ಲಿ ಆ ಶಾಲಾ ಮಕ್ಕಳ ರಕ್ಷಕರ ಸಂಘವನ್ನೂ, ಅದೇ ಶಾಲೆಯ ಹಳೆ ವಿದ್ಯಾರ್ಥಿಗಳ ಸಂಘವನ್ನೂ ಸ್ಥಾಪಿಸಲಾಯಿತು. ಈ ಸಭೆಯ ಅಧ್ಯಕ್ಷ ಸ್ಥಾನವನ್ನು ಶ್ರೀ॥ ಕೆ. ಕೃಷ್ಣರಾಯರು ವಹಿಸಿದ್ದರು.

ಉಪನ್ಯಾಸ

ಈ ಜಿಲ್ಲೆಯ ನಿ. ಭಾ. ವೈದ್ಯ ಸಂಘದ ಆಶ್ರಯದಲ್ಲಿ ಈಚೆಗೆ ಆ॥ ವೇ॥ ಭೂಷಣ ಎಂ. ವಿ. ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಶ್ರೀ॥ ಆ. ವಿ. ಎಚ್. ಟಿ. ರಾಮಚಂದ್ರಾಚಾರ್ಯರು ರೋಗ ವಿಜ್ಞಾನದ ಕುರಿತು ಒಂದು ಉಪನ್ಯಾಸ ಕೊಟ್ಟರು.

ಮಿತ್ರಮಂಡಳಿ

ಮುದ್ದಣ ವಾಚನಾಲಯ:—ಮಂಗಳೂರು ಮಿತ್ರಮಂಡಳಿಯ ಆಶ್ರಯದಲ್ಲಿ ಥಿಯೋಸಫಿಕಲ್ ಲಾಜಿನ ಕಟ್ಟಡದಲ್ಲಿ ಕಳೆದ ಆದಿತ್ಯವಾರ ಸಂಜೆ 'ಮುದ್ದಣ ವಾಚನಾಲಯ'ದ ಉದ್ಘಾಟನಾ ಸಮಾರಂಭವು ಶ್ರೀ. ಹುರುಳಿ ಭೀಮರಾಯರಿಂದ ನೆರವೇರಿಸಲ್ಪಟ್ಟಿತು. ಶ್ರೀ. ಮುಳಿಯ ತಿಮ್ಮಪ್ಪಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ. ಹುರುಳಿ ಭೀಮರಾಯರು ಉದ್ಘಾಟನೆಯನ್ನು ನೆರವೇರಿಸುತ್ತಾ, ಮುದ್ದಣನೆಂದು ಪ್ರಸಿದ್ಧನಾದ ದಿವಂಗತ ನಂದಳಿಕೆ ಲಕ್ಷ್ಮೀನಾರಾಯಣಪ್ಪನವರ ಹೆಸರಲ್ಲಿ ದಕ್ಷಿಣ ಕನ್ನಡಿಗರಾದ ನಾವು ಈ ರೀತಿಯಿಂದಾದರೂ ಸ್ಮಾರಕ ನೆರವೇರಿಸುವ ವಿಷಯ ಸಂತೋಷ ಸೂಚಿಸಿ, ಮುದ್ದಣ ಕವಿಯೊಡನೆ ತನಗಿದ್ದ ವ್ಯಕ್ತಿಪರಿಚಯದ ವಿಷಯ ವಿವರಿಸುತ್ತಾ, ಮುದ್ದಣನೆಂಬ ಹೆಸರಿಂದ ಪ್ರಸಿದ್ಧನಾಗಿ ರಾಮಾಶ್ವಮೇಧ, ಶ್ರೀ ರಾಮಪಟ್ಟಾಭಿಷೇಕಾದಿ ಗ್ರಂಥಕರ್ತೃವು ನಂದಳಿಕೆ ಲಕ್ಷ್ಮೀನಾರಾಯಣಪ್ಪಯ್ಯನವರೇ ಎಂದು ಸಾಧಾರವಾಗಿ ತಿಳಿಸುತ್ತಾ, ಆ ಕವಿಯು ಬರೆದ ಇನ್ನೂ ಕೆಲವು ಪುಸ್ತಕಗಳೂ, ಕಾದಂಬರಿಗಳೂ ಇವೆಯೆಂದೂ, ಕೆಲವು ಹಸ್ತಪ್ರತಿಯೂ ಒಬ್ಬ ವಿದ್ವಾಂಸರ ವಶವಿರುವುದೆಂದೂ (ಅವರ ಹೆಸರು ಹೇಳಲಿಲ್ಲ) ತಿಳಿಸಿ ಅವುಗಳನ್ನೆಲ್ಲಾ ಪ್ರಸಿದ್ಧಪಡಿಸುವ ಪ್ರಯತ್ನ ಮಾಡಬೇಕೆಂದೂ ಸೂಚಿಸಿದರು. ಆ ಮೇಲೆ ಶ್ರೀಗಳಾದ ಜೆ. ವಾಮನಭಟ್ಟ, ಎಸ್. ಮುಕುಂದರಾವ್, ಬಿ. ಅನಂತರಾವ್ ಇವರು ಮಾತನಾಡಿ, ಅಧ್ಯಕ್ಷರ ಉಪಸಂಹಾರ ಭಾಷಣದೊಡನೆ ಕಾರ್ಯದರ್ಶಿ ಶ್ರೀ. ಎಸ್. ಪಿ. ಭಟ್ಟರ ಕೃತಜ್ಞತಾವಂದನೆಯೊಂದಿಗೆ ಸಭಾಂತ್ಯವಾಯಿತು. ಅಧ್ಯಕ್ಷರು ತಮ್ಮ ಉಪಸಂಹಾರ ಭಾಷಣದಲ್ಲಿ ಮುದ್ದಣ ಕವಿಯ ವಿಚಾರ ಮಿತ್ರಮಂಡಳಿಯವರು ಒಂದು ಗ್ರಂಥವನ್ನು ಪ್ರಕಟಿಸಬೇಕೆಂದು ಸೂಚನೆಯಿತ್ತುದನ್ನು ಕಾರ್ಯದರ್ಶಿಯವರು ಸಮರ್ಥಿಸಿದರು. ಈ ವಾಚನಾಲಯದಿಂದ ಮಿತ್ರಮಂಡಳಿಯ ಸದಸ್ಯರಿಗೆ ಪ್ರತಿ ವಾರ ಸಂಜೆಗೆ ಪುಸ್ತಕಗಳು ದೊರೆಯುವವು.

ಕೊಂಚಾಡಿ

ಶ್ರೀರಾಮಾಶ್ರಮ ಹಾಯರ್ ಎಲಿಮೆಂಟರಿ ಶಾಲೆಯ ವರ್ಧಂತ್ಯುತ್ಸವ

ತಾ. ೧೮ರಂದು ಅಪರಾಹ್ನ ಘಂಟೆ ೩-೩೦ಕ್ಕೆ ಡಾ॥ ಎಮ್. ಕೇಶವ ಪೈಗಳ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ಯಶಸ್ವಿಯಾಗಿ ಜರೆಗಿತು.

ಪಾಣೆಮಂಗಳೂರು

ಪ್ರಥಮ ರಾಜಕೀಯ ಪರಿಷತ್ತು

ಇದೇ ಬರುವ ಎಪ್ರೀಲ್ ತಿಂಗಳ ಕಡೇ ವಾರದಲ್ಲಿ ಪಾಣೆಮಂಗಳೂರಿನಲ್ಲಿ ಜರಗಲಿರುವ "ಪಾಣೆಮಂಗಳೂರು ಸರ್ಕಲ್ ರಾಜಕೀಯ ಪರಿಷತ್ತಿನ ಸಮಯ ಈ ಸರ್ಕಲಿಗೆ ಸೇರಿರುವ ಎಲ್ಲಾ ಉತ್ಸಾಹೀ ತರುಣರು ಸ್ವಯಂಸೇವಕರಾಗಿ ಸೇರಿ ಪರಿಷತ್ತನ್ನು ಯಶಸ್ವಿಗೊಳಿಸಬೇಕಾಗಿಯೂ, ಪರಿಷತ್ತಿನಲ್ಲಿ ದೇಶಿಯ ಕೃಷಿ, ಕೈಕಾರಿಕೆ ಮತ್ತು ದೇಶಿಯ ಔಷಧಿಗಳ ಪ್ರದರ್ಶನವು ಜರಗಿಸಲ್ಪಡುವುದರಿಂದ ಅಖಿಲ ಕರ್ನಾಟಕದ ಮಹನೀಯರು ಮತ್ತು ಸಂಸ್ಥೆಗಳು ಈ ಪ್ರದರ್ಶನದಲ್ಲಿ ಭಾಗವಹಿಸಬೇಕಾಗಿಯೂ, ಪರಿಷತ್ತಿನ ಸ್ವಾಗತ ಸಮಿತಿಗೆ ಈ ಸರ್ಕಲಿಗೆ ಸೇರಿದ ಎಲ್ಲಾ ಗ್ರಾಮಸ್ಥರೂ ಬಹುಸಂಖ್ಯೆಯಿಂದ ಸ್ವಾಗತ ಸಮಿತಿಯ ಸದಸ್ಯರಾಗಿಯೂ ಮತ್ತು ಪ್ರತಿನಿಧಿಗಳಾಗಿಯೂ ಸೇರಬೇಕೆಂದೂ ಸ್ವಾಗತ ಸಮಿತಿಯು ವಿನಂತಿಸಿಕೊಳ್ಳುತ್ತದೆ. ಮತ್ತು ಉದಾರಿಗಳಾದ ಮಹನೀಯರಲ್ಲಿ ಧನಸಹಾಯವನ್ನು ಕೋರುತ್ತದೆ.

ಮಂಗಲಪಾಡಿ

ಇಲ್ಲಿಯ ಬೋ. ಹಾ. ಎಲಿಮೆಂಟರಿ ಶಾಲೆಯ ವಾರ್ಷಿಕ ಮತ್ತು ಸಾಹಿತ್ಯ ಸಂಘದ ವರ್ಧಂತಿ ಉತ್ಸವವು ಕಾಸರಗೋಡು ರೇಂಜಿನ ಜೂನಿಯರ್ ಡಿಪ್ಯೂಟಿ ಇನ್ಸ್‌ಪೆಕ್ಟರರ ಅಧ್ಯಕ್ಷತೆಯಲ್ಲಿ ಸಂಭ್ರಮದಿಂದ ಜರಗಿತು. ಬಹುಮಾನ ವಿತರಣೆ ವಿವಿಧ ವಿನೋದಗಳು ಸಾಮೂಹಿಕ ಭಾವಚಿತ್ರ ಮೊದಲಾದ ಕಾರ್ಯಕ್ರಮಗಳಿದ್ದುವು. ಶಾಲಾ ವರ್ಷಾವಧಿ ಪರೀಕ್ಷೆಯು ಇದೇ ಸಮಯ ಜರಗಿತು.

ಮುಳಲಿ

ಇಲ್ಲಿಯ ಪ್ರಾಥಮಿಕ ಶಾಲಾ ಏಳಿಗೆಗಾಗಿ ಈ ಶಾಲಾ ಕಮಿಟಿಯವರಿಂದ ತಾ. ೭ರಂದು ಸಾಮಾಜಿಕ ನಾಟಕವೂ ಯಕ್ಷಗಾನ ಕೂಟವೂ ಜರಗಲಿರುವುದು.

ಕಾಸರಗೋಡು

ಯುವಜನ ಸಂಘದ ಆಶ್ರಯದಲ್ಲಿ ಶ್ರೀಮತಿ ಬೆನೆ ಡಿಕ್ಟ್ ಕಾರಟರ ಅಧ್ಯಕ್ಷತೆಯಿಂದ ಶ್ರೀ. ಎ. ಕೆ. ಕುಮಾರ್ ಇವರ ಸಂಗೀತಕಛೇರಿ ನಡೆಯಿತು.

ಉಡುಪಿ

ತೈಲ ಚಿತ್ರ ಅನಾವರಣ ಸಮಾರಂಭ

ಉಡುಪಿ ಬೋರ್ಡು ಹ್ಯಾಸ್ಕೂಲಿನ ಹಳೆ ವಿದ್ಯಾರ್ಥಿಯೂ ರೋವರ್ಸ್ ಸ್ಕೌಟ್ ದಳದ ಉತ್ಸಾಹೀತರುಣ ಕೆಲಸಗಾರರೂ ಆಗಿದ್ದು ಅಕಾಲ ಮೃತ್ಯುವಿಗೆ ತುತ್ತಾದ ಕೀರ್ತಿಶೇಷ ಕೆ. ಮಾಧವರಾಯರ ತೈಲ ಚಿತ್ರವನ್ನು ಹಿಂದೂಸ್ಥಾನ್ ಸ್ಕೌಟ್ ಎಸೋಸಿಯೇಶನಿನ ಜಿಲ್ಲಾ ಸ್ಕೌಟ್ ಕಮಿಶನರರಾದ ಶ್ರೀ॥ ಎಮ್. ಎಸ್. ಮಾಧವರಾಯರು ಕಳೆದ ತಾ. ೨೦ರಲ್ಲಿ ಬೋರ್ಡು ಹ್ಯಾಸ್ಕೂಲಲ್ಲಿ ಅನಾವರಣ ಮಾಡಿದರು. ಅಧ್ಯಕ್ಷತೆಯನ್ನು ಡಾ॥ ಸುಂದರರಾಮ ಪೈಗಳವರು ವಹಿಸಿದ್ದರು.

ಸಿಡುಬು

ಸೆಂಟ್ರಲ್ ವಾರ್ಡಿನಲ್ಲಿ ಸಿಡುಬು ತಲೆದೋರಿ ಇಪ್ಪತ್ತರಲ್ಲಿ ಆರು ಮಂದಿಗೆ ತಗಲಿದೆಯೆಂದೂ ಪ್ರಾಣಹಾನಿಯೇನೂ ಆಗಲಿಲ್ಲವೆಂದೂ ತಿಳಿದಿದೆ.

ಕರ್ನಾಟಕ

ಧಾರವಾಡ

ಕರ್ನಾಟಕ ಮಹಿಳಾ ಮಂಡಳಿಗಳ ಪ್ರತಿನಿಧಿಗಳು ಶ್ರೀಮತಿ ಕಮಲಾದೇವಿಯವರ ಅಧ್ಯಕ್ಷತೆಯಲ್ಲಿ ಸೇರಿ, ಕರ್ನಾಟಕ ಮಹಿಳಾಮಂಡಳಿಯ ಘಟನೆಗಳನ್ನು ತಯಾರಿಸಿ ಎಲ್ಲಾ ಶಾಖೆಗಳಿಗೆ ಅಭಿಪ್ರಾಯಕ್ಕಾಗಿ ಕಳುಹಿಸುವುದೆಂದಾಗಿ ಈ ವರ್ಷದ ಕಾರ್ಯಕಾರೀಮಂಡಳಿ ಆರಿಸಲಾಯಿತು.

ಮೈಸೂರು ಆಕಾಶವಾಣಿ

ಕನ್ನಡದಲ್ಲಿ ಸುದ್ದಿಗಳು

ಮಾರ್ಚಿ ೧ನೇ ತಾ. ಭಾನುವಾರದಿಂದ ಮೈಸೂರು ಆಕಾಶವಾಣಿಯ ಮೂಲಕ ಕನ್ನಡಿಗರೆಲ್ಲರೂ ಪ್ರಪಂಚದ ನಾನಾ ಭಾಗಗಳಲ್ಲಿ ನಡೆಯುವ ಅಂದಂದಿನ ಸುದ್ದಿಗಳನ್ನು ಅಂದಂದೇ ಕೇಳುವ ಅನುಕೂಲವಿದೆ. ರಾಯಿಟರ್ ಮತ್ತು ಎ. ಪಿ. ಐ. ವಾರ್ತಾ ಸಂಸ್ಥೆಗಳು ಒದಗಿಸುವ ಎಲ್ಲಾ ಸುದ್ದಿಗಳನ್ನೂ ಕೂಡಲೇ ಕನ್ನಡಕ್ಕೆ ಪರಿವರ್ತಿಸಿ ದಿನಕ್ಕೆ ಮೂರು ಸಲ ೪೯ ೯೬ ಮತ್ತು ೩೦೦ ಮೀಟರುಗಳ ಮೂಲಕ ಹೇಳಲಾಗುವುದು. ಆಕಾಶವಾಣಿಯ ಎಲ್ಲಾ ಕಾರ್ಯಕ್ರಮಗಳನ್ನೂ ಈಗ ಮೈಸೂರು ಸಂಸ್ಥಾನದಲ್ಲೂ ಕನ್ನಡ ನಾಡಿನಲ್ಲೂ ಆದರ ಹೊರಗೂ ಹೆಚ್ಚು ತೊಂದರೆಯಿಲ್ಲದೆ ಕೇಳಬಹುದಾದ್ದರಿಂದ ಈ ಹೊಸ ಏರ್ಪಾಡಿನ ಪ್ರಯೋಜನವನ್ನು ಸಹ ಎಲ್ಲರೂ ಪಡೆಯುವರೆಂದು ನಿರೀಕ್ಷಿಸಲಾಗಿದೆ.

ಕರ್ನಾಟಕ ಪ್ರಾಂತೀಯ ಕಾಂಗ್ರೆಸ ಸಮಿತಿ

ಕಾರ್ಯಕಾರಿ ಮಂಡಲದ ಸಭೆ

ಪ್ರಾಂತೀಯ ಸಮಿತಿಯ ಕಾರ್ಯಕಾರೀ ಮಂಡಲದ ಸಭೆಯು 16-2-42ನೇ ದಿವಸ ಧಾರವಾಡದಲ್ಲಿ ಶ್ರೀ ಕೃಷ್ಣಬಾಯಿ ಪಂಜೀಕರರ ಅಧ್ಯಕ್ಷತೆಯಲ್ಲಿ ಸೇರಿತು. ಹೋದ ಸಭೆಯ ಕಾರ್ಯಕಲಾಪ, ಹೋದ ವರ್ಷದ ಪರಿಶೋಧಿಸಲ್ಪಟ್ಟ ಲೆಕ್ಕ ಹಾಗು ಈ ವರ್ಷದ ಅಂದಾಜು ಪತ್ರಿಕೆಗಳು ಮಂಜೂರಿಯಾದವು. ಕಾಂಗ್ರೆಸ ವರ್ಕಿಂಗ ಕಮಿಟಿಯ ಸದಸ್ಯರಾದ ಸೇಠ್ ಜಮುನಾಲಾಲ ಬಜಾಜರ ಹಾಗೂ ಮಾಜಿ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್ ಶ್ರೀನಿವಾಸ ಐಯಂಗಾರ್ಯರ ಶೋಚನೀಯ ನಿಧನಗಳ ಬಗ್ಗೆ ಸಭೆಯು ತನ್ನ ಅಪಾರ ಸಂತಾಪವನ್ನು ವ್ಯಕ್ತಮಾಡಿತು. ಕಾಂಗ್ರೆಸ ಸಮಿತಿಗಳ ಪುನರ್ಘಟನೆಯ ಬಗ್ಗೆ ಅ. ಭಾ. ಕಾ. ಸಮಿತಿಯ ಮೂರನೇ ಪರಿಪತ್ರವನ್ನು ಕೂಡಲೇ ಪ್ರಾಂತದಲ್ಲಿ ಕಾರ್ಯರೂಪದಲ್ಲಿ ತರಬೇಕೆಂದು ಈ ಸಭೆಯು ತೀರ್ಮಾನಿಸಿತು. ಪ್ರಾಂತದಲ್ಲಿ ವಿಧಾಯಕ ಕಾರ್ಯಕ್ರಮವನ್ನು ಒಲಗೊಳಿಸುವುದಕ್ಕಾಗಿ ಪ್ರಾಂತೀಯ ಸಮಿತಿಯ ಪರವಾಗಿ ಪ್ರಚಾರ ಕಾರ್ಯವು ಕೈಕೊಳ್ಳಲ್ಪಡಬೇಕೆಂದು ನಿಶ್ಚಯವಾಯಿತು. ಕಾಂಗ್ರೆಸ ವರ್ಕಿಂಗ ಕಮಿಟಿಯ ಸೂಚನೆಯ ಪ್ರಕಾರ ಪ್ರಾಂತದಲ್ಲಿ ಜಿಲ್ಲಾ ಕಾಂಗ್ರೆಸ ಕಮಿಟಿಗಳು ಶಾಂತಿ ದಲಗಳನ್ನು ಸ್ಥಾಪಿಸಬೇಕೆಂದು ನಿಶ್ಚಯವಾಯಿತು. ಈ ದಲಗಳು ಶಿಸ್ತಿನಿಂದ ನಡೆಯುವುದಕ್ಕಾಗಿ ಜಿಲ್ಲಾ ಸಮಿತಿಗಳು ಬೇಗನೆ ಜಿಲ್ಲೆಯಲ್ಲಿ ಒಂದು ಭಾಷಣ ಕೇಂದ್ರವನ್ನು ತೆಗೆದು ಅಲ್ಲಿ ಸುಮಾರು 12 ದಿನಗಳ ವರೆಗಾದರೂ ಈ ದಲಗಳು ಮಾಡಬೇಕಾದ ಕಾರ್ಯಗಳ ಬಗ್ಗೆ ಶಿಕ್ಷಣಕೊಡಬೇಕೆಂದೂ ನಿಶ್ಚಯವಾಯಿತು. ಮೈಸೂರಿನ ಪ್ರಸಿದ್ಧ ಮುಂದಾಳುಗಳಾದ ಶ್ರೀ ಎಚ್. ಸಿ ದಾಸಪ್ಪ, ಟಿ. ಸಿದ್ಧಲಿಂಗಯ್ಯ ಹಾಗು ಇತರರನ್ನು ಬಂಧಿಸಿದ್ದು, ಮೈಸೂರಿನ ಅಧಿಕಾರಿಗಳ ದಬ್ಬಾಳಿಕೆಯ ಕೃತಿಯನ್ನು ಈ ಸಭೆಯು ನಿಷೇಧಿಸಿತು. ಪ್ರಾಂತದಲ್ಲಿಯ ಸ್ಥಾನಿಕ ಸಂಸ್ಥೆಗಳ ಚುನಾವಣೆಗಳಲ್ಲಿ ಯಾವುದೇ ಒಂದು ಜಿಲ್ಲೆಯಲ್ಲಿ ಕಾಂಗ್ರೆಸ್ಸು ಭಾಗವಹಿಸಬೇಕೋ ಬಾರದೋ ಎಂದು ತೀರ್ಮಾನ ಮಾಡಲಿಕ್ಕೂ, ಪ್ರಾಂತದಲ್ಲಿರುವ, ಸ್ಥಾನಿಕ ಸಂಸ್ಥೆಗಳಲ್ಲಿಯ ಕಾಂಗ್ರೆಸ ಪಕ್ಷಗಳ ನಿಯಂತ್ರಣ ಹಾಗೂ ಮೇಲ್ವಿಚಾರಣೆಯನ್ನು ಮಾಡಲಿಕ್ಕೂ ಮತ್ತು ಸ್ಥಾನಿಕ ಸಂಸ್ಥೆಗಳಲ್ಲಿ ಕಾರ್ಯ ಮಾಡುತ್ತಿರುವ ಕಾಂಗ್ರೆಸ ಪಕ್ಷಗಳು ಸರಿಯಾಗಿ ಕೆಲಸ ಮಾಡದೇ ಇದ್ದಲ್ಲಿ ಅವನ್ನು ರದ್ದುಪಡಿಸಲಿಕ್ಕೂ ಒಂದು ಸಮಿತಿ ಇರಬೇಕೆಂದು ಈ ಸಭೆಯು ತೀರ್ಮಾನಿಸಿತು.

ಸಿನೆಮಾ ಪುಟ

ಅತ್ರಿ ಪಿಕ್ಚರ್ಸಿನವರ 'ವಸಂತಸೇನಾ'

ಶೂದ್ರಕನ ಮೃಚ್ಛಕಟಿಕವನ್ನು ಅತ್ರಿ ಪಿಕ್ಚರ್ಸಿನವರು 'ವಸಂತಸೇನಾ' ಹೆಸರಿನಿಂದ ಸಿದ್ಧಪಡಿಸಿದ್ದಾರೆ. ಪ್ರಿನ್ಸಿಪಾಲ್ ಅತ್ರೆಯವರು ಲೇಖಕರು. ಜಾಗೀರ್ದಾರ್ ನಿರ್ದೇಶಕರು. ಕೃಷ್ಣರಾವ್ ಸಂಗೀತ. ಕಾನೂ ದೇಸಾಯಿ ಕಲಾನಿರ್ದೇಶನ. ನೌಕುಮಾರ್ ನೃತ್ಯ. ವನಮಾಲಾ, ಜಾಗೀರ್ದಾರ್, ಶಾಹುಮೋಡಕ್, ನಲಿನಿದೇವಿ, ನವೀನಯಾಗ್ನಿಕ್ ಮೊದಲಾದವರ ಅಭಿನಯ.

ಧನಲಕ್ಷ್ಮಿಗೂ ಲೀಲಾ ಚಿಟ್ನೀಸಳ ಅವಸ್ಥೆ?

ಲೀಲಾಚಿಟ್ನೀಸಳ ಮೇಲೆ ಸಿಪಾಯಿಗಳು ಕೈಮಾಡಿ ಅನರ್ಥವುಂಟಾಯಿತೆಂದು ಸುದ್ದಿ ಹರಡಿತ್ತಷ್ಟೆ? ಮದ್ರಾಸಿನ ಇನ್ನೊಬ್ಬಳು ನಟಿ ಮಿಸ್ ಧನಲಕ್ಷ್ಮಿಯ ವಿಷಯವೂ ಅಂತೆಯೇ ಬಂದ ಸುದ್ದಿ ಹರಡಿತ್ತು. ಆಕೆಯ ಮೇಲೂ 'ಬಂಕೀ' ಹುಡುಗರು ಕೈಹಾಕಿಬಿಟ್ಟರೆಂದು. ಆದರೆ ಆ ಸುದ್ದಿ ಹರಡಿದಾಗ ಧನಲಕ್ಷ್ಮಿ ಮದ್ರಾಸಿನಲ್ಲೇ ಇರಲಿಲ್ಲವೆಂದು ಈಗ ತಿಳಿದಿದೆ. ಸಿನೆಮಾ ತಾರೆಗಳು ಮಿಲಿಟರಿ ಉಪಯೋಗಕ್ಕೆ ಇರುವವರೆಂದು ಈ ಸುಳ್ಳು ಸುದ್ದಿಗಾರರ ಅಭಿಪ್ರಾಯ ಇದ್ದಿತಾರೆಯೋ?

ಮಧುರಂ ಬಗಳಿದಳೆ!

ಮದ್ರಾಸಿನ ಇನ್ನೊಬ್ಬ ನಟಿಯ ಕುರಿತು ಅದೇ ತರದ ಸುದ್ದಿ. ಮಿಸ್ ಮಧುರಂಳಿಗೆ ನಾಯಿ ಕಚ್ಚಿತು, ಅದರಿಂದ ಇಡೀ ದಿನ ಆಕೆ [illegible] ಇದ್ದಾಳೆಂದು. ಆದರೆ ಈಗ ತಿಳಿದಿದೆ ಆಕೆಗೆ ನಾಯಿ ಕಚ್ಚಿಲ್ಲ. ಅವರೆ ಆಕೆಯ [illegible] ಬಗ್ಗೆ [illegible], ಅವಳು ಬಗ್ಗೆ [illegible] ಬಿಟ್ಟು ಬಿಡಾ ಆಕೆಗೆ ಏನೂ ತೊಂದರೆಯಾಗಲಿಲ್ಲವಂತೆ.

ಮೂವರಲ್ಲಿ ಒಬ್ಬ

ಭಾರತದ ಪ್ರಸಿದ್ಧ ಮೂವರು ಕ್ಯಾಮೆರಾಮನರಲ್ಲಿ ವಾಹಿನಿಯವರ ಕೆಮರಾಮೆನ್ ರಾಮನಾಥ್ ಒಬ್ಬರಾಗಿ 'ಫಿಲ್ಮಿಂಡಿಯಾ' ಸಂಪಾದಕ ಪಟೇಲರು ಹೇಳುತ್ತಾರೆ. 'ಸುಮಂಗಲಿ' ಫೋಟೋಗ್ರಫಿ ಇವರದು.

ಪೌರಾಣಿಕ ನಟನೆ ಬೇಕೆಂದು ವನಮಾಲಾಳು ಹೇಳುತ್ತಾಳೆ

ಆಕೆಗೆ ಪೌರಾಣಿಕ ಐತಿಹಾಸಿಕಗಳಲ್ಲಿ ಅಭಿನಯಿಸಲು ಹೆಚ್ಚಿನ ಅಭಿಲಾಷೆಯುಂಟಂತೆ! ರಾಜಾರಾಣಿ, ಚಂಡಾಶ, ಸಿಕಂದರ್, ಪರಾಜಯ, ವಸಂತಸೇನಾಗಳಲ್ಲಿ ಇದುವರೆಗೆ ಅಭಿನಯಿಸಿ ಆಕೆ ಪ್ರಸಿದ್ಧಿಹೊಂದಿರುವಳು. ಪೌರಾಣಿಕ ನಟನೆಯಲ್ಲಿ ಇನ್ನಷ್ಟು ಅಭಿಲಾಷೆ ತನಗಿದೆಯೆಂದು ಅವಳ ಹೇಳಿಕೆ. ವನಮಾಲಳು [illegible] ವಿದ್ಯಾಮಂತ್ರಿಯ ಮಗಳಾಗಿ ಗ್ವಾಲಿಯರಲ್ಲಿ ಜನಿಸಿದಳು. [illegible] ರಾಣಿ [illegible] ರಿ ಜನರಲ್ ರಾಜವಾಡೆ ಮೊದಲಾದವರೊಡನೆ ಆಕೆಗೆ ವಿದ್ಯಾಭ್ಯಾಸವಾಗಿತ್ತು. ಆಕೆಯ ಜೀವನ ರಾಜವೈಭವದಿಂದ ನಡೆದಿತ್ತು. ಸಣ್ಣದಿರುವಾಗಲೇ ಆಕೆಗೆ ಆಟ, ಈಜುವುದು, ಕುದುರೆಸವಾರಿ, ಸೈಕಲ್ ಸವಾರಿ ಇವುಗಳಲ್ಲಿ ಹೆಚ್ಚಿನ ಅಭಿಲಾಷೆಯಿತ್ತು. ಬಿ. ಎ., ಆದಮೇಲೆ ಉಪಾಧ್ಯಾಯಿನಿಯಾಗಬೇಕೆಂದು ಬಿ. ಟಿ. ಪಾಸಾದಳು. ಆದರೆ ಆಕೆಯ ಜೀವನ ಬೇರೆ ವಿಧವಾಗಿತ್ತು. ಪ್ರಿನ್ಸಿಪಾಲ್ ಅತ್ರೆಯವರು ಅವಳನ್ನು ಸಿನೆಮಾಲೋಕವನ್ನು ತೋರಿಸಿದರು.

ಅಪಮಾನಕಾರಕ ಚಿತ್ರ

ಎಂದು ಫಿಲ್ಮ್ ಎಡ್ವೈಸರಿ ಬೋರ್ಡಿನವರು ಇತ್ತೀಚೆಗೆ ಪ್ರಕಟಿಸಿದ 'ದಿ ವಿಮೆನ್ ಆಫ್ ಇಂಡಿಯಾ' ಚಿತ್ರದ ವಿಷಯ 'ಫಿಲ್ಮಿಂಡಿಯಾ' ಬರೆಯುತ್ತದೆ. ಮಿಸ್ ಪ್ರಮೀಳಾ ರಾವ ರಾವ್ ಇದನ್ನು ಬರೆದಾಕೆ. ಭಾರತದ ಸ್ತ್ರೀಯರು ಇಂಗ್ಲಿಷರು ಬರುವ ಮೊದಲು ವನ್ಯಸ್ಥಿತಿಯಲ್ಲಿದ್ದರೆಂದು ಈ ಚಿತ್ರ ತಿಳಿಸುವುದರಿಂದ ಶಾಂತಾರಾಮರಂತಹ ನಿರ್ದೇಶಕರು ಇದನ್ನು ಹೇಗೆ ಹೊರಗೆಡವಿದರೋ ಎಂದು ಆ ಪತ್ರಿಕೆಯ ಟೀಕೆ.

ರೇಣುಕಾದೇವಿ

ಮನ್-ಕೀ-ಜೀತ್ ಎಂಬ ಶಾಲಿಮಾರ್ ಪಿಕ್ಚರ್ಸಿನ ಮುಂದಿನ ಚಿತ್ರದಲ್ಲಿ ಅಭಿನಯಿಸುವಳೆಂದು ತಿಳಿದುಬರುತ್ತದೆ.

ಮೋತಿಲಾಲ ಮಿನರ್ವಕ್ಕೆ

ರಣಜಿತ್ ಕಂಪೆನಿಯ ಪ್ರಸಿದ್ಧ ನಟ ಮೋತಿಲಾಲನು ಮಿನರ್ವಾ ಕಂಪೆನಿಯನ್ನು ಸೇರಿದನೆಂದು ತಿಳಿದಿದೆ. ಸಬಿತಾ ದೇವಿ ಮತ್ತು ಖಾದಾಮಿಯರು ಮಿನರ್ವಾದಲ್ಲಿದ್ದಾರೆ. ಹಿಂದೆ ಸಾಗರ ಫಿಲ್ಮ್ ಕಂಪೆನಿಯಲ್ಲಿದ್ದ ಈ ಮೂವರು ಚಲಚ್ಚಿತ್ರ ಪ್ರಿಯ ನಾಯಕರು ಈಗ ಮಿನರ್ವಾದಲ್ಲಿ ಒಂದಾಗಿದ್ದಾರೆ.

ನೇಶನಲ್ಸ್ ನಾಲ್ಕು ಚಿತ್ರಗಳು

ನೇಶನಲ್ಸ್ ಸ್ಟುಡಿಯೋದವರು ಬೇಗನೇ ಈಗ 'ರೋಟಿ' 'ಅಪ್ನಾ ಪರಾಯಾ' 'ಲೂಟ್' ಮತ್ತು 'ಜವಾನಿ ಖಾಸವ್' ಎಂಬ ನಾಲ್ಕು ಚಿತ್ರಗಳನ್ನು ತಯಾರಿಸುವರೆಂದು ತಿಳಿದಿದೆ.

ಯಾಕೂಬನ ಪ್ರಣಯ ಕಥೆ

ಯಾಕೂಬ್ ಒಳ್ಳೆಯ ಕರ (Villan) ಪಾತ್ರಗಾರ. ಆತನು ಹಿಂದೆ ಬಹಳ ವಿಲಾಸಿಯಾಗಿದ್ದ. ಯೂರೋಪಿಯನ್ ಹುಡುಗಿಯೊಬ್ಬಳೊಡನೆ ಪ್ರಣಯಮಾಡಿಕೊಂಡಿದ್ದ. ಯೂರೋಪಿನಲ್ಲಿ ಕೆಲಸಕ್ಕಿದ್ದ. ಆದರೆ ಆತನ ಯಜಮಾನನಿಗೆ ಅದು ಸಮ್ಮತವಾಗಲಿಲ್ಲ. ಕೆಲಸ ಹೋಯಿತು. ಆ ವೇಳೆ ಆತನಿಗೆ ಒಬ್ಬ ಸನ್ಯಾಸೀ ದರ್ಶನವಾಯಿತು. ಬಳಿಕ ಆತನ ಜೀವನದಲ್ಲಿ ಬಹಳ ಬದಲಾವಣೆಯುಂಟಾಯಿತು. ಈಗ ಆತ ಅಜ, ಮುಸಲ್ಮಾನ, ದಿನಕ್ಕೆ ಹಲವು ಸಲ ನಮಾಜು ಮಾಡುತ್ತಾನೆ. ಮದುವೆಯಾಗಿ ಸಂಸಾರ ಹೂಡಿದ್ದಾನೆ.

ಇಂದ್ರಜಾಲದಂತೆ ಚರ್ಮದ ರೋಗಗಳು ಮಾಯವಾಗುವುದು

ಕುಟಿಕೂರಾ ಮುಲಾಮು (Cuticurra Ointment) ತನ್ನ ವಾಸಿಮಾಡುವ ಗಾಯದ ವಿಷಯ ಎಂಥಾ ಕಠಿಣ ಸ್ಪರ್ಧೆಗೂ ನಿಲ್ಲುವುದು. ತ್ರಾಸದಾಯಕವಾಗಿ ವೇದನೆಗೊಳಿಸಿ ಪೀಡಿಸುವ ದೀರ್ಘಕಾಲದ ಕಾಲುಹುಣ್ಣುಗಳನ್ನು ಖಂಡಿತ ಗುಣಪಡಿಸುವುದು. ಕುಟಿಕೂರಾ (Cuticura)ವು ಕ್ರಿಮಿಗಳನ್ನು ನಾಶಮಾಡಿ ಕಾಲ್ಹುರಕನ್ನು ಅಧಿಕಗೊಳಿಸುವ ವಿಷವನ್ನು ನಾಶಮಾಡಿ, ಬಾತುಹೋದ ಭಾಗವನ್ನು ಗುಣಪಡಿಸಿ ವೇದನೆಗೊಳಪಟ್ಟ ಚರ್ಮದ ಬದಲಿಗೆ ಹೊಸ ಚರ್ಮವು ಬರುವಂತೆ ಸಹಾಯಮಾಡುವುದು.

ಚರ್ಮವ್ಯಾಧಿಯುಳ್ಳವರು ಕುಟಿಕೂರಾ ಸಾಬೂನನ್ನು (Cuticura Soap) ಮಾತ್ರವೇ ಉಪಯೋಗಿಸಬೇಕು. ಇದು [illegible] ಕ್ರಿಮಿನಾಶಕ ಗುಣವುಳ್ಳದ್ದು.

ಕಜ್ಜಿ, [illegible], ತುರಿಕಜ್ಜಿ, ಗಾಯ, ಪಟ್ಟು, ಪರಂಗಿ, ಸ್ಫೋಟಕ, ಮುದ್ದು [illegible] ಎಲ್ಲಾ ಚರ್ಮವ್ಯಾಧಿಗಳಿಗೂ ಕುಟಿಕೂರಾ ಮುಲಾಮನ್ನೇ (Cuticura Ointment) ಉಪಯೋಗಿಸಿ

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರುಗಳಲ್ಲಿಯೂ ಸಿಕ್ಕುತ್ತದೆ

ಕುಟಿಕೂರಾ ಮುಲಾಮು

CUTICURA OINTMENT



The
Canara Industrial & Banking Syndicate, Ltd
(Incorporated in British India. Liability of shareholders limited)

Estd) Head Office: UDIPI. (S. India) (1925)

Authorised Capital	Rs 50,00,000
Subscribed Capital	Rs 14,73,620
Paid up Capital	Rs 6,12,250
Reserves	Rs 2,10,000

Branches in the important commercial centres of Karnatak, Malabar, and Rayalaseema Districts and in Bombay and Secunderabad

All kinds of Banking business transacted

Our new Issue of Rs 40 Lakhs of 5% Tax free Cumulative Preference Shares of Rs 10 each is an ideal form of safe and remunerative investment with unique features.

INVESTORS PLEASE NOTE

From about the middle of April 1942 premium will be levied also on applications for 100 shares and above @ Rs 5 per every hundred shares. Details will be notified in the Prospectus.

Apply for Prospectus.

ವಿಜ್ಞಾನಯುಗ

ಪ್ಲಾಸ್ಟಿಕಿನಲ್ಲಿರಿಸುವ ಪೆನ್ಸಿಲು

ಲಿಬಿಯಾದಲ್ಲಿರುವ ಟ್ಯಾಂಕು ದಳದವರು ಉಪಯೋಗಿಸುವ ಒಂದು ಹೊಸ ತರದ ಪೆನ್ಸಿಲುಗಳನ್ನು ಅವುಗಳು ಬಿಸಿಗೆ ಕರಗಿ ಹೋಗುತ್ತಾವೆಂದು ಥರ್ಮೋಸ್ ಪ್ಲಾಸ್ಟಿಕಿನಲ್ಲಿರಿಸುತ್ತಾರೆ. ಆ ಪೆನ್ಸಿಲುಗಳ ಹೆಸರು 'ಚಿನಾಗ್ರಾಪ್' ಎಂದು ಅವುಗಳನ್ನು ಕೆಳುವಾದ ಕರಗುವಂತಹ ಪದಾರ್ಥಗಳಿಂದ ಮಾಡಿರುತ್ತಾರೆ. ಗ್ಲಾಸ್ ಅಥವಾ ಸೆಲ್ಲೋಫೇನ್‌ಗಳ ಮೇಲೆ ಗೆರೆಯೆಳೆಯಲು ಇಲ್ಲವೇ ಬ್ಲೀಚ್ ಬೆಲೂನಿನ ರೇಶ್ಮೆಗೆ ಗುರುತು ಹಾಕಲು ಉಪಯೋಗಿಸುತ್ತಾರೆ. ಇವುಗಳನ್ನು ಬ್ರಿಟಿಷ್ ವಿಮಾನದಳದವರಿಗೆ ಆಪರೇಶನಲ್ ಹೆಡ್‌ಕ್ವಾರ್ಟರ್ಸಿನಿಂದ ಒದಗಿಸಿ ಕೊಡುತ್ತಾರೆ. ಇತ್ತೀಚೆಗೆ ಇವುಗಳಿಗೆ ಬಹಳ ಗಿರಾಕಿ ಹೆಚ್ಚಿದೆ. ಹಾಗಾಗಿ ಹಿಂದೂದೇಶದಿಂದ ಇವುಗಳ ಸಲುವಾಗಿ ಬಂದ ೧೦೦ ಪವನುಗಳ ಚೆಕ್ಕನ್ನು ಇದರ ಲಂಡನ್ ಆಫೀಸಿನಿಂದ ಹಿಂತಿರುಗಿ ಕಳುಹಿಸಲಾಗಿದೆಯೆಂದು ತಿಳಿದು ಬರುತ್ತದೆ.

ಸಿಪಾಯಿಗಳ ವಿಲಾಸಕ್ಕೂ ಕಡಿತ

ಯುದ್ಧಕಾಲದಲ್ಲಿ ಹಲವು ವಸ್ತುಗಳ ಉಪಯೋಗದಲ್ಲಿ ಕಡಿತ ಮಾಡಲಾಗಿದೆಯಷ್ಟೆ? ಇತ್ತೀಚೆಗೆ ಡಿವೇನ್‌ಶಯರಿನ ಸಿಪಾಯಿಗಳು ಯಾವಾಗಲಾದರೊಮ್ಮೆ ಹುಡುಗಿಯರೊಡನೆ ಕುಣಿದಾಡಿ ವಿಲಾಸಗಳಿಗೆ ಹೋಗಬೇಕಾದರೆ ಅದಕ್ಕೂ ಕಡಿತ ಹಚ್ಚಲಾಗಿದೆಯೆಂದು ತಿಳಿಯುತ್ತದೆ. ಹಾಗೆ ಹೋಗಬೇಕಾದರೆ ಅವರು ಮುಖ್ಯಆಫೀಸರನ ಒಪ್ಪಿಗೆ ಪಡೆಯಬೇಕಂತೆ. ಒಪ್ಪಿಗೆ ಕೊಡುವುದೇ ಬಹಳ ಅಪರೂಪವಾಗಿರುವುದೆಂದು ತಿಳಿದಿದೆ. ವಿವಾಹಿತನಾದ ಸಾರ್ಜೆಂಟನು ಹೆಂಡತಿಯೊಡನೆ ಕೂಡಲು ಹೋಗಬೇಕಾದರೆ ಆತನೂ ಅಪ್ಪಣೆ ಪಡೆಯಬೇಕು. ಹೀಗೆ ಮಾಡಲು ಶಿಸ್ತುಪಾಲನೆಯಲ್ಲಿ ಸಿಪಾಯಿಗಳು ತೋರಿಸಿದ ಉದಾಸೀನತೆಯೇ ಕಾರಣವೆಂದು ಹೇಳಲಾಗಿದೆ.

ರಶ್ಯನ್ ಹೊಸ ಅಸ್ತ್ರ

ರಶ್ಯನರು 'ರೊಕೆಟ್ ಟ್ರೆಂಚ್ ಮೋರ್ಟರ್' ಎಂಬ ತಾನಾಗಿಯೇ ಗುಂಡು ಹಾರಿಸುವ ಒಂದು ಹೊಸ ಅಸ್ತ್ರವನ್ನು ತಯಾರುಮಾಡಿದ್ದಾರೆ. ಈಗ ಮೋಸ್ಕೋ ರಣರಂಗದಲ್ಲಿ ಈ ಅಸ್ತ್ರವನ್ನವರು ಉಪಯೋಗಿಸುತ್ತಿರುವರಾಗಿ ತಿಳಿದಿದೆ. ಕಾಲಿನಿನ್ ಭಾಗದಲ್ಲಿ ಯುದ್ಧಮಾಡುತ್ತಿದ್ದಾಗ ಇದನ್ನು ಪ್ರಥಮತಃ ಕಾರ್ಯಾಚರಣೆಗೆ ತರಲಾಯಿತು. ಇದರಲ್ಲಿ ಬಹಳ ಭೀಕರ ಸಿಡಿಮದ್ದುಗಳು ತುಂಬಿದ್ದು, ಮೊದಲನೆಯ ಗುಂಡನ್ನು ಹಾರಿಸಿದರೆ, ಆ ಮೇಲೆ ಒಂದರ ಮೇಲೊಂದಾಗಿ ತನ್ನಷ್ಟಕ್ಕೇ ಗುಂಡುಗಳು ರೊಕೆಟ್ ಕ್ರಮದಲ್ಲಿ ಹಾರುತ್ತಾ ಇರುವುದು.

ವಿಚಿತ್ರ ಪ್ರಪಂಚ

ಹೊಯಿಗೆಯಿಂದ ಪೆಟ್ರೋಲು

ಪಶ್ಚಿಮ ಕೆನಡದ ಹೊಯಿಗೆ ತಟ್ಟುಗಳಿಂದ ಜಗತ್ತಿನಲ್ಲಿ ಮುಂದಕ್ಕೆ ಪ್ರಖ್ಯಾತವಾಗುವ ಎಣ್ಣೆ ಸಂಗ್ರಹ ಸಿಗಬಹುದೆಂದು ಪರಿಶೋಧಿಸಲಾಗಿದೆ. 'ಮೆಗಜಿನ್ ಡೈಜೆಸ್ಟ್'ನಲ್ಲಿ ಈ ವಿಷಯವಾಗಿ ಕ್ಲೈಮಂಡ್ ಡೇವಿಸ್ ಎಂಬವರು ಒಂದು ಲೇಖನ ಬರೆದಿರುವರು. ಫೋರ್ಟ್ಮೆ ಮೆಕ್‌ಮರೆಯ ಬಳಿ ಅಂಥಾ ಎಣ್ಣೆಯ ಗನಿಯಿದೆಯೆಂದು ಅವರು ತಿಳಿಸುತ್ತಾರೆ. ಹಲವು ವರ್ಷಗಳಿಂದ ಈ ಪ್ರಾಂತದಲ್ಲಿ ಸಂಶೋಧನಾ ಕಾರ್ಯವು ನಡೆಯುತ್ತಿದ್ದು ಈಗ ಇದು ನಿರ್ಧಾರವಾಗಿದೆ. ೧೭೮೮ರಲ್ಲೇ ಪೀಟರ್ ಪೋಂಡ್ ಎಂಬವರಿಂದ ಈ ವಿಷಯವು ಪ್ರಸ್ತಾಪಿತವಾಗಿತ್ತು. ೧೭೯೩ರಲ್ಲಿ ಪ್ರಸಿದ್ಧ ಅಲೆಕ್ಸಾಂಡರ್ ಮೆಕೆನ್ಸಿಯವರು ಇದರ ವಿಷಯ ಮಾತನಾಡಿದ್ದರು. ಆ ಹೊಯಿಗೆಯಲ್ಲಿ ಎಣ್ಣೆಯು ತುಂಬಿರುತ್ತದೆಂದು ಹೇಳಲಾಗಿದೆ. ಹಲವು ವೈಜ್ಞಾನಿಕರು ಹೊಯಿಗೆಯಿಂದ ಎಣ್ಣೆ ಪ್ರತ್ಯೇಕಿಸುವ ವಿಧಾನವನ್ನು ಕಂಡುಹಿಡಿಯಲು ಪ್ರಯತ್ನಿಸುತ್ತಾರೆ.

ಮೀಸೆಯಿಂದ ಆರೋಗ್ಯವುಂಟು

ಮೀಸೆಯಿಂದ ಆರೋಗ್ಯ ಲಾಭವುಂಟು ಎಂದು ಈಗ ವೈಜ್ಞಾನಿಕರು ಹೇಳುತ್ತಾರೆ. ಎಲ್ಲರೂ ಮೀಸೆ ಬೆಳೆಸಬೇಕೆಂದು ಹೇಳಲಾಗುತ್ತದೆ. ಸಣ್ಣ ಸಣ್ಣ ಧೂಳು ಕಣಗಳಾಗಿ ಪದಾರ್ಥಗಳು ಶ್ವಾಸಮೂಲಕ ಹೊಟ್ಟೆಯೊಳಗೆ ಸೇರುವುದಕ್ಕೆ ಬೆಳೆಸಿದ ಮೀಸೆಗಳು ಪ್ರತಿಬಂಧಕಗಳೆನಿಸಿ ಬಹಳ ಉಪಯುಕ್ತವಾಗಿರುವವು. ಬ್ರಿಟಿಷ್ ಕೊಲಂಬಿಯದಲ್ಲಿರುವ ಹಾಡ್ರೋಕಿನ ಗನಿಗಾರರು ಮೀಸೆ ಬೆಳೆಸಬೇಕೆಂದು ಆಜ್ಞೆಯಿದೆ. ಗನಿಗಳಲ್ಲಿ ಕೆಲಸಮಾಡುವವರು ಸಣ್ಣ ಕಣಗಳು ಹೊಟ್ಟೆಯೊಳಗೆ ಸೇರಿ ಅನೇಕ ತರದ ರೋಗಗಳಿಗೆ ಬಲಿಯಾಗುವುದು ಇದರಿಂದ ನಿಂತುಹೋಗುವುದೆಂದೂ ತಿಳಿಯುತ್ತದೆ.

ಯೋಗದಿಂದ ಅಸ್ವಾಸ್ಥ್ಯನಿವಾರಣೆ

ವರ್ಧಾಕ್ಕೆ ಯೋಗಿ ವಿ. ನರಸಿಂಹಮೂರ್ತಿಯೆಂಬವರು ಬಂದಿದ್ದು, ನೇತಿ, ಧೌತಿ, ನೌಲಿ ಮೊದಲಾದ ಯೋಗಕ್ರಿಯೆಗಳಿಂದ ರೋಗಗಳನ್ನು ಗುಣಪಡಿಸುವ ವಿಷಯ ಪ್ರತ್ಯಕ್ಷ ಪ್ರಮಾಣಗಳನ್ನು ತೋರಿಸಿ ಭಾಷಣವಿತ್ತರು. ರಾಜೇಂದ್ರಪ್ರಸಾದ, ಕುಮಾರಪ್ಪ ಮೊದಲಾದವರು ಈ ಭಾಷಣಗಳಿಗೆ ಹಾಜರಿದ್ದರು. ರಾಜಾಜಿಯವರೊಡಯೂ ಈ ಯೋಗಿಗಳು ಯೋಗದ ಮಹತ್ವದ ವಿಷಯ ತರ್ಕಮಾಡಿದರು. ಪಾಶ್ಚಾತ್ಯ ಚಿಕಿತ್ಸಾ ಪದ್ಧತಿಗೆ ಶರಣಾಗಿ ನಾವು ನಮ್ಮಲ್ಲಿನ ಅದ್ಭುತ ಚಿಕಿತ್ಸಾಕ್ರಮಗಳನ್ನು ಮರೆತು ಬಿಟ್ಟಿರುವುದಕ್ಕೆ ಯೋಗ ಚಿಕಿತ್ಸೆಯು ತಾತ್ಸಾರ ಭಾವವೂ ಒಂದು ನಿದರ್ಶನವಾಗಿದೆ.

ಬಣ್ಣದ ಫೊಟೋಗಳು

ವಿಮಾನಗಳಲ್ಲಿ ಹಾರಾಡುವಾಗ ಬಣ್ಣದ ಚಿತ್ರಗಳನ್ನು ಇದ್ದುದನ್ನು ಇದ್ದ ಬಣ್ಣದಲ್ಲಿಯೇ ತೆಗೆಯುವಂತೆ ಈಗ ಅಮೇರಿಕದ ವೈಮಾನಿಕರು ಕೆಲವು ಕೆಮರಗಳನ್ನು ಉಪಯೋಗಿಸಿ ಕೃತಾರ್ಥರಾಗಿರುವರು. ಗಂಟೆಯೊಂದರ ೨೦೦ ಮೈಲು ವೇಗದಿಂದ ಹಾರಾಡುವ ವಿಮಾನಗಳಲ್ಲಿ ಕುಳಿತು ಸುಮಾರು ಎರಡು ಮೈಲು ಎತ್ತರದಿಂದ ಈ ಬಣ್ಣದ ಫೊಟೋಗಳನ್ನು ತೆಗೆಯುವ ಪಯತ್ನವು ಜಯಶೀಲವಾ

The Canara Banking Corporation Ltd.

(Incorporated in British India with limited liability)

Estd. 1906.

OUR RATES OF INTEREST ON DEPOSITS

Current	...	1% p.a.
Savings Bank	...	2½% „
Short-term	....	1¾% „
FIXED FOR 3 MONTHS	...	2% „
6 „	.	2½% „
9 „	....	2¾% „
12 „	.	3% „
24 „	....	3½% „

Advances made at cheap rates of interest against approved securities and Banking business of every description transacted.

ಡೋಂಗರೆ
ಬಾಲಾಮೃತವು
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

THE VIJAYA BANK, LIMITED.

Head Office MANGALORE

BRANCHES

KADRI-MANGALORE, HAMPANKATTA-MANGALORE, UDIPI, COONDAPUR, KARKAL, KAUP, & BRAHMAVAR.

SEASON DEPOSITS

are now accepted at all our Offices, at 4% per annum, for or more months, maturing on 31st July, 1942

Bhuvanendra Products Limited,
Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitual abortion and other uterine troubles. Must be commensed soon after conception and continued up to the time of delivery.

"ಭುವನೇಂದ್ರ ಗರ್ಭಪಾಲ"

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವವಿಧದ ದೋಷಗಳನ್ನು ಗುಣಪಡಿಸುವ ದಿವ್ಯಔಷಧಿ. ಗರ್ಭವತಿಯೆನಿಸಿದೆಂದಿನಿಂದ ಪ್ರಸವಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ, ವ ಏಜೆಂಟರು:—
(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಪ್ಯೆ, ರಥಬೀದಿ. (3) ದಿ ಕರ್ನಾಟಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ.

ಡಿಪ್ಪೋ:—1. ಮರಾಠ ಗಲ್ಲಿ ಹುಬ್ಬಳ್ಳಿ.
2. 36 ಫ್ಯಾಕ್ರೋಫ್ಟ್ ರೋಡ್, ಟ್ರಿಪ್ಲಿಕೇನ್, ಮದರಾಸು.

The Bank of Mangalore Limited

HEAD OFFICE	*BRANCHES*
Mangalore.	Moodabidri & Padubidri

ANNOUNCEMENT

On and from 1st February 1942, fixed deposits will be accepted at the following attractive rates.

One year	4%
Two years or above	4½%.

Interest Payable Quarterly

ಸರಕಾರದ ಹೊಸ ಪಾಠಪಟ್ಟಿಗನುಸಾರವಾಗಿ ಬರೆದ

ನವೀನ ಭೂವಿವರಣೆ

ವಾಸುದೇವರಾವ್, ಎಂ. ಎ. ಎಲ್. ಟಿ. (Dip. Geogrhpy)
(ಭೂಗೋಳ ಶಾಸ್ತ್ರದಲ್ಲಿ—ಡಿಪ್ಲೊಮಾ ಪಡೆದವರು)

ಈ ಪುಸ್ತಕಗಳನ್ನು ಪಡೆಕೊಂಡಲ್ಲಿ ವಿದ್ಯಾರ್ಥಿಗಳಿಗೆ ಎಟ್ಲಾಸ್ ಕೊಂಡುಕೊಳ್ಳುವ ಅವಶ್ಯವಿಲ್ಲ.

ಪ್ರತಿ ಪುಸ್ತಕದಲ್ಲಿ ಬಣ್ಣಬಣ್ಣದ ಭೂಪಟಗಳಿವೆ.

ಅನೇಕಾನೇಕ ಚಿತ್ರಪಟಗಳಿಂದ ಕೂಡಿದ್ದು, ಪ್ರತಿ ಪಾಠದ ಅಂತ್ಯದಲ್ಲಿ ಅಭ್ಯಾಸಗಳನೂ ಮಾದರಿ ಪ್ರಶ್ನೆಗಳನ್ನೂ ಕೊಟ್ಟಿದೆ.

4 ನೆಯ ಪುಸ್ತಕ 6 ಆಣೆ, 5 ನೆಯ ಪುಸ್ತಕ 7 ಆಣೆ; 7 ಮತ್ತು 8 ನೆಯ ಪುಸ್ತಕಗಳು ಅಚ್ಚಿನಲ್ಲಿವೆ. ಪುಸ್ತಕಗಳು ಬೇಕಾದಲ್ಲಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:

ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.

ದಿ ದಿ

ಕಂಬೈಂಡು ಬುಕ್ಕಿಂಗ್ ಏಜನ್ಸಿ ಮತ್ತು ಜೋಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

ಮಖೆ ಜಾತ್ರೆ

1ನೇ ಮಖೆ	3ನೇ ಮಖೆ	2ನೇ ಮಖೆ
ತಾರೀಕು 13-2-'42 ಮತ್ತು 14-2-'42	ತಾರೀಕು 9-3-'42 ಮತ್ತು 10-3-'42	ತಾರೀಕು 2-3-'42 ಮತ್ತು 3-3-'42

ಪುಣ್ಯ ಪ್ರದಾಯಿನಿ ನೇತ್ರಾವತಿ ಮತ್ತು ಕುಮಾರಧಾರಿ ನದಿಗಳ ಸಂಗಮಸ್ಥಾನವಾದ ಉಪ್ಪಿನಂಗಡಿಯಲ್ಲಿ ನಡಿಯುವ ಮಖೆ ಜಾತ್ರೆ ಸಮಯದಲ್ಲಿ ಉಪ್ಪಿನಂಗಡಿಗೆ ಅತ್ಯಲ್ಪ ಖರ್ಚಿನಲ್ಲಿ ಹೋಗಿ ಸಂಗಮ ಸ್ನಾನಮಾಡಿ ಪುಣ್ಯಾರ್ಜನೆ ಮಾಡಲಿಕ್ಕನುಕೂಲ ಸಮಯ.

ಇಂತಹ ಅತ್ಯಪೂರ್ವ ಸಂದರ್ಭವನ್ನು ಕಳಕೊಳ್ಳದಿರಿ.

ಪ್ರಯಾಣಿಕರ ಪ್ರಯಾಣ ಸೌಕರ್ಯಗಳ ಕಡೆಗೆ ಹೆಚ್ಚಿನ ಗಮನಕೊಡಲಾಗುವುದು.

JOINT MANAGERS,

The Combined Booking Agency, MANGALORE. **The Joint Booking Office,** KODIALBAIL.

[illegible] | ವಾರ್ಷಿಕ ಚಂದಾ ರೂ. 3-0- | [illegible] ರೂ. 1-12-0 | Regd. No. M 3460

ಸ್ವದೇಶಾಭಿಮಾನಿ

[ಸಂಪುಟ 36] ತಾರೀಕು 6-3-1942 [ಸಂಚಿಕೆ 10]

(Regd)

ಅಮೃತಾಂಜನ

ತಲೆವೇದನೆ, ಶಿರೋವೇಧನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ---- ಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ.

ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

CONFIDENCE

A GREAT ASSET IN BUILDING BUSINESS.

The Bombay Life Assurance Co. Ltd.

Has to its credit such Confidence earned by its progress and service of over 33 years

It, therefore, pays you to insure or to represent by applying to:-

KOCHIKAR BROTHERS, LTD.,

Chief Agents for South India, Including Indian States, UDIPI.

Or any of their Branches at:—

MANGALORE,—CALICUT—MADRAS,
TRIVANDRUM,—BANGALORE,—and BOMBAY.

N. B: Take advantage of our free advice based on 32years experience

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರ್ಯಾಂಚ್ ರಥಬೀದಿ ಮಂಗಳೂರು

★

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ

Edited Printed & Published by A. S. Kamath at the Sharada Press, Car Street, Mangalore.

ESTD. 1906

ಸ್ವದೇಶಾಭಿಮಾನಿ

SWADESHABHIMANI

ಬ್ರಿಟನಿನ ಟೇಂಕು ದಳ ಬೆಳೆಯುತ್ತಿದೆ

ಇಲ್ಲಿ ಕೆಲವು ಬ್ರಿಟನಿನ ಭೀಕರ ಟೇಂಕುಗಳನ್ನು ತೋರಿಸಲಾಗಿದೆ. ಇದು ಪೂರ್ವ ಇಂಗ್ಲೆಂಡಿನ ರೋಯಲ್ ಟೇಂಕ್ ದಳದಲ್ಲಿ ಅವುಗಳನ್ನು ಸಾಲಾಗಿರಿಸಿದ ದೃಶ್ಯ

KANNADA ILLUSTRATED WEEKLY

ವಿಮಾನಗಳ ದಾಳಿಯ ಕಾಲದಲ್ಲಿ ಮಾಡಬೇಕಾದ್ದೇನು?

ರಂಗೂನಿನ ಕಷ್ಟಗಳಿಂದ ಕಲಿತ ಪಾಠ.

ಕಹಳೆಯ ಶಬ್ದ ಕೇಳಿದೊಡನೆ ಮರೆ ಸೇರಬೇಕು!

[ರಂಗೂನಿನಲ್ಲಿ ವಿಮಾನಗಳ ದಾಳಿಯ ಕಾಲದಲ್ಲಿ ಯಾವ ಮುಂಜಾಗ್ರತೆ ಮಾಡಿದರು ಎಂದು ತಿಳಿಯುವ ಬಗ್ಗೆ ಇತ್ತೀಚೆಗೆ ರಂಗೂನಿಗೆ ಶ್ರೀ। ಎಚ್. ಡಿ. ಲೆತಿಮರ್ರು ಪ್ರಯಾಣ ಬೆಳೆಸಿದ್ದರು. ಅಲ್ಲಿ ಪಡೆದ ಅನುಭವವನ್ನು ಈ ಲೇಖನದಲ್ಲಿ ಕೊಟ್ಟಿದ್ದಾರೆ.]

ದಾಳಿಯ ಕಾಲದಲ್ಲಿ ಜನರು ಕುಣಿಗಳ ಮರೆ ಸೇರಿ, ಜ್ವಲಿಸುವ ಸಿಡಿಮದ್ದಿನ ತೋಟೆಗಳನ್ನು ಅವು ಕೆಳಗೆ ಬಿದ್ದ ಕ್ಷಣವೇ ನಾಶಪಡಿಸಬೇಕು. ಜಪಾನಿನ ವಿಮಾನಗಳು ರಂಗೂನಿನಲ್ಲಿ ಸಿಡಿಮದ್ದಿನ ತೋಟೆಗಳನ್ನು ಚೆಲ್ಲುವ ಸಾಧಾರಣ 25 ನಿಮಿಷಗಳ ಮೊದಲೇ ಡಿಸೆಂಬರ 23ನೇ ತಾರೀಕಿಗೆ ಬೆಳಗ್ಗೆ ರಂಗೂನಿಗೆ ಸಮಾಚಾರ ತಲಪಿತು. ಇಷ್ಟು ಮೊದಲೇ ಸಮಾಚಾರ ತಲಪಿದರೂ ಜನರು ಮಾಡಬೇಕಾದ ಮುಂಜಾಗ್ರತೆಯ ವಿಷಯದಲ್ಲಿ ಸ್ವಾಕಷ್ಟು ತಿಂಗಳ ಹಿಂದೆಯೇ ಅನುಭವ ಹೇಳಿಕೊಟ್ಟಿದ್ದರೂ ಅದನ್ನು ಲಕ್ಷಿಸದೆ ತೋಟೆಗಳು ಬೀಳುವುದಕ್ಕೆ ಆರಂಭಿಸಿದೊಡನೆ ಸಾವಿರಾರು ಜನರು ಬಹಿರಂಗ ಸ್ಥಳಗಳಲ್ಲಿ ಸೇರಿದ್ದರು. ಈ ಮೊದಲ ದಾಳಿಯಲ್ಲಿ ರಂಗೂನಿನ ಜನರು ಕುತೂಹಲಚಿತ್ತರಾಗಿ ಆತ್ಮರಕ್ಷಣೆಯ ಕಡೆಗೆ ಗೊಡವೆ ಇಲ್ಲದೆ ವರ್ತಿಸಬಹುದೆಂದು ತಂತ್ರಗಾರರಾದ ಜಪಾನಿಯರಿಗೆ ಗೊತ್ತು; ಅದ್ದರಿಂದ ಅವರು ಸೈನಿಕರ ಮೇಲೆ ಎಸೆಯತಕ್ಕ ತೋಟೆಗಳನ್ನು ಸಾಮಾನ್ಯ ಜನತೆಯ ಮೇಲೆ ನಿರ್ದಾಕ್ಷಿಣ್ಯದಿಂದ ಎಸೆದುಬಿಟ್ಟರು

ಚಪಲತೆಯನ್ನು ತಗ್ಗಿಸಬೇಕು

ಜನರ ಮೇಲೆ ಎಸೆಯುವ ಈ ತೋಟೆಗಳು ಸ್ಫೋಟಿಸುವ ಮುಂಚೆ ಬಹಳ ಆಳಕ್ಕೆ ಪ್ರವೇಶಿಸುವುದಿಲ್ಲ; ಯಾವುದಕ್ಕೂ ಸ್ಪರ್ಶವಾದೊಡನೆ ಸ್ಫೋಟಿಸಿ ಅವುಗಳ ಚೂರುಗಳು ನೆಲಕ್ಕೆ ಸಮೀಪದಲ್ಲಿಯೇ ಬಹಳ ತಗ್ಗಾಗಿ ಹರಡಿಕೊಳ್ಳುತ್ತವೆ ಈ ಚೂರುಗಳು ಬಿದ್ದ ಹಲವೆಡೆಗಳನ್ನು ನಾನು ಪರೀಕ್ಷಿಸಿದೆನು ಅವು ಬಿದ್ದ ಎಡೆಯಿಂದ ಈ ಚೂರುಗಳು ಎಷ್ಟು ತಗ್ಗಿನಲ್ಲಿ ಹರಡುತ್ತಿವೆ ಎಂದು ಖಚಿತವಾಯಿತು, ಕೆಳಗೆ ಬಿದ್ದು ಹರಡಿದ ಚೂರುಗಳ ದೆಸೆಯಿಂದ ಅವು ಮೊದಲು ಮಾಡಿದ ಕುಣಿಯಿಂದ ಬಹಳ ದೂರದ ವರೆಗೆ ನೆಲವು ಕರಟಿಹೋಗಿತ್ತು, ನೆಲಕ್ಕೆ ಹಾಸಿದ ಹಾಸುಕಲ್ಲುಗಳು ಚೂರು ಚೂರಾಗಿದ್ದುವು. ಅಂಗಡಿಗಳ ಮತ್ತು ಮನೆಗಳ ನೆಲವು ಕರಟಿ ಒಡೆದುಹೋಗಿತ್ತು. ನೂರಾರು ಅಡಿ ವಿಸ್ತಾರಕ್ಕೆ ಸುತ್ತಲಿರುವ ಗಾಜಿನ ತಗಡುಗಳು ನುಚ್ಚುನೂರಾಗಿದ್ದುವು ಎರಡು ರಸ್ತೆಗಳು ಕೂಡುವ ಒಂದೇ ಸ್ಥಳದಲ್ಲಿ ಮರೆ ಸೇರದ ನೂರಾರು ಜನರು ಮಡಿದು ಬಿದ್ದಿದ್ದರು, ಸಿಡಿಮದ್ದಿನ ತೋಟೆಗಳು ಬರುವ ಶಬ್ದ ಕೇಳಿ ನೆಲದ ಮೇಲೆ ಅಂಗಾತ ಬಿದ್ದ ಜನರು ಗಾಯಹೊಂದಿದ್ದರು, ಅಥವಾ ಸತ್ತು ಬಿದ್ದಿದ್ದರು

ಈ ರೀತಿಯ ಅವಘಡದಿಂದ ರಂಗೂನಿನ ಜನರಿಗೆ ಕಹಳೆಯ ಶಬ್ದ ಕಿವಿಗೆ ಬಿದ್ದೊಡನೆ ಮರೆ ಸೇರಬೇಕೆಂದು ಪ್ರತ್ಯಕ್ಷ ಬೋಧನೆಯಾಯಿತು ಮನುಷ್ಯನಲ್ಲಿ ಇರುವ ಸ್ವಾಭಾವಿಕ ಚಪಲತೆಯನ್ನು ಈ ಕಾಲದಲ್ಲಿ ಸರ್ವ ವಿಧದಲ್ಲಿಯೂ ತಗ್ಗಿಸಬೇಕು ಸ್ಫೋಟಿಸುವ ಈ ತೋಟೆಗಳಲ್ಲದೆ ಅವುಗಳ ಹೊರ ಚಿಪ್ಪಿನ ಚೂರುಗಳು ಮೆಶೀನ್ ಗನ್ನುಗಳಿಂದ ಎಸೆದ ತೋಟೆಗಳು, ಆಕಾಶದಲ್ಲಿ ಮುರಿದು ಕೆಳಗೆ ಕುಸಿದು ಬಿದ್ದ ವಿಮಾನಗಳ ಚೂರುಗಳು ಕೂಡಾ ಅಲ್ಲಲ್ಲಿ ಹರಡಿರುತ್ತವೆ. ಆಕಾಶಕ್ಕೆ ಹೋಗುವ ವಸ್ತುಗಳೆಲ್ಲ ಕೆಳಗೆ ಬಿದ್ದೇ ತೀರಬೇಕು ಎಂಬುದನ್ನು ಮರೆಯದಿರಿ

ಹೀಗಾಗಿ ರಂಗೂನಿನ ದಾಳಿಯಿಂದ ಕಲಿತ ಪ್ರಥಮ ಮತ್ತು ಪ್ರಮುಖ ಪಾಠವು 'ಮರೆ ಸೇರಬೇಕು' ಎಂಬುದು.

ಬೇಗನೆ ಹಾಗೆ ಮಾಡಲಿಕ್ಕೆ ಸಾಧ್ಯವಿದ್ದರೆ ಇಟ್ಟಿಗೆ ಅಥವಾ ಕಲ್ಲಿನಿಂದ ಕಟ್ಟಿದ ಯಾವದೊಂದು ಕಟ್ಟೋಣದ ಆಶ್ರಯ ಸೇರಬೇಕು; ಅಂಥ ಕಟ್ಟಡವಿಲ್ಲದಿದ್ದರೆ ಬೇರೆ ಮರೆಯನ್ನಾಗಲಿ ಇದಕ್ಕಾಗಿಯೆ ತಯಾರಿಸಿದ ಕುಣಿಯನ್ನಾಗಲಿ ಸೇರಬೇಕು.

ಸಿಡಿಮದ್ದು ಇಟ್ಟಿಗೆಯ ಕಟ್ಟಡ

ಈ ತೋಟೆಗಳ ಹಾವಳಿಯಿಂದ ಜನತೆಯು ಮರಣಹೊಂದಿದ ಹಲವೆಡೆಗಳಲ್ಲಿ ಅದರ ಪರಿಣಾಮವನ್ನು ನಾನು ಸ್ವತಃ ನೋಡಿದೆನು. ಸ್ಫೋಟಿಸಿದ ಚೂರುಗಳು ಇಟ್ಟಿಗೆಯ ಅಥವಾ ಕಲ್ಲಿನ ಗೋಡೆಗಳಿಗೆ ತಗುಲಿದ್ದಲ್ಲಿ ಆ ಇಟ್ಟಿಗೆಯ ಮೇಲೆ ಆಳವಾದ ಬರೆಗಳು ಹಲವು ಬಿದ್ದುದು ಕಂಡೆ, ಆದರೆ ಈ ಬರೆಗಳು ನಾಲ್ಕೈದು ಇಂಚುಗಳಷ್ಟು ಆಳವೂ ಇರಲಿಲ್ಲ; ಇಟ್ಟಿಗೆಯ ಮೇಲೆ ಈ ಸ್ಫೋಟನದ ಪರಿಣಾಮವು ಅತೀ ಕಡಿಮೆ ಎಂಬದೇ ಆಶ್ಚರ್ಯದ ಮಾತು. ಇಟ್ಟಿಗೆಯಿಂದ ಮಾಡಿದ ಹಲವು ಗೋಡೆಗಳ ಸಮೀಪದಲ್ಲಿ ಆದ ಸ್ಫೋಟನದ ಹೊಡೆತದ ಪರಿಣಾಮವನ್ನು ನಾನು ಪರಿಶೀಲಿಸಿದೆನು, ಆಗ ಇಟ್ಟಿಗೆಗಳು ಕರಟಿಹೋದದ್ದು ಮಾತ್ರ ಕಂಡು ಬಂತಲ್ಲದೆ ಇಟ್ಟಿಗೆಯೊಳಗೆ ಒಂದೇಒಂದು ಚೂರು ಪ್ರವೇಶ ಮಾಡಿದ್ದಿಲ್ಲ.

ನೇರಾಗಿ ತಲೆಯ ಮೇಲೆ ಹಾರುವ ತೋಟೆಯಲ್ಲದಿದ್ದಲ್ಲಿ ಒಳ್ಳೆ ಮರೆಯಾಗಲಿ ಒಳ್ಳೆಕುಣಿಯಾಗಲಿ ಸುಮಾರು ಸಂಪೂರ್ಣ ಸಂರಕ್ಷಣೆ ಮಾಡಬಲ್ಲದು ಜಪಾನೀಯರ ಒಂದು ದೊಡ್ಡ ತೋಟೆಯು ಮರದಿಂದ ರಚಿತವಾದ ಒಂದು ದೊಡ್ಡ ಬಂಗಲೆಯ ಮೇಲೆ ಸಿಡಿದು ಕಟ್ಟೋಣದ ಅರ್ಧಾಂಶವು ಸಂಪೂರ್ಣ ನಾಶವಾಗಿ ಅದರ ಸ್ಥಳದಲ್ಲಿ 25 ಅಡಿ ವಿಸ್ತಾರದ ಒಂದು ದೊಡ್ಡ ಕುಣಿಯು ಬಿದ್ದಿತ್ತು. ಇದರಿಂದ 10 ಗಜ ದೂರದಲ್ಲಿ ಆ ಬಂಗಲೆಯ ನಿವಾಸಿಕರು ಒಂದು ಕುಣಿಯಲ್ಲಿ ಮರೆ ಹೊಕ್ಕಿದ್ದರು. ಅದರ ಮೇಲ್ಮುಚ್ಚಿಗೆಯು ಹೆಚ್ಚು ದಪ್ಪವಿದ್ದಿಲ್ಲ ಹೀಗಿದ್ದರೂ ಆ ತೋಟೆಯು ರಂಗೂನಿನ ಮೇಲೆ ಬಿದ್ದ ತೋಟೆಗಳಲ್ಲಿ ಒಂದು ದೊಡ್ಡ ತೋಟೆಯಾಗಿದ್ದರೂ ಆ ಜನರಿಗೆ ಸ್ವಲ್ಪವೂ ಅದರ ಅಪಾಯವು ತಟ್ಟಿದ್ದಿಲ್ಲ

ನಾನು ಹಲವು ಸುಳ್ಳು ಸಮಾಚಾರಗಳನ್ನು ಕೇಳಿದ್ದೇನೆ, ಇವನ್ನು ದೇಶದ್ರೋಹಿಗಳು ಬಹುಶಃ ಹೊರಡಿಸಿರಬೇಕು, ಇವುಗಳ ಮೇರೆಗೆ ಉದ್ದ ದೊಡ್ಡ ಕುಣಿಗಳು ಅಷ್ಟು ಭದ್ರವಲ್ಲ, ಯಾಕೆಂದರೆ ಅವುಗಳಲ್ಲಿ ಸೇರಿದ ಜನರ ಮೇಲೆ ಜಪಾನೀಯ ವಿಮಾನಗಳಿಂದ ಮೆಶೀನ್ ಗನ್ನುಗಳಿಂದ ಗುಂಡುಗಳನ್ನು ಹಾರಿಸುತ್ತಾರೆ ಎಂದು ಈ ಸುಳ್ಳು ಸಮಾಚಾರಗಳು. ಜಪಾನೀಯ ವಿಮಾನಗಳು 17,000 ಅಡಿಗಿಂತ ತಗ್ಗಿಗೆ ಆಕಾಶದಲ್ಲಿ ಸುಳಿಯುವುದಿಲ್ಲ, ಈ ಆಶ್ರಯದ ಕುಣಿಗಳು ಓರೆಕೋರೆಯಾಗಿ ಅಗೆಯಲ್ಪಟ್ಟವು, ತಾಸಿಗೆ 200 ಮೈಲು ದೂರ ಪ್ರಯಾಣಮಾಡುವ ವಿಮಾನವು ಸರಿಯಾಗಿ ಗುರಿಯಿಟ್ಟು ಈ ಕುಣಿಗಳ ಮೇಲೆ ಗುಂಡುಗಳನ್ನು ಹಾರಿಸುವುದು ಸಾಧ್ಯವಲ್ಲ ವಿಶ್ವಾಸಾರ್ಹವಾದ ಸರಕಾರಿ ವರ್ತಮಾನಗಳನ್ನು ಕೇಳಿದಾಗ ನೆಲದ ಮೇಲೆ ಚಲಿಸುವ ಜನಗಳ ಮೇಲೆ ಮೆಶಿನ್ ಗುಂಡುಗಳನ್ನು ಎಸೆದುದು ತೀರಾ ಕಡಿಮೆ ಎಂದು ತಿಳಿದು ಬರುತ್ತದೆ. ಮರೆ ಸೇರದೆ ಅತ್ತಿತ್ತ ಸುಳಿಯುವ ಜನರ ಮೇಲೆಯೆ ತೋಟೆಗಳು ಸಿಡಿದು ಜನನಾಶವಾಯಿತೆನ್ನಬೇಕು

ಶಾಂತಚಿತ್ತರಾಗಿರಿ

ದುರದೃಷ್ಟದಿಂದ ಒಂದು ಉದ್ದ ಕುಣಿಯಲ್ಲಿ ಒಂದು ತೋಟೆಯು ಬಿದ್ದು ಕೆಲವು ಅನಾಹುತಗಳಾದವು. ಇದರಿಂದ ಆ ಕುಣಿಯ ನೆರೆಯಲ್ಲಿರುವ ಕುಣಿಗಳಲ್ಲಿ ಗಾಬರಿಯಾಗಿ ಅವರು ಶಾಂತಚಿತ್ತರಾಗುವ ಮತ್ತು ಮರೆಯಲ್ಲಿರುವ ಬದಲು ಕುಣಿಗಳಿಂದ ಹೊರಗೆ ಬರುವುದಕ್ಕೆ ಯತ್ನಿಸಿದರು, ಆಗ ಇನ್ನೊಂದು ತೋಟೆಯು ಸಿಡಿದು ಹೊರಗೆ ಬಂದವರ ಮೇಲೆ ಬಿದ್ದು ಬಹಳ ನಷ್ಟವಾಯಿತು. ಅವರು ತಟಸ್ಥರಾಗಿ ತಮ್ಮ ಕುಣಿಗಳ ಮರೆಯಲ್ಲಿಯೆ ಇದ್ದಿದ್ದರೆ ಬಹಳ ಕಡಿಮೆ ಜನರು ಸಾಯುತಿದ್ದರು. ಅದ್ದರಿಂದ ಇದರಿಂದ ಕಲಿಯುವ ಎರಡನೆ ಪಾಠವು 'ಶಾಂತಚಿತ್ತರಾಗಿರಿ' ಎಂದು.

ಕಟ್ಟೋಣಗಳ ಮರೆ ಸೇರುವಾಗ ಗಾಜಿನ ತಗಡಿರುವ ಕಿಟಿಕಿಗಳ ಸಮೀಪ ಹೋಗಬೇಡಿರಿ. ತೋಟೆಗಳು ಬಿದ್ದಲ್ಲೆಲ್ಲ ಗಾಜಿನ ಚೂರುಗಳು ನೂರಾರು ಅಡಿ ವಿಸ್ತಾರಕ್ಕೆ ಹಾರಿ ಭಯಂಕರ ಅಪಾಯವನ್ನು ತರುತ್ತಿವೆ. ನಿಮ್ಮ ಸುತಲೂ ನಾಲ್ಕು ಬಲವಾದ ಗೋಡೆಗಳ ಮರೆ ಇರುವಂತೆ ನೋಡಿರಿ; ಅಥವಾ ತೆರೆದ ಕಿಟಿಕಿಗಳಿಂದ ದೂರವಾಗಿದ್ದು ಗಾಳಿಯು ಒಳಕ್ಕೆ ಪ್ರವೇಶಿಸದ ಒಂದು ಮೂಲೆಯಲ್ಲಿ, ಅಥವಾ ಕೋಣೆಯಲ್ಲಿ ಮೇಜಿನ ಕೆಳಗೆ ಅಥವಾ ಹಾಸಿಗೆಯ ಅಡಿಯಲ್ಲಿ ಮರೆ ಸೇರುವುದು ಉತ್ತಮ.

ಜ್ವಲನ ಶಕ್ತಿಯುಳ್ಳ ತೋಟೆಗಳು

ಜಪಾನಿಯರು ಸುಮಾರು 40 ರಾತ್ಲು ತೂಕದ ಜ್ವಲನ ಶಕ್ತಿಯ ಕೆಲವು ಬೊಂಬುಗಳನ್ನು ಹಾರಿಸಿದ್ದರು: ಇವು ಯಾವುದೊಂದು ವಸ್ತುವಿಗೆ ಘರ್ಷಣವಾದೊಡನೆ ಸುತ್ತಲೂ ನಾಲ್ಕರಿಂದ ಆರು ಇಂಚು ಉದ್ದದ ನಳಿಗೆಯಾಕಾರದಲ್ಲಿ ಹೊರಡುತಿದ್ದುವು. ಇನ್ನೊಂದರಲ್ಲಿ ದುಂಡಗಾದ ಕಪ್ಪು ರಬ್ಬರ ಚೆಂಡುಗಳಿದ್ದುವು. ಇನ್ನೊಂದರಲ್ಲಿ ದುಂಡಗಾದ ಕಪ್ಪು ರಬ್ಬರ ಚೆಂಡುಗಳಿದ್ದುವು. ಇವು ಸಂದಿಮೂಲೆಗಳಿಗೆ ಹೊರಳಿ ಅಲ್ಲಿ ನಿಧಾನವಾಗಿ ಉರಿಯುತಿದ್ದು ಸಮೀಪದಲ್ಲಿ ಉರಿ ಹತ್ತುವ ಪದಾರ್ಥಗಳಿದ್ದರೆ ಅವಕ್ಕೆ ಬೆಂಕಿ ಹಿಡಿಸುತ್ತಿವೆ. ನೀರು ಹಂಗಾಮಿಯಾಗಿ ಈ ತೋಟೆ ಚೆಂಡುಗಳನ್ನು ನಂದಿಸುತ್ತಿದೆ ಅವು ಒಣಗಿದೊಡನೆ ಪುನಃ ಉರಿಯ ತೊಡಗುತ್ತಿವೆ ಒಮ್ಮೆ ನಂದಿಸಿದ ಬೆಂಕಿಯು ಪುನಃ ಉರಿಯೆದ್ದು ಕೆಲವು ಕಡೆಗಳಲ್ಲಿ ಬೆಂಕಿ ಹತ್ತಲಾರಂಭಿಸಿತು ಅದ್ದರಿಂದ ಇವು ಬಿದ್ದಲ್ಲಿ ಚೆನ್ನಾಗಿ ಪರಿಶೋಧಿಸಿ ಇವುಗಳನ್ನು ನಾಶಮಾಡುವುದೂ ಒಳ್ಳೇದು ಅವುಗಳ ಮೇಲೆ ಹೊಯಿಗೆ ಮುಚ್ಚಿ ಒಂದು ಹಾರೆ ಕೋಲಿನಿಂದ ಅವನ್ನು ಎತ್ತಿಕೊಳ್ಳಬಹುದು. ಆದರೆ ಇದನ್ನು ಆದಷ್ಟು ಬೇಗನೆ ಮಾಡಬೇಕು.

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ANNOUNCEMENT

We have great pleasure in announcing an all round reduction in rates of interest on advances.

Ourpresent rates are:

Personal Loans & Overdrafts	7½% p. a.
Usance Bills	7% ,,
Trade Bills	6% ,,
Loans on Produce	5½% ,,
Loans on Insurance Policies Stocks & shares	5% ,,
Loans on Gold	4½% ,,

The above rates are for medium-sized loans. The rates for small loans will however be slightly higher since the cost of time, labour and stationery consumed in such cases is proportionately higher.

CANARA BANK, LIMITED.

ESTD. 1906.

“ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ”

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

[13-3-1942] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೧೩—೩—೧೯೪೨]

ಸಮರಭೂಮಿಯ ಸಂಚಾರ

ಜಾವಾದ ಪರಿಸ್ಥಿತಿ ದಿನದಿಂದ ದಿನಕ್ಕೆ ಚಿಂತಾಜನಕವಾಗುತ್ತಾ ಬಂದಿತು, ಶತ್ರುಸೈನ್ಯವು ಹೆಚ್ಚಾಗುತ್ತಾ ಹೋದದ್ದು ಮಾತ್ರವಲ್ಲದೆ ಮಿತ್ರಸೈನಿಕರು ವಿಮಾನ ಸಹಾಯವಿಲ್ಲದೆ ಹಿಂದೆಸರಿಯಬೇಕಾಗಿ ಬಂದುದು ವಿಷಾದಕರ. ಜಾವಾದ ರಾಜಧಾನಿಯನ್ನು ಶತ್ರುಯೋಜಿತದಿಂದ ಪಾಂಡಾಂಗಿಲ ಒಟೀವಿಯದಿಂದ ಬಾಂಡೊಂಗಕ್ಕೆ ಸಾಗಿಸಲಾಗಿದ್ದು ಅಲ್ಲಿಯೂ ಜಪಾನರು ಸುತ್ತುಗಟ್ಟಿ ಉಪಟಳ ಕೊಡುತ್ತಿದ್ದುದರಿಂದ ಪರಿಸ್ಥಿತಿಯು ಶೋಚನೀಯವಾಯಿತು. ಜಾವಾದಲ್ಲಿ ಹೀಗೆ ಮಿತ್ರಪಕ್ಷದವರಿಗೆ ಅನೇಕ ಬಗೆಯ ಕಷ್ಟನಷ್ಟಗಳೇ ಒಂದೊದಗಿಬಿಟ್ಟವು. ಜಾವಾಕ್ಕೆ ಏಳು ಅಥವಾ ಹತ್ತು ಜಪಾನೀ ಸೈನ್ಯಗಳು ಬಂದಿದ್ದುವೆಂದು ಹೇಳಲಾಗುತ್ತದೆ. ಜಪಾನರು ಒಟ್ಟು ೧೦೦,೦೦೦ ಸೈನಿಕರನ್ನು ಕಳುಹಿಸಿದ್ದರೆಂದೂ, ಮಿತ್ರರ ಸೈನ್ಯ ೫೦,೦೦೦ಕ್ಕೆ ಏರಿರಲಿಲ್ಲವೆಂದೂ ತಿಳಿಯಲಾಗಿದೆ. “ಜಪಾನೀಯರು ಅಪ್ರತಿಮ ಸಾಹಸವನ್ನು ಜಾವಾದಲ್ಲಿ ತೋರಿಸಿದರು, ಜಾವಾ ಬಂದರುಗಳ ಸಹಾಯವಿಲ್ಲದೆ ಜಪಾನೀಯರು ಒಂದೇ ಸವನೆ ತಮ್ಮ ಸೈನಿಕರನ್ನು ಅಲ್ಲಿ ತಂದಿಳಿಸಿದರು, ಕೆಲವು ಅನುಕೂಲಗಳೂ ಅವರಿಗೆ ಜಾವಾದಲ್ಲಿ ದೊರಕಿದುವು ಹೀಗೆಂದು ಜಪಾನರ ವಿಜಯದ ಕಾರಣವನ್ನು ತಿಳಿಸುತ್ತಾ ‘ಡೈಲಿ ಎಕ್ಸ್‌ಪ್ರೆಸ್’ ಪತ್ರಿಕೆಯ ಮಿಲಿಟರಿ ಸುದ್ದಿಗಾರನು ಬರೆಯುತ್ತಾನೆ. ಜಾವಾದಲ್ಲಿ ಜಪಾನರ ದಾಳಿಯನ್ನು ತಡೆಯಲು ಮಿತ್ರಪಕ್ಷದಲ್ಲಿ ವಿಮಾನ ಹಾಗೂ ನೌಕಾಸಾಧನಗಳು ಸಾಕಷ್ಟಿರಲಿಲ್ಲವೆಂದೂ, ಜಪಾನೀ ಸೈನಿಕರು ಯುರೋಪಿಯನ್ ಸೈನಿಕರಿಗಿಂತ ಕಡಿಮೆ ಆಹಾರದಲ್ಲಿ ಜೀವಿಸಬಲ್ಲವರೂ ಒಳ್ಳೆಯ ಕುಶಲರೂ ಆಗಿರುವುದರಿಂದ ಅವರು ಹೀಗೆ ಮುಂದೊತ್ತಿ ಬಂದರೆಂದೂ ಅವನು ಅಭಿಪ್ರಾಯಪಡುತ್ತಾನೆ.

ಜಾವಾ ೬೦೦ ಮೈಲುಗಳಷ್ಟು ಉದ್ದ ಹಾಗೂ ೫೦-೬೦ ಮೈಲುಗಳಷ್ಟು ಅಗಲವಿರುವ ಭೂಪ್ರದೇಶವಾಗಿದ್ದು ಈಸ್ಟ್ ಇಂಡೀಸ ದ್ವೀಪಗಳಲ್ಲಿ ಅತ್ಯಂತ ಫಲವತ್ತಾದುದು. ಡಚ್ಚರೂ ಅಮೆರಿಕನರೂ, ಆಸ್ಟ್ರೇಲಿಯನರೂ, ಬ್ರಿಟಿಷ್ ಸಾಮ್ರಾಜ್ಯದವರೂ ಅಲ್ಲಿ ಪ್ರಬಲವಾದ ಸೈನ್ಯವನ್ನಿಟ್ಟಿದ್ದರು. ಜಾವಾ ಹೋದರೆ ಆಸ್ಟ್ರೇಲಿಯಕ್ಕೆ ಪೆಸಿಫಿಕ್ಕಿನಲ್ಲಿ ಗತಿಯಿಲ್ಲದಂತೆ ಆಗುತ್ತದೆ. ಮೆಕ್‌ಸಾರ್ ಜಲಸಂಧಿಯಲ್ಲಿ ನಡೆದಂತಹ ಭಯಂಕರ ನೌಕಾಕದನವು ಜಾವಾ ಸಮುದ್ರದಲ್ಲಿಯೂ ನಡೆಯಿತು. ನೌಕಾ ನಷ್ಟವನ್ನು ಗಣಿಸದೆ ಜಪಾನರು ಜಾವಾದಲ್ಲಿ ಸೈನಿಕರನ್ನು ತಂದಿಳಿಸಿದರು. ೬೦೦ ಮೈಲುಗಳ ಉದ್ದಕ್ಕೂ ಅಗಲಕ್ಕೂ ಯುದ್ಧ ನಡೆಯಿತು. ಸಿಂಗಾಪುರವು ಹೋದಮೇಲೆ ಜಾವಾದಲ್ಲಿ ಅತ್ಯುಗ್ರ ಕಾಳಗವಾಯಿತು. ಅಲ್ಲಿ ಹೀಗೆ ಪರಿಸ್ಥಿತಿ ವಿಷಮವಾಗಲು, ಅಲ್ಲಿನ ಸೇನಾಪತಿಗಳಾಗಿದ್ದ ವೇವೆಲ್ಲರನ್ನು ಹಿಂದೂಸ್ಥಾನದ ಸೇನಾಪತಿಯನ್ನಾಗಿ ನೇಮಿಸಿ ಇಲ್ಲಿಗೆ ಈಗ ಕಳುಹಿಸಿಕೊಟ್ಟಿದ್ದಾರೆ!

ಈಗ ಬರ್ಮಾ ಯುದ್ಧದ ವಿಚಾರ. ಬರ್ಮಾದಲ್ಲಿ ಸಿಟಾಂಗ್ ನದಿಯನ್ನು ದಾಟಿ ಮುಂದೆ ಬಂದ ಜಪಾನೀಯರು ಪೆಗೂ ಹತ್ತಿರದ ವರೆಗೆ ಬಂದು ಅಲ್ಲಿ ನಿರತಿದ್ದರೆ. ಅಲ್ಲಿನ ಪರಿಸ್ಥಿತಿ ವಿಚಾರದಲ್ಲಿ ಇತ್ತೀಚೆಗೆ ಯಾವುದೊಂದು ಸ್ಪಷ್ಟವಾದ ಸುದ್ದಿಯೂ ಬರುವುದಿಲ್ಲವಾಗಿ ಹಲವರು ನಿರಾಶರಾಗಿದ್ದಾರೆ. ಅಂತೂ ಬರ್ಮಾದಲ್ಲಿ ಜಪಾನರು ಮುಂದೊತ್ತಿರುವುದರಿಂದ, ಕೊನೆಯ ನದೀ ರಕ್ಷಣೆಯೆನಿಸಿದ ಸಿಟಾಂಗೂ ಜಪಾನರ ಕೈವಶವಾಗಿರುವುದರಿಂದ, ಕೆಲವು ಮುಖ್ಯ ರಸ್ತೆಗಳನ್ನು ಅವರು ಕೈವಶ ಮಾಡಿಕೊಂಡಿರುವುದರಿಂದ, ಬರ್ಮಾರಸ್ತೆಯನ್ನೂ ಧ್ವಂಸಮಾಡುತ್ತಿರುವುದರಿಂದ ರಂಗೂನಿಗೂ, ವಿಪತ್ತು ಸನ್ನಿಹಿತವಾಗಿದೆಯೆಂದೂ ಬರ್ಮಾದ ಅವಸ್ಥೆ ವಿಷಮವಿರುವುದೆಂದೂ ತಿಳಿಯಲಾಗಿದೆ. ಬರ್ಮಾರಸ್ತೆ ಕತ್ತರಿಸಲ್ಪಟ್ಟಿತು ಎಂಬೀ ಸುದ್ದಿ ಕೇಳಿದರೆ ಜಪಾನರು ಮಾಡಿದ ಉಗ್ರ ಹೋರಾಟದ ಅರ್ಥವಾಗದಿರದು. ನಾವು ಕಳೆದ ಸಲ ತಿಳಿಸಿದಂತೆ, ಬರ್ಮಾರಸ್ತೆಯನ್ನು ಮುಚ್ಚಿ ಚೀನದ ಶಕ್ತಿ ಕುಗ್ಗಿಸಬೇಕೆಂಬುದೇ ಜಪಾನರ ಬರ್ಮಾಯುದ್ಧದ ಮಹತ್ತ್ವದೊಂದು ಉದ್ದೇಶವಾಗಿದ್ದು ಅದು ಈಗ ಕೈಗೂಡಿತೆಂದು ಜಪಾನರು ಹಿಗ್ಗಿಕೊಳ್ಳಬಹುದಾಗಿದೆ.

ಜಾವಾ ಬರ್ಮಾಗಳನ್ನು ಮುಗಿಸಿದ ಬಳಿಕ ಜಪಾನರು ಎತ್ತ ಸಾಗುವರು? ಈ ಪ್ರಶ್ನೆ ಈಗ ಎದ್ದುನಿಂತಿದೆ! ಇದಕ್ಕೆ ಉತ್ತರ ಕೊಡುವುದೇನೂ ಅಷ್ಟು ಸುಲಭವಲ್ಲ. ಅದರೆ ಆಸ್ಟ್ರೇಲಿಯಾ ಕಡೆಗೆ ತೆರಳಬಹುದೆಂಬ ಕುರಿತು ದಟ್ಟ ಸುದ್ದಿಯುಂಟು. ಇದುವರೆಗೆ ವಿಮಾನಗಳ ಹಾರಾಟದಿಂದ ಆಸ್ಟ್ರೇಲಿಯವನ್ನು ಜಪಾನರು ಬೆದರಿಸಿ ನೋಡಿದ್ದಾರೆ. ಕೇವಲ ಬೆದರಿಕೆಗಂಜಿ ಆಸ್ಟ್ರೇಲಿಯವೇನೂ ಜಪಾನರಿಗೆ ಬಗ್ಗುವಂತಿಲ್ಲ. ಬರ್ಮಾದ ರಸ್ತೆಯನ್ನು ಮುಚ್ಚಿ ಚೀನಕ್ಕೂ ಹೆಚ್ಚು ಹೆಚ್ಚು ಉಪಟಳ ಕೊಡಬಹುದು. ಆಸ್ಟ್ರೇಲಿಯನರಂತೂ ಈಗಾಗಲೇ ಜಪಾನರ ಆಕ್ರಮಣವು ಆದಂತೆ ಸಿದ್ಧತೆ ಸನ್ನಾಹಗಳನ್ನು ಮಾಡತೊಡಗಿದ್ದಾರೆ. ಜಪಾನರು ಉತ್ತರ ತೀರ ಪ್ರದೇಶದಲ್ಲೂ ಹತ್ತಿರದ ಬಳಗಾಡಿನ ಮೇಲೂ ಇಷ್ಟರಲ್ಲೆ ವಿಮಾನಾಕ್ರಮಣಮಾಡಿದ್ದರೂ, ಆಸ್ಟ್ರೇಲಿಯನರ ಅಂಜಿಕೆಯೆಂದರೆ ಎಲ್ಲಿ ವೈರಿಗಳು ಪೂರ್ವತೀರದ ಮುಖ್ಯ ಬಂದರಗಳನ್ನು ಹಿಡಿದು ಅಮೆರಿಕದ ಸಹಾಯ ಒದದಂತೆ ಮಾಡಿಬಿಡುತ್ತಾರೋ ಎಂದು. ಅದಕ್ಕೆ ಸರಿಯಾಗಿ ಸ್ಯಾಗಿನಿ, ಬಿಸ್ಮಾರ್ಕ್, ಸಾಲಮನ್‌ಗಳ ಕಡೆಗೆ ಜಪಾನರ ಭೀತಿ ಹೆಚ್ಚಾಗುತ್ತಿದೆ. ಆದರೂ ಆಸ್ಟ್ರೇಲಿಯವು ಸಿಂಗಾಪುರ, ಜಾವಾ, ಸುಮಾತ್ರಾ, ಬರ್ಮಾಗಳಲ್ಲಿ ಜಪಾನರು ಮಾಡಿದ ಸಾಹಸಗಳನ್ನು ನೋಡುತ್ತಾ ಇದ್ದು ಜಪಾನರ ಶಕ್ತಿ ಕುಶಲತೆಗಳನ್ನೆಲ್ಲಾ ಅರಿತುಕೊಂಡು, ಅದಕ್ಕೆ ತಕ್ಕ ಸಿದ್ಧತೆಗಳನ್ನೀಗ ಮಾಡಿಕೊಂಡಿದೆಯೆಂದು ಹೇಳಬಹುದು. ಮಿತ್ರರಾಷ್ಟ್ರಗಳು ಆಸ್ಟ್ರೇಲಿಯಕ್ಕಾದರೂ, ಸಾಧ್ಯವಾದ ಎಲ್ಲಾ ಬೆಂಬಲಗಳನ್ನು ಕೊಟ್ಟು ಜಪಾನನ್ನು ತಡೆಗಟ್ಟಬೇಕೆಂದು ಹಾತೊರೆಯಬಾರದೇ ಎಂದು ಹಲವರು ಉದ್ಗಾರ ತೆಗೆಯುತ್ತಾರೆ.

ರಶ್ಯ ಮತ್ತು ಲಿಬಿಯಗಳಲ್ಲಿ ಆಗುತ್ತಿರುವ ಯುದ್ಧದ ಸುದ್ದಿಯೇನು? ರಶ್ಯದಲ್ಲಿ ಸೋವಿಯೆಟ್ ಸೈನ್ಯಗಳು ದಿನದಿಂದ ದಿನಕ್ಕೆ ಪ್ರಬಲವಾಗಿ ಶತ್ರುವನ್ನು ಬಂಧಿಸುತ್ತಿವೆ. ಲಿಬಿಯದಲ್ಲಿ ಈಗ ಅಷ್ಟೊಂದು ಜೋರಿನ ಯುದ್ಧ ನಡೆಯುತ್ತಲಿಲ್ಲ. ಇಂದಿನೀ ಶಾಂತತೆ ಬರುವ ಪ್ರಚಂಡ ಬಿರುಗಾಳಿಯ ಪೂರ್ವ ಚಿಹ್ನೆಯೋ ನೋಡಬೇಕು. ಹಿಟ್ಲರನು ತನ್ನ ವಿಜಯದ ಸಲುವಾಗಿ ಬರುವ ವಸಂತಕಾಲದಲ್ಲಿ ಒಂದು ಉಗ್ರ ಆಕ್ರಮಣ ಕಾರ್ಯವನ್ನು ಆರಂಭಿಸಬಹುದೆಂದು ಎಲ್ಲರೂ ಎಲ್ಲಾ ಕಡೆಯಿಂದಲೂ ನಿರೀಕ್ಷಿಸುತ್ತಿದ್ದಾರಷ್ಟೆ! ಹಿಟ್ಲರನು ವಸಂತಕಾಲದ ಆಕ್ರಮಣವು ರಶ್ಯ ಮತ್ತು ಲಿಬಿಯಗಳ ಮೂಲಕ ಪ್ರಾರಂಭವಾಗಿ, ಇಜಿಪ್ಟ್ ಮತ್ತು ಸುವೇಜ್‌ಗಳನ್ನು ಪ್ರವೇಶಿಸಿ, ಇರಾಕ್ ಇರಾನ್‌ಗಳಿಗೂ ಹಬ್ಬಿ ಅಮೇಲೆ ಹಿಂದೂಸ್ಥಾನಕ್ಕೂ ಕಾಲಿಡಬಹುದೆಂದೂ ಈ ಸಂದರ್ಭದಲ್ಲಿ ಜಪಾನೂ ಬರ್ಮಾದೇಶವನ್ನು ಆಕ್ರಮಿಸಿಕೊಂಡು ಅಲ್ಲಿಂದ ಹಿಂದೀ ಸಾಗರವನ್ನು ನುಗ್ಗಿ, ಪರ್ಶಿಯನ್ ಆಖಾತದವರೆಗೆ ಬಂದು ಜರ್ಮನಿಗೆ ಸಹಾಯಮಾಡಬಹುದೆಂದೂ ಕೆಲವು ಮಿಲಿಟರಿ ತಜ್ಞರ ಅಭಿಪ್ರಾಯವಾಗಿದೆ. ಆದರೆ ಈ ಯೋಜನೆಯು ಎಂದು ಪ್ರಾರಂಭವಾಗುವುದು ಎಂಬೀ ವಿಚಾರವು ಈಗೇನೂ ಗೊತ್ತಾಗುವುದಿಲ್ಲ.

ಹಾಗಾಗಿ ರಶ್ಯದ ಮೇಲೆ ಮರಳಿ ಘೋರ ಗಂಡಾಂತರವೊಂದು ಕಾದಿದೆ, ಇದನ್ನು ಮೊನ್ನೆ ಮೊನ್ನೆ ಸ್ಟಾಲಿನರೇ ಹೇಳಿದರು. ಇದರಿಂದಾಗಿ, ಮಿತ್ರಪಕ್ಷದವರು ಹಿಟ್ಲರನನ್ನು ಮುರಿದಿಕ್ಕಲು ಬೇರೊಂದು ಯುದ್ಧಕ್ಷೇತ್ರವನ್ನು ತೆರಯಬೇಕೆಂದೂ ಬಿನ್ನಹಮಾಡಿದ್ದರು. ಲಿಬಿಯ ಯುದ್ಧವು ಪ್ರಾರಂಭವಾದಾಗ ಅದನ್ನು ದ್ವಿತೀಯ ರಣಕ್ಷೇತ್ರವೆಂದು ಹಲವರು ಹೇಳಿದ್ದರು, ಆದರೆ ಅಲ್ಲಿನ ಪರಿಸ್ಥಿತಿ ನೋಡುವಾಗ ಅಷ್ಟೇನೂ ಭೀಕರವಾದ ಹೊಡೆತವು ಹಿಟ್ಲರನಿಗೆ ಅಲ್ಲಿ ಬಿದ್ದಂತಿಲ್ಲ. ಹಾಗಾಗಿ ಇಂದಾದರೂ ಮಿತ್ರಪಕ್ಷದವರು ಬೇರೊಂದು ರಣಕ್ಷೇತ್ರವನ್ನು ತೆರೆವ ಧೈರ್ಯಮಾಡಿದ್ದರೆ ಒಳ್ಳೆಯದಿತ್ತು. ರಶ್ಯವು ಏಕಾಂಗಿಯಾಗಿ ಹೋರಾಡಿ ಹಿಟ್ಲರನನ್ನು ಸೋಲಿಸುವಲ್ಲಿ ಬಹಳ ಸೋತು ಕಂಗಾಲಾಗುವುದು, ರಶ್ಯವೂ ಈ ಯುದ್ಧದಲ್ಲಿ ಒಂದು ಪಕ್ಷ ಸೋತು ಹೋದರೆ—ಸೋತುಹೋಗುವ ಸಂಭವವೇನೂ ಇಲ್ಲ—ಆದರೂ ಹಾಗಾಗಿಬಿಟ್ಟರೆ ಮತ್ತೆ ಪಶ್ಚಾತ್ತಾಪಪಟ್ಟು ಪ್ರಯೋಜನವಿಲ್ಲ.

ಇನ್ನು ಹಿಂದೂದೇಶದ ಕುರಿತು ಕೆಲವು ಮಾತುಗಳು. ಮಹಾಶಯರಾದ ಚರ್ಚಿಲರು ಈ ವಿಷಯವಾಗಿ ಏನೋ ಹೇಳುತ್ತಾರಂತೆ! ‘ಬೇಗನೇ ಹೇಳಲಿದ್ದಾರೆ, ಹೇಳಲಿರುವುದೆಲ್ಲಾ ನಿರ್ಣಯವಾಗಿದೆ, ಹಿಂದೂದೇಶಕ್ಕೆ ಮಹತ್ತ್ವದ ಮಾತುಗಳನ್ನು ಮಹಾ ಪ್ರಧಾನರು ಹೇಳುತ್ತಾರೆ’ ಹೀಗೆಂದು ಇಂಗ್ಲಿಷ್ ಪತ್ರಿಕೆಗಳು ಈಗ ಕೆಲವಾರಗಳಿಂದ ಕನಸಿನ ಕೊಪ್ಪರಿಗೆ ತೋರಿಸುತ್ತಿವೆ. ಕೆಲವು ಸಂಶಯಾತ್ಮರು ಏನೋ ಇರಬೇಕೆಂದು ಸಂಶಯದಲ್ಲೇ ಮುಳುಗಿದ್ದಾರೆ. ಕೆಲವರು ಆಶಾವಾದಿಗಳು ನಮಗ ಸ್ವಾತಂತ್ರ್ಯವನ್ನೇ ಕೊಟ್ಟುಬಿಡುತ್ತಾರೆಂದು ಬಯಸುತ್ತಾರೆ. ಕೆಲವು ಉಗ್ರಬುದ್ಧಿಯವರು ಚರ್ಚಿಲರು ಪರ್ವತ ಪ್ರಸವ ಮಾಡುತ್ತಾರೆ ವಿನೋದಿಸಿದ್ದಾರೆ. [ಪರ್ವತ … ಒಸುರು … ಹಲವರು ಒಗಟು ಪವಕ್ತತ್ವ ಮರಿ ಪರ್ವತ ಹೆಂದ್ದು ಹೆರುತ್ತದೆಂದ, ಆಂಗ್ಲ ಮಹತ್ವ ಮಾಡುದೆಂದು … ಕಡಾ ನೋಡಿದರೆ, ಪರ್ವತದ ಹೆಟ್ಟೆಯಿಂದ ಒಂದು ಸಣ್ಣ ಇಲಿ ಹೊರಟುಬಂತಂತೆ! ಇದು ಪರ್ವತಪ್ರಸವ ದೃಷ್ಟಾಂತ] ಹಾಗೂ ಸಾಮಂತ ಸ್ವರಾಜ್ಯ ‘…’ ಮೊದಲಾದ ಮಾತುಗಳು ಇಂದು ನಮ್ಮ ವಾತಾವರಣದಲ್ಲೆಲ್ಲಾ ಹರಡಿಬಿಟ್ಟಿದೆ! ಸರ್ ಕ್ರಿಪ್ಸರು ಕೂಡಾ ಬೇಗನೇ ಸ್ಪಷ್ಟೀಕರಿಸಲಾಗುವುದೆಂದು ಭರವಸೆ ಕೊಟ್ಟಿದ್ದಾರೆ. ಅಂತೂ ಹಿಂದೂಸ್ಥಾನದ ವಿಚಾರ ಪಾರ್ಲಿಮೆಂಟಿನಲ್ಲಿ ಇತ್ತೀಚೆಗೆ ನಡೆದ ಚರ್ಚೆಯಾದ ಪರಿಣಾಮವಾಗಿ ಚರ್ಚಿಲರು ಯೋಜನೆಗಳನ್ನಾಗಿಸುವರೆಂದು ನಾವು ತಿಳಿಯಬಹುದು. ಯಾವ ಯೋಜನೆ ನಿಜಾರ್ಥವಾದದ್ದೆಂದು ಹೇಳಲು ನಾವು ಸಮರ್ಥರಲ್ಲ. ಜಪಾನರು ಆಸ್ಟ್ರೇಲಿಯಕ್ಕೆ ಹೋಗುತ್ತಾರೋ, ಹಿಂದೂದೇಶಕ್ಕೆ ಬರುತ್ತಾರೋ ಇದೂ ನಮಗೆ ನಿಶ್ಚಿತ ತಿಳಿಯಲೊಲ್ಲದು.

In the Court of the District munsif of Mangalore

R E P 752/41

(S C 948/1937)

Between

Moolky Venkataya Prabhu— *Petitioner*

and

Hawabi— *Respondent*

To

The Respondent

Hawabi, widow of Abdulla Saheb residing in Kodiyalbail village, Mangalore Town

Take notice that the above execution petition filed by the petitioner for sale of your immoveable properties is posted to 24-3-1942 and in default of your appearance before the court on the said date in person or by pleader the execution will be proceeded with exparte.

(By order of the court)

Mangalore, 6-3-1942 — B. Srinivas Pai, Vakil for Petitioner.

ಸ್ವದೇಶಾಭಿಮಾನಿ

ತಾರೀಕು 13—3—1942

ವಿಜಯಾಸ್ತ್ರ

'ಕಾಂಗ್ರೆಸ್ ಓಫ್ ನೇಶನಲ್ ಯುನಿಟಿ ಫೋರ್ ಎಲೈಡ್ ವಿಕ್ಟರಿ' ಎಂಬೀ ಸಭೆಯಲ್ಲಿ ಭಾಷಣ ಕೊಡುತ್ತಾ, ಆಸ್ಟ್ರೇಲಿಯನ್ ಟ್ರೇಡ್ ಯೂನಿಯನಿನ ಒಬ್ಬ ಪ್ರಸಿದ್ಧ ಅಧಿಕಾರಿಗಳಾದ ಟಿ. ರೈಟ್ ಎಂಬವರು, ಜಪಾನನ್ನು ಗೆಲ್ಲಲು ಮಿತ್ರ ಪಕ್ಷದವರು ಉಪಯೋಗಿಸತಕ್ಕ ಮಹತ್ವದ ವಿಜಯಾಸ್ತ್ರವೆಂದರೆ ಭಾರತೀಯರಿಗೆ ಮತ್ತು ಜಾವಾ ದೇಶದವರಿಗೆ ಸ್ವಾತಂತ್ರ್ಯ ಕೊಡುವುದು ಎಂದು ಹೇಳಿದರು. ರಾಜಾಜಿಯವರೂ, ಇತ್ತೀಚೆಗೆ ದೇಶದ ಉದ್ದಗಲದಲ್ಲಿ ಇದೇ ಅಭಿಪ್ರಾಯವನ್ನು ವಿವರಿಸುತ್ತಾ ಬಂದಿದ್ದಾರೆ.

ಇಂದಿನ ಘೋರ ಯುದ್ಧವನ್ನು ಗೆಲ್ಲಲು ಧೀರ ನಿರ್ಧಾರಬೇಕು. ಆಕ್ರಮಣ ಮಾಡುವ ರಾಷ್ಟ್ರವು ಎಷ್ಟೊಂದು ಶಸ್ತ್ರ ಸಜ್ಜಿತವಿದ್ದರೂ, ಭೀಕರವಿದ್ದರೂ, ಜನತೆಯು ದೇಶರಕ್ಷಣೆಯಲ್ಲಿ ಸಂಪೂರ್ಣ ಆಸಕ್ತರಾಗಿದ್ದರೆ, ಆಕ್ರಮಣವನ್ನು ಎಷ್ಟು ಯಶಸ್ವಿಯಾಗಿ ಎದುರಿಸಬಹುದು ಎಂಬುದನ್ನು ಚೀನಾ ಮತ್ತು ರಷ್ಯಗಳು ಜಗತ್ತಿಗೆ ಪ್ರತ್ಯಕ್ಷವಾಗಿ ಪ್ರದರ್ಶಿಸಿವೆ. ದೇಶದ ಜನತೆಯು ಆ ತರದಲ್ಲಿ ಸಹಕರಿಸಿ ಹೋರಾಡಬೇಕಾದರೆ ರಾಷ್ಟ್ರದ ನಿಜವಾದ ಮುಖಂಡರು ತಮ್ಮ ಪ್ರತಿನಿಧಿಗಳಾಗಿ ರಾಷ್ಟ್ರದ ಅಧಿಕಾರದಲ್ಲಿರಬೇಕು. ಅಂತಹ ವಾತಾವರಣದಲ್ಲಿ ಮಾತ್ರ, ಇಡೀ ಜನತೆಯನ್ನು ತಮ್ಮ ದೇಶದ ಸಲುವಾಗಿ ಹೋರಾಡುವ ಹುರುಪಿನಿಂದ ಕೆರಳಿಸಿಬಿಡಬಹುದಾಗಿದೆ.

ಗವರ್ನರರುಗಳಿಂದ ತೊಡಗಿ ನೌಕರರೆಲ್ಲರನ್ನೂ ಒಟ್ಟುಗೂಡಿಸಿ ಮಾಡಿಸಿದ ಭಾಷಣ ಪ್ರಚಾರ ಕಾರ್ಯಗಳೆಲ್ಲದಕ್ಕಿಂತಲೂ ಭಾರತೀಯರನ್ನು ನೆಹರೂವಿನ ಒಂದು ವೀರವಾಣಿ ಹೆಚ್ಚು ಹುರಿಗೊಳಿಸಿಬಿಡುವುದು! ವೈಸರಾಯರ ಎಲ್ಲಾ ಅಧಿಕಾರ ಪ್ರಭಾವಕ್ಕಿಂತಲೂ ಗಾಂಧೀಜಿಯ ಒಂದು ಆಶೀರ್ವಾದ ಜನತೆಯ ರಕ್ತವನ್ನು ಕುದಿಸಿಬಿಡಬಹುದು! ಭಾರತದ ಸಲುವಾಗಿ ಭಾರತೀಯರು ಹೋರಾಡಬೇಕೆಂಬ ಬುದ್ಧಿ ಬರಬೇಕಾದರೆ ಜನತೆ ತಮ್ಮ ನಿಜವಾದ ಮುಂದಾಳುಗಳಿಂದ ಸ್ಫೂರ್ತಿ ಪಡೆಯಬೇಕು!

ರೈಟರರ ಈ ಉಪದೇಶ ಬ್ರಿಟನಿಗೆ ಕಿವಿಗೆ ಕೇಳಿಸುವುದೆ? ಭಾರತದ ವಿಚಾರ ಯಾವುದೋ ಮಹತ್ವದ ಮಾತುಗಳನ್ನು ಹೇಳಲಿರುವರೆಂದು ಪ್ರಕಟಿತರಾಥ ಚರ್ಚಿಲರು ಈ ಮಾತುಗಳಲ್ಲಿರುವ ಸತ್ಯಾಂಶವನ್ನು ಗಮನಕ್ಕೆ ತೆಂದುಕೊಂಡಾರೆ? ಮಿತ್ರಪಕ್ಷದವರು, ಶತ್ರುಗಳನ್ನು ಜಯಿಸುವ ಸಲುವಾಗಿ, ತಮ್ಮ ಬತ್ತಳಿಕೆಯಲ್ಲಿ, 'ಭಾರತೀಯ ಸ್ವಾತಂತ್ರ್ಯ ದಾನ'ದ ವಿಜಯಾಸ್ತ್ರವನ್ನು ಇಟ್ಟುಕೊಳ್ಳಲು ಮರೆಯಬಹುದೆ?

'ಡೆಟೆನ್ಯುಗಳನ್ನು ಬಿಡುಗಡೆ ಮಾಡಿರಿ'

ಹೀಗೆಂದು 'ಪಂಜಾಬ್ ಸಿವಿಲ್ ಲಿಬರ್ಟೀಸ್ ಕಾನ್ಫರೆನ್ಸಿ'ನವರು ಮಾಡಿದ ವಿನಂತಿಗೆ ಸರಕಾರವು ತಕ್ಕ ಗಮನ ಕೊಡುವುದು ಎಂದು ನಾವು ಭಾವಿಸುತ್ತೇವೆ ರಾಜಕೀಯ ಭಿನ್ನಾಭಿಪ್ರಾಯದ ಸಲುವಾಗಿ, ಸಾರ್ವಜನಿಕ ವಿಚಾರಣೆಯಿಲ್ಲದೆ ಸ್ಥಾನ ಬದ್ಧರನ್ನಾಗಿ ಮಾಡಿ ಸೆರೆಮನೆಯೊಳಗಿಟ್ಟ ಅನೇಕ ಮಂದಿ ಮುಂದಾಳುಗಳನ್ನು ಸರಕಾರವು ಈಗ ಬಿಡುಗಡೆ ಮಾಡುವುದು ಅತ್ಯವಶ್ಯವೆಂದು ದೇಶ ಸರ್ವತ್ರ ಆಂದೋಲನವುಂಟಾಗಿರುವುದು ಕಾನ್ಫರೆನ್ಸಿನ ಅಧ್ಯಕ್ಷರಾದ ಶ್ರೀ ಜೋಶಿಯವರು ತಮ್ಮ ಅಧ್ಯಕ್ಷ ಭಾಷಣದಲ್ಲಿ, ಇಂದಿಗೂ ಭಾರತದಲ್ಲಿ ಸಾವಿರಾರು ಮಂದಿ ಡೆಟೆನ್ಯುಗಳು ಸೆರೆಯ ಮರೆಯಲ್ಲಿ ನರಳುತ್ತಿರುವರೆಂಬ ವಿಷಯವನ್ನು ವಿವರಿಸಿ ಹೇಳಿದರು.

ಪಂಡಿತ ಜವಾಹಿರಲಾಲರು, ಕಾನ್ಫರೆನ್ಸಿಗೆ ಕೊಟ್ಟ ಸಂದೇಶದಲ್ಲಿ ಹೇಳಿದಂತೆ, ಎಷ್ಟೋ ಮಂದಿಯನ್ನು ಡೆಟೆನ್ಯುಗಳಾಗಿ ಬಂಧಿಸಿದ ಕಾರಣವನ್ನು ಸಾರ್ವಜನಿಕರು ಊಹಿಸಿಕೊಳ್ಳುವುದೇ ಕಷ್ಟವಾಗಿದೆ ಕೆಲವು ಸಂದರ್ಭಗಳಲ್ಲಿ ಬಂಧಿಸಿದ ಕಾರಣವು ಇಂದಿಗೆ ಅವಶ್ಯಕವಿರುವುದಿಲ್ಲ. ಹಲವು ಮಂದಿ ತರುಣರನ್ನು ಕಮುನಿಸ್ಟರೆಂದು ಅನವಧಿ ಕಾಲದಿಂದ ಸೆರೆಯಲ್ಲಿ ಇಡಲಾಗಿದೆ, ಆದರೆ ರಷ್ಯವು ಯುದ್ಧದಲ್ಲಿ ಸೇರಿ, ಬ್ರಿಟನೂ ಅದಕ್ಕೆ ಸಹಾಯವನ್ನು ಕೊಡುತ್ತಾ ಬಂದ ಮೇಲಾದರೂ ಅಂತಹ ಕಾರಣದಿಂದ ಬಂಧಿಸಲ್ಪಟ್ಟವರನ್ನು ಬಿಡುಗಡೆಮಾಡಬಹುದಲ್ಲವೆ? ಇನ್ನೂ ಅಂಥವರನ್ನು ಬಂಧಿಸಿಡುವುದು ಅರ್ಥಶೂನ್ಯವಲ್ಲವೆ?

ಎಲ್ಲದಕ್ಕಿಂತಲೂ ಮೇಲಾಗಿ, ದೇಶವು ಇಂದು ಒಂದು ವಿಷಮಪರಿಸ್ಥಿತಿಯನ್ನು ಎದುರಿಸಬೇಕಾದ ಅಸಾಧಾರಣ ಸಂಭವವು ಬಂದೊದಗಿದೆ ಇಂತಹ ಸಂದರ್ಭದಲ್ಲಿ ಎಲ್ಲಾ ಪಂಗಡದವರ ಸಹಕಾರ ಸಹಾಯಗಳನ್ನು ಸರಕಾರವು ಪಡಕೊಳ್ಳಬೇಕಾದುದು ಅವಶ್ಯವಿದೆ. ಹಳೆ ಕಾಲದ ರಾಜನೀತಿಯನ್ನೇ ಇಂದಿಗೂ ಅನುಸರಿಸುವುದು ಪ್ರಮೋದಕರವೆನ್ನದೆ ನಿರ್ವಾಹವಿಲ್ಲ. ಜಪಾನು ಭಾರತದ ಬಾಗಿಲಿಗೆ ಬಂದಿರುವೀ ಸಂದರ್ಭದಲ್ಲಿ ಆಕ್ರಮಣಕಾರರನ್ನು ಯಶಸ್ವಿಯಾಗಿ ಎದುರಿಸಲು ಸರಕಾರವು ಡೆಟೆನ್ಯುಗಳನ್ನೂ ಬಿಡುಗಡೆ ಮಾಡಿ ದೇಶದ ಎಲ್ಲಾ ಜನರ ಎಲ್ಲಾ ರಾಜಕೀಯ ಪಂಗಡದವರ ಪೂರ್ಣ ಸಹಕಾರ ಸಹಾಯಗಳನ್ನು ಬೇಗನೇ ಪಡೆದುಕೊಳ್ಳಬೇಕು ಅಪರಾಧ ಮಾಡಿದವರನ್ನೂ, ಶಾಸನಬಂಗ ಮಾಡಿದವರನ್ನೂ ಸಾರ್ವಜನಿಕ ವಿಚಾರಣೆಗೆ ಗುರಿಪಡಿಸಿ, ಅವರಿಗೆ ಶಿಕ್ಷೆ ಕೊಡುವುದೇನೋ ಯೋಗ್ಯವಾಗಿದೆ ಆದರೆ, ಅಪರಾಧ ಮಾಡಿದ್ದೇನೆಂದು ಸ್ವತಃ ತಮಗೇ ಗೊತ್ತಿಲ್ಲದಂತಹ ಡೆಟೆನ್ಯುಗಳನ್ನು, ಅಂದು ಮಾಡಿದ ಅಪರಾಧವೇನೆಂದು ಸಾರ್ವಜನಿಕರಿಗೆ ಅರ್ಥವಾಗದಂತಹ ಡೆಟೆನ್ಯುಗಳನ್ನು ಇಂದು ಬಿಡುಗಡೆಮಾಡದೆ ಇದ್ದಲ್ಲಿ ಜನತಾ ಸಹಕಾರವನ್ನು ಪಡೆಯುವುದು ಅತ್ಯಂತ ವಿಷಮವಾಗಬಹುದು

ನೋಟಗಳು ....

"ನಾಳೆಯೇ ಬ್ರಿಟಿಷರು ನಿಮಗೆ ಸ್ವರಾಜ್ಯ ಕೊಟ್ಟರೆನ್ನಿ; ಆಗ ನೀವೇನು ಮಾಡುವಿರಿ? ಸ್ವರಾಜ್ಯ ತೆಕೊಳ್ಳುವಿರೋ ಅಥವಾ ಬೇಡವೆನ್ನುವಿರೋ?"

卐

ಈ ಪ್ರಶ್ನೆಯು ಯಾರಿಗೂ ಸ್ವಲ್ಪ ವಿಚಿತ್ರವಾಗಿ ತೋರಬಹುದು; ಏಕೆಂದರೆ ಈ ಕಾಲದಲ್ಲಿ, ಸ್ವಾತಂತ್ರ್ಯ ಬೇಡವೆನ್ನುವ ಪ್ರಾಣಿಯನ್ನು ಎಲ್ಲಿಯೂ ಕಂಡುಹುಡುಕುವುದು ಸಾಧ್ಯವಿಲ್ಲ!

卐

ಸ್ವಲ್ಪ ತಡೆಯಿರಿ! ಅಂಥಾ ಮಹಾಶಯರು ನಮ್ಮ ದೇಶದಲ್ಲಿಯೇ ಒಬ್ಬರಿದ್ದಾರೆ! ಸರ್ ಕೂರ್ಮ ರೆಡ್ಡಿ ಎಂಬವರೇ ಅವರು! ಹಿಂದೊಮ್ಮೆ ಮದ್ರಾಸಿನ ಹಂಗಾಮಿ ಗವರ್ನರರಾಗಿದ್ದವರು! ಇಂದು ಅಣ್ಣಾಮಲೆ ಯುನಿವರ್ಸಿಟಿಯ ವೈಸ್ ಛಾನ್ಸೆಲರಾಗಿದ್ದಾರೆ!

卐

'ಈಗ ನಮಗೆ ಸ್ವಾತಂತ್ರ್ಯ ಕೊಡುವುದರಿಂದ ಯುದ್ಧ ಪ್ರಯತ್ನಕ್ಕೆ ಏನೂ ಪ್ರಯೋಜನವಾಗಲಿಕ್ಕಿಲ್ಲ, ಏಕೆಂದರೆ ಈಗಾಗಲೇ ನಾವು ಸಾಧ್ಯವಿದ್ದಷ್ಟು ಸಹಾಯವನ್ನೆಲ್ಲಾ ಕೊಟ್ಟಿದ್ದೇವೆ. ಇದಕ್ಕಿಂತ ಹೆಚ್ಚಿಗೆ ನಮಗೇನು ಮಾಡಲೂ ಸಾಧ್ಯವಿಲ್ಲ' ಹೀಗೆಂದು ಸರ್ ಕೂರ್ಮರು ಹೇಳಿಬಿಟ್ಟರು 'ಕುಂಭಕೋಣ'ದಲ್ಲಿ!

卐

'ದೇಶಕ್ಕೆ ಸ್ವಾತಂತ್ರ್ಯ ಕೊಟ್ಟರೂ, ಕಾಂಗ್ರೆಸಿನವರು ಏನ್ನು ತಮೇನೂ ಮಾಡಲು ಶಕ್ತರಲ್ಲ' ಹೀಗೆಂದು ಎಚ್ಚರಿಸಿದ್ದಾರೆ ಸರ್ ರೆಡ್ಡಿ! ಚರ್ಚಿಲರಿಂದ ತೊಡಗಿ ವೈಸರಾಯರವರೆಯಾಗಿರುವವರೆಲ್ಲರೂ ಕಾಂಗ್ರೆಸಿನ ಕೇಳಿಕೆಯ ವಿಷಯ ಇಂದು ಚಡಪಡಿಸುತ್ತಿರುವುದನ್ನು ಕೂರ್ಮರು ಒಂದೇ ಮಾತಿನಲ್ಲಿ ತಲೆಕೆಳಗು ಮಾಡಿದ್ದಾರೆ!

卐

'ಸರ್ ಕೂರ್ಮರನ್ನು ಇನ್ನೊಮ್ಮೆ ಮದ್ರಾಸಿನ ಗವರ್ನರ್ ಸ್ಥಾನಕ್ಕೆ ನೇಮಿಸಿದರೆ ಆಗಬಹುದೆ? ಅವರೆ ಗವರ್ನರ್ ಸ್ಥಾನ ಬಿಟ್ಟು ಸಂಪೂರ್ಣ ಸ್ವಾತಂತ್ರ್ಯ ಕೊಟ್ಟರೂ ನಮ್ಮಿಂದೇನೂ ಮಾಡಲು ಸಾಧ್ಯವಿಲ್ಲವೆಂದು ಸರ್ ಕೂರ್ಮರೇ ಹೇಳಿಬಿಟ್ಟಿದ್ದಾರಲ್ಲಾ?

卐

'ನಮ್ಮಿಂದೇನೂ ಸಾಧ್ಯವಿಲ್ಲ' ಎಂದು ಸರ್ ಕೂರ್ಮರು ಹೇಳಿದರೆ, ಸರ್ ಕೂರ್ಮರಿಂದವರಿಂದ ಏನೂ ಆಗಲಿಕ್ಕಿಲ್ಲ ಎಂದಿಷ್ಟೇ ನಾವು ಅರ್ಥಮಾಡಿಕೊಳ್ಳಬಹುದು ಪಾಪ! ಸರ್ ಕೂರ್ಮರಿಂದ ಏನಾದೀತು?

卐

ಆದರೆ ಅವರಿಂದಲೂ ವಿದ್ಯಾರ್ಥಿಗಳು ಕಲಿತುಕೊಳ್ಳಬೇಕಾದ ಒಂದು ವಿಷಯವಿದೆಯೆಂದು ರಾಜಾಜಿ ಇತ್ತೀಚೆಗೆ ಹೇಳಿದರು, ರಾಜಕೀಯ ಭಿನ್ನಾಭಿಪ್ರಾಯವಿದ್ದವರನ್ನೂ ತಮ್ಮ ಮನೆಗೆ ಊಟಕ್ಕೆ ಆಹ್ವಾನಿಸಬೇಕೆಂಬುದೇ ಅವರಿಂದ ಕಲಿಯತಕ್ಕ ಪಾಠವಂತೆ! ಆ ದಿನ ರಾಜಾಜಿಯವರನ್ನು ಆಹ್ವಾನಿಸಿ ಸರ್ ಕೂರ್ಮರು ಒಂದು ಭಾರೀ ಭೋಜನಸತ್ಕಾರ ಏರ್ಪಡಿಸಿದ್ದರು!

ಕಫ, ಎದೆಬೇನೆ ಮತ್ತು ಇನ್‌ಫ್ಲುಯೆಂಜಗಳನ್ನು ದಿನನಿತ್ಯ ಪೆಪ್ಸ್ ತೆಗೆದುಕೊಂಡು ಗುಣಪಡಿಸಿರಿ



ನೀವು ಸುಲಭದಲ್ಲಿ ಶೀತಬಾಧೆಗೊಳಗಾಗುತ್ತೀರಾ? ಸಾಂಕ್ರಾಮಿಕ ಕಫ ತೊಂದರೆಗಳಿಂದ ನರಳುತ್ತೀರಾ? ಶ್ವಾಸಕೋಶಗಳನ್ನು ನಿರ್ಬಲಗೊಳಿಸುವ ಶೀತದಿಂದ ಸಂತಾಪಪಡುತ್ತೀರಾ? ಹಾಗಿದ್ದರೆ, ಅದ್ಭುತ ಗುಣಕಾರಿ ಶ್ವಾಸಯೋಗ್ಯ, ವಿಷಹಾರಿ ಪೆಪ್ಸ್ ಮಾತ್ರೆಗಳನ್ನು ತೆಗೆದುಕೊಂಡು ಗುಣಹೊಂದಿರಿ

ಬಾಯಿಗೆ ಹಾಕಿದ ಕೂಡಲೇ ಪೆಪ್ಸ್ ಕರಗಿ ಉತ್ತಮ ಔಷಧಿ ಸತ್ವವುಳ್ಳ ರಸವನ್ನು ಹೊರಗೆಡವುದು ಅದು ಶ್ವಾಸದೊಡನೆ ಶ್ವಾಸಕೋಶಕ್ಕೆ ಹೋಗಿ ಅಲ್ಲಿ ಹಾನಿಕಾರಕ ಕ್ರಿಮಿಗಳನ್ನು ಕೊಂದು, ಕಫ, ಶೀತ, ಮತ್ತು ಗಂಟಲು ನೋವು ಮೊದಲಾದವುಗಳನು ಪರಿಹರಿಸುವುದು ಆಸ್ತಾಮ ಇನ್‌ಫ್ಲುಯೆಂಜಾ ಇತ್ಯಾದಿಗಳಿಗೂ ಇದು ಅತ್ಯುತ್ತಮವಾಗಿದೆ ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ಪೆಪ್ಸ್ ಒಂದು ರೂಪಾಯಿ ಬೆಲೆಗೆ ದೊರಕುವುದು

ಏಜಂಟ್ಸ್,
ಮೆಸರ್ಸ್ ದಾಧಾ ಎಂಡ್ ಕೊ.,
ಪಾರ್ಕ್ ಟೌನ್ ಮದರಾಸು.

ಪೆಪ್ಸನ್ನು ಕೊಂಡುಕೊಳ್ಳಿರಿ.



PEPS

ವಿಷಹಾರಿ ಶ್ವಾಸಯೋಗ್ಯ ಮಾತ್ರೆಗಳು.

ಜಿನ್ನರಲ್ಲಿ ಗಾಂಧಿಜಿ ವಿನಂತಿಸಿಕೊಳ್ಳುತ್ತಾರೆ!

ಮುಸ್ಲಿಂ ಲೀಗು ಪತ್ರಿಕೆಗಳಲ್ಲಿ ಹಿಂದೂ ಧರ್ಮವನ್ನು ನಿಂದಿಸಬೇಡಿರೆಂದು!

'ಕ್ವಿದೇ ಆಜಾಮರಲ್ಲಿ ಒಂದು ವಿನಂತಿ' ಎಂಬೀ ಶಿರೋನಾಮದಿಂದ ಗಾಂಧಿಜಿ ಹರಿಜನದಲ್ಲಿ ಈ ಕೆಳಗಿನಂತೆ ಒಂದು ಲೇಖನ ಬರೆದಿರುವರು:

"ನಾನು ದಿನನಿತ್ಯವೂ, ಕ್ರಮಪ್ರಕಾರ, ಮುಸ್ಲಿಂ ಲೀಗಿನ ಸಲುವಾಗಿ ಪ್ರಚಾರ ಪಡಿಸಲ್ಪಡುವ ಇಂಗ್ಲಿಷು ಭಾಷೆಯ ಪತ್ರಿಕೆಗಳನ್ನು ಓದುತ್ತಿದ್ದೆ. ಮುಸ್ಲಿಂ ಲೀಗಿನ ಪ್ರಚಾರದಿಂದ ಮುಸ್ಲಿಮರ ಬುದ್ಧಿಯು ಎಷ್ಟರ ಮಟ್ಟಿಗೆ ಆಕರ್ಷಿತವಾಗಿದೆಯೆಂದು ತಿಳಕೊಳ್ಳುವ ಸಲುವಾಗಿ ನಾನವುಗಳನ್ನು ಓದುತ್ತಿದ್ದೆ. ಒಂದು ವಾರವೂ ದಾಟಲಿಲ್ಲ, ಆ ವಾರಪತ್ರಿಕೆಗಳಲ್ಲಿ ಕಾಂಗ್ರೆಸಿನ, ಕಾಂಗ್ರೆಸಿನವರ ಹಾಗೂ ಹಿಂದುಗಳ ಮೇಲೆ ಅಸತ್ಯವೂ ಅಬದ್ಧವೂ ಅಥ ಕೆಟ್ಟ ಪ್ರಚಾರ ಮಾಡಲಾಗಿದೆ. ಅಂತಹ ವಾರಪತ್ರಿಕೆಗಳೊಂದರಲ್ಲಿ ಹಿಂದುಮತದ ಕುರಿತು ಕೆಟ್ಟ ಮಾತುಗಳನ್ನು ಬರೆದುದರ ಸಲುವಾಗಿ ನಾನು ಈ ಲೇಖನ ಬರೆಯ ಬೇಕಾಯಿತು. ಆ ಲೇಖನದ ಒಂದಂಶ ಹೀಗಿದೆ:

"ಹಿಂದು ಮತವು ಭಾರತಕ್ಕೆ ಅತೀ ದೊಡ್ಡ ಒಂದು ಶಾಪ; ಹಿಂದು ಮತವು ಅಸಹಿಷ್ಣುತೆ ಮತ್ತು ಅಸಮಾನತೆಗಳ ಮೇಲೆ ಸ್ಥಾಪಿತವಾಗಿದೆ. ತಾನು ಒಬ್ಬ ಹಿಂದು ಎಂದು ಹೇಳಿಕೊಳ್ಳುವುದೆಂದರೆ, ತಾನೊಬ್ಬ ಪ್ರತಿಗಾಮಿ ಹಾಗೂ ಸಂಕೋಚ ದೃಷ್ಟಿಯವನು ಎಂದು ಒಪ್ಪಿಕೊಂಡಂತೆ. ಆದ್ದರಿಂದ, ವನ್ಯ ಪಶುಜೀವಿಗಳ ಧರ್ಮದಂತಿರುವ ಈ ಹಿಂದೂಧರ್ಮಕ್ಕೆ ಯಾವನೇ ಒಬ್ಬ ವಿದ್ಯಾವಂತ, ಸಂಸ್ಕೃತಿಯುಳ್ಳ, ಗೌರವವುಳ್ಳ ಆತ್ಮಸಾಕ್ಷಿಯುಳ್ಳ ಮನುಷ್ಯನೂ ಸೇರಲಿಕ್ಕಿಲ್ಲ. ಯಾಕೆಂದರೆ ಪಶುಕೃತ್ಯದ ತಳಹದಿಯಲ್ಲಿ ಈ ಧರ್ಮವು ನೆಲೆನಿಂತಿದೆ. ಆದುದರಿಂದ ಕೋಟಿಗಟ್ಟಲೆಯಷ್ಟು ಇರುವ ಈ ಧರ್ಮದ ಜನರ ಸ್ಥಿತಿಯನ್ನು ವಿವರಿಸಲು ಬೇರೆ ಯಾವುದೇ ಶಬ್ದವೂ ಯೋಗ್ಯವಾಗಿಲ್ಲ. ಅವರು ಉಳಿದ ಕೋಟಿಗಟ್ಟಲೆ ಮೂವರಷ್ಟು ಜನರ ಸೇವೆ ಮಾಡಲು ಮಾತ್ರ ಯೋಗ್ಯರಾಗಿರುವರು. ಆದ್ದರಿಂದ ವಿಜ್ಞಾನ ಶಾಲೆಯಲ್ಲಿರುವ ವಿದ್ಯಾರ್ಥಿಗಳಿಗೆ ಇಂತಹ ಕೆಟ್ಟ ಧರ್ಮವನ್ನು ಸಂಪೂರ್ಣ ನಿರ್ನಾಮಗೊಳಿಸಲು ಆವಶ್ಯವಿರುವ ವಿಷಮಯ ಬಾಂಬನ್ನು ನಿರ್ಮಿಸಬೇಕೆಂದು ಸೂಚಿಸದಿರಲಾರೆವು. ಏಕೆಂದರೆ ಹಿಂದೂ ಧರ್ಮವು ಭಾರತದ ಏಳಿಗೆಗೆ ಬಹಳ ದೊಡ್ಡ ಆತಂಕವಾಗಿದೆ."

ನಾನು ಉದ್ಧರಿಸಿದ ಈ ಮಾತು ಬೇರೆ ಪತ್ರಿಕೆಗಳಿಂದ ತೆಗೆದದ್ದು ಎಂದು ಯಾರೂ ಊಹಿಸಲಾರರೆಂದು ನಾನು ಭಾವಿಸುತ್ತೇನೆ. ಹಿಂದೂ ಮತವನ್ನು ತುಚ್ಛೀಕರಿಸುವುದನ್ನು ತಡೆಯಲು ಉದ್ಧರಿಸಿದ್ದಾಗಿದೆ. ಈ ಪತ್ರಿಕೆಯ ಸ್ಥಾಪಕರು ಸ್ವತಃ ಕ್ವಿದೇ ಆಜಾಮರೇ (ಜಿನ್ನರು). ಇದನ್ನು ಪ್ರಕಟಿಸುವುದು ಲೀಗಿನ ಗೌರವ ಕಾರ್ಯದರ್ಶಿ ನವಾಬ್ ಜಾದಾಲಿ ಖಾಯತ್ ಅಲಿಖಾನರು. ನಾನೀಗ ಎತ್ತಿ ತೋರಿಸಿದೀ ಲೇಖನವನ್ನು ಅವರು ನೋಡಲಿಲ್ಲವೋ ಎಂದು ನಾನು ಊಹಿಸುತ್ತೇನೆ.

ಪಾಕಿಸ್ಥಾನದ ಕೆಳಗೆ ಹಿಂದುಗಳ ಅವಸ್ಥೆಯೇನು? ಅವರು ಪಶು ಸಮಾನರೆಂದು ಬಲಾತ್ಕರಿಸಲ್ಪಡುವರೆ? ಈ ಪತ್ರಿಕೆಗಳನ್ನೋದಿದರೆ ಬೇರೆ ವಿಧವಾಗಿ ಊಹಿಸಲು ಸಾಧ್ಯವಿಲ್ಲ. ಈ ಪತ್ರಿಕೆಗಳು ವಹಿಸಿದ ತತ್ವವನ್ನು ನೋಡಿದರೆ ಎರಡು ಜಾತಿಗಳೊಳಗೆ ದ್ವೇಷವನ್ನು ಹುಟ್ಟಿಸುವಂತಿದೆ. ಕೊನೆಯ ನಿರ್ಧಾರವು ಮಾತುಕತೆ ವಿಚಾರಗಳಿಂದ ಆಗದೆ ಬಲಾತ್ಕಾರದಿಂದಲೇ ಆಗಬೇಕಾಗಿದ್ದರೆ ನಾನೀವಿಷಯ ಏನೂ ಹೇಳಲಾರೆ. ಆದರೆ ಕ್ವಿದೇ ಆಜಾಮರ ಭಾಷಣಗಳಿಂದ ನಾನು ತಿಳಿಯುವುದೇನೆಂದರೆ ಅವರಿಗೆ ಹಿಂದುಗಳಲ್ಲಿ ಏನೂ ಕಲಹವಿಲ್ಲವೆಂದು, ಅವರೊಡನೆ ಶಾಂತಿಯಿಂದಿರಬೇಕೆಂದು ಅವರು ಬಯಸುತ್ತಾರೆ. ಆದ್ದರಿಂದ ಮುಸ್ಲಿಂ ಲೀಗಿನ ತತ್ವ ಕಾರ್ಯಕ್ರಮಗಳನ್ನು ಪ್ರಚಾರ ಪಡಿಸುವ ಪತ್ರಿಕೆಗಳು ಮನುಷ್ಯರ ಹಾಗೂ ವಸ್ತುಗಳ ವಿಷಯ ಸ್ವಲ್ಪ ನ್ಯಾಯ ಬುದ್ಧಿಯನ್ನು ತೋರಿಸಬೇಕಾಗಿ ನಾನು ಭಿನ್ನವಿಸುತ್ತೇನೆ.

ಇಂದಿರಾ ವಿವಾಹದ ಕುರಿತು ಗಾಂಧಿಜಿ ಲೇಖನ.

ಜಮ್ನಾಲಾಲಜಿಯವರ ಗುಣಕಥನ

['ಹರಿಜನ'ದಿಂದ]

ಇಂದಿರಾ ನೆಹರು ವಿವಾಹ

ಹಿಂದು ಬ್ರಾಹ್ಮಣ ಹುಡುಗಿ, ಇಂದಿರಾ ನೆಹರು ಪಾರ್ಸಿ ಯುವಕನನ್ನು ಮದುವೆಯಾಗುವ ವಿಷಯ ಕೆಲವರು ಗಾಂಧಿಜಿಯವರಿಗೆ ಸಿಟ್ಟಿನ, ದೂಷಣೆಯ ಪತ್ರ ಬರೆದಿರುವರಂತೆ! ಅದಕ್ಕೆ ಉತ್ತರ ಕೊಡುತ್ತಾ ಗಾಂಧಿಜಿ ಹೀಗೆ ಹೇಳುತ್ತಾರೆ.

ನನಗೆ ಅನೇಕ ಜನರು ಇಂದಿರಾ ಪಾರ್ಸಿ ಜಾತಿಯ ಯುವಕನನ್ನು ಮದುವೆಯಾಗುವ ವಿಷಯ ನಿಂದೆ ಮಾಡಿ, ದೂಷಿಸಿ ಪತ್ರ ಬರೆದಿದ್ದಾರೆ; ಫಿರೋಜ ಗಾಂಧಿಯ ಮೇಲೆ ವ್ಯಕ್ತಿಶಃ ಯಾರಿಗೂ ಆಕ್ಷೇಪವಿಲ್ಲ. ಅವನು ಒಬ್ಬ ಪಾರ್ಸಿಯಾಗಿರುವುದೇ ಅವರ ಅಭಿಪ್ರಾಯದಂತೆ ಆತನ ಅಪರಾಧ. ನಾನು ಹಿಂದಿನಂತೆ ಇಂದೂ ಕೂಡಾ ಮದುವೆಗಾಗಿಯಾವುದೇ ಪಕ್ಷವಾದರೂ ಧರ್ಮ ಬದಲಾವಣೆ ಮಾಡುವ ವಿಷಯದಲ್ಲಿ ವಿರೋಧಿಯಿದ್ದೇನೆ. ಧರ್ಮವೆಂಬುದು ಇಷ್ಟ ಬಂದಂತೆ ಬದಲಾಯಿಸುವಂಥಾದ್ದಲ್ಲ, ಈ ಮದುವೆ ವಿಷಯದಲ್ಲಿ ಧರ್ಮ ಬದಲಾವಣೆಯ ಪ್ರಶ್ನೆಯೇ ಇಲ್ಲ. ಹಲವು ವರ್ಷಗಳಿಂದ 'ಫಿರೋಜ ಗಾಂಧಿ ನೆಹರು ಕುಟುಂಬಕ್ಕೆ ಆಪ್ತನಾಗಿದ್ದನು. ಅಸೌಖ್ಯ ಬಿದ್ದಿದ್ದಾಗ ಆತನು ಕಮಲಾ ನೆಹರುವನ್ನು ಆರೈಕೆ ಮಾಡಿದ್ದನು. ಆಕೆಗೆ ಆತನು ಒಬ್ಬ ಮಗನಂತೆ ಇದ್ದನು. ಇಂದಿರಾ ಯೂರೋಪಿನಲ್ಲಿ ಅಸೌಖ್ಯ ಬಿದ್ದಿದ್ದಾಗ ಆತನು ಆಕೆಗೆ ಬಹಳ ಸಹಾಯ ಮಾಡಿದ್ದನು. ಅವರ ಗೆಳೆತನವು ಪೂರ್ಣ ಗೌರವಕರವಾದುದು. ಅದೇ ಮುಂದೆ ಅನ್ಯೋನ್ಯ ಅನುರಾಗವಾಗಿ ಫಲಿಸಿತು. ಆದರೆ ಎರಡು ಪಕ್ಷದವರೂ ಜವಾಹರಲಾಲರ ಒಪ್ಪಿಗೆ ಆಶೀರ್ವಾದಗಳ ವಿನಾ ಮದುವೆಯಾಗಲು ಬಯಸಲಿಲ್ಲ. ಅವರ ಅನುರಾಗ ಭದ್ರಮೂಲವಾದುದೆಂದು ತಿಳಿದ ಬಳಿಕ ಮಾತ್ರ ನೆಹರು ಒಪ್ಪಿಗೆಯಿತ್ತರು. ನೆಹರುಗಳೊಡನೆ ನನಗಿರುವ ಸಂಬಂಧವನ್ನು ಸಾರ್ವಜನಿಕರು ತಿಳಿದಿರಬಹುದು. ಇಂತಹ ವಿವಾಹಕ್ಕೆ ಒಪ್ಪಿಗೆ ಕೊಡದಿರುವುದು ಕ್ರೂರವಾಗುತ್ತಿತ್ತು!

'ದಿನಗಳು ದಾಟಿದಂತೆ, ಸಮಾಜದ ಏಳಿಗೆಗಾಗಿ ಇಂತಹ ವಿವಾಹಗಳು ಹೆಚ್ಚಾಗಲಿರುವವು. ನಾವು ಅನ್ಯೋನ್ಯ ಸಹಿಷ್ಣುತೆಯ ಕಾಲವನ್ನೂ ಹೊಂದಲಿಲ್ಲ. ಸಹಿಷ್ಣುತೆಯು ಮುಂದಕ್ಕೆ ವಿಧರ್ಮೀಯರ ಗೌರವವಾಗಿ ಪರಿಣಮಿಸಿದಾಗ ಇಂತಹ ವಿವಾಹಗಳು ಸ್ವಾಗತಗೊಳ್ಳುವು. ಯಾವುದೇ ಧರ್ಮವೂ ಸಂಕುಚಿತವಾದುದಲ್ಲ; ಮುಂದಿನ ಸಮಾಜ ರಚನೆಯಲ್ಲಿ ಹಣವಾಗಲಿ, ಪದವಿಯಾಗಲಿ, ಕುಲವಾಗಲಿ ಯೋಗ್ಯತೆಯ ಪರೀಕ್ಷಾ ಸಾಧನವಾಗಿರದೆ ಕೇವಲ ನಡತೆ ಮಾತ್ರ ಪರೀಕ್ಷಾ ಸಾಧನವಾಗಿ ಉಳಿಯುವುದು.

"ನನ್ನ ಅಭಿಮತದ ಹಿಂದೂಧರ್ಮವು ಸಂಕುಚಿತವಲ್ಲ; ಅದು ಪ್ರಾಚೀನ ಕಾಲದಿಂದಲೇ ಬಂದಿದ್ದ, ಜೋರೋಸ್ಟರ್, ಮೋಸೆಸ್, ಕ್ರಿಸ್ತ, ಮಹಮ್ಮದ್, ನಾನಕ್ ಮೊದಲಾದ ನನ್ನ ನೆನಪಿನ ಪ್ರವಾದಿಗಳೆಲ್ಲರ ಸತ್ಯವಾಣಿಯನ್ನು ಕೂಡಿಕೊಂಡಿದೆ. ಅದು ಹೀಗೆ ಸೂತ್ರೀಕರಿಸಲ್ಪಟ್ಟಿದೆ. "ಧರ್ಮವೆಂದರೆ, ಜ್ಞಾನವೂ ಉತ್ತಮವೂ ಆಗಿದ್ದು ಯಾರು ರಾಗದ್ವೇಷಗಳಿಂದ ಮುಕ್ತರಾಗಿರುವರೋ ಅವರ ಹೃದಕ್ಕೆ ಅಂಟಿಕೊಂಡಿರುವುದು" ಅಲ್ಲದೆ 'ನಾಶವಾಗುವುದು' ಅಲ್ಲ. ನನಗೆ ಪತ್ರ ಬರೆದವರು ಅವರಿಗೆ ಉತ್ತರ ಕೊಡದಿರುವುದಕ್ಕೆ ನನ್ನನ್ನು ಕ್ಷಮಿಸಬೇಕು. ತಮ್ಮ ಕೋಪವನ್ನು ಬಿಟ್ಟು, ಅವರು ಭಾವೀ ದಂಪತಿಗಳನ್ನು ಆಶೀರ್ವದಿಸಬೇಕು."

ಜಮ್ನಾಲಾಲರ ಸ್ಮರಣೆ

ವರ್ಧಾದಲ್ಲಿ ಸಭೆ

ಗಾಂಧಿಜಿ ಜಮ್ನಾಲಾಲ ಬಜಾಜರ ಸ್ಮರಣೆಗಾಗಿ ಅವರ ಮಿತ್ರರ ಒಂದು ಸಭೆಯನ್ನು ಕರೆದಿದ್ದರು; ಆ ಸಭೆಯಲ್ಲಿ ಗಾಂಧಿಜಿ ಜಮ್ನಾಲಾಲರ ಅಪೂರ್ವತ್ಯಾಗ ಬುದ್ಧಿ, ದೇಶಸೇವಾ ಕಾಂಕ್ಷೆ, ಉದಾರ ಹೃದಯ ಕಾರ್ಯತತ್ಪರತೆಗಳನ್ನು ಕೊಂಡಾಡಿ ಒಂದು ಒಳ್ಳೆಯ ಭಾಷಣವಿತ್ತರು. ಆ ಕುರಿತು ಈ ಸಲದ ಹರಿಜನದಲ್ಲಿ ವಿವರ ಬಂದಿದೆ. ಅದರ ಸಾರಾಂಶ ಈ ಕೆಳಗಿನಂತಿದೆ:

'ಜಮ್ನಾಲಾಲರು ನಾನು ಈ ದೇಶದಲ್ಲಿ ಸಾರ್ವಜನಿಕ ಜೀವನಕ್ಕೆ ಪ್ರಾರಂಭಮಾಡಿದ ಮೊದಲ್ಗೊಂಡೇ ನನಗೆ ಆಪ್ತರಾದರು. ಆದರಿಂದಾಗಿ ನಾನು ಯಾವುದೇ ವಿಷಯದಲ್ಲಿಯೂ ಚಿಂತೆಗೊಳಗಾಗಬೇಕಾಗಲಿ, ನಾನು ಕೈಕೊಂಡ ಕೆಲಸಗಳನ್ನು ನಾನು ಹೊರಗಿರಲಿ, ಸೆರೆಮನೆಯೊಳಗಿರಲಿ ಅವರು ಮನಸ್ಸುಕೊಟ್ಟು ಮಾಡುವರು; ಖಾದಿ, ಹರಿಜನಸೇವೆ, ಗೋಸೇವಾ, ಗ್ರಾಮೋದ್ಧಾರ, ಈ ಎಲ್ಲಾ ಕಾರ್ಯಗಳಲ್ಲಿಯೂ ಅವರು ತಮ್ಮ ಸಂಪೂರ್ಣ ತನುಮನಧನಗಳನ್ನರ್ಪಿಸಿ ಅಹರ್ನಿಶಿ ದುಡಿಯುತ್ತಿದ್ದರು. ಅವರ ಸ್ಮರಣೆಗಾಗಿ ನಾನು ನಿಮ್ಮೊಡನೆ ನಿಧಿಕೂಡಿಸಲು ಹೇಳುವುದಿಲ್ಲ. ಅದು ಸರಿಯೂ ಅಲ್ಲ. ಅವರು ಕೈಕೊಂಡ ಕಾರ್ಯವನ್ನು ಸುವ್ಯವಸ್ಥೆಯಿಂದ ಸಾಗಿಸಬೇಕೆಂದು ನಿಮ್ಮ ಸಹಕಾರ ಹಾರೈಸಿದ್ದೇನೆ. ಜಮ್ನಾಲಾಲರ ಧರ್ಮಪತ್ನಿ ಜಾನಕೀದೇವಿ—ಚಿತಾರೋಹಣಮಾಡಿ ಸತಿಯಾಗಿ ಮಡಿಯಲು ಹಾರೈಸಿದ್ದಳು—ಆದರೆ ನಾನು ಅವಳಿಗೆ ಸಮಾಧಾನ ಹೇಳಿದೆ: ಚಿತಾರೋಹಣಮಾಡುವುದಕ್ಕಿಂತ ಎಲ್ಲವನ್ನೂ ತ್ಯಾಗಮಾಡಿ, ಜಮ್ನಾಲಾಲರು ಕೈಕೊಂಡ ಕೆಲಸವನ್ನು ಮುಂದುವರಿಸಿ ಜೀವಂತ ಸತಿಯಾಗಿರು ಎಂದು ಬೋಧಿಸಿದೆ. ಜಾನಕೀದೇವಿ ಇದಕ್ಕೆ ಸಂಕೋಚಪಟ್ಟಳು; ನಾನು ಆಕೆಗೆ ವಿನೋಬರಿಂದ ಉಪದೇಶಪಡಕೊಳ್ಳುವಂತೆ ಹೇಳಿದ್ದೆ. ಕಡೆಗೆ ಗೋ ಸೇವಾಸಂಘದ ಅಧ್ಯಕ್ಷಸ್ಥಾನ ವಹಿಸಲು, (ಜಮ್ನಾಲಾಲರು ಮೊದಲಿನ ಅಧ್ಯಕ್ಷರು) ಒಪ್ಪಿಕೊಂಡಿದ್ದಾಳೆ. ತನ್ನ ಎರಡುವರೆ ಲಕ್ಷ ರೂಪಾಯಿಗಳ ಸೊತ್ತೆಲ್ಲವನ್ನೂ ದಾನಮಾಡಿ, ಆಕೆ ಗೋಪುರಿ ಎಂಬ ಗುಡಿಸಲಲ್ಲಿ ವಾಸಮಾಡುವಳು. ತನ್ನ ಎಲ್ಲಾ ಸಮಯವನ್ನು ಗೋಸೇವೆಗಾಗಿ ವ್ಯಯಿಸಲು ಮನಸ್ಸು ಮಾಡಿದ್ದಾಳೆ.

'ಜಮ್ನಾಲಾಲರು ಆರು ಲಕ್ಷ ರೂಪಾಯಿಗಳನ್ನು ಸಾರ್ವಜನಿಕ ಕಾರ್ಯಕ್ಕೆ ತೆಗೆದಿರಿಸಿದ್ದರು. ಅವರ ಮಕ್ಕಳು ಹೆತ್ತವರ ಈ ಉದಾಹರಣೆಯನ್ನು ಅನುಸರಿಸುವರೆಂದು ನಾನು ನಂಬುತ್ತೇನೆ. ಅವರ ಮಕ್ಕಳು ಈ ಹಣವನ್ನು ಬೇಕಾದರೆ ತಮಗೆ ಇಟ್ಟುಕೊಳ್ಳಬಹುದಿತ್ತು; ಆದರೆ ಅವರು ಹಾಗೆ ಬಯಸಲಿಲ್ಲ. (ಕಮಲನಯನ ಮತ್ತು ರಾಮಕೃಷ್ಣ ಇಬ್ಬರು ಗಂಡುಮಕ್ಕಳು) ನಾನು ಇಚ್ಛಿ ಬಂದಂತೆ ವಿನಿಯೋಗ ಮಾಡಬಹುದೆಂದು ಅವರು ಹೇಳಿದರು. ಮಗನ್‌ವಾಡಿ ಮ್ಯೂಸಿಯಮ್, ಮಗನವಾಡಿ, ಇವುಗಳನ್ನು ನನ್ನ ಪರಿವಿತ್ತದ್ದಲದೆ ವರ್ಷಂಪ್ರತಿ ಬಜಾಜ್ ವಾಡಿಯಲ್ಲಿ ಅತಿಥಿಗಳಿಗೆ ವೆಚ್ಚಮಾಡುವ ೨೦,೦೦೦ ರೂಪಾಯಿ ವೆಚ್ಚದ ಆತಿಥ್ಯ ಸತ್ಕಾರಕಾರ್ಯವನ್ನು ತಾವೂ ತಂದೆಯಂತೆಯೇ ಮುಂದುವರಿಸುವುದಾಗಿ ಒಪ್ಪಿಗೊಂಡಿದ್ದಾರೆ! ಜಮ್ನಾಲಾಲಜಿಗೆ ಗೋಸೇವೆಯಲ್ಲಿ ಅತ್ಯಂತ ಆಸಕ್ತಿಯಿತ್ತೆಂಬುದು ನಿಮಗೆ ಗೊತ್ತಿದೆ. ನೀವೆಲ್ಲರೂ ಆ ಕೆಲಸವನ್ನು ಸಾಂಗಗೊಳಿಸಬೇಕು. ಅವರಿಂದ ನಾವು ಕಲಿಯತಕ್ಕದ್ದೆಂದರೆ ನಿತ್ಯ ಕಾರ್ಯತತ್ಪರರಾಗಿರುವುದು, ನಾವು ತ್ಯಾಗ ಮಾಡಲು ಸಿದ್ಧರಿರಬೇಕು. ಶಿಸ್ತುಳ್ಳವರಾಗಿರಬೇಕು. ಜಮ್ನಾಲಾಲರು ಶಿಸ್ತಿನ ಪ್ರತಿಮೂರ್ತಿಯಾಗಿದ್ದರು."

The Canara Banking Corporation Ltd.

(Incorporated in British India with limited liability)

Estd. 1906.

OUR RATES OF INTEREST ON DEPOSITS

Current	....	....	1%	p. a.
Savings Bank	....	....	2½%	,,
Short-term	....	....	1¾%	,,
FIXED FOR. 3 MONTHS		....	2%	,,
6	,,	....	2½%	,,
9	,,	....	2¾%	,,
12	,,	....	3%	,,
24	,,	....	3½%	,,

Advances made at cheap rates of interest against approved securities and Banking business of every description transacted.

ರೈಲು ಬಂಡಿಗಳ ಸಮಯ

ಇದೇ ಜುಲೈ ತಾ. ೧ರಿಂದ ವ್ಯತ್ಯಾಸವಾದ ರೈಲು ಬಂಡಿಗಳ ಸಮಯಗಳು ಈ ಕೆಳಗಿನಂತಿವೆ—

ಗಾಡಿಗಳು	ಹೊರಡುವ ಗಂಟೆ	ತಲ್ಪುವ ಗಂಟೆ
ಗೂಡ್ಸು ಬಂಡಿ	8.45 ರಾತ್ರಿ	9.25 ರಾತ್ರಿ
ಮಲಬಾರು ಎಕ್ಸ್‌ಪ್ರೆಸ್ (ಮೈಲ್)	9.5 ಬೆಳಿಗ್ಗೆ	5.15 ಸಾಯಂ.
ಜಾಲ್ಸೂರ್ ಪೇಟೆ ಪೆಸೆಂಜರ್	12.0 ಮಧ್ಯಾಹ್ನ	2.55 ಸಾಯಂ.
ಕಣ್ಣನ್ನೂರು ವರೆಗೆ	5.53 ಸಾಯಂ.	9.40 ಪೂರ್ವಾಹ್ನ

ರಂಗೂನನ್ನು ಯಶಸ್ವಿಯಾಗಿ ಖಾಲಿಮಾಡಿದರು!

ನ್ಯೂಜಿಲೆಂಡು ಪೂರ್ವಸಿದ್ಧತೆ

ಆಸ್ಟ್ರೇಲಿಯದ ಮೇಲೆ ಜಪಾನ್ ಆಕ್ರಮಣದ ಅಂಜಿಕೆ ವಿಶೇಷವಿರುವುದರಿಂದ, ಜಪಾನಿನ ಮೇಲೆ ಆಕ್ರಮಣಮಾಡುವ ಯೋಜನೆಯನ್ನು ಮಿತ್ರರು ಮಾಡಿರುವುದಾಗಿ ನ್ಯೂಜಿಲೆಂಡ್ ಮುಖ್ಯಮಂತ್ರಿಗಳು ತಿಳಿಸುತ್ತಾ, ತಮ್ಮ ಸಿದ್ಧತೆ ವಿಷಯ ವಿವರಿಸಿ ಅಮೇರಿಕ ಬ್ರಿಟನುಗಳಿಂದ ತಮಗೆ ಹೆಚ್ಚಿನ ಸಹಾಯ ಬಂದಿದೆಯೆಂದರು.

ಆಸ್ಟ್ರೇಲಿಯದ ಅಂಜಿಕೆ

ಜಪಾನರು ನ್ಯೂಗಿನಿಯ ಮುತ್ತಿಗೆ ಹಾಕಿದ್ದರಿಂದ, ಆಸ್ಟ್ರೇಲಿಯದ ಮೇಲೆಯೂ ಆಕ್ರಮಣವಾಗಬಹುದೆಂದು ಅಂಜಿಕೆ ಹೆಚ್ಚಾಗಿದೆ. ಈ ಬಗ್ಗೆ ವಿಚಾರಮಾಡಲು ಮುಖ್ಯ ಮಂತ್ರಿಗಳು ಮಂತ್ರಿಮಂಡಳದ ಒಂದು ವಿಶೇಷ ಸಭೆ ಕರೆದಿರುವರು. ನ್ಯೂಗಿನಿಯಲ್ಲಿ ಜಪಾನರ ಸೈನ್ಯ ಸಲಾಮೂರ ಮತ್ತು ಲೀ ಎಂಬ ಎರಡು ಪ್ರದೇಶಗಳಲ್ಲಿ ಬಂದಿಳಿದಿದ್ದು ಆಸ್ಟ್ರೇಲಿಯ ವಿಮಾನಗಳ ಉಗ್ರ ಹೋರಾಟ ನಡೆಸುತ್ತಿವೆ. ಅಲ್ಲಿಗೆ ಎಷ್ಟು ಮಂದಿ ಜಪಾನೀಯರು ಬಂದಿಳಿದಿರುವರೆಂದೂ ಗೊತ್ತಿಲ್ಲ. ಆದರೆ ಬಹಳ ಜನರಿರುವರೆಂದು ಹೇಳಲಾಗಿದೆ. ನ್ಯೂಗಿನಿ ಆಸ್ಟ್ರೇಲಿಯದ ಮಾಂಡಲಿಕ ದ್ವೀಪವಾಗಿದೆ.

ಹಂಗೇರಿ ಸರಕಾರದ ರಾಜಿನಾಮೆ

ಯ ಸುದ್ದಿ ಲಂಡನಿಗೆ ಬಂದಿದೆ. ಹೆಚ್ಚಿನ ವಿವರವು ಪ್ರಕಟವಾಗಿಲ್ಲ.

ರಂಗೂನ್ ಇನ್ನೂ ಶತ್ರು ವಶವಾಗಿಲ್ಲ

ಬರ್ಮದಿಂದ ಇತ್ತೀಚೆಗೆ ಸುದ್ದಿ ಸರಿಯಾಗಿ ಬರುವುದಿಲ್ಲ. ಆದರೆ ರಂಗೂನ್ ಪರಿಸ್ಥಿತಿ ತೀರಾ ಶೋಚನೀಯವೆಂದು ತಿಳಿದಿದೆ. ನಗರದಲ್ಲಿರುವ ಉಪಯುಕ್ತ ಕಾರ್ಖಾನೆ ಮೊದಲಾದವುಗಳನ್ನು ಬ್ರಿಟಿಷರು ಸುಡಹತ್ತಿದ್ದಾರೆ. ರಂಗೂನನ್ನು ವಶಪಡಿಸಿಕೊಳ್ಳಲಾಗಿದೆಯೆಂದು ಜಪಾನರು ಹೇಳುತ್ತಾರೆ. ರಂಗೂನ್ ಮಂಡಾಲೆ ರೈಲ್ವೆರಸ್ತೆಯನ್ನು ಕತ್ತರಿಸಲಾಗಿದೆಯಂತೆ!

ಮುಸಲನಿಗೆ ಹೃದ್ರೋಗ

ಮುಸಲನಿ ಈಗ ಹೊರಗೆ ಬರುವುದೇ ಕಡಿಮೆಯಾಗಿದೆಯಂತೆ. ಅವರು ಹೃದ್ರೋಗದಿಂದ ನರಳುತ್ತಿರುವರಾಗಿ ತಿಳಿದಿದೆ. ಸಿಯಾನೋ ಎಲ್ಲಾ ಕಡೆಗಳಲ್ಲಿ ಕಾಣಿಸುತ್ತಿರುವನಂತೆ! ಎಡ್ಡ ಇಟಲಿಯಲ್ಲಿ ಅಪ್ರಿಯಳಾಗಿದ್ದಳೂ ಈಗ ಧಾರ್ಮಿಕ ಬುದ್ಧಿಯವಳಾಗಿರುವಳಂತೆ.

ಡಚ್ಚರು ಶರಣಾಗತರಾಗಿಲ್ಲ

ಜಾವಾದ ಭೀಕರ ಯುದ್ಧ

ಕಳೆದ ಕೆಲವು ದಿನಗಳಿಂದ ಜಾವಾ ದ್ವೀಪವು ಜಗತ್ತಿನಿಂದ ಪ್ರತ್ಯೇಕಿಸಲ್ಪಟ್ಟಿದೆ. ಅಲ್ಲಿಂದ ಹೆಚ್ಚಿನ ಸುದ್ದಿಗಳೇನೂ ಬರುವುದಿಲ್ಲ. ಡಚ್ಚರು ಒಪ್ಪಂದಮಾಡಿ

ಬ್ರಿಟಿಷ್ ಸೈನ್ಯ ಕೇಂದ್ರ ಕಾರ್ಖಾನೆಗಳನ್ನು ಸುಟ್ಟು ಹಿಂತೆರಳಿತು!

ಜಾವಾ ಸಂಕಟಮಯ ಪರಿಸ್ಥಿತಿಯಲ್ಲಿದೆ!

ಕೊಳ್ಳುವಂತೆ ಕೇಳಿಕೊಂಡಿರುವರೆಂದು ಒಂದು ವರದಿ ಹೇಳುತ್ತದೆ. ಆದರೆ ಈ ವರದಿಯನ್ನು ಲಂಡನಿನ ಡಚ್ ಸರಕಾರದ ಸುದ್ದಿ ಸಂಸ್ಥೆ ನಂಬುವುದಿಲ್ಲವಂತೆ. ಜಾವಾದ ಗುಡ್ಡಗಾಡುಗಳಲ್ಲಿ ಭೀಕರವಾದ ಯುದ್ಧ ನಡೆಯಿತು. ಇತ್ತೀಚೆಯ ಸುದ್ದಿಗಳನ್ನು ಕೇಳಿದರೆ ಜಾವಾದ ಪರಿಸ್ಥಿತಿ ವಿಷಮವಾಗಿದೆಯೆಂದು ತಿಳಿಯುತ್ತದೆ. ಬಂಡಾಂಗದಲ್ಲಿ ಶತ್ರುಸೈನ್ಯಗಳು ಡಚ್ ಸೈನ್ಯಗಳನ್ನು ಮುತ್ತಿಗೆ ಹಾಕುವ ಕೆಲಸವು ಸಂಪೂರ್ಣ ಮುಗಿದಿದೆಯಂತೆ! ಜಾವಾದಲ್ಲಿ ಡಚ್ಚರು ತೋರಿಸಿದ ಸಾಹಸದ ಹೋರಾಟವನ್ನು ಬ್ರಿಟಿಷ್ ಪತ್ರಿಕೆಗಳು ಕೊಂಡಾಡಿವೆ.

ಬ್ರಿಟನ್-ಗ್ರೀಸ್ ಒಪ್ಪಂದ

ವಾಗಿ ಯುದ್ಧದಲ್ಲಿ ಪರಸ್ಪರ ಸಹಕಾರ ಕೊಡಬೇಕೆಂದಾಗಿದೆ. ಗ್ರೀಸನ್ನು ದಾಸ್ಯದಿಂದ ಮುಕ್ತಮಾಡುವ ಬ್ರಿಟನಿನ ಭರವಸೆ ಮುಖ್ಯವಾದುದಾಗಿದೆ.

ರಂಗೂನನ್ನು ಖಾಲಿಮಾಡಿದರು!

ರಂಗೂನನ್ನು ಖಾಲಿಮಾಡುವ ಕೆಲಸ ಯಶಸ್ವಿಯಾಗಿ ನಡೆಯಿತು. ಬ್ರಿಟಿಷರ ಸೈನ್ಯವನ್ನು ಅಲ್ಲಿಂದ ಹಿಂತೆಗೆಯಲಾಯಿತು. ಮಹತ್ವದ ಕೇಂದ್ರಗಳನ್ನು, ಕಾರ್ಖಾನೆಗಳನ್ನು ನಾಶಪಡಿಸಲಾಗಿದೆ. ಹಿಂದೆ ಸರಿದ ಬ್ರಿಟಿಷ್ ಸೈನ್ಯ ಎಲ್ಲಿಗೆ ಹೋಗುವವೆಂದು ತಿಳಿದಿಲ್ಲ. ಜಪಾನರು ಒಳನುಗ್ಗಿದರು. ಪೆಗು ಭಾಗದಲ್ಲಿಯೂ ಜಪಾನರು ಮುನ್ನುಗ್ಗಿರುವರು.

ಭಾರತದ ವಿಷಯ ಚರ್ಚಿಲರು ಹೇಳುತ್ತಾರೆ.

ಎಂದು ಕೆಲವು ವಾರಗಳಿಂದ ಪ್ರಕಟವಾಗಿತ್ತಷ್ಟೆ? ಬರುವ ಪಾರ್ಲಿಮೆಂಟಿನ ಸಭೆಯಲ್ಲಿ ಆ ವಿವರ ಹೇಳುವರು ಎಂದು ಕ್ರಿಪ್ಸರು ನುಡಿದರು. ಇನ್ನೂ ಸಂಪೂರ್ಣ ವಿಚಾರಮಾಡಿ ಮುಗಿದಿಲ್ಲವಂತೆ.

ಹಾಂಕಾಂಗಿನಲ್ಲಿ ಜಪಾನರು

ಕ್ರೂರ ಅತ್ಯಾಚಾರ ನಡೆಸುತ್ತಾರೆಂದು ಪ್ರಕಟವಾಗಿದೆ. ಬ್ರಿಟಿಷರನ್ನು ಕೈಕಾಲು ಕಟ್ಟಿ ಬಿಗಿದು ಸಂಹರಿಸಿದರಂತೆ.

ಬ್ರಿಟನಿನ ಯುದ್ಧವೆಚ್ಚ ದಿನವೊಂದಕ್ಕೆ ೧೪೫ ಲಕ್ಷ ಪವನು

ಎಂಬುದಾಗಿ ಈಗ ಪ್ರಕಟವಾಗಿದೆ ಈ ವಿವರವನ್ನು ಕಾಮನ್ಸ್ ಸಭೆಯಲ್ಲಿ ಬೊಕ್ಕಸಖಾತೆಯ ಅಧಿಕಾರಿ ಹೇಳಿದರು.

ಹಡಗದ ಜಲಸಮಾಧಿ

ಅರಾಬಟನ್ ಎಂಬ ೮೦೦೦ ಟನ್ ಭಾರದ ಬ್ರಾಝಿಲಿಯನ್ ಹಡಗವು ಕ್ಯಾರಿಬಿಯನ್ ಸಮುದ್ರದಲ್ಲಿ ಟಾರ್ಪೆಡೋದಿಂದ ಮುಳುಗಿಸಲ್ಪಟ್ಟಿತು.

ಬಾಟಾವಿಯದ ಪ್ರವೇಶ

ಜಪಾನು ಸೈನ್ಯಗಳೂ ಜಾವದ ರಾಜಧಾನಿ ಬಾಟಾವಿಯವನ್ನು ಆತಂಕವಿಲ್ಲದೆ ಪ್ರವೇಶಿಸಿದವೆಂದು ಸುದ್ದಿ. ಬಾಟಾವಿಯವು ಅರಕ್ಷಿತ ನಗರವೆಂದು ಸಾರಲಾಗಿದೆ. ಹೀಗೆ ಜಾವದ ಪರಿಸ್ಥಿತಿ ವಿಷಮಯವಾಗಿದೆ. ಉತ್ತರ ಜಾವಾದಿಂದ ಮಿತ್ರ ರಾಷ್ಟ್ರಗಳ ಸೈನ್ಯ ಹಿಂದೆಗೆದಿದೆ.

ಅಂಡಮಾನ್ ದ್ವೀಪದ ಮೇಲೆ ಆಕ್ರಮಣ

ವು ಕಳೆದ ತಿಂಗಳಿಂದಲೇ ಆರಂಭವಾಗಿದೆ. ಅಂಡಮಾನದ ಆಕ್ರಮಣವು ಬಹು ಪ್ರಾಮುಖ್ಯವಾಗಿದೆ. ಅಂಡಮಾನ್ ದ್ವೀಪಗಳಿಗೆ ನಿಕೋಬರ್ ದ್ವೀಪ ಸಮುದಾಯವೂ ಕೂಡಿದ್ದು. ಇವುಗಳು ಬಂಗಾಳಾಕೊಲ್ಲಿಯ ದಕ್ಷಿಣ ಭಾಗದಲ್ಲಿದೆ. ಈ ದ್ವೀಪವು ಹಿಂದೂದೇಶಕ್ಕೆ ಸೇರಿ ಒಬ್ಬ ಕಮಿಷನರಿಂದ ಆಳಲ್ಪಡುತ್ತಿದೆ. ರಂಗೂನಿನಿಂದ 400 ಮೈಲು ದೂರದಲ್ಲಿ, ಕಲ್ಕತ್ತ, ಮದ್ರಾಸುಗಳಿಂದ 800 ಮೈಲು ದೂರದಲ್ಲಿದೆ. ಕೊಲೊಂಬೊಕ್ಕೆ ಇದ್ದು 950 ಮೈಲು ದೂರವಾಗುತ್ತದೆ. ಅಂಡಮಾನ್ ದ್ವೀಪವು ಹಿಂದೂದೇಶಕ್ಕೆ ಸೇರಿದ್ದರಿಂದ ಈ ಧಾಳಿಯು ಹಿಂದೂದೇಶದಮೇಲೆಯೇ ಎಂದು ಪರಿಗಣಿಸಲಾಗುವುದು.

ರಂಗೂನಿನಿಂದ ಬ್ರಿಟಿಷ್ ಸೈನ್ಯ ಹಿಂದೆಗೆಯಲ್ಪಟ್ಟಿತು

ಎಂದು ಪ್ರಕಟವಾಗಿದೆ. ಅಲ್ಲಿನ ಮುಖ್ಯವಾದ ವಸ್ತುಗಳನ್ನು ನಾಶಪಡಿಸಿ ಅವರು ಹಿಂದೆಗೆದರಂತೆ

ಆಹಾರ ಧಾನ್ಯಗಳನ್ನು ಕೂಡಿಡಬೇಡಿರಿ

ಮದ್ರಾಸು ಸರಕಾರದ ಪ್ರಕಟನೆ

ಬರ್ಮದಿಂದ ವ್ಯಾಪಾರ ತಡೆಯಲ್ಪಟ್ಟದ್ದರಿಂದ ಈಗ ಆಹಾರ ಧಾನ್ಯಗಳ ಏಷಯದಲ್ಲಿ ಸ್ವಲ್ಪ ತೊಂದರೆ ಉಂಟಾಗಬಹುದು. ಆದ್ದರಿಂದ ಯಾರಾದರೂ ಮದ್ರಾಸು ಸಂಸ್ಥಾನದಲ್ಲಿ ಆಹಾರ ಧಾನ್ಯಗಳನ್ನು ಕೂಡಿಹಾಕಿದರೆ ಅವರನ್ನು ಶಿಕ್ಷಿಸಲಾಗುವುದೆಂದು ಮದ್ರಾಸು ಸರಕಾರವು ಪ್ರಕಟಿಸಿಯದೆ.

ಭಾರತದ ಕುರಿತು ಪ್ರಕಟಣೆ

ಇಂಡಿಯದಲ್ಲಿನ ರಾಜ್ಯರಚನೆಯ ಬದಲಾವಣೆಗಳ ಕುರಿತು ಯೋಜನೆಯೊಂದು ಆಗಲೇ ಸಿದ್ಧವಾಗಿದೆ ಎಂದೂ, ಅದು ಬೇಗನೇ ಪಾರ್ಲಿಮೆಂಟಿನ ಮುಂದೆ ಬರಲಿದೆ ಎಂದೂ, ಭಾರತದ ಸ್ವಾತಂತ್ರ್ಯದ ಕೇಳಿಕೆಗಳನ್ನು ಲೇಬರ್ ಪಂಗಡದವರು ಸಮರ್ಥಿಸುವರೆಂದೂ ತಿಳಿದು ಬಂದ

ದಕ್ಷಿಣ ಕನ್ನಡ ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಪ್ ಕೋರ್ಟಿನ

O. S. 77/19[illegible]

R. E. P. 832/194[illegible]

ಬಿ. ಚಿಕ್ಕಬ್ಯಾರಿ, ಕೊಂಬಾರ ಶೇಕ ಬ್ಯಾರಿಮಗ, ಬುಂಗ್ಲೂರು ತಾಲೂಕು ಬಜಪೆ ಗ್ರಾಮದಲ್ಲಿರುವವ } ಅರ್ಜಿದಾರ (ವಾ[illegible]

ಮತ್ತು

1. ಅಹಮ್ಮದ್ ಬ್ಯಾರಿ, 2. ಅಬ್ದುಲ್ ಕರೆ ಬ್ಯಾರಿ, ಅಲಿ ಬ್ಯಾರಿ ಮಕ್ಕಳು
3. ಇನ್ನಮ್ಮ ಹೆಂಗಸು, ಅಲಿಬ್ಯಾರಿ ವಿಧವೆ
4. ಮಮ್ಮಾಟಿಯಮ್ಮ, ಅಲಿಬ್ಯಾರಿ ಮಗಳು ಮತ್ತು ಅಮ್ಮಕುಟ್ಟಿ ಬ್ಯಾರಿ ವಿಧವೆ.
5. ಕತ್ತಿಜಮ್ಮ, ಅಲಿಬ್ಯಾರಿ ಮಗಳು ಮತ್ತು ಅದ್ದ್ಯಾರು ಹಮ್ಮದೆಬ್ಯಾರಿ ಹೆಂಡ್ತಿ
6. ಆಸಮ್ಮ, ಅಲಿಬ್ಯಾರಿ ಮಗಳು ಮತ್ತು ಮಂಗಳಪೇಟೆ ಮೊಯಿದಿನ್ ಬ್ಯಾರಿ ಹೆಂಡತಿ.
7. ಬೀಪಾತುಮ್ಮ, ಅಲಿಬ್ಯಾರಿ ಮಗಳು ಮತ್ತು ಮುಳಲಿ ಅಬ್ಬುಬ್ಯಾರಿ ಹೆಂಡ್ತಿ
8. ಉಮ್ಮಾತುಮ್ಮ, ಅಲಿಬ್ಯಾರಿ ಮಗಳು ಮತ್ತು ತೋಕೂರು ಶೇಕ ಬ್ಯಾರಿ ಹೆಂಡತಿ.

} ಪ್ರತಿವಾದಿಗಳು.

1ರಿಂದ 3ನೇ ವರೆಗಿನವರು ಮಂಗಳೂರು ತಾಲೂಕು ಕೊಡಾರು ಗ್ರಾಮದಲ್ಲಿರುವವರು. 4, 5, 8ನೇಯವರು ಮಂಗಳೂರು ತಾಲೂಕು ತೋಕೂರು ಗ್ರಾಮದಲ್ಲಿರುವವರು, 6ನೇಯವಳು ಮಂಗಳೂರು ತಾಲೂಕು ಬಾಳ ಗ್ರಾಮದ ಮಂಗಳ ಪೇಟೆಯಲ್ಲಿರುವವಳು, 7ನೇಯವಳು ಮಂಗಳೂರು ತಾಲೂಕು ಬಡಗು ಪಾಡಿ ಗ್ರಾಮದ ಮುಳಲಿ ಪೇಟೆಯಲ್ಲಿದ್ದಾಳೆ.

ಸದ್ರಿ ಮೇಲ್ಕಂಡಿಸಿದ O. S. 77/1937ನೇ ವ್ಯಾಜ್ಯದ ಡಿಕ್ರಿಮೇಲೆ ಮೇಲಿನ ಅರ್ಜಿದಾರನು ಸದ್ರಿ ಡಿಫೆಂಡೆಂಟರ ಸ್ಥಿರಾಸ್ತಿ ಏಲಂ ಬಗ್ಗೆ ಧಾಖಲು ಮಾಡಿದ ಸದ್ರಿ ಮೇಲಿನ ಅಮಲ್ದಾರಿಯು ತಾ. 19-3-42 ನೇ ಪೂರ್ವಾಹ್ನ 11ಘಂಟೆಗೆ ಮೇಲ್ಕಂಡಿಸಿದ ಕೋರ್ಟಿನಲ್ಲಿ ಸದ್ರಿ ಅಮಲ್ದಾರಿಯಲ್ಲಿ ದಾಖಲುಮಾಡಿದ ಏಲಂ ಇಸ್ತಿಹಾರಿನ ಶರ್ತಗಳನ್ನು ನಿರ್ಣಯಿಸುವ ಬಗ್ಗೆ ತನಿಖೆಗೆ ಇಟ್ಟಿರುತ್ತದೆ. ಸದ್ರಿ ಡಿಫೆಂಡೆಂಟರು ಖುದ್ದಾಗಿ ಯಾ ವಕೀಲರ ಮುಖಾಂತರ ಕೋರ್ಟಿನ ಮುಂದೆ ಹಾಜರಾಗಿ ಆಕ್ಷೇಪಗಳಿದ್ದರೆ ಇರುವಾ ಮಾಡಿಕೊಳ್ಳಬಹುದು. ತಪ್ಪಿದರೆ ಸದ್ರಿ ಅಮಲ್ದಾರಿಯು ಅವರ ಗೈರು ಹಾಜರಿಯಿಂದ ತೀರ್ಮಾನವಾಗುವದು ಎಂತ ಕೋರ್ಟಿನ ಹುಕುಂ ಪ್ರಕಾರ ಪ್ರಕಟಿಸಲಾಗಿಯದೆ.

ಮಂಗಳೂರು, 4—3—42. } P. Vasudeva Rao, Advocate for petitioner.

THE VIJAYA BANK, LIMITED.

Head Office: MANGALORE.

BRANCHES:

KADRI-MANGALORE, HAMPANKATTA-MANGALORE, UDIPI, COONDAPUR, KARKAL, KAUP, & BRAHMAVAR.

SEASON DEPOSITS

are now accepted at all our Offices, at 4% per annum, for or more months, maturing on 31st July, 1942.

ಚರ್ಚಿಲರು ಹಿಂದೂಸ್ಥಾನದ ವಿಷಯ ಹೇಳುತ್ತಾರೆ?

ಹಿಂದುಸ್ಥಾನದ ವಿಷಯ ಚರ್ಚಿಲರು ಹೇಳುತ್ತಾರೆ?

ಕೆಲವು ಊಹಾಪೋಹಗಳು

ಭಾರತದ ರಾಜಕಾರಣವನ್ನು ಪರಿಶೀಲಿಸಲು ಬ್ರಿಟಿಷ್ ಮಂತ್ರಿಮಂಡಲದ ಉಪಪ್ರಧಾನರಾದ ಅಟ್ಲಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರಚಿತವಾಗಿ, ಆ ಸಮಿತಿಯಲ್ಲಿ ಸರ್‌ಕ್ರಿಪ್ಸರೇ ಮೊದಲಾದವರು ಇದ್ದರೆಂದೂ ಕಳೆದವಾರ ಆ ಉಪಸಮಿತಿ ಭಾರತದ ವಿಚಾರಮಾಡಿ ಒಂದು ವರದಿಯನ್ನು ಬ್ರಿಟಿಷ್ ಮಂತ್ರಿ ಮಂಡಲಕ್ಕೊಪ್ಪಿಸಿರುವರೆಂದೂ, ಬ್ರಿಟಿಷ್ ಪ್ರಧಾನರು ಈಗ ಕೊನೆಯ ನಿರ್ಧಾರಕ್ಕೆ ಬಂದಿದ್ದು, ಅದನ್ನು ಬೇಗನೇ ಪ್ರಕಟಿಸುವರೆಂದೂ ರೂಟರ್ ಸುದ್ದಿಗಾರನು ತಿಳಿಸುತ್ತಾನೆ. ವೈಸರಾಯರ ಕೌನ್ಸಿಲಿನಲ್ಲಿ ಎಲ್ಲವರನ್ನೂ ಹಿಂದೀಯರನ್ನೇ ಮಾಡುವ ಯೋಚನೆಯೆಂದು ಕೆಲವರು ಊಹಿಸುತ್ತಾರೆ. ಈಜಿಪ್ಟಿಗೆ ಕೊಟ್ಟಷ್ಟೇ ಸ್ವಾತಂತ್ರ್ಯವನ್ನು ಹಿಂದೂಸ್ಥಾನಕ್ಕೂ ಕೊಡಬಹುದೆಂದು ಕೆಲವರ ಊಹೆಯಿದೆ. ಹಿಂದೂಸ್ಥಾನದ ಬೇರೆ ಬೇರೆ ಪಕ್ಷಗಳಲ್ಲಿ ಒಕ್ಕಟ್ಟಾಗಬೇಕೆಂಬ ಒಂದು ಶರ್ತ ಹಾಕಬಹುದೆಂದು ಕೆಲವರ ಊಹೆ.

ಚರ್ಚಿಲ್ಲರಿಗೆ ಜಿನ್ನರ ತಂತಿ

'ಪಾಕಿಸ್ತಾನದ ವಿರೋಧವಾದ ಯಾವ ಹೊಸ ರಾಜ್ಯರಚನೆಯೂ ಕೂಡದು; ಸಪ್ರೂ ಯೋಜನೆಯನ್ನು ಸರಕಾರವು ಸ್ವೀಕರಿಸಬಾರದು' ಎಂದು ಬ್ರಿಟಿಶ್ ಪ್ರಧಾನರಿಗೆ ಜಿನ್ನರ ತಂತಿ.

ಗವರ್ನರರಲ್ಲಿ ದಯಾ ಪ್ರಾರ್ಥನೆ

'ಮಾರೊಜಾ' ಮೊಕದ್ದಮೆಯಲ್ಲಿ ಫಾಶಿ ಶಿಕ್ಷೆಗೆ (ಮದ್ರಾಸ್ ಹೈಕೋರ್ಟಿನವರಿಂದ) ಗುರಿಪಡಿಸಲ್ಪಟ್ಟ ಶ್ರೀ ಕೆ. ಪಿ. ಆರ್ ಗೋಪಾಲನ್ ನಂಬಿಯಾರರ ಕುರಿತು ದಯೆ ತೋರಬೇಕೆಂದು ಮದ್ರಾಸ್ ಗವರ್ನರರಲ್ಲಿ ಪ್ರಾರ್ಥಿಸಲು ಕಲ್ಲಿಕೋಟೆ, ಪಾಲ್ಘಾಟು ಮೊದಲಾದ ಕಡೆ ಸಾರ್ವಜನಿಕ ಸಭೆಗಳು ಸೇರಿದವು.

ಒರಿಸದಲ್ಲಿ ನಿರಂಕುಶ ಪ್ರಭುತ್ವವೆ?

ನೆಹರುಗಳ ಉಗ್ರಟೀಕೆ

ಒರಿಸ್ಸಾದಲ್ಲಿ ಎರಡು ತಿಂಗಳ ಹಿಂದೆ ಒಂದು ಮಂತ್ರಿಮಂಡಳ ಸ್ಥಾಪಿತವಾಗಿತ್ತು. ತಮ್ಮ ಅಧಿಕಾರ ಸ್ಥಾಪಿಸಿಕೊಳ್ಳಲು ಆ ಮಂತ್ರಿ ಮಂಡಳ ಮಾಡುತ್ತಿರುವ ಕುತಂತ್ರದ ವಿಷಯ ನೆಹರು ಉಗ್ರಟೀಕೆ ಮಾಡಿದ್ದಾರೆ. ಹಿಂದೆ ಆ ಪ್ರಾಂತದ ಎಸೆಂಬ್ಲಿಯಲ್ಲಿ ಕಾಂಗ್ರೆಸ್ ಪಕ್ಷದವರೇ ಬಹುಮತವಿದ್ದು, ಕೆಲವು ಕಾಂಗ್ರೆಸ್ ಪಕ್ಷದವರು ನೂತನ ಮಂತ್ರಿಮಂಡಳದ ಆಶೆಯಿಂದ ತತ್ವಭ್ರಷ್ಟರಾದರೂ, ಎಸೆಂಬ್ಲಿ ಅಧಿವೇಶನ ಕೂಡಿದರೆ ತಮಗೆ ಬಹುಮತ ಸಿಗಲಿಕ್ಕಿಲ್ಲವೆಂದು ಅಂಜಿ ಮಂತ್ರಿಮಂಡಳದವರು ಕೆಲವು ಕಾಂಗ್ರೆಸ್ ಕಡೆಯ ಎಸೆಂಬ್ಲಿ ಸದಸ್ಯರನ್ನು ಎಸೆಂಬ್ಲಿ ಕೂಡುವ ಕೆಲದಿನಗಳ ಹಿಂದೆ ಕುಂಟು ನೆವದಿಂದ ಸೆರೆಮನೆಗೆ ನೂಕಿದರು. ಆದ್ದರಿಂದ ಮಂತ್ರಿಮಂಡಳದಲ್ಲಿ ಅವಿಶ್ವಾಸ ಠರಾವು ತರುವುದನ್ನು, ರಾಷ್ಟ್ರಪತಿ ಮತ್ತು ಗಾಂಧಿಜಿ ಸೂಚನೆಯಂತೆ ಅವರು ಅವಕು ಅದನ್ನು ಮಂಡಿಸಲಿಲ್ಲ. ಮೇಲಿನಂತೆ ಸೆರೆಮನೆಗೆ ಹಾಕಿದ ಸದಸ್ಯರ ಬಗ್ಗೆ ಉಪ ಚುನಾವಣೆ ನಡೆಯುತಲಿದ್ದು, ಈ ಚುನಾವಣೆಯಲ್ಲಿಯೂ ಕಾಂಗ್ರೆಸಿನವರೇ ಗೆಲ್ಲಬಹುದೆಂಬ ಭೀತಿಯಿಂದ, ಕಾಂಗ್ರೆಸ್ ವಿಜಯದ ಸಲುವಾಗಿ ಪ್ರಚಾರ ಮಾಡುತ್ತಿರುವ ಧುರೀಣರನ್ನು ತಿರುಗಿ ಬಂಧಿಸತೊಡಗಿದ ವಿಷಯ ನೆಹರು ಕೆರಳಿದ್ದಾರೆ. ಇದು ಹೇಡಿತನ, ನಾಟಕೀಗೇಡಿತನ, ಮರ್ಯಾದೆ ಇಲ್ಲದ ಕೆಲಸವೆಂದೂ, ಇಂತಹ ಕಾರಭಾರು ನಾಜೀಜರ್ಮನಿಯಲ್ಲಿಯೂ ಇಲ್ಲವೆಂದು ನೆಹರು ಟೀಕಿಸಿದ್ದಾರೆ.

ಶರತ್ ಬೋಸರು ಮಡಿಕೇರಿಗೆ

ತ್ರಿಚನಾಪಳ್ಳಿ ಸೆರೆಮನೆಯಲ್ಲಿದ್ದ ಶ್ರೀ ಶರತ್ ಬೋಸರನ್ನು ಮಡಿಕೇರಿಗೆ ತಂದು ಒಂದು ಬಂಗಲೆಯಲ್ಲಿ ಬಂದಿವಾನ ಇಡಲಾಗಿದೆ.

ಏನು ಯಾವಾಗ ಎಂಬುದು ಗೊತ್ತಿಲ್ಲ!

ಜಿನ್ನರು ಚರ್ಚಿಲರಿಗೆ ತಂತಿ ಬಿಟ್ಟಿದ್ದಾರೆ

ಗವರ್ನರರಲ್ಲಿ ದಯಾಪ್ರಾರ್ಥನೆ!

ಹಿಂದುಸ್ಥಾನಕ್ಕೆ ಕೂಡಲೇ ಸ್ವಾತಂತ್ರ್ಯ ಕೊಡಿ

ಚರ್ಚಿಲರಿಗೆ ಹಕ್ ಬಕ್ಷರ ತಂತಿ

ಮುಸಲ್ಮಾನರ ಅಡ್ಡಿಯಿಲ್ಲ

'ಹಿಂದುಸ್ಥಾನಕ್ಕೆ ಕೂಡಲೇ ಸ್ವಾತಂತ್ರ್ಯ ಕೊಡಿರಿ. ಮುಸಲ್ಮಾನರು ಎಂದಿಗೂ ಇದಕ್ಕೆ ಆಕ್ಷೇಪಿಸುವುದಿಲ್ಲ. ಬ್ರಿಟಿಷರು, ಅದರಲ್ಲೂ ಚರ್ಚಿಲರು ಇದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಹಿಂದೀ ರಾಜ್ಯ ಘಟನೆಯು ಜಾರಿಯಲ್ಲಿರುವ ಎರಡು ಪ್ರಾಂತಗಳಲ್ಲಿ ನಾವು ಮುಖ್ಯ ಮಂತ್ರಿಗಳಾಗಿರುವೆವು. ದೇಶದ ನಿಜಪರಿಸ್ಥಿತಿ ನಮಗೆ ಗೊತ್ತಿದೆ. ಹಿಂದುಸ್ಥಾನದ ಇತರ ಜಾತಿಯವರಂತೆ ಮುಸಲ್ಮಾನರಿಗೂ ಸ್ವಾತಂತ್ರ್ಯದಲ್ಲಿ ತುಂಬಾ ಆಸೆಯಿದೆ. ಹೀಗಿರುವಾಗ ಹಿಂದೀಯರಲ್ಲಿ ಒಕ್ಕಟ್ಟಿಲ್ಲವೆಂದು ಹೇಳಿದರೆ ಸರಿಯಾಗದು. ಹಿಂದೀಯರಿಗೆ ಅಧಿಕಾರ ಕೊಡಲು ಮನಸ್ಸಿಲ್ಲದಿರುವುದರಿಂದ ಬ್ರಿಟಿಷರು ಈ ಕುಂಟು ನೆವ ಹೂಡುತ್ತಾರೆ. ಹಿಂದೀಯರಿಗೆ ವಿಶ್ವಾಸವುಳ್ಳವರೇ ಹಿಂದುಸ್ಥಾನವನ್ನು ಆಳಬೇಕು. ಹಿಂದೀಯರಿಗೆ ಸ್ವಾತಂತ್ರ್ಯ ಕೊಡದೆ ಹಿಂದೀ ಯುವಕರನ್ನು ಯುದ್ಧಕ್ಕೆ ಕರೆಯುವುದು ಸರಿಯಲ್ಲ' ಎಂದು ಮೊದಲಾಗಿ ಬಂಗಾಲ ಸಿಂಧ ಪ್ರಾಂತಗಳ ಪ್ರಧಾನ ಮಂತ್ರಿಗಳಾದ ಫಜುಲುಲ್ ಹಕ್ ಮತ್ತು ಅಲ್ಲಾ ಭಕ್ಷರು ಚರ್ಚಿಲರಿಗೆ ತಂತಿ ಬಿಟ್ಟಿರುವರು.

ವರ್ಕಿಂಗ್ ಕಮಿಟಿಗೆ ಗಫರ್‌ಖಾನರ ಬದಲು ಖಾನ್‌ಸಾಹೇಬರು

ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸದಸ್ಯತ್ವಕ್ಕೆ ಗಡಿನಾಡಿನ ಗಾಂಧಿಯೆನಿಸಿದ ಖಾನ್ ಅಬ್ದುಲ್ ಗಫರ್‌ಖಾನರು ಅಹಿಂಸೆಯ ವಿಚಾರ ಕಾಂಗ್ರೆಸಿನ ಮತಭೇದದ ಸಲುವಾಗಿ ರಾಜೀನಾಮೆಯಿತ್ತಿದ್ದು ಅಂಗೀಕೃತವಾಗಿ ಅವರ ಬದಲು ಅವರ ಸೋದರ ಡಾ। ಖಾನ್‌ಸಾಹೇಬರು ನೇಮಕಹೊಂದಿದ್ದಾರೆ.

ಮದ್ರಾಸಿನಿಂದ ಸೆಕ್ರೆಟರಿಯೇಟ್ ಬದಲಾವಣೆ

ಮದ್ರಾಸು ನಗರದ ತೀರದಲ್ಲಿರುವ ಫೋರ್ಟ್ ಸೈಂಟ್ ಜಾರ್ಜನಿಂದ ಸಿವಿಲ್ ಕಚೇರಿಗಳನ್ನು ಕೋಟೆಯ ಹೊರಗೆ ಸಾಗಿಸುತ್ತಿರುವರೆಂದು, ಸೆಕ್ರೆಟರಿಯೇಟ್ ಕಚೇರಿಯನ್ನು ದೂರ ಸಾಗಿಸಲಿರುವರೆಂದೂ ತಿಳಿದಿದೆ.

ಜಯಪ್ರಕಾಶ ನಾರಾಯಣರಿಗೆ ಅಸೌಖ್ಯ

ಸೋಶಿಯಲಿಸ್ಟ್ ಮುಖಂಡರಾದ ಶ್ರೀ. ಜಯಪ್ರಕಾಶ ನಾರಾಯಣರು ಕೈದಿಯಾಗಿರುವರಷ್ಟೆ? ಅವರ ಆರೋಗ್ಯ ಈಗ ಚೆನ್ನಾಗಿರುವುದಿಲ್ಲವೆಂದು ತಿಳಿದಿದೆ. ಆದಾಗಿ ಅವರು ಕಳೆದ ಎರಡು ವಾರಗಳಲ್ಲಿ ೯ ರಾತಲು ಕಡಿಮೆಯಾಗಿರುವರೆಂದೂ ಸುದ್ದಿ.

ಪಂಡಿತ ಸುಂದರಲಾಲರ ಮೇಲೆ ಗಾಯ.

ಪಂಡಿತ ಸುಂದರಲಾಲ ಹಾಗೂ ಲಾಲಾ ಜಗನ್ನಾಥ ಎಂಬ ಸರ್ವಂಟ್ಸ್ ಒಫ್ ಇಂಡಿಯಾ ಸೊಸೈಟಿ ಸಭೆಯ ಸದಸ್ಯರು ಹಿಂದೂ-ಮುಸ್ಲಿಂ ಐಕ್ಯದ ಕುರಿತು ಭಾಷಣ ಕೊಟ್ಟು ಮರಳುವಾಗ ಹಿಂದೂ ಮಹಾಸಭೆಯ ಸದಸ್ಯರಾದ ಕೆಲವು ಪೋಕರಿಗಳು ಅವರ ಮೇಲೆ ಗಾಯಮಾಡಿದರೆಂದು ತಿಳಿದು, ಗಾಂಧಿಜಿ ಅವರ ಕೃತ್ಯವನ್ನು ಖಂಡಿಸಿದ್ದಾರೆ. ಯಾವುದೇ ಜಾತಿ ಪಕ್ಷ ಹಿಡಿದು ಭಾಷಣ ಮಾಡಿದವರನ್ನು ಗಾಯಗೊಳಿಸುವುದಾದರೂ ಇದೆ. ಆದರೆ ಜಾತಿ ಭೇದವಿಲ್ಲವೆಂದು ವಾದಿಸಿದವರನ್ನು ಗಾಯಗೊಳಿಸುವುದು ವಿಪರೀತ ಕಾಣುತ್ತದೆ. ಪಂಡಿತ ಸುಂದರಲಾಲ ಹಾಗೂ ಲಾಲಾ ಜಗನ್ನಾಥರ ಈ ಸಂಕಷ್ಟವು ನಿಜವಾಗಿ ಅವರ ತತ್ವವನ್ನು ವಿಸ್ತಾರಗೊಳಿಸುವುದು. ಸಂಬಂಧಪಟ್ಟ ಅಧಿಕಾರಿಗಳು ಈ ಪೋಕರಿಗಳಾದ ಹಿಂದೂ ಮಹಾಸಭೆಯ ಮುಖಂಡರಿಗೆ ತಕ್ಕ ಶಿಕ್ಷೆ ವಿಧಿಸುವರು ಎಂದು ಗಾಂಧಿಜಿ ಬರೆದಿರುವರು.

ಇಂದಿರಾ ನೆಹರು ವಿವಾಹ

ಪಂಡಿತ ಜವಾಹಿರಲಾಲ ನೆಹರೂರವರ ಪುತ್ರಿ ಕುಮಾರಿ ಇಂದಿರಾ ನೆಹರೂರವರಿಗೆ ಫಿರೋಜ ಗಾಂಧಿಯೊಡನೆ ಮಾರ್ಚ ೨೬ಕ್ಕೆ ಮದುವೆ ನಿಶ್ಚಯವಾಗಿದೆಯೆಂದು ತಿಳಿದುಬರುತ್ತದೆ. ಫಿರೋಜ ಗಾಂಧಿ ೧೯೩೦ರಲ್ಲಿ ಯೂವಿಂಗ್ ಕ್ರಿಶ್ಚಿಯನ್ ಕಾಲೇಜನ್ನು ಬಿಟ್ಟು ಶಾಸನಭಂಗ ಚಳವಳದಲ್ಲಿ ಸೇರಿದರು. ನಾಲ್ಕು ಸಲ ಈ ಸಂಬಂಧ ಶಿಕ್ಷೆಗೆ ಗುರಿಯಾಗಿರುವರು ೧೯೩೩ರಲ್ಲಿ ತಮ್ಮ ಅಭ್ಯಾಸವನ್ನು ಮುಂದುವರಿಸಲು ಅವರು ಹಿಂದುಸ್ಥಾನವನ್ನು ಬಿಟ್ಟು ಬ್ರಿಟನಿಗೆ ಹೊರಟರು. ಮೂರು ವರ್ಷಗಳ ವರೆಗೆ ಅವರು ಲಂಡನ್ ಸ್ಕೂಲ್ ಓಫ್ ಇಕನಮಿಕ್ಸನಲ್ಲಿ ಅಂತರ್‌ರಾಷ್ಟ್ರೀಯ ನ್ಯಾಯದ ಹಾಗೂ ರಾಜಕಾರಣದ ಸಂಬಂಧ ಅಭ್ಯಾಸ ಮಾಡಿದರು. ಅನಂತರ, ಅವರು ಲಂಡನಿನಲ್ಲಿರುವ ಅಂತರ್‌ರಾಷ್ಟ್ರೀಯ ವಿಷಯಕವಾದ ರಾಯಲ್ ಇನ್‌ಸ್ಟಿಟ್ಯೂಟನಲ್ಲಿ ಸೇರಿ ಅಭ್ಯಾಸ ಮಾಡಿದರು. ಲಂಡನ್ ಕೌಂಟಿ ಕೌನ್ಸಿಲಿನಲ್ಲಿ ಅಪ್ರೆಂಟಿಸ್ ಆಗಿದ್ದರು. ಫಿರೋಜಗಾಂಧಿ ಕೆಲವರ್ಷಗಳ ವರೆಗೆ ಯುರೋಪಿನಲ್ಲಿದ್ದರು. ಅಲ್ಲಿರುವಾಗ ಅನೇಕ ಭೂಭಾಗಗಳನ್ನು ಸಂಚರಿಸಿದರು. ಜಾಗತಿಕ ವಿದ್ಯಾರ್ಥಿ ಫೆಡರೇಶನ್ ಹಾಗೂ ಯುರೋಪಿನಲ್ಲಿರುವ ಹಿಂದೀ ವಿದ್ಯಾರ್ಥಿ ಫೆಡರೇಶನಿನ ವಿಶೇಷ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದರು. ಫ್ರೆಂಚರ ಸಾರ್ವತ್ರಿಕ ಮುಷ್ಕರ ನಡೆದ ಕಾಲದಲ್ಲಿ ಅವರು ನೇಶನಲ್ ಹೆರಾಲ್ಡ್ ಪತ್ರಿಕೆಯ ವಿಶೇಷ ಸುದ್ದಿಗಾರರಾಗಿದ್ದರು. ಆಗ ಅವರನ್ನು ಕೈದುಮಾಡಿ ಸ್ಥಾನಬದ್ಧರನ್ನಾಗಿ ಪ್ಯಾರಿಸಿನಲ್ಲಿ ಇಡಲಾಗಿತ್ತು. ಕೊನೆಗೆ ಅವರನ್ನು ಫ್ರಾನ್ಸಿನಿಂದ ಗಡಿಪಾರು ಮಾಡಲಾಗಿತ್ತು. ಸುಮಾರು ೬ ವರ್ಷಗಳ ವರೆಗೆ ಯುರೋಪಿನಲ್ಲಿದ್ದು ಕಳೆದ ಎಪ್ರಿಲ್ ತಿಂಗಳಲ್ಲಿ ಹಿಂದುಸ್ಥಾನಕ್ಕೆ ಮರಳಿದರು. ಅವರು ಪುನಃ ಕಾಂಗ್ರೆಸಿನೊಡನೆ ಸಂಬಂಧ ಬೆಳೆಸಿದ್ದಾರೆ. ಅವರು ಪತ್ರಿಕೋದ್ಯಮದಲ್ಲಿ ನುರಿತವರು.

ಸಿಪಾಯಿಗಳ ಅತ್ಯಾಚಾರಗಳು!

ಮುಂಬಯಿಯ ಒಂದು ಘಟನೆ

ಕುರುಬರ ಹಂಪಣ್ಣಾ ಮಾನ ರಕ್ಷಿಸಿದ

ಸಿಪಾಯಿಗಳ ಅತ್ಯಾಚಾರಗಳು!

- ಮುಂಬಯಿಯಲ್ಲಿ ನಡೆದ ಸಂಗತಿ.

ಹುಬ್ಬಳ್ಳಿಯ ಓರ್ವ ವಕೀಲರು ತಮ್ಮ ಕೆಲಸಕ್ಕಾಗಿ ಕೆಲವು ದಿವಸಗಳ ಹಿಂದೆ ಮುಂಬಯಿಗೆ ಹೋಗಿದ್ದರು. ಹಾಯ್‌ಕೋರ್ಟಿನಲ್ಲಿಯ ತಮ್ಮ ಕೆಲಸವನ್ನು ತೀರಿಸಿಕೊಂಡು ಯುನಿವ್ಹರ್ಸಿಟಿಯ ತೋಟದ ಕಡೆಗೆ ಹೋಗುವಾಗ ಓರ್ವ ತರುಣಿಯು ಗಾಬರಿಯಾಗಿ ಓಡುತ್ತ ಬಂದು ಈ ವಕೀಲರ ತೆಕ್ಕೆಗೆ ಬಿದ್ದು ಬದುಕಿಸಿರೆಂದು ಅಳಹತ್ತಿದಳು. ಅಷ್ಟರಲ್ಲಿ ಓರ್ವ ಸೋಲ್ಜರನು ಬಂದು ನನ್ನ ಹುಡುಗಿಯನ್ನು ಬಿಡು ಎಂದು ಆ ವಕೀಲರಿಗೆ ಬಲವಾಗಿ ಗುದ್ದಿದನು. ಕೂಡಲೇ ವಕೀಲರು ಹುಡುಗಿಯನ್ನು ಬೆನ್ನಿಗೆ ಹಾಕಿಕೊಂಡು ತಮ್ಮ ಬಲಗೈ ಮುಷ್ಟಿಯಿಂದ ಅವನ ಮೋರೆಯ ಮೇಲೆ ಜಡಿಯಹತ್ತಿದರು ಮತ್ತು ಅವನನ್ನು ಕೆಡಹಿದರು. ಅಷ್ಟರಲ್ಲಿ ಮತ್ತಿಬ್ಬರು ಸೋಲ್ಜರರು ಬಂದು ವಕೀಲರನ್ನು ಹೊಡೆಯಹತ್ತಿದರು. ಹಾಗೆಯೇ ಹೋರಾಡಹತ್ತಿದರು. ವಕೀಲರು ಹಿಂಜರಿಯಲಿಲ್ಲ. ಅಷ್ಟರಲ್ಲಿ ೩-೪ ಪಾರಸಿ ಯುವಕರು ಬಂದು ಸೋಲ್ಜರರನ್ನು ಸುತ್ತುಗಟ್ಟಿದರು. ಅಲ್ಲಿ ಹೋಗುತಿದ್ದ ಕೆಲವು ಕೂಲಿಕಾರರು ಬಂದು ಆ ಸೋಲ್ಜರರನ್ನು ಥಳಿಸಿದರು. ಸೋಲ್ಜರರು ಓಡಿಹೋದರು. ಈ ವಕೀಲರು ಆ ಹೆಣ್ಣುಮಗಳನ್ನು ಕರೆದುಕೊಂಡು ಹೋಗಿ ಅವರ ಮನೆಗೆ ಮುಟ್ಟಿಸಿದರು. ರೈಲ್ವೆ ಗಾಡಿಯಲ್ಲಿ ಒಮ್ಮೆ ಓರ್ವ ಪಠಾಣನು ಓರ್ವ ಹೆಣ್ಣುಮಗಳ ಅಪಮಾನ ಮಾಡಲಿಕ್ಕೆ ಪ್ರಯತ್ನಮಾಡಿದಾಗ ಧಾರವಾಡದ ಓರ್ವ ವಕೀಲರು ಅವನನ್ನು ಒಳಿತಾಗಿ ಥಳಿಸಿ ಅವನನ್ನು ಕ್ಷಮೆ ಬೇಡಲಿಕ್ಕೆ ಹಚ್ಚಿದರು.' ಸುಶಿಕ್ಷಿತರು ಇಂಥ ಪ್ರಸಂಗದಲ್ಲಿ ಧೈರ್ಯದಿಂದ ನಡೆದು ದುರ್ಬಲರ ಸಂರಕ್ಷಣೆ ಮಾಡತಕ್ಕದ್ದು ಅವಶ್ಯವಾಗಿದೆಂದು ಬೇರೆ ಹೇಳಬೇಕಾಗಿಲ್ಲ.

ರಾ. ಶ್ರೀ. ನ.

ಹೆಂಗಸರ ಮಾನರಕ್ಷಕ ಕುರುಬರ ಹಂಪಣ್ಣಾ

ಹಂಪಣ್ಣಾ ಕುರುಬಕವ, ಗುಂತಕಲ್ಲಿನ ಹತ್ತಿರದಲ್ಲಿದ್ದ ರೈಲ್ವೇ ಗೇಟೊಂದನ್ನು ಕಾಯುವುದೇ ಅತನ ಕಸಬು

1939ನೇ ವರ್ಷದ ಒಂದು ದಿನ ನಡೆದ ಘಟನೆ ಇದು. ವೆಲ್ಲಿಂಗ್‌ಟನ್‌ನಿಂದ ಸಿಕಂದರಾಬಾದ್ ಕಡೆಗೆ ಹೋಗುತ್ತಿದ್ದ ಸೇನಾಪತಿಯೊಂದು ಗುಂತಕಲ್ಲಿಗೆ ಬಂದು ಅಲ್ಲಿಯ ಕ್ಯಾಂಪಿನಲ್ಲಿ ತಂಗಿತ್ತು. ಸಾಯಂಕಾಲ ಅದೇ ಕ್ಯಾಂಪಿನ ಮಾರ್ಗವಾಗಿಯೇ ಒಬ್ಬ ಕುರುಬ ಜಾತಿಯ ಮುದುಕಿ ೨೦-೨೪ ವರ್ಷದ ಹೆಂಗಸೊಬ್ಬಳೊಡನೆ ತನ್ನ ಊರಿಗೆ ಹೊರಟಿದ್ದಳು. ಇವರನ್ನು ಕಂಡ ೫-೬ ಜನ ಯುವಕ ಯೋಧರು (ಪ್ರಾಯಶಃ ಬೀರ್ ಬಾಟ್ಲಿಯ ಸೇವನೆಯನ್ನು ಮುಗಿಸಿದ್ದರೆಂದು ಕಾಣುತ್ತದೆ.) ಅವರನ್ನು ಹಿಂಬಾಲಿಸಿದರು. ಭಯಗೊಂಡ ಆ ಹೆಂಗಸರು ಹತ್ತಿರದಲ್ಲಿಯೇ ಇದ್ದ ಹಂಪಣ್ಣನ ಗೇಟಿಗೆ ಓಡಿಹೋಗಿ ತಮ್ಮ ಮಾನ ಕಾಪಾಡಬೇಕೆಂದು ಅವನ ಬೆನ್ನಿಗೆ ಬಿದ್ದರು. ಹಂಪಣ್ಣಾ ಪಕ್ಕದಲ್ಲಿಯೇ ಇದ್ದ ತನ್ನ ಗುಡಿಸಲಿನಲ್ಲಿ ಅವರಿಗೆ ಅಡಕಿಕೊಳ್ಳುವಂತೆ ಹೇಳಿ ಒಳಗಿನಿಂದ ಅಗಳಿ ಹಾಕಿಸಿದ. ಬೆನ್ನಟ್ಟಿ ಬಂದ ಈ ಸೈನಿಕರು ಬಲಾತ್ಕಾರದಿಂದ ಬಾಗಿಲನೊದ್ದು ಒಳಗೆ ನುಗ್ಗಬೇಕೆಂದು ನೋಡಿದರು. ಹಂಪಣ್ಣಾ ಅಲ್ಲಿಯೇ ಬಿದ್ದಿದ್ದ ಬಡಿಗೋಲೊಂದನ್ನು ತೆಗೆದುಕೊಂಡು ಅವರಿಗೆ ಪ್ರಾಯಶ್ಚಿತ್ತ ಮಾಡುವುದಾಗಿ ಹೆದರಿಸಿದ. ಸೈನಿಕರು ಗಾಬರಿಗೊಂಡು ಪರಾರಿಯಾದರು, ಆದರೆ ಅವರಲ್ಲೊಬ್ಬ ತನ್ನ (ರಿವಾಲ್ವರ್) ಬಂದೂಕನ್ನು ತೆಗೆದು ಹಂಪಣ್ಣನ ತೊಡೆಗೆ ಹೊಡೆದ. ಗುತ್ತಿಯ ಆಸ್ಪತ್ರೆಗೆ ಚಿಕಿತ್ಸೆಗೆಂದು ಹೋಗಿದ್ದ ಹಂಪಣ್ಣ ಮರುದಿನವೇ ಮೃತನಾದ. ಪದ್ಧತಿಯಂತೆ ಹೈಕೋರ್ಟಿನಲ್ಲಿ ಅಪರಾಧಿಗಳ ವಿಚಾರಣೆಯಾಯಿತು. ಅವರ ಬಿಡುಗಡೆಯೂ ಆಗಿಹೋಯಿತು!

ಅಸಹಾಯ ಸ್ತ್ರೀಯರ ರಕ್ಷಣೆಗಾಗಿ ತನ್ನ ಪ್ರಾಣ ಕೊಟ್ಟ ಹಂಪಣ್ಣನ ಹೆಸರಿನಲ್ಲಿ ಗುತ್ತಿಯ ಜನರು ಒಂದು ಸ್ಮಾರಕವನ್ನು ಸ್ಥಾಪಿಸಿದರು.

ಜಿಲ್ಲಾ ಸಮಾಚಾರಗಳು

ಮಂಗಳೂರು

ರಾಯಲ್ ಇಂಡಿಯನ್ ನೇವಿ

ಇದಕ್ಕೆ 3-4-42 ಪ್ರಾತಃಕಾಲದಿಂದ ಸ್ಥಳೀಯ ಸೈಂಟ್ ಎಲಾಶಿಯಸ್ ಕಾಲೇಜಿನಲ್ಲಿ ರಿಕ್ರೂಟ್ ಮಾಡಲಾಗುವುದು.

ಜೋಡಾಟ

ಭಾರತದ ರಕ್ಷಣೆಯ ಸಹಾಯಾರ್ಥ ಮಂಗಳೂರು ಡಿವಿಜನು ಯುದ್ಧಕಾರ್ಯದ ಆರ್ಥಿಕ ಸಮಿತಿಯವರ ಆಶ್ರಯದಲ್ಲಿ ಹೆಡ್ ಕ್ವಾರ್ಟರ್ಸ್ ಡಿಪ್ಯೂಟಿ ಕಲೆಕ್ಟರ್‌ರವರ ಅಧ್ಯಕ್ಷತೆಯಲ್ಲಿ ಕಟೀಲು ಮತ್ತು ಮುಲ್ಕಿ ವೆಂಕಟ್ರಮಣ ಮೇಳಗಳ ದಶಾವತಾರದ ಜೋಡಾಟಗಳನ್ನು ತಾ. 14 ಮತ್ತು 15ರಂದು ಮದ್ರಾಸ್ ಗವರ್ನರರ ಯುದ್ಧ ನಿಧಿಯ ಬಗ್ಗೆ ಬಜಪೆ ಪಂಚಾಯತಿ ಕೋರ್ಟಿನ ಬಳಿಯ ಮೈದಾನಿನಲ್ಲಿ ಜರಗಿಸುವರು.

ಮುನ್ಸಿಪಲ್ ಮಹಮ್ಮಡನ್ ಹೈ. ಎ. ಶಾಲೆ

ಇದರ ವಾರ್ಷಿಕೋತ್ಸವವು ಶನಿವಾರ ಸಂಜೆ ಜಿಲ್ಲಾ ಕಲೆಕ್ಟರ್ ಶ್ರೀ ಎಂ. ಕರಮತುಲ್ಲಾ ಇವರ ಅಧ್ಯಕ್ಷತೆಯಲ್ಲಿ ಜರಗುವುದು

ಜಿಲ್ಲಾ ಪೋಲೀಸ್ ಸ್ಪೋರ್ಟ್ಸ್

ಕಳೆದ ಶನಿವಾರ ಇಲ್ಲಿನ ಪೋಲೀಸ್ ಮೈದಾನಿನಲ್ಲಿ ವರ್ಷಾವಧಿ ಜಿಲ್ಲಾ 'ಪೋಲೀಸ್ ಸ್ಪೋರ್ಟ್ಸ್'ಗಳು ಜರಗಿದುವು ಈ 'ಸ್ಪೋರ್ಟ್ಸ್'ಗಳಲ್ಲಿ ರಿಜರ್ವಿನವರೂ, ಜಿಲ್ಲೆಯ ಎಲ್ಲಾ ತಾಲೂಕುಗಳ ಪೋಲೀಸರೂ, ಸಿವಿಲ್ ಗಾರ್ಡರೂ, ಜಿಲ್ಲಾ ಅಧಿಕಾರಿಗಳೂ ಕೂಡ ಭಾಗವಹಿಸಿದ್ದರು. ಜಿಲ್ಲಾ ಜಡ್ಜರಾದ ಶ್ರೀ ಎಲ್. ಎಸ್. ಪಾರ್ಥಸಾರಥಿ ಅಯ್ಯರರು ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಕಲೆಕ್ಟರರ ಅರಿಕೆಯಂತೆ ಜಿಲ್ಲಾ ಪೋಲೀಸ್ ಸುಪರಿಂಡೆಂಟರ ಪತ್ನಿಯವರಾದ ಮಿಸೆಸ್. ಎಫ್ ಜೆ. ಬೆಟ್ಸಿರ್ ಅವರು ಆಟಪಾಟಗಳಲ್ಲಿ ಗೆದ್ದವರಿಗೆ ಬಹುಮಾನ ಹಂಚಿದರು. ಈ ಆಟಪಾಟಗಳನ್ನು ಯಶಸ್ವಿಯಾಗಿ ನೆರವೇರಿಸಲು ವ್ಯವಸ್ಥೆಗೊಳಿಸಿದವರನ್ನು ಜಿಲ್ಲಾ ಕಲೆಕ್ಟರರು ವಂದಿಸಿದರು

ಚೀನಾ ದಿನಾಚರಣೆ

ಕಳೆದ ಶನಿವಾರ ಇಲ್ಲಿನ ಪೋಲೀಸ್ ಮೈದಾನಿನಲ್ಲಿ ಜಿಲ್ಲಾ ಜಡ್ಜರ ಅಧ್ಯಕ್ಷತೆಯಲ್ಲಿ ಜಿಲ್ಲಾ ಯುದ್ಧ ಸಮಿತಿಯ ಆಶ್ರಯದಲ್ಲಿ ಚೀನಾ ದಿನಾಚರಣೆ ಜರಗಿತು ಚೀನಕ್ಕೂ ಭಾರತಕ್ಕೂ ಇರುವ ಸಾಂಸ್ಕೃತಿಕ, ಆತ್ಮಿಕ ಬಾಂಧವ್ಯ ಹಾಗೂ ಚೀನಕ್ಕೆ ನಾವು ಸಹಾಯ ಮಾಡಬೇಕಾದ ಆವಶ್ಯಕತೆ ಇವುಗಳ ಕುರಿತು ಜಿಲ್ಲಾ ಕಲೆಕ್ಟರ್, ಶ್ರೀ. ರಂಗನಾಥ ಪೂಂಜ, ಶ್ರೀ ಎಂ ಎಸ್ ಮಾಧವ ರಾವ್ ಇವರು ಮಾತಾಡಿದರು ಶ್ರೀ ಎಂ ವೆಂಕಟೇಶ ಪೈ ಅವರು ವಂದನಾರ್ಪಣೆ ನಡೆಸಿದರು

ದ. ಕ. ಸಹಕಾರಿ ಉದ್ಯೋಗಿಗಳ ಕೊ-ಒಪರೇಟಿವ್ ಸಂಘ

ಕಳೆದ ಶನಿವಾರ ಈ ಸಂಘದ ಜನರಲ್ ಬೋಡಿ ಮೀಟಿಂಗ್, ಸ್ಥಳೀಯ ಸೆಂಟ್ರಲ್ ಬ್ಯಾಂಕಿನಲ್ಲಿ ಶ್ರೀ ಬಿ. ವಾಮನ್ ರಾವ್ ಅವರ ಅಧ್ಯಕ್ಷತೆಯಲ್ಲಿ ಜರುಗಿ ಆಡಿಟ್, ವರದಿ ಲೆಕ್ಕಪತ್ರ, ಬ್ಯಾಲೆನ್ಸ್ ಶೀಟ್ ಮುಂತಾದುವು ಮಂಜೂರಾಗಿ ಶ್ರೀಗಳಾದ ಉಚ್ಚಿಲ ಗೋವಿಂದರಾವ್, ಟಿ. ನಾರಾಯಣ ರಾವ್, ಎಚ್ ರಾಮರಾಯ ಮಲ್ಯ, ಮುಕುಂದರಾವ್, ಜೆ. ಡಿ. ಸಿಲ್ವ ಇವರನ್ನು ಡೈರೆಕ್ಟರರನ್ನಾಗಿ ಚುನಾಯಿಸಲಾಯಿತು. ಶ್ರೀ ಕೆ. ಶ್ಯಾಮರಾವ್ ಅವರು ವಂದನಾರ್ಪಣೆ ನಡೆಸಿದರು.

ಹೆಂಗಸಿನ ಖೂನಿ

ಮದ್ಯದ ಅಂಗಡಿಗೆ ಮದ್ಯವನ್ನು ಒಯ್ಯುವ ಹೆಂಗುಸೊಬ್ಬಳನ್ನು, ಪಡೀಲಿನಬಳಿ ಕಾದುಕುಳಿತ್ತು ಒಬ್ಬ ಯುವಕನು, ಆಭರಣಗಳ ಆಸೆಯಿಂದ, ಕೊಲೆ ಮಾಡಿ ಅವನ್ನು ಮಾರಿ ಕೊನೆಗೆ ಈಗ ಆತನ ದಸ್ತಗಿರಿಯಾಗಿದೆ ಎಂದು ತಿಳಿದುಬರುತ್ತಿದೆ.

ಪ್ರಕಟಣೆ.

ಗೌಡಸಾರಸ್ವತ ಬ್ರಾಹ್ಮಣ ಸೇವಾ ಸಂಘ, ಮಂಗಳೂರು:

ಈ ಸಂಘದ ನಂಬ್ರ 14ನೇ ಉಪನಿಬಂಧನೆಯ ಮೇರೆಗೆ ಎಲ್ಲಾ ಮೆಂಬರರ 4ನೇ ಮಹಾಸಭೆಯನ್ನು ಇದೇ ಮಾರ್ಚ ತಿಂಗಳ 29ನೇ ಆದಿತ್ಯವಾರ ದಿವಸ ಬೆಳಿಗ್ಗೆ ಘಂಟೆ 10ಕ್ಕೆ ಮಂಗಳೂರು ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಕರೆಯಲಾಗಿದೆ. ಸದ್ರಿ ಮಹಾಸಭೆಯು ಮುಂದಿಡಬೇಕಾದ ಸೂಚನೆಗಳು ವ ಠರಾವುಗಳು ತಾ. 22—3—'42ರೊಳಗೆ ಸಂಘದ ಕಾರ್ಯದರ್ಶಿಯವರಿಗೆ ತಲ್ಪಿಸಬೇಕು.

ಮಹಾಸಭೆಯ ಮುಂದೆ ಈ ಕೆಳಗಿನ ವಿಷಯಗಳನ್ನು ಇಡಲಾಗುವುದು—

1. ಸಂಘದ 3ನೇ ವಾರ್ಷಿಕ ವರದಿ ಮತ್ತು ಜಮಾಖರ್ಚಿನ ತಖ್ತೆ. 2 ಸಂಘದ ನಂಬ್ರ 34 ಮತ್ತು 38ನೆಯ ಉಪನಿಬಂಧನೆಯ ಮೇರೆಗೆ ಈ ಕೆಳಗಿನ ಮೆಂಬರರು ಆಡಳಿತ ಮಂಡಳಿಯಿಂದ ನಿವೃತ್ತರಾಗುವರು ಮತ್ತು ಸದ್ರಿಯವರು ಮರುಚುನಾವಣೆಗೆ ಅರ್ಹರಾಗುವರು 1. ಶ್ರೀಗಳಾದ ಬಸ್ತಿ ರಾಮಯ್ಯ ಶೆಣೈ, 2. ವಿ. ವೆಂಕಟರಾವ್, 3. ಶಿವಗೂರು ಮಾಧವ್ ಕಾಮತ್, 4 ಎಸ್. ಉಪೇಂದ್ರ ಪೈ.

3 ಸಂಘದ ಉದ್ದೇಶಗಳಿಗನುಸಾರವಾಗಿ ಮುಂದಿನ ಕಾರ್ಯಕಲಾಪಗಳನ್ನು ನಿರ್ಣಯಿಸಲಾಗುವುದು 4. ಸಭಾಧ್ಯಕ್ಷರ ಅನುಮತಿಯಿಂದ ತಿಳಿಸಲ್ಪಡುವ ವಿಶೇಷ ಸೂಚನೆಗಳಿದ್ದರೆ ಅವುಗಳು.

(ಅಪ್ಪಣೆಯ ಮೇರೆಗೆ)

ಮಂಗಳೂರು, ಪಿ ಎಸ್. ಶೆಣೈ,
ತಾ 9-3-'42 ಸಂಘದ ಗೌ ಕಾರ್ಯದರ್ಶಿ

ಆರ್ತಚಿಕಿತ್ಸಾ ಭವನದ ವಾರ್ಷಿಕೋತ್ಸವ

ಈ ಭವನದ 11ನೆಯ ಅಧಿವೇಶನವು ಕಳೆದ ಆದಿತ್ಯವಾರ ಆ ಭವನದ ಮಹಡಿಯಲ್ಲಿ ಶ್ರೀ ಜಿನರಾಜ ಹೆಗ್ಗಡೆ ಎಂ. ಎಲ್. ಎ. (ಕೇಂದ್ರ) ಅವರ ಅಧ್ಯಕ್ಷತೆಯಲ್ಲಿ ಜರುಗಿತು. ಭವನದ ಮಾಲಕರಾದ ಡಾ। ಎಸ್. ಡಿ. ಸುವರ್ಣರು ಭವನದ ಪ್ರೋತ್ಸಾಹಕರನ್ನೂ ದಾತೃಗಳನ್ನೂ ಸ್ವಾಗತಿಸಿ ವಂದಿಸಿ, ಇಲ್ಲಿ ನಿತ್ಯವೂ ೧೫೦ ಮಂದಿ ರೋಗಿಗಳಿಗೆ ಚಿಕಿತ್ಸೆಯು ನಡೆಯುತ್ತಿದೆ ಎಂದೂ, ಧನ ಸಹಾಯವು ಇನ್ನಷ್ಟು ಆಗತ್ಯವೆಂದೂ, ಭವನದ ವೃತ್ತಾಂತವನ್ನು ನಿರೂಪಿಸಿದರು. ಚಿಕಿತ್ಸಾಲಯದ ವರದಿ ವಾಚನವಾಗಿ, ಈ ಭವನದ ಲೋಕಸೇವೆ, ದೊರೆಯಬೇಕಾದ ಧನ ಸಹಾಯ ಮೊದಲಾದುವುಗಳ ಕುರಿತು ಶ್ರೀ ಯಚ್ ಆನಂದ ರಾವ್, ಶ್ರೀಗಳಾದ ಕೆ. ಕೃಷ್ಣ ರಾವ್, ಎಚ್. ಭೀಮ ರಾವ್ ಮುಂತಾದವರು ಮಾತಾಡಿದ ಬಳಿಕ, ಅಧ್ಯಕ್ಷರು 'ಹೋಮಿಯೋ ಪತಿಕ್' ಚಿಕಿತ್ಸಾಕ್ರಮ, ಡಾ. ಸುವರ್ಣರ ಸೇವಾಧರ್ಮಗಳ ವಿಚಾರದಲ್ಲಿ ಭಾಷಣ ಕೊಟ್ಟರು.

ರಜೆ

ಮದ್ರಾಸ್ ಸರಕಾರದ ಹಂಗಾಮಿ ಕನ್ನಡ ಟ್ರಾನ್ಸ್ಲೇಟರ್ ಶ್ರೀ ಕೆ. ಮಹಾಬಲ ಶೆಟ್ಟರಿಗೆ ೩ ತಿಂಗಳ ರಜೆ ಕೊಡಲಾಗಿದೆ.

ವಿದ್ಯಾರ್ಥಿ ಸಂಘದ ಕನ್ವೆನ್ಶನ್ ಅಧ್ಯಕ್ಷರ ಪ್ರಕಟಣೆ

ಮಂಗಳೂರು ಸ್ಟುಡೆಂಟ್ಸ್ ಯೂನಿಯನಿನ ಅಧ್ಯಕ್ಷರಾದ ಶ್ರೀ ಕೆ. ಬಿ ಜಿನರಾಜ ಹೆಗ್ಡೆ, ಎಂ. ಎಲ್ ಎ (ಕೇಂದ್ರ) ಇವರು ಒಂದು ಪ್ರಕಟಣೆಯಲ್ಲಿ ಹೀಗೆ ತಿಳಿಸುತ್ತಾರೆ

ತಾ. 1-3-42ರಲ್ಲು ಬಿ ಇ. ಎಂ. ಹೈಸ್ಕೂಲಿನಲ್ಲಿ ಸ್ಟೂಡೆಂಟ್ಸ್ ಕನ್ವೆನ್ಶನ್ ಸೇರುತ್ತಲ್ಲದೆ, ಮೈದಾನಿನಲ್ಲಿ ಸೇರಿದ ಸಭೆಗೂ ಸ್ಟೂಡೆಂಟ್ಸ್ ಯೂನಿಯನಿಗೂ ಏನೂ ಸಂಬಂಧವಿಲ್ಲ. ಈ ಸಭೆಗಳು ಸೇರುವ ಮೊದಲು ಜನರಲ್ ಸೆಕ್ರೆಟರಿಯಿಂದ ಕೂಡಿದ ಇದರ ಅಧಿಕಾರೀ ವರ್ಗ ಹಾಗೂ ನನ್ನೊಳಗೆ ಆ ಕನ್ವೆನ್ಶನ್ ಸ್ಟುಡೆಂಟ್ಸ್ ಯೂನಿಯನಿನ ಜನರಲ್ ಬೋಡಿ ಮೀಟಿಂಗ್ ಆಗಲಾರದೆಂಬ ವಿಷಯ ಒಪ್ಪಿಗೆಯಾಗಿತ್ತು. ಹಾಗಾಗಿ ಕನ್ವೆನ್ಶನಿನಲ್ಲಿ ಪಾಸಾದ ಠರಾವು ಮಂಗಳೂರು ಸ್ಟುಡೆಂಟ್ಸ್ ಯೂನಿಯನಿಗೆ ಸಂಬಂಧಪಟ್ಟದ್ದಲ್ಲ.

ವಿದ್ಯಾರ್ಥಿಗಳು ತಮ್ಮ ಅಭಿವೃದ್ಧಿ ಹೊಂದುವ ಸಂಸ್ಥೆಯಲ್ಲಿ, ರಾಜಕೀಯ ಪಕ್ಷದ ಧೋರಣೆಯ ಸಲುವಾಗಿ ಭೇದವನ್ನು ತರಬಾರದಾಗಿ ನಾನು ವಿನಂತಿಸುತ್ತೇನೆ. ನಮ್ಮ ದೇಶದಲ್ಲಿ ಎಲ್ಲದಕ್ಕಿಂತಲೂ ಹೆಚ್ಚಾಗಿ ಐಕ್ಯವು ಆವಶ್ಯವಿರುವಾಗ ಮುಂದೆ ಒಳ್ಳೆಯ ವಾತಾವರಣವು ಉಂಟಾದೀತೆಂದು ನಾನು ಆಶಿಸುತ್ತೇನೆ"

ಮಂಗಳೂರು

ಸರ್ಕಲ್ ಕಾಂಗ್ರೆಸ್ ಕಮಿಟಿ ಸಭೆ ಕಾಂಗ್ರೆಸ್ ಕಚೇರಿಯಲ್ಲಿ ಜರಗಿ ಶ್ರೀ. ಕೊಂಚಾಡಿ ಕೇಶವ ಶೆಣೈಗಳ ಅಧ್ಯಕ್ಷತೆಯ ಸ್ಥಾನದಲ್ಲಿ ಶ್ರೀ. ಕೆ. ಈಶ್ವರ ಎಂ. ಎಲ್. ಎ. ಇವರನ್ನು ಆರಿಸಲಾಯಿತು.

ಬಾಲಾಜಿ ಟಾಕೀಸ್

ಇಲ್ಲಿ 'ವಸಂತಸೇನಾ' ಎಂಬ ಕನ್ನಡ ಚಿತ್ರವು ಇದೇ ತಾ. ೧೨ನೇ ಗುರುವಾರದಿಂದ ಅತ್ಯಂತ ಯಶಸ್ವಿಯಾಗಿ ೫ನೇ ವಾರ ಪ್ರದರ್ಶಿತವಾಗುತ್ತಿರುವುದು.

ಉಡುಪಿ

ಶ್ರೀ ಎ. ಎನ್. ಮಲ್ಲಾಪುರ ಎಂಬವರು ದಿ ಕೆನರಾ ಯಿಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್, ಇವರ ಮೇಲೆ ಹುಬ್ಬಳ್ಳಿ ಸಬ್ ಜಡ್ಜ್ ಕೋರ್ಟಿನಲ್ಲಿ ನಡೆಸಿದ L. C. No 257/1939ನೇ ವ್ಯಾಜ್ಯದ ತೀರ್ಪಿನ ಮೇಲೆ ಸಿಂಡಿಕೇಟಿನವರು ಮಾಡಿದ ಅಪ್ಪೀಲಿನಲ್ಲಿ ಸಿಂಡಿಕೇಟಿನವರಿಗೆ ಪೂರ್ಣ ಜಯವಾಗಿದೆಯೆಂತಲೂ, ಮೂಲ ಕೋರ್ಟಿನ ತೀರ್ಪು ಸಂಪೂರ್ಣ ರದ್ದುಮಾಡಿ ಎರಡೂ ಕೋರ್ಟಿನಲ್ಲಿ ಈ ಸಂಬಂಧವಾಗಿ ನಡೆದ ವ್ಯವಹರಣೆಗಳ ಕೋರ್ಟು ಖರ್ಚು ಕೂಡಾ ಬ್ಯಾಂಕಿನವರಿಗೆ ಕೊಡುವಂತೆ ಧಾರವಾಡ 1ನೇ ಕ್ಲಾಸ್ ಸಬ್ ಜಡ್ಜ್ ಕೋರ್ಟಿನಲ್ಲಿ ತಾ 25-2 1942ರಲ್ಲಿ ತೀರ್ಮಾನವಾಗಿದೆಯಾಗಿಯೂ ತಿಳಿದಿದೆ.

ಕಡೆಕಾರು:—ನಿಡಂಬೂರು ಪಂಚಾಯ್ತು ಬೋರ್ಡಿನ ಸೋಮವಾರದ ಹೊಸ ಸಂತೆ ಮಾರ್ಕೆಟಿನ ಪ್ರಾರಂಭೋತ್ಸವವು ತಾ ೨ರಂದು ನಡೆಯಿತು. ಮಾಗಣೆಯ ಶ್ರೀ ಜನಾರ್ದನ ದೇವರ ಮತ್ತು ಶ್ರೀ ಮಹಾಕಾಳಿ ಅಮ್ಮನವರ ಗಂಧಪ್ರಸಾದದೊಂದಿಗೆ ಮೆರವಣಿಗೆಯಿಂದ ನಿಡಂಬೂರು ಮಾಗಣೆಯ ಬೀಡಿನ ಬಲ್ಲಾಳರ ಆಗಮನ—ಅಭ್ಯರ್ಥನೆಗಳಾದ ಬಳಿಕ, ಡಾ। ಪಿ. ಜಿ. ಆಚಾರ್ಯರ ಅಧ್ಯಕ್ಷತೆಯಲ್ಲಿ ಕೂಡಿ ಒಂದು ಸಭೆಯಲ್ಲಿ ಶ್ರೀ. ಕಟ್ಪಾಡಿ ಜಗನ್ನಾಥ ಬಲ್ಲಾಳರಿಂದ ಈ ಸಂತೆಯ ಸಂಸ್ಥೆಯ ಉದ್ಘಾಟನವು ನೆರವೇರಿತು. ಬೋರ್ಡಿನ ಪ್ರೆಸಿಡೆಂಟರ ಸ್ವಾಗತವೂ, ಅಧ್ಯಕ್ಷರ ಆರಂಭ ಭಾಷಣವೂ, ಉದ್ಘಾಟಕರ ಉಪನ್ಯಾಸವೂ ಮುಗಿದ ಮೇಲೆ, ನಮ್ಮ ಬೀಡಿನ ಬಲ್ಲಾಳರು ದೇವರ ಮತ್ತು ತಮ್ಮ ಪರವಾಗಿ ಉಚಿತ ವಚನಗಳಿಂದ ಸಂಸ್ಥೆಯನ್ನು ಆಶೀರ್ವದಿಸಿದರು. ಬೋರ್ಡಿನ ಸ್ಥಾಪನೆಯ ಮತ್ತು ಆಶಯಗಳ ವಿಚಾರದಲ್ಲಿ ಜನಸಾಮಾನ್ಯದ ಸಹಕಾರವನ್ನೂ ಉತ್ಸವ ಭಾಗಿಗಳಿಗೆ ಕೃತಜ್ಞತೆಯನ್ನೂ ಬೋರ್ಡಿನ ಪ್ರೆಸಿಡೆಂಟರು ಬಯಸಿದುದನ್ನು ಅಧ್ಯಕ್ಷರು ಪುಷ್ಟೀಕರಿಸಿ ಸಭಾಕಾರ್ಯವನ್ನು ಪೂರೈಸಿದರು. ಹೊಸತಾದರೂ ಸಂತೆ ಬೆಳಗಿಂದ ಸಂಜೆಯ ವರೆಗೂ ಚೆನ್ನಾಗಿಯೇ ನಡೆಯಿತು.

ಪಾಣೆಮಂಗಳೂರು

ಅಖಿಲ ಕರ್ನಾಟಕದ ಬರಹಗಾರರಲ್ಲಿ

ಈ ಸರ್ಕಲಿನ ಪ್ರಥಮ ರಾಜಕೀಯ ಪರಿಷತ್ತಿನಂದು 'ಪರಿಷತ್ ಪತ್ರಿಕಾ' ಎಂಬ ಸಂಚಿಕೆಯೊಂದನ್ನು ಹೊರಡಿಸುವುದಾಗಿ ಪರಿಷತ್ತಿನ ಸ್ವಾಗತ ಸಮಿತಿಯವರು ನಿಶ್ಚೈಸಿರುವರು. ಅದರಲ್ಲಿ ಇಂದಿನ ರಾಜಕೀಯ ಪರಿಸ್ಥಿತಿ, ಗ್ರಾಮ ಪುನರುಜ್ಜೀವನ, ರಾಷ್ಟ್ರೀಯ ವಿದ್ಯಾಭ್ಯಾಸ, ಹರಿಜನೋದ್ಧಾರ, ವಿಧಾಯಕ ಕಾರ್ಯಕ್ರಮ ಮುಂತಾದ ವಿಷಯಗಳ ಬರಹಗಳನ್ನು ಸಂಗ್ರಹಿಸುವುದಾಗಿಯೂ ದೇಶೀಯ ಔಷಧಿ, ಕೃಷಿ ಕೈಗಾರಿಕೆ ವ್ಯಾಪಾರ, ಇತ್ಯಾದಿಗಳ ಜಾಹೀರಾತುಗಳನ್ನು ಹಾಕುವುದಾಗಿಯೂ ನಿರ್ಣಯಿಸಿರುವರು. ಬರಹಗಾರರೂ, ಜಾಹೀರಾತುದಾರರೂ ನೆರವಾಗಬೇಕಾಗಿ ವಿನಂತಿಯಿದೆ.

ನೀವು ಒಬ್ಬ ಅಂಗಡಿಗಾರನಾಗಿ, ಇಲ್ಲವೆ ಕಾರ್ಖಾನೆ ಕೆಲಸಗಾರರೇ ಆಗಿರಿ, ಗುಮಾಸ್ತರೋ ಕೆಲಸಗಾರರೋ, ಆಗಿದ್ದರೆ ಮಲಬದ್ಧತೆ ಅಜೀರ್ಣಗಳಾಗದಂತೆ ನೀವು ಅವಶ್ಯ ನೋಡಿಕೊಳ್ಳಬೇಕು. ಅಂತಹ ನೋವುಗಳಿಂದ ನಿಮ್ಮ ಆರೋಗ್ಯವು ಕೂಡಲೇ ಬಿದ್ದುಹೋಗುವುದು. ನೀವು ದುರ್ಬಲರಾಗುವಿರಿ ಕಾರ್ಯಶಕ್ತಿಯನ್ನು ಕಳಕೊಳ್ಳುವಿರಿ ನಿಮ್ಮ ಮೆದುಳು ಬಲಹೀನವಾಗುವುದು. ದಿನನಿತ್ಯ ತಂಪುಕರವಾದ ಎಂಡ್ರೂಸ್ ಲಿವರ್ ಸಾಲ್ಟನು ತೆಗೆದುಕೊಳ್ಳಿರಿ. ನಿಮ್ಮ ಶರೀರದೊಳಗಡೆಯನ್ನೂ ನಿರ್ಮಲವಾಗಿರಿಸಿ, ಅದೇ ನಿಮ್ಮ ಶರೀರ ಮತ್ತು ಮೆದುಳುಗಳನ್ನು ಶಕ್ತಿಯುತನನ್ನಾಗಿ ಮಾಡುವುದು. ಆಂಡ್ರೂಸ್ ಉತ್ತಮ ಶುಚಿತ್ವವನ್ನೊದಗಿಸುತ್ತದೆ.

ಅಂತರಂಗ ನೈರ್ಮಲ್ಯಕ್ಕೆ ದಿನ ನಿತ್ಯವು ಅಂಡ್ರೂಸ್ ಲಿವರ್ ಸಾಲ್ಟನ್ನು ಉಪಯೋಗಿಸಿರಿ.

ಆರೋಗ್ಯಕರ, ಶಕ್ತಿಕರವಾದ । ಪಾನೀಯವಿದೆ

ANDREWS
LIVER SALT



ರುಚಿಯಾದಾತ್ತದೆ
ತಂಪುಕೊಡುತ್ತದೆ
ಆನಂದವನ್ನುಂಟುಮಾಡುತ್ತದೆ.
ಶಕ್ತಿಕೊಡುತ್ತದೆ.
ಸಣ್ಣ ಸೈಜಿಗೆ 11 ಆಣೆ. ದೊಡ್ಡ ಸೈಜಿಗೆ 1-4-0

ಸಿನೆಮಾ ಪುಟ

ಅಶೋಕ ಕುಮಾರ್

ಕಲ್ಕತ್ತಾ ಪ್ರೊಡಕ್ಷನಿನ ಬಂಧು ಚಿತ್ರಕ್ಕೆ ಸೇರುವ ವಿಷಯ ಸುದ್ದಿ ಉಂಟಾಗಿತ್ತು. ಆದರೆ ಕಲ್ಕತ್ತೆಯಿಂದ ಆ ಸುದ್ದಿ ಸತ್ಯವಲ್ಲವೆಂದು ಬಂದಿದೆ.

• ನೇಶನಲ್ ಸ್ಟುಡಿಯೋ

ದವರು ಅವರ ಉದ್ಯೋಗಿಗಳ ಸಲುವಾಗಿ ಪ್ರಾಯಸ್ಥರ ಶಿಕ್ಷಣ-ಶಾಲೆಯೊಂದನ್ನು ಸ್ಟುಡಿಯೊದಲ್ಲಿ ತೆರೆದಿರುವರು. ಅಲ್ಲಿ ಕೆಲಸಕ್ಕಿರುವ ಜಂಮಂದಿಗೆ ಓದುಬರಹ ಕಲಿಸಲಾಗುವುದು

ಭಾರತಿ ಹಾಡಲಿಲ್ಲ?

ನ್ಯೂ ಥಿಯೇಟರ್ಸಿನ 'ಡೋಕ್ಟರ್' ಚಿತ್ರವನ್ನು ಕಂಡವರು, ಅದರಲ್ಲಿ ಅಭಿನಯಿಸುವ ಹೊಸ ತಾರೆ ಭಾರತಿಯ ಕುರಿತು ಆಕೆಯ ನಟನೆ ಗಾಯನಗಳಿಗಾಗಿ ಮನಸೋತಿದ್ದಾರೆ. ಹದಿನಾರು ವರ್ಷದ ಚೆಲುವೆ ಭಾರತಿಯನ್ನು ಅನೇಕರು ಕಾಲೇಜು ಹುಡುಗರು ಕಂಠೋಕ್ತ ಕೊಂಡಾಡಿದ್ದಾರೆ. ಆದರೆ ಹಂತ! ಅದರಲ್ಲಿನ ಗಾಯನ ಆವಳ ಕಂಠದಿಂದಲ್ಲವೆಂದು ದೀಪಾವಳಿ ಪತ್ರಿಕೆ ಬರೆಯುತ್ತಿದೆ. ಆದರೆ ಆಕೆ ಬಂಗಾಳೀ 'ಪ್ರತಿಶ್ರುತಿ'ಯಲ್ಲಿ ಹಾಡುತ್ತಾಳಂತೆ! ಆದರೆ ಇದರ ಸತ್ಯಾಂಶ ನ್ಯೂ ಥಿಯೇಟರ್ಸಿನವರೇ ಪ್ರಕಟಿಸುವರೆ?

'ಜೀವನ ನಾಟಕ'
ಕನ್ನಡ ಚಿತ್ರದಲ್ಲಿ ಹುಬ್ಳೀಕರ್

ಕನ್ನಡ ಸಾಮಾಜಿಕ ಚಿತ್ರವೊಂದರಲ್ಲಿ ಶಾಂತಾ ಹುಬ್ಳೀಕರ್ ಮತ್ತು ಆ. ನ. ಕೃಷ್ಣರಾವ್ ಅಭಿನಯಿಸುತ್ತಾರೆಂದು ನಾವು ಹಿಂದೆ ಪ್ರಕಟಿಸಿದ್ದೇವಷ್ಟೆ? ಆ ಚಿತ್ರದ ಹೆಸರು 'ಜೀವನ ನಾಟಕ' ಎಂದು ತಿಳಿದಿದೆ. ಗುಬ್ಬಿ ವೀರಣ್ಣನವರು ಇದನ್ನು ತಯಾರಿಸುವರೆಂದೂ, ಶಾಂತಾ ಹುಬ್ಳೀಕರಿಗೆ ಇವರ ಸಹಾಯಾರ್ಥ ೧೫೦೦೦ ರೂಪಾಯಿ ಸಂಬಳ ನಿರ್ಣಯವಾಗಿವೆಯೆಂದೂ ತಿಳಿದಿದೆ.

ಪ್ರಭಾತ ಚಿತ್ರ ಕಂಪೆನಿ

ಇವರ ವಿವಾದವು ಇನ್ನೂ ಕೊನೆಗೊಂಡಿಲ್ಲವಂತೆ. ಆದರೆ ಇಷ್ಟರಲ್ಲಿಯೇ ಹೊಸ ಚಿತ್ರ ತಯಾರಿಕೆಗೆ ಕೈಹಚ್ಚಿರುವರೆಂದೂ, ಎರಡು ಸಾಮಾಜಿಕ ಚಿತ್ರಗಳ ಪೈಕಿ ಒಂದರ ಹೆಸರು 'ರಾಮಶಾಸ್ತ್ರಿ' ಎಂದೂ ತಿಳಿದಿದೆ

ಬಾಂಬೇ ಟಾಕೀಸಿನವರ 'ವಸಂತ'

ಬಾಂಬೇ ಟಾಕೀಸಿನವರು 'ವಸಂತ' ಎಂಬ ಹೆಸರಿನ ಮುಂದಿನ ಚಿತ್ರದ ನಿರ್ಮಾಣಕ್ಕೆ ಸಿದ್ಧಗೊಳಿಸುತ್ತಿರುವರು. ಮುಮ್ತಾಜ್, ಶಾಂತಿ, ಪ್ರಮೀಳಾ, ಉಲ್ಹಾಸ್ ಇವರು ಪಾತ್ರವಹಿಸುತ್ತಾರೆ

ಇರಾಕಿನ ಭಾರತೀಯ ಸೈನಿಕರಿಗೆ

ತೋರಿಸುವ ಚಿತ್ರಗಳೆಂದರೆ ವಾನವಾರ್ಡದವರ ಸಾಹಸ ಚಿತ್ರಗಳು ಮಾತ್ರವೆಂದು ಸುದ್ದಿ

ಫಿರ್ ಮಿಲೇಂಗೇ

ಎಂಬೀ ಹೆಸರಿನ ಹೊಸ ಚಿತ್ರವನ್ನು ಮಿನರ್ವದವರು ತಯಾರಿಸುವರು. ಮೋತಿಲಾಲ್, ಸಬಿತಾ ಇವರು ನಟಿಸುತ್ತಾರೆ

ದತ್ತರ ಕೆಮರಾ ಚಮತ್ಕಾರ

ಜ್ಞಾನೇಶ್ವರದ ಕೆಮರಾಮೇನರಾದ ಶ್ರೀ ಪ್ರಹ್ಲಾದ್ ದತ್ತರ ಕೈಚಳಕವನ್ನು ಅಮೇರಿಕದ ಪ್ರಸಿದ್ಧ ಸಿನೆಮಾ ಪತ್ರಿಕೆ ಕೊಂಡಾಡಿದೆ

'ವಿಮೆನ್ ಓಫ್ ಇಂಡಿಯಾ' ಮಣ್ಣುಗೂಡಿತು

ಫಿಲ್ಮ್ ಎಡ್ವೈಸರಿ ಬೋರ್ಡಿನವರು ಇತ್ತೀಚೆಗೆ ತಯಾರಿಸಿದ 'ವಿಮೆನ್ ಓಫ್ ಇಂಡಿಯಾ' ಚಿತ್ರದ ವಿಷಯ ತಿಳಿಸುತ್ತಾ, ನಾವು ಕಳೆದ ಸಾರಿಯಲ್ಲಿ ಅದು ಅವಮಾನಕಾರಕ ಚಿತ್ರವೆಂದು ಬರೆದಿದ್ದೆವು. ಈಗ ಅದರ ಕುರಿತು ಉಂಟಾದ ಆಂದೋಲನದಿಂದ ಅದನ್ನು ಎಲ್ಲಿಯೂ ಪ್ರದರ್ಶನ ಮಾಡುವುದಿಲ್ಲವೆಂದು ಮಣ್ಣುಗೂಡಿಸಲಾಗಿದೆಯೆಂಬ ಸಂತೋಷದ ಸುದ್ದಿ ಬಂದಿದೆ.

ಆಚಾರ್ಯ ಆರ್ಟ್ ಪ್ರೊಡಕ್ಷನ್

ಎಂಬುವ ಹೊಸ ಸಂಸ್ಥೆ, ಬಂಧನ್, ನಯಾ ಸಂಸಾರಗಳ ನಿರ್ದೇಶಕ ಶ್ರೀ. ಎನ್. ಆರ್. ಆಚಾರ್ಯರು ಸ್ಥಾಪಿಸಿದ್ದು, ಅವರು ಈ ಸಂಸ್ಥೆಯ ಮೂಲಕ ನವೀನ ಮನೋರಂಜಕ ಚಿತ್ರಗಳನ್ನು ತಯಾರಿಸಲು ಆಶಿಸಿದ್ದಾರೆ. ಅವರು ಬೇಗನೇ ಎರಡು ಚಿತ್ರಗಳನ್ನು ತಯಾರಿಸಲಿರುವರೆಂದು ತಿಳಿದಿದೆ.

ಮೀನಾಕ್ಷಿ

ನ್ಯೂ ಥಿಯೇಟರ್ಸ್ ಇವರ ಚಿತ್ರ 'ಮೀನಾಕ್ಷಿ'ಯಲ್ಲಿ ಸಾಧನಾ ಬೋಸ್, ಕೆ. ಸಿ. ಡೇ, ಪನ್ನಾ, ದೇವಬಾಲಾ ಮೊದಲಾದವರ ಅಭಿನಯವಿದೆ. ಮಧು ಬೋಸರವರು ನಿರ್ದೇಶಕರು, ಪಂಕಜ ಮಲ್ಲಿಕರು ಸಂಗೀತ ನಿರ್ದೇಶಕರು.

• ನಯಾತಾರಾ

ಪ್ರಸಿದ್ಧ ಚಲಚ್ಚಿತ್ರ ಲೇಖಕ ಶ್ರೀ ಕೆ. ಎ. ಅಬ್ಬಾಸರ 'ನಯಾತಾರಾ' ಕಥೆಯನ್ನು ನವಯುಗ ಚಿತ್ರಪಟದವರು ಪಡಕೊಂಡಿರುವರೆಂದೂ ಶೀಘ್ರದಲ್ಲೇ ಅದು ಸ್ನೇಹಪ್ರಭಾಳ ಅಭಿನಯದೊಡನೆ ಚಿತ್ರೀಕರಿಸಲ್ಪಡುವುದೆಂದೂ ಸುದ್ದಿ

ಏಕರಾತ್

ಶಾಲಿಮಾರ್ ಪಿಕ್ಚರ್ಸಿನವರ ಏಕರಾತ್ ಚಿತ್ರ ಈಗ ಪ್ರಸಿದ್ಧವಾಗಿ ಕೀರ್ತಿ ಪಡೆದಿದೆ. ಹೊಸ ಸಿನೆಮಾ ನಟಿ ನೀನಾ ಎಂಬಾಕೆ ಇದರಲ್ಲಿ ಪೃಥ್ವೀರಾಜನೊಡನೆ ನಟಿಸುತ್ತಾಳೆ

'ಅಪ್ನಾ ಘರಿ'ನ ಅವಘಡ

ಸಿರ್ಕೋ ಕಂಪೆನಿಯವರು ತಯಾರಿಸಿ, ಶಾಂತಾ ಆಪ್ಟೆ ಅಭಿನಯಿಸಿದ 'ಅಪ್ನಾ ಘರ್' ಚಿತ್ರವು ಬೊಂಬಾಯಿಯ ಕೃಷ್ಣ ಚಿತ್ರ ಮಂದಿರದಲ್ಲಿ ಪ್ರದರ್ಶಿತವಾಗುವಾಗ, 'ಮೆಜಿಸ್ಟಿಕ್'ನವರು ವ್ಯಾಜ್ಯವಾಡಿದರು, ಆ ಚಿತ್ರವನ್ನು ತಮಗೆ ಕೊಡಲು ಒಪ್ಪಿದುವುದಾಗಿ, ಹೇಗಾದರೂ ಈಗ ಮೆಜಿಸ್ಟಿಕ್‌ನವರಿಗೆ ಸಿನೆಮಾ ಪ್ರವರ್ತಕರು ರೂ. ೨೦,೦೦೦ ಕೊಡುವುದೆಂದು ತೀರ್ಮಾನವಾಗಿ 'ಅಪ್ನಾ ಘರ್' ಕೃಷ್ಣ ಚಿತ್ರಮಂದಿರದಲ್ಲೇ ಪ್ರದರ್ಶಿತವಾಗುತ್ತಿದೆ

'ಜೂಲಾ' ಚಿತ್ರದ ಮೇಲೆ ಆಕ್ಷೇಪ

ಇದು ಬೊಂಬಾಯಿ ರೋಕ್ಸಿ ಟಾಕೀಸಿನಲ್ಲಿ ಪ್ರದರ್ಶಿಸಲ್ಪಡುತ್ತಿದ್ದಾಗ ಆ ಚಿತ್ರವು ಆಕ್ಷೇಪಾರ್ಹವಾಗಿದೆಯೆಂದು ಗಲಭೆಯುಂಟಾಯಿತು. ಆಕ್ಷೇಪದ ಕಾರಣ ಇಂತಿದೆ. ಒಂದು ನರ್ತನ ಸಂದರ್ಭದಲ್ಲಿ ಮುಮ್ತಾಜ್ ಅಲಿ ಮತ್ತು ಬಹಾರಿ ಹಾಡುವರು 'ಜೂಲಾ ದೇಕೆ ಚೋಲಿ' ಎಂದು, ಅದು ಆಕ್ಷೇಪಾರ್ಹವೆಂದು ಬೊಂಬಾಯಿಯ ಅನ್ಸಾರಿ ಮತ್ತು ಮೋಮಿನ್ ಸಮಾಜದವರ್ ಚಿತ್ರ ಪ್ರವರ್ತಕರಾದ ಬೊಂಬಾಯಿ ಟಾಕೀಸಿನವರಲ್ಲಿ ಹೇಳಿದರು. ಹೀಗೆ ಹೇಳಿದ ಮರುದಿನ ಗಲಭೆ ಆಯಿತು. ಚಿತ್ರವು ಸೆನ್ಸರಿನಿಂದ ಮಂಜೂರಾಗಿದ್ದರೂ ಒಂದು ಸಮಾಜದ ಆಕ್ಷೇಪವುಂಟೆಂದು ತಿಳಿದು ಬೊಂಬೇ ಟಾಕೀಸಿನವರು ಆ ಅಂಶವನ್ನು ತೆಗೆದುಹಾಕಿದರು. ಈಗ ಚಿತ್ರವು ಎಂದಿನಂತೆ ಪ್ರದರ್ಶಿತವಾಗುತ್ತಿದೆ

ಮುನ್ನಿ ಅಜುರ್

ಈತನು ನ್ಯೂ ಥಿಯೇಟರ್ಸನ್ನು ಬಿಟ್ಟು ನೇಶನಲ್ ಸ್ಟುಡಿಯೋವನ್ನು ಸೇರಿರುವನಾಗಿ ವದಂತಿ.

ಶಾಂತಾ ಆಪ್ಟೆಗೆ
೮೪,೦೦೦ ರೂ. ಸಂಬಳ

ಅಪ್ನಾ ಘರ್ ಚಿತ್ರದ ಸಲುವಾಗಿ ಶಾಂತಾ ಆಪ್ಟೆಗೆ ೮೪,೦೦೦ ರೂಪಾಯಿ ವೇತನ ನಿಶ್ಚಯವಾಗಿದೆಯಂತೆ. ಎಂದರೆ ತಿಂಗಳೊಂದರ ೧೪,೦೦೦ ರೂಪಾಯಿಗಳೆಂದು ವ

ನಮ್ಮ ನಮ್ಮೊಳಗೆ

ಚಿತ್ರಾ ಪಿಕ್ಚರ್ಸಿನವರು 'ನಮ್ಮ ನಮ್ಮೊಳಗೆ' ಎಂಬ ಹೆಸರಿನ ಚಿತ್ರವನ್ನು ತಯಾರಿಸುತ್ತಾರೆ. ಇದರಲ್ಲಿ ಲೀಲಾ ಚಿಟ್ನಿಸ್, ಪಹಾರಿ ಸನ್ಯಾಲ್, ದಾತೆ, ಹರಿಶಿವದಾಸಾನಿ ಇವರು ಅಭಿನಯಿಸುವರು.

ಯಾವ ಆಲೋಚನಾಪರ ಮನುಷ್ಯನೂ

ತನಗೆ ಅತ್ಯಂತ ಪ್ರಿಯತಮವಾದ ತನ್ನ ಸಂಸಾರ, ತನ್ನ ಮನೆ, ತನ್ನ ಬಾಳೀ ಸುರಕ್ಷತೆ ಇವುಗಳು ಈದಿನ ಮಹಾಪಾಯಕ್ಕೆ ಗುರಿಯಾಗಿವೆಯೆಂಬುದನ್ನು ತಿಳಿಯದಿರನು. ಅಲ್ಲದೆ, ಆತನು ಅಮೂಲ್ಯವಾದ ಪ್ರಾಣವನ್ನೂ ಸ್ವಾತಂತ್ರ್ಯವನ್ನೂ ಸಂರಕ್ಷಿಸಬಲ್ಲನು. ಅವನು ದೇಶರಕ್ಷಣೆಯ ಶ್ರಮವನ್ನು ಹೆಚ್ಚಿಸುವುದರ ಮೂಲಕ ಹಿಂದೂಸ್ಥಾನದ ಬಲವನ್ನು ವೃದ್ಧಿಪಡಿಸಲು ಸಹಾಯಮಾಡಬಲ್ಲನು— ಆದರೆ-ಆಲಸ್ಯವಿಲ್ಲದೆ ಕಾರ್ಯೋನ್ಮುಖನಾಗಬೇಕು. ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟುಗಳನ್ನು ಕೊಳ್ಳಲು ಈಗಲೇ ಮುಂದಾಗು

ಪ್ರತಿ ೧೦ ರೂಪಾಯಿನ ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟಿಗೂ ರೂ ೩/೯/- ಲಾಭ ಬರುವುದು

ಪೂರ್ತಿ ವಿವರಗಳು ಪೋಸ್ಟಾಫೀಸಿನಿಂದ

C

G.I. 74. Kn

"NACET"
ನೆಸೆಟ್ ಬ್ಲೇಡುಗಳು

ನಿಮ್ಮ ಅತ್ಯುತ್ತಮ ಶೇವಿಂಗ್ ಸಾಧನ

ಕಡಿಮೆ ಕ್ರಯದ ಬ್ಲೇಡುಗಳಲ್ಲಿ ಕ್ಷೌರ ಮಾಡಲು ಸರಿಯಾಗುವುದಿಲ್ಲ. ಮತ್ತು ಪೆಕೆಟಿನಲ್ಲಿಯೂ ಒಳ್ಳೆಯ ವಸ್ತು ಕೆಟ್ಟ ವಸ್ತುಗಳಿರುತ್ತವೆ. ನೆಸೆಟ್ ಬ್ಲೇಡುಗಳು ಕ್ರಯದಲ್ಲಿಯೂ ಹದವಾಗಿದ್ದು ಪ್ರತಿಯೊಂದೂ ಅತ್ಯುತ್ತಮವಾಗಿರುವುದು. ಸರಿಯಾಗಿ ಶುಚಿಯಾಗಿ ಕ್ಷೌರ ಮಾಡುವುದು. ಅವು ಬಹುಕಾಲದಿಂದ ಪ್ರಸಿದ್ಧವಾಗಿವೆ. ಇವರ ಸಲುವಾಗಿಯೇ ಮಾರುಕಟ್ಟೆಯ ಬ್ಲೇಡುಗಳನ್ನು ಉಪಯೋಗಿಸಿರಿ

ವಿಜ್ಞಾನಯುಗ

ಮೈಕ್ರೊ ಫಿಲ್ಮ್

ಯುದ್ಧದ ದೆಸೆಯಿಂದ ಕಾಗದದ ಆವಶ್ಯಕತೆ ಹೆಚ್ಚಿದ್ದರಿಂದ ಬ್ರಿಟನ್ನಿನಲ್ಲಿ ಈಗ ಹಲವು ರೆಕಾರ್ಡುಗಳನ್ನು ಮೈಕ್ರೋ ಫೋಟೋ ತೆಗೆದು ಅವುಗಳನ್ನು ಕಾಗದವಾಗಿ ಉಪಯೋಗಿಸಲಾಗುತ್ತದೆ. ಮೈಕ್ರೋ ಫೋಟೊದಿಂದ ಒಂದು ದೊಡ್ಡ ದಿನ ಪತ್ರಿಕೆಯು ಸಣ್ಣ ಟೀ ಕಪ್ಪಿನಲ್ಲಿರಿಸುವಷ್ಟು ಸಣ್ಣದಾಗುತ್ತದೆ. ಅನೇಕ ಪುಸ್ತಕ, ಹಸ್ತಪ್ರತಿ ರೆಕಾರ್ಡು ಮೊದಲಾದವುಗಳನ್ನು ಹೀಗೆ ಮೈಕ್ರೊ ಫಿಲ್ಮಿನಿಂದ ಫೋಟೋ ತೆಗೆದು ಭದ್ರವಾಗಿರಿಸಲಾಗಿದೆ. ಯುದ್ಧಕ್ಕಿಂತ ಮೊದಲು ಹೀಗೆ ಮೈಕ್ರೋ ಫೊಟೋಗ್ರಫಿ ತೆಗೆಯಲು ಒಂದು ಪುಟಕ್ಕೆ ಅರ್ಧ ಪೆನ್ನಿ ಖರ್ಚು ತಗಲುತ್ತಿತ್ತು!

ಒಪರೇಶನಿನಿಂದ ಮಾತಾಡುವುದು

ಯುದ್ಧವು ಮನುಷ್ಯನಿಗೆ ಕಷ್ಟವನ್ನುಂಟು ಮಾಡುವುದರೊಡನೆ ಅನೇಕ ಬಗೆಯ ಹೊಸ ಹೊಸ ಶೋಧಗಳಿಗೆ ಆಸ್ಪದ ಕೊಟ್ಟಿದೆ. ಡಾಕ್ಟರರು ಸರ್ಜನರು ತಮ್ಮ ಬುದ್ಧಿ ಶಕ್ತಿಗಳನ್ನು ಉಪಯೋಗಿಸಲು ಸಂದರ್ಭವನ್ನುಂಟುಮಾಡಿದೆ. ರೋಯಿಸ್ಟನ್ ಕರ್ಟಿಸ್ ಎಂಬ ೭ ವರ್ಷದ ಹುಡುಗನಿಗೆ ವಿಮಾನಧಾಳಿಯಿಂದ ತಲೆಬುರುಡೆ ಒಡೆದುಹೋಯಿತು. ಆತನಿಗೆ ಮಾತನಾಡಲು ಆಗುತ್ತಲೇ ಇರಲಿಲ್ಲ. ಆತನನ್ನು ಒಬ್ಬ ಪ್ರಸಿದ್ಧ ಸರ್ಜನರು ಪರೀಕ್ಷಿಸಿ ತಲೆಯ, ಒಪರೇಶನು ಮಾಡುವಂತೆ ಉಪದೇಶಿಸಿದರು. ಒಪರೇಶನು ಯಶಸ್ವಿಯಾಗಿ ನಡೆಯಿತು. ತಲೆಯೊಳಗೆ ನೆತ್ತರಿನ ಗಟ್ಟಿ ಒಂದು ನಿಂಬೆಹುಳಿಯಷ್ಟು ದೊಡ್ಡದಾಗಿದ್ದು ಅದರಿಂದ ಮಿದುಳಿಗೆ ಅತಂಕವುಂಟಾಗಿತ್ತು. ಅದನ್ನು ತೆಗೆಯಲು ಆತನು ಮೊದಲಿನಂತೆ ಮಾತನಾಡಲು ಆರಂಭಿಸಿದನು.

ನಾಡಿ ಬಡಿತ

ಮಗುವಿನ ನಾಡಿ ಬಡಿತ ಸರಾಸರಿ ಮಿನಿಟಿಗೆ ೧೪೦ ಮಧ್ಯಪ್ರಾಯದಲ್ಲಿ ಸಾಧಾರಣ ಸ್ಥಿತಿಯಲ್ಲಿ ೭೨, ಮುದುಕನಾದಂತೆ ಅದು ಹೆಚ್ಚಾಗುವುದು ಗಂಡಸರಿಗಿಂತ ಹೆಂಗಸರ ನಾಡಿಬಡಿತ ಜೋರು. ಸಣ್ಣ ಮನುಷ್ಯರಲ್ಲಿಯೂ ಅದು ಜೋರಾಗಿರುವುದು. ಒಳ್ಳೆಯ ಊಟಗಾರರಲ್ಲಿ ಅದು ಕಡಿಮೆ. ಶರೀರದ ಉಷ್ಣ ಒಂದು ಡಿಗ್ರಿ ಹೆಚ್ಚಿದಂತೆ ೧೦ ಹೊಡೆತ ಹೆಚ್ಚುವುದು. ಬೆದರಿಕೆ ಆಯಾಸಗಳಾದಾಗಲೂ ನಾಡಿ ಬಡಿತ ಅಧಿಕವಾಗುವುದು.

ಗ್ಲಾಸಿನಲ್ಲಿ ಓಕ್ಸಿಜನ್

ಗ್ಲಾಸಿನಲ್ಲಿ ತೂಕದಿಂದ 46% ಓಕ್ಸಿಜನ್ ಇದೆಯೆಂತ ವೈಜ್ಞಾನಿಕರು ಬಹು ಹಿಂದೆಯೇ ತಿಳಿದಿದ್ದರು. ಆದರೆ ಇದು ಟ್ರಾನ್ಸ್ ಪರೆಂಟ್ ಪದಾರ್ಥದ ಮೂಲಕ ಹೇಗೆ ಪ್ರಸಾರಣೆಯಾಗುತ್ತಿದೆಯೆಂಬುದನ್ನು ಅವರು ವಿವರಿಸಲಾರದಾಗಿದ್ದರು. ಅಮೇರಿಕದ ಓಪ್ಟಿಕಲ್ ಕಂಪೆನಿಯ ಡಾಕ್ಟರ್ ಅಲೆಕ್ಸಿಸ್ ಫಿರಾಕಸ್ ಎಂಬವರು ಈಗ ಆ ವಿಷಯವನ್ನು ವಿವರಿಸಿ ಹೇಳುತ್ತಾರೆ.

ಗಂಡಂದಿರನ್ನು ಬಲೆಯೊಳಗೆ ಹಾಕುವುದು!

ಚಿಕಾಗೋದಲ್ಲಿರುವ ಸೆಂಟ್ರಲ್ ವೈ ಎಂ. ಸಿ ಎ. ಕಾಲೇಜಿನ ಮಾನಸಿಕ ಶಾಸ್ತ್ರಜ್ಞರಾದ ಡಾಕ್ಟರ್ ರೋಬರ್ಟ್ ಎನ್ ಮೆಕ್‌ಮರಿ ಎಂಬವರು, ಹೆಂಗುಸರು ಎಂತಹ ಗಂಡಸರನ್ನಾದರೂ ತಮ್ಮ ಬಲೆಯೊಳಗೆ ಹಾಕಿ ಅವರನ್ನು ನಾಯಿಗಳಂತೆ ಮಾಡಿಬಿಡಬಲ್ಲರು ಎಂದು ತಿಳಿಸುತ್ತಾರೆ. ಅದೇ ಸಂಸ್ಥೆಯ ಮಿಸೆಸ್ ಎಲ್ವಿನ್ ಮಿಲಿಸ್ ಡುವಾಲ್ ಎಂಬವರು ಹೆಂಗುಸರ ಆ ಪ್ರಕೃತಿಯ ವಿಷಯ ಎಚ್ಚರಿಕೆ ಕೊಟ್ಟು ಯಾವ ಗಂಡುಸರು, ಹೆಂಗುಸರ ಮೋಹದ ಬಲೆಗೆ ಬಿದ್ದು ನಾಯಿಗಳಂತೆ ಆಗಿಬಿಡುತ್ತಾರೊ ಅಂಥವರನ್ನು ನಿಜವಾಗಿಯೂ ಹೆಂಗುಸರು ಮದುವೆಯಾಗಬಾರದೆಂದೂ, ಹಾಗಿದ್ದವರು ಗಂಡಂದಿರಾಗಲು ಯೋಗ್ಯರಲ್ಲವೆಂದೂ ತಿಳಿಸಿದ್ದಾರೆ.

ವಿಚಿತ್ರ ಪ್ರಪಂಚ

ಕೈಗಂಟನ್ನು ಗ್ಲಾಸಿನಿಂದ ಮಾಡಿದರೆ?

ಒಬ್ಬ ಮನುಷ್ಯನ ಕೈಗಂಟು ಗ್ಲಾಸಿನಿಂದ ಮಾಡಿದ್ದಾಗಿದ್ದರೆ ಆತನು ಒಂದು ಕಾರನ್ನು ಕೈಯಲ್ಲಿ ಎತ್ತಿ ತೂಗಾಡಿಸಬಲ್ಲನು ಎಂಬುದಾಗಿ ಅಮೆರಿಕನ್ ಗ್ಲಾಸ್ ವರ್ಕ್ಸಿನ ಡೈರೆಕ್ಟರ್ ಡಾ। ಯುಜಿನ್ ಸಿ. ಸುಲಿವನ್ ಎಂಬವರು ತಿಳಿಸುತ್ತಾರೆ. ಗ್ಲಾಸಿಗೆ ಅಷ್ಟು ಶಕ್ತಿಯಿರುವುದು, ಇತರ ಯಾವುದೇ ಪದಾರ್ಥಗಳಿಗೂ ಇಲ್ಲದಷ್ಟು ತೀಕ್ಷ್ಣತೆ ಅದಕ್ಕಿದೆಯೆಂದು ಅವರ ಅಭಿಪ್ರಾಯ. ಎಷ್ಟೇ ಒತ್ತಾಟಕ್ಕಾದರೂ ಅದು ಮಣಿಯಲಾರದೆಂದು ಅವರು ಹೇಳುತ್ತಾರೆ. ಗ್ರೆನೈಟ್ ಅಥವಾ ಕೊಂಕ್ರಿಟಗಿಂತಲೂ ಅದು ಗಟ್ಟಿಯಾಗಿದೆಯಂತೆ. ಹಾಗಾಗಿ "ಇಟ್ಟಿಗೆ ಕಾಂಕ್ರಿಟಿನ ಬದಲು ಗ್ಲಾಸುಗಳ ಉಪಯೋಗ ಹೆಚ್ಚಾಗತೊಡಗಿದೆ.

ಸುಲ್ತಾನನಾದನು ಗುಲಾಮ!

ಗುಲಾಮನಾಗಿ, ಡಿಲ್ಲಿಯ ಅರಮನೆಯಲ್ಲಿ ನೀರು ಹೊರುತಿದ್ದ ಬಾಲ್ಬನನೆಂಬ ಟರ್ಕಿ ಹುಡುಗನು, ಮೆಲ್ಲಮೆಲ್ಲನೆ ಪ್ರಾಮುಖ್ಯ ಅಧಿಕಾರಗಳನ್ನು ಪಡೆದು ಕೊನೆಕೊನೆಗೆ ಸೇನಾಧಿಪತಿಯಾಗಿ, ಸುಲ್ತಾನನ ಮಂತ್ರಿಯಾಗಿ ಅಂತ್ಯದಲ್ಲಿ ಡಿಲ್ಲಿಯ ಸುಲ್ತಾನನೇ ಆದನು. ಆತನು ವಿದ್ಯೆಗೆ ಹೆಚ್ಚಿನ ಪುರಸ್ಕಾರ ಕೊಡುತ್ತಿದ್ದನು. ಯಾವಾಗಲೂ ಗಂಭೀರ ವೃತ್ತಿಯವನಾಗಿದ್ದನು. ಒಳ್ಳೆಯ ಗುಣವಂತನೂ ಸದಾಚಾರಿಯೂ, ಯಾವುದೇ ಸಂದರ್ಭದಲ್ಲಿಯೂ ತಪ್ಪಿಹೇಳದವನೂ ಆಗಿದ್ದನು. ಅಂತಹ ಗುಣವಿಶೇಷಗಳಿದ್ದುದರಿಂದಲೇ ಗುಲಾಮನಾಗಿದ್ದವನು ಸುಲ್ತಾನನಾದನಲ್ಲವೆ?

೪೧ ಫೀಟು ಎತ್ತರದ ಹೊಗೆಸೊಪ್ಪಿನ ಗಿಡ

ವು ಅಮೇರಿಕದಲ್ಲಿ ಈಗ ಬೆಳೆಯುತ್ತದೆಂದು ತಿಳಿದಿದೆ. ಅಲ್ಲಿನ ಕೃಷಿ ಇಲಾಖೆಯವರು ಇದನ್ನು ಬೆಳೆಸಿ ಪ್ರದರ್ಶಿಸಿದರು. ಅವುಗಳ ಬೀಜವನ್ನು ಅಂಡೀಸಿನಿಂದ ತಂದು ಸ್ಥಳೀಯ ಬೀಜಗಳೊಡನೆ ಸೇರಿಸಲಾಯಿತಂತೆ!

ಕನ್ನಡ ಗ್ರಂಥಗಳಿಗೆ ಬಹುಮಾನ

ಮದರಾಸಿನ ಸ್ಕೂಲ್‌ಬುಕ್ ಆಂಡ್ ಲಿಟರೇಚರು ಸೊಸೈಟಿಯವರ ವಾರ್ಷಿಕಾಧಿವೇಶನವು, ಕಳೆದ ಫೆಬ್ರವರಿ ತಾ. ೨೪ನೇ ಸೋಮವಾರ ಸಂಜೆಗೆ ನಡೆದು, ಈ ಕೆಳಗೆ ಕಂಡ ಎಂಟು ಕನ್ನಡ ಪುಸ್ತಕಗಳಿಗೆ ಒಟ್ಟು ೪೧೫ ರೂ. ಸಹಾಯ ದ್ರವ್ಯ ಕೊಡಬೇಕೆಂದು ಗೊತ್ತಾಗಿದೆ. (i) ಗೀತಾ ಗಾಂಭೀರ್ಯ (ಪ್ರೊ। ಆರ್ ವಿ. ಜಹಗೀರದಾರ್) ರೂ. ೧೦೦. (ii) ಜ್ಞಾನೋಪಾಸನೆ (ಸಂ. ಶ್ರೀ। ಬುರ್ಲಿ ಬಿಂದು ಮಾಧವಾಚಾರ್ಯರು) ರೂ ೭೫. (iii) ಪರಮಾಣು (ಶ್ರೀ। ಆರ್. ರಂಗಸ್ವಾಮಿ) ರೂ. ೭೫. (iv) ವಯ್ಯಾರಿ (ಶ್ರೀ। ಗೋರೂರು ರಾಮಸ್ವಾಮಯ್ಯಂಗಾರ್) ರೂ. ೫೦. (v) ಶೂರ್ಪಾಲಿಯ ಆಚಾರ್ಯರು (ಶ್ರೀ। ಕಟ್ಟೆ ಶೇಷಾಚಾರ್ಯ) ರೂ. ೩೫. (vi) ಶತಕತ್ರಯ (ಆಸ್ಥಾನಮಹಾ ವಿದ್ವಾನ್ ಶಾಂತಿರಾಜ ಶಾಸ್ತ್ರಿಗಳು) ರೂ. ೩೦. (vii) ಶರೀರ ಶಿಕ್ಷಣ (ಶ್ರೀ। ನಾಡಿಗೇರ ಕೃಷ್ಣರಾವ್) ರೂ. ೨೫. (viii) ಅಷ್ಟಾಂಗ ಹೃದಯ—ಸೂತ್ರ ಸ್ಥಾನ (ಶ್ರೀ। ಅದ್ಯ ಅನಂತಾಚಾರ್ಯ) ರೂ. ೨೫—ಇದಲ್ಲದೆ, ಈ ವರ್ಷದಲ್ಲಿ ಇಂಗ್ಲೀಷಿಗೆ ರೂ. ೪೦೦, ತಮಿಳಿಗೆ ರೂ. ೩೭೫, ಮಲೆಯಾಳಕ್ಕೆ ರೂ. ೨೦೦ ಮತ್ತು ತೆಲುಗಿಗೆ ರೂ. ೧೦೦ ಕೊಟ್ಟರು. ಹೀಗಾಗಿ ಕನ್ನಡಕ್ಕೆ ಮಿಕ್ಕ ಎಲ್ಲ ಭಾಷೆಗಳಿಗಿಂತ ಹೆಚ್ಚು ಹಣ ಬಂದ ಹಾಗಾಯಿತು.

ವಂಚನೆಯಿಂದ ಸ್ವೊತ್ತು

೭ ವರ್ಷ ಶಿಕ್ಷೆ

ವಂಚನೆಯಿಂದ ಪಡೆದ ಸೊತ್ತುಳ್ಳವರಿಗೆ, ಹಾಗೆ ಪಡೆಯಲು ಸಹಾಯಮಾಡುವವರಿಗೆ ೭-ವರ್ಷ ಶಿಕ್ಷೆ ವಿಧಿಸಲಾಗುವುದೆಂದು ಸಾರಲಾಗಿದೆ.



ನಾವೆಲವರೂ ಅದನ್ನು
ಉಪಯೋಗಿಸುತ್ತಿದ್ದೇವೆ!

ಅಜ್ಜಯಿಂದ ಹಿಡಿದು ಸಣ್ಣ ಮಗುವಿನ ತನಕ ಕುಟುಂಬದ ಸಮಸ್ತರಿಗೂ ತಮ್ಮ ಮೈಯ ಚರ್ಮವನ್ನು ಅಂದವಾಗಿರಿಸಲು ಕುಟಿಕೂರಾ ಟಾಲ್ಕಮ್ ಪೌಡರು (Cuticura Talcum Powder) ಆಗತ್ಯವಾಗಿದೆ. ಕುಟಿಕೂರಾ ಟಾಲ್ಕಮ್ (Cuticura Talcum) ಚರ್ಮವನ್ನು ತಂಪಾಗಿರಿಸಿ ಮನಸ್ಸಿಗೆ ಅಹ್ಲಾದವನ್ನುಂಟುಮಾಡುತ್ತದೆ. ಇದಕ್ಕೆ ಇದರ ಔಷಧಿಯುಕ್ತವಾದ ಗುಣವೇ ಕಾರಣವಾಗಿರುತ್ತದೆ. ಮೈಗೆ ತುರಿಗಜ್ಜಿಗಳುಂಟಾದಲ್ಲಿ ಇದು ಕೂಡಲೇ ಗುಣಪಡಿಸಿ ತಂಪಾಗಿರಿಸುತ್ತದೆ ಮಾತ್ರವಲ್ಲದೆ ಬೆವರನ್ನು ಹೀರುವ ಗುಣವುಳ್ಳದ್ದಾಗಿರುತ್ತದೆ. ಸಣ್ಣ ಮಕ್ಕಳಿಗೆ ಇದರಲ್ಲಿ ಉತ್ತಮ ಗುಣವನ್ನು ಕಂಡ ಡಾಕ್ಟರರು ಇದನ್ನೆ ಶಿಫಾರಸು ಮಾಡುತ್ತಾರೆ. ಕುಟಿಕೂರಾ ಪೌಡರಿನ (Cuticura Talcum) ಸುಗಂಧಪೂರಿತ ಪರಿಮಳವು ಅನೇಕ ಗಂಟೆಗಳ ತನಕ ಬಾಳುವುದು. ನಿಮ್ಮ ಅನುನಿತ್ಯದ ಉಪಯೋಗಕ್ಕೆ ಇದು ಎಷ್ಟು ಪ್ರಯೋಜನಕಾರಿಯೆಂದು ಕಂಡುಕೊಳ್ಳಿರಿ. ಇಂದೇ ಒಂದು ಟಿನ್ನನ್ನು ಕೊಂಡುಕೊಳ್ಳಿರಿ. ಮುಖಕ್ಷೌರದ ನಂತರ ಕುಟಿಕೂರಾ ಟಾಲ್ಕಮ್ (Cuticura Talcum) ಬಹಳ ಹರ್ಷದಾಯಕವಾದುದು.

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರಿನಲ್ಲಿಯೂ ಮಾರಲ್ಪಡುತ್ತದೆ.

ಕುಟಿಕೂರಾ ಟಾಲ್ಕಮ್ ಪೌಡರ್

CUTICURA TALCUM POWDER

ಚೈತನ್ಯ ಮತ್ತು ಹೊಸ
ಹುರುಪು

ಸವೆದುಹೋದ ನರಗಳಿಗೆ ಚೈತನ್ಯ ಕೊಡಲು ರಕ್ತವನ್ನು ವೃದ್ಧಿ ಮಾಡಲು ಮತ್ತು ನಿಮಗೆ ತೇಜಸ್ಸನ್ನುಂಟುಮಾಡಲು ಪಂಡಿತ ಡಿ. ಗೋಪಾಲಾಚಾರ್ಲುರವರ 'ಜೀವಾಮೃತಂ' ಅದ್ವಿತೀಯವಾದದ್ದಾಗಿದೆ. 'ಜೀವಾಮೃತ'ವು ಆಶ್ಚರ್ಯ ರೀತಿಯಲ್ಲಿ ನಿಮ್ಮ ಎಲ್ಲಾ ನರಗಳಿಗೂ ಹೊಸ ಚೈತನ್ಯವನ್ನು ಕೊಟ್ಟು, ನೀವು ಸಂತೋಷವನ್ನು ಅನುಭವಿಸಲು ಸಹಕಾರಿಯಾಗಿದೆ.

ಜೀವಾಮೃತ

ಆಯುರ್ವೇದಾಶ್ರಮಂ — ಮದರಾಸು.

Bhuvanendra Products Limited,

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitual abortion and other uterine troubles Must be commensed soon after conception and continued up to the time of delivery.

"ಭುವನೇಂದ್ರ ಗರ್ಭಪಾಲ"

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವವಿಧದ ದೋಷಗಳನ್ನು ಗುಣಪಡಿಸುವ ದಿವ್ಯಔಷಧಿ. ಗರ್ಭವತಿಯೆನಿಸಿದೆಂದಿನಿಂದ ಪ್ರಸವಕಾಲದ ವರೆಗೆ ಸೇವಿಸುವುದು ಅತ್ಯುತ್ತಮ

ಸ್ಥಳೀಯ ಸ್ಟಾಕಿಸ್ಟ ವ ಏಜೆಂಟರು: –
(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಷೈ, ರಥಬೀದಿ (3) ದಿ ಕರ್ನಾಟಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ| ಯಂ ಎಸ್. ಪ್ರಭು, M. B B. S. ಸಿ ಪಿ ಸಿ ಬಿಲ್ಡಿಂಗ್ಸ್ (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್.

ಕಟಪಾಡಿ, ದ. ಕನ್ನಡ.

ಡಿಪೊ—1 ಮರಾರ ಗಲ್ಲಿ ಹುಬ್ಬಳ್ಳಿ.
, 2. 36 ಫ್ಯಾಕ್ರೋಫ್ಟ್ ರೋಡ್, ಟ್ರಿಪ್ಲಿಕೇನ್, ಮದರಾಸು

The Bank of Mangalore Limited

HEAD OFFICE	*BRANCHES*
Mangalore.	Moodabidri & Padubidri

ANNOUNCEMENT

On and from 1st February 1942, fixed deposits will be accepted at the following attractive rates

One year	4%
Two years or above	4½%

Interest Payable Quarterly

ಸರಕಾರದ ಹೊಸ ಪಾರಪಟ್ಟಿಗನುಸಾರವಾಗಿ ಬರೆದ

ನವೀನ ಭೂವಿವರಣೆ

ವಾಸುದೇವರಾವ್, ಬಿ. ಎ ಎಲ್ ಟಿ (Dip Geography)
(ಭೂಗೋಳ ಶಾಸ್ತ್ರದಲ್ಲಿ ಡಿಪ್ಲೊಮಾ ಪಡೆದವರು)

ಈ ಪುಸ್ತಕಗಳನ್ನು ಪಡಕೊಂಡಲ್ಲಿ ವಿದ್ಯಾರ್ಥಿಗಳಿಗೆ ಎಟ್ಲಾಸ್ ಕೊಂಡುಕೊಳ್ಳುವ ಅವಶ್ಯವಿಲ್ಲ.

ಪ್ರತಿ ಪುಸ್ತಕದಲ್ಲಿ ಬಣ್ಣಬಣ್ಣದ ಭೂಪಟಗಳಿವೆ.

ಅನೇಕಾನೇಕ ಚಿತ್ರಪಟಗಳಿಂದ ಕೂಡಿದ್ದು, ಪ್ರತಿ ಪಾಠದ ಅಂತ್ಯದಲ್ಲಿ ಅಭ್ಯಾಸಗಳನ್ನೂ ಮಾದರಿ ಪ್ರಶ್ನೆಗಳನ್ನೂ ಕೊಟ್ಟಿದೆ

4ನೆಯ ಪುಸ್ತಕ 6 ಆಣೆ, 5ನೆಯ ಪುಸ್ತಕ 7 ಆಣೆ 6, 7 ಮತ್ತು 8ನೆಯ ಪುಸ್ತಕಗಳು ಅಚ್ಚಿನಲ್ಲಿವೆ.
ಪುಸ್ತಕಗಳು ಬೇಕಾದಲ್ಲಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.

ಕಡಿಮೆ ಖರ್ಚು | ಮಂಗಳೂರಿನಿಂದ - ಬೆಂಗಳೂರು ತಿರುಪತಿ, ಮದರಾಸು. | ಅತಿ ಶೀಘ್ರ ಪ್ರಯಾಣ

ಬಸ್ಸ್ ಪ್ರಯಾಣವು

ಅತೀ ಸುಖಕರ! **ನಿರಾಯಾಸಕರ!!** **ಮನೋಲ್ಲಾಸಕರವಾಗಿದೆ!!!**

ಊರುಗಳ ಬದಲಾವಣೆ! ನೋಟಗಳ ಬದಲಾವಣೆ! ಜನತೆಯ ಸಂಸರ್ಗ! ಆಯಾಸ ಅನುಕೂಲತೆ!

ಇವೆಲ್ಲವೂ ಬಸ್ಸ್ ಪ್ರಯಾಣದಲ್ಲಿವೆ.

ಪ್ರಯಾಣಿಕರ ಹೆಚ್ಚಿನ ಪ್ರೋತ್ಸಾಹದೊಡನೆ ಇನ್ನೂ ಹೆಚ್ಚಿನ ಸೌಕರ್ಯಗಳನ್ನು ಒದಗಿಸುವೆವು.

JOINT MANAGERS,

The Combined Booking Agency, MANGALORE. | **The Joint Booking Office,** KODIALBAIL.

ಬಿಡಿ ಸಂಚಿಕೆ ಬೆಲೆ ಒಂದಾಣೆ | ವಾರ್ಷಿಕ ಚಂದಾ ರೂ. 3-0-0 | ಅಂಚೆ ವೆಚ್ಚ ಸೇರಿ ರೂ. 2—13—0 | *Regd. No. M 3460*

ಸ್ವದೇಶಾಭಿಮಾನಿ

[ಸಂಪುಟ 36] ತಾರೀಕು 13—3—1942 [ಸಂಚಿಕೆ 11]

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ದಮ್ಮು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ. **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

CONFIDENCE

IS A GREAT ASSET IN BUILDING BUSINESS.

The Bombay Life Assurance Co. Ltd.

Has to its credit such Confidence earned by its progress and service of over 33 years

It, therefore, pays you to insure or to represent by applying to:—

KOCHIKAR BROTHERS, LTD.,

Chief Agents for South India, Including Indian States, UDIPI.

Or any of their Branches at:—

MANGALORE,——CALICUT——MADRAS,

TRIVANDRUM,——BANGALORE,——and BOMBAY.

N. B: Take advantage of our free advice based on 32 years experience

ಇಂದು ಮಿಲಿಯುಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

★

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

Estd 1906

ಸ್ವದೇಶಾಭಿಮಾನಿ

SWADESHABHIMANI

KANNADA ILLUSTRATED WEEKLY

NOTICE

In the Court of the District Munsif of Mangalore

O. S. No. 515/1941

Between:—

Sandliamma . . . Plaintiff.

and

1. Puthu Gowda, 2. Baba Gowda, 3. Sonnu Gowda, 4. Abbas alias Ambachu Beary, 5. Bayyu, 6. Vasu-minor by guardian adlitem Sri P. Ramakrishna Malli, Advocate . Defendants.

To

The Defendants 1 to 5.

Please take notice that the Plaintiff has filed the above suit for the recovery of maintenance due to her and the suit stands posted to 28-3-42 in the above court at 10.30 A. M. The defendants may appear on the said date and contest the same or else it will be decided in their absence.

(By order of court)

Mangalore } **A. Shanker Alva,**
18-3-1942 } Vakil for Plaintiff.

NOTICE

In the Court of the Subordinate Judge of South Kanara

R. E. P. No. 18/1941.
O. S. No. 58/1937

Between

Deog Cutinha— *Petitioner*

and

Baba shetty and others— *Respondents*

To

The 1st Respondent Baba Shetty son of Giriamma Shedthi, residing at Honapady of Sooda village, Karkal Taluk.

Please take notice that in the above named suit the Petitioner the decree-holder has applied for the sale of the immoveable property more fully described in the sale papers. You are hereby informed that the 20th day of March 1942 has been fixed for settling the terms of the proclamation of sale.

(By order)

(sd) **L. G. Pais**, B. A., B. L.
Vakil for Petitioner.

Mangalore, 14-3-1942.

ವರ್ಣಭೇದ ಹೋಗಬೇಕು!

ಬ್ರಿಟನಿನ ಪ್ರಸಿದ್ಧ ಪತ್ರಿಕೋದ್ಯಮಿ ಹಾನೆನ್ಸ್ವವರು ಒಂದು ಲೇಖನದಲ್ಲಿ ಬ್ರಿಟಿಷರು ಕಪ್ಪು ಜನರ ವಿಷಯವಾಗಿ ವರ್ಣಭೇದ ಮಾಡಿದ್ದರಿಂದ ಮಲಯಾ ಬರ್ಮಾಗಳಲ್ಲಿ ಈ ಪ್ರಮಾದವಾಯಿತೆಂದೂ, ಭಾರತದ ವಿಷಯದಲ್ಲಾದರೂ ಅಂತಹ ಭೇದಬುದ್ಧಿಯಿಡಬಾರದೆಂದೂ ಉಪದೇಶಿಸುತ್ತಾರೆ.

ಈ ದಿನ ನಿನ್ನ ಹಲ್ಲುಗಳನ್ನು ಮೆಕ್ಲೀನ್ ಮಾಡಿದೆಯಾ?

ಆಹಾ! ನೀನು ಬುದ್ಧಿವಂತಳೇ ಸರಿ.

ಈ ಸಣ್ಣ ಹುಡುಗಿಯನ್ನು ನೋಡಿ ಬುದ್ಧಿ ಕಲಿತುಕೊಳ್ಳಿ! ಮಕ್ಲೀನ್ ಪೆರಾಕ್ಸೈಡ್ ಟೂತ್‌ಪೇಸ್ಟಿನಿಂದ ನಿಮ್ಮ ಹಲ್ಲುಗಳು ಬೆಳ್ಳಗೆ ಮಿಂಚುವಂತೆಯೂ ಹಲ್ಲಿನ ಗಾರೆಯು ಗಟ್ಟಿಯಾಗಿ ಆರೋಗ್ಯಯುತವಾಗಿಯೂ ಮತ್ತು ಬಾಯಿ ಚೊಕ್ಕಟವಾಗಿಯೂ ಮತ್ತು ಇಂಪಾಗಿಯೂ ಆಗುತ್ತದೆ. ಅದೇ ನಿಮಗೆ ಬೇಕಾದ ಟೂತ್‌ಪೇಸ್ಟ್. ಬೆಳಿಗ್ಗೆಯಾದರೂ ಸರಿ, ರಾತ್ರಿಯಾದರೂ ಸರಿ

ರಶ್ಯಾದ ಮೇಲೆ ಜಪಾನಿ ದಾಳಿ ಮಾಡುವುದೇ?

ಮುಂದಿನ ತಿಂಗಳಲ್ಲಿ ಜಪಾನ್ ಮತ್ತು ಜರ್ಮನಿ ಈ ಎರಡು ರಾಷ್ಟ್ರಗಳು ರಶ್ಯಾದ ಮೇಲೆ ದಾಳಿಯನ್ನಾರಂಭಿಸುವವೆಂದು ವರದಿ ಬರುತ್ತಿದೆಯೆಂದು ಅಂಕಾರಾ ರೇಡಿಯೋ ಹೇಳುತ್ತಿದೆ. ಮುಂದಿನ ವಸಂತಕಾಲದಲ್ಲಿ ರಶ್ಯವನ್ನು ಪೂರ್ಣ ಧ್ವಂಸಮಾಡಬೇಕೆಂದು ಹಿಟ್ಲರನ ಉದ್ದೇಶವಿದೆಯಾಗಿ ತಿಳಿಯಬಹುದು. ಎಪ್ರಿಲ್ ಮಧ್ಯಭಾಗದಲ್ಲಿ ಜರ್ಮನಿ ರಶ್ಯದ ಮೇಲೆ ಆಕ್ರಮಣ ಆರಂಭಿಸಬಹುದೆಂದು ನಂಬಲಾಗಿದೆ.

ಡಾಕ್ಟರರು ಮತ್ತು ನರ್ಸುಗಳು ಜಾಂಬಕ್‌ನ್ನು ಉಪಯೋಗಿಸಿ ಅದೇ ಉತ್ತಮವೆಂದು ಶಿಫಾರಸು ಮಾಡಿದ್ದಾರೆ

ಪ್ರಸಿದ್ಧ ವಿಷಹಾರೀ ಚರ್ಮಲೇಪ

ಗಾಯ ಮತ್ತು ಪ್ರಥಮದ ಚಿಕಿತ್ಸೆಗೆ ಜಾಂಬಕ್ ಅತ್ಯುತ್ತಮವೆಂದು ಅರ್ಧ ಶತಮಾನದಿಂದ ಪ್ರಸಿದ್ಧವಾಗಿದೆ. ಇದನ್ನು ನರ್ಸರು ಡಾಕ್ಟರರು ತುರಿಕಜ್ಜಿ, ವಿಷಗಾಯ, ಬಾವು, ಕಾಲುನೋವು ಮೊದಲಾದವುಗಳಿಗೆ ಉಪಯೋಗಿಸಹೇಳುತ್ತಾರೆ. ಇದು ಕೂಡಲೇ ನೋವನ್ನು ಕಡಿಮೆಮಾಡಿ ಹುಣ್ಣನ್ನು ಗುಣಪಡಿಸುವುದು. ಜ್ಹಾಂಬಕ್ ಕಲೆಯುಳಿಯದಂತೆ ಗುಣಪಡಿಸುವುದು. ಜ್ಹಾಂಬಕ್ ಲೇಪಕ್ಕೆ ರೂಪಾಯಿ ಒಂದು ಅಥವಾ ರೂಪಾಯಿ ಎರಡು ಜ್ಹಾಂಬಕ್ ಪೌಡರಿಗೆ ಒಂದು ರೂಪಾಯಿ.

ಏಜಂಟ್ಸ್:—
ಮೆಸರ್ಸ್ ದಾಥಾ ಎಂಡ್ ಕೊ.,
ಪಿ. ಟಿ. ಮದರಾಸು.

ಜಾಂಬಕನ್ನು ಉಪಯೋಗಿಸಿರಿ

ZAM-BUK

ಪ್ರಾಣಿಕೊಬ್ಬು ವಿರಹಿತವಾದುದು

THE VIJAYA BANK, LIMITED.

Head Office: MANGALORE.

BRANCHES:

KADRI-MANGALORE, HAMPANKATTA-MANGALORE, UDIPI, COONDAPUR, KARKAL, KAUP, & BRAHMAVAR.

SEASON DEPOSITS

are now accepted at all our Offices, at 4% per annum, for or more months, maturing on 31st July, 1942.

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

R. E. P. 835/41.

ರಾಮು ಆಚಾರಿ . . . . ಅರ್ಜದಾರ,

ಮತ್ತು

ಶಿವರಾಮಯ್ಯ ಕರಿಡಾ . ರೆಸ್ಪಾಂಡೆಂಟರು,

1ನೇ ರೆ. ಶಿವರಾಮಯ್ಯ-ಪರಮೇಶ್ವರಯ್ಯರ ಮಗ ಮಂಗಳೂರು ತಾಲೂಕು ಸಜೀಪ ಮೂಡಗ್ರಾಮದ ಕೋಳಕೆಯಬೈಲಿನಲ್ಲಿರುವವರಿಗೆ—

ಮೇಲ್ಕಂಡ ಅರ್ಜದಾರನು ಡಿಕ್ರಿಯಲ್ಲಿ ಜವಾಬ್ದಾರಿಯಿರುವ ಸ್ಥಿರಾಸ್ತಿ ಏಲಂ ಕುರಿತು ದಾಖಲು ಮಾಡಿದ ಏಲಂ ಇಸ್ತಿಹಾರಿನ ಶರ್ತಗಳನ್ನು ನಿರ್ಣೈಸುವರೆ ತಾ. 25-3-42ಕ್ಕೆ ಇಟ್ಟಿರುತ್ತಾರೆ. ಈ ಕುರಿತು ನಿಮಗೇನಾದರೂ ಆಕ್ಷೇಪಣೆಯಿದ್ದರೆ ಸದ್ರಿ ದಿವಸ ಮೇಲಿನ ಕೋರ್ಟಿನ ಮುಂದೆ ಹಗಲು 10½ ಗಂಟೆಗೆ ಹಾಜರಾಗಿ ಉದಾಹರಿಸತಕ್ಕದ್ದು. ಹಾಗೆ ಹಾಜರಾಗದಿದ್ದರೆ ನಿಂಬ್ರರ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು.

(By order of court)

ಮಂಗಳೂರು } **S. NARSAPAYA,**
18-3-'42 } Pleader for Petitioner.

ಸುಭಾಸ ಬೋಸರು ಜಪಾನಿನಲ್ಲಿ?

ಲಂಡನಿನ 'ಡೈಲಿ ಹೆರಾಲ್ಡ್'ನಲ್ಲಿ ಈ ಸುದ್ದಿ ಇದೆ—"ಭಾರತದ ಹಿಂದಿನ ರಾಜಕೀಯ ಮುಂದಾಳು ಚಂದ್ರಸುಭಾಸ ಬೋಸರು ಟೋಕಿಯೋದಲ್ಲಿ 50 ಜನ 'ಇಂಡಿಯನ್ ಇಂಡಿಪೆಂಡೆನ್ಸ್ ಪಾರ್ಟಿ'ಯ ಪ್ರತಿನಿಧಿಗಳೊಡನೆ ಬಂದಿಳಿದುಕೊಂಡಿರುವರೆಂದು ರೋಮ್ ರೇಡಿಯೋ ಹೇಳುತ್ತದೆ."

ಮಡಗಾಸ್ಕರಿಗೆ ಅಪಾಯ!

ಬಂದೋಬಸ್ತಿನಿಂದ ತಿಳಿದ ಜಪಾನೀ ಸೈನಿಕಮಂಡಳಿ ಮಡಗಾಸ್ಕರಿಗೆ ಹೊರಟಿದೆ, ಮಡಗಾಸ್ಕರು ಹಿಡಿವ ಬಗ್ಗೆ ಜಪಾನರು ಪ್ರಯತ್ನಿಸುತ್ತಿದ್ದಾರೆ.

HALFTONE & LINE BLOCK MAKING UNDERTAKEN

Sharada Press, MANGALORE.

"ಸ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

20—3—1942] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ. ೨೦—೩—೧೯೪೨]

ಸಮರಭೂಮಿಯ ಸಂಚಾರ

ಇತ್ತೀಚೆಗೆ ಸಂಗ್ರಾಮರಂಗದಲ್ಲಿ ಸ್ವಲ್ಪ ವಿರಾಮವುಂಟಾದಂತೆ ತೋರುತ್ತದೆ. ಈಗ ಹಿಂದಿನ ಕೆಲವಾರಗಳ ಯುದ್ಧ ಘಟನೆಗಳ ಸಿಂಹಾವಲೋಕನ ಮಾಡುವುದು ಅಪ್ರಕೃತವಾಗಲಾರದು. ಜಪಾನರು ಪೆಸಿಫಿಕ್ಕಿನಲ್ಲಿ ಕಳೆದ ಮೂರು ತಿಂಗಳಿಂದ ಮಾಡಿದ ಯಶಸ್ವೀ ಸಂಗ್ರಾಮವು ಪ್ರಪಂಚವನ್ನೇ ಬೆರಗುಗೊಳಿಸಿದೆ. ದ್ವಿತೀಯ ಮಹಾಯುದ್ಧದ ಇತಿಹಾಸದಲ್ಲಿಯೇ ಇದು ಬಹಳ ಅಪೂರ್ವವಾದುದಾಗಿದೆ. ಬ್ರಿಟನು ಅಮೇರಿಕ ಮೊದಲಾದ ಪ್ರಬಲ ರಾಷ್ಟ್ರಗಳನ್ನು ಇಂದು ಏಕಕಾಲದಲ್ಲಿ ಎದುರಿಸಿ ನಿಂತ ಜಪಾನು, ಒಂದೇ ಸವನೆ ಮುನ್ನುಗ್ಗಿ, ಮಿಂಚಿನ ಯುದ್ಧ ಗತಿಯಿಂದ ಫಿಲಿಪ್ಪಯನ್, ಹಾಂಕಾಂಗ್, ಮಲಯ, ಡಚ್ ಈಸ್ಟ್ ಇಂಡೀಸ್ ಮತ್ತು ಬರ್ಮಾ ದೇಶದ ಬಹುಭಾಗವನ್ನೂ ಆಕ್ರಮಿಸಿ ಸ್ವಾಧೀನಪಡಿಸಿಕೊಂಡದ್ದು ಅದ್ಭುತ ಸಾಹಸವಲ್ಲದೆ ನಿರ್ವಾಹವಿಲ್ಲ. ಜಪಾನು ತನ್ನ ಸಾಮ್ರಾಜ್ಯ ವಿಸ್ತರಣಾಭಿಲಾಷೆಯನ್ನು ಬಹುಕಾಲದಿಂದಲೇ ತೋರಿಸುತ್ತಾ ಬಂದಿದ್ದರೂ ಚೀನದೊಡನೆ ಪ್ರಾರಂಭಿಸಿದ್ದ ಯುದ್ಧವು ಕಳೆದ ನಾಲ್ಕೈದು ವರ್ಷಗಳ ಮೇಲಾದರೂ ಇತ್ಯರ್ಥವಾಗದೆ ಇದ್ದು, ಕೊರಿಯ, ಮಂಚೂರಿಯಗಳನ್ನು ಹಿಡಿಯಲೂ ಅದು ಬಹಳ ಪ್ರಯತ್ನಪಟ್ಟಿದನ್ನೆಲ್ಲಾ ಕಂಡು ಜಪಾನಿನ ಸಾಮರ್ಥ್ಯವು ಅಷ್ಟೇನೂ ಪ್ರಚಂಡವಾಗಿಲ್ಲವೆಂದು, ಎಲ್ಲರೂ ಎಣಿಸುತ್ತಿದ್ದಂತೆಯೇ ಈಗ ಹೀಗೆ ವಿಜಯಿಯಾಗಿ ವಿಜೃಂಭಿಸಿ ಬಂದು, ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿಬಿಟ್ಟದ್ದನ್ನು ನಿರೀಕ್ಷಿಸಿದವರು ಯಾರಾದರೂ ತಲೆದೂಗಲೇಬೇಕಾಗಿದೆ. ಕೇವಲ ಎಪ್ಪತ್ತೈದು ವರ್ಷಗಳ ಹಿಂದೆ 'ಅನಾಗರಿಕ' ರಾಷ್ಟ್ರವೆಂದು ಪಾಶ್ಚಾತ್ಯರಿಂದ ಹೀಗಳೆಯಲ್ಪಟ್ಟಿದ್ದ, ಏಶಿಯಾಖಂಡದ ಒಂದು ಮೂಲೆಯಲ್ಲಿದ್ದ ಜಪಾನು ಇಷ್ಟೊಂದು ಸಾಹಸವನ್ನು ತೋರಿಸಿಬಿಡಬಹುದೆಂದು ಹಿಂದೆ ಯಾರು ಎಣಿಸಿದ್ದರು?

ರಂಗೂನ್ ಜಪಾನರ ಬಳಿಗೆ ಬಿತ್ತು! ಜಪಾನೀಯರು ಬಹಳ ಕುಶಲತೆಯಿಂದ ರಂಗೂನನ್ನು ಒಳಹೊಕ್ಕರು; ಪಟ್ಟಣದ ವ್ಯವಹಾರಾದಿಗಳನ್ನು ಕತ್ತರಿಸಿಬಿಟ್ಟಿದ್ದರು; ಹೀಗೆ ರಂಗೂನು ಕೈವಶವಾಗುವುದರಿಂದ, ಜಪಾನೀಯರಿಗೆ ಬಹಳ ಖನಿಜ ವನಸಂಪತ್ತುಗಳು ದೊರೆತಿವೆ. ಇಲ್ಲಿ ವರ್ಷಕ್ಕೆ ೩೦—೪೦ ಕೋಟಿ ಗೆಲನು ಪೆಟ್ರೋಲು ಹುಟ್ಟುತ್ತದೆ. ಒಂದು ಲಕ್ಷ ಎಕ್ರೆ ಪ್ರದೇಶದಲ್ಲಿ ರಬ್ಬರು ಬೆಳೆಯುತ್ತದೆ. ಏಳು ಕೋಟಿ ಎಕ್ರೆ ಅರಣ್ಯವಿದೆ. ತೇಗು, ದೇವದಾರು, ಅಂಜೂರ ಮೊದಲಾದ ಜಾತಿಯ ಮರಗಳು ಇಲ್ಲಿ ಹೇರಳವಾಗಿವೆ. ಜಪಾನಿಯರು ಬರ್ಮಾದ ಇರಾವತಿ ನದಿಯ ತೀರದಲ್ಲಿ ತಮ್ಮ ಠಾಣ್ಯ ಹಾಕಿ ಮುಂದೆ ಪಶ್ಚಿಮಾಭಿಮುಖವಾಗಿ ದಂಡೆತ್ತಿ ಬಂದರು. ಚಿತಗಾಂಗದ ತನಕ ಅವರು ಆಕ್ರಮಿಸಿಕೊಂಡು ಬರುವುದು ಸಂಭವನೀಯ. ಹಿಂದುಸ್ಥಾನ ಮತ್ತು ಚೀನಗಳೊಳಗಿನ ವ್ಯವಹಾರ ಸಂಬಂಧವನ್ನು ಕಡಿದು ಹಾಕಲು ಹಾಗೆ ಮಾಡುವರೆ ಅವರು ಸಿದ್ಧರಾಗಿಯೂ ಇದ್ದಾರೆ. ಅವರು ಚಿತಗಾಂಗಿನ ತನಕ ಮುಂದೊತ್ತಿ ಬರಲೇಬೇಕಾಗಿದೆ. ಕಲ್ಕತ್ತದ ತನಕವೂ ಮುಂದುವರಿದು, ಅವರು ಬ್ರಹ್ಮಪುತ್ರಾ ನದಿಯನ್ನು ಕೈವಶಮಾಡಿಕೊಳ್ಳಲೂ ಬಹುದು. ಏಕೆಂದರೆ ಇಷ್ಟನ್ನು ಮೊದಲು ಹಿಡಿದುಕೊಂಡರೆ ಹಿಂದುಸ್ಥಾನಕ್ಕೂ ಚೀನಕ್ಕೂ ಸಂಬಂಧ ಕಡಿದು ಹೋದಂತೆಯೇ ಆಗುವುದು. ಇದಲ್ಲದೆ ಅವರಿಗೆ ಸಿಲೋನಿನ ಮೇಲೆಯೂ ಕಣ್ಣಿದೆ. ಸಿಲೋನನ್ನು ಅವರು ಆಕ್ರಮಿಸಿಬಿಟ್ಟಲ್ಲಿ ಮತ್ತೆ ಹಿಂದೀ ಮಹಾಸಾಗರದಲ್ಲಿ ಅವರು ಬೇಕಾದ ಹಾಗೆ ತಮ್ಮ ಚಲನವಲನಗಳನ್ನು ಮಾಡಬಹುದು. ಬ್ರಿಟಿಷರಿಗೆ ಮುಂದೆ ನೌಕಾ ವ್ಯವಹಾರಕ್ಕೆ ಕಂಟಕವನ್ನು ಉಂಟುಮಾಡಬಹುದು. ಮಾತ್ರವಲ್ಲದೆ ಸಿಲೋನಿನಲ್ಲಿ ಜಪಾನೀಯರು ತಳವೂರಿದರೆ ಹಿಂದುಸ್ಥಾನಕ್ಕೂ ಆಸ್ಟ್ರೇಲಿಯಕ್ಕೂ ಇರುವ ಸಂಬಂಧವನ್ನೂ ಕಡಿದುಹಾಕಬಹುದು. ಇಷ್ಟರಲ್ಲಿಯೇ ಆಸ್ಟ್ರೇಲಿಯದ ಉತ್ತರ ದಿಕ್ಕಿನಲ್ಲಿರುವ ಜಾವಾ, ಸುಮಾತ್ರಾ, ಡಚ್ ಇಂಡೀಸ್ ದ್ವೀಪಗಳನ್ನು ಜಪಾನರು ಕೈವಶಮಾಡಿಕೊಂಡಿರುವುದರಿಂದ ಆಸ್ಟ್ರೇಲಿಯವನ್ನು ಆಕ್ರಮಿಸುವುದು ಅವರಿಗೆ ಬಹಳ ಸುಲಭವಾಗಿದೆ.

ಇತ್ತೀಚೆಗೆ ಜರ್ಮನಿ ಫ್ರಾನ್ಸುಗಳೊಳಗೆ ಏನೋ ವ್ಯವಹಾರ ತಂತ್ರಗಳು ನಡೆಯುತ್ತಿರುವಂತೆ ತೋರಿಬರುತ್ತದೆ. ಫ್ರಾನ್ಸಿನ ಪಿಟೇನ್ ಸರಕಾರವು ಹಿಟ್ಲರನ ತಂತ್ರಕ್ಕೆ ವಶವಾಗಿ ವ್ಯವಹರಿಸುತ್ತಿರುವುದೆಂಬ ಸಂಶಯವು ಪ್ರಬಲವಾಗಿದೆ. ಹಿಂದೀ ಮಹಾಸಾಗರದಲ್ಲಿ ಆಫ್ರಿಕದ ಪೂರ್ವ ತೀರಕ್ಕಿರುವ ಮಡಗಾಸ್ಕರ್ ದ್ವೀಪವು ಫ್ರೆಂಚರದಾಗಿದೆ. ಈ ದ್ವೀಪಕ್ಕೆ ಪಿಟೇನ್ ಸರಕಾರವು ತನ್ನ ಸೈನ್ಯವನ್ನು ಕಳುಹಿಸಿ, ಅದನ್ನು ಜಪಾನಿಗೆ ಅನುಕೂಲವಾಗಿರುವಂತೆ ನಿಯೋಜಿಸಿರುವುದಾಗಿ ತಿಳಿದಿದೆ. ಪಿಟೇನ್ ಸರಕಾರದೊಡನೆ ಈ ವಿಷಯ ಪ್ರಶ್ನೆಮಾಡಿದರೆ, ಅದಕ್ಕೆ ಸರಿಯಾದ ಉತ್ತರ ಬಂದಿಲ್ಲ. ಪೂರ್ವದಲ್ಲಿ ಡಚ್ ಇಂಡೀಸ್, ಮಧ್ಯದಲ್ಲಿ ಸಿಲೋನ್, ಪಶ್ಚಿಮದಲ್ಲಿ ಮಡಗಾಸ್ಕರ್ ಹೀಗೆ ಈ ದ್ವೀಪಗಳು ಶತ್ರುವಶವಾಗಿ ಬಿಟ್ಟರೆ ಹಿಂದೀ ಮಹಾಸಾಗರದಲ್ಲಿ ಬ್ರಿಟಿಷ್ ನೌಕಾ ಸೈನ್ಯವು ಚಲಿಸುವುದು ವಿಷಮವಾಗುವುದು. ಇದರಿಂದ ಆಸ್ಟ್ರೇಲಿಯಕ್ಕೆ ಬ್ರಿಟಿಷರು ಸಹಾಯ ಕಳುಹಿಸುವುದಾಗಲಿ, ದಕ್ಷಿಣ ಆಫ್ರಿಕದ ವರೆಗೆ ಹಿಂದೀ ಮಹಾಸಾಗರದಲ್ಲಿ ವ್ಯವಹರಿಸುವುದಾಗಲಿ ಕಠಿಣವಾಗುವುದು. ಈ ಉದ್ದೇಶದಿಂದಲೇ ಹಿಟ್ಲರನು ಇಂತಹ ಯೋಜನೆಯೊಂದನ್ನು ಜಪಾನರ ಕೈಗೊಪ್ಪಿಸಿರುವನೆಂದು ಊಹಿಸಬಹುದಾಗಿದೆ.

ಹಿಟ್ಲರನು ಇತ್ತೀಚೆಗೆ ಒಂದು ಭಾಷಣವನ್ನಿತ್ತಿದ್ದನೆ. ಬ್ರಿಟಿಷ್ ಪತ್ರಿಕೆಗಳು ಅದನ್ನು ಕೇವಲ ನಿರಾಶೆಯ ಭಾಷಣವೆಂದು ಸಾರಿವೆ; ಹಿಟ್ಲರನು ಯಾವಾಗ ಭಾಷಣಕೊಟ್ಟರೂ ಅದು ನಿರಾಶೆಯ ಭಾಷಣವೆಂದು ಹೇಳುವುದು ಬ್ರಿಟಿಷ್ ಪತ್ರಿಕೆಗಳ ಒಂದು ಸಾಂಪ್ರದಾಯ; ಪ್ರಚಾರ ಮಾರ್ಗವು. ಅವರ ಕ್ರಮ ಹೇಗಿದ್ದರೂ, ರಷ್ಯನರ ಪೆಟ್ಟಿನಿಂದ ಹಿಟ್ಲರನು ಕಂಗಾಲಾಗಿದ್ದಾನೆಂಬುದಕ್ಕೆ ಸಂಶಯವಿಲ್ಲ. ರಷ್ಯನರ ಸಾಹಸವು ಇಂದಿನ ಯುದ್ಧದ ಇತಿಹಾಸದಲ್ಲಿಯೇ ಬಹಳ ಪ್ರಶಂಸಾರ್ಹವಾದುದು; ಕೇವಲ ಹತ್ತುವಾರಗಳೊಳಗೇ ರಷ್ಯವನ್ನು ನುಂಗಿ ನೀರ್ಕುಡಿವೆನೆಂದು ಆರ್ಭಟಿಸಿದ್ದ ಹಿಟ್ಲರನು, ಮೊದಲ ಆಕ್ರಮಣದಲ್ಲಿಯೇ ಪ್ರಚಂಡನಾಗಿ ಮೋಸ್ಕೋದ ವರೆಗೆ ಮುಂದೊತ್ತಿ ಹೋದವನು ಈಗ ಹಿಂದೆ ಹಿಂದೆ ಸರಿದಿದ್ದಾನೆ. ಪ್ರಕೃತಿಯೂ ಹಿಟ್ಲರನಿಗೆ ವಿರೋಧಿಯಾಗಿ ನಿಂತಿತು; ರಷ್ಯದ ಭಯಂಕರ ಛಳಿಯಲ್ಲಿ ಜರ್ಮನರು ಹತ್ತು ಮುಂದಿಡಲಾರದಿದ್ದುದನ್ನು ರಷ್ಯನರು ಶತ್ರುವು ಹಿಮ್ಮೆಟ್ಟುವ ಈ ಸಂದರ್ಭವನ್ನು ಸಮುಪಯೋಗ ಮಾಡಿಕೊಂಡು ಜರ್ಮನರನ್ನು ಕೊಚ್ಚುತ್ತಾ ಹಿಂದಟ್ಟುತ್ತಾ ಬಂದರು. ಈಗ ಹಿಮಕಾಲ ಮುಗಿದು ವಸಂತಕಾಲ ಪ್ರಾರಂಭವಾಗಿದೆ. ಹಿಟ್ಲರನ ವಸಂತಕಾಲದ ಆಕ್ರಮಣವು ಎಂದು ಪ್ರಾರಂಭವಾಗುವುದೋ ಹೇಳಲಾಗುವುದಿಲ್ಲ. ಎಪ್ರಿಲ್ ಮಧ್ಯದಲ್ಲಿ ಪ್ರಾರಂಭಿಸಬಹುದೆಂದು ಕೆಲವರು ಊಹಿಸುತ್ತಾರೆ. ಹಿಟ್ಲರನು ಕಾಕಸಸ್ ಮಾರ್ಗವಾಗಿ ಮುಂದೊತ್ತುವನೆಂದು ಹಲವರು ತರ್ಕಿಸುತ್ತಾರೆ. ಇಲ್ಲವೇ ತುರ್ಕಿಸ್ಥಾನ, ಸೈಪ್ರಸ್, ಸಿರಿಯಾ, ಇರಾಕ್, ಮಾರ್ಗವಾಗಿ ಬರಬಹುದೆಂದು ಕೆಲವರ ಊಹೆ. ಆದರೆ ಇದಕ್ಕೆ ತುರ್ಕಿಸ್ಥಾನದ ಸಹಕಾರಬೇಕು. ಅದು ಎಷ್ಟರ ಮಟ್ಟಿಗೆ ಹಿಟ್ಲರನಿಗೆ ದೊರಕುವುದೋ ಹೇಳಬರುವಂತಿಲ್ಲ. ಜರ್ಮನಿಯ ರಾಯಭಾರಿ ವಾನ್ ಪೇಪನ್ ಅಲ್ಲಿ ಯಾವ ಯಾವ ಕುತಂತ್ರ ನಡೆಸುತ್ತಿದ್ದಾನೋ ಹೇಳಬರುವುದಿಲ್ಲ. ತುರ್ಕರು ಒಂದು ಪಕ್ಷ ಅನುಕೂಲರಾಗಿಬಿಟ್ಟರೆ, ಹಿಟ್ಲರನು ಪೆಲೆಸ್ತೈನವನ್ನು ನುಗ್ಗಿ, ಸುವೇಜಿನ ಮೇಲೆ ಸಾಗಿ, ಅಲ್ಲಿಂದ ಕೆಂಪು ಸಮುದ್ರ ಹಾಗೂ ಅರಬಿ ಸಮುದ್ರಗಳನ್ನು ಸೇರಿ, ಜಪಾನಿನೊಡನೆ ಹಸ್ತಾಂದೋಲನ ಮಾಡಬಹುದು. ಅಂತೂ ಜರ್ಮನಿ ಜಪಾನುಗಳು ಮುಂದಿನ ಯುದ್ಧರೀತಿಯ ವಿಚಾರ ಏನೇನೊ ಗುಪ್ತಯೋಜನೆ ಮಾಡಿದ್ದಿರಬೇಕೆಂದು ಊಹಿಸಬಹುದಾಗಿದೆ.

ಜಪಾನರು ಬರ್ಮಾದೇಶವನ್ನು ಮುತ್ತಿ ಮುಂದೆ ಬಂದಿರುವುದರಿಂದ, ಈಗ ಹಿಂದೂದೇಶಕ್ಕೆ ಪೂರ್ವದಿಂದಲೂ, ವಿಶಾಲ ಸಮುದ್ರದಿಂದಲೂ ಅಪಾಯ ಹೆಚ್ಚಹೆಚ್ಚಾಗಿದೆ. ಹಿಟ್ಲರನು ಕಾಕಸಸ ಮೂಲಕ ಆಕ್ರಮಿಸಿ ಬರುವ ಭೀತಿಯೂ ತಪ್ಪಿಲ್ಲ. ಈ ಪರಿಸ್ಥಿತಿಯಲ್ಲಿ ನಮ್ಮ ರಕ್ಷಣೆಯ ವಿಚಾರವೇನು ಎಂಬುದು ಬೇರೆಯಾದ್ದರಂತೆ ಜನರನ್ನು ಬಾಧಿಸುತ್ತಿದೆ. ಇದುವರೆಗಿನ ಬ್ರಿಟಿಷ ಪ್ರಭುತ್ವವು ಭಾರತ ರಕ್ಷಣಾನೀತಿ ಪ್ರಯೋಜನಕರವಾಗಿಲ್ಲವೆಂದು ಅನೇಕರು ತಿಳಿದಿದ್ದಾರೆ. ಈ ವಿಷಯವನ್ನು ಈಗ ಚರ್ಚಿಲ್ ಮಂತ್ರಿಮಂಡಲವೂ ತಿಳಿದುಕೊಂಡಿತೇ ಏನೋ? ಇಷ್ಟು ಭಾರತವನ್ನು ಹಿಂದಿನ ನೀತಿಯಿಂದ ಆಳುವುದು ಸಾಧ್ಯವಿಲ್ಲವೆಂದು ತಿಳಿದರೋ ಏನೋ ಈಗ ಚರ್ಚಿಲರು ಸರ್ ಕ್ರಿಪ್ಸರಂತಹ ಭಾರತ ಹಿತಕಾಂಕ್ಷಿಗಳೊಬ್ಬರನ್ನು ಭಾರತಕ್ಕೆ ರಾಯಭಾರಿಯಾಗಿ ಕಳುಹಿಸಿದ್ದಾರೆ. ಸರ್ ಕ್ರಿಪ್ಸರಿಗೆ ಬ್ರಿಟಿಷ್ ಮಂತ್ರಿಮಂಡಳವು ಸಂಧಾನ ನಡೆಸಲು ಪೂರ್ಣಾಧಿಕಾರವನ್ನು ಕೊಟ್ಟಿದೆಯೆಂದು ಒಂದು ಸುದ್ದಿಯುಂಟು. ಸರ್ ಕ್ರಿಪ್ಸರು ಉಜ್ವಲ ಸಮತಾವಾದಿಗಳೆಂದೂ, ಪ್ರಜಾಪ್ರಭುತ್ವ ಪ್ರೇಮಿಗಳೆಂದೂ ಹೆಸರುಗೊಂಡಿದ್ದಾರೆ. ಇಂತಹ ಮಹನೀಯರು ಇಲ್ಲಿಗೆ ಬಂದು ನಮಗೇನು ಕೊಡುವರು ಎಂದು ಹೇಳುವುದು ಈಗ ಅನುಚಿತ. ಆದರೆ ಸರ್ ಕ್ರಿಪ್ಸರು ಕೈಕೊಂಡ ಈ ಮಹತ್ವದ ರಾಯಭಾರಕ್ಕೆ ಭಾರತದ ಎಲ್ಲಾ ಕಡೆಗಳಿಂದಲೂ ಹೃತ್ಪೂರ್ವಕ ಸ್ವಾಗತ ದೊರೆತಿದೆ; ಅವರು ನಮ್ಮ ಮುಖಂಡರ ಮುಂದೆ ಯಾವ ಸೂಚನೆಗಳನ್ನು ಮಂಡಿಸುತ್ತಾರೋ ನೋಡಬೇಕು; ಕಾಂಗ್ರೆಸ್, ಮುಸ್ಲಿಂ ಲೀಗು, ಹಿಂದು ಮಹಾಸಭೆಗಳು ಹಾಗೂ ಇತರ ಪಕ್ಷಗಳ ಧೋರಣೆ ನಮಗೆ ಗೊತ್ತಿದೆ. ಎಲ್ಲರೂ ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ಕೊಡಬೇಕೆಂಬ ಬಗ್ಗೆ ನಿರ್ವಿವಾದವುಳ್ಳವರಾಗಿವೆ. ಸ್ವಾತಂತ್ರ್ಯಕ್ಕಿಂತ ಕಡಿಮೆ ಏನನ್ನಾದರೂ ಭಾರತೀಯರು ಸ್ವೀಕರಿಸಲಾರರೆಂಬುದು ಸರ್ ಕ್ರಿಪ್ಸರಿಗಾದರೂ ತಿಳಿದಿರಬೇಕು. ಅಂತೂ ಕ್ರಿಪ್ಸರ ರಾಯಭಾರ ಭಾರತದ ಇತಿಹಾಸದಲ್ಲಿ ನಿರ್ಣಾಯಕ ಒಂದು ಘಟನೆಯಾಗಿದೆ.

The Canara Banking Corporation Ltd.

(Incorporated in British India with limited liability)

Estd. 1906

OUR RATES OF INTEREST ON DEPOSITS

Current	....	1% p. a.
Savings Bank	....	2½% „
Short-term	....	1¾% „
FIXED FOR 3 MONTHS	....	2% „
6 „	....	2½% „
9 „	....	2¾% „
12 „	....	3% „
24 „	....	3½% „

Advances made at cheap rates of interest against approved securities and Banking business of every description transacted.

ಸ್ವದೇಶಾಭಿಮಾನಿ

ತಾರೀಕು 20—3—1942

ಕ್ರಿಪ್ಸ್ ರಾಯಭಾರ

"ನನ್ನನು ಭಾರತಕ್ಕೆ ಹೋಗಬೇಕೆಂದು ಹೇಳಿದ್ದಾದರೆ, ನಾನು ಅಲ್ಲಿಗೆ ಹೋಗಲಿಚ್ಛಿಸುತ್ತೇನೆ; ಆದರೆ, ಬ್ರಿಟಿಷ್ ಸರಕಾರವು ಇದುವರೆಗೆ ಭಾರತದ ಕುರಿತು ಅನುಸರಿಸಿದ ನೀತಿಯಲ್ಲಿ ಏನಾದರೂ ಬದಲಾವಣೆ ತೋರಿಸುವುದಾದಲ್ಲಿ ಮಾತ್ರ ನಾನು ಹೋಗಬಹುದಾಗಿದೆ" ಹೀಗೆಂದು ಮೋಸ್ಕೊದಿಂದ ಮರಳಿದ ಕೂಡಲೇ ಸರ್ ಸ್ಟಾಫೋರ್ಡ್ ಕ್ರಿಪ್ಸರು ಹೇಳಿದ್ದರು! ಇಂದು ಅವರು ಭಾರತಕ್ಕೆ ಬ್ರಿಟಿಷ್ ಪ್ರಭುತ್ವದ ಕಡೆಯಿಂದ ರಾಯಭಾರಿಯಾಗಿ ಬರುತ್ತಿರುವರೆಂಬುದನ್ನು ವಿಚಾರಿಸಿದರೆ ಬ್ರಿಟಿಷ್ ಸರಕಾರವು ಭಾರತದ ಕುರಿತು ಹಿಂದೆ ಅನುಸರಿಸಿದ್ದ ನೀತಿಯನ್ನು ಈಗ ಸ್ವಲ್ಪ ಬದಲಾಯಿಸಲಿಚ್ಛಿಸಿದೆಯೆಂದು ಅರ್ಥವಾಗುವುದಿಲ್ಲವೆ?

ಚರ್ಚಿಲರು, ಬ್ರಿಟಿಷ್ ಪ್ರಭುತ್ವವು ಭಾರತದ ಕುರಿತು "ನ್ಯಾಯವೂ ಅಂತ್ಯವೂ ಆದ ಒಂದು ನಿರ್ಣಯ"ಕ್ಕೆ ಬಂದಿದೆಯೆಂಬುದಾಗಿ ತಿಳಿಸಿದರಲ್ಲದೆ, ಆ ನಿರ್ಣಯವೇನೆಂದು ಹೇಳಲಿಲ್ಲ. ಹಾಗೆಂದು ಬಹುಕಾಲದಿಂದ ಚರ್ಚಿಲ್ಲರ ಹೇಳಿಕೆಯನ್ನು ಕಾದು ಕುಳಿತಿದ್ದ ಹಲವರು ಪೂರ್ಣ ನಿರಾಶೆಪಡುವಂತೆಯೂ ಇಲ್ಲ. ಏಕೆಂದರೆ ಚರ್ಚಿಲರು ಮಂತ್ರಿಮಂಡಳದ ಪೂರ್ಣ ಒಪ್ಪಿಗೆಯಿಂದ, ಭಾರತದ ಹಿತಚಿಂತಕರಲ್ಲೊಬ್ಬರೆನಿಸಿದ ಸರ್ ಸ್ಟಾಫರ್ಡ್ ಕ್ರಿಪ್ಸರನ್ನೇ ಈಗ ರಾಯಭಾರಿಯಾಗಿ ಕಳುಹಿಸಿದ್ದಾರೆ. ಸರ್ ಕ್ರಿಪ್ಸರು ಆ ನಿರ್ಧಾರವನ್ನು ಭಾರತದ ಮುಖಂಡರ ಮುಂದಿಟ್ಟು ಇತ್ಯರ್ಥಿಸಲು ಯೋಗ್ಯರಾಗಿದ್ದಾರೆ.

ಇಂದು ಜಪಾನು ಭಾರತದ ಬಾಗಿಲಿಗೆ ಬಂದು ನಿಂತಿರುವ ವಿಷಮಕಾಲ; ಮಾತ್ರವಲ್ಲದೆ, ಕೆಲ ಸಮಯಗಳಿಂದಲೇ ಬ್ರಿಟಿಷ್ ಪ್ರಭುತ್ವಕ್ಕೆ ಭಾರತವು ಎದುರು ನಿಂತಿದ್ದು ಸ್ವಾತಂತ್ರ್ಯಕ್ಕೆ ಹೋರಾಟ ಮಾಡುತ್ತಿರುವೀಕಾಲ; ಹಾಗಾಗಿ ಈ ಎರಡು ಸಂದರ್ಭಗಳೂ ಈಗ ಜತೆಯಾಗಿ ಬಂದಿರುವುದರಿಂದ ಚರ್ಚಿಲರು ಈಗ ತಮ್ಮ ನಿರ್ಧಾರವನ್ನು ಹೇಳದಿರುವುದರಲ್ಲಿ ಒಳ್ಳೆಯ ಜಾಣ್ಮೆಯನ್ನೇ ಉಪಯೋಗಿಸಿದರೆನ್ನಬೇಕು. ಏಕೆಂದರೆ ಅವರ ನಿರ್ಣಯವು ಭಾರತೀಯರಿಗೆ ಒಪ್ಪಿಗೆಯಾದರೆ ಆಯಿತು; ಅದನ್ನು ಬೇಗನೇ ಕ್ರಿಪ್ಸರೇ ಮುಖಂಡರ ಮುಂದಿಡುವವರಿದ್ದಾರೆ. ಒಂದು ಪಕ್ಷ ಒಪ್ಪಿಗೆಯಾಗದಿದ್ದರೆ? ದೇಶದಲ್ಲಿ ಪ್ರಕ್ಷೋಭವುಂಟಾಗುವುದು ಸಾಧ್ಯವಿದೆ. ಈ ಸಂದರ್ಭವನ್ನು ಬಾಗಿಲಲ್ಲಿ ಬಂದು ತಳವೂರಿರುವ ಶತ್ರುವು ಉಪಯೋಗಿಸಿಕೊಳ್ಳಲು ಅವಕಾಶವಾಗುತ್ತದೆ.

ಸರ್ ಕ್ರಿಪ್ಸರು ಭಾರತದ ಬಿಕ್ಕಟ್ಟನ್ನು ಬಿಡಿಸುವಂತಹ ಕಠಿಣ ಕಾರ್ಯಕ್ಕೆ ಯೋಗ್ಯರಾದವರಿದ್ದಾರೆ. ಬ್ರಿಟಿಷ್ ಮಂತ್ರಿಮಂಡಳದಲ್ಲಿರುವ ಭಾರತೀಯ ಸಹಾನುಭೂತಿಪರರಾದವರಲ್ಲಿ ಅವರು ಅಗ್ರಗಣ್ಯರೆನಿಸಿದ್ದಾರೆ. ಸಮತಾವಾದಿಯೆನಿಸಿ ಜನಪ್ರೀತರಾಗಿದ್ದಾರೆ. ಹಿಂದೊಮ್ಮೆ ಭಾರತಕ್ಕೆ ಬಂದು ನೆಹರೂ ಪ್ರಭೃತಿ ಮುತ್ಸದ್ದಿಗಳ ಸಮೀಪದ ಸ್ನೇಹ ಪರಿಚಯಗಳನ್ನು ಪಡೆದವರಾಗಿದ್ದಾರೆ. ಹೀಗಾಗಿ ಕ್ರಿಪ್ಸರ ರಾಯಭಾರವು ಅತ್ಯಂತ ಯೋಗ್ಯವಾಗಿದೆಯೆನಬೇಕು. ಆದರೆ ಅದರ ಫಲಿತಾಂಶದ ಕುರಿತು ಇಂದು ಏನೆಂದೂ ಊಹಿಸಲಾಗುವುದಿಲ್ಲ; ಊಹಿಸುವುದೂ ಸರಿಯಲ್ಲ. ಚರ್ಚಿಲ್ ಮಂತ್ರಿಮಂಡಳದ ಆ 'ಅಂತ್ಯ ನಿರ್ಣಯ'ವು, ಚರ್ಚಿಲರಂತೆ ಭಾರತೀಯರಿಗೂ 'ನ್ಯಾಯ'ವೇ ಆಗಿ, ಸತ್ಪರಿಣಾಮವನ್ನುಂಟುಮಾಡುವುದೋ ಎಂಬುದನ್ನು ತಿಳಿಯಲು ನಾವೂ ಕುತೂಹಲಗೊಂಡಿದ್ದೇವೆ.

ಅಧಿಕಾರ ಮದವೆ?

ಕಳೆದ ವಾರ ಕೇಂದ್ರ ಎಸೆಂಬ್ಲಿಯಲ್ಲಿ ಆರ್ಥಿಕ ಸಚಿವರು ಆರ್ಥಿಕ ಮಸೂದೆಯನ್ನು ಮುಂದಿಸುತ್ತಾ ಸರಕಾರೀ ಸದಸ್ಯರಿಗೆ ಯುದ್ಧ ವಿಷಯದ ಕಾರ್ಯ ಬಾಹುಳ್ಯವಿರುವುದರಿಂದ, ಇತರ ಸದಸ್ಯರು ಈ ವಿಷಯದಲ್ಲಿ ಮಾಡುವ ಭಾಷಣವನ್ನು ಕಡಿಮೆ ಮಾಡಬೇಕೆಂದು ಹೇಳಿದರು! ಈ ಸಂದರ್ಭದಲ್ಲಿ ಶ್ರೀ ಜಮ್ನಾದಾಸ ಮೆಹತರು ಅವರ ಅಂತಹ ಅಧಿಕಾರಮದದ ದರ್ಪೋಕ್ತಿಯನ್ನು ಖಂಡಿಸಿ ಹೇಳಿದ ಮಾತುಗಳು, ಜನತಾಪ್ರತಿನಿಧಿಗಳಾದ ಸದಸ್ಯರ ಗೌರವವನ್ನು ಉಳಿಸುವಂಥಾದ್ದಾಗಿವೆ.

ಶ್ರೀ ಮೆಹತರು ಆರ್ಥಿಕ ಸಚಿವರ ಮಾತನ್ನು ಚರ್ಚಿಲ್ಲರ ಮಾತಿನೊಡನೆ ಹೋಲಿಸಿ, ಇಲ್ಲಿನ ಅಧಿಕಾರೀ ವರ್ಗಕ್ಕೆ ಜನತಾಪ್ರತಿನಿಧಿಗಳ ವಿಷಯವಾಗಿ ಇರುವ ಕನ್ನಿಷ್ಠ ಭಾವನೆಯನ್ನು ಬಯಲಿಗೆಳೆದು ಟೀಕಿಸಿದರು. ಚರ್ಚಿಲರು ಕಳೆದ ಪಾರ್ಲಿಮೆಂಟಿನ ಸಭೆಯಲ್ಲಿ ಎದುರು ಪಕ್ಷದವರಿಗೂ ಇತರ ಎಲ್ಲಾ ಸದಸ್ಯರಿಗೂ ಬೇಕಾದಷ್ಟು ಮಾತನಾಡಲು ಸಂದರ್ಭವನ್ನೂ ಅವಕಾಶವನ್ನೂ ಕೊಟ್ಟುದಲ್ಲದೆ, ಅಂತಹ ಟೀಕೆಗಳಿಂದ ತಾನು ಅನೇಕ ಪಾಠಗಳನ್ನು ಕಲಿತುಕೊಳ್ಳುವೆನೆಂದು ತಿಳಿಸಿದ್ದನ್ನು ನೋಡಿದರೆ, ಚರ್ಚಿಲರಿಗೆ, ನಮ್ಮ ಆರ್ಥಿಕ ಸಚಿವರಿಷ್ಟು ಅಥವಾ ಚರ್ಚಿಲ್ ಸರಕಾರದ ಸದಸ್ಯರಿಗೆ, ನಮ್ಮ ಆರ್ಥಿಕ ಸಚಿವರ ಸರಕಾರದ ಸದಸ್ಯರಷ್ಟು ಯುದ್ಧದ ಗಡಿಬಿಡಿ ಇಲ್ಲವೆಂದು ತಿಳಕೊಳ್ಳಬೇಕೇ ಎಂದು ಶ್ರೀ ಮೆಹತರು ಯೋಗ್ಯವಾಗಿ ಸಮರ್ಪಕವಾಗಿ ಟೀಕಿಸಿದರು.

ಬ್ರಿಟನು ಪ್ರಜಾಪ್ರಭುತ್ವದ ರಾಜ್ಯ. ಅಲ್ಲಿನ ಪ್ರಜೆಗಳ ಪ್ರತಿನಿಧಿಗಳು ಪ್ರಜಾಪ್ರಭುತ್ವದ ರಾಜ್ಯದ ಪ್ರಜಾಪ್ರತಿನಿಧಿಗಳು. ಅಲ್ಲಿನ ಸರಕಾರ ಪ್ರಜೆಗಳಿಗಾಗಿರುವ ಸರಕಾರ. ಆದ್ದರಿಂದ ಅಲ್ಲಿನ ಸರಕಾರೀ ಮುಖಂಡರಾದ ಚರ್ಚಿಲರು ಎದುರು ಪಕ್ಷದ ಸದಸ್ಯರಿಗೂ ಇತರ ಸದಸ್ಯರಿಗೂ ಬೇಕಾದಷ್ಟು ಅವಕಾಶವನ್ನು ಕೊಡುತ್ತಾರೆ, ಏಕೆಂದರೆ ಪ್ರಜಾಪ್ರಭುತ್ವದಲ್ಲಿ ಅಂತಹ ಅವಕಾಶವನ್ನು ಕೊಡದಿರುವುದು ನ್ಯಾಯವಲ್ಲ. ಹಾಗಾದರೆ, ನಮ್ಮ ಸರಕಾರ ಪ್ರಜಾಪ್ರಭುತ್ವಪದ್ಧತಿಯಲ್ಲಿಲ್ಲ; ನಮ್ಮ ಮಂತ್ರಿಗಳು ಪ್ರಜಾಭಿಪ್ರಾಯಕ್ಕೆ ಮನ್ನಣೆ ಕೊಡುವುದಿಲ್ಲ; ನಮ್ಮ ಪ್ರತಿನಿಧಿಗಳ ಮಾತಿಗೆ ಬೆಲೆಯಿಲ್ಲ; ಎಂದು ಜನರು, ಆರ್ಥಿಕ ಸಚಿವರ ಅಂತಹ ದರ್ಪೋಕ್ತಿಯಿಂದ ಅರ್ಥಮಾಡಿಕೊಳ್ಳಲಾರರೆ?

ಯಾವ ಯುದ್ಧದ ಗಡಿಬಿಡಿಯಿಂದ, ಸರಕಾರೀ ಸದಸ್ಯರು ಅವಕಾಶವಿಲ್ಲದಾಗಿದ್ದಾರೆಂದು ಹೇಳಲಾಗಿದೆಯೋ, ಆ ಯುದ್ಧ ಜಯಕ್ಕಾಗಿಯೇ, ಅಧಿಕಾರ ಮದ ಗರ್ವಿತರಾದ ಪ್ರಜಾಪ್ರತಿನಿಧಿಗಳ ಮಾತಿನ ಕಡೆಗೆ ಕಿವಿಗೊಡಲಾರದ ಸರಕಾರೀ ಸದಸ್ಯರೂ ಮಂತ್ರಿಗಳೂ ಎಷ್ಟು ಬೇಗನೆ ಹೊರಗೆ ಹೋಗುತ್ತಾರೋ ಅಷ್ಟು ಒಳ್ಳೆಯದೆನ್ನದೆ ಬೇರೆ ನಿರ್ವಾಹವಿಲ್ಲ. ಏಕೆಂದರೆ ಬಾಗಿಲಿಗೆ ಬಂದ ಶತ್ರುವನ್ನು ಭಾರತದ ಅಖಂಡ ಪ್ರಜಾಸಮುದಾಯವೇ ಎದುರಿಸಬೇಕಲ್ಲದೆ ಗಡಿಬಿಡಿಗೊಂಡ ಸರಕಾರೀ ನೌಕರರು ಕೆಲವರು ಮಾತ್ರವಲ್ಲ. ಪ್ರಜೆಗಳಿಂದ ಚುನಾಯಿತರಾಗಿ ಹೋದ ಮಂತ್ರಿಗಳೇ ಅಂತಹ ಕೆಲಸವನ್ನು ಯೋಗ್ಯವಾಗಿ ಮಾಡಬಲ್ಲರೆಂಬುದನ್ನು ಇಂದು ಅಖಿಲ ಜಗತ್ತೇ ಪ್ರತ್ಯಕ್ಷವಾಗಿ ಬಲ್ಲುದು.

ನೋಟಗಳು....

ಸರ್ ಕ್ರಿಪ್ಸರು ಭಾರತಕ್ಕೆ ರಾಯಭಾರಿಗಳಾಗಿ ಬರುತ್ತಾರೆ ಎಂಬುದನ್ನು ಕೇಳಿ, ಭಾರತದ ಮುಖಂಡರು ಯಾರೂ ವಿಶೇಷ ಸಂತೋಷವನ್ನು ತೋರ್ಪಡಿಸಲಿಲ್ಲ; ಹಾಗೆಂದು ಯಾರೂ ಬೇಸರಪಟ್ಟಿರುವಂತೆಯೂ ಕಂಡು ಬರುವುದಿಲ್ಲ.

卐

"ಕ್ರಿಪ್ಸರು ನಮ್ಮ ಮಿತ್ರರು;" ಎಂದು ಕೆಲವರು ತಿಳಿಸಿದರು; "ಕ್ರಿಪ್ಸರು ಭಾರತದ ಶತ್ರುವಲ್ಲ" ಎಂದು ಹಲವರು ಹೇಳಿದರು. ಹಾಗಾಗಿ "ಕ್ರಿಪ್ಸರು ಕೆಟ್ಟವರಲ್ಲ" ಎಂದು ನಾವು ಅರ್ಥಮಾಡಿಕೊಳ್ಳಬಹುದು.

卐

"ಚರ್ಚಿಲರು ನಿಮ್ಮ ವಿಷಯ ಮಹತ್ವವಾದ ಮಾತನ್ನು ಬೇಗನೇ ಹೇಳುತ್ತಾರೆ" ಎಂದು ಬ್ರಿಟಿಷ ಪತ್ರಿಕೆಗಳು ಬಹುಕಾಲದಿಂದ ಪ್ರಕಟಿಸುತ್ತಿದ್ದವು. ಆದರೂ ಚರ್ಚಿಲರ ಹೇಳಿಕೆಯ ವಿಷಯ ಹೆಚ್ಚಿನವರು ಆಶಾವಾದಿಗಳಾಗಿರಲಿಲ್ಲ. ಚರ್ಚಿಲರು ಈಗ ಹೇಳಿಕೆಯಿತ್ತು ಏನೂ ಹೇಳದಿರುವ ವಿಷಯವಾಗಿಯೂ ಯಾರೂ ನಿರಾಶರಾಗಿಲ್ಲ!

卐

— ಚರ್ಚಿಲರು ಹೇಳಬೇಕೆಂದಿದ್ದುದನ್ನು ಹೇಳಲಾರದೆ ಉಳಿದದ್ದು ಒಳ್ಳೆಯದೇ ಆಯಿತು. ಏಕೆಂದರೆ ಚರ್ಚಿಲರೇ ಸಂಶಯಪಟ್ಟಿದ್ದಾರೆ: "ಒಂದು ಪಕ್ಷ ಅದು ಭಾರತೀಯರಿಗೆ ಒಪ್ಪಿಗೆಯಾದರೆ ಆಯಿತು; ಇಲ್ಲವಾದರೆ ಪ್ರಮಾದವುಂಟಾದೀತು!"

卐

ಚರ್ಚಿಲರು ಹೇಳಬೇಕೆಂದಿದ್ದೂ, ಹೇಳಲಾರದಿದ್ದ ಹೇಳಿಕೆಯು ಭಾರತೀಯರಿಗೆ ಒಪ್ಪಿಗೆಯಾಗದಿದ್ದರೆ, ಭಾರತೀಯರಿಂದ ತಮಗೇನಾದರೂ ತೊಂದರೆ ಬಂದೀತೆಂದು ಚರ್ಚಿಲರು ತರ್ಕಿಸುವುದಿಲ್ಲ. ಏಕೆಂದರೆ ಚರ್ಚಿಲರಿಗೆ ಗೊತ್ತು—ಭಾರತದ ಜನರು ಅಹಿಂಸಾವಾದಿಗಳೆಂದು; ಆದರೆ ಬಾಗಿಲಲ್ಲಿ ಬಂದು ನಿಂತಿರುವ ಶತ್ರುಗಳು, ಜಪಾನಿನವರು, ಅಹಿಂಸಾವಾದಿಗಳಲ್ಲವಷ್ಟೆ?

卐

ಇತ್ತೀಚೆಗೆ ಗಾಂಧಿಜಿ ಅಹಿಂಸೆಯ ಪ್ರಯೋಗದಲ್ಲಿ ಸ್ವಲ್ಪ ಶಿಥಿಲತೆ ತೋರಿಸುವಂತೆ ಕಂಡುಬರುತ್ತದೆ. 'ಸಿಪಾಯಿಗಳು ಹೆಂಗುಸರ ಮೇಲೆ ಕೈಮಾಡಿದರೆ ಅಹಿಂಸೆಯಿಂದಾಗಲಿ ಹಿಂಸೆಯಿಂದಾಗಲಿ ಪ್ರತಿಭಟಿಸಿರಿ' ಎಂದು ಎಂದು ಉಪದೇಶಿಸಿದ್ದಾರೆ. ಲೂಟಿ ಮಾಡುವ ಡಕಾಯಿತರನ್ನು ತಡೆಯಲು ಸಶಸ್ತ್ರ ಸಂಘಟಿತ ಜನರ ದಲವನ್ನು ನಿರ್ಮಿಸಬಹುದೆಂದು ಈಗ ಹೇಳುತ್ತಾರೆ.

卐

ಹಾಗಾದರೆ ನ್ಯಾಯಕ್ಕಾಗಿ ಹೋರಾಡುವಲ್ಲಿ ಹಿಂಸೆಯನ್ನುಪಯೋಗಿಸಿದರೂ ತಪ್ಪಾಗುವುದಿಲ್ಲವೆಂದರ್ಥವಾಗುವುದಿಲ್ಲವೆ? ಹೊರಗಿನ ಆಕ್ರಮಣಗಾರರನ್ನೆದಿರಿಸಲು ಕಾಂಗ್ರೆಸಾದರೂ ಹಿಂಸೆಯನ್ನುಪಯೋಗಿಸಲು ನಿರ್ಧರಿಸಿದೆ.

卐

ಗಾಂಧಿಜಿ ಮತ್ತು ಕಾಂಗ್ರೆಸು ಬೇರೆ ಬೇರೆ ಎಂದರೆ ಯಾರು ನಂಬಬೇಕು?

MONEY TO LEND

Over Forty Lacs of idle funds are awaiting investment in the shape of loans on gold, Government securities, shares of approved companies, life insurance policies having sufficient surrender value, grains and other agricultural produce, etc., etc.

You are cordially invited to utilize these facilities.

CANARA BANK, LIMITED.

ESTD. 1906

ಗೋಪಾಲನ್ ನಂಬಿಯಾರರಿಗೆ ಜೀವದಾನ ಮಾಡುವುದು

"ನಗರವನ್ನು ಬಿಟ್ಟುಹೋದವರು ಹಳ್ಳಿಯಲ್ಲಿ ಏನು ಮಾಡಬೇಕು"

—ಗಾಂಧಿಜಿ ಹೇಳುತ್ತಾರೆ—

ಹರಿಜನದಲ್ಲಿ 'ಗಾಂಧಿಜಿ' ಪಟ್ಟಣದಿಂದ ಹೊರಟುಹೋಗುವವರ ವಿಷಯವಾಗಿ ಒಂದು ಲೇಖನ ಬರೆದು, ಅದರಲ್ಲಿ ಹೀಗೆಂದಿರುವರು:

'ನಾನು ಪಟ್ಟಣದಲ್ಲಿ ಅಗತ್ಯವಿಲ್ಲದವರು ಹಾಗೂ ಅಲ್ಲಿ ಇರಲು ಇಚ್ಛೆಯಿಲ್ಲದವರು, ಪಟ್ಟಣಗಳನ್ನು ಬಿಟ್ಟು ಹೋಗಬೇಕೆಂದು ಹೇಳಿದ ವಿಷಯದಲ್ಲಿ, ಒಬ್ಬ ಬಾತ್ಮಿದಾರರು ನನ್ನ ವಿವರವಾದ ಅಭಿಪ್ರಾಯವೇನೆಂದು ಕೇಳಿದ್ದಾರೆ. ಯಾರೂ ಅವರ ಅಭಿಪ್ರಾಯಕ್ಕೆ ವಿರೋಧವಾಗಿ ಉಳಕೊಳ್ಳಬೇಕಾಗಿಲ್ಲ. ಬಾಂಬು ಧಾಳಿಯಾಗುವ ಕಾಲದಲ್ಲಿ, ಅದನ್ನು ಇದಿರಿಸಲಾರದವರು ಇದ್ದರೆ; ಅವರು ಒಂದು ಭಾರವೇ ಆಗುತ್ತಾರೆ. ಪ್ರಬಲನಾದ ಶತ್ರುವು ಆಕ್ರಮಣ ಮಾಡುವಾಗ, ಆತನನ್ನು ಇದಿರಿಸಲು ಸರಿಯಾದ ನಿರ್ಧಾರ ಬೇಕಾಗಿದೆ. ಎದುರಿಸುವವರ ಗಮನವು ವಿಭಜನೆಯಾಗಕೂಡದು. ಇದು ಸೈನಿಕ ಕ್ರಮಕ್ಕನುಸಾರವಾದುದು.

'ನಾವು ಮಾನವ ಸಹಜವಾಗಿ ಮತ್ತು ರಾಜಕೀಯವಾಗಿ ಯುದ್ಧವನ್ನು ಎದುರಿಸುವವರು. ಅಂಥವರು ಇದ್ದರೆ ತೊಂದರೆಯಾಗುವುದಾದರೆ ಅವರು ಅಲ್ಲಿ ಇರಲಾರರು. ಅಂಥವರು ಒಬ್ಬರೂ ಇರಲಾರರೆಂದು ನಾನಾಶಿಸುತ್ತೇನೆ. ಹಾಗಾಗಿರುವುದರಿಂದ ಅವರೆಲ್ಲರೂ ಪಟ್ಟಣಗಳನ್ನು ಬಿಟ್ಟು ಹೊರಟು ಹೋಗಬೇಕು. ಬಾಂಬುಧಾಳಿಯಾದಾಗ ಏನೂ ಮಾಡಬೇಕೆಂದು ತಿಳಿಯದವರು ಕೆಲವರಿದ್ದಾರೆ. ಅಂಥವರೂ ಪಟ್ಟಣ ಬಿಟ್ಟು ಹೊರಟು ಹೋಗಬೇಕು. ನನ್ನ ಯುದ್ಧ ವಿರೋಧಕ್ಕೂ ಇದಕ್ಕೂ ಏನೂ ಸಂಬಂಧವಿಲ್ಲವೆಂದು ವಾಚಕರು ತಿಳಿದುಕೊಳ್ಳಬಹುದು. ಇಂತಹ ಸಂದರ್ಭದಲ್ಲಿ ಸೈನಿಕರ ಅವಶ್ಯ ಮತ್ತು ಯುದ್ಧ ವಿರೋಧಿಗಳ ಹೇಳಿಕೆ ಒಂದೇ ಕೆಲಸವನ್ನು ಮಾಡುತ್ತದೆ.

'ಹಾಗಾದರೆ, ಹಳ್ಳಿಗೆ ಹೋದವರು, ಹಳ್ಳಿಗೆ ಹೋಗಲು ಮನಸ್ಸು ಮಾಡಿದವರು ಅವರು ಏನು ಮಾಡಬೇಕು? ಅವರು ಹಳ್ಳಿಯಲ್ಲಿ ವಾಸಮಾಡಲು ನಿರ್ಧಾರಮಾಡಿಕೊಂಡೇ ಹೋಗಬೇಕು. ಅವರು ಅಲ್ಲಿ ನಗರದ ವಾತಾವರಣವನ್ನು ನಿರ್ಮಿಸಬಾರದು. ತಾತ್ಕಾಲಿಕ ಅರಮನೆಗಳನ್ನು ಕಟ್ಟಬಾರದು. ಅವರು ಸೇವಾಬುದ್ಧಿಯಿಂದ ಹಳ್ಳಿಗಳಿಗೆ ಹೋಗಬೇಕು. ಅಲ್ಲಿನ ಆರ್ಥಿಕ ಮತ್ತು ಇತರ ಪರಿಸ್ಥಿತಿಗಳನ್ನು ಅಭ್ಯಸಿಸಬೇಕು. ಅವುಗಳನ್ನು ಸರಿಗೊಳಿಸಲು ಪ್ರಯತ್ನಿಸಬೇಕು. ಹಳ್ಳಿಯವರಿಗೆ ಧರ್ಮಕೊಟ್ಟಲ್ಲ, ಅವರಿಗೆ ನಿತ್ಯ ಕೆಲಸವನ್ನು ಕೊಟ್ಟು ಅವರನ್ನು ಏಳಿಗೆಮಾಡಲು ಪ್ರಯತ್ನಿಸಬೇಕು.

ಗಾಂಧಿಜಿ ಸರಕಾರಕ್ಕೆ ಸೂಚಿಸುತ್ತಾರೆ!

ನಗರವನ್ನು ಬಿಟ್ಟವರು ಹಳ್ಳಿಗಳಲ್ಲಿ ಮಾಡತಕ್ಕ ಕರ್ತವ್ಯ

['ಹರಿಜನ'ದಿಂದ]

ಇನ್ನೊಂದು ರೀತಿಯಲ್ಲಿ ಹೇಳುವುದಿದ್ದರೆ, ಅವರು ಹಳ್ಳಿಗೆ ಹೋಗಿ ರಚನಾತ್ಮಕ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕು. ಹೀಗೆ ಅವರು ತಾವೂ ಹಳ್ಳಿಯವರೊಡನೆ ಸೇರಿಕೊಂಡು, ಅಲ್ಲಿ ಅವರ ಆರೋಗ್ಯ, ಆರ್ಥಿಕ, ರಾಜಕೀಯ, ಸಾಮಾಜಿಕ ಪ್ರಗತಿಗೆ ನೆರವಾಗುವ ಸಹಕಾರಿ ಸಂಘಗಳಂತೆ ಕೆಲಸಮಾಡಬೇಕು.

'ಹೊಸತಾಗಿ ಬಂದವರ ದೊಡ್ಡದೊಂದು ಸಮಸ್ಯೆಯೆಂದರೆ, ಅಲ್ಲಿ ಲೂಟಿ ದರೋಡೆಗಳನ್ನು ಬಗೆಹರಿಸುವುದು. ಇದಕ್ಕೆ ಅವರು ತಮ್ಮ ಬಹುಭಾಗವನ್ನು ವ್ಯಯಿಸಬೇಕಾಗುವುದು. ಅಹಿಂಸೆಯ ಮಾರ್ಗವು ತೆರೆದಿದೆ. ಅದು ಅವರಿಗೆ ಸಾಧ್ಯವಾಗದಿದ್ದರೆ, ಹಳ್ಳಿಯವರ ಸಹಕಾರದಿಂದ ಅವರು ಡಕಾಯಿತಿ ಮೊದಲಾದವುಗಳನ್ನು ತಡೆಯಲು ಸಶಸ್ತ್ರ ದಳವನ್ನು ನಿರ್ಮಿಸಬೇಕು. ಇದರ ವಿಷಯ ಸರಕಾರವು ಏನಾದರೂ ಕೆಲಸಮಾಡೀತು ಎಂದು ನಾವು ಬಹು ಸಮಯದಿಂದ ನಿರೀಕ್ಷಿಸುತ್ತಾ ಇದ್ದೆವು. ಸರಕಾರವು ಏನೂ ಮಾಡಲಾರದಾಗಿದೆ; ಅದರಲ್ಲೂ ಈ ವಿಷಮ ಕಾಲದಲ್ಲಿ ಅದು ಅದಕ್ಕೆ ಅಸಾಧ್ಯವಿದೆ. ಅಂತಹ ಕೆಲಸವನ್ನು ನಗರದಿಂದ ಬಿಟ್ಟು ಹೋದವರು ಮಾಡಬಹುದು. ಹಿಂಸೆಯಿಂದಾಗಲಿ, ಅಹಿಂಸೆಯಿಂದಾಗಲಿ, ಅಥವಾ ಎಂಡೂ ಮಾರ್ಗಗಳಿಂದಾಗಲಿ ಅವರು ಅಂಥಾ ಕೆಲಸಮಾಡತಕ್ಕದ್ದು"

ಗೋಪಾಲನ್ ನಂಬಿಯಾರರಿಗೆ ಜೀವದಾನಮಾಡುವುದು

ಗಾಂಧಿಜಿ ಲೇಖನ

ಮಹಾತ್ಮಾ ಗಾಂಧಿಜಿಯವರು ಶ್ರೀ ಗೋಪಾಲನ ನಂಬಿಯಾರರಿಗೆ ಹೈಕೋರ್ಟಿನಲ್ಲಿ ಮರಣ ದಂಡನೆ ವಿಧಿಸಿದ ವಿಷಯವಾಗಿ, ಅವರಿಗೆ ಜೀವದಾನಮಾಡಬೇಕೆಂದು ಒಂದು ಲೇಖನ ಬರೆದಿರುವರು. ಅದರ ವಿವರ ಹೀಗಿದೆ:

'ಗೋಪಾಲನ್ ನಂಬಿಯಾರ್ ಒಬ್ಬ ದೇಶಪ್ರೇಮಿ ಯುವಕ. ಅವರು, ಮಲಬಾರಿನ ಒಂದು ಸಭೆಯಲ್ಲಿ ಜನರ ಗುಂಪನ್ನು ಕೆರಳಿಸಿ, ಪೋಲೀಸ್ ಇನ್ಸ್‌ಪೆಕ್ಟರನ್ನು ಗಾಯಗೊಳಿಸುವ ಕಾರ್ಯಕ್ಕೆ ಪ್ರೇರಕರಾದರೆಂದು ಆರೋಪಿಸಲಾಗಿದೆ; ಪೋಲೀಸ್ ಇನ್ಸ್‌ಪೆಕ್ಟರರು ಅವರಲ್ಲಿ ತೀರಿಹೋದರು; ಮದ್ರಾಸ್ ಹೈಕೋರ್ಟು ನಂಬಿಯಾರರಿಗೆ ಫಾಶಿಕೊಡುವ ಶಿಕ್ಷೆ ವಿಧಿಸಿದೆ. ಈ ಶಿಕ್ಷೆಯನ್ನು ಸಾಕ್ಷಿಗಳು ನ್ಯಾಯಗೊಳಿಸಿದ್ದರೂ, ಇದು ಜೀವದಾನಕ್ಕೆ ಅತ್ಯಂತ ಯೋಗ್ಯವಾದ ಕೇಸೆಂದು ನಾನು ತಿಳಿಯುತ್ತೇನೆ.

'ಈ ಕೇಸು' ಮನಃಪೂರ್ವಕವಾಗಿ, ಗುಪಿತದಿಂದ ಮಾಡಿದ ವಧೆಯಲ್ಲ. ನಾವೀಗ, ಯಾವುದೇ ನ್ಯಾಯಸ್ಥಾನವೂ ತೀರ್ಮಾನಕೊಡದಂತಹ, ಪ್ರಚಂಡ ಕೊಲೆ ನಡೆಯುತ್ತಿರುವ ಲೋಕದಲ್ಲಿ ವಾಸಿಸುತ್ತಿದ್ದೇವೆ. ಆದ್ದರಿಂದ ಒಬ್ಬ ಯುವಕನನ್ನು, ಅಪರಾಧ ಆತನು ಮಾಡದೆ ಇರುವಲ್ಲಿ, ಫಾಶಿ ಶಿಕ್ಷೆಗೆ ಗುರಿಮಾಡುವುದು ಅನ್ಯಾಯವಾಗುವುದು. ಆದ್ದರಿಂದ ಈ ವಿಷಯದಲ್ಲಿ, ಸಾರ್ವಜನಿಕ ಮುಖಂಡರೂ ಪತ್ರಿಕೆಗಳೂ ಆಂದೋಲನ ಮಾಡುವ ಬಗ್ಗೆ ನಾನು ತುಂಬಾ ಹರ್ಷಿತನಾಗಿದ್ದೇನೆ. ಈ ಸಾರ್ವಜನಿಕ ಕರೆಗೆ ಸರಕಾರವು ಕಿವಿಗೊಡುವುದೆಂದು ನಾನು ಆಶಿಸುತ್ತೇನೆ"

ಜೀವದಾನ ಮಾಡಿರೆಂದು ಜನತಾ ಮನವಿ

ಎಪ್ಪತ್ತು ಸಾವಿರ ಜನಗಳಿಂದ ಸಹಿ ಹಾಕಲ್ಪಟ್ಟ ಒಂದು ಜನತಾ ಮನವಿಯು ಕಲ್ಲಿಕೋಟೆಯಿಂದ, ಶ್ರೀ ಕೆ. ಪಿ. ಆರ್. ಗೋಪಾಲನರಿಗೆ ಜೀವದಾನಮಾಡಬೇಕೆಂದು ಗವರ್ನರರಿಗೆ ಹೋಗಿದೆ.

ಹಿಂದು ಪತ್ರಿಕೆ ಅಗ್ರಲೇಖ ಬರೆದಿದೆ

ಮದ್ರಾಸಿನ ಪ್ರಮುಖದಿನ ಪತ್ರಿಕೆ 'ಹಿಂದು' ಶ್ರೀ ಕೆ. ಪಿ. ಆರ್. ಗೋಪಾಲನರಿಗೆ ಜೀವದಾನಮಾಡಬೇಕೆಂದೂ, ಅಂತಹ ಸಾರ್ವಜನಿಕ ಮುಖಂಡರನ್ನು, ವಿದ್ಯಾವಂತರನ್ನು, ಕುಲೀನ ಮನೆತನದ ಯುವಕರನ್ನು ಸರಕಾರವು ಫಾಶಿಗೆ ಕೊಡುವುದು ಸರಿಯಲ್ಲವೆಂದು ಅಗ್ರಲೇಖನವೊಂದನ್ನು ಬರೆದಿದೆ.

'ಹೋಲಿಡೇ ಇನ್ ಬಾಂಬೇ' ಚಿತ್ರದಲ್ಲಿ ಒಂದು ದೃಶ್ಯ. ಸ್ಥಳೀಯ ಸೆಂಟ್ರಲ್‌ನಲ್ಲಿ ಸದ್ಯದಲ್ಲೇ ಪ್ರದರ್ಶಿಸುವರು.



ಜಾವಾ ರಂಗೂನು ಜಪಾನರ ವಶವಾದುವು?

ಆಸ್ಟ್ರೇಲಿಯದ ಕಡೆಗೆ ಜಪಾನರ ಮುನ್ನಡೆಯೆ? ಹಿಟ್ಲರನ ವಸಂತಕಾಲದ ಆಕ್ರಮಣದ ಆರಂಭ?

ಹೆಸ್ಸರ ಪುಸ್ತಕ ಪ್ರಕಟಣೆ

ಬಂಧಿಯಾಗಿ ಕೈಸೆರೆ ಸಿಕ್ಕಿರುವ ಹೆಸ್ಸರ ಕುರಿತು ಪುಸ್ತಕವೊಂದನ್ನು ಬ್ರಿಟಿಷ್ ಸರಕಾರದವರು ಪ್ರಕಟಿಸುವುದಾಗಿ ಆಲೋಚಿಸಿದ್ದಾರೆ. ಹೆಸ್ಸರ ಸ್ಮರಣಾ ಶಕ್ತಿ ವಿಚಿತ್ರವಿರುವುದಾಗಿ ನಾಜಿಗಳು ತಳಮಳಗೊಂಡಿರುವರಂತೆ, ಗತ ಸ್ಮೃತಿಯನ್ನೆಲ್ಲಾ ಅವರು ತಿಳಿಸಬಹುದೆಂದು, ಹೆಸ್ಸರೇ ಪುಸ್ತಕವನ್ನು ಬರೆಯುತ್ತಿರುವರಂತೆ ಈ ಪುಸ್ತಕವು ಪ್ರಕಟವಾದರೆ ಜರ್ಮನಿಯಲ್ಲಿ ಹಾಗೂ ಇತರ ರಾಷ್ಟ್ರಗಳಲ್ಲಿ ಬಹಳೆ ಹೋರಾಟವಾಗಬಹುದೆಂದು ನಿರೀಕ್ಷಿಸಲಾಗಿದೆ

ಚೈನದಲ್ಲಿ ಪಾಕಿಸ್ತಾನವಿಲ್ಲ

ಚೈನದಲ್ಲಿ ೫೦ ಮಿಲಿಯ ಮುಸಲ್ಮಾನರಿದ್ದಾರೆ ಅವರಲ್ಲಿ ಭೇದ ಬೀಜ ಬಿತ್ತಿ ಅವರಲ್ಲಿ ಒಡಕುಂಟುಮಾಡಬೇಕೆಂದು ಜಪಾನು ತಂತ್ರ ಹೂಡಿದೆ ಆದರೆ ಜಪಾನಿನ ಬೇಳೆ ಬೇಯಲಿಲ್ಲ ಅಲ್ಲಿನ ಮುಸಲ್ಮಾನರೂ ಇತರ ಚೀನೀಯರಂತೆಯೇ ಸ್ವಾತಂತ್ರ್ಯ ಪ್ರೇಮಿಗಳಿದ್ದಾರೆಂದು ಪ್ರಕಟವಾಗಿದೆ

ಅಮೆರಿಕನರ ಇನ್ನೊಂದು ಮಿಶನು

ಹೊರಡುವುದಾಗಿ ತಿಳಿದಿದೆ ಇದು ಕೈಗಾರಿಕಾ ತಜ್ಞರ ಮಿಶನು ಭಾರತಕ್ಕೆ ಬರುವುದು ಹಿಂದೆ ರೋಜರ್‌ಮಿಶನು ಬಂದು ಏನೂ ಕೆಲಸ ಮಾಡಿದ್ದಿಲ್ಲ ಇವರೇನು ಮಾಡಲು ಬಗೆದಿರುವರೋ ತಿಳಿಯದು ಹಿಂದೂದೇಶದಲ್ಲಿ ಮೋಟರ್ ಕೈಗಾರಿಕೆ ಸ್ಥಾಪಿಸಲು ಸರ್ ವಿಶ್ವೇಶ್ವರಯ್ಯನವರು ಮಾಡಿದ ಸಾಹಸವು ವಿಷಾದಾಂತವಾಗಿದೆ ಈಗ ಬ್ರಿಟಿಷರೇ ಗುಪ್ತವಾಗಿ ಅಮೆರಿಕದ ಕಂಪನಿಯೊಂದಕ್ಕೆ ಭಾರತದಲ್ಲಿ ಮೋಟರು ಕೈಗಾರಿಕೆ ಸ್ಥಾಪಿಸಲು ಅನುಮತಿ ಕೊಟ್ಟಿದ್ದಾರೆ ಇದರಿಂದ ಯುದ್ಧ ಪ್ರಯತ್ನಕ್ಕೆ ತೊಂದರೆಯುಂಟಾಗುವುದಿಲ್ಲವೋ ಏನೋ?

ರುಮೇನಿಯಾ-ಬಲ್ಗೇರಿಯಾಗಳಲ್ಲಿ ಅತೃಪ್ತಿ

ಉಂಟಾಗಿದೆಯಂತೆ, ಹಿಟ್ಲರನ ವಸಂತಕಾಲದ ಆಕ್ರಮಣದ ವಿಷಯ ಆತನು ಅಧೀನ ರಾಷ್ಟ್ರಗಳನ್ನು ಬಲಾತ್ಕಾರ ಮಾಡುವುದಕ್ಕಾಗಿ ' ರುಮೇನಿಯವು ಮೂರು ಲಕ್ಷ ಸೇನೆಯನ್ನೀಯಬೇಕೆಂದು ಕೇಳಿರುವನಂತೆ ಅಲ್ಲಿನ ಜನರು ಅದಕ್ಕೆ ಒಪ್ಪುವುದಿಲ್ಲವೆಂದು ಪ್ರಕಟವಾಗಿದೆ ಬಲ್ಗೇರಿಯವೂ ಹೀಗೆಯೇ ಅತೃಪ್ತಿಪಟ್ಟಿರುವುದಂತೆ ಅಲ್ಲಿನ ಪ್ರಧಾನ ಮಂತ್ರಿಗಳು ರಾಜಿಯಿತ್ತಿದ್ದಾರೆ

ಹಿಟ್ಲರನ ಭಾಷಣ

ವಸಂತಕಾಲದಲ್ಲಿ ಜರ್ಮನಿಗೆ ಜಯವುಂಟು

ಹಿಟ್ಲರನು, ಕಳೆದ ಮತ್ತು ಈ ಯುದ್ಧದಲ್ಲಿ ಕೊಲ್ಲಲ್ಪಟ್ಟವರ ಗೌರವಾರ್ಥ ಕೂಡಿಸಿದ ಸಭೆಯಲ್ಲಿ ಒಂದು ಪ್ರಚಂಡ ಭಾಷಣ ಮಾಡಿ, ಅದರಲ್ಲಿ, ರಶ್ಯದ ಭಯಂಕರ ಹಿಮ ಪರಿಸ್ಥಿತಿಯಿಂದ ಅಲ್ಲಿಂದ ಹಿಂದೆಗೆಯಬೇಕಾಗಿ ಬಂದ ವಿಷಯವನ್ನು ವಿವರಿಸಿ, ವಸಂತಕಾಲದಲ್ಲಿ ಜರ್ಮನರು ಖಂಡಿತ ವಿಜಯಿಗಳಾಗುವರೆಂದು ಭರವಸೆಯಿತ್ತನು, ಯುದ್ಧದಲ್ಲಿ ಆತ್ಮದಾನ ಕೊಟ್ಟ ವೀರರಿಗಾಗಿ ಆತನು ತನ್ನ ಹಾರ್ದಿಕ ಗೌರವವನ್ನರ್ಪಿಸಿದನು ಆ ಸಭೆಗೆ ತುಂಬಾ ಉಚ್ಚ ಅಧಿಕಾರಿಗಳೂ ಬಂದಿದ್ದರು ಅನೇಕ ವರ್ಷಗಳ ಗುಲಾಮಗಿರಿಯನ್ನು ಸಹಿಸಲಾರದೆ ಇಂದು ನಾವು ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವೆವೆಂದನು, ರಿಯೋಮ್ ವಿಚಾರಣೆಯ ವಿಷಯ ಮಾತನಾಡುತ್ತಾ ಇದು ಈ ಯುದ್ಧದ ಕಾರಣವನ್ನು ಸ್ಪಷ್ಟಪಡಿಸುತ್ತದೆಯೆಂದನು ರಶ್ಯದ ವಿಷಯ ಮಾತನಾಡಿ, ಹಿಮಗ್ರಹವು ಶತ್ರುವಿಗೆ ನಾಲ್ಕು ತಿಂಗಳ ಕಾಲವನ್ನು ಕೊಟ್ಟಿತೆಂದನು. ಕೆಲವೇ ತಿಂಗಳಲ್ಲಿ ವಿಜಯವು ನಿಶ್ಚಿತವಾಗುವುದೆಂದನು ಹೊಸತೊಂದು ಶಾಂತಿಮಯ ಜಗತ್ತು ನಿರ್ಮಾಣವಾಗುವುದೆಂದನು ಮುಂದಿನ ಭಯಂಕರ ಯುದ್ಧದ ವಿಷಯ ಹೇಳುತ್ತಾ, ಅದು ಹಿಂದಿನದಕ್ಕಿಂತ ನಿರ್ಣಾಯಕವಾಗಲಿರುವುದು ಎಂದನು.

ಬೆಂಕಿಪೆಟ್ಟಿಗೆಗೆ ನಿರಖು ಬೆಲೆ ನಿರ್ಣಯ

ಭಾರತ ರಕ್ಷಣಾ ಕಾಯಿದೆಯನ್ವಯ ಇಂಡಿಯಾ ಸರಕಾರವು ಈ ಪ್ರಕಟಣೆ ಹೊರಡಿಸಿಯದೆ —'ಬೆಂಕಿಪೆಟ್ಟಿಗೆಯ ಕ್ರಯವು ಈ ರೀತಿ ನಿಯಂತ್ರಣಗೊಳಿಸಲಾಗಿದೆ—೪೦ ಕಡ್ಡಿಗಳಿರುವ ಬೆಂಕಿಪೆಟ್ಟಿಗೆಗೆ ೧॥ ಪೈಸೆ ಮತ್ತು ೫೦ ಕಡ್ಡಿಗಳಿರುವ ಬೆಂಕಿಪೆಟ್ಟಿಗೆ ೨ ಪೈಸೆ (ಇದು ಚಿಲ್ಲರೆ ವ್ಯಾಪಾರಿಗಳಿಗೆ ಸಂಬಂಧಪಟ್ಟುದಾಗಿದೆ)'

ಚೀನದಲ್ಲಿ ಭಾರತ ದಿನಾಚರಣೆ

ನಡೆಯಿತು ತಾ ೧೬ರಂದು. ಭಾರತ ಚೀನಗಳೊಳಗೆ ಮಧುರ ಬಾಂಧವ್ಯವಾಗಬೇಕೆಂದು ಅನೇಕರು, ಮೇಡಂ ಚಿಯಾಂಗರೇ ಪ್ರಭೃತಿಯಾಗಿ ಭಾಷಣವಿತ್ತರು, ಈ ಸಂದರ್ಭದಲ್ಲಿ ಮಾರ್ಶಲ್ ಮತ್ತು ಮೇಡಂ ಚಿಯಾಂಗರು ಭಾರತ ಸಂಚಾರವನಾಡಿದಾಗ ತೆಗೆದ ಚಿತ್ರಗಳು ಪ್ರದರ್ಶಿಸಲ್ಪಟ್ಟವು.

ಅಧಿಕಾರಿಗಳಾದ ಶ್ರೀ ಬಿ ಬಿ. ಚೌಧರಿಯವರಿಗೆ ತಿಳಿಸಿದ್ದರು.

ಆಕ್ಸ್‌ಫರ್ಡ್ ಯುನಿವರ್ಸಿಟಿಯಲ್ಲಿ ಟಾಗೋರ್ ವ್ಯಾಖ್ಯಾನಮಾಲೆಯೂ ಪ್ರಾರಂಭವಾಗಿತ್ತು, ಅನೇಕ ವಿದ್ವಜ್ಜನರು ಈ ಸಂದರ್ಭದಲ್ಲಿ ವ್ಯಾಖ್ಯಾನ ಮಾಡಿದರು.

ಟಾಗೋರ್ ಸೊಸಾಯಿಟಿಯ ಅಧಿಕಾರಿಗಳಿಗೆ ಉತ್ತರ ಬರೆಯುತ್ತ ಶ್ರೀ. ಜೋನ್‌ರವರು 'ನಿಮ್ಮ ಸೊಸಾಯಿಟಿಯ ವಿಷಯದಲ್ಲಿ ನನಗೆ ಬಹಳ ಆದರವಿದೆ. ನಾನು ಟಾಗೋರರನ್ನು ಮುಕ್ತಕಂಠವಾಗಿ ಹೊಗಳುತ್ತೇನೆ. ಭಾರತಕ್ಕೆ ಕೀರ್ತಿ ತಂದ ಮಹಾಕವಿ ರವೀಂದ್ರರು ತಮ್ಮ ದೇಶಕ್ಕೆ ಬಹಳ ಗೌರವಶಾಲಿಗಳು. ಭಾರತ ಮತ್ತು ಇಂಗ್ಲೆಂಡುಗಳಿಗೆ ಅವರು ಆದರ್ಶಪ್ರಾಯರಾಗಿ ಎರಡು ದೇಶಕ್ಕೂ ಸೂತ್ರಧಾರಿಗಳಂತಿದ್ದರು ಅಂಥ ಪುಣ್ಯಾತ್ಮರಿಂದ ಭಾರತಕ್ಕೆ ಒಂದು ಹೆಮ್ಮೆ ಬಂದಿತು'



ಮಾರ್ಗಸಂಚಾರವಿಲ್ಲದಲ್ಲಿಯೂ ಟೇಂಕ್ ವಿರೋಧಿ ಫಿರಂಗಿಗಳನ್ನು ಸಾಗಿಸುವರು

ಅಸಾಮ್-ಚೀನಾ ರಸ್ತೆ

ಬರ್ಮಾ ರಸ್ತೆ ಮುಚ್ಚಿದರೆ, ಚೀನಕ್ಕೆ ಹಿಂದೂದೇಶದಿಂದ ಸಾಧನ ಸಾಮಗ್ರಿಗಳನ್ನು ಕಳುಹಿಸುವ ಈ ಹೊಸ ರಸ್ತೆಯ ಕೆಲಸ ಭರದಿಂದ ಸಾಗುತ್ತಿದೆಯಾಗಿ ತಿಳಿದಿದೆ.

ಲಂಡನಿನಲ್ಲಿ ಟಾಗೋರರ ಫೋಟೋ ಅನಾವರಣ

ಮೊನ್ನೆ ಮೊನ್ನೆ ಲಂಡನಿನ ನ್ಯಾಶನಲ್ ಪೋರ್ಟ್ರೇಟ್ ಗ್ಯಾಲರಿಯಲ್ಲಿ ವಿಶ್ವಕವಿವರ್ಯರಾದ ಡಾ ರವೀಂದ್ರನಾಥ್ ಟಾಗೋರರವರ ಭಾವಚಿತ್ರದ ಅನಾವರಣೋತ್ಸವವು ಬಳ್ಳಿ ವೈಭವದಿಂದ ನೆರವೇರಿತು ಡಾ. ಟಾಗೋರರ ಚಿತ್ರವನ್ನು ಸುಪ್ರಸಿದ್ಧ ಚಿತ್ರಗಾರರಾದ ಸರ್ ವಿಲ್ಯಮ್ ರೋಥೆನ್‌ಸ್ಟೀನ್‌ರವರು ಚಿತ್ರಿಸಿದ್ದಾರೆ ಜಗನ್ಮಾನ್ಯ ನಾಟಕಕಾರರಾದ ಜಾರ್ಜ್ ಬರ್ನಾರ್ಡ್ ಷಾರವರು ಟಾಗೋರರ ಚಿತ್ರವನ್ನು ಅನಾವರಣ ಮಾಡುವ ವಿಷಯವನ್ನು ಟಾಗೋರ್ ಸೊಸಾಯಟಿ

ರೂಟರ್ ಸುದ್ದಿಗಾರನು ತಿಳಿಸುವಂತೆ ಟಾಗೋರರ ಶಿಲಾಮೂರ್ತಿಯೊಂದು ವೆಸ್ಟ್ ಮಿನಿಸ್ಟರ್ ಅಬೆಯಲ್ಲಿಯ ಪೋಯಟ್ಸ್ ಕಾರ್ನರಿನಲ್ಲಿ ಸ್ಥಾಪಿಸಲಿದ್ದಾರೆಂದು ಕೇಳುತ್ತೇವೆ

ಪೋಲೀಸರ ಗೋಳಿಬಾರಿನಿಂದ ಎಂಟು ಮಂದಿ ಸತ್ತರು

ಮದ್ರಾಸಿನ ಬಕ್ಕಿಂಗಾಮ್ ಮತ್ತು ಕರ್ನಾಟಿಕ ಮಿಲ್ಲಿನ ಮುಷ್ಕರದ ಸಂಬಂಧ ಪೋಲೀಸರು ಗೋಳೀಬಾರು ಮಾಡಿ ಎಂಟು ಮಂದಿ ಕೆಲಸಗಾರರು ಸತ್ತು ಅನೇಕರಿಗೆ ವಿಶೇಷ ಪೆಟ್ಟಾಗಿದೆ.

ಕ್ರಿಪ್ಸರು ಬರುವ ಮೊದಲು ಒಡಂಬಡಿಕೆಮಾಡಿಕೊಳ್ಳಿರಿ

ಎಂದು, ಭಾರತದ ರಾಜಕೀಯ ಮುಖಂಡರಿಗೆ ವಿನಂತಿಸಿಕೊಂಡು ಸ 'ಸಿಕಂದ' ಹಯಾತ್‌ಖಾನರು ಒಂದು ಪ್ರಕಟಣೆ ಹೊರಡಿಸಿದರು.

ಕ್ರಿಪ್ಸರು ಹಿಂದುಸ್ಥಾನಕ್ಕೆ ಹೊರಟರು.

...ರಾಯಟರ್ ಸುದ್ದಿಗಾರನು ತಿಳಿಸುತ್ತಾನೆ.

ಮದ್ರಾಸ್ ಸರಕಾರದ ಆಯ ವ್ಯಯ ಪಟ್ಟಿ.

ಈಗ ಪ್ರಕಟವಾಗಿದೆ, ಇದು 1942–43 ಇಸವಿಗಳದ್ದು. ಆಯವು ರೂ. 18,97, 87,000 ಮತ್ತು ವ್ಯಯವು ರೂ. 18,94, 28,000. ಉಳಿತಾಯ ರೂ. 3,59, 000. ಬರುವ ವರ್ಷದ ಪರಿಸ್ಥಿತಿ ಹೇಗೆ ನಿಲ್ಲುವುದೆಂದು ಹೇಳಬರುವುದಿಲ್ಲವಾದ್ದರಿಂದ ಸರಕಾರವು ಯಾವ ತೆರಿಗೆಯನ್ನೂ ಕಡಿಮೆ ಮಾಡುವುದಿಲ್ಲ, ಹಿಂದೆ ಕೊಡಲಾದ ಭೂಕಂದಾಯ ರಿಯಾಯತಿಯು ಅದೇ ರೀತಿ ಕೊಡಲಾಗಿದೆ, ಈ ಆಯವ್ಯಯ ವರ್ಷದಲ್ಲಿ ಆದಾಯ ತೆರಿಗೆಯಿಂದ ದೊರೆವ ಹಣವು ರೂ. 19,20,00ರಷ್ಟು ಹೆಚ್ಚಾಗಬಹುದೆಂದು ಅಬ್ಕಾರಿ ಆದಾಯವು ರೂ 29,08,000 ಕಡಿಮೆಯಾಗಬಹುದೆಂದೂ ಅಂದಾಜುಮಾಡಲಾಗಿದೆ ಮೋಟರ್ ವಾಹನ ಮತ್ತು ಪೆಟ್ರೋಲಿನಿಂದ ದೊರೆವ ಆದಾಯ ಕಡಿಮೆಯಾಗುವುದೆಂದು ನಿರೀಕ್ಷಿಸಲಾಗಿದೆ, ರೂ 22,57, 000ರಷ್ಟು ಟೋಲ್ ಟೇಕ್ಸ್ ಫಲವನ್ನು ಜಿಲ್ಲಾ ಬೋರ್ಡುಗಳಿಗೆ ಹೆಚ್ಚಿಗೆಯಾಗಿ ಕೊಡುವ ನಿರ್ಧಾರವಾಡಲಾಗಿದೆ, ಕೈಮಗ್ಗ ಕೆಲಸಗಾರರ ಮತ್ತು ನೆಲಗಡಲೆ ವ್ಯವಸಾಯಗಾರರ ಸಹಾಯಕ್ಕಾಗಿ ಅನುಕ್ರಮವಾಗಿ ರೂ 15 ಲಕ್ಷ ಮತ್ತು ರೂ 5,76,000 ಉಪಯೋಗಿಸಲಾಗುವುದು ವಿಮಾನಧಾಳಿಯ ಹಾನಿಯ ನಿವಾರಣಾಕಾರ್ಯಕ್ಕೆ ರೂ 60,10,000 ವಿನಿಯೋಗಿಸಲ್ಪಡುವುದು, ಹೊಸ ಸಂಯೋಜನೆಗಳಿಗೆ 46 ಲಕ್ಷ ಇರಿಸಲಾಗಿದೆ

ಆಶ್ರಿತರಾಜರಿಗೆ ವೈಸರಾಯರ ಸಂದೇಶ

ವಾಗಿ ಒಂದು ಭಾಷಣಮಾಡಿ, ಕ್ರಿಪ್ಸರ ಕಾರ್ಯಭಾರದಲ್ಲಿ ಅವರು ಸಹಕರಿಸಬೇಕೆಂದು ತಿಳಿಸುತ್ತಾ, ಯುದ್ಧಪ್ರಯತ್ನಕ್ಕೆ ಅವರು ಕೊಡುವ ಸಹಾಯವನ್ನು ಅಭಿನಂದಿಸುತ್ತಾ, ರಾಷ್ಟ್ರೀಯ ಯುದ್ಧಕ್ಷೇತ್ರದಲ್ಲಿ ಅವರ ಸಹಕಾರವನ್ನು ಹಾರೈಸಿದರು.

ಬಂಗಾಲ ಅಸೆಂಬ್ಲಿಯಲ್ಲಿ ಗೊಂದಲ

ಬಂಗಾಳ ಅಸೆಂಬ್ಲಿಯಲ್ಲಿ ಆಯವ್ಯಯದ ಮೇಲೆ ಚರ್ಚೆಯಾಗುವಾಗ ವಿಪರೀತ ಗಲಭೆಗೊಂದಲಗಳುಂಟಾದವು ನಾಜಿಮುದ್ದೀನ್ ಮತ್ತು ಮುಖರ್ಜಿಯವರಿಗೆ ವಾಗ್ಯುದ್ಧ ನಡೆಯಿತು ನಾಜಿಮುದ್ದೀನರು ಬಂಗಾಳ ಮಂತ್ರಿಮಂಡಳದ ನೀತಿಯನ್ನು ಬಲವಾಗಿ ಖಂಡಿಸಿದರು ಅದಕ್ಕೆ ಉತ್ತರವಾಗಿ ಡಾ॥ ಶ್ಯಾ। ಪ್ರಸಾದ ಮುಖರ್ಜಿಯವರು ಹೇಳಿದ ಮಾತಿಗೆ ಮುಸ್ಲಿಂ ಲೀಗಿನ ಸದಸ್ಯರು ಗೊಂದಲವೆಬ್ಬಿಸಿದರು ಗಲಭೆಯಲ್ಲಿ ಮುಖ್ಯ ಮಂತ್ರಿ ಹಕ್ಕರು ಎದ್ದರು ಅವರಿಗೂ ಮಾತನಾಡಲಾಗಲಿಲ್ಲ ಡಿಪ್ಯುಟಿಸ್ಪೀಕರರು ಚರ್ಚೆ ನಿಲ್ಲಿಸಿದರು

ಕ್ರಿಪ್ಸರ ಸಂಧಾನದ ಕುರಿತು ಸರ್ದಾರ್

ಪಟೇಲರು ಒಂದು ಹೇಳಿಕೆ ಕೊಡುತ್ತ ಕ್ರಿಪ್ಸರು ಬ್ರಿಟನು ಕೊಡುವುದಕ್ಕೂ, ನಾವು ತೆಕ್ಕೊಳ್ಳುವುದಕ್ಕೂ ಯೋಗ್ಯವಲ್ಲದ ಕಾಲದಲ್ಲಿ ಬಂದಿರುವರು ಎಂದು ಅಭಿಪ್ರಾಯವಿತ್ತು, ಬ್ರಿಟನು ಇದುವರೆಗೆ ಮಾಡಿದ ಪ್ರಮಾದವನ್ನು ವಿವರಿಸಿರುವರು

Empire of India Life Assurance Co Ltd BOMBAY

Notice having been given of the loss of Policy numbered 148243 on the life of Mr M S. Gopal Rao of Mangalore a fresh policy in lieu thereof will be issued unless objection is lodged with the Company within one month from this date.

Bombay, 20th March 1942.

E E ALLUM,
Manager.

ಸರ್ ಕ್ರಿಪ್ಸರು ಸಂಧಾನದೂತರಾಗಿ ಭಾರತಕ್ಕೆ ಹೊರಟಿದ್ದಾರೆ!

ಹಿಂದೂದೇಶಕ್ಕೆ ಸರ್ ಕ್ರಿಪ್ಸರು ಬರುವರು!

ಮುಖಂಡರೊಡನೆ ಮಾತುಕತೆಗೆ ಚರ್ಚಿಲರು ಹೇಳಿದರು!

ಲಾರ್ಡ್ ಪ್ರಿವಿಸೀಲರಾದ ಸರ್ ಸ್ಟಾಫೋರ್ಡ್ ಕ್ರಿಪ್ಸರನ್ನು ಹಿಂದೂದೇಶಕ್ಕೆ ಕಳುಹಿಸಿ, ಅವರು ಭಾರತದ ಮುಖಂಡರೊಡನೆ ಮಾತುಕತೆ ನಡೆಸಲು ಬ್ರಿಟಿಷ ಪ್ರಭುತ್ವ ನಿರ್ಧರಿಸಿರುವುದಾಗಿಯೂ, ಅದರಿಂದ ಭಾರತದ ಬಿಕ್ಕಟ್ಟು ಬಗೆಹರಿಸುವ ಯೋಜನೆ ಸಿದ್ಧವಾಗಿದೆಯೆಂದೂ ಮಿ. ಸಾರ ಚರ್ಚಿಲರು ಹೇಳಿದರು. ಅವರು, ಭಾರತದ ವಿಷಯ ಬ್ರಿಟಿಷ ಮಂತ್ರಿಮಂಡಲದಲ್ಲಿ ಬಂದು ನ್ಯಾಯವೂ ಅಂತ್ಯವೂ ಆದ ತೀರ್ಮಾನವಾಗಿದೆಯೆಂದೂ ಆದರೆ ಅದನ್ನು ಈಗ ಪ್ರಚಾರಪಡಿಸುವುದಿಲ್ಲವೆಂದೂ, ಪ್ರಚಾರಪಡಿಸಿದರೆ ಒಂದು ಪಕ್ಷ ಭಾರತೀಯರು ಸ್ವೀಕರಿಸದಿದ್ದರೆ ಕೋಲಾಹಲವುಂಟಾದೀತೆಂದೂ, ಸರ್ ಕ್ರಿಪ್ಸರೂ ಆ ತೀರ್ಮಾನಗಳನ್ನು ನಮ್ಮ ಮುಖಂಡರ ಮುಂದಿರಿಸುವರೆಂದೂ ಹೇಳಿದರು. ಚರ್ಚಿಲರು ಹೇಳುತ್ತಾ, ಜಪಾನರ ಮುನ್ನಡೆಯಿಂದ ಭಾರತದಲ್ಲಿ ವಿಶೇಷ ಬಿಕ್ಕಟ್ಟು ಉಂಟಾಗಬಹುದಾದ್ದರಿಂದ ಐಕ್ಯವಿರಬೇಕೆಂದೂ, ೧೯೪೦ ಆಗಸ್ಟ ಘೋಷಣೆಯು ಭಾರತದ ವಿಷಯವಾಗಿ ನಮ್ಮ ನೀತಿಯೇನೆಂಬುದನ್ನು ಹೇಳಲಾಗಿತ್ತೆಂದೂ ಯುದ್ಧಾನಂತರ ಪೂರ್ಣ ಸ್ವಾತಂತ್ರ್ಯದಿಂದ ಕೂಡಿದ ಸಾಮಂತ ಸ್ವರಾಜ್ಯವನ್ನು ಕೊಡುವುದಾಗಿ ಭರವಸೆ ಕೊಡಲಾಗಿತ್ತೆಂದೂ ಹೇಳಿ, ಅಲ್ಪಸಂಖ್ಯಾಕರ ಹಾಗೂ ದೇಶೀಯ ರಾಜರ ಹಿತಸಂರಕ್ಷಣೆ ಮಾಡುವ ಭರವಸೆ ಅದರಲ್ಲಿತ್ತೆಂದೂ, ಈಗ ಬ್ರಿಟಿಷ ಮಂತ್ರಿಮಂಡಲ ಮಾಡಿದ ತೀರ್ಮಾನದಂತೆ ಅಲ್ಪ ಸಂಖ್ಯಾಕರ ಬಹುಸಂಖ್ಯಾಕರೊಂದರೆ ಬರಲಿಕ್ಕಿಲ್ಲವೆಂದೂ, ಸರ್ ಕ್ರಿಪ್ಸರು ವೈಸರಾಯರೊಡನೆಯೂ, ಸೇನಾಪತಿಗಳೊಡನೆಯೂ ಮಾತುಕತೆ ಮುಖ್ಯವಾಗಿ ಮಾಡುವರೆಂದೂ ವಿವರಿಸಿದರು.

ಸರ್ ಕ್ರಿಪ್ಸರಿಗೆ ವಿಶೇಷಾಧಿಕಾರ ಕೊಡಲಾಗಿದೆಯೆಂದು ಲಂಡನಿನ ಒಂದು ಸುದ್ದಿ. ಇಷ್ಟರಲ್ಲಿಯೇ ಅವರು ಭಾರತದ ಕಡೆ ಹೊರಡುವರು. ಅವರ ಆಗಮನ ನಿರ್ಗಮನ, ಸಮಾಗಮವು ಗುಪ್ತವಾಗಿರಿಸಲಾಗಿದೆ.

ಸರ್ ಕ್ರಿಪ್ಸರಂತಹ ಭಾರತದ ಬಗ್ಗೆ ಸಹಾನುಭೂತಿಯುಳ್ಳ ವ್ಯಕ್ತಿ ಸಂಧಾನಕ್ಕೆ ಹೊರಟ ವಿಷಯ ಹಲವು ಕಡೆಗಳಲ್ಲಿ ತೃಪ್ತಿಕರವಾದ ಅಭಿಪ್ರಾಯ ಹೊರಟಿದೆ.

ವೈಸರಾಯರ ಸಂದೇಶ

ವೈಸರಾಯರು ಭಾರತೀಯರಿಗೆ ಒಂದು ಸಂದೇಶ ಕೊಡುತ್ತಾ, ಯುದ್ಧವು ಬಾಗಿಲಿಗೆ ಬಂದಿರುವುದರಿಂದ ನಾವೆಲ್ಲರೂ ರಾಷ್ಟ್ರರಕ್ಷಣೆಗಾಗಿ ಯುದ್ಧಕ್ಕೆ ಸೇರಬೇಕೆಂದೂ ಪಂಗಡಗಳ ಭಾವನೆ ಬಿಟ್ಟು ಐಕ್ಯರಾಗಬೇಕೆಂದೂ ಕೇಳಿಕೊಂಡಿದ್ದಾರೆ.

ಶರತ್ ಭೋಸರಿಗೆ ತಿಂಗಳ ೫೦ ರೂ. ಕುಟುಂಬಕ್ಕೆ ೧೦೦೦ ರೂ.

ಪ್ರಕಾರ ಸರಕಾರ ಕೊಡುತ್ತಿದೆಯಾಗಿ ತಿಳಿದಿದೆ. ಶರತ್ ಬೋಸರಿಗೆ ಪ್ರತ್ಯೇಕ ಅಡಿಗೆಯವನನ್ನು ನಿರ್ಧರಿಸಿರುವುದಂತೆ.

ಉರಿಯ ಭಾಷೆ ಶಾಸನ ಸಭೆಯಲ್ಲಿ!

ಮಾತನಾಡಕೂಡದೆಂದರು

ಶ್ರೀ. ರಾಮಕೃಷ್ಣ ಬಸು ಮತ್ತು ಶ್ರೀ. ಜಗನ್ನಾಥ ಮಿಶ್ರರೆಂಬ ಕಾಂಗ್ರೆಸ್ ಪಕ್ಷದ ಎಸೆಂಬ್ಲಿ ಸದಸ್ಯರು ಉರಿಯ ಶಾಸನಸಭೆಯಲ್ಲಿ ಉರಿಯ ಭಾಷೆಯಲ್ಲಿ ಮಾತನಾಡಿದಕ್ಕೆ ಆಕ್ಷೇಪವೆತ್ತು ಸ್ಪೀಕರರು ಹೀಗೆಂದರು — "ನನಗೆ ಅಧಿಕಾರವಿದ್ದರೆ, ನಾನು ವಿದೇಶೀಯ ಭಾಷೆಯಿಂದ ಮಾತನಾಡುವುದನ್ನೆಲ್ಲಾ ಸಂಪೂರ್ಣ ನಿಲ್ಲಿಸುತ್ತಿದೆ. ಆದರೆ ಈಗಿನ ಪದ್ಧತಿಯಂತೆ ನಾನು ನಡೆಯಬೇಕಾಗಿರುವುದರಿಂದ ಮಾತನಾಡುವವರು ಇಂಗ್ಲೀಷಿನಲ್ಲೇ ಮಾತನಾಡಬೇಕೆಂದು ಹೇಳದಿರಲಾರೆ."

ಲಾಹೋರಿನಲ್ಲಿ ಒಡ್ವಾಯ್ಯರ ಪ್ರತಿನಿಧಿಗಳು!

ಶ್ರೀಹರಿ ಕೃಷ್ಣ ಮೆಹತಾಬರಿಗೆ ನಾಲ್ಕು ತಿಂಗಳ ಶಿಕ್ಷೆ!

ಮದ್ರಾಸು ಸರಕಾರದ ಆಯುವ್ಯಯದ ಅಂದಾಜುಪಟ್ಟಿ

ಒಡ್ವಯರ್—ಡಯ್ಯರ್ ಮಾದರಿಯವರು

ಲಾಹೋರಿನ ಕಲೆಕ್ಟರರು

ಲಾಹೋರಿನ ಡಿ. ಮ್ಯಾ. ರಾದ ಕೆ. ಎಚ್. ಹಂಡರ್ಸನರೆಂಬವರು, ಪಂಜಾಬು ಅತ್ಯಾಚಾರ ಪ್ರಸಿದ್ಧರಾದ ಒಡ್ವಯರ್ ಮತ್ತು ಡಯರರ ಜೊತೆಗಾರನೆಯ ಅವತಾರವಾಗಿದ್ದಾರೆಂದು ಪ್ರಸಿದ್ಧವಾಗಿದೆ. ಇಲ್ಲಿ ವ್ಯಾಪಾರಿಗಳು ಸತ್ಯಾಗ್ರಹ ಮಾಡಿದ ಸಂದರ್ಭದಲ್ಲಿ, ಮಂತ್ರಿಮಂಡಳದೊಡನೆ ಏನೊಂದೂ ವಿಚಾರಿಸದೆ ಏಕಾಏಕಿ ಏಳು ಮಂದಿ ವ್ಯಾಪಾರೀ ಮಂಡಳದ ಶಾಸನ ಸಭಾ ಸದಸ್ಯರನ್ನು ಕೈದುಮಾಡಿರುವರು. 'ನನ್ನ ಅಧಿಕಾರದಲ್ಲಿದ್ದರೆ ಈ ಎಸೆಂಬ್ಲಿಯನ್ನು ಒಂದೇ ದಿನದಲ್ಲಿ ಮುಗಿಸುತ್ತಿದ್ದೆ' ಎಂದು ಗರ್ಜಿಸಿಬಿಟ್ಟರಂತೆ! ಅವರಿಗೆ ಅಧಿಕಾರವಿದ್ದರೆ ಇನ್ನೇನೂ ಮಾಡುತ್ತಿದ್ದರು. ಅಂತಹ ಅಧಿಕಾರಕ್ಕೆ ಇನ್ನೆಷ್ಟು ಅವಧಿಯೋ?

ಪಟವರ್ಧನರ ಬಿಡುಗಡೆ—ಬಂಧನ

ಅಹಮ್ಮದ್ ನಗರದ ಪ್ರಸಿದ್ಧ ಕಾಂಗ್ರೆಸ್ ಸಮತಾವಾದಿ ಮುಖಂಡರಾದ ಪಟವರ್ಧನರನ್ನು ಒಮ್ಮೆ ಬಿಡುಗಡೆ ಮಾಡಿ ಪುನಃ ಬಂಧಿಸಿದ್ದಾರೆ.

ಮೆಹತಾಬರಿಗೆ 4 ತಿಂಗಳ ಶಿಕ್ಷೆ

ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸದಸ್ಯರಾದ ಶ್ರೀ ಹರಿಕೃಷ್ಣ ಮೆಹತಾಬರಿಗೆ ಹಿಂದುಸ್ಥಾನ ರಕ್ಷಣಾ ಕಾಯಿದೆಯನ್ವಯ ಹಾಕಲಾದ ಖಟ್ಲೆಯಲ್ಲಿ ರೂ. 100 ದಂಡ ಇಲ್ಲವೆ 4 ತಿಂಗಳ ಶಿಕ್ಷೆ ವಿಧಿಸಲಾಗಿದೆ. ಒಡಿಸಾದ ಶಾಸನ ಸಭಾ ಸದಸ್ಯರ ಬಂಧನದ ವಿಚಾರ ಅವರು ಹೊರಡಿಸಿದ ಪ್ರಕಟಣೆಯ ಸಂಬಂಧವಾಗಿ ಆ ಶಿಕ್ಷೆ!

ಮೈಸೂರು ಕಾಂಗ್ರೆಸ್ ಅಧ್ಯಕ್ಷರಾಗಿ

ಶ್ರೀ. ಟಿ. ಸುಬ್ರಹ್ಮಣ್ಯಂ ಇವರು ಸರ್ವಾನುಮತದಿಂದ ಚುನಾಯಿತರಾಗಿದ್ದಾರೆ.

ಪ್ರೊ। ರಂಗರ ಬಿಡುಗಡೆ

ಸ್ಥಾನಬದ್ಧರಾಗಿರಿಸಿದ ಪ್ರೊ। ಎನ್. ಜಿ. ರಂಗರನ್ನು ಯಾವುದೇ ಶರತವಿಲ್ಲದೆ ಬಿಡುಗಡೆ ಮಾಡಿದೆ.

ನೀವು ಮಿತವ್ಯಯ ಮಾಡಬೇಕಾದರೆ ಮೊದಲು ನಿಮ್ಮ ಹಣವನ್ನು ಜಾಗರೂಕತೆಯಿಂದಿರಿ!



ಸೆಕ್ಯುಂಡಸ್

ನಿ. ರೆಕ್ಟೇಂಗುಲರ್ ನಿ. ಸಿಲ್ವರ್	ರೂ. 44
ಪೇಟೆಂಟ್ ಎವರ್‌ಬ್ರೈಟ್ ಸ್ಟೀಲ್	ರೂ. 52
ರೋಲ್ಡ್ ಗೋಲ್ಡ್	ರೂ. 59
18 ಕ್ಯಾರೆಟ್ ಗೋಲ್ಡ್	ರೂ. 132



ಸೆಕುಂಡಸ್ ನ್ಯೂ ಕೆಲಬರ್ ಕರ್ವ್ಡ್	
ಪೇಟೆಂಟ್ ಎವರ್ ಬ್ರೈಟ್ ಸ್ಟೀಲ್	ರೂ. 54
ರೋಲ್ಡ್ ಗೋಲ್ಡ್	ರೂ. 63
9 ಕ್ಯಾರೆಟ್ ಗಟ್ಟಿ ಗೋಲ್ಡ್	ರೂ. 110

ವಾಚಿನ ಉದ್ದೇಶಕ್ಕಿಂತಲೂ ಕ್ರಯವೇ ಮುಖ್ಯವಲ್ಲ. ಎಷ್ಟೇ ಕ್ರಯ ಕೊಟ್ಟರೂ, ವಿಶ್ವಾಸಾರ್ಹವಲ್ಲದ ಮಟ್ಟಿಗೆ ಕೊಟ್ಟ ದುಡ್ಡು ನೀರಿಗೆ ಹಾಕಿದಂತೆ. ನಿಮಗೆ ಮಿತವ್ಯಯ ಮಾಡಬೇಕೆಂದಿದ್ದರೆ, ವೆಸ್ಟ್ ಎಂಡ್ 'ಸೆಕುಂಡಸ್' ವಾಚನ್ನು ಕೊಂಡುಕೊಳ್ಳಿರಿ. ಸಮಯ ಸರಿಯಾಗಿ ತೋರುವುದರಿಂದಲೂ, ಕಡಿಮೆ ಕ್ರಯದ್ದಿಂದೂ ಅದು ಪ್ರಸಿದ್ಧವಾಗಿದೆ. ಅದರಿಂದ ನಿಮ್ಮ ಹಣವೂ ಭದ್ರವಾಗಿರುತ್ತದೆ. ನಿಮಗೆ ಪ್ರತಿಫಲವೂ ದೊರಕುತ್ತದೆ. ನಿಮಗೆ ಬೇಕಾದ ಸೆಕುಂಡಸನ್ನು ನಮ್ಮ ಚಿತ್ರಿತ ಧರ್ಮಾರ್ಥ ಕೆಟಲಾಗನ್ನು ನೋಡಿ ಆರಿಸಿರಿ.

buy WEST END "SECUNDUS"
Economy Series Watches

ವೆಸ್ಟ್ ಎಂಡ್ ವಾಚ್ ಕಂಪೆನಿ, ಬೊಂಬಾಯಿ ಮತ್ತು ಕಲ್ಕತ್ತಾ

WEST END WATCH Co.
BOMBAY CALCUTTA

(೮ನೆಯ ಪುಟದಿಂದ ಮುಂದುವರಿದುದು)

ಯವರ ವಿವಾಹ ಸಂಬಂಧ ಒಂದು ಸತ್ಕಾರಕೂಟವು ತಾ. ೮ರ ದಿನ ಡಾಕ್ಟರ ಕೆ. ವಿ. ಕೆ. ಉಪಾಧ್ಯಾಯರ ಫಾರ್ಮೆಸಿಯಲ್ಲಿ ಶ್ರೀ ವಕೀಲ ಡಿ. ವಿ. ಭಟ್ಟರ ಅಧ್ಯಕ್ಷತೆಯಲ್ಲಿ ಕೂಡಿ ಸಂಭೋಚಿತ ಭಾಷಣಗಳಾದುವು.

ಮುಲ್ಕಿ—ಜೋಡಾಟ.

ಯುದ್ಧನಿಧಿಗಾಗಿ ತಾ. 24ರಂದು ರಾತ್ರಿ ದಶಾವತಾರ ಆಟವಿರುವುದಾಗಿ ಮಂಗಳೂರು ತಹಶಿಲ್ದಾರರು ತಿಳಿಸುತ್ತಾರೆ.

ಉಡುಪಿ

ಪರಮಹಂಸ ಶಾಲಾ ಪ್ರವೇಶೋತ್ಸವ:—ಬನ್ನಾಡಿ ಪರಮಹಂಸ ಶಾಲಾ ಪ್ರವೇಶೋತ್ಸವವು ತಾ. ೨೮ರಲ್ಲಿ ಕೋಟ್ಟಟ್ಟು ಪಟೇಲ್ ಶ್ರೀ। ಎಚ್. ಆರ್. ಹಂದೆ ಅವರ ಅಧ್ಯಕ್ಷತೆಯಲ್ಲಿ ಸಂಭ್ರಮದಿಂದ ಜರಗಿತು. ಲೇಜಿಮ್, ಕೋಲಾಟ, ಯಕ್ಷಗಾನ ನಾಟಕಾದಿಗಳಾದ ಮೇಲೆ ಸಭಿಕರ ಭಾಷಣಗಳಾದುವು. ಶಾಲೆಯು ಹಾ. ಎ. ಶಾಲೆಯಾಗಲೆಂದು ಅಧ್ಯಕ್ಷರು ಕೋರಿದರು. ಧನ ಪಾದಾರ್ಪಣೆಯೊಂದಿಗೆ ಪ್ರವೇಶೋತ್ಸವವು ಕೊನೆಗೊಂಡಿತು.

ಕುಂದಾಪುರ

ಶ್ರೀ ವಾದಿರಾಜ ಪುಣ್ಯದಿನ ಮಹೋತ್ಸವವು ವಾದಿರಾಜರ ಜನ್ಮಭೂಮಿಯಾದ ಕುಂದಾಪುರದ ಸಮೀಪದಲ್ಲಿರುವ ಹೂವಿನ ಕೆರೆಯಲ್ಲಿ ಉಡುಪಿ ಶೀರೂರು ಶ್ರೀಪಾದಂಗಳವರ ಉದಾರ ನೇತೃತ್ವದಲ್ಲಿ ಸಂಭ್ರಮದಿಂದ ಜರಗಿತು.

ಕೋಟೇಶ್ವರ:—ಫೆ. ತಾ. ೨೮ರಲ್ಲಿ ಕೋಟೇಶ್ವರ ಶಾಲಾ ಮಠಾರದಲ್ಲಿ ಶ್ರೀ। ಎಚ್. ಸಂಜೀವರಾಯರ ನೇತೃತ್ವದಲ್ಲಿ ಮದ್ರಾಸು ಸರಕಾರದ ಚಲಚ್ಚಿತ್ರ ಪ್ರದರ್ಶನ ನಡೆಯಿತು. ಮಾತ್ರವಲ್ಲದೆ ತಾ. ೨೮ರಲ್ಲಿ ಕೋಟೇಶ್ವರ ಶಾಲಾ ಮಠಾರದಲ್ಲಿ ಮಹಿಳಾ ವೃಂದದ ಉದ್ಘಾಟನಾ ಸಮಾರಂಭವೂ ಶ್ರೀಯುತ ಎಚ್. ಸಂಜೀವರಾಯರಿಂದ ನೆರವೇರಿಸಲ್ಪಟ್ಟಿತು.

ಕರ್ನಾಟಕ ಜನತೆಯಲ್ಲಿ ಬಿನ್ನಹ

ಸದ್ಯದ ಬಿಕ್ಕಟ್ಟಿನ ಯುದ್ಧದ ಪರಿಸ್ಥಿತಿಯ ಮೂಲಕ ಉಂಟಾಗಬಹುದಾದ ವಿಮಾನದಾಳಿ, ಬೆಂಕಿ, ಅಶಾಂತತೆ, ಕಳವು, ಸುಲಿಗೆ ಮುಂತಾದ ಅನಾಹುತಗಳಿಂದ ಜನತೆಯ ಜೀವ-ವಿತ್ತಗಳನ್ನು ಸಂರಕ್ಷಿಸುವುದಕ್ಕಾಗಿ ಇದೀಗ ಕರ್ನಾಟಕದಲ್ಲಿ ನಗರಗಳಲ್ಲಿ ಮತ್ತು ಹಳ್ಳಿಗಳಲ್ಲಿ ಶಾಂತಿ-ದಳಗಳನ್ನು ಸ್ಥಾಪಿಸುವ ಕಾರ್ಯವನ್ನು 'ಅಖಿಲ ಭಾರತೀಯ-ಕಾಂಗ್ರೆಸ್ ಕಮಿಟಿ'ಯ ಆದೇಶದ ಮೇರೆಗೆ ಕಾಂಗ್ರೆಸ್ ಕಮಿಟಿಗಳು ಮತ್ತು ಕಾರ್ಯಕರ್ತರು ಕೈಕೊಂಡಿದ್ದಾರೆ. ಜಾತಿ-ಪಕ್ಷ-ಪಂಗಡಗಳನ್ನು ಗಣನೆಗೆ ತಾರದೆ ಯಾವತ್ತೂ ನಾಗರಿಕರ ಸಮಾವೇಶವು ಈ ದಳಗಳಲ್ಲಿ ಆಗತಕ್ಕದ್ದಿದೆ. ಈ ದಳದಲ್ಲಿ ಸೇರಲಿಚ್ಛಿಸುವ ಸ್ವಯಂಸೇವಕನು ಕಾಂಗ್ರೆಸ್ ಸಭಾಸದನಾಗಲೀ ಅಥವಾ ಖಾದೀಧಾರಿಯಾಗಲೀ ಇರಬೇಕೆಂಬ ನಿರ್ಬಂಧವಿಲ್ಲ. ಮಾತ್ರ ಅವನು ದಳದ ಸ್ವಯಂಸೇವಕನೆಂದು ಕಾರ್ಯವೆಸಗುವ ಕಾಲಕ್ಕೆ ಶಾಂತಿಮಾರ್ಗದಿಂದ ನಡೆಯಬೇಕು. ನಾಗರಿಕರ ಸಂರಕ್ಷಣೆಯ ಉದ್ದೇಶಕ್ಕಾಗಿ ಸ್ಥಾಪಿತವಾದ ಸರಕಾರೀ ಅಥವಾ ಇತರ ಸಂಸ್ಥೆಗಳೊಡನೆ ಸಹಕಾರದಿಂದಲೇ ಈ ದಳಗಳ ಕಾರ್ಯವು ಸಾಗತಕ್ಕದ್ದಿದೆ. ಇಂಥ ದಳಗಳನ್ನು ಸ್ಥಾಪಿಸುವುದಕ್ಕೆ ಸಹಾಯಮಾಡುವುದು ಮತ್ತು ಅವುಗಳಲ್ಲಿ ಸೇರಿ ಅವುಗಳ ಶಕ್ತಿ ಬೆಳೆಸುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದೆ. ಆದರಿಂದ ಕರ್ನಾಟಕದ ಯಾವತ್ತೂ ನಾಗರಿಕರು ತಮ್ಮ ಜಾತಿ ಪಕ್ಷ ಪಂಗಡಗಳ ಭೇದಗಳನ್ನು ಬದಿಗಿಟ್ಟು ಈ ದಳಗಳಲ್ಲಿ ಸೇರಿ ಅವುಗಳಿಗೆ ತನು-ಮನ-ಧನಗಳಿಂದ ಸಹಾಯಮಾಡಬೇಕೆಂದು ಕೋರುತ್ತೇನೆ' ಎಂದು ಕ. ಪ್ರಾಂ. ಕಾಂಗ್ರೆಸ್ ಕಮಿಟಿ ಸ್ವಯಂಸೇವಕ ದಳದ ವ್ಯವಸ್ಥಾಪಕರು ತಿಳಿಸುತ್ತಾರೆ.

ಜಿಲ್ಲಾ ಸಮಾಚಾರಗಳು

ಮಂಗಳೂರು

ಮುಸ್ಲಿಮ್ ಮುಹಮ್ಮಡನ್ ಹಾ. ಎ. ಶಾಲಾ ವರ್ಧಂತಿ

ಕಳೆದ ತಾ. ೧೪ರಂದು ಸಂಜೆ ಈ ಶಾಲೆಯ ವರ್ಧಂತ್ಯುತ್ಸವವು ಜಿಲ್ಲಾ ಕಲೆಕ್ಟರ್ ಶ್ರೀ| ಎಂ. ಕರಮತುಲ್ಲಾ ಐ. ಸಿ. ಎಸ್. ಅವರ ಅಧ್ಯಕ್ಷತೆಯಲ್ಲಿ ಜರುಗಿತು. ಪ್ರಾರ್ಥನೆ ಸ್ವಾಗತಗೀತಗಳಾದ ಬಳಿಕ, ಶಾಲಾ ಶ್ರೇಯಃಪ್ರಾರ್ಥನೆಯನ್ನು ಜನಾಬ್ ಮಹಮ್ಮದ್ ಅಬ್ಬಾ ಸಾಹೇಬ್ ಅವರು ಉರ್ದು ಭಾಷೆಯಲ್ಲಿ ಮಾಡಿದರು. ಶಾಲಾ ಹೆಡ್ಮಾಸ್ತರ್ ಶ್ರೀ. ಕೆ. ಮುಹಮ್ಮದರವರು ಶಾಲಾ ವರದಿಯನ್ನೋದುತ್ತ, ಈ ಶಾಲೆಯ ಶಿಕ್ಷಣದ ಮಾಧ್ಯಮವು ಉರ್ದುವೆಂದೂ, ಇಲ್ಲಿ ಪಾಸಾದ ಹಲವು ವಿದ್ಯಾರ್ಥಿಗಳು ಹೈಸ್ಕೂಲಿನ ಉಚ್ಚ ತರಗತಿಗಳಲ್ಲಿ ಸೇರಿ ಕೃತಾರ್ಥರಾಗಿರುವರೆಂದೂ ಹೇಳಿ ಈಗಿನ ವಿದ್ಯಾರ್ಥಿಗಳ ಸಂಖ್ಯೆ, ಶಾಲೆಯ ನಾನಾ ಸಂಘ, ಚಟುವಟಿಕೆಗಳ ಕುರಿತು ತಿಳಿಯಪಡಿಸಿದರು. ಅಧ್ಯಕ್ಷರು ಬಹುಮಾನ ವಿತರಣ ಮಾಡಿ ತಮ್ಮ ಭಾಷಣದಲ್ಲಿ, ಮುಸಲ್ಮಾನರು ರಣಶೂರ ಜನರೆಂಬುದನ್ನು ಸಮರ್ಥಿಸುತ್ತಾ, ಚಿಲ್ಲರೆ ವಿಷಯಗಳಿಗಾಗಿ ಮುಸ್ಲಿಮರು ಹೋರಾಡದೆ, ಸಮೀಪವಿರುವ ಶತ್ರುವಿನೊಡನೆ ಜನಬಲ ಧನಬಲಗಳೊಡನೆ ಹೋರಾಡಲು ಸಿದ್ಧರಾಗಿರಬೇಕೆಂದೂ, ವ್ಯವಹಾರದಲ್ಲಿ ಉರ್ದು—ಕನ್ನಡವನ್ನೇ ಬಳಸಬೇಕೆಂದೂ, ಉರ್ದು ಭಾಷೆಯಲ್ಲಿ ಭಾಷಣವಿತ್ತರು. ಉತ್ಸವ ಕಮಿಟಿಯ ಅಧ್ಯಕ್ಷರಾದ ವಕೀಲ್ ಶ್ರೀ. ಎ. ಮುಸಬ್ಬಿಹರವರು ವಂದನಾರ್ಪಣೆ ನಡೆಸಿದರು. ಕೊನೆಗೆ ವಿದ್ಯಾರ್ಥಿಗಳ ವಿವಿಧ ವಿನೋದಾವಳಿಗಳೂ ಇದ್ದುವು.

ಹಿಂದುಸ್ಥಾನ ಸ್ಕೌಟ್ ಎಸೋಸಿಯೇಶನ್

ಈ ಎಸೋಸಿಯೇಶನಿನ ಒಂದು ಸಭೆ ಕಳೆದ ಆದಿತ್ಯವಾರ ಸ್ಥಳೀಯ ಥಿಯಾಸಾಫಿಕಲ್ ಲಾಜಿನಲ್ಲಿ ಶ್ರೀ. ಕೆ. ಸದಾಶಿವರಾಯರ ಅಧ್ಯಕ್ಷತೆಯಲ್ಲಿ ಜರುಗಿ, ರಚನಾ ನಿಯಮಗಳ ಸಂಬಂಧದ ಕೆಲವು ತಿದ್ದುಪಡಿಗಳ ಕುರಿತು ಪ್ರಾಂತಿಕ ಹೆಡ್ ಕ್ವಾರ್ಟರ್ಸಿಗೆ ಬರೆದುಕೊಳ್ಳುವಂತೆ ಸೂಚಿಸಲಾಯಿತು. ಕಬ್ ಮಾಸ್ಟರ್, ಸ್ಕೌಟ್ ಮಾಸ್ಟರ್, ರೋವರ್ ಲೀಡರ್ ಇವರ ತರಬೇತಿ ಕೇಂದ್ರಗಳನ್ನು ಜಿಲ್ಲೆಯ ಕೆಲವೆಡೆಗಳಲ್ಲಿ ಬರುವ ಎಪ್ರಿಲ್—ಮೇ ತಿಂಗಳಲ್ಲಿ ನಡೆಸಬೇಕೆಂದು ನಿರ್ಧರಿಸಲ್ಪಟ್ಟಿತು.

ಕೃಷ್ಣಪ್ಪ ಮೆಮೋರಿಯಲ್ ಬೆಡ್ಮಿಂಟನ್ ಪಂದ್ಯಾಟ

ಸ್ಥಳೀಯ ಒರಿಯಂಟಲ್ ಕ್ಲಬ್ಬಿನವರು ನಡೆಸಿದ ಈ ಪಂದ್ಯಾಟದಲ್ಲಿ ಪೆಂಟ್‌ಲ್ಯಾಂಡ್‌ಪೇಟೆ ಟೀಮಿನವರು ವಿಜಯಿಗಳಾದರು. ಶ್ರೀ. ಸ್ನೇಂಪಳ್ಳಿ ರಾಮರಾಯರು ಅಧ್ಯಕ್ಷತೆ ವಹಿಸಿ ಬಹುಮಾನಗಳನ್ನು ಹಂಚಿದರು.

ಸೆಂಟ್ರಲ್ ಬ್ಯಾಂಕ್ ಕಟ್ಟಡದಲ್ಲಿ ಸಭೆಗಳು

ಮಂಗಳೂರು ಕೊ-ಒಪರೇಟಿವ್ ಲೇಬರ್ ಯೂನಿಯನಿನ ಆರಂಭದ ಸಭೆ ಸ್ಥಳೀಯ ಸೆಂಟ್ರಲ್ ಕೊ-ಒಪರೇಟಿವ್ ಕಟ್ಟಡದಲ್ಲಿ ಕಳೆದ ಆದಿತ್ಯವಾರ ಶ್ರೀ. ಎ. ಬಿ. ಶೆಟ್ಟಿ ಎಂ.ಎಲ್.ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಈ ಯೂನಿಯನಿನ ಅಧ್ಯಕ್ಷರಾಗಿ ಶ್ರೀ. ಪಿ. ಶಂಕರರಾಯರೂ, ಕಾರ್ಯದರ್ಶಿಗಳಾಗಿ ಶ್ರೀ. ಎಚ್. ರಾಮರಾಯ ಮಲ್ಯರೂ ಆರಿಸಲ್ಪಟ್ಟರು. ೭ ಮಂದಿ ಡೈರೆಕ್ಟರರು ಚುನಾಯಿತರಾದರು. ಮತ್ತೆ ಹರಿಜನ ಕೊ|| ಸಂಘಗಳ ಪ್ರತಿನಿಧಿಗಳಲ್ಲಿ ೬ ಮಂದಿ ಇದರ ಡೈರೆಕ್ಟರರು. ಶ್ರಮಜೀವನದ ಕಂಟ್ರಾಕ್ಟುಗಳನ್ನು ಹರಿಜನರಿಗೆ ಒದಗಿಸಿ ಕೊಡುವುದೇ ಈ ಯೂನಿಯನಿನ ಗುರಿ.

ಸೆಂಟ್ರಲ್ ಕೊ-ಒಪರೇಟಿವ್ [illegible] ವ್ಯಾಪಾರದ ಸ್ಟೋರ್

ಜಿಲ್ಲೆಯ ಚಿಲ್ಲರೆ ವ್ಯಾಪಾರದ ಸಹಕಾರದ ಸ್ಟೋರುಗಳಿಗೆ ಆವಶ್ಯವಿರುವ ಸಾಮಗ್ರಿಗಳನ್ನು ಸರಬರಾಯಿ ಮಾಡಲು ಒಂದು ರಖಂ ವ್ಯಾಪಾರದ ಸೆಂಟ್ರಲ್ ಸ್ಟೋರನ್ನು ಸ್ಥಾಪಿಸುವ ಉದ್ದೇಶದಿಂದ, ಕಳೆದ ಆದಿತ್ಯವಾರ ಸೆ. ಬ್ಯಾಂಕ್ ಕಟ್ಟಡದಲ್ಲಿ, ಶ್ರೀ. ಎಂ. ಶಿವರಾಯರ ಅಧ್ಯಕ್ಷತೆಯಲ್ಲಿ ಅಂಥ ಸ್ಟೋರುಗಳ ಮತ್ತು ಕೊ-ಒಪರೇಟಿವ್ ಸಂಘಗಳ ಪ್ರತಿನಿಧಿಗಳ ಒಂದು ಸಭೆ ನಡೆಯಿತು.

ಸ್ಥಳೀಯ ಸಿನೆಮಾಗಳು

ನಯಾ ಸಂಸಾರ್—ಬಾಲಾಜಿಯಲ್ಲಿ

ಬಾಂಬೇ ಟಾಕೀಸಿನವರ 'ನಯಾ ಸಂಸಾರ್' ಎಂಬ ಚಿತ್ರವು ಬಾಲಾಜಿ ಟಾಕೀಸಿನಲ್ಲಿ ಈ ವಾರದಿಂದ ಪ್ರದರ್ಶಿತವಾಗುತ್ತಿದ್ದು, ಮಂಗಳೂರ ಮಹಾಜನರನ್ನು ಬಹಳವಾಗಿ ಆಕರ್ಷಿಸಿದೆ. ಇದು ಪತ್ರಿಕೋದ್ಯೋಗಕ್ಕೆ ಸಂಬಂಧಪಟ್ಟ ಕತೆ. ಅಶೋಕ ಕುಮಾರನು ಒಬ್ಬ ಪತ್ರಿಕೋದ್ಯೋಗಿಯಾಗಿ, ಪತ್ರಿಕೋದ್ಯಮಿಯ ಪಾತ್ರವನ್ನು ಬಹಳ ಸುಂದರವಾಗಿ ಅಭಿನಯಿಸಿದ್ದಾನೆ. ರೇಣುಕಾದೇವಿ ಇವನ ಜತೆಪತ್ರಿಕೋದ್ಯಮಿಯಾಗಿದ್ದಾಳೆ. ಅವರಲ್ಲಿ ಪರಸ್ಪರ ಉಂಟಾದ ಅನುರಾಗ, ಮಧ್ಯೆ ಬಂದೊದಗಿದ ಗಂಡಾಂತರದಿಂದ ಒಮ್ಮೆ ವಿಪತ್ತಿಗೊಳಗಾದರೂ ಕೊನೆಗೆ ಪ್ರೇಮವೇ ವಿಜಯವನ್ನು ಹೊಂದುವುದು. ಪತ್ರಿಕೋದ್ಯೋಗಿಯು ನ್ಯಾಯದ ಸಲುವಾಗಿ, ಸತ್ಯದ ಸಲುವಾಗಿ ಆದರ್ಶದ ಸಲುವಾಗಿ ಹೋರಾಡುವ ಧೀರನಿರಬೇಕೆಂಬುದು ಇದರ ಸಂದೇಶವಾಗಿದೆ. ಮುಬಾರಕ್, ಶಾ ನವಾಜ್, ದೇಸಾಯಿ, ಸುರೇಶ್ ಮೊದಲಾದವರು ಸಹಾಯಕ ನಟವರ್ಗದವರು. ಸೆಂಟ್ರಲ್ ಟಾಕೀಸಿನಲ್ಲಿ 'ಪರದೇಶಿ' ಚಿತ್ರವೂ ನ್ಯೂ ಚಿತ್ರಾದಲ್ಲಿ 'ಸಂತ ಸಖೂ' ಚಿತ್ರವೂ ಪ್ರದರ್ಶಿತವಾಗುತ್ತಿದೆ.

ದ. ಕನ್ನಡದ ಕೊ-ಒಪರೇಟಿವ್ ಎಡ್ವಾನ್ಸ್‌ಮೆಂಟ್ ಸೊಸೈಟಿ

ಮೇಲಿನ ಸೊಸೈಟಿಯ ಸಭೆ ಕಳೆದ ಆದಿತ್ಯವಾರ, ಸೆ|| ಬ್ಯಾಂಕ್ ಕಟ್ಟಡದಲ್ಲಿ ಶ್ರೀ. ಉಳ್ಳಾಲ ಮಂಗೇಶರಾಯರ ಅಧ್ಯಕ್ಷತೆಯಲ್ಲಿ ಜರಗಿತು.

ಜಮೀನು ಮತ್ತು ಮನೆಗಳ ಮಾಲಕರ ಸಭೆ

ಕಳೆದ ತಾ. ೧೬ರಲ್ಲಿ ಸ್ಥಳೀಯ ಮಿಲಾಗ್ರಿಸ್ ಶಾಲೆಯಲ್ಲಿ, ಕೋರ್ಟ್ ವಾರ್ಡಿನ ಜಮೀನು ಮತ್ತು ಮನೆಗಳ ಮಾಲಕರದೊಂದು ಸಭೆ, ಮು|| ಚೆಯರ್‌ಮ್ಯಾನ್ ಶ್ರೀ. ಬಿ. ವೆಂಕಟರಾವ್ ಬಾಳಿಗ ಎಂ. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರುಗಿತು. ಆ ವಾರ್ಡಿನಲ್ಲಿ ಟೌನ್ ಪ್ಲಾನಿಂಗ್ ಸ್ಕೀಮನ್ನು ಪ್ರವೇಶಗೊಳಿಸುವ ಕುರಿತಾಗಿ ಇರುವ ಸೂಚನೆ ಮತ್ತು ಆಕ್ಷೇಪಗಳನ್ನು ಸ್ವೀಕರಿಸುವುದೇ ಆ ಸಭೆಯ ಉದ್ದೇಶವಾಗಿತ್ತು. ಜಮೀನು ಮತ್ತು ಕಟ್ಟಡಗಳ ಮಾಲಕರ ಪರವಾಗಿ ಶ್ರೀ. ಪಿ. ಡಿ. ಸೋಜರು ಮಾತಾಡಿದರು. ಮೊದಲು ಈ ನಗರಕ್ಕಾಗಿ ಒಂದು ಯೋಜನೆ ತಯಾರಿಸಿ ಬಳಿಕ ಅಗತ್ಯವಿದ್ದರೆ ಈ ವಾರ್ಡಿಗೂ ಒಂದು ಯೋಜನೆ ತಯಾರಿಸಬಹುದೆಂದು ಶ್ರೀ. ಸಿ. ಎಲ್. ಲೋಬರು ಸೂಚಿಸಿದರು. ಡಾ| ಅಡಪರೂ ಚೆಯರ್‌ಮ್ಯಾನ್ ಅಧ್ಯಕ್ಷರೂ ಆಕ್ಷೇಪಗಳಿಗೆ ಉತ್ತರ ಹೇಳಿದರು. ಚೆಯರ್‌ಮ್ಯಾನರು ಈ ಜಮೀನು ಮತ್ತು ಮನೆಗಳ ಮಾಲಕರು ತಮ್ಮೊಡನೊಂದು ಸಮಿತಿ ನೇಮಿಸಿ ಅವರೀ ಪ್ರಶ್ನೆಯ ವಿಚಾರ ನಡೆಸಿ, ೧ ತಿಂಗಳೊಳಗಾಗಿ ಮು|| ಕೌನ್ಸಿಲಿಗೆ ತಮ್ಮ ಸೂಚನೆಗಳನ್ನು ಕಳುಹಿಸಲೆಂದರು.

ಮೂಲ್ಯರ 'ಯಾನೆ' ಕುಲಾಲರ ಪರಿಷತ್ತು

ಮಾರ್ನಮಿಕಟ್ಟೆಯಲ್ಲಿ ಜರಗಿದ ಪರಿಷತ್ತಿನಲ್ಲಿ ಅವರ ಸಮಾಜವನ್ನು 'ಕುಂಬಾರ' ಎಂದು ಕರೆಯದೆ 'ಕುಲಾಲ' ಎಂದು ಪರಿವರ್ತಿಸಬೇಕೆಂದೂ ಈ ಬದಲಾವಣೆಯನ್ನು ಸರಕಾರವು ಗವರ್ನಮೆಂಟ್ ದಾಖಲೆಗಳಲ್ಲಿ ಸ್ವೀಕರಿಸಬೇಕೆಂದೂ ಮನವಿಯನ್ನು ಕಳುಹಿಸಲಾಗಿತ್ತು. ಸರಕಾರದವರು ಇದಕ್ಕೆ ಉತ್ತರವಾಗಿ ಒಂದು ಪ್ರಕಟನೆ ಹೊರಡಿಸಿ, ಆ ಸಮಾಜದವರು ತಮ್ಮ ಸಮಿತಿಗಳ, ಇಲ್ಲವೆ ವೈಯಕ್ತಿಕ ಅಭಿಪ್ರಾಯಗಳನ್ನು ಪರಿಷತ್ತಿನ ನಿರ್ಣಯದ ಕುರಿತು ಬರೆದು, ಎಪ್ರಿಲ್ ಒಂದರೊಳಗೆ ತಲಪುವಂತೆ ಕಾರ್ಯದರ್ಶಿ, ಮದ್ರಾಸ್ ಸರಕಾರ ಅಭಿವೃದ್ಧಿ ಶಾಖೆ, ಫೋ. ಸೆ. ಜಾರ್ಜ್ ಇಲ್ಲಿಗೆ ಕಳುಹಿಸಬೇಕೆಂದು ತಿಳಿಸಿರುವರೆಂದು ತಿಳಿದಿದೆ.

ತಂದೆಯನ್ನು ಕೊಂದ ಮಗನಿಗೆ ಜನ್ಮಠಾಪು

ಕಾರ್ಕಳ ತಾಲೂಕು ಕಣಜಾರು ಗ್ರಾಮದ ಸಂಜೀವಶೆಟ್ಟಿ ಎಂಬವನಿಗೆ ತಂದೆಯನ್ನು ಕೊಂದ ತಪ್ಪಿಗಾಗಿ ಮಂಗಳೂರು ಸೆಶ್ಶನ್ಸ್ ಜಡ್ಜರಾದ ಶ್ರೀ. ಎಲ್. ಎಸ್. ಪಾರ್ಥಸಾರಥಿ ಅಯ್ಯರ್‌ರವರು ಜನ್ಮಠಾಪು ಶಿಕ್ಷೆಯನ್ನು ವಿಧಿಸಿದರು. ಆತನು ಮನೆಯಲ್ಲಿ ಯಾವ ಕೆಲಸವನ್ನೂ ಮಾಡದೆ ಸೋಮಾರಿಯಾಗಿದ್ದ ಕುರಿತು ಅವನ ತಂದೆಯು ಊರಿನ ಪಟೇಲರ ಕೂಡೆ ದೂರು ಹೇಳಲು, ಆತನು ಅವಿಧೇಯನಾಗಿ ಮಾತಾಡುವಾಗ ಅವನ ತಂದೆಯು ತಾನು ಮಗನಿಗೆ ಅನ್ನ ಕೊಡಲು ಸಾಧ್ಯವಿಲ್ಲ ಎಂದು ಹೇಳಿದ ವಾಕ್ಯಕ್ಕೆ ಸಿಟ್ಟುಗೊಂಡು, ಅವನನ್ನೇ ಚೂರಿಯಿಂದ ತಿವಿದದ್ದಾಗಿ ಆತನ ಮೇಲಿನ ಕೇಸಾಗಿತ್ತು. ಆತನು ತಪ್ಪನ್ನು ಒಪ್ಪಿ ಹೇಳಿಕೆ ಕೊಟ್ಟಿದ್ದನು. ತಪ್ಪಿನ ಸಮಯ ಆತನಿಗೆ ತಲೆ ಸರಿಯಿರಲಿಲ್ಲವಾಗಿ ಅವನ ಕಡೆಯಿಂದ ಹೇಳೋಣವಾಗಿತ್ತು. ಆದರೆ ಎಸೆಸರರ ಅಭಿಪ್ರಾಯವನ್ನು ಮಂಜೂರು ಮಾಡಿ ಜಡ್ಜರು ಆತನು ತಪ್ಪಿತಸ್ಥನೆಂತ ವಿಧಿಸಿ ಅವನಿಗೆ ಮೇಲೆ ಹೇಳಿದ ಶಿಕ್ಷೆ ವಿಧಿಸಿದರು. ಆತನ ಕಡೆಯಿಂದ ಶ್ರೀ| ಕೆ. ಪಿ. ಎನ್. ದಾಸರು ಕೋರ್ಟಿನಿಂದ ನೇಮಕಪಟ್ಟು ವಾದಿಸಿದ್ದರು.

ಜಿಲ್ಲಾ ಕಾಂಗ್ರೆಸ್ ಕಮಿಟಿ

ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಮಹಾಸಭೆಯು ಶ್ರೀ| ಯು. ಶ್ರೀನಿವಾಸ ಮಲ್ಯರ ಅಧ್ಯಕ್ಷತೆಯಲ್ಲಿ ತಾ. ೧೫ರಂದು ಸೇರಿ, ಸೇಟ್ ಜಮ್ನಾಲಾಲ ಬಜಾಜರ ಹಾಗೂ ಪಂಡಿತ ಮದನಮೋಹನ ಮಾಲವೀಯರ ಪತ್ನಿಯವರ ನಿಧನಗಳ ಬಗ್ಗೆ ದುಃಖಸೂಚಕ ಠರಾವುಗಳಾದ ನಂತರ, ಯುದ್ಧ ಪರಿಸ್ಥಿತಿಯಿಂದ ಸಂಭವಿಸಬಹುದಾದ ಅನಾಹುತ—ಅನ್ನವಸ್ತ್ರ—ಅನಾನುಕೂಲತೆಗಳನ್ನು ಪರಿಹರಿಸಲೂ, ಜನರು ದಿಗಿಲುಗೊಳ್ಳದಂತೆ ಪ್ರಚಾರ ಮೂಲಕ ಸಾಧಿಸಿ ಅವಶ್ಯವಿದ್ದಾಗ ಅವರನ್ನು ಸುರಕ್ಷಿತ ಸ್ಥಳಗಳಿಗೆ ಸಾಗಿಸಲೂ, ಅನಾಹುತಗಳಲ್ಲಿ ಏಟು ಹೊಂದುವವರಿಗೆ ಚಿಕಿತ್ಸೆ ಮೊದಲಾದ ಏರ್ಪಾಡುಗಳನ್ನು ಮಾಡಿಸಲೂ, ಧವಸಧಾನ್ಯಗಳು ಸರ್ವರಿಗೂ ನ್ಯಾಯವಾದ ಧಾರಣೆಗಳಲ್ಲಿ ಅವಶ್ಯವಿದ್ದಷ್ಟು ದೊರೆವಂತೆಯೂ ಸರ್ವ ವ್ಯವಸ್ಥೆ ಮಾಡುವ ಸಲುವಾಗಿ ಒಂದು ಎಮರ್ಜೆನ್ಸಿ ಸಮಿತಿಯನ್ನು ರಚಿಸಿತು.

ಜಿಲ್ಲೆಯಲ್ಲಿ ಸ್ವಯಂಸೇವಕ ದಲ ತರಬೇತಿಯ ಬಗ್ಗೆ ಒಂದು ಶಿಬಿರವನ್ನು, ಬರುವ ಎಪ್ರಿಲ್ ತಿಂಗಳ ಮಧ್ಯದಲ್ಲಿ ಕಟಪಾಡಿಯಲ್ಲಿ ತೆರೆಯುವ ನಿರ್ಧಾರವಾಯಿತು.

ಮೊರಾಜಾ ದಂಗೆಯ ಸಂಬಂಧವಾಗಿ ದೇಹಾಂತ ಶಿಕ್ಷೆಗೆ ಗುರಿಯಾದ ಶ್ರೀ| ಕೆ. ಪಿ. ಆರ್. ಗೋಪಾಲನ್ ನಂಬಿಯಾರ ಇವರಿಗೆ ವಿಧಿಸಿದ ಮರಣದಂಡನೆಯನ್ನು ತೆಗೆದು ಹಾಕುವಂತೆ ಮದರಾಸು ಗವರ್ನರರನ್ನು ಕೇಳಿಕೊಳ್ಳುವ ಠರಾವಾಯಿತು.

ಹೊಸತಾಗಿ ರಚಿಸಲ್ಪಟ್ಟ ಕಾರ್ಯಕಾರಿ ಮಂಡಳಿಯು ಈ ತೆರನಿದೆ। ಶ್ರೀ| ಯು. ಶ್ರೀನಿವಾಸ ಮಲ್ಯ (ಅಧ್ಯಕ್ಷರು), ಶ್ರೀ| ಎಮ್. ಡಿ. ಅಧಿಕಾರಿ (ಉಪಾಧ್ಯಕ್ಷರು), ಶ್ರೀ| ಕುದ್ಮುಲ್ ವಾಸುದೇವ ಶೆಣೈ (ಜನರಲ್ ಸೆಕ್ರೆಟರಿ), ಶ್ರೀ| ವಿ. ವೆಂಕಟೇಶ ಪ್ರಭು (ಕೋಶಾಧ್ಯಕ್ಷರು); ಶ್ರೀ| ಬಿ. ಸುಬ್ಬಣ್ಣ ಶೆಟ್ಟಿ ಮತ್ತು ಶ್ರೀ| ಕೆ. ಪಿ. ರಾಮ ಪೊದುವಾಳ (ಜತೆಕಾರ್ಯದರ್ಶಿಗಳು.)

ದ. ಕ. ಜಿಲ್ಲಾ ಬೋರ್ಡು ಮೀಟಿಂಗು

ಡಿಸ್ಟ್ರಿಕ್ಟ್ ಬೋರ್ಡು ಆಫೀಸಿನಲ್ಲಿ ಮಾರ್ಚಿ ೨೪ರಂದು ಪ್ರಾತಃಕಾಲ ೧೧ ಗಂಟೆಗೆ ಪ್ರಾರಂಭವಾಗುವುದು.

ಜೋಡಾಟ-ಬಜ್ಪೆ

ಶ್ರೀ ಕಟೀಲ್—ಮುಲ್ಕಿ ಮೇಳಗಳ ಜೋಡಾಟ ಕಳೆದ ಶನಿ, ಆದಿತ್ಯವಾರಗಳಲ್ಲಿ ನಡೆದಾಗ ಡೆ| ಕಲೆಕ್ಟರ್ ಶ್ರೀ. ಬಿ. ಜೂಗಪ್ಪನವರು ಮೊದಲ ದಿನ ಯುದ್ಧ ಪರಿಸ್ಥಿತಿಯ ವಿಚಾರದಲ್ಲಿ ಭಾಷಣ ಮಾಡಿ ಸಹಾಯ ಕೋರಿದರು. ಎರಡು ದಿನಗಳಲ್ಲಿಯೂ ವಿದ್ಯಾರ್ಥಿಗಳಿಂದ ಸಮರ ಗೀತಗಳನ್ನು ಹಾಡಿಸಿ ಶ್ರೀ| ಜೂಗಪ್ಪನವರು ಅವರಿಗೆ ಪುಸ್ತಕಗಳ ಬಹುಮಾನ ಹಂಚಿದರು.

ಗ್ರಾಮೋದ್ಧಾರ

ಕಳೆದ ತಾ. ೧೫ರಲ್ಲಿ ಸ್ಥಳೀಯ ಕೆನರಾ ಹೈಸ್ಕೂಲಿನಲ್ಲಿ, ವಿದ್ಯಾರ್ಥಿ ಸಂಘದ ಒಂದು ಸಭೆಯು ಸ್ಥಳೀಯ ಗ| ಕಾ| ಪ್ರಿನ್ಸಿಪಾಲ್ ಶ್ರೀ| ಕೆ. ಎಸ್. ಯು. ನಾಯರರ ಅಧ್ಯಕ್ಷತೆಯಲ್ಲಿ ಜರಗಿತು. ರಜಾಕಾಲದಲ್ಲಿ ಕಾಲೇಜ್ ವಿದ್ಯಾರ್ಥಿಗಳು ಗ್ರಾಮಾಂತರಗಳಲ್ಲಿ ಸಂಚರಿಸಿ, ಅಲ್ಲಿನ ಆರ್ಥಿಕ ಪರಿಸ್ಥಿತಿಯ ಕೈಗಾರಿಕೆಗಳೇ ಮೊದಲಾದವುಗಳ ವಿದ್ಯಮಾನಗಳ ಕೂಲಂಕಷ ವಿಚಾರಣೆ, ಪರಿಶೋಧನೆ ನಡೆಸಬೇಕೆಂಬುದನ್ನು ಪ್ರೋತ್ಸಾಹಗೊಳಿಸಲಿಕ್ಕಾಗಿಯೇ ಈ ಸಭೆ ನೆರೆದಿತ್ತು. ಶ್ರೀ||ಗಳಾದ ಎಚ್. ರಾಮರಾಯ ಮಲ್ಯ, ಆರ್. ಆರ್. ಕಲ್ಕೀರಿಕರ್, ಯು. ಶಾಂತಾರಾಮರಾವ್ ಇವರು ಭಾಷಣಮಾಡಿದರು. ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ಶ್ರೀ. ಬಿ. ವಿ. ಕಕ್ಕಿಲಾಯರು ವಂದನೆ ಅರ್ಪಿಸಿದರು.

ಕಾಸರಗೋಡು

ನೀಲೇಶ್ವರ:—ಶ್ರೀ| ಕೆ. ಪಿ. ಆರ್. ದಿನಾಚರಣೆ—ಶ್ರೀ| ಕೆ. ಪಿ. ಆರ್. ಗೋಪಾಲನ್ ನಂಬಿಯಾರರನ್ನು ಮರಣದಂಡನೆಯಿಂದ ವಿಮುಕ್ತಗೊಳಿಸಬೇಕೆಂದು ಮದ್ರಾಸಿನ ಗವರ್ನರರನ್ನು ಮತ್ತು ವೈಸರಾಯರನ್ನು ಕೇಳಿಕೊಳ್ಳುವ ಠರಾವೊಂದು ತಾ. ೫ರಲ್ಲಿ ಇಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಮಂಜೂರಾಯಿತು. ಶ್ರೀ| ಎಮ್. ಕೆ. ಕುಂಞಂಬು ನಾಯರರು ಅಧ್ಯಕ್ಷ ಸ್ಥಾನ ವಹಿಸಿ, ಶ್ರೀ| ಕೆ. ಪಿ. ಆರ್. ಗೋಪಾಲನ್ ನಂಬಿಯಾರರ ಗುಣಕಥನಮಾಡಿ ಎಳೆ ವಯಸ್ಸಿನ ದೇಶಪ್ರೇಮಿಯಾದ ಶ್ರೀ| ನಂಬಿಯಾರರನ್ನು ಮರಣದಂಡನೆಯಿಂದ ಪಾರು ಮಾಡಲು ಪ್ರಯತ್ನಿಸುವುದು ನಮ್ಮ ಕರ್ತವ್ಯವೆಂದರು. ವೈಸರಾಯರಿಗೆ ಮತ್ತು ಗವರ್ನರರಿಗೆ ತಂತಿ ಕಳುಹಿಸಲ್ಪಟ್ಟಿದೆ.

ಹೊಸದುರ್ಗ:—ಶ್ರೀ| ಕೆ. ಪಿ. ಆರ್. ದಿನಾಚರಣೆಯು ಕಳೆದ ತಾ ೬ರಂದು ಆಚರಿಸಲ್ಪಟ್ಟಿತು. ಸಾರ್ವಜನಿಕ ಸಭೆಯೊಂದು ಶ್ರೀ| ಎನ್. ಕೆ. ನಂಬಿಯಾರರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀ| ಗೋಪಾಲನ್ ನಂಬಿಯಾರರನ್ನು ಮರಣದಂಡನೆಯಿಂದ ಬಿಡುಗಡೆಮಾಡಲು ಕೇಳಿಕೊಳ್ಳುವ ನಿರ್ಣಯವಾಯಿತು.

ಬ್ರಹ್ಮಾವರ ಲೇಬರ್ ಶಾಲೆಯ ಮಕ್ಕಳ ರಕ್ಷಕರ ಸಭೆಯು ಫೆ. ತಾ. ೮ನೇ ಸಾಯಂ. ಅದೇ ಶಾಲಾ ವಠಾರದಲ್ಲಿ ಇಲ್ಲಿಯ ಸಬ್ ರಿಜಿಸ್ಟ್ರಾರರಾದ ಶ್ರೀ| ಎನ್. ಕೆ. ಜತ್ತನ್ನನವರ ಅಧ್ಯಕ್ಷತೆಯಲ್ಲಿ ಜರಗಿತು. ಈ ಶಾಲೆಯಲ್ಲಿ ಕಲಿಯುವ ಅತಿ ಬಡವರಾದ ಹರಿಜನರ ೪೦ ಮಕ್ಕಳಿಗೆ ಮಧ್ಯಾಹ್ನ ಗಂಜಿ ಊಟ ಹಾಕಿ ಒಂದೊಂದು ಉಡುಪು ಒದಗಿಸಲಾಯಿತು. ಈ ಕಾರ್ಯಕ್ಕೆ ಅನೇಕ ಮಹನೀಯರು ಧನಸಹಾಯ ಮಾಡಿದ್ದಾರೆ.

ಕಾರ್ಕಳ

ಉಪಾಧ್ಯಾಯಿನಿಯರ ಸಭೆ:— ಕಾರ್ಕಳ ಕೇಂದ್ರದ ಬಾಲಿಕಾ ಶಾಲೆಗಳ ಉಪಾಧ್ಯಾಯಿನಿಯರ ತಿಂಗಳ ಸಭೆಯು ಇದೇ ತಾ. ೧೪ರ ದಿನ ಸಾಣೂರು ಹುಡುಗಿಯರ ಬೋರ್ಡ್ ಎಲಿಮೆಂಟರಿ ಶಾಲೆಯಲ್ಲಿ ಶ್ರೀಮತಿ ಜಲಜಾಬಾಯಿಯವರ ಅಧ್ಯಕ್ಷತೆಯಲ್ಲಿ ಕೂಡಿ ಕುಮಾರಿ ರಾಜೀವಿ ಬಂಗೇರರವರು ಶೈಕ್ಷಣಿಕ ಸಂಗಾರಗಳ ಕುರಿತು ಭಾಷಣವನ್ನೂ, ಶ್ರೀಮತಿ ಜೂಲಿಯನ್ ಡಿ'ಸೋಜಾರವರು ಸ್ತ್ರೀಯರ ಕೈಗಾರಿಕೆಗಳ ಕುರಿತೂ ಮಾದರಿ ಪಾಠವನ್ನು ಕೊಟ್ಟರು.

ಅಭಿನಂದನಾ ಸಭೆ:— ಸ್ವಲ್ಪ ಸಮಯದ ಹಿಂದೆ ಇಲ್ಲಿಯ ಗೌಡಸಾರಸ್ವತ ಬ್ರಾಹ್ಮಣ ಸಮಾಜದ ಶ್ರೀಮತಿ ಶಾಂತಾಬಾಯಿ ಎಂಬ ಬಾಲವಿಧವೆಯೊಡನೆ ಮದ್ರಾಸಿನ ಶ್ರೀ| ಗಣೇಶರವರ ಅಂತರ್ಜಾತೀಯ ವಿವಾಹವಾಗಿದ್ದು ಈ ದಂಪತಿಗಳನ್ನು ಅಭಿನಂದಿಸುವ ಒಂದು ಸಭೆಯು ತಾ. ೧೧ರ ದಿನ ಶ್ರೀ| ಕೆ. ಕೃಷ್ಣಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಜರುಗಿ ಉಪಾಹಾರದ ಸತ್ಕಾರವಾದ ಬಳಿಕ ಶ್ರೀಗಳಾದ ಕೆ. ಚನ್ನ ರಾಮಚಂದ್ರ ಶೆಣೈ, ಶಾಂತಾರಾಮ ನಾಯಕ, ಮಂಜುನಾಥ ಶೆಣೈ ಮತ್ತು ವೇದಮೂರ್ತಿ ಮುಕುಂದ ನೆಕರವರು ಸಂದರ್ಭೋಚಿತ ಮಾತನಾಡಿ ದಂಪತಿಗಳನ್ನು ಆಶೀರ್ವದಿಸಿದರು.

ಸತ್ಕಾರ ಕೂಟ:— ವಿದ್ವಾನ್ ಶ್ರೀ| ಕೆ. ಎಲ್. ಎನ್. ಉಪಾಧ್ಯಾಯ, ಶಿರೋಮಣಿ

([illegible]ನೆಯ ಪುಟವನ್ನು ನೋಡಿ)

ಸಿನೆಮಾ ಪುಟ

ಸೈಗಲ್ ಮತ್ತು ಕಾನನ್ ಬೊಂಬಯಿಗೆ?

ಬಂಗಾಳದ ಪ್ರಸಿದ್ಧ ನಟ-ನಟಿಯರು ಕಲ್ಕತ್ತದಿಂದ, ವಿಮಾನ ಧಾಳಿಗೆ ಹೆದರಿ ಬೊಂಬಯಿಗೆ ಹೋಗುತ್ತಿದ್ದಾರೆಂದು ಸುದ್ದಿ. ಪಹಾರಿ ಸನ್ಯಾಲನು ಚಿತ್ರಾ ಪಿಕ್ಚರ್ಸಿನೊಡನೆ ಕರಾರು ಮಾಡಿರುವನಂತೆ. ಲಕ್ಷ್ಮೀ ಪ್ರೊಡಕ್ಶನಿನೊಡನೆ ದೇವಕಿ ಬೋಸ್, ಮಾಧು ಬೋಸ್, ಸಾಧನಾ ಬೋಸ್ ಮೊದಲಾದವರು ಕರಾರು ಮಾಡಿರುವರಂತೆ. ಬಂಗಾಳದ ಪ್ರಸಿದ್ಧ ನಟ ಸೈಗಲ್ ಮತ್ತು ಪ್ರಸಿದ್ಧ ನಟಿ ಕನನ್ ಇವರು ಕೂಡ ಬೊಂಬಯಿಗೆ ಹೊರಟಿದ್ದಾರೆಂದು ಇತ್ತೀಚೆಯ ಸುದ್ದಿ. ರಣಜಿತ್‌ನವರು ಸೈಗಲ್‌ನನ್ನು ಸೇರಿಸಿಕೊಳ್ಳುವರೆಂದು ಒಂದು ವಾರ್ತೆ. ಆದರೆ ಸೈಗಲ್ ಇನ್ನೂ ನ್ಯೂ ಥಿಯೇಟರ್ಸಿನ ಕರಾರಿನಿಂದ ಬಿಡುಗಡೆ ಹೊಂದಿಲ್ಲವಾದ್ದರಿಂದ ಇದನ್ನು ಸರಿಯಾಗಿ ನಂಬಲಾಗುವುದಿಲ್ಲ. ದೇವಕೀ ಬೋಸರು ಕಾನನ್‌ದೇವಿಯನ್ನು ತಾನು ಸೇರಿದ ಲಕ್ಷ್ಮೀ ಪಿಕ್ಚರ್ಸಿನಲ್ಲಿ ಕೆಲಸಮಾಡುವಂತೆ ಉತ್ತೇಜಿಸುವರಾಗಿ ಇನ್ನೊಂದು ವಾರ್ತೆ.

ಉದಯಶಂಕರ-ಅಮಲಾನಂದಿ ವಿವಾಹ

ಆಲ್ಮೋರದ ಭಾರತೀಯ ನೃತ್ಯ ಮಂದಿರದಲ್ಲಿ ಕಳೆದ ತಾ. ೭ರಂದು ಉದಯಶಂಕರ ವಿಮಲಾನಂದಿಯರ ವಿವಾಹವಾಯಿತು. ಕಾಶಿ ಕಲ್ಕತ್ತಗಳಿಂದ ಪುರೋಹಿತರು ಬಂದಿದ್ದು, ವಿವಾಹವು ಮೂರು ದಿವಸಗಳ ವರೆಗೆ ಸನಾತನ ಪದ್ಧತಿಯಂತೆಯೇ ನಡೆಯಿತು. ನೃತ್ಯ ಸಂಗೀತಾದಿಗಳು ಮೂರು ದಿನಗಳ ವರೆಗೂ ಬಿಡದೆ ಇದ್ದುವು. ವಿವಾಹ ಸಮಾರಂಭ ಕಲಾಮಯವಾಗಿತ್ತು. ಶ್ರೀಮತಿ ಅಮಲಾನಂದಿ ಬಿ. ಎ., ಪದವೀಧರಳು. ಆಕೆ ಉದಯಶಂಕರರನ್ನು ಲಂಡನಿನಲ್ಲಿ ಪ್ರಥಮತಃ ಭೇಟಿಯಾಗಿ ಆತನೊಡನೆ ನರ್ತನ ಕಲಿಯಲು ಸೇರಿದಳು. ಆತನ ನರ್ತನ ಕೇಂದ್ರದಲ್ಲಿಯೇ ಅವಳೂ ಇದ್ದಾಳೆ. ನರ್ತನದಲ್ಲಿ ಪ್ರಖ್ಯಾತಳಾಗಿದ್ದಾಳೆ. ವಿವಾಹಿತ ದಂಪತಿಗಳ ಸಂಸಾರವು ಸುಖಮಯವಾಗಲಿ!

ಸ್ಟುಡಿಯೋಗಳಿಂದ

ಆಚಾರ್ಯ ಪ್ರೊಡಕ್ಶನಿನ ನಿರ್ದೇಶಕ ಆಚಾರ್ಯರು ಶ್ರೀ ಸೌಂಡ್ ಸ್ಟುಡಿಯೋಗೆ ಬಂದು 'ಉಲ್ಝನ್' ಚಿತ್ರದ ತಯಾರಿಕೆಗೆ ಪ್ರಾರಂಭಿಸಿದ್ದಾರೆ. ಅದೇ ಕಂಪೆನಿಯ 'ಜಾಮೇಲಾ' ಚಿತ್ರವನ್ನು ನಿರ್ದೇಶಕ ಕಿಶೋರ್ ಶಾಹು ರಚಿಸಲಿರುವರು. ಅದರಲ್ಲಿ ಕಿಶೋರ್ ಶಾಹು, ಪತಿಮಾದಾಸ ಗುಪ್ತ ಇವರ ಅಭಿನಯವಿದೆ.

ಅಶೋಕ ಪಿಕ್ಚರ್ಸ್‌ನವರ ಪ್ರಥಮ ಚಿತ್ರ 'ಚರದನ್' ಯಶಸ್ವಿಯಾಗಿ ಪ್ರದರ್ಶಿತವಾಗುತ್ತಿದೆ. ನಾಜಿರ್, ಕಾಂತಾ, ಮಾಯಾದೇವಿ, ಮಜಾರ್ ಖಾನ್ ಮೊದಲಾದವರ ಉತ್ತಮ ಅಭಿನಯದಿಂದ ಕೂಡಿದೆ.

ಪ್ರಿಯಂಟ್ ಪಿಕ್ಚರ್ಸಿನ ನಿರ್ದೇಶಕ ಬಾಬುರಾವ್ ಆಪ್ಟೆಯವರ ಅಕಾಲ ನಿಧನದಿಂದ ಚಲಚ್ಚಿತ್ರ ವ್ಯವಸಾಯಕ್ಕೇ ಮಹತ್ವವಾದೊಂದು ನಷ್ಟವಾಗಿದೆ. ಅವರ 'ಮುನಿಸಿಪಾಲಿಟಿ' ಯಶಸ್ವಿಯಾಗಿ ಪ್ರದರ್ಶಿತವಾಗುತ್ತಿದೆ.

ಚಿತ್ರ ಮಂದಿರದವರ 'ವಸಂತಸೇನಾ' ತಯಾರಾಗುತ್ತಿದೆ. ಗಜಾನನ ಜಾಗಿರ್ದಾರರ ನಿರ್ದೇಶಕತ್ವದ ಅವರ 'ರಾಜಾರಾಣಿ' ಯಶಸ್ವಿಯಾಗಿ ಪ್ರದರ್ಶಿತವಾಗುತಲಿದೆ.

ದೌಲತ್ ಕಾರ್ಪೊರೇಶನಿನವರು ಹೋಮಿ ವಾಡಿಯರ 'ಮುಕಾಬಿಲಾ' ಡಿಸ್ಟ್ರಿಬ್ಯೂಶನ್ ಪಡಕೊಂಡಿರುವರು. 'ಮುಕಾಬಿಲಾ' ಚಿತ್ರ ತಯಾರಿಕೆಯಲ್ಲಿದೆ.

ಹಿಂದ್ ಪಿಕ್ಚರ್ಸ್‌ನವರ 'ಸೊಸೈಟಿ' ತಯಾರಾಗಿದೆ. ಸಿತಾರಾ, ನಾಜಿರ್, ಮಜೀದ್, ಅಲಕ್‌ನಂದ ಹಾಗೂ ಗೋಪೆ ಇದರಲ್ಲಿ ನಟಿಸಿರುವರು.

ಹಿಂದೂಸ್ಥಾನ್ ಫಿಲ್ಮ್ ಕಾರ್ಪೊರೇಶನ್‌ನವರು 'ಪದನಾಶಿನ್' ಎಂಬ ಚಿತ್ರವನ್ನು ಹಸೀನಾ, ಕಾನಿಜ್, ಶೈದಾ, ಮಿತ್ತರ್, ಗಣೇಶ ಮತ್ತು ನವಾಜೀಶ್ ಇವರ ಅಭಿನಯದಿಂದ ತಯಾರಿಸುವರು.

ಜಾನಕ್ ಪಿಕ್ಚರ್ಸಿನ 'ರಾವ್ ಸಾಹೆಬ್' ಈಗ ಪ್ರದರ್ಶಿತವಾಗುತ್ತಿದೆ. ಕೌಸಲ್ಯಾ ಇದರಲ್ಲಿ ನಟಿಸುತ್ತಾಳೆ.

ಮಿನರ್ವಾ ಮೂವಿಟೋನ್‌ನವರ 'ಸಿಕಂದರ್' ಹೋದ ಕಡೆಗಳಲ್ಲೆಲ್ಲಾ ಯಶಸ್ವಿಯಾಗಿದೆ. 'ಫಿರ್ ಮಿಲೇಂಗೇ' ಎಂಬ ಚಿತ್ರವನ್ನು ಅವರು ತಯಾರಿಸುವ ಭರದಲ್ಲಿದ್ದಾರೆ.

ಮೋಹನ್ ಪಿಕ್ಚರ್ಸ್‌ನವರ 'ತಾಜ್‌ಮಹಾಲ್' ತಯಾರಾಗಿದೆ. 'ಜಾವೆರ್' ಮತ್ತು 'ಸಂತ ಸೂರದಾಸ್' ತಯಾರಿಯಲ್ಲಿದೆ. 'ಸರೊವರ್-ಕಿ-ಸುಂದರಿ' ಎಂಬೀ ಅವರ ಹೊಸ ಚಿತ್ರವು ಪ್ರದರ್ಶಿತವಾಗುತ್ತಿದೆ.

ನೇಶನಲ್ ಆರ್ಟಿಸ್ಟ್ಸ್ ನಿರ್ದೇಶಕ ಮಜಾರ್‌ಖಾನರು ಇದರ ಮುಂದಿನ ಚಿತ್ರದ ಸಲುವಾಗಿ ಸಿಂಧಿಗೆ ಪ್ರಯಾಣ ಮಾಡಿ ಅಲ್ಲಿಂದ ಅನೇಕ ಚಿತ್ರಗಳನ್ನು ಒದಗಿಸಿಕೊಂಡು ಮರಳಿದ್ದಾರೆ. ಒಂಟೆ ಪ್ರಯಾಣವು ಈ ಚಿತ್ರದಲ್ಲಿ ಒಂದು ವಿಶಿಷ್ಟತೆಯಾಗಿದೆ.

ನೇಶನಲ್ ಸ್ಟುಡಿಯೊದವರ 'ಗರೀಬ್' ಪ್ರದರ್ಶಿತವಾಗುತ್ತಿದೆ. ಇದರಲ್ಲಿ ಸುರೇಂದ್ರನ ಅಭಿನಯ ಮನಮೋಹಕವಾಗಿದೆ.

ನವಯುಗ ಚಿತ್ರಪಟದವರು 'ಸ್ಟೇಟ್ ಗೆಸ್ಟ್' ಎಂಬ ಚಿತ್ರವನ್ನು ತಯಾರಿಸುತ್ತಿದ್ದಾರೆ.

ನ್ಯೂ ಥಿಯೇಟರ್ಸಿನ 'ಡೋಕ್ಟರ್' ಚಿತ್ರ ಪ್ರದರ್ಶಿತವಾಗುತ್ತಿದೆ.

ಪ್ರಕಾಶ್ ಪಿಕ್ಚರ್ಸ್‌ನವರ 'ಭರತ್ ಮಿಲಾಪ್' ಯಶಸ್ವಿಯಾಗಿ ಪ್ರದರ್ಶಿತವಾಗುತ್ತಲಿದೆ. 'ಸ್ಟೇಶನ್ ಮಾಸ್ಟರ್' ಅವರ ಮುಂದಿನ ಚಿತ್ರ.

ರಣಜಿತ್ ಮೂವಿಟೋನಿನವರ 'ಭೇಟಿ' ಜನಪ್ರಿಯವಾಗುತ್ತಿದೆ.

ಶಾಲಿಮಾರ್ ಪಿಕ್ಚರ್ಸ್‌ನ 'ಏಕ್ ರಾತ್' ಯಶಸ್ವಿಯಾಗಿ ಪ್ರದರ್ಶಿತವಾಗುತ್ತಿದೆ. ನೀನಾ ಹೊಸ ತಾರೆ, ಪೃಥ್ವೀರಾಜನೊಡನೆ ಬಹಳ ಝಗಝಗಿಸಿದ್ದಾಳೆ.

ತಾಜ್‌ಮಹಾಲ್ ಪಿಕ್ಚರ್ಸ್‌ನವರ 'ಉಜಾಲಾ' ಎಂಬೀ ಪ್ರಥಮ ಚಿತ್ರ ತಯಾರಾಗಿ ಪ್ರದರ್ಶನ ಪ್ರಾರಂಭವಾಗಿದೆ.

ವಿಜಯ ಫಿಲ್ಮ್ಸ್‌ನವರ 'ವಿಧ್ವಸುಹಗಾನ' ಚಿತ್ರ ಮೊದಲಿಸಿಯದು. ಕುಮಾರ್, ಲಲಿತಾ ಪವಾರ್ ಮತ್ತು ದುರ್ಗಾ ಖೋಟೆ ನಟಿಸುತ್ತಾರೆ.



ನಿಮ್ಮ ಮಕ್ಕಳ ಕೋಮಲವಾದ ಚರ್ಮಕ್ಕೆ ಕುಟಿಕೂರಾ ಟ್ಯಾಲೆಟ್ ಸಾಬೂನು—(Cuticura Toilet Medicaetd Soap) ಹೆಚ್ಚಿನ ಮನ್ನಣೆಯ ಸಂರಕ್ಷಣೆಯು ಸಾಬೂನುಗಳು ಮಕ್ಕಳ ಚರ್ಮದ ಕೋಮಲತ್ವವನ್ನೇ ನಾಶಮಾಡುವುವು. ಆದರೆ ಕುಟಿಕೂರಾ ಸಾಬೂನಿನಲ್ಲಿರುವ (Cuticura Soap) ಕ್ರಿಮಿನಾಶಕ ಗುಣವಿದೆ. ಇಂಥ ಗುಣವುಳ್ಳ ಔಷಧಿಯು ಮೈಯ ಚರ್ಮವನ್ನು ನಿರ್ಮಲವಾಗಿರಿಸಿ ಮೈಯನ್ನು ತಂಪಾಗಿರಿಸುತ್ತಿರುವುದು.

ಮಗುವಿನ ಸ್ನಾನವು ಸಂಪೂರ್ಣವಾಗಬೇಕಾದರೆ ಅತ್ಯಂತ ನುಣುಪಾದ ಕುಟಿಕೂರಾ ಟಾಲ್ಕಮ್ ಪೌಡರನ್ನು (Cuticura Talcum Powd) ಹಾಕಿರಿ.

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರಿನಲ್ಲಿಯೂ ಮಾರಲ್ಪಡುತ್ತದೆ

ಕುಟಿಕೂರಾ ಸೋಪ್
CUTICURA SOAP

ಅರುಣ

ಗರ್ಭಾಶಯ ರೋಗ ನಿವಾರಿಣಿ

ಮುಟ್ಟುಶೂಲೆ
ಅಕಾಲ ಬಹಿಷ್ಟೆ
ಮುಟ್ಟಾಗದಿರುವಿಕೆ
ವಿಪರೀತ ರಕ್ತಸ್ರಾವ
ಸ್ರಾವ ಕಮ್ಮಿಯಾಗಿ ಹೋಗುವುದು
ಸಂತಾನ ಹೀನತೆ
ಬಿಳೀ ಸೆರಗು
ಶರೀರವು ಸ್ಥೂಲವಾಗುವುದು

ಮುಂತಾದ ವ್ಯಾಧಿಗಳನ್ನು ಹೋಗಲಾಡಿಸುವುದು

ಎಲ್ಲಾ ಕೆಮಿಸ್ಟರಲ್ಲಿಯೂ ದೊರೆಯುವುದು

ಆಯುರ್ವೇದಾಶ್ರಮಂ
ಮದರಾಸು.

ಡೋಂಗರೆ
ಬಾಲಾಮೃತವು
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ವಿಜ್ಞಾನ ಯುಗ

ಚಂದ್ರ ಗ್ರಹಯಾತ್ರೆ

ನಮ್ಮ ಈ ಭೂಮಿಗೆ ಅತ್ಯಂತ ಸಮೀಪದಲ್ಲಿರುವ ಗ್ರಹವೆಂದರೆ ಚಂದ್ರ, ನಮ್ಮಿಂದ ೨೪೦೦೦೦ ಮೈಲು ದೂರದಲ್ಲಿರುವುದಾಗಿ ತಿಳಿದಿದೆ. ವಿಜ್ಞಾನ ಸಮ್ಮತವಾಗಿ, ಚಂದ್ರನ ಹುಟ್ಟು ಹೀಗೆ. ಒಂದಾನೊಂದು ಕಾಲದಲ್ಲಿ ಭೂಮಿಯಿಂದ ಸಿಡಿ ಹೋದ ತುಂಡು ಚಂದ್ರ. ದೂರದರ್ಶಕ ಯಂತ್ರದಲ್ಲಿ ಚಂದ್ರನನ್ನು ನೋಡಬಹುದು. ಚಂದ್ರನ ಬಳಿಗೆ ಹೋಗಲು ಮಾನವರು ಬಹಳ ಕಾಲದಿಂದ ಪ್ರಯತ್ನಿಸುತ್ತಿದ್ದಾರೆ. ಈ ಪ್ರಯತ್ನದಲ್ಲಿ ಲಕ್ಷಾಂತರ ಮಂದಿ ಪ್ರಾಣ ತೆತ್ತಿದ್ದಾರೆ. ಫ್ರಾನ್ಸಿನ ಡಾನ್‌ವಿಲ್ಲೆಯ ಪ್ರಯೋಗ ಶಾಲೆ ಪ್ರಸಿದ್ಧವಾಗಿದೆ. ಪ್ರೊ|| ಲ್ಯೂಸಿನ್ ರುಡಾಕ್ಸ್ ಎಂಬವರು ಈ ಪ್ರಯೋಗ ಶಾಲೆಯವರು. ಚಂದ್ರನ ವಿಷಯ ಅವರು ಅನೇಕ ಸಂಗತಿಗಳನ್ನು ಸಂಶೋಧಿಸಿದ್ದಾರೆ. ಚಂದ್ರನಲ್ಲಿಗೆ ಹೋಗಲು ಉತ್ತಮ ಸಾಧನವೊಂದನ್ನು ಅವರು ಕಂಡುಹಿಡಿದಿದ್ದಾರೆ. ರಾಕೆಟ್ ಎಂದು ಅದಕ್ಕೆ ಹೆಸರು. ಈಗ ಅಮೆರಿಕದ ಫಿಲಿಡೆಲ್ಫಿಯಾ ಎಂಬಲ್ಲಿರುವ ಫ್ರಾಂಕ್ಲಿನ್ ಇನ್‌ಸ್ಟಿಟ್ಯೂಟಿನವರು ಈ ಪ್ರಯೋಗವನ್ನು ಮುಂದುವರಿಸುತ್ತಾರೆ.

ಚಂದ್ರನಲ್ಲಿಗೆ ಹೋಗುವ ರಾಕೆಟ್ ಗಂಟೆಗೆ ೧೦೦೦ ಮೈಲಿನಂತೆ ನಡೆಯುವುದು. ಇಲ್ಲಿಂದ ಹೊರಟು ಹತ್ತು ದಿನಗಳಲ್ಲಿ ತಲಪಬಹುದು. ಗಾಳಿಯಿಲ್ಲದಲ್ಲಿಯೂ ಅದು ಹಾರಬಲ್ಲುದು. (ನಿರ್ವಾತ ಪ್ರದೇಶದಲ್ಲಿ ವಿಮಾನಗಳು ಹಾರಾಡಲಾರವು) ಆದರೆ ಇಂಧನ (ಶಕ್ತಿದಾಯಕ)ದ್ದೇ ತೊಂದರೆ. ಈಗಾಗಲೇ ಅಂತಹ ಇಂಧನ ಕಂಡು ಹುಡುಕಿದ್ದಾರೆ. ಆದರೆ ಅದು ಕರಗತವಾಗಿಲ್ಲ. ಆ ಶಕ್ತಿಗೆ ಪರಮಾಣು ಶಕ್ತಿ (Atomic power) ಎನ್ನುತ್ತಾರೆ. ಆದರೆ ಪರಮಾಣು ಶಕ್ತಿಗಳು ಗುಪ್ತಾವಸ್ಥೆಯಲ್ಲಿರುವುದರಿಂದ, ಅವುಗಳನ್ನು ಕ್ರಮವಾಗಿ ಚೇತನಗೊಳಿಸಿ (ಅವು ಚೇತನಗೊಂಡರೆ ಭೂಮಿಯೂ ಒಂದು ಸೂರ್ಯ ಗ್ರಹವಾಗುವುದು) ನಮ್ಮಿಷ್ಟದಂತೆ ಉಪಯೋಗಿಸಲು ಸಾಧ್ಯವಾಗುವಂತೆ ಮಾಡಬಲ್ಲ ಮಾಧ್ಯಮಿಕ (Catalic Agent) ಒಂದನ್ನು ಕಂಡುಹಿಡಿಯಲು ಈಗ ವಿಜ್ಞಾನಿಗಳು ಪ್ರಯತ್ನಿಸುತ್ತಾರೆ. ಯುರೇನಿಯಂ ಎಂಬ ಧಾತುವನ್ನು ಈ ಪರಮಾಣು ಶಕ್ತಿಗಾಗಿ ಉಪಯೋಗಿಸಬಹುದೆಂದು ಸಿದ್ಧಗೊಳಿಸಿದ್ದಾರೆ. ರಾತಲು ಯುರೇನಿಯಮಿನಲ್ಲಿರುವ ಪರಮಾಣು ಶಕ್ತಿಯು ೫೦ಲಕ್ಷ ರಾತಲು ಕಲ್ಲಿದ್ದಲ್ಲು ಶಕ್ತಿಗೆ ಸಮನಾಗುವುದು. ಆ ರಾಕೆಟು ಅಸಾಧ್ಯ ವೇಗದಿಂದ ಹೋಗಿ ಚಂದ್ರನ ಆಕರ್ಷಣಶಕ್ತಿಯಿಂದ ಚಂದ್ರನಿಗೆ ಢಕ್ಕೆಹೊಡೆಯದಂತೆ ಸ್ವಯಂಪ್ರೇರಿತ ನಿಲುಗಡೆ (Outomatic Brake) ಉಪಯೋಗಿಸಿದ್ದಾರೆ.

ಚಂದ್ರಗ್ರಹ ಪರಿಶೋಧಕರ ಉಡುಪೂ ವಿಚಿತ್ರ. ಚಂದ್ರನಲ್ಲಿ ಗಾಳಿಯೇ ಇಲ್ಲದ್ದರಿಂದ ಇವರ ದೇಹದೊಳಗಿನ ಗಾಳಿಯ ಒತ್ತಡವನ್ನು ತಡೆಯಲು ಇವರ ದೇಹಕ್ಕೂ ಉಡುಪಿಗೂ ಮಧ್ಯೆ ಗಾಳಿ ಇರುವುದು. ಬೆನ್ನಿನ ಮೇಲೆ ಶ್ವಾಸದ ಚೀಲಗಳಿರುವವು. ಸಂಶೋಧಕರು ಹೋಗಿ ಇಳಿಯಲು ಒಂದು ಸ್ಥಳವನ್ನು ಈಗಲೇ ಗುರುತಿಸಿದ್ದಾರೆ. ಅದನ್ನು 'ಫ್ರಾಂಕ್ಲಿನ್ ಕೆಟಲ್' ಎಂದು ಕರೆದಿದ್ದಾರೆ. ಚಂದ್ರನ ಮೇಲೆ ವರ್ತುಲಾಕಾರದ ಪರ್ವತಗಳಿವೆ. ಕೆಲವು ೧೫೦೦೦ ಅಡಿ ಎತ್ತರವೂ ಇವೆ. ಚಂದ್ರನ ಮೇಲೆ ವಾತಾವರಣವಿಲ್ಲದಿರುವುದರಿಂದ ಅಲ್ಲಿ ಆಕಾಶವಿಲ್ಲ, ಮೋಡವಿಲ್ಲ. ಸೂರ್ಯನ ಬಿಸಿಲು ಬಿದ್ದಾಗ ಅಲ್ಲಿನ ಕಾವು ೨೦೦, ೩೦೦ ಡಿಗ್ರಿಗಳ ವರೆಗೂ ಏರುವುದು. ೧೦೦—೧೫೦ ಡಿಗ್ರಿ ಇಳಿವುದು, ಚಂದ್ರಲೋಕದ ಪ್ರವಾಸಕ್ಕೆ ಇನ್ನೂ ೧೨ ವರ್ಷಗಳ ಅವಧಿ ಇಟ್ಟುಕೊಂಡಿದ್ದಾರೆ. ಚಂದ್ರಲೋಕದಿಂದ ಹಿಂದಿರುಗಿ ಬಂದವರ ವಾರ್ತೆ ಕೇಳಲು ನಾವೂ ಅಲ್ಲಿವರೆಗೆ ಬದುಕಬೇಡವೆ?

ವಿಚಿತ್ರ ಪ್ರಪಂಚ

ಮೊಲೆ ಹಾಲು ಉಣಿಸುವುದು

ಮೊಲೆ ಹಾಲಿನಲ್ಲಿ, ಮಗುವಿನ ದೇಹಕ್ಕೆ ಬೇಕಾದ ಎಲ್ಲಾ ಸತ್ವ ಗುಣಗಳೂ ಸೇರಿರುತ್ತವೆ. ಅದು ಎಲ್ಲಾ ಕಡೆಗಳಲ್ಲಿಯೂ ಸಿಗುತ್ತದೆ; ಮತ್ತು ಮಗು ಅದನ್ನು ಬೇಗನೇ ಕರಗಿಸಿಕೊಳ್ಳುತ್ತದೆ, 'ಅದು ಉತ್ತಮವಾಗಿದೆ'. ಅದರಲ್ಲಿರುವ ವಿಟಮಿನುಗಳು ಬಹಳ ಪ್ರಾಮುಖ್ಯವಾದವುಗಳಾಗಿವೆ. ಆದರೆ ತಾಯಿಗೆ ಕ್ಷಯ, ನಿಮೋನಿಯಾ ಹುಚ್ಚು ಮೊದಲಾದ ರೋಗಗಳಿದ್ದರೆ ಮಾತ್ರ ಅದನ್ನು ಕೊಡಬಾರದಲ್ಲದೆ ಇತರ ಸಂದರ್ಭಗಳಲ್ಲಿ ಮಗುವಿಗೆ ಮೊಲೆಹಾಲನ್ನೇ ಉಣಿಸಬೇಕು.

'ಆದರೆ ಕೆಲವರು ಗೃಹಿಣಿಯರು, ಮಗುವಿಗೆ ಮೊಲೆಹಾಲು ಕೊಡುವುದರಿಂದ, ಆಕೆಯ ಸೌಂದರ್ಯ ಹಾಳಾಗುತ್ತದೆಂದೂ ಮತ್ತೂ ಮತ್ತೂ ಮಕ್ಕಳು ಹುಟ್ಟುವಂತೆ ಆಗುವುದೆಂದೂ ಗ್ರಹಿಸುವರು, ಇದು ತಪ್ಪು ಅಭಿಪ್ರಾಯ. ನಿಜವಾಗಿ ನೋಡಿದರೆ ಇದರಿಂದ ಮಾತೃತ್ವವು ಸಹಜ ಸ್ಥಿತಿಗೆ ಮುಟ್ಟುತ್ತದೆ. ಇದು ಒಂದು ಪ್ರಾಕೃತಿಕ ಕಾರ್ಯವೆಂದು ಹೆಂಗುಸರು ಭಾವಿಸಬೇಕು. ಮಗುವನ್ನು ಆದಷ್ಟಕ್ಕೇ ಬಿಟ್ಟುಬಿಡುವುದು ತಪ್ಪು. ಕೆಲಸ, ಮಗುವಿನ ಮೇಲೆ ಕಣ್ಣಿಡುವಾಗ ಮಾಡಿದ ಹಲವು ಕ್ರಿಯೆಗಳು ಅದರ ಇಡೀ ಜೀವಮಾನವನ್ನು ಉಳಿಸಲೂ, ನಾಶಮಾಡಲೂ ಸಮರ್ಥವಾಗುತ್ತವೆ' ಎಂಬುದಾಗಿ ಹೆಲ್ತ್ ಪತ್ರಿಕೆಯಲ್ಲಿ ಒಂದು ಲೇಖನ ಬಂದಿದೆ.

ತಲೆ ಕೆಳಗಾಗಿ ನೋಡಿದನು

ಚಿಕಾಗೋದ ಎಂಟು ವರ್ಷದ ಒಬ್ಬ ಹುಡುಗನು ಪ್ರತಿಯೊಂದನ್ನೂ ತಲೆ ಕೆಳಗಾಗಿ ನೋಡುತ್ತಿದ್ದನು. ಇದರ ಸಲುವಾಗಿ ಅನೇಕ ಡಾಕ್ಟರರು ಅನೇಕ ಸಂಶೋಧನೆ ಮಾಡಿ ಒಂದು ಕನ್ನಡಕ ಅರಿಸಿದರು, ಇದರ ಮೂಲಕ ಆತನು ಸರಿಯಾಗಿ ನೋಡುತ್ತಾನೆ; ಅದನ್ನು ತೆಗೆದಿದ್ದರೆ, ಪ್ರತಿಯೊಂದೂ ಆತನಿಗೆ 'ತಲೆಕೆಳಗಾಗಿಯೇ' ಕಾಣುವುದು. ಹುಡುಗನ ಹೆಸರು ರಿಚಾರ್ಡ್ ಕಿನ್ಲೆ ಎಂದು.

ಪ್ರೇಮಮಾಡದ ೧೨೦ ವರ್ಷದ ತರುಣಿ!

ಮಿಸ್ ಡೋಲರಸ್ ಬೆಡೋಯಾ ಎಂಬ ಸ್ಪೇನ್ ಸಾಲ್ವಡೋರಿನ ಒಬ್ಬಾಕೆಗೆ ಈಗ ೧೨೦ ವರ್ಷ ಆಗಿದೆ. ಆದರೆ ಇಡೀ ತನ್ನ ಜೀವಮಾನದಲ್ಲಿ ಆಕೆ ಒಮ್ಮೆಯೂ ಪ್ರೇಮಪಾಶದಲ್ಲಿ ಬಂಧಿತಳಾಗಿಲ್ಲವಂತೆ! ಬಹಳ ಅದ್ಭುತ ಪ್ರಾಣಿಯಾಕೆ!

ರೈಲು ಬಂಡಿಗಳ ಸಮಯ

ಇದೇ ಜುಲೈ ತಾ. 1ರಿಂದ ವ್ಯತ್ಯಾಸವಾದ ರೈಲು ಬಂಡಿಗಳ ಸಮಯಗಳು ಈ ಕೆಳಗಿನಂತಿವೆ—

ಗಾಡಿಗಳು	ಹೊರಡುವ ಗಂಟೆ	ತಲ್ಪುವ ಗಂಟೆ
ಗೂಡ್ಸು ಬಂಡಿ	3 45 ರಾತ್ರಿ	9.25 ರಾತ್ರಿ
ಮಲಬಾರು ಎಕ್ಸ್‌ಪ್ರೆಸ್ (ಮೈಲ್)	9.5 ಬೆಳಿಗ್ಗೆ	5.15 ಸಾಯಂ.
ಜಾಲಾರ್ ಪೇಟೆ ಪೆಸೆಂಜರ್	12 0 ಮಧ್ಯಾಹ್ನ	2.55 ಸಾಯಂ.
ಕಣ್ಣನೂರು ವರೆಗೆ	5 52 ಸಾಯಂ.	9·40 ಪೂರ್ವಾಹ್ನ.

ಸ್ವದೇಶಾಭಿಮಾನಿಗೆ ಜಾಹೀರಾತು ಕೊಡಿರಿ



ಅಪತ್ತು ಸನ್ನಿಹಿತವಾದಾಗ ಯಾವ ಆಲೋಚನಾಪರ ವ್ಯಕ್ತಿಯೂ ತನಗೆ ಅತ್ಯಂತ ಪ್ರಿಯತಮವಾದ ವಸ್ತುಗಳನ್ನು ಸಂರಕ್ಷಿಸಲು ಹಿಂಜರಿಯುವುದಿಲ್ಲ. ಯುದ್ಧವು ನಿಮ್ಮ ಆಪ್ತಭಾಂಧವರ ಹತ್ತಿರಕ್ಕೆ ಬರುತ್ತದೆ. ನಿಮ್ಮ ಸೌಖ್ಯವನ್ನು ಮತ್ತು ಅವರ ಸೌಖ್ಯವನ್ನು ಅಪಾಯಕ್ಕೀಡುಮಾಡಿ, ಸ್ವಾತಂತ್ರ್ಯತೆಯನ್ನೂ ಆಸ್ತಿಪಾಸ್ತಿಗಳನ್ನೂ ಭಾವಿ ಭದ್ರತೆಯನ್ನೂ ಧ್ವಂಸಗೊಳಿಸಲು ಸಿದ್ಧವಾಗಿದೆ. ಶತ್ರು ದಾಳಿಯನ್ನು ತಡೆಯಲು, ನಿಮ್ಮ ಶಕ್ತಿಮೀರಿ ನಿಮ್ಮ ದೇಶಕ್ಕೆ ಸಹಾಯ ಮಾಡಲು ಈಗಲೇ ನೀವು ಕಾರ್ಯೋನ್ಮುಖರಾಗಬೇಕು.

ಪ್ರತಿ ೧೦ ರೂಪಾಯಿನ ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟಿಗೂ ರೂ ೩/೯/- ಲಾಭ ಬರುವುದು
ಪೂರ್ತಿ ವಿವರಗಳು ಪೋಸ್ಟಾಫೀಸಿನಿಂದ

ಕೊಳ್ಳಿರಿ
ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟುಗಳನ್ನು

ಜೀವ ಕೊಡುವ ಪ್ರತಿಯೊಂದು ಆಣೆಯೂ ಹಿಂದುಸ್ಥಾನದ ಸೈನಿಕ, ನೌಕಾ, ವೈಮಾನಿಕ ಬಲವನ್ನು ಹೆಚ್ಚಿಸಿ, ಶತ್ರುಗಳ ದಾಳಿಯನ್ನು ಎದುರಿಸಲು ಹಿಂದುಸ್ಥಾನವನ್ನು ಬಲಪಡಿಸುವುದು.

61-73-4a

Bhuvanendra Products Limited,

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitual abortion and other uterine troubles Must be commensed soon after conception and continued up to the time of delivery.

"ಭುವನೇಂದ್ರ ಗರ್ಭಪಾಲ"

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವವಿಧದ ದೋಷಗಳನ್ನು ಗುಣಪಡಿಸುವ ದಿವ್ಯಔಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವಕಾಲದ ವರೆಗೆ ಸೇವಿಸುವುದು ಅತ್ಯುತ್ತಮ

ಸ್ಥಳೀಯ ಸ್ಟಾಕಿಸ್ಟ ವ ಏಜೆಂಟರು:–
(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಪೈ, ರಥಬೀದಿ (3) ದಿ ಕರ್ನಾಟಕ ಸ್ನಫ್ ವರ್ಕ್ಸ್, ರಥಬೀದಿ (4) ಡಾ। ಯಂ ಎಸ್. ಪ್ರಭು, M. B. B. S ಸಿ ಪಿ ಸಿ ಬಿಲ್ಡಿಂಗ್ಸ್ (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಡಿಪೊ — 1 ಮರಾಠ ಗಲ್ಲಿ ಹುಬ್ಬಳ್ಳಿ.
2. 36 ಫ್ಯಾಕ್ರೋಫ್ಟ್ ರೋಡ್, ಟ್ರಿಪ್ಲಿಕೇನ್, ಮದರಾಸು.

The Bank of Mangalore Limited

HEAD OFFICE	***BRANCHES***
Mangalore.	Moodabidri & Padubidri

ANNOUNCEMENT

On and from 1st February 1942, fixed deposits will be accepted at the following attractive rates

One year	4%
Two years or above	4½%

Interest Payable Quarterly

ಸರಕಾರದ ಹೊಸ ಪಾಠಪಟ್ಟಿಗನುಸಾರವಾಗಿ ಬರೆದ

ನವೀನ ಭೂವಿವರಣೆ

ವಾಸುದೇವರಾವ್, ಎಂ ಎ ಎಲ್ ಟಿ (Dip Geography)
(ಭೂಗೋಳ ಶಾಸ್ತ್ರದಲ್ಲಿ ಡಿಪ್ಲೊಮಾ ಪಡೆದವರು)

ಈ ಪುಸ್ತಕಗಳನ್ನು ಪಡಕೊಂಡಲ್ಲಿ ವಿದ್ಯಾರ್ಥಿಗಳಿಗೆ ಎಟ್ಲಾಸ್ ಕೊಂಡುಕೊಳ್ಳುವ ಅವಶ್ಯವಿಲ್ಲ

ಪ್ರತಿ ಪುಸ್ತಕದಲ್ಲಿ ಬಣ್ಣಬಣ್ಣದ ಭೂಪಟಗಳಿವೆ

ಅನೇಕಾನೇಕ ಚಿತ್ರಪಟಗಳಿಂದ ಕೂಡಿದ್ದು, ಪ್ರತಿ ಪಠದ ಅಂತ್ಯದಲ್ಲಿ ಅಭ್ಯಾಸಗಳನ್ನೂ ಮಾದರಿ ಪ್ರಶ್ನೆಗಳನ್ನೂ ಕೊಟ್ಟಿದೆ

4ನೆಯ ಪುಸ್ತಕ 6 ಆಣೆ, 5ನೆಯ ಪುಸ್ತಕ 7 ಆಣೆ 6, 7ನೆಯ ಮತ್ತು ೮ನೆಯ ಪುಸ್ತಕಗಳು ಅಚ್ಚಿನಲ್ಲಿವೆ ಪುಸ್ತಕಗಳು ಬೇಕಾದಲ್ಲಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.

ಡಿ ಡಿ

ಕಂಬೈಂಡ್ ಬುಕ್ಕಿಂಗ್ ಏಜೆನ್ಸಿ ಮತ್ತು ಜೋಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು	ಕೊಡಿಯಾಲ್ ಬೈಲ್

ಹಿರಿಯಡಕ ಶ್ರೀ ವೀರಭದ್ರಸ್ವಾಮಿ ದೇವಾಲಯದಲ್ಲಿ ನಡೆಯುವ ರಥೋತ್ಸವ ಸಮಾರಂಭ

ಧ್ವಜಾರೋಹಣ	ದೀಪಾರಾಧನೆ	ರಂಗಪೂಜೆ	ಮಹಾರಥೋತ್ಸವ
30-4-'42	1-5-'42	2-5-'42	3-5-'42

ಹಿರಿಯಡಕ ದೇವಸ್ಥಾನದಿಂದ ಸುಮಾರು ಅರ್ಧ ಮೈಲು ದೂರದಲ್ಲಿರುವ ಶ್ರೀ ಮಾರ್ಕಾಂಡೇಯ ತೀರ್ಥದಲ್ಲಿ ಮಿಂದು ಶ್ರೀ ಅಡಕ ತಾಯಿ ಮತ್ತು ಶ್ರೀ ಮಾರ್ಕಾಂಡೇಯ ಮಹಾ ಮುನಿಗಳ ಅಪೇಕ್ಷೆಯಂತೆ ಶ್ರೀ ಪರಮೇಶ್ವರನು, ಪಾರ್ವತಿ ಸಮೇತನಾಗಿ ಸಕಲ ಗಣಾಂಗಣಗಳೊಡನೆ ಭಕ್ತಾದಿಗಳ ಸಕಲ ಇಷ್ಟಾರ್ಥವನ್ನು ನೆರವೇರಿಸಿ ಕೊಡುವುದಕ್ಕಾಗಿ ಪ್ರತ್ಯಕ್ಷವಾಗಿ ನೆಲಸಿರವ ಶ್ರೀ ವೀರಭದ್ರಸ್ವಾಮಿ ದೇವಾಲಯವನ್ನು ಸಂದರ್ಶಿಸಿ ಭಕ್ತಿಯಿಂದ ಶ್ರೀ ದೇವರ ಅನುಗ್ರಹಕ್ಕೆ ಪಾತ್ರರಾಗಲು ಇದು ಸುಸಂದರ್ಭವಲ್ಲವೇ?

ಪ್ರಯಾಣಿಕರ ಸೌಕರ್ಯದೆಡೆಗೆ ಹೆಚ್ಚಿನ ಗಮನ ಕೊಡಲಾಗುವುದು.

JOINT MANAGERS,

The Combined Booking Agency,	**The Joint Booking Office,**
MANGALORE.	KODIALBAIL.

Regd. No. M. 3460

ಸ್ವದೇಶಾಭಿಮಾನಿ

[ಸಂಪುಟ 36] ತಾರೀಕು 20-3-1942 [ಸಂಚಿಕೆ 12]

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೊಣಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪೋ, ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

CONFIDENCE

IS A GREAT ASSET IN BUILDING BUSINESS.

The Bombay Life Assurance Co. Ltd.

Has to its credit such Confidence earned by its progress and service of over 33 years

It, therefore, pays you to insure or to represent by applying to:—

KOCHIKAR BROTHERS, LTD.,

Chief Agents for South India, Including Indian States, UDIPI.

Or any of their Branches at:—

MANGALORE,—CALICUT—MADRAS,

TRIVANDRUM,—BANGALORE,—and BOMBAY.

N. B: Take advantage of our free advice based on 32 years experience

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ ರಥಬೀದಿ ಮಂಗಳೂರ

★

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

Estd. 1906

ಸ್ವದೇಶಾಭಿಮಾನಿ

SWADESHABHIMANI



KANNADA ILLUSTRATED WEEKLY

ಶ್ರೀ ರಾಮಕೃಷ್ಣ ಲೀಲಾ ಪ್ರಸಂಗ

[ಗುರುಭಾವ-ಪೂರ್ವಾರ್ಧ]

ಮೂಲ ಬಂಗಾಳೀ ಲೇಖಕರು: ಶ್ರೀ ಸ್ವಾಮಿ ಶಾರದಾನಂದಜಿ.

ಅನುವಾದ ಶ್ರೀ ಸ್ವಾಮಿ ಪುಣ್ಯವೇಶಾನಂದರು

(ಹಕ್ಕು ಕಾದಿಡಲ್ಪಟ್ಟಿದೆ)

ಯೇ ಚೈವ ಸಾತ್ವಿಕಾಭಾವಾ ರಾಜಸಾಸ್ತಾಮಸಾಶ್ಚಯೇ ।
ಮತ್ತ ಏವೇತಿತಾನ್ ವಿದ್ಧಿ ನತ್ವಹಂ ತೇಷು ತೇಮಯಿ ॥
ತ್ರಿಭಿರ್ಗುಣಮಯೈರ್ಭಾವೈರೇಭಿಃ ಸರ್ವಮಿದಂ ಜಗತ್ ।
ಮೋಹಿತಂ ನಾಭಿಜಾನಾತಿ ಮಾಮೇಭ್ಯಃ ಪರಮವ್ಯಯಮ್ ॥ (ಗೀತಾ 7-12, 13)

'ಯಾವ ಯಾವ ಸತ್ವಗುಣದಿಂದ ಹುಟ್ಟಿದ ವಸ್ತುಗಳಿವೆಯೋ ಮತ್ತು ಯಾವ ಯಾವ ರಜೋಗುಣ ತಮೋಗುಣಗಳಿಂದ ಹುಟ್ಟಿದ ಪದಾರ್ಥಗಳಿವೆಯೋ ಅವುಗಳು ನನ್ನಿಂದಲೇ ಹುಟ್ಟಿದವುಗಳೆಂದು ತಿಳಿ. ವಾಸ್ತವವಾಗಿ ನೋಡಿದರೆ ನಾನು ಅವುಗಳೊಳಗೂ ಇಲ್ಲ. ಅವು ನನ್ನೊಳಗೂ ಇಲ್ಲ. ನನ್ನ ಪ್ರಕೃತಿಗೆ ಸಂಬಂಧಿಸಿವೆ.'

ಸಾತ್ವಿಕ, ರಾಜಸ, ತಾಮಸಗಳ ಕಾರ್ಯರೂಪವಾದ, ಈ ಮೂರು ಗುಣಗಳ ಭಾವಗಳಿಂದ ಈ ಪ್ರಪಂಚವೆಲ್ಲವೂ ಭ್ರಾಂತಿಗೆ ಒಳಗಾಗಿದೆ. ಆದುದರಿಂದ ಈ ಜಗತ್ತು ಈ ಗುಣಗಳ ವ್ಯವಹಾರಕ್ಕೆ ಸಿಕ್ಕಿದೆ. ಇವುಗಳನ್ನು ಮೀರುವ ನಾಶರಹಿತನಾದ ನನ್ನನ್ನು ಸರಿಯಾಗಿ ತಿಳಿಯಲಾರದು.

ಶ್ರೀ ಪರಮಹಂಸರ ಮಾತಿನ ಗಭೀರ ಅರ್ಥ

ಹದಿನೆರಡು ವರ್ಷಗಳ ತನಕ ವ್ಯಾಪಕವಾದ ಅಪೂರ್ವ ಮತ್ತು ಅಲೌಕಿಕ ತಪಸ್ಸಿನ ಅಂತ್ಯದಲ್ಲಿ ಶ್ರೀ ಜಗನ್ಮಾತೆಯು ಶ್ರೀ ಪರಮಹಂಸರಿಗೆ 'ನೀನು ಭಾವಮುಖದಲ್ಲಿರು' ಎಂದು ಹೇಳಿದಳು. ಶ್ರೀ ಪರಮಹಂಸರು ಹಾಗೆಯೇ ಇರುತ್ತಿದ್ದರೆಂದು ಅನೇಕರಿಗೆ ತಿಳಿದಿತ್ತು ಆದರೆ 'ಭಾವಮುಖದಲ್ಲಿರು' ಅಂದರೇನು, ಅದರ ಅರ್ಥವು ಎಷ್ಟು ಗಭೀರವೆಂಬದಾಗಿ ತಿಳಿಯಲೂ ಅಥವಾ ತಿಳಿಸಲೂ ಬಹಳ ಕಷ್ಟಕರವಾಗುವುದು ಸ್ವಾಮಿ ವಿವೇಕಾನಂದರು ಒಂದು ದಿನ ಒಬ್ಬ ಮಿತ್ರನಿಗೆ 'ಶ್ರೀ ಪರಮಹಂಸರ ಒಂದೊಂದು ಮಾತನ್ನವಲಂಬಿಸಿ ನೂರಾರು ದರ್ಶನ ಗ್ರಂಥಗಳನ್ನು ಬರೆಯಬಹುದು' ಎಂದು ಹೇಳಿದ್ದರು. ಅದನ್ನು ಕೇಳಿ ಆ ಮಿತ್ರನು ಬಹು ವಿಸ್ಮಿತನಾಗಿ ನಿಜವೇನು? ನಾವು ಶ್ರೀ ಪರಮಹಂಸರ ಮಾತಿನ ಗಭೀರ ಅರ್ಥವನ್ನು ಹಿಡಿಯಲಾರೆವು ನೀವು ಅವರ ಯಾವದಾದರೂ ಒಂದು ಮಾತನ್ನು ಎತ್ತಿ ಹಾಗೆ ವಿವರಿಸಿ ನನಗೆ ತಿಳಿಸಿರಿ ನೋಡೋಣ, ಅಂದರು ಸ್ವಾಮಿ ವಿವೇಕಾನಂದರು ನಿನಗೆ ತಿಳಿಯಲು ಶಕ್ತಿ ಇರುವುದೇನು? ಒಳ್ಳೇದು ಶ್ರೀ ಪರಮಹಂಸರ ಯಾವದಾದರೊಂದು ಮಾತು ಹೇಳು ನಾನು ವಿವರಿಸುತ್ತೇನೆ

ಮಿತ್ರನು ಒಳ್ಳೇದು, ಸಕಲರಲ್ಲಿಯೂ ನಾರಾಯಣನನ್ನು ಕಾಣಬೇಕೆಂದು ಉಪದೇಶವನ್ನು ಕೊಟ್ಟು ಶ್ರೀ ಪರಮಹಂಸರು 'ಆನೆ ನಾರಾಯಣ ಮತ್ತು ಮಾವುತ ನಾರಾಯಣ' ಎಂಬ ಕಥೆಯನ್ನು ಹೇಳಿದರಲ್ಲಾ ಅದನ್ನು ವಿವರಿಸಿ ಹೇಳಿ ನೋಡೋಣ.

ಸ್ವಾಮಿ ವಿವೇಕಾನಂದರು ತಕ್ಷಣವೇ ಪ್ರಾಚ್ಯ ಪಾಶ್ಚಾತ್ಯ ಪಂಡಿತರ ಮಧ್ಯದಲ್ಲಿ ಸ್ವಾಧೀನ ಇಚ್ಛೆ ಮತ್ತು ಅದೃಷ್ಟವಾದ ಅಥವಾ ಪೌರುಷ ಮತ್ತು ಭಗವದಿಚ್ಛೆಯ ವಿಚಾರವಾಗಿ ಪ್ರಾಚೀನ ಕಾಲದಿಂದಲೂ ವಾದವಿವಾದ ನಡೆದುಬರುತ್ತಿದ್ದರೂ ಅವರು ಯಾವದೊಂದು ನಿಷ್ಕರ್ಷೆಗೆ ಬಾರದಿರುವ ವಿಷಯವನ್ನು ತಿಳಿಸಿ, ಶ್ರೀ ಪರಮಹಂಸರ ಕಥೆಯೇ ಈ ವಿವಾದದ ಒಂದು ಅಪೂರ್ವ ಸಮಾಧಾನವೆಂದು ಸುಲಭ ಭಾಷಾಸರಣಿಯಿಂದ ಮೂರು ದಿನಗಳ ವರೆಗೂ ವಿವರಿಸಿದರು.

ಸಕಲ ಅವತಾರ ಪುರುಷರ ಮಾತು ಹೀಗೆಯೇ

ಚೆನ್ನಾಗಿ ಯೋಚಿಸಿ ನೋಡಿದರೆ ವಾಸ್ತವವಾಗಿಯೂ ಶ್ರೀ ಪರಮಹಂಸರ ಅತಿ ಸಾಮಾನ್ಯ ದೈನಿಕ ವ್ಯವಹಾರದಲ್ಲಿ-ಅಥವಾ ಉಪದೇಶದಲ್ಲಿ ಗಭೀರ ಅರ್ಥವನ್ನು ಕಂಡು ನಾವು ವಿಸ್ಮಯಪಡಬೇಕು, ಅವತಾರ ಪುರುಷರಲ್ಲಿ ಪ್ರತಿಯೊಬ್ಬರ ವಿಷಯದಲ್ಲಿಯೂ ಹೀಗೆಯೇ ಎಂದನ್ನಬಹುದು. ಅವರ ಜೀವನಾಲೋಚನೆ ಮಾಡಿದರೆ ಇದನ್ನು ಸ್ಪಷ್ಟವಾಗಿ ತಿಳಿಯಬಹುದು. ಆಚಾರ್ಯ ಶಂಕರ ಮೊದಲಾದ ಒಬ್ಬಿಬ್ಬ ಮಹಾಪುರುಷರಿಗೆ ವಿಪಕ್ಷದವರ ಕುತರ್ಕ ಜಾಲವನ್ನು ತುಂಡುತುಂಡಾಗಿ ಕತ್ತರಿಸಿ ಧರ್ಮಸ್ಥಾಪನೆ ಮಾಡಬೇಕಾಯಿತು. ಇವರ ಮಾತನ್ನು ಬಿಟ್ಟುಬಿಟ್ಟರೆ, ಇತರ ಮಹಾಪುರುಷರ ಜೀವನಾಲೋಚನೆ ಮಾಡಿದರೆ, ಅವರು ಸುಲಭ ಭಾಷಾಸರಣಿಯಿಂದ ಮರ್ಮಸ್ಪರ್ಶವಾದ ಸಣ್ಣಸಣ್ಣ ಕಥೆ ಉಪಮೆ ಅಥವಾ "ಏಕ ಸಹಾಯದಿಂದ ಹೇಳುವುದನ್ನು-ಹೇಳಿಯೂ" ತಿಳಿಸಿಯೂ ಹೋಗಿದ್ದಾರೆಂದು ಕಾಣಬಹುದು. ಉದ್ದ ಉದ್ದ ಮಾತಿನ, ದೀರ್ಘ ದೀರ್ಘ ಸಮಾಸದ ಕಡೆಗೆ ಅವರು ಹೋಗಲೇ ಇಲ್ಲ. ಆದರೆ ಆ ಸುಲಭ ಮಾತಿನೊಳಗೆ, ಆ ಸಣ್ಣ ಉಪಮೆಯೊಳಗೆ ಎಷ್ಟು ಭಾವಗಳಿವೆ ಅಥವಾ ಸಾಮಾನ್ಯ ಮನುಷ್ಯನಿಗೆ ಉಚ್ಚ ಆದರ್ಶಕ್ಕೆ ತಲಪಿಸುವ ಎಷ್ಟು ಶಕ್ತಿ ಇದೆ ಎಂದು ನಾವು ಸಾವಿರಾರು ವರ್ಷ ಪ್ರಯತ್ನಮಾಡಿದರೂ ಕೂಡ ಆ ಭಾವದ ಅಂತ್ಯವನ್ನು ಅಥವಾ ಆ ಶಕ್ತಿಯ ಮೇರೆಯನ್ನು ಈ ವರೆಗೂ ನಮಗೆ ತಿಳಿಯಲಿಕ್ಕಾಗಲಿಲ್ಲ ಪ್ರಯತ್ನ ಮಾಡಿದಷ್ಟು ಉಚ್ಚ ಉಚ್ಚತರ ಭಾವಗಳನ್ನು ಕಾಣಬಹುದು ಅದರ ವಿಮರ್ಶೆ ಮಾಡಿದಷ್ಟು ಮನಸ್ಸು 'ಅನಿತ್ಯ ಅಸುಖ' ಸಂಸಾರದ ರಾಜತ್ವವನ್ನು ಬಿಟ್ಟು ಊರ್ಧ್ವ ಊರ್ಧ್ವತರ ಸ್ಥಾನಗಳಿಗೆ ಏಳುತ್ತಿರುತ್ತದೆ ಅಲ್ಲದೆ ಪರಮ ಪದಪ್ರಾಪ್ತಿ, ಬ್ರಾಹ್ಮೀ ಸ್ಥಿತಿ, ಮೋಕ್ಷ ಅಥವಾ ಭಗವದ್ದರ್ಶನದ ಕಡೆಗೆ (ಒಂದೇ ವಸ್ತುವನ್ನೇ ಬೇರೆ ಬೇರೆ ಭಾವಗಳಲ್ಲಿ ಕಂಡು ಮಹಾಪುರುಷರು ಈ ಎಲ್ಲ ಹೆಸರುಗಳಿಂದ ನಿರ್ದೇಶಿಸಿದ್ದಾರೆ) ಮುಂದುವರಿದಷ್ಟು ಆ ಸುಲಭ ಮಾತುಗಳ ಗಭೀರಭಾವವು ನಮಗೆ ಹೃದಯಂಗಮವಾಗುವುದು.

ಗಿರೀಶಚಂದ್ರರಿಗೆ ವಕಾಲತು ಕೊಡಲು ಹೇಳಿದ್ದು

ಇದೇ ನಿಯಮ—ಶ್ರೀ ಪರಮಹಂಸರ ಮಾತಿನ ಅಥವಾ ವ್ಯವಹಾರದ ವಿಷಯದಲ್ಲಿಯೂ ಕೂಡ ನಿಯಮದ ವ್ಯತಿಕ್ರಮ ಕಾಣುವುದಿಲ್ಲ. ಅವರ ಮಾತುಗಳು ನಾವು ಈ ಮೊದಲು ಯಾವ ಭಾವದಲ್ಲಿ ತಿಳಿಯುತ್ತಿದ್ದೆವೋ ಈಗ ಅವುಗಳಲ್ಲಿ ಇನ್ನೂ ಅಧಿಕತರ ಗಭೀರಭಾವವನ್ನು ನೋಡಬಹುದು. ದೃಷ್ಟಾಂತ ಸ್ವರೂಪವಾಗಿ ಇಲ್ಲಿ ಒಂದು ಮಾತು ಹೇಳಿದರೆ ಸಾಕು. ಗಿರೀಶಚಂದ್ರ ಘೋಷರು ಶ್ರೀ ಪರಮಹಂಸರ ಬಳಿಗೆ ಕೆಲವು ಸಲ ಬಂದುಹೋದ ನಂತರ ಒಂದು ದಿನ ಅವರಿಗೆ ಸರ್ವತೋಭಾವದಿಂದ ಆತ್ಮಸಮರ್ಪಣಮಾಡಿ 'ಈಗಿನಿಂದ ನಾನೇನು ಮಾಡಬೇಕು' ಎಂದು ಕೇಳಿದರು.

ಶ್ರೀ ಪರಮಹಂಸರು 'ನೀನು ಮಾಡುತ್ತಿದ್ದನ್ನೇ ಮಾಡಿಕೊಂಡು ಹೋಗು ಈಗ ಇತ್ತಕಡೆ (ಭಗವಾನ್) ಅತ್ತಕಡೆ (ಸಂಸಾರ) ಎರಡೂ ಕಡೆಗಳಲ್ಲಿ ದೃಷ್ಟಿ ಇಟ್ಟು ನಡೆ, ಅನಂತರ ಒಂದು ಕಡೆಯ ದೃಷ್ಟಿ ನಿಂತುಹೋದ ಬಳಿಕ ಆಗುವಂಥಾದ್ದು ಆಗುವುದು. ಆದರೆ ಪ್ರಾತಃಕಾಲ ಸಂಧ್ಯಾಕಾಲಕ್ಕೆ ದೇವರ ಸ್ಮರಣೆ ಮನನ ಮಾಡುತ್ತಾ ಇರು ಎಂದು ಹೇಳಿ ಗಿರೀಶರ ಕಡೆಗೆ ಅವರ ಉತ್ತರ ನಿರೀಕ್ಷಣೆ ಮಾಡುವಂತೆ ನೋಡಿದರು.

(ಕ್ರಮಶಃ)

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿ

ಎಲ್ಲರೂ ಸ್ವಾವಲಂಬಿಗಳಾಗಬೇಕು

ಈಗ ಎಲ್ಲರಿಗೂ ಒಂದು ದೊಡ್ಡ ಆಪತ್ಕಾರಕ ಪ್ರಸಂಗ ಬಂದಿರುವುದು. ಇದರೊಳಗಿಂದ ಬದುಕಿ ಬಾಳುವಂತೆ ಮಾಡಿಕೊಳ್ಳುವುದು ಎಲ್ಲರ ಕರ್ತವ್ಯವಾಗಿದೆ. ಇದಕ್ಕೆ ಒಂದೇ ಒಂದು ಉಪಾಯವೆಂದರೆ ಸ್ವಾವಲಂಬನವು. ಈಗಿನ ನಮ್ಮ ಜೀವಿತವು ಕೇವಲ ಪರಾವಲಂಬಿಯಾಗಿರುವದು. ಅದರಲ್ಲಿ ಬಹುಭಾಗವು ಯಂತ್ರಗಳನ್ನು ಅವಲಂಬಿಸಿದೆ. ಆದರೆ ಯಂತ್ರಗಳಿಗೆ ಅವಶ್ಯ ಬೇಕಾಗುವ ಸಾಮಗ್ರಿಗಳ ಅಭಾವದ ಮೂಲಕ ಅವು ಬಂದುಬೀಳುವ ಸಂಭವ ಬಹಳವಿರುತ್ತದೆ ಮೋಟರ್, ರೈಲುಗಾಡಿ, ಗಿರಣಿ ಇತ್ಯಾದಿಗಳು ಜನತೆಗೆ ಇಲ್ಲದಂತಾಗಬಹುದು ಆದ್ದರಿಂದ ಜನರು ತಮಗೆ ಅತ್ಯಾವಶ್ಯವಾದ ಆಹಾರಸಾಮಗ್ರಿ ಹಾಗು ಅರಿವೆಗಳನ್ನು ಒದಗಿಸಿಟ್ಟುಕೊಳ್ಳುವಂತೆ ಮಾಡುವದು ಈಗಿನ ಮಹತ್ವದ ಕರ್ತವ್ಯವಾಗಿದೆ ಮತ್ತು ಮುಂದಾದರೂ ಆಹಾರ ಸಾಮಗ್ರಿಯನ್ನೇ ಬೆಳೆಯುವಂತೆ ಮಾಡಬೇಕು ಮತ್ತು ತಮಗೆ ಜೀವನಾಂಶಕ್ಕೆ ಅವಶ್ಯವಿರುವ ಇತರ ವಸ್ತುಗಳನ್ನು ತಾವೇ ಮಾಡಿಕೊಳ್ಳಬೇಕು

ಆಹಾರಸಾಮಗ್ರಿಗಳ ಹೊರತಾಗಿ ಜನತೆಗೆ ಇನ್ನೊಂದು ಅತ್ಯಾವಶ್ಯಕವೆಂದರೆ ಬಟ್ಟೆಗಳು ಆ ಅರಿವೆ ಅಂಚಡಿಗಳನ್ನು ತಾವೇ ಮಾಡಿಕೊಳ್ಳುವದಕ್ಕಾಗಿ ಹತ್ತಿಯನ್ನು ಸಂಗ್ರಹಿಸಬೇಕು ಸಂಗ್ರಹವಿದ್ದವರು ಹೊರಗೆ ಮಾರುವದನ್ನು ಕಡಿಮೆಮಾಡಬೇಕು. ನಿದಾನ ತಮ್ಮ ಮನೆ ಮಂದಿಗೆಲ್ಲ ಅರಿವೆಯಾಗುವಷ್ಟು ಹತ್ತಿಯನ್ನು ಕಾಯ್ದಿಟ್ಟುಕೊಳ್ಳಲೇ ಬೇಕು. ಒಬ್ಬನಿಗೆ ವರುಷದ ಅರಿವೆಗೆ ಕನಿಷ್ಠ ಒಂದು ಮಣ (೪೮ ರಾತಲು) ಹತ್ತಿಯು ಹತ್ತುವದು ಮತ್ತು ನಿತ್ಯ ಒಬ್ಬರು ಐದು ತಾಸು ನೂತರೆ ಹತ್ತು ಮಂದಿಗೆ ವರುಷದ ಅರಿವೆ ಆಗುವದು ಹತ್ತಿ ಅರೆಯುವದು, ಹಂಜೀ ಮಾಡುವದು, ನೇಯುವದು—ಇವು ಸ್ವಲ್ಪ ವೇಳೆಯ ಕೆಲಸಗಳು

ಈಗ ನಡೆದಿರುವ ಕ್ರಮವು ನಿಲ್ಲಬೇಕು—ಅತಿಶಯ ಅಗ್ಗಕ್ಕೆ ಹತ್ತಿ ಮಾರಿ ಅತಿಶಯ ತುಟ್ಟಿಯಾಗಿ ಅರಿವೆ ತರುವದನ್ನು ಬಿಡಬೇಕು—ಹತ್ತಿ ಅರೆಯುವ, ಹಂಜೀ ಮಾಡುವ, ನೂಲುವ, ನೇಯುವ, ಅಹ್ಲಾದಕಾರಕ ಹಾಗು ಲಾಭದಾಯಕ ಉದ್ಯೋಗಗಳು ಹಳ್ಳಿಗಳಲ್ಲಿ ನಡೆಯಬೇಕು ಅದಲ್ಲದೆ ಇತರ ಅವಶ್ಯಕವಾದ ಪದಾರ್ಥಗಳು ಆಯಾ ಸ್ಥಳಗಳಲ್ಲಿಯೇ ದೊರೆಯುವಂತೆ ಮಾಡಬೇಕು

ಈಗ ಮುಗ್ಗೇಡಿಗೆ ಬಂದಿರುವ ಎತ್ತಿನ ಗಾಣ ಕೈಗಾಣಗಳ ಜೋಡಣಿ ಮಾಡಿಕೊಂಡು, ಕುಸಿಬಿ, ತೆಂಗು, ಔಡಲ ಇತ್ಯಾದಿಗಳ ಎಣ್ಣೆಯನ್ನು ತೆಗೆಯುವದಕ್ಕೆ ತೊಡಗಬೇಕು ಈ ಹೊಳೆಯುತ್ತಿರುವ ವಿದ್ಯುದ್ದೀಪಗಳು ಕೂಡ ಬಂದಾಗಬಹುದಲ್ಲದೆ ಚಿಮಣೀ ಎಣ್ಣೆಯು ಸಿಗುವದು ದುರ್ಲಭವಾಗಬಹುದು. ಅದಕ್ಕಾಗಿ ಪ್ರಣತಿ, ಸಮ್ಮೆ, ದೀವಟಿಗೆಗಳನ್ನು ಬಳಕೆಯಲ್ಲಿ ತರಬೇಕಾಗುವದು ಇದಲ್ಲದೆ ಇತ್ತಿತ್ತ ಅನೇಕರು ಮೂಲೆಗೆ ಒಗೆದ ಬೀಸುವ ಕಲ್ಲುಗಳನ್ನು ಹೊರತೆಗೆದು ಎಲ್ಲರೂ ಮನೆಯಲ್ಲಿ ಬೀಸಲಿಕ್ಕೆ ಆರಂಭಿಸಬೇಕು ಮತ್ತು ಅಲ್ಲಲ್ಲಿಗೆ ಬಳೆಯ ಭಟ್ಟಿಗಳು ನಡೆಯುವಂತಾಗಿ ಅವನ್ನೇ ಉಪಯೋಗಿಸಬೇಕು ಒಟ್ಟು ಹೇಳುವದೆಂದರೆ ಮಹಾತ್ಮರು ಹೇಳುವಂತೆ ಸ್ವಾವಲಂಬಿಗಳಾಗದ ವಿನಾ ಗತ್ಯಂತರವಿಲ್ಲ ಪ್ರತಿಯೊಬ್ಬನು ಸ್ವತಃ ಪೂರನಾಗುವದು ಕ್ಷೇಮಕರವಾಗಿದೆ.

ಈ ಮೊದಲು ಯಾಂತ್ರಿಕ ಸಾಮಗ್ರಿಗಳಲ್ಲಿ ಮುನ್ನಡೆಯನ್ನಿಟ್ಟಿದ್ದ ಚೀನಾ ದೇಶದಲ್ಲಿ ಕೂಡಾ ಇಂದು ಯಂತ್ರಗಳು ನಾಶವಾದ ಮೂಲಕ ಅದಕ್ಕೆ ಸಂಪೂರ್ಣ ಸ್ವಾವಲಂಬಿಯಾಗುವ ಸಂದರ್ಭ ಬಂದಿದೆ. ಈ ತತ್ವವು ಅಲ್ಲಿ ಸಂಪೂರ್ಣ ಯಶಸ್ವಿಯಾಗಿದೆ. ನಮ್ಮ ದೇಶ ಹಾಗು ಚೀನದೇಶದಲ್ಲಿ ವಿಶೇಷ ವ್ಯತ್ಯಾಸವಿರುವದಿಲ್ಲ. ಕಾರಣ ಎಲ್ಲರೂ ಸ್ವಾವಲಂಬನ ಕಾರ್ಯದಲ್ಲಿ ತತ್ಪರರಾಗತಕ್ಕದ್ದು.

ಈ ಸಂದರ್ಭದಲ್ಲಿ ಏನಾದರೂ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಸಾಧ್ಯವಿದ್ದಷ್ಟು ಪೂರೈಸಲು ಸಿದ್ಧರಿರುವೆವು. ಎಲ್ಲಿಯೇ ಆಗಲಿ ೨೦-೨೫ರಷ್ಟಾದರೂ ಕೆಲಸಗಾರರು ಕೂಡಿದರೆ ಅವರಿಗೆ ಅವಶ್ಯವಿರುವ ಶಿಕ್ಷಣ ಕೊಡಲಿಕ್ಕೆ ಶಿಕ್ಷಕರನ್ನು ಕಳಿಸಿಕೊಡುವ ಏರ್ಪಾಟು ಮಾಡುವೆವು. ಇದರ ಸಂಪೂರ್ಣ ಲಾಭವನ್ನು ಕರ್ನಾಟಕದ ಜನತೆಯು ಪಡೆಯಬೇಕೆಂದು ಕ. ಪ್ರಾಂ. ಕಾಂಗ್ರೆಸ್ ಕಮಿಟಿ ಗೌ॥ ಕಾರ್ಯದರ್ಶಿಗಳು ಈ ಮೂಲಕ ಬಿನ್ನವಿಸುತ್ತಾರೆ.

ಈ ಹೊತ್ತು ನಿಮ್ಮ ಹಲ್ಲುಗಳನ್ನು ಮ್ಯಾಕ್ಲೀನ್ ಮಾಡಿದಿರಾ?

ಆಹಾ! ಅಂದವಾದ ಹಲ್ಲುಗಳನ್ನು ಹೊಂದುವುದು ಹೇಗೆ ಎನ್ನುವುದು ನಿಮಗೆ ತಿಳಿದಿದೆ.

ಹೌದು ಹಲ್ಲುಗಳು ಕಾಂತಿಯುತವಾಗಿರುವುದಕ್ಕೆ ಮ್ಯಾಕ್ಲೀನ್ ಟೂತ್ ಪೇಸ್ಟನ್ನೇ ಉಪಯೋಗಿಸಬೇಕು. ಯಾಕೆಂದರೆ ಅದು ಜಾಗ್ರತೆಯಾಗಿ ಕಲೆಗಳನ್ನು ತೆಗೆದುಹಾಕಿ ಹಲ್ಲುಗಳನ್ನು ಬೆಳ್ಳಗೂ ಥಳಥಳ ಹೊಳೆಯುವಂತೆಯೂ ಮಾಡುತ್ತದೆ ನೀವೂ ಆರೋಗ್ಯಯುತವಾದ ಮತ್ತು ಅಂದವಾದ ಹಲ್ಲುಗಳನ್ನು ಮ್ಯಾಕ್ಲೀನ್ ಉಪಯೋಗಿಸುವುದರಿಂದ ಹೊಂದಬಹುದು.



"ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

27 – 3 – 1942] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೨೭–೩–೧೯೪೨]

ಸಮರಭೂಮಿಯ ಸಂಚಾರ

ಬರ್ಮಾದ ಅವಸ್ಥೆಯೇನಾಯಿತೆಂಬುದು ಸ್ಪಷ್ಟವಾಗಿ ಇನ್ನೂ ತಿಳಿದುಬಂದಿಲ್ಲ ಆ ಕಡೆಯಿಂದ ಸರಿಯಾದ ಸುದ್ದಿಗಳೇ ಇತ್ತೀಚೆಗೆ ಬರುವುದಿಲ್ಲ. ಫೆಬ್ರವರಿ ಇಪ್ಪತ್ತನೇ ತಾರೀಕಿಗೆ ರಂಗೂನನ್ನು ಬಿಟ್ಟು ಹೋಗುವ ಆಜ್ಞೆ ಹೊರಡಿಸಲಾಗಿತು ರಾಜಧಾನಿಯಾದ ರಂಗೂನ್ ಶತ್ರುವಶವಾದರೂ, ಬರ್ಮಾ ಸರಕಾರವು ಒಂದು ಅಜ್ಞಾತ ಸ್ಥಳದಲ್ಲಿ ಅಡಗಿದ್ದು ಅಲ್ಲಿಂದ ಕಾರಭಾರ ನಡೆಸುತ್ತದೆಯೆಂದು ಸುದ್ದಿ ಕೊಡಲಾಗಿದೆ ಅಂತೂ ಬರ್ಮಾದಲ್ಲಿ ಅರ್ಧಕ್ಕಿಂತ ಹೆಚ್ಚಿನ ಭಾಗವನ್ನು ಜಪಾನೀಯರು ಕೈವಶಪಡಿಸಿಕೊಂಡಿದ್ದು, ಮತ್ತೂ ಮುನ್ನುಗ್ಗುತ್ತಿದ್ದಂತೆ ಬ್ರಿಟಿಷರು ಹಿಂಜರಿಯುತಿದ್ದಾರೆಂದು ತಿಳಿದುಕೊಳ್ಳಬಹುದು ರಂಗೂನ್–ಮಂಡಲೆ ಮಾರ್ಗ ತುಂಡರಿಸಲ್ಪಟ್ಟಿದೆ, ದಕ್ಷಿಣ ಬರ್ಮಾವು ಜಪಾನೀಯರ ಹಿಡಿತಕ್ಕೆ ಹೋಗಿದೆ, ಉತ್ತರ ಬರ್ಮಾಕ್ಕೂ ಅದೇ ಭೀತಿ ಬಲವಾಗಿದೆ ಚೀನಿಯರು ಜಪಾನಿಯರಲ್ಲಿಗೆ ಕೆಚ್ಚಿನ ಪ್ರತಿಭಟನೆ ಕೊಡುತ್ತಿದ್ದಾರೆ ಅದು ಎಷ್ಟರಮಟ್ಟಿಗೆ ಸಫಲಕಾರಿಯಾಗುವುದೋ ನೋಡಬೇಕಾಗಿದೆ

ಜಪಾನೀಯರ ಮುಂದಿನ ಧೋರಣವು ಈಗಾಗಲೇ ನಿಶ್ಚಿತವಾದಂತೆ ತೋರುತ್ತದೆ ಆಸ್ಟ್ರೇಲಿಯಕ್ಕೆ ಅವರ ಆಕ್ರಮಣ ಕಾರ್ಯವು ಅಲ್ಲಲ್ಲಿ ಇಷ್ಟಿಷ್ಟು ಆರಂಭವಾಗಿದೆ ಜಪಾನು ಆಸ್ಟ್ರೇಲಿಯದ ಮೇಲೆ ಏಳುವ ಅಥವಾ ಭಾರತವನ್ನು ಮುತ್ತುವರು ಎಂದಾಗಿ ಈಗ ಒಂದು ಊಹೆಯುಂಟು. ಏಕೆಂದರೆ ಕಳೆದ ನಾಲ್ಕೈದು ವರ್ಷಗಳಿಂದ ಚೀನದೊಡನೆ ಯುದ್ಧ ಸಾಗಿಸಿ ಯಾವುದೇ ಇತ್ಯರ್ಥಕ್ಕೆ ಜಪಾನು ಬರದೇ ಇರುವಾಗ ಅತ್ತ ಜಪಾನಿನ ಸನ್ನಿಹಿತ ಶತ್ರುವಾದ ರಷ್ಯಾವೂ ವಿರೋಧ ಪಕ್ಷದಲ್ಲೇ ಇರುವಾಗ ಚೀನ ರಷ್ಯಗಳೆರಡನ್ನೂ ಹಾಗೆಯೇ ಬಿಟ್ಟು ಅದು ಈ ಕಡೆಯಲ್ಲಿ ಹಲಗಾಲ ಯುದ್ಧ ನಡೆಸುವಂತೆ ಇಲ್ಲ ಯಾವುದೇ ಹೊತ್ತಿನಲ್ಲಾದರೂ ಜಪಾನು ಚೀನ ರಷ್ಯಗಳ ಹೊಡೆತವನ್ನು ಹಾರೈಸಬಹುದು ಆದಾಗಿ ಈಗ ಆಸ್ಟ್ರೇಲಿಯವನ್ನು ಮೊದಲು ಆಕ್ರಮಿಸಲು ಮನವಮಾಡಿದಂತಿದೆ, ಆಸ್ಟ್ರೇಲಿಯವನ್ನು ಸ್ವಾಧೀನಪಡಿಸಿದರೆ ಮತ್ತೆ ಹಿಂದೂದೇಶವನ್ನು ಆಕ್ರಮಿಸಲು ಸುಲಭವಾದಂತೆ ಆಯಿತು ಆಸ್ಟ್ರೇಲಿಯವನ್ನು ಜಪಾನು ಲಕ್ಷಿಸದೆ ಭಾರತದತ್ತ ಬಂದರೆ ಅಮೆರಿಕವು ಅಲ್ಲಿ ಸೈನ್ಯ ಸಂಗ್ರಹ ಮಾಡಿ, ಪೆಸಿಫಿಕ್ಕಿನಲ್ಲಿ ಜಪಾನಿನ ಪ್ರಭುತ್ವಕ್ಕೆ ಪ್ರಬಲ್ಯ ಆತಂಕವುಂಟು ಮಾಡದಿರಲಾರರು ಈಗಾಗಲೇ ಅಮೆರಿಕದ ಸೈನ್ಯ ಆಸ್ಟ್ರೇಲಿಯಕ್ಕೆ ಬಂದಿರುವುದೆಂದೂ ಸುದ್ದಿ ಆಸ್ಟ್ರೇಲಿಯದ ಮೇಲೆ ನ್ಯೂಗಿನಿ ದ್ವೀಪದಿಂದ ಜಪಾನೀಯರ ಆಕ್ರಮಣವು ಆರಂಭವಾಗಿದೆ ಫಿಲಿಪೈನಿನಲ್ಲಿ ಯುದ್ಧ ನಡೆಸಿದ ಜನರಲ್ ಮೆಕಾರ್ಥರನ್ನು ನೈಋತ್ಯ ಶಾಂತಸಾಗರದ ಸರ್ವ ಸೇನಾಪತಿಯನ್ನಾಗಿ ಮಾಡಿ ಈಗ ಆಸ್ಟ್ರೇಲಿಯಕ್ಕೆ ಕಳುಹಿಸಲಾಗಿದೆ ಫಿಲಿಪೈನನ್ನು ಜಪಾನರಿಂದ ಪುನಃ ಸ್ವಾಧೀನಪಡಿಸಲು, ಅಮೆರಿಕವು ಬೇಗನೇ ಜೋರಾಗಿ ಬಂದು ಯುದ್ಧ ಹೂಡುವುದೆಂದು ಸೇನಾಪತಿ ಮೆಕಾರ್ಥರು ಹೇಳಿದ್ದಾರೆ ಆಸ್ಟ್ರೇಲಿಯಕ್ಕೆ ಅದರ ಸಲುವಾಗಿಯೇ ರೂಸ್‌ವೆಲ್ಟರು ಮೆಕಾರ್ಥರನ್ನು ಕಳುಹಿಸಿರಬಹುದೆಂದು ಊಹಿಸಲಾಗಿದೆ ಆಸ್ಟ್ರೇಲಿಯದ ಮುಖ್ಯ ಮಂತ್ರಿ ಕರ್ಟಿನರೂ ಫಿಲಿಪೈನ್ ಸ್ವಾತಂತ್ರ್ಯದ ವಿಷಯ ಸಹಸಂತಾಪಪಡುತ್ತಾರೆ ಇದರಿಂದೆಲ್ಲಾ ಜಪಾನು ಆಸ್ಟ್ರೇಲಿಯವನ್ನು ಮುಂದಿನ ತನ್ನ ಬಲಿಯಾಗಿ ಮಾಡಲು ಆಗ್ರಹಕೊಡಬಹುದೆಂದು ಊಹಿಸಲು ಸಾಕಷ್ಟು ಅವಕಾಶವಾಗಿದೆ ಮುಂದಿನ ಒಂದೆರಡು ವಾರಗಳಲ್ಲಿ ಆಸ್ಟ್ರೇಲಿಯದ ಪರಿಸ್ಥಿತಿ ವಿಶದವಾಗುವುದು

ಅಂತೂ ಕೊನೆಗೆ ಜಾವಾದ ಯುದ್ಧ ಮುಗಿಯಿತು, ಯುದ್ಧ ಸಾಮಗ್ರಿಗಳಿರಲಿಲ್ಲವೆಂದೂ, ಪರಿಸ್ಥಿತಿ ಅನುಕೂಲವಿರಲಿಲ್ಲವೆಂದೂ ಹೇಳಿ ಮಿತ್ರಪಕ್ಷದವರು ಜಾವವನ್ನು ಕೈಬಿಟ್ಟರು ಪಾಪ ಡಚ್ಚರು ವೀರಾವೇಶದಿಂದ ಹೋರಾಡಿದರೂ, ಹೋರಾಡಿ ಅಪಾರ ಹಾನಿಗೀಡಾದರಲ್ಲದೆ ಜಾವವನ್ನು ಉಳಿಸಿಕೊಳ್ಳುವುದಾಗಲಿಲ್ಲ ಅಂತೂ ಸ್ವಾತಂತ್ರ್ಯಕ್ಕಾಗಿ ಡಚ್ಚರು ಮಾಡಿದ ಸ್ವಾರ್ಥತ್ಯಾಗ, ಹೋರಾಟ, ತೋರಿಸಿದ ಅತುಳ ಧೈರ್ಯಗಳಿಗಾಗಿ ಯಾರಾದರೂ ತಲೆದೂಗಲೇಬೇಕು ಜಾವಾದ ಯುದ್ಧದಲ್ಲಿ ಜಪಾನರಿಗಾದ ಹಾನಿ, ಅದರಲ್ಲೂ ನೌಕಾ ನಷ್ಟವು ಬಹಳ ಗಣನೀಯವಿದೆ ಮುಂದಿನ ಜಪಾನೀ ಆಕ್ರಮಣವು ಮಡಗಾಸ್ಕರಿನ ಮೇಲೆ ಆದರೂ ಆಗಬಹುದೆಂದು ಕೆಲವರು ಊಹಿಸುತಾರೆ ಅತ್ತ ಲಿಬಿಯದಿಂದಲೂ ಇತ್ತೀಚೆಗೆ ಸುದ್ದಿಯಿಲ್ಲ ಯುದ್ಧಕ್ಷೇತ್ರವು ಅಲ್ಲಿ ಶಾಂತವಿದೆಯೆಂದು ತೋರುತ್ತದೆ ಇದುವರೆಗೆ ಹವೆ ಚೆನ್ನಾಗಿರಲಿಲ್ಲವೆಂದೂ, ಈಗ ಸುಧಾರಿಸಿದೆಯೆಂದೂ ತಿಳಿದಿದೆ ಅಂತೂ ಇನ್ನೂ ಉಗ್ರ ಹೋರಾಟವನ್ನು ಹಾರೈಸಬಹುದು ಸೇನಾಪತಿ ರೊಮೆಲನು ಬರ್ಲಿನಿಗೆ, ಹಿಟ್ಲರನೊಡನೆ ವಿಚಾರಮಾಡುತ್ತಿರುವನೆಂದು ಪ್ರಕಟವಾಗಿದೆ ಮುಂದಿನ ವಸಂತಕಾಲದ ಆಕ್ರಮಣದ ವಿಷಯ ವಿಚಾರ ವಿನಿಮಯವಿರಬೇಕು

ಈಗ ಬೇಸಿಗೆ ಬಂದಿದೆ, ಬೇಸಿಗೆಯೆಂದರೆ ಯುದ್ಧದ ಬಿಸಿ ಹೆಚ್ಚುವ ಕಾಲವೆಂಬುದನ್ನು ನಾವು ಬಹುಕಾಲದಿಂದ ಪತ್ರಿಕೆಗಳಲ್ಲಿ ಓದುತ್ತಿದ್ದೇವೆ ಹಿಟ್ಲರನು ವಸಂತಕಾಲದಲ್ಲಿ ಮಹಾ ಯೋಜನೆಯೊಂದನ್ನು ಮಾಡಿರುವನೆಂದು ಬಹು ಹಿಂದೆಯೇ ಪ್ರಸಿದ್ಧವಾಗಿದೆ ಮೊನ್ನೆ ಮೊನ್ನೆ ಹಿಟ್ಲರ್ ಮಾಡಿದ ಭಾಷಣದಲ್ಲಿಯೂ ರಷ್ಯನರಿಗೆ ಬೇಸಿಗೆಕಾಲದಲ್ಲಿ ಬುದ್ಧಿ ಕಲಿಸುತ್ತೇನೆ ಎಂದು ಗದರಿಸಿದ್ದಾನೆ ಬೇಸಿಗೆಕಾಲದಲ್ಲಿ ಹಿಟ್ಲರನು ಅಂತಹ ಪ್ರಚಂಡ ಯುದ್ಧ ಮಾಡುವನಾದರೆ, ಮಿತ್ರಪಕ್ಷದವರು ಅದನ್ನು ಎದುರಿಸಲೂ ಸಿದ್ಧರೇ ಆಗಿದ್ದಾರೆ ಅಮೆರಿಕವು ಈಗ ಒಂದೇ ಸವನೆ ಲಕ್ಷಾಂತರ ವಿಮಾನಗಳನ್ನೂ, ಇತರ ಅನೇಕಬಗೆಯ ಯುದ್ಧ ಸಾಮಗ್ರಿಗಳನ್ನೂ ತಯಾರಿಸುತಿದೆ ಮುಂದಿನ ಯುದ್ಧದಲ್ಲಿ ತುರ್ಕಿಸ್ಥಾನಕ್ಕೂ ಗಂಡಾಂತರ ತಪ್ಪಿದ್ದಲ್ಲವೆಂದು ಊಹಿಸಬೇಕಾಗಿದೆ ಮೊನ್ನೆ ಮೊನ್ನೆ ತುರ್ಕಿಸ್ಥಾನದ ಒಂದು ಪಟ್ಟಣದ ಮೇಲೆ ಆಕಸ್ಮಿಕ ಬಾಂಬು ಬಿತು, ಅದು ಜರ್ಮನರದೇ ಎಂದು ಹಲವರು ಊಹಿಸಿದರು, ಕಡೆಗೆ ಬ್ರಿಟಿಷ್ ವಿಮಾನಗಳೇ ಹಾರಿಬಂದು ಪ್ರಮಾದವಶಾತ್ ಅಲ್ಲಿ ಬಾಂಬು ಬಿದ್ದಿತೆಂದೂ ಈಗ ತಿಳಿಸಲಾಗಿದೆ ರಷ್ಯನ್ ರಣಭೂಮಿಗೆ ಹಿಟ್ಲರ್ ಹೊಸ ಸೇನಾಪತಿಗಳನು ಕಳುಹಿಸುವನಂತೆ ಅಂತೂ ಮುಂದಿನ ಒಂದೆರಡು ತಿಂಗಳಲ್ಲಿ ಎಲ್ಲಾ ಕಡೆಯಲ್ಲಿಯೂ ಭಯಂಕರ ಯುದ್ಧಜ್ವಾಲೆ ಜ್ವಲಿಸುವುದಾಗಿ ಊಹಿಸಬಹುದು

ಹಿಂದೂದೇಶದ ರಾಜಕೀಯ ಕ್ಷೇತ್ರದಲ್ಲಿ ಈ ವಾರ ಕೋಲಾಹಲವುಂಟಾಗಿದೆ, ಬ್ರಿಟಿಷ್ ರಾಯಭಾರಿ ಸರ್ ಕ್ರಿಪ್ಸರು ಭಾರತಕ್ಕೆ ಬಂದಿಳಿದಿದ್ದಾರೆ ಅವರು ಬೇಗನೇ ಸಕಲ ಪಕ್ಷದ ಮುಂದಾಳುಗಳನ್ನೂ ಕಂಡು ಅವರೊಡನೆ ವಿಚಾರವಿನಿಮಯ ಮಾಡಲಿರುವರು ಕಾಂಗ್ರೆಸಿನ ಪರವಾಗಿ ರಾಷ್ಟ್ರಪತಿ ಅಜಾದರು ಕ್ರಿಪ್ಸರ ಭೇಟಿಯನ್ನು ಮೊದಲಾಗಿ ನಡೆಸಿಕೊಳ್ಳುವರೆಂದು ನಿಶ್ಚಯವಾಗಿದೆ ಗಾಂಧಿಜಿಯನ್ನು ತಾವು ಭೇಟಿಯಾಗುವುದಾಗಿ ಕ್ರಿಪ್ಸರು ತಿಳಿಸಿದ್ದಾರೆ ರಾಜಾಜಿ ಮತ್ತು ನೆಹರುಗಳೂ ಕ್ರಿಪ್ಸರನ್ನು ಕಾಣಬಹುದೆಂದು ನಂಬಲಾಗಿದೆ ಜಿನ್ನರ ಅವಸ್ಥೆ ಸ್ವಲ್ಪ 'ಪಜೀತಿ' ಯಿದೆ ಕ್ರಿಪ್ಸರ ಸೂಚನೆಗಳು ತನಗೆ ಮುಂದಾಗಿ ಸಿಗಬೇಕೆಂದು ಅವರು ಹೇಳಿದ್ದಾರೆ ಅತ್ತ ಸರ್ ಸಿಕಂದರರು ಮುಸ್ಲಿಂ ಲೀಗಿಗೆ ರಾಜಿನಾಮೆ ಕೊಡುವ ಸುದ್ದಿಯೊಂದು ಹರಡಿದೆ ಫಜ್ಲುಲ್ ಹಕ್ಕರಂತೂ ಜಿನ್ನರ ಮುಂದಾಳುತನವನ್ನು ಅಲ್ಲಗಳೆದು ಚರ್ಚಿಲರಿಗೆ ಹಿಂದೆಯೇ ತಂತಿ ಕಳುಹಿಸಿದ್ದಾರೆ ಮೋಮಿನ್ ಪರಿಷತ್ತಿನವರೂ ಜಿನ್ನರು ಹಾಗೂ ಮುಸ್ಲಿಂ ಲೀಗು ಮುಸ್ಲಿಂ ಪ್ರತಿನಿಧಿಗಳಲ್ಲವೆಂದು ಸಾರಿದ್ದಾರೆ ಸರ್ ಸಿಕಂದರರು ಕಾಂಗ್ರೆಸು ಮತ್ತು ಲೀಗುಗಳೊಳಗೆ ಸಂಧಾನ ಪ್ರಯತ್ನ ಮಾಡುತ್ತಿರುವರೆಂದೂ ಸುದ್ದಿ. ಏಕೆಂದರೆ ಸರ್ ಕ್ರಿಪ್ಸರು ಬಂದಾಗ ಇಲ್ಲಿ ಎಲ್ಲಾ ಜಾತಿಯವರೂ ಒಕ್ಕಟ್ಟಾಗಿ ಒಂದು ಸಂಯುಕ್ತ ಸೂಚನೆ ಅವರ ಮುಂದಿಡಬಹುದೆಂದು ಅವರ ಉದ್ದೇಶವೇನೋ ಅಮೂಲ್ಯವಾದುದು. ಇಷ್ಟರಲ್ಲಿಯೇ ಅವರು ಅಜಾದರನ್ನೂ ಭೇಟಿಯಾಗಿದ್ದಾರೆ ಮುಸ್ಲಿಮರೂ ಐಕ್ಯಗೊಂಡು ದೇಶದ ಸ್ವಾತಂತ್ರ್ಯ ಪಡೆಯಬೇಕೆಂದು ಅಜಾದರೂ ಒಂದು ವಿನಂತಿ ಮಾಡಿದ್ದಾರೆ ಜಿನ್ನರ ಪಾಕಿಸ್ಥಾನವನ್ನು ಎಲ್ಲರೂ ಮೂಲೆಗೊತ್ತುವಂತೆ ಕಂಡುಬರುತ್ತದೆ ಈ ಸಂದರ್ಭ ಸಾವರ್ಕಾರರೂ ಸುಮ್ಮಗಿಲ್ಲ ಕಾಂಗ್ರೆಸ್ ಮತ್ತು ಲೀಗುಗಳು ಒಪ್ಪಂದ ಮಾಡಿಕೊಳ್ಳುವುದರಲ್ಲಿ ಹಿಂದುಗಳ ಹಕ್ಕಿಗೆ 'ಆತಂಕವಾಗುವುದಾದರೆ ಅದನ್ನು ತಾವು ಎದುರಿಸುವೆವೆಂದು ಅವರು ಬೊಬ್ಬಿಡುತ್ತಾರೆ. ಸಂಕೋಚವಾದ ನಮ್ಮ ಜಾತೀಯತೆಯ ಒಡ್ಡಿಗೆ ಎಷ್ಟರ ಮಟ್ಟಿಗೆ ದೇಶದ ಬೆಂಬಲ ಸಿಗುವುದೋ ನಂಬಲಾಗುವುದಿಲ್ಲ ಅಂತೂ ಕ್ರಿಪ್ಸರ ಸಂಧಾನದ ವಿಷಯವಾಗಿ ಈಗ ಎಲ್ಲರಲ್ಲಿಯೂ ಕುರುವು ಹುಟ್ಟಿದೆ

ನೀವು ಮಿತವ್ಯಯ ಮಾಡಬೇಕಾದರೆ ಮೊದಲು ನಿಮ್ಮ ಹಣವನ್ನು ಜಾಗರೂಕತೆಯಿಂದಿಡಿರಿ!





ಸೆಕುಂಡಸ
ನಂ, ರೆಕ್ಟೆಂಗುಲರ್ ನಿ ಸಿಲ್ವರ್ ರೂ 41
ಪೇಟೆಂಟ್ ಎವರ್‌ಬ್ರೈಟ್ ಸ್ಟೀಲ್ ರೂ 52
ರೋಲ್ಡ್ ಗೋಲ್ಡ್ ರೂ 59
18 ಕ್ಯಾರೆಟ್ ಗೋಲ್ಡ್ ರೂ 132



ಸೆಕುಂಡಸ್ ನ್ಯೂ ಕೆಲ-ಬರ ಕರ್ವ್‌ಡ್
ಪೇಟೆಂಟ್ ಎವರ್ ಬ್ರೈಟ್ ಸ್ಟೀಲ್ ರೂ. 54
ರೋಲ್ಡ್ ಗೋಲ್ಡ್ ರೂ 63
9 ಕ್ಯಾರೆಟ್ ಗಟ್ಟಿಗೋಲ್ಡ್ ರೂ 110

ವಾಚಿನ ಉದ್ದೇಶಕ್ಕಿಂತಲೂ ಕ್ರಯವೇ ಮುಖ್ಯವಲ್ಲ ಎಷ್ಟೇ ಕ್ರಯ ಕೊಟ್ಟರೂ, ವಿಶ್ವಾಸಾರ್ಹವಲ್ಲದ ಮಟ್ಟಿಗೆ ಕೊಟ್ಟದ್ದು ನೀರಿಗೆ ಹಾಕಿದಂತೆ ನಿಮಗೆ ಮಿತವ್ಯಯ ಮಾಡಬೇಕೆಂದಿದ್ದರೆ, ವೆಸ್ಟ್ ಎಂಡ್ 'ಸೆಕುಂಡಸ್' ವಾಚನ್ನು ಕೊಂಡುಕೊಳ್ಳಿರಿ ಸಮಯ ಸರಿಯಾಗಿ ಕೊಡುವುದೆಂದೂ, ಕಡಿಮೆ ಕ್ರಯದ್ದೆಂದೂ ಅದು ಪ್ರಸಿದ್ಧವಾಗಿದೆ ಅದರಿಂದ ನಿಮ್ಮ ಹಣವೂ ಭದ್ರವಾಗಿರತ್ತದೆ ನಿಮಗೆ ಪ್ರತಿಫಲವೂ ದೊರಕುತ್ತದೆ ನಿಮಗೆ ಬೇಕಾದ ಸೆಕುಂಡಸನ್ನು ನಮ್ಮ ಚಿತ್ರಿತ ಧರ್ಮಾರ್ಥ ಕೆಟಲಾಗನ್ನು ನೋಡಿ ಆರಿಸಿರಿ

buy WEST END "SECUNDUS"
Economy Series Watches.

ವೆಸ್ಟ್ ಎಂಡ್ ವಾಚ್ ಕಂಪೆನಿ, ಬೊಂಬಾಯಿ ಮತ್ತು ಕಲ್ಕತ್ತಾ

WEST END WATCH Co
BOMBAY CALCUTTA

ಶ್ರೀ ರಾಮಕೃಷ್ಣ ಲೀಲಾ ಪ್ರಸಂಗ

[ಗುರುಭಾವ-ಪೂರ್ವಾರ್ಧ]

ಮೂಲ ಬಂಗಾಳಿ ಲೇಖಕರು: ಶ್ರೀ ಸ್ವಾಮಿ ಶಾರದಾನಂದಜಿ
ಅನುವಾದ: ಶ್ರೀ ಸ್ವಾಮಿ ಪ್ರಣವೇಶಾನಂದರು

(ಹಕ್ಕು ಕಾದಿಡಲ್ಪಟ್ಟಿದೆ)

ಯೇ ಚೈವ ಸಾತ್ತ್ವಿಕಾಭಾವಾ ರಾಜಸಾಸ್ತಾಮಸಾಶ್ಚಯೇ।
ಮತ್ತ ಏವೇತಿತಾನ್ ವಿದ್ಧಿ ನತ್ವಹಂ ತೇಷು ತೇಮಯಿ॥
ತ್ರಿಭಿರ್ಗುಣಮಯೈರ್ಭಾವೈರೇಭಿಃ ಸರ್ವಮಿದಂ ಜಗತ್।
ಮೋಹಿತಂ ನಾಭಿಜಾನಾತಿ ಮಾಮೇಭ್ಯಃ ಪರಮವ್ಯಯಮ್॥ (ಗೀತಾ 7-12, 13)

'ಯಾವ ಯಾವ ಸತ್ತ್ವಗುಣದಿಂದ ಹುಟ್ಟಿದ ವಸ್ತುಗಳಿವೆಯೋ ಮತ್ತು ಯಾವ ಯಾವ ರಜೋಗುಣ ತಮೋಗುಣಗಳಿಂದ ಹುಟ್ಟಿದ ಪದಾರ್ಥಗಳಿವೆಯೋ ಅವುಗಳು ನನ್ನಿಂದಲೇ ಹುಟ್ಟಿದವುಗಳೆಂದು ತಿಳಿ. ವಾಸ್ತವವಾಗಿ ನೋಡಿದರೆ ನಾನು ಅವುಗಳೊಳಗೂ ಇಲ್ಲ. ಅವು ನನ್ನೊಳಗೂ ಇಲ್ಲ. ನನ್ನ ಪ್ರಕೃತಿಗೆ ಸಂಬಂಧಿಸಿವೆ.'

ಸಾತ್ತ್ವಿಕ, ರಾಜಸ, ತಾಮಸಗಳ ಕಾರ್ಯರೂಪವಾದ, ಈ ಮೂರು ಗುಣಗಳ ಭಾವಗಳಿಂದ ಈ ಪ್ರಪಂಚವೆಲ್ಲವೂ ಭ್ರಾಂತಿಗೆ ಒಳಗಾಗಿದೆ. ಆದುದರಿಂದ ಈ ಜಗತ್ತು ಈ ಗುಣಗಳ ವ್ಯವಹಾರಕ್ಕೆ ಸಿಕ್ಕಿದೆ. ಇವುಗಳನ್ನು ಮೀರಿರುವ ನಾಶರಹಿತನಾದ ನನ್ನನ್ನು ಸರಿಯಾಗಿ ತಿಳಿಯಲಾರದು.

ಶ್ರೀ ಪರಮಹಂಸರ ಮಾತಿನ ಗಭೀರ ಅರ್ಥ

ಹದಿನೆರಡು ವರ್ಷಗಳ ತನಕ ವ್ಯಾಪಕವಾದ ಅಪೂರ್ವ ಮತ್ತು ಅಲೌಕಿಕ ತಪಸ್ಸಿನ ಅಂತ್ಯದಲ್ಲಿ ಶ್ರೀ ಜಗನ್ಮಾತೆಯು ಶ್ರೀ ಪರಮಹಂಸರಿಗೆ 'ನೀನು ಭಾವಮುಖದಲ್ಲಿರು' ಎಂದು ಹೇಳಿದಳು. ಶ್ರೀ ಪರಮಹಂಸರು ಹಾಗೆಯೇ ಇರುತ್ತಿದ್ದರೆಂದು ಅನೇಕರಿಗೆ ತಿಳಿದಿತ್ತು. ಆದರೆ 'ಭಾವಮುಖದಲ್ಲಿರು' ಅಂದರೇನು, ಅದರ ಅರ್ಥವು ಎಷ್ಟು ಗಭೀರವೆಂಬದಾಗಿ ತಿಳಿಯಲೂ ಅಥವಾ ತಿಳಿಸಲೂ ಬಹಳ ಕಷ್ಟಕರವಾದುದು. ಸ್ವಾಮಿ ವಿವೇಕಾನಂದರು ಒಂದು ದಿನ ಒಬ್ಬ ಮಿತ್ರನಿಗೆ 'ಶ್ರೀ ಪರಮಹಂಸರ ಒಂದೊಂದು ಮಾತನ್ನವಲಂಬಿಸಿ ನೂರಾರು ದರ್ಶನ ಗ್ರಂಥಗಳನ್ನು ಬರೆಯಬಹುದು' ಎಂದು ಹೇಳಿದ್ದರು. ಅದನ್ನು ಕೇಳಿ ಆ ಮಿತ್ರನು ಬಹು ವಿಸ್ಮಿತನಾಗಿ, ನಿಜವೇನು? ನಾವು ಶ್ರೀ ಪರಮಹಂಸರ ಮಾತಿನ ಗಭೀರ ಅರ್ಥವನ್ನು ಹಿಡಿಯಲಾರೆವು. ನೀವು ಅವರ ಯಾವದಾದರೂ ಒಂದು ಮಾತನ್ನು ಎತ್ತಿ ಹಾಗೆ ವಿವರಿಸಿ ನನಗೆ ತಿಳಿಸಿರಿ ನೋಡೋಣ, ಅಂದರು. ಸ್ವಾಮಿ ವಿವೇಕಾನಂದರು: ನಿನಗೆ ತಿಳಿಯಲು ಶಕ್ತಿ ಇರುವುದೇನು? ಒಳ್ಳೇದು ಶ್ರೀ ಪರಮಹಂಸರ ಯಾವದಾದರೊಂದು ಮಾತು ಹೇಳು. ನಾನು ವಿವರಿಸುತ್ತೇನೆ.

ಮಿತ್ರನು: ಒಳ್ಳೇದು; ಸಕಲರಲ್ಲಿಯೂ ನಾರಾಯಣನನ್ನು ಕಾಣಬೇಕೆಂದು ಉಪದೇಶವನ್ನು ಕೊಟ್ಟು ಶ್ರೀ ಪರಮಹಂಸರು 'ಆನೆ ನಾರಾಯಣ ಮತ್ತು ಮಾವುತ ನಾರಾಯಣ' ಎಂಬ ಕಥೆಯನ್ನು ಹೇಳಿದರಲ್ಲಾ ಅದನ್ನು ವಿವರಿಸಿ ಹೇಳಿ ನೋಡೋಣ.

ಸ್ವಾಮಿ ವಿವೇಕಾನಂದರು ತಕ್ಷಣವೇ ಪ್ರಾಚ್ಯ ಪಾಶ್ಚಾತ್ಯ ಪಂಡಿತರ ಮಧ್ಯದಲ್ಲಿ ಸ್ವಾಧೀನ ಇಚ್ಛೆ ಮತ್ತು ಅದೃಷ್ಟವಾದ ಅಥವಾ ಪೌರುಷ ಮತ್ತು ಭಗವದಿಚ್ಛೆಯ ವಿಚಾರವಾಗಿ ಪ್ರಾಚೀನ ಕಾಲದಿಂದಲೂ ವಾದವಿವಾದ ನಡೆದುಬರುತ್ತಿದ್ದರೂ ಅವರು ಯಾವದೊಂದು ನಿಷ್ಕರ್ಷೆಗೆ ಬಾರದಿರುವ ವಿಷಯವನ್ನು ತಿಳಿಸಿ, ಶ್ರೀ ಪರಮಹಂಸರ ಕಥೆಯೇ ಈ ವಿವಾದದ ಒಂದು ಅಪೂರ್ವ ಸಮಾಧಾನವೆಂದು ಸುಲಭ ಭಾಷಾಸರಣಿಯಿಂದ ಮೂರು ದಿನಗಳ ವರೆಗೂ ವಿವರಿಸಿದರು.

ಸಕಲ ಅವತಾರ ಪುರುಷರ ಮಾತು ಹೀಗೆಯೇ

ಚೆನ್ನಾಗಿ ಯೋಚಿಸಿ ನೋಡಿದರೆ ವಾಸ್ತವವಾಗಿಯೂ ಶ್ರೀ ಪರಮಹಂಸರ ಅತಿ ಸಾಮಾನ್ಯ ದೈನಿಕ ವ್ಯವಹಾರದಲ್ಲಿ ಅಥವಾ ಉಪದೇಶದಲ್ಲಿ ಗಭೀರ ಅರ್ಥವನ್ನು ಕಂಡು ನಾವು ವಿಸ್ಮಯಪಡಬೇಕು. ಅವತಾರ ಪುರುಷರಲ್ಲಿ ಪ್ರತಿಯೊಬ್ಬರ ವಿಷಯದಲ್ಲಿಯೂ ಹೀಗೆಯೇ ಎಂದನ್ನಬಹುದು. ಅವರ ಜೀವನಾಲೋಚನೆ ಮಾಡಿದರೆ ಇದನ್ನು ಸ್ಪಷ್ಟವಾಗಿ ತಿಳಿಯಬಹುದು. ಆಚಾರ್ಯ ಶಂಕರ ಮೊದಲಾದ ಒಬ್ಬೊಬ್ಬ ಮಹಾಪುರುಷರಿಗೆ ವಿಪಕ್ಷದವರ ಕುತರ್ಕ ಜಾಲವನ್ನು ತುಂಡುತುಂಡಾಗಿ ಕತ್ತರಿಸಿ ಧರ್ಮಸ್ಥಾಪನೆ ಮಾಡಬೇಕಾಯಿತು. ಇವರ ಮಾತನ್ನು ಬಿಟ್ಟುಬಿಟ್ಟರೆ, ಇತರ ಮಹಾಪುರುಷರ ಜೀವನಾಲೋಚನೆ ಮಾಡಿದರೆ ಅವರು ಸುಲಭ ಭಾಷಾಸರಣಿಯಿಂದ ಮರ್ಮಸ್ಪರ್ಶಿಯಾದ ಸಣ್ಣಸಣ್ಣ ಕಥೆ ಉಪಮೆ ಅಥವಾ ರೂಪಕ ಸಹಾಯದಿಂದ ಹೇಳುವುದನ್ನು ಹೇಳಿಯೂ ತಿಳಿಸಿಯೂ ಹೋಗಿದ್ದಾರೆಂದು ಕಾಣಬಹುದು. ಉದ್ದ ಉದ್ದ ಮಾತಿನ, ದೀರ್ಘ ದೀರ್ಘ ಸಮಾಸದ ಕಡೆಗೆ ಅವರು ಹೋಗಲೇ ಇಲ್ಲ. ಆದರೆ ಆ ಸುಲಭ ಮಾತಿನೊಳಗೆ, ಆ ಸಣ್ಣ ಉಪಮೆಯೊಳಗೆ ಎಷ್ಟು ಭಾವಗಳಿವೆ ಅಥವಾ ಸಾಮಾನ್ಯ ಮನುಷ್ಯನಿಗೆ ಉಚ್ಚ ಆದರ್ಶಕ್ಕೆ ತಲುಪಿಸುವ ಎಷ್ಟು ಶಕ್ತಿ ಇದೆ ಎಂದು ನಾವು ಸಾವಿರಾರು ವರ್ಷ ಪ್ರಯತ್ನ ಮಾಡಿದರೂ ಕೂಡ ಆ ಭಾವದ ಅಂತ್ಯವನ್ನು ಅಥವಾ ಆ ಶಕ್ತಿಯ ಮೇರೆಯನ್ನು ಈ ವರೆಗೂ ನಮಗೆ ತಿಳಿಯಲಿಕ್ಕಾಗಲಿಲ್ಲ. ಪ್ರಯತ್ನ ಮಾಡಿದಷ್ಟು ಉಚ್ಚ ಉಚ್ಚತರ ಭಾವಗಳನ್ನು ಕಾಣಬಹುದು. ಅದರ ವಿಮರ್ಶೆ ಮಾಡಿದಷ್ಟು ಮನಸ್ಸು 'ಅನಿತ್ಯ ಅಸುಖ' ಸಂಸಾರದ ರಾಜತ್ವವನ್ನು ಬಿಟ್ಟು, ಊರ್ಧ್ವ ಊರ್ಧ್ವತರ ಸ್ಥಾನಗಳಿಗೆ ಏರುತ್ತಿರುತ್ತದೆ. ಅಲ್ಲದೆ ಪರಮ ಪರಪ್ರಾಪ್ತಿ, ಬ್ರಾಹ್ಮೀ ಸ್ಥಿತಿ, ಮೋಕ್ಷ ಅಥವಾ ಭಗವದ್ದರ್ಶನದ ಕಡೆಗೆ (ಒಂದೇ ವಸ್ತುವನ್ನೇ ಬೇರೆ ಬೇರೆ ಭಾವಗಳಲ್ಲಿ ಕಂಡು ಮಹಾಪುರುಷರು ಈ ಎಲ್ಲ ಹೆಸರುಗಳಿಂದ ನಿರ್ದೇಶಿಸಿದ್ದಾರೆ) ಮುಂದುವರಿದಷ್ಟು ಆ ಸುಲಭ ಮಾತುಗಳ ಗಭೀರಭಾವವು ನಮಗೆ ಹೃದಯಂಗಮವಾಗುವುದು.

ಗಿರೀಶಚಂದ್ರರಿಗೆ ವಕಾಲತು ಕೊಡಲು ಹೇಳಿದ್ದು

ಇದೇ ನಿಯಮ—ಶ್ರೀ ಪರಮಹಂಸರ ಮಾತಿನ ಅಥವಾ ವ್ಯವಹಾರದ ವಿಷಯದಲ್ಲಿಯೂ ಕೂಡ ನಿಯಮದ ವ್ಯತಿಕ್ರಮ ಕಾಣುವುದಿಲ್ಲ. ಅವರ ಮಾತುಗಳು ನಾವು ಈ ಮೊದಲು ಯಾವ ಭಾವದಲ್ಲಿ ತಿಳಿಯುತ್ತಿದ್ದೆವೋ ಈಗ ಅವುಗಳಲ್ಲಿ ಇನ್ನೂ ಅಧಿಕತರ ಗಭೀರಭಾವವನ್ನು ನೋಡಬಹುದು. ದೃಷ್ಟಾಂತ ಸ್ವರೂಪವಾಗಿ ಇಲ್ಲಿ ಒಂದು ಮಾತು ಹೇಳಿದರೆ ಸಾಕು. ಗಿರೀಶಚಂದ್ರ ಘೋಷರು ಶ್ರೀ ಪರಮಹಂಸರ ಬಳಿಗೆ ಕೆಲವು ಸಲ ಬಂದುಹೋದ ನಂತರ ಒಂದು ದಿನ ಅವರಿಗೆ ಸರ್ವತೋಭಾವದಿಂದ ಆತ್ಮಸಮರ್ಪಣ ಮಾಡಿ 'ಈಗಿನಿಂದ ನಾನೇನು ಮಾಡಬೇಕು' ಎಂದು ಕೇಳಿದರು.

ಶ್ರೀ ಪರಮಹಂಸರು: 'ನೀನು ಮಾಡುತ್ತಿದ್ದನ್ನೇ ಮಾಡಿಕೊಂಡು ಹೋಗು. ಈಗ ಇತ್ತ ಕಡೆ (ಭಗವಾನ್) ಅತ್ತ ಕಡೆ (ಸಂಸಾರ) ಎರಡೂ ಕಡೆಗಳಲ್ಲಿ ದೃಷ್ಟಿ ಇಟ್ಟು ನಡೆ, ಅನಂತರ ಒಂದು ಕಡೆಯ ದೃಷ್ಟಿ ನಿಂತುಹೋದ ಬಳಿಕ ಆಗುವಂಥಾದ್ದು ಆಗುವುದು. ಆದರೆ ಪ್ರಾತಃಕಾಲ ಸಂಧ್ಯಾಕಾಲಕ್ಕೆ ದೇವರ ಸ್ಮರಣೆ ಮನನ ಮಾಡುತ್ತಾ ಇರು' ಎಂದು ಹೇಳಿ ಗಿರೀಶರ ಕಡೆಗೆ ಅವರ ಉತ್ತರ ನಿರೀಕ್ಷಣೆ ಮಾಡುವಂತೆ ನೋಡಿದರು.

(ಕ್ರಮಶಃ)

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿ

ಎಲ್ಲರೂ ಸ್ವಾವಲಂಬಿಗಳಾಗಬೇಕು

ಈಗ ಎಲ್ಲರಿಗೂ ಒಂದು ದೊಡ್ಡ ಆಪತ್ಕಾರಕ ಪ್ರಸಂಗ ಬಂದಿರುವುದು. ಇದರೊಳಗಿಂದ ಬದುಕಿ ಬಾಳುವಂತೆ ಮಾಡಿಕೊಳ್ಳುವುದು ಎಲ್ಲರ ಕರ್ತವ್ಯವಾಗಿದೆ. ಇದಕ್ಕೆ ಒಂದೇ ಒಂದು ಉಪಾಯವೆಂದರೆ ಸ್ವಾವಲಂಬನವು. ಈಗಿನ ನಮ್ಮ ಜೀವಿತವು ಕೇವಲ ಪರಾವಲಂಬಿಯಾಗಿರುವದು. ಅದರಲ್ಲಿ ಬಹುಭಾಗವು ಯಂತ್ರಗಳನ್ನು ಅವಲಂಬಿಸಿದೆ. ಆದರೆ ಯಂತ್ರಗಳಿಗೆ ಅವಶ್ಯ ಬೇಕಾಗುವ ಸಾಮಗ್ರಿಗಳ ಅಭಾವದ ಮೂಲಕ ಅವು ಬಂದುಬೀಳುವ ಸಂಭವ ಬಹಳವಿರುತ್ತದೆ. ಮೋಟರ್, ರೈಲುಗಾಡಿ, ಗಿರಣಿ ಇತ್ಯಾದಿಗಳು ಜನತೆಗೆ ಇಲ್ಲದಂತಾಗಬಹುದು. ಆದ್ದರಿಂದ ಜನರು ತಮಗೆ ಅತ್ಯವಶ್ಯವಾದ ಆಹಾರಸಾಮಗ್ರಿ ಹಾಗು ಅರಿವೆಗಳನ್ನು ಒದಗಿಸಿಟ್ಟುಕೊಳ್ಳುವಂತೆ ಮಾಡುವದು ಈಗಿನ ಮಹತ್ವದ ಕರ್ತವ್ಯವಾಗಿದೆ. ಮತ್ತು ಮುಂದಾದರೂ ಆಹಾರ ಸಾಮಗ್ರಿಯನ್ನೇ ಬೆಳೆಯುವಂತೆ ಮಾಡಬೇಕು ಮತ್ತು ತಮಗೆ ಜೀವನಾಂಶಕ್ಕೆ ಅವಶ್ಯವಿರುವ ಇತರ, ವಸ್ತುಗಳನ್ನು ತಾವೇ ಮಾಡಿಕೊಳ್ಳಬೇಕು.

ಆಹಾರಸಾಮಗ್ರಿಗಳ ತರುವಾಗಿ ಜನತೆಗೆ ಇನ್ನೊಂದು ಅತ್ಯಾವಶ್ಯಕವೆಂದರೆ ಬಟ್ಟೆಗಳು. ಆ ಅರಿವೆ ಅಂಚಡಿಗಳನ್ನು ತಾವೇ ಮಾಡಿಕೊಳ್ಳುವದಕ್ಕಾಗಿ ಹತ್ತಿಯನ್ನು ಸಂಗ್ರಹಿಸಬೇಕು. ಸಂಗ್ರಹವಿದ್ದವರು ಹೊರಗೆ ಮಾರುವದನ್ನು ಕಡಿಮೆಮಾಡಬೇಕು. ನಿದಾನ ತಮ್ಮ ಮನೆ ಮಂದಿಗೆಲ್ಲ ಅರಿವೆಯಾಗುವಷ್ಟು, ಹತ್ತಿಯನ್ನು ಕಾಯ್ದುಕೊಳ್ಳಲೇ ಬೇಕು. ಒಬ್ಬನಿಗೆ ವರುಷದ ಅರಿವೆಗೆ ಕನಿಷ್ಟ ಒಂದು ಮಣ (೩೮ ರಾತಲು) ಹತ್ತಿಯು ಹತ್ತುವದು ಮತ್ತು ನಿತ್ಯ ಒಬ್ಬರು ಐದು ತಾಸು ನೂತರೆ ಹತ್ತು ತಿಂಗಳಿಗೆ ವರುಷದ ಅರಿವೆ ಆಗುವದು. ಹತ್ತಿ ಅರೆಯುವದು, ಹಂಜೀ ಮಾಡುವದು, ನೇಯುವದು— ಇವು ಸ್ವಲ್ಪ ವೇಳೆಯ ಕೆಲಸಗಳು.

ಈಗ ನಡೆದಿರುವ ಕ್ರಮವು ನಿಲ್ಲಬೇಕು— ಅತಿಶಯ ಅಗ್ಗಕ್ಕೆ ಹತ್ತಿ ಮಾರಿ ಅತಿಶಯ ತುಟ್ಟಿಯಾಗಿ ಅರಿವೆ ತರುವದನ್ನು ಬಿಡಬೇಕು—ಹತ್ತಿ ಅರೆಯುವ, ಹಂಜೀ ಮಾಡುವ, ನೂಲುವ, ನೇಯುವ, ಅಹ್ಲಾದಕಾರಕ ಹಾಗು ಲಾಭದಾಯಕ ಉದ್ಯೋಗಗಳು ಹಳ್ಳಿಗಳಲ್ಲಿ ನಡೆಯಬೇಕು. ಅದಲ್ಲದೆ ಇತರ ಅವಶ್ಯಕವಾದ ಪದಾರ್ಥಗಳು ಆಯಾ ಸ್ಥಳಗಳಲ್ಲಿಯೇ ದೊರೆಯುವಂತೆ ಮಾಡಬೇಕು.

ಈಗ ಮುಗ್ಗೇದಿಗೆ ಬಂದಿರುವ ಎತ್ತಿನ ಗಾಣ ಕೈಗಾಣಗಳ ಜೋಡಣೆ ಮಾಡಿಕೊಂಡು, ಕುಸಿಬಿ, ತೆಂಗು, ಔಡಲ ಇತ್ಯಾದಿಗಳ ಎಣ್ಣೆಯನ್ನು ತೆಗೆಯುವದಕ್ಕೆ ತೊಡಗಬೇಕು. ಈ ಹೊಳೆಯುತ್ತಿರುವ ವಿದ್ಯುದ್ದೀಪಗಳು ಕೂಡ ಬಂದಾಗಬಹುದಲ್ಲದೆ ಚಿಮಣೀ ಎಣ್ಣೆಯು ಸಿಗುವದು ದುರ್ಲಭವಾಗಬಹುದು. ಅದಕ್ಕಾಗಿ ಪ್ರಣತಿ, ಸಮೆ, ದೀವಟಿಗೆಗಳನ್ನು ಬಳಕೆಯಲ್ಲಿ ತರಬೇಕಾಗುವದು. ಇದಲ್ಲದೆ ಇತ್ತಿತ್ತ ಅನೇಕರು ಮೂಲೆಗೆ ಒಗೆದ ಬೀಸುವ ಕಲ್ಲುಗಳನ್ನು ಹೊರತೆಗೆದು ಎಲ್ಲರೂ ಮನೆಯಲ್ಲಿ ಬೀಸಲಿಕ್ಕೆ ಆರಂಭಿಸಬೇಕು. ಮತ್ತು ಅಲ್ಲಲ್ಲಿಗೆ ಬಳೆಯ ಭಟ್ಟಿಗಳು ನಡೆಯುವಂತಾಗಿ ಅವನ್ನೇ ಉಪಯೋಗಿಸಬೇಕು. ಒಟ್ಟು ಹೇಳುವದೆಂದರೆ ಮಹಾತ್ಮರು ಹೇಳುವಂತೆ ಸ್ವಾವಲಂಬಿಗಳಾಗದ ವಿನಾ ಗತ್ಯಂತರವಿಲ್ಲ. ಪ್ರತಿಯೊಬ್ಬನು ಸ್ವತಃ ಶೂರನಾಗುವದು ಕ್ಷೇಮಕರವಾಗಿದೆ.

ಈ ಮೊದಲು ಯಾಂತ್ರಿಕ ಸಾಮಗ್ರಿಗಳಲ್ಲಿ ಮುನ್ನಡೆಯನ್ನಿಟ್ಟಿದ್ದ ಚೀನಾ ದೇಶದಲ್ಲಿ ಕೂಡಾ ಇಂದು ಯಂತ್ರಗಳು ನಾಶವಾದ ಮೂಲಕ ಅದಕ್ಕೆ ಸಂಪೂರ್ಣ ಸ್ವಾವಲಂಬಿಯಾಗುವ ಸಂದರ್ಭ ಬಂದಿದೆ. ಈ ತತ್ವವು ಅಲ್ಲಿ ಸಂಪೂರ್ಣ ಯಶಸ್ವಿಯಾಗಿದೆ. ನಮ್ಮ ದೇಶ ಹಾಗು ಚೀನದೇಶದಲ್ಲಿ ವಿಶೇಷ ವ್ಯತ್ಯಾಸವಿರುವದಿಲ್ಲ. ಕಾರಣ ಎಲ್ಲರೂ ಸ್ವಾವಲಂಬನ ಕಾರ್ಯದಲ್ಲಿ ತತ್ಪರರಾಗತಕ್ಕದ್ದು.

ಈ ಸಂದರ್ಭದಲ್ಲಿ ಎನಾದರೂ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಸಾಧ್ಯವಿದ್ದಷ್ಟು ಪೂರೈಸಲು ಸಿದ್ಧರಿರುವೆವು. ಎಲ್ಲಿಯೇ ಆಗಲಿ ೨೦–೩೦ರಷ್ಟಾದರೂ ಕೆಲಸಗಾರರು ಕೂಡಿದರೆ ಅವರಿಗೆ ಅವಶ್ಯವಿರುವ ಶಿಕ್ಷಣ ಕೊಡಲಿಕ್ಕೆ ಶಿಕ್ಷಕರನ್ನು ಕಳಿಸಿಕೊಡುವ ಏರ್ಪಾಟು ಮಾಡುವೆವು. ಇದರ ಸಂಪೂರ್ಣ ಲಾಭವನ್ನು ಕರ್ನಾಟಕದ ಜನತೆಯು ಪಡೆಯಬೇಕೆಂದು ಕ. ಪ್ರಾ. ಕಾಂಗ್ರೆಸ್ ಕಮಿಟಿ ಗೌ। ಕಾರ್ಯದರ್ಶಿಗಳು ಈ ಮೂಲಕ ಬಿನ್ನವಿಸುತಾರೆ.

ಈ ಹೊತ್ತು ನಿಮ್ಮ ಹಲ್ಲುಗಳನ್ನು ಮ್ಯಾಕ್ಲಿನ್ ಮಾಡಿದಿರಾ?

ಆಹಾ! ಅಂದವಾದ ಹಲ್ಲುಗಳನ್ನು ಹೊಂದುವುದು ಹೇಗೆ ಎನ್ನುವುದು ನಿಮಗೆ ತಿಳಿದಿದೆ.

ಹೌದು ಹಲ್ಲುಗಳು ಕಾಂತಿಯುತವಾಗಿರುವುದಕ್ಕೆ ಮ್ಯಾಕ್ಲೀನ್ ಟೂತ್ ಪೇಸ್ಟನ್ನೇ ಉಪಯೋಗಿಸಬೇಕು. ಯಾಕೆಂದರೆ ಅದು ಜಾಗ್ರತೆಯಾಗಿ ಕಲೆಗಳನ್ನು ತೆಗೆದುಹಾಕಿ ಹಲ್ಲುಗಳನ್ನು ಬೆಳ್ಳಗೂ ಥಳಥಳ ಹೊಳೆಯುವಂತೆಯೂ ಮಾಡುತ್ತದೆ. ನೀವೂ ಆರೋಗ್ಯಯುತವಾದ ಮತ್ತು ಅಂದವಾದ ಹಲ್ಲುಗಳನ್ನು ಮ್ಯಾಕ್ಲೀನ್ ಉಪಯೋಗಿಸುವುದರಿಂದ ಹೊಂದಬಹುದು.



"ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

27—3—1942] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೨೭—೩—೧೯೪೨]

ಸಮರಭೂಮಿಯ ಸಂಚಾರ

ಬರ್ಮಾದ ಅವಸ್ಥೆಯೇನಾಯಿತೆಂಬುದು ಸ್ಪಷ್ಟವಾಗಿ ಇನ್ನೂ ತಿಳಿದುಬಂದಿಲ್ಲ. ಆ ಕಡೆಯಿಂದ ಸರಿಯಾದ ಸುದ್ದಿಗಳೇ ಇತ್ತೀಚೆಗೆ ಬರುವುದಿಲ್ಲ. ಫೆಬ್ರವರಿ ಇಪ್ಪತ್ತನೇ ತಾರೀಕಿಗೆ ರಂಗೂನನ್ನು ಬಿಟ್ಟು ಹೋಗುವ ಆಜ್ಞೆ ಹೊರಡಿಸಲಾಗಿತ್ತು. ರಾಜಧಾನಿಯಾದ ರಂಗೂನ್ ಶತ್ರುವಶವಾದರೂ, ಬರ್ಮಾ ಸರಕಾರವು ಒಂದು ಅಜ್ಞಾತ ಸ್ಥಳದಲ್ಲಿ ಅಡಗಿದ್ದು ಅಲ್ಲಿಂದ ಕಾರಭಾರ ನಡೆಸುತ್ತದೆಯೆಂದು ಸುದ್ದಿ ಕೊಡಲಾಗಿದೆ. ಅಂತೂ ಬರ್ಮಾದಲ್ಲಿ ಅರ್ಧಕ್ಕಿಂತ ಹೆಚ್ಚಿನ ಭಾಗವನ್ನು ಜಪಾನೀಯರು ಕೈವಶಪಡಿಸಿಕೊಂಡಿದ್ದು, ಮತ್ತೂ ಮುನ್ನುಗ್ಗುತ್ತಿದ್ದಂತೆ ಬ್ರಿಟಿಷರು ಹಿಂಜರಿಯುತ್ತಿದ್ದಾರೆಂದು ತಿಳಿದುಕೊಳ್ಳಬಹುದು. ರಂಗೂನ್—ಮಂಡಲೆ ಮಾರ್ಗ ತುಂಡರಿಸಲ್ಪಟ್ಟಿದ್ದು, ದಕ್ಷಿಣ ಬರ್ಮಾವು ಜಪಾನೀಯರ ಹಿಡಿತಕ್ಕೆ ಹೋಗಿದೆ. ಉತ್ತರ ಬರ್ಮಾಕ್ಕೂ ಅದೇ ಭೀತಿ ಬಲವಾಗಿದೆ. ಚೀನಿಯರು ಜಪಾನಿಯರಿಗೆ ನೆಟ್ಟಿನ ಪ್ರತಿಭಟನೆ ಕೊಡುತ್ತಿದ್ದಾರೆ. ಅದು ಎಷ್ಟರ ಮಟ್ಟಿಗೆ ಫಲಕಾರಿಯಾಗುವುದೋ ನೋಡಬೇಕಾಗಿದೆ.

ಜಪಾನೀಯರ ಮುಂದಿನ ಧೋರಣವು ಈಗಾಗಲೇ ನಿಶ್ಚಿತವಾದಂತೆ ತೋರುತ್ತದೆ. ಆಸ್ಟ್ರೇಲಿಯಕ್ಕೆ ಅವರ ಆಕ್ರಮಣ ಕಾರ್ಯವು ಅಲ್ಲಲ್ಲಿ ಇಷ್ಟಿಷ್ಟು ಆರಂಭವಾಗಿದೆ. ಜಪಾನು ಆಸ್ಟ್ರೇಲಿಯದ ಮೇಲೆ ಬಿದ್ದು ಆ ಬಳಿಕ ಭಾರತವನ್ನು ಮುತ್ತುವರು ಎಂಬುದಾಗಿ ಈಗ ಒಂದು ಊಹೆಯುಂಟು. ಏಕೆಂದರೆ ಕಳೆದ ನಾಲ್ಕೈದು ವರ್ಷಗಳಿಂದ ಚೀನದೊಡನೆ ಯುದ್ಧ ಸಾಗಿಸಿ ಯಾವುದೇ ಇತ್ಯರ್ಥಕ್ಕೆ ಜಪಾನು ಬರದೇ ಇರುವಾಗ, ಇತ್ತ ಜಪಾನಿನ ಸನ್ನಿಹಿತ ಶತ್ರುವಾದ ರಶ್ಯವೂ ವಿರೋಧ ಪಕ್ಷದಲ್ಲೇ ಇರುವಾಗ, ಚೀನ ರಶ್ಯಗಳೆರಡನ್ನೂ ಹಾಗೆಯೇ ಬಿಟ್ಟು ಅದು ಈ ಕಡೆಯಲ್ಲಿ ಹಲಗಾಲ ಯುದ್ಧ ನಡೆಸುವಂತಿಲ್ಲ. ಯಾವುದೇ ಹೊತ್ತಿನಲ್ಲಾದರೂ ಜಪಾನು ಚೀನ ರಶ್ಯಗಳ ಹೊಡೆತವನ್ನು ಹಾರೈಸಬಹುದು. ಆದಾಗಿ ಈಗ ಆಸ್ಟ್ರೇಲಿಯವನ್ನು ಮೊದಲು ಆಕ್ರಮಿಸಲು ಮನನಮಾಡಿದಂತಿದೆ; ಆಸ್ಟ್ರೇಲಿಯವನ್ನು ಸ್ವಾಧೀನಪಡಿಸಿದರೆ ಮತ್ತೆ ಹಿಂದೂದೇಶವನ್ನು ಆಕ್ರಮಿಸಲು ಸುಲಭವಾದಂತೆ ಆಯಿತು. ಆಸ್ಟ್ರೇಲಿಯವನ್ನು ಜಪಾನು ಲಕ್ಷಿಸದೆ ಭಾರತದತ್ತ ಬಂದರೆ ಅಮೆರಿಕವು ಅಲ್ಲಿ ಸೈನ್ಯ ಸಂಗ್ರಹ ಮಾಡಿ, ಪೆಸಿಫಿಕ್ಕಿನಲ್ಲಿ ಜಪಾನಿನ ಪ್ರಭುತ್ವಕ್ಕೆ ಪ್ರಬಲ ಆತಂಕವುಂಟು ಮಾಡದಿರಲಾರರು. ಈಗಾಗಲೇ ಅಮೆರಿಕದ ಸೈನ್ಯ ಆಸ್ಟ್ರೇಲಿಯಕ್ಕೆ ಬಂದಿರುವುದೆಂದೂ ಸುದ್ದಿ. ಆಸ್ಟ್ರೇಲಿಯದ ಮೇಲೆ ನ್ಯೂಗಿನಿ ದ್ವೀಪದಿಂದ ಜಪಾನೀಯರ ಆಕ್ರಮಣವು ಆರಂಭವಾಗಿದೆ. ಫಿಲಿಪ್ಪೈನಿನಲ್ಲಿ ಯುದ್ಧ ನಡೆಸಿದ ಜನರಲ್ ಮೆಕಾರ್ಥರನ್ನು ನೈಋತ್ಯ ಶಾಂತಸಾಗರದ ಸರ್ವ ಸೇನಾಪತಿಯನ್ನಾಗಿ ಮಾಡಿ, ಈಗ ಆಸ್ಟ್ರೇಲಿಯಕ್ಕೆ ಕಳುಹಿಸಲಾಗಿದೆ. ಫಿಲಿಪ್ಪೈನನ್ನು ಜಪಾನರಿಂದ ಪುನಃ ಸ್ವಾಧೀನಪಡಿಸಲು, ಅಮೆರಿಕವು ಬೇಗನೇ ಜೋರಾಗಿ ಬಂದು ಯುದ್ಧ ಹೂಡುವುದೆಂದು ಸೇನಾಪತಿ ಮೆಕಾರ್ಥರು ಹೇಳಿದ್ದಾರೆ. ಆಸ್ಟ್ರೇಲಿಯಕ್ಕೆ ಆದರೆ ಸಲುವಾಗಿಯೇ ರೂಸ್‌ವೆಲ್ಟರು ಮೆಕಾರ್ಥರನ್ನು ಕಳುಹಿಸಿರಬಹುದೆಂದು ಊಹಿಸಲಾಗಿದೆ. ಆಸ್ಟ್ರೇಲಿಯದ ಮುಖ್ಯ ಮಂತ್ರಿ ಕರ್ಟಿನರೂ ಫಿಲಿಪ್ಪೈನ್ ಸ್ವಾತಂತ್ರ್ಯದ ವಿಷಯ ಸಹಸಂತಾಪಪಡುತ್ತಾರೆ. ಇದರಿಂದೆಲ್ಲಾ ಜಪಾನು ಆಸ್ಟ್ರೇಲಿಯವನ್ನು ಮುಂದಿನ ತನ್ನ ಬಲಿಯಾಗಿ ಮಾಡಲು ಆಗ್ರಹಪಡಬಹುದೆಂದು ಊಹಿಸಲು ಸಾಕಷ್ಟು ಅವಕಾಶವಾಗಿದೆ. ಮುಂದಿನ ಒಂದೆರಡು ವಾರಗಳಲ್ಲಿ ಆಸ್ಟ್ರೇಲಿಯದ ಪರಿಸ್ಥಿತಿ ವಿಶದವಾಗುವುದು.

ಅಂತೂ ಕೊನೆಗೆ ಜಾವಾದ ಯುದ್ಧ ಮುಗಿಯಿತು. ಯುದ್ಧಸಾಮಗ್ರಿಗಳಿರಲಿಲ್ಲವೆಂದೂ, ಪರಿಸ್ಥಿತಿ ಅನುಕೂಲವಿರಲಿಲ್ಲವೆಂದೂ ಹೇಳಿ ಮಿತ್ರಪಕ್ಷದವರು ಜಾವವನ್ನು ಕೈಬಿಟ್ಟರು. ಪಾಪ! ಡಚ್ಚರು ವೀರಾವೇಶದಿಂದ ಹೋರಾಡಿದರೂ, ಹೋರಾಡಿ ಅಪಾರ ಹಾನಿಗೀಡಾದರಲ್ಲದೆ ಜಾವವನ್ನು ಉಳಿಸಿಕೊಳ್ಳುವುದಾಗಲಿಲ್ಲ. ಅಂತೂ ಸ್ವಾತಂತ್ರ್ಯಕ್ಕಾಗಿ ಡಚ್ಚರು ಮಾಡಿದ ಸ್ವಾರ್ಥತ್ಯಾಗ, ಹೋರಾಟ, ತೋರಿಸಿದ ಅತುಳ ಧೈರ್ಯಗಳಿಗಾಗಿ ಯಾರಾದರೂ ತಲೆದೂಗಲೇಬೇಕು. ಜಾವಾದ ಯುದ್ಧದಲ್ಲಿ ಜಪಾನರಿಗಾದ ಹಾನಿ, ಅದರಲ್ಲೂ ನೌಕಾ ನಷ್ಟವು ಬಹಳ ಗಣನೀಯವಿದೆ. ಮುಂದಿನ ಜಪಾನೀ ಆಕ್ರಮಣವು ಮಡಗಾಸ್ಕರಿನ ಮೇಲೆ ಆದರೂ ಆಗಬಹುದೆಂದು ಕೆಲವರು ಊಹಿಸುತ್ತಾರೆ. ಅತ್ತ ಲಿಬಿಯದಿಂದಲೂ ಇತ್ತೀಚೆಗೆ ಸುದ್ದಿಯಿಲ್ಲ. ಯುದ್ಧಕ್ಷೇತ್ರವು ಅಲ್ಲಿ ಶಾಂತವಿದೆಯೆಂದು ತೋರುತ್ತದೆ. ಇದುವರೆಗೆ ಹವೆ ಚೆನ್ನಾಗಿರಲಿಲ್ಲವೆಂದೂ, ಈಗ ಸುಧಾರಿಸಿದೆಯೆಂದೂ ತಿಳಿದಿದೆ. ಅಂತೂ ಇನ್ನೂ ಉಗ್ರ ಹೋರಾಟವನ್ನು ಹಾರೈಸಬಹುದು. ಸೇನಾಪತಿ ರೊಮೆಲನು ಬರ್ಲಿನಿಗೆ, ಹಿಟ್ಲರನೊಡನೆ ವಿಚಾರಮಾಡುತ್ತಿರುವನೆಂದು ಪ್ರಕಟವಾಗಿದೆ. ಮುಂದಿನ ವಸಂತಕಾಲದ ಆಕ್ರಮಣದ ವಿಷಯ ವಿಚಾರ ವಿನಿಮಯವಿರಬೇಕು.

ಈಗ ಬೇಸಿಗೆ ಬಂದಿದೆ, ಬೇಸಿಗೆಯೆಂದರೆ ಯುದ್ಧದ ಬಿಸಿ ಹೆಚ್ಚುವ ಕಾಲವೆಂಬುದನ್ನು ನಾವು ಬಹುಕಾಲದಿಂದ ಪತ್ರಿಕೆಗಳಲ್ಲಿ ಓದುತ್ತಿದ್ದೇವೆ. ಹಿಟ್ಲರನು ವಸಂತಕಾಲದಲ್ಲಿ ಮಹಾಯೋಜನೆಯೊಂದನ್ನು ಮಾಡಿರುವನೆಂದು ಬಹು ಹಿಂದೆಯೇ ಪ್ರಸಿದ್ಧವಾಗಿದೆ. ಮೊನ್ನೆ ಮೊನ್ನೆ ಹಿಟ್ಲರ್ ಮಾಡಿದ ಭಾಷಣದಲ್ಲಿಯೂ ರಶ್ಯನರಿಗೆ ಬೇಸಿಗೆಕಾಲದಲ್ಲಿ ಬುದ್ಧಿ ಕಲಿಸುತ್ತೇನೆ ಎಂದು ಗದರಿಸಿದ್ದನು. ಬೇಸಿಗೆಕಾಲದಲ್ಲಿ ಹಿಟ್ಲರನು ಅಂತಹ ಪ್ರಚಂಡ ಯುದ್ಧ ಮಾಡುವನಾದರೆ, ಮಿತ್ರಪಕ್ಷದವರು ಅದನ್ನು ಎದುರಿಸಲೂ ಸಿದ್ಧರೇ ಆಗಿದ್ದಾರೆ. ಅಮೆರಿಕವು ಈಗ ಒಂದೇ ಸಮನೆ ಲಕ್ಷಾಂತರ ವಿಮಾನಗಳನ್ನೂ, ಇತರ ಅನೇಕ ಬಗೆಯ ಯುದ್ಧ ಸಾಮಗ್ರಿಗಳನ್ನೂ ತಯಾರಿಸುತ್ತದೆ. ಮುಂದಿನ ಯುದ್ಧದಲ್ಲಿ ತುರ್ಕಿಸ್ಥಾನಕ್ಕೂ ಗಂಡಾಂತರ ತಪ್ಪದೆಂದು ಊಹಿಸಬೇಕಾಗಿದೆ. ಮೊನ್ನೆ ಮೊನ್ನೆ ತುರ್ಕಿಸ್ಥಾನದ ಒಂದು ಪಟ್ಟಣದ ಮೇಲೆ ಆಕಸ್ಮಿಕ ಬಾಂಬು ಬಿತ್ತು, ಅದು ಜರ್ಮನರದೇ ಎಂದು ಹಲವರು ಭೀತಿಗೊಂಡರು, ಕಡೆಗೆ ಬ್ರಿಟಿಷ್ ವಿಮಾನಗಳೇ ಹಾರಿಬಂದು ಪ್ರಮಾದವಶಾತ್ ಅಲ್ಲಿಗೆ ಬಾಂಬು ಬಿದ್ದಿತೆಂದೂ ಈಗ ಹೇಳಲಾಗಿದೆ. ರಶ್ಯನ್ ರಣಭೂಮಿಗೆ ಹಿಟ್ಲರ್ ಹೊಸ ಸೇನಾಪತಿಗಳನ್ನು ಕಳುಹಿಸುವನಂತೆ. ಅಂತೂ ಮುಂದಿನ ಒಂದೆರಡು ತಿಂಗಳಲ್ಲಿ ಎಲ್ಲಾ ಕಡೆಯಲ್ಲಿಯೂ ಭಯಂಕರ ಯುದ್ಧಜ್ವಾಲೆ ಜ್ವಲಿಸುವುದಾಗಿ ಊಹಿಸಬಹುದು.

ಹಿಂದೂದೇಶದ ರಾಜಕೀಯ ಕ್ಷೇತ್ರದಲ್ಲಿ ಈ ವಾರ ಕೋಲಾಹಲವುಂಟಾಗಿದೆ. ಬ್ರಿಟಿಷ್ ರಾಯಭಾರಿ ಸರ್ ಕ್ರಿಪ್ಸರು ಭಾರತಕ್ಕೆ ಬಂದಿಳಿದಿದ್ದಾರೆ. ಅವರು ಬೇಗನೇ ಸಕಲ ಪಕ್ಷದ ಮುಖಂಡರನ್ನೂ ಕಂಡು ಅವರೊಡನೆ ವಿಚಾರವಿನಿಮಯ ಮಾಡಲಿರುವರು. ಕಾಂಗ್ರೆಸಿನ ಪರವಾಗಿ ರಾಷ್ಟ್ರಪತಿ ಆಜಾದರು ಕ್ರಿಪ್ಸರ ಭೇಟಿಯನ್ನು ಮೊದಲಾಗಿ ತೆಗೆದುಕೊಳ್ಳುವರೆಂದು ನಿಶ್ಚಯವಾಗಿದೆ. ಗಾಂಧೀಜಿಯನ್ನು ತಾವು ಭೇಟಿಯಾಗುವುದಾಗಿ ಕ್ರಿಪ್ಸರು ತಿಳಿಸಿದ್ದಾರೆ. ರಾಜಾಜಿ ಮತ್ತು ನೆಹರೂಗಳು ಕ್ರಿಪ್ಸರನ್ನು ಕಾಣಬಹುದೆಂದು ನಂಬಲಾಗಿದೆ. ಜಿನ್ನರ ಅವಸ್ಥೆ ಸ್ವಲ್ಪ ವಿಚಿತ್ರವಾಗಿದೆ. ಕ್ರಿಪ್ಸರ ಸೂಚನೆಗಳು ತನಗೆ ಮೊದಲಾಗಿ ಸಿಗಬೇಕೆಂದು ಅವರು ಹೇಳಿದ್ದಾರೆ. ಅತ್ತ ಸರ್ ಸಿಕಂದರರು ಮುಸ್ಲಿಂ ಲೀಗಿಗೆ ರಾಜೀನಾಮೆ ಕೊಡುವ ಸುದ್ದಿಯೊಂದು ಹರಡಿದೆ. ಭಕ್ಷಿಹಕ್ಕರಂತೂ ಜಿನ್ನರ ಮುಂದಾಳುತನವನ್ನು ಅಲ್ಲಗಳೆದು ಚರ್ಚಿಲರಿಗೆ ಹಿಂದೆಯೇ ತಂತಿ ಕಳುಹಿಸಿದ್ದಾರೆ. ಮೋಮಿನ್ ಪರಿಷತ್ತಿನವರೂ ಜಿನ್ನರು ಹಾಗೂ ಮುಸ್ಲಿಂ ಲೀಗು ಮುಸ್ಲಿಂ ಪ್ರತಿನಿಧಿಗಳಲ್ಲವೆಂದು ಸಾರಿದ್ದಾರೆ. ಸರ್ ಸಿಕಂದರರು ಕಾಂಗ್ರೆಸು ಮತ್ತು ಲೀಗುಗಳೊಳಗೆ ಸಂಧಾನ ಪ್ರಯತ್ನ ಮಾಡುತ್ತಿರುವರೆಂದೂ ಸುದ್ದಿ. ಏಕೆಂದರೆ ಸರ್ ಕ್ರಿಪ್ಸರು ಬಂದಾಗ ಇಲ್ಲಿ ಎಲ್ಲಾ ಜಾತಿಯವರೂ ಒಕ್ಕಟ್ಟಾಗಿ ಒಂದು ಸಂಯುಕ್ತ ಸೂಚನೆ ಅವರ ಮುಂದಿಡಬಹುದೆಂದು ಅವರ ಉದ್ದೇಶವೇನೋ ಅಮೂಲ್ಯವಾದುದು. ಇಷ್ಟರಲ್ಲಿಯೇ ಇವರು ಅಜಾದರನ್ನು ಭೇಟಿಯಾಗಿದ್ದಾರೆ. ಮುಸ್ಲಿಮರೂ ಐಕ್ಯಗೊಂಡು ದೇಶದ ಸ್ವಾತಂತ್ರ್ಯ ಪಡೆಯಬೇಕೆಂದು ಅಜಾದರೂ ಒಂದು ವಿನಂತಿ ಮಾಡಿದ್ದಾರೆ. ಜಿನ್ನರ ಪಾಕಿಸ್ಥಾನವನ್ನು ಎಲ್ಲರೂ ಮೂಲೆಗೊತ್ತಿದಂತೆ ಕಂಡುಬರುತ್ತದೆ. ಈ ಸಂದರ್ಭ ಸಾವರ್ಕರರೂ ಸುಮ್ಮಗಿಲ್ಲ. ಕಾಂಗ್ರೆಸ್ ಮತ್ತು ಲೀಗುಗಳು ಒಪ್ಪಂದಮಾಡಿಕೊಳ್ಳುವುದರಲ್ಲಿ ಹಿಂದುಗಳ ಹಕ್ಕಿಗೆ ಆತಂಕವಾಗುವುದಾದರೆ ಅದನ್ನು ತಾವು ಎದುರಿಸುವೆವೆಂದು ಅವರು ಬೊಬ್ಬಿಡುತ್ತಾರೆ. ಸಂಕೋಚಮನಸ್ಸಿನ ಜಾತೀಯತೆಯ ಬುದ್ಧಿಗೆ ಎಷ್ಟರ ಮಟ್ಟಿಗೆ ದೇಶದ ಬೆಂಬಲ ಸಿಗುವುದೋ ನಂಬಲಾಗುವುದಿಲ್ಲ. ಅಂತೂ ಕ್ರಿಪ್ಸರ ಸಂಧಾನದ ವಿಷಯವಾಗಿ ಈಗ ಎಲ್ಲರಲ್ಲಿಯೂ ಹುರುಪು ಹುಟ್ಟಿದೆ.

ನೀವು ಮಿತವ್ಯಯ ಮಾಡಬೇಕಾದರೆ ಮೊದಲು ನಿಮ್ಮ ಹಣವನ್ನು ಜಾಗರೂಕತೆಯಿಂದಿಡಿರಿ!

Safety first!



ಸೆಕುಂಡಸ

ನಗ, ರಕ್ಟೇಂಗುಲರ್ ನಿ ಕಿಲರ್ ರೂ 44
ಪೇಟೆಂಟ್ ಎವರ್‌ಬ್ರೈಟ್ ಸ್ಟೀಲ್ ರೂ 52
ರೋಲ್ಡ್ ಗೋಲ್ಡ್ ರೂ 58
18 ಕ್ಯಾರೆಟ್ ಗೋಲ್ಡ್ ರೂ. 132

ಸೆಕುಂಡಸ್ ನ್ಯೂ ಕೆಲಿಬರ ಕರ್ವ್ಡ್
ಪೇಟೆಂಟ್ ಎವರ್ ಬ್ರೈಟ್ ಸ್ಟೀಲ್ ರೂ. 54
ರೋಲ್ಡ್‌ಗೋಲ್ಡ್ ರೂ 63
9 ಕ್ಯಾರೆಟ್ ಗಟ್ಟಿಗೋಲ್ಡ್ ರೂ 110

ವಾಚಿನ ಉದ್ದೇಶಕ್ಕಿಂತಲೂ ಕ್ರಯವೇ ಮುಖ್ಯವಲ್ಲ. ಎಷ್ಟೇ ಕ್ರಯ ಕೊಟ್ಟರೂ, ವಿಶ್ವಾಸಾರ್ಹವಲ್ಲದ ಮಟ್ಟಿಗೆ ಕೊಳ್ಳುದನ್ನು ಸೀರಿಗೆ ಹಾಕಿದಂತೆ. ನಿಮಗೆ ಮಿತವ್ಯಯ ಮಾಡಬೇಕೆಂದಿದ್ದರೆ, ವೆಸ್ಟ್ ಎಂಡ್ 'ಸೆಕುಂಡಸ್' ವಾಚನ್ನು ಕೊಂಡುಕೊಳ್ಳಿರಿ. ಸಮಯ ಸರಿಯಾಗಿ ಕೊಡುವುದೆಂದೂ ಕಡಿಮೆ ಕ್ರಯದ್ದೆಂದೂ ಇದು ಪ್ರಸಿದ್ಧವಾಗಿದೆ. ಆದರಿಂದ ನಿಮ್ಮ ಹಣವೂ ಭದ್ರವಾಗಿರತ್ತದೆ. ನಿಮಗೆ ಪ್ರತಿಫಲವೂ ದೊರಕುತ್ತದೆ. ನಿಮಗೆ ಬೇಕಾದ ಸೆಕುಂಡಸನ್ನು ನಮ್ಮ ಚಿತ್ರಿತ ಧರ್ಮಾರ್ಥ ಕೆಟಲಾಗನ್ನು ನೋಡಿ ಆರಿಸಿರಿ.

buy WEST END "SECUNDUS"
'Economy Series Watches

ವೆಸ್ಟ್ ಎಂಡ್ ವಾಚ್ ಕಂಪೆನಿ, ಬೊಂಬಾಯಿ ಮತ್ತು ಕಲ್ಕತ್ತಾ

WEST END WATCH Co
BOMBAY CALCUTTA

ಸ್ವದೇಶಾಭಿಮಾನಿ

ತಾರೀಕು 27—8—1942

ಕ್ರಿಪ್ಸರು ಹೇಳುತ್ತಾರೆ:

'ಬ್ರಿಟಿಷ್ ಮಂತ್ರಿಮಂಡಳದವರು ಹಿಂದುಸ್ಥಾನದ ಭವಿತವ್ಯದ ಕುರಿತು ಒಮ್ಮತದಿಂದ ಮಾಡಿದ ಸೂಚನೆಗಳ ವಿಷಯ ಚರ್ಚಿಸಲು ನಾನು ಇಲ್ಲಿಗೆ ಬಂದಿರುವೆನು. ಭಾರತಕ್ಕೆ ಸ್ವರಾಜ್ಯವನ್ನು ಕೊಡುವರೆ ಬ್ರಿಟಿಷ್ ಸರಕಾರದವರು ಕೊಟ್ಟ ಭರವಸೆಯನ್ನು ಪೂರೈಸುವ ಕೊನೆಯ ನಿರ್ಣಯ ಹಾಗೂ ವ್ಯಾವಹಾರಿಕ ಉಪಾಯಗಳನ್ನು ಕೈಕೊಳ್ಳಲು ಈ ರೀತಿ ಮಾಡಲಾಗಿದೆ. ಅದು ಭಾರತೀಯರಿಗೆ ಒಪ್ಪಿಗೆಯಾದರೆ ಆ ರೀತಿಯಿಂದ ರಾಜಕೀಯ ಬಿಕ್ಕಟ್ಟು ಬಗೆಹರಿದರೆ, ಆಕ್ರಮಣವನ್ನು ವಿರೋಧಿಸಲು ಎಲ್ಲಾ ರಾಜಕೀಯ ಪಕ್ಷದವರೂ ಯುದ್ಧಯತ್ನದಲ್ಲಿ ತೊಡಗಲು ಅನುಕೂಲವಾಗುತ್ತದೆ' ಹೀಗೆಂದು ಹಿಂದೂದೇಶಕ್ಕೆ ಬಂದಿಳಿದ ಸರ್ ಸ್ಟ್ಯಾಫೋರ್ಡ್ ಕ್ರಿಪ್ಸರು, ಪತ್ರಿಕಾ ಪ್ರತಿನಿಧಿಗಳೊಡನೆ ತಮ್ಮ ಆಗಮನದ ಕುರಿತು ಕೆಲವು ಮಾತುಗಳನ್ನು ಹೇಳಿದರು.

ಅವರು ಪ್ರಕಟಿಸಿದ ಇನ್ನು ಕೆಲವು ವಿಚಾರಗಳು ಮನನೀಯವಿವೆ. 'ನಾನು ಭಾರತದ ಸ್ನೇಹಿತನೂ, ಯುದ್ಧ ಮಂತ್ರಿಮಂಡಳದ ಸದಸ್ಯನೂ ಆಗಿ, ಬ್ರಿಟನು ಭಾರತಗಳ ಸಂಬಂಧದಲ್ಲಿ ಮುಸಿ ಹಚ್ಚಿದ ಈ ರಾಜಕೀಯ ಬಿಕ್ಕಟ್ಟನ್ನು ಬಿಡಿಸಬೇಕೆಂದು ಪ್ರಯತ್ನಿಸುತ್ತೇನೆ. ಬಿಕ್ಕಟ್ಟು ಪರಿಹಾರವಾದರೆ ನಾವೆಲ್ಲರೂ ಒಕ್ಕಟ್ಟಿನಿಂದ ಜಗತ್ತಿನ ಸ್ವಾತಂತ್ರ್ಯಕ್ಕಾಗಿ ಹೋರಾಡಬಹುದು. ನಾವು ವ್ಯರ್ಥ ಸಮಯ ಕಳೆಯಲು ಇದು ಸಂದರ್ಭವಲ್ಲ. ಆದುದರಿಂದ ಇಲ್ಲಿನ ರಾಜಕೀಯ ಮುಖಂಡರೂ ಇತರ ಹಿತಸಂಬಂಧದವರೂ ಬೇಗನೇ ನಿರ್ಣಯ ಮಾಡಿಕೊಳ್ಳುವರೆಂದು ನಂಬಿದ್ದೇನೆ. ನಾನಿದುವರೆಗೆ ಕಾಂಗ್ರೆಸಿನ ಮಾತ್ರ ಸ್ನೇಹಿತನಾಗಿದ್ದೆ; ಆದರೆ ಈಗ ಬ್ರಿಟಿಷ್ ಮಂತ್ರಿಮಂಡಳದ ಒಬ್ಬ ಸದಸ್ಯನಾಗಿ ಬಂದುದರಿಂದ ಆಶ್ರಿತರಾಜರು, ಮುಸಲ್ಮಾನರು ಮತ್ತು ಇನ್ನಿತರ ಪಕ್ಷದವರೂ ಸಂಕೋಚವಿಲ್ಲದೆ ತಮ್ಮ ಅಭಿಪ್ರಾಯವನ್ನು ತಿಳಿಸಬೇಕಾಗಿ ಕೋರುತ್ತೇನೆ' ಎಂದು ಕ್ರಿಪ್ಸರು ತಮ್ಮ ಆಗಮನ ವಿಚಾರವನ್ನು ತಿಳಿಸಿದರು

ಸರ್ ಕ್ರಿಪ್ಸರು ಗಾಂಧಿಜಿಯವರನ್ನೂ ಕಾಣುವುದಾಗಿ ತಿಳಿಸಿದರು. ಗಾಂಧಿಜಿಯನ್ನು ನೋಡಲು ನನಗೆ ಯಾವಾಗಲೂ ಆನಂದವಾಗುತ್ತದೆಯೆಂದರು. ಸರ್ ಕ್ರಿಪ್ಸರು ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ, ಅವರು ತಂದ ಸೂಚನೆಗಳು ಕೊನೆಯವೆಂದು ತಿಳಿಸಿದರು. ಸರ್ ಕ್ರಿಪ್ಸರು ಆ ಸೂಚನೆಗಳಾವುವೆಂದು ಇನ್ನೂ ಹೇಳಲಿಲ್ಲ. ಅವರ ಆಗಮನದ ಉದಾರ ಉದ್ದೇಶವನ್ನು ಮಾತ್ರ ತಿಳಿಸಿದ್ದಾರೆ. ಈ ವಿಷಯವಾಗಿ ಈಗ ಯಾವುದೇ ಟೀಕೆ ಮಾಡುವುದೂ ಯೋಗ್ಯವಾಗಿಲ್ಲ. ಸರ್ ಕ್ರಿಪ್ಸರು ಸ್ವತಃ ಬಯಸಿದಂತೆ, ಅವರ ಆಗಮನವನ್ನು ನಾವು ಮನಃಪೂರ್ವಕ ಸ್ವಾಗತಿಸುವೆವು.

ಅಮೆರಿ ಪಕ್ಷಪಾತ

ಇತ್ತೀಚೆಗೆ ಅಮೆರಿಯವರು ಮುಸ್ಲಿಂ ಲೀಗಿನ ವಿಷಯ ಪಕ್ಷಪಾತ ತೋರಿಸುವುದು ಸ್ಪಷ್ಟವಾಗುತ್ತಿದೆ. ಭಾರತದ ಪ್ರಮುಖ ಮುಸ್ಲಿಂಪಕ್ಷವಾದ ಮೊಮಿನ್ ಪರಿಷತ್ತು, ಜಿನ್ನರ ಅರ್ಥಾತ್ ಮುಸ್ಲಿಂ ಲೀಗಿನ ಪಾಕಿಸ್ತಾನ ಧೋರಣೆಗೆ ವಿರೋಧ ತೋರಿಸಿ ಬ್ರಿಟಿಷ್ ಸರಕಾರಕ್ಕೆ ತಂತಿ ಬಿಟ್ಟಿದ್ದ ಬಗ್ಗೆ ಕಾಮನ್ಸ್ ಸಭೆಯಲ್ಲಿ ಕೇಳಿದ ಪ್ರಶ್ನೆಗೆ ಉತ್ತರ ಕೊಡುತ್ತಾ ಅಮೆರಿಯವರು ಮೊಮಿನ್ ಪರಿಷತ್ತು ಕೇವಲ ೮೦–೫೦ ಲಕ್ಷ ಮುಸಲ್ಮಾನರ ಬಗ್ಗೆ ಮಾತ್ರ ಮಾತನಾಡಬಹುದೆಂದೂ, ೮–೫ ಕೋಟಿ ಮುಸಲ್ಮಾನರ ಪ್ರಾತಿನಿಧಿಕ ಸಂಸ್ಥೆ ಮುಸ್ಲಿಂ ಲೀಗೆಂದೂ ಹೇಳಿದರು.

ಇದಕ್ಕೆ ಮೊಮಿನ್ ಪಕ್ಷದ ಉಪಾಧ್ಯಕ್ಷರಾದ ಅಬ್ದುಲ್ ಕಯೂಮ ಅನ್ಸಾರಿಯವರು ಉತ್ತರ ಕೊಟ್ಟಿದ್ದಾರೆ. ಅಮೆರಿಯಂತಹ ಜವಾಬ್ದಾರಿ ಹೊತ್ತ ವ್ಯಕ್ತಿಗಳು ಈ ದೇಶದ ನಿಜಸ್ಥಿತಿಯ ವಿಚಾರ ಅಜ್ಞಾನ ಪ್ರದರ್ಶಿಸುವುದು ಅನ್ಯಾಯವೆಂದಿದ್ದಾರೆ. ಭಾರತದ ಮುಸ್ಲಿಮರ ಸಂಖ್ಯೆಯಲ್ಲಿ ಮೊಮಿನರ ಸಂಖ್ಯೆಯೇ ಹೆಚ್ಚೆಂದೂ ತಿಳಿಸಿದ್ದಾರೆ. ಆದ್ದರಿಂದ ಮುಸ್ಲಿಮರ ಪ್ರಾತಿನಿಧಿಕ ಸಂಸ್ಥೆ ಮೊಮಿನ್ ಪರಿಷತ್ತಲ್ಲದೆ ಲೀಗಲ್ಲವೆಂದು ವಿಶದಪಡಿಸಿದ್ದಾರೆ. ಮೊಮಿನರು ಉಚ್ಚವರ್ಗದ ಮುಸಲ್ಮಾನರ ಹಾಗೂ ಆಳುವ ಸಾಮ್ರಾಜ್ಯಶಾಹಿಯನ್ನು ಮುರಿದು ಸ್ವಾತಂತ್ರ್ಯಕ್ಕಾಗಿ ಹೋರಾಡುವವೆಂದೂ ಸ್ಪಷ್ಟಪಡಿಸಿರುವರು.

ಮುಸ್ಲಿಂ ಲೀಗನ್ನುಳಿದು ಹಿಂದೂದೇಶದಲ್ಲಿ ಅನೇಕ ಮುಸ್ಲಿಂ ಸಂಸ್ಥೆಗಳಿವೆಯೆಂಬುದನ್ನು ಅಮೆರಿಯವರೂ ಅಲ್ಲಗಳೆಯಲಾರರು. ಅಧಿಕಾರೀ ಬ್ರಿಟಿಷ್ ವರ್ಗವು ಮುಸ್ಲಿಂ ಲೀಗನ್ನು ಎತ್ತಿ ಹಿಡಿದ ಮಾತ್ರಕ್ಕೆ ಇತರ ಸಂಸ್ಥೆಗಳ ಪ್ರಾತಿನಿಧ್ಯವೇನೂ ಹೋಗಲಾರದು. 'ವಿಭಜಿಸಿ ಆಳುವ ಪದ್ಧತಿ'ಯುಳ್ಳ ಬ್ರಿಟಿಷ್ ಪ್ರಭುತ್ವವು ಪಾಕಿಸ್ತಾನದಂತಹ ದೇಶವಿಘಾತುಕ ಧೋರಣೆಯನ್ನು ಉದ್ಘೋಷಿಸುತ್ತಿರುವ ಮುಸ್ಲಿಂ ಲೀಗಿನ ಬೆನ್ನು ಚಪ್ಪರಿಸುವುದರಲ್ಲಿ ಸ್ವಾರ್ಥವೇ ಕಾಣುತ್ತದೆ. ಮುಸ್ಲಿಂಬಹುಮತವುಳ್ಳ ಗಡಿನಾಡು, ಬಂಗಾಳ, ಒರಿಸಾಗಳ ಚುನಾಯಿತಪ್ರತಿನಿಧಿಗಳು ಪ್ರಧಾನಮಂತ್ರಿಗಳೂ ಜಿನ್ನರ ಹಾಗೂ ಲೀಗಿನ ಧೋರಣೆಗೆ ಅನುಕೂಲರಿಲ್ಲವೆಂದರೆ, ಮುಸ್ಲಿಂಲೀಗು ಅಮೆರಿಯಂಥವರಿಗೆ ಹೊರತು ಬೇರೆ ಯಾರಿಗೂ ಈ ಜಗತ್ತಿನಲ್ಲಿ ಬೇಡವಾಗಿಲ್ಲವೆಂದು ಅರ್ಥವಾಗುವುದಿಲ್ಲವೆ? ಭಾರತದ ಬಹುಮತ ಸ್ಲಿಂ ಜನತೆಯ ಪ್ರತಿನಿಧಿ ಸಂಸ್ಥೆ ಮುಮುಸ್ಲಿಂಲೀಗೆಂದು ಅಮೆರಿ 'ಪ್ರಶಸ್ತಿ ಕೊಟ್ಟಿರುವುದು ಪಕ್ಷಪಾತವಲ್ಲವೇ? ಈ ತರದ ಪಕ್ಷಪಾತವು ಕೇವಲ ಸ್ವಾರ್ಥಮಯವಲ್ಲವೆ? ಕ್ರಿಪ್ಸರು ಹಿಂದೂದೇಶಕ್ಕೆ ಬರುವೀ ಸಂದರ್ಭದಲ್ಲಿ, ಹಿಂದೂದೇಶದ ವಿಚಾರ, ಪಾರ್ಲಿಮೆಂಟಿನಲ್ಲಿ ಯಾವುದೇ ಚರ್ಚೆ ಆಗಲಾರದೆಂದು ಹೇಳಲ್ಪಟ್ಟಿದ್ದರೂ, ಮುಸ್ಲಿಂ ಲೀಗಿಗೆ ಹೀಗೆ 'ಸರ್ಟಿಫಿಕೇಟು' ಕೊಡುವ ಮಾತನ್ನು ಅಮೆರಿಯವರು ಉಚ್ಚರಿಸುವುದು ಪಕ್ಷಪಾತವಲ್ಲವೆ ಮತ್ತೇನನ್ನು ತೋರಿಸುತ್ತದೆ?

ಮೊನ್ನೆ ಹಕ್ಕರು ಭಕ್ಷರು ಜಿನ್ನರ ಹಾಗೂ ಮುಸ್ಲಿಂ ಲೀಗಿನ ಧೋರಣೆಯನ್ನು ಖಂಡಿಸಿ ಚರ್ಚಿಲರಿಗೆ ತಂತಿ ಬಿಟ್ಟಿದ್ದಾರೆ; ಗಡಿನಾಡಿನ ಪ್ರಧಾನರಾಗಿದ್ದ ಖಾನ್ ಸೋದರರಂತೂ ಲೀಗಿನ ಪ್ರಾತಿನಿಧ್ಯವನ್ನು ಒಪ್ಪಿಕೊಳ್ಳುವವರೇ ಅಲ್ಲ. ಪಂಜಾಬ್ ಪ್ರಧಾನರಾದ ಸಿಕಂದರರೂ ಈಗ ಲೀಗಿನಿಂದ ಹೊರಬರುವರೆಂದು ಸುದ್ದಿಯಿದೆ. ಹೀಗಿರುವಾಗ ಮುಸ್ಲಿಂ ಬಹು ಸಂಖ್ಯಾಕ ಪ್ರಾಂತಗಳಲ್ಲಿಯೇ ಮುಸ್ಲಿಂ ಲೀಗಿಗೆ ಮನ್ನಣೆಯಿಲ್ಲವಾದರೆ, ಲೀಗಿನ ವಿಷಯ ಅಮೆರಿಯೊಬ್ಬರಿಗಿಷ್ಟು ಪಕ್ಷಪಾತವೇಕೋ ನಮಗೆ ತಿಳಿಯದು.



ನೋಟಗಳು....

ಕ್ರಿಪ್ಸರು ಹಿಂದೂದೇಶಕ್ಕೆ ಹೋದ ಸಂದರ್ಭದಲ್ಲಿ, ಹಿಂದೂಸ್ಥಾನದ ವಿಷಯ ಪಾರ್ಲಿಮೆಂಟಿನಲ್ಲಿ ಏನೂ ಚರ್ಚೆಯಿಲ್ಲವೆಂದು ಚರ್ಚಿಲ್ಲರು ಹೇಳಿದ್ದರು.

卐

ಗಾಂಧಿಜಿಯೊಡನೆ ಕ್ರಿಪ್ಸರ ಆಗಮನದ ಕುರಿತು ಅಭಿಪ್ರಾಯ ಕೇಳಲು, 'ಚರ್ಚಿಲರೇ ಹೇಳಿದ್ದಾರೆ; ಈ ಸಂದರ್ಭದಲ್ಲಿ ಚರ್ಚಿಸಬಾರದೆಂದು, ಹಾಗಾಗಿ ನಾನೇನೂ ಅಭಿಪ್ರಾಯಕೊಡಲಾರೆ' ಎಂದು ಹೇಳಿ, ಚರ್ಚಿಲರ ಮಾತಿಗೆ ಗಾಂಧಿಜಿಯೂ ಬೆಲೆಕೊಟ್ಟರು!

卐

ಆದರೆ ಇತ್ತೀಚೆಗೆ ಪಾರ್ಲಿಮೆಂಟಿನಲ್ಲಿ ಅಮೆರಿಯವರಿಗೆ, 'ಹಿಂದೂದೇಶದಲ್ಲಿ ಮುಸ್ಲಿಂ ಲೀಗೇ ಮುಸ್ಲಿಂ ಬಹುಮತದ ಪ್ರತಿನಿಧಿ ಸಂಸ್ಥೆ'ಯೆಂಬುದಾಗಿ 'ಒಂದು ಸರ್ಟಿಫಿಕೇಟು' ಕೊಡಬೇಕಾಗಿ ಬಂತು.

卐

'ಕೊಡಬೇಕಾಗಿ ಬಂತು' ಎಂದರೆ ಮೊಮಿನ್ ಪರಿಷತ್ತಿನವರು ಜಿನ್ನರ ಮುಸ್ಲಿಂ ಲೀಗು, ಹಿಂದೂದೇಶದ ಮುಸ್ಲಿಮರ ಪ್ರತಿನಿಧಿ ಸಂಸ್ಥೆಯಲ್ಲವೆಂದು ಪ್ರತಿಭಟಿಸುವ ಪಂಥಹೂಡಿದ್ದರು!

卐

ಮುಸ್ಲಿಮರ ಪ್ರತಿನಿಧಿ ಸಂಸ್ಥೆಯಾವುದೇ ಇರಲಿ, ಅಂತೂ ಚರ್ಚಿಲರು, ಕ್ರಿಪ್ಸರು ರಾಯಭಾರಕ್ಕೆ ಹೋದ ಸಂದರ್ಭದಲ್ಲಿ ಪಾರ್ಲಿಮೆಂಟಿನಲ್ಲಿ ಹಿಂದೂದೇಶದ ವಿಷಯ ಚರ್ಚೆಯಿಲ್ಲವೆಂದು ಹೇಳಿದ ಮಾತನ್ನು ಅಮೆರಿಯವರೇ ಮೊದಲು ಮೀರಿದರು!

卐

"ಕ್ರಿಪ್ಸರು ಬರುವುದು ನಮಗೆ ಸ್ವಾತಂತ್ರ್ಯ ಕೊಡುವುದಕ್ಕಲ್ಲ; ಹಿಂದೂದೇಶದ ಯುದ್ಧ ವಿಚಾರವನ್ನು ನೋಡಿಹೋಗುವುದು ಅವರ ಮುಖ್ಯ ಉದ್ದೇಶ" ಹೀಗೆಂದು ಈಗ ರಾಜಾಜಿಯೂ ಹೇಳಿದ್ದಾರೆ!

卐

ಬ್ರಿಟನಿನಲ್ಲಿ ಎಲ್ಲರೂ ಚರ್ಚಿಲರಲ್ಲ; ಅಮೆರಿಯಂಥವರೂ ಕೆಲವರಿದ್ದಾರೆ. ಹಿಂದೂದೇಶದಲ್ಲಿಯೂ ಎಲ್ಲರೂ ಗಾಂಧಿಗಳಂತಿಲ್ಲ; ರಾಜಾಜಿಯಂಥವರು ತುಂಬಾ ಮಂದಿಯಿದ್ದಾರೆ.

卐

ರೈಟ್ ಆನರೇಬಲ್ ಶಾಸ್ತ್ರಿಗಳಿಗೆ, ಕ್ರಿಪ್ಸರು ಸ್ವಾತಂತ್ರ್ಯ ಕೊಡಲು ಬಂದಿರುವರೆಂಬ ಕನಸು ಕಂಡಿತು; ರಾಜಾಜಿ ರೈ| ಆ| ಶಾಸ್ತ್ರಿಗಳಿಗೆ ಹಾಗೆಲ್ಲಾ ಕನಸು ಕಟ್ಟಬೇಡಿರೆಂದು ಮಾತ್ರ ಸೂಚಿಸಿದರು.

卐

ಕ್ರಿಪ್ಸರ ಕುರಿತು ರಾಜಾಜಿ ಹೀಗೆ ಭವಿಷ್ಯ ಹೇಳಬೇಕಾದ ಅವಶ್ಯವೇನೂ ಇರಲಿಲ್ಲ. ಆದರೆ ರೈ| ಆ| ಶಾಸ್ತ್ರಿಗಳು ಹಾಗೆ ಕನಸು ಕಾಣಬೇಕಾದದ್ದೂ ಅಗತ್ಯವಿರಲಿಲ್ಲ. ಚರ್ಚಿಲರು ಈ ಸಂದರ್ಭದಲ್ಲಿ ಪಾರ್ಲಿಮೆಂಟಿನಲ್ಲಿ ಹಿಂದೂದೇಶದ ವಿಷಯ ಚರ್ಚೆಯಿಲ್ಲವೆಂದು ಹೇಳಿರುವಾಗ, ಅಮೆರಿಯವರು ಮುಸ್ಲಿಂ ಲೀಗಿಗೆ ಸರ್ಟಿಫಿಕೇಟು ಕೊಡಬೇಕಾದದ್ದಂತೂ ಏನೇನೂ ಅವಶ್ಯವಾಗಿರಲಿಲ್ಲ.

'ಸ್ವಸಂಪತ್ತನ್ನು ಸುಟ್ಟುಹೋಗುವ ಘೋರಣೆ ಮಾಡಲಾಗದು

ಸರಕಾರಕ್ಕೆ, ಗಾಂಧಿಜಿ ಸೂಚಿಸುತ್ತಾರೆ

ಕ್ವಿದೇ ಅಜಾಮರ ವಿಷಪೂರ್ಣಲೇಖನ

ಬ್ರಿಟನ್ ಮತ್ತು ಅಮೆರಿಕನ್ ನಾಜಿವಾದ

['ಹರಿಜನ'ದಿಂದ]

ಇತ್ತೀಚೆಗೆ, ಶತ್ರುವಿನ ಕೈಗೆ ರಾಷ್ಟ್ರ ಸಿಗುವಾಗ, ಆತನಿಗೂ ಏನೂ ಉಪಯೋಗಬಾರದೆಂದು ಇದ್ದ ಕಾರ್ಖಾನೆ ಪಟ್ಟಣಗಳನ್ನು ಹಾಗೂ ಎಲ್ಲಾ ಸೊತ್ತುಗಳನ್ನು ಸುಟ್ಟು ಪಟ್ಟಣ ಬಿಟ್ಟು ಓಡಿಹೋಗುವ ರೋಗವು ಸಾಂಕ್ರಾಮಿಕವಾಗಿದೆ. ಇದು ರಶ್ಯದಲ್ಲಿ ಪ್ರಾರಂಭವಾಗಿ ಎಲ್ಲೆಡೆಗಳಲ್ಲಿಯೂ ಹರಡಿದೆ. ಹಿಂದುಸ್ಥಾನದಲ್ಲಿಯೂ ಅಂತಹ ಕ್ರಮವನ್ನು ಮಾಡಕೂಡದು ಎಂದು ಇಷ್ಟರಲ್ಲಿಯೇ ಅನೇಕ ಮುಖಂಡರು ಸರಕಾರಕ್ಕೆ ಬಿನ್ನಹ ಮಾಡಿದ್ದಾರೆ. ಗಾಂಧಿಜಿಯೂ ಈ ವಿಷಯ ಹೀಗೆನ್ನುವರು:

'ಸ್ವಸಂಪತ್ತನ್ನು ನಾಶಮಾಡುವ ರಶ್ಯನ್ ತಂತ್ರದಿಂದ ಜನರು ನಡುಗುತ್ತಿದ್ದಾರೆ. ಆದರೆ ಶತ್ರುವನ್ನು ಮೋಸಗೊಳಿಸುವುದಕ್ಕಾಗಿ ಎಷ್ಟು ವೆಚ್ಚಮಾಡಿದರೂ ಕಡಿಮೆಯೇ ಎನ್ನುವ ಭಯಾನಕ ಸ್ವಾರ್ಥತ್ಯಾಗ ಹಾಗೂ ಶೌರ್ಯವನ್ನು ಹೊಗಳುವುದನ್ನು ಬಿಟ್ಟು ಅವರಿಗೇನೂ ತೋರುವುದಿಲ್ಲ. ಅವರಂತೆ ನಾನೂ ಆಶ್ಚರ್ಯಚಕಿತನಾಗಿರುವೆನಾದರೂ ಇದನ್ನು ಹೊಗಳಲಾರೆನು. ನಮಗೆ ಪ್ರಶಂಸನೀಯವಾದುದನ್ನು ನಾವು ಅನುಕರಿಸುವೆವು. ಅಂಥ ಸಂದರ್ಭವೀಗ ನಮ್ಮ ಮುಂದೆ ಇದೆಯೆ? ಮುನ್ನಡೆಗೆ ಪ್ರತಿಬಂಧ ಮಾಡಬೇಕೆಂದು, ಹಿಂದುಸ್ಥಾನದ ಸಂಪತ್ತನ್ನೆಲ್ಲಾ ಸುಟ್ಟು ಎಲ್ಲವನ್ನೂ ನಾಶಪಡಿಸುವ ಶೌರ್ಯ ಮತ್ತು ಸ್ವಾರ್ಥತ್ಯಾಗಗಳನ್ನು ನಾವು ಸಮಾಧಾನದಿಂದ ನೋಡಬಲ್ಲೆವೊ? ಯುದ್ಧ ವಿರೋಧಿಯಾದ ನಾನು ಇದಕ್ಕೆ ಒಂದೇ ಉತ್ತರ ಕೊಡುತ್ತೇನೆ. ಆಕ್ರಮಣಕ್ಕಾಗಿ ಇಲ್ಲವೇ ರಕ್ಷಣೆಗಾಗಿ ದ್ರವ್ಯ ಜೀವನಗಳನ್ನು ನಾಶಮಾಡುವುದರಲ್ಲಿ ಯಾವುದೇ ಶೌರ್ಯ ಹಾಗೂ ಸ್ವಾರ್ಥತ್ಯಾಗವೂ ನನಗೆ ತೋರುವುದಿಲ್ಲ. ವೈರಿಗೆ ಉಪಯೋಗ ಬೀಳಬಾರದೆಂದು ನನ್ನ ಮನೆ ಬದುಕುಗಳೆಲ್ಲವನ್ನೂ ನಾಶಪಡಿಸುವ ಬದಲು ಶತ್ರುವು ಅದನ್ನು ಉಪಯೋಗಿಸಲೆಂದು ಎಲ್ಲವನ್ನೂ ಬಿಟ್ಟುಬಿಡುವೆನು. ವೈರಿಗಳಿಗೆ ಅಂಜಿ ಅಲ್ಲ, ಮಾನವತೆಯ ದೃಷ್ಟಿಯಿಂದ ಯಾರೂ ವೈರಿಗಳಲ್ಲವೆಂದು ಭಾವಿಸಿ ನನ್ನ ಮನೆ ಬದುಕುಗಳೆಲ್ಲವನ್ನೂ ಅವರಿಗೆ ಬಿಟ್ಟುಕೊಡುವುದರಲ್ಲಿ ಸದುದ್ದೇಶ ಶೌರ್ಯ ಸ್ವಾರ್ಥತ್ಯಾಗಗಳೆಲ್ಲಾ ಕೂಡಿವೆ. ಹಿಂದುಸ್ಥಾನದ ವಿಷಯವಂತೂ ಪ್ರತ್ಯೇಕವಿದೆ. ರಶ್ಯದಂತೆ ಹಿಂದುಸ್ಥಾನೀಜನರ ರಾಷ್ಟ್ರೀಯ ಭಾವನೆ ವಿಕಾಸಗೊಂಡಿರುವುದಿಲ್ಲ. ಹಿಂದುಸ್ಥಾನವು ಯುದ್ಧಮಾಡುವುದಿಲ್ಲ. ಅದನ್ನು ಗೆದ್ದವರು ಯುದ್ಧಮಾಡುತ್ತಿದ್ದಾರೆ. ಅವರು ಸೋತು ಜಪಾನರು ಬಂದರೆಂದು ಭಾವಿಸುವ. ಹಿಂದುಸ್ಥಾನದ ಮೂಕ ಮಿಲಿಯ ಜನರಿಗೆ ಬಹಳ ಬೇಗನೇ ಅಂತೂ ಬಹುಕಾಲ ಆ ಬದಲಾವಣೆಯೇ ತಿಳಿಯದು. ಯುದ್ಧದ ವಿಷಯ ಹಿಂದೀಯರಲ್ಲಿ ಭಿನ್ನಾಭಿಪ್ರಾಯವಿದೆ. ಹಿಂದೀ ಸೈನಿಕರು ಯಾವ ದೃಷ್ಟಿಯಿಂದಲೂ ರಾಷ್ಟ್ರೀಯ ಸೈನಿಕರಲ್ಲ, ಉದ್ಯೋಗದ ಸಲುವಾಗಿ ಅವರು ಸೈನಿಕರಾಗಿರುವರು. ಹಣ ಕೊಟ್ಟರೆ ಜಪಾನರ ಮುಂದಾಳುತನದಲ್ಲಿ ಇಲ್ಲವೇ ಇನ್ನು ಯಾರ ಮುಂದಾಳುತನದಲ್ಲಿಯೂ ಅವರು ಹೋರಾಡಬಹುದು. ಈ ಕಾರಣದಿಂದ ಸಂಪತ್ತಿನ ನಾಶದ ಧೋರಣವು ಅನರ್ಥಕಾರಿಯಾದುದು. ಈ ಧೋರಣದ ವಿರೋಧವಾಗಿ ಹಿಂದೀಯರು ಅಭಿಪ್ರಾಯ ಪ್ರಕಟಿಸುವುದು ಸಮಾಧಾನಕರವಾದುದು. ಸೈನಿಕರಿಗೇನು ಬೇಕೆಂದು ನನಗೆ ಗೊತ್ತಿಲ್ಲ. ಆದರೆ ರಾಷ್ಟ್ರವು ಸ್ವೀಕರಿಸಿದ ಹಾಗೂ ಮಾನವತೆಯ ಪ್ರಯೋಜನಕ್ಕೆ ಅವಶ್ಯವಾದ ನೀತಿಯನ್ನು ಅದು ಮೀರಿ ಹೋಗಬಾರದು. ಹಿಂದುಸ್ಥಾನದ ವಿಶಿಷ್ಟ ಪರಿಸ್ಥಿತಿಯನ್ನನುಲಕ್ಷಿಸಿ ಅಂತಹ ಪ್ರಸಂಗ ಬಂದರೂ ಇಲ್ಲಿ ಸಂಪತನ್ನು ನಾಶಪಡಿಸುವ ಯೋಜನೆ ಮಾಡಲಾಗುವುದಿಲ್ಲವೆಂದು ಸರಕಾರವು ಸಾರಿ, ಜನತೆಯನ್ನು ಶಾಂತಗೊಳಿಸಿದರೆ ಬಹುಮಟ್ಟಿಗೆ ಒಳ್ಳೆಯದಾಗುವುದು.

ಸಮರ್ಥಿಸಲಾರದುದನ್ನು ಸಮರ್ಥಿಸುವುದು

ಜಿನ್ನರಿಗೆ ಗಾಂಧಿಜಿ ಉತ್ತರ

ಜಿನ್ನರಲ್ಲಿ ಗಾಂಧಿಜಿ ಒಂದು ವಿನಂತಿ ಮಾಡಿ, ಮುಸ್ಲಿಂ ಲೀಗು ಪತ್ರಿಕೆಗಳಲ್ಲಿ ಹಿಂದು ಮತವನ್ನು ಅಸಂಬದ್ಧ ನಿಂದಿಸಿ ಬರುವ ಲೇಖನಗಳ ವಿಷಯ ಅವರು ಸ್ವಲ್ಪ ವಿಚಾರಮಾಡಬೇಕೆಂದು ಸೂಚಿಸಿದ್ದರಷ್ಟೆ? ಅದಕ್ಕೆ ಜಿನ್ನರು ಕೊಟ್ಟ ಉತ್ತರದ ಕುರಿತು ಗಾಂಧಿಜಿ ತಿರುಗಿ ಹೀಗೆ ಬರೆದಿರುವರು:

'ನನ್ನ ವಿನಂತಿಗೆ ಕ್ವಿದೆ ಅಜಾಮರು (ಜಿನ್ನರು) ಕೊಟ್ಟ ಉತ್ತರವನ್ನು ಓದಿದೆ. ಅದರಿಂದ ನನಗೆ ಬಹಳ ವಿಷಾದವಾಯಿತು, ಇದಕ್ಕಿಂತ ಒಳ್ಳೆಯ ಉತ್ತರವನ್ನು ನಾನು ಸಾರೈಸಿದ್ದೆ. ಮನನೋಯಿಸುವ ಅವರ ಆ ಲೇಖನವನ್ನು ನಾನು ಇಲ್ಲಿ ಉದ್ಧರಿಸಿ ಕೊಡುವುದರಿಂದ ಪರಿಣಾಮ ಮತ್ತಷ್ಟು ಕೆಡುವುದು. ಏಕೆಂದರೆ ಆ ಲೇಖನ ವಿಷಪೂರ್ಣವಾಗಿದೆ. ಟೀಕೆಗೆ ಅವಕಾಶವಿದ್ದರೆ ನಾನು ಯಾವುದೇ ಪಕ್ಷ ಇಲ್ಲವೇ ವ್ಯಕ್ತಿಯನ್ನು ಟೀಕಿಸಲೂ ಹಿಂದು ಮುಂದು ನೋಡುವುದಿಲ್ಲವೆಂದು ಕ್ವಿದೇ ಅಜಾಮರಿಗೆ ಗೊತ್ತಿದೆ. ಮುಸಲ್ಮಾನೇತರ ಪತ್ರಿಕೆಗಳಲ್ಲಿ ಬಂದ ಅಸಂಬದ್ಧ ವಿಚಾರಗಳ ಕುರಿತು ನಾನು ಅನೇಕ ಸಲ ಟೀಕಿಸಿದ್ದೇನೆ. ಮನ ನೋಯಿಸುವ ಆ ಲೇಖನವನ್ನು ಬರೆದವರಾರೆಂದು ನನಗೆ ಗೊತ್ತಿಲ್ಲ. ಅವನು ಹಿಂದೆ ಇದ್ದರೆ ಕ್ವಿದೇ ಅಜಾಮರ ಸಮರ್ಥನೆ ಮತ್ತಷ್ಟು ಅರ್ಥಹೀನವಾಗುವುದು. ಸಮರ್ಥಿಸಲಾರದುದನ್ನು ಸಮರ್ಥಿಸಲು ಕ್ವಿದೇ ಅಜಾಮರು ವಿಶೇಷ ಯುಕ್ತಿಸುವುದನ್ನು ನೋಡಿ ನನಗೆ ಬಹಳ ಮನನೊಂದಿದೆ. ಆಳವಾದ ಭಾವನೆಗಳನ್ನು ನೋಯಿಸುವುದಕ್ಕಾಗಿ ಬರೆದ ಈ ಲೇಖನದ ಅನಿರೀಕ್ಷಿತ ಸಮರ್ಥನೆಯನ್ನು ಓದುವುದು ಅನಿಷ್ಟವಾಗಿದೆ.'

ಅಮೆರಿಕನ್ ಮತ್ತು ಬ್ರಿಟಿಷ್ ನಾಜಿವಾದ

('ಹರಿಜನ'ದಿಂದ)

ಡಾ. ಜಾರ್ಜ ವಾಶಿಂಗಟನ್ ಕಾರ್ವರರು ಬಿಳಿ ಮನುಷ್ಯರಾಗಿ ಹುಟ್ಟಿದ್ದರೆ, ಶಾಸ್ತ್ರೀಯ ಜಗತ್ತಿನಲ್ಲಿ ಹೆಸರುಪಡೆದ ಒಡಿಸ್ಸಿಂಕ್, ಎಡಿಸನ್ ಮೊದಲಾದವರಂತೆ ಹೆಸರುವಾಸಿಯಾಗುತ್ತಿದ್ದರು. ಆದರೆ ಅವರು ನಿಗ್ರೋ ಜಾತಿಯವರಾಗಿದ್ದಾರೆ. ಶಾಸ್ತ್ರೀಯ ಕ್ಷೇತ್ರದಲ್ಲಿ ಎಷ್ಟೋ ಶೋಧಗಳನ್ನು ಅವರು ಮಾಡಿದ್ದರೂ ಇಂದು ಅಮೇರಿಕೆಯಲ್ಲಿ ಅವರು ೮೦ ವರ್ಷದ ಹಿಂದಿನ ನಿಗ್ರೋಗಳಂತೆ ನಿಗ್ರೋ ಆಗಿಯೇ ಉಳಿದಿದ್ದಾರೆ. ಅವರು ೧೮೬೪ರಲ್ಲಿ ಜನಿಸಿದರು. ಸರ್ ಹ್ಯಾಜಾ ನಸ್ಸರ ಕೀಡಿಯ ಸಂಶೋಧಕರಾದ ಓರ್ವ ಬ್ರಿಟಿಷರು ಅವರ ವಿಷಯವಾಗಿ ಈ ಕೆಳಗಿನಂತೆ ಅಭಿಪ್ರಾಯ ಪಟ್ಟಿದ್ದಾರೆ:—

'ಟಸ್ಕಗಿಯಲ್ಲಿ ಕೃಷಿಶಾಸ್ತ್ರ ಮೊದಲಾದ ವಿಷಯಗಳನ್ನು ಕಲಿಸತಕ್ಕ ಪ್ರೊಫೆಸರ ಕಾರ್ವರರು ಪೂರ್ಣ ನಿಗ್ರೋಗಳಾಗಿಯೇ ಇದ್ದಾರೆ. ಆದರೆ ಅವರಿಗೆ ಶಾಸ್ತ್ರೀಯ ವಿಷಯದಲ್ಲಿರುವ ಪ್ರಾಶಸ್ತ್ಯವನ್ನು ನೋಡಿದರೆ ಟಸ್ಕಗಿಯಲ್ಲಿ ಪ್ರೊಫೆಸರರಾಗಿದ್ದು ಆಕ್ಸ್‌ಫೋರ್ಡ ಅಥವಾ ಕೇಂಬ್ರಿಜದಲ್ಲಿ ಬಾಟನಿ (ಉಂತುಶಾಸ್ತ್ರದ)ಯ ಅಧ್ಯಾಪಕರಾಗಲು ಯೋಗ್ಯತೆಯುಳ್ಳವರಿರುವರು. ಸಸ್ಯಶಾಸ್ತ್ರದಲ್ಲಿ ಪ್ರವೀಣ್ಯಪಡೆದ ಯಾವನೇ ಯೂರೋಪಿಯನನು ಇವರೊಡನೆ ೧೦ ನಿಮಿಷ ಸಂಭಾಷಣೆ ಮಾಡಿದರೆ ಇವರು ತನ್ನ ಸರಿಸಮಾನ ಯೋಗ್ಯತೆಯುಳ್ಳವರೆಂದು ಕಂಡುಹಿಡಿಯಬಲ್ಲನು.' ಡಾ. ಕಾರ್ವರರು ಆಗಾಗ್ಗೆ ಗಾಂಧಿಜಿಯವರಿಗೆ ಸಂದೇಶಗಳನ್ನು ಮತ್ತು ಹಸ್ತಪತ್ರಿಕೆಗಳನ್ನು ಕಳಿಸುತ್ತಿರುವರು. ಅವರಲ್ಲಿ ಇತ್ತೀಚೆಗೆ ಒಂದಷ್ಟರವರೆ ಡಾ. ಜಾನರು ಅಮೇರಿಕೆಗೆ ಹೋದಾಗ ಆಕಸ್ಮಾತ್ತಾಗಿ ಟಸ್ಕಿಗೆ ಭೇಟಿಕೊಟ್ಟಾಗ ಅವರೊಡನೆ ಕಳಿಸಿದ ಪತ್ರ ಗಾಂಧಿಜಿಯವರು ಹಸನ್ಮುಖದಿಂದ ಡಾ. ಕಾರ್ವರರು ಸ್ವಾ ಇಲ್ಲಿಯವರೆಗೆ ಒಂದು ಅವುಗಳನ್ನು ಕೊಡದೆ ನಾನು ಸ್ವೀಕರಿಸಲಿಕ್ಕಿಲ್ಲವೆಂದು ನುಡಿದರು. ಡಾ. ಕಾರ್ವರರು ಹಿಂದುಸ್ಥಾನಕ್ಕೆ ಒಂದು ತೀರ ಮೆಚ್ಚಿಕೆಯವರಾಗಿರುವರೆಂದು ಡಾ. ಜಾನರು ಹೇಳಿದರು. ಮುದುಕರಾಗಿದ್ದರೂ ಪ್ರತಿನಿತ್ಯ ಬೆಳಿಗ್ಗೆ ೪ ಗಂಟೆಗೆ ಎದ್ದು ತೋಟದಲ್ಲಿ ಕೆಲಸಮಾಡಲು ಹಿಂಜರಿಯುವದಿಲ್ಲ. ಮತ್ತು ಯಾವನೇ ಭಾರತೀಯನನ್ನು ಬೆಟ್ಟಿಯಾದರೆ ಗಾಂಧಿಜಿಯವರನ್ನು ನೆನಪಿಸುವರು. ಅವರು ಅತ್ಯಂತ ಸರಳ ಹಾಗೂ ನಮ್ರಸ್ವಭಾವದವರಿರುವರು. ಕೆಲವು ವರ್ಷಗಳವರೆಗೆ ಡಾ. ಜಾನರು ಅವರನ್ನು ಓರ್ವ ತೋಟಿಗನೆಂದು ಗೃಹಿಸಿಕೊಂಡಿದ್ದರು. ಡಾ. ಕಾರ್ವರರು ಈಗ ೩೦ ವರ್ಷಗಳವರೆಗೆ ಉಪಯೋಗಿಸಬಹುದಾದ ಒಂದು ಪದ್ಧತಿಯನ್ನು ತಯಾರಿಸಿರುವರು. ಆದರೆ ಇಂಥ ದೊಡ್ಡ ವಿಜ್ಞಾನಿಯು ಕೂಡ ದಾಸ್ಯದಲ್ಲಿಯೇ ಕೊಳೆಯುವವನಲ್ಲವೇ' ಎಂದು ಗಾಂಧೀಜಿಯವರು ಡಾ. ಜಾನರೊಡನೆ ಕೇಳಿದ ಮೊಟ್ಟಮೊದಲಿನ ಪ್ರಶ್ನೆಯಾಗಿದೆ.

ಡಾ. ಜಾನರು, ಅವರು ಯೋಕಸ್ಥಿತ ನಿಗ್ರೋನಂತೆಯೇ ತಿಳಿಯಲ್ಪಡುವರು.

"ಅವಾಗ್ಯೂ ಈ ಜನರು ಪ್ರಜಾಪ್ರಾತಿನಿಧ್ಯ ಮತ್ತು ಸರಿಸಮಾನತೆಗಳ ದೊಡ್ಡ ತತ್ವಗಳ ವಿಷಯ ಮಾತನಾಡುವರಲ್ಲವೇ" ಎಂದು ಗಾಂಧೀಜಿಯವರು ವ್ಯಂಗ ಪುರಸ್ಕರವಾಗಿ ನುಡಿದರು.

ಆದರೆ ಡಾ. ಕಾರ್ವರರು ಪ್ರತಿರೋಧಿಗಳು ಅಥವಾ ವಿಷಪೂರಿತರು ಆಗಿರುವದಿಲ್ಲವೆಂದು ಡಾ. ಜಾನರು ನುಡಿದರು.

'ಅಹಿಂಸೆಯಲ್ಲಿ ನಂಬಿಗೆಯುಳ್ಳವರು ಅವರಿಂದ ಕಲಿಯಬೇಕಾದ ಬುದ್ಧಿಮಾತು ನನಗೆ ಗೊತ್ತಿದೆ' ಎಂದು ಗಾಂಧೀಜಿಯವರೆಂದರು. ಆದರೆ ಪ್ರಜಾಪ್ರಾತಿನಿಧ್ಯಕ್ಕಾಗಿ ಹೋರಾಡುವೆವೆಂದು ಕೂಗಿಕೊಳ್ಳುತ್ತಿರುವ ಈ ಜನರಿಗೆ ಏನನ್ನಬೇಕು?

ಒಳ್ಳೇದು ಅವರು ಸಂಪೂರ್ಣ ನಿಗ್ರೋಗಳಾಗಿದ್ದಾರೆ. ಸರಿಸಮಾನತೆ ಮತ್ತು ಪ್ರಜಾಪ್ರಾತಿನಿಧ್ಯ ಶಬ್ದಗಳನ್ನು ಪ್ರಯೋಗಿಸಿದ ಅವುಗಳ ಹಿಂದೆ "ಬಿಳಿ ಜನಾಂಗದ" ಎಂಬ ಶಬ್ದಗಳ ಅಧ್ಯಾಹಾರ್ಯವಾದವು. ಅದೇ ಅಮೆರಿಕನ್ ನಾಝಿವಾದವೆನ್ನಬಹುದು.

"ದಿ ನ್ಯೂ ಸ್ಟೇಟ್ಸಮನ್" ಪತ್ರಿಕೆಯು ಕೆಲವು ಸಂಗತಿಗಳನ್ನು ಒದಗಿಸಿದೆ.

ಆಗಸ್ಟ ೧೯೪೧ರಲ್ಲಿ ಜಾರಿಯಲ್ಲಿ ಬಂದ ದಿ ಸದರ್ನ ರೊಡೇಶಿಯಾ ಲ್ಯಾಂಡ ಟಾಕ್ಸೇಶನ ಎಂಬ ಆಕ್ಟ ಪ್ರಕಾರ ೬ ಕೋಟಿ ಎಕರೆ ಮೀರಿದ ಜನರ ಸ್ವಾಧೀನ ದೇಶ ... ೩ ಕೋಟಿ ಎಕರೆ ಸ್ವದೇಶೀಯರ ಸ್ವಾಮಿತ್ವಕ್ಕಾಗಿಯೂ ಮತ್ತು ಉಳಿದ ಭಾಗವನ್ನು ... ಅಲ್ಲಿಯ ಬಿಳಿಯರಲ್ಲದೆ ... ಒತ್ತಿಯ ಹರಿಸಲಾಗಿದೆ.

ಈ ೪ ಕೋಟಿ ಎಕರೆ ೫೦೦೦೦ ದ. ರೋಡೆಶಿಯನರಿಗಾಗಿಯೂ ಮತ್ತು ೩ ಕೋಟಿ ಎಕರೆ ೧೪೦೦೦೦೦ ಆಫ್ರಿಕನರಿಗಾಗಿ ಕಾಯ್ದಿಡಲಾಗಿದೆ. ಇದರಿಂದ ಬ್ರಿಟಿಶ ಸರಕಾರವು ಬ್ರಿಟಿಶ ಪ್ರಜೆಗಳನ್ನು ಕಡೆಗಣಿಸಲು ಒಪ್ಪಿದಂತಾಗಿದೆ. ಪಾರ್ಲಿಮೆಂಟಿನವರ ಈ ರೀತಿಯಾಗಿ ನಾಜಿ ತತ್ವವು ಅನುಯೋಗಿಸುತ್ತಿರುವುದನ್ನು ಕಡೆಗೂ ಯಾರೂ ಕಸರತ್ತದಿಲ್ಲ.

ಕರ್ನಾಟಕ ವಿದ್ಯಾವರ್ಧಕ ಸಂಘ ಧಾರವಾಡ

೧೯೪೦ರಲ್ಲಿ ಗ್ರಂಥಕರ್ತರಿಗೆ ಕೊಟ್ಟ ಬಹುಮಾನ

೧೯೪೦ನೆಯ ಇಸ್ವಿಯ ಒಳ್ಳೆ ಗ್ರಂಥಕರ್ತರಿಗೆ ಬಹುಮಾನವನ್ನು ಈ ಕೆಳಗೆ ಬರೆದ ೧೧ ಜನರಿಗೆ ಅವರ ಮುಂದೆ ಕಾಣಿಸಲಾದ ಗ್ರಂಥಗಳ ಬಗ್ಗೆ ಕೊಟ್ಟಿದೆಯೆಂದು ಗೌರವ ಕಾರ್ಯದರ್ಶಿಗಳು ತಿಳಿಸುತ್ತಾರೆ.

೧ ಪ್ರೊ. ಆರ್. ವ್ಹಿ. ಜಾಗೀರದಾರರು 'ಗೀತಾ ಗಾಂಧೀರ್ಯ' ೫೦ ರೂ. ೨ ಶ್ರೀ ಸಾಲಿ ರಾಮಚಂದ್ರರಾಯರು 'ತಿಳಿನಿಜ್ಞಾ' ೪೦ ರೂ. ೩ ಶ್ರೀ ಮಾಳಿಯ ತಿಮ್ಮಪ್ಪಯ್ಯನವರು 'ಸಮಗ್ರ ಭಾರತಸಾರ' ೩೫ ರೂ. ೪ ಸಿದ್ಧವನಹಳ್ಳಿ ಕೃಷ್ಣಶರ್ಮರು 'ಪರ್ಣಕುಟಿ' ೩೫ ರೂ. ೫ ಶ್ರೀ ಕಟ್ಟಿಗೆಹಳ್ಳಿ ಕೃಷ್ಣರಾಯರು 'ಮಕ್ಕಳ ತಂಪೆರೆಯ ಕಥೆಗಳು' ೩೫ ರೂ. ೬ ಶ್ರೀ ಯಲ್ಲಂಬಳಸೆ ಸುಬ್ರಹ್ಮಣ್ಯ ಶರ್ಮರು 'ಪರಮಾರ್ಥ ಚಿಂತಾಮಣಿ' ೩೫ ರೂ. ೭ ಶ್ರೀ ನೇಗಳೂರ ರಂಗನಾಥರಾಯರು 'ಶ್ರೀರಂಗ' ೩೫ ರೂ. ೮ ಶ್ರೀ ಎಸ್. ಪಾಟೀಲರು 'ತಕ್ಕಡಿ' ೩೫ ರೂ. ೯ ಶ್ರೀ ವಿ. ಬಿ. ಹಾಲಭಾವಿ ಶಂಕರರು 'ವಾಸಿಷ್ಠಮತ್ಸ್ಯಪುರಾಣ' ೩೦ ರೂ. ೧೦ ಶ್ರೀ ಬುರ್ಲಿ ಬಿಂದುಮಾಧವಾಚಾರ್ಯರು 'ಜ್ಞಾನೋಪಾಸನೆ' ೧೫ ರೂ. ೧೧ ಶ್ರೀ ಕಟ್ಟಿ ಶೇಷಾಚಾರ್ಯರು 'ಮೂರ್ಬಾಗಿಲಿ ಆಚಾರ್ಯರು' ೧೫ ರೂ.



‘ಭಾರತದ ರಾಜಕೀಯ ಸಮಸ್ಯೆ ಬಿಡಿಸಲು ಬಂದಿರುವೆನು’

ಸರ್ ಕ್ರಿಪ್ಸರು ಹೇಳಿದರು.

ಗಾಂಧಿಜಿಯವರನ್ನು ಸಂದರ್ಶಿಸುವರು

ಗೋಪಾಲನ್ ನಂಬಿಯಾರರಿಗೆ ಜೀವದಾನ ಮಾಡಿದರು

ಕ್ರಿಪ್ಸ್ ರಾಯಭಾರದ ಬಗ್ಗೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ ಒಡಕಾಗಿಲ್ಲ

ಎಂಬುದಾಗಿ ರಾಷ್ಟ್ರಪತಿ ಆಜಾದರು ಹೇಳಿಕೆಯಿತ್ತಿರುವರು. ಕ್ರಿಪ್ಸ್‌ರಾಯಭಾರದ ವಿಷಯವಾಗಿ, ಸರ್ದಾರ್ ಪಟೇಲರು ವಿರುದ್ಧವಿದ್ದಾರೆಂದು ನೆಹರು ಮತ್ತು ರಾಜಾಜಿ ಅನುಕೂಲವಿದ್ದಾರೆಂದೂ, ಕಾಂಗ್ರೆಸ್ ಸಂಘಟನವಾಗುವ ಸೂಚನೆ ಸ್ವೀಕರಿಸಿದರೆ ಸರ್ದಾರರು ರಾಜಿನಾಮೆ ಕೊಡುವರೆಂದೂ ಆಂಗ್ಲ ಪತ್ರಿಕೆಗಳಲ್ಲಿ ಸುದ್ದಿಬಂದದ್ದನ್ನು ಈ ಮೂಲಕ ಆಜಾದರು ಅಲ್ಲಗಳೆದಿರುವರು. ಕ್ರಿಪ್ಸರು ರಾಯಭಾರದ ಬಗ್ಗೆ ಏನೂ ಈಗ ಹೇಳಲಾಗುವುದಿಲ್ಲವೆಂದೂ ಅವರಿಂದ ತಿಳಕೊಂಡ ಮೇಲೆ ನಮ್ಮ ವಿಚಾರ ಹೇಳಬಹುದೆಂದೂ ಆಜಾದರು ಹೇಳಿ ಕಾಂಗ್ರೆಸ್ ಅಧ್ಯಕ್ಷನಾಗಿ ತಾನು ಅವರನ್ನು ಭೇಟಿಯಾಗುವೆನೆಂದೂ, ಪುನರ್ವಿಚಾರ ಮಾಡಬೇಕಾಗಿದ್ದರೆ ವರ್ಕಿಂಗ್ ಕಮಿಟಿ ಕರೆಯುವೆನೆಂದೂ ಅವರು ತಿಳಿಸಿದರು

ಕೇಂದ್ರ ಎಸೆಂಬ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಒಂದು ದಿವಸ ಭಾಗವಹಿಸಬಹುದು

ಎಂದು ತಿಳಿದಿದೆ, ತಾ. ೨೫ರ ಅಧಿವೇಶನಕ್ಕೆ ಕೇಂದ್ರ ಎಸೆಂಬ್ಲಿಯ ಕಾಂಗ್ರೆಸ್ ಪಕ್ಷದ ಸದಸ್ಯರ ಸಭೆ ಡಿಲ್ಲಿಯಲ್ಲಿ ಕೂಡುವುದು.

ಕಾಂಗ್ರೆಸ್ ಅಧ್ಯಕ್ಷರಿಗೆ ವೈಸರಾಯರ ತಂತಿ!

ಕ್ರಿಪ್ಸರ ಭೇಟಿಗೆ ಆಮಂತ್ರಣ

ರಾಷ್ಟ್ರಪತಿ ಮೌಲಾನಾ ಅಬುಲ್ ಕಲಂ ಆಜಾದರಿಗೆ ವೈಸರಾಯರಿಂದ ಕ್ರಿಪ್ಸರ ಭೇಟಿಯ ಬಗ್ಗೆ ಆಮಂತ್ರಣದ ತಂತಿ ಬಂದಿದೆ. ಸರ್ ಕ್ರಿಪ್ಸರು ನಾಲ್ಕು ಜನ ಕಾಂಗ್ರೆಸ್ ಪ್ರತಿನಿಧಿಗಳನ್ನು ಭೇಟಿಯಾಗಲು ಇಚ್ಛಿಸಿದಂತೆ, ಆಜಾದ್, ನೆಹರು, ರಾಜಾಜಿ, ಗಾಂಧಿಯವರು ಕ್ರಿಪ್ಸರೊಡನೆ ಮಾತನಾಡಬಹುದೆಂದು ತಿಳಿದಿದೆ. ಕಾಂಗ್ರೆಸ್ ವರ್ಕಿಂಗ್ ಕಮಿಟಿ ಆಜಾದರೊಬ್ಬರಿಗೇ ಅನುಮತಿಯಿತ್ತಿದೆ. ಹೀಗೆಯೇ ವೈಸರಾಯರಿಂದ ಬೇರೆ ಬೇರೆ ಪಕ್ಷದ ಅನೇಕ ಮಂದಿ ಮುಖಂಡರಿಗೆ ಕ್ರಿಪ್ಸರನ್ನು ಭೇಟಿಯಾಗಲು ಆಮಂತ್ರಣದ ತಂತಿ ಹೋಗಿರುವುದಾಗಿ ಅವರೆಲ್ಲರೂ ಈ ವಾರ ಡಿಲ್ಲಿಗೆ ತೆರಳುವರು. ಕ್ರಿಪ್ಸರು ವೈಸರಾಯರ ಮನೆಯಲ್ಲಿರುವುದಿಲವಾಗಿ ತಿಳಿದಿದೆ

ಭಾರತದ ಸ್ತ್ರೀಯರ ಸೈನ್ಯ

೧೮ ವರ್ಷದಿಂದ ೫೦ ವರ್ಷದೊಳಗಿನವರು

ಭಾರತದಲ್ಲಿ ಹೆಂಗುಸರು ೧೮ ವರ್ಷದಿಂದ ೫೦ ವರ್ಷದೊಳಗಿನವರು ಸೈನ್ಯಕ್ಕೆ ಸೇರಬಹುದಾಗಿ ಸರ್ಕಾರ ಪ್ರಕಟಿಸಿದೆ. ಯುದ್ಧ ಮುಗಿವವರೆಗೆ ಇವರಿಗೆ ಸಂಬಳ ಕೊಡಲಾಗುವುದು. ಇವರಿಗೆ ಟೆಲಿಫೋನ್, ವಯರ್‌ಲೆಸ್, ಆರ್ಡಿನೆನ್ಸ್ ಆಸ್ಪತ್ರೆಗಳಲ್ಲಿ ಕೆಲಸ ಕೊಡಲಾಗುವುದು

ಕ್ರಿಪ್ಸರು ವರ್ಧಾಕ್ಕೆ ಹೋಗುವರು?

ಗೋಪಾಲನ್ ನಂಬಿಯಾರ ಮರಣ ದಂಡನೆ ಶಿಕ್ಷೆ ತಪ್ಪೆಂದರು ನೆಹರು

ಸ್ಟಾಫೋರ್ಡ್ ಕ್ರಿಪ್ಸರು ಗಾಂಧಿಜಿ ಭೇಟಿಗಾಗಿ ವರ್ಧಾಕ್ಕೆ ತೆರಳುವರೆಂದು ಸುದ್ದಿಯುಂಟು. ಗೋಪಾಲನ್ ನಂಬಿಯಾರರಿಗೆ ಮರಣದಂಡನೆ ವಿಧಿಸಿದ್ದು ತಪ್ಪೆಂದು ಪಂಡಿತ ನೆಹರು ಒಂದು ಹೇಳಿಕೆ ಕೊಟ್ಟಿರುವರು

ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆ

ಕಳೆದ ವಾರ ವರ್ಧಾದಲ್ಲಿ ಸೇರಿತ್ತು. ಯುದ್ಧ ಪರಿಸ್ಥಿತಿ, ಕ್ರಿಪ್ಸರ ಆಗಮನ ವಿಚಾರ ಚರ್ಚೆಯಾಗಿತ್ತು. ಗಂಡಾಂತರ ಕಾಲದಲ್ಲಿ ಕಾಂಗ್ರೆಸಿನವರು ಮಾಡತಕ್ಕ ಕರ್ತವ್ಯದ ಕುರಿತು ವಿಮರ್ಶಿಸಲಾಯಿತು. ಕಾಂಗ್ರೆಸ್ ಮುಖಂಡರು ಕ್ರಿಪ್ಸರ ಭೇಟಿಯಾದ ಮೇಲೆ ಕೂಡಬಹುದೆಂದು ತಿಳಿದಿದೆ. ವರ್ಕಿಂಗ್ ಕಮಿಟಿ ಪ್ರಾರಂಭದಲ್ಲಿ ಬಜಾಜರ ನಿಧನದ ಬಗ್ಗೆ ಸಂತಾಪ ಸೂಚಕ ನಿರ್ಣಯವೊಂದು ಮಾಡಲಾಯಿತು.

ಕಾಂಗ್ರೆಸ್ ಲೀಗ್ ಒಪ್ಪಂದ ಪ್ರಯತ್ನ?

ಇದಕ್ಕಾಗಿ ಸಿಕಂದರರು ಸಾಧ್ಯವಾದೆಲ್ಲಾ ಪ್ರಯತ್ನ ಮಾಡುತ್ತಿರುವರಾಗಿ ಅವರೇ ಪ್ರಕಟಿಸಿದ್ದಾರೆ. ಹಿಂದುಗಳ ಹಕ್ಕಿಗೆ ತೊಂದರೆ ಬರುವಂತೆ ಕಾಂಗ್ರೆಸ್ ಲೀಗ್ ಒಪ್ಪಂದವಾಡಿದರೆ ನಾವದನ್ನು ಇದಿರಿಸುವೆವೆಂದು ಸಾವರ್ಕರ್ ನುಡಿದಿದ್ದಾರೆ. ಕ್ರಿಪ್ಸರು ಬರುವ ಮೊದಲು, ಕಾಂಗ್ರೆಸ್ ಲೀಗ್ ಒಪ್ಪಂದಮಾಡಿ, ಅವರ ಮುಂದೆ ಒಂದು ಸಂಯುಕ್ತ ಯೋಜನೆ ಇಡಬೇಕೆಂದು ಈ ಪ್ರಯತ್ನವಂತೆ.

ಗೋಪಾಲನ್ ನಂಬಿಯಾರರಿಗೆ ಜೀವದಾನವಾಯಿತು!

ಉತ್ತರ ಮಲಬಾರಿನ ದೊಂಬಿಯೊಂದರಲ್ಲಿ ಅಪಾದಿತರಾದ ಶ್ರೀ ಕೆ. ಪಿ. ಆರ್. ಗೋಪಾಲನ್ ನಂಬಿಯಾರರಿಗೆ ಮದ್ರಾಸು ಹೈಕೋರ್ಟಿನಲ್ಲಿ ಮರಣದಂಡನೆ ಶಿಕ್ಷೆ ವಿಧಿಸಲಾಗಿದ್ದು ಅವರಿಗೆ ಜೀವದಾನ ಮಾಡಬೇಕೆಂದು ಗವರ್ನರರಿಗೆ ಒಪ್ಪಿಸಲಾದ ವಿನಂತಿಯಂತೆ, ಗವರ್ನರರು ಮರಣದಂಡನೆ ಶಿಕ್ಷೆಯನ್ನು ಮಾಫಿ ಮಾಡಿ ಜನ್ಮಟಾಪು ಶಿಕ್ಷೆ ವಿಧಿಸಿರುವರಾಗಿ ತಿಳಿದಿದೆ

ಭಾರತಕ್ಕೆ ದೊಡ್ಡ ನೌಕಾಬಲ ಬೇಕು

ಆದ್ದರಿಂದ ಈಗಿರುವುದನ್ನು ಕೂಡಲೇ ದೊಡ್ಡದು ಮಾಡಬೇಕಾಗಿದೆ, ಹಡಗು ಕಟ್ಟುವ ಕಾರ್ಯವೂ ವಿಸ್ತರಿಸಬೇಕಾಗಿದೆ ಎಂಬುದಾಗಿ ಭಾರತದ ನೌಕಾಧಿಪತಿ ಸರ್ ಹರ್ಬರ್ಟ್ ಪಿಟ್ಸಿಬರ್ಟರು ಹೇಳಿದರು

ಉಪವಾಸದಿಂದ ಸಾಯುವುದನ್ನು ತಪ್ಪಿಸುವುದು

ಗಾಂಧಿಜಿ ಸೂಚನೆ

‘ಉಪವಾಸದಿಂದ ಸಾಯುತ್ತಿರುವವರನ್ನು ಹಾಗೂ ಸುಲಿಗೆಗೊಳಗಾದವರನ್ನು ರಕ್ಷಿಸುವುದು ಸರಕಾರ ರಕ್ಷಕ ದಲದವರ ಒಂದು ಕೆಲಸವಾಗಿದೆ. ಇಂತಹ ಗಂಡಾಂತರ ಕಾಲದಲ್ಲಿ ಆಹಾರವನ್ನು ಮಿತವ್ಯಯದಿಂದ ಉಪಯೋಗಿಸಬೇಕೆಂದು ನಾನು ಹಿಂದೆ ಸೂಚಿಸಿದ್ದೇನೆ. (೧) ಆಹಾರವು ಹಾಳಾಗದಂತೆ ಮತ್ತು ಶಾಸ್ತ್ರೀಯ ರೀತಿಯಿಂದ ಉಪಯೋಗಿಸಬೇಕು. (೨) ಆಯಾ ಕಾಲದಲ್ಲಿ ಬಿತ್ತಬೇಕಾದ ಬೆಳೆ ಆಹಾರಪದಾರ್ಥಗಳನ್ನು ಕೂಡಲೇ ಬಿತ್ತಬೇಕು (೩) ತಿನ್ನಲಿಕ್ಕೆ ಯೋಗ್ಯವಾದ ಕಂದಮೂಲಗಳನ್ನು ಉಪಯೋಗಿಸುವುದು (೪) ಯಾರೂ ಸೋಮಾರಿಗಳಾಗಬಾರದು. ಉದ್ಯೋಗವಿಲ್ಲದಿದ್ದರೆ ನೂಲಬೇಕು (೫) ಹಿಂದುಸ್ಥಾನದ ಮೇಲೆ ಧಾಳಿಯಾದರೆ ಆಹಾರ ಪದಾರ್ಥಗಳನ್ನು ಸಾಗಿಸುವುದು ಕಠಿಣ. ಹಾಗಾಗಿ ಹೆಚ್ಚಿದ್ದ ಸ್ಥಳಗಳಿಂದ ಇಲ್ಲದಲ್ಲಿಗೆ ಈಗಲೇ ಸಾಗಿಸಬೇಕು.’

ನಗರದ ಕೂಲಿಗಾರರ ಗತಿಯೇನು?

ಗಾಂಧಿಜಿ ಸೂಚನೆ

ನಗರದ ಕೂಲಿಗಾರರು ತಮ್ಮ ಒಡೆಯರೊಡನೆಯೇ ಹಳ್ಳಿಗಳಿಗೆ ಹೋಗುವುದು ಸಾಧ್ಯವಿಲ್ಲ. ಅಂಥವರು ಹಳ್ಳಿಗಳಿಗೆ ಹೋಗುವ ಸಂಕಲ್ಪ ಮಾಡಬೇಕು. ಅಲ್ಲಿ ಉದ್ಯೋಗ ಸಿಗದಿದ್ದರೆ ನೂಲುವುದನ್ನು ಪ್ರಾರಂಭಿಸಬೇಕು

ಡಿಲ್ಲಿಯಲ್ಲಿ ಕ್ರಿಪ್ಸ್

ಸರ್ ಕ್ರಿಪ್ಸರು ಕರಾಚಿಗೆ ಮೊದಲು ಬಂದಿಳಿದರು. ಅಲ್ಲಿಂದ ಅವರು ಡಿಲ್ಲಿಗೆ ಬಂದರು. ಅವರನ್ನು ಅಲ್ಲಿಂದ ವೈಸರಾಯ ಭವನಕ್ಕೆ ಕರೆದುಕೊಂಡು ಹೋದರು. ಅಧಿಕಾರಿಗಳೊಡನೆ ತಾ. ೨೫ರಂದೇ ವಿಚಾರ ವಿನಿಮಯ ಪ್ರಾರಂಭವಾಗುವುದು. ಜಿನ್ನಾ, ಭೂಲಾಭಾಯಿಗಳು ಬಂದಿದ್ದಾರೆ. ರಾಜಾಜಿ ಬೇಗನೇ ಬರುವರು. ಆಶ್ರಿತ ರಾಜರ ಪ್ರತಿನಿಧಿ ಛತ್ತಾರಿನ ನವಾಬರು ಬಂದಿರುವರು. ಆಜಾದರೂ ಬೇಗನೇ ಬರಲಿದ್ದಾರೆ. ಪ್ರಾಂತಗಳ ಗವರ್ನರರೂ ಒಬ್ಬೊಬ್ಬರೇ ಬರುತ್ತಿದ್ದಾರೆ. ಕ್ರಿಪ್ಸರ ಜೊತೆಯಲ್ಲಿ ಕೆನಡದ ಅರ್ಥಶಾಸ್ತ್ರ ಪ್ರಾವೀಣ್ಯತೆ ಇದ್ದ ಸ್ಕೀ ಮತ್ತು ಓವೆನ್ ಎಂಬಿಬ್ಬರೂ ಬಂದಿದ್ದರು. ಸರ್ ಸ್ಟಾಫೋರ್ಡ್ ಕ್ರಿಪ್ಸರು ಒಂದು ಹೇಳಿಕೆಯಿತ್ತು, ಒಪ್ಪಂದವಾದರೆ ಯುದ್ಧಪ್ರಯತ್ನಕ್ಕೆ ಸಹಾಯ ಮಾಡಲು ಸಿದ್ಧರಾಗಬೇಕೆಂದೂ ಹಿಂದುಸ್ಥಾನದ ರಾಜಕೀಯ ಬಿಕ್ಕಟ್ಟನ್ನು ಬಿಡಿಸಲು ತಾನು ಬಂದಿರುವೆನೆಂದೂ ಹೇಳಿ ತಾನು ಗಾಂಧಿಜಿಯನ್ನು ಭೇಟಿಯಾಗುವೆನೆಂದರು

ಹಿಟ್ಲರ್ ಮತ್ತು ಹಿಂದುಸ್ಥಾನ.

ಬ್ರಿಟಿಷರೊಡನೆ ಸ್ನೇಹದಿಂದಿರುವಾಗ, ಹಿಟ್ಲರನು ತನ್ನ ಆತ್ಮಚರಿತ್ರೆಯನ್ನು ಬರೆದನು. ಅದರಿಂದ ಆತನು ಹಿಂದೂದೇಶದಲ್ಲಿ ಬ್ರಿಟಿಷರ ಆಳುವಿಕೆಯನ್ನು ಸಮರ್ಥಿಸಿದ್ದನಲ್ಲದೆ, ಇನ್ನೂ ಉಗ್ರವಾಗಿರಬೇಕೆಂದು ಸೂಚಿಸಿದ್ದ. ಆದರೆ ಈಗ ಅವನ ಅಭಿಪ್ರಾಯ ಒಮ್ಮೆಗೇ ಬದಲಾದಂತೆ ತೋರುತ್ತದೆ. ಈ ಯುದ್ಧದಲ್ಲಿ ಜರ್ಮನರಿಗೆ ಜಯವಾದರೆ ಅವರು ಹಿಂದೆ ಎಂದೂ ಇರದಂತಹ ಉಗ್ರ ಸಾಮ್ರಾಜ್ಯವನ್ನು ಸ್ಥಾಪಿಸುವುದರಲ್ಲಿ ಸಂದೇಹವಿಲ್ಲ ಎಂದು ನ್ಯೂಸ್ ಕ್ರಾನಿಕಲ್‌ನಲ್ಲಿ ಡೊರೊಥಿ ಥಾಮ್ಸನ್ ಎಂಬಾಕೆ ಬರೆಯುತ್ತಾಳೆ.

ಬೇಗನೇ ಕಮ್ಯುನಿಸ್ಟರ ಬಿಡುಗಡೆ?

ಭಾರತದ ಕಮ್ಯುನಿಸ್ಟರನ್ನು ಬೇಗನೇ ಸರಕಾರದವರು ಬಿಡುಗಡೆ ಮಾಡಲಿರುವರೆಂದು ಈ ಸಂಬಂಧ ಮಾತುಕತೆಗಳು ನಡೆಯುತ್ತಿರುವವೆಂದೂ ಒಂದು ವದಂತಿ. ಕಮ್ಯುನಿಸ್ಟ್ ಮುಖಂಡರಾದ ಡಾ. ಕೆ. ಎಂ. ಅಶ್ರಫ್, ರಷೀದ್, ಎಂ. ಅಹಮ್ಮದ್, ಶಾ ಅಬುಲ್ ವೈಜಿ, ರಜನೀಶಚಂದ್ರ ಸಿಂಹ ಮೊದಲಾದವರನ್ನು ಬೇಗನೇ ಬಿಡುಗಡೆ ಮಾಡಲಾಗುವುದೆಂದು ಸುದ್ದಿ. ಇವರೊಡನೆ ಒಂದು ಒಪ್ಪಂದ ಆಗುವುದಂತೆ.

ಸಿಮ್ಲಾ-ರಾವಲ್ ಪಿಂಡಿಯಲ್ಲಿ ಭೂಕಂಪಿಸಿತು

ಎಂದು ಸುದ್ದಿ. ಆದರೆ ಅದರಿಂದ ಏನೂ ಹಾನಿಯಾದ ವಿಷಯ ತಿಳಿದಿಲ್ಲ.

ಮೊರೆಸ್ಬಿ ಬಂದರದ ಮೇಲೆ ಜಪಾನರ ಬಾಂಬು

ಆಸ್ಟ್ರೇಲಿಯವನ್ನು ಆಕ್ರಮಿಸಿದರೆ?

ರಶ್ಯನರಿಗೆ ಹೆಚ್ಚಿನ ವಿಜಯಗಳು

ಹಂಗೇರಿ ರುಮೇನಿಯಾ ಕಲಹ

ಬರ್ಮಾ ರಣಭೂಮಿ

ಜಪಾನಿಯರು ವಿಮಾನದಲವನ್ನು ಈಗ ಹೆಚ್ಚಿಸುತ್ತಿದ್ದಾರೆ. ಬೇಗನೇ ಬರ್ಮಾದ ಸ್ಥಿತಿ ಹೋಗುವುದೆಂದೂ ಉಗ್ರ ಹಾಗೂ ಕೊನೆಯ ಕಾಳಗವಾಗುವುದೆಂದೂ ತಿಳಿದಿದೆ. ಮಂಡಲೆ ಮಾರ್ಗದಲ್ಲಿರುವ ಟೊಂಗೂ ನಗರವನ್ನು ಆಕ್ರಮಿಸಲಾಗಿದೆಯೆಂದೂ, ಪ್ರೋಮಿ ರಸ್ತೆಯ ಅರ್ಧ ಭಾಗದಲ್ಲಿದ್ದ ಲೆಪಾದನ ನಗರವನ್ನು ವಶಪಡಿಸಿಕೊಂಡಿರುವುದಾಗಿಯೂ ಜಪಾನೀಯರು ಹೇಳುತ್ತಾರೆ. ಚೀನೀ ಸೈನಿಕರು ಬರ್ಮಾದಲ್ಲಿ ಜಪಾನೀಯರನ್ನು ಬಲವಂತವಾಗಿ ಎದುರಿಸುತ್ತಾರೆ.

ರಶ್ಯನ್ ರಣಭೂಮಿಯಲ್ಲಿ

ಪರಿಸ್ಥಿತಿ ಏನೂ ಬದಲಾವಣೆಯಿಲ್ಲ. ಸ್ಟೆಬಸ್ಟವಾಲನ್ನು ಆಕ್ರಮಿಸಿದ ರಶ್ಯನ್ ಸೈನಿಕರನ್ನು ಹೊಗಳಿ ಪ್ರವಾಢ ಪತ್ರಿಕೆ ಬರೆದಿದೆ. ಅಮೆರಿಕನರು ರಶ್ಯಕ್ಕೆ ಕಳುಹಿಸಿದ ಎರೊಕೊಬ್ರಾಭಾಸ್ ವಿಮಾನಗಳು ಜರ್ಮನರು ಉಪಯೋಗಿಸುವ ಹೊಸ ಮಿನರಮಿಟ್ ವಿಮಾನಗಳಿಗಿಂತ ವಿಶೇಷವಾಗಿದೆ.

ಲಿಬಿಯದಲ್ಲಿ

ವಿಶೇಷವೇನೂ ಇಲ್ಲ. ಆರ್. ಎ. ಎಫ್ ವಿಮಾನಗಳು ಮರ್ತುಬಾ ವಿಮಾನ ಗೃಹದ ಮೇಲೆ ಆಕ್ರಮಣ ನಡೆಸಿದವು. ಮಾಲ್ಟಾದ ಮೇಲೆ ವೈರಿ ವಿಮಾನಗಳು ಹಗಲಿರುಳು ಧಾಳಿ ಮಾಡುತ್ತಿವೆ.

ಬ್ರಿಟನಿಗೆ ಬಾಂಬು

ಇತ್ತೀಚೆಗೆ ಶತ್ರುಗಳಿಂದ ಹಾಕಲಾಯಿತಾದರೂ ವಿಶೇಷ ಹಾನಿಯೇನೂ ಅದರಿಂದ ಆಗಲಿಲ್ಲವೆಂದು ಪ್ರಕಟವಾಗಿದೆ

ಮೊರೆಸ್ಬಿ ಬಂದರಕ್ಕೆ ಜಪಾನರ ಬಾಂಬು

ಬಿಸ್ಸಿದಯಾಗಿ ತಿಳಿದಿದೆ. ಎಂದಾಮಿಗೂ ಆಕ್ರಮಣವಾಗಿದೆ. ನ್ಯೂಗಿನಿಯಲ್ಲಿ ಮಿತ್ರ ಪಕ್ಷದವರು ಪ್ರತಿಭಟನೆ ಮಾಡುತ್ತಿದ್ದಾರೆ ಆಸ್ಟ್ರೇಲಿಯದ ಯುದ್ಧ ಹೀಗೆ ಈಗಾಗಲೇ ಆರಂಭವಾಗಿದೆ

ಪಂಚಮ ದಳದವರು

ಜಪಾನು ಆಕ್ರಮಣಮಾಡುವ ರಾಷ್ಟ್ರಗಳಲ್ಲಿ ಪಂಚಮದಳದವರ ಕೆಲಸಗಳು ಭರದಿಂದ ಸಾಗುತ್ತಿರುವುದಾಗಿ ತಿಳಿದಿದೆ ಬರ್ಮಾದಲ್ಲಿ ಪಂಚಮ ದಳದವರು ತುಂಬಿಹೋಗಿರುವರಂತೆ. ನ್ಯೂಗಿನಿಯಲ್ಲಿಯೂ ಅದೇ ಅವಸ್ಥೆಯಾಗಿದೆಯೆಂದು ತಿಳಿದಿದೆ.

ಬೊರಿಸ್ ಹಿಟ್ಲರ್ ಭೇಟಿ

ಹಿಟ್ಲರನಿಂದ ಆಮಂತ್ರಣ ಬಂದಿರುವುದರಿಂದ, ಬಲ್ಗೇರಿಯದ ಅರಸು ಬೋರಿಸ್ ಬರ್ಲಿನಗೆ ಹೋಗಿದ್ದಾರೆ. ರಕ್ಷಣೆಗೆ ಸ್ವಲ್ಪ ಸೈನ್ಯ ಕಳುಹಿಸುವಂತೆ ಬಲ್ಗೇರಿಯಕ್ಕೆ ಹಿಟ್ಲರ್ ಒತ್ತಾಯ ಹಾಕಿರುವನೆಂದು ಸುದ್ದಿಯಿದೆ

ಸಿಕಂದರ ರಾಜಿನಾಮೆ

ಮುಸ್ಲಿಂ ಲೀಗಿನ ಸರ್ ಸಿಕಂದರರು ರಾಜಿನಾಮೆ ಕೊಡುವರೆಂದು ಪ್ರಸಿದ್ಧವಾಗಿದ್ದು ಅದನ್ನು ಅವರೇ ಅಲ್ಲಗಳೆದಿದ್ದಾರೆ. ಆದರೆ ಲೀಗ್ ಕೌನ್ಸಿಲ್ ಮತ್ತು ಕಾರ್ಯಕಾರೀ ಮಂಡಳಿಗೆ ರಾಜಿನಾಮೆ ಕೊಟ್ಟಿಲ್ಲವೇ ಎಂದು ತಿಳಿದಿಲ್ಲ. ಅವರ ನಿವಾರಣೆಯಿಂದ ಇನ್ನೂ ರಹಸ್ಯ ಹೆಚ್ಚಾಗಿದೆಯೆಂದು ಅಸೋಸಿಯೇಟೆಡ್ ಪ್ರೆಸ್ ಸುದ್ದಿ.

ಮದ್ರಾಸಿಗೆ ಮಾಪಿಳ್ಳೆಯವರನ್ನು

ರಕ್ಷಣೆಗೆ ಸರಕಾರದವರು ಕೂಡಿಸುವರಂತೆ ಸುಮಾರು ೫೦೦೦ ಎ. ಆರ್. ಪಿ ವಾರ್ಡನರನ್ನು ನಿಯಮಿಸಲಾಗಿದೆಯೆಂದು ಪ್ರಸಿದ್ಧವಾಗಿದೆ. ನಗರ ರಕ್ಷಣೆಗೆ ಮಲಬಾರನ ಮಾಪಿಳ್ಳೆಯವರನ್ನೇ ಹೆಚ್ಚಾಗಿ ಕೂಡಿಸಲಾಗುವುದೆಂದು ಪ್ರಕಟವಾಗಿದೆ.

ಹಂಗೇರಿ ರುಮೇನಿಯಾ ಬಡಿದಾಟ

ಟ್ರಾನ್ಸಿಲ್ವೇನಿಯ ಪ್ರಾಂತದ ಸಲುವಾಗಿ ಈ ರಾಷ್ಟ್ರಗಳೊಳಗೆ ಕಲಹವುಂಟಾಗಿರುವುದೆಂದು ಸುದ್ದಿ ಇದರಿಂದ ಜರ್ಮನಿಗೆ ಚಿಂತೆಯುಂಟಾಗಿರುವುದಂತೆ

ನಾರ್ವೆ ಹಡಗುಗಳ ಮೇಲೆ ಜಪಾನ್ ದೃಷ್ಟಿ

ಇರುವುದಾಗಿ ಸುದ್ದಿ ಪೆಸಿಫಿಕ್ ಸಾಗರದಲ್ಲಿರುವ ನಾರ್ವೆ ಹಡಗುಗಳೆಲ್ಲವೂ ಎಪ್ರಿಲ್ ೧೫ರೊಳಗೆ ಜಪಾನರ ವಶದಲ್ಲಿರುವ ಬಂದರಗಳಿಗೆ ಹೋಗಬೇಕೆಂದು ಕ್ವಿಸ್ ಲಿಂಗ್ ಸರಕಾರವು ಆಜ್ಞೆ ಹೊರಡಿಸಿರುವುದಂತೆ.

ಅಮೆರಿಕದ ತಯಾರಿ

ಅಮೆರಿಕದಲ್ಲಿ ಇಷ್ಟರೊಳಗೆಯೇ ಸುಮಾರು ೧೫೦೦ ಟನ್ನಿನಷ್ಟು ಕೃತ್ರಿಮ ರಬ್ಬರು ತಯಾರಾಗಿರುವುದಾಗಿ ತಿಳಿದಿದೆ. ಅಮೆರಿಕದಲ್ಲಿರುವ ಚೀನೀಯರು, ಹಿಂದೀಯರು, ಫಿಲಿಪ್ಪೈನರೇ ಮೊದಲಾದವರು ಒಂದು ಮಿತ್ರ ಸೈನ್ಯ ತಯಾರಿಸಿದ್ದಾರಂತೆ. ಅಮೇರಿಕದ ಪಶ್ಚಿಮ ಕರಾವಳಿಯಲ್ಲಿರುವ ವಿದೇಶೀಯರನ್ನು ಅದರಲ್ಲೂ ಅಲ್ಲಿರುವ ಜಪಾನರನ್ನು ಬೇರೆ ಕಡೆಗೆ ಸಾಗಿಸಲಿಕ್ಕಿದೆ. ಅಟ್ಲಾಂಟಿಕ್ ಕರಾವಳಿಯಲ್ಲಿ ಇತ್ತೀಚೆಗೆ ಮೂರು ಅಮೇರಿಕನ್ ಹಡಗುಗಳು ಮುಳುಗಿದವು.

ಜಪಾನರ ವಿಮಾನಬಲ ಹೆಚ್ಚಿದೆ

ಯೆಂದೂ, ಪೂರ್ವದಲ್ಲಿ ಅವರು ಬೇಗನೇ ತೀವ್ರ ಹೋರಾಟವಮಾಡಿ, ಅಲ್ಲಿನ ಯುದ್ಧವನ್ನು ಕೊನೆಗಾಣಿಸುವರೆಂದೂ ರೂಟರ್ ಸುದ್ದಿ. ಸಮುದ್ರಮಾರ್ಗವಾಗಿಯೂ ಜಪಾನರು ಧಾಳಿಮಾಡುತ್ತಿರುವರಂತೆ. ಲೆಪಾದನ ಎಂಬ ಹಳ್ಳಿಯಲ್ಲಿ ಬರ್ಮದಲ್ಲಿ ಜಪಾನರು ಆಕ್ರಮಿಸಿಕೊಂಡರೆಂದು ಸುದ್ದಿ.

ಚೀನೀ ಕರಾವಳಿಯಲ್ಲಿ ಜಪಾನೀ ಹಡಗಗಳು

ಇತ್ತೀಚೆಗೆ ಓಡಾಡುತ್ತಿವೆಯೆಂದು ಸುದ್ದಿ. ಫೂಚಾ ಹತ್ತಿರ ಚೀನದ ಹಡಗೊಂದು ಮುಳುಗಿತಂತೆ. ದಕ್ಷಿಣದಲ್ಲಿ ಹಾಂಕಾಂಗ್ ಬಳಿಯಲ್ಲಿಯೂ ಜಪಾನ್ ಹಡಗು ಸಂಚಾರವಿದೆಯಾಗಿ ಸುದ್ದಿ.

ಪೋಪರ ಜಪಾನೀ ಸಂದೇಶ

ಪೋಪರು, ಆಂಗ್ಲೋ ಅಮೆರಿಕನ್ ಒಪ್ಪಂದವನ್ನು ಮುರಿದು ಜಪಾನಿನೊಡನೆ ವ್ಯವಹಾರದಲ್ಲಿರುವರೆಂದು ಒಂದು ಸುದ್ದಿಯಿದೆ ಹಿಂದಿನ ಜಪಾನಿನ ವಿದೇಶಮಂತ್ರಿ ಮಾಟುಸೂಕಾರವು ವೆಟಿಕನ್ ಸಿಟಿಗೆ ಸೇರಿರುವರೆಂದೂ ವಾರ್ತೆ.

ಚೀನಕ್ಕೆ ಅಮೇರಿಕದ ಸಾಲ

ಸಿಕ್ಕಿದೆಯೆಂದೂ, ಅದರಿಂದ ಚೀನದ ಯುದ್ಧಯತ್ನಕ್ಕೆ ಹೆಚ್ಚಿನ ಸಹಾಯವಾಗುವುದೆಂದೂ ತಿಳಿದಿದೆ.

ಹಿಂದೂದೇಶದಲ್ಲಿ ಸುದ್ದಿ ಕೊಡುವ

ವಿಚಾರವಾಗಿ ಪಾರ್ಲಿಮೆಂಟಿನಲ್ಲಿ ಬೇಗನೇ ಪ್ರಶ್ನೆಯೆತ್ತಲಾಗುವುದೆಂದು ಸುದ್ದಿ.

ವಿಚಿ-ಅಮೆರಿಕಾ ಸಂಬಂಧ

ದಲ್ಲಿ, ಮಾತುಕತೆ ನಡೆಯುತ್ತಿದ್ದರೂ ಯಾವುದೇ ಒಪ್ಪಂದಕ್ಕೆ ಸಹಿಯಾದ ವಿಚಾರ ಇದುವರೆಗೆ ಪ್ರಕಟವಾಗಿಲ್ಲ.

ಪ್ರಿನ್ಸಿಪಾಲ್ ಸಾರನಾಥರ ರಾಜಿನಾಮೆ

ರಾಜಾಜಿಯವರು ತ್ರಿಚಿನಾಪಳ್ಳಿ ನೇಶನಲ್ ಕಾಲೇಜಿಗೆ ಹೋಗಿದ್ದಾಗ, 'ಅಲ್ಲಿನ ಪ್ರಿನ್ಸಿಪಾಲ್ ಸಾರನಾಥ ಅಯ್ಯಂಗಾರರು ಆಕ್ಷೇಪಕರ ಭಾಷಣವನ್ನಾಡಿದರೆಂದು, ಕಾಲೇಜ್ ಕಮಿಟಿಯವರು ಪ್ರಿನ್ಸಿಪಾಲರನ್ನು ರಾಜಿನಾಮೆ ಕೊಡಬೇಕೆಂದು ಹೇಳಿದಂತೆ ಅವರು ರಾಜಿನಾಮೆ ಒಪ್ಪಿಸಿದ್ದಾರೆ.

ಸ್ಟೇಟ್ಸ್‌ಮೆನ್ ಬರೆವುದು ಸುಳ್ಳು

'ನಮಗೂ ಸುಭಾಸರಿಗೂ ಭಿನ್ನತೆ ಇದೆ; ಆದರೆ ಗಾಂಧಿಜಿಯವರ ಆಪ್ತರೂ, ವರ್ಕಿಂಗ್ ಕಮಿಟಿ ಸದಸ್ಯರೂ ಆಗಿದ್ದ ಸುಭಾಸರು ಪರದೇಶಗಳಿಂದ ಹಣ ಪಡೆಯುತ್ತಿರುವರೆಂದು ಸ್ಟೇಟ್ಸ್‌ಮೆನ್ ಬರೆವುದು ಸುಳ್ಳು ಎಂದು ಆಚಾರ್ಯ ಕೃಪಾಲನಿ ಹೇಳಿದರು.

ಕಾಂಗ್ರೆಸಿನ ಶಾಂತಿದಳ

ಕಾಂಗ್ರೆಸ್ಸಿನವರು ಈಗ ಶಾಂತಿದಳವೆಂಬ ಸ್ವಯಂಸೇವಕ ದಳವನ್ನು ಅಲ್ಲಲ್ಲಿ ರಚಿಸುತಿದ್ದಾರೆ. ಇವರು ನಗರರಕ್ಷಣೆ, ಬಾಂಬುಧಾಳಿಯಾದರೆ ಜನರಿಗೆ ಸಹಾಯಮಾಡುವುದು, ಆಹಾರಸಾಮಗ್ರಿಗಳನ್ನು ಒದಗಿಸುವುದೇ ಮೊದಲಾದ ಕಾರ್ಯ ಮಾಡುವರು

ಬರ್ಮಾ ನಿರಾಶ್ರಿತರು

ಬರ್ಮಾದೇಶದಿಂದ ಹಿಂದೂದೇಶಕ್ಕೆ ಪ್ರತಿದಿನವೊಂದಕ್ಕೆ ಸಾವಿರಾರು ಮಂದಿ ನಿರಾಶ್ರಿತರು ಬರುತಿದ್ದಾರೆ.

NOTICE

In the Court of the District Munsiff of Mangalore

S E P No. 37,1942.
(claim No 1102/1940-41)

Between

The M C C Bank Ltd; *Petitioner*

and

1. Victor Saldanha 2. Cyprian A. Saldanha sons of Marian Saldanha, residing near Valencia Church, Mangalore—*Respondents*

To Respondents abovenamed

Please take notice that the Petitioner (Decree-Holder) has in execution of the decree in claim No. 1102/1940-41 has applied for your arrest and detension in civil and that the said execution stands posted to 10-4-1942 at 10-30 a. m. for hearing.

(By Order of Court)

Mangalore, 23-3-1942. } L C Pais, B A, B L, Vakil for Petitioner.

The Canara Banking Corporation Ltd.

(Incorporated in British India with limited liability)

Estd 1906.

OUR RATES OF INTEREST ON DEPOSITS

Current	1%	p. a.
Savings Bank	2½%	,,
Short-term	1¼%	,,
FIXED FOR 3 MONTHS	2%	,,
6 ,,	2¼%	,,
9 ,,	2½%	,,
12 ,,	3%	,,
24 ,,	3½%	,,

Advances made at cheap rates of interest against approved securities and Banking business of every description transacted.

MONEY TO LEND

Over Forty Lacs of idle funds are awaiting investment in the shape of loans on gold, Government securities, shares of approved companies, life insurance policies having sufficient surrender value, grains and other agricultural produce, etc., etc.

You are cordially invited to utilize these facilities.

CANARA BANK, LIMITED.

ESTD. 1906.

ಜಿಲ್ಲಾ ಸಮಾಚಾರಗಳು

ಮಂಗಳೂರು

ಮುನ್ಸಿಪಲ್ ಕೌನ್ಸಿಲು

ಕಳೆದ ಸೋಮವಾರ ಸಂಜೆ ಚೆಯರ್‌ಮ್ಯಾನ್ ಶ್ರೀ. ಬಿ. ವೆಂಕಟರಾವ್ ಬಾಳಿಗಾ ಎಂ. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರುಗಿತು. ಕ್ರೈಸ್ತ ಪಾದರಿಗಳಿಗೆ ವೃತ್ತಿತೆರಿಗೆ ವಿಧಿಸಬೇಕೆಂಬ ಸರಕಾರಿ ಹುಕುಮನ್ನು ರಿಕಾರ್ಡ್ ಮಾಡಲಾಯಿತು; ಸೆಂಟ್‌ಲ್ಯಾಂಡ್‌ಪೇಟೆಯ ಅಂಗಸಾಧನೆಯ ಮಂದಿರಕ್ಕೆಂದು ೧ ಸಾವಿರ ರೂಪಾಯಿ ಮಂಜೂರಾಯಿತು; ಮುನ್ಸಿಪಲ್ ಪ್ರಾವಿಡೆಂಟ್ ಫಂಡಿನಿಂದ ರೂ. ೬ ಸಾವಿರವನ್ನು ಇಂಡಿಯಾ ಸರಕಾರದ ಡಿಫೆನ್ಸ್ ಬಾಂಡುಗಳಲ್ಲಿ ವಿನಿಯೋಗಿಸಬಹುದೆಂದು ಸೂಚಿಸಿದ್ದ ಕಮಿಶನರರ ಅರಿಕೆಗೆ ಪ್ರತಿಯಾಗಿ ಆ ಮೊತ್ತವನ್ನು 'ಸೆ. ಲ್ಯಾಂಡ್ ಮೋರ್ಗೇಜ್ ಬೇಂಕ್, ಮದ್ರಾಸ್' ಇದರಲ್ಲಿ ವಿನಿಯೋಗಿಸಬೇಕೆಂದು ಕೌನ್ಸಿಲು ನಿರ್ಧರಿಸಿತು; ಮುನ್ಸಿಪಾಲಿಟಿಯಲ್ಲಿ ಈಗಿರುವ ಟೆಂಕಿಯಾರಿಸುವ ಯಂತ್ರವು ನಿತ್ಯವೂ ಮುನ್ಸಿಪಾಲಿಟಿಗಾಗಿ ಉಪಯೋಗವಾಗುತ್ತಿರುವುದರಿಂದ, ಅದನ್ನು ಜಿಲ್ಲಾ ಪೋಲಿಸ್ ಸುಪರಿಂಟೆಂಡೆಂಟರ ವಶಕೊಡಬೇಕೆನ್ನುವ ಜಿಲ್ಲಾ ಮ್ಯಾಜಿಸ್ಟ್ರೇಟರ ಅರಿಕೆಯು ಮನ್ನಿಸಲ್ಪಡಲು ಅನಾನುಕೂಲವೆಂದೂ ಕೆಲ್ಸೀರು ಟೌನ್ ಪ್ಲಾನಿಂಗಿನಲ್ಲಿ ಉಳಿತಾಯವಾಗಿರುವ ೧೦ ಸಾವಿರ ರೂಪಾಯಿಗಳಿಂದ, ಇನ್ನೊಂದು ಟೆಂಕಿಯಾರಿಸುವ ಯಂತ್ರವನ್ನು, ಎ. ಆರ್. ಪಿ. ಉದ್ದೇಶಗಳಿಗಾಗಿ ಮುನಿಸಿಪಾಲಿಟಿ ಕೊಳ್ಳುವಂತೆ ಆ ಮೊತ್ತದ ವಿನಿಯೋಗಕ್ಕಾಗಿ ಸರಕಾರವನ್ನು ಪ್ರಾರ್ಥಿಸಬೇಕೆಂದೂ ನಿರ್ಧಾರವಾಯಿತು; ಈ ಮುನಿಸಿಪಾಲಿಟಿಯ ಎಕ್ಸೈಜ್ ಲೈಸನ್ಸಿಂಗ್ ಬೋರ್ಡಿನ ಪ್ರತಿನಿಧಿ ಸದಸ್ಯರಾಗಿ ಶ್ರೀ ಎಂ. ಆರ್. ಭಟ್ಟರನ್ನೇ ತಿರುಗಿ ಚುನಾಯಿಸಲಾಯಿತು. ಮಂಗಳೂರು ಪೋರ್ಟ್ ಕನ್ಸರ್ವೆನ್ಸಿ ಬೋರ್ಡಿನವರು ಈ ಮುನಿಸಿಪಾಲಿಟಿಯ ಒಬ್ಬ ಪ್ರತಿನಿಧಿ ಆ ಬೋರ್ಡಿನಲ್ಲಿ ಆಗತ್ಯವಿಲ್ಲವೆಂದರೂ, ಆ ಪ್ರಾತಿನಿಧ್ಯದ ಆಗತ್ಯವಿದೆ ಎಂದು ಒತ್ತಾಯಿಸುವಂತೆ ನಿರ್ಣಯಿಸಲಾಯಿತು. ಮುನ್ಸಿಪಲ್ ಕೌನ್ಸಿಲು ಈಶ್ವರಾನಂದ ಮಹಿಳಾ ಸೇವಾಶ್ರಮಕ್ಕೆ (ರೂ. ೩೦೦ರೊಡನೆ) ಕೊಟ್ಟಿದ್ದ ಹೆಚ್ಚಿಗೆನ ರೂ. ೨೦೦ರ ಗ್ರಾಂಟನ್ನು ವಿದ್ಯಾಂಗದ ಡೈರೆಕ್ಟರರು ಮಂಜೂರು ಮಾಡಲಿಲ್ಲವೆಂಬ ವಿಚಾರವನ್ನು ಕೌನ್ಸಿಲು ರಿಕಾರ್ಡ್ ಮಾಡಿತು.

ಬೋಳಾರ:- ದೇವರ ಪ್ರತಿಷ್ಠೆ ಮತ್ತು ಬ್ರಹ್ಮಕಲಶ—ಬೋಳಾರ ಹಳೇಕೋಟೆ ಶ್ರೀ ಮಾರಿಯಮ್ಮ ದೇವಸ್ಥಾನದ ಬಾಬ್ತು ಹೊಸತಾಗಿ ಕಟ್ಟಿಸಿದ ಭಂಡಾರದ ಮನೆಯಲ್ಲಿ ಇದೇ ಚಿತ್ರಭಾನು ಸಂ|ದ ಮೀನ ಮಾಸ ದಿನ ೨೨ ಸಲುವ ತಾ. ೫—೪—೧೯೪೨ನೇ ರವಿವಾರ ದಿವಸ ಪ್ರಾತಃಕಾಲ ೫ ಘಂಟೆ ಸಮಯಕ್ಕೆ ಎಲ್ಲಾ ದೇವರ ಪ್ರತಿಷ್ಠೆ ಮಾಡಿ ಕಲಶಾಭಿಷೇಕಆಗಿ ತದ್ದಿನ ಮಧ್ಯಾಹ್ನಕ್ಕೆ ಶ್ರೀ ಮಾರ್ಯಮ್ಮ ದೇವರ ದೇವಸ್ಥಾನದಲ್ಲಿ ಅಲಂಕಾರ ಪೂಜೆ ಮಾರಣೆ ಚಂದ್ರವಾರ ದಿವಸ ರಾತ್ರೆ ೮ ಘಂಟೆ ಸಮಯಕ್ಕೆ ದೀಪಾರಾಧನೆ ಮಾರಣೆ ಕುಜವಾರ ದಿವಸ ಶ್ಯಾಮ ಘಂಟೆ ೫ಕ್ಕೆ ಬಂಡಿ ಉತ್ಸವ ಹೀಗೆ ೩ ದಿವಸಗಳ ಉತ್ಸವ ಮಾಡುವದೆಂತ ನಿಶ್ಚಯಿಸಿರುವುದರಿಂದ, ಆಸ್ತಿಕ ಭಕ್ತವೃಂದದವರೆಲ್ಲರೂ ತಮ್ಮ ಬಂಧುಬಾಂಧವರೊಂದಿಗೆ ಬಂದು ತಮ್ಮ ಹರಿಕೆ ಕಾಣಿಕೆಗಳನ್ನು ಒಪ್ಪಿಸಿ ಶ್ರೀ ದೇವಿಯರ ಪ್ರಸಾದವನ್ನು ಸ್ವೀಕರಿಸಬೇಕಾಗಿ ಸದ್ರಿ ಮಾರಿಯಮ್ಮ ದೇವಸ್ಥಾನದ ಆಡಳ್ತೆ ಮೊಕ್ತೇಸರ್ ಶ್ರೀ. ಬಿ. ತಿಮ್ಮಪ್ಪಶೆಟ್ಟಿಯವರು ತಿಳಿಸುತ್ತಾರೆ.

ಹಿಂದುಸ್ತಾನ ಸ್ಕೌಟ್ ಎಸೋಸಿಯೇಶನ್

ಈ ಎಸೋಸಿಯೇಶನಿನವರು ಮುಂದೆ ತೋರುವ ಸ್ಥಳ ಮತ್ತು ತಾರೀಕುಗಳಲ್ಲಿ ತಮ್ಮ ಟ್ರೈನಿಂಗ್ ಕ್ಯಾಂಪುಗಳನ್ನು ನಡೆಸಲು ನಿರ್ಧರಿಸಿರುವರು:—ಎಪ್ರಿಲ್ ತಾ. ೩ರಿಂದ ೫ ಮಂಗಳೂರಲ್ಲಿ ಕಬ್ ಮಾಸ್ಟರರಿಗಾಗಿ; ಎಪ್ರಿಲ್ ತಾ. ೧೬ರಿಂದ ೧೯ ಕುಂದಾಪುರದಲ್ಲಿ ಕಬ್ ಮಾಸ್ಟರರಿಗಾಗಿ; ಎಪ್ರಿಲ್ ತಾ. ೨೦ರಿಂದ ೨೬ ಉಡ್ಪಿಯಲ್ಲಿ ಹೆಣ್ಣು ಮಕ್ಕಳ ಸ್ಕೌಟ್ ಮಾಸ್ಟರರಿಗಾಗಿ; ಎಪ್ರಿಲ್ ತಾ. ೨೮ರಿಂದ ಮೇ ೬ ಕಮ್ಮಣ್ಣನಲ್ಲಿ ಸ್ಕೌಟ್‌ಮಾಸ್ಟರರಿಗಾಗಿ; ಮೇ ತಾ. ೮ರಿಂದ ೧೩ ಕಾಸರಗೋಡಿನಲ್ಲಿ ರೋವರ್ಸ್‌ಗಾಗಿ. ಇದಲ್ಲದೆ ಉಡ್ಪಿಯಲ್ಲಿ, ಮೇ ತಾ. ೮ರಿಂದ ೨೧ರ ವರೆಗೆ ಶಾರೀರಿಕ ಶಿಕ್ಷಣದ ತರಬೇತಿ ಕ್ಲಾಸ್ ಒಂದನ್ನೂ ಈ ಸಂಘದವರು ನಡೆಸಲಿರುವರು.

ಜಿಲ್ಲಾ ಸ್ಕೌಟ್ ಮಾಸ್ಟರ್ ಕಬ್ ಮಾಸ್ಟರರ ನೇಮಕ

ಕಿನ್ನಿಕಂಬಳ ಶ್ರೀ. ಪಿ. ಸದಾಶಿವರಾವ್; ಕಾಪು ಕೇಂದ್ರ ಶ್ರೀ. ಎಸ್. ಆರ್. ಫುರ್ಟಾಡೊ; ಉಡ್ಪಿ ಮುನಿಸಿಪಾಲಿಟಿ ಶ್ರೀ. ಲಕ್ಷ್ಮೀನಿಧಿರಾವ್; ಮಂಗಳೂರು ಮುನ್ಸಿಪಾಲಿಟಿ ಶ್ರೀ. ಜೆ. ಸಿಕೇರಾ; ಕುಂದಾಪುರ ಡಿವಿಜನ್ ಶ್ರೀ. ಎಸ್. ಗೋವಿಂದರಾಯ ಕಾಮತ್; ಕಾಸರಗೋಡು ಶ್ರೀ. ಕೆ. ವಿಠಲ ಕಾಮತ್.

ಯುದ್ಧ ಪ್ರಚಾರ ಕಾರ್ಯದ ಸಬ್ ಕಮಿಟಿ

ಕಳೆದ ಸೋಮವಾರ ಸಂಜೆ ಸ್ಥಳೀಯ ಕೆನರಾ ಕ್ಲಬ್ಬಿನಲ್ಲಿ, ಜಿಲ್ಲಾ ಕಲೆಕ್ಟರ್ ಶ್ರೀ. ಎಂ. ಕರಮತುಲ್ಲ ಐ. ಸಿ. ಎಸ್. ಅವರ ಅಧ್ಯಕ್ಷತೆಯಲ್ಲಿ, ಯುದ್ಧ ಪ್ರಚಾರಕಾರ್ಯದ ಸಬ್ ಕಮಿಟಿಯ ಪುನರ್‌ವ್ಯವಸ್ಥೆಗಾಗಿ ಆಲೋಚನೆ ನಡೆದು, ಮಾನ್ಯ ಮಂಗಳೂರಿನ ಬಿಶೋಪರು ಆ ಉಪಸಮಿತಿಯ ಅಧ್ಯಕ್ಷರಾಗಿಯೂ, ಶ್ರೀ. ಅಬ್ದುರ್ ರಹಿಂ ಅಹಮದ್‌ರವರು ಅದರ ಕಾರ್ಯದರ್ಶಿಗಳಾಗಿಯೂ ಇರುವಂತೆಯೂ, ಕಮಿಟಿಯಲ್ಲಿ ಅವರಿಬ್ಬರು ಸದಸ್ಯರಲ್ಲದೆ, ಶ್ರೀ. ಸಿ. ಎಲ್. ಲೋಬೋ, ಜಿಲ್ಲಾ ವಿದ್ಯಾಧಿಕಾರಿಗಳು, ಶ್ರೀ. ಕೆ. ಟಿ. ಆಳ್ವ, ಶ್ರೀ. ಎನ್. ಎಸ್. ಸುವರ್ಣ, ಜಿಲ್ಲಾ ಹೆಲ್ತ್ ಆಫೀಸರ್ ಜಿ| ಲೇಬ| ಆಫೀಸರ್, ಡಾ. ಎಂ. ಕೇಶವ ಪೈ, ಶ್ರೀ. ಕೆ. ಯಶವಂತರಾವ್, ರೆ| ಕೆ. ಆರ್. ಕರುಣಾಕರ, ಶ್ರೀ. ರಂಗನಾಥ ಪೂಂಜ ಇವರಿಷ್ಟು ಮಂದಿ ಇತರ ಸದಸ್ಯರಾಗಿರುವಂತೆಯೂ ನಿರ್ಧರಿಸಲಾಯಿತು.

ಕೊಸ್ಮೊಪೊಲಿಟನ್ ಟೆನ್ನಿಸ್ ಟೂರ್ನಮೆಂಟ್

ಈ ತಿಂಗಳ ತಾ. ೧ರಿಂದ ತಾ. ೨೦ರ ತನಕ ಮೆನ್ಸ್ ಸಿಂಗಲ್ಸ್, ಮೆನ್ಸ್ ಡಬ್‌ಲ್ಸ್, ಮಿಕ್ಸೆಡ್ ಡಬ್‌ಲ್ಸ್ ನಡೆದುವು. ಮೆನ್ಸ್ ಸಿಂಗ್‌ಲ್ಸ್‌ನಲ್ಲಿ ಶ್ರೀ| ಕೆ. ವೆಂಕಪ್ಪ ರೈಗಳು ಕಾಸರಗೋಡು ಶ್ರೀಕೃಷ್ಣನಾಯಕರನ್ನು ಸೋಲಿಸಿದರು. ಮಿಕ್ಸೆಡ್ ಡಬ್‌ಲ್ಸ್‌ನಲ್ಲಿ ಮಿಸ್ ನಳಿನೀಬಾಯಿ ಮತ್ತು ಶ್ರೀ| ನಾರಾಯಣರಾಯರು ಮಿಸೆಸ್ ಮೋನಾ ಪಿಂಟೋ ಮತ್ತು ಶ್ರೀ| ಎಂ. ಎಂ. ಪ್ರಭು ಅವರನ್ನು ಸೋಲಿಸಿದರು. ಮೆನ್ಸ್ ಡಬ್‌ಲ್ಸ್‌ನಲ್ಲಿ ಶ್ರೀ| ಕೆ. ವೆಂಕಪ್ಪ ರೈ ಮತ್ತು ಶ್ರೀ| ಮುಕುಂದರಾಯರು ಶ್ರೀ| ದತ್ತಾತ್ರೇಯರಾವ್ ಪಂಡಿತ್ ಮತ್ತು ಶ್ರೀ| ಬಾಬುರಾಯರನ್ನು ಸೋಲಿಸಿದರು. ಕಪ್ಪುಗಳು ಮತ್ತು ಮೆಡಲು ಶ್ರೀ| ವೆಂಕಟ್ರಾಯ ಬಾಳಿಗರಿಂದ ಹಂಚಲ್ಪಟ್ಟಿತು. ಶ್ರೀ. ಡಿ. ಮೋಹನರಾಯರು ಧನ್ಯವಾದಗಳನ್ನರ್ಪಿಸಿದರು.

ವಾರ್ಷಿಕೋತ್ಸವ:- ಮಂಗಳೂರು ಗವರ್ನಮೆಂಟ್ ಟ್ರೈನಿಂಗ್ ಶಾಲೆಗೆ ಸಂಬಂಧಪಟ್ಟ ಎ. ಬೋರ್ಡಿಂಗಿನ ವಾರ್ಷಿಕೋತ್ಸವವು ತಾ. ೧೨ರಂದು ಶಾಲಾ ಮುಖ್ಯೋಪಾಧ್ಯಾಯರಾದ ಯನ್ ಸುಬ್ಬರಾವ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಭಾಷಣ, ಶುಭಾಶಯಗಳ ಬಳಿಕ ಛಾಯಾಚಿತ್ರ, ಉಪಾಹಾರಗಳು ಜರಗಿದುವು.

ವರ್ಗ:— ಗುಂಟೂರಿನ ಜಿಲ್ಲಾ ಪೋಲಿಸ್ ಸುಪರಿಂಟೆಂಡೆಂಟ್ ರಾವ್‌ಬಹದೂರ್ ಕೆ. ಪಿ. ಜನಾರ್ಧನರಾವ್ ಅವರು ಪೋಲಿಸ್ ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ ಸ್ಥಾನಕ್ಕೂ, ಶ್ರೀ| ಎ. ನಾರಾಯಣ ರೈ, ಅಸಿಸ್ಟಾಂಟ್ ಪೋಲೀಸ್ ಸುಪರಿಂಟೆಂಡೆಂಟ್, ಪಾಲ್ಘಾಟ್ ಅವರು ಗುಂಟೂರು ಜಿಲ್ಲಾ ಪೋಲಿಸ್ ಸುಪರಿಂಟೆಂಡೆಂಟರ ಸ್ಥಾನಕ್ಕೂ ವರ್ಗಾಯಿಸಲ್ಪಟ್ಟಿದ್ದಾರೆ.

ಜಿಲ್ಲೆಯಲ್ಲಿ ಶಾಂತಿದಳ ಮಹಾಜನರಲ್ಲಿ ವಿನಂತಿ

ಜಿಲ್ಲೆಯೊಳಗಿನ ಎಲ್ಲ ಸರ್ಕಲುಗಳಲ್ಲಿ ಕಾಂಗ್ರೆಸ್ ವತಿಯಿಂದ ಸ್ವಯಂಸೇವಕ ದಲಗಳನ್ನು ರಚಿಸುವುದೆಂದು ನಿರ್ಧಾರವಾಗಿರುತ್ತದೆ. ೧೮ ವರ್ಷ ಪ್ರಾಯಕ್ಕೆ ಮೀರಿದ ಮತ್ತು ದಲದ ಪ್ರತಿಜ್ಞೆಗೆ ಸಹಿಮಾಡುವ ಎಲ್ಲ ಸ್ತ್ರೀ ಪುರುಷರು ಈ ದಲದ ಸದಸ್ಯರಾಗಬಹುದು. ಜನತಾ ಸಂಬಂಧ, ವಿಮಾನಧಾಳಿಯ ಕಾಲದಲ್ಲಿ ಜನತಾ ಮಾರ್ಗದರ್ಶನ, ಜನರ ಪ್ರಾಣವಿತ್ತಗಳ ಸಂರಕ್ಷಣಾ ವಿಚಾರ, ಪ್ರಥಮೋಪಚಾರ, ನಿಜಸುದ್ದಿಗಳನ್ನು ತಿಳಿಸುವುದು, ಸಂಕಟಸಮಯದಲ್ಲಿ ಗಾಬರಿಗೊಳ್ಳದೆ ಶಾಂತತೆಯಿಂದಲೂ, ಧೈರ್ಯದಿಂದಲೂ ಪ್ರಸಂಗವನ್ನೆದುರಿಸುವುದಕ್ಕೆ ಬೇಕಾದ ಶಿಕ್ಷಣವನ್ನು ಕೊಡುವುದು, ಜನತೆಗೆ ಬೇಕಾದ ಆಹಾರಸಾಮಗ್ರಿಗಳ ಮತ್ತು ಇತರ ಜೀವನಾವಶ್ಯಕ ವಸ್ತುಗಳ ಪೂರೈಕೆಯ ಬಗ್ಗೆ ಹೆಚ್ಚಿನ ಜಾಗ್ರತೆ, ಆಹಾರಕ್ಕೆ ಬೇಕಾಗುವ ಧಾನ್ಯಗಳನ್ನು ಬೆಳೆಸಲು ಜನತೆಗೆ ಉತ್ತೇಜನ, ದಂಗೆ, ಕಳವು, ಸುಲಿಗೆ ಮುಂತಾದುವು ಆಗದಂತೆ ಮುಂಜಾಗ್ರತೆ, ಗ್ರಾಮೋದ್ಯೋಗಾಭಿವೃದ್ಧಿ, ಎಲ್ಲಾ ಶಕ್ಯವಿದ್ದ ಮುಂಜಾಗ್ರತೆ ಮತ್ತು ಪರಿಹಾರ ಕಾರ್ಯ, ತಮ್ಮ ವಾಸಸ್ಥಳಗಳನ್ನು ಬಿಟ್ಟು ಬಂದವರಿಗೂ, ಹೋಗುವವರಿಗೂ, ಶಕ್ಯವಿದ್ದ ಸಹಾಯಮಾಡುವುದು ಇವು ಸ್ವಯಂಸೇವಕ ದಲದ ಕೆಲಸಗಳು. ಸ್ವಯಂಸೇವಕರಾಗಲಿಚ್ಛಿಸುವವರು ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ಬರೆದು ತಿಳಿಸಬಹುದು.

ನೃತ್ಯಕೂಟ: ಶ್ರೀ. ಕೆ. ಕೆ. ಶೆಟ್ಟರು, ತಮ್ಮ ಮುಂದಿನ ನೃತ್ಯ ವಿದ್ಯಾಭ್ಯಾಸದ ಸಲುವಾಗಿ, ಆಲ್ಮೋರಾ ಉದಯಶಂಕರ ಇಂಡಿಯಾ ಕಲ್ಚರ್ ಸೆಂಟರಿಗೆ ಹೋಗುವ ಸಂಬಂಧದಲ್ಲಿ, ತಾ. ೨೮ರಂದು ಸಂಜೆ ೬-೩೦ಕ್ಕೆ ಬಿಸೆಂಟ್ ನೇಶನಲ್ ಗರ್ಲ್ಸ್ ಸ್ಕೂಲಿನಲ್ಲಿ ಡಾ| ಕೇಶವಪೈಗಳ ಅಧ್ಯಕ್ಷತೆಯಿಂದ ನೃತ್ಯಕೂಟವೊಂದನ್ನು ಏರ್ಪಡಿಸಿದ್ದಾರೆ. ಶ್ರೀ. ಕೆ. ಕೆ. ಶೆಟ್ಟಿ ಕುಮಾರಿ ಪದ್ಮಿನಿ, ವಸುಧಾ ಮೊದಲಾದವರ ನೃತ್ಯ, ಶ್ರೀ. ಚೂರ್ಯರ ಪ್ರಹಸನ ಶ್ರೀ. ಉಡುಪರೇ ಮೊದಲಾದವರ ಸಂಗೀತಗಳು ಇವೆ.

ಸಂಗೀತ ಪರೀಕ್ಷೆ: ಕಳದ ದಶಂಬರ ತಿಂಗಳಲ್ಲಿ ಮಂಗಳೂರಲ್ಲಿ ಜರಗಿದ ಮದ್ರಾಸ್ ಸರಕಾರದ ಭಾರತೀಯ ಸಂಗೀತ ಪರೀಕ್ಷೆಯ ಲೋಯರ್ ಗ್ರೇಡಿನಲ್ಲಿ ಶ್ರೀ. ಕೆ. ಕೃಷ್ಣಭಟ್ ಮತ್ತು ಕುಮಾರಿ ಎ ಕೆ ಹೈಮವತೀ ದೇವಿಯರೂ ಹೈಯರ್ ಗ್ರೇಡಿನಲ್ಲಿ ಶ್ರೀ ಎಚ್. ಶ್ರೀನಿವಾಸ ಉಡುಪ ಮತ್ತು ಶ್ರೀ. ಪಿ. ವೆಂಕಟ್ರಾಯರೂ ಉತ್ತೀರ್ಣರಾಗುತ್ತಾರಾಗಿ ತಿಳಿದಿದೆ.

ಉಳ್ಳಾಲ ವಾಸುದೇವನಾಯ್ಕರ ನಿಧನ: ಮಂಗಳೂರಿನ ಸಾಹುಕಾರರಲ್ಲೊಬ್ಬರೂ ನಮ್ಮ ಜಿಲ್ಲೆಯ ಪ್ರಸಿದ್ಧ ಕ್ರಿಕೆಟ್ ಆಟಗಾರರು ಆದ ಶ್ರೀ. ಉಳ್ಳಾಲ ವಾಸುದೇವ ನಾಯಕರು ತಾ. ೨೫ರಂದು ಬೆಳಗ್ಗೆ ೧೧ ಗಂಟೆಗೆ ನಿಧನಹೊಂದಿದರೆಂದು ತಿಳಿಸಲು ವಿಷಾದಪಡುತ್ತೇವೆ. ಇವರಿಗೆ ಸುಮಾರು ಐವತ್ತು ವರ್ಷ ಪ್ರಾಯವಾಗಿತ್ತು. ಇವರು ಕ್ರಿಕೆಟ್, ಟೆನಿಸ್ ಮೊದಲಾದ ಆಟಗಳಲ್ಲಿ ಹೆಸರುಹೊಂದಿದ್ದರು. ಮೃತರ ಆತ್ಮಕ್ಕೆ ಪರಶಾಂತಿಯುರಲಿ!

ಪೊಳಲಿ:— ಇಲ್ಲಿಯ ಶ್ರೀ ರಾಜೇಶ್ವರೀ ಅಮ್ಮನವರ ದೇವಸ್ಥಾನದಲ್ಲಿ ಇದೇ ಮೀನ ಸಂಕ್ರಮಣದ ದಿನ ಧ್ವಜಾರೋಹಣವಾಗಿರುತ್ತದೆ ಮುಂದ್ಯಪ್ರತಿ ೫ನೆ ದಿನಕ್ಕೆ ದಂಡಮಾಲೋತ್ಸವವು ಜರಗಿ ಏಪ್ರಿಲ್ ತಾ. ೬ಕ್ಕೆ ಚೆಂಡು ಉತ್ಸವ ಆರಂಭವಾಗಿ ತಾ. ೧೦ನೇ ಶುಕ್ರವಾರ ದಿನ ಕಡೆ ಚೆಂಡು ಉತ್ಸವವೂ ಜರಗುವುದು. ಮರುದಿನ ಶನಿವಾರ ರಥೋತ್ಸವ ಆದಿತ್ಯವಾರ ಅವಭೃತವಾಗಿ ಉತ್ಸವವು ಕೊನೆಗೊಳ್ಳುವುದು.

ಹೊಸಂಗಡಿ ಸೇತುವೆಯನ್ನು ದಾಟುವಾಗ (ಮೂಡಬಿದ್ರಿ-ಗುರುವಾಯನಕೆರೆ ರಸ್ತೆಯ ೫|೭ ಮೈಲಿನಲ್ಲಿ) ಬಸ್ಸುಗಳಿಂದ ಪ್ರಯಾಣಿಕರು ಇಳಿಯಬೇಕಲ್ಲದೆ, ಸೇತುವೆ ದುರಸ್ತಿಯಾಗುವ ತನಕ ಗಂಟೆಗೆ ಐದು ಮೈಲುಗಳಿಗೆ ಮಿಕ್ಕದ ವೇಗದಲ್ಲಿ ಹೋಗಲು ಬೋರ್ಡಿನವರು ತಿಳಿಸುತ್ತಾರೆ.

ಇಂಡಿಯನ್ ರೆಡ್‌ಕ್ರಾಸ್ ಸೊಸೈಟಿಯ ವಾರ್ಷಿಕ ಮಹಾಸಭೆಯು ಛೇರ್‌ಮನ್ ಶ್ರೀ| ಯಂ. ವೆಂಕಟೇಶ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಸಭೆಯಲ್ಲಿ ಲೆಕ್ಕ ಪತ್ರ ವರದಿಗಳ ಸ್ವೀಕಾರದ ಬಳಿಕ ಹೊಸ ವರ್ಷದ ಸಮಿತಿಯು ಚುನಾಯಿಸಲ್ಪಟ್ಟಿತು.

ಶ್ರೀ| ಕೆ. ವಿ. ಅನಂತರಾಮನ್: (ರಾಜಮಂತ್ರಿ ಪ್ರವೀಣ) ಮೈಸೂರು ಸರಕಾರದ ಆರ್ಥಿಕ ಮತ್ತು ಕಂದಾಯ ಮಂತ್ರಿ, ಮತ್ತು ಕಾಫಿ ಕಂಟ್ರೋಲರ್ ಶ್ರೀ| ಎಂ. ಪಿ. ಪೈ ಐ. ಸಿ. ಎಸ್. ಇವರಿಗೆ ಮಂಗಳೂರು ಕಾಫಿ ಮತ್ತು ಉತ್ಪತ್ತಿ ವ್ಯಾಪಾರಿಗಳ ಸಂಘದವರು ಸತ್ಕಾರ ಕೂಟವನ್ನು ಬಾವಟೆ ಗುಡ್ಡೆಯಲ್ಲಿ ತಾ. ೧೯ರಂದು ಕೊಟ್ಟರು.

ಶಾಲಾ ವರ್ಧಂತಿ:— ಕಾಪು ಬೋರ್ಡು ಹಾ. ಎ. ಶಾಲೆಯ ವರ್ಧಂತ್ಯುತ್ಸವವು ಇದೇ ತಾ. ೧೪ರಲ್ಲಿ ಜಿಲ್ಲಾ ಬೋರ್ಡು ಪ್ರೆಸಿಡೆಂಟರಾದ ಡಾ| ಕೆ. ವಿಟ್ಟಲ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಹೊಸ ಕಟ್ಟಡದ ಪ್ರವೇಶೋತ್ಸವವನ್ನು ಮಾನ್ಯ ಅಧ್ಯಕ್ಷರು ಸಾಂಗಗೊಳಿಸಿದ ನಂತರ ಶ್ರೀ| ರಾಪು ಕೃಷ್ಣಾಚಾರ್ಯರು ಸ್ವಾಗತ ಭಾಷಣಮಾಡಿದರು. ಶಾಲಾ ವರದಿಯು ಮುಖ್ಯೋಪಾಧ್ಯಾಯರಿಂದ ಓದಲ್ಪಟ್ಟಿತು. ಶಾಲಾ ಬಾಲಿಕೆಯರಿಂದ ಮತ್ತು ಶಾಲಾ ಹುಡುಗರಿಂದ ನಾಟಕ, ಯಕ್ಷಗಾನ ಆಟಗಳೂ, ಶಾಲಾ ಹಳೆ ವಿದ್ಯಾರ್ಥಿಗಳಿಂದ ತುಳು ನಾಟಕವೂ ಅಭಿನಯಿಸಲ್ಪಟ್ಟವು.

ಕುಂದಾಪುರ

ಮುದ್ದಣ ಜಯಂತಿ:- ಆಧುನಿಕ ಕವಿಕುಲತಿಲಕರಾದ ಮುದ್ದಣನ ಜಯಂತಿಯು ತಾ. ೧೫ರಲ್ಲಿ ಕರ್ನಾಟಕ ಸಾಹಿತ್ಯ ಸಂಘದ ವತಿಯಿಂದ ಜರಗಿತು. ಉಡ್ಪಿ ಕ್ರಿಶ್ಚಿಯನ್ ಹೈಸ್ಕೂಲಿನ ಕನ್ನಡ ಪಂಡಿತರಾದ ಶ್ರೀ| ಕೆ. ವೆಂಕಟರಾಮಾಚಾರ್ಯರು ಅಧ್ಯಕ್ಷರಾಗಿದ್ದರು. ಶ್ರೀ| ಕೆ. ಆರ್. ಕಸ್ತೂರಿಯವರ ಪಟ್ಟಾಭಿಷೇಕದ ಪದ್ಯಗಳ ವಾಚನವೂ ಶ್ರೀ| ಐ. ಕೃಷ್ಣ ಉಡುಪರ ಮುದ್ದಣ ಕವಿಯ ಸೂಕ್ಷ್ಮ ಪರಿಚಯ ಭಾಷಣವೂ ಶ್ರೀ| ಪಿ. ಕೆ. ಆಚಾರ್ಯರ ಮುದ್ದಣನ ರಾಮಾಶ್ವಮೇಧದ ವಿಷಯವಾಗಿ ವಿಮರ್ಶಾತ್ಮಕ ಭಾಷಣಗಳೂ ಆದುವು. ಶ್ರೀ. ಕೆ. ಅಣ್ಣಪ್ಪ ಕಾರಂತರು ಮುದ್ದಣನ ಯಕ್ಷಗಾನದ ವಿಷಯವಾಗಿಯೂ ಶ್ರೀ| ಕೆ. ಜಿ. ಶರ್ಮರು ಮುದ್ದಣನ ಹೊಸ ರೀತಿಯ ಕುರಿತೂ ಭಾಷಣಗಳನ್ನು ಮಾಡಿದರು. ಅಧ್ಯಕ್ಷರು ಭಾಷಣ ಮಾಡುತ್ತಾ ಮುದ್ದಣ ಕವಿಯ ಅಸಾಧಾರಣವಾದ ಕವಿತಾಶಕ್ತಿ, ಅದ್ಭುತವಾದ ವರ್ಣನಾ ಕೌಶಲ್ಯ ಮುಂತಾದ ವಿಷಯಗಳ ಕುರಿತು ಮಾತಾಡಿದರು.

ಹಿಂದುಸ್ಥಾನ್ ಸ್ಕೌಟ್ ಎಸೋಸಿಯೇಶನ್

ಶಿಶು ವೀರನಾಯಕರ ಶಿಕ್ಷಣ ಶಿಬಿರ

ಕುಂದಾಪುರ ತಾಲೂಕು ಹಿಂದೂಸ್ಥಾನ್ ಸ್ಕೌಟ್ ಎಸೋಸಿಯೇಶನಿನ ಆಶ್ರಯದಲ್ಲಿ ಇದೇ ಬರುವ ಎಪ್ರಿಲ್ ತಿಂಗಳ ತಾರೀಕು ೧೬ರಿಂದ ೧೯ರ ವರೆಗೆ ಆಣೆಗುಡ್ಡೆ (ಕುಂಭಾಶಿ)ಯಲ್ಲಿ ಶಿಶುವೀರನಾಯಕ (ಕಬ್‌ಮಾಸ್ಟರ)ರ ಶಿಕ್ಷಣ ಶಿಬಿರವೊಂದನ್ನು ನಡೆಸಲು ನಿಶ್ಚಯಿಸಲಾಗಿದೆ. ತರಬೇತಿ ಬಗ್ಗೆ ಪ್ರಾಂತೀಯ ಸಹಾಯಕ ಕಮೀಶನರಾದ ಶ್ರೀ ಎಂ. ರಾಜಗೋಪಾಲನ್ ಮತ್ತು ಜಿಲ್ಲಾ ಸ್ಕೌಟ್ ಕಮೀಶನರಾದ ಶ್ರೀ ಎಂ. ಎಸ್. ಮಾಧವರಾವ್ ಇವರು ಆಗಮಿಸುವವರಿದ್ದಾರೆ. ಈ ಶಿಬಿರದಲ್ಲಿ ಭಾಗವಹಿಸಲಿಚ್ಛಿಸುವ ಅಧ್ಯಾಪಕರಿಗೆ ಆ ದಿನಗಳನ್ನು ಡ್ಯೂಟಿಯೆಂದು ಪರಿಗಣಿಸುವಂತೆ ಸಂಬಂಧಪಟ್ಟ ಅಧಿಕಾರಿಗಳನ್ನು ಕೇಳಿಕೊಳ್ಳಲಾಗಿದೆ. ಅವರಿಂದ ಬರುವ ಹುಕುಮನ್ನು ಆರಿಸಲ್ಪಟ್ಟ ಉಮೇದ್ವಾರರಿಗೆ ಹಿಂದಿನಿಂದ ತಿಳಿಸಲಾಗುವುದು. ಶಿಬಿರಕ್ಕೆ ಸೇರಲಿಚ್ಛಿಸುವ ಪ್ರತಿಯೊಬ್ಬ ಉಮೇದ್ವಾರರೂ ೨-೮-೦ ಶಿಬಿರ ಶುಲ್ಕವನ್ನು ಮುಂಗಡವಾಗಿ ತರಬೇಕಾಗುವುದು. ಈ ಶಿಕ್ಷಣ ಶಿಬಿರಕ್ಕೆ ಸೇರಲಿಚ್ಛಿಸುವವರು ಎಪ್ರಿಲ್ ತಿಂಗಳ ೫ನೇ ತಾರೀಕಿನೊಳಗೆ ಕಾರ್ಯದರ್ಶಿಗಳಿಗೆ ಅರ್ಜಿಗಳನ್ನು ಕಳುಹಿಸಿಕೊಡಬೇಕು. ಚುನಾಯಿಸಲ್ಪಟ್ಟವರಿಗೆ ಎಪ್ರಿಲ್ ತಿಂಗಳ ತಾ. ೧೦ರ ತನಕ ಹೆಚ್ಚಿನ ಸೂಚನೆಗಳನ್ನು ಕೊಡಲಾಗುವುದು ಎಂದು ಕಟ್ಟೇಲ್ ಗಣಪತಿ ಶರ್ಮಾಗ್ನಿ| ಕಾರ್ಯದರ್ಶಿ, ಇವರು ತಿಳಿಸುತ್ತಾರೆ.

ಸ್ವದೇಶಾಭಿಮಾನಿಯಲ್ಲಿ ನಿಮ್ಮ ಜಾಹೀರಾತುಗಳನ್ನು ಕೊಡಿರಿ

ಸಿನೆಮಾ ಪುಟ

ಸ್ಟುಡಿಯೋಗಳಿಂದ

ಬಾಂಬೇ ಟಾಕೀಸಿನವರ

—'ಜೂಲಾ' ಈಗ ಯಶಸ್ವಿಯಾಗಿ ಪ್ರದರ್ಶಿತವಾಗುತ್ತಿದೆ. ರೋಕ್ಸಿ ಸಿನೆಮಾದಲ್ಲಿ ಇದು ಪ್ರದರ್ಶಿಸಲ್ಪಡುವಾಗ, ಕೆಲಮಂದಿ ಮುಸ್ಲಿಮರು ಆಕ್ಷೇಪ ಮಾಡಿದರೆಂದು, ಅದರ ಸ್ವಲ್ಪ ಭಾಗವನ್ನು ತೆಗೆದುಹಾಕಲಾಗಿದೆ. ಮುಂದಿನ ಬಾಂಬೇ ಟಾಕೀಸಿನ ಸಾಮಾಜಿಕ ಚಿತ್ರವು ರಚನೆಯಲ್ಲಿದೆ. ಅಮಿಯ ಚಕ್ರವರ್ತಿ ಇದರ ನಿರ್ದೇಶಕರು. ಎಪ್ರಿಲ್ ಅಂತ್ಯದೊಳಗೆ ಅದು ಸಿದ್ಧವಾಗುವುದೆಂದು ಹಾರೈಸಲಾಗಿದೆ.

ರಣಜಿತ್ ಮೂವಿಟೋನಿನವರ

'ಛೇಡ್' ಕಳದ ತಿಂಗಳಿಂದ ಪ್ರದರ್ಶಿತವಾಗುತ್ತಿದ್ದು ಚಿತ್ತಾಕರ್ಷಕವಾಗಿದೆ. ಕುರ್ಶಿದ್ ಮತ್ತು ವಸಂತಿಯರ ನಟನೆ ರಮ್ಯ ರಮಣೀಯವಿದೆ. ಸ್ಟುಡಿಯೋದಲ್ಲಿ ಜಯಂತ ದೇಸಾಯಿಯವರು 'ಬಾಂದಿ'ಯನ್ನು ಪೂರ್ತಿಗೊಳಿಸಿದ್ದಾರೆ. ಇದರಲ್ಲಿ ಕುರ್ಶಿದ್ ಮತ್ತು ಈಶ್ವರಲಾಲರು ಅಭಿನಯಿಸುವರು. 'ಫರಿಯಾದ್' ಎಂಬ ಹೊಸ ಚಿತ್ರದ ತಯಾರಿ ಕೆಲಸ ಇಷ್ಟರಲ್ಲೇ ಆರಂಭವಾಗಿದೆ. ಶಾಮಿಮ್, ಮುಬಾರಕ್, ಈಶ್ವರಲಾಲ್ ಮತ್ತು ನೂರ್ಜಹಾನ್ ಇದರಲ್ಲಿ ನಟಿಸುತ್ತಾರೆ. ನಿರ್ದೇಶಕರು ಕೇದಾರಶರ್ಮ. ಮೋತಿಲಾಲ್ ಮತ್ತು ಶಾಮಿಮ್ ಅಭಿನಯದಿಂದೊಡಗೂಡಿದ 'ಆರ್ಮಾನ್' ಎಂಬ ಚಿತ್ರವನ್ನು ಅವರು ತಯಾರಿಸಿಬಿಟ್ಟರು. ನಿರ್ದೇಶಕ ಚತುರ್ಭುಜ ದೋಶಿಯವರು 'ಧಿಲಾಜ್'ನ್ನು ಮುಗಿಸಿದರು. 'ನರ್ಸ್' ಎಂಬ ಇನ್ನೊಂದು ಸಾಮಾಜಿಕ ಚಿತ್ರದ ತಯಾರಿಯಲ್ಲಿದ್ದಾರೆ. ಇದರಲ್ಲಿ ಕುರ್ಶಿದ್, ಪ್ರಧಾನ ಪಾತ್ರದಲ್ಲಿದ್ದಾಳೆ. 'ಪ್ಯಾಸ್'ನ ಯಶಸ್ವಿತೆಯಿಂದ ಗೌರವಗೊಂಡ ರಾಮ ದರ್ಯಾನಿ 'ಸುಹಾಗಿನ್' ಎಂಬ ಚಿತ್ರವನ್ನು ತಯಾರಿಸುವರು.

ಪಂಚೋಲಿ ಆರ್ಟ್ ಪಿಕ್ಚರ್ಸ್

ಇವರ ಖಜಾಂಚಿ ಹೋದ ಹೋದ ಕಡೆ ಯಶಸ್ವಿಯಾಗಿದೆ. 'ಖಾನ್‌ಧಾನ್' ಎಂಬ ಅವರ ಚಿತ್ರ ಈಗ ತಯಾರಾಗಿದೆ. ಪಂಚೋಲಿಯವರ ಮುಂದಿನ ಚಿತ್ರ 'ಜಮೀನ್ದಾರ್' ಎಂಬುದು. ಇದರಲ್ಲಿ ಶಾಂತಾ ಆಪ್ಟೆ ಅಭಿನಯಿಸುವಳಾಗಿ ವದಂತಿಯಿದೆ.

ಪ್ರಕಾಶ ಪಿಕ್ಚರ್ಸ್

ಇವರ 'ಭರತ್ ಮಿಲಾಪ್' ಈಗ ಪ್ರಖ್ಯಾತವಾಗಿದೆ. ತತ್ವಜ್ಞಾನಿ ಸರ್. ಎಸ್. ರಾಧಾಕೃಷ್ಣನರೇ ಇದನ್ನು ಮುಕ್ತಕಂಠ ಕೊಂಡಾಡಿದರು. ಮರಾಠಿ ಮತ್ತು ಹಿಂದೀ ಎರಡು ಭಾಷೆಗಳಲ್ಲಿ ಇದು ಚಿತ್ರಿತವಾಗಿದೆ. 'ಸ್ಟೇಶನ್ ಮಾಸ್ಟರ್' ಎಂಬ ಚಿತ್ರವನ್ನು ಅವರು ತಯಾರಿಸುವ ಭರದಲ್ಲಿರುವರು.

ಪ್ರಭಾತ್ ಫಿಲ್ಮ್ ಕಂಪೆನಿ

ಇವರ 'ಸಂತಸಖು' ಅಖಿಲ ಭಾರತದಲ್ಲಿ ಪ್ರದರ್ಶಿತವಾಗುತ್ತಿದೆ. ಈ ಕಂಪನಿಯ ಡೈರೆಕ್ಟರರಲ್ಲಿ ಆದ ವಿವಾದವು ಕೊನೆಗೊಳ್ಳುವದರಲ್ಲಿದೆಯಾಗಿ ಸುದ್ದಿ. ಹಾಗಾಗಿ ಬೇಗನೇ ಅವರು ಬಂದು ಸಾಮಾಜಿಕ ಚಿತ್ರವನ್ನು ತಯಾರಿಸುವರೆಂದು ತಿಳಿದಿದೆ.

ಸರಸ್ವತಿ ಸಿನೆಟೋನ್

ಇವರ 'ಅವಾಜ್' ಎಂಬ ಸಾಮಾಜಿಕ ಚಿತ್ರವು ತಯಾರಾಗುತ್ತಿದೆ. ಇದು ಮೊಗಲ ಇತಿಹಾಸ ಕಥೆಯಾಗಿರುವುದರಿಂದ, ಈ ಚಿತ್ರದ ಸಲುವಾಗಿ ಅವರು ಆಗ್ರಾಕ್ಕೆ ಹೋಗಿ ಕೆಲವು ದೃಶ್ಯಗಳನ್ನು ಚಿತ್ರ ತೆಗೆದಿರುವರು. ವಾಸ್ತಿ, ಮಾಯಾ ಬೆನರ್ಜಿ ಇವರು ಇದರಲ್ಲಿ ನಟಿಸುತ್ತಾರೆ. 'ಕಾನೂನ್' ಎಂಬ ಚಿತ್ರವು ಅವರ ಮುಂದಿನದು ಎಂದು ತಿಳಿದಿದೆ.

ಫಜ್ಲಿ ಬ್ರದರ್ಸ್

ಇವರ 'ಮಾಸೂಮ್' ಬೇಗನೇ ಪ್ರದರ್ಶಿತವಾಗುವುದು. 'ಚೌರಂಗೀ' ಎಂಬ ಚಿತ್ರವನ್ನು ಅವರು ಈಗ ತಯಾರಿಸುತ್ತಿದ್ದಾರೆ. ಸುಜ್ಜುಲ್ ಇಸ್ಲಾ ಮುರು ಇವರಲ್ಲಿ ಸಂಗೀತ ನಿರ್ದೇಶಕರು.

ನೇಶನಲ್ ಸ್ಟುಡಿಯೋ

ಇವರ ಗರೀಬ್ ಪ್ರದರ್ಶಿತವಾಗಿದೆ. ಸುರೇಂದ್ರ ಮತ್ತು ರೋಸ್ ಅಭಿನಯಿಸುತ್ತಾರೆ. ಅಪ್ನಾ ಪರಾಯಾ, ಜವಾನಿ ಕಾಸಮ್, ಲಾಲಾಜಿ ಮತ್ತು ರೋಟಿ-ಈ ಚಿತ್ರಗಳು ತಯಾರಾಗುತ್ತಿವೆ.

ಬ್ರಿಲಿಯಂಟ್ ಪಿಕ್ಚರ್ಸ್

ಮುನ್ಸಿಪಾಲಿಟಿ ಪ್ರದರ್ಶಿತವಾಗುತ್ತಿದೆ. ಪೂಜಾರಿ ಎಂಬ ಚಿತ್ರವನ್ನು ಅವರು ತಯಾರಿಸುತ್ತಿದ್ದಾರೆ.

ನವಯುಗ ಚಿತ್ರಪಟ

ಸ್ಟೇಟ್‌ಗೆಸ್ಟ್ ಎಂಬ ಮಾಲ್ವಂಕರ್ ಮತ್ತು ಜೋಗ್ ದ್ವಯರ ಅಭಿನಯದಿಂದ ಕೂಡಿದ ಚಿತ್ರವನ್ನು ಪೂರ್ತಿಗೊಳಿಸುತ್ತಿದ್ದಾರೆ. ಎಪ್ರಿಲಿನಲ್ಲಿ ಇದು ಪ್ರದರ್ಶಿತವಾಗಲಿದೆ.

ಸಿರ್ಕೋ ಪ್ರೊಡಕ್ಶನ್

ಇವರ ಅಪ್ನಾ ಘರ್ ಒಳ್ಳೆಯ ಯಶಸ್ವೀ ಚಿತ್ರ. ಶಾಂತಾ ಆಪ್ಟೆಯನ್ನು ಇದರಲ್ಲಿ ಬಹುಕಾಲದ ಬಳಿಕ ಹಿಂದೀ ಚಿತ್ರದ ಅಭಿನಯದಲ್ಲಿ ಕಾಣಬಹುದು. ನಯಾ ದುನಿಯಾ ಚಿತ್ರವನ್ನು ನಿರ್ದೇಶಕ ಕರ್ದಾರರು ರಚಿಸುತ್ತಾರೆ. ಅಹಮ್ಮದ್ ಅಬ್ಬಾಸರ ಕಥೆ. ಮಜಾರ್‌ಖಾನ್, ಅಜೂರಿ, ಶೋಭನಾ ಸಮರ್ಥ ಇದರಲ್ಲಿ ನಟಿಸುವರು. ಪದ್ಮಿನೀ ನಟಿಸುವ ಭಕ್ತ ವಿದುರ ಇವರ ಭಕ್ತಿ ಚಿತ್ರ ತಯಾರಾಗುತ್ತಿದೆ.

ಗೀತಾ ಪಿಕ್ಚರ್

ಇವರು ಅಧಾರ್ ಎಂಬ ಪ್ರಥಮ ಸಾಮಾಜಿಕ ಚಿತ್ರವನ್ನು ತಯಾರಿಸುತ್ತಾರೆ. ಕೋಕಿಲಾ ಮತ್ತು ಉಮಾಕಾಂತ ಇವರು ನಟಿಸುವರು.

ವಾಡಿಯಾ ಮೂವಿಟೋನ್

ಇವರ, ಹೋಮಿ ವಾಡಿಯರಿಂದ ತಯಾರಿಸಲ್ಪಟ್ಟ ಜಂಗಲ್ ಕ್ವೀನ್ ಚಿತ್ರವು ಬೇಗನೇ ಪೂರ್ಣವಾಗಲಿದೆ. ವಾಡಿಯರವರು ಇನ್ನು ಹಲವು ಚಿತ್ರಗಳ ರಚನೆಯ ಕಾರ್ಯಕ್ರಮ ಕೈಕೊಂಡಿದ್ದಾರೆ.

ಫೇಮಸ್ ಸ್ಕ್ರೀನ್ ಸ್ಟುಡಿಯೋಸ್

ಹಳೆಯ ಪೆರಮೌಂಟ್ ಸ್ಟುಡಿಯೋಕ್ಕೆ ಈ ಹೆಸರು ಕೊಡಲಾಗಿದೆ. ಇದನ್ನು ಶಿರಾಜ್ ಅಲಿ ಖಾನ್ ನಡೆಸುತ್ತಾರೆ. ಇದರಲ್ಲಿ ಸಿರ್ಕೋ ಪ್ರೊಡಕ್ಷನಿನಲ್ಲಿದ್ದ ಚಿಮನ್ಲಾಲ ತ್ರಿವೇದಿಯವರು ಲಕ್ಷ್ಮಿ ಪಿಕ್ಚರ್ಸ್ ಎಂಬ ಹೆಸರಿನಿಂದ ಹೊಸ ಕಂಪನಿ ಸುರುಮಾಡಿದ್ದಾರೆ. 'ನಾನು ಅದನ್ನು ಮಾಡಬಲ್ಲೆನು' ಎಂಬುದು ಅವರ ಮೊದಲನೆ ಚಿತ್ರ.

ಫೇಮಸ್ ಅರುಣ ಫಿಲ್ಮ್ಸ್

ಸೂನ್ ಬಾಯಿ ಚಿತ್ರ ರಚಿತವಾಗುತ್ತಿದೆ. ಇದಕ್ಕೆ ಸೊಸೆ ಎಂಬುದು ಇನ್ನೊಂದು ಹೆಸರು. ಸುಮತಿ ಗುಪ್ತೆ ಮತ್ತು ಮಾಸ್ಟರ್ ವಿಟ್ಠಲ್ ಅಭಿನಯಿಸುವರು.

ಶಾಂತಾರಾಮರು ಪ್ರಯೋಜನವಿಲ್ಲವೆ?

ಫಿಲ್ಮ್ ಎಡ್ವೈಸರಿ ಬೋರ್ಡಿಗೆ ಸೇರಿ ಶಾಂತಾರಾಮರು ಪ್ರಯೋಜನವಿಲ್ಲದವರಾದರೇ ಎಂದು ಫಿಲ್ಮ್ ಇಂಡಿಯಾ ಪ್ರಶ್ನಿಸುತ್ತದೆ. ಮಿಸ್ ಪ್ರಮೀಳಾ ರಾಮರಾವ್ ಇವರಿಂದ ಬರೆಯಲ್ಪಟ್ಟ ಭಾರತದ ಸ್ತ್ರೀಯರು ಎಂಬ ಚಿತ್ರವನ್ನು ತಯಾರಿಸಿ ಅವರು ಅಪಖ್ಯಾತಿಗೆ ಗುರಿಯಾಗಿದ್ದಾರೆ. ಆ ಚಿತ್ರವು ನಿರ್ನಾಮವಾಯಿತು ಎಂಬುದನ್ನು ನಾವು ಹಿಂದೆ ತಿಳಿಸಿದ್ದೇವೆ. ಆದರೆ ಅದರಲ್ಲಿನ ಆಕ್ಷೇಪಕರವಾದ ಅಂಶಗಳನ್ನು ಶಾಂತಾರಾಮರು ತೆಗೆದು ಇನ್ನೊಮ್ಮೆ ಪುನರ್ಜೀವ ಮಾಡುತ್ತಾರಂತೆ. ಈಗ ನಿಜವಾದ ಭಾರತದ ಸ್ತ್ರೀಯ ಸ್ವರೂಪ ಚಿತ್ರಿಸಲ್ಪಡುವುದೇ ನೋಡಬೇಕು. ಫಿಲ್ಮ್ ಎಡ್ವೈಸರಿ ಬೋರ್ಡಿನಲ್ಲಿ ಕೆಲಸ ವಹಿಸಿ ಶಾಂತಾರಾಮರು ಏಳೆಂಟು ತಿಂಗಳಾದರೂ ಇದುವರೆಗೆ ಏನುಮಾಡಿದ್ದೂ ಕಂಡುಬರುವುದಿಲ್ಲ. ನಮ್ಮ ದೇಶದ ತೆರಿಗೆದಾರರು ಈ ಎರಡು ತಿಂಗಳಲ್ಲಿ ರೂ. ೫೦೦೦ ವ್ಯರ್ಥ ಕಳಕೊಂಡರೆ?

ತಾಯಿಯೇ! ನಿನಗೆ ಆಗಾಗ ಅಗತ್ಯಬೀಳುವ ಸ್ನೇಹಿತಳಿಲ್ಲಿರುವಳು.

ಮಕ್ಕಳಿಗೆ ಆಗಾಗ ಕೆಳಗೆ ಬಿದ್ದು ಗಾಯ, ಪೆಟ್ಟುಗಳಾಗುತ್ತವೆ. ಆದ್ದರಿಂದ ಪ್ರತೀ ಒಂದು ಮನೆಯಲ್ಲಿಯೂ ಅಗತ್ಯ ಬೇಕಾಗುವುದಾವುದೆಂದರೆ ಕ್ರಿಮಿನಾಶಕ ಔಷಧಿ. ಒಂದು ಟಿನ್ನು ಕುಟಿಕೂರಾ ಮುಲಾಮನ್ನು (Cuticura Ointment) ನಿಮ್ಮ ಬಳಿ ಇರಿಸಿ ನಂತರ ಯಾವ ಪೆಟ್ಟು ಗಾಯಗಳಿಗೂ ತಯಾರಾಗಿರಿ.

ಗಾಯವು ಕೂಡಲೇ ಗುಣವಾಗಬೇಕಾದರೆ, ಬಾತುವಿಕೆಯು, ಮಾಯವಾಗಬೇಕಾದರೆ ಕುಟಿಕೂರಾ ಮುಲಾಮನ್ನು (Cuticura Ointment) ಉಪಯೋಗಿಸಿರಿ ಗಾಯದ ಪೆಟ್ಟು, ಪರಚುವಿಕೆ, ಮುದ್ದಣ ಇವುಗಳಿಗೆ ಹಚ್ಚಿರಿ. ರಶಿಗೆ ಯಾದೀತೆಂಬ ಬೆದರಿಕೆಯಿಲ್ಲ. ಕುಟಿಕೂರಾ ಮುಲಾಮು (Cuticura Ointment) ಸುಟ್ಟುಹೋದ ಯಾ ಬೆಂದುಹೋದ ಭಾಗಗಳಿಗೆ ಹಚ್ಚಲು ಕೂಡಾ ಬಹಳ ಉತ್ತಮ. ಸಹಿಸಲಸದಳವಾದ ವೇದನೆಯನ್ನು ನಿಲ್ಲಿಸಿ ಗಾಯಗಳು ಹರಡದಂತೆ ಮಾಡುತ್ತದೆ. ಚರ್ಮರೋಗಗಳಿಗೆ ಕೂಡಾ ಉತ್ತಮ ಔಷಧಿ. ಅಸಹ್ಯವಾದ ತುರಿಗಜ್ಜಿಗಳು ಇದರ ಸ್ಪರ್ಶದಿಂದಲೇ ಮಾಯವಾಗುತ್ತವೆ. ಇಷ್ಟಲ್ಲದೆ ದೀರ್ಘಕಾಲದ ಚರ್ಮವ್ಯಾಧಿಗಳು ಕೂಡ ಕುಟಿಕೂರಾ ಮುಲಾಮಿನಿಂದ (Cuticura Ointment) ಗುಣವಾಗುತ್ತವೆ. ನಿಮ್ಮ ಕೆಮಿಸ್ಟರಲ್ಲಿಂದ ಒಂದು ಟಿನ್ನನ್ನು ಕೊಂಡುಕೊಳ್ಳಿರಿ.

ಕುಟಿಕೂರಾ ಮುಲಾಮನ್ನು (Cuticura Ointment) ಕಜ್ಜಿ, ಕುರು, ಗಾಯ, ಪೆಟ್ಟು, ವ್ರಣ, ಮುದ್ದಣ, ಬಾತುವಿಕೆ, ತುರಿಕಜ್ಜಿ ವಿಷಪ್ರಾಯವಾದ ಗಾಯ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉಪಯೋಗಿಸಿರಿ.

ಕುಟಿಕೂರಾ ಮುಲಾಮು
Cuticura Ointment

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

S. C. No. 252/1941.
R. E. P. 1143/1941.

ವಾದಿ . . . ಸಾಂತಪ್ಪ ನಾಯ್ಕ ಮುಕ್ತ್ಯಾರದಾರ
. . . . ಅರ್ಜಿದಾರ

ಕುಂದಾಪುರ ಪೇಟೆ ಶ್ರೀ ವೆಂಕಟ್ರಮಣ ದೇವಸ್ಥಾನದ ಭಂಡಾರದ ಈಗಿನ ಅದಾಲತ್ ಮೊಕ್ತೇಸರ್ ಕೆ. ನರಸಿಂಹ ಕಾಮತ್ ವಕೀಲ್.

ಪ್ರತಿವಾದಿರು . . . ಸೈದ ಹಮ್ಮದ ಯಾನೆ ಬಾಬಾ ಸಾಹೇಬ ಕೊಡಾ ಸಹ್ರಿ ಅಮ್ಮ ಬಾಂಯಿ ಎದ್ರಿರು 2. ಅಬ್ದುಲ ಖಾದಿರ ಸಾಹೇಬ ದುಲ್ಲಾಬಾವುನಯನ ಮಗ. 7. ಸವಿನಾಬಿ ಕಟ್ಟಿನ ಇಸ್ಮಾಯಿಲ್ ಸಾಹೇಬರ ಹೆಂಡ್ತಿ. 8. ಬಿಯಾಮ್ಮ, ಮುತ್ರಿ ಸಾಹೇಬರ ಹೆಂಡ್ತಿ, ಕುಂದಾಪುರ ಕಸಬಾ ಕೋಡಿಯಲ್ಲಿರುವವರು.

ಇವರಿಗೆ

ಅರ್ಜಿದಾರನು ಎದ್ರಿರ ಮೇಲೆ ಸ್ಥಾಪಿಸಿದ ಸಹ್ರಿ ಅಮ್ಮಬ್ಯಾಣಿಯಲ್ಲಿ ಎದ್ರಿರ ಬಾಬ್ತು ಸ್ಥಿರಾಸ್ತಿಯನ್ನು ಜೋಲಂವಾಗಿ ಅಪೇಕ್ಷಿಸಿರುತ್ತಾನೆ. ಸಹ್ರಿ ಜೋಲಂ ಮುಟ್ಟಾಣಿನ ಶರ್ತ ನಿರ್ಣಯಿಸುವ ಬಗ್ಗೆ ಸಹ್ರಿ ಅಮಲ್ದಾರಿ ಅರ್ಜಿಯನ್ನು ತಾ. 7-4-1942ಕ್ಕೆ ಇಡೋಣಾಗಿಯದೆಂತ ಈ ಮೂಲಕ ನಿಮಗೆ ತಿಳಿಸಿರುತ್ತದೆ.

Coondapoor, 18-3-1942. | K. Narasimha Kamath, Adalthe Moktesar of petr. Temple.

ನೋಟೀಸು

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. 10/42.
R. I. A. 69/42.

ರಾಮಪ್ಪ ಗೌಡ. . . . . ವಾದಿ

ಎದ್ರಿ

ಪುಟ್ಟಮ್ಮ ಕೇವಳ ತಿಮ್ಮಪ್ಪ ಗೌಡರ ವಿಧವೆ, ಮುದಿಪಾಡಿ ಗ್ರಾಮ ಪುತ್ತೂರು ತಾಲೂಕು. . . . . . .
. . . ಪ್ರತಿವಾದಿ

ದಾವಾ ನೋಟಿನ ಬಾಬ್ತು ಅಸಲು ಬಡ್ಡಿ ರೂ. 313-12-0 ರ ಕಂಟ್ರ್ಯಾಕ್ಟಿನ ಬಗ್ಗೆ ಕೊಡತಕ್ಕ ಬಾಕಿಯು ಮಾಡಿದ ಮೇಲಿನ ದಾವೆಯು ಈ ಕೋರ್ಟ O. S. 306/41ನೇ ಪ್ರತಿವಾದಿಯು ಡಿಕ್ರಿ ಬರೇಬು ಮಾರಿ ಹಕ್ಕು ಜಪ್ತಿಗೆ ಮಾಡಿದ ಮೇಲಿನ R. I. A. 69/42ನೇ ಅರ್ಜಿ ಕೂಡಾ 6-4-42ಕ್ಕೆ ಇಟ್ಟಿರುವದರಿಂದ ನ್ಯಾಯದ ಜಪ್ತಿ ಅರ್ಜಿಯ ಬಗ್ಗೆ ನಿಮಗೇನಾದರೂ ಆಕ್ಷೇಪಣೆ ಇದ್ದರೆ ಸ್ವತಃ ಆ ದಿನ ಬೆಳಗ್ಗೆ ಗಂಟೆ 11ಕ್ಕೆ ಈ ಕೋರ್ಟ ಮುಂದೆ ಹಾಜರಾಗಿ ಉತ್ತರಿಸಬೇಕೆಂದು ನಿಮ್ಮನ್ನು ತಿಳಿಯಬೇಕಾಗಿ ತೀರ್ಮಾನಿಸಲಾದೀತೆಂದು ಈ ಮೂಲಕ ತಿಳಿಸಿಯದೆ.

ಪುತ್ತೂರು 20-3-42 | sd) H. Pundarik Bhat, Pleader for Plaintiff.

ಸ್ವದೇಶಾಭಿಮಾನಿಗೆ ಜಾಹೀರಾತು ಕೊಡಿರಿ

ವಿಜ್ಞಾನಯುಗ

'ಬೆಟಟ್ರೋನ್'

ಎಂಬುದು ಹೊಸತೊಂದು ವಿದ್ಯುಚ್ಛಕ್ತಿ ಉತ್ಪಾದಕ ಯಂತ್ರ. ಇದುವರೆಗೆ ಉತ್ಪಾದಿಸ ಲಸಾಧ್ಯವಾದ ವಿದ್ಯುಚ್ಛಕ್ತಿ ಇದರಲ್ಲಿ ಹುಟ್ಟು ವುದು. ಇದು ವಿದ್ಯುಚ್ಛಕ್ತಿಯನ್ನು ಬೆಳಕಿನ ವೇಗದಲ್ಲಿ ಹಸರಿಸಬಲ್ಲುದು. ಇದು ೩೧,೦೦೦ ೦೦೦ ವಾಲ್ಟ್ ಎಕ್ಸ್‌ರೇಗಳನ್ನು ಹುಟ್ಟಿಸುವುದು. ಜಗತ್ತು ತಿಳಿದಿರುವ ಎಲ್ಲಾ ರೇಡಿಯಮು ಗಳನ್ನೂ ಮೀರಿದ ಶಕ್ತಿಯುಳ್ಳದ್ದು. ಇದರ ಇನ್ನೂ ಹಲವು ಗುಣಗಳು ಪ್ರಕಟವಾಗಬೇಕಷ್ಟೆ. ಇದನ್ನು ಕಂಡುಹುಡುಕಿದವರು ಡೊನಾಲ್ಡ್ ವಿಲಿಯಂ ಕೆರ್ಸ್ಟ್ ಎಂಬವರು. ಅವರ ಪ್ರಾಯ ೩೦ ವರ್ಷ. ಇದು ಪ್ರಸಿದ್ಧ ನೋಬೆಲ್ ಪ್ರೈಸ್ ಪಡೆದ ಸೈಕ್ಲೋಟ್ರೋನ್‌ಗಿಂತಲೂ ಅದ್ಭುತವಾದುದು. ಬೆಟಟ್ರೋನನ್ನು ಉಪಯೋಗಿಸಿ ಅದ್ಭುತ ಔಷಧೋಪಚಾರ ಮಾಡಬಹುದೆಂದು ವೈದ್ಯ ವಿಶಾರದರು ಆಲೋಚಿಸುತ್ತಿದ್ದಾರೆ.

ಸಾವಿರಾರು ಜನರು ಕಣ್ಣು ಪಡೆದರು

ಡಾ॥ ಮಥುರಾದಾಸ್

ಮೋಗದ ಡಾ॥ ಮಥುರಾದಾಸರೆಂಬವರು ಕಣ್ಣಿನ ಚಿಕಿತ್ಸೆಯಲ್ಲಿ ಪ್ರಸಿದ್ಧರಾಗಿದ್ದಾರೆ. ಸಾವಿರಾರು ಜನ ಕುರುಡರನ್ನೂ ಅವರು ಕಣ್ಣು ಕಾಣುವಂತೆ ಮಾಡಿದ್ದಾರೆ. ಕಳೆದ ತಿಂಗಳು ಅವರು ಜಮ್ನಾಲಾಲರ ಆಮಂತ್ರಣದಿಂದ ವರ್ಧಾಕ್ಕೆ ಬಂದಿದ್ದರು. ಅವರ ಗುಣಶಕ್ತಿಯನ್ನು ನೋಡಿ ನಾನು ಬೆರಗಾದೆನು ಎಂದು ಗಾಂಧಿಜಿ ಬರೆಯುತ್ತಾರೆ. ಡಾ॥ ಮಥುರಾದಾಸರು ಸಾವಿರಾರು ಜನರನ್ನು ಕೂಡಿಸಿ ಶಸ್ತ್ರಚಿಕಿತ್ಸೆ ಮಾಡುತ್ತಾರೆ. ಅದಕ್ಕೆ ಅವರು ಯಜ್ಞವೆಂದು ಹೇಳುವರು. ಈ ಯಜ್ಞವನ್ನು ಅವರು ರೇವಾರಿಯ ಭಗವತ್ ಭಕ್ತಿ ಆಶ್ರಮದಲ್ಲಿ ಆರಂಭಿಸಿದರು. ಅವರು ಶಸ್ತ್ರಚಿಕಿತ್ಸೆಯಲ್ಲಿ ಬಹಳ ನಿಪುಣರಿದ್ದಾರೆ. ಮಿನಿಟಿಗೆ ಒಂದರಂತೆ ಅವರು ಶಸ್ತ್ರಚಿಕಿತ್ಸೆ ಮಾಡಬಲ್ಲರು. ಹೀಗಾಗಿ ಸಾವಿರಾರು ಜನರು ಕಣ್ಣನ್ನು ಹೊಂದಿದರು. ಈ ಒಪರೇಶನುಗಳಿಂದ ಅವರು ಜಗತ್ತಿನ ಪ್ರಖ್ಯಾತ ಡಾಕ್ಟರರ ಸಾಲಿಗೆ ಸೇರತಕ್ಕವರಾಗಿರುವರು.

ವಿಚಿತ್ರ ಪ್ರಪಂಚ

ನಾಗಪುರದ ೧೩೦ ವರ್ಷದ ಮುದುಕ

ಸಿದ್ಧಿ ವಾಸ್ತಾದ್ ಎಂಬವನಿಗೆ ಕಳೆದ ಜಾನೆವರಿಗೆ ೧೩೦ ವರ್ಷ ಪ್ರಾಯ ತುಂಬಿತು. ಈತನು ನಾಗಪುರದಲ್ಲಿದ್ದಾನೆ. ಆತನು ನಾಗಪುರಕ್ಕೆ ೧೮೫೫ರಲ್ಲಿ ಬಂದನು. ಆಗ ರೈಲ್ವೆ ಮಾರ್ಗವಿರಲಿಲ್ಲ. ಆತನು ಪ್ರಸಿದ್ಧ ಗುಜ್ಜಾರ್ ಕುಟುಂಬದೊಡನೆ ಕಳೆದ ೮೦ ವರ್ಷಗಳಿಂದ ವಾಸಮಾಡುತ್ತಾನೆ. ೧೯೧೮ರ ವರೆಗೆ ಆತನು ಸಂಪೂರ್ಣ ಆರೋಗ್ಯಶಾಲಿಯಾಗಿದ್ದ. ಆತನಿಗೆ ಆ ಮೇಲೆ ಇಂಫ್ಲುಯೆಂಜ, ಕೋಲರಾ ಮತ್ತು ಪಕ್ಷವಾತ ರೋಗಗಳು ಆದವು. ಇತ್ತೀಚೆಗೆ ಅಂಧ್ರವಾಯುವಿನ ಒಪರೇಶನ್ ಮಾಡಿದ್ದಾರೆ. ಆತನು ಒಬ್ಬ ನಿಷ್ಠಾವಂತ ಮುಸ್ಲಿಮನು. ಮೋಟರು ಕಾರಲ್ಲಿ ಕೂತುಕೊಳ್ಳುವುದಿಲ್ಲ. ಆಸ್ಪತ್ರೆಗೆ ಹೋಗುವುದಿಲ್ಲ. ದಾದಿಗಳು ತನ್ನನ್ನು ಮುಟ್ಟಬಾರದು ಎಂದು ಆತನ ಹೇಳಿಕೆ.

ಹದಿನಾರನೆಯ ಮದುವೆ

ಪಂಜಾಬಿನ, ಸೈಲ್‌ಕೋಟಿನಲ್ಲಿ ಒಬ್ಬ ಹಿಂದುವಿಗೆ ಈಗ ಹದಿನಾರನೆಯ ಮದುವೆ ಆಗಿದೆ. ವಧುವಿನ ಪ್ರಾಯ ಹದಿನೆಂಟು ವರ್ಷ. ವರನದು ತೊಂಬತ್ತೈದು ವರ್ಷ. ಎಪ್ಪತ್ತು ವರ್ಷ ಪ್ರಾಯದ ಮೊದಲೇ ಆತನಿಗೆ ಹನ್ನೆರಡು ಮದುವೆಗಳಾಗಿದ್ದುವು.

ನಾಗರಹಾವಿನ ಬಂಧುಬಳಗದ ಪ್ರತ್ಯಕ್ಷ ದರ್ಶನ

ಉಡುಪಿ ತಾಲೂಕಿನ ಅಲೆವೂರು ಗುಡ್ಡೆಯಂಗಡಿ ಬಳಿಯಲ್ಲಿ ಕೊಲ್ಲಲ್ಪಟ್ಟಿದ್ದ ನಾಗರಹಾವಿನ ಶವವನ್ನು ಶ್ರೀ॥ ರಂಗಪ್ಪ ಶಿಣೆಯರು ದಹನ ಮಾಡುವಾಗ ನೆರೆದ ಜನರ ಪೈಕಿ ಒಬ್ಬರು ಪಶ್ಚಾತ್ತಾಪದಿಂದ, ಮನುಷ್ಯನ ಶವಸಂಸ್ಕಾರವಾಗುತ್ತಿದ್ದರೆ ಬಹುಮಂದಿ ಬಂದು ಸೇರಿ ತಮ್ಮ ದುಃಖವನ್ನು ಪ್ರದರ್ಶಿಸುತ್ತಿದ್ದರು; ಆದರೆ ಈ ಹಾವಿನ ವಿಷಯದಲ್ಲಿ ದುಃಖಿಸಲು ಅಥವಾ ದಹನ ಕಾರ್ಯದಲ್ಲಿ ಭಾಗವಹಿಸಲು ಯಾರಿರುವರು? ಎಂದು ಹೇಳಿದರು. ಅವರು ಹಾಗೆ ಹೇಳಿದ ಐದು ನಿಮಿಷಗಳಲ್ಲಿ ಸಮೀಪದ ನಾಗಬನದಿಂದ ಈ ತನಕ ಯಾರೂ ನೋಡದಷ್ಟು ದೊಡ್ಡ ನಾಗರಹಾವುಗಳೆರಡು ಬಂದುವು. ಪಡುಭಾಗದಿಂದ ಸ್ವಲ್ಪ ಚಿಕ್ಕದಾದ ಎರಡು, ಹಾಗೂ ಉತ್ತರ ದಿಕ್ಕಿನಿಂದ ಒಂದು ಹೀಗೆ ಐದು ಹಾವುಗಳು ಬಂದು ಸುಯ್‌ಗುಟ್ಟುತ್ತಾ ಒಂದರ ಮೇಲೊಂದು ಉರುಳುತ್ತ ಶವ ಭಸ್ಮವಾಗುವ ತನಕ ಅಲ್ಲಿಯೇ ಇದ್ದು ಬಳಿಕ ಯಥಾಸ್ಥಾನಗಳಿಗೆ ಹೊರಟು ಹೋದುವು. ನೆರೆದವರೆಲ್ಲರಿಗೂ ಪರಮಾಶ್ಚರ್ಯವಾಯಿತು. ಈ ವಿನೋದವನ್ನು ನೋಡಲು ಆಸುಪಾಸಿನ ಜನರೆಷ್ಟೋ ಮಂದಿ ಕೂಡಿದ್ದರು.

[ರಾ. ಬ.]

ರೈಲು ಬಂಡಿಗಳ ಸಮಯ

ಇದೇ ಜುಲೈ ತಾ. ೧ರಿಂದ ವ್ಯತ್ಯಾಸವಾದ ರೈಲು ಬಂಡಿಗಳ ಸಮಯಗಳು ಈ ಕೆಳಗಿನಂತಿವೆ:—

ಗಾಡಿಗಳು	ಹೊರಡುವ ಗಂಟೆ	ತಲ್ಪುವ ಗಂಟೆ
ಗೂಡ್ಸು ಬಂಡಿ	8.45 ರಾತ್ರಿ	9.25 ರಾತ್ರಿ
ಮಲಬಾರು ಎಕ್ಸ್‌ಪ್ರೆಸ್ (ಮೈಲ್)	9.5 ಬೆಳಿಗ್ಗೆ	5.15 ಸಾಯಂ.
ಜಾಲಾರ್ ಪೇಟೆ ಪೆಸೆಂಜರ್	12.0 ಮಧ್ಯಾಹ್ನ	2.55 ಸಾಯಂ.
ಕಣ್ಣನ್ನೂರು ವರೆಗೆ	5·52 ಸಾಯಂ.	9·40 ಪೂರ್ವಾಹ್ನ.

ನೋಟೀಸು

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

ಸ್ಮಾ. ಸಂಖ್ಯೆ 117/1937
S. E. P. 155/1941.
S. E. A. No. 209/1941.

ಮುಲ್ಕಿ ಶ್ರೀ ವೆಂಕಟ್ರಮಣ ದೇವಸ್ಥಾನ . . . . . ಅರ್ಜಿದಾರ

ಶೇದಣ್ಣ ಭಟ್ಟ ಸಹಾ . . . . ಎದ್ರಿರು

ಽನೇ ಎದ್ರಿ ಹಳೆಯಂಗಡಿ ಹಸನಬ್ಯಾರಿ—ಬಣಂಬೂರು ಬಾವಬ್ಯಾರಿ ಮಗ. ದುಂಗಳೂರು ತಾಲ್ಲೂಕು ಹಳೆಯಂಗಡಿ ಗ್ರಾಮದಲ್ಲಿರುವವರಿಗೆ

ಸದ್ರಿ ನಂಬರಿನಲ್ಲಿ ಎದ್ರಿರು ನಡಿಸುವ ತಕ್ಷೀರಿನ ಕುರಿತು ಸೆಂಕ್ಷನ್ ಕೊಡಬೇಕಾಗಿ ಅರ್ಜಿದಾರ ಅರ್ಜಿ ಕೊಟ್ಟಿರುವದರಿಂದ ಅದನ್ನು ಕುರಿತು ನಿಮಗೇನಾದರೂ ಆಕ್ಷೇಪಣೆಯಿದ್ದ ಪಕ್ಷದಲ್ಲಿ ಅದನ್ನು 1942 ನೇ ಇಸವಿ ಜೂನ್ 3ನೇ ತಾರೀಕಿನ ಹಗಲು 10 ಘಂಟೆಗೆ ಈ ಕೋರ್ಟಿನಲ್ಲಿ ನೀವು ಖುದ್ದು ನಿಂದಾಗಲೀ ವಕೀಲದ್ವಾರವಾಗಲೀ ಹಾಜರಾಗಿ ತಿಳಿಸಿಕೊಳ್ಳಬೇಕು. ಹಾಗೆ ಹಾಜರಾಗದಿದ್ದರೆ ಸದರಿ ವಿಷಯದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು.

(ಕೋರ್ಟಿನ ಹುಕುಂ ಪ್ರಕಾರ)

ಕಾರ್ಕಳ 21-3-42 | M. Mukunda Kamath, ಅರ್ಜಿದಾರರ ಪರ ವಕೀಲ.

HALFTONE & LINE
BLOCK MAKING
UNDERTAKEN
Sharada Press,
MANGALORE.

ನೆರೆಬಿದ್ದ ಚರ್ಮ, ಕಾಂತಿಹೀನವಾದ ಕಣ್ಣುಗಳು, ಶಕ್ತಿಗುಂದಿದ ಶರೀರ, ಹೀಗಾಗಿ ಕುಂದಿಹೋದ ಆಕೆಯನ್ನು ಗೆಳೆಯರೆಲ್ಲರೂ ತೊಲಗಿಬಿಟ್ಟರು!

ಅಂತರಂಗ ನೈರ್ಮಲ್ಯವು ಅವನ ಚರ್ಮವನ್ನು ಶುಭ್ರಗೊಳಿಸಿತು; ಕಳೆದ ಶರೀರಾರೋಗ್ಯವನ್ನು ತಿರಿಗಿ ಸಂಪಾದಿಸಿಕೊಟ್ಟಿತು.

ಮೃದುವಾದ ಶುಚಿಯಾದ ಚರ್ಮವಿರುವುದು, ಶುಭ್ರವಾದ, ಕಾಂತಿಯುಕ್ತವಾದ ಕಣ್ಣುಗಳಿರುವುದು, ತುಂಬಿದ ಕೃಪಕಾಂತಿಯು ಕೂಡಲಿರುವುದು, ಇದೇ ಅಂತರಂಗದ ಶುಚಿತ್ವದ ಚಿಹ್ನೆಗಳು! ನಿಮ್ಮ ಶರೀರದ ಒಳಭಾಗವನ್ನು ಶುಚಿಗೊಳಿಸಿರಿ. ಹೊಟ್ಟೆಯಲ್ಲಿ ಅಶುದ್ಧ ವಸ್ತುಗಳು ಒಟ್ಟುಗೂಡದಂತೆ ನೋಡಿಕೊಳ್ಳಿರಿ. ಪ್ರತಿ ದಿನವೂ ಒಂದು ಗ್ಲಾಸು ತಂಪಾದ ಪಾನೀಯ

ಅಂಡ್ರೂಸ್ ಲಿವರ್ ಸಾಲ್ಟನ್ನು

ತೆಗೆದುಕೊಳ್ಳುವುದರಿಂದ ಶರೀರದ ಅಂತರಂಗವು ಶುಚಿಯಾಗುತ್ತದೆ. ಮಲಬದ್ಧತೆಯು ನಾಶವಾಗುತ್ತದೆ. ಮತ್ತೆ ಅನೇಕ ತರದ ರೋಗಗಳು ಪರಿಹಾರವಾಗುತ್ತವೆ. ಇದು ಹೊಟ್ಟೆಯನ್ನು ಬಹಳ ಶುಚಿಯಾಗಿಡುತ್ತದೆ. ರಕ್ತವನ್ನು ಶುದ್ಧಗೊಳಿಸುತ್ತದೆ.

ನಿಮ್ಮ ಅಂತರಂಗ ಶುಚಿತ್ವಕ್ಕಾಗಿ ದಿನನಿತ್ಯ
ಅಂಡ್ರೂಸ್ ಲಿವರ್ ಸಾಲ್ಟ್
ಈ ಆರೋಗ್ಯ ಪಾನೀಯವನ್ನು ಉಪಯೋಗಿಸಿರಿ.

ANDREWS
LIVER SALT



ಶುಚಿಗೊಳಿಸುತ್ತದೆ—ತಂಪುಗೊಳಿಸುತ್ತದೆ—ಆನಂದಪಡಿಸುತ್ತದೆ.

ಸ. ಸೈ. ೬. 12
ದೊಡ್ಡ ಸೈ. ರೂ. 1-6-0

THE VIJAYA BANK, LIMITED.
Head Office: MANGALORE.

BRANCHES:
KADRI-MANGALORE, HAMPANKATTA-MANGALORE, UDIPI, COONDAPUR, KARKAL, KAUP, & BRAHMAVAR.

SEASON DEPOSITS
are now accepted at all our Offices, at 4% per annum, for 6 or more months, maturing on 31st July, 1942.

Bhuvanendra Products Limited,

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitual abortion and other uterine troubles. Must be commensed soon after conception and continued up to the time of delivery

"ಭುವನೇಂದ್ರ ಗರ್ಭಪಾಲ"

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವವಿಧದ ದೋಷಗಳನ್ನು ಗುಣಪಡಿಸುವ ದಿವ್ಯಔಷಧಿ ಗರ್ಭವತಿಯೆನಿಸಿದಂದಿನಿಂದ ಪ್ರಸವಕಾಲದ ವರೆಗೆ ಸೇವಿಸುವುದು ಅತ್ಯುತ್ತಮ

ಸ್ಥಳೀಯ ಸ್ಟಾಕಿಸ್ಟ್ ವ ಏಜೆಂಟರು:—

(1) ಡಾಕ್ಟರ್ ವಿ. ಟಿ. ಕಾಮತ್, ರಥಬೀದಿ (2) ರಾಘುವೇಂದ್ರ ಷೈ, ರಥಬೀದಿ (3) ದಿ ಕರ್ನಾಟಕ ಸ್ನಫ್ ವರ್ಕ್ಸ್, ರಥಬೀದಿ (4) ಡಾ। ಯಂ ಎಸ್ ಪ್ರಭು, M B B S ಸಿ ಪಿ ಸಿ ಬಿಲ್ಡಿಂಗ್ಸ್ (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಡಿಪೊ —1 ಮರಾಠ ಗಲ್ಲಿ ಹುಬ್ಬಳ್ಳಿ

2. 36 ಫ್ಯಾಕ್ರೋಫ್ಟ್ಸ್ ರೋಡ್, ಟ್ರಿಪ್ಲಿಕೇನ್, ಮದರಾಸು

The Bank of Mangalore Limited

HEAD OFFICE Mangalore — *BRANCHES* Moodabidri & Padubidri

ANNOUNCEMENT

On and from 1st February 1942, fixed deposits will be accepted at the following attractive rates

One year	4%
Two years or above	4½%

Interest Payable Quarterly

ಸರಕಾರದ ಹೊಸ ಪಾಠಪಟ್ಟಿಗನುಸಾರವಾಗಿ ಬರೆದ

ನವೀನ ಭೂವಿವರಣೆ

ವಾಸುದೇವರಾವ್, ಎಂ ಎ ಎಲ್ ಟಿ (Dip Geography)
(ಭೂಗೋಳ ಶಾಸ್ತ್ರದಲ್ಲಿ ಡಿಪ್ಲೊಮಾ ಪಡೆದವರು)

ಈ ಪುಸ್ತಕಗಳನ್ನು ಪಡಕೊಂಡಲ್ಲಿ ವಿದ್ಯಾರ್ಥಿಗಳಿಗೆ ಎಟ್ಲಾಸ್ ಕೊಂಡುಕೊಳ್ಳುವ ಅವಶ್ಯವಿಲ್ಲ

ಪ್ರತಿ ಪುಸ್ತಕದಲ್ಲಿ ಬಣ್ಣಬಣ್ಣದ ಭೂಪಟಗಳಿವೆ

ಅನೇಕಾನೇಕ ಚಿತ್ರಪಟಗಳಿಂದ ಕೂಡಿದ್ದು, ಪ್ರತಿ ಪಾಠದ ಅಂತ್ಯದಲ್ಲಿ ಅಭ್ಯಾಸಗಳನ್ನೂ ಮಾದರಿ ಪ್ರಶ್ನೆಗಳನ್ನೂ ಕೊಟ್ಟಿದೆ

4ನೆಯ ಪುಸ್ತಕ 6 ಆಣೆ, 5ನೆಯ ಪುಸ್ತಕ 7 ಆಣೆ, 7 ಮತ್ತು 8ನೆಯ ಪುಸ್ತಕಗಳು ಅಚ್ಚಿನಲ್ಲಿವೆ ಪುಸ್ತಕಗಳು ಬೇಕಾದಲ್ಲಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.

ದಿ ಕಂಬೈಂಡ್ ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೊಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು — ಕೊಡಿಯಾಲ್ ಬೈಲ್

ಹಿರಿಯಡಕ ಶ್ರೀ ವೀರಭದ್ರಸ್ವಾಮಿ ದೇವಾಲಯದಲ್ಲಿ ನಡೆಯುವ ರಥೋತ್ಸವ ಸಮಾರಂಭ

ಧ್ವಜಾರೋಹಣ	ದೀಪಾರಾಧನೆ	ರಂಗಪೂಜೆ	ಮಹಾರಥೋತ್ಸವ
30–4–'42	1–5–'42	2–5–'42	3–5–'42

ಹಿರಿಯಡಕ ದೇವಸ್ಥಾನದಿಂದ ಸುಮಾರು ಅರ್ಧ ಮೈಲು ದೂರದಲ್ಲಿರುವ ಶ್ರೀ ಮಾರ್ಕಾಂಡೇಯ ತೀರ್ಥದಲ್ಲಿ ಮಿಂದು ಶ್ರೀ ಅಡಕ ತಾಯಿ ಮತ್ತು ಶ್ರೀ ಮಾರ್ಕಾಂಡೇಯ ಮಹಾ ಮುನಿಗಳ ಅಪೇಕ್ಷೆಯಂತೆ ಶ್ರೀ ಪರಮೇಶ್ವರನು, ಪಾರ್ವತಿ ಸಮೇತನಾಗಿ ಸಕಲ ಗಣಾಂಗ್ರಣಗಳೊಡನೆ ಭಕ್ತಾದಿಗಳ ಸಕಲ ಇಷ್ಟಾರ್ಥವನ್ನು ನೆರವೇರಿಸಿ ಕೊಡುವುದಕ್ಕಾಗಿ ಪ್ರತ್ಯಕ್ಷವಾಗಿ ನೆಲಸಿರುವ ಶ್ರೀ ವೀರಭದ್ರ ಸ್ವಾಮಿ ದೇವಾಲಯವನ್ನು ಸಂದರ್ಶಿಸಿ ಭಕ್ತಿಯಿಂದ ಶ್ರೀ ದೇವರ ಅನುಗ್ರಹಕ್ಕೆ ಪಾತ್ರರಾಗಲು ಇದು ಸುಸಂದರ್ಭವಲ್ಲವೇ?
ಪ್ರಯಾಣಿಕರ ಸೌಕರ್ಯದೆಡೆಗೆ ಹೆಚ್ಚಿನ ಗಮನ ಕೊಡಲಾಗುವುದು.

JOINT MANAGERS,

The Combined Booking Agency, MANGALORE. — **The Joint Booking Office,** KODIALBAIL.

ಒಂದು ಸಂಚಿಕೆ ಬೆಲೆ ಒಂದಾಣೆ ವಾರ್ಷಿಕ ಚಂದಾ ರೂ. 2-0-0 ಅಂಚೆ ವೆಚ್ಚ ಸೇರಿ ರೂ. 2—12—0 Regd. No. M 3460

ಸ್ವದೇಶಾಭಿಮಾನಿ

[ಸಂಪುಟ 36] ತಾರೀಕು 27—3—1942 [ಸಂಚಿಕೆ 13]

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಚೊಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ.

ಬೊಂಬಾಯಿ, ಮದರಾಸು, ಕಲ್ಕತ್ತ.

ಶ್ರೀ ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಸಂಶಯುವೇಕೆ?

ಶತ್ರುಗಳು ವಿಮಾನಗಳ ಮೂಲಕ ಧಾಳಿ ನಡೆಸುವುದರಿಂದಲೂ ಮತ್ತು ಇತರ ವಿಧವಾದ ಶತ್ರು ಚಟುವಟಿಕೆಗಳಿಂದಲೂ ಹಿಂದುಸ್ಥಾನದ ಸಿವಿಲ್ ಪ್ರಜೆಗಳಲ್ಲಿ—ಇದರಲ್ಲಿ ಎ. ಆರ್. ಪಿ. ಕೆಲಸಗಾರರೂ ಸೇರುವರು—ಉಂಟಾಗಬಹುದಾದ ಪ್ರಾಣಹಾನಿಗೆ

ದಿ "ಬಾಂಬೆ ಲೈಫ್" ಪಾಲಿಸಿಗಳು

ಸಂಪೂರ್ಣವಾದ ರಕ್ಷಣೆಯನ್ನು ನೀಡುತ್ತವೆ. ಆದ್ದರಿಂದ ನಿಮ್ಮ ಪ್ರೀತಿಪಾತ್ರರಿಗಾಗಿ

ದಿ ಬಾಂಬೆ ಲೈಫ್ ಅಷ್ಯೂರೆನ್ಸ್ ಕಂಪೆನಿ (ಲಿಮಿಟೆಡ್)

ಯಲ್ಲಿ ಪಾಲಿಸಿಗಳನ್ನು ಪಡೆಯುವುದು ನಿಮ್ಮ ತ್ವರಿತ ಕರ್ತವ್ಯವಾಗಿದೆ

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಸಂಸ್ಥಾನಗಳಾದಿಯಾಗಿ ದಕ್ಷಿಣ ಭಾರತಕ್ಕೆ ಪ್ರಾಮುಖ್ಯ ಏಜೆಂಟರು:

ಉಡುಪಿ

—: ಅಥವಾ ಈ ಕೆಳಗಿನ ಇತರ ಆಫೀಸುಗಳಿಗೆ ಬರೆಯಿರಿ :-

ಕಲ್ಲಿಕೋಟೆ	ಬೆಂಗಳೂರು	ಮಂಗಳೂರು
ಮದರಾಸು	ತ್ರಿವೇಂಡ್ರಂ	ಬೊಂಬಾಯಿ

ಇಂದು ಮಿಲಿಯುಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ ರಥಬೀದಿ ಮಂಗಳೂರ

★

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

Estd. 1906

ಸ್ವದೇಶಾಭಿಮಾನಿ

SWADESHABHIMANI

ಬ್ರಿಟಿಷ್ ಮತ್ತು ರಶ್ಯನ್ ಸೈನಿಕರು ಜತೆಗೂಡಿದ್ದಾರೆ

ಲಂಡನಿಗೆ ಬಂದಿರುವ ರಶ್ಯನ್ ಮಿಲಿಟರಿ ಮಿಶನಿನವರು ಲಂಡನಿನ ಏಂಟಿ ಏರ್‌ಕ್ರಾಫ್ಟ್ ಬೆಟರಿಯನ್ನು ಸಂದರ್ಶಿಸುತ್ತಾರೆ

KANNADA ILLUSTRATED WEEKLY

ಶ್ರೀ ರಾಮಕೃಷ್ಣ ಲೀಲಾ ಪ್ರಸಂಗ

[ಗುರುಭಾವ-ಪೂರ್ವಾರ್ಧ]

ಮೂಲ ಬಂಗಾಳೀ ಲೇಖಕರು. ಶ್ರೀ ಸ್ವಾಮಿ ಶಾರದಾನಂದಜಿ
ಅನುವಾದ: ಶ್ರೀ ಸ್ವಾಮಿ ಪ್ರಣವೇಶಾನಂದರು
(ಹಕ್ಕು ಕಾದಿರಿಸಲ್ಪಟ್ಟಿದೆ)

ಗಿರೀಶಚಂದ್ರರ ಅವಸ್ಥೆ

- ಗಿರೀಶಚಂದ್ರರು ಅದನ್ನು ಕೇಳಿ ಖಿನ್ನಮನಸ್ಸಿನಿಂದ ನನಗೆ ಈಗಿರುವ ಕೆಲಸಕಾರ್ಯಗಳ ಆವಶ್ಯಕತೆಯಿಂದ ನನ್ನ ಸ್ನಾನ, ಆಹಾರ, ನಿದ್ರೆ ಮೊದಲಾದ ನಿತ್ಯಕರ್ಮಗಳಿಗೆ ಒಂದು ನಿಯಮಿತ ಸಮಯ ನಿರ್ಧರಿಸಲು ನನ್ನಿಂದ ಆಗುವುದಿಲ್ಲ. ಪ್ರಾತಃಕಾಲ ಸಂಧ್ಯಾಕಾಲ ಸ್ಮರಣೆ ಮನನ ಮಾಡಲು, ನಿಶ್ಚಯವಾಗಿ ಮರೆತೇಬಿಡುವೆನು. ಆದರಿಂದ ಶ್ರೀ ಗುರುವಿನ ಆದೇಶ ಉಲ್ಲಂಘನೆ ಮಾಡಿದ ಮಹಾ ದೋಷದಿಂದ ಅನಿಷ್ಟ ಸಂಭವಿಸುವುದು ನಿಶ್ಚಯ. ಆದ್ದರಿಂದ ಇದನ್ನು ಹೇಗೆ ಒಪ್ಪಿಕೊಳ್ಳಲಿ? ವ್ಯಾವಹಾರಿಕ ಸಂಸಾರದಲ್ಲಿ ಯಾರಿಗಾದರೂ ಮಾತುಕೊಟ್ಟು ತಪ್ಪಿದರೆ ದೋಷ ಬರುತ್ತದೆ. ಅವರಾದರೋ ನನ್ನ ಪರಕಾಲದ ಗುರುಗಳು ಇವರಿಗೆ ಕೊಟ್ಟ ಮಾತು ಹೇಗೆ ತಪ್ಪುವುದು ಎಂದು ಭಾವಿಸತೊಡಗಿದರು. ಗಿರೀಶಚಂದ್ರರು ತಮ್ಮ ಮನಸ್ಸಿನ ಭಾವಗಳನ್ನು ಭಯದಿಂದ ವ್ಯಕ್ತಪಡಿಸಲೂ ಕುಂಠಿತರಾದರು. ಆದರೆ ಶ್ರೀ ಪರಮಹಂಸರು ನನಗೇನೂ ಕಷ್ಟಕರವಾದ ಕೆಲಸವನ್ನು ಮಾಡಲು ಹೇಳಲಿಲ್ಲವಲ್ಲ. ಬೇರೆ ಯಾರಿಗಾದರೂ ಈ ಮಾತನ್ನು ಹೇಳಿದರೆ ಅವರು ತಕ್ಷಣವೇ ಸಾನಂದದಿಂದ ಒಪ್ಪಿಕೊಳ್ಳುತ್ತಿದ್ದರು ಎಂದು ಪುನಃ ಭಾವಿಸಿದರು. ಆದರೆ ಅವರೇನು ಮಾಡುವುದು, ತಮ್ಮ ಏಕಾಂತ ಬಹಿರ್ಮುಖ ಅವಸ್ಥೆಯನ್ನು ನೋಡಿಯೇ ಧರ್ಮಕರ್ಮ ಒಂದಿಷ್ಟಾದರೂ ಪ್ರತಿದಿನವೂ ಮಾಡುವುದು ಅಸಾಧ್ಯವೆಂದು ತಿಳಿದಿದ್ದರು! ಅಲ್ಲದೆ ತಮ್ಮ ಸ್ವಭಾವವಾದರೋ ಯಾವದಾದರೊಂದು ವ್ರತ ಅಥವಾ ನಿಯಮಕ್ಕೆ ದೀರ್ಘಕಾಲ ಒಳಪಡುವುದು ಅವರಿಗೆ ಉಸುರುಕಟ್ಟಿಸಿದಂತಾಗುತ್ತಿತ್ತು. ಅಲ್ಲದೆ ಆ ನಿಯಮವು ಭಂಗವಾಗುವ ತನಕ ಮನಸ್ಸಿನಲ್ಲಿ ಅಶಾಂತಿ. ಆಜೀವನವೂ ಹೀಗೆಯೇ ಆಗುತ್ತಾ ಬಂದಿದೆ!

ಸ್ವಂತ ಇಚ್ಛೆಯಿಂದ ಒಳ್ಳೆದೋ ಕೆಟ್ಟದೋ ಏನೊಂದು ಮಾಡಲು ಅವರಿಗೆ ಆಕ್ಷೇಪಣೆ ಇರುತ್ತಿದ್ದಿಲ್ಲ. ಆದರೆ ಯಾವದಾದರೂ ಒಂದು ಕಾರ್ಯವನ್ನು ನಿರ್ಬಂಧದಿಂದ ಮಾಡಬೇಕೆಂದಿದ್ದ ಅವರ ಮನಸ್ಸು ಅದಕ್ಕೆ ಒಪ್ಪುತ್ತಿದ್ದಿಲ್ಲ. ಆದ್ದರಿಂದ ತಮ್ಮ ಅತ್ಯಂತ ಅಶಕ್ತತೆಯ ಮತ್ತು ನಿರುಪಾಯದ ಅವಸ್ಥೆಯನ್ನು ಕಂಡು ಕಾತರಪಟ್ಟು ಏನೂ ಮಾತನ್ನಾಡದೆ ಸುಮ್ಮಗಿದ್ದರು. ಮಾಡುತ್ತೇನೆ ಅಥವಾ ಮಾಡುವುದಿಲ್ಲ ಎಂದು ಯಾವ ಮಾತನ್ನೂ ಹೇಳಲಿಲ್ಲ! ಹೇಳುವುದಾದರೂ ಹೇಗೆ?—ಅಷ್ಟು ಸುಲಭದ ಕೆಲಸ ಮಾಡುವುದಿಲ್ಲವೆಂದು ಹೇಳುವುದು ನಾಚಿಕೆಗೇಡು. ಹೇಳಿದರೆ ಶ್ರೀ ಪರಮಹಂಸರು ಅಥವಾ ಇನ್ನಿತರರು ಏನು ಭಾವಿಸುವರು? ತಮ್ಮ ಏಕಾಂತ ನಿರುಪಾಯದ ಅವಸ್ಥೆಯನ್ನು ಒಂದುವೇಳೆ ಅವರು ತಿಳಿಯಲಿಕ್ಕೇ ಇಲ್ಲ. ಅವರು ಬಾಯಿಬಿಟ್ಟು ಹೇಳದಿದ್ದರೂ ನಾನೇನೋ ಢೋಂಗು ಮಾಡಿ ಮಾತನ್ನಾಡುತ್ತೇನೆ ಎಂದು ಮನಸ್ಸಿನಲ್ಲೇ ಭಾವಿಸುವರು.

ಶ್ರೀ ಪರಮಹಂಸರು ಗಿರೀಶಚಂದ್ರರು ಮಾತನಾಡದೆ ಸುಮ್ಮಗಿರುವುದನ್ನು ಕಂಡು ಮತ್ತು ಅವರ ಕಡೆಗೆ ನೋಡುತ್ತ ಅವರ ಮನೋಭಾವವನ್ನರಿತು—ಒಳ್ಳೇದು, ಆದಾಗದಿದ್ದರೆ ಆಹಾರ ನಿದ್ರೆ ಮಾಡುವ ಮೊದಲು ಒಂದು ಸಲವಾದರೂ ದೇವರ ಸ್ಮರಣೆ ಮಾಡು ಅಂದರು.

ಗಿರೀಶಚಂದ್ರರು ಇನ್ನೂ ನಿಶಬ್ದರಾಗಿದ್ದಾರೆ. ಅದನ್ನೂ ಕೂಡ ಹೇಗೆ ಮಾಡಲಿ ಎಂದು ಭಾವನೆ. ಒಂದೊಂದು ದಿನ ಊಟ ಮಾಡುವುದು ಹತ್ತು ಗಂಟೆಯ ಹೊತ್ತು, ಒಂದೊಂದು ದಿನ ಸಾಯಂಕಾಲ ಐದು ಗಂಟೆಯ ಸಮಯ; ರಾತ್ರಿ ಆಹಾರದ ಸಮಯವೂ ಕೂಡ ಹೀಗೆಯೇ. ಆ ಮೇಲೆ ಕೋರ್ಟು ಮೊಕದ್ದಮೆಯ ಬಲೆಯಲ್ಲಿ ಸಿಕ್ಕಿ ಊಟಕ್ಕೆ ಕುಳಿತುಕೊಂಡಲ್ಲೇ ಉದ್ವೇಗ ಮನಸ್ಸಿಂದ ವಕೀಲರಿಗೆ ರುಸುಮು ರವಾನಿಸಿದ್ದನು, ಅದು ಅವರಿಗೆ ತಕ್ಕ ಸಮಯಕ್ಕೆ ತಲುಪಿದೆಯೋ ಇಲ್ಲವೋ ಗೊತ್ತಿಲ್ಲ. ಮೊಕದ್ದಮೆಯ ಸಮಯ ಅವರು ಬಾರದಿದ್ದರೆ ಬಹಳ ಮೋಸ ಇತ್ಯಾದಿ ಭಾವಿಸುತ್ತಿದ್ದರು. ಕಾರ್ಯಗಳಲ್ಲಿ ಅಂತಹ ಸಮಯವು ಇನ್ನೊಮ್ಮೆ ಬಂದರೆ, ಬರುವುದೂ ಕೂಡ ಅಸಂಭವವಲ್ಲ, ಆ ದಿನ ಭಗವಾನ್‌ರ ಸ್ಮರಣೆ ಮನನ ಮಾಡಲು ನಿಜವಾಗಿಯೂ ಮರೆತುಬಿಡುವರು! ಅಯ್ಯೋ ಪಾಪ! ಶ್ರೀ ಪರಮಹಂಸರು ಅಷ್ಟು ಸುಲಭ ಉಪಾಯ ಹೇಳಿಕೊಟ್ಟಿದ್ದರೂ ಮಾಡುತ್ತೇನೆ ಎಂದು ಹೇಳಲು ಅವರಿಂದಾಗಲಿಲ್ಲವಲ್ಲಾ! ಗಿರೀಶಚಂದ್ರರು ವಿಷಮ ಕಷ್ಟಕ್ಕೆ ಗುರಿಯಾಗಿ ಏನೊಂದು ಮಾತನಾಡದೆ ಇದ್ದರು. ಅವರ ಅಂತರ್ಯದಲ್ಲಿ ಒಂದು ದುಃಖದ, ಭಯದ ಮತ್ತು ನಿರಾಶೆಯ ಬಿರುಗಾಳಿ ಬೀಸಿದಂತಾಯಿತು. ಶ್ರೀ ಪರಮಹಂಸರು ಗಿರೀಶಚಂದ್ರರ ಕಡೆಗೆ ಇನ್ನೊಮ್ಮೆ ದಿಟ್ಟಿಸಿ ಈ ಸಲ ನಗುಮೊಗೆಯಿಂದ ನೀನು ಅದನ್ನೂ ಕೂಡ ಮಾಡಲಾಗುವುದಿಲ್ಲವೆಂದು ಹೇಳುತ್ತಿಯಾ, ಒಳ್ಳೇದು ಹಾಗಾದರೆ ನಿನ್ನ ವಕಾಲತು ನನಗೆ ಕೊಡು ಎಂದು ಹೇಳಿದರು. ಶ್ರೀ ಪರಮಹಂಸರು ಆಗ ಅರ್ಧಬಾಹ್ಯ ಅವಸ್ಥೆಯಲ್ಲಿದ್ದರು.

ವಕಾಲತು ಕೊಟ್ಟನಂತರ ಗಿರೀಶಚಂದ್ರರ ಮನಸ್ಸಿನ ಅವಸ್ಥೆ

ಈ ಮಾತು ಗಿರೀಶಚಂದ್ರರ ಮನಸ್ಸಿಗೆ ಒಪ್ಪಿತು. ಮನಸ್ಸು ಶಾಂತವಾಯಿತು. ಶಾಂತವಾಯಿತು ಮಾತ್ರವಲ್ಲ, ಶ್ರೀ ಪರಮಹಂಸರ ಅಪಾರ ಕರುಣೆಯ ವಿಷಯವಾಗಿ ಭಾವಿಸಿ, ಅದರಲ್ಲಿ ಪ್ರೀತಿಯೂ ವಿಶ್ವಾಸವೂ ತುಂಬಿ ತುಳುಕುತ್ತಿತ್ತು. ನಿಯಮ ಬಂಧನಗಳು ಹುಲಿ ಎಂದನ್ನಬೇಕು. ಇನ್ನು ಅದರ ಬಾಯೊಳಗೆ ಬೀಳಬೇಕಾದ್ದಿಲ್ಲ. ಈಗ ನಾನು ಏನು ಮಾಡಬಹುದು, ಶ್ರೀ ಪರಮಹಂಸರು ತಮ್ಮ ಅನಂತರ ದಿವ್ಯ ಶಕ್ತಿಬಲದಿಂದ ಯಾವದಾದರೊಂದು ಉಪಾಯದಿಂದ ನನಗೆ ಉದ್ಧಾರ ಮಾಡುವರೆಂದು ದೃಢವಾಗಿ ನಂಬಿದ್ದರೆ ಸಾಕು ಎಂದು ಭಾವಿಸಿದರು. ಶ್ರೀ ಪರಮಹಂಸರಿಗೆ ವಕಾಲತು ಕೊಡುವುದು ಅಥವಾ ಭಾರ ಒಪ್ಪಿಸುವುದೆಂದರೆ ಇದೇ ಎಂದು ಗಿರೀಶಚಂದ್ರರು ಆಗ ಅರ್ಥಮಾಡಿದ್ದರು, ತಾವು ಸ್ವತಃ ಪ್ರಯತ್ನ ಮಾಡಿ ಅಥವಾ ಸಾಧನೆ ಭಜನೆ ಮಾಡಿ ಏನೂ ಭಜನೆ ಮಾಡಬೇಕೆಂತಿಲ್ಲ. ಶ್ರೀ ಪರಮಹಂಸರೇ ತಮ್ಮ ಸ್ವಂತ ಶಕ್ತಿಬಲದಿಂದ ವಿಷಯವಾಸನೆ ತ್ಯಾಗಮಾಡಿಸುವರೆಂದು ಅವರು ನಂಬಿದರು. ಆದರೆ ನಿಯಮ ಬಂಧನ ಕೊರಳಿಗೆ ಧರಿಸುವುದು ಸರಿಬೀಳದೆ ಅದರ ಬದಲು ನೂರು ಪಾಲು ಹೆಚ್ಚಿನ ಪ್ರೇಮಬಂಧನವನ್ನು ಸ್ವೇಚ್ಛೆಯಿಂದ ಕೊರಳಿಗೆ ಧರಿಸಿದ್ದರೆಂದು ಆಗ ಅವರಿಗೆ ತಿಳಿಯಲಿಲ್ಲ. ಒಳ್ಳೇದಾಗಲಿ ಕೆಟ್ಟದಾಗಲಿ, ಕೀರ್ತಿಯಾಗಲಿ ಅಪಕೀರ್ತಿಯಾಗಲಿ, ದುಃಖವಾಗಲಿ ಸುಖವಾಗಲಿ—ಅವುಗಳನ್ನು ಮೌನಾವಲಂಬನದಿಂದ ಸಹಿಸಬೇಕೇ ಹೊರತು ಅದರ ವ್ಯತಿರಿಕ್ತ ಏನೂ ಹೇಳಲೂ ಬಾರದು, ಮಾಡಲೂ ಬಾರದು ಎಂಬುದಾಗಿ ಆಗ ಅವರಿಗೆ ಸರಿಯಾಗಿ ತಿಳಿಯಲೇ ಇಲ್ಲ. ತಿಳಿಯಲು ಶಕ್ತಿಯೂ ಇರಲಿಲ್ಲ. ಇತರ ಎಲ್ಲಾ ಯೋಚನೆಗಳನ್ನು ಮನಸ್ಸಿನಿಂದ ಹೊರಪಡಿಸಿ ಶ್ರೀ ರಾಮಕೃಷ್ಣ ದೇವರ ಅಪಾರ ಕರುಣೆಯ ವಿಷಯವನ್ನೇ ಯೋಚಿಸಿದ್ದರು. ಶ್ರೀ ರಾಮಕೃಷ್ಣದೇವರ ಕೃಪೆಯ ಸಹಾಯ ದೊರಕಿದೆಂದು ಅವರ ಅಹಂಕಾರವು ನೂರು ಪಾಲು ವೃದ್ಧಿಯಾಯಿತು. ಸಂಸಾರದಲ್ಲಿ ಯಾರು ಏನೇ ಹೇಳಲಿ, ಎಷ್ಟೇ ದ್ವೇಷಿಸಲಿ, ಇವರು ನನ್ನನ್ನು ಸಂರಕ್ಷಣೆ ಮಾಡುವವರಾದ್ದಾರೆ, ಇನ್ನಾರಿಗೂ ಹೆದರಬೇಕೆಂತಿಲ್ಲ ಎಂದು ಭಾವಿಸಿದ್ದರು. ಭಕ್ತಿಶಾಸ್ತ್ರದಲ್ಲಿ (ನಾರದ ಭಕ್ತಿಸೂತ್ರವನ್ನು ನೋಡಬಹುದು)

(ಕ್ರಮಶಃ)



ವಾಚಿನ ಉದ್ದೇಶಕ್ಕಿಂತಲೂ ಕ್ರಯವೇ ಮುಖ್ಯವಲ್ಲ. ಎಷ್ಟೇ ಕ್ರಯ ಕೊಟ್ಟರೂ, ವಿಶ್ವಾಸಾರ್ಹವಲ್ಲದ ಮುಟ್ಟಿಗೆ ಕೊಟ್ಟ ದುಡ್ಡು ನೀರಿಗೆ ಹಾಕಿದಂತೆ. ನಿಮಗೆ ಮಿತವ್ಯಯ ಮಾಡಬೇಕೆಂದಿದ್ದರೆ, ವೆಸ್ಟ್ ಎಂಡ್ 'ಸೆಕುಂಡಸ್' ವಾಚನ್ನು ಕೊಂಡುಕೊಳ್ಳಿರಿ. ಸಮಯ ಸರಿಯಾಗಿ ಕೊಡುವುದೆಂದೂ, ಕಡಿಮೆ ಕ್ರಯದ್ದೆಂದೂ ಅದು ಪ್ರಸಿದ್ಧವಾಗಿದೆ. ಅದರಿಂದ ನಿಮ್ಮ ಹಣವೂ ಭದ್ರವಾಗಿರುತ್ತದೆ. ನಿಮಗೆ ಪ್ರತಿಫಲವೂ ದೊರಕುತ್ತದೆ. ನಿಮಗೆ ಬೇಕಾದ ಸೆಕುಂಡಸನ್ನು ನಮ್ಮ ಚಿತ್ರಿತ ಧರ್ಮಾರ್ಥ ಕೆಟಲಾಗನ್ನು ನೋಡಿ ಆರಿಸಿರಿ.

buy WEST END "SECUNDUS"
Economy Series Watches

ವೆಸ್ಟ್ ಎಂಡ್ ವಾಚ್ ಕಂಪೆನಿ, ಬೊಂಬಾಯಿ ಮತ್ತು ಕಲ್ಕತಾ

WEST END WATCH Co
BOMBAY CALCUTTA

ಕಾಂಗಿಡೋರಿನ ಮೇಲೆ ಆಕ್ರಮಣ

ಜಪಾನು ವಿಮಾನಗಳು ತಂಡತಂಡವಾಗಿ ಬಂದು ಕಾಂಗಿಡೋರ್ ದ್ವೀಪದ ಮೇಲೆ ತಾಸುಗಳ ತನಕ ತಂಡತಂಡವಾಗಿ ಬಾಂಬು ಸುರಿಸಿದವು. ಮೊರಸಬಿ ಬಂದರದ ಮೇಲೆ 20 ಸಲಕ್ಕಿಂತ ಮಿಕ್ಕಿ ಆಕ್ರಮಣವಾಯಿತು. ಆಸ್ಟ್ರೇಲಿಯದ ರಕ್ಷಣೆಗೆ ಹೊಸ ಸೈನ್ಯ ತರಲಾಗಿದೆ.

ರಕ್ತದ ವಿರುದ್ಧ ಬಲ್ಗೇರಿಯಾ ಯುದ್ಧ

ಹೂಡಿತೆಂದು ತಿಳಿದಿದೆ. ಬೋಲ್ಶೆವಿಸಮನ್ನು ನಾಶಗೊಳಿಸಲು ಬಲ್ಗೇರಿಯನ್ ಮುಖ್ಯಮಂತ್ರಿ ಜನರಿಗೆ ವಿನಂತಿಸಿಕೊಂಡಿದ್ದಾನೆ.

HALFTONE & LINE
BLOCK MAKING
UNDERTAKEN
Sharada Press,
MANGALORE

"ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

3-4-1942] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೩-೪-೧೯೪೨]

ಸಮರಭೂಮಿಯ ಸಂಚಾರ

ಪೆಸಿಫಿಕ್ ಸಾಗರದಲ್ಲಿ ಜಪಾನರ ರಣರಥಸವ್ವ ಇಂದು ಹಿಂದಿನಷ್ಟು ತೀವ್ರವಾಗಿಲ್ಲ, ಹಾಗೆಂದ್ಲು ಅವರು ಮುನ್ನುಗ್ಗುವುದೇನೂ ನಿಂತಿಲ್ಲ ಏಕೆಂದರೆ ಮೊನ್ನೆ ಮೊನ್ನೆ ಅಂಡಮಾನ ದ್ವೀಪಗಳನ್ನು ಜಪಾನರು ಕೈವಶ ಮಾಡಿಕೊಂಡರು ಮಿತ್ರಪಕ್ಷದವರು, ಹಿಂದೆ ಹಿಂದೆ ಸರಿದು ಈಗ ಆಸ್ಟ್ರೇಲಿಯದ ವರೆಗೆ ಬಂದು ನಿಂತಿದ್ದಾರೆ ಅಲ್ಲಿಂದ ಮುಂದೆ ಪ್ರತಿಧಾಳಿ ಆರಂಭವಾಗುವುದಂತೆ! ಆಸ್ಟ್ರೇಲಿಯದಿಂದಾದರೂ, ಮಿತ್ರರು ರಭಸದಿಂದ, ಸಾಹಸದಿಂದ ಪ್ರತಿಧಾಳಿ ಮಾಡಿದರೆ, ಹೋದದ್ದನ್ನು ತಿರುಗಿ ಪಡಕೊಳ್ಳಬಹುದೆಂದೂ, ವಿಜಯವನ್ನು ಹೊಂದಬಹುದೆಂದೂ ಹಲವರಿಗೆ ನಿರಾಶೆಯಲ್ಲಿಯೂ ಆಶೆಯಿದೆ ಅಲ್ಲಿನ ತನಕ, ಆಸ್ಟ್ರೇಲಿಯದಲ್ಲಿ ಮಿತ್ರರು ಯಶಸ್ವಿಯಾದ ಪ್ರತಿಧಾಳಿಯನ್ನು ಆರಂಭಿಸುವ ತನಕ ಅಪರಿಮಿತ ಕಷ್ಟನಷ್ಟಗಳನ್ನು ಸಹಿಸಬೇಕಾಗುವುದೆಂಬುದಂತೂ ನಿರ್ವಿವಾದ ಆದರೆ ಜಪಾನರ ಇಂದಿನ ಮಂದಗತಿಗೆ ಕಾರಣವೇನೆಂಬುದು ವಿಚಾರಿಸತಕ್ಕ ವಿಷಯ ಅಂತೂ ಇನ್ನು ಮುಂದೆ ಹೊಸ ರಾಜ್ಯವನ್ನು ಹಿಡಿಯಲು ಹೊಸ ಆಕ್ರಮಣವನ್ನು ಆರಂಭಿಸುವ ಮುನ್ನ ಜಪಾನರು ತಾವು ವಶಪಡಿಸಿದ ರಾಜ್ಯಗಳನ್ನು ಸಂಘಟಿಸಬೇಕಾಗಿದೆ, ಹಿಡಿತಕ್ಕೆ ತರಬೇಕಾಗಿದೆ ಇದಿಷ್ಟು ಮಾಡಲು ಸ್ವಲ್ಪ ಸಮಯವೇನೋ ಬೇಕಾದೀತು ಕಳೆದ ಕೇವಲ ಮೂರು ತಿಂಗಳಲ್ಲಿ, ಇಡೀ ಆಗ್ನೇಯ ಪೆಸಿಫಿಕ್ ಸಾಗರದ ತುಂಬ ಇರುವ ಹಲವು ಪ್ರದೇಶಗಳನ್ನು ಮಿಂಚಿನ ಯುದ್ಧಗತಿಯಿಂದ ಜಪಾನು ಕೈವಶಪಡಿಸಿಕೊಂಡದ್ದೇನೋ ಸರಿ ಅಲ್ಲಿ ಒಳ್ಳೆಯ ಸಂಘಟನೆ ಮಾಡದೆ, ಮತ್ತೂ ಮುಂದುವರಿದರೆ ಅದು ಜಪಾನರ ಪ್ರಮಾದವೇ ಆದೀತಲ್ಲವೆ? ಅಂತೂ ಜಪಾನು ಈಗ ಡಚ್ ಇಂಡಿಯ, ಮಲಯ, ಫಿಲಿಫೈನುಗಳ ಸಂಪತ್ತನ್ನು ಸ್ವಾಧೀನಪಡಿಸಿಕೊಂಡದ್ದರಿಂದ, ತನ್ನ ಜೀವನಕ್ಕಾಗಿ ಪಾಶ್ಚಾತ್ಯ ರಾಷ್ಟ್ರಗಳನ್ನು ಅವಲಂಬಿಸಿಕೊಂಡಿರಬೇಕಾದುದು ತಪ್ಪಿದಂತೆ ಆಯಿತು ಅಷ್ಟು ನೆರವೇರಿದ ಮೇಲೆ ಸಹಜವಾಗಿ ಈಗ ಸ್ವಲ್ಪ ಸ್ತಬ್ಧತೆಯುಂಟಾಗಿದೆ ಇದು ಮುಂದಿನ ತೀವ್ರತೆಯ ಸನ್ನಾಹವೆಂದು ಊಹಿಸಿದರೂ ಊಹಿಸಬಹುದು. ಇಷ್ಟರಲ್ಲಿ ಆಸ್ಟ್ರೇಲಿಯದಿಂದ ಮಿತ್ರರು ಯಾವ ರೀತಿ ಪ್ರತಿ ಆಕ್ರಮಣ ಕೈಕೊಳ್ಳುವರೋ ನೋಡಬೇಕಾಗಿದೆ ಮಿತ್ರರ ಪ್ರತಿ ಆಕ್ರಮಣ ಆರಂಭವಾಗುವ ವರೆಗೆ ಜಪಾನರು ಸುಮ್ಮಗಿರುವರೋ ಎಂಬುದೂ ಗಮನಾರ್ಹವಾದುದು.

ಜಪಾನು ಆಸ್ಟ್ರೇಲಿಯದ ಮೇಲೆ ಬೇಗನೇ ಆಕ್ರಮಣವನ್ನು ಜೋರುಮಾಡುವುದೆಂದು ಇಂದಿನ ಸಂಭವಗಳಿಂದ ಕಂಡುಬರುತ್ತದೆ ಆದರೆ ಜಪಾನಿಗೆ ಆಸ್ಟ್ರೇಲಿಯವನ್ನು ಬೇಗನೇ ಬಗ್ಗುಬಡಿಯುವುದು ಕಷ್ಟಸಾಧ್ಯವಾದ ಕೆಲಸ. ಆಸ್ಟ್ರೇಲಿಯವು ಬಹಳ ದೊಡ್ಡ ರಾಷ್ಟ್ರ ಇದರ ಮೇಲೆ ಆಕ್ರಮಿಸಿದಲ್ಲಿ ಜಪಾನು ಹೆಚ್ಚು ಬಲವಂತ ನಷ್ಟವನ್ನನುಭವಿಸಬೇಕಾಗುವುದಂತೂ ನಿಶ್ಚಯ. ಹಾಗೆಂದು ಜಪಾನು ಸಂಪೂರ್ಣ ತನ್ನ ಗಮನವನ್ನು ಆಸ್ಟ್ರೇಲಿಯದ ಕಡೆಗೆ ಮಾತ್ರ ಹರಿಯಿಸುವುದೂ ಇಂದು ಅಸಂಭವವಾಗಿದೆ ಇತ್ತ ಬರ್ಮಾದಲ್ಲಿ ಈಗಲೂ ಯುದ್ಧ ನಡೆಯುತ್ತಿದೆ. ಅದನ್ನು ನೋಡಿಕೊಳ್ಳದಲ್ಲಿ ಜಪಾನಿಗೆ ಹಿಂದೀ ಸಾಗರದ ನೌಕಾಪ್ರಭುತ್ವ ಪಡೆಯಲು ಸಾಧ್ಯವಿಲ್ಲ. ಅತ್ತ ಆಸ್ಟ್ರೇಲಿಯವೂ ಸುಮ್ಮಗಿಲ್ಲ ಇಂದು ಅದು ಸಾಕಷ್ಟು ಸೈನ್ಯಸಾಮಗ್ರಿ ಸಜ್ಜಿತವಾಗಿದೆಯೆಂದು ಹೇಳಬರುವುದಿಲ್ಲವಾದರೂ, ಅಮೇರಿಕಕ್ಕೆ ವಿನಂತಿಮಾಡಿಕೊಂಡಂತೆ ಅಲ್ಲಿಂದ ಸಹಾಯಗಳು ಬರತೊಡಗಿವೆ ಬ್ರಿಟನು ಆಸ್ಟ್ರೇಲಿಯಕ್ಕೆ ಏನೇನು ಕಳುಹಿಸುತ್ತಿದೆಯೋ, ಕಳುಹಿಸುತ್ತದಿಲ್ಲವೋ, ಕಳುಹಿಸಲು ಅದಕ್ಕೆ ಸಾಧ್ಯವಾಗುತ್ತದೊ ಇಲ್ಲವೋ ಅದೊಂದೂ ತಿಳಿಯುವುದಿಲ್ಲ ಅಂತೂ ಅಮೇರಿಕದಿಂದ ಯುದ್ಧ ಸಾಮಗ್ರಿಗಳನ್ನು ತುಂಬಿದ ಹಡಗಗಳು ಆಸ್ಟ್ರೇಲಿಯಕ್ಕೆ ಹೊರಟಿವೆ. ಜಪಾನು ಈಗ ಈ ಮಾರ್ಗದಲ್ಲಿ ತಡೆಯನ್ನುಂಟುಮಾಡುತ್ತಿದೆ ಅಮೆರಿಕದಿಂದ ಆಸ್ಟ್ರೇಲಿಯಕ್ಕೆ ಸಹಾಯ ಬರದಂತೆ ತಡೆವ ಯತ್ನ ಮಾಡುತ್ತಿದೆ ದಾರಿಯಲ್ಲಿ ಜಪಾನು ಜಲಾಂತರ್ಗಾಮಿ ನಾವೆಗಳು ಅಡಗಿದ್ದು ಅಮೆರಿಕನ್ ನೌಕಾಸೈನ್ಯಕ್ಕೆ ಉಪಟಳ ಕೊಡುತ್ತಿವೆ ಹೀಗೆ ಉಪದ್ರವ ಮಾಡಿಕೊಂಡಿದ್ದರೆ ಮಾತ್ರ ಆಸ್ಟ್ರೇಲಿಯವನ್ನು ಹದಕ್ಕೆ ತರುವುದು ಸಾಧ್ಯವಿಲ್ಲದ್ದರಿಂದ, ಜಪಾನರು ಬೇಗನೇ ಆಸ್ಟ್ರೇಲಿಯದ ಮುಖ್ಯ ಬಂದರಗಳ ಮೇಲೆ ಆಕ್ರಮಣ ಕಾರ್ಯವನ್ನು ಆರಂಭಿಸಬಹುದು ಆಸ್ಟ್ರೇಲಿಯವು ಹೆದರಿ ಜಪಾನಿನೊಡನೆ ಒಪ್ಪಂದಮಾಡಿಕೊಳ್ಳುವುದೆಂಬ ಊಹೆಗೆ ಏನೂ ಆಧಾರ ತೋರುವುದಿಲ್ಲ

ಜಪಾನರು ಇದುವರೆಗೆ ಗೆದ್ದಿರುವುದನ್ನು ಉಳಿಸಿಕೊಳ್ಳಬೇಕಾದರೆ, ಅವರು ಹಿಂದೀ ಸಾಗರದ ಪ್ರಭುತ್ವವನ್ನು ಸಂಪಾದಿಸಿಕೊಳ್ಳಬೇಕು, ಅದರ ಸಲುವಾಗಿಯೇ ಜಪಾನರು ಇತ್ತೀಚೆಗೆ ಬರ್ಮಾದಕಾಳಗವನ್ನು ಕೊನೆಗಾಣಿಸುವ ಹೋರಾಟವನ್ನು ಆರಂಭಿಸಿದಂತೆ ತೋರುತ್ತದೆ. ಸಾಮಾನ್ಯ ದಕ್ಷಿಣ ಬರ್ಮದೇಶವೆಲ್ಲ ಜಪಾನರ ವಶವಾಗಿದೆ ಇತ್ತೀಚೆಗೆ ಅವರು ಮಧ್ಯ ಬರ್ಮದೇಶವನ್ನೂ ನುಗ್ಗಿದ್ದಾರೆ ಜಪಾನ್ ಸೈನ್ಯಗಳು ಟಾಂಗೂ ನದಿಯ ಹತ್ತಿರ ಬಂದಾಗ ಅಲ್ಲಿ ಚೀನೀ ಸೈನ್ಯದೊಡನೆ ಉಗ್ರ ಪ್ರತಿಭಟನೆಯಾಯಿತು. ಅಂತೂ ಟಾಂಗೂ ನದಿಯ ಬಳಿಯ ಯುದ್ಧವು ಇಂದು ವಿಷಮ ಸ್ಥಿತಿಗೆ ಬಂದು ಮುಟ್ಟಿರುತ್ತದೆ. ಜಪಾನು ಬರ್ಮಾದ ಯುದ್ಧವನ್ನು ಮುಂದುವರಿಸಿ ಬಂಗಾಳ ಉಪಸಾಗರದ ಪ್ರಭುತ್ವ ಪಡೆಯಲು ಮುಂದೊತ್ತುತ್ತಿರುವಂತೆ ತೋರುತ್ತದೆ ಆ ಉದ್ದೇಶದಿಂದಲೇ ಇಂದು ಅದು ಅಂಡಮಾನ ದ್ವೀಪಗಳನ್ನು ಆಕ್ರಮಿಸಿಕೊಂಡಿರಬೇಕು ಅಂಡಮಾನ ದ್ವೀಪಗಳು ರಂಗೂನ್–ಕೊಲೊಂಬೋ ಮಾರ್ಗದಲ್ಲಿದ್ದು ಇಲ್ಲಿಂದ ಸಿಲೋನಿಗೆ ಸುಮಾರು ಸಾವಿರ ಮೈಲು ಮಾತ್ರ ದೂರವಿದೆ ಹಿಟ್ಲರನ ವಸಂತಕಾಲದ ಆಕ್ರಮಣಕ್ಕೆ ಸಹಾಯಮಾಡಲು ಹೋಗುವ ಮೊದಲು, ಏಶಿಯದಲ್ಲಿ ಮುಂದೊತ್ತಿ ಹಿಂದುಸ್ಥಾನವನ್ನು ಹಿಡಿದು ಬಿಡಬೇಕೆಂದು ಜಪಾನಿನ ಆಶೆಯಿದ್ದರೂ ಇರಬಹುದು ಅಂಡಮಾನ ದ್ವೀಪಗಳನ್ನು ಆಕ್ರಮಿಸಿದ್ದರಿಂದ ಸಿಲೋನಿನ ಮೇಲೆ ಆಕ್ರಮಿಸಲೂ ಸುಲಭವಾದಂತಾಯಿತು ಹಿಂದುಸ್ಥಾನದ ಪೂರ್ವ ಕರಾವಳಿಯ ಮೇಲೂ ಇದರಿಂದ ಅಪಾಯ ಹೆಚ್ಚಿರುತ್ತದೆ. ಕಲ್ಕತ್ತ ಮದ್ರಾಸುಗಳಿಗೆ ಇನ್ನು ಕೇವಲ ೭೦೦-೮೦೦ ಮೈಲುಗಳ ಅಂತರ ಮಾತ್ರವಿದೆ. ಕರಾವಳಿಯಲ್ಲಿ ಜಪಾನು ಹಡಗಗಳ ಚಲನವಲನದ ಕುರಿತು ಈಗಲೇ ಅನೇಕಾನೇಕ ಊಹಾಪೋಹಗಳೇರುತ್ತವೆ.

ಬರ್ಮಾ ಮಾರ್ಗವು ಕಡಿದುಹೋದದ್ದರಿಂದ ಚೀನೀಯರಿಗೆ ಸಾಧನ ಸಾಮಗ್ರಿಗಳು ಬರುವುದು ಬಂದಾಗಿ ಹೋಗುವುದಷ್ಟೆ? ಹಾಗಾಗಿ ಚೀನವು ಜಪಾನಿನೊಡನೆ ಹೋರಾಟ ನಿಲ್ಲಿಸಲು ಮನಸ್ಸು ಮಾಡಬಹುದೆಂದೂ, ಜಪಾನು ಈಗಾಗಲೇ ಮಾರ್ಶಲ್ ಚಿಯಾಂಗರಿಗೆ ಒಪ್ಪಂದದ ಕೆಲವು ಸೂಚನೆಗಳನ್ನು ಕಳುಹಿಸಿರುವುದೆಂದೂ ತಿಳಿದುಬಂದಿದೆ ಲಂಡನಿನ ರಾಜಕಾರಣಿಗಳೇ ಈ ಬಗೆಯ ಊಹಾ ತರ್ಕಗಳನ್ನು ಮಾಡತೊಡಗಿದ್ದಾರೆ ಜಪಾನು ಚೀನದೊಡನೆ ಒಪ್ಪಂದ ಮಾಡಿಕೊಳ್ಳುವರೆ ಮುಂದೊಡ್ಡಿದ ಶರತುಗಳ ವಿವರ ಹೀಗಿರುವುದಂತೆ (೧) ಜಪಾನು ಮಾರ್ಶಲ್ ಚಿಯಾಂಗರ ಸರಕಾರಕ್ಕೆ ಮಾನ್ಯತೆ ಕೊಡುವುದು, ಆದರೆ ವಾಂಗ್ ಸರಕಾರವೂ (ಜಪಾನರ ಕೈಗೊಂಬೆ ಸರಕಾರ) ಜಪಾನರ ಏಶಿಯದ ನವನಿರ್ಮಾಣಕ್ಕೆ ಸಹಾಯಮಾಡಬೇಕಾಗಿದೆ (೨) ಚೀನದಲ್ಲಿ ಜಪಾನು ಪಡೆದ ಕೆಲವು ಬಂದರಗಳನ್ನು ಮಾತ್ರ ಇಟ್ಟುಕೊಂಡು ಬಾಕಿ ಸ್ವಾಧೀನಪಡಿಸಿದ್ದ ಚೀನದ ಎಲ್ಲಾ ಸ್ಥಳಗಳನ್ನೂ ಚೀನಾ ಸರಕಾರಕ್ಕೆ ಒಪ್ಪಿಸುವುದು (೩) ಜಪಾನು ಎಲ್ಲಾ ಚೀನೀ ಕೈದಿಗಳನ್ನೂ ಬಿಡುಗಡೆಮಾಡುವುದು (೪) ಯುದ್ಧದಿಂದಾದ ನಷ್ಟಕ್ಕೆ ಯಾರಿಗೂ ಯಾರೂ ಏನೂ ಕೊಡಬೇಕಿಲ್ಲ (೫) ಜಪಾನ್–ಚೀನಗಳ ಒಂದು ಸಂಯುಕ್ತ 'ಕಸ್ಟಮ್ ಬೋರ್ಡು' ಇರಬೇಕು (೬) ಚೀನ–ಬರ್ಮಾಗಳ ಒಂದು ಸಂಯುಕ್ತ ಸರಕಾರವನ್ನು ರಚಿಸಿ ರಂಗೂನ್ ಬಂದರವನ್ನು ಚೀನಾ ಸರಕಾರದ ವಶ ಒಪ್ಪಿಸುವುದು, ಇದರ ಸಲುವಾಗಿ ಚೀನವು ಮಿತ್ರಪಕ್ಷದಿಂದ ಹೊರಗೆ ಬರಬೇಕು ಮತ್ತು ರಷ್ಯ ಜಪಾನುಗಳ ಯುದ್ಧ ಪ್ರಾರಂಭವಾದರೆ ಚೀನವು ತಟಸ್ಥ ಉಳಿಯಬೇಕು ಹಾಗೆಯೇ ನಾನ್ ಕಿಂಗ್ ಸರಕಾರವು ಶಾಶ್ವತ ಉಳಿಯಬೇಕು. ಚೀನದಲ್ಲಿ ಸಂಯುಕ್ತ ಸರಕಾರವನ್ನು ಅಸ್ತಿತ್ವದಲ್ಲಿ ತರಬೇಕು. ಈ ಸೂಚನೆಗಳು ಜಪಾನು ಚೀನಕ್ಕೆ ಒಪ್ಪಿಸಿದವುಗಳಂತೆ. ಈ ಸೂಚನೆಗಳಲ್ಲಿ ಅಡಕವಾದ ಒಂದೊಂದೇ ವಿಷಯವನ್ನಿತ್ತಿ ನೋಡಿದರೂ, ಅದು ಚೀನೀಯರ ಸ್ವಾತಂತ್ರ್ಯವನ್ನು ನುಂಗುವಂಥಾದ್ದಿದೆಯೆಂದು ತಿಳಿದುಬರದಿರದು ಹಾಗಾಗಿ ನಾಲ್ಕೈದು ವರ್ಷಗಳಿಂದ ಅಮಿತ ಕಷ್ಟಗಳಿಗೆದುರೊಡ್ಡಿ ಹೋರಾಡಿದ ಚೀನೀಯರು ಈ ಸೂಚನೆಗಳಿಗೆ ಒಪ್ಪಬಹುದೆಂದು ನಂಬಲಾಗುವುದಿಲ್ಲ ಆದರೆ ಮುಂದಿನ ಪರಿಸ್ಥಿತಿ ಹೇಗೆ ನಿಲ್ಲುವುದೋ, ಚೀನೀಯರು ಜಪಾನಿನೊಡನೆ ರಾಜಿಮಾಡಿಕೊಳ್ಳದೆ ಕಡೆತನಕ ಕಾದಾಡಿ ಸ್ವಾತಂತ್ರ್ಯ ಉಳಿಸಿಕೊಳ್ಳುವರೋ ಎಂಬುದಿದು ನಿರೀಕ್ಷಣೀಯವಿದೆ ಚೀನೀಯರ ಇದುವರೆಗಿನ ದೃಢನಿರ್ಧಾರದ ಹೋರಾಟವನ್ನು ನೋಡಿದರೆ ಅವರು ಅಲ್ಪ ಪ್ರಯಾಸಕ್ಕೆ ಬಗ್ಗತಕ್ಕ ಜನಾಂಗದವರಲ್ಲವೆಂಬುದು ಖಂಡಿತವಾಗಿದೆ

ಈ ವಾರ ಅಮೆರಿಕದ ಚಟುವಟಿಕೆಗಳು ಜೋರಾಗಿರುವ ಸುದ್ದಿ ಕೇಳಿಬರುತ್ತಿದೆ. ಸಯಾಮ್ ಮತ್ತು ಫಿಲಿಪೈನುಗಳಲ್ಲಿ ಅಮೆರಿಕನ್ ವಿಮಾನಗಳು ಹಾರಿ ಆಕ್ರಮಣ ಮಾಡುತ್ತಾರುವವು ಫಿಲಿಪೈನಿನ ಕಳೆದುಹೋದ ಸ್ವಾತಂತ್ರ್ಯವನ್ನು ಪುನಹ ಅದಕ್ಕೆ ಒದಗಿಸಿಕೊಡಲು ರೂಸ್‌ವೆಲ್ಟರು ದೃಢನಿರ್ಧಾರ ಮಾಡಿದಂತಿದೆ. ಅಮೆರಿಕನ್ ವಿಮಾನಗಳು ಫಿಲಿಪೈನಿನಲ್ಲಿ ಜಪಾನರ ಟ್ಯಾಂಕ್ ದಳದೊಡನೆ ಹೋರಾಡಿ ಹಾನಿಯನ್ನುಂಟುಮಾಡಿದವೆಂದೂ, ಸಯ್ಯಾಮಿನಲ್ಲಿ ಅಮೆರಿಕನ್ ಸ್ವಯಂಸೇವಕ ದಳದವರು ಚಿಂಗ್‌ಮೈ ಎಂಬ ವಿಮಾನ ಗೃಹದ ಮೇಲೆ ಆಕ್ರಮಣ ಮಾಡಿ ಅಲ್ಲಿದ್ದ ಕೆಲವು ಜಪಾನ್ ವಿಮಾನಗಳನ್ನು ನಾಶಮಾಡಿದರೆಂದೂ ಹೇಳಲಾಗಿದೆ ಆಗ್ನೇಯ ಪೆಸಿಫಿಕ್ಕಿನಲ್ಲಿ ಅಮೆರಿಕನರ ಈ ಚಟುವಟಿಕೆಯ ಜಪಾನ್ ವಿರೋಧಕ್ಕೆ ಆಸ್ಟ್ರೇಲಿಯ ನ್ಯೂಜಿಲೆಂಡ್ ಮೊದಲಾದ ಮಿತ್ರ ಸರಕಾರಗಳು ಅತ್ಯಂತ ಸಹಾಯಮಾಡುತ್ತಿವೆಯೆಂದು ರೂಸ್‌ವೆಲ್ಟರು ಹೇಳಿದರು ಹಾಗೂ ಈಗ ಅಮೆರಿಕವು ಜಪಾನರ ವಿರುದ್ಧ ಹೋರಾಡಲು ಸೊಂಟಕಟ್ಟಿ ರಣರಂಗಕ್ಕೆ ಇಳಿದಂತಾಗಿದೆ

ಫ್ರಾನ್ಸ್ ಪತನಕ್ಕೆ ಕಾರಣರೆಂಬುದಾಗಿ, ಬ್ಲ್ಯೂಮ್, ಗ್ಯೇಮಲ್, ಮತ್ತು ದಲಾದಿಯನ್ನು ಹಿಡಿದು ಕಳೆದ ಕೆಲವು ತಿಂಗಳಿಂದ ಅವರ ಮೇಲೆ ಹಾಕಿದ ಆರೋಪದಂತೆ ವಿಚಿ ಸರಕಾರವು ವಿಚಾರಣೆ ನಡೆಸುತ್ತಿದೆ ಇದಕ್ಕೆ ಮೊದಲು ಜರ್ಮನಿಯೇ ಪ್ರೋತ್ಸಾಹ ಕೊಟ್ಟಿರಬೇಕು ಆದರೆ ಇತ್ತೀಚೆಗೆ ಈ ಎಟ್ಲೆಯಲ್ಲಿ ಜರ್ಮನಿಗೆ ಹಾನಿಕರವಾದ ಸಂಗತಿಗಳು ಹೊರಬಿದ್ದಿರುವುದರಿಂದ ಜರ್ಮನಿಯು ರೋಷಗೊಂಡಿರುವುದಂತೆ ಬ್ರಿಟಿಷರ ಹೇಳಿಕೆಯ ಪ್ರಕಾರ ನಾವು ಜರ್ಮನಿ ಎದುರು ಯುದ್ಧ ಹೂಡಿದ್ದು" ಎಂದು ಅವರು ಹೇಳಬೇಕೆಂದು ಜರ್ಮನಿಯ ಇಚ್ಛೆ ಆದರೆ ದಲಾದಿಯರ "೧೯೩೯ರಲ್ಲೇ ಫ್ರಾನ್ಸು ಜರ್ಮನಿಯನ್ನು ಎದುರಿಸಲು ಸಮರ್ಥವಿತ್ತು" ಎಂದು ಅಂದರು ಇದರಿಂದ ಜರ್ಮನಿಗೆ ಸಂತೋಷವಾಗಿಲ್ಲ ಅಂತೂ ವಿಚಿ ಇವರ ಮೇಲೆ ಖಟ್ಲೆ ನಡೆಸುತ್ತಿದೆ ಇದರ ಫಲಿತಾಂಶವೂ, ಮುಂದಿನ ವಿವರಗಳೂ ಅತ್ಯಂತ ಗಮನಾರ್ಹವಾದವುಗಳು

ಹಿಂದೂದೇಶದ ರಾಜಕೀಯ ವಾತಾವರಣವು ಈ ವಾರ ಬಹಳ ಗಂಭೀರವಾಗಿದೆ ಸರ್ ಸ್ಟಾಫೋರ್ಡ್ ಕ್ರಿಪ್ಸರೊಡನೆ ಭಾರತದ ವಿವಿಧ ಪಂಗಡಗಳ ಮುಖಂಡರು ಮಾತುಕತೆ ಮಾಡುತ್ತಿದ್ದಾರೆ ಸರ್ ಕ್ರಿಪ್ಸರು ತಾವು ತಂದ ಸೂಚನೆಗಳನ್ನು ಈಗ ಪ್ರಕಟಿಸಿದ್ದಾರೆ ಮುಖ್ಯವಾಗಿ ಅವರು ಹೇಳುವುದೆಂದರೆ, ಯುದ್ಧ ಮುಗಿದ ನಂತರ ನಿಮಗೆ ಎಲ್ಲಾ ಅಧಿಕಾರ ಕೊಡುತ್ತೇವೆಂದು, ಯುದ್ಧಯತ್ನಕ್ಕೆ ಈಗ ನೀವು ಜನ ಧನ ಮನ ಸಹಾಯಮಾಡಬೇಕೆಂದು ಈಗ ನಮಗೆಯಾವ ಅಧಿಕಾರ ಕೊಡುವ ವಿಚಾರವೂ ಅವರ ಪ್ರಕಟವಾದ ಸೂಚನೆಗಳಲ್ಲಿಲ್ಲ ಮಿಲಿಟರಿ ಅಧಿಕಾರವನ್ನಂತೂ, ಯಾರು ಕೇಳಿದರೂ, ಎಲ್ಲರೂ ಕೇಳಿದರೂ ನಾವು ನಿಮಗೊಪ್ಪಿಸುವುದಿಲ್ಲವೆಂದು ಖಂಡಿತ ಹೇಳಿದ್ದಾರೆ ದಿಲ್ಲಿಯಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸೇರಿ ಗಂಭೀರ ವಿಚಾರ ಮಾಡುತ್ತದೆ ಮುಸ್ಲಿಂಲೀಗಿನವರು ಇತರರೂ ಆಲೋಚಿಸುತ್ತಿದ್ದಾರೆ ತಾನು ತಂದ ಸೂಚನೆಗಳನ್ನು ಮುಖಂಡರು ಒಪ್ಪುವುದಿದ್ದರೆ ಸಂಪೂರ್ಣ ಒಪ್ಪಬೇಕು, ಇಲ್ಲವಾದರೆ ಪೂರ್ಣ ಬಿಡಬೇಕು ಎಂದೂ ಕ್ರಿಪ್ಸರು ಹೇಳಿದರು ಕ್ರಿಪ್ಸರಂತೂ ಒಪ್ಪಿಸಲು ಸಾಧನೆಮಾಡುತ್ತಾರೆ ಅವರ 'ಮಿಲಿಟರಿ'ಯಂತಹ ಪ್ರಾಮುಖ್ಯವಾತೆ ಬ್ರಿಟಿಷರು ಹೇಳಿದಂತಿದ್ದರೆ, ಜನವನ್ನು ಹುರಿದುಂಬಿಸಲು ಸಾಧ್ಯವಾಗಲಾರೆಂದೂ, ಆ ಅಧಿಕಾರವನ್ನು ಹಿಂದೀಯರಿಗೊಪ್ಪಿಸಿದರೆ ಅವರು ಕ್ರಿಪ್ಸರ ಸೂಚನೆಗಳಿಗೊಪ್ಪಬಹುದೆಂದೂ ಈಗ ಊಹಿಸಲಾಗಿದೆ ಹಿಂದಿನ ನಮ್ಮ ಅನ್ಯಾಯಗಳೆಲ್ಲವನ್ನೂ ಮರೆತು ಮುಂದೆ ಸ್ನೇಹಸೌಹಾರ್ದದಿಂದ ನಾವು ಕೂಡಿ ನಡೆಯುವ ಎಂದು ಕ್ರಿಪ್ಸರು ಭಾರತೀಯರಲ್ಲಿ ವಿನಂತಿಸಿಕೊಂಡದ್ದು, ಅವರ ಉದಾತ್ತ ಭಾವನೆಯನ್ನು ಸೂಚಿಸುತ್ತದೆಯೆಂಬುದಕ್ಕೆ ಏನೂ ಸಂಶಯವಿಲ್ಲ.

ಸ್ವದೇಶಾಭಿಮಾನಿ

ತಾರೀಕು 3—4—1942

ಸಂಧಾನ ಸೂಚನೆಗಳು

ಬ್ರಿಟಿಷ್ ಭಾರತಗಳೊಳಗೆ ಸಂಧಾನ ಮಾಡಲು ಬಂದಿರುವ ಸರ್ ಸ್ಟಾಫೋರ್ಡ್ ಕ್ರಿಪ್ಸರು ಬ್ರಿಟಿಷ್ ಸರಕಾರದಿಂದ ತಂದಿರುವ ಸೂಚನೆಗಳು ಈಗ ಪ್ರಕಟವಾಗಿವೆ ಅದರ ಕುರಿತು ಕ್ರಿಪ್ಸರು ವಿವರಣೆ ಕೊಟ್ಟಿದ್ದಾರೆ, ಆ ವಿಷಯ ಪತ್ರಿಕೋದ್ಯಮಿಗಳು ಕೇಳಿದ ಕೇಳಿದ ಪ್ರಶ್ನೆಗೆ ಉತ್ತರ ಕೊಟ್ಟು ಸಂದೇಹ ಪರಿಹರಿಸಿದ್ದಾರೆ. ಇದರಿಂದೆಲ್ಲ ಈಗ ನಮಗೆ ಸರ್ ಕ್ರಿಪ್ಸರು ತಂದ ಸಂಧಾನ ಸೂಚನೆಗಳು ಸ್ಪಷ್ಟವಾಗಿವೆ. ಸರ್ ಕ್ರಿಪ್ಸರು ತಂದ ಸೂಚನೆಗಳು ಸಂಪೂರ್ಣ ತ್ಯಾಜ್ಯವೆನ್ನುವಷ್ಟರ ಮಟ್ಟಿಗೆಯಿಲ್ಲವೆಂದು ಕೆಲವು ಮಂದಿ ಹೇಳುತ್ತಿದ್ದಾರೆ. ಆದರೆ ಸಮ್ಮತಿಸಿ ಬಿಡುವಷ್ಟರ ಮಟ್ಟಿಗೆ ತೃಪ್ತಿಕರವಾಗಿಲ್ಲವೆಂಬುದು ಖಂಡಿತ. ಅದರಿಂಥಲೇ ಈಗ ಭಾರತ ಮುಖಂಡರೂ ಆ ಸೂಚನೆಗಳ ಕುರಿತು ಈಗ ಗಂಭೀರ ವಿಚಾರಮಗ್ನರಾಗಿದ್ದಾರೆ.

ಸೂಚನೆಗಳ ಸಾರಾಂಶ

ಬ್ರಿಟಿಷ ಸರಕಾರವು ಕ್ರಿಪ್ಸರ ಮೂಲಕ ಕಳುಹಿಸಿದ ಸೂಚನೆಗಳ ಸಾರಾಂಶವಿದು. ಹಿಂದೂದೇಶಕ್ಕೆ ನಾವು ಯುದ್ಧಾನಂತರ ಸಾಮಂತ ಸ್ವರಾಜ್ಯವನ್ನು ಕೊಡುತ್ತೇವೆ, ಹಿಂದೂದೇಶದ ಆಡಳಿತೆಯ ವ್ಯವಸ್ಥೆಯನ್ನು ನಿರ್ಣಯಿಸಲು ಯುದ್ಧಾನಂತರ ಒಂದು 'ಘಟನಾ ಸಮಿತಿ'ಯನ್ನು ಏರ್ಪಡಿಸುತ್ತೇವೆ, ಸಂರಕ್ಷಣ ಖಾತೆಯ ಅಧಿಕಾರವನ್ನು ಯುದ್ಧ ಮುಗಿಯುವ ವರೆಗೆ ನಾವೇ ಇಟ್ಟುಕೊಳ್ಳುವೆವು, ಮಿಕ್ಕ ಅಧಿಕಾರಗಳು ಭಾರತೀಯರಿಗೆ ದೊರಕುವ ವಿಷಯ ವ್ಯವಸ್ಥೆ ಮಾಡಲು ವೈಸರಾಯರೇ ಸಂಪೂರ್ಣ ಅಧಿಕಾರವುಳ್ಳವರಾಗಿದ್ದು ಅವರಿಗೆ ಕೆಲವು ಸೂಚನೆಮಾಡಲಾಗುವುದು ಯಾವುದಾದರೂ ಪ್ರಾಂತವು ಸಂಯುಕ್ತವಾಗಿರಲು ಇಚ್ಛೆಪಡದಿದ್ದರೆ ಅದು ಪ್ರತ್ಯೇಕವಾಗಿ ಉಳಿಯಬಹುದು.

ಈಗೇನು ಕೊಡುತ್ತೀರಿ?

ಮೇಲಿಂದ ಮೇಲೆ ಈ ಸೂಚನೆಗಳನ್ನು ನೋಡಿದವರಿಗೂ, ಈಗ ನಮಗೇನೂ ಅಧಿಕಾರ ಕೊಡುವಂತಿಲ್ಲವೆಂಬುದು ತೋರದಿರದು. ಯುದ್ಧಾನಂತರ ಸಾಮಂತ ಸ್ವರಾಜ್ಯವೋ, ಸಂಪೂರ್ಣ ಸ್ವರಾಜ್ಯವೋ ದೊರಕಬಹುದೇನೋ ನಿಜ. ಆದರೆ ಯುದ್ಧವನ್ನು ಗೆಲ್ಲುವಂತೆ ಜನರಲ್ಲಿ ಹುರುಪು ಹುಟ್ಟಿಸಬೇಕಾದರೆ ಈಗೇನು ಕೊಡುತ್ತೀರಿ ಎಂದು ನಾವು ಕೇಳುವುದು ಸಹಜವಿದೆ ಸಂರಕ್ಷಣ ಖಾತೆಯಂತಹ ಪ್ರಾಮುಖ್ಯ ಖಾತೆ ಬ್ರಿಟಿಷರ ವಶವಿದ್ದು ಹಿಂದೀಯರು ತನುಮನ ಧನದಿಂದ ಅದರಲ್ಲಿ ಸಹಾಯ ಸಹಕಾರ ಕೊಡುವಂತೆ ಮಾಡುವುದು ಕಷ್ಟಸಾಧ್ಯವಾಗುವುದು ಈಗ ಸಕಲ ಪಕ್ಷಗಳಿಂ ಕೂಡಗೂಡಿದ ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಿ, ಆರ್ಥಿಕ, ಸೈನಿಕ ಖಾತೆಗಳನ್ನೂ ಕೊಟ್ಟರೆ ಭಾರತೀಯರಲ್ಲಿ ಹೊಸ ಹುರುಪು ಹುಟ್ಟಬಹುದು; ಯುದ್ಧ ಪ್ರಯತ್ನಕ್ಕೆ ಸಹಾಯವಾಗಬಹುದು. ಅದಲ್ಲದೆ, ಎಲ್ಲವನ್ನೂ ಯುದ್ಧಾನಂತರ ಮಾಡುತ್ತೇವೆ ಎನ್ನುವ ಭರವಸೆಯು ಅಷ್ಟೊಂದು ಆಶಾಜನಕವಾಗಿಲ್ಲ.

ಪಾಕಿಸ್ತಾನಕ್ಕೆ ದಾರಿ?

ಸರ್ ಕ್ರಿಪ್ಸರು ತಂದ ಸೂಚನೆಗಳಲ್ಲಿ ಬಹಳ ಅನರ್ಥದ ಒಂದು ಅಂಶವೆಂದರೆ, ಮುಂದಿನ ಯೋಜನೆಗೆ ಸಮ್ಮತಿಸದೆ ಪ್ರಾಂತವು ಪ್ರತ್ಯೇಕವಾಗಿ ಇರುವುದು ಎಂದರೆ ಭಾರತವು ಬೇರೆ ಬೇರೆಯಾಗಿರಲು ಆಸ್ಪದ ಕೊಟ್ಟಂತೆಯೇ ಆಯಿತು. ಯುದ್ಧಾನಂತರದಲ್ಲಿ ಭಾರತಕ್ಕೆ ಕೊಡುವ ಸಾಮಂತ ಸ್ವರಾಜ್ಯದ ಆಡಳಿತವನ್ನು ಜ್ಯಾರಿಗೆ ತರುವ ಮುಂದಿನ ಯಾವುದೋ ಒಂದು ಕಾಲದಲ್ಲಿ, ಸಂಯುಕ್ತವಾಗಿರಲು ಒಪ್ಪದ ಹಾಗೆ ಒಪ್ಪುವುದಿಲ್ಲವೆಂದು ಏಕೆ ಊಹಿಸಬೇಕೋ ತಿಳಿಯಲಾರದು— ಪ್ರಾಂತಗಳು ಬೇರೆ ಬೇರೆಯಾಗಿರಬಹುದೆಂದು ಈಗಲೇ ಹೇಳುವುದರಿಂದ ಪಾಕಿಸ್ತಾನಕ್ಕೆ ದಾರಿ ಮಾಡಿ ಕೊಟ್ಟಂತೆಯೇ ಆಗುತ್ತದೆ, ವಿಭಜಿಸಿ ಆಳುವ ನೀತಿ ಒಡೆದು ತೋರುತ್ತದೆ. ಅದರ ಬದಲು ಎಲ್ಲಾ ಪ್ರಾಂತಗಳು ಒಂದೇ ಆಡಳಿತಕ್ಕೆ ಅಧೀನ ಪಟ್ಟಿದ್ದು ಹಾಗೆ ಕೆಲವು ವರ್ಷಗಳು ಕಳೆದ ಬಳಿಕ, ಅದು ಸರಿಯಾಗಿಲ್ಲವೆಂದು ತೋರಿದರೆ ಮತ್ತೆ ಬೇರಾಗುವ ಅಧಿಕಾರ ಕೊಡುವುದು ವಿಹಿತವಾಗುವುದು. ಮಕ್ಕಳು ಹುಟ್ಟುವ ಮೊದಲೇ ಮನೆಯನ್ನು ಪಾಲುಮಾಡುವ ಯೋಚನೆ ಮಾಡುವುದಕ್ಕಿಂತ ಮಕ್ಕಳು ಹುಟ್ಟಿ ಬೆಳೆದ ಮೇಲೆ ಅವರು ಬಯಸಿದಾಗ ಪಾಲುಮಾಡಿ ಕೊಟ್ಟರೆ ಸಾಲದೆ?

ಇದು ವ್ಯಾಪಾರೀ ಬುದ್ಧಿ

ಈ ಸೂಚನೆಗಳಲ್ಲಿ ಹೆಚ್ಚಿನ ಮಟ್ಟಿಗೆ ವ್ಯಾಪಾರೀ ಬುದ್ಧಿಯು ಒಡೆದು ತೋರುತ್ತದೆ ಭಾರತ ಮುಖಂಡರು ಯುದ್ಧ ಯತ್ನಕ್ಕೆ ಸಹಕಾರ ಮಾಡದಿದ್ದರೆ ಯಾವುದೇ ಒಪ್ಪಂದವೂ ಆಗುವಂತಿಲ್ಲವೆಂದು ಕ್ರಿಪ್ಸರು ಸ್ಪಷ್ಟಪಡಿಸಿದ್ದಾರೆ ಇಂತಹ ಭಾವನೆ ಅಷ್ಟು ಉದಾತ್ತವಲ್ಲವೆಂದು ನಾವು ಹೇಳದಿರಲಾರೆವು. 'ನಮಗೆ ಯುದ್ಧದಲ್ಲಿ ಸಹಾಯ ಮಾಡಿದರೆ ನಾವು ಮುಂದೆ ನಿಮಗೆ ಸ್ವಾತಂತ್ರ್ಯ ಕೊಡುತ್ತೇವೆ' ಎನ್ನುವುದು ಇಂದಿನ ಬ್ರಿಟಿಷರ ಮಾತು. 'ಸ್ವಾತಂತ್ರ್ಯವು ನಮ್ಮ ಜನ್ಮಸಿದ್ಧವಾದ ಹಕ್ಕು, ಅದನ್ನು ಪಡೆಯಲು ಹೋರಾಡುವುದು ನಮ್ಮ ಜನ್ಮಧ್ಯೇಯ'; ಎಂಬುದನ್ನು ಬ್ರಿಟಿಷರಿಗೆ ಭಾರತೀಯರು ಹೇಳುತ್ತಾ ಬಂದಿರುವರು, ಭಾರತೀಯರು ಯುದ್ಧಕ್ಕೆ ಸಹಕಾರ ಕೊಡಲು ಇಷ್ಟಪಡದಿದ್ದರೆ, ಸ್ವಾತಂತ್ರ್ಯ ಕೊಡುವುದಿಲ್ಲವೆಂದರೆ ಭಾರತೀಯರ ಹೋರಾಟ ನಿಂತೀತೆ? ಭಾರತೀಯರು ಸ್ವಾತಂತ್ರ್ಯಕ್ಕೆ ಅನರ್ಹರೆಂದಾದೀತೆ? ಎಂಬುದನ್ನು ನಾವು ಕೇಳದಿರಲಾಗುವುದಿಲ್ಲ. ಆ ಸಂದರ್ಭದಲ್ಲಿ ಹಿಂದೆ ರಾಜಾಜಿ ಹೇಳಿದ ಮಾತು ನೆನಪಿಗೆ ಬರುತ್ತದೆ "ಸರ್ ಕ್ರಿಪ್ಸರು ಬರುವುದರ ಮುಖ್ಯ ಉದ್ದೇಶ ಯುದ್ಧ ಪ್ರಯತ್ನಕ್ಕೆ ಬೆಂಬಲ ದೊರಕಿಸುವುದು" ಎಂದು ರಾಜಾಜಿ ಭವಿಷ್ಯ ಹೇಳಿದ್ದು ಇಂದಿಗೆ ಸತ್ಯವಾಗುತ್ತಾ ಬರುತ್ತಿದೆ. ಇದನ್ನು ಗಾಂಧಿಜಿಯೂ ಮನಗಂಡಂತೆ ತೋರುತ್ತದೆ. ಕ್ರಿಪ್ಸರ ಸೂಚನೆಗಳ ವಿಷಯ ಅವರು ಅಭಿಪ್ರಾಯ ಕೊಡುತ್ತಾ ಅದು 'ಮುಂದಿನ ತಾರೀಕು ಹಾಕಿ ಕೊಟ್ಟ ಚೆಕ್ಕು' ಎಂದು ಹೇಳಿದರಾಗಿ ತಿಳಿದಿದೆ. ಎಂದರೆ, ವ್ಯಾಪಾರದಲ್ಲಿಯಾದರೂ ಮುಂದಿನ ತಾರೀಕು ಹಾಗೆ ಕೊಟ್ಟ ಚೆಕ್ಕಿನ ಪ್ರಕಾರ ಇಂದು ತನ್ನ ಸಾಮಾನನ್ನು ಒಪ್ಪಿಸಿಕೊಟ್ಟು ಮುಂದೆ ಹಾಕಿದ ತಾರೀಕಿನ ಅವಧಿಯಲ್ಲಿ ತನಗೆ ದುಡ್ಡು ದೊರೆತೀತು ಎಂದು ನಂಬಿಕೆ ಇಡುವುದು ಅಷ್ಟೊಂದು ಭದ್ರವಾದ ವ್ಯಾಪಾರೀ ರೀತಿಯಲ್ಲಿ

ಪೂರ್ಣ ಪರಿತ್ಯಾಜ್ಯವೆ?

ಹೇಗಿದ್ದರೂ, ಈ ಸೂಚನೆಗಳಲ್ಲಿ ಕೆಲವೊಂದು ದೋಷಗಳು ಕಂಡುಬಂದರೂ ಪೂರ್ಣ ಪರಿತ್ಯಾಜ್ಯವೆನ್ನುವಂತಿಲ್ಲ ಭಾರತಕ್ಕೆ 'ಸಂಪೂರ್ಣ ಸಾಮಂತ ಸ್ವರಾಜ್ಯವನ್ನು ಯುದ್ಧಾನಂತರ ಕೊಡುತ್ತೇವೆ ಎಂಬ ಭರವಸೆ ಕೊಟ್ಟದ್ದು ಗಂಭೀರವಿದೆ. ಭಾರತೀಯರಿಂದಲೇ ಕೂಡಿದ 'ಘಟನಾ ಸಮಿತಿ'ಯನ್ನೇರ್ಪಡಿಸುವ ಸಲಹೆಯು ಯೋಗ್ಯವಿದೆ ವೈಸರಾಯರ ಮಂತ್ರಿ ಮಂಡಲದಲ್ಲಿ ಹೆಚ್ಚಿನ ಅಧಿಕಾರಗಳನ್ನು ಭಾರತೀಯರ ವಶ ಒಪ್ಪಿಸುವ ನಿರ್ಧಾರ ಮಾಡಿದ್ದು ಸಮಯೋಚಿತವಿದೆ. ಎಲ್ಲದಕ್ಕಿಂತಲೂ ಹೆಚ್ಚಾಗಿ ಸರ್ ಕ್ರಿಪ್ಸರು ಇಂತಹ ಸ್ನೇಹಸಂಧಾನವನ್ನೊಂದನ್ನು ಕೈಕೊಂಡಿದ್ದು ಸಂತೋಷವಿದೆ ಅನೇಕ ಮುಖಂಡರನ್ನು ಸಂದರ್ಶಿಸಿ, ಅವರೊಡನೆ ವಿಚಾರ ವಿನಿಮಯ ಮಾಡಿ, ಯಾವುದಾದರೊಂದು ರೀತಿಯ ಸಂಧಾನ ಮಾಡಿ ಬಿಡಬೇಕೆಂಬ ಅವರ ಆತುರ ಪ್ರಶಂಸನೀಯವಿದೆ. ಸರ್ ಕ್ರಿಪ್ಸರ ವ್ಯಕ್ತಿತ್ವ, ಕುಶಲತೆಗಳನ್ನು ವಿಚಾರಿಸಿದಲ್ಲಿ ಬ್ರಿಟನು ಭಾರತಗಳೊಳಗೆ ಒಪ್ಪಂದ ಆಗುವಂತಹ ಒಂದು ಮಧ್ಯ ಮಾರ್ಗವನ್ನು ಅವರು ಕಂಡುಹುಡುಕಲಾರರೆಂದು ಹೇಳಲಾಗುವುದಿಲ್ಲ.

The Canara Banking Corporation Ltd.

(Incorporated in British India with limited liability)

Estd 1906

OUR RATES OF INTEREST ON DEPOSITS

Current		1% p.a.
Savings Bank	.. ....	2½% ,,
Short-term	. .	1¾% ,,
FIXED FOR 3 MONTHS		2% ,,
6 ,,	. .	2¼% ,,
9 ,,	. ....	2½% ,,
12 ,,		3% ,,
24 ,,	..	3½% ,,

Advances made at cheap rates of interest against approved securities and Banking business of every description transacted.

ಉಷ್ಣದ ತುರಿಕಜ್ಜಿಗಳಿಗೆ ಇದು ಅತ್ಯುತ್ತಮ ಔಷಧ



ಝಾಂಬಕಿನಿಂದ ನೋವು ತುರಿಸುವುದೂ ನಿಲ್ಲುವುದು

ತುರಿಕಜ್ಜಿ, ಹುಳಕಜ್ಜಿ ಮೊದಲಾದವುಗಳಿಂದ ಎಷ್ಟು ಮಂದಿ ನರಳುತ್ತಿರುವರೆಂಬುದು ಆಶ್ಚರ್ಯಕರ. ಝಾಂಬಕ್ ಅಂತಹ ಉಷ್ಣಕಾಲದ ಕಜ್ಜಿಗಳಿಗೆಲ್ಲಾ ದಿವ್ಯೌಷಧ. ಉತ್ತಮ ವನೌಷಧಿ ಸತ್ವಗಳಿಂದ ಝಾಂಬಕ್ ಮಾಡಲ್ಪಟ್ಟಿದ್ದು, ಇದು ಚರ್ಮಕ್ಕೆ ತಾಗಿಸಿದ ಕೂಡಲೇ ಎಳೆಕೊಳ್ಳುವುದು. ಇದು ಆರೋಗ್ಯವನ್ನುಂಟುಮಾಡುತ್ತದೆ. ಸೂರ್ಯನ ಬಿಸಿಲಿನಿಂದ ಆರಿದ ಶರೀರದ ತೈಲವನ್ನು ಇದು ಒದಗಿಸುತ್ತದೆ. ಝಾಂಬಕ್ ಲೇಪಕ್ಕೆ ರೂ. 1. ಮತ್ತು 1-4-0, ಝಾಂಬಕ್ ಸೋಪಿಗೆ ಒಂದು ರೂಪಾಯಿ, ಪೌಡರಿಗೆ ಒಂದು ರೂಪಾಯಿ.

ಏಜಂಟ್ಸ್. ಮೆಸರ್ಸ್, ದಾಧಾ ಎಂಡ್ ಕೋ.,
ಪಾರ್ಕ್‌ಟೌನ್ ಮದರಾಸು.

ಯಾವಾಗಲೂ ಝಾಂಬಕನ್ನೇ ಉಪಯೋಗಿಸಿರಿ.

ZAM-BUK

ಪ್ರಾಣಿಕೊಬ್ಬು ವಿರಹಿತವಾದುದು

ನೋಟೀಸು

ದಿ ಅತ್ತೂರು ಎಂಡ್ ಜವಾಹರ ಬೇಂಕ್ ಲಿಮಿಟೆಡ್, ಪೆಂಟ್ಲಾಂಡ್‌ಪೇಟೆ ಮಂಗಳೂರು

ಈ ಕೆಳಗೆ ಹೆಸರು ಕಾಣಿಸಿದವರು ದಿ ಜವಾಹರ ಬೇಂಕ್ (ರಿಜಿಸ್ಟರ್ಡ್) ಮತ್ತು ದಿ ಅತ್ತೂರು & ಜವಾಹರ ಬೇಂಕ್ ಲಿಮಿಟೆಡ್, ಪೆಂಟ್ಲಾಂಡ್ ಪೇಟೆ ಮಂಗಳೂರು ಈ ಬೇಂಕುಗಳಲ್ಲಿ ಚಿನ್ನಾಭರಣ ಈಡಿನ ಮೇಲೆ ಸಾಲ ಪಡಕೊಂಡ ನಂತರ ಕ್ಲಪ್ತ ವ್ಯಾದಗೆ ಬಡ್ಡಿ ಕೊಡದೆ ಬಾಕಿ ಮಾಡಿರುವುದರಿಂದ, ಬಡ್ಡಿಯನ್ನು ಕಟ್ಟುವರೆ ಅವರಿಗೆ ಬಿಟ್ಟ ರಿಜಿಸ್ತ್ರಿ ನೋಟಿಸುಗಳಲ್ಲಿ ಕೆಲವು ಜಾರಿಯಾಗಿಯೂ, ಕೆಲವು ಜಾರಿಯಾಗದೆಯೂ, ಇನ್ನು ಹಲವರು ಮೃತಪಟ್ಟಿರುವುದರಿಂದ ಜಾರಿಯಾಗದೆ ವಾಪಾಸು ಬಂದಿರುವುದರಿಂದಲೂ ಸದ್ರಿಯವರು ಅಡವಿಟ್ಟ ನಗಗಳನ್ನು ಇದೇ ತಾರೀಕು 9ನೇ ಎಪ್ರಿಲ್ 1942 ದಿವಸ ಯಾ ಅದಕ್ಕಿಂತ ಮೊದಲೇ ಬೇಂಕಿಗೆ ಸಲ್ಲತಕ್ಕ ಅಸಲು, ಬಡ್ಡಿ, ನೋಟೀಸು ಚಾರ್ಜು ಇತ್ಯಾದಿಗಳನ್ನು ಸಲಾಯಿಸಿ ಬಿಡಿಸಿಕೊಂಡು ಹೋಗದೆ ಇದ್ದರೆ ಸದ್ರಿಯವರು ಈಡಾಗಿಟ್ಟ ನಗಗಳನ್ನು ಇದೇ ತಾರೀಕು 11ನೇ ಎಪ್ರಿಲ್ 1942 ಯಾ ಅನಂತರ ನಮಗೆ ಯುಕ್ತ ಕಂಡ ತಾರೀಕಿನಲ್ಲಿ ಬೇಂಕಿನ ಆಫೀಸಿನಲ್ಲಿ ಮಧ್ಯಾಹ್ನ ಘಂಟೆ 2ಕ್ಕೆ ಬಹಿರಂಗವಾಗಿ ಏಲಂ ಮಾಡಲ್ಪಡುವುದು

	ಸಾಲದ ನಂಬ್ರ ಮತ್ತು ಅಡವಿಟ್ಟ ತಾರೀಕು	ಸಾಲ ಪಡಕೊಂಡವರ ಹೆಸರು ಮತ್ತು ವಿಳಾಸ	ಅಸ್ಲು ರೂಪಾಯಿ
1.	636–39 12–5–39	ಚಂದ್ರು D/o ಚಾರು, ಬೋಳೂರು, ಬತ್ತೇರಿ ಬಳಿ, ಮಂಗ್ಳೂರು	5
2	734–40 7–5–40	ಅಪ್ಪಣ್ಣ ಪೂಜಾರಿ N/o ಕೊರಗ ಪೂಜಾರಿ, ಉರ್ವ, ಮಾರಿಗುಡಿ ದೇವಸ್ಥಾನದ ಬಳಿ ಮುತ್ತಕೆಲ್ಲ, ಮಂಗ್ಳೂರು	5.
3.	939–40 3–6–40	ತನಿಯ S/o ಪುದ್ದು, ಕೂಲಿ, ಮಿಶನ್ ಟೈಲ್ ಫೆಕ್ಟರಿ, ಕುದ್ರೋಳಿ ಮಂಗಳೂರು	8
4	967 40 7–6–40	ಪಂಚಿ S/o ಬೊಗ್ರು, ಅದ್ಯಪಾಡಿ ಗ್ರಾಮ, ಬೀಡಿನ ಮೇಲೆ ದರಿಯಾಸು P O ಬಜ್ಪೆ	12
5	1065 40 24 6 40	ಜೋನ ಕೋಟ್ಯನ್ S/o ಯೋನಸ್ ಕೋಟ್ಯನ್, ಮಂಗ್ಲದ ಕೆಲ್ಸ, ಪೆಂಟ್ಲಾಂಡ್‌ಪೇಟೆ ಕಾಂಪೌಂಡ ಮನೆಬಳಿ ಮಂಗಳೂರು	[illegible]
6	1491–40 27–8–40	ಉಗ್ಗು ಹೆಂಗ್ಸು D/o ಅಂತಪ್ಪ ಪೂಜಾರಿ ಉರ್ವ, ಮಾರಿಗುಡಿ ದೇವಸ್ಥಾನದ ಬಳಿ, ಐತಣ್ಣನವರ ಜಾಗೆಯಲ್ಲಿ ಮಂಗಳೂರು	5
7	1556 40 6 9–40	ಸೀತಮ್ಮ D/o ಈಶ್ವರ ಪೂಜಾರಿ C/o ಯಂ ವಿ ಆಚಾರಿ, ಪೆಂಟ್ಲಾಂಡ್‌ಪೇಟೆ ಮಂಗಳೂರು	35
8	1578–40 7–9 40	ತಿಮ್ಮಪ್ಪ ಪೂಜಾರಿ S/o ಬಾಬು ಪೂಜಾರಿ ಉರ್ವ C/o ಶೇಷಪ್ಪ, ಹೊಟೇಲುಕೀಪರ್ ಮಂಗಳೂರು	5
9	1822 40 17–10–40	ಶ್ರೀಧರ ಆಚಾರಿ S/o ಗಿರಿಯಪ್ಪ ಆಚಾರಿ, C/o ಭಾಸ್ಕರ ಆಚಾರಿ, ಪೆಂಟ್ಲಾಂಡ್‌ಪೇಟೆ ಮಂಗಳೂರು	5
10	1859 40 24–10–40	ಬಿ ರಾಮಪ್ಪ S/o ಬ್ಯಾಂ ಚಂದಪ್ಪ ಉರ್ವ, ಮಾರಿಗುಡಿ ದೇವಸ್ಥಾನದ ಬಳಿ, ಬೀಡಿ ಅಂಗಡಿ ಮಂಗಳೂರು	5
11	1871–40 26 10 40	ಬೊನವೆಂಚರ್ ಪಿರೇರ S/o ಸಲ್ವದೋರ್ ಪಿರೇರ ಕೆಂಜಾರು ಗ್ರಾಮ, ಅತ್ರಬೈಲು ಕಡವಿನ ಬಳಿ, ದೋಣಿಕೆಲ್ಸ ಪೇಜಾವರ ಮಾಗಣೆ P O ಬಜ್ಪೆ	5
12	1073–40 24–6–40	ಬೊನವೆಂಚರ್ ಪಿರೇರ S/o ಸಲ್ವದೋರ್ ಪಿರೇರ ಕೆಂಜಾರು ಗ್ರಾಮ, ಅತ್ರಬೈಲು ಕಡವಿನ ಬಳಿ, ಪೇಜಾವರ ಮಾಗಣೆ, ದೋಣಿ ಕೆಲ್ಸ P O ಬಜ್ಪೆ	25
13	211?–40 12–12 40	ಅಚ್ಯುತ S/o ನಾರಾಣ ಕನ್ನಡಿಗ ಉರ್ವ, ಮಾರಿಗುಡಿ ದೇವಸ್ಥಾನದ ಬಳಿ, ದೇವಸ್ಥಾನದ ಸ್ಥಳದಲ್ಲಿರುವುದು ಮಂಗಳೂರು	5
14	73–41 17–1–41	ಮೋನಪ್ಪ S/o ಕೊರಗ ಪೂಜಾರಿ ಉರ್ವ, ಟೋಲ್ ಗೇಟಿನ ಬಳಿ P O ಉರ್ವ ಮಂಗಳೂರು	24
15.	260 41 25–2–41	ಜನ್ನುಶೆಟ್ಟಿ N/o ನೇಮುಶೆಟ್ಟಿ, ದೇರೆಬೈಲು, ಮೀನು ಮಾರ್ಕೆಟು ಬಳಿ, ಪೋಲೀಸ್ ಸಿಕೂಲ್ಸ್‌ದವರ ವಕ್ಕಲು P O ದೇರೆಬೈಲು	6.
16	322–41 8–3–41	ಐತಪ್ಪ ಪೂಜಾರಿ N/o ಚಿತ್ರಿ ಪೂಜಾರಿ ತಣ್ಣೀರುಬಾವಿ ಗ್ರಾಮ, ಪಟೇಲರ ಮನೆಬಳಿ, ಮುಗ್ಗದ ಕೆಲ್ಸ, P O ಪಣಂಬೂರು	6
17	397–41 24–3 41	ಕುಂಞಾಲಿ ಬ್ಯಾರಿ S/o ಹಮ್ಮಬ್ಬ ಬ್ಯಾರಿ, ಹೊಟೇಲ್ ಕೀಪರ್ ಕೂಳೂರು ಕಡವಿನ ಬಳಿ, P O ಕೂಳೂರು	13
18	464–41 4–4–41	ಪಕೀರ S/o ಸುಬ್ಬ ಗುರಿಕಾರ, ಬೋಳೂರು ಬತ್ತೇರಿ ಬಳಿ, ಪಟ್ಲ, ಮಂಗಳೂರು	5
19	574–41 1–5–41	ಬಿ ಲಕ್ಷ್ಮಣ S/o ಬಿ ಕೊರಗಪ್ಪ C/o ಜಿ ಪಿ ಬೋಳಾರ್ ರಾವ್, ರಥಬೀದಿ ಮಂಗಳೂರು	5
20	627–41 12–5–41	ಯಂ ಪುರುಷೋತ್ತಮ ಪೈ S/o ದಾಮೋದರ ಪೈ, ರಥಬೀದಿ ಮಂಗಳೂರು	14

Office of the Bank
Pentlandpet Mangalore
2–4–42

A Narasimha Prabhu
Agent
The Attur & Jawhar Bank Ltd
Petland Pet Mangalore

ನೋಟೀಸು

ದಿ ಅತ್ತೂರ್ ಎಂಡ್ ಜವಾಹರ ಬೇಂಕ್ ಲಿಮಿಟೆಡ್, ಕೆನರಾ ಹೈಸ್ಕೂಲ್ ರೋಡ್ ಮಂಗಳೂರು.

ಈ ಕೆಳಗೆ ಹೆಸರು ಕಾಣಿಸಿದವರು ದಿ ಜವಾಹರ ಬೇಂಕ್ (ರಿಜಿಸ್ಟರ್ಡ್) ಮತ್ತು ದಿ ಅತ್ತೂರ್ ಎಂಡ್ ಜವಾಹರ ಬೇಂಕ್ ಲಿಮಿಟೆಡ್, ಕೆನರಾ ಹೈಸ್ಕೂಲ್ ರೋಡ್ ಮಂಗಳೂರು ಈ ಬೇಂಕುಗಳಲ್ಲಿ ಚಿನ್ನಾಭರಣಗಳ ಈಡಿನ ಮೇಲೆ ಸಾಲಪಡಕೊಂಡ ನಂತರ ಕ್ಲಪ್ತ ವ್ಯಾದಗೆ ಬಡ್ಡಿ ಕೊಡದೆ ಬಾಕಿಮಾಡಿರುವುದರಿಂದ ಬಡ್ಡಿಯನ್ನು ಕಟ್ಟುವರೆ ಅವರಿಗೆ ಬಿಟ್ಟ ರಿಜಿಸ್ತ್ರಿ ನೋಟೀಸುಗಳಲ್ಲಿ ಕೆಲವು ಜಾರಿಯಾಗಿಯೂ ಕೆಲವು ಜಾರಿಯಾಗದೆಯೂ, ಇನ್ನು ಹಲವರು ಮೃತಪಟ್ಟಿರುವುದರಿಂದ ಜಾರಿಯಾಗದೆ ವಾಪಾಸು ಬಂದಿರುವುದರಿಂದಲೂ ಸದ್ರಿಯವರು ಅಡವಿಟ್ಟ ನಗಗಳನ್ನು ಇದೇ ತಾ 9ನೇ ಎಪ್ರಿಲ್ 1942 ದಿವಸ ಯಾ ಅದಕ್ಕಿಂತ ಮೊದಲೇ ಬೇಂಕಿಗೆ ಸಲ್ಲತಕ್ಕ ಅಸಲು ಬಡ್ಡಿ, ನೋಟೀಸು ಚಾರ್ಜು ಇತ್ಯಾದಿಗಳನ್ನು ಸಲಾಯಿಸಿ ಬಿಡಿಸಿಕೊಂಡು ಹೋಗದೆ ಇದ್ದರೆ, ಸದ್ರಿಯವರು ಈಡಾಗಿಟ್ಟ ನಗಗಳನ್ನು ಇದೇ ತಾ 11ನೇ ಎಪ್ರಿಲ್ 1942 ಯಾ ನಂತರ ನಮಗೆ ಯುಕ್ತ ಕಂಡ ತಾರೀಕಿನಲ್ಲಿ ಬೇಂಕಿನ ಆಫೀಸಿನಲ್ಲಿ ಮಧ್ಯಾಹ್ನ ಘಂಟೆ 2ಕ್ಕೆ ಬಹಿರಂಗವಾಗಿ ಏಲಂ ಮಾಡಲ್ಪಡುವುದು

	ಸಾಲದ ನಂಬ್ರ ಮತ್ತು ಅಡವಿಟ್ಟ–ತಾರೀಕು	ಸಾಲ ಪಡಕೊಂಡವರ ಹೆಸರು ಮತ್ತು ವಿಳಾಸ	ಅಸ್ಲು ರೂಪಾಯಿ
1	1119 39 5 6 39	ಮುಂಗೇರ ತನಿಯ S/o ಐತ, ಸೂಟರ್‌ಪೇಟೆ ಶಾಲೆಯ ಬಳಿ ಕಂಕನಾಡಿ P O	10
2	2 9 40 9 2 40	ಅಬ್ದುಲ್ ರಹಿಮಾನ್ S/o ಬಾಪು ಪ್ಸಾಹೇಬ್, ಗುಡ್ಡೆಕಂಬ್ಳ ಶೇಖ್ ಹುಸೈನರ ಮನೆಬಳಿ ಮೂರು ಪೆಂ ಗ್ರಾಮ ಕಿನ್ನಿಕಂಬ್ಳ	8
3	260 40 14 2 40	ಜೋಸೆಫ್ ಸೋಜ S/o ಮಾರ್ಟಿನ್ ಡಿ ಸೋಜ, ಪಡುಕೋಡಿ ಗ್ರಾಮ ಕೂಳೂರು P O	30
4	?78 40 1 5 40	Do Do Do	30
5	7?6 40 3 ? 40	ವೆಂಕಟ್ರಾವ್ S/o ನಾರ್ಣಪ್ಪಯ್ಯ ಕಾಫಿ ಹೊಟೇಲು ಒಜ್ಪೆ P O	10
6	103? 40 ? ? 40	ವಿ ಪಿ ಮಮ್ಮುಂಞಬ್ಬ S/o ಎಮ್ ಪಿ ಹುಸೆನಬ್ಬ ಅಕ್ಕರೆ ಗ್ರಾಮ, ವ್ಯಾಪಾರಿ, ಫ ಂಗಿಪೇಟೆ P O	33
7	12?8 40 10 7 40	ಎಮ್ ದೇಜಪ್ಪ S/o ಯು ಮುಟ್ಲಪ್ಪ C/o ಬಿ ಎಮ್ ಹೆಗ್ಡೆ ಎಡ್ವೊಕೇಟ್ ಕೊಡಿಯಾಲ್‌ಬೈಲು ಮಂಗಳೂರು	10
8	1906 40 17 10 40	ಯು ಶಿಶಪ್ಪ S/o ಕೊರಗ ಮೇಸ್ತ್ರಿ, ಒಸ್ತಿ ಬಳಿ ಕ್ರಿಸ್‌ಬೀಟ್ಸ್ ಸ್ಟ್ರೀಟ್ ಮಂಗಳೂರು	12
9	1968 40 31 10 40	ನಾರಾಯಣ ಪೂಂಜ S/o ಸಿದ್ದು ನಾಯ್ಕ ಪಡುಪೆರಾರು ಗ್ರಾಮ ಉಳಾಯಿ ಒಜ್ಪೆ P O	25
10	2021 40 8 11 40	ಮಮುಂಞ ಬ್ಯಾರಿ S/o ಹುಸಕುಂಞ ಬ್ಯಾರಿ, ತಲಪಾಡಿಗ್ರಾಮ ಪಟ್ಲ, ಮಂಜೇಶ್ವರ P O	11
11	2194 40 10 12 40	ಬಿ ಎಂ ಹುಸೈನಬ್ಬ S/o ಬಿ ಎಂ ಅಬ್ದುಲ್ಲಕ್ಕ ಬಜಾರ ವ್ಯಾಪಾರಿ, ಗೋಳಿಕಟ್ಟೆ ಬಜಾರ್ ಮಂಗಳೂರು	14
12	2?32 40 16 12 40	ಎಂ ಹುಸೇನ್ ಖಾನ್ S/o ರಹಿಮಾನ್ ಖಾನ್, ಗವರ್ನಮೆಂಟ್ ಪೆನ್ಶನರ್ ಕುದ್ರೋಳಿ ಮಂಗಳೂರು	5
13	22?2 40 24 12 40	ಉದ್ಯಾವರ ಮುಹಮ್ಮದ್ ಬ್ಯಾರಿ S/o ತಲೆಂಗಡಿ ಮಮ್ಮುಬ್ಯಾರಿ, ಉದ್ಯಾವರ ಪೊಂಗಾಲು ಪ್ರತಿನ್ಯಾಸು, ತ್ರಿಪೊಳಪು ಪುತ್ತೂರುPO	9
14	?0-41 14 1-41	ಯು ಮೊಯಿದಿನ್ ಟೀಚರ್ ಲೇಡಿ ಗೋಷನ್ ಸ್ಕೂಲ್ ಕಾಸರಗೋಡು	5
15	255 41 26 2 41	ಯು ಚಂದಯ್ಯ ಶೆಟ್ಟಿ N/o ಕೊರಗಶೆಟ್ಟಿ ಟಿಂಕರ್, ಹೂವಿನ ಮಾರ್ಕೆಟ್ ಬಳಿ, ರಥಬೀದಿ ಮಂಗಳೂರು	5
16	273 41 2? 2 41	ಕೆ ಕೃಷ್ಣರಾವ್ S/o ವೆಂಕಪ್ಪಯ್ಯ ಕಲ್ಲುಜಾರಿ, ದೇರೆಬೈಲು ಬಜ್ಪೆ P O,	15

Office of the Bank
Mangalore 2 4 1942

A. Vaikunta Prabhu,
Managing Director.
The Attur & Jawhar Bank Ltd
Canara High School Road Mangalore.

ಕ್ರಿಪ್ಸರ ಸೂಚನೆಗೆ ಕಾಂಗ್ರೆಸಿನ ನಿರಾಕಾರ?

ವರ್ಕಿಂಗ್ ಕಮಿಟಿ ನಿರ್ಧಾರ ಕ್ರಿಪ್ಸರ ಸೂಚನೆಗಳನ್ನು ಕಾಂಗ್ರೆಸು ನಿರಾಕರಿಸುವುದರಲ್ಲಿದೆಯೆಂದು ತಿಳಿದಿದೆ. ಸಂಪೂರ್ಣ ಸ್ವಾತಂತ್ರ್ಯದ ವಿಷಯ ಸೂಚನೆಯಲ್ಲಿಲ್ಲದಿರುವುದರಿಂದ ಹಾಗೂ ಸೇನಾ ಖಾತೆಯನ್ನು ಒಪ್ಪಿಸದೆ ಇರುವುದರಿಂದ ಕಾಂಗ್ರೆಸು ಸ್ವೀಕರಿಸಲೊಪ್ಪುವುದಿಲ್ಲವಾಗಿಯೂ, ಹಾಗಾದರೆ ಕ್ರಿಪ್ಸರು ಬೇಗನೇ ಇಲ್ಲಿಂದ ತೆರಳುವರೆಂದೂ ಸುದ್ದಿ.

ಅಂಡಮಾನ್ ದ್ವೀಪಗಳು ಜಪಾನರ ವಶ

ಅಂಡಮಾನ್ ದ್ವೀಪಗಳನ್ನು ಜಪಾನರು ಕಳೆದ ವಾರ ವಶಮಾಡಿಕೊಂಡರು ಅಂಡಮಾನ್‌ನಲ್ಲಿರುವ ಬ್ರಿಟಿಷ್ ಸೈನ್ಯಗಳನ್ನು ಆಕ್ರಮಿಸುವ ಕೆಲಕಾಲದ ಹಿಂದೆಯೇ ಹಿಂತೆಗೆದುಕೊಳ್ಳಲಾಗಿತ್ತಂತೆ

ಕಿಟ್ಟಿಗಾವುದ ಆಕ್ರಮಣ

ಉತ್ತರ ಸುಮಾತ್ರದಲ್ಲಿ ಮೇಡಾನದ ಪಶ್ಚಿಮಕ್ಕಿರುವ ಕಿಟ್ಟಿಗಾವಾ ಎಂಬ ನಗರವನ್ನು ಜಪಾನೀಯರು ವಶಪಡಿಸಿಕೊಂಡಿರುವರೆಂದು ಸುದ್ದಿಯಿದೆ

ಇಂದಿರಾ ನೆಹರು ವಿವಾಹ

ತಾ. ೨೬ರಂದು ನೆರವೇರಿತು

ನೆಹರು ಪುತ್ರಿ ಇಂದಿರಾಳ ವಿವಾಹವು ಶ್ರೀ ಫಿರೋಜ್ ಗಾಂಧಿಯೊಡನೆ ಅಲಹಾಬಾದಿನಲ್ಲಿ ತಾ ೨೬ರಂದು ನೆರವೇರಿತು ವಿವಾಹವು ವೇದೋಕ್ತ ಪದ್ಧತಿಯಿಂದ ನಡೆಯಿತು ವಿವಾಹ ಮಹೋತ್ಸವಕ್ಕೆ ಅಖಿಲ ಭಾರತ ಮುಖಂಡರನೇಕರು ಆಗಮಿಸಿದ್ದರು

ಡಾ। ನಾ ಸು ಹರ್ಡಿಕರರ ಆಗಮನ

ಜಿಲ್ಲೆಯಲ್ಲಿ ಸ್ವಯಂ ಸೇವಕ ದಳಗಳನ್ನು ಸ್ಥಾಪಿಸುವ ಬಗ್ಗೆ ಸ್ವಯಂ ಸೇವಕ ತರಬೇತಿ ಶಿಬಿರವೊಂದನ್ನು ಕಟಪಾಡಿಯಲ್ಲಿ ಎಪ್ರಿಲ್ ತಾ ೧೫ರ ಸುಮಾರಿಗೆ ತೆರೆಯುವುದೆಂದು ನಿರ್ಧಾರವಾಗಿದೆ ತರಬೇತಿ ಬಗ್ಗೆ ಡಾ। ನಾ, ಸು ಹರ್ಡೀಕರ ಇವರು ಆಗಮಿಸುವವರಿದ್ದಾರೆಂದೂ ಶಿಬಿರದ ಮೇಲ್ವಿಚಾರಕರಾಗಿ ಶ್ರೀ। ಪಾಂಗಾಳ ಲಕ್ಷ್ಮೀನಾರಾಯಣ ನಾಯ್ಕರು ನೇಮಿಸಲ್ಪಟ್ಟಿರುವರೆಂದೂ ತಿಳಿದಿದೆ.

ಸೋಶಿಯಲ್ ಸರ್ವಿಸ್ ಡಿಪಾರ್ಟ್‌ಮೆಂಟಿನ ಮಾರ್ವಾರಿ ರಿಲೀಫ್ ಸೊಸೈಟಿಯ ಸೆಕ್ರೆಟರಿಗಳು ಗಾಂಧಿಜಿಯವರಿಗೆ ಈ ಕೆಳಗಿನಂತೆ ಬರೆದಿರುವರು:

'ಕಲ್ಕತ್ತದ ಮಾರ್ವಾರಿ ರಿಲೀಫ್ ಕಮಿಟಿಯವರು ಮಲಯಾ, ಬರ್ಮಾ ಮೊದಲಾದ ಕಡೆಗಳಿಂದ ನಗರ ದೇಶಗಳನ್ನು ತೊರೆದು ಬಂದ ನಿರಾಶ್ರಿತರಿಗೆ ಜಾತಿ ಮತಭೇದವಿಲ್ಲದೆ ಸಹಾಯ ಮಾಡುತ್ತಿದ್ದಾರೆ. ಆಹಾರ, ಔಷಧ ಉದ್ಯೋಗ ಮೊದಲಾದ ಸಹಾಯ ಮಾಡುತ್ತಿದ್ದಾರೆ ಕಲ್ಕತ್ತೆಗೆ ದಿನನಿತ್ಯ ಬಂದಿಳಿವ ಸಾವಿರಾರು ಮಂದಿಗೆ ಸಹಾಯ ಮಾಡುತ್ತಾರೆ. ಇಂಥವರಲ್ಲಿ ಕೆಲವು ಪ್ರಸವಕಾರ್ಯಗಳೂ ಆಗಿ ನಾವು ಅರೈಕೆ ಮಾಡಿದ್ದೇವೆ. ಇಂಥಾ ಸಂದರ್ಭದಲ್ಲಿ ಆದ ಒಂದು ಕರುಣಾಮಯ ಘಟನೆಯನ್ನು ನಾನು ನಿಮಗೆ ತಿಳಿಸಲು ಇಷ್ಟಪಡುತ್ತೇನೆ ಮಾರ್ಚ್ ೧೪ ರಂದು ರಾತ್ರಿ ನಾನು ಕೆಲವು ಸ್ವಯಂಸೇವಕರೊಡನೆ ರೈಲಿನಲ್ಲಿ ಬಂದ ಕೆಲವು ನಿರಾಶ್ರಿತರನ್ನು ನೋಡಲು ಹೋಗಿದ್ದೆ ಒಬ್ಬ ಬ್ರಿಟಿಷ್ ಸಿಪಾಯಿಯು ಓರ್ವ ಬಡ ತಂದೆತಾಯಿಗಳ ಒಂದು ಒಂದು ವರ್ಷದ ಮಗುವನ್ನು ಹಿಡಿದು ರೈಲು ಗಾಡಿಯ ಕೆಳಹಾಕಿದನು. ನಾನು ನಿಮ್ಮ ಅಹಿಂಸೆಯ ಅನುಯಾಯಿಯಾದರೂ, ನನ್ನನ್ನೂ ನನ್ನ ಸ್ವಯಂಸೇವಕರನ್ನೂ ಆ ಬ್ರಿಟಿಷ್ ಸಿಪಾಯಿಯ ಪಾಶವಿಕ ಕೆಲಸಕ್ಕೆ ಪ್ರತೀಕಾರ ಮಾಡದೆ ಸುಮ್ಮನಿರಬೇಕಾದರೆ ಬಹಳ ಕಷ್ಟವಾಯಿತು. ನಾನೀ ವಿಷಯವನ್ನು ಮಿಲಿಟರಿ ಸ್ಟೇಶನಿನ ಅಧಿಕಾರಿಗಳಿಗೆ ತಿಳಿಸಿದೆ ಅವರು ಇದರ ವಿಷಯ ಏನೂ ಮಾಡಲಿಲ್ಲ ಆ ಮೇಲೆ ನಾನಿದನ್ನು ಶ್ರೀ. ಕೆ. ಸಿ ಸೇನ್ ಐ. ಸಿ ಎಸ್ ರಿಗೆ ತಿಳಿಸಿದಾಗ ಅವರು ಆ ವಿಷಯದ ವಿಚಾರಣೆ ಮಾಡುವುದಾಗಿ ನನಗೆ ತಿಳಿಸಿದರೂ ಅದರ ವಿಷಯ ಏನು ಮಾಡಿದ್ದೂ ತೋರುವುದಿಲ್ಲ. ಈಗಲೂ ಇಂತಹ ಅನೇಕ ಮಂದಿ ಬ್ರಿಟಿಷ್ ಸಿಪಾಯಿಗಳು ಪ್ರತಿ ದಿನ ರಾತ್ರಿ ಪ್ಲೇಟ್‌ಫಾರ್ಮಿನಲ್ಲಿ ಅಲೆದಾಡುತ್ತಿದ್ದು, ಇವರಿಗೂ ಸ್ವಯಂಸೇವಕರಿಗೂ ಘರ್ಷಣೆಗಳುಂಟಾಗುತ್ತಿವೆ. ನಾನೀ ವಿಷಯವನ್ನು ಇಷ್ಟರಲ್ಲೇ ಬಂಗಾಳ ಕಾಂಗ್ರೆಸ್ ಪ್ರಜಾಪಾಲನ ಸಮಿತಿಗೆ ತಿಳಿಸಿದ್ದೇನೆ ನನಗೆ ನೀವು ಕೆಳಗಿನ ವಿಷಯದಲ್ಲಿ ಉಪದೇಶಿಸಬೇಕಾಗಿ ವಿನಂತಿಸುತ್ತೇನೆ (೧) ನಾನೀ ವಿಷಯ ಪತ್ರಿಕೆಯಲ್ಲಿ ಪ್ರಚಾರ ಆಂದೋಲನ ನಡೆಸಬೇಕೆ? (೨) ಹೀಗೆ ಸಿಪಾಯಿಯೊಬ್ಬನು ಮಾಡಿದರೆ, ನಾವಿದನ್ನು ಸುಮ್ಮನಿದ್ದು ನೋಡಬೇಕೇ, ಇಲ್ಲವೇ ಆತನಿಗೆ ತಕ್ಕ ಬುದ್ಧಿ ಕಲಿಸಬೇಕೆ? ನೀವೀ ವಿಷಯ ಹರಿಜನದಲ್ಲಿ ಏನಾದರೂ ಬರೆದರೆ ನಮಗೆ ಸಹಾಯವಾದೀತು ಈ ಸಂಘಟನೆಯಲ್ಲಿ ಒದಗಿದ ಎಲ್ಲಾ ಆಪತ್ತುಗಳನ್ನೂ ಎದುರಿಸಲು ನಾನು ಸಿದ್ಧನಿದ್ದೇನೆ.'

ಗಾಂಧಿಜಿ ಇದಕ್ಕೆ ಹೀಗೆಂದು ಉತ್ತರ ಬರೆದಿರುವರು ಸಿಪಾಯಿಗಳ ದುರ್ನಡತೆಯನ್ನು ಪ್ರಕಟಿಸಿ ನನಗೆ ಅನೇಕ ಪತ್ರಗಳು ಬಂದಿವೆಯಾದರೂ ನಾನವುಗಳಲ್ಲಿ ಬಹಳವನ್ನು ಪ್ರಕಟಿಸಲಿಲ್ಲ ಅಂಥವುಗಳಲ್ಲಿ ಪ್ರಕಟಿಸದಿದ್ದರೆ ಹೇಡಿತನವೆಂದಾಗುವಂಥವುಗಳನ್ನು ನಾನು ಪ್ರಕಟಿಸುತ್ತೇನೆ. ಮೇಲಿನ ಪತ್ರವು ಈ ವಿಷಯ ನನ್ನ ಅಭಿಪ್ರಾಯವನ್ನು ಕೇಳುತ್ತದೆ ಇದರಿಂದ ಅವರಿಗೆ ಮಾತ್ರವಲ್ಲ, ಸಿಪಾಯಿಗಳಿಗೂ ಸರಕಾರಕ್ಕೂ ಪ್ರಯೋಜನವಿದೆ. ಮಾರ್ವಾರಿ ರಿಲೀಫ್ ಕಮಿಟಿಯು ಕಳೆದ ಇಪ್ಪತ್ತು ವರ್ಷಗಳಿಂದ ಸಾರ್ವಜನಿಕ ಸೇವೆ ಮಾಡಿ ಅಖಿಲ ಭಾರತ ಪ್ರಸಿದ್ಧಿ ಪಡೆದ ಸಂಸ್ಥೆ. ಅದಕ್ಕೆ ಬೇಕಾದ ನಿಧಿಯಿದ್ದೆ ಉತ್ತಮ ಕೆಲಸಗಾರರಿದ್ದಾರೆ ಅಂಥವರು ಹಾಗ್ಯ ಅವರ ಘನತೆಯೇ ಸಿಪಾಯಿಗೆ, ಜನರ ವಿಷಯ ಹೇಗೆ ವರ್ತಿಸಬೇಕೆಂದು ತಿಳಿಸಲು ಸಾಕಾಗುತಿತ್ತು. ಬಹುಶಃ ಆ ಬ್ರಿಟಿಷ್ ಸಿಪಾಯಿಯು, ನನಗೆ ಬರೆದಂತೆ ಮಾಡಿರಬೇಕಾದರೆ, ಬಹುಶಃ ಉನ್ಮಾದಾವಸ್ಥೆಯಲ್ಲಿದ್ದಿರಬೇಕು ಅಥವಾ ಕುಡಿದು ಮತ್ತೇರಿದವನಾಗಿರಬೇಕು. ಇಂಥ ವಿಷಯ ಸರಿಯಾದ ವಿಚಾರಣೆಯಾಗದೆ ಮಾರ್ವಾರಿ ರಿಲೀಫ್ ಕಮಿಟಿ ಬಿಟ್ಟುಬಿಡಬಾರದೆಂದು ನಾನು ಸೂಚಿಸುತ್ತೇನೆ. ಇಂಥ ಸಂಭವಗಳನ್ನು

ನಿಜವಾಗಿದ್ದರೆ ಇದು ಅಮಾನುಷ

ಬ್ರಿಟಿಷ್ ಸಿಪಾಯಿಗಳ ವರ್ತನೆಯ ಖಂಡನೆ

ಗಾಂಧಿಜಿ ಲೇಖನ

(ಹರಿಜನದಿಂದ)

ಅಧಿಕಾರಿಗಳಾದರೂ ಮರೆಮಾಚಲು ಯತ್ನಿಸದೆ ಸಾಕಷ್ಟು ವಿಚಾರಣೆ ನಡೆಸಿ ಯೋಗ್ಯ ರೀತಿಯಿಂದ ನ್ಯಾಯ ತೀರ್ಮಾನಿಸಬೇಕೆಂದು ನಾನು ಸೂಚಿಸುತ್ತೇನೆ

'ಇಂಥ ಸಂಭವಗಳಲ್ಲಿ ನನ್ನ ಸೂಚನೆಗಳಿವು ಸ್ವಯಂಸೇವಕರು, ಸಾಧ್ಯವಿದ್ದರೆ ಮಗುವನ್ನು ಸಿಪಾಯಿಯು ಮುಟ್ಟುವ ಮೊದಲು ಶರೀರದಿಂದ ತಡೆಯಬೇಕಿತ್ತು, ಇಲ್ಲವೇ ಮಗುವನ್ನು ಅವನಿಂದ ತೆಗೆದುಬಿಡಬೇಕಿತ್ತು ಆ ಸಂದರ್ಭದಲ್ಲಿ ಸಿಪಾಯಿಗೆ ಗಾಯವಾಗಿದ್ದರೂ ಅವರು ಮಗುವನ್ನು ಹಾಗೆ ರಕ್ಷಣೆಮಾಡಬೇಕಿತ್ತು ಅಹಿಂಸಾವಾದಿಯು ಅಪರಾಧಿಯ ಮೇಲೆ ದಯೆ ಶಾಂತಿ ತೋರಿಸಬೇಕು. ಆದರೆ ದಯೆ ಶಾಂತಿ ತೋರಿಸುವಾಗಲೂ ಒಂದು ವಿಚಾರವಿರಬೇಕು ಇಂಥಾ ಎಲ್ಲಾ ಸಂಭವಗಳಲ್ಲಿ ಹೇಗೆ ಮಾಡಬೇಕೆಂದು ನಿಯಮ ಮಾಡುವುದು ಕಷ್ಟ ಅಪರಾಧಿಗೆ ತಾನು ಮಾಡಿದ್ದು ತಪ್ಪಾಯಿತು ಎಂದು ತೋರುವಂತೆ ನಾವು ವಿನಯ ವೃತ್ತಿ ತಾಳಬೇಕು ನಾನು ಆಫ್ರಿಕೆಯಲ್ಲಿ ಒಮ್ಮೆ ರೈಲಿನಲ್ಲಿ ಹೋಗುತ್ತಿದ್ದಾಗ, ಬಿಳಿಯನೊಬ್ಬನು ನನಗೆ ಅಪರಾಧ ಮಾಡಿದ ನಾನು ಆತನಿಗೆ ಹೇಳಿದೆ 'ಇಂತಹ ತಪ್ಪಿಗಾಗಿ ದೇವರು ನಿನ್ನನ್ನು ಕ್ಷಮಿಸಲಿ' ಎಂದು ಅಪರಾಧಿಯ ಮನಸ್ಸು ಸಂಕೋಚಗೊಂಡಿತ್ತು. ಇಂಥಾದರಲ್ಲಿ ನಾನು ಈ ನೂರಿನ ದಾರಿ ಹಿಡಿದಿರಲಿಲ್ಲ. ನಾನು ಆಗ ನನ್ನ ಅಹಿಂಸಾ ವೃತ್ತಿಯನ್ನು ಸ್ವರೂಪಕ್ಕೆ ತರಲು ಯತ್ನಿಸುತ್ತಿದ್ದೆ.

'ಇವಿಷ್ಟು ಸ್ವಂತ ಗಾಯದ ವಿಷಯ, ಆದರೆ ಮಗುವಿಗೆ ಆಗುವ ಅಪಾಯದ ವಿಷಯವೇನು? ಅಹಿಂಸೆಯಲ್ಲಿ ತನಗೊಂದು ಬೇರೊಬ್ಬನಿಗೊಂದು ಎಂಬ ಮಾರ್ಗವಿಲ್ಲ. ಒಬ್ಬ ಮನುಷ್ಯ ತನಗಿಂತ ಇನ್ನೊಬ್ಬನಿಗೆ ಹೆಚ್ಚು ಕಡಮೆ ಮಾಡುವುದು ಸರಿಯಲ್ಲ. ನನ್ನ ರಕ್ಷಣೆಯಲ್ಲಿರುವವರ ವಿಷಯಕ್ಕಾಗಿ ನನ್ನ ಆತ್ಮಬಲಿದಾನ ಮಾಡುವುದು ಅಗತ್ಯ. ಆದರೆ ಆ ರೀತಿ ತನ್ನ ವಿಷಯವೂ ಮಾಡುವುದಿರಬೇಕು. ಹಾಗೆ ಮಾಡದೆ ತನ್ನ ವಿಷಯ ಮಾತ್ರ ಬಲಿದಾನ ಮಾಡಿ, ತನ್ನ ರಕ್ಷಣೆಯಲ್ಲಿರುವ ಮನುಷ್ಯರ ವಿಷಯ ಮಾಡದಿದ್ದರೆ ಆತನು ಹೇಡಿಯೆನಿಸುವನು ಸರಿಯಾದ ಅಹಿಂಸಾ ಕಾರ್ಯವು ಬರಿಯ ವಿಚಾರದಿಂದ ಮಾತ್ರ ಬರುವುದಿಲ್ಲ. ವಿಚಾರ ಮೊದಲಾಗಿ ಬೇಕಾಗಿದೆ ಆದರೆ ಅಹಿಂಸೆಯು ಅಭ್ಯಾಸದಿಂದ ಪೂರ್ಣತೆ ಬರುವುದು.'



‘ಯುದ್ಧ ಮುಗಿದ ಮೇಲೆ ಸಾಮಂತ ಸ್ವರಾಜ್ಯ ಕೊಡುತ್ತೇವೆ’

ಯುದ್ಧಾನಂತರ ಪೂರ್ಣ ವಸಾಹತು ಸ್ವರಾಜ್ಯ

ಕ್ರಿಪ್ಸರು ತಂದ ಸಲಹೆಗಳು

ಯುದ್ಧಕ್ಕಾಗಿ ಸಹಾಯ ಬೇಡಿಕೆ

ಬ್ರಿಟಿಷ್ ಸರಕಾರದವರು ಸೂಚಿಸಿದ, ಕ್ರಿಪ್ಸರು ತಂದ ಸಲಹೆಗಳು ಈಗ ಪ್ರಕಟವಾಗಿವೆ. ಅದರ ವಿವರ ಇಂತಿದೆ

(೧) ಯುದ್ಧಾನಂತರ ಹಿಂದುಸ್ಥಾನಕ್ಕೆ ಸಂಪೂರ್ಣ ವಸಾಹತು ಸ್ವರಾಜ್ಯ (ಡೊಮಿನಿಯನ್ ಸ್ಟೇಟಸ್) (೨) ರಾಷ್ಟ್ರದ ಹೊಸ ಘಟನೆಯನ್ನು ನಿರ್ಮಿಸಲು, ಯುದ್ಧ ಮುಗಿದ ಬಳಿಕ ಹೊಸ ಘಟನಾ ಸಮಿತಿಯನ್ನು ಸ್ಥಾಪಿಸಲಾಗುವುದು ಪ್ರಾಂತಿಕ ಎಸೆಂಬ್ಲಿಗಳ ಹೊಸ ಚುನಾವಣೆ ನಡೆದು, ಆ ಹೊಸ ಸದಸ್ಯರು ತಮ್ಮ ಸಂಖ್ಯಾಬಲದ ಹತ್ತರಲ್ಲಿ ಒಂದಂಶ ಜನರನ್ನು ಆ ಘಟನಾ ಸಮಿತಿಗೆ ಆರಿಸಿ ಕಳುಹಿಸುವುದು ಸಂಸ್ಥಾನಿಕರು ತಮ್ಮ ಸಂಖ್ಯಾಪ್ರಮಾಣದಲ್ಲಿ ಪ್ರತಿನಿಧಿಗಳನ್ನು ಕಳುಹಿಸುವುದು (೩) ಈ ಹೊಸ ಘಟನೆಗೆ ಸೇರಲು ಯಾವುದಾದರೊಂದು ಪ್ರಾಂತವು ಒಪ್ಪದಿದ್ದರೆ ಅದೊಂದು ಪ್ರತ್ಯೇಕ ಸ್ವಾಯತ್ತ ಪ್ರಾಂತವಾಗಿ ಉಳಿಯುವುದು. ಮುಂದೆ ಸೇರಲು ಬಯಸಿದರೆ ಸೇರುವರೆ ಅಧಿಕಾರವಿರುವುದು (೪) ಯುದ್ಧದ ಈ ಗಂಡಾಂತರ ಕಾಲದಲ್ಲಿ ಹಿಂದುಸ್ಥಾನದ ರಕ್ಷಣೆಯನ್ನು ಬ್ರಿಟಿಷ್ ಸರಕಾರದವರೇ ಇಟ್ಟುಕೊಳ್ಳುವರು ಎಲ್ಲಾ ಪಕ್ಷಗಳ ಹಿಂದಿ ಮುಖಂಡರು ಯುದ್ಧ ಯತ್ನದಲ್ಲಿ ಸಹಾಯ ಮಾಡಬೇಕು ಇವಿಷ್ಟು ಅವರು ತಂದ ಸಲಹೆಯ ಸಾರಾಂಶಗಳು ಇದು ಜಾರಿಯಲ್ಲಿ ಬರುವುದೋ ಇಲ್ಲವೋ ಎಂಬುದು ಮುಖಂಡರೊಡನೆ ನಡೆದು ಚರ್ಚೆಯನ್ನವಲಂಬಿಸಿರುವುದು.

ಕ್ರಿಪ್ಸ್–ಗಾಂಧಿಜಿ ಭೇಟಿ

ಮಹಾತ್ಮಾ ಗಾಂಧಿಜಿಯವರು ಸರ್ ಕ್ರಿಪ್ಸರೊಡನೆ ಎರಡು ಗಂಟೆಗಳ ತನಕ ಮಾತನಾಡಿದರು ಗಾಂಧಿಜಿಯವರು ಭೇಟಿಗೆ ಕ್ರಿಪ್ಸರು ಉಳಕೊಂಡಿದ್ದ ಭವನಕ್ಕೆ ಕಾರಿನಲ್ಲಿ ದಯಮಾಡಿದಾಗ, ಕ್ರಿಪ್ಸರು ಭವನದ ಮೆಟ್ಟಲು ಇಳಿದು ಬಂದು ಕಾರಿನ ಬಾಗಿಲು ತೆರೆದು ಅವರನ್ನು ಸ್ವಾಗತಿಸಿದರು ‘ನಿಮ್ಮನ್ನು ನೋಡಲು ನನಗೆ ಸಂತೋಷವಾಗುತ್ತದೆ ಎಂದರು ಗಾಂಧಿಜಿ ಕ್ರಿಪ್ಸರೊಡನೆ ಭೇಟಿಮಾಡಿ ಮರಳಿದಾಗ ಗಾಂಧಿಜಿ ಹಸನ್ಮುಖರಾಗಿದ್ದರು ಪತ್ರಿಕಾ ಪ್ರತಿನಿಧಿಗಳ ಪ್ರಶ್ನೆಗೆ ಗಾಂಧಿಜಿ ‘ನಾನು ಮೌನವ್ರತ ತಾಳಿದ್ದೇನೆ’ ಎಂದರು ಮೌಲಾನಾ ಅಜಾದರು ಕ್ರಿಪ್ಸರನ್ನು ಪುನಃ ಭೇಟಿಯಾದರು ಯುರೋಪಿಯನ್ ಸಂಗಡದ ಪ್ರತಿನಿಧಿಗಳೂ ಇಂಡಿಯನ್ ಕ್ರಿಶ್ಚಿಯನ್ ಪ್ರತಿನಿಧಿಗಳೂ ಭೇಟಿಯಾದರು ಗಾಂಧಿಜಿಯವರೊಡನೆ ಮಾಡಿದ ಮಾತುಕತೆ ಬಹಳ ಸಹಾಯಕವಾಗಿತ್ತು ಎಂದರು ಕ್ರಿಪ್ಸರು ಜಯಕರ್, ರಾಜಾಜಿ, ನೆಹರು ಮೊದಲಾದವರೂ ಕ್ರಿಪ್ಸರ ಭೇಟಿಮಾಡಿದರು. ಕ್ರಿಪ್ಸರು ಎಲ್ಲರೊಡನೆಯೂ ಮಾತುಕತೆ ಮಾಡಿದ ಬಳಿಕ ವೈಸರಾಯರನ್ನು ಕಂಡರು

‘ಈಗ ಮಾಡಿರುವ ಮಾತುಕತೆಗಳಿಂದ, ನಾನು ತಂದಿರುವ ಸಲಹೆಗಳಲ್ಲಿ ಒಂದು ವಾಕ್ಯದಲ್ಲಿ ಕೆಲವು ಪದಗಳನ್ನು ಮಾತ್ರ ವ್ಯತ್ಯಾಸ ಮಾಡಬೇಕಾಯಿತು ಅದೂ ಅರ್ಥವು ಸ್ಪಷ್ಟವಾಗುವಂತೆ. ೧೦ ದಿನಗಳಲ್ಲಿ ನಾನು ತಂದ ಸಲಹೆಗಳು ಒಪ್ಪಲ್ಪಡುವವೋ ಇಲ್ಲವೋ ಎಂದು ತಿಳಿಯುವುದು. ಏನಾದರೂ ಇತ್ಯರ್ಥ ಮಾಡಿಕೊಂಡೇ ನಾನು ಹೋಗುವೆನು’ ಎಂದರು ಕ್ರಿಪ್ಸರು.

ಜಿನ್ನಾ ಕ್ರಿಪ್ಸ್ ಭೇಟಿ

ಜಿನ್ನರು ಕ್ರಿಪ್ಸರನ್ನು ಭೇಟಿಯಾದರು. ಒಂದೂಕಾಲು ಗಂಟೆ ವರೆಗೆ ಮಾತುಕತೆಗಳಾದವು. ಜಿನ್ನರು ಸಂಭಾಷಣೆ ಮುಗಿಸಿ ಹೊರಗೆ ಬರುವಾಗ ಹಸನ್ಮುಖಿಗಳಾಗಿದ್ದರು ಡಿಲ್ಲಿಯಲ್ಲಿ ಲೀಗ್ ವರ್ಕಿಂಗ್ ಕಮಿಟಿ ಸಭೆ ಸೇರಿದೆ. ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆಯೂ ಡಿಲ್ಲಿಯಲ್ಲಿ ಸೇರಿದೆ. ಹಿಂದೂ ಮಹಾಸಭೆಯ ...ಂಗ್ ಕಮಿಟಿಸಭೆಯು ಡಿಲ್ಲಿಯಲ್ಲಿ ಎಪ್ರಿಲ್ ... ಸೇರುತ್ತದೆ.

‘ಸೈನ್ಯಾಧಿಕಾರವನ್ನು ಖಂಡಿತ ಬಿಟ್ಟುಕೊಡಲಾರೆವು’

ಈಗಿನ ವ್ಯವಸ್ಥೆಯನ್ನು ವೈಸರಾಯ್ ಮಾಡುವರು

ಯುದ್ಧ ಪ್ರಯತ್ನ ಸಂಪೂರ್ಣ ಬೆಂಬಲಕೊಡಿರಿ

— ಸರ್ ಕ್ರಿಪ್ಸರು ತಂದ ಬ್ರಿಟಿಷ್ ಸೂಚನೆಗಳು —

ಹಿಂದುಸ್ಥಾನವು ಸಾಮ್ರಾಜ್ಯದಿಂದ ಬೇರೆಯಾಗಬಹುದು

ಯುದ್ಧ ಮುಗಿವ ವರೆಗೆ ಮಾತ್ರ ಬ್ರಿಟಿಷರ ಆಧೀನ

ಪತ್ರಿಕೋದ್ಯಮಿಗಳಿಗೆ ಕ್ರಿಪ್ಸರ ಸೂಚನೆ।

‘ಯುದ್ಧ ಮುಗಿದ ಮೇಲೆ ಹಿಂದುಸ್ಥಾನದ ಹೊಸ ರಾಜ್ಯ ಘಟನೆಯನ್ನು ತಯಾರಿಸುವ ಸಲುವಾಗಿ ಒಂದು ಕಮಿಟಿಯನ್ನು ಸ್ಥಾಪಿಸಲಾಗುವುದು, ಈ ಕಮಿಟಿಗೆ ಪ್ರಾಂತಗಳು, ಸಂಸ್ಥಾನಗಳು ತಮ್ಮ ತಮ್ಮ ಕಾಯದೆ ಮಂಡಳಿಗಳಿಂದ ಪ್ರತಿನಿಧಿಗಳನ್ನು ಕಳುಹಿಸಬಹುದು. ಈ ಪ್ರತಿನಿಧಿಗಳ ಕಮಿಟಿಯು ರಾಜ್ಯಘಟನೆಯನ್ನು ತಯಾರಿಸಿದ ಮೇಲೆ ಬ್ರಿಟಿಷ್ ಸರಕಾರದವರು ಆ ಕಮಿಟಿಯೊಡನೆ ಒಪ್ಪಂದ ಮಾಡಿಕೊಂಡು, ಹಿಂದೀಯರಿಗೆ ಎಲ್ಲಾ ಅಧಿಕಾರವನ್ನು ಬಿಟ್ಟುಕೊಡುವರು ಯಾವುದೇ ಪ್ರಾಂತಕ್ಕಾದರೂ ಈ ರಾಜ್ಯಘಟನೆ ಒಪ್ಪಿಗೆಯಾಗದಿದ್ದರೆ ಅದು ಬೇರೆಯಾಗಬಹುದು ಅಥವಾ ಉಳಿದ ಪ್ರಾಂತಗಳೊಡನೆ ಸೇರಿಕೊಂಡು ಪ್ರತ್ಯೇಕ ಯೂನಿಯನ್ ಆಗಿ ಇರಬಹುದು’ ಎಂಬುದಾಗಿ ಕ್ರಿಪ್ಸರು ಪತ್ರಿಕೋದ್ಯಮಿಗಳ ಸಭೆಯಲ್ಲಿ ಹೇಳಿದರು

ಬ್ರಿಟಿಷ್ ಸರಕಾರದ ಯೋಜನೆಯನ್ನು ವಿವರಿಸುತ್ತಾ, ಹೊಸ ರಾಜ್ಯಘಟನೆ ತಯಾರಾದ ಮೇಲೆ ಬ್ರಿಟಿಷ್ ಸಾಮ್ರಾಜ್ಯದ ಉಳಿದ ಸಾಮಂತ ರಾಜ್ಯಗಳಷ್ಟೆ ಸ್ಥಾನಮಾನಗಳಿರುವವೆಂದೂ, ಬೇಕಾದರೆ ಹಿಂದುಸ್ಥಾನವು ಬ್ರಿಟಿಷ್ ಸಾಮ್ರಾಜ್ಯದಿಂದ ಬೇರೆಯಾಗಬಹುದೆಂದೂ ಹೇಳಿದರು. ಈ ಯೋಜನೆಯನ್ನು ಸ್ವೀಕರಿಸಿದರೆ ಸಂಪೂರ್ಣ ಸ್ವೀಕರಿಸಬೇಕೆಂದೂ ಇಲ್ಲದಿದ್ದರೆ ಸಂಪೂರ್ಣ ಬಿಡಬೇಕೆಂದೂ ಹೇಳಿದರು

ಪತ್ರಿಕೋದ್ಯಮಿಗಳಿಗೆ ಕ್ರಿಪ್ಸರು ಎರಡು ತಾಸಿನ ಸಂದರ್ಶನವಿತ್ತರು. ಇಷ್ಟು ದೀರ್ಘ ಸಂದರ್ಶನ ವೀರೊಬ್ಬರೂ ಇದುವರೆಗೆ ಕೊಟ್ಟಿರಲಿಲ್ಲ. ಪತ್ರಿಕೋದ್ಯಮಿಗಳ ಪ್ರತಿಯೊಂದು ಪ್ರಶ್ನೆಗೂ ಅವರು ಸಹನೆಯಿಂದ ಉತ್ತರ ಕೊಡುತ್ತಿದ್ದರು ಬ್ರಿಟಿಷ್ ಯೋಜನೆಯಲ್ಲಿ, ಈ ಕೂಡಲೇ ಹಿಂದುಸ್ಥಾನದಲ್ಲಿ ಏನು ಮಾಡಲಾಗುವುದು ಎಂಬ ವಿಚಾರವಿದೆಯೆಂದು ಕೇಳಿದ್ದಕ್ಕೆ ಈ ವಿಷಯ ಹೆಚ್ಚಿಗೆ ಏನನ್ನೂ ಹೇಳುವುದಿಲ್ಲವೆಂದರು ‘ಹಿಂದುಸ್ಥಾನ ಸರಕಾರವನ್ನು ಯಾವ ರೀತಿ ನಡೆಸಬೇಕೆಂಬ ವಿಚಾರ, ಸಂಪೂರ್ಣ ವೈಸರಾಯರಿಗೆ ಸೇರಿದ್ದು, ಆ ಬಗ್ಗೆ ಅವರಿಗೆ ಕೆಲವು ಸಾಮಾನ್ಯ ಸೂಚನೆಗಳು ಕೊಡಲ್ಪಡುವವು ಎಂದರು ತಮ್ಮ ಕಾರ್ಯಕಾರೀ ಮಂಡಳಿಯನ್ನು ವಿಸ್ತರಿಸುವಲ್ಲಿ, ಹಿಂದೀ ಮುಖಂಡರನ್ನು ಸೇರಿಸಿಕೊಳ್ಳಲೂ ವೈಸರಾಯರಿಗೇ ಅಧಿಕಾರ ಕೊಡಲಾಗಿದೆಯಂತೆ ಏಕೆಂದರೆ ಯುದ್ಧ ಮುಗಿವ ವರೆಗೆ ಹೊಸ ರಾಜ್ಯಘಟನೆಗೆ ಕೈಹಾಕುವುದು ಸಾಧ್ಯವಿಲ್ಲವಂತೆ. ಸದ್ಯದ ಪರಿಸ್ಥಿತಿಯಲ್ಲಿ ಹಿಂದೀಯರಿಗೆ ಶಕ್ಯವಿದ್ದಷ್ಟು ಅಧಿಕಾರ ಕೊಡುವುದಕ್ಕಾಗಿ ಹೀಗೆ ಮಾಡಲಾಗಿದೆಯಂತೆ. ಒಟ್ಟಿನಲ್ಲಿ ಸಂರಕ್ಷಣೆಯೊಂದನ್ನು ಬಿಟ್ಟು ಉಳಿದೆಲ್ಲಾ ವಿಚಾರಗಳಲ್ಲಿ ಹಿಂದೀಯರಿಗೆ ಅಧಿಕಾರ ಕೊಡುವ ವಿಚಾರವಿದೆಯಂತೆ ಈ ಸೂಚನೆಗಳನ್ನು ಸ್ವೀಕರಿಸಿದರೆ ಪೂರ್ಣ ಸ್ವೀಕರಿಸಬೇಕೆಂದೂ, ಬಿಟ್ಟರೆ ಪೂರ್ಣ ಬಿಡಬೇಕೆಂದೂ ಹೇಳಿದರು. ಸಂರಕ್ಷಣೆ ಖಾತೆಯ ಜವಾಬ್ದಾರಿಯನ್ನು ಕೊಡಬೇಕೆಂದು ಹಿಂದುಸ್ಥಾನದ ಎಲ್ಲಾ ರಾಜಕೀಯ ಸಂಗಡಗಳವರು ಕೇಳಿದರೂ ನಾವು ಕೊಡುವುದಿಲ್ಲವೆಂದರು. ಏಕೆಂದರೆ ಇದರಿಂದ ಹಿಂದುಸ್ಥಾನದ ಸಂರಕ್ಷಣಾ ವ್ಯವಸ್ಥೆ ಕೆಟ್ಟು ಹೋಗುವುದಂತೆ. ಬ್ರಿಟಿಷ್ ಯುದ್ಧ ಮಂಡಳದಲ್ಲಿ ಒಬ್ಬ ಹಿಂದೀಯನನ್ನು ಸೇರಿಸಬೇಕೆಂದು ಅಭಿಪ್ರಾಯವಿದೆಯಂತೆ, ‘ಇಂಡಿಯಾ ಯೂನಿಯನ್’ನಲ್ಲಿ ಒಂದು ಪ್ರಾಂತವು ಸೇರಲು ಇಷ್ಟಪಡುವುದಿಲ್ಲವೆಂಬುದನ್ನು ನಿರ್ಣಯಿಸಲು, ಘಟನಾ ಸಮಿತಿಯಲ್ಲಿ ಸ್ಪಷ್ಟೀಕರಣವಿಲ್ಲದಿದ್ದರೆ ಪ್ರಾಯಸ್ಥರ ಮತದಾನದಿಂದ ನಿರ್ಣಯವಾಗುವುದೆಂದರು ಪ್ರಾಂತಗಳನ್ನು ಬೇರೆ ನಿಲ್ಲಲು ಬಿಡುವ ಸೂಚನೆ ಪಾಕಿಸ್ತಾನಕ್ಕೆ ಸಮ್ಮತಿಯೇ ಎಂದು ಕೇಳಿದ್ದಕ್ಕೆ ಅದು ಅಲ್ಲವೆಂದರು ಹಿಂದುಸ್ಥಾನದಲ್ಲಿರುವ ಬ್ರಿಟಿಷ್ ವ್ಯಾಪಾರಿಗಳ ಹಕ್ಕು ಬಾಧ್ಯತೆಯ ವಿಷಯ ಯಾವುದೇ ಶರತ ಹಾಕುವುದಿಲ್ಲವೆಂದರು ‘ಸಂಸ್ಥಾನಗಳೆಲ್ಲವೂ ಯೂನಿಯನಿನಲ್ಲಿ ಸೇರಬೇಕು ಮನಸ್ಸಿಲ್ಲದಿದ್ದರೆ ಶಕ್ಯವಿದ್ದಷ್ಟು ಹೆಚ್ಚು ಪ್ರಾಂತಗಳು ಸೇರಬೇಕೆಂದರು ಚುನಾಯಿತ ಕಾಯದೆ ಮಂಡಳಿಗಳಿರುವ ಸಂಸ್ಥಾನಗಳು ಈ ಕಾಯದೆ ಮಂಡಳಿಗಳ ಮೂಲಕ ಘಟನಾ ಸಮಿತಿಗೆ ಸದಸ್ಯರನ್ನು ಆರಿಸಿ ಕಳುಹಿಸಬಹುದು ಉಳಿದ ಸಂಸ್ಥಾನಗಳು ಈಗಿನ ವ್ಯವಸ್ಥೆಯಿಂದಲೇ ಪ್ರತಿನಿಧಿಗಳನ್ನು ಕಳುಹಿಸಬಹುದೆಂದರು ಅಟ್ಲಾಂಟಿಕ ಘೋಷಣೆಯಲ್ಲಿ ಹಿಂದುಸ್ಥಾನವು ಸೇರಲು ಅಡ್ಡಿಯಿಲ್ಲವೆಂದರು ಒಬ್ಬ ಸುದ್ದಿಗಾರನು ಬ್ರಿಟಿಷರ ವಿಷಯ ಕುತ್ಸಿತ ಟೀಕೆ ಮಾಡಲು ಕ್ರಿಪ್ಸರು ಸಿಟ್ಟಾಗಿದ್ದರು

ಕ್ರಿಪ್ಸರ ಸೂಕ್ಷ್ಮ ಪರಿಚಯ

ಬ್ರಿಟನಿನಿಂದ ಭಾರತದ ಸಂಧಾನದೂತರಾಗಿ ಬಂದ, ಸರ್ ಸ್ಟಾಫೋರ್ಡ್ ಕ್ರಿಪ್ಸರು ಸಮತಾವಾದಿಗಳು, ಶಾಖಾಹಾರಿಗಳು ಶ್ರೀಮಂತ ಕುಟುಂಬದಲ್ಲಿ ಜನ್ಮ ಪಡೆದರೂ ದೀನರಿಗೆ ದುಡಿಯುವವರು ವಕೀಲ ಕೆಲಸದಲ್ಲಿ ಬಹಳ ಪ್ರಸಿದ್ಧರಾದರು, ಮತ್ತೆ ರಾಜಕೀಯ ರಂಗಕ್ಕೆ ಪ್ರವೇಶಿಸಿದ್ದಾರೆ ೧೯೩೧ರಲ್ಲಿ ಕೂಲಿಗಾರ ಪಕ್ಷದ ಉಪಪ್ರಮುಖರಾಗಿದ್ದರು, ೧೯೩೯ರಿಂದ ಬ್ರಿಟನು ಫ್ರಾನ್ಸ್ ಮತ್ತು ರಷ್ಯಗಳು ನಾಜೀ ವಿರುದ್ಧ ಯುದ್ಧಹೂಡುವಂತೆ ಇವರು ಪ್ರಚಾರ ಕಾರ್ಯ ಕೈಕೊಂಡುದರಿಂದ, ಕೂಲಿಗಾರ ಪಕ್ಷದಿಂದ ಇವರನ್ನು ತಳ್ಳಿಹಾಕಲಾಯಿತು. ೧೯೪೦ರಲ್ಲಿ ಬ್ರಿಟಿಷ ರಾಯಭಾರಿಯಾಗಿ ಮೋಸ್ಕೋಗೆ ತೆರಳಿ ಮಾಡಿದ ಕಾರ್ಯಕಲಾಪಗಳು ಇತಿಹಾಸಪ್ರಸಿದ್ಧವಾದವುಗಳು ರಷ್ಯವನ್ನು ಜರ್ಮನಿ ವಿರುದ್ಧ ಯುದ್ಧಕ್ಕಿಳಿಸುವಲ್ಲಿ ಕ್ರಿಪ್ಸರು ಹೆಚ್ಚಿನ ಹೊಣೆಗಾರರು. ಯಾವ ಬ್ರಿಟನು ರಷ್ಯದ ಮೇಲೆ ಉಗ್ರವಾಗಿತ್ತೋ ಅದನ್ನು ರಷ್ಯದ ಮಿತ್ರನನ್ನಾಗಿ ಪರಿವರ್ತಿಸಿದರು ಕ್ರಿಪ್ಸರಿಗೆ ಈಗ ೫೩ ವರ್ಷ ಪ್ರಾಯ. ಅವರು ಭಾರತದ ಹಿತೈಷಿಗಳೂ ಕಾಂಗ್ರೆಸ್ ಮಿತ್ರರೂ ಆಗಿದ್ದಾರೆ ಬ್ರಿಟನು ಭಾರತಗಳೊಳಗೆ ಒಳ್ಳೆಯ ಸಂಬಂಧವಿರಬೇಕೆಂಬ ಸದ್ಬುದ್ಧಿಯಿಂದ ಅವರು ಸಂಧಾನದೂತರಾಗಿ ಬಂದಿದ್ದಾರೆ.

ಕಾಸರಗೋಡು

ಲೇಬರ್ ಶಾಲೆ—ತಾ. ೨೮ನೇ ಶನಿವಾರದಲ್ಲಿ ಕುಂಜಿ ಲೇಬರ್ ಶಾಲೆಯಲ್ಲಿ ಶಾಲೆಯ ವಾರ್ಷಿಕೋತ್ಸವವು ಬೋರ್ಡು ಹೈಸ್ಕೂಲಿನ ಉಪಾಧ್ಯಾಯರಾದ ಶ್ರೀ. ಯು ಭವಾನಿಶಂಕರ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಬೋರ್ಡು ಎಲಿಮೆಂಟರಿ ಶಾಲೆಯ ಹೆಡ್ಮಾಸ್ತರರೂ ಕಾಸರಗೋಡು ತಾಲೂಕು ಹರಿಜನಸೇವಾ ಸಂಘದ ಕಾರ್ಯದರ್ಶಿಗಳೂ ಆದ ಶ್ರೀ. ಎಂ. ಕೆ. ಬಾಬು ಶೆಟ್ಟರೂ ಶ್ರೀ. ಎಂ. ರಾಧಾಕೃಷ್ಣರವರೂ ಅಲ್ಲಿ ಹಾಜರಿದ್ದರು. ಇತರ ಹರಿಜನ ಗಂಡಸರೂ ಹೆಂಗಸರೂ ಕೂಡಿದ್ದರು. ಲೇಬರ್ ಶಾಲೆಯ ಹೆಡ್ಮಾಸ್ತರರಾದ ಶ್ರೀ ಕೆ. ರಾಮರವರು ಜರಗಿಸಿದ ಭಜನಾ ಸಮಾರಂಭವನ್ನು ನೋಡಿ ತನಗೆ ಬಹಳ ಸಂತೋಷವಾಯಿತೆಂದೂ, ಇಂತಹ ಸಮಾರಂಭಗಳಿಂದ ಹರಿಜನರಿಗೆ ಅನೇಕ ಪ್ರಯೋಜನಗಳು ... ವೆಂದೂ ಅಧ್ಯಕ್ಷರು ಹೇಳಿದರು.

ವಾರಕ್ಕೊಂದಾವರ್ತಿಯಾಗಲಿ ತಿಂಗಳಿಗೊಂದಾವರ್ತಿಯಾಗಲಿ ಇಂತಹ ಸಭೆಯನ್ನು ಜರಗಿಸುವುದರಿಂದ ಹೆತ್ತವರಿಗೆ ಮತ್ತು ಹುಡುಗರಿಗೆ ಅನೇಕ ಉಪಯೋಗವುಂಟಾಗುವುದೆಂದು ತಮ್ಮ ಭಾಷಣದಲ್ಲಿ ಹೇಳಿದರು ತದನಂತರ ಲೇಬರ್ ಶಾಲಾ ಹೆಡ್ಮಾಸ್ತರರ ಧನ್ಯವಾದಗಳೊಡನೆ ಸಭೆಯು ಮುಕ್ತಾಯವಾಯಿತು

ಮನೋಹರ ಗ್ರಂಥಮಾಲೆಯ ಸಾಹಿತ್ಯೋತ್ಸವ

ಮನೋಹರ ಗ್ರಂಥಮಾಲೆಯು ಕನ್ನಡ ಸಾಹಿತ್ಯದೇವಿಗೆ ಕನ್ನಡ ನಾಡಿನ ಸಾಹಿತ್ಯಭಕ್ತರ ಐವತ್ತೊಂದು ಕೃತಿ ಕುಸುಮಗಳ ಮಾಲೆಯೊಂದನ್ನು ಅರ್ಪಿಸಿದುದರ ಸವಿನೆನಪಿಗಾಗಿ ಈ ಸಾಹಿತ್ಯೋತ್ಸವವನ್ನು ಏರ್ಪಡಿಸಲಾಗಿದೆ ಈ ಸಾಹಿತ್ಯೋತ್ಸವವು ಕುಮಾರವ್ಯಾಸನ ಊರಾದ ಗದುಗಿನಲ್ಲಿ ಇದೇ ಮೇ ತಿಂಗಳ ೧ ೨ ೩ನೇ ದಿನಾಂಕಗಳ ಮೂರು ದಿನಗಳ ವರೆಗೆ ನಡೆಯುವುದು ಕನ್ನಡ ಸಣ್ಣಕತೆಗಳ ‘ಶ್ರೀನಿವಾಸ’ರು ಮುಖ್ಯ ಅತಿಥಿಗಳಾಗಿ ಈ ಉತ್ಸವವನ್ನು ನಡೆಯಿಸಿಕೊಡಲು ದಯವಿಟ್ಟು ಒಪ್ಪಿಕೊಂಡಿದ್ದಾರೆ ಕನ್ನಡ ನಾಡಿನ ಹಿರಿಯ ಸಾಹಿತ್ಯಭಕ್ತರಿಗೂ ಕಿರಿಯ ಸಾಹಿತ್ಯಭಕ್ತರಿಗೂ ಔತಣಕೊಡಲಾಗಿದೆ ಅವರು ಉತ್ಸವಕ್ಕೆ ಬರುವುದಾಗಿ ಆಶ್ವಾಸನ ಕೊಟ್ಟಿದ್ದಾರೆ ಈ ಸಾಹಿತ್ಯೋತ್ಸವದ ಸಮಯಕ್ಕೆ ಕನ್ನಡ ಬರೆಹಗಾರರ ಸ್ನೇಹ ಸಮ್ಮೇಳನ ‘ಲೇಖಕ ವಾಚಕರ ವಿಚಾರಕೂಟ’ ‘ವಿಮರ್ಶಕರ ವಿಚಾರ ವಿನಿಮಯ’ ಅಭಿನಯ ಸ್ಪರ್ಧೆ ‘ಪ್ರಬಂಧ ಸ್ಪರ್ಧೆ’ಗಳನ್ನು ಏರ್ಪಡಿಸಲಾಗಿದೆ ನಮ್ಮ ಗ್ರಂಥಮಾಲೆಯ ಹಿತಚಿಂತಕರು ಆಶ್ರಯದಾತರು ಸಹಾಯಕರು ಗ್ರಾಹಕರು ಒಂದು ಉತ್ಸವದಲ್ಲಿ ಭಾಗಿಗಳಾಗಬೇಕೆಂದು ಬೇಡುತ್ತೇವೆ

ಪ್ರಬಂಧ ಸ್ಪರ್ಧೆ

ಕನ್ನಡನಾಡಿನವರೆಲ್ಲರಿಗೂ ಸ್ಪರ್ಧೆಗೆ ಸೇರಲು ಅಧಿಕಾರವಿದೆ

ಪ್ರಬಂಧದ ವಿಷಯ

ಮನೋಹರ ಗ್ರಂಥಮಾಲೆಯಲ್ಲಿ ನನಗೆ ಮೆಚ್ಚುಗೆಯಾದ ಗ್ರಂಥ’

ಎಪ್ರಿಲ್ ೨೦ನೆಯ ತಾರೀಖಿನೊಳಗಾಗಿ ತಲುಪುವಂತೆ ಕಳಿಸಬೇಕು

೩೫ ರೂಪಾಯಿಗಳ ಒಂದೇ ಬಹುಮಾನ ಇದೆ ೩೦೦ ಸಾಲುಗಳಿಗೆ ಕಡಿಮೆಯಿಲ್ಲದಷ್ಟು ೪೦೦ ಸಾಲು ಮೀರದಷ್ಟು ವಿಷಯ ವಿಸ್ತಾರವಿರಬೇಕು. ಪ್ರಬಂಧವನ್ನು ಒಮ್ಮೆಗ್ಗಲಿಗೇ ತಿಳಿಯುವ ಹಾಗೆ ಬರೆಯಬೇಕು ಪ್ರಬಂಧಸ್ಪರ್ಧೆಯ ಫಲಿತಾಂಶವು ಉತ್ಸವದ ಹೊತ್ತಿಗೆ ಪ್ರಕಟವಾಗುವುದು. ಪರೀಕ್ಷಕರ ನಿರ್ಣಯವೇ ಕೊನೆಯದು. ಬಹುಮಾನವನ್ನು ಪಡೆದ ಪ್ರಬಂಧದ ಮೊದಲ ಮುದ್ರಣದ ಅಧಿಕಾರವು ಮನೋಹರ ಗ್ರಂಥಪ್ರಕಾಶನ ಸಮಿತಿಯದು ಎಂದು ಜಿ. ಬಿ. ಜೋಶಿ ಮನೋಹರ ಗ್ರಂಥಮಾಲಾ ಧಾರವಾಡ ಇವರು ತಿಳಿಸುತ್ತಾರೆ ಅಭಿನಯ ಸ್ಪರ್ಧೆಯೊಂದನ್ನು ಏರ್ಪಡಿಸಲಾಗಿದೆ

ನೋಟೀಸು

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಸ್ಮಾಲ ನಂಬ್ರ 117/1937

S E P 155/1941.

S E A. No 209/1941.

ಮುಲ್ಕಿ ಶ್ರೀ ವೆಂಕಟ್ರಮಣ ದೇವಸ್ಥಾನ...... . . ಅರ್ಜಿದಾರ

ದೇವಣ್ಣ ಭಟ್ಟ ವಗೈರಾ ... ಎದುರು

8ನೇ ಎದುರು ಹಳೆಯಂಗಡಿ ಹಸನಬ್ಬಾರಿ—ಮಂಗಳೂರು ಅಲಿಬ್ಯಾರಿ ಮಗ ಮಂಗಳೂರು ತಾಲೂಕು ಹಳೆಯಂಗಡಿ ಗ್ರಾಮದಲ್ಲಿರುವವರಿಗೆ।

ಸದ್ರಿ ನಂಬರಿನಲ್ಲಿ ಎದುರು ನಮೂದ ಡಿಕ್ರೀಯಿನ ಕುರಿತು ಸೆಂಕ್ಷನ್ ಕೊಡಬೇಕಾಗಿ ಅರ್ಜಿದಾರ ಅರ್ಜಿ ಕೊಟ್ಟಿರುವದರಿಂದ ಅದನ್ನು ಕುರಿತು ನಿಮಗೇನಾದರೂ ಆಕ್ಷೇಪಣೆಯಿದ್ದ ಪಕ್ಷದಲ್ಲಿ ಅದನ್ನು 1942 ನೇ ಇಸವಿ ಜೂನ್ 3ನೇ ತಾರೀಖಿನ ಹಗಲು 10 ಗಂಟೆಗೆ ಈ ಕೋರ್ಟಿನಲ್ಲಿ ನೀವು ಖುದ್ದು ನಿಂದಾಗಲೀ ವಕೀಲದ್ವಾರವಾಗಲೀ ಹಾಜರಾಗಿ ತಿಳಿಸಿಕೊಳ್ಳಬೇಕು. ಹಾಗೆ ಹಾಜರಾಗದಿದ್ದರೆ ಸದರಿ ವಿಷಯದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು.

(ಕೋರ್ಟು ಹುಕುಂ ಪ್ರಕಾರ)

ಕಾರ್ಕಳ } M. Mukunda Kamath

ಜಿಲ್ಲಾ ಸಮಾಚಾರಗಳು

ಮಂಗಳೂರು

ಶ್ರೀ ಕಾಳಿಕಾಂಬಾ ಪ್ರಸಾದಿಕ ರಾಷ್ಟ್ರೀಯ ವಿಶ್ವಬ್ರಾಹ್ಮಣ ಸಮಾಜೋದ್ಧಾರಕ ಸಭಾ, ಮಂಗಳೂರು.

ಇದರ ಇಪ್ಪತ್ತೊಂದನೆಯ ವಾರ್ಷಿಕ ಮಹಾಸಭೆಯು ಶ್ರೀ. ಎ. ಎನ್. ಆಚಾರ್ಯರ ಮನೆಯಲ್ಲಿ ತಾ. ೨೫ನೇ ಸಾಯಂ. ಘಂಟೆ ೬-೩೦ಕ್ಕೆ ಶ್ರೀ. ಗೋಪಾಲ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನೆ, ಅಧ್ಯಕ್ಷರ ಸ್ವಾಗತ, ಸಂಘದ ಲೆಕ್ಕದ ಪತ್ರ ವರದಿ ವಾಚನ, ಆಯವ್ಯಯಗಳ ಅಂದಾಜು, ಆಡಳಿತ ಸಭೆಯ ಸದಸ್ಯರ ಚುನಾವಣೆ, ಕ್ರಮ ನಿಬಂಧನೆ, ತಿದ್ದುಪಡಿ ಮುಂತಾದ ಕಾರ್ಯಕ್ರಮಗಳು ಸರ್ವಾನುಮತದಿಂದ ಅಂಗೀಕೃತವಾದ ಮೇಲೆ ಶ್ರೀಗಳಾದ ಅರ್ಕುಳ ಸುಬ್ರಾಯಾಚಾರ್ಯ, ಕೆ. ಕೃಷ್ಣಾಚಾರ್ಯ ಮೊದಲಾದವರ ಭಾಷಣ ಅಧ್ಯಕ್ಷರ ಹಿತಬೋಧೆಗಳಾದ ಬಳಿಕ ಸಭಾಂತ್ಯವಾಯಿತು.

ಆಳಿಗೆ ಮರಣದಂಡನೆ

ಕಾಸರಗೋಡು ತಾಲೂಕು ಮೈರ್ಕೆ ಗ್ರಾಮದ ಬಟ್ಟೆಯಪ್ಪ ರೈಗೆ ಮಂಗಳೂರು ಸೆಶ್ಶನ್ಸ್ ಜಡ್ಜರು ಇ. ಪಿ. ಕೋಡಿನ ೩೦೨ನೇ ಕಲಂ ಪ್ರಕಾರ ಮರಣದಂಡನೆಯನ್ನು ವಿಧಿಸಿದರು. ತಾ. ೧೯-೧೦-೪೧ರಲ್ಲಿ ಆತನು ಮೃತ ರಾಮಕುಟ್ಟಿಯನ್ನು ಖೂನಿಮಾಡಿದ್ದಾಗಿ ಆತನ ಮೇಲಿನ ಮೊಕದ್ದಮೆಯಾಗಿತ್ತು. ಆಳೆಯು ಕುಡುಕನೆಂತಲೂ, ಹಣದ ಅಡಚಣೆ ಉಳ್ಳವನೆಂತಲೂ, ಹಣದ ಆಶೆಯಿಂದ ಮೃತನನ್ನು ಕೊಂದನೆಂತಲೂ ಹೇಳೋಣಾಗಿತ್ತು. ತನ್ನ ದ್ವೇಷಿಕರು ನಿರಪರಾಧಿಯಾದ ತನ್ನನ್ನು ಈ ಕೇಸಿನಲ್ಲಿ ಸೇರಿಸಿದ್ದಾಗಿ ಆಳೆಯ ಹೇಳಿಕೆಯಾಗಿತ್ತು. ಇಬ್ಬರು ಎಸೆಸರು ಆಳೆಯು ತಪ್ಪುಗಾರನಲ್ಲವೆಂತಲೂ ಒಬ್ಬ ಎಸೆಸರು ಆಳೆಯು ತಪ್ಪುಗಾರನೆಂತಲೂ ಅಭಿಪ್ರಾಯ ಕೊಟ್ಟಿದ್ದರು. ಜಡ್ಜರು ಆಳೆಯು ತಪ್ಪುಗಾರನೆಂತ ವಿಧಿಸಿ ಆತನಿಗೆ ಮರಣದಂಡನೆ ವಿಧಿಸಿದರು.

ಕಳವಿಗೆ ಶಿಕ್ಷೆ

ಅ. ಸೆಶ್ಶನ್ ಜಡ್ಜರಾದ ಶ್ರೀ ಟಿ. ಡಿ. ರಾಮಯ್ಯ ಪಂತಲು ಅವರ ಕೋರ್ಟಿನಲ್ಲಿ, ರೈಮಂಡ್ ಸೋಜಾ ಮತ್ತು ವೆಂಕಪ್ಪಕರ್ಕೇರ ಇವರ ಮೇಲೆ ೭-೧-೪೨ರಲ್ಲಿ ರಾತ್ರಿ ಗೊಲ್ಲರಕೇರಿಯಲ್ಲಿರುವ ಅಬ್ದುಲ್‌ರಹಿಮಾನ್ ಸಾಹೇಬರ ಅಂಗಡಿ ಮುರಿದು ಸಾಮಾನುಗಳನ್ನು ಕಳವು ಮಾಡಿದರೆಂದೂ, ೬-೧-೪೨ನೇ ರಾತ್ರಿ ಇನ್ಸ್‌ಪೆಕ್ಟರ್ ಅಫ್ ಮಿಶನ್ ಸ್ಕೂಲ್ಸ್‌ರೆ. ಕರುಣಾಕರರ ಬಳ್ಮಠ ಮಿಶನ್ ಕಂಪೌಂಡಿನಲ್ಲಿರುವ ಬಂಗ್ಲೆಯಿಂದ ಉಡುಪುಗಳನ್ನು ಕಳವು ಮಾಡಿದರೆಂದೂ ಮತ್ತು ೧೪-೧-೪೨ನೇ ರಾತ್ರಿ ತಾಲೂಕು ಕಚೇರಿಯ ಮುಂದಿರುವ ಮಾಧವರ ಗೂಡಿನಂಗಡಿಯನ್ನು ಮುರಿದು ಕಳವು ಮಾಡಿದರೆಂದೂ ಐ. ಪಿ. ಸಿ. ೪೫೭ನೇ ಪ್ರಕರಣದ ಮೇರೆಗೆ ಮೂರು ಚಾರ್ಜುಗಳು (ಮೇಲಿನ ತಕ್ಸೀರುಗಳ ನಿಮಿತ್ತ) ಪ್ರತ್ಯೇಕ ಪ್ರತ್ಯೇಕದ ಚಾರ್ಜುಗಳಾಗಿ, ವ್ಯವಹರಣೆ ನಡೆದು ಅವರು ತಪ್ಪಿತಸ್ಥರೆಂದು ಎಲ್ಲಾ ಚಾರ್ಜುಗಳ ಮೇಲೂ ಜೂರಿಯವರು ಒಮ್ಮತದ ನಿರ್ಧಾರ ಮಾಡಿದರು. ಜಡ್ಜರು ಈ ಅಭಿಪ್ರಾಯವನ್ನು ಸ್ವೀಕರಿಸಿ ತಪ್ಪಿತಸ್ಥರ ಪೈಕಿ ೧ನೇ ಆಳಿಗೆ ಪ್ರತಿಯೊಂದು ಚಾರ್ಜಿನ ಮೇಲೆ ೩ ವರ್ಷ ೨ನೇ ಆಳೆಗೆ ಪ್ರತಿಯೊಂದು ಚಾರ್ಜಿನ ಮೇಲೆ ೩ ವರ್ಷ ಸಜೆ ಮತ್ತು ಮೂರು ವರ್ಷ ಪೋಲೀಸರ ವಿಚಾರಣೆಗೆ ಒಳಪಟ್ಟಿರಬೇಕೆಂದೂ ವಿಧಿಸಿದರು. ಶಿಕ್ಷೆಯು ಏಕಕಾಲದಲ್ಲಿ ಜಾರಿಯಾಗತಕ್ಕದ್ದು.

ನೇಮಕ ವರ್ಗಾವರ್ಗಿಗಳು

ಪುತ್ತೂರು ತಹಶಿಲ್ದಾರ್ ಶ್ರೀ. ಕೇಶವ ಕುಡ್ವರು ೩ ತಿಂಗಳ ರಜೆ ಪಡೆಕೊಂಡಿರುವದರಿಂದ ಅವರ ಬದಲಿಗೆ ಶ್ರೀ. ಸೊಲೊಮನ್ ಜೋಶ್ವರೂ, ಕಾಸರಗೋಡು ತಹಶಿಲ್ದಾರ್ ಶ್ರೀ. ಬಿ. ಗಣೇಶರವರು ಒಂದು ತಿಂಗಳ ರಜೆಪಡೆಕೊಂಡಿರುವದರಿಂದ ಅವರ ಬದಲಿಗೆ ಶ್ರೀ. ಯು. ಪಳ್ಳಿಟ್ಟಾ ಸಾಹೇಬರವರೂ, ಪುತ್ತೂರಿನ ಆ ಟೇಕ್ಸ್ ಆಫೀಸರ್ ಶ್ರೀ. ಜೂಲಿಯನ್ ಅರೇಂಜಾರವರು ೩ ತಿಂಗಳ ರಜೆಪಡಕೊಂಡಿರುವುದರಿಂದ ಅವರ ಬದಲಿಗೆ ಶ್ರೀ. ಬಿ. ಟಿ. ಪಿಂಟೋರವರೂ ನೇಮಕಪಟ್ಟಿದ್ದಾರೆ.

ಶ್ರೀ. ಟಿ. ವೆಂಕಟರಾಯರು ಬೆಳ್ತಂಗಡಿ ಡಿ. ತಹಶಿಲ್ದಾರರಾಗಿಯೂ, ಶ್ರೀ. ಪಿ. ಸೀತಾರಾಮ ಶೆಟ್ಟಿ ಹೊಸದುರ್ಗ ಡಿ. ತಹಶಿಲ್ದಾರರಾಗಿಯೂ ಶ್ರೀ. ಯು. ಬಿ. ಗೋಪಾಲಕೃಷ್ಣರಾಯರು ಮಂಗಳೂರಿನ ಆ. ಟೇಕ್ಸ್ ಆಫೀಸರರಾಗಿಯೂ, ಕೆ. ಶೇಕ್ ಹಸನ್ ಸಾಹೇಬರವರು ಕಾಸರಗೋಡು ಸಬ್ ಮೆಜಿಸ್ಟ್ರೇಟರಾಗಿಯೂ ಹಂಗಾಮಿಯಾಗಿ ನೇಮಕಪಟ್ಟಿದ್ದಾರೆ.

ಸೇಲಂ ಡೆ. ಕಲೆಕ್ಟರ್ ಶ್ರೀ. ಜಿ. ದತ್ತಾತ್ರಯರಾಯರು ೪ ತಿಂಗಳ ರಜೆ ಪಡಕೊಂಡಿದ್ದಾರೆ.

ಮಲಬಾರ್ ಟ್ರೆಜರಿ ಡೆ. ಕಲೆಕ್ಟರ್ ಶ್ರೀ. ಪಿ. ಎಫ್. ಮಸ್ಕರೇಂಞಾಸರವರು ಉತ್ತರ ಆರ್ಕಾಡು ಟ್ರೆಜರಿಗೆ ವರ್ಗಾಯಿಸಲ್ಪಟ್ಟಿದ್ದಾರೆ.

ಕಾಸರಗೋಡಿನ ಅಸಿಸ್ಟಂಟ್ ಸರ್ಜನ್ ಡಾ. ಜಿ. ಐ. ರೆಬೆಲ್ಲೊರವರು ಮದ್ರಾಸಿಗೆ ವರ್ಗಾಯಿಸಲ್ಪಟ್ಟಿರುವದರಿಂದ ರಿಟಾಯರ್ಡ್ ಅಸಿಸ್ಟಂಟ್ ಸರ್ಜನರಾಗಿದ್ದ ಡಾ। ಪಿ. ಕೆ. ರಾಮನ್ ನಂಬಿಯಾರರು ಪುನಃ ಕಾಸರಗೋಡಿನ ಆ. ಸರ್ಜನರಾಗಿ ನೇಮಕಹೊಂದಿದ್ದಾರೆ.

ಜಿಲ್ಲಾ ಬೋರ್ಡ್ ಅಧಿವೇಶನ

ತಾ. ೨೮ನೇ ಶನಿವಾರ ಪ್ರಾತಃಕಾಲ ಗಂಟೆ ೧೦ಕ್ಕೆ ಜಿ. ಬೋರ್ಡ್ ಅಧಿವೇಶನವು ಆದರ ಕಾರ್ಯಾಲಯದಲ್ಲಿ ಪ್ರೆಸಿಡೆಂಟ್ ಡಾ. ಕೆ. ವಿಠ್ಠಲ ಶೆಟ್ಟರ ಅಧ್ಯಕ್ಷತೆಯಲ್ಲಿ ಜರುಗಿತು. ಬೋ. ಗೈರಹಾಜರಿಯ ದೆಸೆಯಿಂದ ಮೆಂಬರಿಕೆಯು ರದ್ದಾಗಿದ್ದ ಶ್ರೀಗಳಾದ ಎಂ. ಮಹಾಲಿಂಗ ಶೆಟ್ಟಿ ಮತ್ತು ಸಿ. ಕೆ. ರಾಘವನ್ ನಂಬಿಯಾರರ ಮೆಂಬರಿಕೆಯನ್ನು ಅವರ ಅರಿಕೆಯಂತೆ ಊರ್ಜಿತಗೊಳಿಸಿ, ಬೈಂದೂರು ರಸ್ತೆಯನ್ನು ಮೈಸೂರು ಗಡಿಗಳ ವರೆಗೆ ವಿಸ್ತರಿಸಬೇಕೆಂಬ ಸುಮಾರು ೧೩ ಸಾವಿರ ಖರ್ಚಿನ ವಿಚಾರವನ್ನು ಸಂಬಂಧಪಟ್ಟ ಪಂಚಾಯತ್. ಬೋರ್ಡಿಗೆ ತಿಳಿಸಬೇಕೆಂದೂ, ಭಟ್ಕಳದ ಕಡೆಯಿಂದ ಪ್ಲೇಗ್ ಈ ಜಿಲ್ಲೆಗೆ ವ್ಯಾಪಿಸದಂತೆ, ತಾತ್ಕಾಲಿಕವಾದ ಒಂದು ಶಿಬಿರವನ್ನು ಏರ್ಪಡಿಸಬೇಕೆಂದೂ, ಉಡ್ಪಿ ಬೋರ್ಡ್ ಹೈಸ್ಕೂಲಿನ ವಿಚಾರದಲ್ಲಿ ಸರಕಾರಕ್ಕೆ ಬರೆದುಕೊಳ್ಳುವುದೆಂದೂ ನಿರ್ಧಾರವಾಯಿತು. ತಮ್ಮ ತಂದೆಯ ಹೆಸರಲ್ಲಿ ಬಡ್ಡಿಯ ಅಂಶದಿಂದ ಒಂದು ವಿದ್ಯಾರ್ಥಿ ವೇತನಕ್ಕಾಗಿ ಕಾರ್ಕಳ ಶ್ರೀ. ಎಸ್. ರಾಮಪ್ಪನವರು ದಾನಮಾಡಿದ ರೂ.೧೦೦೦ನ್ನು ಸ್ವೀಕರಿಸಿ, ಮೂಲ್ಕಿ ಉಡ್ಪಿ ಬೋರ್ಡ್ ಹೈಸ್ಕೂಲುಗಳಲ್ಲಿ, ಸ್ವಲ್ಪಹೊತ್ತು ಕಲಿಸುವ ಹೊಲಿಗೆ ಮಿಸ್ಟ್ರೆಸುಗಳನ್ನೂ ಪಂಜ, ಸುಳ್ಯ, ಗುತ್ತಿಗಾರು ಪಡ್ರೆ ಹಾ। ಎ। ಶಾಲೆಗಳಲ್ಲಿ, ಕೊಂಚ ಹೊತ್ತು, ಕಸುಬುಗಳನ್ನು ಕಲಿಸುವ ಉಪಾಧ್ಯಾಯರನ್ನೂ ನೇಮಿಸಬೇಕೆಂದಾಯಿತು. ತೆರಿಗೆ ಅಪ್ಪಿಲ್ ಕಮಿಟಿಯ ಕೋರಮನ್ನು ಎರಡಕ್ಕೆ ಇಳಿಸಿ, ಕುಂದಾಪುರ ಕಾರ್ಕಳಗಳ ಹೊರತಾದ ಇತರ ಟೇಕ್ಸ್ ಅಪೀಲ್ ಕಮಿಟಿಗೆ ಸದಸ್ಯರನ್ನು ಆರಿಸಲಾಯಿತು.

ಶ್ರೀ ಶರವು ಗಣೇಶ ವಾಚನಾ ಸಂಘ

ಮೇಲಿನ ಸಂಘದ ನಾಲ್ಕನೆಯ ವಾರ್ಷಿಕೋತ್ಸವವು ಇದೇ ಬರುವ ಎಪ್ರಿಲ್ ತಾ. 5ನೆಯ ಆದಿತ್ಯವಾರ ಸಾಯಂಕಾಲ ಘಂಟೆ 5ಕ್ಕೆ ಶ್ರೀಮಾನ್ ಎಲ್. ಎಸ್. ಪಾರ್ಥಸಾರಥಿ ಅಯ್ಯರರ ಅಧ್ಯಕ್ಷತೆಯಲ್ಲಿ ನಡೆಯಲಿರುವುದು. ಬ್ರಹ್ಮಶ್ರೀ ಶರವು ಸುಬ್ಬಣ್ಣ ಶಾಸ್ತ್ರಿಗಳ ಭಾವಚಿತ್ರ ಅನಾವರಣವನ್ನು ಮಾಡಲಿರುವರು. ಅನಂತರ ಮೈಸೂರು ಆಸ್ಥಾನ ವಿದ್ವಾನ್ ಗಾನಕೇಸರಿ ಶ್ರೀಮಾನ್ ದೇವೇಂದ್ರಪ್ಪನವರು ಮತ್ತು ಪಾರ್ಟಿ ಇವರ ಸಂಗೀತವೂ ನಡೆಯಲಿರುವುದು.

ಯಕ್ಷಗಾನ ಸಮಾರಂಭ

ಭಾರತದೇಶದ ಸಂರಕ್ಷಣೆಗಾಗಿ ಎಪ್ರಿಲ್ ತಾ. ೪ನೆಯ ಶನಿವಾರ ರಾತ್ರಿ ಗಂಟೆ ೯ರಿಂದ ೧೨ರ ವರೆಗೆ ಸ್ಥಳೀಯ ಗವರ್ನಮೆಂಟ್ ಕಾಲೇಜಿನಲ್ಲಿ ಶ್ರೀಮಾನ್ ಎಲ್. ಎಸ್. ಪಾರ್ಥಸಾರಥಿ ಅಯ್ಯರ ನೇತೃತ್ವದಲ್ಲಿ ನಡೆಯಲಿರುವುದು. ಪ್ರಸಂಗ: [illegible]. ಭಾಗವತರು: ಯಕ್ಷಗಾನರತ್ನ ಬಲಿಪ ನಾರಾಯಣ ಭಾಗವತರು. ಮೃದಂಗವಾದಕರು: ಮೃದಂಗ ವಿಶಾರದ ಕೆನ್ಯೂರು ನಾರ್ಣಪ್ಪಯ್ಯನವರು. ಪಾತ್ರವರ್ಗ: ಶ್ರೀ ಕೃಷ್ಣ ಯಕ್ಷಗಾನಾಚಾರ್ಯ ಅರ್ಕುಳ ಸುಬ್ರಾಯಚಾರಿಗಳು. ಅರ್ಜುನ–ಶ್ರೀಮಾನ್ ಪೊಳಲಿ ಶಂಕರನಾರಾಯಣ ಶಾಸ್ತ್ರಿಗಳು, ವಿದ್ವಾನ್, ಕರ್ಣ–ಕವಿಭೂಷಣ ಕೆ. ಪಿ. ವೆಂಕಪ್ಪಶೆಟ್ಟರು, ಶಲ್ಯ–ಎಡ್ವೋಕೇಟ್ ಕೆ. ಬಾಲಕೃಷ್ಣರಾವ್, ಮತ್ತು ಇನ್ನಿತರರು.

ಶ್ರೀ ಬಾಲಮಾರುತಿ ವ್ಯಾಯಾಮ ಮಂಡಲ ಮಂಗಳೂರು

ಮಂಡಲದವರು ನಡಿಸಲಿರುವ ಶಿಕ್ಷಣ ಶಿಬಿರವು ಇದೇ ಎಪ್ರಿಲ್ ತಾ. 16ರಿಂದ ಮೇ 16ರ ವರೆಗೆ ಎಂದು ತಿಳಿಸುತ್ತಾರೆ. ಸದ್ರಿ ಶಿಬಿರಕ್ಕೆ ಸೇರಲಿಚ್ಛಿಸುವವರು ತಮ್ಮ ಅಪ್ಲಿಕೇಶನುಗಳನ್ನು ಫೀಸಿನೊಂದಿಗೆ (ರೂ. ೧೦ನ್ನು) ಎಪ್ರಿಲ್ ತಾ. ೧೨ರ ಒಳಗೆ ಮಂಡಲದ ಸೆಕ್ರೆಟರಿಗಳವರಿಗೆ ತಲುಪುವಂತೆ ರವಾನಿಸುವುದು.

ಕೊಂಗ್ರೆಸ್ ಸದಸ್ಯರಾಗಿ ಸೇರಿರಿ
ಜಿಲ್ಲೆಯ ಮಹಾಜನರಲ್ಲಿ ವಿನಂತಿ

ಕೊಂಗ್ರೆಸ್ ಪ್ರಾಥಮಿಕ ಸದಸ್ಯರನ್ನು ಸೇರಿಸುವ ಕಾರ್ಯವು ನಡೆದಿದೆ. ಪ್ರತಿಯೊರ್ವ ದೇಶಾಭಿಮಾನಿಯು ಪ್ರಾಥಮಿಕ ಸದಸ್ಯನಾಗಿ ಸೇರುವನೆಂದು ನಂಬಲಾಗಿದೆ. ಹೊಸತಾಗಿ ಪ್ರಾಥಮಿಕ ಸದಸ್ಯರಾಗಿ ಸೇರುವವರು ನಾಲ್ಕಾಣೆ ತೆತ್ತು ಸದಸ್ಯರಾಗಬಹುದು. ಈ ಮೊದಲು ಸದಸ್ಯರಾಗಿದ್ದು, ಕಳೆದ ವರ್ಷ ಮಾತ್ರ ತಮ್ಮ ಸದಸ್ಯತನವನ್ನು ಮುಂದುವರಿಸದೆ ಇದ್ದವರು, ಕಳೆದ ವರ್ಷದ (೧೯೪೧) ಸದಸ್ಯತನದ ವರ್ಗಣಿ ೦-೪-೦ ಮತ್ತು ಈ ವರ್ಷದ (೧೯೪೨) ವರ್ಗಣಿ ೦-೪-೦ ಹೀಗೆ ಎಂಟಾಣೆ ತೆತ್ತು ಸದಸ್ಯರಾಗಬೇಕಾಗಿದೆ. ಹೀಗೆ ಎರಡು ವರ್ಷಕ್ಕೆ ವರ್ಗಣಿ ತೆತ್ತ ಬಗ್ಗೆ ಅವರಿಗೆ ಒಂದೇ ರಶೀದಿ ಕೊಡಲ್ಪಡುವುದು.

ಸದಸ್ಯರನ್ನು ಸೇರಿಸುವ ಅವಧಿಯು ಇದೇ ಜೂನ್ ತಿಂಗಳಿಗೆ ಮುಗಿಯುವುದು. ಆದ ಕಾರಣ, ಸದಸ್ಯರನ್ನು ಸೇರಿಸುವವರು ತ್ವರೆಯಿಂದ ಕಾರ್ಯ ಸಾಗಿಸಬೇಕಾಗಿದೆ. ಸದಸ್ಯರಾಗಿ ಸೇರುವವರೂ ವಿಳಂಬಿಸದೆ, ಕೊಂಗ್ರೆಸ್, ಕಾರ್ಯಕರ್ತರು ತಮ್ಮ ಬಳಿಗೆ ಬಂದಾಗ ಸೇರಬೇಕೆಂದು ಜಿ. ಕಾ. ಪ್ರ. ಕಾರ್ಯದರ್ಶಿಯವರ ವಿನಂತಿ.

ಬಂಟ್ವಾಳ

ಕಳೆದ ತಾ. ೨೨ನೇ ರವಿವಾರ ಇಲ್ಲಿ ಸಮೀಪವಿರುವ ಕಂಚಿಕಾರ ಕುಟ್ಲ ಎಂಬಲ್ಲಿ ಒಬ್ಬನು ನೇಣುಹಾಕಿ ಆತ್ಮಹತ್ಯವನ್ನು ಮಾಡಿಕೊಂಡನೆಂದು ತಿಳಿದಿದೆ.

ಕಂಬಳ: ಬಂಟ್ವಾಳದ ಸಮೀಪ ಮಣಿಹಳ್ಳಿವೆಂಬಲ್ಲಿ ಕಂಬಳದ ಸ್ಪರ್ಧೆಯೊಂದು ಕಳೆದ ವಾರ ನಡೆಯಿತು. ಸ್ಪರ್ಧೆಯಲ್ಲಿ ಮುಲ್ಕಿ ಬಜಪೆ ಮುಂತಾದ ಸ್ಥಳಗಳಿಂದ ಬಹಳ ಹೆಸರುಪಡೆದ ಕೋಣಗಳು ಬಂದು ಭಾಗವಹಿಸಿದ್ದವು. ಅದರಲ್ಲಿ ಪ್ರಥಮ ಬಹುಮಾನವು ಅವ್ವೆಂಬಳ ಕಾದ್ರಿಬ್ಯಾರಿಗಳ ಕೋಣಗಳಿಗೂ ದ್ವಿತಿಯ ಬಹುಮಾನವು ತೋಕ್ರು ಗುತ್ತಿನವರ ಕೋಣಗಳಿಗೂ ಸಿಕ್ಕಿದವು.

ಪುತ್ತೂರು

ಬಾಲಾಂಜನೇಯ ವ್ಯಾಯಾಮ ಶಾಲೆಯ ಉದ್ಘಾಟನಾ ಸಮಾರಂಭವು ಶ್ರೀ ವೆಂಕಟ್ರಮಣ ದೇವಳದ ವಠಾರದಲ್ಲಿ ಶ್ರೀ. ಗೋವಿಂದಾಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು.

ಗೌಡ ಸಾರಸ್ವತ ಸಂಘದ ನವವರ್ಷ ಮಹೋತ್ಸವವು

ಕಳೆದ ತಾ. ೧೭ರಂದು ಸ್ಥಳೀಯ ವೆಂಕಟರಮಣ ದೇವಸ್ಥಾನದಲ್ಲಿ ಶ್ರೀ ಯಮ್. ಕೇಶವ ಪೈಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಮತಿ ಆನಂದಿ ಬಾಯಿ ಇವರು ಸ್ತ್ರೀಯರನ್ನು ಉದ್ದೇಶಿಸಿ ಭಾಷಣವನ್ನಿತ್ತರು. ಶ್ರೀ ಜಿ. ಎನ್. ಲಕ್ಷ್ಮಣ ಪೈ ಇವರಿಂದ ವರದಿ ವಾಚನವಾಯಿತು. ಅಧ್ಯಕ್ಷರ ಭಾಷಣವಾದ ಮೇಲೆ ಮುಂದಿನ ವರ್ಷದ ಕಾರ್ಯಕಾರಿ ಮಂಡಳಿಯ ಚುನಾವಣೆ ನಡೆಯಿತು.

ವರ್ಗಾವರ್ಗಿ

ಸ್ಥಳೀಯ ಪೋಲೀಸ್ ಸರ್ಕಲ್ ಇನ್ಸ್‌ಪೆಕ್ಟರ್ ಶ್ರೀ. ಗಣೇಶ ಸುಂದರರಾಯರಿಗೆ ಮಂಗಳೂರಿಗೂ ಶ್ರೀ. ಸಂಜೀವ ರಾಯರಿಗೆ ಇಲ್ಲಿಗೂ ವರ್ಗವಾಗಿದೆ.

ಕಡಬ

ಇಲ್ಲಿಯ ಬೋ. ಹಾ. ಎ. ಶಾಲಾ ವಾರ್ಷಿಕೋತ್ಸವವು ತಾ. ೧೩ ಮತ್ತು ೧೪ರಲ್ಲಿ ಶ್ರೀ. ಹೊಸಬೆಟ್ಟು ರಾಮರಾವ್ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ಕಾಸರಗೋಡು

ವಾರ್ಷಿಕ ಪಂದ್ಯಾಟಗಳು

ಬೋರ್ಡ್ ಹೈಸ್ಕೂಲಿನ ವಿದ್ಯಾರ್ಥಿಗಳೊಳಗೆ ನಡೆದ ಪಂದ್ಯಾಟಗಳು ಕೊನೆಗೊಂಡವು. ಬಹುಮಾನ ವಿತರಣೆಯನ್ನು ಶ್ರೀ. ಎ. ವಿ. ಎನ್. ಮೆನೋನರು ಮಾಡಿದರು. ಶ್ರೀ. ಭವಾನಿಶಂಕರ ರಾಯರ ಮತ್ತು ಶ್ರೀ. ಕುಮಾರನ್‌ರವರು ಭಾಷಣ ಮಾಡಿದರು.

ಉಡುಪಿ

ಕ್ರಿಶ್ಚಿಯನ್ ಹೈಸ್ಕೂಲ್ ಹೆಡ್ಮಾಸ್ತರರಿಗೆ ಮಾನಪತ್ರ

ಸ್ಥಳೀಯ ಕ್ರಿಶ್ಚಿಯನ್ ಹೈಸ್ಕೂಲಿನ ಹೆಡ್ಮಾಸ್ತರರಾಗಿರುವ ಶ್ರೀ. ಎಸ್. ಜಿ. ಕೌಂಡಿನ್ಯರವರು ಅಧ್ಯಾಪಕ ವೃತ್ತಿಯಿಂದ ನಿವೃತ್ತರಾಗಲಿರುವ ಕಾರಣ ಈ ಶಾಲೆಯ ವಿದ್ಯಾರ್ಥಿಗಳು ಕಳೆದ ತಾ. ೧೯ರಲ್ಲಿ ಶ್ರೀಯುತರನ್ನು ಬೀಳ್ಕೊಡುವ ವಿದಾಯ ಸತ್ಕಾರ ಕೂಟವೊಂದನ್ನು ಡಾ। ಪಿ. ಜಿ. ಆಚಾರ್ಯರ ಅಧ್ಯಕ್ಷತೆಯಲ್ಲಿ ಏರ್ಪಡಿಸಿದ್ದರು. ಶ್ರೀ. ಕೌಂಡಿನ್ಯರಿಗೆ ವಿದ್ಯಾರ್ಥಿ ವೃಂದದ ಮಾನಪತ್ರವನ್ನು ಶ್ರೀ. ಬಾಲಕೃಷ್ಣ ಸೆಟ್ಟರು ಅರ್ಪಿಸಿದರು. ಗುರುಭಕ್ತಿ ಕಾಣಿಕೆಗಳು ಸಮರ್ಪಿಸಲ್ಪಟ್ಟ ತರುವಾಯ ಮಾನ್ಯ ಅತಿಥಿಯ ಹಾಗೂ ಮಾಜಿ ಹೆಡ್ಮಾಸ್ತರ್ ಶ್ರೀ. ಸಾಲಿಸಯ್ಯನವರ ಭಾವಚಿತ್ರಗಳನ್ನು ಅಧ್ಯಕ್ಷರು ಅನಾವರಣ ಮಾಡಿದರು.

ನಗರ ಸಭೆ

ಕಳೆದ ತಾ. ೨೬ರಲ್ಲಿ ಸೇರಿದ ಉಡುಪಿ ನಗರ ಸಭೆಯಲ್ಲಿ ಜಿಲ್ಲಾ ಕೈಗಾರಿಕೆ ವಸ್ತು ಪ್ರದರ್ಶನದ ಖರ್ಚಿನ ಬಗ್ಗೆ ಧನಸಹಾಯವೀಯಬೇಕಾಗಿ ಕಲೆಕ್ಟರರು ಸೂಚಿಸಿದುದಕ್ಕೆ ವಿಷಾದ ಸೂಚಿಸಲಾಯಿತು. ಮುನಿಸಿಪಲ್ ನೌಕರರ ಪ್ರೊವಿಡೆಂಟ್ ಫಂಡನ್ನು ಮದ್ರಾಸ್ ಸೆಂಟ್ರಲ್ ಕೊ-ಆಪರೇಟಿವ್ ಲೇಂಡ್ ಮೋರ್ಗೆಜ್ ಬೇಂಕಿನ ಡಿಬೆಂಚರುಗಳಲ್ಲಿ ಠೇವಣಾತಿಯಾಗಿರಿಸುವರೆ ಬಹುಮತದ ಒಪ್ಪಿಗೆ ದೊರೆಯಿತು.

ನೋಟೀಸು

ಕಾಸರಗೋಡು ತಾಲೂಕು ತೆಕ್ಕಿಲಗ್ರಾಮದ ಪರಂಬಿನಲ್ಲಿರುವ ಪುಲ್ಲಾಕೋಡಿ ಪುದ್ಯ ವೀಟಿಲ್ ಕುಂಞಂಬು ನಾಯರ ಅಳಿಯ ದ ಚಿರುದೈ ಅಮ್ಮನ ಮಗ ಪಕೀರ ಯಾನೆ ಕಂಣನ್ಯಾಯರನು ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನೆಂದ್ರೆ:

ನಮ್ಮ ಪುಲ್ಲಾಕೋಡಿ ಪುದ್ಯವೀಟ್ಟಿಲ್ ತರ್ವಾಟಿನಲ್ಲಿ ಸುಮಾರು 80 ಜನ ಮೆಂಬರೆರು ಇರುತ್ತಾ ವೃದ್ಧಾಪ್ಯದವರಾದ ಈಗಿನ ತರ್ವಾಟು ಕಾರ್ನವ ಮಾಲಿಂಗುನ್ಯಾಯರರನ್ನು ದಳಸಂಚನೆಗೆ ಸೇರಿಸಿ ದುರ್ಬೋಧನೆಯಿಂದ ನಮ್ಮ ತರ್ವಾಡಿನ ಕೆಲವು ಜನ ಮೆಂಬರರು ಅವರ ಸ್ವಾರ್ಥಕ್ಕನೇ ಆಸ್ತಿ ಪರಾಧೀನ ಮಾಡಿಸುವ ಇರಾಧೆಯಿಂದ ಇತ್ಲಾಗೆ ರೂ. 60ಕ್ಕೆ ಕೂಕಳ ಚಿಂದನ್ಯಾಯರ ಹೆಸರಿಗೆ ಬರೆದಿಟ್ಟ ದಸ್ತಾವೇಜು ಮತ್ತು ಇನ್ನು ಮುಂದೆ ಮಾಡಿಸಬಹುದಾದ ದಸ್ತಾವೇಜುಗಳೂ ಪರಾಧೀನಗಳೂ ನಮ್ಮ ತರ್ವಾಟು ಆಸ್ತಿಗೆ ವ-ಇತರ ಮೆಂಬರರಿಗೆ ಬಾಧಿಸತಕ್ಕದ್ದುಗಳಲ್ಲವೆಂತಲೂ ನಮ್ಮ ತರ್ವಾಡಿನಿಂದ ಕೊಡತಕ್ಕದ್ದು ತರ್ವಾಡಿಗೆ ಸಲತಕ್ಕ ಸಾಲಕೊಡತಕ್ಕ ಬೇರೇನೂ ಸಾಲವಿರುವುದಿಲ್ಲ ವ ಸಾಲಗಳು ಮಾಡುವರೆ ಎಷ್ಟು ಮಾತ್ರಕ್ಕೂ ಅಗತ್ಯವಿಲ್ಲವೆಂತಲೂ ಈ ಮೂಲಕ ತಿಳಿಸಲಾಗುತ್ತದೆ.

ತೆಕ್ಕಿಲಗ್ರಾಮದ ಪರಂಬು, [illegible] ಈ ಮೂರು ತಾ. 28-3-1942 ಗೆರೆ ಮತ್ತು ಎಡ ಕೈ ಹೆಬ್ಬೆಟ್ಟಿನ ಗುರುತು ಸದ್ರಿ ಪಕೀರ ಯಾನೆ ಕಂಣನ್ಯಾಯರನ ರುಜು

ಸಿನೆಮಾ ಪುಟ

ಸ್ಥಳೀಯ ಸಿನೆಮಾ

ಬಾಲಾಜಿಯಲ್ಲಿ 'ದಿ ಗ್ರೇಟ್ ಡಿಕ್ಟೇಟರ್'

ಚಾರ್ಲಿ ಚಾಪ್ಲಿನ್ ದೃಶ್ಯ!

'ದಿ ಗ್ರೇಟ್ ಡಿಕ್ಟೇಟರ್' ಎಂದರೆ ಇಂದು ಜಗತ್ತೇ ಬಲ್ಲುದು ಸರ್ವಾಧಿಕಾರಿ ಹಿಟ್ಲರ್ ಇಂದು ಅಂತಹ ಪ್ರಚಂಡ ಮೂರ್ತಿ ಹಿಟ್ಲರನ್ನು ಪ್ರಸಿದ್ಧ ಹಾಸ್ಯಗಾರ ಚಾರ್ಲಿ ಚೇಪಿನ್ ಹಾಸ್ಯಮಾಡಿದ ಈ ಚಿತ್ರವು ಸ್ಥಳೀಯ ಬಾಲಾಜಿ ಟಾಕೀಸಿನಲ್ಲಿ ಕಳೆದ ಶನಿವಾರದಿಂದ ಪ್ರದರ್ಶಿತವಾಗುತ್ತಿದೆ ಬ್ರಿಟಿಷ್ ಪ್ರಚಾರದಂತೆ, ಹಿಟ್ಲರನು ಹೇಗೆ ಸಾಮಾನ್ಯ ವಿಲಕ್ಷಣಪುರುಷನಾಗಿರುವನೆಂದೂ, ಆತನು ನಾಸಿಸಮ್ಮಿನ ಹಿಡಿತದಲ್ಲಿ ಹೇಗೆ ಹುಚ್ಚನಂತೆ ಕುಣಿಯುತ್ತಿದ್ದಾನೆಂದೂ, ಆತನ ಆ ಹುಚ್ಚಿನಿಂದ ಲೋಕವು ಎಂತಹ ಅನ್ಯಾಯವನ್ನು ಅನುಭವಿಸುತ್ತದೆಂದೂ ಚಾರ್ಲಿ ಚಾಪ್ಲಿನ್ ಇದರಲ್ಲಿ ಚಿತ್ರಿಸುತ್ತಾನೆ ಚಾರ್ಲಿ ಚಾಪ್ಲಿನನ ಹಾಸ್ಯವು ಪ್ರಪಂಚದ ಜನರನ್ನು ಬೆರಗುಗೊಳಿಸಿದೆ. ಆತನ ಹಾಸ್ಯಶಕ್ತಿಯು ಈ ಚಿತ್ರದಲ್ಲಿ ಅತ್ಯುಜ್ವಲವಾಗಿದೆ ಸರ್ವಾಧಿಕಾರಿಯಾಗಿ ಮಾತನಾಡುವ, ಸರ್ವಾಧಿಕಾರಿಯಾಗಿ ನಟಿಸುವ, ಆತನ ಅಂತರಂಗ, ಬಹಿರಂಗ ಜೀವನಗಳನ್ನು ನಿರೂಪಿಸುವ ಹಲವು ಹಾಸ್ಯ ಸನ್ನಿವೇಶಗಳು ನಗೆಯ ಕಡಲನ್ನು ಹುಟ್ಟಿಸುತ್ತವೆ ಸರ್ವಾಧಿಕಾರಿ ಹಿಟ್ಲರ್ ಇಷ್ಟೊಂದು ಹುಚ್ಚನೋ ಎಂಬುದು ಆತನ ಸಮೀಪ ಪರಿಚಯವಿದ್ದವರು ಮಾತ್ರ ಹೇಳಬಲ್ಲರು ಆದರೆ ಆತನ ಪ್ರಚಂಡ ಮೂರ್ತಿಯೆಂಬುದನ್ನು ಜಗತ್ತೇ ಬಲ್ಲುದು ಆತನ ಪ್ರಚಂಡತೆಯೇ ಇಂದು ಜಗತ್ತಿಗೆ ಹುಚ್ಚಾಗಿ ಅನ್ಯಾಯವಾಗಿ ಪರಿಣಮಿಸಿದೆಯೆಂಬುದೂ ನಿರ್ವಿವಾದ ಅಂತಹ ಕಲ್ಪನೆಯಿಂದ ಚಾರ್ಲಿ ಚಾಪ್ಲಿನ್ ಈ ಚಿತ್ರದಲ್ಲಿ 'ದಿ ಗ್ರೇಟ್ ಡಿಕ್ಟೇಟರ್' ಆಗಿ ನಟಿಸಿ ಜನರ ಮನಸ್ಸನ್ನು ರಂಜಿಸುತ್ತಾನೆ ಚಾಪ್ಲಿನ್ ಈ ಚಿತ್ರದಲ್ಲಿ ಅತ್ಯುತ್ತಮವಾಗಿ ನಟಿಸುತ್ತಾನೆ

ಮೋಹನ್ ಪಿಕ್ಚರ್ಸ್

'ತಾಜ್‌ಮಹಾಲ್' ಎಂಬ ಮೊಗಲ್ ಇತಿಹಾಸ ಪ್ರಸಿದ್ಧ ಕಥಾಚಿತ್ರವು ಯಶಸ್ವಿಯಾಗಿ ಪ್ರದರ್ಶಿತವಾಗುತ್ತಿದೆ 'ಜಮೀನ್ದಾರ್' 'ಜೀವನ್' 'ಸೂರ್‌ದಾಸ್ ಮತ್ತು ಸರೋಜಿನಿ' ಸುಂದರಿ ಎಂಬೀ ಚಿತ್ರಗಳು ಅವರ ಮುಂದಿನ ಕಾರ್ಯಕ್ರಮಗಳು

ಈಸ್ಟರ್ನ್ ಪಿಕ್ಚರ್ಸ್

ಇವರು 'ಬಾದಲ್ ಚಿತ್ರವನ್ನು, ರಾಧಾರಾಣಿ, ಊರ್ಮಿಳಾ, ಜಾಹುರ್‌ರಾಜಾ ಇವರ ನಟನೆಯಿಂದ ತಯಾರಿಸಿದ್ದಾರೆ 'ಹಸ್ತ' ಮತ್ತು 'ಖಯ್ಯಮ್' ಎಂಬುದು ಅವರ ಮುಂದಿನ ಚಿತ್ರಗಳು

ವೀಣಸ್ ಪಿಕ್ಚರ್ಸ್

ಇವರ 'ಕೀರ್ತಿ' ಪ್ರದರ್ಶನಕ್ಕೆ ತಯಾರಾಗಿದೆ ಶ್ರೀ ಎಂ ಜಿ ರಂಗ್ನೇಕರರ ಕಥೆಯಿದು ನಿರ್ದೇಶಕ ಗುಂಜಾಲ್ ಅವರ ಮುಂದಿನ ಚಿತ್ರ 'ನಾರಿ'

ಭಾರತ್ ಪಿಕ್ಚರ್ಸ್

ಇವರ 'ದರ್ಪಣ ಮತ್ತು ಸ್ವಾಮಿನಾಥ' ಚಿತ್ರಗಳು ಬೇಗನೇ ಪ್ರದರ್ಶಿತವಾಗುವವು ಇವೆರಡೂ ಸಾಮಾಜಿಕ

ಅಮರ್ ಪಿಕ್ಚರ್ಸ್

ಇವರ 'ಖಿಲೌನಾ' ಇದು ಸುರೇಂದ್ರ ದೇಸಾಯಿಯವರ ನೇತೃತ್ವದಿಂದ ಸ್ನೇಹಪ್ರಭಾ, ಜಯರಾಜರ ನಟನೆಯಿಂದ ಪ್ರಸಿದ್ಧವಾಗಿದೆ ಪ್ರಭಾ, ಕನ್ಯಾಲಾಲ್ ಇವರೂ ಇದ್ದಾರೆ. ಸರ್ವೋತ್ತಮ ಬಾದಾಮಿಯವರ ನಿರ್ದೇಶಕತ್ವ ಸರ್ವೋತ್ತಮ ಬಾದಾಮಿ ಕನ್ನಡಿಗರು

ತಾಜ್‌ಮಹಾಲ್ ಪಿಕ್ಚರ್ಸ್

ಇವರ ಪ್ರಥಮ ಚಿತ್ರ 'ಉಜಾಲಾ' ನಾಸೀಮಳ ಅದ್ಭುತ ಅಭಿನಯದಿಂದ ಕೂಡಿದೆ ಉಜಾಲಾ' ಇಷ್ಟರಲ್ಲಿಯೇ ಜನಪ್ರಿಯವಾಗಿರುವುದು. 'ಭಾರತ್' ಎಂಬುದು ಅವರ ಮುಂದಿನ ಚಿತ್ರ

ಶಾಲಿಮಾರ್ ಪಿಕ್ಚರ್ಸ್

ಇವರ 'ಏಕ್ ರಾತ್' ಜನಪ್ರಿಯವಾಗಿದೆ ಇದರ ನಿರ್ದೇಶಕರು ಡಬ್ಲ್ಯು ಝಡ್. ಅಹಮ್ಮದ್. ನೀನಾ ಪೃಥ್ವಿರಾಜರ ಜೊತೆ ಅಭಿನಯ ನೀನಾ ಹೊಸ ತಾರೆ

ಜಾನಕ್ ಪಿಕ್ಚರ್ಸ್

ಇವರ 'ರಾಯಿ ಸಾಹೇಬ್' ಚಿತ್ರವನ್ನು ನಿರ್ದೇಶಕ ಚತುರ್ಭುಜ ದೇಸಾಯಿಯವರು ತಯಾರಿಸುತ್ತಾರೆ ಜಗದೀಶ್ ಶೆಟ್ಟಿ, ಕೌಸಲ್ಯಾ, ರತನ್‌ಬಾಯಿ, ತ್ರಿಲೋಕ್ ಕಾಪೂರ್ ಮೊದಲಾದವರು ಇದರಲ್ಲಿ ಅಭಿನಯಿಸುವರು

ರಶ್ಯದಲ್ಲಿ ಸಿನೆಮಾಕಲೆ

ಹಿಂದೂದೇಶದಲ್ಲಿ ಒಟ್ಟು ೧೫೦೦ ಸಿನೆಮ ಮಂದಿರಗಳಿವೆ ರಶ್ಯದಲಿ ೧೬೦೦ ಸಿನೆಮಾ ಮಂದಿರಗಳಿರುವವು, ಇದು ಮಾತ್ರವಲ್ಲದೆ ಅಲ್ಲಿನ ಶಾಲೆಗಳಲ್ಲಿ ವಿಶೇಷ ಸಿನೆಮ ಪ್ರದರ್ಶನವಿದೆ ಕಳೆದ ಮೂರು ವರ್ಷಗಳಲ್ಲಿ ೫೧,೦೦೦ ಸಿನೆಮ ಮಂದಿರಗಳು ಹೆಚ್ಚಿದವು ಇದರೊಡನೆ ೪೦ ೫೮ ಸಾವಿರ ಸ್ಟೇಂಡಾರ್ಡ್ ಸಿನೆಮಾ ಯಂತ್ರಗಳು ಹಳ್ಳಿಗಳಲ್ಲಿ ಪ್ರಚಾರವಿವೆ ೧೯೩೫ರಲ್ಲಿ ೯೫ ಕೋಟಿ ಜನರೂ ೧೯೪೦ರಲ್ಲಿ ೨೭೦ ಕೋಟಿ ಜನರೂ, ಅಲ್ಲಿ ಸಿನೆಮಾ ನೋಡಿರುವರೆಂದು ತಿಳಿದಿದೆ ಈಗಿನ-ಯುದ್ಧ ನಡೆಯುತ್ತಿದ್ದರೂ ೧೫೪ ಕೋಟಿ ಅಡಿಗಳಷ್ಟು ಫಿಲ್ಮ್ ತಯಾರಿಕೆ ೧೯೪೨ರಲ್ಲಿ ಆಗಿದೆ ರಶ್ಯದಲ್ಲಿ ಎಷ್ಟರ ಮಟ್ಟಿಗೆ ಸಿನೆಮಾ ಪ್ರಚಾರದಲ್ಲಿದೆಯೆಂಬುದಕ್ಕೆ ಇದೇ ಸಾಕಷ್ಟು ನಿದರ್ಶನ ಸೋವಿಯೆಟ್ ಸರಕಾರದವರು ಕೈಕೊಳ್ಳುವ ಪಾಂಚವರ್ಷಿಕ ಯೋಜನೆಯಲ್ಲಿ ಸಿನೆಮಾಭಿವೃದ್ಧಿಯ ಯೋಜನೆಯೂ ಒಂದಾಗಿದೆ ೧೯೩೪ರ ಮೊದಲು ಸಿನೆಮಕ್ಕೆ ಬೇಕಾದ ಎಲ್ಲಾ ಸಾಮಗ್ರಿಗಳೂ ಹೊರದೇಶದಿಂದ ಬರಬೇಕಿತ್ತು, ಈಗ ಎಲ್ಲಾ ಅಲ್ಲೇ ಆಗುತ್ತಿದೆ ಅಲ್ಲಿನ ಶಬ್ದಗ್ರಹಣ ಸ್ವರೂಪವೇ ಬೇರೆ ವಿನ್ಯಾಸ ಕ್ರಮ ವಿಶಿಷ್ಟ ಕೆಮರಾ ಚಮತ್ಕಾರ ಅದ್ಭುತ ರಶ್ಯದ ಜನಜೀವನವೇ ವಿಶಿಷ್ಟವಾಗಿದ್ದು ಅಲ್ಲಿಗೆ ಅದು ಅನುರೂಪವಾಗಿದೆ ಸಿನೆಮಾ ಪ್ರದರ್ಶನವನ್ನು ಕೇವಲ ಮನೋರಂಜನೆಗಲ್ಲದೆ ವಿಷಯ ಬೋಧನೆಗೂ ಉಪಯೋಗಿಸುತ್ತಾರೆ ಅಲ್ಲಿನ ಎಲ್ಲರ ಭಾಷೆ ರಶ್ಯವಲ್ಲದ್ದರಿಂದ ಯುಕ್ರೇನ್, ಬೆಲರಶ್ಯ, ಜಾರ್ಜಿಯ, ಅರ್ಮೇನಿಯ, ಅಜರ್ ಬೈಜಾನ್, ತಜಿಕ್‌ಸ್ಥಾನ್ ಮುಂತಾದ ಪ್ರಾಂತಭಾಷೆಗಳಲ್ಲಿಯೂ ಚಿತ್ರ ತಯಾರಾಗುತ್ತದೆ ಸಿನೆಮಾ ಕೈಗಾರಿಕೆಗೆ ಸಂಬಂಧಪಟ್ಟ ಒಂದು ಕಾಲೇಜು ಇದೆ ಅಲ್ಲಿ ಬೋಧನೆ,ಪರಿಶೋಧನೆಗಳೂ ಆಗುತ್ತವೆ

ಅಮೆರಿಕದಲ್ಲಿ ಭಾರತ ಚಿತ್ರಗಳು

ರಡ್ಯಾರ್ಡ್ ಕಿಪ್ಲಿಂಗರ ಜಂಗಲ್ ಪಿಕ್ಚರ್ಸ್‌ಗಳನ್ನು ನೋಡಿದ ಪಾಶ್ಚಾತ್ಯರಿಗೆ ಭಾರತೀಯರು ಕಾಡುಜನಗಳೆಂಬ ಭಾವನೆಯುಂಟಾಗುವುದು ಆದರೆ ಇತ್ತೀಚೆಗೆ ಕಂಗನ್, ಬ್ರಾಂಡ್‌ಸ್ಟರ್, ಅಛ್ಯ ಚಿತ್ರಗಳನ್ನು ಕಂಡ ಅಮೆರಿಕನರು ಭಾರತದ ನಿಜಸ್ವರೂಪವನ್ನು ತಿಳಕೊಂಡಿರುವರು, ಆದ್ದರಿಂದ ಅಂತಹ ಹೆಚ್ಚು ಚಿತ್ರಗಳನ್ನು ಹೊರದೇಶಗಳಿಗೆ ಕಳುಹಿಸಿ ಎಂಬುದಾಗಿ ಹಾಲಿವುಡ್ಡಿನಿಂದ ಶ್ರೀ। ರಾಮು ಬಾಗೇಯಿಯವರು ಬರೆಯುತ್ತಾರೆ

ಗ್ರೇಟಾ ಗಾರ್ಬೊ

ಇದುವರೆಗೆ ಇಪ್ಪತ್ತೈದು ಚಿತ್ರಗಳಲ್ಲಿ ಪಾತ್ರವಹಿಸಿದ್ದಾಳೆ. ಆಕೆಯ ಇಪ್ಪತ್ತೈದನೆಯ ಚಿತ್ರ 'ದಿ ಟು ಫೇಸ್ಡ್ ವುಮನ್ ಎಂಬುದು

ಅಣ್ಣನು ತಮ್ಮನೊಡನೆ?

ಶಾಂತಾರಾಮ್-ವಿನಾಯಕ್

ಶಾಂತಾರಾಮರ ವಿಷಯ ಇತ್ತೀಚೆಗೆ ಹಲವು ಸುದ್ದಿಗಳು ಹುಟ್ಟಿವೆ ಅವುಗಳಲ್ಲಿ ಒಂದು ಆವರು ವಿನಾಯಕರ ನವಯುಗ ಚಿತ್ರಪಟಕ್ಕೆ ಸೇರುತ್ತಾರೆಂಬುದು, ಶಾಂತಾರಾಮ್ ಮತ್ತು ವಿನಾಯಕರು ಸೋದರ ಸಂಬಂಧದವರು

ಒಂದು ಭಾರತೀಯ "ಕಾರ್ಟೂನ್ ಪಿಕ್ಚರ್"

ಎಸ್ ಎ ಅಜೀಜ್ ಮತ್ತು ಎಸ್ ಜಂಗ್ ಬಾರಿಯವರು 'ತೀಸ್ಮಾರ್‌ಖಾನ್ ಎಂಬ ಕಾರ್ಟೂನ್ ಚಿತ್ರವನ್ನು ತಯಾರಿಸಿದ್ದಾರೆ ಚಲಚ್ಚಿತ್ರ ಪ್ರದರ್ಶಕರು ವಿದೇಶೀಯ 'ಮಿಕ್ಕಿ ಮೌಸ್' ಚಿತ್ರಗಳಿಗೆ ಮಾತ್ರ ಪ್ರೋತ್ಸಾಹ ಕೊಡುವುದಲ್ಲದೆ ಇಂತಹ ಭಾರತೀಯ ಚಿತ್ರಗಳನ್ನು ಯಾಕೆ ಪ್ರೋತ್ಸಾಹಿಸುವುದಿಲ್ಲವೋ ತಿಳಿಯದು.



ನಿಮ್ಮ ಮಗುವಿನ ಮೈ ಚರ್ಮವು ಎಷ್ಟು ಕೋಮಲವಾದುದೆಂದರೆ, ಕೇವಲ ಅತ್ಯಂತ ಸೂಕ್ಷ್ಮವಾದ ಮತ್ತು ಉತ್ಕೃಷ್ಟವಾದ ಪೌಡರು ಮಾತ್ರವೇ ಅದಕ್ಕೆ ಯೋಗ್ಯವಾಗಿದೆ ಕುಟಿಕೂರಾ ಟೊಲ್ಕಮ್ ಪೌಡರು (Cuticura Talcum) ಬಹಳ ಸೂಕ್ಷ್ಮವಾದದ್ದು ಮಾತ್ರವಲ್ಲದೆ ಕೇಳಲಾ ಹತ್ತರಷ್ಟು ಶುದ್ಧವಾದದ್ದು ಮತ್ತು ಸೌಮ್ಯ ತರದಲ್ಲಿ ಸ್ವೀಕರಿಸಲ್ಪಟ್ಟದ್ದು ಮಗುವಿನ ಕೋಮಲವಾದ ಸ್ನಾಯು ಚರ್ಮವನ್ನು ಬಹಳ ಸ್ವಚ್ಛವಾಗಿಯೂ ನುಣುಪಾಗಿಯೂ ಮಾಡುತ್ತದೆ ಸ್ನಾನವಾದ ಕೂಡಲೆ ಮಗುವಿನ ಮೈಗೆ ಇದನ್ನು ಹಾಗಿದರೆ ಚರ್ಮವ್ಯಾಧಿಗಳ ರೋಗಾಣುಗಳು ಮಗುವಿನ ಚರ್ಮವನ್ನು ಸೇರದಂತೆ ರಕ್ಷಿಸುತ್ತದೆ

ಇಡೀ ಜಗತ್ತಿನಲ್ಲಿ ಡಾಕ್ಟರರೂ ನರ್ಸುಗಳೂ ಕುಟಿಕೂರಾ ಪೌಡರು (cuticura Talcum) ಮಗುವಿನ ಕೋಮಲವಾದ ಚರ್ಮಕ್ಕೆ ಉತ್ತಮವಾದುದೆಂದು ಶಿಫಾರಸು ಮಾಡುತ್ತಿದ್ದಾರೆ ಹೆಂಗಸರು ಕೂಡಾ ಸ್ನಾನವಾದ ಕೂಡಲೇ ಇದನ್ನು ಹಚ್ಚಲು ಸಂತೋಷಪಡುತ್ತಾರೆ ಇದು ಬೆವರನ್ನು ಎಳಕೊಳ್ಳುತ್ತದೆ ಮತ್ತು ಚರ್ಮವನ್ನು ನುಣುಪಾಗಿಯೂ ಪರಿಮಳಯುಕ್ತವಾಗಿಯೂ ಇಡುವುದು ನಿಮ್ಮ ಕೆಮಿಸ್ಟರಿಂದ ಇದನ್ನು ಇಂದೇ ಕೊಂಡುಕೊಳ್ಳಿರಿ

ಮಕ್ಕಳಿಗೆ ಉಪಯುಕ್ತವಾದದ್ದು

ಕುಟಿಕೂರಾಟಾಲ್ಕಂಪೌಡರು

CUTICURA TALCUM

MONEY TO LEND

Over Forty Lacs of idle funds are awaiting investment in the shape of loans on gold, Government securities, shares of approved companies, life insurance policies having sufficient surrender value, grains and other agricultural produce, etc, etc. You are cordially invited to utilize these facilities

CANARA BANK, LIMITED.

ESTD 1906

ಆಚಾರ್ಯ ಪ್ರೊಡಕ್ಸನ್

ಇವರು 'ಬ್ರಹ್ಮಚಾರೀ ಪಿತ ಎಂಬ ಸಾಮಾಜಿಕ ಕಥೆ ತಯಾರಿಸುವರು 'ಬಂಧನ್' 'ಕಂಗನ್' ಖ್ಯಾತಿಯ ನಿರ್ದೇಶಕ ಎನ್ ಆರ್ ಆಚಾರ್ಯರು ತಮ್ಮದೇ ಆದ ಕಂಪನಿಯಲ್ಲಿ ಹೇಗೆ ನಿರ್ದೇಶಿಸುತ್ತಾರೋ ನೋಡಬೇಕು ಕಿಶೋರ್ ಶಾಹು, ಪೃಥಿವರಾದಾಸ ಗುಪ್ತ ಇವರು ಆ ಚಿತ್ರದಲ್ಲಿ ಅಭಿನಯಿಸುವರು.

ಸ್ವದೇಶಾಭಿಮಾನಿಗೆ ಜಾಹೀರಾತು ಕೊಡಿರಿ

ರೈಲು ಬಂಡಿಗಳ ಸಮಯ

ಇದೇ ಜುಲ್ಯಾ ತಾ 1೦ಂದ ವ್ಯತ್ಯಾಸವಾದ ರೈಲು ಬಂಡಿಗಳ ಸಮಯಗಳು ಈ ಕೆಳಗಿನಂತಿವೆ.—

ಗಾಡಿಗಳು	ಹೊರಡುವ ಗಂಟೆ	ತಲ್ಪುವ ಗಂಟೆ
ಗೂಡ್ಸು ಬಂಡಿ	3 45 ರಾತ್ರಿ	9 25 ರಾತ್ರಿ
ಮಲಬಾರು ಎಕ್ಸ್‌ಪ್ರೆಸ್ (ಮೈಲ್)	9.5 ಬೆಳಿಗ್ಗೆ	5.15 ಸಾಯಂ.
ಜಾಲಾರ್‌ಪೇಟೆ ಪೆಸೆಂಜರ್	12 0 ಮಧ್ಯಾಹ್ನ	2.55 ಸಾಯಂ.
ಕಣ್ಣನ್ನೂರು ವರೆಗೆ	೩-೫೨ ಸಾಯಂ.	9-40 ಮುಂಜಾನೆ.

ಜಿಲ್ಲಾ ಸಮಾಚಾರಗಳು

ಮಂಗಳೂರು

ಶ್ರೀ ಕಾಳಿಕಾಂಬಾ ಪ್ರಸಾದಿಕ ರಾಷ್ಟ್ರೀಯ ವಿಶ್ವಬ್ರಾಹ್ಮಣ ಸಮಾಜೋದ್ಧಾರಕ ಸಭಾ, ಮಂಗಳೂರು

ಇದರ ಇಪ್ಪತ್ತೊಂದನೆಯ ವಾರ್ಷಿಕ ಮಹಾಸಭೆಯು ಶ್ರೀ. ಪಿ. ಎನ್. ಆಚಾರ್ಯರ ಮನೆಯಲ್ಲಿ ತಾ. ೨೫ನೇ ಸಾಯಂ. ಘಂಟೆ ೩-೩೦ಕ್ಕೆ ಶ್ರೀ. ಗೋಪಾಲ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನೆ, ಅಧ್ಯಕ್ಷರ ಸ್ವಾಗತ, ಸಂಘದ ಲೆಕ್ಕದ ಪತ್ರ ವರದಿ ವಾಚನ, ಆಯವ್ಯಯಗಳ ಅಂದಾಜು, ಆತರೆ ಸಭೆಯ ಸದಸ್ಯರ ಚುನಾವಣೆ, ಕ್ರಮ ನಿಬಂಧನೆ, ತಿದ್ದುಪಡಿ ಮುಂತಾದ ಕಾರ್ಯಕ್ರಮಗಳು ಸರ್ವಾನುಮತದಿಂದ ಅಂಗೀಕೃತವಾದ ಮೇಲೆ ಶ್ರೀಗಳಾದ ಅರ್ಕುಳ ಸುಬ್ರಾಯಾಚಾರ್ಯ ಕೆ. ಕೃಷ್ಣಾಚಾರ್ಯ ಮೊದಲಾದವರ ಭಾಷಣ ಅಧ್ಯಕ್ಷರ ಹಿತಬೋಧೆಗಳಾದ ಬಳಿಕ ಸಭಾಂತ್ಯವಾಯಿತು.

ಆಳಿಗೆ ಮರಣದಂಡನೆ

ಕಾಸರಗೋಡು ತಾಲೂಕು ಮೈರೆ ಗ್ರಾಮದ ಬಟ್ಟಿಯಪ್ಪ ರೈಗೆ ಮಂಗಳೂರು ಸೆಶ್ಶನ್ಸ್ ಜಡ್ಜರು ಇ. ಪಿ. ಕೋಡಿನ ೩೦೨ನೇ ಕಲಮ ಪ್ರಕಾರ ಮರಣದಂಡನೆಯನ್ನು ವಿಧಿಸಿದರು ತಾ. ೧೯-೧೦-೪೧ರಲ್ಲಿ ಆತನು ಮೃತ ರಾಮಕುಟ್ಟಿಯನ್ನು ಕೊಲೆಮಾಡಿದ್ದಾಗಿ ಆತನ ಮೇಲಿನ ಮೊಕದ್ದಮೆಯಾಗಿತ್ತು. ಆಳಿಯು ಕುಡುಕನೆಂತಲೂ, ಹಣದ ಅಡಚಣೆ ಉಳ್ಳವನೆಂತಲೂ, ಹಣದ ಆಶೆಯಿಂದ ಮೃತನನ್ನು ಕೊಂದನೆಂತಲೂ ಹೇಳೋಣಾಗಿತ್ತು. ತನ್ನ ದ್ವೇಷಿಕರು ನಿರಪರಾಧಿಯಾದ ತನ್ನನ್ನು ಈ ಕೇಸಿನಲ್ಲಿ ಸೇರಿಸಿದ್ದಾಗಿ ಆಳಿಯ ಹೇಳಿಕೆಯಾಗಿತ್ತು. ಇಬ್ಬರು ಎಸೆಸರು ಆಳಿಯು ತಪ್ಪುಗಾರನಲ್ಲವೆಂತಲೂ ಒಬ್ಬ ಎಸೆಸರರು ಆಳಿಯು ತಪ್ಪುಗಾರನೆಂತಲೂ ಅಭಿಪ್ರಾಯ ಕೊಟ್ಟಿದ್ದರು. ಜಡ್ಜರು ಆಳಿಯು ತಪ್ಪುಗಾರನೆಂತ ವಿಧಿಸಿ ಆತನಿಗೆ ಮರಣದಂಡನೆ ವಿಧಿಸಿದರು.

ಕಳವಿಗೆ ಶಿಕ್ಷೆ

ಆ ಸೆಶ್ಶನ್ ಜಡ್ಜರಾದ ಶ್ರೀ ಟಿ ಡಿ ರಾಮಯ್ಯ ಪಂತಲು ಅವರ ಕೋರ್ಟಿನಲ್ಲಿ, ರೈಮಂಡ್ ಸೋಜಾ ಮತ್ತು ಸೆಂಟಮರ್ಕಳ ಇವರ ಮೇಲೆ ೬-೧-೪೨ರಲ್ಲಿ ರಾತ್ರಿ ಗೊಲ್ಲರಕೇರಿಯಲ್ಲಿರುವ ಅಬ್ದುಲ್‌ರಹಿಮಾನ್ ಸಾಹೇಬರ ಅಂಗಡಿ ಮುರಿದು ಸಾಮಾನುಗಳನ್ನು ಕಳವು ಮಾಡಿದರೆಂದೂ, ೬-೧-೪೨ನೇ ರಾತ್ರಿ ಇನ್ಸ್‌ಪೆಕ್ಟರ್ ಆಫ್ ಮಿಶನ್ ಸ್ಕೂಲ್ಸ್‌ರೈ ಕರುಣಾಕರರ ಬಲ್ಮಠ ಮಿಶನ್ ಕಂಪೌಂಡಿನಲ್ಲಿರುವ ಬಂಗ್ಲೆಯಿಂದ ಉಡುಪುಗಳನ್ನು ಕಳವು ಮಾಡಿದರೆಂದೂ ಮತ್ತು ೧೧-೧-೪೨ನೇ ರಾತ್ರಿ ತಾಲೂಕು ಕಚೇರಿಯ ಮುಂದಿರುವ ಮಾಧವರ ಗೂಡಿನಂಗಡಿಯನ್ನು ಮುರಿದು ಕಳವು ಮಾಡಿದರೆಂದೂ ಐ ಪಿ ಸಿ. ೪೫೭ನೇ ಪ್ರಕರಣದ ಮೇರೆಗೆ ಮೂರು ಚಾರ್ಜುಗಳು (ಮೇಲಿನ ತಕ್ಸೀರುಗಳ ನಿಮಿತ್ತ) ಪ್ರತ್ಯೇಕ ಪ್ರತ್ಯೇಕದ ಚಾರ್ಜುಗಳಾಗಿ, ವ್ಯವಹರಣೆ ನಡೆದು ಅವರು ತಪ್ಪಿತಸ್ಥರೆಂದು ಎಲ್ಲಾ ಚಾರ್ಜುಗಳ ಮೇಲೂ ಜೂರಿಯವರು ಏಕಮತದ ನಿರ್ಧಾರ ಮಾಡಿದರು. ಜಡ್ಜರು ಈ ಅಭಿಪ್ರಾಯವನ್ನು ಸ್ವೀಕರಿಸಿ ತಪ್ಪಿತಸ್ಥರ ಪೈಕಿ ೧ನೇ ಆಳಿಗೆ ಪ್ರತಿಯೊಂದು ಚಾರ್ಜಿನ ಮೇಲೆ ೨ ವರ್ಷ ೨ನೇ ಆಳಿಗೆ ಪ್ರತಿಯೊಂದು ಚಾರ್ಜಿನ ಮೇಲೆ ೩ ವರ್ಷ ಸಜೆ ಮತ್ತು ಮೂರು ವರ್ಷ ಪೋಲೀಸರ ವಿಚಾರಣೆಗೆ ಒಳಪಟ್ಟಿರಬೇಕೆಂದೂ ವಿಧಿಸಿದರು. ಶಿಕ್ಷೆಯು ಏಕಕಾಲದಲ್ಲಿ ಜಾರಿಯಾಗತಕ್ಕದ್ದು.

ನೇಮಕ ವರ್ಗಾವರ್ಗಿಗಳು

ಪುತ್ತೂರು ತಹಶಿಲ್ದಾರ್ ಶ್ರೀ. ಕೇಶವ ಕುಡ್ವ ೩ ತಿಂಗಳ ರಜೆ ಪಡಕೊಂಡಿರುವುದರಿಂದ ಅವರ ಬದಲಿಗೆ ಶ್ರೀ. ಸೊಲೊಮನ್ ಜೋಶ್ವರೂ, ಕಾಸರಗೋಡು ತಹಶಿಲ್ದಾರ್ ಶ್ರೀ. ಬಿ. ಗಣೇಶರವರು ಒಂದು ತಿಂಗಳ ರಜೆ ಪಡಕೊಂಡಿರುವುದರಿಂದ ಅವರ ಬದಲಿಗೆ ಶ್ರೀ. ಯು ಪಳ್ಳಿಬ್ಯಾರಿ ಸಾಹೇಬರವರೂ, ಪುತ್ತೂರಿನ ಆ ಟೇಕ್ಸ್ ಆಫೀಸರ್ ಶ್ರೀ. ಜೂಲಿಯನ್ ಅರೇಂಜಾರವರು ೩ ತಿಂಗಳ ರಜೆ ಪಡಕೊಂಡಿರುವುದರಿಂದ ಅವರ ಬದಲಿಗೆ ಶ್ರೀ ಪಿ ಜೆ. ಪಿಂಟೋರವರೂ ನೇಮಕಪಟ್ಟಿದ್ದಾರೆ.

ಶ್ರೀ. ಟಿ. ವೆಂಕಟರಾಯರು ಬೆಳ್ತಂಗಡಿ ಡಿ. ತಹಶಿಲ್ದಾರರಾಗಿಯೂ, ಶ್ರೀ. ಪಿ. ಸೀತಾರಾಮ ಶೆಟ್ಟಿ ಹೊಸದುರ್ಗ ಡಿ. ತಹಶಿಲ್ದಾರರಾಗಿಯೂ ಶ್ರೀ. ಯು. ಬಿ ಗೋಪಾಲಕೃಷ್ಣರಾಯರು ಮಂಗಳೂರಿನ ಆ ಟೇಕ್ಸ್ ಆಫೀಸರರಾಗಿಯೂ, ಕೆ. ಶೇಕ್ ಹಸನ್ ಸಾಹೇಬರವರು ಕಾಸರಗೋಡು ಸಬ್ ಮೆಜಿಸ್ಟ್ರೇಟರಾಗಿಯೂ ಹಂಗಾಮಿಯಾಗಿ ನೇಮಕಪಟ್ಟಿದ್ದಾರೆ.

ಸೇಲಂ ಡಿ. ಕಲೆಕ್ಟರ್ ಶ್ರೀ ಜಿ ದತ್ತಾತ್ರಯ ರಾಯರು ೪ ತಿಂಗಳ ರಜೆ ಪಡಕೊಂಡಿದ್ದಾರೆ.

ಮಲಬಾರ್ ಟ್ರೆಜರಿ ಡಿ ಕಲೆಕ್ಟರ್ ಶ್ರೀ ಎ ಎಫ್ ಮಸ್ಕರೇಂಞಸರವರು ಉತ್ತರ ಆರ್ಕಾಡು ಟ್ರೆಜರಿಗೆ ವರ್ಗಾಯಿಸಲ್ಪಟ್ಟಿದ್ದಾರೆ.

ಕಾಸರಗೋಡಿನ ಆಸಿಸ್ಟಾಂಟ್ ಸರ್ಜನ್ ಡಾ. ಜಿ. ಐ ರೆಬೆಲ್ಲೋರವರು ಮದ್ರಾಸಿಗೆ ವರ್ಗಾಯಿಸಲ್ಪಟ್ಟಿರುವುದರಿಂದ ರಿಟೈಯರ್ಡ್ ಆಸಿಸ್ಟಾಂಟ್ ಸರ್ಜನರಾಗಿದ್ದ ಡಾ| ಪಿ ಕೆ ರಾಮನ್ ನಂಬಿಯಾರರು ಪುನಃ ಕಾಸರಗೋಡಿನ ಆ| ಸರ್ಜನರಾಗಿ ನೇಮಕಹೊಂದಿದ್ದಾರೆ

ಜಿಲ್ಲಾ ಬೋರ್ಡು ಅಧಿವೇಶನ

ತಾ ೩೧ನೇ ಶನಿವಾರ ಪ್ರಾತಃಕಾಲ ಗಂಟೆ ೧೧ಕ್ಕೆ ಜಿ ಬೋರ್ಡ್ ಅಧಿವೇಶನವು ಅದರ ಕಾರ್ಯಾಲಯದಲ್ಲಿ ಪ್ರೆಸಿಡೆಂಟ್ ಡಾ ಕೆ ವಿಠ್ಠಲ ಶೆಟ್ಟರ ಅಧ್ಯಕ್ಷತೆಯಲ್ಲಿ ಜರುಗಿತು ಬೋರ್ಡಿಗೆ ಹಾಜರಿಯ ದೆಸೆಯಿಂದ ಮೆಂಬರಿಕೆಯು ರದ್ದಾಗಿದ್ದ ಶ್ರೀಗಳಾದ ಎಂ ಮಹಾಲಿಂಗ ಶೆಟ್ಟಿ ಮತ್ತು ಸಿ. ಕೆ. ರಾಘವನ್ ನಂಬಿಯಾರರ ಮೆಂಬರಿಕೆಯನ್ನು ಅವರ ಅರಿಕೆಯಂತೆ ಊರ್ಜಿತಗೊಳಿಸಿ, ಬೈಂದೂರು ರಸ್ತೆಯನ್ನು ಮೈಸೂರು ಗಡಿಗಳ ವರೆಗೆ ವಿಸ್ತರಿಸಬೇಕೆಂಬ ಸುಮಾರು ೧೩ ಸಾವಿರ ಖರ್ಚಿನ ವಿಚಾರವನ್ನು ಸಂಬಂಧಪಟ್ಟ ಪಂಚಾಯತ್ ಬೋರ್ಡಿಗೆ ತಿಳಿಸಬೇಕೆಂದೂ, ಭಟ್ಕಳದ ಕಡೆಯಿಂದ ಪ್ಲೇಗ್ ಈ ಜಿಲ್ಲೆಗೆ ವ್ಯಾಪಿಸದಂತೆ, ತಾತ್ಕಾಲಿಕವಾದ ಒಂದು ಶಿಬಂದಿಯನ್ನು ಏರ್ಪಡಿಸಬೇಕೆಂದೂ, ಉಡ್ಪಿ ಬೋರ್ಡ್ ಹೈಸ್ಕೂಲಿನ ವಿಚಾರದಲ್ಲಿ ಸರಕಾರಕ್ಕೆ ಬರೆದುಕೊಳ್ಳುವುದೆಂದೂ ನಿರ್ಧಾರವಾಯಿತು ತಮ್ಮ ತಂದೆಯ ಹೆಸರಲ್ಲಿ ಬಡ್ಡಿಯ ಅಂಶದಿಂದ ಒಂದು ವಿದ್ಯಾರ್ಥಿ ವೇತನಕ್ಕಾಗಿ ಕಾರ್ಕಳ ಶ್ರೀ ಎನ್ ರಾಮಪ್ಪನವರು ದಾನಮಾಡಿದ ರೂ ೧೦೦೦ನ್ನು ಸ್ವೀಕರಿಸಿ, ಮೂಲ್ಕಿ ಉಡ್ಪಿ ಬೋರ್ಡ್ ಹೈಸ್ಕೂಲುಗಳಲ್ಲಿ ಸ್ವಲ್ಪಹೊತ್ತು ಕಲಿಸುವ ಹೊಲಿಗೆ ಮಿಸ್ಟ್ರೆಸುಗಳನ್ನೂ ಪಂಜ, ಸುಳ್ಯ, ಗುತ್ತಿಗಾರು ಪಕ್ಷಿ ಹಾ. ಎ. ಶಾಲೆಗಳಲ್ಲಿ, ಕೊಂಚ ಹೊತ್ತು, ಕಸುಬುಗಳನ್ನು ಕಲಿಸುವ ಉಪಾಧ್ಯಾಯರನ್ನೂ ನೇಮಿಸಬೇಕೆಂದಾಯಿತು ತೆರಿಗೆ ಅಪ್ಪಿಲ್ ಕಮಿಟಿಯ ಕೋರಮನ್ನು ಎರಡಕ್ಕೆ ಇಳಿಸಿ, ಕುಂದಾಪುರ ಕಾರ್ಕಳಗಳ ಹೊರತಾದ ಇತರ ಟ್ಯಾಕ್ಸ್ ಅಪೀಲ್ ಕಮಿಟಿಗೆ ಸದಸ್ಯರನ್ನು ಆರಿಸಲಾಯಿತು.

ಶ್ರೀ ಶರವು ಗಣೇಶ ವಾಚನಾ ಸಂಘ

ಮೇಲಿನ ಸಂಘದ ನಾಲ್ಕನೆಯ ವಾರ್ಷಿಕೋತ್ಸವವು ಇದೇ ಬರುವ ಎಪ್ರಿಲ್ ತಾ 5ನೆಯ ಆದಿತ್ಯವಾರ ಸಾಯಂಕಾಲ ಘಂಟೆ 5ಕ್ಕೆ ಶ್ರೀಮಾನ್ ಎಲ್. ಎಸ್ ಪಾರ್ಥಸಾರಥಿ ಅಯ್ಯರ ಅಧ್ಯಕ್ಷತೆಯಲ್ಲಿ ನಡೆಯಲಿರುವುದು ಬ್ರಹ್ಮಶ್ರೀ ಶರವು ಸುಬ್ಬಣ್ಣ ಶಾಸ್ತ್ರಿಗಳ ಭಾವಚಿತ್ರ ಅನಾವರಣವನ್ನು ಮಾಡಲಿರುವರು ಅನಂತರ ಮೈಸೂರು ಆಸ್ಥಾನ ವಿದ್ವಾನ್ ಗಾನಕೇಸರಿ ಶ್ರೀಮಾನ್ ದೇವೇಂದ್ರಪ್ಪನವರು ಮತ್ತು ಪಾರ್ಟಿ ಇವರ ಸಂಗೀತವೂ ನಡೆಯಲಿರುವುದು.

ಯಕ್ಷಗಾನ ಸಮಾರಂಭ

ಭಾರತಕಲೋಪಾಸಕ ಸಂರಕ್ಷಣೆಗಾಗಿ ಎಪ್ರಿಲ್ ತಾ. ೪ನೆಯ ಶನಿವಾರ ರಾತ್ರಿ ಗಂಟೆ ೯ರಿಂದ ೧೨॥ರ ವರೆಗೆ ಸ್ಥಳೀಯ ಗವರ್ನಮೆಂಟ್ ಕಾಲೇಜಿನಲ್ಲಿ ಶ್ರೀಮಾನ್ ಎಲ್. ಎಸ್. ಪಾರ್ಥಸಾರಥಿ ಅಯ್ಯರರ ನೇತೃತ್ವದಲ್ಲಿ ನಡೆಯಲಿರುವುದು. ಪ್ರಸಂಗ ಕರ್ಣನ ಪ್ರತಾಪ. ಭಾಗವತರು ಯಕ್ಷಗಾನ ರಕ್ಷ ಬಲಿಪ ನಾರಾಯಣ ಭಾಗವತರು, ಮೃದಂಗವಾದಕರು ಮೃದಂಗ ವಿಶಾರದ ಕೆಮ್ಮಣ್ಣು ನಾರ್ಣಪ್ಪಯ್ಯನವರು. ಪಾತ್ರವರ್ಗ- ಶ್ರೀ ಕೃಷ್ಣ ಯಕ್ಷಗಾನಾಚಾರ್ಯ ಅರ್ಕುಳ ಸುಬ್ರಾಯಚಾರಿಗಳು, ಅರ್ಜುನ—ಶ್ರೀಮಾನ್ ಪೊಳಲಿ ಶಂಕರನಾರಾಯಣ ಶಾಸ್ತ್ರಿಗಳು, ವಿದ್ವಾನ್. ಕರ್ಣ—ಕವಿಭೂಷಣ ಕೆ ಪಿ. ವೆಂಕಪ್ಪಶೆಟ್ಟರು, ಶಲ್ಯ—ಎಡ್ವೋಕೇಟ್ ಕೆ. ಬಾಲಕೃಷ್ಣರಾವ್, ಮತ್ತು ಇನ್ನಿತರರು.

ಶ್ರೀ ಬಾಲಮಾರುತಿ ವ್ಯಾಯಾಮ ಮಂಡಲ ಮಂಗಳೂರು

ಮಂಡಲದವರು ನಡಿಸಲಿರುವ ಶಿಕ್ಷಣ ಶಿಬಿರವು ಇದೇ ಎಪ್ರಿಲ್ ತಾ 16ರಿಂದ ಮೇ 16ರ ವರೆಗೆ ಎಂದು ತಿಳಿಸುತ್ತಾರೆ ಸದ್ರಿ ಶಿಬಿರಕ್ಕೆ ಸೇರಲಿಚ್ಛಿಸುವವರು ತಮ್ಮ ಎಪ್ಲಿಕೇಶನುಗಳನ್ನು ಫೀಸಿನೊಂದಿಗೆ (ರೂ ೧೦ನ್ನು) ಎಪ್ರಿಲ್ ತಾ ೧೨ರ ಒಳಗೆ ಮಂಡಲದ ಸೆಕ್ರೆಟರಿಗಳವರಿಗೆ ತಲುಪುವಂತೆ ರವಾನಿಸುವುದು

ಕೊಂಗ್ರೆಸ್ ಸದಸ್ಯರಾಗಿ ಸೇರಿರಿ ಜಿಲ್ಲೆಯ ಮಹಾಜನರಲ್ಲಿ ವಿನಂತಿ

ಕೊಂಗ್ರೆಸ್ ಪ್ರಾಥಮಿಕ ಸದಸ್ಯರನ್ನು ಸೇರಿಸುವ ಕಾರ್ಯವು ನಡೆದಿದೆ ಪ್ರತಿಯೊರ್ವ ದೇಶಾಭಿಮಾನಿಯು ಪ್ರಾಥಮಿಕ ಸದಸ್ಯನಾಗಿ ಸೇರುವನೆಂದು ನಂಬಲಾಗಿದೆ ಹೊಸತಾಗಿ ಪ್ರಾಥಮಿಕ ಸದಸ್ಯನಾಗಿ ಸೇರುವವರು ನಾಲ್ಕಾಣೆ ತೆತ್ತು ಸದಸ್ಯರಾಗಬಹುದು ಈ ಮೊದಲು ಸದಸ್ಯರಾಗಿದ್ದು, ಕಳೆದ ವರ್ಷ ಮಾತ್ರ ತಮ್ಮ ಸದಸ್ಯತನವನ್ನು ಮುಂದುವರಿಸದೆ ಇದ್ದವರು ಕಳೆದ ವರ್ಷದ (೧೯೪೧) ಸದಸ್ಯತನದ ವರ್ಗಣಿ ೦ ೪ ೦ ಮತ್ತು ಈ ವರ್ಷದ (೧೯೪೨) ವರ್ಗಣಿ ೦ ೪ ೦ ಹೀಗೆ ಎಂಟಾಣೆ ತೆತ್ತು ಸದಸ್ಯರಾಗಬೇಕಾಗಿದೆ ಹೀಗೆ ಎರಡು ವರ್ಷಕ್ಕೆ ವರ್ಗಣಿ ತೆತ್ತ ಬಗ್ಗೆ ಅವರಿಗೆ ಒಂದೇ ರಶೀದಿ ಕೊಡಲ್ಪಡುವುದು

ಸದಸ್ಯರನ್ನು ಸೇರಿಸುವ ಅವಧಿಯು ಇದೇ ಜೂನ್ ತಿಂಗಳಿಗೆ ಮುಗಿಯುವುದು ಆದಕಾರಣ, ಸದಸ್ಯರನ್ನು ಸೇರಿಸುವವರು ತ್ವರೆಯಿಂದ ಕಾರ್ಯ ಸಾಗಿಸಬೇಕಾಗಿದೆ ಸದಸ್ಯರಾಗಿ ಸೇರುವವರೂ ವಿಳಂಬಿಸದೆ ಕೊಂಗ್ರೆಸ್, ಕಾರ್ಯಕರ್ತರು ತಮ್ಮ ಬಳಿಗೆ ಬಂದಾಗ ಸೇರಬೇಕೆಂದು ಜಿ ಕಾ ಪ್ರ ಕಾರ್ಯದರ್ಶಿಯವರ ವಿನಂತಿ

ಬಂಟ್ವಾಳ

ಕಳೆದ ತಾ ೨೨ನೇ ರವಿವಾರ ಇಲ್ಲಿ ಸಮೀಪವಿರುವ ಕಂಚಕಾರ ಕುಟ್ಟಿ ಎಂಬಲ್ಲಿ ಒಬ್ಬನು ನೇಣುಹಾಕಿ ಆತ್ಮಹತ್ಯವನ್ನು ಮಾಡಿಕೊಂಡನೆಂದು ತಿಳಿದಿದೆ

ಕಂಬಳ ಬಂಟ್ವಾಳದ ಸಮೀಪ ಮಣಿಹಳ್ಳವೆಂಬಲ್ಲಿ ಕಂಬಳದ ಸ್ಪರ್ಧೆಯೊಂದು ಕಳೆದ ವಾರ ನಡೆಯಿತು ಸ್ಪರ್ಧೆಯಲ್ಲಿ ಮುಲ್ಕಿ ಬಜಪೆ ಮುಂತಾದ ಸ್ಥಳಗಳಿಂದ ಬಹಳ ಹೆಸರುಪಡೆದ ಕೋಣಗಳು ಒಂದು ಭಾಗವಹಿಸಿದ್ದವು ಅದರಲ್ಲಿ ಪ್ರಥಮ ಬಹುಮಾನವು ಅಮ್ಮುಂಬಳ ಕಾದ್ರಿಬ್ಯಾರಿಗಳ ಕೋಣಗಳಿಗೂ ದ್ವಿತೀಯ ಬಹುಮಾನವು ತೋಕ್ರು ಗುತ್ತಿನವರ ಕೋಣಗಳಿಗೂ ಸಿಕ್ಕಿದವು

ಪುತ್ತೂರು

ಬಾಲಾಂಜನೇಯ ವ್ಯಾಯಾಮ ಶಾಲೆಯ ಉದ್ಘಾಟನಾ ಸಮಾರಂಭವು ಶ್ರೀ ವೆಂಕಟ್ರಮಣ ದೇವಳದ ವಠಾರದಲ್ಲಿ ಶ್ರೀ ಗೋವಿಂದಾಚಾರ್ರ ಅಧ್ಯಕ್ಷತೆಯಲ್ಲಿ ಜರಗಿತು

ಗೌಡ ಸಾರಸ್ವತ ಸಂಘದ ನವವರ್ಷ ಮಹೋತ್ಸವವು

ಕಳೆದ ತಾ ೧೭ರಂದು ಸ್ಥಳೀಯ ವೆಂಕಟರಮಣ ದೇವಸ್ಥಾನದಲ್ಲಿ ಶ್ರೀ ಯಮ್ ಕೇಶವ ಪೈಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಮತಿ ಆನಂದಿ ಬಾಯಿ ಇವರು ಸ್ತ್ರೀಯರನ್ನು ಉದ್ದೇಶಿಸಿ ಭಾಷಣವಿತ್ತರು. ಶ್ರೀ. ಜಿ ಎಸ್. ಲಕ್ಷ್ಮಣ ಪೈ ಇವರಿಂದ ವರದಿ ವಾಚನವಾಯಿತು. ಅಧ್ಯಕ್ಷರ ಭಾಷಣವಾದ ಮೇಲೆ ಮುಂದಿನ ವರ್ಷದ ಕಾರ್ಯಕಾರಿ ಮಂಡಳಿಯ ಚುನಾವಣೆ ನಡೆಯಿತು.

ವರ್ಗಾವರ್ಗ

ಸ್ಥಳೀಯ ಪೋಲೀಸ್ ಸರ್ಕಲ್ ಇನ್ಸ್‌ಪೆಕ್ಟರ್ ಶ್ರೀ ಗಣೇಶ ಸುಂದರರಾಯರಿಗೆ ಮಂಗಳೂರಿಗೂ ಶ್ರೀ ಸಂಜೀವ ರಾಯರಿಗೆ ಇಲ್ಲಿಗೂ ವರ್ಗವಾಗಿದೆ

ಕಡಬ

ಇಲ್ಲಿಯ ಬೋ. ಹಾ ಎ. ಶಾಲಾ ವರ್ಧಂತ್ಯುತ್ಸವವು ತಾ ೧೩ ಮತ್ತು ೧೪ರಲ್ಲಿ ಶ್ರೀ ಹೊಸಬೆಟ್ಟು ರಾಮರಾವ್ ಅವರ ಅಧ್ಯಕ್ಷತೆಯಲ್ಲಿ ನಡೆಯಿತು

ಕಾಸರಗೋಡು

ವಾರ್ಷಿಕ ಪಂದ್ಯಾಟಗಳು

ಬೋರ್ಡು ಹೈಸ್ಕೂಲಿನ ವಿದ್ಯಾರ್ಥಿಗಳೊಳಗೆ ನಡೆದ ಪಂದ್ಯಾಟಗಳು ಕೊನೆಗೊಂಡವು ಬಹುಮಾನ ವಿತರಣೆಯನ್ನು ಶ್ರೀ ಎ ವಿ ಎನ್ ಮೆನೋನರು ಮಾಡಿದರು ಶ್ರೀ ಭವಾನಿಶಂಕರ ರಾಯರ ಮತ್ತು ಶ್ರೀ ಕುಮಾರನ್‌ರವರು ಮಾತಾಡಿದರು

ಉಡುಪಿ

ಕ್ರಿಶ್ಚಿಯನ್ ಹೈಸ್ಕೂಲ್ ಹೆಡ್ಮಾಸ್ತರರಿಗೆ ಮಾನಪತ್ರ

ಸ್ಥಳೀಯ ಕ್ರಿಶ್ಚಿಯನ್ ಹೈಸ್ಕೂಲಿನ ಹೆಡ್ಮಾಸ್ತರರಾಗಿರುವ ಶ್ರೀ ಎಸ್ ಜೆ ಕೌಂಡಿನ್ಯರವರು ಅಧ್ಯಾಪಕ ವೃತ್ತಿಯಿಂದ ನಿವೃತ್ತರಾಗಲಿರುವ ಕಾರಣ ಈ ಶಾಲೆಯ ವಿದ್ಯಾರ್ಥಿಗಳು ಕಳೆದ ೩೦-೧ರಲ್ಲಿ ಶ್ರೀಯುತರನ್ನು ಬೀಳ್ಕೊಡುವರೆ ವಿನಯ ಸತ್ಕಾರ ಕೂಟವೊಂದನ್ನು ಡಾ| ಪಿ ಜೆ ಆಚಾರ್ಯರ ಅಧ್ಯಕ್ಷತೆಯಲ್ಲಿ ಏರ್ಪಡಿಸಿದ್ದರು. ಶ್ರೀ ಕೌಂಡಿನ್ಯರಿಗೆ ವಿದ್ಯಾರ್ಥಿ ವೃಂದದ ಮಾನಪತ್ರವನ್ನು ಶ್ರೀ ಬಾಲಕೃಷ್ಣ ಸೆಟ್ಟರು ಅರ್ಪಿಸಿದರು ಗುರುಭಕ್ತಿ ಕಾಣಿಕೆಗಳು ಸಮರ್ಪಿಸಲ್ಪಟ್ಟ ತರುವಾಯ ಮಾನ್ಯ ಅತಿಥಿಯ ಹಾಗೂ ಮಾಜಿ ಹೆಡ್ಮಾಸ್ತರ್ ಶ್ರೀ ಸಾಲಿಸಯ್ಯನವರ ಭಾವಚಿತ್ರಗಳನ್ನು ಅಧ್ಯಕ್ಷರು ಅನಾವರಣ ಮಾಡಿದರು

ನಗರ ಸಭೆ

ಕಳೆದ ತಾ ೨೬ರಲ್ಲಿ ಸೇರಿದ ಉಡುಪಿ ನಗರ ಸಭೆಯಲ್ಲಿ ಜಿಲ್ಲಾ ಕೈಗಾರಿಕೆ ವಸ್ತು ಪ್ರದರ್ಶನದ ಖರ್ಚಿನ ಬಗ್ಗೆ ಧನಸಹಾಯವೀಯಬೇಕಾಗಿ ಕಲೆಕ್ಟರರು ಸೂಚಿಸಿದುದಕ್ಕೆ ವಿಷಾದ ಸೂಚಿಸಲಾಯಿತು ಮ್ಯುನಿಸಿಪಲ್ ನೌಕರರ ಪ್ರೊವಿಡೆಂಟ್ ಫಂಡನ್ನು ಮದ್ರಾಸ್ ಸೆಂಟ್ರಲ್ ಕೊ-ಆಪರೇಟಿವ್ ಲೇಂಡ್ ಮೋರ್ಗೇಜ್ ಬೇಂಕಿನ ಡಿಬೆಂಚರುಗಳಲ್ಲಿ ಠೇವಣಾತಿಯಾಗಿರಿಸುವರೆ ಬಹುಮತದ ಒಪ್ಪಿಗೆ ದೊರೆಯಿತು

ನೋಟೀಸು

ಕಾಸರಗೋಡು ತಾಲೂಕು ತೆಕ್ಕಿಲಗ್ರಾಮದ ಪರಂಬಿನಲ್ಲಿರುವ ಪುಲ್ಲಾಂಕೋಡಿ ವೃದ್ಧ ವೀಟಿಲ್ ಕುಂಞಂಬು ನಾಯರ ಅಳಿಯ ಮತ್ತು ಚಿರುದೈ ಅಂಬುವಿನ ಮಗ ಪಕ್ಕೀರ ಯಾನೆ ಕಣ್ಣನ್ನಾಯರನು ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನಂದ್ರೆ

ನಮ್ಮ ಪುಲ್ಲಾಂಕೋಡಿ ವೃದ್ಧವೀಟ್ಲ ತರ್ವಾಟಿನಲ್ಲಿ ಸುಮಾರು 80 ಜನ ಮೆಂಬರರು ಇರುತ್ತಾರೆ. ವೃದ್ಧಾಪ್ಯದವರಾದ ಈಗಿನ ತರ್ವಾಟು ಕಾರ್ಣವರ್ ಮಾಲಿಂಗುನ್ನಾಯರನ್ನು ವಶಸಂಚನೆಗೆ ಸೇರಿಸಿ ದುರ್ಬೋಧನೆಯಿಂದ ನಮ್ಮ ತರ್ವಾಡಿನ ಕೆಲವು ಜನ ಮೆಂಬರರು ಅವರ ಸ್ವಾರ್ಥಕ್ಕೆನೇ ಆಸ್ತಿ ಪರಾಧೀನ ಮಾಡಿಸುವ ಇರಾದೆಯಿಂದ ಇತ್ತಾಗೆ ರೂ. 60ಕ್ಕೆ ಕೂಕಳ ಚಂದನ್ನಾಯರ ಹೆಸರಿಗೆ ಬರೆದಿಟ್ಟ ದಸ್ತಾವೇಜು ಮತ್ತು ಇನ್ನು ಮುಂದೆ ಮಾಡಿಕಬಹುದಾದ ದಸ್ತಾವೇಜುಗಳೂ ಪರಾಧೀನಗಳೂ ನಮ್ಮ ತರ್ವಾಟು ಆಸ್ತಿಗೆ ಮತ್ತು ಇತರ ಮೆಂಬರರಿಗೆ ಬಾಧಿಸತಕ್ಕವುಗಳಲ್ಲವೆಂತಲೂ ನಮ್ಮ ತರ್ವಾಡಿನಿಂದ ಕೊಟ್ಟಿದೋಸ್ತು ತರ್ವಾಡಿಗೆ ಸಲತಕ್ಕ ಸಾಲಕೊರತು ಬೇರೇನೂ ಸಾಲವಿರುವುದಿಲ್ಲ ಈ ಸಾಲಗಳು ಮಾಡುವರೆ ಏನ್ನು ಮಾತ್ರವೂ ಅಗತ್ಯವಿಲ್ಲವೆಂತಲೂ ಈ ಮೂಲಕ ತಿಳಿಸೋಣಾಗುತ್ತದೆ

ತೆಕ್ಕಿಳಗ್ರಾಮದ ಪರಂಬು, ||| ಈ ಮೂರು ತಾ. 28-3-1942) ಗೆರೆ ಮತ್ತು ಎಡಕೈ ಹೆಬ್ಬೆಟ್ಟಿನ ಗುರ್ತು ಸದ್ರಿ ಪಕ್ಕೀರ ಯಾನೆ ಕಣಣ್ಣಾಯರನ ರುಜು

ಸಿನೆಮಾ ಪುಟ

ಸ್ಥಳೀಯ ಸಿನೆಮಾ

ಬಾಲಾಜಿಯಲ್ಲಿ 'ದಿ ಗ್ರೇಟ್ ಡಿಕ್ಟೇಟರ್'

• ಚಾರ್ಲಿ ಚಾಪ್ಲಿನ್ ದೃಶ್ಯ!

'ದಿ ಗ್ರೇಟ್ ಡಿಕ್ಟೇಟರ್' ಎಂದರೆ ಇಂದು ಜಗತ್ತೇ ಬಲ್ಲುದು ಸರ್ವಾಧಿಕಾರಿ ಹಿಟ್ಲರ್ ಎಂದು. ಅಂತಹ ಪ್ರಚಂಡ ಮೂರ್ತಿ ಹಿಟ್ಲರನನ್ನು ಪ್ರಸಿದ್ಧ ಹಾಸ್ಯಗಾರ ಚಾರ್ಲಿ ಚೇಪ್ಲಿನ್ ಹಾಸ್ಯಮಾಡಿದ ಈ ಚಿತ್ರವು ಸ್ಥಳೀಯ ಬಾಲಾಜಿ ಟಾಕೀಸಿನಲ್ಲಿ ಕಳೆದ ಶನಿವಾರದಿಂದ ಪ್ರದರ್ಶಿತವಾಗುತ್ತಿದೆ. ಬ್ರಿಟಿಷ್ ಪ್ರಚಾರದಂತೆ, ಹಿಟ್ಲರನು ಹೇಗೆ ಸಾಮಾನ್ಯ ವಿಲಕ್ಷಣಪುರುಷನಾಗಿರುವನೆಂದೂ, ಆತನು ನಾಜಿಸಮ್ಮಿನ ಹಿಡಿತದಲ್ಲಿ ಹೇಗೆ ಹುಚ್ಚನಂತೆ ಕುಣಿಯುತ್ತಿದ್ದಾನೆಂದೂ, ಆತನ ಆ ಹುಚ್ಚಿನಿಂದ ಲೋಕವು ಎಂತಹ ಅನ್ಯಾಯವನ್ನು ಅನುಭವಿಸುತ್ತದೆಂದೂ ಚಾರ್ಲಿ ಚಾಪ್ಲಿನ್ ಇದರಲ್ಲಿ ಚಿತ್ರಿಸುತ್ತಾನೆ. ಚಾರ್ಲಿ ಚಾಪ್ಲಿನನ ಹಾಸ್ಯವು ಪ್ರಪಂಚದ ಜನರನ್ನು ಬೆರಗುಗೊಳಿಸಿದೆ. ಆತನ ಹಾಸ್ಯಶಕ್ತಿಯು ಈ ಚಿತ್ರದಲ್ಲಿ ಅತ್ಯುಜ್ವಲವಾಗಿದೆ ಸರ್ವಾಧಿಕಾರಿಯಾಗಿ ಮಾತನಾಡುವ, ಸರ್ವಾಧಿಕಾರಿಯಾಗಿ ನಟಿಸುವ, ಆತನ ಅಂತರಂಗ, ಬಹಿರಂಗ ಜೀವನಗಳನ್ನು ನಿರೂಪಿಸುವ ಹಲವು ಹಾಸ್ಯ ಸನ್ನಿವೇಶಗಳು ನಗೆಯ ಕಡಲನ್ನು ಹುಟ್ಟಿಸುತ್ತವೆ. ಸರ್ವಾಧಿಕಾರಿ ಹಿಟ್ಲರ್ ಇಷ್ಟೊಂದು ಹುಚ್ಚನೋ ಎಂಬುದು ಆತನ ಸಮೀಪ ಪರಿಚಯವಿದ್ದವರು ಮಾತ್ರ ಹೇಳಬಲ್ಲರು. ಆದರೆ ಆತನು ಪ್ರಚಂಡ ಮೂರ್ತಿಯೆಂಬುದನ್ನು ಜಗತ್ತೇ ಬಲ್ಲುದು. ಆತನ ಪ್ರಚಂಡತೆಯೇ ಇಂದು ಜಗತ್ತಿಗೆ ಹುಚ್ಚಾಗಿ ಅನ್ಯಾಯವಾಗಿ ಪರಿಣಮಿಸಿದೆಯೆಂಬುದೂ ನಿರ್ವಿವಾದ. ಅಂತಹ ಕಲ್ಪನೆಯಿಂದ ಚಾರ್ಲಿ ಚಾಪ್ಲಿನ್ ಈ ಚಿತ್ರದಲ್ಲಿ 'ದಿ ಗ್ರೇಟ್ ಡಿಕ್ಟೇಟರ್' ಆಗಿ ನಟಿಸಿ ಜನರ ಮನಸ್ಸನ್ನು ರಂಜಿಸುತ್ತಾನೆ. ಚಾಪ್ಲಿನ್ ಈ ಚಿತ್ರದಲ್ಲಿ ಅತ್ಯುತ್ತಮವಾಗಿ ನಟಿಸುತ್ತಾನೆ.

ಮೋಹನ್ ಪಿಕ್ಚರ್ಸ್

'ತಾಜ್‌ಮಹಾಲ್' ಎಂಬ ಮುಗಲ್ ಇತಿಹಾಸ ಪ್ರಸಿದ್ಧ ಕಥಾಚಿತ್ರವು ಯಶಸ್ವಿಯಾಗಿ ಪ್ರದರ್ಶಿತವಾಗುತ್ತಿದೆ. 'ಜಮೀನ್ದಾರ್' 'ಜೀವಾರ್' 'ಸೂರ್‌ದಾಸ್' ಮತ್ತು ಸರೋವರ್-ಕೆ-ಸುಂದರಿ ಎಂಬೀ ಚಿತ್ರಗಳು ಅವರ ಮುಂದಿನ ಕಾರ್ಯಕ್ರಮಗಳು.

ಈಸ್ಟರ್ನ್ ಪಿಕ್ಚರ್ಸ್

ಇವರು 'ಬಾದಲ್' ಚಿತ್ರವನ್ನು, ರಾಧಾರಾಣಿ, ಊರ್ಮಿಳಾ, ಜಾಹುರ್‌ರಾಜಾ ಇವರ ನಟನೆಯಿಂದ ತಯಾರಿಸಿದ್ದಾರೆ 'ಹಸ್ತಿ' ಮತ್ತು 'ಖಿಯ್ಯಮತ್' ಎಂಬುದು ಅವರ ಮುಂದಿನ ಚಿತ್ರಗಳು.

ವೀಣಾಸ್ ಪಿಕ್ಚರ್ಸ್

ಇವರ 'ಕೀರ್ತಿ' ಪ್ರದರ್ಶನಕ್ಕೆ ತಯಾರಾಗಿದೆ ಶ್ರೀ. ಎಂ ಜಿ. ರಂಗ್ನೇಕರರ ಕಥೆಯಿದು ನಿರ್ದೇಶಕ ಗುಂಜಾಲ್ ಅವರ ಮುಂದಿನ ಚಿತ್ರ 'ನಾರಿ'

ಭಾರತ್ ಪಿಕ್ಚರ್ಸ್

ಇವರ 'ದರ್ಪಣ' ಮತ್ತು 'ಸ್ವಾಮಿನಾಥ' ಚಿತ್ರಗಳು ಬೇಗನೇ ಪ್ರದರ್ಶಿತವಾಗುವವು. ಇವೆರಡೂ ಸಾಮಾಜಿಕ

ಅಮರ್ ಪಿಕ್ಚರ್ಸ್

ಇವರ 'ಜಿಲ್ಲೋನಾ' ಇದು ಸುರೇಂದ್ರ ದೇಸಾಯಿಯವರ ನೇತೃತ್ವದಿಂದ, ಸ್ನೇಹಪ್ರಭಾ, ಜಯರಾಜರ ನಟನೆಯಿಂದ ಪ್ರಸಿದ್ಧವಾಗಿದೆ. ಪ್ರಭಾ, ಕನ್ಯಾಲಾಲ್ ಇವರೂ ಇದ್ದಾರೆ. ಸರ್ವೋತ್ತಮ ಬಾದಾಮಿಯವರ ನಿರ್ದೇಶಕತ್ವ. ಸರ್ವೋತ್ತಮ ಬಾದಾಮಿ ಕನ್ನಡಿಗರು.

ತಾಜ್‌ಮಹಾಲ್ ಪಿಕ್ಚರ್ಸ್.

ಇವರ ಪ್ರಥಮ ಚಿತ್ರ 'ಉಜಾಲಾ' ನಾಸೀಮಳ ಅದ್ಭುತ ಅಭಿನಯದಿಂದ ಕೂಡಿದೆ. 'ಉಜಾಲಾ' ಇಷ್ಟರಲ್ಲಿಯೇ ಜನಪ್ರಿಯವಾಗಿರುವುದು. 'ಭಾರತ್' ಎಂಬುದು ಅವರ ಮುಂದಿನ ಚಿತ್ರ.

ಶಾಲಿಮಾರ್ ಪಿಕ್ಚರ್ಸ್

ಇವರ 'ಏಕ್ ರಾತ್' ಜನಪ್ರಿಯವಾಗಿದೆ. ಇದರ ನಿರ್ದೇಶಕರು ಡಬ್ಲ್ಯು. ಝಡ್. ಅಹಮ್ಮದ್. ನೀನಾ ಪೃಥ್ವಿರಾಜರ ಜೊತೆ ಅಭಿನಯ. ನೀನಾ ಹೊಸ ತಾರೆ.

ಜಾನಕ್ ಪಿಕ್ಚರ್ಸ್

ಇವರ 'ರಾಯಿಸಾಹೇಬ್' ಚಿತ್ರವನ್ನು ನಿರ್ದೇಶಕ ಚತುರ್ಭುಜ ದೇಸಾಯಿಯವರು ತಯಾರಿಸುತ್ತಾರೆ. ಜಗದೀಶ್ ಶೆಟಿ, ಕೌಸಲ್ಯಾ, ರತನ್‌ಬಾಯಿ, ತ್ರಿಲೋಕ್ ಕಾಪೂರ್ ಮೊದಲಾದವರು ಇದರಲ್ಲಿ ಅಭಿನಯಿಸುವರು.

ರಶ್ಯದಲ್ಲಿ ಸಿನೆಮಕಲೆ

ಹಿಂದೂದೇಶದಲ್ಲಿ ಒಟ್ಟು ೧೫೦೦ ಸಿನೆಮ ಮಂದಿರಗಳಿವೆ ರಶ್ಯದಲ್ಲಿ ೧೬೦೦ ಸಿನೆಮಾ ಮಂದಿರಗಳಿರುವವು, ಇದು ಮಾತ್ರವಲ್ಲದೆ ಅಲ್ಲಿನ ಶಾಲೆಗಳಲ್ಲಿ ವಿಶೇಷ ಸಿನೆಮ ಪ್ರದರ್ಶನವಿದೆ. ಕಳೆದ ಮೂರು ವರ್ಷಗಳಲ್ಲಿ ೫೧,೦೦೦ ಸಿನೆಮ ಮಂದಿರಗಳು ಹೆಚ್ಚಿದವು. ಇದರೊಡನೆ ೪೦.೫೦ ಸಾವಿರ ಸ್ಟೇಂಡಾರ್ಡ್ ಸಿನೆಮಾ ಯಂತ್ರಗಳು ಹಳ್ಳಿಗಳಲ್ಲಿ ಪ್ರಚಾರವಿವೆ. ೧೯೩೫ರಲ್ಲಿ ೯೫.೪ ಕೋಟಿ ಜನರೂ, ೧೯೪೦ರಲ್ಲಿ ೨೭೦ ಕೋಟಿ ಜನರೂ, ಅಲ್ಲಿ ಸಿನೆಮಾ ನೋಡಿರುವರೆಂದು ತಿಳಿದಿದೆ. ಈಗಿನ ಯುದ್ಧ ನಡೆಯುತ್ತಿದ್ದರೂ ೧೫೪ ಕೋಟಿ ಅಡಿಗಳಷ್ಟು ಫಿಲ್ಮ್ ತಯಾರಿಕೆ ೧೯೪೨ರಲ್ಲಿ ಆಗಿದೆ ರಶ್ಯದಲ್ಲಿ ಎಷ್ಟರ ಮಟ್ಟಿಗೆ ಸಿನೆಮಾ ಪ್ರಚಾರದಲ್ಲಿದೆಯೆಂಬುದಕ್ಕೆ ಇದೇ ಸಾಕಷ್ಟು ನಿದರ್ಶನ. ಸೋವಿಯಟ್ ಸರಕಾರದವರು ಕೈಕೊಳ್ಳುವ ಪಾಂಚವರ್ಷಿಕ ಯೋಜನೆಯಲ್ಲಿ ಸಿನೆಮಾಭಿವೃದ್ಧಿಯ ಯೋಜನೆಯೂ ಒಂದಾಗಿದೆ. ೧೯೩೪ರ ಮೊದಲು ಸಿನೆಮಕ್ಕೆ ಬೇಕಾದ ಎಲ್ಲಾ ಸಾಮಗ್ರಿಗಳೂ ಹೊರದೇಶದಿಂದ ಬರಬೇಕಿತ್ತು; ಈಗ ಎಲ್ಲಾ ಅಲ್ಲೇ ಆಗುತ್ತಿದೆ ಅಲ್ಲಿನ ಶಬ್ದಗ್ರಹಣ ಸ್ವರೂಪವೇ ಬೇರೆ ವಿನ್ಯಾಸ ಕ್ರಮ ವಿಶಿಷ್ಟ. ಕೆಮರಾ ಚಮತ್ಕಾರ ಅದ್ಭುತ, ರಶ್ಯದ ಜನಜೀವನವೇ ವಿಶಿಷ್ಟವಾಗಿದ್ದು ಅಲ್ಲಿಗೆ ಅದು ಅನುರೂಪವಾಗಿದೆ ಸಿನೆಮಾ ಪ್ರದರ್ಶನವನ್ನು ಕೇವಲ ಮನೋರಂಜನೆಗಲ್ಲದೆ ವಿಷಯ ಬೋಧನೆಗೂ ಉಪಯೋಗಿಸುತ್ತಾರೆ. ಅಲ್ಲಿನ ಎಲ್ಲರ ಭಾಷೆ ರಶ್ಯವಲ್ಲದ್ದರಿಂದ, ಯುಕ್ರೇನ್, ಬೆಲರಶ್ಯ, ಜಾರ್ಜಿಯ, ಅರ್ಮೇನಿಯ, ಆಜರ್ ಬೈಜಾನ್, ತಜಿಕ್‌ಸ್ತಾನ್ ಮುಂತಾದ ಪ್ರಾಂತಭಾಷೆಗಳಲ್ಲಿಯೂ ಚಿತ್ರ ತಯಾರಾಗುತ್ತದೆ ಸಿನೆಮಾ ಕೈಗಾರಿಕೆಗೆ ಸಂಬಂಧಪಟ್ಟ ಒಂದು ಕಾಲೇಜು ಇದೆ. ಅಲ್ಲಿ ಬೋಧನೆ, ಪರಿಶೋಧನೆಗಳೂ ಆಗುತ್ತವೆ.

ಅಮೇರಿಕದಲ್ಲಿ ಭಾರತ ಚಿತ್ರಗಳು

ರಡ್ಯಾರ್ಡ್ ಕಿಪ್ಲಿಂಗರ ಜಂಗಲ್ ಪಿಕ್ಚರ್ಸ್‌ಗಳನ್ನು ನೋಡಿದ ಪಾಶ್ಚಾತ್ಯರಿಗೆ ಭಾರತೀಯರು ಕಾಡುಜನಗಳೆಂಬ ಭಾವನೆಯುಂಟಾಗುವುದು. ಆದರೆ ಇತ್ತೀಚೆಗೆ ಕಂಗನ್, ಜ್ಞಾನೇಶ್ವರ್, ಅಧ್ಯಚಿತ್ರಗಳನ್ನು ಕಂಡ ಅಮೇರಿಕನರು ಭಾರತದ ನಿಜಸ್ವರೂಪವನ್ನು ತಿಳಕೊಂಡಿರುವರು, ಆದ್ದರಿಂದ ಅಂತಹ ಹೆಚ್ಚು ಚಿತ್ರಗಳನ್ನು ಹೊರದೇಶಗಳಿಗೆ ಕಳುಹಿಸಿ ಎಂಬುದಾಗಿ ಹಾಲಿವುಡ್ಡಿನಿಂದ ಶ್ರೀ। ರಾಮ ಬಾಗೇಯಿಯವರು ಬರೆಯುತ್ತಾರೆ

ಗ್ರೇಟಾ ಗಾರ್ಬೋ

ಇದುವರೆಗೆ ಇಪ್ಪತ್ತೈದು ಚಿತ್ರಗಳಲ್ಲಿ ಪಾತ್ರವಹಿಸಿದ್ದಾಳೆ. ಆಕೆಯ ಇಪ್ಪತ್ತೈದನೆಯ ಚಿತ್ರ 'ದಿ ಟು ಫೇಸ್ಡ್ ವುಮನ್ ಎಂಬುದು

ಅಣ್ಣನು ತಮ್ಮನೊಡನೆ?

ಶಾಂತಾರಾಮ್—ವಿನಾಯಕ್

ಶಾಂತಾರಾಮರ ವಿಷಯ ಇತ್ತೀಚೆಗೆ ಹಲವು ಸುದ್ದಿಗಳು ಹುಟ್ಟಿವೆ, ಅವುಗಳಲ್ಲಿ ಒಂದು ಅವರು ವಿನಾಯಕರ ನವಯುಗ ಚಿತ್ರಪಟಕ್ಕೆ ಸೇರುತ್ತಾರೆಂಬುದು; ಶಾಂತಾರಾಮ್ ಮತ್ತು ವಿನಾಯಕರು ಸೋದರ ಸಂಬಂಧದವರು.

ಒಂದು ಭಾರತೀಯ "ಕಾರ್ಟೂನ್ ಪಿಕ್ಚರ್"

ಎಸ್. ಎ. ಅಜೀಜ್ ಮತ್ತು ಎಸ್. ಜಂಗ್ ಬಾರಿಯವರು 'ತೀಸ್ಮಾರ್‌ಖಾನ್' ಎಂಬ ಕಾರ್ಟೂನ್ ಚಿತ್ರವನ್ನು ತಯಾರಿಸಿದ್ದಾರೆ. ಚಲಚ್ಚಿತ್ರ ಪ್ರದರ್ಶಕರು ವಿದೇಶೀಯ 'ಮಿಕ್ಕಿ ಮೌಸ್' ಚಿತ್ರಗಳಿಗೆ ಮಾತ್ರ ಪ್ರೋತ್ಸಾಹ ಕೊಡುವುದಲ್ಲದೆ ಇಂತಹ ಭಾರತೀಯ ಚಿತ್ರಗಳನ್ನು ಯಾಕೆ ಪ್ರೋತ್ಸಾಹಿಸುವುದಿಲ್ಲವೋ ತಿಳಿಯದು.

ನಿಮ್ಮ ಮಗುವಿನ ಮೈ ಚರ್ಮವು ಎಷ್ಟು ಕೋಮಲವಾದುದೆಂದರೆ ಕೇವಲ ಅತ್ಯಂತ ಸೂಕ್ಷ್ಮವಾದ ಮತ್ತು ಉತ್ಕೃಷ್ಟವಾದ ಪೌಡರು ಮಾತ್ರವೇ ಅದಕ್ಕೆ ತಕ್ಕುದಾಗಿದೆ. ಕುಟಿಕೂರಾ ಟಾಲ್ಕಮ್ ಪೌಡರು (Cuticura Talcum) ಬಹಳ ಸೂಕ್ಷ್ಮವಾದದ್ದು ಮಾತ್ರವಲ್ಲದೆ ಶೇಕಡಾ ಪತ್ತರಷ್ಟು ಶುದ್ಧವಾದದ್ದು ಮತ್ತು ಸೌಮ್ಯ ತರದಲ್ಲಿ ಸ್ವೀಕರಿಸಲ್ಪಟ್ಟದ್ದು. ಮಗುವಿನ ಕೋಮಲವಾದ ಮೈಯ ಚರ್ಮವನ್ನು ಬಹಳ ಸ್ವಚ್ಛವಾಗಿಯೂ ನುಣುಪಾಗಿಯೂ ಮಾಡುತ್ತದೆ. ಸ್ನಾನವಾದ ಕೂಡಲೆ ಮಗುವಿನ ಮೈಗೆ ಇದನ್ನು ಹಾಗಿದರೆ ಚರ್ಮವ್ಯಾಧಿಗಳ ರೋಗಾಣುಗಳು ಮಗುವಿನ ಚರ್ಮವನ್ನು ಸೇರದಂತೆ ರಕ್ಷಿಸುತ್ತದೆ

ಇಡೀ ಜಗತ್ತಿನಲ್ಲಿ ಡಾಕ್ಟರರೂ, ನರ್ಸುಗಳೂ ಕುಟಿಕೂರಾ ಪೌಡರು (cuticura Talcum) ಮಗುವಿನ ಕೋಮಲವಾದ ಚರ್ಮಕ್ಕೆ ಉತ್ತಮವಾದುದೆಂದು ಶಿಫಾರಸು ಮಾಡುತ್ತಿದ್ದಾರೆ. ಹೆಂಗಸರು ಕೂಡಾ ಸ್ನಾನವಾದ ಕೂಡಲೇ ಇದನ್ನು ಹಚ್ಚಲು ಸಂತೋಷಪಡುತ್ತಾರೆ. ಇದು ಬೆವರನ್ನು ಎಳಕೊಳ್ಳುತ್ತದೆ ಮತ್ತು ಚರ್ಮವನ್ನು ನುಣುಪಾಗಿಯೂ ಪರಿಮಳಯುಕ್ತವಾಗಿಯೂ ಇಡುವುದು. ನಿಮ್ಮ ಕೆಮಿಸ್ಟರಿಂದ ಇದನ್ನು ಇಂದೇ ಕೊಂಡುಕೊಳ್ಳಿರಿ.

ಮಕ್ಕಳಿಗೆ ಉಪಯುಕ್ತವಾದದ್ದು

ಕುಟಿಕೂರಾ ಟಾಲ್ಕಂ ಪೌಡರು

CUTICURA TALCUM

MONEY TO LEND

Over Forty Lacs of idle funds are awaiting investment in the shape of loans on gold, Government securities, shares of approved companies, life insurance policies having sufficient surrender value, grains and other agricultural produce, etc., etc., You are cordially invited to utilize these facilities.

CANARA BANK, LIMITED.

ESTD. 1906.

ಆಚಾರ್ಯ ಪ್ರಾಡಕ್ಶನ್

ಇವರು 'ಬ್ರಹ್ಮಚಾರೀ ಪಿತ' ಎಂಬ ಸಾಮಾಜಿಕ ಕಥೆ ತಯಾರಿಸುವರು. 'ಬಂಧನ್' 'ಕಂಗನ್' ಖ್ಯಾತಿಯ ನಿರ್ದೇಶಕ ಎನ್. ಆರ್. ಆಚಾರ್ಯರು ತಮ್ಮದೇ ಆದ ಕಂಪನಿಯಲ್ಲಿ ಹೇಗೆ ನಿರ್ದೇಶಿಸುತ್ತಾರೋ ನೋಡಬೇಕು. ಕಿಶೋರ್ ಸಾಹು, ಪ್ರತಿಮಾದಾಸ ಗುಪ್ತೆ ಇವರು ಆ ಚಿತ್ರದಲ್ಲಿ ಅಭಿನಯಿಸುವರು.

ಸ್ವದೇಶಾಭಿಮಾನಿಗೆ ಜಾಹೀರಾತು ಕೊಡಿರಿ

ರೈಲು ಬಂಡಿಗಳ ಸಮಯ

ಇದೇ ಜುಲೈ ತಾ. 1೦ದ ವ್ಯತ್ಯಾಸವಾದ ರೈಲು ಬಂಡಿಗಳ ಸಮಯಗಳು ಈ ಕೆಳಗಿನಂತಿವೆ—

ಗಾಡಿಗಳು	ಹೊರಡುವ ಗಂಟೆ	ತಲ್ಪುವ ಗಂಟೆ
ಗೂಡ್ಸು ಬಂಡಿ	3.45 ರಾತ್ರಿ	9.25 ರಾತ್ರಿ
ಮಲಬಾರು ಎಕ್ಸ್‌ಪ್ರೆಸ್ (ಮೈಲ್)	9.5 ಬೆಳಿಗ್ಗೆ	5.15 ಸಾಯಂ.
ಜಾಲಾರ್ ಪೇಟೆ ಪೆಸೆಂಜರ್	12.0 ಮಧ್ಯಾಹ್ನ	2.55 ಸಾಯಂ.
ಕಣ್ಣನ್ನೂರು ವರೆಗೆ	೬.೬೨ ಸಾಯಂ.	9.40 ಪೂರ್ವಾಹ್ನ

ವಿಚಿತ್ರ ಪ್ರಪಂಚ

'ಡರ್ಬನ್' ಉದ್ಯಾನದಲ್ಲಿ ಭಾರತೀಯರಿಗೆ ಪ್ರವೇಶವಿಲ್ಲ

ಎಂಬುದಾಗಿ ತಿಳಿದಿದೆ. ಇದರ ವಿಷಯ ಕಾಂಗ್ರೆಸು ಅಲ್ಲಿನ ಅಧಿಕಾರಿಗಳಿಗೆ ಒಂದು ಪತ್ರ ಬರೆದು, ತನ್ನ ನಿಷೇಧವನ್ನು ವ್ಯಕ್ತಪಡಿಸುತ್ತಿರುವುದು. 'ನಿಮ್ಮ ದೇಶದಲ್ಲಿ ಈ ರೀತಿ ನಮ್ಮ ದೇಶೀಯರ ವಿಷಯವಾಗಿ ದ್ವೇಷ ತಾತ್ಸಾರ ಭಾವಗಳು ಇನ್ನೂ ಇರುವಾಗ, ನಾವು ಯುದ್ಧಯತ್ನಕ್ಕೆ ಸಹಾಯಮಾಡಬೇಕೆಂದು ಕೇಳುತ್ತೀರಲ್ಲಾ, ಇದು ಯಾವ ಮುಖದಿಂದ' ಎಂದು ಆ ಪತ್ರದಲ್ಲಿ ಬರೆಯಲಾಗಿದೆ. ಡರ್ಬನ್‌ನ ಉದ್ಯಾನವು ಸಾರ್ವಜನಿಕ ಉದ್ಯಾನವಾಗಿದ್ದು ಅತ್ಯಂತ ಸುಂದರ ಪ್ರದೇಶವಾಗಿರುವುದರಿಂದ ಅಲ್ಲಿ ಜಾತಿ ಮತ ಭೇದವಿಲ್ಲದೆ ಎಲ್ಲರಿಗೂ ಪ್ರವೇಶ ಕೊಡಬೇಕಾದದ್ದು ನ್ಯಾಯವಾಗಿದೆ. ಉದ್ಯಾನಕ್ಕೆ ಹೋದ ಭಾರತೀಯರು ಅಲ್ಲಿ ತ್ರಪ್ತರಾದದಿಂದ ವರ್ತಿಸುವರೆಂದಾದರೆ ನಾವು ಅವರನ್ನು ಖಂಡಿಸುತ್ತೇವೆ, ನಿಂದಿಸುತ್ತೇವೆ. ಆದರೆ ಭಾರತೀಯ ವರ್ಗಕ್ಕೇ ಅಲ್ಲಿಗೆ ಹೋಗಲು ಅಧಿಕಾರವಿಲ್ಲವೆಂದರೆ ಅದು ದೊಡ್ಡ ಅಪಮಾನ, ರಾಷ್ಟ್ರಕ್ಕೆ ಮಾಡಿದ ಅಪಮಾನ, ಇಂತಹ ಕೆಲಸಗಳಿಂದ ಅನ್ಯೋನ್ಯ ವೈಷಮ್ಯವೇ ಬೆಳೆದೀತು' ಎಂದು ಆ ಪತ್ರದಲ್ಲಿ ಎಚ್ಚರಿಸಲಾಗಿದೆ. ಇಪ್ಪತ್ತನೆಯ ಶತಮಾನದಲ್ಲಿ, ಯುದ್ಧದ ಬಿಸಿಯನ್ನು ಪಡೆಯುತ್ತಿರುವಾಗಲೂ ಕೂಡಾ, ಹಿಂದೀಯರ ಮೇಲಿನ ವಿದ್ವೇಷ ಇಳಿಯಲಿಲ್ಲವೆ?

ಜಪಾನಿನ ಬಾಂಬರುಗಳನ್ನು ಅಮೇರಿಕದ ಮಾದರಿ

ಯಾಗಿ ಮಾಡಲು ಜಪಾನೀಯರು ಬಹಳ ಪ್ರಯತ್ನಿಸುತ್ತಿರುವರಂತೆ. ಅದರ ಸಲುವಾಗಿ ಹೊಸ ಹೊಸ 'ಡಿಸೈನ್' ತಯಾರಿಸುತ್ತಿರುವರೆಂದೂ ತಿಳಿದಿದೆ. ಹಲವು ವರ್ಷಗಳ ಹಿಂದೆ ದೂರ ದೇಶಕ್ಕೆ ಬಾಂಬು ಹೊಡೆವ ಬಾಂಬರುಗಳನ್ನು ತಯಾರಿಸುವರೆ, ಜಪಾನು ಆಲೋಚನೆ ಮಾಡುತ್ತಲೇ ಇತ್ತು. ಆ ಮೇಲೆ ಗುಪಿತದಿಂದ ಅಮೆರಿಕದ ಕಂಪನಿಯಿಂದ ಕಲಿತುಕೊಂಡು ಜಪಾನೀಯರು ಈಗ ತಯಾರುಮಾಡಿದರು. ಆದರೆ ತಯಾರುಮಾಡಿದ್ದೆ ಬಂತಲ್ಲದೆ ಹೊಸ ಬಾಂಬರಿನ ಎಂಜಿನು ಹಿಂದಿನದಕ್ಕಿಂತಲೂ ದ್ವಿಗುಣ ಭಾರವುಳ್ಳದ್ದಾಯಿತು. ಹಾಗಾಗಿ ಅವರು ಹಿಂದಿನ ತಮ್ಮ ಮಾದರಿಯ ಬಾಂಬರುಗಳನ್ನೇ ಉಪಯೋಗಿಸುತ್ತಿದ್ದಾರೆ ಎಂದು ಲಂಡನ್ ಪತ್ರಿಕೆಯೊಂದು ಬರೆಯುತ್ತದೆ.

ದಾರಿ ಬಿಟ್ಟು ಹೋಗು

ರಾಜರೊಡನೆ ಗಣಿಹುಡುಗಿ ಹೇಳಿದಳು

ಇತ್ತೀಚೆಗೆ ಬ್ರಿಟಿಷ್ ರಾಜರು, ರಾಣಿಯೊಡನೆ ದಕ್ಷಿಣ ವೇಲ್ಸಿನಲ್ಲಿ ನಡೆದುಕೊಂಡು ಹೋಗುತ್ತಿರುವಾಗ, ಒಬ್ಬ ಗಣಿಗಾರನ ಮಗಳು, ಬಹಳ ಚಿಕ್ಕವಳು, ತನ್ನ ಆಟದ ಬೊಂಬೆಯನ್ನು ಎಳೆಕೊಂಡು ಬರುತಿದ್ದು, ದಾರಿಗೆ ಅಡ್ಡಬರುವ ರಾಜರನ್ನು, ದಾರಿ ಬಿಟ್ಟು ತೊಲಗು ಎಂದು ಹೇಳಿದಳು. ರಾಣಿ ನಕ್ಕುಬಿಟ್ಟರು'

ಅಲ್ಲಿ ಎಲ್ಲರೂ ಭಾರತ ದ್ವೇಷಿಗಳು

ಪ್ರಸಿದ್ಧ ಬ್ರಿಟಿಷ್ ಪತ್ರಿಕೋದ್ಯಮಿ ಹೇನೆನ್ ಸ್ವಾಫರ್ ಎಂಬುವರು 'ಯುದ್ಧದ ಕೆಲವು ವಿಚಿತ್ರ ಸುದ್ದಿಗಳು' ಎಂಬ ಲೇಖನದಲ್ಲಿ ಈ ಕೆಳಗಿನ ವಿಷಯವೊಂದನ್ನು ವಿವರಿಸುತ್ತಾರೆ.

'ಪಶ್ಚಿಮ ಇಂಗ್ಲೆಂಡಿನಲ್ಲಿ ಓರ್ವ ಭಾರತೀಯ ವ್ಯಾಪಾರಿಯು ಮನೆವಸ್ತುಗಳನ್ನು ಪರೀಕ್ಷಿಸಲು ಹೋಗಿದ್ದನು. ಒಂದು ಸಣ್ಣ ಕೋರ್ನಿಷ್ ಪಟ್ಟಣದಲ್ಲಿ ಆತನಿಗೆ ಉಳಕೊಳ್ಳಲು ಕೋಣೆಯೇ ಸಿಗಲಿಲ್ಲ. ಅಲ್ಲಿನ ಯಾವನೇ ಒಬ್ಬನಾದರೂ ಭಾರತೀಯನನ್ನು ಒಳಗೆ ಬರಬಿಡಲಾರನು. ಅಲ್ಲಿನ ಪಾದ್ರಿಯು ಆತನೊಡನೆ ಹೇಳಿದ 'ಇಲ್ಲಿರುವ ಪ್ರತಿಯೊಬ್ಬನೂ ಭಾರತ ದ್ವೇಷಿ' ಎಂದು. ಆದ್ದರಿಂದ ಆತನು ರಾತ್ರಿ ಹೊತ್ತನ್ನೆಲ್ಲಾ ನಿದ್ದೆಯಿಲ್ಲ ಸ್ಟೇಶನಿನಲ್ಲಿಯೇ ಕಳೆಯಬೇಕಾಯಿತು. ಬಹಳ ಸಿಟ್ಟುಗೊಂಡು ಆತನು ಹೇಳಿದನು: 'ನಿಮಗೆ ಸಹಾಯಮಾಡಬೇಕೆಂದು ನೀವು ಭಾರತೀಯರೊಡನೆ ಕೇಳುವುದು ಎಂತಹ ಔದ್ಧತ್ಯ' ಎಂದು.

'ಪಿನಾಂಗಿ'ಗೆ ಟೋಗೋ ನಾಮಕರಣ

ಸಿಂಗಾಪುರವನ್ನು ಜಪಾನರು ಸ್ವಾಧೀನ ಮಾಡಿಕೊಂಡ ಮೇಲೆ ಅದಕ್ಕೆ 'ಶೋನಾನ್' ಎಂದು ಹೊಸ ಹೆಸರಿಟ್ಟರಷ್ಟೆ? ಈಗ 'ಪಿನಾಂಗ್'ನ್ನು ಸ್ವಾಧೀನಮಾಡಿಕೊಂಡಿದ್ದಾರೆ. ಅದಕ್ಕೂ ಹೊಸ ಹೆಸರಿಟ್ಟಿರುವರು, ಟೋಗೊ ದ್ವೀಪ ಎಂಬುದು ಈಗಿನ ಅದರ ಹೆಸರು. ಹೊಸಬರು ಸ್ವಾಧೀನಮಾಡಿದ ಕುರುಹಾಗಿ ದೇಶಗಳಿಗೆ ಹೊಸ ಹೆಸರು ಬರಬೇಕೆ? ಹಿಂದುಸ್ತಾನವು ಆಂಗ್ಲೇಯರ ಕೈಯ್ಯಲ್ಲಿ 'ಇಂಡಿಯಾ' ಆಗಿದೆಯಷ್ಟೆ?

ಕೇಳಲಿಕ್ಕೆ ಸಾಧ್ಯವಿಲ್ಲದಷ್ಟು ಗಟ್ಟಿ ಸ್ವರ

ಸ್ವರವನ್ನು ಕೇಳಲಿಕ್ಕೆ ಸಾಧ್ಯವಿಲ್ಲದಷ್ಟು ಗಟ್ಟಿಯಾಗುವುದು ಸಾಧ್ಯವೆ? ಇತ್ತೀಚೆಗೆ ಆಗುತ್ತಿರುವ ವಿಮಾನಧಾಳಿಯಿಂದ ಅಂತಹ ಅನುಭವವಾಗುತ್ತಿದೆ. ಕೇವಲ ೨೦೦ಯಾರ್ಡುಗಳ ದೂರದಲ್ಲಿ ಸಿಡಿದ ಬಾಂಬಿನ ಶಬ್ದವನ್ನಾದರೂ ಜನರು ಕೇಳಲಿಲ್ಲವಂತೆ! ಏಕೆಂದರೆ ಆ ಸ್ವರವು ಕಿವಿಗೆ ಕೇಳಲು ಅಸಾಧ್ಯವಿರುವಷ್ಟು ಗಟ್ಟಿಯಿರಬೇಕು. ಈ ವಿಷಯ ಸ್ಪೆಶಲಿಸ್ಟರು ಸಂಶೋಧನೆ ನಡೆಸುತ್ತಿದ್ದಾರೆ. ಮನುಷ್ಯನ ಕಿವಿಗೆ ಕೇಳದಷ್ಟು ಗಟ್ಟಿಯಾಗಿ ಸ್ವರ ಹುಟ್ಟುವುದುಂಟೇ ಎಂಬುದು ಅವರ ಸಂದೇಹವಾಗಿದೆ. ಇತ್ತೀಚೆಗೆ, ಸ್ವರವು ವಿಶೇಷ ಗಟ್ಟಿಯಾದರೆ ಕೇಳುವುದಿಲ್ಲವೆಂಬ ವಿಷಯವು ಇತ್ಯರ್ಥವಾದಂತಿದೆ.

ಮಣ್ಣಿಲ್ಲದೆ ಮರಗಳು!

ನ್ಯೂಯಾರ್ಕಿನ ಬೊಟೇನಿಕಲ್ ಗಾರ್ಡನಿನಲ್ಲಿ ನೆಟ್ಟ ಒಂದು ಸಸಿ ಬಹಳ ಅಂದವಾಗಿ ಬೆಳೆದಿದೆ, ಆದರೆ ಅದರ ಅಡಿಗೆ ಮಣ್ಣೆಂಬುದೇ ಇಲ್ಲ. ಮಣ್ಣಿಲ್ಲದೆ ಈಗ ಮರಗಳು ಬೆಳೆಸಲಾಗುತ್ತದೆ! ಹೊಯಿಗೆಯ ಪಾತ್ರವೊಂದರಲ್ಲಿ ಕೆಲವು ಆಹಾರಗಳ ದ್ರವ್ಯವನ್ನು ಹಾಕುವುದರಿಂದ ಆ ಸಸಿ ಹುಟ್ಟಿತು. ಹೊಯಿಗೆಯಲ್ಲಿ ಆ ಸಸಿಯು (ಪತಂಗ ಹೂವಿನ ಸಸಿ) ಮಣ್ಣಿಗಿಂತಲೂ ವೇಗವಾಗಿ ಬೆಳೆಯಿತು. ಇದು ೬೦ ಇಂಚು ಎತ್ತರವಿದೆ. ಅದರೊಟ್ಟಿಗೆ ಮಣ್ಣಿನಲ್ಲಿ ನೆಟ್ಟ ಗಿಡಗಳು ಇನ್ನೂ ೨೦ ಇಂಚು ಬೆಳೆದಿಲ್ಲ. ಕಳೆದ ಹಲವು ವರ್ಷಗಳಿಂದ ಮಣ್ಣಿಲ್ಲದ ಉದ್ಯಾನ ಸೃಷ್ಟಿಯ ಪ್ರಯೋಗ ನಡೆಯುತ್ತಿದೆ!

೧೫ ವರ್ಷದ ಹುಡುಗನ ಮೇಲೆ ವ್ಯಭಿಚಾರದ ಅಪವಾದ

ಮೆಂಚಸ್ಟರ್‌ನಲ್ಲಿರುವ ಜೇಮ್ಸ್ ಹೇಸ್ಟಿಂಗ್ ಎಂಬ ಹದಿನೈದು ವರ್ಷದ ಹುಡುಗನೊಬ್ಬನ ಮೇಲೆ ಜೋಪಿಶ್ಕರ್ ಎಂಬವನು ತನ್ನ ಹೆಂಡತಿ ಮೇಲೆ ವ್ಯಭಿಚಾರ ಮಾಡಿದನೆಂಬ ಅಪವಾದ ಹೊರಿಸಿ ಕೋರ್ಟಿನಲ್ಲಿ ವ್ಯಾಜ್ಯಮಾಡಿ 'ಡೈವೋರ್ಸ್' ಕೇಳಿದ್ದಾನೆ. ಸಾಲ್‌ಫೋರ್ಡಿನಲ್ಲಿರುವ ಪಿಶ್ಕರನ ಮನೆಯಿಂದ ಆ ಹುಡುಗನು ಯುದ್ಧಾರಂಭದಲ್ಲಿ ಹೊರಟು ಹೋಗಿದ್ದ. ೧೯೩೯ರ ಮೇಲೆ, ತಾನೂ ತನ್ನ ಹೆಂಡತಿಯೂ ಜತೆಯಾಗಿ ಬಾಳಲಿಲ್ಲವೆಂದು ಪಿಶ್ಕರನ ವಾದ ಮಾತ್ರವಲ್ಲದೆ ೧೯೩೯ರಲ್ಲಿ ಆತನ ಹೆಂಡತಿಯೇ ಆ ಹುಡುಗನೊಡನೆ ತನಗಿದ್ದ ವ್ಯಭಿಚಾರವನ್ನು ಒಪ್ಪಿ ಪತ್ರ ಬರೆದಿರುವಳೆಂದು ಅವನ ಹೇಳಿಕೆ. ೧೯೩೭ರಲ್ಲಿ ಮದುವೆಯ ಕಾಲದಲ್ಲಿ ಶ್ರೀಮತಿ ಪಿಶ್ಕರಳಿಗೆ 'ಸುಖಿ ವಧು' ಸ್ಪರ್ಧೆಯ ಬಹುಮಾನವಾಗಿ ಒಂದು ಬೆಳ್ಳಿ ಟೀ ಪಾತ್ರ ದೊರೆತಿತು.

ಅಮೆರಿಕನನ ವಿಚಿತ್ರವಾದ ಚಟ

ವಿಚಿತ್ರ ಚಟವನ್ನು ಇಟ್ಟುಕೊಂಡ ಹಲವು ಮನುಷ್ಯರನ್ನು ನಾವು ಜಗತ್ತಿನಲ್ಲಿ ಕಾಣಬಹುದು. ಚಾರ್ಲ್ಸ ಸಿ ನೋಟ್‌ವಿನ್ ಎಂಬ ಅಮೆರಿಕನನು ಅಂಥವರಲ್ಲಿ ಒಬ್ಬ. ಕಾಲೇಜಿನ ವಿದ್ಯಾಭ್ಯಾಸ ಮುಗಿಸಿ ಮರಳಿದವನೇ ವಿಚಿತ್ರ ಪ್ರಾಣಿಗಳ ಪಕ್ಷಿಗಳ ಶಬ್ದಗಳನ್ನು ಅನುಕರಿಸುವುದೇ ಕಸುಬು ಮಾಡುತ್ತಿದ್ದಾನೆ, ಯಂತ್ರಗಳ ಶಬ್ದಗಳನ್ನೂ ಆತನು ಅನುಕರಿಸಲು ಕಲಿತಿರುವನು. ಚಿತ್ರಶಾಸ್ತ್ರದಲ್ಲಿ ಆತನ ಜ್ಞಾನ ಅದ್ಭುತವಾದುದು. ಭೂತಗಳ ಶಬ್ದಗಳನ್ನೂ ಆತನು ಮಾಡಬಲ್ಲನಂತೆ.

ಮಂಗಳೂರು

ಸಂಗೀತ ನಾಟ್ಯ ಪ್ರದರ್ಶನ

ಶ್ರೀ. ಕೆ. ಕೆ. ಶೆಟ್ಟಿ ಅವರು ಅಲ್ಮೋರಾ ನೃತ್ಯಕಲಾಶಿಕ್ಷಣದ ಕೇಂದ್ರಕ್ಕೆ, ಶ್ರೀ. ಉದಯಶಂಕರರ ಬಳಿ ನಾಟ್ಯ ಕಲಿತು ಬಂದಿದ್ದಾರೆ. ನೃತ್ಯದಲ್ಲಿ ಹೆಚ್ಚಿನ ಶಿಕ್ಷಣ ಪಡೆಯಲು ಅಲ್ಲಿಗೆ ತೆರಳಿರುವ ಸಂದರ್ಭದಲ್ಲಿ ಕಳೆದ ಶನಿವಾರ ಸಂಜೆ, ಸ್ಥಳೀಯ ಬೆಸೆಂಟ್ ಗರ್ಲ್ಸ್ ಶಾಲೆಯಲ್ಲಿ, ಸ್ಥಳೀಯರಾದ ಹಲವು ಗೃಹಸ್ಥರ ಮುಂದೆ, ಡಾ. ಎಂ. ಕೇಶವ ಪೈಯವರ ಅಧ್ಯಕ್ಷತೆಯಲ್ಲಿ ಒಂದು ಸಂಗೀತ ನೃತ್ಯ ಪ್ರದರ್ಶನವನ್ನು ಮಾಡಿದರು. ಕಥಕ್ಕಳಿ, ಮಣಿಪುರಿ ನೃತ್ಯಗಳೂ ಶ್ರೀಗಳಾದ ಶ್ರೀನಿವಾಸ, ರಘುನಾಥ ಶೆಣೈ, ನಾರಾಯಣ ರಾವ್, ಉಪೇಂದ್ರ ಮೊದಲಾದವರ ಸಿತಾರ, ವೀಣಾ, ಮೊದಲಾದ ನಾನಾ ವಾದ್ಯ ವಾದನಗಳೂ, ಶ್ರೀ ರಮಾನಂದ ಚೂರ್ಯರ ಲಘುಹಾಸ್ಯವೂ, ಶ್ರೀ. ಶೆಟ್ಟರ ಮಿನುಗಾರ ನರ್ತನಗಳೂ ಸಭಿಕರನ್ನು ಆನಂದಗೊಳಿಸುವವು. ಅಧ್ಯಕ್ಷರು ಶ್ರೀ. ಕೆ. ಕೆ. ಶೆಟ್ಟರನ್ನು ಹೊಗಳಿ ಅವರ ಶ್ರೇಯಸ್ಸನ್ನು ಕೋರಿದರು. ಎಲ್ಲರೂ ಅವರಿಗೆ ಪ್ರೋತ್ಸಾಹಿಸಬೇಕೆಂದರು.



The Canara Industrial & Banking Syndicate Ltd.,

(Incorporated in British India Liability of shareholders Limited)

Estd: **Head office, UDIPI. (S. India)** 1925

Statement of Affairs as on 31st December 1941.

Liabilities.		Assets.	
Paid up Capital . .	.6,10,230- 0- 0	Cash on hand and with other Bankers	5,92,149-12-10
Reserve Funds	2,10,000- 0- 0	Investments on Govt. Securities	14,54,167-15- 6
Deposits	33,82,285- 7- 7	Investments on shares of other Companies	1,00,334- 8- 0
Due to Banks .	5,98,329 1- 1	Fully secured Advances	14,82,290- 0- 6
Bills for collection	5,63,515- 0-10	Other Advances, Bills discounted etc.,	11,87,688- 4- 1
Sundries including Branch adjustments ...	4,29,834-14- 5	Landed properties etc, Office Premises Safes Furniture & Fittings	3,24,074 14- 0
Net Profits for the year including balance carried forward	52,418-15- 9	Bills for collection (as per contra)	5,63,515- 0-10
		Sundries etc., . .	1,42,392-15-11
Total Rs.	**58,46,563-7-8**	**Total Rs.**	**58,46,563- 7- 8**

"Mukund Nivas"
UDIPI S. K.
29th January, 1942.

T. M. A. Pai,
Managing Director.

Bhuvanendra Products Limited,

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitual abortion and other uterine troubles. Must be commensed soon after conception and continued up to the time of delivery

"ಭುವನೇಂದ್ರ ಗರ್ಭಪಾಲ"

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವವಿಧದ ದೋಷಗಳನ್ನು ಗುಣಪಡಿಸುವ ದಿವ್ಯಔಷಧಿ. ಗರ್ಭವತಿಯೆನಿಸಿದಂದಿನಿಂದ ಪಸವಕಾಲದ ವರೆಗೆ ಸೇವಿಸುವುದು ಅತ್ಯುತ್ತಮ

ಸ್ಥಳೀಯ ಸ್ಟಾಕಿಸ್ಟ ವ ಏಜೆಂಟರು:-
(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ (2) ರಾಘುವೇಂದ್ರ ಪೈ, ರಥಬೀದಿ (3) ದಿ ಕರ್ನಾಟಿಕ ಸ್ಟಫ್ ವರ್ಕ್ಸ, ರಥಬೀದಿ (4) ಡಾ। ಯಂ ಎಸ್ ಪ್ರಭು, M. B B S ... (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್

ಕಟಪಾಡಿ, ದ. ಕನ್ನಡ.

ಡಿಪೊ—1 ಮರಾಠ ಗಲ್ಲಿ ಹುಬ್ಬಳ್ಳಿ
2. 36 ಫ್ಯಾಕ್ರೋಫ್ಟ್ಸ ರೋಡ್, ಟ್ರಿಪ್ಲಿಕೇನ್, ಮದರಾಸು

The Bank of Mangalore Limited

HEAD OFFICE	*BRANCHES*
Mangalore	Moodabidri & Padubidri

ANNOUNCEMENT

On and from 1st February 1942 fixed deposits will be accepted at the following attractive rates

One year	4%
Two years or above	4½%

Interest Payable Quarterly

ಸರಕಾರದ ಹೊಸ ಪಾಠಪಟ್ಟಿಗನುಸಾರವಾಗಿ ಬರೆದ

ನವೀನ ಭೂವಿವರಣೆ

ವಾಸುದೇವರಾವ್, ಎಂ ಎ ಎಲ್ ಟಿ (Dip Geography)
(ಭೂಗೋಳ ಶಾಸ್ತ್ರದಲ್ಲಿ ಡಿಪ್ಲೊಮಾ ಪಡೆದವರು)

ಈ ಪುಸ್ತಕಗಳನ್ನು ಪಡಕೊಂಡಲ್ಲಿ ವಿದ್ಯಾರ್ಥಿಗಳಿಗೆ ಎಟ್ಲಾಸ್ ಕೊಂಡುಕೊಳ್ಳುವ ಅವಶ್ಯವಿಲ್ಲ

ಪ್ರತಿ ಪುಸ್ತಕದಲ್ಲಿ ಬಣ್ಣಬಣ್ಣದ ಭೂಪಟಗಳಿವೆ

ಅನೇಕಾನೇಕ ಚಿತ್ರಪಟಗಳಿಂದ ಕೂಡಿದ್ದು ಪ್ರತಿ ಪಾಠದ ಅಂತ್ಯದಲ್ಲಿ ಅಭ್ಯಾಸಯೋಗ್ಯವಾದ ಪ್ರಶ್ನೆಗಳನ್ನೂ ಕೊಟ್ಟಿದೆ

4ನೆಯ ಪುಸ್ತಕ 6 ಆಣೆ, 5ನೆಯ ಪುಸ್ತಕ 7 ಆಣೆ, 6, 7 ಮತ್ತು 8ನೆಯ ಪುಸ್ತಕಗಳು ಅಚ್ಚಿನಲ್ಲಿವೆ
ಪುಸ್ತಕಗಳು ಬೇಕಾದಲ್ಲಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.

ದಿ ಕಂಬೈಂಡ್ ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೋಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು	ಕೊಡಿಯಾಲ್ ಬೈಲ್

ಹಿರಿಯಡಕ ಶ್ರೀ ವೀರಭದ್ರಸ್ವಾಮಿ ದೇವಾಲಯದಲ್ಲಿ ನಡೆಯುವ ರಥೋತ್ಸವ ಸಮಾರಂಭ

ಧ್ವಜಾರೋಹಣ	ದೀಪಾರಾಧನೆ	ರಂಗಪೂಜೆ	ಮಹಾರಥೋತ್ಸವ
30-4-'42	1-5-'42	2-5-'42	3-5-'42

ಹಿರಿಯಡಕ ದೇವಸ್ಥಾನದಿಂದ ಸುಮಾರು ಅರ್ಧ ಮೈಲು ದೂರದಲ್ಲಿರುವ ಶ್ರೀ ಮಾರ್ಕಾಂಡೇಯ ತೀರ್ಥದಲ್ಲಿ ಮಿಂದು ಶ್ರೀ ಅಡಕ ತಾಯಿ ಮತ್ತು ಶ್ರೀ ಮಾರ್ಕಾಂಡೇಯ ಮಹಾ ಮುನಿಗಳ ಅಪೇಕ್ಷೆಯಂತೆ ಶ್ರೀ ಪರಮೇಶ್ವರನು, ಪಾರ್ವತಿ ಸಮೇತನಾಗಿ ಸಕಲ ಗಣಾಂಗಣಗಳೊಡನೆ ಭಕ್ತಾದಿಗಳ ಸಕಲ ಇಷ್ಟಾರ್ಥವನ್ನು ನೆರವೇರಿಸಿ ಕೊಡುವುದಕ್ಕಾಗಿ ಪ್ರತ್ಯಕ್ಷವಾಗಿ ನೆಲಸಿರುವ ಶ್ರೀ ವೀರಭದ್ರಸ್ವಾಮಿ ದೇವಾಲಯವನ್ನು ಸಂದರ್ಶಿಸಿ ಭಕ್ತಿಯಿಂದ ಶ್ರೀ ದೇವರ ಅನುಗ್ರಹಕ್ಕೆ ಪಾತ್ರರಾಗಲು ಇದು ಸುಸಂದರ್ಭವಲ್ಲವೇ?
ಪ್ರಯಾಣಿಕರ ಸೌಕರ್ಯದೆಡೆಗೆ ಹೆಚಿನ ಗಮನ ಕೊಡಲಾಗುವುದು.

JOINT MANAGERS,

The Combined Booking Agency,	**The Joint Booking Office,**
MANGALORE.	KODIALBAIL.

ಈ ಸಂಚಿಕೆ ಬೆಲೆ ಒಂದಾಣೆ ವಾರ್ಷಿಕ ಚಂದಾ ರೂ. 2-0-0 ಅಂಚೆ ವೆಚ್ಚ ಸೇರಿ ರೂ. 2—13—0 **Regd. No. M 3460**

ಸ್ವದೇಶಾಭಿಮಾನಿ

[ಸಂಪುಟ 36] ತಾರೀಕು 3—4—1942 [ಸಂಚಿಕೆ 14]

(Regd)

ಅಮೃತಾಂಜನ

ತಲೆನೋವನ್ನು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಶೀತ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ಕಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

ಸಂಶಯವೇಕೆ?

ಶತ್ರುಗಳು ವಿಮಾನಗಳ ಮೂಲಕ ಧಾಳಿ ನಡೆಸುವುದರಿಂದಲೂ ಮತ್ತು ಇತರ ವಿಧವಾದ ಶತ್ರು ಚಟುವಟಿಕಗಳಿಂದಲೂ ಹಿಂದುಸ್ಥಾನದ ಸಿವಿಲ್ ಪ್ರಜೆಗಳಲ್ಲಿ—ಇದರಲ್ಲಿ ಎ ಆರ್ ಪಿ ಕೆಲಸಗಾರರೂ ಸೇರುವರು - ಉಂಟಾಗಬಹುದಾದ ಪ್ರಾಣಹಾನಿಗೆ

ದಿ "ಬಾಂಬೆ ಲೈಫ್" ಪಾಲಿಸಿಗಳು

ಸಂಪೂರ್ಣವಾದ ರಕ್ಷಣೆಯನ್ನು ನೀಡುತ್ತವೆ. ಆದ್ದರಿಂದ ನಿಮ್ಮ ಪ್ರೀತಿಪಾತ್ರರಿಗಾಗಿ

ದಿ ಬಾಂಬೆ ಲೈಫ್ ಅಷ್ಯೂರೆನ್ಸ್ ಕಂಪೆನಿ (ಲಿಮಿಟೆಡ್)

ಯಲ್ಲಿ ಪಾಲಿಸಿಗಳನ್ನು ಪಡೆಯುವುದು ನಿಮ್ಮ ತ್ವರಿತ ಕರ್ತವ್ಯವಾಗಿದೆ

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಸಂಸ್ಥಾನಗಳಾದಿಯಾಗಿ-ದಕ್ಷಿಣ ಭಾರತಕ್ಕೆ ಪ್ರಾಮುಖ್ಯ ಏಜೆಂಟರು:

ಉಡುಪಿ

: ಅಥವಾ ಈ ಕೆಳಗಿನ ಇತರ ಆಫೀಸುಗಳಿಗೆ ಬರೆಯಿರಿ :—

ಕಲ್ಲಿಕೋಟೆ	ಬೆಂಗಳೂರು	ಮಂಗಳೂರು
ಮದರಾಸು	ತ್ರಿವೇಂಡ್ರಂ	ಬೊಂಬಾಯಿ

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

★

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

Estd. 1906

ಸ್ವದೇಶಾಭಿಮಾನಿ

SWADESHABHIMANI

"ಚಿತ್ರಲೇಖಾ"ದಲ್ಲಿ ನಂದ್ರೇಕರ್ ಮತ್ತು ಮೆಹತಬ್

ಬಾಲಾಜಿ ಟಾಕೀಸಿನಲ್ಲಿ ಪ್ರದರ್ಶಿತವಾಗುತ್ತಿದೆ

KANNADA ILLUSTRATED WEEKLY

ಬಿಡಿ ಪ್ರತಿಗೆ ... ವಾರ್ಷಿಕ ಚಂದಾ ರೂ. 4-0-0 ಆರು ತಿಂಗಳಿಗೆ ರೂ. 2-12-0 Regd. No. M 3460

ಸ್ವದೇಶಾಭಿಮಾನಿ

[ಸಂಪುಟ 36] ತಾರೀಕು 3-4-1942 [ಸಂಚಿಕೆ 14]

ಅಮೃತಾಂಜನ

(Regd)

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಚಾಕು ಕೊಯ್ಯುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೆಗಡಿ ಮೊದಲಾದ ಎಲ್ಲಾ ರೋಗಗಳಿಗೂ ದಿವ್ಯೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಸಿಕ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ. **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪ್ಪೋ, ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಸಂಶಯವೇಕೆ?

ಶತ್ರುಗಳು ವಿಮಾನಗಳ ಮೂಲಕ ಧಾಳಿ ನಡೆಸುವುದರಿಂದಲೂ ಮತ್ತು ಇತರ ವಿಧವಾದ ಶತ್ರು ಚಟುವಟಿಕೆಗಳಿಂದಲೂ ಹಿಂದುಸ್ಥಾನದ ಸಿವಿಲ್ ಪ್ರಜೆಗಳಲ್ಲಿ—ಇದರಲ್ಲಿ ಎ. ಆರ್. ಪಿ. ಕೆಲಸಗಾರರೂ ಸೇರುವರು—ಉಂಟಾಗಬಹುದಾದ ಪ್ರಾಣಹಾನಿಗೆ

ದಿ "ಬಾಂಬೆ ಲೈಫ್" ಪಾಲಿಸಿಗಳು

ಸಂಪೂರ್ಣವಾದ ರಕ್ಷಣೆಯನ್ನು ನೀಡುತ್ತವೆ. ಆದ್ದರಿಂದ ನಿಮ್ಮ ಪ್ರೀತಿಪಾತ್ರರಿಗಾಗಿ

ದಿ ಬಾಂಬೆ ಲೈಫ್ ಅಷ್ಯೂರೆನ್ಸ್ ಕಂಪೆನಿ (ಲಿಮಿಟೆಡ್)

ಯಲ್ಲಿ ಪಾಲಿಸಿಗಳನ್ನು ಪಡೆಯುವುದು ನಿಮ್ಮ ತ್ವರಿತ ಕರ್ತವ್ಯವಾಗಿದೆ

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಸಂಸ್ಥಾನಗಳಾದಿಯಾಗಿ ದಕ್ಷಿಣ ಭಾರತಕ್ಕೆ ಪ್ರಾಮುಖ್ಯ ಏಜೆಂಟರು:

ಉಡುಪಿ

—: ಅಥವಾ ಈ ಕೆಳಗಿನ ಇತರ ಆಫೀಸುಗಳಿಗೆ ಬರೆಯಿರಿ :—

ಕಲ್ಲಿಕೋಟೆ	ಬೆಂಗಳೂರು	ಮಂಗಳೂರು
ಮದರಾಸು	ತ್ರಿವೇಂಡ್ರಂ	ಬೊಂಬಾಯಿ

ಇಂದು ವಿಶಾಲಿಯುಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ
ನಂಜನಗೂಡು ಟೂತ್ ಪೌಡರ್
ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

★

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

ESTD. 1906

ಸ್ವದೇಶಾಭಿಮಾನಿ

SWADESHABHIMANI

"ಚಿತ್ರಲೇಖಾ"ದಲ್ಲಿ ನಂದ್ರೇಕರ್ ಮತ್ತು ಮೆಹತಬ್
ಬಾಲಾಜಿ ಟಾಕೀಸಿನಲ್ಲಿ ಪ್ರದರ್ಶಿತವಾಗುತ್ತಿದೆ

KANNADA ILLUSTRATED WEEKLY

ಬಿಡಿ ಸಂಚಿಕೆ ಬೆಲೆ ಒಂದಾಣೆ ವಾರ್ಷಿಕ ಚಂದಾ ರೂ. 3-0-0 ಅರ್ಧ ವರ್ಷಕ್ಕೆ ರೂ. 1—12—0 Regd. No. M 3460

ಸ್ವದೇಶಾಭಿಮಾನಿ

[ಸಂಪುಟ 36] ತಾರೀಖು 3-4-1942 [ಸಂಚಿಕೆ 14]

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಸುಟ್ಟುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೆಗಡಿ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ. **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಸಂಶಯವೇಕೆ?

ಶತ್ರುಗಳು ವಿಮಾನಗಳ ಮೂಲಕ ಧಾಳಿ ನಡೆಸುವುದರಿಂದಲೂ ಮತ್ತು ಇತರ ವಿಧವಾದ ಶತ್ರು ಚಟುವಟಿಕೆಗಳಿಂದಲೂ ಹಿಂದುಸ್ಥಾನದ ಸಿವಿಲ್ ಪ್ರಜೆಗಳಲ್ಲಿ—ಇದರಲ್ಲಿ ಎ. ಆರ್. ಪಿ. ಕೆಲಸಗಾರರೂ ಸೇರುವರು—ಉಂಟಾಗಬಹುದಾದ ಪ್ರಾಣಹಾನಿಗೆ

ದಿ "ಬಾಂಬೆ ಲೈಫ್" ಪಾಲಿಸಿಗಳು

ಸಂಪೂರ್ಣವಾದ ರಕ್ಷಣೆಯನ್ನು ನೀಡುತ್ತವೆ. ಆದ್ದರಿಂದ ನಿಮ್ಮ ಪ್ರೀತಿಪಾತ್ರರಿಗಾಗಿ

ದಿ ಬಾಂಬೆ ಲೈಫ್ ಅಷ್ಯೂರೆನ್ಸ್ ಕಂಪೆನಿ (ಲಿಮಿಟೆಡ್)

ಯಲ್ಲಿ ಪಾಲಿಸಿಗಳನ್ನು ಪಡೆಯುವುದು ನಿಮ್ಮ ತ್ವರಿತ ಕರ್ತವ್ಯವಾಗಿದೆ

ಕೊಚಿಕಾರ್ ಬ್ರದರ್ಸ್ ಲಿಮಿಟೆಡ್

ಸಂಸ್ಥಾನಗಳಾದಿಯಾಗಿ ದಕ್ಷಿಣ ಭಾರತಕ್ಕೆ ಪ್ರಾಮುಖ್ಯ ಏಜೆಂಟರು:

ಉಡುಪಿ

ಅಥವಾ ಈ ಕೆಳಗಿನ ಇತರ ಆಫೀಸುಗಳಿಗೆ ಬರೆಯಿರಿ:—

ಕಲ್ಲಿಕೋಟೆ	ಬೆಂಗಳೂರು	ಮಂಗಳೂರು
ಮದರಾಸು	ತ್ರಿವೇಂಡ್ರಂ	ಬೊಂಬಾಯಿ

ಇಂದು ಮಲೆಯಾಳ ಜಿಲ್ಲೆಗಳ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ ರಥಬೀದಿ ಮಂಗಳೂರ

★

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

Estd. 1906

ಸ್ವದೇಶಾಭಿಮಾನಿ

SWADESHABHIMANI

ತ್ರಲೇಖಾದಲ್ಲಿ ನಂದ್ರೇಕರ್ ಮತ್ತು ಮೆಹತಬ್
ಬಾಲಾಜಿ ಟಾಕೀಸಿನಲ್ಲಿ ಪ್ರದರ್ಶಿತವಾಗುತ್ತಿದೆ.

KANNADA ILLUSTRATED WEEKLY

ಶ್ರೀ ರಾಮಕೃಷ್ಣ ಲೀಲಾ ಪ್ರಸಂಗ

[ಗುರುಭಾವ-ಪೂರ್ವಾರ್ಧ]

ಮೂಲ ಬಂಗಾಳೀ ಲೇಖಕರು: ಶ್ರೀ ಸ್ವಾಮಿ ಶಾರದಾನಂದಜಿ
ಅನುವಾದ: ಶ್ರೀ ಸ್ವಾಮಿ ಪ್ರಣವೇಶಾನಂದರು

(ಹಕ್ಕು ಕಾದಿಡಲ್ಪಟ್ಟಿದೆ)

... ಅಹಂಕಾರವು ಸಾಧನೆಯ ಅಂಗವೆಂದು ಪರಿಗಣಿಸಲ್ಪಟ್ಟಿದೆ, ಅಲ್ಲದೆ ಅದು ಬಹಳ ಸುಕೃತದಿಂದ ಮನುಷ್ಯನಿಗೆ ಲಭ್ಯವಾಗುವುದೆಂದು ಹೇಳಿದೆ—ಇದೂ ಕೂಡ ಆಗ ಅವರಿಗೆ ಹೇಗೆ ತಾನೆ ಗೊತ್ತಾಗುವುದು? ಅದಂತಿರಲಿ ಗಿರೀಶಚಂದ್ರರು ಆಗ ನಿಶ್ಚಿಂತರಾಗಿದ್ದರು. ಅಲ್ಲದೆ 'ಶ್ರೀ ರಾಮಕೃಷ್ಣದೇವರು ನನ್ನ ಸಂಪೂರ್ಣ ಭಾರವಹಿಸಿದ್ದಾರೆ' ಎಂದು ಅಶನ ವಸನ ಮಾಡುವಾಗಲೂ ... ಯನ ಆಸನ ಮಾಡುವಾಗಲೂ ಈ ಒಂದೇ ಯೋಚನೆಯು ಸರ್ವದಾ ಅವರ ಮನಸ್ಸಿನಲ್ಲಿ ಹುಟ್ಟಿ ಅವರನ್ನು ಶ್ರೀ ಪರಮಹಂಸರ ಧ್ಯಾನ ಮಾಡಿಸುತ್ತಿತ್ತು. ಅಲ್ಲದೆ ಆ ಯೋಚನೆಯು ಅವರ ಸಕಲ ಕರ್ಮಗಳ ಮತ್ತು ಮನೋಭಾವಗಳ ಮೇಲೆ ಮುದ್ರಿಸಿ ಅದರ ಆಧಿಪತ್ಯವನ್ನು ವಿಸ್ತಾರಮಾಡಿ ಅವರನ್ನು ಆಮೂಲಾಗ್ರವಾಗಿ ಪರಿವರ್ತನ ಮಾಡುತ್ತಿತ್ತು. ಇದು ಅವರಿಗೆ ತಿಳಿಯದೆ ಇದ್ದರೂ ಅವರು ಸುಖಿಯೋ ಸರಿ—ಏಕೆಂದರೆ ಅವರು (ಶ್ರೀ ರಾಮಕೃಷ್ಣ ದೇವರು) ತನ್ನನ್ನು ಬಹಳವಾಗಿ ಪ್ರೀತಿಸುತ್ತಾರೆಂದು ಅವರ ದೃಢನಂಬಿಕೆ.

ಗಿರೀಶ ಚಂದ್ರರಿಗೆ ನಂತರದ ಶಿಕ್ಷೆ

'ಯಾರ ಭಾವವೇ ಆಗಲಿ ಅದನ್ನೆಂದಿಗೂ ಕೆಡಿಸಬಾರದು ಎಂದು ಶ್ರೀ ಪರಮಹಂಸರು ಸರ್ವದಾ ಉಪದೇಶಿಸುತ್ತಿದ್ದರು. ಅಲ್ಲದೆ ಪ್ರತಿಯೊಬ್ಬ ಭಕ್ತನೊಂದಿಗೆ ಹಾಗೆಯೇ ವ್ಯವಹಾರ ನಡೆಸುತ್ತಿದ್ದರು. ಗಿರೀಶಚಂದ್ರರಿಗೆ ಪೂರ್ವೋಕ್ತ ಭಾವವನ್ನು ಕೊಟ್ಟು, ಈಗ ಅವರಿಗೆ ಆ ಭಾವಕ್ಕನುಗುಣವಾದ ಶಿಕ್ಷೆ ಕೊಡಲಾರಂಭಿಸಿದರು. ಒಂದು ದಿನ ಶ್ರೀ ಪರಮಹಂಸರ ಸಮ್ಮುಖದಲ್ಲಿ ಏನೋ ಒಂದು ಸಾಮಾನ್ಯ ವಿಷಯದಲ್ಲಿ ಗಿರೀಶಚಂದ್ರರು ನಾನು ಮಾಡುತ್ತೇನೆ ಎಂದು ಹೇಳಲು ಶ್ರೀ ಪರಮಹಂಸರು 'ಅದೇನು? ನಾನು ಮಾಡುತ್ತೇನೆ ಎಂದು ಹೇಳುತಿದ್ದಿಯಲ್ಲಾ? ಮಾಡಲಿಕ್ಕೆ ಆಗದಿದ್ದರೆ? ಈಶ್ವರನ ಇಚ್ಛೆಯಿದ್ದರೆ ಮಾಡುತ್ತೇನೆ ಎಂದನ್ನಬೇಕು' ಅಂದರು. ಗಿರೀಶಚಂದ್ರರು ಕೂಡ 'ಆ ಮಾತು ನಿಜವೇ ಸರಿ; ಯಾವಾಗ ನಾನು ಶ್ರೀ ದೇವರ ಮೇಲೆ ನನ್ನ ಸಂಪೂರ್ಣ ಭಾರ ಅರ್ಪಿಸಿದ್ದೆನೆಯೋ ಅಲ್ಲದೆ ಅವರೂ ಕೂಡ ಅದನ್ನು ಗ್ರಹಿಸಿದ್ದಾರೆಯೋ ಆವಾಗ ಆ ಕಾರ್ಯವು ನನ್ನ ಪಕ್ಷಕ್ಕೆ ಒಳ್ಳೆದೆಂದು ಅಥವಾ ಮಂಗಲಕರವಾದುದೆಂದು ತಿಳಿದು ಮಾಡಲು ಬಿಟ್ಟರಲ್ಲವೇ ನಾನು ಮಾಡಬೇಕು; ಇಲ್ಲವಾದರೆ ನನ್ನ ಸಾಮರ್ಥ್ಯದಿಂದ ಹೇಗೆ ಮಾಡಬಲ್ಲೆನು' ಎಂದು ತಿಳಿದು ಆ ಅವಧಿಯಿಂದ ನಾನು ಮಾಡುತ್ತೇನೆ, ನಾನು ಹೋಗುತ್ತೇನೆ ಎಂದು ಹೇಳುವ ಆ ಭಾವವನ್ನೇ ತ್ಯಜಿಸಿಬಿಟ್ಟರು.

ಗಿರೀಶಚಂದ್ರರು ವಕಾಲತಿನ ಗೂಢಾರ್ಥ ತಿಳಿದುದು

ಹೀಗೆ ದಿನದ ಮೇಲೆ ದಿನ ಅತಿಕ್ರಮಿಸಿತು. ಕ್ರಮೇಣ ಶ್ರೀ ಪರಮಹಂಸರು ಅದೃಶ್ಯರಾದರು. ಗಿರೀಶಚಂದ್ರರು ಸ್ತ್ರೀ ಪುತ್ರ ಮೊದಲಾದವರ ವಿಯೋಗವೆಂಬ ನಾನಾ ಕಷ್ಟಗಳಿಗೆ ಗುರಿಯಾದರು; ಆದರೆ ಅವರ ಮನಸ್ಸು ಮೊದಲಿನಂತೆ ಪ್ರತಿಯೊಂದು ಕಾರ್ಯದಲ್ಲಿ 'ಅವರು (ಶ್ರೀ ರಾಮಕೃಷ್ಣದೇವರು) ಹೀಗಾಗುವುದು ನಿನ್ನ ಪಕ್ಷಕ್ಕೆ ಮಂಗಳಕರವೆಂದೇ ಅವುಗಳನ್ನು ಮಾಡಿದ್ದಾರೆ. ನೀನು ಅವರ ಮೇಲ ಭಾರ ಅರ್ಪಿಸಿದ್ದಿ. ಅವರು ಕೂಡ ವಹಿಸಿದ್ದಾರೆ; ಆದರೆ ನಿನ್ನನ್ನು ಯಾವ ದಾರಿಯಿಂದ ಕೊಂಡೊಯ್ಯುವರೆಂಬುದನ್ನು ನಿನಗೆ ಬರೆದು ಕೊಡಲಿಲ್ಲವಲ್ಲಾ. ಅವರು ಈ ದಾರಿಯೇ ನಿನ್ನ ಪಕ್ಷಕ್ಕೆ ಒಳ್ಳೆದೆಂದು ಅರಿತು ನಿನ್ನನ್ನು ಕೊಂಡೊಯ್ಯುತ್ತಾರೆ; ನೀನು ಅದನ್ನು ಅಲ್ಲಗಳೆಯಲು ಅಥವಾ ಅದರಿಂದ ವಿರಕ್ತನಾಗಲು ಕಾರಣವಿಲ್ಲ. ಅವರಿಗೆ ವಕಾಲತು ಕೊಡುವುದು ಅಥವಾ ಭಾರವಹಿಸುವುದು ಒಂದು ಬಾಯಿ ಮಾತೇನು!? ಎಂದು ಅವರನ್ನು ಪ್ರೇರಿಸುತ್ತಿತ್ತು. ಹೀಗೆ ದಿನಗಳು ಅತಿಕ್ರಮಿಸಿದಷ್ಟು ಗಿರೀಶಚಂದ್ರರಿಗೆ ವಕಾಲತು ಕೊಡುವುದರ ಗೂಢಾರ್ಥವು ತಿಳಿದುಬಂತು. ಈಗಲೂ ಆದರ ಸಂಪೂರ್ಣ ಅರ್ಥ ತಿಳಿಯಿತೇ? ಹೀಗೆಂದು ಗಿರೀಶಚಂದ್ರರನ್ನು ಒಂದು ದಿನ ಕೇಳಿದಾಗ 'ಈಗಲೂ ಬಹಳವಿದೆ. ವಕಾಲತು ಕೊಡುವುದರ ಒಳಗೆ ಇಷ್ಟು ಅರ್ಥ ಉಂಟೆಂದು ಆಗ ನಾನು ಭಾವಿಸಲಿಲ್ಲ. ಈಗ ಸ್ವಲ್ಪ ಗೊತ್ತಾಗುತ್ತಿದೆ, ಸಾಧನೆ ಭಜನೆಯು, ಜಪತಪದ ಅಂತ್ಯವಿದೆ. ಆದರೆ ಯಾರು ವಕಾಲತು ಕೊಟ್ಟಿದ್ದಾರೆಯೋ ಅಂಥವನ ಅನುಷ್ಠಾನಕ್ಕೆ ಅಂತ್ಯವೇ ಇಲ್ಲ. ಅಂಥವರು ಪ್ರತಿ ಹೆಜ್ಜೆ ಇಡುವಾಗ ಅವರ (ಶ್ರೀ ದೇವರ) ಮೇಲೆ ಭಾರವಿಟ್ಟು ಅವರ ಶಕ್ತಿಯಿಂದ ಹೆಜ್ಜೆ ಇಟ್ಟಿದ್ದಾನೆಯೋ ಅಥವಾ ಕ್ಷುದ್ರ ಅಹಂಕಾರದ ವಶವರ್ತಿಯಾಗಿ ಅದನ್ನು ಮಾಡಿದ್ದಾನೆಯೋ ಎಂದು ನೋಡಬೇಕು' ಎಂದು ಉತ್ತರಕೊಟ್ಟರು.

ಅವತಾರ ಪುರುಷರೇ ಮಾತ್ರ ವಕಾಲತಿನ ಭಾರವಹಿಸಲು ಸಮರ್ಥರು

ವಕಾಲತಿನ ಪ್ರಸಂಗದಲ್ಲಿ ನಾನಾ ಯೋಚನೆಗಳು ಮನಸ್ಸಿನಲ್ಲಿ ಹುಟ್ಟುತ್ತವೆ. ಜಗತ್ತಿನ ಇತಿಹಾಸದಲ್ಲಿ ಯೇಸುಕ್ರಿಸ್ತನು, ಚೈತನ್ಯದೇವನು ಮೊದಲಾದ ಮಹಾಪುರುಷರು ಆಗಾಗ ಕೆಲವರಿಗೆ ಅಂತಹ ಅಭಯದಾನ ಮಾಡಿದುದನ್ನು ಕಾಣಬಹುದು. ಸಾಧಾರಣ ಗುರುವಿಗೆ ಹಾಗೆ ಮಾಡಲು ಸಾಮರ್ಥ್ಯ ಅಥವಾ ಅಧಿಕಾರವಿರುವುದಿಲ್ಲ. ಸಾಧಾರಣ ಗುರುಗಳು ಅಥವಾ ಸಾಧುಗಳು ತಾವು ಯಾವ ಮಂತ್ರತಂತ್ರ ಅಥವಾ ಕ್ರಿಯೆಗಳಿಂದ ಆಧ್ಯಾತ್ಮಿಕ ಉನ್ನತಿ ಲಾಭ ಮಾಡಿದ್ದಾರೆಯೋ, ಹೆಚ್ಚಾಗಿ ಅವುಗಳನ್ನೇ ಇತರರಿಗೆ ಹೇಳಿಕೊಡಬಹುದು. ಅಥವಾ ಪವಿತ್ರಭಾವದಿಂದ ತಾನು ಜೀವನಯಾಪನ ಮಾಡಿ ಜನರನ್ನು ಪವಿತ್ರತೆಯ ಕಡೆಗೆ ಆಕೃಷ್ಟರಾಗುವಂತೆ ಮಾಡಬಹುದು. ಆದರೆ ನಾನಾ ಬಂಧನಗಳಲ್ಲಿ ಸಿಕ್ಕಿ ಮನುಷ್ಯನು ಸಂಪೂರ್ಣ ದಿಕ್ಕಿಲ್ಲದವನಾದಾಗ 'ನೀನು ಹೀಗೆ ಮಾಡು' ಎಂದು ಹೇಳಿದರೆ ಆತನು ನಿರಾಶೆಯಿಂದ ಹೇಗೆ ಮಾಡುವುದು? ಮಾಡಲು ಶಕ್ತಿಕೊಟ್ಟರೆ ಮಾಡಬಹುದು ಎಂದು ಕೇಳಿದರೆ ಆಗ ಆತನಿಗೆ ಸಹಾಯಮಾಡುವುದು ಸಾಧಾರಣ ಗುರುವಿಗೆ ಸಾಧ್ಯವಿಲ್ಲ. 'ನಿನ್ನ ದುಷ್ಕೃತ್ಯದ ಎಲ್ಲಾ ಭಾರ ನಾನು ವಹಿಸಿದ್ದೇನೆ. ನಿನಗಾಗಿ ಅದರ ಫಲವನ್ನು ನಾನು ಅನುಭವಿಸುತ್ತೇನೆ' ಎಂದು ಸಾಧಾರಣ ಗುರುವಿಗೆ ಹೇಳಲೂ ಮಾಡಲೂ ಶಕ್ತಿಯಿಲ್ಲ

ಅದರ ದೃಷ್ಟಾಂತ

ಮಾನವ ಹೃದಯದಲ್ಲಿ ಅಂತಹ ಧರ್ಮಗ್ಲಾನಿ ಬಂದೊದಗಿದರೆ ಶ್ರೀ ಪರಮಾತ್ಮನು ಕೃಪಾಪರವಶನಾಗಿ ಅವತರಿಸುತ್ತಾನೆ. ಅಲ್ಲದೆ ಆತನ ದುಷ್ಕೃತ್ಯದ ಫಲವನ್ನು ತಾನೇ ಅನುಭವಿಸಿ ಆ ಬಂಧನದ ಆವರ್ತನದಿಂದ ಉದ್ಧರಿಸುತ್ತಾನೆ. ಆದರೆ ಹಾಗೆ ಉದ್ಧರಿಸಿದರೂ ಶ್ರೀ ಪರಮಾತ್ಮನು ಸಂಪೂರ್ಣವಾಗಿ ಆತನನ್ನುಕ್ಷಮಿಸುವುದಿಲ್ಲ. ಶಿಕ್ಷೆಕೊಡುವ ನಿಮಿತ್ತ ಆತನಿಂದ ಏನಾದರೂ ಅಲ್ಪಸ್ವಲ್ಪ ಮಾಡಿಸಿಕೊಳ್ಳುತ್ತಾನೆ. 'ಅವತಾರ ಪುರುಷರ ಕೃಪೆಯಿಂದ ಮನುಷ್ಯನ ಹತ್ತು ಜನ್ಮದ ಭೋಗವು ಒಂದೇ ಜನ್ಮದಲ್ಲಿ ಸಾಗುತ್ತದೆ' ಎಂದು ಶ್ರೀ ಪರಮಹಂಸರು ಹೇಳುತ್ತಿದ್ದರು; ಒಬ್ಬ ವ್ಯಕ್ತಿಯ ಸಂಬಂಧ ಹೇಗೆಯೋ, ಒಂದು ಜನಾಂಗದ ವಿಷಯವಾಗಿಯೂ ಕೂಡ ಹಾಗೆಯೇ. ಇದಕ್ಕೆನೇ ಗೀತೆಯಲ್ಲಿ ವಿಶ್ವರೂಪ ಪ್ರದರ್ಶನ ಮಾಡಿದ್ದರಿಂದ ಅರ್ಜುನನಿಗೆ ದಿವ್ಯದೃಷ್ಟಿ ಲಾಭವಾಯಿತೆಂದೂ ಪುರಾಣದಲ್ಲಿ ಶ್ರೀ ಪರಮಾತ್ಮನ ಕೃಪಾಲಾಭವೆಂದೂ ವೈಷ್ಣವ ಶಾಸ್ತ್ರದಲ್ಲಿ (ಗೌರಂಗದೇವನ) ಜಗಾಯಿ ಮಾಧಾಯಿಯವರ ಉದ್ಧಾರ ಸಾಧನೆ ಅಥವಾ ಪಾಪಾದಿದಲವೆಂದೂ, ಕ್ರೈಸ್ತ ಮತದಲ್ಲಿ ಯೇಸುಕ್ರಿಸ್ತನು ಇತರರ ಪಾಪವನ್ನು ತನ್ನ ಮೇಲೆ ಗ್ರಹಿಸಿ ಸ್ವರ್ಗಪಿತನ ಕೋಪ ಶಮನ ಮಾಡಿದ್ದನೆಂದೂ ನಿರ್ದೇಶಿಸಲ್ಪಟ್ಟಿದೆ. ಶ್ರೀ ರಾಮಕೃಷ್ಣ ಜೀವನದಲ್ಲಿ ನಾವು ಇದರ ಆಭಾಸಪಡೆಯದೆ ಇದ್ದರೆ, ಈ ಮಾತು ನಿಜವೆಂದು ನಾವು ತಿಳಿಯಲು ಎಂದಿಗೂ ಸಮರ್ಥರಾಗುತ್ತಿದ್ದಿಲ್ಲ.

(ಕ್ರಮಶಃ)

MONEY TO LEND

Over Forty Lacs of idle funds are awaiting investment in the shape of loans on gold, Government securities, shares of approved companies, life insurance policies having sufficient surrender value, grains and other agricultural produce, etc., etc.

You are cordially invited to utilize these facilities.

CANARA BANK, LIMITED.

ESTD. 1906.

ಡೋಂಗರೆ
ಬಾಲಾಮೃತವು
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಧೂಳು ಶ್ವಾಸಕೋಶಕ್ಕೆ ರೋಗವನ್ನು ಒಯ್ಯುವುದು
ಶ್ವಾಸಯೋಗ್ಯ ಮಾತ್ರೆ ಪೆಪ್ಸು ತೆಕ್ಕೊಳ್ಳಿರಿ
ಬಾಯಿಗೆ ಹಾಕಿದ ಕೂಡಲೇ ಪೆಪ್ಸು ಕರಗಿ, ಉತ್ತಮ ಔಷಧಿಯೋಗ್ಯ ರಸವನ್ನು ಹೊರಗೆಡವುದು; ಆದರಿಂದ ಶೀತ, ಇಂಪ್ಲುಯೆಂಜಾ, ಮೊದಲಾದ ಬಾಧೆಗಳು ಕೂಡಲೇ ಗುಣವಾಗುವುವು. ಕ್ರಯ ಒಂದು ರೂಪಾಯಿ.
ಪೆಪ್ಸು ಸೇವಿಸಿರಿ.

PEPS
ವಿಷಹಾರಿ ಶ್ವಾಸನೀಯ ಗುಳಿಗೆಗಳು

ಕರ್ನಾಟಕ ಉತ್ತಂಗಿ ಸತ್ಕಾರ ಸಮಿತಿ

ಶ್ರೀಮಾನ್ ಚೆನ್ನಪ್ಪ ಉತ್ತಂಗಿಯವರ ಷಷ್ಟ್ಯಬ್ದಪೂರ್ತಿಯ ದಿನಾಚರಣೆಯನ್ನು ಇದೇ ಎಪ್ರಿಲ್ ಅಂದರೆ ತಾ. ೫-೪-೧೯೪೨ನೆಯ ಭಾನುವಾರ ಸಾಯಂಕಾಲ ೫ ಘಂಟೆಗೆ ಮುಂಬಾಯಿ ಸರಕಾರದ ಹಿಂದಿನ ಶಿಕ್ಷಣ ಮಂತ್ರಿಗಳಾದ ದಿವಾಣ ಬಹದ್ದೂರ ಸರ್ ಸಿದ್ಧಪ್ಪ ಕಂಬಳಿ, ಬಿ. ಎ., ಎಲ್ಎಲ್. ಬಿ., ಎಂ. ಎಲ್. ಎ., ಜೆ. ಪಿ., ಇವರ ಅಧ್ಯಕ್ಷತೆಯಲ್ಲಿ ಹುಬ್ಬಳ್ಳಿಯ ನಗರ ಸಭಾಭವನದಲ್ಲಿ ಜರಗಿಸಲು ನಿಶ್ಚಯಿಸಿದ್ದಾರೆ.

ಸ್ವದೇಶಾಭಿಮಾನಿಗೆ ಜಾಹೀರಾತು ಕೊಡಿರಿ

ನಂಬಿ ನಂಬಿ ತೆಗೆದು ಕೊಳ್ಳಲು



ದಮ್ಮಿನ ಮೇಲೆ ಒಂದೇ ಉಪಾಯ

"ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

10-4-1942] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೧೦-೪-೧೯೪೨]

ಸಮರಭೂಮಿಯ ಸಂಚಾರ

ಯಾರು ಮಾಡಿದ ಪಾಪಕ್ಕೋ, ಯಾವ ಕಾರಣಕ್ಕೋಸ್ಕರವೋ ಭಾರತೀಯರೂ ಬಾಂಬಿನ ಆಘಾತಕ್ಕೆ ಬಲಿಯಾಗಬೇಕಾಗಿ ಬಂದಿದೆ! ವಿಶಾಖಪಟ್ಟಣ, ಕೋಕನಾಡುಗಳಿಗೆ ಜಪಾನ್ ವಿಮಾನಗಳು ಬಾಂಬು ಧಾಳಿ ಮಾಡಿದ ಸುದ್ದಿ ಬಂದಿದೆ! ಇನ್ನೇನು? ಇಷ್ಟರಲ್ಲಿಯೇ ಹಿಂದೂದೇಶದ ಪ್ರಸಿದ್ಧ ಪಟ್ಟಣಗಳಿಗೆ ಬಾಂಬು ಬೀಳಲೂ ಬಹುದು ಮೊನ್ನೆ ಮೊನ್ನೆ ಕೊಲೊಂಬೋಗೂ ಜಪಾನರು ಧಾಳಿಯಿಟ್ಟರು! ಬಂಗಾಳಾ ಕೊಲ್ಲಿಯಲ್ಲಿಯೂ ಹಿಂದೂ ಮಹಾಸಾಗರದಲ್ಲಿಯೂ ಶತ್ರು ನೌಕಾ ಸಂಚಾರವು ಈಗ ನಿರಂತರ ನಡೆಯುತ್ತಿರುವುದಾಗಿ ತಿಳಿದಿದೆ. ಇದರಿಂದ ಸಮುದ್ರ ಕರಾವಳಿಯ ಪಟ್ಟಣಗಳಿಗೆ ಯಾವುದೇ ಕಾಲದಲ್ಲಾದರೂ ಗುಂಡು 'ಬೀಳಬಹುದು!' ಸಿಂಗಾಪುರವನ್ನು ಭೇದಿಸಿ ಮುಂದೆ ಬಂದಾಗಲೇ ಹಿಂದೂದೇಶದ ರಕ್ಷಣೆಗೆ ಅಪಾಯವುಂಟಾಗಿತ್ತು! ಜಪಾನರ ಸಂಚಾರಕ್ಕೆ ಅನುಕೂಲವಾಗಿತ್ತು, ಬರ್ಮಾವನ್ನು ಆಕ್ರಮಿಸಿದ ಬಳಿಕಂತೂ ಈಗ ಹಿಂದೂದೇಶದ ಕಡಲತೀರ ಪ್ರದೇಶಗಳಿಗೆ ಎದುರಾಗಿಯೂ, ಬದಿಯಾಗಿಯೂ ಇರುವ ನೌಕಾ ಮೂಲಗಳನ್ನು ಜಪಾನರು ಸ್ವಾಧೀನಪಡಿಸಿಕೊಂಡೇ ಇರುವರು ಅಂಡಮಾನ್, ಕೊಲೊಂಬೋಗಳ ಆಕ್ರಮಣದ ನಂತರ ಪ್ರತಿದಿನವೆಂಬಂತೆ ಸಿಲೋನು ಜಪಾನರ ಬಾಂಬಿನ ಮಳೆಯನ್ನು ನಿರೀಕ್ಷಿಸುವಂತಾಗಿದೆ ಹಿಂದೂದೇಶದ ಹಾಗೂ ಹಿಂದೂ ಮಹಾಸಾಗರದ ಸಂಬಂಧದಲ್ಲಿ ಸಿಲೋನಿನ ಆಕ್ರಮಣವು ಬಹಳ ಪ್ರಾಮುಖ್ಯವಾಗುವುದು ಸಿಲೋನ್ ಮಿತ್ರಪಕ್ಷದವರ ಕೈಯಲ್ಲಿದ್ದರೆ ಅಲ್ಲಿಂದ ಜಪಾನರನ್ನು ಪ್ರಬಲವಾಗಿ ಎದುರಿಸಲು ಸಾಧ್ಯವಾಗುತ್ತದೆ ಹಾಗಾಗಿ ಜಪಾನು ಮಿತ್ರಪಕ್ಷದವರ ಶಕ್ತಿ ಕುಗ್ಗಿಸಲು ಸಿಲೋನನ್ನು ಕೂಡಲೇ ಆಕ್ರಮಿಸದೆ ಎಷ್ಟು ಮಾತ್ರಕೂ ಸುಮ್ಮಗಿರಲಾರದು ಅಂತೂ ಈಗ ಜಪಾನರು ತಮ್ಮ ಯುದ್ಧಕಾರ್ಯಕ್ಷೇತ್ರವನ್ನು ವಿಸ್ತರಿಸಿ ವಿಸ್ತರಿಸಿ ಇತ್ತ ಹಿಂದೂದೇಶಕ್ಕೂ ಕಾಲಿಡಬಂದಿರುವರೆಂಬುದು ಗಮನಾರ್ಹವಾದುದು ಅತ್ತ ಆಸ್ಟ್ರೇಲಿಯದಲ್ಲಿ, ಇತ್ತ ಹಿಂದೂದೇಶದಲ್ಲಿ, ಮತ್ತೆ ಬಹುಕಾಲದಿಂದಲೂ ಚೀನಾದಲ್ಲಿ, ಈನ್ನಡ್ಯೇ ಬರ್ಮಾದಲ್ಲಿ ಕೊಲೊಂಬೋದಲ್ಲಿ ಹೀಗೆ ಪ್ರಚಂಡ ಯುದ್ಧಗಳನ್ನು ಒಂದೇ ಕಾಲಕ್ಕೆ ನಡಿಸುತ್ತಿರುವ, ಹಾಗೂ ಕಳೆದ ಕೆಲವೇ ತಿಂಗಳುಗಳಲ್ಲಿ ಸಿಂಗಾಪುರ, ಮಲಯ, ಜಾವಾ, ಡಚ್ ಇಂಡೀಸ್, ಫಿಲಿಪ್ಪೈನ್, ಬರ್ಮಾ, ನ್ಯೂಗಿನಿ, ಅಂಡಮಾನ್ ಮೊದಲಾಗಿ ಸಣ್ಣ ದೊಡ್ಡ ರಾಷ್ಟ್ರರಾಷ್ಟ್ರಗಳನ್ನು ನುಂಗಿ ನೀರ್ಕುಡಿಯುಬರುತ್ತಿರುವ ಜಪಾನಿನ ಇಂದಿನ ಈ ವಿಜೃಂಭಣೆಯನ್ನು ನೋಡಿದರೆ ಪೂರ್ವರಾಷ್ಟ್ರದಲ್ಲಿ ಜಪಾನು ತನ್ನ ಪ್ರಭುತ್ವವನ್ನು ಸ್ಥಾಪಿಸಲು ಬಹುಕಾಲದಿಂದ ಮಾಡಿದ ಮಹತ್ವಾಕಾಂಕ್ಷೆಯನ್ನು ಇಂದು ಈಡೇರಿಸಲು ಸೊಂಟಕಟ್ಟಿ ಹೊರಟಿರುವಂತೆ ತೋರುತ್ತದೆ!

ದಶಂಬರ ಏಳಕ್ಕೆ ಪೆಸಿಫಿಕ್ ಸಂಗ್ರಾಮ ಸುರುವಾದ ಒಂದು ವಾರದ ನಂತರ ಬರ್ಮಾ ಕಾಳಗ ಪ್ರಾರಂಭವಾಗಿ ಇನ್ನೂ ನಡೆಯುತ್ತಾ ಬರುತ್ತಿದೆ. ಸಾಲ್ವಿನ್, ಭಿಲಿನ್, ಸಿಟಾಂಗ್ ನದಿಗಳನ್ನು ದಾಟಿ ಜಪಾನರು ದಕ್ಷಿಣ ಬರ್ಮಾ ಮತ್ತು ಮಧ್ಯ ಬರ್ಮಾಗಳ ಕಡೆಗೆ ನುಗ್ಗಿದರು. ದಕ್ಷಿಣದಿಂದ ಮುತ್ತಿ ಬಂದು ರಂಗೂನನ್ನು ಕೈವಶಪಡಿಸಿಕೊಂಡರು. ಅಲ್ಲಿಂದ ಪಶ್ಚಿಮಕ್ಕೆ ಸಾಗಿ ಬೆಸ್ಸೀನ್ ಮೂಲಕ ಅಕ್ಯಾಬನ್ನು ಕೈವಶಮಾಡಿಸುತ್ತಿರುವರು ಅಕ್ಯಾಬ್ ಬಂಗಾಳಾ ಗಡಿಯಿಂದ ಕೇವಲ ನಲ್ವತ್ತು ಮೈಲು ಅಂತರ ಮಾತ್ರದಲ್ಲಿದೆ ಇದರಿಂದ ಜಪಾನರು ಬಂಗಾಳಕೊಲ್ಲಿಯ ತೀರ ಪ್ರದೇಶವನ್ನು ಹಿಡಿದಂತಾಯಿತು ಮಧ್ಯ ಬರ್ಮಾ ಮತ್ತು ಉತ್ತರ ಬರ್ಮಾದಲ್ಲಿ ಘೋರ ಯುದ್ಧವು ನಡೆಯಿತು ಕಳೆದ ಒಂದೆರಡು ವಾರಗಳಿಂದ ಭೀಕರ ಸಂಗ್ರಾಮ ಸಾಗುತ್ತಿದ್ದ ಟೋಂಗೋ ಈಗ ಜಪಾನರ ಕೈವಶವಾಗಿದೆ ಮಿತ್ರಪಕ್ಷದ ಸೈನಿಕರು ಟೋಂಗೋ ಬಿಟ್ಟು ಹಿಂದೆ ಸರಿದರು ಈಗ ಟೋಂಗೋಗೆ ಪಶ್ಚಿಮದಲ್ಲಿರುವ ಇರವಾಡಿ ನದೀ ತೀರ ಪ್ರೋಂ ಬಳಿ ಯುದ್ಧ ನಡೆಯುತ್ತಿದೆ ಹೀಗೆ ದಕ್ಷಿಣ, ಪಶ್ಚಿಮ, ಪೂರ್ವ ದಿಕ್ಕುಗಳೆಲ್ಲಾ ಕಡೆಗಳಿಂದಲೂ ಜಪಾನರು ಬರ್ಮಾವನ್ನು ನುಂಗಲು ಬರುತ್ತಿದ್ದಾರೆ. ಚೀನ, ಬರ್ಮಾ, ಭಾರತ ಬ್ರಿಟಿಷ್ ಮತ್ತು ಅಮೆರಿಕನ್ ಸೈನಿಕರು ಜಪಾನರನ್ನು ಎದುರಿಸುತ್ತಿದ್ದಾರೆ ಇಷ್ಟರಲ್ಲಿ ಬರ್ಮಾದಲ್ಲಿ ಕೆಲವರು ಬ್ರಿಟಿಷ್ ದ್ರೋಹಿಗಳು ಜಪಾನರಿಗೆ ನೆರವಾಗುತಿದ್ದಾರೆಂದು ಸುದ್ದಿ ಬಂದಿದೆ ಎಂದರೆ ಕೆಲಬರ್ಮೀಯರಿಗೆ ಬ್ರಿಟಿಷ್ ದ್ವೇಷ ಹಿಂದಿನಿಂದಲೇ ಇತ್ತು, ಅಂತೆಯೇ ಬರ್ಮೀಯರ ಮೇಲೆ ಬ್ರಿಟಿಷರಿಗೂ ಕಣ್ಣಿತ್ತು, ಬರ್ಮಾದ ಜಾಮಾ, ಯೂಸಾ ಮೊದಲಾದ ಪ್ರಧಾನರೇ ಒಳಸಂಚುಗಾರರೆಂಬ ಆಪಾದನೆಗೆ ಗುರಿಯಾಗಿ ಬ್ರಿಟಿಷರ ಸೆರೆಮನೆಯಲ್ಲಿ ಕೊಳೆಯುತ್ತಿದ್ದಾರೆ ಇತರ ಕೆಲವು ಮಂದಿ ಅಧಿಕಾರಿಗಳಿಗೂ ಈ ದುರ್ದೆಶೆ ತಪ್ಪಿಲ್ಲ, ಹೀಗಾಗಿ ಅನೇಕ ಬರ್ಮೀಯರು ಬ್ರಿಟಿಷ್ ದ್ವೇಷವನ್ನು ಈಗ ಸಾಧಿಸಲು ತೊಡಗಿದಂತಿದೆ, ಜಪಾನರಾದರೂ ಈ ಸಂದರ್ಭವನ್ನು ಸದುಪಯೋಗಮಾಡುತ್ತಿರುವರು, ಬ್ರಿಟಿಷ್ ದ್ವೇಷಿಗಳಾದ ಬರ್ಮೀಯರನ್ನು ಹುರಿದುಂಬಿಸುತಾರೆ, ಅವರಿಂದ ಗುಪ್ತ ವಿಚಾರಗಳನ್ನು ತಿಳಕೊಳ್ಳುತ್ತಾರೆ, ಅಂತೂ ಬ್ರಿಟಿಷರಿಗೆ ಇವರಿಂದ ಅಸಾಧ್ಯ ಉಪಟಳವಾಗಿ ಬಿಟ್ಟಿದೆ.

ಸಮರವು ಪ್ರಾರಂಭವಾದ ಮೇಲೆ ಹಲವು ಸಲ ಟರ್ಕಿಯ ವಿಷಯ ಚರ್ಚೆಯಾಗಿದೆ. ಈಗ ತಿರುಗಿ ಟರ್ಕಿಯ ಪ್ರಸ್ತಾಪ ಬಂದಿದೆ ವಾನ್ ಪೇಪನರು ಜರ್ಮನಿಯ ರಾಯಭಾರಿಯಾಗಿ ಟರ್ಕಿಯಲ್ಲಿದ್ದರು, ಏನು ಕಿತೂರಿ ನಡೆಸುತ್ತಿದ್ದರೋ ತಿಳಿಯದು ಇತ್ತೀಚೆಗೆ ಅವರು ಹಿಟ್ಲರ್ ಭೇಟಿಗಾಗಿ ಜರ್ಮನಿಗೆ ತೆರಳಿದ್ದು, ಈಗಾಗಲೇ ಟರ್ಕಿಗೆ ಮರಳಿ ಬರಲಿದ್ದಾರೆಂದು ಸುದ್ದಿಯಿದೆ ಅವರು ಹಿಟ್ಲರಿನಿಂದ ಟರ್ಕಿಯ ವಿಷಯ ಕೊನೆಯ ಶರತವನ್ನು ತರಲಿರುವರೆಂದು ಊಹಿಸಲಾಗಿದೆ ಟರ್ಕಿಯು ಇದುವರೆಗೆ ತಟಸ್ಥವಿದ್ದಂತೆ, ಇನ್ನು ಮುಂದೆಯೂ ಇರಬಹುದು, ಆದರೆ ಡಾರ್ಡನೆಲ್ಸ್ ಜಲಸಂಧಿಯಲ್ಲಿ ಜರ್ಮನ್ ನೌಕೆಗಳು ಸಂಚರಿಸಲು ಯಾವ ತೊಂದರೆಯನ್ನೂ ಟರ್ಕಿ ಮಾಡದಿದ್ದರೆ, ಟರ್ಕಿಯಲ್ಲಿ ಯುದ್ಧವು ಆಗದಂತೆ ತಾನು ನೋಡುವೆನಾಗಿ ಹಿಟ್ಲರ್ ಭರವಸೆ ಕೊಟ್ಟಿರುವನೆಂತ ತಿಳಿದುಬರುತ್ತಿದೆ. ಇದನ್ನು ಅಸಂಭವ, ಅಸತ್ಯವೆಂದೇನೂ ಹೇಳಬರುವುದಿಲ್ಲ; ಏಕೆಂದರೆ ಯೂರೋಪಿನಲ್ಲಿ ಈಗ ತಾನೇ ತಾನಾಗಿ ವಿಜೃಂಭಿಸುತ್ತಾ ಬರುತ್ತಿರುವ ಜರ್ಮನಿಯು ಟರ್ಕಿಯನ್ನು ತನ್ನ ಶರತಗಳಿಂದ ತನಗನುಕೂಲವಾಗಿ ವರ್ತಿಸುವಂತೆ ಮಾಡಲು ಪ್ರಯತ್ನಿಸಬಹುದು, ಈ ಪ್ರಯತ್ನದಲ್ಲಿ ಘರ್ಷಣೆಯುಂಟಾಗುವುದೂ ಸಂಭವವಿರುತ್ತದೆ ಅಂತೂ ಈ ವಿಚಾರವಾಗಿ, ಮುಂದಾಗಲಿರುವ ಘಟನೆಗಳು ಗಮನೀಯವಾಗಿವೆ

ಕಳೆದ ದಶಂಬರ ಮೊದಲ್ಗೊಂಡು ಮಾರ್ಚಿಯವರೆಗೆ ರಷ್ಯದ ಯುದ್ಧದಲ್ಲಿ ಹಿಟ್ಲರನಿಗೆ ಗೆಲ್ಲವಿಲ್ಲ, ರಷ್ಯನರು ಕಳೆದುಕೊಂಡ ಸ್ಥಳಗಳಲ್ಲಿ ಅನೇಕಗಳನ್ನು ಸ್ವಾಧೀನಪಡಿಸಿದ್ದಾರೆ ಎಂದರೆ ಚಳಿಗಾಲವಾಗಿದ್ದು, ಮುಂದೊತ್ತಿ ಕಾದಾಡುವುದು ಅಸಂಭವವಾಗಿ, ಅಗತ್ಯವಿಲ್ಲವೆಂದು ಹಿಟ್ಲರನೂ, ಮುಂದಿನ ಸಿದ್ಧತೆಗಾಗಿ ವಿಶ್ರಾಂತಿ ಪಡೆದಿದ್ದನೋ ಎಂದೂ ಹೇಳಬಹುದು ಅಂತೂ ಈಗ ರಷ್ಯದಲ್ಲಿ ವಸಂತಕಾಲ ಪ್ರಾರಂಭವಾಗಿದೆ ಹಿಟ್ಲರನ ವಸಂತಕಾಲದ ಯುದ್ಧದ ವಿಚಾರ ಹಿಂದೆಯೇ ಬಹಳ ಪ್ರಚಾರವಾಗಿದ್ದು ಜಗತ್ತೇ ಅದನ್ನು ಎದುರು ನೋಡುತ್ತಿದೆ, ರಷ್ಯನರಂತೂ ಕಳೆದ ಹತ್ತಾರು ತಿಂಗಳಿಂದ ಏಕಾಂಗ ವೀರರಾಗಿ ಶತ್ರುವನ್ನು ಎಡೆಬಿಡದೆ ಎದುರಿಸಿದ್ದಾರೆ ಅವರ ಆ ಶೌರ್ಯವು ದ್ವಿತೀಯ ಮಹಾಯುದ್ಧದ ಇತಿಹಾಸದಲ್ಲಿಯೇ ಪ್ರಶಂಸನೀಯವಾಗಿದೆ ಆದರೆ ಜರ್ಮನ್ ರಷ್ಯನರ ಈ ಹೋರಾಟದ ಅಂಕೆಸಂಖ್ಯೆಗಳನ್ನು ಸ್ವಲ್ಪ ಗಮನಿಸಿ ನೋಡುವುದು ಅವಶ್ಯವಾದುದು ಕಳೆದ ಜೂನಿನಿಂದ ದಶಂಬರದ ವರೆಗೆ ಜರ್ಮನರು ೩೫೦ ಮೈಲು ದೂರ ಮುನ್ನುಗ್ಗಿದರು ಆದರೆ ರಷ್ಯನರು ಕಳೆದ ಹಿಮಗಾಲದಲ್ಲಿ ಇದರ ಐದನೆಯ ಒಂದಂಶದಷ್ಟು, ಹಿಂದೆ ಹೋಗಿಲ್ಲ ಈಗಲೂ ಮೋಸ್ಕೋ, ಲೆನಿನ್‌ಗ್ರಾಡ್, ಕೇಲಿನಿನ್ ಕಾಳಗ ನಡೆಯುತ್ತಿದೆ ಮಝನಸ್ಕ್, ರಜೆವ್ ಮೊದಲಾದ ಒಂದೆರಡು ಕೇಂದ್ರಗಳನ್ನು ಸ್ವಾಧೀನಪಡಿಸಿಕೊಂಡರೂ, ನೊವ್ಗೊರಾಡ್, ಸ್ಮೊಲೆನ್‌ಸ್ಕ್, ಒರೆಲ್, ಚಾರ್ಕೊವ್ ಮೊದಲಾದೆಡೆಗಳಲ್ಲಿರುವ ಜರ್ಮನ್ ಶಿಬಿರಗಳನ್ನು ಅವರು ವಶಪಡಿಸಿಕೊಂಡಿಲ್ಲ. ಎಂದರೆ, ರಷ್ಯನರು ಚಳಿಗಾಲದಲ್ಲಿ ವೈರಿಗೆ ಮುಂದುವರಿಯಲು ಆಸ್ಪದವಿಲ್ಲದಿರುವಾಗ, ಅಪ್ರತಿಮರಾಗಿ ಹೋರಾಡಿ, ಅವರ ಬಲಮುರಿದು ಮುಂದೆ ಅವರಿಗೆ ವಸಂತಕಾಲದಲ್ಲಿ ಮುಂದೊತ್ತಿ ಬರಲು ಅಸಾಧ್ಯವಾಗುವಂತೆ ಮಾಡಿದ್ದರೆ, ಒಂದು ಲೆಕ್ಕವಿತ್ತು ಹಾಗೇನೂ ರಷ್ಯನರಿಗೆ ಮಾಡಲಾಗಲಿಲ್ಲವಾದುದರಿಂದ ಮುಂದಿನ ಹಿಟ್ಲರನ ವಸಂತಕಾಲದ ಯುದ್ಧವು ಭರದಿಂದ ಸಾಗಲಿರುವುದೆಂದು ಊಹಿಸಬೇಕಾಗಿದೆ ಈ ಯುದ್ಧದಲ್ಲಿ ರಷ್ಯನರು ಸೋತುಬಿಡಬಹುದೆಂದಾಗಲಿ, ಜರ್ಮನರೇ ಸೋಲುವರೆಂದಾಗಲಿ ಈಗ ಯಾರೂ ಹೇಳುವಂತಿಲ್ಲ ಮುಖ್ಯ ಏನೆಂದರೆ ಚಳಿಗಾಲದಲ್ಲಿ ರಷ್ಯನರು ಮಾಡಿದ ಹೋರಾಟದಿಂದ, ವಿಶ್ರಾಂತಿ ಬಗೆದಿದ್ದ ಶತ್ರುವಿಗೆ ವಿಶ್ರಾಂತಿಯೇ ದೊರಕಿತಲ್ಲದೆ ವಿಶೇಷವಾಗಿ ಗಣಿಸುವಂತಹ ನಷ್ಟಗಳೇನೂ ಒದಗಲಿಲ್ಲ. ಈ ಸಲದ ರಷ್ಯನ್ ಜರ್ಮನ್ ಯುದ್ಧವು ಹಿಂದಿಗಿಂತ ಉಗ್ರವಾಗುವ ಲಕ್ಷಣಗಳಿವೆ ಈ ಸಲ ಇನ್ನೂ ಹಲವು ರಾಷ್ಟ್ರಗಳು ಇವುಗಳ ಜತೆಸೇರಿ ಕಾದಾಡುವ ಸಂಭವವಿದೆ. ಹಿಟ್ಲರನಂತೂ ಈಗಾಗಲೇ ಫಿನ್ಲೆಂಡು, ಬಲ್ಗೇರಿಯ, ಗ್ರೀಸ್, ಯುಗೊಸ್ಲಾವಿಯಗಳನ್ನು ಹುರುಪುಗೊಳಿಸುವುದರಲ್ಲಿದ್ದಾನೆ ಟರ್ಕಿಗೆ ಜರ್ಮನ್ ರಾಯಭಾರಿ ಓಡಾಡುತ್ತಾನೆ ಫ್ರಾನ್ಸ್ ಸ್ಪೈನ್‌ಗಳಿಗೂ ಹಿಟ್ಲರನ ಒತ್ತಾಯವಾಗುತ್ತಿದೆ ಇಂತಹ ಸಿದ್ಧತೆಗಳೆಲ್ಲವನ್ನೂ ನೋಡಿದರೆ ಮುಂದಿನ ರಷ್ಯನ್ ರಣರಂಗದ ಕಾಳಗವು ಅತ್ಯುಗ್ರವಾಗಲಿದೆಯೆಂದು ಊಹಿಸಬೇಕಾಗಿದೆ

ಕ್ರಿಪ್ಸ್ ರಾಯಭಾರದ ವಿಷಯ ನಮಗೆ ಸಂತೋಷವಿದ್ದರೂ, ಕ್ರಿಪ್ಸರು ಪ್ರಕಟಿಸಿದ ಸೂಚನೆಗಳಿಂದ ಯಾರೂ ಸಂತೋಷಗೊಂಡಿಲ್ಲ ಮುಖ್ಯವಾದುದನ್ನು, ಸೈನ್ಯಖಾತೆಯನ್ನು ಬ್ರಿಟಿಷರೇ ಇಟ್ಟುಕೊಂಡು, ಮಿಕ್ಕವುಗಳನ್ನು ನಮಗೆ ಕೊಡುವ ಯೋಚನೆಯಂತೆ! ಯುದ್ಧಕಾಲದಲ್ಲಿ ಸಂರಕ್ಷಣೆ ಹಾಗೂ ಸೈನ್ಯಖಾತೆ ಮುಖ್ಯ ಸೇನಾಪತಿ ಕೇಳಿದಷ್ಟು ದುಡ್ಡು, ಕೇಳಿದಷ್ಟು ಜನಗಳನ್ನು ಯುದ್ಧಕಾರ್ಯಕ್ಕೆ ಭಾರತೀಯರು ಒದಗಿಸಬೇಕು, ಆದರೆ ಸೇನಾಪತಿಯ ಮೇಲೆ ನಮ್ಮ ರಾಷ್ಟ್ರಕ್ಕೆ ಅಧಿಕಾರವಿಲ್ಲ! ಇದು ಯಾವ ನ್ಯಾಯ? ಒರೆಯನ್ನು ಅವರೇ ಹಿಡಕೊಂಡು ಕತ್ತಿಯನ್ನು ನಮ್ಮ ಕೈಗೆ ಕೊಡುವ ಈ ಸೂಚನೆಯಾಗಿದೆ ಅದಾಗಿ ಕಾಂಗ್ರೆಸಿನವರಾದರೂ ಇದಕ್ಕೆ ಒಪ್ಪುವಂತೆ ಕಂಡುಬರುವುದಿಲ್ಲ ಕಾಂಗ್ರೆಸ್ ನಿರ್ಣಯವು ಕ್ರಿಪ್ಸರಿಗೆ ಹೋಗಿದೆ ಅದು ಬೇಗನೇ ಪ್ರಕಟವಾಗುವುದು, ಈಗ ಅಮೆರಿಕದ ಅಧ್ಯಕ್ಷ ರೂಸ್‌ವೆಲ್ಟರೂ ಒಮ್ಮೆಗೇ ಭಾರತದ ವಿಷಯ ಬಹಳ ಪ್ರೀತಿಗೊಂಡಂತೆ ತೋರುತ್ತದೆ, ತಮ್ಮ ವಿಶೇಷ ಪ್ರತಿನಿಧಿಯೊಬ್ಬನನ್ನು ಇಲ್ಲಿಗೆ ಕಳುಹಿಸಿದ್ದಾರೆ, ನೆಹರುಗಳೊತನೆ ಅವರ ಮಾತುಕತೆ ನಡೆಯಿತು! ಇದೆಲ್ಲಾ ನೋಡಿದರೆ, ಹೇಗಾದರೂ ಮಾಡಿ ಭಾರತೀಯರನ್ನು ಮಂಕುಗೊಳಿಸುವ ಹಂಚಿಕೆ ಮಾಡಿರುವರೆಂದು ಊಹಿಸಬೇಕಾಗಿದೆ! ಆದರೆ ನೆಹರು ರಾಜಾಜಿ ಮೊದಲಾದವರು ಮರುಳುಗೊಳಿಸುವ ಮಾತಿಗೆ ಬಲಿಬೀಳುವಂಥವರಲ್ಲವೆಂಬುದು ನಿಂತಿತ ಕ್ರಿಪ್ಸರ ಸೂಚನೆ, ಕಾಂಗ್ರೆಸ್ ಬೇಡಿಕೆಗಳೊಳಗೆ ಯಾವದಾದರೊಂದು ಮಧ್ಯಮಾರ್ಗವು ತೋರಿ ಎರಡು ಪಕ್ಷದವರಿಗೂ ಸಮ್ಮತವಾಗುವ ನಿರ್ಣಯವೊಂದು ಆಗಬಹುದೇ ಎಂದು ದೇಶವೇ ಈಗ ಎದುರು ನೋಡುತ್ತಿದೆ.

ಮಂಗಳೂರು.

ಬೊಳಿಪ್ಪುರೆ:–ಇಲ್ಲಿಯ ಜೋಡುರ್ಎಲಿಮೆಂಟರಿ ಶಾಲೆಯ ವಾರ್ಷಿಕ ವರ್ಧಂತ್ಯುತ್ಸವವು ತಾ 23-3-42ನೇ ಸೋಮವಾರ ಅಪರಾಹ್ನ ಗಂಟೆ 5-30ಕ್ಕೆ ಉಪ್ಪಿ ಕ್ರಿಶ್ಚಿಯನ್ ಹೈಸ್ಕೂಲಿನ ಕನ್ನಡ ಪಂಡಿತರಾದ ಶ್ರೀ ಕೆ. ವೆಂಕಟ್ರಮಣಾಚಾರ್ಯರವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನೆ, ಸ್ವಾಗತ, ಶಾಲಾಭಿನಂದನ, ವರದಿ ವಾಚನ, ಇನಾಮು ಹಂಚೋಣ, ಕೋಲಾಟ, ಲೇಜಿಂ, ಭೂತಾಳಪಾಂಡ್ಯ, (ತುಳು ನಾಟಕ) ಸತೀ ಊರ್ಮಿಳಾ (ಕನ್ನಡ ಸಂಗೀತ ನಾಟಕ) ಮೊದಲಾದ ವಿವಿಧ ವಿನೋದಾವಳಿಗಳ ಕಾರ್ಯಕ್ರಮಗಳಿಂದ ಕೂಡಿ ಪ್ರೇಕ್ಷಣೀಯವಾಗಿತು.

ಸ್ವದೇಶಾಭಿಮಾನಿ

ತಾರೀಕು 10—4—1942

ರಾಷ್ಟ್ರೀಯ ವಾರ

೧೯೧೯ರ ಮೊದಲ್ಗೊಂಡು ಎಪ್ರಿಲ್ ಆರನೆಯ ದಿನದಿಂದ ಮುಂದಿನ ಒಂದು ವಾರವನ್ನು ರಾಷ್ಟ್ರೀಯವಾರವಾಗಿ ಭಾರತೀಯರು ಆಚರಿಸುತ್ತಾ ಬಂದಿದ್ದಾರೆ. ಜನರಲ್ ಡಾಯರನು ೧೯೧೯ರಲ್ಲು ಅಮೃತಸರದ ಜಲಿಯನ್‌ವಾಲಾ ಬಾಗಿನಲ್ಲಿ ಸಾವಿರಾರು ಮಂದಿ ನಿರಪರಾಧಿ ಭಾರತೀಯರನ್ನು ಗುಂಡಿನೇಟಿಗೆ ಬಲಿಕೊಟ್ಟು ಕ್ರೂರ ಅತ್ಯಾಚಾರ ನಡೆಸಿದ ವಿಷಯವು ಎಂದೆಂದಿಗೂ ಭಾರತೀಯರ ಸ್ಮೃತಿ ಪಥದಿಂದ ಅಳಿಸಿಹೋಗಲಾರದು! ಆ ಅತ್ಯಾಚಾರ ಕಾಂಡವು ಭಾರತೀಯರ ದರಿದ್ರ ದಾಸ್ಯವನ್ನು ಬಹಿರಂಗ ಪಡಿಸಿತು! ಸ್ವಾತಂತ್ರ್ಯ ಹೀನ ದೀನಾವಸ್ಥೆಯನ್ನು ಸಾರಿ ಹೇಳಿತು. ಹಾಗಾಗಿ ಅಂದು ಮೊದಲ್ಗೊಂಡು ಭಾರತೀಯರು ತಮ್ಮ ಜನ್ಮಸಿದ್ಧ ಹಕ್ಕಾದ ಸ್ವಾತಂತ್ರ್ಯವನ್ನು ಸಾಧಿಸುವ ನಿರ್ಧಾರದ ನೆನಪಿಗಾಗಿ ಈ ವಾರವನ್ನು ರಾಷ್ಟ್ರೀಯ ವಾರವಾಗಿ ಆಚರಿಸುತ್ತಾ ಬಂದಿದ್ದಾರೆ

ಗಾಂಧಿಜಿ ಕಾಂಗ್ರೆಸಿನ ಮುಂದಾಳುತನವನ್ನು ಅಂಗೀಕರಿಸಿಕೊಂಡ ಮೇಲೆ ರಾಷ್ಟ್ರೀಯ ವಾರದ ಆಚರಣೆಯಲ್ಲಿ ಸ್ವಲ್ಪ ಬದಲಾವಣೆ ಮಾಡಲ್ಪಟ್ಟಿತು. ನಾವು ಸ್ವಾತಂತ್ರ್ಯವನ್ನು ಪಡೆಯಬೇಕೆಂದು ದೃಢವಾಗಿ ನಂಬುವುದರೊಡನೆ ಸ್ವಾತಂತ್ರ್ಯ ಪಡೆವ ಹಾದಿಯು ಮುಂದುವರಿಯುವಂತೆ ಕೆಲಸ ಮಾಡುವುದೂ ಅವಶ್ಯವೆಂದು ಖಾದಿ ಪ್ರಚಾರ, ಜಾತಿ ಐಕ್ಯ, ಅಸ್ಪೃಶ್ಯತಾ ನಿವಾರಣೆ ಮೊದಲಾದ ಕಾರ್ಯಕ್ರಮಗಳನ್ನು ಅವರು ರಾಷ್ಟ್ರೀಯ ವಾರದ ಅಂಗಗಳಾಗಿ ಜೋಡಿಸಿದರು ಹೀಗೆ ಹಲವು ಕಾರ್ಯಕ್ರಮಗಳಿಂದ ರಾಷ್ಟ್ರೀಯ ವಾರವು ಕಳೆದ ಇಪ್ಪತ್ತು ವರ್ಷಗಳಿಂದಲೂ ಆಚರಿಸುತ್ತಬಂದಿದೆ. ಜನರಲ್ ಡಾಯರನ್ನು ನಮ್ಮ ಅಸ್ವಾತಂತ್ರ್ಯದ ಸ್ಥಿತಿಯನ್ನು ತನ್ನ ಕ್ರೂರ ಅತ್ಯಾಚಾರದಿಂದ ತೋರಿಸಿಕೊಟ್ಟು ನಮ್ಮಲ್ಲಿ ರಾಷ್ಟ್ರೀಯತಾ ಬುದ್ಧಿಯು ನೆಲೆಗೊಳ್ಳುವಂತಾಗಲು ಒಂದು ರೀತಿಯಿಂದ ಸಹಕರಿಸಿದನೆಂದರೂ ಸಲ್ಲುವುದು!

ಈ ವರ್ಷದ ರಾಷ್ಟ್ರೀಯ ವಾರದ ಆಚರಣೆಯಲ್ಲಿ ಹಿಂದು ಮುಸಲ್ಮಾನ ಐಕ್ಯಕ್ಕೆ ಒಂದು ದಿನವನ್ನು ಮೀಸಲಾಗಿರಿಸಿದೆಯೆಂದು ಅಖಿಲ ಭಾರತ ಕಾಂಗ್ರೆಸಿನ ಪ್ರಕಟಣೆಯಿದೆ. ಇಂದು ದೇಶಕ್ಕೆ ಭೀಕರ ಗಂಡಾಂತರವು ಸನ್ನಿಹಿತವಾಗಿದೆ. ಈಗ ನಾವು ಜಾತೀಯತೆಯ ಕಲಹದಿಂದ ಪತಿತರಾಗಬಾರದು. ನಾವು ಐಕ್ಯಗೊಳ್ಳದಿದ್ದರೆ ನಮ್ಮ ವೈರಿಗಳಿಗೆ ಇಲ್ಲಿ ಪ್ರವೇಶಿಸಲು ಆಸ್ಪದವಾಗುತ್ತದೆ. ಹಿಂದು-ಮುಸಲ್ಮಾನರೆಂಬ ಈ ಪ್ರಾಮುಖ್ಯ ಜಾತಿಗಳು ಭೇದಬುದ್ಧಿಯನ್ನು ತೊರೆದು ವರ್ತಿಸುವುದರೊಡನೆ ಇತರ ಎಲ್ಲಾ ಮತ ಧರ್ಮದವರೂ ಒಂದಾಗಿ, ಭಾರತ ದೇಶದ ಏಳಿಗೆಯ ವಿಷಯದಲ್ಲಿ ಸಮಾನ ಸೋದರ ಭಾರತೀಯರಾಗಿ ನಡೆದುಕೊಳ್ಳಬೇಕಾದುದು ಕರ್ತವ್ಯವಾಗಿದೆ.

ಎಂದಿನಂತೆ ಈವರ್ಷ ಖಾದಿಯನ್ನು ಹೊತ್ತುಕೊಂಡು ಮನೆಮನೆ ಮಾರಾಟ ಮಾಡುವಷ್ಟರ ಮಟ್ಟಿಗೆ ಖಾದಿ ಉತ್ಪತ್ತಿ ಇರುವುದಿಲ್ಲ. ಆದರೆ, ಇದರ ಬದಲು ಪ್ರತಿಯೊಂದು ಮನೆಯಲ್ಲಿಯೂ ಖಾದಿ ಉತ್ಪತ್ತಿಯ ವಿಚಾರವಾಗಿ ಈ ವರ್ಷ ಕೆಲಸಮಾಡಬೇಕೆಂದು ಗಾಂಧಿಜಿ ತಿಳಿಸಿದ್ದಾರೆ. ನಮ್ಮ ರಾಷ್ಟ್ರೀಯ ಜೀವನದಲ್ಲಿ ಖಾದಿ ಎಷ್ಟರ ಮಟ್ಟಿಗೆ ಪ್ರಾಮುಖ್ಯತೆಯನ್ನು ಹೊಂದಿದೆಯೆಂದು ಈಗ ಎಲ್ಲರಿಗೂ ತಿಳಿದಿದೆ. ಪ್ರತಿಯೊಬ್ಬನೂ ಸ್ವಾವಲಂಬಿಯಾಗಿ ಜೀವಿಸುವಂತೆ ಖಾದಿಯು ಕಲಿಸುತ್ತದೆ ಎಂದೂ ಈಗ ಎಲ್ಲರಿಗೂ ಗೊತ್ತು. ಹಾಗಾಗಿ ಖಾದಿಯನ್ನು ನಿರ್ಮಾಣ ಮಾಡುವ ವಿಷಯಗಳನ್ನು ರಾಷ್ಟ್ರೀಯ ವಾರದಲ್ಲಿ ಗಮನಿಸಬೇಕಾದುದು ಅವಶ್ಯವಾಗಿದೆ. ಒಟ್ಟಿನಿಂದ ರಾಷ್ಟ್ರೀಯ ವಾರದಲ್ಲಿ ನಮ್ಮ ದೇಶದ ಆದ್ಯಂತ ಹೊಸ ಉತ್ಸಾಹ ಸ್ವಾತಂತ್ರ್ಯ ಭಕ್ತಿ ತಲೆಯೆತ್ತುವಂತೆ ಮಾಡತಕ್ಕದ್ದು ಭಾರತೀಯರೆನಿಸಿದ ಪ್ರತಿಯೊಬ್ಬರ ಕರ್ತವ್ಯವಾಗಿರುವುದು.

ಕಾಂಗ್ರೆಸಿನ ಇತ್ತೀಚಿಯ ಕಾರ್ಯಕ್ರಮ ಶಾಂತಿದಲದ ಸಂಘಟನೆ, ಭಾರತಕ್ಕೆ ಬಾಂಬು ಬಿದ್ದಿರುವೀಕಾಲದಲ್ಲಿ ಶಾಂತಿದಲದ ಸಂಘಟನೆಯ ಮಹತ್ವವು ಹೆಚ್ಚಿದಂತಾಗಿದೆ. ಜನರು ನಿರಾಶ್ರಿತರಾಗಿ ನಿಸ್ಸಹಾಯಕರಾಗಿ ನರಳುವ ಪರಿಸ್ಥಿತಿ ಬಂದರೂ ಬರಬಹುದು; ಈ ಸಂದರ್ಭದಲ್ಲಿ ಕಾಂಗ್ರೆಸಿನಂತಹ ಪ್ರಮುಖ ಪ್ರಜಾ ಪಕ್ಷವು ಸುಮ್ಮಗಿರಲು, ಸಾಧ್ಯವಿಲ್ಲ. ಅದಾಗಿ ಪ್ರತಿಯೊಂದು ನಗರ ಗ್ರಾಮಗಳಲ್ಲಿ ಶಾಂತಿದಳದ ಸಂಘಟನೆಯಾಗಿ, ಅದೇ ಭಾರತದ ಸೇನಾ ಸಮೂಹವೆನಿಸಿ ದೇಶದ ಹಿತವನ್ನು ಕಾಯುವಂತಾಗಬೇಕಾದ್ದರಿಂದ, ರಾಷ್ಟ್ರೀಯ ವಾರದಲ್ಲಿ ಆ ಕುರಿತು ಕಾಂಗ್ರೆಸಿನವರು ಗಮನಿಸುವುದು ಅತ್ಯಂತ ಅವಶ್ಯವಾಗಿದೆ.

ಭಾರತಕ್ಕೆ ಜಪಾನಿನ ಧಾಳಿ

ಈ ವಾರದ ಚಟುವಟಿಕೆಗಳನ್ನು ನಿರೀಕ್ಷಿಸಿದಲ್ಲಿ ಭಾರತಕ್ಕೆ ಜಪಾನ್ ಧಾಳಿಯ ಭೀತಿ ಹೆಚ್ಚಿದಂತಾಗಿದೆ. ವಿಶಾಖಪಟ್ಟಣ ಕೋಕನಾಡುಗಳಿಗೆ ಜಪಾನರು ತಾರೀಕು ಆರರಂದು ಭಾರತಕ್ಕೆ ಇದೇ ಮೊದಲನೆಯ ಸಲವಾಗಿ, ಬಾಂಬೆಸೆದರು. ಮದ್ರಾಸು ನಗರದಲ್ಲಿ ಬಾಂಬು ಧಾಳಿಯ ಭೀತಿ ಉಂಟಾಯಿತು! ಇದರಿಂದ ಇನ್ನು ಮುಂದೆ ಎಂದು ಯಾವಾಗ ಹಿಂದೂದೇಶದ ನಗರಗಳ ಮೇಲೆ ಜಪಾನರು ಬಾಂಬೆಸೆವರೋ ಎಂದು ಜನರು ಭೀತಿಯಿಂದ ಚಕಿತರಾಗುವಂತಾಗಿದೆ!

ಸಾವಿರಾರು ಮೈಲುಗಳಿಂದ ಬಂದ ಜಪಾನರು ಭಾರತೀಯರ ಮೇಲೆ ಬಾಂಬೆಸೆದು, ಭೀತಿ ಹುಟ್ಟಿಸಿ, ನಾಶಗೊಳಿಸಿಬಿಡುವುದು, ಭಾರತೀಯರು ನಿಸ್ಸಹಾಯ ಸ್ಥಿತಿಯಿಂದ ನರಳುವುದು ಇದು ಶೋಚನೀಯ ಪರಿಸ್ಥಿತಿ! ಆಕ್ರಮಿಸಿ ಬರುವ ಶತ್ರುವನ್ನು ಧೈರ್ಯದಿಂದ ಎದುರಿಸುವುದು ಕರ್ತವ್ಯ. ಆಕ್ರಮಣಗಾರರನ್ನು ಕಂಡು ಅಂಜುವುದು ಹೇಡಿತನ. ಭಾರತೀಯರು ನಿಸ್ಸಹಾಯರಾಗಲು, ನಿರಾಯುಧರಾಗಲು ಬ್ರಿಟಿಷರೇಹೊಣೆಗಾರರೆಂದು ಆರೋಪಿಸಿ, ಹೊಸತಾಗಿ ಬರುವ ಶತ್ರುವನ್ನು ಎದುರಿಸಲಾರದೆ ಕೈಕಟ್ಟಿ ಕುಳಿತಿರುವುದು ರಾಜಕೀಯ ಆತ್ಮಹತ್ಯೆಯಾಗುವುದು! ಇಂದಿನೀ ಸಂಧಿಕಾಲದಲ್ಲಿ ಭಾರತೀಯರು ಬಹಳ ಧೈರ್ಯದಿಂದಲೂ ವಿಚಕ್ಷಣತೆಯಿಂದಲೂ ವರ್ತಿಸಿ ದೇಶದ ಹಿತಕ್ಕಾಗಿ ಹೋರಾಡಬೇಕಾಗಿದೆ

ಕ್ರಿಪ್ಸರು ಈಗಲೂ ಮಾತುಕತೆ ನಡೆಸುತ್ತಿದ್ದಾರೆ. ಕ್ರಿಪ್ಸರ ಮಾತುಕತೆಯಲ್ಲಿ ಇತ್ತೀಚೆಗೆ ಯಾರೂ ಆಶೆ ಇಟ್ಟಿಲ್ಲ! ಕ್ರಿಪ್ಸರ ಸೂಚನೆಗಳು ಅಂಗೀಕಾರಾರ್ಹವಾಗಿಲ್ಲವೆಂದು ಹಲವು ಕಡೆಗಳಿಂದ ಟೀಕೆಬಂದಿವೆ, ಜಪಾನ್ ಹಿಂದೂದೇಶದ ಮೇಲೆ ಹೀಗೆ ಬಾಂಬೆಸೆದು ಬಿಟ್ಟಿರುವೀ ಕಾಲದಲ್ಲಾದರೂ ಬ್ರಿಟಿಷರು ದೂರ ದೃಷ್ಟಿಯಿಂದ ಭಾರತೀಯರನ್ನು ಸಂಪೂರ್ಣ ಸ್ವತಂತ್ರಗೊಳಿಸುವುದು ಉಚಿತವಾಗಿದೆ. ಚೀನವು ಕಳೆದ ಐದು ವರ್ಷಗಳಿಂದ ಜಪಾನಿನ ಉಗ್ರ ಧಾಳಿಯನ್ನೆದುರಿಸಿ ಹೋರಾಡುವುದಿದ್ದರೆ, ಅದು ತನ್ನ ಸ್ವಾತಂತ್ರ್ಯದ ಸಲುವಾಗಿಯೂಗಿದೆ ಭಾರತವನ್ನು ಇಂದಾದರೂ ಬ್ರಿಟಿಷರು ದಾಸ್ಯದಿಂದ ಬಿಡುಗಡೆಗೊಳಿಸಿ ಸ್ವತಂತ್ರ ಮಾಡಿದರೆ, ಆಕ್ರಮಣಗಾರರಾದ ಜಪಾನರಿಗೆ ಭಾರತವು ದ್ವಿತೀಯ ಚೀನವಾಗದಿರದು. ಸರ್ ಕ್ರಿಪ್ಸರು ಈ ವಿಷಯವನ್ನು ಗಮನಕ್ಕೆ ತಂದುಕೊಂಡು ಮಾತುಕತೆ ಮುಂದುವರಿಸುವುದು ವಿಹಿತವಾದುದು.

ವ್ಯರ್ಥ ಮಾತುಕತೆಗಳಿಂದ ಸಮಯ ಕಳೆವ ಕಾಲವಿದಲ್ಲ, ಜಗತ್ತಿನ ರಾಜಕೀಯದಲ್ಲಿ ಪ್ರತಿಯೊಂದು ನಿಮಿಷದಲ್ಲೆಂಬಂತೆ ವಿಶೇಷ ಪರಿವರ್ತನೆಗಳುಂಟಾಗುತ್ತಿವೆ. ಜಪಾನರಾದರೂ ಇಂದು ಮಿಂಚಿನ ವೇಗದಿಂದ ಭಾರತವನ್ನು ಆಕ್ರಮಿಸಲು ಬಂದಂತಿದೆ, ಜಪಾನರ ಅನ್ಯಾಯದ ಆಕ್ರಮಣವನ್ನೆದುರಿಸಲು ಜನತೆಯನ್ನು ಹುರಿದುಂಬಿಸಬೇಕಾದರೆ ಜನತಾ ಮುಖಂಡರು ಮಾತ್ರ ಸಮರ್ಥರು. ಪರಕೀಯ ಸರಕಾರವು ಭಾರತದ ಜನತಾ ಶಕ್ತಿಯನ್ನು ಜಾಗೃತಿಗೊಳಿಸಲಾರದು. ಇಂದು ಸನ್ನಿಹಿತವಾದ ಸಂಕಷ್ಟವನ್ನು ಪರಿಭಾವಿಸಿಕೊಂಡು, ಬ್ರಿಟಿಷರು ಭಾರತೀಯರಿಗೆ ಸಂಪೂರ್ಣ ಸ್ವಾತಂತ್ರ್ಯ ಸಾರಿ, ಜಪಾನರೆದುರು ಹೋರಾಡುವಂತೆ ಅವರನ್ನು ಸಿದ್ಧಗೊಳಿಸುವುದು ಅವಶ್ಯವೂ ಬುದ್ಧಿವಂತಿಕೆಯ ಕಾರ್ಯವೂ ಆಗಿದೆ ವ್ಯರ್ಥ ಮಾತುಕತೆಗಳಿಂದ ಹಾಳುಮಾಡುವ ಪ್ರತಿಯೊಂದು ನಿಮಿಷವೂ ಭಾರತದ ಹಿತದ ದೃಷ್ಟಿಯಿಂದ ಘೋರ ಅಪರಾಧವಾಗುವುದು.

ನೋಟಗಳು . . .

“ಮೊದಲನೆಯ ಬಾರಿ, ಕೊಡೆ ಹಿಡಿದುಕೊಂಡು ಮಾರ್ಗಕ್ಕಿಳಿದ ಮನುಷ್ಯನನ್ನು ಕಂಡು ಉಳಿದವರೆಲ್ಲರೂ ನಗಾಡಿದರು; ಬೈದರು; ಹುಚ್ಚನೆಂದರು ಆದರೆಕೊನೆಗೆ ಎಲ್ಲರಿಗೂ ಕೊಡೆಯು ಅವಶ್ಯಬೇಕಾದುದೆಂದು ತಿಳಿಯಿತು’ ಹೀಗೆಂದು ಜಿನ್ನರು ತನ್ನ ಪಾಕಿಸ್ಥಾನ ತತ್ವದ ವಿಷಯ ಪತ್ರಿಕೋದ್ಯಮಿಗಳಿಗೆ ವಿವರಿಸುತ್ತಾ ಹೇಳಿದರು!

卐

ಜಿನ್ನರು ಕೊಡೆ ಹಿಡಿದುಕೊಂಡು ಹೊರಟಿದ್ದಾರೆ! ಆದರೆ ಈ ಯುದ್ಧಕಾಲದಲ್ಲಿ, ಬಾಂಬಿನ ಮಳೆ ಸುರಿವಾಗ ಕೊಡೆಯಿಂದ ಅದನ್ನು ತಡೆಯುವುದು ಸಾಧ್ಯವುಂಟೆ?

卐

ಚೆಂಬರ್ಲಿನರೂ ಕೊಡೆಹಿಡಿದು ಹೊರಟಿದ್ದರು! ಯುದ್ಧದ ಗೊಂದಲದಲ್ಲಿ ಚೆಂಬರ್ಲಿನರನ್ನು ಅವರ ಕೊಡೆಯು ರಕ್ಷಿಸಲಾರದಾಯಿತು! ಚೆಂಬರ್ಲಿನರು ಪ್ರಧಾನಿ ಪಟ್ಟದಿಂದ ಉರುಳಿದರು! ಪಾಪ! ಕೆಲವೇ ದಿನಗಳಲ್ಲಿ ಕೀರ್ತಿಶೇಷರೂ ಆದರು!

卐

ಜಿನ್ನರೂ ಈಗ ಕೊಡೆಹಿಡಿದು ಹೊರಟಿದ್ದಾರೆ! ಆದರೆ ಇದು ಯುದ್ಧಕಾಲವೆಂದು ಚೆಂಬರ್ಲಿನರಂತೆ ಜಿನ್ನರಿಗೂ ನೆನಪೇ ಇಲ್ಲವೇನೋ? ಎಲ್ಲರೂ ಕೊಡೆಹಿಡಿದು ಹೊರಟ ತನ್ನನ್ನು ಹಿಂಬಾಲಿಸಿ ಬರಬಹುದೆಂದು ಜಿನ್ನರ ನಂಬಿಗೆ! ಆದರೆ ಜನರು ಅವರನ್ನು ನೋಡಿ ನಗಾಡುತ್ತಾರೆ!

卐

ಜನರು ತನ್ನನ್ನು ನೋಡಿ ನಗಾಡುತ್ತಾರೆಂದು ಜಿನ್ನರಿಗೂ ಗೊತ್ತು! ಮೊದಲನೆಯ ಬಾರಿ ಕೊಡೆಹಿಡಿದು ಹೊರಟ ಮನುಷ್ಯನನ್ನು ಕಂಡು ಉಳಿದವರೆಲ್ಲರೂ ನಗಾಡಿದರಷ್ಟೆ? ಆದರೆ ಜನರಿಗೆ ಮುಂದೆ ತಿಳುವಳಿಕೆಯುಂಟಾದೀತೆಂದು ಜಿನ್ನರ ಹಂಬಲ! ಜಿನ್ನರಿಗೆ ಹೀಗೇಕೆ ತಲೆ ಕೆಟ್ಟುಹೋಗಿದೆಯೆಂದು ಜನರ ಗೊಂದಲ!

卐

‘ಇತರರೆಲ್ಲರೂ ಮೂರ್ಖರು, ತಾನೊಬ್ಬ ಬುದ್ಧಿವಂತ’ ಎನ್ನುವವರೂ ಕೆಲವರಿದ್ದಾರೆ! ‘ಲೋಕಕ್ಕೆಲ್ಲಾ, ಹುಚ್ಚು ತನಗೆ ಮಾತ್ರ ತಲೆ ಸರಿಯಿದೆ’ ಎಂದು ತಿಳಕೊಳ್ಳುವವರೂ ಇಲ್ಲದಿಲ್ಲ!

卐

ಜನರು ಏನೆಂದರೂ ತನ್ನ ಪಾಕಿಸ್ಥಾನ ಯೋಜನೆ ಸರಿಯೆಂದೇ ಜಿನ್ನರ ಮತ! ತಾನು ಹಿಡಿದ ಕೋಳಿಗೆ ಮೂರು ಕಾಲೆನ್ನುವುದೇ ಕೆಲವರ ಸಿದ್ಧಾಂತ!

卐

ಪಾಕಿಸ್ಥಾನ ಕೊಡದಿದ್ದರೆ ನಾವು ಜಗಳ ಮಾಡುವೆವು ಎಂದು ಲೀಗು ಕ್ರಿಪ್ಸರಿಗೆ ತಿಳಿಸಿದೆ!

卐

ಪಾಕಿಸ್ಥಾನ ಕೊಟ್ಟರೆ ನಾವು ಜಗಳ ಮಾಡುವೆವು ಎಂದು ಹಿಂದು ಮಹಾಸಭೆ ಕ್ರಿಪ್ಸರಿಗೆ ತಿಳಿಸಿದೆ!

卐

ಲೀಗು ಹಿಂದು ಮಹಾಸಭೆ ಇವೆರಡನ್ನು ಬಿಟ್ಟು ಕ್ರಿಪ್ಸರು ಕಾಂಗ್ರೆಸಿನ ಬೆನ್ನು ಹಿಡಿದಿದ್ದಾರೆ.

"ಸ್ವತಂತ್ರ ಹಿಂದುಸ್ತಾನದಲ್ಲಿ ವಿದೇಶೀಯರಿಗೆ ಸ್ವಾಗತವಿದೆ"

ಸ್ವತಂತ್ರವಾದ ಭಾರತದಲ್ಲಿ ಪರದೇಶಿಯರಿಗೆ

'ಸ್ವಾಗತ, ಆದರೆ ಸುಲಿಯಬಾರದು'

ಗಾಂಧಿಜಿ ಲೇಖನ

ಸ್ವತಂತ್ರ ಭಾರತದಲ್ಲಿ ಪರದೇಶಿಯರಿಗೆ ಹಾಗೂ ಬ್ರಿಟಿಷರಿಗೆ ಇರಲು ಆಸ್ಪದವಿದೆಯೋ ಎಂಬ ಪ್ರಶ್ನೆಗೆ ಗಾಂಧಿಜಿ 'ಹರಿಜನ'ದಲ್ಲಿ ಹೀಗೆಂದು ಉತ್ತರಕೊಡುತ್ತಾರೆ.

'ಭಾರತವು ಸ್ವತಂತ್ರವಾದರೆ ಅದು ಆದರ ಇಷ್ಟದಂತೆ ಮಾಡಬಹುದು. ಆದರೆ ನನಗೇನಾದರೂ ಅದರಲ್ಲಿ ಪ್ರಭಾವವಿದ್ದರೆ, ಪರಕೀಯರಿಗೆ ನಾವು ಸ್ವಾಗತ ಕೊಡಬೇಕನ್ನುವೆನು; ಆದರೆ ಅವರು ಇದು ವರೆಗೆ ಮಾಡಿದಂತೆ ನಮ್ಮನ್ನು ಸುಲಿಗೆ ಮಾಡಬಾರದು, ಆದರೆ ಸ್ವತಂತ್ರವಾದ ಹಿಂದೂದೇಶವು ಮುಂದೆ ಹೇಗಿರುವುದು ಎಂದು ನಾವು ವಿಚಾರಮಾಡಬೇಕು.

ಇದುವರೆಗೆ ಸ್ವಲ್ಪ ಹೆಚ್ಚುಕಡಿಮೆ ಪೂರ್ಣ ಕಡಿಮೆ ಪೂರ್ಣ ಹಾಗೂ ಯಶಸ್ವಿಯಾಗಿ ಹಿಂದುಸ್ತಾನವು ಅಹಿಂಸೆಯನ್ನು ಅನುಸರಿಸಿದಂತೆ ಇನ್ನು ಮುಂದೆಯೂ ಅನುಸರಿಸಿದರೆ ಯೂರೋಪಿನ ಚಿಕ್ಕ ರಾಷ್ಟ್ರಗಳಂತೆ ಹೆದರ ಬೇಕಾಗಿಲ್ಲ. ಪರಕೀಯರ ಧಾಳಿಯಿಂದ ರಾಷ್ಟ್ರವನ್ನು ರಕ್ಷಿಸಲು ದೇಶವನ್ನು ರಕ್ಷಿಸಲು ದೇಶದ ದೊಡ್ಡದಿರಬೇಕೆನ್ನುವುದು ಅಹಿಂಸಾತ್ಮಕ ರಾಷ್ಟ್ರಕ್ಕೆ ಅವಶ್ಯವಿರುವುದಿಲ್ಲ. ಅಂಥ ರಾಷ್ಟ್ರವು ಹೊರಗಿನ ಧಾಳಿಯನ್ನು ತಡೆಯಲು ಒಂದು ಪೈಯನ್ನೂ ವೆಚ್ಚ ಮಾಡಬೇಕಾಗಿಲ್ಲ. ಅಂಥ ರಾಷ್ಟ್ರವು ಎಂದಾದರೂ ಅಸ್ತಿತ್ವದಲ್ಲಿ ಬರುವುದೋ ಎಂಬುದೂ ಪ್ರಶ್ನೆ. ತಾತ್ವಿಕ ಪ್ರಪಂಚದಲ್ಲಿ ಅದಕ್ಕೆ ಓಕವಿಲ್ಲ. ಅಹಿಂಸಾ ತತ್ವವು ವ್ಯವಹಾರ ದೃಷ್ಟಿಯಿಂದ ಕಠಿಣವೆಂದು ಹಲವರು ಹೇಳುತ್ತಿರುವುದರಿಂದ, ಜನರ ಬೆಂಬಲವು ಎಷ್ಟರ ಮಟ್ಟಿಗೆ ಸಿಗಬಹುದೆಂಬುದು ಇನ್ನೊಂದು ಪ್ರಶ್ನೆ. ಆದರೆ ಮನುಷ್ಯನು ವೈಯಕ್ತಿಕವಾಗಿ ಅದನ್ನು ಆಚರಿಸುವುದರಿಂದ ಆ ಸದ್ಗುಣ ಉನ್ನತ ಸ್ಥಿತಿಗೆ ಮುಟ್ಟಬಹುದೆಂದು ಸಿದ್ಧವಾಗುವುದು. ಸಾಂಘಿಕ ರೀತಿಯಿಂದ ಸಾಹಸ ಪ್ರಯತ್ನಗಳನ್ನು ಮಾಡಿದರೆ ಅಂಥವರ ಸಂಖ್ಯೆಯನ್ನು ಹೆಚ್ಚಿಸಬಹುದು. ಹಿಂದುಸ್ತಾನದಲ್ಲಿ ಅಂಥ ಮನೋವೃತ್ತಿ ಕಂಡು ಬರದಿದ್ದರೂ ನಾನು ನನ್ನ ಉದ್ಯೋಗ ಬಿಡಲಾರೆ, ಹಾಗೂ ಅದರಲ್ಲಿ ವಿಶ್ವಾಸ ಬಿಡಲಾರೆ, ಹಾಗೂ ಅದರಲ್ಲಿ ವಿಶ್ವಾಸ ಬಿಡಲಾರೆ ಹಿಂದುಸ್ತಾನವು ಸ್ವಾತಂತ್ರ್ಯವನ್ನು ಗಳಿಸುವ ಆಶೆಯನ್ನು ಕೆಲವು ಈಗ ಹಲವರು ಬಿಟ್ಟಂತೆ ಬಿಟ್ಟಂತೆ ಬಿಡಬಹುದು. ಏಕೆಂದರೆ ನಿಶ್ಶಸ್ತ್ರವಾಗಿರುವ ದೇಶವು ಶಸ್ತ್ರಸಜ್ಜಿತವಾಗಲು ಸಾವಿರಾರು ವರ್ಷಗಳು ಬೇಕೆಂದು ಅವರು ತಿಳಿವರು, ಆದರೆ ನಾನು ನಿರಾಶನಾಗಿಲ್ಲ. 'ಸ್ವಾತಂತ್ರ್ಯವು ಹಿಂದುಸ್ತಾನದ ಜನ್ಮಸಿದ್ಧ ಹಕ್ಕು; ಎಷ್ಟು ಕಷ್ಟ ಬಂದರೂ ಅದು ದೊರೆವುದು' ಎಂದು ತಿಲಕರು ಘಂಟಾಘೋಷವಾಗಿದ್ದಾರೆ. ಧ್ಯೇಯ ಸಾಧನೆಯ ಪ್ರಯತ್ನದಲ್ಲಿ ಕೀರ್ತಿಯಿರುವುದಲ್ಲದೆ ಪ್ರಾಪ್ತಿಯಲ್ಲಲ್ಲ. ಇನ್ನೂ ಗೂಢವಾಗಿರುವ ಅಹಿಂಸೆಯ ಸತ್ವವನ್ನು ಪೂರ್ಣತ್ವಕ್ಕೆ ತರುವ ಯತ್ನದಲ್ಲಿ ಯಶಸ್ಸು ಪ್ರಾಪ್ತಿಯಾಗುವುದೆಂದು ನನಗೆ ಭರವಸೆಯಿದೆ. ಶ್ರಮವು ದೊಡ್ಡವಾದರೆ ಫಲವು ದೊಡ್ಡದಾಗುವುದು."

"ಮಾತನಾಡುವ ಸಮಯ ಬಂದಿಲ್ಲ,"

ಮೌನವೇ ಈಗ ಒಳ್ಳೇಯದು

ಕ್ರಿಪ್ಸರ ರಾಯಭಾರದ ಕುರಿತು ಗಾಂಧಿಜಿ

ಕ್ರಿಪ್ಸ್‌ರ ರಾಯಭಾರದ ಕುರಿತು, ದಿಲ್ಲಿಯಿಂದ ವಾರ್ಧಾಕ್ಕೆ ಹೊರಟ ಗಾಂಧಿಜಿಯನ್ನು ಪತ್ರಿಕಾ ವರದಿಗಾರರು ಮುತ್ತಿಗೆ ಹಾಕಿ ಕೇಳಿದರೂ ಅವರು ಏನೆಂದೂ ಹೇಳಲಿಲ್ಲ. ನಾನೀವಿಷಯ ಈಗ ಮೌನತಾಳಿದೇನೆ ಮಾತನಾಡುವ ಸಮಯ ಇನ್ನೂ ಬಂದಿಲ್ಲ' ಎಂದರು. ಕೊನೆಗೆ ಅವರಿಂದ ಹರಿಜನ ನಿಧಿಗಾಗಿ ಭಿಕ್ಷೆ ಬೇಡಿದರು.

ಆದರೆ ಹಿಂದಿನಂತೆ ಅವರು ಸುಲಿಗೆ ಮಾಡಬಾರದು

ಭಾಷಾನುಗುಣ ಪ್ರಾಂತ ವಿಭಜನೆಗೆ ನಾನೇ ಮೂಲ ಕಾರಣನು

ಗಾಂಧಿಜಿ ಲೇಖನ

('ಹರಿಜನ'ದಿಂದ)

'ಭಾಷಾನುಗುಣ ಪ್ರಾಂತರಚನೆಗೆ ನಾನು ಮೂಲಕಾರಣನು'

ಆಂಧ್ರಪ್ರಾಂತ ನಿರ್ಮಾಣದ ವಿಷಯ

ಗಾಂಧಿಜಿ ಲೇಖನ

ಭಾಷಾನುಗುಣ ಪ್ರಾಂತ ವಿಭಜನೆಯಾಗಬೇಕೆಂಬ ತತ್ವಕ್ಕೆ ತಾವೇ ಮೂಲಕಾರಣರೆಂದೂ, ತಾವೆಂದಿಗೂ ಆಂಧ್ರಪ್ರಾಂತ ನಿರ್ಮಾಣಕ್ಕೆ ವಿರೋಧಿಯಾಗಿಲ್ಲವೆಂದೂ ಗಾಂಧಿಜಿ 'ಹರಿಜನ'ದಲ್ಲಿ ಬರೆದಿರುವರು. 'ಆಂಧ್ರರನ್ನು ಕಂಡರೆ ಗಾಂಧಿಜಿಗೆ ಆಗದು, ಆಂಧ್ರಪ್ರಾಂತ ನಿರ್ಮಾಣಕ್ಕೆ ಗಾಂಧಿಜಿ ಒಪ್ಪಿಗೆಯಿಲ್ಲ ಗಾಂಧಿಜಿ ಕಾಶಿಗೆ ಹೋದದ್ದು ಆಂಧ್ರಪ್ರಾಂತವು ಪ್ರತ್ಯೇಕವಾಗಬೇಕೆಂಬ ಚಳವಳವನ್ನು ತಡೆಯಲು,' ಪ್ರತ್ಯೇಕ ಪ್ರಾಂತ ನಿರ್ಮಾಣಕ್ಕೆ ಸಾಕಷ್ಟು ಆದಾಯವಿಲ್ಲದ್ದ, ಕರ್ನಾಟಕ ಕೇರಳಗಳಂತೆ ಆಂಧ್ರದ ವಿಷಯವೆಂದು ಗಾಂಧಿಜಿ ಭಾವಿಸುತ್ತಾರೆ' ಇತ್ಯಾದಿ ಅವರ ಮೇಲೆ ಆರೋಪವಿದೆಯೆಂದು, ಆಂಧ್ರ ಮಹಾಸಭಾಧ್ಯಕ್ಷ ವಿಜಯನಗರದ ಮಹಾರಾಜಕುಮಾರ್ ಸರ್ ವಿಜಯರು ಬರೆದ ಪತ್ರಕ್ಕೆ ಗಾಂಧಿಜಿ ಉತ್ತರವೀಯುತ್ತಾ ಹೀಗನ್ನುತ್ತಾರೆ.

"ಮಹಾರಾಜಕುಮಾರರು ಕೆಟ್ಟವರ ಕೈಯಲ್ಲಿ ಸಿಕ್ಕಿದ್ದಾರೆ—ತಮ್ಮ ಸುದ್ದಿಗಾರರ ಯಥಾರ್ಥವನ್ನು ಅವರು ಪರಿಶೀಲಿಸಲಿಲ್ಲ. ಆಂಧ್ರ ದೇಶಕ್ಕೆ ನಾನು ಹೊಸಬನಲ್ಲ ಶ್ರೀಗಳಾದ ಕೊಂಡ ವೆಂಕಟಪ್ಪಯ್ಯ, ಪ್ರಕಾಶಂ, ಪಟ್ಟಾಭಿ, ಕಾಶೀಶ್ವರರಾವ್ ಸೀತಾರಾಮ ಶಾಸ್ತ್ರಿ ಇವರೆಲ್ಲರೂ ನನ್ನ ಮಿತ್ರರು. ಕಾಂಗ್ರೆಸು ಭಾಷಾನುಗುಣ ಪ್ರಾಂತವಿಭಾಗವನ್ನಂಗೀಕರಿಸಲು ನಾನೇ ಮೂಲಕಾರಣನು. ಸರಕಾರವೂ ಅದನ್ನಂಗೀಕರಿಸಬೇಕೆಂದು ನಾನು ಚಳವಳ ಹೂಡಿದ್ದೇನೆ. ಆಂಧ್ರರ ಬೇಡಿಕೆಯನ್ನು ವಿರೋಧಿಸಬಾರದೆಂದು ತಮಿಳುನಾಡಿನವರಿಗೆ ನಾನು ಹೇಳಿದ್ದೇನೆ ರಾಜಾಜಿಯವರ ಸಹಾಯದಲ್ಲಿ ಕಾಂಗ್ರೆಸ್ ಸರಕಾರವು ಆಂಧ್ರ ಪ್ರಾಂತ ನಿರ್ಮಾಣದ ಚಳವಳ ಹೂಡಿದೆ. ಅದು ಯಶಸ್ವಿಯಾಗದಿರುವುದಕ್ಕೆ ಕಾಂಗ್ರೆಸ್ ಸರಕಾರ ಹೊಣೆಯಲ್ಲ. ಕರ್ನಾಟಕ, ಕೇರಳ ಆಂಧ್ರಗಳಲ್ಲಿ ನಾನು ಭೇದಮಾಡುವುದಿಲ್ಲ".

ರಾಷ್ಟ್ರೀಯ ಸಪ್ತಾಹ

ಗಾಂಧಿಜಿ ಲೇಖನ

"ವರ್ಷಗಳಲ್ಲಿ ಹುತುಗಳು ಬರುವಂತೆ ರಾಷ್ಟ್ರೀಯ ಸಪ್ತಾಹವೂ ಬರುತ್ತದೆ. ಈಗ ೨೦ ವರ್ಷಗಳಿಂದ ಅದು ಆಗುತ್ತದೆ. ಇಷ್ಟಾದರೂ ನಾವು ಜಾತೀಯತಾ ಸಹಿಷ್ಣುತೆ, ಖಾದಿ ಪ್ರಚಾರ, ಸ್ವಾತಂತ್ರ್ಯಗಳಿಂದ ಬಹುದೂರವಿದ್ದೇವೆ ಈ ಮೂರು ಮುಖ್ಯ ಉದ್ದೇಶಗಳನ್ನಿಟ್ಟುಕೊಂಡು ಈ ವಾರವನ್ನಾಚರಿಸಬೇಕು. ನಮ್ಮಲ್ಲಿ ಐಕ್ಯವಿದ್ದರೂ, ಖಾದಿ ಪ್ರಸಾರವಾದರೂ ಸ್ವಾತಂತ್ರ್ಯ ಸಿದ್ಧ. ಖಾದಿ ವಿಚಾರ ಒಂದು ಮಾತು. ಇಷ್ಟರ ವರೆಗೆ ಖಾದಿ ಮಾರಾಟವಾಗುತ್ತಿತ್ತು, ಈ ವರ್ಷ ಮಾರಾಟಮಾಡಲು ಖಾದಿಯಿಲ್ಲ; ಆದರೆ ನಾವೆಲ್ಲರೂ ಖಾದಿ ತಯಾರಿಸಬೇಕು, ನಿಧಿ ಶೇಖರಿಸಬೇಕು, ಎಪ್ರಿಲ್ ೬ ಮತ್ತು ೧೩ರ ಉಪವಾಸವನ್ನು ಮರೆವಂತಿಲ್ಲ. ನಂಬಿಕೆಯಿರುವವರು ಉಪವಾಸ ವ್ರತವನ್ನೂ ಪ್ರಾರ್ಥನೆಯನ್ನೂ ಮರೆಯದಿರಲಿ".

ಕಾರ್ಕಳ

ರಾಷ್ಟ್ರೀಯ ಸಪ್ತಾಹ

ತಾ. ೬ರ ದಿನ ಬೆಳಗ್ಗೆ ಪ್ರಭಾತ ಫೇರಿಯಾಗಿ ಶ್ರೀ. ಕೆ. ವೆಂಕಟೇಶ ಪ್ರಭುಗಳವರು ಧ್ವಜಾರೋಹಣ ಮಾಡಿದರು. ವಿಧಾಯಕ ಕಾರ್ಯಕ್ರಮವು ಕೈಕೊಳ್ಳಲ್ಪಟ್ಟಿದೆ.

ಸಂಘ ಸ್ಥಾಪನೆ

ನೂಲುವುದು, ಒದ್ದರ ಮಾರಾಟ ಮೊದಲಾದವನ್ನು ವ್ಯವಸ್ಥಿತ ಗೊಳಿಸಲಿಕ್ಕೆ ಇಲ್ಲೊಂದು ಚರಕ ಸಂಘವು ಸ್ಥಾಪಿತವಾಗಿದೆ. ಹಿಂದೀ ಪ್ರಚಾರವನ್ನು ತಾಲೂಕಿನಲ್ಲಿ ವ್ಯವಸ್ಥೆಗೊಳಿಸಲಿಕ್ಕೆ ತಯಾರುಗೊಳಿಸಲಿಕ್ಕೆ ಒಂದು ತಾಲೂಕು ಹಿಂದೀ ಪ್ರಚಾರ ಸಂಘವನ್ನು ಸ್ಥಾಪಿಸುವ ಪ್ರಯತ್ನಗಳು ನಡೆಯುತ್ತಿವೆ.

ಹಿಂದೀ ಪರೀಕ್ಷೆಗಳು

ಫೇಬ್ರುವರಿ ತಿಂಗಳ ಪರೀಕ್ಷೆಗಳ ಫಲಿತಾಂಶವು ಪ್ರಕಟವಾಗಿದೆ ೪೦ ಮಂದಿ ಪರೀಕ್ಷೆಯನ್ನು ಕೊಟ್ಟವರಲ್ಲಿ ಮೂವರು ಮಾತ್ರ ಉತ್ತೀರ್ಣರಾಗಿರುವರು.

—"ಕಾಂಚನ್"ದಲ್ಲಿ ಲೀಲಾಚಿಟ್ನೀಸ್—
ಬೇಗನೇ ಸೆಂಟ್ರಲ್ ಟಾಕೀಸಿಗೆ ಬರಲಿರುವುದು.

ವಿಶಾಖಪಟ್ಟಣ ಕೋಕನಾಡುಗಳಿಗೆ ಬಾಂಬು!

ಮದ್ರಾಸಿನ ಮೇಲೆ ಬಾಂಬು ಭೀತಿ

ಹಿಟ್ಲರನ ಪ್ರಚಂಡ ಯುದ್ಧ ಸಿದ್ಧತೆ

ವಿಶಾಖ ಕೋಕನಾಡುಗಳ ಬಾಂಬು ವಿವರ

ಧಕ್ಕೆಯ ಪ್ರದೇಶದಲ್ಲಿ ೨೦ ಬಾಂಬು ಒಗೆಯಲ್ಪಟ್ಟವು

ಕೋಕೋನಾಡ ಎಣ್ಣೆ ಕಾರಖಾನೆಗೆ ಪೆಟ್ಟು!

ತಾ. ೬ರಂದು ವಿಶಾಖಪಟ್ಟಣ ಹಾಗು ಕೋಕೋನಾಡಗಳ ಮೇಲೆ ನಡೆದ ವಿಮಾನ ಧಾಳಿಯ ಸಂಪೂರ್ಣ ವಿವರಗಳು ಇನ್ನೂ ತಿಳಿದುಬಂದಿಲ್ಲ. ಆದರೂ ಈ ವರೆಗೆ ಪ್ರಸಿದ್ಧವಾದ ವಿವರಗಳಿಗಿಂತ ಸ್ವಲ್ಪ ಹೆಚ್ಚು ವಿವರಗಳನ್ನು ಕೊಡುವದು ಸಾಧ್ಯವಾಗಿದೆ ಎಂಬುದಾಗಿ ಮದ್ರಾಸ್ ಸರಕಾರದ ನಾಗರಿಕ ರಕ್ಷಣೆ ಖಾತೆಯವರು ಇಂದು ಪ್ರಕಟನೆ ಹೊರಡಿಸಿದ್ದಾರೆ. ಅದರಲ್ಲಿ ಅವರು ಕೆಳಗಿನಂತೆ ಉಲ್ಲೇಖಿಸಿರುವರು.

ವಿಶಾಖ ಪಟ್ಟಣ ಬಂದರದಲ್ಲಿಯ ಧಕ್ಕೆ ಪ್ರದೇಶದಲ್ಲಿ ಮೊದಲನೇ ಧಾಳಿಯು ಮಧ್ಯಾಹ್ನ ೧೧-೪೦ ಗಂಟೆಗೆ ಸಂಭವಿಸಿತು. ಮತ್ತು ಎರಡನೇ ಧಾಳಿಯು ಸಂಜೆಯ ೫ ಗಂಟೆಗೆ ಆಯಿತು. ಈ ಎರಡೂ ಧಾಳಿಗೆ ೧೦ಕ್ಕಿಂತ ಹೆಚ್ಚು ವಿಮಾನಗಳು ಬಂದಿರಲಿಲ್ಲ. ಒಟ್ಟು ೩೦ ಬಾಂಬುಗಳು ಒಗೆಯಲ್ಪಟ್ಟವು. ಬಂದರದಲ್ಲಿಯ ಕೆಲವು ಕಡೆಗಳಲ್ಲಿ ಹಾನಿ ಸಂಭವಿಸಿತು. ಪ್ರಾಣ ಹಾನಿ ಸ್ವಲ್ಪೇ ಆಗಿದ್ದು ನಗರ ಪ್ರದೇಶದಲ್ಲಿ ಒಂದೂ ಬಾಂಬು ಬೀಳಲಿಲ್ಲ.

ಕೋಕನಾಡದಲ್ಲಿ ಮೊದಲನೇ ಧಾಳಿಯು ಮುಂಜಾನೆ ೮ ಗಂಟೆಗೆ ಸಂಭವಿಸಿತು. ಒಂದು ವಿಮಾನವು ಬಂದು ಕೋರೋಮಂಡಲ ಕಂಪೆನಿಯ ಲಾಂಛ್ ಮೇಲೆ ಬಾಂಬು ಒಗೆಯಿತು. ಲಾಂಛವು ಆಗ ಒಂದು ಹಡಗವನ್ನು ಬಂದರ ರಸ್ತೆಗೆ ತನ್ನ ಸಂರಕ್ಷಣೆಯಲ್ಲಿ ತೆಗೆದುಕೊಂಡು ನಡೆದಿತ್ತು. ವಿಮಾನವು ಎರಡೂ ಹಡಗಗಳ ಮೇಲೆ ಗುಂಡುಗಳನ್ನು ಸುರಿಸಿತು. ಲಾಂಛಿನಲ್ಲಿಯ ಓರ್ವ ನಾವಿಕನು ಮರಣಹೊಂದಿದ್ದಲ್ಲದೆ ಒಬ್ಬನು ಗಾಯಗೊಂಡನು.

ನೆಲದ ಮೇಲೆ ಮೊದಲನೇ ಧಾಳಿಯು ಮಧ್ಯಾಹ್ನ ೧-೪೫ ಗಂಟೆಗೆ ಆಯಿತು. ೫ ಜಪಾನೀ ವಿಮಾನಗಳು ಎಣ್ಣೆ ಕಾರಖಾನೆ ಮೇಲೆ ಧಾಳಿ ಮಾಡಿದವು. ಕಾರಖಾನೆಗೆ ಸ್ವಲ್ಪ ಧಕ್ಕೆ ಸಂಭವಿಸಿದ್ದು ಪ್ರಾಣಹಾನಿಯೇನೂ ಆಗಿಲ್ಲ. ಇಲ್ಲಿಯೂ ವಿಶಾಖ ಪಟ್ಟಣದಂತೆ ನಗರದ ಮುಖ್ಯ ಭಾಗದ ಮೇಲೆ ಬಾಂಬುಗಳು ಬೀಳಲಿಲ್ಲ. ಕೋಕನಾಡದಲ್ಲಿ ಸಂಜೆ ೪-೪೦ ಗಂಟೆಗೆ ಮತ್ತೆ ವಿಮಾನ ಧಾಳಿಯ ಎಚ್ಚರಿಕೆ ಕೊಡಲಾಗಿತ್ತು. ಆದರೆ ಸ್ವಲ್ಪ ಸಮಯದಲ್ಲಿಯೇ ಭಯನಿವಾರಣೆ ಗಂಟೆಯಿತು. ವಿಮಾನಗಳೇನೂ ಬರಲಿಲ್ಲ.

ಎರಡೂ ಪಟ್ಟಣಗಳಲ್ಲಿ ಜನರು ಧೈರ್ಯದಿಂದ ನಡೆದುಕೊಂಡರು. ಸವಿಸ್ತರ ವಿವರಗಳು ಸರಕಾರಕ್ಕೆ ತಿಳಿದುಬಂದ ಮೇಲೆ ಮತ್ತೆ ಪ್ರಕಟಣೆ ಹೊರಡಿಸಲಾಗುವುದು.

ಕೊಲೊಂಬೋದ ಮೇಲೆ ಜಪಾನ್ ಧಾಳಿ

ಕೊಲೊಂಬೋದ ಮೇಲೆ ಧಾಳಿಮಾಡಲು ಸುಮಾರು ಎಪ್ಪತ್ತೈದು ವಿಮಾನಗಳು ಬಂದಿದ್ದುವು. ಅವುಗಳಲ್ಲಿ ಹಲವು ಕೆಳಗುರುಳಿಸಲ್ಪಟ್ಟಿವೆ. ಜಪಾನ್ ವಿಮಾನಗಳು ತೀರಾ ಕೆಳಗಿಳಿದು ಗುಂಡು ಹೊಡೆದವು.

೪೦೦ ೦೦೦೦ ಜರ್ಮನ್ ಸೈನ್ಯ ಸಂಗ್ರಹ.

ವಸಂತಕಾಲದ ಆಕ್ರಮಣಕ್ಕೆ

ಬಾಲ್ಟಿಕ್‌ನಿಂದ ಕಪ್ಪುಸಮುದ್ರದ ಮಲ್ಲ ಜರ್ಮನರು, ಉಗ್ರ ಯುದ್ಧ ಪ್ರಾರಂಭಿಸಲಿಕ್ಕೆ ದೊಡ್ಡ ಸಿದ್ಧತೆ ಮಾಡಿರುವರೆಂದೂ, ೪೦೦,೦೦೦ ಜರ್ಮನ್ ಸೈನಿಕರು ಸಂಗ್ರಹವಾಗಿ ಸಿದ್ಧರಾಗಿರುವರೆಂದೂ, ಲೆನಿನ್‌ಗ್ರಾಡಿನ ಮೇಲೆ ಉಗ್ರ ಆಕ್ರಮಣ ಆಗಬಹುದೆಂದೂ ಒಂದು ಊಹೆಯಿದೆ.

ಪ್ರೋಮ್ ಉತ್ತರದಲ್ಲಿ ಕಾಳಗ

ಬರ್ಮಾ ರಣಭೂಮಿಯಲ್ಲಿ ಜಪಾನರ ಕೇವಲ ವಿಮಾನ ಧಾಳಿ ಮತ್ತು ಸ್ಥಳಪರೀಕ್ಷೆಗೆ ತೊಡಗಿರುವರು. ಈ ರಾವತಿ ಪಶ್ಚಿಮದಲ್ಲಿರುವ ಜಪಾನ್ ಸೈನ್ಯಗಳು ಪ್ರಸಿದ್ಧ ಎಣ್ಣೆಗಣಿಗಳ ಕಡೆಗೆ ಹೋಗಿರುವವು. ನಿಯೊಂಗ್—ಬಿಯುವ್ ಎಂಬಲ್ಲಿ ಯುದ್ಧವಾಗಲಿರುವುದು.

ಕೋಕನಾಡು ವಿಶಾಖ ಪಟ್ಟಣಗಳ ಮೇಲೆ ಬಾಂಬು

ತಾ. 6ರಂದು ಮುಂಜಾನೆ ಕೋಕನಾಡ ವಿಶಾಖ ಪಟ್ಟಣಗಳ ಮೇಲೆ ಜಪಾನರು ಬಾಂಬು ಸುರಿಸಿದರು. ಬಂಗಾಳ ಉಪಸಾಗರದಲ್ಲಿ ವೈರಿಗಳು ವ್ಯಾಪಾರಿ ಹಡಗಗಳನ್ನು ಮುಳುಗಿಸಿದರೆಂದು ತಿಳಿದಿದೆ.

ಬಟಾನದಲ್ಲಿ ಇಳಿಯಲು ಜಪಾನರ ಪ್ರಯತ್ನ

ಜಪಾನೀಯರು ಬಟಾನ ದ್ವೀಪದಲ್ಲಿ ಇಳಿಯಲು ಪ್ರಯತ್ನ ನಡೆಸಿದರು.

ಆಸ್ಟ್ರೇಲಿಯಾ ಸಿದ್ಧವಾಗುತ್ತಿದೆ

ಆಸ್ಟ್ರೇಲಿಯವು ಬಹಳ ರಭಸದಿಂದ ತನ್ನ ಸಿದ್ಧತೆಗಳನ್ನು ಈಗ ಮಾಡುತ್ತಿದೆ. ಸೈನ್ಯ ಶಿಕ್ಷಣವು ದೊಡ್ಡ ಪ್ರಮಾಣದಲ್ಲಿ ಪ್ರಾರಂಭವಾಗಿದೆ. ಶತ್ರು ನೌಕಾಮೂಲಗಳಿಗೆ ವಿಮಾನಧಾಳಿ ಮಾಡಲಾಗಿದೆ.

ಜಪಾನೀಯರ ಚಟುವಟಿಕೆಗಳು

ಟಾಂಗು ಪಟ್ಟಣದ ವಾಯುವ್ಯಕ್ಕೆ ಸರಿದ ಚೀನೀ ಸೈನ್ಯದವರು ತಮ್ಮಲ್ಲಿ ಪುನರ್ಘಟನೆ ಮಾಡಿಕೊಂಡು ಪುನಃ ಯುದ್ಧಕ್ಕೆ ಸಿದ್ಧರಾಗುತ್ತಿದ್ದಾರೆಂದು ಸುದ್ದಿ. ಪ್ರೋಮಿಗೆ ಉತ್ತರದಲ್ಲಿರುವ ಮೊಗವೇ ಎಣ್ಣೆಗಣಿಗಳ ಕಡೆಗೆ ಹೊರಟಿರುವರು. ಮಧ್ಯ ಬರ್ಮಾದಲ್ಲಿ ಒಂದು ನಗರದ ಮೇಲೆ ಆಕ್ರಮಣವಾಯಿತು.

ಐ. ಸಿ. ಯಸ್. ಪರೀಕ್ಷೆಯಲ್ಲಿ ಜಯಶಾಲಿಗಳು

1942ರಲ್ಲು ಐ. ಸಿ. ಎಸ್. ಪರೀಕ್ಷೆಯಲ್ಲಿ ಈ ಕೆಳಗಿನವರು ಪಾಸಾಗಿರುವರು.

ಕೆ. ಬಾಲಚಂದ್ರನ್ ನಾಯರ್, ಲಲಿತ ಚಂದ್ರ, ಆರ್. ದಲಾಲ್, ದಲಿಪ ರೈ ಕೊಹ್ಲಿ, ಕಾಮ್ರುಲ್ ಇಸ್ಲಾಮ್, ಆರ್. ಬಿ. ವಗೀವಾರಾ, ಬಿ. ವೈ. ಗೋಡಬೋಲೆ, ರಾಜಾರಾಯ್ ಸಿಂಗ್, ವಿ. ರಮಾನಾಥನ್, ಗಿರಿಜಾ ಪ್ರಸಾದ ಪಾಂಡೆ, ಮೋನಿತಿಮೋಹನ್ ಸೇನ್, ಬಾಸ್ಕರ್ ಗಣೇಶ್ ಕಕಟ್ಕರ್, ವೀರೇಂದ್ರ ಕುಮಾರ್ ಸಕ್ಸೇನಾ, ಪಿ. ಕನ್ನನ್ ನಂಬಿಯಾರ್, ಎಚ್. ನಂಜುಂಡಯ್ಯ, ಮಣಿಲಾಲ್ ಪಿ. ಸಿ. ಮೇಥಾ, ಜಿ. ಎಚ್. ಜಾನ್‌ಸನ್, ಮುಹಮ್ಮದ್ ಸಹಾಬೀರ್, ಹಸನ್ ಬಾಷೀರ್, ಧರಮ್‌ಬೀರ್ ವೋಹ್ರಾ, ನವನಾಥ ಮಿಶ್ರ, ವಸಂತಸಿಂಗಸೇನ್, ಓ. ಓ. ಜನಾರ್ಧನನ್ ನಂಬಿಯಾರ್, ಸತೀಶಚಂದ್ರ ಲೂಂಬ, ಮೋಹನ್‌ದಾಸ್ ಕುಮಾರ್, ಅಶಿಮ್ ಕುಮಾರ್ ಅಶಿಮ್ ಕುಮಾರ್ ರಾಯ್, ದಯಜುದ್ದೀನ್ ಅಹಮ್ಮದ್, ಎಸ್. ರಂಗಚಾರಿ, ಎ. ಎಸ್. ನಾಗೇಶ್ವರ ಅಯ್ಯರ್, ರಾಮಪ್ರಸನ್ನ ನಾಯಕ್, ಅಶೋಕ್ ಕುಮಾರ್ ಮುಸ್ತಾಫಿ, ಎಂ. ಸುಂದರ್ ರಾಜ್, ಎಂ. ರಾಮಕೃಷ್ಣಯ್ಯ, ಬಿ. ಕೆ. ಕರಂಜಿಯ, ಶ್ರೀ ಪಾದವಿನಾಯಕ ದಾವೆ ಜಿ. ಎಚ್. ಲಾಲಾನಿ, ಹರೀಶ್ ಚಂದ್ರ, ಭೂಪೇಂದ್ರ ಚಂದ್ರ ಮುಜುಂದಾರ್, ಜ್ಞಾನಸ್ವರೂಪ ಗುಪ್ತ, ಎಸ್. ವೇಣುಗೋಪಾಲ ರಾವ್, ಬನಬಿಹಾರಿ ತಂಡನ್, ರಣಜಿತ ಕುಮಾರಗುಪ್ತ, ಗುಲಾಮ್ ರಬ್ಬಾನಿ, ಸಿ. ಡಿ. ಚಟರ್ಜಿ, ಕುಂದನ್ ಸಿಂಗ್ ಸಂಘ್ವಿ, ಟಿ. ಡಿ. ಸುಬ್ರಹ್ಮಣ್ಯಂ, ಮೌಲ್ಸುದ್ ಭಕ್ಷ ಕದ್ರಿ, ನರಸಿಂಗ್ ಪಾಂಡೆ, ಎಸ್. ಬಿ. ಪರ್ಡಿವಾಲಾ, ಇಪ್ತಿಕರ್ ಅಹಮ್ಮದ್ ಖಾನ್ ಶರ್ವಾಣಿ, ಸುಬೋಧ ಗೋಪಾಲ ಬೋಸ್ ಮಲ್ಲಿಕ್. ಇವರಿಗೆ ಉದ್ಯೋಗ ಸಿಗುವ ಭದ್ರತೆಯೇನೂ ಇಲ್ಲವಂತೆ!

ಎಂ. ಎನ್. ರಾಯ್ ತತ್ತ್ವೋಪದೇಶ

ಈಗ ಯುದ್ಧವು ಹಿಂದೂಸ್ಥಾನಕ್ಕೆ ಬಂದಿರುವುದರಿಂದ, ಎಲ್ಲಾ ರಾಜಕೀಯ ಪಕ್ಷಗಳು ತಮ್ಮ ಮತಭೇದವನ್ನು ಮರೆತು ಯುದ್ಧ ಪ್ರಯತ್ನಕ್ಕೆ ಸಹಕರಿಸಬೇಕು ಎಂಬುದು ಎಂ. ಎನ್. ರಾಯ್‌ಯವರ ತತ್ತ್ವೋಪದೇಶವಾಗಿದೆ.

‘ಹಿಂದೂಸ್ಥಾನವನ್ನು ವಿಚ್ಛೇದನ ಮಾಡಗೊಡಲಾರೆವು’

ನೆಹರು ಭಾಷಣ

ನ್ಯೂಡಿಲ್ಲಿಯಲ್ಲಿ ಒಂದು ಭಾಷಣಮಾಡುತ್ತಾ ನೆಹರುಗಳು, ಎಂದೋ ಮೃತಪಟ್ಟ ಜನರೊಡನೆ ಬ್ರಿಟಿಷ್ ಸರಕಾರದವರು ಒಪ್ಪಂದ ಮಾಡಿಕೊಂಡಿರುವರೆಂದು ಭಾವಿಸಿ, ಸಂಸ್ಥಾನಗಳ ವಿಷಯ ಬದಿಗೆ ಸರಿಸತಕ್ಕದ್ದಲ್ಲವೆಂದೂ, ಹಿಂದೂಸ್ಥಾನದ ಹಿತ ಸಂಬಂಧಗಳು ಪೂರೈಸಲ್ಪಡಬೇಕೆಂದೂ, ಹಿಂದೂಸ್ಥಾನದಲ್ಲಿ ಒಕ್ಕಟ್ಟಿರಬೇಕೆಂದೂ, ಅದನ್ನು ವಿಭಾಗಿಸಲು ನಾವೆಂದೂ ಆಸ್ಪದಕೊಡಲಾರೆವೆಂದೂ ಹೇಳಿದರು.

ಉದ್ಯೋಗ ನೌಕರರು ನಗರವನ್ನು ಬಿಡಕೂಡದು

ಮದ್ರಾಸು ಕಾರ್ಪರೇಶನಿನೊಳಗಿನ ಅವಶ್ಯಕ ಉದ್ಯೋಗ ನೌಕರರು ನಗರವನ್ನು ಬಿಡಕೂಡದೆಂದು ಮದ್ರಾಸು ಪೋಲೀಸು ಕಮಿಶನರ ಆಜ್ಞೆ ಹೊರಟಿದೆ.

ಬ್ರಿಟಿಷ್ ಸರಕಾರದ ಉತ್ತರ ಕಾಂಗ್ರೆಸಿಗೆ ಮುಟ್ಟಿತು

ತಾ. 7ರಂದು ಅಜಾದ್ ಮತ್ತು ನೆಹರುಗಳು ಕ್ರಿಪ್ಸರನ್ನು ಭೇಟಿಮಾಡಲು ಹೋಗಿದ್ದರು; ಅವರಿಗೆ ಕ್ರಿಪ್ಸರು ಬ್ರಿಟಿಷ್ ಸರಕಾರದ ಉತ್ತರವನ್ನು ಕೊಟ್ಟರೆಂದು ತಿಳಿದಿದೆ. ಈ ಬಗ್ಗೆ ವಿಚಾರಮಾಡಲು ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸೇರಿದೆ; ಬ್ರಿಟಿಷ್ ಸರಕಾರವು ಕಾಂಗ್ರೆಸಿಗೆ ಕೊಟ್ಟ ಉತ್ತರದಲ್ಲಿ ಏನಿದೆಯೆಂದು ಪ್ರಕಟವಾಗಿಲ್ಲ. ಕ್ರಿಪ್ಸ್ ರಾಯಭಾರದ ಫಲಿತಾಂಶವು ಗುರುವಾರ ಹೊರಬೀಳುವುದೆಂದು ಸುದ್ದಿ.

ಭಾರತದಲ್ಲಿ ಅಮೇರಿಕದ ರಾಯಭಾರಿ

ಸಂಧಾನ ಸಾಧನವೆ?

ಭಾರತದಲ್ಲಿ ಪ್ರೆಸಿಡೆಂಟ ರೂಸ್‌ವೆಲ್ಟರ ರಾಯಭಾರಿ ಕರ್ನಲ್ ಜಾನ್ಸನರು ಬಂದಿದ್ದು, ಭಾರತ ಮುಖಂಡರಾದ ನೆಹರು ಅಜಾದರನ್ನು ಕಂಡುಮಾತನಾಡಿದ್ದರು; ಕ್ರಿಪ್ಸರನ್ನು ಭೇಟಿಯಾದರು. ವೈಸರಾಯರಿಗೆ ರೂಸ್‌ವೆಲ್ಟರ ಪತ್ರವನ್ನೊಪ್ಪಿಸಿದರು. ಭಾರತ ಬ್ರಿಟನುಗಳಲ್ಲಿ ಒಂದು ಸಂಧಾನ ನಡೆಸುವರೆ ರೂಸ್‌ವೆಲ್ಟರು ಈ ಮೂಲಕ ಪ್ರಯತ್ನಿಸುತ್ತಿರುವಂತೆ ತೋರುತ್ತದೆ.

ಭಾರತೀಯ ಸಂರಕ್ಷಕ ಮಂತ್ರಿಯಾಗಬೇಕು

ಮಂದಪಕ್ಷದವರ ಸೂಚನೆ

ಬೊಂಬಾಯಲ್ಲಿ ಕೂಡಿದ ಮಂದಪಕ್ಷದವರ ಸಭೆಯಲ್ಲಿ ಕ್ರಿಪ್ಸರ ಸೂಚನೆಗಳ ವಿಚಾರ ಮಾಡಿ, ಸಂರಕ್ಷಕ ಮಂತ್ರಿಯಾಗಿ ಹಿಂದೀಯನನ್ನೇ ನೇಮಿಸಬೇಕೆಂದು ಅವರು ಸೂಚಿಸಿರುವರು.

ಆಹಾರ ಬೆಳೆ ಪ್ರಚಾರ ಪರಿಷತ್ತು

ಹಳ್ಳಿಗಳಲ್ಲಿ ಮಾಡತಕ್ಕ ಕಾರ್ಯ

ಆಹಾರ ಬೆಳೆ ಪ್ರಚಾರ ಪರಿಷತ್ತೊಂದು ಡಿಲ್ಲಿಯಲ್ಲಿ ಸೇರಿ, ಹಿಂದುಸ್ಥಾನದ ಎಲ್ಲಾ ಭಾಗಗಳಲ್ಲಿಯೂ, ಇಂದಿನ ಈ ಬಿಕ್ಕಟ್ಟಿನ ಕಾಲದಲ್ಲಿ ಆಹಾರ ಬೆಳೆಗಳನ್ನು ಹೆಚ್ಚಿಸಲು ಪ್ರಚಾರ ಮಾಡಬೇಕೆಂದು ಈ ಬಗ್ಗೆ ಒಂದು ಸಂಸ್ಥೆಯನ್ನೇರ್ಪಡಿಸಿ, ಹಳ್ಳಿಹಳ್ಳಿಗಳಲ್ಲಿ ಪ್ರಚಾರ ಮಾಡಲಿರುವರೆಂದೂ ತಿಳಿದಿದೆ.

ಚೀನದಲ್ಲಿ ಹಿಂದುಸ್ಥಾನದ ಏಜಂಟ್ ಜನರಲ್

ಆಗಿ ಸರ್ ಜಾಫ್ರುಲ್ಲಾರವರು ನೇಮಕ ಹೊಂದಿದ್ದಾರೆ. ಇವರು ವೈಸರಾಯ್ ಕಾರ್ಯಕಾರೀ ಮಂಡಳದ ಸದಸ್ಯರೂ, ಫೆಡರಲ್ ಕೋರ್ಟಿನ ಜಡ್ಜರೂ ಆಗಿದ್ದಾರೆ.

ನೆಹರುಗಳಿಗೆ ಚಿಯಾಂಗ್ ಪತ್ನಿಯ ಪತ್ರ

ನೆಹರುಗಳಿಗೆ ಇತ್ತೀಚೆಗೆ ಚಿಯಾಂಗ್ ಪತ್ನಿಯವರಿಂದ ಒಂದು ಪತ್ರವು ಬಂದಿದ್ದು ಅದು ರಾಜಕೀಯದಲ್ಲವಾಗಿಯೂ ಖಾಸಗಿ ವಿಷಯದ್ದೆಂದೂ ತಿಳಿದಿದೆ.

ಇಂಡಿಯದ ಹೈಕಮಿಶನರ್

ಆಗಿ ಸರ್ ಮುಹಮ್ಮದ್ ಅಜಿಜುಲ್ ಹಕ್ಕರವರು ನೇಮಕ ಹೊಂದಿ ಈಗ ಆ ಕೆಲಸದ ಕಾರ್ಯಭಾರ ನಿರ್ವಹಿಸಲು ಬ್ರಿಟನಿಗೆ ಹೊರಟಿರುವರು.

ಬೊಂಬಯಿ ಮೇಯರ್ ಪದವಿ ಮೆಹರಾಲಿಗೆ

ಇತ್ತೀಚೆಗೆ ಬಂಧನದಿಂದ ಬಿಡುಗಡೆ ಹೊಂದಿಬಂದ ಯುಸಫ್ ಮೆಹರಾಲಿಯವರು ಬೊಂಬಯಿ ಹೊಸ ಮೇಯರಾಗಿ ಚುನಾಯಿತರಾದರು.

ಭೋಸರ ವಿಚಾರ ಸುದ್ದಿ

ಶ್ರೀ ಸುಭಾಸ್ ಚಂದ್ರ ಬೋಸರು ವಿಮಾನ ಅಪಘಾತದಿಂದ ತೀರಿಕೊಂಡರೆಂಬ ವಾರ್ತೆ ಹಬ್ಬಿ ಹಿಂದುಸ್ಥಾನದಲೆಲ್ಲ ದುಃಖವಾಗಿತ್ತು. ಆದರೆ ಈ ವಾರ್ತೆ ಸಟೆಯೆಂದು ಈಗ ಪ್ರಕಟವಾಗಿದೆ. ಜಪಾನದ ರಾಜಧಾನಿಯಾದ ಟೋಕಿಯೋದಿಂದ ಈ ಸುದ್ದಿ ಮುಂಚೆ ಬಂತು. ಫ್ರಾನ್ಸ ದೇಶದ ಆಕಾಶವಾಣಿಯಿಂದ ಈ ಸುದ್ದಿ ತಿಳಿಯಿತಾಗಿ ಟೋಕಿಯೋದ ಆಕಾಶವಾಣಿ. ಆದರೆ ಮೃತ್ಯುವಾರ್ತೆ ಪ್ರಕಟವಾದ ದಿನವೇ ಶ್ರೀ ಸುಭಾಸ್ ಚಂದ್ರ ಬೋಸರು ಒಂದು ವಿದೇಶಿ ಆಕಾಶವಾಣಿಯಿಂದ ಮಾತಾಡುತ್ತಿದ್ದ ಸಂಗತಿಯನ್ನು ಕೆಲವರು ತಮಗೆ ಹೇಳಿದರಾಗಿ ಮುಂಬಯಿಯ ಶ್ರೀ ನರಿಮಾನರು ಪ್ರಕಟಿಸುತ್ತಾರೆ. ಶ್ರೀ ಸುಭಾಸ್ ಚಂದ್ರ ಬೋಸರ ಮರಣ ವಾರ್ತೆಯನ್ನು ಪ್ರಕಟಿಸಿದ ಬಗ್ಗೆ ಜರ್ಮನಿಯೊಳಗಿನ ವೃತ್ತಪತ್ರಿಕೆಗಳು ಬ್ರಿಟಿಷರನ್ನು ಉಗ್ರವಾಗಿ ಟೀಕಿಸುತ್ತವೆ. ಶ್ರೀ ಸುಭಾಷರು ಈಗ ಬರ್ಲಿನ್ನಲ್ಲಿದ್ದಾರೆಂದು ಕೆಲವರ ಹೇಳಿಕೆ. ಆದರೆ ನಿಶ್ಚಯವಾಗಿ ಅವರಿರುವ ಸ್ಥಳ ತಿಳಿಯುವುದಿಲ್ಲ. ಶ್ರೀ ಸುಭಾಸರ ಕುಶಲ ವಾರ್ತೆ ಕೇಳಿ ಹಿಂದು ಜನಾಂಗಕ್ಕೆ ಆನಂದವಾಗುವುದು ಸಹಜ.

-- ಬೇಕಾಗಿದ್ದಾರೆ --

“ಲೇಥ್’’ (Lathe) ನಲ್ಲಿ ಕೆಲಸ ಮಾಡಲು

ಟರ್ನರ್ (Turners) ಕೆಲಸಗಾರರು ಬೇಕಾಗಿದ್ದಾರೆ.

ಕೋಮನ್‌ವೆಲ್ತ್ ಇಂಜಿನಿಯರಿಂಗ್ ವರ್ಕ್ಸ್

ಮಂಗಳೂರು.

ದಿವ್ಯಾಸ್ತ್ರವಾದ ಧನುಶ್ ತಕಲಿ

ಇಂದಿಗೆ ೩೦-೪೦ ವರ್ಷಗಳಿಂದ ಖಾದಿ ಉತ್ಪಾದನೆಯಲ್ಲಿ ಅನೇಕ ಸುಧಾರಣೆಗಳು ತಲೆದೋರಿವೆ. ಹಿಂಜುವುದಕ್ಕಾಗಲಿ ನೂಲುವುದಕ್ಕಾಗಲಿ ಅಥವಾ ನೂತ ನೂಲನ್ನು ನೇಯುವುದಕ್ಕಾಗಲಿ ಕಸಬುಗಾರನ ಕೈಚಳಕಕ್ಕೆ ಮತ್ತು ಅವನ ನಿಪುಣತೆಯ ಪ್ರದರ್ಶನಕ್ಕೆ ಸಂಪೂರ್ಣ ಅಸ್ಪದವು ಸಿಗಬೇಕು. ಅಲ್ಲದೆ ಈ ಎಲ್ಲಾ ಬಗೆಯ ವಿಧಾನಗಳಲ್ಲಿ ಉಪಯೋಗಿಸಲ್ಪಡುವ ಯಂತ್ರೋಪಕರಣಗಳು ಸರಳವಾಗಿದ್ದು, ಸುಲಭ ಬೆಲೆಯಲ್ಲಿ ಒದಗುವಂಥವುಗಳೇ ಆಗಿರಬೇಕು. ಅಂದರೆ ಮಾತ್ರ ಪ್ರಾಮಾಣಿಕನಾದ ಕಸಬುಗಾರನು ಭಂಡವಾಳಗಾರನ ಹಂಗಿನಿಂದ ಪಾರಾಗುವನು. ಹೀಗೆ ಸರಳವೂ ಕಡಿಮೆ ಬೆಲೆಯಲ್ಲಿ ಸಿಗುವ ಉಪಕರಣವು ಒಬ್ಬನ ಗಂಜಿಗೆ ಬೇಕಾದಷ್ಟು ಕೂಲಿಯನ್ನಾದರೂ ಒದಗಿಸಿಕೊಡಬೇಕಷ್ಟೆ? ನೂಲುವುದಕ್ಕೆ ತಕಲಿ, ಕಿಸಾನ್ ಚರಕ, ಬಾರ್ಡೋಲಿ ಚರಕ, ಮಗನ್ ಚರಕ ಮೊದಲಾದುವುಗಳು ಈ ಮೊದಲೇ ಪ್ರಚಲಿತವಿದ್ದುವು. ಪ್ರತಿಯೊಂದಕ್ಕೂ ಅದರದರ ವೈಶಿಷ್ಟ್ಯವಿದ್ದೆ ಇದೆ. ಆದರೆ ಇತ್ತೀಚೆಗೆ ಸ್ವಾಮಿ ಭರತಾನಂದ (ಇವರು ಪೋಲೆಂಡದ ಒಬ್ಬ ಇಂಜಿನೀಯರರು. ಮೋರಿಸ್ ಫ್ರೈಡ್‌ಮನ್ ಎಂದು ಇವರ ಯಥಾರ್ಥದ ಹೆಸರು. ಬೆಂಗಳೂರಿನ ಇಲೆಕ್ಟ್ರಿಕ್ ಫೆಕ್ಟರಿಯಲ್ಲಿದ್ದವರು. ಗ್ರಾಮೋದ್ಧಾರ ಮತ್ತು ಗುಡಿಕೈಗಾರಿಕೆಗಳ ಪುನರುಜ್ಜೀವನದಲ್ಲಿ ಅಚಲ ಭಕ್ತಿ ವಿಶ್ವಾಸವಿದ್ದು ಗಾಂಧೀಜಿಯವರ ಆಶ್ರಮದಲ್ಲಿ ನಿರತ ಈ ವಿಚಾರದಲ್ಲಿ ಸಂಶೋಧನೆಗಳನ್ನು ನಡೆಸುತ್ತಲಿರುವರು) ಇವರು ಕಲ್ಪಿಸಿ ಬಳಕೆ ತಂದ ಧನುಶ್ ತಕಲಿಯು ಸರಳತೆ, ಯೋಗ್ಯವೇಗ, ನಿರ್ಮಾಣದ ಸೌಲಭ್ಯ ಇವುಗಳಿಂದಾಗಿ ಎಲ್ಲಾ ಖಾದಿಪ್ರೇಮಿಗಳ ಆದರಕ್ಕೆ ಪಾತ್ರವಾಗಿದೆ. ಮಹಾತ್ಮಾ ಗಾಂಧಿಯವರಂತೂ ಈಗ ನೂಲುವುದಕ್ಕೆ ಧನುಶ್-ತಕಲಿಯನ್ನೇ ಉಪಯೋಗಿಸುತ್ತಾರಲ್ಲದೆ ಎಲ್ಲರೂ ಇದನ್ನೇ ಆದಷ್ಟು ಬಳಕೆಗೆ ತರಬೇಕೆನ್ನುವರು. ಯುದ್ಧದ ಕಾರಣದಿಂದ ಬಟ್ಟೆಯ ಅಭಾವವು ಅತಿರೇಕವಾಗಿರುವ ಈ ಸಮಯದಲ್ಲಿ ಖಾದಿಯ ಉತ್ಪಾದನೆಯು ಸಾಗಬೇಕಾದರೆ ಧನುಶ್ ತಕಲಿಯ ಹೊರತು ಬೇರೆ ಉಪಾಯವೇ ಇಲ್ಲ. ಇಂದು ಮಾನವನನ್ನು ಹಲವು ವಿಧಾನದಲ್ಲಿ ಪೀಡಿಸುತ್ತಿರುವ ಆರ್ಥಿಕ ರಾಜಕೀಯ ಹಾಗೂ ಸಾಮಾಜಿಕ ಭೂತಪ್ರೇತಗಳನ್ನು ಜಯಿಸಲು ಧನುಶ್ ತಕಲಿಯೇ ದಿವ್ಯಾಸ್ತ್ರವಾಗಿ ಪರಿಣಮಿಸಿಯದೆ. ಅದರ ರಚನೆ ಮತ್ತು ಬಳಕೆಯ ಕ್ರಮಗಳನ್ನು ಸಚಿತ್ರವಾಗಿ ವಿವರಿಸಿ ಓದುಗರಿಗೆ ಖಾದಿ ಉತ್ಪಾದನೆಯಲ್ಲಿ ಮುಖ್ಯ ಹೆಜ್ಜೆಯಾದ ನೂಲುವ ವಿಧಾನದ ಪರಿಚಯವನ್ನು ಮಾಡಿಕೊಡುವುದೇ ಈ ಬರೆಹದ ಉದ್ದೇಶವಾಗಿದೆ.

ಉರುಳುವ ತಕಲಿ

ಧನುಶ್ತಕಲಿಯ ಜೀವಾಳವೆಂದರೆ ಉರುಳುವ ತಕ್ಲಿಯು. ಸಾಮಾನ್ಯ ತಕ್ಲಿಯನ್ನು ನಾವು ಬೆರಳುಗಳಿಂದ ಲಂಬವಾಗಿ ಉರುಳುವಂತೆ ಮಾಡುತ್ತೇವೆ. ಆದರೆ ಧನುಶ್ತಕಲಿಯಲ್ಲಿ ತಕಲಿಯು ನೆಲಕ್ಕೆ ಸಮಾನಾಂತರವಾಗಿ ಅಥವಾ ಸ್ವಲ್ಪ ಇಳಿಜಾರಾಗಿದ್ದು ಅದನ್ನು ಉರುಳಿಸಲು ತೊಗಲಿನ ಪಟ್ಟಿಯಿರುವ ಬಿಲ್ಲನ್ನು ಉಪಯೋಗಿಸುತ್ತೇವೆ. ಈ ತಕ್ಲಿಯಲ್ಲಿ ಹದಕ್ಕೇರಿಸಿದ (Tempered) ಉಕ್ಕಿನ ಕಂಬಿಯಿಂದ (ಕೊಡೆಕಡ್ಡಿಯನ್ನೂ ಜತನದಿಂದ ಉಪಯೋಗಿಸಬಹುದು) ಮಾಡಿದ ಒಂದು ಕೊನೆಯಲ್ಲಿ ಮೊನಚಾಗಿರುವ ಒಂದು ಕಡ್ಡಿ (ಚಿತ್ರ ನೋಡಿರಿ ನಂ. 2) ಮತ್ತು ಅದನ್ನು ಸರಿಯಾಗಿ ಹೊಂದಿಕೊಂಡಿರುವ ಕಬ್ಬಿಣದ ಉರುಳು ಚಕ್ರ (ನಂ. 4). ಈ ಮೊನಚು ಕಡ್ಡಿ ಮತ್ತು ಉರುಳು ಚಕ್ರದ ರಚನೆಯೇ ಈ ಉಪಕರಣದ ನಿರ್ಮಾಣದಲ್ಲಿ ಪ್ರಮುಖವಾದುದು. ಈ ಕಡ್ಡಿಯಲ್ಲಿ ಅಂಕುಡೊಂಕುಗಳು ಇಷ್ಟಾದರೂ ಇರಬಾರದು. ಅಂದರೆ ಅದು ತಾಜಾ ನೇರವಾಗಿರಬೇಕು. ಹದಕ್ಕೇರಿಸಿದ ಉಕ್ಕಿನ ಕಡ್ಡಿಯ ಡೊಂಕನ್ನು ನೀಗುವುದು ಸ್ವಲ್ಪ ಕಷ್ಟ. ಕಾಯಿಸಿ ಮೃದುವನ್ನಾಗಿ ನೇರವಾಗಿ ಮಾಡಿದರೆ ಪುನಃ ಹದಕೊಡುವಾಗ ಅದು ಕೆಡುವುದು ಮಾತ್ರವಲ್ಲದೆ ಅಂಕುಡೊಂಕುಗಳು ತಲೆದೋರುವುದುಂಟು. ಆದಕಾರಣ ಕಂಬಿಯನ್ನು ಮೆಲ್ಲ ಮೆಲ್ಲನೆ ಬಡೆದು ಅಂಕುಡೊಂಕುಗಳನ್ನು ನೀಗಬೇಕು. ಆ ಬಳಿಕ ಅರದಿಂದ ಒಂದು ಕೊನೆಯನ್ನು ಕಡ್ಡಿಯ ನೇರ ಕೆಡದಂತೆ ಉಜ್ಜಿ ಮೊನಚು ಮಾಡಬೇಕು. ಈ ಮೊನಚು ಕಡ್ಡಿಯ ಉದ್ದವು 7 ಇಂಚು, ಒಂದೂವರೆ ನೂಲು ($\frac{3}{16}''$) ದಪ್ಪದ ಮತ್ತು $1\frac{1}{4}''$ ವ್ಯಾಸದ ಒಂದು ಕಬ್ಬಿಣ ವೃತ್ತಾಕಾರದ ತುಂಡನ್ನು ಸರಳಿನಿಂದ ಅಥವಾ ಪಟ್ಟಿಯಿಂದ ಕಡಿದು ತೆಗೆದು ಅದರ ಸರಿ ಕೇಂದ್ರದಲ್ಲಿ ಉಕ್ಕಿನ ಕಡ್ಡಿಯಷ್ಟೆ ಗಾತ್ರದ ತೂತನ್ನು ತೆಗೆಯಬೇಕು. ಈ ತೂತಿನಲ್ಲಿ ಕಡ್ಡಿಯು ತಿರುಗದೆ ಬಿಗಿಯಾಗಿ ಸೇರಿಕೊಳ್ಳುವುದು ಅತಿ ಅಗತ್ಯ. ತೂತು ಉರುಳು ಚಕ್ರ



ದ ಕೇಂದ್ರದಿಂದ ಅಲ್ಪ ಸ್ವಲ್ಪ ತಪ್ಪಿದರೂ ಕೂಡ ತಕಲಿಯು ಸರಿಯಾಗಿ ಉರುಳದೆ ನೂಲುವಾಗ ನೂಲು ಪದೇ ಪದೇ ಕಡಿದುಹೋಗುವ ಸಂದರ್ಭವಿದೆ. ಉಕ್ಕಿನ ಕಡ್ಡಿಯು ತಾಜಾ ನೇರವಾಗಿದ್ದು ಉರುಳ ಚಕ್ರದ ತೂತು ಸರಿ ಕೇಂದ್ರದಲ್ಲಿದ್ದು ಚಕ್ರವು ಬಿಗಿಬಿಗಿಯಾಗಿ ಕಡ್ಡಿಯನ್ನು ಜೋಡಿ ಹೊಂದಿದ್ದರೆ ತಕಲಿಯು ಉತ್ತಮವಾಗುವುದು.

ತಕಲಿಯ ಪೀಠ

ಈ ತಕಲಿಯನ್ನು ಇರಿಸಲು ಒಂದು ಪೀಠವನ್ನು ನಿರ್ಮಿಸಬೇಕು. ಇದನ್ನು ಒಂದು ಅಂಗುಲ ದಪ್ಪದ ಮರದ ಹಲಗೆಯಲ್ಲಿ ಚಿತ್ರದಲ್ಲಿ ತೋರಿಸಿದಂತೆ ಮಾಡಿದರಾಯಿತು. 7 ಮತ್ತು 5–6 ಇರುವ ಈ ಎರಡು ತುಂಡುಗಳನ್ನು ಬೇರೆ ಬೇರೆ ಮಾಡಿ ಆ ಬಳಿಕ ಪೀಠಕ್ಕೆ ಜೋಡಿಸುವುದು ಉತ್ತಮ. ಪೀಠದ ನಡುಭಾಗದಲ್ಲಿ ಇರುವ ತೂತಿನಲ್ಲಿ ಒಂದು ಉದ್ದದ ಸರಿಗೆ ಅಥವಾ ರೀಪಿನ ತುಂಡನ್ನು ಜೋಡಿಸಿದರೆ ನೂಲು ಸುಳಿತುಕೊಳ್ಳುವಾಗ ಈ ರೀಪನ್ನು ಕಾಲಿನಿಂದ ಒತ್ತಿ ಹಿಡಿದರೆ ಇದೇಲು ಪಕರಣವು ಅಲ್ಲಾಡದೆ ಭದ್ರವಾಗಿರುವಂತಿರಿಸಲು ತುಂಬಾ ಅನುಕೂಲವಾಗುವುದು. ಚಿತ್ರದಲ್ಲಿ 1 ಮತ್ತು 3 ಇವು ಎರಡೂ ತೊಗಲಿನ ತುಂಡುಗಳು; ಮರಕ್ಕೆ ಕಬ್ಬಿಣದ ಆಣಿಗಳಿಂದ ಅಂಟಿಸಲ್ಪಟ್ಟಿವೆ. ಈ ತೊಗಲಿನ ತುಂಡುಗಳಲ್ಲಿ ತಕಲಿಯನ್ನು ಇರಿಸಲು ಅನುಕೂಲವಾದ ತೂತುಗಳು ಮತ್ತು ಅದನ್ನು ಹೊಗಿಸಲು ಬೇಕಾದ ಸೀಳಗಳನ್ನು ಮಾಡಿಯದೆ. (ಚಿತ್ರ ೧೦) ತಕ್ಲಿಯನ್ನು ಈ ಸೀಳಗಳ ಮೂಲಕ ಈ ತೊಗಲಿನ ಹಿಡಿತಗಳಲ್ಲಿರಿಸುವ ಮೊದಲು ತಗಡಿನ ಎರಡು ಚಿಕ್ಕ ಬಿಲ್ಲೆಗಳನ್ನು ಸೇರಿಸಬೇಕು. ಈ ಬಿಲ್ಲೆಗಳು (ಚಿತ್ರ ೧೧) ತಕ್ಲಿಯ ಕಡ್ಡಿಯಲ್ಲಿ ನಿರಾಯಾಸವಾಗಿ ತಿರುಗಬೇಕು. ಅಲ್ಲದೆ ಬಿಲ್ಲೆಯ ಪಾರ್ಶ್ವದ (ಚಿತ್ರ ೧೧ರಲ್ಲಿ ಪಾರ್ಶ್ವ ಮತ್ತು ಮುಂಭಾಗದ ನೋಟಗಳನ್ನು ಬರೆದಿದೆ) ಉಬ್ಬುಗಳು ಚರ್ಮದ ಹಿಡಿತಗಳಿಗೆ ಅಭಿಮುಖವಾಗಿರಬೇಕು. ಹೀಗಾದರೆ ಮಾತ್ರ ಉರುಳು ಚಕ್ರಕ್ಕೂ ಹಿಡಿತಕ್ಕೂ ಸಂಪರ್ಕವಾಗದೆ ತಕಲಿಯು ತಡೆಯಿಲ್ಲದೆ ಸರಾಗವಾಗಿ ಉರುಳುವುದು. ಉರುಳು ಚಕ್ರದ ಸಮೀಪಕ್ಕೆ ತಕ್ಲಿಯ ಕಡ್ಡಿಯ ಮೇಲೆ ವಜ್ರಸರಿಗೆ ಅಥವಾ ಚೆನ್ನಾಗಿ ಅಂಟಿರುವ ಗೋಂದಿನಲ್ಲಿ ಅದ್ದಿದ ನೂಲನ್ನು ಸುತ್ತಿ ಒಂದು ಚಿಕ್ಕ ಚೆಂಡನ್ನು ನಿರ್ಮಿಸಬೇಕು. ಆಗ ತಗಡಿನ ಚಿಕ್ಕ ಬಿಲ್ಲೆಯ ಟೊಳ್ಳು ಈ ಚೆಂಡನ್ನು ಹೊಂದಿಕೊಳ್ಳುವುದು. ತಕಲಿಯ ಮೇಲ್ತುದಿಯಲ್ಲಿಯೂ ಈ ಬಗೆಯ ಅಂಟಿನ ನೂಲಿನ ಒಂದು ಚೆಂಡನ್ನು ಸುತ್ತಿದರೆ ತಕಲಿಯು ಹಿಡಿತದಿಂದ ಕೆಳಕ್ಕೆ ಜಾರಬೀಳದಂತೆಯೂ ಆಗುತ್ತದೆ. ಅಲ್ಲದೆ ಹಿಡಿತದ (ನಂ. ೧) ಸಮೀಪವಿರಿಸಿದ ಬಿಲ್ಲೆಯ ಟೊಳ್ಳಿಗೆ ಹೊಂದಿಕೊಳ್ಳಲು ಕೂಡ ಈ ಚೆಂಡು ಅನುಕೂಲವಾಗುತ್ತದೆ.

ತಕಲಿಯನ್ನು ಈ ರೀತಿಯಲ್ಲಿ ಹಿಡಿತಗಳಲ್ಲಿರಿಸಿದಬಳಿಕ ಹಿಡಿತಗಳಿಗೆ ಎಣ್ಣೆ ಅಥವಾ ಚರ್ಬಿಯನ್ನು ತೋಯುವಾಗ ಎಣ್ಣೆಯ ಪಸೆಯು ಹಿಡಿತಗಳ ಮಧ್ಯೆ ತಕಲಿಯ ಕಡ್ಡಿಯ ಭಾಗಕ್ಕೆ ಮುಟ್ಟದಂತೆ ಎಚ್ಚರವಿರಬೇಕು. ಏಕೆಂದರೆ ತಕಲಿಯನ್ನು ಉರುಳಿಸಲು ಬಿಲ್ಲನ್ನು ಈ ಭಾಗದ ಮೇಲೆ ಸವರುತ್ತೇವಷ್ಟೆ. ಆಗ ಅಲ್ಲಿ ಎಣ್ಣೆ ಪಸೆಯಿದ್ದರೆ ಬಿಲ್ಲು ಸರಕ್ಕನೆ ಜಾರುವುದಲ್ಲದೆ ತಕಲಿಯು ಉರುಳಲಾರದು.

ಬಿಲ್ಲಿನ ಕೆಲಸ

ಬಿಲ್ಲನ್ನು ಬೆತ್ತದಿಂದ ಅಥವಾ ಸಪೂರ ಬಿದಿರಿನಿಂದ ಮಾಡಬಹುದು. ಒಂದು ಕಡೆಯಲ್ಲಿ ಹಿಡಿಯಲಿಕ್ಕೆ ಅನುಕೂಲವಾದ ಹಿಡಿಕೆ ಇದ್ದು ಎರಡೂ ತುದಿಗಳಲ್ಲಿ ಸಪೂರವಾದ ಸೀಳುಗಳನ್ನು ಕತ್ತರಿಸಬೇಕು. ಇದರ ಒಟ್ಟು ಉದ್ದ ೩೩–೩೫ ಇಂಚು. ಒರೆದಗುಲ ಅಗಲ ೩೦–೩೨ ಇಂಚು ಉದ್ದ ತೊಗಲಿನ ಪಟ್ಟಿಯ ಕೊನೆಗಳಿಗೆ ಮತ್ತು ತೂತು ತೆಗೆದು ಚಿತ್ರದಲ್ಲಿ (ನಂ. ೯) ತೋರಿಸಿದಂತೆ ಸಿಕ್ಕಿಸಿ ಬಿಲ್ಲು ಮಾಡಬಹುದು. ತೊಗಲಿನ ಮಾಂಸಭಾಗವು ಹೊರಕ್ಕಿರುವುದು ವಾಸಿ. ಹಿಡಿಕೆಯ ಸಮೀಪದ ಕೊನೆಯಲ್ಲಿ ಒಂದು ಟೊಳ್ಳು ಕತ್ತರಿಸಿ ಅದರಲ್ಲಿ ಒಂದು ಉರುಳು ಮರದ ತುಂಡನ್ನು ಇರಿಸಿದರೆ ಚರ್ಮದ ಪಟ್ಟಿಯ ಸಳೆತದ ಮಿತಿಯನ್ನು ಬೇಕಾದ ಹಾಗೆ ಹೆಚ್ಚುಕಡಿಮೆ ಮಾಡಿಕೊಳ್ಳಬಹುದು. ರಾಳ ಧೂಪದ ಒಂದು ಪಾಕವನ್ನು ಅದಕ್ಕೆ ಬಳಿಯಬೇಕು. ಅಂದರೆ ಅದನ್ನು ತಕಲಿಯ ಮೇಲೆ ಸವರುವಾಗ ಅದು ಸರಕ್ಕನೆ ಜಾರದೆ ತಕಲಿಯನ್ನು ಸರಿಯಾಗಿ ಉರುಳುವಂತೆ ಮಾಡುವುದು.

ರಾಳದ ಪಾಕಮಾಡುವ ವಿಧಾನ

ಒಂದು ಪಾತ್ರೆಯಲ್ಲಿ ೫ ತೊಲೆ ಅಗಸೆ ಎಣ್ಣೆ (Linseed oil) ೩ ತೊಲೆ ಹರಳೆಣ್ಣೆ (Castor oil) ಹಾಕಿ ಹದವಾದ ಬೆಂಕಿಯ ಮೇಲೆ ಕಾಯಿಸಲಿಕ್ಕೆ ಇಡಿರಿ. ೬ ತೊಲೆ ರಾಳ ಧೂಪವನ್ನು ಚೆನ್ನಾಗಿ ಹುಡಿಮಾಡಿ ಆ ಹುಡಿಯನ್ನು ಸ್ವಲ್ಪವಾಗಿ ಪಾತ್ರೆಗೆ ಹಾಕುತ್ತಲೂ ಪಾತ್ರೆಯಲ್ಲಿರುವ ಪಾಕವನ್ನು ಪದೇ ಪದೇ ಕದಡಿಸುತ್ತಲೂ ಇರಿ. ಎಲ್ಲಾ ಹುಡಿಯನ್ನು ಪಾತ್ರೆಗೆ ಹಾಕಿ ಅದು ಕರಗಿ ಎಣ್ಣೆಗಳೊಡನೆ ಸರಿಯಾಗಿ ಮಿಶ್ರವಾದ ಬಳಿಕ ಅದಕ್ಕೆ ಎರಡು ತೊಲೆ ಇಂಗಾಲದ ಹಸನಾದ ಪುಡಿಯನ್ನು ಸೇರಿಸಿ ಚೆನ್ನಾಗಿ ಕದಡಿಸಿರಿ. ಬಿಸಿ ಇರುವಾಗಲೇ ಒಂದು ಬ್ರಶ್ಶಿನ ಮೂಲಕ ಈ ಪಾಕವನ್ನು ಬಿಲ್ಲಿನ ತೊಗಲ ಪಟ್ಟಿಗೆ ಒಂದೇ ಪ್ರಕಾರವಾಗಿ ಒಂದೆರಡು ಬಾರಿ ಬಳಿಯಿರಿ. ಹೀಗೆ ಬಳಿದ ರಾಳದ ಪಾಕವು ಒಂದೆರಡು ವಾರಗಳ ತನಕ ಬಾಳಿಕೆ ಬರುವುದು. ಆ ಬಳಿಕ ತೊಗಲು ನಯವಾಗಿ ಕಾಣಿಸುವುದು. ಆಗ ಪುನಃ ಪಾಕವನ್ನು ಬಿಸಿಮಾಡಿ ಬಳಿಯಬೇಕಾಗುವುದು. ಇಲ್ಲದಿದ್ದರೆ ಬಿಲ್ಲನ್ನು ಸವರುವಾಗ ತಕಲಿಯು ಸರಿಯಾಗಿ ಉರುಳಲಾರದು.

ಧನುಶ್ ತಕಲಿ ವೈಶಿಷ್ಟ್ಯ

ಸರಿಯಾಗಿ ನೂಲುವ ಅಭ್ಯಾಸವಿದ್ದವರು ಧನುಶ್ ತಕಲಿಯಲ್ಲಿ ತಾಸಿಗೆ ೪೦೦–೫೦೦ ಗಜ ನೂಲನ್ನು ತೆಗೆಯಬಹುದು. ಚರಕದಲ್ಲಿ ರಾಟೆ ಮತ್ತು ಚಕ್ರವನ್ನು ಜೋಡಿಸುವ ನೂಲಿನ ಸೆಳೆತದ ಹೆಚ್ಚು ಕಡಿಮೆ ಮತ್ತು ಇನ್ನಿತರ ತೊಡಕುಗಳಿಂದ ಆಗಾಗ ಉಪಕರಣವನ್ನು ಸರಿಪಡಿಸಿಕೊಳ್ಳಲು ಸಮಯ ವೆಚ್ಚವಾಗುವುದು. ಧನುಶ್ತಕಲಿಯಲ್ಲಿ ಈ ಗೊಂದಲಗಳ್ಯಾವುವೂ ಇಲ್ಲ; ದಿನಕ್ಕೊಂದೆರಡು ಬಾರಿ ಹಿಡಿತಗಳಿಗೆ ಎಣ್ಣೆ ತೊಯ್ದರಾಯಿತಷ್ಟೆ. ಧನುಶ್ತಕಲಿಯಲ್ಲಿ ನೂತ ನೂಲನ್ನು 'ಲಡಿ' (Hank) ಮಾಡಲು ಕೂಡ ಏನೇನೂ ಪರಿಶ್ರಮವಿಲ್ಲ. ತಕಲಿಯನ್ನು ಹಿಡಿತಗಳಿಂದ ತಪ್ಪಿಸುವ ಅವಶ್ಯಕತೆಯೇ ಇಲ್ಲ. ಸುತ್ತುವ ಉಪಕರಣ (8) ಪೀಠದ ಕಂಬಕ್ಕೆ (7)ಕ್ಕೆ ಸೇರಿಸಿ ನೂಲನ್ನು 5 ಮತ್ತು 6 ಈ ಕೊಳಕೆಗಳಿಂದ ಹಾಯಿಸಿ ಸುತ್ತುವ ಉಪಕರಣಕ್ಕೆ ಸೇರಿಸಿ ಅದನ್ನು ಸುತ್ತಿ ತಿರುಗಿಸಿದರೆ ತಕಲಿಯ ನೂಲು ನಿರಾಯಾಸವಾಗಿ ಸುತ್ತುವ ಉಪಕರಣಕ್ಕೆ ಕ್ಷಿಪ್ರದಲ್ಲಿಯೆ ಬರುವುದು. ನಂ. 5 ಕೊಳಕೆಯನ್ನು ಅದು ತಕ್ಲಿಯ ಕಡ್ಡಿಯೊಡನೆ ಒಂದು ಸರಳ ರೇಖೆಯಲ್ಲಿರುವಂತೆ ಇರಿಸುವುದು ಮಾತ್ರ ಅಗತ್ಯ. ಇಲ್ಲದಿದ್ದರೆ ತಕಲಿಯ ತೂತು ಸಂಪೂರ್ಣವಾಗಿ ಸುತ್ತುವ ಉಪಕರಣಕ್ಕೆ ಸುತ್ತಿಕೊಳ್ಳಲಾರದು.

ಪ್ರತಿಯೊಂದು ವಿಷಯದಲ್ಲಿಯೂ ಧನುಶ್ತಕಲಿಯು ಯೋಗ್ಯವಾಗಿದೆ ಮಾತ್ರವಲ್ಲದೆ ಅದರ ಸರ್ವತ್ರ ಪ್ರಯೋಗದಿಂದ ಮಾನವ ಕೋಟಿಯ ಕಲ್ಯಾಣವು ವಿದಿಸುವುದೆಂಬ ಅಭಿಲಾಷೆ ಮಾತ್ರವಲ್ಲದೆ ದೃಢ ನಂಬಿಕೆಯು ಕೂಡ ಬೇರೂರಿರುವ ಈ ಸಮಯದಲ್ಲಿ ಪ್ರತಿಯೊಬ್ಬನೂ ಅದರ ರಚನೆ ಉಪಯೋಗದ ರೀತಿಯನ್ನರಿತು ಅಹಿಂಸಾಮಯ ಯುದ್ಧದ ಈ ದಿವ್ಯಾಸ್ತ್ರದ ಸಿದ್ಧಿಯನ್ನು ಮಾಡಿಕೊಳ್ಳಲೆಂದು ಹಾರೈಸಲಾಗಿದೆ.

ರೂಸ್‌ವೆಲ್ಟರ ಪ್ರತಿನಿಧಿಯೊಡನೆ ನೆಹರು ಅಜಾದ್ ಭೇಟಿ

ರೂಸ್‌ವೆಲ್ಟರ ಪ್ರತಿನಿಧಿ ಲುಯಿ ಜಾನ್ಸರೆಂಬವರು ಈಗ ಹಿಂದೂದೇಶಕ್ಕೆ ಬಂದಿದ್ದು ನೆಹರು ಅಜಾದರನ್ನು ಭೇಟಿಯಾದರು. ಭಾರತದ ಕುರಿತು ರೂಸ್‌ವೆಲ್ಟರು ಮಧ್ಯಸ್ಥಿಕೆ ಮಾಡಲು ಬಯಸಿರುವರಂತೆ.

ಅಜಾದ್ ವಾವೆಲ್ ಭೇಟಿ

ಸೇನಾಪತಿ ವಾವೆಲರನ್ನು ಅಜಾದ್ ಮತ್ತು ನೆಹರುಗಳು ಭೇಟಿಯಾದರು.

ಜಿನ್ನರಿಗೆ ಸರ್ವಾಧಿಕಾರ

ಕ್ರಿಪ್ಸರೊಡನೆ ಸಂಧಾನ ಮಾತುಕತೆ ಮಾಡುವರೆ ಜಿನ್ನರಿಗೆ ಮುಸ್ಲಿಂ ಲೀಗು ಸರ್ವಾಧಿಕಾರ ಕೊಟ್ಟಿದೆ.

ಕ್ರಿಪ್ಸರಿಗೆ ಸಾವರ್ಕಾರ್ ತಂತಿ

'ಕಾಂಗ್ರೆಸ್ ಲೀಗ್‌ಗಳೊಡನೆ ಮಾತ್ರ ಒಪ್ಪಂದ ಮಾಡಿಕೊಂಡಲ್ಲಿ, ಹಿಂದೂ ಮಹಾಸಭೆಯ ಒಪಿಗೆಯಿಲ್ಲದಲ್ಲಿ ನೀವು ಕೈಕೊಂಡ ಕಾರ್ಯವು ಬಗೆಹರಿಯಲಾರದು, ಹಿಂದೂಸ್ಥಾನವನ್ನು ವಿಭಜಿಸುವ ವಿಷಯವನ್ನು ತೆಗೆದುಹಾಕಿದರೆ ಮಹಾಸಭೆಯವರು ನಿಮ್ಮ ಸೂಚನೆಯನ್ನಂಗೀಕರಿಸಲು ಸಿದ್ಧರಿರುವರು' ಎಂದು ಸಾವರ್ಕಾರರು ಸರ್ ಕ್ರಿಪ್ಸರಿಗೆ ತಂತಿ ಬಿಟ್ಟಿರುವರು.

ಜಿಲ್ಲಾ ಸಮಾಚಾರಗಳು

ಮಂಗಳೂರು

ಮುನಿಸಿಪಲ್ ಕೌನ್ಸಿಲ್ ಮೀಟಿಂಗ್

ಮುನ್ಸಿಪಲ್ ಕೌನ್ಸಿಲ್ ಸಭೆಯು ಚೆಯರ್ಮನ್ ಶ್ರೀ ಬಿ. ವೆಂಕಟರಾವ್ ಬಾಳಿಗಾ, ಎಂ. ಎಲ್. ಸಿ. ಅವರ ಅಧ್ಯಕ್ಷತೆಯಲ್ಲಿ ಜರುಗಿತು. ಅನೈತಿಕ ವ್ಯಾಪಾರದ ಕಾನೂನನ್ನು ಇಲ್ಲಿ ಜಾರಿಗೆ ತರಲಿರುವ ಪ್ರದೇಶಗಳನ್ನು ನಿರ್ಧರಿಸಿ ಸೂಚಿಸಬೇಕೆಂಬ ಕಲೆಕ್ಟರರ ಪತ್ರದ ಮೇರೆಗೆ, ಆ ಪ್ರದೇಶಗಳ ಪಟ್ಟಿಯನ್ನು ತಯಾರಿಸಬೇಕೆಂದಾಯಿತು. ಯುನಾನಿ ಔಷಧಾಲಯ, ಮಂಗಳೂರು, ಇದಕ್ಕೆ ಸ್ಥಳೀಯ ಶ್ರೀ ದತ್ತಾತ್ರಯ ಆಯುರ್ವೇದ ಫಾರ್ಮಸಿಯವರ ಟೆಂಡರನ್ನು ಸ್ವೀಕರಿಸಿ, ಅಲ್ಲಿಂದ ೧೯೪೨—೪೩ನೇ ಇಸ್ವಿಗೆ ಔಷಧಗಳನ್ನು ಒದಗಿಸಬೇಕೆಂದಾಯಿತು. ಮುನಿಸಿಪಾಲಿಟಿಯ ಅಚ್ಚಿನ ಕೆಲಸಗಳನ್ನು, ಮದ್ರಾಸ್ ಗವರ್ನ್ಮೆಂಟ್ ಪ್ರೆಸ್ಸಿನ ಸುಪರಿಂಟೆಂಡೆಂಟರ ಶಿಫಾರಸಿನ ಮೇರೆಗೆ, ಸ್ಥಳೀಯ ಕೆನರಾ ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಹೌಸ್, ಲಿಮಿಟೆಡ್, ಅವರಿಗೆ ಒಪ್ಪಿಸಿಕೊಡುವುದೆಂದಾಯಿತು. ಹಿಂದೂಸ್ಥಾನ ಸ್ಕೌಟ್ ಎಸೋಸಿಯೇಷನಿನವರು ಏರ್ಪಡಿಸಿದ "ಸೆಕೆಂಡ್ ಕಬ್ ಮಾಸ್ಟರ್ಸ್ ಟ್ರೈನಿಂಗ್"ನ ಸಂಬಂಧ, ಮುನಿಸಿಪಾಲಿಟಿಯವರು ತಮ್ಮ ೮ ಮಂದಿ ಉಪಾಧ್ಯಾಯರನ್ನು ಆ ಶಿಕ್ಷಣಕ್ಕೆ ಕಳುಹಿಸಬೇಕೆಂದು ನಿರ್ಧರಿಸಿದ್ದ ವಿಚಾರದಲ್ಲಿ ಶ್ರೀ ಸಿ. ಎಲ್. ಲೋಬೋರವರು, ಆ ಎಸೋಸಿಯೇಶನಿನವರ ಪ್ರಮಾಣವಚನದ ಕುರಿತು ಸಂದೇಹ ಸೂಚಿಸಿ, ಈ ಸಂಘದ ಆ ಟ್ರೈನಿಂಗಿಗೆ ವಿರೋಧವನ್ನು ತಂದೊಡ್ಡಲಾಗಿ, ಅದನ್ನು ಓಟಿಗೆ ಹಾಕಲು, ಶ್ರೀ. ಲೋಬರ ಆಕ್ಷೇಪವು ವ್ಯರ್ಥವಾಯಿತು.

ಗೌಡ ಸಾರಸ್ವತ ಬ್ರಾಹ್ಮಣ ಪರಿಷತ್ತು

ಈ ಪರಿಷತ್ತಿನ ಕಳೆದ ವಾರ್ಷಿಕ ಅಧಿವೇಶನದಲ್ಲಿ ತೀರ್ಮಾನಿಸಿದಂತೆ, ಶ್ರೀ ಗೋಕರ್ಣ, ಶ್ರೀ ಚಿತ್ರಾಪುರ ಶ್ರೀ ಕಾಶೀ ಮಠಾಧಿಪತಿಗಳ ಒಂದು ಸಭೆಯು, ಇದೇ ಮೇ ತಾ. ೭—೮ರಲ್ಲಿ ಮಂಗಳೂರಲ್ಲಿ ಜರಗುವುದು. ಮೇ ತಾ. ೭ರಲ್ಲಿ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಮೊದಲು ಸಭೆ ಆಗಿ, ಕೂಡಲೇ ಶ್ರೀ ಉಮಾ ಮಹೇಶ್ವರ ದೇವಸದಲ್ಲಿಯೂ ಜರಗುವುದು. ೮ನೇ ತಾರೀಕಿಗೆ ಈ ಎಲ್ಲ ಸ್ವಾಮಿಜಿಯವರಿಗೂ ಸಾರ್ವಜನಿಕ ಸ್ವಾಗತ; ಅದು ಕೆನರಾ ಹೈಸ್ಕೂಲಲ್ಲಿ. ದೇವಸ್ಥಾನಗಳಲ್ಲಿ ಶ್ರೀ ಶ್ರೀಗಳವರಿಗೆ ಪಾದಪೂಜೆಗಳು ಕೆನರಾ ಹೈಸ್ಕೂಲಲ್ಲಿ ಮಾನಪತ್ರಗಳೂ ಸಲ್ಲುವುವು.

ರಾಷ್ಟ್ರೀಯ ವಾರ:—ಈ ನಿಮಿತ್ತವಾಗಿ ಸಾರ್ವಜನಿಕ ಸಭೆಯೊಂದು ತಾ. ೬ ರಂದು ಸಂಜೆ ಮೈದಾನಿನಲ್ಲಿ ಶ್ರೀ. ಕೆ. ಆರ್. ಕಾರಂತ ಎಮ್. ಎಲ್. ಎ. ಇವರ ಅಧ್ಯಕ್ಷತೆಯಿಂದ ಸೇರಿತು. ಶ್ರೀಗಳಾದ ದಾಮೋದರ ಬಾಳಿಗ, ಎಂ. ಡಿ. ಅಧಿಕಾರಿ, ಬಿ. ವಿ. ಕಕ್ಕಿಲ್ಲಾಯರು ಭಾಷಣಮಾಡಿದರು. ಅಧ್ಯಕ್ಷರ ಭಾಷಣವಾದ ಮೇಲೆ ಶ್ರೀ. ಕೆ. ಈಶ್ವರ ಎಂ. ಎಲ್. ಎ. ಇವರ ಕೃತಜ್ಞತೆ ಹೇಳಿದರು.

ಮುಸ್ಲಿಂ ಬಡವಿದ್ಯಾರ್ಥಿಗಳಿಗೆ ವಸ್ತ್ರದಾನ

ಮಂಗಳೂರಿನ ಸಾಹುಕಾರ್ ಸಿ. ಅಬ್ದುಲ್ ರಹ್ಮಾನ್ ಸಾಹೇಬರವರು ಮುನ್ಸಿಪಲ್ ಮಹಮ್ಮದನ್ ಹಯರ್ ಎಲಿಮೆಂಟರಿ ಶಾಲೆಯಲ್ಲಿ ಕಲಿಯುವ ೨೪ ಬಡ ವಿದ್ಯಾರ್ಥಿಗಳಿಗೆ ಅಂಗಿ ವಸ್ತ್ರಗಳ ದಾನವನ್ನು ಕೊಟ್ಟಿರುವರು. ಮತ್ತು ೧೯೪೧ನೇ ಇಸವಿಯ ಸೀರತ್ ಕಮಿಟಿಯವರು ೮೫ ಮಂದಿ ವಿದ್ಯಾರ್ಥಿಗಳಿಗೆ ರೂಪಾಯಿ (೬೦) ಕ್ರಯದ ಶರ್ಟಿಂಗ್ ವಸ್ತ್ರಗಳನ್ನು ಕೊಟ್ಟಿರುವರು. ಜನಾಬ್ ಸಿ. ಅಬ್ದುಲ್ ರಹಿಮಾನ್ ಸಾಹೇಬರು ವಸ್ತ್ರದಾನವನಿತ್ತುದು ಮಾತ್ರವಲ್ಲದೆ ೬೦ ಶರ್ಟಿಂಗ್ ಹೊಲಿಸಿದ ಮಜೂರಿಯನ್ನು ತಾನೇ ಕೊಡುವರು.

ಈ ದಾನವನ್ನು ವಿದ್ಯಾರ್ಥಿಗಳಿಗೆ ಹಂಚುವ ಸಮಾರಂಭವು ಇದೇ ತಾ. ೨ನೇ ಗುರುವಾರ ದಿನ ೪ ಗಂಟೆಗೆ ಜನಾಬ್ ಮೋಹಿದ್ದೀನ್‌ಬಿನ ಅಹಮದ ಸಾಹೇಬ್‌ನವರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು.

ಮಂಗಳೂರಿನ ಸೀರತ್ ಕಮಿಟಿ (೧೯೪೧) ಯವರು ಮುನ್ಸಿಪಾಲ್ ಗರ್ಲ್ಸ್ ಶಾಲೆಯೆ ಹೆಮ್ಮಕ್ಕಳ ಹಯರ್ ಎಲಿಮೆಂಟರಿ ಶಾಲೆಯಲ್ಲಿ ಕಲಿಯುವ ಬಡ ಹೆಮ್ಮಕ್ಕಳಿಗೆ ಇಪ್ಪತ್ತು ರೂಪಾಯಿಗಳ ಸ್ಲೇಟು ಮತ್ತು ಪಠ್ಯಕ್ಕೆಯನ್ನೂ ಮುಹಮ್ಮದನ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಕಲಿಯುವ ಬಡ ವಿದ್ಯಾರ್ಥಿಗಳಿಗೆ ಹತ್ತು ರೂಪಾಯಿಗಳ ಅಂಗೀ ವಸ್ತ್ರಗಳನ್ನು, ಬದ್ರಿಯಾ ಶಾಲೆಯಲ್ಲಿ ಕಲಿಯುವ ಬಡ ಹೆಮ್ಮಕ್ಕಳಿಗೆ ಹತ್ತು ರೂಪಾಯಿಗಳ ಕುಪ್ಪಸದ ವಸ್ತ್ರಗಲನ್ನಿ ಹಂಚಿ ತಮ್ಮವರ ರೂಪಾಯಿಗಳನ್ನು ಈ ಧರ್ಮಕಾರ್ಯಕ್ಕಾಗಿ ವಿನಿಯೋಗಿಸಿದ ಕಾರ್ಯವು ಬಹಳ ಶ್ಲಾಘನೀಯವಾಗಿದೆ.

೧೯೪೨ನೇ ವರ್ಷದ ಸೀರತ್ ಕಮಿಟಿಯವರೂ ಈ ಮಾರ್ಗವನ್ನೂ ಅನುಸರಿಸಲಾರರೇ? ಎಂದು ಬಾತ್ಮಿ.

ಫರಂಗಿಪೇಟೆ

ರಜತೋತ್ಸವ:—ಶ್ರೀ ರಾಮಾ ಹಾ. ಎ. ಶಾಲೆಯ ೨೫ನೇ ವರ್ಷೋತ್ಸವವು ಶ್ರೀ ಜಿ. ವಾಸುದೇವ ಪೈ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಬೆಳಿಗ್ಗೆ ಮಕ್ಕಳ ಚಟುವಟಿಕೆಗಳಾದ ಮೇಲೆ, ಸಂಜೆ ಅಧ್ಯಕ್ಷರನ್ನು ಸ್ವಾಗತಿಸಿದ ಬಳಿಕ ಶ್ರೀ ಎ. ಗೋವಿಂದರಾವ್ ಮತ್ತು ಡಾ. ಎಫ್. ಎಚ್. ಒಡೆಯರ್‌ರವರು ದಿವಂಗತ ಶ್ರೀ ಪದ್ಮನಾಭ ನಾಯ್ಕರವರ ಗುಣಕಥನ ಮಾಡಿದರು. ಅವರ ಭಾವಚಿತ್ರವು ಅಧ್ಯಕ್ಷರಿಂದ ಅನಾವರಣ ಮಾಡಲ್ಪಟ್ಟಿತು. ವರದಿ ವಾಚನ, ಇನಾಮು ಹಂಚೋಣಗಳ ಬಳಿಕ ಅಧ್ಯಕ್ಷರು ಭಾಷಣವಿತ್ತ ಮೇಲೆ ವಿವಿಧ ವಿನೋದಾವಳಿಗಳಗಳಿದ್ದುವು.

ಪುತ್ತೂರು

ರಾಷ್ಟ್ರೀಯ ಸ್ವಯಂ ಸೇವಕ ಸಂಘದ ನವ ಸಂವತ್ಸರೋತ್ಸವವು

ಕಳೆದ ತಾ. ೨೯ರಲ್ಲಿ ಸ್ಥಳೀಯ ಹಳೆ ಪೋಲಿಸ್ ಲ್ಯಾನಿನ ಸಮೀಪದ ಮೈದಾನಿನಲ್ಲಿ ಮಂಗಳೂರಿನ ಶ್ರೀ ಬಸ್ತಿ ದಾಸಪ್ಪ ಶೆಣೈ ಇವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು.

ರಾಮ ಕುಂಜ

ತಾ. ೨೭ರಂದು ಬಂಟರ ಜಾತಿಯ ಗುಡ್ಡಪ್ಪ ರೈ ಎಂಬವರ ಎಡದ ಭುಜಕ್ಕೆ ಯಾರೋ ಕಡಿದು ತೀವ್ರ ಜಖಂಗೊಂಡಿದ ಅವರನ್ನು ಪುತ್ತೂರು ಗವರ್ನಮೆಂಟ್ ಆಸ್ಪತ್ರೆಗೆ ಸಾಗಿಸಲಾಗಿದಲ್ಲಿ ಇವರ ಪರಿಸ್ಥಿತಿಯು ವಿಷಮವಾಗಿದೆ ಎಂದು ವದಂತಿ.

ಕಾಸರಗೋಡು

ಶ್ರೀ ರಾಮ ಭಜನಾ ಮಂದಿರದ

ಆಶ್ರಯದಲ್ಲಿ ಶ್ರೀ ರಾಮ ಭಜನೆ ಸಂಗೀತಗಳು ನಡೆದ ತರುವಾಯ ಶ್ರೀ ಬಿ. ಲಕ್ಷ್ಮಣ ದೇವ ವಿದ್ಯಾರ್ಥಿಯವರು ಹರಿಕೀರ್ತನೆಯನ್ನು ಮಾಡಿದರು. ಶ್ರೀ. ಪುಂಡೂರು ಲಕ್ಷ್ಮಣ ಪುಣಿಚಿತ್ತಾಯರು ಭಾಷಣ ಮಾಡಿದರು. ಶ್ರೀ ಪಾಂಡುರಂಗ ಶೆಣೈಯವರು ಧನ್ಯವಾದವನ್ನರ್ಪಿಸಿದರು ತರುವಾಯ ಸತ್ಕಾರದಿಂದ ಪ್ರಸಾದ ಸ್ವೀಕಾರದೊಡನೆ ಸಭೆಯ ಕಾರ್ಯಕ್ರಮವು ಕೊನೆಗೊಂಡಿತು.

ಕಾರ್ಕಳ

ಸಭೆಯ ಸಮಾಚಾರಗಳು

ಕಾರ್ಕಳ ಸರ್ಕಲ್ ಕಾಂಗ್ರೆಸ್ ಕಮಿಟಿಯ ಸಭೆಯೊಂದು ಶ್ರೀ. ಯಂ. ಡಿ. ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಕೂಡಿ ಕಟಪಾಡಿಯ ಸ್ವಯಂಸೇವಕ ಶಿಕ್ಷಣ ಶಿಬಿರಕ್ಕೆ ಶ್ರೀಗಳಾದ ಕೆ. ಜಿ. ಕಾಮತ್ ಕೆ ವಿ ಪೈ ಯಂ ಕೆ ಶೆಟ್ಟಿರನ್ನು ಕರಬೇಕೆಂದು ಆರಿಸಲಾಯಿತು. ಹೆಲ್ತ ಕಮಿಟಿಯ ಸಭೆಯೊಂದು ಶ್ರೀ. ಕೆ. ಯಲ್. ಕುದ್ವರ ಅಧ್ಯಕ್ಷತೆಯಲ್ಲಿ ಕೂಡಿ ಕಾರ್ಕಳಕ್ಕೆ ಸೆನಿಟರಿ ಇನ್ಸ್‌ಪೆಕ್ಟರರನ್ನು ನೇಮಿಸಬೇಕೆಂದು ಪಂಚಾಯತ ಬೋರ್ಡನ್ನು ಕೇಳಿಕೊಳ್ಳುವ ಠರಾವಾಯಿತು.

ಚುನಾವಣೆ

ಪಂಚಾಯತ ಬೋರ್ಡಿನ ಉಪ ಚುನಾವಣೆಯೊಂದು ನಡೆದು ಶ್ರೀಗಳಾದ ಬಿ. ರಾಮಕೃಷ್ಣ ಶೆಟ್ಟಿ ಮತ್ತು ಡಿ. ವಿ. ಭಟ್ಟರವರು ಪ್ರತಿಸ್ಪರ್ಧಿಗಳಿಲ್ಲದೆ ಆರಿಸಲ್ಪಟ್ಟಿರುತ್ತಾರೆ.

ಉಡುಪಿ

ತೆನ್ನಯ್ಯ ಪೂಜಾರಿ ಕೊಲೆಯ ವಿಚಾರಣೆ

ಮಟ್ಟಿಯಲ್ಲಿ ಕೆಲವು ತಿಂಗಳ ಹಿಂದೆ ನಡೆದ ತೆನ್ನಯ ಪೂಜಾರಿಯ ಆಶ್ಚರ್ಯಕರ ಕೊಲೆಯ ವಿಚಾರಣೆ ಕಳೆದ ವಾರದಿಂದ ಸ್ಪೆಶಲ್ ಸಬ್ ಮೆಜಿಸ್ಟ್ರೇಟರ ಕೋರ್ಟಿನಲ್ಲಿ ನಡೆಯುತ್ತಿದೆ.

ಪುನಃ ಫನ್ ಫೇರ್

ಬೊಂಬೇ ವೆರ್ರ್ಯಾಟಿಷೊ ಎಂಬ ಫನ್‌ಫೇರಿಗೆ ಪುನಃ ಲೈಸೆನ್ಸು ದೊರೆತಿರುವುದರಿಂದ ದ್ವಿತೀಯ ಬಾರಿ ಪ್ರದರ್ಶನವಾರಂಭವಾಗಿದ್ದೆ ನಗರದ ಕೆಲವೆಡೆ ಸಿಡುಬು ರೋಗ ಹಬ್ಬಿರುವುದು.

ಸಾಸ್ತಾನು

ಪಾಂಡೇಶ್ವರ ಶಾಲೆಯ ರಕ್ಷಕರ ಕೂಟವು ಸೈಂಟ್ ಎಂಟೊನೀಸ್ ಗರ್ಲ್ಸ್ ಹಾ. ಎ. ಶಾಲೆಯಲ್ಲಿ ಜೂನಿಯರ್ ಡೆಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ. ಟಿ. ಶೀನಪ್ಪ ಹೆಗ್ಡೆ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಲೆಕ್ಕಪತ್ರ ಸ್ವೀಕಾರದ ಮೇಲೆ, ಅಧ್ಯಕ್ಷರು ವಿದ್ಯಾಭ್ಯಾಸಕ್ಕೆ ಸಂಬಂಧಿಸಿ ಮಾತನಾಡಿದರು.

ಕರ್ನಾಟಕ

ಮೈಸೂರು

ವೆಂಕಣ್ಣಯ್ಯ ಸ್ಮಾರಕ

ಗ್ರಂಥಪ್ರಕಾಶನವನ್ನು ಚಿತ್ರದುರ್ಗ ಕರ್ನಾಟಕ ಸಂಘದವರು ಮಾಡುವರು.

ವಸಂತ ಸಾಹಿತ್ಯೋತ್ಸವವು

ಶ್ರೀ ಕೃಷ್ಣರಾಜ ಪರಿಷನ್ಮಂದಿರದಲ್ಲಿ ತಾ. ೩ ರಿಂದ ಆರಂಭವಾಗಿದ್ದು ತಾ. ೬ರ ತನಕ ಜರಗುವುದು.

ಅಗ್ನಿಯ ಅನಾಹುತ

ನಂಜನಗೂಡು ತಾಲೂಕಿನ ಬೊಕ್ಕನೆ ಹಳ್ಳಿ ಗ್ರಾಮಕ್ಕೆ ಆಕಸ್ಮಾತ್ತಾಗಿ ಬೆಂಕಿ ಬಿದ್ದು ೬೧ ಮನೆಗಳು ಸುಟ್ಟು ಹೋದುವು. ೬೦೦೦ ರೂ. ಗಳಷ್ಟು ನಷ್ಟವಾಗಿದೆ. ೮೦೦ ಮಂದಿ ಸಂಕಷ್ಟಗಳಿಗೀಡಾಗುವರು. ಕಂದಾಯ ಇಲಾಖೆಯವರು ಸಹಾಯವೀಯುವ ಕಾರ್ಯಕ್ರಮಗಳನ್ನು ಕೈಕೊಳ್ಳುತ್ತಿರುವರು.

ಬೆಂಗಳೂರು

ಕಾಂಗ್ರೆಸ್ ಅಧ್ಯಕ್ಷರಿಗೆ ಮಾನ ಪತ್ರ

ಒಂದು ತಾ. ೩೦ ರಂದು ಬೆಂಗಳೂರು ನಗರ ಸಭೆಯಿಂದ ಅರ್ಪಿಸಲ್ಪಟ್ಟಿತು. ಶ್ರೀ. ಎಚ್. ಸಿದ್ದಯ್ಯನವರು ಮಾನಪತ್ರಕ್ಕೆ ಉತ್ತರವನ್ನಿಯ್ಯುತ್ತಾ ಮೈಸೂರಿನ ಮಹಾ ರಾಜರು ಜವಾಬ್ದಾರೀ ಸರಕಾರವನ್ನು ಕೂಡಲೇ ಕೊಟ್ಟು ಇತರ ಆಶ್ರಿತ ರಾಜರಿಗೆ ಮೇಲ್ಪಂಕ್ತಿಯನ್ನು ಹಾಕಿಕೊಡಬೇಕೆಂದು ಹೇಳಿದರು.

ಹುಬ್ಬಳ್ಳಿ

ಶ್ರೀಮತಿ ಉಮಾಬಾಯಿ ಕುಂದಾಪೂರ

ಇವರ ೫೦ನೆಯ ಹುಟ್ಟಿದ ಹಬ್ಬವು ತಾ. ೨೫ ರಂದು ಹುಬ್ಬಳ್ಳಿಯಲ್ಲೂ ಇನ್ನಿತರ ಸ್ಥಳಗಲ್ಲೂ ಆಚರಿಸಲ್ಪಟ್ಟಿತು.

ಪುಸ್ತಕಾವಲೋಕನ

ಶ್ರೀ ಉತ್ತಂಗಿ ಚೆನ್ನಪ್ಪನವರ ಷಷ್ಟ್ಯಬ್ದ ಪೂರ್ತಿಕಾಣಿಕೆ

ಹುಬ್ಬಳ್ಳಿಯ ಉತ್ತಂಗಿ ಸತ್ಕಾರ ಸಮಿತಿಯವರು, ಕನ್ನಡನಾಡಿನ, ಅಭಿನವ ಸರ್ವಜ್ಞನೆನಿಸಿದ ಶ್ರೀಮಾನ್ ಉತ್ತಂಗಿ ಚೆನ್ನಪ್ಪನವರ ಷಷ್ಟ್ಯಬ್ದ ಪೂರ್ತಿ ದಿನಾಚರಣೆಯನ್ನು ತಾ. ೩—೪—೧೯೪೧ರಂದು ಮುಂಬಾಯಿ ಸರಕಾರದ ಹಿಂದಿನ ಶಿಕ್ಷಣಮಂತ್ರಿ ಶ್ರೀ ಸಿದ್ದಪ್ಪ ಕಂಬಳಿಯವರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ಜರಗಿಸಿದ ಸುದ್ದಿ ಅಖಿಲ ಕನ್ನಡನಾಡಿಗೆ ಬಹಳ ಸಂತೋಷವನ್ನುಂಟುಮಾಡಿದೆ. ಆ ದಿನ ಹಲವು ಮಂದಿ ಹಿರಿಯ ಕನ್ನಡಿಗರು, ಸಾಹಿತ್ಯ ಸೇವಕರು ಉತ್ತಂಗಿ ಚೆನ್ನಪ್ಪನವರು ಸರ್ವಜ್ಞನ ಪದಗಳ ಮರ್ಮವನ್ನು ಕನ್ನಡನಾಡಿಗೆ ಅರುಹಿ, ಕನ್ನಡ ನಾಡುನುಡಿಗೆ ಸಲ್ಲಿಸಿದ ಸೇವೆಯನ್ನು ಕೊಂಡಾಡಿ ಅವರಿಗೆ ಆಯುರಾರೋಗ್ಯಗಳನ್ನು ಕೋರಿದರು. ಈ ಸಂದರ್ಭದಲ್ಲಿ ಅವರ ಸೇವೆಯ ಕಾಣಿಕೆಯಾಗಿ ಅವರ ಕುರಿತಾಗಿರುವ ಒಂದು ಪುಸ್ತಕವನ್ನು ಉತ್ತಂಗಿ ಸತ್ಕಾರ ಸಮಿತಿಯವರು ಪ್ರಕಟಿಸಿ ಶ್ರೀ. ಉತ್ತಂಗಿಯವರನ್ನು ಅಧಿಕಾಧಿಕ ಗೌರವಿಸಿದ್ದು ಹಿರಿಯ ಹೆಮ್ಮೆಯ ಮಾತಾಗಿದೆ.

ಕನ್ನಡ ಬರೆಹಗಾರರಿಗೆ ಅವರು ಜೀವಂತರಾಗಿರುವಾಗಲೇ ಇಂತಹ ಗೌರವ ಸಂದಿರುವುದು ಶ್ರೀ. ಬಿ. ಎಂ. ಶ್ರೀಕಂಠಯ್ಯನವರ ನಂತರ ಶ್ರೀ. ಉತ್ತಂಗಿಯವರಿಗೆ 'ಶ್ರೀ'ಯವರಿಗೆ ಅವರ ಮಿತ್ರರು ಕೊಟ್ಟ 'ಸಂಭಾವನೆ'ಯು ಶ್ರೀ ಯ ಸರಸ್ವತಿಯೂ ಒಲಿದಿತ್ತ ಸಂಭಾವನೆ. ಉತ್ತಂಗಿಯವರ ಈ ಕಾಣಿಕೆ ಗಾತ್ರದಲ್ಲಿ ಅದಕ್ಕಿಂತ ಚಿಕ್ಕದಿದ್ದರೂ, ಇದರಲ್ಲಿ ಅಡಕವಾದ ಹಾರ್ದಿಕ ಭಾವನೆಗಳು, ಸಾರಸ್ವತ ಸಂಭಾವನೆಗಳು ಮೊದಲಿನವಕ್ಕಿಂತ ಏನೇನೂ ಕಡಿಮೆಯೆನ್ನದಷ್ಟು ಘನವಾಗಿವೆ. ಕನ್ನಡ ಸಾಹಿತ್ಯ ಸಮಾಜದಲ್ಲಿ ಹೆಚ್ಚಾಗಿ ಹಿಂದುಗಳು, ಅದರಲ್ಲೂ ಬ್ರಾಹ್ಮಣರೇ ಮೆರೆಯುತ್ತಿರುವವರು ಎಂಬುದಾಗಿ ಕೆಲವು ಕಡೆಗಳಲ್ಲಿ ಕೇಳಿಬರುತ್ತಿರುವ ಆರೋಪವನ್ನು, ಈ ಮೂಲಕ ಅಲ್ಲಗಳೆದಂತಾಗಿದೆ. ಕನ್ನಡ ತಾಯಿಯ ಹೊಟ್ಟೆಯಲ್ಲಿ ಕ್ರಿಶ್ಚಿಯನ್ ಆಗಿ ಹುಟ್ಟಿರುವುದರಿಂದ ದೌರ್ಭಾಗ್ಯಕರವೆಯಿಲ್ಲವೆಂಬುದನ್ನು ಈ ಕಾಣಿಕೆಯು ತೋರಿಸಿದೆ. ಶ್ರೀ. ಉತ್ತಂಗಿಯವರನ್ನು, ಅವರು ಮಾಡಿದ ಘನವಾದ ಸೇವೆಗೆ ಸಾಕ್ಷಿಯಾಗಿ ಅಖಿಲ ಕನ್ನಡನಾಡು ಒಮ್ಮತದಿಂದ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷ ಪೀಠಕ್ಕೇರಿಸಿ ಗೌರವಿಸಬೇಕೆಂದು ನಮ್ಮ ಬಿನ್ನಹವಾಗಿದೆ.

ಉತ್ತಂಗಿಯವರ ಜೀವನ ಪರಿಚಯ, ಸಾಹಿತ್ಯಸೇವೆ, ಕೃತಿ ಪರಿಚಯ ಮೊದಲಾಗಿ ಇದರಲ್ಲಿ ಹಲವು ಲೇಖನಗಳು, ಕವಿತೆಗಳೂ ಗ್ರಂಥಪುಟಗಳೂ ಕೂಡಲಾಗಿವೆ. ಶ್ರೀಗಳಾದ ಬೇಂದ್ರೆ, ರೂಬೆನ್, ಗೋವಿಂದ ಪೈ, ಚಂದ್ರಶೇಖರ ಶಾಸ್ತ್ರಿ, ಪಾಂಡೇಶ್ವರ, ಜಾಗೀರ್ದಾರ್, ಉಗ್ರಾಣ, ಹಳಕಟ್ಟಿ, ಅ. ನ. ಕೃ, ಟಿ. ಟಿ. ಶರ್ಮ, ಪುಟ್ಟಪ್ಪ ಮೊದಲಾದವರ ಲೇಖನಕವನಗಳು ಇದರಲ್ಲಿವೆ. ಕೊನೆಗೆ ಅವರ ಗ್ರಂಥದಿಂದ ಉದ್ಧೃತ ಭಾಗಗಳಿವೆ. ಶ್ರೀ ಉತ್ತಂಗಿಯವರು ಕನ್ನಡದಂತೆ ಆಂಗ್ಲ ಭಾಷೆಯಲ್ಲೂ ಸಿದ್ಧಹಸ್ತರೆಂಬುದು ವಿಶೇಷ ಸಂತೋಷದ ಸುದ್ದಿ. ಆಂಗ್ಲ ಭಾಷೆಯಲ್ಲಿ ಬರೆದ ಅವರ ಗ್ರಂಥಗಳ ಉದ್ಧೃತ ಭಾಗಗಳನ್ನು ನೋಡಿದರೆ ನಾವು ಬೆರಗಾಗಬೇಕಾಗಿದೆ. ಶ್ರೀ ಉತ್ತಂಗಿಯವರ ಧಾರ್ಮಿಕ ಜ್ಞಾನ, ಮತ ಸಹಿಷ್ಣುತೆ, ಕನ್ನಡಪ್ರೇಮಗಳು ಆದರ್ಶವಾದುವು. ಸರ್ವಜ್ಞನ ಕುರಿತು ಅವರು ಪ್ರಕಟಿಸಿದ ಸಂಶೋಧನಾತ್ಮಕ ಕೃತಿಗಳು ಅಖಿಲ ಕನ್ನಡದ ಮನೆಮನೆಯನ್ನಲಂಕರಿಸಲು ಯೋಗ್ಯವಾಗಿವೆ. ಧಾರವಾಡ ಕರ್ನಾಟಕ ಪ್ರಿಂಟಿಂಗ್ ವರ್ಕ್ಸಿನ ಶ್ರೀ ಜಠಾರರು ಈ ಪುಸ್ತಕವನ್ನು ಬಹಳ ಸುಂದರವಾಗಿ ಅಚ್ಚುಗೊಳಿಸಿದ್ದಾರೆ. ಶ್ರೀಮಾನ್ ಉತ್ತಂಗಿಯವರಿಗೆ ನಾವು ಚಿರಕಾಲಯುರಾರೋಗ್ಯ ಸೌಭಾಗ್ಯಗಳನ್ನು ಕೋರಿ, ಅವರನ್ನು ಈ ತೆರದಲ್ಲಿ ಸತ್ಕರಿಸಿ ಕನ್ನಡಭಾಷೆ, ಕನ್ನಡ ದೇಶ, ಇಡೀ ಕನ್ನಡವಂಶವನ್ನೇ ಸತ್ಕರಿಸಿದ ಹುಬ್ಬಳ್ಳಿಯ ಉತ್ತಂಗಿ ಸತ್ಕಾರ ಸಮಿತಿಯವರನ್ನು ನಾವು ಅಭಿವಂದಿಸುವೆವು.

ಸಿನೆಮಾ ಪುಟ

ನಾಸೀಮಳ ವಿವಾಹ

ಪ್ರಸಿದ್ಧ ನಟಿ ರೂಪರಾಣಿ ನಾಸೀಮಳು ತಾಜ್ ಮಹಾಲ್ ಪಿಕ್ಚರ್ಸಿನ ಮಹಮ್ಮದ್ ಹಸನರೊಡನೆ ಬೇಗನೇ ವಿವಾಹಿತಳಾಗುವಳೆಂದು ಒಂದು ಸುದ್ದಿ. ಕೆಲವು ಉರ್ದು ಪತ್ರಿಕೆಗಳಲ್ಲಿ ಈ ಸುದ್ದಿ ಪ್ರಕಟವಾಗಿ ಬಂದಿದೆ.

ನ್ಯೂಥಿಯೇಟರ್ಸ್ ಸೋಧಬೋಧ್
ಠಾಗೂರ್ ಕತೆ

ನ್ಯೂಥಿಯೇಟರ್ಸ್ ಸ್ಟುಡಿಯೋದಲ್ಲಿ ಸೋಧಬೋಧ್ ಎಂಬ ಅವರ ಹೊಸ ಚಿತ್ರವು ಪೂರ್ಣವಾಗುತ್ತಿದೆ. ಇದು ಠಾಗೂರರ ಒಂದು ನಾಟಕ ಕಥೆ, ಸೌಮಿತ್ರ ಮುಖರ್ಜಿ ಫೋಟೋ.

ನಮ್ಮ ವೀರ ನೆರೆಕರೆಯವರು
ಚಿಯಾಂಗರ ಚಿತ್ರ

'ನಮ್ಮ ವೀರ ನೆರೆಕರೆಯವರು' ಎಂಬ ಹೆಸರಿನಿಂದ ಇತ್ತೀಚಿಗೆ ಚೀನದ್ದ ದಳಪತಿ ಕೈಶೇಕರು ಪತ್ನೀ ಸಮೇತ ಭಾರತಕ್ಕೆ ಬಂದ ಐತಿಹಾಸಿಕ ಘಟನೆಯ ವಿಷಯ ಚಿತ್ರತಯಾರಿಸಲಾಗಿದೆ. ಇದು ಶಾಂತಾರಾಮರ ನಿರ್ದೇಶಕತ್ವದಿಂದ ಆಗಿರುವುದು. ಇದರಲ್ಲಿ ಭಾರತದ ಮುಖಂಡರನ್ನು ಸಂದರ್ಶಿಸಿದ ಚಿತ್ರಗಳಿಲ್ಲ!

ಒಬ್ಬಳು ಹೊಸ ತಾರೆ

ಸ್ವರ್ಗೀಯ ಶರಚ್ಚಂದ್ರ ಚಟರ್ಜಿಯವರ ಕಥೆಯನ್ನು ಆಧರಿಸಿ ನಿರ್ದೇಶಕ ಬೋಸರು ಒಂದು ಸಿನೆಮಾ ತಯಾರಿಸುತ್ತಾರೆ. ಪ್ರಸಿದ್ಧ ನಟವರ್ಗದವರಿದರಲ್ಲಿದ್ದಾರೆ. ಈ ಸಿನೆಮಾದಲ್ಲಿ ಕುಲೀನ ಕುಟುಂಬದ ಒಬ್ಬ ಹೊಸತಾರೆ ಮುಖ್ಯ ಪಾತ್ರವಹಿಸುತ್ತಾಳೆ.

ಜೂಲದ ಯಶಸ್ವಿತೆ

ಜೂಲಾ ಉತ್ತರ ಭಾರತದ ಪ್ರಸಿದ್ಧ ಕೇಂದ್ರಗಳಲ್ಲಿ ಅತ್ಯಂತ ಯಶಸ್ವಿಯಾಗಿ ಪ್ರದರ್ಶಿತವಾಗುತ್ತಿದೆ. ದಿಲ್ಲಿಯಲ್ಲಿ ಮೊದಲನೆ ವಾರದ ಸಂಪ್ರಹ ೧೩ ಸಾವಿರಕ್ಕೆ ಮಿಕ್ಕಿದೆ. ಲಾಹೋರಲ್ಲಿ ೧೨ ಸಾವಿರ, ಲಕ್ನೋದಲ್ಲಿಯೇ ರೂ. ೫,೫೫೫. ಅಲ್ಲಿ ಎಷ್ಟೇ ಪ್ರಸಿದ್ಧ ಚಿತ್ರವಾದರೂ ರೂ. ೩,೦೦೦ಕ್ಕೆ ಮಿಕ್ಕಿ ಹೋಗುವುದಿಲ್ಲ. ಇದು ಬಂಧನವನ್ನೂ ಮಿಕ್ಕಿರುವುದು.

ರಶ್ಯದಿಂದ ಸಿನೆಮಾ ಸಾಮಾನು

ಯುದ್ಧಕಾಲದಲ್ಲಿ ಸಿನೆಮಾಕ್ಕೆ ಬೇಕಾದ ಸಾಮಾನು ಸಿಗುವುದು ಕಷ್ಟವಾಗಿದೆ. ಹಾಗಾಗಿ ಭಾರತೀಯ ಸಿನೆಮಾ ನಿರ್ಮಾಪಕರು ಕಷ್ಟದಲ್ಲಿ ಬೀಳಬೇಕಾಗುವುದು. ಆದರೆ ರಶ್ಯದಲ್ಲಿ ಉತ್ತಮ ಸಿನೆಮಾ ಸಾಮಾಗ್ರಿಗಳು ಧಾರಾಳ ಸೃಷ್ಟಿಯಾಗುತ್ತವೆಯೆಂದು ತಿಳಿದು ಬರುವುದರಿಂದ ಅಲ್ಲಿಂದ ಈ ಕಡೆ ಅವುಗಳನ್ನು ತರಿಸುವ ವ್ಯವಸ್ಥೆಯನ್ನು ಇಂಡಿಯಾ ಸರಕಾರವು ಏರ್ಪಡಿಸುವುದು ಒಳ್ಳೆಯದು.

'ಪತ್ನಿ' ತೆಲುಗು ಚಿತ್ರ

ಸಾರಥಿ ಫಿಲ್ಮ್ಸಿನವರ ತೆಲುಗು ಚಿತ್ರ 'ಪತ್ನಿ' ಪ್ರದರ್ಶಿತವಾಗಿದೆ. ಇದು ಪತಿವ್ರತಾ ಧರ್ಮವನ್ನು ಸಾರುವ ಚಿತ್ರ. ಪ್ರಸಿದ್ಧ ತಮಿಳು ಪುರಾಣ ಶಿಲಪ್ಪದಿಗಾರದಿಂದ ಉದ್ಧರಿಸಿದ ಕಥೆ. ಪ್ರಕಾಶರಾವ್, ಹೇಮಾವತಿ, ಮೊದಲಾದವರು ಉತ್ತಮವಾಗಿ ನಟಿಸುತ್ತಾರೆ. ಸಂಗೀತ, ನಾಟ್ಯ ಅಭಿನಯಗಳು ಚೆನ್ನಾಗಿವೆ.

ಸೈಗಲ್ ರಣಜಿತ್ ಚಿತ್ರದಲ್ಲಿ

ಈ ವಾರದ ಒಂದು ಪ್ರಾಮುಖ್ಯ ವಾರ್ತೆಯೆಂದರೆ ಸೈಗಲನಿಗೆ ರಣಜಿತ್ ಚಿತ್ರ ಕಂಪೆನಿಯ ಒಂದು ಚಿತ್ರದಲ್ಲಿ ಅಭಿನಯಿಸಲು ನ್ಯೂಥಿಯೇಟರ್ಸಿನವರಿಂದ ಅನುಮತಿ ದೊರತಿದೆಯೆಂಬುದು. ಕುರ್ಶಿದ್ ಇದರಲ್ಲಿ ನಾಯಕಿಯಾಗಿರುವಳು. ಇಬ್ಬರೂ ಸಂಗೀತ ಶ್ರೇಷ್ಠರು. ಚಿತ್ರ ಗಾಯನ ಮಯವಾಗದಿರದು. ಕೆದಾರ್ ಶರ್ಮರೇ ಸಂಭಾಷಣಾ ಲೇಖಕರು ಮತ್ತು ನಿರ್ದೇಶಕರು. ಶ್ರೀ ಮನ್ಮಥನಾಥ ರೈಯವರು ಕಥಾಲೇಖಕರು. ದೇವಕೀಬೋಸ್, ಕಾನನ್, ಕೇ. ಸಿ. ಡೇ, ಮಾಧುಬೋಸ್, ಸಾಧನಾಬೋಸ್ ಮೊದಲಾದವರನ್ನೂ ರಣಜಿತ್‌ನಲ್ಲಿ ಅಭಿನಯಿಸುವಂತೆ ಮಾಡಲಾಗುವುದೇ-ಎಂಬುದೊಂದು ಊಹೆ.

ಸ್ಥಳೀಯ ಸಿನೆಮಾ
ಬಾಲಾಜಿಯಲ್ಲಿ
"ಚಿತ್ರಲೇಖಾ"

ಫಿಲ್ಮ್ ಕೊರ್ಪೊರೇಶನ್ ಓಫ್ ಇಂಡಿಯಾ ಕಂಪೆನಿಯವರ, 'ಚಿತ್ರಲೇಖಾ' ಎನ್ನುವ ಐತಿಹಾಸಿಕ ಚಿತ್ರವು ತಾ. 4ರಿಂದ ಸ್ಥಳೀಯ ಬಾಲಾಜಿ ಟಾಕೀಸಿನಲ್ಲಿ ಪ್ರದರ್ಶಿತವಾಗುತ್ತಿದೆ. ಇದು ಮೌರ್ಯ ಚಂದ್ರಗುಪ್ತನ ಕಾಲದ ಕಥೆ. ಮಾನವನ ಹೃದಯದಲ್ಲಿ ಪ್ರೇಮ ಕಾಂಕ್ಷೆ, ಭೋಗಲಾಲಸೆಗಳು ಹೇಗೆ ಹಿಡಿದೊತ್ತಿದರೂ ತಾಂಡವವಾಡುತ್ತಿವೆಯೆಂಬುದು ಸುಂದರಿ ನರ್ತಕಿ 'ಚಿತ್ರಲೇಖೆ'ಯ ಕುರಿತು, ರಾಜಪುತ್ರ ಹಾಗೂ ಯೋಗಿರಾಜ ಇವರು ಮೋಹಿತರಾಗಿರುವುದರಿಂದ ಗೊತ್ತಾಗದಿರದು. ಬ್ರಹ್ಮಚಾರಿಯು ಸ್ತ್ರೀಯ ಮೋಹದಲ್ಲಿ ಬೀಳುವನು! ಭೋಗಿ ಯೋಗಿಯಾಗುವನು! ಯೋಗಿ ಭೋಗ ಕೂಪದಲ್ಲಿ ನರಳುವನು! ಸ್ತ್ರೀ, ಮದ್ಯ, ಮೋಹಗಳು ಯಾರನ್ನು ತಾನೇ ಮರುಳುಮಾಡವು? ಕಥೆ ಸ್ವಾರಸ್ಯವಿದೆ; ಅಭಿನಯ ಅತ್ಯುತ್ತಮವಿದೆ; ಐತಿಹಾಸಿಕ ಕಾಲಕ್ಕೆ ಅನುರೂಪವಾಗಿರುವವೇಷ ಭೂಷಣ, ಪಾತ್ರರಚನೆ, ಸನ್ನಿವೇಶ ವಾತಾವರಣಾದಿಗಳು ಚಿತ್ರದ ಸೌಂದರ್ಯವನ್ನು ಹೆಚ್ಚಿಸಿವೆ. ಮೆಹತಬ್, ನಂದ್ರೇಕರ್, ಮಾನಿಕ ದೇಸಾಯಿ, ಗ್ಯಾನಿ, ರಾಮದುಲಾರಿ ಮೊದಲಾದವರು ಇದರಲ್ಲಿ ನಟಿಸುತ್ತಾರೆ.

ಕುರ್ಶಿದ್ ಕಂಪೆನಿ

ಕುರ್ಶಿದಳೂ ತನ್ನ ಸ್ವಂತ ಕಂಪೆನಿಯೊಂದನ್ನು ಪ್ರಾರಂಭಿಸುತ್ತಾಳಾಗಿ ಸುದ್ದಿಯಿದೆ. ಆಕೆ ಇದರಿಂದಾಗಿ ರಣಜಿತ್ ಅಭಿನಯದಿಂದ ವಿಮುಕ್ತಳಾಗುವಳೆಂದು ತಿಳಿಯಕೂಡದು. ಚಂದುಲಾಲ ಶಾರೊಡನೆ ರಣಜಿತಿನಲ್ಲಿ ಆಕೆ ಚಿತ್ರ ತಯಾರಿಸುವಳು; ಆಕೆಯ ಕಂಪನಿ ಕೇವಲ ಪಂಜಾಬಿ ಚಿತ್ರಗಳನ್ನು ಮಾತ್ರ ತಯಾರಿಸುವುದಂತೆ.

ಬೊಂಬೇ ಟಾಕೀಸ್ 'ವಸಂತ್'

'ಬೊಂಬಾಯಿ ಟಾಕೀಸಿನವರ ಮುಂದಿನ ಚಿತ್ರ 'ವಸಂತ್'' ಎಂಬುದು. ಪ್ರಮೀಲಾ ಇದರಲ್ಲಿ ಅಭಿನಯಿಸುತ್ತಾಳೆ. ಪ್ರಮೀಲಾ ಸ್ವತಃ ಕುಮಾರ್ ಚಂದ್ರಮೋಹನರೊಡನೆ ಒಂದು ಕಂಪನಿ ಸುರುಮಾಡುತ್ತಾಳೆಂದೂ ಸುದ್ದಿ.

ಶಾಂತಾರಾಮ್

ನಿರ್ದೇಶಕ ಶಾಂತಾರಾಮರು ಫಿಲ್ಮ್ ಎಡ್ವೈಸರಿ ಬೋರ್ಡಿನ ಚಟುವಟಿಕೆಗಳನ್ನು ಸರಿಯಾಗಿ ಮಾಡಲು ಸರಕಾರವು ಒಂದು ಮಿಲಿಯ ರೂಪಾಯಿ ಕೊಡಬೇಕಾಗಿ ಕೇಳಿಕೊಂಡಿದ್ದಾರೆಂದು ದಿಲ್ಲಿ ವಾರ್ತೆ; ಸರಕಾರವೂ ಆ ಹಣವನ್ನು ಕೊಡಲು ಒಪ್ಪಿದೆಯಂತೆ.

ಸಿಲ್ವರ್ ಫಿಲ್ಮ್ಸ್

ಇವರು 'ಬಿಗ್ ಮನಿ' ಎಂಬ ಚಿತ್ರವನ್ನು ತಯಾರಿಸುವರು. ಚಂದ್ರಮೋಹನ್, ಪ್ರಮೀಳಾ, ಕುಮಾರ್, ಅಜೂರಿ ಮತ್ತು ಗೋಪಿ ಅದರಲ್ಲಿದ್ದಾರೆ.

ಮೋತಿಲಾಲನ ಚಟುವಟಿಕೆಗಳು

ಮೋತಿಲಾಲ್ ರಣಜಿತ್ ಚಿತ್ರಪಟ ಬಿಟ್ಟ ಮೇಲೆ ಈಗ ಬೇರೆ ಬೇರೆ ಕಂಪೆನಿಗಳ ಐದು ಚಿತ್ರಗಳಲ್ಲಿ ಪಾತ್ರವಹಿಸುವರೆ ಒಪ್ಪಂದ ಮಾಡಿರುವನೆಂದು 'ರೂಪವಾಣಿ' ಪತ್ರಿಕೆಯ ಸುದ್ದಿ. ಮಿನೆರ್ವಾದ 'ನವಜೀವ'ನದಲ್ಲಿ ಈಗಲೇ ಕೆಲಸಕ್ಕೆ ಕೈಹಚ್ಚಿರುವನಂತೆ. ಇದರಲ್ಲಿ ಸವಿತಾ ಸಹ ನಟಿಯಾಗಿರುವಳು. 'ಲಕ್ಷ್ಮಿ'ಯವರ ಎರಡನೆಯ ಚಿತ್ರದಲ್ಲಿ ಲೀಲಾ ಚಿಟ್ನೀಸ್ ಮತ್ತು ಛಾಯಾದೇವಿಯರೊಡನೆ ನಟಿಸುವನಂತೆ. ನೇಶನಲ್ ಪಿಕ್ಚರ್ಸಿನ ಮುಂದಿನ ಚಿತ್ರದಲ್ಲಿ ಚಂದ್ರಮೋಹನ್ ಅಥವಾ ಶೇಕ್ ಮುಕ್ತಾರರ ಜತೆಯಲ್ಲಿ ಮೋತಿಲಾಲನನ್ನು ನಟಿಸುವಂತೆ ಮಾಡಬೇಕೆಂದು ಮೆಹಬೂಬರ ಹಂಚಿಕೆಯಾಗಿದೆಯಂತೆ. ಚಿತ್ರ ಪ್ರೊಡಕ್ಷನ್ಸಿನವರ ದಿವಾನ್ ಶೇರಾರು ಬರೆದ ಕಥೆಯಲ್ಲಿ ಲೀಲಾ ಚಿಟ್ನೀಸರೊಡನೆ ಅಭಿನಯಿಸುವನೆಂದೂ ಸುದ್ದಿ. ಕಾನನ್ ಮತ್ತು ಪೃಥ್ವಿರಾಜರು ನಟಿಸುವ ದೇವಕೀಬೋಸರ ಚಿತ್ರದಲ್ಲಿ ಮೋತಿಲಾಲನು ನಾಯಕನಾಗುವನೆಂದೂ ವಾರ್ತೆ. ಅಂತೂ ರಣಜಿತ್ ಬಿಟ್ಟರೂ ಮೋತಿಲಾಲ್ ಸುಮ್ಮನಿಲ್ಲ.



'ನನಗೀಗ ಅಸಹ್ಯವಾದ ಹುಣ್ಣುಗಳಾಲಿ ಛಿದ್ರಗಳಾಲಿ ಇರುವ ಚರ್ಮವಿರುವುದಿಲ್ಲ'

ದುಬಾರಿ ಗುಣವುಳ್ಳ ಕುಟಿ ಕೂರಾ (Cuticura) ಸಾಬೂನನ್ನು ನಾನೀಗ ಉಪಯೋಗಿಸುತ್ತಿರುವೆ. ಇದು ನನ್ನ ಚರ್ಮವನ್ನು ಸ್ವಚ್ಛವಾಗಿರಿಸುವುದಲ್ಲದೆ, ಅಂದವಾಗಿರಿಸುವುದು. ಪರಿಮಳ ತನ್ನ ಔಷಧಿಯುಕ್ತವಾದ ಈ ಸಾಬೂನಿನಲ್ಲಿ ನೋವನ್ನು ಸಂತವಿಸಿ ವಾಸಿಮಾಡಿ ವಿಷಹರಕ ಗುಣವಿರುವುದು. ಈ ಸಾಬೂನಿನ ಎಣ್ಣೆಯಿಂದ ಕೂಡಿದ ಸಾರವತ್ತಾದ ನೊರೆಯು ನಿಮ್ಮ ಚರ್ಮದ ರಂಧ್ರವನ್ನು ಹೊಕ್ಕು ಚರ್ಮದಲ್ಲಿರುವ ಸಣ್ಣ ಸಣ್ಣ ಕಲ್ಮಶವನ್ನು ಕೂಡಾ ಹೊರಗೆಡುವುದು. ನಿಮ್ಮ ಕೆಮಿಸ್ಟರಿಂದ ಇಂದೇ ಕುಟಿಕುರಾ (Cuticura) ಸಾಬೂನನ್ನು ಕೊಂಡುಕೊಳ್ಳಿರಿ!

ಕುಟಿಕುರಾ (Cuticura) ಸಾಬೂನು ಚರ್ಮವನ್ನು ವಾಸಿಯಾಗಿರಿಸಿ ದೊರಗಾದ ಚರ್ಮವನ್ನು ಮೃದುವಾಗಿಯೂ ಇರಿಸುವುದು. ಸೌಮ್ಯವಾದ ವಿಷಹಾರಿ ಗುಣವುಳ್ಳದ್ದು—ಚರ್ಮದ ಮೇಲುಂಟಾಗಬಹುದಾದ ಮಚ್ಚೆ ಮತ್ತು ಕಲ್ಮಶವನ್ನು ಇಲ್ಲದಂತೆ ಮಾಡುವುದು.

ಕುಟಿಕೂರಾ ಸೋಪ್

Cuticura Soap

ಕುಟಿಕೂರಾ ಸಾಬೂನು ಈಗ ದೊಡ್ಡ ಸೈಜಿನ ಬಿಲ್ಲೆಯ ರೂಪದಲ್ಲಿಯೂ (ಮಾಮೂಲಿಕ್ಕೆ) ಮತ್ತು ಸಣ್ಣ ಬಿಲ್ಲೆಯ (ಪರಿಚಯದ ಸೈಜು) ಆಕಾರದಲ್ಲಿಯೂ ದೊರಕುವುದು.

The Canara Banking Corporation Ltd.

(Incorporated in British India with limited liability)

Estd. 1906.

OUR RATES OF INTEREST ON DEPOSITS

Current	....	1%	p. a.
Savings Bank	....	2½%	,,
Short-term	....	1¼%	,,
FIXED FOR 3 MONTHS	....	2%	,,
6 ,,	....	2½%	,,
9 ,,	....	2¾%	,,
12 ,,	....	3%	,,
24 ,,	....	3½%	,,

Advances made at cheap rates of interest against approved securities and Banking business of every description transacted.

ಕೊಲಂಬೋದ ಮೇಲೆ ವಿಮಾನ ಧಾಳಿ

ಕೊಲೊಂಬೋದ ಮೇಲೆ ತಾ. 5ರಂದು ಮುಂಜಾನೆ ಜಪಾನ್ ವಿಮಾನ ಧಾಳಿಯಾಯಿತು. ವಿಮಾನ ವಿರೋಧಕ ದಳದವರು ೭೯ ಶತ್ರು ವಿಮಾನಗಳನ್ನು ಕೆಳಗುರುಳಿಸಿದರೆಂದು ತಿಳಿದಿದೆ. ಇದಲ್ಲದೆ ಬೇರೆ ೨೫ ವಿಮಾನಗಳಿಗೆ ಪೆಟ್ಟು ತಗಲಿದೆಯಂತೆ. ಧಾಳಿಯಾದಾಗ ನಗರದಲ್ಲಿ ವಿಶೇಷ ಗಾಬರಿಯೇನೂ ಇರಲಿಲ್ಲವಂತೆ.

ಭಾರತ ಮಂತ್ರಿಗಳ ಮೇಲೆ ೫೦ ಸಾವಿರ ರೂಪಾಯಿ ಮಾನನಷ್ಟ

ಕಳೆದ ತಿಂಗಳು ಲಾಹೋರ್ ಸ್ಟೇಶನಿನ ೧ ಕ್ಲಾಸಿನ ಗಾಡಿಯಲ್ಲಿ ಅಜಾದರು ಮತ್ತು ಅಲ್ಲಾಭಕ್ಷರು ಪ್ರಯಾಣಮಾಡುತ್ತಿದ್ದಾಗ, ಸ್ಟೇಶನಾಧಿಕಾರಿಯ ಮಾತಿನಂತೆ ರೈಲ್ವೆ ಅಧಿಕಾರಿ ಅವರನ್ನು ಅಲ್ಲಿಂದ ಇಳಿಸಿ ಅಪಮಾನ ಮಾಡಿದನೆಂದು ಅವರು ೫೦ ಸಾವಿರ ರೂಪಾಯಿ ಮಾನನಷ್ಟಕ್ಕೆ ಭಾರತ ಮಂತ್ರಿಗೆ ನೋಟೀಸು ಬಿಟ್ಟಿರುವರೆಂದು ಸುದ್ದಿ.

ವಿಚಿತ್ರ ಪ್ರಪಂಚ

ಸಿಂಡೀಸಿನಲ್ಲಿ ವಿಚಿತ್ರ ಮಾನವ ಜಾತಿ

ದಕ್ಷಿಣ ಅಮೆರಿಕದ ಪರ್ವತ ಪ್ರದೇಶವಾದ ಸಿಂಡೀಸಿನಲ್ಲಿ ಹೊಸ ಮನುಷ್ಯ ಜಾತಿಯೊಂದು ಈಗ ವಾಸವಿರುವುದಾಗಿ ಸಂಶೋಧಿಸಲಾಗಿದೆ. 'ಸ್ಟೇಟೋಫಿಯರ್ ಮೆನ್' ಎಂದು ಇವರಿಗೆ ಹೆಸರಿಡಲಾಗಿದೆ. ಇದನ್ನು ಕಂಡುಹಿಡಿದವರು ಡಾ॥ ಕಾರ್ಲೋಸ್ ಮೊಂಗೇ ಎನ್ನುವವರು. ಇವರು ಪೆರುವಿನ ಒಂದು ವಿಶ್ವವಿದ್ಯಾಲಯದ ಬಯೋಲಜಿಸ್ಟರು. ಸಮುದ್ರ ಮಟ್ಟಕ್ಕಿಂತ ಎರಡು ಅಥವಾ ಮೂರು ಮೈಲುಗಳ ಮೇಲ್ಗಡೆಯಲ್ಲಿರುವ ಜೀವರಾಶಿಯವರಾಗಿದ್ದು ಇವರು ಒಂದು ವಿಶಿಷ್ಟ ಮಾನವ ಜಾತಿಯಾಗಿದ್ದಾರೆ. ಇಂತಹ ಮನುಷ್ಯ ವರ್ಗವು ಭೂಮಿಯ ಯಾವ ಕಡೆಯಲ್ಲಿಯೂ ಇರುವುದಿಲ್ಲವಾಗಿ ಹೇಳಲಾಗಿದೆ. ಇತರ ಮನುಷ್ಯರಿಗೂ ಇಲ್ಲಿನ ಮನುಷ್ಯರಿಗೂ ಇರುವ ಪ್ರಾಮುಖ್ಯ ಭೇದವೇದರೆ, ಶರೀರದಲ್ಲಿರುವ ರಾಸಾಯನಿಕ ವಸ್ತುಗಳ ಮತ್ತು ಶರೀರದ ಅಂತರ್ರಚನೆಯ ವ್ಯತ್ಯಾಸ. ಸಮುದ್ರ ಮಟ್ಟಕ್ಕಿಂತ ೫೮೦೦ ಫೀಟು ಮೇಲಿರುವುದಾಗಿ ಆ ಜೀವಿಗಳ ರಕ್ತವು ಹೆಚ್ಚು ದಪ್ಪವಾಗಿರುವುದು; ಅವರ ಹೃದಯವು ದೊಡ್ಡದು. ನಾವು ಶ್ವಾಸಮಾಡುವುದಕ್ಕಿಂತ ಅವರ ಹೆಚ್ಚು ಗಾಳಿಯನ್ನು ಉಪಯೋಗಿಸಿ ಶ್ವಾಸಿಸುವರು. ಅವರ ನಾಡಿ ಬಡಿತ ಕಡಿಮೆ. ಇಂತಹ ೧೨ ಮಿಲಿಯ ಜನರು ಅಲ್ಲಿ ವಾಸಮಾಡುತ್ತಿದ್ದಾರಂತೆ.

ನಿದ್ರಾರಾಣಿಗೆ ಮದುವೆ

ಫಿಲಡೆಲ್ಫಿಯದ ನಿದ್ರಾರಾಣಿಯೊಬ್ಬಳಿಗೆ ಮದುವೆಯಾಗುವ ಸುದ್ದಿ ಬಂದಿದೆ. ಆಕೆಯ ಹೆಸರು ದೊರೆತ್ ಸ್ಟಿವನ್‌ಸನ್ ಎಂದು. ಕಳೆದ ನಾಲ್ಕು ತಿಂಗಳಿಂದ ಆಕೆ ನಿದ್ರಾಪರವಶಳಾಗಿ ಮಲಗಿದಲ್ಲಿಯೇ ಇದ್ದಳು. ಆಕೆ ಈಗ ಎಡ್ವರ್ಡ್ ಕಾರ್ನ್ ಎಂಬವನನ್ನು ಮದುವೆಯಾಗುವಳಂತೆ. ಆತನು ಆಕೆಯನ್ನು ಈ ಪರವಶಾವಸ್ಥೆಯಲ್ಲಿ ರಕ್ಷಣೆಮಾಡುತ್ತಿದ್ದನು. ದೊರೆತಳ ಪ್ರಾಯ ೨೨ ವರ್ಷ! ೧೯೪೦ ಇಸವಿ ದಶಂಬರ ತಿಂಗಳಲ್ಲಿ ಒಂದು ಮೋಟರು ಅಘಾತದಿಂದ ಅವಳಿಗೆ ಗಾಯವಾಗಿತ್ತು. ಕಳೆದ ಎಪ್ರಿಲ್ ವರೆಗೆ ಅವಳನ್ನು ನಿದ್ರಾಪರವಶತೆಯಿಂದ ಎಬ್ಬಿಸಲು ಯಾವ ಡಾಕ್ಟರರಿಗೂ ಸಾಧ್ಯವಾಗಲಿಲ್ಲ. ಆಕೆಗಾದ ಗಾಯದ ಪರಿಣಾಮವಾಗಿ ಆಕೆ ಹೀಗೆ ನಿದ್ರಾಪರವಶಳಾಗಿರುವಳೆಂದೂ, ಈ ನಿದ್ರೆಯು ಬಹಳ ದೀರ್ಘದ್ದೆಂದೂ ಡಾಕ್ಟರರು ಹೇಳಿದ್ದರು. ಹಲವು ಸಮಯಗಳ ವರೆಗೆ ಆಕೆ ನಿಶ್ಚಲಳಾಗಿಯೇ ಇದ್ದಳು.

ಕೋಟು ಹಾಕದೆ ಹೊರ ಬರಕೂಡದು

ಅರ್ಜೆಂಟೈನದ ರಾಜಧಾನಿ ಬ್ಯೂನೋಸ್ ಆಯಿರೆಸ್ ಎಂಬಲ್ಲಿ ಯಾವನೇ ಮನುಷ್ಯನಾದರೂ ಕೋಟುಹಾಕದೆ ಹೊರಬರಕೂಡದು. ಮಾರ್ಗದಲ್ಲಿ ಯಾವನೇ ಒಬ್ಬನಾದರೂ ಕೋಟುಹಾಕದೆ ನಡೆಯಕೂಡದೆಂದು ಕಾನೂನೇ ಆಗಿದೆ. ಅರ್ಜೆಂಟೈನ್ ಜಗತ್ತಿನ ಪ್ರಸಿದ್ಧ ನಗರಗಳಲ್ಲಿ ಒಂದು; ಸುಂದರವಾದದ್ದು. ಇಲ್ಲಿ ಸಿನೆಮಾ ಪ್ರಿಯರು ಬಹಳ. ಸಿನೆಮಾ ಭವನಗಳು ಭವ್ಯವಾಗಿವೆ.

HALFTONE & LINE
BLOCK MAKING
UNDERTAKEN
Sharada Press,
MANGALORE.

ವಿಜ್ಞಾನಯುಗ

ಮೆದುಳಿನ ರೋಗಕ್ಕೆ ವಿಟಮಿನ್ ಚಿಕಿತ್ಸೆ

ಮಿದುಳಿನ ಹಲವು ತರದ ರೋಗಗಳಿಗೆ ವಿಟಮಿನ್ ಚಿಕಿತ್ಸೆ ಒಳ್ಳೆಯದಾಗುತ್ತದೆಯೆಂದು ಬ್ರಿಟಿಷ್ ಮೆಡಿಕಲ್ ಜರ್ನಲ್‌ನಲ್ಲಿ ಒಂದು ಲೇಖನ ಬಂದಿದೆ. ಓಕ್ಸ್‌ಫರ್ಡಿನ ಆಸ್ಪತ್ರೆಯೊಂದರಲ್ಲಿ ೪೦ ಮಂದಿ ಮಿದುಳಿನ ರೋಗವಿದ್ದವರಿಗೆ ಒಂದು ವರ್ಷ ಪರ್ಯಂತ ವಿಟಮಿನ್, ಬಿ ಮತ್ತು ಸಿಗಳಿಂದ ಚಿಕಿತ್ಸೆ ನಡೆಸಲಾಯಿತು. ವಿಟಮಿನ್ ಸಿ ಆಹಾರದಲ್ಲಿಲ್ಲದಿದ್ದರೆ ಎಲುಬು ನಾಶವುಂಟಾಗುವುದೆಂದು ತಿಳಿದುಬಂದಿದೆ. ಪ್ರಾಯದ ಕಾಲದಲ್ಲಿ ಇದರಿಂದ ತುಂಬಾ ಹಾನಿಯಿರುವುದರಿಂದ ಅಂಥವರು ಹೆಚ್ಚು ವಿಟಮಿನ್‌ನ್ನು ತೆಗೆದುಕೊಳ್ಳಬೇಕಾಗುವುದು. ನರಗಳ ರೋಗವಿದ್ದವರಲ್ಲಿಯೂ ವಿಟಮಿನ್ ಸಿ ತೆಗೆದುಕೊಳ್ಳಬೇಕಾಗುವುದು. ನರಗಳ ರೋಗವಿದ್ದವರಲ್ಲಿಯೂ ವಿಟಮಿನ್ ಸಿಯ ಅಭಾವ ಕಂಡುಬರುತ್ತದೆ. ವಿಟಮಿನ್ ಬಿಯಿಂದ ಹಸಿವು ಹೆಚ್ಚುವುದು, ಜೀರ್ಣಶಕ್ತಿಯುಂಟಾಗುವುದು, ಬೆಳವಣಿಗೆಯಾಗುವುದು. ಶರೀರ ರಕ್ಷಣಾ ನರಗಳಲ್ಲಿ ಶಕ್ತಿ ಗೂಡಿಸುವುದು. ಮಿದುಳು ರೋಗದಿಂದ ನಿದ್ರಾಶೂನ್ಯರಾಗಿರುವವರೂ ಇಂತಹ ಚಿಕಿತ್ಸೆಯಿಂದ ಬಹಳ ಫಲ ಪಡೆದಿರುವರು.

ಕಲ್ಲು ಹೆಕ್ಕುವಕೆ ಯಂತ್ರ

ಕೃಷಿಕರಿಗೆ ಒಂದು ವರ!

ಕಲ್ಲುಗಳನ್ನು ಹೆಕ್ಕುವಂತಹ ಒಂದು ತರದ ಯಂತ್ರವು ಈಗ ಅಮೆರಿಕದಲ್ಲಿ ಕಂಡುಹಿಡಿಯಲಾಗಿದೆ. ಯಂತ್ರವು ತಿರುಗಾಡುತ್ತಿರುವಾಗ, ಅದರಿಂದುಂಟಾಗುವ ಚಲನೆಯ ಕಾಲದಲ್ಲಿ, ಅವುಗಳ ಹಲ್ಲುಗಳು ಕಲ್ಲುಗಳನ್ನು ಹೆಕ್ಕುವವು. ಕೃಷಿಕರಿಗೆ ಇದು ಬಹಳ ಉಪಕಾರಿಯಾಗಿದೆ. ಕಲ್ಲಿನ ಉಪಟಳದಿಂದ ಬೆಳೆ ಮಾಡಲಾರದಾಗಿರುವ ಕೆಲವು ಸ್ಥಳಗಳಲ್ಲಿ ಇದರಿಂದ ಬಹಳ ಪ್ರಯೋಜನವಾಗುವುದೆಂಬುದಕ್ಕೆ ಸಂಶಯವೇ ಇಲ್ಲ.

ಕೋಳಿ ಮರಿಗಳಲ್ಲಿ ಹೊಸ ಜಾತಿ

ಹುಟ್ಟುವಾಗಲೇ ಗಂಡು ಹೆಣ್ಣು ಕಂಡುಹಿಡಿಯಬಹುದು

ಹುಟ್ಟಿದಾಗಲೇ ಗಂಡೋ ಹೆಣ್ಣೋ ಎಂದು ಕಂಡುಹಿಡಿಯಬಹುದಾದ ಒಂದು ಹೊಸ ಜಾತಿಯ ಕೋಳಿಗಳನ್ನು ಈಗ ಕೇಂಬ್ರಿಜಿನಲ್ಲಿ ಸಾಕುತ್ತಿದ್ದಾರೆ. ಇದರಿಂದ ಗಂಡು ಕೋಳಿ ಬೇಕಾದವರು, ಅವುಗಳನ್ನೇ ದೊಡ್ಡದು ಮಾಡಬಹುದು; ಹೆಣ್ಣುಕೋಳಿ ಬೇಕಾದವರು ಅವುಗಳನ್ನೇ ಬೆಳೆಸಬಹುದಾಗಿದೆ; ಈಗಿನ ಕೋಳಿ ಮರಿಗಳಲ್ಲಿ ಅವು ದೊಡ್ಡದಾಗಿದೆ, ಅವುಗಳು ಗಂಡೋ ಹೆಣ್ಣೋ ಹೇಳಲು ಬರುವುದಿಲ್ಲ.

ಭಾರತಸ್ಥಾನ ಜಗತ್ತಿನಲ್ಲಿ ತೃತೀಯ

ಸಿನೆಮಾ ನಿರ್ಮಾಣಮಾಡುವ ಜಗತ್ತಿನ ಮೂವತ್ತೊಂದು ರಾಷ್ಟ್ರಗಳಲ್ಲಿ ಭಾರತವು ತೃತೀಯ ಸ್ಥಾನವನ್ನು ಪಡೆದಿದೆ. ಜಪಾನ್ ಪ್ರಥಮ, ಅಮೆರಿಕ ದ್ವಿತೀಯ.



ಹೌದು, ಪುಟ್ಟ ಹುಡುಗನೇ, ಈ ವೀರಯೋಧನು ಶತ್ರುವಿನೊಂದಿಗೆ ಕಾದಾಡಲು ಹೊರಟದ್ದಾನೆ ಮತ್ತು, ನೀನು ಸುಖವಾಗಿರುವಂತೆ ಇಂಡಿಯಾವನ್ನು ರಕ್ಷಿಸುತ್ತಾನೆ. ಯೋಧನಾಗಲು ನೀನು ತೀರಾ ಚಿಕ್ಕವನಿರುವೆ, ಆದರೆ ನೀನು ಮತ್ತು ನಿಮ್ಮ ತಂದೆ ಮತ್ತು ತಾಯಿ, ಸಹೋದರರು ಮತ್ತು ಸಹೋದರಿಯರು ನಿಮ್ಮ ಆಣೆಗಳನ್ನು ಕೂಡಿಟ್ಟು ಡಿಫೆನ್ಸ್ ಸೇವಿಂಗ್ಸ್ ಸ್ಟಾಂಪ್‌ಗಳನ್ನು ಮತ್ತು ಸರ್ಟಿಫಿಕೇಟ್‌ಗಳನ್ನು ಕೊಂಡುಕೊಂಡು ಇಂಡಿಯಾ ಬಲಗೊಳ್ಳಲು ಸಹಾಯಕರಾಗಬಹುದು.

ಒಂದಕ್ಕೆ ರೂ. ೧೦/-
ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್
೩/೯/- ಲಾಭ ಕೊಡುತ್ತೆ
ಪೋಸ್ಟ್ ಆಫೀಸ್‌ನಲ್ಲಿ ವಿವರಗಳನ್ನು ತಿಳಿಯಿರಿ

ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್‌ಗಳನ್ನು ಕೊಳ್ಳಿರಿ

61-49 Nn.

Bhuvanendra Products Limited,
Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitual abortion, and other uterine troubles. Must be commensed soon after conception and continued up to the time of delivery

"ಭುವನೇಂದ್ರ ಗರ್ಭಪಾಲ"

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವವಿಧದ ದೋಷಗಳನ್ನು ಗುಣಪಡಿಸುವ ದಿವ್ಯಔಷಧಿ ಗರ್ಭವತಿಯೆನಿಸಿದಂದಿನಿಂದ ಪ್ರಸವಕಾಲದ ವರೆಗೆ ಸೇವಿಸುವುದು ಅತ್ಯುತ್ತಮ

ಸ್ಥಳೀಯ ಸ್ಟಾಕಿಸ್ಟ್ ವ ಏಜೆಂಟರು:-
(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘವೇಂದ್ರ ಶೈ, ರಥಬೀದಿ (3) ದಿ ಕರ್ನಾಟಕ ಸ್ನಫ್ ವರ್ಕ್ಸ್, ರಥಬೀದಿ (4) ಡಾ। ಯಂ ಎಸ್ ಪ್ರಭು, M. B B S. ಸಿ ಪಿ ಸಿ ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ.

ಡಿಪೊ—1 ಮರಾಠ ಗಲ್ಲಿ ಹುಬ್ಬಳ್ಳಿ
2. 36 ಫ್ಲ್ಯಾಕ್ರೋಫ್ಟ್ ರೋಡ್, ಟ್ರಿಪ್ಲಿಕೇನ್, ಮದರಾಸು

The Bank of Mangalore Limited

HEAD OFFICE	*BRANCHES*
Mangalore	Moodabidri & Padubidri

ANNOUNCEMENT

On and from 1st February 1942, fixed deposits will be accepted at the following attractive rates

One year	4%
Two years or above	4½%

Interest Payable Quarterly

ಸರಕಾರದ ಹೊಸ ಪಾಠಪಟ್ಟಿಗನುಸಾರವಾಗಿ ಬರೆದ

ನವೀನ ಭೂವಿವರಣೆ

ವಾಸುದೇವರಾವ್, ಎಂ ಎ ಎಲ್ ಟಿ (Dip Geography)
(ಭೂಗೋಳ ಶಾಸ್ತ್ರದಲ್ಲಿ ಡಿಪ್ಲೊಮಾ ಪಡೆದವರು)

ಈ ಪುಸ್ತಕಗಳನ್ನು ಪಡಕೊಂಡಲ್ಲಿ ವಿದ್ಯಾರ್ಥಿಗಳಿಗೆ ಎಟ್ಲಾಸ್ ಕೊಂಡುಕೊಳ್ಳುವ ಅವಶ್ಯವಿಲ್ಲ

ಪ್ರತಿ ಪುಸ್ತಕದಲ್ಲಿ ಬಣ್ಣಬಣ್ಣದ ಭೂಪಟಗಳಿವೆ

ಅನೇಕಾನೇಕ ಚಿತ್ರಪಟಗಳಿಂದ ಕೂಡಿದ್ದು ಪ್ರತಿ ಪಾಠದ ಅಂತ್ಯದಲ್ಲಿ ಅಭ್ಯಾಸಕ್ಕೆನೂ ಮಾದರಿ ಪ್ರಶ್ನೆಗಳನ್ನು ಕೊಟ್ಟಿದೆ.

4ನೆಯ ಪುಸ್ತಕ್ಕೆ 6 ಆಣೆ, 5ನೆಯ ಪುಸ್ತಕ್ಕೆ 7 ಆಣೆ, 7ಮತ್ತು 8ನೆಯ ಪುಸ್ತಕಗಳು ಅಚ್ಚಿನಲ್ಲಿವೆ ಪುಸ್ತಕಗಳು ಬೇಕಾದಲ್ಲಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.

ದಿ ಕಂಬೈಂಡ್ ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೋಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು	ಕೊಡಿಯಾಲ್ ಬೈಲ್

ಹಿರಿಯಡಕ ಶ್ರೀ ವೀರಭದ್ರಸ್ವಾಮಿ ದೇವಾಲಯದಲ್ಲಿ ನಡೆಯುವ ರಥೋತ್ಸವ ಸಮಾರಂಭ

ಧ್ವಜಾರೋಹಣ	ದೀಪಾರಾಧನೆ	ರಂಗಪೂಜೆ	ಮಹಾರಥೋತ್ಸವ
30-4-'42	**1-5-'42**	**2-5-'42**	**3-5-'42**

ಹಿರಿಯಡಕ ದೇವಸ್ಥಾನದಿಂದ ಸುಮಾರು ಅರ್ಧ ಮೈಲು ದೂರದಲ್ಲಿರುವ ಶ್ರೀ ಮಾರ್ಕಾಂಡೇಯ ತೀರ್ಥದಲ್ಲಿ ಮಿಂದು ಶ್ರೀ ಆಡಕ ತಾಯಿ, ಮತ್ತು ಶ್ರೀ ಮಾರ್ಕಾಂಡೇಯ ಮಹಾ ಮುನಿಗಳ ಅಪೇಕ್ಷೆಯಂತೆ ಶ್ರೀ ಪರಮೇಶ್ವರನು, ಪಾರ್ವತಿ ಸಮೇತನಾಗಿ ಸಕಲ ಗಣಾಂಗಣಗಳೊಡನೆ ಭಕ್ತಾದಿಗಳ ಸಕಲ ಇಷ್ಟಾರ್ಥವನ್ನು ನೆರವೇರಿಸಿ ಕೊಡುವುದಕ್ಕಾಗಿ ಪ್ರತ್ಯಕ್ಷವಾಗಿ ನೆಲಸಿರುವ ಶ್ರೀ ವೀರಭದ್ರಸ್ವಾಮಿ ದೇವಾಲಯವನ್ನು ಸಂದರ್ಶಿಸಿ ಭಕ್ತಿಯಿಂದ ಶ್ರೀ ದೇವರ ಅನುಗ್ರಹಕ್ಕೆ ಪಾತ್ರರಾಗಲು ಇದು ಸುಸಂದರ್ಭವಲ್ಲವೇ?
ಪ್ರಯಾಣಿಕರ ಸೌಕರ್ಯದೆಡೆಗೆ ಹೆಚ್ಚಿನ ಗಮನ ಕೊಡಲಾಗುವುದು.

JOINT MANAGERS,

The Combined Booking Agency,	The Joint Booking Office,
MANGALORE	KODIALBAIL

ರೂ. 3-0-0 ... ರೂ. 3-13-0 Regd. No. M 3460

ಸ್ವದೇಶಾಭಿಮಾನಿ

[ಸಂಪುಟ 36] ತಾರೀಕು 10—4—1942 [ಸಂಚಿಕೆ 15]

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ವೆರಿಟಿಮೆ ಮೊದಲಾದ ಎಲಾ ರೋಗಗಳಿಗೂ ಸಿದ್ಧೌಷಧ.

ಗಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಸಂಶಯವೇಕೆ?

ಶತ್ರುಗಳು ವಿಮಾನಗಳ ಮೂಲಕ ಧಾಳಿ ನಡೆಸುವುದರಿಂದಲೂ ಮತ್ತು ಇತರ ವಿಧವಾದ ಶತ್ರು ಚಟುವಟಿಕೆಗಳಿಂದಲೂ ಹಿಂದುಸ್ಥಾನದ ಸಿವಿಲ್ ಪ್ರಜೆಗಳಲ್ಲಿ—ಇದರಲ್ಲಿ ಎ. ಆರ್. ಪಿ. ಕೆಲಸಗಾರರೂ ಸೇರುವರು— ಉಂಟಾಗಬಹುದಾದ ಪ್ರಾಣಹಾನಿಗೆ

ದಿ "ಬಾಂಬೆ ಲೈಫ್" ಪಾಲಿಸಿಗಳು

ಸಂಪೂರ್ಣವಾದ ರಕ್ಷಣೆಯನ್ನು ನೀಡುತ್ತವೆ. ಆದ್ದರಿಂದ ನಿಮ್ಮ ಪ್ರೀತಿಪಾತ್ರರಿಗಾಗಿ

ಧಿ ಬಾಂಬೆ ಲೈಫ್ ಅಷ್ಯೂರೆನ್ಸ್ ಕಂಪೆನಿ (ಲಿಮಿಟೆಡ್)

ಯಲ್ಲಿ ಪಾಲಿಸಿಗಳನ್ನು ಪಡೆಯುವುದು ನಿಮ್ಮ ತ್ವರಿತ ಕರ್ತವ್ಯವಾಗಿದೆ

ಕೊಚಿಕಾರ್ ಬ್ರದರ್ಸ್ ಲಿಮಿಟೆಡ್

ಸಂಸ್ಥಾನಗಳಾದಿಯಾಗಿ ದಕ್ಷಿಣ ಭಾರತಕ್ಕೆ ಪ್ರಾಮುಖ್ಯ ಏಜೆಂಟರು:

ಉಡುಪಿ

—: ಅಥವಾ ಈ ಕೆಳಗಿನ ಇತರ ಆಫೀಸುಗಳಿಗೆ ಬರೆಯಿರಿ :—

ಕಲ್ಲಿಕೋಟೆ	ಬೆಂಗಳೂರು	ಮಂಗಳೂರು
ಮದರಾಸು	ತ್ರಿವೇಂಡ್ರಂ	ಬೊಂಬಾಯಿ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.
ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

★

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press. Car Street. Mangalore.

Estd. 1906

ಸ್ವದೇಶಾಭಿಮಾನಿ

SWADESHABHIMANI

ಭಾರತೀಯ ವೀರ ವೈಮಾನಿಕ

ರಣಾಂಗಣಕ್ಕಿಳಿದ ವೀರನು ಎಷ್ಟು ಹಸನ್ಮುಖನಾಗಿದ್ದಾನೆ?

'ಭಾರತೀಯ ವೀರಯೋಧರ ಸಮರ ಸಾಹಸವನ್ನು ಜರ್ಮನನೊಬ್ಬನು ನನ್ನೊಡನೆ ಮುಕ್ತಕಂಠವಾಗಿ ಪ್ರಶಂಸಿಸಿದನು. ಪರರಿಗಾಗಿ ಈ ರೀತಿ ಭಾರತೀಯ ಯೋಧರು ಕಾದಾಡಬಲ್ಲರಾದರೆ, ತಮ್ಮ ದೇಶದ ಸ್ವಾತಂತ್ರ್ಯ ರಕ್ಷಣೆಯ ಸಂದರ್ಭದಲ್ಲಿ ಅವರು ಎಂತಹ ವೀರಾವೇಶದಿಂದ ಹೋರಾಡಲಿಕ್ಕಿಲ್ಲ

— ಜವಾಹರಲಾಲ ನೆಹರು

KANNADA ILLUSTRATED WEEKLY

ಶ್ರೀ ರಾಮಕೃಷ್ಣ ಲೀಲಾ ಪ್ರಸಂಗ

[ಗುರುಭಾವ-ಪೂರ್ವಾರ್ಧ]

ಮೂಲ ಬಂಗಾಳೀ ಲೇಖಕರು ಶ್ರೀ ಸ್ವಾಮಿ ಶಾರದಾನಂದಜಿ
ಅನುವಾದ ಶ್ರೀ ಸ್ವಾಮಿ ಪ್ರಣವೇಶಾನಂದರು

(ಹಕ್ಕು ಕಾದಿರಿಸಲ್ಪಟ್ಟಿದೆ)

ವಕಾಲತ್ತಿನ ವಿಷಯು ಶ್ರೀ ಪರಮಹಂಸರ ದರ್ಶನ

ಶ್ರೀ ಪರಮಹಂಸರು ಚಿಕಿತ್ಸೆಗೋಸ್ಕರ ಕಲ್ಕತ್ತಾ ಶಾಮ್‌ಪುಕೂರಿನಲ್ಲಿ ಬಂದು ವಾಸಿಸುತ್ತಿರುವಾಗ ಒಂದು ದಿನ ತನ್ನ ಸೂಕ್ಷ್ಮ ಶರೀರವು ಸ್ಥೂಲ ಶರೀರದಿಂದ ನಿರ್ಗತವಾಗಿ ಹೊರಗೆ ಬಂದು ತಿರುಗಾಡುತ್ತಿರುವುದನ್ನು ಕಂಡರು ಅದಕ್ಕೆ ಒಂದು ವಿಷಮ ಹುಣ್ಣಾಗಿದನ್ನು ನೋಡಿದೆನು! ಹೀಗಾಗಲು ಕಾರಣವೇನು? ಎಂದು ಭಾವಿಸುತ್ತಿದ್ದೆನು ಏನೇನೋ ದುಷ್ಕರ್ಮಗಳನ್ನೆಲ್ಲ ಮಾಡಿ ಎಷ್ಟೋ ಜನರು ನಿನ್ನನ್ನು ಮುಟ್ಟುತ್ತಿದ್ದಾರೆ ಅವರ ದುರ್ದಶೆಯನ್ನು ಕಂಡು ನಿನಗೆ ಕರುಣೆ ಬರುತ್ತದೆ ಅವುಗಳ ಫಲವನ್ನು ನೀನೇ ಅನುಭವಿಸಬೇಕು ಅವುಗಳನ್ನೆಲ್ಲಾ ಗ್ರಹಿಸಿ ನಿನಗೆ ಹೀಗಾಗಿದೆ ಎಂದು ಶ್ರೀ ಜಗನ್ಮಾತೆಯು ತೋರಿಸಿಕೊಟ್ಟಳು ಆದ್ದರಿಂದಲೇ (ತನ್ನ ಕೊರಳನ್ನು ತೋರಿಸಿ) ಇದಾಗಿದೆ ಇಲ್ಲವಾದರೆ ಈ ದೇಹದಿಂದ ಯಾವ ಅನ್ಯಾಯವನ್ನಾದರೂ ಎಂದಿಗೂ ಮಾಡಲಿಲ್ಲ—ಇಷ್ಟು ರೋಗ ಭೋಗ ಯಾತನೆ ಎಲ್ಲಿಂದ ಬಂತು?' ಎಂದು ಶ್ರೀ ಪರಮಹಂಸರು ಹೇಳುತ್ತಿದ್ದರು ಕೇಳಿ ನಮಗೆ ಆಶ್ಚರ್ಯವಾಯಿತು ಹಾಗಾದರೆ ಒಬ್ಬನ ಕರ್ಮಫಲ ಭೋಗವನ್ನು ಇನ್ನೊಬ್ಬನು ಗ್ರಹಿಸಿ ಆತನನ್ನು ಧರ್ಮಪಥಕ್ಕೆ ಒಯ್ಯುವುದು ನಿಜವೇನು? ಎಂದು ಭಾವಿಸಲಾರಂಭಿಸಿದೆವು ಅನೇಕರು ಆಗ ಶ್ರೀ ಪರಮಹಂಸರ ಆ ಮಾತನ್ನು ಕೇಳಿ ಅವರನ್ನು ಪ್ರೀತಿಸಿ 'ಅಯ್ಯೋ!' ಸುಳ್ಳು ವಂಚನೆ ಇತ್ಯಾದಿ ದುಷ್ಕರ್ಮಗಳನ್ನು ಮಾಡಿ ನಾವು ಏತಕ್ಕೆ ಶ್ರೀ ಪರಮಹಂಸರನ್ನು ಮುಟ್ಟಿದೆವು ನಮಗೋಸ್ಕರವಾಗಿ ಅವರು ಇಷ್ಟು ಕಷ್ಟಪಡಬೇಕೇ? ಇನ್ನು ಅವರ ದೇವ ಶರೀರವನ್ನು ಸ್ಪರ್ಶಮಾಡಲಿಕ್ಕಿಲ್ಲ ಎಂದು ಭಾವಿಸಿದ್ದರು

ಶ್ರೀ ಪರಮಹಂಸರು ಬಿಳೀ ಕುಷ್ಠ ರೋಗವನ್ನು ಆರೋಗ್ಯಮಾಡಿದ್ದು

ಈ ಸಂಬಂಧವಾಗಿ ಶ್ರೀ ಪರಮಹಂಸರ ಇನ್ನೊಂದು ವಿಷಯವು ನನ್ನ ಸ್ಮರಣೆಗೆ ಬೀಳುತ್ತದೆ ಒಂದು ದಿನ ಒಬ್ಬ ಬಿಳೀ ಕುಷ್ಠರೋಗಿಯು ಬಂದು ಶ್ರೀ ಪರಮಹಂಸರು ಒಂದು ಸಾರೆ ಕೈಯಿಂದ ಸವರಿಸಿದ್ದಾದರೆ ತನ್ನ ಕುಷ್ಠ ರೋಗವು ವಾಸಿಯಾಗುವುದೆಂದು ಕಾತರತೆಯಿಂದ ಬೇಡಿಕೊಂಡನು ಶ್ರೀ ಪರಮಹಂಸರು ಆತನ ಮೇಲೆ ಕೃಪಾಪರವಶರಾಗಿ 'ಅಪ್ಪಾ, ನನಗೇನೂ ತಿಳಿಯದು ಆದರೆ ನೀನು ಹೇಳಿದಂತೆ, ಇಕೋ ಕೈ ತಳುಕುತ್ತೇನೆ ಶ್ರೀ ಜಗನ್ಮಾತೆಯು ಇಚ್ಛೆಯಿದ್ದರೆ ವಾಸಿಯಾಗುವುದು ಎಂದು ಹೇಳಿ ಕೈತಡವಿದರು ಆ ದಿನವೆಲ್ಲ ಶ್ರೀ ಪರಮಹಂಸರ ಕೈಗೆ ಎಷ್ಟು ನೋವಾಯಿತೆಂದರೆ ಅವರು ಚಡಪಟ್ಟು ಶ್ರೀ ಜಗಜ್ಜನನಿಯನ್ನು ಕುರಿತು 'ತಾಯಿ ಇನ್ನೆಂದಿಗೂ ಈ ಕಾರ್ಯವನ್ನು ಮಾಡುವುದಿಲ್ಲ ಎಂದು ಹೇಳಿಕೊಂಡರು 'ಆವನು ರೋಗದಿಂದ ಮುಕ್ತನಾದನು ಆದರೆ ಅವನ ರೋಗ ಭೋಗವು (ತನ್ನ ಶರೀರವನ್ನು ತೋರಿಸಿ) ಇದರ ಮೇಲೆ ಬಂದು ಹೋಯಿತು ಶ್ರೀ ಪರಮಹಂಸರ ಜೀವನದ ಈ ಎಲ್ಲ ಘಟನೆಗಳಿಂದ ತಿಳಿಯಬಹುದೇನಂದರೆ—ವೇದ, ಬೈಬಲ್, ಪುರಾಣ, ಕೊರಾಣ, ತಂತ್ರಮಂತ್ರಗಳು ಇತ್ಯಾದಿ ಆಧ್ಯಾತ್ಮಿಕ ಶಾಸ್ತ್ರವೆಲ್ಲ ಶ್ರೀ ರಾಮಕೃಷ್ಣ ಜೀವನ ಪ್ರಕಾಶದ ಸಹಾಯದಿಂದ ತಿಳಿದುಕೊಂಡರೆ ಅವುಗಳನ್ನು ಈ ಯುಗದಲ್ಲಿ ಅತಿ ಸುಲಭವಾಗಿ ತಿಳಿಯಬಹುದು 'ನವಾಬು ಆಡಳಿತೆಯು ನಾಣ್ಯ ಚಕ್ರವರ್ತಿಯ ಆಡಳಿತೆಯಲ್ಲಿ ನಡೆಯುವುದಿಲ್ಲ' ಎಂದು ಶ್ರೀ ಪರಮಹಂಸರೇ ನಮಗೆ ಹೇಳುತ್ತಿದ್ದರು

ವಕಾಲತು ಕೊಡುವುದೆಂದರೆ ಸುಲಭವಲ್ಲ

ಆಪಾತ ದೃಷ್ಟಿಯಿಂದ ನೋಡಿದರೆ 'ವಕಾಲತ್ತು' ಕೊಡುವುದು ಬಹಳ ಸುಲಭವೆಂದು ಕಾಣುತ್ತದೆ. ಕೊಟ್ಟರೆ ಆಯಿತು ಮತ್ತೇನು? ಮನುಷ್ಯನು ಪ್ರವೃತ್ತಿಯ ದಾಸನಾಗಿದ್ದಾನೆ, ಧರ್ಮ ಕರ್ಮವನ್ನು ಮಾಡುವಾಗಲೂ ಕೇವಲ ಸೌಕರ್ಯವೇ ಹುಡುಕುತ್ತಾನೆ ಈ ಕಡೆ ಸಂಸಾರ ಸುಖ, ಆ ಕಡೆ ಭಗವದಾನಂದ ಎರಡು ಹೇಗೆ ಲಭಿಸುವುವೆಂದು ಕೇವಲ ಹುಡುಕುತ್ತಾನೆ ಆವನಿಗೆ ಸಂಸಾರದ ಭೋಗಸುಖವು ಎಷ್ಟು ಮಧುಮಯವಾಗಿದೆ ಅಂದರೆ ಅದನ್ನು ತ್ಯಜಿಸಬೇಕೆಂದು ಮನಸ್ಸಿನಲ್ಲಾದರೆ ಸಕಲವೂ ಶೂನ್ಯವೆಂದು ತೋರುತ್ತದೆ ಹಾಗಾದರೆ ಏನನ್ನು ಹಿಡಿದು ಜೀವಿಸಲಿ ಎಂದು ಭಾವಿಸುವನು ಆದ್ದರಿಂದಲೇ ಆಧ್ಯಾತ್ಮಿಕ ಜಗತ್ತಿನಲ್ಲಿ ವಕಾಲತು ಕೊಟ್ಟರೆ ಸಾಕು ಎಂದು ಹೇಳಿ ಆತನು ಸಂತೋಷದಿಂದ ಕುಣಿದಾಡುವನು ಹಾಗಾದರೆ ಇನ್ನೇನು? ನಾನು ಕಳ್ಳತನ ವಂಚನೆ ಸುಲಿಗೆ ಇತ್ಯಾದಿ ಬೇಕಾದುದನ್ನು ಮಾಡಿ ಸಂಸಾರದಲ್ಲಿ ಸಾಕಷ್ಟು ಸುಖಸಂಭೋಗ ಮಾಡುತ್ತೇನೆ, ಮತ್ತು ನಾನು ಪರಕಾಲಕ್ಕೆ ಸುಖಿಯಾಗಿರುವಂತೆ ಶ್ರೀ ಚೈತನ್ಯ, ಯೇಸುಕ್ರಿಸ್ತ ಅಥವಾ ಶ್ರೀ ರಾಮಕೃಷ್ಣರೇ ನೋಡಿಕೊಳ್ಳಲಿ ಎಂದು ಭಾವಿಸುವರು ಇದು ಏನಿಲ್ಲ, ಇದು ಪಾಪಿ ಮನಸ್ಸಿನ ವಂಚನೆ ಮಾತ್ರವೆಂದು ಆತನಿಗೆ ತಿಳಿಯುವುದಿಲ್ಲ ಇದು ನಿರಂತರವೂ ತನಗೆ ತಾನೆ ವಂಚನೆ ಮಾಡುವುದೆಂದು ಆತನಿಗೆ ತಿಳಿಯುವುದಿಲ್ಲ ಇದು ಮತ್ತೇನಿಲ್ಲ ತನ್ನ ದುಷ್ಕೃತ್ಯದ ಭೀಷಣ ಮೂರ್ತಿಯನ್ನು ಕಾಣಬೇಕಾಗುವುದೆಂದು ಹೇಳಿ ತಾನಾಗಿಯೇ ಮುಂದುವರಿಯುವುದೆಂದು ಆತನಿಗೆ ತಿಳಿಯುವುದಿಲ್ಲ ಆ ಕಣ್ಣಿನ ಮರೆಯನ್ನು ಒಂದು ದಿನ ಒಬ್ಬನು ಬಲಾತ್ಕಾರದಿಂದ ತೆರೆಯುವನು ಆಗ ಆತನಿಗೆ ಅಪಾರ ಸಮುದ್ರವು ಕಾಣಬರುವುದು ಮತ್ತು ವಂಚನೆ ಮಾಡುವವರ 'ವಕಾಲತು' ಯಾರೂ ಗ್ರಹಿಸುವುದಿಲ್ಲವೆಂದು ಆತನಿಗೆ ತಿಳಿಯುವುದು ಅಕಟಾ, ಮಾನವನೇ ಎಷ್ಟೋ ಪ್ರಕಾರವಾಗಿ ನೀನೇ ನಿನ್ನನ್ನು ವಂಚಿಸುತ್ತಿದ್ದಿ ಅಲ್ಲ ಮತ್ತು 'ನಾನು ಜಯಿಸಿದ್ದೇನೆ' ಎಂದು ಎಣಿಸುತ್ತಿದ್ದಿ ಅಲ್ಲ' ಮಹಾಮಾಯೇ ನೀನೇ ಧನ್ಯಳು! ಮಾನವ ಮನಸ್ಸನ್ನು ನೀನು ಮರುಳು ಮಾಡಿ ಇಟ್ಟಿದ್ದಿ! ಶ್ರೀ ರಾಮಪ್ರಸಾದರು ತಾವು ರಚಿಸಿದ ಒಂದು ಗೀತೆಯಲ್ಲಿ ನಿನ್ನನ್ನು ಸಂಬೋಧನ ಮಾಡಿ ಹೇಳಿದ್ದಿಲ್ಲಾ ವಾಸ್ತವವಾಗಿ ನಿಜವೇ ಸರಿ!

ಯಾವ ಅವಸ್ಥೆಯಲ್ಲಿ ವಕಾಲತು ಕೊಡಬಹುದು

ವಕಾಲತು ಕೊಡುವುದು ಸುಲಭವಲ್ಲ ಬಹಳ ಉದ್ಯಮ ಅಧ್ಯವಸಾಯದ ಫಲದಿಂದ ಮನಸ್ಸಿನಲ್ಲಿ 'ವಕಾಲತು ಕೊಡುವ ಸ್ಥಿತಿಯು ಬಂದರೆ ಮಾತ್ರ ಮನುಷ್ಯನಿಗೆ ಅದನ್ನು ಕೊಡಲು ಸಾಧ್ಯವಾಗುತ್ತದೆ. ಆವಾಗಲೇ ಶ್ರೀ ದೇವರೂ ಕೂಡ ಅವನ ಭಾರವಹಿಸುತ್ತಾನೆ ಸುಖ ಪಡೆಯಬೇಕೆಂಬ ಆಸೆಯಿಂದ ಮನುಷ್ಯನು ಸಂಸಾರದ ಬೇರೆ ಬೇರೆ ಕೆಲಸ ಕಾರ್ಯಗಳನ್ನು ಮಾಡಲು ಓಡಾಡುತ್ತಾ ಕೊನೆಗೆ ಸಂಸಾರವು ಒಂದು ಪ್ರಾಣಹೀನ ಛಾಯೆ ಮಾತ್ರವೆಂದು ವಾಸ್ತವವಾಗಿ ತಿಳಿಯುತ್ತಾನೆ ಸಾಧನೆ ಭಜನೆ, ಜಪತಪಮಾಡಿ ಮನುಷ್ಯನು ಅನಂತ ಈಶ್ವರನನ್ನು ಪಡೆಯಲು ಸಾಂಸಾರಿಕ ಕರ್ಮಗಳು ಎಂದಿಗೂ ಕೆಲಸಕ್ಕೆ ಬಾರವು ಎಂದು ಚೆನ್ನಾಗಿ ತಿಳಿದರೆ ಅಥವಾ ದುರ್ದಮ್ಯ ಉದ್ಯಮದಿಂದ ಪರ್ವತವನ್ನು ಒಡೆದು ದಾರಿ ಮಾಡಿಕೊಳ್ಳುವೆನೆಂದು ಭಾವಿಸಿ ಎಲ್ಲ ವಿಷಯಗಳಲ್ಲಿಯೂ ಉತ್ಸಾಹಗೊಂಡು ಕೊನೆಗೆ ತನ್ನಲ್ಲಿ ಏನೂ ಸಾಮರ್ಥ್ಯವಿಲ್ಲವೆಂದು ಅರಿತರೆ ಆಗ ಆತನು ಕಾತರತೆಯಿಂದ ಯಾರು ಎಲ್ಲಿ ಇದ್ದಾರೆ? ನನ್ನನ್ನು ರಕ್ಷಣೆಗೆ ಮಾಡಿ ಎಂದು ಕೂಗುವನು ಆಗಲೇ ಶ್ರೀ ದೇವರು ಅವನ ವಕಾಲತ್ತನ್ನು ಗ್ರಹಿಸುತ್ತಾನೆ ಹಾಗಲ್ಲದೆ ಸಾಧನೆ ಭಜನೆ ಮಾಡಲು ಅಥವಾ ಈಶ್ವರನ ನಾಮಸ್ಮರಣೆ ಮಾಡಲು ನನಗೆ ಬಿಡುವಿಲ್ಲ. ಆದ್ದರಿಂದ ಹೀಗೆಯೇ ಮಾಡುವೆನು ಯಾರಾದರೂ ಪ್ರತಿಪಾದಿಸಿದರೆ ನಾನು ಈಶ್ವರನಿಗೆ ವಕಾಲತು ಕೊಟ್ಟಿದ್ದೇನೆ, ಮತ್ತೇನು ಬೇಕು? ಆವನು ನನ್ನಿಂದ ಹೀಗೆ ಮಾಡಿಸುತ್ತಾನೆ ಅದಕ್ಕೇನು ಮಾಡಲಿ? ನನ್ನ ಮನಸ್ಸನ್ನು ಏಕೆ ದೇವರು ಬದಲಾಯಿಸುವುದಿಲ್ಲ? ಎಂದು ಹೇಳುವೆನು. ಈ ವಕಾಲತು ಇತರರಿಗೂ ತನಗೂ ವಂಚಿಸುವ ವಕಾಲತು ಇದರಿಂದ 'ಇತೋನಷ್ಟಸ್ತತೋ ಭ್ರಷ್ಟಃ' ಎಂಬಂತೆ ಆಗುವುದು

(ಕ್ರಮಶಃ)

ವಿಷಮಯ ಕಡಿತಗಳಿಗೆ ಗಾಯಗಳಿಗೆ ತೀವ್ರ ಗುಣಕಾರಿ.

ಜಾಂಬಕ್ ಜಗತ್ಪ್ರಸಿದ್ಧ ವಿಷಹಾರೀ ಲೇಪ

ನಿಮಗೆ ಗಾಯವಾದರೆ, ಕಡಿತವುಂಟಾದರೆ ವಿಷವು ನಿಮ್ಮ ಚರ್ಮದೊಳಗೆ ಸೇರಿಬಿಡುವುದು ಆದರಿಂದ ಮುಂದೆ ಅನರ್ಥವಾಗದಂತೆ ಕೂಡಲೇ ಜಾಂಬಕನ್ನು ಅಲ್ಲಿ ಸವರಿರಿ ಜಾಂಬಕಿನಲ್ಲಿರುವ ಅತ್ಯುತ್ತಮ ವನೌಷಧಿ ರಸವು ಕೂಡಲೇ ಚರ್ಮಕ್ಕೆ ಎಳೆಯಲ್ಪಡುತ್ತದೆ ಅದರಿಂದ ನೋವು ಕಡಿಮೆಯಾಗುತ್ತದೆ, ರಸಿಗೆ ಒಣಗುತ್ತದೆ ವಿಷಮಯ ಕ್ರಿಮಿಗಳು ಜಾಂಬಕಿನಿಂದ ಕೂಡಲೇ ನಾಶಹೊಂದುತ್ತವೆ ಜಾಂಬಕ್ ಲೇಪಕ್ಕೆ ಒಂದು ರೂಪಾಯಿ. ಇಲ್ಲವೇ ರೂ ೨-೪-೦ ಸೋಪಿಗೆ ಒಂದು ರೂಪಾಯಿ ಪೌಡರಿಗೆ ಒಂದು ರೂಪಾಯಿ

ಏಜಂಟ್ಸ್ ಮೆಸರ್ಸ್ ದಾಧಾ ಎಂಡ್ ಕೊ ಪಿ ಟಿ ಮದರಾಸು

ಯಾವಾಗಲೂ ಜಾಂಬಕನ್ನು ಪಯೋಗಿಸಿರಿ

ZAM-BUK

ಪ್ರಾಣಿಕೊಟ್ಟು ವಿರಹಿತವಾದುದು

ಬೇಕಾಗಿದ್ದಾರೆ

''ಲೇಥ್'' (Lathe) ನಲ್ಲಿ ಕೆಲಸ ಮಾಡಲು ಟರ್ನರ್ (Turners) ಕೆಲಸಗಾರರು ಬೇಕಾಗಿದ್ದಾರೆ.

ಕೋಮನ್‌ವೆಲ್ತ್ ಇಂಜಿನಿಯರಿಂಗ್ ವರ್ಕ್ಸ್

ಮಂಗಳೂರು

MONEY TO LEND

Over Forty Lacs of idle funds are awaiting investment in the shape of loans on gold, Government securities, shares of approved companies, life insurance policies having sufficient surrender value, grains and other agricultural produce, etc., etc.

You are cordially invited to utilize these facilities

CANARA BANK, LIMITED

ESTD 1906

ಸ್ವದೇಶಾಭಿಮಾನಿಗೆ ಜಾಹೀರಾತು ಕೊಡಿರಿ

"ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

17-4-1942] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೧೭-೪-೧೯೪೨]

ಸಮರ ಭೂಮಿಯ ಸಂಚಾರ

ವಸಂತಕಾಲದಲ್ಲಿ ಪ್ರಕೃತಿಯೇ ರಮ್ಯಮೋಹಕವಾಗಿ ನಲಿಯುವುದು! ತರುಣತರುಣಿಯರ ಪ್ರೇಮಭಾವನೆಗಳು ಆಗ ವಿಕಾಸಗೊಳ್ಳುವವು! ಪ್ರೇಮಿಗಳ ಹೃದಯವರಳುವ ಕಾಲವದು! ಆದರೆ ಏನು ದೌರ್ಭಾಗ್ಯವೋ! ಕಳೆದ ಮೂರು ವಸಂತಗಳು ಮಾನವ ಹೃದಯಗಳನ್ನರಳಿಸುವ ಬದಲು ನರಳಿಸಿಬಿಟ್ಟವು. ಪ್ರೇಮಿಗಳ ಸುಖಮಯ ಸಮಾಗಮದ ಬದಲು ಅವರ ದುಃಖಪೂರ್ಣವಿಯೋಗ ವಿರಹವೇದನೆಗಳೇ ಹೆಚ್ಚಿದವು! ಪ್ರಕೃತಿದೇವಿ ಸಂತೋಷದಿಂದ ರಮ್ಯಮೋಹಕಳಾಗಿ ನಲಿವುದನ್ನು ಬಿಟ್ಟು ಉಗ್ರ ಭೈರವಿಯಾಗಿ ಚಂಡಿ ರಣಕಾಳಿಯಾಗಿ ಪ್ರಳಯ ನರ್ತನ ಮಾಡತೊಡಗಿದಳು! 1940ನೆಯ ಇಸವಿ ಎಪ್ರಿಲ್ ತಿಂಗಳ ಮೂರನೆಯ ತಾರೀಕಿನಂದು ನಾಜಿಗಳ ಡೆನ್ಮಾರ್ಕ್ ಆಕ್ರಮಣದಿಂದ ಪ್ರಾರಂಭವಾಯಿತು ಇಂದಿನೀ ಭೀಕರ ಮಹಾಯುದ್ಧವು! ಎಪ್ರಿಲ್ ತಿಂಗಳಲ್ಲಿ, ವಸಂತಕಾಲದಲ್ಲಿ ಹೊಡೆದ ಆ ರಣಭೇರಿ ಇನ್ನೂ ಪ್ರಚಂಡವಾಗಿ, ಪ್ರಚಂಡತರವಾಗಿ, ಪ್ರಚಂಡತಮವಾಗಿ ರಣಗುಟ್ಟುತ್ತಲಿದೆ! ೧೯೪೦ನೆಯ ಇಸವಿ ಎಪ್ರಿಲ್‌ನಲ್ಲಿ ಡೆನ್ಮಾರ್ಕ್, ನಾರ್ವೆಗಳು ನಾಜೀಬಲಿಬಿದ್ದು ಫ್ರಾನ್ಸಿನ ಪತನಕ್ಕೆ ಪ್ರಾರಂಭವಾಗಿತ್ತು! ೧೯೪೧ನೆಯ ಎಪ್ರಿಲ್‌ನಲ್ಲಿ ಗ್ರೀಸ್ ಮತ್ತು ಯುಗೊಸ್ಲಾವಿಯಗಳು ಬಗ್ಗುಬಡೆಯಲ್ಪಟ್ಟು ಹಿಟ್ಲರ್ ಸೇನೆ ಬಾಲ್ಟಿಕಿನಿಂದ ಬ್ಲೇಕ್ ಸೀವರೆಗೆ ಜಾಲಬೀಸಿತು. ಈಗ ಮೂರನೆಯ ಎಪ್ರಿಲ್ ಬಂದಿದೆ. ಕಳೆದ ಕೆಲಕಾಲದಿಂದ ವಾತಾವರಣದಲ್ಲಿ ವಸಂತಕಾಲದೊಂದು ಪ್ರಚಂಡ ಸಿದ್ಧತೆಯ ಮಾತೇ ತುಂಬಿಹೋಗಿದೆ. ಎಲ್ಲೆಡೆಗಳಲ್ಲಿಯೂ ವಸಂತಕಾಲದ ಯುದ್ಧದ ಸಲುವಾಗಿ ಎಂತಹ ಭೀಕರತಯಾರಿ ನಡೆಯುತ್ತಿದೆಯೋ ನಮ್ಮಿಂದ ಊಹಿಸುವುದಳವಲ್ಲ.

ಯೂರೋಪಿನ ಬಹುಭಾಗ ಇಂದು ಹಿಟ್ಲರನ ಪದಹತಿಯೊಳಗೆ ಸಿಕ್ಕಿ ನರಳುತ್ತಿದೆ! ಇಂದು ಯೂರೋಪಿನಲ್ಲಿ ಕೇವಲ ನಾಲ್ಕು ತಟಸ್ಥರಾಷ್ಟ್ರಗಳು ಮಾತ್ರ ಉಳಿದಿವೆ! ಉತ್ತರದಲ್ಲಿ ಸ್ವೀಡನ್ ಒಂದು, ಮತ್ತೆ ದಕ್ಷಿಣದಲ್ಲಿ ಸ್ವಿಜರ್ಲೆಂಡಿರುವುದು. ನೈಋತ್ಯದಲ್ಲಿ, ಯೂರೋಪಿನ ತುದಿಯಲ್ಲಿ ಸ್ಪೈನ್ ಮತ್ತು ಪೋರ್ಚುಗಲ್‌ಗಳಿವೆ. ಕೊನೆಗೆ ಉಳಿದುದೆಂದರೆ ಟರ್ಕಿ. ಮೊದಲಿನ ಮೂರು ರಾಷ್ಟ್ರಗಳಲ್ಲಿಯೂ ಹಿಟ್ಲರನಿಗೆ ಸಾಕಷ್ಟು ಪ್ರಭಾವವಿದ್ದೇ ಇದೆ, ಹೇಗಿದ್ದರೂ ಅವುಗಳು ಹಿಟ್ಲರನಿಗೆ ಯಾವುದೇ ತೆರದ ತೊಂದರೆ ಮಾಡಲಾರದಂತಾಗಿವೆ. ಟರ್ಕಿ ವಿಷಯ ಈಗ ಬಹಳ ಮಾತುಕತೆಗಳಾಗುತ್ತಿವೆ. ಜರ್ಮನ್ ರಾಯಭಾರಿ ವೋನ್ ಪೆಪನ್ ಅಲ್ಲಿ ಏನೇನೋ ಕುತಂತ್ರ ನಡಿಸರುವನೆಂದು ತಿಳಿದುಬರುತ್ತದೆ. ಇತ್ತೀಚೆಗೆ ಪೇಪನ್ ಹಿಟ್ಲರನನ್ನು ನೋಡಿಬಂದನು. ಟರ್ಕರು ಉದ್ದಾಮರಣವೀರರು, ಸ್ವಾತಂತ್ರ್ಯಪ್ರಿಯರು, ಸಮರಕಲೆಯಲ್ಲಿ, ರಾಜತಂತ್ರದಲ್ಲಿ ನುರಿತವರು, ಹಗ್ಗದ ಮೇಲೆ ಕುಣಿದಾಡುವ ವಿದ್ಯೆಯನ್ನು ಬಲ್ಲವರು, ಯುದ್ಧಪ್ರಾರಂಭವಾದ ಮೇಲೆ, ಅವರು ತಟಸ್ಥರಾಗಿ, ಹಗ್ಗದ ಮೇಲೆ ಕುಣಿದಾಡುವುದರೊಡನೆ ಇಡೀ ಜನಾಂಗವನ್ನು ಯುದ್ಧಸಿದ್ಧವಾಗಿಯೂ ತಯಾರುಗೊಳಿಸಿದ್ದಾರೆ. ದೌರ್ಭಾಗ್ಯಕ್ಕೆ ಟರ್ಕಿ ಕಾಕಸಸ್ ಮತ್ತು ಬರ್ಲಿನ್ ಬಗ್‌ದಾದ್ ಮಾರ್ಗದ ಅಡ್ಡದಾರಿಯಲ್ಲಿದೆ. ಬಹುಶಃ ಟರ್ಕಿಯು ಜಲಸಂಧಿಯಲ್ಲಿ ನಾಜಿಗಳಿಗೆ ಮಾರ್ಗ ಬಿಟ್ಟುಕೊಟ್ಟರೆ ಅದರ ಮೇಲೆ ಹಿಟ್ಲರ್ ಕೈಹಾಕುವುದಿಲ್ಲವೋ ಏನೋ? ಆದರೆ ನಾಜಿಗಳಿಗೆ ಹಾದಿಕೊಡುವುದರಿಂದ ತಮ್ಮ ಸ್ಥಿತಿ ಶೋಚನೀಯವಾಗುವುದೆಂದೂ, ಬ್ರಿಟನು ರಷ್ಯಗಳೊಂದಿಗೆ ದ್ವೇಷ ಕಟ್ಟಿಕೊಳ್ಳಬೇಕಾಗುವುದೆಂದೂ ಟರ್ಕಿ ಬಲ್ಲದು. ಹಾಗಾಗಿ ಟರ್ಕಿ ಹಿಟ್ಲರನ ಸಂಧಾನಕ್ಕೊಪ್ಪದೆ ಇದ್ದರೆ ನಾಜಿಗಳು ಅದರ ಮೇಲೆ ಆಕ್ರಮಣ ಮಾಡಬಹುದೇ ಮುಂದೆ ನೋಡಬೇಕು.

ಬಟಾನ್ ಘೋರ ಸಂಗ್ರಾಮುಗಿದು ಕೊನೆಗೆ ಜಪಾನರಿಗೆ ಶರಣಾಯಿತು! ಅಮೆರಿಕನ್ ಸೈನಿಕರು ತಮ್ಮ ಶಸ್ತ್ರಗಳನ್ನು ಕೆಳಗಿಟ್ಟು ಸುಮ್ಮಗಾದರು ಎಂಬ ವಾರ್ತೆಯಿಂದ ಸ್ವಾತಂತ್ರ್ಯಪ್ರೇಮಿಗಳ ಎದೆಗೆ ಇರಿದಂತೆ ಆಗಿದೆ. ರಾಜಧಾನಿಯಾದ ಮನಿಲಾದ ಪತನದ ಬಳಿಕ, ಅಲ್ಲಿ ಅಮೆರಿಕನ್ ಸೈನ್ಯವು ಮೊದಲು ಜನರಲ್ ಮೆಕಾರ್ಥರ ಮುಂದಾಳುತನದಲ್ಲಿ ಅವರು ಆಸ್ಟ್ರೇಲಿಯಕ್ಕೆ ತೆರಳಿದನಂತರ ಜನರಲ್ ವೇನ್‌ರಾಯಟರ ಧುರೀಣತ್ವದಲ್ಲಿ ಹೋರಾಟ ಹೂಡಿದ್ದವು. ಬಟಾನಿನಲ್ಲಿದ್ದ ಅಮೆರಿಕನ್ ಫಿಲಿಪೈನ್ ಸೈನ್ಯಗಳು ಸ್ವಾತಂತ್ರ್ಯ ಧ್ವಜವನ್ನು ಎತ್ತಿ ಹಿಡಿವ ಸಲುವಾಗಿ ಸಾಹಸದಿಂದ ಹೋರಾಡಿದರೆಂಬುದನ್ನು ಯಾರೂ ಮರೆಯಲಾರರು. ಬಟಾನಿನ ಅಪಜಯಕ್ಕೆ ಮೂರು ಕಾರಣಗಳನ್ನು ಕೊಡಬಹುದು. ಶತ್ರುಗಳ ಸಂಖ್ಯೆ ಅಧಿಕವಾಗಿದ್ದುದು, ಶತ್ರು ವಿಮಾನಬಲ ಬಲವಂತವಾಗಿದ್ದುದು, ಶತ್ರುಗಳಿಗೆ ಸಾಮಗ್ರಿಯ ಪೂರೈಕೆ ಸಾಕಷ್ಟಿದ್ದುದು. ಅಮೆರಿಕನ್ ಅಧಿಕಾರಿಗಳೇ ಹೇಳುವಂತೆ, ಬಟಾನಿನಲ್ಲಿ ಜಪಾನರು ಒಂದು ಲಕ್ಷವಿದ್ದರೆ ಅಮೆರಿಕನರು ೩೬೦೦೦ ಮಂದಿಯಿದ್ದರಂತೆ. ವಿಮಾನಗಳ ಸಂಖ್ಯೆ ತಿಳಿದುಬಂದಿಲ್ಲವಾದರೂ ವಿಶೇಷವಿರಲಿಲ್ಲವೆಂದು ಅರ್ಥ ಮಾಡಿಕೊಳ್ಳಬಹುದು. ಅಮೆರಿಕದಿಂದ ಸಾಮಗ್ರಿ ತುಂಬಿಸಿ ಒಂದು ಹಡಗು ಬಟಾನನ್ನು ಬಂದು ತಲ್ಪಿದರೆ ಎರಡು ಹಡಗಗಳು ಮುಳುಗುತ್ತಿದ್ದವು. ಪರಿಸ್ಥಿತಿಯು ಹೀಗಾದುದರಿಂದ ಬಟಾನಿನ ವೀರರು ಸೋತುಹೋದರು ಎಂದು ಹೇಳುವುದಕ್ಕಿಂತ ಯುದ್ಧ ಸೂತ್ರಧಾರದ ವಿಚಕ್ಷಣತೆಯ ಅಭಾವದಿಂದ ಅವರಿಗೆ ಸೋಲು ಬಂದಿತು ಎಂದು ಹೇಳುವುದೇ ಸರಿಯಾಗುವುದು.

ಯೂರೋಪಿನಲ್ಲಿ ಹುಟ್ಟಿದ ಸಮರಜ್ವಾಲೆ ಭಾರತವನ್ನೂ ಇಂದು ಬಂದು ಮುಂಗಿತೊಡಗಿದೆ! ಭಾರತ ಭೂಮಿಗೆ ಇದೇ ಮೊದಲನೆ ಸಲವಾಗಿ ವಿಶಾಖಪಟ್ಟಣ ಕೋಕನಾಡುಗಳಲ್ಲಿ ಪೂರ್ವ ಕರಾವಳಿತೀರದಲ್ಲಿ ಬಾಂಬಿನ ಬೆಂಕಿ ಮುಟ್ಟಿತು. ಪ್ರಪಂಚವೇ ಇಂದು ಯುದ್ಧಾಗ್ನಿಯಿಂದ ಉರಿಯುತ್ತಿರುವಾಗ ಭಾರತವೂ ಯುದ್ಧದಲ್ಲಿ ಉರಿಯುತ್ತಿರುವ ದೃಶ್ಯವೇನೂ ಅಷ್ಟೊಂದು ಅನಿರೀಕ್ಷಿತವಾದುದಲ್ಲ. ಕಲ್ಕತ್ತಾ, ಮದ್ರಾಸು, ಕೊಲೊಂಬೋಗಳ ಮೇಲೆಯೇ ಮೊದಲ ಬಾಂಬು ಬೀಳುವುದೆಂದು ಜನರು ಬಗೆದಿದ್ದರು. ಅದು ತಪ್ಪಿ ಬೇರೆ ಕಡೆಗೆ ಬಿದ್ದಿದೆ. ವಿಶಾಖಪಟ್ಟಣಕ್ಕೆ ಬಾಂಬು ಹಾಕಿದ್ದರಲ್ಲಿ ಅರ್ಥವಿಲ್ಲದಿಲ್ಲ, ವಿಶಾಖಪಟ್ಟಣವು ಭಾರತದ ಏಕಮಾತ್ರ ನೌಕಾ ನಿರ್ಮಾಣ ಕೇಂದ್ರವಾಗಿದೆ. ಕೋಕನಾಡು ಅದರ ಸಮೀಪದಲ್ಲಿದೆ. ಇದರಿಂದ ಇನ್ನು ಮುಂದೆ ಯಾವ ಪಟ್ಟಣಕ್ಕೆ ಯಾವಾಗ, ಯಾತರ ಸಲುವಾಗಿ ಬಾಂಬು ಬೀಳುವುದೋ ಎಂದು ಊಹಿಸಿಕೊಳ್ಳುವುದೂ ಅಸಾಧ್ಯವಾಗಿದೆ, ಎಲ್ಲರೂ ಎಲ್ಲೆಡೆಗಳಲ್ಲಿಯೂ ಭೀತಿಗೊಳ್ಳುವಂತಾಗಿದೆ. ಕೊಲೊಂಬೋ ನಗರವೂ ಬಾಂಬಿನ ಪೆಟ್ಟಿಗೆ ಗುರಿಯಾಯಿತು. ಸಿಲೋನಿನ ಜನರು ಧೀರರಾಗಿ ಕಾದಾಡುತ್ತಾರೆ. ಹೀಗಾಗಿ ಬಂಗಾಳಾ ಕೊಲ್ಲಿಯಲ್ಲಿ ಈಗ ಶತ್ರು ನೌಕಾ ಸಂಚಾರವುಂಟಾಗಿದೆಯೆಂದು ತಿಳಿದುಬಂದಿದೆ. ಸಿಲೋನಿನ ಬಳಿ ಬ್ರಿಟಿಷರ ಎರಡು ಮಹತ್ತಾದ ವಿಮಾನವಾಹಕ ನೌಕೆಗಳನ್ನು ಜಪಾನರು ಮುಳುಗಿಸಿಬಿಟ್ಟರು. ಈ ಸುದ್ದಿ ಕೇಳಿದೊಡನೆ ಸಮುದ್ರ ಕರಾವಳಿ ನಗರಗಳಲ್ಲಿ ಒಮ್ಮೆಲೇ 'ಬ್ಲೇಕ್ ಔಟ್' ಸುರುವಾಗಿದೆ, ಮದ್ರಾಸು ತೀರಾ ಕತ್ತಲು ಮಾಡಲ್ಪಟ್ಟಿದೆ, ಅನಾವಶ್ಯಕರಾದಜನರು ಮದ್ರಾಸುಬಿಟ್ಟು ಹೋಗಬೇಕೆಂದು ಸರಕಾರ ಸಾರಿದೆ. ಉಳಿದಿರುವ ಜನರು ರಕ್ಷಣಾ ವ್ಯವಸ್ಥೆಮಾಡಿಕೊಳ್ಳುವಂತೆ ಚಟುವಟಿಕೆಗಳು ನಡೆಯುತ್ತಿವೆ. ಮದ್ರಾಸು, ಕಲ್ಕತ್ತಗಳಲ್ಲಿಯೂ ವಿಮಾನಧಾಳಿಯ ಎಚ್ಚರಿಕೆ ಕೊಡಲಾಗಿತ್ತು, ಇದುವರೆಗಿನ ಬಾಂಬಿನಿಂದ ಭಾರತದಲ್ಲಿ ದೊಡ್ಡ ನಷ್ಟವೇನೂ ಆಗಿಲ್ಲ. ವಿಶಾಖಪಟ್ಟಣದಲ್ಲಿ ಐದು ಮಂದಿ ಮಾತ್ರ ಸತ್ತರು, ನಲ್ವತ್ತು ಮಂದಿ ಗಾಯಗೊಂಡರು, ಕೋಕನಾಡಿನಲ್ಲಿ ಒಬ್ಬನು ಮರಣಹೊಂದಿ ಐದು ಮಂದಿಗೆ ಗಾಯವಾಯಿತು. ಆದರೆ ಇದರಿಂದ ನಾವು ಮುಂದಿನ ರೀತಿ ಹೇಗಿರಬಹುದೆಂದು ಊಹಿಸಿಕೊಳ್ಳಲು ಆಗುವದಿಲ್ಲ. ನಮಗೆ ಪ್ರಚಂಡ ಆಕ್ರಮಣವಾಯಿತೆಂದೇ ಭಾವಿಸುವ (ದೇವರು ಅಂತಹ ಅನುಭವವನ್ನು ನಮಗೆ ಕೊಡದಿರಲಿ) ಒಂದು ಪಕ್ಷ ಹಾಗಾದರೂ ನಾವು ಎದೆಗೆಡಬಾರದು. ಹೇಡಿಗಳು ಮರಣಕ್ಕೆ ಮುನ್ನವೇ ಅನೇಕ ಸಲ ಸಾಯುತ್ತಾರೆ! ಪರಿಸ್ಥಿತಿಗಳನ್ನು ಧೈರ್ಯದಿಂದ ಶಾಂತಿಯಿಂದಲೂ ವಿಚಕ್ಷಣತೆಯಿಂದಲೂ ಎದುರಿಸುವ ದೃಢನಿರ್ಧಾರ ನಮ್ಮಲ್ಲಿರಬೇಕು.

ಇಂದು ಜಪಾನು ಇತ್ತ ಹಿಂದೂದೇಶ ಅತ್ತ ಆಸ್ಟ್ರೇಲಿಯ, ಮಧ್ಯದಲ್ಲಿ ಬರ್ಮಾ, ಸಿಲೋನ್, ನ್ಯೂಗಿನಿಗಳಲ್ಲಿ ಬಾಂಬುಗಳನ್ನು ಎಸೆದಿದೆ. ಎಂದರೆ ಇವೆಲ್ಲಾ ಯುದ್ಧಕಾರ್ಯಾಚರಣೆಗಳನ್ನು ಕೈಕೊಂಡಂತೆಯೇ ಆಯಿತು. ಆದರೆ ಜಪಾನಿನ ಪ್ರಧಾನಾಗಮನವು ಎಲ್ಲಿಗೆ? ಈ ವಿಷಯ ನಮಗೆ ಏನೆನೂ ಊಹಿಸಲು ಬರುವುದಿಲ್ಲ. ಈ ಕುರಿತು ಜಪಾನರಾದರೂ ಯಾವ ಕುರುಹನ್ನೂ ಕೊಟ್ಟಿರುವುದಿಲ್ಲ. ಭಾರತದ ಯುದ್ಧಕ್ಕೆ ಪ್ರಥಮ ಹೆಜ್ಜೆಯಾಗಿ ಬರ್ಮಾ ಯುದ್ಧ ನಡೆಯಿತು, ಆಸ್ಟ್ರೇಲಿಯ ಯುದ್ಧಕ್ಕೆ ಮೊದಲ ಮೆಟ್ಟಲಾಗಿ ನ್ಯೂಗಿನಿ ಕಾಳಗವಾಯಿತು. ಹಾಗಾದರೆ ಅತ್ತ ಆಸ್ಟ್ರೇಲಿಯ, ಇತ್ತ ಭಾರತ ಇವೆರಡರ ಮೇಲೂ ಏಕಕಾಲದಲ್ಲಿ ಆಕ್ರಮಣ ಮಾಡುವ ನಿರ್ಧಾರವನ್ನು ಜಪಾನರು ಮಾಡಿಕೊಂಡಿರುವರೆಂದು ಊಹಿಸಬೇಕೆ? ಹಾಗಲ್ಲವೆಂದು ಹೇಳಲು ಬರುವಹಾಗಿಲ್ಲವಾದರೂ, ಭಾರತ ಆಸ್ಟ್ರೇಲಿಯಗಳಂತಹ ಎರಡು ವಿಸ್ತಾರ ಪ್ರಬಲ ರಾಷ್ಟ್ರಗಳನ್ನು ಮುತ್ತಿ ಯುದ್ಧ ನಡೆಸುವಷ್ಟು ಜಪಾನಿನ ಸಿದ್ಧತೆ ಪೂರ್ಣವಾಗಿದೆಯೋ ನೋಡಬೇಕು, ಅದಿಲ್ಲದಿದ್ದರೂ ಜಪಾನರು ವಿಮಾನ ಮೂಲಕವೋ ನೌಕಾ ಮಾರ್ಗದಲ್ಲಿಯೋ ಆಗಾಗ ಬಂದು, ಆಸ್ಟ್ರೇಲಿಯ ಭಾರತ ಇವೆರಡೂ ದೇಶಗಳ ನಗರನಗರಗಳಿಗೆ ಬಾಂಬೆಸೆದು ಹಾನಿಗೈದು ಮುಂದೆ ಉಪಟಳ ಕೊಡುತ್ತಾ ಇರಬಹುದು.

ಹಿಂದೂದೇಶವು ಹದಿನೆಂಟು ಲಕ್ಷ ಚದುರ ಮೈಲು ವಿಸ್ತಾರವುಳ್ಳ ಭೂಭಾಗವಾಗಿದೆ. ಆಸ್ಟ್ರೇಲಿಯವು ಇದರ ಇಮ್ಮಡಿಯಷ್ಟಿದೆ. ಇಷ್ಟು ವಿಸ್ತಾರ ಭೂಪ್ರದೇಶಗಳುಳ್ಳ ಎರಡು ದೇಶಗಳನ್ನು ಏಕಕಾಲದಲ್ಲಿ ಜಪಾನು ಮುತ್ತುವುದೇ? ಆ ಮುತ್ತಿಗೆ ಯಶಸ್ವಿಯಾದೀತೇ? ನಾವು ಈ ವಿಷಯ ಸಂಶಯ ಪಡುತ್ತೇವೆ. ಆಕ್ರಮಣ ಮಾಡಲು ಸಾಧ್ಯವಿಲ್ಲದಿದ್ದರೂ ಧಾಳಿಯಿಡುತ್ತಿರಲು ಅಸಾಧ್ಯವೇನೂ ಇಲ್ಲ. ಆಸ್ಟ್ರೇಲಿಯದ ದಾರ್ವಿನ್ ಬಂದರ, ನ್ಯೂಗಿನಿಯ ಮಾರಸ್ಬಿಗಳು ಈಗ ನಿರಂತರ ಬಾಂಬಿನ ಪೆಟ್ಟಿಗೆ ಬಲಿಯಾಗುತ್ತಿವೆ. ಭಾರತದ ಮದ್ರಾಸು, ಕಲ್ಕತ್ತಗಳು ಹಾಗೂ ಇತರ ಬಂದರ ನಗರಗಳು ಶತ್ರುಧಾಳಿಯು ಎಂದಾದರೂ ಆಗಬಹುದೆಂದು ತತ್ತರಿಸುತ್ತಿವೆ. ಹೀಗೆ ಎರಡು ರಾಷ್ಟ್ರಗಳನ್ನು ಬಾಂಬು ಪ್ರಹಾರದ ಸಂಕಟಕ್ಕೆ ತುತ್ತುಗೊಳಿಸುವ ಸಲುವಾಗಿ ಹಾಗೂ ಕೊನೆಗೆ ಬಳಲಿಸಿ ಗೆಲ್ಲುವ ಸಾಹಸಕ್ಕಾಗಿ, ಮತ್ತೂ ಪೆಸಿಫಿಕ್ ಮತ್ತು ಹಿಂದುಸಾಗರದ ಪ್ರಭುತ್ವವನ್ನು ಪಡೆದುಕೊಳ್ಳುವ ಸಲುವಾಗಿ ಪೆಸಿಫಿಕ್ಕಿನಲ್ಲಿರುವ ಕೆಲವು ದ್ವೀಪಗಳನ್ನು ಸಿಲೋನ್ ಮೊದಲಾದವುಗಳನ್ನು ಜಪಾನು ಸದ್ಯಕ್ಕೆ ಹಿಡಿತಕ್ಕೆ ತರಲು ಪ್ರಯತ್ನಿಸಬಹುದಾಗಿದೆ.

The Canara Banking Corporation Ltd.

(Incorporated in British India with limited liability)

Estd 1906.

OUR RATES OF INTEREST ON DEPOSITS

Current	1%	p. a.
Savings Bank	2½%	,,
Short-term	1¾%	,,
FIXED FOR 3 MONTHS	2%	,,
6 ,,	2¼%	,,
9 ,,	2¾%	,,
12 ,,	3%	,,
24 ,,	3½%	,,

Advances made at cheap rates of interest against approved securities and Banking business of every description transacted.

ಸ್ವದೇಶಾಭಿಮಾನಿ

ತಾರೀಕು 17—4—1942

ಸಂಧಾನ ಭಂಗ

ಕೊನೆಗೆ, ಕ್ರಿಪ್ಸ್ ಸಂಧಾನವು ಭಂಗವಾಯಿತು; ಸರ್ ಕ್ರಿಪ್ಸರು ಬ್ರಿಟಿಷ್ ಪ್ರಭುತ್ವದಿಂದ ತಂದಿದ್ದ ಸೂಚನೆಗಳು ಸ್ವೀಕಾರಯೋಗ್ಯವಲ್ಲವೆಂದು ಕಾಂಗ್ರೆಸು ಸಾರಿತು; ಅದರೊಡನೆ ಮುಸ್ಲಿಂ ಲೀಗೂ ತಿರಸ್ಕರಿಸಿತು; ಇತರ ಪಕ್ಷಗಳೂ ಮಾನ್ಯಮಾಡಲಿಲ್ಲ; ಹೀಗೆ ಬೇರೆ ಬೇರೆ ಕಾರಣಗಳಿಂದ ಭಾರತದ ರಾಜಕೀಯ ಮುಖಂಡರೆಲ್ಲರೂ ಕ್ರಿಪ್ಸ್ ಸೂಚನೆ ಅಸ್ವೀಕಾರ್ಯವೆಂದು ಒಮ್ಮತದ ಸಮ್ಮತಿಯಿತ್ತರು; ಅಂತೂ ಕ್ರಿಪ್ಸರ ಸಂಧಾನವು ಭಂಗವಾಗಿ ಅವರು ತಮ್ಮೂರಿಗೆ ಹಿಂತೆರಳಿದರು.

ಕ್ರಿಪ್ಸರ ಪ್ರಧಾನವಾದ ಮಾತುಕತೆ ಕಾಂಗ್ರೆಸಿನೊಡನೆ ಆಗಿತ್ತು; ಏಕೆಂದರೆ ಕಾಂಗ್ರೆಸು ಸೂಚನೆಗಳನ್ನು ಮನ್ನಿಸಿದರೆ ಇಡೀ ದೇಶವೇ ಒಪ್ಪಿದಂತೆ ಎಂಬ ವಿಷಯವನ್ನು, ಇತರರಂತೆ ಕ್ರಿಪ್ಸರೂ ಅರಿತಿದ್ದರು. ಹಾಗಾಗಿ ದೇಶಕ್ಕೆ ದೇಶವೇ ಕಾಂಗ್ರೆಸು ವರ್ಕಿಂಗ್ ಕಮಿಟಿ ನಿರ್ಣಯವನ್ನು ಎದುರು ನೋಡುತಿತ್ತು! ಕ್ರಿಪ್ಸರ ಸೂಚನೆಯಲ್ಲಿ, ಸಂಪೂರ್ಣ ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸುವ ಅಭಿಪ್ರಾಯವಿಲ್ಲವೆಂದೂ, ಸೈನ್ಯಖಾತೆಯು ಭಾರತೀಯರಿಗೊಪ್ಪಿಸಲ್ಪಡುವುದಿಲ್ಲವೆಂದೂ, ಈ ಎರಡು ಮುಖ್ಯ ಕಾರಣಗಳಿಂದ ಕಾಂಗ್ರೆಸು ಕ್ರಿಪ್ಸರ ಸೂಚನೆಗಳನ್ನು ನಿರಾಕರಿಸಿತು; ಇವುಗಳೊಡನೆ ಪ್ರಾಂತಗಳು ಬೇರೆಯಾಗಿರಲು ಅವಕಾಶಕೊಟ್ಟು ಅಖಂಡ ಭಾರತವನ್ನು ವಿಭಜಿಸುವ ಹಂಚಿಕೆಮಾಡಿದ್ದು, ಆಶ್ರಿತರಾಜ್ಯಗಳ ಪ್ರಜೆಗಳ ಹಕ್ಕು ಬಾಧ್ಯತೆಯ ವಿಚಾರಗಳೇನೂ ಇಲ್ಲದಿರುವುದೂ ಕಾಂಗ್ರೆಸು ಕ್ರಿಪ್ಸರ ಸೂಚನೆಯನ್ನು ಅಸ್ವೀಕಾರ್ಯವೆನಲು ಕಾರಣಗಳಾಗಿವೆ.

ಕ್ರಿಪ್ಸ್ ಮತ್ತು ಕಾಂಗ್ರೆಸ್ ಅಧ್ಯಕ್ಷರೊಡನೆ ನಡೆದ ಪತ್ರವ್ಯವಹಾರವನ್ನು ಪರಿಶೀಲಿಸಿದರೆ, ಬ್ರಿಟಿಷ್ ಪ್ರಭುತ್ವವು ಭಾರತದ ಮೇಲಿರಿಸಿರುವ ತನ್ನ ಅಧಿಕಾರ ಭಾರವನ್ನು ಕಡಿಮೆಮಾಡಲು ಮನಸ್ಸು ಮಾಡಿಲ್ಲವೆಂದೂ, ಭಾರತೀಯರಿಗೆ ಸ್ವಾತಂತ್ರ್ಯ ಕೊಡಲು ಇಷ್ಟಪಡುವುದಿಲ್ಲವೆಂದೂ ಸ್ಪಷ್ಟವಾಗುತ್ತದೆ. ಅದರ ಸಲುವಾಗಿಯೇ ಕ್ರಿಪ್ಸರು, ಅಲ್ಪಸಂಖ್ಯಾಕರ ಹಿತಸಂರಕ್ಷಣೆ, ಬಹುಮತದ ಸರ್ವಾಧಿಕಾರ, ಪ್ರಾಂತ ಪ್ರತ್ಯೇಕೀಕರಣ ಮೊದಲಾದ ಕುಂಟು ಪಂಕ್ತಿಗಳನ್ನಿಟ್ಟುಕೊಂಡೇ ಮಾತನಾಡಿದರು. ಅಂತೂ ಜವಾಹಿರಲಾಲರು ಈಗ ಸ್ಪಷ್ಟಪಡಿಸಿದಂತೆ, ವೈಸರಾಯರಿಗೆ ಸರ್ವಾಧಿಕಾರವಿರುತ್ತಾ, ಅವರ ಕಾರ್ಯಕಾರೀ ಮಂಡಳದಲ್ಲಿ ಯಾವುದೇ ಶರತವಿಲ್ಲದೆ ಸೇರಿ ಕೆಲಸಮಾಡಲು ಕಾಂಗ್ರೆಸು ಒಪ್ಪದ್ದರಿಂದ,—ಹಾಗೆ ಒಪ್ಪಬೇಕೆಂದು ಕ್ರಿಪ್ಸರ ಸೂಚನೆಯ ಸಾರಾಂಶ—ಕ್ರಿಪ್ಸ್ ಸಂಧಾನವು ಹೀಗೆ ನಿರಾಕರಿಸಲ್ಪಟ್ಟಿತು!

ಸ್ವಾವಲಂಬನ

'ಹೊರಗಿನ ಆಕ್ರಮಣದಿಂದ ದೇಶವನ್ನು ಒಂದು ಸರಕಾರವು ರಕ್ಷಿಸಬಲ್ಲದು. ನಾವೀಗ ಸರಕಾರದಲ್ಲಿಲ್ಲ; ಹಾಗಾಗಿ ಪ್ರಜಾಸೈನ್ಯವೊಂದನ್ನು ಸೇರಿಸುವುದು ನಮಗೀಗ ಸಾಧ್ಯವಿಲ್ಲ. ಭಾರತದ ರಕ್ಷಣೆ ವಿಷಯದಲ್ಲಿ ನಮಗುಳಿದಿರುವ ಒಂದೇ ಒಂದು ಕಾರ್ಯಕ್ರಮವೆಂದರೆ, ದೇಶವನ್ನು ಈಗ ಸ್ವಾವಲಂಬಿಯಾಗಿ ಮಾಡುವುದು; ಹಾಗೆ ಸ್ವರಕ್ಷಣೆಯನ್ನು ಕೈಕೊಳ್ಳುವುದು; ನಮ್ಮ ರಾಷ್ಟ್ರದ ಜೀವಾಳವಾದ ಹಳ್ಳಿಗಳಲ್ಲಿ ಈ ಕಾರ್ಯಕ್ರಮವನ್ನು ಎಷ್ಟು ಬೇಗ ಕೈಕೊಂಡಿತೋ ಅಷ್ಟು ಲೇಸು. ಈ ಕಾರ್ಯಕ್ರಮದಿಂದ ಜನರು ದಿಗ್ಭ್ರಾಂತರಾಗದಂತೆ ನೋಡಬಹುದಾಗಿದೆ; ಇದರಿಂದ ಯುದ್ಧಪ್ರಯತ್ನಕ್ಕೂ ಕೆಲಮಟ್ಟಿಗೆ ಸಹಾಯವಾಗುವುದು.'

—ಹೀಗೆಂದು ಇತ್ತೀಚೆಗೆ ನೆಹರುಗಳು ಈ ಕಾಲದಲ್ಲಿ ಜನತೆ ಕೈಕೊಳ್ಳಬೇಕಾದ ಕಾರ್ಯಕ್ರಮದ ವಿಚಾರವಾಗಿ ಹೇಳಿದ್ದಾರೆ. ಯುದ್ಧ ನಡೆಯುತ್ತಿರುವೀ ಕಾಲದಲ್ಲಿ ದೇಶಸರ್ವತ್ರ, ಅಶಾಂತಿ ಗೊಂದಲ ದಾರಿದ್ರ್ಯಗಳು ತಲೆಯೆತ್ತಬಹುದು. ಜನತಾಜೀವನವು ದುರಂತವಾಗಬಹುದು; ಈ ಸಂದರ್ಭದಲ್ಲಿ ಸರಕಾರವು ಯುದ್ಧಕಾರ್ಯವನ್ನು ಮಾತ್ರ ವಿಶೇಷ ಗಮನಿಸುತ್ತಾ ಇತರ ವಿಚಾರಗಳ ಕಡೆಗೆ ಅಧಿಕ ಗಮನ ಕೊಡಲು ಸಾಧ್ಯವಿಲ್ಲವಾದರೆ, ವ್ಯಾಪಾರ ವಹಿವಾಟುಗಳು ನಿಂತುಹೋಗಿ, ಒಂದೂರಿಂದ ಇನ್ನೊಂದೂರಿಗೆ ಹೋಗುವ ವಾಹನ ಸೌಕರ್ಯಾದಿಗಳ ಅಭಾವವುಂಟಾಗುವ ಸಂಭವವಿರುವಾಗ, ನಮ್ಮ ದೇಶದ ಪ್ರತಿಯೊಂದು ಹಳ್ಳಿಯೂ 'ಸ್ವಾವಲಂಬಿ'ಯಾಗುವಂತೆ ಮಾಡುವುದು ರಾಷ್ಟ್ರ ಸೇವಕರ, ರಾಷ್ಟ್ರ ಹಿತಚಿಂತಕರ ಕಾರ್ಯವಾಗಿದೆ.

ಪ್ರತಿಯೊಂದು ಹಳ್ಳಿ ಈ ಕಾಲದಲ್ಲಿ ತನಗೆ ಬೇಕಾದ ವಸ್ತುಗಳೆಲ್ಲವನ್ನು ತನ್ನಲ್ಲಿಯೇ ಸಂಪಾದಿಸಿಕೊಂಡು, ಹಳ್ಳಿಯೊಳಗಿನ ಸಮೃದ್ಧಿಯೊಡನೆ, ಕಳ್ಳಕಾಕರರ ಪೀಡೆ ಮೊದಲಾದ ಉಪಟಳಗಳನ್ನು ತಡೆಯುವಷ್ಟು, ಸ್ವಸಂರಕ್ಷಣೆಯನ್ನರಿತು ವರ್ತಿಸಲು ಶಿಕ್ಷಣ ಹೊಂದುವುದೇ ಸ್ವಾವಲಂಬನವಾಗಿದೆ. ತಮ್ಮ ಊರಿಗೆ ರೋಗರುಜಿನಗಳು ಬರದಂತೆ ಗ್ರಾಮದ ಯಾವುದೇ ವ್ಯವಸ್ಥೆ ಕೆಡದಂತೆ, ಪ್ರತಿಯೊಬ್ಬನೂ ವೈಯಕ್ತಿಕ ಸ್ವಾವಲಂಬನ ಜೀವನವನ್ನು ಕಲಿತು ವರ್ತಿಸಿದರೆ ಯುದ್ಧದಿಂದುಂಟಾಗಬಹುದಾದ ಗೊಂದಲ ಕಾಲದ ಅಗ್ನಿ ಪರೀಕ್ಷೆಯಲ್ಲಿ ನಾವು ದೇಶವನ್ನೂ ದೇಶಬಾಂಧವರನ್ನೂ ಮೇಲೆತ್ತಬಹುದಾಗಿದೆ. ಹಳ್ಳಿಗಳ ಸ್ವಾವಲಂಬನ ಸಿದ್ಧತೆಗೆ ಕಾಂಗ್ರೆಸಿನ ರಚನಾತ್ಮಕ ಕಾರ್ಯದ ಅನುಸರಣೆಯು ಅಮೃತಮಯ ಫಲಕಾರಿಯಾಗುವುದು ಎಂಬುದನ್ನು ನಾವಿಲ್ಲಿ ಸೂಚಿಸದಿರಲಾರೆವು.

'ಅಧಿಕಾಹಾರ ಬೆಳೆಸಿರಿ'

ಹಿಂದಿನ ವಾರ ಡಿಲ್ಲಿಯಲ್ಲಿ ಕೂಡಿದ ಆಹಾರವಸ್ತು ಪರಿಪೋಷಕ ಸಮ್ಮೇಳನ ಅಧ್ಯಕ್ಷ ಸ್ಥಾನದ ಭಾಷಣದಲ್ಲಿ ಶ್ರೀ ನಲಿನೀರಂಜನ ಸರ್ಕಾರರು 'ಅಧಿಕಾಹಾರ ಬೆಳೆಸಿರಿ' ಎಂಬೀ ಘೋಷಣೆ ಮಾಡಿದರು. ಯುದ್ಧದ ದೆಸೆಯಿಂದ ದೇಶವು ಗೊಂದಲಕ್ಕೊಳಗಾಗುವ ಪರಿಸ್ಥಿತಿ ಬಂದಿರುವಾಗ, ಆಹಾರವಸ್ತುಗಳಿಲ್ಲದೆ ದೇಶವು ಕಂಗೆಡುವುದಾದರೆ, ಅಂತಹ ಭೀಕರ ಸಮಸ್ಯೆಯನ್ನು ದೂರದೃಷ್ಟಿಯಿಟ್ಟು ಪರಿಹರಿಸಲು ಸರ್ವಯತ್ನಗಳಿಂದಲೂ ಸಾಧಿಸುವುದು ಮುಂದಾಳುಗಳ ಹಾಗೂ ಸರಕಾರದ ಕರ್ತವ್ಯವಾಗಿದೆ.

ಇಂದು ನಮ್ಮ ದೇಶದ ಪ್ರಧಾನ ಆಹಾರವಾದ ಅಕ್ಕಿ ಮತ್ತು ಗೋಧಿಗಳಿಗೆ ಕ್ರಯವು ಸಾಮಾನ್ಯ ಕಾಲಕ್ಕಿಂತ ಹೆಚ್ಚಿದೆ, ಇದಕ್ಕೆ ಮುಖ್ಯವಾದ ಕಾರಣ, ಇಂದಿನೀ ಯುದ್ಧಕಾಲದಲ್ಲಿ ಬರ್ಮಾದಿಂದ ಅಕ್ಕಿಯೂ, ಆಸ್ಟ್ರೇಲಿಯದಿಂದ ಗೋಧಿಯೂ ಬರದಿರುವುದಾಗಿದೆ. ಇದರೊಂದಿಗೆ ಸರಕಾರದ ಬೆಲೆ ನಿರ್ಬಂಧ ಕಾರ್ಯಕ್ರಮವು ಸಾಕಷ್ಟು ಪರಿಣಾಮಕಾರಿಯಾಗಿಲ್ಲವಿರುವುದೂ ಒಂದು ಕಾರಣವೆಂದು ಕೆಲವು ಕಡೆಗಳಿಂದ ಟೀಕೆಬಂದಿದೆ. ಇದು ಹೇಗೆ ಇದ್ದರೂ, ನಾವು ಯಾರನ್ನೂ ಟೀಕಿಸಹೋಗದೆ, ನಮ್ಮ ದೇಶದ ಜನರು, ಹೆಚ್ಚಾಗಿ ಹಳ್ಳಿಯ ರೈತರು, ಈ ಕಾಲದಲ್ಲಿ ಆಹಾರ ವಸ್ತುಗಳನ್ನು ಹೆಚ್ಚು ಹೆಚ್ಚಾಗಿ ಬೆಳೆಸಲು ಗಮನಕೊಡಬೇಕೆಂದೂ ಸರಕಾರವು ಅವರಿಗೆ ಪ್ರೋತ್ಸಾಹ ಕೊಡಬೇಕೆಂದೂ ಆಗ್ರಹಪೂರ್ವಕ ಸೂಚಿಸುತ್ತೇವೆ.

ರೈತರಾದರೂ ಲಾಭದಾಯಕವಾದ ಕೆಲವು ಕೃಷಿಗಳ ಕಡೆಗೆ ಗಮನ ಕೊಟ್ಟು, ಆಹಾರ ವಸ್ತುಗಳನ್ನು ಹೆಚ್ಚು ಬೆಳೆಸುವ ವಿಷಯ ಅಷ್ಟು ಆಗ್ರಹಪಡದಿರುವುದು ಕಂಡುಬರುತ್ತದೆ. ಎಲ್ಲಿಯಾದರೂ ನಮ್ಮ ದೇಶದಲ್ಲಿ, ಈ ಯುದ್ಧದ ಅವ್ಯವಸ್ಥೆಯಿಂದ ಆಹಾರ ವಸ್ತುವಿನ ಅಭಾವವಾಗಿ ಜನರು ಚಡಪಡಿಸಬೇಕಾಗಿ ಬಂದರೆ ಅದಕ್ಕೆ ಅಂತಹ ರೈತರೇ ಕಾರಣರಾಗುವರು; ಸರಕಾರವಾದರೂ ಆಹಾರ ವಸ್ತುಗಳನ್ನು ಹೆಚ್ಚಾಗಿ ಬೆಳೆಸಲು ಪ್ರೋತ್ಸಾಹಿಸುವುದಲ್ಲದೆ ಉತ್ತಮ ಬೀಜಾದಿಗಳನ್ನು ಒದಗಿಸಿ ಕೃಷಿ ಇಲಾಖೆಯ ವಿಷಯೆ ಹೆಚ್ಚು ಗಮನಕೊಡುವುದು ಅವಶ್ಯವಿದೆ. ಹೀಗೆ ಮಾಡಿದರೆ ನಮಗೆ ಬೇಕಾದ ಎಲ್ಲಾ ಆಹಾರ ವಸ್ತುಗಳೂ ನಮ್ಮ ದೇಶದಲ್ಲೇ ಸಾಕಷ್ಟು ಬೆಳೆಯುವವೆಂಬ ಬಗ್ಗೆ ಏನೇನೂ ಸಂಶಯವಿಲ್ಲ. ಇಂದು ಬಂಜರು ಬಿದ್ದಿರುವ ಅನೇಕ ಭೂಭಾಗಗಳನ್ನು ಈಗ ಕೃಷಿ ಮಾಡಿ ಆಹಾರ ವಸ್ತುಗಳನ್ನು ಅಧಿಕಗೊಳಿಸಬಹುದಾಗಿದೆ. ಸರಕಾರವಾದರೂ ಈ ಕುರಿತು ಆದಷ್ಟು ಬೇಗನೇ ಯೋಗ್ಯ ಯೋಜನೆಯನ್ನು ತಯಾರಿಸಿ ಕಾರ್ಯಾಚರಣೆ ಮಾಡುವುದು ಅತ್ಯಗತ್ಯವಾಗಿರುವುದು.

ನೋಟಗಳು....

'ಕ್ರಿಪ್ಸರು ದ್ವಿಭಾಷಿಗಳಾದರೇಕೆ?' ಎಂಬುದು ಹಲವರಂತೆ ನಮಗೂ ಉಂಟಾಗಿರುವ ಪ್ರಶ್ನೆ!

卐

'ನೀವು ಮೊದಲನೆಯ ಮಾತುಕತೆಯ ಕಾಲದಲ್ಲಿ ಒಂದು ತರವಾಗಿ ಹೇಳಿದಿರಿ; ಇನ್ನೊಂದು ಸಲ ಬೇರೊಂದು ತೆರವಾಗಿ ನುಡಿದಿರಿ' ಎಂದು ರಾಷ್ಟ್ರಪತಿ ಅಜಾದರು ಕ್ರಿಪ್ಸರಿಗೆ ಪತ್ರ ಬರೆದು ಸ್ಪಷ್ಟಪಡಿಸಿದ್ದಾರೆ.

卐

'ಸ್ವಾತಂತ್ರ್ಯವನ್ನು ಕೊಟ್ಟಕೂಡಲೇ ಜಾತಿಮತಗಳ ಭೇದ ವಿಚಾರವು ಘಾಯವಾಗುವುದು, ಎಂದು ನಾನು ನಿಮಗೆ ತಿಳಿಸಿದ್ದೆ; ನೀವು ಅದಕ್ಕೆ ಸಮ್ಮತಿಸಿದ್ದಿರಿ; ಈಗ ತಿರುಗಿ ಅದೇ ಜಾತಿ ಮತಗಳ ನೆವನವನ್ನೆತ್ತಿ ಮಾತನಾಡುತ್ತೀರಿ' ಎಂದೂ ಅಜಾದರು ಕ್ರಿಪ್ಸರನ್ನು ಬಯಲಿಗೆಳೆದಿದ್ದಾರೆ.

卐

'ರಾಷ್ಟ್ರೀಯ ಸರಕಾರವು ಸಂಪೂರ್ಣ ಸ್ವಾತಂತ್ರ್ಯವುಳ್ಳದ್ದು; ವೈಸರಾಯರಿಗೆ ಇಂಗ್ಲೆಂಡಿನ ಅರಸರಷ್ಟೇ ಅಧಿಕಾರ; ಎಂದು ನೀವು ನಮ್ಮ ನಿಮ್ಮ ಮೊದಲನೆಯ ಮಾತುಕತೆಯ ಕಾಲದಲ್ಲಿ ತಿಳಿಸಿದ್ದಿರಿ; ಈಗ 'ರಾಷ್ಟ್ರೀಯ ಸರಕಾರ'ದ ವಿಷಯವೇ ಇಲ್ಲದೆ, ಸಂಪೂರ್ಣ ಅಧಿಕಾರ ವೈಸರಾಯರಿಗೆ, ಅವರ ಕಾರ್ಯಕಾರೀ ಮಂಡಳಿಯಲ್ಲಿ ನಾವು ಸೇರಬೇಕು ಎನ್ನುತ್ತೀರಿ; ಇದು ಯಾವ ನ್ಯಾಯ' ಹೀಗೆಂದು ಮೌಲಾನರು ಪ್ರಶ್ನಿಸಿದ್ದಾರೆ.

卐

ಕ್ರಿಪ್ಸರಾದರೂ, ತಮ್ಮ ಮೇಲೆ ಹೊರಿಸಿದ ಈ ಆರೋಪಗಳನ್ನು ಅಲ್ಲಗಳೆದಿಲ್ಲ. ಹಾಗಾಗಿ ಹೀಗೆ ಎರಡು ನಾಲಗೆಯಲ್ಲಿ ಮಾತನಾಡಬೇಕಾಗಿ ಬಂದು ಕ್ರಿಪ್ಸರ ದುರವಸ್ಥೆ ಬಗ್ಗೆ ಹಲವರಂತೆ ನಾವೂ ವಿಷಾದಪಡುತ್ತೇವೆ!

卐

ಸುಳ್ಳುಹೇಳಬೇಕಾದ ಅವಶ್ಯಕತೆ ಕ್ರಿಪ್ಸರಿಗೇಕೆ ಒದಗಿತೋ ಎಂಬುದು ನಮಗೆ ಬೇರೊಂದು ಬೇಸರ!

卐

'ಅಮೆರಿಕದ ಅಧ್ಯಕ್ಷರ ರಾಯಭಾರಿ ಕರ್ನಲ್ ಜಾನ್ಸನರನ್ನು ಕಾಂಗ್ರೆಸಿನವರೇ ರಾಜಿಮಾತನಾಡಲು ಕರೆಸಿದರು' ಎಂದು ಕ್ರಿಪ್ಸರು ಲಾಹೋರಲ್ಲಿ ಹೊರಟು ಹೋಗುವಾಗ ಹೇಳಿದರು.

卐

'ಇದು ಸತ್ಯಾಂಶವಲ್ಲ' ಎಂದು ಕಾಂಗ್ರೆಸ್ ಅಧ್ಯಕ್ಷರಾದ ಅಜಾದರೂ ಕಾಂಗ್ರೆಸ್ ಮುಂದಾಳರಾದ ನೆಹರುಗಳೂ ಈಗ ಅಧಿಕಾರಯುತವಾಗಿ ಅಲ್ಲಗಳೆದಿದ್ದಾರೆ.

卐

ಹಾಗಾದರೆ ಕ್ರಿಪ್ಸರಿಗೆ, ಕಾಂಗ್ರೆಸಿನವರು ಜಾನ್ಸರನ್ನು ಕರೆಸಿದರು ಎಂಬ ಸುದ್ದಿ ಎಲ್ಲಿಂದ ಸಿಕ್ಕಿತೋ ತಿಳಿಯದಾಗಿದೆ.

卐

ಅಥವಾ ಯಾರಾದರೂ ಹಾಗೆಂದು ಹೇಳಿದ್ದರೂ, ಅದನ್ನು ನಂಬುವಷ್ಟು ಕ್ರಿಪ್ಸರು ಹೆಡ್ಡರೇ ಎಂಬುದು ನಮ್ಮ ಸಂದೇಹವಾಗಿದೆ.

卐

ಹೆಡ್ಡರಾದವರೂ ಸುಳ್ಳು ಹೇಳಬೇಕೆಂದೇನೂ ಇಲ್ಲ.

ಕ್ರಿಪ್ಸರ ಸೂಚನೆಗಳನ್ನು ಸ್ವೀಕರಿಸಲಿಲ್ಲವೇಕೆ?

'ವೈಸರಾಯರ ಸರ್ವಾಧಿಕಾರದಲ್ಲಿ ಶರತವಿಲ್ಲದೆ ಸೇರಬೇಕು'

'ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಲು ಸಾಧ್ಯವಿಲ್ಲ'

'ಸೈನ್ಯಾಧಿಕಾರವನ್ನು ಭಾರತೀಯರಿಗೆ ಕೊಡುವುದಿಲ್ಲ'

ಕ್ರಿಪ್ಸ್ ಸೂಚನೆ ತಿರಸ್ಕೃತವಾಯಿತು

ಬ್ರಿಟಿಷ್ ಸರಕಾರದಿಂದ, ಕ್ರಿಪ್ಸರು ತಂದಿದ್ದ ಸೂಚನೆಯಲ್ಲಿ ಹುರುಳಿಲ್ಲವೆಂದು ಕಾಂಗ್ರೆಸ್ ಅದನ್ನು ನಿರಾಕರಿಸಿತು. ಈ ವಿಷಯ ಕ್ರಿಪ್ಸರು ಬ್ರಿಟಿಷ್ ಸರಕಾರಕ್ಕೆ ತಿಳಿಸಿ, ಸೂಚನೆಯನ್ನು ಹಿಂತೆಗೆದುಕೊಂಡಿರುವರು. ಸಂಪೂರ್ಣ ಅಧಿಕಾರವಿರುವ ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸುವ ಯೋಜನೆ ಅದರಲ್ಲಿ ಅಡಕವಾಗದಿರುವುದರಿಂದ, ಭಾರತೀಯರಲ್ಲಿ ಯುದ್ಧಾಸಕ್ತಿ ಹುಟ್ಟಲು ಸೈನ್ಯಸಂರಕ್ಷಣೆ ಖಾತೆಯನ್ನೂ ಭಾರತೀಯರಿಗೆ ಕೊಡಲು ಒಪ್ಪದಿರುವುದರಿಂದ, ಕಾಂಗ್ರೆಸು ಆ ಸೂಚನೆಗಳನ್ನು ಒಪ್ಪಿಕೊಳ್ಳಲಿಲ್ಲ. ಅಂತೂ ಮೂರು ವಾರಗಳಿಂದ ನಡೆಯುತ್ತಿದ್ದ ಕ್ರಿಪ್ಸರ ಸಂಧಾನವು ವಿಫಲವಾಗಿ, ಅವರು ಇಂಗ್ಲೆಂಡಿಗೆ ಹೊರಟರು. ಕ್ರಿಪ್ಸರು ಹೊರಡುವಾಗ ನಾನು ಪುನಃ ಹಿಂದೂಸ್ಥಾನಕ್ಕೆ ಬರುವೆನು ಎಂದು ಹೇಳಿ ಹೋದರು.

ವರ್ಕಿಂಗ್ ಕಮಿಟಿ ನಿರ್ಣಯ

ಕಾಂಗ್ರೆಸ್ ವರ್ಕಿಂಗ್ ಕಮಿಟಿಯು, ಬ್ರಿಟಿಷ್ ಸರಕಾರದಿಂದ, ಕ್ರಿಪ್ಸರು ತಂದಿದ್ದ, ಯೋಜನೆಯನ್ನು ಬಹಳ ದೀರ್ಘಕಾಲದ ತನಕ ವಿಚಾರಮಾಡಿ ಒಂದು ನಿರ್ಧಾರಕ್ಕೆ ಬಂದು, ಉತ್ತರ ಕಳುಹಿಸಿದರು. ಅದು ಈ ರೀತಿಯಾಗಿತ್ತು "ಸಂರಕ್ಷಣೆಯ ಅಧಿಕಾರದ ಜವಾಬ್ದಾರಿ ಭಾರತೀಯರಿಗಿಲ್ಲದಿದ್ದರೆ, ನಾವು ಸ್ವತಂತ್ರರೆಂದೂ, ನಮ್ಮ ಸ್ವಾತಂತ್ರ್ಯವನ್ನುಳಿಸಲು ನಾವು ಹೋರಾಡಬೇಕೆಂದೂ ಜನರಲ್ಲಿ ಭಾವನೆ ಹುಟ್ಟಿಸಲು ಸಾಧ್ಯವಿಲ್ಲ. ಜನತೆಯಿಂದ ಈಗ ಹುರುಪು ಸಹಕಾರಗಳನ್ನು ಪಡೆವುದು ಮುಖ್ಯ. ಜನರಿಂದ ಅದನ್ನು ಪಡೆಯಬೇಕಾದರೆ, ಅವರಿಗಿರತಕ್ಕ ಹೊಣೆಯನ್ನು ಅವರಿಗೆ ಮನಗಾಣಿಸಬೇಕು. ಅದಕ್ಕೆ ಮುಖ್ಯ ಸಂರಕ್ಷಣೆಯ ಹೊರೆಯನ್ನೇ ಭಾರತೀಯರಿಗೆ ಹೊರಿಸಬೇಕು. ಹೀಗೆ ಮಾಡಲು ಸರಕಾರಕ್ಕೆ ಮನಸ್ಸಿಲ್ಲದ್ದನ್ನು ನೋಡಿದರೆ, ಬ್ರಿಟಿಷ್ ಸರಕಾರದ ಮನೋವೃತ್ತಿಯಲ್ಲಿ, ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯ ಕೊಡಲು ಮನಸ್ಸಿಲ್ಲವೆಂದು ತೋರುತ್ತದೆ."

ಕ್ರಿಪ್ಸರ ಹೇಳಿಕೆ

ಕ್ರಿಪ್ಸರು ತನ್ನ ಸಂಧಾನವು ವ್ಯರ್ಥವಾದ ಬಗ್ಗೆ ವಿಷಾದ ಸೂಚಿಸುತ್ತಾ ಒಂದು ಹೇಳಿಕೆ ಕೊಟ್ಟು "ನಾವು ನಡೆಸಿದ ಚರ್ಚೆಗಳು ಸ್ನೇಹ ಸೌಹಾರ್ದಮಯವಾಗಿದ್ದವು. ನಾವು ಸಾಧ್ಯವಾದೆಲ್ಲಾ ಯತ್ನಗಳನ್ನು ಮಾಡಿದರೂ, ಅದು ಯಶಸ್ವಿಯಾಗಲಿಲ್ಲ. ಹಿಂದೂಸ್ಥಾನವು ಸ್ವತಂತ್ರವಾಗಬೇಕೆಂಬ ವಿಷಯ ಯಾರಿಗೂ ಭಿನ್ನಾಭಿಪ್ರಾಯವಿಲ್ಲ. ಅಮೇರಿಕವು ಸಹಾನುಭೂತಿಪರವಾಗಿದೆ. ನನ್ನ ಸಂಧಾನ ವ್ಯರ್ಥವಾದುದಕ್ಕೆ ನನಗೆ ದುಃಖವಾದರೂ ನಾನು ಯಾರ ವಿಷಯವೂ ಬೇಸರವುಳ್ಳವನಾಗಿಲ್ಲ. ದುರ್ದೈವಿ ಚೀನಕ್ಕಾದಂತೆ, ನಾನು ಮತ್ತು ನೀವು ಪ್ರೀತಿಸುವ ಭಾರತಕ್ಕೆ ದುರ್ಗತಿ ಬರದಂತೆ ನೋಡಿರಿ" ಎಂದರು. ಕ್ರಿಪ್ಸರು ತಮ್ಮ ಸೂಚನೆಯ ವಿಷಯ ಅಜಾದರಿಗೆ ಬರೆದ ಪತ್ರದಲ್ಲಿ ಹೀಗೆ ವಿವರಿಸಿದರು. "ಈಗಿನ ಯುದ್ಧದ ಮಟ್ಟಿಗೆ ವಿಮಾನ ಮತ್ತು ನೌಕಾಬಲ ಸೇನಾಪತಿಯ ಅಧೀನ. ಉಳಿದ ಖಾತೆಗಳು ಸಂರಕ್ಷಕ ಮಂತ್ರಿ ಅಧೀನ; ಗೃಹಖಾತೆ, ಪೂರೈಕೆ ಖಾತೆ, ಹಣಕಾಸಿನ ಖಾತೆ, ಆಕಾಶವಾಣಿ ಮತ್ತು ಸುದ್ದಿ ಖಾತೆಗಳು ಹಿಂದೀ ಸಂರಕ್ಷಕ ಮಂತ್ರಿ ಅಧೀನ. ಸೈನ್ಯ ಮೊದಲಾದ ಯುದ್ಧಾಂಗಗಳ ಮೇಲಿನ ಅಧಿಕಾರಗಳನ್ನು ಈಗ ಕೊಟ್ಟುಬಿಟ್ಟರೆ ಹಿಂದುಸ್ಥಾನದ ವಿಷಯ ನಾವು ಮಾಡಿದ ವ್ಯವಸ್ಥೆಗಳೆಲ್ಲವೂ ಕೆಟ್ಟು ಹೋಗುವವು. ಭಾರತದ ಸಂರಕ್ಷಣೆ ತಮ್ಮ ಜವಾಬ್ದಾರಿಯೆಂದು ಬ್ರಿಟಿಷ್ ಸರಕಾರದವರು ಭಾವಿಸಿದ್ದಾರೆ. ಆ ಉದ್ದೇಶದಿಂದಲೇ ವೇವೆಲರನ್ನು ನೇಮಿಸಿದ್ದಾರೆ. ಹಾಗಾಗಿಯೇ ಮಿತ್ರರಾಷ್ಟ್ರಗಳೂ ಹಿಂದುಸ್ಥಾನಕ್ಕೆ ಸಹಾಯ ಮಾಡುವುದು. ರಾಜ್ಯಘಟನೆಯಲ್ಲಿ ಬದಲಾವಣೆ ಮಾಡಿ ಸಂಪೂರ್ಣ ರಾಷ್ಟ್ರೀಯ ಸರಕಾರ ಸ್ಥಾಪಿಸುವುದು ಈಗ ಸಾಧ್ಯವಿಲ್ಲ. ಪ್ರಮುಖ ರಾಜಕೀಯ ಪಕ್ಷಕ್ಕೆ ಸರಕಾರ ಒಪ್ಪಿಸಿದರೆ ಬಹುಸಂಖ್ಯಾಕರ ಸರ್ವಾಧಿಕಾರಕ್ಕೆ ಡೆಕೊಟ್ಟಂತಾಗುವುದು. ಅಲ್ಪ ಸಂಖ್ಯಾಕರಿಗೆ ಬ್ರಿಟಿಷರು ಕೊಟ್ಟ ಭರವಸೆಗೆ ಅದು ಸರಿಯಾಗುವದಿಲ್ಲ"

ಅಜಾದರ ಉತ್ತರ

ರಾಷ್ಟ್ರಪತಿ ಅಜಾದರು ಕ್ರಿಪ್ಸರಿಗೆ ಒಂದು ಪತ್ರ ಬರೆದು ಪರಿಸ್ಥಿತಿ ವಿವರಿಸಿದ್ದಾರೆ. 'ಸಂಪೂರ್ಣ ರಾಷ್ಟ್ರೀಯ ಸರಕಾರ ಸ್ಥಾಪಿಸಿದರೆ ನಿಮ್ಮ ಯೋಜನೆಯನ್ನು ಇನ್ನಾದರೂ ಸ್ವೀಕರಿಸಲು ಸಿದ್ಧರಿದ್ದೇವೆ. ಕೇವಲ ವೈಸರಾಯರ ಕಾರ್ಯಕಾರೀ ಮಂಡಳಿದ ವಿಸ್ತಾರದಿಂದ ಪ್ರಯೋಜನವಿಲ್ಲ. ಮಂತ್ರಿಮಂಡಳದ ತಳಹದಿಯ ಮೇಲೆ ರಾಷ್ಟ್ರೀಯ ಸರಕಾರವಾಗಬೇಕು. ಅದರಿಗೆ ಸಂಪೂರ್ಣ ಅಧಿಕಾರ ಕೊಡಬೇಕು. ರಾಷ್ಟ್ರೀಯ ಸರಕಾರದ ಅಧೀನದಲ್ಲಿರುವ ಸಂರಕ್ಷಕ ಮಂತ್ರಿಯ ಅಧಿಕಾರದಲ್ಲಿ ಸಂರಕ್ಷಣೆಯ ಸಂಪೂರ್ಣ ಜವಾಬ್ದಾರಿಯಿರಬೇಕು. ಒಪ್ಪಂದ ಮಾಡಿಕೊಳ್ಳುವ ಸಲುವಾಗಿ ಹಿಂದೀ ಸಂರಕ್ಷಕ ಮಂತ್ರಿಯ ಅಧಿಕಾರ ಕಡಿಮೆ ಮಾಡಲೂ ಒಪ್ಪಿದೆವು. ಯುದ್ಧ ನೀತಿಯ ಮುಖ್ಯ ಸೂತ್ರ ಲಂಡನಿನಲ್ಲಿರುವ ಯುದ್ಧ ಮಂಡಲದ ಕೈಯ್ಯಲ್ಲಿರಬಹುದೆಂದೂ ಒಪ್ಪಿದೆವು. ಆ ಯುದ್ಧ ಮಂಡಳಕ್ಕೆ ಒಬ್ಬ ಹಿಂದೀಯನನ್ನು ಕಳುಹಿಸಲೂ ಸಿದ್ಧರಿದ್ದೆವು. ಒಟ್ಟಿನಿಂದ ನಮ್ಮ ದೇಶದ ಸಂರಕ್ಷಣೆಯ ಕಾರ್ಯವನ್ನು ಅತ್ಯಂತ ಪರಿಣಾಮಕಾರಿಯಾಗಿಯೂ ಜನಪ್ರಿಯವಾಗಿಯೂ ಮಾಡಬೇಕೆಂದು ನಮ್ಮಿಷ್ಟವಿತ್ತು.

'ಬ್ರಿಟಿಷ್ ಸರಕಾರವು ನಮ್ಮಲ್ಲಿ ಭೇದಬುದ್ಧಿ ಹುಟ್ಟಿಸದಿದ್ದರೆ ನಾವು ಯಾವುದೇ ಪಕ್ಷದವರಿರಲಿ ಒಂದಾಗುವೆವು; ಕೂಡಿಕೊಂಡು ಕಾರ್ಯಮಾಡುವೆವು. ಮೊದಲಿನ ಚರ್ಚೆಯಲ್ಲಿ ನೀವು ರಾಷ್ಟ್ರೀಯ ಸರಕಾರ ಸ್ಥಾಪಿಸಲ್ಪಡುವದೆಂದೂ, ಅದು ಮಂತ್ರಿಮಂಡಳದಂತೆ ಕಾರ್ಯಮಾಡುವುದೆಂದೂ, ವೈಸರಾಯರು ಮಂತ್ರಿಮಂಡಳದ ಮಟ್ಟಿಗೆ, ಇಂಗ್ಲೆಂಡಿನ ಅರಸರಂತೆ ಉಳಿಯುವರೆಂದೂ ತಿಳಿಸಿದ್ದರಲ್ಲದೆ ಭಾರತ ಮಂತ್ರಿಯ ಕಚೇರಿಯನ್ನು ಸಾವಂತ ಕಚೇರಿಗೆ ಜೋಡಿಸಲಾಗುವುದೆಂದೂ ಹೇಳಿದ್ದಿರಿ. ಆದರೆ ಕೊನೆಗೆ ನೀವು ಹೇಳಿದ್ದು ನೋಡಿದರೆ ನನಗೆ ವಿಪರೀತವಾಗಿ ತೋರುತ್ತದೆ. ನೀವು ನಿಮ್ಮ ಪತ್ರದಲ್ಲಿ ಬಹುಸಂಖ್ಯಾಕರ ಸರ್ವಾಧಿಕಾರತ್ವದ ಗುಲ್ಲೆಂದು ಹೇಳಿದ್ದೀರಿ. ನೀವು ಈ ವಿಷಯ ಹೇಳುವರೆಂದು ನಾವು ಭಾವಿಸಿರಲಿಲ್ಲ. ಕಾಂಗ್ರೆಸಿಗೆ ಅಧಿಕಾರಬೇಕೆಂದು ನಾವು ಕೇಳಲಿಲ್ಲ. ಭಾರತೀಯರಿಗೆ ಅಧಿಕಾರಬೇಕೆಂದು ನಾವು ಹೇಳುವುದು. ನಿಮ್ಮೊಡನೆ ನಡೆದ ಮೊದಲನೆಯ ಚರ್ಚೆಯಲ್ಲಿ ನಾನು ಜಾತೀಯಭೇದ ವಿಚಾರವು ಸ್ವಾತಂತ್ರ್ಯ ಕೊಟ್ಟಕೂಡಲೇ ಒಗೆಹರಿವುದೆಂದು ಹೇಳಿದ್ದೆ. ನೀವದಕ್ಕೆ ಆಗ ಒಪ್ಪಿದಂತೆ ತೋರಿತು. ಆದರೆ ತಪ್ಪಾಗಿ ಈಗ, ಬ್ರಿಟಿಷ್ ಸರಕಾರವು ತನ್ನ ವಿಧ್ವಂಸಕ ಬುದ್ಧಿಯನ್ನು ಇನ್ನೂ ಬಿಟ್ಟಂತೆ ತೋರುವುದಿಲ್ಲ. ನೀವು ನಮ್ಮ ಮುಂದಿಟ್ಟ ಚಿತ್ರವು ಹಳೆಯ ಚಿತ್ರಕ್ಕಿಂತ ವಿಶೇಷ ವ್ಯತ್ಯಾಸವೇನೂ ಇರಲಿಲ್ಲ. ವೈಸರಾಯರಿಗೇ ಸಂಪೂರ್ಣ ಅಧಿಕಾರವಿರುವ ಅವರ ಕೈ ಕೆಳಗಿನ ರಾಷ್ಟ್ರೀಯ ಸರಕಾರವೆಂದು ಕರೆಯುವುದು ಸರಿಯಲ್ಲ. ಹೊಸ ಸರಕಾರ ಮತ್ತು ವೈಸರಾಯರ ಸಂಬಂಧ ಸ್ಪಷ್ಟವಾಗದೆ ಇದ್ದುದರಿಂದ ಮುಂದೆ ಯಾವುದೇ ಕಾಲದಲ್ಲಾದರೂ ತಿಕ್ಕಾಟವುಂಟಾಗಲಿದೆಯಿದೆ. ಇಂತಹ ತಿಕ್ಕಾಟದ ಎಡೆಯನ್ನಿಟ್ಟುಕೊಂಡು ಹೊಸ ಸರಕಾರ ಸ್ಥಾಪಿಸುವುದು ವಿಚಿತ್ರವು.

"ನಮ್ಮ ಅಪೇಕ್ಷದ ಚಿಹ್ನವಾದ ಭಾರತ ಮಂತ್ರಿಗಳ ಕಚೇರಿ ತೆಗೆದುಹಾಕಬೇಕು. ಹಿಂದೂಸ್ಥಾನದ ಮೇಲೆ ಎಂದಾದರೂ ಒಂದರೆ ಯಾವನೇ ಪರದೇಶೀಯನಿಗಿಂತ ನಾವು ಹೆಚ್ಚು ಹೋರಾಡುವೆವು. ಅದನ್ನು ಎದುರಿಸಲಿಕ್ಕೇ ನಾವು ರಾಷ್ಟ್ರೀಯ ಸರಕಾರವನ್ನು ಕೇಳಿದ್ದು. ನಿಜವಾದ ರಾಷ್ಟ್ರೀಯ ಸರಕಾರ ಸ್ಥಾಪಿಸಿದಲ್ಲಿ ಇಂದಾದರೂ ಅಧಿಕಾರ ವಹಿಸುತ್ತೇವೆ."

ಸಾರಾಂಶವಿದು:

ಹಾಗಾಗಿ ಒಟ್ಟಿನಿಂದ ಕಾಂಗ್ರೆಸು ಹೀಗೆ ಉತ್ತರ ಕೊಟ್ಟಿತು (೧) 'ಹಿಂದೂಸ್ಥಾನದಲ್ಲಿ ನಿಜವಾದ ರಾಷ್ಟ್ರೀಯ ಸರಕಾರ ಸ್ಥಾಪಿಸಬೇಕು. (೨) ಸಂರಕ್ಷಣೆಯ ಪೂರ್ಣ ಜವಾಬ್ದಾರಿ ಹಿಂದೀಯರಿಗೊಪ್ಪಿಸಬೇಕು.' ಅದಕ್ಕೆ ಬ್ರಿಟಿಷ್ ಸರಕಾರದಿಂದ ಸಮ್ಮತಿ ದೊರಕಲಿಲ್ಲ. ಹಾಗಾಗಿ ಕ್ರಿಪ್ಸರು ಹೇಳಿದರು (೧) 'ಈಗಿನ ಪರಿಸ್ಥಿತಿಯಲ್ಲಿ ರಾಜ್ಯಘಟನೆಯಲ್ಲಿ ಬದಲಾವಣೆ ಮಾಡಿ ರಾಷ್ಟ್ರೀಯ ಸರಕಾರ ಸ್ಥಾಪಿಸಲು ಸಾಧ್ಯವಿಲ್ಲ. ಇದರಿಂದ ಬಹುಸಂಖ್ಯಾಕರ ಸರ್ವಾಧಿಕಾರವಾಗುತ್ತದೆ. ಅಲ್ಪ ಸಂಖ್ಯಾಕರ ಆಕ್ಷೇಪ ಬರುತ್ತದೆ. (೨) ಭಾರತೀಯ ಸಂರಕ್ಷಕ ಮಂತ್ರಿಯೊಬ್ಬನನ್ನು ನೇಮಿಸಿ ಆತನಿಗೆ ಯುದ್ಧಭೂಮಿಯ ವಿಚಾರಬಿಟ್ಟು ಮಿಕ್ಕ ಎಲ್ಲಾ ಜವಾಬ್ದಾರಿಯನ್ನು ಕೊಡಬಹುದು.'

ಕ್ರಿಸ್‌ಮಸ್ ದ್ವೀಪದ ಆಕ್ರಮಣ

ಹಿಂದೀ ಮಹಾಸಾಗರದಲ್ಲಿರುವ ಕ್ರಿಸ್‌ಮಸ್ ದ್ವೀಪವನ್ನು ತಾವು ಆಕ್ರಮಿಸಿ ಕೊಂಡಿರುವುದಾಗಿ ಜಪಾನರು ಹೇಳುತ್ತಾರೆ. ಈ ದ್ವೀಪಗಳು ಜಾವಾಕ್ಕೆ ನೈಋತ್ಯ, ಮುಂಬಯಿ ಆಸ್ಟ್ರೇಲಿಯಗಳ ನಡುವೆ ಇದೆ.



ಜಪಾನು ಧಾಳಿಯಿಟ್ಟರೆ ಅಹಿಂಸಾವಿರೋಧ ಹೇಗೆ?

ಮಹಾತ್ಮಾಜಿ ವಿವರಿಸುತ್ತಾರೆ

ವರ್ಧಾದಲ್ಲಿ ನೂಲಿನ ನಾಣ್ಯದ ಪ್ರಚಾರ

['ಹರಿಜನ'ದಿಂದ]

ಅಹಿಂಸಾತ್ಮಕ ವಿರೋಧದಿಂದ ಜಪಾನಿನ ಧಾಳಿಯನ್ನು ಎದುರಿಸುವುದೆಂತು?

ಗಾಂಧಿಜಿ ಲೇಖನ

'ಜಪಾನರು ನಮ್ಮ ಬಾಗಿಲು ಬಡೆಯುತ್ತಿದ್ದಾರೆ, ಅಹಿಂಸಾ ಮಾರ್ಗದಿಂದ ಈಗ ನಾವೇನು ಮಾಡತಕ್ಕದ್ದು? ನಮ್ಮದು ಸ್ವತಂತ್ರ ದೇಶವಾಗಿದ್ದರೆ, ಅಹಿಂಸಾತ್ಮಕ ವಿರೋಧದಿಂದ ನಾವು ಇಲ್ಲಿಗೆ ಅವರು ಪ್ರವೇಶ ಮಾಡದಂತೆಯೇ ತಡೆಯುತ್ತಿದ್ದುವು ಆದರೆ, ಇಂದಿನ ಪರಿಸ್ಥಿತಿಯಲ್ಲಿ, ಜಪಾನರು ನಮ್ಮ ದೇಶಕ್ಕೆ ಇಳಿದ ಕೂಡಲೇ ಅಹಿಂಸಾತ್ಮಕ ವಿರೋಧ ಪ್ರಾರಂಭವಾಗುತ್ತದೆ. ಅಹಿಂಸಾತ್ಮಕ ವಿರೋಧಮಾಡುವವರು ಅವರಿಗೆ ಯಾವ ರೀತಿಯಿಂದಲೂ ಸಹಾಯ ಮಾಡಕೂಡದು, ನೀರು ಕೂಡ ಕೊಡಕೂಡದು ದೇಶವನ್ನು ಸ್ವಾಧೀನಮಾಡಲು ಬಂದವರಿಗೆ ಸಹಾಯ ಮಾಡುವುದು ಕರ್ತವ್ಯವಲ್ಲ ಒಂದು ವೇಳೆ ಜಪಾನರು ದಾರಿತಪ್ಪಿ, ನೀರಡಿಕೆಯಿಂದ ನೀರು ಕೇಳಿದರೆ, ಯಾರೂ ನಮಗೆ ದ್ವೇಷಿಯಲ್ಲವೆಂದು ತಿಳಿವ ಬುದ್ಧಿಯ ಅಹಿಂಸಾವಾದಿಯು ಕುಡಿಯಲು ನೀರು ಕೊಡಬಲ್ಲನು ಒಂದು ಪಕ್ಷ ಜಪಾನರು ನೀರು ಕೊಡಲು ಬಲಾತ್ಕಾರ ಮಾಡಿದರೆ, ಆಗ ಅಹಿಂಸಾ ವಿರೋಧ ಮಾಡುವವರು ತಮ್ಮ ವಿರೋಧ ಕಾರ್ಯದಲ್ಲಿ ಜೀವ ಕೊಡಲೂ ಸಿದ್ಧರಿರಬೇಕು ಈ ರೀತಿ ವಿರೋಧಮಾಡುವವರನ್ನೆಲ್ಲಾ ಧಾಳಿಗಾರನು ಕೊಂದು ಬಿಡಬಹುದು ಆದರೆ ಆ ರೀತಿ ಮಾಡುವ ಧಾಳಿಗಾರನು ಕೆಲಸಮಯದಲ್ಲಿಯೇ ಮನಸ್ಸಿನಿಂದಲೂ ಶರೀರದಿಂದಲೂ ದಣಿವು ಹೊಂದುವನು ಹಾಗೂ ಅಹಿಂಸಾತ್ಮಕ ವಿರೋಧಿಗಳ ಕೊಲೆಯನ್ನು ನಿಲ್ಲಿಸುವನು ಇದೇ ಅಹಿಂಸಾತ್ಮಕ ವಿರೋಧದ ತಿರುಳು ಯಾವುದೇ ರೀತಿಯಲ್ಲಿಯೂ ಬೇಸೆಗೊಳಿಸದೆ, ಸಹಾಯ ಸಹಕಾರಗಳನ್ನು ಕೊಡಲು ತಿರಸ್ಕರಿಸುವ, ಈ ಹೊಸ ಶಕ್ತಿಯೇನೆಂದು ಅವನು ಹುಡುಕಹತ್ತುವನು, ಹೆಚ್ಚಿನ ಪಕ್ಷಕಡೆಗೆ ಅಂಥಾ ಹತ್ಯದಿಂದ ವಿಮುಖನಾಗುವನು ದಬ್ಬಾಳಿಕೆಗೆ ಶರಣಾಗದೆ ಸಾಯಲು ಕೂಡ ಸಿದ್ಧರಾದ ದಿನವೇ ಅಹಿಂಸಾವಿರೋಧಕರಿಗೆ ವಿಜಯದ ದಿನ

'ದೇಶದಲ್ಲಿ ಕಡಿಮೆಯೆಂದರೆ ನಾಲ್ಕು ಪಕ್ಷಗಳಿವೆ ಮೊದಲನೆಯದು, ಬ್ರಿಟಿಷರು ಮತ್ತು ಅವರು ಸಂಘಟಿಸಿದ ಸೈನ್ಯ ಹಿಂದುಸ್ತಾನದ ವಿಷಯ ತಮಗೇನೂ ದ್ವೇಷವಿಲ್ಲವೆಂದೂ ಬ್ರಿಟಿಷರೊಡನೆ ತಮ್ಮ ಜಗಳವೆಂದೂ ಜಪಾನರು ಸಾರುತ್ತಿದ್ದಾರೆ ಅವರ ಕಾರ್ಯಕ್ಕೆ ಜಪಾನಿನಲ್ಲಿರುವ ಕೆಲವು ಹಿಂದೀಯರು ಸಹಾಯಮಾಡುತ್ತಿದ್ದಾರೆ. ಜಪಾನರ ಈ ಹೇಳಿಕೆಯಲ್ಲಿ ವಿಶ್ವಾಸವಿಟ್ಟು, ಜಪಾನರು ನಮ್ಮನ್ನು ಬ್ರಿಟಿಷರ ದಾಸ್ಯದಿಂದ ಮುಕ್ತಮಾಡಿ ಕಡೆಗೆ ಅವರು ಹೋಗುವರೆಂದು ಅಂಥವರ ಅಭಿಪ್ರಾಯ ಅವರ ನಂಬಿಕೆಯಂತೆ ಜಪಾನರು ಹೋಗದಿದ್ದರೂ ಬ್ರಿಟಿಷರ ದಾಸ್ಯದಿಂದ ಬಳಲಿದ ಅವರು ಜಪಾನರ ದಾಸ್ಯವನ್ನು ಸ್ವಾಗತಿಸಲು ಕೂಡ ಸಿದ್ಧರು ದಾಸ್ಯದಲ್ಲಿಯೂ ಒಂದು ತರದ ಬದಲಾವಣೆಯಾಗಬೇಕೆಂದು ಅವರ ಅಭಿಪ್ರಾಯ, ಇದು ಎರಡನೆಯ ಪಕ್ಷ ಮೂರನೆಯ ಪಕ್ಷವೆಂದರೆ ತಟಸ್ಥರು ಅವರು ಅಹಿಂಸಾವಾದಿಗಳಲ್ಲದಿದ್ದರೂ ಬ್ರಿಟಿಷರಿಗಾಗಲಿ, ಜಪಾನರಿಗಾಗಲಿ ಸಹಾಯ ಮಾಡಲಾರರು ಅಹಿಂಸಾತ್ಮಕ ವಿರೋಧಿಗಳು ನಾಲ್ಕನೆಯ ಪಕ್ಷದವರು ಅವರು ಸ್ವಲ್ಪ ಮಾತ್ರ ಜನರಾದರೆ ಅವರ ವಿರೋಧ ಅಷ್ಟೊಂದು ಪರಿಣಾಮಕಾರಿಯಾಗಲಾರದು ಆದರೆ ಮುಂದಕ್ಕೆ ಅದು ಒಂದು ಬಗೆಯ ಉದಾಹರಣೆಯಾಗಬಹುದು. ಇಂಥವರು ಎಲ್ಲಿದ್ದರೂ ಶಾಂತರೀತಿಯಿಂದ ಮರಣಹೊಂದುವರು ಧಾಳಿಗಾರರಿಗೆ ಶರಣಾಗರು ಮೂರನೆಯವರ ಸಹಾಯಪಡೆದು ಬ್ರಿಟಿಷರ ದಾಸ್ಯದಿಂದ ಬಿಡುಗಡೆಯಾಗಬೇಕೆಂಬ ಅಪೇಕ್ಷೆ ಅವರಿಗಿಲ್ಲ ತಮ್ಮ ಹೋರಾಟದ ದಾರಿಯಲ್ಲಿ ಅವರಿಗೆ ಅಚಲ ಶ್ರದ್ಧೆಯಿದೆ. ತಮ್ಮ ದಾಸ್ಯ ವಿಮೋಚನೆಗೆ ಮಾರ್ಗವಿಂದು ಗೊತ್ತಿಲ್ಲದೇ ಇರುವಂಥಾ ಮಿಲಿಯ ನಾರಕೀಯರ ಪರವಾಗಿ ಅವರು ಹೋರಾಡುವರು. ಬ್ರಿಟಿಷರ ಬಗ್ಗೆ ಅವರಿಗೆ ದ್ವೇಷವಿಲ್ಲ. ಜಪಾನರ ವಿಷಯ ಅವರಿಗೆ ಪ್ರೇಮವೂ ಇಲ್ಲ. ಬೇರೆಯವರಂತೆ ಅವರಿಗೂ ಕ್ಷೇಮವಿರಲಿ ಎಂದು ಬಯಸುವರು ಬ್ರಿಟಿಷರಾಗಲಿ ಜಪಾನರಾಗಲಿ ನ್ಯಾಯವಾದದ್ದನ್ನೇ ಮಾಡಬೇಕೆಂದು ಅವರ ಹಂಬಲ ಅಹಿಂಸೆಯಿಂದಲೇ ಮಾನವನು ಎಲ್ಲಾ ಸಂದರ್ಭಗಳಲ್ಲೂ ಸತ್ಯವನ್ನೂ ನ್ಯಾಯವನ್ನೂ ಆಚರಿಸಬಲ್ಲನೆಂದು ಅವರ ವಿಶ್ವಾಸ. ಆದ್ದರಿಂದಲೇ ಸಾಕಷ್ಟು ಸಹಾಯಕರಿಲ್ಲದಿದ್ದರೂ, ಅಹಿಂಸಾತ್ಮಕ ವಿರೋಧಿಗಳು ತಮ್ಮ ಧ್ಯೇಯವು ಸಾಧಿಸಲಾಗದಿದ್ದರೂ ತನ್ನ ಮಾರ್ಗ ಬಿಡ್ಡುವುದಿಲ್ಲ. ಸಾಯುವವರೆಗೆ ಅದನ್ನೇ ಅನುಸರಿಸುವರು, ಇಂತಹ ಮಾರ್ಗ ಬಹಳ ಕಠಿಣವಿದೆ, ಆದರೆ ತನ್ನ ಧ್ಯೇಯದಲ್ಲಿ ವಿಶ್ವಾಸವಿರುವ ಮನುಷ್ಯನು ಎಂಥ ಸಂಕಟದಲ್ಲಾದರೂ ಎದೆಗುಂದಲಾರನು

'ಅಹಿಂಸಾತ್ಮಕ ವಿರೋಧಿಗಳು ಅಸಾಧ್ಯ ಪ್ರಯತ್ನಗಳು ಮಾಡಕೂಡದು ಅವರ ಶಕ್ತಿ ಸಾಮರ್ಥ್ಯಗಳು ಮಿತವಾಗಿದೆ. ಆಸಾಮಿನ ಗಂಡಾಂತರವನ್ನು ತಪ್ಪಿಸಲು ಕೇರಳದ ಅಹಿಂಸಾ ವಿರೋಧಿ ಹೊಣೆಯಲ್ಲ ಅಸಾಮ್ ಅಹಿಂಸಾ ವಿರೋಧದಲ್ಲಿ ವಿಶ್ವಾಸವುಳ್ಳದ್ದಾದರೆ ಅದೇ ಮಾಡಿಕೊಳ್ಳಬಲ್ಲದು. ಜಪಾನು ಆಸ್ಸಾಮಿನಲ್ಲಿ ಮಾತ್ರ ನಿಲ್ಲದೆ ಮುಂದೊತ್ತಿರಬಹುದು ತಾನಿದ್ದ ಸ್ಥಳದಲ್ಲಿಯೇ ಅಹಿಂಸಾ ಪ್ರತೀಕಾರವನ್ನಾಡಿ ಇತರರಿಗೆ ಆದರ್ಶವಾಗಬಹುದು ಬ್ರಿಟಿಷರಾದರೂ, ಕಾಲಿಡುವ ಜಪಾನರನ್ನು ಸೋಲಿಸಲು ಕೊನೆವರೆಗೆ ಕಾದಾಡುವರು, ಹಿಂದುಸ್ತಾನವನ್ನು ಬ್ರಿಟಿಷರು ಕಳಕೊಳ್ಳುವುದೆಂದರೆ ಸಂಪೂರ್ಣ ಸೋಲನ್ನು ಅವರು ಒಪ್ಪಿಕೊಂಡಂತೆ

'ಬ್ರಿಟಿಷ್ ಸೈನ್ಯವು 'ಶತ್ರು'ವಿನೊಡನೆ ಪ್ರತ್ಯಕ್ಷ ಹೋರಾಡುತ್ತಿರುವಾಗ, ಪ್ರತ್ಯಕ್ಷ ವಿರೋಧ ಮಾಡುವುದು ಅಹಿಂಸಾ ಪ್ರತೀಕಾರಿಗೆ ಸರಿಯಲ್ಲ ಹಿಂಸೆಯಿಂದ ಕೂಡಿದ ಅಥವಾ ಹಿಂಸೆಗೆ ಸಹಾಯಕವಾದ ವಿರೋಧವು ನಿಜವಾದ ಅಹಿಂಸಾತ್ಮಕ ವಿರೋಧವಲ್ಲ ರಚನಾತ್ಮಕ ಕಾರ್ಯ ಮಾಡುವುದರಿಂದಲೇ ಇಂಥಾ ಅಹಿಂಸಾತ್ಮಕ ವಿರೋಧದ ನಿಜವಾದ ಸಿದ್ಧತೆಯಿದೆ ರಚನಾತ್ಮಕ ಕಾರ್ಯಮಾಡದೆ, ಅಹಿಂಸಾತ್ಮಕ ವಿರೋಧ ಮಾಡಬಲ್ಲೆವೆಂದು ಯೋಚಿಸುವವರು ಪರೀಕ್ಷಾಕಾಲದಲ್ಲಿ ಬಹುಮಟ್ಟಿಗೆ ಅಯಶಸ್ವಿಗಳಾಗುವರು ಕೊಬ್ಬಿದ ಸಶಸ್ತ್ರ ಸೈನಿಕನೊಡನೆ ಹಸಿವಿಂದ ಬಳಲಿದ ನಿಶ್ಶಸ್ತ್ರನು ತನ್ನ ಶಕ್ತಿ ಪ್ರದರ್ಶಿಸಿದಂತೆ ಅವರ ಪಾಡಾಗುವುದು ರಚನಾತ್ಮಕ ಕಾರ್ಯದಲ್ಲಿ ವಿಶ್ವಾಸವಿಲ್ಲದವರು, ಹಸಿವೆಯಿಂದ ಬಳಲುವ ಮಿಲಿಯಾಂತರ ಮಂದಿಯ ವಿಚಾರ ವಾಸ್ತವಿಕ ಅಭಿಪ್ರಾಯವಿರುವವರಲ್ಲವೆಂದು ನನ್ನ ಅಭಿಮತ ಆ ಬಗೆಯ ಭಾವನೆಯಿಲ್ಲದವನು ಅಹಿಂಸಾತ್ಮಕವಾಗಿ ಹೋರಾಡಲಾರನು ಹಸಿವಿಂದ ಬಳಲುವ ಜನಾಂಗದೊಡನೆ ತಾದಾತ್ಮ್ಯಹೊಂದುವುದರಲ್ಲಿ ನನ್ನ ಅಹಿಂಸಾಚರಣೆಯ ಪೂರ್ಣತ್ವವಿದೆಯೆಂದು ನನ್ನ ಭಾವನೆ ಆ ರೀತಿಯ ತಾದಾತ್ಮ್ಯ ಭಾವನೆ ಇನ್ನೂ ನನ್ನಲ್ಲಿ ಹುಟ್ಟದಿರುವುದರಿಂದ ನನ್ನ ಕಲ್ಪನೆಯ ಅಹಿಂಸೆಯ ಮಟ್ಟಕ್ಕೆ ನಾನಿನ್ನೂ ಮುಟ್ಟಿರುವುದಿಲ್ಲ'.

'ಸಂಪತ್ತಿನ ವಿನಾಶ' ಧೋರಣೆಯಲ್ಲಿ ನಾನು ಗಾಂಧಿಜಿಯ ಅಭಿಪ್ರಾಯ ಕೊಪ್ಪುವುದಿಲ್ಲ'

ನೆಹರು ಹೇಳಿಕೆ

ವೈರಿಗಳು ಬಂದಾಗ ಸ್ವಸಂಪತ್ತನ್ನು ನಾಶಮಾಡಿ, ಅವರಿಗೆ ಅದರಿಂದೇನೂ ಪ್ರಯೋಜನವಾಗದಂತೆ ಮಾಡುವ ರಷ್ಯನ್ ಪದ್ಧತಿಯನ್ನು ಬ್ರಿಟಿಷ್ ಸರಕಾರದವರು ಅಂಗೀಕರಿಸುವ ಭೀತಿಯ ಹಾಗೂ ಭಾರತದಲ್ಲಿ ಅಂತಹ ಕ್ರಮವನ್ನು ಜಾರಿಗೆ ತರಬಾರದೆಂಬುದಾಗಿ ಗಾಂಧಿಜಿ ಹಿಂದೆ ಒಂದು ಲೇಖನ ಬರೆದಿದ್ದರು. ಆ ಕುರಿತು ನೆಹರು ಅಭಿಪ್ರಾಯ ಕೊಡುತ್ತ, ಗಾಂಧಿಜಿಯ ಅಭಿಪ್ರಾಯದಿಂದ ನಾನು ಭಿನ್ನನಾಗಿದ್ದೇನೆ, ನಾನು ರಾಷ್ಟ್ರೀಯ ಸರಕಾರವಾದರೆ, ಸಂಪತ್ತನ್ನು ವೈರಿಯ ಹಸ್ತ ಬಿಡಲಾರೆ, ಸರಕಾರವು ತಿರುಗಿ ಒದಗಿಸಿದನ್ನು ಕೊಡಬೇಕು, ಆದರೆ ಬ್ರಿಟಿಷ್ ಸರಕಾರ ರಾಷ್ಟ್ರೀಯ ಸರಕಾರವಲ್ಲ, ಆದ್ದರಿಂದ ಅದು ಅಂತಹ ಕೆಲಸ ಮಾಡಿದಲ್ಲಿ ನಾನು ಅದನ್ನು ಒಪ್ಪುವುದಿಲ್ಲವೆಂದಿರುವರು

ರೋಮನ್ ಲಿಪಿ

'ನಿಮಗೆ ಆಂಗ್ಲಭಾಷೆಯ ಮೇಲೆ ತಿರಸ್ಕಾರವಿರುವುದರಿಂದ ನೀವು ರೋಮನ್ ಲಿಪಿಯನ್ನು ತಿರಸ್ಕರಿಸುತ್ತೀರಿ, ಇಲ್ಲವಾದರೆ ಭಾರತದ ರಾಷ್ಟ್ರೀಯ ಲಿಪಿಯಾಗಿ, ನೀವು ರೋಮನ್ ಲಿಪಿಯನ್ನು ಉಪಯೋಗಿಸಲು ಹೇಳುತ್ತಿದ್ದಿರಿ ಹೀಗೆಂದು ಗಾಂಧಿಜಿಯೊಡನೆ ಒಬ್ಬರು ಪ್ರಶ್ನಿಸಿದ್ದಾರೆ.

ಅದಕ್ಕೆ ಗಾಂಧಿಜಿ ಹೀಗೆನ್ನುವರು, 'ನನಗೆ ಯಾವ ಭಾಷೆಯ ಮೇಲೂ, ಲಿಪಿಯ ಮೇಲೂ ತಿರಸ್ಕಾರವಿಲ್ಲ, ಆದರೆ ಒಂದರ ಸ್ಥಾನ ಇನ್ನೊಂದು ಆಕ್ರಮಿಸಕೂಡದು ರೋಮನ್ ಲಿಪಿ ಭಾರತದಲ್ಲಿ ಈಗ ಸ್ಥಾನ ಪಡೆದಿದೆ, ಆದರೆ ಅದು ದೇವನಾಗರಿ ಪರ್ಶಿಯ ಲಿಪಿಗಳ ಸ್ಥಾನವನ್ನಾಕ್ರಮಿಸಬಾರದು ನನಗೇನಾದರೂ ಅಧಿಕಾರವಿದ್ದರೆ, ಎಲ್ಲಾ ಪ್ರಾಂತಿಕ ಭಾಷೆಗಳ ಲಿಪಿಗಳೂ ದೇವನಾಗರಿಯಾಗಬೇಕೆಂದು ಹೇಳುತ್ತೇನೆ, ಹಿಂದುಗಳಿಗೆ ಸಂಸ್ಕೃತ ಭಾಷೆ ಕಲಿಯಲು ದೇವನಾಗರಿ ಹೇಗೆ ಅಗತ್ಯವೋ ಹಾಗೆ ಮುಸ್ಲಿಮರಿಗೆ ಅವರ ಧರ್ಮಶಾಸ್ತ್ರ ಕಲಿಯಲು ಪರ್ಶಿಯನ್ ಲಿಪಿ ಅಗತ್ಯ, ಹಾಗಾಗಿ ಇವೆರಡು ಲಿಪಿಗಳು ಬೇಕಾಗಿವೆ ರೋಮನ್ ಲಿಪಿಯು ಇವೆರಡರ ಮಾಧ್ಯಮವಾಗಿ ಸೂಚಿತವಾಗಿದೆ, ಅದಕ್ಕೆ ಯೂರೋಪಿನಲ್ಲಿ ಸ್ಥಾನವಿದೆ, ಆದರೆ ಅದು ನಮಗೆ ಅವಶ್ಯವೆಂದೇನೂ ಕಾಣುವುದಿಲ್ಲ'

ನೂಲಿನ ನಾಣ್ಯ

ವಾರ್ಧಾದಲ್ಲಿ

ನಲ್ವಾಡಿಯಲ್ಲಿ ಜರಗಿದ ೬ನೇ ಖಾದಿಯಾತ್ರಾ ಪರಿಷತ್ತಿನಲ್ಲಿ ಗಾಂಧಿಜಿ ಭಾಷಣಮಾಡುತ್ತಾ ರಚನಾತ್ಮಕ ಕಾರ್ಯಕ್ರಮದ ಸಹಾಯವಿಲ್ಲದೆ, ದಿಲ್ಲಿಯಲ್ಲಿ ಹದಿನೈದು ಮಂದಿ ಸೇರಿ ಏನುಮಾಡಬಲ್ಲರು ಎಂದು ಕೇಳಿದರು ನಲ್ವಾಡಿಯಲ್ಲಿ 'ಸ್ವರಾಜ್ಯ ಭಂಡಾರ' ಎಂಬ ಹೆಸರಿನ ಖಾದಿಸಂಸ್ಥೆ ಪ್ರಾರಂಭವಾಗಿದೆ ಈ ಹೊಸ ಸಂಸ್ಥೆ ನೂಲಿನ ನಾಣ್ಯವನ್ನು ಜಾರಿಗೆ ತರುವುದು. ನೂಲನ್ನು ಮಾರಾಟಕ್ಕೆ ತಂದವರಿಗೆ ಅದರ. ಪ್ರತಿಫಲವಾಗಿ ತಕ್ಕ ಬೆಲೆ ಇಲ್ಲವೆ ಅಷ್ಟೆ ಬೆಲೆಯ ಮನೆವಾರ್ತೆಗೆ ಬೇಕಾದ ಸಾಮಾನುಗಳು ಕೊಡಲ್ಪಡುವವು 'ಸ್ವರಾಜ್ಯ ಭಂಡಾರದ ಉದ್ಘಾಟನಾ ಸಮಾರಂಭವನ್ನು ನೆರವೇರಿಸುತ್ತಾ ಗಾಂಧಿಜಿ ಹೀಗೆಂದರು

'ಸರಕಾರದ ನಾಣ್ಯದ ಹಾಗೆ ನೂಲಿನ ನಾಣ್ಯವನ್ನು ಯಾಕೆ ನಾವು ಜಾರಿಗೆ ತರಬಾರದು? ಈ ವಿಚಾರ ಹಲದಿನಗಳಿಂದ ನಾನು ಯೋಚಿಸುತ್ತೇನೆ. ನನ್ನ ಸೂಚನೆಯಂತೆ ವಿನೋಬಾರವರು ಈ ನೂಲಿನ ನಾಣ್ಯವನ್ನು ಜಾರಿಗೆ ತಂದಿದ್ದಾರೆ ೧ಪೈಸೆಯಿಂದ ಒಂದು ರೂಪಾಯಿ ವರೆಗೆ ನೂಲಿನ ನಾಣ್ಯ ಈಗ ತಯಾರಾಗಿದೆ ನೂಲಿನ ನಾಣ್ಯದ ಪ್ರತಿಫಲವಾಗಿ ಧಾನ್ಯ, ಚರ್ಮ ಸಾಮಗ್ರಿ, ಚರಕ ಮತ್ತು ವರ್ಧಾದ ಗ್ರಾಮ ಸೇವಾ ಮಂಡಳದ ಅಂಗಡಿಯಲ್ಲಿ ದೊರೆವ ಇತರ ಎಲ್ಲಾ ತರದ ಸಾಮಗ್ರಿಗಳೂ ಕೊಡಲ್ಪಡುವವು ಯಾರಾದರೂ ಈ ತರದ ನಕಲಿ ನೋಟನ್ನು ರಚಿಸಿ ವಂಚಿಸದಿರಿ. ನಮ್ಮ ನಾಣ್ಯವು ಖಾದಿ ಪ್ರಚಾರಕ್ಕೆ ತುಂಬಾ ಸಹಾಯವಾಗುವುದು"

ದಿ ಕೆನರಾ ಇಂಡಸ್ಟ್ರೀಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್

1941ನೆಯ ಇಸವಿ ದಶಂಬರ 31ಕ್ಕೆ ಅಂತ್ಯವಾಗುವ ದಿ ಕೆನರಾ ಇಂಡಸ್ಟ್ರೀಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡಿನ ಕಾರ್ಯಕಲಾಪಗಳ ವರದಿಯು ಬೇಂಕಿನ ತೃಪ್ತಿಕರವಾದ ಕೆಲಸಾವಳಿಗಳನ್ನು ನಮೂದಿಸುತ್ತದೆ. ಯುದ್ಧದ ದುರ್ದಶೆಯು ದೇಶದ ಇಂದಿನ ವಿಷಮ ಪರಿಸ್ಥಿತಿಯಲ್ಲಿಯೂ ಸಿಂಡಿಕೇಟು ಅಭಿವೃದ್ಧಿ ಹೊಂದುತ್ತಾ ಬಂದಿದೆ ಈ ವರ್ಷದಲ್ಲಿ ಇದರ ಸಬ್‌ಸ್ಕ್ರೈಬ್ಡ್ ಕೆಪಿಟಲ್ ರೂ. 12,84,880ರಿಂದ 14,17,570ಕ್ಕೆ ಏರಿದೆ ಪೈಡ್ ಅಪ್ ಕೆಪಿಟಲ್ ರೂ 5,20,711 ರಿಂದ ರೂ 6,10, 30ಕ್ಕೆ ಏರಿದೆ. ಡಿಪೋಸಿಟುಗಳೂ ರೂ 23,14,330ರಿಂದ ರೂ. 33,82,235ಕ್ಕೆ ಏರಿದೆ ಸುಮಾರು 10ಲಕ್ಷರೂಪಾಯಿಗಳ ಈ ಅಭಿವೃದ್ಧಿಯು ಸಂಸ್ಥೆಯ ಮೇಲೆ ಸಾರ್ವಜನಿಕರಿಗಿರುವ ವಿಶ್ವಾಸವನ್ನು ತೋರಿಸುವುದು ಇಂತಹ ಸಾರ್ವಜನಿಕ ವಿಶ್ವಾಸವು ಬೇಂಕಿನ ನಿರಂತರ ಸೇವೆಯಿಂದ ಉಂಟಾಗಿದೆ ಕಳೆದ ವರ್ಷದಲ್ಲಿ ಏಳು ಹೊಸ ಬ್ರಾಂಚುಗಳನ್ನು ತೆರೆಯಲಾಗಿದೆ ಇವೆಲ್ಲಾ ಬೇಂಕಿನ ಅಭಿವೃದ್ಧಿಯನ್ನು ಸೂಚಿಸುತ್ತವೆ. ಇಂತಹ ಸಂಸ್ಥೆಯನ್ನು ನಡೆಸುತ್ತಾ ಬರುವ ಡೈರೆಕ್ಟರರು ಬಹಳ ಪ್ರಶಂಸಾರ್ಹರಾಗಿರುವರು

ದಿ ಪ್ರೋವ್ಹಿನ್ಶಿಯಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

1941ನೆಯ ಇಸವಿ ದಶಂಬರ 31ನೇ ತಾರೀಕಿಗೆ ಅಂತ್ಯವಾಗುವ ಇದರ ವರದಿ ಮತ್ತು ಲೆಕ್ಕ ಪತ್ರಗಳು ಪರಿಶೀಲಿಸಲು ಬಹಳ ತೃಪ್ತಿಕರವಿದೆ ದಕ್ಷ ಆಡಳಿತ ಮಂಡಳಿಯೊಡಗೂಡಿಕೊಂಡು ಕಳೆದ ಹನ್ನೆರಡು ವರ್ಷಗಳಿಂದ ನಮ್ಮ ಜಿಲೆಯಲ್ಲಿ ಹುಟ್ಟಿ ದೇಶ ಸರ್ವತ್ರ ಪ್ರಸಿದ್ಧವಾಗಿ ವ್ಯಾಪಾರ ಕ್ಷೇತ್ರದಲ್ಲಿ ಕೀರ್ತಿಶಾಲಿಯಾದೀ ಸಂಸ್ಥೆಯ ಅಭಿವೃದ್ಧಿ ಕಾರ್ಯಗಳನ್ನು ಪರಿಶೀಲಿಸಲು ನಾವು ಸಂತೋಷಗೊಂಡಿದ್ದೇವೆ ಈ ವರ್ಷದಲ್ಲಿ ರೂ 9,12,500ರ ಪ್ರೊಪೋಸಲ್ ದೊರೆತಿದೆ ಇವುಗಳಲ್ಲಿ 517ರಷ್ಟು ರೂ 7,51,850ರ ಪೋಲಿಸಿ ಪಡೆದಿವೆ ಹೊಸ ವಹಿವಾಟಿನ ಸಂಖ್ಯೆಯು ಕಳೆದ ವರ್ಷಕ್ಕಿಂತ ರೂ. 1,07,675ರಷ್ಟು ಅಧಿಕವನ್ನು ಸೂಚಿಸುತ್ತದೆ ಪ್ರೀಮಿಯಮ್, ಇಂಟರೆಸ್ಟ್ ಮತ್ತು ಇತರ ದಾರಿಗಳಿಂದೊದಗಿ ಲಾಭ ರೂ 1,08,659-8-3ರಷ್ಟಿದೆ ಖರ್ಚು ಕಳೆದ ವರ್ಷಕ್ಕಿಂತ ಕಡಿಮೆಯಿದೆ ಈ ವರ್ಷದ ಕ್ಲೈಮ್‌ಗಳು ರೂ 16,183-8-0 ಇವುಗಳೊ 13,643-8-0ರಷ್ಟು ಮರಣದಿಂದ ಮತ್ತು ರೂ. 2,540 ಪ್ರಾಯಕ್ಕೆ ಬಂದಿರುವುದರಿಂದ 1941ನೆಯ ವರ್ಷವು ಯುದ್ಧ ಕೋಲಾಹಲದ ಕಾಲವಾದರೂ ವಹಿವಾಟಿನಲ್ಲಿ ಇಷ್ಟೊಂದು ಅಭಿವೃದ್ಧಿ ಹೊಂದಿದ ಬಗ್ಗೆ ನಾವೀ ಕಂಪೆನಿಯ ಸಂಚಾಲಕರನ್ನು ಅಭಿನಂದಿಸುತ್ತೇವೆ. ಕರ್ನಾಟಕ ಚೀಫ್ ಏಜೆಂಟರಾಗಿ ಹುಬ್ಬಳ್ಳಿಯ ಮೆಸರ್ಸ್ ಜಿ ಎನ್ ಮಾಡಿಮನವರು ನೇಮಕರಾಗಿದ್ದಾರೆ

ಸಾದರ-ಸ್ವೀಕಾರ

ಅಂತರಂಗ—(ಯುಗಾದಿ ಸಂಚಿಕೆ) 'ಅಂತರಂಗ' ಆಕಾರದ ೧೦೦ ಪುಟಗಳು ಬೆಲೆ ೫. ೪.

ಉಡುಪಿಯ 'ಅಂತರಂಗ' ಪತ್ರಿಕೆಯು ತನ್ನ ಎಂಟನೆಯ ವರ್ಷದಲ್ಲಿ ಸಚಿತ್ರ ಲೇಖನ ಸುಂದರವಾದ ಯುಗಾದಿ ಸಂಚಿಕೆಯನ್ನೀಗ ಪ್ರಕಟಿಸಿದೆ, ಹಲವು ಹಾಸ್ಯಮಯ ಲೇಖನಗಳು, ಉತ್ತಮ ಕತೆಗಳು, ಶ್ರೇಷ್ಠ ಕವಿತೆಗಳೂ ಕೂಡಿದ್ದು ಪತ್ರಿಕೆ ಚಿತ್ರಮಯವಾಗಿ, ಸುಂದರ ಅಚ್ಚುಕಟ್ಟುಳ್ಳದ್ದಾಗಿ ವಾಚನೀಯವೂ ಮನೋಹರವೂ ಆಗಿದೆ. ಶ್ರೀಗಳಾದ ಶಿವರಾಮ ಕಾರಂತ, ಎ. ಬಿ ಶೆಟ್ಟಿ, ಎಸ್. ಎಂ ಕುಲಕರ್ಣಿ, ಕೊರಡ್ಕಲ್ ಶ್ರೀನಿವಾಸರಾವ್, ವೆಂಕಟರಾಜ, ಕೆ. ಕೃಷ್ಣರಾವ್, ಕು. ಶಿ. ರಾವ್, ಕೆ ಕೆ. ಶೆಟ್ಟಿ, ಕಲ್ಯಾಣಮ್ಮ, ಲೀಲಾಬಾಯಿ ಸರಸ್ವತೀ ಬಾಯಿ ಮೊದಲಾದವರ ಲೇಖನಗಳು ತುಂಬಿವೆ. ಯುದ್ಧದ ದೆಸೆಯಿಂದ ಪತ್ರಿಕಾಸಂಚಾಲನ ಕಾರ್ಯವು ಕಷ್ಟತರವಾಗಿರುವೀ ಕಾಲದಲ್ಲಿ ಯೂ ಅಂತರಂಗವು ಇಂತಹ ಸಾಹಸವನ್ನು ಕೈಕೊಂಡು ವಾಚಕರನ್ನು ಆನಂದಗೊಳಿಸುತ್ತಿರುವುದು ವಿಶೇಷ ಅಭಿನಂದನೀಯವಿದೆ.

ಮದ್ರಾಸಿನಿಂದ ಸರಕಾರದ ಕಚೇರಿ ಸ್ಥಳಾಂತರ!

ಸಿಲೋನಿನ ಹತ್ತಿರ ಜಪಾನು ಹಡಗ ಸಂಚಾರ

ವಿಚಿ ಸರಕಾರದ ಬದಲಾವಣೆ

ಮದ್ರಾಸಿನಿಂದ ಸೆಕ್ರಟರಿಯೇಟ್ ಸ್ಥಳಾಂತರ

ಮದ್ರಾಸು ನಗರದಿಂದ ಮುಖ್ಯ ಕಚೇರಿ ಸೆಕ್ರಟರಿಯೇಟನ್ನು ಮದನಪಳ್ಳಿಗೆ ಸ್ಥಳಾಂತರಿಸಿರುವರು. ಸರಕಾರದ ಅಮುಖ್ಯ ಕಚೇರಿಗಳನ್ನು ಮೊದಲೇ ಉದಕ ಮಂಡಲಕ್ಕೆ ಸಾಗಿಸಲಾಗಿದೆ. ಬೇರೆ ಬೇರೆ ಖಾತೆಗಳನ್ನು ಬೇರೆಬೇರೆ ಸ್ಥಳಗಳಿಗೆ ಸಾಗಿಸುವರು. ಗವರ್ನರರೇ ಮೊದಲಾದವರು ನಗರ ಬಿಟ್ಟುಹೋಗಿಲ್ಲವಂತೆ.

ಮದ್ರಾಸಿನಲ್ಲಿರುವ ಬೇಂಕುಗಳು ತಮ್ಮ ಕಚೇರಿಯನ್ನು ಬೇರೆ ಕಡೆಗೆ ಸ್ಥಳಾಂತರಿಸುವುದಕ್ಕಾಗಿ ಸರಕಾರದವರು ಎಪ್ರಿಲ್ ೧೪ನ್ನು ಸಾರ್ವಜನಿಕ ರಜೆಯನಾಗಿ ಪ್ರಕಟಿಸಿರುವರು. ಕಳೆದ ಮಂಗಳವಾರ ಮದ್ರಾಸಿನಲ್ಲಿ ವಿಮಾನ ದ್ಥಾಳಿಯ ಸೂಚನೆಕೊಟ್ಟಿರುವುದಂದಿನಿಂದ ತಾ. ೧೪ರ ತನಕ ೧೪೦,೦೦೦ ಜನರು ಮದ್ರಾಸು ಬಿಟ್ಟುಹೋದರು.

ಎಂ. ಎಸ್. ಎಂ. ರೈಲ್ವೆ ಕಂಪೆನಿ ಸ್ಥಳಾಂತರ

ಮದ್ರಾಸು ಮತ್ತು ಸದರ್ನ್ ಮರಾಟ ರೈಲ್ವೆ ಕಂಪೆನಿಯ ಮುಖ್ಯ ಕಚೇರಿ ಮದ್ರಾಸಿನಲ್ಲಿ ಮುಚ್ಚಲ್ಪಟ್ಟು, ಏಜಂಟರ ಕಚೇರಿ ಹುಬ್ಬಳ್ಳಿಗೂ, ಕಮರ್ಶಿಯಲ್ ಮೇನೇಜರ್ ಕಚೇರಿ ಗುಂಟಕಲ್ಲಿಗೂ ಲೆಕ್ಕಪತ್ರಗಳ ಕಚೇರಿ ಬಳ್ಳಾರಿಗೂ ಸಾಗಿಸಲಾಗಿದೆ.

ವಿಚಿ ಸರಕಾರದಲ್ಲಿ ಬದಲಾವಣೆ

ಲಾವೆಲರು ಉಪ ಪ್ರಧಾನರು

ಫ್ರಾನ್ಸಿನಲ್ಲಿ ಪಿಟೇನರು, ಹೊಸ ಮಂತ್ರಿಮಂಡಲವನ್ನು ಸ್ಥಾಪಿಸಿಕೊಂಡಿದ್ದಾರೆ. ಹಿಟ್ಲರರ ಮಿತ್ರ, ಲಾವೆಲರು ಉಪಪ್ರಧಾನರಾಗಿರುವರು. ಇದುವರೆಗೆ ಉಪಪ್ರಧಾನರಾಗಿದ್ದ ಡಾರ್ಲಾನರು ಯುದ್ಧ ಬಲಗಳ ಮುಖ್ಯಾಧಿಕಾರಿಯಾದರೂ ಮಂತ್ರಿಮಂಡಲದಲ್ಲಿ ಅವರಿಗೆ ಸ್ಥಾನವಿಲ್ಲ.

ರಶ್ಯ ಜಪಾನನ್ನು ಎಚ್ಚರಿಸುತ್ತದೆ

ರಶ್ಯವು ಜಪಾನು ತಟಸ್ಥ ಒಪ್ಪಂದದಂತೆ ನಡೆದುಕೊಳ್ಳಬೇಕೆಂದು ಎಚ್ಚರಿಸಿದೆ.

ಕ್ರಿಪ್ಸರು ಹಿಂತೆರಳಿದರು

ತಾ. ೧೪ರಂದು ಕ್ರಿಪ್ಸರು ಕರಾಚಿಯಿಂದ ವಿಮಾನವೇರಿ ತಮ್ಮ ಪರಿವಾರ ಸಮೇತ ಇಂಗ್ಲೆಂಡಿಗೆ ಹೊರಟುಹೋದರು.

ಲೇರಾಬಾಲಾಗಳಿಗೆ ಬಾಂಬು

ನ್ಯೂಗಿನಿಯ ಲೇ ಬುಲ್‌ಗಳಿಗೆ ಜಪಾನರು ಬಾಂಬು ಹಾಕಿರುವರು.

ಚಿಯಾಂಗ್ ಬರ್ಮಾ ಸಂದರ್ಶನ

ಮಾರ್ಶಲ್ ಚಿಯಾಂಗರು ಬರ್ಮವನ್ನು ಸಂದರ್ಶಿಸಿದ್ದಾರೆ.

ಕೊರಿಜಿಡಾರಿಗೆ ಧಾಳಿ

ಜಪಾನರು ಕೊರಿಜಡಾರಿಗೆ ಧಾಳಿ ಮಾಡಿದ್ದರು. ಮನಿಲಾ ಅಖಾತದಲ್ಲಿ ಶತ್ರು ಹಡಗವು ಮುಳುಗಿಸಲ್ಪಟ್ಟಿತು.

ಕ್ರಿಪ್ಸರ ರಾಯಭಾರದ ವಿಫಲತೆಗಾಗಿ ವಿದೇಶದ ಅಭಿಪ್ರಾಯ

ಕ್ರಿಪ್ಸರ ರಾಯಭಾರವು ವಿಫಲವಾದ ವಿಷಯದಲ್ಲಿ ಬ್ರಿಟಿಷ್ ಪತ್ರಿಕೆಗಳು ಕಾಂಗ್ರೆಸನ್ನು ದೂರುತ್ತವೆ. ಚೈನವು ಭಾರತದ ಬಿಕ್ಕಟ್ಟು ಬಗೆಹರಿಸುವ ವಿಚಾರ ಇನ್ನೂ ಬಹಳ ಆತುರವಾಗಿದೆ. ಅಮೇರಿಕದಲ್ಲಿ ನಿರಾಶೆಯುಂಟಾಗಿದೆ. ಮಿತ್ರಪಕ್ಷದವರು ಇನ್ನಾದರೂ ಆ ಕುರಿತು ಪ್ರಯತ್ನ ಮಾಡಬೇಕಾಗಿ ಕೆಲವು ಕಡೆಗಳಿಂದ ಸೂಚನೆ ಬಂದಿದೆ.

ಸಿಲೋನ್ ಕರಾವಳಿಯಲ್ಲಿ ಬ್ರಿಟಿಷ್ ಹಡಗ ಮುಳುಗಿತು

ಹರ್ಮಿಸ್ ಎಂಬ ಬ್ರಿಟಿಷ್ ವಿಮಾನವಾಹಕ ಹಡಗವು ಸಿಲೋನ್ ಕರಾವಳಿಯಲ್ಲಿ ಶತ್ರುಗಳಿಂದ ಮುಳುಗಿಸಲ್ಪಟ್ಟಿತು. ಯುದ್ಧ ಪ್ರಾರಂಭವಾದಂದಿನಿಂದ, ಕರೇಜಿಯಸ್, ಫ್ಯೂರಿಯಸ್, ಆರ್ಕ್‌ರಾಯಲ್, ಹರ್ಮಿಸ್ ಎಂಬೀ ನಾಲ್ಕು ವಿಮಾನವಾಹಕಗಳು ಮುಳುಗಿಸಲ್ಪಟ್ಟವು. ಯುದ್ಧ ಸುರುವಾದಾಗ ೬ ವಿಮಾನವಾಹಕಗಳಿದ್ದುವು. ಈಗ ೪ ಕಟ್ಟಲಾಗುತ್ತದೆ. ತ್ರಿಕೋಮಾರಿಯಲ್ಲಿ ಎರಡು ಕ್ರೂಜರುಗಳನ್ನು ಮುಳುಗಿಸಲಾಗಿದೆಯೆಂದು ಕೇಳುತ್ತದೆ. ಜಪಾನು ಹಿಂದೀ ಸಾಗರಕ್ಕೆ ತನ್ನ ವಿಮಾನಗಳನ್ನು ಹೇಗೆ ಕಳುಹಿಸುತ್ತಿದೆಯೋ ತಿಳಿಯದಾಗಿದೆ. ಅದರ ಹತ್ತಿರ ೮ ವಿಮಾನವಾಹಕಗಳಿದ್ದುವು.

ಕ್ರಿಪ್ಸರು ತಿರುಗಿ ಬರುವರೆ?

ಕ್ರಿಪ್ಸರು ಸಂಧಾನ ನಡೆಸಲು ತಿರುಗಿಯೂ ಇಲ್ಲಿ ಬರುವರೇ ಎಂದು ಒಂದು ಊಹೆಯುಂಟು. ಅದಕ್ಕೆ ಅವರೇ 'ನಾನು ತಿರುಗಿಯೂ ಬರುವೆನು,' ಎಂದು ಹೇಳಿದ ಮಾತು ಒಂದು ಆಧಾರವಾಗಿದೆ.

ಜಪಾನ್ ಮುಂದೊತ್ತುವಿಕೆ

ಇರಾವತಿ ಪ್ರದೇಶದಲ್ಲಿ ಜಪಾನರ ಮುಂದೊತ್ತುವಿಕೆ ಹೆಚ್ಚಾಗಿದೆ. ಮಾಗೆಯಂಗ್. ತಿಂಬಾಂಡವೆಂಗ್ ಕಡೆ ಅವರು ನುಗ್ಗಿದ್ದಾರೆ. ಜಪಾನರು ಇರಾವತಿ ಎಣ್ಣೆ ಗಣಿಗಳ ಕಡೆಗೆ ಅವರು ನುಗ್ಗುತ್ತಿರುವರು.

ಜಪಾನರ ಮೂರು ಯುದ್ಧ ಹಡಗಗಳು ಮತ್ತು ಐದು ವಿಮಾನ ವಾಹನಗಳು ಬಂದಿವೆ

ಕಾಮನ್ಸ್ ಸಭೆಯಲ್ಲಿ ಕೇಳಿದ ಪ್ರಶ್ನೆಗೆ ಉತ್ತರಕೊಡುತ್ತ, ಚರ್ಚಿಲರು ಸಿಲೋನಿನ ಹತ್ತಿರ ಜಪಾನರ ಮೂರು ಯುದ್ಧ ಹಡಗಗಳು ಮತ್ತು ಐದು ವಿಮಾನ ವಾಹನಗಳು ಬಂದಿವೆ ಎಂದರು. ಬ್ರಿಟಿಷ್ ವಿಮಾನಗಳು ಅವುಗಳ ಮೇಲೆ ಧಾಳಿನಡೆಸಿದವಂತೆ.

ಮಾಲ್ಟಾದ ಮೇಲೆ ಜರ್ಮನ್ ಧಾಳಿ

ಮಾಲ್ಟಾದ ಮೇಲೆ ಈ ವಾರ ಪ್ರಚಂಡ ಧಾಳಿಯಾಗಿದೆ. ೫೦೦ ವಿಮಾನಗಳು ಒಮ್ಮೆಲೇ ಹಾರಿಬಂದಿದ್ದವು. ಯುದ್ಧ ಆರಂಭವಾದ ಬಹಳ ಹೆಚ್ಚು ಧಾಳಿಗೆ ಗುರಿಯಾದ ದ್ವೀಪವೆಂದರೆ ಇದೆ.

ಮೈಸೂರು ಕಾಂಗ್ರೆಸ್ ಅಧಿವೇಶನ

ಮೈಸೂರು ಕಾಂಗ್ರೆಸಿನ ಎರಡನೆಯ ಅಧಿವೇಶನವು ಈ ವಾರ ಚೆನ್ನಪಟ್ಟಣದ ನೆಹರು ನಗರದಲ್ಲಿ ಶ್ರೀ. ದಿ. ಸುಬ್ರಹ್ಮಣ್ಯರವರ ಅಧ್ಯಕ್ಷತೆಯಲ್ಲಿ ಜರಗಿತು. ತಿರುವಾಂಕೂರು ಕಾಂಗ್ರೆಸ್ ಕಾರ್ಯಕರ್ತೆ ಶ್ರೀಮತಿ ಮಸ್ಕರೇಣಾಸ್ ಮತ್ತು ಕರ್ನಾಟಕದ ಮುಂದಾಳು ಶ್ರೀ ದಿವಾಕರರು ಆಮಂತ್ರಿಸಲ್ಪಟ್ಟು ಭಾಷಣವಿತ್ತರು. ಜವಾಬ್ದಾರಿ ಸರಕಾರದ ಅವಶ್ಯಕತೆಯ ವಿಷಯದಲ್ಲಿ ಭಾಷಣ ನಿರ್ಣಯಮಾಡಿದರೂ ಪರಿಷತ್ತಿನ ಅಂಗವಾಗಿ ಅನೇಕ ಇತರ ಚಟುವಟಿಕೆಗಳು ಇದ್ದವು.

ಜಿನ್ನರ ವರ್ತನೆ ನಿಷೇಧ

ಜಿನ್ನರು ತಮ್ಮ ಭವನಕ್ಕೆ ಪತ್ರಿಕಾ ಪ್ರತಿನಿಧಿಗಳನ್ನು ಆಮಂತ್ರಿಸಿದ್ದರು. ಸಭೆ ಜರಗುವ ಮೊದಲು ಅವರು 'ಹಿಂದೂಸ್ಥಾನ ಟೈಮ್ಸ್' ಪತ್ರಿಕೆಯ ಪ್ರತಿನಿಧಿಯನ್ನು ಹೊರಗೆ ಹೋಗಬೇಕೆಂದು ಹೇಳಿದರು. ಅವರು ತಾನು ಆಮಂತ್ರಣದಂತೆ ಬಂದಿರುವುದಾಗಿ ಹೇಳುತ್ತಾ ಹೊರಟರು. ಈ ವರ್ತನೆಯ ನಿಷೇಧವಾಗಿ ಇತರ ಹಲವು ಪತ್ರಿಕಾ ಪ್ರತಿನಿಧಿಗಳು ಸಭೆಯಿಂದ ಹೊರ ಹೊರಟರು. ಕೆಲವು ವಿದೇಶಿ ಪತ್ರಿಕಾ ಪ್ರತಿನಿಧಿಗಳು ಮಾತ್ರ ಕುಳಿತಿದ್ದರು.

ಸರ್ ಷಣ್ಮುಗಂ ಹಿಂತಿರುಗಿದರು

ಅಮೇರಿಕಕ್ಕೆ ಹೋಗಿದ್ದ ಭಾರತದ ವ್ಯಾಪಾರೀ ಶಿಷ್ಟಮಂಡಲದ ನಾಯಕರಾದ ಸರ್. ಷಣ್ಮುಗಂರವರು ತಾ. ೧೪ರಂದು ಹಿಂದೂದೇಶಕ್ಕೆ ಮರಳಿ ಬಂದರು. ಈ ಶಿಷ್ಟಮಂಡಲದ ಫಲವಾಗಿ, ಯುದ್ಧಕ್ಕೆ ಬೇಕಾದ ಸಾಧನ ತಯಾರಿ ಕಾರ್ಖಾನೆ ಭಾರತದಲ್ಲಿ ಪ್ರಾರಂಭವಾಗಬಹುದಂತೆ.

ಜಪಾನರು ನಮಗೆ ಸ್ವಾತಂತ್ರ್ಯ ಕೊಡಬರುವರೆಂದು ನಂಬಬೇಡಿ

ನೆಹರು ಹೇಳಿಕೆ

'ಸುಭಾಸಬೋಸರು ಪರದೇಶೀಯರ ಸೈನ್ಯ ತೆಗೆದುಕೊಂಡು ಬಂದರೆ ನಮಗೆ ಸ್ವಾತಂತ್ರ್ಯ ಸಿಗುವುದೆಂದು ನಂಬಬೇಡಿ; ಹಾಗೆ ಭಾವಿಸುವ ಹಿಂದೀಯರನ್ನು ನೋಡಿ ನನಗೆ ವ್ಯಸನವಾಗುತ್ತದೆ; ಜಪಾನರು ಇಲ್ಲಿಗೆ ಬರುವುದಿದ್ದರೆ ಒಂದೊ ಸಾಮ್ರಾಜ್ಯ ತೃಷೆಯಿಂದ ಇಲ್ಲವಾದರೆ ಬ್ರಿಟಿಷರೊಡನೆ ಹೋರಾಡಬೇಕೆಂಬ ಇಚ್ಛೆಯಿಂದ, ಅಲ್ಲದೆ ನಮಗೆ ಸ್ವಾತಂತ್ರ್ಯ ಕೊಡುವುದಕ್ಕಲ್ಲ' ಹೀಗೆಂದು ನೆಹರು ಹೇಳಿದರು.

ಕ್ರಿಪ್ಸರು ಸುಳ್ಳಾಡುತ್ತಾರೆಯೆ?

ಅಮೇರಿಕದ ಅಧ್ಯಕ್ಷರ ವಿಶೇಷ ಪ್ರತಿನಿಧಿ ಜಾನ್ಸನರು ಬಂದದ್ದು ಕಾಂಗ್ರೆಸಿನವರ ಕೇಳಿಕೆಯ ಪ್ರಕಾರವಾಗಿದೆಯೆಂದು ಕ್ರಿಪ್ಸರು ಹೇಳಿದ ಮಾತನ್ನು ಖಂಡಿಸಿ ಆಜಾದರೂ ನೆಹರುಗಳೂ ಒಂದು ಪ್ರಕಟಣೆ ಕೊಟ್ಟಿರುವರು. 'ನಾವು ಅವರನ್ನು ಮಧ್ಯಸ್ಥಿಕೆಗೆ ಕರೆಸಲಿಲ್ಲ. ಹೀಗೆ ಹೇಳುವುದು ನಮಗೂ ಅವರಿಗೂ ಅಪಮಾನ. ಅವರಿಗೆ ನಮ್ಮ ದೇಶದ ವ್ಯವಸ್ಥೆಯಲ್ಲಿ ಆಸಕ್ತಿಯಿತ್ತಲ್ಲದೆ ಅವರಿಗೆ ಈ ಮಾತುಕತೆಯಲ್ಲಿ ಮಧ್ಯಸ್ಥಿಕೆಯೇನೂ ಇರಲಿಲ್ಲವೆಂದು ಅವರಿಬ್ಬರೂ ತಿಳಿಸಿದ್ದಾರೆ.

ಜಾನ್ಸನರನ್ನು ಕಾಂಗ್ರೆಸು ಕರೆಯಲಿಲ್ಲ

ಕ್ರಿಪ್ಸರಿಗೆ ಆಜಾದ ನೆಹರುಗಳ ಉತ್ತರ

ಕ್ರಿಪ್ಸರು ಲಾಹೋರಿನಿಂದ ಹೊರಡುವಾಗ ಅನೇಕ ಸುಳ್ಳು ಸಂಗತಿಗಳನ್ನು ಹೇಳಿರುವುದನ್ನು ಆಜಾದರೂ ನೆಹರುಗಳು ಖಂಡಿಸಿದ್ದಾರೆ. ಕಾಂಗ್ರೆಸಿನವರು ಜಾನ್ಸರನ್ನು ಅವರಿಗೆ ಸಹಾಯ ಮಾಡಲು ಕರೆದರೆಂದು ಕ್ರಿಪ್ಸರು ಹೇಳಿದ್ದು ಯಥಾರ್ಥವಲ್ಲವೆಂದು ಆಜಾದರೂ ಮತ್ತು ನೆಹರುಗಳು ತಿಳಿಸಿದ್ದಾರೆ.

ಹೆಲಿಫಾಕ್ಸರಿಗೆ ನೆಹರುಗಳ ಉತ್ತರ

ಎರಡನೆಯವನ ಉಪದೇಶ ಬೇಡ

ಅಮೇರಿಕನರ ಕುರಿತು ನೆಹರು

'ಅಮೇರಿಕದ ವಿಷಯ ನನ್ನಲ್ಲಿ ಒಳ್ಳೆಯ ಅಭಿಪ್ರಾಯವಿದೆ. ಸದ್ಯದ ಮಹಾ ಕಾರ್ಯದಲ್ಲಿ ಅದು ಯಶಸ್ವಿಯಾಗಲಿ ಎಂದು ನನ್ನ ಹಾರೈಕೆ. ಆದರೆ ಕೆಲವು ಅಮೇರಿಕನ್ ಪತ್ರಿಕೆಗಳಲ್ಲಿ ಬಂದ ಟೀಕೆಗಳನ್ನು ನೋಡಿ ನನಗೆ ಆಶ್ಚರ್ಯವಾಗಿದೆ. ಅಮೇರಿಕನರಿಗೆ ಹಿಂದೂಸ್ಥಾನದ ವಿಷಯ ಸಾಕಷ್ಟು ಜ್ಞಾನ ಇಲ್ಲದಿರುವುದೇ ಇದರ ಕಾರಣ ಹೀಗೆಂದು ಅಮೇರಿಕನ್ ಪತ್ರಿಕೆಗಳಲ್ಲಿ ಹಿಂದೂಸ್ಥಾನದ ವಿಷಯ ಬಂದ ಟೀಕೆಯ ಕುರಿತು ನೆಹರು ಹೇಳಿಕೆಯಿತ್ತಿದ್ದಾರೆ.

'ನಮಗೆ ಹಿತವಾವುದು ಅಹಿತವಾವುದು ಎಂಬ ವಿಷಯ ಬಹುದಿನದಿಂದ ಅನೇಕರು ನಮಗೆ ಬುದ್ಧಿ ಹೇಳುತ್ತಾರೆ, ಮಾತ್ರವಲ್ಲದೆ ಕೆಲವರು ತಮ್ಮ ಉಪದೇಶ ಕೇಳದಿದ್ದರೆ ಬೆದರಿಕೆ ಹಾಕುತ್ತಾರೆ. ಮಿತ್ರರ ಉಪದೇಶ ಸ್ವಾಗತಾರ್ಹ; ಆದರೆ ನಮಗೆ ಎರಡನೆಯವರ ಉಪದೇಶ ಬೇಕಾಗಿಲ್ಲ. ಅವರ ಉಪದೇಶ ಅಥವಾ ಬೆದರಿಕೆಗಳಿಂದ ನಾವು ನಮ್ಮ ಧೋರಣವನ್ನು ಗೊತ್ತು ಮಾಡುವುದಿಲ್ಲ. ನಾವು ಯಾರಿಗೂ ಉಪದೇಶ ಮಾಡಿರೆಂದು ಬಿನ್ನವಿಸಿಲ್ಲ. ಪ್ರೆಸಿಡೆಂಟ್ ರೂಸ್‌ವೆಲ್ಟರಲ್ಲಿ ನನಗೆ ಪೂಜ್ಯ ಭಾವನೆಯಿದೆ, ಅವರಿಂದ ಮುಂದೆ ಮಹತ್ಕಾರ್ಯವಾಗಬೇಕಾಗಿದೆ. ಆದರೆ ನಮ್ಮ ಮಧ್ಯಸ್ತಿಕೆ ಮಾಡಿರೆಂದು ನಾವು ಅವರೊಡನೆ ಕೇಳಲಿಲ್ಲ. ಜವಾಬ್ದಾರಿ ನಮ್ಮದೆಂಬುದು ನಮಗೆ ಗೊತ್ತು. ನಾವು ಕಳೆದ ೫೦ ವರ್ಷಗಳಿಂದ ಬಲಾಢ್ಯ ಸಾಮ್ರಾಜ್ಯದೆದುರು ಹೋರಾಡುತ್ತೇವೆ. ಎಂಥ ಸಂಕಷ್ಟಗಳು ಬಂದರೂ ತಲೆಬಾಗಿಲ್ಲ. ನಾವು ಮುಂದೆಯೂ ಇದೇ ರೀತಿ ನಡೆಯುವೆವು. ಸ್ವಾತಂತ್ರ್ಯ ದೊರಕಿಸಿಕೊಳ್ಳಲು ನಾವು ಶಕ್ತರಾದರೆ ಅದನ್ನು ಪಡೆವೆವು; ಇಲ್ಲವಾದರೆ ಅಪಯಶಸ್ಸು ಹೊಂದುವೆವು. ಎರಡನೆಯವರ ಸಹಾಯ ನಾವು ಹಾರೈಸುವುದಿಲ್ಲ. ಯೋಗ್ಯ ಕೆಲಸದಲ್ಲಿ ಯಾರಾದರೂ ಸಹಾಯ ಮಾಡಿದರೆ ಅದನ್ನು ಸ್ವಾಗತಿಸುವೆವು. ಕರ್ನಲ್ ಜಾನ್ಸನರು ನಮ್ಮ ಮಿತ್ರರಂತೆ ಈಗ ಆಸ್ಥೆ ತೆಗೆದುಕೊಳ್ಳುವ ವಿಷಯ ಸಂತೋಷಗೊಂಡಿರುವೆವು. ಆದರೆ ನಿರ್ಣಯದ ಅಥವಾ ಮಧ್ಯಸ್ಥಿಕೆಯ ಭಾರವು ತಮ್ಮ ಮೇಲಿದೆಯೆಂದು ಅವರು ಭಾವಿಸಿದ್ದರೆ, ಅದು ಅವರಿಗೂ ಭೂಷಣವಲ್ಲ; ನಮಗೂ ಭೂಷಣವಲ್ಲ; ಲಾರ್ಡ್ ಹೆಲಿಫಾಕ್ಸರು ಹಿಂದಿನಂತೆಯೇ ನಮಗೆ ಉಪದೇಶಿಸಲು ಬಂದಿದ್ದಾರೆ; ಅವರು ನಮ್ಮ ಪರಿಚಿತರು. ಹಿಂದುಸ್ಥಾನದಲ್ಲಿ ನಾವು ಕ್ಷುದ್ರರಾಗಿರುವೆವೆಂದು ನುಡಿದಿದ್ದಾರೆ. ಇರಬಹುದು, ಆದರೆ ನಮ್ಮ ವಿಷಯ ನೀವಿಷ್ಟು ತೊಂದರೆ ತೆಗೆದುಕೊಳ್ಳುವುದೇಕೆ? ಸೂಚನೆ ಹಿಡಕೊಂಡು ನಮ್ಮಲ್ಲಿಗೆ ಬರುವುದೇಕೆ? ನಮ್ಮನ್ನು ನಮ್ಮ ಸುಖದುಃಖಗಳಿಗೆ ಬಿಟ್ಟುಬಿಡಿರಿ" ಎಂದೂ ನೆಹರು ಹೇಳಿರುವರು.

ಗಂಡಾಂತರವನ್ನೆದುರಿಸಲು ಸಿದ್ಧರಾಗಿರಿ

ನೆಹರು ಹೇಳಿಕೆ

'ಕ್ರಿಪ್ಸರ ಸಂಧಾನವು ವಿನೀ ಆಗಲಿ, ಪ್ರತಿಯೊಬ್ಬ ಹಿಂದೀಯನೂ ಗಂಡಾಂತರವನ್ನೆದುರಿಸಲು ಸಿದ್ಧನಿರಬೇಕು. ಪರದೇಶದಲ್ಲಿರುವ ಹಿಂದೀಯರೂ ತಾಯ್ನಾಡಿನ ರಕ್ಷಣೆಗೆ ಬರಬೇಕು' ಎಂದು ನೆಹರು ಹೇಳಿದ್ದಾರೆ.

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿ

ವಿಜ್ಞಾಪನೆ ಹಾಗೂ ಆಭಾರ ಮನ್ನಣೆ

ಕಳೆದ ವರುಷದಿಂದಲೂ ಪ್ರಾಂತೀಯ ಕಾಂಗ್ರೆಸ್ ಸಮಿತಿಗೆ ಹಣದ ಕೊರತೆಯು ಬಹಳ ಆಗಿ ಕಾರ್ಯವು ಕಷ್ಟಕರವಾಗಿ ಸಾಗಿದೆ. ಆದರೆ ಧಾರವಾಡ, ಹುಬ್ಬಳ್ಳಿ, ಗದಗ, ಬಾಗಲಕೋಟೆ, ಬಳ್ಳಾರಿ, ಹೊಸಪೇಟೆ, ಹಾವೇರಿ, ಬೆಳಗಾವಿ, ಮಂಗಳೂರು, ಕೊಡಗು, ಬೆಂಗಳೂರು ದಂಡು, ಹೆಬ್ಬಾಳ ಇತ್ಯಾದಿ ಸ್ಥಳಗಳಲ್ಲಿ ಕೆಲ ಮಹನೀಯರು ಕೊಡುಗೈಯಿಂದ ಹಣದ ಸಹಾಯ ಮಾಡಿರುವದರಿಂದ ತಕ್ಕಮಟ್ಟಿಗಾದರೂ ಕಾರ್ಯ ಮಾಡುವದು ಶಕ್ಯವಾಗಿದೆ. ಅವರೆಲ್ಲರಿಗೂ ಪ್ರಾಂತೀಯ ಸಮಿತಿಯು ಧನ್ಯವಾದಗಳನ್ನು ಅರ್ಪಿಸುತ್ತದೆ.

ಸದ್ಯಕ್ಕೆ ದೇಶದಲ್ಲಿ ಉಂಟಾದ ಗಂಭೀರ ಪರಿಸ್ಥಿತಿಯ ಮೂಲಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯು ವಿಶೇಷ ಕೆಲಸದ ಹೊರೆಯನ್ನು ಹೊತ್ತಿರುವದು. ಈಗಿನ ಸಂದರ್ಭಕ್ಕನುಸರಿಸಿ ಕೈಕೊಳ್ಳಲಾದ ಎಷ್ಟೋ ಮಹತ್ವದ ಕಾರ್ಯಗಳನ್ನು ಮಾಡುವುದು ಹಣದ ಅನಾನುಕೂಲತೆಯ ಮೂಲಕ ಬಹಳ ಕಠಿನವಾಗಿದೆ. ಈ ಸನ್ನಿವೇಶದಲ್ಲಿ ಸಾರ್ವಜನಿಕರು ಯಥಾಸಾಧ್ಯ ಹಣದ ಸಹಾಯ ನೀಡಿ ಕಾರ್ಯದಲ್ಲಿ ನೆರವಾಗಬೇಕೆಂದು ಚನಬಸಪ್ಪ ಅಂಬಲಿಯವರು ವಿಜ್ಞಾಪಿಸುತ್ತಾರೆ.

ಜಿಲ್ಲಾ ಸಮಾಚಾರಗಳು

ಮಂಗಳೂರು

ಬ್ಲೇಕ್ ಔಟ್

ಮಂಗಳೂರು ನಗರದಲ್ಲಿ ತಾ. ೧೩ರಿಂದ ಮೊದಲ್ಗೊಂಡು ಬ್ಲೇಕ್‌ಔಟ್ ಆರಂಭವಾಗಿದೆ. ರಾತ್ರೆಯಲ್ಲಿ ದೀಪ ಪ್ರಜ್ವಲಿಸಲಾಗುವುದಿಲ್ಲ.

"ದೇವತಾ" ಬಾಲಾಜಿಯಲ್ಲಿ

ತಾ. 18ರಿಂದ ವಾಹಿನಿಯವರ ಪ್ರಸಿದ್ಧ ತೆಲುಗು ಸಾಮಾಜಿಕ ಚಿತ್ರವಾದ 'ದೇವತಾ' ಸ್ಥಳೀಯ ಬಾಲಾಜಿ ಟಾಕೀಸಿನಲ್ಲಿ ಪ್ರದರ್ಶಿಸಲ್ಪಡುತ್ತಿರುವುದು. ವಾಹಿನಿಯವರ ಸುಮಂಗಲಿ, ದೇವತಾ ಮೊದಲಾದ ಚಿತ್ರಗಳು ಸಿನೆಮಾ ಪ್ರಿಯರ ಮೆಚ್ಚುಗೆಯನ್ನು ಪಡೆದು ಪ್ರಸಿದ್ಧವಾಗಿವೆ. ನಾಗಯ್ಯ, ಕುಮಾರಿ, ರಾಜರತ್ನಂ ಕುಮಾರ್ಯಕುಮಾರಿ ಮೊದಲಾದವರು ಇದರಲ್ಲಿ ನಟಿಸುತ್ತಾರೆ.

ವಸಂತೋತ್ಸವ

ಬಿಸೆಂಟ್ ಬಾಲಿಕಾ ಪಾಠಶಾಲೆಯಲ್ಲಿ ತಾ. ೧೦, ೧೧ರಲ್ಲು ಡಾ| ಕೇಶವ ಪೈಗಳ ಅಧ್ಯಕ್ಷತೆಯಿಂದ ವಸಂತೋತ್ಸವ ವಿವಿಧ ಕಾರ್ಯಕ್ರಮಗಳಿಂದ ಜರಗಿದವು

ಶಾಲಾವರ್ಧಂತಿ

ಬೋಳಾರ ಮುನ್ಸಿಪಲ್ ಶಾಲಾ ವರ್ಧಂತಿ ಶ್ರೀ ಬಿ ವೆಂಕಟ್ರಾಯ ಬಾಳಿಗ ಎಂ. ಎಲ್. ಎ. ಪ್ಯಾರ್‌ಮೇನ್, ಇವರ ಅಧ್ಯಕ್ಷತೆಯಿಂದ ಜರಗಿತು. ಭಾಷಣ, ಹಾಗೂ ಇತರ ಅನೇಕ ಚಟುವಟಿಕೆಗಳಿದ್ದುವು.

ಕೈರಳೀಯ ಜ್ಞಾನೋದಯ ಸಮಾಜ

ಇದರ ವಾರ್ಷಿಕ ವರ್ಧಂತಿ ಕಳೆದ ಆದಿತ್ಯವಾರ ಶ್ರೀ ಕೇಳಪ್ಪನವರ ಅಧ್ಯಕ್ಷತೆಯಿಂದ ಜರಗಿತು. ಶ್ರೀ ವಿ. ಆರ್. ನಾಯ್ನರರು ಸ್ವಾಗತ ಭಾಷಣವನ್ನಿತ್ತರು ಶ್ರೀ ಎ. ಸಿ. ದಾಮೋದರನ್ ಎಂ. ಎಲ್ ಎ ಇವರು ಆರಂಭ ಭಾಷಣ ಮಾಡಿದರು ಶ್ರೀ ಕೆ ಕುಮಾರನ್ ಧನ್ಯವಾದ ಸಮರ್ಪಿಸಿದರು ಮಂಗಳೂರಲ್ಲಿ ಸುಮಾರು ೭ ಸಾವಿರ ಮಂದಿ ಮಲೆಯಾಳಿಗಳಿದ್ದು, ಇಲ್ಲಿ ಒಂದು ಮಲೆಯಾಳೀ ಶಾಲೆ ನಡೆಯುತ್ತದೆ.

'ಭಾರತ ಮತ್ತು ಹೊಸ ಜಗತ್ತಿನ ವ್ಯವಸ್ಥೆ'

ಈ ಕುರಿತು ಕಳೆದ ಆದಿತ್ಯವಾರ ಬೆಳಗ್ಗೆ ಥಿಯಾಸಫಿಕಲ್ ಲಾಜಿನಲ್ಲಿ ಒಂದು ಚರ್ಚೆ ನಡೆಯಿತು. ಶ್ರೀಗಳಾದ ಪಾರ್ಥಸಾರಥಿ ಅಯ್ಯರ್, ಡಾ| ಕೇಶವ ಪೈ, ಎಂ ಎಸ್ ಮಾಧವರಾವ್, ಜನಾರ್ದನ ಮಲ್ಯ, ಮುಕುಂದರಾವ್, ರಂಗರಾವ್ ತಲ್ಚೇರಿಕರ್, ಕೆ ಶಿವರಾವ್, ಅನಂತರಾವ್ ಇವರು ಚರ್ಚೆಯಲ್ಲಿ ಭಾಗವಹಿಸಿದ್ದರು

ಹರಿಜನೋದ್ಧಾರ

ಈ ಕುರಿತು ಶ್ರೀ ಕೇಳಪ್ಪನ್ ಇವರು ಡಿ. ಸಿ. ಎಂ ಶಾಲೆಯಲ್ಲಿ ಕಳೆದ ಸೋಮವಾರ ಭಾಷಣಮಾಡಿದರು. ಶ್ರೀ ಯು ಗೋವಿಂದರಾಯರು ಭಾಷಣವನ್ನು ಭಾಷಾಂತರಿಸಿದರು.

ಶ್ರೀ ಗೋಕರ್ಣ ಮಠಾಧೀಶರು ವೃಂದಾವನಸ್ಥರಾದರು

ಶ್ರೀ ಗೋಕರ್ಣ ಮಠಾಧೀಶರಾದ ಶ್ರೀಮತ್ ಇಂದಿರಾಕಾಂತ ಶ್ರೀ ಪಾದಂಗಳವರು ತಾ. ೭ರಲ್ಲು ಪರ್ತಗಾಳಿ ಮಠದಲ್ಲಿ ವೃಂದಾವನಸ್ಥರಾದರು. ಶ್ರೀಗಳವರು ಆಗ ೬೦ ವರ್ಷದವರಾಗಿದ್ದರು. ಇನ್ನು ಮುಂದೆ ಇವರ ಶಿಷ್ಯ ಶ್ರೀಮತ್ ಕಮಲಾಕಾಂತ ಶ್ರೀ ಪಾದಂಗಳವರು ಮಠಾಧೀಶರಾಗುವರು.

ಹೊಸ ಕಮಿಶನರು

ಮಂಗಳೂರು ನಗರ ಸಭೆಯ ಕಮಿಶನರಾಗಿದ್ದ ಶ್ರೀ ಯಂ. ನಾರಾಯಣ ಶೆಣೈಗಳಿಗೆ ಶ್ರೀರಂಗಕ್ಕೆ ವರ್ಗವಾಗಿದೆ. ಅವರ ಸ್ಥಾನಕ್ಕೆ ಶ್ರೀ ಡಿ. ಸುಬ್ರಹ್ಮಣ್ಯ ಶೆಟ್ಟಿಯವರು ಬಂದು ಅಧಿಕಾರ ಸ್ವೀಕರಿಸಿದರು.

ಭಾರತೀಯ ವೈಮಾನಿಕ ದಳಕ್ಕೆ

ಜನರನ್ನು ಕಲೆಕ್ಟರರ ಆಫೀಸಿನಲ್ಲಿ ತಾ. ೨೩ರಂದು ಪೂರ್ವಾಹ್ನ ೯ ಗಂಟೆಗೆ ರಿಕ್ರೂಟ್ ಮಾಡುವರು ಯಂತ್ರಗಳ ಮಾಹಿತಿಯುಳ್ಳವರು, ಮೋಟಾರ್ ಡ್ರೈವರರು, ಇಲೆಕ್ಟ್ರೀಶಿಯನರು, ಕ್ಲಾರ್ಕರು ಮೊದಲಾದವರು ಬೇಕು. ಕಲೆಕ್ಟರರ ಆಫೀಸಿನಲ್ಲಿ ಹೆಚ್ಚಿನ ಮಾಹಿತಿಗಳು ಸಿಗುವುವು.

ಶಾಂತಿ ದಲ ಸಮಿತಿಯ ಸಭೆ

ಇದೇ ತಾ. ೫–೪–೧೯೪೨ರಲ್ಲಿ ಶ್ರೀ ಎ. ಬಿ. ಶೆಟ್ಟಿ, ಎಂ. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ಸೇರಿದ ಶಾಂತಿ ದಲ ಸಮಿತಿಯ ಪ್ರಥಮ ಸಭೆಯ ಕೈಕೊಳ್ಳಬೇಕಾದ ಕಾರ್ಯಗಳೇನೆಂಬುದರ ಬಗ್ಗೆ ಒಂದು ಕಾರ್ಯ ಯೋಜನೆಯನ್ನು ತಯಾರಿಸಬೇಕೆಂದು ನಿರ್ಣಯವಾಗಿ, ಆ ಸಮಿತಿಗೆ ಈ ಕೆಳಗಿನ ಮಹಾಶಯರು ಆರಿಸಲ್ಪಟ್ಟಿದ್ದರು (೧) ಶ್ರೀ. ಎ. ಬಿ. ಶೆಟ್ಟಿ, ಎಂ. ಎಲ್. ಎ.–(ಅಧ್ಯಕ್ಷರು) (೨) ಶ್ರೀ. ಕೆ. ಆರ್. ಕಾರಂತ, ಎಂ. ಎಲ್. ಎ. (೩) ಶ್ರೀ ಎಲ್. ಸಿ. ಪಾಯ್ಸ್, (೪) ಶ್ರೀ. ಎಂ. ಡಿ ಅಧಿಕಾರಿ–(ಕಾರ್ಯದರ್ಶಿ) (೫) ಶ್ರೀ. ಮಜೇಲ ಅಣ್ಣಪ್ಪ ನಾಯ್ಕರು–(ಕೋಶಾಧ್ಯಕ್ಷ) (೬) ಶ್ರೀಮತಿ ಲೀಲಾಬಾಯಿ ಏಕಾಂಬರ ರಾವ್ (೭) ಶ್ರೀ. ಯು ಶ್ರೀನಿವಾಸ ಮಲ್ಯ, (೮) ಡಾ| ಕೆ. ಆರ್ ಕಿಣಿ, ಎಮ್. ಬಿ. ಬಿ. ಎಸ್ ಈ ಸಮಿತಿಯ ಸಭೆಯು ತಾ. ೮–೪–೪೨ರಲ್ಲು ಸಾಯಂಕಾಲ ಕೊಂಗ್ರೆಸ್ ಕಚೇರಿಯಲ್ಲಿ ಸೇರಿ ಈ ಕೆಳಗಿನ ಕಾರ್ಯ ಯೋಜನೆಗಳನ್ನು ಕೈಕೊಳ್ಳಬೇಕೆಂದು ತೀರ್ಮಾನವಾಗಿದೆ.

೧. ದಲದ ಸ್ವಯಂಸೇವಕರಿಗೆ ದಲದ ಕಾರ್ಯ ಮಾಡುವುದಕ್ಕಾಗಿ ಬೇಕಾಗುವ ಶಿಕ್ಷಣ ಕೊಡುವುದು.

೨. ಆಹಾರ ಸಾಮಗ್ರಿಗಳೇ ಮೊದಲಾದ ಜೀವನಾವಶ್ಯಕ ವಸ್ತುಗಳ ಬೆಲೆಯೇರದಂತೆ ಪ್ರಚಾರ ಮೂಲಕ ಸಾಧಿಸುವುದು ಮತ್ತು ಅವಶ್ಯವಿದ್ದಲ್ಲಿ ಡಿಪೋಗಳನ್ನು ತೆರೆದು, ಕಡಿಮೆ ಧಾರಣೆಗಳಲ್ಲಿ ಜೀನಸುಗಳನ್ನು ಒದಗಿಸುವುದು

೩ ವಿಮಾನ ಧಾಳಿಯ ಕಾಲದಲ್ಲಿ ಜನರು ಹೇಗೆ ವರ್ತಿಸಬೇಕೆಂಬ ಬಗ್ಗೆ ಕರಪತ್ರಗಳ ಮೂಲಕವೂ, ಪತ್ರಿಕೆ ಹಾಗೂ ಭಾಷಣಗಳ ಮೂಲಕವೂ ಶಿಕ್ಷಣ ಕೊಡುವುದು, ಮತ್ತು ಆ ಕಾಲದಲ್ಲಿ ಮಾರ್ಗದರ್ಶನ ಮಾಡುವುದು. ಈ ಬಗ್ಗೆ ಒಂದು ಉಪ ಸಮಿತಿಯನ್ನು ರಚಿಸುವುದು

೪. ಗಾಬರಿಗೊಳಿಸುವ ಸುಳ್ಳು ಸುದ್ದಿಗಳನ್ನು ಪ್ರತೀಕರಿಸಿ ಜನರಿಗೆ ನಿಜ ಸ್ಥಿತಿಯನ್ನು ತಿಳಿಸುವುದು

೫ ಡಾಕ್ಟರರ ಸಹಕಾರ ಪಡೆದು, ಅವಶ್ಯವಿದ್ದಾಗ ಪ್ರಥಮ ಚಿಕಿತ್ಸೆ ಒದಗಿಸುವುದು.

೬. ಯುದ್ಧ ಪರಿಸ್ಥಿತಿಯಿಂದ ತಮ್ಮ ವಾಸಸ್ಥಳಗಳನ್ನು ಬಿಟ್ಟು ಬಂದವರಿಗೂ ಹೋಗುವವರಿಗೂ ಶಕ್ಯವಿದ್ದ ಸಹಾಯ ಮಾಡುವುದು.

ಈ ಮೇಲ್ಕಿನ ಕಾರ್ಯಗಳಿಗೆ (ಡಿಪೋ ವಿಷಯವನ್ನುಳಿದು) ಕನಿಷ್ಠ ರೂ. ೧೦೦೦/—ಬೇಕಾಗಬಹುದು ಇದನ್ನು ಸಾರ್ವಜನಿಕರಲ್ಲಿ ವಿನಂತಿಸಿ ಸಂಗ್ರಹಿಸಬೇಕಾಗಿ ಗೊತ್ತುಮಾಡಲಾಯಿತು.

ಪಾಣೆಮಂಗಳೂರು

ಸರ್ಕಲ್ ಪ್ರಥಮ ರಾಜಕೀಯ ಪರಿಷತ್ತು

(ಎಪ್ರಿಲ್ ತಾ. ೨೫ ಮತ್ತು ೨೬ ೧೯೪೨)

ಪಾಣೆಮಂಗಳೂರು ಸರ್ಕಲ್ ಪ್ರಥಮ ರಾಜಕೀಯ ಪರಿಷತ್ತನ್ನು ಇದೇ ತಾ. ೨೫–೪–೪೨ ಮತ್ತು ತಾ. ೨೬–೪–೪೨ನೇ ಶನಿವಾರ ರವಿವಾರಗಳಲ್ಲಿ ಪಾಣೆಮಂಗಳೂರಲ್ಲಿ ಜರಗಿಸುವುದೆಂದು ಸಂಕಲ್ಪಿಸಿದೆ. ಕರ್ನಾಟಕದ ಪ್ರಸಿದ್ಧ ಕೊಂಗ್ರೆಸ್ ಧುರೀಣರಲ್ಲೊಬ್ಬರಾದ ಶ್ರೀಮಾನ್ ರಂಗನಾಥ ರಾಮಚಂದ್ರ ದಿವಾಕರ ಇವರು ದಯವಿಟ್ಟು ಅಧ್ಯಕ್ಷತೆ ವಹಿಸಲು ಒಪ್ಪಿರುವರು. ಕಾರ್ಯಕ್ರಮ: ತಾ. 25-4-42ನೇ ಶನಿವಾರ ಅಪರಾಹ್ಣ ಘಂಟೆ 4ಕ್ಕೆ—ಅಧ್ಯಕ್ಷರ ಮೆರವಣಿಗೆ (ಬಂಟ್ವಾಳದಿಂದ ಪಾಣೆಮಂಗಳೂರಿಗೆ) ಸಾಯಂ. 5-45ಕ್ಕೆ ಧ್ವಜವಂದನೆ (ಶ್ರೀಮತಿ ಕೃಷ್ಣಾಬಾಯಿ ಪಂಜೀಕರ್ ಅವರಿಂದ) 6.15ಕ್ಕೆ ಪರಿಷತ್ತಿನ ಉದ್ಘಾಟನೆ (ಕೆ. ಆರ್. ಕಾರಂತ ಎಂ. ಎಲ್. ಎ. ಇವರಿಂದ), 7ಕ್ಕೆ ಸ್ವಾಗತ ಭಾಷಣ (ಶ್ರೀ. ಪಿ. ಮಾಧವ ಪಡಿಯಾರರಿಂದ), 7–30ಕ್ಕೆ ಅಧ್ಯಕ್ಷರ ಭಾಷಣ. (ರಾತ್ರಿ ಭೋಜನಾನಂತರ ವ್ಯಾಯಾಮ ಪ್ರದರ್ಶನ.) 'ತಾ. 26ನೇ ಆದಿತ್ಯವಾರ: ಪೂರ್ವಾಹ್ನ 8–30ಕ್ಕೆ ವಿಷಯ ನಿಯಾಮಕ ಮಂಡಲಿಯ ಸಭೆ. 10ಕ್ಕೆ ಮಹಾಸಭೆ. ಅಪರಾಹ್ನ 4ಕ್ಕೆ ಮುಖಂಡರ ಭಾಷಣಗಳು. 6ಕ್ಕೆ ಅಧ್ಯಕ್ಷರ ಉಪಸಂಹಾರ ಭಾಷಣ. (ರಾತ್ರಿ ಭೋಜನಾನಂತರ ಯಕ್ಷಗಾನ.)

ಕಾಸರಗೋಡು

ಸತ್ಕಾರ.—ಶ್ರೀ ಎ. ವಿ. ನಾರಾಯಣ ಮೇನನ್ ಅವರಿಗೆ ಗವರ್ನಮೆಂಟ್ ಸ್ಕಾಲರ್‌ಶಿಪ್ ಸಿಕ್ಕ ಕಾರಣ '೧೯೪೧' ಕ್ಲಬ್‌ನ ಮೆಂಬರರನ್ನೂ ಊರ ಇನ್ನಿತರರನ್ನೂ ಆಮಂತ್ರಿಸಿ ಒಂದು ಟೀ ಪಾರ್ಟಿ ಇತ್ತರು. ಶ್ರೀ ಎ. ಶ್ರೀನಿವಾಸ ಪೈಗಳೂ ಮಿ. ಬಾಬುರಾವ್ ಅವರೂ ಅವರ ಕುರಿತಾಗಿ ಭಾಷಣವನ್ನು ಮಾಡಿದ್ದರು.

ನೀಲೇಶ್ವರ

ಇಲ್ಲಿನ ಸಹಕಾರಿ ಸ್ಟೋರ್ಸ್ ಡೈರೆಕ್ಟರರ ಒಂದು ಸಭೆಯು ತಾ. ೫ಕ್ಕೆ ಜರಗಿ, ಸ್ಟೋರನ್ನು ೨೦–೪–೪೨ಕ್ಕೆ ತೆರೆಯುವುದೆಂತ ತೀರ್ಮಾನಿಸಲಾಯಿತು ಸಭೆಯಲ್ಲಿ ಶ್ರೀ ಎಂ ಶಿವರಾಯರು ಸ್ಟೋರಿನ ಉಪಯುಕ್ತತೆಯ ಕುರಿತು ಭಾಷಣ ಮಾಡಿದರು

ಇ. ಎಸ್ ಎಲ್. ಸಿ —ಪರೀಕ್ಷೆಗೆ ಈ ಕೇಂದ್ರದಿಂದ ೧೩೪ ವಿದ್ಯಾರ್ಥಿಗಳು ಹಾಜರಾಗಿರುವರು.

ಹೊಸದುರ್ಗ

ಇಲ್ಲಿ ಒಂದು ತಾತ್ಕಾಲಿಕ ಸರ್ಕಲ್ ಕಮಿಟಿಯನ್ನು ನಿರ್ಮಿಸಲಾಗಿದೆ ಶ್ರೀ ಎಂ ಸಿ ನಂಬಿಯಾರರು, (ಡಿ. ಬೋ ಮೆಂಬರ್) ಅಧ್ಯಕ್ಷ ಶ್ರೀ ಕೆ. ಅಚ್ಯುತ ಶೆಣೈರವರು ಕಾರ್ಯದರ್ಶಿ

ರಾಮನಗರ

ಶ್ರೀ ಕೃಷ್ಣ ವಿದ್ಯಾಲಯ --ಶ್ರೀ ಆನಂದಾಶ್ರಮದ ನೇತೃತ್ವದಲ್ಲಿ ನಡೆಸಲ್ಪಡುವ ಈ ವಿದ್ಯಾಲಯದ ಪ್ರವೇಶೋತ್ಸವವು ಎಪ್ರಿಲ್ ತಾ. ೧ರಂದು ಸದ್ಗುರು ರಾಮದಾಸ ಸ್ವಾಮಿಯವರ ೬೫ನೇ ಜನ್ಮದಿನೋತ್ಸವದೊಂದಿಗೆ ನೆರವೇರಿತು

ಈ ವಿದ್ಯಾಲಯವು ಹರಿಜನರ ಮತ್ತು ಇತರ ಬಡಜನರ ಮಕ್ಕಳಿಗೆ ಯೋಗ್ಯ ವಿದ್ಯಾಭ್ಯಾಸವನ್ನು ಕೊಡುವುದಕ್ಕಾಗಿ ಸ್ಥಾಪಿತವಾಗಿದೆಯೆಂದೂ ಇದರಲ್ಲಿ ನೂಲುವುದು, ನೆಯಿಗೆ ಮೊದಲಾದ ಕೈಗಾರಿಕೆಗಳ ಶಿಕ್ಷಣವೂ ಕೊಡಲ್ಪಡುವುದೆಂದೂ ಧರ್ಮಾರ್ಥ ಮಧ್ಯಾಹ್ನದ ಊಟವಿದೆಯೆಂದೂ ತಿಳಿದಿದೆ.

ಕಾರ್ಕಳ

ಹಿಂದೀ ಪ್ರಚಾರ

ಕಾರ್ಕಳದಿಂದ ಹಿಂದೀ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರ ಸಂಖ್ಯೆ ೪೦ರಲ್ಲಿ '೩೭'.

ಈ ತಾಲೂಕಿನಲ್ಲಿ ರಾಷ್ಟ್ರಭಾಷೆಯಾದ ಹಿಂದಿಯ ಪ್ರಚಾರ ಮಾಡುವ ಉದ್ದೇಶವನ್ನಿಟ್ಟುಕೊಂಡು ಇಲ್ಲಿ 'ಕಾರ್ಕಳ ತಾಲೂಕು ರಾಷ್ಟ್ರಭಾಷಾ ಪ್ರಚಾರ ಸಂಘ'ವೆಂಬುದು ಸ್ಥಾಪಿತವಾಗಿದೆ. ಇದಕ್ಕೆ ೧೧ ಮಂದಿಯಿಂದೊಡಗೂಡಿದ ಒಂದು ಕಾರ್ಯಕಾರೀ ಸಮಿತಿಯು ಇದೆ.

ಬ್ಲೇಕ್ ಔಟ್

ಇಲ್ಲಿಯೂ ತಾ. ೧೨ರಿಂದ ಬ್ಲೇಕ್ ಔಟಿಗೆ ಆರಂಭವಾಗಿರುವದು.

ಉಪಾಧ್ಯಾಯರ ತಿಂಗಳ ಸಭೆಯು ಶ್ರೀ. ಯು ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಕೂಡಿತು. ಬಜೆಗೋಳಿಯಲ್ಲಿ ಸಿಡಿಲು ಬಡೆದು ಇಬ್ಬರು ಮೃತರಾದರು, ಐವರಿಗೆ ಗಾಯಗಳಾಗಿವೆ. ಕಾರ್ಕಳ ರಥೋತ್ಸವವು ಇದೇ ತಾ. ೨ರ ದಿನ ನಡೆಯುವದು. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಒಂದು ಶಿಕ್ಷಣ ಕೇಂದ್ರವು ಇಲ್ಲಿ ತೆರೆಯಲ್ಪಟ್ಟಿದೆ.

ಉಡುಪಿ

ಶ್ರೀ ಶೀರೂರು ಮಠದಲ್ಲಿ ಉತ್ತರಾದಿ ಮಠದ ಸ್ವಾಮಿಗಳವರ ಆರಾಧನೆ:—ಶ್ರೀ ಮದುತ್ತರಾದಿ ಶ್ರೀ ಸತ್ಯಧ್ಯಾನ ತೀರ್ಥ ಸ್ವಾಮಿಗಳವರು ವೃಂದಾವನಸ್ಥರಾದ ಪ್ರಯುಕ್ತ ಅವರ ಹನ್ನೆರಡನೆಯ ಪುಣ್ಯದಿನವಾದ ಇದೇ ತಾ. ೪ರಂದು ಶ್ರೀ ಶೀರೂರು ಮಠದ ಶ್ರೀ ಲಕ್ಷ್ಮೀಂದ್ರ ತೀರ್ಥ ಶ್ರೀ ಪಾದಂಗಳವರು ತಮ್ಮ ಮಠದಲ್ಲಿ ಅವರ ಆರಾಧನೆ ಮಹೋತ್ಸವವನ್ನು ಮಹಾ ವೈಭವದಿಂದ ನೆರವೇರಿಸಿದರು. ಸಂಜೆ ಶೀರೂರು ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಶೀರೂರು ಮಠದ ಉಪ್ಪರಿಗೆಯಲ್ಲಿ ಕೀರ್ತಿಶೇಷ ಶ್ರೀ ಸತ್ಯಧ್ಯಾನ ತೀರ್ಥರ ಗುಣಕಥನ ಮಾಡಿ ಅವರ ನಿಧನದ ಬಗ್ಗೆ ಸಂತಾಪ ಸೂಚಿಸಲಾಯಿತು.

ಕನಕದಾಸರ ಗುಡಿಯಲ್ಲಿ ಸಭೆ

ಇತಿಹಾಸ ಪ್ರಸಿದ್ಧವಾದ ಕನಕದಾಸರ ಗುಡಿಯಲ್ಲಿ ಶ್ರೀ ಉತ್ತರಾದಿ ಮಠಾಧೀಶ್ವರರಿಂದಲೇ ಸ್ಥಾಪಿಸಲ್ಪಟ್ಟ ಚಂದ್ರಿಕಾ ಪಾಠಶಾಲೆಯಲ್ಲಿ ಶ್ರೀ ಸತ್ಯಧ್ಯಾನ ತೀರ್ಥರ ವೈಕುಂಠ ಯಾತ್ರೆಯ ದುಃಖ ಪ್ರದರ್ಶನ ಸಭೆಯು ಇದೇ ತಾ. ೩ರಂದು ಶ್ರೀ ಕಟ್ಟೆ ಶ್ರೀನಿವಾಸಾಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು.

ಹಿಂದೂಸ್ಥಾನಿ ಶಾಲಾ ಮಕ್ಕಳ ಹೆತ್ತವರ ಸಂಘ ಸ್ಥಾಪನೆ

ಮುನ್ಸಿಪಲ್ ಹಿಂದೂಸ್ಥಾನಿ ಪ್ರಾಥಮಿಕ ಶಾಲೆಯ ಮಕ್ಕಳ ಹೆತ್ತವರ ಹಾಗೂ ರಕ್ಷಕರ ಸಭೆಯೊಂದು ಇದೇ ತಾ ೫ರಂದು ಜನಾಬ್ ಎಮ್. ಡಿ. ಉಸ್ಮಾನ್ ಸಾಹೇಬರ ಅಧ್ಯಕ್ಷತೆಯಲ್ಲಿ ಸೇರಿ ರಕ್ಷಕ ಸಂಘ ಸ್ಥಾಪನೆಯಾಗಿ ೧೫ ಮಂದಿಯ ಕಾರ್ಯಕಾರಿ ಮಂಡಳಿಯ ರಚನೆಯಾಯಿತು.

ಸಿಡುಬು

ದಿನೇ ದಿನೇ ಸಿಡುಬು ರೋಗಿಗಳ ಸಂಖ್ಯೆ ಏರುತ್ತಲಿದೆ

ಫಲಿಮಾರು

ಸ್ಥಳೀಯ ಬೋ ಹಾ ಎ ಶಾಲಾ ತರ್ಕಸಂಘದ ವರ್ಧಂತ್ಯುತ್ಸವವೂ ಇ ಎಸ್. ಎಲ್. ಸಿ. ಕ್ಲಾಸಿನ ವಿದ್ಯಾರ್ಥಿಗಳ ವಿದಾಯ ಸಮಾರಂಭವು ಕಳೆದ ತಾ ೨ನೇ ಸಾಯಂ ಉಡುಪಿ ರೇಂಜಿನ ಡಿ. ಇ. ರಾದ ಶ್ರೀ ಕೆ ಸಂಜೀವ ಭಟ್ ಅವರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು.

ಕೊಡಗು

ಶ್ರೀ ರಾಮಕೃಷ್ಣ ಪರಮಹಂಸರ ಮತ್ತು ಸ್ವಾಮಿ ವಿವೇಕಾನಂದರ ಜಯಂತ್ಯುತ್ಸವ

ಇದೇ 1942ನೇ ಇಸವಿ ಎಪ್ರಿಲ್ ತಿಂಗಳು ತಾರೀಕು 25ನೇ ಶನಿವಾರ ಮೇಲ್ಕಂಡ ಉತ್ಸವವು ಪೊನ್ನಂಪೇಟೆ ಶ್ರೀ ಶಾರದಾಶ್ರಮದಲ್ಲಿ ನಡೆಸಲಾಗುತ್ತದೆಂದು ಸ್ವಾಮಿ ಪ್ರಣವೇಶಾನಂದರು ತಿಳಿಸುತ್ತಾರೆ.

ಮೈಸೂರು

ಮೈಸೂರು ಕಾಂಗ್ರೆಸ್ ಹದನೇ ಅಧಿವೇಶನವು ಚನ್ನಪಟ್ಟಣದ ಬಳಿ ನೆಹರು ನಗರದಲ್ಲಿ ತಾ. ೧೨ ಮತ್ತು ೧೩ನೇ ದಿನಗಳಲ್ಲಿ ನಡೆಯಿತು

ಧುರೀಣರ ವಿಚಾರಣೆ —ರಾಜ್ಯರಕ್ಷಾ ನಿಯಮದಂತೆ ಬಂಧಿತರಾಗಿದ್ದ, ಶ್ರೀ ಎಸ್ ರಂಗರಾಮಯ್ಯ ಮತ್ತು ಶ್ರೀ ಕೆ. ಎಸ್. ಕುಮಾರನ್ ಇವರ ವಿಚಾರಣೆ ನಡೆದು ಶ್ರೀ ರಂಗರಾಮಯ್ಯನವರಿಗೆ ೨ ತಿಂಗಳ ಕಠಿಣ ಸಜೆ ದೊರೆಯಿತು. ಶ್ರೀ ಕುಮಾರನ್ ಅವರು ಬಿಡಲ್ಪಟ್ಟಿರುವರು.

ಬೆಂಗಳೂರು

ವಸಂತ ಸಾಹಿತ್ಯೋತ್ಸವವು ಶ್ರೀ ಕೃಷ್ಣರಾಜೇಂದ್ರ ಪರಿಷನ್ಮಂದಿರದಲ್ಲಿ ಸಾಹಿತ್ಯ ಪರಿಷತ್ತಿನ ಮೈಸೂರು ಪ್ರಾಂತ ಸಮಿತಿಯ ಆಶ್ರಯದಲ್ಲಿ ತಾ. ೬ರಿಂದ ವಿಜೃಂಭಣೆಯಿಂದ ಜರಗಿತ್ತು. ಪ್ರಥಮದ ದಿನ ವಿದ್ಯಾ ಸಚಿವರಾದ ಶ್ರೀ ಡಿ. ಎಂ. ಇಸ್ಮಾಯಿಲರು ಉದ್ಘಾಟನೋತ್ಸವವನ್ನು ನೆರವೇರಿಸುತ್ತಾ ಕರ್ನಾಟಕದ ಸಂಸ್ಕೃತಿಯ ಕುರಿತು ಕನ್ನಡದಲ್ಲಿ ಭಾಷಣವಿತ್ತರು. ಶ್ರೀ ಎಂ. ವಿಶ್ವೇಶ್ವರಯ್ಯನವರ ಭಾವಚಿತ್ರ ಅನಾವರಣವೂ ಅವರಿಂದಲೇ ಆಯಿತು. ಇತರ ದಿನಗಳಲ್ಲಿ ನಾಡಿನ ಹಿರಿಯ ಸಾಹಿತಿಗಳ ಉಪನ್ಯಾಸಗಳು ಜರಗಿದುವು.

ಸಿನೆಮಾ ಪುಟ

ಕ್ರಿಪ್ಸರೇ ನಮ್ಮ ಸಿನೆಮಾ ನೋಡಿ

ಎಂದು ಪ್ರಕಾಶ ಪಿಕ್ಚರ್ಸಿನವರು ಅವರ 'ಭಾರತ್ ಮಿಲಾಪ್' ಚಿತ್ರವನ್ನು ನೋಡಲು ಸರ್ ಕ್ರಿಪ್ಸರಿಗೆ ಆಹ್ವಾನವಿತ್ತಿದ್ದರು. ಭಾರತೀಯರ ಇಂದಿನ ರಾಷ್ಟ್ರೀಯ ಆಂದೋಲನವನ್ನು ಪ್ರೇರಿಪಿಸುವ ರಾಷ್ಟ್ರೀಯತೆಯ ಸಂಪತ್ತು ಎಲ್ಲಿಂದ ಬಂತೆಂಬುದನ್ನು ನಮ್ಮೀ ಚಿತ್ರವನ್ನು ನೋಡಿ ತಿಳಿಕೊಳ್ಳಿರೆಂದು ಅವರಿಗೆ ಸಲಹೆ.

ಯುದ್ಧಕಾಲದಲ್ಲಿ ಸಿನೆಮಾ

ಶಾಂತಿಕಾಲಕ್ಕಿಂತ ಯುದ್ಧಕಾಲದಲ್ಲಿ ಸಿನೆಮಾದ ಅವಶ್ಯಕತೆ ಹೆಚ್ಚು. ಯುದ್ಧ ಕೋಲಾಹಲದಿಂದ ಕದಡಿದ ಮನಸ್ಸಿಗೆ ಶಾಂತಿಯನ್ನು ಅದು ಕೊಡುವುದು, ಯಾತನೆಯನ್ನು ಕಡಿಮೆ ಮಾಡುವುದು; ಉತ್ತಮ ಮನೋರಂಜನೆಯಾಗುವುದು ಆದ್ದರಿಂದ ಯುದ್ಧಕಾಲದಲ್ಲಿ ಸರಕಾರವು ಸಿನೆಮಾ ಪ್ರಚಾರಕ್ಕೆ ಹೆಚ್ಚಿನ ಅನುಕೂಲತೆಗಳನ್ನು ಕೊಡಬೇಕು.

ಫಿಲ್ಮ್ ಬರಗಾಲ

ಸಿನೆಮಾ ತಯಾರಿಸಲು 'ನೆಗೆಟಿವ್ ಫಿಲ್ಮ್' ಮುಖ್ಯವಾಗಿರಬೇಕು, 'ಪೋಸಿಟಿವ್ ಫಿಲ್ಮ್' ಕೂಡಾ ಅಗತ್ಯವಾಗಿದೆ. ಯುದ್ಧಕಾಲದಲ್ಲಿ ಇವುಗಳಿಗೆ ಬರಗಾಲ ಬಂದಿದೆ. ಹಿಂದೂದೇಶದಲ್ಲಿ ಈಗ ಫಿಲ್ಮ್ ತಯಾರಿಯಾಗುವುದಿಲ್ಲ. ಯುದ್ಧಕಾರಣದಿಂದ ಸಂಚಾರಾನುಕೂಲವಿಲ್ಲದೆ ಅವು ಪರದೇಶದಿಂದಲೂ ಬರುವಂತಿಲ್ಲವಾಗಿ ಒಂದು ಚಿತ್ರ ತಯಾರಿಸಿ, ಇನ್ನೊಂದು ಚಿತ್ರಕ್ಕೆ ಕೈಹಚ್ಚುವಾಗ ಮೇಲೆ ಕೆಳಗೆ ನೋಡುವಂತಾಗಿದೆ. ರಷ್ಯದಲ್ಲಿ ಫಿಲ್ಮ್ ಬಹಳವಾಗಿ ತಯಾರಾಗುತ್ತಿದೆ. ಅಲ್ಲಿಂದ ತರಿಸುವ ವ್ಯವಸ್ಥೆಯನ್ನು ಸರಕಾರದವರು ಮಾಡುವರೇ?

ಜೀವನ ನಾಟಕ, ಕನ್ನಡ ಸಿನೆಮಾ

ಈ ಚಿತ್ರವನ್ನು ಸ್ಟೂಥಿಯೇಟರ್ಸಿನ ಶ್ರೀ ರಾಹಬರು ನಿರ್ದೇಶಿಸುತ್ತಿರುವರು, ಅವರಿಗೆ ಸಹಾಯಕರಾಗಿ ಶ್ರೀ ಜಮದಗ್ನಿಯೆಂಬವರನ್ನು ಗುಬ್ಬಿ ಕಂಪೆನಿಯವರು ನೇಮಿಸಿರುವರು ಶ್ರೀ ಜಮದಗ್ನಿಯವರು ಮೂರು ಚಿತ್ರಗಳ ಕಾಲದ ಒಬ್ಬ ನಟರು. ಇದು ಕೊಯಮುತ್ತೂರಿನ ಒಂದು ಸ್ಟುಡಿಯೋದಲ್ಲಿ ನಿರ್ಮಾಣವಾಗುತ್ತಿದೆ. ಶ್ರೀಮತಿ ಶಾಂತಾಹುಬ್ಳೀಕರ್ ನಾಯಿಕಾ ಪಾತ್ರದಲ್ಲಿ, ಶ್ರೀ ಆ ನ ಕೃಷ್ಣರಾಯರು ಒಬ್ಬರು ಪಾತ್ರಧಾರಿ ಕಥಾ ಲೇಖನದಲ್ಲಿ ಅವರಿಗೆ ಶ್ರೀ ಬಿ.ಪುಟ್ಟಸ್ವಾಮಿಯವರು ಸಹಾಯಕರು.

'ಬ್ರಹ್ಮಚಾರಿ ಪಿತಾ'

ಇದು ಬ ಂಬೇ ಟಾಕೀಸಿನ ಪ್ರಸಿದ್ಧ ನಿರ್ದೇಶಕ ಆಚಾರ್ಯರ ಸ್ವಂತ ಕಂಪೆನಿಯ ಪ್ರಥಮ ಚಿತ್ರದ ಹೆಸರು ಆಚಾರ್ಯ ಪ್ರೊಡಕ್ಶನ್ ಎಂಬುದು ಅವರ ಸಂಸ್ಥೆ ಹೆಸರು. 'ಕಣ್ವಾರ್‌ಬಾಪ್' ಎಂಬುದು ಅದರ ಹೆಸರು, ಎಂದರೆ 'ಬ್ರಹ್ಮಚಾರಿ ಪಿತಾ' ಎಂದರ್ಥ ಕಿಶೋರ್ ಶಾಹು, ಪ್ರತಿಮಾ ದಾಸ್ ಗುಪ್ತ ಇವರು ಪಾತ್ರಾಭಿನಯ ಮಾಡುವರು. ಆಚಾರ್ಯ ಪ್ರೊಡಕ್ಶನಿನ ಮುಂದಿನ ಚಿತ್ರ 'ಉಲ್‌ಝನ್' ಎಂಬುದು. ಪೆರಮೌಂಟಿನ ಶಿಕೂಭಾಯಿಯವರು 'ಬ್ರಹ್ಮಚಾರೀ ಪಿತಾ' ಚಿತ್ರವನ್ನು ತಯಾರಿಸಲು ಆರಂಭಿಸಿದ್ದು ಅವಾಂತರದಿಂದ ನಿಂತು ಹೋದೀ ಚಿತ್ರವನ್ನು ಆಚಾರ್ಯರೀಗ ಕೈಕೊಂಡಿದ್ದಾರೆ.

ಅಬ್ಬಾಸರ 'ನಯಾ' ಕತೆಗಳು

ಶ್ರೀ ಕೆ. ಎ. ಅಬ್ಬಾಸರು 'ನಯಾಸಂಸಾರ್' ಕಥಾಲೇಖಕರು; ಅವರ ಇನ್ನೊಂದು ಕಥೆ 'ನಯಾ ದುನಿಯಾ', ಇದರಲ್ಲಿ ಮಜರ್ಖಾನ್, ಶೋಭನಾಸಮರ್ಥ ಇವರು ನಟಿಸುತ್ತಾರೆ. ಇನ್ನೊಂದು 'ನಯಾತರಣ್' ಎಂಬುದು. ಇದು ನವಯುಗ ಚಿತ್ರ. ಸ್ನೇಹಪ್ರಭಾ ನಟಿಸುವಳು. ಅಂತೂ ಅಬ್ಬಾಸರು ತಮ್ಮ ಕಥೆಗಳಲ್ಲಿ 'ನಯಾ' ಹೆಸರನ್ನು ಮುದ್ರೆ ಮಾಡಿದಂತಿದೆ.

'ನವಯುಗ'ದವರು ಮರಾಠಿ ಚಿತ್ರ ಮಾತ್ರ

ತಯಾರಿಸುವರೆಂದು ಸುದ್ದಿ. ಇದುವರೆಗೆ ಹಿಂದೀ ಮರಾಠೀ ಚಿತ್ರಗಳನು ಅವರು ರಚಿಸುತ್ತಿದ್ದರು. ಯುದ್ಧಕಾಲದಿಂದ 'ರಾಫಿಲ್ಮ್' ಸಿಗುವುದು ದುರ್ಲಭವಾಗಿ ಈ ವ್ಯವಸ್ಥೆ ಮಾಡಿದುವಂತೆ. ನವಯುಗದವರ ಮುಂದಿನ ಚಿತ್ರದಲ್ಲಿ ಸ್ನೇಹಪ್ರಭಾ ಪಾತ್ರವಹಿಸಬೇಕಾಗಿತ್ತು; ಆದರೆ ಈಗ ಅವರು ಬರೇ ಮರಾಠಿ ಚಿತ್ರಮಾತ್ರ ತಯಾರಿಸಲು ನಿಶ್ಚಯಿಸಿ ಅವಳ ಅಭಿನಯ ನೋಡುವ ಭಾಗ್ಯ ಇಲ್ಲವಾಯಿತು.

"ಮದ್ರಾಸು ಸುಟ್ಟು ಹೋಗಬಾರದು"

ಎಂಬ ವಿಮಾನ ಧಾಳಿ ಎಚ್ಚರಿಕೆಯ ಚಿತ್ರವೊಂದನ್ನು ಎ. ಆರ್. ಪಿ ಸಂಸ್ಥೆಯವರು ರಚಿಸಿರುವರು ಮದ್ರಾಸಿಗೆ ಕಾಲ್ಪನಿಕ ಧಾಳಿಯು ಒಂದು ಘಟನೆಯಿದ್ದು, ಧಾಳಿಯಾದರೂ ಜನರು ಯಾವ ಯಾವ ರೀತಿಗಳಲ್ಲಿ ವರ್ತಿಸಬೇಕೆಂದು ಇದರಲ್ಲಿ ಶಿಕ್ಷಣ ಸಿಗುವುದು.

ನ್ಯೂಥಿಯೇಟರ್ಸ್ ಲಕ್ನೋಗೆ?

ಯುದ್ಧದ ಭೀತಿಯಿಂದ ನ್ಯೂಥಿಯೇಟರ್ಸ್ ಕಂಪೆನಿಯವರು ತಮ್ಮ ಕೇಂದ್ರವನ್ನು ಕಲ್ಕತ್ತದಿಂದ ಲಕ್ನೋಗೆ ಒಯ್ಯುವರೆಂದು ಸುದ್ದಿ. 'ಸೌಗಂಧ' ಚಿತ್ರವನ್ನೀಗ ಹೇಮಚಂದ್ರರು ಕಲ್ಕತ್ತ ಸ್ಟುಡಿಯೋದಲ್ಲಿ ತಯಾರಿಸುತ್ತಾರೆ. ಭಾರತಿ ಮತ್ತು ಪಹಾರಿ ಸನ್ಯಾಲ್ ಇದರಲ್ಲಿ ಪಾತ್ರವಹಿಸುವರು. ಸಾಧನಾಬೋಸ್ ಮತ್ತು ನಜಮುಲ್ ಪಾತ್ರವಹಿಸುವ 'ಮಿನಾಕ್ಷಿ' ಚಿತ್ರವನ್ನು ನಿರ್ದೇಶಕ ಮಧುಬೋಸರು ತಯಾರಿಸುತ್ತಾರೆ.

ರಾಜಮ್ಮ ತಮಿಳು ಚಿತ್ರದಲ್ಲಿ

ಕನ್ನಡ ನಟಿ ರಾಜಮ್ಮ ಒಂದು ತಮಿಳು ಚಿತ್ರದಲ್ಲಿ ಈಗ ಅಭಿನಯಿಸುತ್ತಿದ್ದಾಳೆ.

ಲೀಲಾದೇಸಾಯಿ ಹಾಡಲಾರಳೆ?

ಲೀಲಾದೇಸಾಯಿ ಅಭಿನಯಿಸಿದ ದುಶ್ಮನ್ ಚಿತ್ರದ ಬಂಗಾಳೀ ಭಾಷಾಂತರ ಜೀವನ್ ಮರಣ್‌ವು ಪ್ರದರ್ಶಿತವಾದ ಸಮಯದಲ್ಲಿ, ಆಕೆಯ ಗೌರವಾರ್ಥ ಒಬ್ಬ ಮಹನೀಯರು ಒಂದು ಸತ್ಕಾರಕೂಟವನ್ನೇರ್ಪಡಿಸಿದರು, ಆ ಕೂಟದಲ್ಲಿ ಲೀಲಾದೇಸಾಯಿಯನ್ನು ಹಾಡಬೇಕೆಂದು ಅನೇಕರು ಒತ್ತಾಯಪಡಿಸಿದರು; ಲೀಲಾ ಹಾಡಲಾರೆನೆಂದಳು; ಆದರೆ ಆಕೆ ಹಾಡಲಾರಳೆಂದು ಯಾರೂ ನಂಬಲಿಲ್ಲ; ಆಕೆಗೆ ಕಂಠನೋವು, ಶೀತಬಾಧೆಯೇನೋ ಇರಬೇಕೆಂದೇ ಎಲ್ಲರೂ ಒಗೆದರು. ಏಕೆಂದರೆ ಜೀವನ್‌ಮರಣ್‌ನಲ್ಲಿ ಆಕೆಯ ಹಾಡನ್ನು ಕೇಳಿ ಇಡೀ ನಗರವೇ ಮರುಳಾಗಿತ್ತು.

ಪ್ರಭಾತ ಸ್ಟುಡಿಯೋ

ದಲ್ಲಿ ಈಗ ಚುರುಕಿನ ಕೆಲಸ ನಡೆಯುತ್ತಿದೆ ರಾಜಾನೆನೆಯವರು ಎರಡು ಚಿತ್ರಗಳನ್ನು ತಯಾರಿಸುತ್ತಿದ್ದಾರೆ. ಅವರಲ್ಲಿ ಒಂದು ಸಾಮಾಜಿಕ, ಶ್ರೀ ಕಾಕ್ಯಪರ ಕಥೆಯನ್ನು ಆಧರಿಸಿರುವುದು' ಇನ್ನೊಂದು ಜೀವನಕಥೆ 'ರಾಮಶಾಸ್ತ್ರಿ ಪ್ರಭುನೆ' ಎಂಬುದು. ಶಾಂತಾರಾಮರು ಬಿಟ್ಟು ಹೋದ ಮೇಲೂ ಪ್ರಭಾತದ ಕೀರ್ತಿಯನ್ನು ಈ ಚಿತ್ರಗಳು ಪುನಃ ಬೆಳಗುವವೋ ನೋಡಬೇಕು.

ಅದ್ಭುತ ಪೌರಾಣಿಕ ಚಿತ್ರ ಬೇಡ

ಜಯಕರರ ಅಭಿಪ್ರಾಯ

"ಅದ್ಭುತಗಳನ್ನು ತೋರಿಸುವ ಪೌರಾಣಿಕ ಚಿತ್ರಗಳನ್ನು ಸಿನೆಮಾ ನಿರ್ಮಾಪಕರು ಸೃಷ್ಟಿಸಬಾರದು, ಒಂದು ವೇಳೆ ಪೌರಾಣಿಕ ಚಿತ್ರಗಳನ್ನು ನಿರ್ಮಿಸುವುದಾದರೂ, ಆ ಚಿತ್ರಗತ ಕಥಾವಸ್ತುವು ಈಗಣ ಲೋಕದಿಂದ ಅನುಕರಿಸಲು ಸಾಧ್ಯವಾದಂತಹವುಗಳಿರಬೇಕು, ನಮ್ಮ ಧೀರ ಐತಿಹಾಸಿಕ ಕಥೆಗಳನ್ನು ಚಿತ್ರಿಸಬಹುದು, ಎಲ್ಲದಕ್ಕಿಂತಲೂ ಹೆಚ್ಚು ಇಂದಿನ ಜನಾಂಗವನ್ನು ಚುರುಕುಗೊಳಿಸುವ ಸಂಸ್ಕಾರಪೂರ್ಣವಾಗಿ ಮಾಡುವ ಸಿನೆಮಾಗಳನ್ನೇ ಮಾಡಬೇಕು" ಎಂದು ಡಾ। ಜಯಕರರ ಅಭಿಪ್ರಾಯ.

ಭಕ್ತ ಪೋತನಾ

'ದೇವತಾ' ಮೊದಲಾದ ಪ್ರಸಿದ್ಧ ಚಿತ್ರಗಳನ್ನು ತಯಾರಿಸಿದ ವಾಹಿನಿಯವರ 'ಭಕ್ತ ಪೋತನಾ' ಚಿತ್ರವು ಪೂರ್ಣವಾಗಿದೆ. ನಾಗಯ್ಯನು ಮುಖ್ಯ ಪಾತ್ರದಲ್ಲಿ, ಕೆ. ವಿ. ರೆಡ್ಡಿ ನಿರ್ದೇಶಕ, ರಮಾನಾಥ್ ಫೋಟೋಗ್ರಫಿ

ಗಾಯಗಳಲ್ಲಿರುವ ಹೊಲಸು ವಿಷಕಾರಿಯಾಗಿ ಪರಿಣಮಿಸಬಹುದು

ಸೂಜಿಯ ಕಣ್ಣು ಒಂದು ಚುಚ್ಚುವಿಕೆಯೂ ಭಯಂಕರವಾದ ಗಾಯ—ಎರಡೂ ಒಂದೇ ಸಮಾನ ಅಂಥಾ ಚಿಕ್ಕ ದೊಡ್ಡ ಗಾಯಗಳಲ್ಲಿರಬಹುದಾದ ವಿಷಕಾರಿ ಕ್ರಿಮಿಗಳನ್ನು ನಾಶಮಾಡಲು ಕೂಡಲೆ ವಿಷಹಾರಿ ಔಷಧಿಯನ್ನು ಹಾಗಿಸದಿದ್ದರೆ ಭಯಂಕರವಾದ ಹಾನಿಯು ದೊರೆಬಹುದು. ಅಂಥಾ ಗಾಯಗಳನ್ನು ಗಮನಿಸದಿದ್ದರೆ ಅಂಗಾಂಗಗಳಿಗೆ ಹಾನಿಯಾಗುವುದು ಮಾತ್ರವಲ್ಲದೆ ಜೀವಕ್ಕೂ ಕೆಡುಕುಂಟು. ಹಾಗಾದರೆ ಇಲ್ಲದ ಸಂಕಷ್ಟಗಳನ್ನು ಯಾಕೆ ಅನುಭವಿಸಬೇಕು? ಇಂಥ ಬಾಧೆಗಳನ್ನು ಬರಗೊಡದಂತೆ ಮಾಡಲು ಉತ್ತಮವಾದುದೆಂದರೆ ಕುಟ್ಟಿಕೂರಾ ಮುಲಾಮು (cuticura ointment) ಕುಟಿಕೂರಾ (cuticura) ಮುಲಾಮು ಹಾಗಿಸಿದ ಭಾಗದ ಕಡೆಗಳು ವಾಸಿಸುವುದಿಲ್ಲ ಒಂದೂ ಲೋಪವಿಲ್ಲದ ಇಂಥಾ ರಕ್ಷಣೆಯ ಔಷಧಿಯನ್ನು ಉಪಯೋಗಿಸಿದರೆ ಗಾಯಗಳಲ್ಲಿ ರಸಿಗೆಯಾದೀತೆಂಬ ಭಯವೇ ಇರುವುದಿಲ್ಲ.

ಗಜ್ಜಿ, ಗಾಯ, ವ್ರಣ, ಕುರು, ಹುಣ್ಣು, ಚರ್ಮರೋಗ ಮುದ್ವಣ, ವಿಷಕಾರಿ ಗಾಯ, ಬೆಂಕಿಯ ಹುಣ್ಣು ಮೊದಲಾದ ಚರ್ಮರೋಗಗಳನ್ನು ನಾಶಮಾಡಲು ಕುಟಿಕೂರಾ ಮುಲಾಮನ್ನು (cuticura ointment) ಉಪಯೋಗಿಸಿರಿ

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡತಕ್ಕದೆ.

ಕುಟಿಕೂರಾ ಮುಲಾಮು

CUTICURA OINTMENT

ಡೋಂಗರ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ರೈಲು ಬಂಡಿಗಳ ಸಮಯ

ಇದೇ ಜುಲೈ ತಾ. 1ರಿಂದ ವ್ಯತ್ಯಾಸವಾದ ರೈಲು ಬಂಡಿಗಳ ಸಮಯಗಳು ಈ ಕೆಳಗಿನಂತಿವೆ—

ಗಾಡಿಗಳು	ಹೊರಡುವ ಗಂಟೆ	ತಲ್ಪುವ ಗಂಟೆ
ಗೂಡ್ಸ ಬಂಡಿ	6 48 ಬೆಳಿಗ್ಗೆ	7.50 ರಾತ್ರಿ
ಮಲಬಾರು ಎಕ್ಸ್‌ಪ್ರೆಸ್ (ಮೈಲ್)	9.5 ಬೆಳಿಗ್ಗೆ	5.15 ಸಾಯಂ.
ಜಾಲಾರ್ ಪೇಟೆ ಪೆಸೆಂಜರ್	12.0 ಮಧ್ಯಾಹ್ನ	2.55 ಸಾಯಂ.
ಕಣ್ಣಾನೂರು ವರೆಗೆ	5·52 ಸಾಯಂ.	9·40 ಪೂರ್ವಾಹ್ನ

ನಂಬಿ ನಂಬಿ ತೆಗೆದುಕೊಳ್ಳಲು

ದಮ್ಮಿನ ಮೇಲೆ ಒಂದೇ ಉಪಾಯ

ಮನೋಹರ ಶ್ವಾಸಹಾರಿ

ವಿಚಿತ್ರ ಪ್ರಪಂಚ

ಆರು ತಿಂಗಳ ತನಕ ಆತನನ್ನು ಜೀವಂತವಾಗಿ ಮಣ್ಣಿನಡಿಯಲ್ಲಿ ಹೂಳಿದಿಟ್ಟರು!

ಆಧುನಿಕ ಕಾಲದ ಮಹಾಯೋಗಿ!

ಲಕ್ಷಾಂತರ ಮಂದಿ ನೋಡಿದ್ದಾರೆ!

ಕಾಶೀ ವಿಶ್ವವಿದ್ಯಾಲಯದ ತತ್ವ ಶಾಸ್ತ್ರದ ಅಧ್ಯಾಪಕರಾದ ಡಾ। ಎ. ಎಲ್ ಆತ್ರೇಯವರು ಒಂದು ಲೇಖನ ಬರೆಯುತ್ತಾ, ಪೂರ್ವ ಸನ್ಯಾಸಿಯು ಮಾಡಿದ ಸಮಾಧಿಯ ವಿಷಯವನ್ನು ಈ ರೀತಿ ತಿಳಿಸುತ್ತಾರೆ;

"ಹಮಿದ್ ಬೇ ಎಂಬ ಒಬ್ಬ ಇಜಿಪ್ತಿನ ಫಕೀರನು 1927ನೆಯ ಇಸವಿ ಜನವರಿ 28 ರಂದು ಅನೇಕ ಮಂದಿ ಕಣ್ಣಾರೆ ನೋಡುತ್ತಿದ್ದಂತೆ ಮಣ್ಣಿನೊಳಗೆ ಜೀವಂತ ಹುಗಿದು ಕೂತನು! ಅದನ್ನು ಬಹಳ ಅಧ್ಭುತವೆಂದು ಹೇಳಲಾಗಿತ್ತು। ಆದರೆ ಬ್ರಹ್ಮಚಾರಿ/ ರಾಮಸ್ವರೂಪರೆಂಬ ಇನ್ನೊಬ್ಬ ಯೋಗಿಯ ಕಥೆ ಅದಕ್ಕಿಂತ ವಿಶೇಷದ್ದಾಗಿ ಬ್ರಹ್ಮಚಾರೀ ರಾ ಮ ಸ್ವ ರೂ ಪ ರು ಮಣ್ಣಿನಡಿಯಲ್ಲಿ ಹುಗಿದಿಡಲ್ಪಟ್ಟು, ಆಹಾರ ವಾಯು ಸಂಪರ್ಕವಿಲ್ಲದೆ, ಮೇಲೆ ಕಲ್ಲು ಸಿಮೆಂಟುಗಳಿಂದ ನೆಲ ಭದ್ರಮಾಡಲ್ಪಟ್ಟಲ್ಲಿ ಆರು ತಿಂಗಳವರೆಗೆ ಇದ್ದರು! ಇದು 1941ನೆಯ ಇಸವಿ ಸಪ್ಟಂಬರ ತಿಂಗಳಲ್ಲಿ ನಡೆಯಿತು ನಾನು ಸ್ವತ ಇವನ್ನು ಪರೀಕ್ಷಿಸಿದೆನು, ಯೋಗಿ ಸಮಾಧಿಗೆ ಹೊಕ್ಕದ್ದು ನನ್ನೆದುರು, ಅದನ್ನು ಮುಚ್ಚಿದ್ದು ನನ್ನೆದುರು, ಆ ಮೇಲೆ ಆರು ತಿಂಗಳ ಮೇಲೆ ಸಾರ್ವಜನಿಕರ ಸಮ್ಮುಖದಲ್ಲಿಯೇ ಅದು ಒಡೆಯಲ್ಪಟ್ಟಿತು ಅದನ್ನು ನೋಡಲು ಲಕ್ಷಾಂತರ ಮಂದಿ ಸೇರಿದ್ದರು 1942 ಮಾರ್ಚ್ ತಿಂಗಳಲ್ಲಿ ಅದು ತೆರೆಯಲ್ಪಟ್ಟಿತು. ಸಮಾಧಿಯನ್ನು ಬಹಳ ಜಾಗ್ರತೆಯಿಂದ ಒಡೆಯಲಾಯಿತು. ಆಗ ಯೋಗಿ ಎಚ್ಚರದಲ್ಲಿದ್ದರು. ವಸ್ತ್ರಾದಿಗಳು ಹಳತಾಗಿ ಹರಿದುಹೋಗಿದ್ದುವು, ಇರುವೆ ತಿಂದು ಬಿಟ್ಟಿತ್ತು, ಆದರೆ ಶರೀರದಲ್ಲಿ ಏನೂ ವ್ಯತ್ಯಾಸವಾಗಿರಲಿಲ್ಲ ಇಡೀ ಜನತಾ ವೃಂದಕ್ಕೆ ಅವರು ಸಂತೋಷದಿಂದ ನಮಸ್ಕರಿಸಿದರು. 25 ಗಜ ದಾರಿ ನಡೆದು ಹೋಗಬಹುದೆಂದು ಅವರು ಹೇಳಿದರೂ ನಾವು ಬಿಡಲಿಲ್ಲ

ಸಿನೆಮಾದಲ್ಲಿ ದೀರ್ಘಕಾಲ ಮುತ್ತಿಟ್ಟವರು?

ಸಿನೆಮಾಗಳಲ್ಲಿ ದೀರ್ಘಕಾಲ ಮುತ್ತಿಡುವುದರಲ್ಲಿ ಆನ್‌ಶೆರಿಡನ್ ಮತ್ತು ಜೋರ್ಜ್ ಬ್ರೆಂಟ್ ಇವರು 'ರೆಕಾರ್ಡ್' ಮಾಡಿದ್ದರು. ಆದರೆ ಇದನ್ನು ಜೇನ್ ವೈಮನ್ ಮತ್ತು ರೆಗಿಸ್ ಟೋಮಿ ಇವರು ಈಗ ಮೀರಿದ್ದಾರೆ! ಇವರು ಮೂರು ಮಿನಿಟು ಮತ್ತು ಐದು ಸೆಕುಂಡುಗಳ ವರೆಗೆ ಮುತ್ತಿಟ್ಟರು!

ಕಸಾಯಿ ಕೊಲ್ಲುವುದನ್ನು ಬಿಟ್ಟನು!

ಒಂದು ಮುದಿ ಹೋರಿಯನ್ನು ನೋಡಿ, ಕಸಾಯಿಯೊಬ್ಬನ ಹೃದಯ ಕರಗಿ, ಅದನ್ನು ಕೊಲ್ಲಲಾರದೆ, ಇನ್ನು ಮುಂದೆ ತಾನೀ ಉದ್ಯೋಗವನ್ನೇ ಮಾಡಲೊಲ್ಲೆನೆಂದು ತನ್ನ ಕೆಲಸ ತೊರೆದು ಹೋದ ವಾರ್ತೆಯೊಂದು ಬೃಂದಾವನದಿಂದ ಬಂದಿದೆ ಒಬ್ಬ ಕಸಾಯಿಯನ್ನು ಮುದಿ ಎತ್ತು ದನಗಳನ್ನು ಕೊಲ್ಲುವ ಕೆಲಸಕ್ಕೆ ನೇಮಿಸಿದ್ದರು. ಒಂದು ದಿನ ಆತನಿಗೆ ಕಡಿಯಲೊಪ್ಪಿಸಿದ ಎತ್ತು ಬಹಳ ಬಡವಾಗಿ, ದುರ್ಬಲವೂ ಮುದಿಯೂ ಆಗಿದ್ದು, ಅದರ ನೋಟದಿಂದ ಆತನ ಹೃದಯವು ಕರುಣಾರಸದಿಂದ ತುಂಬಿಹೋಯಿತು. ಹಾಗಾಗಿ ಇನ್ನು ಮುಂದೆ ತಾನು ಇಂತಹ ವೃತ್ತಿಯನ್ನೇ ಮಾಡಲಾರೆನೆಂದು ಪ್ರತಿಜ್ಞೆ ಹಾಕಿ ಆತನು ತನ್ನ ಕೆಲಸವನ್ನೇ ಬಿಟ್ಟು ಹೊರಟುಹೋದನೆಂದು ಪತ್ರಿಕಾಸುದ್ದಿಯಿಂದ ತಿಳಿದುಬಂದಿದೆ.

ವಿಜ್ಞಾನ ನವ್ಯುಗ

ಗಂಟೆಗೆ ೩೦೦ ಮೈಲು ಹಾರುವಾಗ ಫೋಟೋ

ಫೋಟೋಗ್ರಫಿಯಲ್ಲಿ ಇತ್ತೀಚೆಗೆ ಎರಡು ಮೂರು ವರ್ಷಗಳಲ್ಲಿ ಬಹಳ ಸುಧಾರಣೆ ಆಗಿದೆ. ವಿಮಾನದಲ್ಲಿ ಕುಳಿತು ಕೆಮರಾ ಹಿಡಿದು ಕೆಲಸ ಜೋರಾಗಿ ನಡೆದಿದೆ. ಪ್ರತಿ ಎರಡು ಸೆಕೆಂಡಿಗೊಂದರಂತೆ ಉತ್ತಮ ಚಿತ್ರವನ್ನು ವಿಮಾನದಲ್ಲಿ ಗಂಟೆಗೆ ೩೦೦ ಮೈಲು ವೇಗದಲ್ಲಿ ಹಾರಾಡುತ್ತಿರುವಾಗ ತೆಗೆಯುತ್ತಾರೆ ಇಂತಹ ಫೋಟೋಗ್ರಫಿಗೆ ಒಂದು ತರದ ಕನ್ನಡಿಯನ್ನು ಕಂಡುಹಿಡಿದದ್ದು ಬಹಳ ಪ್ರಯೋಜನವಾಯಿತು ಇದು ಗಟ್ಟಿ, ಬಿಳಿ ಬಣ್ಣವಿಲ್ಲದ ಧಾತುವಿನಿಂದ ಮಾಡಲ್ಪಡುವುದು ಇದಕ್ಕೆ ಸಿಲಿಕಾ ಉಪಯೋಗಿಸುವುದಿಲ್ಲ. ಆದರ ಬದಲು ಹೊಸ ಟಂಗ್‌ಸ್ಟನೆಂಬ ಧಾತುವೊಂದನ್ನು ಉಪಯೋಗಿಸಲಾಗುವುದು; ಟಿಟೇನಿಯಂ ಮತ್ತು ಟಂಟೇಲಂ ಎಂಬ ಧಾತುಗಳು ಇದಕ್ಕೆ ಸೇರಿಸಲ್ಪಡುವುವು ಇದರಿಂದ ಹಿಂದಿನ ಕನ್ನಡಿಗಿಂತ ಹೆಚ್ಚಾಗಿ ಬೆಳಕು ಬೀಳುತ್ತದೆ. ವಸ್ತುವನ್ನು ಇದು ಸ್ಪಷ್ಟವಾಗಿ ತೋರಿಸುತ್ತದೆ

ರೋಗಾಣುಗಳ ಮೇಲೆ ಯುದ್ಧ

ರೋಗಗಳನ್ನು ಹರಡುವ ರೋಗಾಣುಗಳನ್ನು ಕಂಡುಹಿಡಿದಿರುವರಷ್ಟೆ? ಈಗ ಅವುಗಳ ವಂಶವನ್ನೇ ನಿರ್ಮೂಲಮಾಡುವ ಸಲುವಾಗಿ ಒಂದು ಪ್ರಚಂಡ ಸಂಶೋಧನೆ ನಡೆಯುತ್ತಿದೆ. ಲಂಡನಿನ ಹಾಂಪ್‌ಸ್ಟಡಿನಲ್ಲಿ ಬ್ರಿಟಿಷ್ ಮತ್ತು ಅಮೇರಿಕನ್ ವೈಜ್ಞಾನಿಕರು ಇನ್ಫ್ಲುಯೆಂಜಾ ರೋಗಾಣುಗಳನ್ನು ಕೊಲ್ಲುವ ಯುದ್ಧವನ್ನು ಹೂಡಿದ್ದಾರೆ. ಡಾ। ಪಿ. ಎಚ್. ಆಂಡ್ರ್ಯೂಸರು ತನ್ನ ಸಂಶೋಧನಾಲಯದಲ್ಲಿ ಎಂಟುವರ್ಷಗಳ ಹಿಂದೆಯೇ ಒಂದು ಜಾತಿ ಇನ್ಫ್ಲುಯೆಂಜಾ ಕ್ರಿಮಿಗಳನ್ನು ಪ್ರತ್ಯೇಕಿಸಿದ್ದರು; ಅವರ ಕೆಲಸದಲ್ಲಿ ಅಮೆರಿಕದ ರಾಕ್‌ಫೆಲರ್ ಫೌಂಡೇಶನಿನವರೂ ಸಹಕರಿಸುತ್ತಾರೆ. ನ್ಯೂಯಾರ್ಕಿನಲ್ಲಿ ರಯಮಂಡ್ ಫೋಡಿಕರ ಮುಂದಾಳುತನದಲ್ಲಿಯೂ, ಫೋರ್ಸ್ಮೌತಿನಲ್ಲಿ ಪ್ರೊ। ಸ್ಮಿಂಡಿಂಟ್ಸ ಇವರ ಮುಂದಾಳುತನದಲ್ಲಿಯೂ ಇನ್ಫ್ಲುಯೆಂಜಾ ರೋಗಾಣುಗಳ ವಿನಾಶ ಸಂಶೋಧನಾ ಕಾರ್ಯ ನಡೆಯುತ್ತಿದೆ.

ಸ್ವದೇಶಾಭಿಮಾನಿಯಲ್ಲಿ

ನಿಮ್ಮ ಜಾಹೀರಾತುಗಳನ್ನು ಕೊಡಿರಿ



Bhuvanendra Products Limited,
Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitual abortion and other uterine troubles Must be commensed soon after conception and continued up to the time of delivery.

"ಭುವನೇಂದ್ರ ಗರ್ಭಪಾಲ"

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವವಿಧದ ದೋಷಗಳನ್ನು ಗುಣಪಡಿಸುವ ದಿವ್ಯಔಷಧಿ. ಗರ್ಭವತಿಯೆನಿಸಿದೆಂದಿನಿಂದ ಪ್ರಸವಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ್ರ ಏಜೆಂಟರು: –
(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘವೇಂದ್ರ ಪೈ, ರಥಬೀದಿ (3) ದಿ ಕರ್ನಾಟಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B B S. ಪಿ ಪಿ ಪಿ ಬಿಲ್ಡಿಂಗ್ಸ್ (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್
ಕಟಪಾಡಿ, ದ. ಕನ್ನಡ.

ಡಿಪೊ —1 ಮುರಾರ ಗಲ್ಲಿ ಹುಬ್ಬಳ್ಳಿ.
2. 36 ಫ್ಲಾಕ್ರೋಫ್ಟ್ ರೋಡ್, ಟ್ರಿಪ್ಲಿಕೇನ್, ಮದರಾಸು

The Bank of Mangalore Limited

HEAD OFFICE	***BRANCHES***
Mangalore	Moodabidri & Padubidri

ANNOUNCEMENT

On and from 1st February 1942, fixed deposits will be accepted at the following attractive rates

One year	4%
Two years or above	4½%

Interest Payable Quarterly

ಸರಕಾರದ ಹೊಸ ಪಾಠಪಟ್ಟಿಗನುಸಾರವಾಗಿ ಬರೆದ

ನವೀನ ಭೂವಿವರಣೆ

ವಾಸುದೇವರಾವ್, ಎಂ. ಎ. ಎಲ್. ಟಿ (Dip Geography)
(ಭೂಗೋಳ ಶಾಸ್ತ್ರದಲ್ಲಿ ಡಿಪ್ಲೊಮಾ ಪಡೆದವರು)

ಈ ಪುಸ್ತಕಗಳನ್ನು ಪಡೆಕೊಂಡಲ್ಲಿ ವಿದ್ಯಾರ್ಥಿಗಳಿಗೆ ಎಟ್ಲಾಸ್ ಕೊಂಡುಕೊಳ್ಳುವ ಅವಶ್ಯವಿಲ್ಲ.

ಪ್ರತಿ ಪುಸ್ತಕದಲ್ಲಿ ಬಣ್ಣಬಣ್ಣದ ಭೂಪಟಗಳಿವೆ

ಅನೇಕಾನೇಕ ಚಿತ್ರಪಟಗಳಿಂದ ಕೂಡಿದ್ದು, ಪ್ರತಿ ಪಾಠದ ಅಂತ್ಯದಲ್ಲಿ ಅಭ್ಯಾಸಗಳನೂ ಮಾದರಿ ಪ್ರಶ್ನೆಗಳನ್ನೂ ಕೊಟ್ಟಿದೆ

4ನೆಯ ಪುಸ್ತಕ 6 ಆಣೆ, 5ನೆಯ ಪುಸ್ತಕ 7 ಆಣೆ 6, 7 ಮತ್ತು 8ನೆಯ ಪುಸ್ತಕಗಳು ಅಚ್ಚಿನಲ್ಲಿವೆ ಪುಸ್ತಕಗಳು ಬೇಕಾದಲ್ಲಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.

ದಿ ಕಂಬೈಂಡ್ ಬುಕ್ಕಿಂಗ್ ಏಜನ್ಸಿ ಮತ್ತು **ದಿ ಜೋಯಿಂಟ್ ಬುಕ್ಕಿಂಗ್ ಆಫೀಸು**
ಮಂಗಳೂರು **ಕೊಡಿಯಾಲ್ ಬೈಲ್**

ಹಿರಿಯಡಕ ಶ್ರೀ ವೀರಭದ್ರಸ್ವಾಮಿ ದೇವಾಲಯದಲ್ಲಿ ನಡೆಯುವ ರಥೋತ್ಸವ ಸಮಾರಂಭ

ಧ್ವಜಾರೋಹಣ	ದೀಪಾರಾಧನೆ	ರಂಗಪೂಜೆ.	ಮಹಾರಥೋತ್ಸವ
30-4-'42	1-5-'42	2-5-'42	3-5-'42

ಹಿರಿಯಡಕ ದೇವಸ್ಥಾನದಿಂದ ಸುಮಾರು ಅರ್ಧ ಮೈಲು ದೂರದಲ್ಲಿರುವ ಶ್ರೀ ಮಾರ್ಕಾಂಡೇಯ ತೀರ್ಥದಲ್ಲಿ ಮಿಂದು ಶ್ರೀ ಅಡಕ ತಾಯಿ ಮತ್ತು ಶ್ರೀ ಮಾರ್ಕಾಂಡೇಯ ಮಹಾ ಮುನಿಗಳ ಅಪೇಕ್ಷೆಯಂತೆ ಶ್ರೀ ಪರಮೇಶ್ವರನು, ಪಾರ್ವತಿ ಸಮೇತನಾಗಿ ಸಕಲ ಗಣಾಂಗಣಗಳೊಡನೆ ಭಕ್ತಾದಿಗಳ ಸಕಲ ಇಷ್ಟಾರ್ಥವನ್ನು ನೆರವೇರಿಸಿ ಕೊಡುವುದಕ್ಕಾಗಿ ಪ್ರತ್ಯಕ್ಷವಾಗಿ ನೆಲಸಿರುವ ಶ್ರೀ ವೀರಭದ್ರಸ್ವಾಮಿ ದೇವಾಲಯವನ್ನು ಸಂದರ್ಶಿಸಿ ಭಕ್ತಿಯಿಂದ ಶ್ರೀ ದೇವರ ಅನುಗ್ರಹಕ್ಕೆ ಪಾತ್ರರಾಗಲು ಇದು ಸುಸಂದರ್ಭವಲ್ಲವೇ? ಪ್ರಯಾಣಿಕರ ಸೌಕರ್ಯದೆಡೆಗೆ ಹೆಚ್ಚಿನ ಗಮನ ಕೊಡಲಾಗುವುದು.

JOINT MANAGERS,

The Combined Booking Agency, MANGALORE.
The Joint Booking Office, KODIALBAIL.

ಬಿಡಿ ಸಂಚಿಕೆ ಒಂದು ಆಣೆ   ವಾರ್ಷಿಕ ಚಂದಾ ರೂ. 3-0-0   ಅಂಚೆ ವೆಚ್ಚ ಸೇರಿ ರೂ. 3—12—0   Regd. No. M 3460

ಸ್ವದೇಶಾಭಿಮಾನಿ

[ಸಂಪುಟ 36]   ತಾರೀಕು 18-4-1942   [ಸಂಚಿಕೆ 16]

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೋವು ಮೊದಲಾದ ಎಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ. ಬೊಂಬ್ಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಸಂಶಯವೇಕೆ?

ಶತ್ರುಗಳು ವಿಮಾನಗಳ ಮೂಲಕ ಧಾಳಿ ನಡೆಸುವುದರಿಂದಲೂ ಮತ್ತು ಇತರ ವಿಧವಾದ ಶತ್ರು ಚಟುವಟಿಕೆಗಳಿಂದಲೂ ಹಿಂದುಸ್ಥಾನದ ಸಿವಿಲ್ ಪ್ರಜೆಗಳಲ್ಲಿ—ಇದರಲ್ಲಿ ಎ. ಆರ್. ಪಿ. ಕೆಲಸಗಾರರೂ ಸೇರುವರು—ಉಂಟಾಗಬಹುದಾದ ಪ್ರಾಣಹಾನಿಗೆ

ದಿ "ಬಾಂಬೆ ಲೈಫ್" ಪಾಲಿಸಿಗಳು

ಸಂಪೂರ್ಣವಾದ ರಕ್ಷಣೆಯನ್ನು ನೀಡುತ್ತವೆ. ಆದ್ದರಿಂದ ನಿಮ್ಮ ಪ್ರೀತಿಪಾತ್ರರಿಗಾಗಿ

ದಿ ಬಾಂಬೆ ಲೈಫ್ ಅಶ್ಯೂರೆನ್ಸ್ ಕಂಪೆನಿ (ಲಿಮಿಟೆಡ್)

ಯಲ್ಲಿ ಪಾಲಿಸಿಗಳನ್ನು ಪಡೆಯುವುದು ನಿಮ್ಮ ತ್ವರಿತ ಕರ್ತವ್ಯವಾಗಿದೆ

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಸಂಸಾನಗಳಾದಿಯಾಗಿ ದಕ್ಷಿಣ ಭಾರತಕ್ಕೆ ಪ್ರಾಮುಖ್ಯ ಏಜೆಂಟರು:

ಉಡುಪಿ

—: ಅಥವಾ ಈ ಕೆಳಗಿನ ಇತರ ಆಫೀಸುಗಳಿಗೆ ಬರೆಯಿರಿ: —

ಕಲ್ಲಿಕೋಟೆ	ಬೆಂಗಳೂರು	ಮಂಗಳೂರು
ಮದರಾಸು	ತ್ರಿವೇಂಡ್ರಂ	ಬೊಂಬಾಯಿ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.
ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.
ವೈದ್ಯಶಾಲಾ, ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

★

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

ESTD. 1906

ಸ್ವದೇಶಾಭಿಮಾನಿ

SWADESHABHIMANI



ಹಿಂದೂದೇಶದಲ್ಲಿ ಯುದ್ಧಹಡಗಗಳ ಕೈಗಾರಿಕೆಯು ಭರದಿಂದ ಸಾಗುತ್ತಿದೆ

KANNADA ILLUSTRATED WEEKLY

ಶ್ರೀ ರಾಮಕೃಷ್ಣ ಲೀಲಾ ಪ್ರಸಂಗ

[ಗುರುಭಾವ-ಪೂರ್ವಾರ್ಧ]

ಮೂಲ ಬಂಗಾಳಿ ಲೇಖಕರು: ಶ್ರೀ ಸ್ವಾಮಿ ಶಾರದಾನಂದರು
ಅನುವಾದ. ಶ್ರೀ ಸ್ವಾಮಿ ಪ್ರಣವೇಶಾನಂದರು

(ಹಕ್ಕು ಕಾದಿದಲ್ಪಟ್ಟಿದೆ)

ಮನಸ್ಸಿನ ಕಪಟವಂಚನೆಯಿಂದ ಸಾವಧಾನವಾಗಬೇಕು

ಇನ್ನೊಂದು ದೃಷ್ಟಿಯಿಂದ ಈ ವಿಷಯವನ್ನು ಪರ್ಯಾಲೋಚಿಸಿದರೆ ಇನ್ನೂ ಚೆನ್ನಾಗಿ ತಿಳಿಯಬರುವುದು. ಒಳ್ಳೇದು, ನೀನು ವಕಾಲತು ಕೊಟ್ಟಿದ್ದಿ ಎಂದು ತಿಳಿಯಲಾಯಿತು-ಈಶ್ವರನನ್ನು ಸ್ಮರಿಸಲು ಅಥವಾ ಸಾಧನೆ ಭಜನೆ ಮಾಡುವುದು ನಿನಗೇನೂ ಅವಶ್ಯವಿಲ್ಲ. ಆದರೆ ನಿಜವಾಗಿ ವಕಾಲತು ಕೊಟ್ಟರೆ ನಿನ್ನ ಹೃದಯದಲ್ಲಿ ನಿರಂತರವೂ ಈಶ್ವರನ ಕರುಣೆಯ ವಿಷಯವು ಹುಟ್ಟುವುದೇ ಹುಟ್ಟುವುದು ಈ ಅಪಾರ ಸಂಸಾರಸಾಗರದಲ್ಲಿ ಬಿದ್ದು ಇಷ್ಟು ದಿನ ನರಳುತ್ತಿದ್ದೆನು ಆಹಾ, ಈಶ್ವರನು ನನ್ನ ಮೇಲೆ ಕೃಪೆಯಿಟ್ಟು ಉದ್ಧಾರ ಮಾಡಿದ್ದಾನೆ! ಅಂತಹ ಅನುಭವದಿಂದ ಈಶ್ವರನ ಮೇಲೆ ನಿನಗೆ ಎಷ್ಟು ಭಕ್ತಿ ಪ್ರೇಮ ಹುಟ್ಟಬೇಕು! ನಿನ್ನ ಹೃದಯವು ಆತನ ಮೇಲೆ ಕೃತಜ್ಞತೆ ಪ್ರೇಮದಿಂದ ತುಂಬಿ, ನಿತ್ಯವೂ ಆತನ ಸ್ಮರಣೆ ಮನನವಾಗಲೇ ಬೇಕು ಇದನ್ನು ಮಾಡಲು ನಿನಗೆ ಇನ್ನು ಹೇಳಬೇಕೇ? ಹಾವಿನಂತಹ ಕ್ರೂರ ಜಂತುಗಳೂ ಕೂಡ ಆಶ್ರಯದಾತರಿಗೆ ಕೃತಜ್ಞತೆಯಿಂದ ವಾಸುಸರ್ಪವಾಗುತ್ತದೆ ಅಂದರೆ ಮನೆಯವರಿಗೆ ಅದು ಕಚ್ಚುವುದಿಲ್ಲ. ನಿನ್ನ ಹೃದಯವು ಆ ಹಾವಿಗಿಂತ ನೀಚವೇ? ಈಶ್ವರನು ನಿನ್ನ ಇಹಕಾಲ ಪರಕಾಲದ ಭಾರವನ್ನು ವಹಿಸಿದ್ದಾನೆ ನಿನ್ನ ಹೃದಯವು ಅಂತಹ ಈಶ್ವರನ ಮೇಲೆ ಕೃತಜ್ಞತೆ ಪ್ರೇಮದಿಂದ ಪೂರ್ಣವಾಗಲಿಕ್ಕಿಲ್ಲವೇ? ಆದ್ದರಿಂದ ನೀನು ವಕಾಲತು ಕೊಟ್ಟು ನಿನಗೆ ದೇವರ ನಾಮಸ್ಮರಣೆ ಮಾಡಲು ರುಚಿಸದಿದ್ದರೆ ನೀನು ನಿಜವಾಗಿಯೂ ವಕಾಲತು ಕೊಡಲಿಲ್ಲವೆಂದೂ ಈಶ್ವರನು ನಿನ್ನ ಭಾರವನ್ನು ವಹಿಸಲಿಲ್ಲವೆಂದನ್ನಬೇಕು 'ನಾನು ವಕಾಲತು ಕೊಟ್ಟಿದ್ದೇನೆ' ಎಂದು ತನಗೆ ತಾನೇ ವಂಚಿಸಬಾರದು ಅಲ್ಲದೆ ಶುದ್ಧ ನಿಷ್ಕಲಂಕ ಸ್ವಭಾವದ ಈಶ್ವರನಲ್ಲಿ ತಾನು ಮಾಡಿದ ದುಷ್ಕೃತ್ಯಗಳ ಪಾಪ ಹೊರಿಸಬಾರದು ಇದರಿಂದ ತನಗೆನೇ ಅಮಂಗಲವಾಗುವುದು ಶ್ರೀ ಪರಮಹಂಸರು ಹೇಳಿದ 'ಬ್ರಾಹ್ಮಣನು ಗೋಹತ್ಯೆ ಮಾಡಿದ' ವಿಷಯವನ್ನು ಸ್ಮರಿಸು ಅದೇನೆಂದರೆ

ಶ್ರೀ ಪರಮಹಂಸರ ಬ್ರಾಹ್ಮಣನು ಮತ್ತು ಗೋಹತ್ಯೆಯು ಎಂಬ ಒಂದು ದೃಷ್ಟಾಂತರೂಪ ಕಥೆ

ಒಬ್ಬ ಬ್ರಾಹ್ಮಣನು ಬಹಳ ಪರಿಶ್ರಮದಿಂದ ಜತನದಿಂದ ಒಂದು ಮನೋಹರವಾದ ತೋಟವನ್ನು ನಿರ್ಮಾಣ ಮಾಡಿದ್ದನು ನಾನಾ ತರದ ಫಲಪುಷ್ಪಗಳ ಮರಗಳನ್ನು ಬೆಳಸಿದ್ದನು ಅವುಗಳು ದಿನದಿನವೂ ಚೆನ್ನಾಗಿ ಬೆಳೆದು ಬರುತ್ತಿವೆ ಎಂದು ಬ್ರಾಹ್ಮಣನ ಆನಂದಕ್ಕೆ ಮಿತಿಯೇ ಇರಲಿಲ್ಲ ಒಂದು ದಿನ ಬಾಗಿಲು ತೆರೆದಿಟ್ಟಿದ್ದನ್ನು ನೋಡಿ ಒಂದು ದನವು ಆ ತೋಟದಲ್ಲಿ ನುಗ್ಗಿ ಗಿಡಗಳನ್ನು ತಿನ್ನಲಾರಂಭಿಸಿತು ಬ್ರಾಹ್ಮಣನು ಎಲ್ಲಿಯೋ ಕೆಲಸಕ್ಕೆ ಹೋಗಿದ್ದನು ಮರಳಿಬಂದು ನೋಡುವಾಗ ಒಂದು ದನವು ಗಿಡತಿನ್ನುವುದನ್ನು ಕಂಡನು ಬಹಳ ಕೋಪಗೊಂಡು ಅದನ್ನು ಹಿಂಬಾಲಿಸಿ ಕೋಲಿನಿಂದ ಒಂದೇಟು ಕೊಡಲು ದನದ ಮರ್ಮಸ್ಥಾನಕ್ಕೆ ತಗಲಿ ಅದು ಸತ್ತುಬಿತ್ತು! ತಾನು ಹಿಂದೂ ಗೋಹತ್ಯೆ ಮಾಡಿದೆನೆಂದು ಬ್ರಾಹ್ಮಣನಿಗೆ ಹೆದರಿಕೆ ಹಿಡಿಯಿತು. ಗೋಹತ್ಯೆ ಸಮಾನ ಪಾಪ ಇನ್ನು ಏನಿಲ್ಲ! ಬ್ರಾಹ್ಮಣನು ಸ್ವಲ್ಪ ವೇದಾಂತ ಕಲಿತಿದ್ದನು ವಿಶಿಷ್ಟ ದೇವತೆಗಳ ಶಕ್ತಿಯಿಂದೊಡಗೂಡಿ ಮಾನವನ ಇಂದ್ರಿಯಗಳು ತಂತಮ್ಮ ಕಾರ್ಯಕಲಾಪಗಳನ್ನು ಮಾಡುತ್ತವೆಂದು (ವೇದಾಂತದಲ್ಲಿದೆ ಯಥಾ—ಸೂರ್ಯನ ಶಕ್ತಿಯಿಂದ ಕಣ್ಣುಗಳು ನೋಡುತ್ತವೆ, ವಾಯು ಶಕ್ತಿಯಿಂದ ಕಿವಿಗಳು ಕೇಳುತ್ತವೆ, ಇಂದ್ರನ ಶಕ್ತಿಯಿಂದ ಕೈಗಳು ಕೆಲಸ ಮಾಡುತ್ತವೆ ಇತ್ಯಾದಿ. ಈ ವೇದಾಂತ ವಿಚಾರವನ್ನು ಬ್ರಾಹ್ಮಣನು ಭಾವಿಸಿ ಗೋಹತ್ಯೆ ನಾನು ಮಾಡಲಿಲ್ಲ ಇಂದ್ರನ ಶಕ್ತಿಯಿಂದ ಕೈಚಲಿಸುತ್ತದೆ. ಆದ್ದರಿಂದ ಗೋಹತ್ಯೆವು ಇಂದ್ರನೇ ಮಾಡಿದಂತಾಯಿತು! ಎಂದು ಮನಸ್ಸಿನಲ್ಲೇ ನಿರ್ಣಯಿಸಿ ನಿಶ್ಚಿಂತನಾದನು.

ಇತ್ತ ಗೋಹತ್ಯಾ ಪಾಪವು ಬ್ರಾಹ್ಮಣನ ಶರೀರದಲ್ಲಿ ಪ್ರವೇಶಿಸಲು ಬಂತು ಆದರೆ ಬ್ರಾಹ್ಮಣನ ಮನಸ್ಸು ಅದನ್ನು ಓಡಿಸಿ ಬಿಟ್ಟಿತು ನೀನು ಇಲ್ಲಿಂದ ಹೋಗು ನಿನಗೆ ಇಲ್ಲಿ ಸ್ಥಾನವಿಲ್ಲ. ಗೋಹತ್ಯೆಯು ಇಂದ್ರನು ಮಾಡಿದ್ದಾಗಿರುತ್ತದೆ ಅವನ ಬಳಿಗೆ ಹೋಗು ಎಂದು ಹೇಳಿತು. ಆದ್ದರಿಂದ ಪಾಪವು ಇಂದ್ರನಿಗೆ ಹಿಡಿಯಲು ಹೋಯಿತು ಇಂದ್ರನು ಆ ಪಾಪವನ್ನು ಕುರಿತು, ಒಂದಿಷ್ಟು ನಿಲ್ಲು ನಾನು ಬ್ರಾಹ್ಮಣನ ಬಳಿಗೆ ಹೋಗಿ ಎರಡು ಮಾತುಗಳನ್ನಾಡುತ್ತೇನೆ. ಆ ಮೇಲೆ ನನ್ನನ್ನು ಹಿಡಿಯಬಹುದು ಎಂದು ಹೇಳಿದನು ಹೀಗೆಂದು ಇಂದ್ರನು ನರರೂಪವನ್ನು ತಾಳಿ ಬ್ರಾಹ್ಮಣನ ಉದ್ಯಾನವನ್ನು ಪ್ರವೇಶಿಸಿ ಬ್ರಾಹ್ಮಣನು ಅನತಿ ದೂರದಲ್ಲಿ ನಿಂತು ಮರಗಿಡಗಳ ಮೇಲ್ವಿಚಾರಣೆಯನ್ನು ಮಾಡುತ್ತಿದ್ದುದನ್ನು ಕಂಡನು ಇಂದ್ರನು ಉದ್ಯಾನದ ಶೋಭೆಯನ್ನು ಕಂಡು ಬ್ರಾಹ್ಮಣನ ಕಿವಿಗೆ ಕೇಳುವಂತೆ ಬಹಳ ಪ್ರಶಂಸೆ ಮಾಡಿ ಮೆಲ್ಲಮೆಲ್ಲನೆ ಬ್ರಾಹ್ಮಣನು ಇದ್ದಲ್ಲಿಗೆ ಮುಂದುವರಿದನು ಆಹಾ ಎಷ್ಟು ಮನೋಹರ ಉದ್ಯಾನ, ಎಷ್ಟು ಸೊಗಸಾಗಿ ಗಿಡಮರಗಳನ್ನು ನೆಟ್ಟಿವೆ ಯಾವ ಗಿಡಮರಗಳು ಎಲ್ಲಿರಬೇಕೋ ಅಲ್ಲೇ ಹುಟ್ಟಿಸಿವೆ ಎಂದನು ಹೀಗಂದುಕೊಂಡು ಬ್ರಾಹ್ಮಣನ ಬಳಿಗೆ ಹೋಗಿ ಮಹಾಶಯರೇ ಈ ಉದ್ಯಾನವು ಯಾರದೆಂದು ಹೇಳಬಲ್ಲಿರಾ! ಇಷ್ಟು ಸೊಗಸಾಗಿ ಗಿಡಮರಗಳನ್ನು ಯಾರು ಹುಟ್ಟಿಸಿದ್ದು? ಎಂದು ಕೇಳಿದನು ಬ್ರಾಹ್ಮಣನು ಉದ್ಯಾನದ ಪ್ರಶಂಸೆಯನ್ನು ಕೇಳಿ ಸಂತೋಷದಿಂದ ತುಂಬಿ ಅಯ್ಯಾ ಇದು ನನ್ನದೇ, ನಾನೇ ಇವುಗಳನ್ನೆಲ್ಲಾ ಹಬ್ಬಿಸಿದೆನು ಬನ್ನಿರಿ, ಸುತ್ತಿಸುತ್ತಿ ಎಲ್ಲವನ್ನೂ ಚೆನ್ನಾಗಿ ನೋಡೋಣ ಅಂದನು ಹೀಗೆಂದು ಉದ್ಯಾನದ ವಿಷಯವಾಗಿ ನಾನಾ ಮಾತನ್ನು ಹೇಳುತ್ತಾ ಹೇಳುತ್ತಾ ಇಂದ್ರನಿಗೆ ಉದ್ಯಾನದಲ್ಲಿರುವ ಸಕಲವನ್ನು ತೋರಿಸಿ ತಿರುಗಾಡಿದನ್ನು ಕ್ರಮೇಣ ಮರೆತು, ಸತ್ತ ದನವು ಎಲ್ಲಿ ಇತ್ತೋ ಅಲ್ಲಿ ಬಂದರು. ಆಗ ಇಂದ್ರನು ಚಕಿತನಾಗಿ ರಾಮ, ರಾಮ ಇಲ್ಲಿ ಗೋಹತ್ಯೆ ಮಾಡಿದ್ದು ಯಾರು? ಎಂದು ಕೇಳಿದರು ಬ್ರಾಹ್ಮಣನು ಇಷ್ಟರ ವರೆಗೆ ಉದ್ಯಾನದಲ್ಲಿರುವ ಎಲ್ಲವನ್ನೂ ನಾನು ಮಾಡಿದ್ದು, ನಾನು ಮಾಡಿದ್ದು ಎಂದು ಹೇಳಿ ಬಂದಿದ್ದನು ಆದ್ದರಿಂದ ಗೋಹತ್ಯೆ ಮಾಡಿದ್ದು ಯಾರೆಂದು ಕೇಳಿದೊಡನೆ ಗಾಬರಿಪಟ್ಟು ಏನೊಂದು ಮಾತನಾಡದೆ ಸುಮ್ಮನಿದ್ದನು ಆಗ ಇಂದ್ರನು ತನ್ನ ನಿಜವಾದ ರೂಪವನ್ನು ತಾಳಿ ಬ್ರಾಹ್ಮಣನನ್ನು ಕುರಿತು ಎಲೋ ಕಳ್ಳ ಉದ್ಯಾನದಲ್ಲಿ ಏನೆಲ್ಲ ಒಳ್ಳೇದುಂಟೋ ಅವುಗಳನ್ನು ನೀನೇ ಮಾಡಿದ್ದು ಗೋಹತ್ಯವು ಮಾತ್ರ ನಾನು ಮಾಡಿದ್ದೇ? ಹಾಗಾದರೆ ಗೋಹತ್ಯೆಯ ಪಾಪವೂ ಕೂಡ ನಿನ್ನದೇ! ಎಂದು ಹೇಳಿ ಇಂದ್ರನು ಅಂತರ್ಧಾನನಾದನು, ಗೋಹತ್ಯೆಯ ಪಾಪವು ಬ್ರಾಹ್ಮಣನ ಶರೀರದಲ್ಲಿ ಹೊಕ್ಕಿತು.

(ಕ್ರಮಶಃ)



The Canara Banking Corporation Ltd.

(Incorporated in British India with limited liability)

Estd 1906.

OUR RATES OF INTEREST ON DEPOSITS

Current	1%	p. a.
Savings Bank	$2\frac{1}{2}$%	,,
Short-term	$1\frac{3}{4}$%	,,
FIXED FOR 3 MONTHS	2%	,,
6 ,,	$2\frac{1}{4}$%	,,
9 ,,	$2\frac{3}{4}$%	,,
12 ,,	3%	,,
24 ,,	$3\frac{1}{2}$%	,,

Advances made at cheap rates of interest against approved securities and Banking business of every description transacted.

ನಂಬಿ ನಂಬ ತೆಗೆದು ಕೊಳ್ಳಲು



ದಮ್ಮಿನ ಮೇಲೆ ಒಂದೇ ಉಪಾಯ

ಪುರೋಹಿತ ಶ್ವಾಸಹಾರಿ

ಮೃಗಾಲಯದ ದುಷ್ಟ ಪ್ರಾಣಿಗಳನ್ನು ಕೊಂದು ಹಾಕಿರಿ

ವೈರಿಗಳಿಂದ ಗೊಂದಲವುಂಟಾದರೆ ಮೃಗಾಲಯದಲ್ಲಿರುವ ದುಷ್ಟ ಪ್ರಾಣಿಗಳಿಂದ ಹಾನಿಯುಂಟಾಗುವ ನಿಮಿತ್ತ ಆ ಮೃಗಳನ್ನೆಲ್ಲಾ ಕೊಂದು ಹಾಕಬೇಕೆಂದು ಇಂಡಿಯಾ ಸರಕಾರವು ಅಪ್ಪಣೆ ಹೊರಡಿಸಿದಂತೆ ಎಲ್ಲಾ ಕಡೆಗಳಲ್ಲಿಯೂ ಕಾರ್ಯಾಚರಣೆಯಾಗುತ್ತಿದೆ.

ನೆಹರು ಮಣಿಪುರಕ್ಕೆ

ಬರ್ಮದಿಂದ ಒಂದ ನಿರಾಶ್ರಿತರನ್ನು ನೋಡುವ ಸಲುವಾಗಿ ನೆಹರುಗಳು ಕಲ್ಕತ್ತ ಮಾರ್ಗವಾಗಿ ಮಣಿಪುರಕ್ಕೆ ಹೊರಟರು.

' ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ'

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

24—4—1942] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೨೪—೪—೧೯೪೨]

ಹೊಲದಲ್ಲಿರಲಿ, ಮನೆಯಲ್ಲಿರಲಿ, ಕಾರ್ಖಾನೆಯಲ್ಲಿರಲಿ, ಕಚೇರಿಯಲ್ಲಿರಲಿ ಭಾರತೀಯರು ಇಂದು ಎಲ್ಲಿದ್ದರೂ ಬಾಂಬಿನ ಹೊಡೆತ-ತಪ್ಪಿದ್ದಲ್ಲವೆಂದು ಭಯಪಡುವಂತಾಗಿದೆ ಕಾರಣ, ಶತ್ರು ನೌಕಾ ಸಂಚಾರವು ತೀರ ಸಮುದ್ರದಲ್ಲಿ ನಿರಾಂತಕವಾಗಿ ನಡೆಯುತ್ತಿದೆಯೆಂದು ತಿಳಿದು ಅವರು ಅಂಜಿದ್ದಾರೆ ಬಂಗಾಳ ಕೊಲ್ಲಿಯು ಇಂದು ಬ್ರಿಟಿಷರಿಗೆ ಮಾತ್ರ ವಿಹಾರ ಸರೋವರವಾಗಿ ಉಳಿದಿಲ್ಲ ಜಪಾನರೂ ಅಲ್ಲಿಗೆ ದುಮುಕಿ ಈಜಾಡುತ್ತಿದ್ದಾರೆ, ಹೀಗಾಗಿ ಪೂರ್ವ ಕರಾವಳಿ ತೀರದಲ್ಲೆಲ್ಲಾ ಕಡೆಗಳಲ್ಲಿಯೂ ನಗರ ಗ್ರಾಮಗಳಲ್ಲಿ ಜನರು ಜಪಾನು ಬಾಂಬಿಗೆ ಬೆದರಿಕೊಂಡೇ ಇರಬೇಕಾಗಿ ಬಂದಿದೆ ನಮಗೆ ಇಂದು ಜಪಾನಿನ ನೌಕಾಶಕ್ತಿಯೆಷ್ಟರಮಟ್ಟಿಗೆ ಇದೆಯೆಂಬ ವಿಷಯವೇನೂ ತಿಳಿಯಲೊಲ್ಲದು ಇತ್ತೀಚೆಗೆ ಬಂದ ವರದಿಯಿಂದ ಬಂಗಾಳ ಕೊಲ್ಲಿಯಲ್ಲಿ ಎರಡು ಜಪಾನೀ ವಿಮಾನವಾಹಕ ಹಡಗಗಳು ಸಂಚರಿಸುತ್ತಿವೆಯೆಂದು ಗೊತ್ತಾಗಿದೆ ಇದರೊಂದಿಗೆ, ಕ್ರೂಸರುಗಳು, ಡಿಸ್ಟ್ರಾಯರುಗಳು ಇನ್ನೆಷ್ಟಿವೆಯೋ ತಿಳಿಯದು ಹೇಗಿದ್ದರೂ ಸಿಂಗಾಪುರ, ಪಿನಾಂಗ್, ಮಾಲ್ಮೀನ್, ರಂಗೂನ್, ಪೋರ್ಟ್ ಬ್ಲೇರ್ ಮೊದಲಾದ ನೌಕಾನಿಲ್ದಾಣಗಳನ್ನು ಕೈವಶಪಡಿಸಿಕೊಂಡ ಜಪಾನು, ತನಗೆ ಬೇಕುಬೇಕಾದಷ್ಟು ಸಾಧನ ಸಾಮಗ್ರಿಗಳನ್ನು ಅಲ್ಲಿ ತಂದಿರಿಸಿಕೊಳ್ಳುವುದೆಂದೂ ಆ ಮೂಲಕ ಮುಂದಿನ ಯುದ್ಧ ಸಾಗಿಸುವುದೆಂದೂ ಊಹಿಸುವುದು ಅತಿಶಯವೆನಲಾಗುವುದಿಲ್ಲ

ಅಂತೂ, ಬಂಗಾಳಕೊಲ್ಲಿಯಲ್ಲಿ ಬ್ರಿಟಿಷರು ತಮ್ಮದೇ ಪ್ರಭುತ್ವಮಾಡಿ, ಜಪಾನರನ್ನು ಸಂಚಾರರಹಿತರನ್ನಾಗಿ ಗೈಯ್ಯದಿದ್ದರೆ ಎಂದಾದರೂ ಮದ್ರಾಸು, ಬಂಗಾಳ ಒರಿಸಾ ಸಿಲೋನ್ ಮೊದಲಾದ ಪ್ರದೇಶಗಳಿಗೆ ಬೆದರಿಕೆಯಿದ್ದೇ ಇದೆ ಕಳೆದ ಕೆಲವು ವಾರಗಳ ಯುದ್ಧದಿಂದಂತೂ ನಮಗೆ ಜಪಾನರು ನೌಕಾಶಕ್ತಿಯಲ್ಲಿ ಎಂತಹ ಸಮರ್ಥರಿದ್ದಾರೆಂಬುದು ಅರ್ಥವಾಗದಿರದು ಜಪಾನಿನ ಸಿಪಾಯಿಗಳು ಮಾತ್ರ ಪರಾಕ್ರಮಿಗಳಲ್ಲ, ಜಪಾನು ವೈಮಾನಿಕರು ಮಾತ್ರ ಸಾಹಸಿಗಳಲ್ಲ, ಎಲ್ಲದಕ್ಕಿಂತಲೂ ಹೆಚ್ಚಾಗಿ ಜಪಾನಿನ ನೌಕಾದಳದವರು ಅಪ್ರತಿಮ ಧೀರರೆನಬೇಕಾಗಿದೆ' ಪೆಸಿಫಿಕ್‌ನಲ್ಲಿ ಇದುವರೆಗೆ ಈ ನೌಕಾವೀರರು ತೋರಿಸಿದ ಸಾಹಸದ ಹೋರಾಟವು ಇಂದು ಪ್ರಪಂಚವನ್ನೇ ಬೆರಗು ಮಾಡಿಬಿಟ್ಟಿದೆ ಹೀಗಾಗಿ ಬ್ರಿಟಿಷರು ಬಂಗಾಳಾ ಕೊಲ್ಲಿಯಲ್ಲಿ ಈಗ ಉಂಟಾಗಿರುವ ಶತ್ರು ನೌಕಾ ಸಂಚಾರವನ್ನು ತಡೆಗಟ್ಟದಿದ್ದರೆ ನಮ್ಮ ಪರಿಸ್ಥಿತಿ ಮುಂದೆ ಹೇಗೋ ಎನ್ನುವಂತಾಗಿದೆ ಇಷ್ಟು ಮಾತ್ರವಲ್ಲ, ಜಪಾನೀಯರು ಇತ್ತೀಚೆಗೆ ಬಂಗಾಳಕೊಲ್ಲಿಯಲ್ಲಿಯೇ ಎರಡು ಬ್ರಿಟಿಷ್ ಕ್ರೂಸರ್ ಹಡಗುಗಳನ್ನು ಒಂದು ವಿಮಾನ ವಾಹಕ ಹಡಗವನ್ನೂ ಮುಳುಗಿಸಿಬಿಟ್ಟರೆಂದರೆ ಇದಕ್ಕಿಂತ ಹೆಚ್ಚಿನ ಆಘಾತಕರ ಅವಮಾನಕರ ವಾರ್ತೆ ಬೇರೆ ಉಂಟೆ? ವಿಶಾಖ, ಕೋಕನಾಡ, ಕೊಲೊಂಬೋಗಳ ಮೇಲೆ ಬಿದ್ದ ಬಾಂಬಿನ ಪೆಟ್ಟಿಗಿಂತಲೂ ಈ ಹಡಗಗಳ ಮುಳುಗಿಸುವಿಕೆಯು ಬ್ರಿಟಿಷರಿಗೆ ಹೆಚ್ಚು ಹಾನಿಯನ್ನುಂಟುಮಾಡಿದೆ'

— ಕೊಲೊಂಬೋದ ಮೇಲೆ ಜಪಾನೀಯರು ಮಾಡುವ ಮುತ್ತಿಗೆಯ ರೀತಿಯನ್ನು ಆಲೋಚಿಸಿದರೆ ಸಿಲೋನನ್ನು ಕೂಡಲೇ ಕೈವಶಪಡಿಸಿಕೊಳ್ಳಬೇಕೆಂದು ಅವರು ಹಠತೊಟ್ಟಂತೆಯೇ

ಸಮರ ಭೂಮಿಯ ಸಂಚಾರ

ತೋರುತ್ತದೆ ಹಸುರು ಹಾಸಿಗೆಯಾಗಿರುವ ಸಿಲೋನ್, ದಶಕಂಠ ರಾವಣನ ಲಂಕಾದ್ವೀಪ' ಪುರಾಣಕಾಲದಿಂದಲೇ ಭಾರತ ಸಿಲೋನ್‌ಗಳೊಳಗೆ ಒಂದು ರೀತಿಯ ಸಂಬಂಧವಿತ್ತು, ಸಿಲೋನ್ ಅಷ್ಟೊಂದು ಪ್ರಾಮುಖ್ಯವಾದುದೆಂದು ತಿಳಿದೋ ಏನೋ, ಶ್ರೀ ರಾಮನೂ ಅಂದು ಅದನ್ನು ಶತ್ರುಗಳಾದ ರಾಕ್ಷಸರ ಕೈಯ್ಯಲ್ಲಿ ಇರಗೊಡದೆ ಕಾದಾಡಿ ಕೈವಶಪಡಿಸಿಕೊಂಡನು, ಮಿತ್ರ ವಿಭೀಷಣನಿಗೊಪ್ಪಿಸಿದನು' ಹೇಗಿದ್ದರೂ ಇಂದಿನ ಪರಿಸ್ಥಿತಿಯನ್ನು ಪರ್ಯಾಲೋಚಿಸಿದರೆ ಸಿಲೋನ್ ಪ್ರಾಮುಖ್ಯವಾಗಿರುವುದೆಂದು ಯಾರಿಗಾದರೂ ತಿಳಿಯದಿರದು ಭಾರತದ ರಕ್ಷಣೆಗೆ ಇದು ಅತ್ಯಂತ ಅವಶ್ಯವೂ ಆಗಿದೆ ಪಶ್ಚಿಮ ಸಮುದ್ರ ಪ್ರಾಂತಕ್ಕೆ ಸಿಲೋನ್ ಒಂದು ರಕ್ಷಕ ವಲಯದಂತಿದೆ, ಅರೇಬಿಯನ್ ಸಮುದ್ರಕ್ಕೆ ದಕ್ಷಿಣ ದಿಕ್ಕಿನ ಪ್ರವೇಶಮಾರ್ಗವಾಗಿದೆ ಹಿಂದೂಸಾಗರದ ವಿಷಯದಲ್ಲಿಯೂ ಸಿಲೋನ್ ಬಹಳ ಪ್ರಾಮುಖ್ಯವಾಗಿರುವುದರ ಹೀಗಾಗಿ ಜಪಾನು ಸಿಲೋನಿನ ಮೇಲೆ ದೃಷ್ಟಿಯಿಟ್ಟದ್ದರೆ ಅದೊಂದು ಆಶ್ಚರ್ಯವೇನೂ ಅಲ್ಲ ಸಿಲೋನನ್ನು ಶರಣುಗೊಳಿಸಿದರೆ ಬಂಗಾಳಕೊಲ್ಲಿಯಲ್ಲಿ ಅವರ ಪ್ರಭುತ್ವ ಸ್ಥಾಪಿಸಲು ಅವಕಾಶವಾಯಿತು ಆ ಮೇಲೆ ಅರೇಬಿ ಸಮುದ್ರಕ್ಕೂ ಅವರು ಮುಂದೊತ್ತಬಹುದು. ಮಾತ್ರವಲ್ಲದೆ ಭಾರತ ಬ್ರಿಟಿಷ್ ಪ್ರಾಣನಾಡಿಯನ್ನೇ ಸುವೇಜಿನ ಮೂಲಕವಾಗಲಿ, ಕೇಪ್ ಓಫ್ ಗುಡ್‌ಹೋಪಿನ ಮೂಲಕವಾಗಲಿ ಭೇದಿಸನೋಡಬಹುದು ಜಪಾನರಿಗೆ ಇಷ್ಟರಲ್ಲಿಯೇ ಮಾಲ್‌ದೀವ್ ದ್ವೀಪಗಳ ಮೇಲೆ ಹಾಗೂ ಮಡಗಾಸ್ಕರ್ ಮೇಲೆ ದೃಷ್ಟಿ ಬಿದ್ದಿರಬಹುದೆಂದು ಊಹಿಸಬಹುದು.

ಜರ್ಮನಿ ರಶ್ಯಗಳ ಪ್ರಚಂಡ ಯುದ್ಧದ ಕಡೆಗೆ ಜಗತ್ತು ಇಂದು ದೃಷ್ಟಿಯಿಟ್ಟಿದೆ ಎಷ್ಟೆಂದರೂ, ಈ ದ್ವಿತೀಯ ಮಹಾಯುದ್ಧದಲ್ಲಿ ವಿಜೃಂಭಿಸಿ ಬಂದ ಹಿಟ್ಲರನನ್ನು ಹಿಡಿದು ನಿಲ್ಲಿಸಿ, ಹಿಂದಟ್ಟಿದ್ದು ರಶ್ಯ, ರಶ್ಯ ಆ ಅತುಲ ಸಾಹಸದಲ್ಲಿ ಬಹು ನಷ್ಟ ಹೊಂದಿದ್ದರೆ ವೈರಿಗೂ ಕಡಿಮೆ ಹಾನಿಯಾಗಿಲ್ಲ, ಅಂತೂ ಹಿಂದಿನ ಜರ್ಮನ್ ರಶ್ಯದ ಕಾಳಗವು ಹಿಂದಿನ 'ರಾಮರಾವಣರ' ಕಾಳಗದಂತೆ ಅದಕ್ಕೆ ಅದೇ ಹೋಲಿಕೆಯಿದ್ದೆ, ಅಷ್ಟು ಪ್ರಚಂಡವೂ ಪ್ರಸಿದ್ಧವೂ ಆಗಿದೆ, ರಶ್ಯ ಜರ್ಮನ್ ಯುದ್ಧದ ಪ್ರಥಮಾಂಕವು ಹಾಗೆ ಏನೊಂದೂ ಇತ್ಯರ್ಥವಾಗದೆಯೇ ಛಳಿಗಾಲದಲ್ಲಿ ಕೊನೆಗೊಂಡಿತು, ಛಳಿಗಾಲದಲ್ಲಿ ಪ್ರಚಂಡ ಹೋರಾಟ ಕಡಿಮೆಯಾಗಿತ್ತು, ಇದೀಗ ಜರ್ಮನ್ ರಶ್ಯ ಯುದ್ಧದ ದ್ವಿತೀಯಾಂಕ ವಸಂತಕಾಲದೊಡನೆ ಪ್ರಾರಂಭವಾಗಿದೆ ಹಿಂದಿನ ಯುದ್ಧಕಾಲದಲ್ಲಿ ಜರ್ಮನಿಯನ್ನು ಏಕಾಂಗಿಯಾಗಿ ರಶ್ಯ ಮಾತ್ರ ಎದುರೊಡ್ಡಿ ನಿಂತಿತು, ಇಂದು ಅದರ ಪಕ್ಷಕ್ಕೆ ಬ್ರಿಟನು ಅಮೆರಿಕಗಳೂ ಇವೆ ಹಾಗಾಗಿ ಅವುಗಳೆಲ್ಲವನ್ನೂ ಹಿಟ್ಲರನು ಒಟ್ಟಿಗೆ ಎದುರಿಸಬೇಕಾಗಿ ಬಂದಿದೆ, ಹಾಗಿದ್ದರೂ ಹಿಟ್ಲರನಿಗೆ ಈ ಸಲ ಯುರೋಪಿನ ಅನೇಕ ರಾಷ್ಟ್ರಗಳು ಬೆಂಬಲಕ್ಕಿವೆ. ಅವುಗಳೆಲ್ಲವನ್ನೂ ಆತನು ಈಗ ರಣೋದ್ಯುಕ್ತವಾಗಲು ಪ್ರೇರೇಪಿಸದಿರಲಾರನು ಫಿನ್‌ಲೆಂಡ್, ರುಮೇನಿಯ, ಹಂಗೇರಿಗಳನ್ನು ಆತನು ಪ್ರೇರೇಪಿಸಬಹುದಲ್ಲದೆ ಬಲ್ಗೇರಿಯ ಫ್ರಾನ್ಸುಗಳ ಮೇಲೂ ಒತ್ತಾಯಮಾಡುವನಾಗಿ ತಿಳಿಯಲು ಅವಕಾಶವುಂಟಾಗಿದೆ ಬಲ್ಗೇರಿಯದ ಅರಸ ಬೋರಿಸರು ಇಷ್ಟರಲ್ಲೇ ಹಿಟ್ಲರನನ್ನು ನೋಡಲು ಹೋಗಿದ್ದಾರೆ ಬಲ್ಗೇರಿಯವು ಜರ್ಮನಿಗೆ ನೆರವಾಗಿ ರಶ್ಯದ ಬೋಲ್ಶೆವಿಸಮನ್ನು ನಾಶಪಡಿಸುವುದೆಂದು, ಅದರ ಮಂತ್ರಿ ಫಿಲೋಫನು ಸಾರುತ್ತಾನೆ'

ಇಷ್ಟರಲ್ಲಿ ಯುರೋಪಿನಲ್ಲಿ ದ್ವಿತೀಯ ರಣಕ್ಷೇತ್ರವೊಂದು ತೆರೆಯಲಿದೆಯೆನ್ನುವ ಸುದ್ದಿಯೂ ದಟ್ಟವಾಗಿದೆ ಪಶ್ಚಿಮ ರಣಭೂಮಿಯು ಇನ್ನೊಮ್ಮೆ ಉಗ್ರ ರಣಕ್ಷೇತ್ರವಾಗುವ ಸಂಭವವಿದೆ ಇದನ್ನು ಅರಿತುಕೊಂಡೋ ಏನೋ, ಹಿಟ್ಲರನು ಈಗ ಫ್ರಾನ್ಸನ್ನು ಕೆರಳಿಸುತ್ತಿದ್ದಾನೆ, ಅಲ್ಲಿ ಸಿದ್ಧತೆಗಳನ್ನು ಮಾಡುತ್ತಿರುವನು, ಪಿಟೇನ್ ಸರಕಾರಕ್ಕೆ ಈಗ ಒತ್ತಾಯವುಂಟಾಗಿದೆ, ವಿಚಿ ಮಂತ್ರಿ ಮಂಡಳದಲ್ಲಿ ಬಿಕ್ಕಟ್ಟುಂಟಾಗಿರುವುದರ ಕಾರಣವೂ ಅದೇ ಎನಬಹುದು ಫ್ರಾನ್ಸ್ ಹೇಗಾದರೂ ಜರ್ಮನ್ ಆಕ್ರಮಿತರಾಷ್ಟ್ರ ಅದನ್ನು ತನ್ನ ಕೈಗೊಂಬೆಯಾಗಿ, ಹೇಗೆ ಬೇಕಾದರೂ ಹಿಟ್ಲರ್ ಕುಣಿಸಬಲ್ಲ, ಈಗ ಪಿಟೇನ್, ಲಾವಲ್, ಡಾರ್ಲಾನರಲ್ಲಿ ಮಂತ್ರಿಮಂಡಳದ ಕುರಿತು ಮಾತುಕತೆಗಳಾಗುವ ಸುದ್ದಿ ಬಂದಿದೆ ಅಂತೂ ಪಿಟೇನ್ ಹೆಸರು ಮಾತ್ರಕ್ಕಿದ್ದು, ಲಾವಲ್ ಪೂರ್ಣ ಪ್ರಭುತ್ವ ಕೈವಶಪಡಿಸಿಕೊಂಡು, ಸರ್ವಾಧಿಕಾರ ನಡೆಸುವ ಹಂತಿಕೆಯೆಂದು ಹೇಳಲಾಗುತ್ತದೆ, ಏಕೆಂದರೆ ಲಾವಲ್ ಹಿಟ್ಲರ್ ಪಕ್ಷಪಾತಿ ಬ್ರಿಟಿಷರ ವಿಷಯ ಆತನಿಗೆ ಸದಭಿಪ್ರಾಯವಿಲ್ಲ ಹಾಗಾಗಿ ಫ್ರಾನ್ಸಿನ ರಾಜ್ಯಸೂತ್ರವು ಲಾವಲ್ ಹಸ್ತ ಹೋದರೆ ಬ್ರಿಟಿಷರಿಗೆ ತೊಂದರೆ ಹುಟ್ಟಿದಂತೆಯೇ ಸರಿ ಹೀಗಾಗಿ ಫ್ರಾನ್ಸೂ ಅತ್ತ ಬ್ರಿಟನು ಅಮೇರಿಕಗಳ ಮೇಲೆ ಯುದ್ಧ ಮಾಡುತ್ತಿರುವಂತೆ ಇಂದು ಯೋಜನೆ ನಡೆಸಲಾಗುತ್ತದೆ. ಇದ್ದೇ ಇಂದು ಫ್ರಾನ್ಸಿನಲ್ಲಿ ನಡೆಯುವ ಗಡಿಬಿಡಿಯ ಅರ್ಥವೆನಬಹುದು ಫ್ರಾನ್ಸು ಯುದ್ಧಕ್ಕೆ ಸೇರಿದರೆ ಭೂಮಧ್ಯ ಸಮುದ್ರದಲ್ಲಿ ಪ್ರಚಂಡ ಯುದ್ಧವಾಗದಿರದು ಸ್ಪೈನಿನ ಸಹಾಯಪಡೆದು ಜರ್ಮನರು ಜಿಬ್ರಾಲ್ಟರ್, ಸುವೇಜ್ ಕಾಲುವೆಗಳ ಮಾರ್ಗ ಬರಬಹುದು ಆಗ ಬ್ರಿಟಿಷರಿಗೆ ಸ್ಪೈನ್, ಫ್ರಾನ್ಸ್, ಇಟಲಿ, ಜರ್ಮನಿ, ಬಲ್ಗೇರಿಯ ಈ ಪಂಚಮ ದಳಗಳ ನೌಕಾಬಲವನ್ನು ಏಕಕಾಲದಲ್ಲಿ ಇದಿರಿಸಬೇಕಾದ ಸಂಕಷ್ಟ ಬರಬಹುದು ಇದೇ ಕಾಲಕ್ಕೆ ಜಪಾನರು ಅರಬೀ ಸಮುದ್ರವನ್ನು ಹೊಕ್ಕು, ಕೆಂಪು ಸಮುದ್ರ ಪರ್ಶಿಯನ್ ಆಖಾತಗಳಲ್ಲಿ ನುಗ್ಗಿದರೆ ಬಹಳ ಗಂಡಾಂತರವೇ ಬಂದೊದಗಬಹುದು

ಬರ್ಮಾ ದೇಶದಲ್ಲಿ ಇರಾವತಿ ವ್ಯೂಹದಲ್ಲಿ ಭೀಕರ ಸಂಗ್ರಾಮ ನಡೆಯುತ್ತಿದೆ ಸಾಲ್ವೀನ್ ನದಿಯ ಹತ್ತಿರ ಜಪಾನ್ ಸೈನ್ಯಗಳು ಬಹುವಾಗಿ ಸೇರಿವೆಯೆಂದೂ, ಶಾನ್ ಪ್ರದೇಶದ ಮಾರ್ಗವಾಗಿ ಅವುಗಳು ಮುನ್ನುಗ್ಗಬಹುದೆಂದೂ ಹೇಳಲಾಗಿದೆ ಮಂಡಾಲೆ ಕಡೆಗೆ ಸಾಗಿ, ಉತ್ತರ ಬರ್ಮಾದಲ್ಲಿ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಳ್ಳಬೇಕೆಂದು ಜಪಾನರ ಗುರಿಯಿದೆ ಇರಾವತಿ ನದಿ ಮಾರ್ಗವಾಗಿಯೂ ಜಪಾನ್ ಸೈನ್ಯ ಸಾಗುತ್ತಲಿದೆ. ಹೀಗೆ ಎಲ್ಲಾ ಯುದ್ಧರಂಗದಲ್ಲಿಯೂ ಶತ್ರುಗಳು ಮುನ್ನುಗ್ಗುತ್ತಿರುವರು ಸ

ಟಾಂಗಿನ ಬಳಿಯ ಚೀನೀ ಸೈನ್ಯದ ಮೇಲೆ ಆಕ್ರಮಣವಾಯಿತು ಮಿಂಗ್ಯಾಜೆಯಿಂದ ಬ್ರಿಟಿಷ್ ಸೈನ್ಯವು ಮಿನ್‌ಪೂಲ್‌ಗೆ ಹಿಂದೆ ಸಾಗಿವೆ ಉತ್ತರ ಬರ್ಮಾದಲ್ಲಿ ಕಾಳಗ ವಿಶೇಷ ರಭಸದಿಂದ ನಡೆಯುತ್ತಿದೆ ಬಟಾನಿನ ಜಯದಿಂದ ಮದೋನ್ಮತ್ತರಾದ ಜಪಾನರು ಈಗ ಬರ್ಮಾವನ್ನು ಸದೆಬಡಿಯಲು ಹೋರಾಡುತ್ತಿರುವರು ಇರಾವತಿ ಬಳಿ ತೈಲ ಬಾವಿಗಳನ್ನು ಕೈವಶ ಪಡಿಸಬೇಕೆಂದು ಅವರ ಇಚ್ಛೆಯಾಗಿತ್ತು, ಆದರೆ ಬ್ರಿಟಿಷರು ಅದನ್ನು ಸುಟ್ಟು ಬಿಟ್ಟು ವೈರಿಗೆ ಏನೂ ಪ್ರಯೋಜನವಾಗದಂತೆ ಮಾಡಿರುವರೆಂದು ಸುದ್ದಿಯೀಗ ಬಂದಿದೆ ಟಾಂಗೂದಲ್ಲಿ ಸೋತ ಚೀನೀಯರು ಹಿಂದಹಿಂದೆಯೇ ಸರಿಯುತ್ತಿದ್ದಾರೆ ಅಂತೂ ಬರ್ಮಾ ಯುದ್ಧದಲ್ಲಿ ಚೀನಿಯರು ಪ್ರಬಲ ಪ್ರಹಾರಕ್ಕೆ ತುತ್ತಾದರು ಇಂದಿನ ಪರಿಸ್ಥಿತಿ ನೋಡಿದರೆ ಬರ್ಮಾ ಕಾಳಗವು ಮಿತ್ರಪಕ್ಷದವರಿಗೆ ವಿಶೇಷ ಅನುಕೂಲವಾಗಿರುವಂತೆ ತೋರುತ್ತದಿಲ್ಲ ಬರ್ಮಾದ ಯುದ್ಧವನ್ನು ಜಪಾನರು ಬೇಗನೆ ಕೊನೆಗಾಣಿಸುವ ಸಾಹಸದಲ್ಲಿದ್ದಾರೆ

·ಅಹಿತಕರವಾದ ಶೀತದಿಂದ
ನೀವು ಯಾಕೆ ಕಷ್ಟಪಡುತ್ತೀರಿ
ಶ್ವಾಸಯೋಗ್ಯ ಪೆಪ್ಸ ಮಾತ್ರೆಗಳನ್ನು
ತೆಗೆದುಕೊಳ್ಳಿರಿ.

ಪೆಪ್ಸ ಮಾತ್ರೆ ಬಾಯಿಗೆ ಹಾಕಿದ ಕೂಡಲೇ ಕರಗಿ ಉತ್ತಮ ಔಷಧಿ ರಸವನ್ನು ಹೊರಗೆಡಹುತ್ತವೆ ಅದು ಕೊರಳನ್ನು ಸರಿಗೊಳಿಸುತ್ತದೆ ಅದು ಕಫ, ಶೀತ, ಉಬ್ಬಸ, ಇಂಫ್ಲುಯೆಂಜಾ ಮೊದಲಾದವುಗಳನ್ನು ಗುಣಪಡಿಸುತ್ತವೆ

ಕೃಪಯ ಒಂದು ಡಬ್ಬಿ.
ಪೆಪ್ಸ ಸೇವಿಸಿರಿ



PEPS

ವಿಷಹಾರಿ ಶ್ವಾಸನೀಯ ಗುಳಿಗೆಗಳು

ಸ್ವದೇಶಾಭಿಮಾನಿಯಲ್ಲಿ
ನಿಮ್ಮ ಜಾಹೀರಾತುಗಳನ್ನು ಕೊಡಿರಿ

ಸ್ವದೇಶಾಭಿಮಾನಿ

ತಾರೀಕು 24—4—1942

ಆಕ್ರಮಣಗಾರರು— —ಶತ್ರುಗಳು

ಬ್ರಿಟಿಷ್ ಪ್ರಭುತ್ವದ ಮೇಲೆ ಜನರಿಗೆ ಇರುವ ವಿರೋಧ ಭಾವನೆಯಿಂದ ಜಪಾನೀಯರನ್ನು ಸ್ವಾಗತಿಸುವ ಇಲ್ಲವೇ ಜಪಾನರ ಆಕ್ರಮಣ ಕಾಲದಲ್ಲಿ ತಟಸ್ಥವಿರುವ ಕೆಲವು ಮಂದಿಯ ಕುತ್ಸಿತ ಧೋರಣೆಯನ್ನು ನಾವು ಖಂಡಿಸದಿರಲಾಗುವುದಿಲ್ಲ. ಭಾರತದ ಬಳಿ ಶತ್ರುವು ಇಂದು ಬಂದು ನಿಂತಿರುವಾಗ, ನಮ್ಮ ಧೋರಣವು ರಾಷ್ಟ್ರ ವಿಘಾತುಕವಾಗಬಾರದು ಎಂಬ ವಿಚಾರದಲ್ಲಿ ಎಲ್ಲರೂ ಬಹಳ ಜಾಗರೂಕರಾಗಿರಬೇಕು. ಇಂದು ಯಾರಾದರೂ ಜವಾಬ್ದಾರಿ ರಹಿತರಾಗಿ ವರ್ತಿಸಿ ಶತ್ರುವಿನ ಆಕ್ರಮಣಕ್ಕೆ ಆಸ್ಪದ ಮಾಡಿಕೊಡುವರಾದರೆ—ಅದು ಯಾವ ಭಾವನೆಯಿಂದಲೇ ಇರಲಿ—ಅಂಥವರು ದೇಶದ ಮಹಾ ಶತ್ರುಗಳೆಂದು ಗಣಿಸಲ್ಪಡುವರು.

ಈ ಕುರಿತು ನಾವು ಮುಖಂಡರ ಅಭಿಪ್ರಾಯಗಳನ್ನು ಆದರ್ಶವಾಗಿಟ್ಟುಕೊಳ್ಳುವುದು ಸಮಂಜಸವಾಗಿದೆ. ಭಾರತದ ಬಹಳ ಮಂದಿ ಮುಖಂಡರು ಇಂದು ಬ್ರಿಟಿಷ್ ಪ್ರಭುತ್ವವು ಇಲ್ಲಿ ವಹಿಸಿದ ಧೋರಣದ ಬಗ್ಗೆ ವಿರೋಧಾಭಿಪ್ರಾಯವುಳ್ಳವರಾದರೂ, ಜಪಾನರನ್ನು ಸ್ವಾಗತಿಸುವವರಾಗಲಿ, ಅವರ ಆಕ್ರಮಣವನ್ನು ತಟಸ್ಥ ರೀತಿಯಿಂದ ನೋಡಿ ನಿಲ್ಲುವ ಮನೋಭಾವದವರಾಗಲಿ ಆಗಿಲ್ಲ. ಮಹಾತ್ಮಾಜಿಯವರು ಮೊನ್ನೆಮೊನ್ನೆ ಹರಿಜನದಲ್ಲಿ ಒಂದು ಲೇಖನ ಬರೆದು 'ಅಹಿಂಸಾ ರೀತಿಯಿಂದ ಜಪಾನರನ್ನು ಹೇಗೆ ವಿರೋಧಿಸುವುದು?' ಎಂದು ಸ್ಪಷ್ಟಪಡಿಸಿದ್ದಾರೆ. ಶಸ್ತ್ರ ಸಜ್ಜಿತನಾದ ಯೋಧನು ಹೇಗೆ, ಶತ್ರುವಿನೆದುರು ಹೋರಾಡುವನೋ, ಅದೇ ರೀತಿಯ ದೃಢ ನಿರ್ಧಾರದಿಂದ, ಮರಣಕ್ಕಂಜದ ಧೈರ್ಯದಿಂದ—ಅಹಿಂಸಾ ವೀರನಾದರೂ ಶತ್ರುವನ್ನು ಎದುರಿಸತಕ್ಕದ್ದು ಎಂಬುದಾಗಿ ಅವರು ಸ್ಪಷ್ಟಪಡಿಸಿರುವರು.

ನೆಹರು, ಅಜಾದ್, ರಾಜಾಜಿ ಮೊದಲಾದವರ ಅಭಿಪ್ರಾಯವೂ ಖಂಡತುಂಡವಿದೆ. "ಯಾರು ಬಂದರೆ ನಮಗೇನು?" ಎನ್ನುವ ಧೋರಣೆಯನ್ನು ನಾವು ಇಂದೇ ಬಿಟ್ಟುಬಿಡಬೇಕೆಂದೂ, ನಮ್ಮ ದೇಶಕ್ಕೆ ಆಕ್ರಮಣಗಾರರಾಗಿ ಯಾರೇ ಬರಲಿ ಅವರನ್ನು ನಾವು ಎದುರಿಸಲು ಸಿದ್ಧರಿರಬೇಕೆಂದೂ ನೆಹರು ಮೊನ್ನೆ ಕಲ್ಕತ್ತಾದಲ್ಲಿ ಭಾಷಣ ಮಾಡುತ್ತಾ ಸ್ಪಷ್ಟಪಡಿಸಿದರು. ಅವರ ಭಾಷಣದ ಕೆಲವು ಅಂಶಗಳು ಅತ್ಯಂತ ಮನನೀಯವಿವೆ. "ಭಾರತದ ಮೇಲೆ ದಂಡೆತ್ತಿ ಬರುವ ವಿದೇಶೀ ಸೈನ್ಯವು ನಮಗೆ ಸ್ವಾತಂತ್ರ್ಯ ಕೊಡಲು ಬರುವುದಲ್ಲ; ಈ ದೇಶವನ್ನು ಆಕ್ರಮಿಸಿ ವಶಪಡಿಸಿಕೊಳ್ಳಲು ಬರುತ್ತದೆ. ಒಮ್ಮೆ ಅವರು ನಮ್ಮ ದೇಶವನ್ನು ಆಕ್ರಮಿಸಿಕೊಂಡರೆ ಮತ್ತೆ ಅವರನ್ನು ಹೊರ ಹಾಕುವುದು ಕಷ್ಟವಾದೀತು. ವಿದೇಶೀಯರಿಂದ ನಮಗೆ ಸ್ವಾತಂತ್ರ್ಯ ದೊರಕೀತೆಂಬ ಭಾವನೆ ತುಚ್ಛವಾದುದು. ಆಕ್ರಮಣಗಾರರೆದುರು ಜನತಾ ಸೈನ್ಯ ಸ್ಥಾಪಿಸಿ ಯುದ್ಧ ಮಾಡಬೇಕಿತ್ತು; ಆದರೆ ಇಂದು ಸರಕಾರ ನಮ್ಮ ಕೈಯ್ಯಲ್ಲಿಲ್ಲದಿರುವುದರಿಂದ ಅದು ಆಗಲಾರದು; ಆದರೂ ನಾವು ಶರಣಾಗುವ ಮನೋವೃತ್ತಿಯವರಾಗಕೂಡದು. ಹಳ್ಳಿಹಳ್ಳಿಗಳಲ್ಲಿ ಶಾಂತಿ ದಳಗಳನ್ನು ಸ್ಥಾಪಿಸಬೇಕು. ದೇಶವನ್ನು ಸ್ವಾವಲಂಬಿಯಾಗಿ ಮಾಡಬೇಕು." ಎಂದು ನೆಹರುಗಳು ಸ್ಪಷ್ಟಪಡಿಸಿದರು. ಈ ಮಾತುಗಳನ್ನು ಪ್ರತಿಯೊಬ್ಬ ಭಾರತೀಯನೂ ಮನನಮಾಡಬೇಕಾಗಿದೆ.

ಸಿಲೋನ್

ಸಿಲೋನಿನ ಮೇಲೆ ಜಪಾನರ ಧಾಳಿ ಆರಂಭವಾಗಿದೆ; ಜಪಾನರ ಕೆಲವು ಹಡಗಗಳು ಬಂಗಾಳಾ ಕೊಲ್ಲಿಯಲ್ಲಿ ಸಿಲೋನ್ ಕಡೆ ಸಂಚರಿಸುತ್ತಿವೆಯೆಂದು ಸುದ್ದಿ ಬಂದೊಡನೆ, ಕೊಲೊಂಬೋ, ಟ್ರಿಂಕಮಲೆಗಳು ಧಾಳಿಗೀಡಾದ ವಾರ್ತೆಯೂ ಹರಡಿತು. ಆದರೆ ಸಿಲೋನಿನ ಸೇನಾಧಿಪತಿಗಳು ಜಪಾನರ ಆಕ್ರಮಣ ಕಾರ್ಯಕ್ಕೆ ಸಿದ್ಧರಾಗಿ ಸಾಹಸದಿಂದ ಎದುರು ನಿಂತರು ಎಂಬುದು ಸಂತೋಷದ ಸಮಾಚಾರವಾಗಿದೆ. ಈಗ ಕೆಲದಿನಗಳಿಂದ ಸಿಲೋನಿನ ಮೇಲೆ ಧಾಳಿ ಮಾಡಲ್ಪಟ್ಟಿಲ್ಲವೆಂಬುದರಿಂದ, ಸಿಲೋನಿಗೆ ವಿಪತ್ತು ದೂರವಾಯಿತು ಎಂದು ಭಾವಿಸುವಂತೇನೂ ಇಲ್ಲ.

ಜಪಾನ್ನರು ಹಿಂದೂ ದೇಶಕ್ಕೆ ಬರುವುದೂ ಬರದಿರುವುದೂ ಅವರ ಪ್ರಚಂಡ ಸಿದ್ಧತೆಯ ಸಾಧ್ಯಾಸಾಧ್ಯತೆಗಳನ್ನು ಹೊಂದಿಕೊಂಡಿದೆ; ಭಾರತದಂತಹ ವಿಸ್ತಾರವಾದ ದೇಶವನ್ನು ಅವರು ಬೇಗನೇ ಕೈವಶಪಡಿಸಿಕೊಳ್ಳಲಾರರು, ಹಾಗೆಂದು ಭಾರತದಂತಹ ಫಲವತ್ತಾದ ಪ್ರದೇಶವನ್ನು ಆಕ್ರಮಿಸದೆ ಬಿಟ್ಟುಬಿಡುವಂತೆಯೂ ತೋರುವುದಿಲ್ಲ. ಆದರೆ ಸಿಲೋನನ್ನು ಅವರು ಕೂಡಲೇ ಆಕ್ರಮಿಸಲು ಸಾಹಸಪಡಬಹುದು. ಮಿತ್ರ ರಾಷ್ಟ್ರಗಳಿಂದ ಸೈನ್ಯ ಸಾಮಗ್ರಿಗಳು ಹಿಂದೂ ದೇಶಕ್ಕೆ ಬರುವುದನ್ನು ತಪ್ಪಿಸಬೇಕಾದರೆ ಅವರು ಸಿಲೋನನ್ನು ಕೈವಶಮಾಡಿಕೊಳ್ಳಬೇಕು. ಇಲ್ಲವಾದರೆ ಭಾರತವೂ, ಆ ಮೂಲಕ ಚೀನವೂ ಬಲಗೊಂಡರೆ ಈ ಉಭಯ ರಾಷ್ಟ್ರಗಳು ಮುಂದಾಗಿ ಕಾಲಾನುಭಾಗದಲ್ಲಿ ಜಪಾನನ್ನ ಮುರಿದಿಕ್ಕಬಹುದೆಂಬ ಭೀತಿ ಜಪಾನಿಗೂ ಇದ್ದೇ ಇದೆ. ಆದ್ದರಿಂದ ಸಿಲೋನನ್ನು ಹಿಡಿಯಲು ಜಪಾನು ಸಾಧ್ಯವಾದೆಲ್ಲಾ ಸಾಹಸಗಳನ್ನು ಕೂಡಲೇ ಮಾಡದಿರದು!

ಸಿಲೋನಿನಲ್ಲಿ ವಿಮಾನ ರಕ್ಷಣೆ ಪ್ರಬಲವಾಗಿದೆಯೆಂದು ತಿಳಿದುಬರುತ್ತದೆ. ಸಿಲೋನಿನ ವಿಮಾನ ರಕ್ಷಣೆಯನ್ನು ಮುರಿಯಲು ಬೇಕಾದಷ್ಟು ವಿಮಾನಗಳನ್ನು ಜಪಾನು ತಂದಿರಿಸಿಕೊಳ್ಳಬೇಕಾದರೆ, ಸಮೀಪದಲ್ಲಿ ಅದಕ್ಕೆ ನಿಲ್ದಾಣವು ಅವಶ್ಯ. ಇಂತಹ ನಿಲ್ದಾಣವನ್ನು ಪಡೆಯಲು, ಸಿಲೋನ್ ಸಮೀಪದ ಭಾರತದ ತೀರ ಪ್ರದೇಶಗಳನ್ನು ಜಪಾನು ಮೊದಲು ಸ್ವಾಧೀನಪಡಿಸಲು ಯೋಚಿಸಬಹುದಾಗಿದೆ. ಅಂತೂ ಸಿಲೋನ್ ದೊರಕಿತರೆ, ಜಪಾನಿಗೆ ಹಿಂದೂ ಸಾಗರದಲ್ಲಿ ಪ್ರಭುತ್ವ ದೊರೆತಂತೆಯೇ ಆಯಿತು. ಆದರಿಂದ ಸಿಲೋನಿಗೆ ಬೇಗನೇ ವಿಪತ್ತು ಬರಬಹುದೆಂದು ನಾವು ಯೋಚಿಸಬೇಕಾಗಿದೆ.

ಫ್ರಾನ್ಸಿನಲ್ಲಿ ನಾಜೀ ತಂತ್ರ

ಫ್ರಾನ್ಸಿನಲ್ಲಿ ನಾಜೀ ತಂತ್ರವು ಇಂದು ಬಹಳ ನಡೆಯುತ್ತಿದೆ. ಹೇಗಿದ್ದರೂ ಫ್ರಾನ್ಸಿನ ಪತನದ ಬಳಿಕ, ಅದು ನಾಜೀ ಸರಕಾರದ ಕೈಗೊಂಬೆಯೇ ಆಗಿಬಿಟ್ಟಿದೆ. ಇಂದು ಪಿಟೇನರನ್ನು ತಳ್ಳಿಹಾಕಿ, ಜರ್ಮನ್ ಪಕ್ಷಪಾತಿ ಲಾವಲ್ ಸರ್ವಾಧಿಕಾರಕ್ಕೆ ಬಂದಿದ್ದಾರೆ. ಇಷ್ಟರಲ್ಲಿಯೇ ಫ್ರಾನ್ಸಿನಿಂದ ಜರ್ಮನಿಗೆ ನೌಕಾ ಪಡೆಯ ಸಹಾಯವೂ ಕಳುಹಿಸಲ್ಪಡುವುದೆಂಬ ಸುದ್ದಿಯೂ ಬಂದಿದೆ. ಇದರಿಂದ ಫ್ರಾನ್ಸು ಈಗ ನಾಜೀ ಒಳತಂತ್ರಕ್ಕೆ ಸಂಪೂರ್ಣ ಸಿಕ್ಕಿದೆಯೆಂದು ಯಾರಾದರೂ ಅರ್ಥಮಾಡಿಕೊಳ್ಳಬಹುದು,

ಇನ್ನು ಮುಂದೆ ಫ್ರಾನ್ಸಿನ ಸರ್ವಸಂಪತ್ತೂ ನಾಜಿಗಳ ಕೈವಶವಾದಂತೆಯೇ ಸರಿ. ಇದುವರೆಗೆ ಪಿಟೇನರು ನಾಜಿವತ್ತಾಯವನ್ನು ನಿವಾರಿಸಿಕೊಂಡು ಹಾಗೂ ಹೀಗೂ ಸಮಯ ಸಾಗಿಸುತ್ತಿದ್ದರು. ಆದರೆ ಪಿಟೇನರು ಬಹುಕಾಲ ಹಾಗೆ ಮಾಡಲು ಸಾಧ್ಯವಿರಲಿಲ್ಲ. ಹಿಟ್ಲರನ ಒತ್ತಾಯವು ವಿಪರೀತವಾಗುತ್ತಾ ಬಂದಂತೆ, ಪರಿಸ್ಥಿತಿ ಅವರಿಗೆ ವಿರೋಧಿಸಿಂತು ಅವರು ಸ್ಥಾನಚ್ಯುತರಾಗಬೇಕಾಗಿ ಬಂತು. ಇಂದು ಲಾವಲ್ ಫ್ರಾನ್ಸಿನ ಸರ್ವಾಧಿಕಾರಿಯಾಗಿ ಮುಂದೆ ಬಂದಿದ್ದಾರೆ. ಡಾಲರ್ನ್ ಸೇನಾಪತಿಯಾಗಿದ್ದರೆ ಇವರಿಬ್ಬರೂ ಬ್ರಿಟಿಷ್ ದ್ವೇಷಿಗಳೆಂದು ಹೆಸರಾದವರು.

ಲಾವಲ್ ಅಧಿಕಾರಕ್ಕೆ ಬಂದುದರಿಂದ ಯೂರೋಪಿನ ರಾಜಕಾರಣದಲ್ಲಿ ಬಹಳ ಕಳವಳವುಂಟಾಗಿದೆ; ವಿಶೇಷವಾಗಿ ಬ್ರಿಟನು ಅಮೆರಿಕಾಗಳು ತಳಮಳಗೊಂಡಿವೆ. ಫ್ರೆಂಚರು ತಮ್ಮ ನೌಕಾ ದಳವನ್ನು ಜರ್ಮನಿಗೊಪ್ಪಿಸಿದರೆಂಬ ವಾರ್ತೆ ಕೇಳಿಯಂತೂ ಈಗ ಎಲ್ಲರೂ ಫ್ರಾನ್ಸಿನ ಪ್ರಜಾ ಪ್ರಭುತ್ವ ಮಾರಿ ಹೋದಂತಾಯಿತೆಂದು ಹೇಳುತ್ತಿದ್ದಾರೆ. ಮುಂದೆ ಜರ್ಮನಿಯೆದುರು ಮಿತ್ರ ಪಕ್ಷದವರು ದ್ವಿತೀಯ ರಣರಂಗವನ್ನು ಪ್ರಾರಂಭಿಸಲಿರುವರೆಂದು ದಟ್ಟ ಸುದ್ದಿ ಹರಡಿರುವಾಗ, ಹಿಟ್ಲರನು ಈ ರೀತಿ ಫ್ರಾನ್ಸನ್ನು ತನ್ನ ಸಂಪೂರ್ಣ ಕೈಗೊಂಬೆಯಾಗಿ ಮಾಡಿಕೊಂಡು ಇಟ್ಟುದರಲ್ಲಿ ಅರ್ಥವಿಲ್ಲದಿಲ್ಲ!

ನೋಟಗಳು....

ಭಾರತದ ಸಮಸ್ಯೆ ಬಗೆಹರಿಸಲು ರೂಸ್‌ವೆಲ್ಟರು ಮಧ್ಯಸ್ಥಿಕೆ ನಡೆಸುವಂತೆ ಕೇಳಿಕೊಳ್ಳಬೇಕೆಂದು ಅಮೆರಿಕದ ಸೆನೆಟರ್ ವೆಂಡ್‌ವಾಟರರೆಂಬವರು ಸರ್ ಸಪ್ರುಗಳಿಗೊಂದು ತಂತಿ ಕಳುಹಿಸಿದ್ದಾರೆ.

卐

ಭಾರತದ ವಿಷಯದಲ್ಲಿ ಅಮೆರಿಕನರಿಗೆ ಸಹಾನುಭೂತಿಯಿದೆಯೆಂದೂ ಭಾರತ ಬ್ರಿಟನುಗಳೊಳಗೆ ಒಂದು ಒಪ್ಪಂದವಾಗುವುದು ಆ ಎರಡು ದೇಶಗಳಿಗೆ ಮಾತ್ರವಲ್ಲ ಇಡೀ ಪ್ರಪಂಚಕ್ಕೇ ಸಂಬಂಧಿಸಿರುವುದೆಂದೂ ಅವರು ಆ ತಂತಿಯಲ್ಲಿ ಉಲ್ಲೇಖಿಸಿದ್ದಾರೆ.

卐

ಸೆನೆಟರ್ ವೆಂಡ್‌ವಾಟರರ ಈ ಸದಭಿಪ್ರಾಯದ ಬಗ್ಗೆ ನಮಗೆ ಸಂದೇಹವೇನೂ ಇಲ್ಲ; ಭಾರತವು ಸ್ವತಂತ್ರವಾದರೆ ಬ್ರಿಟಿಷರಷ್ಟು ಅಮೆರಿಕನರು ಬೇಸರಪಡದಿರಲೂ ಬಹುದು. ಆದರೆ ಪ್ರೆಸಿಡೆಂಟರು ಮಧ್ಯಸ್ಥಿಕೆ ಮಾಡಬೇಕೆಂದು ಭಾರತೀಯರೇ ಅವರನ್ನು ಯಾಕೆ ಕೇಳಿಕೊಳ್ಳಬೇಕೋ ನಮಗೆ ಅರ್ಥವಾಗುವುದಿಲ್ಲ.

卐

ಅಮೆರಿಕದಿಂದ ಬಂದ ರೂಸ್‌ವೆಲ್ಟರ ರಾಯಭಾರಿ ಕರ್ನಲ್ ಜಾನ್ಸನರನ್ನು ಭಾರತಕ್ಕೆ ಬಂದು ಒಪ್ಪಂದ ಮಾಡುವಂತೆ, ಕಾಂಗ್ರೆಸಿನವರು ಕರೆದರು ಎಂಬುದಾಗಿ ಮೊನ್ನೆಮೊನ್ನೆ ಸರ್ ಕ್ರಿಪ್ಸರೇ ದೂರು ಹೇಳಿದರು. ಕಾಂಗ್ರೆಸಿನವರು ಕರೆದಿಲ್ಲವಾದರೂ, ಅವರು ಕರೆದರೆಂದು ಸರ್ ಕ್ರಿಪ್ಸರಂಥವರೇ ಹೇಳುವಾಗ, ರೂಸ್‌ವೆಲ್ಟರೊಡನೆ ಮಧ್ಯಸ್ಥಿಕೆ ಮಾಡಲು ಭಾರತೀಯರು ಎಲ್ಲಿಯಾದರೂ ಭಿನ್ನವಿಸಿಕೊಂಡರೆ ಇಂತಹ ಕೋಲಾಹಲ ಉಂಟಾದೀತೊ?

卐

ಸರ್ ಕ್ರಿಪ್ಸರನ್ನಾದರೂ ಕಾಂಗ್ರೆಸಿನವರು ಬನ್ನಿರೆಂದು ಕರೆದಿರಲಿಲ್ಲ. ಅವರಾಗಿ ಬಂದರು ಬಂದಂತೆ ಹೋದರು.

卐

ಬ್ರಿಟನು-ಭಾರತಗಳೊಳಗೆ ಒಪ್ಪಂದವಾಗುವುದು ಯಾರಿಗೆ ಅವಶ್ಯ ಬಿದ್ದಿದೆಯೆಂಬುದು ಈಗಿನ ಪ್ರಶ್ನೆ! ಭಾರತೀಯರಿಗೋ, ಬ್ರಿಟಿಷರಿಗೋ, ಅಮೆರಿಕನರಿಗೊ?

卐

ಭಾರತೀಯರಿಗೆ ಅವಶ್ಯವಾದರೆ ಅವರೇ ಕರೆಯಬೇಕು; ಆದರೆ ತಮ್ಮ ದೇಶದ ಸ್ವಾತಂತ್ರ್ಯ ಗಳಿಸದ ಭಾರತೀಯರು ಬೇರೆಯವರಲ್ಲಿ ದೂರಿಡುವುದಿಲ್ಲ. ಬ್ರಿಟಿಷರಾದರೂ ತಾವಾಗಿಯೇ ಇತ್ಯರ್ಥ ಮಾಡಲು ನೋಡುತ್ತಾರಲ್ಲದೆ ಬೇರೆಯವರನ್ನು ಕರೆಯುವುದಿಲ್ಲ. ಇನ್ನು ಅಮೆರಿಕನಿಗೆ ಅವಶ್ಯವಿದ್ದರೆ, ಕರ್ನಲ್ ಜಾನ್ಸನರು ಬಂದು ಪ್ರಯತ್ನಿಸಿದಂತೆ ರೂಸ್‌ವೆಲ್ಟರಾದರೂ ಯಾಕೆ ಇನ್ನೊಮ್ಮೆ ಪ್ರಯತ್ನಿಸಬಾರದು?

"ಭಾಗ್ಯಹೀನ ಸೂಚನೆಗಳು"

ಕ್ರಿಪ್ಸ್ ರಾಯಭಾರದ ಕುರಿತು ಗಾಂಧಿಜಿ

ಸಾಮ್ರಾಜ್ಯಶಾಹೀ ಯಂತ್ರದ ಶಕ್ತಿಯೇ ಹಾಗಿದೆ

ಆ ಅದೃಷ್ಟಹೀನ ಸೂಚನೆ

ಕ್ರಿಪ್ಸ್ ರಾಯಭಾರದ ಕುರಿತು ಗಾಂಧಿಜಿ

'ಯಾವ ಸೂಚನೆಯನ್ನು ನೋಡಿದ ಕೂಡಲೇ, ಸ್ವೀಕರಿಸುವುದು ಬಹಳ ಅಪಹಾಸ್ಯಕರವೆಂದು ತೋರುವುದೋ, ಅಂತಹ ಒಂದು ಸೂಚನೆಯನ್ನು ಬ್ರಿಟಿಷ್ ಸರಕಾರವು ನಮಗೆ ಕಳುಹಿಸಿದ್ದು ಸಹಸ್ರ ಕರುಣಾತ್ಮಕವೆನಬೇಕು. ಅದನ್ನು ಉಗ್ರವಾದಿಗಳಲ್ಲಿ ಉಗ್ರವಾದಿಯೆನಿಸಿದ, ಭಾರತದ ಮಿತ್ರನೆನಿಸಿದ ಸರ್ ಸ್ಟಾಫೋರ್ಡ್ ಕ್ರಿಪ್ಸರಂತವರು ತಂದದ್ದು ಅದರಲ್ಲೂ ಅದೃಷ್ಟಹೀನವೆನಬೇಕು' ಹೀಗೆಂದು ಗಾಂಧಿಜಿ ಕ್ರಿಪ್ಸ್ ರಾಯಭಾರದ ಕುರಿತು ಹರಿಜನದಲ್ಲಿ ಆ ಅದೃಷ್ಟಹೀನ ಸೂಚನೆ ಎಂಬ ಶಿರೋನಾಮೆಯಿಂದ ಒಂದು ಲೇಖನ ಬರೆದಿರುತ್ತಾರೆ ಅದರ ವಿವರ ಹೀಗಿದೆ

'ಸರ್ ಕ್ರಿಪ್ಸರ ಸದಾಶಯದ ವಿಷಯ ನನಗೆ ಸಂಶಯವೇ ಇಲ್ಲ ಭಾರತಕ್ಕೆ ಇದಕ್ಕಿಂತ ಯೋಗ್ಯವಾದುದನ್ನು ಬೇರೆ ಯಾರೂ ತರಲಾರರೆಂದು ಅವರು ನಂಬಿದ್ದರು ಆದರೆ ಕಾಂಗ್ರೆಸು ಸಾಮಂತ ಸ್ವರಾಜ್ಯವನ್ನು ಅಂಗೀಕರಿಸಲಾರದೆಂಬ ವಿಷಯ ಅವರಿಗೆ ತಿಳಿದಿರಬೇಕಿತ್ತು, ಆ ಸೂಚನೆಗಳು ಭಾರತವನ್ನು ಮೂರು ಪಾಲುಮಾಡುವವುಗಳೆಂಬ ವಿಷಯ ಅವರಿಗೆ ಗೊತ್ತಿತ್ತು, ಅದು ಮುಸ್ಲಿಂ ಲೀಗಿನ ಪಾಕಿಸ್ಥಾನವಲ್ಲದಿದ್ದರೂ ಆ ಸೂಚನೆಗಳಲ್ಲಿ ಪಾಕಿಸ್ಥಾನದ ಗರ್ಭಕವಿತ್ತು, ಕೊನೆಗೊಂದರೆ, ಜವಾಬ್ದಾರೀ ಮಂತ್ರಿಗವಶ ಆದರಲ್ಲಿ ರಕ್ಷಣೆಯನ್ನು ಕೊಡುವರೆ ಸೂಚಿತವಾಗಿರುವುದಿಲ್ಲ

'ಇದರ ಕಾರಣವೇನಂದರೆ, ಸರ್ ಕ್ರಿಪ್ಸರಾದರೂ ಸಾಮ್ರಾಜ್ಯಶಾಹೀ ಯಂತ್ರದೊಳಗೆ ಸೇರಿ ಹೋದವರಾದ ಕಾರಣ, ತಿಳಿದೂ ತಿಳಿಯದಂತೆ ಈ ಕೆಲಸಕ್ಕೆ ಕೈಹಾಕಿದರು ಸಾಮ್ರಾಜ್ಯಶಾಹೀ ಯಂತ್ರದ ಶಕ್ತಿಯೆಂದರೆ ಅಂಥಾದ್ದು ಹಿಂದೂದೇಶದಲ್ಲಿ ಆ ಯಂತ್ರದ ಅನುಭವವೂ ಹಾಗೆಯೇ ಇದೆ ಒಮ್ಮೆ ಅದಕ್ಕೆ ಕೈಕೊಟ್ಟವರು ಅವರು ತಮ್ಮ ಸ್ವಕೀಯ ಬುದ್ಧಿಯನ್ನೆಲ್ಲಾ ಕಳಕೊಳ್ಳುವುದು ಮಾತ್ರವಲ್ಲದೆ, ಅಲ್ಲಿ ಹಿಂದೆ ಇದ್ದ ರಾಜಭಕ್ತರಿಗಿಂತಲೂ ಹೆಚ್ಚಿನ ರಾಜಭಕ್ತಿಯನ್ನು ತೋರಿಸುವವರಾಗುತ್ತಾರೆ ಸರ್ ಕ್ರಿಪ್ಸರು, ಸಾಮ್ರಾಜ್ಯಶಾಹೀ ಯಂತ್ರದಿಂದ ದೂರವಿದ್ದರೆ, ಅವರು ಭಾರತದಲ್ಲಿರುವ ತನ್ನ ಮಿತ್ರರೊಡನೆ ಸಂಭಾಷಿಸಿ ಒಂದು ಒಪ್ಪಂದ ಮಾಡಿ ಬಿಡುತ್ತಿದ್ದರು. ಹಾಗಾಗಿಯೇ ನಾನು ಹೇಳುವುದು ಸಾಮ್ರಾಜ್ಯಶಾಹೀ ಯಂತ್ರದಲ್ಲಿ ಈಗ ಸಿಕ್ಕಿರುವ ಅವರು, ಹೀಗೆ ಪತನಹೊಂದುವುದು ನಿರೀಕ್ಷಿತವಾದುದೇ ಆಗಿದೆಯಲ್ಲದೆ ಬೇರೇನೂ ಮಾಡಲು ಸಾಧ್ಯವಿಲ್ಲ

'ಹಿಂದಿನ ವಿಷಯ ಆಲೋಚಿಸುತ್ತಾ ಇರುವುದರಲ್ಲಿಯೇ ಪ್ರಯೋಜನವಿಲ್ಲ ಈಗಿನ ವಿಚಾರವನ್ನು ಅವಲೋಕಿಸುವುದು ಲಾಭದಾಯಕ. ನಾವು ನಮ್ಮ ಜಾಗ್ರತೆ ತಕ್ಕೊಳ್ಳುವವರಾದರೆ, ಬ್ರಿಟಿಷರು ಅವರ ಜಾಗ್ರತೆ ತಕ್ಕೊಳ್ಳುವರು ನಮ್ಮ ತಪ್ಪುಗಳು ಅಥವಾ ನ್ಯೂನತೆಗಳು ಹಲವಾರು ಇವೆ. ನಮ್ಮ ಕುಂದುಗಳಿಗಾಗಿ ನಾವು ಬ್ರಿಟಿಷರನ್ನು ಯಾಕೆ ದೂರಬೇಕು? ನಾವು ಜಾತೀಯ ಸಮಸ್ಯೆಯನ್ನು ಪರಿಹರಿಸದ ವರೆಗೆ ಸ್ವಾತಂತ್ರ್ಯ ಪಡೆವುದು ಸಾಧ್ಯವಿಲ್ಲ ನಾವು ಈ ನಗ್ನ ಸತ್ಯದ ಕುರಿತು ಕಣ್ಮುಚ್ಚುವುದರಲ್ಲಿ ಪ್ರಯೋಜನವಿಲ್ಲ ಈ ಸಮಸ್ಯೆ ಪರಿಹರಿಸುವುದು ಹೇಗೆಂಬುದು ಇನ್ನೊಂದು ವಿಚಾರ. ಈ ಸಮಸ್ಯೆ ಪರಿಹಾರವಾಗದೆ ನಮ್ಮ ಸ್ವಾತಂತ್ರ್ಯ ಸಿಗಲಾರದೆಂದು ಯಾವುದೇ ಒಂದು ಪಕ್ಷ ಅಥವಾ ಎರಡು ಪಕ್ಷಗಳು, ನಿರ್ಧಾರಕ್ಕೆ ಬರದಿದ್ದರೆ ನಮಗೆ ಈ ಸಮಸ್ಯೆ ಪರಿಹರಿಸುವುದೂ ಸಾಧ್ಯವಿಲ್ಲ. ಇದುವರೆಗೆ ಪರಿಹರಿಸಲಾಗದೀ ಸಮಸ್ಯೆಯನ್ನು ಬಗೆಹರಿಸಲು ಎರಡು ದಾರಿಗಳಿವೆ: ಒಂದು ಅಹಿಂಸೆಯ ರಾಜಮಾರ್ಗ, ಇನ್ನೊಂದು ಹಿಂಸಾಮಾರ್ಗ. ಮೊದಲನೆಯ ದಾರಿಯಲ್ಲಿ ಎರಡನೆಯ ಪಕ್ಷದ ಒಪ್ಪಿಗೆಯು ಅವಶ್ಯವಿಲ್ಲ ಎರಡು ಹುಡುಗರು ಒಂದು ಹಣ್ಣಿಗಾಗಿ ಜಗಳಾಡುವುದಿದ್ದರೆ, ಅಹಿಂಸಾ ಮಾರ್ಗವು ಹೀಗೆ, ಅಹಿಂಸಾಗಾಮಿ ಹುಡುಗನು ಎರಡನೆಯವನಿಗೆ ಆ ಹಣ್ಣನ್ನು ವಿವಾದವಿಲ್ಲದೆ ಬಿಟ್ಟುಬಿಡುವುದು ಎರಡನೆ ದಾರಿ ಸಹಜವಾಗಿರುವ ಹಿಂಸಾದಾರಿ. ಅದರಲ್ಲಿ ಒಂದು ಪಕ್ಷ ಸೋಲುವವರೆಗೆ ಇಬ್ಬರೂ ಜಗಳಾಡುವರು ಸ್ವಾತಂತ್ರ್ಯಾಪೇಕ್ಷಿಗಳಾದವರು ಇದರಲ್ಲಿ ಯಾವುದು ಬೇಕೆಂದು ಆರಿಸಬೇಕಾಗಿದೆ ಇದರ ಕುರಿತು ಮುಖ್ಯ ಪಾತ್ರಧಾರಿಗಳು ಈಗಾಗಲೇ ತಮ್ಮ ಅರಿಸುವಿಕೆ ಮಾಡಿದ್ದಾರೆ ಆದರೆ ಜನಸಾಮಾನ್ಯರಿಗೆ ಅವರ ಅಭಿಪ್ರಾಯ ತಿಳಿದಿಲ್ಲ ಆದ್ದರಿಂದ ಅವರು ಸ್ವತಂತ್ರವಾಗಿ ಆಲೋಚಿಸಿ, ಒಕ್ಕಟ್ಟಿಗಾಗಿ ಅಹಿಂಸೆಯ ದಾರಿ ಅನುಸರಿಸುವುದು ವಿಹಿತವಾಗಿದೆ

'ಇಂತಹ ಸಂಯುಕ್ತ ಜೀವನವು ಸಾಧ್ಯ ಮತ್ತು ಆಗತ್ಯವೆಂದರೆ ಹಿಂದುಗಳು ಮುಸ್ಲಿಮರು ಯೋಚಿಸಿದರೆ, ಹೀಗಾಗುವುದು ಸಾಧ್ಯವಿದೆ ಎರಡು ರಾಷ್ಟ್ರವಾಗಬೇಕೆಂದು ಹೇಳುವವರೂ ಅನ್ಯೋನ್ಯ ಸಹಕಾರದಿಂದ ಇರಬಲ್ಲರು, ಆದರೆ, ಅಧಿಕ ಮಂದಿ ಮುಸ್ಲಿಮರು ತಮಗೆ ಹಿಂದುಗಳ ಸಂಪರ್ಕವೇ ಬೇಡವೆಂದು ಬೇರಾಗಲು ಇಷ್ಟಪಟ್ಟರೆ ಅವರನ್ನು ಒಂದುಗೂಡಿಸಲು ಯಾವ ಜಗತ್ತಿನ ಶಕ್ತಿಗೂ ಸಾಧ್ಯವಿಲ್ಲ ಹಿಂದುಗಳು ಪ್ರತ್ಯೇಕವಾಗುವ ವಿಷಯ ಜಗಳಾಡದಿದ್ದರೆ ಮುಸ್ಲಿಮರಿಗೆ ವಿಭಾಗವು ದೊರಕೀತು ನಾನು ನೋಡುತ್ತಿರುವಂತೆ ಈ ರೀತಿಯ ಸಿದ್ಧತೆ ಆಗುತ್ತಲಿದೆ. ಇದರಲ್ಲಿ ಆತ್ಮಹತ್ಯಾ ಧೋರಣವಿದೆ, ಪ್ರತಿಯೊಂದು ಪಕ್ಷವೂ ಬ್ರಿಟಿಷ್ ಇಲ್ಲವೇ ವಿದೇಶೀಯ ಸಹಾಯವನ್ನು ಹಾರೈಸುತ್ತದೆ ಹೀಗಾದರೆ ಸ್ವಾತಂತ್ರ್ಯ ದೂರವಾಗುವುದು ಹೋರಾಟವು ಆಗ ಸ್ವಾತಂತ್ರ್ಯಕ್ಕಾಗಿರಲಾರದು; ಇಬ್ಬರು ಹುಡುಗರಂತೆ, ಊಹಿಸಲ್ಪಡುವ ಹಣ್ಣಿಗಾಗಿರಬಹುದು ನಾನು ಹಾಗಾಗಬಹುದೆಂದು ಆಶಿಸುವುದಿಲ್ಲ ನಾನದನ್ನು ನೋಡಲು ಜೀವಂತನಾಗಿರಬೇಕೆಂದೂ ಹಾರೈಸುವುದಿಲ್ಲ ಸ್ವಾತಂತ್ರ್ಯವಾಗಿ ನಾವು ಐಕ್ಯಗೊಂಡು ಮಾಡುವ ಹೋರಾಟವನ್ನು ನಾನು ನೋಡಬಯಸುತ್ತೇನೆ ನಾವಿನ್ನೂ ನಮ್ಮ ಜಗಳವನ್ನು ಮರೆಯದಿರುವುದು ನಮ್ಮ ದೌರ್ಭಾಗ್ಯ.'

ಜಪಾನ್ ರಾಜಧಾನಿ ಮೇಲೆ ಬಾಂಬು

ಜಪಾನ್ ರಾಜಧಾನಿ ಟೋಕಿಯೋದ ಮೇಲೆ ಮತ್ತು ಯೋಕೋಹಾಮ್ ಮೇಲೆ ಬಾಂಬು ಬಿದ್ದಿದೆಯೆಂದು ಸುದ್ದಿ. ಆದರೆ ಇದು ಲಂಡನಿನಲ್ಲಿ ನಿಶ್ಚಿತವಾಗಿಲ್ಲವಂತೆ

ಫ್ರೆಂಚ್ ಕರಾವಳಿ ಮೇಲೆ ಧಾಳಿ

ಬ್ರಿಟಿಷ್ ವಿಮಾನಗಳು ಫ್ರೆಂಚ್ ಕರಾವಳಿಯ ಮೇಲೆ ಪ್ರಚಂಡ ಧಾಳಿ ನಡೆಸಿದವು.

The Saraswathi Printing Works, Ltd., Mangalore

NOTICE

Is hereby given that the Register of Members and the Transfer Books of the Company will remain closed from 1st May 1942 to 14th May 1942 (both days inclusive).

(By order of the Board)

Office of the The S P Works Ltd, Mangalore 19-4-1942 | U Ganesh Shenai, Manager.



ಶರೀರ ಮತ್ತು ಮೆದುಳು ಚುರುಕಾಗಿರಬೇಕಾದರೆ, ದೇಹದೊಳಭಾಗವು ಶುಚಿಯಿರಬೇಕು ದೇಹದೊಳಭಾಗವು ಶುಚಿಯಾಗಿದ್ದ ಶರೀರವು ಮಾತ್ರ ನಿತ್ಯದ ಮಲಬದ್ಧತೆ ಅಜೀರ್ಣ ಮೊದಲಾದ ಬಾಧೆಗಳಿಂದ ನಿವೃತ್ತಿ ಹೊಂದಿ ಆರೋಗ್ಯವಾಗಿರುವುದು.
ದಿನನಿತ್ಯವೂ ಎಂಡ್ರೂಸ್ ಲಿವರ್ ಸಾಲ್ಟನ್ನು ಉಪಯೋಗಿಸುವುದರಿಂದ ನಿಮ್ಮ ಶರೀರವು ಶುಚಿಯಾಗಿರುವುದು ಅದು ಶರೀರದಲ್ಲಿರುವ ವಿಷವನ್ನು ಹೊರಹಾಕುವುದು ಕಾಳಿಜವನ್ನು ಸರಿಗೊಳಿಸುವುದು ಮಲಕೋಶವನ್ನು ಸರಿಯಾಗಿಸುವುದು ಅಜೀರ್ಣಕಾರೀ ವಿಷಗಳನ್ನು ಇಲ್ಲದೆ ಮಾಡುವುದು ಎಂಡ್ರೂಸ್, ತಂಪುಗೊಳಿಸಿ, ರಕ್ತ ಶುದ್ಧಿಗೊಳಿಸಿ ಇಡೀ ಶರೀರದಲ್ಲಿ ಚೈತನ್ಯ ತುಂಬಿಸುವುದು. ಅದು ಉಪಯೋಗಿಸಿದರೆ ಒಂದು ಚಟವಾಗುವುದಿಲ್ಲ ಖರ್ಚು ಕಡಿಮೆ.

'ದೇಹದೊಳಭಾಗದ ನೈರ್ಮಲ್ಯಕ್ಕೆ ದಿನನಿತ್ಯವೂ ಉಪಯೋಗಿಸಿರಿ

ಆರೋಗ್ಯಕರ ಪಾನೀಯ— ಶಕ್ತಿವರ್ಧಕ ಔಷಧ—



ANDREWS
LIVER SALT

ತಂಪುಗೊಡುವುದು-ಶುಚಿಗೊಳಿಸುವುದು-
ಉಲ್ಲಾಸವೀಯುವುದು-ಚೈತನ್ಯ ಹುಟ್ಟಿಸುವುದು

ಜಾವಾದಲ್ಲಿ ಇನ್ನೂ ಕಾಳಗ!

ಜಾವಾದಲ್ಲಿ ಇನ್ನೂ ಕಾಳಗ ನಡೆಯುತ್ತದಂತೆ. ಅಲ್ಲಿನ ಡಚ್ ಸೈನಿಕರು ಗುಪ್ತ ಸ್ಥಳಗಳಿಂದ ಯುದ್ಧಾಸ್ತ್ರಗಳನ್ನು ತೆಗೆದು ಉಪಯೋಗಿಸುತ್ತಿರುವರಂತೆ.

ಪ್ರಚಂಡ ಧಾಳಿಗೆ ಅಮೇರಿಕದ ಸಿದ್ಧತೆ

ಪೆಸಿಫಿಕ್ಕಿನಲ್ಲಿ ಒಂದು ಪ್ರಚಂಡ ಧಾಳಿಗೆ ನಾವು ಸಿದ್ಧತೆ ಮಾಡುತ್ತಿದ್ದೇವೆಂದು—ಅಮೇರಿಕನ್ ಯುದ್ಧ ಮಂತ್ರಿ ಹೇಳಿದನು

ಭಾರತದ ಸಮಸ್ಯೆ ಬಿಡಿಸಲು ರೂಸ್‌ವೆಲ್ಟರ ಮಧ್ಯಸ್ಥಿಕೆ

ಅಮೇರಿಕನ್ ಸೆನೆಟರ ಸೂಚನೆ

ಭಾರತದ ಸಮಸ್ಯೆಯನ್ನು ಯಶಸ್ವಿಯಾಗಿ ಬಿಡಿಸುವಂತೆ, ಪ್ರೆಸಿಡೆಂಟ್ ರೂಸ್‌ವೆಲ್ಟರನ್ನು ಕೇಳಿಕೊಳ್ಳಬೇಕೆಂದು ಸೆನೆಟರ್ ಜೆ ಆರ್. ರೇನಾಲ್ಡರು ಸರ್ ಸಪ್ರೂರವರಿಗೆ ಒಂದು ತಂತಿ ಕಳುಹಿಸಿದ್ದಾರೆ. ಅಮೇರಿಕದ ಜನರಿಗೆ ಹಿಂದೂಸ್ಥಾನದ ಬಗ್ಗೆ ತುಂಬಾ ಸಹಾನುಭೂತಿಯಿದೆಯೆಂದು ಅವರು ತಿಳಿಸಿರುತ್ತಾರೆ.

ಹಿಂದುಸ್ಥಾನದ ರಕ್ಷಣೆಯ ಬಗ್ಗೆ ವಾವೆಲ್ಲರ ವಿಶ್ವಾಸ

ಹಿಂದೂಸ್ಥಾನದ ರಕ್ಷಣೆಯ ಬಗ್ಗೆ ವಾವೆಲ್ಲರ ವಿಶ್ವಾಸ

"ಜಪಾನವು ಹಿಂದುಸ್ಥಾನದ ಮೇಲೆ ದಾಳಿ ಮಾಡಬಹುದು; ಕೆಲವು ಭಾಗವನ್ನು ಸಹಾ ಆಕ್ರಮಿಸಬಹುದು; ಆದರೆ ಹಿಂದುಸ್ಥಾನವು ಅಡ್ಡಗಾದಿಯನ್ನು ಹಿಡಿಯದಿರುವವರೆಗೆ ಅದನ್ನು ಯಾರೂ ಜಯಿಸಲಾರರು" ಎಂದು ಸೇನಾಪತಿಗಳಾದ ಸರ್ ಆರ್ಚಿಬಾಲ್ಡ ವಾವೆಲ್ಲರು ಹಿಂದೀಯರನ್ನು ಉದ್ದೇಶಿಸಿ ಭಾಷಣ ಮಾಡುತ್ತ ಹೇಳಿದರು.

ಭೂಮಾರ್ಗವಾಗಿ ಮುಂಬಯಿ ಮೇಲೆ ಧಾಳಿಯಾಗುವುದಿಲ್ಲ

ಮುಂಬಯಿ ಮೇಲೆ ಭೂಮಾರ್ಗವಾಗಿ ಧಾಳಿಯಾಗುವ ಸಂಭವವಿಲ್ಲವೆಂದೂ, ಆದರೆ ಒಂದು ಪಕ್ಷ ಜಲಮಾರ್ಗವಾಗಿ ಆಗಬಹುದೆಂದೂ ಮುಂಬೈಯ ಗವರ್ನರ್ ಸರ್ ರೋಜರ್ ಲಮ್ಲೆಯವರು ಆಕಾಶವಾಣಿಯಲ್ಲಿ ಭಾಷಣ ಮಾಡಿ ಹೇಳಿದರು.

ಗೋವೆಯ ಗವರ್ನರರಿಗೆ ಸರ್ವಾಧಿಕಾರ ಹಿಂದುಸ್ಥಾನದಲ್ಲಿರುವ ಪೋರ್ಚುಗೀಸ್ ಪ್ರದೇಶಗಳ ಮೇಲೆ ದಾಳಿಯಾದರೆ, ಆ ಪ್ರದೇಶದ ರಕ್ಷಣೆಯ ವಿಷಯವಾಗಿ ಮನಸ್ಸಿಗೆ ಬಂದಂತೆ ವರ್ತಿಸಲು ಗೋವೆಯ ಗವರ್ನರರಿಗೆ ಸರ್ವಾಧಿಕಾರ ಕೊಡಲಾಗಿದೆ

ಕೋಲಾರದ ಕೂಲಿಗಾರರ ಮೇಲೆ ಗೋಳಿಬಾರು

ಒಬ್ಬನು ಮೃತಪಟ್ಟನು

ಕೋಲಾರ ಚಿನ್ನದ ಗಣಿಯಲ್ಲಿ ಪೋಲಿಸರು ಕೂಲಿಗಾರರ ಮೆರವಣಿಗೆಯ ಮೇಲೆ ಗೋಳಿಬಾರು ಮಾಡಿದರೆಂದೂ ಒಬ್ಬ ಮೃತಪಟ್ಟನೆಂದು ಸುದ್ದಿ.

ಜಪಾನರಿಂದ ನಮಗೆ ಸ್ವಾತಂತ್ರ್ಯ ಸಿಗದು

ಎಂಬುದಾಗಿ ಕಲ್ಕತ್ತದಲ್ಲಿ ಜನರ ಸಭೆಯಲ್ಲಿ ಮಾತನಾಡುತ್ತ ನೆಹರು ಮತ್ತು ಆಜಾದರು ಸ್ಪಷ್ಟಪಡಿಸಿದರು

"ಹಳ್ಳಿಗಳಲ್ಲಿ ನೆಲಸಿರಿ"

ಮಹಾತ್ಮರ ಸಲಹೆ

ನಗರದಲ್ಲಿ ವಾಸಮಾಡುವ ಆಗತ್ಯವಿಲ್ಲದ ಜನರು ನಗರಗಳನ್ನು ಬಿಟ್ಟು ಹೊರಟು ಹೋಗಿ ಹಳ್ಳಿಗಳಲ್ಲಿ ನೆಲಸಬೇಕು. ಅಲ್ಲಿ ಹಳ್ಳಿಗಳ ಸಮಸ್ಯಾಪರಿಹಾರಕ್ಕೆ ಅವರು ಸಹಾಯ ಮಾಡಬಹುದು ಎಂಬುದಾಗಿ ಗಾಂಧಿಜೀ ಸಲದ ಹರಿಜನದಲ್ಲಿ ಬರೆದಿರುವರು.

ಡಿಲ್ಲಿಯನ್ನು ಖಾಲಿಮಾಡುವುದು

ಡಿಲ್ಲಿಯು ಗಂಡಾಂತರಕ್ಕೆ ಒಳಪಡುವ ಪ್ರದೇಶವೆಂದು ತಿಳಿದ ಕೂಡಲೇ ಅಗತ್ಯವುಳ್ಳ ಉದ್ಯೋಗದಲ್ಲಿ ತೊಡಗಿರದವರು ನಗರವನ್ನು ಬಿಟ್ಟು ಹೋಗಬೇಕೆಂದು ಸರಕಾರವು ಸಾರಿದೆ. ನಗರವನ್ನು ಬಿಟ್ಟು ಹೋಗುವವರಿಗೆ ಬೇಕಾದ ವ್ಯವಸ್ಥೆಗಳನ್ನು ಮಾಡಲಾಗುತ್ತದೆ.

ನೆಲ್ಲೂರಲ್ಲಿ ೧೪೪ನೆ ಸೆಕ್ಷನು

ನೆಲ್ಲೂರು ದೇವಸ್ಥಾನದ ಉತ್ಸವ ಕಾಲದಲ್ಲಿ ಮೆರವಣಿಗೆ ಸಾಗುತ್ತಿದ್ದಾಗ ಹಿಂದು ಮುಸ್ಲಿಂ ಗಲಭೆಯುಂಟಾಗಿರುವುದರಿಂದ ಅಲ್ಲಿ ೧೪೪ನೆ ಸೆಕ್ಷನು ಜಾರಿ ಮಾಡಲಾಗಿದೆ. ಗಲಭೆಯಲ್ಲಿ ೧೫ ಜನರಿಗೆ ಗಾಯವಾಗಿ, ೪ ಜನರು ಮರಣಾಂತಿಕ ಆಪತ್ತಿಗೆ ಗುರಿಯಾಗಿರುವರು.

ಮುಂಬಯಿ ಖಾಲಿಯಾಗುತ್ತದೆ

ಕಳೆದ ತಿಂಗಳಿಂದಲೇ ಜನರು ಮುಂಬಯಿ ನಗರವನ್ನು ಬಿಟ್ಟು ಹೊರಟು ಹೋಗತೊಡಗಿದ್ದಾರೆ. ಹೆಚ್ಚಾಗಿ ಹೆಂಗುಸರು ಮಕ್ಕಳು ಹೊರಗೆ ಕಳುಹಿಸಲ್ಪಡುತ್ತಾರೆ. ಅಂತೂ ನಾಲ್ಕು ಲಕ್ಷಕ್ಕಿಂತ ಮಿಕ್ಕಿದ ಜನರು ಇಷ್ಟರಲ್ಲೇ ಬೊಂಬಾಯಿ ಬಿಟ್ಟು ಹೋದರೆಂದು ತಿಳಿದಿದೆ. ನಗರದಿಂದ ಗುಂಪು ಗುಂಪಾಗಿ ಜನರು ಬರುತ್ತಿರುವುದರಿಂದ ಹಳ್ಳಿಗಳಲ್ಲಿ ಉಳಕೊಳ್ಳಲು ಮನೆಗಳು ಸಿಗದಾಗಿವೆ.

ಭೂಮಾರ್ಗವಾಗಿ ಮುಂಬೈಗೆ ಧಾಳಿಯಾಗುವುದಿಲ್ಲ

ಕೋಲಾರದ ಕೂಲಿಗಾರರ ಮೇಲೆ ಗೋಳಿಬಾರು

ಕೊಚ್ಚಿನ್ ಸರಕಾರದ ಸ್ಥಳಾಂತರ

ಯುದ್ಧ ಭೀತಿಯಿಂದ ಕೊಚ್ಚಿನ ಸರಕಾರವು ಎರ್ನಾಕುಲಮಿನಿಂದ ತ್ರಿಚೂರಿಗೆ ಸ್ಥಳಾಂತರ ಮಾಡುವುದೆಂದು ಸುದ್ದಿಯಿದೆ.

ಕರಾವಳಿಯ ಪ್ರತಿಯೊಬ್ಬನಿಗೂ ಶಸ್ತ್ರ ಕೊಡುವುದು

ರಾಜಾಜಿ ಹೇಳಿಕೆ

'ರಾಷ್ಟ್ರೀಯತೆಯೇ ಇಂದಿನ ಪ್ರಬಲ ಅಸ್ತ್ರ, ಜಪಾನ್ ಧಾಳಿಯನ್ನೆದುರಿಸಬೇಕಾದರೆ, ಕರಾವಳಿಯ ಪ್ರತಿಯೊಬ್ಬನಿಗೂ ಶಸ್ತ್ರ ಕೊಡಬೇಕು, ಸಂಬಳದ ಆಶೆ ತೋರಿಸಿಯಲ್ಲ; ದೇಶಪ್ರೇಮದ ಆಧಾರದ ಮೇಲೆ ಅವರನ್ನು ಹುರಿದುಂಬಿಸಬೇಕು. ಎಂದು ರಾಜಾಜಿ ಹೇಳಿದರು.

ಅಮೆರಿಕದ ಶಿಷ್ಟಮಂಡಲ

ಯೊಂದು ಭಾರತಕ್ಕೆ ಬಂದಿದೆ, ಭಾರತದ ಯುದ್ಧ ಕೈಗಾರಿಕೆಗಳ ಪರಿಸ್ಥಿತಿ ಪರಿಶೀಲನೆಗಾಗಿ ಡಿಲ್ಲಿಯಲ್ಲಿ ಅದರ ಸಭೆಕೂಡಿರುವುದು

ಹೇಡಿಯಂತೆ ಊರುಬಿಟ್ಟು ಹೋಗಲಾರೆ ಸಪ್ರೂ ಹೇಳಿದರು

ಆಕ್ರಮಣಗಾರರನ್ನು ಇದಿರಿಸುವೆನಲ್ಲದೆ, ಹೇಡಿಯಂತೆ ಊರುಬಿಟ್ಟು ಹೋಗುವವನಲ್ಲ' ಎಂದು ಸರ್ ಸಪ್ರೂ ಹೇಳಿದರು.

ಎ. ಐ. ಸಿ. ಸಿ ತಾ. ೨೯ಕ್ಕೆ

ಅಖಿಲ ಭಾರತ ಕಾಂಗ್ರೆಸ್ ಕಮಿಟಿ ಸಭೆ ತಾ. ೨೯ಕ್ಕೆ ಅಲಹಾಬಾದಿನಲ್ಲಿ ಸೇರುವುದಾಗಿ ತಿಳಿದುಬಂದಿದೆ

ವಿದ್ಯಾವಂತ ನಿರುದ್ಯೋಗಿಗಳಿಗೆ ಸಹಾಯ

ಮುಂಬಯಿ ಸರಕಾರದ ಯೋಜನೆ

ತಾ. 21ರಂದು ವಿದ್ಯಾವಂತ ನಿರುದ್ಯೋಗಿಗಳಿಗೆ ಸಹಾಯ ಮಾಡುವುದಕ್ಕಾಗಿ ಮುಂಬಯಿ ಸರಕಾರದವರು ಒಂದು ಯೋಜನೆ ತಯಾರಿಸಿದ್ದಾರೆ. ಈ ಯೋಜನೆಯ ಪ್ರಕಾರ ಸರಕಾರದವರು ಕೈಗಾರಿಕೆ ಕಾರ್ಯಗಳನ್ನು ಪ್ರಾರಂಭಿಸುವವರಿಗೆ ಧನಸಹಾಯದ ಮುಖಾಂತರ ಸಹಾಯ ಮಾಡುವರು ವಿವರಗಳನ್ನು ಕೈಗಾರಿಕೆಯ ಡಾಯರೆಕ್ಟರರಿಂದ ತಿಳಿದುಕೊಳ್ಳಬಹುದು. ಕೈಗಾರಿಕೆಯ ಡ್ಯಾರೆಕ್ಟರರೇ ಈ ಹಣದ ಸಹಾಯಗಳನ್ನು ಕೊಡುವರು. ಮತ್ತು ಆ ಹಣದಿಂದ ಉದ್ಯೋಗಕ್ಕೆ ಅವಶ್ಯವಿದ್ದ ಉಪಕರಣಗಳನ್ನು ಮಾತ್ರ ಕೊಳ್ಳಬೇಕು. ಪ್ರತಿಯೊಬ್ಬರಿಗೆ ೧೦೦೦ ರೂ. ಗಿಂತ ಹೆಚ್ಚು ಹಣವನ್ನು ಕೊಡುವದಿಲ್ಲ. ಇದರಲ್ಲಿ ಅರ್ಧ ಹಣವು ದೇಣಿಗೆಯೆಂದೂ ಉಳಿದುದು ಬಡ್ಡಿ ಇಲ್ಲದ ಮತ್ತು ಸಣ್ಣ ಸಣ್ಣ ಕಂತುಗಳಿಂದ ಮರಳಿ ಕೊಡಬಹುದಾದ ಸಾಲವೆಂದೂ ತಿಳಿಯಲಾಗುವದು.

ಮದ್ರಾಸು ಸರಕಾರದ ಔದ್ಯೋಗಿಕ ಖಾತೆ

ಮದ್ರಾಸು ಸರಕಾರದ ಔದ್ಯೋಗಿಕ ಹಾಗು ವ್ಯಾಪಾರಿ ಖಾತೆಯ ಡಾಯರೆಕ್ಟರ ಕಚೇರಿಯು ಬಳ್ಳಾರಿಗೆ ತರಲ್ಪಟ್ಟಿದ್ದು ಒಂದೆರಡು ದಿನಗಳಲ್ಲಿ ಕಾರ್ಯ ಪ್ರಾರಂಭವಾಗುವದು

ಮದ್ರಾಸು ಮತ್ತು ಮಿಲಿಟರಿ ಸುದ್ದಿಯ ನಿರಾಕರಣೆ

ಮದ್ರಾಸು ನಗರವನ್ನು ಮಿಲಿಟರಿಯವರ ವಶಕ್ಕೆ ಕೊಡಲಾಗುವದೆಂದು ಹಬ್ಬಿದ ಸುದ್ದಿಯು ನಿಜವಿರುವುದಿಲ್ಲವೆಂದು ಸರಕಾರದವರು ತಿಳಿಸುತ್ತಾರೆ. ಆದರೆ ನಗರದಲ್ಲಿ ಮಿಲಿಟರಿಯವರು ತಿರುಗಾಡುತ್ತಿರುವರಂತೆ. ಮತ್ತು ಅವರು ಸರಕಾರಿ ಅಧಿಕಾರಿಗಳಿಗೆ ಸಹಾಯ ಮಾಡುತ್ತಿರುವರಂತೆ.

ಶೋಚನೀಯ ನಿಧನ

ಶ್ರೀ. ಉಳ್ಳಾಲ ಮಂಗೇಶರಾವ್, ಬಿ ಎ ಯಲ್ ಟಿ. ಟ್ರೈನಿಂಗ್ ಶಾಲೆಯ ನಿವೃತ ಮುಖ್ಯೋಪಧ್ಯಾಯ ಇವರು ತಮ್ಮ 65ನೇ ವಯಸ್ಸಿನಲ್ಲಿ ತಾ 23ರಂದು ಮಧ್ಯಾಹ್ನ 11 30 ಗಂಟೆಗೆ ಹೃದಯರೋಗದಿಂದ ಅಕಸ್ಮಾತ್ತಾಗಿ ಮೃತರಾದರೆಂಬ ದುಃಖವಾರ್ತೆಯು ಬಂದಿದೆ ಮೃತರು ನಮ್ಮ ಜಿಲ್ಲೆಯ ವಿದ್ಯಾಕ್ಷೇತ್ರದಲ್ಲಿಯೂ ಕನ್ನಡ ಸಾಹಿತ್ಯವೂ ಮತ್ತು ಸಹಕಾರ ಚಳವಳದಲ್ಲಿಯೂ ತುಂಬಾ ಸೇವೆಯನ್ನು ಸಲ್ಲಿಸಿರುವರು ಮೃತರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇವೆ

ಶೋಚನೀಯ ನಿಧನ

ರಾವ್ ಬಹದೂರ್ ಕೆ ಗಣಪತಿ ಕುಡ್ವ, ಬಿ. ಎ ಬಿ ಸಿ ಎ ಮದ್ರಾಸ್ ಹಾರ್ಬರಿನ ನಿವೃತ್ತ ಎಕ್ಸಿಕ್ಯೂಟಿವ್ ಎಂಜಿನೀಯರ್ ಇವರು ತಮ್ಮ 60ನೇ ವಯಸ್ಸಿನಲ್ಲಿ ದೈವಾಧೀನರಾದರೆಂದು ತಿಳಿಸಲು ತುಂಬಾ ವಿಷಾದಪಡುತ್ತೇವೆ ಮೃತರ ಪತ್ನಿ ಪುತ್ರ ಪುತ್ರಿಯರಿಗೆ ನಮ್ಮ ಅನುಕಂಪನೆಯನ್ನು ಸೂಚಿಸುವುದಲ್ಲಿ ಮೃತರ ಆತ್ಮಕ್ಕೆ ಶಾಂತಿಯು ಒದಗಲೆಂದು ಬಯಸುತ್ತೇವೆ.

MONEY TO LEND

Over Forty Lacs of idle funds are awaiting investment in the shape of loans on gold, Government securities, shares of approved companies, life insurance policies having sufficient surrender value, grains and other agricultural produce, etc., etc., You are cordially invited to utilize these facilities.

CANARA BANK, LIMITED.

ESTD. 1906.

ಈ ಬೆಳಿಗ್ಗೆ ಮ್ಯಾಕ್ಲಿನ್ ಮಾಡಿದೆಯೋ?

ಓಹೊ! ಆರೋಗ್ಯಕರವಾದ ಹಲ್ಲುಗಳ ಲಾಭವು ನಿನಗೆ ತಿಳಿದಿದೆ.

ಈ ಮನುಷ್ಯನಿಗೆ ಹಲ್ಲುಗಳು ಕೊಳೆತರೆ ಮತ್ತು ... ಯುವುದಿಲ್ಲವೆಂದು ತಿಳಿದಿದೆ. ಆದುದರಿಂದ ಪ್ರತಿ ರಾತ್ರಿಯೂ ಮತ್ತು ಬೆಳಿಗ್ಗೆಯೂ ಆತನು ಮ್ಯಾಕ್ಲಿನ್ ಪೆರಾಕ್ಸೈಡ್ ಟೂತ್‌ಪೇಸ್ಟನ್ನೇ ಉಪಯೋಗಿಸುತ್ತಾನೆ. ನೀವು ಶುಚಿಯಾದ ಬಾಯಿಯನ್ನೂ ಥಳಥಳ ಹೊಳೆಯುವ ಬಿಳಿಯ ಹಲ್ಲುಗಳನ್ನೂ ಹೊಂದಬಹುದು ಮ್ಯಾಕ್ಲಿನ್ ಉಪಯೋಗಿಸುವುದರಿಂದ.



ಟೋಕಿಯೋ, ಯೋಕಹಾಮಗಳಿಗೆ ಬಾಂಬು!

ಟೋಕಿಯೋ ಮೇಲೆ ಧಾಳಿ

ಟೋಕಿಯೋದ ಮೇಲೆ ಮಿತ್ರಪಕ್ಷದವರ ವಿಮಾನ ಧಾಳಿಮಾಡಿ ಬಾಂಬು ಸುರಿಸಿದರು

ಫ್ರಾನ್ಸಿನಲ್ಲಿ ೫೦ ಜನರನ್ನು ಗಲ್ಲಕ್ಕೇರಿಸಲಾಯಿತು

ಫ್ರಾನ್ಸದಲ್ಲಿ ಜರ್ಮನ್ ಸೈನಿಕರನ್ನು ತುಂಬಿಕೊಂಡು ಹೋಗುತ್ತಿದ್ದ ಒಂದು ರೈಲ್ವೆಗಾಡಿಯನ್ನು ಉರುಳಿಸಿದಕ್ಕಾಗಿ ೫೦ ಜನ ಫ್ರೆಂಚರನ್ನು ಗಲ್ಲಕ್ಕೇರಿಸಲಾಯಿತು

ಮೋರಸಬಿ ಮೇಲೆ ದಾಳಿ

ಮಿತ್ರ ವಿಮಾನದಳಗಳ ಏರಿಕೆಯ ಚಟುವಟಿಕೆಗಳು ಜ. ಮೇಕಾರ್ಥರರ ಕಚೇರಿಯಿಂದ ಪ್ರಕಟಿಸಲ್ಪಟ್ಟಿರುವವು. ಕುಪಾಂಗ ಮತ್ತು ರಾಬೌಲ ನಗರಗಳ ಮೇಲೆ ಭಯಂಕರ ದಾಳಿ ಮಾಡಿ ಬಂದರು, ವಿಮಾನ ನಿಲ್ದಾಣ ಮತ್ತು ಇತರ ಕಟ್ಟಡಗಳಿಗೆ ಧಕ್ಕೆ ಮಾಡಿರುವು.

ಲಾವಲರು ಜರ್ಮನಿಯೊಡನೆ ಸಹಕರಿಸುವರು

ಲಾವಲರು ಮೊನ್ನೆ ರಾತ್ರಿ ಆಕಾಶವಾಣಿಯಲ್ಲಿ ಮಾತನಾಡುತ್ತ ತಮ್ಮ ಧೋರಣವೇನೆಂಬುದನ್ನು ಫ್ರೆಂಚ್ ಜನಾಂಗಕ್ಕೆ ವಿವರಿಸಿ ಯೂರೋಪಿನ ಸಮಸ್ಯೆಯು ಸಮಾಧಾನಕರವಾಗಿ ಬಗೆಹರಿಯಬೇಕಾದರೆ ಫ್ರಾನ್ಸು ಜರ್ಮನಿಯೊಂದಿಗೆ ಸಂಪೂರ್ಣವಾಗಿ ಸಹಕರಿಸಬೇಕೆಂದು ತಿಳಿಸಿದರು. ಮತ್ತು ಇದಕ್ಕಾಗಿ ತಾನೇ ಈ ವಿಚಾರವನ್ನು ಕಾರ್ಯರೂಪಕ್ಕೆ ತರಲು ಶಕ್ತಿಮೀರಿ ಪ್ರಯತ್ನಿಸುವೆನೆಂದು ತಿಳಿಸಿದರು.

ಲಿಬಿಯದಲ್ಲಿ ಅನುಕೂಲ ಹವಾಗುಣ

ಇಲ್ಲಿಯ ಹವೆಯು ಈಗ ಸುಧಾರಿಸಿರುವದರಿಂದ ಪಶ್ಚಿಮ ಮರುಭೂಮಿಯಲ್ಲಿ ನಿನ್ನೆಯಿಂದ ಗಸ್ತಿ ಚಟುವಟಿಕೆಗಳು ಪ್ರಾರಂಭವಾಗಿರುತ್ತವೆ. ವಿಮಾನ ಚಟುವಟಿಕೆಯೂ ವಿಶೇಷವಾಗಿತ್ತು. ಬೆಂಗಾಝಿ ಮೊದಲಾದ ನಗರಗಳ ಮೇಲೆ ಬಾಂಬುಗಳನ್ನು ಹಾಕಲಾಯಿತು.

ಸ್ವತಂತ್ರ ಫ್ರೆಂಚ್ ನಗರಗಳ ಮೇಲೆ ದಾಳಿ

ಸ್ವತಂತ್ರ ಫ್ರೆಂಚರ ಕೆಲವು ನಗರಗಳ ಮೇಲೆ ಜರ್ಮನ್ ಮತ್ತು ಇಟಾಲಿಯನ್ ವಿಮಾನಗಳು ದಾಳಿಮಾಡಿರುವವೆಂದು ಸ್ವತಂತ್ರ ಫ್ರೆಂಚರ ಸುದ್ದಿ ಸಂಸ್ಥೆಯು ತಿಳಿಸುತ್ತದೆ.

* * *

ಈ ದಿನ ಕರ್ಟಿನ್, ಜನರಲ್ ಮ್ಯಾಕಾರ್ಥರ, ನೈಋತ್ಯ ಶಾಂತಸಾಗರದ ಕಮಾಂಡರ್ ಇನ್ ಚೀಫ್ ಜ. ಬ್ಲೇಮಿ, ಜ. ಸದರ್‌ಲ್ಯಾಂಡ್ ಮೊದಲಾದ ಪ್ರಮುಖರ ಗುಪ್ತ ಸಭೆ ಜರುಗಿ ಮಹತ್ವದ ವಿಷಯಗಳ ಬಗ್ಗೆ ಚರ್ಚೆಯಾಯಿತು.

* * *

ಟೋಕಿಯೋ ಮತ್ತು ಮುಖ್ಯ ನಡುಗಡ್ಡೆಯ ಇನ್ನಿತರ ನಗರಗಳಲ್ಲಿ ಕಳೆದ ೧೨ ತಾಸುಗಳಲ್ಲಿ ಹಲವಾರು ಸಲ ವಿಮಾನ ದಾಳಿಯ ಎಚ್ಚರಿಕೆಯನ್ನು ಕೊಡಲಾಗಿತೆಂದು ರೇಡಿಯೋದಲ್ಲಿ ಹೇಳಲಾಯಿತು. ದಾಳಿಯಾಯಿತೋ ಎಂಬುದನ್ನು ಮಾತ್ರ ಹೇಳಲಿಲ್ಲ. ಶನಿವಾರದ ದಾಳಿಯ ವಿವರಗಳು ಜಪಾನ ಸರಕಾರಕ್ಕೆ ಈಗ ತಿಳಿದುಬಂದಿವೆಯಂತೆ.

ಮೊನ್ನೆ ಶನಿವಾರ ದಿವಸ ಅಮೆರಿಕನ್ ವಿಮಾನಗಳು ಟೋಕಿಯೋದ ಮೇಲೆ ದಾಳಿಮಾಡುವ ಮೊದಲು ಜನರಿಗೆ ಎಚ್ಚರಿಕೆ ಕೊಡದಿದ್ದರಿಂದ ಟೋಕಿಯೋ ಮತ್ತು ಇತರ ನಗರಗಳ ರಕ್ಷಣೆಗೆ ಹೊಣೆಗಾರರಾದ ಸೇನಾಪತಿಗಳ ಮೇಲೆ ದಂಡನೆ ಕಾಯಿದೆಯನ್ವಯ ಖಟ್ಲೆ ನಡೆಸಲಾಗುವುದೆಂದು ಆಸ್ಟ್ರೇಲಿಯಾದ ಒಂದು ರೇಡಿಯೋದಲ್ಲಿ ಹೇಳಲಾಯಿತು.

ಲಾವಲರು ಜರ್ಮನಿಯೊಡನೆ ಸಹಕರಿಸುವರು
ಫ್ರಾನ್ಸಿನಲ್ಲಿ ೫೦ ಜನರನ್ನು ಗಲ್ಲಕ್ಕೇರಿಸಲಾಯಿತು
ಹಿಟ್ಲರ್ ಒಪ್ಪಂದಮಾಡಿಕೊಳ್ಳುವನೆ?

ಅಂದಮಾನವನ್ನು ಖಾಲಿಮಾಡುವಾಗ ಅಲ್ಲಿಯ ಚೀಫ್ ಕಮಿಶನರರು ಹಾಗು ಇನಿತರ ೭ ಮಂದಿ ಅಧಿಕಾರಿಗಳು ಅಲ್ಲಿಯೇ ಉಳಿದಿರುವರೆಂದು ತಿಳಿದುಬಂದಿದೆ.

ಕೋರಿಜಿಡೋರ ದ್ವೀಪದ ಮೇಲೆ ಬೀಕರ ದಾಳಿ ಮಾಡಬೇಕೆಂದು ಜಪಾನರ ಯೋಜನೆಯಿದೆ. ಈ ದ್ವೀಪದಲ್ಲಿ ಯುದ್ಧವಾಗಿ ನಿನ್ನೆ ಜಪಾನರ ಒಂದು ಬಾಂಬರ್ ವಿಮಾನ ಉರುಳಿತು. ಮಿಂಡನೋ ದ್ವೀಪದಲ್ಲಿ ಅಮೇರಿಕೆಯ ಕಾಪಿನ ಭಟರ ಚಟುವಟಿಕೆ ಈಗಲೂ ಸಾಗಿದೆ.

ಜರ್ಮನರ ಧಾಳಿ ಮೇ ತಿಂಗಳಲ್ಲಿ?

ಹಿಟ್ಲರನ ವಸಂತಕಾಲದ ಧಾಳಿಯು ಮೇ ತಿಂಗಳಲ್ಲಿ ಪ್ರಾರಂಭವಾಗುವುದೆಂದು ಸ್ಟಾಕ್‌ಹಾಮದ ಮಿಲಿಟರಿ ತಜ್ಞರು ಅಭಿಪ್ರಾಯ ಪಡುತ್ತಾರೆ. ಅಷ್ಟರಲ್ಲಿ ರಷ್ಯದ ಹವೆಯು ಅನುಕೂಲಿಸುವುದಂತೆ

ಇರಾವತಿ ಎಣ್ಣೆಗಣಿಗಳಿಗೆ ಬ್ರಿಟಿಶರೇ ಬೆಂಕಿ ಹಚ್ಚಿದರು

ಇರಾವತಿ ನದಿ ಪ್ರದೇಶದಲ್ಲಿರುವ ಹಲವು ಪ್ರಸಿದ್ಧ ಎಣ್ಣೆಗಣಿಗಳಿಗೆ ಬ್ರಿಟಿಷರೇ ಬೆಂಕಿ ಹಚ್ಚಿ ನಾಶಮಾಡಿದರು ಇದನ್ನು ತಪ್ಪಿಸಬೇಕೆಂದು ಜಪಾನರು ಬಹಳ ಸಾಹಸ ಮಾಡಿದರು. ಅದು ಯಶಸ್ವಿಯಾಗಲಿಲ್ಲ ಈ ಗಣಿಗಳಿಂದ ಹತ್ತು ಲಕ್ಷ ಗೆಲನ್ ಎಣ್ಣೆ ಸಿಗುತಿತ್ತು.

ಸೆಬೂ ಜಪಾನರ ವಶ

ಫಿಲಿಪೈನಿನಲ್ಲಿರುವ ಸೆಬೂ ದ್ವೀಪವು ಜಪಾನರ ವಶವಾಗಿದೆ. ತೆನಾಂಬು ಎಂಬಿನ್ನೊಂದು ದ್ವೀಪದಲ್ಲಿ ಜಪಾನರು ಇಳಿದಿದ್ದಾರೆ ಮೇರಿನಬೀ ಬಂದರದ ಮೇಲೆ ಜಪಾನರೂ ಕುಪಾಂಗದ ಮೇಲೆ ಅಸ್ಟ್ರೇಲಿಯನರೂ ಧಾಳಿಮಾಡುತ್ತಾರೆ.

ಗ್ರೀಸ್‌ನಲ್ಲಿ ದುರ್ಭಿಕ್ಷ

ಗ್ರೀಸ್‌ನಲ್ಲಿ ಕ್ಷಾಮವು ಉಂಟಾಗಿ ಸಾವಿರಾರು ಜನರು ಪ್ರತಿದಿನ ಹೊಟ್ಟೆಗಿಲ್ಲದೆ ಸಾಯುತ್ತಿರುವರಂತೆ

ಲಾವಲರ ಹೊಸ ಮಂತ್ರಿಮಂಡಲ

ಲಾವಲ್ ಮುಖ್ಯ ಮಂತ್ರಿಯಾಗಿ ಅನಾಕ್ರಮಿತ ಫ್ರಾನ್ಸಿನ ಆಡಳಿತ ಸೂತ್ರವನ್ನು ವಹಿಸಿರುವನು. ಇದರಿಂದ ಯೂರೋಪಿನ ಸಮರಾಂಗಣದಲ್ಲಿ ಅನೇಕ ಬದಲಾವಣೆಗಳುಂಟಾಗುವವೆಂದು ತಿಳಿಯಲಾಗಿದೆ. ಏಕೆಂದರೆ ಲಾವಲ್ ಜರ್ಮನ್ ಪಕ್ಷಪಾತಿಯಾಗಿರುವನು. ಹಾಗಾಗಿ ಲಾವಲ್ ಮುಂದೆ ಫ್ರಾನ್ಸಿನ ಸರ್ವಾಧಿಕಾರಿಯಾಗಿ ಜರ್ಮನರು ಹೇಳಿದಂತೆ ಕೇಳಬಹುದು. ಪೆಟೇನರನ್ನು ಮುದುಕರೆಂದೂ ಅದೃಷ್ಟ ಹಾಗೂ ಅದೃಶ್ಯ ಶಕ್ತಿಯಲ್ಲಿ ಅವರು ವಿಶ್ವಾಸವುಳ್ಳವರಾಗಿರುವುದರಿಂದ ಅವರಿಂದೇನೂ ಸಾಧ್ಯವಿಲ್ಲವೆಂದು ದೂಷಿಸಲಾಗಿದೆ. ಲಾವಲ್ ಸರಕಾರದ ವಿಷಯ ಬ್ರಿಟಿಷ್ ಪತ್ರಿಕೆಗಳು ಬಹಳ ಟೀಕಿಸುತ್ತವೆ.

ಲೆನಿನ್‌ಗ್ರಾಡ್ ರಣಕ್ಷೇತ್ರದಲ್ಲಿ ಕಾಳಗ

ನಡೆಯುತ್ತಿದೆ. ಕೆಂಪು ಸೈನಿಕರು ರಣೋತ್ಸಾಹದಿಂದ ಹೋರಾಡುತ್ತಿದ್ದಾರೆ.

ಜಪಾನರ ಹೊಸ ವಿಮಾನ

'ಮಿಟ್ಸು ಬಿಷಿ' ಎಂಬ ಹೊಸ ತರದ ವಿಮಾನವನ್ನು ಜಪಾನರು ಇತ್ತೀಚೆಗೆ ಉಪಯೋಗಿಸುತ್ತಿರುವರೆಂದು ತಿಳಿದಿದೆ. ಈ ವಿಮಾನದಲ್ಲಿ ಒಬ್ಬನೇ ಕುಳಿತು ಕೊಳ್ಳಲು ಸ್ಥಳವಿರುವುದು. ೧೪ ಸಿಲಿಂಡರಿನ ಎಂಜಿನುಗಳಿರುವವು. ಈ ವಿಮಾನದ ಮುಂಭಾಗದಲ್ಲಿ ಎರಡು ಫಿರಂಗಿಗಳಿರುವವು. ಸುಮಾರು ೪೦,೦೦೦ ಅಡಿ ಎತ್ತರದಿಂದ ವಿಮಾನವು ಗಂಟೆಗೆ ೩೫೫ ಮೈಲಿನಂತೆ ೬೦೦ ಮೈಲು ಹೋಗಬಲ್ಲುದು.

ಹಿಟ್ಲರ್ ಒಪ್ಪಂದ ಮಾಡಿಕೊಳ್ಳುವನೆ?

ಹಿಟ್ಲರನು ಮಿತ್ರರಾಷ್ಟ್ರಗಳೊಡನೆ ಒಪ್ಪಂದ ಮಾಡಿ ಕೊಳ್ಳಲು ಕೆಲವು ಸೂಚನೆಗಳನ್ನು ಕೊಟ್ಟು ತನ್ನ ದಾಯಭಾರಿಯನ್ನು ಕಳುಹಿಸಿರುವನೆಂದು ಒಂದು ಸುದ್ದಿ

ಆಸ್ಸಾಮ್ ಕಡೆ ಜಪಾನ್ ಧಾಳಿ

ಅಸಾಮಿನ ಗಡಿಯ ಕಡೆಗೆ ಹೋಗುತ್ತಿರುವ ಜಪಾನೀ ಸೈನ್ಯವನ್ನು ಬರ್ಮಾದ ಚೀನಿ ಸೈನಿಕರು ತಡೆಗಟ್ಟಿದರೆಂದು ತಿಳಿದಿದೆ.

ಫ್ರೆಂಚ್ ನೌಕಾಪಡೆಯನ್ನು ಜರ್ಮನರಿಗೊಪ್ಪಿಸಲಾಯಿತು

ಫ್ರಾನ್ಸ್ ಜರ್ಮನಿ ಒಪ್ಪಂದ

ಫ್ರೆಂಚ್ ನೌಕಾಪಡೆಯನ್ನು ಜರ್ಮನಿಗೊಪ್ಪಿಸುವ ಫ್ರಾನ್ಸ್ ಜರ್ಮನಿ ಒಪ್ಪಂದವು ಈಗ ಆಗಿದೆಯೆಂದು ತಿಳಿದಿದೆ. ಈ ಒಪ್ಪಂದದ ಪ್ರಕಾರ ಫ್ರಾನ್ಸು ತನ್ನ ಯುದ್ಧ ಹಡಗಗಳನ್ನು ಆರು ಬೇರೆ ಬೇರೆ ಒಗೆಯ ಕ್ರೂಜರುಗಳನ್ನು ಒಂದು ವಿಮಾನ ವಾಹನವನ್ನು ಒಂಬತ್ತು ಪ್ಲೋಟಿಲಾಗಳನ್ನು ಜರ್ಮನಿಗೆ ಒಪ್ಪಿಸುವುದಂತೆ ಇವಲ್ಲದೆ ಈಗ ತುಲಾನದಲ್ಲಿ ದುರುಸ್ತಿಯಾಗುತ್ತಿರುವ ವಿನಾಶಿಕೆಗಳನ್ನು ಜರ್ಮನಿಗೆ ಕೊಡಲಾಗುವುದಂತೆ.

ಹಿಟ್ಲರನಿಗೆ ೫೩ ವರ್ಷ

ಹಿಟ್ಲರನಿಗೆ ಇಂದು ೫೩ ವರ್ಷ ಪ್ರಾಯ ತುಂಬಿತು. ಜರ್ಮನರು ಆ ಸಮಾರಂಭವನ್ನು ಉತ್ಸಾಹದಿಂದ ನೆರವೇರಿಸಿದರು.

ರಷ್ಯದಲ್ಲಿ ಜರ್ಮನ್ ಪರಾಪಜಯ

ರಶ್ಯನ್ ವ್ಯೂಹದಲ್ಲಿ ಜರ್ಮನರಿಗೆ ಎಲ್ಲಾ ಕಡೆಗಳಲ್ಲಿಯೂ ಅಪಜಯವೇ ಆಗುತ್ತಿದೆ.

ಮಾಲ್ಟಾದ ವಿಮಾನ ಧಾಳಿ

ಅಪಾರ ಹಾನಿ

ವೈರಿ ವಿಮಾನಗಳು ಮಾಲ್ಟಾದ ಮೇಲೆ ಧಾಳಿಯನ್ನು ಪ್ರಾರಂಭಿಸಿವೆ. ಮೊನ್ನೆ ರಾತ್ರಿ ಆದ ಭಯಂಕರ ಧಾಳಿಯಲ್ಲಿ ವಿಶೇಷ ಪ್ರಾಣಹಾನಿಯೂ ಆಗಿದೆ. ಆಸ್ತಿ ಹಾನಿಯೂ ಆಗಿದೆ, ಏಳು ಜರ್ಮನ ಬಾಂಬರ ವಿಮಾನಗಳನ್ನು ನೆಲಕ್ಕುರುಳಿಸಲಾಯಿತು.

ಹಿಂದಿನ ಮುಖ್ಯ ಮಂತ್ರಿಯನ್ನು ಬಂಧಿಸಿದ್ದೇಕೆ?

ಇಜಿಪ್ತ ಪಾರ್ಲಿಮೆಂಟಿನಲ್ಲಿ ಹೇಳಿಕೆ

ಇಜಿಪ್ತದ ಹಿಂದಿನ ಮುಖ್ಯ ಮಂತ್ರಿಯಾಗಿದ್ದ ಅಲಿ ಮಹರ ಪಾಶಾರವರು ಸರಕಾರದ ಇಚ್ಛೆಯ ವಿರುದ್ಧ ಅಲೆಗ್ಸಾಂಡ್ರಿಯಕ್ಕೆ ಹೋಗುತ್ತಿದ್ದುದರಿಂದ ಅವರನ್ನು ಬಂಧಿಸಬೇಕಾಯಿತೆಂದು ಮುಖ್ಯ ಮಂತ್ರಿ ನಹಾಸ ಪಾಶಾರವರು ಇಜಿಪ್ತ ಪಾರ್ಲಿಮೆಂಟಿನಲ್ಲಿ ಹೇಳಿದರು. ವಿದೇಶ ಸರಕಾರದ ಕೇಳಿಕೆಯಿಂದ ಅವರನ್ನು ಬಂಧಿಸಿಲ್ಲವೆಂದೂ ಹೇಳಲಾಯಿತು.

ಯೆನಾಂಗ್ಯೆಚಿಯಾನ ಪುರಾಕ್ರಮಣ

ಯೆನಾಂಗ್ಯಂಚಿಯನ್ನು ಪುನಃ ವಶಪಡಿಸಿಕೊಳ್ಳಲಾಯಿತೆಂದು ಈಗ ಅಧಿಕೃತವಾಗಿ ತಿಳಿದುಬಂದಿದೆ. ಚೀನಿಯರು ಈಗ ಆ ನಗರವನ್ನು ಆಕ್ರಮಿಸುತ್ತಿರುವರು. ಜಪಾನಿಗಳನ್ನು ನಗರದಿಂದ ೫ ಮೈಲು ಓಡಿಸಲಾಗಿದೆಯೆಂದು ಚುಂಕಿಂಗದಲ್ಲಿ ಹೊರಟ ಪ್ರಕಟಣೆಯಲ್ಲಿ ಹೇಳಿದೆ. ಬ್ರಿಟಿಶ್ ಮತ್ತು ಚೀನಿ ಸಶಸ್ತ್ರ ದಂಡುಗಳು ಹಲವಾರು ದಾಳಿಗಳನ್ನು ಮಾಡಿ ಟಾಂಗೂದ ಹತ್ತಿರವಿದ್ದ ಪೆನ್ಸಿಗನ್ ಎಂಬ ನದಿಯನ್ನು ದಾಟಿದರು.

ಚೀನಿ ದಂಡುಗಳು ಶಾನ್ಸೀನದಲ್ಲಿ ಇನ್ನೂ ಶೌರ್ಯದಿಂದ ಹೋರಾಡುತ್ತಿರುವರು. ಆದರೆ ಸಿಟಾಂಗ್ ರಣಭೂಮಿಯಲ್ಲಿ ಮಾತ್ರ ಪ್ರೋಮಿಸಾ ನಗರದಿಂದ ಸಾವಕಾಶವಾಗಿ ಹಿಂದೆ ಸರಿಯುತ್ತಿರುವವು

ಅಮೇರಿಕೆಯ ವಿಮಾನದಳ ಉತ್ತರ ಬ್ರಹ್ಮದೇಶದ ಒಂದು ನಿಲ್ದಾಣದ ಮೇಲೆ ಒಂದು ಶತ್ರು ಬಾಂಬರವನ್ನು ಉರುಳಿಸಿದವು.

ಇಂಗ್ಲಂಡಕ್ಕೆ ಹಿಟ್ಲರನ ಮುತ್ತಿಗೆ?

ರೂನ್‌ಸ್ಟೆಟರ ನೇಮಕದ ರಹಸ್ಯ

ಮಾರ್ಶಲ್ ರೂನ್‌ಸ್ಟೆಟರನ್ನು ಫ್ರಾನ್ಸದಲ್ಲಿರುವ ಜರ್ಮನ್ ದಂಡುಗಳ ಮುಖ್ಯ ಸೇನಾಪತಿಯನ್ನಾಗಿ ನಿಯಮಿಸಿದ್ದೇಕೆ ಎಂಬ ಬಗ್ಗೆ ಅನೇಕ ಬಗೆಯ ತರ್ಕವಿತರ್ಕಗಳನ್ನು ಮಾಡಲಾಗುತ್ತಿದೆ. ಜರ್ಮನಿಯು ಮೊದಲು ಇಂಗ್ಲಂಡನ್ನು ಮುತ್ತಬೇಕೆಂದೂ ಇದರಿಂದ ಯುದ್ಧವು ಬೇಗನೆ ಕೊನೆಗಾಣುವುದೆಂದೂ ರೂನ್‌ಸ್ಟೆಟರು ಹೇಳುತ್ತಿದ್ದರಂತೆ ಈಗ ಹಿಟ್ಲರನು ಇವರನ್ನೇ ಪಶ್ಚಿಮ ರಣಭೂಮಿಗೆ ಕಳುಹಿಸುವುದರಿಂದ ಇಂಗ್ಲಂಡನ್ನು ಮುತ್ತುವ ಆಲೋಚನೆ ಪುನಃ ಹಿಟ್ಲರನಿಗೆ ಬಂದಿರಬಹುದೇ ಎಂದು ಕೇಳಲಾಗುತ್ತದೆ. ಬಹುಶಃ ಇದೇ ಉದ್ದೇಶದಿಂದ ಹಿಟ್ಲರನು ಫ್ರೆಂಚ್ ನೌಕಾಪಡೆಯನ್ನು ಪಡೆಯಲು ಪ್ರಯತ್ನಿಸುತ್ತಿರಬಹುದು.

ಡಾರ್ಲನರ ಮಂತ್ರಿಮಂಡಳಕ್ಕೆ ಜರ್ಮನರ ಆಗ್ರಹ

ಬ್ರಿಟಿಷರ ವರ್ಚಸ್ಸನ್ನು ದೂರಗೊಳಿಸಿ ದೇಶಕಲ್ಯಾಣ ಮಾಡಿರಿ

ಫ್ರೆಂಚರನ್ನುದ್ದೇಶಿಸಿ ಲಾವಲರು ಮಾಡತಕ್ಕ ಆಕಾಶವಾಣಿ ಭಾಷಣವನ್ನು ಕೇಳುವ ಉತ್ಸುಕತೆಯಿಂದಿರುವಾಗ ಜರ್ಮನರ ಆಳಿಕೆಯಲ್ಲಿದ್ದ ರೇಡಿಯೋಗಳಲ್ಲಿ ಹೊಸ ಮಂತ್ರಿಮಂಡಳದವರು ಫ್ರಾನ್ಸವನ್ನು ಸಜ್ಜುಗೊಳಿಸಿ ಕಡಲಾಚೆಯ ಆಚೆಯಿರುವ ತಮ್ಮ ಶತ್ರುಗಳಾದ ಬ್ರಿಟಿಷ ವರ್ಚಸ್ಸು ಫ್ರಾನ್ಸಿನ ಮೇಲೆ ಎಳ್ಳಷ್ಟೂ ಉಳಿಯದಂತೆ ನೋಡಿಕೊಂಡು ದೇಶದ ಬಂಧ ವಿಮೋಚನೆಯ ಮಾರ್ಗ ತೋರಿಸಬೇಕೆಂದು ಆಗ್ರಹಗೊಳಿಸಿವೆ.

ಪ್ಯಾರಿಸಿನಲ್ಲಿ ಲಾವಲ ಮತ್ತು ಡಾರ್ಲನರಿಗೆ ಭವ್ಯ ಮನೆಗಳಿದ್ದರೂ ಮುಂದೆ ಅವರು ವಿಚಿಯಲ್ಲಿ ತಮಗೆ ನೇಮಕವಾದ ಮನೆಗಳಲ್ಲಿ ಉಳಿಯುವರು. ಡಾರ್ಲನರು ವ್ಹಾಯಿಸಕ್ಕೆ ಹೋದಾಗ ಫ್ರೆಂಚ್ ರಿಪಬ್ಲಿಕಿನ ಅಧ್ಯಕ್ಷರ ಆರಮನೆಯಲ್ಲಿ ವಾಸಿಸುತ್ತಿದ್ದರು.

'ಜವಾಬ್ದಾರಿ ವಹಿಸಲು ಮನಸ್ಸಿಲ್ಲ'

ಹಿಂದೀ ಮುಖಂಡರ ಮೇಲೆ ಸಿಕಂದರರ ಆರೋಪ

ಸರ್ ಸಿಕಂದರ್ ಹಯಾತ್‌ಖಾನರು ಇಲ್ಲಿ ಭಾಷಣ ಮಾಡುತ್ತಾ ಸಂರಕ್ಷಣೆಯ ಜವಾಬ್ದಾರಿಯನ್ನು ಸ್ವೀಕರಿಸಲು ಹಿಂದೀ ಮುಖಂಡರಿಗೆ ಮನಸ್ಸಿರಲಿಲ್ಲ. ಆದ್ದರಿಂದ ಅವರು ಕ್ರಿಪ್ಸ್ ಯೋಜನೆಯನ್ನು ಸ್ವೀಕರಿಸಲಿಲ್ಲ. ಎಂದು ಹೇಳಿದರು. ಆದರೂ ಪಂ. ಜವಾಹರಲಾಲ ಮೊದಲಾದವರು ಜಪಾನರನ್ನು ಎದುರಿಸುವಂತೆ ಜನರಿಗೆ ಹೇಳುತ್ತಿರುವದು ಒಂದು ಸಂತೋಷದ ಸಂಗತಿ. ಆದರೆ ಅವರು ಮುಂದೇನು ಮಾಡುವರೆಂಬುದನ್ನು ನೋಡಬೇಕಾಗಿದೆ ಎಂದರು.

ಜಿಲ್ಲಾ ಸಮಾಚಾರಗಳು

ಮಂಗಳೂರು

ಮುನಿಸಿಪಲ್ ಕೌನ್ಸಿಲು ಮೀಟಿಂಗ್

ತಾ. ೨೦ ರಂದು ಸಂಜೆ ನಮ್ಮ ಮುನಿಸಿಪಲ್ ಕೌನ್ಸಿಲ್ ಮೀಟಿಂಗ್, ಚೆಯರ್‌ಮ್ಯಾನ್ ಶ್ರೀ. ಪಿ. ವೆಂಕಟರಾವ್ ಬಾಳಿಗ ಎಂ. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರುಗಿತು. ಹಿಂದಿನ ಕಮಿಶನರರನ್ನು ಪ್ರಶಂಸಿಸುವ ಒಂದು ಠರಾವು ಮಾಡಿ, ಫಳ್ನೀರು ಟೌನ್ ಪ್ಲಾನಿಂಗಿನಲ್ಲಿ ಉಳಿದ ಹಣವನ್ನು ಬೆಂಕಿಯಾರಿಸುವ ಯುನಿಟಿಗಾಗಿ ಮಂಜೂರು ಮಾಡಿತು. ಬೋಳೂರಿನ ಹಿಂದೂ ಸ್ಮಶಾನದ ದುರುಸ್ತಿಗೆ ರೂ. ೭೦, ಹೂ ಮಾರ್ಕೆಟಿನ ವೃದ್ಧಿ ಕಾರ್ಯಗಳಿಗಾಗಿ ೩೯೭೫ ರೂ. ಗಳನ್ನು ಸೆಂಕ್ಶನ್ ಮಾಡಿ, ಮಂಗಳೂರು ಹಿಂದುಸ್ಥಾನ ಸ್ಕೌಟ್ ಎಸೋಸಿಯೇಶನಿನ ಹುಡುಗಿಯರ ವಿಭಾಗದ ತರಬೇತಿಗಾಗಿ ಮತ್ತು ಎ. ಆರ್. ಪಿ. ಮಾಹಿತಿಗಾಗಿ ಒಬ್ಬಿಬ್ಬರು ಮುನಿಸಿಪಲ್ ಉಪಾಧ್ಯಾಯಿನಿಯರನ್ನೂ ಅದೇ ಸಂಘದ ಕೆಮ್ಮಣ್ಣಿನ ಶಿಬಿರದ ಸ್ಕೌಟ್ ಮಾಸ್ತರರ ಶಿಕ್ಷಣಕ್ಕಾಗಿ ೩ ಮಂದಿ ಮು॥ ಹ್ಯಾ॥ ಎ॥ ಶಾಲೆಗಳ ಉಪಾಧ್ಯಾಯರನ್ನೂ ಕಳುಹಿಸುವುದೆಂದಾಯಿತು. ಮಂಗಳೂರು ಕೈಗಾರಿಕೆ ಮ್ಯುಜಿಯಮ್ಮಿಗೆ ಹಿಂದಿನಂತೆ ವಂತಿಗೆ ಕೊಡುವ ಮಂಗಳೂರು ನಗರಕ್ಕೆ ಇನ್ನೊಂದು ಬೆಂಕಿಯಾರಿಸುವ ಯಂತ್ರ ತರಿಸುವ, ಸ್ಥಳೀಯ ಎ. ಆರ್. ಪಿ. ಆಫೀಸರರ ಪತ್ರದಂತೆ, ಡಾ॥ ಪ್ಲಾ॥ ಓವರ್‌ಸಿಯರ್ ಶ್ರೀ. ಕೆ. ದಿನಕರರಾಯರು, ಗ್ರೂಪ್ ವಾರ್ಡನುಗಳಿಗೆ ಅಗತ್ಯಬಿದ್ದಾಗ ಸಹಕರಿಸುವರೆನ್ನುವ ನಿರ್ಧಾರಗಳಾದುವು. ಜಪ್ಪುವಿನ ಮೆಟರ್ನಿಟಿ ಸೆಂಟರಿನ ಮಂದಿರವನ್ನು ವಿಸ್ತರಿಸಲು ಒಂದು ಯೋಜನೆಯನ್ನು ಅಪೇಕ್ಷಿಸಲಾಯಿತು.

ಗವರ್ನರರ ಫಂಡಿಗೆ ೨ ಕೋಟಿ ಕೂಡಿದ ಮಹೋತ್ಸವ

ಈ ಉತ್ಸವವು ತಾ. ೨೦ ರಂದು ಸಂಜೆ ಮೈದಾನಿನಲ್ಲಿ ಜಿಲ್ಲಾ ಕಲೆಕ್ಟರರ ನೇತೃತ್ವದಲ್ಲಿ ಜರುಗಿತು. ಡಿವಿಜನಲ್ ವಾರ್ ಕಮಿಟಿ ಸೆಕ್ರೆಟರಿ ಶ್ರೀ. ಸಿ. ಎಲ್. ಲೋಬರು ಜಿಲ್ಲಾ ಕಲೆಕ್ಟರರಿಗೆ ಹೂಮಾಲೆ ಹಾಕಿದ ಮೇಲೆ ಜಿಲ್ಲಾ ಕಲೆಕ್ಟರರು ಈ ಯುದ್ಧ ನಿಧಿಗೆ ವಂತಿಗೆ ಕೊಟ್ಟವರ ವಂದನೆಗಾಗಿ, ಸಂತೋಷ ಪ್ರದರ್ಶನಕ್ಕಾಗಿ ಮಾನ್ಯ ನಮ್ಮ ಗವರ್ನರರ ಅಪೇಕ್ಷೆಯಂತೆ ಈ ಸಭೆ ಜರುಗಿಸಲಾಗಿದೆ ಎಂದರು. ಬಳಿಕ ಈ ಯುದ್ಧಕ್ಕೆ ನೀಡಬೇಕಾದ ಸಹಾಯ, ವಿಮಾನ ದಾಳಿಗಳಿಂದ ರಕ್ಷಣೆಯಾಗುವ ಉಪಾಯ ಮುಂತಾದುವುಗಳ ಕುರಿತು ಶ್ರೀಗಳಾದ ಸಿ. ಎಲ್. ಲೋಬೋ, ಸತ್ಯನಾರಾಯಣ, (ವಿದ್ಯಾಧಿಕಾರಿಗಳು) ಅಬ್ದುರ್ ರಹೀಂ ಅಹಮ್ಮದ್, ಶ್ರೀ. ಯು. ಕೃಷ್ಣರಾವ್ (ಸ್ಥಳೀಯ ರಿಕ್ರೂಟಿಂಗ್ ಆಫೀಸರ್), ಶ್ರೀ. ಕೆ. ಸೀತಾರಾಮರಾವ್, ಶ್ರೀ. ಬಿ. ಜೂಗಪ್ಪ (ರೆವಿನ್ಯೂ ಡಿವಿಜನಲ್ ಆಫೀಸರ್) ಇವರು ಮಾತಾಡಿದರು. ಅನಂತರ ಹಲವು ಮಹನೀಯರು ದಾನ ಮಾಡಿದ ಸುಮಾರು ೩೫ ಮುಡಿಗಳನ್ನು ಬಡಬಗ್ಗರಿಗೆ ಹಂಚುವ ಕೆಲಸದ ಆರಂಭಕಾರ್ಯವನ್ನು ಜಿಲ್ಲಾ ಕಲೆಕ್ಟರರು ನೆರವೇರಿಸಿದರು. ಇದಕ್ಕೆ ಮೊದಲು ಮುನ್ಸಿಪಲ್ ಶಾಲಾ ಮಕ್ಕಳಿಗೆ ತಾಲೂಕು ಕಚೇರಿ ವಠಾರದಲ್ಲಿ ಮಹನೀಯರು ದಾನಮಾಡಿದ ತಿಂಡಿ ಹಂಚಲಾಯಿತು.

ನಾಟಕ ನೃತ್ಯ ವಿನೋದ

ಕದ್ರಿ ವಿದ್ಯಾಬೋಧಿನಿ ಹಾ. ಎ. ಶಾಲಾ ವಿದ್ಯಾರ್ಥಿಗಳೂ ಹಿತೈಷಿಗಳೂ (ತಾ. ೧೯ನೇ ಆದಿತ್ಯವಾರ) ಸಂಜೆ ಗಂಟೆ ೬ಕ್ಕೆ ಸರಿಯಾಗಿ ನಾಟಕ ನೃತ್ಯ ವಿನೋದಗಳನ್ನು ಕೆನರಾ ಹೈಸ್ಕೂಲಿನ ಭುವನೇಂದ್ರ ಹಾಲಿನಲ್ಲಿ ಪ್ರದರ್ಶಿಸಿದರು.

ಉಪನ್ಯಾಸ:—ಪಾವಂಜೆ ಶ್ರೀ ಜ್ಞಾನ ಶಕ್ತಿ ಸುಬ್ರಹ್ಮಣ್ಯ ದೇವರ ಸನ್ನಿಧಿಯಲ್ಲಿ ಅಲ್ಲಿಯ ಉತ್ಸವ ಕಾಲದಲ್ಲಿ ಶ್ರೀ॥ ಅತ್ಮಾನಂದಜೀಯವರು ಕರ್ಮಯೋಗದ ವಿಚಾರವಾಗಿಯೂ ತಾ. ೧೭ರಲ್ಲಿ ಭಕ್ತಿಯೋಗದ ವಿಚಾರದಲ್ಲಿಯೂ ಉಪನ್ಯಾಸ ಮಾಡಿದರು.

ಸ್ಥಿರ ಪ್ರತಿಷ್ಠೆ

ಚಿತ್ರಭಾನು ಸಂವತ್ಸರದ ವೈಶಾಖ ಶುದ್ಧ ೫ ಯು (ತಾ. ೨೦—೪—೪೨ನೇ) ಸೋಮವಾರ ದಿವಾಘಟಿ ೬—೫ ಸ್ಟೈ. ಘಂ. ೯—೧೦)ಕ್ಕೆ ಸರಿಯಾದ ವೃಷಭಲಗ್ನದಲ್ಲಿ, ದಿವಂಗತ ಶ್ರೀ. ಆರ್. ಕೆ. ಶೇಟ್ ಇವರು ಮಂಗಳೂರು ಶಹರ ಬಸವನ ಗುಡಿ ಸಮೀಪದಲ್ಲಿರುವ ತಮ್ಮ 'ಸ್ವಂತ ಸ್ಥಳದಲ್ಲಿ ಹೊಸದಾಗಿ ಕಟ್ಟಿಸಿದ ದೇವಸ್ಥಾನದಲ್ಲಿ ಶ್ರೀ. ಲಕ್ಷ್ಮೀನಾರಾಯಣ ದೇವರ ಸ್ಥಿರ ಪ್ರತಿಷ್ಠೆಯನ್ನು ತಾ. ೧೬ರಿಂದ ೨೦ರ ವರೆಗೆ ವೇದೋಕ್ತವಾಗಿ ಮಾಡಿದರು.

ಶ್ರೀ ರಾಮಭಜನಾಮಂದಿರದ ಪ್ರವೇಶ ಮತ್ತು ಏಕಾಹ ಉತ್ಸವ

ಇದೇ ವೈಶಾಖ ಶು॥ ೧೧ಯು (ತಾರೀಕು ೨೬—೪—೪೨ನೇ) ರವಿವಾರ ಸಾಯಂಕಾಲ ೬—೩೦ಕ್ಕೆ ಸ್ಥಳೀಯ ಮಾರಿಗುಡಿ ಬಳಿ ನೂತನವಾಗಿ ಕಟ್ಟಿಸಿದ ಶ್ರೀ ಭಜನಾಮಂದಿರದ ಪ್ರವೇಶ ಮತ್ತು ಮಾರಣೆ ದಿನದ "ಏಕಾಹ" ಮಹೋತ್ಸವವೂ ಜರಗಲಿದೆಯಾಗಿ ತಿಳಿದಿದೆ.

ಬರ್ಮಾ—ಮಲಯ ಬಿಟ್ಟು ಬಂದವರು

ಬರ್ಮಾ ಮತ್ತು ಮಲಯಗಳನ್ನು ಬಿಟ್ಟು ಬಂದವರು ಉದ್ಯೋಗ ಕಾಂಕ್ಷಿಗಳಾಗಿದ್ದರೆ ದಕ್ಷಿಣ ಕನ್ನಡ ಜಿಲ್ಲಾ ಲೇಬರ್ ಆಫೀಸರರಲ್ಲಿ ತಮ್ಮ ಹೆಸರನ್ನು ದಾಖಲುಗೊಳಿಸುವುದು.

ವಿಮಾನ ಧಾಳಿ ಎಚ್ಚರಿಕೆ

ಮಂಗಳೂರಲ್ಲಿ ತಾ. ೧೯ ರಿಂದ ವಿಮಾನ ಧಾಳಿಯ ಎಚ್ಚರಿಕೆ ಕೊಡಲಾಯಿತೆಂದೂ, ಧಾಳಿಯಾದರೆ ಜನರು ಹೇಗೆ ಹೇಗೆ ವರ್ತಿಸಬೇಕೆಂಬ ಬಗ್ಗೆ ಎ. ಆರ್. ಪಿ. ಪ್ರಯೋಗ ನಡೆಯಿತೆಂದೂ ಕೇಳಿಬರುತ್ತದೆ. ಆದರೆ ಈ ಪ್ರಯೋಗವಾದದ್ದು ಹೆಚ್ಚು ಜನರಿಗೆ ತಿಳಿದು ಬಂದಿಲ್ಲವೆಂದು ನಾವು ಕೇಳುತ್ತೇವೆ.

ಕಾಸರಗೋಡು

ನೀಲೇಶ್ವರ:—ತಾ. ೧೦—೪—೪೨ಕ್ಕೆ ಸ್ಥಳೀಯ ಹ್ಯಾಸ್ಕೂಲಿನಲ್ಲಿ ಇಲ್ಲಿನ ಪುರ ಪ್ರಮುಖರ ಮತ್ತು ಜಮೀನ್‌ದಾರರ ಒಂದು ಸಭೆ ಸೇರಿ, ಕೂಡಲೇ ಒಂದು ಶಾಂತಿದಳ ಸ್ಥಾಪನೆ ಮಾಡಲು ೧೫ ಜನರಿರುವ ಒಂದು ಸಮಿತಿಯನ್ನು ನಿರ್ಮಿಸಲಾಗಿದೆ.

ಹಿಂದೂಸ್ಥಾನ ಸ್ಕೌಟ್ ಎಸೋಸಿಯೇಶನಿನ ಪರವಾಗಿ, ಕಾಸರಗೋಡು ತಾಲೂಕಿನ ಸಮೀಪದ ಒಂದು ಹಳ್ಳಿಯಲ್ಲಿ ಇದೇ ಬರುವ ತಾ. ೧೪ರ ವರೇಗೆ ಮದರಾಸಿನ ಮಾನ್ಯ ರತ್ನ ಸಭಾಪತಿ, ಬಿ. ಟಿ. ಇವರ ನೇತೃತ್ವದಲ್ಲಿ ರೋವರ್ ಲೀಡರ್ ಟ್ರೈನಿಂಗ್ ಕ್ಯಾಂಪ್ ಒಂದು ತೆರೆಯೋಣಾಗುವದು. ಈ ಟ್ರೈನಿಂಗ್ ಕ್ಯಾಂಪಿನ ಫೀಸು ಎಲ್ಲವೂ ಕೂಡಿ ರೂ. ೩—೧೨—೦ ಹೆಚ್ಚಿನ ಮಾಹಿತಿಯನ್ನು ಕೆ. ವಿ. ಶೆಣೈ ಗೌ॥ ಕಾರ್ಯದರ್ಶಿ ಹಿಂದೂಸ್ಥಾನ ಸ್ಕೌಟ್ ಎಸೋಸಿಯೇಶನ್ ಕಾಸರಗೋಡು ಅಥವಾ ಡಿಸ್ಟ್ರಿಕ್ಟ್ ಸ್ಕೌಟ್ ಕಮಿಶನರ್ ಇವರಿಂದ ಪಡೆಯಬಹುದು.

ಮುಲ್ಕಿ

ಮಂಗಳೂರು ತಾ. ಬೋ. ಎ. ಶಾಲಾ ಅಧ್ಯಾಪಕರ ಯೂನಿಯನಿನ ಕಾರ್ಯಕಾರಿ ಮಂಡಲದ ಸಭೆಯು ತಾ. ೧೨ನೇ ಪೂರ್ವಾಹ್ನ ಗಂಟೆ ೧೧ಕ್ಕೆ ಕಿನ್ನಿಕಂಬ್ಳ ಬೋ. ಹಾ. ಎ. ಶಾಲೆಯಲಿ ಶ್ರೀ. ಬಾಗ್ಲೋಟಿ ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಜರಗಿ ಅನೇಕ ಠರಾವುಗಳು ಮಂಜೂರಾದುವು. ೧ ಎಲಿಮೆಂಟರಿ ಶಾಲಾ ಅಧ್ಯಾಪಕರ ಪ್ರಾವಿಡೆಂಟ್ ಫಂಡ್ ಲೆಖ್ಖಾಚಾರದಲ್ಲಿ ಕಂಡು ಬರುವ ಹೆಚ್ಚು ಕಡಿಮೆಯು ಯಾವ ಸೂತ್ರಕ್ಕೆ ಅನುಸರಿಸಲ್ಪಟ್ಟಿರುತ್ತದೆ ಎಂದು ತಿಳಿಸುವಂತೆ ಮಾನ್ಯ ಜಿಲ್ಲಾ ಬೋರ್ಡು ಪ್ರಸಿಡೆಂಟರನ್ನು ಕೇಳಿಕೊಳ್ಳುವುದು ೨. ಬೋ. ಎ. ಶಾಲಾ ಅಧ್ಯಾಪಕರಿಗೆ ಯುದ್ಧಭತ್ತೆಯನ್ನು ಕೊಡುವಂತೆ ಮಾನ್ಯ ಪ್ರಸಿಡೆಂಟರು ಸರಕಾರಕ್ಕೆ ಬರೆಕೊಳ್ಳುವಂತೆ ಕೇಳಿಕೊಳ್ಳುವುದು ೩ ಸಾದಿಲ್ವಾರು ದರವನ್ನು ಆದಷ್ಟು ಹೆಚ್ಚಿಸುವಂತೆ ಕೇಳಿಕೊಳ್ಳುವುದು. ೪ ಉಪಾಧ್ಯಾಯರು ತಮ್ಮ ರಿಪೋರ್ಟುಗಳನ್ನು ತಾವು ಕಾಗದದಲ್ಲಿ ಬರೆಕೊಳ್ಳಲು ಪರವಾನಿಗಿ ಕೊಡಬೇಕೆಂದು ಕೇಳಿಕೊಳ್ಳುವುದು.

ಪಾಣೆಮಂಗಳೂರು ರಾಜಕೀಯ ಪರಿಷತ್ತು

ಈ ಸರ್ಕಲಿನ ಪ್ರಥಮ ಪರಿಷತ್ತು ಇದೇ ತಾ. ೨೫—೨೬ರಲ್ಲಿ ಜರಗುವುದು; ಹುಬ್ಬಳ್ಳಿಯ ಶ್ರೀ. ರಂಗನಾಥ ರಾಮಚಂದ್ರ ದಿವಾಕರರು ಇವರು ಇದರ ಅಧ್ಯಕ್ಷತೆ ವಹಿಸುವರು. ಶ್ರೀಮತಿ ಕೃಷ್ಣಾಬಾಯಿ ಪಂಜೀಕರ್‌ರವರು ಧ್ವಜವಂದನೆ ನೆಡೆಸುವರು; ಶ್ರೀ. ಕೆ. ಆರ್. ಕಾರಂತ ಎಂ. ಎಲ್. ಎ., ಅವರು ಪರಿಷತ್ತಿನ ಉದ್ಘಾಟನೆ ಮಾಡುವರು.

ಕಾರ್ಕಳ

ಯುದ್ಧ ಸಹಾಯ ಸಭೆ:—ಮದ್ರಾಸು ಗವರ್ನರರ ಯುದ್ಧ ಸಹಾಯ ನಿಧಿಯು ಎರಡು ಕೋಟಿ ರೂಪಾಯಿಗಳನ್ನು ಮೀರಿದ ಸಂಬಂಧ ಆ ನಿಧಿಗೆ ಹಣ ವಂತಿಗೆ ಕೊಟ್ಟವರಿಗೆ ಗವರ್ನರರ ಕೃತಜ್ಞತೆಗಳನ್ನು ಸೂಚಿಸಲಿಕ್ಕಾಗಿ ಒಂದು ಸಭೆಯು ತಾ. ೭೦ರ ದಿನ ಶ್ರೀ. ವಕೀಲ್ ಕೆ. ಸದಾಶಿವ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ತಹಶಿಲ್ದಾರ್ ಶ್ರೀ. ಯಂ. ಅಪ್ಪುರಾಯರು ಧನ್ಯವಾದಗಳನ್ನು ಕೊಟ್ಟ ಬಳಿಕ ಸಭೆಯು ಮುಗಿಯಿತು.

ಉಡುಪಿ

ಪರವೂರುಗಳಿಗೆ ಅಕ್ಕಿ ಹೋಗುವುದನ್ನು ತಡೆಗಟ್ಟಿರಿ

ದಕ್ಷಿಣ ಕನ್ನಡ ಜಿಲ್ಲೆಯಿಂದ ಅಕ್ಕಿ ಮೊದಲಾದ ನಿತ್ಯೋಪಯೋಗದ ಧಾನ್ಯಗಳು ಪರವೂರುಗಳಿಗೆ ಹೋಗುವುದನ್ನು ಮನಗಂಡ ಉಡುಪಿಯ ಹಲವರು ಹಾಗೆ ಹೋಗುವುದನ್ನು ತಡೆಗಟ್ಟಬೇಕಾಗಿ ಜಿಲ್ಲಾ ಕಲೆಕ್ಟರ್ ದೊರೆಗಳವರಿಗೆ ಮನವಿಯೊಂದನ್ನು ಕಳುಹಿಸಿರುವರು. ಉಡುಪಿ ತಾಲೂಕಿನಿಂದ ಅಕ್ಕಿಯು ಹಂಗಾರಕಟ್ಟೆ ಬಂದರದಿಂದ ಗೋವಾ ಮೊದಲಾದ ಸ್ಥಳಗಳಿಗೆ ಒಯ್ಯಲ್ಪಡುತ್ತಿದೆಯಾಗಿ ಸಹಾ ಸೂಚಿಸಲ್ಪಟ್ಟಿದೆ.

ಸಂಪೂರ್ಣ ಬ್ಲೇಕ್ ಔಟ್

ತಾ. ೧೩ ರಿಂದ ಸಂಪೂರ್ಣ ಬ್ಲೇಕ್‌ಔಟ್ ಜ್ಯಾರಿಗೆ ಬಂದಿದೆ

ಪಾಕಿಸ್ಥಾನ ನಿಷೇಧ ದಿನ

ಬರುವ ಮೇ ತಿಂಗಳ ತಾರೀಕು ೧೦ನ್ನು 'ಪಾಕಿಸ್ಥಾನ ನಿಷೇಧ ದಿನ'ವನ್ನಾಗಿ ಆಚರಿಸಬೇಕೆಂದು ಅಖಿಲ ಭಾರತ ಹಿಂದೂ ಮಹಾ ಸಭೆಯವರು ಅಪ್ಪಣೆ ಕೊಟ್ಟಿರುತ್ತಾರಾಗಿ ತಿಳಿದಿದೆ.

ಖಾದಿ ಮಾರಾಟ

ರಾಷ್ಟ್ರೀಯವಾರದ ನಿಮಿತ್ತ ಪುತ್ತೂರಲ್ಲಿ ಖಾದಿ ಮಾರಾಟದಿಂದ ರೂಪಾಯಿ ೧೧೦೦ಕ್ಕೂ ಮೇಲ್ಪಟ್ಟು ಸಂಗ್ರಹವಾಗಿರುತ್ತದೆಂದು ತಿಳಿದು ಬಂದಿದೆ.

ಪುತ್ತೂರು

ಪುತ್ತೂರು ದ. ಕ. ಕೃಷಿಕರ ಸಹಕಾರಿ ಸಂಘದವರು ಪುತ್ತೂರು ತಾಲೋಕು ಗುತ್ತಿಗಾರಿನಲ್ಲಿ ನೂತನವಾಗಿ ಕಟ್ಟಿಸಿದ ಬಂಡಸಾಲೆಯ ಪ್ರವೇಶೋತ್ಸವವು ಸಹಕಾರಿ ಸಂಘಗಳ ಡಿ. ರಜಿಸ್ಟ್ರಾರರಾದ ಶ್ರೀ. ಕೆ. ಅಚ್ಯುತನ್ನಾಯರ್ ಇವರ ನೇತೃತ್ವದಲ್ಲಿ ತಾ॥ ೨೦ ಬೆಳಗ್ಗೆ ಜರಗಿತು.

ದೇವಸ್ಥಾನದ ಜೀರ್ಣೋದ್ಧಾರ

ನೆಟ್ಟಣಿಗೆ ಗ್ರಾಮದ ಶ್ರೀ. ಮಹಾಲಿಂಗೇಶ್ವರ ದೇವಸ್ಥಾನದ ಜೀರ್ಣೋದ್ಧಾರವಾಗಿದೆ.

ಬೋ॥ ಹಾ॥ ಎಲಿ॥ ಶಾಲೆಯ ವರ್ಧಂತಿ—ಹೆಬ್ರಿ

ಈ ಶಾಲೆಯ ವರ್ಧಂತಿ ಉತ್ಸವವು ತಾ.೧೫ಗೆ ಶ್ರೀ. ಎ. ಬಿ. ಶೆಟ್ಟಿ ಎಂ. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರುಗಿತು. ಬೋರ್ಡ್ ಪ್ರಸಿಡೆಂಟ್ ಡಾ. ವಿಠ್ಠಲ ಶೆಟ್ಟರೂ ಈ ಸಮಾರಂಭಕ್ಕೆ ದಯಮಾಡಿಸಿದ್ದರು. ಬಹುಮಾನ ವಿತರಣೆ, ವಿವಿಧ ವಿನೋದಾವಳಿಗಳು ಇದ್ದುವು.

ಪಾವಂಜೆ

ಸೇವೆ: ಶ್ರೀಯುತ ಹೆಜಮಾಡಿ ಕೃಷ್ಣರಾಯರು ಸ್ವರ್ಗವಾಸಿ, ತಮ್ಮ ಜ್ಯೇಷ್ಠ ಪತ್ನಿ ಶ್ರೀಮತಿ ವರದಾದೇವಿಯವರ ಸ್ಮರಣಾರ್ಥವಾಗಿ ಪಾವಂಜೆ ಶ್ರೀಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನದ ಒಳ ಅಂಗಣಕ್ಕೆ ಶಿಲೆಕಲ್ಲು ಮಡಾಯಿಸಿ ಅವರ ಹೆಸರು ಶಾಶ್ವತವಾಗಿ ಉಳಿಯುವಂತೆ ಮಾಡಿದರು. ತದ್ವಾರಾ ತಮ್ಮ ಕುಲದೇವರ ಪ್ರಸನ್ನತೆಗಾಗಿ ಶಕ್ತಿಮೀರಿ ತ್ಯಾಗಮಾಡಿ ಪುಣ್ಯ ಭಾಗಿಗಳಾದರೆಂದು ತಿಳಿಸಲು ಆ ದೇವಳದ ಮೊಕ್ತೇಸರರು ಸಂತೋಷ ಪಡುತ್ತಾರೆ. ಶ್ರೀ. ಸ್ವಾಮಿಯು ಅವರಿಗೆ ಚಿರಾಯುರಾರೋಗ್ಯ ಸಂಪತ್ತು ಸದ್ಬುದ್ಧಿಗಳನ್ನು ದಯಪಾಲಿಸಲಿ.

ಕರ್ನಾಟಕ

"ದಿ. ಕೆನರಾ ಕುಲಾಲರ ಸುಧಾರಕ ಸಂಘ, ಮುಂಬೈ"

ಈ ಸಂಘದ ಹನ್ನೆರಡನೇ ವಾರ್ಷಿಕಾಧಿವೇಶನವು ತಾ. ೫ ರಂದು ಯಂ. ಕೆ. ಮೆಂಡನರವರ ಅಧ್ಯಕ್ಷತೆಯಲ್ಲಿ ಜರಗಿತು. ದೇವತಾ ಪ್ರಾರ್ಥನೆಯಾ ಬಳಿಕ, ೧೯೪೧ನೇ ಗತವರ್ಷದ ಆಯವ್ಯಯಗಳ ಲೆಕ್ಕಪತ್ರ ವರದಿ ವಾಚನವಾಗಿ ಸಂಘದ ಹಿತಚಿಂತಕರ ಸಂದೇಶಗಳನ್ನು ಓದಿ ೧೯೪೨ನೇ ಇಸವಿಗೆ ಕಾರ್ಯನಿರ್ವಾಹಕ ಮಂಡಲಿ ಆರಿಸಲಾಯಿತು. ಸಂಘದ ರಜಿಸ್ಟ್ರಿ ಕ್ರಮ ನಿಬಂಧನೆಯನ್ನು ಸಭೆಯ ಮುಂದಿಟ್ಟು ಪರಿಶೀಲಿಸಲಾಗಿ ಅವಿರೋಧವಾಗಿ ಮಂಜೂರಾತಿ ಹೊಂದಿತು. ಮಾತ್ರವಲ್ಲದೆ, ದಿ. ಕೆನರಾ ಕುಲಾಲರ ಸುಧಾರಕ ಸ್ಕೌಟ್ ಎಸೋಸಿಯೇಷನ್" ಎಂದಿದ್ದ ಸೇವಾದಳದ ಹೆಸರನ್ನು ಇನ್ನು ಮುಂದಕ್ಕೆ ಸಂಘದ ಸೇವಾದಳವೆಂದು ಮಾರ್ಗದಿಸಬೇಕೆಂಬುದಾಗಿ ನಿರ್ಣಯವಾಗಲು ಪ್ರಕೃತ ೨೫ ಮಂದಿಯನ್ನು ವಿವಿಧ ಉಪಸಮಿತಿಗಳ ಸದಸ್ಯರನ್ನಾಗಿ ಆರಿಸಲಾಯಿತು. ಆ ಮೇಲೆ, ವರದಿಯ ವರ್ಷದಲ್ಲಿ ವರ್ಗಣಿ ವಸೂಲಿ ಮತ್ತು ಹೆಚ್ಚಿನ ಧನಸಂಗ್ರಹ ಮಾಡಿದವರಿಗೆ ಪಾರಿತೋಷಕ ಹಂಚಿದ ಬಳಿಕ, ಸಂಘದ ಸದಸ್ಯರಲ್ಲಿ ಕೆಲವರು ಸಂದರ್ಭೋಚಿತವಾದ ಭಾಷಣವನ್ನಿತ್ತರು. ಸಭಾಧ್ಯಕ್ಷರು ಭಾಷಣವಿತ್ತರು.

ಹುಬ್ಬಳ್ಳಿಯಲ್ಲಿ ಅಣೆಕಲ್ಲಿನ ಮಳೆ

ಹುಬ್ಬಳ್ಳಿಯಲ್ಲಿ ತಾ. ೧೯ ರಂದು ಸಂಜೆಗೆ ಅಣೆಕಲ್ಲಿನ ಮಳೆ ಸುಮಾರು ೪೫ ನಿಮಿಷಗಳ ವರೆಗೆ ಆಯಿತೆಂದೂ, ಗಂಡಸರೂ ಹೆಂಗಸರೂ ಉತ್ಸಾಹದಿಂದ ಆ ಮಳೆಯಲ್ಲಿ ನೆನೆ ನೆನೆದು ಆಡುತಿದ್ದಾರೆಂದೂ, ಕೆಲವರು ಅಣೆಕಲ್ಲುಗಳನ್ನು ನೆಲದಿಂದ ಹೆಕ್ಕುತಿದ್ದರೆಂದೂ ಒಂದು ಸುದ್ದಿ ಬಂದಿದೆ. ಆಣೆಕಲ್ಲಿನ ಈ ಮಳೆಯ ಕಾಲದಲ್ಲಿ ಜನರಲ್ಲಿ ಬಹು ವಿಶೇಷವಾದ ಆನಂದವುಂಟಾಗಿತ್ತು.

ಎಲ್ಲೂರು

ಜಲಿಯನ್ ವಾಲಾ ಬಾಗ್ ದಿನಾಚರಣೆಯು ಎಲ್ಲೂರು ಫಾರ್ಮ್ಸ್‌ನ ಮೆನೇಜರ್ ಶ್ರೀ. ಎಸ್. ಕೆ. ಗೋವಿಂದರಾಯರ ಅಧ್ಯಕ್ಷತೆಯಲ್ಲಿ ಎಲ್ಲೂರು ದೇವಾಲಯದ ವಠಾರದಲ್ಲಿ ಜರಗಿತು.

ಬೆಳ್ಳಾರೆ

ಕಳೆದ ಫೆಬ್ರುವರಿಯಲ್ಲಿ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯವರಿಂದ ನಡೆಸಲ್ಪಟ್ಟ ಪ್ರಾರಂಭಿಕ ಪರೀಕ್ಷೆಗಳಲ್ಲಿ ಬೆಳ್ಳಾರೆ ಸೆಂಟರಿನಲ್ಲಿ ಪರೀಕ್ಷೆಕೊಟ್ಟು ತೇರ್ಗಡೆಯಾದವರು, ಶ್ರೀ. ಬಿ. ಯುಪ್, ಗೋವಿಂದಯ್ಯ ಪ್ರಾಥಮಿಕದಲ್ಲಿ ಫಸ್ಟ್ ಕ್ಲಾಸಿನಲ್ಲೂ ಮತ್ತು ಶ್ರೀಗಳಾದ ಕೋಟಿ ಸಾದಿಪ್ರಿಯರು, ಕೆ. ವಾಸುದೇವ ಎಲಚಿತ್ತಾಯ, ಯಮ್. ಕೃಷ್ಣ ಮಂಡೆಚ್ಚ ಈ ಮೂವರು ಎರಡನೆ ತರಗತಿಯಲ್ಲಿಯೂ ತೇರ್ಗಡೆ ಹೊಂದಿದರು. ಶ್ರೀಮತಿಯವರಾದ ಕೆ. ಸರಸ್ವತಿ ಮತ್ತು ಕೆ. ಲಲಿತಾ ಇವರು ಮಧ್ಯಮದಲ್ಲಿ ತೇರ್ಗಡೆಯಾಗಿರುತ್ತಾರೆ.

ಸಿನೆಮಾ ಪುಟ

ಚಾರ್ಲಿ ಚಾಪ್ಲಿನ್ ಚಟುವಟಿಕೆಗಳು

ಚಾರ್ಲಿ ಚಾಪ್ಲಿನ್ ವಿಷಯ ವಿಶೇಷಸುದ್ದಿಗಳು ಆತನು ಈಗ ಹಲವು ಚಿತ್ರಗಳನ್ನು ತಯಾರಿಸುತ್ತಿದ್ದಾನೆ. ವಿಶೇಷ ಚಟುವಟಿಕೆಯಿಂದ ಇದ್ದಾನೆ. 'ಲೇಡಿ ಕಿಲ್ಲರ್' ಎಂಬುದು ಅವನ ಹೊಸ ಚಿತ್ರ. ಇನ್ನೂ ಎರಡು ಚಿತ್ರಗಳ ತಯಾರಿ ಆಗುತ್ತಿದೆ. ದಿ ಗೋಲ್ಡ್ ರಶ್' 'ದಿ ಸರ್ಕಸ್' 'ಸಿಟಿ ಲೈಟ್ಸ್' ಚಿತ್ರಗಳು ಈಗ ಹೊಸರೂಪ ತಾಳುತ್ತಿವೆ. ಚಾರ್ಲಿ ಅವುಗಳನ್ನು ನವೀಕರಿಸುತ್ತಿರುವನು.

ಪ್ರಸಿದ್ಧ ನಟನಟಿಯರಿದರಲ್ಲಿದ್ದಾರೆ

ಹೋಲಿವುಡ್ಡಿನಲ್ಲಿ ಈಗ 'ಟೇಲ್ಸ್ ಒಫ್ ಮೆನ್ ಹಟನ್' ಎಂಬೀ ಚಿತ್ರ ಸಿದ್ಧವಾಗುತ್ತಿದೆ ಚಾರ್ಲೆಸ್ ಬೋಯರ್, ರಿಟಾ, ಹೇವರ್ತ್, ಥೋಮಸ್ ಮಿಟಿಲ್, ಜಿಂಜರ್ ರೋಜ್ರಸ್, ಹೆನ್ರಿಫೊಂಡಾ, ಚಾರ್ಲ್ಸ್‌ಲಾಪ್ಟನ್, ಎಲ್ಸಾಲಂಚೇಸ್ಟರ್ ವಿಕ್ಟರ್ ಫ್ರಾನ್ಸಿಸ್, ಎಡ್ವರ್ಡ್ ಜಿರೋಬಿನ್‌ಸನ್, ಡಬ್ಲ್ಯು. ಸಿ. ಫಿಲೋಸ್, ಪಾಲ್ ರೋಬ್‌ಸನ್, ಹಾಲ್ ಜೋನ್ಸನ್ ಚೋರ್ ಮೊದಲಾದವರು ಇದರಲ್ಲಿ ನಟಿಸುವರು.

ಮದ್ರಾಸಿನ ಸ್ಟುಡಿಯೋ ಥಿಯೇಟರುಗಳ ದುರವಸ್ಥೆ

'ಬ್ಲೇಕ್‌ಔಟ್' ಮತ್ತು 'ವಾಕ್‌ಔಟ್'ಗಳ ದೆಸೆಯಿಂದಾಗಿ ಮದ್ರಾಸಿನ ಹಲವು ಸ್ಟುಡಿಯೋಗಳು ಮತ್ತು ಥಿಯೇಟರುಗಳು ಸುಮ್ಮಗಿರಬೇಕಾದ ದುರ್ದಶೆಯುಂಟಾಗಿದೆ ನಟನಟಿಯರು ಮದ್ರಾಸಿನಲ್ಲಿರಲು ಒಪ್ಪುವುದಿಲ್ಲವಾದ್ದರಿಂದ ಮದ್ರಾಸಿನ ಸ್ಟುಡಿಯೋಗಳು ಕೆಲಸವಿಲ್ಲದಂತಾಗಿವೆ. ಇವುಗಳನ್ನು ಮದ್ರಾಸಿನಿಂದ ಹೊರಗಡೆ ಸಾಗಿಸಿದರೆ ಒಂದು ಪಕ್ಷ ಅವುಗಳಿಗೆ ಕೆಲಸ ಸಿಗಬಹುದೋ ಏನೋ? ಹಾಗೆಯೇ ಪೇಟೆಯ ಜನರು ಈಗ ಹೆಚ್ಚಾಗಿ ಹಳ್ಳಿಗಳ ಸಣ್ಣ ಸಣ್ಣ ಪೇಟೆಗಳಿಗೆ ಹೋಗಿ ಉಳಕೊಳ್ಳುವುದರಿಂದ ಅಲ್ಲಿ ಥಿಯೇಟರುಗಳನ್ನು ನಡಿಸಿದರೆ ಆಗಲಾರದೇ ಎಂದು ಒಂದು ಸೂಚನೆ

ಚೀನಾದಲ್ಲಿ ಚಲಚ್ಚಿತ್ರ

ಚೀನಾದ ಚಲಚ್ಚಿತ್ರೋದ್ಯೋಗವು ಅಲ್ಲಿನ ರಾಷ್ಟ್ರೀಯತೆಯನ್ನು ರೂಪುಗೊಳಿಸುವುದರಲ್ಲಿ ಬಹಳ ಸಹಾಯ ಮಾಡುತ್ತಿದೆ. ೧೯೦೪ರಲ್ಲು ಮೊದಲಾಗಿ ಚೀನಕ್ಕೆ ಸಿನೆಮವನ್ನು ತಂದವನು ರೇನರ್ ರೊಮಾನ್ ಎಂಬ ಸ್ಪೇನಿಶ್ ದೇಶೀಯನು. ಮೊದಲನೆಯ ಥಿಯೇಟರನ್ನು ಆತನೇ ಶಾಂಗಾಯಿಯಲ್ಲಿ ನಡೆಸಿದನು. ಆ ಮೇಲೆ ಮೆಲ್ಲ ಮೆಲ್ಲಗೆ ಚಲಚ್ಚಿತ್ರೋದ್ಯೋಗವು ಚೀನದಲ್ಲಿ ಅಭಿವೃದ್ಧಿ ಹೊಂದಿತು. ಈಗ ದೂರ ಹಳ್ಳಿಗಳಲ್ಲಿಯೂ ಸಿನೆಮಾ ತೋರಿಸಲ್ಪಡುತ್ತಿದೆ. ಕೆಲವು ಕಡೆಗಳಿಗೆ ವಿಮಾನಗಳ ಮೂಲಕ ಫಿಲ್ಮುಗಳನ್ನು ಸಾಗಿಸುವ ವ್ಯವಸ್ಥೆಯೂ ಇದೆ. ಜಪಾನು ಚೀನವನ್ನು ಆಕ್ರಮಿಸುವ ಮೊದಲು ಒಟ್ಟು ಚೀನದಲ್ಲಿ ೩೦ ಸ್ಟುಡಿಯೋ ಮತ್ತು ೬೦೦ ಥಿಯೇಟರುಗಳು ಮಾತ್ರವಿದ್ದುವು. ಇತ್ತೀಚೆಗೆ ಅವುಗಳ ಸಂಖ್ಯೆ ಬಹಳ ಬೆಳೆದಿರುತ್ತದೆ ಚೀನದಲ್ಲಿ ಕೆಲವು ಭಾಷೆಗಳು ಇದ್ದರೂ ಮೆಂಡರೀನ್ ಎಂಬ ಭಾಷೆ ಹಲವರಿಗೆ ಬರುತ್ತದೆ. ಹಾಗಾಗಿ ಆ ಭಾಷೆಯಲ್ಲಿಯೇ ತುಂಬಾ ಚಿತ್ರಗಳು ತಯಾರಾಗುತ್ತವೆ. ಅಲ್ಲಿಗೆ ಹೊರದೇಶಗಳಿಂದ ಚಿತ್ರಗಳು ಬರುವುದರಲ್ಲಿ ಅಮೆರಿಕಾ ರಷ್ಯಗಳೇ ಮುಖ್ಯ. ರಷ್ಯನ್ ಚಿತ್ರಗಳಿಂದ ಇತ್ತೀಚೆಗೆ ರಷ್ಯದ ಪ್ರಭಾವ ಆ ದೇಶದಲ್ಲಿ ಬಲವಂತವಾಗಿ ಬೇರೂರಿದೆ. ಚೀನದಲ್ಲೇ ಹಲವು ಚಿತ್ರಗಳು ತಯಾರಾಗುತ್ತಿವೆ. ಇತ್ತೀಚೆಗೆ ೧೯೩೦ರ ಮೇಲೆ ಚೀನದಲ್ಲಿ ಚಲಚ್ಚಿತ್ರ ವ್ಯವಸಾಯ ಬಹಳ ಅಭಿವೃದ್ಧಿ ಹೊಂದಿತು. ಅಲ್ಲಿನ ಪ್ರಸಿದ್ಧ ಚಿತ್ರವೊಂದು 'ಎ ಫಿಶರ್ಸ್ ಸೋನ್ಸ್ ಸೋಂಗ್' ಎಂಬುದು. ಚೀನದ ರಾಷ್ಟ್ರೀಯಾಭಿವೃದ್ಧಿಗೆ ಚಲಚ್ಚಿತ್ರವು ಸಹಕಾರಿಯಾಗುವಂತೆ ಚೀನಾ ಸರಕಾರವು ಇತ್ತೀಚೆಗೆ ಬಹಳ ಗಮನ ಕೊಟ್ಟಿದೆ. ಕಾಣ್ಯ ರಕ್ಷಣೆಯ ಚಿತ್ರಗಳು ತಯಾರಾಗುತ್ತಿವೆ. ಹವನಸಿಲೀನ ಕಥಾವಸ್ತುಗಳಿಂದ ಕೂಡಿದ ಹಾಗೂ ಪ್ರಚಾರ ದೃಷ್ಟಿಯುಳ್ಳ ಅನೇಕ ಚಿತ್ರಗಳು ಅಲ್ಲಿ ತೋರಿಸಲ್ಪಡುತ್ತಿವೆ.

ಹೆಂಡತಿ ಅಭಿನಯಿಸಕೂಡದಂತೆ

ಮೊನ, ಜಹೂರ್ ರಾಜರ ಕೈಹಿಡಿದು ಕೆಲ ಕಾಲವಾಯಿತು. ಇನ್ನು ಮುಂದೆ ಆಕೆ ಅಭಿನಯಿಸಕೂಡದಾಗಿ ಜಹೂರ್ ಅಪೇಕ್ಷೆಯಂತೆ. ಸೊಹ್ರಾಬ್ ಮೋಡಿಯವರ 'ಫಿರ್‌ಮಿಲೇಂಗೆ'ಯ ಅವಳ ಅಭಿನಯವೇ ಆಕೆಯ ಕೊನೆಯ ಅಭಿನಯವಾಗುವುದಾಗಿ ತಿಳಿದುಬರುತ್ತದೆ.

ಸಿನೆಮಾ ಅಭಾರತೀಯವೇ?

ಚಟರ್ಜಿಯವರಿಗೆ ಉತ್ತರ

"ಸಿನೆಮವು ಅಭಾರತೀಯ, ವಿದೇಶಿಯರಿಂದ ಕಲಿತನಕಲಿ, ಅದರಲ್ಲೂ ಸಂಸ್ಕೃತಿಯನ್ನು ಹೆಚ್ಚಿಸದಂತಹ ಒರದು ಕಲೆ ಸಿನೆಮಾ" ಹೀಗೆಂದು ರಮಾನಂದ ಚಟರ್ಜಿ ಇತ್ತೀಚೆಗೆ ಒಂದು ಟೀಕೆ ಮಾಡಿದರು ಅದಕ್ಕೆ ಉತ್ತರವಾಗಿ ಸೈ ವಿ ಫಜ್ಲ್‌ಬಾಯಿಯವರು ಒಂದು ಲೇಖನ ಬರೆದಿದ್ದಾರೆ ಅದರಲ್ಲಿ ವಿಷಯಗಳು ವಾಚನೀಯವಿವೆ ಅವರು ಹೀಗೆಂದು ಚಟರ್ಜಿಯವರಿಗೆ ಉತ್ತರಿಸುತ್ತಾರೆ

' ಸಿನೆಮಾ ಪ್ರಪಂಚಕ್ಕೇ ನೂತನವಾದ ಮನರಂಜನೆ ಸಾಧನ ಹತ್ತಿಪ್ಪತ್ತು ವರ್ಷಗಳ ಹಿಂದೆ ಇದು ಇನ್ನೂ ಪ್ರಯೋಗಾವಸ್ಥೆಯಲ್ಲಿಯೇ ಇತ್ತು ಅಮೆರಿಕದಲ್ಲಿ ಮೊದಲು ಇದನ್ನು ಮನರಂಜನೆಗಾಗಿ ಹೊಂದಿಸಿಕೊಂಡರು ಮೊದಲನೆಯ ಭಾರತೀಯ ಪೂರ್ಣ ಚಿತ್ರ ತಯಾರಾದುದು ೧೯೧೩ರಲ್ಲು ಅದು ರಾಮಾಯಣ ಕಥೆಯಿಂದ; ರಾಮಾಯಣ ಅಭಾರತೀಯವಲ್ಲ. ಆ ಹೊತ್ತಿನಿಂದ ಭಾರತದಲ್ಲಿ ತಯಾರಾದ ಚಿತ್ರಗಳೆಲ್ಲಾ ಭಾರತೀಯ ವಸ್ತು ವಿಚಾರ ಪೂರ್ಣವೇ ಆಗಿವೆ. ಗ್ರಂಥ ರಚನೆಯಲ್ಲಿಯೂ ನಾವು ಇಂತಹ ಹೊಂದಿಕೆಯನ್ನು ವಿದೇಶಿಯರಿಂದ ಅಂಗೀಕರಿಸಿದ್ದೇವೆ. ಸಾಂಸ್ಕೃತಿಕ ಮಹತ್ವವುಳ್ಳ ಅನೇಕ ಚಿತ್ರಗಳು ನಮ್ಮಲ್ಲಿ ತಯಾರಾಗಿವೆ. ಅಮೆರಿಕನರು ಸಿನೆಮಾದಲ್ಲಿ ಮುಂದುವರಿದರು, ಇಂಗ್ಲಿಷರು ರೈಲು ಇಂಜಿನು ತಯಾರಿಸಿದರು, ಇದನ್ನೆಲ್ಲಾ ಅಭಾರತೀಯವೆಂದು ನಾವು ತಿರಸ್ಕರಿಸಲಾಗುವುದಿಲ್ಲ. ಭಾರತೀಯ ವಾಹನವೆಂದರೆ ಆನೆ ಸವಾರಿ ಮಾತ್ರ, ರೈಲು ಮೋಟರುಗಳನ್ನು ನಾವು ಅಂಗೀಕರಿಸಬಾರದಿತ್ತು ನಮ್ಮಲ್ಲಿನ ಚಿತ್ರಗಳ ಪಾತ್ರಧಾರಿಗಳೆಲ್ಲಾ ಭಾರತೀಯರು, ಭಾರತೀಯ ಜನಜೀವನವನ್ನೇ ಅವರು ಚಿತ್ರಿಸುತ್ತಾರೆ ಶಾಂತಾರಾಮ್ ಮೊದಲಾದ ನಿರ್ದೇಶಕರು ವಿದೇಶೀಯರಲ್ಲ ಇಂದು ಸಿನೆಮಾ, ಸಂಸ್ಕೃತಿಯನ್ನು ಹರಡುತ್ತದೆ ಸಾವಿರಾರು ಮಂದಿ ಪ್ರಸಿದ್ಧ ಗಾಯಕರ ಸಂಗೀತಗಳನ್ನು ದೇಶದ ಎಲ್ಲೆಡೆಗಳಲ್ಲಿಯೂ ಇಂದು ಸಿನೆಮಗಳ ಮೂಲಕ ಕೇಳಬಹುದಾಗಿದೆ ಸಿನೆಮವು ಕ್ರಮಶಃ ದೇಶದ ಏಳಿಗೆಯ ಸಹಕಾರಿಯಾಗಬಹುದು"

ಕೆಂಚು ಕೂದಲ ಚೆಲುವರು

ವಿದೇಶೀ ಸಿನೆಮಾ ನಟಿಯರು

ನಮ್ಮಲ್ಲಿ ಕರಿಕೂದಲು ಸ್ತ್ರೀಯರ ಅಲಂಕಾರ ಸಾಧನವಾದಂತೆ ಯೂರೋಪಿಯನ್ ಸ್ತ್ರೀಯರಿಗೆ ಕೆಂಚುಕೂದಲು, ಬಂಗಾರ ಬಣ್ಣದ ಕೂದಲು ಅಲಂಕಾರ. ವಿದೇಶಿಯ ನಟಿಯರಿಗೆ ಕೆಂಚು ಕೂದಲು ಒಂದು ವಿಶೇಷ ಆಕರ್ಷಣ ವಸ್ತು. ಕೆಂಚು ಕೂದಲ ಚೆಲುವೆ ಸಿನೆಮಾ ನಟಿಯರಲ್ಲಿ ಬಹಳ ಸುಂದರಿಯೆನಿಸುತ್ತಾಳೆ. ಕರಿಕೂದಲಿನವರು ಬಹಳ ಕಷ್ಟಪಟ್ಟು ಕಾಸು ಕೊಟ್ಟು ಕೂದಲಿಗೆ ಕೆಂಪು ಬಣ್ಣ ಹಾಕುತ್ತಾರೆ.

ನ್ಯೂ ಥಿಯೇಟರ್ಸ್ 'ಸದ್‌ಬೋಧ'

ನ್ಯೂ ಥಿಯೇಟರ್ಸಿನ ಇತ್ತೀಚೆಯ ಚಿತ್ರ 'ಸದ್‌ಬೋಧ'ವು ಠಾಗೂರರ ಕಥೆಯನ್ನವಲಂಬಿಸಿದೆ. ಫೆಬ್ರವರಿ ಇಪ್ಪತ್ತನಾಲ್ಕರಲ್ಲು ಇದರ ತಯಾರಿಕೆಯ ಕೆಲಸವು ಆರಂಭವಾಯಿತು. ಮೂರು ವಾರಗಳಲ್ಲಿ ಅದರ ತಯಾರಿಕೆ ಕೆಲಸ ಪೂರ್ಣವಾಯಿತು. ಈಗ ಆ ಚಿತ್ರವು ಕಲ್ಕತ್ತದಲ್ಲಿ ನಡೆಯುತ್ತಿದೆ. ಇಷ್ಟು ಅವಸರವಾಗಿ ಇನ್ನಾವ ಚಿತ್ರವೂ ತಯಾರಾಗಿಲ್ಲ. ಇದನ್ನು ಸೌಮ್ಯೇಂದ್ರ ಮುಖರ್ಜಿ ನಿರ್ದೇಶಿಸಿದ್ದಾರೆ. ಇವರು ಬಹು ಕಾಲ ಬರುವ, ಅಮರ್ ಮಲ್ಲಿಕ್, ಹೇಮ್ ಚಂದರ್ ಮೊದಲಾದ ಪ್ರಸಿದ್ಧ ನಿರ್ದೇಶಕರ ಕೈಕೆಳಗೆ ಕೆಲಸ ಮಾಡಿದ್ದಾರೆ. ಇವರ ಪ್ರಥಮ ಚಿತ್ರ 'ಸದ್‌ಬೋಧ'

ಇದು ನಿಮ್ಮ ಚರ್ಮವನ್ನು ತಂಪಾಗಿರಿಸುವುದು ಅಲ್ಲದೆ ಅಧಿಕ ಉಷ್ಣತೆಯಿಂದ ಚರ್ಮವನ್ನು ರಕ್ಷಿಸುವುದು.

ಅಧಿಕ ಉಷ್ಣತೆಯನ್ನು ಪರಿಹರಿಸಲು ತಕ್ಕ ಹಂಚಿಕೆಗಳಿರುವಾಗ ಅಸೌಖ್ಯವನ್ನು ಹೊಂದಿ ಯಾಕೆ ಬಳಲುತ್ತೀರಿ. ಸಾವಿರಾರು ಮಹಿಳೆಯರು ಆನಂದದಾಯಕವಾದ ಸೌಖ್ಯವನ್ನು ಪಡೆಯಲು ಕುಟಿಕೂರಾ ಟಾಲ್ಕಮ್ ಪೌಡರನ್ನು (Cuticura Talcum Powder) ಶೋಧನೆ ಮಾಡಿ ಉಪಯೋಗಿಸುತಿದ್ದಾರೆ ಬಹಳ ಕೋಮಲವಾದ ಚರ್ಮವನ್ನು ಕೂಡ ಸಂತಯಿಸುವುದು. ಕುಟಿಕೂರಾ ಟಾಲ್ಕಮ್ ಪೌಡರನ್ನು (Cuticura Talcum) ವಿಶಿಷ್ಟ ರೀತಿಯಿಂದ ತಯಾರಿಸಿ ತಕ್ಕುದಾದ ಪರಿಮಳ ಪುಷ್ಪ ಮತ್ತು ತೈಲಗಳಿಂದ ಔಷಧಿಕರಿಸಲ್ಪಟ್ಟಿದೆ. ಸಾಮಾನ್ಯ ಪೌಡರುಗಳಿಗಿಂತ ಉತ್ತಮ ಗುಣವುಳ್ಳದ್ದಾಗಿ ಚರ್ಮವನ್ನು ತಂಪಾಗಿರಿಸಿ ಸಂತವಿಸುವ ಶಕ್ತಿ ಇರುವುದು ಉಷ್ಣದಿಂದ ಬೆಂದಂತ ಚರ್ಮದ ಭಾಗಕ್ಕೆ ಸ್ವಲ್ಪ ಪೌಡರನ್ನು ಹಚ್ಚಿದಾಕ್ಷಣ ತಂಪಾದ ಸ್ಪರ್ಶದಂತೆ ಭಾಸವಾಗುತ್ತದೆ ಬೆವರನ್ನು ಹೀರಿಕೊಂಡು ಅನೇಕ ತಾಸುಗಳ ಪರ್ಯಂತರ ಆನಂದವನ್ನೀಯುವುದು ಎಲ್ಲಾ ಮಹಿಳೆಯರು ಇದರ ಸುಮಧುರವಾದ ಪರಿಮಳವನ್ನು ಹೆಚ್ಚುತ್ತಿರುವರು

ಇಂದೇ ಒಂದು ಕುಟಿಕೂರಾ ಟಿನ್ನನ್ನು (Cuticura) ಕೊಂಡುಕೊಳ್ಳಿರಿ ಕುಟುಂಬದ ಪ್ರತೀ ಒಬ್ಬನಿಗೂ ಬಹು ಅಮೂಲ್ಯವಾದದ್ದು.

ಎಲಾ ಕೆಮಿಸ್ಟರಲ್ಲಿಯೂ ಅಂಗಡಿಗಳಲ್ಲಿಯೂ ಮಾರಲ್ಪಡುತ್ತದೆ.

ಕುಟಿಕೂರಾ ಟಾಲ್ಕಮ್ ಪೌಡರು

CUTICURA TALCUM POWDER

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

HALFTONE & LINE BLOCK MAKING UNDERTAKEN

Sharada Press, MANGALORE.

ವಿಚಿತ್ರ ಪ್ರಪಂಚ

ಹಕ್ಕಿಗಳು ಹಾಡುವುದೇಕೆ?

ಹಕ್ಕಿಗಳು ಸಂತೋಷಗೊಳ್ಳುವುದರಿಂದ ಹಾಡುತ್ತವೆ ಎಂಬುದಾಗಿ ಹೇಳುವುದು ಒಂದು ವಾಡಿಕೆಯಾಗಿದೆ. ಆದರೆ ವೈಜ್ಞಾನಿಕರು ಈ ಹೇಳಿಕೆಯನ್ನು ಒಪ್ಪುವುದಿಲ್ಲ. ಹಕ್ಕಿಗಳ ಭಾವನೆಗಳನ್ನು ಅಳೆಯಲು ತಕ್ಕ ಸಾಧನಗಳನ್ನು ಇದುವರೆಗೆ ವೈಜ್ಞಾನಿಕರು ಕಂಡುಹುಡುಕಿರದಿದ್ದರೂ ಹಕ್ಕಿ ಜಾತಿಯ ವಿಚಾರ ಹಲವು ಸಂಶೋಧನೆಗಳನ್ನು ಅವರು ನಡೆಸಿದ್ದಾರೆ.

ಹಕ್ಕಿಗಳಲ್ಲಿ ಹೆಚ್ಚಾಗಿ ಹಾಡುವವುಗಳು ಗಂಡು ಜಾತಿಯವು, ಏಕೆಂದರೆ ಹೆಣ್ಣು ಜಾತಿಯನ್ನು ತಮ್ಮೆಡೆಗೆ ಆಕರ್ಷಿಸಲು ಅವು ಹೀಗೆ ಮಾಡುತ್ತವೆ. ಆದರೆ ಕಪ್ಪು ಜಾತಿಯ ಹಕ್ಕಿಗಳಲ್ಲಿ ಇದು ಸಹಜವಾದುದಾದರೂ, ಇತರ ಪಕ್ಷಿಗಳ ವಿಷಯ ಇದನ್ನು ಸತ್ಯವೆನಲಾಗುವುದಿಲ್ಲ. ಇತರ ಜಾತಿಯ ಪಕ್ಷಿಗಳು ಗಂಡುಜಾತಿಯವುಗಳಂತೆ ಹೆಣ್ಣು ಜಾತಿಯವುಗಳೂ ಹಾಡತೊಡಗುತ್ತವೆ ಹಾಗಾದರೆ ಹಕ್ಕಿಗಳು ತಮ್ಮ ಜೊತೆ ಹಕ್ಕಿಗಳನ್ನು ಆಕರ್ಷಿಸಲು ಹಾಡುತ್ತವೆಯೆ? ಎಂದರೆ ಋತುವಿನ ಪ್ರಾರಂಭದಲ್ಲೆ ಹೆಚ್ಚಾಗಿ ಇದರ ಸಲುವಾಗಿಯೇ ಅವುಗಳು ಹಾಡುತ್ತವೆ. ಇನ್ನು ಕೆಲವು ಎದುರು ಪಕ್ಷದ ಹಕ್ಕಿಯನ್ನು ಕಾಳಗಕ್ಕೆ ಆಹ್ವಾನಿಸಲೂ ಹಾಡುವುದಿದೆಯಂತೆ.

ಬೇರಿಬ್ಬರನ್ನುಳಿಸಲು ತನ್ನ ಜೀವದ ಬಲಿಕೊಟ್ಟ ವಿದ್ಯಾರ್ಥಿ!

ಅಶೋಕಾಷ್ಟಮಿ ದಿನ ಬ್ರಹ್ಮಪುತ್ರಾ ನದಿಯಲ್ಲಿ ತೀರ್ಥಸ್ನಾನ ಮಾಡಲು ಹೋಗಿದ್ದ ನೂರಾರು ಮಂದಿ, ಒಬ್ಬ ವಿದ್ಯಾರ್ಥಿಯ ಧೀರ ಬಲಿದಾನವನ್ನು ಕಂಡು ಬೆರಗಾದರು. ನೀರಿನಲ್ಲಿ ಮುಳುಗುತ್ತಿದ್ದ ಇಬ್ಬರನ್ನು ಬದುಕಿಸಲು ಹೋಗಿ ಆತನು ಅವರನ್ನು ಬದುಕಿಸಿ ತನ್ನ ಜೀವವನ್ನು ಬಲಿಕೊಟ್ಟನು! ಕನಕಚಂದ್ರ ಹಜಾರಿಕ್ ಎಂಬುದು ಆತನ ಹೆಸರು, ಆತನು ಸ್ಥಳೀಯ ಗವರ್ನ್‌ಮೆಂಟ್ ಹೈಸ್ಕೂಲಲ್ಲಿ ಮೆಟ್ರಿಕುಲೇಶನ್ ಕ್ಲಾಸಿನಲ್ಲಿ ಓದುತ್ತಿದ್ದವನು ಆತನು ಬಿಶೋಪ್‌ಘಾಟಿನಲ್ಲಿ ತನ್ನಿಬ್ಬರು ಗೆಳೆಯರೊಡನೆ ಈಜಾಡುತ್ತಿದ್ದನು. ಒಮ್ಮೆಗೇ ಉಳಿದಿಬ್ಬರು ಒಂದು ಆಕಸ್ಮಿಕ ಪ್ರವಾಹದಿಂದ ಎಳೆಯಲ್ಪಟ್ಟು ನೀರಿನೊಳಗೆ ಮುಳುಗಿಸಲ್ಪಟ್ಟರು ಕನಕಚಂದ್ರನು ಹೆಸರುವಾಸಿಯಾದ ಸ್ಪೋರ್ಟ್‌ಮೆನ್, ಕೂಡಲೇ ಅವರ ಜೀವವುಳಿಸಲು ನೀರಿಗೆ ಹಾರಿ ಅವರನ್ನು ಮೇಲೆಳೆದನು, ಆದರೆ ಅವರಿಬ್ಬರನ್ನು ಮೇಲೆ ತಂದ ಸಾಹಸದಿಂದ ಆಯಾಸಗೊಂಡು ಆತನು ಮುಳುಗಿದನು! ಆ ಊರ ವಿದ್ಯಾರ್ಥಿ ವೃಂದದವರು ಆತನ ಅಮರ ಮರಣಕ್ಕಾಗಿ ಬಹಳ ಗಂಭೀರ ರೀತಿಯಿಂದ ಸಭೆಗೂಡಿ ಕೊಂಡಾಡಿ ಕಂಬನಿಗರೆದರು.

ಸಾಗರದಲ್ಲಿ ಬಂಗಾರ

ಸಾಗರದಡಿಯಲ್ಲಿ ಬಂಗಾರದ ನಿಧಿಯಿದೆಯೆಂದು ನಂಬಲಾಗಿದೆ ಒಬ್ಬ ವಿಜ್ಞಾನಿ ಹೇಳುತ್ತಾನೆ ಪ್ರತಿಕ್ಯೂಬಿಕ್ ಮೈಲು ಸಾಗರದಡಿಯಲ್ಲಿ 5,000,000 ಪವನು ಬೆಲೆಬಾಳುವ ಬಂಗಾರ ಸಿಗಬಹುದೆಂದು ಆ ಸಂಪತ್ತು ಮಾನವ ಪ್ರಯೋಜನಕ್ಕಾಗಿ ದೊರಕಬಹುದೆ? ಇದರಿಗೆ ಅದು ಅಸಾಧ್ಯವಾಗಿದೆ. ಏಕೆಂದರೆ ಸಮುದ್ರದಡಿಯ ಧಾತುಗಳನ್ನು ತೆಗೆಯಲ್ಲಿ ನೆಲಧಡಿಯ ಬಂಗಾರವನ್ನು ತೆಗೆವುದರ ಐದು ಪಾಲಷ್ಟು ವೆಚ್ಚ ತಗಲುವುದು. ಇಂಥಾ ವಿಚಾರದಲ್ಲಿ ಈಗಾಗಲೇ ಅನೇಕ ಸಂಶೋಧನೆಗಳು ನಡೆದಿವೆ.

ಕಣ್ಣುಗಳಿಂದ ಮನುಷ್ಯನ ಸ್ವಭಾವ ತಿಳಿವುದು

ಮನುಷ್ಯನ ಮುಖ ನೋಡಿದರೆ ನಮಗೆ ಆತನ ಸ್ವಭಾವ ಹಲವು ವೇಳೆ ತಿಳಿಯುತ್ತದೆ. ಆದರಲ್ಲೂ ಕಣ್ಣಿನಿಂದ ಮನುಷ್ಯನ ಸ್ವಭಾವ ಪರಿಚಯವು ಚೆನ್ನಾಗಿ ಆಗುವುದೆಂದು ಬಲ್ಲವರು ಹೇಳುತ್ತಾರೆ. ಲೂಯಿ ಬಾಸ್ಕುಂಬ್ಯಾರೆಟೆರೆಂಬವರು ಈ ವಿಷಯದಲ್ಲಿ ಹೀಗೆ ಬರೆಯುತ್ತಾರೆ:

"ಕಣ್ಣಿನ ಬಿಳಿ ಭಾಗವು ರಕ್ತವರ್ಣವಾಗಿದ್ದರೆ ಆ ಮನುಷ್ಯ ಬಹಳ ಕೋಪಿಯೆನಬಹುದು; ಅನುಮಾನ ಪ್ರಕೃತಿಯವನೆನಬಹುದು. ಸಂಗೀತಜ್ಞರ ಮತ್ತು ಕವಿಗಳ ಕಣ್ಣು ಅರ್ಧ ತೆರೆದಿರುವುದು; ಕಣ್ಣುಗಳೂ ಕಿವಿಗಳೂ ಬಹಳ ಸಣ್ಣದಿದ್ದರೆ ಅಂಥವರು ವಿಶ್ವಾಸಾರ್ಹರಲ್ಲ. ನೀಲವರ್ಣದ ಮಿನುಗುವ ಕಣ್ಣುಳ್ಳ ಸ್ತ್ರೀ ಸೌಂದರ್ಯಪ್ರಿಯಳು. ಮುಷ್ಟೂಲೆಯ ಉಗುರುಳ್ಳ ಸ್ತ್ರೀ ರಹಸ್ಯವನ್ನು ಕಾಪಾಡಲಾರಳು, ವಿಶ್ವಾಸಕ್ಕೆ ಅಯೋಗ್ಯಳೂ ಆಗುವಳು. ತೆಳುವಾದ ನೀಲ ಕೈಬೆರಳುಳ್ಳವನು ಕಲಾವಿದನು, ಆದರೆ ಆತನಿಗೆ ದುಡಿತ ಕಡಿಮೆ. ದುಂಡಾದ ಸಣ್ಣ ಉಗುರುಳ್ಳವನು ನಂಬಿಗಸ್ತ, ಆದರೆ ಮುಂಗೋಪಿ. ಉಗುರಲ್ಲಿ ದೊಡ್ಡ ಅರ್ಧ ಚಂದ್ರಗಳಿದ್ದರೆ, ಅಂಥವರು ಹೃದ್ರೋಗಿಗಳು. ಹಣೆಯ ಮೇಲೆ ಅಡ್ಡ ಗೆರೆಯುಳ್ಳವರು ಚಿಂತೆಗೊಳಗಾದವರು ಉದ್ದ ಗೆರೆಗಳುಳ್ಳವರು ವಿನೋದಿಗಳು, ಬುದ್ಧಿವಂತರು. ನಗುವಾಗ ಮುಖ ಪ್ರಕಾಶಮಾನವಾದರೆ ಸುಗುಣಿಗಳು, ಮುಖ ವಿಕಾರಗೊಂಡರೆ ದುರ್ಗುಣಿಗಳು."

ರೈಲು ಬಂಡಿಗಳ ಸಮಯ

ಇದೇ ಜುಲ್ಯಾ ತಾ. 1ರಿಂದ ವ್ಯತ್ಯಾಸವಾದ ರೈಲು ಬಂಡಿಗಳ ಸಮಯಗಳು ಈ ಕೆಳಗಿನಂತಿವೆ—

ಗಾಡಿಗಳು	ಹೊರಡುವ ಗಂಟೆ	ತಲ್ಪುವ ಗಂಟೆ
ಗೂಡ್ಸು ಬಂಡಿ	6.48 ಬೆಳಗ್ಗೆ	7 50 ರಾತ್ರಿ
ಮಲಬಾರು ಎಕ್ಸ್‌ಪ್ರೆಸ್ (ವೈಆ)	9 5 ಬೆಳಗ್ಗೆ	5.15 ಸಾಯಂ.
ಜಾಲಾರ್ ಪೇಟೆ ಪೆಸೆಂಜರ್	12 0 ಮಧ್ಯಾಹ್ನ	2.55 ಸಾಯಂ.
ಕಣ್ಣನೂರು ವರೆಗೆ	5·52 ಸಾಯಂ	9 40 ಪೂರ್ವಾಹ್ನ

Mangalore Municipality

NOTICE

Sealed tenders are invited up to 4 p m on 28th April for 1942 for the work of improvements to the Flower Market. Amount of Estimate Rs. 3975/ . Tender documents etc, can be had on payment of Rs. 5/-. Further particulars can be had from the commissioner, Mangalore Municipality

Municipal Office Mangalore 16-4 1941 } A Balsubramannia Pillai Commissioner

ಸ್ವದೇಶಾಭಿಮಾನಿಗೆ ಜಾಹೀರಾತು ಕೊಡಿರಿ.



ಹೌದು, ಪುಟ್ಟ ಹುಡುಗನೇ, ಈ ವೀರಯೋಧನು ಶತ್ರುವಿನೊ ಕಾದಾಡಲು ಹೊರಟಿದ್ದಾನೆ ಮತ್ತು, ನೀನು ಸುಖವಾಗಿರುವಂತೆ ಇಂಡಿಯಾವನ್ನು ರಕ್ಷಿಸುತ್ತಾನೆ ಯೆ ನಾಗಲು ನೀನು ತೀರಾ ಚಿಕ್ಕವನಿರುವೆ, ಆದರೆ ನೀನು ಮತ್ತು ತಂದೆ ಮತ್ತು ತಾಯಿ, ಸಹೋದರರು ಮತ್ತು ಸಹೋದರಿಯರು ನಿಮ್ಮ ಆಣೆಗಳನ್ನು ಕೂಡಿಟ್ಟು ಡಿಫೆನ್ಸ್ ಸೇವಿಂಗ್ಸ್ ಸ್ಟಾಂಪ್‌ಗಳನ್ನು ಮತ್ತು ಸರ್ಟಿಫಿಕೇಟ್‌ಗಳನ್ನು ಕೊಂಡುಕೊಂಡು ಇಂಡಿಯಾ ಬಲಗೊಳ್ಳಲು ಸಹಾಯಕರಾಗಬಹುದು

ಒಂದಕ್ಕೆ ರೂ. ೧೦/-
ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್
೩/೯/— ಲಾಭ ಕೊಡುತ್ತೆ
ಪೋಸ್ಟ್ ಆಫೀಸ್‌ನಲ್ಲಿ ವಿವರಗಳನ್ನು ತಿಳಿಯಿರಿ

ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್‌ಗಳನ್ನು ಕೊಳ್ಳಿರಿ

GI 49 Kn.

Bhuvanendra Products Limited,

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitual abortion and other uterine troubles. Must be commenced soon after conception and continued up to the time of delivery.

"ಭುವನೇಂದ್ರ ಗರ್ಭಪಾಲ"

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವವಿಧದ ದೋಷಗಳನ್ನು ಗುಣಪಡಿಸುವ ದಿವ್ಯಔಷಧಿ ಗರ್ಭವತಿಯೆನಿಸಿದಂದಿನಿಂದ ಪಸವಕಾಲದ ವರೆಗೆ ಸೇವಿಸುವುದು ಅತ್ಯುತ್ತಮ

ಸ್ಥಳೀಯ ಸ್ಟಾಕಿಸ್ಟ ವ ಏಜೆಂಟರು:-
(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಷೈ, ರಥಬೀದಿ (3) ದಿ ಕರ್ನಾಟಕ ಸ್ಟಫ್ ವರ್ಕ್ಸ, ರಥಬೀದಿ (4) ಡಾ। ಯಂ ಎಸ್ ಪ್ರಭು, M L B S ಸಿ ಪಿ ಸ್ಟಿ ಬಿಲ್ಡಿಂಗ್ಸ (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಡಿಪೊ — 1 ಮರಾಠ ಗಲ್ಲಿ ಹುಬ್ಬಳ್ಳಿ
2. 36 ಫ್ಲಾಕ್ರೋಫ್ಟ್ ರೋಡ್, ಟ್ರಿಪ್ಲಿಕೇನ್, ಮದರಾಸು

The Bank of Mangalore Limited

HEAD OFFICE	*BRANCHES*
Mangalore	Moodabidri & Padubidri

ANNOUNCEMENT

On and from 1st February 1942 fixed deposits will be accepted at the following attractive rates

One year	4%
Two years or above	4½%

Interest Payable Quarterly

ಸರಕಾರದ ಹೊಸ ಪಾರಪಟ್ಟಿಗನುಸಾರವಾಗಿ ಬರೆದ

ನವೀನ ಭೂವಿವರಣೆ

ವಾಸುದೇವರಾವ್, ಎಂ ಎ ಎಲ್ ಟಿ (Dip Geography)
(ಭೂಗೋಳ ಶಾಸ್ತ್ರದಲ್ಲಿ ಡಿಪ್ಲೊಮಾ ಪಡೆದವರು)

ಈ ಪುಸ್ತಕಗಳನ್ನು ಪಡಕೊಂಡಲ್ಲಿ ವಿದ್ಯಾರ್ಥಿಗಳಿಗೆ ಎಟ್ಲಾಸ್ ಕೊಂಡುಕೊಳ್ಳುವ ಅವಶ್ಯವಿಲ್ಲ

ಪ್ರತಿ ಪುಸ್ತಕದಲ್ಲಿ ಬಣ್ಣಬಣ್ಣದ ಭೂಪಟಗಳಿವೆ

ಅನೇಕಾನೇಕ ಚಿತ್ರಪಟಗಳಿಂದ ಕೂಡಿದ್ದು ಪ್ರತಿ ಪಾಠದ ಅಂತ್ಯದಲ್ಲಿ ಅಭ್ಯಾಸಗಳನ್ನೂ ಮಾದರಿ ಪ್ರಶ್ನೆಗಳನ್ನೂ ಕೊಟ್ಟಿದೆ.

4ನೆಯ ಪುಸ್ತಕ 6 ಆಣೆ, 5ನೆಯ ಪುಸ್ತಕ 7 ಆಣೆ 6, 7 ಮತ್ತು 8ನೆಯ ಪುಸ್ತಕಗಳು ಅಚ್ಚಿನಲ್ಲಿವೆ ಪುಸ್ತಕಗಳು ಬೇಕಾದಲ್ಲಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.

ದಿ ಕಂಬೈಂಡ್ ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೋಂಟ್ ಬುಕ್ಕಿಂಗ್ ಆಫೀಸು

ಮಂಗಳೂರು — ಕೊಡಿಯಾಲ್ ಬೈಲ್

ಹಿರಿಯಡಕ ಶ್ರೀ ವೀರಭದ್ರಸ್ವಾಮಿ ದೇವಾಲಯದಲ್ಲಿ ನಡೆಯುವ ರಥೋತ್ಸವ ಸಮಾರಂಭ

ಧ್ವಜಾರೋಹಣ	ದೀಪಾರಾಧನೆ	ರಂಗಪೂಜೆ	ಮಹಾರಥೋತ್ಸವ
30-4-'42	1-5-'42	2-5-'42	3-5-'42

ಹಿರಿಯಡಕ ದೇವಸ್ಥಾನದಿಂದ ಸುಮಾರು ಅರ್ಧ ಮೈಲು ದೂರದಲ್ಲಿರುವ ಶ್ರೀ ಮಾರ್ಕಾಂಡೇಯ ತೀರ್ಥದಲ್ಲಿ ಮಿಂದು ಶ್ರೀ ಅಡಕ ತಾಯಿ ಮತ್ತು ಶ್ರೀ ಮಾರ್ಕಾಂಡೇಯ ಮಹಾ ಮುನಿಗಳ ಅಪೇಕ್ಷೆಯಂತೆ ಶ್ರೀ ಪರಮೇಶ್ವರನು, ಪಾರ್ವತಿ ಸಮೇತನಾಗಿ, ಸಕಲ ಗಣಾಂಗಣಗಳೊಡನೆ ಭಕ್ತಾದಿಗಳ ಸಕಲ ಇಷ್ಟಾರ್ಥವನ್ನು ನೆರವೇರಿಸಿ ಕೊಡುವುದಕ್ಕಾಗಿ ಪ್ರತ್ಯಕ್ಷವಾಗಿ ನೆಲಸಿರುವ ಶ್ರೀ ವೀರಭದ್ರ ಸ್ವಾಮಿ ದೇವಾಲಯವನ್ನು ಸಂದರ್ಶಿಸಿ ಭಕ್ತಿಯಿಂದ ಶ್ರೀ ದೇವರ ಅನುಗ್ರಹಕ್ಕೆ ಪಾತ್ರರಾಗಲು ಇದು ಸುಸಂದರ್ಭವಲ್ಲವೇ?

ಪ್ರಯಾಣಿಕರ ಸೌಕರ್ಯದೆಡೆಗೆ ಹೆಚ್ಚಿನ ಗಮನ ಕೊಡಲಾಗುವುದು.

JOINT MANAGERS,

The Combined Booking Agency,	The Joint Booking Office,
MANGALORE.	KODIALBAIL.

ಬಿಡಿ ಸಂಚಿಕೆ ಬೆಲೆ ಒಂದಾಣೆ ವಾರ್ಷಿಕ ಚಂದಾ ರೂ. 2-0-0 ಅಂಚೆ ವೆಚ್ಚ ಸೇರಿ ರೂ. 2—12—0 Regd. No. M 3460

ಸ್ವದೇಶಾಭಿಮಾನಿ

[ಸಂಪುಟ 36] ತಾರೀಕು 24—4—1942 [ಸಂಚಿಕೆ 17]

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಜೊಮೆ ಮೊದಲಾದ ಎಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ. **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪ್ಪೋ. ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲಿ ಶಾ ಕಂಪೆನಿಯಲಿ ದೊರೆಯುವದು.

AMRUTANJAN DEPOTS BOMBAY MADRAS CALCUTTA

ಸಂಶಯವೇಕೆ?

ಶತ್ರುಗಳು ವಿಮಾನಗಳ ಮೂಲಕ ಧಾಳಿ ನಡೆಸುವುದರಿಂದಲೂ ಮತ್ತು ಇತರ ವಿಧವಾದ ಶತ್ರು ಚಟುವಟಿಕೆಗಳಿಂದಲೂ ಹಿಂದುಸ್ಥಾನದ ಸಿವಿಲ್ ಪ್ರಜೆಗಳಲ್ಲಿ—ಇವರಲ್ಲಿ ಎ. ಆರ್. ಪಿ. ಕೆಲಸಗಾರರೂ ಸೇರುವರು — ಉಂಟಾಗಬಹುದಾದ ಪ್ರಾಣಹಾನಿಗೆ

ದಿ "ಬಾಂಬೆ ಲೈಫ್" ಪಾಲಿಸಿಗಳು

ಸಂಪೂರ್ಣವಾದ ರಕ್ಷಣೆಯನ್ನು ನೀಡುತ್ತವೆ. ಆದ್ದರಿಂದ ನಿಮ್ಮ ಪ್ರೀತಿಪಾತ್ರರಿಗಾ

ದಿ ಬಾಂಬೆ ಲೈಫ್ ಅಶ್ಯೂರೆನ್ಸ್ ಕಂಪೆನಿ (ಲಿಮಿಟೆಡ್)

ಯಲ್ಲಿ ಪಾಲಿಸಿಗಳನ್ನು ಪಡೆಯುವುದು ನಿಮ್ಮ ತ್ವರಿತ ಕರ್ತವ್ಯವಾಗಿದೆ

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಸಂಸ್ಥಾನಗಳಾದಿಯಾಗಿ ದಕ್ಷಿಣ ಭಾರತಕ್ಕೆ ಪ್ರಾಮುಖ್ಯ ಏಜೆಂಟರು:

ಉಡುಪಿ

—: ಅಥವಾ ಈ ಕೆಳಗಿನ ಇತರ ಆಫೀಸುಗಳಿಗೆ ಬರೆಯಿರಿ : —

ಕಲ್ಲಿಕೋಟೆ	ಬೆಂಗಳೂರು	ಮಂಗಳೂರು
ಮದರಾಸು	ತ್ರಿವೇಂಡ್ರಂ	ಬೊಂಬಾಯಿ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.
ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.
ವೈದ್ಯಶಾಲಾ ನಂಜನಗೂಡು ಬ್ರಾಂಚ್ ರಥಬೀದಿ ಮಂಗಳೂರು.

★

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by the A. S. Kamath at Sharada Press, Car Street, Mangalore.

ESTD. 1906

ಸ್ವದೇಶಾಭಿಮಾನಿ

SWADESHABHIMANI

“ಶಾದೀ” ಚಿತ್ರದಲ್ಲಿ ಈಶ್ವರಲಾಲ್ ಮತ್ತು ಕುರ್ಶಿದ್
ಸೆಂಟ್ರಲ್ ಟಾಕೀಸಿಗೆ ಬೇಗನೇ ಬರಲಿದೆ

KANNADA ILLUSTRATED WEEKLY

ಶ್ರೀ ರಾಮಕೃಷ್ಣ ಲೀಲಾ ಪ್ರಸಂಗ

[ಗುರುಭಾವ-ಪೂರ್ವಾರ್ಧ]

ಮೂಲ ಬಂಗಾಳಿ ಲೇಖಕರು ಶ್ರೀ ಸ್ವಾಮಿ ಶಾರದಾನಂದಜಿ

ಅನುವಾದ ಶ್ರೀ ಸ್ವಾಮಿ ಪ್ರಣವೇಶಾನಂದರು

(ಹಕ್ಕು ಕಾದಿಡಲ್ಪಟ್ಟಿದೆ)

ಸಾಧಕನ ಮನಸ್ಸಿನ ಸ್ಥಿತಿಯು ಉನ್ನತಿಯಾದಂತೆ ಶ್ರೀ ಪರಮಹಂಸರ ಉಪದೇಶಗಳ ಅರ್ಥ ಮತ್ತಷ್ಟು ಚೆನ್ನಾಗಿ ತಿಳಿಯುತ್ತದೆ

ಈಗ ವಕಾಲತಿನ ವಿಷಯವು ಹಾಗಿರಲಿ, ನಾವು ಮೊದಲಿನ ಪ್ರಸಂಗವನ್ನೇ ಅನುಸರಿಸೋಣ. ಶ್ರೀ ಪರಮಹಂಸರ ಭಕ್ತರಿಗೆ ಈಗ ಕೇಳಿದರೆ ಅವರ ಉಪದೇಶಗಳ ಅರ್ಥವು ದಿನದಿನಕ್ಕೂ ಅವರ ಕೃಪೆಯಿಂದ ಹೆಚ್ಚುಹೆಚ್ಚಾಗಿ ತಿಳಿಯಲು ಸಮರ್ಥರಾಗಿದ್ದೇವೆಂದು ಮುಕ್ತಕಂಠದಿಂದ ಸ್ವೀಕರಿಸುತ್ತಾರೆ. ಅಲ್ಲದೆ ಶ್ರೀ ಪರಮಹಂಸರ ಮಾತಿನ ಅಥವಾ ವ್ಯವಹಾರದ ಅರ್ಥವು ಮುಂಚೆ ಏನೂ ತಿಳಿಯುತ್ತಿದ್ದಿಲ್ಲ. ಅವರ ಮಾತುಗಳನ್ನು ಆಗ ಸುಮ್ಮನೆ ಕೇಳಿ ಹೋಗಿದ್ದೇವಷ್ಟೆ. ಈಗ ಅವುಗಳ ಅರ್ಥ ಮತ್ತು ಭಾವವನ್ನು ತಿಳಿದು ಅವಾಕ್ ಆಗಿ ಹೋಗಿದ್ದೇವೆ. ಶ್ರೀ ಪರಮಹಂಸರು ಹೀಗನ್ನುತ್ತಿದ್ದರು 'ಇದು ಒಂದು ದಿನ ನಿನಗೆ ತಿಳಿಯುವುದು. ಬೀಜವು ಬಿತ್ತಿದ ಕ್ಷಣವೇ ಫಲಬಿಡುವುದಿಲ್ಲ. ಪ್ರಥಮತಃ ಅದು ಅಂಕುರಿಸಬೇಕು. ಅನಂತರ ಸಣ್ಣ ಗಿಡವಾಗಿ ಆ ಗಿಡವು ಬೆಳೆದು ಮರವಾಗಬೇಕು. ಆ ಮರದಲ್ಲಿ ಹೂವಾಗಿ ಫಲವಾಗಬೇಕು. ಹೀಗೆಯೇ ಬೇರೆ ಬೇರೆ ಎಲ್ಲ ವಿಷಯಗಳು. ಹೀಗೆ ಹೇಳಿ ಒಂದು ಹಿಂದುಸ್ಥಾನಿ ಗಾನ ಹಾಡಿದರು. ಅದನ್ನು ಹಾಡಿ ಅದನಂತರ ಈಶ್ವರನ ಸೇವೆ, ವಂದನೆ ಮತ್ತು ಅಧೀನತೆ ಅಂದರೆ ದೀನಭಾವದಲ್ಲಿರುವುದು, ಇವುಗಳಿಂದೊಡಗೂಡಿ ವಿಶ್ವಾಸದಿಂದಿದ್ದರೆ ಎಲ್ಲವೂ ಕೈಗೂಡುವುದು. ಆತನ ದರ್ಶನ ದೊರಕುವುದೇ ದೊರಕುವುದು. ಅದನ್ನು ಮಾಡದೆ ಬಿಟ್ಟುಬಿಟ್ಟರೆ ಹಾಗೆಯೇ ಇರಬೇಕಾದೀತು. ಒಬ್ಬನು ಚಾಕರಿ ಮಾಡಿ ಸ್ವಲ್ಪ ಸ್ವಲ್ಪ ಹಣ ಗಂಟುಹಾಕಿ ಇಡುತ್ತಿದ್ದನು. ಒಂದು ದಿನ ಕೂಡಿಸಿ ನೋಡಿದಾಗ ಸಾವಿರ ರೂಪಾಯಿ ಆಗಿತ್ತ. ಅದನ್ನು ಕಂಡು ತಾನು ಭಾಗ್ಯವಂತನೆಂದು ಆಹ್ಲಾದದಿಂದ ಇನ್ನು ಚಾಕರಿ ಮಾಡುವುದಿಲ್ಲವೆಂದು ಬಿಟ್ಟುಬಿಟ್ಟನು. ಅಲ್ಲ ಆಶೆ! ಸಾವಿರ ರೂಪಾಯಿ ಉಂಟೆಂತ ಉಬ್ಬಿಕೊಂಡನು! ಅನಂತರ ಸಾವಿರ ರೂಪಾಯಿ ಖರ್ಚಾಗಲಿಕ್ಕೆ ಎಷ್ಟು ಹೊತ್ತು? ಸ್ವಲ್ಪ ದಿನಗಳಲ್ಲಿಯೇ ಮುಗಿಯಿತು. ಆಗ ದುಃಖಪಟ್ಟು ಬೇರೆ ಚಾಕರಿಗಾಗಿ ಪುನಃ ಓಡಾಡಿದನು. ಹಾಗೆ ಮಾಡಿದರೆ ಏನು ಪ್ರಯೋಜನ? ಈಶ್ವರನ ಮಂದಿರ ದ್ವಾರದ ಬಳಿಯಲ್ಲಿ ಬಿದ್ದಿರಬೇಕು. ಹಾಗೆ ಬಿದ್ದರೇನೇ ಈಶ್ವರ ಲಾಭವಾಗುವುದು!

ಮಂದಭಕ್ತಿ ತ್ಯಾಗಮಾಡಬೇಕು

ಆ ಗಾನದ ದ್ವಿತಿಯ ಚರಣವನ್ನು ಉಲ್ಲೇಖಿಸಿ 'ಕೇರಾ ಬನತ ಬನತ ಬನಿಜಾಯಿ' ಅಂದರೆ—ಭಕ್ತಿ ಮಾಡುತ್ತ ಮಾಡುತ್ತ ಫಲವು ದೊರಕುವುದು—ಇದನ್ನು ಹಾಡುತ್ತ ಹೇಳಿ ಬಿಟ್ಟರು, ಏನೆಂದರೆ 'ಇದೇನು? ಬನತ ಬನತ ಏಕೆ? ಇಂತಹ ಮಂದ ಮಂದ ಭಕ್ತಿ ಮಾಡಬಾರದು. ಈಗಲೇ ಈಶ್ವರನನ್ನು ಸಾಕ್ಷಾತ್ಕಾರ ಮಾಡುತ್ತೇನೆ ಎಂದು ವಿಶ್ವಾಸವಿರಬೇಕು, ಮಂದಭಕ್ತಿಯಿಂದ ಆತನನ್ನು ಪಡೆಯಲು ಅಸಾಧ್ಯ.

ಭಾವ ಘನಮೂರ್ತಿ ಶ್ರೀ ಪರಮಹಂಸರ ಪ್ರತಿಯೊಂದು ಭಾವವು ಅವರ ದೇಹವನ್ನು ಪರಿವರ್ತಿಸುತಿತ್ತು

ಶ್ರೀ ಪರಮಹಂಸರನ್ನು ದರ್ಶನ ಮಾಡಿದರೆ ವಾಸ್ತವವಾಗಿ ಒಂದು ಉಜ್ವಲ ಭಾವ ಘನಮೂರ್ತಿಯೆಂದು ತೋರುತಿತು. ಪುಂಜೀಕೃತ ಧರ್ಮ ಭಾವರಾಶಿಯು ಏಕತ್ರವಾಗಿ ಗಡ್ಡೆಕಟ್ಟಿದಂತೆ ಇತ್ತೆಂದೇ ನಾವು ಅವರದೊಂದು ಆಕಾರವನ್ನು ಅಥವಾ ಶರೀರವನ್ನು ನೋಡುತ್ತಿದ್ದೆವು! ಮನಸ್ಸಿನ ಭಾವ [illegible] ಜತೆಯಲ್ಲಿ ದೇಹವು ಪರಿವರ್ತನವಾಗುವ ವಿಷಯವಾಗಿ ನಾವು ಕೇಳಿಯೇ ಇದ್ದೇವೆ. ಪ್ರಸಂಗಿಕವಾಗಿ ಆಗಾಗ ಅದನ್ನು ಅಲ್ಪ ಸ್ವಲ್ಪ ನೋಡಿದ್ದೇವೆ. ಆದರೆ ಮನಸ್ಸಿನ ಭಾವತರಂಗಗಳು ಶರೀರದಲ್ಲಿ ಇಷ್ಟು ಪರಿವರ್ತನ ತರುವುದೆಂಬುದನ್ನು ನಾವು ಸ್ವಪ್ನದಲ್ಲಿಯೂ ಕೂಡ ಭಾವಿಸಲಿಲ್ಲ. ನಿರ್ವಿಕಲ್ಪ ಸಮಾಧಿಯಲ್ಲಿ ನಾನು ಎಂಬ ಬೋಧೆಯು ಸಂಪೂರ್ಣವಾಗಿ ಲೋಪವಾಯಿತು. ಅಷ್ಟರಲ್ಲೇ ಅದರ ಜತೆಯಲ್ಲಿ ಶ್ರೀ ಪರಮಹಂಸರ ಕೈನಾಡಿ ಹೃದಯ ಸ್ಪಂದನ, ಎಲ್ಲವೂ ನಿಂತುಹೋದುವು, ವೈದ್ಯ ಮಹೇಂದ್ರಲಾಲ ಸರಕಾರ್ ಮೊದಲಾದ ಡಾಕ್ಟರರು ಯಂತ್ರ ಸಹಾಯದಿಂದ ಪರೀಕ್ಷೆ ಮಾಡಿಯೂ ಕೂಡ ಹೃದಯದ ಚಲನೆಯು ಅವರಿಗೆ ಗೋಚರವಾಗಲಿಲ್ಲ (ಗಂಟ್ಲುರೋಗದ ಚಿಕಿತ್ಸೆಗೆ ಶ್ರೀ ಪರಮಹಂಸರು ಶ್ಯಾಮಪೂಕುರಿನ ಬಾಡಿಗೆ ಮನೆಯಲ್ಲಿದ್ದಾಗ ನಮ್ಮ ಸನ್ಮುಖದಲ್ಲಿ ಈ ಪರೀಕ್ಷೆಯು ಆಗಿತ್ತು) ಹೀಗೆ ಮಾಡಿಯೂ ಕೂಡ ಸಂತುಷ್ಟರಾಗದೆ ಅವರಲ್ಲಿ ಒಬ್ಬ ಡಾಕ್ಟರರು ಶ್ರೀ ಪರಮಹಂಸರ ಕಣ್ಣಗೊಂಬೆಯನ್ನು ಬೆರಳಿನಿಂದ ಮುಟ್ಟಿ ನೋಡಿದರು—ಆದಾಗ್ಯೂ ಅದು ಸತ್ತ ವ್ಯಕ್ತಿಯ ಕಣ್ಣಿನಂತೆ ಒಂದಿಷ್ಟಾದರೂ ಸಂಕುಚಿತವಾಗಲಿಲ್ಲ. 'ಸಖಿಭಾವದ ಸಾಧನೆಯ ಕಾಲ ತಮ್ಮನ್ನು ಶ್ರೀ ಕೃಷ್ಣನ ದಾಸಿ ಎಂದು ಭಾವಿಸುತ್ತ ಭಾವಿಸುತ್ತ ತನ್ಮಯವಾಗಲು, ಅದರೊಂದಿಗೆ ಸ್ತ್ರೀ ಭಾವ ಅಂದರೆ ಕೂರುವುದು, ಏಳುವುದು, ನಿಲ್ಲುವುದು, ಮಾತನಾಡುವುದು ಇತ್ಯಾದಿ ಪ್ರತಿಯೊಂದು ಕಾರ್ಯವೂ ಕೂಡ ಸ್ತ್ರೀಯರಂತೆ ಆಗಿ ಮಥುರಾ ಮೋಹನ ಮೊದಲಾದವರು ಶ್ರೀ ಪರಮಹಂಸರ ಬಳಿಯಲ್ಲಿ ಇಪ್ಪತ್ತನಾಲ್ಕು ತಾಸು ಇದ್ದರೂ ಕೂಡ ಅವರನ್ನು ಕಂಡು ಹಲವಾರು ಸಲ ಯಾರೋ ಒಬ್ಬ ಹೆಂಗಸು ಬಂದಿರಬಹುದೆಂಬದಾಗಿ ಭ್ರಮೆಹೊಂದುತ್ತಿದ್ದರು. ಹೀಗೆ ಎಷ್ಟೋ ಘಟನೆಗಳನ್ನು ನಾವು ಸ್ವತಃ ನೋಡಿದ್ದೇವೆ. ಅಲ್ಲದೆ ಶ್ರೀ ಪರಮಹಂಸರ ಬಾಯಿಯಿಂದಲೂ ಕೇಳಿದ್ದೇವೆ. ಇವುಗಳು ವರ್ತಮಾನ ಯುಗದ ಮನೋವಿಜ್ಞಾನದ ಮತ್ತು ಶರೀರ ವಿಜ್ಞಾನದ ನಿಯಮಗಳನ್ನು ಅತಿಕ್ರಮಿಸಿದೆ. ಅವುಗಳನ್ನು ಅತಿಕ್ರಮಿಸಿದೆ. ಅವುಗಳನ್ನು ಹೇಳಿದರೂ ಕೂಡ ಜನರು ನಂಬಲಾರರು ಎಂದು ನಮ್ಮ ಭಾವನೆ.

ಶ್ರೀ ಪರಮಹಂಸರಿಗೆ ಸಕಲ ಜನರ ಎಲ್ಲಾ ತರದ ಭಾವಗಳನ್ನು ಗ್ರಹಿಸಲು ಶಕ್ತಿ ಇತ್ತು

ಆದರೆ ಒಂದು ಅತಿ ಆಶ್ಚರ್ಯಕರವಾದ ಸಂಗತಿ ಏನಂದರೆ ಶ್ರೀ ಪರಮಹಂಸರಿಗೆ ಭಾವರಾಜ್ಯದಲ್ಲಿ ಸರ್ವತ್ರವೂ ವಿಚರಣ ಮಾಡುವ ಶಕ್ತಿ ಇತ್ತು. ಸಣ್ಣ ದೊಡ್ಡ ಎಲ್ಲ ಭಾವಗಳನ್ನು ತಿಳಿಯುತ್ತಿದ್ದರು. ಬಾಲಕ, ಯುವಕ, ಮುದುಕ ಎಲ್ಲವರ ಮನೋಭಾವವನ್ನು ಕಂಡುಹಿಡಿಯುತ್ತಿದ್ದರು. ವಿಷಯೀ ಸಾಧು, ಜ್ಞಾನಿ, ಭಕ್ತ, ಸ್ತ್ರೀ ಪುರುಷ ಸಕಲರ ಭಾವಗಳನ್ನು ತಿಳಿದು ಯಾರು ಎಷ್ಟು ದೂರ ಧರ್ಮರಾಜ್ಯದಲ್ಲಿ ಮುಂದುವರಿದಿದ್ದಾರೆಂದೂ ಪೂರ್ವ ಸಂಸ್ಕಾರಗಳನ್ನು ಅನುಸರಿಸಿ ಆ ದಾರಿಯಿಂದ ಮುಂದುವರಿಯಲು ವರ್ತಮಾನದಲ್ಲಿ ಅವನಿಗೆ ಯಾವ ಸಾಧನೆಯ ಅವಶ್ಯಕತೆ ಉಂಟೆಂದೂ ಎಲ್ಲ ವಿಷಯಗಳನ್ನು ಅರಿತು ಪ್ರತಿಯೊಬ್ಬನ ಅವಸ್ಥೆಯ ಅನುಸಾರವಾಗಿ ವ್ಯವಸ್ಥೆ ಮಾಡಿ ಕೊಡುತ್ತಿದ್ದರು! ಮಾನವ ಮನಸ್ಸಿನಲ್ಲಿ ಹುಟ್ಟಿದ್ದ ಅಥವಾ ಈಗ ಹುಟ್ಟುವ ಅಥವಾ ಇನ್ನು ಮುಂದೆ ಹುಟ್ಟುವ ಭಾವಗಳನ್ನು ಶ್ರೀ ಪರಮಹಂಸರು ತಮ್ಮ ಜೀವನದಲ್ಲಿ ಅನುಭವಿಸಿದ್ದಾರೆಂದು ಅವರನ್ನು ಕಂಡು ತಿಳಿದವರು ಹೇಳುತ್ತಾರೆ. ಅಲ್ಲದೆ ಆ ಸಕಲ ಭಾವಗಳಲ್ಲಿ ಪ್ರತಿಯೊಂದು ಭಾವವು ಅವರ ಸ್ವಂತ ಮನಸ್ಸಿನಲ್ಲಿ ಆವಿರ್ಭಾವದ ಮೊದಲ್ಗೊಂಡು ತಿರೋಭಾವ ಕಾಲದ ವರೆಗೆ ಒಂದರ ಮೇಲೊಂದು ಯಾವ ಯಾವ ಅವಸ್ಥೆಗಳಾಗಿದ್ದವೋ ಅವುಗಳನ್ನು ಕೂಡ ಸಂಪೂರ್ಣವಾಗಿ ಸ್ಮರಣೆಯಲ್ಲಿಡಲು ಶಕ್ತರಾಗಿದ್ದರು. ಆದುದರಿಂದಲೇ ಸಾಧಾರಣ ಮನುಷ್ಯನು ಒಂದು ತನ್ನ ಭಾವದ ವಿಷಯವಾಗಿ ಹೇಳಲು ಅವರು ಅದನ್ನು ತಮ್ಮ ಪೂರ್ವಾನುಭವದೊಂದಿಗೆ ಮಿಲಾಯಿಸಿ ತಿಳಿದು ಅತನಿಗೆ ಬೇಕಾದ ವಿಧಾನವನ್ನು ಹೇಳಿಕೊಡುತ್ತಿದ್ದರು. ಎಲ್ಲ ವಿಷಯಗಳಲ್ಲಿಯೂ ಹೀಗೆಯೇ ಎಂದು ಹೇಳಬಹುದು, ಮಾಯಾ ಮೋಹ, ಸಂಸಾರ ದುಃಖ, ತ್ಯಾಗ, ವೈರಾಗ್ಯದ ಅನುಷ್ಠಾನ ಮೊದಲಾದ ಎಲ್ಲ ವಿಷಯಗಳಲ್ಲಿ ಯಾರಾದರೂ ಏನೊಂದು ವಿಷಯದಲ್ಲಿ ಬಿದ್ದು ಅದರಿಂದ ಉದ್ಧರವಾಗುವ ದಾರಿಕಾಣದೆ ಕಾತರತೆಯಿಂದ ಕೇಳಲು ಬಂದರೆ ಶ್ರೀ ಪರಮಹಂಸರು ಅತನಿಗೆ ದಾರಿ ತೋರಿಸುತ್ತಿದ್ದರು. ಅಲ್ಲದೆ ಅನೇಕ ವೇಳೆ ಅವರ ಜತೆಯಲ್ಲಿ ತಾವು ಆ ಅವಸ್ಥೆಯಲ್ಲಿದ್ದಾಗ ಪಡೆದ ಅನುಭೂತಿಗಳನ್ನು ಹೇಳುತಿದ್ದರು 'ನನಗೂ ಈ ಅವಸ್ಥೆ ಬಂದಿತ್ತು. ಆಗ ನಾನು ಹೀಗೆ ಮಾಡಿದ್ದೆನು' ಇತ್ಯಾದಿ ಹೇಳುತಿದ್ದರು. ಹೀಗೆ ಮಾಡಿದ್ದರಿಂದ ಜಿಜ್ಞಾಸುವಿನ ಮನಸ್ಸಿನಲ್ಲಿ ಎಷ್ಟು ನಂಬಿಕೆ ಹುಟ್ಟುತಿತ್ತೆಂಬದಾಗಿ ಹೇಳಬೇಕೆಂತಿಲ್ಲ. ಅಲ್ಲದೆ ಶ್ರೀ ಪರಮಹಂಸರು ಹೇಳಿಕೊಟ್ಟ ದಾರಿಯನ್ನು ಅವರು ಬಹಳ ವಿಶ್ವಾಸದಿಂದಲೂ ಉತ್ಸಾಹದಿಂದಲೂ ಹಿಡಿದು ಮುಂದುವರಿಯುತ್ತಿದ್ದರು. ಅದು ಮಾತ್ರವಲ್ಲ, ಹಾಗೆ ತಮ್ಮ ಜೀವನದ ಅನುಭವವನ್ನು ಹೇಳಿದ್ದರಿಂದ ಜಿಜ್ಞಾಸುವು ತನಗೆ ಶ್ರೀ ಪರಮಹಂಸರು ಬಹಳ ಪ್ರೀತಿಸುತ್ತಾರೆಂದೂ ಭಾವಿಸುತ್ತಿದ್ದನು. ಒಂದೆರಡು ದೃಷ್ಟಾಂತಗಳಿಂದಲೇ ಈ ವಿಷಯವನ್ನು ಇನ್ನೂ ಚೆನ್ನಾಗಿ ತಿಳಿಯಬಹುದು.

(ಕ್ರಮಶಃ)

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿ

ಕಾರ್ಯಕಾರೀ ಮಂಡಲದ ಸಭೆ

ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಕಾರ್ಯಕಾರೀ ಮಂಡಲದ ಸಭೆಯು ತಾ. ೧೯-೪-೪೨ನೇ ದಿವಸ ಧಾರವಾಡದಲ್ಲಿ ಡಾ॥ ಆರ್. ನಾಗನಗೌಡ ಇವರ ಅಧ್ಯಕ್ಷತೆಯಲ್ಲಿ ಸೇರಿತು. ಸಭೆಗೆ ಶ್ರೀಮತಿ ಕೃಷ್ಣಬಾಯಿ ಪಂಜೀಕರ ಶ್ರೀ ದತ್ತಾತ್ರೆಯ ಕರಮರಕರ, ಪರಮಣ್ಣಾ ಹೊಸಮನಿ, ಕೆ. ಕೆ. ವಿ. ರಾಮಸ್ವಾಮಿನಾಳ್ ಹಾಗು ಶ್ರೀ. ಚನಬಸಪ್ಪಾ ಅಂಬಲಿ ಇವರು ಬಂದಿದ್ದರು.

ಹೋದ ಸಭೆಯ ಕಾರ್ಯಕಲಾಪಗಳು ಓದಿ ಸ್ವೀಕೃತವಾದ ಮೇಲೆ ಕೆಳಗಿನ ಗೊತ್ತುವಳಿಗಳು ಪಾಸಾದುವು.

ಶ್ರೀ. ಟಿ ಎಸ್ ನಾಯಕ್ ಇವರು ಪ್ರಾಂತೀಯ ಕಾರ್ಯಕಾರಿ ಮಂಡಲಕ್ಕೆ ಕೊಟ್ಟ ರಾಜಿನಾಮೆಯನ್ನು ಓದಲಾಯಿತು. ಇಂದಿನ ಕಠಿಣ ಪರಿಸ್ಥಿತಿಯಲ್ಲಿ ಶ್ರೀ ಟಿ. ನಾಯಕ್ ಇವರ ಸಲಹೆ ಸೂಚನೆಗಳು ಪ್ರಾಂತೀಯ ಕಾರ್ಯಕಾರಿ ಪ್ರಾಂತೀಯ ಮಂಡಲಕ್ಕೆ ಅತ್ಯವಶ್ಯವಿದ್ದುದರಿಂದ ಅವರು ತಮ್ಮ ರಾಜೀನಾಮೆಯನ್ನು ಹಿಂದೆ ತೆಗೆದುಕೊಳ್ಳಬೇಕೆಂದು ಈ ಸಭೆಯು ವಿನಂತಿ ಮಾಡಿಕೊಳ್ಳುತ್ತದೆ. ಡಾ. ನಾ. ಸು. ಹರ್ಡೀಕರ ಇವರು ಪ್ರಾಂತೀಯ ಸ್ವಯಂಸೇವಕ ಉಪಸಮಿತಿಯ ಸದಸ್ಯತನಕ್ಕೆ ಕೊಟ್ಟ ರಾಜೀನಾಮೆಯನ್ನು ಈ ಸಭೆಯು ಸ್ವೀಕರಿಸುತ್ತದೆ ಮತ್ತು ಆ ಸ್ಥಳದಲ್ಲಿ ಒಬ್ಬರಿಯ ಶ್ರೀ ಬಿ ಸುಬ್ರಮಣ್ಯ ಇವರನ್ನು ಈ ಸಭೆಯು ನಿಯಮಿಸುತ್ತದೆ. ಶ್ರೀಮತಿ ಉಮಾಬಾಯಿ ಕುಂದಾಪುರ ಇವರು ಪ್ರಾಂತೀಯ ಸ್ತ್ರೀ ವಿಭಾಗಕ್ಕೆ ಕೊಟ್ಟ ರಾಜೀನಾಮೆಯನ್ನು ಈ ಸಭೆಯು ಸ್ವೀಕರಿಸಿದೆ. ಅವರ ಸ್ಥಳದಲ್ಲಿ ಶ್ರೀಮತಿ ಕೃಷ್ಣಬಾಯಿ ಪಂಜೀಕರ ಇವರನ್ನು ನಿಯಮಿಸುತ್ತದೆ. ಶ್ರೀ ಶ್ರೀನಿವಾಸರಾವ್ ಇವರು ಕಚೇರಿಯ ತಮ್ಮ ಕೆಲಸಕ್ಕೆ ಕೊಟ್ಟ ರಾಜೀನಾಮೆಯನ್ನು ಈ ಸಭೆಯು ಸ್ವೀಕರಿಸುತ್ತದೆ ಮತ್ತ ಅವರು ಈ ವರೆಗೆ ಒಳ್ಳೇ ನಿಷ್ಠೆಯಿಂದ ಕೆಲಸ ಮಾಡಿದಕ್ಕೆ ಈ ಸಭೆಯು ತನ್ನ ಹಕ್ಪೂರ್ವಕ ಸಮಾಧಾನವನ್ನು ವ್ಯಕ್ತಮಾಡುತ್ತದೆ.

ಶ್ರೀ ಪುಂಡಲೀಕ ಕಾತಗಡೆ ಇವರ ಪ್ರಶ್ನೆ ಶ್ರೀ ಪುಂಡಲೀಕ ಕಾತಗಡೆ ಇವರ ಚುನಾಯಿತ ಕಾಂಗ್ರೆಸ್ ಸ್ಥಳ (ಜಿ ಕಾ ಸ ಪ್ರಾ ಕಾ ಸ ಸದಸ್ಯತ್ವ ವಗೈರೆ)ಗಳ ಬಗ್ಗೆ ಅ ಭಾ ಕಾ ಸಮಿತಿಯಿಂದ ಬಂದ ೨೪-೩-೪೦ ಪತ್ರ, ಅದರ ಬಗ್ಗೆ ಪ್ರಾಂತೀಯ ಉಪಸಮಿತಿಯವರು ಮಾಡಿದ ನಿರ್ಣಯವನ್ನೊಳಗೊಂಡ ೧-೪-೪೧ರ ಪತ್ರ, ಹಾಗು ಶ್ರೀ. ಪುಂಡಲೀಕ ಇವರ ವಿಧಾಯಕ ಕಾರ್ಯದ ಬಗ್ಗೆ ಬೆಳಗಾವಿ ಜಿ ಕಾ. ಸಮಿತಿಯ ೧-೪-೪೨ರ ಪತ್ರ ಇವೆಲ್ಲವುಗಳನ್ನು ವಿಚಾರಿಸಿ ಉಪಸಮಿತಿಯವರು ಮಾಡಿದ ನಿರ್ಣಯವನ್ನು ಈ ಸಭೆಯು ದೃಢೀಕರಿಸುತ್ತದೆ.

ನಿಧಿ ಸಂಗ್ರಹ—ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಗೆ, ಪ್ರತಿಯೊಬ್ಬ ಸ್ಥಾನಿಕ ಪಕ್ಷಗಳಲ್ಲಿಯ ಕಾಂಗ್ರೆಸ್ ಪಕ್ಷದ ಸದಸ್ಯರು ಕನಿಷ್ಟ ಹತ್ತು ರೂಪಾಯಿ ಕಾಣಿಕೆಯನ್ನು ಕಳಿಸಬೇಕೆಂದು ಈ ಸಭೆಯು ಆ ಸದಸ್ಯರಿಗೆ ಬಿನ್ನವಿಸುತ್ತದೆ.

ಕ್ರಿಪ್ಸ ಯೋಜನೆ—ಕ್ರಿಪ್ಸ ಯೋಜನೆಯು ಅಸಮಾಧಾನಕಾರಕವಿದ್ದುದರಿಂದ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಅದನ್ನು ನಿರಾಕರಿಸಿದ್ದು ಒಳ್ಳೇದಾಯಿತೆಂದು ಈ ಸಭೆಯು ಅಭಿಪ್ರಾಯ ಪಡುತ್ತದೆ.

ಆಕ್ರಮಣಗಾರರ ವಿಷಯಕ್ಕೆ ಧೋರಣ—ಸದ್ಯದ ಪರಿಸ್ಥಿತಿಯಲ್ಲಿ ಕಾಂಗ್ರೆಸು ಅಹಿಂಸಾತ್ಮಕ ಪ್ರತೀಕಾರದ ಧೋರಣಕ್ಕೆ ಅವಿತು ಕೊಳ್ಳುವುದು ಯುಕ್ತವೆಂದು ಈ ಸಭೆಯು ಅಭಿಪ್ರಾಯ ಪಡುತ್ತದೆ.

ಅ ಭಾ ಗ್ರಾಮೋದ್ಯೋಗ ಸಂಘದ ಕೆಲಸ—ಅಖಿಲ ಭಾರತ ಗ್ರಾಮೋದ್ಯೋಗ ಸಂಘದ ಕಾರ್ಯವನ್ನು ಹಿಂದುಸ್ಥಾನದಲ್ಲಿ ಹೆಚ್ಚು ವ್ಯವಸ್ಥಿತವಾಗಿ ನಡೆಯಬೇಕೆಂಬ ಯೋಜನೆಯ ಪ್ರಕಾರ ಕರ್ನಾಟಕ ಪ್ರಾಂತದ ಸಲುವಾಗಿ ಮಾಡುವ ವ್ಯವಸ್ಥೆಯ ವಿಷಯಕ್ಕೆ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯೊಡನೆ ವಿಚಾರ ವಿನಿಮಯ ಮಾಡಿ, ಮಾಡುವುದರಿಂದ ಈ ಕಾರ್ಯವು ಒಳ್ಳೇ ಯಶಸ್ವಿಯಾಗಿ ನಡೆಯಲು ಅನುಕೂಲವಾಗುವುದೆಂದು ಈ ಸಭೆಯು ಸಂಪ್ರವಾದ ಅಭಿಪ್ರಾಯವಿದೆ. ಈ ಅಭಿಪ್ರಾಯವನ್ನು ಅ ಭಾ ಗ್ರಾ ಸಂಘದ ಕಾರ್ಯದರ್ಶಿಗಳಿಗೆ ಪ್ರಾಂತೀಯ ಸಮಿತಿಯ ಕಾರ್ಯದರ್ಶಿಗಳು ಕಳಿಸಬೇಕೆಂದು ಈ ಸಭೆಯು ಬಿನ್ನವಿಸುತ್ತದೆ.

NOTICE

The Ammembal Subba Rao Pai Memorial Fund

Applications for loan stipends from the above Fund should reach the undersigned on or before the 15th June 1942. While granting stipends first preferance will be given to those who are already undergoing courses with aid from this Fund. If funds are available after awarding the abovesaid stipends, applications for Technical Courses will be considered. Applications for Arts Courses will be considered in cases of exceptional merit. Only Gowd Saraswath Brahmins need apply.

Blank application forms will be supplied at a cost of one anna each for original ones and half-anna each for renewals. If they are to be sent by post, an additional three forth anna stamp should be sent. All Correspondence will be attended to if a reply post card or an embossed cover is enclosed along with the letter or application.

Office of the A. S. R. P. M. Fund, Canara High School, Mangalore. 23rd April 1942.

J. Vasudeva Pai B.A., L.T. Hon. Secretary.

"ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

1-5-1942] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೧ ೫—೧೯೪೨]

ಸಮರ ಭೂಮಿಯ ಸಂಚಾರ

ಜಪಾನಿನ ನೌಕಾ ಬಲವೊಂದು, ಹಿಂದು ಮಹಾ ಸಾಗರದ ಒಳಹೊಕ್ಕು, ಸಿಲೋನಿನ ಮೇಲೆ ಬಾಂಬೆಸೆದದ್ದು ಮತ್ತು ಎರಡು ಬ್ರಿಟಿಷ್ ವಿಮಾನವಾಹಕ ನೌಕೆಗಳನ್ನು ಮುಳುಗಿಸಿದ್ದು ವಿಶೇಷ ದಿಗಿಲುಗೊಳಿಸುವ ಒಂದು ಸಂಭವವಾಗಿ ಪರಿಣಮಿಸಿತ್ತು. ಪೂರ್ವ ರಾಷ್ಟ್ರಗಳಲ್ಲಿ ಇಂದು ಪ್ರಬಲವಾಗಿರುವ ಪ್ರಭಾವಶಾಲೀ ರಾಷ್ಟ್ರವು, ತನ್ನ ನೂತನ ವಿಧ್ವಂಸಕ ವಿಮಾನ ನೌಕಾ ಸಾಧನ ಸಾಮಗ್ರಿಗಳೊಡನೆ, ಬಿಡದೆ ಚೀನವನ್ನು ಆಕ್ರಮಿಸುತ್ತಿರುವಂತೆ, ಮೊನ್ನೆ ಮೊನ್ನೆ ಸಿಂಗಾಪುರ, ಡಚ್ ಇಂಡೀಸ್, ಜಾವಾ ಬರ್ಮಾಗಳನ್ನು ಆಕ್ರಮಿಸಿ ಬಂದಂತೆ, ಹಿಂದೂ ದೇಶಕ್ಕೂ ಬರಬಹುದೇ ಎನ್ನುವ ಒಂದು ತೆರನ ಅಂಜಿಕೆ ಜನರಿಗೆ ಇದ್ದೇ ಇದೆ ಆಕಾಶದತ್ತ ನೋಡಿದರೆ ವಿಮಾನಧಾಳಿಯ ಬೆದರಿಕೆ, ಸಾಗರದತ್ತ ನಿರೀಕ್ಷಿಸಿದರೆ ನೌಕಾ ಧಾಳಿಯ ಹೆದರಿಕೆ ಇಂದು ಜನರಿಗೆ ಆಗುತ್ತಿದೆ. ಇದರಿಂದಲ್ಲವೇ ಮದ್ರಾಸು, ಮುಂಬಯಿ ಹಾಗೂ ಪೂರ್ವ ಕಡಲ ತೀರದ ಅನೇಕ ಸಣ್ಣ ದೊಡ್ಡ ನಗರಗಳು ಈಗ ಜನನಿವಾಸ ರಹಿತವಾಗಿರುವುದು? ಏನು, ಜಪಾನು ಹಿಂದೂದೇಶವನ್ನು ಆಕ್ರಮಿಸಲು ಬರಬಹುದೆ?

ಮೇಲಿನ ಪ್ರಶ್ನೆಗೆ ಯಾರು ನಿರ್ಧಾರದೊಂದು ಉತ್ತರವನ್ನು ಕೊಡಬಲ್ಲರು? ಜಪಾನಿನ ಗತಿಗಮ್ಯಗಳನ್ನು ಯಾರು ಬಲ್ಲವರು? ಆದರೆ, ನಾವು ಸುದ್ದಿ ಕೇಳಿದಂತೆ, ಜಪಾನು ತನ್ನ ಒಂದು ಪ್ರಬಲ ನೌಕಾ ಬಲವನ್ನು ಹಿಂದೀ ಸಾಗರದಲ್ಲಿಳಿಸಲು ಕಾರಣವಾದರೂ ಏನು? ಹಿಂದೂ ದೇಶಕ್ಕೆ ಆಕ್ರಮಣ ಮಾಡುವ ಉದ್ದೇಶವು ಇದರಿಂದ ತೋರಿಬರುವುದಿಲ್ಲವೆ? ಅಥವಾ ಕೇವಲ ಸಿಲೋನನ್ನು ಬೆದರಿಸಲು ಮಾತ್ರ ಆ ನೌಕಾ ಬಲ ಬಂದಿರಬಹುದೆ? ಇಲ್ಲವೇ ಹಿಂದೀ ಸಾಗರದಲ್ಲಿ ಬ್ರಿಟನು ಜಪಾನಿನ ನೌಕಾಬಲವನ್ನು ಎದುರಿಸಲು ಅಸಮರ್ಥವಿದೆಯೆಂದು ತನ್ನ ಅಗ್ಗಳಿಕೆಯನ್ನು ಮೆರೆಸಲು ಬಂದಿರಬಹುದೆ? ಈ ಪ್ರಶ್ನೆಗಳು ಈಗ ಈ ದೇಶದ ರಾಜಕೀಯ ವಿಚಾರಪಟುಗಳನ್ನು ಮಾತ್ರವಲ್ಲ ಇತರ ದೇಶಗಳ ಯುದ್ಧ ವಿಶಾರದರನ್ನೂ ಬಹಳವಾಗಿ ಪೀಡಿಸುತ್ತಲಿವೆ

ಜಾವಾವನ್ನು ಜಪಾನು ಹಿಡಿದ ಮೇಲೆ ಜನರಿಗೆ ಅದು ಮುಂದೆ ಯಾವ ಕಡೆಗೆ ತಿರುಗಬಹುದು ಎಂಬ ವಿಚಾರದಲ್ಲಿ ತೀವ್ರಾಲೋಚನೆಯುಂಟಾಯಿತು. ಜಾವಾವನ್ನು ಆಕ್ರಮಿಸಿದ ಬಳಿಕ ಅದು ಪೂರ್ವಕ್ಕೋ ಪಶ್ಚಿಮಕ್ಕೋ— ಆಸ್ಟ್ರೇಲಿಯಕ್ಕೋ ಭಾರತಕ್ಕೋ—ಯಾವೆಡೆಗೆ ಕಾಲಿಡಬಹುದೆಂದು ಎಲ್ಲರೂ ಕುತೂಹಲದಿಂದ ನಿರೀಕ್ಷಿಸುತ್ತಿದ್ದರು. ಎರಡು ಕಡೆಗೂ ಅದು ಹಾರಬಹುದಿತ್ತು ಆಸ್ಟ್ರೇಲಿಯವೆಂದರೆ, ಶಾಂತ ಸಾಗರದಲ್ಲಿ ಅಮೆರಿಕದ ಶಕ್ತಿಸಂಚಯದ ಕೇಂದ್ರ, ಭಾರತವೆಂದರೆ ಬಹುಕಾಲದಿಂದ ಬ್ರಿಟನಿನ ಸಂಪತ್ ಖನಿ. ಹೀಗೆ ಇವುಗಳೆರಡನ್ನು ಮುತ್ತುವುದು ಮುತ್ತಿ ಸ್ವಾಧೀನಗೊಳಿಸುವುದು ಜಪಾನ್ ಪ್ರಭುತ್ವದ 'ಹೊಸ ನಿರ್ಮಾಣ'ದ ಫಲಪದಿಯಾಗಿ ಪರಿಣಮಿಸಲವಕಾಶವಿದೆ ಹೀಗಿರುವಾಗ ಜಪಾನು ಆಸ್ಟ್ರೇಲಿಯವನ್ನೇ ಮೊದಲು ಆಕ್ರಮಿಸುವುದು ಎನ್ನುವಂತೆ ಕೆಲವು ವಾರಗಳ ಚಲನವಲನಗಳು ನಮಗೆ ತಿಳಿಸಿದವು, ಏಕೆಂದರೆ ಜಪಾನರು ನ್ಯೂಗಿನಿಗೆ ಮುತ್ತಿಗೆ ಹಾಕಿದ್ದರು. ಟೋರಿಯೋದಿಂದ ಆಸ್ಟ್ರೇಲಿಯನ್ ಸಾಗರಕ್ಕೆ ನಿರಂತರ ನೌಕಾಬಲವು ಸಾಗುತ್ತಲಿತ್ತು. ಹೀಗಾಗಿ ಆಸ್ಟ್ರೇಲಿಯದ ಮೇಲೆ ಜಪಾನು ಎಲ್ಲ ಕಡೆಗಳಿಂದಲೂ ಆಕ್ರಮಿಸಲು ಸಿದ್ಧತೆ ಮಾಡುತ್ತಿದಂತಿತ್ತು ಆದರೆ ಒಮ್ಮೆಲೇ ಸಿಲೋನಿನ ಮೇಲೆ ಜಪಾನರು ಮರಳಿ ಬಿದ್ದರು, ಕೊಲೊಂಬೊ ಟ್ರಿಂಕೊಮಲೆಗಳು ಬಾಂಬಿನ ಹೊಡೆತಕ್ಕೆ ಬಲಿಬಿದ್ದುವು, ಹೀಗಾಗಿ ಆಸ್ಟ್ರೇಲಿಯದತ್ತ ಸಿದ್ಧತೆ ಮಾಡುತ್ತಿದ್ದಂತೆ ಮಾತ್ರ ತೋರಿಸುತ್ತಿದ್ದ ಜಪಾನು, ಒಮ್ಮೆಲೇ ಹಿಂದೀ ಸಾಗರದ ಪ್ರಭುತ್ವಕ್ಕೆ ಮನಮಾಡಿತೇ ಎಂದು ಊಹಿಸಬೇಕಾಗಿದೆ

ಹೇಗೂ ಪಂಡಿತ ನೆಹರುಗಳು ಅಭಿಪ್ರಾಯಪಟ್ಟಂತೆ, ಭಾರತವು ಮುಂದಿನ ಎರಡು ಮೂರು ತಿಂಗಳಲ್ಲಿ ತೀರಾ ಸಂಕಷ್ಟ ಪರಿಸ್ಥಿತಿಯನ್ನು ಎದುರಿಸಬೇಕಾಗಿ ಬಂದರೂ ಬರಬಹುದು, ವಿಶಾಖಪಟ್ಟಣ ಕೋಕನಾಡುಗಳ ಬಾಂಬಿನಿಂದ ಕಡಲ ತೀರದ ಜನರು ಬಹು ಹೆದರಿದರು! ಆದರೆ ಜಪಾನರು ಕಡಲ ತೀರದಲ್ಲಿ ಮಾತ್ರ ಬರಬೇಕೆಂದೇನೂ ಇಲ್ಲ ಇಂದು ಬರ್ಮಾದಲ್ಲಿ ನಡೆಯುತ್ತಿರುವ ನಿರ್ಧಾರಕ ಸಂಗ್ರಾಮವನ್ನು ಪರಿಶೀಲಿಸಿದರೆ, ಬರ್ಮಾ ಸ್ವಾಧೀನವಾದ ಬಳಿಕ ಜಪಾನರು ವಿಮಾನ ಮಾರ್ಗವಾಗಿ ಬಂದರೂ ಬರಬಹುದು ಕಡಲ ಮಾರ್ಗವಂತು ಇದ್ದೇ ಇದೆ ಹಿಂದೂದೇಶದಲ್ಲಿ ಇಷ್ಟೊಂದು ಜನಸಂಖ್ಯೆಯಿದ್ದರೂ ವಿಸ್ತಾರ ದೇಶವಿದ್ದರೂ,ದೇಶದ ಜನತೆ ಒಟಿನಿಂದ ಸೈನಿಕ ಶಿಕ್ಷಣ ವಿಹೀನವಾಗಿ ದುರ್ಬಲವಾಗಿದೆ ಮೊನ್ನೆಮೊನ್ನೆ ರಾಜಾಜಿ ಹೇಳಿದಂತೆ, ''ನಮಗೀಗ ಒಂದೊಂದು ಕೋವಿಯನ್ನಾದರೂ ಕೊಡಿರಿ, ನಾವು ಶತ್ರುವನ್ನು ಹೊಡೆದೋಡಿಸುವೆವು ಎಂದರೂ ಬ್ರಿಟಿಷರು ಇಂದೂ ನಮ್ಮನ್ನು ನಂಬುವಂತೆ ತೋರುವುದಿಲ್ಲ, ನಮ್ಮ ಕೈಗೆ ಕೋವಿಯೊಪ್ಪಿಸುವುದಿಲ್ಲ—ಜನರಲ್ಲಿ ರಾಜಕೀಯ ಜಾಗೃತಿ, ಸ್ವಾತಂತ್ರ್ಯಪ್ರೇಮವಿದ್ದರೂ, ನೆಹರುಗಳು ಹೇಳಿದಂತೆ, ಬ್ರಿಟಿಷ್ ವಿರೋಧ ಬಲವಂತವಾಗಿ ಜನರು ಆಕ್ರಮಣಗಾರರೆದುರು ತಟಸ್ಥವೃತ್ತಿಯನ್ನವಲಂಬಿಸಬಹುದಾಗಿದೆ ಅಂತೂ ಹಲವರು ನಿರಾಯುಧರಾಗಿ ನಿರುಪಾಯರಾಗಿ ಸಂದೇಹ ಸಾವಿರಗಳಿಂದ ಆಕ್ರಮಣಗಾರರು ಬಂದಾಗ ದಿಗ್ಭ್ರಾಂತರಾಗಬಹುದು

ಜಪಾನರು ಇಷ್ಟರಲ್ಲೇ ಬಂಗಾಳಕೊಲ್ಲಿಯಲ್ಲಿ ನಿರಾತಂಕ ಸಂಚರಿಸುತ್ತಿರುವರಾಗಿ ತಿಳಿಯುತ್ತದೆ ಹಾಗಾದರೆ ಅವರು ಪೂರ್ವಕರಾವಳಿ ನಗರ ಬಂದರಗಳಲ್ಲಿ ಬಂದಿಳಿಯಲು ಪ್ರಯತ್ನ ಮಾಡುವುದೇನೂ ಅಸಂಭವವೆನಲಾಗುವುದಿಲ್ಲ ಹಾಗೆಂದು ಜಪಾನು ಕರಾವಳಿಯ ಕೆಲವು ಪಟ್ಟಣ, ಬಂದರಗಳನ್ನು ಕೈವಶಪಡಿಸಿಕೊಂಡ ಮಾತ್ರಕ್ಕೆ ಹಿಂದೂದೇಶವನ್ನು ಸ್ವಾಧೀನಮಾಡಿಕೊಂಡಂತೇನೂ ಆಗುವುದಿಲ್ಲ ಅದರಿಂದ ದೇಶಸರ್ವತ್ರ ಗೊಂದಲ ಗಲಭೆಗಳೇನೂ ಹೆಚ್ಚಬಹುದೆಂಬುದನ್ನು ಯಾರೂ ಅಲ್ಲಗಳೆಯಲಾರರು. ಅಂತೂ ಸಮುದ್ರಮಾರ್ಗವಾಗಿ ಸಾಕಷ್ಟು ಜನ ಸಾಮಗ್ರಿ ಸಿದ್ಧರಾಗಿ ಜಪಾನರು ಬಂದು ಹಿಂದೂದೇಶದಂತಹ ಭೂಖಂಡವೊಂದನ್ನು ಆಕ್ರಮಿಸಿ ಬಿಡುವುದು ಯಾರೂ ನೆನಸುವಷ್ಟು ಸುಲಭ ಕಾರ್ಯವೆನಲಾಗದು, ಚೀನದಲ್ಲಿ ಕಳೆದ ಐದು ವರ್ಷಗಳಿಂದ ನಡೆಯುತ್ತಿರುವ ಹೋರಾಟವು ಈ ತರ ಆಕ್ರಮಣದ ಫಲಿತಾಂಶವನ್ನು ಸ್ಪಷ್ಟಗೊಳಿಸಿದೆ. ಹೇಗಿದ್ದರೂ ಈಗಿನ ಚಲನವಲನಗಳನ್ನು ಪರಿಶೀಲಿಸಿದರೆ ಜಪಾನು ಹಿಂದೀ ಸಾಗರದಲ್ಲಿ ಚಟುವಟಿಕೆ ಹೆಚ್ಚಿಸಿ ಸಿಲೋನನ್ನು ಕೂಡಲೇ ಕೈವಶಮಾಡಲು ಹೆಣಗುವುದು ಕಂಡುಬರುತ್ತದೆ, ಏಕೆಂದರೆ ಸಿಲೋನ್ ಸೈನಿಕ ದೃಷ್ಟಿಯಿಂದ ಬಹಳ ಮಹತ್ವವಾದ ಕ್ಷೇತ್ರವಾಗಿದೆ. ಸಿಲೋನನ್ನು ಹಿಡಿಯದೆ ಜಪಾನು ಭಾರತ ಬ್ರಿಟನ ಪ್ರಾಣನಾಡಿಯನ್ನು ಮುರಿಯಲು ಸಾಧ್ಯವಿಲ್ಲ, ಸಿಲೋನ್ ಜಪಾನ್ ಕೈವಶವಾಗದಿದ್ದರೆ ಅದು ಮುಂದೆ ಮಿತ್ರರಿಗೆ ಒಳ್ಳೆಯ ನೌಕಾಕೇಂದ್ರವಾಗಬಹುದು ಹಿಂದೀ ಸಾಗರಕ್ಕಿಳಿದ ವೈರಿ ನೌಕಾಬಲವು ಈಗ ಎಲ್ಲಿ ಅಡಗಿದ್ದರೂ ಅದು ಬೇಗನೇ ಸಿಲೋನಿನ ಬಳಿ ಬಂದು ಸಿಡಿಗುಂಡು ಹಾರಿಸಬಹುದೆಂದು ನಮ್ಮ ಊಹನೆಯಾಗಿದೆ

ಸಿಲೋನನ್ನು ಹೀಗೆ ಕೈವಶಪಡಿಸಿಕೊಳ್ಳುವಲ್ಲಿ ಅದು ಭಾರತದ ದಕ್ಷಿಣ ತೀರವನ್ನು ಗಾಸಿಗೊಳಿಸುವುದನ್ನು ಸದ್ಯ ಅನಿರೀಕ್ಷಿತವಾಗಿಲ್ಲ ಹೇಗಿದ್ದರೂ ಸಂಪೂರ್ಣ ಭಾರತವನ್ನು ಆಕ್ರಮಿಸುವ ಪ್ರಶ್ನೆ ಜಪಾನಿಗಾದರೂ ಬಹಳ ದೀರ್ಘಕಾಲ ವಿಚಾರಮಾಡಿ ನಿರ್ಧರಿಸತಕ್ಕ ವಿಷಯವೇ ಆಗಿರುವುದು ಹಿಟ್ಲರನು ಬೇಗನೇ ವಸಂತಕಾಲದ ಧಾಳಿಯನ್ನು ಆರಂಭಮಾಡುತ್ತಾನೆಂದು ಪ್ರಸಿದ್ಧಿಯಿರುವಾಗ, ಜಪಾನು ಆತನಿಗೆ ಸಹಾಯಕವಾಗುವುದನ್ನು ಬಿಟ್ಟು, ಭಾರತದಂತಹ ದೊಡ್ಡ ರಾಷ್ಟ್ರವನ್ನು ಆಕ್ರಮಿಸಲು ತನ್ನ ಸರ್ವಶಕ್ತಿ ವ್ಯಯಿಸುವುದೇ ಎಂಬುದು ನೋಡಬೇಕಾಗಿದೆ

ಫ್ರಾನ್ಸಿನಲ್ಲಿ ಹಿಟ್ಲರನಿಗೆ ಸಂಪೂರ್ಣ ಜಯವಾಯಿತು. ಅವನ ಇಚ್ಛೆಯಿದ್ದಂತೆ ಲಾವಲರೇ ಫ್ರಾನ್ಸಿನ ಮುಖ್ಯ ಮಂತ್ರಿಯಾದರು ಇದರಿಂದ ಇಡೀ ಫ್ರಾನ್ಸು ಹಿಟ್ಲರ್ ಕೈಗೊಂಬೆಯಾದಂತೆ ಆಗಿದೆ ಬ್ರಿಟಿಷ್ ದ್ವೇಷಿ, ಜರ್ಮನ್ ಪಕ್ಷಪಾತಿ ಡಾರ್ಲಾನರು ಫ್ರಾನ್ಸಿನ ಸರ್ವ ಸೇನಾಪತಿಯಾಗಿದ್ದಾರೆ ಅಲ್ಲಿನ ನೆಲ ಜಲ ಆಕಾಶ ಬಲಗಳು ಹಿಟ್ಲರನು ಹೇಳಿದಂತೆ ಕೇಳುವುದಾದರೆ ಅದನ್ನು ಬ್ರಿಟನಿನ ವಿರುದ್ಧ ಉಪಯೋಗಿಸಲು ಹಿಟ್ಲರನು ನಿಮಿಷಮಾತ್ರವನ್ನೂ ಕಳೆಯಲಾರನು ಇದರಿಂದೆಲ್ಲಾ ಬ್ರಿಟನಿಗೆ ಈಗ ಚಿಂತೆ ಬಲವತ್ತರವಾಗಿದೆ

ಇತ್ತೀಚೆಗೆ ಯೂರೋಪಿನಲ್ಲಿ ದ್ವಿತೀಯ ರಣಕ್ಷೇತ್ರವನ್ನು ತೆರೆವ ಮಾತು ದಟ್ಟಹಬ್ಬಿರುವುದು ಅತ್ತ ರಶ್ಯನರು ಜರ್ಮನರೊಡನೆ ಅಪ್ರತಿಹತವಾಗಿ ಹೋರಾಡುತ್ತಿರುವಾಗ, ಬ್ರಿಟಿಷರೂ ಅಮೆರಿಕನರೂ ಸುಮ್ಮನಿರುವುದು ಬುದ್ಧಿವಂತಿಕೆಯಾಗುವುದಿಲ್ಲ ಸ್ಟಾಲಿನ್ ಅಂತೂ ಬಹುಕಾಲದಿಂದ ಮಿತ್ರರು ದ್ವಿತೀಯ ರಣಕ್ಷೇತ್ರವೊಂದನ್ನು ತೆರೆದು ಹಿಟ್ಲರನನ್ನು ಹದಗೊಳಿಸಬೇಕೆಂದು ಸಾರಿ ಸಾರಿ ಹೇಳುತ್ತಿದ್ದಾನೆ ಹಿಟ್ಲರ್ ಈಗ ರಶ್ಯದಲ್ಲಿ ತನ್ನ ಸರ್ವಶಕ್ತಿಯನ್ನು ಉಪಯೋಗಿಸುತ್ತಿರುವುದರಿಂದ, ಪಶ್ಚಿಮಯೂರೋಪಿನಲ್ಲಿ ಹೊಸ ರಣರಂಗವನ್ನು ಪ್ರಾರಂಭಿಸಿದರೆ ಆತನು ಸೋತುಹೋಗುವನೆಂದು ಮಿತ್ರರ ನಿರೀಕ್ಷೆಯಾಗಿದೆ ನಾರ್ವೆಯಲ್ಲಿಲ್ಲಾದರೂ ಒಂದು ಕಡೆ ಇಳಿದು ಯುದ್ಧ ಪ್ರಾರಂಭಿಸಬಹುದೆಂಬ ಮಾತುಕತೆ ಕೇಳುತ್ತದೆ. ಇತ್ತೀಚೆಗೆ ರೂಸ್‌ವೆಲ್ಟರು ಜನರಲ್ ಮಾರ್ಶಲ್ ಮತ್ತು ಹಾಪ ಕಿನ್ಸರನ್ನು ಇಂಗ್ಲೆಂಡಿಗೆ ಕಳುಹಿಸಿದ ಉದ್ದೇಶವು ಈ ವಿಷಯದಲ್ಲಿ ವಿಚಾರವಿನಿಮಯಕ್ಕಾಗಿದ್ದರೂ ಇರಬೇಕು. ಅವರು ಇಂಗ್ಲೆಂಡಿನಲ್ಲಿ ಚರ್ಚಿಲರೊಡನೆ ಚರ್ಚಿಸಿ ಮರಳಿ ಬಂದಿದ್ದಾರೆ. ಅಲ್ಲಿ ಯಾವ ನಿರ್ಧಾರಕ್ಕೆ ಬಂದರೆಂಬುದು ಅವರ ಮುಂದಿನ ಕಾರ್ಯಗಳಿಂದ ನಾವು ಊಹಿಸಿಕೊಳ್ಳಬಹುದಾಗಿದೆ

ಬರ್ಮಾದ ಯುದ್ಧದಲ್ಲಿ ಜಪಾನರು ಮೇಲುಗೈಯಾದಂತೆಯೇ ಕಂಡುಬರುತದೆ ಇರಾವತಿ ಸಿಟಾಂಗ್ ಮತ್ತು ಸಾಲ್ವೀನ್ ಈ ಮೂರು ನದಿಗಳ ಮಾರ್ಗವಾಗಿಯೂ ಜಪಾನರು ಮುನ್ನುಗ್ಗಿ ಬಂದಿದ್ದಾರೆ ಬ್ರಿಟಿಷ್ ಚೀನೀ ಸೈನ್ಯಗಳನ್ನು ಪ್ರತ್ಯೇಕಿಸುವುದು ಮೊದಲಾದ ಯುದ್ಧ ಪ್ರಯತ್ನಗಳನ್ನು ಅವರು ಮಾಡುತ್ತಿರುವರು ಚೀನರು ಬರ್ಮಾದಲ್ಲಿಯೂ ಜಪಾನರಿಗೆ ಕೊಟ್ಟ ಪ್ರತಿಭಟನೆ ಪ್ರಶಂಸಾರ್ಹವಾಗಿದೆ ತಮ್ಮ ದೇಶವನ್ನು ಆಕ್ರಮಣ ಮಾಡಲು ಬಂದ, ಸ್ವಾತಂತ್ರ್ಯ ವಿರೋಧಿಗಳನ್ನು ಅವರು ಹಿಂಗೆ ಹೊರದೇಶಗಳಲ್ಲಿಯೂ ವಿರೋಧಿಸುವ ಸಾಹಸವನ್ನು ಚೀನೀಯರು ಕೈಗೊಂಡದ್ದು ವಿರಕುಲೋಚಿತವಾಗಿದೆ ಇಡೀ ಬರ್ಮಾ ಯುದ್ಧದಲ್ಲಿ ಚೀನೀ ಸೈನಿಕರು ತೋರಿಸಿದ ಪರಾಕ್ರಮ, ಹೂಡಿದ ಹೋರಾಟ ಇತಿಹಾಸ ಪ್ರಸಿದ್ಧವಾಗದಿರದು. ಹೇಗಿದ್ದರೂ ಇಂದು ಬರ್ಮಾದ ಸ್ಥಿತಿ ವಿಷಮವಾಗಿದೆ, ಚೀನರು ಎಷ್ಟೊಂದು ಸಾಹಸಮಾಡಿ ಹೋರಾಡಿದರೂ ಜಪಾನರನ್ನು ಹಿಂದಟ್ಟುವುದು ಸಾಧ್ಯವಾಗುವಂತೆ ತೋರುವುದಿಲ್ಲ ಇಷ್ಟರಲ್ಲಿಯೇ ಅಲ್ಲಿಗೆ ಪ್ರಬಲಸೈನ್ಯ ಹಾರಿಯ ಹೋಗದಿದ್ದರೆ ಬರ್ಮಾ ಕೈಬಿಟ್ಟು ಹೋಗಲೂ ಬಹುದು

ಕಳೆದ ವಾರ ಜಪಾನಿನ ಮುಖ್ಯ ನಗರ ಟೋಕಿಯೋ ಯೋಕೊಹಾಮಾಗಳ ಮೇಲೆ ಬಾಂಬು ಹಾಕಿದ್ದು ದೊಡ್ಡದೊಂದು ಕೋಲಾಹಲದ ಸುದ್ದಿಯಾಗಿತು! ಇದನ್ನು ಜಪಾನರೇ ಸ್ವಂತ ಬಾಯಿಂದ ಒಪ್ಪಿಕೊಂಡಿದ್ದಾರೆ ನಡು ಹಗಲಲ್ಲಿ ಎಲ್ಲ ದಿಕ್ಕುಗಳಿಂದಲೂ ಬಾಂಬು ಬಿದ್ದಿತೆಂದು ತಿಳಿಸಿದ್ದಾರೆ ಜಪಾನ್ ಸಮೀಪದಲ್ಲಿ ಪೆಸಿಫಿಕ್ಕಿನಲ್ಲಿರುವ ನೌಕಾ ದಳದವರು ಈ ಅನಾಹುತ ಪ್ರಯತ್ನ ಮಾಡಿರಬಹುದೆಂದು ಹೇಳುತ್ತಾರೆ ದೂರದ ಶತ್ರುವಿಮಾನಗಳು ಜಪಾನಿನ ಒಳನಾಡಿಗೆ ಬಂದು ಅದರಲ್ಲೂ ಮುಖ್ಯ ನಗರಗಳಿಗೆ ಬಂದು ಅನಾಹುತ ಮಾಡಲು ಎಡೆಗೊಟ್ಟ ರಕ್ಷಕ ಸೈನ್ಯಾಧಿಕಾರಿಯನ್ನು ಜಪಾನರು ಶಿಕ್ಷೆಗೂ ಗುರಿಪಡಿಸಿದ್ದಾರೆ ಕಳೆದ ಒಂದೆರಡು ವಾರಗಳಲ್ಲಿ ಜಪಾನು ಸುಮ್ಮಗಿರುವುದು, ವಿಶಾಖಪಟ್ಟಣ, ಕೋಕನಾಡು, ಕೊಲೊಂಬೋಗಳ ಮೇಲೆ ಬಾಂಬು ಹಾಕಿದ ಬಳಿಕ ಒಮ್ಮೆಲೇ ಜಪಾನು ಕಳೆದ ಒಂದೆರಡು ವಾರ ಸುಮ್ಮನೆ ಸಪ್ಪೆಯಾಗಿರುವುದರ ಅರ್ಥವೇನು? ಅಷ್ಟರಲ್ಲಿ ಜಪಾನುವರೆಗೂ ಹೋಗಿ, ಅವರ ಪ್ರಧಾನ ನಗರಕ್ಕೇ ಶತ್ರು ವಿಮಾನಗಳು ಬಾಂಬೆಸೆದುದರ ರಹಸ್ಯವೇನು? ಜಪಾನಿನ ಶಕ್ತಿ ಸಂಗ್ರಹವು ಕ್ಷೀಣವಾಗುತ್ತಾ ಬರುತ್ತಿದೆಯೆಂದು ಊಹಿಸಲು ಇವರಿಂದ ಅವಕಾಶವಾಗದೆ?

HALFTONE & LINE
BLOCK-MAKING
UNDERTAKEN

Sharada Press.
MANGALORE.

ಸ್ವದೇಶಾಭಿಮಾನಿ

ತಾರೀಕು 1-5-1942

'ಮದ್ರಾಸು ನಿರ್ಣಯ'

'ಮುಸ್ಲಿಂ ಲೀಗು, ಪ್ರತ್ಯೇಕೀಕರಣವಾಗಬೇಕೆಂದೇ ಹಠಹಿಡಿದರೆ, ಮುಂದಿನ ರಾಜ್ಯಘಟನೆಯನ್ನು ರಚಿಸುವಾಗ, ಅದರ ಹಕ್ಕನ್ನು ಮನ್ನಿಸುವುದಾಗಿ ಕಾಂಗ್ರೆಸು ಒಪ್ಪಬೇಕು, ಸದ್ಯದ ಗಂಡಾಂತರವನ್ನು ಎದುರಿಸುವುದಕ್ಕಾಗಿ, ರಾಷ್ಟ್ರೀಯ ಸರಕಾರವನ್ನು ರಚಿಸಲು ಒಂದು ಒಪ್ಪಂದಕ್ಕೆ ಬರುವ ಸಲುವಾಗಿ ವಿಚಾರವಿನಿಮಯ ಮಾಡಲು ಮುಸ್ಲಿಂ ಲೀಗಿಗೆ ಆಮಂತ್ರಣ ಕೊಡಬೇಕು, ಮತ್ತು ಇಂದಿನ ವಿಷಮ ಕಾಲದಲ್ಲಿ ಮದ್ರಾಸು ಪ್ರಾಂತದ ಪರಿಸ್ಥಿತಿ ಬಹಳ ಗಂಡಾಂತರದ್ದಿರುವುದರಿಂದ, ಜನರು ತಮ್ಮ ಕರ್ತವ್ಯಗಳನ್ನು ನೆರವೇರಿಸಲು ಸಮರ್ಥರಾಗುವಂತೆ ಮಾಡುವರ್‍ಕೆ, ಈ ಪ್ರಾಂತ್ಯದಲ್ಲಿ ಪ್ರಜಾಸಮ್ಮತ ಸರಕಾರವಿರುವುದು ಅತ್ಯವಶ್ಯವಿರುವುದರಿಂದ, ಈ ಕೆಲಸವು ಹೆಚ್ಚು ಪರಿಣಾಮಕಾರಿಯಾಗುವಂತೆ ಮಾಡಲು ಮದ್ರಾಸು ಪ್ರಾಂತದ ಮಟ್ಟಿಗೆ ಮುಸ್ಲಿಂ ಲೀಗೂ ಮಂತ್ರಿಮಂಡಳದಲ್ಲಿ ಸೇರಿ ಸಮ್ಮಿಶ್ರ ಮಂತ್ರಿಮಂಡಳ ಸ್ಥಾಪಿಸುವಂತೆ-ಇತರ ಪ್ರಾಂತಗಳ ವಿಷಯ ಹೇಗಿದ್ದರೂ-ಕಾಂಗ್ರೆಸು ಅಪ್ಪಣೆ ಕೊಡಬೇಕು'

ಮೇಲಿನ ನಿರ್ಣಯವನ್ನು ಮದ್ರಾಸು ಕಾಂಗ್ರೆಸು ಶಾಸನ ಸಭಾಸದಸ್ಯರ ಪಕ್ಷದ ಮೂಲಕ ಮಂಜೂರು ಮಾಡಿಸಿ ಶ್ರೀ ರಾಜಗೋಪಾಲಾಚಾರ್ಯರು ಈಗ ಅಲ್ಲಾಬಾದಿನಲ್ಲಿ ನಡೆಯುತ್ತಿರುವ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಮುಂದೆ ಇಟ್ಟಿದ್ದಾರೆ ಈ ನಿರ್ಣಯವು ಕಾಂಗ್ರೆಸು ವಾತಾವರಣದಲ್ಲಿ ಪ್ರಬಲ ಕ್ರಾಂತಿಯನ್ನೇ ಉಂಟು ಮಾಡಿದೆ ಮುಸ್ಲಿಂ ಲೀಗಿನೊಡನೆ ಒಪ್ಪಂದ ಮಾಡಿಕೊಳ್ಳುವ ಸಲುವಾಗಿ ಕಾಂಗ್ರೆಸು ಇಷ್ಟೊಂದು ತಲೆಬಗ್ಗಿಸಬಾರದೆಂದು ಹಲವರು ಟೀಕಿಸಿದ್ದಾರೆ, ಅಜಾದ್, ನೆಹರು ಮೊದಲಾದವರು ಈ ನಿರ್ಣಯವನ್ನು ಖಂಡಿಸಿದ್ದಾರೆ. ಇನ್ನು ಕೆಲವರು ಇದು ನ್ಯಾಯವೆಂದಿದ್ದಾರೆ, ಇಂದಿನ ವಿಷಮಕಾಲದಲ್ಲಿ ರಾಷ್ಟ್ರೀಯ ಐಕ್ಯದ ಸಲುವಾಗಿ ಇಂತಹ ಧೀರ ಹೆಜ್ಜೆ ತೆಗೆದುಕೊಳ್ಳಬೇಕಾದದ್ದು ಆವಶ್ಯವೆಂದು ಅಭಿಪ್ರಾಯಪಟ್ಟಿದ್ದಾರೆ; ಹಿಂದು ಮಹಾ ಸಭೆಯವರು ಪಾಕಿಸ್ಥಾನದೊಡನೆ ಒಪ್ಪಂದ ಮಾಡುವ ಈ ನಿರ್ಣಯದ ವಿಷಯ ಉಗ್ರರಾಗಿದ್ದರೆ, ಮುಸ್ಲಿಂ ಲೀಗಿನವರಿಗೆ ಇದು ಸಮಾಧಾನ ಕೊಟ್ಟಂತೆ ಕಂಡುಬರುತ್ತದೆ. ಅಂತೂ ಮದ್ರಾಸಿನ ಈ ನಿರ್ಣಯವು ಇಂದು ಅಖಿಲ ಭಾರತದ ಗಮನವನ್ನು ತನ್ನ ಕಡೆಗೆ ಸೆಳೆದಿದೆ.

ಇಂದಿನ ಭಾರತದ ಪರಿಸ್ಥಿತಿಯನ್ನು ಪರ್ಯಾಲೋಚಿಸಿದರೆ ಈ ರೀತಿಯ ವಿಚಾರ ಕ್ರಾಂತಿಯುಂಟಾಗಲು ಅಸ್ವಭಾವಿಕವೆಂದು ತಿಳಿಯದಿರೆವು. ದೇಶಕ್ಕೆ ಒದಗಬಹುದಾದ ಗಂಡಾಂತರವನ್ನು ತಪ್ಪಿಸಲು ಧುರೀಣರು ವ್ಯಗ್ರರಾಗಿರುವರು. ಈ ನಿರ್ಣಯದ ವಿಷಯವಾಗಿ ಅಖಿಲ ಭಾರತ ಕಾಂಗ್ರೆಸು ಕಮಿಟಿಯವರು ದೀರ್ಘ ವಿಚಾರ ಮಾಡುತ್ತಿದ್ದಾರೆ. ರಾಜಾಜಿಯು ಈ ನಿರ್ಣಯವನ್ನು ಮಂಡಿಸಿ ಹೇಗೆ ಕಾಂಗ್ರೆಸ್ ಸದಸ್ಯರನ್ನು ಒಪ್ಪಿಸಲು ಶಕ್ತರಾಗುವರೋ ನೋಡಬೇಕು ನೆಹರು, ಅಜಾದ್ ಮೊದಲಾದವರ ಪ್ರತಿಭಟನೆಯನ್ನು ರಾಜಾಜಿ ಇದಿರಿಸಿ ತನ್ನ ನಿರ್ಣಯವನ್ನು ಅಂಗೀಕರಿಸುವಂತೆ ಮಾಡಬಲ್ಲರೇ ಎಂಬುದು ಸಂದೇಹವಾಗಿದೆ. ನಮ್ಮ ಮುಂದಾಳುಗಳೇ ನಮಗೆ ಈ ದಾರಿಯಲ್ಲಿ ಯೋಗ್ಯ ಮಾರ್ಗದರ್ಶಕರಾಗುವರೆಂದು ನಾವು ನಂಬಿದ್ದೇವೆ

ಕಣ್ಮರೆಯಾದ ಇಬ್ಬರು ಹಿರಿಯ ಕನ್ನಡಿಗರು

ಇಬ್ಬರು ಕನ್ನಡ ನಾಡಿನ ಹಿರಿಯ ಜೀವಿಗಳು-ಶ್ರೀ. ಉಳ್ಳಾಲ ಮಂಗೇಶರಾವ್ ಮತ್ತು ಶ್ರೀ ವೆಂಕಟೇಶ ತಿರಕೋ ಕುಲಕರ್ಣಿ, ಗಳಗನಾಥ ಇವರುಗಳು-ಕಳೆದ ವಾರ ನಮ್ಮನ್ನಗಲಿ ಹೋದರು! ನಾಡು ನುಡಿಗಳಿಗೆ ಅಪಾರಸೇವೆಯನ್ನು ಸಲ್ಲಿಸಿದ ಅವರಿಬ್ಬರ ಮರಣಕ್ಕಾಗಿ ಇಡಿಯ ಕನ್ನಡ ನಾಡೇ ಇಂದು ಮರುಗುತ್ತಿದೆ ಪಾರ್ಥಿವ ಶರೀರದಿಂದ ಅವರು ಇಂದು ಕಣ್ಮರೆಯಾಗಿದ್ದರೂ ಅಳಿಯಲಾರದ ಕೀರ್ತಿ ಶರೀರದಿಂದ ಅವರಿಬ್ಬರೂ ನಮ್ಮ ನಾಡಿನ 'ಕೀರ್ತಿ ಚಿರಂಜೀವಿ'ಗಳ ಸಾಲಿನಲ್ಲಿ ಸೇರಿದ್ದಾರೆ!

ಶ್ರೀಮಾನ್ ಉಳ್ಳಾಲ ಮಂಗೇಶರಾಯರು ವೃತ್ತಿಯಿಂದ ಉಪಾಧ್ಯಾಯರಾಗಿದ್ದು, ದಕ್ಷಿಣ ಕನ್ನಡದ ಸಾವಿರಾರು ಮಂದಿಯ ಹೃದಯಗಳಲ್ಲಿ ಕನ್ನಡದ ಪ್ರೇಮವನ್ನು ತುಂಬಿಸಿದ್ದಾರೆ, ಕನ್ನಡ ಲೇಖಕರಾಗಿದ್ದು ಬರೆಹಗಾರರಿಗೆ ಪ್ರೋತ್ಸಾಹವಿತ್ತಿದ್ದಾರೆ; ದಿವಂಗತ ಪಂಜೆಯವರ ಒಡನಾಡಿಯಾಗಿದ್ದು, ಕನ್ನಡ ನಾಡುನುಡಿಗಳ ಉನ್ನತಿಗಾಗಿ ನಿರಂತರ ಸೇವೆ ಸಲ್ಲಿಸಿದ್ದಾರೆ ಶ್ರೀಮಾನ್ ಉಳ್ಳಾಲ ಮಂಗೇಶರಾಯರ ಇನ್ನೊಂದು ಸೇವಾಕ್ಷೇತ್ರವೆಂದರೆ 'ಸಹಕಾರ'! ನಮ್ಮ ಜಿಲ್ಲೆಯಲ್ಲಿ ಸಹಕಾರೀ ಆಂದೋಲನವು ಆರಂಭವಾದ ಕಾಲದಿಂದಲೇ ಅವರು ಅದರಲ್ಲಿದ್ದು ದುಡಿಯುತ್ತಾ ಬಂದು ಇಂದಿನ ಅಭಿವೃದ್ಧಿಗೆ ಅವರಿಂದ ಸಂದ ಸೇವೆಯನ್ನು ಯಾರೂ ಮರೆಯುವಂತಿಲ್ಲ ಶ್ರೀಮಾನ್ ಮಂಗೇಶರಾಯರು, ನಮ್ಮ ಪತ್ರಿಕೆಯ ಏಳಿಗೆಗಾಗಿ ದುಡಿದವರಿದ್ದು, ಪತ್ರಿಕೆಯ ಅಭಿವೃದ್ಧಿಯಲ್ಲಿ ಸದಾ ಹಿಗ್ಗುತ್ತಿದ್ದ ಮಹಾನುಭಾವರಾಗಿದ್ದರೆಂಬುದನ್ನು ನಾವು ಸ್ಮರಿಸಲು ಮರೆಯಲಾರೆವು

ಗಳಗನಾಥರೆಂದು ಕನ್ನಡ ಆದ್ಯಂತವೂ ಪ್ರಸಿದ್ಧರಾದ ಶ್ರೀಮಾನ್ ವೆಂಕಟೇಶ ತಿರಕೋ ಕುಲಕರ್ಣಿಯವರನ್ನು ಕನ್ನಡದಲ್ಲಿ ಕಾದಂಬರಿಗಳನ್ನು ಓದಿದವರೆಲ್ಲರೂ ಬಲ್ಲರು ಕನ್ನಡಿಗರಲ್ಲಿ ಕಾದಂಬರೀ ವಾಚನದ ಪ್ರೀತಿಯನ್ನು ಹುಟ್ಟಿಸಿದ ಹಿರಿಯರಲ್ಲಿ ಅವರು ಮುಖ್ಯರು, ಮೊದಲಿಗರು, ತಮ್ಮ ಓಜಸ್ವೀ ಶೈಲಿಯಿಂದ ಕನ್ನಡ ಸಾಹಿತ್ಯದಲ್ಲಿ ಒಂದು ಹೊಸ ಪಂಥವನ್ನು ಪ್ರಸ್ಥಾಪಿಸಿದವರು ಗಳಗನಾಥರು ಕನ್ನಡ ಸಾಹಿತ್ಯವಾಹಿನಿಯು ಹರಿಯುತ್ತಿರುವ ತನಕ ಗಳಗನಾಥರ ಕೀರ್ತಿ ಧ್ವನಿಯು ಕನ್ನಡನಾಡಿನ ಎಲ್ಲಾ ಕ್ಷೇತ್ರಗಳಲ್ಲಿಯೂ ಪ್ರವಹಿಸುತ್ತಿರುವುದು ಕನ್ನಡ ಲೇಖಕರಿಗೆ ಗಳಗನಾಥರು ನಿತ್ಯ ಸ್ಫೂರ್ತಿದಾಯಕರಾಗಿದ್ದಾರೆ, ಕನ್ನಡ ವಾಚಕಲೋಕಕ್ಕೆ ಗಳಗನಾಥರು ರಸದೂಟವನ್ನಿತ್ತಿದ್ದಾರೆ ಹೀಗೆ ನಾಡಿಗೆ ನಾಡೇ ಅವರಿಗೆ ನಿರಂತರ ಋಣಿಯಾಗಿದೆ!

ಮೃತಶರೀರರ ಆತ್ಮಗಳಿಗೆ ಭಗವಂತನು ಚಿರಶಾಂತಿಯನ್ನು ದಯಪಾಲಿಸಲಿ ಎಂಬುದು ನಮ್ಮ ಪ್ರಾರ್ಥನೆಯಾಗಿದೆ!

ನೋಟಗಳು

'ಸತ್ಯಕ್ಕೆ ಜಯವುಂಟು; ಧರ್ಮಕ್ಕೆ ಜಯವುಂಟು; ಸತ್ಯ ಧರ್ಮಗಳೆರಡೂ ಜರ್ಮನಿಯಲ್ಲುಂಟು, ಆದ್ದರಿಂದ, ದೇವರಾಣೆಯಾಗಿ ಜರ್ಮನಿಗೆ ಅಂತ್ಯದಲ್ಲಿ ಜಯವುಂಟು' ಹೀಗೆಂದು ಮೊನ್ನೆಯ ರಿಚ್‌ಸ್ಟಾಗ್ ಭಾಷಣದಲ್ಲಿ ಹಿಟ್ಲರನು ಹೇಳಿದನು!

卐

'ಸತ್ಯವು ಶಾಶ್ವತವಾದರೆ, ನ್ಯಾಯವು ನಿತ್ಯವಾದರೆ, ಸತ್ಯ ನ್ಯಾಯಗಳೆರಡೂ ಕೂಡಿಕೊಂಡಿರುವ ರಾಷ್ಟ್ರವೊಂದು ದೇವರ ದಯೆಯಿಂದ ಉಳಿಯುವುದೆಂದಾದರೆ, ಬ್ರಿಟನು ಅಂತ್ಯದಲ್ಲಿ ವಿಜಯಿಯಾಗಲೇ ಬೇಕು' ಈ ಪಲ್ಲವಿಯನ್ನು ಯುದ್ಧ ಪ್ರಾರಂಭವಾದಂದಿನಿಂದಲೇ ನಾವು ಕೇಳುತ್ತಾ ಇದ್ದೇವೆ

卐

ಹೀಗೆ ಉಭಯಪಕ್ಷದವರೂ, ಒಮ್ಮೆಗೇ ಸತ್ಯ, ಧರ್ಮ, ನ್ಯಾಯ, ದೇವರುಗಳನ್ನು ಮುತ್ತಿ, ತಮಗೇ ಅಂತ್ಯದಲ್ಲಿ ಜಯವನ್ನುಂಟುಮಾಡಬೇಕೆಂದು ಬಲಾತ್ಕರಿಸುವಂತೆ ತೋರುತ್ತದೆ!

卐

ಅಂತೂ ಇಂದು, ಸತ್ಯ ಧರ್ಮಗಳ ಹೆಸರಲ್ಲಿ, ನ್ಯಾಯನೀತಿಗಳ ಹೆಸರಲ್ಲಿ ಸಾಲದ್ದಕ್ಕೆ ದೇವರ ಹೆಸರಲ್ಲಿಯೇ ಯುದ್ಧ ನಡಯುತ್ತಿದೆ!

卐

ಸತ್ಯ ಯಾವುದು, ಧರ್ಮ ಯಾವುದು ಎಂಬುದನ್ನು ನಿರ್ಧರಿಸುವುದು ಅವರವರೇ ಆಗಿದ್ದರೆ, ಲೋಕದಲ್ಲಿ ಸತ್ಯಾತ್ಮರಲ್ಲದವರು, ಧರ್ಮಾತ್ಮರಲ್ಲದವರು ಯಾರಿದ್ದಾರೆ?

卐

ತಾವು 'ಪರಿಂಗರು' ಎಂಬುದನ್ನು ಒಪ್ಪಿಕೊಳ್ಳುವ ಒಂದೇ ಒಂದು ಮಾನವ ಸಂತತಿಯಾದರೂ ಹುಟ್ಟಿದ್ದರೆ, ಇಂದಿನ ಮಹಾಯುದ್ಧವೇ ಆಗುತ್ತಿರಲಿಲ್ಲವೋ ಏನೊ!

卐

ಹೇಗಿದ್ದರೂ, ಅಂತ್ಯ ಜಯವು ತಮಗೇ ಎಂಬುದಾಗಿ ಎರಡು ಪಕ್ಷದವರೂ ದೃಢವಾಗಿ ನಂಬಿದ್ದಾರೆ! ಹಾಗೆ ದೃಢವಿಶ್ವಾಸವಿರುವುದರಿಂದಲೇ ಇಷ್ಟೊಂದು ಉಗ್ರಹೋರಾಟವೂ ಆಗುತ್ತಿದೆ!

卐

ಆದರೆ, ಅಂತ್ಯದಲ್ಲಿ ಎರಡು ಪಕ್ಷದವರೂ ಗೆಲ್ಲುವುದು ಸಾಧ್ಯವುಂಟೆ? ಯಾವುದಾದರೊಂದು ಪಕ್ಷ ಸೋಲಲೇ ಬೇಕೆಂಬುದಾಗಿ-ಹೋರಾಡುತ್ತಿರುವ ಯಾವುದೇ ಪಕ್ಷವಾದರೂ ಒಪ್ಪದಿದ್ದರೂ-ಇತರರು ಊಹಿಸಬಹುದಾಗಿದೆ.

卐

ಹಾಗೆ ಊಹಿಸಿಕೊಳ್ಳುವ ಇತರರು ಬ್ರಿಟಿಷ್ ಪಕ್ಷಪಾತಿಗಳಾದರೆ ಬ್ರಿಟನು ಗೆಲ್ಲುವುದೆಂದೂ, ಹಿಟ್ಲರ್ ಪಕ್ಷಪಾತಿಗಳಾದರೆ ಜರ್ಮನಿ ಗೆಲ್ಲುವುದೆಂದೂ ಊಹಿಸಿಕೊಳ್ಳುವರು!

卐

ಇವರಲ್ಲಿ ಯಾರ ಊಹೆ ಸತ್ಯವಾಗುವುದೆಂದು ಯಾರು ಹೇಳಬಲ್ಲರು?

ಪಥಿಕ

The Canara Industrial & Banking Syndicate, Ltd.

(Incorporated in British India Liability of shareholders limited)

Estd] Head Office - UDIPI (S. India). [1925.

Authorised Capital	..	Rs. 6,00,000
Subscribed Capital	...	Rs 14,69,015
Paid up Capital	...	Rs 6,59,183
Reserves		Rs 2,11,000

Savings Bank Accounts are opened and interest allowed. With drawals by cheques Accounts transferred from one Branch to another free of charge. Enquire for rules

. Cheques & Drafts are issued on numerous places and Bills etc. negotiated on terms which will be quoted on enquiry.

Advances made at low rates of interest against gold, Government Securities, approved shares, accepted bills, life insurance policies and marketable goods.

Every business receives quick and courteous attention.

'ಹರಿಜನ' ವಾಣಿ

ಜಪಾನಿನ ಪೌರುಷವೋ? ಬ್ರಿಟನಿನ ಜಾಡ್ಯವೋ?

ಏಶ್ಯದಲ್ಲಿ ಜಪಾನು ವಿಜಯಿಯಾಗಲು ಕಾರಣ?

ರಾಮಮನೋಹರ ಲೋಹಿಯರ ಲೇಖನ

"ಜಪಾನಿನ ವಿಜಯಗಳು ನಂಬಲಾರದ ಮಾತು. ಆದರೆ ಬ್ರಿಟಿಷರು ಅವನ್ನು ವರ್ಣಿಸುವ ರೀತಿಯು ಮಾತ್ರ ಬಹು ವಿಲಕ್ಷಣವಿದೆ. ಜಪಾನರು ವಂಚನೆಯಿಂದ ಒಮ್ಮೆಲೇ ದಾಳಿ ಮಾಡಿದರು. ಅದರಿಂದ ಏಶಿಯಾದಲ್ಲಿರುವ ಬ್ರಿಟಿಷರು ಗಾಬರಿಗೊಂಡರು. ಅನಿರೀಕ್ಷಿತವಾಗಿ ಮಿಂಚಿನ ವೇಗದಲ್ಲಿ ಯುದ್ಧ ಮಾಡಿದುದರಿಂದ ಜಪಾನರಿಗೆ ವಿಜಯದ ಮೇಲೆ ವಿಜಯ ದೊರೆಯುತ್ತ ಹೋಯಿತೆಂದು ಹೇಳಲಾಗಿದೆ. ನಾನು ಏಶಿಯಾ ಖಂಡದಲ್ಲಿ ಬ್ರಿಟಿಷ್ ಸಾಮ್ರಾಜ್ಯದ ಮಿತ್ರನಾಗಿದ್ದರೆ ಬ್ರಿಟಿಷರು ಕೊಡುತ್ತಿರುವ ಕಾರಣಗಳು ಪಂಚಮ ದಳದ ಸೂಕ್ಷ್ಮವಾದ ಪ್ರಚಾರ—ಮರೆಮೋಸ್ತುಬಿನಾದ ರೋಗಿಯನ್ನು ಸಿದ್ಧಿವಂತ ಪ್ರಯತ್ನಿಸಲು ಕೊಡುತ್ತಿರುವ ಔಷಧ—ಎಂದೇ ಹೇಳುತ್ತಿದ್ದೆನು.

ತಪ್ಪು ಯಾರದು?

"ಮಲಯದಲ್ಲಿ ಯುದ್ಧಾರಂಭವಾಗುವದಕ್ಕೆ ೩ ವರ್ಷ ಮೊದಲು ಬ್ರಿಟಿಷ್ ಸಮರ ಸರ್ವಜ್ಞರ ಒಂದು ಶಿಷ್ಟಮಂಡಲವು ಮಲಯದ ಸಂರಕ್ಷಣೆಯ ಪ್ರಶ್ನೆಯನ್ನು ಪರಿಶೀಲಿಸಿತು. ಆಗ ಮಲಯದ ಮೆತ್ತಗಾದ ಭೂಪ್ರದೇಶವು ೧೦, ೧೫ ಟನ್ ಭಾರವುಳ್ಳ ಟ್ಯಾಂಕುಗಳನ್ನು ಹೊರಲಾರದು ಎಂಬ ವರದಿಯನ್ನು ಅವರು ಒಪ್ಪಿಸಿದರು. ಅನಂತರ ಸಂರಕ್ಷಣೆಯ ಬಗ್ಗೆ ಬ್ರೆನ್‌ಗನ್ ವಾಹಕಗಳನ್ನು ತಂದು ವ್ಯೂಹವನ್ನು ರಚಿಸಲಾಯಿತು. ಆದರೆ ಯುದ್ಧಾರಂಭವಾದಾಗ ಜಪಾನರ ಭಾರವಾದ ಟ್ಯಾಂಕುಗಳು ಮಲಯದ ಭೂಪ್ರದೇಶವನ್ನು ಸೇರಿದವು. ಆಗ ಬ್ರಿಟಿಷ್ ಸೈನ್ಯಾಧಿಕಾರಿಗಳ ಮೋರೆಯಾ ಕಳೆಗಟ್ಟಿತು. ಇವು ಟ್ಯಾಂಕುಗಳೇ? ಎಂದು ಉದ್ಗರಿಸಿದರು. ಆದರೆ ಆ ಯುದ್ಧಶಾಸ್ತ್ರಜ್ಞರು ಇವು ಟ್ಯಾಂಕುಗಳಲ್ಲವೆಂದು ಉತ್ತರ ಕೊಟ್ಟರು. ಬ್ರಿಟಿಷ್ ಸಮರ ಸರ್ವಜ್ಞರಿಗೆ ಜಪಾನರು ಲಂಚ ಕೊಟ್ಟಿರಬೇಕು—(ಕೊಟ್ಟಂತೆ ನಾನೆಲ್ಲಿಯೂ ಸುದ್ದಿ ಕೇಳಲಿಲ್ಲ) ಎಂದು ಊಹಿಸಲೇ? ಇಲ್ಲವಾದರೆ ಮಲಯದಲ್ಲಿ ಬ್ರಿಟಿಷರಿಗೆ ಆದ ಪರಾಜಯವನ್ನು ಜಪಾನರ ವಿಶ್ವಾಸಘಾತಕವೆಂದು ಹೇಳುವುದು ತೀರ ಹಾಸ್ಯಾಸ್ಪದವೆನಿಸುವುದು. ಒಟ್ಟಿನಲ್ಲಿ ನೋಡಿದರೆ ಸ್ವಲ್ಪ ವಿಂಶಿಮವಿದ್ದರೂ ಉಂಡು ಕುಡಿದು ನಲಿಯುವ ಭೋಜನಪ್ರಿಯರು ಬ್ರಿಟಿಷ್ ತಜ್ಞರು. ಅವರಿಗೆ ಏನೂ ಗೊತ್ತಿಲ್ಲವೆಂದು ಹೇಳಬೇಕಾಗಿದೆ.

ಅಸಡ್ಡೆಯೂ ಕಾರಣ

'ಮಲಯದಲ್ಲಿ ಯುದ್ಧಾರಂಭವಾಗುವುದಕ್ಕೆ ೬ ತಿಂಗಳು ಮೊದಲು ಹಿಂದೀಯರ ಒಂದು ಶಿಷ್ಟಮಂಡಲವು ಅಲ್ಲಿಯ ಗವರ್ನರರಾದ ಶೆಂಟನರನ್ನು ಭೇಟಿಯಾಯಿತು. ವಿಮಾನ ಧಾಳಿಯಿಂದ ತಮ್ಮನ್ನು ರಕ್ಷಿಸುವುದಕ್ಕೆ ಆಶ್ರಯ ಸ್ಥಾನಗಳು ಹಾಗೂ ಇನ್ನಿತರ ಮುಂಜಾಗ್ರತೆಯ ವ್ಯವಸ್ಥೆ ಮಾಡಿಕೊಡಬೇಕೆಂದು ಕೇಳಿತು. ಗವರ್ನರರು ಕೊಟ್ಟ ಉತ್ತರವು ಅವರ ವೈಶಿಷ್ಟ್ಯಕ್ಕೆ ತಕ್ಕಂತಿದೆ. ಶಿಷ್ಟಮಂಡಲದವರನ್ನು ಯೋಗ್ಯ ರೀತಿಯಿಂದ ಸತ್ಕರಿಸಿ ಜಪಾನರು ಮಲಯಾದ ಮೇಲೆ ಎಂದೂ ಧಾಳಿಮಾಡುವುದು ಶಕ್ಯವಿಲ್ಲ. ಅವರು ಹೇಗೆ ಧಾಳಿ ಮಾಡುವರು? ಸಣ್ಣ ಜಪಾನಿ ದೋಣಿಗಳು ಬ್ರಿಟಿಷರ ಪ್ರಬಲವಾದ ನೌಕಾ ಬಲವನ್ನು ಎದುರಿಸುವವೆ? ಇದೆಂಥ ಮಾತು? ಎಲ್ಲಿಯಾದರೂ ಒಮ್ಮೊಮ್ಮೆ ಬ್ರಿಟಿಷ್ ಬಾಂಬರ್ ವಿಮಾನಗಳು ಧಾಳಿಮಾಡಿದರೂ ಈಗ ಗಾಬರಿಗೊಂಡು ಕಳಕಳಿಯಿಂದ ಮುಂಜಾಗ್ರತೆ ತೆಗೆದುಕೊಳ್ಳುವಷ್ಟು ವ್ಯವಸ್ಥೆ ಮಾಡುವಂಥ ಗಂಭೀರ ಪರಿಸ್ಥಿತಿಯುಂಟಾಗುವುದಿಲ್ಲವೆಂದು ಉತ್ತರ ಕೊಟ್ಟರು. ಈ ಬಗೆಯ ಆತ್ಮವಿಶ್ವಾಸವು ಕೇವಲ ಬ್ರಿಟಿಷ್ ಗವರ್ನರರೊಬ್ಬರದೇ ಅಲ್ಲ. ಅವರ ಸೈನ್ಯಾಧಿಕಾರಿಯೂ ಅದೇ ಮಾರ್ಗವನ್ನನುಸರಿಸಿದನು.

ಹೆಚ್ಚೇಕೆ ಕೋಟ ಬಾರುವಿನಿಂದ ರಾಜಧಾನಿಗೆ ಸಲಹೆ ಕೊಡುವಂತೆ ಮೊತ್ತಮೊದಲು ಬರೆದು ಕೇಳಿದರೆ ಅಲ್ಲಿಂದ ಉತ್ತರ ಬರಲು ಎಷ್ಟು ಹೊತ್ತಾಯಿತೆಂಬುದನ್ನು ಯಾರು ಹೇಳಬಲ್ಲರು?

ಸರಳರೂ ಒಳ್ಳೆಯವರೂ ಆದ ಅಮೇರಿಕನರು ತಮ್ಮ ದಂಡಿನಲ್ಲಿ ನೆಲಸಿದ ಈ ಬಗೆಯ ಆಶ್ಚರ್ಯದಾಯಕವಾದ ಆತ್ಮ ವಿಶ್ವಾಸದ ವೈಶಿಷ್ಟ್ಯವನ್ನು ಸ್ಪಷ್ಟಮಾಡಿದ ಬಗ್ಗೆ ನಮಗೆ ಸಾಕಷ್ಟು ಕಾಗದ ಪತ್ರಗಳವೇ ಸಾಕ್ಷಿಯಿವೆ. ವಾಶಿಂಗಟನಿನಿಂದ ಕಳವಳಗೊಂಡು ಸಲಹೆ ಕಳುಹಿಸಿದರೆ, ಪರ್ಲ ಬಂದರದಲ್ಲಿದ್ದ ಅಧಿಕಾರಿಗಳು ತಮ್ಮ ನಿಜಸ್ಥಿತಿಯನ್ನು ತಿಳಿಯದೆ ಬಹಳ ಆತ್ಮವಿಶ್ವಾಸೋನ್ಮತ್ತರಾಗಿ ಅದನ್ನು ಕೇಳಲಿಲ್ಲ. ದಾಸ್ಯದ ನೊಗಕ್ಕೆ ಕೊರಳನ್ನು ಕೊಟ್ಟು ಕುಗ್ಗಿದ ಏಶಿಯಾ ಖಂಡದ ಪ್ರತೀಕಾರ ಮಾಡುವ ಪದ್ಧತಿಯನ್ನು ಬ್ರಿಟಿಷರು ಹಾಗೂ ಅಮೇರಿಕನರು ಈ ವರೆಗೂ ತಿಳಿದುಕೊಂಡಿಲ್ಲ. ಸತತ ಸ್ವಾಮಿನಿಷ್ಠರಾದ ಮಹನೀಯರ ಸಹವಾಸದಲ್ಲಿದ್ದು ನಮ್ಮನ್ನು ಬಡತನಕ್ಕೀಡುಮಾಡಿ ಅವರು ಅನುಭವಿಸುತ್ತಿರುವ ಅತಿಶಯವಾದ ವೈಭವಕ್ಕೆ ಮನಸೋತು ಸಾಗುತ್ತಿರುವ ನಮ್ಮ ಈ ಪೂರ್ವದೇಶದ ಜನರಲ್ಲಿ, ತಮ್ಮಲ್ಲಿರುವ ವ್ಯಕ್ತಿತ್ವಶಕ್ತಿಯು ಸ್ವಲ್ಪವಾದರೂ, ಮಿತಿಮೀರಿದ ಅಹಂಕಾರವು ತುಂಬಿಕೊಂಡಿದೆ.

ಯುದ್ಧದ ನೆಲೆ

ಒಳಪ್ರದೇಶವು ಭದ್ರವಾಗಿಲ್ಲವಾದರೆ ಕರಾವಳಿಯ ನೌಕಾ ಮತ್ತು ವೈಮಾನಿಕ ಕೇಂದ್ರಗಳಿಂದ ಇಂದಿನ ಯುದ್ಧದಲ್ಲಿ ಹೆಚ್ಚು ಪ್ರಯೋಜನವಾಗುವುದಿಲ್ಲ. ಭೂಮಧ್ಯ ಸಾಗರದಲ್ಲಿ ಬ್ರಿಟಿಷರ ಭದ್ರತೆಯು ಉಳಿದದ್ದು ಜಿಬ್ರಾಲ್ಟರಿನಿಂದ ಅಲ್ಲ. ಅದಕ್ಕೆ ಸ್ಪೇನಿನ ಅಲ್ಫೋನ್ಸೋ ರಾಜರೇ ಕಾರಣವೆಂದು ಮೊದಲೇ ಹೇಳಲಾಗಿತ್ತು. ಏಶಿಯದಲ್ಲಿರುವ ಸ್ಥಳಗಳೆಲ್ಲವೂ ಮರುಭೂಮಿಯಾಗಿ ಮಾರ್ಪಟ್ಟಿವೆ. ಯಾಕೆಂದರೆ ಬ್ರಿಟಿಷರು ಈ ರೀತಿ ಅವರ ಶಕ್ತಿ ಸರ್ವಸ್ವವನ್ನು ಕಳೆದು ಕುಗ್ಗಿಸಿ ಬಿಟ್ಟಿದ್ದಾರೆ. ಸಿಂಗಾಪುರದಲ್ಲಿ ಏಶಿಯಾ ಖಂಡದ ಜನರು ತಮ್ಮ ಉಪಯೋಗಕ್ಕೆ ಬೇಕಾದ ಸಾಮಗ್ರಿಗಳನ್ನು ತಾವೇ ಹೊತ್ತುಕೊಂಡು ಹೋಗತಕ್ಕದ್ದೆಂದು ಮೊನ್ನೆಯ ವರೆಗೆ ಅಂದರೆ ಸಿಂಗಾಪುರದ ಪತನದ ವರೆಗೆ ಭಿತ್ತಿಪತ್ರಗಳನ್ನು ಹಚ್ಚಿಲ್ಲವೇ? ಬರ್ಮಾ ದೇಶದಲ್ಲಿ ಹಿಂದೀಯರ ಮೋಟಾರುಗಳನ್ನು ಯುದ್ಧ ಪ್ರಯತ್ನದ ಸೇವೆಗೆಂದು ತೆಗೆದುಕೊಂಡು ಯುರೋಪಿಯನರನ್ನು ಅಲ್ಲಿಂದ ಖಾಲಿಮಾಡುವುದಕ್ಕೆ ಉಪಯೋಗಿಸಿಲ್ಲವೇ? ಓರ್ವ ಹಿಂದೀ ನಿರಾಶ್ರಿತನು ಈ ದೇಶಕ್ಕೆ ಅಲ್ಲಿಂದ ಮರಳಿದ್ದು ಅಲ್ಲಿಯ ಕರುಣಾಜನಕವಾದ ಕತೆಯನ್ನು ಈ ರೀತಿ ಒಪ್ಪಿಸಿದ್ದಾನೆ. 'ನಾನು ಎತ್ತಿನ ಬಂಡಿಯಲ್ಲಿ ನನ್ನ ಸಾಮಾನು ಹೇರಿಸಿಕೊಂಡು ಬರುವಾಗ ನನ್ನ ಕಾರಿನಲ್ಲಿ ಬ್ರಿಟಿಷರು ಕುಳಿತು ಬರುವದನ್ನು ಕಣ್ಣಾರೆ ಕಂಡೆ' ಹೀಗಿರುವಾಗ ಜಪಾನಿನ ವಿರುದ್ಧ ಬ್ರಿಟಿಷರ ಯುದ್ಧದಲ್ಲಿ ಭಾಗವಹಿಸಿ ಹೋರಾಡಲು ಬರ್ಮಾಯರಿಗಾಗಲಿ, ಹಿಂದೀಯರಿಗಾಗಲಿ ಯಾವ ಉತ್ಸಾಹವೂ ಇಲ್ಲ. ಅವರ ಮನೋಮಾರ್ಗವು ಇದರ ವಿರುದ್ಧವಿದೆ.

'ಏಶಿಯಾದ ಜನಾಂಗಗಳಲ್ಲಿ ಹಿಂದೀಯರು ದೀನ ಹಾಗೂ ಸತತ ಅಪಮಾನಕ್ಕೆ ಗುರಿಯಾದ ಜನಾಂಗ. ಈ ವಿಷಯವನ್ನು ನಾವು ಮರೆಯಬಾರದು. ಜಪಾನು ಏಶಿಯಾ ಖಂಡದ ಒಂದು ಶಕ್ತಿ. ಯೂರೋಪಿನ ನೈತಿಕ ತತ್ವದಲ್ಲಿ ನಾನು ತರಬೇತಿ ಹೊಂದಿದ್ದಾಗಿದ್ದರೆ, ಮಹಾತ್ಮಾ ಗಾಂಧಿಯವರ ತತ್ವವು ನನ್ನ ಮೇಲೆ ತಕ್ಕ ಪರಿಣಾಮವನ್ನು ಮಾಡದೆ ಇರುತ್ತಿದ್ದರೆ (ತಕ್ಕ ಪರಿಣಾಮ ಮಾಡಿದ್ದರಿಂದ ಈ ಭಾಗವೇ ನನ್ನ ಜೀವನ ಚರಿತ್ರೆಯಲ್ಲಿ ಉತ್ತಮವಾದದು ಎಂದು ನನ್ನ ಭಾವನೆ) ನಾನು ಜನರಲ್ ಟೋಜೋನಿಗೆ ಜಯವಿರಲಿ ಎನ್ನುತ್ತಿದ್ದೆ. ಜನರಲ್ ಟೋಜೋ ಇವನು ಒರೇ ಬ್ರಿಟನನ್ನು ಸೋಲಿಸುವದು ಮಾತ್ರವಲ್ಲ—ಆ ಕೆಲಸವು ತೀರ ಸುಲಭವಾದ್ದು—ತನ್ನ ಪ್ರಯತ್ನದಲ್ಲಿ ಹಿಟ್ಲರನನ್ನೂ ಮೀರಿಸಿದ್ದಾನೆ. ಹಿಟ್ಲರನು ಸಾವಿರ ಮೈಲುಗಳ ವ್ಯೂಹದಲ್ಲಿ ಯುದ್ಧ ಮಾಡಬಲ್ಲನಾದರೆ 'ಜನರಲ್' ಟೋಜೋ ಎಷ್ಟು ಸಾವಿರ ಮೈಲುಗಳ ವ್ಯೂಹದಲ್ಲಿ ಯುದ್ಧ ಸಾಗಿಸಿದ್ದಾನೋ ನನಗೆ ಗೊತ್ತಿಲ್ಲ. ಒಟ್ಟಿನಲ್ಲಿ ಹಿಟ್ಲರನನ್ನು ಮೀರಿಸಿದ್ದಾನೆ. ಹಿಂದೀ ಗಾದೆಯೊಂದರಲ್ಲಿ ಹೇಳುವಂತೆ ಜನರಲ್ ಟೋಜೋ ಹಿಟ್ಲರನ ದೊಡ್ಡಪ್ಪನಾಗಿದ್ದಾನೆ. ಜನರಲ್ ಟೋಜೋ ಹಿಟ್ಲರ್ ಅಥವಾ ಚರ್ಚಿಲರಷ್ಟೇ ಕೆಟ್ಟವನಿದ್ದಾನೆ. ಏಕೆಂದರೆ ಈ ಬಗೆಯ ಹೇಯವಾದ ಕೊಲೆಯು ಸಾಗಿ, ಯಾವದೇ ಒಂದು ಪಕ್ಷಕ್ಕೆ ವಿಜಯವಾದರೆ, ಮುಂದೆ ಹೊಸ ಜಗತ್ತು ನಿರ್ಮಾಣವಾಗಬಹುದೆಂಬ ನನ್ನ ಆಶೆಯು ಶತಚೂರ್ಣವಾದಂತಾಗುವುದು.

"ಈಗ ಬಹುಃ ಹಿಂದುಸ್ಥಾನವನ್ನು ಉಳಿಸಲು ಬ್ರಿಟನಿಗೆ ಹೊತ್ತು ಮೀರಿದಂತಾಗಿದೆ. ಅಲ್ಲದೆ ಬ್ರಿಟನಿಗೆ ಹಿಂದುಸ್ಥಾನವು ಈಗ ಸಹಾಯ ಮಾಡುವ ಹೊತ್ತಲ್ಲ. ಈ ಸಮಯವು ಇನ್ನೂ ಬಹಳ ದೂರವಿದೆ. ಆದರೆ ನಾವೇನು ಮಾಡಬಹುದು? ಹಿಂದೀಯರು ಹಾಗೂ ಬ್ರಿಟಿಶರು ಒಂದಾಗಿ ಜಗತ್ತನ್ನು ಉಳಿಸಲು ಪ್ರಯತ್ನಿಸಬಹುದು. ಈ ಪ್ರಶ್ನೆಯು ಮೇಲಿಂದ ಮೇಲೆ ತೋರುವಷ್ಟು ದುರ್ಬಲವಾಗಿಲ್ಲ. ಮುಂದೆ ಜಗತ್ತಿನಲ್ಲಿ ಶಾಂತಿ ನೆಲೆಗೊಳ್ಳುವಂತೆ ಸ್ವತಂತ್ರ ಹಾಗೂ ಶಬಲ ಜಗತ್ತಿನ ಬಗ್ಗೆ ಒಳ್ಳೆ ಕಳಕಳಿಯಿಂದ ನಿಷ್ಪಕ್ಷಪಾತ ಹಾಗೂ ಪ್ರಾಮಾಣಿಕವಾದ ಒಂದು ಯೋಜನೆಯನ್ನು ರಚಿಸಿ ಯುದ್ಧದಲ್ಲಿ ಧುಮುಕಿದ ಪ್ರತಿಯೊಂದು ರಾಷ್ಟ್ರವನ್ನು ಕರೆದು ಈ ಯೋಜನೆಯು ಒಪ್ಪುವಂತೆ ಕೇಳಿ ಆಗ ಕೆಲರಾಷ್ಟ್ರಗಳು ಅತ್ಯಾಶೆ ಹಾಗೂ ಅತ್ಯಹಂಕಾರವನ್ನು ವ್ಯಕ್ತ ಮಾಡಿದರೆ ಮುಂದೆ ಏಶಿಯದ ಯುದ್ಧದ ಸ್ವರೂಪವೇ ಬದಲಾಗುವದು."

ಜಪಾನು ನಮ್ಮನ್ನು ಸ್ವತಂತ್ರ ಮಾಡುವುದೆ?

ಹಿಂದುಸ್ತಾನದಲ್ಲಿ ಪರದೇಶೀ ಸೈನಿಕರೇಕೆ?

— ಗಾಂಧಿಜಿ ಲೇಖನ —

ಜಪಾನರು ನಮ್ಮ ದಾಸ್ಯ ಪರಿಹಾರವಾಗುವುದೆ?

ಇಲ್ಲವೆನ್ನುವರು ಗಾಂಧಿಜಿ

'ಜಪಾನರು ಈಗ ಹೇಳುವಂತೆ, ಹಿಂದುಸ್ತಾನವನ್ನು ಬ್ರಿಟಿಷರ ನೊಗದಿಂದ ಅವರು ಬಿಡುಗಡೆ ಮಾಡುವುದಿದ್ದರೆ ನಾವು ಯಾಕೆ ಅವರೊಡನೆ ಸಹಕರಿಸಬಾರದು?' ಎಂದೊಬ್ಬರು ಗಾಂಧಿಜಿಯವರೊಡನೆ ಕೇಳಿದ್ದಕ್ಕೆ ಹರಿಜನದಲ್ಲಿ ಅವರು ಹೀಗೆಂದು ಉತ್ತರಿಸುತ್ತಾರೆ.

'ಆಕ್ರಮಣಗಾರರು, ನಮ್ಮ ಹಿತಚಿಂತಕರೆಂದು ಭಾವಿಸುವುದು ಮೂರ್ಖತನ. ಬ್ರಿಟಿಷರ ನೊಗದಿಂದ ಹಿಂದುಸ್ತಾನದ ಕೊರಳನ್ನು ಒಂದು ಪಕ್ಷ ಜಪಾನರು ಬಿಡಿಸಬಹುದು, ಆದರೆ ಮುಂದೆ ತಮ್ಮ ನೊಗವನ್ನು ಅದರ ಕೊರಳಿಗೆ ಅವರು ಕಟ್ಟುವರು. ನಮ್ಮ ಸ್ವಾತಂತ್ರ್ಯಗಳಿಸಲು ಯಾವುದೇ ಪರಕೀಯ ಸರಕಾರದ ಸಹಾಯ ಕೇಳಬಾರದು. ಹಾಗೆ ಸಹಾಯ ಕೇಳುವುದು ಅಹಿಂಸಾತ್ಮಕಮಾರ್ಗವಲ್ಲ. ಅಹಿಂಸಾ ಮಾರ್ಗದಿಂದ ನಮ್ಮ ಗುರಿಯನ್ನು ಮುಟ್ಟುವುದು ಸುಲಭವಿದೆ. ಜಪಾನರ ವಿರುದ್ಧ ನನಗೇನೂ ದ್ವೇಷವಿಲ್ಲ; ಆದರೆ ಹಿಂದುಸ್ತಾನದ ವಿಚಾರ ಅವರು ತಳೆದ ಧೋರಣ ಸರಿಯೆಂದು ನಾನು ಶಾಂತಚಿತ್ತನಾಗಿ ಆಲೋಚಿಸಲಾರೆ. ಅವರು ಹಿಂದುಸ್ತಾನವನ್ನು ಅದರ ಪಾಲಿಗೆ ಬಿಟ್ಟುಬಿಡಲಿ. ಅವರ ಉದ್ದೇಶವು ಉತ್ತಮವಿದ್ದರೆ ಯಾವ ಅಪರಾಧಕ್ಕಾಗಿ ಇವರು ಚೀನದ ಮೇಲೆ ಆಕ್ರಮಣ ಮಾಡಿದರು?'

ಹಿಂದುಸ್ತಾನದಲ್ಲಿ ವಿದೇಶೀ ಸೈನಿಕರೇಕೆ?

ಗಾಂಧಿಜಿ ಲೇಖನ

'ಈಗಾಗಲೇ ಇಲ್ಲಿ ಅನೇಕ ವಿದೇಶೀ ಕೈದಿಗಳಿದ್ದಾರೆ, ಸಾಲದ್ದಕ್ಕೆ ಈಗ ಅಮೇರಿಕ ಚೀನ ಮೊದಲಾದೆಡೆಗಳಿಂದ ಸೈನಿಕರನ್ನು ತರಲಾಗುತದೆ, ಅಮೆರಿಕದ ಸಹಾಯದ ಅರ್ಥ ನನಗೆ ಗೊತ್ತಿದೆ, ನಮ್ಮ ದೇಶದಲ್ಲಿ ಇಷ್ಟು ಜನರಿರುವಾಗ ಸೈನ್ಯಕ್ಕೆ ಅವರನ್ನು ಸೇರಿಸುವುದನ್ನು ಬಿಟ್ಟು ಹೀಗೆ ಪರದೇಶದಿಂದ ಜನರನ್ನು ತರುವುದು ಯಾಕೆ? ಬ್ರಿಟಿಷರ ಆಡಳಿತ ಸಾಲದ್ದಕ್ಕೆ ಮುಂದೆ ಅಮೆರಿಕದ ವರ್ಚಸ್ಸೂ ನಮ್ಮ ಮೇಲೆ ಬಿದ್ದು ನಾವು ಅವರಿಗೂ ಹಂಗಿಗರಾಗಬೇಕೆಂದೆ?' ಹೀಗೆಂದು ಗಾಂಧಿಜಿ 'ಹರಿಜನ'ದಲ್ಲಿ ಸರಕಾರವು ವಿದೇಶದಿಂದ ಸೈನಿಕರನ್ನು ತರುವ ವಿಷಯ ಖಂಡಿಸಿ ಲೇಖನ ಬರೆದಿರುವರು. ಅದರ ವಿವರ ಕೆಳಗಿನಂತಿದೆ.

'ಈಗ ಹಿಂದುಸ್ತಾನದ ರಕ್ಷಣೆಯ ಸಲುವಾಗಿ ಮಾಡುವ ಕೆಲಸದಿಂದ ಹಿಂದುಸ್ತಾನಕ್ಕೆ ಮುಂದೆ ಸ್ವಾತಂತ್ರ್ಯ ದೊರಕುವುದೆಂದು ನನಗೆ ತೋರುವುದಿಲ್ಲ. ಬ್ರಿಟಿಷರು ಏನು ಹೇಳಿದರೂ ಇದು ಬ್ರಿಟಿಷ್ ಸಾಮ್ರಾಜ್ಯ ರಕ್ಷಣೆಗಾಗಿ ಮಾಡುವ ಪ್ರಯತ್ನವೆಂಬುದು ಸ್ಪಷ್ಟವಾಗಿದೆ. ಸಿಂಗಾಪುರವನ್ನು ಅದರಷ್ಟಕ್ಕೆ ಬಿಟ್ಟಂತೆ, ಹಿಂದುಸ್ತಾನವನ್ನೂ ಅದರಷ್ಟಕ್ಕೆ ಬಿಟ್ಟರೆ ಅದರಿಂದ ಅಹಿಂಸಾತ್ಮಕ ಹಿಂದುಸ್ತಾನಕ್ಕೆ ಯಾವ ತೊಂದರೆಯೂ ಆಗಲಾರದು. ಬಹುಶಃ ಜಪಾನರೂ ಹಿಂದುಸ್ತಾನವನ್ನು ಅದರ ಪಾಡಿಗೆ ಬಿಟ್ಟು ಬಿಡಬಹುದು. ಇಲ್ಲಿಯ ಪ್ರಮುಖ ಪಕ್ಷಗಳು ಒಂದು ಒಪ್ಪಂದಕ್ಕೆ ಬಂದರೆ ಶಾಂತಿಯ ಮಾರ್ಗದಲ್ಲಿ ಹಿಂದುಸ್ತಾನವು ವಿಶೇಷ ಸಹಕಾರಿಯಾಗಬಹುದು.

ಮುಂದೆ ಬ್ರಿಟಿಷರು, ಬೇರೆ ಉಪಾಯವಿಲ್ಲದೆ ಬಿಟ್ಟುಕೊಟ್ಟರೆ ಈ ಮಹತ್ಕಾರ್ಯಗಳು ಸಾಧ್ಯವಾಗದು. ಈಗ ಬ್ರಿಟನು ಪಶ್ಚಿಮದಲ್ಲಿ ಯುದ್ಧ ಮಾಡಿ, ಪೂರ್ವದ ಪರಿಸ್ಥಿತಿಯನ್ನು ಸರಿಪಡಿಸಲು ಅದರಷ್ಟಕ್ಕೆ ಬಿಟ್ಟುಬಿಟ್ಟರೆ ಅದು ಎಷ್ಟು ಧೈರ್ಯ ಮತ್ತು ಯೋಗ್ಯ ಕೆಲಸವಾಗಲಿಕ್ಕಿಲ್ಲ. ಈ ಮಹಾಯುದ್ಧದಲ್ಲಿ ಬ್ರಿಟನು ತನ್ನೆಲ್ಲಾ ಸಾಮ್ರಾಜ್ಯವನ್ನು ರಕ್ಷಿಸಿಕೊಳ್ಳುವುದೆಂಬುದೇನೂ ಭದ್ರವಾದುದಲ್ಲ. ಆದಷ್ಟು ಬೇಗ ಬ್ರಿಟನು ಈ ಹೊರಲಾರದ ಭಾರದಿಂದ ತನ್ನನ್ನು ತಪ್ಪಿಸಿಕೊಳ್ಳದಿದ್ದರೆ, ಜಪಾನರು ಹಿಂದುಸ್ತಾನವನ್ನು ಮತ್ತಷ್ಟು ಪೀಡಿಸಬಹುದು. ಮುಂದೆ ಭಾರತೀಯರಿಗೆ ಅದು ಈಗ ಬ್ರಿಟಿಷರಿಗಾಗುವ ಕಷ್ಟಕ್ಕಿಂತ ಹೆಚ್ಚಿನದಾಗುವುದು. ಬ್ರಿಟನು ಏಶಿಯಾ ಮತ್ತು ಆಫ್ರಿಕದ ಜನರನ್ನು ದಾಸ್ಯದಲ್ಲಿ ಅದ್ದಿದ ಪಾಪಕ್ಕೆ ಪ್ರಾಯಶ್ಚಿತ್ತ ಕೊಡಲು ಇಂದು ನಾಜೀ ಶಕ್ತಿ ತಲೆಯೆತ್ತಿದೆ. ಹಾಗಾಗಿ ಬ್ರಿಟಿಷರು ಹಿಂದುಸ್ತಾನವನ್ನು ಅದರ ಪಾಡಿಗೆ ಬಿಟ್ಟು, ಎಷ್ಟು ಬೇಗ ಇಲ್ಲಿಂದ ಹೊರಟು ಹೋಗುತ್ತಾರೋ ಅಷ್ಟು ಬ್ರಿಟಿಷರಿಗೂ ಭಾರತೀಯರಿಗೂ ಒಳ್ಳೆಯದು. ನರೇಂದ್ರರ ಹಿತ, ಅಲ್ಪಸಂಖ್ಯಾಕರ ಹಿತ ಇವೆಲ್ಲ ತಮ್ಮ ಹಿತಸಂಬಂಧವನ್ನುಳಿಸಿಕೊಳ್ಳಲು ಅವರೇ ಹೂಡಿದ ಕೃತಕಗಳು. ನಾವು ಕಾಣುವ ಕಠೋರ ಸತ್ಯದ ಮುಂದೆ ಅವು ಕರಗಿ ನೀರಾಗಲೇ ಬೇಕು. ಬ್ರಿಟಿಷರ ಹಸ್ತ ತಪ್ಪಿದೊಡನೆ ಹಿಂದುಸ್ತಾನದ ಜನರೆಲ್ಲರೂ ಒಂದಾಗಿ ಅಖಂಡ ಭ್ರಾತೃಗಳಾಗಿ ನಡೆಕೊಳ್ಳುವರು. ಅಂಥಾ ಉಪಾಯವನ್ನು ಮುಖಂಡರು ಮಾಡಿಯೇ ಮಾಡುವರು. ಮೇಲೆ ಹೇಳಿದ ಎಲ್ಲಾ ವಿಷಯಗಳಿಂದ ನಮ್ಮಲ್ಲಿಗೆ ಪರದೇಶದಿಂದ ಸೈನ್ಯ ಬರುವುದು ಬಹಳ ಅಪಾಯಕಾರಿಯಾಗಿದೆ. ಇದು ಸಾಮಾನ್ಯ ಅಪಾಯವಲ್ಲ. ಸಂಪೂರ್ಣ ದುಃಖಕ್ಕೆ ಗುರಿಪಡಿಸುವಂಥಾದ್ದು.'

ಮದ್ರಾಸು ನಿರ್ಣಯದ ಕುರಿತು ಎ. ಐ. ಸಿ. ಸಿ.ಯಲ್ಲಿ ಚರ್ಚೆ

ಹಿಟ್ಲರನ ರಿಚ್‌ಸ್ಟಾಗ್ ಭಾಷಣ

ಗಂಡಾಂತರ ಕಾಲದಲ್ಲಿ ರಾಜೇಂದ್ರಪ್ರಸಾದರ ಸೂಚನೆಗಳು

ಪತ್ರಿಕೆಗಳ ಮೇಲೆ ಸರಕಾರದ ಗದೆ!

ಹಿಟ್ಲರನ ಭಾಷಣ

ಹಿಟ್ಲರನು ರಿಕ್‌ಸ್ಟಾಗ್‌ನಲ್ಲಿ ಭಾಷಣ ಮಾಡು ತ್ತಾ ಹೀಗೆ ಹೇಳಿದನು. 'ರಶ್ಯಾದಲ್ಲಿ ಸಹಿಸಲ ಸಾಧ್ಯವಾದ ಛಳಿಗಾಲ ಮುಗಿಯಿತು. 130 ವರ್ಷಗಳ ಹಿಂದೆ ನೆಪೋಲಿಯನಿಗೊದಗಿದ್ದ ದುರ್ದೆಸೆಯಿಂದ ನಾವು ಪಾರಾದೆವು. ನಮ್ಮ ಮುಂದಿನ ಧಾಳಿ ಬೇಗನೇ ಪ್ರಾರಂಭವಾಗುವುದು. ರಶ್ಯ ನಿರ್ನಾಮವಾಗುವ ವರೆಗೆ ಆ ಯುದ್ಧ ನಡೆವುದು. ಹಿಟ್ಲರನು ತನ್ನ ಭಾಷಣದಲ್ಲಿ ಯೂರೋಪಿನ ರಾಜಕಾರಣವನ್ನು ವಿವರಿಸಿ, ಅಮೆರಿಕ ಬ್ರಿಟನುಗಳನ್ನು ಟೀಕಿಸಿ, ಸತ್ಯಕ್ಕಾಗಿ ಹೋರಾಡುವ ಜರ್ಮನಿಗೇ ಜಯವಾಗುವುದೆಂದನು. ಯುದ್ಧದಲ್ಲಿ ಕಷ್ಟವನ್ನನುಭವಿಸಿದ ಸೈನಿಕರನ್ನು ಅಭಿನಂದಿಸಿದನು. ಕೊನೆಗೆ ಹಿಟ್ಲರನು ಇಂಗ್ಲೆಂಡಿಗೆ ಹೆದರಿಕೆ ಹಾಕಿದನು. ಜರ್ಮನ್ ಜಲಾಂತರ್ಗಾಮಿಗಳ ಹಾವಳಿ ಹೆಚ್ಚಾಗುವುದೆಂದೂ, ಆರ್. ಎ. ಎಫ್. ಧಾಳಿಗೆ ಪ್ರತಿಯಾಗಿ ಇಂಗ್ಲೆಂಡಿನ ಮೇಲೆ ಉಗ್ರ ವಿಮಾನ ಧಾಳಿಯಾಗುವುದೆಂದೂ ಹೆದರಿಸಿದನು.

ಅವನ ಭಾಷಣದ ಇನ್ನೂ ಕೆಲವು ವಿವರಗಳು ಹೀಗಿವೆ:

'ಸಾಮಾನ್ಯ ಸಾವಿರ ವರ್ಷಕ್ಕೊಮ್ಮೆ ಜಗತ್ತನ್ನೇ ಬದಲಾಯಿಸುವ ಪ್ರಳಯ ಕಾಲ ಬರುತ್ತದೆ; ಇಂದಿನ ಹೋರಾಟವು ಅಂತಹ ಒಂದು ಕಾಲ. ತಮ್ಮ ಸ್ಥಾನಮಾನಗಳನ್ನು ಭದ್ರಪಡಿಸಿಕೊಳ್ಳಲು ಬ್ರಿಟಿಷರು ಯೂರೋಪಿನಲ್ಲಿ ಆಗಾಗ ಯುದ್ಧ ನಡೆಸಿದರು; ಇಂದಿನದೂ ಅದೇ ಉದ್ದೇಶಕ್ಕಾಗಿತ್ತು. ಜಪಾನಿನೊಡನೆ ಒಪ್ಪಂದ ಮಾಡಿಕೊಳ್ಳಿರಿ ಎಂದು ನಾನು ಅನೇಕ ಸಲ ಹೇಳಿದೆ; ಆದರೆ ಅವರೊಪ್ಪಲಿಲ್ಲ. ಈ ಯುದ್ಧದಲ್ಲಿ ಸತ್ಯಕ್ಕೆ ಜಯವಾಗುವುದು; ಆದರೆ ಸತ್ಯವು ನಮ್ಮ ಕಡೆಗಿದೆ; ಜರ್ಮನರ ಭವಿಷ್ಯದ ಸಲುವಾಗಿ ನನ್ನ ಜೀವನ ಧಾರೆಯೆರೆದಿದ್ದೇನೆ."

ವಿಚಿ ಬರ್ಲಿನ್ ಸಂಧಾನ

ಲಾವಲರು ಜರ್ಮನಿಯೊಡನೆ ಸಂಧಾನ ಪ್ರಯತ್ನದ ಕಾರ್ಯ ಪ್ರಾರಂಭಿಸಿರುವರೆಂದು ತಿಳಿದಿದೆ. ಲಾವಲರ ಕಚೇರಿ ವಿಚಿಯಲ್ಲಿರಬೇಕೋ ಪ್ಯಾರಿಸಿನಲ್ಲಿರಬೇಕೋ ಎಂಬ ವಿಷಯ ಮಾತುಕತೆ ನಡೆಯುತ್ತಿಯಂತೆ.

ಕ್ರಿಪ್ಸ್ ರಾಯಭಾರದ ಕುರಿತು ಬಿಳಿ ಕಾಗದ

ಕ್ರಿಪ್ಸ್ ರಾಯಭಾರದ ಕುರಿತು ಬ್ರಿಟಿಷ್ ಸರಕಾರದವರು ಒಂದು ಬಿಳಿಯ ಕಾಗದವನ್ನು ಹೊರಡಿಸುತ್ತಾರೆ. ಇದರಲ್ಲಿ ಕ್ರಿಪ್ಸರ ಸೂಚನೆ, ಕಾಂಗ್ರೆಸ್ ಉತ್ತರ ಮೊದಲಾದವುಗಳೂ, ಕ್ರಿಪ್ಸ್ ರಾಯಭಾರದ ಕುರಿತು ಚರ್ಚೆಗಳ ಭಾಷಣ ಮೊದಲಾದವುಗಳಿವೆ. ಕಾಮನ್ಸ್ ಸಭೆ ಮುಂದಿನ ಸಲ ಕೂಡಿದಾಗ, ಕ್ರಿಪ್ಸರು ಹಿಂದೂಸ್ತಾನದ ವಿಷಯ ಮಾತನಾಡುವರು. ಅಖಿಲ ಭಾರತ ಕಾಂಗ್ರೆಸ್ ಕಮಿಟಿಯವರೂ ಕ್ರಿಪ್ಸ ರಾಯಭಾರದ ಕುರಿತು ಒಂದು ಚಿಕ್ಕ ಪ್ರಕಟಣೆ ಹೊರಡಿಸುವರು. ಇದರಲ್ಲಿ ಕ್ರಿಪ್ಸರ ವಿಷಯ ಕಾಂಗ್ರೆಸಿನವರ ವರದಿ ಇರುವುದು. ಎ. ಐ. ಸಿ. ಸಿ. ಸಮಯದಲ್ಲಿ ಇದು ಪ್ರಸಿದ್ಧವಾಗುವುದು.

ಪತ್ರಿಕೆಗಳ ಮೇಲೆ ಗದೆ

ಸರಕಾರದವರು, ಹಿಂದುಸ್ತಾನ್ ಟೈಮ್ಸ್ ನೇಶನಲ್ ಹೆರಾಲ್ಡ್, ಯುಗಾಂತರ ಮೊದಲಾದ ಪತ್ರಿಕೆಗಳ ಮೇಲೆ ಇತ್ತೀಚೆಗೆ ಗದೆಯೆತ್ತಿದ್ದಾರಷ್ಟೆ? ಹೀಗೆ ಸತ್ಯ ಸುದ್ದಿಗಳನ್ನು ಅಡಗಿಸುವ ಸಲುವಾಗಿ ಸರಕಾರವು ಅನುಸರಿಸುವ ಕೆಟ್ಟ ರೀತಿಯನ್ನು ನೆಹರು ಖಂಡಿಸಿದರು. ಇತ್ತೀಚೆಗೆ ಯುಗಾಂತರ 'ಸೆಂಟಿನಲ್' ಪತ್ರಿಕೆಗಳ ಪ್ರಕಟಣೆಗೆ ಅನುಮತಿ ದೊರೆತಿದೆ.

ಆರ್. ಎ. ಎಫ್. ಗಳು ಫ್ರಾನ್ಸಿನ ಮೇಲೆ

ಧಾಳಿ ನಡೆಸಿದವು. ಶತ್ರು ವಿಮಾನಗಳು ನಾಶಗೊಳಿಸಲ್ಪಟ್ಟವೆ. ಜರ್ಮನಿಯ ವಿರುದ್ಧ ಇಂಗ್ಲೆ

ಷರೂ ಅಮೆರಿಕನರೂ ಒಂದು ಪ್ರಚಂಡ ಸಿದ್ಧತೆ ಮಾಡುತ್ತಿದ್ದಾರೆ.

ಜಪಾನಿನ ನೌಕಾಬಲವೆಲ್ಲಿದೆ?

ಹಿಂದೀ ಸಾಗರಕ್ಕಿಳಿದ ಜಪಾನಿನ ನೌಕಾಬಲವು ಈಗ ಯಾವೆಡೆಯಲ್ಲಿದೆಯೆಂದು ಊಹೆಯಿದ್ದಿದೆ ಬಹುಶಃ ಇದು ಈಗ ಸಿಂಗಾಪುರದ ಬಳಿ ಹೋಗಿದ್ದು ಪೆಟ್ರೋಲ್ ಮೊದಲಾದ ಸಾಧನ ಸಾಮಗ್ರಿ ತುಂಬಿಸಿ ತಿರುಗಿ ಬರಬಹುದೆಂದು ಅಂದಾಜು ಮಾಡಲಾಗಿದೆ.

ಗಂಡಾಂತರ ನಿವಾರಣಾ ಸೂತ್ರಗಳು

ರಾಜೇಂದ್ರ ಪ್ರಸಾದರ ಕೆಲವು ಸೂಚನೆ

ಪ್ರಕೃತದ ಗಂಡಾಂತರದಿಂದ ಜನರು ಸ್ವಪ್ರಯತ್ನದಿಂದ ಹೇಗೆ ಪಾರುಬೀಳಬಹುದೆಂಬ ಬಗ್ಗೆ ಡಾ॥ ರಾಜೇಂದ್ರ ಪ್ರಸಾದರವರು ಒಂದು ಕಾರ್ಯಕ್ರಮ ಹೊರಡಿಸಿದ್ದಾರೆ. ಅದರಲ್ಲಿರುವ ಹನ್ನೊಂದು ವಿಷಯಗಳ ಸಾರಾಂಶ ಇಂತಿದೆ:

(1) ಆದಷ್ಟು ಹೆಚ್ಚಿಗೆ ಆಹಾರ ವಸ್ತುಗಳನ್ನು ಬೆಳೆಸಿರಿ. ಬರ್ಮದಿಂದ ಈಗ ಅಕ್ಕಿ ಬರುವುದಿಲ್ಲ. ಒಂದು ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗೆ ಅದನ್ನು ಸಾಗಿಸುವುದೂ ಪ್ರಯಾಸ. (2) ಸಾಗುಮಾಡುವ ಭೂಮಿಯ ಉತ್ಪತ್ತಿಯು ಹೆಚ್ಚಾಗುವಂತೆ ದುಡಿಯಿರಿ. ಸಣಬಿನಂತಹ ಹಣಗಳಿಸುವ ಉತ್ಪತ್ತಿಯ ಬದಲಿಗೆ ಅಕ್ಕಿ ಪೈದಾಸ್ತು ಮಾಡಿರಿ. ಹಣಕೊಡುವ ಉತ್ಪತ್ತಿಗಳನ್ನು ಪರದೇಶಗಳಿಗೆ ರಫ್ತು ಮಾಡಲು ಈಗ ಸಾಧ್ಯವಿಲ್ಲ. ಈಗ ಬೇಕಾದುದು ನಮ್ಮ ಗಳೇ ಸರಿ. (3) ಆಹಾರ ಪದಾರ್ಥಗಳಿಗೆ ಹೊರತು ದೀಪಕ್ಕೆ ಸಹಾ ಇನ್ನು ಎಣ್ಣೆ ಬೇಕು. ಕಾರಣ, ಚಿಮಿಣಿ ಎಣ್ಣೆ ಸುಲಭವಾಗಿ ಸಿಗದು. ಆದುದರಿಂದ ಎಣ್ಣೆ ಬೀಜಗಳ ಉತ್ಪತ್ತಿ ನಡೆಯಬೇಕು. ಅದು ಅಗತ್ಯವಿದೆ (4) ಬಂಜರು ಬಿದ್ದ ಸ್ಥಳಗಳನ್ನು ಆಹಾರ ಸಾಮಗ್ರಿಗಳ ಬಗ್ಗೆ ಸಾಗುವಳಿ ಮಾಡಿರಿ; (5) ಉಣ್ಣುವಾಗ ತಿನ್ನುವಾಗ ಆಹಾರ ಪದಾರ್ಥಗಳನ್ನು ಬಿಸಾಡಬೇಡಿರಿ, ಅವುಗಳ ದುರ್ವ್ಯಯ ತ್ಯಜಿಸಬೇಕು. ಉಚ್ಛಿಷ್ಟದಿಂದ ಜೀವಿಸುವವರು ಅನೇಕರಿರಬಹುದು. (6) ಕಜೆ ('ಸಪ್ಪಾ ಮಾಡದ) ಅಕ್ಕಿಯನ್ನೇ ಉಣ್ಣುವುದು ಲೇಸು. ಇಡಿ ಗೋಧಿಯನ್ನೇ ತಿನ್ನುವುದುತ್ತಮ. ಏಕೆಂದರೆ, ಅಂಥಹುದೇ ಆರೋಗ್ಯಕ್ಕೆ ಯೋಗ್ಯವಾಗಿದೆ. ಸ್ವಲ್ಪ ಪರಿಮಾಣದಲ್ಲಿಯೂ ಅವನ್ನು ತಿಂದರೆ ಹೆಚ್ಚಿಗೆ ಪೌಷ್ಟಿಕ ಆಹಾರ ತಿಂದಂತಾಗುವುದು. —ಅಂದರೆ ಅದರಲ್ಲಿ ಸಾರ ಹೆಚ್ಚು ಇರುವುದರಿಂದ ಕಡಿಮೆ ತಿಂದರೂ ಸಾಕಾಗುವುದು. ನೀವು ಎಷ್ಟು ಮಟ್ಟಿಗೆ ಆಹಾರ ಸಾಮಗ್ರಿಗಳನ್ನು ಉಳಿಸುವಿರೋ ಅಷ್ಟು ಹೆಚ್ಚು ಮಂದಿಯನ್ನು ನೀವು ಬದುಕಿಸುವಿರಿ. (7) ಕಿಸಾನರು ತಮಗೆ ಬೇಕಾದ ಆಹಾರ ಸಾಮಗ್ರಿಗಳನ್ನು ಸಂಗ್ರಹಿಸಿಡತಕ್ಕುದು, ಮತ್ತು ತಮ್ಮಲ್ಲಿ ಹೆಚ್ಚಿಗೆ ಉಳಿದುದನ್ನು ಇತರರಿಗೆ—ಅಂದರೆ ಅವರಂತೆ ಬೆಳೆಯಿಸದವರಿಗೆ— ಅವನ್ನು ಮಾರಿದ ಪಕ್ಷಕ್ಕೆ ಅವರು ಕೂಡ ಬದುಕುವರು; ಅಲ್ಲದೆ ಹೊಟ್ಟೆಗಿಲ್ಲದೆ ಸಾಯುವ ಗತಿಗೆ ಯಾರೂ ಬರಲಾರರು. (8) ಪ್ರತಿಗ್ರಾಮದಲ್ಲಿ ಸೇವಾದಲದ ವ್ಯವಸ್ಥೆ ಮಾಡಿರಿ, ರಾತ್ರಿಯಲ್ಲಿ ಸರ್ತಿಪ್ರಕಾರ ಕಾವಲು ಏರ್ಪಾಡು ಸಹ ಮಾಡಿರಿ. ಸಭ್ಯರು ಇಂಥಹಾ ವ್ಯವಸ್ಥೆಗೆ ಸೇರಿದರೆ ಕಳ್ಳರು ಕಾಕಪೋಕ ಜನರು ತಮ್ಮ ಅಧಮಕಾರ್ಯಕ್ಕೆ ತೊಡಗರು. ಪ್ರತಿ ಯುವಕನು ಸಹ ಸೇವಾದಲ ಸೇರಲಿ. (9) ಗಾಳಿ ವರ್ತಮಾನ ಹಬ್ಬದಂತೆ ತಡೆ ಹಾಕಿರಿ. ಜನರು ಗಾಬರಿಗೊಂಡು ಒಂದು ಕಡೆಯಿಂದ ಇನ್ನೊಂದು ಕಡೆಗೆ ಓಡದಂತೆ ಜಾಗ್ರತೆ ಮಾಡಿರಿ. (10) ಪ್ರತಿ ಒಬ್ಬನು ತನಗೆ ಬೇಕಾದ ಬಟ್ಟೆ ತಯಾರಿಸಲು ನೂಲು ತೆಗೆಯಬೇಕು, ಹಳ್ಳಿಯ ನೇಕಾರನಿಗೆ ಅದನ್ನು ಕೊಟ್ಟು ಬಟ್ಟೆ ಮಾಡಿಸಬೇಕು. ಬಟ್ಟೆಯ ಕ್ರಯ ಏರುವ ಕಾರಣ, ಇನ್ನು ಸುಲಭವಾಗಿ ಸಿಗುವಂತಿಲ್ಲ, ಹತ್ತಿಯನ್ನು ಬೆಳೆಸಬೇಕು. (11) ಅಂಗಡಿಕಾರರ ವರ್ತಕರು ಜೀವನಕ್ಕೆ ಬೇಕಾದ ವಸ್ತುಗಳನ್ನು ಬಚ್ಚಿಟ್ಟು ಮಾಡಿ ಅಧಿಕ ಲಾಭ ಗಳಿಸುವ ಆಸೆ ಮಾಡಬಾರದು, ಹಾಗಾದರೆ ಆಹಾರಸಾಮಗ್ರಿಗಳ ತುಟ್ಟಿ ಒದಗಿ ಹೇಳಲಾಗದ ತೊಂದರೆಗಳಿಗೆ ಜನರು ಗುರಿಯಾಗುವರು.

ರಶ್ಯನ್ ರಣರಂಗದಲ್ಲಿ

ರಶ್ಯನರಿಗೆ ಜಯವು ಹೆಚ್ಚು ಹೆಚ್ಚಾಗಿ ದೊರಕುತ್ತಿದೆ. ಸ್ಟಾಲಿನ್ ಕೆನಾಲ್‌ನ ಬಳಿ ಯುದ್ಧ ನಡಯುತ್ತಿರುವುದು. ಗೋರಿಲ್ಲಾ ಕದನವು ಹೆಚ್ಚುತ್ತಿರುವುದು.

ಬರ್ಮಾದಲ್ಲಿ

ಕಾಳಗ ಜೋರಾಗಿ ನಡೆದಿದೆ. ಜಪಾನು ವ್ಯವಹಾರವನ್ನು ಚೀನಿಯರು ತುಂಡರಿಸಿದ್ದಾರೆ. ಲಾಶಿಯೋ ಮಾರ್ಗಕ್ಕೆ ಶತ್ರುಗಳು ಹೆದರಿಕೆ ಹಾಕಿರುವರು.

ಫ್ರೆಂಚ್ ಹಡಗುಪಡೆ ಜರ್ಮನಿಗೆ

ಲಾವಲರ ಪ್ರಭುತ್ವ ಸ್ಥಾಪನೆಯಾದ ಬಳಿಕ ಫ್ರೆಂಚ್ ಜರ್ಮನ್ ಒಪ್ಪಂದವಾಗಿ ಫ್ರೆಂಚ್ ಹಡಗುಪಡೆ ಜರ್ಮನ್ ವಶ ಒಪ್ಪಿಸಲಾಗಿದೆಯೆಂದು ತಿಳಿದಿದೆ.

ಅಲ್ಲಾಬಾದಿನಲ್ಲಿ ಕಾಂಗ್ರೆಸ್ ಕಮಿಟಿ ಸಭೆ

ನಡೆದಿರುವುದು ವರ್ಕಿಂಗ್ ಕಮಿಟಿ ನೇರ ರಾಜಾಜಿಯವರ ಠರಾವಿನ ಕುರಿತು ಬಹಳ ವಿಚಾರ ಚರ್ಚೆ ನಡೆದವು. ಬರ್ಮಾ ನಿರಾಶ್ರಿತರ ಕಾಂಗ್ರೆಸು ದೀರ್ಘ ವಿಚಾರಮಾಡುತ್ತಿದೆ. ಬರ್ಮದಿಂದ ಆಗಲಿ ಬಂದವರ ಕುರಿತು ಕಾಂಗ್ರೆಸ್ ಮಾಡಿದ ಠರಾವನ್ನು ಪತ್ರಿಕೆಗಳು ಪ್ರಕಟಿಸಬಾರದಾಗಿ ಸರಕಾರದ ಪ್ರಕಟಣೆ.

ರಾಷ್ಟ್ರೀಯ ವಾರ ಪತ್ರಿಕೆ
ಸ್ವದೇಶಾಭಿಮಾನಿಗೆ
— ಇಂದೇ —
ಚಂದಾದಾರರಾಗಿರಿ.

ಸಕಲ ಶಿಷ್ಯವರ್ಗದವರ ಅಭೀಷ್ಟ ಚಿಂತನೆ!

ಶ್ರೀ ಸಂಸ್ಥಾನ ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠಾಧೀಶ ಶ್ರೀಮತ್ ಕಮಲಾನಾಥ ತೀರ್ಥ ಶ್ರೀಪಾದವಡೇರ ಸ್ವಾಮಿಯವರ ಕಡೆಯಿಂದ ಗೋಮಂತಕ, ಕರ್ನಾಟಕ, ಘಟ್ಟದ ಮೇಲಿನ ಪ್ರದೇಶ ಮೊದಲಾದ ದಕ್ಷಿಣೋತ್ತರ ಪ್ರಾಂತಗಳಲ್ಲಿಯ ಯಾವತ್ತೂ ಶಿಷ್ಯವೃಂದದವರಿಗೆ ತಿಳಿಸುವುದೇನೆಂದರೆ: ನಮ್ಮ ಪರಮ ಪೂಜ್ಯ ಗುರುವರ್ಯರಾಗಿದ್ದ ಶ್ರೀಮತ್ ಇಂದಿರಾಕಾಂತ ತೀರ್ಥ ಶ್ರೀಪಾದ ವಡೇರ ಸ್ವಾಮಿಯವರು ಪ್ರಕೃತಿಯಲ್ಲಿ ಅಸ್ವಸ್ಥರಾದ ವರ್ತಮಾನ ತಿಳಿದಂದಿನಿಂದ, ಅನಂತರ ಅವರು ಸಮಾಧಿಸ್ತರಾಗಿ ಆ ಮೂಲಕ ಆದ ಕಾರ್ಯಕಲಾಪದ ಪರಿಸಮಾಪ್ತಿಯಾಗುವ ವರೆಗೆ ನೀವೆಲ್ಲರು ಕಾಯಾ-ವಾಕ್ ಮನೋಭಾವಗಳಿಂದಲೂ ಟೆಲಿಗ್ರಾಮಿನಿಂದಲೂ ದ್ರವ್ಯರೂಪದಿಂದಲೂ ವೈಯಕ್ತಿಕವಾಗಿ ಇಲ್ಲವೆ ಸಂಘರೂಪದಿಂದ ಅಭಿಮಾನ ಮತ್ತು ಭಕ್ತಿಪುರಸ್ಸರವಾಗಿ ಯಾವ ಬಗೆಯ ಆಸ್ಥೆ ವ ಆದರವನ್ನು ಈ ಸ್ಥಾನದ ಬಗ್ಗೆ ವ್ಯಕ್ತಪಡಿಸಿದಿರೊ ಆ ಕುರಿತು ಶ್ರೀ ಸಂಸ್ಥಾನದವರು ಸಕಲ ಶಿಷ್ಯವೃಂದದವರನ್ನು ಅತ್ಯಂತ ಆತ್ಮೀಯ ಭಾವದಿಂದ ನೋಡುತ್ತಿದ್ದು, ನಿಮ್ಮೆಲ್ಲವರ ಅಖಂಡ ಆಯುರಾರೋಗ್ಯ ಕಲ್ಯಾಣೈಶ್ವರ್ಯಾಭಿವೃದ್ಧಿ ವಿಷಯದಲ್ಲಿ ಶ್ರೀ ರಾಮದೇವ ವೀರವಿಠಲ ಚರಣಗಳಲ್ಲಿ ಅನುದಿನ ಪ್ರಾರ್ಥಿಸುತ್ತೇವೆ. ಶ್ರೀ ಸಂಸ್ಥಾನದ ಅಭಿಮಾನವುಳ್ಳವರಿಗೆ ವಿಶೇಷ ಬರೆಯಬೇಕಾದದ್ದೇನು! ಇತಿ ಆಶೀರ್ವಾದಗಳು.

ಮಿತಿ ಚಿತ್ರಭಾನು ಸಂ॥ ವೈಶಾಖ ಶು॥ ೫ ಮಿ. ಸೋಮವಾರ ಶಕ ೧೮೬೪.

ಶ್ರೀಮತ್ ಕಮಲಾನಾಥತೀರ್ಥರು ಬರುವ ಸಪ್ತಮಿಗೆ ಶಿಷ್ಯರನ್ನು ಮಾಡಲಿದ್ದಾರೆ

ಶ್ರೀಮತ್ ಕಮಲಾನಾಥತೀರ್ಥ ಗುರುಗಳ ಪ್ರಕೃತಿ ಅಷ್ಟೇನು ಗಟ್ಟಿಮುಟ್ಟಾಗಿರುವುದಿಲ್ಲ. ಮೇಲಿಂದ ಮೇಲೆ ಬರುವ ಕಾಯಿಲೆಗಳಿಂದ ಅವರು ಬಹಳ ಕೃಶರಾಗಿದ್ದಾರೆ; ಜೀರ್ಣರಾಗಿದ್ದಾರೆ. ಅವರ ವಯಸ್ಸಾದರೂ ಅವರ ವಯಸ್ಸೇ, ಶ್ರೀ ಸಂಸ್ಥಾನದ ಕಟ್ಟು-ನಿಯಮಗಳಂತೆ ಶ್ರೀ ಗುರುಗಳ ಜೊತೆಗಿರುವ ಶ್ರೀ ವೀರವಿಠ್ಠಲ ದೇವರ ಪೂಜಾದಿ ಸೇವೆಗಳು ಸ್ವತಃ ಶ್ರೀ ಸ್ವಾಮಿಗಳಿಂದಲೇ ನಡೆಯಬೇಕು; ಅನ್ಯರಿಗೆ ನಡೆಸಬಹುವುದಿಲ್ಲ. ಆದುದರಿಂದಲೇ ಬೇಗನೇ ಶಿಷ್ಯರನ್ನು ಮಾಡಬೇಕೆಂಬ ವಿಚಾರ ಪಟ್ಟಾಭಿಷೇಕದ ಕಾಲಕ್ಕೇ ಶ್ರೀ ಗುರುಗಳಿಗೆ ಸೂಚಿಸಿತು. ಅದನ್ನು ಶ್ರೀಗಳು ಹಲಕೆಲವು ವಿಶ್ವಸ್ತರಿಗೆ ತಿಳಿಸಿ, ಈ ಉತ್ತರಾಯಣದಲ್ಲಿ ತಮ್ಮ ಸಂಕಲ್ಪವನ್ನು ಈಡೇರಿಸಲು ಸಿದ್ಧರಾಗಿದ್ದಾರೆ. ಮುಂದೆ ಅಧಿಕ ಮಾಸ, ಅಧಿಕ ಮಾಸದ ನಂತರ ಗುರುಮೌಢ್ಯ ಆ ನಂತರ ದಕ್ಷಿಣಾಯನಾರಂಭ ಮೊದಲಾದ ದೋಷಗಳು ಇರುತ್ತವಾದ್ದರಿಂದ, ಜ್ಯೋತಿಷ-ಶಾಸ್ತ್ರಿಗಳ ಅನುಮತಿಯಿಂದ ಶ್ರೀ ಗುರುಗಳು ಇದೇ ಬರುವ ಚಿತ್ರಭಾನು ಸಂ॥ ವೈಶಾಖ ವ॥ ೭ ಮಿ. ಗುರುವಾರ ಗಂಗೊಳ್ಳಿಯ ಶ್ರೀ ವೆಂಕಟರಮಣ ದೇವರ ಅರ್ಚಕ ವೇ॥ ಶಾ॥ ಸಂ॥ ರಾಮನಾಥ ಆಚಾರ್ಯರವರ ಮಗಂದಿರಾದ ವೇ॥ ಶಾ॥ ಸಂ॥ ಗೋವಿಂದ ಆಚಾರ್ಯರೆಂಬ ೨೧ ವರ್ಷ ಪ್ರಾಯದ ಬ್ರಹ್ಮಚಾರಿಗಳಿಗೆ ಸನ್ಯಾಸ ದೀಕ್ಷೆಯನ್ನು ಕೊಟ್ಟು ಶಿಷ್ಯರನ್ನಾಗಿ ಮಾಡಬೇಕೆಂದು ನಿಶ್ಚಯಿಸಿ ಆ ಬಗ್ಗೆ ತಯಾರಿಯನ್ನೂ ಮಾಡಿಸಲಾರಂಭಿಸಿದ್ದಾರೆ. ವೇ॥ ಗೋವಿಂದಾಚಾರ್ಯರು ಇತ್ತ ೪ ವರ್ಷಗಳಿಂದ ಶ್ರೀ ಪರ್ತಗಾಳಿ ಮಠದಲ್ಲಿ ದಿವಂಗತ ಶ್ರೀಮದಿಂದಿರಾಕಾಂತತೀರ್ಥ ಸ್ವಾಮಿಗಳ ಸನ್ನಿಧಿಯಲ್ಲಿ ಉಳಿದು ವೇದಾಂತಾದಿಗಳ ಅಧ್ಯಯನ ಮಾಡಿದ್ದಾರೆ. ಅವರ ಪತ್ರಿಕೆಯಲ್ಲಿ ಸನ್ಯಾಸ ಯೋಗವೂ ಉಂಟು, ಮುಂದೆ ಇವರನ್ನೇ ಶ್ರೀ ಸಂಸ್ಥಾನದ ಶಿಷ್ಯರನ್ನಾಗಿ ಮಾಡಬೇಕೆಂದು ಸಮಾಧಿಸ್ಥ ಶ್ರೀಮದಿಂದಿರಾಕಾಂತತೀರ್ಥಗುರುಗಳೇ ನಿರ್ಣಯಿಸಿದ್ದರಾಗಿ ಹೇಳುತ್ತಾರೆ. ಇದೇ ಬರುವ ೮ಗೆ ವೇ॥ ಗೋವಿಂದಾಚಾರ್ಯರನ್ನು ಶ್ರೀ ಸಂಸ್ಥಾನಕ್ಕೆ ವೈಭವದಿಂದ ಕರೆತಾರಲಿಕ್ಕೆ ಕರೆದೊಯ್ಯಲಾಗುವದು.

ಜಿಲ್ಲಾ ಸಮಾಚಾರಗಳು

ಮಂಗಳೂರು

ಡಿಸ್ಟ್ರಿಕ್ಟ್ ಎಡ್ವಾನ್ಸ್‌ಮೆಂಟ್

ಎಸೋಸಿಯೇಶನಿನ ಸಭೆಯೊಂದು ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಸೇರಿ ೧೯೪೨ನೇ ಫೆಬ್ರುವರಿ ತಿಂಗಳಲ್ಲಿ ಮೊದಲನೆಯ ಮಂಗಳೂರು ಗಾರ್ಡನ್ ಕಾಂಪಿಟೀಶನ್ ಬಗ್ಗೆ ನಿರ್ಣಾಯಕ ಸಮಿತಿಯ ವರದಿಯನ್ನು ಪರಿಶೀಲಿಸಿ ಮಂಜೂರು ಮಾಡಲಾಯಿತು ಮತ್ತು ಅದರಲ್ಲಿ ಬದ್ಧರಾಗಿ ನೇಮಕ ಹೊಂದಿದವರ ಶಿಫಾರಸನ್ನು ಅಂಗೀಕರಿಸಲಾಯಿತು ಗಾರ್ಡನ್ ಕ್ಲಾಸ್ 'ಎ' ಯಲ್ಲಿ ಮೊದಲನೆಯ ಬಹುಮಾನವು ಮಿಸೆಸ್ ಎನ್. ರಾಮನಾಯರಿಗೂ ದ್ವಿತೀಯ ಬಹುಮಾನವು ಮಿಸೆಸ್ ಶಾಂಭವಿ ಆರ್ ಪೂಂಜರಿಗೂ, ಗಾರ್ಡನ್ ಕ್ಲಾಸ್ ಬಿ' ಯಲ್ಲಿ ಮೊದಲನೆಯ ಬಹುಮಾನವು ಮಿಸೆಸ್ ಬ್ರೋಡ್ವಿಕ್ ಅವರಿಗೂ ದ್ವಿತೀಯ, ಬಹುಮಾನವು ಮಿಸೆಸ್ ವೆಂಕಟೇಶ ಪೈಗಳಿಗೂ, ಸಂಸ್ಥೆಗಳಲ್ಲಿ ೧ನೇ ಬಹುಮಾನವು ಡಿ ಕ. ಜಿ. ಬೋರ್ಡಿಗೂ [ಜಿ ಬೋರ್ಡು ಕಾರ್ಯದರ್ಶಿಗಳಿಗೆ] ದ್ವಿತೀಯ ಬಹುಮಾನವು ಗವರ್ನಮೆಂಟ್ ಕಾಲೇಜಿಗೂ (ಶ್ರೀ ಕೆ ಎಸ್ ಮ್ಯು. ನಾಯರ್ ಪ್ರಿನ್ಸಿಪಾಲ್ ಅವರಿಗೆ)- ದೊರೆತಿದೆ.

ಮುನಿಸಿಪಲ್ ಗ್ರಂಥ ಭಂಡಾರ ಮತ್ತು ವಾಚನಾಲಯ

ವು ಸಂಜೆಯೂ ಹೊತ್ತು ತೆರೆಯುವ ವೇಳೆಯು ಈ ತಿಂಗಳ ಮೊದಲ್ಗೊಂಡು ೩-೩೦ರಿಂದ ೬-೩೦ ರ ತನಕ.

ಕಂಕನಾಡಿ ಬಾಲಿಕಾಶ್ರಮದ

ತುಳಸೀ ಬ್ಯಾ ವೇದಾವತಿ ಪಯಿನಿ ಬ್ಲಾಕಿನ ಉದ್ಘಾಟನಾ ಉತ್ಸವವ ಶ್ರೀ ಎಲ್. ಎಸ್ ಪಾರ್ಥಸಾರಥಿ ಅಯ್ಯಂಗಾರ್ ಅವರು ತಾ. ೨೯ರಂದು ಸಂಜೆ ೫-೧೫ಕ್ಕೆ ಜರಗಿಸಿದರು

ಜಿಲ್ಲಾ ಹರಿಜನ ಸೇವಕ ಸಂಘ

ಕುಂದಾಪುರ ಹರಿಜನ ವಿದ್ಯಾರ್ಥಿ ಭವನದ ಸಲುವಾಗಿ ತಾ ೭-೪-೪೨ರಿಂದ ೧೨-೪-೪೨ರ ತನಕ ಕೋಟೇಶ್ವರ, ಕುಂಭಾಶಿ, ಹಾಲಾಡಿ, ಗೋಳಿಯಂಗಡಿ, ವಂಡಾರು, ಕೊಕ್ಕರ್ಣೆಕೊರ್ಗಿ, ಬಿದ್ಕಲ್‌ಕಟ್ಟೆ, ಕಂದಾವರ, ಸಾಲಿಗ್ರಾಮ, ಬಸ್ರೂರು, ಕೋಟ, ಸಿರಿಯಾರ, ಅಲ್ತಾರು, ಬಾರ್ಕೂರು, ಬ್ರಹ್ಮಾವರ, ಸಾಹೇಬ್ರಕಟ್ಟೆ ಮತ್ತು ಬ್ರಹ್ಮಾವರ ಮೊದಲಾದ ಕಡೆಗಳಲ್ಲಿ ಧನ ಸಂಗ್ರಹದ ಕೆಲಸವೂ, ಹರಿಜನೋದ್ಧಾರ ಕಾರ್ಯದ ಪರವಾಗಿ ಪ್ರಚಾರವೂ ನಡೆದಿತ್ತು. ಊರ-ಮಹನೀಯರೆಲ್ಲಾ ತುಂಬಾ ಪ್ರೋತ್ಸಾಹವಿತ್ತಿರುವರು ಖರ್ಚು ಕಳೆದು ರೂ. ೩೧೨/-ರ ಉಳಿತಾಯವಾಗಬಹುದು

ಇದೇ ಸಂದರ್ಭದಲ್ಲಿ ಸಾಹೆಬ್ರ ಕಟ್ಟೆಯಲ್ಲಿ ಒಂದು ನೂತನ ಯಕ್ಷಗಾನ ಸಮಾರಂಭವು ಜರಗಿತ್ತು. ಜಿಲ್ಲೆಯ ಪ್ರಸಿದ್ಧ ಕಲಾಕೋವಿದರು ಭಾಗವಹಿಸಿದ್ದರು ಶ್ರೀ ಎ ಬಿ. ಶೆಟ್ಟಿ, ಎಂ. ಎಲ್. ಎ. ಇವರು ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಬೋರ್ಡು ಅಧ್ಯಕ್ಷರಾದ ಡಾ। ವಿಠ್ಠಲ ಶೆಟ್ಟಿ ಅವರು ಭಾಷಣ ಮಾಡಿದ್ದರು

ಈ ಪುಣ್ಯಕಾರ್ಯದಲ್ಲಿ ಬೇರೆಬೇರೆ ಬಗೆಯಿಂದ ಸಹಾಯವಿತ್ತ ಶ್ರೀ. ರಾಮಭಟ್ಟರವರಿಗೂ, ಕೊಳ್ಕೆಬೈಲು ಮನೆತನದವರಿಗೂ, ವ್ಯವಸ್ಥಾಪಕರುಗಳಾದ ಕೆ. ರಾಮಣ್ಣ ಹೆಗ್ಡೆಯವರಿಗೂ, ಕೆ. ಮಹಾಬಲ ಶೆಟ್ಟಿಯವರಿಗೂ, ಯಕ್ಷಗಾನದಲ್ಲಿ ಭಾಗವಹಿಸಿದ ಮಹನೀಯರಿಗೂ ಊರ ಮಹಾಜನರಿಗೂ, ಜಿಲ್ಲಾ ಹರಿಜನ ಸೇವಕ ಸಂಘವು ತುಂಬಾ ಆಭಾರಿಯಾಗಿರುತ್ತ ಎಂದು ಯನ್. ಯಸ್. ಕಿಲ್ಲೆ, ಹರಿಜನ ಸೇವಕ, ಇವರು ತಿಳಿಸುತ್ತಾರೆ.

ಸರಕಾರ 'ಡಿಪೋ' ತೆರೆವುದು

ಈಗಿನ ಸಂದಿಗ್ಧ ಪರಿಸ್ಥಿತಿಯಲ್ಲಿ ಯಾವತ್ತೂ ಜನರಿಗೆ ಬೇಕಾದ ಆಹಾರ ಮತ್ತು ಅತ್ಯಗತ್ಯದ ಸಾಮಗ್ರಿಗಳನ್ನು ಒದಗಿಸಿಕೊಡುವುದಕ್ಕಾಗಿ ಸರಕಾರದ ಆಶ್ರಯದಲ್ಲಿ ರಖಂ ಮತ್ತು ಚಿಲ್ಲರೆ ಡಿಪೋಗಳನ್ನು ಮಂಗಳೂರು ಟೌನಿನ ನಾನಾ ಭಾಗಗಳಲ್ಲಿ ತೆರೆಯುವದಕ್ಕೆ ಏರ್ಪಾಡು ಮಾಡಲಾಗಿಯದೆ. ಆದುದರಿಂದ ಈ ವಿಚಾರದಲ್ಲಿ ಭೀತಿ ಯಾ ಕಳವಳಪಡುವ ಅವಶ್ಯಕತೆ ಇರುವುದಿಲ್ಲ ಎಂದು ಎಮ್. ಕರಮತುಲ್ಲ, ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟ್ ಇವರು ಪ್ರಕಟಿಸಿದ್ದಾರೆ.

ಶ್ರೀ. ನೀರೇಶ್ವಾಲ್ಯ ಅರ್ಧ ಭಜನೆ ಮಂಡಲಿಯು ೧೭ನೇ ವಾರ್ಷಿಕೋತ್ಸವವು ಇದೇ ಬರುವ ತಾ. ೩-೫-೪೨ನೇ ಆದಿತ್ಯವಾರ ಮಧ್ಯಾಹ್ನ ಗಂಟೆ ೩-೩೦ಕ್ಕೆ ಸರಿಯಾಗಿ ಶ್ರೀಮಾನ್ ಕೆ. ಬಿ ಜಿನರಾಜ ಹೆಗ್ಗಡೆ ಯಂ ಯಲ್. ಎ. ರವರ ಅಧ್ಯಕ್ಷತೆಯಲ್ಲಿ ನೀರೇಶ್ವಾಲ್ಯ ಮುನ್ಸಿಪಾಲ್ ಹುಡುಗರ ಎಲಿಮೆಂಟರಿ ಶಾಲಾ ಕಟ್ಟಡದಲ್ಲಿ ಜರಗಲಿದೆ. ಸರ್ವರಿಗೂ ಸುಸ್ವಾಗತವಿದೆ.

ಹಿಂದೂಸ್ಥಾನೀ ಸ್ಪರ್ಧೆ

ದ ಭಾ। ಹಿಂದೀ ಪ್ರಚಾರ ಸಭೆಯವರು ನಡೆಸಿದ ಹಿಂದೂಸ್ಥಾನೀ ಸ್ಪರ್ಧೆಯಲ್ಲಿ ಈ ವರ್ಷ ಕೆನರಾ ಹೈಸ್ಕೂಲಿನ III ಫಾರ್ಮಿನಲ್ಲಿ ಕಲಿಯುತ್ತಿರುವ ಶ್ರೀ. ಜಿ. ಮಧ್ವ ಭಟ್ಟರು ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ ಸರ್ವ ಪ್ರಥಮ ಬಂದು ತೃತೀಯ ಬಹುಮಾನ ಪಡೆದಿರುವರು

ಇದೇ ಶಾಲೆಯಿಂದ ಎಚ್ ಉಪೇಂದ್ರ ಶೆಣೈ ಮತ್ತು ಅಬ್ದುಲ್ ರಫೀಕ್ ಇವರಿಗೂ ಬಹುಮಾನಗಳು ಕೊಡಲ್ಪಟ್ಟಿವೆ

ವಿಮಾನ ದಾಳಿ ನಿರೋಧಕ ವ್ಯವಸ್ಥೆ

೧೩೧ ೧೦೦ ಜನ ಸಂಖ್ಯೆಯಿರುವ ನಗರವನ್ನು ೮ ಪ್ರಧಾನ ವಿಭಾಗಗಳಾಗಿ ಮಾಡಿ ಪುನಃ ಅವುಗಳನ್ನು ೫೨ ಉಪ ವಿಭಾಗಗಳಾಗಿ ವಿಂಗಡಿಸಿರುವರು. ಮಿ. ಜೆಫರೀಸರು ಪ್ರಧಾನ ವಾರ್ಡನರಾಗಿಯೂ ಶ್ರೀಗಳಾದ ಜೆ ಎ ಪುತ್ರನ್, ಏಕಾಂಬರರಾವ್, ಜೆ ಎಸ್ ವೆಂಕಟ್ರಾಮನ್ ಮತ್ತು ಮಿ।ಗಳಾದ ಎ ಎಚ್ 'ಗನ್ ರೆಜಿನಾಲ್ಡ್ ಮ್ಯಾಥ್ಯು, ಇ ಸ್ಪಾಹೇಲ್ಲಿ, ಎಲ್ ಜೆ ಟವರ್ಸ್ ಜೆ ಆರ್ ಫೌಲರ್ ಇವರು ೮ ವಿಭಾಗಗಳ ವಾರ್ಡನರಾಗಿಯೂ ನಿಯಮಿಸಲ್ಪಟ್ಟಿರುವರು ೫೨ ವಿಭಾಗಗಳ ವಾರ್ಡನರಾಗಲು ಅರ್ಜಿಗಳು ಬರುತ್ತಿವೆ.

ಹಿಂದೂ ಮಹಾಸಭೆ

ತಾ ೨೬ನೇ ಸಾಯಂಕಾಲ ಲೈನ್‌ಮೈದಾನದಲ್ಲಿ ಶ್ರೀ ಯು. ಗೋಪಾಲ ನಾಯಕರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆಯು ಜರಗಿತು. ಶ್ರೀ ಮಂಜುನಾಥ ಶೆಣೈಯವರು ವೈದಿಕ ಧರ್ಮದ ಮಹತ್ವದ ಕುರಿತು ಭಾಷಣ ಮಾಡಿದರು. ತೀರ್ಥಹಳ್ಳಿಯ ಶ್ರೀ. ಡಿ ಜ್ಞಾನೇಂದ್ರ ಪ್ರಭುಗಳು ಭಾಷಣ ಮಾಡುತ್ತಾ ತಾವು ಜನ್ಮತ ಕ್ರೈಸ್ತರಾಗಿದ್ದು ಆರ್ಯಧರ್ಮವನ್ನು ಸ್ವೀಕರಿಸಿದುದು ಏಕೆ? ಎಂಬ ವಿಷಯವನ್ನು ವಿವರಿಸಿದ್ದಲ್ಲದೆ ಇತರ ಧರ್ಮಗಳನ್ನೂ ವೈದಿಕ ಧರ್ಮವನ್ನೂ ಹೋಲಿಸಿ ವೈದಿಕ ಹಿಂದುಧರ್ಮವೇ ಶ್ರೇಷ್ಠವಾದುದೆಂದು ಸಕಾರಣವಾಗಿ ವಿವರಿಸಿದರು

ಶ್ರೀ ದಿವಾಕರರ ಸಭೆ, ಸತ್ಕಾರ

ಶ್ರೀ. ರಂ. ರಾ. ದಿವಾಕರರ ದಕ್ಷಿಣ ಕನ್ನಡ ಜಿಲ್ಲಾ ಸಂಚಾರ ಕಾರ್ಯಕ್ರಮವೊಂದು ಸಿದ್ಧವಾಗಿರುವುದಾಗಿ ತಿಳಿದು ಬಂದಿದೆ. ತಾರೀಕು 29ರಂದು ಸಂಜೆ ಬಂಟ್ವಾಳದಲ್ಲಿ ಶ್ರೀ. ರಂ. ರಾ ದಿವಾಕರರು ಸಾರ್ವಜನಿಕ ಭಾಷಣ ಮಾಡಿದರು. ಆ ದಿನ ಬೆಳಿಗ್ಗೆ ಕೆನರಾ ಹೈಸ್ಕೂಲಲ್ಲಿ ಹಿಂದೀ ಪ್ರಚಾರಕರ ಸಭೆ ಕೂಡಿ ಶ್ರೀ. ದಿವಾಕರರ ಭಾಷಣ ಮತ್ತು ಸಂಜೆ 4 ಗಂಟೆಗೆ ಮಿತ್ರಮಂಡಳಿ ಕಲ್ಚರಲ್ ಎಸೋಸಿಯೇಶನ್, ಹಿಂದೀ ಪ್ರಾದೇಶಿಕ ಸಮಿತಿಗಳ ಆಶ್ರಯದಲ್ಲಿ ಶ್ರೀ. ದಿವಾಕರರ ಸನ್ಮಾನಾರ್ಥ ಒಂದು ಸತ್ಕಾರ ಕೂಟವಿತ್ತು.

ಸುರತ್ಕಲ್

ವರ್ಧಂತಿ—ಇಲ್ಲಿ ವಿದ್ಯಾದಾಯಿನಿ ಶಾಲೆಯ ೨೫ನೇ ವರ್ಧಂತ್ಯುತ್ಸವವು ಈ ದಿನ ಜಿಲ್ಲಾ ವಿದ್ಯಾಧಿಕಾರಿ ಶ್ರೀ. ಯು. ಸತ್ಯನಾರಾಯಣ ಇವರ ಅಧ್ಯಕ್ಷತೆಯಲ್ಲಿ ಜರಗುವುದು.

ಮುಲ್ಕಿ

ಸ್ಥಳೀಯ ಬೋ. ಎ. ಶಾಲೆಯ ಹಳೇ ವಿದ್ಯಾರ್ಥಿಗಳ ಸಂಘದ ಆಶ್ರಯದಲ್ಲಿ ದಿವಂಗತ ಕನ್ನಾಡು ಸಂಜೀವರಾಯರ ಭಾವಚಿತ್ರ ಅನಾವರಣದ ಸಮಾರಂಭವು ಕಳೆದ ತಾ. ೧೯ರಲ್ಲಿ ಜರಗಿತು.

ಪುತ್ತೂರು

ಬಿಲ್ಲವರಿಗೆ ದೇವಸ್ಥಾನ ಪ್ರವೇಶದ ಕುರಿತು ಸಭೆ

ಕಳೆದ ತಾ. ೧೭ನೇ ಸಾಯಂ ಸ್ಥಳೀಯ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಎದುರಿನ ಚಪ್ಪರದಲ್ಲಿ ಶ್ರೀ. ಎಡ್ವೋಕೆಟ್ ಬಿ. ಶಿವರಾಮ ಹೊಳ್ಳರ ಅಧ್ಯಕ್ಷತೆಯಲ್ಲಿ ಒಂದು ಸಭೆ ಸೇರಿತು. ವಕೀಲ ಶ್ರೀ. ಯಂ. ಸದಾಶಿವರಾಯರು, ಶ್ರೀ ಶಂಭು ಶರ್ಮರೇ ಮೊದಲಾದವರು ಬಿಲ್ಲವರಿಗೆ ದೇವಸ್ಥಾನದ ಪ್ರವೇಶ ಮಾಡುವ ಹಕ್ಕನ್ನು ಕೊಡುವ ವಿಷಯವಾಗಿ ಮಾತಾಡಿದರು ಕೆಲವರು ವಿರೋಧಿಸಿ ಮಾತಾಡಿದರು ದೇವಸ್ಥಾನದ ರಾಜಾಂಗಣಕ್ಕೆ ಪ್ರವೇಶ ಕೊಡುವದೆ ಸರ್ವಾನುಮತದಿಂದ ನಿರ್ಣಯಿಸಲಾಗಿದೆಯಾಗಿ ತಿಳಿದು ಬಂದಿದೆ

ವರ್ಗ

ಕಳೆದ ವಾರ ಇಲ್ಲಿ ಪ್ರೊಬೆಶನರಿ ಸಬ್ ಇನ್ಸ್ಪೆಕ್ಟರಾಗಿ ಕೆಲಸ ಮಾಡುತ್ತಿದ್ದ ಶ್ರೀ ಸಿ. ಯಸ್. ರಾಜಗೋಪಾಲ ಇವರು ವಿಟ್ಲ ಪೋಲೀಸ್ ಸ್ಟೇಶನಿನ ಸಬ್ ಇನ್ಸ್ಪೆಕ್ಟರರಾಗಿ ನೇಮಕ ಹೊಂದಿ ಅಲ್ಲಿಯ ಸ್ಟೇಶನ್ ಚಾರ್ಜು ವಹಿಸಿಕೊಂಡಿರುತ್ತಾರೆ.

ಉಡುಪಿ

ಭಾಷಣ —ಮುಂಬಯಿ ವಿಶ್ವ ಭ್ರಾತೃತ್ವ ಮಿಶನಿನ ಸಂಸ್ಥಾಪಕರಾದ ಶ್ರೀ ಸೀತಾರಾಮ್ಯ ಡಿ. ಆಚಾರ್ಯರು ಶ್ರೀ ಕೃಷ್ಣನ ಉದಾತ್ತ ಸಂದೇಶ ಎಂಬ ವಿಷಯವನ್ನೆತ್ತಿ ಗಾಂಧಿ ಮೈದಾನದಲ್ಲಿ ಶ್ರೀ ಯು ವಾಸುದೇವ ಪ್ರಭುಗಳ ಅಧ್ಯಕ್ಷತೆಯಲ್ಲಿ ಭಾಷಣವಿತ್ತರು

ತ್ರಿಸಂಧ್ಯಾಕಾಲದೊಳಗಾಗಿ ವಸಂತೋತ್ಸವ

ಶ್ರೀ ಕೃಷ್ಣ ಸನ್ನಿಧಿಯಲ್ಲಿ ವೈಶಾಖ ಮಾಸದಲ್ಲಿ ನಡಿಯತಕ್ಕ ವಸಂತೋತ್ಸವವು ಈ ಬಾರಿ ಬ್ಲೇಕ್ ಔಟ್ ನಿಮಿತ್ತ ರಾತ್ರಿ ವೇಳೆಯ ಬದಲಾಗಿ ತ್ರಿಸಂಧ್ಯಾಕಾಲದಲ್ಲಿಯೇ ನಡೆಯಿತು.

ಶಾಂತಿದಳ

ಯುದ್ಧದ ಪರಿಸ್ಥಿತಿಯಿಂದ ಉಂಟಾಗುವ ಅಶಾಂತತೆ ವಿಪತ್ತುಗಳನ್ನು ದೂರೀಕರಿಸಿ ಪಟ್ಟಣದಲ್ಲಿ ಶಾಂತಿ ನೆಲೆಗೊಳ್ಳುವಂತೆ ಮಾಡಲು ಕಳೆದ ತಾ. ೧೫ರಂದು ಶಾಂತಿದಳವೊಂದು ಸ್ಥಾಪಿಸಲ್ಪಟ್ಟಿತು. ಈ ತನಕ ಇನ್ನೂರಕ್ಕೆ ಮೇಲ್ಪಟ್ಟು ಸ್ವಯಂಸೇವಕರು ಈ ದಳಕ್ಕೆ ಸೇರಿರುತ್ತಾರೆ. ದಳದ ಸರ್ವಾಧಿಕಾರಿ ವಕೀಲ ಶ್ರೀ. ವಿಠ್ಠಲ ಕಾಮತರ ನೇತೃತ್ವದಲ್ಲಿ ಸ್ವಯಂಸೇವಕ ಶಿಕ್ಷಣ ವ್ಯವಸ್ಥೆ ಮಾಡಲಾಗಿದೆ

'ವಿ' ಮೆರವಣಿಗೆ

ಗವರ್ನರರ ಯುದ್ಧ ಸಹಾಯಕ ನಿಧಿಯು ಎರಡು ಕೋಟಿ ಪ್ರಮಾಣಕ್ಕೇರಿದುದರ ಸಂತೋಷ ಸೂಚನಾರ್ಥವಾಗಿ ಉಡುಪಿ ತಾಲೂಕು ಯುದ್ಧ ಕಮಿಟಿಯ ಆಶ್ರಯದಲ್ಲಿ ಮುನಿಸಿಪಲ್ ಶಾಲಾ ಮಕ್ಕಳಿಗೆ ಪೆಪ್ಪರ್ ಮಿಠಾಯಿ ಹಂಚಲಾಯಿತು. ಅಂದು 'ವಿ' ಮೆರವಣಿಗೆಯೂ ಇತ್ತು.

ಕುಂದಾಪುರ

ಶಂಕರನಾರಾಯಣ

ಇಲ್ಲಿಯ ಹಾ. ಎ. ಶಾಲೆಯ ೭ನೇ ವಾರ್ಷಿಕೋತ್ಸವವು ಜಿ. ಬೋ ಅಧ್ಯಕ್ಷರಾದ ಡಾ. ಶ್ರೀ. ಕೆ. ವಿಠಲ ಶೆಟ್ಟರವರ ಅಧ್ಯಕ್ಷತೆಯಲ್ಲಿ ಜರಗಿತು. ಪೂರ್ವಾಹ್ನ ಶಾಲಾ ಮಕ್ಕಳಿಗೆ ಉಪಾಹಾರವೂ, ಮಧ್ಯಾಹ್ನ ಸಾರ್ವಜನಿಕ ಸಭೆ, ವಿನೋದಾವಳಿ, ಇನಾಮು ಹಂಚೋಣವೂ ರಾತ್ರಿ ಊಟವಾದ ತರುವಾಯ ಸಂಗೀತ, ನಾಟಕವೂ ಇದ್ದುವು. ಅದೇ ದಿನ ಸಂಜೆ ಪೇಟೆಯ ಮಧ್ಯದಲ್ಲಿ ಡಾ। ಯು. ಬಿ. ರಾವ್ ಮತ್ತು ಶ್ರೀ. ಎ. ಕೆ. ಕೊಡ್ಗಿ ಇವರುಗಳಿಂದ ಕಟ್ಟಿಸಲ್ಪಟ್ಟ ಮಕ್ಕಳ ವಿಹಾರ ಸ್ಥಳವು ಅಧ್ಯಕ್ಷರಿಂದ ತೆರೆಯಲ್ಪಟ್ಟಿತು.

ವಜ್ರಾಂಗಬಲಿ ವ್ಯಾಯಾಮ ಶಾಲೆ

ಯ ಸಪ್ತಮ ವಾರ್ಷಿಕೋತ್ಸವವು ತಾ. ೧೭ರಂದು ಬೋ. ಹೈಸ್ಕೂಲಿನಲ್ಲಿ ಶ್ರೀ. ಎಂ. ಎಸ್. ಮಾಧವ ರಾಯರ ಅಧ್ಯಕ್ಷತೆಯಲ್ಲಿ ಜರಗಿತು ಶಾಲೆಯ ವಿದ್ಯಾರ್ಥಿಗಳ ವ್ಯಾಯಾಮ ಪ್ರದರ್ಶನದ ಬಳಿಕ ಜನ ಜೀವನವನ್ನು ಮೇಲ್ಪಟ್ಟಿಕೊಳ್ಳಲು ಏನು ಮಾಡಬಹುದೆಂಬುದನ್ನು ಅಧ್ಯಕ್ಷರು ತಮ್ಮ ಭಾಷಣದಲ್ಲಿ ವಿವರಿಸಿದರು.

ಕಬ್ ಮಾಸ್ತರರ ಸ್ಕೌಟು ಶಿಕ್ಷಣ

ವು ತಾ ೧೫ರಿಂದ ೨೦ರ ತನಕ ಕುಂಭಾಶಿಯಲ್ಲಿ ಜರಗಿತು ೨೮ ಮಂದಿ ಉಡುಪಿ-ಕಾರ್ಕಳದವರು ಭಾಗವಹಿಸಿದ್ದರು ಮದ್ರಾಸಿನ ಶ್ರೀ. ಎಂ ರಾಜಗೋಪಾಲನ್‌ರವರೂ ಶ್ರೀಗಳಾದ ಬಿ. ಎಂ ಬಾಳಿಗ ಮತ್ತು ಎಂ ಎಸ್. ಮಾಧವರಾಯರೂ ಶಿಕ್ಷಣವನ್ನು ನಡೆಸಿದರು. ಈ ಶಿಕ್ಷಣದ ಜತೆಗೆ ವಿಮಾನದಾಳಿ ನಿರೋಧಕ ವ್ಯವಸ್ಥೆಯ ಕುರಿತೂ ಭಾಷಣ ಪ್ರದರ್ಶನಗಳಿದ್ದುವು.

ಕರ್ನಾಟಕ

ಶ್ರೀ. ಗಳಗನಾಥರು ದಿವಂಗತರಾದರು!

ಕನ್ನಡದ ಕಾದಂಬರಿ ಪಿತಾಮಹರಾದ ಶ್ರೀ. ವೆಂಕಟೇಶ ತಿರಕೋ ಕುಲಕರ್ಣಿ ಗಳಗನಾಥರು ಈ ವಾರ ದಿವಂಗತರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಕನ್ನಡಿಗರಿಗೆ ಕಾದಂಬರಿಯ ಸವಿಯನ್ನುಣಿಸಿದ ಆದ್ಯರಲ್ಲಿ ಇವರು ಪ್ರಸಿದ್ಧರು 'ಮಾಧವ ಕರುಣಾ ವಿಲಾಸ' ಮೊದಲಾದ ಅವರ ಕಾದಂಬರಿಗಳು ಕನ್ನಡದ ಅತ್ಯುತ್ತಮ ಕಾವ್ಯಗಳು ದಿವಂಗತ ವೆಂಕಟಾಚಾರ್ಯರು ಬಂಗಾಳಿಯಿಂದ ಭಾಷಾಂತರಿಸಿದಂತೆ ಮರಾಠಿಯಿಂದಲೂ ಇವರು ಭಾಷಾಂತರಿಸಿ ಅನೇಕ ಕಾದಂಬರಿಗಳನ್ನು ಕನ್ನಡಿಗರಿಗಿತ್ತಿದ್ದಾರೆ ಮೃತರ ಆತ್ಮಕ್ಕೆ ಚಿರಶಾಂತಿಯಿರಲಿ!

ಶಿಕ್ಷೆ

ಕನ್ನಡ ನ ದಿನ ರಾಜಕೀಯ ಮುಂದಾಳುಗಳಲ್ಲೊಬ್ಬರೂ, ಕ ಪ್ರಾಂ ಕಾಂ ಕಮಿಟಿ ಉಪಾಧ್ಯಕ್ಷೆಯರೂ ಆದ ಶ್ರೀಮತಿ ಕೃಷ್ಣಾಬಾಯಿ ಪಂಜೀಕರರಿಗೆ ರತ್ನಗಿರಿಯಲ್ಲಿ ವಿಚಾರಣೆ ನಡೆದು 9 ತಿಂಗಳ ಕಠಿಣ ಶಿಕ್ಷೆ ವಿಧಿಸಲಾಗಿದೆ.

ಶಿರ್ವ

ಇಲ್ಲಿ ಹೊಸದಾಗಿ ಕಟ್ಟಿಸಿದ ಮಾರ್ಕೆಟ ವಾರ್ಡಿನ ಉದ್ಘಾಟನಾ ಸಮಾರಂಭವು ಕಳೆದ ಆದಿತ್ಯವಾರ ಶ್ರೀ. ಎ ಬಿ. ಶೆಟ್ಟಿ ಎಂ ಎಲ್. ಎ. ಇವರಿಂದ ನೆರವೇರಿಸಲ್ಪಟ್ಟಿತು ಡಾಕ್ಟರ್ ಕೆ. ಕೆ ಪೈಗಳು ವರದಿಯನ್ನೋದಿದ ಮೇಲೆ ಶ್ರೀಗಳಾದ ಡಾ ವಿಟ್ಠಲ್ ಶೆಟ್ಟಿ ಪ್ರೆಸಿಡೆಂಟ್, ಡಿ. ಬೋ. ಇವರೂ ಕಾರ್ಕಳದ ಹುಸೇನ್ ಸಾಹೇಬ ಎಂ ಎಲ್. ಎ. (ಕೇಂದ್ರ) ಇವರೂ ಮಾತನಾಡಿದರು. ಡಿ. ಬೋ ಮೆಂಬರ್ ಶ್ರೀ. ಫೆರ್ನಾಂಡಿಸರು ಕೃತಜ್ಞತೆ ಸಮರ್ಪಿಸಿದರು.

ಸಾದರ ಸ್ವೀಕಾರ

ಶಾಂತಿಯ ಪ್ರವಾದಿ ಶ್ರೀ ನಾರಾಯಣ ಗುರುದೇವ

ಪ್ರಕಾಶಕರು ಬಿಲ್ಲವರ ಎಸೋಸಿಯೇಶನ್ ಮುಂಬಯಿ ಮೂಲ ಲೇಖಕ ಸ್ವಾಮಿ ಧರ್ಮತೀರ್ಥನ್, ಭಾಷಾಂತರ ಬಿ. ಪಿ. ಆಚಾರ್ಯ.

ಬೆಳಕಿನ ಕತ್ತಲೆ

(ಕತೆಗಳ ಸೂಸು) ಮಲ್ಹಾರ ಬರೆದವರು ಮನಪಾಟದ ಸರ್ವಾಧಿಕಾರಿಗಳು ಮನೋಹರ ಗ್ರಂಥ ಭಂಡಾರ ಧಾರವಾಡ.

ಚಿತ್ರ

(ಶರಚ್ಚಂದ್ರರ ಕಥಾನ ವಾದ) ಮಲ್ಹಾರಿ ಅನುವಾದಕರು, ಮಾರಾಟಗಾರರು, ಮನೋಹರ ಗ್ರಂಥ ಭಂಡಾರ ಧಾರವಾಡ.

ಪಾಣೆಮಂಗಳೂರು ಪ್ರಥಮ ರಾಜಕೀಯ ಪರಿಷತ್ತು

ಅಧ್ಯಕ್ಷ ಶ್ರೀ ದಿವಾಕರರ ಮನನೀಯ ಭಾಷಣ

ಶ್ರೀ. ಕೆ. ಆರ್. ಕಾರಂತರಿಂದ ಉದ್ಘಾಟನ

ಮದ್ರಾಸು ನಿರ್ಣಯದ ಖಂಡನ

'ಈ ಜಿಲ್ಲೆ ನನಗೆ ಮೊದಲಿನಿಂದ ಪಂಡಿತವು. ತ್ಯಾಗದಲ್ಲಿ, ಸಾಹಸದಲ್ಲಿ, ಸಹನದಲ್ಲಿ ಈ ಜಿಲ್ಲೆ ಕರ್ನಾಟಕದ ಯಾವ ಜಿಲ್ಲೆಗೂ ಹಿಂದೆ ಇಲ್ಲ; ದಿವಂಗತ ಕಾರ್ನಾಡ ಸದಾಶಿವ ರಾಯರಂಥ ತ್ಯಾಗಿಗಳು ಹಿಂದೂದೇಶದಲ್ಲಿಯೇ ವಿರಳರು ಎಂದು ಹೇಳಬಹುದು. ಇಂಥವರು ಹುಟ್ಟಿ ಬೆಳೆದು ದೇಶಸೇವೆಯ ಪಾಠಗಳನ್ನು ಕಲಿಸಿದ ಭೂಮಿಯಿದು. ರಾಜಕೀಯ, ಸಾಂಸ್ಕೃತಿಕ, ಶೈಕ್ಷಣಿಕ ಮುಂತಾದ ದೃಷ್ಟಿಯಿಂದ ಒಳ್ಳೆ ಜಾಗೃತ ಜಿಲ್ಲೆಯಿದು.'

ಹೀಗೆಂದು ಪಾಣೆಮಂಗಳೂರಿನ ಪ್ರಥಮ ರಾಜಕೀಯ ಪರಿಷತ್ತಿನ ಅಧ್ಯಕ್ಷ ಪೀಠದಿಂದ ಶ್ರೀ ರಂಗನಾಥ ರಾಮಚಂದ್ರ ದಿವಾಕರರು ಉದ್ಘೋಷಿಸಿದರು. ಅವರು ಸಂದರ್ಭಗಳಿಗೊಪ್ಪುವ ಯಾವತ್ತು ಮುಖ್ಯ ವಿಷಯಗಳನ್ನು ಒಳಗೊಂಡ ತಮ್ಮ ಸುದೀರ್ಘ ವಿಚಾರಪರಿಪ್ಲುತವಾದ ಭಾಷಣವನ್ನು ಹೃದಯಂಗಮವಾಗಿ ಮಾಡಿದರು. ಕನ್ನಡನಾಡು ಒಂದು, ಸ್ವತಂತ್ರಭಾರತ, ಏಕತಂತ್ರ ಕರ್ನಾಟಕ ಎಂಬ ದಿವ್ಯ ಮಂತ್ರವನ್ನು ನಮಗೆ ಉಪದೇಶಿಸಿ, ಸಂಸ್ಥಾನಗಳ ಪ್ರಶ್ನೆಯನ್ನು ವಿಮರ್ಶಿಸಿದುದಲ್ಲದೆ, ಏಕತಂತ್ರ ಕರ್ನಾಟಕವನ್ನು ಸಾಧಿಸುವ ಬಗೆಯಾವುದು ಎಂದೂ ವಿಸ್ತರಿಸಿದರು. ಅಖಂಡ ಕರ್ನಾಟಕ ಭಾವನೆಯನ್ನು ಇಟ್ಟುಕೊಂಡು ಜನಸಾಮಾನ್ಯರೂ, ಕರ್ನಾಟಕದ ತಜ್ಞರೂ ವಹಿಸತಕ್ಕ ಕರ್ತವ್ಯಗಳನ್ನು ತಿಳಿಸಿದರು. ಕರ್ನಾಟಕಕ್ಕೆ ಒಂದು ಬಂದರ, ಒಂದು ವಿಶ್ವವಿದ್ಯಾಲಯ ಮೊದಲಾದ ಪ್ರಾಮುಖ್ಯಾಂಗಗಳು ಇರುವಂತಾಗಿ, ಕರ್ನಾಟಕ ದೇಶವು ಆದೊಂದು ಸರ್ವಾಂಗ ಸುಂದರವಾದ ಪ್ರಾಂತದ ಯಾವತ್ತು ಲಕ್ಷಣಗಳನ್ನೂ ಒಳಗೊಂಡಿರಬೇಕೆಂದು ಸೂಚಿಸಿದರು.

ಅವಿಭಾಜ್ಯ ಹಿಂದುಸ್ತಾನ-

ಹಿಂದೂಸ್ಥಾನವು ಏಕ ರಾಷ್ಟ್ರವೆಂದು, ನಮ್ಮ ಪ್ರಭುತ್ವದವರು ಹೇಗೆ ಈ ೧೫೦ ವರ್ಷಗಳಲ್ಲಿ ನಮ್ಮೊಡನೆ ನಡೆಸಿಕೊಂಡು ಬಂದಿದ್ದಾರೆ, ಈ ದೇಶವು ಹೇಗೆ ಅವಿಭಾಜ್ಯವು ಎಂಬುದನ್ನು ಅಧ್ಯಕ್ಷರು ಮನಗಾಣಿಸಿ, ಹೊರಗಿನಿಂದ, ಒಳಗಿನಿಂದ, ನಮ್ಮ ಸಂರಕ್ಷಕರಿಂದ ಈ ರಾಷ್ಟ್ರಕ್ಕೆ ಯಾವ ಬಗೆಯ ಗಂಡಾಂತರಗಳೂ, ಸಂಕಟಗಳೂ ಒದಗಿವೆ ಎಂಬುದನ್ನು ವಿಶದೀಕರಿಸುತ್ತ, ದಾಸ್ಯದ ಸ್ವರೂಪ, ದಾಸ್ಯದಿಂದಾಗುವ ಹಾನಿಗಳನ್ನು ನಿವೇದಿಸುತ್ತ, ಶತ್ರುಗಳು ಗೆದ್ದರೆ ಯಾವ ಭಯಾನಕ ಸ್ಥಿತಿಯೊದಗಬಹುದೆಂಬ ಚಿತ್ರವನ್ನು ಅವರು ತಿಳಿಸಿದರು. ಪಾಕಿಸ್ಥಾನ ಮೊದಲಾದ ಹಲವು ಸ್ಥಾನಗಳ ಬೇಡಿಕೆ, ಜಾತಿ ತತ್ವದ ಮೇಲೆ ಮತದಾನ ಪದ್ಧತಿ, ಅತೀ ಪ್ರಾಂತೀಯತೆಯ ಗೊಂದಲ,—ಈ ವಿಚಾರಗಳನ್ನು ಸಮಂಜಸವಾಗಿ ವಿಮರ್ಶಿಸಿ, ಸರ್ ಕ್ರಿಪ್ಸರ ಪ್ರಯತ್ನಗಳ ಕುರಿತು ಪ್ರಸ್ತಾಪಿಸಿ ಕ್ರಿಪ್ಸರು ಕೈತೋರಿಸಿ ಅವಲಕ್ಷಣವಾಡಿಕೊಂಡರೆಂದೂ ಅವರ ಮುಂದಿನ ಯೋಜನೆ ಹಾಗೂ ಈಗಿನ ಯೋಜನೆ ಇವೆರಡು ಅಗ್ರಾಹ್ಯ, ಅತೃಪ್ತಿಕರ ಇರುವದಲ್ಲದೆ ಹಲವು ಅಪಮಾನಕಾರಕ ಹಾಗೂ ಘಾತಕವಾಗಿದ್ದುವೆಂದೂ ಹೇಳಿದರು.

ಹಿಂಸೆ ಅಹಿಂಸೆಗಳ ಪ್ರವೃತ್ತಿಯನ್ನು ವಿವರಿಸಿ ರಾಜಕೀಯ ಧ್ಯೇಯ ಮತ್ತು ಸಾಧನಗಳಲ್ಲಿ ಈಗ ಜನರ ವಿತ್ತಜೀವಿತಗಳ ಸಂರಕ್ಷಣೆಯ ದೊಡ್ಡ ಹೊಣೆ ನಮ್ಮ ಮೇಲೆ ಬಂದು ಬಿದ್ದಿದೆ ಎಂದು ಎಚ್ಚರಿಸಿದರು.

ಕಳೆದ ಶನಿವಾರ ಸಂಜೆ ಈ ಅಧಿವೇಶನದ ಆರಂಭವಾಯಿತು. ಸಭಾಧ್ಯಕ್ಷರಾದ ಶ್ರೀ ರಂಗನಾಥ ರಾಮಚಂದ್ರ ದಿವಾಕರರೂ, ಅವರ ಸಂಗಡಿಗರೂ ಅಲಂಕೃತವಾದ ಕಾರಿನಲ್ಲಿ ಆಗಮಿಸಲು ನೆರೆದ ಜನತೆ ಅವರನ್ನು ಸ್ವಾಗತಿಸಿ ಕರೆತಂದ ಮೇಲೆ, ಮಳೆಯ ಬೆಸೆಯಿಂದ ಅಂದಿನ ಕಾರ್ಯಕ್ರಮವನ್ನು ನಿಲ್ಲಿಸಿ, ಮರುದಿನಕ್ಕೆ ಮುಂದರಿಸಲಾಯಿತು.

ಧ್ವಜವಂದನೆ

ಮರುದಿನ ಬೆಳಗ್ಗೆ ೮॥ ಘಂ॥ ಕಾಂ॥ ಕಮಿಟಿಯ ಕಾರ್ಯದರ್ಶಿಯವರಾದ ಶ್ರೀ. ಚನ್ನಬಸಪ್ಪ ಅಂಬಲಿಯವರು, ಧ್ವಜವಂದನೆಯ ಕಾರ್ಯವನ್ನು ಇಲ್ಲಿ ನೆರವೇರಿಸ ಬೇಕಾಗಿದ್ದ ಶ್ರೀಮತಿ ಕೃಷ್ಣಬಾಯಿ ಪಂಜೀಕರರವರು ಬಂಧಿತರಾದ ಕಾರಣ ತಾವು ಇದನ್ನು ಮಾಡಬೇಕಾಯಿತೆಂದು ತಿಳಿಸಿ ಭಾರತೀಯರ ರಾಷ್ಟ್ರ ಉಪಾಸನಾ ದೇವತೆಯಾದ ಈ ರಾಷ್ಟ್ರ ಧ್ವಜಕ್ಕಾಗಿ ನಡೆದು ಹೋದ ತ್ಯಾಗದ ಇತಿಹಾಸವನ್ನು ಪ್ರಸ್ತಾವಿಸಿ, ನಮ್ಮ ರಾಷ್ಟ್ರಾಭಿಮಾನ, ಸ್ವಾತಂತ್ರ್ಯ ಪ್ರೇಮಗಳ ಉದ್ದೀಪನಕಾರಿಯಾದ, ಜಾತಿಮತಗಳನ್ನು ಅರಿಯದ ಈ ಧ್ವಜದ ಮಹತ್ವವನ್ನು ಸೂಚಿಸಿ, ಧ್ವಜವನ್ನೇರಿಸಿದರು. ಮೌಲಾನಾ ಡಾ. ಎಫ್. ಎಚ್. ಒಡೆಯರು ಶ್ರೀ. ಅಂಬಲಿಯವರ ಪರಿಚಯ ತಿಳಿಸಿದರು. ಅನಂತರ ವಿಷಯ ನಿಯಾಮಕ ಸಭೆ ಜರುಗಿತು.

ಉದ್ಘಾಟನಾ ಸಮಾರಂಭ

ಅಪರಾಹ್ನ, ಅಲಂಕೃತವಾದ ಸಭಾಂಗಣದಲ್ಲಿ ಮಹಾಸಭೆ ನೆರೆಯಿತು. "ವಂದೇಮಾತರಂ" ಗೀತೆಯೊಂದಿಗೆ, ಶ್ರೀ. ಕೆ. ಆರ್. ಕಾರಂತ ಎಂ. ಎಲ್. ಎ. ಅವರು ಈ ಅಧಿವೇಶನವನ್ನು ತೆರೆವ ಉತ್ಸವವನ್ನು ನೆರವೇರಿಸಿದರು. ಅವರು ತಮ್ಮ ಭಾಷಣದಲ್ಲಿ, ಕ್ರಿಪ್ಸರ ಸೂಚನೆಗಳ ವಿಚಾರವೆಸ್ತಿ, ಮದ್ರಾಸ್ ಕಾಂಗ್ರೆಸ್ ಶಾಸನ ಸಭಾ ಸದಸ್ಯರ ಪಕ್ಷದವರು ಮಾಡಿದ ಈಚೆಗಿನ ನಿರ್ಣಯವನ್ನು ಖಂಡಿಸಿ, ಕಾರಣಗಳನ್ನು ಕೊಟ್ಟು ಮಾತಾಡಿದರು. ಶ್ರೀ. ಪಿ. ಮಾಧವ ಪಡಿಯಾರರು ತಮ್ಮ ಸ್ವಾಗತ ಭಾಷಣವನ್ನು ಅನಂತರ ಮಾಡಿ ಮುಗಿಸಲು, ಅಧ್ಯಕ್ಷರು ತಮ್ಮ ಭಾಷಣದಲ್ಲಿ ಶ್ರೀ. ಕಾರಂತರ ಅಭಿಮತವನ್ನು ಸಮರ್ಥಿಸಿ ಮಾತಾಡಿ, ಭಾರತೀಯರೇ ಇನ್ನು ತಾವಾಗಿ ಮುಂದೆ ಬರಬೇಕು ಎಂಬುದು ಸರಿಯಲ್ಲ, ಪಾಕಿಸ್ಥಾನವನ್ನು ಒಪ್ಪಬೇಕೆನ್ನುವುದು ಸರಿಯಲ್ಲ, ಬೇರೆ ಬೇರೆ ಪ್ರಾಂತಗಳಿಗೆ ಬೇರೆ ಬೇರೆ ಹಕ್ಕುಗಳಿರಬೇಕೆಂದು ಭೇದನೀತಿಯ ಮಾತು, ಅದೂ ಸರಿಯಲ್ಲ ಎಂದು ಮೊದಲಾಗಿ ಹೇಳಿದರು.

'ಮದ್ರಾಸು ನಿರ್ಣಯ'ದ ಖಂಡನ

ಅನಂತರ ಮೌ॥ ಡಾ. ಎಫ್. ಎಚ್. ಒಡೆಯರ್‌ ಅವರು, ಮದ್ರಾಸ್ ಕಾಂಗ್ರೆಸ್ ಶಾಸನ ಸಭಾಸದಸ್ಯರು ಕೆಲವರು ತೀರ್ಮಾನ ಮಾಡಿದಂತೆ, ಪಾಕಿಸ್ಥಾನ ಯೋಜನೆಯನ್ನು ಒಪ್ಪಬೇಕು, ಗವರ್ನರುಗಳು, ವೈಸರಾಯರು, ಭಾರತಪದ ಸ್ಟೇಟ್ ಸೆಕ್ರೆಟರಿಗಳು ಇವರ ಆಶ್ರಯದಲ್ಲಿ ಒಂದು ರಾಷ್ಟ್ರೀಯ ಸರಕಾರ ಸ್ಥಾಪಿಸಲ್ಪಡಬೇಕು ಎಂಬುದನ್ನು ಈ ಅಧಿವೇಶನ ಒಪ್ಪುವುದಿಲ್ಲವೆಂಬ ಆರ್ಥದ ಒಂದು ಠರಾವು ತಂದು ಅದರ ಪರವಾಗಿ ಶ್ರೀ. ರಾಮದಾಸರೂ, ಜಿಲ್ಲಾ ಕಾಂ. ಸಭೆಯ ಉಪಾಧ್ಯಕ್ಷ ಶ್ರೀ. ಅಧಿಕಾರಿಗಳೂ ಮಾತಾಡಿದರು. ವಿರೋಧವಾಗಿ ಶ್ರೀಗಳಾದ ಪಿ. ಪದ್ಮನಾಭ ರಾವ್, ಎ. ಕೃಷ್ಣ ಶೆಟ್ಟಿ, ಶ್ರೀ. ಕೆ. ಬಿ. ಜಿನರಾಜ ಹೆಗ್ಗಡೆ ಎಂ. ಎಲ್. ಎ. (ಕೇಂದ್ರ) ಅವರೂ ಮಾತಾಡಲಾಗಿ, ಮತ ತೆಗೆಯಲಾಯಿತು. ಠರಾವಿನ ಪರವಾಗಿ ೬೭, ವಿರೋಧವಾಗಿ ೫ ಮತಗಳು ದೊರಕಿ ಮೌಲಾನಾ ಒಡೆಯರ ನಿರ್ಣಯ ಬಹುಮತದಿಂದ ಮಂಜೂರಾಯಿತು.

ಇತರ ನಿರ್ಣಯಗಳು

ಬಜಾಜ್, ಠಾಕೂರ್, ಮತ್ತು ಪಾಣೆಮಂಗಳೂರಿನ ಸತ್ಯಾಗ್ರಹಿ ಶ್ರೀ ಶ್ರೀನಿವಾಸಯ್ಯ ಇವರ ನಿಧನದ ಬಗ್ಗೆ ದುಃಖಸೂಚಕ ನಿರ್ಣಯಗಳಾದ ನಂತರ, 'ಮದ್ರಾಸು ನಿರ್ಣಯ'ವನ್ನು ಖಂಡಿಸಿ ಠರಾವಾದ ನಂತರ, ಈ ಕೆಳಗಿನ ಠರಾವುಗಳು ಸರ್ವಾನುಮತದಿಂದ ಮಂಜೂರಾದುವು

(೧) ಕ್ರಿಪ್ಸ್ ಯೋಜನೆಯನ್ನು ವರ್ಕಿಂಗ್ ಕಮಿಟಿಯು ನಿರಾಕರಿಸಿದುದು ಸಮಂಜಸವಿದೆಯೆಂದು ಈ ಪರಿಷತ್ತು ಅಭಿಪ್ರಾಯ ಪಡುತ್ತದೆ. (೨) ಸದ್ಯದ ಪರಿಸ್ಥಿತಿಯಲ್ಲಿ ಅಹಿಂಸಾತ್ಮಕ ಧೋರಣಕ್ಕೆ ಅಂಟಿಕೊಳ್ಳುವುದೇ ಯೋಗ್ಯವೆಂದೂ, ಗಾಂಧಿಜಿಯವರ ನೇತೃತ್ವದಲ್ಲಿ ಈ ಪರಿಷತ್ತು ಪೂರ್ಣ ವಿಶ್ವಾಸ ವ್ಯಕ್ತಪಡಿಸುತ್ತ ಜನತೆಗೆ ಅವರೇ ಮಾರ್ಗದರ್ಶಕರಾಗಿರಬೇಕೆಂದೂ ಕೇಳಿಕೊಳ್ಳುತ್ತದೆ. (೩) ಗಾಂಧೀಜಿಯವರು ನಿರ್ದೇಶಿಸಿದ ರಚನಾತ್ಮಕ ಕಾರ್ಯಕ್ರಮಗಳನ್ನು ಎಲ್ಲ ಗ್ರಾಮ ಸಮಿತಿಗಳು ಕಾರ್ಯರೂಪಕ್ಕೆ ತರಬೇಕೆಂದು ಕೇಳಿಕೊಳ್ಳುತ್ತದೆ. (೪) ದೇವಸ್ಥಾನಗಳಿಗೂ ಹೊಟೇಲುಗಳಿಗೂ ಹರಿಜನರಿಗೆ ಪ್ರವೇಶ ಕೊಡಬೇಕೆಂದೂ ಅನುಕ್ರಮವಾಗಿ ಟ್ರಸ್ಟಿಗಳನ್ನೂ ಮಾಲಕರನ್ನೂ ಈ ಪರಿಷತ್ತು ಕೇಳಿಕೊಳ್ಳುತ್ತದೆ. (೫) ಡೆಟಿನ್ಯೂಗಳ ಕಯ್ಯೂರು ಮೊಕದ್ದಮೆಯ ಕೈದಿಗಳ ಮತ್ತು ಇತರ ರಾಜಕೀಯ ಕೈದಿಗಳ ಬಿಡುಗಡೆಯಾಗಬೇಕೆಂದು ಈ ಪರಿಷತ್ತಿನ ಕೋರಿಕೆಯಿರುತ್ತದೆ, (೬) ಯುದ್ಧ ಪರಿಸ್ಥಿತಿಯಿಂದ ದವಸಧಾನ್ಯಗಳ ಮತ್ತು ಬಟ್ಟೆಬರೆಗಳ ಧಾರಣೆಗಳೇರಿರುವ ಪ್ರಯುಕ್ತ, ಕಾರ್ಖಾನೆದಾರರೂ ಇತರ ಸಂಸ್ಥೆಯವರೂ ತಮ್ಮ ನೌಕರರಿಗೆ ತುಟ್ಟಿ ಭತ್ಯೆ ಕೊಡಬೇಕೆಂದೂ, (೭) ಜಿಲ್ಲಾ ಕಾಂಗ್ರೆಸ್ ಕಮಿಟಿಗಳು ಸ್ಥಾಪಿಸಲಿರುವ ಶಾಂತಿದಳಗಳಲ್ಲಿ ಜನರೆಲ್ಲರೂ ಸಹಕರಿಸಬೇಕೆಂದೂ, (೮) ಎ. ಐ. ಸಿ. ಸಿ. ಯು ಅಸ್ಸಾಮ್, ಬರ್ಮಾ ಕಡೆಗಳಲ್ಲಿನ ನಿರಾಶ್ರಿತರಿಗೆ ಸೌಕರ್ಯಗಳನ್ನೊದಗಿಸುವ ಬಗ್ಗೆ ಒಂದು ನಿರ್ಣಯ ಮಾಡಬೇಕೆಂದೂ ಈ ಪರಿಷತ್ತು ಕೇಳಿಕೊಳ್ಳುತ್ತದೆ, (೯) ವ್ಯಾಪಾರಿಗಳು, ಯುದ್ಧದ ಸಂದರ್ಭವನ್ನು ಅಮಿತ ಲಾಭಗಳಿಸಲು ಉಪಯೋಗಿಸದೆ ನ್ಯಾಯವಾದ ಧಾರಣೆಗಳಲ್ಲಿ ಜನತೆಗೆ ತಮ್ಮ ಸರಕುಗಳನ್ನು ಒದಗಿಸಬೇಕೆಂದು ಈ ಪರಿಷತ್ತು ವ್ಯಾಪಾರಸ್ಥರಲ್ಲಿ ಕೇಳಿಕೊಳ್ಳುತ್ತದೆ; (೧೦) ಫೆಸಿಸ್ಟ್ ದುಶ್ಶಕ್ತಿಗಳನ್ನೆದುರಿಸಿ ನಿಂತಿರುವ ಸೋವಿಯೆಟ್ ಯೂನಿಯನ್ ಹಾಗೂ ಚೀನ ದೇಶದವರ ಶೌರ್ಯ-ಸಾಹಸ-ರಾಷ್ಟ್ರಪ್ರೇಮಗಳಿಗಾಗಿ ಈ ಪರಿಷತ್ತು ತನ್ನ ಮೆಚ್ಚಿಕೆಯನ್ನು ಪ್ರದರ್ಶಿಸುತ ಅಲ್ಲಿಯ ಜನರೊಡನೆ ತನ್ನ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತದೆ; (೧೧) ಭಾರತದೊಳಗಿನ ಹಾಗೂ ಸುತ್ತುಮುತ್ತಲಿನ ಸರಕು ರವಾನೆಯ ಸಾಧನಗಳೂ ರಸ್ತೆಗಳೂ ಪರಿಮಿತಗೊಂಡಿರುವುದರಿಂದ ದೇಶದಲ್ಲಿ ಹೆಚ್ಚೆಚ್ಚು ದವಸಧಾನ್ಯಗಳು ಬೆಳೆಸುವಂತೆ ರೈತಾಪಿ ಜನರಿಗೆ ಸರಕಾರದವರು ಬೀಜಮೊದಲಾದುವುಗಳನ್ನೊದಗಿಸುವ ಮೂಲಕ ಸಹಾಯಮಾಡಬೇಕೆಂದು ಈ ಪರಿಷತ್ತು ಕೇಳಿಕೊಳ್ಳುತ್ತದೆ.

ಜಿಲ್ಲೆಯ ಸುಪ್ರಸಿದ್ಧ ಯಕ್ಷಗಾನ ಕಲಾವಿದರಾದ ಶ್ರೀ. ಮೈಂದಪ್ಪ ರೈ, ಶ್ರೀ. ಶಂಕರನಾರಾಯಣ ಸಾಮಗ, ಶ್ರೀ. ಸದಾನಂದ ಪೈ, ಶ್ರೀ. ಕೃಷ್ಣ ಭಟ್, ಡಾ. ಎಫ್. ಎಚ್. ಒಡೆಯರ್ ಮೊದಲಾದವರ ಕೂಡುವಿಕೆಯಿಂದ ಯಕ್ಷಗಾನ ಕೂಟವೊಂದು ಜರಗಿತು. ಹೀಗೆ ಎರಡು ದಿವಸಗಳ ವಿಪುಲ ಕಾರ್ಯಕ್ರಮದಿಂದ ಪಾಣೆಮಂಗಳೂರು ಸರ್ಕಲಿನ ಪ್ರಥಮ ರಾಜಕೀಯ ಪರಿಷತ್ತು ಯಶಸ್ವಿಯಾಗಿ ಜರಗಿತು.

ಶ್ರೀ ಶಂಕರ ಜಯಂತಿ

ತಾ. ೨೦-೪-೪೨ನೇ ಸೋಮವಾರ ಶ್ಯಾಮ ಘಂಟೆ ೪-೩೦ಕ್ಕೆ ಉಳ್ಳಾಲ ಅದ್ವೈತಾಶ್ರಮದಲ್ಲಿ ಶ್ರೀ. ಶಂಕರ ಜಯಂತ್ಯುತ್ಸವವು ಶ್ರೀ. ಮುಳಿಯ ತಿಮ್ಮಪ್ಪಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಕಾರ್ಯಕ್ರಮದ ಆರಂಭದಲ್ಲಿ ಶ್ರೀ. ಎಂ. ಎಸ್. ಅಚ್ಯುತ ಶರ್ಮರು ಅದ್ವೈತತತ್ವದ ವಿಚಾರವಾಗಿ ಭಾಷಣ ಮಾಡಿದರು. ಅನಂತರ ಶ್ರೀ. ಎಚ್. ಶ್ರೀನಿವಾಸ ಉಡುಪರ ಗಾಯನ ಕಚೇರಿಯೂ ನಡೆಯಿತು. ಆದಾಗಿ ಅಧ್ಯಕ್ಷರು ಆದ್ಯ ಶ್ರೀ ಶಂಕರಾಚಾರ್ಯರ ಇತಿಹಾಸ, ಅದ್ವೈತಸಿದ್ಧಾಂತ, ಮೊದಲಾದ ವಿಷಯಗಳ ಕುರಿತು ಸರಸವಾಗಿ ಭಾಷಣ ಮಾಡಿದರು. ಅದ್ವೈತ ಸಮಿತಿಯ ಪರವಾಗಿ ಶ್ರೀ. ಬಿ. ಕೆ. ಪಿ. ಶರ್ಮರ ವಂದನಾರ್ಪಣೆಗಳಾದ ಬಳಿಕ ಪುಷ್ಪ, ತಾಂಬೂಲ ಹಂಚೋಣದಿಂದ ಉತ್ಸವವು ಯಶಸ್ವಿಯಾಗಿ ಕೊನೆಗೊಂಡಿತು.

ಪ್ರಕಟಣೆ

ದ್ಯುತಕಲ್ಲ ಪೂವಣಿ ಹೆಗಡೆಯವರ ಬಾಬ್ತು ಪುತ್ತೂರು ತಾಲೂಕು ಕೊಡಿಪಾಡಿ ಗ್ರಾಮದಲ್ಲಿ (ಪುತ್ತೂರಿಂದ 4 ಮೈಲು ಪಶು) ಆಸ್ತಿ 1, ಕುಂಜ ಗ್ರಾಮದಲ್ಲಿ (ಸುಬ್ರಹ್ಮಣ್ಯದಿಂದ 12 ಮೈಲು ಪಡು) ಆಸ್ತಿಗಳು 4 ಸಹ ಪುತ್ತೂರಿನಲ್ಲಿ ನನ್ನ ಆಫೀಸಿನಲ್ಲಿ ತಾ. 24-5-1942ನೇ ಆದಿತ್ಯವಾರ ಹ. 10 ಘಂಟೆಗೆ ಸಬಕೋರ್ಟು ಕ್ರ. ನಂ. 21/1940 ರಲ್ಲಿ ಕೋರ್ಟಿನಿಂದ ರಿಸಿವರನಾಗಿ ನೇಮಕಯ್ಯು ಅಧಿಕಾರ ಹೊಂದಿದ ನಾನು ಬಹಿರಂಗವಾಗಿ ಏಲಂ ಮಾಡಲಿರುವೆನು. ಏಲಮಿನ ಶರ್ತಗಳು, ಆಸ್ತಿಗಳ ಕಬಸೀಲು ಮುಂತಾದ ವಿವರಗಳು ಕಾಣುವ ಭಾಷಾ ಇಷ್ಟದಾರು ಫೋರ್ಮುಗಳನ್ನು ನನ್ನ ಆಫೀಸಿನಿಂದ ಪಡೆಯಬಹುದು. ಈಗ ಹಣವನ್ನು ಆಸ್ತಿ ಕೊಂಡು ಕೊಳ್ಳುವುದರಲ್ಲಿ ವಿನಿಯೋಗಿಸುವದು ಲೇಸು. ಉತ್ತಮ ಸುಸಂದರ್ಭ ಸಿಕ್ಕುವುದು ಕೇಳಿ ಪಡೆ.

ಪುತ್ತೂರು 27-4-1942 } ಮೊಳಹಳ್ಳಿ ಶಿವರಾವ್ ಕೋರ್ಟು ರಿಸಿವರ

ಬೊಂಬೇ ಟಾಕೀಸಿನ 'ಅಂಜಾನ್' ಚಿತ್ರದ ಒಂದು ದೃಶ್ಯ
ಸ್ಥಳೀಯ ಬಾಲಾಜಿ ಟಾಕೀಸಿನಲ್ಲಿ ತಾ. 2-5-42ರಿಂದ ಪ್ರದರ್ಶಿತವಾಗುವುದು.

ಸಿನೆಮಾ ಪುಟ

ಬೊಂಬೇ ಟಾಕೀಸಿನ 'ಅಂಜಾನ್'

'ಬಂಧನ್' 'ಕಂಗನ್' ಖ್ಯಾತಿಯ ಬೊಂಬೇ ಟಾಕೀಸಿನವರು, ಅಶೋಕ ಕುಮಾರ್, ದೇವಿಕಾ ರಾಣಿ ಸಮ್ಮೇಳದಿಂದ ರಚಿಸಿದ 'ಅಂಜಾನ್' ಚಿತ್ರವು ಈಗ ಪ್ರದರ್ಶಿಸಲ್ಪಡುವ ಎಲ್ಲೆಡೆಗಳಲ್ಲಿಯೂ ಬಹಳ ಪ್ರಶಂಸೆಗೆ ಪಾತ್ರವಾಗುತ್ತಿದೆ ವಿ. ಎಚ್. ದೇಸಾಯಿ, ಸುರೇಶ್, ಅರುಣಕುಮಾರ್, ಬೇಬಿ ಪಾಧುರಿ ಮುಂತಾದವರು ಇದರಲ್ಲಿನ ಬೇರೆ ನಟ ವರ್ಗದವರು ಅಮಿಯ ಚಕ್ರವರ್ತಿ ನಿರ್ದೇಶಕರು ತರುಣ ಕುಮಾರಿ ಮಣಿಪುರ ನೃತ್ಯವೂ ಇದರಲ್ಲಿದೆ ಪನ್ನಾಲಾಲ್ ಘೋಷ್ ಮತ್ತು ಅರುಣ ಕುಮಾರರ ಸಂಗೀತ ನಿದರ್ಶನ ೧೦ ಮಧುರ ಗೀತೆಗಳಿಂದ ಇದು ಮನೋರಂಜಕವಾಗಿದೆ

ರಾಜವಟುಯು ಜಮೀನ್ದಾರನು ಕಾಲವಾದ ಮೇಲೆ, ಆಸ್ತಿಯ ಒಡೆತನವನ್ನು ಜಮೀನ್ದಾರನ ಪತ್ನಿ ರಾಣಿಮಳು ವಹಿಸಬೇಕಾಯಿತು. ಆ ಮನೆತನವು ಸುಖವಾಗಿತ್ತು, ಜನರು, ಸೇವಕರು ವಿಶ್ವಾಸವಿಟ್ಟಿದ್ದರು. ಅಜಿತನು ಮನೆತನದ ವೈದ್ಯ ರಾಮನಾಥನು ಪಾರುಪತ್ಯಗಾರ ರಾಣಿಮಳು ಕಾಯಿಲೆ ಬಿದ್ದಾಗ ಮಕ್ಕಳ ಆರೈಕೆ ನೋಡಿಕೊಳ್ಳಲು ಸುಶಿಕ್ಷಿತ ಪರಿಚಾರಿಕೆಯೊಬ್ಬಳನ್ನು ಇಂದಿರೆಯನ್ನು ತಂದರು. ರಾಮನಾಥನಿಗೆ ಅವಳ ಮೇಲೆ ಮೋಹದೃಷ್ಟಿ. ಇಂದಿರೆಗೆ ಅಜಿತನ ಮೇಲೆ ಪ್ರೇಮ ರಾಮನಾಥನ ಪ್ರೇಮವನ್ನು ಇಂದಿರೆ ತಿರಸ್ಕರಿಸಲು ಮುಂದೆ ಅಜಿತ ಇಂದಿರೆಯರಿಗೆ ಅನಂತ ಆಪತ್ತು ರಾಮನಾಥನಿಂದಾಗಿ ಒದಗಿತು. ಅಜಿತನ ಮೇಲೆ ಕೊಲೆಯ ಅಪಾದನೆಯಾಗಿ ಆತನು ಗಲ್ಲಿಗೇರುವ ಪ್ರಸಂಗ ಸಿದ್ಧವಾಗಿತ್ತು. ಆದರೆ ಕೊನೆಗೆ ಸತ್ಯವು ಜಯಿಸುವುದು, ಅಜಿತ ಇಂದಿರೆಯರು ಒಂದಾಗುವರು. ರಾಮನಾಥನ ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತವಾಗುವುದು' ಅಂಜಾನ್‌ದ ಕಥೆ ಹೀಗಿದೆ ಸ್ಥಳೀಯ ಬಾಲಾಜಿ ಟಾಕೀಸಿನಲ್ಲಿ ಮೇ ೨ರಿಂದ ಪ್ರಾರಂಭವಾಗುವುದು.

ಸೆಂಟ್ರಲ್ ಟಾಕೀಸಿನಲ್ಲಿ ಪ್ರದರ್ಶನದ ಸಮಯ ಬದಲಾವಣೆ

ಬ್ಲೇಕ್ ಔಟಿನ ನಿಮಿತ್ತ ಸ್ಥಳೀಯ ಸೆಂಟ್ರಲ್ ಟಾಕೀಸಿನಲ್ಲಿ ಈ ರೀತಿಯಾಗಿ ಪ್ರದರ್ಶನದ ಸಮಯ ಬದಲಾವಣೆ ಮಾಡಿರುವರು ಸಂಜೆ ೩ ಗಂಟೆಗೆ ಮತ್ತು ೬ ಗಂಟೆಗೆ ಶನಿವಾರ ಆದಿತ್ಯವಾರ ಬೆಳಿಗ್ಗೆ ೯-೩೦ಕ್ಕೆ ಮೆಟನಿ ಪ್ರದರ್ಶನಗಳಿವೆ.

ಸ್ಟಂಟ್ ಪಿಕ್ಚರ್ ನೋಡಿ ಕದ್ದುಕೊಂಡ ಹುಡುಗ

ಜವಾಹಿರಲಾಲರ ಕೈಗಡಿಯಾರವನ್ನು

ಒಂದು ಸಭೆಯಲ್ಲಿ ಒಮ್ಮೆ ನೆಹರುಗಳ ಕೈಗಡಿಯಾರವು ಕಾಣದೆ ಆಯಿತು ಬಹಳ ಹೊತ್ತು. ಹುಡುಕಿದ ಮೇಲೆ ಒಬ್ಬ ಹುಡುಗನು ಅದನ್ನು ತೆಗೆದುಕೊಂಡಿರುವುದಾಗಿ ತಿಳಿದುಬಂತು. 'ಇಂಥ ಕೆಲಸವನ್ನು ನೀನೇಕೆ ಮಾಡಿದೆ?' ಎಂದು ಅವನನ್ನು ಕೇಳಿದರೆ, ಅವನು ಹೀಗಂದನು. 'ನಾನು ಒಂದು ಸ್ಟಂಟ್ ಸಿನೆಮಾ ನೋಡಿದ್ದೆ' ಹಾಗಾದರೆ ಈ ಕದ್ದುಕೊಂಡದ್ದರಲ್ಲಿ ಹುಡುಗನ ತಪ್ಪು ಇದೆಯೆ? ಮನುಷ್ಯನ ಸಂಸ್ಕೃತಿಗೆ ಅವನ ಸುತ್ತಮುತ್ತಲಿನ ವಾತಾವರಣವೇ ಕಾರಣವಾಗುತ್ತದಲ್ಲವೆ? ಹುಡುಗನಾದರೂ ಕದ್ದುಕೊಳ್ಳುವ ಕಲೆಯನ್ನು ರೂಪಿಸುವ ಚಿತ್ರ ನೋಡಿ ಅದನ್ನು ಒಂದು ವಿದ್ಯೆಯಾಗಿ ಕಲಿತುಕೊಂಡನು. ಹಾಗಾಗಿ ಸಿನೆಮಾ ನಿರ್ಮಾಪಕರು ಚಿತ್ರಗಳನ್ನು ತಯಾರಿಸುವಾಗ ಜನತೆಯ ಮೇಲೆ ಅದು ಎಂತಹ ಪರಿಣಾಮವನ್ನು ಹುಟ್ಟಿಸುವುದು ಎಂಬ ಕುರಿತು ವಿಚಾರಿಸಿಕೊಳ್ಳುವುದು ಅವಶ್ಯವಾಗಿದೆ.

'ಗೀತಾ' ಚಿತ್ರ ಭಗವದ್ಗೀತೆಯಲ್ಲ

ಸಿರ್ಕೋರನವರ 'ಗೀತಾ' ಚಿತ್ರದ ಆರಂಭೋತ್ಸವವನ್ನು ಮಾಡಲು ಡಾ. ಎಂ. ಆರ್. ಜಯಕರರನ್ನು ಕೇಳಿಕೊಂಡರು. ಅದಕ್ಕೆ ಅವರು ಒಪ್ಪಿಗೆಯಿತ್ತರು. ಅವರಿಗೆ 'ಗೀತಾ' ಎಂಬ ಹೆಸರು ಕೇಳಿ, ಅದು ಭಗವದ್ಗೀತೆಗೆ ಸಂಬಂಧಿಸಿದ ಕಥೆಯಿರಬಹುದೆಂಬ ಅಭಿಪ್ರಾಯವಿತ್ತು. ಆದರೆ ಕಡೆಗೆ ನೋಡಿದರೆ ಅದು ಭಗವದ್ಗೀತಾ ಕಥೆಯಲ್ಲವಾಗಿ ಅವರಿಗೆ ಆಶ್ಚರ್ಯವಾಯಿತಂತೆ.

ಶಾಂತಾ ಆಪ್ಟೆ ಪಂಚೋಲಿಯಲ್ಲಿ

ಶಾಂತಾ ಆಪ್ಟೆ ಪಂಜಾಬಿನ ಪ್ರಸಿದ್ಧಿಯ ಪಂಚೋಲಿ ಆರ್ಟ್ ಪಿಕ್ಚರ್ಸನವರ ಒಂದು ಚಿತ್ರದಲ್ಲಿ ಅಭಿನಯಿಸುತ್ತಾಳೆ ಈ ಚಿತ್ರದ ಹೆಸರು 'ಜಮೀನ್ದಾರ್' ಇದರಲ್ಲಿ ಶಾಂತಾ ಆಪ್ಟೆ, ಗುಲಾಮ್ ಮಹಮ್ಮದ್, ಇಸ್ಮಾಯಿಲ್, ನಾರಂಗ್, ಮನೋರಮಾ ಮೊದಲಾದವರೂ ನಟಿಸುವರು. ಮಾಸ್ಟರ್ ಗುಲಾಮ್ ಹೈದರರು ಶಾಂತಾ ಆಪ್ಟೆಯ ಗಾಯನಕ್ಕಾಗಿ ಕೆಲವು ಮಧುರ ಹಾಡುಗಳನ್ನು ರಚಿಸಿದ್ದಾರೆ ಅವರ 'ಖ.ನ್‌ಧನ್' ಚಿತ್ರ ಈಗ ಪ್ರದರ್ಶಿತವಾಗುತ್ತಲಿದೆ

ಅತ್ರೇಯರವರ 'ವಸಂತಸೇನಾ'

ಚಿತ್ರವು ಈಗ ತಯಾರಾಗುತ್ತಿದೆ. ಇದರಲ್ಲಿ ವನಮಾಲಾ ವಸಂತಸೇನೆಯಾಗಿ, ಶಾಹುಮೋಡಕ್ ಚಾರುದತ್ತನಾಗಿ ಅಭಿನಯಿಸುವರು. ನಿರ್ದೇಶಕರು ಜಾಗಿರ್ದಾರ್. ಇದರ ಸಂಗೀತ ನಿರ್ದೇಶಕರು 'ಪ್ರಭಾತ' ಪ್ರಸಿದ್ಧರಾದ ಮಾಸ್ತರ್ ಕೃಷ್ಣರಾವ್ ಈ ಕಂಪೆನಿಯವರ 'ಸ್ವಜಾರಾಣಿ' ಚಿತ್ರವು ಈಗ ಯಶಸ್ವಿಯಾಗಿ ಪ್ರದರ್ಶಿತವಾಗುತ್ತಿದೆ.

ಹನ್ಸ್ ಪಿಕ್ಚರ್ಸನವರ 'ಪಹೇಲ್ ಪಲ್ಲಾ'

'ಹನ್ಸ್' ಪಿಕ್ಚರ್ಸನವರ ಆಡಳಿತ ಮಂಡಳವು ಈಗ ಬದಲಾಗಿದ್ದು, ಹೊಸ ಆಡಳಿತಗಾರರ ಮೊದಲಿನ ಚಿತ್ರ 'ಪಹೇಲ್ ಪಲ್ಲಾ' ಎಂಬುದು, ಇವರಲ್ಲಿ ಬಾಬುರಾವ್ ಪೆಂಡಾರ್ಕರ್, ಶಾಂತಾ ಹುಬ್ಳೀಕರ್, ದಿನಕರ ಕಾಮಣ್ಣ ಕುಸುಮ್ ದೇಶಪಾಂಡೆ ಚಾಂದ್‌ಕರ್ ಮೊದಲಾದವರು ನಟಿಸುತ್ತಾರೆ ಪೆಂಡಾರ್ಕರ್ ಈ ಚಿತ್ರದಲ್ಲಿ ಮೊದಲನೆಯ ಸಾರಿಯಾಗಿ ರಸಿಕ ನಾಯಕ ಪಾತ್ರ ವಹಿಸುವರು

ಬೊಂಬೇ ಟಾಕೀಸ್ 'ವಸಂತ್'

ಬೊಂಬೇ ಟಾಕೀಸಿನವರ ಹೊಸ ಚಿತ್ರದ ಹೆಸರು 'ವಸಂತ್' ಎಂದು ಇದರಲ್ಲಿ ಎಲ್ಲರೂ ಹೊಸಬರೇ ನಟನಟಿಯರು' ಮುಮ್‌ತಾಜ್ ಶಾಂತಿ, ಪ್ರಮೀಳಾ ಉಲ್ಲಾಸ್ ಮುಮ್‌ತಾಜ್ ಆಲಿ ಮತ್ತು ಸುರೇಶ ಇವರು ಇದರಲ್ಲಿ ನಟಿಸುತ್ತಾರೆ ಅಮಿಯಾ ಚಕ್ರವರ್ತಿಯವರು ನಿರ್ದೇಶಕರು ಇವರ ಝೂಲಾ ಎಲ್ಲೆಡೆಗಳಲ್ಲಿಯೂ ಪ್ರಸಿದ್ಧವಾಗಿದೆ

ಮಿನೆರ್ವಾದ ಫಿರ್ ಮಿಲೇಂಗೇ

ಮಿನೆರ್ವಾದವರು 'ಫಿರ್ ಮಿಲೇಂಗೇ' ಎಂಬ ಚಿತ್ರವನ್ನು ಈಗ ತಯಾರಿಸುತ್ತಾರೆ. ಸರ್ದಾರ್ ಅಖ್ತರ್ ಮುಖ್ಯ ನಟಿಯಾಗಿದ್ದಾಳೆ. ಸರ್ವೋತ್ತಮ ಬಾದಾಮಿ, ಸಬಿತಾ ಮತ್ತು ಮೋತಿಲಾಲ ಇವರು ಮೂವರೂ ಈಗ ಮಿನೆರ್ವಾದಲ್ಲಿದ್ದಾರೆ. ಮಿನೆರ್ವಾದವರ 'ಸಿಕಂದರ್' ಚಿತ್ರವು ಎಲ್ಲಾ ಕಡೆಗಳಲ್ಲಿಯು ಕೀರ್ತಿ ಪಡೆದಿದೆ

ನೇಶನಲ್ಸ್ 'ರೋಟೀ' ಮತ್ತು 'ನಿರ್ದೋಷ್'

ನೇಶನಲ್ ಚಿತ್ರದವರ 'ರೋಟೀ' ಚಿತ್ರವು ಪೂರ್ಣವಾಯಿತು ವೀರೇಂದ್ರ ದೇಸಾಯಿ ನಿರ್ದೇಶಿಸಿದ 'ನಿರ್ದೋಷ'ವೂ ಸಮಾಪ್ತಿಗೊಂಡಿದೆ ಇದರಲ್ಲಿ ನಳಿನೀ ಜಯವಂತ್ ಮುಖ್ಯ ಪಾತ್ರ ವಹಿಸಿದ್ದಾಳೆ.

ಶಾಂತಾರಾಮರೇನು ಮಾಡುತ್ತಾರೆ?

ಫಿಲ್ಮ್ ಎಡ್ವೈಸರಿ ಬೋರ್ಡಿಗೆ ಸೇರಿದ ಮೇಲೆ ಪ್ರಸಿದ್ಧ ನಿರ್ದೇಶಕ ಶಾಂತಾ ರಾಮರ ಪ್ರಭೆ ಕ್ಷೀಣವಾಗಿದೆ. ಫಿಲ್ಮ್ ಎಡ್ವೈಸರಿ ಬೋರ್ಡಿನವರು ಮುಂಬಯಿಯಲ್ಲಿ ಒಂದು ಹೊಸ ಸ್ಟುಡಿಯೋ ತೆರೆದಿದ್ದಾರೆ. ಈ ವರೆಗೆ ಪ್ರಚಾರ ಚಿತ್ರಗಳನ್ನು ಮಾತ್ರ ತಯಾರಿಸುತ್ತಿದ್ದ, ಫಿಲ್ಮ್ ಎ. ಬೋರ್ಡಿನವರು ಮುಂದೇನು ಮಾಡುತ್ತಾರೋ ನೋಡಬೇಕು.

ನ್ಯೂಥಿಯೇಟರ್ಸ್ 'ಸೌಗಂಧಿ'

ನ್ಯೂಥಿಯೇಟರ್ಸನವರ 'ಸೌಗಂಧಿ' ಈಗ ತಯಾರಾಗಿದೆ. ಹೇಮಚಂದ್ರರು ಇದನ್ನು ನಿರ್ದೇಶಿಸಿದ್ದಾರೆ ಪಹರಿ ಸನ್ಯಾಲ್ ಇದರಲ್ಲಿ ನಟಿಸುತ್ತಾರೆ ಭಾರತಿಯನ್ನು ಇದರಲ್ಲಿ ಸಿನೆಮಾ ಪ್ರೇಕ್ಷಕರು ಇನ್ನೊಮ್ಮೆ ನೋಡಬಹುದು ಚಂದ್ರಾವತಿಯೂ ಇಲ್ಲಿ ನಟಿಸುತ್ತಾಳೆ. ಇತರ ನಟರು ವಿನಯ ಗೋಸ್ವಾಮಿ, ರೇಖಾ, ನೇಮೋ ಮೊದಲಾದವರು.

'ಮೀನಾಕ್ಷಿ'

ನ್ಯೂಥಿಯೇಟರ್ಸನವರ 'ಮೀನಾಕ್ಷಿ' ಚಿತ್ರವು ಹಿಂದೀ ಬಂಗಾಳೀ ಉಭಯ ಭಾಷೆಗಳಲ್ಲಿ ತಯಾರಾಗಿದೆ.

ಶರಚ್ಚಂದ್ರರ 'ಕಾಶೀನಾಥ್'

ಪ್ರಸಿದ್ಧ ಕಾದಂಬರೀ ಕಾರವಾರ ಶರಚ್ಚಂದ್ರರ ಕಾಶೀನಾಥ ಕಥೆಯನ್ನು ನ್ಯೂಥಿಯೇಟರ್ಸ್‌ನ ನಿರ್ದೇಶಕ ನೀತಿನ್ ಬೋಸರು ರಜತ ಪರದೆಗೆ ತರುವ ನಿರ್ಣಯ ಮಾಡಿರುವರೆಂದು ತಿಳಿದಿದೆ. ಬುದ್ಧದೇವ ಮಿಶ್ರ, ಭಾರತಿ, ಅಮರ ಮಲ್ಲಿಕ್ ಮತ್ತು ಹೊಸ ನಟಿ ಸುನಂದಾದೇವಿ ಇವರು ಇದರಲ್ಲಿ ನಟಿಸುವರು.

ಇಮ್ಮಡಿ ಉದ್ದೇಶವಿರುವ

ಈ ಸಾಬೂನನ್ನುಪಯೋಗಿಸಿರಿ

ಛಿದ್ರವಾದ ಚರ್ಮದಿಂದ ರಕ್ಷಿಸಲ್ಪ ಉತ್ತಮವಾದ ನಿಮ್ಮ ಭದ್ರತೆಯ ಸಾಧನ!

ನಿಮ್ಮ ಮೈಚರ್ಮದ ಮೇಲೆ ಮಚ್ಚೆ ಯಾ ಚಿಬ್ಬುಗಳಿರುವವೆ, ಚರ್ಮವು ಒರಟಾಗಿರುವುದೇ ಅಥವಾ ತುರಿಗಜ್ಜಿಯಿಂದ ಕೆಟ್ಟಿರುವುದೆ? ಅದಕ್ಕೆ ಚರ್ಮವನ್ನು ಸರಿಯಾದ ರೀತಿಯಲ್ಲಿ ಸ್ವಚ್ಛವಾಗಿಡದಿದ್ದುದೇ ಕಾರಣ ನಿಮ್ಮ ಸೂಕ್ಷ್ಮವಾದ ಚರ್ಮರಂಧ್ರಗಳು ಧೂಳು, ಕೈಕ್ಕಿ ವ ತ್ತು ಬೆವರಿನಿಂದ ಮುಚ್ಚಿಕೊಂಡಿರುತ್ತವೆ ಯೋಗ್ಯವಾದ ಚರ್ಮದ ಆರೋಗ್ಯ ಮತ್ತು ಸೌಂದರ್ಯತೆಗೆ ನಿಮ್ಮ ಮೈಚರ್ಮವನ್ನು ಯಾವಾಗಲೂ ಕುಟಿಕೂರಾ ಸಾಬೂನಿನಿಂದ (Cuticur Soap) ತೊಳೆಯಿರಿ ಇದು ಇಮ್ಮಡಿ ಉದ್ದೇಶಗಳನ್ನು ಈಡೇರಿಸುತ್ತದೆ, ಯಾಕೆಂದರೆ ಇದು ಔಷಧಿಯುಕ್ತವಾದುದು ಮತ್ತು ಶೃಂಗಾರಯುಕ್ತವಾದ ಪರಿಮಳ ಸಾಬೂನಾಗಿರುತ್ತದೆ ಆಗಾಗ ಸೂರ್ಯನ ತಾಪಕ್ಕೆ ಮತ್ತು ಹವೆಗೆ ಮೈಚರ್ಮ ಒಡ್ಡಲ್ಪಟ್ಟರೂ ಇದು ಸೌಂದರ್ಯವನ್ನು ಕೆಡಿಸದು ಆದಕಾರಣ ಇಮ್ಮಡಿ ಉದ್ದೇಶದ ಈ ಸೌಂದರ್ಯದ ಸಾಬೂನನ್ನು ಇಂದೇ ಉಪಯೋಗಿಸಲು ಪ್ರಾರಂಭಿಸಿರಿ ಸೌಂದರ್ಯ ಮತ್ತು ಆರೋಗಕರವಾದ ಚರ್ಮವನ್ನು ಪಡೆಯಲು ಇದನ್ನುಪಯೋಗಿಸುವುದೇ ಉತ್ತಮ ಹಾದಿ ಕುಟಿಕೂರಾ ಮುಲಾಮು (Cuticura Ointment) ನಿಂದ ಮುದ್ದಣ ಛಿದ್ರ ಗಜ್ಜಿಗಳನ್ನು ನಾಶಮಾಡಿ ಇದರ ವಿಷಹಾರ ಗುಣವು ಕ್ರಿಮಿಗಳನ್ನು ನಾಶಮಾಡಿ ತುರಿಸುವಿಕೆಯನ್ನು ಶಾಂತಗೊಳಿಸಿ ಆಶ್ಚರ್ಯಕರವಾದ ಅತ್ಯಲ್ಪ ಸಮಯದೊಳಗಾಗಿ ಚರ್ಮವನು ಗುಣಪಡಿಸುವುದು ಸ್ನಾನ ನಂತರ ಕುಟಿಕೂರಾ ಟಾಲ್ಕಮ್ ಪೌಡರು (Cuticura Talcum Powder) ಬಹಳ ಶೈತ್ಯಕರವಾದುದು.

ಎಲ್ಲಾ ಕೆಮಿಸ್ಟರಲ್ಲಿಯೂ ಅಂಗಡಿಗಳಲ್ಲಿಯೂ ಮಾರಲ್ಪಡುವುದು

ಕುಟಿಕೂರಾ ಸಾಬೂನು

Cuticura Soap

ಕುಟಿಕೂರಾ ಸಾಬೂನುಗಳು ದೊಡ್ಡ ಸೈಜಿನಲ್ಲಿಯೂ (ಸ್ನಾನಕ್ಕೆ) ಸಣ್ಣ ಸೈಜಿನಲ್ಲಿಯೂ (ಪ್ರವಾಸಕ್ಕೆ) ದೊರೆಯುತ್ತದೆ.

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಸ್ವದೇಶಾಭಿಮಾನಿಯಲ್ಲಿ,

ನಿಮ್ಮ ಜಾಹೀರಾತುಗಳನ್ನು ಕೊಡಿರಿ

ವಿಚಿತ್ರ ಪ್ರಪಂಚ

ಒಮ್ಮೆಗೆ ೧೫ ರೆಕಾರ್ಡುಗಳನ್ನು ಕೇಳಬಹುದು

ಗ್ರಾಮಫೋನಿನಲ್ಲಿ ಸಂಶೋಧನೆ

ಇತ್ತೀಚೆಯ ಗ್ರಾಮಫೋನು ಸಂಶೋಧನೆ ಯಂತೆ ಒಮ್ಮೆ ಒಂದು ಗುಬ್ಬಿಯನ್ನು ಒತ್ತಿ ಬಿಟ್ಟರೆ ಬಿಡದೆ ಎರಡು ತಾಸಿನ ವರೆಗೆ ಸಂಗೀತ ಹಾಡುತ್ತಾ ಇರುವ ಯಂತ್ರ ಸಾಧನ ತಯಾರಾಗಿರುವದು ಈ ಯಂತ್ರವು ಒಟ್ಟು ೧೫ ರೆಕಾರ್ಡುಗಳನ್ನು ಒಂದರ ಮೇಲೊಂದಾಗಿ ನುಗಿಸುವುದು ಹೀಗೆ ಒಂದು ರೆಕಾರ್ಡು ಮುಗಿದು ಇನ್ನೊಂದು ಪ್ರಾರಂಭಿಸಬೇಕಾದರೆ ಮನುಷ್ಯನು ಅದನ್ನು ಕೈಯಿಂದ ಸ್ಪರ್ಶಿಸಬೇಕಾಗಿಲ್ಲ. ಮನುಷ್ಯನು ಅಲ್ಲಿ ಇರುವುದೇ ಅವಶ್ಯವಿಲ್ಲ ಹೀಗೆ ಮಾಡಲು, ಹೊಸ ಬಗೆಯ ಒಂದು 'ರೆಕಾರ್ಡು ಚೇಂಜರ್'ನ್ನು ಕಂಡುಹಿಡಿದಿರುವುದೇ ಕಾರಣವಾಗಿದೆ ಆ ಯಂತ್ರದಲ್ಲಿಯೇ ಎರಡು ಕಡೆಗಳಲ್ಲಿ ಒಂದು ರೆಕಾರ್ಡು ಇಡಲು, ಇನ್ನೊಂದು ರೆಕಾರ್ಡು ತೆಗೆಯಲು ಬೇಕಾದ ಸಲಕರಣೆಗಳು ಇರುತ್ತವೆ

❋ ❋ ❋

ಸಮುದ್ರದಲ್ಲಿ ಹಾವುಗಳಿವೆಯೆ?

ಸಮುದ್ರದಲ್ಲಿ ಹಾವುಗಳುಂಟೆ? ೧೬, ೧೭, ೧೮ ಮತ್ತು ೧೯ನೆಯ ಶತಮಾನಗಳಲ್ಲಿ ಸಮುದ್ರದಲ್ಲಿ ೨೫೦ ಜಾತಿಯ ಹಾವುಗಳಿದ್ದುವೆ ಎಂಬುದಾಗಿ ಒಬ್ಬ ಲೇಖಕರು ಬರೆದಿರುತ್ತಾರೆ ಹೀಗೆ ಅಂತಹ ಹಾವುಗಳನ್ನು ಕಂಡವರು ಪ್ರಸಿದ್ಧ ಬ್ರಿಟಿಷ್, ಅಮೇರಿಕನ್, ಫ್ರೆಂಚ್ ನೌಕಾ ಯಾತ್ರಿಕರು ೧೦೦ ಫೀಟು ಉದ್ದದ ಶರೀರದ ಹಾವುಗಳೂ ಇದ್ದವೆಂದು ಅವರು ತಿಳಿಸುತ್ತಾರೆ ಒಮ್ಮೆ ತಿಮಿಂಗಿಲದೊಡನೆ ಒಂದು ಸಮುದ್ರಹಾವು ಹೋರಾಡುತ್ತಿರುವುದನ್ನು ಪ್ರತ್ಯಕ್ಷ ಕಂಡ ಕಥೆ ಹೇಳಲಾಗಿದೆ ಇನ್ನೊಮ್ಮೆ ಮೀನು ಹಿಡಿವವರನ್ನು ನುಂಗಬಂದ ಹಾವಿನ ವಿಷಯ ಹೇಳಲಾಗಿದೆ ೧೦೦ ವರ್ಷಗಳ ಹಿಂದೆ ಒಬ್ಬ ವಿಜ್ಞಾನಿಕನು ಯುರೋಪು ಸಂಚಾರ ಮಾಡಿ, ೧೧೪ ಫೀಟು ಉದ್ದದ ಒಂದು ಹಾವಿನ ಶರೀರದ ಎಲುಬನ್ನು ಪರಿಶೋಧಿಸಿದನೆಂದು ಹೇಳಲಾಗಿತ್ತು ಆದರೆ ಕಡೆಗೆ ಆ ಎಲುಬು ಆರು ಬೇರೆ ಬೇರೆ ಪ್ರಾಣಿಗಳ ಎಲುಬಿನ ರಾಶಿಯೆಂದು ಕಂಡುಹಿಡಿಯಲಾಯಿತು ಹಾಗಾಗಿ ಸಮುದ್ರದಲ್ಲಿ ಹಾವುಗಳಿಲ್ಲ ಎನ್ನುವವರು ಹೇಳುವುದೇನಂದರೆ, ಕತೆ ಹೇಳುವವರು ಸುಮ್ಮಗೆ ಊಹನಾತ್ಮಕ ರಮ್ಯ ಕತೆಗಳನ್ನು ಕಟ್ಟಿ ಹೇಳುತ್ತಾರೆಂದು ಇಲ್ಲವೇ ಪ್ರಮಾದವಶರಾಗಿ ಹಾಗೆ ಹೇಳುವರೆಂದು ಆದರೆ ಇತ್ತೀಚೆಗೆ ನೈಲ್ ನದಿಯ ಬಳಿ ೬೦ ಫೀಟು ಉದ್ದದ ಒಂದು ಹಾವನ್ನು ಕಾಣಲಾಗಿದೆಯಂತೆ ಅಂತೂ ಸಮುದ್ರ ಹಾವುಗಳ ವಿಷಯವು ಇನ್ನೂ ಸ್ಪಷ್ಟವಾಗಬೇಕಾಗಿರುತ್ತದೆ

❋ ❋ ❋

ವಿಳಾಸವಿಲ್ಲದ ೫ ಮಿಲಿಯ ಸಾಮಾನುಗಳು

ಸರಾಸರಿ ೨೧೬ ಸಾಮಾನುಗಳು ಪ್ರತಿದಿನ ಎಡ್ರೆಸ್ ಇಲ್ಲದೆ ಹಿಂದೂದೇಶದಲ್ಲಿ ಪೋಸ್ಟು ಮಾಡಲ್ಪಡುತ್ತವೆಯಂತೆ! ೪೦-೪೧ನೇ ಇಸವಿಯ 'ಡೆಡ್ ಲೆಟರ್ ಆಫೀಸಿ'ನ ವರದಿಯಂತೆ ಆ ವರ್ಷದಲ್ಲಿ ೫,೩೬೩,೦೦೦ ಪೋಸ್ಟಲ್ ಸಾಮಾನುಗಳನ್ನು ಆ ಕಚೇರಿಯಲ್ಲಿ ತಂದು ಹಾಕಲಾಗಿತ್ತು ಇಂತಹ ಕೆಲವು ಕವರುಗಳೊಳಗೆ ಚಕ್ಕುಗಳಿದ್ದುವು, ನೋಟುಗಳಿದ್ದುವು, ಎಕ್ಸ್‌ಚೇಂಜ್ ಬಿಲ್ಲುಗಳಿದ್ದುವು, ನಾಣ್ಯಗಳಿದ್ದುವು, ಇನ್ನೂ ಅಮೂಲ್ಯ ಸಾಧನಗಳಿದ್ದುವು. ಇವುಗಳಲ್ಲಿ ಹೆಚ್ಚಿನವುಗಳನ್ನು ವಿಳಾಸದಾರನಿಗಾಗಲಿ ಬರೆದವನಿಗಾಗಲಿ ತಲುಪಿಸಲಾಗುತ್ತದೆ ಇಂತಹ ಸಾಮಾನುಗಳಲ್ಲಿ ಕೇವಲ ಸೇಕಡಾ ೯ರಷ್ಟು ಮಾತ್ರ ಗತಿಗೋತ್ರವಿಲ್ಲದವುಗಳಾಗಿರುತ್ತವೆ.

❋ ❋ ❋

ವಿಜ್ಞಾನಯುಗ

ಜಗತ್ತಿನಲ್ಲೆ ದೊಡ್ಡ ಎಕ್ಸ್‌ರೇ ಯಂತ್ರ

ಒಂದು ಅಮೇರಿಕದ ವಾಶಿಂಗ್‌ಟನ್ನಿನಲ್ಲಿದೆ. ಇದು ೧,೪೦೮,೦೦೦ ವೋಲ್ಟ್ ಎಕ್ಸ್‌ರೇ ಯಂತ್ರವಾಗಿದೆ ಇದು ೧೪ ಪೌಂಡು ರೇಡಿಯಮಿಗೆ ಸದೃಶ ಮಾಡಿದುದನ್ನು ಅದು ಕಳುಹಿಸಬಲ್ಲದು, ಎಂದರೆ ೩೦ ಮಿಲಿಯ ಪವನು ಬೆಲೆಯುಳ್ಳದ್ದು

❋ ❋ ❋

ದೇಹದೊಳಗೆ ರಕ್ತ ಸಂಚಾರ ಮಾಡಿಸುವುದು

ರಕ್ತವನ್ನು ರೋಗಿಗಳ ಶರೀರಕ್ಕೆ ತುಂಬಿಸುವುದು ಈಗ ಪ್ರಸಿದ್ಧವಾಗಿದೆ, ಇದರಲ್ಲಿ ಇತ್ತೀಚೆಯ ಪ್ರಯೋಗವೆಂದರೆ ಎಲುಬಿನ ಮೂಲಕ ರಕ್ತ ಸಂಚಾರ ಮಾಡಿಸಿರುವುದು, ಅಮೇರಿಕದ ಇಬ್ಬರು ಡಾಕ್ಟರರು ೪೦ ಮಂದಿ ರೋಗಿಗಳಿಗೆ ಹೀಗೆ ರಕ್ತಸಂಚಾರ ಮಾಡಿಸಿದ್ದಾರೆ ಇಂತಹ ಕ್ರಮವು ಬಹಳ ಒಳ್ಳೆಯದಾಗಿದೆಯೆಂದು ಅವರ ಅಭಿಪ್ರಾಯವಿದೆ.

❋ ❋ ❋

ಭೂಮಿಯಿಂದ ಸೂರ್ಯನ ದೂರ

ಸೂರ್ಯನು ಭೂಮಿಯಿಂದ ೯೩,೦೩೦,೦೦೦ ಮೈಲುಗಳ ದೂರದಲ್ಲಿದ್ದಾನೆಯೆಂದು ಹಿಂದೆ ಲೆಕ್ಕ ಹಾಕಿದಕ್ಕಿಂತ ೬೫,೦೩೦ ಮೈಲು ದೂರ ಈಗ ಸಂಶೋಧಕರು ಹೇಳುತ್ತಾರೆ ಇದು ಹನ್ನೆರಡು ವರ್ಷಗಳ ವರೆಗೆ ಇಪ್ಪತ್ತನಾಲ್ಕು ಶೋಧನೆಗಳನ್ನು ಮಾಡಿ ಕಂಡು ಹಿಡಿದ ಫಲಿತಾಂಶ ಈ ಬಗ್ಗೆ ಹನ್ನೆರಡು ವರ್ಷಗಳ ವರೆಗೆ ಹಲವರು ಹಲವು ಕಡೆಗಳಲ್ಲಿ ಸಂಶೋಧನೆ ಮಾಡುತ್ತಾ ಇದ್ದರು ಈಗ ಈ ಸಿದ್ಧಾಂತವು ಪ್ರಸಿದ್ಧವಾಗಿದೆ

❋ ❋ ❋

ಕಜೆ ಅಕ್ಕಿಯ ಗುಣಗಳು

ಕಜೆ ಅಕ್ಕಿ ಕರಗುವುದು ಕಠಿಣವೆಂದು ಒಂದು ಹೇಳಿಕೆಯಿದೆ, ಆದರೆ ಅದು ಹಾಗಲ್ಲ, ವೈಜ್ಞಾನಿಕರು ಇತ್ತೀಚೆಗೆ ಮಾಡಿದ ಸಂಶೋಧನೆಯಿಂದ, ಕಜೆ ಅಕ್ಕಿಯಲ್ಲಿ ಮತ್ತು ಸ್ವಚ್ಛ ಅಕ್ಕಿಯಲ್ಲಿ ಕರಗುವ ವಿಷಯ ವ್ಯತ್ಯಾಸವು ಏನೂ ಇರುವುದಿಲ್ಲವೆಂದು ಸಿದ್ಧಾಂತಪಡಿಸಿದ್ದಾರೆ ಸ್ವಚ್ಛ ಅಕ್ಕಿಯನ್ನು ಊಟಮಾಡುತ್ತಿದ್ದವರು ಯಾವುದೇ ಕಷ್ಟ ತಾಪತ್ರಯಗಳಿಲ್ಲದೆ ಕಜೆ ಅಕ್ಕಿಯನ್ನು ಊಟಮಾಡಬಹುದೆಂದು ಅನುಭವದಿಂದ ಗೊತ್ತಾಗಿದೆ ಆದರೆ ಕಜೆ ಅಕ್ಕಿಯನ್ನು ಇತರದ್ದಕ್ಕಿಂತ ಸ್ವಲ್ಪ ಕಡಿಮೆ ತೆಗೆದುಕೊಂಡರೆ ಸಾಕಾಗುವುದು, ಹಾಗಾದರೆ, ಬರೇ ಬಿಳಿ ಮಾಡಿಕೊಂಡು, ಆರೋಗ್ಯ ಹಾಳಾಗುವ ಹಾಗಿರುವ ಅಕ್ಕಿಯನ್ನು ಹೆಚ್ಚು ಪರಿಣಾಮವಾದರೂ ಯಾಕೆ ಉಪಯೋಗಿಸುವುದು? ಅದರ ಬದಲು ಕಜೆ ಅಕ್ಕಿಯನ್ನು ಆರೋಗ್ಯಕಾರಿಯಾಗಿರುವುದರಿಂದ ಕಡಿಮೆ ಪರಿಮಾಣದಲ್ಲಿ ಉಪಯೋಗಿಸುವುದು ಪ್ರಯೋಜನಕರವಲ್ಲವೆ?

❋ ❋ ❋

ರೈಲು ಬಂಡಿಗಳ ಸಮಯ

ಇದೇ ಜುಲ್ಯಾ ತಾ 1ರಿಂದ ವ್ಯತ್ಯಾಸವಾದ ರೈಲು ಬಂಡಿಗಳ ಸಮಯಗಳು ಈ ಕೆಳಗಿನಂತಿವೆ—

ಗಾಡಿಗಳು	ಹೊರಡುವ ಗಂಟೆ	ತಲ್ಪುವ ಗಂಟೆ
ಗೂಡ್ಸು ಬಂಡಿ	6 48 ಬೆಳಗ್ಗೆ	7 50 ರಾತ್ರಿ
ಮಲಬಾರು ಎಕ್ಸ್‌ಪ್ರೆಸ್ (ಮೈಲ್)	9 5 ಬೆಳಗ್ಗೆ	5.15 ಸಾಯಂ.
ಜಾಲಾರ್‌ಪೇಟೆ ಪೆಸೆಂಜರ್	12 0 ಮಧ್ಯಾಹ್ನ	2.55 ಸಾಯಂ.
ಕಣ್ಣನೂರು ವರೆಗೆ	5·52 ಸಾಯಂ.	9·40 ಪೂರ್ವಾಹ್ನ

ಉಷ್ಣಕಾಲದ ಕಾಲು ನೋವನ್ನು ಗುಣಪಡಿಸಿರಿ.

ಪ್ರತಿದಿನ ರಾತ್ರಿ ಜಾಂಬಕನ್ನು ಉಜ್ಜಿರಿ.

ಉಷ್ಣಕಾಲದ ಹನೆಯಿಂದ ನಿಮ್ಮ ಕಾಲು ಗಾಯವಾಗುವುದಾದರೆ ಪ್ರತಿದಿನ ರಾತ್ರಿ ಜಾಂಬಕ್ ಉಜ್ಜಿ ಅದನ್ನು ಗುಣಪಡಿಸಿರಿ ಈ ಅತ್ಯುತ್ತಮ ವನೌಷಧಿ ರಸದಿಂದ ಮಾಡಿದ ಎಣ್ಣೆಯು ನೋವನ್ನು ಕೂಡಲೇ ಗುಣಪಡಿಸುವುದು, ಬೀಗಿ ಹೋದುದನ್ನು ಕಡಿಮೆ ಮಾಡುವುದು ಗಾಯಗಳೂ ಬೇಗನೇ ಗುಣವಾಗುವುವು ಜಾಂಬಕ್ ಲೇಪಕ್ಕೆ ಒಂದು ರೂಪಾಯಿ ಅಥವಾ 2-4-0 ಸೋಪಿಗೆ ಒಂದು ರೂಪಾಯಿ ಪೌಡರಿಗೆ ಒಂದು ರೂಪಾಯಿ.

ಏಜಂಟ್ಸ್ —

ಮೆಸರ್ಸ್ ದಾಧಾ ಎಂಡ್ ಕೊ.,
ಪಾರ್ಕ್‌ಟೌನ್ ಮದರಾಸು

ಯಾವಾಗಲೂ ಜಾಂಬಕನ್ನು ಪ್ರಯೋಗಿಸಿರಿ

ZAM-BUK

ಪ್ರಾಣಿಕೊಬ್ಬು ವಿರಹಿತವಾದುದು.

MONEY TO LEND

Over Forty Lacs of idle funds are awaiting investment in the shape of loans on gold, Government securities, shares of approved companies, life insurance policies having sufficient surrender value, grains and other agricultural produce, etc., etc. You are cordially invited toutilize these facilities

CANARA BANK, LIMITED.

ESTD 1906

The Canara Banking Corporation Ltd.

(Incorporated in British India with limited liability

Estd 1906

OUR RATES OF INTEREST ON DEPOSITS

Current	1%	p. a.
Savings Bank	2½%	„
Short-term	1¾%	„
FIXED FOR 3 MONTHS	2%	„
6 „	2½%	„
9 „	2¾%	„
12 „	3%	„
24 „	3½%	„

Advances made at cheap rates of interest against approved securities and Banking business of every description transacted.

Bhuvanendra Products Limited,

Katapadi, S. Kanara.

'BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitual abortion and other uterine troubles Must be commensed soon after conception and continued up to the time of delivery

"ಭುವನೇಂದ್ರ ಗರ್ಭಪಾಲ"

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ
ಗರ್ಭಾಶಯದ ಸವಗವಿಧದ ದೋಷಗಳನ್ನು ಗುಣಪಡಿ
ಸುವ ದಿವ್ಯಔಷಧಿ ಗರ್ಭವತಿಯೆನಿಸಿದಂದಿನಿಂದ
ಪಸವಕಾಲದ ವರೆಗೆ ಸೇವಿಸುವುದು ಅತ್ಯುತ್ತ ಮ

ಸ್ಥಳೀಯ ಸ್ಟಾಕಿಸ್ಟ ವ ಏಜೆಂಟರು :–
(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ (2) ರಾಘುವೇಂದ್ರ ಪೈ, ರಥಬೀದಿ (3) ದಿ ಕರ್ನಾಟಕ ಸ್ನಫ್ ವರ್ಕ್ಸ್ ರಥಬೀದಿ (4) ಡಾ। ಯಂ ಎಸ್ ಪ್ರಭು, M B B S ಸಿ ಪಿ ಸಿ ಬಿಲ್ಡಿಂಗ್ಸ (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್.

ಕಟಪಾಡಿ, ದ. ಕನ್ನಡ.

ಡಿಪೊ —1 ಮರಾರ ಗಲ್ಲಿ ಹುಬ್ಬಳ್ಳಿ
2. 36 ಫ್ಯಾಕ್ರೊಫ್ಟ್ ರೋಡ್, ಟ್ರಿಪ್ಲಿಕೇನ್, ಮದರಾಸು

The Bank of Mangalore Limited

HEAD OFFICE	***BRANCHES***
Mangalore	Moodabidri & Padubidri

ANNOUNCEMENT

On and from 1st February 1942, fixed deposits will be accepted at the following attractive rates

One year	4%
Two years or above	4½%

Interest Payable Quarterly

ಸರಕಾರದ ಹೊಸ ಪಾಠಪಟ್ಟಿಗನುಸಾರವಾಗಿ ಬರೆದ

ನವೀನ ಭೂವಿವರಣೆ

ವಾಸುದೇವರಾವ್, ಎಂ. ಎಲ್. ಟಿ (Dip. Geography)
(ಭೂಗೋಳ ಶಾಸ್ತ್ರದಲ್ಲಿ ಡಿಪ್ಲೊಮ ಪಡೆದವರು)

ಈ ಪುಸ್ತಕಗಳನ್ನು ಪಡಕೊಂಡಲ್ಲಿ ವಿದ್ಯಾರ್ಥಿಗಳಿಗೆ ಎಟ್ಲಾಸ್ ಕೊಂಡುಕೊಳ್ಳುವ ಅವಶ್ಯವಿಲ್ಲ

ಪ್ರತಿ ಪುಸ್ತಕದಲ್ಲಿ ಬಣ್ಣಬಣ್ಣದ ಭೂಪಟಗಳಿವೆ

ಅನೇಕಾನೇಕ ಚಿತ್ರಪಟಗಳಿಂದ ಕೂಡಿದ್ದು ಪತಿ ಪಾಠದ ಅಂತ್ಯದಲ್ಲಿ ಅಭ್ಯಾಸಗಳನ್ನೂ ಮಾದರಿ ಪ್ರಶ್ನೆಗಳನ್ನೂ ಕೊಟ್ಟಿದೆ

4ನೆಯ ಪುಸ್ತಕ 6 ಆಣೆ, 5ನೆಯ ಪುಸ್ತಕ 7 ಆಣೆ 7 ಮತ್ತು 8ನೆಯ ಪುಸ್ತಕಗಳು ಅಚ್ಚಿನಲ್ಲಿವೆ ಪುಸ್ತಕಗಳು ಬೇಕಾದಲ್ಲಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.

ದಿ ಕಂಬ್ಯಾಂಡ್ ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೊಂಟ್ ಬುಕ್ಕಿಂಗ್ ಆಫೀಸು

ಮಂಗಳೂರು ಕೊಡಿಯಾಲ್ ಬೈಲ್

ಹಿರಿಯಡಕ ಶ್ರೀ ವೀರಭದ್ರಸ್ವಾಮಿ ದೇವಾಲಯದಲ್ಲಿ ನಡೆಯುವ ರಥೋತ್ಸವ ಸಮಾರಂಭ

ಧ್ವಜಾರೋಹಣ	ದೀಪಾರಾಧನೆ	ರಂಗಪೂಜೆ	ಮಹಾರಥೋತ್ಸವ
30-4-'42	1-5-'42	2-5-'42	3-5-'42

ಹಿರಿಯಡಕ ದೇವಸ್ಥಾನದಿಂದ ಸುಮಾರು ಅರ್ಧ ಮೈಲು ದೂರದಲ್ಲಿರುವ ಶ್ರೀ ಮಾರ್ಕಾಂಡೇಯ ತೀರ್ಥದಲ್ಲಿ ಮಿಂದು ಶ್ರೀ ಅಡಕ ತಾಯಿ ಮತ್ತು ಶ್ರೀ ಮಾರ್ಕಾಂಡೇಯ ಮಹಾ ಮುನಿಗಳ ಅಪೇಕ್ಷೆಯಂತೆ ಶ್ರೀ ಪರಮೇಶ್ವರನು, ಪಾರ್ವತಿ ಸಮೇತನಾಗಿ ಸಕಲ ಗಣಾಂಗಣಗಳೊಡನೆ ಭಕ್ತಾದಿಗಳ ಸಕಲ ಇಷ್ಟಾರ್ಥವನ್ನು ನೆರವೇರಿಸಿ ಕೊಡುವುದಕ್ಕಾಗಿ ಪ್ರತ್ಯಕ್ಷವಾಗಿ ನೆಲಸಿರುವ ಶ್ರೀ ವೀರಭದ್ರ ಸ್ವಾಮಿ ದೇವಾಲಯವನ್ನು ಸಂದರ್ಶಿಸಿ ಭಕ್ತಿಯಿಂದ ಶ್ರೀ ದೇವರ ಅನುಗ್ರಹಕ್ಕೆ ಪಾತ್ರರಾಗಲು ಇದು ಸುಸಂದರ್ಭವಲ್ಲವೇ? ಪ್ರಾಣಿಕರ ಸೌಕರ್ಯದೆಡೆಗೆ ಹೆಚ್ಚಿನ ಗಮನ ಕೊಡಲಾಗುವುದು.

JOINT MANAGERS,

The Combined Booking Agency,	The Joint Booking Office,
MANGALORE.	KODIALBAIL.

Regd. No. M 3460

ಸ್ವದೇಶಾಭಿಮಾನಿ

[ಸಂಪುಟ 36] ತಾರೀಖು 1—5—1942 [ಸಂಚಿಕೆ 18]

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೆಗಡಿ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಗಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ,

ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಆ ಕಂಪೆನಿಯಲ್ಲಿ ದೊರೆಯುವುದು.

ಸಂಶಯವೇಕೆ?

ಶತ್ರುಗಳು ವಿಮಾನಗಳ ಮೂಲಕ ಧಾಳಿ ನಡೆಸುವುದರಿಂದಲೂ ಮತ್ತು ಇತರ ವಿಧವಾದ ಶತ್ರು ಚಟುವಟಿಕೆಗಳಿಂದಲೂ ಹಿಂದುಸ್ಥಾನದ ಸಿವಿಲ್ ಪ್ರಜೆಗಳಲ್ಲಿ—ಇದರಲ್ಲಿ ಎ. ಆರ್. ಪಿ. ಕೆಲಸಗಾರರೂ ಸೇರುವರು—ಉಂಟಾಗಬಹುದಾದ ಪ್ರಾಣಹಾನಿಗೆ

ದಿ "ಬಾಂಬೆ ಲೈಫ್" ಪಾಲಿಸಿಗಳು

ಸಂಪೂರ್ಣವಾದ ರಕ್ಷಣೆಯನ್ನು ನೀಡುತ್ತವೆ. ಆದ್ದರಿಂದ ನಿಮ್ಮ ಪ್ರೀತಿಪಾತ್ರರಿಗಾಗಿ

ದಿ ಬಾಂಬೆ ಲೈಫ್ ಅಶ್ಯೂರೆನ್ಸ್ ಕಂಪೆನಿ (ಲಿಮಿಟೆಡ್)

ಯಲ್ಲಿ ಪಾಲಿಸಿಗಳನ್ನು ಪಡೆಯುವುದು ನಿಮ್ಮ ತ್ವರಿತ ಕರ್ತವ್ಯವಾಗಿದೆ

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಸಂಸ್ಥಾನಗಳಾದಿಯಾಗಿ ದಕ್ಷಿಣ ಭಾರತಕ್ಕೆ ಪ್ರಾಮುಖ್ಯ ಏಜೆಂಟರು:

ಉಡುಪಿ

—: ಅಥವಾ ಈ ಕೆಳಗಿನ ಇತರ ಆಫೀಸುಗಳಿಗೆ ಬರೆಯಿರಿ :—

ಕಲ್ಲಿಕೋಟೆ	ಬೆಂಗಳೂರು	ಮಂಗಳೂರು
ಮದರಾಸು	ತ್ರಿವೇಂಡ್ರಂ	ಬೊಂಬಾಯಿ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ
ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಬೇಧಿಗೆ ಉತ್ತಮೌಷಧ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್, ರಥಬೀದಿ ಮಂಗಳೂರು.

★

ಸ್ವದೇಶಾಭಿಮಾನಿಗೆ
ಇಂದೇ ಚಂದಾದಾರರಾಗಿರಿ!

Edited Printed & Published by the A. S. Kamath at Sharada Press, Car Street, Mangalore.

Estd. 1906

ಸ್ವದೇಶಾಭಿಮಾನಿ

SWADESHABHIMANI

ಬಾಂಬುಗಳೆಂದರೆ ಇವುಗಳು!

ಸಾಲಾಗಿರಿಸಿದ ಬ್ರಿಟಿಷ್ ಬಾಂಬುಗಳನ್ನು ನೋಡಿರಿ

KANNADA ILLUSTRATED WEEKLY

ಶ್ರೀ ರಾಮಕೃಷ್ಣ ಲೀಲಾ ಪ್ರಸಂಗ

[ಗುರುಭಾವ—ಪೂರ್ವಾರ್ಧ]

ಮೂಲ ಬಂಗಾಳೀ ಲೇಖಕರು: ಶ್ರೀ ಸ್ವಾಮಿ ಶಾರದಾನಂದಜಿ
ಅನುವಾದ: ಶ್ರೀ ಸ್ವಾಮಿ ಪುರುಷೋತ್ತಮಾನಂದರು
(ಹಕ್ಕು ಕಾದಿಡಲ್ಪಟ್ಟಿದೆ)

ಮಣಿಮೋಹನನ ಪುತ್ರಶೋಕದ ವಿಷಯ

ಸಿಂದುರಿಯಾ ಪಟ್ಟಿಯ ಮಣಿಮೋಹನ ಮಲ್ಲಿಕನ ಒಬ್ಬ ಯೋಗ್ಯ ಮಗನು ತೀರಿಹೋಗಿದ್ದನು. ಮಣಿಮೋಹನನು ಪುತ್ರನ ಸಂಸ್ಕಾರ ಕ್ರಿಯೆಯನ್ನು ಮುಗಿಸಿ ಶ್ರೀ ಪರಮಹಂಸರ ಬಳಿಗೆ ಬಂದಿದ್ದನು. ಶ್ರೀ ಪರಮಹಂಸರನ್ನು ಪ್ರಣಾಮಮಾಡಿ ದುಃಖಿತನಾಗಿ ಕೋಣೆಯ ಒಂದು ಕಡೆ ಕುಳಿತುಕೊಂಡಿದ್ದನು. ಕೋಣೆಯಲ್ಲಿ ಸ್ತ್ರೀ ಪುರುಷ ಅನೇಕ ಜನ ಭಕ್ತರು ನೆರೆದಿದ್ದರು. ಶ್ರೀ ಪರಮಹಂಸರು ಅವರೊಡನೆ ನಾನಾ ಸತ್‌ಪ್ರಸಂಗವನ್ನು ಮಾಡುತ್ತಿದ್ದಾರೆ. ಮಣಿಮೋಹನನು ಕುಳಿತುಕೊಂಡ ಸ್ವಲ್ಪ ಸಮಯದಲ್ಲೇ ಶ್ರೀ ಪರಮಹಂಸರ ದೃಷ್ಟಿ ಅವನ ಮೇಲೆ ಬಿದ್ದು, ತಲೆ ಅಲ್ಲಾಡಿಸಿ 'ನಿನ್ನ ಮುಖವು ಬಾಡಿದಂತೆ ತೋರುತ್ತದೆ. ಏನಾಯಿತು?' ಎಂದು ಕೇಳಿದರು.

ಮಣಿಮೋಹನನು ಬಿಕ್ಕಿ ಬಿಕ್ಕಿ ಅಳುತ್ತ ತನ್ನ ಮಗನ ಹೆಸರು ಹೇಳಿ ಆತನು ಈ ಹೊತ್ತು ತೀರಿಹೋದನೆಂದು ಹೇಳಿದನು. ವೃದ್ಧ ಮಣಿಮೋಹನನ ಆ ಖಿನ್ನ ಸ್ಥಿತಿ ಮತ್ತು ಶೋಕಾನ್ವಿತ ಕಂಠಸ್ವರವನ್ನು ಕೇಳಿ ಕೋಣೆಯಲ್ಲಿದ್ದ ಜನರೆಲ್ಲರು ಸ್ತಬ್ಧರಾದರು. ವೃದ್ಧನ ಹೃದಯದ ಆ ಗಭೀರ ಶೋಕವು ಮತ್ತು ಮರ್ಮವೇದನೆಯು ಮಾತಿನಿಂದ ಹೋಗಲಾಡಿಸುವುದಿಲ್ಲವೆಂದು ಎಲ್ಲರಿಗೂ ತಿಳಿದಿತ್ತು. ಆದರೂ ವೃದ್ಧನ ವಿಲಾಪ ಕ್ರಂದನಗಳನ್ನು ಕೇಳಿ ದುಃಖಿತರಾಗಿ, ಸಂಸಾರದ ನಿಯಮವೇ ಹೀಗೆ, ಎಲ್ಲರೂ ಒಂದು ದಿನ ಸಾಯಲೇ ಬೇಕು. ಎಷ್ಟು ಅತ್ತರೂ ಸತ್ತವನು ಹಿಂದಕ್ಕೆ ಬರಲಾರನು, ಆದ್ದರಿಂದ ಶೋಕವನ್ನು ಬಿಟ್ಟು ಬಿಡು, ಸಹಿಸು, ಎಂದು ನಾನಾ ಮಾತಿನಿಂದ ಅವನನ್ನು ಸಂತೈಸಲು ತೊಡಗಿದರು. ಸೃಷ್ಟಿಯ ಆದಿಯಿಂದಲೂ ಮಾನವನು ಶೋಕಸಂತಪ್ತರಾದ ನರನಾರಿಗಳಿಗೆ ಆ ಮಾತುಗಳನ್ನು ಹೇಳಿ ಸಾಂತ್ವನೆ ಮಾಡಲು ಪ್ರಯತ್ನಿಸಿದ್ದಾರೆ; ಆದರೆ ಅದರಿಂದ ಎಷ್ಟು ಜನರ ಹೃದಯವು ಶಾಂತವಾಗಿದೆ? ಶಾಂತವಾಗುವುದಾದರೂ ಹೇಗೆ? ಮನೋವಾಕ್ಕಾಯವು ಒಂದೇ ಆಗಿದ್ದರೆ ನಾವು ಆಡಿದ ಮಾತು ಇತರರ ಪ್ರಾಣಸ್ಪರ್ಶ ಮಾಡಿ ಅದಕ್ಕೆ ತಕ್ಕ ಭಾವತರಂಗವು ಅವರಲ್ಲಿ ಏಳುತಿತ್ತು. ಇಲ್ಲಿ ಅದರ ಅಭಾವವೇ ಕಾಣುತ್ತದೆ. ನಾವು ಬಾಯಿಂದ ಸಂಸಾರವು ಅನಿತ್ಯವೆಂದು ಹೇಳಿ ಪ್ರತಿಯೊಂದು ಯೋಚನೆಯಲ್ಲಿಯೂ ಕಾರ್ಯದಲ್ಲಿಯೂ ಅದಕ್ಕೆ ವ್ಯತಿರಿಕ್ತ ಅನುಷ್ಠಾನವನ್ನು ಮಾಡುತ್ತೇವೆ. ಸ್ವಪ್ನದಂತಿರುವ ಈ ಸಂಸಾರವು ಅನಿತ್ಯವೆಂದು ಭಾವಿಸಲು ಇತರರಿಗೆ ಉಪದೇಶ ಕೊಟ್ಟು ನಾವು ಸ್ವತಃ ಅದನ್ನು ಹೃತ್ಪೂರ್ವಕವಾಗಿ ಸರ್ವದಾ ನಿತ್ಯವೆಂದು ಭಾವಿಸುತ್ತೇವೆ. ಅಲ್ಲದೆ ಚಿರಕಾಲಕ್ಕೂ ಸಂಸಾರದಲ್ಲಿಯೇ ಇರಲು ವ್ಯವಸ್ಥೆಯನ್ನು ಮಾಡುತ್ತೇವೆ. ಆದ್ದರಿಂದ ನಮ್ಮ ಮಾತಿಗೆ ಅಂತಹ ಶಕ್ತಿಯು ಬರುವುದು ಎಲ್ಲಿಂದ?

ಇತರರೆಲ್ಲರೂ ಮಣಿಮೋಹನನಿಗೆ ಅಂತಹ ಮಾತುಗಳನ್ನು ಹೇಳಿದರೂ, ಶ್ರೀ ಪರಮಹಂಸರು ಆಗ ಬಹಳ ಹೊತ್ತಿನ ತನಕ ಏನೊಂದೂ ಮಾತನಾಡದೆ, ಮಣಿಮೋಹನನ ಶೋಕಾವೇಗವನ್ನು ಕೇವಲ ಕೇಳುತ್ತಾ ಹೋದರು. ಅವರ ಆಗಿನ ಉದಾಸೀನತೆಯನ್ನು ಕಂಡು ಕೆಲವರು ಚಕಿತರಾಗಿ 'ಇವರ ಹೃದಯವು ಎಷ್ಟು ಕಠೋರವಾಗಿದೆ, ಎಷ್ಟು ನಿರ್ದಯವಾಗಿದೆ' ಎಂದು ಭಾವಿಸತೊಡಗಿದರು

ಮುದುಕ ಮಣಿಮೋಹನನ ಮಾತನ್ನು ಕೇಳುತ್ತ ಕೇಳುತ್ತ ಶ್ರೀ ಪರಮಹಂಸರಿಗೆ ಅರ್ಧ ಬಾಹ್ಯದಶೆಯು ಪ್ರಾಪ್ತವಾಯಿತು, ಮತ್ತು ಸಹಸಾ ಅವರು ತಾಳಹಾಕುತ್ತಾ ಎದ್ದು ಮಣಿಮೋಹನನನ್ನು ಲಕ್ಷ್ಯದಲ್ಲಿಟ್ಟು ಅಪೂರ್ವ ತೇಜಸ್ಸಿನಿಂದ ಗಾನ ಹಾಡಿದರು. ಗಾನದ ವೀರತ್ವ ಭಾವವನ್ನು ವ್ಯಕ್ತಪಡಿಸುವ ಸ್ವರ ಮತ್ತು ಅದಕ್ಕೆ ಅನುರೂಪವಾದ ಅಂಗಭಂಗಿ, ಶ್ರೀ ಪರಮಹಂಸರ ನಯನಗಳಿಂದ ಹೊರಸೂಸುವ ವೈರಾಗ್ಯ ಮತ್ತು ತೇಜಸ್ಸುಗಳಿಂದ ಮಿಳಿತವಾಗಿ ಸಕಲರ ಹೃದಯಗಳಲ್ಲಿ ಆಗ ಒಂದು ಅಪೂರ್ವ ಆಸೆ ಮತ್ತು ಉದ್ಯಮಗಳ ಪ್ರವಾಹವು ಹರಿಯಿತು. ಎಲ್ಲವರ ಮನಸ್ಸು ಆಗ ಶೋಕ ಮೋಹಗಳ ರಾಜ್ಯದಿಂದ ಎದ್ದು ಒಂದು ಅಪೂರ್ವ ಇಂದ್ರಿಯಾತೀತವಾದ ಮತ್ತು ಸಂಸಾರಾತೀತವಾದ ವಿಮಲ ಈಶ್ವರೀಯ ಆನಂದದಲ್ಲಿ ಪೂರ್ಣವಾಯಿತು. ಮಣಿಮೋಹನನು ಕೂಡ ಅದನ್ನು ತನ್ನ ಹೃದಯದಲ್ಲಿ ಅನುಭವಿಸಿ ಶೋಕತಾಪಗಳನ್ನು ಮರೆತು ಶಾಂತವಾದನು.

ಹಾಡು ಮುಗಿಯಿತು. ಆದರೆ ಹಾಡಿನಲ್ಲಿ ಹೇಳಿದ ಕೆಲವು ವಿಷಯಗಳಿಂದ ಶ್ರೀ ಪರಮಹಂಸರು ಎಬ್ಬಿಸಿದ ದಿವ್ಯ ಭಾವತರಂಗದಿಂದ ಕೋಣೆಯು ಹೆಚ್ಚು ಹೊತ್ತಿನ ತನಕ ಝುಳಿಪಿಸುತಿತ್ತು. ಈಶ್ವರನೊಬ್ಬನೇ ನಮ್ಮವನು, ಮನಸ್ಸನ್ನೂ ಪ್ರಾಣವನ್ನೂ ಅವನಿಗೆ ಅರ್ಪಣ ಮಾಡಲಾಯಿತು. ಆತನು ಕೃಪೆಮಾಡಲಿ, ದರ್ಶನ ಕೊಡಲಿ—ಈ ಭಾವದಿಂದ ಆವಿಷ್ಟರಾಗಿ ಸಕಲರೂ ಸ್ಥಿರವಾಗಿ ಕುಳಿತುಕೊಂಡಿದ್ದರು. ಸ್ವಲ್ಪ ಸಮಯದ ನಂತರ ಸಮಾಧಿ ಭಂಗವಾದ ಮೇಲೆ ಅವರು ಮಣಿಮೋಹನನ ಹತ್ತಿರ ಕುಳಿತು ಹೀಗೆಂದರು:—

'ಆಹಾ, ಪುತ್ರಶೋಕದಂತೆ ಬೇರೆ ಯಾವ ದುಃಖವಿದೆ? ಪಂಜರದಿಂದ (ದೇಹದಿಂದ) ನಿರ್ಗತವಾಗುತ್ತದಲ್ಲ! ಪಂಜರದ ಸಂಬಂಧ ಪಂಜರವಿರುವ ವರೆಗೆ ಇದೆ.'

ಹೀಗೆ ಹೇಳಿ ಶ್ರೀ ಪರಮಹಂಸರು ತಮ್ಮ ಅಣ್ಣನ ಮಗ ಅಕ್ಷಯನ ಮರಣದ ವಿವರವನ್ನು ದೃಷ್ಟಾಂತ ಸ್ವರೂಪವಾಗಿ ಆತನಿಗೆ ಹೇಳತೊಡಗಿದರು. ಎಷ್ಟು ವಿಮರ್ಶಕರವಾಗಿಯೂ ಗಂಭೀರವಾಗಿಯೂ ಹೇಳಿದರೆಂದರೆ ತಾವು ತಮ್ಮ ಆತ್ಮೀಯರ ಮರಣವನ್ನು ಪುನಃ ಕಣ್ಣೆದುರು ನೋಡುತ್ತಾರೋ ಏನೋ ಎಂದು ಸ್ಪಷ್ಟವಾಗಿ ಭಾಸವಾಯಿತು. 'ಅಕ್ಷಯನು ಸತ್ತುಹೋದನು. ಆಗ ನನಗೆ ಏನೂ ಆಗಲಿಲ್ಲ. ಮನುಷ್ಯನು ಹೇಗೆ ಸಾಯುತ್ತಾನೆ ನೋಡೋಣವೆಂದು ಎದ್ದು ನಿಂತು ಕಂಡೆನು. ಖಡ್ಗಕೋಶದಿಂದ ಖಡ್ಗವನ್ನು ಎತ್ತಿ ತೆಗೆದಂತಾಯಿತು. ಖಡ್ಗಕ್ಕೆ ಏನಾಗಲಿಲ್ಲ—ಖಡ್ಗ ಹೇಗೆ ಇತ್ತೋ ಹಾಗೆಯೇ ಉಳಿಯಿತು, ಕೋಶವು ಬಿದ್ದುಬಿಟ್ಟಿತು! ನೋಡಿ ಬಹಳ ಆನಂದವಾಯಿತು. ನಗಾಡಿದೆನು, ಹಾಡಿದೆನು, ಕುಣಿದಾಡಿದೆನು! ಅವನ ಶವದಹನ ಮಾಡಿ ಬಂದರು. ಮರುದಿನ (ಕೋಣೆಯ ಪೂರ್ವದಲ್ಲಿ ಕಾಳಿಮಂದಿರದ ಅಂಗಳದ ಮುಂಭಾಗದಲ್ಲಿರುವ ಜಗಲಿಯ ಕಡೆಗೆ ತೋರಿಸಿ) ಅಲ್ಲಿ ನಿಂತಿದ್ದೇನೆ, ಹೃದಯದಲ್ಲಿ ಬಟ್ಟೆ ಹಿಂಡಿದಂತೆ ನನ್ನ ಪ್ರಾಣವು ಹಿಂಡಿದಂತಾಯಿತು. ಅಕ್ಷಯನ ಮರಣದಿಂದಾದ ವಿರಹ ವೇದನೆಯು ಅಷ್ಟಾಗಿತ್ತು. ಅಮ್ಮಾ ಜಗಜ್ಜನನೀ! ಇಲ್ಲಿ (ನನಗೆ) ಉಡುವ ಬಟ್ಟೆ ಸರಿಯಾಗಿದೆಯೋ ಇಲ್ಲವೋ ಎಂದು ತಿಳಿಯದು. ಆದರೂ ಅಣ್ಣನ ಮಗನೊಂದಿಗೆ ಎಷ್ಟು ಸ್ನೇಹವಿತ್ತು! ಇಲ್ಲಿಯೇ (ನನಗೇನೇ) ಇಷ್ಟಾದರೆ, ಗೃಹಸ್ಥರಿಗೆ ಶೋಕ ವೆಷ್ಟಾಗಬೇಕು!—ನನಗೆ ಇದನ್ನು ತಿಳಿಸಲು ಹೀಗೆ ಮಾಡಿದ್ದಿ ಎಂದು ತೋರುತ್ತದೆ' ಅಂದರು.

ಕುಸು ಹೊತ್ತಿನ ಮೇಲೆ ಶ್ರೀ ಪರಮಹಂಸರು ಮತ್ತೂ ಹೀಗಂದರು:—ಆದರೆ ಶ್ರೀ ದೇವರ ಕೈಯನ್ನು ಹಿಡಿದಿದ್ದವರು ವಿಪತ್ತು ಬಂದೊದಗಿದಾಗ ಶೋಕಸಾಗರದಲ್ಲಿ ಮುಳುಗುವುದಿಲ್ಲ. ಸ್ವಲ್ಪ ಅತ್ತಿತ್ತ ಈಜಾಡಿ ಶಾಂತವಾಗುವರು. ಕಿರಿ ಮೀನುಗಳಂತಿರುವ ಆಧಾರಗಳು ಸಂಪೂರ್ಣವಾಗಿ ತಲ್ಲಣಗೊಳ್ಳುತ್ತವೆ ಅಥವಾ ಮುಳುಗಿ ಹೋಗುತ್ತವೆ. ನೀನು ನೋಡಲಿಲ್ಲವೇನು? ಗಂಗಾನದಿಯಲ್ಲಿ ಸ್ಟೀಮರುಗಳು ಚಲಿಸಿದರೆ ಮೊಗೇರರ ಸಣ್ಣ ಸಣ್ಣ ದೋಣಿಗಳು ಏನಾಗುತ್ತವೆ? ಮುಳುಗುತ್ತವೆಯೋ ಏನೋ ಎಂಬಂತೆ ತೋರುತ್ತವೆ, ಅವುಗಳಿಂದ ತಡೆವರಿಸಲಿಕ್ಕೆ ಆಗುವುದಿಲ್ಲ. ಅವುಗಳಲ್ಲಿ ಕೆಲವು ದೋಣಿಗಳು ಮಗುಚಿಹೋಗುತ್ತವೆ. ಪರಂತು ದೊಡ್ಡ ದೊಡ್ಡ ಸಾವಿರ ಮಣ ಹಿಡಿಯುವ ಹಡಗುಗಳು ಸಾಲ್ವಾರು ಬಾರಿ ಅಲ್ಲೋಲಕಲ್ಲೋಲವಾಗಿಯೇ ಸ್ಥಿರವಾಗುವುವು—ನಾಲ್ಕಾರು ಬಾರಿಯಾದರೂ ಅಲ್ಲಾಡುವುದು ನಿಜ.'

(ಕ್ರಮಶಃ)

ಕರ್ನಾಟಕ

ಕರ್ನಾಟಕ ವಿಶ್ವವಿದ್ಯಾಲಯ ಪರಿಷತ್ತು

ಬರುವ ಮೇ ತಿಂಗಳಲ್ಲಿ ಬೆಳಗಾವಿಯಲ್ಲಿ ಕೂಡಲಿರುವ ಕರ್ನಾಟಕ ವಿಶ್ವವಿದ್ಯಾಲಯ ಪರಿಷತ್ತು ಮುಂಬಯಿಯ ಸುಪ್ರಸಿದ್ಧ ಕನ್ನಡಿಗರೂ ಶಿಕ್ಷಣಾಭಿಮಾನಿಗಳೂ ಆದ ಶ್ರೀಮಾನ್ ರಂಗಾಚಾರ್ಯ ಜಹಗೀರದಾರ ಎಂ. ಎ. ಎಲ್. ಎಲ್. ಬಿ., ಗವರ್ನಮೆಂಟ್ ಪ್ಲೀಡರು, ಮುಂಬಯಿ ಹಾಯ್‌ಕೋರ್ಟು ಇವರ ಅಧ್ಯಕ್ಷತೆಯಲ್ಲಿ ಜರಗಲಿರುವುದು. ಕರ್ನಾಟಕದ ಎಲ್ಲ ಭಾಗಗಳಿಂದ ಶಿಕ್ಷಣಾಭಿಮಾನಿಗಳೂ ಕಾರ್ಯಕರ್ತರೂ ಸಂಘ ಸಂಸ್ಥೆಗಳ ಪ್ರತಿನಿಧಿಗಳೂ ಪರಿಷತ್ತಿಗೆ ಬಂದು ತಮ್ಮ ಸೂಚನೆಗಳನ್ನಿತ್ತು ಕರ್ನಾಟಕ ವಿಶ್ವವಿದ್ಯಾಲಯ ಸ್ಥಾಪನೆಯ ಕಾರ್ಯಕ್ಕೆ ಚಾಲನೆ ಕೊಡುವರಾಗಿ ನಂಬಲಾಗಿದೆ. ಪರಿಷತ್ತಿನಲ್ಲಿ ಅನೇಕ ಮಹತ್ವದ ವಿಷಯಗಳು ಚರ್ಚೆಗೆ ಬರಲಿವೆ. ಪ್ರಾದೇಶಿಕ ವಿಶ್ವವಿದ್ಯಾಲಯಗಳ ಉಪಯುಕ್ತತೆ ಮತ್ತು ಅವಶ್ಯಕತೆ, ಕರ್ನಾಟಕ ವಿಶ್ವವಿದ್ಯಾಲಯದ ಸ್ವರೂಪ (Unitary, Federal ಅಥವಾ Affiliating); ಕರ್ನಾಟಕ ವಿಶ್ವವಿದ್ಯಾಲಯದ ಸ್ಥಾಪನೆಗಾಗಿ ಕೈಕೊಳ್ಳಬೇಕಾದ ಪ್ರಯತ್ನಗಳು; ಕರ್ನಾಟಕ ವಿಶ್ವವಿದ್ಯಾಲಯದ ವಿಸ್ತಾರ ಮತ್ತು ಕ್ಷೇತ್ರ ಇವೇ ಮೊದಲಾದ ವಿಷಯಗಳ ಬಗ್ಗೆ ತಜ್ಞರು ತಮ್ಮ ಸಲಹೆ ಸೂಚನೆಗಳನ್ನು ಕಳಿಸಬೇಕಾಗಿ ಪ್ರಾರ್ಥನೆಯಿದೆ. ಸಲಹೆ ಸೂಚನೆಗಳನ್ನು ಸ್ವಾ. ಸ. ಕಚೇರಿ, ಕರ್ನಾಟಕ ವಿಶ್ವವಿದ್ಯಾಲಯ ಪರಿಷತ್ತು ಬೆಳಗಾವಿ ಇವರಿಗೆ ಕಳುಹಬೇಕು.

ಈ ದಿನ ನಿನ್ನ ಹಲ್ಲುಗಳನ್ನು ಮೆಕ್ಲೀನ್ ಮಾಡಿದೆಯಾ?

ಆಹಾ! ನೀನು ಬುದ್ಧಿವಂತಳೇ ಸರಿ.

ಈ ಸಣ್ಣ ಹುಡುಗಿಯನ್ನು ನೋಡಿ ಬುದ್ಧಿ ಕಲಿತುಕೊಳ್ಳಿ! ಮ್ಯಾಕ್ಲೀನ್ ಪೆರಾಕ್ಸೈಡ್ ಟೂತ್‌ಪೇಸ್ಟಿನಿಂದ ನಿಮ್ಮ ಹಲ್ಲುಗಳು ಬೆಳ್ಳಗೆ ಮಿಂಚುವಂತೆಯೂ ಹಲ್ಲಿನ ಗಾರೆಯು ಗಟ್ಟಿಯಾಗಿ ಆರೋಗ್ಯಯುಕ್ತವಾಗಿಯೂ ಮತ್ತು ಬಾಯಿ ಚೊಕ್ಕಟವಾಗಿಯೂ ಮತ್ತು ಇಂಪಾಗಿಯೂ ಆಗುತ್ತದೆ. ಅದೇ ನಿಮಗೆ ಬೇಕಾದ ಟೂತ್‌ಪೇಸ್ಟ್, ಬೆಳಿಗ್ಗೆಯಾದರೂ ಸರಿ, ರಾತ್ರಿಯಾದರೂ ಸರಿ.

The Canara Banking Corporation Ltd.

(Incorporated in British India with limited liability

Estd. 1906.

OUR RATES OF INTEREST ON DEPOSITS

Current	....	....	1%	p. a.
Savings Bank	....	....	2½%	,,
Short-term	....	....	1¾%	,,
FIXED FOR 3 MONTHS		....	2%	,,
6	,,	....	2¼%	,,
9	,,	....	2¾%	,,
12	,,	....	3%	,,
24	,,	....	3½%	,,

Advances made at cheap rates of interest against approved securities and Banking business of every description transacted.

ಸ್ವದೇಶಾಭಿಮಾನಿಗೆ ಜಾಹೀರಾತು ಕೊಡಿರಿ

"ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

8—5—1942] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೮—೫—೧೯೪೨]

ಸಮರ ಭೂಮಿಯ ಸಂಚಾರ

ಏಪ್ರಿಲ್ ದಾಟಿಹೋಯಿತು; ಬಹುಕಾಲದಿಂದ ಬೆದರಿಸುತ್ತಿದ್ದ ಹಿಟ್ಲರನ ವಸಂತಕಾಲದ ಕಾರ್ಯಕ್ರಮವು ಇದುವರೆಗೂ ಪ್ರಾರಂಭವಾಗಿಲ್ಲ. ಹಿಟ್ಲರನು ಇನ್ನೂ ಕೆಲ ದಿನಗಳನ್ನು ಹೀಗೆ ತಟಸ್ಥನಾಗಿಯೇ ಕಳೆದನಾದರೆ ಹಲವು ತಿಂಗಳಿಂದಲೇ ನಾವು ಕೇಳುತ್ತಿದ್ದ ನಾಜೀ ಸಿದ್ಧತೆಯ ಕಟ್ಟುಕತೆಗಳೆಲ್ಲಾ ಬರೀ ಬೂಟಾಟಿಕೆಯೆನ್ನಬೇಕಾಗುತ್ತದೆ. ಹಿಮಗಾಲ ಮುಗಿದ ಬಳಿಕ ನಾಜೀ ಆಕ್ರಮಣ ಕಾರ್ಯವು ತೀವ್ರವಾಗಿ ಪ್ರಾರಂಭವಾಗಲಿದೆಯೆಂದು ನಾಜೀ ಪ್ರಚಾರ ಭೇರಿ ಹೊಡೆಯಲ್ಪಟ್ಟಿತು. ಹಾಗಾಗಿ ಹಿಟ್ಲರನ ಪೆಟ್ಟು ಎಲ್ಲಿ ಮೊದಲು ಬೀಳಬಹುದೋ ಎಂದು ಎಲ್ಲರೂ ಎಲೆ ಡೆಗಳಲ್ಲೂ ಬೆದರಿಕೊಂಡಿದ್ದರು, ರಾಜಕೀಯ ವಿಚಾರಜ್ಞರು ಗಂಭೀರ ಯೋಚನಾಮಗ್ನರಾಗಿದ್ದರು. ಆದರೆ ಈಗ ಬೆದರಿಕೆಗಳೆಲ್ಲಾ ...ಯಲಾಗುತ್ತಾ ಬರುತ್ತವೆ.

ರಶ್ಯ ಬ್ರಿಟನುಗಳಿಗೆ ಸರಿಸಮವೆನಿಸುವಂತಹ ಪರಾಕ್ರಮವನ್ನು ಈ ಯುದ್ಧದಲ್ಲಿ ಮಾಲ್ಟಾ ತೋರಿಸಿತು. ನಿರಂತರ ಬೀಳುತ್ತಿರುವ ನಾಜೀ ಬಾಂಬುಗಳಿಗಂಜದೆ ತಲೆಕೊಟ್ಟು ಇನ್ನೂ ಮಾಲ್ಟಾ ಬಾಗದೆ, ಬಳುಕದೆ ನಿಂತಿದೆ. ಇಂದಿನೀ ದ್ವಿತೀಯ ಮಹಾಯುದ್ಧದಲ್ಲಿ ಅತ್ಯಂತ ಬಲವಂತವಾದ ನಿರಂತರ ಧಾಳಿಯು ಯಾವುದಾದರೊಂದು ಸ್ಥಳಕ್ಕೆ ಆಗಿದ್ದರೆ ಅದು ಮಾಲ್ಟಾ ದ್ವೀಪಕ್ಕೊಂದೇ ಎಂದು ಎಲ್ಲರೂ ಒಪ್ಪಬೇಕು. ಮಾಲ್ಟಾದ ರಣವೀರರು ಅಲ್ಲಿನ ನಾಗರಿಕರು ತೋರಿಸಿದ ಸಾಹಸವು ಜಗತ್ತನ್ನೇ ಇಂದು ಬೆರಗುಗೊಳಿಸುವುದು!

ಜರ್ಮನಿಯು ಹಿಂದೆಯೇ ಪ್ರಕಟಿಸಿದ್ದ ಆ ಪ್ರಚಂಡ ಧಾಳಿಯನ್ನು ಆರಂಭಮಾಡಲು ಇದುವರೆಗೆ ಅಸಮರ್ಥವಾಯಿತೇಕೆ? ಮೊದಲನೆಯ ಕಾರಣವೆಂದರೆ ರಶ್ಯಾ ಯುದ್ಧ, ರಶ್ಯನರು ಹಿಮಗಾಲದಲ್ಲಿ ಜರ್ಮನರಿಗೆ ಉಂಟುಮಾಡಿದ ಕಷ್ಟನಷ್ಟಗಳೆಂದರೆ ಅಗಣಿತ, ಅಪರಿಮಿತ. ಹಿಮಗಾಲದಲ್ಲಿ ರಶ್ಯಾ ರಣರಂಗದಲ್ಲಿ ಜರ್ಮನರ ಅಸಂಖ್ಯ ಸೇನಾಸಾಮಗ್ರಿಗಳು ಧೂಳಿಧೂಸರವಾದುವು. ರಶ್ಯವು ಹಿಂದೆ ಕಳಕೊಂಡ ಎಲ್ಲಾ ಸ್ಥಳಗಳನ್ನೂ ಸಕಲ ಸಾಮಗ್ರಿಗಳನ್ನೂ ಮರಳಿ ಪಡೆಯಲಿಲ್ಲವಾದರೂ, ಜರ್ಮನರ 'ವಸಂತ' ಸಿದ್ಧತೆಯ ಬಹುಪಾಲು ಸಾಮಗ್ರಿಗಳನ್ನು ನಾಶಗೊಳಿಸಿ ಬಿಟ್ಟಿದೆಯೆಂಬುದಕ್ಕೆ ಏನೂ ಸಂಶಯವಿಲ್ಲ. ಸ್ಟಾಲಿನ್ 2000 ಮೈಲುಗಳ ಉದ್ದದಾ ಯುದ್ಧ ಭೂಮಿಯಲ್ಲಿ ಹಿಟ್ಲರನೊಡನೆ ಹೀಗೆ ಹೋರಾಡುತ್ತಾ ಇದ್ದಂತೆ, ಅತ್ತ ಜರ್ಮನಿಯ ಮುಂದಿನ ಸಿದ್ಧತೆಗಳನ್ನೆದುರಿಸುವ ಸಲುವಾಗಿಬೇಕಾದ ಸಾಧನ ಸಾಮಗ್ರಿಗಳನ್ನು, ಜನಬಲವನ್ನೂ ಒಟ್ಟುಗೂಡಿಸುವುದರಲ್ಲಿಯೂ ನಿರತನಾಗಿದ್ದು ಅದರಲ್ಲಿ ಇಂದು ಜಯಶೀಲನಾಗಿದ್ದಾನೆ. ಇದು ಮಾತ್ರವಲ್ಲದೆ ಮಿತ್ರರೂ ಇತ್ತೀಚೆಗೆ ರಶ್ಯಕ್ಕೆ ಸಾಧ್ಯವಾದೆಲ್ಲಾ ಸಹಾಯಗಳನ್ನು ಕಳುಹಿಸುತ್ತಿದ್ದಾರೆ. ಅದು ಅಲ್ಪ ಪ್ರಮಾಣದಲ್ಲಾದರೂ ಇಂದಿನೀ ಪರಿಸ್ಥಿತಿಯಲ್ಲಿ ಬಹೂಪಕಾರಿಯಾಗುವುದೆನ್ನುವುದಕ್ಕೆ ಏನೇನೂ ಸಂಶಯವಿಲ್ಲ. ಇಂದು ರಶ್ಯನರು ಹಿಟ್ಲರನ ವಸಂತ ಧಾಳಿಯನ್ನೆದುರಿಸಲು ಶಕ್ತರು ಮಾತ್ರವಲ್ಲದೆ ಇನ್ನೊಂದು ಕಡೆ ಯುದ್ಧವನ್ನು ಆರಂಭಿಸಲೂ ಸಿದ್ಧರಿದ್ದಾರೆ!

ಹಿಟ್ಲರನ 'ಬಾಯಿ ಬಡಾಯಿ' ಈಗ ನಡೆಯುತ್ತಿಲ್ಲ. ಆ ಕಾಲ ಕಳೆದುಹೋಯಿತು! ಹಿಟ್ಲರನು ಹತ್ತು ವಾರದಲ್ಲಿ ರಶ್ಯವನ್ನು ಸ್ವಾಹಾಮಾಡುವೆನೆಂದು ಹಿಂದೆ ಡಂಭಕೊಚ್ಚಿದ್ದ. ಈಗ ರಶ್ಯನಾಗಲಿ ಇತರರಾಗಲಿ ಹಿಟ್ಲರನ ಅಂತಹ ಮಾತಿಗೆ ಏನೇನೂ ಬೆಲೆಕೊಡುವುದಿಲ್ಲ. ರಶ್ಯನರಂತೂ ತಮ್ಮ ಕಾರ್ಯಕ್ರಮವನ್ನು ಮುಂದುವರಿಸುತ್ತಿದ್ದಾರೆ. ಹೇಗಿದ್ದರೂ ಇಂದು ಹಿಟ್ಲರನ ವಸಂತಕಾಲದ ಧಾಳಿಯ ಬೆದರಿಕೆ ಹಿಂದಿನಷ್ಟು ಇಂದು ಯಾರಿಗೂ ಇಲ್ಲ. ಅಥವಾ ಅತ್ತ ಕೆಂಪು ಸೈನ್ಯದ ಪೆಟ್ಟು, ಇತ್ತ ಆ ಬ್ರಿಟಿಷ್ ವಿಮಾನಾಘಾತ ಇವುಗಳಿಂದ ಬಹು ಬಳಲಿದ ಹಿಟ್ಲರನು ಈಗ ಸ್ವರಕ್ಷಣೆಯನ್ನು ಮಾತ್ರ ಮಾಡುವುದರಲ್ಲಿ ಮಗ್ನನಾಗಿರುವನೆ? ಹೇಗಿದ್ದರೂ, ಎರಡು ಕಡೆಗಳಿಂದಲೂ ಹೀಗೆ ಹೊಡೆತ ಬೀಳುವಾಗ ನಾಜೀ ಹುಲಿಯು ಎಲ್ಲಿಯಾದರೂ ಒಂದು ದಿಕ್ಕಿನಿಂದ ನುಸುಳಿ ಹೊರಗೆ ಬರಲು ಹೆಣಗಾಡದೆ ಇರಲಾರದೆಂದು ಯೋಚಿಸುವುದು ಅಸಂಭವವಲ್ಲ. ಅದನ್ನೇ ವಸಂತಕಾಲದ ಧಾಳಿಯೆಂದರೂ ಎನಬಹುದು!

ಮುಸಲನಿಯ ರಾಷ್ಟ್ರದಲ್ಲಿ ಏನೇನೋ ಉತ್ಪಾತಗಳು ಇತ್ತೀಚೆ ಉಂಟಾಗಿವೆಯೆಂದು ಸುದ್ದಿ. ಮುಸಲನಿಯನ್ನು ಅಧಿಕಾರದಿಂದ ತಳ್ಳಿ ಬೇರೆ ಮಂತ್ರಿಮಂಡಳವೊಂದು ಸ್ಥಾಪಿತವಾಗುವುದೆಂದು ಪ್ರಚಾರವಾಗಿದೆ. ಆದರೆ ಇತ್ತೀಚೆಗೆ ಹಿಟ್ಲರ್ ಮತ್ತು ಮುಸಲನಿಗಳು ಅಸ್ಟ್ರಿಯದಲ್ಲಿರುವ ಸಾಲ್ಜ್‌ಬರ್ಗಿನಲ್ಲಿ ಭೇಟಿಯಾದರೆಂದು ಸುದ್ದಿಯಿದೆ. ಯುದ್ಧ ಪರಿಸ್ಥಿತಿ ವಿಚಾರವಾಗಿ ಆಲೋಚನೆ ಮಾಡಿದರೆಂದು ಹೇಳಲಾಗಿದೆ. ಅತ್ತ ಹಿಟ್ಲರ್ ಮುಸಲನಿ ಮಾತುಕತೆಯಾಗುತ್ತಿದ್ದಂತೆ, ಇತ್ತ ರಿಬನ್ ಟ್ರಾಪ್-ಮಿಯೊನ್ನೋರವರು ಇನ್ನೊಂದು ಕಡೆ ಜಪಾನ್ ರಾಯಭಾರಿಗಳೊಡನೆ ಆಲೋಚನೆ ನಡೆಸಿದರೆಂದೂ ಗೊತ್ತಾಗಿರುವುದು. ಅಂತೂ ಇಟಲಿ ಜರ್ಮನಿ ಮತ್ತು ಜಪಾನುಗಳು ಹೀಗೆ ಗುಪ್ತ ಗುಪ್ತವಾಗಿ ಏನೇನೊ ಮಾತುಕತೆ ನಡೆಸುತ್ತಾ ಇದ್ದಾವೆ!

ಆಸ್ಟ್ರೇಲಿಯಕ್ಕೆ ಜಪಾನ್ ಅಭಿಯೋಗದ ಭೀತಿ ತಪ್ಪಲಿಲ್ಲವೆಂದು ಅಲ್ಲಿನ ಪ್ರಧಾನರೇ ಹೇಳುತ್ತಿದ್ದಾರೆ. ಅವರಿಗೆ ಫ್ರಾನ್ಸಿನ ಹೊಸ ಮಂತ್ರಿಮಂಡಳದ ವ್ಯವಸ್ಥೆಯಿಂದ ಬಹು ವ್ಯಥೆಯುಂಟಾಗಿರುವುದು. ಮಡಗಾಸ್ಕರನ್ನು ಶತ್ರುಗಳ ವಶ ಕೊಟ್ಟುಬಿಟ್ಟರೆ ಕೆಲಸ ಕೆಟ್ಟಿತೆಂದು ಅವರ ಅಂಜಿಕೆಯಾಗಿದೆ. ಆಸ್ಟ್ರೇಲಿಯವು ಮಿತ್ರಪಕ್ಷದವರಿಗೊಂದು ವಿಮಾನ ನಿಲ್ದಾಣವಾಗಿ ಉಪಯೋಗವಾಗಬಾರದೆಂದು ಜಪಾನರ ಉದ್ದೇಶವಿದೆ. ಆದಕಾರಣ ಜಪಾನು ಈಗ ಎಷ್ಟು ಕಷ್ಟನಷ್ಟ ಹೊಂದಿದರೂ, ಆಸ್ಟ್ರೇಲಿಯದ ಸಮುದ್ರ ಮಾರ್ಗವನ್ನು ಕತ್ತರಿಸಿ ಆ ಖಂಡವನ್ನು ಬೇರೆಯಾಗಿರಿಸಲು ಪ್ರಯತ್ನಿಸುವರೆಂದು ಅಲ್ಲಿನ ಪ್ರಧಾನರ ಊಹನೆಯಾಗಿದೆ. ಇತ್ತೀಚೆಗೆ ಸಲಮನ್ ದ್ವೀಪಗಳನ್ನು ಆಕ್ರಮಿಸಿದುದೂ, ಹಿಂದೀ ಸಾಗರದಲ್ಲಿ ಜಪಾನ್ ನೌಕೆಗಳು ಓಡಾಡುತ್ತಿರುವುದೂ ಆಸ್ಟ್ರೇಲಿಯದ ಮಾರ್ಗಾಕ್ರಮಣಕ್ಕಾಗಿರಬಹುದೆಂದು ತಿಳಿಯುತ್ತದೆ. ಹೇಗೂ ಜಪಾನರು ಆಸ್ಟ್ರೇಲಿಯವನ್ನು ಹಿಡಿಯುವ ಸಾಹಸ ಮಾಡುತ್ತಿರುವರೆಂಬುದು ಖಂಡಿತ. ಇಷ್ಟರಲ್ಲಿ ಅಮೆರಿಕದಿಂದ ಆಸ್ಟ್ರೇಲಿಯಕ್ಕೆ ಬೇಕಾದ ಸಾಧನ ಸಾಮಗ್ರಿಗಳು ಬಂದಿಳಿಯುತ್ತಿರುವುದು ಉತ್ಸಾಹಕರವಾದ ವಾರ್ತೆಯಾಗಿದೆ. ಅಮೆರಿಕ ಬೆಂಬಲ ನಿಂತಲ್ಲಿ ಆಸ್ಟ್ರೇಲಿಯವು ಜಪಾನನ್ನು ಚೆನ್ನಾಗಿಯೇ ಸಮರ್ಥವಾದೀತೆಂಬುದು ಖಂಡಿತವಾಗಿದೆ.

ಅಮೆರಿಕದ ಅಧ್ಯಕ್ಷ ರೂಸ್‌ವೆಲ್ಟರು ಇತ್ತೀಚೆಗೆ ಒಂದು ಆಕಾಶ ಭಾಷಣ ಮಾಡಿ ಅದರಲ್ಲಿ, ಇಡೀ ಯೂರೋಪನ್ನು ಅಮೆರಿಕದ ವಿಮಾನಗಳು ಬೇಗನೇ ಬಂಧಮುಕ್ತ ಮಾಡುವವೆಂದು ಭರವಸೆಯಿತ್ತರು. ಪ್ರೆಂಚ್ ಸಾಮ್ರಾಜ್ಯದ ಪ್ರದೇಶಗಳು ಶತ್ರುಗಳ ಕೈಸೇರದಂತೆ ಮಾಡಲು ಬೇಕಾದ ಅವಶ್ಯೋಪಾಯಗಳನ್ನು ಅಮೆರಿಕವು ಕೈಕೊಳ್ಳುವುದೆಂದು ಲಾವಲರಿಗೆ ಎಚ್ಚರಿಕೆಯಿತ್ತರು. ಭೂಮಧ್ಯ ಹಾಗೂ ಹಿಂದೀ ಮಹಾಸಾಗರಗಳಲ್ಲಿ ಅಮೆರಿಕ ನೌಕಾಬಲವು ಸಂಚರಿಸುತ್ತಿರುವುದಾಗಿ ತಿಳಿಸಿದರು. ಜಪಾನರ ಮುಂದೊತ್ತುವಿಕೆ ಈಗ ಕುಗ್ಗಿದ್ದು ಅಮೆರಿಕದ ಕೈಬಿಟ್ಟ ಪ್ರದೇಶಗಳು ಬೇಗನೇ ಅದರ ಸ್ವಾಧೀನ ಬರುವವೆಂದೂ, ಆಸ್ಟ್ರೇಲಿಯ ನ್ಯೂಜಿಲೇಂಡುಗಳಿಂದ ಬೇಗನೇ ಮಿತ್ರರು ಹೊಸ ಧಾಳಿ ಪ್ರಾರಂಭಿಸುವರೆಂದೂ ಹೇಳಿದರು. ಜಪಾನರು ಬರ್ಮಾ ಮಾರ್ಗವನ್ನು ಕತ್ತರಿಸಿದರೂ, ಅಮೆರಿಕವು ಬಿಡದೆ ಚೀನಕ್ಕೆ ಸಹಾಯ ಕಳುಹಿಸುವುದೆಂದು ನಿರ್ಧಾರಪೂರ್ವಕ ನುಡಿದರು. ಅಮೆರಿಕದ ಯುದ್ಧ ಕಾಲದ ವೆಚ್ಚವನ್ನು ಸರಿಪಡಿಸಲು ರೂಸ್‌ವೆಲ್ಟರು ಹೊಸ ಯೋಜನೆಯೊಂದನ್ನು ತಯಾರಿಸಿದ್ದಾರೆ. ಅಂತೂ ಇಂದು ಅಮೆರಿಕವು ಸಂಪೂರ್ಣ ಯುದ್ಧಸಿದ್ಧತೆಯಲ್ಲಿ ನಿರತವಾಗಿರುವುದೆಂದು ನಾವು ತಿಳಿದುಕೊಳ್ಳಬಹುದಾಗಿದೆ.

ಬರ್ಮಾದ ಸುದ್ದಿ ತೀರಾ ನಿರಾಶಾಜನಕವಾಗಿದೆ. ಲಾಶಿಯೋ ಪತನವಾಗಿ ಇಂದು ಬರ್ಮಾದ ಈಗಿನ ರಾಜಧಾನಿಯಾದ ಮಂಡಾಲೆಯೂ ಜಪಾನರ ಕೈವಶವಾಯಿತು. ಕಳೆದ ಮೂರು ತಿಂಗಳಿಂದ ಜಪಾನರು ಬರ್ಮಾದ ಬಹುಭಾಗವನ್ನು ಹಿಡಿದರು; ಬೇಕುಬೇಕಾದ ಪ್ರದೇಶಗಳನ್ನು ಸ್ವಾಧೀನಪಡಿಸಿದರು, ಫಲವತ್ತಾದ ಭೂಭಾಗಗಳು, ಎಣ್ಣೆ ಕಣಿಗಳು, ಸೈನಿಕ ಆಯಕಟ್ಟಿನ ಸ್ಥಳಗಳು ಹೀಗೆ ಒಂದರ ಮೇಲೊಂದಾಗಿ ಜಪಾನರ ವಶವಾದುವು. ಪ್ರತಾಪದಿಂದ ಪ್ರತಿಭಟಿಸುತ್ತಿರುವ ಚೀನೀ ಸೈನ್ಯಗಳೂ, ಭಾರತೀಯ ಬಲಗಳೂ ಹಿಂದೆ ಹಿಂದೆ ಸರಿಸಲ್ಪಟ್ಟಿವೆ. ಚೀನಾ-ಬರ್ಮಾಗಳ ಸಂಬಂಧವನ್ನು ಬೇಗನೇ ಜಪಾನರು ಮುರಿದಿಕ್ಕುವುದರಲ್ಲಿದ್ದಾರೆ. ಮಂಡಾಲೆಯನ್ನು ಆಕ್ರಮಿಸಿಕೊಂಡ ಬಳಿಕ, ಸದ್ಯಕ್ಕೆ ಯುದ್ಧವನ್ನು ಜಪಾನರು ನಿಲ್ಲಿಸುವರು ಎಂಬೊಂದು ವದಂತಿಯಿದೆ. ಇನ್ನು ಕೆಲವೇ ದಿನಗಳಲ್ಲಿ ಮಳೆಗಾಲವೂ ಆರಂಭವಾಗಿರುವುದರಿಂದ ಜಪಾನರು ಬರ್ಮಾ ಯುದ್ಧವನ್ನು ಬೇಗನೇ ಕೊನೆಗಾಣಿಸಲೂ ಬಹುದು.

ಬರ್ಮಾದೇಶದಿಂದ ಭಾರತಕ್ಕೆ ಹೊರಟುಬರುತ್ತಿರುವ ಜನರ ಗೋಳಿನ ಕುರಿತು ಪಂಡಿತ ಜವಾಹರಲಾಲರೂ, ಪಂಡಿತ ಕುಂಜ್ರುಗಳೂ ಬಹಳ ದೀರ್ಘ ಪ್ರಕಟಣೆಗಳನ್ನಿತ್ತು ಪರಿಸ್ಥಿತಿಯನ್ನು ಪ್ರಸಿದ್ಧಿಸಿದ್ದಾರೆ. ನಿರಾಶ್ರಿತರಿಗೆ ಸರಕಾರವು ವ್ಯವಸ್ಥೆ ಮಾಡುವಲ್ಲಿ ವರ್ಣ ಭೇದದ ಪಕ್ಷಪಾತವನ್ನು ಮಾಡುತ್ತಿರುವುದೆಂದು ಹೇಳಿದ್ದಾರೆ. ಬರ್ಮಾ ದೇಶೀಯರಿಂದಲೂ ಅಲ್ಲಿನ ಅಧಿಕಾರಿಗಳಿಂದಲೂ ಭಾರತೀಯರಿಗೆ ಬಗೆಬಗೆಯ ಪೀಡೆಗಳುಂಟಾದುವೆಂದು ತಿಳಿಸಿದ್ದಾರೆ. ಇಷ್ಟು ಕಷ್ಟನಷ್ಟಗಳನ್ನನುಭವಿಸಿ ಭಾರತೀಯರು ಬರ್ಮಾವನ್ನು ಬಿಟ್ಟುಬಂದರೂ, ಇಲ್ಲಿನ ಸರಕಾರವು ಅವರಿಗೇನು ಸೌಕರ್ಯ ಕಲ್ಪಿಸಿದೆ? ಬರ್ಮಾದಲ್ಲಿ ಸಿವಿಲ್ ಉದ್ಯೋಗಸ್ಥರಾಗಿದ್ದವರಿಗೆ ಇಲ್ಲಿ ಕೂಡಲೇ ಉದ್ಯೋಗ ಕೊಡಲಾಗುತ್ತದೆ. ಆದರೆ ಬರ್ಮಾವನ್ನು ಬಿಟ್ಟು ಭಾರತಕ್ಕೆ ಬಂದ ಭಾರತೀಯರಿಗೇ ನೌಕರಿಯಿಲ್ಲ! ಇಂತಹ ತಿರಸ್ಕೃತ ನೀತಿಯನ್ನು ಸರಕಾರವು ವಹಿಸಬಾರದು, ಕಷ್ಟದಲ್ಲಿ ಬಿದ್ದು ನರಳುವವರಿಗೆ ಸಾಕಷ್ಟು ಸೌಕರ್ಯ ಕಲ್ಪಿಸಿಕೊಡುವುದು ಸರಕಾರದ ಕರ್ತವ್ಯವಾಗಿದೆ. ಇಂತಹ ಸಂದರ್ಭದಲ್ಲಿ ಕೊಟ್ಟ ಸಹಾಯವು ಬಹುಕಾಲದ ವರೆಗೆ ಮರೆಯತಕ್ಕದಲ್ಲ!

ಬರ್ಮಾದಲ್ಲಿ ಜಪಾನರು ಮುಂದೊತ್ತಿಬಂದಂತೆ, ಭಾರತೀಯರು ಭೀತಿಪಡುವಂತಾಗಿದೆ. ಇದುವರೆಗೆ ಸಮುದ್ರ ಕರಾವಳಿಯ ಜನರು ಮಾತ್ರ ಜಲಮಾರ್ಗವಾಗಿ ಜಪಾನರು ಬಾಂಬೆಸೆವರೆಂದು ಅಂಜಿಕೊಂಡಿದ್ದರು, ಈಗ ಬರ್ಮಾದ ಅವಸ್ಥೆಯೂ ಮುಗಿದಬಳಿಕ ಜಪಾನರು ಸೀದಾ ವಿಮಾನಗಳ ಮೇಲೇರಿ ಭಾರತಕ್ಕೆ ಯಾಕೆ ಮುತ್ತಿಗೆ ಹಾಕಬಾರದು? ಅಂತೂ ಈ ತರದ ಭೀತಿಗಳುಂಟಾಗುವುದು ಸಹಜವಾದರೂ, ಜನರು ಈ ಕಾಲದಲ್ಲಿ ಬಹಳ ಧೈರ್ಯವಂತರಾಗಿರಬೇಕು, ಯುದ್ಧವೆಂಬುದು ಪ್ಲೇಗು ಮೊದಲಾದ ರೋಗದಂತೆ! ಅಂತಹ ರೋಗಗಳಿಂದ ಊರಿಗೆ ಊರೇ ನಾಶವಾಗುತ್ತದೆ, ಅದರಿಂದ ತಲೆತಪ್ಪಿಸಿಕೊಳ್ಳುವೆನೆಂಬವನು ಬದುಕಿಬಿಡುವನೆಂದೇನೂ ಹೇಳಬರುವುದಿಲ್ಲ. ಅಂತೂ ಇಂತಹ ಸಂದರ್ಭದಲ್ಲಿ ಅಪರಿಮಿತ ಧೈರ್ಯವಿರಬೇಕು; ಧೀರರಾಗಿದ್ದರೆ ಎಂತಹ ಗಂಡಾಂತರವನ್ನೂ ಎದುರಿಸಿ ಜಯಶಾಲಿಗಳಾಗಬಹುದು, ಇದಕ್ಕೆ ನಮ್ಮ ನೆರೆಕರೆಯ ಚೀನೀಯರೇ ನಮಗೆ ಉತ್ತಮ ನಿದರ್ಶನವಾಗಿದ್ದಾರೆ.

ಒಮ್ಮೆ 'ಜಪಾನರ ಧಾಳಿಯ ಭೀತಿಯುಂಟು, ನಗರಗಳನ್ನು ಬಿಟ್ಟು ಹೋಗಿ' ಎಂದು ಹೇಳಿದ ಸರಕಾರದವರೇ, ತಿರುಗಿ ಈಗ 'ಅಂತಹ ಅಂಜಿಕೆ ಏನೂ ಸದ್ಯಕ್ಕಿಲ್ಲ, ಮರಳಿ ನಗರಗಳಿಗೆ ಬನ್ನಿ' ಎಂದು ಪ್ರಕಟಿಸುತ್ತಿದ್ದಾರೆ, ಮದ್ರಾಸು ಮೊದಲಾದ ನಗರಗಳಿಂದ ಇತರ ಸ್ಥಳಗಳಿಗೆ ಸಾಗಿಸಲ್ಪಡ್ಡ ಕಚೇರಿಗಳು ತಿರುಗಿ ಮೊದಲಿದ್ದಲ್ಲಿಗೇ ತರಲಾಗಿವೆಯಂತೆ! ನಾಲ್ಕು ದಿನಗಳ ಮೊದಲು ಭೀತಿಯುಂಟೆಂದೂ, ಈಗ ಭೀತಿಯಿಲ್ಲೆಂದೂ ಸರಕಾರ ಪ್ರಕಟಿಸಿದರೆ ಅದನ್ನು ಜನರು ಎಷ್ಟರಮಟ್ಟಿಗೆ ನಂಬುವರೋ ನಂಬಲಾರರೋ ನಾವು ಹೇಳಲಾರೆವು, ಆದರೆ ಹೀಗೆ ಅವಸರವಸರವಾಗಿ ಬಿಟ್ಟು ಹೋಗಬೇಕೆಂದೂ ಕೆಲವೇ ದಿನಗಳಲ್ಲಿ ಮರಳಿ ಬರಬಹುದೆಂದೂ ಸರಕಾರವು ಪ್ರಕಟಿಸುವಾಗ ತಕ್ಕ ಕಾರಣಗಳನ್ನು ಕೊಡುವುದು ಯೋಗ್ಯವಾಗಿರುತ್ತದೆ. ಒಮ್ಮೆ ನಗರಗಳನ್ನು ಬಿಟ್ಟವರು ತಿರುಗಿ ಅಲ್ಲಿಗೆ ಹೋಗುವುದು ಕಷ್ಟ. ಏಕೆಂದರೆ ಅವರು ಅಲ್ಲಿಂದ ಹೊರಡುವಾಗಲೇ ಪೂರ್ಣ ನಿರ್ಧಾರಮಾಡಿ ಹೊರಟು ಬಿಡುತ್ತಾರೆ, ಅಥವಾ ತಿರುಗಿ ಹೋದರೆ ಮುಂದೆ ಅಪಾಯವಿಲ್ಲವೆಂದು ಹೇಳುವುದಕ್ಕಾದರೂ ಏನು ಆಧಾರವಿದೆಯೋ ಅವರಿಗೆ ತಿಳಿಯಲೊಲ್ಲದು. ನಗರವನ್ನು ಬಿಟ್ಟು ಹೋಗುವ ವಿಷಯ ಮುಖಂಡರಲ್ಲಿ ಭಿನ್ನಾಭಿಪ್ರಾಯವಿದೆ. ಗಾಂಧಿಜಿ ಹಳ್ಳಿಗೆ ಹೋಗಿರೆನ್ನುತ್ತಾರೆ. ರಾಜಾಜಿ ನೆಹರು ನಗರ ಬಿಡಕೂಡದೆನ್ನುತ್ತಾರೆ, ಆದರೆ ಮುಖಂಡರು ಇಂದು ಸರಕಾರವಲ್ಲ; ದೇಶದ ರಕ್ಷಣೆ ಸರಕಾರದ ಕೈಯಲ್ಲಿದೆ, ರಕ್ಷಣೆ ಮಾಡುವ ಸರಕಾರವು, ನಗರವನ್ನು ಬಿಟ್ಟುಹೋಗಿರೆನ್ನುವಾಗ, ಅಥವಾ ಬಿಟ್ಟುಹೋದವರು ಮರಳಿ ಬನ್ನಿರೆನ್ನುವಾಗ ಬಹಳ ದೀರ್ಘ ವಿಚಾರಮಾಡಬೇಕು; ಇಲ್ಲವಾದರೆ ವ್ಯವಸ್ಥೆಗಿಂತ ಗೊಂದಲವೇ ಹೆಚ್ಚಿದಂತಾಗುವುದು.

ಸ್ವದೇಶಾಭಿಮಾನಿ

ತಾರೀಕು . 8—5—1942

ತಿರಸ್ಕೃತ ನಿರ್ಣಯ

ರಾಜಾಜಿಯವರ 'ಮದ್ರಾಸು ನಿರ್ಣಯ'ವು ಅಖಿಲ ಭಾರತ ಕಾಂಗ್ರೆಸ್ ಕಮಿಟಿಯಿಂದ ತಿರಸ್ಕೃತವಾಯಿತು, ರಾಷ್ಟ್ರಕ್ಕೆ ರಾಷ್ಟ್ರವೇ ಆ ನಿರ್ಣಯದ ಕುರಿತು ವಿರುದ್ಧಾಭಿಪ್ರಾಯ ಪ್ರಕಟಿಸಿತು; ರಾಜಾಜಿಗೆ ಹೋದ ಹೋದೆಡೆಗಳಲ್ಲಿ ಕರಿನಿಶಾನೆಯ ಸ್ವಾಗತವೂ ದೊರಕಿತು; ಅಂತೂ ಇದರಿಂದಾಗಿ, ಅವರು ಕಾಂಗ್ರೆಸ್ ವರ್ಕಿಂಗ್ ಕಮಿಟಿಗೆ ರಾಜಿನಾಮೆ ಕೊಟ್ಟು ಹೊರ ಹೋಗಬೇಕಾಗಿಯೂ ಬಂತು!

ಹಿಂದು ಮುಸ್ಲಿಮರಲ್ಲಿ ಐಕ್ಯವಿರಬೇಕೆಂಬ ವಿಷಯ ಯಾರೂ ಭಿನ್ನಾಭಿಪ್ರಾಯವುಳ್ಳವರಾಗಿಲ್ಲ, ಕಾಂಗ್ರೆಸಿನ ರಚನಾತ್ಮಕ ಕಾರ್ಯಕ್ರಮದಲ್ಲಿ ಅದೂ ಒಂದಾಗಿದೆ. ಆದರೆ ರಾಷ್ಟ್ರಘಾತುಕವಾಗಿರುವ ಇಂತಹ ಹಿಂದು ಮುಸ್ಲಿಂ ಐಕ್ಯ ಸೂಚನೆಗೆ ಯಾರೂ ಒಪ್ಪಿಗೆ ಕೊಡುವಂತಿಲ್ಲ. ದೇಶವನ್ನು ಎರಡು ಭಾಗ ಮಾಡಲು ಒಪ್ಪಿಗೆ ಕೊಟ್ಟಾದರೂ ನಾವು ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಲು ಪ್ರಯತ್ನಿಸಬೇಕೆಂಬ ರಾಜಾಜಿಯವರ ಸೂಚನೆಯನ್ನು ಎಲ್ಲರೂ ಅಲ್ಲಗಳೆದರು

ರಾಜಾಜಿಯವರ ಈ ಸೂಚನೆಗೆ ಒಪ್ಪಿಕೊಂಡಿದ್ದಲ್ಲಿ, ಕಾಂಗ್ರೆಸು ತನ್ನ ಮೂಲಭೂತ ತತ್ವಕ್ಕೆ ವಿರುದ್ಧ ಹೋದಂತಾಗುತ್ತಿತ್ತು, ಕಾಂಗ್ರೆಸು ಮುಖ್ಯತಃ 'ಎರಡು ಜನಾಂಗ ವಾದ'ವನ್ನು ಮನ್ನಿಸುವುದಿಲ್ಲ, ಕಾಂಗ್ರೆಸು ಮುಸ್ಲಿಂ ಲೀಗನ್ನು ಮುಸ್ಲಿಮರ ಏಕಮಾತ್ರ ಪ್ರತಿನಿಧಿ ಸಭೆಯೆಂದು ಒಪ್ಪಿಕೊಳ್ಳುವುದಿಲ್ಲ. ಮುಸ್ಲಿಮರೊಡನೆ ಜಾತೀಯತೆಯ ವಿಷಯ ಒಪ್ಪಂದ ಮಾಡಿಕೊಳ್ಳಲು; ಕಾಂಗ್ರೆಸು ಹಿಂದೂ ಸಂಸ್ಥೆಯಾಗಿರುವುದಿಲ್ಲ! ಮದ್ರಾಸು ನಿರ್ಣಯವನ್ನು ಅಂಗೀಕರಿಸಿದ್ದರೆ ಕಾಂಗ್ರೆಸು ದಾರಿತಪ್ಪಿ ಹೋದಂತಾಗುತಿತ್ತು!

ಅಂತೂ ಕಾಂಗ್ರೆಸ್ ಕಮಿಟಿಯವರು ರಾಷ್ಟ್ರಕ್ಕೆ ಸರಿಯಾದ ದಾರಿ ತೋರಿಸಿದರು; ಮದ್ರಾಸು ನಿರ್ಣಯಕ್ಕೆ ಸಿಗಬೇಕಾದ ಮರ್ಯಾದೆ ಸಿಕ್ಕಿತು! 'ಪಾಕಿಸ್ಥಾನ'ವೆಂಬ ಮಾತು ಎಷ್ಟರಮಟ್ಟಿಗೆ ಇಡೀ ರಾಷ್ಟ್ರದ ಜನತೆಗೆ ಅಸಹ್ಯವಾಗಿದೆಯೆಂದು ತಿಳಿಯಿತು. ಅಖಂಡ ಭಾರತದ ಗೌರವವು ಉಳಿಯಿತು!

ರಾಜಾಜಿ ನಿರ್ಣಯವು ತಿರಸ್ಕೃತವಾದ ವಿಷಯ ಬಹುಮಂದಿ ದೇಶಾಭಿಮಾನಿಗಳು ಸಂತೋಷಪಡುತ್ತಾರೆ!

ಅಡ್ಡ ಹಾದಿಯೆ?

ತನ್ನ ನಿರ್ಣಯವು ತಿರಸ್ಕೃತವಾದ ಮಾತ್ರಕ್ಕೆ ರಾಜಾಜಿ ಸುಮ್ಮಗಾಗುವಂತೇನೂ ತೋರುವುದಿಲ್ಲ. ತನ್ನ ಅಭಿಪ್ರಾಯವನ್ನು, ಅವರು ಪ್ರಚಾರಪಡಿಸುತ್ತಿರುವರು. ಕಾಂಗ್ರೆಸಿನ ಇಂದಿನ ಧೋರಣೆ ಪ್ರಯೋಜನಕಾರಿಯಾಗಿಲ್ಲವೆಂದು ಅವರ ಅಭಿಮತ. ಕಾಂಗ್ರೆಸಿನ ರಾಜಮಾರ್ಗವನ್ನು ಬಿಟ್ಟು, ರಾಜಗೋಪಾಲಾಚಾರ್ಯರು, ಈಗ 'ಅಡ್ಡ ಹಾದಿ' ಹಿಡಿದು ಹೋಗುವಂತೆ ತೋರುತ್ತದೆ!

'ಇಂದಿನ ಪರಿಸ್ಥಿತಿಯಲ್ಲಿ ಕಾಂಗ್ರೆಸಿನ ಧೋರಣೆ ಸರಿಯಾಗಿಲ್ಲವೆಂದು ನನಗನಿಸುತ್ತದೆ. ಆದ್ದರಿಂದ ಕಾಂಗ್ರೆಸು ತನ್ನ ಧೋರಣವನ್ನು ಬದಲಾಯಿಸುವಂತೆ ನಾನು ಪ್ರಯತ್ನಿಸುವೆನು. ರಾಷ್ಟ್ರೀಯ ಸರಕಾರದ ಸ್ಥಾಪನೆಯಾದರೆ ನಮ್ಮ ಇಂದಿನ ಸಮಸ್ಯೆಗಳು ಬಗೆಹರಿವವು. ರಾಷ್ಟ್ರೀಯ ಸರಕಾರದ ಸ್ಥಾಪನೆಯಾಗಬೇಕಾದರೆ ಮುಸ್ಲಿಂ ಲೀಗಿನೊಡನೆ ಒಪ್ಪಂದ ಮಾಡಿಕೊಳ್ಳಬೇಕು. ಕಾಂಗ್ರೆಸಿನ ಇಂದಿನ ಧೋರಣವು ತಾಟಸ್ಥ್ಯದ್ದಾಗಿದೆ, ಜಪಾನರನ್ನು ಇದಿರಿಸಲು ರಾಷ್ಟ್ರೀಯ ಸೈನ್ಯಬೇಕು. ಇಂಥ ಸೈನ್ಯವು ರಾಷ್ಟ್ರೀಯ ಸರಕಾರದಿಂದಲೇ ಸಾಧ್ಯ'.

—ಹೀಗೆಂದು ರಾಜಗೋಪಾಲಾಚಾರ್ಯರು ವಾದ ಹೂಡಿದ್ದಾರೆ. ಹೀಗೆ ವಾದಿಸಲು ತಾನು ಕಾಂಗ್ರೆಸ್ ವರ್ಕಿಂಗ್ ಕಮಿಟಿಗೆ ರಾಜೀನಾಮೆ ಕೊಟ್ಟು ಸ್ವತಂತ್ರನಾಗಿದ್ದೇನೆಂದು ಅವರು ಹೇಳಿದ್ದಾರೆ. ರಾಜಾಜಿಯವರ ದೇಶಸೇವಾ ಕಾಂಕ್ಷೆ, ಕಾಂಗ್ರೆಸ್ ಭಕ್ತಿ, ಪ್ರಾಮಾಣಿಕತೆಗಳ ವಿಷಯ ಯಾರೂ ಸಂದೇಹಪೆತ್ತಲಾರರು. ಆದರೆ ರಾಜಾಜಿ, ಕಾಂಗ್ರೆಸಿನ ರಾಜಮಾರ್ಗ ಬಿಟ್ಟು ಹೀಗೆ ಅಡ್ಡ ಹಾದಿ ಯಾಕೆ ಹಿಡಿದರೆಂದು ಹಲವರಿಗೆ ಆಶ್ಚರ್ಯವಾಗಿದೆ. ಅಂತೂ ರಾಜಾಜಿಗೆ ಮುಂದೆ ದಾರಿತಪ್ಪಿ ಕಂಗೆಡುವ ಪ್ರಸಂಗ ಬಂದೊದಗಿದರೆ ನಮಗೆಲ್ಲರಿಗೂ ಬಹಳ ದುಃಖವೆನಿಸಿತು!

ಬರ್ಮಾದಿಂದ ಬರುವ ಭಾರತೀಯರು

ಬರ್ಮಾದಿಂದ ದೇಶಬಿಟ್ಟು ಬರುವ ಭಾರತೀಯರಿಗೆ ಬಂದೊದಗುವ ದುರಂತ ಸಂಕಷ್ಟಗಳ ವಿವರಗಳು ಇತ್ತೀಚೆಗೆ ಪ್ರಕಟವಾಗುತ್ತಿರುವುದನ್ನು ನೋಡಿ ಯಾವನ ಕಲ್ಲೆದೆಯಾದರೂ ಕರುಣೆಯಿಂದ ಕರಗಬೇಕಾಗಿದೆ! ತಾವು ನೆಲಸಿದ್ದ ದೇಶವನ್ನು ಬಿಟ್ಟುಬರುವ ಪ್ರಸಂಗ, ಬರ್ಮೀಯರು ಭಾರತೀಯರನ್ನು ಹೊರಹಾಕುವ ದೃಶ್ಯ ದೇಶಬಿಟ್ಟು ಬರಲು ಪ್ರವಾಸ ಸೌಕರ್ಯ ಕೊಡದಿರುವುದು ಮಾರ್ಗದಲ್ಲಿ ಅನ್ನಾಹಾರವಿಲ್ಲದೆ, ರೋಗರುಜಿಗಳಿಗೆ ತುತ್ತಾಗಿ ನರಳುವುದು ಅಧಿಕಾರಿಗಳ ಪಕ್ಷಪಾತ, ಕರಿಯ ಬಿಳಿಯ ಬಣ್ಣಭೇದ ಇವುಗಳ ಸಾವಿರಾರು ಸಂಭವಗಳ ಕತೆಗಳನ್ನು ನಾವಿಂದು ಕೇಳುತ್ತೇವೆ. ಪಂಡಿತ ಕುಂಜ್ರು ಮತ್ತು ಜವಾಹರಲಾಲ ನೆಹರುಗಳು ಈ ಹೃದಯ ವಿದ್ರಾವಕ ಸಂಗತಿಯನ್ನು ಇತ್ತೀಚೆಗೆ ಹೀಗೆಂದು ಬರೆದು ಪ್ರಕಟಿಸಿದ್ದಾರೆ

ಮಹಾಯುದ್ಧದಿಂದ ಜೀವಲೋಕಕ್ಕೆ ಒದಗಿದ ಹಲವು ದುರಂತಗಳಲ್ಲಿ ಬರ್ಮಾವನ್ನು ಬಿಟ್ಟುಬರುವ ಭಾರತೀಯರ ಈ ಸಂಕಷ್ಟವು ಒಂದಾಗಿದೆ ತಾವು ಚಿರಕಾಲದಿಂದ ಸ್ಥಿರವಾಗಿ ನೆಲೆನಿಂತ ಆ ದೇಶದಿಂದ, ಆ ಭಾರತೀಯರು ಇಂದು ಹೊರಹಾಕಲ್ಪಟ್ಟಿದ್ದಾರೆ, ಅದು ಆಕ್ರಮಿಸಿ ಬಂದ ಶತ್ರುವಿನಿಂದಲ್ಲ, ಜತೆಗೂಡಿ ಜೀವಿಸಿದ್ದ ಬರ್ಮೀಯರಿಂದಲೇ! ಅದರ ಮೇಲೆ ಸಾವಿರಾರು ಮೈಲುಗಳ ಮಾರ್ಗದಂತರವನ್ನು ದಾಟಿ, ದುರ್ಗಮ ಪರ್ವತ ವನ ದುರ್ಗಗಳನ್ನತಿಕ್ರಮಿಸಿ ಅವರು ಸ್ವದೇಶಕ್ಕೆ ಬರಬೇಕಾಗಿದೆ. ಇಂತಹ ಸಂದರ್ಭಗಳಲ್ಲಿ ಕಷ್ಟಗಳು ಬರುವುದು ಸಹಜವಾದರೂ, ಭಾರತ ಸರಕಾರವು ಸಾಕಷ್ಟು ಅನುಕೂಲಗಳನ್ನೊದಗಿಸಲಿಲ್ಲವೆಂಬುದನ್ನು ಕೇಳಿದರೆ ದುಃಖವಾಗದಿರದು. ಅದರಲ್ಲೂ ಅಧಿಕಾರಿಗಳು ವರ್ಣಭೇದ ಮಾಡುತ್ತಿರುವರೆಂಬುದು ಅತ್ಯಂತ ನಿಂದನೀಯವಾಗಿದೆ! ಸ್ವಯಂಸೇವೆ ಮಾಡುತ್ತಿರುವ ಹಲವು ಭಾರತೀಯ ಸಂಸ್ಥೆಗಳ ಸಹಾಯವನ್ನು ಸರಕಾರವು ಉಪೇಕ್ಷಿಸುತ್ತಿದೆಯೆಂಬ ಸುದ್ದಿಯನ್ನು ಕೇಳಿಯಂತೂ ಸಂತಾಪವಾಗುತ್ತಿದ್ದೆ.

FURTHER REDUCTIONS
IN
LENDING RATES

The busy trade season is coming to a close. Lending rates are naturally tending to be reduced. Even at the beginning of the season we had lowered our rates on loans and advances as our contribution to better business. A further reduction in accordance with seasonal conditions will be made early if the present conditions continue....

CANARA BANK, LIMITED
ESTD. 1906.

ನೋಟಗಳು....

ಹಿಂದುಸ್ಥಾನದ ಮೇಲೆ, ಜಪಾನ ಬಾಂಬಿನೊಡನೆ, 'ರಾಜಗೋಪಾಲಾಚಾರ್ಯರ 'ಬಾಂಬು'ಗಳೂ ಬೀಳತೊಡಗಿವೆ!

卐

ರಾಜಾಜಿಯವರ 'ಮದ್ರಾಸು ನಿರ್ಣಯ'ದಿಂದ ದೇಶದಲ್ಲಿ ಹುಟ್ಟಿದ ಗೊಂದಲವು, ಜಪಾನರು ವಿಶಾಖಪಟ್ಟಣ ಕೋಕನಾಡುಗಳ ಮೇಲೆ ಬಾಂಬೆಸೆದು ಉಂಟುಮಾಡಿದ ಗಾಬರಿಗಿಂತ ಯಾವದೇ ದೃಷ್ಟಿಯಿಂದಲೂ ಕಡಿಮೆಯದ್ದಾಗಿರಲಿಲ್ಲ!

卐

ಆದರೆ ಇಷ್ಟರವರೆಗೆ ಇವೆರಡರಿಂದಲೂ ದೇಶಕ್ಕೆ ಹೇಳುವಂಥಾ ಹಾನಿಯೇನೂ ಉಂಟಾಗಲಿಲ್ಲವೆಂಬುದು ವಿಷಾದಪಡಬೇಕಾಗಿಲ್ಲವಾದ ಸಂಗತಿ.

卐

'ಮದ್ರಾಸು ಪ್ರಾಂತವು ಪ್ರತ್ಯೇಕವಾಗಿ ನಿಲ್ಲಬೇಕಾಗುವುದು' ಎಂದು ರಾಜಾಜಿ ಇತ್ತೀಚೆಗೆ ಹೇಳಿದರಂತೆ! ಇದರ ಗೂಢವೇನೋ ನಮಗೆ ತಿಳಿಯದಾಗಿದೆ! ಹೇಗಿದ್ದರೂ ಇದು ರಾಜಾಜಿಯರ ಹೊಸ ಬಾಂಬು!

卐

'ಪಾಕಿಸ್ಥಾನ'ದ ಆಶೆ ಬಿಟ್ಟ ರಾಜಾಜಿಗೆ ಈಗ 'ದ್ರಾವಿಡಸ್ಥಾನ'ದ ಕನಸು ಕಟ್ಟುತ್ತಿದೆಯೋ ಯಾರು ಬಲ್ಲರು?

卐

ಹಾಗಾದರೆ, ರಾಮಸ್ವಾಮಿ ನಾಯಕರೊಡನೆ ರಾಜಗೋಪಾಲಾಚಾರ್ಯರು ಬೇಗನೇ ರಾಜಿ ಮಾಡಿಕೊಳ್ಳಬಹುದು!

卐

ರಾಜಾಜಿ ಯಾವುದನ್ನು ಮಾಡುವರು, ಯಾವುದನ್ನು ಮಾಡಲಿಕ್ಕಿಲ್ಲವೆಂದು ಇತ್ತೀಚೆಗೆ ಹೇಳುವುದೇ ಕಷ್ಟವಾಗಿದೆ!

卐

ಬಹುಕಾಲದಿಂದ ಗಾಂಧೀ ಶಿಷ್ಯರಾಗಿದ್ದ ರಾಜಾಜಿ ಅಹಿಂಸಾವಾದಿ ಒಮ್ಮೆಲೇ ಕೋವಿ ಹಿಡಿದು ರಣರಂಗಕ್ಕೆ ಇಳಿಯುವವೆನೆಂದು ಹಿಂಸಾಕ್ರಮಕ್ಕೆ ಸಿದ್ಧರಾದರು! ಪಾಪ! ರಾಜಾಜಿಯ ಕೈಗೆ ಬ್ರಿಟಿಷರು ಮಾತ್ರ ಕೋವಿ ಕೊಡಲೊಪ್ಪಲಿಲ್ಲ!

卐

ಹಿಂದೊಮ್ಮೆ ಜಿನ್ನರನ್ನು ರಾಷ್ಟ್ರೀಯ ಸರಕಾರದ ಮುಖ್ಯ ಮಂತ್ರಿಯಾಗಿ ಮಾಡಬಹುದೆಂದಿದ್ದರು! ಅದಕ್ಕೆ ಅಂದು ಜಿನ್ನರೇ ಸಮ್ಮತಿಸಲಿಲ್ಲ!

卐

ಮತ್ತೆ, ಮುಸ್ಲಿಮರಿಗೆ ಪಾಕಿಸ್ಥಾನ ಕೊಡಬಹುದೆಂದರು! ಕಾಂಗ್ರೆಸು ಅವರ ಆ ಮಾತಿಗೆ ಮನ್ನಣೆ ಕೊಡಲಿಲ್ಲ!

卐

ಈಗ ಮದ್ರಾಸು ಪ್ರಾಂತವು ಪ್ರತ್ಯೇಕಿಸಲ್ಪಡುವುದು ಎಂದು ಹೇಳುತ್ತಿದ್ದಾರೆ! ಕಡೆಗೆ ಮದ್ರಾಸು ಪ್ರಾಂತದವರೇ ಅವರನ್ನು ನಿರಾಶರಾಗಿ ಮಾಡದಿದ್ದರೆ ಸಾಕು!

卐

ಅಂತೂ ರಾಜಾಜಿಗೆ ಈಗ ಏನಾಗಿದೆ?

ಹರಿಜನವಾಣಿ

ಬ್ರಿಟನು ಹೊರಟುಹೋದರೆ ಜಪಾನ್ ಧಾಳಿಯಿಲ್ಲ

ಅಹಿಂಸಕ ವ್ಯಾಯಾಮ ಸಂಘ

ಬರ್ಮಾ ನಿರಾಶ್ರಿತರು

ದು ಪ್ರೋತ್ಸಾಹಿಸುವುದಕ್ಕಾಗಿ ಅಲ್ಲ

ಕಿಸ್ತಾನದ ಕುರಿತು ಗಾಂಧಿಜಿ ವಿವರ

'ಬಹುಸಂಖ್ಯಾಕ ಮುಸ್ಲಿಮರು, ತಾವೊಂದು ತ್ಯೇಕ ರಾಷ್ಟ್ರವಾಗಬೇಕೆಂದು ಭಾವಿಸಿದರೆ, ಗತ್ತಿನಲ್ಲಿರುವ ಯಾವ ಶಕ್ತಿಯೂ ಅದರ ವಿರುದ್ಧ ಲ್ಲಲು ಸಮರ್ಥವಾಗಲಾರದು' ಎಂದು ನೀವು ರೆದಿದ್ದೀರಿ. ಆ ಮಾತಿನ ಮೇರೆಗೆ, ಮುಸ್ಲಿಮರಿಗೆ ಹಿಂದುಸ್ತಾನವನ್ನು ವಿಭಜಿಸಬೇಕೆಂದಿದ್ದರೆ, ಹಿಂದುಗಳು ಅದಕ್ಕೆ ವಿರೋಧಮಾಡದಿದ್ದರೆ, ವಿಭಜನೆಯಾಗಲೇ ಬೇಕಾಗುವುದು. ಇಂಥ ಪದ್ಧತಿ ಎರಡು ಪಕ್ಷಗಳಿಂದಲೂ ಸಾವಕಾಶವಾಗಿ ಸಿದ್ಧವಾಗಿದೆ. ಮುಸಲ್ಮಾನರ ಮಟ್ಟಿಗೆ ಅಂಥ ಪದ್ಧತಿ ನಡೆದಿಲ್ಲೆಂದು ನಾನು ಹೇಳಬಲ್ಲೆ. ಇಂದಿನ ಗಂಡಾಂತರ ಪರಿಸ್ಥಿತಿಯಲ್ಲಿ ಆ ತರದ ಸಿದ್ಧತೆ ಮೂರ್ಖತನದ್ದು. ಆದರೆ ಹಿಂದುಗಳು ನಡೆಸಿದ ಪದ್ಧತಿ ನಿಮಗೆ ಗೊತ್ತಿರುವಾಗ, ಅವರನ್ನು ಅದರಿಂದ ಪರಾವೃತ್ತಗೊಳಿಸದಿರುವುದು ನಿಮ್ಮ ಮಹಾಪರಾಧವಲ್ಲವೆ? ನಿಜವಾಗಿಯೂ ನಿಮ್ಮದು ಹಿಂದುಗಳಿಗೆ ಪ್ರೋತ್ಸಾಹನವಾಗಿದೆ' ಹೀಗೆಂದು ಗಾಂಧಿಜಿಯವರಿಗೊಂದು ಪತ್ರ ಬಂದಿದೆ. ಅದಕ್ಕವರು ಈ ರೀತಿ ಉತ್ತರಿಸುತ್ತಾರೆ.

"ಇದು ನನಗೆ ಬಂದ ಪ್ರಶ್ನೆಗಳಲ್ಲಿ ಅತಿ ಸೌಮ್ಯವಾದುದು. ಈ ಬಗ್ಗೆ ನಾನು ಹೆದರಬೇಕಾಗಿಲ್ಲ; ನನ್ನ ಸಾರ್ವಜನಿಕ ಜೀವನದಲ್ಲಿ ಇಂಥ ಟೀಕೆ ಅನೇಕ ಸಲ ಆಗಿದೆ. ಪ್ರತಿಯೊಬ್ಬ ಸಾರ್ವಜನಿಕ ಕೆಲಸಗಾರನ ಹಣೆಬರೆಹವೇ ಇದು. ಟೀಕೆಯು ಅಜ್ಞಾನದಿಂದ ಕೂಡಿದ್ದರೆ ಅದರಿಂದ ಟೀಕಾಕಾರನಿಗೂ ಅವನು ಎತ್ತಿಹಿಡಿದ ಧ್ಯೇಯಕ್ಕೂ ಹಾನಿತಟ್ಟದಿರದು. ಸಮಂಜಸ ಬುದ್ಧಿಯ ಜನರು ಇಂಥ ಅಜ್ಞಾನದ ಟೀಕೆಗಳನ್ನು ತಡೆಯಲು ತಮ್ಮ ವರ್ಚಸ್ಸನ್ನು ಪ್ರಯೋಗಿಸುವರು. ಹಿಂದುಗಳು ನಡೆಸಿದ ಸಿದ್ಧತೆಯ ವಿಶಿಷ್ಟ ಜ್ಞಾನ ನನಗಿಲ್ಲ. ಮುಸಲ್ಮಾನರ ವಿಷಯ ನೀವು ಹೇಳುವುದು ಸತ್ಯವೇ ಆಗಿದ್ದರೆ ಒಂದೇ ಪಕ್ಷದ ಸಿದ್ಧತೆಯಿಂದ ಯಾವ ಹೋರಾಟವೂ ಆಗಲಾರದು. ಬಡಿದಾಡಲು ಯಾವಾಗಲೂ ಇಬ್ಬರೂ ಸಿದ್ಧರಿರಬೇಕು. ನನ್ನ ಜಾತಿ ಬಾಂಧವರನ್ನು ಪರಾವೃತ್ತಗೊಳಿಸಬೇಕೆಂದು ನೀವು ಬರೆಯುವಿರಿ. ಎಲ್ಲಾ ಭಾರತೀಯರೂ ನನ್ನ ಬಂಧುಗಳೆಂದು ನನ್ನ ಭಾವನೆ. ಆದ್ದರಿಂದ ಬಡಿದಾಡುವವನು ಯಾವನೇ ಇರಲಿ ಅವನನ್ನು ಪರಾವೃತ್ತಗೊಳಿಸಲು ನನ್ನ ಇಚ್ಛೆ. ಸ್ಪರ್ಧೆಯಲ್ಲಿ ಶಕ್ತಿಯೇ ನಿರ್ಣಾಯಕವಾಗದೆ, ವಿವೇಕವು ಮಹತ್ವಕ್ಕೆ ಪಡೆಯಬೇಕೆಂದು ನಾನಿದನ್ನು ಬರೆಯುತ್ತಿದ್ದೇನೆ."

ಅಹಿಂಸಕ ವ್ಯಾಯಾಮ ಸಂಘ

ಮಲಬಾರಿನಲ್ಲಿ ಅಹಿಂಸಕ ವ್ಯಾಯಾಮ ಸಂಘವು ಕೆಲದಿನಗಳಿಂದ ಸರ್ದಾರ್ ಪೃಥ್ವೀಸಿಂಗರ ಧುರೀಣತ್ವದಿಂದ (ಹಿಂದಿನ ಕ್ರಾಂತಿಕಾರಿ) ನಡೆಯುತ್ತಿದೆ. ಪೃಥ್ವೀ ಸಿಂಗರು ಅದರ ಅಧ್ಯಕ್ಷ. ಅದರ ಮಾರ್ಗದರ್ಶಕರು ಶ್ರೀ ಮ. ಫಡ್ಕೇ, ಶ್ರೀ. ತಿ. ನೇರ್ಕ್ಯದಾಸ ಬಿರ್ಲ, ಶ್ರೀ ಪುರುಷೋತ್ತಮ ಕಾಂಜಿ, ಮತ್ತು ಕೇಶವದೇವ ನೆವತಿ. ಯುವಕರಿಗೆ ಪೃಥ್ವೀಸಿಂಗರು ಶಿಕ್ಷಣ ಕೊಡುತ್ತಿರುವರು. ಪ್ರಾಂತಿಕ ಕಾಂಗ್ರೆಸ್ ಕಮಿಟಿಗಳು ಒಳ್ಳೇ ವ್ಯಕ್ತಿಗಳನ್ನು ಆಯ್ದು ಕಳುಹಿಸಿದರೆ ಮಾತ್ರ ಇದರ ಕೆಲಸ ಸುಸೂತ್ರವಾಗಿ ಸಾಗೀತು. ದೈಹಿಕ ಪೂರ್ಣ ಬೆಳವಣಿಗೆಯ ಜೊತೆಗೆ ಅಹಿಂಸೆಯ ಕೆಲಸಗಳನ್ನು ಹೇಗೆ ಮಾಡಬಹುದೆಂದು ಶಿಕ್ಷಣ ಕೊಡಲಾಗುವುದು. ಹಿಂಸೆಯಿಂದಲೇ ಭಾರತದ ಉದ್ಧಾರವೆಂದು ನಂಬಿದ್ದ ಸರ್ದಾರರೇ ಈಗ ಅಹಿಂಸೆಯ ಮಹಾತ್ಮ್ಯವನ್ನರಿತು ಈ ಶಿಕ್ಷಣ ಕೊಡುತ್ತಿದ್ದಾರೆ" ಎಂದು ಗಾಂಧಿಜಿ ಈ ಸಲದ ಹರಿಜನದಲ್ಲಿ ಬರೆದಿರುವರು.

ಬರ್ಮ ನಿರಾಶ್ರಿತರು

ಗಾಂಧಿಜಿ ಲೇಖನ

"ಬರ್ಮದಿಂದ ಬರುತ್ತಿರುವ ನಿರಾಶ್ರಿತರದ್ದು ಒಂದು ಹೃದಯ ವಿದ್ರಾವಕ ಕಥೆಯಾಗಿದೆ. ನಮ್ಮನ್ನೆದುರಿಸುತ್ತಿರುವ ಪರಿಸ್ಥಿತಿಯಲ್ಲಿ ಅಂತಹ ದುರಂತಗಳು ಅನಿವಾರ್ಯ. ನಾವೀಗ ಗಮನಿಸಬೇಕಾದವು ಎರಡು ಮುಖ್ಯ ವಿಷಯಗಳು; ಒಂದನೆಯದು ಶಕ್ಯವಿದ್ದಷ್ಟು ನಿರಾಶ್ರಿತರ ಕಷ್ಟನಷ್ಟಗಳನ್ನು ಕಡಿಮೆಮಾಡುವದು, ಎರಡನೆಯದು ಬ್ರಿಟಿಷರಿಗೂ ಭಾರತೀಯರಿಗೂ ಪಕ್ಷಪಾತ ಉಪಚಾರ ದೊರೆಯುತ್ತಿದೆಯೆಂದೆನ್ನಲಾಗುವ ಪ್ರಶ್ನೆ. ಬರ್ಮವನ್ನು ಬಿಟ್ಟು ಬರಲಿರುವವರ ಸಂಖ್ಯೆ ಇನ್ನೂ ೪ ಲಕ್ಷಕ್ಕೂ ಹೆಚ್ಚಿದೆಯೆಂದು ನನಗೆ ತಿಳಿದಿದೆ. ಅಂತಹವರಿಗೆ ಬರ್ಮಾದಲ್ಲಿ ಜೀವಿಸಿದು ಅಸಹ್ಯವಾಗಿದೆ. ಈಗಿರುವ ಯಾವ ಸಂಸ್ಥೆಯಿಂದಲೂ ಬಗೆಹರಿಸಲಸಾಧ್ಯವಾದಷ್ಟು ದೊಡ್ಡ ಪ್ರಶ್ನೆಯಿದು. ಅದಕ್ಕಾಗಿಯೇ ಒಂದು ಅಸುಳ ವೈಸ್ಯರ ತಾತ್ಪೂರ್ತಿಕ ಸಮಿತಿಯು ರಚನೆಯಾಗಬೇಕಾಗುತ್ತದೆ. ಬರ್ಮವನ್ನು ಬಿಡಲಿರುವ ೪ ಲಕ್ಷ ಜನರನ್ನು ಸುವ್ಯವಸ್ಥೆಯಿಂದಲೂ ಶೀಘ್ರವಾಗಿಯೂ ಬರ್ಮವನ್ನು ಬಿಟ್ಟು ಹೊರಡಲನುವಾಗಿ ಅವರು ಭಾರತದ ಮೇಲೆ ಕಾಲಿಟ್ಟ ಕೂಡಲೇ ಯೋಗ್ಯ ಸ್ಥಳಗಳಿಗೆ ಸಾಗುಹಾಕುವಂತೆ ಮಾಡುವದೇ ಆ ಸಮಿತಿಯ ಸಂಪೂರ್ಣ ಕರ್ತವ್ಯವಾಗಿರಬೇಕು. ಈ ಅಗತ್ಯ ಮಾನವ ಸೇವೆಯನ್ನು ಸಲ್ಲಿಸಲು ಜನರು ಮುಂದೆ ಬರುವರೆಂದು ನಂಬೋಣ."

'ಗೋರಿಲ್ಲಾ ಯುದ್ಧ ನಮಗೆ ಪರಕೀಯ'

ನೆಹರು ಮತ್ತು ರಾಜಾಜಿ ಕೊನೆಗೆ ತಿಳಿವರು

'ಗೋರಿಲ್ಲಾ ಯುದ್ಧಕ್ರಮ' ಮಾಡಬಹುದೆ?

ಗಾಂಧಿಜಿ ಅಭಿಪ್ರಾಯ

'ಜವಾಹಿರಲಾಲರು ನಿಮ್ಮ ಉತ್ತರಾಧಿಕಾರಿಯೆನ್ನುತ್ತೀರಿ, ಜಪಾನರ ವಿರುದ್ಧ ಗೋರಿಲ್ಲಾ ಯುದ್ಧಮಾಡಬೇಕೆಂದು ಅವರು ಹೇಳುತ್ತಾರೆ. ಬಹಿರಂಗ ಹಿಂಸೆಯನ್ನು ಅವರು ಪುರಸ್ಕರಿಸುವಾಗ, ರಾಜಾಜಿ ಇಡೀ ರಾಷ್ಟ್ರಕ್ಕೆ ಶಸ್ತ್ರಾಸ್ತ್ರ ಯುದ್ಧ ಶಿಕ್ಷಣ ಸಿಗಬೇಕೆನ್ನುವಾಗ ನಿಮ್ಮ ಅಹಿಂಸೆಯು ಗತಿಯೇನಾಯಿತು?' ಹೀಗೆ ಗಾಂಧಿಜೀಗೆ ಒಬ್ಬರು ಪ್ರಶ್ನೆ ಹಾಕಿದ್ದಕ್ಕೆ ಅವರು ಹೀಗೆಂದು ಉತ್ತರವೀಯುತ್ತಾರೆ

'ಉತ್ತರಾಧಿಕಾರಿ ಎಂಬ ಶಬ್ದ ನನ್ನದಲ್ಲ, ನಾನು ಹಿಂದಿಯಲ್ಲಿ ಮಾತನಾಡಿದ್ದೆ, ಅದರಲ್ಲಿ ಜವಾಹರಲಾಲರೇ ಮುಂದೆ ನನ್ನ ವಾರಿಸದಾರರೆಂದು ಜನರ ಅಭಿಪ್ರಾಯವಿದೆಯೆಂದು ಹೇಳಿದ್ದೆ, ಎಂದರೆ ನನ್ನ ಕಾಲದ ಬಳಿಕ ನನ್ನ ಸ್ಥಾನವನ್ನು ನೆಹರು ಪಡೆಯುವರು ಎಂದಿಷ್ಟೇ ಅರ್ಥ. ನನ್ನ ರೀತಿಯನ್ನು ನೆಹರು ಎಂದೂ ಸಂಪೂರ್ಣ ಒಪ್ಪಿಲ್ಲ ಅವರು ಸರಿಯಾಗಿ ಟೀಕಿಸಿದ್ದಾರೆ ಕಾಂಗ್ರೆಸಿನ ಕಾರ್ಯ ನನ್ನ ಸಲಹೆಯಂತೆ ಸಾಗದ ಕಾಲದಲ್ಲಿಯೂ ಅವರು ಅದನ್ನು ನಡೆಸಿಕೊಂಡು ತಮ್ಮ ವರ್ಚಸ್ಸು ಬೆಳೆಸಿದ್ದಾರೆ ನನ್ನನ್ನು ತಪ್ಪದೆ ಅನುಸರಿಸಿದ ಸರ್ದಾರ ಪಟೇಲರಂಥವರೂ ನನ್ನ ಉತ್ತರಾಧಿಕಾರಿಗಳಾಗಲಾರರು. ಇನ್ನಾರಿಗೂ ಇಲ್ಲದಷ್ಟು ಧೈರ್ಯ ಸಾಹಸ ನೆಹರುಗಳಿಗಿದೆಯೆಂದು ಎಲ್ಲರೂ ಒಪ್ಪುತ್ತಾರೆ ನಾನು ಸತ್ತ ಬಳಿಕ, ನನ್ನೊಡನೆ ಇರುವ ಅವರ ಅನೇಕ ಭಿನ್ನಾಭಿಪ್ರಾಯಗಳನ್ನು ಅವರು ಬಿಟ್ಟುಕೊಡಬಹುದು. ಆದರೆ ಏಕೋ ಗೋರಿಲ್ಲಾ ಯುದ್ಧದ ಬಗ್ಗೆ ಅವರಿಗೆ ಒಂದು ತರದ ಮೋಹವಿದೆ ನನಗೆ ಅದು ಸಮಾಧಾನವಿಲ್ಲ ಹಿಂದೀಯರಿಗೆ ಆ ರೀತಿಯು ಪರಕೀಯವಾದುದು ನೆಹರು ಮತ್ತು ರಾಜಾಜಿಯವರು ಬಹಳ ವರ್ಷಗಳಾದರೂ ನನ್ನ ೨೦ ವರ್ಷಗಳ ಸತತ ಬೋಧನೆಯ ಅಹಿಂಸಾ ತತ್ವವನ್ನು—ಅದು ಎಷ್ಟು ಅಪೂರ್ಣವಿದ್ದರೂ—ಒಮ್ಮಿಂದೊಮ್ಮೆಗೆ ಕಿತ್ತುಹಾಕುವುದು ಅವರಿಗೆ ಸಾಧ್ಯವಾಗದು. ತಮ್ಮ ಪ್ರಯತ್ನವು ವಿಫಲವಾದಾಗ, ಪರಾಜಯದಿಂದ ಮತ್ತಷ್ಟು ಶಕ್ತಿಗೂಡಿ ಪುನರುಜ್ಜೀವಿತ ಸಹನೆಯಿಂದ ತಿರುಗಿ ಅವರು ಅಹಿಂಸೆಯನ್ನೇ ಅನುಸರಿಸುವರು. ಹಿಂಸೆಯಲ್ಲಿ ವಿಶ್ವಾಸವಿಟ್ಟು ಅವರಲ್ಲಿ ಯಾರೂ ಆ ಮಾರ್ಗ ಅನುಸರಿಸುವುದಿಲ್ಲ ಅಹಿಂಸಾ ಮಾರ್ಗವು ಸ್ಥಿರವಾಗಬೇಕಾದರೆ ಮೊದಲೊಮ್ಮೆ ಹಿಂದುಸ್ತಾನದಲ್ಲಿ ಹಿಂಸೆ ನಡೆಯಬೇಕೆಂದು ಅವರ ಅಭಿಮತ. ಮುಂದೆ ಹೇಗಾಗಬಹುದೆಂದು ಯಾರೂ ಈಗ ಹೇಳಲಾರರು ಅವರ ನೈಸರ್ಗಿಕ ಆಂತರಿಕ ಭಾವನೆ ಸರಿಯಿದ್ದರೂ ಇರಬಹುದು. ಅನುಭವ ಸಿದ್ಧವಾದ ನನ್ನ ಭಾವನೆ ತಪ್ಪಿದರೂ ಇರಬಹುದು. ಆದರೆ ನನ್ನ ಮಾರ್ಗವು ನನಗೆಂದು ನಾನು ತಿಳಿದಿರುವೆನು. ಗೋರಿಲ್ಲಾ ಯುದ್ಧದಿಂದ ನಮಗೆ ಯಾವ ಲಾಭವೂ ಆಗಲಾರದು. ಪ್ರತಿಯೊಂದು ಬಗೆಯ ಹಿಂಸಾತ್ಮಕ ಯುದ್ಧ ಪ್ರತೀಕಾರವೆಂದರೆ ಅಹಿಂಸಾತ್ಮಕ ಅಸಹಕಾರ. ಬ್ರಿಟಿಷರ ವಿರುದ್ಧ ಇದು ಅಷ್ಟೊಂದು ಯಶಸ್ವಿಯಾಗಲಿಲ್ಲ ನಿಜ: ಏಕೆಂದರೆ ಅವರು ಇಲ್ಲಿ ಬಹುಕಾಲದಿಂದ ಬಂದು ನೆಲೆಯೂರಿದ್ದರು, ಜಪಾನರು ಹಾಗಲ್ಲ. ಹೆಜ್ಜೆಯಿಡುವಷ್ಟು ಸ್ಥಳ ಅವರಿಗೆ ಇಲ್ಲಿಲ್ಲ, ಸಂಭಾವದ ಮಾತುಕತೆಗಳು ವಿಫಲವಾದ ಮೇಲೆ ಅಧಿಕೃತ ಸಂಬಂಧವಿಲ್ಲದೆ, ಬ್ರಿಟಿಷ್ ಯುದ್ಧ ಪ್ರಯತ್ನಕ್ಕೆ ಹಿಂಸಾ ಮಾರ್ಗದಲ್ಲಿ ಬೆಂಬಲ ಕೊಡುವುದೆಂದರೆ ರಾಷ್ಟ್ರೀಯ ಅವಮಾನವನ್ನು ಆಮಂತ್ರಿಸಿದಂತೆಯೇ ಎಂದು ನನ್ನ ಭಾವನೆಯಾಗಿದೆ

ನೀವು ಜಪಾನರನ್ನು ಆಮಂತ್ರಿಸಿದಂತಾಗಲಿಲ್ಲವೆ?

ಗಾಂಧಿಜಿಯೊಡನೆ ಪ್ರಶ್ನೆ

'ಬ್ರಿಟಿಷ್ ಸರಕಾರದವರು ಇಲ್ಲಿಂದ ಹೊರಟುಹೋಗಬೇಕೆಂದು ನೀವು ಹೇಳುವುದರಿಂದ, ಜಪಾನರಿಗೆ ಇಲ್ಲಿಗೆ ಬರಲು ಆಮಂತ್ರಣ ಕೊಟ್ಟಂತೆ ಆಗುವುದಿಲ್ಲವೇ?' ಎಂದು ಗಾಂಧಿಜಿಯವರೊಡನೆ ಕೇಳಿದ ಪ್ರಶ್ನೆಗೆ ಅವರು ಹೀಗೆಂದು ಉತ್ತರ ಕೊಡುತ್ತಾರೆ

'ಬ್ರಿಟಿಷರು ಇಲ್ಲಿರುವುದರಿಂದ ಜಪಾನರಿಗೆ ಇಲ್ಲಿಗೆ ಬರಲು ಪ್ರೋತ್ಸಾಹ ದೊರೆಯುತ್ತದೆಂದು ನನ್ನ ನಂಬಿಕೆಯಾಗಿದೆ. ಆದ್ದರಿಂದ ಬ್ರಿಟಿಷರು ಇಲ್ಲಿಂದ ಹೊರಟುಹೋಗಿ, ಭಾರತದ ವಿಚಾರ ಭಾರತೀಯರಿಗೇ ಬಿಟ್ಟುಕೊಟ್ಟರೆ ಜಪಾನರು ಪುನರ್ವಿಚಾರ ಮಾಡಬೇಕಾಗುವುದು ಬ್ರಿಟಿಷರ ಈ ಹೊಸ ಧೋರಣದಿಂದ ಜಪಾನರು ವಿಚಾರ ಗೊಂದಲದಲ್ಲಿ ಬೀಳುವರು. ಬ್ರಿಟಿಷರ ಬಗೆ ಇದ್ದ ದ್ವೇಷ ಬಿಟ್ಟುಬಿಡುವರು. ಹಿಂದೀ ಜೀವನವನ್ನು ನಾಶಮಾಡುವ ಅನೇಕ ಅಸ್ವಾಭಾವಿಕ ಸಂಗತಿಗಳು ಮಾಯವಾಗುವವು. ನನಗೆ ತಿಳಿದಂತೆ, ಹಿಂದೀಯರ ಅಭಿಪ್ರಾಯವನ್ನು ಲಕ್ಷಿಸದೆ, ಜಪಾನರು ತಮ್ಮ ಯೋಜನೆಗಳನ್ನು ಮಾಡಿರುವರು ನನ್ನ ಬರವಣಿಗೆಯಿಂದ ಜಪಾನರಿಗೆ ಯಾವುದೇ ಪರಿಣಾಮ ಆಗುವುದಿಲ್ಲ. ಆದರೆ ಬ್ರಿಟಿಷರಿಗೆ ನಾನು ಸ್ವೀಕರಿಸಲು ಹೇಳಿದ ಮಾರ್ಗದಿಂದ ಅವರು ಗೊಂದಲದಲ್ಲಿ ಬೀಳುವರು



ನೋಟೀಸು

ಪಡುಬಿದ್ರಿ ಮಾಗಣೆ ನಡಿಸಾಲು ಗ್ರಾಮದ ಬಿಡಾಡಿ ದೊಡ್ಡು ಶೆಡ್ತಿಯಿಂದ ಮೋಸದಿಂದ ಹೆಬ್ಬೆಟ್ಟಿನ ಗುರುತನ್ನು ಕೊಂಡುಹೋಗಿರುವರು. ಇವು ಯಾವದೊಂದು ಕಾನೂನಿಗೆ ಸಿಂಧಾಗಬೇಕಾದರೂ ಅವಳ ಹಿರಿಯ ಮಗನಾದ ಎಲ್ಲಪ್ಪ ಶೆಟ್ಟಿ ವ ನನ್ನ ತಮ್ಮ ಬೋಜು ಶೆಟ್ಟಿ ಕೂಡಿದ ಪಕ್ಷಕ್ಕೆ ಅದು ಸಿಂಧಾಗತಕ್ಕದ್ದು. ಇಲ್ಲದಿದ್ದರೆ ಯಾವ ರಿಕಾರ್ಡ ಸಿಂಧಾಗತಕ್ಕದ್ದಲ್ಲವೆಂದು ಈ ಮೂಲಕ ತಿಳಿಸುತ್ತೇನೆ. ಪರಮೋಶದಲ್ಲಿ ಕೈ ಹೆಬ್ಬೆಟ್ಟಿನ ಗುರುತು ~~ಕೊಂಡುಹೋಗುವ ಸಮ~~ಯ ನಾನು ವ ನನ್ನ ತಮ್ಮ ಬೋಜು ಇಬ್ಬರೂ ಊರಲ್ಲಿರಲಿಲ್ಲ. ಬೊಂಬಾಯಿಗೆ ಹೋಗಿದ್ದೆವು. ~~ಆದ್ದರಿಂದ ಆ ಹೆಬ್ಬೆಟ್ಟಿನ ಗುರುತನ್ನು ಪ್ರಯೋಗಿಸಿ~~ ಯಾವ ರಿಕಾರ್ಡು ಮಾಡಿದರೂ ಅದು ಸಿಂಧಾಗತಕ್ಕದ್ದಲ್ಲ ಎಂದು ~~ಈ ಮೂಲಕ ತಿಳಿಸಿರುತ್ತೇನೆ.~~

ಎಲ್ಲಪ್ಪ ಶೆಟ್ಟಿ.

ಬ್ರಿಟಿಷರು ಮಡಗಾಸ್ಕರನ್ನು ವಶಪಡಿಸಿದರು?

ಮಡಗಾಸ್ಕರ್ ಬ್ರಿಟಿಷ್ ವಶವಾಯಿತು?

ಹೆಚ್ಚಿನ ಯಾವ ಪ್ರಯಾಸವೂ ಇಲ್ಲದೆ ಮಡಗಾಸ್ಕರ್ ಬ್ರಿಟಿಷರ ವಶವಾಗಿದೆಯೆಂದು ಅನ್ಯಂಶದ ಸುದ್ದಿ. ಇದು ಫ್ರೆಂಚ್ ಸಾಮ್ರಾಜ್ಯಾಂತರ್ಗತವಾದ ರಾಷ್ಟ್ರ ಸೈನಿಕ ಆಯಕಟ್ಟಿನ ಸ್ಥಳವಾಗಿದ್ದು ಇದರ ಸ್ವಾಧೀನಗೊಳಿಸಿದ್ದು ಮಹತ್ವದ ಸಂಗತಿಯಾಗಿರುವುದು.

ರಂಗೂನಿನ ಹೃದಯುದ್ರಾವಕ ಕಥೆ

ರಂಗೂನ್ ಮೈಲ್ ಸಂಪಾದಕರ ಲೇಖನ

ರಂಗೂನ್ ಮೈಲ್ ಪತ್ರಿಕೆಯ ಸಂಪಾದಕರಾದ ಶ್ರೀ. ಭಟ್ಟಾಚಾರ್ಯರೆಂಬವರು, ರಂಗೂನಿನ ಹೃದಯದ್ರಾವಕ ಕಥೆಯನ್ನು ಒಂದು ಲೇಖನ ಬರೆದು ವಿವರಿಸಿದ್ದಾರೆ. ಪ್ರಥಮ ಧಾಳಿಯಾದಾಗ ಕಂಗೆಟ್ಟ ಸ್ಥಿತಿ, ನಗರವು ನಿರ್ಜನವಾಗಿ ಆಸ್ಪತ್ರೆಗಳ ರೋಗಿಗಳೂ ಶುಶ್ರೂಷಾರಹಿತರಾದುದು, ಸೈನ್ಯಾಧಿಕಾರಿಗಳು, ಸೊತ್ತು ವಾಹನಗಳನ್ನು ವಶಪಡಿಸುವುದರಲ್ಲಿ, ನಗರಬಿಟ್ಟು ಹೋಗುವಾಗ ಸ್ಥಳ ಒದಗಿಸುವುದರಲ್ಲಿ ಹಿಂದೀಯರಿಗೇ ಹೆಚ್ಚಿನ ತೊಂದರೆ ಕೊಡುತ್ತಿದ್ದು ವರ್ಣಭೇದ ತೋರಿಸುತ್ತಿದ್ದುದು, ರಂಗೂನ್ ನಗರದಲ್ಲಿ ಸಾಕಷ್ಟು ರಕ್ಷಣೆ ಇಡದೆ, ಪೋಲೀಸರೂ ಕೂಡಾ ಬಿಟ್ಟು ಹೋದುದು, ಹುಚ್ಚರನ್ನು ಕ್ರಿಮಿನಲ್ ಕೈದಿಗಳನ್ನೂ ಒಮ್ಮೆಲೇ ಬಿಟ್ಟುಬಿಟ್ಟು ನಗರದ ಶಾಂತಿ ವ್ಯವಸ್ಥೆ ಕೆಡಿಸಿ ಗೊಂದಲ ಹುಟ್ಟಿಸಿದುದು, ಆದರೂ ಬರ್ಮಾದ ಮುಖ್ಯ ಮಂತ್ರಿ ಬಾ ಮ್ಹಾನಂಥ ರಾಜಕೀಯ ಕೈದಿಗಳನ್ನು ಬಿಡದಿರುವುದು ಮೊದಲಾದ ಕಣ್ಣಾರೆಕಂಡ ವಿಷಯಗಳನ್ನು ಬಹಳ ಮರ್ಮಿಕವಾಗಿ ಒಂದು ಲೇಖನದಲ್ಲಿ ಬರೆದು ಡಿಲ್ಲಿಯ 'ಹಿಂದುಸ್ತಾನ್ ಟೈಮ್ಸ್' ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿದ್ದಾರೆ. ಶತ್ರುವು ಭಾರತದ ಬಾಗಿಲಿಗೆ ಬಂದಿರುವಾಗ, ಇದರಿಂದ ನಾವು ಬಹಳ ಪಾಠ ಕಲಿತುಕೊಳ್ಳಬೇಕಾಗಿದೆಯೆಂದು ಅವರು ಎಚ್ಚರಿಸಿದ್ದಾರೆ. ನಮ್ಮ ಆಳರಸರು ಯಾವ ರೀತಿಯ ಧೋರಣೆ ವಹಿಸಿರುವರೆಂದು ಸ್ಪಷ್ಟಪಡಿಸಿದ್ದಾರೆ. ಲೇಖನದ ಕೊನೆಯಲ್ಲಿ ಈ ಕೆಲವು ಸೂಚನೆಗಳನ್ನಿತ್ತಿರುವರು. ೧) ಎಂಥಾ ಸಂದರ್ಭ ಬಂದರೂ ಪೋಲೀಸರನ್ನು ಹೊರಗೆ ಕಳುಹಿಸಬಾರದು ೨) ರಾಜಕೀಯ ಕೈದಿಗಳನ್ನು ಬಿಡಬೇಕಲ್ಲದೆ ಕ್ರಿಮಿನಲ್ ಕೈದಿಗಳನ್ನೂ ಹುಚ್ಚರನ್ನೂ ಬಿಡಕೂಡದು ೩) ನಾಗರಿಕರ ರಕ್ಷಣೆಗಾಗಿ ಕೆಲವು ದಲಗಳನ್ನೇರ್ಪಡಿಸಿ ಅವರಿಗೆ ಶಸ್ತ್ರಾಸ್ತ್ರಗಳನ್ನೊದಗಿಸಿಕೊಡಬೇಕು ೪) ಜನರ ನಿತ್ಯೋಪಯೋಗೀ ವಸ್ತುಗಳನ್ನು (ಮೋಟರು ಇತರ ವಾಹನ ಮೊದಲಾದವುಗಳನ್ನು) ಒಮ್ಮೆಲೇ ಕಸಿದುಕೊಳ್ಳಬಾರದು. ಅಂಥ ಸಂದರ್ಭ ಬಂದರೆ ಬೇರೆ ವ್ಯವಸ್ಥೆ ಮಾಡಬೇಕು, ಹಾಗೂ ಪರಿಹಾರ ದ್ರವ್ಯವನ್ನು ಕೂಡಲೇ ಕೊಡಬೇಕು ೫) ಅವಶ್ಯವಿರುವ ಕೂಲಿಗಾರರಿಗೆ ಮತ್ತು ನೌಕರರಿಗೆ ನಗರದ ಸಮೀಪ ಬೇರೆ ವ್ಯವಸ್ಥೆ ಮಾಡಬೇಕು. ರಂಗೂನಿನಲ್ಲಿ ಇದರ ಅಭಾವದಿಂದಲೇ ಜೀವನಾಡಿ ಒಮ್ಮೆಲೇ ತಪ್ಪಿಬಿಟ್ಟಿತು.

ಅಲ್ಲಾಬಾದಿನಲ್ಲಿ ಅಖಿಲ ಭಾರತ ಕಾಂಗ್ರೆಸ್ ಕಮಿಟಿ ಸಭೆ

೮ ನಿರ್ಣಯಗಳು ಮಂಜೂರಾದುವು!

'ಮದ್ರಾಸು ನಿರ್ಣಯ' ತಿರಸ್ಕೃತವಾಯಿತು

ಅಲ್ಲಾಬಾದಿನಲ್ಲಿ ಇತ್ತೀಚೆಗೆ ಸೇರಿದ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಅಧಿವೇಶನವು ಹಲವು ವಿಷಯಗಳಿಂದ ಅತ್ಯಂತ ಮಹತ್ವದ್ದಾಗಿದೆ. ಕ್ರಿಪ್ಸರು ಸಂಧಾನ ಮಾಡಲು ಬಂದುಹೋದ ಮೇಲೆ, ವಿಶಾಖಪಟ್ಣ ಕೋಕನಾಡುಗಳಿಗೆ ಬಾಂಬು ಬಿದ್ದ ಮೇಲೆ ಭಾರತೀಯರು ತಮ್ಮ ಮುಂದಿನ ಮಾರ್ಗವೇನೆಂದು ಗೊಂದಲಗೊಂಡಿರುವ ಕಾಲದಲ್ಲಿ ಅಖಿಲ ಭಾರತ ಕಾಂಗ್ರೆಸು ಕಮಿಟಿಯು ಸಭೆ ಸೇರಿ ಮುಂದಿನ ಮಾರ್ಗವನ್ನು ನಿರ್ಣಯಿಸಿ ಮಾಡಿ ಹೇಳಿತು. ಈ ಸಂದರ್ಭದಲ್ಲಿ ಮದ್ರಾಸು ಶಾಸನ ಸಭಾಸದಸ್ಯರ ಮೂಲಕ ರಾಜಾಜಿ ತಂದ ನಿರ್ಣಯವೊಂದು ಬಹಳ ಗೊಂದಲವನ್ನೂ ಚರ್ಚೆಗೆ ಅವಕಾಶವನ್ನೂ ಕೊಟ್ಟಿತು. ಅಂತೂ ಅಖಿಲ ಭಾರತ ಕಾಂಗ್ರೆಸ್ ಕಮಿಟಿ ಕೊನೆಗೆ ಸರಿಯಾದ ಮಾರ್ಗವನ್ನು ತೋರಿಸಿತು.

ಬರ್ಮಾದಿಂದ ಬರುವ ಭಾರತೀಯರ ಸಂಕಷ್ಟಗಳು

ಎ. ಐ. ಸಿ. ಸಿ. ಅಧಿವೇಶನದ ನಿರ್ಣಯಗಳು

ಎ ಐ ಸಿ ಸಿಯಲ್ಲಿ ಒಟ್ಟು ೮ ನಿರ್ಣಯಗಳು ಮಂಜೂರಾಗಿವೆ. ಸರಕಾರದವರು ಎರಡು ನಿರ್ಣಯಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಬಾರದಾಗಿ ತಿಳಿಸಿದ್ದಾರೆ, ಹಾಗಾಗಿ ನಾವು ಏನೂ ಆ ಕುರಿತು ಬರೆಯಲು ಉಪಾಯವಿಲ್ಲ. ಮೊದಲನೆಯ ನಿರ್ಣಯ ಕ್ರಿಪ್ಸರ ಸೂಚನೆಗೆ ಸಂಬಂಧಿಸಿತ್ತು. ಎರಡನೆಯದು ಮತ್ತು ಮೂರನೆಯದು ಕ್ರಮವಾಗಿ ನಿರಾಶ್ರಿತರ ಗೋಳು ಮತ್ತು ಅದರ ಪರಿಹಾರ ವಿಷಯವಾಗಿತ್ತು. ನಾಲ್ಕನೆಯದು ಯುದ್ಧ ಧೋರಣೆಯ ವಿಷಯ ಕಾಂಗ್ರೆಸಿನ ಮುಖ್ಯ ನಿರ್ಣಯ, ರಾಜಾಜಿಯವರ 'ಪಾಕಿಸ್ತಾನಕ್ಕೆ ಒಪ್ಪುವ' ನಿರ್ಣಯ ಐದನೆಯದು. ಆರನೆಯದು ಜಗತ್ ನಾರಾಯಣಲಾಲರ ನಿರ್ಣಯವು ನಮ್ಮ ದೇಶದ ಪ್ರಾಮುಖ್ಯ ಸಮಸ್ಯೆಗಳೆಲ್ಲಾ ಈ ಮೇಲಿನ ನಿರ್ಣಯಗಳಲ್ಲಿ ಅಡಕವಾಗಿವೆ.

ಬ್ರಿಟಿಷರು ಕಾಮನ್ಸ್ ಸಭೆಯಲ್ಲಿ, ಕ್ರಿಪ್ಸರು ಭಾಷಣ ಮಾಡಿ ಅವರ ಸೂಚನೆಗಳ ವಿಷಯ ಕೊಂಡಾಡುತ್ತಿದ್ದಂತೆ ಇತ್ತ, ಭಾರತದಲ್ಲಿ ಕಾಂಗ್ರೆಸ್ ಕಮಿಟಿ ಸಭೆ ಸೇರಿ ಅವರ ಸೂಚನೆಯು ತಿರಸ್ಕೃತವಾದೆಯೆಂದು ತಿಳಿಸಿತು. ಕಾಂಗ್ರೆಸು ಅರ್ಥಹೀನ ಸವಿವಾತುಗಳ ವಿಷಯಗಳ ಕಡೆಗೆ ಮನಸ್ಸು ಕೊಡದೆ ತಿರುಳನ್ನು ಮಾತ್ರ ತೆಕ್ಕೊಳ್ಳುವುದೆಂದು ಇದರಿಂದ ತಿಳಿದುಬಂತು. ರಾಷ್ಟ್ರಪತಿ ಅಜಾದರು ೯೦ ಮಿನಿಟುಗಳ ಉಜ್ವಲ ಭಾಷಣ ಮಾಡಿ ಕ್ರಿಪ್ಸ್ ಯೋಜನೆ ನಿಸ್ಸಾರತ್ವವನ್ನು ವಿಶದಪಡಿಸಿದರು. 'ಬ್ರಿಟಿಷರು ಒಪ್ಪಂದದ ಸಲುವಾಗಿ ಇನ್ನು ಮುಂದೆ ಬರುವುದಿಲ್ಲ' ಎಂದು ಕಾಂಗ್ರೆಸು ನಿರ್ಣಯಿಸಿತು.

ಯುದ್ಧದ ವಿಚಾರದಲ್ಲಿ ಮಾಡಿದ ನಿರ್ಣಯದ ಸಾರಾಂಶವಿದು 1) ಸ್ವತಂತ್ರ ಹಿಂದುಸ್ತಾನವು ಮಾತ್ರ ತನ್ನ ಪರರಾಷ್ಟ್ರ ಧೋರಣವನ್ನು ನಿರ್ಧರಿಸಬಲ್ಲುದು 2) ಆಕ್ರಮಣಗಾರರಿಗೆ ತಲೆಬಾಗಿಸದೆ ನಾವು ಅಹಿಂಸಾತ್ಮಕ ಅಸಹಕಾರದಿಂದ ಅವರನ್ನು ವಿರೋಧಿಸುವೆವು 3) ಈ ಗಂಡಾಂತರದಿಂದ ಪಾರಾಗಬೇಕಾದರೆ ನಾವು ಆತ್ಮಾವಲಂಬಿಗಳಾಗಬೇಕು ಮತ್ತು ಆತ್ಮರಕ್ಷಣೆ ಮಾಡಿಕೊಳ್ಳಬೇಕು. ಆದರೆ ಬ್ರಿಟಿಷರು ಭಾರತೀಯರನ್ನು ತಮ್ಮ ಸೊತ್ತಾಗಿ ಗ್ರಹಿಸಿ, ತಮ್ಮ ಲಾಭ ಮಾಡಿಕೊಳ್ಳಲು ಯತ್ನಿಸುತ್ತಿರುವುದು. ಹಿಂದುಸ್ತಾನದಲ್ಲಿ ಅಪಾರ ಮಾನವಶಕ್ತಿಯಿದ್ದರೂ ಅದನ್ನು ಉಪಯೋಗಿಸದೆ ಪರದೇಶದ ಸೈನ್ಯ ತರುವುದು ಇವುಗಳನ್ನು ಖಂಡಿಸಿ ಬ್ರಿಟಿಷರೊಡನೆ ಮಾಡುವ ಅಸಹಕಾರವು, ಶತ್ರುವಿಗೆ ಕೊಡುವ ಸಹಾಯವಲ್ಲವೆಂದು ತಿಳಿಸಿ, ಆಕ್ರಮಣಗಾರರೊಡನೆ ಕೈಕೊಳ್ಳಬೇಕಾದ ಧೋರಣೆಯ ವಿಷಯವನ್ನು ವ್ಯಕ್ತಪಡಿಸಿರುತ್ತದೆ.

ರಾಜಾಜಿಯವರ 'ಮದ್ರಾಸು ನಿರ್ಣಯ'ವು ಪ್ರಬಲ ಬಹುಮತದಿಂದ ತಿರಸ್ಕೃತವಾಯಿತು. ದೇಶಕ್ಕೆ ದೇಶವೇ ರಾಜಾಜಿಯವರ ನಿರ್ಣಯದ ಕುರಿತು ಬಹಳ ಗೊಂದಲಹುಟ್ಟಿಸಿತು. ಅದರಲ್ಲಿರುವ ಪಾಕಿಸ್ತಾನಕ್ಕೆ ವಿರೋಧವಾಗಿ ಜಗತ್ ನಾರಾಯಣಲಾಲರು ಒಂದು ಠರಾವು ತಂದರು. ಅದು ಮಂಜೂರಾಯಿತು. ಇದರಿಂದ ಪಾಕಿಸ್ತಾನಕ್ಕೆ ಒಪ್ಪಿಗೆ ಕೊಡುವುದು ಭಾರತೀಯರಿಗೆ ಎಷ್ಟರ ಮಟ್ಟಿಗೆ ಅಸಮ್ಮತವಾಗಿದೆಯೆಂಬುದು ತಿಳಿದುಬಂತು.

ಬರ್ಮಾ ನಿರಾಶ್ರಿತರ ಬಗ್ಗೆ ನೆಹರುಗಳ ಹೇಳಿಕೆ

"ಬರ್ಮಾದಿಂದ ಬರುವ ಹಿಂದೀಯರ ಕಷ್ಟವನ್ನು ಹೇಳಲಸದಳ. ಬರ್ಮೀಯರಂತೂ ಅವರನ್ನು ದ್ವೇಷಿಸುತ್ತಿದ್ದರು, ಅಧಿಕಾರಿಗಳು ತಿರಸ್ಕರಿಸುತ್ತಿದ್ದರು. ಹೀಗಾಗಿ ದೇಶತ್ಯಾಗ ಮಾಡುವ ಭಾರತೀಯರು ಅನಾಥರಾಗಿದ್ದರು. ಪ್ರತಿದಿನ ಸುಮಾರು ೧೦೦೦ ಜನ ಹೊರಟು ಒರುತ್ತಿದ್ದರು. ದೇಶತ್ಯಾಗಿಗಳು ಬರಲು ಎರಡು ಮಾರ್ಗವಿದೆ. ಒಂದು ಬಿಳಿ ಮಾರ್ಗ, ಇನ್ನೊಂದು ಕರಿ ಮಾರ್ಗ, ಬಿಳೀ ಮಾರ್ಗ ಯೂರೋಪಿಯನರಿಗೆ, ಕರಿಮಾರ್ಗ ಭಾರತೀಯರಿಗೆ, ಒಬ್ಬ ಭಾರತೀಯನು ಚಡ್ಡಿ ಹಾಕಿ ಬಿಳೀ ಮಾರ್ಗದಲ್ಲಿ ಬಂದನು. ಸೀರೆಯುಟ್ಟ ಅವನ ಹೆಂಡತಿಗೆ ಆ ಮಾರ್ಗದಲ್ಲಿ ದಾರಿ ಸಿಗಲಿಲ್ಲ. ಮಾರ್ಗದಿಂದ ಪ್ರಯಾಣಮಾಡಬೇಕಾದರೆ ಅಪ್ಪಣೆಬೇಕು, ಭಾರತೀಯರಿಗೆ ಅಪ್ಪಣೆ ದೊರಕುವುದು ಕಷ್ಟ. ಯೂರೋಪಿಯನರಿಗೂ ಯೂರೋಪಿಯನ್ ವಂಶದ ಬರ್ಮೀಯರಿಗೂ ಬೇಗ ಅಪ್ಪಣೆ ಸಿಗುತ್ತದೆ. ಭಾರತೀಯರು ಮರದ ಬುಡದಲ್ಲಿರಬೇಕು. ದೇಶ ತ್ಯಾಗಿಗಳಿಗೆ ಸರಕಾರವು ಉದ್ಯೋಗ ಕೊಡುವ ಏರ್ಪಾಡಿದೆ. ಅಲ್ಲಿನ ದೊಡ್ಡ ದೊಡ್ಡ ಅಧಿಕಾರಿಗಳಿಗೆ—ಯೂರೋಪಿಯನರಿಗೆ—ಇಲ್ಲಿ ಉದ್ಯೋಗ ಸಿಗುತ್ತದೆ. ಸಣ್ಣ ನೌಕರರಿಗೆ ಭಾರತೀಯರಿಗೇ ಭಾರತದಲ್ಲಿ ನೌಕರಿ ಕೊಡಲ್ಪಡುವುದಿಲ್ಲ. ಅಸಾಮ್ ಕಡೆಯ ನೌಕರರೊಬ್ಬರು ತಮ್ಮ ಗಿರಣಿಯಲ್ಲಿನ ಕೆಲ ಸಾವಿರ ದೇಶತ್ಯಾಗಿಗಳಿಗೆ ಆಶ್ರಯ ಕೊಡುತ್ತೇನೆಂದು ಹೇಳಿದ್ದಕ್ಕೆ ಸರಕಾರ ಒಪ್ಪಲಿಲ್ಲ. ಇವರಿಗೆ ಹಿಂದೀಯ ಧರ್ಮ ಸಂಸ್ಥೆಯವರೂ ಧರ್ಮಾರ್ತರೂ ಊಟಹಾಕಿ ಪೋಷಣೆಮಾಡುತ್ತಾರೆ" ಹೀಗೆಂದು ನೆಹರು ಒಂದು ಹೇಳಿಕೆ ಹೊರಡಿಸಿದ್ದಾರೆ.

ಪಂಡಿತ ಕುಂಜ್ರು ಹೇಳಿಕೆ

"ಭಾರತೀಯರಿಗೆ ಬರ್ಮಾದಲ್ಲಿ ಹೇಗೂ ಕಷ್ಟ, ಭಾರತಕ್ಕೆ ಮುಟ್ಟಿದೊಡನೆ ಕಷ್ಟ ನಿವಾರಣೆಯಾಗುವುದೆಂಬ ಭರವಸೆ ಅವರಿಗಿರುತ್ತದೆ. ಇಲ್ಲಿನ ಅಧಿಕಾರಿಗಳು ಅವರಿಗೆ ಸುಖ ಕೊಡುವುದು ಬಿಟ್ಟು ಅವರನ್ನು ನೀಚರೆಂಬಂತೆ ನಡೆಸುತ್ತಾರೆ. ಪರಮಾವಧಿ ಪೀಡೆ ಕೊಡುತ್ತಾರೆ. ಪೋಲೀಸರು ಹೊಡೆಯುತ್ತಾರೆ. ಸರಿಯಾದ ಸೌಕರ್ಯವಿಲ್ಲ, ಸೌಕರ್ಯವೆಲ್ಲಾ ಯೂರೋಪಿಯನರಿಗೆ ಊಟದ ವ್ಯವಸ್ಥೆಯಿಲ್ಲ. ಮಾರವಾಡಿ ಸಂಘ, ರಾಮಕೃಷ್ಣ ಮಿಶನ್ ಇವುಗಳ ಸಹಕಾರ ಪಡೆಯಲೊಪ್ಪಲಿಲ್ಲ. ವಿಮಾನದಿಂದ ತರುವುದು ಮುಖ್ಯವಾಗಿ ಯೂರೋಪಿಯನರನ್ನೇ. ಹಿಂದುಸ್ಥಾನದ ಪಾರತಂತ್ರ್ಯದ ಫಲವಿದು!" ಹೀಗೆಂದು ಪಂಡಿತ ಕುಂಜ್ರೂ ಬರೆದಿದ್ದಾರೆ.

ವರ್ಕಿಂಗ್ ಕಮಿಟಿಗೆ ರಾಜಾಜಿ ರಾಜಿನಾಮೆ

ನಿರ್ಣಯ ತರುವ ಮೊದಲು ಸಲಹೆ ಕೇಳಬೇಕಿತ್ತು

ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸದಸ್ಯತ್ವಕ್ಕೆ ರಾಜಾಜಿಯವರು ರಾಜಿನಾಮೆಯಿತ್ತಿರುವರು. ಮದ್ರಾಸು ನಿರ್ಣಯವನ್ನು ತರುವ ಮೊದಲು ಅವರು ವರ್ಕಿಂಗ್ ಕಮಿಟಿ ಸದಸ್ಯರ ಅಭಿಪ್ರಾಯ ಕೇಳದಿರುವ ತಪ್ಪನ್ನು ಒಪ್ಪಿಕೊಂಡು ಅದರ ಸಲುವಾಗಿ ತನ್ನ ರಾಜಿನಾಮೆ ಒಪ್ಪಿಸಿದರು. ಕಾಂಗ್ರೆಸ್ ಅಧ್ಯಕ್ಷರು ಅವರ ರಾಜಿನಾಮೆಯನ್ನು ಅಂಗೀಕರಿಸಿದರು.

'ಕಾಂಗ್ರೆಸ್ ಠರಾವು ಪ್ರಕಟಿಸಕೂಡದು'

ಸರಕಾರದ ಆಜ್ಞೆ

ಅಲ್ಲಾಬಾದಿನಲ್ಲಿ ಸೇರಿದ ಕಾಂಗ್ರೆಸ್ ಕಮಿಟಿಯ ಎರಡು ಠರಾವುಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಬಾರದಾಗಿ ಸರಕಾರದ ಆಜ್ಞೆಯಿದೆ. ಅದು ರಂಗೂನಿನಲ್ಲಿ ನಗರ ಬಿಟ್ಟು ಬರುವವರಿಗೆ ನಡೆದ ಘಟನೆಗಳು ಹಾಗೂ ಹಿಂದುಸ್ಥಾನದಲ್ಲಿ ನಡೆದ ಘಟನೆಗಳು ಆಗಿವೆ. ಅಂತೆಯೇ ಸ್ತ್ರೀಯರ ಕುರಿತು ಸೈನಿಕರು ವರ್ತಿಸಿದ ವಿಷಯ ಮಾಡಿದ ಠರಾವೂ ಪ್ರಕಟಿಸಬಾರದಾಗಿ ತಿಳಿಸಲಾಗಿದೆ. ಬರ್ಮಾ ಮಲಯ ಮೊದಲಾದ ಕಡೆಗಳಿಂದ ಬಂದ ಭಾರತೀಯ ನಿರಾಶ್ರಿತರಿಗೆ ಯೋಗ್ಯ ವ್ಯವಸ್ಥೆ ಮಾಡದಿರುವ ವಿಷಯ, ಮತ್ತು ಕೆಲ ಸಂದರ್ಭಗಳಲ್ಲಿ ಅವರನ್ನು ಕೆಟ್ಟ ರೀತಿಯಿಂದ ನೋಡಿದ ವಿಷಯ ಸಂತಾಪ ಸೂಚಿಸುವ ಠರಾವೊಂದನ್ನು ಕಾಂಗ್ರೆಸ್ ವರ್ಕಿಂಗ್ ಕಮಿಟಿ ಅಂಗೀಕರಿಸಿದೆ. ಸರಕಾರದ ಈ ಅನುದಾರ ಧೋರಣೆಯಿಂದ ಸರಕಾರೀ ಅಧಿಕಾರಿಗಳ ಅಯೋಗ್ಯತೆ ಅಜಾಗರೂಕತೆ ಹಾಗೂ ಸ್ವಾರ್ಥದ ಪರಿಣಾಮವಾಗಿ ಮಲಯ ಬರ್ಮಾ ದೇಶಗಳ ಅಸಂಖ್ಯಾತ ಭಾರತೀಯರು ತಮ್ಮ ಸರ್ವಸ್ವವನ್ನು ಕಳಕೊಂಡದ್ದು ಮಾತ್ರವಲ್ಲದೆ, ಹಾದಿಯಲ್ಲಿ ಮೃತಪಟ್ಟದ್ದು ರೋಗಿಗಳಾದವರಿಗೆ ಒಳಗಾದುದೇ ಮೊದಲಾದ ಕಷ್ಟ ಪರಂಪರೆಗಳಿಗೆ ತುತ್ತಾದ ವಿಷಯ ಹೀಗಾಗದಂತೆ ಸರಕಾರವು ನೋಡಿಕೊಳ್ಳುವ ವಿಷಯವೂ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಒಂದು ನಿರ್ಣಯ ಮಾಡಿರುವುದು.

ಮಂಗಳೂರು

ಅಂತರ್ ಜಾತೀಯ ವಿವಾಹ

ಕಳೆದ ತಾ ೩೦ರಂದು ಶ್ರೀ ಕೆ ವೈ ಪೂಜಾರಿ, ಎಡ್ವೊಕೇಟ್ ಇವರ ಭವನದಲ್ಲಿ ಬಿಲ್ಲವ ಜಾತಿಯ ಶ್ರೀ. ಜೆ ಪಿ ಸುವರ್ಣ ಮತ್ತು ಬಂಟರ ಜಾತಿಯ ಶ್ರೀಮತಿ ಲಲಿತಾ ಇವರೊಳಗೆ ನಡೆದ ವಿವಾಹದ ಪ್ರಯುಕ್ತ ಸತ್ಕಾರ ಕೂಟವೊಂದು ನೆರವೇರಿತು. ಮಂಗಳೂರಿನ ವಿದ್ಯಾವಂತ ಗೃಹಸ್ಥರನೇಕರು ನೆರೆದಿದ್ದರು. ಶ್ರೀಯುತ ಲಕ್ಷ್ಮಣ ದೇವ ವಿದ್ಯಾರ್ಥಿಯವರು ವಧೂವರರ ಪರಿಚಯ ಮಾಡಿಕೊಟ್ಟು ಅಂತರ್ ಜಾತೀಯ ಮತ್ತು ಪ್ರೇಮ ವಿವಾಹಗಳ ಕುರಿತು ಶ್ಲಾಘನೀಯವಾದ ಭಾಷಣವಿತ್ತ ಬಳಿಕ ಶ್ರೀ ವೈದ್ಯಗುರು ಡಾಕ್ಟರ್ ಎಂ. ಆರ್ ಭಟ್ಟರವರೂ ತಮ್ಮ ಭಾಷಣದಿಂದ ಈ ವಿವಾಹವನ್ನು ಸಮರ್ಥಿಸಿದುದಲ್ಲದೆ ವಧೂವರರನ್ನು ಆಶೀರ್ವದಿಸಿದರು. "ಸತ್ಯವಾನ್ ಸಾವಿತ್ರಿ" ಎಂಬ ಹರಿಕಥೆಯೊಡನೆ ಸಭಾ ಮುಕ್ತಾಯವಾಯಿತು.

ಉಷ್ಣಕಾಲದಲ್ಲಿ ನಿಮ್ಮ ಕಂಠದ ಕುರಿತು ಜಾಗ್ರತೆ ತೆಕ್ಕೊಳ್ಳಿರಿ

ಶ್ವಾಸಯೋಗ್ಯ ಮಾತ್ರೆ ಪೆಪ್ಸುಗಳನ್ನು

ಪೆಪ್ಸು ನಿಮ್ಮ ಬಾಯಲ್ಲಿ ಹಾಕಿದ ಕೂಡಲೇ ಕರಗಿ ಅತ್ಯುತ್ತಮ ಔಷಧರಸವನ್ನು ಹೊರಗೆಡುವುದು. ಆದರಿಂದ ಕಂಠಬೇನೆ, ಉರಿಶೀತ, ಎದೆನೋವು ಮೊದಲಾದ ಶೀತಬಾಧೆಗಳು ಗುಣಹೊಂದುವುವು. ಕ್ರಯ ಒಂದು ರೂಪಾಯಿ.

ಪೆಪ್ಸು ತೆಕ್ಕೊಳ್ಳಿರಿ.

PEPS

ವಿಷಹಾರಿ ಶ್ವಾಸಯೋಗ್ಯ ಮಾತ್ರೆಗಳು

'ಪಾಕಿಸ್ತಾನ'ದ ಕನಸು ಹೇಗಿದೆ ಬಲ್ಲಿರಾ?

ಉತ್ಪತ್ತಿ, ಯೋಜನೆ, ಆಂದೋಲನಗಳ ವಿವರಗಳು

['ಪಾಕಿಸ್ತಾನ' ಎಂದರೆ ದೇಶಾಭಿಮಾನಿ-ಭಾರತೀಯನು ಕಿಡಿಕೆಂಡವಾಗುತ್ತಾನೆ! ಅಖಂಡ ಭಾರತವನ್ನು ಹರಿದು ಹಂಚುವ ಈ ವಿಷ ಬೀಜವನ್ನು ಯಾರು ಬಿತ್ತಿದರು? ಯಾರು ಬೆಳೆಸಿದರು? ಎಂಬ ವಿಷಯ ಶ್ರೀ. ಮಿರ್ಜಿ ಅಣ್ಣಾರಾಯರವರು ಕೆಲವು ಸಂಗತಿಗಳನ್ನು ಸಂಗ್ರಹಿಸಿ 'ಜಯಂತಿ'ಯಲ್ಲಿ ಒಂದು ಲೇಖನ ಬರೆದಿದ್ದಾರೆ. ಅದರ ವಿವರವನ್ನು ನಾವಿಲ್ಲಿ ಕೊಟ್ಟಿದ್ದೇವೆ.]

ಭರತಖಂಡವು ಒಂದು ರಾಷ್ಟ್ರವಿದೆ; ಎಲ್ಲ ದೃಷ್ಟಿಯಿಂದಲೂ ಸ್ವಾವಲಂಬಿಯಾಗಿರಲು ತಕ್ಕದಾದ ಅಖಂಡ ದೇಶವಿದೆ. ಇದನ್ನು ಎರಡು ಭಾಗ ಮಾಡುವುದರ ಪರಿಣಾಮವು ತನುವಿನಲ್ಲಿ ತುಂಡುಗಡಿದುದ್ದರ ಪರಿಣಾಮಕ್ಕೆ ಸಮನಾದುದು. * 'ಹಂಚಿ ಆಳು' ಎಂಬ ನೀತಿಯನ್ನು ಅನುಸರಿಸುವ ಅರಸರೂ ಅಂಥವರಿಗೆ ಬೆಂಬಲಕೊಡುತ್ತಲಿದ್ದಾರೆ ಇವರೆಲ್ಲರೂ ಮಾಡಬಯಸುವಪಾಕಿಸ್ತಾನದ ಸ್ವರೂಪವಾದರೂಏನು?

ಮೊದಲು 'ಪಾಕಿಸ್ತಾನ್' ಎಂಬ ಶಬ್ದವನ್ನು ಕೆಂಬ್ರಿಜ್ ವಿಶ್ವವಿದ್ಯಾನಿಲಯದಲ್ಲಿ ಅಭ್ಯಾಸ ಮಾಡುವ ಭಾರತೀಯ ಮುಸಲ್ಮಾನ್ ವಿದ್ಯಾರ್ಥಿಯೊಬ್ಬನು ರಚಿಸಿದನು. ಅವನು ಪಂಜಾಬ, ಅಫಗಾನಿಸ್ತಾನ್, ಕಾಶ್ಮೀರ, ಮತ್ತು ಸಿಂಧ ಪ್ರಾಂತಗಳ ಮೊದಲಕ್ಷರಗಳನ್ನೂ, ಬಲುಚಿಸ್ತಾನದ ಕೊನೆಯ 'ಸ್ತಾನ'ವನ್ನೂ ಸೇರಿಸಿ 'ಪಾಕಿಸ್ತಾನ್' ಎಂಬ ಶಬ್ದವನ್ನು ಸಿದ್ಧಮಾಡಿದನು. ಆಗ ಅವನ ವಿಚಾರವಿಷ್ಟು: ಭಾರತದ ಮುಸಲ್ಮಾನರು ಭಾರತದ ಪಾಕಿಸ್ತಾನದಲ್ಲಿ ಬಂದು ಸೇರಬೇಕು. ಎಂದರೆ ಯುರೋಪ್ ಖಂಡದಲ್ಲಿಯ ತುರ್ಕಸ್ತಾನದಂತೆ ಇದೂ ಒಂದು ಮುಸಲ್ಮಾನರ ಸ್ವತಂತ್ರ ರಾಜ್ಯವಾಗುವುದು—ಎಂದು. *

೧೯೩೦ನೆಯ ಇಸ್ವಿಯಲ್ಲಿ ಮುಸ್ಲೀಮ್‌ಲೀಗಿನ ಅಧಿವೇಶನ ಲಖನೌದಲ್ಲಿ ಸೇರಿದ್ದಿತು. ಅದರ ಅಧ್ಯಕ್ಷರಾಗಿದ್ದ ದಿವಂಗತ ಸರ್ ಇಕಬಾಲ್ ಅವರು ಈ ಪಾಕಿಸ್ತಾನದ ವಿಷಯವನ್ನು ಎತ್ತಿ ಹಿಡಿದರು. ಇಷ್ಟೇ ಅಲ್ಲ, ಅದಕ್ಕಾಗಿ ದೇಶತುಂಬ ಚಳವಳ ಹೂಡಲೂ ಹೇಳಿದರು. ಅದರಂತೆ ಸ್ವತಃ ಕಾರ್ಯವನ್ನೂ ಕೈಕೊಂಡರು ಅವರಿಗೆ ದಿ. ಫಜಲಿ ಹುಸೇನ್ ಮೊದಲಾದವರು ಸಹಾಯಕರಾಗಿ ಕೆಲಸ ಮಾಡಿದರು. ಇದರ ಪರಿಣಾಮವಾಗಿ ಪಾಕಿಸ್ತಾನದ ಯೋಜನೆಗೆ ಚೈತನ್ಯ ಸಿಕ್ಕಿದಂತಾಯಿತು.*

* ಪ್ರಸ್ಥಾಪಿತ ಸಂಘಶಾಸನದಲ್ಲಿ ತಮಗೆ ಸಾಕಷ್ಟು ಸ್ಥಳಗಳು ಸಿಕ್ಕಲಿಲ್ಲ—ಒಂದು ವೇಳೆ ಬ್ರಿಟಿಷ್ ಹಿಂದುಸ್ಥಾನದಲ್ಲಿ ಸಿಕ್ಕಿವರೂ ಸಂಸ್ಥಾನಗಳಲ್ಲಿ ಸಿಕ್ಕುವ ಸಂಭವವಿಲ್ಲ' ಎಂಬುದೂ ಒಂದು ಕಾರಣವಾಯಿತು ಪಾಕಿಸ್ತಾನದ ಸ್ವಪ್ನ ಕಾಣಲಿಕ್ಕೆ.

ಪಾಕಿಸ್ತಾನದ ವಿಚಾರಕ್ಕೆ ಪುಟ ದೊರೆಯಲೆಂದು ದೇಶ ತುಂಬ ಮುಸಲ್ಮಾನರು ಚಳವಳ ಹೂಡಿದರು ಆ ದೃಷ್ಟಿಯಿಂದ ಕಾರ್ಯಮಾಡಲು ಪಂಜಾಬ್, ಹೈದರಾಬಾದ್‌ಗಳಲ್ಲಿ ಕಾರ್ಯಾಲಯಗಳನ್ನು ಕೂಡ ತೆರೆದರು ಆದರೆ ಅವುಗಳಿಗೆ ಆ ಅರ್ಥದ ಹೆಸರನ್ನು ಮಾತ್ರ ಇರಿಸಿತಲಿಲ್ಲ ಹೈದರಾಬಾದಿನಲ್ಲಿರುವ ಸಂಸ್ಥೆಯನ್ನು 'ಮುಸ್ಲಿಮ್ ಕಲ್ಚರ್ ಸೊಸೈಟಿ' ಎಂದು ಕರೆದರೆ ಪಂಜಾಬದಲ್ಲಿರುವುದನ್ನು 'ಮುಸ್ಲಿಂ ಬ್ರಾದರ್ ಹುಡ್' ಎಂದು ಕೂಗಿದರು. ಅವುಗಳ ಕಾರ್ಯ ಮಾತ್ರ ಅದೇನೋ 'ಗೋಚರ್ಮವನ್ನು ಹೊತ್ತ ಹುಲಿಯಂತೆ' ಎನ್ನುತ್ತಾರಲ್ಲ—ಹಾಗೆ ಇದ್ದಿತು.

ಹೈದರಾಬಾದಿನಲ್ಲಿರುವ ಸಂಘದ ಪ್ರಧಾನ ಕಾರ್ಯಕರ್ತರು ಶ್ರೀ. ಸೈಯದ್ ಅಬ್ದುಲ್ ಲತೀಫ್ ಸಾಹೇಬ್ ಎಂಬವರು, ಇವರು ೧೯೩೯ನೆಯ ಇಸ್ವಿಯಲ್ಲಿ ಲಾಹೋರಿನಲ್ಲಿ ಕೂಡಿದ ಮುಸ್ಲಿಂ ಲೀಗಿನ ಅಧಿವೇಶನದಲ್ಲಿಯೆ, ಆ ಆದೇಶದ ಪ್ರಕಾರ ಪಾಕಿಸ್ತಾನದ ರೂಪ-ರೇಖೆಗಳು ಹೇಗಿರಬೇಕೆಂಬ ಯೋಜನೆಯೊಂದನ್ನು ಸಿದ್ಧಪಡಿಸಿದರು. ಆ ಯೋಜನೆಯ ಮೊದಲು ಮಾತಿನಲ್ಲಿ ಅವರು ಹೇಳುವುದು ಹೀಗೆ: 'ಭಾರತವು ಒಂದು ರಾಷ್ಟ್ರವಲ್ಲ. ಇಲ್ಲಿ ಭಿನ್ನ ಭಿನ್ನ ಜಾತಿಯ ಜನರು ವಾಸಿಸುತ್ತಾರೆ. ಅವರಲ್ಲಿ ಸಾಂಸ್ಕೃತಿಕ ಐಕ್ಯ ಇಲ್ಲವೇ ಇಲ್ಲ. ಇಸ್ಲಾಂ ಹಾಗೂ ವೈದಿಕ ಧರ್ಮಗಳಲ್ಲಿ ಬಹಳಷ್ಟು ಅಂತರವಿದೆ. ಸಾಮಾಜಿಕ ದೃಷ್ಟಿಯಿಂದಲೂ ಎರಡೂ ಬೇರೆಬೇರೆಯಾಗಿವೆ. ಇಷ್ಟೇ ಏಕೆ? ಒಂದಕ್ಕೊಂದು ವಿರೋಧವಾಗಿಯೂ ಇವೆ. ಭಾರತದಲ್ಲಿ ಇವೆಲ್ಲ ಜಾತಿಗಳಲ್ಲಿ ಐಕ್ಯತೆಯ ಕೊರತೆ ಇರುವಾಗ, ಭಾಷೆಯ ದೃಷ್ಟಿಯಿಂದಲಾದರೂ ಐಕ್ಯತೆಯಿದೆಯೆನ್ನಬೇಕೆ? ಅದೂ ಇಲ್ಲ! ಅದೂ ಹೋಗಲಿ, ಇವೆರಡೂ ಸಂಸ್ಕೃತಿಗಳಿಗೆ ಸಮಾನವಾದ ಬೇರೆ ದೇಶೀಯ ಭಾಷೆಯಾದರೂ ಇದೆಯೇ? ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ಭಾರತವು ಅಖಂಡವಾಗಿರುವದು ಅಶಕ್ಯವು ಅದರಿಂದ ಇದನ್ನು ಎರಡು ಭಾಗ ಮಾಡುವುದಗತ್ಯವು. ಅಲ್ಲದೆ ಬಹು ಸಂಖ್ಯಾಕ ಹಿಂದುಗಳಲ್ಲಿ ಅಲ್ಪ ಸಂಖ್ಯಾಕ ಮುಸಲ್ಮಾನರಿರುವುದೂ ಅವರಿಗೆ ಸುರಕ್ಷಿತವಲ್ಲ.'

ಇವೆಲ್ಲ ಮಾತುಗಳ ಆಧಾರವಿಟ್ಟು ಲತೀಫ್ ಸಾಹೇಬರು, ಭರತ ಖಂಡವನ್ನು ಅದರ ಸಂಸ್ಕೃತಿ ಧಾರ್ಮಿಕತೆಗಳ ತಳಹದಿಯ ಮೇಲೆ ಹದಿನೈದು ತುಂಡುಗಳನ್ನಾಗಿ ವಿಭಾಗಿಸಿದ್ದಾರೆ. ಅವುಗಳಲ್ಲಿ ನಾಲ್ಕು ಮುಸಲ್ಮಾನರಿಗೆ, ಉಳಿದವುಗಳು ಹಿಂದುಗಳಿಗೆ. ಪಾಕಿಸ್ತಾನದಲ್ಲಿ ಬರುವ-ಅವರು ತೆಕ್ಕೊಳ್ಳಬಯಸುವ ನಾಲ್ಕು ತುಂಡುಗಳೆಂದರೆ (೧) ಉತ್ತರ ಪಶ್ಚಿಮ ಮಂಡಲ—ಪಂಜಾಬ, ಸರಹದ್ದ ಪ್ರಾಂತ, ಕಾಶ್ಮೀರ, ಖೈರಪುರ್, ಭಾವಲಪುರ್, ಸಿಂಧ, ಬಲುಚಿಸ್ತಾನಗಳಿಂದ ಕೂಡಿದ್ದು ಇಲ್ಲಿ ವಾಸಿಸುವ ಸಿಖ್ ಹಿಂದೂ ಜನರು ಅಲ್ಲಿಂದ ಹೊರಟು, ಕಾಶ್ಮೀರದ ಪೂರ್ವ ಭಾಗದಲ್ಲಿಯೂ ಕಾಂಗಡಾದ ಹಿಂದೂ ಭಾಗದಲ್ಲಿಯೂ ಹೋಗಿ ನೆಲೆಸಬೇಕು ಅದರಂತೆ ಕಾಶ್ಮೀರದ ಮಹಾರಾಜರಿಗೆ ಏನನ್ನಾದರೂ ಪ್ರತಿಕ್ರಿಯಕೊಟ್ಟು ಅವರ ರಾಜ್ಯದ ಕೆಲವು ಭಾಗವನ್ನು ಪಾಕಿಸ್ತಾನಕ್ಕೆ ಕೂಡಿಸಿಕೊಳ್ಳುವುದು (೨) ಉತ್ತರ-ಪೂರ್ವಭಾಗ—ಇದರಲ್ಲಿ ಆಸಾಮು—ಬಂಗಾಲಗಳು ಸೇರಿವೆ ಇಲ್ಲಿಯ ಹಿಂದುಗಳು ಬಿಹಾರ ಪ್ರಾಂತದಲ್ಲಿ ಹೋಗಿ ನೆಲೆಸಬೇಕು ಅಲ್ಲಿಯ ಮುಸಲ್ಮಾನರು ಬಂಗಾಲ-ಆಸಾಮದಲ್ಲಿ ಬಂದು ಇರಬೇಕು. (೩) ದಿಲ್ಲಿ ಲಖನೌ ವಿಭಾಗ—ಇದರಲ್ಲಿ ಸಂಯುಕ್ತ ಪ್ರಾಂತ, ಬಿಹಾರದೊಳಗಿನ ಮುಸಲ್ಮಾನರ ಸ್ಥಳಗಳು ಸೇರುವುವು. ಅಲ್ಲಿರುವ ಮಥುರಾ, ಹರಿದ್ವಾರ ಮೊದಲಾದ ಹಿಂದೂ ತೀರ್ಥಗಳ ಮೇಲೆ ಹಿಂದುಗಳ ಅಧಿಕಾರ ಉಳಿಯುವುದು. ಆ ಕ್ಷೇತ್ರ ಸ್ಥಳದಲ್ಲಿ ಕೆಲವು ಹಿಂದುಗಳು ವಾಸಿಸಲೂ ಕೂಡ ಅಧಿಕಾರವು ಇದೆ. ಅವರಿಗೆ ಮುಸಲ್ಮಾನರಿಂದ ಏನೂ ತೊಂದರೆಯಾಗಲಿಕ್ಕಿಲ್ಲ. (೪) ದಕ್ಷಿಣ ವಿಭಾಗ—ಇದರಲ್ಲಿ ಹೈದರಾಬಾದ್, ಮದ್ರಾಸ ಇಲಾಖೆಯ ಕೆಲವು ಭಾಗಗಳೂ ಸೇರಿವೆ. ಹೀಗೆ ನಾಲ್ಕು ಪ್ರಾಂತಗಳು ಪಾಕಿಸ್ತಾನಕ್ಕೆ ಸೇರಿದ ಮೇಲೆ, ಉಳಿದ ಭಾರತದ ಭಾಗಗಳಲ್ಲಿಯ ಹಲ ಕೆಲವು ಮುಸಲ್ಮಾನರು ಈ ಪಾಕಿಸ್ತಾನದಲ್ಲಿ ಹೋಗಿ ತಳವೂರಬೇಕು. ಅಲ್ಲಿಯ ಹಿಂದುಗಳು ತಳಕೀಳಬೇಕೆಂದೂ ಸೂಚಿಸಿದ್ದಾರೆ. ಈ ನಾಲ್ಕು ಪ್ರಾಂತಗಳನ್ನುಳಿದು, ಉಳಿದ ಭಾರತದಲ್ಲಿ, ಭಾಷೆಯ ಪ್ರಕಾರ ಎಂದರೆ ಬಂಗಾಲ, ಹಿಂದಿ, ಉರಿಯಾ, ತೆಲುಗು, ತಮಿಳು, ಕನ್ನಡ, ಮರಾಟಿ, ಗುಜರಾತಿ ಮಲೆಯಾಳ ಎಂದು ಮೊದಲಾದ ಭಾಗಗಳನ್ನು ಮಾಡಬಹುದು.*

ಮೇಲಿನ ಯೋಜನೆಯು ಮುಸ್ಲಿಂ ಲೀಗಿನ ಆಜ್ಞೆಯ ಮೇರೆಗೆ ಮಾಡಿದ್ದಾದರೂ ಇನ್ನೂ ಲೀಗಿನಿಂದ ಸ್ವೀಕೃತವಾಗಿಲ್ಲ ಆದರೂ ಸಿಂಧ ಪ್ರಾಂತೀಯ ಲೀಗು ತನ್ನ ಒಂದು ಅಧಿವೇಶನದಲ್ಲಿ ಇದನ್ನು ಸ್ವೀಕಾರಮಾಡಿದೆ ಈಗ ಮುಸ್ಲಿಂ ಲೀಗು ಈ ಯೋಜನೆಯ ವಿಚಾರಣೆಗಾಗಿ ಮಿ. ಜಿನ್ನಾ, ಸರ್ ಸಿಕಂದರ್ ಹಯಾತ್‌ಖಾನ್, ಮಿ. ಅಬ್ದುಲ್ ಅಜೀಜ್, ಖ್ವಾಜಾ ಸರ್ ನಾಜೀಮುದ್ದೀನ್, ಸರ್ ಅಬ್ದುಲ್ಲಾ ಹಾರೂನ್, ಸರದಾರ್ ಔರಂಗಜೇಬ್‌ಖಾನ್ ಮತ್ತು ನವಾಬ್ಜಾದಾ ಲಿಯಾಖತ್ ಅಲೀಖಾನ್ ಮೊದಲಾದವರ ಕಮಿಟಿಯೊಂದನ್ನು ನಿಯಮಿಸಿದೆ.

ಲತೀಫ್ ಸಾಹೇಬರ ಈ ಯೋಜನೆಯ ಕುರಿತು ವಿಚಾರ-ವಿವಾದ-ವಿವೇಚನೆಗಳು ಬೇಕಷ್ಟಾಗಿವೆ, ಆಗಲಿವೆ. ಭಾರತದ ಎಲ್ಲ ರಾಷ್ಟ್ರೀಯ ಪತ್ರಿಕೆಗಳೂ ಇದನ್ನು ಅಲ್ಲಗಳೆದಿವೆ ಕೆಲವು ಮುಸಲ್ಮಾನರೂ ಇದನ್ನು ವಿರೋಧಿಸಿದ್ದಾರೆ. ಸಿಂಧದ ಹಿರ್ವ್ಯ ಸಹೃದಯ ಮುಸಲ್ಮಾನ್ ಗೃಹಸ್ಥನು ಎನ್ನುವದು ಹೀಗೆ "ಈ ಯೋಜನೆಯು ದೇಶದ ದೃಷ್ಟಿಯಿಂದ ಹಾನಿಕರವು ಮೇಲಾಗಿ ಮುಸಲ್ಮಾನ್ ಸಂಸ್ಕೃತಿಯ ದೃಷ್ಟಿಯಿಂದಲೂ ದೂಷಿತವಾಗಿದೆ. ಮುಂದಾಗುವ ಮುಸ್ಲಿಂ ಪ್ರಾಂತಗಳಲ್ಲಿಯಾದರೂ ಮುಸ್ಲಿಂ ಸಂಸ್ಕೃತಿಯು ಸುಧಾರಿಸುವುದೆಂಬುದಕ್ಕೆ ಆಧಾರವೇನು?" ಮುಸ್ಲಿಂ ಲೀಗಿನಲ್ಲಿರುವ ಕೆಲಜನರೂ ವಿರೋಧಿಸುವರು. ಅವರು ಹೇಳುವ ಕಾರಣವಿದು "ಪಾಕಿಸ್ತಾನದೊಳಗಿನ ಕೆಲ ಪ್ರಾಂತಗಳು ಹಿಂದೂ ಜನರಿಂದ ಸುತ್ತಲ್ಪಟ್ಟಿರುವುದರಿಂದ ಅವುಗಳ ಏಳಿಗೆಗೆ ತೊಡಕಾಗುವುದು. ದಕ್ಷಿಣ ಪ್ರಾಂತವಾದ ಹೈದರಾಬಾದಿನ ಸ್ಥಿತಿಯಂತೂ ತೀರ ಶೋಚನೀಯವಾಗುವುದು ಅದು ಬಹಳ ದಿನ ಸ್ವತಂತ್ರವಾಗಿ ಬಾಳಲೂ ಸಾಧ್ಯವಿಲ್ಲ ಹದಿನೆಂಟನೆಯ ಶತಮಾನದಲ್ಲಿ ಮರಾಠರ ಧಾಳಿಯಿಂದ ಆದ ನಿಜಾಮನ ಗತಿಯಂತಾಗಬಹುದು. ಆಗ ನಿಜಾಮನಿಗೆ ಈಸ್ಟ್ ಇಂಡಿಯಾ ಕಂಪನಿಯಾದರೂ ನೆರವಿಗೆ ಇತ್ತು' ಇದರಂತೆ ಉತ್ತರದಲ್ಲಿರುವ ಲಖನೌ ಪ್ರಾಂತ, ಬಂಗಾಲ-ಆಸಾಮ ಪ್ರಾಂತಗಳಿಗೂ ರಜಪೂತ, ಸೀಖ, ಗುರ್ಖ, ನೇಪಾಳ ಮೊದಲಾದ ಜನರ ಭಯವು ತಪ್ಪಿದ್ದಲ್ಲ' ಈ ಪ್ರಕಾರ ಲತೀಫರ ಯೋಜನೆಗೆ ವಿರೋಧಕ ವಿಚಾರಗಳಿದ್ದು, ಇದೀಗ ಇನ್ನೊಂದು ಯೋಜನೆಯು ಸಿದ್ಧವಾಗಲಿದೆ. ಆಗಲಿದೆಯೇಕೆ? ಆಗಿಯೂ ಇದೆ.

ಆ ಯೋಜನೆಯೆಂದರೆ ಕಲಕತ್ತೆಯ ಒಬ್ಬ ಮೌಲವೀ ಸಾಹೇಬರು ನಿರ್ಮಿಸಿದುದು ಮಿ. ಲತೀಫರ ದಕ್ಷಿಣಮಂಡಲವು (ಹೈದರಾಬಾದ್) ಅವರ ದೃಷ್ಟಿಯಿಂದ ಯೋಗ್ಯವಾಗಿಲ್ಲ ಯಾಕೆಂದರೆ ಅದು ಅನ್ಯ ಮುಸಲ್ಮಾನ್ ಪ್ರಾಂತಗಳಿಂದ ದೂರವಾಗಿ ನಿಲ್ಲುವುದು ಅಷ್ಟು ಸುರಕ್ಷಿತವಲ್ಲ. ಅದರಿಂದ ಅವರು ಯೋಜಿಸುವುದು ಹೀಗೆ "ಸಂಯುಕ್ತ ಪ್ರಾಂತದೊಳಗಿನ ಹಿಂದುಗಳನ್ನು ಹೊರಗಟ್ಟಿ ಉತ್ತರ ಹಿಂದುಸ್ತಾನವನ್ನು ಸಂಪೂರ್ಣ ಮುಸಲ್ಮಾನರದನ್ನಾಗಿಯೆ ಮಾಡಬೇಕು. ಮತ್ತು ಕಾಶ್ಮೀರ, ಹೈದರಾಬಾದಿನ ಒಡೆಯರು ತಮ್ಮ ತಮ್ಮ ರಾಜ್ಯಗಳನ್ನು ಅದಲು ಬದಲು ಮಾಡಿಕೊಳ್ಳಬೇಕು ಮನ್ನಾಡಿಸಬೇಕು. ಎಂದರೆ, ಹೈದರಾಬಾದಿನ ಅರಸು ಕಾಶ್ಮೀರದ ಅರಸನಾಗಬೇಕು" ಈ ಮೌಲವೀ ಮಹನೀಯರು ಹಿಂದುಸ್ಥಾನದಲ್ಲಿಯ ಈಗಿನ ಹನ್ನೊಂದು ಪ್ರಾಂತಗಳಲ್ಲಿ ಏಳು ಪ್ರಾಂತಗಳನ್ನು ಪಾಕಿಸ್ತಾನಕ್ಕೆ ಸೇರಿಸುವರು. ಆ ಪ್ರಾಂತಗಳಿವು (೧) ಸಿಂಧ (೨) ಸರಹದ್ದು (೩) ಪಂಜಾಬ (೪) ಸಂಯುಕ್ತಪ್ರಾಂತ (೫) ಬಿಹಾರ (೬) ಬಂಗಾಲ (೭) ಆಸಾಮು. ಈ ರೀತಿ ಕಲಕತ್ತೆಯಿಂದ ಕ್ವೇಟಾದ ವರೆಗೆ, ಹಾಗೂ ಹಿಮಾಲಯದಿಂದ ವಿಂಧ್ಯಗಿರಿಯ ವರೆಗೆ ಮೌಲವೀ ಸಾಹೇಬರ ಪಾಕಿಸ್ತಾನವು ಕಾಲುಚಾಚುವುದು.

ಈ ಯೋಜನೆಯನ್ನು ವ್ಯವಹಾರದಲ್ಲಿ ತರಬೇಕಾದರೆ, ೧೩,೨೦,೦೦,೦೦೦ ಹಿಂದೂ ಜನರು ಮೇಲೆ ಹೇಳಿದ ೭ ಪ್ರಾಂತಗಳನ್ನು ಬಿಟ್ಟು, ಹೊರಬಿದ್ದು, ಮುಂಬೈ ಮದ್ರಾಸು ಮೊದಲಾದ ಪ್ರಾಂತಗಳಲ್ಲಿ ಬರಬೇಕಾಗುವುದು. ಈ ಪ್ರಾಂತಗಳಲ್ಲಿರುವ ೫೩,೦೦೦೦೦ ಮುಸಲ್ಮಾನರು ಆ ಪ್ರಾಂತಗಳಲ್ಲಿ ಹೋಗಬೇಕಾದೀತು. ಇದರಲ್ಲಿ ಮತ್ತೊಂದು ಜಟಿಲವಾದ ಸಮಸ್ಯೆಯೆಂದರೆ ಒಂದೆಡೆಗೆ ಬೆಳೆಯುಳ್ಳ ಭೂಮಿಯಾದರೆ, ಇನ್ನೊಂದೆಡೆಗೆ ಬಡಕಲು ಭೂಮಿಯಾಗುವುದು. ಮುಂಬಯಿ, ಮದ್ರಾಸು ಓಡಿಸಾ, ಮಧ್ಯ ಪ್ರಾಂತಗಳ ಜನಸಂಖ್ಯೆಯು ಸುಮಾರು ೮ ಕೋಟಿ ೬೦ ಲಕ್ಷವಿದೆ. ಆದರಲ್ಲಿ ಮುಸಲ್ಮಾನರು ಸುಮಾರು ೫೭ ಲಕ್ಷ ಜನರಿದ್ದಾರೆ. ಅವರಷ್ಟು ಹೋದರೆ, ಇಲ್ಲಿ ೮ ಕೋಟಿ ೩ ಲಕ್ಷ ಜನ ಉಳಿಯುವುದು ಮೌಲಾನಾ ಸಾಹೇಬರು ಉತ್ತರದೊಳಗಿನ ೧೨ ಕೋಟಿ ೨೦ ಲಕ್ಷದಷ್ಟು ಹಿಂದೂ ಜನರನ್ನು ಇತ್ತ ಕಳಿಸಲಿದ್ದಾರೆ ಇದು ಯಾವ ಮಾನವನೆಂಬವನಿಗಾದರೂ ಯೋಗ್ಯ ಕಂಡೀತೆ? ಈ ದಕ್ಷಿಣ ಪ್ರಾಂತಗಳ ಒಟ್ಟು ಕ್ಷೇತ್ರಫಲವು ೩,೩೬,೪೮೫ ಚದರು ಮೈಲು ಇದ್ದು, ಅಲ್ಲಿ ೨೦ ಕೋಟಿ ೨೩ ಲಕ್ಷ ಜನರು ಜೀವಿಸಿರಲು ಸಾಧ್ಯವೆ? ಇದು ಆರ್ಥಿಕ ದೃಷ್ಟಿಯಿಂದ ಅಸಂಭವನೀಯವು, ಅನುಚಿತವು ಯಾಕೆಂದರೆ ದಕ್ಷಿಣದಲ್ಲಿ ಚದರು ಮೈಲಿಗೆ ಸು ೫೭೬ ಜನರು ನಿಂತರೆ ಉತ್ತರದಲ್ಲಿ—ಬೆಳೆಯುಳ್ಳ ಭಾಗದಲ್ಲಿ—ಚದರು ಮೈಲಿಗೆ ಸು. ೧೩೩ ಜನರು ಮಾತ್ರ ನಿಲ್ಲುವರು.

ಮೌಲಾನಾ ಸಾಹೇಬರು * ಸುಮಾರು ೬೫ ಲಕ್ಷ ಮುಸಲ್ಮಾನರು ವಾಸಿಸುವ ಸ್ಥಳದಲ್ಲಿ ೧೧ ಕೋಟಿ ಹಿಂದುಗಳನ್ನು ಹೊಗಿಸಲು ವಿಚಾರಿಸುತ್ತಿದ್ದಾರಲ್ಲವೆ?

ಹಿಂದುಗಳ ಬಹಳಷ್ಟು ತೀರ್ಥ-ಕ್ಷೇತ್ರಗಳು ಉತ್ತರ ಹಿಂದುಸ್ಥಾನದಲ್ಲಿಯೇ ಇವೆ. ಹಿಂದುಗಳ ದೃಷ್ಟಿಯಿಂದ ಗಂಗಾನದಿಯೂ ಕಾಶಿಯೂ ಸ್ವರ್ಗಸಮವಾದುವು. ಮೌಲಾನಾ ಸಾಹೇಬರು ಹೇಳುವರೆಂದು ಹಿಂದುಗಳು ತಮ್ಮ ಸ್ವರ್ಗ ಸದೃಶವಾದ ವಾಸಸ್ಥಳವನ್ನು ಬಿಡಬೇಕೆ?

ಇರಲಿ, ಇತ್ತೀಚೆಗೆ ಪಂಜಾಬಿನ ಪ್ರಧಾನ ಮಂತ್ರಿಗಳಾದ ಮಾನ್ಯ ಸರ್ ಸಿಕಂದರ್ ಹಯಾತ್ ಖಾನ್‌ರೂ ಒಂದು ಹೊಸ ಯೋಜನೆಯನ್ನು ಮಾಡಿದ್ದಾರೆ ಅವರು ಮಾಡಿದುದು ಹಿಂದುಸ್ಥಾನದಲ್ಲಿ ಏಳು ಹೋಳುಗಳನ್ನು. ಅವುಗಳು: (೧) ಆಸಾಮು, ಬಂಗಾಲ, ಮತ್ತು ಬಂಗಾಲದ ಸಂಸ್ಥಾನಗಳು, (೨) ಬಿಹಾರ, ಓಡಿಸಾ ಮತ್ತು ಬಂಗಾಲದ ಪಶ್ಚಿಮದ ಎರಡು ಮೂರು ಜಿಲ್ಲೆಗಳು. (೩) ಸಂಯುಕ್ತ ಪ್ರಾಂತ ಹಾಗೂ ಅದರ ಸಂಸ್ಥಾನಗಳು (೪) ಮದ್ರಾಸು ತ್ರಾವಣಕೋರ-ಮದ್ರಾಸಿನ ಸಂಸ್ಥಾನಗಳು, ಮತ್ತು ಕೊಡಗು, (೫) ಮುಂಬೈ ಹೈದರಾಬಾದ್, ಪಶ್ಚಿಮ ಭಾರತದ ಸಂಸ್ಥಾನಗಳು, ಮೈಸೂರು ಮತ್ತು ಮಧ್ಯಪ್ರಾಂತದ ಸಂಸ್ಥಾನಗಳು (೬) ರಜಪೂತ ಸಂಸ್ಥಾನಗಳು (ಬಿಕಾನೇರ್ ಮತ್ತು ಜೇಸಲ್‌ಮೇರ್‌ಗಳನ್ನುಳಿದು), ಗ್ವಾಲ್ಹೇರ ಮಧ್ಯಪ್ರಾಂತ, ವಸ್ಥಾಡ್ ಪಂಜಾಬದ ಸಂಸ್ಥಾನಗಳು, ಬಲೂಚಿಸ್ತಾನ್, ಬಿಕಾನೇರ ಮತ್ತು ಜೆಸಲಮೇರ್.

ಸಿಕಂದರರ ಈ ಯೋಜನೆಯು ಹೊರಬೀಳುವ ಮೊದಲು ಕಾಂಗ್ರೆಸು ಹಿಂದುಸ್ತಾನದಲ್ಲಿ ಹನ್ನೊಂದು ಪ್ರಾಂತಗಳಲ್ಲಿಯೂ ತನ್ನ ಕೈಯಲ್ಲಿ ರಾಜ್ಯ ಸೂತ್ರವನ್ನು ತಕ್ಕೊಂಡಿದ್ದಿತು. ಅದರಿಂದ ಕಾಂಗ್ರೆಸಿನ ಶಕ್ತಿಯನ್ನು ಕಡಿಮೆ ಮಾಡಲೆಂದು ಈ ಯೋಜನೆಯನ್ನು ಹೂಡಿದರು. ಈ ಯೋಜನೆಯಿಂದ ಆಸಾಮ್, ಸೀಮಾಂತ ಪ್ರಾಂತಗಳಿಂದ ಕಾಂಗ್ರೆಸು ಕಾಲು ಕೀಳುವುದೆಂದೂ, ಅಲ್ಲಿ ಮುಸ್ಲಿಂ ಲೀಗಿನ ಪ್ರತಿಷ್ಠೆ ಬೆಳೆಯುವುದೆಂದೂ ಅವರು ಊಹಿಸಿದ್ದರು. ಮೇಲಾಗಿ ಈ ಯೋಜನೆಯಿಂದ ಕೇಂದ್ರಶಾಸನ ಸಭೆಯಲ್ಲೂ ಮುಸಲ್ಮಾನರ ಸಂಖ್ಯೆ ಹೆಚ್ಚುವುದು. ಬ್ರಿಟಿಷ್ ಹಿಂದುಸ್ಥಾನದಲ್ಲಿ ಮುಸಲ್ಮಾನರಿಗೆ ೮೩ ಸ್ಥಳಗಳು ಸಿಕ್ಕುತ್ತವೆ ಮತ್ತು ಭಾರತೀಯ ಸಂಸ್ಥಾನಗಳಲ್ಲಿ ೧೫೫ರಲ್ಲಿ ೮೨ ಸ್ಥಳಗಳು ಸಿಕ್ಕುವುವು ಇವೆಲ್ಲವೂ ಕೂಡಿ ಆಗ ಮುಸಲ್ಮಾನರ ಸ್ಥಳಗಳು ೧೨೫. ಕೇಂದ್ರ ಶಾಸನದಲ್ಲಿ ಈಗ ಎಲ್ಲಿ ಮುಸಲ್ಮಾನರಿಗೆ ೮೩ ಸ್ಥಳಗಳು ಸಿಕ್ಕುವವೋ ಅಲ್ಲಿ ಈ ಸಿಕಂದರರ ಯೋಜನೆಯಿಂದ ೧೨೫ ಸ್ಥಳಗಳು ದೊರೆಯುವುವು.

*ತಮ್ಮ ಜಾತಿಯ ವರ್ಗದ ಜನತೆಯ ಕೈಯಲ್ಲಿ ಅಧಿಕಾರ ಬರಬೇಕು ಎಂಬುವ ಮನೋಭಾವನೆಯನ್ನು ಬದಿಗಿಟ್ಟು ವಿಚಾರಿಸಿದರೆ, "ಭಾರತವು ಅಖಂಡವಾದ ದೇಶವು, ಅದು ಎಂದೂ ಎರಡಾಗಲು ಶಕ್ಯವಿಲ್ಲ!" ಎಂಬುದು ಯಾರಿಗೂ ಹೊಳೆಯುವುದು. ಪಾಕಿಸ್ತಾನದ ಕನಸನ್ನು ಕಾಣುವವರಿಗೆ *ಭಾರತಾಂಬೆಯು ಸುಬುದ್ಧಿಯನ್ನೀಯಲಿ!

ಜಿಲ್ಲಾ ಸಮಾಚಾರಗಳು

ಮಂಗಳೂರು

ಮುನ್ಸಿಪಲ್ ಕೌನ್ಸಿಲ್ ಮೀಟಿಂಗ್

ಸ್ಥಳೀಯ ಮುನ್ಸಿಪಲ್ ಕೌನ್ಸಿಲ್ ಮೀಟಿಂಗ್ ತಾ. ೮ರಂದು ಸಂಜೆ ಚೆಯರ್‌ಮೇನ್ ಶ್ರೀ. ವೆಂಕಟ್ರಾವ್ ಬಾಳಿಗ, ಎಂ. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರುಗಿ ಸ್ಥಳೀಯ 'ಪೋರ್ಟ್ ಕನ್‌ಸರ್‌ವೆನ್ಸಿ ಬೋರ್ಡಿಗೆ' ಮುನಿಸಿಪಾಲಿಟಿಯ ಒಬ್ಬ ಪ್ರತಿನಿಧಿಯನ್ನಾರಿಸುವಂತೆ ತಿರುಗಿ ಒತ್ತಾಯಪಡಿಸುವ ಒಂದು ಠರಾವು ಮಂಜೂರಾಯಿತು. ಅನೀತಿಯ ವ್ಯಾಪಾರ ಮುನ್ಸಿಪಾಲಿಟಿಯೊಳಗೂ ಬೋಳೂರು ಬಿ, ತಣ್ಣೀರು ಬಾವಿ, ಬಂಗ್ರ ಕೂಳೂರು, ಕಾವೂರು, ದೇರೆಬೈಲು, ಕದ್ರಿ ಬಿ, ಪದವು, ಕೊಡಿಯಾಲಬೈಲು ಬಿ, ಮರೋಳಿ, ಅಳ್ಪೆ ಕಣ್ಣೂರು, ಕಂಕನಾಡಿ ಬಿ, ಬಜಾಲ್, ಜೆಪ್ಪು ಮೊಗ್ರು ಬಿ, ಉಳ್ಳಾಲ, ಪೆರಮನ್ನೂರ್ರ್ಯ, ಮನ್ನೂರು, ಅತ್ತಾವರ ಬಿ ಪ್ರದೇಶಗಳೊಳಗೂ ಇರದಂತೆ ಕಾನೂನು ಜಾರಿಮಾಡಬೇಕೆಂದಾಯಿತು.

ಸೈಂಟ್ ಜಾನ್ ಅಂಬುಲೆನ್ಸ್ ಎಸೋಶಿಯೇಶನ್

ದಕ್ಷಿಣ ಕನ್ನಡ ಜಿಲ್ಲಾ ಈ ಸಂಘದ ಶಾಖೆಯ ಆಶ್ರಯದಲ್ಲಿ, ಹಂಪನಕಟ್ಟೆಯಲ್ಲಿ ಪ್ರಥಮ ಚಿಕಿತ್ಸಾ ತರಗತಿಯೊಂದು ಡಾ. ಕೆ. ಬಾಲಪ್ಪ ಶೆಟ್ಟರಿಂದ ತೆರೆಯಲ್ಪಟ್ಟಿದೆ. ಡಾ. ಬಾಲಪ್ಪಶೆಟ್ಟರು ಈ ತರಗತಿಗಳನ್ನು ನಡೆಸುವರು.

ಅತ್ತಾವರ ಮುನಿಸಿಪಲ್ ಶಾಲಾ ವರ್ಧಂತಿ

ಈ ಶಾಲಾ ವರ್ಧಂತಿಯುತ್ಸವವು ಕಳೆದ ಆದಿತ್ಯವಾರ ಸಂಜೆ ಶ್ರೀ. ಎಂ. ಜಾರಪ್ಪ ಅವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರುಗಿತು. ಪ್ರಾರ್ಥನೆ, ಶಾಲಾ ಹೆಡ್ಮಾಸ್ಟರರಾದ ಶ್ರೀ. ಕೆ. ಅಪ್ಪಾಜಿರಾಯರಿಂದ ಶಾಲಾ ವರದಿ ವಾಚನ (ಈ ಶಾಲೆ ೪೫ ವರ್ಷಗಳ ಹಿಂದೆ ಒಬ್ಬ ಉಪಾಧ್ಯಾಯರಿಂದ ಆರಂಭವಾದುದು ಈಗ ೮ ಮಂದಿ ಉಪಾಧ್ಯಾಯರಿಂದಲೂ ೩೦೦ ಮಂದಿ ವಿದ್ಯಾರ್ಥಿ ವಿದ್ಯಾರ್ಥಿನಿಗಳಿಂದಲೂ ಕೂಡಿದೆ.) ಶ್ರೀ. ಜನಾರ್ಧನ ಸುವರ್ಣರಿಂದ ಶಾಲಾಶ್ರೇಯೋ ಪ್ರಾರ್ಥನೆ, ಅಧ್ಯಕ್ಷರಿಂದ ಬಹುಮಾನ ವಿನಿಯೋಗ, ಶ್ರೀ. ಎಂ. ಆರ್. ಶಾಸ್ತ್ರಿ ಅವರ ಹಿತೋಕ್ತಿಯ ಭಾಷಣ, ಅಧ್ಯಕ್ಷರ ಉಪನ್ಯಾಸ ಮತ್ತು ಹೆಡ್ಮಾಸ್ಟರರ ವಂದನೋಕ್ತಿಗಳಾದ ಬಳಿಕ, ವಿವಿಧ ವಿನೋದಗಳು ಪ್ರದರ್ಶಿಸಲ್ಪಟ್ಟವು.

'ಕೈಸರ್ ಈ ಹಿಂದ್' ಮೆಡಲಿನ ಬಹುಮಾನ

ಕಳೆದ ತಾ. ೩ನೇ ಬೆಳಗ್ಗೆ ಈ ಜಿಲ್ಲೆಯ ಕಲೆಕ್ಟರ್ ಮತ್ತು ಡಿ. ಮ್ಯಾಜಿಸ್ಟ್ರೇಟರು ತಮ್ಮ ಬಂಗಲೆಯಲ್ಲಿ ದ. ಕ. ಜಿಲ್ಲೆಯ ನಿವೃತ್ತ ಜಿಲ್ಲಾ ರಿಜಿಸ್ಟ್ರಾರರೂ ಮಂಗಳೂರಿನ ಎ. ಆರ್. ಪಿ. ಡೆಪ್ಯುಟಿ ಕಂಟ್ರೋಲರೂ ಆಗಿರುವ ಶ್ರೀ. ಎಫ್. ಸೋನ್ಸ್‌ರ ಪತ್ನಿ ಮಿಸೆಸ್ ಇ. ಸೋನ್ಸ್‌ರಿಗೆ 'ಕೈಸರ್ ಈ ಹಿಂದ್' ಮೆಡಲನ್ನು (ಕಂಚಿನದು) ಬಹುಮಾನಿಸಿದರು.

ಬಾಲಿಕಾಶ್ರಮದ ನೂತನ ಮಂದಿರ ಭಾಗದ ಪ್ರವೇಶೋತ್ಸವ

ಸ್ಥಳೀಯ ಈಶ್ವರಾನಂದ ಮಹಿಳಾ ಸೇವಾಶ್ರಮ ಸಂಘದ ಕಂಕನಾಡಿ ಬಾಲಿಕಾಶ್ರಮದ 'ತುಳಸೀಬಾಯಿ ವೇದಾವತಿ ಪೈ'ಯವರ ಹೊಸ ಮಂದಿರ ಭಾಗದ ಪ್ರವೇಶೋತ್ಸವವು ನಮ್ಮ ಜಿಲ್ಲಾ ಜಡ್ಜರಾದ ಶ್ರೀ. ಎಲ್. ಎಸ್. ಪಾರ್ಥಸಾರಥಿ ಅಯ್ಯರರ ಹಸ್ತದಿಂದ ಕಳೆದ ಬುಧವಾರ ಸಂಜೆ ನೆರವೇರಿತು. ಸೇವಾಶ್ರಮದ ಕಾರ್ಯದರ್ಶಿಗಳಾದ ಶ್ರೀ. ಎನ್. ರಾಮರಾಯರು, ಸಂಘದ ೩೩ ವರ್ಷದ ಚಟುವಟಿಕೆಗಳನ್ನು ವಿವರಿಸಿ ತಮ್ಮ ಮಾತೃಶ್ರೀಯವರ ಸ್ಮಾರಕವಾಗಿ ಈ ಮಂದಿರ ಕಟ್ಟಿಸಿ ದಾನವಾಡಿದ ಡಾ। ಎಂ. ಕೇಶವ [illegible] ಸಂಘಕ್ಕೆ ನಗದಿಯಾಗಿಯೂ ೭ ಸಾವಿರ ರೂಪಾಯಿಗಳನ್ನು ಅನುಗ್ರಹಿಸಿರುವರೆಂದೂ [illegible] ಅಧ್ಯಕ್ಷರು ಈ ಮಂದಿರದ ಆರಂಭೋತ್ಸವವನ್ನು ನಡೆಯಿಸಿ, ಈ ಸಂಘದ ಕಾರ್ಯಗಳನ್ನೂ (ಡಾ. ಕೇಶವ ಪೈಗಳ ಔದಾರ್ಯವನ್ನೂ) ಕೊಂಡಾಡಿ, ಅನಾಥರಿಗೆ ಗತಿಗಾಣಿಸುವಲ್ಲಿ ಹಿಂದುಳಿದಿರುವ ಹಿಂದೂ ಸಮಾಜವನ್ನು ಎಚ್ಚರಿಸಿ, ಈ ವಿಷಯದಲ್ಲಿ ವಂದನಾರ್ಹರಾದ ಕ್ರೈಸ್ತರ ಮೇಲ್ಪಂಕ್ತಿಯನ್ನು ನೆನಪಿಗೆ ತಂದುಕೊಟ್ಟರು. ಸಂಘದ ಜತೆಕಾರ್ಯದರ್ಶಿ ಶ್ರೀ. ಟಿ. ರಾಮರಾವ್ ವಂದನಾರ್ಪಣೆ ಮಾಡಿದರು. ಬರ್ಮದಲ್ಲಿ ಹುಟ್ಟಿ ಬೆಳೆದ ಶ್ರೀಮತಿಗಳಾದ ವತ್ಸಲಾ-ಲೀಲಾ ಬಾಯಿಯವರ ಸಂಗೀತ ನರ್ತನಾದಿಗಳೂ ಇದ್ದುವು.

ಥಿಯೊಸಫಿಕಲ್ ಲಾಜಿನಲ್ಲಿ

ಶ್ರೀ. ಎಚ್. ವೆಂಕಟರಾಯರು ಸ್ವಾಚಾರ ಜೀವಿತದ ಕುರಿತು ಒಂದು ಭಾಷಣವನ್ನಿತ್ತರು. ಜಿಲ್ಲಾ ಮತ್ತು ಸೆಶನ್ಸ್ ಜಡ್ಜರಾದ ಶ್ರೀ. ಎಲ್. ಎಸ್. ಪಾರ್ಥಸಾರಥಿ ಅಯ್ಯರರು ಅಧ್ಯಕ್ಷತೆ ವಹಿಸಿದ್ದರು. ಸಭಾಂತ್ಯದಲ್ಲಿ ಶ್ರೀ. ಎಂ. ಎಸ್. ಏಕಾಂಬರರಾಯರು ಧನ್ಯವಾದಗಳನ್ನರ್ಪಿಸಿದರು.

ಬೆಂಗ್ರೆ ಮೊಗವೀರ ವೀರ ಭಾರತಿ ವ್ಯಾಯಾಮ ಶಾಲೆ

ಇದರ ನೂತನ ಕಟ್ಟೋಣದ ಉದ್ಘಾಟನಾ ಸಮಾರಂಭವು ಕಳೆದ ತಾ. ೨೬ನೇ ಅಪರಾಹ್ನ ಗಂಟೆ ೪ಗೆ ಸರಿಯಾಗಿ ಶ್ರೀ. ಜೆ. ಎ. ಪುತ್ರನ್ ಇವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು.

ಶ್ರೀ ರಾಮಕೃಷ್ಣ ಜನ್ಮದಿನೋತ್ಸವ

ತಾ. ೩ರಂದು ಶ್ರೀ ಸುವಿಚಾರಾನಂದ ಸ್ವಾಮಿಜಿಯವರ ಅಧ್ಯಕ್ಷತೆಯಲ್ಲಿ ವಿವೇಕಾನಂದ ಸಭೆಯವರು ರಾಮಕೃಷ್ಣ ಜನ್ಮದಿನವನ್ನು ಆಚರಿಸಿದರು. ಬೆಳಗ್ಗೆ ಗಂಟೆ ೮ರಿಂದ ೧೧ರ ತನಕ ಭಜನೆ ಮತ್ತು ಕೀರ್ತನೆಗಳು ನಡೆದುವು. ಸಂಜೆ ೫ ಗಂಟೆಯ ಬಳಿಕ, ಪ್ರಾರ್ಥನೆ, ಸ್ತೋತ್ರ, ಸಂಗೀತಗಳಾದ ಮೇಲೆ ರಾಮಕೃಷ್ಣ ಪರಮಹಂಸರ ಜೀವನ ಚರಿತ್ರೆಯ ಕುರಿತು ಶ್ರೀ. ಪ್ರಹ್ಲಾದ ಹೆಗ್ಡೆ, ಶ್ರೀ. ಕೆ. ವೆಂಕಟ್ರಾವ್ ಉಪನ್ಯಾಸಗಳನ್ನಿತ್ತರು. ಅಧ್ಯಕ್ಷ ಭಾಷಣ, ವಂದನಾರ್ಪಣೆಗಳ ಅನಂತರ ಶ್ರೀ. ಬಿ. ಉಮೇಶರಾಯರು ಮಂಗಳ ಶ್ಲೋಕಗಳನ್ನು ಪಠಿಸಿದರು.

ಮಂಗಳೂರು ಸಭೆ

ತಾ. ೨೬-೪-೪೨ನೇ ಆದಿತ್ಯವಾರ ದಿವಸ ಶ್ರೀ ಸುಬ್ರಹ್ಮಣ್ಯ ಸಭೆಯ ಆಡಳಿತೆ ಮಂಡಳಿಯ ಸಭೆಯು ಶ್ರೀ ಎನ್. ಎಸ್. ಅಪ್ಪಾಜಿರಾಯರ ಅಧ್ಯಕ್ಷತೆಯಲ್ಲಿ ಮಂಗಳೂರು ಆನಂದ ಭವನದಲ್ಲಿ ಶ್ರೀ ಬಿ. ಭುಜಂಗರಾಯರ ಉದಾರಾಶ್ರಯದಲ್ಲಿ ಪೂರ್ವಾಹ್ನ ಗಂಟೆ ೧೦ಕ್ಕೆ ಜರಗಿತು. ಕಳೆದ ದಶಂಬರ ತಿಂಗಳಲ್ಲಿ ಜರಗಿದ ಮಹಾಸಭೆಯವರಿಂದ ನಿಯಮಿಸಲ್ಪಟ್ಟ ಉಪಸಮಿತಿಯವರು ತಯಾರಿಸಿದ ನಿಬಂಧನೆಗಳನ್ನು ಮಂಜೂರು ಮಾಡಿ ಸಭೆಯನ್ನು ೧೮೬೦ನೇ ಇಸವಿಯ ೨೧ನೇ ಆಕ್ಟಿನನುಸಾರವಾಗಿ ರಿಜಿಸ್ಟ್ರ ಮಾಡಬೇಕೆಂದು ನಿರ್ಣಯಿಸಲಾಯಿತು. ಈ ಸಭೆಯ ಉದ್ದೇಶಗಳನ್ನು ಸ್ವಜಾತಿಬಾಂಧವರಲ್ಲಿ ಪ್ರಚಾರಗೊಳಿಸಲು ಯೋಗ್ಯನಾದ ಒಬ್ಬ ಶಿವಬ್ರಾಹ್ಮಣ ತರುಣನನ್ನು ತಿಂಗಳೊಂದರ ರೂ. ೨೦ ತಲಬು ಮತ್ತು ರೂ. ೧೦ ಪ್ರಯಾಣ ಖರ್ಚಿನ ಮೇಲೆ ನೇಮಕ ಮಾಡಲು ಉಮೇದ್ವಾರರಿಂದ ಅರ್ಜಿಗಳನ್ನು ಪಡೆಯಲು ಸಭೆಯ ಕಾರ್ಯದರ್ಶಿಗಳಾದ ಶ್ರೀ ನೈ. ನಾರಾಯಣರಾಯರನ್ನು ಅಧಿಕರಿಸಲಾಯಿತು. ಮಡಿಕೇರಿ, ಬೆಳ್ತಂಗಡಿ, ಪುತ್ತೂರು, ಪಾವಂಜೆ ವಗೈರೆ ದೂರ ದೂರ ಸ್ಥಳಗಳಿಂದ ಬಂದ ಮತ್ತು ಸಭೆಗೆ ಹಾಜರಾದ ಎಲ್ಲಾ ಸದಸ್ಯರನ್ನೂ ಶ್ರೀ ಬಿ. ಭುಜಂಗರಾಯರು ಊಟ ಉಪಚಾರಾದಿಗಳಿಂದ ಸತ್ಕರಿಸಿದರು.

ಮುನ್ಸಿಪಲ್ ಶಾಲಾ ವರ್ಧಂತಿ

ಕಳೆದ ತಾ. ೨ನೇ ಸಾಯಂಕಾಲ ಮಂಗಳೂರು ರಥಬೀದಿಯ ಮುನ್ಸಿಪಲ್ ಪ್ರಾಥಮಿಕ ಶಾಲಾ ವರ್ಧಂತಿಯು ಡಾ. ಯು. ಪಿ. ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲೆಯ ಶ್ರೇಯೋಭಿವೃದ್ಧಿಯನ್ನು ಬಯಸಿ, ಶ್ರೀ ಬಿ. ವಿ. ಬಾಳಿಗ, ಯಂ. ಎಲ್. ಎ., ಮಿಸೆಸ್ ಆನಂದಬಾಯಿಯವರೇ ಮೊದಲಾದವರು ಭಾಷಣಮಾಡಿದರು.

ಮೇ ದಿನಾಚರಣೆ

ಮಂಗಳೂರಿನ ಮಜೂರರು ಮೇ ತಾ. ೧ರಂದು ಮೇ ದಿನಾಚರಣೆಯನ್ನು ಜರಗಿಸಿದರು. ಮೌ। ಡಾ। ಎಫ್. ಎಚ್. ಒಡೆಯರ್ ಅವರು ಅಗ್ರಾಸನ ವಹಿಸಿದ್ದರು. ಈ ಸಂದರ್ಭದಲ್ಲಿ ಶ್ರೀಗಳಾದ ಬಿ. ವಿ. ಕಕ್ಕಿಲ್ಲಾಯ, ಮಾಸ್ಟರ್ ಕೈಲೂರ್ಕರ್ ಮತ್ತು ಕೇಶವ ಕಾಮತರು ಮಾತಾಡಿದರು. ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡುವ, ರಾಷ್ಟ್ರೀಯ ಸರಕಾರ ಸ್ಥಾಪಿಸುವ ಇವೇ ಮೊದಲಾದ ಕೇಳಿಕೆಗಳನ್ನೊಳಗೊಂಡ ಠರಾವು ಮಂಜೂರಾಯಿತು.

ವಿನಂತಿ

ಮೌಲಾನಾ ಡಾ। ಎಫ್. ಎಚ್. ಒಡೆಯರ್ ಇವರು ಈ ರೀತಿ ವಿನಂತಿಸುತ್ತಾರೆ:— 'ಇತ್ತೀಚೆಗೆ ಪಟ್ಟಣ ಹಾಗೂ ಹಳ್ಳಿಗಳಲ್ಲಿ ಸಂಪೂರ್ಣ ಕತ್ತಲೆಯ ಕ್ರಮವನ್ನು ಸರಕಾರವು ಜಾರಿಗೆ ತಂದಿರುವುದು. ಯುದ್ಧವು ಹಿಂದುಸ್ಥಾನಕ್ಕೆ ಕಾಲಿಟ್ಟಿರುವಾಗ ಭಾರತೀಯರ ಜೀವನಮರಣ ಸಮಸ್ಯೆಯು ನಮ್ಮ ಮುಂದೆ ನಿಂತಿರುವ ಈ ವಿಷಮ ಪರಿಸ್ಥಿತಿಯಲ್ಲಿ ಹಿಂದೀಯರ ಮಾನ-ಪ್ರಾಣ-ಧನದ ರಕ್ಷಣೆಯ ಜವಾಬ್ದಾರಿಯು ಸರಕಾರದ್ದೂ ಸಾರ್ವಜನಿಕರದ್ದೂ ಆಗಿರುವುದು. ಸಂಪೂರ್ಣ ಕತ್ತಲೆಯ ಕಾರ್ಯಕ್ರಮದಿಂದಾಗಿ ಜನರಿಗೆ ಬಹಳ ಕಷ್ಟಗಳು ಸಂಭವಿಸಬಹುದು. ಆದುದರಿಂದ ಇಂತಹ ಪರಿಸ್ಥಿತಿಯಲ್ಲಿ ಶಾಂತಿ ರಕ್ಷಣೆಯ ಕಾರ್ಯದಲ್ಲಿ ದೇಶದ ಉದ್ಧಾರಕ್ಕಾಗಿ ದುಡಿಯುತ್ತಿರುವ ಎಲ್ಲಾ ರಾಜಕೀಯ ಸಂಸ್ಥೆಗಳು ತಮ್ಮ ತಮ್ಮ ಮತಭೇದಗಳನ್ನುಳಿದು ಸಾಧ್ಯವಾದರೆ ಸರಕಾರದೊಂದಿಗೆ ಸಹಕರಿಸಿ ಅಥವಾ ಪ್ರತ್ಯೇಕವಾಗಿ ದೇಶದ ವಿಷಮ ಪರಿಸ್ಥಿತಿಯಿಂದ ಸಾರ್ವಜನಿಕರ ಮಾನ, ಪ್ರಾಣ, ಧನವನ್ನುಳಿಸುವ ಕಾರ್ಯದಲ್ಲಿ ಭಾಗಿಗಳಾಗಬೇಕೆಂದು ನನ್ನ ವಿನಂತಿ.'

ಕುಂಬಳೆ. ರಕ್ಷಕರ ಸಮ್ಮೇಳನ

ಇಲ್ಲಿಯ ಆರಿಕ್ಕಾಡಿ ಬೋ. ಎ. ಶಾಲಾ ಬಾಲಕರ ರಕ್ಷಕರ ಸಮ್ಮೇಳನವು ತಾ. ೨೪ರಂದು ಶ್ರೀ ರಾಜಗೋಪಾಲರವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು. ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಕೆ. ಸಣ್ಣಯ್ಯನವರು ಶಾಲಾ ಚಟುವಟಿಕೆಯ ವರದಿಯನ್ನು ಸಭಿಕರ ಮುಂದಿಟ್ಟರು.

ಕುಕ್ಕೆ ಶ್ರೀ ಸುಬ್ರಹ್ಮಣ್ಯ

ಬರುವ ತಾ. ೯-೫-೪೨ರಲ್ಲಿ ಶ್ರೀ. ಸುಬ್ರಹ್ಮಣ್ಯ ಕ್ಷೇತ್ರದಲ್ಲಿ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ಕಡೆಯಿಂದ ಈ ಕೆಳಗಿನ ಸಮಾರಂಭಗಳು ಜರಗಿಸಲ್ಪಡುವುವು. ಮದ್ರಾಸ್ ಮೋಟರ್ ಕೆಫೆಯ ಮಾಲಕರಾದ ಶ್ರೀ. ಕೆ. ಸೀತಾರಾಮರಾಯರು ಕೊಟ್ಟ ಸಹಾಯ ನಿಧಿಯಿಂದ ಕಟ್ಟಿಸಿದ ದೇವಸ್ಥಾನದಲ್ಲಿ ಶ್ರೀ ಫಲಿಮಾರು ಶ್ರೀಗಳವರಿಂದ ಆಂಜನೇಯ ಸ್ವಾಮಿಯ ಪ್ರತಿಷ್ಠೆ; ಮಾನ್ಯ ಡಾ। ಯು. ರಾಮರಾಯರ ಅಧ್ಯಕ್ಷತೆಯಲ್ಲಿ ಮೈಸೂರು ಶ್ರೀಮನ್ಮಹಾರಾಜರ ಮತ್ತು ರಾ. ಬ. ಬಿ. ಶ್ರೀಪತಿ ರಾಯರ ಭಾವಚಿತ್ರಗಳ ಅನಾವರಣ (ಕ್ರಮವಾಗಿ ಪ್ರೊ. ಬಿ. ಯಂ. ಶ್ರೀಕಂಠಯ್ಯ ಮತ್ತು ಶ್ರೀ ಕೆ. ಯಂ ರಾಮರಾವ್ ಇವರುಗಳಿಂದ) ಶ್ರೀ. ಬಿ. ವಿ. ಬಾಳಿಗ ಯಂ. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ದಿವಂಗತ ಇಡ್ಯ ವಾಸುದೇವಯ್ಯನವರ ಸ್ಮಾರಕ ಮಂದಿರದ ಉದ್ಘಾಟನೆ (ಶ್ರೀ ಕಾರ್ಕಳ ಸದಾಶಿವರಾಯರಿಂದ) ಮತ್ತು ರೂರಲ್ ಡಿಸ್ಪೆನ್ಸರಿಯ ಉದ್ಘಾಟನೆ (ಜಿ. ಬೋ. ಅಧ್ಯಕ್ಷರಾದ ಡಾ. ಕೆ. ವಿಟ್ಠಲ ಶೆಟ್ಟರಿಂದ) ಸರ್ವರಿಗೂ ಸ್ವಾಗತವಿದೆಯಾಗಿ ದೇವಳದ ಆಡಳಿತೆ ಮಂಡಳಿಯ ಅಧ್ಯಕ್ಷರು ತಿಳಿಸುತ್ತಾರೆ.

ಪುತ್ತೂರು

ಯಕ್ಷಗಾನ

ಜಿಲ್ಲಾ ಹರಿಜನ ಸೇವಕ ಸಂಘದ ಆಶ್ರಯದಲ್ಲಿ ತಾ. 11-5-42ನೇ ಸೋಮವಾರ ರಾತ್ರಿ ಗಂಟೆ 9.30ಕ್ಕೆ ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಬಳಿಯಲ್ಲಿ ಒಂದು ಉತ್ತಮ ಯಕ್ಷಗಾನ ಸಮಾರಂಭವನ್ನು ಜರಗಿಸಲಿದ್ದೇವೆ. ಜಿಲ್ಲೆಯ ಸುಪ್ರಸಿದ್ಧ ಯಕ್ಷಗಾನ ಕಲಾ[illegible]ಗಳು ಭಾಗವಹಿಸುವರು. ಮಹಾಜನರು ಪ್ರೋತ್ಸಾಹಿಸಬೇಕಾಗಿ ವಿನಂತಿ. ಪ್ರಸಂಗ ಶ್ರೀ ಕೃಷ್ಣ ಸಂಧಾನ ಮತ್ತು ಭೀಷ್ಮಪರ್ವ. ಭಾಗವತರು ಬಿ. ಸ್ಕಂದಪ್ಪ ರೈಗಳು, ಮೃದಂಗವಾದಕರು ಕಾರ್ಕಳ ಈಶ್ವರಪ್ಪಯ್ಯನವರು, ಪಾತ್ರವರ್ಗದವರು ಶ್ರೀಗಳಾದ ಕೆ. ಬಾಲಕೃಷ್ಣರಾಯರು, ಎ[illegible]ಕೇಟ್, ಕೆ. ಪಿ. ವೆಂಕಪ್ಪಶೆಟ್ಟಿ, ಕೆ. ಶಂಕರನಾರಾಯಣ ಶಾಸ್ತ್ರಿಗಳು, ಸುಬ್ರಾಯ ಆಚಾರಿಗಳು, ಬಿ. ಜನಾರ್ಧನ ಶೆಟ್ಟಿ, ಡಾ. ಎಫ್. ಎಚ್. ಒಡೆಯರ್, ಯಂ. ಆರ್. ಶಾಸ್ತ್ರಿಗಳು, ಸದಾನಂದ ನಾಯ್ಕರು ಮತ್ತು ನಾರಾಯಣ ಕಿಲ್ಲೆಯವರು.

ಹಿಂದುಸ್ಥಾನ ಸ್ಕೌಟ್ ಎಸೋಸಿಯೇಶನ್

ಇದರ ಆಶ್ರಯದಲ್ಲಿ ಮೇ ೧೨ರಿಂದ ೨೫ರ ತನಕ ಎಲಿಮೆಂಟರಿ ಶಾಲೆಗಳಿಗೆ ಸರಕಾರದಿಂದ ಮಂಜೂರಾದ ಶರೀರ ಶಿಕ್ಷಣ ತರಬೇತಿ ತರಗತಿ ಉಡುಪಿಯಲ್ಲಿ ತೆರೆಯಲಾಗುವುದು. ಜಿಲ್ಲಾ ವಿದ್ಯಾಧಿಕಾರಿ ಶ್ರೀ. ಯು. ಸತ್ಯನಾರಾಯಣರು ಇಂದು ಪ್ರಾರಂಭ ಮಾಡುವರು. ಹೆಚ್ಚಿನ ವಿವರ ಶ್ರೀ. ಬಿ. ಎಂ. ಬಾಳಿಗ, ಡಿಸ್ಟ್ರಿಕ್ಟ್ ಕಮಿಶನರ್ ಹಿಂ। ಸ್ಕೌ। ಎಸೋಸಿಯೇಶನ್ ಉಡುಪಿ, ಇವರಿಗೆ ಬರೆದು ತಿಳಕೊಳ್ಳಬಹುದು.

ಧುರೀಣರ ಪ್ರವಾಸ

ಶ್ರೀಯುತರುಗಳಾದ ರಂ. ರಾ. ದಿವಾಕರರೂ, ಚನಬಸಪ್ಪ ಅಂಬಲಿಯವರೂ ತಾ. ೨ರಿಂದ ೭ರ ತನಕ ಈ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದರು. ತಾ. ೩ ಕುಂದಾಪುರ, ಗಂಗೊಳ್ಳಿ, ತಾ. ೪ ಕಾರ್ಕಳ, ಮೂಡಬಿದ್ರೆ. ತಾ. ೫ ಧರ್ಮಸ್ಥಳ ಬೆಳ್ತಂಗಡಿ. ತಾ. ೬ ಮಂಜೇಶ್ವರ, ಹೊಸದುರ್ಗ ಕಾಸರಗೋಡು. ತಾ. ೭ ಬದಿಯಡ್ಕ, ಪುತ್ತೂರು,

---

ನೋಟೀಸು

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

R. E. A. No. 1432/1941.
R. E. P. No. 930/1941.
R. E. A. No. 328/1942.

ಬೀಬಾಬಿ ಅಮ್ಮ— ಅರ್ಜಿದಾರಳು.

ಮತ್ತು

ಮಂಜಣ್ಣ ಸಹಾ— ಎದ್ರಿರು.

ಇವರವಳಗೆ

ಮಂಗಳೂರು ತಾಲೂಕು ಇರ್ವತ್ತೂರು ಗ್ರಾಮದ ಬಜೆ ರಾಮ ಪೂಜಾರಿ ಮನೆಯಲ್ಲಿರುವ ಎಲ್ಲಮ್ಮ ಹೆಂಗ್ಸಿನ ಮಗಳು 4ನೇ ಎದ್ರಿಳು ಹುಕ್ರು ಹೆಂಗ್ಸಿಗೆ ಈ ಮೂಲಕ ತಿಳಿಯಪಡಿಸುವುದೇನಂದರೆ:—

ಸದ್ರಿ ಅಮಲ್ದಾರಿಯಲ್ಲಿ 3-4ನೇ ಎದ್ರಿರ ಕುಟುಂಬಕ್ಕೆ ಬಾಲಗೇಣಿ ಪಕ್ಷಗಳಿಂದ 1942ನೇ ಇಸ್ವಿ ಮಾರ್ಚಿ ಅಖೈರಿಗೆ ಸಲತಕ್ಕ ಗೇಣಿ ವಸುಲಿ ಹಕ್ಕು ಜಪ್ತಿ ಕುರಿತು 2-3 ಸಾರಿ ಪ್ರೊ ಆರ್ಡರು ಮಾಡಿಸಿದರೂ ಸದ್ರಿ ಹುಕುಂ ಜ್ಯಾರಿಗೆ ಸಿಕ್ಕದ್ರಿಂದ ಈ ಮೂಲಕ ತಿಳಿಸುವದೇನಂದರೆ ಮೇಲ್ಕಂಡ ಗೇಣಿ ವಸುಲಿ ಹಕ್ಕು ಜಪ್ತಿ ವ ಅಮ್ಲಜ್ಯಾರಿ ಕುರಿತು ನಿನ್ನ ಆಕ್ಷೇಪಣೆಗಳಿದ್ದರೆ ತಾರೀಕು 28-5-1942ರಲ್ಲು ಬೆಳಿಗ್ಗೆ 10 ಘಂಟೆಗೆ ಸದ್ರಿ ಕೋರ್ಟ ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದರೆ ನಿನ್ನನ್ನು ಶಿವ್ಯಾ ಮಾಡಿ ಸದ್ರಿ ಅಮಲ್ಜ್ಯಾರಿ ಮುಂದರಿಸೋಣಾದೀತೆಂಬ ಸಂಗ್ತಿ ಕೋರ್ಟ ಹುಕುಂ ಪ್ರಕಾರ ತಿಳಿಸೋಣಾಗುತ್ತದೆ.

ಕಾರ್ಕಳ 4-5-1942. } (sd) H. S. Hussain, B. A. B. L., M. L. A.
ಅರ್ಜಿದಾರಳ ಕಡೆ ವಕೀಲರು

HALFTONE & LINE BLOCK MAKING UNDERTAKEN
Sharada Press, MANGALORE

ಸಿನೆಮಾ ಪುಟ

ಅಶೋಕ್ ಕುಮಾರನ ಮೊದಲನೆಯ ನಾಯಕ ಪಾತ್ರಾಭಿನಯ

ಗತಿಸಿದ ಹಿಮಾಂಶುರೈ ಇವರು ವಿಚಿತ್ರ ಪ್ರಕೃತಿಯವರಿದ್ದರು; ಒಮ್ಮೆ ಅವರು ತಮ್ಮ ಸ್ಟುಡಿಯೋದಲ್ಲಿ ಕೆಲಸ ಮಾಡುತ್ತಿದ್ದ ಯುವಕನೊಬ್ಬನನ್ನು ಕರೆದು ಹೇಳಿದರು: 'ನಾಳೆ ನೀನು ನಮ್ಮ ಹೊಸ ಕಥೆಯಲ್ಲಿ ನಾಯಕನ ಪಾತ್ರವನ್ನು ವಹಿಸಬೇಕು' ಎಂದು. ಇದು ಅಶೋಕ ಕುಮಾರನಿಗೆ ಅವರ ಆದೇಶವಾಗಿತ್ತು. ಆ ಕಥೆ 'ಜೀವನ್‌ನಯ್ಯ'. ಅಂದಿನಿಂದ ಅಶೋಕ್ ಕುಮಾರ್ ನಾಯಕ ಪಾತ್ರಾಭಿನಯ ಮಾಡತೊಡಗಿದ. ಅಶೋಕ ಕುಮಾರ್ ಲಜ್ಜಾ ಸ್ವಭಾವದವ; ಆದರೂ ಆತನ ಗಂಭೀರ ಸ್ವರೂಪ, ಸಂಸ್ಕೃತಿಹೊಂದಿದ ನಡತೆ, ಇವುಗಳಿಂದ ಅಶೋಕ ಕುಮಾರ್ ಬೊಂಬೇ ಟಾಕೀಸಿನಲ್ಲಿ ಕೀರ್ತಿ ಶಿಖರಕ್ಕೇರಿದನು. ಅಶೋಕ ಕುಮಾರ್ ಸಾಧಾರಣ ನಟನಾಗಿ ತನ್ನ ಸಿನೆಮಾ ಜೀವನವನ್ನು ಪ್ರಾರಂಭಿಸಿ ಉತ್ತಮ ನಟನೆಂದು ಪ್ರಸಿದ್ಧನಾದನು' ಹೀಗೆಂದು ರೂಪವಾಣಿಯಲ್ಲಿ ಶ್ರೀ. ಕೆ. ಎ. ಅಬ್ಬಾಸರು ಬರೆಯುತ್ತಾರೆ.

ದೇವಿಕಾರಾಣಿ ಪುಷ್ಪಪ್ರಿಯಳು

'ದೇವಿಕಾರಾಣಿಗೆ ಹೂಗಳೆಂದರೆ ಬಹಳ ಪ್ರೀತಿ; ಹೂ ಕೈಯಲ್ಲಿಲ್ಲದೆ ಆಕೆ ಇರುವುದೇ ಅಪರೂಪ. ಯಾವಾಗಲೂ ಆಕೆಯ ಆಫೀಸಿನ ಮೇಜಿನ ಮೇಲೆ ಇಲ್ಲವೇ ಕಾರಿನ ಮುಂಗಡೆ ಕೆಲವು ಹೂಗಳು ಇದ್ದೇ ಇರುತ್ತವೆ. ಆಕೆಯ ಸಿಲ್ಕು ಸೀರೆಯಲ್ಲಿ ಚಲೋ ಗುಲಾಬಿ ಹೂವೊಂದನ್ನು ನಿತ್ಯ ನೀವು ಕಾಣಬಹುದು. ದೇವಿಕಾರಾಣಿ ಯಾವಾಗಲೂ ತನ್ನ ಸ್ಟುಡಿಯೋದ ಜನರ ಸುಖದುಃಖಗಳನ್ನು ವಿಚಾರಿಸುತ್ತ ಇರುವಳು' ಎಂದು ರೂಪವಾಣಿಯಲ್ಲಿ ಬೇರೊಂದು ಲೇಖನ ಬಂದಿರುವುದು.

ಸ್ಥಳೀಯ ಸಿನೆಮಾ

ಬಾಲಾಜಿಯಲ್ಲಿ ಪ್ರಾತಃಕಾಲದ ಪ್ರದರ್ಶನ

ಎಪ್ರಿಲ್ ತಿಂಗಳಿಂದ ಮೊದಲ್ಗೊಂಡು ಪ್ರತಿ ಶನಿವಾರ ಆದಿತ್ಯವಾರ ಪ್ರಾತಃಕಾಲ 10-30 ಗಂಟೆಗೆ ಸ್ಥಳೀಯ ಬಾಲಾಜಿ ಟಾಕೀಸಿನವರು ಇಂಗ್ಲಿಷು ಚಿತ್ರಗಳನ್ನು ಪ್ರದರ್ಶಿಸುತ್ತಿದ್ದಾರೆ. ಇದೊಂದು ಹೊಸ ಸೌಕರ್ಯವಾಗಿದ್ದು ಮಂಗಳೂರ ಸಿನೆಮಾ ಪ್ರಿಯರಿಗೆ ಹೊಸ ಆಕರ್ಷಣೆಯಾಗಿದೆ.

ಶಾಲಿಮಾರ್ ಪಿಕ್ಚರ್ಸ್

ಇವರ 'ಏಕ್ ರಾತ್' ಪೂರ್ಣವಾಗಿದೆ. ಇದನ್ನು ನಿರ್ದೇಶಿಸಿದವರು ಡಬ್ಲ್ಯು. ಜಡ್. ಅಹಮ್ಮದ್ ಇವರು. ನೀನಾ, ಪೃಥ್ವೀರಾಜ್ ಮೊದಲಾದವರು ಇದರಲ್ಲಿದೆ. ಹಾಡುಗಳು ಕರ್ಣ ಮನೋಹರವಾಗಿವೆ. ನಿರ್ದೇಶಕ ಅಹಮ್ಮದರು ಎರಡನೆಯ ಚಿತ್ರದಲ್ಲಿ ಈಗ ನಿರತರಾಗಿದ್ದಾರೆ.

ರಣಜಿತ್ ಮೂವಿಟೋನ್

ಜಯಂತ್ ದೇಸಾಯಿಯವರ ನಿರ್ದೇಶಕತ್ವದ 'ಚಾಂದನಿ' ಚಿತ್ರ ಸಿದ್ಧವಾಗಿದೆ ಮತ್ತು 'ಫರಿಯಾದ್' ಎಂಬುದು ತಯಾರಾಗುತ್ತಿದೆ. ಕೇದಾರಶರ್ಮರು ತನ್ನ 'ಅರ್ಮಾನ್' ಚಿತ್ರವನ್ನು ಪೂರ್ತಿಗೊಳಿಸಿದ್ದಾರೆ. ಈಗ ಇನ್ನೊಂದು ಚಿತ್ರವನ್ನು ಕೈಗೊಂಡಿದ್ದಾರೆ. ಚತುರ್ಭುಜ ದೋಷಿಯವರು 'ಧಿರಾಜ್' ಚಿತ್ರವನ್ನು ಕೊನೆಗೊಳಿಸಿರುವರು. 'ನರ್ಸ್' ಎಂಬುದನ್ನು ಪೂರ್ತಿಗೊಳಿಸುವುದರಲ್ಲಿದ್ದಾರೆ. ರಾಮ ದರ್ಯಾನಿಯವರ 'ಸುಖ ದುಃಖ' ಎಂಬ ಸಾಮಾಜಿಕ ಚಿತ್ರ ಪ್ರಾರಂಭವಾಗಿದೆ. ಮಣಿಭಾಯಿ ವ್ಯಾಸರೂ ಒಂದು ಚಿತ್ರ ತಯಾರಿಸುತ್ತಿರುವರು. ಹೀಗೆ ರಣಜಿತ್ ಬಹಳ ಚಿತ್ರಗಳನ್ನು ಒಮ್ಮೆಲೇ ತಯಾರಿಸುತ್ತಲಿದೆ.

ಆಚಾರ್ಯ ಪ್ರೊಡಕ್ಷನ್

ಇವರ 'ಕನ್ವಾರ್ ಬಾಬಾ (ಬ್ರಹ್ಮಚಾರಿ ಪಿತಾ)' ಚಿತ್ರವು ಈಗ ಪೂರ್ತಿಗೊಂಡಿದೆ. ಪ್ರತಿಮಾದಾಸ ಗುಪ್ತೆ ಇದರಲ್ಲಿ ನಟಿಸುತ್ತಾಳೆ. 'ಉಲ್ಝನ್' ಇವರ ಎರಡನೆಯ ಸಾಮಾಜಿಕ ಚಿತ್ರ. 'ಬಂಧನ್' ನಿರ್ದೇಶಕ ಶ್ರೀ. ಆಚಾರ್ಯರೇ ಈ ಕಂಪನಿಯ ಸ್ಥಾಪಕರು ಮತ್ತು ನಿರ್ದೇಶಕರು.

ಬೊಂಬೇ ಟಾಕೀಸ್

ಇವರ ಇತ್ತೀಚೆಯ ಚಿತ್ರ 'ವಸಂತ್' ಈಗ ತಯಾರಾಗುತ್ತಿದೆ. ಅಮಿಯಾ ಚಕ್ರವರ್ತಿ ಇದರ ನಿರ್ದೇಶಕರು. ಮುಮ್ತಾಜ್ ಶಾಂತಿ ಮತ್ತು ಉಲ್ಲಾಸ್ ಇವರು ಇದರಲ್ಲಿ ಅಭಿನಯಿಸುತ್ತಾರೆ.

ಪಂಚೋಲಿ ಆರ್ಟ್ ಪ್ರೊಡಕ್ಷನ್

ಇವರ 'ಜಮೀನ್ದಾರ್' ಚಿತ್ರದ ಮೊದಲನೆಯ ಭಾಗವು ಈಗ ಪೂರ್ಣವಾಯಿತು. ಇದರಲ್ಲಿ ಶಾಂತಾ ಆಪ್ಟೆ ಪಾತ್ರ ವಹಿಸುತ್ತಾಳೆ. ಇವರ 'ಖಾನ್‌ಧಾನ್' ಖಜಾಂಚಿಯಷ್ಟೆ ಪ್ರಸಿದ್ಧವಾಗಿ ಪ್ರದರ್ಶಿತವಾಗುತ್ತಿದೆ.

ಭಾರತ್ ಟಾಕೀಸ್

ಇವರು 'ಕಿಸ್‌ಕೀ ಬೀಬಿ' ಎಂಬ ಸಾಮಾಜಿಕ ಚಿತ್ರವನ್ನು ಸಂಪೂರ್ಣಗೊಳಿಸಿದರು. ಅನುರಾಧಾ, ಇ. ಬಿಲ್ಲಿಮೋರಿಯಾ, ಕಲ್ಯಾಣಿ, ವತ್ಸಲಾ ಕುಮ್ಟೇಕರ್, ಗುಲಾಬ್ ಇವರೇ ಮೊದಲಾದವರು ಇದರಲ್ಲಿ ನಟಿಸುತ್ತಾರೆ.

ನವಯುಗ ಚಿತ್ರಪಟ

ಇವರ 'ಸ್ಟೇಟ್ ಗೆಸ್ಟ್ಸ್' ಈಗ ಸಂಪೂರ್ಣವಾಗಿದೆ. ಅದು ಬೇಗನೇ ಪ್ರದರ್ಶಿತವಾಗುವುದೆಂದು ತಿಳಿದುಬರುತ್ತದೆ. ಇದೊಂದು ಹಾಸ್ಯ ಚಿತ್ರ.

ಸರಸ್ವತಿ ಸಿನೆಟೋನ್

ಇವರು ದಾದಾಸಾಹೇಬ್ ಟೋರೊನಿಯವರ 'ಅವಾಜ್' ಎಂಬ ಕಥೆಯನ್ನು ಪೂರ್ತಿಗೊಳಿಸಿದ್ದಾರೆ. ಮಾಯಾ ಬೆನರ್ಜಿ ಮತ್ತು ವಸ್ತಿಯವರು ಅಭಿನಯಿಸಿದ್ದಾರೆ.

ಮೆನಿ ಹೆಪ್ಪಿ ರಿಟರ್ನ್ಸ್

ಎಂಬ ಹೆಸರಿನ ಚಿತ್ರವನ್ನು ನ್ಯೂ ಹನ್ಸ್ ಪಿಕ್ಚರ್ಸಿನವರು ತಯಾರಿಸುವರು. ಬಾಬುರಾವ್ ಪೆಂಡಾರ್ಕಾರ್, ಹುಬ್ಳೀಕರ್ ಇದರಲ್ಲಿ ಅಭಿನಯಿಸುವರು.

ನೇಶನಲ್ ಸ್ಟುಡಿಯೋ

ನಳಿನೀ ಜಯವಂತ್ ಪಾತ್ರವಹಿಸಿದ 'ನಿರ್ದೋಷಿ' (ಹಿಂದೀ ಮತ್ತು ಮರಾಠಿ) ಈಗ ಪ್ರದರ್ಶಿತವಾಗುತ್ತಲಿದೆ. 'ಲಾಲಾಜಿ' ಎಂಬ ಹಾಸ್ಯಚಿತ್ರವನ್ನೂ 'ವಿಜಯ' 'ರೋಟಿ' 'ಅಪ್ನಾಘರಾನ್' ಚಿತ್ರಗಳನ್ನೂ ಈಗ ತಯಾರಿಸುತ್ತಿದ್ದಾರೆ.

ಪ್ರಕಾಶ ಪಿಕ್ಚರ್ಸ್

ಇವರ 'ಭರತ ಮಿಲಾಪ್' ಬಹಳ ಪ್ರಸಿದ್ಧವಾಗಿರುವುದು. 'ನರ್ಸಿ ಭಗತ್' ಹೆಚ್ಚು ಹಣ ಸಂಗ್ರಹಿಸುತ್ತಿದೆ. ಈಗ 'ಸ್ಟೇಶನ್ ಮಾಸ್ಟರ್' ಎಂಬ ಹೊಸ ಚಿತ್ರವನ್ನು ಇವರು ತಯಾರಿಸುತ್ತಿದ್ದಾರೆ. ಇದರಲ್ಲಿ ಜಗದೀಶ ಸೇಟಿ ಪಾತ್ರ ವಹಿಸುವನು.

ಸಾದರ ಸ್ವೀಕಾರ

ಕೊರವಂಜೀ (ತಿಂಗಳಿನ ಮಾಸಪತ್ರಿಕೆ) ಸಂಪಾದಕರು: ಶ್ರೀ. ರಾ. ಶಿ. ಸಲಹೆಗಾರರು: ಶ್ರೀ. ನಾ. ಕಸ್ತೂರಿ. ಚಿತ್ರಕಾರರು ಶ್ರೀ. ಆರ್. ಕೆ. ಲಕ್ಷ್ಮಣ. ಬಿಡಿ ಪ್ರತಿ ಎರಡಾಣೆ. ವ್ಯವಸ್ಥಾಪಕರು: ಲಾಲ್‌ಭಾಗ್ ರೋಡ್, ಬೆಂಗಳೂರು ಸಿಟಿ. ಸಂ. ೧ ಸಂ. ೩

ಇದು ಉತ್ತಮ ಹಾಸ್ಯಗಳಿಂದ ಕೂಡಿದ ಲೇಖನ, ಕತೆ, ಹರಟೆ ಅಣಕವಾಡುಗಳುಳ್ಳ ಪತ್ರಿಕೆ. ಸಚಿತ್ರವಾಗಿದ್ದು ರಮಣೀಯವಿದೆ; ಇಂತಹ ಸಾಹಸವು ಪ್ರಶಂಸನೀಯವಿದೆ. ಈ ತರದ ಪತ್ರಿಕೆಗಳು ಬೆಳೆದಷ್ಟು ಕನ್ನಡಿಗರ ಮನೆಮನೆಗಳಲ್ಲಿ ಆನಂದ ಹರಿದೀತು.

ಕಾಲಕ್ಷೇಪ: ವಾರಪತ್ರಿಕೆ. ಸಂ. ೧ ಸಂ. ೧೩, ನಾಲ್ಕು ಪುಟಗಳು. ಸಂಪಾದಕರು: ಕೆ. ಆರ್ ರಂಗಸ್ವಾಮಿ. ಗೀತಾ ರೋಡ್, ಮೈಸೂರು. ಸಮಾಚಾರ, ಸಿನೆಮಾ, ಸ್ಪರ್ಧೆಗಳಿಂದ ಕೂಡಿದ ವಾರಪತ್ರಿಕೆಯಿದು.

ಹುಣ್ಣುಗಳನ್ನು ತೀವ್ರವಾಗಿ ನಾಶಪಡಿಸಿರಿ

ಅತ್ಯಂತ ಬೇನೆಯ ಹುಣ್ಣು ಮತ್ತು ಚರ್ಮದ ನೂನತೆಗಳನು ತಕ್ಕುದಾದ ಸುಲಭ ರೀತಿಯಲ್ಲಿ ನಾಶಪಡಿಸಿರಿ. ಕುರು ಯಾ ಹುಣ್ಣನ್ನು ಬಿಸಿನೀರು ಮತ್ತು ಕುಟಿಕೂರಾ ಸಾಬೂನಿನಿಂದ (cuticura soap) ಚೆನ್ನಾಗಿ ತೊಳೆಯಿರಿ. ನಂತರ ಕುಟಿಕೂರಾ ಮುಲಾಮನ್ನು (cuticura ointment) ಚೆನ್ನಾಗಿ ಅದರ ಮೇಲೆ ಸವರಿ ಬಿಡಿರಿ. ಇದು ಕುರುಹುಣ್ಣು, ಮುದ್ದಣ ಕಾಲು ಕುಂಟು ಮುಂತಾದ ಭಯಂಕರ ವ್ರಣಗಳಿಗೂ ಗುಣಕಾರಿಯಾದ ಚಿಕಿತ್ಸೆಯಾಗಿದೆ. ಕುಟಿಕೂರಾ ಮುಲಾಮು (cuticura ointment) ಚರ್ಮವ್ಯಾಧಿಯ ಮೂಲವನ್ನೇ ಹೊಕ್ಕು ತೀವ್ರವಾಗಿ ನೋವನ್ನೂ ಬಾತುವಿಕೆಯನ್ನೂ ಗುಣಪಡಿಸುತ್ತದೆ.

ಕುಟಿಕೂರಾ ಮುಲಾಮು (cuticura ointment) ನೆದುರು ಯಾವ ಕ್ರಿಮಿಗಳು ತಡೆಯವು. ಆದುದರಿಂದ ಕೊಳೆತು ವಿಷಕಾರಿಯಾಗಿ ಪರಿಣಮಿಸದಂತೆ ಇದು ಖಂಡಿತ ರಕ್ಷಿಸುವುದು. ರಕ್ಷಣೆಯ ಸಲುವಾಗಿ ಒಂದು ಟಿನ್ನು (cuticura) ಮುಲಾಮನ್ನು ಇಟ್ಟುಕೊಳ್ಳಿರಿ. ಕುಟಿಕೂರವು (cuticura) ಇತರ ಔಷಧಗಳಿಂದ ಗುಣಪಡಿಸಲಾಗದಂಥ ಚರ್ಮವ್ಯಾಧಿಗಳನ್ನು ನಾಶಪಡಿಸುವುದು. ಒಂದು ವರ್ಷಕಾಲದಿಂದಿರುವ ಚರ್ಮವ್ಯಾಧಿಯನ್ನು ಒಂದೇ ಟಿನ್ನು ಮುಲಾಮು ಗುಣಪಡಿಸುವುದು.

ಕುಟಿಕೂರಾ ಮುಲಾಮು (cuticura ointment) ಗಜ್ಜಿ, ಕುರು, ವ್ರಣ, ಹುಣ್ಣು, ಮುದ್ದಣ, ವಿಷಕಾರಿಗಾಯ, ಉರಿ ಮುಂತಾದ ಎಲ್ಲಾ ಚರ್ಮಛಿದ್ರಗಳನ್ನೂ ಗುಣಪಡಿಸುತ್ತದೆ.



ಎಲ್ಲಾ ಕೆಮಿಸ್ಟರಲ್ಲಿಯೂ ಅಂಗಡಿಗಳಲ್ಲಿಯೂ ಮಾರಲ್ಪಡುತ್ತದೆ.

ಕುಟಿಕೂರಾಮುಲಾಮು
Cuticura Ointment

ಡೋಂಗರೆ ಬಾಲಾಮೃತವು
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ರೈಲು ಬಂಡಿಗಳ ಸಮಯ

ಇದೇ ಜುಲ್ಯಾ ತಾ. 1ರಿಂದ ವ್ಯತ್ಯಾಸವಾದ ರೈಲು ಬಂಡಿಗಳ ಸಮಯಗಳು ಈ ಕೆಳಗಿನಂತಿವೆ—

ಗಾಡಿಗಳು	ಹೊರಡುವ ಗಂಟೆ	ತಲ್ಪುವ ಗಂಟೆ
ಗೂಡ್ಸು ಬಂಡಿ	6.48 ಬೆಳಿಗ್ಗೆ	7.50 ರಾತ್ರಿ
ಮಲಬಾರು ಎಕ್ಸ್‌ಪ್ರೆಸ್ (ಮೈಲ್)	9.5 ಬೆಳಿಗ್ಗೆ	5.15 ಸಾಯಂ.
ಪಾಲ್ಘಾಟ್ ವರೆಗೆ ಪೆಸೆಂಜರ್	12.0 ಮಧ್ಯಾಹ್ನ	2.55 ಸಾಯಂ.
ಕಣ್ಣನೂರು ವರೆಗೆ	5.52 ಸಾಯಂ.	9.40 ಪೂರ್ವಾಹ್ನ

ನಂಬಿ ನಂಬಿ ತೆಗೆದುಕೊಳ್ಳಲು



ದಮ್ಮಿನ ಮೇಲೆ ಒಂದೇ ಉಪಾಯ

ಮನೋಹರ ಶ್ವಾಸಹಾರಿ

ವಿಚಿತ್ರ ಪ್ರಪಂಚ

'ಸಿಂಧು' 'ಇಂಡಿಯಾ' ಆಯಿತೆ?

ನಮ್ಮ ದೇಶಕ್ಕೆ 'ಇಂಡಿಯಾ' ಎಂಬ ಹೆಸರು ಬಂದದ್ದು ಇಲ್ಲಿ ಹರಿವ 'ಸಿಂಧು' ಎಂಬ ನದಿಯಿಂದ ಎಂಬುದಾಗಿ ಹೇಳಲಾಗುತ್ತದೆ. ಸಂಸ್ಕೃತದ 'ಸಿಂಧು' ಎಂಬುದು ಈಗಿನ 'ಇಂಡೀಸ್' ನದಿ. ಪರ್ಶಿಯದಲ್ಲಿ 'ಹಿಂದು' ಎಂಬ ರೂಪಾಂತರ ಹೊಂದಿತು. ಗ್ರೀಕರು ಇದನ್ನು 'ಇಂಡೋಸ್' ಎಂದು ಮಾಡಿದರು. ರೋಮನರು 'ಇಂಡಸ್' ಎಂದರು; ಕೊನೆಗೆ ಆಂಗ್ಲೇಯರು 'ಇಂಡಿಯಾ' ಆಗಿ ಮಾರ್ಪಡಿಸಿಕೊಂಡರು. ಹೀಗೆ 'ಇಂಡಿಯಾ' ಎಂಬ ಹೆಸರು 'ಸಿಂಧು' ನದಿಯಿಂದ ಉತ್ಪನ್ನವಾಯಿತೆಂದು ಭಾಷಾ ಶಾಸ್ತ್ರಜ್ಞರ ಹೇಳಿಕೆಯಾಗಿದೆ.

ಮುಸ್ಲಿಮರು 'ವಂದೇಮಾತರಂ' ಹಾಡಿದರು!

ಢಾಕ್ಕಾದಲ್ಲಿ ಹಿಂದೂ ಮುಸ್ಲಿಂ ಐಕ್ಯದೃಶ್ಯ!

ಫಜುಲುಲ್ ಹಕ್, ಡಾ। ಶ್ಯಾಮ ಪ್ರಸಾದ ಮುಕರ್ಜಿ, ನವಾಬ್ ಬಹದ್ದೂರ್ ಮೊದಲಾದ ಮುಖಂಡರು ಢಕ್ಕಾದಲ್ಲಿ ೫೦ ಸಾವಿರ ಮಂದಿ ಸೇರಿದ ಸಭೆಯಲ್ಲಿ ಹಿಂದೂ ಮುಸ್ಲಿಂ ಐಕ್ಯದ ವಿಷಯ ಭಾಷಣ ಮಾಡಿದರು. ಹಿಂದುಗಳೂ ಮುಸ್ಲಿಮರೂ ಐಕ್ಯವಾಗಿ ನೆರೆದಿದ್ದರು! ಹಿಂದುಗಳು ಅಲ್ಲಾಹೊ ಅಕ್ಬರ್ ಹೇಳಿದರು, ಮುಸ್ಲಿಮರು ವಂದೇ ಮಾತರಂ ಹಾಡಿದರು! ಹಕ್ಕರು ಶ್ಯಾಮಪ್ರಸಾದರೇ ಮೊದಲಾದವರು ಹಿಂದುಗಳೂ ಮುಸ್ಲಿಮರೂ ಭೇದಭಾವವನ್ನು ಬಿಟ್ಟು ಅನ್ಯೋನ್ಯ ಬಾಂಧವರಂತೆ ಸ್ನೇಹ ಸೌಹಾರ್ದದಿಂದಿರಬೇಕೆಂದು ವಿನಂತಿಸಿಕೊಂಡರು ಅಂದಿನ ದೃಶ್ಯವು ದೇವದರ್ಶನೀಯವಿತ್ತು!

ಎಸೆಸರ್ ಆಗಲೊಪ್ಪದೆ ಕಾಂಗ್ರೆಸ್ ವಾಲ!

೬ನೆ ಸಲ ದಂಡ ತೆತ್ತರು

ಸೇಠ್ ಪೂನಂ ಚಾಂದರಾಂಕ ಎಂಬ ನಾಗಪುರದ ಪ್ರಾಂತಿಕ ಕಾಂಗ್ರೆಸ್ ಕಮಿಟಿ ಅಧ್ಯಕ್ಷರು ಕ್ರಿಮಿನಲ್ ಕೇಸಿನಲ್ಲಿ ಎಸೆಸರ್ ಆಗಲು ಸಮ್ಮತಿಸದಿರುವುದಕ್ಕಾಗಿ ರೂ. ೫೦ ದಂಡ ಕೊಡಬೇಕಾಯಿತು ಇದು ಅವರು ಎಂಟನೆ ಸಲ ಈ ತೆರ ತಿರಸ್ಕರಿಸಿದುದಕ್ಕೆ ದಂಡ ಕೊಡುವುದಾಗಿದೆ. ಅಹಿಂಸಾ ವಿಶ್ವಾಸವುಳ್ಳವನಾಗಿ ನಾನು ಕೋರ್ಟಿಗೆ ಹೋಗಲಾರೆನಲ್ಲದೆ, ಕೋರ್ಟಿಗೆ ಆಗೌರವ ಮಾಡಬೇಕೆಂದು ಬಯಸುವುದಿಲ್ಲವೆಂದು ಅವರ ಹೇಳಿಕೆಯಾಗಿದೆ. ಮಾತ್ರವಲ್ಲದೆ ತಾ. ೧೩ನೇ ಮಾರ್ಚಿ ದಿನ ಕಾಂಗ್ರೆಸ್ ಪ್ರೆಸಿಡೆಂಟರಾದ ಆಜಾದರನ್ನು ಕಾಣಬೇಕಾಗಿರುವುದರಿಂದಲೂ ಎಸೆಸರಾಗಲು ಸಾಧ್ಯವಿಲ್ಲವೆಂದು ಅವರು ಬರೆದಿರುವರು

ಹಿಂದಿನೊಂದು ಫೋಟೋದಲ್ಲಿ ನೆಹರು ಅಳಿಯನನ್ನು ಗುರುತಿಸಿದರು

ಕಮಲಾ ನೆಹರುವನ್ನು ಶುಶ್ರೂಷಿಸುವ ಸ್ವಯಂ ಸೇವಕನಾಗಿ

'ಹೌದು, ಇದು ನನ್ನ ಅಳಿಯ' ಹೀಗೆಂದು ನೆಹರು ಜವಾಹಿರಲಾಲರು ಅಮೃತ ಬಜಾರ್ ಪತ್ರಿಕೆಯ ಪ್ರತಿನಿಧಿ ಒಂದು ಹಳೆಯ ಫೋಟೋವನ್ನು ತೋರಿಸಿದಾಗ ಗುರುತಿಸಿ ಹೇಳಿದರು. ಕಮಲಾ ನೆಹರುವನ್ನು ತನ್ನ ಕೈಗಳಲ್ಲಿ ಎತ್ತಿಕೊಂಡು ಹೋಗುತ್ತಿದ್ದ ಸ್ವಯಂಸೇವಕನಾಗಿ ಫಿರೋಜ ಗಾಂಧಿಯನ್ನು ಅವರು ಗುರುತಿಸಿದರು.

ಈ ಫೋಟೋ ಅಮೃತ ಬಜಾರ್ ಪತ್ರಿಕೆಯಲ್ಲಿ ಹಲವು ವರ್ಷಗಳ ಹಿಂದೆ ಪ್ರಕಟಿಸಲಾಗಿತ್ತು. 'ಯೂರೋಪಿನಿಂದ ಹಿಂತೆರಳಿದ ಕಮಲಾ ನೆಹರುವನ್ನು ಅವರಿಗೆ ನಡೆಯಲು ಶಕ್ತಿಯಿಲ್ಲದಿರುವುದರಿಂದ ಒಬ್ಬ ಕಾಂಗ್ರೆಸ್ ಸ್ವಯಂಸೇವಕನು ಅವರ ಮನೆಗೆ ಕೈಗಳಲ್ಲೆತ್ತಿಕೊಂಡು ಹೋಗುತ್ತಾನೆ' ಎಂದು ಆ ಫೋಟೋದಲ್ಲಿ ಬರೆಯಲಾ...

ವಿಜ್ಞಾನಯುಗ

ಜ್ಯೋತಿಷ್ಯದ ಮೇಲೆ ಬಿಕಪಾರ ಗದೆ!

ಸಂಸ್ಕೃತಿ ಕೆಡಿಸುವುದೆಂದು

'ಇಂದು ಯುದ್ಧದಿಂದ ಗೊಂದಲಗೊಂಡಿರುವೀ ಕಾಲದಲ್ಲಿ, ಮನುಷ್ಯನು ವಿಪರೀತ ಆಧಾರಗೊಂಡಿರುವೀ ಸಂದರ್ಭದಲ್ಲಿ ಜ್ಯೋತಿಷ್ಯವೆಂಬುದು ಮಾನವನನ್ನು ಪಾಶವಿಕ ಲೋಕಕ್ಕೊಯ್ದು ಆತನ ಸಂಸ್ಕೃತಿಯನ್ನು ಹಾಳುಗೆಡವಿ, ಮನುಷ್ಯತ್ವವನ್ನೇ ನಿರ್ನಾಮಗೊಳಿಸುವುದು ಎಂಬುದಾಗಿ ಪ್ರೇಂಕ್ ರುಸೆಲ್ ಬಾರಿ ಎಂಬ ಸೌತ್ ವೆಲ್ಸಿನ ಎಂಗ್ಲಿಕನ್ ಬಿಶಪರು, ಬ್ರಿಟನಿನ ಯುದ್ಧಕಾಲದ ಜ್ಯೋತಿಷ್ಯ ವಿಶ್ವಾಸದ ಮೇಲೆ ಟೀಕಿಸಿದ್ದಾರೆ. ಲೋಕದಲ್ಲಿ ಮಾನವನನ್ನು ಈ ಜ್ಯೋತಿಷ್ಯದ ವಿಶ್ವಾಸವು ಕೆಡಿಸುವಷ್ಟು ಬೇರೆ ಯಾವುದೂ ಕೆಡಿಸಲಾರದು; ಮಾನವನ ನೀತಿಯ ನೆಲೆಯನ್ನು ಹಾಳುಮಾಡಿ, ಆತನ ನಡತೆಯನ್ನು ಇದು ನಿರ್ನಾಮಗೊಳಿಸುವುದು. ಇದು ಮಾನವ ಲೋಕದಲ್ಲಿ ಉಳಿದರೆ ಇಡೀ ಮನುಷ್ಯತ್ವವೇ ಕೆಟ್ಟುಹೋದೀತು, ಕ್ರಿಸ್ತನ ಧರ್ಮವೇ ಬಾಳಲಾರದು ಎಂದು ಅವರು ಹೇಳಿರುವರು.

...ಗಿತ್ತು ಪಂಡಿತ ನೆಹರುಗಳಿಗೆ ಆ ಚಿತ್ರ ಬಹಳ ಹೃದಯ ಸ್ಪರ್ಶಿಯಾದಂತೆ ಕಂಡುಬಂತು! ಅವರು ಅದರ ಒಂದು ಪ್ರತಿಯನ್ನು ತನಗೆ ಒದಗಿಸಿಕೊಡಬೇಕಾಗಿ ಪತ್ರಿಕಾ ಪ್ರತಿನಿಧಿಯೊಡನೆ ಕೇಳಿಕೊಂಡರು.

ಮಿದುಳಿನ ಎಕ್ಸ್‌ರೇ ತೆಗೆವುದು

ಮಿದುಳಿನ ಒಳಭಾಗವನ್ನು ಈಗ ಸಾಧ್ಯವಾಗಿ ಎಕ್ಸ್‌ರೇ ತೆಗೆಯಬಹುದಾಗಿದೆ ಚಿಲಟ್ರೈನ್ ಮತ್ತು ಆಯೊಡಿನ್ ಮಿಶ್ರಣದ ಒಂದು ಇಂಜೆಕ್ಷನನ್ನು ಮಿದುಳಿನ 'ಕೇವಿಟಿ'ಗಳಿಗೆ ಇಂಜೆಕ್ಟ್ ಮಾಡಲಾಗುವುದು; ಇದನ್ನು ನ್ಯೂಯಾರ್ಕಿನ ಪೋಸ್ಟ್ ಗ್ರಾಜ್ಯುವೇಟ್ ಹೋಸ್ಪಿಟಲಿನ ಡಾಕ್ಟರರು ಹೆರಾಲ್ಡ್ ಎಚ್ ಲೆಪ್ಟ್ ಮತ್ತು ಜಾನ್ ಆರ್ಥರ್ ಮಕ್ಲೀನ್ ಎಂಬವರು ಕಂಡುಹಿಡಿದಿರುವರು. ಹಿಂದಿನ ರೀತಿಯಲ್ಲಿ ಬಹಳ ಕಷ್ಟಕರವಾಗಿ ಮಿದುಳಿನ ಚಿಕಿತ್ಸೆ ಮಾಡಬೇಕಾಗಿದ್ದು, ಈ ಶೋಧನೆಯಿಂದ ಡಾಕ್ಟರರು ಬಹಳ ಆನಂದಗೊಂಡಿದ್ದಾರೆ ಮೊದಲು ಇದನ್ನು ಇಲಿ ಮತ್ತು ಬೆಕ್ಕುಗಳ ಮೇಲೆ ಪ್ರಯೋಗಿಸಿ ನೋಡಲಾಯಿತು. ಅಲ್ಲಿ ಫಲಕಾರಿಯೆಂದು ಕಂಡುಬಂದ ಮೇಲೆ ಈಗ ಮನುಷ್ಯರಿಗೂ ಪ್ರಯೋಗಿಸಲ್ಪಡುವುದು

ಸ್ವದೇಶಾಭಿಮಾನಿಯಲ್ಲಿ
ನಿಮ್ಮ ಜಾಹೀರಾತುಗಳನ್ನು ಕೊಡಿರಿ



Bhuvanendra Products Limited,

Katapadi, S. Kanara.

"BHUVANENDRA" Garbhapal

Tried and appreciated by eminent Doctors Proved to be the best remedy where even allopathic medicines failed A specific for threatened or habitual abortion and other uterine troubles Must be commensed soon after conception and continued up to the time of delivery

"ಭುವನೇಂದ್ರ ಗರ್ಭಪಾಲ"

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವವಿಧದ ದೋಷಗಳನ್ನು ಗುಣಪಡಿಸುವ ದಿವ್ಯಔಷಧಿ ಗರ್ಭವತಿಯೆನಿಸಿದಂದಿನಿಂದ ಪ್ರಸವಕಾಲದ ವರೆಗೆ ಸೇವಿಸುವುದು ಅತ್ಯುತ್ತಮ

ಸ್ಥಳೀಯ ಸ್ಟಾಕಿಸ್ಟ ವ ಏಜೆಂಟರು:-
(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ (2) ರಾಘುವೇಂದ್ರ ಪೈ, ರಥಬೀದಿ (3) ದಿ ಕರ್ನಾಟಕ ಸ್ಟಫ್ ವರ್ಕ್ಸ, ರಥಬೀದಿ (4) ಡಾ। ಯಂ ಎಸ್ ಪ್ರಭು, M B B S ಸಿ ಪಿ ಸಿ ಬಿಲ್ಡಿಂಗ್ಸ (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಜಪ್ಪನಕಟ್ಟೆ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಡಿಪೊ —1 ಮರಾರ ಗಲ್ಲಿ ಹುಬ್ಬಳ್ಳಿ
2 36 ಫ್ಯಾಕ್ರೋಫ್ಟ್ ರೋಡ್, ಟ್ರಿಪ್ಲಿಕೇನ್, ಮದರಾಸು

The Bank of Mangalore Limited

HEAD OFFICE	*BRANCHES*
Mangalore	Moodabidri & Padubidri

ANNOUNCEMENT

On and from 1st February 1942 fixed deposits will be accepted at the following attractive rates

One year	4%
Two years or above	4½%

Interest Payable Quarterly

ಸರಕಾರದ ಹೊಸ ಪಾಠಪಟ್ಟಿಗನುಸಾರವಾಗಿ ಬರೆದ

ನವೀನ ಭೂವಿವರಣೆ

ವಾಸುದೇವರಾವ್, ಎಂ ಎ ಎಲ್ ಟಿ (Dip Geography
(ಭೂಗೋಳ ಶಾಸ್ತ್ರದಲ್ಲಿ ಡಿಪ್ಲೊಮಾ ಪಡೆದವರು)

ಈ ಪುಸ್ತಕಗಳನ್ನು ಪಡಕೊಂಡಲ್ಲಿ ವಿದ್ಯಾರ್ಥಿಗಳಿಗೆ ಎಟ್ಲಾಸ್ ಕೊಂಡುಕೊಳ್ಳುವ ಅವಶ್ಯವಿಲ್ಲ

ಪ್ರತಿ ಪುಸ್ತಕದಲ್ಲಿ ಬಣ್ಣಬಣ್ಣದ ಭೂಪಟಗಳಿವೆ

ಅನೇಕಾನೇಕ ಚಿತ್ರಪಟಗಳಿಂದ ಕೂಡಿದ್ದು ಪ್ರತಿ ಪಾಠದ ಅಂತ್ಯದಲ್ಲಿ ಅಭ್ಯಾಸಗಳೂ ಮಾದರಿ ಪ್ರಶ್ನೆಗಳನ್ನೂ ಕೊಟ್ಟಿದೆ

4 ನೆಯ ಪುಸ್ತಕ 6 ಆಣೆ 5 ನೆಯ ಪುಸ್ತಕ 7 ಆಣೆ। 7 ಮತ್ತು 8 ನೆಯ ಪುಸ್ತಕಗಳು ಅಚ್ಚಿನಲ್ಲಿವೆ ಪುಸ್ತಕಗಳು ಬೇಕಾದಲ್ಲಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.

ದಿ ದಿ
ಕಂಬೈಂಡ್ ಬುಕ್ಕಿಂಗ್ ಏಜನ್ಸಿ ಮತ್ತು ಜೋಂಟ್ ಬುಕ್ಕಿಂಗ್ ಆಫೀಸು

ಮಂಗಳೂರು ಕೊಡಿಯಾಲ್ ಬೈಲ್

ಹಿರಿಯಡಕ ಶ್ರೀ ವೀರಭದ್ರಸ್ವಾಮಿ ದೇವಾಲಯದಲ್ಲಿ ನಡೆಯುವ ರಥೋತ್ಸವ ಸಮಾರಂಭ

ಧ್ವಜಾರೋಹಣ	ದೀಪಾರಾಧನೆ	ರಂಗಪೂಜೆ	ಮಹಾರಥೋತ್ಸವ
30-4-'42	1-5-'42	2-5-'42	3-5-'42

ಹಿರಿಯಡಕ ದೇವಸ್ಥಾನದಿಂದ ಸುಮಾರು ಅರ್ಧ ಮೈಲು ದೂರದಲ್ಲಿರುವ ಶ್ರೀ ಮಾರ್ಕಾಂಡೇಯ ತೀರ್ಥದಲ್ಲಿ ಮಿಂದು ಶ್ರೀ ಅಡಕ ತಾಯಿ ಮತ್ತು ಶ್ರೀ ಮಾರ್ಕಾಂಡೇಯ ಮಹಾ ಮುನಿಗಳ ಅಪೇಕ್ಷೆಯಂತೆ ಶ್ರೀ ಪರಮೇಶ್ವರನು, ಪಾರ್ವತಿ ಸಮೇತನಾಗಿ ಸಕಲ ಗಣಾಂಗಣಗಳೊಡನೆ ಭಕ್ತಾದಿಗಳ ಸಕಲ ಇಷ್ಟಾರ್ಥವನ್ನು ನೆರವೇರಿಸಿ ಕೊಡುವುದಕ್ಕಾಗಿ ಪ್ರತ್ಯಕ್ಷವಾಗಿ ನೆಲಸಿರುವ ಶ್ರೀ ವೀರಭದ್ರ ಸ್ವಾಮಿ ದೇವಾಲಯವನ್ನು ಸಂದರ್ಶಿಸಿ ಭಕ್ತಿಯಿಂದ ಶ್ರೀ ದೇವರ ಅನುಗ್ರಹಕ್ಕೆ ಪಾತ್ರರಾಗಲು ಇದು ಸುಸಂದರ್ಭವಲ್ಲವೇ?

ಪ್ರಯಾಣಿಕರ ಸೌಕರ್ಯದೆಡೆಗೆ ಹೆಚ್ಚಿನ ಗಮನ ಕೊಡಲಾಗುವುದು

JOINT MANAGERS,

The Combined Booking Agency,	**The Joint Booking Office,**
MANGALORE.	KODIALBAIL

ಈ ಸಂಚಿಕೆ ಬೆಲೆ ಒಂದಾಣೆ   ವಾರ್ಷಿಕ ಚಂದಾ ರೂ. 3-0-0   ಅಂಚೆ ವೆಚ್ಚ ಸೇರಿ ರೂ. 3-13-0   Regd. No. M 3460

ಸ್ವದೇಶಾಭಿಮಾನಿ

[ಸಂಪುಟ 36]   ತಾರೀಕು 8-5-1942   [ಸಂಚಿಕೆ 19]

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು; ಘಾಯಗಳು, ಚಾಕುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ. ಬೊಂಬ್ಯಾ, ಮದರಾಸು, ಕಲ್ಕತ್ತ.

ಶ್ರೀ ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

AMRUTANJAN DEPOTS BOMBAY MADRAS CALCUTTA

ಸಂಶಯವೇಕೆ?

ಶತ್ರುಗಳು ವಿಮಾನಗಳ ಮೂಲಕ ಧಾಳಿ ನಡೆಸುವುದರಿಂದಲೂ ಮತ್ತು ಇತರ ವಿವಾದ ಶತ್ರು ಚಟುವಟಿಕೆಗಳಿಂದಲೂ ಹಿಂದುಸ್ಥಾನದ ಸಿವಿಲ್ ಪ್ರಜೆಗಳಲ್ಲಿ—ಇದರಲ್ಲಿ ಎ ಆರ್ ಪಿ ಕೆಲಸಗಾರರೂ ಸೇರುವರು ಉಂಟಾಗಬಹುದಾದ ಪ್ರಾಣಹಾನಿಗೆ

ದಿ "ಬಾಂಬೆ ಲೈಫ್" ಪಾಲಿಸಿಗಳು

ಸಂಪೂರ್ಣವಾದ ರಕ್ಷಣೆಯನ್ನು ನೀಡುತ್ತವೆ. ಆದ್ದರಿಂದ ನಿಮ್ಮ ಪ್ರೀತಿಪಾತ್ರರಿಗಾಗಿ

ದಿ ಬಾಂಬೆ ಲೈಫ್ ಅಶ್ಯೂರೆನ್ಸ್ ಕಂಪೆನಿ (ಲಿಮಿಟೆಡ್)

ಯಲ್ಲಿ ಪಾಲಿಸಿಗಳನ್ನು ಪಡೆಯುವುದು ನಿಮ್ಮ ತ್ವರಿತ ಕರ್ತವ್ಯವಾಗಿದೆ

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಸಂಸ್ಥಾನಗಳಾದಿಯಾಗಿ ದಕ್ಷಿಣ ಭಾರತಕ್ಕೆ ಪ್ರಾಮುಖ್ಯ ಏಜೆಂಟರು:

ಉಡುಪಿ

—: ಅಥವಾ ಈ ಕೆಳಗಿನ ಇತರ ಆಫೀಸುಗಳಿಗೆ ಬರೆಯಿರಿ: —

ಕಲ್ಲಿಕೋಟೆ	ಬೆಂಗಳೂರು	ಮಂಗಳೂರು
ಮದರಾಸು	ತ್ರಿವೇಂಡ್ರಂ	ಬೊಂಬಾಯಿ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ

ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

★

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by the A. S. Kamath at Sharada Press, Car Street, Mangalore.

ESTD. 1906

ಸ್ವದೇಶಾಭಿಮಾನಿ

SWADESHABHIMANI

ಬಿಟಿಷ್ ಪೆರಟ್ರೂಪ್ ಸೈನಿಕನು ತರಬೇತಿ ಮಾಡುತ್ತಾನೆ

KANNADA ILLUSTRATED WEEKLY

ಶ್ರೀ ರಾಮಕೃಷ್ಣ ಲೀಲಾ ಪ್ರಸಂಗ

[ಗುರುಭಾವ-ಪೂರ್ವಾರ್ಧ]

ಮೂಲ ಬಂಗಾಳಿ ಲೇಖಕರು: ಶ್ರೀ ಸ್ವಾಮಿ ಶಾರದಾನಂದಜಿ
ಅನುವಾದ: ಶ್ರೀ ಸ್ವಾಮಿ ಪ್ರಣವೇಶಾನಂದರು

(ಹಕ್ಕು ಕಾದಿಡಲ್ಪಟ್ಟಿದೆ)

ಇನ್ನೊಮ್ಮೆ ಸ್ವಲ್ಪ ಹೊತ್ತು ಗಂಭೀರಭಾವದಲ್ಲಿದ್ದು ಶ್ರೀ ಪರಮಹಂಸರು ಹೇಳತೊಡಗಿದರೇನೆಂದರೆ ಈ ಸಂಸಾರದಲ್ಲಿ ಎಲ್ಲವರೊಡನೆ (ಪುತ್ರ ಮೊದಲಾದವರೊಡನೆ) ಸಂಬಂಧವು ಎಷ್ಟು ದಿನಗಳ ತನಕ ಇರುವುದು? ಮನುಷ್ಯನು ಸುಖದಾಸೆಯಿಂದ ಸಂಸಾರ ಮಾಡುತ್ತಾನೆ— ಮದುವೆ ಮಾಡಿಕೊಂಡನು, ಮಗುವಾಯಿತು, ಆ ಮಗುವು ಬೆಳೆಯಿತು, ಅವನಿಗೂ ಮದುವೆ ಆಯಿತು. ಕೆಲವು ದಿನ ಚೆನ್ನಾಗಿಯೇ ಕಳೆಯಿತು. ಅನಂತರ ಇದಕ್ಕೆ ರೋಗ, ಅದು ಸತ್ತು ಹೋಯಿತು ಇದು ಮನೆಬಿಟ್ಟು ಹೋಯಿತು— ಈ ಚಿಂತೆಯಲ್ಲೇ ಮಗ್ನ, ವಯಸ್ಸಾದ ಹಾಗೆ ಹತ್ತು ದಿಕ್ಕುಗಳಿಂದ ಕರೆ ಬರುತ್ತವೆ. ನೀನು ನೋಡಿರಬಹುದು, ಒಂದು ತರದ ಮರ ಉಂಟು, ಅದರ ಸೌದೆಯು ಮೊದಲು ಮೊದಲು ಚೆನ್ನಾಗಿ ಉರಿಯುತ್ತದೆ ಅನಂತರ ಸೌದೆಯು ಉರಿಯುತ್ತ ಬಂದ ಮೇಲೆ ಅದರ ರಸವು ಮತ್ತೊಂದು ಕಡೆಯಿಂದ ಹೊರಬಂದು ನೊರೆಯಂತೆ ಉಕ್ಕುತ್ತದೆ ಮತ್ತು ನಾನಾ ತರದ ಶಬ್ದವಾಗುತ್ತದೆ ಅದರ ಹಾಗೆಯೇ ಹೀಗೆ ಹೇಳುತ್ತಾ ಸಂಸಾರದ ಅನಿತ್ಯತೆಯನ್ನೂ ಅಸಾರತೆಯನ್ನೂ ಶ್ರೀ ದೇವರನ್ನೂ ಶರಣುಹೋಗುವುದೇ ಒಂದು ಮಾತ್ರ ಸುಖವೆಂದು ಮೊದಲಾದ ವಿಷಯಗಳನ್ನು ಹೇಳಿ ಮಣಿಮೋಹನನನ್ನು ಸಂತೈಸಿದರು ಮಣಿಮೋಹನನು ಕೂಡ ದುಃಖವನ್ನು ಸಹಿಸಿ 'ಈ ಫಲುವಾಗಿಯೇ ನಿಮ್ಮ ಹತ್ತಿರ ಬಂದಿದ್ದೇನೆ ಏಕೆಂದರೆ ಈ ದುಃಖವು ಇನ್ನಾರಿಂದಲೂ ನಿವಾರಣೆಯಾಗದೆಂದು ನನಗೆ ತಿಳಿದಿತ್ತು ' ನಾವು ಶ್ರೀ ಪರಮಹಂಸರ ಈ ಅಪೂರ್ವ ವ್ಯವಹಾರವನ್ನು ಕಂಡು ಇವರಿಗೆನೆ ನಾವು ಈ ಮುಂಚೆ ಕಠೋರ ಉದಾಸೀನರೆಂದು ಭಾವಿಸಿದುದು ಎಂದು ಯೋಚಿಸಿದೆವು, ಯಾರಾದರೂ ನಿಜವಾಗಿಯೂ ದೊಡ್ಡವರಾದರೆ ಅವರ ಸಣ್ಣ ಪುಟ್ಟ ಕಾರ್ಯಗಳೂ ಕೂಡ ಬೇರೆ ಸಾಮಾನ್ಯ ಜನರಂತೆ ಇರುವುದಿಲ್ಲ ಸಣ್ಣ ದೊಡ್ಡ ಪ್ರತಿಯೊಂದು ಕೆಲಸವೂ ಕೂಡ ಅವರ ಮಹತ್ತದ ಪರಿಚಯವನ್ನು ಕೊಡುತ್ತದೆ ಈಗ ತಾನೆ ತುಸು ಹೊತ್ತಿನ ಮುಂಚೆ ಸಮಾಧಿ ಮೂಲಕ ಈಶ್ವರ ಸಾನಿಧ್ಯದ ಉಪಲಬ್ಧಿಯಿಂದ ಹೃದಯ ಸ್ಪಂದನವೂ ಕೂಡ ಆಗುತ್ತಿದ್ದಿಲ್ಲ ಇವರೆನೆಯೇ ಅವರು? ಆ ಶ್ರೀ ಪರಮಹಂಸರೆನೆಯೇ ನಿಜವಾಗಿಯೂ ಮಣಿಮೋಹನನ ಅವಸ್ಥೆಯನ್ನು ಕಂಡು ಅವನಿಗೆ ಸಹಾನುಭೂತಿ ತೋರಿಸಲು ಸಂಪೂರ್ಣವಾಗಿ ಸಾಮಾನ್ಯ ಮನುಷ್ಯನಂತೆ ಆಗಿದ್ದರು? ಇದೊಂದು ಮಾಯಾಬಂಧನ ನೀನು ಅಳುವುದು ಉಚಿತವಲ್ಲ ಎಂದು ಹೇಳಿ ಅವರು ಮುದುಕನನ್ನು ಸಮಾಧಾನ ಮಾಡಬಹುದಿತ್ತಲ್ಲವೆ? ಇಂತಹ ಶಕ್ತಿಯು ಅವರಲ್ಲಿತ್ತಲ್ಲವೆ? ಪರಂತು ಅಂತಹ ಮಹತ್ವವನ್ನು ತೋರಿಸುತ್ತಿದ್ದರೆ ಇವರು ದೊಡ್ಡವರಾಗಲಿ ಅಥವಾ ಏನಾದರಾಗಲಿ ಲೋಕಗುರು ಜಗದ್ಗುರುವಲ್ಲ ಎಂದು ಭಾವಿಸುತ್ತಿದ್ದೆವು ಸಾಧಾರಣ ಮನುಷ್ಯನ ಭಾವವನ್ನು ತಿಳಿಯುವ ಶಕ್ತಿಯು ಇವರಲ್ಲಿ ಇಲ್ಲವೆಂದು ತಿಳಿಯುತ್ತಿದ್ದೆವು, ಮತ್ತು ದುರ್ಬಲ ಮನುಷ್ಯರಾದ ನಮ್ಮಂತೆ ಇವರು ಕೂಡ ಸಂಪೂರ್ಣ ನಿರುಪಾಯರಾಗಿದ್ದರೆ ಹೇಗೆ ಈ ಮಾಯಾ ಲೀಲೆಯಲ್ಲಿ ಉದಾಸೀನರಾಗುತ್ತಿದ್ದರು ನೋಡೋಣ ಎಂದು ಹೇಳುತ್ತಿದ್ದೆವು

ಕಾಮವಾಸನೆಯನ್ನು ಹೋಗಲಾಡಿಸುವ ವಿಷಯವಾಗಿ ಶ್ರೀ ಪರಮಹಂಸರ ಹೇಳಿಕೆ

ಮರುಕ್ಷಣದಲ್ಲೇ ಯಾರೊಬ್ಬ ಯುವಕನು ಬಂದು ಖಿನ್ನ ಮನಸ್ಸಿನಿಂದ ಶ್ರೀ ಪರಮಹಂಸರಿಗೆ 'ಮಹಾಶಯರೇ ಕಾಮವಾಸನೆಯನ್ನು ಹೋಗಲಾಡಿಸುವ ಬಗೆ ಹೇಗೆ? ಎಷ್ಟು ಪ್ರಯತ್ನ ಮಾಡುತ್ತಿದ್ದೇನೆ ಆದರೂ ಆಗಾಗ ಇಂದ್ರಿಯಗಳು ಚಂಚಲವಾಗುತ್ತವೆ ಮತ್ತು ಮನಸ್ಸಿನಲ್ಲಿ ಕೆಟ್ಟ ಭಾವನೆಗಳು ಬಂದು ಬಹಳ ಅಶಾಂತಿ ಬರುತ್ತದೆ' ಎಂದು ಕೇಳಿದನು. ಶ್ರೀ ಪರಮಹಂಸರು—'ಎಲೋ ಭಗವದ್ದರ್ಶನವಾಗದಿದ್ದರೆ ಕಾಮವಾಸನೆಯು ಸಂಪೂರ್ಣವಾಗಿ ಹೋಗುವುದಿಲ್ಲ. ಭಗವದ್ದರ್ಶನವಾದರೂ ಶರೀರವಿರುವ ತನಕ ಅಲ್ಪಸ್ವಲ್ಪವಾದರೂ ಇದ್ದೇ ಇರುತ್ತದೆ, ಆದರೆ ಅದಕ್ಕೆ ತಲೆ ಎತ್ತಲು ಶಕ್ತಿ ಇರುವುದಿಲ್ಲ ನನ್ನ ಕಾಮವಾಸನೆಯೂ ಕೂಡ ಸಂಪೂರ್ಣ ಹೋಗಿದೆಂದು ಭಾವಿಸುತ್ತಿಯಾ? ಒಂದಾನೊಂದು ಸಮಯ ನಾನು ಕಾಮವಾಸನೆಯನ್ನು ಜಯಿಸಿದ್ದೇನೆಂದು ಭಾವಿಸಿದ್ದೆನು ಅನಂತರ ಒಂದು ದಿನ ಪಂಚವಟಿಯಲ್ಲಿ ಕುಳಿತಿದ್ದೆನು. ಆಗೊಂದು ಸಹಸಾ ಕಾಮದ ವೇಗವು ಬಂದಿತ್ತು ಆಗ ಧೂಳಲ್ಲಿ ನನ್ನ ಮುಖವನ್ನು ಘರ್ಷಿಸುತ್ತ ತಾಯಿ, ಬಹಳ ಅನ್ಯಾಯ ಮಾಡಿದೆನು, ಇನ್ನು ಮುಂದೆ ಕಾಮವನ್ನು ಜಯಿಸಿದ್ದೇನೆಂದು ಎಂದಿಗೂ ಭಾವಿಸುವುದಿಲ್ಲ' ಎಂದು ಅತ್ತು ಜಗದಂಬೆಗೆ ನನ್ನ ಪ್ರಾರ್ಥನೆ ಸಲ್ಲಿಸಿದೆನು ಆಗ ಆ ವಾಸನೆಯು ಮಾಯವಾಯಿತು ಆದರೆ ನಿನಗೀಗ ಯೌವನದ ನೆರೆಬಂದರೆ ಆಷ್ಟರಿಂದ ಅದನ್ನು ನಿನ್ನಿಂದ ತಡೆಹಿಡಿಯಲಿಕ್ಕಾಗುವುದಿಲ್ಲ ನೆರೆಬಂದರೆ ಕಟ್ಟೆ ನಿಲ್ಲುವುದಿಲ್ಲ ಕಟ್ಟೆ ಕೆಡವಿ ನೀರು ಹೊರಕ್ಕೆ ಹರಿದು ಹೋಗುತ್ತಾ ಇರುತ್ತದೆ ಗದ್ದೆ ಹೊಲಗಳಲ್ಲಿ ನೀರು ತುಂಬಿ ಹೋಗುತ್ತದೆ ಆದರೆ ಕಲಿಗಾಲದಲ್ಲಿ ಮನಸ್ಸಿನ ಪಾಪವು ಪಾಪವಲ್ಲವೆಂದನ್ನುತ್ತಾರೆ ಮನಸ್ಸಿನಲ್ಲಿ ಸಹಸಾ ಏನಾದರೂ ಕುಭಾವನೆ ಬಂದರೆ 'ಏಕೆ ಬಂತೆಂದು' ಭಾವಿಸುವುದು ಏತಕ್ಕೆ? ಅವುಗಳು ಶರೀರ ಧರ್ಮದಿಂದ ಆಗಾಗ ಬರುತ್ತಿವೆ—ಶೌಚ ಮೂತ್ರಾದಿಗಳಂತೆ ಅದು ಕೂಡಾ ಅವುಗಳಲ್ಲಿ ಒಂದೆಂದು ಭಾವಿಸತಕ್ಕದ್ದು ಶೌಚ ಮೂತ್ರಾದಿಗಳಾದರೆ ಜನರು ಅವುಗಳ ವಿಷಯವಾಗಿ ಭಾವಿಸುತ್ತಾರೆಯೇ? ಹಾಗೆಯೇ ಆ ಭಾವಗಳು ಬಹಳ ಹೇಯವೆಂದು ಮನಸ್ಸಿನಲ್ಲಿ ತರಲೇ ಬಾರದು ಮತ್ತು ದೇವರನ್ನು ಚೆನ್ನಾಗಿ ಪ್ರಾರ್ಥನೆ ಮಾಡು, ಆತನ ನಾಮಸ್ಮರಣೆಯನ್ನೇ ಮಾಡುತ್ತಿರು ಆ ಭಾವಗಳು ಬಂದರೂ, ಅವುಗಳನ್ನು ಗಮನಿಸಬೇಡ ಹೀಗೆ ಮಾಡಿದರೆ ಅವುಗಳನ್ನು ಕ್ರಮೇಣ ಜಯಿಸಬಹುದು. ಯುವಕನ ಮುಂದೆ ಶ್ರೀ ಪರಮಹಂಸರು ಯುವಕರಾಗಿಯೇ ಹೋಗಿದ್ದಾರೆ

(ಕ್ರಮಶಃ)

ಯುದ್ಧ ಸಂಬಂಧ ಎ ಐ.ಸಿ ಸಿ. ನಿರ್ಣಯದಲ್ಲಿ ಗಾಂಧಿಜಿಗೆ ಸಮ್ಮತಿಯಿಲ್ಲ

ಯುದ್ಧ ಸಂಬಂಧದಲ್ಲಿ ಎ. ಐ ಸಿ ಸಿ ಸಭೆಗೆ ಮಹಾತ್ಮರು ಒಂದು ನಿರ್ಣಯ ಸಿದ್ಧಮಾಡಿ ಕೊಟ್ಟಿದ್ದು ಅದನ್ನು ಸ್ವೀಕರಿಸಿದ್ದರೆ ಕಾಂಗ್ರೆಸು ಸದ್ಯದ ಪರಿಸ್ಥಿತಿಯಲ್ಲಿ ಉತ್ತಮ ಹಾದಿ ಹಿಡಿದಂತಾಗುತಿತ್ತೆಂದು ಹೇಳಿದ್ದರಂತೆ. ಅದರಲ್ಲಿ ಪರದೇಶೀಯ ಸೈನಿಕರ ವಿಚಾರ ಕುರಿತೂ ಒಂದು ವಾಕ್ಯವಿತ್ತೆಂದೂ ತಿಳಿದಿದೆ ಆದರೆ ಪಂಡಿತ ನೆಹರುಗಳೇ ಮೊದಲಾದ ಕೆಲ ಸದಸ್ಯರಿಗೆ ಆ ನಿರ್ಣಯ ಸರಿಯಾಗಿ ಕಾಣಲಿಲ್ಲವಾಗ್ಗಿ, ಗಾಂಧಿಜಿ ಬರೆದ ನಿರ್ಣಯದಲ್ಲಿ ಹೆಚ್ಚು ಕಡಿಮೆಮಾಡಿ ಇಂದಿನ ಠರಾವು ಮಾಡಲಾಯಿತಂತೆ. ಬ್ರಿಟಿಷರು ಹಿಂದುಸ್ತಾನವನ್ನು ಅದರ ಪಾಡಿಗೆ ಬಿಟ್ಟು ಹೊರಟು ಹೋದರೆ ಬ್ರಿಟಿಷರು ಹಿಂದುಸ್ತಾನಕ್ಕೂ ಮಾನವಲೋಕಕ್ಕೂ ಉಪಕಾರ ಮಾಡಿದಂತಾಗುತ್ತಿತೆಂದು ಮಹಾತ್ಮರ ಅಭಿಪ್ರಾಯವಿತ್ತಂತೆ. ಎ ಐ ಸಿ ಸಿ ಮಾಡಿದ ಇಂದಿನ ನಿರ್ಣಯ ಗಾಂಧಿಜಿಗೆ ಸಮ್ಮತಿಯಿಲ್ಲವಾಗಿದೆಯಂತೆ. ಆದ್ದರಿಂದ ವರ್ಕಿಂಗ್ ಕಮಿಟಿ ಪುನಃ ಕರೆವುದೇ ಎಂದು ಒಂದು ಊಹನೆಯಿರುವುದು. ವರ್ಕಿಂಗ್ ಕಮಿಟಿಯಲ್ಲಿ ಒಂದು ಪಕ್ಷವು ಸಂಪೂರ್ಣ ಅಹಿಂಸೆ ಅಸಹಕಾರ ಮಾಡುವ ನಿರ್ಣಯಕ್ಕೆ ಪರವಾಗಿದ್ದು ಇನ್ನೊಂದು ಪಕ್ಷ ಬ್ರಿಟಿಷರಿಂದ ಸಮಾಧಾನಕರವಾದ ಸಂಧಾನ ಸೂಚನೆ ಬಂದರೆ ಯುದ್ಧ ಪ್ರಯತ್ನದಲ್ಲಿ ಭಾಗಿಯಾಗಬಹುದೆಂಬುದಾಗಿ ಅಭಿಪ್ರಾಯವುಳ್ಳದ್ದಾಗಿದೆ. ರಾಜಾಜಿಯ ರಾಜೀನಾಮೆಯಿಂದ ಎರಡನೆ ಪಕ್ಷದ ಪ್ರಮುಖರೊಬ್ಬರಿಲ್ಲದಂತಾಗಿರುವರು.



"ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

15-6-1942] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೧೫-೬-೧೯೪೨]

ಸಮರ ಭೂಮಿಯ ಸಂಚಾರ

ಪಶ್ಚಿಮ ದಿಕ್ಕಿನಲ್ಲಿ ಮುಂದೊತ್ತಿ ಬರುತ್ತಿರುವ ಜಪಾನರನ್ನು ತಡೆಗಟ್ಟುವ ಸಲುವಾಗಿ ಹಾಗೂ ಬರ್ಮಾದೇಶವನ್ನು ರಕ್ಷಿಸುವುದಕ್ಕಾಗಿ ಹೋಗಿದ್ದ ಬ್ರಿಟಿಷ್ ಚೀನೀ ಸೈನ್ಯಗಳು ಈಗ ಸೋತು ಮರಳಿ ಬರುತ್ತಿವೆ. ರಂಗೂನ್ ಆಕ್ರಮಣದ ಬಳಿಕ ಜಪಾನರನ್ನು ಹೆಚ್ಚಾಗಿ ಎದುರಿಸಿದವರು ಚೀನೀ ವೀರರು. ಟಾಂಗೂ ಮೊದಲಾದ ಕಡೆಗಳಲ್ಲಿ ಅಸಂಖ್ಯಾತ ಚೀನೀಯರು ಜಪಾನರ ಪ್ರತಿಭಟನೆಗಾಗಿ ತಮ್ಮೆದೆಯ ರಕ್ತಪ್ರವಾಹವನ್ನು ಹರಿಸಿದರು ಆದರೆ ಮಾಡುವುದೇನು? ಜಪಾನರ ಸೈನ್ಯಶಕ್ತಿ ಬಲವಂತವಾಗಿತ್ತು, ಕಾಲದ್ದಕ್ಕೆ ಬ್ರಿಟಿಷ್ ವಿರೋಧೀ ಬರ್ಮೀಯರ ಸಹಕಾರವೂ ಜಪಾನರಿಗಿದ್ದಿತು. ಇದರಿಂದೆಲ್ಲಾ ಚೀನೀ ಸೈನ್ಯವು ಈಗ ಹಿಮ್ಮೆಟ್ಟಿ ನಿಲ್ಲಬೇಕಾಗಿ ಬಂತು, ಬ್ರಿಟಿಷರಂತೂ ಕಳೆದ ನಾಲ್ಕು ತಿಂಗಳಿಂದಲೇ ಹಿಂದೆ ಹಿಂದೆ ಹೋಗುತ್ತಾ—ಹಾಗೆ ಹೋಗುವಾಗ ಎಣ್ಣೆಕಣಿ ಮೊದಲಾದವುಗಳನ್ನು ನಾಶಮಾಡುತ್ತಾ—ಇದ್ದವರು ಈಗ ಬರ್ಮಾ ರಕ್ಷಣೆಯ ಆಶೆ ಬಿಟ್ಟು ಚಿಂದ್ವಿನ್ ಮಾರ್ಗವಾಗಿ ಹಿಂದುಸ್ಥಾನದ ಹಾದಿ ಹಿಡಿದು ಬರುವಂತೆ ತೋರುತ್ತದೆ. ಜಪಾನರೂ ಬ್ರಿಟಿಷರನ್ನು ಬೆನ್ನು ಹತ್ತಿ ಬರುತ್ತಿದ್ದಾರೆ ಬ್ರಿಟಿಷರು ಬರ್ಮಾವನ್ನು ಸಂಪೂರ್ಣ ಬಿಟ್ಟುಕೊಟ್ಟು ಅಸಾಮಿನಲ್ಲಿ ಬಂದು ಸೇರಕೊಳ್ಳುವ ಸಂಭವವಿರುವುದು. ಅಸಾಮಿನ 'ಡಿಗ್ಬೋಯಿ' ಎಂಬ ಎಣ್ಣೆ ಕಣಿಯ ಮೇಲೆ ಜಪಾನರ ದೃಷ್ಟಿ ಇದೆಯೆಂದು ಕೆಲವರು ಹೇಳುತ್ತಾರೆ ಅಂತೂ ಜಪಾನರೂ ಅಸಾಮ್ ಗಡಿ ವರೆಗೆ ಬೆನ್ನಟ್ಟಿ ಬರುವುದಾಗಿ ಈಗ ಊಹಿಸಲಾಗಿದೆ

ಇತ್ತ ಮಂಡಾಲೆಯ ಪಶ್ಚಿಮದಲ್ಲಿ ಮೋನಿವಾ ಎಂಬಲ್ಲಿದ್ದ ಜಪಾನೀ ಸೈನ್ಯಗಳು ಪೂರ್ವಕ್ಕೆ ತಿರುಗಿ ಮಂಡಾಲೆಯ ಉತ್ತರಕ್ಕೆ ಬರುತ್ತಿವೆ. ಮಂಡಾಲೆ ಪತನದ ಬಳಿಕ ಉತ್ತರಕ್ಕೆ ಸರಿದ ಜನರಲ್ ಸ್ಟಿಲ್‌ವೆಲ್ಲನ ಚೀನೀ ಸೈನ್ಯವನ್ನು ಸುತ್ತುಗಟ್ಟಬೇಕೆಂದು ಹೀಗೆ ಮಾಡಲಾಗಿದೆಯೆಂದು ಊಹನೆಯಿದೆ ಚೀನೀ ಸೈನ್ಯಗಳು ಅಲ್ಲಿ ಈಗ ಪ್ರತಿಭಟಿಸುತ್ತಿದ್ದರೂ, ಇದು ಎಷ್ಟು ದಿನಗಳ ವರೆಗೆ ನಡೆಯುವುದೆಂದು ನೋಡಬೇಕು ಲಾಶಿಯೋದ ಈಶಾನ್ಯದ ಪರಿಸ್ಥಿತಿಯೂ ಗಂಭೀರವಿರುವುದು ಏಕೆಂದರೆ, ಈ ಭಾಗದ ಯುದ್ಧದಿಂದ ಬರ್ಮಾದೇಶದ ಮಾತ್ರವಲ್ಲ ಚೀನದ ಭವಿಷ್ಯವೂ ನಿರ್ಣಯವಾಗತಕ್ಕದ್ದಿದೆ ಒಂದು ಪಟ್ಟಿನಿಂದ ಎರಡು ರಾಷ್ಟ್ರಗಳ ಸೊಂಟಮುರಿಯಬೇಕೆಂದು ಜಪಾನ್ ಮಹತ್ವಾಕಾಂಕ್ಷೆ ಮಾಡಿದೆ. ಅಂತೂ ಈಗ ಜಪಾನರು ಚೀನೀ ಸೈನಿಕರನ್ನು ಬರ್ಮಾದಿಂದ ಸಂಪೂರ್ಣ ಹೊರತಳ್ಳಿ, ಚೀನದ ಪಶ್ಚಿಮ ಪ್ರಾಂತವಾದ ಯೂನಾನದಲ್ಲಿ ಮುಂದುವರಿದಿರುವರು. ಹಾಗೂ ಬರ್ಮಾದಲ್ಲಿ ಚೀನೀ ಸೈನಿಕರ ಕಾಳಗದ ಕಳೆಕಟ್ಟಿತನಬೇಕು. ಬ್ರಿಟಿಷ್ ಸೈನ್ಯವಂತೂ ಅಸಾಮಿಗೆ ಸರಿಯುವುದು ಖಂಡಿತವಾಗಿದೆ. ಹೀಗೆ ಬ್ರಿಟಿಷ್ ಚೀನೀ ಸೈನ್ಯಗಳು ಬರ್ಮಾದ ರಕ್ಷಣೆಯ ಆಶೆ ಬಿಟ್ಟು ತೊರಟು ಹೋದರೆ ಬರ್ಮಾದ ಗತಿಯೇನು? ಇಷ್ಟರವರೆಗೆ ಬ್ರಿಟಿಷರ ಗುಲಾಮರಾಗಿದ್ದ ಬರ್ಮೀಯರು ಇನ್ನು ಜಪಾನರ ಗುಲಾಮಗಿರಿಯಲ್ಲಿ ನರಳಬೇಕಲ್ಲವೆ? ಜಪಾನರು ಇಷ್ಟರಲ್ಲಿಯೇ ಮಂಡಾಲೆ, ಲಾಶಿಯೋಗಳಲ್ಲಿ ತಮ್ಮ ಕೈಗೊಂಬೆ ಸರಕಾರವನ್ನು ಸ್ಥಾಪಿಸಿ ಸರಕಾರ ನಡೆಸಲು ಯತ್ನಿಸಿದರೂ ಯತ್ನಿಸಬಹುದು! ಇಷ್ಟಾಗುವಾಗ—ಬ್ರಿಟಿಷರ—ಬರ್ಮಾ—ಸರಕಾರವೆಲ್ಲಿ ಹೋಗುವುದು? ಅಲ್ಲಿನ ಗವರ್ನರೆಲ್ಲಿರುವರು?

ಈ ಪ್ರಶ್ನೆಗಳಿಗೆ ಸದ್ಯ ಸಮಾಧಾನಕರವಾದ ಉತ್ತರ ಹೇಳಲು ನಾವು ಶಕ್ತರಾಗಿಲ್ಲ'

ಪೆಸಿಫಿಕ್ಕಿನ ಜಿಬ್ರಾಲ್ಟರ್ ಎನಿಸಿದ, ಫಿಲಿಪೈನಿನ ಕಾರಿಜಿಡೋರ್ ಕೋಟೆಯು ಪತನವಾದ ವರ್ತಮಾನ ಹತ್ತರದ ಸುದ್ದಿ ಬಂದಿದೆ ಕಳೆದ ನಾಲ್ಕು ತಿಂಗಳಿಂದ ಈ ದುರ್ಗವು ಜಪಾನರನ್ನು ಪ್ರತಿಭಟಿಸಿತು ಸುಮಾರು 7000 ದ್ವೀಪ ಸಮುದಾಯವುಳ್ಳ ಫಿಲಿಪೈನನ್ನು ಒಮ್ಮೆಗೇ ಜಪಾನರಿಗೆ ಸ್ವಾಧೀನಪಡಿಕೊಳ್ಳುವದಾಗಲಿಲ್ಲ ಆದಾಗಿ ಅವರು ಒಂದರ ಮೇಲೆ ಒಂದು ದ್ವೀಪವನ್ನು ಹಿಡಿಯುತ್ತಾ ಬಂದರು. ಬಟಾನವು ಕಳೆದ ತಿಂಗಳು ಜಪಾನರ ವಶವಾಯಿತು. ಬಟಾನದ ಪತನದ ಬಳಿಕ ಶಾಂತಸಾಗರದಲ್ಲಿ ಅಮೆರಿಕನರ ಯುದ್ಧ ಮುಗಿದಂತಾಗಿತ್ತು. ಆದರೂ ದೂರ ಆರು ಸಾವಿರ ಮೈಲುಗಳಂತರದ ಅಮೆರಿಕದ ಸಹಾಯ ಬರಬಹುದೆಂಬಾಶೆಯಿಂದ ಅಮೆರಿಕನ್ ವೀರ ಸೈನಿಕರು ಫಿಲಿಪೈನಿನಲ್ಲಿ ಕಾದಾಟ ನಡೆಸಿದರು ಆದರೆ ಇಂದು ಅವರು ನಿರಾಶರಾಗಿದ್ದಾರೆ ಕೊನೆಗೆ ಕೋರಿಜಿಡೋರವನ್ನು ಶತ್ರುವಿನ ವಶ ಬಿಟ್ಟುಕೊಟ್ಟಿದ್ದಾರೆ ಜನರಲ್ ಮೆಕಾರ್ಥರು ಆಸ್ಟ್ರೇಲಿಯಕ್ಕೆ ಹೊರಟು ಹೋದ ಮೇಲೆ ಜನರಲ್ ವೆನ್‌ರೈಟರು ತೋರಿಸಿದ ಸಾಹಸ ಧೈರ್ಯಗಳು ಅತ್ಯಂತ ಪ್ರಶಂಸಾರ್ಹವಾಗಿದ್ದುವು ಅಂತೂ ಈಗ ಫಿಲಿಪೈನ್ ಕಾಳಗದ ಪರಿಸಮಾಪ್ತಿಯಾಯಿತು' ಜಪಾನರು ಅಲ್ಲಿದ್ದ ತಮ್ಮ ಸೈನ್ಯವನ್ನು ಇನ್ನೆತ್ತ ಕಡೆ ತಿರುಗಿಸುವರೋ ನೋಡಬೇಕಾಗಿದೆ

ದಕ್ಷಿಣಾಫ್ರಿಕದ ಪೂರ್ವ ಕರಾವಳಿಯಲ್ಲಿರುವ ಫ್ರೆಂಚ್ ನೌಕಾ ನಿಲ್ದಾಣವಾದ ಮೆಡಗಾಸ್ಕರನ್ನು ವಿಶೇಷ ಸಾಹಸ ಸಮರಗಳಿಲ್ಲದೆ ಅಕಸ್ಮಾತಾಗಿ ಬ್ರಿಟಿಷರು ಸ್ವಾಧೀನಪಡಿಸಿಕೊಂಡಿದ್ದಾರೆ ಇದರಿಂದ ಹಿಂದೀ ಸಾಗರದ ಮಹತ್ವಾದೊಂದು ಅಪಾಯವು ತಪ್ಪಿದಂತೆ ಆಗಿದೆ. ಜಪಾನಿನ ಕೈಗೆ ಮಡಗಾಸ್ಕರ್ ಬಿದ್ದಿದ್ದರೆ, ಅಮೆರಿಕದ ಸರಬರಾಯಿ ಹಿಂದೂದೇಶಕ್ಕೋ, ಮಧ್ಯಪೂರ್ವಕ್ಕೋ ಬಂದುಮುಟ್ಟಲು ಬಹಳ ಪ್ರಯಾಸವಾಗುತ್ತಿತ್ತು. ಒಂದು ಕಡೆ ಜಪಾನು ಬರ್ಮಾದಲ್ಲಿ ಮುಂದೊತ್ತಿ ಇನ್ನೊಂದು ಕಡೆಯಿಂದ ಅಂಡಮಾನ್, ಸಿಲೋನ್ ಮಡಗಾಸ್ಕರ್ ಮಾರ್ಗವಾಗಿಯೂ ಬಂದು, ಅಷ್ಟರಲ್ಲಿ ಪಶ್ಚಿಮದಿಂದ ಬರುವ ತಮ್ಮ ಮಿತ್ರ ಜರ್ಮನರನ್ನು ಇರಾಕ್ ಅಥವಾ ಇರಾಣ್‌ಗಳಲ್ಲಿ ಕೂಡಿಕೊಂಡು ಮುಂದಿನ ಮಹಾಕಾರ್ಯಕ್ರಮವನ್ನು ಕೈಕೊಳ್ಳಬೇಕೆಂದು ಬಯಸಿದ್ದ ಜಪಾನಿನ ಕನಸಿನ ಮಂದಿಗೆ ಇದರಿಂದ ಬಯಲಾದ ಹಾಗಾಯಿತು ಮಡಗಾಸ್ಕರ್‌ನಲ್ಲಿ ಫ್ರೆಂಚ್ ವಿಚಿ ಸೈನ್ಯವು ಬಹಳ ಇಲ್ಲದಿರುವುದರಿಂದ ಬ್ರಿಟಿಷರ ಈ ಆಕ್ರಮಣವನ್ನು ಅವರಿಂದ ತಡೆವುದು ಸಾಧ್ಯವಾಗಲಾರದು· ಬ್ರಿಟಿಷರು ಅಮೆರಿಕವನ್ನು ಆಕ್ರಮಿಸಿದ ವಾರ್ತೆ ಕೇಳಿ ಅಮೆರಿಕದ ಅಧ್ಯಕ್ಷ ರೂಸ್‌ವೆಲ್ಟರು ತಮ್ಮ ಸಂತೋಷ ಸಹಾಯಗಳನ್ನು ವ್ಯಕ್ತಪಡಿಸಿದ್ದಾರೆ. ಮಡಗಾಸ್ಕರು ಜಗತ್ತಿನ ಮಹಾದ್ವೀಪಗಳಲ್ಲಿ ಒಂದಾಗಿದ್ದು 228000 ಚದುರ ಮೈಲು ವಿಸ್ತೀರ್ಣವುಳ್ಳದ್ದಾಗಿದೆ. ಇಲ್ಲಿ ಹೆಚ್ಚಾಗಿ ಅಕ್ಕಿ ಬೆಳೆಯುತ್ತದೆ. ಅಲ್ಲದೆ ಜೋಳ, ಮೆಕ್ಕೆ, ಸಿಹಿಗೆಣಸು ಮೊದಲಾದವೂ ಬೆಳೆಯುತ್ತವೆ. ಅಲ್ಲಿನ ಮುಖ್ಯ ಉದ್ಯೋಗ-ಬೇಸಾಯ. ಜನರು ಬಹಳ ಚುರುಕು ಬುದ್ಧಿಯವರು. 1931ರ ಖಾನೆಸುಮಾರಿಯಂತೆ ಅಲ್ಲಿ 3,701,776 ಜನವಸತಿಯಿದೆ ಎಂಟನಾರಿವೋ ಎಂಬುದು ಅದರ ರಾಜಧಾನಿಯಾಗಿದೆ ಅಲ್ಲಿನ ಕೌನ್ಸಿಲುಗಳ ಸಹಾಯದಿಂದ ಫ್ರೆಂಚ್ ಗವರ್ನರ್ ಜನರಲನು ಅದರ ಅಧಿಕಾರ ನಡೆಸುತ್ತಿದ್ದನು. ಅಂತೂ ಫ್ರೆಂಚರ ದಾಸ್ಯದಿಂದ ತಪ್ಪಿ ಮಡಗಾಸ್ಕರ್ ಈಗ ಬ್ರಿಟಿಷರ ದಾಸ್ಯಕ್ಕೆ ಬಲಿಬಿತ್ತು'

ಚೀನಾಯುದ್ಧದ ಸಂಬಂಧವಾಗಿ ಚೀನೀ ಸರಕಾರದ ಪ್ರಕಟಣೆಯೊಂದು ಪ್ರಸಿದ್ಧಿಸಲ್ಪಟ್ಟಿದೆ ಜಪಾನರು ಆಕಾಶದಿಂದ ಒಂದೇ ಸಮನೆ ಬಾಂಬು ಎಸೆಯುತ್ತಿದ್ದರೂ ಚೀನೀಯರು ಮೋಯಾಂಗ್ ಮೊದಲಾದ ಪ್ರದೇಶಗಳಲ್ಲಿ ಒಳ್ಳೇ ಉತ್ಸಾಹದಿಂದ ಪ್ರತಿಭಟಿಸುತ್ತಿದ್ದು ತಮ್ಮ ಸ್ಥಾನವನ್ನು ಬಿಟ್ಟು ಕದಲಿದರೆ 10 ಸಾವಿರ ಜನರೊಡನೆ ಈ ಪ್ರದೇಶದಲ್ಲಿ ಜಪಾನರು ಧಾಳಿಯಿಟ್ಟಿರುವರು. ಹೂಪೇದ ಲಿಂಗಪೋ ಭಾಗದಲ್ಲಿ ಜಪಾನರು ಹೊಸ ಫಿರಂಗಿಗಳನ್ನು ಪಯೋಗಿಸಿ ಕಾದಾಡುತ್ತಾರೆ ಕೆಲದಿನಗಳಿಂದ ಜಪಾನರು ವಿಮಾನಧಾಳಿ ಸುರು ಮಾಡಿದ್ದರೂ, ಇದು ವರೆಗೆ ಚುಂಕಿಂಗಿನ ಮೇಲೆ ಬಾಂಬೆಸೆಯಲಾಗಲಿಲ್ಲ ಚುಂಕಿಂಗಿನಲ್ಲಿ ಪ್ರತಿಭಟನೆ ಬಹಳ ಭದ್ರವಾಗಿರುವುದೆಂದು ತಿಳಿದಿದೆ. ಬರ್ಮಾದಲ್ಲಿಯೂ ಚೀನೀಯರ ಪ್ರತಿಭಟನೆ ಈಗ ಜೋರಾಗಿದ್ದು ಮೈಮೋ ನಗರವನ್ನು ಅವರು ಪುನಃ ಸ್ವಾಧೀನಪಡಿಸಿಕೊಂಡರೆಂದು ಸುದ್ದಿ ಬಂದಿದೆ ಚೀನೀಯರು ಜಪಾನ್ ಸೈನ್ಯದ ಹಿಂಭಾಗದಿಂದ ಧಾಳಿ ಪ್ರಾರಂಭಿಸಿ ಲಾಶಿಯೋ ಮಂಡಾಲೆ ರಸ್ತೆ ಕತ್ತರಿಸಿಬಿಟ್ಟಿರುವರು, ಚೀನೀಯರು ಲಾಶಿಯೋದ ದಕ್ಷಿಣಕ್ಕೆ 180 ಮೈಲುಗಳ ಮೇಲಿರುವ ಟಾಂಗಿಯನ್ನು ಪುನಃ ವಶಪಡಿಸಿಕೊಂಡು, ತಮ್ಮ ಚಟುವಟಿಕೆಯನ್ನು ಜೋರು ಮಾಡಿ ಉತ್ತರಕ್ಕೆ ನುಗ್ಗಿ, ಲಾಶಿಯೋ ಮಂಡಾಲೆ ರಸ್ತೆಯ ಮೇಲಿರುವ ಮಹತ್ವದ ಪಟ್ಟಣವಾದ ಮೈಮೋವನ್ನು ಸ್ವಾಧೀನಪಡಿಸಿಕೊಂಡರು. ಅಲ್ಲಿಂದ ರೈಲ್ವೆದಾರಿಯಾಗಿ ಉತ್ತರಕ್ಕೆ ಮುನ್ನುಗ್ಗುತ್ತಿದ್ದಾರೆಂದು ವಾರ್ತೆ ಬಂದಿರುವುದು ಅಂತೂ ಚೀನೀ ಸೈನಿಕರು ಮೇರೆ ಮೀರಿದ ಶೌರ್ಯದಿಂದ ಎಲ್ಲಾ ಕಡೆಗಳಲ್ಲಿಯೂ ಜಪಾನರನ್ನು ಪ್ರತಿಭಟಿಸಿ ಹೋರಾಡುತ್ತಿದ್ದಾರೆ

ಬಿಕಾನಿರ್ ಮಹಾರಾಜಾ
ಜನರಲ್ ಸರ್ ಗಂಗಾ ಸಿಂಗ್‌ಜಿ

ಬ್ರಿಟನಿನ ಯುದ್ಧಕ್ಕೆ ಇವರು ಬಹಳ ಸಹಾಯ ಮಾಡುತ್ತಾರೆ ಸೈನಿಕ ಜೀವನದಲ್ಲಿ ನುರಿತವರು, ಈಗ ಹೆಸರಾಂತ ಸೈನ್ಯದಲ್ಲಿರುವರು

ಕೆಲವು ವಾರಗಳ ಹಿಂದೆ, ಜಪಾನರು, ನಮ್ಮ ದೇಶದ ಪೂರ್ವ ಕರಾವಳಿ ನಗರಗಳೆರಡರ ಮೇಲೆ, ವಿಶಾಖಪಟ್ಟಣ ಕೋಕನಾಡಗಳ ಮೇಲೆ—ಬಾಂಬೆಸೆದು ಗಾಬರಿಗೊಳಿಸಿದ್ದರು ಆ ಕಾರಣದಿಂದ ಮದ್ರಾಸು ಮೊದಲಾದ ನಗರಗಳಿಂದ ಜನವಸತಿ ಪಟ್ಟಣ ಬಿಟ್ಟು ಹೊರಹೋಗ ತೊಡಗಿದ್ದು, ಇತ್ತೀಚೆಗೆ ಒಂದು ವಾರದಲ್ಲಿ ಸಲ್ಪ ಗಾಬರಿ ಕಡಿಮೆಯಾಗಿತ್ತು ಸರಕಾರದವರಾದರೂ ನಗರಬಿಟ್ಟು ಹೋದವರು ತಿರುಗಿ ಬರಬಹುದೆಂದು ಪ್ರಕಟಣೆ ಹೊರಡಿಸಿದ್ದರು. ಜಪಾನರು ಸದ್ಯ ಭಾರತದ ಮೇಲೆ ಬಾಂಬು ಹಾಕುವುದಿಲ್ಲವೆಂದು ಮಿಲಿಟರಿ ತಜ್ಞರೇ ಕೆಲವರು ಹೇಳಿದರು ಜನತೆ ಇದೆಲ್ಲವನ್ನು ನಂಬಿತೋ ನಂಬಿರಲಿಲ್ಲವೋ ನಾವು ಹೇಳಲಾರೆವು ಅಂತೂ ಪರಿಸ್ಥಿತಿ ಸ್ವಲ್ಪ ಶಾಂತತೆ ಹೊಂದುತ್ತಲಿತ್ತು'

ಆದರೆ ಈಗ ಜಪಾನರು ಚಿತಗಾಂಗಿಗೆ ಎರಡು ಸಲ ಬಾಂಬೆಸೆದಿರುವ ವಾರ್ತೆ ಬಂದಿದೆ ಬರ್ಮಾದ ಕಾಳಗವನ್ನು ಪೂರೈಸಿದ ಬಳಿಕ ಮುಂದೆ ನುಗ್ಗಬಂದ ಜಪಾನರು ಈಗ ವಾಯುಮಾರ್ಗವಾಗಿ ಭಾರತದ ಮೇಲೆ ಆಕ್ರಮಿಸುವ ಕಾರ್ಯ ಪ್ರಾರಂಭಮಾಡುವರೇ ಎಂಬ ತಿರುಗಿ ಸಂದೇಹ ತಲೆದೋರಿದೆ ಚಿತಗಾಂಗಿನ ಮೇಲೆ ಜಪಾನರು ಬಾಂಬು ಸುರಿದುದರಿಂದ ಜಪಾನರು ಬರ್ಮಾದ ದಾರಿಯಾಗಿ ಭಾರತಕ್ಕೆ ನೆಟ್ಟನೆ ಮುಂದೊತ್ತಿ ಬಂದಂತೆ ಆಯಿತು' ಅಸಾಮಿನ ರೈಲ್ವೆ ಕೊನೆಯ ಭಾಗದಲ್ಲಿರುವ ಸಾದಿಯದ ಮೂಲಕ ಭಾರತ ಚೀನಾಗಳ ಸರಬರಾಯಿ ಮಾರ್ಗವನ್ನು ಕತ್ತರಿಸುವುದು ಸದ್ಯಕ್ಕೆ ಜಪಾನರ ದೃಷ್ಟಿಯಲ್ಲಿದ್ದರೂ ಇರಬಹುದೆಂದು ಕೆಲವರು ತರ್ಕಿಸುತ್ತಾರೆ. ಚಿತಗಾಂಗ್ ಸಾದಿಯಕ್ಕೆ ಅತ್ಯಂತ ಸಮೀಪದಲ್ಲಿರುವ ಬಂದರವಾಗಿದ್ದು ಅಲ್ಲಿಂದ ಚೀನಕ್ಕೆ ಸಮುದ್ರ ಮಾರ್ಗವಾಗಿ ಕಳುಹಿಸುವ ಸಾಧನ ಸಾಮಗ್ರಿಗಳನ್ನು ಚಿತಗಾಂಗಿನ ಮೂಲಕ ಕಳುಹಿಸುವುದು ಸುಲಭವಾಗಿರುತ್ತದೆ ಇದನ್ನು ವಿಚಾರಿಸಿಕೊಂಡು ಜಪಾನು ಸದ್ಯ ಚಿತಗಾಂಗಿನ ಮೇಲೆ ಬಾಂಬೆಸೆದು ಈ ವ್ಯವಹಾರ ಸಂಬಂಧವನ್ನು ಮುರಿಯಲು ಮನಮಾಡಿರಬಹುದೇ ಎಂದು ಊಹಿಸಲು ಆಸ್ಪದವಾಗಿದೆ

ಚಿತಗಾಂಗಿನ ಇಂದಿನ ಬಾಂಬಿನಿಂದ ಜಪಾನು ತನ್ನ ವಿಮಾನಶಕ್ತಿಯನ್ನು ನಂಬಿಕೊಂಡಿರುವಂತೆ ತೋರುತ್ತದೆ ಆದರೆ ಈ ಸಂದರ್ಭದಲ್ಲಿ ಜಪಾನು ತನ್ನ ನೌಕಾಬಲದಿಂದ ಬಂಗಾಳಕೊಲ್ಲಿಯ ಮಿತ್ರರ ಪ್ರಯೋಜನಕ್ಕೆ ಬೀಳದಂತೆ ಪ್ರಯತ್ನಿಸಲೂ ಬಹುದು ಆದರೆ ಬಂಗಾಳಕೊಲ್ಲಿಯಲ್ಲಿ ಮಹತ್ವಾದ ನೌಕಾಬಲವನ್ನಿಟ್ಟು ಮಿತ್ರರೊಡನೆ ಹೋರಾಡುವ ಸೇಟಾಟಕ್ಕಿಂತ ಅಕ್ಯಾಬ್ ಮತ್ತು ರಂಗೂನ್ ನಿಲ್ದಾಣಗಳಿಂದ ಜಪಾನು ಭಾರತದ ಆಕ್ರಮಣ ಕಾರ್ಯವನ್ನು ಸುಲಭವಾಗಿ ಮತ್ತು ಪರಿಣಾಮಕಾರಿಯಾಗಿ ಪೂರೈಸಲು ಪ್ರಯತ್ನಿಸಲೂ ಬಹುದು. ಜಪಾನಿನ ನೌಕಾಶಕ್ತಿಯ ವಿಷಯ ನಾವಿದುವರೆಗೆ ಪರೀಕ್ಷಿಸುತ್ತಾ ಬಂದಿದ್ದೇವೆ, ಅವರ ವಿಮಾನಶಕ್ತಿ ಎಂತಹುದಿದೆಯೆಂದು ಇನ್ನು ಮುಂದೆ ನಿರೀಕ್ಷಿಸಲು ಅವಕಾಶವಾಗುವುದೆ?

ಸ್ವದೇಶಾಭಿಮಾನಿ

ತಾರೀಖು 15—5—1942

ಮಡಗಾಸ್ಕರ್ ವಿಜಯ

ಬ್ರಿಟಿಷರು ಪೆಸಿಫಿಕ್ಕಿನಲ್ಲಿ ಸಾಧಿಸಿದ ಮಹತ್ವವಾದ ಒಂದು ವಿಜಯವೆಂದರೆ ಮಡಗಾಸ್ಕರ್ ಆಕ್ರಮಣ. ಇಂದಿನೀ ಯುದ್ಧಕಾಲದಲ್ಲಿ, ಮಡಗಾಸ್ಕರ್ ಅತ್ಯಂತ ಪ್ರಾಮುಖ್ಯವಾದೊಂದು ಸ್ಥಳವಾಗಿದ್ದು ಅದನ್ನು ಎಲ್ಲಿ ಜಪಾನರಾಗಲಿ ಜರ್ಮನರಾಗಲ್ಲಿ ಸ್ವಾಧೀನಪಡಿಸಿಬಿಡುವರೋ ಎಂಬ ಅಂಜಿಕೆಯಿದ್ದೇ ಇತ್ತು. ಲಾವಲರು ಪ್ರಾನ್ಸಿನಲ್ಲಿ ಅಧಿಕಾರಕ್ಕೆ ಬಂದ-ಮೇಲಂತೂ ಈ ಸಂದೇಹವು ಬಲವಂತವಾಗಿತ್ತು. ಇಷ್ಟರಲ್ಲಿ ಏನೇನೂ ಗಲಭೆಯಿಲ್ಲದೆ, ವಿಶೇಷ ಪ್ರಯತ್ನಕೂಡಾ ಮಾಡದೆ ಮಡಗಾಸ್ಕರನ್ನು ಬ್ರಿಟಿಷರು ಕೈವಶ ಮಾಡಿಕೊಂಡದ್ದು ವಿಶೇಷ ವಿಸ್ಮಯ ಹಾಗೂ ಸಂತೋಷಕರ ವಾರ್ತೆಯಾಗಿದೆ.

ಆಫ್ರಿಕದ ಪೂರ್ವ ಕರಾವಳಿಯಲ್ಲಿರುವ ದೊಡ್ಡ ದ್ವೀಪವಾಗಿದೆ ಮಡಗಾಸ್ಕರ್. ಪ್ರಪಂಚದಲ್ಲಿಯೇ ಇದು ಒಂದು ಮಹತ್ವಾದ ದ್ವೀಪ. ಇದು ಖನಿಜ ಸಂಪತ್ತಿನಿಂದ ಕೂಡಿದೆ. ಈ ದ್ವೀಪವು ೧೮೯೬ರಿಂದ ಫ್ರೆಂಚ್ ಸರಕಾರದ ಸ್ವಾಧೀನದಲ್ಲಿತ್ತು; ಹಿಂದೂದೇಶ ಹಾಗೂ ಹಿಂದೀ ಸಾಗರದ ರಕ್ಷಣೆಗೆ ಇದು ಸಿಲೋನಿನಂತೆಯೇ ಪ್ರಾಮುಖ್ಯವಾಗಿದೆ. ಅಮೆರಿಕದಿಂದ ಹಿಂದೂದೇಶಕ್ಕೆ ಬರುವ ಸಾಮಗ್ರಿಗಳು ಆಫ್ರಿಕದ ಕೆಳಭಾಗದಿಂದ ಬರಬೇಕಾಗಿದೆ. ಹಾಗೆ ರಶ್ಯಕ್ಕೆ ಅರೆಬಿಯನ್ ಸಮುದ್ರ ಪರ್ಶಿಯನ್‌ಕೊಲ್ಲಿಗಳ ಮೂಲಕ ಸಾಧನ ಸಾಮಗ್ರಿಗಳನ್ನು ಕಳುಹಿಸುವಲ್ಲಿ, ಈ ದ್ವೀಪದ ಸ್ಥಾನವು ಪ್ರಮುಖವಾಗಿದೆ. ಹೀಗೆ ಇಂದಿನಯುದ್ಧದದೃಷ್ಟಿಯಿಂದ ಪ್ರಾಮುಖ್ಯತೆಯುಳ್ಳ ಈ ಭೂಪ್ರದೇಶವು ಬ್ರಿಟಿಷರ ವಶಬಂದದ್ದು ವಿಶೇಷ ಮಹತ್ವದ್ದಾಗಿರುವುದು.

ಮಡಗಾಸ್ಕರ್ ಬ್ರಿಟಿಷರ ಕೈಗೆ ಇಂದು ಅಲ್ಪಪ್ರಯಾಸದಿಂದ ಬಂದಿದ್ದರೂ ಜಪಾನರು ಅದರ ಸಲುವಾಗಿ ಹೋರಾಡದೆ ಬಿಡಲಾರರೆಂದುತೋರುತ್ತದೆ. ಅದಕ್ಕಾಗಿ ಜಪಾನು ಮುಂದೆ ಯಾವ ಉಪಾಯ ಕೈಕೊಳ್ಳಲಿದೆಯೋ ನೋಡಬೇಕಾಗಿದೆ. ಆದರೆ ಒಮ್ಮೆ ಆಕ್ರಮಿಸಿಬಿಟ್ಟ ಮಡಗಾಸ್ಕರ್ ಬೇಗನೇ ಬ್ರಿಟಿಷರ ಕೈಯಿಂದ ತಪ್ಪಿಹೋಗುವುದು ಸಾಧ್ಯವಿಲ್ಲ. ಅಂತೂ ಬರ್ಮಾ ಯುದ್ಧದಲ್ಲಿ ನಿರಾಶೆಗೊಂಡು ಹಿಂತೆರಳುತ್ತಿರುವ ಬ್ರಿಟಿಷ್ ಸೈನ್ಯದ ದುರವಸ್ಥೆಯನ್ನು ಕಂಡು ಮರುಗುತ್ತಿದ್ದ ಮಿತ್ರಪಕ್ಷದಾರಿಗೆ ಮಡಗಾಸ್ಕರ್ ಸ್ವಾಧೀನವಾಯಿತೆಂಬ ವಾರ್ತೆ ಕೇಳಿ ಪರಮ ಸಂತೋಷವಾಗಿದೆ.

ಚರ್ಚಿಲ್ ಘೋಷ!

ಚರ್ಚಿಲರು ಇತ್ತೀಚೆಗೆ ಒಂದು ಭಾಷಣ ಮಾಡಿ, ಜರ್ಮನಿಯನ್ನು ಎಚ್ಚರಿಸಿದ್ದಾರೆ. ಜರ್ಮನಿಯು ರಶ್ಯದಲ್ಲಿ ವಿಷ ವಾಯುವನ್ನುಪಯೋಗಿಸಿದ ಪಕ್ಷದಲ್ಲಿ ಬ್ರಿಟನು ಜರ್ಮನಿಯ ಮೇಲೆ ಅದೇ ತರದ ಪ್ರತೀಕಾರ ಮಾಡುವುದಾಗಿ ತಿಳಿಸಿದ್ದಾರೆ. ಜರ್ಮನಿಯು ರಶ್ಯದ ಮೇಲೆ ವಿಷವಾಯುವಿನ ಪ್ರಯೋಗಮಾಡಿದರೆ, ಬ್ರಿಟನು ಅಂತಹ ಪ್ರಯೋಗವು ತನ್ನ ಮೇಲೆಯೇ ಆದದಂತೆ ತಿಳಕೊಳ್ಳುವುದೆಂದೂ ಸಾರಿದ್ದಾರೆ.

ಇತ್ತೀಚೆಗೆ ರಶ್ಯದ ಸರಕಾರವು, ಬ್ರಿಟಿಷ್ ಸರಕಾರಕ್ಕೆ, ಜರ್ಮನರು ನಿರಾಶಾ ಪರಿಸ್ಥಿತಿಯಲ್ಲಿ ತಮ್ಮ ಮೇಲೆ ವಿಷವಾಯುವನ್ನು ಉಪಯೋಗಿಸಲೂ ಬಹುದು ಎಂದು ಅಭಿಪ್ರಾಯ ಪ್ರಕಟಿಸಿದ ವಿಚಾರವಾಗಿ, ಈ ಎಚ್ಚರಿಕೆಯೀಯಲಾಗಿದೆ. ಚರ್ಚಿಲರು ರಶ್ಯನ್ ಯುದ್ಧದ ವಿವರವನ್ನು ಹೇಳುತ್ತ, ರಶ್ಯ ರಣರಂಗದಲ್ಲಿ ಬಹಳ ಮಂದಿ ಜರ್ಮನರು ಮೃತರಾದರೆಂದೂ ಆ ಮೃತರಾದವರ ಸಂಖ್ಯೆ ಕಳೆದ ನಾಲ್ಕು ವರ್ಷಗಳಲ್ಲಿ ಒಟ್ಟು ರಣರಂಗಗಳಲ್ಲಿ ಸತ್ತ ಜರ್ಮನರ ಸಂಖ್ಯೆಗಿಂತ ಅಧಿಕವಾಗಿರುವುದೆಂದೂ ತಿಳಿಸಿದರು.

ಹಾಗಾಗಿ, ಈ ವರ್ಷದ ಯುದ್ಧ ರೀತಿಯಲ್ಲಿ ಜರ್ಮನಿಯ ಮೇಲೆ ಬ್ರಿಟಿಷ್ ಅಮೆರಿಕನ್ ವಿಮಾನ ಧಾಳಿಯು ಒಂದು ವಿಶಿಷ್ಟತೆಯಾಗಲಿದೆಯೆಂದು ಊಹಿಸಲು ಅವಕಾಶವಾಗಿದೆ. ರಶ್ಯದೆದುರು ಈಗ ಪ್ರಬಲವಾಗಿ ಬೀಳುತ್ತಿರುವ ಶತ್ರುವಿನ ಪರಾಕ್ರಮವನ್ನು ಪರಾಭವಗೊಳಿಸಲು ಈಗ ಬ್ರಿಟನು ಮನಮಾಡಿ ಅಪರಿಮಿತ ವಿಮಾನಶಕ್ತಿಯನ್ನು ಕೂಡಿಸಿಕೊಂಡು ಜರ್ಮನಿ ಮೇಲೆ ಆಕ್ರಮಣ ಆರಂಭಿಸುವುದು ಸಂದರ್ಭೋಚಿತವೂ ರಶ್ಯಕ್ಕೆ ಸಹಾಯಕಾರಕವೂ ಆಗುವುದು. ಚರ್ಚಿಲರು ರಶ್ಯಕ್ಕೆ ಕೊಡುವ ಭರವಸೆ ಎಷ್ಟರಮಟ್ಟಿಗೆ ಕಾರ್ಯರೂಪ ಕ್ಷದಲ್ಲಿ ತೋರಿಬರುವುದೋ ನೋಡಬೇಕು.

ಚರ್ಚಿಲರು, ಹಿಂದೆ ಬ್ರಿಟನು ಏಕಾಕಿಯಾಗಿ ಯುದ್ಧ ಮಾಡುತ್ತಿತ್ತೆಂದೂ ಈಗ ಅಮೆರಿಕದ ಪ್ರಬಲ ಸಹಾಯವೂ ದೊರಕಿದೆಯೆಂದೂ ತಿಳಿಸಿದರು. ಅಮೆರಿಕದ ಪ್ರಚಂಡ ಸಿದ್ಧತೆಯನ್ನು ವಿವರಿಸಿ ಮಿತ್ರರ ಶಕ್ತಿಯು ದಿನದಿಂದ ದಿನಕ್ಕೆ ಹೆಚ್ಚುತ್ತಿದೆಯೆಂದು ಭರವಸೆಯಿತ್ತರು. ಅಂತೂ ತಾವು ಮುಖ್ಯಮಂತ್ರಿಗಳಾಗಿ ಎರಡು ವರ್ಷಗಳ ವರೆಗೆ ಗಂಡಾಂತರವನ್ನು ವೀರರಂತೆ ಎದುರಿಸಿದ ಚರ್ಚಿಲರು ಮುಂದಿನ ವರ್ಷದಲ್ಲಿ ಅಮೆರಿಕದ ಸಹಾಯ ಹೊಂದಿದವರಾಗಿ ಯಾವ ರೀತಿಯಲ್ಲಿ ರಣರಭಸವನ್ನು ಹೆಚ್ಚಿಸಿ ಶತ್ರುಗಳನ್ನು ಸೋಲಿಸುವರೋ ಎಂಬ ವಿಷಯವನ್ನು ಜಗತ್ತೇ ಕುತೂಹಲದಿಂದ ನಿರೀಕ್ಷಿಸುತ್ತಿದೆ.

ಕರ್ನಾಟಕ ವಿಶ್ವವಿದ್ಯಾಲಯ

ಕಳೆದ ಕೆಲವು ತಿಂಗಳಿಂದ ಕರ್ನಾಟಕಕ್ಕೊಂದು ಪ್ರತ್ಯೇಕ ವಿಶ್ವವಿದ್ಯಾಲಯವಾಗಬೇಕೆಂಬ ಬಗ್ಗೆ ದೇಶದಾದ್ಯಂತ ಜೋರಿನ ಚಳವಳವು ನಡೆಯುತ್ತಿದೆ. ಇದೇ ತಿಂಗಳ ಅಂತ್ಯದಲ್ಲಿ ಬೆಳಗಾಂವಿಯಲ್ಲಿ ಈ ಕುರಿತು ವಿಚಾರಿಸುವರೆ ಒಂದು ಪರಿಷತ್ತು ಕೂಡುವುದಾಗಿಯೂ ನಿರ್ಣಯವಾಗಿದೆ. ಇಷ್ಟರಲ್ಲಿಯೇ ಅನೇಕ ಪ್ರಮುಖರಿಂದ ಕರ್ನಾಟಕ ವಿಶ್ವವಿದ್ಯಾಲಯದ ಕುರಿತು ಹಲವು ಸೂಚನೆಗಳು, ಪ್ರೋತ್ಸಾಹಗಳು ದೊರೆತಿರುವುದು ಸಂತೋಷದ ಸುದ್ದಿಯಾಗಿದೆ.

ಕರ್ನಾಟಕವು ಆಂಧ್ರ ಮಹಾರಾಷ್ಟ್ರಗಳ ಮಧ್ಯದಲ್ಲಿದೆ. ಆಂಧ್ರವು ಕೆಲಕಾಲದ ಹಿಂದೆಯೇ ಒಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸಿಕೊಂಡಿದೆ. ಮಹಾರಾಷ್ಟ್ರ ವಿಶ್ವವಿದ್ಯಾಲಯದಕಾರ್ಯವು ಭರದಿಂದ ಸಾಗಿದ್ದು ಅದು ಬೇಗನೇ ಕೈಗೂಡುವಂತೆ ತೋರುತ್ತದೆ. ಹೀಗೆ ನಮ್ಮ ನೆರೆಕರೆಯ ಪ್ರಬಲ ಪ್ರಾಂತಗಳೆರಡು ಸ್ವತಂತ್ರ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಿಕೊಂಡು ತಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸುತ್ತಿರುವಾಗ, ಕರ್ನಾಟಕವು ಕಾರ್ಯವಿಮುಖವಾಗಿದ್ದರೆ ಅನೇಕ ತರದ ಕಷ್ಟನಷ್ಟಗಳಿಗೆ ಗುರಿಯಾಗಬೇಕಾದೀತೆಂಬುದು ನಿರ್ವಿವಾದವಾಗಿದೆ!

ವಿಶ್ವವಿದ್ಯಾಲಯ ಸ್ಥಾಪನೆಯೆಂದರೆ ಬಹಳ ದೊಡ್ಡ ಕಾರ್ಯ. ಲಕ್ಷಲಕ್ಷಾಂತರ ರೂಪಾಯಿಗಳು ಸಂಗ್ರಹವಾಗಬೇಕು. ಉತ್ಸಾಹದಿಂದ ಕಾರ್ಯ ಮಾಡುವ ಕೆಲಸಗಾರರಿರಬೇಕು; ಅನೇಕ ಕಾಲೇಜುಗಳು ಸ್ಥಾಪಿಸಲ್ಪಡಬೇಕು ಇವೆಲ್ಲದಕ್ಕೂ ಪ್ರಧಾನವಾಗಿ ದೇಶದಾದ್ಯಂತ ಪ್ರಬಲ ಪ್ರಚಾರವಾಗಬೇಕು. ಈಗ ಪ್ರಾರಂಭಿಸಿರುವೀ ಆಂದೋಲನವು ಕಾರ್ಯರೂಪಕ್ಕೆ ಬರುವಂತೆ ಕನ್ನಡಿಗರೆಲ್ಲರೂ ಒಮ್ಮನದಿಂದ ನೆರವಾಗಬೇಕೆಂದು ನಾವುಬಿನ್ನವಿಸುತ್ತೇವೆ

ನೋಟಗಳು......

'ಪಾಕಿಸ್ತಾನ'ಕ್ಕೆ ಸಮ್ಮತಿಸಿದ ರಾಜಗೋಪಾಲಾಚಾರ್ಯರು, 'ದ್ರಾವಿಡಸ್ಥಾನ'ಕ್ಕೆ ಒಪ್ಪಲೇ ಬೇಕೆಂದು ರಾಮಸ್ವಾಮಿ ನಾಯಕರು ಆಗ್ರಹ ತೊಡುತ್ತಾರೆ.

卐

ಆಂಧ್ರರೂ ಕನ್ನಡಿಗರೂ ತಮಗೆ ಪ್ರತ್ಯೇಕ ಪ್ರಾಂತರಚನೆಯಾಗಬೇಕೆಂದು ಆಂದೋಲನ ಮಾಡುವಾಗ, ತುಳು ಕೊಂಕಣಿಭಾಷೆಯ ಜನರು ತಮಗೂ ಪ್ರತ್ಯೇಕ ಪ್ರಾಂತವಾಗಬೇಕೆಂದು ಆಶೆ ಪಡುವರು!

卐

ಅಬ್ರಾಹ್ಮಣ ಮತದಾರರೇ ಬಹುಸಂಖ್ಯಾಕರಾಗಿರುವ ಮದ್ರಾಸು ಪ್ರಾಂತ್ಯದಲ್ಲಿ, ಶಾಸನ ಸಭಾ ಸದಸ್ಯರು ಬಹುಮಂದಿ ಬ್ರಾಹ್ಮಣರಾಗಿರುವುದು ಸರಿಯಲ್ಲವೆಂದು ರಾಮಸ್ವಾಮಿ ನಾಯಕರ ಆಕ್ಷೇಪ.

卐

ಆದರೆ ಈ ಕಾರಣಕ್ಕಾಗಿ ನಾಯಕರು ಬ್ರಾಹ್ಮಣ ವಿರೋಧ ಮಾಡುವುದು ಸರಿಯಲ್ಲ; ಏಕೆಂದರೆ, ಅವರೇ ಹೇಳುವಂತೆ, ಬಹುಸಂಖ್ಯಾಕ ಮತದಾರರಾಗಿರುವ ಅಬ್ರಾಹ್ಮಣರು ಬ್ರಾಹ್ಮಣ ಪ್ರತಿನಿಧಿಗಳಲ್ಲಿ ವಿಶ್ವಾಸವಿಟ್ಟ ಬಗ್ಗೆ ಮತದಾರರನ್ನು ದೂರುವುದೇ ಒಳ್ಳೆಯದು.

卐

ರಾಜಕೀಯ ಪಕ್ಷಗಳನ್ನು ಅನುಸರಿಸಿ ಚುನಾವಣೆ ನಡೆಯುವಾಗ, ಮತದಾರರಿಗೆ, ಪ್ರತಿನಿಧಿಗಳು ಯಾವ ಜಾತಿಯವರೆಂಬುದಕ್ಕಿಂತಲೂ ಯಾವ ರಾಜಕೀಯ ಪಕ್ಷದವರು ಎಂಬ ವಿಚಾರವೇ ಪ್ರಾಮುಖ್ಯವಾಗಿರುತ್ತದೆ!

卐

ಕಳೆದ ಚುನಾವಣೆಯ ಕಾಲದಲ್ಲಿ ಕಾಂಗ್ರೆಸ್ ಪಕ್ಷದಲ್ಲಿ ಬ್ರಾಹ್ಮಣರೇ ಬಹುಮಂದಿ ಪ್ರತಿನಿಧಿಗಳಾಗಿದ್ದುದರಿಂದ ಅವರೇ ಬಹುಮಂದಿ ಶಾಸನ ಸಭಾ ಸದಸ್ಯರಾಗಿ ಚುನಾಯಿತರಾದರು!

卐

ಜಾತಿಯನ್ನು ನೋಡಿ ಮತ ಕೊಡುವುದಕ್ಕಿಂತ, ಪಕ್ಷವನ್ನು ನೋಡಿ ಮತಕೊಡುವುದು ಒಳ್ಳೆಯದೆಂದು, ರಾಮಸ್ವಾಮಿ ನಾಯಕರಿಗೆ ಗೊತ್ತಿಲ್ಲವಾದರೂ, ಬಹುಸಂಖ್ಯಾಕ ಅಬ್ರಾಹ್ಮಣ ಮತದಾರರು ಬಲ್ಲರು!

卐

ಅಬ್ರಾಹ್ಮಣರು ಬಹುಮಂದಿ ಶಾಸನ ಸಭಾಸದಸ್ಯರಾಗಬೇಕೆಂದು ಮನಃಪೂರ್ವಕವಾಗಿ ನಾಯಕರು ಆಶಿಸುವುದಾದರೆ ತಮ್ಮ ಸಂಗಡಿಗರೊಂದಿಗೆ ಅವರಾದರೂ ಕಾಂಗ್ರೆಸಿಗೆ ಸೇರುವುದು ಒಳ್ಳೆಯದು!

卐

ಅಂತೂ ರಾಮಸ್ವಾಮಿ ನಾಯಕರು ಯಾರಿಗಾಗಿ 'ದ್ರಾವಿಡಸ್ಥಾನ' ಬೇಕೆನ್ನುತ್ತಾರೋ ಅರ್ಥವಾಗಲೊಲ್ಲದು!

ಹರಿಜನವಾಣಿ

'ಯುದ್ಧಕಾಲದಲ್ಲಿಯೇ ಬ್ರಿಟಿಷರು ಮತ್ತು ಭಾರತೀಯರು ಸಂಪೂರ್ಣ ಬೇರೆಬೇರೆಯಾಗಬೇಕು'

ಇದರಿಂದ ಹಿಂದುಸ್ತಾನಕ್ಕೂ ಜಗತ್ತಿಗೂ ಸುಖವಿದೆ

ಗಾಂಧಿಜಿ ಅಭಿಪ್ರಾಯ

'ಭಾರತ ಮತ್ತು ಭಾರತೀಯರನ್ನು ಪ್ರೀತಿಸುವ ಹಾಗು ಮನಃಪೂರ್ವಕ ಜನತಾ ಸೇವೆ ಮಾಡಲು ಬಯಸುವ ನಮ್ಮ ಬಗ್ಗೆ, ಇಂಥ ಸಂಕಟ ಸಮಯದಲ್ಲಿ ದ್ವೇಷ ಭಾವನೆ ಬೆಳೆಯುತ್ತಿರುವುದು ನಿಜವಾಗಿಯೂ ದುಃಖದ ಸಂಗತಿಯಾಗಿದೆ. ಹಿಂದುಸ್ತಾನದ ಸೇವೆಯನ್ನು ನಾವು ಯಥಾರ್ಥವಾಗಿ ಮಾಡಿಲ್ಲ; ಈಗಲೂ ಮಾಡುತ್ತಿಲ್ಲ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ, ಆದರೆ ಎರಡು ತಪ್ಪುಗಳಿಂದ ಒಂದು ಸರಿಯಾದ ಸಂಗತಿ ಸಂಭವಿಸುವುದೊ? 'ಶತ್ರು ಆದರೂ ಕೂಡಾ ಸಂಕಷ್ಟದಲ್ಲಿದ್ದರೆ ಅವನಿಗೆ ಆಶ್ರಯ ಕೊಡಬಾರದೊ? ಹೊರಟುಹೋಗಲು ನಮಗೆ ನೀವು ಹೇಳುವುದರಿಂದ, ಜಪಾನಿಗೆ ಶರಣಾಗಲು ನಿಮ್ಮ ಜನರಿಗೆ ಹೇಳಿದಂತಾಗುವುದಿಲ್ಲವೆ? ಅಹಿಂಸಾತ್ಮಕ ವಿರೋಧ ಶಕ್ತಿಯಿಂದ ಯಾವುದೇ ಪರಕೀಯ ಧಾಳಿ ಇಲ್ಲವೆ ವರ್ಚಸ್ಸನ್ನು ತಡೆವುದು ದೇಶಕ್ಕೆ ಸಾಧ್ಯವಿಲ್ಲೆಂದು ಗೊತ್ತಿದ್ದರೂ ನೀವು ಹೀಗೆ ಹೇಳುವುದು ಸರಿಯೋ? ಆಶಕ್ತಿ ನಿಮ್ಮಲ್ಲಿದ್ದರೆ ನಿಮ್ಮ ಮೇಲೆ ನಮ್ಮ ಪ್ರಭುತ್ವವೆ ಪ್ರಸ್ಥಾಪಿತವಾಗುತ್ತಿರಲಿಲ್ಲ ಹಿಂದಿನ ಪಾಪಗಳನ್ನೆಲ್ಲ ಮರೆತು ಸಾಮ್ರಾಜ್ಯದ ಬಗ್ಗೆ ಇನ್ನು ಮುಂದೆ ವಿಚಾರ ಮಾಡದಿದ್ದ ಇಂಗ್ಲಿಷ್ ತರುಣ ಸ್ತ್ರೀ ಪುರುಷರ ಬಾಂಧ್ಯವದ ಮೇಲೆ ವಿಶ್ವಾಸವಿಡುವುದಿಲ್ಲವೊ? ಕಾಂಗ್ರೆಸ್ ಮುಖಂಡರಲ್ಲಿ ನಿಮ್ಮನ್ನು ಬಿಟ್ಟುಕೊಟ್ಟರೆ ಬೇರೆ ಯಾರೂ ಅಹಿಂಸೆಯ ಬಗ್ಗೆ ಅಷ್ಟೊಂದು ನಿಷ್ಠೆಯನ್ನು ತಳೆದಿರುವರು? ನೀವೊಬ್ಬರು ನ್ಯಾಯವಾಗಿ ನಡೆಯುವಿರಿ, ನೀವೊಬ್ಬರೆ ಬ್ರಿಟನಿನ ನಿಜ ಮಿತ್ರರು'

ಒಳ್ಳೆ ಹೃದಯ ಸ್ಪರ್ಶಿಯಾಗಿ ಬರೆದ ಇಂಗ್ಲೀಷ್ ಲೇಖನದ ಸಾರವಿದು ಯುದ್ಧವು ಸಾರಲ್ಪಟ್ಟ ಬಳಿಕ ಹಿಂದೆ ಸರಿಯಲಿಕ್ಕೆ ನನಗೇನೂ ಕಾರಣವಿಲ್ಲ, ಪಶ್ಚಾತ್ತಾಪ ಪಡಲಿಕ್ಕೂ ಕಾರಣವಿಲ್ಲ ಆಗ ಇದ್ದಂತೆ ಈಗಲೂ ನಾನು ಬ್ರಿಟಿಷರ ಮಿತ್ರನಿರುವೆನು ಅವರ ಬಗ್ಗೆ ನನ್ನಲ್ಲಿ ಎಳ್ಳಷ್ಟಾದರೂ ದ್ವೇಷಭಾವನೆ ಇರುವುದಿಲ್ಲ ಅವರ ಸದ್ಗುಣಗಳ ಬಗ್ಗೆ ನನಗೆ ಅರಿವಿದ್ದಂತೆ ಅವರ ಮಟ್ಟವೂ ನನಗೆ ಗೊತ್ತಿದೆ

ಜನ ಸಾಮಾನ್ಯರಲ್ಲುಂಟಾದ ದ್ವೇಷಭಾವನೆಯನ್ನು ನಾನು ಅಲ್ಲಗಳೆಯ ಎವುದಿಲ್ಲ ಘಟನೆಗಳು ಸಂಭವಿಸುತ್ತ ನಡೆದಂತೆ ಆ ದ್ವೇಷ ಬೆಳೆಯುತ್ತಿರುವುದೆಂಬುದನ್ನೂ ನಾನು ಅಲ್ಲಗಳೆಯುವುದಿಲ್ಲ ಆದರೆ ರಾಷ್ಟ್ರೀಯತ್ವದ ಚಿಕಿತ್ಸೆಯಿಂದ ಅದು ಹತ್ತಿಕ್ಕಲ್ಪಟ್ಟಿದ್ದು ಒಂದು ಮಟ್ಟಕ್ಕೆ ಅದು ಪರಿಮಿತವಾಗಿದೆಯೆಂದು ನಾನು ಹೇಳಬಲ್ಲೆ.

ಆದುದರಿಂದ ಯುದ್ಧಕಾಲದಲ್ಲಿಯೆ ಬ್ರಿಟಿಷ ಮತ್ತು ಭಾರತೀಯರು ಪೂರ್ಣವಾಗಿ ಬೇರೆಯಾಗುವ ಸಮಯ ಬಂದಿದೆಯೆಂದು ನನ್ನ ಮನವರಿಕೆಯಾಗಿದೆ ಯುದ್ಧದ ನಂತರ ಇದು ಶಕ್ಯವಿಲ್ಲ ಯುದ್ಧಕಾಲದಲ್ಲಿಯೇ ಇದು ಆಗತಕ್ಕದ್ದು ಇಬ್ಬರ ಸುರಕ್ಷಿತತೆಗೆ ಅದೊಂದೇ ಯೋಗ್ಯವಾದ ಮಾರ್ಗ ಜಗತ್ತಿನ ಸುರಕ್ಷಿತತೆಗೆ ಅದೊಂದೇ ಯೋಗ್ಯವಾದ ಉಪಾಯ ಪರಸ್ಪರರಲ್ಲಿಯ ದ್ವೇಷವು ಬೆಳೆಯುತ್ತಿರುವದೆಂಬುದನ್ನು ಸ್ಪಷ್ಟವಾಗಿ ನಾನು ನೋಡುತ್ತೇನೆ ಬ್ರಿಟಿಷ್ ಸರಕಾರದವರು ಕೈಕೊಳ್ಳುವ ಪ್ರತಿಯೊಂದು ಧೋರಣವು, ಮಾರ್ಗವು ಅವರ ಹಿತ ಮತ್ತು ರಕ್ಷಣೆಗಾಗಿಯೆ ಎಂದು ತಿಳಿಯಲಾಗುತ್ತದೆ ಮತ್ತು ಅದು ಸರಿಯಾಗಿರುವುದು ಇಬ್ಬರ ಸಂಯುಕ್ತ ಹಿತವೆನ್ನುವಂಥಾದ್ದೇ ಇರುವುದಿಲ್ಲ ಬಹಳ ದೀರ್ಘ ವಿಚಾರಿಸಿದರೆ ಬ್ರಿಟಿಷರು ಜಪಾನನ್ನು ಗೆದ್ದರೆ ಅದು ಹಿಂದುಸ್ತಾನದ ವಿಜಯವಾಗದು. ಆದರೆ ಅದು ಬೇಗ ಘಟಿಸುವಂಥ ಸಂಗತಿಯಲ್ಲ. ಆದರೆ ಹಿಂದುಸ್ತಾನದಲ್ಲಿ ಪರಕೀಯ ಸೈನ್ಯ ತಂದುದು ಹಿಂದೀ ಮತ್ತು ಯುರೋಪಿಯನ್ ದೇಶಭ್ರಷ್ಟರಲ್ಲಿ ಮಾಡಿದ ಪಕ್ಷಪಾತ—ಇದನ್ನು ಒಪ್ಪಿದ್ದಾರೆ—ಸೈನಿಕರ ಪ್ರತ್ಯಕ್ಷ ಅಸಹ್ಯ ಆಚರಣೆ ಮೊದಲಾದವುಗಳಿಂದ ಬ್ರಿಟಿಷರ ಸದ್ಬುದ್ಧಿ ಮತ್ತು ಘೋಷಣೆಗಳ ಬಗ್ಗೆ ಅವಿಶ್ವಾಸವು ಬೆಳೆಯುತ್ತದೆ ಅವರು ವಂಶಪರಂಪರಾಗತವಾಗಿ ಬಂದ ತಮ್ಮ ಸ್ವಭಾವವನ್ನು ಒಮ್ಮೆಲೆ ಬಿಟ್ಟುಗೊಡಲಾರರೆಂದು ನನಗನಿಸುತ್ತದೆ ಜಾತೀಯ ಶ್ರೇಷ್ಠತೆಯ ಭಾವನೆಯು ಒಂದು ದೊಡ್ಡ ಸದ್ಗುಣವೆಂದು ತಿಳಿಯಲಾಗುತ್ತದೆಯಲ್ಲದೆ ಅದೊಂದು ದುರ್ಗುಣವೆಂದು ತಿಳಿಯಲಾಗುವುದಿಲ್ಲ ಹಿಂದುಸ್ತಾನದಲ್ಲಿ ಅಷ್ಟೇ ಅದು ಸತ್ಯವಿರುವುದಿಲ್ಲ ಆದರೆ ಆಫ್ರಿಕೆಯಲ್ಲಿ ಮತ್ತು ಬರ್ಮಾ ಸಿಲೋನಗಳಲ್ಲಿಯೂ ಅಷ್ಟೇ ಸತ್ಯವಾಗಿರುವುದು ಈ ಜಾತೀಯ ಶ್ರೇಷ್ಠತೆಯ ಸಹಾಯದಿಂದಲೇ ಈ ಎಲ್ಲ ದೇಶಗಳನ್ನು ನಿಯಂತ್ರಿಸಿದ್ದಾರೆ ಬೇರೆ ಇತರಿಂದಲ್ಲೂ ಅಲ್ಲ

ಇದು ಘೋರ ಸ್ವರೂಪದ ರೋಗವಾದುದರಿಂದ ಉಪಾಯವೂ ಅತ್ಯುಗ್ರವಾಗಿರಬೇಕಾಗಿದೆ ಬ್ರಿಟಿಷರು ಕನಿಷ್ಟ ಹಿಂದುಸ್ತಾನದಿಂದಲಾದರೂ ಸಂಪೂರ್ಣವಾಗಿ ಹೊರಟು ಹೋಗಬೇಕು ನ್ಯಾಯವಾಗಿ ಯುರೋಪೇತರ ದೇಶಗಳಿಂದಲೂ ಹೊರಟು ಹೋಗುವುದುಚಿತ ಇದು ಬ್ರಿಟಿಷ್ ಜನತೆಯ ಅತ್ಯಂತ ಶ್ರೇಷ್ಠ ಶೌರ್ಯದ ಮತ್ತು ಸ್ಪಷ್ಟ ಮಾರ್ಗವಾಗಿದೆ ಇದರಿಂದ ಮಿತ್ರರ ಪಕ್ಷವು ಕೂಡಲೆ ನೈತಿಕ ಪಕ್ಷವಾಗಿ ಪರಿಣಮಿಸುವುದು, ಅಲ್ಲದೆ ಯುದ್ಧಾಸಕ್ತ ರಾಷ್ಟ್ರಗಳಲ್ಲಿ ಒಂದು ಬಗೆಯ ಸನ್ಮಾನ್ಯ ಒಡಂಬಡಿಕೆಯಾಗಲು ಮಾರ್ಗ ತೆರೆದಂತಾಗುವುದು ಸಾಮ್ರಾಜ್ಯದ ಸಂಪೂರ್ಣ ಮುಕ್ತಾಯವಾಗುವುದರಿಂದ ನಾಜೀ ಮತ್ತು ಫೆಸಿಸ್ಟ ಮಾರ್ಗದ ಕೊನೆಯಾದಂತೆಯೆ ಅವುಗಳ ಖಡ್ಗದ ಮೊನೆ ಮೊಂಡಾಗುವುದು. ಮೇಲೆ ಬರೆದವರ ಸೂಚನೆಗಳಂತೆ ರಾಷ್ಟ್ರೀಯ ಹಿಂದೀಯರ ಸಹಾಯ ಸಿಕ್ಕಿದರೂ ಬ್ರಿಟಿಷರ ತೊಂದರೆ ಕಡಿಮೆಯಾಗದು

ರಾಷ್ಟ್ರೀಯ ಭಾರತವನ್ನು ಉತ್ಸಾಹಗೊಳಿಸಲಿಕ್ಕೆ ಅವರಲ್ಲೇನಿದೆ? ಸೂರ್ಯನ ಪ್ರಕಾಶದ ಪ್ರಭಾವವು ಸೂರ್ಯನಿಲ್ಲದಾಗ ಜನತೆಗೆ ಹೇಗೆ ಗೊತ್ತಾಗುವದಿಲ್ಲವೊ ಹಾಗೆಯೇ ಹಿಂದುಸ್ತಾನವು ಸ್ವಾತಂತ್ರ್ಯವನ್ನನುಭವಿಸದೆ ಅದರ ನಿಜ ಪ್ರಕಾಶವು ಗೊತ್ತಾಗಲಾರದು ಶಾಂತಿ ಸಮಾಧಾನಗಳಿಂದ ಹಿಂದುಸ್ತಾನವು ಸಂಪೂರ್ಣ ಸ್ವತಂತ್ರವಾಗಬಲ್ಲದೆಂಬ ಬಗ್ಗೆ ನಮ್ಮಲ್ಲನೇಕರಿಗೆ ಒಪ್ಪಿಗೆಯಿಲ್ಲ ಆ ಬಗೆಯ ಜ್ಞಾನ ಬರುವ ಮೊದಲು ಉಂಟಾಗಬಹುದಾದ ನೋದಲನೇ ಅನುಭವದಿಂದ ಧಕ್ಕೆ ಕೊಡುವ ಸಂಭವವುಂಟು, ಆ ಬಗೆಯ ಧಕ್ಕೆ ಅವಶ್ಯವಾಗಿದೆ ಹಿಂದುಸ್ತಾನವು ದೊಡ್ಡದೊಂದು ರಾಷ್ಟ್ರ ಆ ಬಗೆಯ ಧಕ್ಕೆಯುಂಟಾದಾಗ ಅದೆಂತು ಕಾರ್ಯ ಮಾಡಬಲ್ಲುದು, ಅದರ ಪರಿಣಾಮವೆಂತಾಗಬಹುದೆಂಬುದನ್ನು ಯಾರೂ ಹೇಳಲಾರರು

ಆದುದರಿಂದ ಈ ಶ್ರೇಷ್ಠ ಕಾರ್ಯವನ್ನು ಸಾಧಿಸುವುದಕ್ಕಾಗಿ ನಾನು ನನ್ನ ಎಲ್ಲ ಉತ್ಸಾಹಶಕ್ತಿಯನ್ನು ವ್ಯಯ ಮಾಡಲೇಬೇಕು ಬ್ರಿಟಿಶರಿಂದ ಹಿಂದುಸ್ತಾನಕ್ಕಾದ ಹಾನಿಯನ್ನು ಈ ಪತ್ರ ಬರೆದವರು ಒಪ್ಪುತ್ತಾರೆ ಈ ಹಾನಿಯನ್ನು ತುಂಬಿ ಕೊಡುವುದೆ ಬ್ರಿಟಿಷ್ ವಿಜಯದ ಮೊದಲನೆಯ ಕರಾರೆಂದು ನಾನು ಈ ಬರಹಗಾರನಿಗೆ ಸೂಚಿಸ ಬಯಸುತ್ತೇನೆ ವಿಜಯಕ್ಕಿಂತ ಮೊದಲು ಅದಾಗಬೇಕು ಹಿಂದುಗಡೆ ಅಲ್ಲ

ಬ್ರಿಟಿಷರು ಹಿಂದುಸ್ತಾನದಲ್ಲಿರುವದೇ ಹಿಂದುಸ್ತಾನದ ಮೇಲೆ ಧಾಳಿ ಮಾಡಲು ಜಪಾನಿಗೆ ಆಮಂತ್ರಣ ಕೊಟ್ಟಂತೆ ಅವರು ಇಲ್ಲಿಂದ ಹೊರಟುಹೋದರೆ ಆ ನಿಮಿಷವೇ ಎಲಾ ಮಾಯವಾಗುವುದು ಹಾಗೆ ಆಗುವುದಿಲ್ಲೆಂದು ತಿಳಿದರೂ ಸ್ವತಂತ್ರ ಹಿಂದುಸ್ತಾನವು ಆ ಧಾಳಿಯನ್ನು ತಡೆಯಲು ಹೆಚ್ಚು ಸಮರ್ಥವಾಗುವುದು ಅನಂತರ ಶುದ್ಧ ಅಸಹಕಾರದ ಸಂಪೂರ್ಣ ಶಕ್ತಿಯು ಪ್ರಭಾವಶಾಲಿಯಾಗುವುದು

ಹರಿಜನ ಸೇವಕ ಸಂಘದ ವಿಚಾರದಲ್ಲಿ--

ಮಹಾತ್ಮರ ಕೆಲವು ಸೂಚನೆಗಳು

ಪ್ರಶ್ನೆ—ಹರಿಜನ ಸೇವಕ ಸಂಘವು ಕಾಂಗ್ರೆಸಿನ ಒಂದು ಅಂಗಸಂಸ್ಥೆಯೆಂದು ತಿಳಿಯಲಾಗುತ್ತದೆ ಆದರೆ ಕಾಂಗ್ರೆಸಿನ ಕೆಲವು ಜನರು ಮಾತ್ರ ಹರಿಜನ ಕಾರ್ಯಕರ್ತರಿರುವರು. ಹಾಗೇಕೆ?

ಉತ್ತರ—ಹರಿಜನ ಸಂಘವು ಕಾಂಗ್ರೆಸ್ಸಿನ ಅಂಗಸಂಸ್ಥೆಯಾಗಿರುವುದಿಲ್ಲ ನಾನು ತುರಂಗದಲ್ಲಿದ್ದಾಗ, ಕೈಕೊಂಡ ಉಪವಾಸಗಳ ಕಾಲಕ್ಕೆ ಹೊರಟ ಸಂಸ್ಥೆಯಿದು ಪಂಡಿತ ಮಾಲವಿಯರ ಅಧ್ಯಕ್ಷತೆಯಲ್ಲಿ ಕೂಡಿದ್ದ ಎಲ್ಲ ಹಿಂದುಗಳ ಪ್ರಾತಿನಿಧಿಕ ಸಭೆಯಲ್ಲಿ ಈ ಸಂಸ್ಥೆಯು ಸ್ಥಾಪಿಸಲ್ಪಟ್ಟಿತು ಮತ್ತು ಅದನ್ನು ಬೇಕೆಂತಲೇ ಕಾಂಗ್ರೆಸಿನಿಂದ ಪ್ರತ್ಯೇಕವಿಡಬೇಕೆಂದು ನಿರ್ಧರಿಸಲಾಯಿತು ಅದಕ್ಕೆ ರಾಜಕಾರಣದ ಯಾವ ಸಂಬಂಧವನ್ನೂ ಇಡಲಿಲ್ಲ ಸಂಘದ ಉದ್ದೇಶವು ಈ ರೀತಿಯಲ್ಲಿದ್ದುದರಿಂದಲೇ ಶೇಟ ಜಿ. ಡಿ. ಬಿರ್ಲಾರಂಥವರು ಅದರ ಅಧ್ಯಕ್ಷರಾಗಲಿಕ್ಕೆ ಮತ್ತು ಠಕ್ಕರ್ ಬಾಪರವರು ಕಾರ್ಯದರ್ಶಿಗಳಾಗಲಿಕ್ಕೆ ಅವಕಾಶ ಸಿಕ್ಕಿತು ಆದರೂ ಈ ಸಂಘದಲ್ಲಿ ಅನೇಕ ಕಾಂಗ್ರೆಸಿಗರು ಇರುವರು, ಇರತಕ್ಕದ್ದು ಏಕೆಂದರೆ ಎಲ್ಲ ಬಗೆಯ ಸುಧಾರಣಾ ಪ್ರಿಯರನೇಕರು ಕಾಂಗ್ರೆಸಿನಲ್ಲಿ ಸೇರಿರುವರು. ಆದರೆ ಸಂಘದಲ್ಲಿ ಅನೇಕ ಜನ ಕಾಂಗ್ರೆಸ್ಸೇತರರೂ ಇರುವರು ರಾಜಕಾರಣದಲ್ಲಿ ಮಾತ್ರ ಆಸ್ಥೆ ಇದ್ದ ಕಾಂಗ್ರೆಸ್ಸಿಗರು ಈ ಸಂಸ್ಥೆಯಲ್ಲಿಲ್ಲವೆಂಬುದು ನಿಜ. ಆದುದರಿಂದ ಕಾಂಗ್ರೆಸ್ಸಿಗರು ಸಂಘದ ಕಾರ್ಯಕಲಾಪಗಳಲ್ಲಿ ಯಾವುದೇ ಬಗೆಯ ಆಸ್ಥೆ ವಹಿಸುವುದಿಲ್ಲವೆಂದು ಅನೇಕ ಸಲ ತಪ್ಪಾಗಿ ತಿಳಿಯಲಾಗುತ್ತದೆ. ಅಸ್ಪೃಶ್ಯತೆಯನ್ನು ತನ್ನ ಜೀವನದಿಂದ ಸಂಪೂರ್ಣವಾಗಿ ಹೋಗಲಾಡಿಸುವದು ಪ್ರತಿಯೊಬ್ಬ ಕಾಂಗ್ರೆಸ್ಸಿಗನ ಕರ್ತವ್ಯವಾಗಿದೆ

ಪ್ರಶ್ನೆ—ಹರಿಜನ ಸೇವೆಯೆಂದರೆ ಕೇವಲ ಹರಿಜನೋದ್ಧಾರ ಕಾರ್ಯವೆಂದು ತಿಳಿಯಲಾಗುತ್ತದೆ ಸವರ್ಣಹಿಂದುಗಳಲ್ಲಿಯ ಅಸ್ಪೃಶ್ಯತೆಯನ್ನು ಹೋಗಲಾಡಿಸಲಿಕ್ಕೆ ಪ್ರತ್ಯಕ್ಷ ಕೆಲಸ ನಡೆದಿಲ್ಲ. ಇದಕ್ಕುಪಾಯವೇನು?

ಉತ್ತರ—ಸವರ್ಣ ಹಿಂದುಗಳಲ್ಲಿ ಪ್ರಚಾರ ಕಾರ್ಯವು ಯಶಸ್ವಿಯಾಗಬೇಕಾದರೆ ಜನತೆಯಲ್ಲಿ ವರ್ಚಸ್ಸುಳ್ಳ ಪ್ರಮುಖ ಜನರು ಅದನ್ನು ಕೈಕೊಳ್ಳಬೇಕು. ಇಂಥ ಜನರು ಸಿಕ್ಕುವುದು ಅಪರೂಪ. ಆದರೆ ಅಂಥ ಪ್ರಚಾರ ಕಾರ್ಯವನ್ನು ಸಾಗಿಸುವದು ಪ್ರತಿಯೊಬ್ಬ ಹರಿಜನ ಕಾರ್ಯಕರ್ತನ ಕೈಯಲ್ಲಿದೆ ನಮ್ಮ ಸವರ್ಣ ಹಿಂದೂ ಕಾರ್ಯಕರ್ತರು ಹರಿಜನರ ಉದ್ಧಾರ ಕಾರ್ಯ ಮಾತ್ರ ಮಾಡುವರು ಅಷ್ಟರಿಂದ ಸಮಾಧಾನ ಹೊಂದುವರು ಆದರೆ ಇಷ್ಟರಿಂದ ಸಾಲದು ಅನೇಕ ಕಾರ್ಯಕರ್ತರು ತಾವು ಸ್ವತಃ ಅಸ್ಪೃಶ್ಯತೆಯನ್ನು ಪಾಲಿಸದಿದ್ದರೂ ತಮ್ಮ ಕುಟುಂಬವನ್ನು ಆ ರೀತಿ ವರ್ತಿಸಲಿಕ್ಕೆ ಸಮರ್ಥರಿರುವುದಿಲ್ಲ ಎಂದ ಬಳಿಕ ಹೊರಗಿನ ಜನರ ಮತಗಳನ್ನು ಅವರೆಂತು ಪರಿವರ್ತಿಸಬಲ್ಲರು? ಆದೂ ಪ್ರತಿಯೊಬ್ಬ ಹರಿಜನ ಕಾರ್ಯಕರ್ತನು ಸವರ್ಣ ಹಿಂದುವು ಭೆಟ್ಟಿಯಾದಾಗೆಲ್ಲ ಹರಿಜನರಿಗಾಗಿ ಪೈ ಪೈಯಂತೆ ಕೂಡ ಭಿಕ್ಷೆ ಬೇಡಬೇಕೆಂದು ನನ್ನ ಸ್ಪಷ್ಟ ಅಭಿಪ್ರಾಯವಾಗಿದೆ ಪ್ರತಿಯೊಬ್ಬರು ಈ ಕಾರ್ಯದಲ್ಲಿ ತಮ್ಮ ಸರ್ವಸ್ವವನ್ನು ವ್ಯಯ ಮಾಡಲು ಪ್ರಯತ್ನಿಸಿದರೆ ಬಹಳ ಒಳ್ಳೆ ಪರಿಣಾಮ ಉಂಟಾಗುವದು

ಪ್ರಶ್ನೆ—ಕ್ರಿಶ್ಚನ್ ಅಥವಾ ಮುಸಲ್ಮಾನ ಧರ್ಮಕ್ಕೆ ಮತಾಂತರಿಸಲ್ಪಟ್ಟಿದ್ದರೂ ಇನ್ನೂ ಅಸ್ಪೃಶ್ಯರಂತೆಯೇ ನಡೆಸಿಕೊಳ್ಳುತ್ತಿರುವ ಹರಿಜನರ ಸೇವೆಯನ್ನು ಸಂಘದವರು ತಾವಾಗಿಯೇ ಏಕೆ ಕೈಕೊಳ್ಳಬಾರದು? ಅಸ್ಪೃಶ್ಯತೆಯನ್ನು ಸಮೂಲ ಕಿತ್ತು ಹಾಕಲು ನಾವು ಹೊರಟಿರುವುದಿಲ್ಲವೊ? ಎಂದ ಬಳಿಕ ಅಸ್ಪೃಶ್ಯರೊಡು ಪರಿಗಣಿಸಲ್ಪಡುವವರೆಲ್ಲರಿಗೆ ಸಹಾಯ ಮಾಡುವದು ನಮ್ಮ ಕರ್ತವ್ಯವಲ್ಲವೆ?

ಉತ್ತರ—ಹಿಂದು ಸಮಾಜದಲ್ಲಿಯ ಈ ಅಸ್ಪೃಶ್ಯತೆಯನ್ನು ಸಮೂಲ ಕಿತ್ತು ಹಾಕಿದಾಕ್ಷಣವೇ ಬೇರೆ ಕಡೆಯಲ್ಲಿಯ ಅಸ್ಪೃಶ್ಯತೆಯು ಹೊರಟು ಹೋಗುವದು ಈ ಪ್ರಶ್ನೆಯು ಸಾಧಕ ಬಾಧಕ ಪ್ರಮಾಣಗಳೇನೇ ಇದ್ದರೂ ಮತಾಂತರಿಸಲ್ಪಟ್ಟ ಹರಿಜನರ ಕಾರ್ಯದಲ್ಲಿ ನಾವು ಕೈ ಹಾಕಿದರೆ ಮುಸಲ್ಮಾನ ಮತ್ತು ಕ್ರಿಶ್ಚನ್‌ರೊಡನೆ ಘರ್ಷಣೆಯಾಗಲು ಕಾರಣವಾಗಬಹುದು. ಇಂಥ ಮತಾಂತರಿಸಲ್ಪಟ್ಟ ಹರಿಜನರು ಹಿಂದುಗಳೊಡನೆ ಎಲ್ಲ ಸಂಬಂಧವನ್ನು ಕಡಿದುಕೊಂಡಿರುವರಲ್ಲದೆ ಹಿಂದುಗಳಾದರೂ ಅವರ ಮೇಲೆ ಬಹಿಷ್ಕಾರ ಹಾಕಿದಂತಾಗಿದೆ, ಉಳಿದ ಜಾತಿಗಳ ಧುರೀಣರು ಹಳೆಯ ಸಂಬಂಧವನ್ನು ಬೆಳೆಸಲು ತಮ್ಮ ಜಾತಿಯವರಿಗೆ ಆಸ್ಪದ ಕೊಡದಂತೆ ಈ ಜನರ ಸ್ಥಿತಿಯು ಇರುವದು, ಅಂತೆಯೇ ಹರಿಜನಸೇವಕ ಸಂಘವು ಮೊದಲಿನಿಂದಲೂ ಹಿಂದು ಧರ್ಮದಲ್ಲಿರುವ ಹರಿಜನರ ಉದ್ಧಾರ ಕಾರ್ಯವನ್ನು ಮಾತ್ರವೇ ಕೈಕೊಂಡದ್ದು ಉಚಿತವೇ ಆಗಿದೆ ಮೊದಲಿನ ಧರ್ಮವನ್ನು ಬಿಟ್ಟುಹೋದವನು ಈ ಧರ್ಮದಂತೆ ಆಚರಿಸಲಾರನು

ಪ್ರಶ್ನೆ—ಹರಿಜನ ಹುಡುಗರು ಸೈನ್ಯದಲ್ಲಿ ಸೇರಲು ಬಯಸಿದರೆ ಸಂಘದ ಧೋರಣವೇನಿರತಕ್ಕದ್ದು?

ಉತ್ತರ—ಹಾಗೆ ಸೇರಲು ಅವರಿಗೆ ಅಪ್ಪಣೆ ಕೊಡಬೇಕು ಕಾಂಗ್ರೆಸ್ ಧೋರಣೆ ಇಲ್ಲವೆ ಅಹಿಂಸೆಯಿಂದ ಅವರು ನಿಯಂತ್ರಿಸಲ್ಪಡಲಾರರು ಆ ವಿಷಯದಲ್ಲಿ ಅವರಿಗೆ ಸಂಪೂರ್ಣ ಸ್ವಾತಂತ್ರ್ಯವನ್ನು ಕೊಡಬೇಕು

ಪ್ರಶ್ನೆ—ಹರಿಜನ ಕಾರ್ಯದ ಬಗ್ಗೆ ಸಹಾನುಭೂತಿಯಿದ್ದ ಹಿಂದುಗಳು, ಹರಿಜನರ ಪ್ರವೇಶಕ್ಕೆ ನಿರ್ಬಂಧವಿರುವ ದೇವಾಲಯಗಳಿಗೆ ಹೋಗಬಾರದೆಂದು ಹರಿಜನರ ಅಭಿಪ್ರಾಯವಿದೆ

ಉತ್ತರ—ಅವರ ಅಭಿಪ್ರಾಯ ಸರಿಯಿದೆ ಹರಿಜನರಿಗೆ ತೆರೆಯದಿದ್ದ ದೇವಾಲಯಗಳಿಗೆ ಕಾರ್ಯಕರ್ತರು ಹೋಗದಿರುವದು ಅವರ ಕರ್ತವ್ಯವಾಗಿರುವದಲ್ಲದೆ ಉಳಿದ ಸವರ್ಣ ಹಿಂದುಗಳಿಗೂ ಹಾಗೆ ಮಾಡಲು ಮನವೊಲಿಸಬೇಕು

ಪ್ರಶ್ನೆ—ತಮ್ಮ ಮಕ್ಕಳನ್ನು ಬೇಕಾದ ಸಾಲೆಗಳಿಗೆ ಕಳುಹಿಸಲಿಕ್ಕೆ, ಇಲ್ಲವೆ ಸಾರ್ವಜನಿಕ ಬಾವಿಗಳಿಂದ ನೀರು ತರಲಿಕ್ಕೆ ಹರಿಜನರಿಗೆ ಕಾಯಿದೆಯಿಂದಲೇ ಅಪ್ಪಣೆಯಿದೆ ಆದರೆ ಅದನ್ನು ಕಾರ್ಯರೂಪದಲ್ಲಿ ತರಲು ಸಾರ್ವಜನಿಕರ ವಿರೋಧವಿನ್ನೂ ಇರುವುದು ಈ ವಿಷಯಗಳಲ್ಲಿ ಹರಿಜನರು ಕೋರ್ಟಿಗೆ ಹೋಗಬೇಕೊ ಇಲ್ಲವೆ ಸವರ್ಣ ಹಿಂದುಗಳನ್ನು ಮನಃಪರಿವರ್ತಿಸುವವರೆಗೆ ಸಹನೆಯಿಂದ ಕಾಯಬೇಕೋ?

ಉತ್ತರ—ಸವರ್ಣೀಯರಿಗೆ ಹಿಂಸೆಯನ್ನುಂಟು ಮಾಡದ ತಮ್ಮ ಕಾಯದೆ ಬದ್ಧ ಹಕ್ಕನ್ನು ಅವರು ಉಪಯೋಗಿಸಬೇಕು ಅವಶ್ಯವಿದ್ದಲ್ಲಿ ಕೋರ್ಟುಗಳಿಗೂ ಹೋಗಬೇಕು ಹರಿಜನ ಕಾರ್ಯಕರ್ತರು ಸವರ್ಣ ಹಿಂದುಗಳಲ್ಲಿ ಚಳವಳವನ್ನು ಹಾಗೆಯೇ ನಡಿಸಬೇಕು ಮತ್ತು ಕೇವಲ ಕಾಯಿದೆಬದ್ಧ ಹಕ್ಕುಗಳಿಂದ ಸಮಾಧಾನ ಹೊಂದಬಾರದು

ಪ್ರಶ್ನೆ—ಪಾಯಖಾನೆಗಳನ್ನು ಮತ್ತು ಬೀದಿಗಳನ್ನು ಸ್ವಚ್ಛ ಮಾಡುವಾಗ ತೋಟಿಗಳು ಅನುಸರಿಸುವ ಅನಾರೋಗ್ಯಕರ ಪದ್ಧತಿಗಳಲ್ಲಿ ಸುಧಾರಣ ಮಾಡುವುದು ಅವಶ್ಯವಾಗಿಲ್ಲವೇ?

ಉತ್ತರ—ಅದು ಅತ್ಯಂತ ಅವಶ್ಯವಾಗಿದೆ ಅಲ್ಲದೆ ಹಾಗೆ ಆಗುವ ವರೆಗೆ ತೋಟಿಗಳ ಸ್ಥಿತಿ ನಿಕೃಷ್ಟವುಳಿಯುವದು ಇದಕ್ಕಾಗಿ ಹರಿಜನ ಕಾರ್ಯಕರ್ತರು ಮತ್ತು ಸವರ್ಣ ಹಿಂ

(೬ನೇ ಪುಟವನ್ನು ನೋಡಿ)

ಕ್ರಿಮಿಯುದಲ್ಲಿ ಹಿಟ್ಲರನ ವಸಂತ ಧಾಳಿ ಪ್ರಾರಂಭ!

ವಿಷವಾಯು ಪ್ರಯೋಗದ ವಿಚಾರ ಹಿಟ್ಲರನಿಗೆ ಚರ್ಚಿಲರ ಎಚ್ಚರಿಕೆ

ಕ್ರಿಮಿಯುದಲ್ಲಿ ಹಿಟ್ಲರನ ವಸಂತಧಾಳಿಯು ಪ್ರಾರಂಭ

ಕ್ರಿಮಿಯುದ ಕರ್ಚ್ ದ್ವೀಪಕಲ್ಪದಲ್ಲಿ ರಶ್ಯನರ ವಿರುದ್ಧ ಜರ್ಮನರು ವಸಂತಕಾಲದ ಧಾಳಿಯನ್ನು ಆಗಾಗಲೇ ಪ್ರಾರಂಭಿಸಿರುವರೆಂದು ಪ್ರಕಟವಾಗಿದೆ ರಶ್ಯನರು ಆಗ್ರಹಪೂರ್ವಕ ಪ್ರತಿಭಟಿಸುತ್ತಾರೆ ವಾಯುವ್ಯ ಭಾಗದಲ್ಲಿ ಘೋರ ಸಂಗ್ರಾಮ ನಡೆದಿರುವುದೆಂದು ಪ್ರಕಟವಾಗಿದೆ ಜರ್ಮನ್ ಸೈನಿಕರು ವಿಶೇಷ ನಾಶವಾಗಿರುವುದಲ್ಲದೆ ಯುದ್ಧ ಸಾಮಗ್ರಿಯೂ ವಿಶೇಷ ನಷ್ಟವಾಗಿದೆ

ಬರ್ಮಾದ ಯುದ್ಧ ಮುಗಿದಿಲ್ಲ

ಚೀನದ ಗೊರಿಲ್ಲಾ ಕಾಳಗವು ಬರ್ಮಾದಲ್ಲಿ ನಡೆಯುತ್ತಿದೆಯಾಗಿ ಬರ್ಮಾದ ಯುದ್ಧ ಸದ್ಯ ಮುಗಿಯುವಂತಿಲ್ಲ ಆಯುಧ ಸನ್ನಾಹಗಳು ಅಲ್ಲಿಗೆ ಆಗತ್ಯವಾಗಿವೆ ಎಂದು ಚೀನ ಪ್ರಧಾನಾಧಿಕಾರಿಗಳು ತಿಳಿಸಿರುವರು

ಚಿತಗಾಂಗಿನ ಮೇಲೆ ಶತ್ರುಗಳ ಎರಡು ಧಾಳಿ

ಚಿತಗಾಂಗಿನಲ್ಲಿ ಕಳೆದ ವಾರ ಜಪಾನೀ ವಿಮಾನಗಳು ಎರಡು ಸಲ ಧಾಳಿ ನಡೆಸಿದುವು ಇದರಿಂದ ಉಂಟಾದ ನಷ್ಟವು ಸಾಮಾನ್ಯ

ಜಪಾನರ ದೊಡ್ಡ ಅಪಜಯ

ಕಳೆದವಾರ ಉತ್ತರ ಪೂರ್ವ ಆಸ್ಟ್ರೇಲಿಯದ ಬಳಿ ಜಪಾನರ ದಂಡಯಾತ್ರೆಯ ಒಂದು ದೊಡ್ಡ ನೌಕಾಬಲವು ಪುಡಿಯಾಗಿ ಅದರ ಶೇಷ ಭಾಗವು ಓಡಿಹೋಯಿತೆಂದ ತಿಳಿದು ಬಂದಿದೆ ಇದಕ್ಕೆ ಹವಳ ಸಮುದ್ರದ ಕಾಳಗವೆಂದು ಹೆಸರು ಕೊಟ್ಟಿಗೆ ಅಲ್ಲಿ ಜಪಾನರ ೬ ಡಿಸ್ಟ್ರಾಯರುಗಳು ಮುಳುಗಿಸಲ್ಪಟ್ಟಿವೆ ಎಂದು ಒಂದು ವಾರ್ತೆಯೂ ನ್ಯೂಗಿನಿ ಬಳಿ ೧೮ ಜಪಾನರ ಹಡಗುಗಳು ಮುಳುಗಿಸಲ್ಪಟ್ಟು ೪ ಹಡಗುಗಳಿಗೆ ಗಾಸಿಯಾಗಿದೆ ಎಂದು ಇನ್ನೊಂದು ವಾರ್ತೆಯು ಹೇಳುತ್ತಿರುವಾಗ, ಜಪಾನರು ತಮ್ಮ ಜಹಜುಗಳಲ್ಲಿ ಅತ್ಯಂತ ದೊಡ್ಡದಾದ ೪೪ ಸಾವಿರ ಟನ್ನಿನ ಒಂದು ಅಮೆರಿಕದ ಹಡಗನ್ನು ಮುಳುಗಿಸಿದೆವೆಂದು ಪ್ರಕಟಿಸಿದ್ದಾರೆ ಇಲ್ಲಿ ಬ್ರಿಟಿಷರ ಯಾವ ಹಡಗಿಗೂ ಏನೂ ಆಗಿಲ್ಲ ಇನ್ನೂ ಈ ಪ್ರಾಂತದಲ್ಲಿ ಸಮುದ್ರ ಯುದ್ಧಗಳಾಗಬಹುದೆಂದು ನಿರೀಕ್ಷಿಸಲಾಗಿದೆ

ಚೀನಾ—ಬರ್ಮಾ ಗಡಿಯಲ್ಲಿ ಭೀಕರ ಸಂಗ್ರಾಮ ಸಾಗಿದೆ

ಬರ್ಮಾ ಚೀನಾ ಗಡಿಯಲ್ಲಿ ತೀವ್ರ ಅಸ್ತವ್ಯಸ್ತ ಪರಿಸ್ಥಿತಿಯುಂಟಾಗಿದ್ದು, ಭೀಕರ ಕದನ ನಡೆಯುತ್ತಿದೆ

ಡೊನೆಟ್ಸ್ ನದಿ ಪ್ರದೇಶದಲ್ಲಿ ಜರ್ಮನರ ಧಾಳಿ

೨೦ ಲಕ್ಷ ಸೈನಿಕರ ಮುನ್ನಡೆ

ಸುಮಾರು ೨೦ ಲಕ್ಷ ಸೈನಿಕರು, ೩೦೦೦ ವಿಮಾನ ಮತ್ತು ೨೪ ಸಶಸ್ತ್ರ ಸೈನ್ಯಗಳೊಡನೆ ಹಿಟ್ಲರನು ಡೊನೆಟ್ಸ್ ನದೀ ಭಾಗದಲ್ಲಿ ಪ್ರಚಂಡ ಧಾಳಿಯನ್ನು ಪ್ರಾರಂಭಿಸಿರುವನೆಂದು ಈಗ ಸುದ್ದಿ ಬಂದಿದೆ ರಶ್ಯನರೂ ಉಗ್ರವಾಗಿ ಪ್ರತಿಭಟಿಸುತ್ತಿರುವರು

ಪೂರ್ವ ಅಸಾಮಿನ ಮೇಲೆ ವಿಮಾನ ದಾಳಿ

ಅಸಾಮಿನ ಪೂರ್ವ ಭಾಗದಲ್ಲಿರುವ ಒಂದು ಸಣ್ಣ ನಗರದ ಮೇಲೆ ವೈಮಾನಿಕ ಧಾಳಿಯಾಯಿತೆಂದು ತಿಳಿದಿದೆ ಕೆಲಮಟ್ಟಿಗೆ ನಾಗರಿಕರು, ಹಾಗೂ ಸೈನ್ಯದವರು ಹಾನಿಹೊಂದಿರುವರು.

ಗಾಂಧಿಜಿ ಮುಂಬಯಿ ಪ್ರವಾಸ

ಚರ್ಚಿಲರಿಗೆ ಹಿಟ್ಲರನ ಬೆದರಿಕೆ

ಬ್ರಿಟಿಷ್ ವಿಮಾನಗಳು ಇತ್ತೀಗೆ ಜರ್ಮನಿ ಮೇಲೆ ಧಾಳಿಮಾಡಿದಾಗ ಸ್ಫೋಟಕ ಮತ್ತು ರಂಜಕ ಬಾಂಬುಗಳನ್ನು ಒಗೆದವೆಂದು ಆರೋಪಿಸಿ, ಇದು ಅಂತರ್ ರಾಷ್ಟ್ರೀಯ ಕಾಯಿದೆಗೆ ವಿರುದ್ಧವಾಗುವುದೆಂದು ತಿಳಿಸಿ, ಹೀಗೆ ರಂಜಕ ಬಾಂಬುಗಳನ್ನೊಗೆಯುವುದನ್ನು ನಿಲ್ಲಿಸದಿದ್ದರೆ ತಾವು ಬ್ರಿಟನಿನ ಮೇಲೆ ವಿಷವಾಯು ಪ್ರಯೋಗ ಮಾಡುವೆವಾಗಿ ಹಿಟ್ಲರ್ ಎಚ್ಚರಿಸಿದನು

ಚಿತಗಾಂಗ್ ಕಮಿಶನರಿಗೆ ಸರ್ವಾಧಿಕಾರ

ಚಿತಗಾಂಗ್ ಕಮಿಶನರಿಗೆ ಡಿಫೆನ್ಸ್ ಕಾನೂನ್ ಪ್ರಕಾರ ಎಲ್ಲ ಅಧಿಕಾರವನ್ನು ತಾ 31ರ ವರೆಗೆ ಬಂಗಾಲ ಸರಕಾರವು ಕೊಟ್ಟಿರುವುದು.

ನಿಧಿ ಸಂಗ್ರಹಕ್ಕಾಗಿ ಮುಂಬಯಿ ಪ್ರವಾಸ ಮಾಡಿದ್ದಾರೆ ಬಿರ್ಲಾ ಭವನದಲ್ಲಿ ತಂಗಿರುವರು

ಚೀನವನ್ನು ಗೆಲ್ಲಲು ಶತಪ್ರಯತ್ನ

ಜಪಾನು ಹಿಂದೂದೇಶದ ಮೇಲೆ ಪ್ರತಿಧಾಳಿ ಮಾಡದೆ, ಚೀನದ ಯುದ್ಧವನ್ನು ಮುಗಿಸಲು ಶತಪ್ರಯತ್ನ ಮಾಡುವುದಾಗಿ ಚುಂಕಿಂಗಿನಲ್ಲಿ ನಂಬಲಾಗಿದೆ ಜಪಾನರು ಇದುವರೆಗೆ ಗೆದ್ದ ಪ್ರದೇಶಗಳನ್ನು ಭದ್ರಪಡಿಸುವ ನಿಟ್ಟಿನಲ್ಲಿ ನಿರತರಾಗುವರೆಂದೂ ಊಹೆ

ತಿರುವಾಂಕೂರಿನ ಆದರ್ಶ

ಆಂಗ್ಲವೇಷ ರದ್ದಾಯಿತು

ದೊಡ್ಡ ಸರಕಾರೀ ಅಧಿಕಾರಿಗಳು ಆಂಗ್ಲರೀತಿಯ ವೇಷಭೂಷೆ ಮಾಡುವ ಗೌನ್ ಮೊದಲಾದ ಇದುವರೆಗೆ ಧರಿಸಿದ ಪೋಷಾಕು ಈ ಪಾಶ್ಚಾತ್ಯ ಪದ್ಧತಿಯನ್ನು ತಿರುವಾಂಕೂರು ಸರಕಾರವು ಈಗ ತೆಗೆದುಹಾಕಿರುವುದೆಂದು ತಿಳಿದಿದೆ ಅಲ್ಲಿನ ಅಧಿಕಾರಿಗಳೂ ಆ ದೇಶೀಯ ಪದ್ಧತಿ ಉಡಿಗೆತೊಡಿಗೆ ತೊಡಬೇಕಾಗಿ ಸರಕಾರ ಆಜ್ಞೆ ಹೊರಡಿಸಿದೆ ಇದು ದೇಶೀಯ ಸಂಸ್ಥಾನಗಳಿಗೂ ಈ ಮಾದರಿಯನ್ನು ಅನುಸರಿಸುವುದು ಒಳ್ಳೆಯದು

ತನ್ನ ಸ್ವಂತ ತೋಟಿಯಾಗಬೇಕು ಸಮಾಜದಲ್ಲಿ ಈ ಧ್ಯೇಯದಂತೆ ನಡೆಯಲು ಪ್ರಾರಂಭಿಸಿದರೆ ತೋಟಿಗಳ ವಿಷಾದಕರ ಪರಿಸ್ಥಿತಿಯು ಕೂಡಲೇ ಸರಿಯಾಗುವುದು

ಅಫೀಮು ತಿನ್ನುವುದು

(ಹರಿಜನದಿಂದ)

'ಈ ಅಫೀಮು ಚಟವನ್ನು ಹೋಗಲಾಡಿಸುವುದಕ್ಕಾಗಿ ದೀನಬಂಧು ಆಂಡ್ರೂಸರು ಪ್ರಯತ್ನಿಸಿದರು. ಮದ್ಯ ಕುಡಿಯುವವರ ಬಗ್ಗೆ ನಾವು ಅಫೀಮು ತಿನ್ನುವರ ಪರಿಣಾಮವು ಮದ್ಯ ಕುಡಿಯುವುದರಷ್ಟು ಘಾತಕವಾಗುವುದಿಲ್ಲ ಆದರೂ ಎರಡೂ ಚಟಗಳು ಕೆಟ್ಟವೇ ಇರುವವು ಅಫೀಮು ತಿನ್ನುವವರ ವಿವೇಕಶಕ್ತಿ ಹಾಳಾಗಿ ಹೋಗುವುದು ಅಫೀಮು ಹೊರತು ಬೇರೆ ಯಾವ ಪದಾರ್ಥಗಳ ಮೇಲೆಯೂ ಪ್ರೇಮವಿಲ್ಲದ ಸೂತ್ರಗೊಂಬೆಯಂತಾಗುವರು ಹಾಗಾದರೆ ಅವರನ್ನು ಆ ಚಟದಿಂದ ಹೇಗೆ ಮುಕ್ತ ಮಾಡಬೇಕೆಂಬುದು ಬಹಳ ದೊಡ್ಡ ಪ್ರಶ್ನೆಯಾಗಿದೆ ಸಮಾಜದಲ್ಲಿಯ ಈ ನಿಸ್ಸಹಾಯ ಜನರ ಮನವೊಲಿಸಿ ಅವರ ಮೇಲೆ ಒಳ್ಳೆ ಪರಿಣಾಮವನ್ನುಂಟುಮಾಡಬೇಕಾದರೆ ಒಳ್ಳೆ ನುರಿತ ವಿವೇಕಶಾಲಿಗಳಾದ ಅಸಂಖ್ಯ ಕಾರ್ಯಕರ್ತರು ಅವಶ್ಯ ಅವರು ಸಿಕ್ಕುವವರೆಗೆ ಈ ಕಾರ್ಯವಾಗದು ಈ ಸಾರ್ವಜನಿಕ ರೋಗವನ್ನು ಹೋಗಲಾಡಿಸುವದಕ್ಕಾಗಿ ಡಾಕ್ಟರರು ಸಂಶೋಧನೆಗಳನ್ನು ನಡಿಸಿ ಯೋಗ್ಯ ಉಪಾಯಗಳನ್ನು ಹುಡುಕಿದರೆ ಈ ಕಾರ್ಯಕ್ಕೆ ಬಹಳ ಮಹತ್ವದ ಸಹಾಯ ಸಲ್ಲಿಸಿದಂತಾಗುವುದು' ಎಂದು ಗಾಂಧಿಜಿ ಬರೆಯುತ್ತಾರೆ



ಬ್ರಿಟನಿನಲ್ಲಿ ಟೇಂಕು ಶಿಕ್ಷಣ   ಬ್ರಿಟಿಷ್ ವೆಲೆಂಟೈನ್ ಟೇಂಕುಗಳು ಯುದ್ಧರಂಗಕ್ಕೆ ಹೊರಡುತ್ತವೆ

ಸಿಲೋನಿಗೆ ಹೊಸ ಸೈನ್ಯ

ಸಿಲೋನಿಗೆ ಈಚೆಗೆ ಪೂರ್ವ ಆಫ್ರಿಕದಿಂದ ಹೊಸ ಸೈನ್ಯಗಳು ಬಂದಿಳಿದಿವೆ ಈ ಸೈನಿಕರು ಅರಣ್ಯ ಯುದ್ಧದಲ್ಲಿ ಮತ್ತು ಗೊರಿಲ್ಲಾ ಕಾಳಗದಲ್ಲಿ ಬಹಳ ಪ್ರವೀಣರು.

ಯುದ್ಧ ವಾರ್ತೆಗಳು

ಸೈಬೀರಿಯದ ಕಡೆಗೆ ಜಪಾನರು ಬರುವ ತಿಂಗಳು ನುಗ್ಗುವ ಹಾಗೆ, ಅವರು ಮಂಚೂರಿಯದ ಬಳಿ ಅಧಿಕ ಸೇನೆಗಳನ್ನು ಸಂಗ್ರಹಿಸುತ್ತಿದ್ದಾರೆ, ಮಧ್ಯ ಚೀನದಲ್ಲಿ ೧೦ ಸಾವಿರ ಜಪಾನಿ ಸೈನಿಕರು ಯುದ್ಧಮಾಡುತ್ತ ಚೀನಿಯರನ್ನು ಸದೆಬಡಿಯಲು ಯತ್ನಿಸುತ್ತಿರುವಲ್ಲಿ ಚೀನಿಯರು ವೀರಾವೇಶದ ಮರುದಾಳಿಯನ್ನು ಹೂಡಿದ್ದಾರೆ, ಮರಮುಸ್ಕಿನ ಯುದ್ಧದಲ್ಲಿ ಜರ್ಮನರು ಹಿಂದೆ ಸರಿದಿದ್ದಾರೆ ಫಿಲಿಪೈನ್ಸಿನ ಪ್ರತಿಭಟನೆ ಮುಗಿಯಿತು

ಮಂಚೂರಿಯದಲ್ಲಿ ಸಿದ್ಧತೆ

ಜಪಾನರು ಉತ್ತರ ಚೀನದಿಂದ ಮಂಚೂರಿಯಕ್ಕೆ ಅತ್ಯವಸರದಿಂದ ಸೇನೆಯನ್ನೊಯ್ದು ಸಂಗ್ರಹಿಸುತ್ತಿದ್ದಾರೆ ಅವರು ಬರುವ ತಿಂಗಳಲ್ಲಿ ಸೈಬೇರಿಯದ ಮೇಲೇರಿ ಹೋಗಬಹುದೆಂದು ಚುಂಕಿಂಗಿನ ವಾರ್ತೆ ಹಿಟ್ಲರ್ ಮುಸಲೀನಿಗಳು ಮೊನ್ನೆ ಭೇಟಿಯಾದಾಗ ಇದು ನಿಶ್ಚಯಿಸಲ್ಪಟ್ಟಿರುವುದೆಂದು ತಿಳಿದಿದೆ.

ಗಾಂಧಿ ಮುಂಬಯಿ ಪ್ರವಾಸ

ಮಹಾತ್ಮಾ ಗಾಂಧಿಜಿಯವರು ದೀನಬಂಧು

ಹರಿಜನವಾಣಿಯಿಂದ

(೫ನೇ ಪುಟದಿಂದ ಮುಂದುವರಿದುದು)

ದುಗಳು ತಾವೆ ತೋಟಿಕೆಲಸವನ್ನು ಕೈಕೊಳ್ಳುವದು ಕರ್ತವ್ಯವಾಗಿದೆ ಅಂದರೆ ಅವರು ಶಾಸ್ತ್ರೀಯ ಪದ್ಧತಿಯಿಂದ ಕಾರ್ಯ ಮಾಡಬಲ್ಲರು ಉದಾಹರಣಾರ್ಥವಾಗಿ ಹೊಲಸನ್ನು ಅವರೆಂದಿಗೂ ಬುಟ್ಟಿಯಲ್ಲಿ ತೆಗೆಯಲಾರರು ಇಲ್ಲವೆ ತಮ್ಮ ತಲೆಯ ಮೇಲೆ ಹೊರಲಾರರು ಅವರು ಅದನ್ನು ಒಣಮಣ್ಣಿನಿಂದ ಮುಚ್ಚಿ ಕಬ್ಬಿಣ ಪಾತ್ರೆಯಲ್ಲಿ ಅದನ್ನು ಚೆಲ್ಲಬಹುದು ತಮ್ಮ ಕೈಯಿಂದ ಹೊಲಸನ್ನು ಶಕ್ಯವಿದ್ದಷ್ಟು ಹಿಡಿಯುವುದಿಲ್ಲ ಪಾತ್ರೆಯನ್ನು ನೀರಿನಿಂದ ಸ್ವಚ್ಛ ತೊಳೆಯುವರು ಕೆಲಸ ಮುಗಿದ ಕೂಡಲೇ ಅವರು ಸ್ನಾನ ಮಾಡುವರು, ಕೆಲಸಮಾಡುವಾಗ ಬೇರೆ ಬಟ್ಟೆಯನ್ನು ಧರಿಸುವರು ಇದೆಲ್ಲಕ್ಕೆ ಬಹಳ ಹಣಬೇಕಾಗಿಲ್ಲ ಅದಕ್ಕೆ ಬುದ್ಧಿಬೇಕು ಪರಿಶ್ರಮಬೇಕು ಧ್ಯೇಯನಿಷ್ಠೆ ಇರಬೇಕು ಯಾವುದೊಂದೇ ಜಾತಿಗೆ ಈ ತೋಟಿ ಕೆಲಸವನ್ನು ನಾವು ಬಿಟ್ಟುಕೊಡಬಾರದು ಆದಾಗ್ಯೂ ಯನ್ನು ಕಲಿಯುವಂತೆ ಈ ಕೆಲಸವನ್ನೂ ಪ್ರತಿಯೊಬ್ಬನೂ ಕಲಿಯಬೇಕು, ಪ್ರತಿಯೊಬ್ಬ

ಕಾಂಗ್ರೆಸಿನ ಬಹಿಷ್ಕೃತ ಠರಾವು

ಕಾಂಗ್ರೆಸಿನ ಬಹಿಷ್ಕೃತವಾದ ಠರಾವಿನ ಯಾವ ಅಂಶಗಳು ವದಂತಿಗಳ ಮೇಲೆ ಹೊಂದಿಕೊಂಡಿವೆ? ಯಾವ ವಿಧ್ವಮಾನಗಳನ್ನು ತಪ್ಪಾಗಿ ನಿವೇದಿಸಲಾಗಿದೆ ಎಂಬುದನ್ನು ಸರಕಾರದವರು ತಮಗೆ ಖಚಿತಪಡಿಸಿದಲ್ಲಿ ತಾವು ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಪರವಾಗಿ ಕ್ಷಮೆ ಬೇಡಿ, ಆ ಠರಾವುಗಳನ್ನು ಹಿಂದೆಗೆಯುತ್ತೇವೆಂದು ರಾಷ್ಟ್ರಪತಿ ಮೌಲಾನರು ಪ್ರಕಟಿಸಿದ್ದಾರೆ ಪ್ರಭುತ್ವದವರು ಈಚೆಗೆ ರಂಗೂನ್ ಮೊದಲಾದ ಕೆಲವು ಕಡೆಗಳ ವಿಧ್ವಮಾನಗಳ ಕುರಿತು ಕಾಂ. ವ. ಕಮಿಟಿ ಮಾಡಿದ ಠರಾವುಗಳನ್ನು ಬಹಿಷ್ಕರಿಸಿ, ಆ ವಿಷಯದಲ್ಲಿ ಇಂಡಿಯಾ ಸ್ಟೇಟ್ ಸೆಕ್ರೆಟರಿಗಳೂ 'ಹೌಸ್ ಆಫ್ ಕಾಮನ್ಸ್'ನಲ್ಲಿ ಒಂದು ಭಾಷಣ ಮಾಡಿದುದಕ್ಕೆ ಪ್ರತಿಯಾಗಿ ಮೌಲಾನರ ಈ ಹೇಳಿಕೆ ಕೊಟ್ಟರು

'ರಾಜಾಜಿಯವರ ಮಾರ್ಗವು ಸರಿಯಲ್ಲ' ಸತ್ಯಮೂರ್ತಿ

ಭದ್ರಾವತಿ ಕೆಲಸಗಾರರ ಮೇಲೆ ಗುಂಡಿನೇಟು!

ಮೈ। ಕಾಂ। ಅಧ್ಯಕ್ಷರು ಅಧಿಕಾರಿಗಳ ವರ್ತನೆ ಖಂಡಿಸುತ್ತಾರೆ.

ಮೈಸೂರ್ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ. ಟಿ. ಸುಬ್ರಹ್ಮಣ್ಯಂರವರು ಭದ್ರಾವತಿ ಕೆಲಸಗಾರರ ಮೇಲೆ ಪೋಲೀಸರು ಗುಂಡಿನೇಟು ಹಾರಿಸಿದ ವಿಷಯ ಒಂದು ಪ್ರಕಟಣೆ ಹೊರಡಿಸಿ ಅದರಲ್ಲಿ ಅಧಿಕಾರಿಗಳು ವಿಚಾರತಪ್ಪಿ ವರ್ತಿಸಿ ಈ ಅನಾಹುತವನ್ನು ತಂದರೆಂದೂ, ಅಧಿಕಾರಿಗಳು ೧೪ನೇ ಕಲಮು ಜಾರಿಮಾಡಿದ್ದು ಸರಿಯಲ್ಲವೆಂದೂ ಮುಖಂಡರನ್ನು ಕೈದುಮಾಡಿದ್ದು ಜಾಣತನವಾಗಲಿಲ್ಲವೆಂದೂ, ಕೈದುಮಾಡಿದ ಮೇಲೆ ವಿಚಾರಣೆ ಮಾಡದೆ, ಸೆರೆಯೊಳಗಿಟ್ಟದ್ದು ಸರಿಯಾಗಲಿಲ್ಲವೆಂದೂ ಕೆಲಸಗಾರರು ಕೈದಾದ ಮುಖಂಡರಿಗೆ ಗೌರವ ತೋರಿಸಲು ಹಾರ ಹಾಕುವಾಗ ಅದನ್ನು ತಡೆದದ್ದು ಅವಿಚಾರವೆಂದೂ ಗಲಭೆಯಾದಾಗ ಮುಖಂಡರಿಗೆ ಹೇಳಿ ಕೆಲಸಗಾರರನ್ನು ಶಾಂತಗೊಳಿಸಬಹುದಾಗಿರಲು ಗುಂಡು ಹಾರಿಸಿದ್ದು ಅವಿವೇಕವೆಂದು ಬರೆದಿರುವರು. ಕೊನೆಗೆ ಅಹಿಂಸಾ ರೀತಿಯಿಂದ ವರ್ತಿಸಿದ ಕೆಲಸಗಾರರನ್ನು ಅಭಿನಂದಿಸಿ, ಅವರು ಪಡುತ್ತಿರುವ ಕಷ್ಟಗಳಿಗಾಗಿ ಸಹಸಂತಾಪ ಸೂಚಿಸಿದರು.

ಮೈಸೂರು ಕಾಂಗ್ರೆಸ್ ಮುಖಂಡರಾದ ಭಾಷ್ಯಂ, ಸುಬ್ರಹ್ಮಣ್ಯಂ, ಸಿದ್ಧಯ್ಯ ಮೊದಲಾದವರು ತಮ್ಮ ಮೇಲೆ ಪ್ರತಿಬಂಧಕಾಜ್ಞೆ ಹಾಕಿದ್ದು ತಾವು ಭದ್ರಾವತಿಯಲ್ಲಿರುವಾಗ ಅಂತಹ ಅನಾಹುತ ನಡೆದಿಲ್ಲವೆಂದೂ ಕೆಲಸಗಾರರನ್ನು ರೇಗಿಸಲು ಹೀಗೆ ಅಧಿಕಾರಿಗಳು ಮಾಡಿದರೆಂದೂ ಪ್ರಕಟಿಸಿರುವರು.

ಸೋಲ್ಜರರಿಗೂ ವಿದ್ಯಾರ್ಥಿಗಳಿಗೂ ಹೊಡೆದಾಟ

ಹುಡುಗಿಯ ಅಪಹರಣ

ಲಾಹೋರಿನ ಎಂಪ್ರೆಸ್ ರೋಡಿನಲ್ಲಿಯ ಒಂದು ಹೊಟೇಲಿನ ಹೊರಬದಿಯಲ್ಲಿ ೪ನೇ ತಾರೀಕಿನ ದಿವಸ ಸಂಜೆಗೆ ೪-೫ ಯುರೋಪಿಯನ್ ಸೋಲ್ಜರರಿಗೂ ಕೆಲವು ಸಾರ್ವಜನಿಕರಿಗೂ ಹೊಡೆದಾಟ ಸಂಭವಿಸಿ ಸಾರ್ವಜನಿಕರಲ್ಲಿ ಕೆಲವರಿಗೂ ಮತ್ತು ಆ ೫ ಸೋಲ್ಜರರಿಗೂ ಗಾಯಗಳಾದವು. ಸಂಜೆಯ ೫ ಗಂಟೆಯ ಸುಮಾರಕ್ಕೆ ಓರ್ವ ಹುಡಿಗೆಯು ಅಲ್ಲಿ ಹಾಯ್ದು ಹೋಗುತ್ತಿರುವಾಗ ಸೋಲ್ಜರರು ಅವಳನ್ನು ಎತ್ತಿಕೊಂಡು ಹೊಟೇಲಿನಲ್ಲಿ ಒಯ್ದರೆಂದೂ ಅವಳು ಚೀರಹತ್ತಿದ್ದರಿಂದ ರಸ್ತೆಯಲ್ಲಿ ಹೋಗುವವರು ಆ ಧ್ವನಿ ಕೇಳಿ ಸೋಲ್ಜರರನ್ನು ಹೊಟೆಲಿನಲ್ಲಿಯೇ ಬೆನ್ನಟ್ಟಿ ಕೋಣೆಯನ್ನು ಮುರಿದು ಅವರನ್ನು ಹೊಡೆದು ಹುಡುಗಿಯನ್ನು ಪಾರುಮಾಡಿದರೆಂದೂ ತಿಳಿಯುತ್ತದೆ. ಪಾರಾಗಿ ಹೋಗಲು ಪ್ರಯತ್ನಿಸಿದರು. ಆದರೆ ಅವರಲ್ಲಿ ಇಬ್ಬರನ್ನು ಡ್ಯಾವಿಸ ರಸ್ತೆ ಹತ್ತಿರ ಮತ್ತು ಉಳಿದ ಮೂವರನ್ನು ಮ್ಯಾಕ್ಲೋಯಿಡ ರಸ್ತೆ ಹತ್ತಿರ ಜನರು ಹಿಡಿದರು. ಈಗ ಐದೂ ಸೋಲ್ಜರರು ಆಸ್ಪತ್ರೆಗೆ ಹಾಕಲ್ಪಟ್ಟಿದ್ದಾರೆ. ಸೋಲ್ಜರರು ಹೊರಗಿನ ಠಾಣೆಯವರಿದ್ದು ರಜೆಯ ಮೇಲೆ ಬಂದಿದ್ದರೆಂದು ತಿಳಿಯುತ್ತದೆ.

ಅಂಡ್ರೂಸ್ ನಿಧಿಗೆ ಸಹಾಯ ಮಾಡಿರಿ

ಮಹಾದೇವ ದೇಸಾಯಿ ಬಿನ್ನಹ

ಗಾಂಧಿಜಿ ಮುಂಬಯಿಗೆ ಪ್ರಯಾಣ ಬೆಳಸಿದ ವಿಷಯವಾಗಿ ಶ್ರೀ. ಮಹಾದೇವದೇಸಾಯಿಯವರು ಒಂದು ಲೇಖನ ಪ್ರಕಟಿಸಿ, ಎಲ್ಲರಿಗೂ ಗೊತ್ತಿದ್ದಂತೆ ಗಾಂಧಿಜಿಯ ಪ್ರಕೃತಿಯು ಸೇವಾಗ್ರಾಮ ಬಿಟ್ಟು ಹೊರಡಲು ಯೋಗ್ಯವಾಗಿಲ್ಲವಾದರೂ ಅವರು ನಿಧಿ ಸಂಗ್ರಹಕ್ಕಾಗಿ ಹೋಗಿದ್ದಾರೆ. ಶಾಂತಿನಿಕೇತನದ ಸಲುವಾಗಿ ಕೇವಲ 5 ಲಕ್ಷ ರೂಪಾಯಿ ಕೂಡಿಸಲು ಗಾಂಧಿಜಿ ಮುಂಬಯಿಗೆ ಹೊರಟಿದ್ದಾರೆ, ಅವರಿಗೆ ಪ್ರಯಾಸವಾಗದಂತೆ ಮಹಾಜನರು ನೆರವಾಗಬೇಕೆಂದು ಅದರಲ್ಲಿ ವಿನಂತಿಸಿರುವರು.

ಅಖಿಲಭಾರತದಲ್ಲಿ ಪಾಕಿಸ್ತಾನ ವಿರೋಧ ದಿನಾಚರಣೆ

ಖಾನ್ ಸಾಹೇಬರು ಸಾರ್ವಜನಿಕ ಸೇವೆಯಿಂದ ನಿವೃತ್ತರೆ?

ಅಂಡ್ರೂಸ್ ನಿಧಿಗೆ ಸಹಾಯ ಮಾಡಿರಿ.

ಅಖಿಲ ಭಾರತದಲ್ಲಿ ಪಾಕಿಸ್ತಾನ ವಿರೋಧ ದಿನಾಚರಣೆ

ತಾ. 10ರಂದು ಹಿಂದು ಮಹಾಸಭೆಯ ವತಿಯಿಂದ ಆಚರಿಸಲ್ಪಟ್ಟಿತು.

ಮೈಸೂರು ಮಹಾರಾಜರ ಎರಡನೆ ವಿವಾಹದ ವಿಚಾರವಾಗಿ ಹರಡಿದ ಸುದ್ದಿಗಳು

ಮೈಸೂರು ಮಹಾರಾಜರು ತಮ್ಮ ರಾಜಮನೆತನಕ್ಕೆ ಸೇರಿದ ತರುಣಿಯೋರ್ವಳನ್ನು ಕಳೆದವಾರ ಎರಡನೇ ವಿವಾಹವಾದರಷ್ಟೆ? ಅವರು ಮೊದಲನೆಯ ಪತ್ನಿಯನ್ನು ತ್ಯಜಿಸಿದರೆ? ಎರಡನೆಯ ವಿವಾಹಕ್ಕೆ ಕಾರಣವೇನು? ಮೊದಲಾದ ವಿಚಾರಗಳು ಅಧಿಕೃತವಾಗಿ ಪ್ರಕಟವಾಗಿಲ್ಲ. ಜನತೆಯಲ್ಲಿ ಹಲವು ಸುದ್ದಿ ಹರಡಿವೆ. ಮೊದಲನೆ ಪತ್ನಿಯನ್ನು ತಿಂಗಳ 5000 ರೂ. ವೇತನಕೊಟ್ಟು ತ್ಯಜಿಸಿಬಿಟ್ಟಿರುವರೆಂದೂ, ನಿರ್ದೋಷಿ ಸತ್ಯ ಪ್ರೇಮಾದೇವಿ ರಾಣಿವಾಸದ ಒಳಸಂಚಿನಿಂದ ಪತಿಯನ್ನಗಲಬೇಕಾಯಿತೆಂದೂ ಹಲವು ಸುದ್ದಿಗಳಿವೆ. ಅಂತೂ ಈಗ ಸತ್ಯ ಪ್ರೇಮಾದೇವಿ ತಮ್ಮ ತೌರುಮನೆಗೆ ಹೋಗಿರುವರಂತೆ. ಈ ಕುರಿತು ಅಧಿಕೃತ ಪ್ರಕಟಣೆ ಹೊರಟು ಸಂಶಯ ನಿವಾರಣೆಯಾಗುವುದು ವಿಹಿತವು.

ಕ್ಷಣೆಯ ಸಲುವಾಗಿ ಹಿಂದೀ ಸೈನ್ಯವನ್ನು ಮೂರು ಭಾಗವನ್ನಾಗಿ ವಿಭಾಗಿಸಲಾಗಿದೆಯೆಂದು ಒಂದು ಸರಕಾರೀ ಪ್ರಕಟಣೆ ಹೊರಡಿಸಲಾಗಿದೆ; ಧಾಳಿಯಾದರೆ ಒಂದು ಕಡೆಯಲ್ಲಿ ಭದ್ರವಾಗಿ ನಿಂತುಕೊಳ್ಳದೆ ಮುನ್ನುಗ್ಗಿ ಧಾಳಿಗಾರರನ್ನು ಎದುರಿಸುವುದೇ ನಮ್ಮ ಉದ್ದೇಶ. ಧಾಳಿಯ ಅಂಜಿಕೆಯಿರುವ ಪ್ರದೇಶಗಳಿಗೆ ಸಮೀಪ ಸೈನ್ಯಗಳನ್ನು ಮತ್ತು ಯುದ್ಧಯಂತ್ರಗಳನ್ನು ಕಾಯ್ದಿಟ್ಟಿರಬೇಕು. ಧಾಳಿಯಾದಕೂಡಲೇ ಮುನ್ನುಗ್ಗಿ ವೈರಿಗಳನ್ನು ಎದುರಿಸುವುದು' ಎಂದು ವೇವಲರು ಪ್ರಕಟಿಸಿದ್ದಾರೆ.

ಈ ಪ್ರಕಾರವಾಗಿ ಹಿಂದುಸ್ಥಾನದ ಉತ್ತರ, ಪೂರ್ವ ಮತ್ತು ದಕ್ಷಿಣಭಾಗದ ಸೈನ್ಯಗಳಲ್ಲಿ ಬದಲಾವಣೆಯಾಗಿದೆಯಂತೆ.

ರಫಿ ಅಹಮ್ಮದ್ ಕಿಡ್ವಾಯಿಯವರ ಕೈದು

ಸಂಯುಕ್ತ ಪ್ರಾಂತದ ಹಿಂದಿನ ಕಂದಾಯ ಮಂತ್ರಿ ರಫಿ ಅಹಮ್ಮದ್ ಕಿಡ್ವಾಯಿಯವರನ್ನು ತಾ. 12ರಂದು ಸಂರಕ್ಷಕ ಕಾಯಿದೆಯಂತೆ ಕೈದು.



ಅಮೇರಿಕನ್ ಬಂದರಗಳಲ್ಲಿ ತಯಾರಾದ ಬ್ರಿಟಿಷ್ ಯುದ್ಧ ಹಡಗಗಳು

ರಾಜಾಜಿ ಗಾಂಧಿ ಭೇಟಿ

ಇತ್ತೀಚೆಗೆ ರಾಜಾಜಿ ಗಾಂಧಿಜಿಯವರನ್ನು ವರ್ಧಾದಲ್ಲಿ ಭೇಟಿಯಾದರು. ಅವರು ತಮ್ಮ ನಿರ್ಣಯದ ವಿಚಾರವನ್ನು ಗಾಂಧಿಜಿಯವರೊಡನೆ ಚರ್ಚಿಸಿದರೆಂದು ತಿಳಿದಿದೆ.

ಪಂಡಿತ ನೆಹರು

ಪುತ್ರಿಯೊಂದಿಗೆ ಡಿಲ್ಲಿಗೆ ಹೋಗಿ, ರೂಸ್ವೆಲ್ಟರ ರಾಯಭಾರಿ ಕರ್ನಲ್ ಜೋನ್ಸನರನ್ನು ಭೇಟಿಯಾಗಿ ಲಾಹೋರಿಗೆ ಮರಳಿದರು.

ರಾಜಾಜಿ ಮಾರ್ಗ ಸರಿಯಲ್ಲ

ರಾಜಾಜಿ ರಾಜಿನಾಮೆ ಕೊಡಬೇಕು

ಸತ್ಯಮೂರ್ತಿ ಹೇಳಿಕೆ

ಸತ್ಯಮೂರ್ತಿಯವರು ಒಂದು ಪ್ರಕಟಣೆ ಹೊರಡಿಸಿ, ರಾಜಾಜಿ ಈಗ ಪ್ರಚಾರ ಮಾಡುತ್ತಿರುವುದು ಸರಿಯಲ್ಲವೆಂದೂ, ಹಾಗೆ ಪ್ರಚಾರ ಮಾಡಬೇಕಾದರೆ ಅವರು ಕಾಂಗ್ರೆಸಿಗೆ ರಾಜಿನಾಮೆ ಕೊಡಬೇಕೆಂದೂ ಬರೆದಿದ್ದಾರೆ.

ಹಿಂದೂಸ್ಥಾನದಮೇಲೆ ಧಾಳಿಯಾದರೆ?

'ಹಿಂದೂಸ್ಥಾನದಮೇಲೆ ಧಾಳಿಯಾದರೆ, ಸಂರ

ಪೇರಿಸಿನಲ್ಲಿ ಗೋರಿಂಗ್

ಗೋರಿಂಗ್ ಈಗ ಪ್ಯಾರಿಸಿನಲ್ಲಿರುವರೆಂದು ಫ್ರಾನ್ಸಿನ ಪ್ರಧಾನ ವ್ಯಕ್ತಿಗಳೊಡನೆ ಮಾತುಕತೆ ನಡೆಸುತ್ತಿರುವರೆಂದೂ ಸುದ್ದಿಯಿದೆ.

ಅಮೇರಿಕದಿಂದ ಹಿಂದುಸ್ಥಾನಕ್ಕೆ ಯುದ್ಧ ಸಾಮಗ್ರಿ

ಡಾ। ಹೆನ್ರಿ ಗ್ರೇಡಿಯವರ ನೇತೃತ್ವದಲ್ಲಿ ಹಿಂದುಸ್ಥಾನಕ್ಕೆ ಆಗಮಿಸಿರುವ ಅಮೇರಿಕನ್ ಸಲಹಾ ಶಿಷ್ಟಮಂಡಲದವರು ಈಗಾಗಲೇ ವಾಶಿಂಗ್‌ಟನಿಗೆ ತಂತಿ ಮೂಲಕ 20 ಬಗೆಯ ಶಿಫಾರಸು ಮಾಡಿದ್ದು ಕೆಲ ಬಗೆಯ ಯಂತ್ರ ಸಾಮಗ್ರಿಗಳು ಜಲವಾಯು ಮಾರ್ಗವಾಗಿ ಕಳುಹಿಸಬೇಕೆಂದು ಕೇಳಿರುವರಂತೆ.

ವಿದ್ಯಾರ್ಥಿ ಪರಿಷತ್ತಿಗೆ ಹೋಗಲು ೬ ಜನ ವಿದ್ಯಾರ್ಥಿಗಳ ಬಿಡುಗಡೆ

ಡಿಲ್ಲಿಯಲ್ಲಿ ಕೂಡಲಿರುವ ಅ. ಭಾ. ವಿದ್ಯಾರ್ಥಿ ಪರಿಷತ್ತಿಗೆ ಹೋಗಲು ಬಿಹಾರ್ ಸರಕಾರದವರು ಬಿಹಾರ್ ಪ್ರಾಂತಿಕ ವಿದ್ಯಾರ್ಥಿ ಸಂಘದ ೬ ಜನ ಸದಸ್ಯರನ್ನು ಸೆರೆಮನೆಯಿಂದ ಬಿಡುಗಡೆ ಮಾಡಿರುವರು. ಈ ಪರಿಷತ್ತಿನಲ್ಲಿ ಯುದ್ಧ

ಕಾರ್ಯಗಳಿಗೆ ಬೆಂಬಲ ಕೊಡುವ ವಿಚಾರ ಚರ್ಚಿಸಲ್ಪಡುವುದು.

ಡಾ। ಖಾನ್ ಸಾಹೇಬರು ಸಾರ್ವಜನಿಕ ಸೇವೆಯಿಂದ ನಿವೃತ್ತರಾಗುವರೆ?

"ನನ್ನ ಮಗಳು ವೈಮಾನಿಕ ಲೆಫ್ಟಿನೆಂಟ್ ಕಣ್ವಾರ್ ಜಸವಂತಸಿಂಗ (ಹಿಂದೀ ಕ್ರೈಸ್ತ)ರನ್ನು ಲಗ್ನವಾಗಿರುವುದರಿಂದ ನನ್ನ ವಿರೋಧಿಗಳು ಅಜ್ಞ ಜನರ ಮನೋಭಾವನೆಯನ್ನು ನನ್ನ ವಿರುದ್ಧ ಉದ್ರೇಕಿಸತೊಡಗಿದ್ದಾರೆ. ಆದಕಾರಣ ಸಾರ್ವಜನಿಕರಿಗೆ ಇನ್ನು ಮುಂದೆ ನನ್ನ ಸೇವೆ ಅಗತ್ಯವಿಲ್ಲವೆಂದು ನನಗನಿಸುತ್ತದೆ" ಎಂದು ಡಾ। ಖಾನ್ ಸಾಹೇಬರ ಪ್ರಕಟಣೆ.

ರಾಜಾಜಿಯವರಿಗೆ ಕಾಶ್ಮೀರ ಸ್ವಾಗತ

ಕಾಶ್ಮೀರದವರು ರಾಜಾಜಿಯವರು ಹಿಂದು ಮುಸ್ಲಿಂ ಐಕ್ಯದ ಬಗ್ಗೆ ಮಾಡಿದ ಪ್ರಯತ್ನದ ಬಗ್ಗೆ ಬಹಳ ಸಂಭ್ರಮದ ಸ್ವಾಗತ ಕೊಟ್ಟಿರುವರು. ಅವರನ್ನು ಶ್ಲಾಘಿಸಿ ಅವರಿಗೆ ತಮ್ಮ ಸಂಪೂರ್ಣ ಬೆಂಬಲ ಕೊಡುವುದಾಗಿಯೂ ಭರವಸೆಯಿತ್ತಿದ್ದಾರೆ.

ಆಸ್ಟ್ರೇಲಿಯದ ಮೇಲೆ ಆಕ್ರಮಣ ಯತ್ನ

ಜಪಾನರು ಆಸ್ಟ್ರೇಲಿಯದ ಮೇಲೆ ವ್ಯವಸ್ಥಿತ ರೀತಿಯಿಂದ ಆಕ್ರಮಣ ಮಾಡಲು ಪ್ರಯತ್ನ ಮಾಡುತ್ತಿರುವರೆಂದು ಸುದ್ದಿಯಿದೆ.

ವೃತ್ತಪತ್ರ ಮತ್ತು ಸರಕಾರ

ಸಲಹಾಸಮಿತಿ ರದ್ದು ಮಾಡುವರೆ?

ಪತ್ರಿಕೆಗಳ ಮೇಲೆ ಸರಕಾರವು ಕ್ರಮ ತೆಕೊಳ್ಳುವುದರ ಮೊದಲು ಪ್ರತಿಯೊಂದು ಪ್ರಾಂತಿಕ ಸರಕಾರದವರು ಸ್ಥಳೀಕ ಸಲಹಾ ಸಮಿತಿಯವರೊಡನೆ ವಿಚಾರಮಾಡುವ ಪದ್ಧತಿಯಿತ್ತಷ್ಟೆ? ಸದ್ಯಕ್ಕೆ ಗಂಡಾಂತರ ಪ್ರಸಂಗ ಬಂದಿರುವುದರಿಂದ ಆ ಪದ್ಧತಿಯನ್ನು ರದ್ದುಪಡಿಸಬೇಕೆಂದು ಸರಕಾರದ ವಿಚಾರವಿತ್ತು. ಆದರೆ ವೃತ್ತಪತ್ರ ಸ್ಥಾಯಿ ಸಮಿತಿಯವರ ಮಧ್ಯಸ್ಥಿಕೆಯಿಂದ ಸರಕಾರದವರ ಈ ವಿಚಾರವನ್ನು ಸದ್ಯಕ್ಕೆ ಬಿಟ್ಟುಕೊಟ್ಟಿರುವರು.

ಹಂಗೇರಿ ರುಮೇನಿಯಾ ಗಡಿ ತಕರಾರು

ರುಮೇನಿಯಾ ಹಂಗೇರಿ ಗಡಿಗಳ ವಿಚಾರದಲ್ಲಿ ಪುನಃ ತಕರಾರು ಬಂದಿರುವುದೆಂದು ಸುದ್ದಿ. ಕೆಲ ರುಮೇನಿಯ ಸೈನಿಕರು ಹಂಗೇರಿ ಗಡಿದಾಟಿ ತಂಟೆ ಮಾಡಿದರಂತೆ.

ನೋಟೀಸು

ದ. ಕ. ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಸ್ಮಾಲ ನಂಬ್ರ 99/1942.

ಬಿ. ಎಸ್. ಸುಬ್ರಾಯ ತಂತ್ರಿ. . . . . ವಾದಿ.

ಮತ್ತು

M. ಚಂದಯ್ಯ ಶೆಟ್ಟಿ, ಪೂವಪ್ಪ ಶೆಟ್ಟಿ ಅಳಿಯ ಮಂಗಳೂರು ಕಸಬಾ ಬಪ್ಪನಮೊಗ್ರು ಗ್ರಾಮ. } ಪ್ರತಿವಾದಿ.

ಪ್ರತಿವಾದಿ M. ಚಂದಯ್ಯ ಶೆಟ್ಟಿಗೆ—

ಮೇಲೆ ಹೆಸರು ಕಾಣಿಸಿದ ವಾದಿ ನಿಮ್ಮ ಮೇಲೆ ಗೇಣಿ ಬಾಕಿ ರೂ. 63-8-0 ವಸೂಲಿ ಕೇಳಿ ದಾಖ್ಲು ಮಾಡಿದ ಸದ್ರಿ ದಾವೆಯು ತಾ. 30-5-42 ಕ್ಕೆ ತನಿಖೆ ಬಗ್ಗೆ ಇಟ್ಟಿರುತ್ತದೆ. ಆ ಕುರಿತು ನಿಮಗೇನಾದ್ರು ಆಕ್ಷೇಪವಿದ್ರೆ ಸದ್ರಿ ತಾರೀಕಿನ ದಿನ ಮೇಲಿನ ಕೋರ್ಟಿನ ಮುಂದೆ ಹಾಜರಾಗಿ ನಿಮ್ಮ ಆಕ್ಷೇಪಣೆಗಳನ್ನು ಜಾಹೀರುಪಡಿಸಿಕೊಳ್ಳಬಹುದು.

(ಕೋರ್ಟಿನ ಹುಕುಂ ಪ್ರಕಾರ)

ಮಂಗಳೂರು } B. R. Vyasraya Achar

14-5-1942. } Advocate.

ಜಿಲ್ಲಾ ಸಮಾಚಾರಗಳು

ಮಂಗಳೂರು

ಜಪಾನ್ ವಿರುದ್ಧ ದಿನಾಚರಣೆ

ಕಳೆದ ಆದಿತ್ಯವಾರ ಸಂಜೆ, ಮೈದಾನಿನಲ್ಲಿ ಸ್ಥಳೀಯ ಮಜೂರ ಸಂಘದ ಆಶ್ರಯದಲ್ಲಿ 'ಜಪಾನಿನ ವಿರುದ್ಧ ದಿನಾಚರಣೆಗಾಗಿ ಒಂದು ಸಾರ್ವಜನಿಕ ಸಭೆ ಸೇರಿತ್ತು. ಪೋಸ್ಟಲ್ ವೆಂಕಣ್ಣ ರವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಶ್ರೀ. ಕೆ ಬಿ ಜಿನರಾಜ ಹೆಗ್ಗಡೆ ಎಂ. ಎಲ್. ಎ. (ಕೇಂದ್ರ) ಶ್ರೀಗಳಾದ ಕಕ್ಕಿಲ್ಲಾಯ, ಕೇಶವ ಕಾಮತ್ ಮೊದಲಾದವರು ಮಾತಾಡಿದರು. ಅಧ್ಯಕ್ಷರ ಭಾಷಣ ಹಾಗೂ ಧನ್ಯವಾದಗಳಲ್ಲಿ ನಡೆದ ಪೋಲೀಸರ ಗೋಳಿಬಾರಿನ ಸ್ವತಂತ್ರ ವಿಚಾರಣೆಯಾಗಬೇಕೆಂಬ ತೀರ್ಮಾನಗಳೊಡನೆ ಸಭೆ ಮುಗಿಯಿತು.

ದ. ಕ. ಜಿಲ್ಲಾ ಹರಿಜನಸೇವಕ ಸಂಘ

ದ ಕಾರ್ಯಕಾರಿ ಸಮಿತಿಯ ಸಭೆಯೊಂದು ದಿ ಸಿ ಎಂ ಹಾಲ್‌ನಲ್ಲಿ ತಾ ೬ರಂದು ಸಂಜೆ ಶ್ರೀಮತಿ ಶಾಂಭವಿ ಆರ್ ಪೂಂಜರ ಅಧ್ಯಕ್ಷತೆಯಲ್ಲಿ ಜರಗಿತು. ಕಾಸರಗೋಡು ತಾಲೂಕಿನ ಶೀತಂಗೋಳಿಯಲ್ಲಿ ಹರಿಜನ ವಸತಿಯನ್ನೇರ್ಪಡಿಸುವುದಕ್ಕೆ ಬೇಕಾದ ಸ್ಥಳದ ಕುರಿತು ಜಿಲ್ಲಾ ಕಲೆಕ್ಟರರು ಹಾಕಿದ್ದ ಶರತ್ತುಗಳನ್ನೊಪ್ಪುವ ನಿರ್ಣಯವೊಂದು ಸ್ವೀಕೃತವಾಯಿತು.

ಬೀಡಿ ಕೆಲಸಗಾರರ ಸಂಘ

ತಾ ೬ನೇ ರಾತ್ರೆ ಜರಗಿದ ಮಂಗಳೂರು ಬೀಡಿ ಕೆಲಸಗಾರರ ಸಂಘದ ಕಾರ್ಯಕರ್ತರ ಸಭೆಯಲ್ಲಿ ತಾ ೧೧ನ್ನು ಜಪಾನ್ ವಿರೋಧ ದಿನವನ್ನಾಗಿ ಆಚರಿಸಬೇಕೆಂದು ತೀರ್ಮಾನವಾಯಿತು.

ಚೊಕ್ಕಾಡಿ

ಹರಿಜನ ಸೇವಕಸಂಘದ ಪ್ರಚಾರ ಸಭೆಯೊಂದು ೪ರಂದು ಇಲ್ಲಿ ಶ್ರೀ। ಎನ್ ಡಿ ಕೃಷ್ಣಯ್ಯರವರ ಅಧ್ಯಕ್ಷತೆಯಲ್ಲಿ ಜರಗಿತು. ಹರಿಜನೋದ್ಧಾರದ ಕುರಿತು ಶ್ರೀ ಎನ್ ಎಸ್ ಕಿಲ್ಲೆಯವರು ಮಾತನಾಡಿದರು. ಶ್ರೀ। ಕೋಟಿ ಗಣೇಶ ಸುಬ್ಬಪ್ಪಯ್ಯ ಅವರು ಧನ್ಯವಾದಗಳನ್ನಿತ್ತರು.

ಸ್ವಾತಂತ್ರ್ಯ ಸಮರದ ಕಥೆಗಳು

ಈ ತನಕ ಸ್ವಾತಂತ್ರ್ಯ ಸಮರಗಳಲ್ಲಿ ಕರ್ನಾಟಕವು ಪ್ರಧಾನ ಪಾತ್ರ ವಹಿಸಿದೆ. ಅಸಮಾನ್ಯ ತ್ಯಾಗ, ಶೌರ್ಯಗಳನ್ನು ಕನ್ನಡಿಗರು ತೋರಿಸಿದ್ದಾರೆ, ಹೇಳಲಾಗದ ಸಂಕಷ್ಟಗಳನ್ನು ಅನುಭವಿಸಿದ್ದಾರೆ. ಅಂಥ ನಿಜವಾದ ಘಟನೆಗಳನ್ನೆಲ್ಲ ಕಥಾರೂಪದಲ್ಲಿ ಬರೆಸಿ, ಸಂಗ್ರಹಿಸಿ ಅಚ್ಚುಹಾಕಿಸುವ ಯೋಜನೆಯನ್ನು ಹುಬ್ಬಳ್ಳಿಯ ಕರ್ನಾಟಕ ಶಿಕ್ಷಣ ಸಮಿತಿಯವರು ಮಾಡಿರುವರೆಂದೂ ಯಥಾರ್ಥವಾಗಿ ನಡೆದ ಪ್ರಸಂಗಗಳ ತಳಹದಿಯ ಮೇಲೆ ಕಥೆಯು ಆಧರಿಸಬೇಕೆಂದೂ ಕಥೆಗಳ ಜತೆಯಲ್ಲಿ ಯಥಾರ್ಥ ಘಟನೆಯನ್ನು ಬರೆದು ಕಳಿಸಬೇಕೆಂದೂ ಸ್ವೀಕೃತವಾದ ಕಥೆಗಳಿಗೆ ಪ್ರತಿಫಲ ಸಿಗುವುದೆಂದೂ ಪ್ರಕಟವಾಗಿದೆ.

ಕರ್ನಾಟಕಕ್ಕೊಂದು ವಿಶ್ವವಿದ್ಯಾನಿಲಯ

ಕಳೆದ ಶುಕ್ರವಾರ ಸಂಜೆ, ಸ್ಥಳೀಯ ಥಿಯಾಸಾಫಿಕಲ್ ಲಾಜಿನಲ್ಲಿ, ಕಲಾಸಂಘ, ಮಿತ್ರಮಂಡಲಿ ಪ್ರಕಾಶ ಸಂಘಗಳ ಆಶ್ರಯದಲ್ಲಿ ಶ್ರೀ ರಂಗನಾಥ ರಾ। ದಿವಾಕರರು "ಕರ್ನಾಟಕಕ್ಕೊಂದು ವಿಶ್ವವಿದ್ಯಾನಿಲಯ"ದ ಕುರಿತು ಭಾಷಣಮಾಡಿದರು. ಶ್ರೀ ಕೆ ಬಿ ಜಿನರಾಜ ಹೆಗ್ಗಡೆ, ಎಂ ಎಲ್ ಎ (ಕೇಂದ್ರ) ಅವರು ಅಧ್ಯಕ್ಷರಾಗಿದ್ದರು. ಶ್ರೀ ದಿವಾಕರರು ಈ ವಿಶ್ವವಿದ್ಯಾನಿಲಯದ ಆವಶ್ಯಕತೆಯನ್ನು ವಿವರಿಸಿ, ಮೈಸೂರು ಯೂನಿವರ್ಸಿಟಿಯನ್ನೇ ಕರ್ನಾಟಕದ ವಿಶ್ವವಿದ್ಯಾನಿಲಯವನ್ನಾಗಿ ಘೋಷಿಸುವಲ್ಲಿ ಇರುವ ತೊಡಕುಗಳನ್ನು ಸೂಚಿಸಿ, ಈ ಸಂಬಂಧ ಸದ್ಯ ಬೆಳಗಾವಿಯಲ್ಲಿ ನಡೆಯಲಿರುವ ಒಂದು ಪರಿಷತ್ತಿನ ವಿಚಾರವನ್ನು ಸ್ಮರಣೆಗೆ ತಂದುಕೊಟ್ಟು, ಇತರ ಭಾಗಗಳವರ ವರ್ತನೆಯನ್ನು ಕರ್ನಾಟಕವನ್ನು ಮಂಗದಂತೆ ಈ ಪ್ರಾಂತದವರೂ ಈ ಯೋಜನೆಗೆ ಬೆಂಬಲ ಕೊಡಬೇಕೆಂದು ಪ್ರಾರ್ಥಿಸಿದರು. ಕರ್ನಾಟಕದಲ್ಲಿ ಮುಂದೆ ವಿಶ್ವವಿದ್ಯಾನಿಲಯವೊಂದು ಸ್ವತಂತ್ರವಾಗಿ ಏರ್ಪಟ್ಟರೆ, ಅದರಿಂದ ಈ ಪ್ರಾಂತದ ಜನತೆಯ ಕಾರ್ಯ ಸುಲಭವಾಗುವುದೆಂದರು. ಅಧ್ಯಕ್ಷರು ಈ ಯೋಜನೆಯನ್ನು ಸಮರ್ಥಿಸಿ ಮಾತಾಡಿದರು. ಶ್ರೀ. ವೆಂಕಟೇಶ ಭಟ್ಟರು ಧನ್ಯವಾದಗಳನ್ನು ಅರ್ಪಿಸಿದರು.

ಆಶ್ರಮ ದಾನ

ಶ್ರೀ ಗೋಕರ್ಣ ಮಠದ ಶ್ರೀಮತ್ ಕಮಲಾನಾಥ ಶ್ರೀ ಶ್ರೀಗಳವರು ಕಳೆದ ತಾ ೭ರಲ್ಲಿ ಗಂಗೊಳ್ಳಿಯ ಒಬ್ಬ ಯೋಗ್ಯ ವೈದಿಕ ಕುಲದ ವಟುವನ್ನು ತಮ್ಮ ಶಿಷ್ಯರನ್ನಾಗಿ ಸ್ವೀಕರಿಸಿದರು.

ವಾರ್ಷಿಕ ಮಹಾಸಭೆ

ದ. ಕ ಜಿಲ್ಲಾ ನೇಕಾರ ಮಜೂರರ ಸಂಘದ ವಾರ್ಷಿಕ ಮಹಾಸಭೆಯು ತಾ ೫ರಲ್ಲಿ ಶ್ರೀ ಕೆ ಕೇಶವ ಕಾಮತರ ಅಧ್ಯಕ್ಷತೆಯಲ್ಲಿ ಜರಗಿತು. ವಾರ್ಷಿಕ ವರದಿ, ಲೆಕ್ಕಪತ್ರಗಳನ್ನು ಓದಿ ಮಂಜೂರು ಮಾಡಿದ ನಂತರ ಮುಂದಿನ ವರ್ಷದ ಅಧ್ಯಕ್ಷರಾಗಿ ಶ್ರೀ ಕೆ ಕೇಶವಕಾಮತರನ್ನೂ ಕಾರ್ಯದರ್ಶಿಯರಾಗಿ ಶ್ರೀ ಸಿಂಸೋನ್ ಸೋನ್ಸರನ್ನೂ ಕೋಶಾಧಿಕಾರಿಗಳಾಗಿ ಶ್ರೀ. ಬಿ ವಾಸು ಇವರನ್ನೂ ಚುನಾಯಿಸಿದನಂತರ ಮಂಗಳೂರಿನ ಎಲ್ಲಾ ಮಜೂರ ಸಂಘಗಳು ಒಂದಾಗಿ ಮಜೂರ ಸಂಯುಕ್ತ ಕಮಿಟಿಯನ್ನು ಸ್ಥಾಪಿಸಬೇಕೆಂದೂ, ಶಂಕರನಾಡಿ ಪಡಿಲ್, ಕದ್ರಿ, ಮನ್ನಮಿ ಕಟ್ಟೆಗಳಲ್ಲಿ ಡಿವಿಜನ್ ಕಮಿಟಿಗಳನ್ನು ಸ್ಥಾಪಿಸಬೇಕಾಗಿಯೂ, ಮಜೂರರಿಗೆ ತುಟ್ಟಿ ಭತ್ತೆಯು ದೊರೆಯುವಂತೆ ವಸ್ತ್ರಾಲಕರ ಬಳಿಯೂ ಸರಕಾರದ ಬಳಿಯೂ ಕೇಳಿಕೊಳ್ಳಬೇಕೆಂದೂ ಠರಾವುಗಳು ಮಂಜೂರಾದುವು.

ಕೆನರಾ ಹೈಸ್ಕೂಲ್

ಕೆನರಾ ಹೈಸ್ಕೂಲಿನ ಶ್ರೀ ಕೃಷ್ಣಮಂದಿರ ದೇವಸ್ಥಾನದ ಶಂಕುಸ್ಥಾಪನೆ ಸಮಾರಂಭವು ತಾರೀಕು 8ನೇ ಶುಕ್ರವಾರ ಬೆಳಗ್ಗೆ 7–45ಕ್ಕೆ ಸುವಿಚಾರನಂದಸ್ವಾಮಿಯವರ ಅಧ್ಯಕ್ಷತೆಯಲ್ಲಿ ಜರುಗಿತು. ಅವರ ಶಂಕುಸ್ಥಾಪನೆಯಾದ ಮೇಲೆ ಶಾಲೆಯ ಮೇನೇಜರ್ ಎಮ್ ಮಾಧವರಾಯರು ಹಿಂದೂಶಾಲೆಗಳಲ್ಲಿ ಪ್ರಾರ್ಥನಾಮಂದಿರದ ಆಗತ್ಯವನ್ನೂ ಶಾಲಾಬಾಲಕರಿಗೆ ಧರ್ಮದ ಮೇಲೆ ಶ್ರದ್ಧೆಯನ್ನೂ ಹುಟ್ಟಿಸಲಿಕ್ಕೆ ಈ ದೇವಸ್ಥಾನವು ಹೇಗೆ ಸಹಾಯಕವಾಗುವುದೆಂಬುದನ್ನು ವಿವರಿಸಿ ಎಲ್ಲರೂ ಜಾತಿಭೇದವಿಲ್ಲದೆ ಹರಿಜನರು ಸಮೇತ ಈ ದೇವಸ್ಥಾನದಲ್ಲಿ ಪ್ರಾರ್ಥನೆ ಮಾಡಬಹುದೆಂದು ಇಂತಹ ದೇವಸ್ಥಾನವು ನಮ್ಮ ಜಿಲ್ಲೆಯಲ್ಲಿ ಪ್ರಥಮದಾಗಿರುವುದೆಂದು ಹೇಳಿ ಈ ದೇವಸ್ಥಾನವನ್ನು ಕಟ್ಟಿಸಲಿಕ್ಕೆ ಪೂರ್ಣ ಖರ್ಚನ್ನು ಕೊಡಲು ಒಪ್ಪಿದ ಶ್ರೀ ಮಿಜಾರ ಕೃಷ್ಣಪ್ಪೈ ಮತ್ತು ಸಹೋದರರಿಗೆ ಶಾಲಾಪರವಾಗಿ ಧನ್ಯವಾದಗಳನ್ನು ಅರ್ಪಿಸಿದರು.

ಕಾಸರಗೋಡು

ಶ್ರೀ। ದಿವಾಕರ ಮತ್ತು ಚನ್ನಬಸಪ್ಪ ಅವರ ಆಗಮನ

ತಾ. ೬ರಂದು ಸಂಜೆ ಶ್ರೀಯುತರು ದಿವಾಕರರೂ ಚನ್ನಬಸಪ್ಪ ಅಂಬಲಿಯವರು, ಕೆ ಆರ್. ಕಾರಂತ ಮೊದಲಾದವರೊಡಗೂಡಿ ಇಲ್ಲಿಗೆ ಬಂದರು. ಶ್ರೀ ಉಮೇಶರಾಯರು ಮತ್ತು ಇನ್ನಿತರರು ಶ್ರೀಯುತರನ್ನು ರೈಲ್ವೆನಿಲ್ದಾಣದಲ್ಲಿ ಎದುರುಗೊಂಡು ಸಂಜೆ ೬ಗೆ ಸರಿಯಾಗಿ ಇಲ್ಲಿಯ ಕೋಆಪರೇಟಿವ್ ಬೇಂಕಿನ ವಠಾರದಲ್ಲಿ ಒಂದು ಸಭೆ ಜರಗಿಸಿದರು. ಕೆ ಆರ್. ಕಾರಂತರು ಅಧ್ಯಕ್ಷತೆ ವಹಿಸಿದರು. ಕಾಂಗ್ರೆಸಿನ ಧೋರಣೆ ಮತ್ತು ನಮ್ಮ ಮುಂದಿನ ಕಾರ್ಯಕ್ರಮದ ಕುರಿತು ಮಾತನಾಡುತ್ತಾ ಶ್ರೀ ದಿವಾಕರರು 'ಸ್ವರಾಜ್ಯವು ನಮ್ಮ ಹಕ್ಕು, ಅದನ್ನು ನಾವು ಸ್ಥಾಪಿಸಬೇಕು ಪ್ರಜಾಪ್ರಭುತ್ವವು ಸರ್ವತ್ರ ವ್ಯಾಪಿಸಬೇಕು!' ಎಂದು ಹೇಳಿ ಅಲಹಾಬಾದಿನ ಕಾಂಗ್ರೆಸ್ ನಿರ್ಣಯವನ್ನು ವಿವರಿಸಿ ಹೇಳಿದರು. ಶ್ರೀ ಅಂಬಲಿಯರೂ ಮಾತನಾಡಿದರು.

ಕಾರ್ಕಳ

ಕಾಂಗ್ರೆಸ್ ಪ್ರಚಾರ

ಶ್ರೀ। ದಿವಾಕರ ಮತ್ತು ಶ್ರೀ। ಅಂಬಲಿಯವರು ತಾ. ೪ರ ದಿನ ಕಾರ್ಕಳಕ್ಕೆ ಬಂದು ಶ್ರೀ ಕೆ ಲಕ್ಷ್ಮಣ ಕುಡ್ವರ ಅಧ್ಯಕ್ಷತೆಯಲ್ಲಿ ಕೂಡಿದ ಸಾರ್ವಜನಿಕ ಸಭೆಯಲ್ಲಿ, ಶ್ರೀ. ವಕೀಲ ಡಿ. ವಿ. ಭಟ್ಟರು ಅರ್ಪಿಸಿದ ಕಾರ್ಕಳ ತಾಲೂಕು ಹಿಂದೀ ಪ್ರಚಾರ ಸಮಿತಿಯ ಮಾನ ಪತ್ರವನ್ನು ಸ್ವೀಕರಿಸುವುದರೊಂದಿಗೆ, ಶತ್ರುವನ್ನು ಅಹಿಂಸಾತ್ಮಕ ಅಸಹಕಾರದಿಂದ ವಿರೋಧಿಸಬೇಕೆಂದೂ ವಿಧಾಯಕ ಕಾರ್ಯಕ್ರಮವನ್ನು ಮುಂದೊತ್ತಬೇಕೆಂದೂ ಭಾಷಣವನ್ನು ಕೊಟ್ಟರು.

ಯುದ್ಧ ಪ್ರಚಾರ

ಸ್ಥಳೀಯ ಯುದ್ಧ ಸಹಾಯ ಸಮಿತಿಯ ಆಶ್ರಯದಲ್ಲಿ ತಾ ೫ರ ದಿನ ಶ್ರೀ ವಕೀಲ ಕೆ ಸದಾಶಿವ ಭಟ್ಟರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆಯು ಕೂಡಿ, ಜಿಲ್ಲಾ ಕಲೆಕ್ಟರ್ ಜ। ಯಂ ಕರಮತುಲ್ಲಾರವರು ಭಾಷಣ ಮಾಡುತ್ತ ಯುದ್ಧ ಪರಿಸ್ಥಿತಿಯನ್ನು ಚರ್ಚಿಸಿ, ಹಿಂಸೆಯನ್ನು ಹಿಂಸೆಯಿಂದಲೇ ತಡೆಯುವುದು ಸಾಧ್ಯ ಮತ್ತು ಸುಲಭವಾಗಿರುವುದರಿಂದ ಎಲ್ಲರೂ ಸರಕಾರದ ಯುದ್ಧ ಪ್ರಯತ್ನಗಳಲ್ಲಿ ಸಹಕರಿಸಬೇಕೆಂದರು. ಡಾಕ್ಟರ್ ಸಿ ರಾಮ ಕಾಮತರೂ ಅಧ್ಯಕ್ಷರೂ ಅವರನ್ನು ಸಮರ್ಥಿಸಿ ಮಾತನಾಡಿದರು. ಜನಾಬ್ ಯಚ್ ಯ್ಯಸ್ ಹುಸ್ಸೇನರು ಧನ್ಯವಾದಗಳನ್ನಿತ್ತರು.

ಧರ್ಮ ಪ್ರಚಾರ

ಇಲ್ಲಿಯ ಮಾರಿಜಾತ್ರೆಯು ತಾ ೫ರ ದಿನ ನಡೆಯಿತು. ಈ ಸಂಧರ್ಭದಲ್ಲಿ ಮಾರಿಗುಡಿಯಲ್ಲಾಗುವ ಹಿಂಸಾತ್ಮಕ ಪೂಜೆಯನ್ನು ನಿಲ್ಲಿಸಿ ಎಲ್ಲರೂ ಸಾತ್ವಿಕ ವೃತ್ತಿಯನ್ನು ಕೈಕೊಳ್ಳಬೇಕೆಂದು ಸ್ಥಳೀಯ ಆರ್ಯ ಸಮಾಜದವರೂ ಪ್ರಾಣಿಬಲಿ ನಿಷೇಧ ಸಮಿತಿಯವರೂ ಪ್ರಚಾರಕಾರ್ಯವನ್ನು ಕೈಕೊಂಡಿದ್ದರು.

ಉಡುಪಿ

ಭಾಷಣ — ದ ಕ ಜಿಲ್ಲೆಯ ಪ್ರಚಾರ ಕಾರ್ಯಕ್ರಮವನ್ನು ಕೈಕೊಂಡ ಶ್ರೀ ರಂಗನಾಥ ರಾಮಚಂದ್ರ ದಿವಾಕರ ಮತ್ತು ಶ್ರೀ ಚನಬಸಪ್ಪ ಅಂಬಲಿಯವರು ಇದೇ ತಾ ೨ರಂದು ಉಡುಪಿಗೆ ಚಿತ್ತೈಸಿ ಅಜ್ಜರ ಕಾಡು ಗಾಂಧಿ ಮೈದಾನಿನಲ್ಲಿ ಶ್ರೀ. ಪಿ ಎ ಪೈಗಳ ಅಧ್ಯಕ್ಷತೆಯಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ಶ್ರೀ ರಾಜಾಜಿಯವರ ಯೋಜನೆಯನ್ನು ನಿಷೇಧಿಸಿ, ಪಾಕಿಸ್ಥಾನ ಸಮಸ್ಯೆಯನ್ನು ಖಂಡಿಸಿದರು. ಕಳೆದ ಮಹಾಯುದ್ಧವನ್ನೂ ಈಗಣ ಯುದ್ಧಗಳನ್ನೂ ಗಣನೆಗೆ ತಂದು Total Warfare ಮತ್ತು Propaganda Warfare' ಎಂಬುದನ್ನು ವಿವರಿಸಿ, ಬ್ರೊಡ್‌ಕಾಸ್ಟಿಂಗ್ ಸ್ಟೇಶನ್‌ಗಳ ಮೂಲಕ ಹೇಗೆ ಬ್ರಿಟಿಷ್ ಸಾಮ್ರಾಜ್ಯವಾದಿ ಪ್ರಚಾರ ಕಾರ್ಯವು ಮುಂದುವರಿಸಲ್ಪಡುತ್ತಿದೆ ಎಂಬುದನ್ನು ಸ್ಪಷ್ಟಪಡಿಸಿದರು. ಕಾಂಗ್ರೆಸ್ ಸಂಸ್ಥೆಯು ಈ ತನಕ ಮಾನಸಿಕ ನೈತಿಕ ಆತ್ಮಿಕ ಶಸ್ತ್ರಗಳಿಂದ ಪ್ರಚಾರ ಕಾರ್ಯವನ್ನು ಮಾಡಿರುತ್ತದೆ. ಕರ್ನಾಟಕ ಪ್ರಾಂತದಲ್ಲೂ ದ್ವಿಗುಣಿತ ಉತ್ಸಾಹದಿಂದ ಕಾಂಗ್ರೆಸ್ ಪ್ರಚಾರ ಕಾರ್ಯವು ನಡೆಯಬೇಕಾಗಿದೆ. ಹಣದ ಅಭಾವ ತುಂಬಿದೆ. ಆದುದರಿಂದ ಮಹಾಜನರೆಲ್ಲರೂ ಉದಾರ ಹಸ್ತದಿಂದ ಧನಸಹಾಯ ಮಾಡಬೇಕು. ಎಲ್ಲರೂ ಕಾಂಗ್ರೆಸ್ ಸದಸ್ಯರಾಗಿ ಸೇರಿ ಕಾಂಗ್ರೆಸ್ ಸಂಸ್ಥೆಯನ್ನು ಬಲಪಡಿಸಲು ನೆರವಾಗಬೇಕಾಗಿಯೂ ವಿನಂತಿಸಿ ತಮ್ಮ ಭಾಷಣವನ್ನು ಮುಗಿಸಿದರು.

ಪ್ರಾಣ ಪ್ರತಿಷ್ಠಾ ಸಮಾರಂಭ

ಉಡುಪಿಯಿಂದ ಸಾಧಾರಣ ಎರಡೂವರೆ ಮೈಲು ಉತ್ತರದಲ್ಲಿರುವ ಪುತ್ತೂರಲ್ಲಿ ವೈಶ್ಯ ಸಮಾಜದ ಪರವಾಗಿ ಹೊಸತಾಗಿ ಕಟ್ಟಲ್ಪಟ್ಟ ದೇವಸ್ಥಾನದ ಪ್ರವೇಶ, ಗರ್ಭಗುಡಿಯಲ್ಲಿ ಶ್ರೀ ಲಕ್ಷ್ಮೀವೆಂಕಟೇಶ ದೇವರ ಪ್ರಾಣ ಪ್ರತಿಷ್ಠಾ ಸಮಾರಂಭಗಳು ಇದೇ ತಾ. ೭ರಂದು ಧಾರ್ಮಿಕ ಸಂಪ್ರದಾಯದಂತೆ ಜರಗಿದುವು.

ಶ್ರೀ. ಕಾಣೂರು ಮಠಕ್ಕೆ ಉತ್ತರಾಧಿಕಾರಿ

ಶ್ರೀ. ಕಾಣೂರು ಮಠದ ಶ್ರೀ. ವಿದ್ಯಾಸಮುದ್ರ ತೀರ್ಥ ಶ್ರೀ। ಪಾದಂಗಳವರು ತಮ್ಮ ಪೂರ್ವಾಶ್ರಮ ಸಹೋದರರಾದ ಶ್ರೀ। ಅನಂತಾಚಾರ್ಯ ದ್ವಿತೀಯ ಪುತ್ರ ಹನ್ನೆರಡು ವರುಷದ ಬಾಲ ಬ್ರಹ್ಮಚಾರಿಗೆ ಇದೇ ತಾ ೬ರಲ್ಲು ಬೆಳಗ್ಗೆ ಸುಲಗ್ನತಾ ಸಮುಹೂರ್ತದಲ್ಲಿ ಸನ್ಯಾಸಾಶ್ರಮ ದೀಕ್ಷೆಯನ್ನಿತ್ತು ತಮ್ಮ ಉತ್ತರಾಧಿಕಾರಿಯನ್ನಾಗಿ ನೇಮಿಸಿದರು.

ಶಂಕರನಾರಾಯಣ

ಸ್ಥಳೀಯ ಹಾ. ಎ ಶಾಲೆಯ ಹಳೆ ವಿದ್ಯಾರ್ಥಿಗಳ ಸಂಘವೊಂದು ಇತ್ತೀಚೆಗೆ ಶ್ರೀ। ಎಡೇರ ಆನಂದಸ್ವಾಯರ ಅಧ್ಯಕ್ಷತೆಯಲ್ಲಿ ಸ್ಥಾಪಿಸಲ್ಪಟ್ಟಿತು. ಸಂಘದ ಪ್ರಥಮ ವರ್ಧಂತಿ ಉತ್ಸವವು ತಾ ೧–೫–೪೨ರಲ್ಲಿ ಜನಾಬ್ ಶೇಕ್ ಉಮ್ಮರ್ ಸಾಹೇಬ್ ಇವರ ಅಧ್ಯಕ್ಷತೆಯಲ್ಲಿ ಬಹು ಯಶಸ್ವಿಯಾಗಿ ನೆರವೇರಿಸಲ್ಪಟ್ಟಿತು.

ಕರ್ನಾಟಕ

ಮೈಸೂರು ಮಹಾರಾಜರಿಗೆ ದ್ವಿತೀಯ ವಿವಾಹ

ಮೈಸೂರು ಮಹಾರಾಜರಾದ ಶ್ರೀ। ಜಯಚಾಮರಾಜ ಒಡೆಯರು, ತಾ ೬ರಂದು ಶ್ರೀಮತಿ ತ್ರಿಪುರ ಸುಂದರಮ್ಮಣ್ಣಿಯವರನ್ನು ವಿವಾಹವಾದರು. ಈಗಿನ ಪಟ್ಟದ ರಾಣಿಯವರು ಉತ್ತರ ಭಾರತಕ್ಕೆ ಪ್ರಯಾಣ ಬೆಳೆಸಿರುವರು.

ಕಾಂಗ್ರೆಸ್ ಮುಖಂಡರ ದಕ್ಷಿಣ ಕನ್ನಡ ಜಿಲ್ಲಾ ಪ್ರವಾಸ

೧೭ ಸ್ಥಳಗಳಲ್ಲಿ ೨೦ ಭಾಷಣಗಳು ೩೦೦೦ಕ್ಕೆ ಮೇಲ್ಪಟ್ಟ ನಿಧಿ ಸಂಗ್ರಹ

ಶ್ರೀಗಳಾದ ದಿವಾಕರ ರಂಗರಾಯರು, ಚನ್ನಬಸಪ್ಪ ಅಂಬಲಿ, ಕೋಟ ರಾಮಕೃಷ್ಣ ಕಾರಂತ ಎಂ ಎಲ್ ಎ ಮತ್ತು ಇತರ ಕಾಂಗ್ರೆಸ್ ಮುಂದಾಳುಗಳು ಈ ಜಿಲ್ಲೆಯ ದಕ್ಷಿಣ ಭಾಗದ ಹೊಸದುರ್ಗ, ಕಾಸರಗೋಡು, ಬದಿಯಡ್ಕ, ಪುತ್ತೂರು ಮತ್ತು ವಿಟ್ಲ ಈ ಸ್ಥಳಗಳನ್ನು ತಾ ೬, ೭ ಎರಡು ದಿನಗಳಲ್ಲಿ ಸಂಚರಿಸಿ ತಮ್ಮ ಕಾರ್ಯಕ್ರಮವನ್ನು ಮುಗಿಸಿ ಮರಳಿದರು. ಪ್ರತಿಯೊಂದು ಕಡೆಯಲ್ಲಿಯೂ ಯಶಸ್ವಿಯಾಗಿ ಸಭೆ ಜರುಗಿದ್ದು ಎ ಐ ಸಿ ಸಿ ಠರಾವನ್ನು ವಿವರಿಸಿ ಜನರಿಗೆ ಸ್ಪಷ್ಟವಾದ ಭಾಷೆಯಲ್ಲಿ ತಿಳಿಸಲಾಯಿತು. ಅಲ್ಲದೆ ರಚನಾತ್ಮಕ ಕಾರ್ಯಕ್ರಮವನ್ನು ವಿವರವಾಗಿ ಹೇಳಿ ರಾಜಾಜಿಯವರ ಧೋರಣೆಯನ್ನು ಸ್ವಹಸ್ತೋಕ್ತಿಗಳಲ್ಲಿ ಖಂಡಿಸಿ ಹೀಗೆ ಮಾಡುವದರಿಂದ ಕೇವಲ ದಾಸ್ಯ ಮನೋವೃತ್ತಿಯ ಸಹಕಾರವನ್ನು ವ್ಯಕ್ತಮಾಡಿದಂತಾಗುವದೆಂದು ತಿಳಿಸಿ ಹೇಳಲಾಯಿತು.

ವಿದ್ಯೆಯಲ್ಲಿ ಆಸಕ್ತಿಯುಳ್ಳವರು ಬೆಳಗಾವಿಯಲ್ಲಿ ಜರಗಲಿರುವ ಕರ್ನಾಟಕ ವಿಶ್ವವಿದ್ಯಾಲಯ ಪರಿಷತ್ತಿಗೆ ಬೆಂಬಲ ಕೊಡಬೇಕೆಂದು ಶ್ರೀ. ದಿವಾಕರರು ಈ ಸಭೆಗಳಲ್ಲಿ ಬಿನ್ನವಿಸಿಕೊಂಡರು.

ಒಟ್ಟು ಕಾಂಗ್ರೆಸ್ ಪ್ರಮುಖರು ಈ ಜಿಲ್ಲೆಯಲ್ಲಿ ೧೭ ಸ್ಥಳಗಳನ್ನು ಸಂದರ್ಶಿಸಿ ೨೦ ಭಾಷಣಗಳನ್ನು ಮಾಡಿದರು. ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿ ಹಾಗೂ ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ಒಟ್ಟು ೩೦೦೦ಕ್ಕೆ ಮೇಲ್ಪಟ್ಟು ರೂಪಾಯಿ ನಗದಿಯಾಗಿ ವಸೂಲಾಯಿತು.

ಸಣ್ಣ ಕಥೆಗಳ ಸಂಗ್ರಹ

ಪ್ರಕಾಶದ ಸಂಪಾದಕ ಮಂಡಳಿಯ ಸಭೆ ತಾ. 10ರಂದು ಬಿ ವಾಸುದೇವ ಬಾಳಿಗರ ಅಧ್ಯಕ್ಷತೆಯಲ್ಲಿ ಜರುಗಿ, ಒಂದು ಸಣ್ಣ ಕಥೆಗಳ ಸಂಗ್ರಹವನ್ನು ಪ್ರಕಟಿಸುವುದು ಎಂದು ನಿಶ್ಚಯಿಸಲಾಯಿತು. ವಿದ್ಯಾರ್ಥಿಗಳ ಪ್ರಯತ್ನಗಳಿಗೆ ಬೆಂಬಲವೀಯಲು, ಮಹಾಜನರಲ್ಲಿ ಪ್ರಕಾಶ ಸಂಪಾದಕ ಮಂಡಳಿಯ ನಮ್ರ ಕೋರಿಕೆಯಿದೆ.

ಸಿನೆಮಾ ಪುಟ

ಸಿಕಂದರ್

ಮಿಲಿಯು ರೂಪಾಯಿಗಳ ಚಿತ್ರರತ್ನ!

1939ರಲ್ಲಿ 'ಪುಕಾರ್' ಚಿತ್ರದಂತಹ ಭವ್ಯ ಸುಂದರ ಚಿತ್ರವನ್ನು ನಿರ್ಮಿಸಿದ ಬಳಿಕ ಸೊಹ್ರಾಬ್ ಮೋದಿಯವರು ಇನ್ನೊಂದು ಇತಿಹಾಸೋಜ್ವಲ ಚಿತ್ರ ತಯಾರಿಸುವ ಸಿದ್ಧತೆಗೆ ತೊಡಗಿದರು, ಪುಕಾರಿಗಿಂತಲೂ ಈ ಚಿತ್ರವನ್ನು ಪ್ರಸಿದ್ಧವೂ, ಪರಿಪೂರ್ಣವೂ, ಪ್ರಶಸ್ತವೂ ಮಾಡಬಯಸಿದರು. ಭಾರತೇತಿಹಾಸದಲ್ಲಿ ಪ್ರಸಿದ್ಧ ವೀರನಾದ ಪುರೂರವನು, ಲೋಕವಿಜಯಾಕಾಂಕ್ಷಿ ಗ್ರೀಕ್ ವೀರ ಅಲೆಕ್ಸಾಂಡರನನ್ನು ಪ್ರತಿಭಟಿಸಿದ ಇತಿಹಾಸ ಪ್ರಸಿದ್ಧ ಕಥೆಯನ್ನು ಆಧರಿಸಿ ಸಿಕಂದರ್ ಚಿತ್ರವನ್ನು ನಿರ್ಮಿಸಿದರು

ಈ ಚಿತ್ರವನ್ನು ತಯಾರಿಸಲು ಭಾರತ, ಗ್ರೀಸ್, ಇರಾನ್ ಈ ಮೂರು ದೇಶಗಳ ಐತಿಹಾಸಿಕ ಸಂಶೋಧನೆ ಅವಶ್ಯವಾಯಿತು, ಅಂದಿನ ವೈಭವ, ಅಂದಿನ ಜನಜೀವನಗಳ ಯಥಾಚಿತ್ರವನ್ನು ಚಿತ್ರಿಸಬೇಕಾದರೆ ಮಿಲಿಯಾಂತರ ರೂಪಾಯಿಗಳ ವ್ಯಯ, ಅಪರಿಮಿತ ಪರಿಶ್ರಮಗಳು ಬೇಕಾ

('ಸಿಕಂದರ್' ಚಿತ್ರದಲ್ಲಿ ಸೋಹ್ರಾಬ್ ಮೋದಿ)

ದುವು, ವಿಚಾರವಂತರ ಸಲಹೆ ಕೇಳಬೇಕಾಯಿತು ಹಾಗಿದ್ದರೂ ಅವೆಲ್ಲವನ್ನೂ ಅಳವಡಿಸಿ ಸೋಹ್ರಾಬ್ ಮೋದಿಯವರು 'ಸಿಕಂದರ್' ಚಿತ್ರವನ್ನು ಭವ್ಯ ಭಾಸುರವಾಗಿ ನಿರ್ಮಿಸಿದರು 'ಸಿಕಂದರ್'ದಂಥಾ ಐತಿಹಾಸಿಕ ಚಿತ್ರದಲ್ಲಿ ನಟಿಸಲು ಅವರು ಅಂಥಾ ಧೀಮಂತ ಪ್ರತಿಭಾಸ್ಪಿತ, ರೂಪ ಗುಣ ಗೌರವಾನ್ವಿತ ನಟನಟಿಯರನ್ನೇ ಆರಿಸಿದರು. ಪೃಥ್ವೀರಾಜನಂತಹ ಗಂಭೀರ ಪ್ರಕೃತಿಯ ನಟನು ಸಿಕಂದರನಾಗಿ, ವನಮಾಲಳಂತಹ ಸುಂದರಿ ಸುಶಿಕ್ಷಿತಳಾದ ನಟಿ ರುಕ್ಸಾನಳಾಗಿ ಸೋಹ್ರಾಬ್ ಮೋದಿಯವರೇ ಪುರೂರವರಾಗಿ ಇದರಲ್ಲಿ ನಟಿಸಿ ಚಿತ್ರದ ಕೀರ್ತಿಯನ್ನು ನಾಲ್ಕು ದಿಕ್ಕುಗಳಲ್ಲಿಯೂ ಹಬ್ಬುವಂತೆ ಮಾಡಿದರು.

'ಖಿಲೌನಾ'ದಲ್ಲಿ ಸ್ನೇಹಪ್ರಭಾ

ಅಮರ ಪಿಕ್ಚರ್ಸಿನವರ ಯಶಸ್ವೀ ಚಿತ್ರ 'ಖಿಲೌನಾ'ದಲ್ಲಿ ಸ್ನೇಹಪ್ರಭಾ ಅತ್ಯುಜ್ವಲವಾಗಿ ನಟಿಸುತ್ತಾಳೆ. ಪುನರ್ಮಿಲನವನ್ನು ಕಂಡವರು ಆಕೆಯ ನಟನೆ, ಸಂಗೀತ ಸೌಂದರ್ಯಗಳಿಗೆ ಮುಗ್ಧರಾಗಿರುವರಷ್ಟೆ? ಈ ಹೊಸ ಚಿತ್ರದಲ್ಲಿ ಸ್ನೇಹಪ್ರಭಾ ಇಮ್ಮಡಿ ಬೆಳಗಿರುವಳು. ಹೆಸರಾಂತ ಕನ್ನಡಿಗರಾದ ಸರ್ವೋತ್ತಮ ಬಾದಾಮಿಯರು ಇದರ ನಿರ್ದೇಶಕರು, ವಿಜಯ ಕೋಟಿಕರ ಕಥಾಲೇಖನ, ರಾಮಶಂಕರ ಚೌಧರಿಯವರ ಸಂಭಾಷಣಾ ವ್ಯವಸ್ಥಾಪಕರು, ಪಂಡಿತ ಇಂದ್ರರ ಹಾಡುಗಳು, ಪ್ರೇಮ್‌ಚಂದ್ ಪ್ರಕಾಶಕರು, ಸಂಗೀತಕ್ಕೆ. ದ್ರೋಣಾಚಾರ್ಯರ ಫೊಟೋಗ್ರಫಿ ಥಾಕೂರ್‌ಭಾಯಿ ಪಟೇಲರು ಧ್ವನಿ ನಿರ್ದೇಶಕರು, ಇದರಿಂದೆಲ್ಲಾ ಸ್ನೇಹಪ್ರಭಾ 'ಖಿಲೌನಾ'ದಲ್ಲಿ ಇಮ್ಮಡಿ ಕೀರ್ತಿ ಪಡೆದಳು! ಜಯರಾಜ್, ಕನ್ಹೇಲಾಲ್ ಮೊದಲಾದವರು ಸಹನಟವರ್ಗದವರು.

ಕಿಶೋರಸಾಹುವಿನ ಅಲ್ಪ ಪರಿಚಯ

ನಾಗಪುರದಲ್ಲಿ ಒಮ್ಮೆ ಒಬ್ಬ ನಟನನ್ನು ಗೌರವಿಸಲು ಒಂದು ಕೂಟ ನೆರೆಯಿತು. ಬಂಗಾರದ ಪದಕವನ್ನು ಬಗ್ಗಿದ ಆ ನಟನ ಮೈಗೆ ಒಬ್ಬ ಎಳೆ ಬಾಲಕನು ತೊಡಿಸಿದನು! ನಟ ಶಿರೋಮಣಿಯ ಗಂಭೀರ ಪ್ರಕೃತಿ, ಗೌರವ ಜೀವನಗಳನ್ನು ಎಣಿಸಿ ಆ ಬಾಲಕನು ಮುಗ್ಧನಾಗಿರಬೇಕು!

ಆ ಬಾಲಕನು ಬೇರಾರೂ ಅಲ್ಲ; ಕಿಶೋರ ಸಾಹು, ಆ ನಟನು ಸೊಹ್ರಾಬ್‌ಮೋದಿ, ಅಂದಿನ ನಾಟಕ 'ಹೇಮ್ಲೆಟ್'. ಶೇಕ್ಸ್‌ಪಿಯರ್ ನಟನಾಗಿ ಸೋಹ್ರಾಬ್‌ಮೋದಿ ಪ್ರಸಿದ್ಧನಾದ ದಿನಗಳವು ಅಂದಿನಿಂದ ಕಿಶೋರಸಾಹು ನಟಶಿರೋಮಣಿಯಾಗಬೇಕೆಂದು ಬಯಸಿದ ಕಿಶೋರ್ ಸಾಹು ನಾಗಪುರದ ಮೋರಿಸ್ ಕಾಲೇಜಿನಲ್ಲಿ ಕಲಿಯುತ್ತಿರುವಾಗ ಶಾಲಾ ವರ್ಧಂತಿಗಳಲ್ಲಿ ಹಲವು ನಾಟಕಗಳಲ್ಲಿ ಪಾತ್ರವಹಿಸಿ ಪ್ರಸಿದ್ಧನಾಗಿದ್ದನು.

ಮುಂದೆ ಬೊಂಬೇ ಟಾಕೀಸಿನ ಹಿಮಾಂಶುರೈಗಳ ಪರಿಚಯವಾಯಿತು 'ಜೀವನ ಪ್ರಭಾತ'ದಲ್ಲಿ ಸಾಹು ದೇವಿಕಾರಾಣಿಯೊಡಗೂಡಿ ನಟಿಸಿದ್ದನು. 'ಪುನರ್ಮಿಳನ'ವು ಕಿಶೋರಸಾಹುವಿನ ಪ್ರಸಿದ್ಧಿಯನ್ನು ಹೆಚ್ಚಿಸಿತು ಸ್ನೇಹಪ್ರಭಾಳೊಡನೆ ಸಾಹು ಮನಮೆಚ್ಚಿ ನಟಿಸಿದನು!

ಇಂದು ಕಿಶೋರ್‌ಸಾಹು ಆಚಾರ್ಯ ಪ್ರೊಡಕ್ಷನಿನ 'ಬ್ರಹ್ಮಚಾರಿ ಪಿತಾ'ದಲ್ಲಿ ನಾಯಕನಾಗಿದ್ದಾನೆ ಸಾಹು ಹಿಂದೀ ಭಾಷೆಯಲ್ಲಿ ಕಥೆ, ಕವಿತೆ, ಲೇಖನಗಳನ್ನು ಬರೆಯುತ್ತಾನೆ ವಿದ್ಯಾರ್ಥಿ ಲೋಕದಲ್ಲಿ ಅವನು ಬಹು ಪ್ರಖ್ಯಾತನು ಕಿಶೋರಸಾಹುವಿನೊಡನೆ ಸ್ನೇಹಪ್ರಭಾಳ ಪ್ರೇಮ ವಿವಾಹ ನಡೆದಿತ್ತು. ಈಗ ಪತಿಪತ್ನಿಯರು ಕೂಡಿ ಬಾಳುವುದಿಲ್ಲವೆಂದು ಒಂದು ದಟ್ಟವಾದ ಸುದ್ದಿ ಇದೆ

ಯಾರ್ಯಾರು ಏನೇನು ಮಾಡುತ್ತಾರೆ?

ಮೋತಿಲಾಲ್ ಈಗ ಮಿನೆರ್ವಾದಲ್ಲಿದ್ದಾನೆ. ಸಬಿತಾದೇವಿಯೂ ಅಲ್ಲಿಗೆ ಬಂದಿರುವಳು ಸರ್ವೋತ್ತಮ ಬಾದಾಮಿಯನ್ನೂ ಅಲ್ಲಿ ನೇಮಿಸಿದ್ದಾರಂತೆ ತಿರುಗಿ ಈ ಮೂವರೂ ಈಗ ಜತೆ ಸೇರಿದ್ದಾರೆ

ಚಂದುಲಾಲ ಶಾ ರು ಮೋತೀಲಾಲನನ್ನು ಕಳೆಕೊಂಡರೆ ಸೈಗಲ್‌ನನ್ನು ಆಮಂತ್ರಿಸಿರುವುದಾಗಿ ತಿಳಿದಿದೆ ಇಷ್ಟರಲ್ಲೇ ಸೈಗಲ್ ಬಾಂಬೇಗೆ ಬಂದಿದ್ದರೂ ಇರಬಹುದು

ಸೈಗಲ್ ಎಂದೊಡನೇ ಪಹಾರೀ ನೆನಪಾಗುತ್ತದೆ ಸಹಾರಿ ಚಿತ್ರಾ ಪ್ರೊಡಕ್ಷನಿನ 'ನಮ್ಮನಮ್ಮೊಳಗೆ' ಈ ಚಿತ್ರದಲ್ಲಿ ನಟಿಸುವನೆಂದು ತಿಳಿದಿದೆ ಸೈಗಲ್, ಪಹಾರೀ, ಲೀಲಾ ಇವರ ಹೆಸರು ಕೇಳಿದರೆ ನಮಗೆ ಸಂಗೀತದ ನೆನಪಾಗುವುದು. ನೇಶನಲ್ಸ್ ಮೋಟೇ ಚಿತ್ರದಲ್ಲಿ ಗಾಯಕಿ ಜಬ್ಬಾರಿ ಫೈಜಾಬಾದಿ ಕೆಲವು ಸುಂದರ ಹಾಡು ಹಾಡುತ್ತಾಳೆ.

'ಭರತ್ ಮಿ ಲಾಪ್' ಈಗ ಜನಪ್ರಿಯವಾಗುತ್ತಿದೆಯಷ್ಟೆ? ಪ್ರಕಾಶ ಚಿತ್ರದವರು ಮುಂದೆ 'ಲವಕುಶ' ಎಂಬ ಪೌರಾಣಿಕ ಕಥೆಯನ್ನು ತಯಾರಿಸುವುದರಲ್ಲಿದ್ದಾರೆ ಪ್ರಕಾಶ ಚಿತ್ರ ಕಂಪೆನಿಯವರಿಗೆ ರಾಮದೇವರಲ್ಲಿ ಬಹಳ ಭಕ್ತಿಯೇನೋ!

ಕಿಶೋರ್‌ಸಾಹು 'ಬ್ರಹ್ಮಚಾರಿ ಪಿತಾ' ಅಗಿರಲು ಬಹಳ ಇಷ್ಟಪಡುತ್ತಾನೆ ಈ ಚಿತ್ರವನ್ನು ಬಹಳ ಯಶಸ್ವಿಯಾಗಿ ಮಾಡಬೇಕೆಂದು ಪ್ರತಿಮಾ ದಾಸಗುಪ್ತಳ ಬೆನ್ನುಹಿಡಿದಿದ್ದಾನೆ. ಆಚಾರ್ಯ ಚಿತ್ರ ಕಂಪನಿಯ ಮುಂದಿನ ಚಿತ್ರ 'ಉಲ್ಝನ್' ಎಂಬುದು.

ಜಗದೀಶ ಶೇಟ ಈಗ ಒಂಭತ್ತು ಕಂಪನಿಗಳಲ್ಲಿ ಕಂಟ್ರಾಕ್ಟ್ ಮಾಡಿಕೊಂಡಿರುವನಂತೆ!

ಪ್ರತಿಯೋರ್ವ ನಟಿಯೂ ತನ್ನದೇ ಆ ಹೊಸ ಕಂಪನಿಯನ್ನು ತೆರೆಯುವ ಆಲೋಚನೆ ಮಾಡಿರುವಂತಿದೆ. ಖುರ್ಶಿದ್ ಪಂಜಾಬಿ ಚಿತ್ರಗಳನ್ನು ತಯಾರಿಸುವ ಕಂಪನಿ ಪ್ರಾರಂಭಿಸಲು ಚಂದುಲಾಲರ ಸಹಾಯ ಪಡೆದಿರುವಳಂತೆ. ಕುಮಾರ್, ಚಂದ್ರಮೋಹನ್, ಪ್ರಮಿಳಾ ಇವರೂ ಒಂದು ಕಂಪೆನಿ ಸುರುಮಾಡಿ ದಾಬಿಳಾರಿಂದ ಒಂದು ಸಾವಿರ ರೂಪಾಯಿ ಕೊಟ್ಟು ಕಥೆಯೊಂದನ್ನು ಕೊಂಡುಕೊಂಡಿರುವರಂತೆ.

ಶಾಲಿಮಾರ್ ಪಿಕ್ಚರ್ಸಿನವರು ಪೃಥ್ವೀರಾಜ್, ಮೀನಾಕ್ಷಿಯವರುಳ್ಳ 'ವಿಕ್ರಾಂತ್' ತಯಾರಿಸಿದ ಮೇಲೆ ಈಗ 'ಮಾನ್ ಕೀ ಜೀತ್' ಎಂಬ ಹೊಸ ಚಿತ್ರವನ್ನು ಪ್ರಾರಂಭಿಸುವರೆಂದು ಸುದ್ದಿ. ಲಿಮ್ ಬಿಲ್ಲಿಮೋರಿಯರು 'ಭಕ್ತ-ಕಬೀರ'ವು ಬೇಗನೇ ಪ್ರದರ್ಶಿತವಾಗಲಿದೆ.

ನ್ಯೂ ಹಂಸ ಪಿಕ್ಚರ್ಸಿನವರ 'ಶಹಿಲಾ ಪಲ್ಲಾ'ದ ಬಳಿಕ ಇಂದು 'ಭಕ್ತ ದಾಮಾಜಿ' ಎಂಬ ಚಿತ್ರವು ತಯಾರಾಗುತ್ತಿದೆ. ಇದು ಪೌರಾಣಿಕ ಚಿತ್ರ.

ನಾವೆಲ್ಲವರೂ ಅದನ್ನು
ಉಪಯೋಗಿಸುತ್ತಿದ್ದೇವೆ!

ಅಜ್ಜಿಯಿಂದ ಹಿಡಿದು ಸಣ್ಣ ಮಗುವಿನ ತನಕ ಕುಟುಂಬದ ಸಮಸ್ತರಿಗೂ ತಮ್ಮ ಮೈಯ ಚರ್ಮವನ್ನು ಅಂದವಾಗಿರಿಸಲು ಕುಟಿಕೂರಾ ಟಾಲ್ಕಮ್ ಪೌಡರು (Cuticura Talcum Powder) ಅಗತ್ಯವಾಗಿದೆ ಕುಟಿಕೂರಾ ಟಾಲ್ಕಮ್ (Cuticura Talcum) ಚರ್ಮವನ್ನು ತಂಪಾಗಿರಿಸಿ ಮನಸ್ಸಿಗೆ ಆಹ್ಲಾದವನ್ನುಂಟುಮಾಡುತ್ತದೆ ಇದಕ್ಕೆ ಇದರ ಔಷಧಿಯುಕ್ತವಾದ ಗುಣವೇ ಕಾರಣವಾಗಿರುತ್ತದೆ ಮೈಗೆ ತುರಿಗಜ್ಜಿಗಳುಂಟಾದಲ್ಲಿ ಇದು ಕೂಡಲೇ ಗುಣಪಡಿಸಿ ತಂಪಾಗಿರಿಸುತ್ತದೆ ಮಾತ್ರವಲ್ಲದೆ ಬೆವರನ್ನು ಹೀರುವ ಗುಣವುಳ್ಳದ್ದಾಗಿರುತ್ತದೆ. ಸಣ್ಣ ಮಕ್ಕಳಿಗೆ ಇದರಲ್ಲಿ ಉತ್ತಮ ಗುಣವನ್ನು ಕಂಡ ಡಾಕ್ಟರರು ಇದನೆ ಶಿಫಾರಸು ಮಾಡುತ್ತಾರೆ ಕುಟಿಕೂರಾ ಪೌಡರಿನ (Cuticura Talcum) ಸುಗಂಧಪೂರಿತ ಪರಿಮಳವು ಅನೇಕ ಗಂಟೆಗಳ ತನಕ ಬಾಳುವುದು

ನಿಮ್ಮ ಅನುನಿತ್ಯದ ಉಪಯೋಗಕ್ಕೆ ಇದು ಎಷ್ಟು ಪ್ರಯೋಜನಕಾರಿಯೆಂದು ಕಂಡುಕೊಳ್ಳಿರಿ ಇಂದೇ ಒಂದು ಟಿನ್ನನ್ನು ಕೊಂಡುಕೊಳ್ಳಿರಿ ಮುಖಕ್ಷೌರದ ನಂತರ ಕುಟಿಕೂರಾ ಟಾಲ್ಕಮ್ (Cuticura Talcum) ಬಹಳ ಹರ್ಷದಾಯಕವಾದುದು

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರಿನಲ್ಲಿಯೂ ಮಾರಲ್ಪಡುತ್ತದೆ

ಕುಟಿಕೂರಾ ಟಾಲ್ಕಮ್ ಪೌಡರ್

CUTICURA TALCUM POWDER

The Canara Banking Corporation Ltd.

(Incorporated in British India with limited liability

Estd 1906.

OUR RATES OF INTEREST ON DEPOSITS

Current		1%	p. a.
Savings Bank		2½%	,,
Short-term		1½%	,,
FIXED FOR 3 MONTHS		2%	,,
6	,,	2¼%	,,
9	,,	2½%	,,
12	,,	3%	,,
24	,,	3½%	,,

Advances made at cheap rates of interest against approved securities and Banking business of every description transacted.

ಸ್ವದೇಶಾಭಿಮಾನಿಯಲ್ಲಿ
ನಿಮ್ಮ ಜಾಹೀರಾತುಗಳನ್ನು ಕೊಡಿರಿ

ವಿಚಿತ್ರ ಪ್ರಪಂಚ

೪೦ ವರ್ಷದ ಶಿಶು!

ಬೆಲ್‌ಗ್ರೇಡಿನಲ್ಲಿ ಒಂದು ವಿಚಿತ್ರ ಶಿಶುವಿದೆ. ಇನ್ನೂ ತೊಟ್ಟಿಲಲ್ಲೇ ಮಲಗಿ ಜೋಗುಳ ಕೇಳುತ್ತಿರುವಾ ಶಿಶುವಿಗೆ ನಲ್ವತ್ತು ವರ್ಷ ಪ್ರಾಯ ತುಂಬಿತು!

ಹುಟ್ಟುವಾಗ ಆ ಮಗುವು ಎಲ್ಲಾ ಮಕ್ಕಳಂತೆಯೇ ಇತ್ತು. ಸರಿಯಾದ ಬೆಳವಣಿಗೆಗಳೆಲ್ಲಾ ಇದುವು. ಕೆಲವು ತಿಂಗಳಲ್ಲಿ ಆ ಮಗುವು ಒಮ್ಮೆ ತೊಟ್ಟಿಲಿನಿಂದ ಕೆಳಗೆ ಬಿತ್ತು. ಆ ಮೇಲೆ ಶಿಶುವಿನ ಶರೀರ ಮನಸ್ಸುಗಳ ಬೆಳವಣಿಗೆ ನಿಂತುಹೋಯಿತು!

ಈಗಲೂ ಶಿಶುವಿನ ಎತ್ತರ ೩ ಅಡಿ. ಮಾತ್ರನಾಡಲು ಇನ್ನೂ ಆಗುವುದಿಲ್ಲ. ಕೇಳುವ ಶಕ್ತಿ ಬಹಳ ಕಡಿಮೆ. ಶೈಶವಾವಸ್ಥೆಯನ್ನು ನಲ್ವತ್ತು ವರ್ಷ ಪ್ರಾಯವಾದ ಮೇಲೂ ಆ ಶಿಶು ಮೀರಿಲ್ಲ

೧೦ ವರ್ಷ ಸಮಾಧಿಯಲ್ಲಿದ್ದಳು-

ಢಾಕಾದ ಮುದುಕಿಯೊಬ್ಬಳ ಜೀವನ

ಹಿಂದುಸ್ಥಾನ್ ಸ್ಟೇಂಡರ್ಡ್ ಪತ್ರಿಕೆಯಲ್ಲಿ ಢಾಕಾದ ಪ್ರೊ॥ ಎಸ್. ಎನ್. ರಾಯ್‌ಯವರು ವೃದ್ಧಳೊಬ್ಬಳ ವಿಚಿತ್ರಜೀವನದ ಕುರಿತು ಒಂದು ಲೇಖನ ಬರೆದಿರುವರು. ಢಾಕಾ ಜಿಲ್ಲೆಯ ಸೋನಾಗಾವ ಹಳ್ಳಿಯಲ್ಲಿ ೭೦ ವರ್ಷ ಪ್ರಾಯದ ಒಬ್ಬ ವೃದ್ಧೆ ಇರುವಳು. ಆಕೆಯ ಜೀವನ ವಿಜ್ಞಾನ ಶೋಧನೆಗೂ ಮೀರಿದ ಅದ್ಭುತವಾಗಿರುವುದೆಂದು ಅವರ ಅಭಿಪ್ರಾಯ

ಬಾಲ್ಯದಿಂದಲೇ ಆಕೆಗೆ ಪ್ರಾಪಂಚಿಕ ಸುಖದ ಆಶೆ ತಪ್ಪಿಹೋಗಿ, ಪಾರಮಾರ್ಥಿಕದ ಕಡೆಗೆ ಮನವೊಲಿದಿತ್ತು. ಮದುವೆಯಾಗಿ ಗಂಡನ ಮನೆಗೆ ಹೋದರೂ ಅಲ್ಲಿ ಆಕೆ ದಾಂಪತ್ಯ ಸುಖವನ್ನು ಬಯಸದೆ ಬೂದಿಮಣ್ಣು ಸಗಣಿ ಇವುಗಳನ್ನು ತಿಂದು ಜೀವನಶಾಂತಿ ಪಡೆದುಕೊಳ್ಳುತ್ತಿದ್ದಳು. ಹೊಟ್ಟೆಗೆ ಊಟ, ರೋಗಕ್ಕೆ ಔಷಧಗಳನ್ನು ಕೊಟ್ಟರೂ ನಮ್ಮ ದೇಹ ಯಾಕೆ ಚಿರಕಾಲ ಉಳಿಯಲಾರದೆಂಬುದು ಆಕೆಗೆ ಬಿಡಿಸಲಾಗದ ಸಮಸ್ಯೆಯಾಗಿತ್ತು. ಬೇಕಾದಷ್ಟು ದಿವಸ ಬದುಕಲಾರೆವಾದರೆ, ಊಟವೇಕೆ, ಔಷಧವೇಕೆ ಎಂದು ಆಕೆ ಪ್ರಶ್ನಿಸುತ್ತಿದ್ದಳು. ಅವಳನ್ನು ಯಾರು ಸಮಾಧಾನ ಪಡಿಸಬಲ್ಲರು?

ಹೀಗಿರಲು, ಒಬ್ಬ ವೃದ್ಧ ಸನ್ಯಾಸಿ ಅನಿರೀಕ್ಷಿತವಾಗಿ ಅಲ್ಲಿಗೆ ಬಂದನು. ಆತನು ಆಕೆಗೆ ಗುರುವಾದನು. ಅಂದಿನಿಂದ ಅವಳು ಒಂದು ಸಣ್ಣ ಗುಹೆಯಂಥಾ ಗುಡಿಸಲನ್ನು ಕಟ್ಟಿ ಅಲ್ಲಿ ಸಾಧನೆ ಆರಂಭಿಸಿದಳು. ಮೊದಲು ೨೨ ದಿನ ಸಮಾಧಿಸ್ಥಳಾಗಿದ್ದಳು. ಆಗ ಅವಳಿಗೆ ೨೪ ವರ್ಷ ಪ್ರಾಯವಾಗಿತ್ತು. ಎರಡನೆ ಸಲ ೬ ತಿಂಗಳ ಕಾಲ ಸಮಾಧಿಯಲ್ಲಿದ್ದಳು. ಮೂರನೇ ಸಲ (ಅದೇ ಕೊನೆಯದು) ಸಮಾಧಿಯಿಂದ ಎಚ್ಚತ್ತಾಗ ೧೦ ತಿಂಗಳು ಕಳೆದಿತ್ತು! ಹತ್ತು ತಿಂಗಳ ಸಮಾಧಿಯಿಂದೆದ್ದು ಬಂದಾಗ ಅವಳ ದೇಹವೆಲ್ಲವೂ ದೇವಲೋಕದಿಂದಿಳಿದು ಬಂದವರಂತೆ ಶೋಭಿಸುತ್ತಿತ್ತು! ಅಂದಿನಿಂದ ಸಾವಿರಾರು ಜನರ ಜೀವದ ದುಃಖಗಳನ್ನು ತೊಲಗಿಸುವುದರಲ್ಲಿ ಮಗ್ನಳಾಗಿದ್ದಾಳೆ.

ಅಕ್ಷರಾಭ್ಯಾಸವಿಲ್ಲದವಳಾದರೂ ಆಕೆ ಅಂತರ್ರಾಷ್ಟ್ರೀಯ ರಾಜಕಾರಣ, ಸಾಮಾನ್ಯ ವಿಜ್ಞಾನ ವೇದಾಂತಗಳನ್ನು ಬಹು ಸುಲಭ ತಿಳಕೊಳ್ಳಬಲ್ಲಳು. ಬಹಳ ವೃದ್ಧಳಾಗಿದ್ದರೂ ಸೋಮಾರಿಯಾಗಿರುವುದಿಲ್ಲ. ಅಡಿಗೆಯನ್ನು ತಾನೇ ಮಾಡಿಕೊಳ್ಳುತ್ತಾಳೆ. ಯಾವ ರೋಗ ಬಂದರೂ ಔಷಧ ತೆಕ್ಕೊಳ್ಳುವುದಿಲ್ಲ. ವೈದ್ಯರಿಗೂ ವಿಜ್ಞಾನಿಗಳಿಗೂ ಅವಳ ಜೀವನದ ರೀತಿ ತಿಳಿಯಲಾರದು!

ವಿಜ್ಞಾನಯುಗ

ಆಶ್ರಯ-ನಗರ

ಚೀನದಲ್ಲಿ, ಹೋಂಕೋಂಗಿನಿಂದ ೩೦೦ ಮೈಲು ದೂರವಿರುವ ಕ್ವೆಲಿನ್ ಎಂಬ ನಗರದ ಸಮೀಪದಲ್ಲಿರುವ ಒಂದು ಗುಹೆಯಲ್ಲಿ ಆ ನಗರದ ಸಂಪೂರ್ಣ ಜನರೂ ಹೋಗಿ ವಾಸ ಮಾಡುತ್ತಾರೆ; ಅಷ್ಟು ದೊಡ್ಡದಾಗಿ, ಪ್ರಾಕೃತಿಕವಾಗಿದೆ ಆ ಆಶ್ರಯ ಗುಹೆ; ಅಲ್ಲಿ ಚೀನಿಯರು ಯುದ್ಧಕಾಲದ ನಗರವೊಂದನ್ನೇ ಸೃಷ್ಟಿಸಬಹುದು; ಜಪಾನರ ಬಾಂಬು ಬೀಳುವಾಗ ಅವರು ಆ ಗುಹೆಯೊಳಗೆ ಹೋಗಿ ಅಡಗಿಕೊಳ್ಳುತ್ತಾರೆ.

ಹೊಟ್ಟೆಯ ಫೋಟೋ ತೆಗೆಯುವ ಹೊಸ ಯಂತ್ರ

ಸ್ಟಿರೋಸ್ಕೋಪಿಕ್ ಫೋಟೋಗಳನ್ನು, ಹೊಟ್ಟೆಯ ಅನಾರೋಗ್ಯ ಪರೀಕ್ಷೆಗಾಗಿ, ಒಂದು ಸಿಗರೇಟಿಗಿಂತ ಸ್ವಲ್ಪ ದೊಡ್ಡದಾದೊಂದು ಯಂತ್ರದ ಮೂಲಕ ತೆಗೆಯುವ ಹೊಸ ಒಂದು ಯಂತ್ರವು ಈಗ ಸಿದ್ಧವಾಗಿದೆ. ಇದರಿಂದ ಒಂದು ಮಿನಿಟಿನಲ್ಲಿ ೧೬ ಚಿತ್ರಗಳನ್ನು ತೆಗೆಯಬಹುದು; ಮೊದಲು ತೆಗೆದ ಚಿತ್ರ ಸಣ್ಣದಿರುವುದು, ಮತ್ತೆ ಅದನ್ನು ವಿಸ್ತರಿಸಬಹುದಾಗಿದೆ. ವಿಸ್ತರಿಸಿದಾಗ ಚಿತ್ರವು ಸ್ಪಷ್ಟವಾಗಿ ಕಾಣುತ್ತದೆ.

ನೀವೀಗ ಮಾಡುತ್ತಿರುವುದೇನು?

ನೀವು ಈಗ ಓದುತ್ತೀರಿ. ನಿಮ್ಮ ಕಣ್ಣು ಒಂದು ಸ್ಥಳದಲ್ಲಿ ಒಂದು ಸೆಕುಂಡದ ಐದನೆಯ ಒಂದಂಶದಷ್ಟು ಕಾಲ ನಿಲ್ಲುತ್ತದೆ. ಆ ಸಮಯದಲ್ಲಿ ನೀವು ೯ ಅಥವಾ ೧೦ ಅಕ್ಷರಗಳನ್ನು ಓದುತ್ತೀರಿ. ಆ ಮೇಲೆ ಒಂದು ಹಾರಾಟವಾಗುತ್ತದೆ ಇನ್ನೊಂದು ಸ್ಥಳಕ್ಕೆ. ಅದರ ಸಮಯ ಒಂದು ಸೆಕುಂಡದ ೩೦ನೇ ಒಂದಂಶವಾಗಿದೆ. ಸಮಯಹೋದಂತೆ ನೀವು ಮಿನಿಟಿಗೆ ಹತ್ತು ಸಲವಾದರೂ ಕಣ್ಣು ರೆಪ್ಪೆ ಮುಚ್ಚುತ್ತೀರಿ. ಪ್ರತಿಯೊಂದು ಸಾರಿ ಕಣ್ಣು ಮುಚ್ಚುವಾಗಲೂ ಒಂದು ಸೆಕುಂಡದ ೩೦ನೇ ೪ ಅಂಶದಷ್ಟು ಸಮಯ ಬೇಕಾಗುತ್ತದೆ. ಹಾಗೆ ಕಣ್ಣು ಮುಚ್ಚಿದ ಮೇಲೆ ಹೊಸ ಸ್ಥಳವೊಂದರಲ್ಲಿ ಕಣ್ಣು ಬೀಳಬೇಕಾದರೆ ಕಣ್ಣು ಹೊರ ಒಳಗಡೆಗಳಲ್ಲಿ ಒಂದು ತಿರುಗಾಟ ಮಾಡುತ್ತದೆ.

ಈ ಸಂಶೋಧನೆಯನ್ನು ಅಮೇರಿಕದ ವಿಜ್ಞಾನಿಗಳು ಕೆಲವರು ಕೆಲ ತಿಂಗಳ ಹಿಂದೆ ಮಾಡಿದರು. ಈ ವಿಶೇಷವಾದ ಚಲನವನ್ನು ವಿದ್ಯುಚ್ಛಕ್ತಿಯ ಸಾಧನಗಳ ಮೂಲಕವಾಗಿ ಪರೀಕ್ಷಿಸಿದರು. ಪ್ರತಿಯೊಂದು ಕಣ್ಣಲ್ಲಿಯೂ ಆರು ಮಾಂಸಖಂಡಗಳು (muscles) ಇವೆ. ಈ ಮಾಂಸಖಂಡಗಳ ಹಿಡಿತ ಮತ್ತು ಬೆಳವಣಿಗೆಗಳನ್ನು ಅವರು ಕಂಡುಹಿಡಿದು ಚಲನವಲನಗಳನ್ನು ಗುಣಿಸಿದರು. ನಾವು ಒಂದು ಸ್ಥಳದಿಂದ ಕಣ್ಣನ್ನು ಇನ್ನೊಂದು ಸ್ಥಳಕ್ಕೆ ಚಲಿಸುವುದು, ನಮ್ಮ ದೃಷ್ಟಿಕೇಂದ್ರದಲ್ಲಿರುವುದನ್ನೆಲ್ಲಾ ನೋಡಿ ಆಯಿತೆಂಬುದಾಗಿ ಅಲ್ಲ; ನಮ್ಮ ಕಣ್ಣು ಇನ್ನೊಂದು ಸ್ಥಳವನ್ನು ನೋಡಲು ಬಯಸುತ್ತದೆಯೆಂಬುದಕ್ಕಾಗಿ.

NOTICE

Notice is hereby given that the following assets of the company or their rights in the following possessions of the company are available for sale, lease or hire.

1. The company's premises and factory buildings at Kalianpur or any portion thereof.

2. If any reasonable offers for purchase or lease of the above are not received, the roof material consisting of corrugated sheets, purlins tsuses, beams etc, of one building with a floor space of about 65' by 90' is offered for sale.

3. Company's farms at Kokkarne in No. 47 Pejamangur village.

Offers are invited for purchase or lease of the above and should be communicated to the undersigned so as to reach the undersigned on or before 20—5—1942. Offers may be accepted or rejected without assigning any reasons.

Further particulars will be supplied by the undersigned when applied for

V. S. KUDVA.
Director,
The Kalyanpur Sugar Mills Ltd,
MANGALORE
Mangalore, 9 5—1942

ಈ ಹೊತ್ತು ನಿಮ್ಮ ಹಲ್ಲುಗಳನ್ನು ಮ್ಯಾಕ್ಲಿನ್ ಮಾಡಿದಿರಾ?

ಆಹಾ! ಅಂದವಾದ ಹಲ್ಲುಗಳನ್ನು ಹೊಂದುವುದು ಹೇಗೆ ಎನ್ನುವುದು ನಿಮಗೆ ತಿಳಿದಿದೆ.

ಹೌದು. ಹಲ್ಲುಗಳು ಕಾಂತಿಯುತವಾಗಿರುವುದಕ್ಕೆ ಮೆಕ್ಲೀನ್ ಟೂತ್ ಪೇಸ್ಟನ್ನೇ ಉಪಯೋಗಿಸಬೇಕು. ಯಾಕೆಂದರೆ ಅದು ಜಾಗ್ರತೆಯಾಗಿ ಕಲೆಗಳನ್ನು ತೆಗೆದುಹಾಕಿ ಹಲ್ಲುಗಳನ್ನು ಬೆಳ್ಳಗೂ ಥಳಥಳ ಹೊಳೆಯುವಂತೆಯೂ ಮಾಡುತ್ತದೆ. ನೀವೂ ಆರೋಗ್ಯಯುತವಾದ ಮತ್ತು ಅಂದವಾದ ಹಲ್ಲುಗಳನ್ನು ಮ್ಯಾಕ್ಲೀನ್ ಉಪಯೋಗಿಸುವುದರಿಂದ ಹೊಂದಬಹುದು.

FURTHER REDUCTIONS IN LENDING RATES

The busy trade season is coming to a close. Lending rates are naturally tending to be reduced. Even at the beginning of the season we had lowered our rates on loans and advances as our contribution to better business. A further reduction in accordance with seasonal conditions will be made early if the present conditions continue....

CANARA BANK, LIMITED.
ESTD. 1906.

HALFTONE & LINE BLOCK MAKING UNDERTAKEN
Sharada Press, MANGALORE.

Bhuvanendra Products Limited,

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitual abortion and other uterine troubles Must be commensed soon after conception and continued up to the time of delivery.

"ಭುವನೇಂದ್ರ ಗರ್ಭಪಾಲ"

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವವಿಧದ ದೋಷಗಳನ್ನು ಗುಣಪಡಿಸುವ ದಿವ್ಯಔಷಧಿ ಗರ್ಭವತಿಯೆನಿಸಿದಂದಿನಿಂದ ಪ್ರಸವಕಾಲದ ವರೆಗೆ ಸೇವಿಸುವುದು ಅತ್ಯುತ್ತಮ

ಸ್ಥಳೀಯ ಸ್ಟಾಕಿಸ್ಟ ವ ಏಜೆಂಟರು:-

(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ (2) ರಾಘುವೇಂದ್ರ ಪೈ, ರಥಬೀದಿ (3) ದಿ ಕರ್ನಾಟಕ ಸ್ಟಫ್ ವರ್ಕ್ಸ್, ರಥಬೀದಿ (4) ಡಾ। ಯಂ ಎಸ್ ಪ್ರಭು, M L B S ಪಿ ಪಿ ಪಿ ಬಿಲ್ಡಿಂಗ್ (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಡಿಪೊ — 1 ಮರಾಠ ಗಲ್ಲಿ ಹುಬ್ಬಳ್ಳಿ

2. 36 ಫ್ಯಾಕ್ರೋಫ್ಟ್ ರೋಡ್, ಟ್ರಿಪ್ಲಿಕೇನ್, ಮದರಾಸು

The Bank of Mangalore Limited

HEAD OFFICE	*BRANCHES*
Mangalore	Moodabidri & Paladbidri

ANNOUNCEMENT

On and from 1st February 1942, fixed deposits will be accepted at the following attractive rates

One year	4%
Two years or above	4½%

Interest Payable Quarterly

ಸರಕಾರದ ಹೊಸ ಪಾಠಪಟ್ಟಿಗನುಸಾರವಾಗಿ ಬರೆದ

ನವೀನ ಭೂವಿವರಣೆ

ವಾಸುದೇವರಾವ್, ಎಂ ಎ ಎಲ್ ಟಿ (Dip Geography)

(ಭೂಗೋಳ ಶಾಸ್ತ್ರದಲ್ಲಿ ಡಿಪ್ಲೊಮಾ ಪಡೆದವರು)

ಈ ಪುಸ್ತಕಗಳನ್ನು ಪಡಕೊಂಡಲ್ಲಿ ವಿದ್ಯಾರ್ಥಿಗಳಿಗೆ ಎಟ್ಲಾಸ್ ಕೊಂಡುಕೊಳ್ಳುವ ಅವಶ್ಯವಿಲ್ಲ

ಪ್ರತಿ ಪುಸ್ತಕದಲ್ಲಿ ಬಣ್ಣಬಣ್ಣದ ಭೂಪಟಗಳಿವೆ

ಅನೇಕಾನೇಕ ಚಿತ್ರಪಟಗಳಿಂದ ಕೂಡಿದ್ದು, ಪ್ರತಿ ಪಾಠದ ಅಂತ್ಯದಲ್ಲಿ ಅಭ್ಯಾಸಾರ್ಥವಾದ ಪ್ರಶ್ನೆಗಳನ್ನೂ ಕೊಟ್ಟಿದೆ

4ನೆಯ ಪುಸ್ತಕ 6 ಆಣೆ 5ನೆಯ ಪುಸ್ತಕ 7 ಆಣೆ 7 ಮತ್ತು 8ನೆಯ ಪುಸ್ತಕಗಳು ಅಚ್ಚಿನಲ್ಲಿವೆ ಪುಸ್ತಕಗಳು ಬೇಕಾದಲ್ಲಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.

ಕಡಿಮೆ ಖರ್ಚು — ಮಂಗಳೂರಿನಿಂದ - ಬೆಂಗಳೂರು ತಿರುಪತಿ, ಮದರಾಸು. — ಅತಿ ಶೀಘ್ರ ಪ್ರಯಾಣ

ಬಸ್ಸ್ ಪ್ರಯಾಣವು

ಅತೀ ಸುಖಕರ! ನಿರಾಯಾಸಕರ!! ಮನೋಲ್ಲಾಸಕರವಾಗಿದೆ!!!

ಊರುಗಳ ಬದಲಾವಣೆ! ನೋಟಗಳ ಬದಲಾವಣೆ! ಜನತೆಯ ಸಂಪರ್ಕ! ಆಯಾಸ ಅನುಕೂಲತೆಗಳು!

ಇವೆಲ್ಲವೂ ಬಸ್ಸ್ ಪ್ರಯಾಣದಲ್ಲಿವೆ

ಪ್ರಯಾಣಿಕರ ಹೆಚ್ಚಿನ ಪ್ರೋತ್ಸಾಹದೊಡನೆ ಇನ್ನೂ ಹೆಚ್ಚಿನ ಸೌಕರ್ಯಗಳನ್ನು ಒದಗಿಸುವೆವು.

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

ಬಿಡಿ ಸಂಚಿಕೆ ಬೆಲೆ ಒಂದಾಣೆ ವಾರ್ಷಿಕ ಚಂದಾ ರೂ. ३-0-0 ಅಂಚೆ ವೆಚ್ಚ ಸೇರಿ ರೂ. ३-18-0 Regd. No. M 3460

ಸ್ವದೇಶಾಭಿಮಾನಿ

[ಸಂಪುಟ 36] ತಾರೀಕು 15-5-1942 [ಸಂಚಿಕೆ 20]

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಸಂಧಿವಾತ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಜ್ವರ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪೋ.

ಬೊಂಬಾಯಿ, ಮದರಾಸು, ಕಲ್ಕತ್ತ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

AMRUTANJAN DEPOTS LTD. BOMBAY MADRAS CALCUTTA

ಸಂಶಯವೇಕೆ?

ಶತ್ರುಗಳು ವಿಮಾನಗಳ ಮೂಲಕ ಧಾಳಿ ನಡೆಸುವುದರಿಂದಲೂ ಮತ್ತು ಇತರ ವಿಧವಾದ ಶತ್ರು ಚಟುವಟಿಕಗಳಿಂದಲೂ ಹಿಂದುಸ್ಥಾನದ ಸಿವಿಲ್ ಪ್ರಜೆಗಳಲ್ಲಿ—ಇದರಲ್ಲಿ ಎ ಆರ್ ಪಿ ಕೆಲಸಗಾರರೂ ಸೇರುವರು ಉಂಟಾಗಬಹುದಾದ ಪ್ರಾಣಹಾನಿಗೆ

ದಿ "ಬಾಂಬೆ ಲೈಫ್" ಪಾಲಿಸಿಗಳು

ಸಂಪೂರ್ಣವಾದ ರಕ್ಷಣೆಯನ್ನು ನೀಡುತ್ತವೆ. ಆದ್ದರಿಂದ ನಿಮ್ಮ ಪ್ರೀತಿಪಾತ್ರರಿಗಾಗಿ

ದಿ ಬಾಂಬೆ ಲೈಫ್ ಅಶ್ಯೂರೆನ್ಸ್ ಕಂಪೆನಿ (ಲಿಮಿಟೆಡ್)

ಯಲ್ಲಿ ಪಾಲಿಸಿಗಳನ್ನು ಪಡೆಯುವುದು ನಿಮ್ಮ ತ್ವರಿತ ಕರ್ತವ್ಯವಾಗಿದೆ

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಸಂಸ್ಥಾನಗಳಾದಿಯಾಗಿ ದಕ್ಷಿಣ ಭಾರತಕ್ಕೆ ಪ್ರಾಮುಖ್ಯ ಏಜೆಂಟರು:

ಉಡುಪಿ

—: ಅಥವಾ ಈ ಕೆಳಗಿನ ಇತರ ಆಫೀಸುಗಳಿಗೆ ಬರೆಯಿರಿ :—

ಕಲ್ಲಿಕೋಟೆ ಬೆಂಗಳೂರು ಮಂಗಳೂರು
ಮದರಾಸು ತ್ರಿವೇಂಡ್ರಂ ಬೊಂಬಾಯಿ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ ವಿ ಪಂಡಿತರ
ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.
ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು

★

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by the A. S. Kamath at Sharada Press, Car Street, Mangalore.

Estd. 1906

ಸ್ವದೇಶಾಭಿಮಾನಿ

SWADESHABHIMANI



ಪೆಟ್ರೋಲ್ ಡ್ಯೂಟಿ ಯಿಂದ ಮರಳಿ ಬಂದಿರುವ ಸಬ್‌ಮೆರಿನ್

KANNADA ILLUSTRATED WEEKLY

ಶ್ರೀ ರಾಮಕೃಷ್ಣ ಲೀಲಾ ಪ್ರಸಂಗ

[ಗುರುಭಾವ-ಪೂರ್ವಾರ್ಧ]

ಮೂಲ ಬಂಗಾಳಿ ಲೇಖಕರು ಶ್ರೀ ಸ್ವಾಮಿ ಶಾರದಾನಂದಜಿ
ಅನುವಾದ ಶ್ರೀ ಸ್ವಾಮಿ ಪುಣವೇಶಾನಂದರು
(ಹಕ್ಕು ಕಾದಿಡಲ್ಪಟ್ಟಿದೆ)

ಶ್ರೀ ಸ್ವಾಮಿ ಯೋಗಾನಂದರಿಗೆ ಆ ವಿಷಯವಾಗಿ ಕೊಟ್ಟ ಉಪದೇಶ

ಈ ಪ್ರಸಂಗದಲ್ಲಿ ಶ್ರೀ ಸ್ವಾಮಿ ಯೋಗಾನಂದರ ವಿಷಯವು ನನ್ನ ಸ್ಮರಣೆಗೆ ಬರುತ್ತದೆ ಸ್ವಾಮಿ ಯೋಗಾನಂದರಂತೆ ಇಂದ್ರಿಯಜಿತ ಪುರುಷರು ಬಹಳ ವಿರಳರೆನ್ನಬೇಕು ಅವರೇ ಒಂದು ದಿನ ಶ್ರೀ ಪರಮಹಂಸರಿಗೆ ಈ ಪ್ರಶ್ನೆಯನ್ನು ದಕ್ಷಿಣೇಶ್ವರದಲ್ಲಿ ಕೇಳಿದ್ದರು ಅವರ ವಯಸ್ಸು ಆಗ ಸುಮಾರು ೧೪ ಅಥವಾ ೧೫ ಆಗಿರಬಹುದು ಸ್ವಲ್ಪ ದಿವಸವಾಯಿತು, ಶ್ರೀ ಪರಮಹಂಸರ ಹತ್ತಿರ ಬರುತ್ತಾ ಹೋಗುತ್ತಿದ್ದಾರೆ ಆಗ ನಾರಾಯಣನೆಂಬೊಬ್ಬ ಹಠಯೋಗಿಯೂ ಕೂಡ ದಕ್ಷಿಣೇಶ್ವರ ಪಂಚವಟಿಯ ಕುಟೀರದಲ್ಲಿದ್ದು ನೇತಿ-ಧೌತಿ* ಇತ್ಯಾದಿ ಕ್ರಿಯೆಗಳನ್ನು ತೋರಿಸಿ ಕೆಲವರಿಗೆ ಕುತೂಹಲ ಪಡಿಸಿ ಆಕೃಷ್ಟ ಮಾಡುತಿದ್ದಾನೆ ಸ್ವಾಮಿಯವರು ಕೂಡ ಅವರಲ್ಲೊಬ್ಬರಾಗಿದ್ದರು, ಮತ್ತು ಆ ಕ್ರಿಯೆಗಳನ್ನು ನೋಡಿ ಹಾಗೆ ಮಾಡದಿದ್ದರೆ ಕಾಮವಾಸನೆ ಹೋಗಲಾರದೆಂದೂ ಈಶ್ವರನ ದರ್ಶನವಾಗದೆಂದೂ ಭಾವಿಸುತಿದ್ದರು ಆದ್ದರಿಂದ ಈ ಪ್ರಶ್ನೆಗೆ ಶ್ರೀ ಪರಮಹಂಸರು ಒಂದು ಆಸನವೇನಾದರೂ ಹೇಳಿಕೊಡುವರು ಅಥವಾ ಹರಡೆಕಾಯಿ ಇತ್ಯಾದಿ ತಿನ್ನಲು ಹೇಳುವರು ಅಥವಾ ಪ್ರಾಣಾಯಾಮವನ್ನು ಮಾಡಲು ಉಪದೇಶಿಸುವರೆಂದು ಬಹಳ ಆಸೆಪಟ್ಟಿದ್ದರು ಯೋಗಾನಂದ ಸ್ವಾಮಿಯವರು ಹೇಳುತ್ತಿದ್ದರೇನಂದರೆ 'ಶ್ರೀ ಪರಮಹಂಸರು ನನ್ನ ಪ್ರಶ್ನೆಗೆ ಉತ್ತರವಾಗಿ ನೀನು ಚೆನ್ನಾಗಿ ಹರಿನಾಮಸ್ಮರಣೆ ಮಾಡು ಅದನ್ನು ಮಾಡಿದರೆ ಜಯಿಸಬಹುದು ಈ ಮಾತು ನನ್ನ ಮನಸ್ಸಿಗೇನೂ ಒಪ್ಪಲಿಲ್ಲ ಅವರಿಗೆ ಇಂತಹ ಕ್ರಿಯೆಗಳೇನೂ ಗೊತ್ತಿಲ್ಲವಾದ್ದರಿಂದ ಮನಸ್ಸಿಗೆ ಬಂದದ್ದು ಒಂದು ಹೇಳಿದರೆಂದು ಭಾವಿಸಿದೆನು ಹರಿನಾಮಸ್ಮರಣೆ ಮಾಡಿದರೆ ಕಾಮವಾಸನೆ ಹೋಗುವುದಂತೆ ಹಾಗಾದರೆ ಎಷ್ಟೋ ಜನರು ಮಾಡುತ್ತಾರೆ ಅವರ ಕಾಮವಾಸನೆ ಹೋಗುವುದಿಲ್ಲವೇನು? ಅನಂತರ ಒಂದು ದಿನ ಕಾಳೀ ಮಂದಿರದಿಂದ ತೋಟಕ್ಕೆ ಬಂದು ಶ್ರೀ ಪರಮಹಂಸರ ಹತ್ತಿರ ಮೊಂಚಿತವಾಗಿ ಹೋಗದೆ ಪಂಚವಟಿಯಲ್ಲಿ ಹಠಯೋಗಿಯ ಹತ್ತಿರ ಹೋಗಿ ನಿಂತು ಆತನ ಮಾತನ್ನು ಮುಗ್ಧನಾಗಿ ಕೇಳುತ್ತಿದ್ದೇನೆ ಅಷ್ಟರಲ್ಲಿ ಶ್ರೀ ಪರಮಹಂಸರೇ ಅಲ್ಲಿಗೆ ದಯಮಾಡಿದರು ನನ್ನನ್ನು ಕರೆದುಕೊಂಡು ಹೋಗಿ ತಮ್ಮ ಕೋಣೆಯ ಕಡೆಗೆ ಹೋಗುತ್ತ ಹೋಗುತ್ತ ಹೀಗೆಂದು ಹೇಳಿದರು 'ನೀನು ಅಲ್ಲಿ ಏಕೆ ಹೋಗಿದ್ದೆ? ಅಲ್ಲಿ ಹೋಗಬೇಡ ಅವುಗಳನ್ನು (ಹಠಯೋಗದ ಕ್ರಿಯೆಗಳನ್ನು) ಕಲಿತು ಅಭ್ಯಾಸ ಮಾಡಿದರೆ ದೇಹದ ಮೇಲೆಯೇ ಮನಸ್ಸು ಬೀಳುವುದು ದೇವರ ಕಡೆಗೆ ಹೋಗುವುದಿಲ್ಲ ಆದರೆ ನಾನು ಅವರ ಮಾತನ್ನು ಕೇಳಿ ಭಾವಿಸಿದೇನಂದರೆ ಇನ್ನು ಅವರ ಹತ್ತಿರ ಹೋಗಲಿಕ್ಕಿಲ್ಲವೆಂದು ಹೀಗೆಲ್ಲ ಹೇಳುತ್ತಿದ್ದಾರೆ ನಾನು ನನ್ನಷ್ಟಕ್ಕೆ ಬಹಳ ಬುದ್ಧಿವಂತನೆಂದು ಭಾವಿಸಿದ್ದರಿಂದ ಹೀಗೆಲ್ಲ ಯೋಚನೆ ಬಂದಿತ್ತು ಮತ್ತೇನು? ನಾನು ಅವನ ಹತ್ತಿರ ಹೋದರೂ ಹೋಗದಿದ್ದರೂ ಅವರಿಗೆ ಏನೂ ಅದರಲ್ಲಿ ಲಾಭನಷ್ಟವೇನೂ ಇಲ್ಲವೆಂದು ನನಗೆ ಆಗ ಮನಸ್ಸಿಗೆ ಸೂಚಿಸಲಿಲ್ಲ ನಾನೊಬ್ಬ ಆಗ ಬಹಳ ಸಂದೇಹಾತ್ಮನಾಗಿದ್ದೆನು ಆದರೆ ಶ್ರೀ ಪರಮಹಂಸರು ಕೃಪಾನಿಧಿಯಾಗಿದ್ದರು ಆದ್ದರಿಂದಲೇ ಇಷ್ಟೆಲ್ಲ ದೋಷಗಳು ನನ್ನಲ್ಲಿದ್ದರೂ ಕೂಡ ಅವರು ನನಗೆ ತಮ್ಮ ಪದಪ್ರಾಂತದಲ್ಲಿ ಸ್ಥಾನ ಕೊಟ್ಟಿದ್ದರು ಅನಂತರ ಶ್ರೀ ಪರಮಹಂಸರು ಹೇಳಿದಂತೆ ಮಾಡಿ ನೋಡೋಣವೆಂದು ಮನಸ್ಸಿನಲ್ಲಾಯಿತು ಹಾಗೆಯೇ ಹರಿನಾಮಸ್ಮರಣೆ ಚೆನ್ನಾಗಿ ಮಾಡಿದೆನು ನಿಜವಾಗಿಯೂ ಸ್ವಲ್ಪ ದಿವಸಗಳಲ್ಲಿಯೇ ಶ್ರೀ ಪರಮಹಂಸರು ಹೇಳಿದಂತೆ ಪ್ರತ್ಯಕ್ಷ ಫಲವನ್ನು ಅನುಭವಿಸಿದೆನು

* ಎರಡಂಗುಲ ಅಗಲ ಮತ್ತು ಸುಮಾರು ಹತ್ತು ಹದಿನೈದು ಮೊಳ ಉದ್ದವಾದ ಒಂದು ಬಟ್ಟೆ ತುಂಡನ್ನು ನೀರಿನಲ್ಲಿ ನೆನೆದು ಮೆಲ್ಲಮೆಲ್ಲನೆ ನುಂಗಿ ಬಿಟ್ಟು ಅದನ್ನು ಆ ಮೇಲೆ ಎಳೆದು ಹೊರಗೆ ತರುವುದರ ಹೆಸರು 'ನೇತಿ' ಎಂದು

ಎರಡು ಮೂರು ಸೇರು ನೀರು ಕುಡಿದು ಪುನಹ ಅದನ್ನು ಕಾರಿಬಿಡುವುದರ ಹೆಸರು 'ಧೌತಿ' ಎಂದು ಗುದದ್ವಾರದಿಂದ ನೀರನ್ನು ಸೆಳೆದು ಹೊರಪಡಿಸುವುದಕ್ಕೂ ಧೌತಿ ಎನ್ನುತ್ತಾರೆ ಹಟಯೋಗಿಗಳು ಹೀಗೆಯೇ ಮಾಡಿ ದೇಹದಲ್ಲಿರುವ ಎಲ್ಲ ಶ್ಲೇಷ್ಮಾದಿಗಳನ್ನು ಹೊರ ಹಾಕುತ್ತಾರೆ ಇದರಿಂದ ದೇಹಕ್ಕೆ ರೋಗಬರುವುದಿಲ್ಲವೆಂದೂ ದೃಢಕಾಯರಾಗುತ್ತಾರೆಂದೂ ಅವರು ಹೇಳುತ್ತಾರೆ

ಮಣಿಮೋಹನನ ಆತ್ಮೀಯಳ ವಿಷಯ

ಹೀಗೆ ಸಕಲರ ಅವಸ್ಥೆಗಳನ್ನೂ ಭಾವಗಳನ್ನೂ ಶ್ರೀ ಪರಮಹಂಸರು ತಿಳಕೊಳ್ಳುತ್ತಿದ್ದರು ಎಷ್ಟೋ ದೃಷ್ಟಾಂತಗಳನ್ನು ಕೊಡಬಹುದು ಸಿಂದೂರಿಯಾಪಟ್ಟಿಯ ಮಣಿಮೋಹನ ಮಲ್ಲಿಕನ ವಿಷಯವಾಗಿ ಈ ಮುಂಚೆಯೇ ಹೇಳಿದ್ದೇವೆ ಆತನ ಭಕ್ತಿಮತೀ ಒಬ್ಬ ಆತ್ಮೀಯಳು ಶ್ರೀ ಪರಮಹಂಸರ ಹತ್ತಿರ ಬರುತ್ತಾ ಹೋಗುತ್ತಾ ಇದ್ದಳು ಅವಳು ಒಂದು ದಿನ ಬಂದು ಬಹಳ ಕಾತರತೆಯಿಂದ ಶ್ರೀ ಪರಮಹಂಸರಿಗೆ ತಿಳಿಸಿದಳೇನಂದರೆ ದೇವರ ಧ್ಯಾನ ಮಾಡುತ್ತಿದ್ದಾಗ ಸಂಸಾರದ ಚಿಂತೆ, ಇವನ ವಿಷಯ, ಅವನ ಮುಖ ಇತ್ಯಾದಿ ಮನಸ್ಸಿನಲ್ಲಿ ಬಂದು ಬಹಳ ಅಶಾಂತಿ ಕಾಡುತ್ತದೆ ಶ್ರೀ ಪರಮಹಂಸರು ಅವಳ ಭಾವವನ್ನು ಹಿಡಿದರು ಇವಳು ಯಾರನ್ನಾದರೂ ಪ್ರೀತಿಸಿರಬೇಕು ಆತನ ವಿಷಯವಾಗಿ ಭಾವಿಸುತ್ತಾಳೆ ಮತ್ತು ಮುಖವನ್ನು ಮನಸ್ಸಿನಲ್ಲಿ ಕಾಣುತ್ತಾಳೆ 'ನಿನಗೆ ಯಾರ ಮುಖದ ಸ್ಮರಣೆಯಾಗುತ್ತದೆ? ನೀನು ಯಾರ ಚಿಂತೆಯನ್ನು ಮಾಡುತ್ತಿದ್ದಿ ಹೇಳು ನೋಡೋಣ' ಎಂದು ಕೇಳಿದರು. ಆಗವಳು ತನ್ನ ಸಹೋದರನ ಸಣ್ಣ ಮಗನನ್ನು ಲಾಲನೆ ಪಾಲನೆ ಮಾಡುವ ವಿಷಯವನ್ನು ಹೇಳಿದಳು ಅದಕ್ಕೆ ಶ್ರೀ ಪರಮಹಂಸರು 'ಒಳ್ಳೇದು, ನೀನು ಅವನ ಲಾಲನೆಪಾಲನೆ ಮಾಡುವ ಯಾವತ್ತೂ ಕೆಲಸವು ಗೋಪಾಲನ ಸೇವೆಯೆಂದು ಭಾವಿಸಿ ಮಾಡು ಗೋಪಾಲನು ಆ ಮಗುವಿನಲ್ಲಿದ್ದಾನೆ-ನೀನು ಅವನಿಗೆ ಲಾಲನೆಪಾಲನೆ ಮಾಡುತ್ತೀ ಎಂದು ಭಾವಿಸು ಆತನು ಮನುಷ್ಯನೆಂದು ಭಾವಿಸುವುದು ಏಕೆ? ಭಾವವಿದ್ದಂತೆ ಲಾಭವಾಗುತ್ತದೆ' ಎಂದು ಹೇಳಿದರು ಹಾಗೆಯೇ ಅವಳು ಮಾಡಿದ್ದರಿಂದ ಸ್ವಲ್ಪ ದಿವಸಗಳಲ್ಲೇ ಅವಳಿಗೆ ಬಹಳ ಆಧ್ಯಾತ್ಮಿಕ ಉನ್ನತಿಯು ಬಂದಿತ್ತು-ಅಲ್ಲದೆ ಭಾವ ಸಮಾಧಿಯೂ ಕೂಡ ಆಗಿತ್ತು.

(ಕ್ರಮಶಃ)



ನೀವು ಮಲಬದ್ಧತೆ ಅಜೀರ್ಣ ಹೊಟ್ಟೆಯ ಆಮ್ಲವಸ್ಥೆ ಮೊದಲಾದ ರೋಗಗಳಿಂದ ಸಂಕಟಪಡುತ್ತಿದ್ದರೆ ನೀವು ದೇಹದೊಳಭಾಗವನ್ನು ನಿರ್ಮಲವಾಗಿಸಲು ಪ್ರಯತ್ನಿಸಬೇಕು ದಿನಾಲು ವ್ಯಾಯಾಮ ತೆಗೆದುಕೊಳ್ಳಿ ಬುದ್ಧಿಗಾಳಿ ಸೇವಿಸಿ ಹಸಿವಾದಷ್ಟು ಉಣ್ಣಿರಿ ಕುಡಿಯಿರಿ ಆದರೆ ಎಲ್ಲದಕ್ಕಿಂತಲೂ ವಿಶೇಷವಾದುದೆಂದರೆ ನಿಮ್ಮ ದೇಹದೊಳಭಾಗದ ನೈರ್ಮಲ್ಯ

ಪ್ರತಿದಿನವೂ ಎಂಡ್ರೂಸ್ ಲಿವರ್ ಸಾಲ್ಟನ್ನು ತೆಗೆದುಕೊಳ್ಳುವುದರಿಂದ ನಿಮ್ಮ ದೇಹದೊಳಭಾಗವು ಶುಚಿಯಾಗುವುದು ಇದರ ರುಚಿಯೂ ಚನ್ನಾಗಿದೆ ಉಪಯೋಗಿಸಲು ಹೆಚ್ಚು ವೆಚ್ಚವಿಲ್ಲ ಇದು ಒಂದು ಬಿರಿಲಾದದ ಚಟವೂ ಆಗುವುದಿಲ್ಲ ಎಂಡ್ರೂಸ್ ನಿಮ್ಮ ಅನಾರೋಗ್ಯಕ್ಕೆ ಕಾರಣವಾಗುವ ವಿಷವಸ್ತುಗಳನ್ನು ಹೊರಹಾಕುವುದು ಅದು ಹೊಟ್ಟೆಯನ್ನು ನಿರ್ಮಲ ಮಾಡುವುದು ಮಲಶೋಧನೆ ಸ್ವಾಭಾವಿಕವಾಗುವುದು ತಂಪುಗೊಳಿಸುವುದು ರಕ್ತವನ್ನು ಶುದ್ಧಿಪಡಿಸುವುದು ಇಡೀ ಶರೀರಕ್ಕೆ ಹೊಸ ಚೈತನ್ಯ ಕೊಟ್ಟು ಉಲ್ಲಾಸ ತುಂಬಿಸುವುದು

ದೇಹದೊಳಗಿನ ನೈರ್ಮಲ್ಯಕ್ಕೆ ದಿನನಿತ್ಯವೂ ನಿಮ್ಮ

ANDREWS
LIVER SALT

ಆರೋಗ್ಯಕರ ಪಾನೀಯ ಮತ್ತು ಧಾತುಪುಷ್ಟಿಕರವಾದ ಇದನ್ನು ತೆಕೊಳ್ಳಿರಿ
ಸಣ್ಣ ಸೈಜ್ ಆಣೆ 12 ಫೆಮಿಲಿ ಸೈಜ್ ರೂ 1 6-0
ಶುದ್ಧಮಾಡುವುದು ತಂಪುಕೊಡುವುದು ಸಂತೋಷ ಕೊಡುವುದು
ಚೈತನ್ಯ ತುಂಬಿಸುವುದು



"ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

22—5—1942] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೨೨—೫—೧೯೪೨]

ಸಮರ ಭೂಮಿಯ ಸಂಚಾರ

ಕಳೆದ ಐದಾರು ತಿಂಗಳಲ್ಲಿ ಹಿಮಗಾಲದ ಸಂಬಂಧ ತಟಸ್ಥವಾಗಿದ್ದ ರಶ್ಯದ ರಣರಂಗವು ತಿರುಗಿ ಈಗ ಉಗ್ರತೆಗೇರಿದೆ ಜರ್ಮನ್ ಸೈನಿಕರು ಬೇಸಿಗೆಕಾಲದ ಬಿಸಿಯೇರಿ ಯುದ್ಧವನ್ನು ಬಲಗೊಳಿಸುತ್ತಿದ್ದಾರೆ ಕಳೆದ ಅಕ್ಟೋಬರ್ ತಿಂಗಳಲ್ಲಿ ಜರ್ಮನರು ಕರ್ಚನ್ನು ಸ್ವಾಧೀನಪಡಿಸಿ ಕಾಕಸಸ್ ವರೆಗೆ ಹೋಗಲು ಸಿದ್ಧರಾಗಿದ್ದರು, ಆದರೆ ಹಿಮಗಾಲವು ಬಂದುದರಿಂದ ಅವರು ಅಲ್ಲಿಂದ ಹಿಮ್ಮೆಟ್ಟಬೇಕಾಯಿತು ಈಗ ಕರ್ಚ್‌ನ ಸಲುವಾಗಿ ಭಯಂಕರ ಯುದ್ಧ ನಡೆದಿದ್ದು ತಾವು ವಿಜಯಿಗಳಾಗಿರುವೆವೆಂದೂ ಜರ್ಮನರು ಹೇಳುತ್ತಾರೆ ಉಗ್ರ ಪ್ರತಿಭಟನೆ ಮಾಡಿ ತಾವು ಹಿಂದೆ ಸರಿಯಬೇಕಾಗಿ ಬಂತೆಂದು ರಶ್ಯನರೇ ಒಪ್ಪಿದ್ದಾರೆ ನಾಜಿಗಳು ಇಪ್ಪತ್ತು ಲಕ್ಷ ಸೈನಿಕರನ್ನು ಕೇಂದ್ರೀಕರಿಸಿಕೊಂಡು ಡೊನೆಟ್ಸ್ ಪ್ರದೇಶದಲ್ಲಿ ಹೊಸ ಧಾಳಿಯನ್ನು ಪ್ರಾರಂಭಿಸಿರುವರು ಖಾರ್ಕೋವ್ ಕಡೆಯಲ್ಲಿ ಜರ್ಮನರನ್ನು ರಶ್ಯನರು ಹಿಂದಟ್ಟುತ್ತಿರುವರೆಂದು ಸುದ್ದಿ. ಅಂತೂ ಇಲ್ಲಿಂದ ಮುಂದೆ ಜರ್ಮನ್ ಸೈನ್ಯವು ಯಾವ ಕಡೆ ಮುಂದೆ ಸಾಗುವುದೆಂದು ಸರಿಯಾಗಿ ತಿಳಿದು ಬಂದಿಲ್ಲವಾದರೂ, ಕಾಕಸಸ್‌ನ ಮೇಲೆ ಹಿಟ್ಲರನಿಗೆ ಹಿಂದೆಯೇ ಕಣ್ಣಿರುವುದರಿಂದ ಆ ಕಡೆ ಧಾಳಿ ಪ್ರಾರಂಭಿಸುವನೆಂದು ಊಹಿಸಲಾಗಿದೆ ಹಿಟ್ಲರನು ಹೀಗೆ ಈಗ ವಸಂತಕಾಲದ ತನ್ನ ಧಾಳಿಯನ್ನು ಪ್ರಾರಂಭಿಸಿರುವನೆಂದು ತಿಳಿಯಲು ಅವಕಾಶವಾಗಿರುವುದು ಇಷ್ಟರಲ್ಲಿಯೇ ಯುಕ್ರೇನಿನಲ್ಲಿ ಮಾರ್ಶಲ್ ಟಿಮೊಶಂಕೋ ಧಾಳಿ ಮಾಡುತ್ತಿದ್ದು ಜರ್ಮನ್ನರು ಅವನನ್ನು ಎದುರಿಸಬೇಕಾಗಿ ಬಂದಿದೆ ಅಂತೂ ರಶ್ಯದಲ್ಲಿ ಈಗ ಘನಘೋರವಾದ ಕಾಳಗವು ಪುನರ್ ಪ್ರಾರಂಭವಾಗಿರುವುದು

ಈಗ ಪ್ರಾರಂಭವಾದ ಯುದ್ಧದಲ್ಲಿ ಹೊಸ ಬಗೆಯ ಶಸ್ತ್ರಾಸ್ತ್ರಗಳನ್ನು ವೈರಿಗಳು ಉಪಯೋಗಿಸಲಿರುವರೆಂಬ ಊಹೆ ಬಲವಂತವಾಗಿದೆ ಜರ್ಮನರು ನಿರಾಶಾಸ್ಥಿತಿಯಲ್ಲಿ ರಶ್ಯದ ಮೇಲೆ ವಿಷವಾಯುವಿನ ಪ್ರಯೋಗ ಮಾಡಬಹುದೆಂಬ ಅಂಜಿಕೆ ಮೊದಲಿಂದಲೇ ರಶ್ಯನರಿಗಿದ್ದು, ಆ ಕುರಿತು ಮೊನ್ನೆ ಮೊನ್ನೆ ಚರ್ಚಿಲರು ಹಿಟ್ಲರನನ್ನು ಎಚ್ಚರಿಸಿದ್ದಾರೆ ರಶ್ಯದ ಮೇಲೆ ಮಾಡುವ ಅನ್ಯಾಯವು ಬ್ರಿಟನಿಗೆ ಬಗೆದ ದ್ರೋಹವೆಂದೇ ಪರಿಗಣಿಸಲಾಗುವುದೆಂದು ಸಾರಿ ತಿಳಿಸಿದ್ದಾರೆ ಕಳೆದ ಮಹಾಯುದ್ಧದಲ್ಲಿಯೂ ಜರ್ಮನರು ವಿಷವಾಯು ಪ್ರಯೋಗವನ್ನು ಮಾಡಿದ್ದರೆಂದು ಹೇಳಲಾಗುತ್ತದೆ ಈ ಸಲವೂ ಅದೇ ರೀತಿ ಅವರು ಮಾಡಿದರೂ ಮಾಡಬಹುದೆಂದು ಅಂಜಿಕೆಯಿರುವುದು ಸಹಜವಿದೆ. ಮೊನ್ನೆ ರಶ್ಯದಲ್ಲಿ ಜರ್ಮನರು ಪುನಃ ತೀವ್ರ ಧಾಳಿಯನ್ನು ಪ್ರಾರಂಭ ಮಾಡಿದರಷ್ಟೆ? ಆಗ ಯುದ್ಧದಲ್ಲಿ ಮಡಿದ ಹಲವು ಮಂದಿ ರಶ್ಯನ್ ಸೈನಿಕರ ಮೇಲೆ ಒಂದಿಷ್ಟು ಗಾಯವಿರದೆ ಇದ್ದುದರಿಂದ ಅವರು ವಿಷವಾಯು ಪ್ರಯೋಗದಿಂದ ಮಡಿದಿರಬಹುದೇ ಎಂಬ ಸಂಶಯವುಂಟಾಯಿತು ಆದರೆ ಕಡೆಗೆ ಸೂಕ್ಷ್ಮ ಪರಿಶೀಲನೆಯಿಂದ ವಿಷವಾಯು ಪ್ರಯೋಗಿಸಿಲ್ಲವೆಂದು ತಿಳಿದಿದೆ ನಾಜಿಗಳು ಒಂದು ಬಗೆಯ 'ಮೈನ್'ನ್ನು ಪ್ರಯೋಗಿಸಿದರು. ಇದು ಸ್ಫೋಟನವಾದಾಗ ಸುತ್ತಮುತ್ತಲಿನ 300 ಅಡಿಗಳಷ್ಟು ದೂರದ ಪ್ರದೇಶದ ಎಲ್ಲಾ ಜನರನ್ನೆಲ್ಲಾ ಅದು ನಾಶಗೊಳಿಸಿ ವಾತಾವರಣವನ್ನು ವಿಷಸದೃಶ ಮಾಡುತ್ತದೆಯಾಗಿ ಈ ರೀತಿ ಮರಣವುಂಟಾಯಿತೆಂದು ತಿಳಿದುಬಂದಿದೆ.

ಅಂತೂ ರಣರಂಗದಲ್ಲಿ ಹೊಸ ಬಗೆಯ ಶಸ್ತ್ರಾಸ್ತ್ರಗಳು ಈಗ ಪ್ರಯೋಗವಾಗುತ್ತಿವೆ

ಬರ್ಮಾ ಯುದ್ಧವು ಈಗ ಕೊನೆಗೊಂಡಂತಿದೆ; ಜಪಾನರು ಬರ್ಮಾದಲ್ಲಿ ತಮ್ಮ ಸ್ಥಾನವನ್ನು ಭದ್ರಮಾಡಿಕೊಳ್ಳುತ್ತಿದ್ದಾರೆ ಬರ್ಮಾ ಕಾಳಗವನ್ನು ಮುಗಿಸಿಕೊಂಡು ಜಪಾನ್ ದಂಡುಗಳು ಈಗ ಚೀನ ಹಿಂದುಸ್ಥಾನಗಳ ಕಡೆಗೆ ತಿರುಗಿವೆ. ಚೀನದಲ್ಲಿ ಜಪಾನರು ಮೂರು ದಿಕ್ಕಿನಿಂದ ನುಗ್ಗುತ್ತಿದ್ದಾರೆ ಬರ್ಮಾ ರಸ್ತೆಯಲ್ಲಿ ಅವರು ಬಹುದೂರ ಹೋದಂತೆ ತೋರುತ್ತದೆ ಅದನ್ನು ವಶಪಡಿಸಿದ ಮೇಲೆ ಅವರು ಚೀನದ ಹೃದಯವನ್ನು ಭೇದಿಸಲು ಯೋಚನೆ ಮಾಡಿರುವಂತೆ ತೋರುವುದು ಸಾಲ್ವಿನ್ ನದಿಯನ್ನು ದಾಟಿ ಚೆವಾಂಗ್ ನದಿಯ ಬಳಿ ಚೀನೀಯರನ್ನು ಎದುರಿಸಿ ಅಲ್ಲಿಂದ ನೂರು ಮೈಲುಗಳಿಗಿಂತ ಮಿಕ್ಕು ಮುಂದುವರಿದಿರುವರು ಚೀನ, ಸಯಾಮ್ ಮತ್ತು ಬರ್ಮಗಳು ಕೂಡುವ ಗಡಿಯಲ್ಲಿ ಮೆಕಾಂಗ್ ನದಿಯ ಮಾರ್ಗವಾಗಿ ಇನ್ನೊಂದು ಆಕ್ರಮಣವನ್ನು ಆರಂಭಿಸಿರುವರು ಸಾಲವೀನ್ ನದಿಯ ದಡದ ಮೇಲೆ ಚಿಯಾಂಗ್ ಕೈಶೇಕರು ಕೂಡಿಸಿಟ್ಟಿರುವ ಸೈನ್ಯವನ್ನು ಹಿಂದಿನಿಂದ ಬಂದು ಮುತ್ತಬೇಕೆಂದು ಜಪಾನರು ಹಂಚಿಕೆ ಮಾಡಿದಂತೆ ತೋರುತ್ತದೆ ಇದರಲ್ಲಿ ಜಪಾನರು ಯಶಸ್ವಿಗಳಾದರೆ ಅವರು ಬರ್ಮಾ ರಸ್ತೆಯಿಂದ, ಕುನ್‌ಮಿಂಗದ ವರೆಗೆ ಹೋಗಿ, ಯಂಗ್‌ತ್ಸೀ ನದಿಯನ್ನು ದಾಟಿ ಆ ಮೂಲಕ ಚೀನಾ ರಾಜಧಾನಿಯಾದ ಚುಂಕಿಂಗನ್ನು ಸ್ವಾಧೀನಪಡಿಸಲು ಸಾಧ್ಯವಾಗುವುದು ಹೇಗಿದ್ದರೂ ಇಂದು ತಿರುಗಿ ಚೀನವು ಬಹಳ ದೊಡ್ಡ ಗಂಡಾಂತರವನ್ನು ಎದುರಿಸಬೇಕಾಗಿದೆ ಚೀನದ ಜೀವನಾಡಿಯಂತಿದ್ದ ಬರ್ಮಾ ರಸ್ತೆ ಶತ್ರುವಶವಾಯಿತು ಬ್ರಿಟನು ಅಮೆರಿಕದಂತಹ ಮಿತ್ರರಾಷ್ಟ್ರಗಳ ಸಹಾಯದಿಂದ ಜಪಾನರನ್ನು ಹೊಡೆದೋಡಿಸಬಹುದೆಂದು ಚೀನೀಯರು ನಂಬಿದ್ದರು, ಅದು ಇಂದು ತಡೆಯಲ್ಪಟ್ಟಿದೆ ಆದರೂ ಚೀನೀಯರು ಅಸಮ ಸಾಹಸಿಗರು ಅನೇಕ ವರ್ಷಗಳಿಂದ 'ಗೋರಿಲ್ಲಾ ಯುದ್ಧ ಮೊದಲಾದವುಗಳನ್ನು ಮಾಡಿ, ಸ್ವಾತಂತ್ರ್ಯದ ಸಲುವಾಗಿ ಅಮಿತ ಕಷ್ಟಪಟ್ಟವರು, ಇನ್ನಾದರೂ ಜಪಾನರಿಗೆ ಶರಣಾಗತರಾಗಲಾರರು

ಹಿಂದುಸ್ಥಾನದ ಗಡಿನಾಡಿನ ಮೇಲೆ ಮತ್ತೆ ಧಾಳಿಯಾರಂಭವಾಗಿದೆ ಚಿತಗಾಂಗಿಗೆ ಬಾಂಬೆಸೆದ ಬಳಿಕ ಜಪಾನರು ಈಗ ತಿರುಗಿ ಅಸ್ಸಾಮಿನ ಮೇಲೆ ಆಕ್ರಮಣ ಆರಂಭಿಸಿರುವರು ಜಪಾನರು ಅಸ್ಸಾಮಿನ ಮೇಲ್ಭಾಗವಾದ ಡಿಗ್ಬಾಯಿ ಜಿಲ್ಲೆಯನ್ನು ಆಕ್ರಮಿಸಲು ಯತ್ನಿಸುವಂತೆ ತೋರುತ್ತದೆ ಏಕೆಂದರೆ ಚೀನಕ್ಕೆ ಬರ್ಮಾ ರಸ್ತೆಯಿಂದ ಸಾಧನ ಸಾಮಗ್ರಿಗಳು ಹೋಗುವುದು ನಿಂತಿದ್ದರೂ ಅಸ್ಸಾಮ್ ಮೂಲಕ ಸಾಗುತಿತ್ತು ಉತ್ತರ ಅಸ್ಸಾಮಿನಲ್ಲಿ ಬ್ರಹ್ಮಪುತ್ರಾ ನದಿಯ ತೀರದಲ್ಲಿರುವ ಸದಿಯಾದಿಂದ ಚೀನದ ರಾಜಧಾನಿಯ ವರೆಗೆ ಹೊಸ ರಸ್ತೆಯು ನಿರ್ಮಾಣವಾಗುತಿದೆ ಈ ಪ್ರಾಂತದಲ್ಲಿ ವಿಮಾನ ಸಂಚಾರವೂ ಸಾಗುತಲಿದೆ ಜಪಾನರು ಈಗ ಅಸ್ಸಾಮಿಗೆ ಒಂಳುವುದನ್ನು ನೋಡಿದರೆ ಸದ್ಯ ಈ ಉದ್ದೇಶದಿಂದಲೇ ಇರಬಹುದು, ಚೀನಕ್ಕೆ ಅಸ್ಸಾಮಿನ ಮೂಲಕ ಹೋಗುವ ಸಹಾಯವನ್ನು ತಡೆಗಟ್ಟುವುದು ಅವರ ಉದ್ದೇಶವಿರಬೇಕು ಬ್ರಿಟಿಷ್ ಸೈನ್ಯಗಳು ಬರ್ಮಾದಿಂದ ಹಿಂಜರಿದು ಭಾರತ ಬರ್ಮಾ ಗಡಿನಾಡಿನಲ್ಲಿ ಕಲೇವಾ ಎಂಬಲ್ಲಿ ಬಂದು ನೆಲಸಿರುತ್ತವೆಯೆಂದು ತಿಳಿದಿದೆ ಇದು ಹಿಂದುಸ್ಥಾನಕ್ಕೆ ಕೇವಲ ಐವತ್ತು ಮೈಲು ಮಾತ್ರ ದೂರವಿದೆ ಈ ಊರಿನ ಮುಂಗಡೆ ಚಿಂದ್ವಿನ್ ನದಿ ಹರಿಯುತ್ತದೆ ಅದರ ಆಚೆ ದಡದಲ್ಲಿ ಜಪಾನ್ ಠಳವೂರಿದೆ ಬ್ರಿಟಿಷ್ ಸೈನ್ಯವು ಕಲೆವಾದಿಂದ ಮುಂದುವರಿದು ಹಿಂದುಸ್ಥಾನವನ್ನು ಹೊಡುವ ಮೊದಲು ಅದನ್ನು ತಡೆದಿಡಬೇಕೆಂದ. ಜಪಾನ್ನರು ಬಯಸಿದ್ದರೂ ಇರಬಹುದು ಬರ್ಮಕ್ಕೆ ಹೋಗಿರುವ ಸುಮಾರು ಮೂವತ್ತು ಸಾವಿರ ಸೈನಿಕರಲ್ಲಿ ಎಷ್ಟು ಮಂದಿ ಮರಳಿಬಂದಿರುವರೋ ತಿಳಿದಿಲ್ಲ ಹೇಗಿದ್ದರೂ ಬ್ರಿಟಿಷ್ ಸೈನ್ಯದ ಬಹುಭಾಗವು ಬರ್ಮಾದಿಂದ ಹಿಂಜರಿದು ಬಂದಿದ್ದು, ಅದು ಹಿಂದುಸ್ಥಾನದಲ್ಲಿ ತಳವೂರಿದರೆ, ಇಲ್ಲಿನ ರಕ್ಷಣೆಗೆ ವಿಶೇಷ ಸಹಾಯವಾದೀತೆಂದು ತಿಳಿದು ಜಪಾನರು ಅವರನ್ನು ತಡೆಗಟ್ಟುವ ಉಪಾಯವನ್ನು ಕೂಡಲೇ ಮಾಡಿರಬಹುದು ಅದಕ್ಕಾಗಿಯೇ ಜಪಾನರು ಬ್ರಿಟಿಷ್ ಸೈನಿಕರನ್ನು ಬೆನ್ನಟ್ಟಿ ಒರುತ್ತಿದ್ದಾರೆ

ಬರ್ಮಾದ ಪೂರ್ವ ದಿಕ್ಕಿನ ದೃಶ್ಯವನ್ನು ನೋಡಿದರೆ ಅಲ್ಲಿ ಶಾಂತತೆ ಕಂಡುಬರುವುದಿಲ್ಲ ಕಾರಿಜಿಡೋರ್ ಕೋಟೆಯ ಪತನದಿಂದ ಅಮೆರಿಕಕ್ಕೆ ಬಲವಾದ ಪೆಟ್ಟುಬಿತ್ತು ಇದರಿಂದ ಅಮೆರಿಕವು ಅಸಂಖ್ಯ ಸೈನಿಕರನ್ನು ಮತ್ತು ಅಪಾರ ಯುದ್ಧ ಸಾಮಗ್ರಿಗಳನ್ನು ಕಳಕೊಂಡಿತು ಇದರಿಂದ ಫಿಲಿಪೈನ್ ಕಾಳಗವೇ ಕೊನೆಗೊಂಡಿತು ಆದರೆ ಇದಕ್ಕಾಗಿ ನಿರಾಶರಾಗಬೇಕಾಗಿಲ್ಲ ಜನರಲ್ ಮೆಕಾರ್ಥರರು ಫಿಲಿಪೈನನ್ನು ಉದ್ಧರಿಸಲೆಂದೇ ಆಸ್ಟ್ರೇಲಿಯಕ್ಕೆ ತೆರಳಿ ಅಲ್ಲಿಂದ ಜಪಾನರನ್ನು ಇದಿರಿಸ ತೊಡಗಿದ್ದಾರೆ ನ್ಯೂಗಿನಿಯಲ್ಲಿ ಜಪಾನು ಮತ್ತು ಆಸ್ಟ್ರೇಲಿಯನ್ ವೈಮಾನಿಕ ಚಟುವಟಿಕೆಗಳು ಹೆಚ್ಚಾಗಿವೆ ಈ ಸಂದರ್ಭದಲ್ಲಿ ಕಳೆದವಾರ, ಆಸ್ಟ್ರೇಲಿಯ ಮತ್ತು ಸಲಮನ್ ದ್ವೀಪಗಳ ಅಂತರದಲ್ಲಿರುವ ಕೋರಲ್ ಸಮುದ್ರದಲ್ಲಿ ಘೋರ ನೌಕಾಯುದ್ಧವು ನಡೆಯಿತು ಈ ಯುದ್ಧವು ಆರಂಭವಾದ ನಾಲು ದಿನಗಳ ತನಕ ಯಾವ ಸುದ್ದಿಯೂ ಪ್ರಕಟವಾಗಲಿಲ್ಲ ಇನ್ನೂ ಆ ಯುದ್ಧದ ಫಲಿತಾಂಶ ಹೊರಬರಲಿಲ್ಲ ಆಸ್ಟ್ರೇಲಿಯದ ಬಳಿ ನೌಕಾ ಪ್ರಭುತ್ವವನ್ನು ಸ್ಥಾಪಿಸಲು ಜಪಾನರು ಬಂದು ಈ ಯುದ್ಧ ಪ್ರಾರಂಭಿಸಿದರೂ ಇರಬಹುದು ಈ ಯುದ್ಧದ ಪ್ರಾರಂಭದಲ್ಲಿ ಮಿತ್ರರಿಗೆ ಒಳ್ಳೆಯ ವಿಜಯ ದೊರಕಿತು ಹಲವು ಜಪಾನೀ ನೌಕೆಗಳು ಮುಳುಗಿಸಲ್ಪಟ್ಟವು ವಿವರವಿನ್ನೂ ಪ್ರಸಿದ್ಧವಾಗಿಲ್ಲವಾದರೂ ಇದು ಜಾವಾ, ಸಿಲೋನ್ ಮೊದಲಾದೆಡೆ ನಡೆದ ನೌಕಾಯುದ್ಧದಷ್ಟೇ ತೀವ್ರತರವಾದುದಾಗಿತ್ತೆನ್ನಲು ಅಡ್ಡಿಯಿಲ್ಲ

ಹೀಗೆ, ಯೂರೋಪಿನಲ್ಲಿ ಹಲವಾರು ರಾಷ್ಟ್ರಗಳಲ್ಲಿ ಅಶಾಂತಿ ಅನ್ಯಾಯ ಅನಾಚಾರಗಳು ನಡೆಯುತ್ತಲೇ ಇವೆ ಎಲ್ಲೆಲ್ಲೂ ಯುದ್ಧ ಜ್ವರದ ಬಿಸಿಯೇರುತ್ತಲೇ ಇದೆ ಆ ಬಿಸಿಯು ವಿಶ್ವಕ್ಕೂ ಉಗ್ರವಾಗಿ ತಟ್ಟಿರುವುದು ನಾರ್ವೆಯಲ್ಲಿ ಹಲವು ಜರ್ಮನ್ ಗುಪ್ತಚಾರರು ಸೆರೆಹೊಂದಿರುವರು ಫ್ರಾನ್ಸಿನಲ್ಲೂ ಬಹುಮಂದಿಯಿರುವರೆಂದು ತಿಳಿದಿದೆ ಗೋರಿಂಗರೇ ಫ್ರಾನ್ಸಿಗೆ ಹೋಗಿ, ಅಲ್ಲಿ ವಿಶೇಷ ಸಭೆ ಸೇರಿಸಿ ವಿಚಿ ಅಧಿಕಾರಿಗಳೊಡನೆ ಸಂಭಾಷಣೆ ನಡೆಸಿದರು ಮೆಡಿಟರೇನಿಯನ್ ಯುದ್ಧದ ಬಗ್ಗೆ ಫ್ರೆಂಚ್ ಇಟಲಿಯನ್ ಸಹಕಾರ ಪಡೆವುದೇ ಇದರ ಉದ್ದೇಶವಿರಬೇಕೆಂದು ಬೇರೆ ಹೇಳಬೇಕಾಗಿಲ್ಲ ಮಾಲ್ಟಾ ದ್ವೀಪದ ಮೇಲೆ ನಿರಂತರ ಬಾಂಬಿನ ಮಳೆ ಸುರಿಯುತಲೇ ಇದೆ ಮೆಡಿಟರೇನಿಯಿನಲ್ಲಿ ನಾಜೀ ವಿಮಾನಗಳು ಕೆಲವು ಬ್ರಿಟಿಷ್ ನೌಕೆಗಳನ್ನು ಮುಳುಗಿಸಿದವು ಸೆಂಟ್ ಲಾರೆನ್ಸ್ ಬಳಿ ಶತ್ರು ಸಬ್‌ಮೆರಿನ್ ಚಟುವಟಿಕೆ ಜೋರಾಗಿದೆ ಉತ್ತರ ಸಮುದ್ರ ಮೂಲಕ ರಶ್ಯಕ್ಕೆ ಹೋಗುತ್ತಿರುವ ಬ್ರಿಟಿಷ್ ವ್ಯಾಪಾರೀ ಹಡಗಗಳಿಗೆ ಜರ್ಮನ್ ಪೀಡೆ ತಪ್ಪಿಲ್ಲ ಹೀಗೆ ನೌಕಾಯುದ್ಧವೂ ನಿರಂತರ ನಡೆಯುತ್ತಲಿದ್ದು ಇಕ್ಕಡೆಯವರಿಗೂ ಅಪಾರ ನಷ್ಟಗಳಾಗುತ್ತವೆ ಹೀಗೆ ಒಟ್ಟಿನಿಂದ ರಶ್ಯದಲ್ಲಿ ಜರ್ಮನ್ ರಶ್ಯನ್ ಸೈನಿಕರ ಘನಘೋರ ಭೂಯುದ್ಧವೂ, ಕೋರಲ್‌ನ ನೌಕಾ ಸಂಗ್ರಾಮವೂ, ಚೀನದ ಗೋರಿಲ್ಲಾ ಹೊಸ ಧಾಳಿಯೂ ಈ ವಾರದ ವಿಶೇಷ ಘಟನೆಗಳಾಗಿರುವವು.

The Canara Banking Corporation Ltd.

(Incorporated in British India with limited liability

Estd. 1906

OUR RATES OF INTEREST ON DEPOSITS

Current	1%	p. a.
Savings Bank	2½%	,,
Short-term	1¾%	,,
FIXED FOR 3 MONTHS	2%	,,
6 ,,	2¼%	,,
9 ,,	2½%	,,
12 ,,	3%	,,
24 ,,	3½%	,,

Advances made at cheap rates of interest against approved securities and Banking business of every description transacted.

ಸ್ವದೇಶಾಭಿಮಾನಿ

ತಾರೀಖು 22—5—1942

ಪತ್ರಿಕಾ ನಿರ್ಬಂಧ

ಯುದ್ಧಕಾಲದಲ್ಲಿ ಪತ್ರಿಕೆಗಳ ಮೇಲೆ ಸರಕಾರವು ಸಾಮಾನ್ಯವಾಗಿ ನಿರ್ಬಂಧ ಹಾಕುವುದು ಸಹಜವಿದೆ. ಇಂದಿನ ಮಹಾಯುದ್ಧವು ಪ್ರಾರಂಭವಾದ ಕಾಲದಲ್ಲಿ ಭಾರತದ ಪತ್ರಿಕೆಗಳ ಮೇಲೆ ಎಷ್ಟೋ ಹಲವುತರದ ನಿರ್ಬಂಧಗಳು ಹಾಕಲ್ಪಟ್ಟವು. ಆದರೆ ಭಾರತ ಸರ್ಕಾರ ಮತ್ತು ಪತ್ರಿಕಾ ಸಂಪಾದಕರಲ್ಲಿ ಒಂದು ಒಡಂಬಡಿಕೆಯಾಗಿ, ಪತ್ರಿಕೆಗಳ ಮೇಲೆ ಪ್ರಯೋಗ ತೆಗೆದುಕೊಳ್ಳುವಾಗ ಪತ್ರಿಕಾ ಸಂಪಾದಕರ ಸ್ಥಾಯಿ ಸಮಿತಿಯ ಸಲಹೆಯನ್ನು ಕೇಳಿಕೊಳ್ಳುವುದಾಗಿ ಒಪ್ಪಿಗೆಯಾಗಿತ್ತು.

ಇದರಿಂದ ಪತ್ರಿಕೆಗಳ ಮೇಲೆ ಬೀಳುವ ಗದಾಪ್ರಹಾರವು ಸ್ವಲ್ಪ ಮಟ್ಟಿಗೆ ತಡೆಯಲ್ಪಡುವಂತಾಯಿತು. ಈ ಒಡಂಬಡಿಕೆಯು ಕಳೆದ ಒಂದು ವರ್ಷದತನಕ ಚೆನ್ನಾಗಿ ಪಾಲಿಸಲ್ಪಟ್ಟಿದೆ ಯೆಂದೂ ಹೇಳಬಹುದು. ಆದರೆ ಇತ್ತೀಚೆಗೆ ಕೆಲ ಪತ್ರಿಕೆಗಳ ಮೇಲೆ ಅವುಗಳು ಮಾರ್ಗಮೀರಿ ನಡೆದಿವೆ ಯೆಂಬ ಆರೋಪದಿಂದ ನಿರ್ಬಂಧ ಬೀಳತೊಡಗಿದೆ. ಪತ್ರಿಕಾ ಸಂಪಾದಕರಿಗೆ ಶಿಕ್ಷೆ ಜುಲ್ಮಾನೆಗಳನ್ನು ವಿಧಿಸಲಾಗುತ್ತದೆ. ಇದರಿಂದ ತಿರುಗಿ ಪತ್ರಿಕಾ ಸಂಚಾಲನವು ನಿರ್ಬಂಧಕ್ಕೊಳಗಾಗಿದೆ.

ಈ ಕುರಿತು ಸರಕಾರ ಮತ್ತು ಪತ್ರಿಕಾ ಸಂಪಾದಕರ ಸ್ಥಾಯಿ ಸಮಿತಿ ಅಧ್ಯಕ್ಷರೊಳಗೆ ಪತ್ರವ್ಯವಹಾರ ನಡೆಯಿತು. ಸರಕಾರದವರು ಕೆಲ ಪತ್ರಿಕೆಗಳಲ್ಲಿ ಪ್ರಕಟವಾಗುವ ಅಗ್ರಲೇಖ, ಯುದ್ಧಸುದ್ದಿ, ಟೀಕೆ ಟಿಪ್ಪಣಿಗಳಲ್ಲಿ ಶತ್ರು ವಿಜಯವು ಶಕ್ಯವಿದೆಯೆಂದೂ ಹಿಂದುಸ್ಥಾನದ ರಕ್ಷಣೆ ಸರಕಾರದಿಂದ ಶಕ್ಯವಿಲ್ಲವೆಂದೂ ಮೊದಲಾಗಿ ಬರೆಯುವುದರಿಂದ ಅಂಥವುಗಳ ಮೇಲೆ ಸಲಹೆ ಕೇಳದೆ ಕ್ರಮ ತೆಗೆದುಕೊಳ್ಳಲಾಗುವುದೆಂದು ತಿಳಿಸಿದ್ದಾರೆ. ಅಂತೂ ಇದರಿಂದ ಇನ್ನು ಮುಂದೆ ಪತ್ರಿಕಾ ಸ್ವಾತಂತ್ರ್ಯಕ್ಕೆ ಹೆಚ್ಚಿನ ನಿರ್ಬಂಧ ವುಂಟಾಯಿತೆಂಬುದು ಸ್ಪಷ್ಟವಾಗಿದೆ.

ಭದ್ರಾವತಿ ಪ್ರಕರಣ

ಭದ್ರಾವತಿಯ ಕೂಲಿಗಾರರ ಮೇಲೆ ಪೊಲೀಸಿನವರು ಇದೇ ತಿಂಗಳ ಮೂರನೆಯ ತಾರೀಕಿನಂದು ಗುಂಡುಹಾರಿಸಿದರು. ಇದರಿಂದ ಮೂವರು ಮರಣ ಹೊಂದಿದ್ದು ಅನೇಕರು ಗಾಯಗೊಂಡರು. ಮೃತಿಹೊಂದಿದವರಲ್ಲಿ ಮೂರು ವರ್ಷದ ಮಗುವೊಂದೂ ಸೇರಿತ್ತು. ಮಾದರಿಯ ಸಂಸ್ಥಾನವೆನಿಸಿದ ಮೈಸೂರಲ್ಲಿ ಇಂತಹ ಅನಾಹುತಗಳು ಆಗಾಗ ಆಗುತ್ತಿರುವುದು ಸಂಸ್ಥಾನದ ಕೀರ್ತಿಗೆ ಕಳಂಕತರುವುದು!

ವಿದುರಾಶ್ವತ್ಥದ ಕಹಿ ನೆನಪು ಇನ್ನೂ ಪ್ರಜೆಗಳಲ್ಲಿ ಅಳಿಸಿಹೋಗಿರ ಬಹುದೋ ಇಲ್ಲವೋ, ಇಷ್ಟರಲ್ಲಿಯೇ ಈ ಪ್ರಸಂಗವೂ ನಡೆದದ್ದು ಪ್ರಜೆಗಳ ಮನಸ್ಸಿನ ಶಾಂತಿ ಕದಡಿಸುವಂತಿದೆ. ಸಂಸ್ಥಾನಗಳಲ್ಲಿ ಈ ರೀತಿಯ ಅಧಿಕಾರವು ಇನ್ನೂ ನಡೆಯುತ್ತಿರುವುದು ಅಪಮಾನಕರ!

ಶಾಂತವಾಗಿದ್ದ ಜನತೆಯು ತಮ್ಮ ಬೇಡಿಕೆಗಳನ್ನು ಪ್ರದರ್ಶಿಸಿದಾಗ, ಅವರ ಮೇಲೆ ಹೀಗೆ ಗುಂಡುಹಾರಿಸಲಾಯಿತೆಂದು ಮೈಸೂರು ಕಾಂಗ್ರೆಸಿನವರು ಪ್ರಕಟಿಸಿದ್ದಾರೆ. ಜನತೆ ಪೋಲೀಸ್ ಸ್ಟೇಶನಿನ ಮೇಲೆ ಕಲ್ಲುಗಳನ್ನೆಸೆದಾಗ ತಾವು ಗುಂಡುಹಾರಿಸಬೇಕಾಗಿ ಬಂತೆಂದು ಅಧಿಕಾರಿಗಳು ಹೇಳುತ್ತಾರೆ. ಇಂತಹ ಸಂದರ್ಭದಲ್ಲಿ ನಿಷ್ಪಕ್ಷಪಾತದ ವಿಚಾರಣಾಮಂಡಳವನ್ನೇರ್ಪಡಿಸಿ ವಿಚಾರಣೆನಡೆಸುವುದುಯೋಗ್ಯವಾಗಿದೆ.

ಪ್ರಪಂಚವೇ ಇಂದು ಅಲ್ಲೋಲ ಕಲ್ಲೋಲವಾಗುತ್ತಿದೆ. ಮಹಾ ಮಹಾ ಸಾಮ್ರಾಜ್ಯಗಳೇ ತಲೆಕೆಳಗಾಗುವುದರಲ್ಲಿವೆ. ಪ್ರಜೆಗಳಿಗೆ ಶಾಂತಿಯುಂಟಾಗದೆ ಇಂದಿನ ಕ್ರಾಂತಿ ನಿಲ್ಲುವಂತಿಲ್ಲ; ಶತ್ರುವು ಬಾಗಿಲ ಬಳಿ ಬಂದು ನಿಂತಿರುವಾಗ, ಸಂಸ್ಥಾನಿಕರಾದರೂ ಪ್ರಜೆಗಳ ಮನಸ್ಸನ್ನು ಉದ್ವೇಗಗೊಳಿಸುವಂತಹ ಕೆಲಸ ಮಾಡಿದರೆ ದರೆ ಅದು ಪ್ರಮಾದವಾಗುವುದು.

ರಾಜಾಜಿ ಪ್ರಚಾರ

ಅಲ್ಲಾಬಾದಿನಲ್ಲಿ ಸೇರಿದ ಅಖಿಲ ಭಾರತ ಕಾಂಗ್ರೆಸ್ ಕಮಿಟಿ ಅಧಿವೇಶನದಲ್ಲಿ ರಾಜಾಜಿಯವರ 'ಮದ್ರಾಸು ನಿರ್ಣಯ'ವು ತಿರಸ್ಕೃತವಾಗಿ ಹಿಂದುಸ್ಥಾನವನ್ನು ತುಂಡುಮಾಡುವ ಘೋರ ಹೆಗೊಪ್ಪದೆ, ಕಾಂಗ್ರೆಸಿನವರು ಜಗತ್ ನಾರಾಯಣಲಾಲರ 'ಅಖಂಡ ಭಾರತ' ನಿರ್ಣಯವನ್ನು ಸಮರ್ಥಿಸಿದರಷ್ಟೆ? ಆದರೆ ರಾಜಾಜಿಯವರು ಅದರಿಂದ ನಿರಾಶರಾಗದೆ, ವರ್ಕಿಂಗ್ ಕಮಿಟಿ ಸದಸ್ಯತ್ವಕ್ಕೆ ರಾಜಿನಾಮೆಯಿತ್ತು ಹೊರಬಂದು ಈಗ ತನ್ನ ನಿರ್ಣಯದ ವಿಷಯ ಜನತೆಗೆ ಬೋಧಿಸಲು ಪ್ರಚಾರ ಕಾರ್ಯವನ್ನು ಪ್ರಾರಂಭಿಸಿದ್ದಾರೆ. ಈ ಪ್ರಚಾರ ಕಾರ್ಯಕ್ಕಾಗಿ ಮುಂದಿನ ವಾರ, ತಾ. ೨೮ರಂದು ರಾಜಾಜಿ ಮಂಗಳೂರಿಗೂ ಬರಲಿದ್ದಾರೆ.

ಇಷ್ಟರಲ್ಲಿಯೇ ದೇಶದಾದ್ಯಂತ ರಾಜಾಜಿ ನಿರ್ಣಯದ ವಿಷಯ ಚರ್ಚೆಗಳು ನಡೆಯುತ್ತಿವೆ. ಮಹಾತ್ಮಾಜಿಯವರೊಡನೆ, ಈ ಕುರಿತು ಅಭಿಪ್ರಾಯ ಕೇಳಲು ಅವರು, ಇದರಲ್ಲಿ ಯಾರು ಸರಿ ಯಾರು ತಪ್ಪೆಂಬುದನ್ನು ಭವಿಷ್ಯವೇ ನುಡಿಯುವುದು ಎಂಬೀ ರೀತಿಯ ನಿರ್ಧಾರಕವಲ್ಲದ ಉತ್ತರ ಕೊಟ್ಟಿದ್ದಾರೆ. ಅಜಾದ್, ನೆಹರು, ರಾಜೇಂದ್ರ ಬಾಬು, ಸತ್ಯಮೂರ್ತಿ ಮೊದಲಾದ ಪ್ರಮುಖರು ಇವರನ್ನು ಖಂಡಿಸಿ ಅಭಿಪ್ರಾಯ ಸಾರುತ್ತಿದ್ದಾರೆ. ರಾಜಾಜಿಗೆ ಕೂಲಿಗಾರರು, ಸಮತಾವಾದಿಗಳು ಇನ್ನು ಕೆಲವು ಕಾಂಗ್ರೆಸು ಮುಸ್ಲಿಂಲೀಗು ಮುಖಂಡರು ಬೆಂಬಲವನ್ನು ಕೊಡುತ್ತಿದ್ದಾರೆ.

ರಾಜಾಜಿ ತನ್ನ ನಿರ್ಣಯಕ್ಕೆ ಜನತೆಯ ಒಪ್ಪಿಗೆಯನ್ನು ಮೊದಲು ಪಡೆದು ಆ ಮೇಲೆ ಕಾಂಗ್ರೆಸಿನಿಂದ ಒಪ್ಪಿಗೆ ಪಡೆಯಲು ಈ ರೀತಿ ಪ್ರಚಾರಕ್ಕೆ ಹೊರಟಿದ್ದಾರೆ. ಜಪಾನ್ ಧಾಳಿಯಾಗುವ ಸಂಭವದಲ್ಲಿ ದೇಶಕ್ಕುಂಟಾಗುವ ಹಾನಿಯನ್ನು ಲಕ್ಷಿಸಿಕೊಂಡು, ದೇಶದ ರಕ್ಷಣೆಗಾಗಿ ನಾವಿಂದು ಕಾಂಗ್ರೆಸ್ ಲೀಗ್ ಒಪ್ಪಂದ ಮಾಡಿಕೊಳ್ಳಬೇಕೆಂದು ರಾಜಾಜಿ ಹೇಳುತ್ತಾರೆ. ರಾಜಾಜಿಯವರ ಉದ್ದೇಶವು ಹಿಂದು ಮುಸ್ಲಿಂ ಐಕ್ಯಸಾಧನೆಯಾಗಿದ್ದರೆ ಆ ಕುರಿತು ಯಾರಿಗೂ ಭಿನ್ನಮತವಿಲ್ಲ, ಆದರೆ ಅವರು ಹೇಳುವ ಐಕ್ಯಸಾಧನೋಪಾಯದ ಕುರಿತು ಮಾತ್ರ ಜನತೆ ಚೆನ್ನಾಗಿ ವಿಚಾರಮಾಡಿಕೊಳ್ಳಬೇಕಾಗಿದೆ.

ವಸಂತಧಾಳಿ

ರಶ್ಯದಲ್ಲಿ ಹಿಟ್ಲರನ ವಸಂತಕಾಲದ ಧಾಳಿಯು ಈಗ ಪ್ರಾರಂಭವಾದಂತೆ ತೋರುತ್ತದೆ. ಆತನ ಹಿಂದಿನ ಅನೇಕ ಸಿದ್ಧತೆಗಳಂತೆ, ಇದೂ ಕೂಡಾ ಪ್ರಚಂಡವಾಗಿಯೇ ಇರುವುದು.

ಸುಮಾರು ಇಪ್ಪತ್ತನಾಲ್ಕು ಶಸ್ತ್ರಸಿದ್ಧ ಸಮರದಲಗಳು, ಸಾವಿರದಿಂದ ಎರಡು ಸಾವಿರದ ವರೆಗಿನ ವಿಮಾನ ಬಲ ಮಾತ್ರವಲ್ಲದೆ ಅಸಂಖ್ಯ ಪದಾತಿ ಸೈನ್ಯ ಇವುಗಳನ್ನು ಒಟ್ಟುಗೂಡಿಸಿ ಹಿಟ್ಲರನು ರಶ್ಯದ ಮೇಲೆ ಪುನಃ ಎರಗಿದ್ದಾನೆ!

ಆದರೆ 'ಕೆಂಪು ಸೈನ್ಯ'ವು ತಟಸ್ಥವಾಗಿಲ್ಲ; ಹಿಟ್ಲರನ ಈ ಅತ್ಯಾಚಾರವನ್ನು ಇದಿರಿಸಲು ರಶ್ಯನರೂ ಪ್ರಚಂಡ ಸನ್ನಾಹ ಮಾಡಿಯೇ ಇದ್ದಾರೆ. ಇಂದಿನೀ ರಶ್ಯಾ ಜರ್ಮನ್ ಯುದ್ಧವು ಇಂದಿನ ಸಮರೇತಿಹಾಸದಲ್ಲಿಯೇ ಘನಘೋರವಾಗಿ ಪರಿಣಮಿಸಿದೆ!

ಈ ಯುದ್ಧವು ಎಷ್ಟು ಬೇಗ ಕೊನೆಗೊಂಡಿತೋ ಅಷ್ಟು ಒಳ್ಳೆಯದೆಂದು ಹಿಟ್ಲರನು ಬಯಸುತ್ತಾನೆ. ಏಕೆಂದರೆ ರಶ್ಯದಲ್ಲಿಯೇ ಇನ್ನೊಂದು ಹಿಮಗಾಲವನ್ನು ಕಳೆಯಬೇಕಾಗಿ ಬಂದರೆ ಹಿಟ್ಲರನಿಗದು ಮರಣಾಂತಿಕವಾಗುವುದೆಂದು ಎಲ್ಲರೂ ಬಲ್ಲರು. ಅದಾಗಿ ಬರುವ ಹಿಮಗಾಲದ ಮೊದಲು, ರಶ್ಯದ ಕಾಳಗ ಕೊನೆಗೊಳಿಸಬೇಕೆಂದು ಅತನು ನಿರ್ಧರಿಸಿರಬೇಕು.

ಅಂತೂ ರಶ್ಯದ ಯುದ್ಧವು ಇಂದು ತಿರುಗಿ ಪ್ರಚಂಡವಾಗಿರುವುದು. ಹಿಟ್ಲರನು ಹೊಸ ಹುಮ್ಮಸಿನಿಂದ ಮುನ್ನುಗ್ಗಿ ಬರುತ್ತಾನೆ ರಶ್ಯದ ಕೆಂಪು ಸೈನಿಕರು ರಕ್ತವನ್ನು ನೀರಿನಂತಾದರೂ ಚೆಲ್ಲಿ ಸ್ವಾತಂತ್ರ್ಯಕ್ಕಾಗಿ ಶತ್ರುವನ್ನು ತೀವ್ರ ಎದುರಿಸಿ ನಿಂತಿದ್ದಾರೆ!

ಪುನಃ ಚೀನದ ಮೇಲೆ

ಬರ್ಮದ ಯದ್ಧವನ್ನು ಸಾಧಾರಣ ಕೊನೆಗೊಳಿಸುತ್ತಾ ಬಂದ ಜಪಾನ್ ಪುನಃ ಚೀನದ ಮೇಲೇರಿ ಹೋಗಿರುವುದು. ಬರ್ಮದಲ್ಲಿದ್ದ ಜಪಾನ್ ಸೈನ್ಯ ಸಹಾಯವು ಆ ಕಡೆ ಸರಿಯುತ್ತಿದ್ದು ಅವರು ಇಂಡೋ ಚೀನ ಮತ್ತು ಯುನಾನ್ ಪ್ರಾಂತದ ಗಡಿಯಲ್ಲಿ ಸೇನೆ ಸಂಗ್ರಹಿಸುತ್ತಿರುವುದಾಗಿ ತಿಳಿದು ಬಂದಿದೆ. ಚೀನದ ಪೂರ್ವ ಮತ್ತು ಪಶ್ಚಿಮ ದಿಕ್ಕುಗಳಲ್ಲಿ ಈಗ ಯುದ್ಧ ನಡೆಯುತ್ತಲಿದೆ. ಬರ್ಮ ದೇಶದ ಗಡಿದಾಟಿ ಜಪಾನರು ನೂರಾರು ಮೈಲುಗಳಂತರ ಮುಂದುವರಿದಿರುವರು. ಹೀಗೆ ತಿರುಗಿ ಚೀನಕ್ಕೆ ಗಂಡಾಂತರವೊದಗಿದೆ.

ಚೀನೀಯರಾದರೂ ಜಪಾನರೊಡನೆ ಹೋದ ಹೋದೆಡೆಗಳಲ್ಲಿ ಕಾಳಗ ಕೊಡುತ್ತಾ ಬಂದಿದ್ದರು. ಒಂದಲ್ಲ ಒಂದು ದಿನ ಜಪಾನರು ಅಸಂಖ್ಯ ಸೈನ್ಯ ಸಂಗ್ರಹಮಾಡಿ ಕೊನೆಯ ಕಾಳಗ ಕೊಡುವರೆಂದು ಅವರು ಚೆನ್ನಾಗಿ ತಿಳಿದಿದ್ದರು. ಬರ್ಮ ದೇಶದಲ್ಲಿ ಜಪಾನ್ ಸೈನ್ಯದೆದುರು ಚೀನೀ ದಂಡು ಕೊನೆತನಕ ಮಾಡಿದ ಕಾಳಗವು ಇತಿಹಾಸಪ್ರಸಿದ್ಧವಾಗಿದೆ.

ತಿರುಗಿ ಚೀನದ ಮೇಲೇರಿ ಬಂದಿರುವ ಜಪಾನ್ ಸೈನಿಕರನ್ನು ಚೀನೀಯರು ಜೋರಿನಿಂದ ಪ್ರತಿಭಟಿಸಿ ಕಾದಾಡುತ್ತಿದ್ದಾರೆ. ಬರ್ಮ ರಸ್ತೆಯನ್ನು ಕಡಿದು ಚೀನಕ್ಕೆ ಸಹಾಯ ಸಿಗುವಂತೆ ಮಾಡುವುದರಿಂದ ತಮ್ಮ ಬಹುಭಾಗದ ಕೆಲಸ ಕೊನೆಗೊಂಡಂತಾಯಿತೆಂದು ಜಪಾನರು ಹಿಗ್ಗುತ್ತಿರಬಹುದು. ಚೀನವು ಇದರಿಂದ ತೊಂದರೆಗೊಳಗಾದರೂ ಕಂಗೆಟ್ಟಿರುವುದಿಲ್ಲ. ಇನ್ನೂ ಚೀನಕ್ಕೆ ಸಹಾಯ ಸಾಧನಗಳು ಬರುತ್ತಿದ್ದು ಅವರು ಹುರುಪಿನಿಂದ ಹೋರಾಡುತ್ತಲಿದ್ದಾರೆ.

ನೋಟಗಳು....

ಈ ವಾರ ರಾಜಾಜಿ ಮಂಗಳೂರಿಗೆ ಬರುತ್ತಾರೆ! ಕಾಂಗ್ರೆಸು ನಿರಾಕರಿಸಿದರೂ ತನ್ನನಿರ್ಣಯಕ್ಕೆಜನತೆಯ ಒಪ್ಪಿಗೆ ದೊರಕುವಂತೆ ಮಾಡಲು ಅವರು ಈಗ ಪ್ರಚಾರ ಮಾಡುತ್ತಿದ್ದಾರೆ.

卐

ರಾಜಾಜಿ ತನ್ನೀ ಪ್ರಚಾರಕ್ಕಾಗಿಯೇ ವರೆ ಉತ್ತರ ಹಿಂದುಸ್ಥಾನಕ್ಕೆ ಹೋಗುವ ಮೊದಲು, ತನ್ನ ಮದ್ರಾಸು ಪ್ರಾಂತದಲ್ಲಿ ಪ್ರಚಾರ ಪ್ರಾರಂಭಿಸಬೇಕೆಂದು ಮನಸ್ಸುಮಾಡಿರುವರು! ತನ್ನ ಜನರನ್ನು ಒಪ್ಪಿಸಿದ ಮೇಲೆ ಇತರರಲ್ಲಿಗೆ ಅವರು ಹೋಗುವರಂತೆ!

卐

ತನ್ನ ಜನರ ಒಪ್ಪಿಗೆ ಸಿಗದಿದ್ದರೆ ಇತರರಲ್ಲಿಗೆ ಹೋಗುವುದನ್ನು ನಿಲ್ಲಿಸುವರೇ ಎಂಬ ವಿಷಯವಾಗಿ ಇನ್ನೂ ಅವರು ಪ್ರಕಟಿಸಲಿಲ್ಲ!

卐

ಅಂಧ್ರ ಪ್ರಾಂತದ ಕಾಂಗ್ರೆಸಿನವರು ರಾಜಾಜಿಯ ಠರಾವನ್ನು ಮೊದಲೇ ವಿರೋಧಿಸಿದ್ದಾರೆ. ತಮಿಳು ಕಾಂಗ್ರೆಸ್ ಕಮಿಟಿಯೂ ರಾಜಾಜಿಗೆ ಅನುಕೂಲವಾಗಿರುವಂತೆ ತೋರುವುದಿಲ್ಲ. ಕೇರಳದ ಕಾಂಗ್ರೆಸಿನವರಾದರೂ ರಾಜಗೋಪಾಲಾಚಾರ್ಯರ ನಿರ್ಣಯವನ್ನು ಖಂಡಿಸಿದ್ದಾರೆ! ಕರ್ನಾಟಕ ಕಾಂಗ್ರೆಸಿನವರು ಅಲ್ಲಾಬಾದ್ ನಿರ್ಣಯವನ್ನೇ ಸಮರ್ಥಿಸುತ್ತಾರೆ!

卐

ಇಷ್ಟು ವಿರೋಧವಿದ್ದರೂ ರಾಜಗೋಪಾಲಾಚಾರ್ಯರು, ಧೈರ್ಯದಿಂದ ಪ್ರಚಾರ ಕಾರ್ಯವನ್ನು ಸಾಗಿಸುತ್ತಿರುವರು. ಕಾಂಗ್ರೆಸ್ ಕಮಿಟಿಗಳ ಆಶ್ರಯದಲ್ಲಿ ಅವರ ಪ್ರಚಾರ ಕಾರ್ಯ ಸಾಗದಿದ್ದರೂ ಅವರು ಅದಕ್ಕೆ ಬೇರೆ ವ್ಯವಸ್ಥೆಗಳನ್ನು ಮಾಡಿಕೊಳ್ಳುತ್ತಾರೆ!

卐

ರಾಜಾಜಿ ಒಳ್ಳೇ ಬುದ್ಧಿವಂತರೆಂದು ಪ್ರಸಿದ್ಧರಾಗಿದ್ದರು! ತಾನು ಬಹಳ ಬುದ್ಧಿವಂತನಾಗಿರುವೆನೆಂಬುದು ಈಗ ಅವರಿಗೇ ಸ್ವತಃ ತಿಳಿದುಬಂದಂತೆ ತೋರುತ್ತದೆ!

卐

ಈ ವಿಚಾರದಲ್ಲಿ ಯಾರು ಸರಿ; ಯಾರು ತಪ್ಪು ಎಂದು ಕೇಳಿದಾಗ ಗಾಂಧಿಜಿ ಭವಿಷ್ಯತ್ತೇ ಅದನ್ನು ನಿರ್ಣಯಿಸುವುದೆಂದು ಹೇಳಿದರು!

卐

ಭವಿಷ್ಯತ್ತು ಯಾವುದನ್ನು ನಿರ್ಣಯಿಸುವುದಿಲ್ಲ! ರಾಜಾಜಿಯ ವಿಚಾರ ಮಾತ್ರವೇಕೆ? ಹಿಟ್ಲರನ ಚರ್ಚಿಲರ ಸ್ವತಃ ಗಾಂಧಿಜಿಯವರ ಅದೃಷ್ಟವನ್ನೂ ಭವಿಷ್ಯತ್ತು ಖಂಡಿತ ನಿರ್ಣಯಿಸುವುದು!

ಜನವಾಣಿ: ಪ್ರತಿಯೊಬ್ಬ ಬ್ರಿಟಿಷನಿಗೆ-ಗಾಂಧಿಜಿಯವರ ಬಹಿರಂಗ ಪತ್ರ

ದಕ್ಷಿಣ ಆಫ್ರಿಕದಲ್ಲಿ ನಾನು ಆಗ ತಾನೆ ಸಾರ್ವಜನಿಕ ಸೇವೆಯನ್ನು ಕೈಕೊಂಡಾಗ ದಕ್ಷಿಣ ಆಫ್ರಿಕದಲ್ಲಿನ ಪ್ರತಿಯೊಬ್ಬ ಬ್ರಿಟಿಷನಿಗೆ ಒಂದು ಬಹಿರಂಗ ಪತ್ರವನ್ನು ಬರೆದಿದ್ದೆನು. ಅದರಿಂದ ಒಳ್ಳೆ ಪರಿಣಾಮವಾಯಿತು. ಜಗತ್ತಿನ ಸದ್ಯದ ಗಂಡಾಂತರಪರಿಸ್ಥಿತಿಯಲ್ಲಿ ಅದೇ ಮಾರ್ಗವನ್ನು ಮತ್ತೆ ಅನುಸರಿಸಬೇಕೆಂದು ನಾನು ಭಾವಿಸುತ್ತೇನೆ. ಈ ಸಲ ಜಗತ್ತಿನಲ್ಲಿಯ ಎಲ್ಲ ಬ್ರಿಟಿಷ್ ಜನತೆಗೆ ನಾನು ಬಿನ್ನವಿಸಿಕೊಳ್ಳಬೇಕಾಗಿದೆ. ತನ್ನ ರಾಷ್ಟ್ರದ ಆಡಳಿತಗಾರರಲ್ಲಿ ಅವನ ವಿಶ್ವಾಸವೇನೂ ಇರಲಿಕ್ಕಿಲ್ಲ. ಆದರೆ ಅಹಿಂಸೆಯ ಸಾಮ್ರಾಜ್ಯದಲ್ಲಿ ಪ್ರತಿಯೊಂದು ಸದ್ವಿಚಾರಕ್ಕೆ ಬೆಲೆಯಿದೆ. ಪ್ರತಿಯೊಂದು ಸಚ್ಛಬ್ದವು ಯೋಗ್ಯತೆಯುಳ್ಳದ್ದಾಗಿದೆ. 'ಜನತಾ ವಾಕ್ಯವೆ ಜನಾರ್ದನ ವಾಕ್ಯ'ವೆಂಬುದು ಕೇವಲ ಪುಸ್ತಕದ ಮೇಲಿನ ಸೂತ್ರವಾಕ್ಯವಲ್ಲ. ಮಾನವನ ಸ್ಥಿರವಾದ ಅನುಭವದಿಂದ ಹೊರಟ ವಾಕ್ಯವದು. ಆದರೆ ಅದಕ್ಕೊಂದು ಮಿತಿಯಿದೆ. ಅಹಿಂಸಾ ಕ್ಷೇತ್ರದಲ್ಲಿಯೆ ಅದರ ಸತ್ಯದ ಪ್ರತೀತಿಯಾಗಿರುತ್ತದೆ. ಹಿಂಸೆಯು ಮಾನವನ ಮತವನ್ನು ಆ ಕ್ಷಣದಲ್ಲಿ ಪೂರ್ಣವಾಗಿ ಕೆಡಿಸಿಬಿಡುತ್ತದೆ. ಆದರೆ ನಾನು ಕೇವಲ ಅಹಿಂಸಾ ಕ್ಷೇತ್ರದಲ್ಲಿಯೆ ಕೆಲಸ ಮಾಡುವವನಾದ್ದರಿಂದ ವ್ಯಕ್ತವಾದ ಇಲ್ಲವೆ ವ್ಯಕ್ತವಾಗದಿದ್ದ ಪ್ರತಿಯೊಂದು ಸದ್ವಿಚಾರವು ನನಗೆ ಮೂಲ್ಯವಾಗಿದೆ.

ಪ್ರತಿಯೊಬ್ಬ ಬ್ರಿಟಿಷನು ಕೂಡಲೆ ಏಶಿಯ ಮತ್ತು ಆಫ್ರಿಕೆಗಳಲ್ಲಿ ತನ್ನ ಆಳ್ವಿಕೆಯಲ್ಲಿರುವ ದೇಶಗಳನ್ನು ವಿಶೇಷತಃ ಹಿಂದುಸ್ಥಾನವನ್ನು ಬಿಟ್ಟುಗೊಟ್ಟು ಹೋಗಬೇಕೆಂದು ನನ್ನ ಬಿನ್ನಹ. ಅದಕ್ಕೆ ಪ್ರತಿಯೊಬ್ಬ ಬ್ರಿಟಿಷನು ಬೆಂಬಲ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಜಗತ್ತಿನ ಸುರಕ್ಷಿತೆಗಾಗಿ ಆ ಮಾರ್ಗವು ಅತ್ಯವಶ್ಯವಾಗಿದೆ. ನಾಝಿಜಂ ಮತ್ತು ಫೇಸಿಜಂದ ನಾಶಕ್ಕಾಗಿಯೂ ಅದು ಅತ್ಯವಶ್ಯ. ಇದರಲ್ಲಿ ಜಪಾನಿನ "ಇಜಂ"ವನ್ನೂ ನಾನು ಕೂಡಿಸಿರುವೆನು. ಒಂದುವೇಳೆ ಹಾಗೆ ಮಾಡದಿರೆ ಅದು ನಾನು ಮಾಡಿಕೊಂಡ ಬಿನ್ನಹವು ಮಾನ್ಯ ಮಾಡಲ್ಪಟ್ಟರೆ ಎಲ್ಲ ಮಿತ್ರ ರಾಷ್ಟ್ರಗಳ ಸೈನಿಕ ಯೋಜನೆಗಳಲ್ಲೆಲ್ಲ ಗಲಿಬಿಲಿ ಉಂಟಾಗುವದಲ್ಲದೆ ಗ್ರೇಟ್ ಬ್ರಿಟನಿನ ಸೈನಿಕ ಮುಖಂಡರು ಕೂಡ ಬೆಚ್ಚಿಬೀಳುವರು.

ನನ್ನ ಬಿನ್ನಹವು ಮಾನ್ಯಮಾಡಲ್ಪಟ್ಟರೆ ಬ್ರಿಟಿಷರಿಗೆ ಸ್ವಲ್ಪ ಹಾನಿಯಾಗುವದು. ಆದರೆ ಹಿಂದುಸ್ಥಾನ ಮತ್ತು ಆಫ್ರಿಕಗಳಲ್ಲಿ ಬ್ರಿಟಿಷ್ ಹಿತಸಂಬಂಧಗಳಿಗಾಗುವ ಈ ಹಾನಿಯನ್ನು ದಿನಾಲು ನಡೆಯುತ್ತಿರುವ ಈ ಯುದ್ಧದ ವೆಚ್ಚಕ್ಕೆ ಹೋಲಿಸಿ ನೋಡಿದರೆ ಏನೂ ಅನಿಸದು. ಮತ್ತು ನೈತಿಕ ದೃಷ್ಟಿಯಿಂದ ವಿಚಾರ ಮಾಡಿದರೆ ಬ್ರಿಟನು ಹಿಂದುಸ್ಥಾನ ಮತ್ತು ಜಗತ್ತಿಗೆ ಲಾಭವಾಗುವುದಲ್ಲದೆ ಮತ್ತೇನೂ ಇಲ್ಲ.

ಏಶಿಯ ಮತ್ತು ಆಫ್ರಿಕವನ್ನು ಬಿಟ್ಟುಹೋಗಬೇಕೆಂದು ನಾನು ಬ್ರಿಟಿಷರಿಗೆ ಹೇಳಿದರೂ ಸದ್ಯಕ್ಕೆ ಹಿಂದುಸ್ಥಾನದಮಟ್ಟಿಗೆ ಮಾತಾಡುವೆನು. ಹಿಂದುಸ್ಥಾನವು ಯುದ್ಧದಲ್ಲಿ ಭಾಗವಹಿಸಿದೆ ಎಂಬುದಾಗಿ ಬ್ರಿಟಿಷ್ ಮುತ್ಸದ್ದಿಗಳು ಒಳ್ಳೆ ನುಣ್ಣಗೆ ಹೇಳುವದುಂಟು. ಯುದ್ಧ ಸಾರಲ್ಪಡುವಾಗ ಔಪಚಾರಿಕ ರೀತಿಯಿಂದಲಾದರೂ ಹಿಂದುಸ್ಥಾನದ ಸಲಹೆ ತೆಗೆದುಕೊಂಡಿಲ್ಲ. ಅದನ್ನೇಕೆ ಕೇಳಬೇಕು? ಹಿಂದುಸ್ಥಾನವು ಹಿಂದೀಯರ ಒಡೆತನದ್ದಲ್ಲ. ಅದು ಬ್ರಿಟಿಷರದು. ಬ್ರಿಟಿಷರ ಸೊತ್ತೆಂದೂ ಅದನ್ನು ಕರೆಯುವದುಂಟು. ಸಾಧಾರಣವಾಗಿ ತಮ್ಮ ಮನಸ್ಸಿಗೆ ಬಂದ್ಹಾಂತೆ ಬ್ರಿಟಿಷರು ಇಲ್ಲಿ ವರ್ತಿಸುತ್ತಾರೆ. ಎಲ್ಲ ಯುದ್ಧಗಳನ್ನು ವಿರೋಧಿಸುತ್ತಿರುವ ನಾನು ಕೂಡ ವಿವಿಧ ರೀತಿಯಿಂದ ಯುದ್ಧಕರವನ್ನು ಕೊಡುವಂತೆ ಅವರು ಯೋಜಿಸಿದ್ದಾರೆ. ನಾನು ಕಳಿಸುವ ಪ್ರತಿಯೊಂದು ಪೋಸ್ಟಕಾರ್ಡಿಗೆ ಎಪಾವಾಣೆ ಪೋಸ್ಟಕಾರ್ಡಿಗೆ ೯ ಪಾವಾಣೆ ಯುದ್ಧಕರವೆಂದು ಕೊಡುತ್ತೇನೆ. ನಾನು ಕಳಿಸುವ ಪ್ರತಿಯೊಂದು ತಂತಿಗೆ ಎರಡಾಣೆ ಯುದ್ಧಕರ. ಈ ಭೀಕರವಾದ ಚಿತ್ರದ ಒಂದು ಚಿಕ್ಕ ಭಾಗವಿದು. ಆದರೆ ಇದರಿಂದ ಬ್ರಿಟಿಷರ ಜಾಣತನವು ವ್ಯಕ್ತವಾಗುವದು. ನಾನು ಅರ್ಥಶಾಸ್ತ್ರದ ವಿದ್ಯಾರ್ಥಿಯಾಗಿದ್ದರೆ ಯುದ್ಧಕ್ಕಾಗಿ ಹಿಂದುಸ್ಥಾನಕ್ಕೆ ಎಷ್ಟು ಹಣವನ್ನು ಕೊಡಲಿಕ್ಕೆ ಹಚ್ಚಿರುವರೆಂಬ ಬಗ್ಗೆ ಬೆಚ್ಚಿಬೀಳುವಂಥ ಒಂದು ಚಿತ್ರವನ್ನು ತೆಗೆಯುತ್ತಿದ್ದೆನು. ಅದಲ್ಲದೆ ಆತ್ಮಸಂತೋಷದಿಂದ ಎಂದು ಹಣ ಬೇರೆ ಎತ್ತಲಾಗುತ್ತದೆ. ಹೀಗೆ ಹೇಳುವದು ಅಪಾರ್ಥವೆ. ಗೆದ್ದ ರಾಷ್ಟ್ರಕ್ಕೆ ಯಾವ ಸೋತ ರಾಷ್ಟ್ರವಾದರೂ ಸ್ವಸಂತೋಷದಿಂದ ಹಣವನ್ನು ಕೊಡಲಾರದು. ಅವರಿಗೆ ಕೊಟ್ಟ ಹಣವು ಆ ಬಗೆಯದಾಗಲಾರದು. ಬ್ರಿಟಿಷನು ಎಂಥ ವಿಜಯಿ! ಅವನ ತನ್ನ ಆಸನದಲ್ಲಿ ಒಳ್ಳೆ ಭದ್ರವಾಗಿರುವನು. ಅವನು ಬ್ರಿಟನಿನಲ್ಲಿ ಕುಳಿತು ಹೀಗಾಗಬೇಕೆಂದು ತನ್ನ ಇಚ್ಛೆಯನ್ನು ಪ್ರದರ್ಶಿಸಿದ ಕೂಡಲೆ ಹಿಂದುಸ್ಥಾನದಲ್ಲಿ ಅದು ಕಾರ್ಯರೂಪದಲ್ಲಿ ಬರುವದು. ಅದುದರಿಂದ ವಿಜಯಿಯೆಂಬ ಅಧಿಕಾರದಿಂದ ಮತ್ತು ಇಲ್ಲಿ ತಳವೂರಿದ ಸೈನ್ಯದ ಬಲುಮೆಯಿಂದ ಹಿಂದುಸ್ಥಾನದ ಮೇಲೆ ಪ್ರಭುತ್ವ ನಡಿಸುವ ಬ್ರಿಟನು ಹಿಂದುಸ್ಥಾನದೊಡನೆ ಶಾಶ್ವತವಾದ ಯುದ್ಧವನ್ನು ಹೂಡಿದೆಯೆಂದು ಹೇಳಬಹುದು. ಬ್ರಿಟನಿನ ಯುದ್ಧದಲ್ಲಿ ಒತ್ತಾಯದಿಂದ ನೂಕಲ್ಪಟ್ಟ ಭಾರತಕ್ಕೆ ಇದರಿಂದ ಲಾಭವೇನಾಗಬೇಕು? ಹಿಂದೀ ಸೈನಿಕರ ಶೌರ್ಯದಿಂದ ಹಿಂದುಸ್ಥಾನಕ್ಕೆ ಯಾವ ಬಗೆಯ ಲಾಭವೂ ಆಗದು.

ಹಿಂದೂಸ್ಥಾನದಲ್ಲಿ ಜಪಾನರ ಹಾವಳಿ ಪ್ರಾರಂಭವಾಗುವ ಮೊದಲು ಬ್ರಿಟಿಷ ಸೈನಿಕರು ಹಿಂದೀ ಮತ್ತು ಇತರರು ಹಿಂದುಸ್ಥಾನದಲ್ಲಿಯ ಮನೆಮಾರುಗಳನ್ನೆಲ್ಲಾ ವ್ಯಾಪಿಸಿ ಬಿಡುವರು. ಮನೆಗಳಲ್ಲಿರುವವರನ್ನು ಒತ್ತಾಯದಿಂದ ಹೊರಗೆ ಹಾಕಲಾಗುತ್ತದೆ. ತಾವಾಗಿಯೇ ಅವರು ಹೊರಟು ಹೋಗಬೇಕೆಂದು ಅಪೇಕ್ಷಿಸಲಾಗುತ್ತದೆ. ಅವರಿಗೆ ಹೊರಟು ಹೋಗಲು ಸ್ವಲ್ಪ ಹಣ ಕೊಡಲಾಗುತ್ತದೆ. ಆ ಹಣದಿಂದ ಅವರು ಯಾವ ಸ್ಥಳವನ್ನೂ ಮುಟ್ಟರು! ಅವರ ಕಸಬೆಲ್ಲಾ ಹಾಳಾಗಿ ಹೋಗುವದು. ಅವರು ಗುಡಿಸಲುಗಳನ್ನು ಕಟ್ಟಿಕೊಳ್ಳಬೇಕು. ಜೀವನೋಪಾಯಗಳನ್ನು ಹುಡುಕಬೇಕು. ದೇಶಾಭಿಮಾನದ ಭಾವನೆಯಿಂದ ಇವರೇನು ತಮ್ಮ ಮನೆಮಾರುಗಳನ್ನು ಬಿಟ್ಟು ಹೋಗುವುದಿಲ್ಲ. ಕೆಲ ದಿವಸಗಳ ಹಿಂದೆ ಈ ಸಂಗತಿಯು ನನಗೆ ತಿಳಿದ ಕೂಡಲೇ ಆ ಮನೆಮಾರುಗಳನ್ನು ಕಳೆದುಕೊಂಡವರು ತ್ಯಾಗ ವೃತ್ತಿಯಿಂದ ಅದನ್ನು ಸಹಿಸಿಕೊಳ್ಳಬೇಕೆಂದು ನಾನು ಈ ಪತ್ರಿಕೆಯಲ್ಲಿ ಬರೆದಿದ್ದೆನು. ಆದರೆ ನನ್ನ ಸಹಕಾರಿಗಳು ಇದಕ್ಕೆ ವಿರೋಧ ಪ್ರದರ್ಶಿಸಿ ಆ ಹೋಗುವವರ ಕಡೆಗೆ ನೀವೆ ಹೋಗಿ ಅವರನ್ನು ಸಮಾಧಾನಪಡಿಸಿರಿ, ಇಲ್ಲವೇ ಅವಶ್ಯವಾದ ಕೆಲಸಮಾಡಲು ಯಾರು ಬೇಕಾದವರನ್ನು ಕಳಿಸಿರೆಂದು ನನಗೆ ಹೇಳಿದರು. ಅವರು ಸರಿಯಾದುದನ್ನೇ ಹೇಳಿದರು. ಈ ಬಡ ಜನರನ್ನು ಯೋಗ್ಯ ರೀತಿಯಿಂದ ನಡೆಸಿಕೊಳ್ಳಲಿಲ್ಲ. ಅವರನ್ನು ಮನೆಯಿಂದ ಹೊರಗೆ ಹಾಕಿದ ಬಳಿಕ ಬೇರೆ ಕಡೆಗೆ ಅವರಿಗೆ ಯೋಗ್ಯ ಮನೆಮಾಡಿಕೊಡುವದವಶ್ಯವಾಗಿತ್ತು.

ಪೂರ್ವಬಂಗಾಲದಲ್ಲಿಯ ಜನರು ಭೂ-ಜಲಚರರೆಂದು ಹೇಳಬೇಕಾಗುವುದು. ಅವರು ಭೂಮಿಯ ಮೇಲೆಯೂ ಅರ್ಧ ನೀರಿನಲ್ಲಿಯೂ ಅರ್ಧ ಇರುವರು. ಅವರು ಸಣ್ಣ ಸಣ್ಣ ದೋಣಿಗಳನ್ನು ಕಟ್ಟಿಕೊಂಡಿರುವರು. ಅವುಗಳಲ್ಲಿ ಅವರು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಂಚಾರ ಮಾಡುತ್ತಾರೆ. ಜಪಾನಿಗಳು ಆ ದೋಣಿಗಳ ಉಪಯೋಗ ಮಾಡಿಕೊಳ್ಳಬಹುದೆಂಬ ಭೀತಿಯಿಂದ ಅವನ್ನೆಲ್ಲ ತಮ್ಮ ವಶಕ್ಕೆ ಕೊಡಬೇಕೆಂದು ಸರಕಾರದವರು ವಿಧಿಸಿರುವರು. ಬಂಗಾಳವು ಈ ದೋಣಿಯನ್ನು ಬಿಟ್ಟುಕೊಡುವದೆಂದರೆ ಸರ್ವಸಾಧಾರಣ ತನ್ನ ಪ್ರಾಣಕೊಟ್ಟಂತೆ. ಆದುದರಿಂದ ಈ ದೋಣಿಗಳನ್ನು ಕಸಿದು-ಕೊಂಡು ಹೋಗುವವರೆಲ್ಲ ತನ್ನ ಶತ್ರುಗಳೆಂದು ಅವನು ತಿಳಿದುಕೊಳ್ಳುತ್ತಾನೆ.

ಗ್ರೇಟ್‌ಬ್ರಿಟನಿಗೆ ಯುದ್ಧವನ್ನು ಗೆಲ್ಲಬೇಕಾಗಿದೆ. ಹಿಂದುಸ್ಥಾನಕ್ಕೆ ಘಾತಕವಾಗುವಂತೆ ಅವರು ಹಾಗೆ ಮಾಡುವದವಶ್ಯವೆ? ಅವರು ಹಾಗೆ ಮಾಡತಕ್ಕದ್ದೆ?

ಈ ದುಃಖದ ಪ್ರಕರಣಕ್ಕೆ ನನಗೆ ಇನ್ನೂ ಸ್ವಲ್ಪ ಜೋಡಿಸಬೇಕಾಗಿದೆ. ಹಿಂದೀಯರನ್ನು ಆವರಿಸಿದ ಈ ಕೃತಕ ಜೀವನವು ಉಸುರುಕಟ್ಟುವಂತಹದಿದೆ. ಪ್ರತಿಯೊಬ್ಬ ಹಿಂದಿಯನು ಅಸಂತುಷ್ಟನಿರುವನು. ಆದರೆ ಸಾರ್ವಜನಿಕ ರೀತಿಯಿಂದ ಅವನು ಹಾಗೆ ಹೇಳಲಾರನು. ಸರಕಾರದ ಮೇಲಧಿಕಾರಿಗಳ ಮತ್ತು ಕೆಳಗಿನ ನೌಕರರ ಪಾಡೂ ಹೀಗೆಯೇ. ನಾನೇನು ಹಾರಿಕೆಯ ಮಾತು ಹೇಳುವುದಿಲ್ಲ. ಅನೇಕ ಬ್ರಿಟಿಷ್ ಅಧಿಕಾರಿಗಳಿಗೆ ಇದು ಗೊತ್ತಿದೆ. ಆದರೆ ಇಂಥವರಿಂದಲೇ ಕೆಲಸ ತೆಗೆದುಕೊಳ್ಳುವ ಕಲೆಯನ್ನು ಕಲಿತಿರುವರು. ಸರ್ವವ್ಯಾಪಿಯಾದ ಆ ವಿಶ್ವಾಸವು ಮತ್ತು ವಿಧ್ಯಾಚಾರವು ಇಡೀ ಜೀವನವನ್ನೇ ನಿರುಪಯೋಗ ಮಾಡುತ್ತಿದೆ. ತಮ್ಮ ಆತ್ಮಶಕ್ತಿಯಿಂದ ಇದನ್ನು ತಡೆಯುವವರ ಜೀವನವು ಮಾತ್ರ ಇದಕ್ಕೆ ಅಪವಾದ.

ನಾನು ಹೇಳುವದರಲ್ಲಿ ನಿಮಗೆ ವಿಶ್ವಾಸವಿರಲಿಕ್ಕಿಲ್ಲ. ನನ್ನ ವಿರುದ್ಧ ಬರಹಗಳು ಬರುವದು ಖಂಡಿತ. ಅವನೆಲ್ಲ ಎದುರಿಸಿ ನಾನು ಜೀವಿಸುವೆನು.

ನನಗೆ ಸತ್ಯವೆನಿಸಿದುದನ್ನೂ ನಾನು ವಿವರಿಸಿರುವೆನು. ಶುದ್ಧ ಸಂಪೂರ್ಣ ಸತ್ಯವಲ್ಲದೆ ಬೇರೆ ಯಾವುದನ್ನೂ ನಾನು ಹೇಳುವುದಿಲ್ಲ.

ಈ ವಿಚಾರ ನನ್ನ ಜನರಿಗೆ ಸೇರಬಹುದು ಅಥವಾ ಸೇರಲಿಕ್ಕಿಲ್ಲ. ಈ ಬಗ್ಗೆ ಯಾರೊಡನೆಯೂ ವಿಚಾರಮಾಡಿಲ್ಲ. ನಾನು ಮೌನದಿನವನ್ನಾಚರಿಸುತ್ತಿರುವಾಗ ಈ ಬಿನ್ನಹದ ಬರಹವನ್ನು ಬರೆದಿರುವೆನು. ಅಮೇರಿಕೆಯಲ್ಲಿ ಗುಲಾಮಗಿರಿಯನ್ನು ರದ್ದುಗೊಳಿಸಿದಾಗ ಅನೇಕ ಗುಲಾಮರು ವಿರೋಧಮಾಡಿದರು. ಹಲವರು ಕಣ್ಣೀರು ಕೂಡಾ ಸುರಿಸಿದರು. ಆದರೆ ಈ ವಿರೋಧ, ಕಣ್ಣೀರನ್ನು ಕೂಡಾ ಗಣಿಸದೆ ಗುಲಾಮಗಿರಿಯನ್ನು ಕಾಯಿದೆಯಿಂದ ಕಿತ್ತು ಹಾಕಲಾಯಿತು. ದಕ್ಷಿಣ ಮತ್ತು ಉತ್ತರದ ಜನತೆಯಲ್ಲಿ ಭೀಕರ ಸಂಗ್ರಾಮದ ಪರಿಣಾಮವಾಗಿ ಈ ಗುಲಾಮಗಿರಿಯು ತೆಗೆದು ಹಾಕಲಾಯಿತು. ಮೊದಲಿಗಿಂತ ಈಗ ನೀಗ್ರೊಗಳ ಪರಿಸ್ಥಿತಿ ಬಹಳ ಮಟ್ಟಿಗೆ ಸುಧಾರಿಸಿದ್ದರೂ ಉಚ್ಚವರ್ಣದವರಿನ್ನೂ ಅವರನ್ನು ಬಹಿಷ್ಕೃತರೆಂದೂ ತಿಳಿಯುವರು. ಇದಕ್ಕಿಂತ ಹೆಚ್ಚಿನದಾಗಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ನಮ್ಮಲ್ಲಿ ಕೆಲವರು ಎಷ್ಟೇ ವಿರೋಧವಾದಿ ಪ್ರಲಾಪಿಸಿದರೂ, ಈ ಅಸ್ವಾಭಾವಿಕವಾದ ಪ್ರಭುತ್ವವನ್ನು ರಕ್ತದ ಹನಿ ಚೆಲ್ಲದೆ ಕೊನೆಗೊಳಿಸಿ ನಮ್ಮ ಮನ್ವಂತರವನ್ನು ಪ್ರಸ್ತಾವಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಪುಸ್ತಕ ವಿಮರ್ಶೆ:

ಕಲ್ಕ್ಯವತಾರ (ಮೂಲ — ಹಿಂದೀ ಚೇತಾವನಿ)

'ಕಲಿಯುಗಾಂತ ಮತ್ತು ಕೃತ ಯುಗಾರಂಭ ವಿಚಾರ' ಅನುವಾದಕ, ಶೋಧಕ ಮತ್ತು ಪ್ರಕಾಶಕ ವಿದ್ವಾನ್ ಕೆ ಎಂ ಕರಿಬಸವ ಶಾಸ್ತ್ರಿ ದಾಯದುರ್ಗ ಸೋಲ್ ಡಿಸ್ಟ್ರಿಬ್ಯೂಟರ್ಸ್-ಯಜಮಾನ್ ಎಂಡ್ ಬ್ರದರ್ಸ್, ಬಳ್ಳಾರಿ. ಪುಟ ೧/೮ ಆಕಾರದ ೧೦೪. ಬೆಲೆ ೮ ಆಣೆ.

ಈ ಗ್ರಂಥವು ಪಶ್ಚಿಮ ಹಿಂದುಸ್ಥಾನದ ಕಥಿಯಾವಾಡ್ ಗೋಂಡಾಲದಲ್ಲಿರುವ ರಾಜವೈದ್ಯ ಜೀವಾರಾಂ, ಕಾಳಿದಾಸ ಶಾಸ್ತ್ರಿಗಳ ಇಂಗ್ಲಿಷ್ ಪುಸ್ತಕದ ಅನುವಾದ' ಬ್ರಹ್ಮದೇವರ ಆಯುಷ್ಯ, ನವವಿಧಮಾನಗಳು ಈ ವಿಚಾರವನ್ನು ಈ ಪುಸ್ತಕದ ಮೊದಲಲ್ಲಿ ಪ್ರಸ್ತಾಪಿಸಿ, ಚೇತಾವನಿ ವಿಚಾರವನ್ನು ಹೇಳುತ್ತಾ, ಕಲಿಯುಗ ಸಮಾಪ್ತಿಯಾಗಿ ಕೃತ ಯುಗಪ್ರಾರಂಭವಾಗುವುದೆಂದೂ, ಶ್ರೀ ಕಲ್ಕಿ ಭಗವಾನನು ಅವತರಿಸುವನೆಂದೂ, ವೇದ, ಪುರಾಣ ಜ್ಯೋತಿಷಾದಿಗಳನ್ನು ಅನ್ವೇಷಣೆ ಮಾಡಿ ಹಿಂದು ಮುಸ್ಲಿಂ ಕ್ರಿಸ್ತ ಮತಗಳನ್ನು ಶೋಧಿಸಿ ಪಂಜಾಬ್ ದೇಶದ ಪರಮಹಂಸ ಶ್ರೀ ಸ್ವಾಮಿ ಜಯ ರಾಜ ನಾರಾಯಣಜೀ ಷಟ್‌ಶಾಸ್ತ್ರಿ ಭಕ್ತಿಯೋಗಾಚಾರ್ಯ, ಜ್ಯೋತಿಷ ಭೂಷಣರೆಂಬ ಮಹಾಶಯರು ಕಂಡುಹಿಡಿದ ವಿಚಾರವನ್ನು ತಿಳಿಸಿ, ಅವರಿಗೆ ಶ್ರೀ ಕೃಷ್ಣ ಭಗವಾನನಲ್ಲಿ ಅನನ್ಯ ಭಕ್ತಿಯಿದ್ದು ಆತನು ಸಂದರ್ಶನವಿತ್ತು, ತಾನು ಕಲ್ಕ್ಯವತಾರದಿಂದ ಹುಟ್ಟುವುದಾಗಿಯೂ, ಭಕ್ತಿ ಪ್ರಚಾರ ಮಾಡುತ್ತಿರಬೇಕಾಗಿಯೂ ತಿಳಿಸಿದ ವಿಷಯವನ್ನು ವಿವರಿಸಲಾಗಿದೆ. ಈ ಪ್ರಾತಿಗೆ ಗ್ರಂಥ ಕರ್ತರು ಮನುಸ್ಮೃತಿ, ಋಗ್ವೇದ, ಭಾಗವತ, ವಿಷ್ಣುಪುರಾಣ, ಕಲ್ಕಿಪುರಾಣಗಳ ಆಧಾರಗಳನ್ನು ಕೊಟ್ಟುವಿವರಿಸಿರುವರು. ಅನಂತರ ನವವಿಧ ವರ್ಷಗಳ ವಿಚಾರವನ್ನು ಬರೆದು, ಕಲಿಯುಗವು ಎಂದು ಪ್ರಾರಂಭವಾಯಿತು, ಎಂದು ಸಮಾಪ್ತಿ ಹೊಂದುವುದು, ಕಲಿಯುಗದಲ್ಲಿ ಏನೇನು ನಡೆಯುವುದು, ಎಂಬಿವುಗಳನ್ನು ಸಕಾರಣವಾಗಿ ವಿವರಿಸಿರುವರು.

ಕಲ್ಕ್ಯವತಾರದ ಜನ್ಮಲಗ್ನದ ವಿಷಯವಾಗಿ ತಿಳಿಸಿ, ಕಲ್ಕಿಮೂರ್ತಿಯ ಜನ್ಮ ಕುಂಡಲಿಯನ್ನು ವಿವರಿಸಿ, ವಿಕ್ರಮಶಕ ೧೯೮೧ ಶ್ರೀ ವಿಷ್ಣು ವಿಶಂತಿ ಧಾತೃ ಸಂ। ಉತ್ತರಾಯಣ ವಸಂತ ಋತುವಿಗೆ ಸರಿಯಾದ ಶ್ಲಾಘ್ಯ ನಾಮ ಸಂದ ವೈಶಾಖ ಶು। ೨ (ಬಿದಿಗೆ) ಸೋಮವಾರ ಕೃತ್ತಿಕಾ ನಕ್ಷತ್ರ ೩೦-೫ ಶೋಭನಯೋಗ ಸೂರ್ಯೋದಯಾದಿಷ್ಟಂ ೧೪-೨೫ ಮೇಷಾರ್ಕಗತಾಂಶಃ ೨೩ (ಇದಕ್ಕೆ ಸರಿಯಾದ ಕ್ರೀ ಶ ತಾ ೫-೫-೨೪ ಸೋಮವಾರ) ಹಿಜ್ರಾ ೧೩೪೨, ಸವಾಲ್ ೩೦ ಈ ಶುಭದಿನದಲ್ಲಿ ಪೂರ್ಣ ಬ್ರಹ್ಮ ವಾಸುದೇವ ಶ್ರೀ ಭಗವಂತನು ಶಂಭಳಗ್ರಾಮದಲ್ಲಿ ಬ್ರಾಹ್ಮಣ ಕುಲಭೂಷಣನಾದ ಪಂಡಿತ ವಿಷ್ಣು ಯಶಸುಮತೀ ದೇವಿಯರ ಗರ್ಭದಲ್ಲಿ ಜನ್ಮಸಿರುವನೆಂದೂ, ಆ ಬಾಲಕನನ್ನು ರಾಯಸ್ತಂಡೆಯ ಸಹಿತವಾಗಿ ಬ್ರಹ್ಮದೇವರ ಆಜ್ಞಾನುಸಾರ ಪರಶುರಾಮನು ಮಹೇಂದ್ರ ಪರ್ವತಕ್ಕೆ ಕರೆದುಕೊಂಡು ಹೋಗಿ ಶಾಸ್ತ್ರಗಳನ್ನು ಅಭ್ಯಾಸ ಮಾಡಿಸುವನೆಂದೂ, ಅಲ್ಲಿಗೆ ಮನುಷ್ಯರೂ ಹೋಗಲಾರರೆಂದೂ, ಆತನಿಗೆ ಕವಿ, ಪ್ರಜ್ಞ, ಸುಮಂತ್ರರೆಂಬ ಮೂರು ಸೋದರರಿರುವರೆಂದೂ ವಿಕ್ರಮಶಕ ೧೯೯೯ರಲ್ಲಿ ಕಲ್ಕಿ ಭಗವಂತನು ಪ್ರಾಚೀನ ಋಷಿ, ಮಹರ್ಷಿ ಭ್ರಾತೃ ಸಹಿತ ಪ್ರಥಮದಲ್ಲಿ ಬಂಗಾಳಕ್ಕೆ ಹೋಗಿ ಅಲ್ಲಿಂದ ಮಗದ, ಬೀಹಾರ, ಹರಿದ್ವಾರ ಮುಂತಾದ ಪಟ್ಟಣಗಳಿಗೆ ಒಪ್ಪುವನೆಂದೂ, ಈ ಪ್ರಯಾಣಗಳಲ್ಲಿ ಆತನು ಬೌದ್ಧ, ಜೈನ, ಮ್ಲೇಚ್ಛರನ್ನಳಿದೆ, ನಿಕುಂಭಾಸುರ ಪುತ್ರಿ ಕಮಲೋದರಿಯನ್ನು ಸಂಹರಿಸುವನೆಂದೂ, ಅನಂತರ ಭಲ್ಲಾಟ ದೇಶಾಧಿಪತಿ ಮಹಾ ಭಕ್ತನೂ ಆದ ಶಶಿಧ್ವಜನೊಡನೆ ಕಾಳಗ ಮಾಡಿ ಆತನ ಮಗಳು ರಮಾದೇವಿಯನ್ನು ಪರಿಣಯವಾಗುವನೆಂದೂ, ಅನಂತರ ಪಂಜಾಬ್, ಇರಾನ್ ದೇಶಗಳ ಮೇಲೆ ಪಶ್ಚಿಮಕ್ಕೆ ಹೋಗಿ ದಿಗ್ವಿಜಯಾನಂತರ ಭರತ ವರ್ಷಕ್ಕೆ ಮರಳಿ ಬಂದು ಸಿಂಹಳ ದ್ವೀಪಾಧಿಪ ಪುತ್ರಿ ಪದ್ಮಾವತಿ ದೇವಿಯನ್ನು ಪರಿಣಯವಾಗುವನೆಂದೂ ಮತ್ತೆ ದೇವದತ್ತನಾಮಕ ಕುದುರೆಯನ್ನೇರಿ, ಶಿವನಿತ್ತದಿವ್ಯ ಕರವಾಲವನ್ನು ಧರಿಸಿ ರಾಜರೆಂಬ ಹೆಸರಿನಿಂದ ಪ್ರಜೆಗಳನ್ನು ಪೀಡಿಸುವವರೆಲ್ಲರನ್ನೂ ಸಂಹರಿಸುವನೆಂದೂ ಬರೆದಿರುವರು. ಈ ವಿಷಯಕ್ಕೆ ಅನೇಕ ಪುರಾಣಗಳ ಆಧಾರಗಳನ್ನು ಕೊಡಲಾಗಿದೆ. ವಿವಿಧ ಮತಗ್ರಂಥಗಳ ಮತ ಪುರುಷರ ಮಾತನ್ನೆತ್ತಿ ಸಮರ್ಥಿಸಲಾಗಿದೆ. ಆದ್ದರಿಂದ ಈ ಪುಸ್ತಕವು ಪ್ರತಿಯೊಬ್ಬನಿಂದ ಅವಶ್ಯ ವಾಚನೀಯವೂ ಮನನೀಯವೂ ಆಗಿರುವುದು.

ರಶ್ಯ ಜರ್ಮನಿಗಳೊಳಗೆ ಘೋರ ಸಂಗ್ರಾಮ!

ಅಂಡ್ರೂಸ್ ನಿಧಿಗೆ ಗಾಂಧಿಜಿ ಹಣ ಸಂಗ್ರಹ

ಜಪಾನ್ ಸೈನ್ಯ ಚೀನಾ ಹಿಂದುಸ್ಥಾನಗಳ ಕಡೆಗೆ?

ಯುದ್ಧ ಸುದ್ದಿಗಳು

ಬರ್ಮಾ ಕಾಳಗವನ್ನು ಮುಗಿಸಿ ಜಪಾನು ಸೈನ್ಯಗಳು ಹಿಂದುಸ್ಥಾನ—ಚೀನಗಳ ಕಡೆಗೆ ತಿರುಗುತ್ತಿವೆಯೆಂದು ತಿಳಿದಿದೆ. ಅಸ್ಟ್ರೇಲಿಯದ ಹತ್ತಿರ ಜಪಾನರು ಹೊಸ ನೌಕಾ ಬಲವನ್ನು ತಂದಿರಿಸುವರಂತೆ. ಲಿಬಿಯದ ರಣಭೂಮಿಯಲ್ಲಿ ವೈರಿ ಟ್ಯಾಂಕುಗಳು ಚೆದರಿಸಲ್ಪಟ್ಟವು ಅಮೆರಿಕನ್ ಸೈನ್ಯಗಳು ಉತ್ತರ ಆಯರ್ಲೆಂಡಿಗೆ ಬಂದಿವೆ. ಯುಕ್ರೇನಿನಲ್ಲಿ ಜರ್ಮನರ ಪ್ರತಿಭಟನೆ ಜೋರಾಗಿದೆ; ಅನೇಕ ಹೊಸ ಸೈನ್ಯಗಳನ್ನು ತರುತ್ತಿರುವರು. ಕರ್ಚನ ಬಳಿ ಭೀಕರ ಕಾಳಗವಾಗುತ್ತಿರುವುದು ಕಾಮನ್ಸ್ ಸಭೆಯಲ್ಲಿ ಯುದ್ಧದ ಬಗ್ಗೆ ಚರ್ಚೆ ನಡೆದು ಅಟ್ಲಿಯವರು ಒಂದು ಹೇಳಿಕೆ ಕೊಡುತ್ತಾ ಅತಿ ಪೂರ್ವದ ಪರಿಸ್ಥಿತಿಯನ್ನು ವಿವರಿಸಿದರು ಹಿಂದುಸ್ಥಾನ ಸಿಲೋನುಗಳ ಸೈನ್ಯವನ್ನು ಬಲಪಡಿಸಬೇಕಾಗಿದೆಯೆಂದರು. ದ್ವಿತೀಯ ರಣಕ್ಷೇತ್ರದ ಬಗ್ಗೆ ಭವಿಷ್ಯ ನುಡಿಯಲಾರೆನೆಂದರು ಖಾರಕೋವ್ ಹತ್ತಿರ ಭೀಕರ ಯುದ್ಧ ನಡೆಯುತ್ತದೆ. ರಷ್ಯನರು ಜರ್ಮನ್ ವ್ಯೂಹವನ್ನು ಭೇದಿಸಿರುವರು ಜಪಾನು ಮೊದಲು ಚೀನದ ಮೇಲೆ ಆಕ್ರಮಣ ಮಾಡುವುದೆಂದು ಕೆಲವು ಮಿಲಿಟರಿ ತಜ್ಞರ ಅಭಿಪ್ರಾಯ

ಪತ್ರಿಕೆಗಳ ಪುಟ ಸಂಖ್ಯೆ ಮತ್ತು ದರಗಳು

'ಎ' ಸೈಜಿಗೆ ಒಂದಾಣೆಗೆ, ನಾಲ್ಕು ಪುಟದಂತೆ

ಕಾಗದದ ಪ್ರಮಾಣದ ಬಗ್ಗೆ ಸರಕಾರದ ಆರ್ಡರು

ಸರಕಾರದ ಪ್ರಕಟಣೆಯೊಂದು ತಿಳಿಸುವ ಮೇರೆಗೆ ಇಂಡಿಯಾ ಸರಕಾರದವರು ಪತ್ರಿಕೆಗಳ ದರಗಳ ಬಗ್ಗೆ ಹೊಸದಾಗಿ ಪುನರ್ರಚಿತ ಆರ್ಡರೊಂದನ್ನು ಈ ರೀತಿ ಹೊರಡಿಸಿದ್ದಾರೆ

ಯುದ್ಧದ ವಿಪತ್ತಿನಿಂದ ಹಡಗುಗಳ ಸಂಚಾರಕ್ಕೆ ಅಭಾವವಾಗಿರುವುದರಿಂದ ವೃತ್ತಪತ್ರಿಕೆಗೆ ಹಾಕುವ ಕಾಗದವನ್ನು ಬಹುಮಟ್ಟಿಗೆ ಇನ್ನು ಕಡಿಮೆ ಮಾಡಬೇಕಾಗಿದೆ

ಸ್ಟಾಂಡರ್ಡ್ ಕ್ಲಾಸಿನ 'ಎ' ಸೈಜಿನ ಪೇಪರಿಗೆ ನಾಲ್ಕು ಪುಟಗಳಿರಬೇಕು ಇದರ ಬೆಲೆ ೧ ಆಣೆ ಅದೇ ಬೆಲೆಯ ಬಿ ಮತ್ತು ಸಿ ಕ್ಲಾಸು ಪೇಪರುಗಳಿಗೆ ೬ ಮತ್ತು ೮ ಪುಟಗಳಿರಬೇಕು

ಅಥವಾ ಎ ಸೈಜಿನ ಪತ್ರಿಕೆಯು ಒಂದು ಪುಟಕ್ಕೆ ಕಾಲಾಣೆಯಂತೆ ಬೆಲೆ. ಬಿ ಸೈಜಿನ ಒಂದು ವರೆ ಪುಟಕ್ಕೆ ಕಾಲಾಣೆ. ಸಿ ಸೈಜಿನ ಎರಡು ಪುಟಕ್ಕೆ ಕಾಲಾಣೆ ದಿನ ಪತ್ರಿಕೆಗಳು ಒಂದು ವಾರದಲ್ಲಿ ಇಷ್ಟು ಕಾಗದವನ್ನು ಪರಮಾವಧಿಯಾಗಿ ಉಪಯೋಗಿಸಬೇಕೆಂದೂ, ವಾರಪತ್ರಿಕೆಗಳು ಮೊದಲಾಗಿ ನಾಲ್ಕು ವಾರಗಳಲ್ಲಿ ಇಷ್ಟು ಕಾಗದವನ್ನು ಪರಮಾವಧಿಯಾಗಿ ಉಪಯೋಗಿಸಬೇಕೆಂದೂ ವಿಧಿಸಲಾಗಿದೆ

ಮುನವಳ್ಳಿ ಸನ್ಮಾನ ನಿಧಿ

ರಾಮದುರ್ಗ ದುರಂತದ ಆರೋಪ ಶಿಕ್ಷೆಗೆ ಗುರಿಯಾದ ರಾಮದುರ್ಗ ಪ್ರಜಾ ಪರಿಷತ್ತಿನ ಅಧ್ಯಕ್ಷ ಶ್ರೀ ಮುನವಳ್ಳಿ ವಕೀಲರನ್ನು ಎರವಾಡ ಜೈಲಿನಲ್ಲಿ ಭೇಟಿಯಾಗಿ ಬಂದ ಕಾರ್ಯದರ್ಶಿಗಳು ಅವರ ಪರಿಸ್ಥಿತಿ ಚೆನ್ನಾಗಿರುವುದೆಂದೂ ಅವರು ೩ ವರ್ಷದ ಶಿಕ್ಷೆ ಮುಗಿದು ಬೇಗನೇ ಬಿಡುಗಡೆಯಾಗಲಿರುವರೆಂದೂ ಬಿಡುಗಡೆಯಾದ ಕೂಡಲೇ ಪ್ರಜಾ ಪರಿಷತ್ತಿನ ಚಟುವಟಿಕೆಗಳನ್ನು ಅವರು ತೀವ್ರಗೊಳಿಸುವರೆಂದೂ ಪ್ರಕಟಿಸಿದ್ದಾರೆ. ಅವರಿಗೆ ಜುಲ್ಮಾನೆ ವಿಧಿಸಲಾದ ಒಂದು ಸಾವಿರ ರೂಪಾಯಿ ದಂಡ (ಇಲ್ಲವೇ ಒಂದು ವರ್ಷ ಶಿಕ್ಷೆ) ತೆರಲು ಮುನವಳ್ಳಿ ಸನ್ಮಾನ ನಿಧಿಯು ಹುಬ್ಬಳ್ಳಿಯಲ್ಲಿ ಕೂಡಿಸಲಾಗುತ್ತದೆ.

ಚಲಚಿತ್ರಗಳ ಉದ್ದ ೧೧ ಸಾವಿರ ಅಡಿಗಿಂತ ಹೆಚ್ಚಿರಕೂಡದು

ಕೇಂದ್ರ ಸರಕಾರದ ಆಜ್ಞೆ

ಇನ್ನು ಮುಂದೆ ಯಾವ ಸಿನೆಮಾ ಕಂಪೆನಿಯೂ ೧೧೦೦೦ ಅಡಿಗಿಂತ ಹೆಚ್ಚು ಉದ್ದವಿರುವ ಚಲಚ್ಚಿತ್ರವನ್ನು ತಯಾರಿಸಬಾರದೆಂದು ಸರಕಾರದವರು ಆಜ್ಞೆ ಮಾಡಿರುವರು. ಆ ಚಿತ್ರಕ್ಕೆ ಸಂಬಂಧಿಸಿದ ಮುಂಗಡ ಚಿತ್ರವು (ಟ್ರೇಲರ) ೮೦೦ ಅಡಿಗಳಿಗೆ ಹೆಚ್ಚಿರಬಾರದೆಂದು ವಿಧಿಸಲಾಗಿದೆ ಇದನ್ನು ಉಲ್ಲಂಘಿಸಿದ ಸಿನೆಮಾ ಕಂಪೆನಿಯವರಿಗೂ ಆ ಚಿತ್ರವನ್ನು ತೋರಿಸಿದವರಿಗೂ ಯೋಗ್ಯ ಶಿಕ್ಷೆ ವಿಧಿಸಲಾಗುವದು

ಶಾಲಾ ಪಠ್ಯ ಪುಸ್ತಕಗಳು

(ಸರಕಾರವು ಪ್ರಕಟಿಸಿದ ಪಾಠಪಟ್ಟಿಗೆ ಅನುಸಾರವಾಗಿ ಬರೆಯಲ್ಪಟ್ಟಿವೆ)

ಮಾಧ್ಯಮಿಕ ಶಾಲಾ ಲಘುಗಣಿತ

ಮಾಧ್ಯಮಿಕ ಶಾಲೆಗಳಲ್ಲಿ 1942ನೇ ಜೂನ್ ತಿಂಗಳಿಂದ ಅನುಸರಿಸಬೇಕಾದ ಸರಕಾರದ ಹೊಸ ಪಾಠಪಟ್ಟಿಗನುಸಾರವಾಗಿ ಬರೆಯಲ್ಪಟ್ಟದ್ದು

ಎಂ ಪಿ ದೇವರಾವ್, ಬಿ ಎ ಎಲ್ ಟಿ ಬೋರ್ಡ್ ಹೈಸ್ಕೂಲ್, ಉಡ್ಪಿ

Iನೇ ಫೋರ್ಮಿಗ 0—12—0

IIನೇ ಫೋರ್ಮಿಗೆ 0—12—0

ಎಂ ಪಿ ದೇವರಾವ್ ಬಿ ಎ ಎಲ್ ಟಿ ಮತ್ತು ಬಿ ಭವಾನಿರಾವ್ ಬಿ ಎ ಎಲ್ ಟಿ

IIIನೇ ಫೋರ್ಮಿಗೆ 0—12—0

ಬಾಲಕರ ಲಘುಗಣಿತ

ಬಿ ಭವಾನಿರಾವ್, ಬಿ ಎ, ಎಲ್ ಟಿ

ಸೈಂಟ್ ಏನ್ಸ್ ಹೈಸ್ಕೂಲ್, ಮಂಗಳೂರು

ನಾಲ್ಕನೇ ದರ್ಜೆಗೆ 0—7—0

ಐದನೇ ದರ್ಜೆಗೆ 0—8—0

ನವೀನ ಭೂವಿವರಣೆ

ಎಂ ವಾಸುದೇವರಾವ್ ಎಂ ಎ, ಎಲ್ ಟಿ. (Dip Geog.)

ಗಣಪತಿ ಹೈಸ್ಕೂಲ್, ಮಂಗಳೂರು

ನಾಲ್ಕನೇ ದರ್ಜೆಗೆ 0—6—0

ಐದನೇ ದರ್ಜೆಗೆ 0—7—0

ಪ್ರಾಥಮಿಕ ಲಘುವಿಜ್ಞಾನ

ಎಸ್ ರಾಮಕೃಷ್ಣಾಚಾರ್ ಬಿ ಎ ಎಲ್. ಟಿ

ಬೋರ್ಡ್ ಹೈಸ್ಕೂಲ್, ಕಾರ್ಕಳ

ಆರನೇ ದರ್ಜೆಗೆ 0—6—0

ಏಳನೇ ದರ್ಜೆಗೆ 0—6—0

ಎಂಟನೇ ದರ್ಜೆಗೆ 0—6—0

ನವೀನ ಪ್ರಕೃತಿಶಾಸ್ತ್ರ ಮತ್ತು ತೋಟಗಾರಿಕೆ

ಎಂ. ವಾಸುದೇವರಾವ್, ಎಂ. ಎ. ಎಲ್. ಟಿ.

ಗಣಪತಿ ಹೈಸ್ಕೂಲ್, ಮಂಗಳೂರು.

ನಾಲ್ಕನೇ ದರ್ಜೆಗೆ 0—3—0

ಐದನೇ ದರ್ಜೆಗೆ 0—3—6

ವ್ಯಾಕರಣ ಮತ್ತು ಪ್ರಬಂಧ

ಕೆ ಕೆ ರೈ ವಿದ್ವಾನ್

4 ಮತ್ತು 5ನೇ ದರ್ಜೆಗೆ 0—2—0

ಆರನೇ ದರ್ಜೆಗೆ ಅಥವಾ I ಫೋರ್ಮಿಗೆ 0—3—0

ಏಳನೇ ದರ್ಜೆಗೆ ಅಥವಾ II ಫೋರ್ಮಿಗೆ 0—3—6

ಎಂಟನೇ ದರ್ಜೆಗೆ ಅಥವಾ III ಫೋರ್ಮಿಗೆ 0—4—0

ಮಕ್ಕಳ ಪದ್ಯಮಂಜರಿ

ಕೆ ಕೆ ರೈ ವಿದ್ವಾನ್

ಮೊದಲನೆಯ ಪುಸ್ತಕ ೧, ೨, ೩ನೇ ದರ್ಜೆಗಳಿಗೆ 0—2—0

ಎರಡನೆಯ ಪುಸ್ತಕ ೪ ಮತ್ತು ೫ನೇ ದರ್ಜೆಗಳಿಗೆ 0—2—6

ಚರಿತ್ರೆ ಮತ್ತು ಕಥೆಗಳು

ಮೂರನೇ ದರ್ಜೆಗೆ 0—2—6

ನಾಲ್ಕನೇ ದರ್ಜೆಗೆ 0—3—0

ಐದನೇ ದರ್ಜೆಗೆ 0—3—6

ಸಿವಿಕ್ಸ್

ಎಂ. ಗಣಪತಿರಾವ್ ಐಗಳ್

ಮೂರನೇ ದರ್ಜೆಗೆ 0—1—6

ಗೆ 0—2—0

ಗೆ 0—2—6

ಮತ್ತು ಕೆ ಕೆ. ರೈ ವಿದ್ವಾನ್

ಆರನೇ ದರ್ಜೆಗೆ 0—3—0

ಏಳನೇ ದರ್ಜೆಗೆ 0—3—0

ಎಂಟನೇ ದರ್ಜೆಗೆ 0—3—0

ಪ್ರಕೃತಿಶಾಸ್ತ್ರ

ಎಂ. ಗಣಪತಿರಾವ್ ಐಗಳ್

ಮೂರನೇ ದರ್ಜೆಗೆ 0—1—6

ಶಾರದಾ ಛಾಪಖಾನೆ ರಥಬೀದಿ, ಮಂಗಳೂರು.

'ಬ್ರಿಟನಿಗೆ ನಾನು ನೈತಿಕ ಬೆಂಬಲ ಕೊಡಲಾರೆನು'

ಅಮೆರಿಕವು ಶಾಂತಿ ಪ್ರಯತ್ನ ಮಾಡಬೇಕಿತ್ತು

ಪರದೇಶೀಯರು ಹೊರಟುಹೋದರೆ ಒಕ್ಕಟ್ಟಾಗುವುದು

ಗಾಂಧಿಜಿಯೊಡನೆ ಪ್ರಶ್ನೋತ್ತರಗಳು

ಮುಂಬಯಿಯಲ್ಲಿ ಪತ್ರಿಕಾ ಪ್ರತಿನಿಧಿಗಳು ಮತ್ತು ಗಾಂಧಿಜಿಯವರ ನಡುವೆ ಜರಗಿದ ಪ್ರಶ್ನೋತ್ತರಗಳನ್ನು ಕೆಳಗೆ ಕೊಡಲಾಗಿದೆ.

ಪ್ರಶ್ನೆ: ಈ ಯುದ್ಧದಲ್ಲಿ ಹಿಂದುಸ್ತಾನವು ಯಾವ ಪಕ್ಷಕ್ಕೆ ನೈತಿಕ ಬೆಂಬಲವನ್ನು ಕೊಡಬೇಕು?

ಉತ್ತರ: ಯಾವ ಪಕ್ಷಕ್ಕೂ ಹಿಂದುಸ್ತಾನದಿಂದ ಸಹಾಯ ದೊರೆಯಬಾರದು. ಆದರೆ ಚೀನ ಮತ್ತು ರಶಿಯಾದ ಕಡೆಗೆ ನನ್ನ ಸಹಾನುಭೂತಿಯಿದೆ.

ಪ್ರಶ್ನೆ: ಹಾಗಾದರೆ ಬ್ರಿಟನಿನ ವಿಷಯದಲ್ಲಿ ನಿಮ್ಮ ಸಹಾನುಭೂತಿ?

ಉತ್ತರ: ಮೊದಲು ನನ್ನ ಎಲ್ಲ ನೈತಿಕ ಸಹಾನುಭೂತಿಯು ಬ್ರಿಟನಿನ ಕಡೆಗಿತ್ತೆಂದು ನಾನು ಎಷ್ಟೋ ಸಾರಿ ಹೇಳಿದ್ದೇನೆ. ಆದರೆ ಇಂದು ನನ್ನ ನೈತಿಕ ಬೆಂಬಲವು ಬ್ರಿಟನಿನ ಕಡೆಗಿಲ್ಲವೆಂದು ನಾನು ಬಹಳ ವಿಷಾದದಿಂದ ಒಪ್ಪಿಕೊಳ್ಳುತ್ತೇನೆ. ಇಂದು ಆ ನೈತಿಕ ಬೆಂಬಲವನ್ನು ಬ್ರಿಟನಿಗೆ ತೋರಿಸಲು ನನ್ನ ಮನಸ್ಸು ಒಪ್ಪುವದಿಲ್ಲ. ಯಾಕೆಂದರೆ ಹಿಂದುಸ್ತಾನದ ಸಂಬಂಧದಲ್ಲಿ ಬ್ರಿಟಿಷರು ಸಾಗಿಸಿದ ವರ್ತನೆಯಿಂದ ನನ್ನ ಮನಸ್ಸು ಅತೀವ ನೊಂದಿದೆ. ಅಮೆರಿಯವರ ನಾಟ್ಯ ಪ್ರದರ್ಶನ ಮತ್ತು ಕ್ರಿಪ್ಸರ ಮಹತ್ಕಾರ್ಯಗಳಿಂದ ಕೆಲವು ರಹಸ್ಯಗಳು ಹೊರಬಿದ್ದಿದ್ದು ನನ್ನ ದೃಷ್ಟಿಯಿಂದ ಬ್ರಿಟನು ನೈತಿಕ ದೃಷ್ಟಿಯಿಂದ ತಪ್ಪು ಮಾಡಿದೆಯೆಂದು ನನಗೆ ಅನಿಸಿದೆ. ಅಷ್ಟರಿಂದ ಮಾತ್ರಕ್ಕೆ ಬ್ರಿಟನಿಗೆ ಅಪಮಾನವಾಗಬೇಕು, ಬ್ರಿಟನು ಸೋತುಹೋಗಬೇಕುಎಂದು ನನ್ನ ಉದ್ದೇಶವಿಲ್ಲ.

ಪ್ರಶ್ನೆ: ಅಮೆರಿಕಕ್ಕೆ ನಿಮ್ಮ ನೈತಿಕ ಬೆಂಬಲವನ್ನು ಕೊಡುವಿರಾ?

ಉತ್ತರ: ಅಮೆರಿಕ ಯುದ್ಧದಲ್ಲಿ ಧುಮುಕಿದ್ದು ತಪ್ಪಾಯಿತು, ಅಮೆರಿಕವು ತನ್ನ ಘನತೆಗೆ ತಕ್ಕಂತೆ ಜಗತ್ತಿನ ಶಾಂತಿಯ ಸಲುವಾಗಿ ಕೆಲಸ ಮಾಡುವುದನ್ನು ಬಿಟ್ಟು ಈ ಯುದ್ಧದಲ್ಲಿ ಸೇರಿದ್ದು ದುರ್ದೈವದ ಪ್ರಸಂಗವೆಂದು ನಾನು ಹೇಳಲಿಲ್ಲವೇ?

ಪ್ರಶ್ನೆ: ಹಾಗಾದರೆ ಅಮೆರಿಕಕ್ಕೆ ಬೇರೆ ಯಾವ ಮಾರ್ಗವು ಸುಗಮವಾಗಿತ್ತು?

ಉತ್ತರ: ಶಾಂತಿಯನ್ನು ಮಾಡಿಯೇ ತೀರಬೇಕೆಂದು ಅಮೆರಿಕನರ ಮನಸ್ಸಿನಲ್ಲಿದ್ದರೆ ಅದು ಶಕ್ಯವಿತ್ತು. ಆದರೆ ಅಮೇರಿಕವು ಆ ಸಂದರ್ಭದ ಸದುಪಯೋಗ ಮಾಡಿಕೊಳ್ಳಲಿಲ್ಲವೆಂದು ನನಗೆ ಅಚಲವಾದ ವಿಶ್ವಾಸವಿದೆ. ಅಂಥ ದೊಡ್ಡ ರಾಷ್ಟ್ರವನ್ನು ಟೀಕಿಸುವ ಅಧಿಕಾರವು ನನಗಿಲ್ಲವೆಂಬುದನ್ನು ನಾನು ಬಲ್ಲೆ. ಈ ಯುದ್ಧದಲ್ಲಿ ಧುಮುಕಲು ನಿರ್ಣಯಿಸುವಂತೆ ಅಮೆರಿಕಕ್ಕೆ ಯಾವ ಕಾರಣಗಳು ಒತ್ತಾಸೆ ಗೊಳಿಸಿದವು ಎಂಬ ವಿಷಯಗಳನ್ನು ಕುರಿತು ವಿವರವಾಗಿ ಎಲ್ಲ ಸಂಗತಿಗಳು ನನಗೆ ಗೊತ್ತಿಲ್ಲ. ಒಟ್ಟಿನಲ್ಲಿ ಅಮೆರಿಕವು ಈ ಯುದ್ಧದಿಂದ ಹೊರಗಿರಲು ಬರುತ್ತಿತ್ತು ಎಂದು ನನ್ನ ಮನಸ್ಸಿನಲ್ಲಿ ಅಭಿಪ್ರಾಯ ಮೂಡಿದ್ದು ನಾನು ಈ ರೀತಿ ತಿಳಿದುಕೊಂಡಿದ್ದೇನೆ. ಅತುಲವಾದ ಸಂಪತ್ತಿನಿಂದ ಹುಟ್ಟಿದ ಉನ್ಮತ್ತತೆಯಿಂದ ಅಮೆರಿಕವು ಮುಕ್ತವಾಗಲು ನಿರ್ಧರಿಸಿದರೆ ಈಗಲಾದರೂ ಯುದ್ಧದಿಂದ ಹೊರಗುಳಿಯಲು ಶಕ್ಯವಿದೆ.

ಎಲ್ಲ ಅಧಿಕಾರ ಬಿಟ್ಟುಕೊಟ್ಟು ಬ್ರಿಟಿಷರು ಹಿಂದುಸ್ತಾನದಿಂದ ಹೋಗಬೇಕು ಎಂಬ ಬಗ್ಗೆ ನಾನು ಹೇಳಿದ ಮಾತುಗಳನ್ನು ಈ ಸಂದರ್ಭದಲ್ಲಿ ಪುನಃ ಹೇಳಲು ಬಯಸುತ್ತೇನೆ. ಅಮೆರಿಕ ಮತ್ತು ಬ್ರಿಟನ್ ಇವೆರಡೂ ರಾಷ್ಟ್ರಗಳು ವರ್ಣಭೇದವನ್ನು ಮರೆತು ಆಫ್ರಿಕಾ ಮತ್ತು ಏಶಿಯಾ ಖಂಡಗಳಿಂದ ಎಲ್ಲ ಅಧಿಕಾರ ಬಿಟ್ಟುಕೊಟ್ಟುಬಿಡಲು ನಿರ್ಧರಿಸುವ ವರೆಗೆ ಈ ಯುದ್ಧದಲ್ಲಿ ಭಾಗವಹಿಸಲು ನೈತಿಕ ದೃಷ್ಟಿಯಿಂದ ಕಾರಣವಿಲ್ಲ. ಬೀಳಿ ವರ್ಣದವರು ಶ್ರೇಷ್ಠರು ಎಂಬ ವಿಷಮಯವಾದ ಕೊರೆಯುವ ಹುಣ್ಣನ್ನು ಸಂಪೂರ್ಣ ನಾಶಪಡಿಸುವವರೆಗೆ ಪ್ರಜಾಪ್ರಭುತ್ವ, ನಾಗರಿಕತೆ ಮತ್ತು ಮಾನವೀ ಸ್ವಾತಂತ್ರ್ಯದ ಬಗ್ಗೆ ಮಾತಾಡಲು ಅವರಿಗೆ ಅಧಿಕಾರವಿಲ್ಲ.

ಪ್ರಶ್ನೆ: ನೀವು ಅಮೆರಿಕಕ್ಕೆ ಹೋಗಲಿಲ್ಲವೇಕೆ?

ಉತ್ತರ: ನಾನು ಅಮೆರಿಕಕ್ಕೆ ಹೋಗುವುದರಿಂದ ಹಿಂದುಸ್ಥಾನಕ್ಕೆ ಏನಾದರೂ ಹಿತವಾಗಬಹುದೆಂಬ ವಿಶ್ವಾಸವು ನನಗೆ ಇರಲಿಲ್ಲ. ಇಂಥ ಪ್ರವಾಸವು ೯ ದಿನಗಳ ವಿಚಿತ್ರವೆನಿಸುತಿತ್ತು. ನಾನು ಅಲ್ಲಿಗೆ ಹೋಗಿದ್ದರೆ ನನ್ನನ್ನು ಸಿಂಹವನ್ನಾಗಿ ಮಾಡಿ ಹರಿದು ಚೂರುಮಾಡುತಿದ್ದರು. ಮತ್ತೊಬ್ಬರ ಮಾತುಗಳನ್ನು ಅಮೆರಿಕನರು ಕೇಳುವವರಲ್ಲ. ಮಂದಿಯನ್ನು ಬಹಳವಾಗಿ ಗೌರವಿಸಿ ತಮ್ಮ ಮಾರ್ಗದಲ್ಲಿ ಸಾಗುವದು ಅಮೆರಿಕನರ ದಾರಿ. ಹಣವನ್ನು ಪೂಜಿಸುವವರಿಂದ ಸುವರ್ಣ ಗೋವತ್ಸವನ್ನು ಮೊಳೆ ಬಿಡಿಸುವದು ಬಹಳ ಕಷ್ಟವಾದದ್ದು. ಇಂಡೋ—ಬ್ರಿಟಿಶ್ ಸಮಸ್ಯೆಯನ್ನು ಬಗೆ ಹರಿಸಲು ನಿಷ್ಪಕ್ಷಪಾತಿ ಪಂಚಮಂಡಲವು ದೊರೆತು ಅವರ ಕಡೆಗೆ ಅದನ್ನು ಒಪ್ಪಿಸುವದಾದರೆ ಆ ಬಗ್ಗೆ ನನಗೆ ಆಕ್ಷೇಪವಿಲ್ಲ. ನ್ಯಾಯ್ಯಮಾರ್ಗಾನುಯಾಯಿಗಳಾಗಿದ್ದು, ನಿಷ್ಪಕ್ಷಪಾತಿಗಳಾದ ಹಾಗು ಧರ್ಮಸಂಪನ್ನರಾದ ಪಂಚರು ದೊರೆಯುವುದೇ ದುರ್ಲಭವಿದೆ. ಬ್ರಿಟನಿನ ಸಾಮ್ರಾಜ್ಯಶಾಹಿಯು ಜಗತ್ತಿನಲ್ಲೆಲ್ಲ ತನ್ನ ಅಗಾಧವಾದ ಶಕ್ತಿ ಮತ್ತು ವರ್ಚಸ್ಸನ್ನು ತೋರಿಸಿರುವಾಗ ಬ್ರಿಟಿಷರ ಒಲವಿಗೆ ಸಿಲುಕದ ನ್ಯಾಯ್ಯಮಾರ್ಗಾನುಯಾಯಿ ಮತ್ತು ನಿಷ್ಪಕ್ಷಪಾತಿ ಪಂಚರು ಸಿಗುವದು ಶಕ್ಯವಿಲ್ಲ. ಹಿಂದುಸ್ಥಾನದ ಸ್ವಾತಂತ್ರ್ಯದ ಪ್ರಶ್ನೆಯು ಬ್ರಿಟಿಶರನ್ನು ಕೂಡಲೇ ಸಂಧಾನಕ್ಕೆ ಒಪ್ಪಲು ಅವಕಾಶ ಕೊಡುವುದಿಲ್ಲ. ಮತಭೇದಕ್ಕೆ ಎಷ್ಟೋ ಅವಕಾಶವಿದ್ದರೂ ಬೇರೆ ಅನೇಕ ಪ್ರಶ್ನೆಗಳಲ್ಲಿ ಮಾತ್ರ ಸಂಧಾನವು ಶಕ್ಯವಿದೆ.

ಪ್ರಶ್ನೆ: ಏ ಅಯ್ ಸಿ ಸಿ ಯ ಅಲಾಹಾಬಾದಿನ ಠರಾವಿನ ಸಂಬಂಧದಲ್ಲಿ, ಮುಖ್ಯವಾಗಿ ಮುಸ್ಲಿಮರು ಹಿಂದೂಸ್ಥಾನವನ್ನು ಇಬ್ಭಾಗ ಮಾಡಬೇಕೆಂದು ಬಯಸಿದರೆ ಜಗತ್ತಿನ ಯಾವ ಶಕ್ತಿಯೂ ಅವರನ್ನು ತಡೆಗಟ್ಟಲಾರದು, ಎಂದು ನಿಮ್ಮ ಮಾತುಗಳ ಉದಾಹರಣೆ ಕೊಟ್ಟು ರಾಜಾಜಿಯವರು ಹೇಳಿದ ಬಗ್ಗೆ ನಿಮ್ಮ ಅಭಿಪ್ರಾಯವೇನು? ಆ ಬಗ್ಗೆ ವಿಮರ್ಶೆ ಮಾಡುವಿರಾ?

ಉತ್ತರ: ಅಲಹಾಬಾದಿನ ಕಾರ್ಯಕಲಾಪವನ್ನು ಅದರ ಪಾಡಿಗೆ ಬಿಟ್ಟುಬಿಡಬೇಕು. ನನ್ನ ಮಾತುಗಳನ್ನು ರಾಜಾಜಿಯವರು ಸರಿಯಾಗಿ ಉದಾಹರಿಸಿದ್ದಾರೆ. ಆ ಮಾತುಗಳನ್ನು ನಾನು ಈಗಲೂ ಪುನಃ ಹೇಳುತ್ತೇನೆ. ಮುಸ್ಲಿಮರಿಗೆ ಯಾವುದಾದರೂ ಬೇಕೆಂದಿದ್ದರೆ, ಜಗತ್ತಿನ ಯಾವ ಶಕ್ತಿಯೂ ಅದನ್ನು ಪಡೆಯದಂತೆ ಅದನ್ನು ತಡೆಯಲಾರದು ಯಾಕೆಂದರೆ ಹಾಗೆ ಬೇಡಿದ್ದನ್ನು ಕೊಡಲು ನಿರಾಕರಿಸಿದರೆ ಮುಂದೆ ಕಲಹ ಮಾಡಬೇಕು ಮುಸಲ್ಮಾನೇತರು ಯಾವುದನ್ನು ಕೊಡುವುದು ಬೇಡವೆಂದು ಬಯಸುವರೊ ಮತ್ತು ಯಾವುದನ್ನು ಕೊಡಲು ಶಕ್ಯವಿಲ್ಲವೋ ಅಂತಹುದನ್ನು ಬೇಡಿದರೆ ಕಲಹವಾಗುವುದರಲ್ಲಿ ಅನುಮಾನವಿಲ್ಲ. ಅದೇ ನಾನು ಹೇಳಿದ ಮಾತಿನ ಅರ್ಥ. ಈ ಅರ್ಥವು ಪ್ರತಿಯೊಂದು ಜಾತಿಗೂ ಅನ್ವಯಿಸುವುದು. ನಾಳೆ ಹಿಂದೂಗಳಿಗೆ ಏನೋ ಬೇಕಾಯಿತು, ಎಲ್ಲ ಹಿಂದುಗಳು ಒಂದಾಗಿ ಆ ರೀತಿ ನಿರ್ಣಯ ಮಾಡಿದರೆ ಕಲಹಮಾಡಲು ಬಯಸದ ಯಾವ ಪಕ್ಷವೂ ಅದನ್ನು ವಿರೋಧಿಸುವುದು ಶಕ್ಯವಿಲ್ಲ. ಆದರೆ ಒಂದಲ್ಲ ಒಂದು ದಿನ ಎಲ್ಲ ಪಕ್ಷದವರು ಬುದ್ಧಿ ಕಲಿಯುವರು. ಆಗ್ಗೆ ಅವರು ತಮ್ಮ ಬೇಡಿಕೆಯನ್ನು ಒಪ್ಪುವಂತೆ ಆಗ್ರಹ ಮಾಡುವುದಿಲ್ಲ. ಬೇಡಿಕೆಯು ಒಪ್ಪಲ್ಪಡದಿದ್ದರೆ ಅನ್ಯಾಯ ನಿರ್ಣಯದ ಬಗ್ಗೆ ಪಂಚರ ಕಡೆಗೆ ಹೋಗುವರು. ಇದು ಅನಾದಿಕಾಲದಿಂದ ಅನುಸರಿಸಿಕೊಂಡು ಬಂದ ನಾಗರಿಕ ಪದ್ಧತಿ. ಆ ಮಾರ್ಗವನ್ನು ನಾವು ಒಪ್ಪಿಕೊಳ್ಳಬಹುದೆಂದು ನನಗನಿಸುತ್ತದೆ. ಯಾಕೆಂದರೆ ಒಪ್ಪಂದದ ಸಲುವಾಗಿ ಇನ್ನಿತರರಿಂದ ಹಾಗೂ ನನ್ನಿಂದ ಮಾಡಲಾದ ಎಲ್ಲ ಪ್ರಯತ್ನಗಳು ನಿರರ್ಥಕವಾದ ಬಳಿಕ ಈ ರೀತಿ ಮಾಡುವುದೇ ತರ್ಕಬದ್ಧವಾದುದೆಂದು ನನಗನಿಸುತ್ತಿದೆ. ಅಂದರೆ ಬ್ರಿಟಿಶರು ಹಿಂದೂಸ್ಥಾನದಿಂದ ಸಂಪೂರ್ಣವಾಗಿ ಹೊರಗೆ ಹೋಗುವವರೆಗೆ ಹಿಂದೂಸ್ಥಾನದಲ್ಲಿ ನಿಜವಾದ ಒಪ್ಪಂದವಾಗಲು ಶಕ್ಯವಿಲ್ಲ. ಯಾಕಂದರೆ ಎಲ್ಲ ಪಕ್ಷಗಳು ಪರಮಂಡಲದ ಸಹಾಯವನ್ನು ನಿರೀಕ್ಷಿಸುತ್ತಿವೆ. ಮುಂದೆ ಚೀನೀಯರ ಫ್ರೆಂಚರ ಅಥವಾ ಅಥವಾ ಇನ್ನಾವದೇ ಪರ ಮಂಡಲದ ಸಹಾಯವನ್ನು ನಿರೀಕ್ಷಿಸುವುದು ಶಕ್ಯವಿದೆ. ಬ್ರಿಟಿಷರದಾಗಲೀ ಇನ್ನಿತರರದಾಗಲಿ—ಪರಮಂಡಲದವರ ಕೈವಾಡವೆಂದರೆ ಅದರಲ್ಲಿ ವ್ಯತ್ಯಾಸವಿಲ್ಲ. ಬ್ರಿಟಿಶರು ಹಿಂದೂಸ್ಥಾನದಲ್ಲಿ ಎಲ್ಲ ಅಧಿಕಾರವನ್ನು ಬಿಟ್ಟುಕೊಟ್ಟು ಹೋಗುವರೆ ಹಾಗೂ ಆ ಸ್ಥಾನವನ್ನು ಇನ್ನಾವ ಪರಮಂಡಲವೂ ಆಕ್ರಮಿಸದಿರುವವರೆಗೆ ನಿಜವಾದ ನಿರ್ಮಲಿನ ಒಕ್ಕಟ್ಟು ಶಕ್ಯವಿಲ್ಲ. ಅಂದರೆ ಬೇರೆ ಭಾಷೆಯಲ್ಲಿ ಹೇಳುವುದಾದರೆ ಹಿಂದುಸ್ಥಾನವು ಸ್ವತಂತ್ರವೆಂದು ತಿಳಿದುಕೊಳ್ಳುವುದಲ್ಲದೆ ಇನ್ನಾವ ಒಡೆಯರೂ ಯಾವದೇ ರೂಪದಲ್ಲಿ ಅಥವಾ ರೀತಿಯಲ್ಲಿ ಒಡೆತನ ನಡೆಸದೆ ನಿಜವಾಗಿಯೂ ಸ್ವತಂತ್ರ ರಾಷ್ಟ್ರವಾದಾಗ ಅಖಂಡವಾದ ಒಕ್ಕಟ್ಟು ಶಕ್ಯವಿದೆ. ಆದರೂ ಅದರ ಮೊದಲು ಮಾಡುವ ಪ್ರಯತ್ನಗಳು ನಿರರ್ಥಕವೆಂದು ನನಗೆ ಅನಿಸಿದರೂ ಒಕ್ಕಟ್ಟಿನ ಬಗ್ಗೆ ಮಾಡುವ ಪ್ರತಿಯೊಂದು ಪ್ರಯತ್ನವನ್ನು ನಾನು ಸ್ವಾಗತಿಸುವೆನು.

ಗ್ರೇಡಿ—ಗಾಂಧೀಜಿ ಭೆಟ್ಟಿ

ವಿವರಗಳು:—ಭಾರತಕ್ಕೆ ಬಂದಿರುವ ಅಮೆರಿಕದ ಟೆಕ್ನಿಕಲ್ ಸಲಹಾ ಸಮಿತಿಯ ನಾಯಕ ಡಾಕ್ಟರ್ ಗ್ರೇಡಿಯವರು, ತಾ. ೧೫ರಂದು ಮಹಾತ್ಮಾ ಗಾಂಧಿಯವರನ್ನು ಸಂದರ್ಶಿಸಿದರು. ತಮ್ಮ ಭೇಟಿಯು ಕೇವಲ ಸಹಜವೂ ಖಾಸಗಿಯದೂ ಆಗಿದೆಯೆಂದೂ ತನ್ನ ಪತ್ನಿಯವರಿಗೆ ಮಹಾತ್ಮರಲ್ಲಿ ಬಹಳ ಗೌರವವಿದೆಯೆಂದೂ ಅದೂ ಅಲ್ಲದೆ ತಾವು ಸಹ ಮಹಾತ್ಮಾ ಗಾಂಧಿಯವರನ್ನು ನೋಡಲು ಬಹಳ ಉತ್ಸುಕರಾಗಿದ್ದುದರಿಂದ ಅವರ ಸಂದರ್ಶನವನ್ನು ಪಡೆದಿರುವದಾಗಿಯೂ ಗ್ರೇಡಿಯವರು ತಿಳಿಸಿದರು. ಮುಂದುವರಿಸುತ್ತ, ಮಾನವ ಧರ್ಮ ಮತ್ತು ಶಾಂತಿಯ ಆಧಾರದ ಮೇಲೆ ಯುದ್ಧಾನಂತರದ ವಿಶ್ವರಚನೆಯಾಗಬೇಕೆಂಬ ನೀತಿಯ ಮಟ್ಟಿಗೆ ಗಾಂಧಿಜಿ ಮತ್ತು ರೂಜವೆಲ್ಟರವರು ಏಕಾಭಿಪ್ರಾಯವುಳ್ಳವರಾಗಿರುವರೆಂದರು.

ಸದ್ಯ ಯುದ್ಧ ಸಂಬಂಧವಾಗಿ ಭಾರತದಲ್ಲಿ ಕೈಗಾರಿಕ ಉದ್ಯಮಗಳ ಸ್ಥಾಪನೆಯ ವಿಷಯದ ಮೇಲೆ ಗ್ರೇಡಿ—ಗಾಂಧಿಯವರ ಮಾತುಕತೆನಡೆದವು.

ಕಾಸರಗೋಡು

ಹೊಸದುರ್ಗ ತಾಲೂಕು ಸೋವಿಯೆಟ್ ಸೌಹಾರ್ದ ಸಮ್ಮೇಳನ

ಹೊಸದುರ್ಗ ತಾಲೂಕಿನ ಸೋವಿಯೆಟ್ ಸೌಹಾರ್ದ ಸಮ್ಮೇಳನವು ಬೆಳ್ಳಿಕೋತ್ ಎಂಬಲ್ಲಿ ಕೇರಳ ಪ್ರಾಂತೀಕ ಸೋವಿಯೆಟ್ ಸಹಾಯ ಸಮಿತಿಯ ಅಧ್ಯಕ್ಷರೂ ಕೇರಳ ಪತ್ರಿಕೆಯ ಸಂಪಾದಕರೂ ಆದ ಶ್ರೀ. ಸಿ. ಆರ್. ಕುಂಜುಣ್ಣಿಯವರ ಅಧ್ಯಕ್ಷತೆಯಲ್ಲಿ ಜರುಗಿತು.

ಮಜೂರಿ—ಕಿಸಾನ ಧ್ವಜವನ್ನು ಶ್ರೀ. ವಿಷ್ಣು ಕಕ್ಕಿಲ್ಲಾಯರು, ಹಾರಿಸಿ ಭಾಷಣ ಮಾಡಿದರು. ಪರಿಷತ್ತಿಗೆ ಯಶಸ್ಸನ್ನು ಕೋರಿ ಮದ್ರಾಸಿನ ಪೌರ ಸಭಾಧ್ಯಕ್ಷ ಶ್ರೀ ಚಕ್ಕರೈ ಚೆಟ್ಟಿಯವರು ಕಳುಹಿದ್ದ ಸಂದೇಶವನ್ನೋದಿದ ಮೇಲೆ ಸ್ವಾಗತ ಸಮಿತಿಯ ಕಾರ್ಯದರ್ಶಿಯಾದ ಶ್ರೀ ಪಿ. ಅಂಬುನಾಯರವರು ನೆರೆದವರನ್ನು ಸ್ವಾಗತಿಸಿದರು. ಕಣ್ಣನ್ನೂರಿನ ಮಜೂರಿ ಮುಖಂಡರಾದ ಶ್ರೀ ನರಿಕುಟ್ಟಿ ಮಾಧವನ್ ಅವರು ಪರಿಷತ್ತಿನ ಉದ್ಘಾಟನೆ ಮಾಡಿದರು.

ಅಧ್ಯಕ್ಷರು ಭಾಷಣದಲ್ಲಿ ರಶ್ಯದ ಪತನವಾದರೆ, ಮಿತ್ರ ರಾಷ್ಟ್ರಗಳಿಗೆ ಜರ್ಮನಿಯನ್ನು ಗೆಲ್ಲುವುದು ಸಾಧ್ಯವೊ ಎಂಬುದು ಸಂಶಯಾಸ್ಪದವಾದ್ದುದೆಂದು ಹೇಳಿ ನಮಗೆ ಗರಿಲಾ ಶಿಕ್ಷಣ ಅತ್ಯವಶ್ಯವಾಗಿ ಬೇಕೆಂದೂ ಜಪಾನರನ್ನು ನಾವು ಶಕ್ತಿ ಪೂರ್ಣವಾಗಿ ಪ್ರತಿಭಟಿಸುವಂತಾಗಬೇಕೆಂದೂ ವ್ಯಕ್ತಪಡಿಸಿದರು.

ಯೂರೋಪಿನಲ್ಲಿ ದ್ವಿತೀಯ ರಂಗವನ್ನು ಸ್ಥಾಪಿಸಲು ಆಗ್ರಹ ಬದ್ಧ ಕೇಳಿಕೆ; ಹಿಟ್ಲರನ ಪಡೆಗಳ ಮೇಲೆ ವಿಜಯ ಸಂಪಾದಿಸಿದ ಕೆಂಪು ಸೇನೆಗಳಿಗೂ ಸ್ಟಾಲಿನನಿಗೂ ಅಭಿನಂದನಾರ್ಪಣೆ ಫ್ಯಾಸಿಸ್ಟ ವಿರೋಧಿಗಳಾದ ಶ್ರೀ ಕೆ. ಪಿ. ಆರ್ ಗೋಪಾಲನ್ ಸಂಬಿಯಾರ್ ಮತ್ತು ಇತರ ಮಟ್ಟಿನ್ನವರು, ಮೊರಾಜಾ ಕಯ್ಯೂರು ಮೊಕದ್ದಮೆಗಳಲ್ಲಿ ಶಿಕ್ಷಿಸಲ್ಪಟ್ಟವರನ್ನು ಬಿಡುಗಡೆ ಮಾಡಲು ಸರಕಾರಕ್ಕೆ ಅರಿಕೆ ಭಾರತದಲ್ಲಿ ಸೋವಿಯೆಟ್ ದಿನವು ಆಚರಿಸಲ್ಪಡುವಂತೆ ವ್ಯವಸ್ಥೆ ಮಾಡಲು ವೈಸರಾಯರಿಗೆ ಸೂಚನೆ; ರಶ್ಯ ಮತ್ತು ಭಾರತದ ಸರಕಾರಗಳೊಳಗೆ ಸಂಬಂಧ ಕಲ್ಪಿಸಲು ಬಿನ್ನಹ ರಷ್ಯನ್ ಸಾಹಿತ್ಯದ ಮೇಲಿನ ನಿರ್ಬಂಧವನ್ನು ತೆಗೆಯುವುದಕ್ಕೂ ಕೇಂದ್ರ ಮತ್ತು ಪ್ರಾಂತಗಳಲ್ಲಿ ರಾಷ್ಟ್ರೀಯ ಸರಕಾರಗಳನ್ನು ಸ್ಥಾಪಿಸುವುದಕ್ಕೂ ಸೂಚನೆ; ಕೆಲವು ಪ್ರಧಾನ ನಿರ್ಣಯಗಳು ಸರ್ವಾನುಮತದಿಂದ ಸ್ವೀಕರಿಸಲ್ಪಟ್ಟವು.

ಕರ್ನಾಟಕ ವಿಶ್ವವಿದ್ಯಾಲಯ ಪರಿಷತ್ತಿನ ಅಧಿವೇಶನ

ಕರ್ನಾಟಕ ವಿಶ್ವವಿದ್ಯಾಲಯ ಪರಿಷತ್ತು ಶ್ರೀ. ಆರ್. ಎ. ಜಹಾಗೀರದಾರ ಎಂ. ಎ. ಎಲ್. ಎಲ್. ಬಿ. ಸರಕಾರೀ ವಕೀಲ ಮುಂಬಯಿ ಹಾಯ್ ಕೋರ್ಟ ಇವರ ಅಧ್ಯಕ್ಷತೆಯಲ್ಲಿ ಇದೇ ತಿಂಗಳ ೩೦ ಹಾಗೂ ೩೧ನೇ ತಾರೀಕಿಗೆ ಬೆಳಗಾವಿಯಲ್ಲಿ ಕೂಡುವುದು. ಪರಿಷತ್ತಿನ ಸಿದ್ಧತೆಯು ಭರದಿಂದ ಸಾಗಿದೆ.

ನಿಮ್ಮ ಎದೆನೋವನ್ನು ಗುಣಪಡಿಸಿಕೊಳ್ಳಿ

ಶ್ವಾಸಯೋಗ್ಯ ಪೆಪ್ಸ ಮಾತ್ರೆಗಳನ್ನು ತೆಗೆದುಕೊಳ್ಳಿ

ಪೆಪ್ಸ ಮಾತ್ರೆಗಳು ಬಾಯಿಗೆ ಹಾಕಿದ ಕೂಡಲೇ ಕರಗಿ, ಔಷಧಿ ಸತ್ವವನ್ನು ಹೊರಗೆಡವಿ ಕಂಠವನ್ನು ಎದೆನೋವನ್ನು ಇನ್ನು ಅನೇಕ ತರದ ಉಪದ್ರವಕಾರೀ ಶೀತ ಇಂಪ್ಲುಯೆಂಜಾ ಕ್ರಿಮಿಗಳನ್ನು ನಾಶಗೊಳಿಸುವುವು. ಕ್ರಯ ೧ ಕ್ಕೆ ಒಂದು ರೂಪಾಯಿ.

ಪೆಪ್ಸ ಕೊಂಡುಕೊಳ್ಳಿ

PEPS

ವಿಷಹಾರಿ ಶ್ವಾಸನೀಯ ಮಾತ್ರೆಗಳು

ಜಿಲ್ಲಾ ಸಮಾಚಾರಗಳು

ಮಂಗಳೂರು

ಡೆಪ್ಯುಟಿ ಕಲೆಕ್ಟರರಾಗಿ ವರ್ಗ

ಕುಂದಾಪುರದ ತಹಶಿಲ್ದಾರರಾಗಿದ್ದ ಶ್ರೀ. ಎಂ. ಬಿ. ಶಂಕರರಾಯರು ಈಗ ಕೊಯಮುತ್ತೂರು ಪ್ರಾಂತದ ಡೆಪ್ಯುಟಿ ಕಲೆಕ್ಟರರಾಗಿ ವರ್ಗ ಹೊಂದಿ, ಇಷ್ಟರಲ್ಲೇ ತಮ್ಮ ಆ ಸ್ಥಾನದ ಚಾರ್ಜು ವಹಿಸಲು ಅತ್ತ ತೆರಳಿರುವರು

ಆಗಮನ-ನಿರ್ಗಮನ

ಕಮರ್ಶಿಯಲ್ ಟ್ಯಾಕ್ಸ್ ಕಮೀಶನರರೂ, ರೆವಿನ್ಯೂ ಬೋರ್ಡ್ ಮೆಂಬರರೂ ಆಗಿರುವ ಮಿ॥ ಇ ಎಂ. ಗೋನ್ ಅವರು ಇಷ್ಟರಲ್ಲೇ ಮಂಗಳೂರಿಗೆ ದಯೆಮಾಡಿಸಿ ಒಂದೆರಡು ದಿನ ಇಲ್ಲಿರುವರೆಂದು ತಿಳಿದುಬಂದಿದೆ

ಕಲೆಕ್ಟರರ ಪ್ರಕಟಣೆ

ಎಪ್ರಿಲ್ ತಾ ೨೪ರ ಸಾಯಂಕಾಲದಿಂದ ಬ್ಲ್ಯಾಕ್ ಔಟ್ ನಿರ್ಬಂಧಗಳ ಬದಲು ಸ್ವಲ್ಪ ಮಟ್ಟಿಗೆ ಬ್ರೌನ್ ಔಟ್ ನಿರ್ಬಂಧಗಳು ಪುನಃ ಪ್ರಾರಂಭಿಸುವವು. ರಸ್ತೆಗಳಲ್ಲಿನ ದೀಪಗಳೂ, ಕಟ್ಟೋಣಗಳಲ್ಲಿನ ದೀಪಗಳೂ, ಈಗ ಜ್ಯಾರಿಯಲ್ಲಿರುವ ಬ್ರೌನ್ ಔಟ್ ನಿಯಮಗಳಿಗನುಸಾರವಾಗಿ ಪ್ರತಿ ರಾತ್ರಿ ಒಂದು ನಿಯಮಿತ ಘಂಟೆಯ ವರೆಗೆ ಅಂದರೆ ರಾತ್ರಿ ೧೧ ಘಂಟೆಗೆ ಮೀರದೆ ಉರಿಯಲು ಬಿಡಲ್ಪಡುವವು ಈ ಘಂಟೆಗಿಂತಲೂ ಮುಂಚಿತವಾಗಿ ಸಂಪೂರ್ಣ ಬ್ಲ್ಯಾಕ್ ಔಟ್ ನಿಯಮಗಳನ್ನು ಅನುಸರಿಸಬೇಕಾದ ಸೂಚನೆಯೆಂದರೆ ರಸ್ತೆಗಳಲ್ಲಿನ ದೀಪಗಳನ್ನು ಆರಿಸುವುದು ಯಾ ಕತ್ತಲೆಗಿಂತಲೂ ಮುಂಚಿತವಾಗಿ ನಿಶ್ಚೈಸಿದಲ್ಲಿ ರಸ್ತೆಗಳಲ್ಲಿನ ದೀಪಗಳನ್ನು ಬೆಳಗಿಸದೆ ಇರುವುದು.

ಆದುದರಿಂದ ಎಲ್ಲಾ ಕಾಲದಲ್ಲೂ ಪೋಲೀಸು ಮತ್ತು ಎ. ಆರ್ ಪಿ. ವಾರ್ಡನರುಗಳಿಂದ ಸಹಕರಿಸುವ ರಸ್ತೆಗಳಲ್ಲಿನ ದೀಪಗಳಿಗನುಸಾರವಾಗಿ ನಡೆಯುವುದೇ ಸಾಮಾನ್ಯ ಜನತೆಯ ಕರ್ತವ್ಯವಾಗಿದೆ ಅಲ್ಲದೆ ಯುದ್ಧ ಪ್ರಯತ್ನಗಳಿಗೆ ಸಂಪೂರ್ಣ ಸಹಕಾರ ನೀಡಲೋಸುಗವಾಗಿ ಸಂಪೂರ್ಣ ಬ್ಲ್ಯಾಕ್ ಔಟ್ ಶರ್ತಗಳಿಗನುಸಾರವಾಗಿ ಅತ್ಯಗತ್ಯದ ಕಾರ್ಯಗಳನ್ನು ಮುಂದುವರಿಸಲು ಸಾಧ್ಯವಾಗದ ಸಾರ್ವಜನಿಕ ಸೇವೆಯವರೂ, ಸಂಸ್ಥೆಗಳೂ ರಾತ್ರಿಕಾಲದಲ್ಲಿ ನಿರ್ಬಂಧಿತ ಬ್ರೌನ್ ಔಟ್ ಶರ್ತಗಳ ಮೇರೆಗೆ ತಮ್ಮ ಕಾರ್ಯವನ್ನು ಮುಂದರಿಸಲು ಜಿಲ್ಲಾ ಮ್ಯಾಜಿಸ್ಟ್ರೇಟರಿಗೆ ಬರಕೊಳ್ಳಬಹುದು

ಈ ಶರ್ತಗಳಿಗೆ ಅತ್ಯಾವಶ್ಯಕವಾದುದೆಂದರೆ ಎಲ್ಲಾ ದೀಪಗಳೂ ಆಗತ್ಯಬಿದ್ದಲ್ಲಿ ಒಡನೆಯೇ ಆರಿಸಲ್ಪಡಬೇಕು ಇದನ್ನು ಮಾಡಲೋಸುಗವಾಗಿ ಟೆಲಿಫೋನಿನ ಬಳಿಯಲ್ಲಿ ಇಂಗ್ಲೀಷನ್ನು ಮಾತನಾಡಬಲ್ಲ ಒಬ್ಬ ಜವಾಬ್ದಾರಿ ಮನುಷ್ಯನಿರಬೇಕು ಮತ್ತು ದೀಪಗಳನ್ನು ಆರಿಸಲು ತ್ವರಿತದ ವಿಧಾನವಿರಬೇಕು ಈ ಮೇಲಿನವುಗಳನ್ನನುಸರಿಸುವ ವಿವರಗಳನ್ನು ಜಿಲ್ಲಾ ಮ್ಯಾಜಿಸ್ಟ್ರೇಟರವರಿಗೆ ಮಾಡುವ ಅರ್ಜಿಯಲ್ಲಿ ಕಾಣಿಸಿದಲ್ಲಿ ಅವರು ಕಾಣಿಸಿದಲ್ಲಿ ಅವರು ಸ್ಥಳದ ತನಖೆ ನಡೆಸಲೂ ಯೋಜನೆಯನ್ನು ಪರೀಕ್ಷಿಸಿ ನೋಡಲೂ ಮತ್ತು ಸಾಮಾನ್ಯವಾಗಿ ದೀಪಗಳನ್ನು ಉರಿಸಲು ಅನುಮತಿ ಕೊಡಲೂ ಒಬ್ಬ ಆಫೀಸರನಿಗೆ ಕಳುಹಿಸುವರು

ಅರ್ಜಿಗಳಲ್ಲಿ ಯಾವ ಯಾವ ಘಂಟೆಗಳ ವರೆಗೆ ಬ್ರೌನ್ ಔಟ್ ಶರ್ತಗಳಿಗನುಸಾರವಾಗಿ ಕೆಲಸಮಾಡುವ ಆವಶ್ಯಕತೆಯಿದೆಯೆಂದು ತೋರಿಸತಕ್ಕದ್ದು. ಸಂಬಂಧಪಟ್ಟ ಪ್ರತಿಯೊಬ್ಬನಿಗೂ ಎಚ್ಚರಿಸುವುದೇನಂದರೆ ಬ್ರೌನ್ ಔಟ್ ಶರ್ತಗಳಿಗನುಸಾರವಾಗಿಯೂ ಕೂಡ ಯಾವದೇ ತರದ ದೀಪವಾಗಲೀ, ದೀಪದ ಛಾಯೆಯಾಗಲೀ, ಸಮುದ್ರದಲ್ಲಿ ಪ್ರಕಾಶಿಸುವಂತೆ ಮಾಡಬಾರದು. ಈ ಬ್ರೌನ್ ಔಟ್ ಶರ್ತಗಳನ್ನು ಜ್ಯಾರಿಗೆ ತಂದಿರುವರಿಂದಾದ್ದು ಯಾವ ವಿಧಾನದಲ್ಲೂ ಮೋಟಾರು ಮತ್ತಿತರ ವಾಹನಗಳ ದೀಪಗಳ ಸಂಬಂಧವಾಗಿ ಹಾಲಿ ಜ್ಯಾರಿಯಲ್ಲಿರುವ ನಿಯಮಗಳನ್ನು ಬದಲಾಯಿಸುವುದಿಲ್ಲವೆಂದು ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರಾದ ಎಮ್. ಕರಮುತುಲ್ಲಾ ಇವರು ತಿಳಿಸುತ್ತಾರೆ.

ಜಿಲ್ಲಾ ಬೋರ್ಡು

ಸಭೆಯೊಂದು ತಾ. ೨೭ರಂದು ಪೂರ್ವಾಹ್ನ ೯-೩೦ ಘಂಟೆಗೆ ಜರಗುವುದು.

ನಗರ ಸಂದರ್ಶನ

ನಾಗರಿಕ ರಕ್ಷಣೆಯ ಡೆಪ್ಯುಟಿ ಇನ್ಸ್ಪೆಕ್ಟರ ಜನರಲರಾದ ಮಿ ಇ ಎಚ್. ಕೊಲ್ ಬ್ರೂಕ್ ಅವರು ತಾ. ೧೧ರಂದು ಏ ಆರ್ ಪಿ ಕಟ್ಟಡಗಳನ್ನೂ ನಗರದ ವಿವಿಧ ಭಾಗಗಳನ್ನೂ ಮ್ಯುನಿಸಿಪಲ್ ಮತ್ತು ಖಾಸಗಿ ವೈದ್ಯಾಲಯವನ್ನೂ ಸಂದರ್ಶಿಸಿ ಮರಳಿದರು.

ಗೋಕುಲದಾಸ ಕೋ-ಆಪರೇಟಿವ್ ಮಿಲ್ಕ್ ಸಪ್ಲೈ ಸೊಸೈಟಿ ಲಿಮಿಟೆಡ್

ಅದರ ಮಹಾಸಭೆಯು ತಾ ೧೧ರಂದು ಅಧ್ಯಕ್ಷರಾದ ಶ್ರೀ. ಕೆ. ಸಿ ಜೆ. ಪ್ರಭುಗಳ ಅಧ್ಯಕ್ಷತೆಯಲ್ಲಿ ಜರುಗಿತು ಲೆಕ್ಕಪತ್ರಗಳನ್ನೋದಿ ಮಂಜೂರು ಮಾಡಿದ ಬಳಿಕ ಡೈರೆಕ್ಟರರ ಚುನಾವಣೆ ನಡೆದು ಮುಂದಿನ ವರ್ಷದ ಬಜೇಟು ಮಂಜೂರು ಮಾಡಲ್ಪಟ್ಟಿತು.

ಯಕ್ಷಗಾನ

ಕದಿರೆ ಶ್ರೀ ಮಂಜುನಾಥ ಕೃಪಾಪೋಷಿತ ಯಕ್ಷಗಾನ ಕಲಾವರ್ಧಕ ಸಂಘದ ಎಂಟನೇ ವಾರ್ಷಿಕೋತ್ಸವದ ಸಲುವಾಗಿ ೧೭ ರಾತ್ರಿ ಒಳ್ಳೆ ಕದಿರೆ ದೇವಸ್ಥಾನದ ರಾಜಾಂಗಣದಲ್ಲಿ ಜಿಲ್ಲೆಯ ಪ್ರಸಿದ್ಧ ಅರ್ಥಧಾರಿಗಳ ಕೂಡುವಿಕೆಯಿಂದ 'ವಿರಾಟಪರ್ವ ಉತ್ತರ ಗೋಗ್ರಹಣ' ಎಂಬ ಪ್ರಸಂಗದ ಯಕ್ಷಗಾನ ಕೂಟವೊಂದು ನೆರವೇರಿತು.

ರಾಜಾಜಿಯವರ ಸಾರ್ವಜನಿಕ ಸಭೆ

ತಾ. ೨೫ರಂದು ಸಂಜೆಗೆ ಬೋಳಾರ್ ಪೇಟ್ ಪೆಸೆಂಜರಿನಲ್ಲಿ ಅಪರಾಹ್ನ ೩ ೧೦ಕ್ಕೆ ಶ್ರೀ ರಾಜಗೋಪಾಲಾಚಾರ್ಯರು ಮಂಗಳೂರಿಗೆ ಆಗಮಿಸುವರು. ಆ ದಿನ ಸಂಜೆ ೬ ಗಂಟೆಗೆ ಸಾರ್ವಜನಿಕ ಮೈದಾನಿನಲ್ಲಿ ಶ್ರೀ. ವೆಂಕಟ್ರಾಯ ಬಾಳಿಗ, ಎಂ ಎಲ್. ಏ ಇವರ ಅಧ್ಯಕ್ಷತೆಯಲ್ಲಿ 'ಜಪಾನ್ ಆಕ್ರಮಣ ಮತ್ತು ತಮ್ಮ ರಾಜಕೀಯ' ಎಂಬ ವಿಚಾರ ಭಾಷಣಮಾಡುವರು.

ಶ್ರೀ ಬಾಲಮಾರುತಿ ವ್ಯಾಯಾಮ ಮಂಡಲಿ ಮಂಗಳೂರು

ಇವರ ವ್ಯಾಯಾಮ ಶಿಕ್ಷಣ ಶಿಬಿರವು ಇದೇ ತಾ ೧೯ಕ್ಕೆ ಒಂದು ತಿಂಗಳ ಅವಧಿಯನಂತರ ಮುಗಿಯಿತು ಜಿಲ್ಲೆಯ ಬೇರೆ ಬೇರೆ ಕಡೆಗಳಿಂದ ಯುವಕರು ಇದಕ್ಕೆ ಸೇರಿ ಇದರ ಸದುಪಯೋಗವನ್ನು ಪಡೆದಿರುವರಾಗಿ ತಿಳಿದುಬರುತ್ತಿದೆ

ಫೆಸಿಸ್ಟ್ ವಿರೋಧ ಪರಿಷತ್

ನೇಕಾರ, ಬೀಡಿ ಹಾಗೂ ಪ್ರೆಸ್ ಕೆಲಸಗಾರರು ಸಂಘದ ಪ್ರತಿನಿಧಿಗಳ ಸಭೆಯೊಂದು ನಿನ್ನೆ ರಾತ್ರಿ ಕಾಂಗ್ರೆಸ್ ಕಚೇರಿಯಲ್ಲಿ ಶ್ರೀ. ಕೆ ಕೃಷ್ಣ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರಗಿ ಜಿಲ್ಲಾ ಮಜೂರ ಕೇಂದ್ರ ಸಮಿತಿಯನ್ನು ಸ್ಥಾಪಿಸಿ, ಶ್ರೀ ಕೇಶವಕಾಮತರನ್ನು ಕಾರ್ಯದರ್ಶಿಯಾಗಿ ಚುನಾಯಿಸಿತು ಫೆಸಿಸ್ಟ ರಾಷ್ಟ್ರಗಳ ದಾಳಿಯನ್ನು ಖಂಡಿಸಿ, ಅದನ್ನು ವಿರೋಧಿಸುವ ನಿರ್ಧಾರವನ್ನು ವ್ಯಕ್ತಪಡಿಸಿ, ಲೀಗ್ ಕಾಂಗ್ರೆಸ್ ಗಳ ಸಂಘಟನೆಯ ಸ್ಥಾಪನೆಯ ಮೂಲಕ ರಾಷ್ಟ್ರೀಯ ಸರಕಾರ ರಚಿಸಿ ಯುದ್ಧವನ್ನು ಭಾಗವಹಿಸುವದರ ಅಗತ್ಯವನ್ನು ಸೂಚಿಸುವ ಠರಾವನ್ನು ಮಂಜೂರು ಮಾಡಿದರು. ಹಾಗೂ ಇದೇ ತಾ. ೨೫ನೇ ಸೋಮವಾರ ಫೆಸಿಸ್ಟ ವಿರೋಧ ಪರಿಷತ್ತನ್ನು ಜರಗಿಸಬೇಕೆಂದೂ ಅದಕ್ಕೆ ಅಧ್ಯಕ್ಷರಾಗಲು ಮುಂಬಾಯಿಯ ಮಜೂರ ಧುರೀಣರಾದ ಶ್ರೀ. ಯನ್. ಯಲ್. ಉಪಾಧ್ಯಾಯರನ್ನೂ ಉದ್ಘಾಟನೆ ನಡಿಸಲು ಶ್ರೀ ಸಿ. ರಾಜಗೋಪಾಲಾಚಾರ್ಯರನ್ನೂ ಕೇಳಿಕೊಳ್ಳಬೇಕೆಂದೂ ನಿರ್ಣಯಿಸಲಾಯಿತು.

ಎಲ್ಲೂರು

ಇಲ್ಲಿಯ ಹಾ. ಎ. ಶಾಲೆಯ ವರ್ಧಂತ್ಯುತ್ಸವವು ಎಪ್ರಿಲ್ ತಾ. ೨೭ರಲ್ಲಿ ಶ್ರೀ. ಕೆ. ಸಂಜೀವ ಭಟ್ ಇವರ ಅಧ್ಯಕ್ಷತೆಯಲ್ಲಿ ವೈಭವದಿಂದ ಜರುಗಿತು. ಅಧ್ಯಕ್ಷರನ್ನು ಮೆರವಣಿಗೆಯಲ್ಲಿ ಸ್ವಾಗತೀಕರಿಸಿದ ಮೇಲೆ, ಪ್ರಾರ್ಥನೆ, ಶ್ರೀ. ಕೆ. ಕೆ. ಮೂರ್ತಿಯವರ ಸ್ವಾಗತ ಭಾಷಣ, ಶ್ರೀ. ಕೆ. ಭಟ್ಟರ ವರದಿವಾಚನಗಳಾದ ಬಳಿಕ ಅಧ್ಯಕ್ಷರು ಶಾಲಾಸ್ಥಾಪಕರಾದ ಶ್ರೀ. ಕೆ. ವೈ. ಅನಂತ ಕೃಷ್ಣಯ್ಯನವರ ಭಾವಚಿತ್ರವನ್ನು ಅನಾವರಣ ಮಾಡಿದರು. ಶ್ರೀ. ವೈ ಎಲ್. ರಾಯರು ಶಾಲೆಯ ಪ್ರಗತಿಪಥ ಎಂಬೀ ವಿಷಯವಾಗಿ ಭಾಷಣ ಕೊಟ್ಟರು. ಇವರಿಂದ ಬರೆಯಲ್ಪಟ್ಟ 'ನಿರ್ಮಲ ಕುಮಾರಿ' ಎಂಬ ಸಂಗೀತ ಪ್ರಹಸನವು ಶಾಲಾ ಹುಡುಗರಿಂದ ಅಭಿನಯಿಸಲ್ಪಟ್ಟಿತು. ಮಕ್ಕಳು ವಿನೋದಾವಳಿಗಳಿಂದ ಸಭಿಕರನ್ನು ಆನಂದಗೊಳಿಸಿದರು.

ಕಾಸರಗೋಡು

ಎರ್ಕಕಟ್ಟೆ ಐಡೆಡ್ ಎಲಿಮೆಂಟರಿ ಶಾಲಾ ಪ್ರವೇಶೋತ್ಸವ

ಸಾರ್ವಜನಿಕ ಸಹಾಯದಿಂದ ಎರ್ಕಕಟ್ಟೆಯಲ್ಲಿ ನವೀನವಾಗಿ ಕಟ್ಟಿಸಿದ ಎರ್ಕಕಟ್ಟೆ ಐಡೆಡ್ ಎಲಿಮೆಂಟರಿ ಶಾಲಾ ಕಟ್ಟಡದ ಪ್ರವೇಶೋತ್ಸವವು ಇದೇ ಮೇ ತಾ ೧೬ರಂದು ಜರಗಿತು ಉದ್ಘಾಟನಾ ಸಮಾರಂಭವು ಶ್ರೀ ಮಾಸ್ತ ಖಂಡಿಗೆ ಮಹಾಲಿಂಗ ಭಟ್ಟರವರಿಂದ ನೆರವೇರಿತು ಶ್ರೀಗಳಾದ ಎಂ. ರಾಮಕೃಷ್ಣ ರಾವ್, ಎಸ್ ಗೋಪಾಲ ಕೃಷ್ಣ ಭಟ್, ಪಿ ಸುಬ್ರಾಯ ಭಟ್ ಮೊದಲಾದವರು ಶಾಲೆಯ ಏಳಿಗೆಯನ್ನು ಹಾರೈಸಿ ಭಾಷಣವಿತ್ತರು ಟೀಚರ್ ಮೆನೇಜರ್ ಶ್ರೀ. ಅಣ್ಣಯ್ಯಶೆಟ್ಟರು ವರದಿಯನ್ನೋದಿದರು. ಒದಿಯಡ್ಕ ಪ್ರೇಮಕೂಟದವರು ಕುಮಾರ ವಿಜಯ ಯಕ್ಷಗಾನ ನಾಟಕವನ್ನು ಯಶಸ್ವಿಯಾಗಿ ಅಭಿನಯಿಸಿದರು

ಉಡುಪಿ

ಜಿಲ್ಲಾ ಕಲೆಕ್ಟರರ ಭಾಷಣ

ಇದೇ ತಾ ೭ರಲ್ಲಿ ಜಿಲ್ಲಾ ಕಲೆಕ್ಟರರಾದ ಮಿ ಯಂ ಕರಮತುಲ್ಲಾರವರು ತಾಲೂಕು ಕಚೇರಿಯಲ್ಲಿ ಯುದ್ಧ ಪ್ರಕರಣದ ಕುರಿತು ಭಾಷಣ ಮಾಡುತ್ತ ಸದ್ಯದ ಪರಿಸ್ಥಿತಿಯಲ್ಲಿ ಈ ಕಡೆ ಶತ್ರು ಧಾಳಿಯಿಲ್ಲವಾದರೂ ಸಂದರ್ಭಾನುಸಾರ ಆ ಪರಿಸ್ಥಿತಿಯನ್ನು ಎದುರಿಸಲು ತಯಾರಿರಬೇಕೆಂದರು ಮಹಾಜನರು ಎ ಆರ್ ಪಿ. ಯೋಜನೆಗೆ ಸಹಕರಿಸಬೇಕಾಗಿಯೂ ಸಿವಿಕ್ ಗಾರ್ಡ್ ಮತ್ತು ಇತರ ಯುದ್ಧ ಸಹಾಯಕ ಸರ್ವಿಸುಗಳಿಗೆ ಸೇರಬೇಕಾಗಿಯೂ ವಿನಂತಿ ಮಾಡಿದರು.

ಅಖಂಡ ಹಿಂದೂಸ್ಥಾನ ದಿನಾಚರಣೆ

ವೀರ ಸವರ್ಕರರ ಸಂದೇಶದಂತೆ ದ ಕ. ಜಿಲ್ಲಾ ಹಿಂದೂ ಮಹಾಸಭೆಯ ನೇತೃತ್ವದಲ್ಲಿ ಇದೇ ತಾ. ೧೧ರಲ್ಲಿ ಶ್ರೀ ಆರ್ ಎಸ್ ಶೆಣೈಯವರ ಅಧ್ಯಕ್ಷತೆಯಲ್ಲಿ ರಥಬೀದಿಯಲ್ಲಿ ಸಾರ್ವಜನಿಕ ಸಭೆ ಜರಗಿ ಅಖಂಡ ಹಿಂದೂಸ್ಥಾನ ದಿನವನ್ನು ಆಚರಿಸಲಾಯಿತು ಹಿಂದೂಸ್ಥಾನದ ಸ್ವಾತಂತ್ರ್ಯವನ್ನು ಗಳಿಸುವ ಮತ್ತು ಹಿಂದೂಸ್ಥಾನದ ಅಖಂಡತ್ವವನ್ನು ಪಾಲಿಸುವ ಪ್ರತಿಜ್ಞೆ, ಹಿಂದೂಸ್ಥಾನದ ರಕ್ಷಣೆಗೆ ಮಾಡುವ ದೀಕ್ಷೆಗಳಾಗಿ ಹಿಂದೂ ಮಹಾಸಭೆಯಿಂದ ಮಂಜೂರಾದ ನಿರ್ಣಯಗಳು ಓದಿ ಪುಷ್ಟೀಕರಿಸಲಾದುವು ಶ್ರೀ. ರಾಜಾಜಿಯವರ ನೂತನ ಧೋರಣೆಯನ್ನು ವಿರೋಧಿಸಿ ಪಾಕಿಸ್ಥಾನ ಯೋಜನೆಯನ್ನು ಖಂಡಿಸಲಾಯಿತು.

ಶಾರೀರಿಕ ಶಿಕ್ಷಣ ಶಿಬಿರ ಉದ್ಘಾಟನಾ ಸಮಾರಂಭ

ಹಿಂದೂಸ್ಥಾನ ಸ್ಕೌಟ್ ಎಸೋಸಿಯೇಶನಿನ ಉದಾಶ್ರಯದಲ್ಲಿ ಜಿಲ್ಲೆಯ ಹಾಯರ್ ಮತ್ತು ಲೋವರ್ ಎಲಿಮೆಂಟರಿ ಶಾಲಾ ಮಾಸ್ತರುಗಳ ಪ್ರಯೋಜನಾರ್ಥವಾಗಿ ಸಜ್ಜುಗೊಳಿಸಲ್ಪಟ್ಟ ಶಾರೀರಿಕ ಶಿಕ್ಷಣ ಶಿಬಿರದ ಉದ್ಘಾಟನಾ ಸಮಾರಂಭವನ್ನು ಉಡುಪಿ ರೇಂಜಿನ ಶಾಲಾ ಡಿ. ಇನ್ಸ್ಪೆಕ್ಟರ್ ಶ್ರೀ. ಕೆ. ಸಂಜೀವ ಭಟ್, ಅವರು ಇದೇ ತಾ. ೧೩ರಲ್ಲಿ ಸ್ಥಳೀಯ ಬೋ. ಹಾಯಸ್ಕೂಲಿನ ವಠಾರದಲ್ಲಿ ನೆರವೇರಿಸಿದರು. ಇಂತಹ ಶಿಕ್ಷಣ ಶಿಬಿರಗಳ ಆವಶ್ಯಕತೆಯನ್ನು ಸೂಚಿಸಿ ಈ ಶಿಬಿರದಲ್ಲಿ ತರಬೇತು ಹೊಂದಿದ ಉಪಾಧ್ಯಾಯರು ತಮ್ಮ ಅನುಭವವನ್ನು ತಂತಮ್ಮ ಶಾಲೆಗಳಲ್ಲಿ ಪ್ರತ್ಯಕ್ಷ ರೀತಿಯಲ್ಲಿ ಅಮಲಿನಲ್ಲಿ ತರಬೇಕೆಂದು ಬೋರ್ಡುಹಾಯ್ಸ್ಕೂಲ್ ಹೆಡ್ಮಾಸ್ತರ್ ಶ್ರೀ. ಆರ್. ಫೆರ್ನಾಂಡೀಸರು ಆಗ್ರಹಪೂರ್ವಕ ವಿನಂತಿಮಾಡಿದರು. ಈ ಶಿಬಿರವನ್ನು ಉಡುಪಿಯಲ್ಲಿ ತೆರೆದಿದುವರೆ ಇಲಾಖಾ ಅಧಿಕಾರಿಗಳು ಒಪ್ಪಿಗೆಯಿತ್ತುದಕ್ಕಾಗಿ ಜಿಲ್ಲಾ ಸ್ಕೌಟು ಕಮಿಶನರ್ ಶ್ರೀ ಎಮ್. ಎಸ್. ಮಾಧವರಾಯರು ಆಭಾರ ಮನ್ನಿಸಿದರು ಶ್ರೀ ಆರ್ ಆರ್ ಕುಂಜೂರರು ಧನ್ಯವಾದಗಳನ್ನರ್ಪಿಸಿದರು ಅ ಸ್ಕೌಟ್ ಕಮೀಶನರ್ ಶ್ರೀ. ಬಿ. ಎಮ್ ಬಾಳಿಗ ಮತ್ತು ಶ್ರೀ. ಅನಂತ ಕೃಷ್ಣರಾಯರು ಶಿಬಿರವನ್ನು ನಡೆಸುತ್ತಿರುವರು

ಭದ್ರಾವತಿಯಲ್ಲಿ ದಬ್ಬಾಳಿಕೆ

ಮೈಸೂರು ಸರಕಾರವು ಭದ್ರಾವತಿಯಲ್ಲಿ ನಡೆಸಿದ ದಬ್ಬಾಳಿಕೆಯು ಎಲ್ಲರ ಲಕ್ಷವನ್ನು ಎಳೆದಿದು ಜನತೆಯಲ್ಲಿ ಕ್ಷೋಭೆಯನ್ನು ಹೆಚ್ಚಿಸುವಂತಾಗಿದೆ ಯಾವುದೇ ತರದಿಂದ ಈ ಕಾಲದಲ್ಲಿ ಸರಕಾರಕ್ಕೆ ತೊಂದರೆಯಾಗದಂತೆ ದೃಷ್ಟಿಯಿಟ್ಟು 'ಮೇ' ದಿನಾಚರಣೆಯನ್ನು ಶಾಂತ ರೀತಿಯಿಂದ ಜನರು ಮುಗಿಸಿದ ನಂತರ ೩ನೇ ತಾರೀಕಿನ ದಿವಸ ಅಧಿಕಾರಿಗಳು ಕೂಲಿಕಾರ ಮುಖಂಡರನ್ನು ಒಯ್ಯುವಾಗ ಅವರನ್ನು ಕಾಣಬೇಕೆದು ನೆರೆದ ಜನರ ಮೇಲೆ ಲಾಠಿ ಪ್ರಹಾರ ಗುಂಡಿನ ಪ್ರಯೋಗ ನಡೆಸಿದ್ದು ಬಹಳ ಕ್ರೂರಮಯವಾಗಿದೆ ಆ ಪ್ರಯೋಗದಿಂದ ಮೂರು ಜನರು ಮರಣ ಹೊಂದಿ ನಲ್ವತ್ತು ಜನರು ಗಾಯಗೊಂಡಿದ್ದು ಅದರಲ್ಲಿ 'ಸರೋಜ್' ಎಂಬ ೩ ವರುಷದ ಬಾಲಿಕೆಯು ತನ್ನ ಮನೆಯಲ್ಲಿದ್ದಾಗ ಗುಂಡಿಗೆ ತುತ್ತಾಗಿ ಸತ್ತದ್ದು ಜನತೆಯಲ್ಲಿ ಅತ್ಯಂತ ಸಂತಾಪ ತುಂಬಿಸುವಂತಾದ್ದು ಆಗಿರುವುದು

ದೇಶದ ಈಗಿನ ಗಂಡಾಂತರ ಕಾಲದಲ್ಲಿ ಮೈಸೂರು ಸರಕಾರವು ಪ್ರಸಂಗ ಹಾಗು ಪರಿಸ್ಥಿತಿಯನ್ನು ಯೋಚಿಸದೆ ಅನಾವಶ್ಯಕವಾಗಿ ಅಶಾಂತತೆ ಉಂಟಾಗುವುದಂತೆ ಮಾಡಿದ್ದು ಬಹಳ ವಿಷಾದಕರ ಸಂಗತಿಯಾಗಿದೆ ಮೈಸೂರು ಸಂಸ್ಥಾನದಲ್ಲಿ ಪದೇ ಪದೇ ಅತ್ಯಾಚಾರಗಳು ಸಂಭವಿಸುತಿದ್ದದ್ದು ಜನತೆಯಲ್ಲಿ ಅಪ್ರೀತಿ ಬೆಳೆಯುವಂತಾಗಿ ಸರಕಾರವು ಹಲವು ಬಗೆಯಿಂದ ತನ್ನ ತತ್ವವನ್ನು ಕಳಕೊಳ್ಳಲಿಕ್ಕೆ ಹತ್ತಿದಂತಾಗಿದೆ

ಎಂದಿನಂತೆ ಮೈಸೂರು ಕಾಂಗ್ರೆಸ್ ಕಾರ್ಯಕರ್ತರೂ ಮೈಸೂರ ಜನತೆಯು ಇಂತಹ ಉದ್ರೇಕ ಸರಕಾರದ ಪರಿಸ್ಥಿತಿಯಲ್ಲಿ ಕೂಡಾ ಶಾಂತತೆಯಿರದಲೂ ಧೈರ್ಯದಿಂದಲೂ ವರ್ತಿಸಿದಕ್ಕಾಗಿ ಅವರಿಗೆ ಅಭಿವಂದನೆಗಳು ಸಮರ್ಪಿಸುತ್ತೇನೆ ಎಂದು ಕ ಪ್ರಾಂ ಕಾಂ. ಕಮಿಟಿ ಕಾರ್ಯದರ್ಶಿಯವರ ಪ್ರಕಟಣೆ

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮೊನ್ಸಿಫ್ ಕೋರ್ಟಿನಲ್ಲಿ

S C 87/42

ರಿಸೀವರ್ B ನಾರಾಯಣ .... ವಾದಿ

ಗೋಲಿಮನೆ ಶೀತಟ್ಟಿ (ಬಿ.ತಿ) ಸಹಾ— ಪ್ರ. ವಾದಿ

2 ಲಿಂಗಮ್ಮ ಸತ್ತ. ಮಂಜಮ್ಮ ಶೆಡ್ತಿ ಮಗಳು ವ 1ನೇ ಪ್ರತಿವಾದಿ ಹೆಂಡ್ತಿ.

ಸದ್ರಿ ವಾದಿಯು ಜ್ಯಾಹೀರು ಮಾಡುವುದೇನೆಂದ್ರ ಸದ್ರಿ ಬಹುದಾನ್ಯ ಸಂ/-ರದ ಗೇಣಿ ಬರಮಾಡಿಕೊಳ್ಳುವರೆ ಪ್ರತಿವಾದರ ಮೇಲೆ ಮಾಡಿದ ದಾವೆಯು ತಾ 11-6-42ಕ್ಕೆ ತನ್ಖಿಗೆ ಯಿಟ್ಟದೆ ಆ ಕುರಿತು ನಿಮ್ಮ ದೇನಾದ್ರೂ ಉದಾಹರಣೆಯಿದ್ದರೆ ಸದ್ರಿ ದಿವಸ ಮೇಲ್ಕಂಡ ಕೋರ್ಟಿನಲ್ಲಿ ಹಗಲು 11 ಗಂಟೆಗೆ ಸ್ವತಹಾ ವ ವಕೀಲರ ದ್ವಾರಾ ಹಾಜ್ರಾಗಿ ತಿಳಿಸತಕ್ಕದ್ದು ಇಲ್ಲವಾದ್ರೆ ನಿಮ್ಮ ಗೈರ ಹಾಜರಿಯಲ್ಲಿ ಸದ್ರಿ ಸಂಬ್ಯದ ತೀರ್ಮಾನಿಸಲ್ಪಡುವುದೆಂಬ ಸಂಗತಿ ವಾದಿ ಕಡೆಯಿಂದ 2ನೇ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸಿಯದೆ

Kundapur } G. Sanjiva Rao,

9-4-42 } Pleader for Plaintiff.

ಸ್ವಾಭಿಮಾನಿ ಶಾಂತಾ ಆಪ್ಟೆ

ರಾಗತಪ್ಪಿದನೆಂದು ಸಂಗೀತ ಮಾಸ್ತರಿಗೆ ಹೇಳುತ್ತಿರುವ ಆ ಪುಟ್ಟ ಹುಡುಗಿ ಯಾರು? ಆಕೆ ಹೇಳಿದುದು ಸರಿಯಾದರೂ ಉಪಾಧ್ಯಾಯರು ಅವಳನ್ನು 'ಶಾಲೆಯಿಂದ ಹೊರಕ್ಕೆ ಹಾಕಿದರು. ತಾರಕಾಗಣದಲ್ಲಿ ಜಾಜ್ವಲ್ಯಮಾನವಾಗಿ ಪ್ರಜ್ವಲಿಸುತ್ತಲಿರುವ ಶಾಂತಾ ಆಪ್ಟೆಯೇ ಆ ಹುಡುಗಿ.

ಸೊಲ್ಲಾಪುರದಲ್ಲಿರುವ ದುಧಾಯಿ ಎಂಬ ಹಳ್ಳಿ ಶಾಂತಳ ಜನ್ಮಸ್ಥಳ. ಸುಮಾರು ಎರಡು ದಶಕಗಳ ಹಿಂದೆ ಒಂದು ಸಾಮಾನ್ಯ ತರಗತಿಯ ಮಹರಾಷ್ಟ್ರ ಬ್ರಾಹ್ಮಣ ವಂಶದಲ್ಲಿ ಆಪ್ಟೆ ಜನಿಸಿದಳು. ಶಾಂತಾಳ ತಂದೆ ಸನಾತನಿಗಳು. ಭಜನೆ ಮಾಡುವ ಸಂಪ್ರದಾಯವನ್ನಿಟ್ಟುಕೊಂಡಿದ್ದರು. ನಾಲ್ಕು ವರ್ಷದ ಶಾಂತೆ ಭಜನೆಗಳನ್ನೂ ಕೀರ್ತನೆಗಳನ್ನೂ ಬಹಳ ಉತ್ಸುಕತೆಯಿಂದ ಹೇಳುತ್ತಿದ್ದಳು. ಅವಳ ಸಂಗೀತ ಶಿಕ್ಷಣಕ್ಕೆ ಆಕೆಯ ತಂದೆಯ ಭಜನೆ ಮತ್ತು ಕೀರ್ತನೆಗಳೇ ಅಸ್ತಿಭಾರವಾಗಿ ಪರಿಣಮಿಸಿದವೆಂದು ಹೇಳಿದರೆ ಅತ್ಯುಕ್ತಿಯಾಗಲಾರದು. ಶಾಂತೆಯು ಪ್ರಾಥಮಿಕ ಶಾಲೆಯಲ್ಲಿ ಸಹ ತನ್ನ ಉಳಿದ ಸಹಪಾಠಿಗಳಿಗಿಂತ ಸಂಗೀತದಲ್ಲಿ ಒಂದು ಕೈ ಮೇಲೆನಿಸಿಕೊಂಡಿದ್ದಳು. ಶಾಂತೆಗೆ ಆರು ವರ್ಷವಾಗಿರುವಾಗ ಆಕೆಯ ತಂದೆ ಕಾಲಾಧೀನರಾದರು. ಹನ್ನೆರಡು ಜನರುಳ್ಳ ಈ ದೊಡ್ಡ ಕುಟುಂಬದ ನಿರ್ವಹಣವು ಶಾಂತೆಯ ಹಿರಿಯಣ್ಣನಾದ ಬಾಬುರಾವ್‌ನ ಮೇಲೆ ಬಿದ್ದಿತು. ಅವನು ತನ್ನ ಅಲ್ಪ ಸ್ವಲ್ಪ ಸಂಪಾದನೆಯಲ್ಲೇ ತನ್ನ ತಂಗಿ ಶಾಂತೆಗೆ ವಿದ್ಯಾಭ್ಯಾಸ ಕೊಡಲು ನಿರ್ಧರಿಸಿದನು. ಅಂದಿನ ಸನಾತನೀ ದಿನಗಳಲ್ಲಿ ಸ್ತ್ರೀ ವಿದ್ಯಾಭ್ಯಾಸಕ್ಕೆ ಅಷ್ಟಾಗಿ ಪ್ರೋತ್ಸಾಹವಿಲ್ಲದುದರಿಂದ, ಶಾಂತೆಯ ಬಂಧುಗಳನೇಕರು, ಅವಳು ಶಾಲೆಯಲ್ಲಿ ಸಂಗೀತ ಮತ್ತು ನೃತ್ಯವನ್ನು ಅಭ್ಯಸಿಸುವುದಕ್ಕೆ ಆಕ್ಷೇಪವೆತ್ತಿದರು.

ಶಾಂತಾ ಆಪ್ಟೆ ಶಾಲೆಯಲ್ಲಿರುವಾಗಲೇ ನೃತ್ಯವೆಂದರೆ ಬಹಳ ಅಭಿರುಚಿಯನ್ನು ತೋರುತ್ತಿದ್ದಳು. ಒಂದು ದಿನ ಶಾಲೆಯ ಬಿಡುವಿನ ವೇಳೆಯಲ್ಲಿ ಹುಡುಗರೆಲ್ಲರೂ ಆಟಪಾಠಗಳಲ್ಲಿ ಮಗ್ನರಾಗಿದ್ದರು. ಉಪಾಧ್ಯಾಯರು ಬಲವಾದ ಊಟವನ್ನು ಹೊಡೆದು ಬಿಸಿಲಿನ ಬೇಗೆಯನ್ನು ತಾಳಲಾರದೆ ಕುರ್ಚಿಯ ಮೇಲೆಯೇ ಕುಳಿತುಕೊಂಡು ಗೊರಕೆ ಹೊಡೆಯುತ್ತಿದ್ದರು. ಈ ಸಮಯವನ್ನು ತಮ್ಮ ಅನುಕೂಲಕ್ಕೆ ತಿರುಗಿಸಿಕೊಂಡು ಎರಡು ಪುಟ್ಟ ಮಕ್ಕಳು—ಅಣ್ಣ ಮತ್ತು ತಂಗಿ—ಶಾಲೆಯ ಕೋಣೆಯಿಂದ ನುಸುಳಿ ಪಕ್ಕದಲ್ಲಿಯೇ ಇದ್ದ ಜಗನ್ಮಾತೆಯ ದೇಗುಲವನ್ನು ಹೊಕ್ಕರು. ಅಲ್ಲಿಯೇ ಬಿದ್ದಿದ್ದ ಒಂದು ಒಡಕಲು ಡಬ್ಬವನ್ನು ಅಣ್ಣನು ತೆಗೆದುಕೊಂಡು ತಬಲಗಾರನಾದ. ಸಹೋದರಿಯು ತೊದಲು ನುಡಿಯಲ್ಲಿ ಹಾಡುತ್ತಾ ತಬಲದ ತಾಳಕ್ಕೆ ಸರಿಯಾಗಿ ಹೆಜ್ಜೆ ಹಾಕುತ್ತ ನರ್ತಿಸಲಾರಂಭಿಸಿದಳು. ಉಪಾಧ್ಯಾಯರು ಎಚ್ಚತ್ತು ತರಗತಿಯಲ್ಲಿ ಹುಡುಗರು ಕಾಣೆಯಾಗಿರುವ ಅಂಶವನ್ನು ಗ್ರಹಿಸಿ, ತುಂಟಾಟಕ್ಕಾಗಿ ಆ ಹುಡುಗರನ್ನು ಶಿಕ್ಷಿಸಬೇಕೆಂಬ ಉದ್ದೇಶದಿಂದ ಹಲ್ಲು ಕಡಿಯುತ್ತಾ ಅವರನ್ನು ಹುಡುಕಲು ಹೊರಟರು. ದೇವಾಲಯದಲ್ಲಿ ಬರುತ್ತಿದ್ದ ಶಬ್ದದ ಕಾರಣಕ್ಕೆ ಈ ಹುಡುಗರೇ ಕಾರಣರಿರಬಹುದೆಂದು ತಿಳಿದು ಅಲ್ಲಿಗೆ ಹೋದರು. ಆದರೆ ಆ ಪುಟ್ಟ ಹುಡುಗಿಯ ನೃತ್ಯವಿದ್ಯೆಯನ್ನು ನೋಡಿ ಬೆರಗಾದರು.

ಮೊದಲನೆ ಬಾರಿ ಶಾಂತಾ ಆಪ್ಟೆ ರಂಗಮಂಟಪದಲ್ಲಿ ಕಾಲಿಕ್ಕಿದುದು ೧೯೩೧ರಲ್ಲಿ. ಬಾಬುರಾವ್ ತನ್ನ ಮೂವರು ಸಹೋದರಿಯರನ್ನೊಡಗೂಡಿದ ಒಂದು ಸಂಗೀತಪ್ರಸಂಗವನ್ನೇರ್ಪಡಿಸಿದ್ದರು. ತೆರೆ ಎದ್ದಕೂಡಲೇ ಇಬ್ಬರು ಹುಡುಗಿಯರು ತಮ್ಮೆದುರಿಗಿದ್ದ ಪ್ರೇಕ್ಷಕ ವೃಂದವನ್ನು ನೋಡಿ ಕಂಪಿತರಾದರು. ಆದರೆ ಶಾಂತ ಕಂಗೆಡಲಿಲ್ಲ. ತನ್ನ ಮಧುರ ಕಂಠದಿಂದ ಗಾನಸುಧೆಯಲ್ಲಿ ಪ್ರೇಕ್ಷಕರನ್ನು ತಲ್ಲೀನರಾಗುವಂತೆ ಮಾಡಿದಳು. ಅಂದು ಶಾಂತೆಯ ಸಂಗೀತವನ್ನು ಕೇಳಿದವರು ಇಂದಿಗೂ ಮರೆತಿಲ್ಲ. ಕಾಲಾನುಗುಣವಾಗಿ ಶಾಂತೆಯ ಹೆಸರು ಬೆಳಗತೊಡಗಿತು.

ಶಾಂತೆಯ ಜೀವನ ಇತಿಹಾಸದಲ್ಲಿ ಅತಿ ಮಹತ್ವದ ವರ್ಷವೆಂದರೆ ೧೯೩೩. ಏಕೆಂದರೆ ಪೂನಾದ ಸರಸ್ವತಿ ಸಿನಿಟೋನ್‌ನವರು ತಯಾರಿಸಿದ "ಶಾಮಸುಂದರ್" ಎಂಬ ಚಿತ್ರದಲ್ಲಿ ಈಕೆ ಪ್ರಥಮವಾಗಿ ಅಭಿನಯಿಸಿದಳು. ಈಕೆ ರಾಧಾ ಪಾತ್ರವನ್ನು ನಿರ್ವಹಿಸಿದ್ದಳು. ಪ್ರೇಕ್ಷಕರು ಆಕೆಯ ಅಭಿನಯವನ್ನು ಅಷ್ಟಾಗಿ ಮೆಚ್ಚಲಿಲ್ಲ. ಅನೇಕ ಪತ್ರಿಕೆಗಳವರು ಈ ನೂತನ ನಟಿಯ ಅಭಿನಯವನ್ನು ಕುರಿತು ಕಟುವಾಗಿ ಟೀಕಿಸಿದ್ದರು. ಈ ವಿಮರ್ಶೆಗಳನ್ನು ಓದಿದ ಶಾಂತಾ ಆಪ್ಟೆ ತನ್ನ ಮನಸಿನಲ್ಲಿ ಹೀಗೆ ನಿರ್ಧರಿಸಿಕೊಂಡಳು "ನಾನು ಇನ್ನೊಂದು ಸಾರಿ ಚಲನ ಚಿತ್ರದಲ್ಲಿ ಭಾಗವಹಿಸ್ದೇ ಆದರೆ, ಎಲ್ಲೆಡೆಗಳಿಂದಲೂ ಪ್ರಶಂಸೆಯ ಸುರಿಮಳೆ ಹೊಂದಬೇಕು"

ಇದೇ ಸಮಯದಲ್ಲಿ ಪ್ರಭಾತ್ ಫಿಲ್ಮ್ ಕಂಪನಿಯು ಕೊಲ್ಹಾಪುರದಿಂದ ಪೂನಾಕ್ಕೆ ಬಂದಿತು. ದಿಗ್ದರ್ಶಕ ಶಾಂತರಾಮರು 'ಅಮೃತ ಮಂಥನ' ಚಿತ್ರದಲ್ಲಿ ಪಾತ್ರವಹಿಸಲು ಪ್ರತಿಭಾಶಾಲಿಗಳಾದ ನಟನಟಿಯರನ್ನು ಹುಡುಕುತ್ತಿದ್ದರು. ಶಾಂತಾ ಆಪ್ಟೆಯ ಮಧುರ ಕಂಠಕ್ಕೆ ಆಕರ್ಷಿತರಾಗಿದ್ದ ಶಾಂತಾರಾಮರು ಆಕೆಗೆ ಸುಮಿತ್ರಳ ಪಾತ್ರವನ್ನು ಕೊಟ್ಟರು. ಶಾಂತಾರಾಮರ ಶ್ರೇಷ್ಠ ದಿಗ್ದರ್ಶನ, ಅತ್ಯದ್ಭುತವಾಗಿ ಅಭಿನಯಿಸಬೇಕೆಂಬ ಶಾಂತೆಯ ಆಕಾಂಕ್ಷೆ ಇವೆರಡೂ ಮಿಳಿತವಾಗಿ ಶಾಂತಾ ಆಪ್ಟೆಯು ಆ ಚಿತ್ರವು ಪ್ರದರ್ಶನವಾದ ದಿನವೇ ತಾರಾಂಗಣದಲ್ಲಿ ಗಣ್ಯಸ್ಥಾನವನ್ನಲಂಕರಿಸಿದಳು. "ರಜಪೂತ ರಮಣಿ"ಯಲ್ಲಿ ಆಪ್ಟೆ ಚಿಕ್ಕ ತುಂಟ ಹುಡುಗಿಯ ಪಾತ್ರವನ್ನು ಕಟು ವಿಮರ್ಶಕರು ಕೂಡ ತಲೆತೂಗುವಂತೆ ಅಭಿನಯಿಸಿದಳು. "ಅಮರಜ್ಯೋತಿ"ಯಲ್ಲಿ ಆಕೆ ಪಾತ್ರವಹಿಸಿದಳೆಂದು ಹೇಳುವುದಕ್ಕಿಂತ ಆ ಪಾತ್ರದಲ್ಲಿ ಜೀವಿಸಿದಳೆಂದು ಹೇಳಿದರೆ ಉತ್ಪ್ರೇಕ್ಷೆಯಾಗಲಾರದು. "ಬಿಯಾಂಡ್ ದಿ ಹೊರೈಸನ್" ಚಿತ್ರದಲ್ಲಿ ಈಕೆ ಗುಲಾಮ ತರುಣಿಯ ಪಾತ್ರವನ್ನು ವಹಿಸಿದ್ದಳು. "ದುನಿಯಾನಮಾನೆ" ಚಿತ್ರದಲ್ಲಿ ನಿರ್ಮಲಳ ಪಾತ್ರದಲ್ಲಿ ಈಕೆ ತನ್ನ ಕಲಾಕೌಶಲ್ಯದ ಪ್ರೌಢಿಮೆಯನ್ನು ಬಹಳ ಚೆನ್ನಾಗಿ ವ್ಯಕ್ತಪಡಿಸಿದ್ದಾಳೆ. ನಂತರ "ಗೋಪಾಲಕೃಷ್ಣ"ದಲ್ಲಿ ಪಾತ್ರವಹಿಸಿ ತನ್ನ ಅದ್ವಿತೀಯ ನಟನಾ ಕೌಶಲ್ಯವನ್ನು ವ್ಯಕ್ತಪಡಿಸಿ ಪ್ರಭಾತದ ಕೀರ್ತಿ ಪತಾಕೆಯನ್ನು ಎತ್ತಿ ನಿಲ್ಲಿಸಿ ತನಗೂ ಪ್ರಭಾತ್ ಕಂಪನಿಗೂ ಇದ್ದ ಸಂಬಂಧವು ಮುಗಿದುದರಿಂದ ಕಂಪನಿಯನ್ನೇ ಬಿಟ್ಟು ಬಿಟ್ಟಳು.

ಆ ವೇಳೆ ಅಖಿಲ ಭಾರತದ ಪ್ರವಾಸವನ್ನು ಕೈಕೊಂಡಳು. ಪ್ರವಾಸ ಕೈಕೊಳ್ಳುವ ಮುನ್ನ ತಾನು ಸಿನೆಮಾ ವ್ಯವಸಾಯಕ್ಕೆ ಸೇರಿದ್ದು, ಆ ದೀರ್ಘ ಅವಧಿಯಲ್ಲಿ ತನಗಾದ ಅನುಭವಗಳನ್ನೆಲ್ಲಾ ಸೇರಿಸಿ ಒಂದು ಪುಸ್ತಕವನ್ನು ಬರೆದು ಅದನ್ನು ಮೂರು ಭಾಷೆಗಳಲ್ಲಿ ಪ್ರಕಟಿಸಿದಳು. ಅನಂತರ ಹೊಸದಾಗಿ ತಮಿಳು ಭಾಷೆಯನ್ನು ಕಲಿತು, ಆ ಭಾಷೆಯಲ್ಲಿ ತಾನು ಬಹಳ ನುರಿತವಳಂತೆ ಅತ್ಯಂತ ಯಶಸ್ವಿಯಾಗಿ "ಸಾವಿತ್ರಿ" ಎಂಬ ಪೌರಾಣಿಕ ಚಿತ್ರದಲ್ಲಿ ನಟಿಸಿ, ತಮಿಳು ತಾರಾಗಣದಲ್ಲೂ ಕೀರ್ತಿಗಳಿಸಿದಳು. ಅವಳ ಇತ್ತೀಚಿನ ಚಿತ್ರ ದೇವಕೀ ಬೋಸರು ನಿರ್ದೇಶಿಸಿರುವ "ಅಪ್ನಾಘರ್" ಈ ಚಿತ್ರದಲ್ಲಿಯೂ ಕೂಡ ಆಕೆ ತನ್ನ ಹಿರಿಮೆಯನ್ನು ಉಳಿಸಿಕೊಂಡಿದ್ದಾಳೆಂದು ಹೇಳಲಾಗಿದೆ.

ಶಾಂತಾ ಆಪ್ಟೆ ಪಾಶ್ಚಾತ್ಯ ಚಿತ್ರಗಳನ್ನು ಬಹಳವಾಗಿ ನೋಡುತ್ತಾಳೆ. "ಗ್ರೇಟಾ ಗಾರ್ಬೋ" "ರಾಬರ್ಟ್ ಟೇಲರ್" ಮತ್ತು "ಕ್ಲಾಡೆಟ್ ಕಾಲ್‌ಬರ್ಟ್" ಇವಳ ನೆಚ್ಚಿನ ನಟನಟಿಯರು. ಭಾರತೀಯ ಚಿತ್ರರಂಗದಲ್ಲಿ ದೇವಿಕಾರಾಣಿಯೇ ಸಮರ್ಥ ನಟಿಯೆಂದು ಇವಳ ಅಭಿಪ್ರಾಯ. ಭಾರತೀಯ ಚಿತ್ರಗಳಲ್ಲಿ 'ಚಂಡೀದಾಸ್' ಚಿತ್ರವೇ ಉತ್ಕೃಷ್ಟವೆಂದು ಹೇಳುತ್ತಾಳೆ.

ಆರೋಗ್ಯ ಮತ್ತು ಸೌಂದರ್ಯಕ್ಕೆ

ಈ ಇಮ್ಮಡಿ ಗುಣದ ಸಾಬೂನನ್ನೇ ಉಪಯೋಗಿಸಿರಿ

ಕಾಂತಿಯನ್ನುಂಟುಮಾಡುವ ಮತ್ತು ಔಷಧಿಯುಕ್ತವಾದ ಇಮ್ಮಡಿ ಗುಣಗಳಿರುವ ಸಾಬೂನು ಕುಟಿಕೂರಾ ಟಾಯ್ಲೆಟ್ ಸಾಬೂನ (Cuticura Toilet Soap) ನಿಮ್ಮ ಮೈಯ ಚರ್ಮವನ್ನು ಸೌಂದರ್ಯವಾಗಿಯೂ ಆರೋಗ್ಯ ಸ್ಥಿತಿಯಲ್ಲಿರಿಸುವಂತೆಯೂ ಔಷಧೀಕರಿಸಿರುತ್ತದೆ. ಈ ಸಾಬೂನಿನಿಂದ ಹೊರಟ ಮಹತ್ವಾದ ನೊರೆಯು ಚರ್ಮರಂಧ್ರಗಳಿಂದ ಕಲ್ಮಶಗಳನ್ನು ತೆಗೆಯುತ್ತದೆ. ಈ ಇಮ್ಮಡಿ ಗುಣಗಳಿರುವ ಸೌಂದರ್ಯಯುಕ್ತವಾದ ಸಾಬೂನನ್ನು ಉಪಯೋಗಿಸಿ ಸೌಂದರ್ಯವನ್ನು ಗಳಿಸಿರಿ

ಕುಟಿಕೂರಾ ಸಾಬೂನು (Cuticura Soap) ಬೆಣ್ಣೆಯಂತೆ ಗುಣವುಳ್ಳದ್ದಾಗಿದೆ. ದೊರಗಾದ ಚರ್ಮವನ್ನು ನುಣುವಾಗಿರಿಸುತ್ತದೆ.

ಸೌಮ್ಯ ಕ್ರಿಮಿನಾಶಕ ಗುಣವುಳ್ಳದ್ದು—ಚರ್ಮವನ್ನು ಸ್ವಚ್ಛವಾಗಿರಿಸುವುದು. ಮೊಡವೆ, ಚರ್ಮವ್ಯಾಧಿಗಳಿದ್ದರೆ ಕುಟಿಕೂರಾ ಮುಲಾಮನ್ನು (Cuticura Ointment) ಉಪಯೋಗಿಸಿರಿ. ಇದರ ಕ್ರಿಮಿನಾಶಕ ಗುಣಯುಕ್ತವಾದ ಔಷಧಿಯು ಚರ್ಮವ್ಯಾಧಿಯನ್ನು ಕೂಡಲೇ ಗುಣಪಡಿಸುವುದು. ಸ್ನಾನದ ನಂತರ ಕುಟಿಕೂರಾ ಟಾಲ್ಕಮ್ ಪೌಡರು (Cuticura Talcum Powder) ಬಹಳ ಉತ್ತಮವಾದದ್ದು.

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರುಗಳಲ್ಲಿಯೂ ಮಾರಲ್ಪಡುತ್ತದೆ.

ಕುಟಿಕೂರಾ ಸಾಬೂನು
CUTICURA SOAP

FURTHER REDUCTIONS IN LENDING RATES

The busy trade season is coming to a close. Lending rates are naturally tending to be reduced. Even at the beginning of the season we had lowered our rates on loans and advances as our contribution to better business. A further reduction in accordance with seasonal conditions will be made early if the present conditions continue

CANARA BANK, LIMITED.
ESTD 1906

ಶಾಂತಾ ಆಪ್ಟೆ ಹಾಸ್ಯಪ್ರಿಯಳು. ಟೆನ್ನಿಸ್ ಪಿಂಗ್‌ಪಾಂಗ್ ಈಕೆಯ ನೆಚ್ಚಿನ ವ್ಯಾಸಂಗಗಳು. ಕುದುರೆಸವಾರಿ, ಈಜುವದು, ಮತ್ತು ಮೋಟಾರ್ ನಡೆಸುವುದು ಇವು ಸಹ ಅವಳ ಇಷ್ಟ ವಿಷಯಗಳು.

ಸಂಗೀತ ಮತ್ತು ನೃತ್ಯ ವಿದ್ಯೆಗಳಲ್ಲಿ ಪರಿಪೂರ್ಣತೆಯನ್ನು ಪಡೆಯಬೇಕೆಂಬುದೇ ಅವಳ ಮಹತ್ವಾಕಾಂಕ್ಷೆಯಾಗಿದೆ. ಈ ಕಲೆಗಳನ್ನು ಅಭ್ಯಯಿಸಲು ಹಣವನ್ನು ನೀರಿಗಿಂತ ಧಾರಾಳವಾಗಿ ವೆಚ್ಚಮಾಡುತ್ತಾಳೆ.

—ಶ್ರೀ 'ಕುಮುದ'

ಸ್ವದೇಶಾಭಿಮಾನಿಯಲ್ಲಿ ನಿಮ್ಮ ಜಾಹೀರಾತುಗಳನ್ನು ಕೊಡಿರಿ

...ಶ್ರೀ ಸುಬ್ರಹ್ಮಣ್ಯ ಕ್ಷೇತ್ರದಲ್ಲಿ ...ಜನೇಯಸ್ವಾಮಿ ದೇವಸ್ಥಾನ ... ಮುಖ್ಯಪ್ರಾಣ ದೇವರ ಪ್ರತಿಷ್ಠೆ

...ದ್ರಾಸ್ ನೋರ್ಡನ್ ರೈಲ್ವೆಯ ವ್ಯಾಲಕ ಶ್ರೀ. ಕೆ. ಸೀತಾರಾಮರಾಯರು ತಮ್ಮ ...ಯವರಾದ, ದಿವಂಗತ ಬ್ರ. ಶ್ರೀ. ಕೆ. ಗೋ...ದಾಸರ ಸ್ಮಾರಕವಾಗಿ ಸ್ವಂತ ಖರ್ಚಿನಿಂದ ...ಕೆ. ಸುಬ್ರಹ್ಮಣ್ಯದಲ್ಲಿ ಕಟ್ಟಿಸಿರುವ ಶ್ರೀ ಆಂ...ಯ ದೇವಸ್ಥಾನದಲ್ಲಿ ಶ್ರೀ ಆಂಜನೇಯ ಪ್ರ... ಸಮಾರಂಭವು ತಾ. ೪ರಂದು ನಡೆಯಿತು. ...ಉಡುಪಿ ಶ್ರೀ ಫಲಿಮಾರು ಮಠದ ಗುರು...ರಾದ ಶ್ರೀ ಮದ್ರಘುಮಾನ್ಯ ತೀರ್ಥ ಶ್ರೀ ಪಾ...ಳವರು ವೈದಿಕ ಲೌಕಿಕ ಮಹಾಜನರ ಸ...ಖದಲ್ಲಿ ಪ್ರತಿಷ್ಠಾ ಕಾರ್ಯವನ್ನು ನೆರವೇರಿಸಿ... ಹೊಸ ದೇವಸ್ಥಾನದಲ್ಲಿ ಶ್ರೀ ಫಲಿಮಾರು ...ಧ ಶ್ರೀಗಳವರಿಗೂ ಶ್ರೀ ಪಾದಂಗಳವರಿ...ಗೂ ಪಾದಪೂಜೆ ನಡೆಸಲ್ಪಟ್ಟಿತು. ಈ ಸಮಾ...ರಂಭದಲ್ಲಿ ಶ್ರೀ ಮದ್ರಘುಮಾನ್ಯ ತೀರ್ಥ ಶ್ರೀ...ಪಾದಂಗಳವರು ಅಮೂಲ್ಯ ಸ್ವಸ್ತಿವಾಚನ ಮಾಡಿ... ಶ್ರೀ. ಟಿ. ಪಿ. ಲಕ್ಷ್ಮೀನಾರಾಯಣ ಉಪಾ...ಯರೂ ಶ್ರೀ. ಕೆ. ಆರ್. ಆಚಾರ್ ಅವರು ...ಲರಿಗೂ ಧನ್ಯವಾದಗಳನ್ನರ್ಪಿಸಿದರು. ಅನಂತ... ಶ್ರೀ ಫಲಿಮಾರು ಮಠದ ಶ್ರೀಗಳವರಿಗೆ ಭಿಕ್ಷೆ... ಅದೇ ಸಂದರ್ಭದಲ್ಲಿ ಬ್ರಹ್ಮಾರಾಧ...ನೂ ಶ್ರೀ ಆಂಜನೇಯ ದೇವಸ್ಥಾನದಲ್ಲಿ ನಡೆ...ವು.

...ರಾತ್ರಿ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾ...ನದಲ್ಲಿ ರಂಗಪೂಜೋತ್ಸವವು ನಡೆಯಿತು. ಶ್ರೀ ...ದ್ರಘುಮಾನ್ಯ ತೀರ್ಥ ಶ್ರೀಪಾದಂಗಳವರಿಗೂ ...ಸುಬ್ರಹ್ಮಣ್ಯ ಮಠದ ಶ್ರೀಗಳವರಿಗೂ ...ದಪೂಜೆ ಪಾದಕಾಣಿಕೆಗಳನ್ನರ್ಪಿಸಿದರು. ರಾತ್ರಿ ...ಶೇಷ ಉತ್ಸವಗಳೂ ಇದ್ದುವು.

ತಾ. ೯ರಂದು ಶ್ರೀ. ಭಾಗಮಂಡಲ ಶ್ರೀಪತಿ...ಯರ ಛತ್ರದಲ್ಲಿ, ಡಾ. ಯು. ರಾಮರಾಯರ ...ಧ್ಯಕ್ಷತೆಯಲ್ಲಿ ಮೈಸೂರಿನ ಶ್ರೀ ಜಯಚಾಮ...ರಾಜೇಂದ್ರ ಒಡೆಯರ ಮತ್ತು ಶ್ರೀ. ಬಿ. ಶ್ರೀಪತಿ...ಯರ ಭಾವಚಿತ್ರಗಳ ಅನಾವರಣ ಕಾರ್ಯ...ವು ಕ್ರಮವಾಗಿ ಪ್ರೊ. ಬಿ. ಯಂ. ಶ್ರೀಕಂಠಯ್ಯ...ನವರಿಂದಲೂ ಶ್ರೀ. ಸಿ. ಯಂ. ರಾಮರಾಯರಿಂದ...ಲೂ ನೆರವೇರಿಸಲ್ಪಟ್ಟುವು.

ಶ್ರೀ. ಕೆ. ಆರ್. ಆಚಾರ್ಯರು ಧನ್ಯವಾದಗಳ...ನರ್ಪಿಸಿದರು. ಶ್ರೀ. ವಿ. ರಾಮಚಂದ್ರರಾಯರು ...ನಾನ್ಯ ಅಧ್ಯಕ್ಷರಿಗೆ ವಂದನಾರ್ಪಣೆ ಮಾಡಿದರು.

ತಾ. ೬ನೇ ಸಾಯಂಕಾಲ ಶ್ರೀ ಸುಬ್ರಹ್ಮಣ್ಯ...ದಲ್ಲಿ, ದಿವಂಗತ ಇನ್ನ ವಾಸುದೇವಯ್ಯನವರ ...ಸ್ಮಾರಕ ಮಂದಿರದ ಉದ್ಘಾಟನಾ ಸಮಾರಂಭವು ...ದಿವಾನ್ ಕರ್ನಲ್ ಸದಾಶಿವರಾವ್ ಯಂ. ...ಎಲ್., ಅಡ್ವಕೇಟ್ ಅವರಿಂದ ನೆರವೇರಿಸಲ್ಪಟ್ಟಿ...ತು. ಮಂಗಳೂರು ನಗರ ಸಭಾಧ್ಯಕ್ಷರಾದ ...ಶ್ರೀ. ಬಿ. ವಿ. ಬಾಳಿಗ ಯಂ. ಎಲ್. ಎ. ಅವರು ...ಅಗ್ರಾಸನ ವಹಿಸಿದ್ದರು.

ಅದೇ ಕಟ್ಟಡದಲ್ಲಿ ಸುಬ್ರಹ್ಮಣ್ಯ ರೂರಲ್ ...ಲೈಬ್ರರಿಯ ಆರಂಭೋತ್ಸವವು ದ. ಕ. ಜಿಲ್ಲಾ ...ಬೋರ್ಡು ಅಧ್ಯಕ್ಷರಾದ ಮಾನ್ಯ ಡಾ. ವಿಟ್ಠಲ ...ಶೆಟ್ಟರ ಹಸ್ತದಿಂದ ನೆರವೇರಿತು. ಶ್ರೀ. ಬಿ. ...ವೈಕುಂಠ ಬಾಳಿಗರು ಭಾಷಣ ಮಾಡಿದರು.

ಉಡುಪಿ ಶಾಲಾ ವರ್ಧಂತಿ

ಮ್ಯುನಿಸಿಪಲ್ ಬಡಗಣ ಶಾಲಾ ವರ್ಧಂತಿ ಮಹೋತ್ಸವವು ಇದೇ ತಾ. ೧೧ರಲ್ಲಿ ಡಾ. ಯು. ...ಎಲ್. ನಾರಾಯಣರಾಯರ ಅಧ್ಯಕ್ಷತೆಯಲ್ಲಿ ...ಜರಗಿತು. ವರದಿ ವಾಚನ, ಸಭಿಕರ ಭಾಷಣಾಗ...ಳಾದ ತರುವಾಯ ಶ್ರೀ. ಕೆ. ಶೇಷಗಿರಿ ರಾಯರು ...ತನ್ನ ತಂದೆ ಕೀರ್ತಿಶೇಷರ ಭಾವಚಿತ್ರ 'ಫಸ್ಟ್ ಏಯಿಡ್ ...ಕಿಟ್' ಇದರ ಉದ್ಘಾಟನವನ್ನು ಅಧ್ಯಕ್ಷರು ನೆರವೇರಿಸಿದರು. ಡಾ. ರಾಯರು ತನ್ನ ಅಧ್ಯಕ್ಷ ಭಾಷಣದಲ್ಲಿ ಪ್ರಾಥಮಿಕ ಶಿಕ್ಷಣವು ಸಾಕಷ್ಟು ಮುಂದರಿಯಲಿಲ್ಲವೆಂದು ಅಕ್ಷರಜ್ಞರಸಂಖ್ಯೆಯು ಸಹ ಹೀನಾವಸ್ಥೆಯಲ್ಲಿಯೇ ಇನ್ನೂ ಇರುವುದೆಂದೂ ಹೇಳಿದರು.

ಶ್ರೀ. ಸುಭಾಸಬೋಸರು ಜರ್ಮನಿಯಲ್ಲಿ ಕೈದಿಯೆ?

ಜಪಾನಿಗೆ ಕಳುಹಿಸಲು ಹಿಟ್ಲರನಿಗೆ ಇಷ್ಟವಿಲ್ಲ?

ಬೊಂಬಾಯಿಯ 'ಬ್ಲಿಟ್ಸ್' ಪತ್ರಿಕೆಯು ಜೂರಿಕ್‌ನಿಂದ ಬಂದ ಕೇಬಲ್ ಎಂದು ಶ್ರೀ. ಸುಭಾಷ್ ಚಂದ್ರಬೋಸರ ವಿಷಯವಾಗಿ ಒಂದು ವರದಿಯನ್ನು ಪ್ರಕಟಿಸಿದೆ. ಈ ವರದಿಯನ್ನು ಅಮೆರಿಕಾ ಪತ್ರಿಕಾ ಬಾತ್ಮೀದಾರರೊಬ್ಬರು ಜೂರಿಕ್‌ನಿಂದ ವಾಶಿಂಗ್‌ಟನಿಗೆ ಕೇಬಲ್ ಮಾಡಿದರೆಂದು ಹೇಳಲಾಗಿದೆ.

ಶ್ರೀ. ಬೋಸರು ಭಾರತದಿಂದ ಅದೃಶ್ಯವಾದಾರಭ್ಯ ಅವರ ಬಗ್ಗೆ ಭಾರತದಲ್ಲಿ ಕೌತುಕವುಂಟಾಗಿದೆ. ಅವರು ಯಾವ ದಿವಸ ಪೋಲೀಸ್ ವಶದಿಂದ ಅದೃಶ್ಯರಾದರೋ, ಮೂರನೇ ದಿನ ಕಲ್ಕತ್ತೆಯಿಂದ ಹೊರಟ ಜಪಾನೀ ಹಡಗಿನಲ್ಲಿ ಪರಾರಿಯಾದರೆಂದು ಹೇಳಬಹುದಾಗಿದೆ.

ಶ್ರೀ. ಬೋಸರು ಬರ್ಲಿನಿಗೆ ಟೋಕಿಯೋ ಮತ್ತು ರಶ್ಯಾ ಮೂಲಕ ಬಂದರೆಂದು ಹೇಳಬಹುದು. ಆ ಕಾಲದ ಮೇಲೆ ಬಂದಾಗ ರಶ್ಯವೂ ಜರ್ಮನಿಯೂ ಮಿತ್ರತ್ವದಿಂದಲೇ ಇದ್ದುವು. ಶ್ರೀ. ಬೋಸರು ಭಾರತದಲ್ಲಿ ಪತ್ತೆಯಿಲ್ಲದ ಮತ್ತು ಪೆಸಿಫಿಕ್ಕಿನಲ್ಲಿ ಜಪಾನೀ ಕಾರ್ಯವು ಆರಂಭವಾದ ಕಾಲದೊಳಗೆ ಶ್ರೀ. ಬೋಸರು ಬ್ರಿಟನ್ನಿಗೆ ವಿರೋಧವಾಗಿ ಮಾಡಿದ ಬ್ರಾಡ್‌ಕ್ಯಾಸ್ಟ್‌ಗಳೆಲ್ಲವೂ ಬರ್ಲಿನ್ ರೇಡಿಯೋದಿಂದಲೇ ನಡೆದವು. ಆದೇ ಸ್ವತಂತ್ರ ಹಿಂದೂಸ್ತಾನ್ ಸ್ಟೇಷನ್ ಎನಿಸಿಕೊಂಡಿತ್ತು. ಈಗಲೂ ಬ್ರಾಡ್‌ಕಾಸ್ಟ್‌ಗಳು ಕೇಳುತ್ತಿರುವುವಾದರೂ ಅವು ಈಗ ಶ್ರೀ. ಬೋಸರು ಮಾಡುತ್ತಿರುವುವಲ್ಲ. ಹಳೆಯ ರಿಕಾರ್ಡ್ ಬ್ರಾಡ್‌ಕಾಸ್ಟುಗಳು. ಜಪಾನು ತನ್ನ ಅಕ್ಸಿಸ್ ಒಪ್ಪಂದದಂತೆ ಅಕ್ಸಿಸ್ ರಾಷ್ಟ್ರಗಳಿಗೆ ಸಂಪೂರ್ಣ ಸಹಾಯ ಮಾಡುವ ಬದಲು ತನ್ನ ಸ್ವಂತ ಆಕ್ರಮಣ ಕಾರ್ಯದಲ್ಲಿಯೇ ತೊಡಗಿರುವುದರಿಂದ ಶ್ರೀ ಬೋಸರನ್ನು ಜಪಾನಿಗೆ ಕಳುಹಿಸಲು ಜರ್ಮನಿಗೆ ಇಷ್ಟವಿಲ್ಲವೆಂದು ತೋರುತ್ತದೆ. ಜಪಾನಿಗೆ ಅವರನ್ನು ಕಳುಹಿಸಬೇಕಾದರೆ ಜಪಾನು ಜರ್ಮನಿಯ ಷರತ್ತುಗಳನ್ನು ಒಪ್ಪಬೇಕು. ಜಪಾನು ಶ್ರೀ. ಬೋಸರನ್ನು ಕರೆಸಿಕೊಂಡು ಬರ್ಮಾವನ್ನು ಆಕ್ರಮಣ ಮಾಡಿಕೊಂಡಿರುವುದರಿಂದ ಉಂಟಾದಿರುವ ಸೌಲಭ್ಯದ ದೆಸೆಯಿಂದ ಬಂಗಾಳಾ ಕಡೆ ಅವರನ್ನು ಬಿಟ್ಟುಕೊಂಡು ಮುಂದುವರಿಯಲು ಆಶಿಸುತ್ತಿರುವುದೆಂಬುದು ಸಾಮಾನ್ಯ ನಂಬಿಕೆ.





Bhuvanendra Products Limited,
Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitual abortion and other uterine troubles Must be commensed soon after conception andcontinued up to the time of delivery.

"ಭುವನೇಂದ್ರ ಗರ್ಭಪಾಲ"

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವವಿಧದ ದೋಷಗಳನ್ನು ಗುಣಪಡಿಸುವ ದಿವ್ಯಔಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವಕಾಲದ ವರೆಗೆ ಸೇವಿಸುವುದು. ಅತ್ಯುತ್ತಮ

ಸ್ಥಳೀಯ ಸ್ಟಾಕಿಸ್ಟ್ ವ ಏಜೆಂಟರು:—
(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಪೈ, ರಥಬೀದಿ. (3) ದಿ ಕರ್ನಾಟಕ ಸ್ನಫ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ.

ಡಿಪೋ:—1. ಮರಾಠ ಗಲ್ಲಿ ಹುಬ್ಬಳ್ಳಿ.
2. 36 ಫ್ಲ್ಯಾಕ್ರೋಫ್ಟ್ ರೋಡ್, ಟ್ರಿಪ್ಲಿಕೇನ್, ಮದರಾಸು.

The Bank of Mangalore Limited

HEAD OFFICE — Mangalore.
BRANCHES — Moodabidri & Padubidri

ANNOUNCEMENT

On and from 1st February 1942, fixed deposits will be accepted at the following attractive rates.

One year	4%
Two years or above	4½%

Interest Payable Quarterly

HALFTONE & LINE
BLOCK MAKING
UNDERTAKEN
Sharada Press,
MANGALORE.

ರಾಷ್ಟ್ರೀಯ ವಾರ ಪತ್ರಿಕೆ
ಸ್ವದೇಶಾಭಿಮಾನಿಗೆ
— ಇಂದೇ —
ಚಂದಾದಾರರಾಗಿರಿ.

ರೈಲು ಬಂಡಿಗಳ ಸಮಯ

ಇದೇ ಮೇ ತಾ. 1ರಿಂದ ವ್ಯತ್ಯಾಸವಾದ ರೈಲು ಬಂಡಿಗಳ ಸಮಯಗಳು ಈ ಕೆಳಗಿನಂತಿವೆ—

ಗಾಡಿಗಳು	ಹೊರಡುವ ಗಂಟೆ	ತಲ್ಪುವ ಗಂಟೆ
ಗೂಡ್ಸು ಬಂಡಿ	6.25 ಬೆಳಿಗ್ಗೆ	7.30 ರಾತ್ರಿ
ಮಲಬಾರು ಎಕ್ಸ್ ಪ್ರೆಸ್ (ಮೈಲ್)	8.30 ಬೆಳಿಗ್ಗೆ	6.45 ಸಾಯಂ.
ಜಾಲ್ನಾರ್ ಪೇಟೆ ಪೆಸೆಂಜರ್	11.30 ಮಧ್ಯಾಹ್ನ	3.45 ಸಾಯಂ.
ಕನ್ನನೂರು	6.0 ಸಾಯಂ.	9.30 ಪೂರ್ವಾಹ್ನ

ಕಡಿಮೆ ಖರ್ಚು — ಮಂಗಳೂರಿನಿಂದ - ಬಂಗಳೂರು ತಿರುಪತಿ, ಮದರಾಸು. — ಅತಿ ತೀವ್ರ ಪ್ರಯಾಣ

ಬಸ್ಸ್ ಪ್ರಯಾಣವು

ಅತೀ ಸುಖಕರ. ನಿರಾಯಾಸಕರ!! ಮನೋಲ್ಲಾಸಕರವಾಗಿದೆ!!!

ಊರುಗಳ ಬದಲಾವಣೆ! ನೋಟಗಳ ಬದಲಾವಣೆ! ಜನತೆಯ ಸಂಪರ್ಕ ಆಯಾಸ ಅನುಕೂಲತೆಗಳು!

ಇವೆಲ್ಲವೂ ಬಸ್ಸ್ ಪ್ರಯಾಣದಲ್ಲಿವೆ

ಪ್ರಯಾಣಿಕರ ಹೆಚಿನ ಪ್ರೋತ್ಸಾಹದೊಡನೆ ಇನ್ನೂ ಹೆಚ್ಚಿನ ಸೌಕರ್ಯಗಳನ್ನು ಒದಗಿಸುವೆವು

JOINT MANAGERS,

The Combined Booking Agency, MANGALORE.
The Joint Booking Office, KODIALBAIL.

ಬಿಡಿ ಸಂಚಿಕೆ ಒಂದು ಆಣೆ · ವಾರ್ಷಿಕ ಚಂದಾ ರೂ. 3-0-0 · ಅಂಚೆ ವೆಚ್ಚ ಸೇರಿ ರೂ. 3—13—0 · Regd. No. M 3460

ಸ್ವದೇಶಾಭಿಮಾನಿ

[ಸಂಪುಟ 36] ತಾರೀಕು 22—5—1942 [ಸಂಚಿಕೆ 21]

(Regd)

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲ ಎಲಾ ರೋಗಗಳಿಗೂ ಸಿದ್ಧೌಷಧ.

ಜ್ವ, ತುರಿಕೆ; ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ.

ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

AMRUTANJAN DEPOTS BOMBAY, MADRAS, CALCUTTA

ಸಂಶಯವೇಕೆ?

ಶತ್ರುಗಳು ವಿಮಾನಗಳ ಮೂಲಕ ಧಾಳಿ ನಡೆಸುವುದರಿಂದಲೂ ಮತ್ತು ಇತರ ವಿಧವಾದ ಶತ್ರು ಚಟುವಟಿಕೆಗಳಿಂದಲೂ ಹಿಂದುಸ್ಥಾನದ ಸಿವಿಲ್ ಪ್ರಜೆಗಳಲ್ಲಿ—ಇದರಲ್ಲಿ ಎ. ಆರ್. ಪಿ. ಕೆಲಸಗಾರರೂ ಸೇರುವರು - ಉಂಟಾಗಬಹುದಾದ ಪ್ರಾಣಹಾನಿಗೆ

ದಿ "ಬಾಂಬೆ ಲೈಫ್" ಪಾಲಿಸಿಗಳು

ಸಂಪೂರ್ಣವಾದ ರಕ್ಷಣೆಯನ್ನು ನೀಡುತ್ತವೆ. ಆದ್ದರಿಂದ ನಿಮ್ಮ ಪ್ರೀತಿಪಾತ್ರರಿಗಾಗಿ

ದಿ ಬಾಂಬೆ ಲೈಫ್ ಅಷ್ಯೂರೆನ್ಸ್ ಕಂಪೆನಿ (ಲಿಮಿಟೆಡ್)

ಯಲ್ಲಿ ಪಾಲಿಸಿಗಳನ್ನು ಪಡೆಯುವುದು ನಿಮ್ಮ ತ್ವರಿತ ಕರ್ತವ್ಯವಾಗಿದೆ.

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಸಂಸ್ಥಾನಗಳಾದಿಯಾಗಿ ದಕ್ಷಿಣ ಭಾರತಕ್ಕೆ ಪ್ರಾಮುಖ್ಯ ಏಜೆಂಟರು:

ಉಡುಪಿ

—: ಅಥವಾ ಈ ಕೆಳಗಿನ ಇತರ ಆಫೀಸುಗಳಿಗೆ ಬರೆಯಿರಿ :—

ಕಲ್ಲಿಕೋಟೆ	ಬೆಂಗಳೂರು	ಮಂಗಳೂರು
ಮದರಾಸು	ತ್ರಿವೇಂಡ್ರಂ	ಬೊಂಬಾಯಿ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಜಿ. ವಿ. ಪಂಡಿತರ
ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.
ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

★

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by the A. S. Kamath at Sharada Press, Car Street, Mangalore.

ESTD SWADESHABHIMANI 1906

[ಸಂಪುಟ 36] ತಾರೀಕು 29—5—1942 [ಸಂಚಿಕೆ 22]

ಶಾಲಾ ಪಠ್ಯ ಪುಸ್ತಕಗಳು

(ಸರಕಾರವು ಪ್ರಕಟಿಸಿದ ಪಾಠಪಟ್ಟಿಗೆ ಅನುಸಾರವಾಗಿ ಬರೆಯಲ್ಪಟ್ಟವು)

ಮಾಧ್ಯಮಿಕ ಶಾಲಾ ಲಘುಗಣಿತ

ಮಾಧ್ಯಮಿಕ ಶಾಲೆಗಳಲ್ಲಿ 1942ನೇ ಜೂನ್ ತಿಂಗಳಿಂದ ಅನುಸರಿಸಬೇಕಾದ ಸರಕಾರದ ಹೊಸ ಪಾಠಪಟ್ಟಿಗನುಸಾರವಾಗಿ ಬರೆಯಲ್ಪಟ್ಟದ್ದು

ಎಂ ಪಿ ದೇವರಾವ್, ಬಿ ಎ ಎಲ್ ಟಿ ಬೋರ್ಡ್ ಹೈಸ್ಕೂಲ್, ಉಡ್ಪಿ

Iನೇ ಫೋರ್ಮಿಗ 0—12—0

IIನೇ ಫೋರ್ಮಿಗೆ 0—12—0

ಎಂ ಪಿ ದೇವರಾವ್ ಬಿ ಎ ಎಲ್ ಟಿ ಮತ್ತು ಬಿ ಭವಾನಿರಾವ್ ಬಿ ಎ ಎಲ್ ಟಿ

IIIನೇ ಫೋರ್ಮಿಗೆ 0—12—0

ಬಾಲಕರ ಲಘುಗಣಿತ

ಬಿ ಭವಾನಿರಾವ್, ಬಿ ಎ, ಎಲ್ ಟಿ

ಸೈಂಟ್ ಏಸ್ಸ್ ಹೈಸ್ಕೂಲ್, ಮಂಗಳೂರು

ನಾಲ್ಕನೇ ದರ್ಜೆಗೆ 0—7—0

ಐದನೇ ದರ್ಜೆಗೆ 0—8—0

ನವೀನ ಭೂವಿವರಣೆ

ಎಂ ವಾಸುದೇವರಾವ್ ಎಂ ಎ, ಎಲ್ ಟಿ (Dip Geog)

ಗಣಪತಿ ಹೈಸ್ಕೂಲ್, ಮಂಗಳೂರು

ನಾಲ್ಕನೇ ದರ್ಜೆಗೆ 0—6—0

ಐದನೇ ದರ್ಜೆಗೆ 0—7—0

ಪ್ರಾಥಮಿಕ ಲಘುವಿಜ್ಞಾನ

ಎಸ್ ರಾಮಕೃಷ್ಣಾಚಾರ್, ಬಿ ಎ ಎಲ್ ಟಿ

ಬೋರ್ಡ್ ಹೈಸ್ಕೂಲ್ ಕಾರ್ಕಳ

ಆರನೇ ದರ್ಜೆಗೆ 0—6—0

ಏಳನೇ ದರ್ಜೆಗೆ 0—6—0

ಎಂಟನೇ ದರ್ಜೆಗೆ 0—6—0

ನವೀನ ಪ್ರಕೃತಿಶಾಸ್ತ್ರ ಮತ್ತು ತೋಟಗಾರಿಕೆ

ಎಂ ವಾಸುದೇವರಾವ್, ಎಂ ಎ ಎಲ್ ಟಿ

ಗಣಪತಿ ಹೈಸ್ಕೂಲ್, ಮಂಗಳೂರು

ನಾಲ್ಕನೇ ದರ್ಜೆಗೆ 0—3—0

ಐದನೇ ದರ್ಜೆಗೆ 0—3—6

ಪ್ರಕೃತಿಶಾಸ್ತ್ರ

ಎಂ. ಗಣಪತಿರಾವ್ ಐಗಳ್

ಮೂರನೇ ದರ್ಜೆಗೆ 0—1—6

ವ್ಯಾಕರಣ ಮತ್ತು ಪ್ರಬಂಧ

ಕೆ ಕೆ ರೈ ವಿದ್ವಾನ್

4 ಮತ್ತು 5ನೇ ದರ್ಜೆಗೆ 0—2—0

ಆರನೇ ದರ್ಜೆಗೆ ಅಥವಾ I ಫೋರ್ಮಿಗೆ 0—3—0

ಏಳನೇ ದರ್ಜೆಗೆ ಅಥವಾ II ಫೋರ್ಮಿಗೆ 0—3—6

ಎಂಟನೇ ದರ್ಜೆಗೆ ಅಥವಾ III ಫೋರ್ಮಿಗೆ 0—4—0

ಮಕ್ಕಳ ಪದ್ಯಮಂಜರಿ

ಕೆ ಕೆ ರೈ ವಿದ್ವಾನ್

ಮೊದಲನೆಯ ಪುಸ್ತಕ ೧, ೨, ೩ನೇ ದರ್ಜೆಗಳಿಗೆ 0—2—0

ಎರಡನೆಯ ಪುಸ್ತಕ ೪ ಮತ್ತು ೫ನೇ ದರ್ಜೆಗಳಿಗೆ 0—2—6

ಚರಿತ್ರೆ ಮತ್ತು ಕಥೆಗಳು

ಮೂರನೇ ದರ್ಜೆಗೆ 0—2—6

ನಾಲ್ಕನೇ ದರ್ಜೆಗೆ 0—3—0

ಐದನೇ ದರ್ಜೆಗೆ 0—3—6

ಸಿವಿಕ್ಸ್

ಎಂ ಗಣಪತಿರಾವ್ ಐಗಳ್

ಮೂರನೇ ದರ್ಜೆಗೆ 0—1—6

ನಾಲ್ಕನೇ ದರ್ಜೆಗೆ 0—2—0

ಐದನೇ ದರ್ಜೆಗೆ 0—2—6

ಎಂ ಗಣಪತಿರಾವ್ ಐಗಳ್ ಮತ್ತು ಕೆ ಕೆ ರೈ ವಿದ್ವಾನ್

ಆರನೇ ದರ್ಜೆಗೆ 0—3—0

ಏಳನೇ ದರ್ಜೆಗೆ 0—3—0

ಎಂಟನೇ ದರ್ಜೆಗೆ 0—3—0

ಬೇಗನೇ ಪ್ರಕಟವಾಗಲಿವೆ

ನವೀನ ಭೂವಿವರ

ಎಮ್ ವಾಸುದೇವರಾವ್, ಎಂ ಎ ಎಲ್ ಟಿ (Dip Geog)

II ಮತ್ತು III ತರಗತಿಗಳಿಗೆ

ಸಾಮಾನ್ಯ ವಿಜ್ಞಾನ

ಹೈಸ್ಕೂಲುಗಳಿಗೆ

ಕೆ ಎಲ್ ಕಾರಂತ, ಬಿ ಎ ಎಲ್ ಟಿ IV ಫೋರ್ಮಿಗೆ

ಎಸ್ ರಾಮಕೃಷ್ಣ ಆಚಾರ್, ಬಿ ಎ, ಎಲ್ ಟಿ, ಮತ್ತು

ಎಚ್ ಮುದ್ದಣ್ಣ ಶೆಟ್ಟಿ ಬಿ ಎಸ್ ಸಿ (Ag). ಎಲ್. ಟಿ V, VI ಫೋರ್ಮುಗಳಿಗೆ

ಶಾರದಾ ಛಾಪಖಾನೆ ರಥಬೀದಿ, ಮಂಗಳೂರು.

KANNADA ILLUSTRATED WEEKLY

ವಾರ್ಷಿಕ ಚಂದಾ ರೂ. 2-0-0 ಅಂಚೆ ವೆಚ್ಚ ಸೇರಿ ರೂ. 2—13—0 Regd. No. M 3460

ಸ್ವದೇಶಾಭಿಮಾನಿ

[ಸಂಪುಟ 36] ತಾರೀಕು 22—5—1942 [ಸಂಚಿಕೆ 21]

(Regd)

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಹುಳುಕಡ್ಡಿ ಮದ್ದು

ತ್ವ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪ್ಪೋ. ಬೊಂಬ್ಬಾ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಸಂಶಯವೇಕೆ?

ಶತ್ರುಗಳು ವಿಮಾನಗಳ ಮೂಲಕ ಧಾಳಿ ನಡೆಸುವುದರಿಂದಲೂ ಮತ್ತು ಇತರ ವಿಧವಾದ ಶತ್ರು ಚಟುವಟಿಕೆಗಳಿಂದಲೂ ಹಿಂದುಸ್ಥಾನದ ಸಿವಿಲ್ ಪ್ರಜೆಗಳಲ್ಲಿ—ಇದರಲ್ಲಿ ಎ. ಆರ್. ಪಿ. ಕೆಲಸಗಾರರೂ ಸೇರುವರು - ಉಂಟಾಗಬಹುದಾದ ಪ್ರಾಣಹಾನಿಗೆ

ದಿ "ಬಾಂಬೆ ಲೈಫ್" ಪಾಲಿಸಿಗಳು

ಸಂಪೂರ್ಣವಾದ ರಕ್ಷಣೆಯನ್ನು ನೀಡುತ್ತವೆ. ಆದ್ದರಿಂದ ನಿಮ್ಮ ಪ್ರೀತಿಪಾತ್ರರಿಗಾಗಿ

ದಿ ಬಾಂಬೆ ಲೈಫ್ ಅಷ್ಯೂರೆನ್ಸ್ ಕಂಪೆನಿ (ಲಿಮಿಟೆಡ್)

ಯಲ್ಲಿ ಪಾಲಿಸಿಗಳನ್ನು ಪಡೆಯುವುದು ನಿಮ್ಮ ತ್ವರಿತ ಕರ್ತವ್ಯವಾಗಿದೆ.

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಸಂಸ್ಥಾನಗಳಾದಿಯಾಗಿ ದಕ್ಷಿಣ ಭಾರತಕ್ಕೆ ಪ್ರಾಮುಖ್ಯ ಏಜೆಂಟರು:

ಉಡುಪಿ

—: ಅಥವಾ ಈ ಕೆಳಗಿನ ಇತರ ಆಫೀಸುಗಳಿಗೆ ಬರೆಯಿರಿ :

ಕಲ್ಲಿಕೋಟೆ	ಬೆಂಗಳೂರು	ಮಂಗಳೂರು
ಮದರಾಸು	ತ್ರಿವೇಂಡ್ರಂ	ಬೊಂಬಾಯಿ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.

ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

★

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by the A. S. Kamath at Sharada Press, Car Street, Mangalore,

ESTD SWADESHABHIMANI 1906

[ಸಂಪುಟ 36] ತಾರೀಕು 29—5—1942 [ಸಂಚಿಕೆ 22]

ಶಾಲಾ ಪಠ್ಯ ಪುಸ್ತಕಗಳು

(ಸರಕಾರವು ಪ್ರಕಟಿಸಿದ ಪಾಠಪಟ್ಟಿಗೆ ಅನುಸಾರವಾಗಿ ಬರೆಯಲ್ಪಟ್ಟಿವೆ)

ಮಾಧ್ಯಮಿಕ ಶಾಲಾ ಲಘುಗಣಿತ

ಮಾಧ್ಯಮಿಕ ಶಾಲೆಗಳಲ್ಲಿ 1942ನೇ ಜೂನ್ ತಿಂಗಳಿಂದ ಅನುಸರಿಸಬೇಕಾದ ಸರಕಾರದ ಹೊಸ್ತ ಪಾಠಪಟ್ಟಿಗನುಸಾರವಾಗಿ ಬರೆಯಲ್ಪಟ್ಟದ್ದು

ಎಂ. ಬಿ. ದೇವರಾವ್, ಬಿ ಎ ಎಲ್ ಟಿ ಬೋರ್ಡ್ ಹೈಸ್ಕೂಲ್, ಉಡುಪಿ

Iನೇ ಫೋರ್ಮಿಗ 0—12—0

IIನೇ ಫೋರ್ಮಿಗೆ 0—12—0

ಎಂ. ಬಿ ದೇವರಾವ್ ಬಿ ಎ ಎಲ್ ಟಿ ಮತ್ತು ಬಿ ಭವಾನಿರಾವ್ ಬಿ ಎ ಎಲ್ ಟಿ

IIIನೇ ಫೋರ್ಮಿಗೆ 0—12—0

ಬಾಲಕರ ಲಘುಗಣಿತ

ಬಿ ಭವಾನಿರಾವ್, ಬಿ ಎ, ಎಲ್ ಟಿ

ಸೈಂಟ್ ಏನ್ಸ್ ಹೈಸ್ಕೂಲ್, ಮಂಗಳೂರು

ನಾಲ್ಕನೇ ದರ್ಜೆಗೆ 0—7—0

ಐದನೇ ದರ್ಜೆಗೆ 0—8—0

ನವೀನ ಭೂವಿವರಣೆ

ಎಂ ವಾಸುದೇವರಾವ್ ಎಂ ಎ, ಎಲ್ ಟಿ (Dip. Geog)

ಗಣಪತಿ ಹೈಸ್ಕೂಲ್, ಮಂಗಳೂರು

ನಾಲ್ಕನೇ ದರ್ಜೆಗೆ 0—6—0

ಐದನೇ ದರ್ಜೆಗೆ 0—7—0

ಪ್ರಾಥಮಿಕ ಲಘುವಿಜ್ಞಾನ

ಎಸ್ ರಾಮಕೃಷ್ಣಾಚಾರ್, ಬಿ. ಎ. ಎಲ್ ಟಿ

ಬೋರ್ಡ್ ಹೈಸ್ಕೂಲ್, ಕಾರ್ಕಳ.

ಆರನೇ ದರ್ಜೆಗೆ 0—6—0

ಏಳನೇ ದರ್ಜೆಗೆ 0—6—0

ಎಂಟನೇ ದರ್ಜೆಗೆ 0—6—0

ನವೀನ ಪ್ರಕೃತಿಶಾಸ್ತ್ರ ಮತ್ತು ತೋಟಗಾರಿಕೆ

ಎಂ ವಾಸುದೇವರಾವ್, ಎಂ. ಎ ಎಲ್ ಟಿ.

ಗಣಪತಿ ಹೈಸ್ಕೂಲ್, ಮಂಗಳೂರು.

ನಾಲ್ಕನೇ ದರ್ಜೆಗೆ 0—3—0

ಐದನೇ ದರ್ಜೆಗೆ 0—3—6

ಪ್ರಕೃತಿಶಾಸ್ತ್ರ

ಎಂ. ಗಣಪತಿರಾವ್ ಐಗಳ್

ಮೂರನೇ ದರ್ಜೆಗೆ 0—1—6

ವ್ಯಾಕರಣ ಮತ್ತು ಪ್ರಬಂಧ

ಕೆ ಕೆ ರೈ ವಿದ್ವಾನ್

4 ಮತ್ತು 5ನೇ ದರ್ಜೆಗೆ 0—2—0

ಆರನೇ ದರ್ಜೆಗೆ ಅಥವಾ I ಫೋರ್ಮಿಗೆ 0—3—0

ಏಳನೇ ದರ್ಜೆಗೆ ಅಥವಾ II ಫೋರ್ಮಿಗೆ 0—3—6

ಎಂಟನೇ ದರ್ಜೆಗೆ ಅಥವಾ III ಫೋರ್ಮಿಗೆ 0—4—0

ಮಕ್ಕಳ ಪದ್ಯಮಂಜರಿ

ಕೆ ಕೆ ರೈ ವಿದ್ವಾನ್

ಮೊದಲನೆಯ ಪುಸ್ತಕ ೧, ೨, ೩ನೇ ದರ್ಜೆಗಳಿಗೆ 0—2—0

ಎರಡನೆಯ ಪುಸ್ತಕ ೪ ಮತ್ತು ೫ನೇ ದರ್ಜೆಗಳಿಗೆ 0—2—6

ಚರಿತ್ರೆ ಮತ್ತು ಕಥೆಗಳು

ಮೂರನೇ ದರ್ಜೆಗೆ 0—2—6

ನಾಲ್ಕನೇ ದರ್ಜೆಗೆ 0—3—0

ಐದನೇ ದರ್ಜೆಗೆ 0—3—6

ಸಿವಿಕ್ಸ್

ಎಂ ಗಣಪತಿರಾವ್ ಐಗಳ್

ಮೂರನೇ ದರ್ಜೆಗೆ 0—1—6

ನಾಲ್ಕನೇ ದರ್ಜೆಗೆ 0—2—0

ಐದನೇ ದರ್ಜೆಗೆ 0—2—6

ಎಂ ಗಣಪತಿರಾವ್ ಐಗಳ್ ಮತ್ತು ಕೆ ಕೆ ರೈ ವಿದ್ವಾನ್

ಆರನೇ ದರ್ಜೆಗೆ 0—3—0

ಏಳನೇ ದರ್ಜೆಗೆ 0—3—0

ಎಂಟನೇ ದರ್ಜೆಗೆ 0—3—0

ಬೇಗನೇ ಪ್ರಕಟವಾಗಲಿವೆ

ನವೀನ ಭೂವಿವರ

ಎಮ್, ವಾಸುದೇವರಾವ್, ಎಂ ಎ ಎಲ್ ಟಿ (Dip Geog)

II ಮತ್ತು III ತರಗತಿಗಳಿಗೆ

ಸಾಮಾನ್ಯ ವಿಜ್ಞಾನ

ಹೈಸ್ಕೂಲುಗಳಿಗೆ

ಕೆ. ಎಲ್. ಕಾರಂತ, ಬಿ. ಎ. ಎಲ್. ಟಿ. IV ಫೋರ್ಮಿಗೆ

ಎಸ್ ರಾಮಕೃಷ್ಣ ಆಚಾರ್, ಬಿ. ಎ. ಎಲ್. ಟಿ ಮತ್ತು

ಎಚ್. ಮುದ್ದಣ್ಣ ಶೆಟ್ಟಿ ಬಿ. ಎಸ್. ಸಿ (Ag). ಎಲ್. ಟಿ V, VI ಫೋರ್ಮುಗಳಿಗೆ

ಶಾರದಾ ಛಾಪಖಾನೆ ರಥಬೀದಿ, ಮಂಗಳೂರು.

KANNADA ILLUSTRATED WEEKLY

ಶ್ರೀ ರಾಮಕೃಷ್ಣ ಲೀಲಾ ಪ್ರಸಂಗ

[ಗುರುಭಾವ-ಪೂರ್ವಾರ್ಧ]

ಮೂಲ ಬಂಗಾಳಿ ಲೇಖಕರು ಶ್ರೀ ಸ್ವಾಮಿ ಶಾರದಾನಂದಜಿ
ಅನುವಾದ ಶ್ರೀ ಸ್ವಾಮಿ ಪ್ರಣವೇಶಾನಂದರು

(ಹಕ್ಕು ಕಾದಿಡಲ್ಪಟ್ಟಿದೆ)

ಶ್ರೀ ರಾಮಕೃಷ್ಣದೇವರು ಸ್ತ್ರೀಯರ ಎಲ್ಲ ಮನೋಭಾವಗಳನ್ನೆ ಹಿಡಿಯುತ್ತಿದ್ದರು ಮತ್ತು ಅದರ ಕಾರಣ

ಶ್ರೀ ಪರಮಹಂಸರು ಪುರುಷರಾಗಿದ್ದರಿಂದ ಪುರುಷ ಭಾವವನ್ನು ತಿಳಿಯುವುದು ಅವರಿಗೆ ಕಷ್ಟವಲ್ಲ ಆದರೆ ಸ್ತ್ರೀಯರ (ಅಂದರೆ ಕೋಮಲ ಸ್ವಭಾವ ಮಕ್ಕಳ ವಾತ್ಸಲ್ಯ ಇತ್ಯಾದಿ ಗುಣಗಳನ್ನು ವಿಶೇಷವಾಗಿ ವ್ಯಕ್ತಪಡಿಸಲು ದೇವರು ಅವರಿಗೆ ಪುರುಷರಿಗಿಂತ ಒಂದು ಅಂಶವು ಹೆಚ್ಚಾಗಿ ಕೊಟ್ಟಿರುತ್ತಾನೆಯೋ ಅಂತಹದರ) ಭಾವವನ್ನು ಸರಿಯಾಗಿ ಶ್ರೀ ಪರಮಹಂಸರು ಹೇಗೆ ಹಿಡಿಯುತ್ತಿದ್ದರೆಂಬದಾಗಿ ಯೋಚಿಸಿದರೆ ನಾವು ಆಶ್ಚರ್ಯಪಡಬೇಕು ಶ್ರೀ ಪರಮಹಂಸರ ಸ್ತ್ರೀ ಭಕ್ತರು ಹೇಳುತ್ತಿದ್ದರೇನಂದರೆ 'ಅನೇಕ ಸಮಯ ಶ್ರೀ ಪರಮಹಂಸರು ಪುರುಷರೆಂದು ಕೂಡ ನಮ್ಮ ಮನಸ್ಸಿಗೆ ಬರುತಿದ್ದಿಲ್ಲ ನಮ್ಮಲ್ಲಿ ಒಬ್ಬರೆಂದು ನಾವು ಭಾವಿಸುತ್ತಿದ್ದೆವು ಆದ್ದರಿಂದ ಪುರುಷರ ಸಾನಿಧ್ಯದಲ್ಲಿ ನಮಗಾಗುವ ಲಜ್ಜಾ ಸಂಕೋಚವು ಶ್ರೀ ಪರಮಹಂಸರ ಸಾನಿಧ್ಯದಲ್ಲಾಗುತ್ತಿದ್ದಿಲ್ಲ ಎಂದಿಗಾದರೂ ಬಂದರೆ ತಕ್ಷಣವೇ ನಾವು ಮರೆತು ಬಿಡುತ್ತಿದ್ದೆವು ಅಲ್ಲದೆ ನಿಸ್ಸಂಕೋಚ ಚಿತ್ತದಿಂದ ನಮ್ಮ ಮನಸ್ಸಿನ ಭಾವಗಳನ್ನು ಅವರಿಗೆ ಹೇಳುತ್ತಿದ್ದೆವು 'ನಾನು ಭಗವಾನ್ ಶ್ರೀ ಕೃಷ್ಣನ ಸಖಿಯು ಅಥವಾ ದಾಸಿಯು ಎಂದು ದೀರ್ಘಕಾಲದ ತನಕ ಭಾವಿಸಿ ತನ್ಮಯರಾಗಿದ್ದರಿಂದ 'ನಾನು ಪುರುಷನು ಎಂಬ ಭಾವವು ಶ್ರೀ ಪರಮಹಂಸರು ಸಂಪೂರ್ಣ ಮರೆತು ಬಿಟ್ಟಿದ್ದರೆಂಬುದಾಗಿಯೇ ಈ ರೀತಿಯಾಗುತ್ತಿತ್ತೋ ಏನೋ ಪತಂಜಲಿ ಮಹಾಮುನಿಯು ತನ್ನ ಯೋಗ ಸೂತ್ರಗಳಲ್ಲಿ ಹೀಗೆಂದು ಹೇಳಿದ್ದಾನೆ ಮನಸ್ಸಿನಿಂದ ಹಿಂಸಾವೃತ್ತಿಯು ಸಂಪೂರ್ಣವಾಗಿ ಲುಪ್ತವಾದವನಿಗೆ ಜಗತ್ತಿನಲ್ಲಿ ಯಾವ ಹಿಂಸಾಪ್ರಾಣಿಯಾಗಲಿ ಅಂದರೆ ಹುಲಿ ಹಾವು ಇತ್ಯಾದಿಗಳು ಹಿಂಸೆ ಮಾಡುವುದಿಲ್ಲ ಅಂತಹವನಿಗೆ ನೋಡಿದರೆ ಅವುಗಳ ಮನಸ್ಸಿನಲ್ಲಿ ಹಿಂಸಾ ಪ್ರವೃತ್ತಿಯು ಬರುವುದಿಲ್ಲ ಹಿಂಸೆಯಂತೆ ಕಾಮ ಕ್ರೋಧ ಮೊದಲಾದ ಇತರ ಎಲ್ಲಾ ವಿಷಯಗಳಲ್ಲಿಯೂ ಹಾಗೆಯೇ ಎಂದು ತಿಳಕೊಳ್ಳಬೇಕು ಪುರಾಣದಲ್ಲಿ ಈ ವಿಷಯವಾಗಿ ಅನೇಕ ದೃಷ್ಟಾಂತಗಳಿವೆ ಇಲ್ಲಿ ಒಂದನ್ನು ಉಲ್ಲೇಖಿಸುತೇನೆ ಮಾಯಾರಹಿತನಾದ ನಿಷ್ಕಲಂಕ ಯುವಕ ಶುಕನು ಭಗದ್ಭಾವದಲ್ಲಿ ನಿರಂತರವೂ ಮಗ್ನನಾಗಿ ಸಂಸಾರ ತ್ಯಜಿಸಿ ಹೋಗುತ್ತಿದ್ದಾನೆ ಮುದುಕ ತಂದೆ ವ್ಯಾಸನು ಪುತ್ರ ಮಾಯೆಯಿಂದ ಕರುಣನಾಗಿ 'ಎಲ್ಲಿ ಹೋಗುತ್ತಿ? ಎಲ್ಲಿ ಹೋಗುತ್ತಿ?' ಎಂದು ಕೂಗುತ್ತಾ ಆತನ ಹಿಂದಕ್ಕೆ ಓಡುತ್ತಿದ್ದಾನೆ ದಾರಿಯಲ್ಲಿ ಸರೋವರದ ತೀರದಲ್ಲಿ ತಮ್ಮ ಬಟ್ಟೆಗಳನ್ನು ಇಟ್ಟು ಅಪ್ಸರ ಸ್ತ್ರೀಯರು ಸ್ನಾನ ಮಾಡುತ್ತಿದ್ದಾರೆ ಶುಕನಿಗೆ ಕಂಡ ಅವರ ಮನಸ್ಸಿನಲ್ಲಿ ಎಂದಿನಿತು ಲಜ್ಜಾ ಸಂಕೋಚ ಭಾವವು ಬರಲಿಲ್ಲ ಹೇಗೆ ಸ್ನಾನ ಮಾಡುತ್ತಿದ್ದರೋ ಹಾಗೆಯೇ ಇದ್ದರು ಆದರೆ ಮುದುಕ ವ್ಯಾಸನು ಅಲ್ಲಿ ಬಂದೊಡನೆಯೇ ಸಕಲರೂ ಸಸಂಭ್ರಮದಿಂದ ದೇಹವನ್ನು ಬಟ್ಟೆಯಿಂದ ಮುಚ್ಚಿಬಿಟ್ಟರು 'ಇದು ಆಶ್ಚರ್ಯಕರವಾದುದು ನನ್ನ ಯುವಕ ಪುತ್ರನು ಮೊದಲೇ ಹೋಗಿದ್ದನು ಆದರೆ ಆಗ ಒಬ್ಬಳೂ ಕೂಡ ಅಲ್ಲಾಡಲಿಲ್ಲ ಆದರೆ ನಾನು ವೃದ್ಧನು, ನನ್ನನ್ನು ಕಂಡು ಇಷ್ಟು ಲಜ್ಜೆ!' ಎಂದು ಭಾವಿಸತೊಡಗಿದನು ಕಾರಣ ಕೇಳಿದಾಗ ರಮಣಿಯರು ಹೀಗಂದರು 'ಶುಕನು ಬಹಳ ಪವಿತ್ರನಾಗಿದ್ದಾನೆ ತಾನು ಆತ್ಮನೆಂದು ನಿರಂತರವೂ ಚಿಂತಿಸುತ್ತಿದ್ದಾನೆ ತನ್ನ ದೇಹವು ಪುರುಷ ಶರೀರವೋ ಅಥವಾ ಸ್ತ್ರೀ ಶರೀರವೋ ಎಂಬದಾಗಿ ಆತನಿಗೆ ಬೋಧೆಯಿಲ್ಲ ಆದ್ದರಿಂದ ಆತನಿಗೆ ಕಂಡು ನಮಗೆ ಲಜ್ಜೆಯಾಗಲಿಲ್ಲ ಆದರೆ ನೀವು ಮುದುಕರು ನಿಮಗೆ ರಮಣಿಯರ ಹಾವಭಾವ ಕಟಾಕ್ಷಗಳ ಬಹಳ ಪರಿಚಯವುಂಟು ಅಲ್ಲದೆ ಅವರ ರೂಪಲಾವಣ್ಯದ ವರ್ಣನೆಯನ್ನೂ ಕೂಡ ಬಹಳವಾಗಿ ಮಾಡಿದ್ದೀರಿ, ನಿಮಗೆ ಶುಕನಂತೆ ಸ್ತ್ರೀ ಪುರುಷರಲ್ಲಿ ಆತ್ಮದೃಷ್ಟಿಯಿಲ್ಲ, ಇನ್ನು ಬರುವುದೂ ಕೂಡ ಕಷ್ಟ. ಆದ್ದರಿಂದ ನಿಮ್ಮನ್ನು ಕಂಡರೆ ನಮಗೆ ಪುರುಷಬುದ್ಧಿಯು ಬರುತ್ತದೆ ಮತ್ತು ಲಜ್ಜೆಯೂ ಆಗುತ್ತದೆ

ಸ್ತ್ರೀಯರು ಶ್ರೀ ಪರಮಹಂಸರೊಂದಿಗೆ ಸರ್ವ ನಿಸ್ಸಂಕೋಚಭಾವದಿಂದ ವ್ಯವಹಾರಮಾಡುವ ಕಾರಣ

ಶ್ರೀ ಪರಮಹಂಸರ ವಿಷಯವಾಗಿಯೂ ಹಾಗೆಯೇ ಎಂದು ಹೇಳಬೇಕು ಅವರ ಉಜ್ವಲವಾದ ಆತ್ಮಜ್ಞಾನ ಮತ್ತು ಸ್ತ್ರೀ ಪುರುಷರಲ್ಲಿಯೂ ಸರ್ವ ಪ್ರಾಣಿಗಳಲ್ಲಿಯೂ ಆತ್ಮದೃಷ್ಟಿಯು ಅವರ ಹತ್ತಿರವಿರುವ ತನಕ ಸಕಲರ ಮನಸ್ಸು ಉಚ್ಚಭಾವಕ್ಕೆಬ್ಬಿಸಿ 'ನಾನು ಪುರುಷನು 'ಇವಳು ಸ್ತ್ರೀ ಎಂಬ ಭೇದ ಬುದ್ಧಿಯು ಅನೇಕ ಸಾರಿ ಲೋಪವಾಗುತಿತ್ತು ಆದರಿಂದ ಪುರುಷರಂತೆ ಸ್ತ್ರೀಯರಿಗೂ ಅವರ ಹತ್ತಿರವಿರುವಾಗ ಲಜ್ಜಾ ಸಂಕೋಚಗಳು ಬರುತ್ತಿದ್ದಿಲ್ಲ ಅದು ಮಾತ್ರವಲ್ಲ ಶ್ರೀ ಪರಮಹಂಸರ ಸಾನಿಧ್ಯದಲ್ಲಿ ಅಂತಹ ದೃಷ್ಟಿಯು ಅವರಲ್ಲಿ ತತ್ಕಾಲಕ್ಕೆ ಎಷ್ಟು ದೃಢೀಕರಿಸುತ್ತಿತ್ತೆಂದರೆ ಯಾವ ಕೆಲಸಗಳನ್ನು ಬಹಳ ಸಾಹಸದಿಂದ ಮಾಡಬೇಕೆನ್ನುತ್ತಿದ್ದಾರೋ ಅಥವಾ ಆದಿಷ್ಟರಾಗಿಯೂ ಕೂಡ ಮಾಡಲೆಲ್ಲರೋ ಅವುಗಳನ್ನೆಲ್ಲ ಶ್ರೀ ಪರಮಹಂಸರು ಹೇಳಿದರೆ ಅನಾತಂಕದಿಂದಲೂ ಅನಾಯಾಸದಿಂದಲೂ ಮಾಡುತ್ತಿದ್ದರು ಗಾಡಿ ಪಾಲಕಿ ಇಲ್ಲದೆ ಎಲ್ಲಿಯೂ ಹೋಗದಿರುವ ಶ್ರೀಮಂತ ಸ್ತ್ರೀಯರೂ ಕೂಡ ಶ್ರೀ ಪರಮಹಂಸರ ಆದೇಶದಿಂದ ಆಗಾಗ ಅವರೊಂದಿಗೆ ಹಗಲು ಹೊತ್ತಿಗೆ ಕಾಲ್ನಡೆಯಿಂದ ಗಂಗಾತೀರದ ವರೆಗೆ ಅನಾಯಾಸದಿಂದ ದಾರಿ ನಡೆದು ದೋಣಿಯಲ್ಲಿ ಕುಳಿತು ದಕ್ಷಿಣೇಶ್ವರ ಕಾಳಿ ದೇವಾಲಯಕ್ಕೆ ಬರುತ್ತಿದ್ದರು ಅದು ಮಾತ್ರವಲ್ಲ ಅಲ್ಲಿ ಹೋಗಿ ಪುನಃ ಶ್ರೀ ಪರಮಹಂಸರ ಆದೇಶದಿಂದ ಹತ್ತಿರದ ಬಜಾರಿಗೆ ನಡೆದುಕೊಂಡು ಹೋಗಿ ಏನಾದರೂ ಕೊಂಡುಕೊಂಡು ಕಲ್ಕತ್ತೆಗೆ ಕಾಲ್ನಡೆಯಿಂದಲೇ ತಂತಮ್ಮ ಮನೆಗೆ ಹಿಂತಿರಳುತ್ತಿದ್ದರು ಈ ವಿಷಯವಾಗಿ ಒಂದೆರಡು ದೃಷ್ಟಾಂತಗಳನ್ನು ಕೊಟ್ಟರೆ ಚೆನ್ನಾಗಿ ತಿಳಿಯುವುದು.

ಕ್ರಿ ಶ 1884ನೇ ಭಾದ್ರಪದ ಅಥವಾ ಆಶ್ವೀಜ ತಿಂಗಳು ಶ್ರೀ ಮಾತಾದೇವಿಯು (ಶ್ರೀ ಶಾರದಾಮಣಿ ದೇವಿಯು) ಆಗ ಜಯರಾಮವಾಟಿ ತವರು ಮನೆಗೆ ಹೋಗಿದ್ದಾರೆ ಬಲರಾಮಬಾಬು ತಮ್ಮ ತಂದೆಯೊಂದಿಗೆ ವೃಂದಾವನಕ್ಕೆ ಹೋಗಿದ್ದಾರೆ ಜೊತೆಯಲ್ಲಿ ಬ್ರಹ್ಮಾನಂದ ಸ್ವಾಮಿಜಿ ಮತ್ತು ಅದ್ವೈತಾನಂದ ಸ್ವಾಮಿಜಿ ಇತ್ಯಾದಿ ಮತ್ತು ಇತರ ಸ್ತ್ರೀ ಪುರುಷರು ಹೋಗಿದ್ದಾರೆ ಬಾಗ್‌ಬಜಾರಿನ ಸದ್ವಂಶದ ಒಬ್ಬ ಹೆಂಗಸಿಗೆ ಶ್ರೀ ಪರಮಹಂಸರನ್ನು ದರ್ಶನಮಾಡುವ ತೀವ್ರ ಇಚ್ಛೆಯಾಯಿತು ಅವಳು ಈ ವರೆಗೆ ಅವರನ್ನು ಕಾಣಲೇ ಇಲ್ಲ, ಅವರ ವಿಷಯವಾಗಿ ಕೇಳಿದ್ದಾಳಷ್ಟೇ ಪರಿಚಯದ ಒಬ್ಬ ಹೆಂಗಸಿಗೆ ತನ್ನ ಇಚ್ಛೆಯನ್ನು ತಿಳಿಸಿದಳು ಈ ಹೆಂಗಸು ಈಗ ಎರಡು ವರ್ಷಗಳಿಂದ ಶ್ರೀ ಪರಮಹಂಸರ ಹತ್ತಿರ ಹೋಗಿ ಬರುತ್ತಾ ಇದ್ದಾಳಾದ್ದರಿಂದ ಇವಳಿಗೆ ಹೇಳಿದಳು ಶ್ರೀ ಪರಮಹಂಸರನ್ನು ಕಾಣಲು ಹೋಗಬೇಕೆಂದು ಅವರಿಬ್ಬರೂ ನಿರ್ಣಯಿಸಿದರು ಮರುದಿನ ಅಪರಾಹ್ನದಲ್ಲಿ ದೋಣಿಯಲ್ಲಿ ಕುಳಿತು ಇಬ್ಬರೂ ದಕ್ಷಿಣೇಶ್ವರಕ್ಕೆ ಬಂದರು ಶ್ರೀ ಪರಮಹಂಸರ ಕೋಣೆಯ ಬಾಗಿಲು ಆಗ ಹಾಕಿತ್ತು, ಕೋಣೆಯ ಉತ್ತರ ಗೋಡೆಯಲ್ಲಿ ಎರಡು ತೂತುಗಳಿವೆ ಅವುಗಳಿಂದ ಅವರು ಹಣಕಿ ನೋಡಿ ಶ್ರೀ ಪರಮಹಂಸರು ವಿಶ್ರಾಂತಿ ಮಾಡುತ್ತಿದ್ದುದನ್ನು ಕಂಡರು ಆದ್ದರಿಂದ ಶ್ರೀ ಮಾತಾದೇವಿಯು ವಾಸಮಾಡುತ್ತಿದ್ದ ವಾದ್ಯಕುಟೀರಕ್ಕೆ ಹೋಗಿ ಕಾದು ಕುಳಿತರು ಸ್ವಲ್ಪ ಹೊತ್ತಿನ ಮೇಲೆಯೇ ಶ್ರೀ ಪರಮಹಂಸರು ಎದ್ದರು ಮತ್ತು ಉತ್ತರ ದಕ್ಷಿಣದ ಬಾಗಿಲನ್ನು ತೆರೆದು ವಾದ್ಯಕುಟೀರದ ದ್ವಿತಲದ ಜಗಲಿಯ ಮೇಲೆ ಕುಳಿತ ಹೆಂಗಸರನ್ನು ಕರೆದರು ಸ್ತ್ರೀ ಭಕ್ತರಿಬ್ಬರು ಬಂದು ಕುಳಿತ ನಂತರ ಶ್ರೀ ಪರಮಹಂಸರು ಮಂಚದಿಂದ ಇಳಿದು ತಮ್ಮ ಪರಿಚಯದ ಸ್ತ್ರೀ ಭಕ್ತಳ ಹತ್ತಿರ ಹೋಗಿ ಕೂತುಕೊಂಡರು ಅವಳು ಸಂಕೋಚಪಟ್ಟು ಸ್ವಲ್ಪ ದೂರ ಕೂರಲು ಹೋದಾಗ ಶ್ರೀ ಪರಮಹಂಸರು 'ಲಜ್ಜೆ ಏಕೆ ಪಡುತ್ತಿ? ಲಜ್ಜೆ, ಘೃಣೆ, ಭಯ ಈ ಮೂರು ಇರಬಾರದು (ಕೈ ಅಲ್ಲಾಡಿಸಿ) ನೀನು ಯಾವುದೋ 'ನಾನೂ ಅದೇ ಆದರೆ (ಗಡ್ಡತೋರಿಸಿ) ಇದು ಉಂಟೆಂದು ಲಜ್ಜೆಯಾಗುತ್ತಿದೆಯೋ ಏನೋ?'

(ಕ್ರಮಶಃ)



FURTHER REDUCTIONS

IN

LENDING RATES

The busy trade season is coming to a close Lending rates are naturally tending to be reduced Even at the beginning of the season we had lowered our rates on loans and advances as our contribution to better business A further reduction in accordance with seasonal conditions will be made early if the present conditions continue

CANARA BANK, LIMITED.

ESTD 1906

"ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

29—5—1942] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೨೯—೫—೧೯೪೨]

ಯೂರೋಪಿನಲ್ಲಿ ಈಗ ತಿರುಗಿ ಯುದ್ಧ ಕೋಲಾಹಲವು ಆರಂಭವಾಗಿದೆ ಅಕ್ಷಪಕ್ಷ ಮತ್ತು ಮಿತ್ರ ಪಕ್ಷಗಳೆರಡರಲ್ಲಿಯೂ ಮಹಾತ್ತಾಹಾ ಸಿದ್ಧತೆಗಳು ಸಂಭ್ರಮ ಸಡಗರ ಸಾಹಸಗಳಿಂದ ಕೂಡಿ ನಡೆಯುತ್ತಿವೆ ನಾಜಿಗಳು, ತಾವು ಗೆದ್ದ ರಾಷ್ಟ್ರಗಳನ್ನು ತುಳಿದು ಸೂರೆಗೊಂಡು ತಮ್ಮ ಯುದ್ಧ ಕಾರ್ಯವನ್ನು ಬಲಪಡಿಸುತ್ತಲಿದ್ದಾರೆ. ಮಿತ್ರಪಕ್ಷದವರ ಬಲವನ್ನು ಮುರಿಯುತ್ತಾ ಮುನ್ನುಗ್ಗುತ್ತಲಿದ್ದಾರೆ ಬ್ರಿಟಿಷ್ ಅಮೇರಿಕಗಳು ಒಂದಾಗಿ ಜರ್ಮನಿಯ ಮೇಲೂ ಆಕ್ರಮಿಸಲು ಯತ್ನಿಸುತ್ತಿವೆ ಹೀಗೆ ಯೂರೋಪಿನತ್ತ ಇಂದು ತೀವ್ರ ರಣ ಕೋಲಾಹಲವುಂಟಾಗಿರುವುದು

ರಶ್ಯದ ರಣರಂಗವು ದಿನದಿಂದ ದಿನಕ್ಕೆ ಉಗ್ರ ಮಹೋಗ್ರವಾಗುತ್ತಿದೆ, ಘೋರ ಭೀಕರವಾಗುತ್ತಿದೆ ಕರ್ಚ್ ದ್ವೀಪ ಕಲ್ಪವನ್ನು ಕಡೆಗೆ ರಶ್ಯನರು ಬಿಟ್ಟು ಹೋಗಬೇಕಾಗಿ ಬಂತು! ಜರ್ಮನರು ಕರ್ಚನ್ನು ಪ್ರವೇಶಿಸಿರುವರೆಂದು ಅವರ ಪ್ರಕಟಣೆ ಸಾರುತ್ತಿದೆ ಮೇ ಎಂಟರಂದು ಕರ್ಚಿನ ಮೇಲೆ ಆಕ್ರಮಣವಾರಂಭವಾಗಿ ಸುಮಾರು ಐದು ದಿನಗಳ ತನಕ ಈ ಯುದ್ಧ ಸಾಗಿತ್ತು. ರಶ್ಯನರು ಜೀವದಾಸೆ ತೊರೆದು ಹೋರಾಡಿದರೂ ಪ್ರಯೋಜನ ಬೀಳಲಿಲ್ಲ ಜರ್ಮನರು ಕರ್ಚನ್ನು ಪೂರ್ಣವಶಪಡಿಸಿದೆವೆಂದು ಹೇಳಿದರೂ ಇನ್ನೂ ಕಾಳಗ ನಡೆಯುತ್ತಿದೆಯಾಗಿ ರಶ್ಯನ್ ವರದಿ ತಿಳಿಸುತ್ತದೆ ಇಂದಿಗೆ ಖಾರ್ಕೋವ್ ಕಾಳಗವೇ ಮಹತ್ತಾಗಿರುವುದು. ಡೊನೆಟ್ಸ್ ನದಿಯ ದಂಡೆಯ ಮೇಲೆ ವಿಶೇಷದ ಟೇಂಕ್ ಯುದ್ಧ ನಡೆಯಿತು ಜರ್ಮನರು ಕರ್ಚನ್ನು ಕೈವಶ ಪಡಿಸಿ ಆ ಕಡೆಯಿಂದ ಮುನ್ನುಗ್ಗುತ್ತಿದ್ದಾರೆ ರಶ್ಯನರು ಖಾರ್ಕೋವನ್ನು ಸ್ವಾಧೀನಪಡಿಸಲು ಹೋರಾಡುತ್ತಾರೆ. ಖಾರ್ಕೋವ್ ಯುಕ್ರೇನಿನ ಪ್ರಸಿದ್ಧ ಕೈಗಾರಿಕೆಯ ಕೇಂದ್ರವಾಗಿದೆ ಮಾರ್ಶಲ್ ಟಿಮೊಶೆಂಕೋ ಈ ಕಡೆ ಸುಸಜ್ಜಿತ ಸೈನ್ಯ ಸಿದ್ಧನಾಗಿ ಜರ್ಮನರನ್ನು ಅಪೂರ್ವಶಕ್ತಿಯಿಂದ ಎದುರಿಸಿ ಹೋರಾಡುತ್ತಾನೆ. ಖಾರ್ಕೋವ್ ರಕ್ಷಣೆಗಾಗಿ ಜರ್ಮನರು ರಚಿಸಿದ್ದ ಕೋಟೆಯನ್ನು ಮುರಿದು ರಶ್ಯನರು ಮುನ್ನುಗ್ಗಿದ್ದಾರೆ ಜರ್ಮನರೂ ಘೋರ ಪ್ರತಿಭಟನೆ ಮಾಡುತ್ತಿದ್ದಾರೆ ಹಿಟ್ಲರನ ಕಾಕಸಸ್ ಧಾಳಿಯು ಈ ಯುದ್ಧದ ಪರಿಣಾಮವನ್ನವಲಂಬಿಸಿರುವುದು

ಜರ್ಮನಿಯು ವಸಂತ ಧಾಳಿಯನ್ನು ಈಗ ಪ್ರಾರಂಭಿಸಿರುವುದೆಂದು ಹೇಳಲಾಗುತ್ತಿದೆಯಷ್ಟೆ? ಕರ್ಚ್ ಕದನದಿಂದ ಹಾಗೆ ಹೇಳಲು ಅವಕಾಶವೂ ಆಯಿತು ಆದರೆ ಇಷ್ಟರಲ್ಲಿಯೇ ಜರ್ಮನರು ಹೊಸ ಯುದ್ಧವನ್ನಾರಂಭಿಸುವುದರೊಡನೆ ರಶ್ಯನರೂ ಖಾರ್ಕೋವ್ ಕಡೆ ಪ್ರಬಲ ಹೋರಾಟ ಹೂಡಿದ್ದು ಅತ್ಯಂತ ಗಣನೀಯವಿದೆ ರಶ್ಯ ರಣರಂಗದಲ್ಲಿ ಈಗ ನಡೆಯುವ ಯುದ್ಧವು ಮೂರನೆಯ ಅಂಕವಾಗಿದೆ. 1941ರ ಜೂನ್ 22ರಂದು ಪ್ರಾರಂಭವಾಗಿ ನವಂಬರದಲ್ಲಿ ಮೊದಲನೆಯ ಅಂಕವು ಕೊನೆಗೊಂಡಿತು ಆ ಅವಧಿಯಲ್ಲಿ ಜರ್ಮನರು ಎತ್ತಲೂ ವಿಜಯಿಗಳಾಗುತ್ತ ಹೋದರು. ಜರ್ಮನರು ಸುಮಾರು ಐದು ಲಕ್ಷ ಚದುರ ಮೈಲು ಪ್ರದೇಶವನ್ನಾಕ್ರಮಿಸಿಕೊಂಡರು. ಡೊನೆಟ್ಸ್ ಪ್ರದೇಶವನ್ನು ವಶಪಡಿಸಿಕೊಂಡರು 'ಲೆನಿನ್‌ಗ್ರಾಡ್, ಮಾಸ್ಕೋ ಮತ್ತು ಬಾಕು ಎಣ್ಣೆಕಣಿಗಳನ್ನು

ಸಮರ ಭೂಮಿಯ ಸಂಚಾರ

ಮಾತ್ರ ಅವರಿಂದ ವಶಪಡಿಸಿಕೊಳ್ಳಲಾಗಲಿಲ್ಲ ರಶ್ಯನ್ ಸೈನಿಕರಾದರೂ ಅವರಲ್ಲಿ ಸೋತು ಕಂಗಾಲಾಗಿರಲಿಲ್ಲ ಮುಂದಿನದು ರಶ್ಯನ್ ಯುದ್ಧದ ಎರಡನೆಯ ಅಂಕ ಅದು ಹಿಮಗಾಲದ ಕಾಳಗ ಇದರಲ್ಲಿ ಎಲ್ಲೆಲ್ಲೂ ರಶ್ಯನರು ವಿಜಯಿಗಳೇ ನವಂಬರ 9ರಂದು ರಶ್ಯನರು ರಾಸ್ಟೊವನ್ನು ತಿರುಗಿ ತೆಗೆದುಕೊಂಡರು ಮೋಸ್ಕೋದ ಮೇಲಿನ ಗಂಡಾಂತರವು ಮಾಯವಾಯಿತು ಕಾಲಿನಿನ್, ಕಾಲುವೆಗೂ, ಮೊಜೆಸ್ಕಾಗಳೂ ತಿರುಗಿ ರಶ್ಯನರ ವಶಬಂದವು. ಕ್ರಿಮಿಯದಲ್ಲಿಯೂ ಶತ್ರುವನ್ನು ಹಿಮ್ಮೆಟ್ಟಿಸಲಾಯಿತು ಕಾಕಸಸ್ ಎಣ್ಣೆ ಕಣಿಯ ಭೀತಿಯೂ ಹೋಗಿತ್ತು ಇಷ್ಟರಲ್ಲಿ ಹಿಮಗಾಲ ಮುಗಿದು ವಸಂತಕಾಲ ಬಂತು ಈಗ ಆಗ ಆರಂಭವಾದುದು ಯುದ್ಧದ ಮೂರನೆಯ ಅಂಕ ಇದರಲ್ಲಿ ತಿರುಗಿ ಯುದ್ಧಭಯಂಕರರೂಪವನ್ನು ತಾಳಿನಿಂತಿದೆ'

ಜಪಾನರು ಬರ್ಮಾ ಯುದ್ಧವನ್ನು ಕೊನೆಗಾಣಿಸಿದ ಮೇಲೆ ಚೀನಾದ ಕಡೆಗೆ ಮುನ್ನುಗ್ಗುವರೆಂದು ಈಗ ಎಲ್ಲಾ ಕಡೆಗಳಲ್ಲಿಯೂ ನಂಬಲಾಗಿದೆ ಇಂಡೋ ಚೀನಾ ಮತ್ತು ಚೀನಾ ಗಡಿಯಲ್ಲಿ ಹಾಗೂ ಥೈಚೀನಾ ಗಡಿಯಲ್ಲಿ ಜಪಾನರು ಬಹಳ ಸಾಧನ ಸಾಮಗ್ರಿಗಳನ್ನು ಒಟ್ಟುಗೂಡಿಸುತ್ತಿರುವರೆಂದು ಸುದ್ದಿ. ಯೂನಾನ್ ಪ್ರಾಂತದ ಮುಖ್ಯ ಪಟ್ಟಣವು ಬಾಂಬಿನ ಪೆಟ್ಟಿಗೆ ಗುರಿಯಾಗಿ ಅಲ್ಲಿ ಜಪಾನರು ಒಳನುಗ್ಗುತ್ತಿದ್ದಾರೆ ನಾಲ್ಕು ದಿಕ್ಕುಗಳಿಂದಲೂ ಚೀನವನ್ನು ಮುತ್ತಿ ಅದಕ್ಕೆ ಬೇರೆ ಬೇರೆ ಕಡೆಗಳಿಂದ ಬರುತ್ತಿರುವ ಸಹಾಯಗಳನ್ನು ಸಿಗದಂತೆ ಮಾಡಿಬಿಡಬೇಕೆಂಬುದು ಜಪಾನರ ಯುದ್ಧ ಗುರಿಯೆಂದು ಹೇಳಲಾಗುತ್ತದೆ ಪೂಚೋದಲ್ಲೆಳೆಯಬೇಕೆಂಬ ಜಪಾನ ಪ್ರಯತ್ನವು ವ್ಯರ್ಥವಾಯಿತು ಹೀಗೆ ಜಪಾನರು ಚೀನದ ಕಡೆಯಾಗಿಯೇ ಈಗ ಧಾಳಿ ಪ್ರಾರಂಭಿಸಬಹುದೆಂದು ಹಲವರು ಊಹಿಸುತ್ತಲಿರುವರು ಆದರೆ ಅವರದೃಷ್ಟಿ ಹಿಂದುಸ್ತಾನದ ಮೇಲೂ ಇದ್ದೇ ಇದೆ ಅಸಾಮ್ ಗಡಿಯಲ್ಲಿ ಜಪಾನರು ಆಗಾಗ ಬಾಂಬೆಸೆಯುತ್ತಿರುವರು ಜಪಾನರು ಮೊದಲು ಅಕ್ಯಾಬಿನಿಂದ ಚಿತಗಾಂಗ್ ಮಾರ್ಗವಾಗಿ ಬಂಗಾಲಕ್ಕೆ ಬರಬಹುದೆಂದು ಕೆಲವರು ಊಹಿಸುತ್ತಾರೆ ಅಂತೂ ಅತ್ತ ಆಸ್ಟ್ರೇಲಿಯದ ಕಡೆಗಳಲ್ಲಿಯೂ ಜಪಾನರ ಚಟುವಟಿಕೆಯು ನಡೆದೇ ಇದೆ ಒಟ್ಟಿನಿಂದ ಹೇಳುವುದಿದ್ದರೆ, ಜಪಾನು ಸದ್ಯ ಬರ್ಮದ ಯುದ್ಧವನ್ನು ಕೊನೆಗಾಣಿಸಿಕೊಂಡು ಬರ್ಮಾ ವ್ಯವಸ್ಥೆಯನ್ನು ಮುಗಿಸಿದ ಬಳಿಕ ಮಾತ್ರ ಯಾವುದಾದರೂ ಇತರ ದೇಶದ ಮೇಲೆ ಬೀಳಲು ಮನಸ್ಸು ಮಾಡಬಹುದಾಗಿದೆ ಅದುವರೆಗೆ ಹೀಗೆ ಸುತ್ತು ಕಡೆಗಳಲ್ಲಿಯೂ ಸ್ವಲ್ಪ ಸ್ವಲ್ಪ ಚಟುವಟಿಕೆ ತೋರಿಸುತ್ತಾ ಎಲ್ಲರಿಗೂ ಅಂಜಿಕೆ ಹುಟ್ಟಿಸುತ್ತಿರುವಂತೆ ಕಂಡುಬರುವುದು

ಯಾವ ಕಡೆ ಜಪಾನರು ಮುಂದೆ ನುಗ್ಗುತ್ತಾರೋ ತಿಳಿಯದು; ನಮ್ಮ ಹತ್ತಿರ ಇರುವ ಸಾಧಾರಣ ಸೈನ್ಯವನ್ನು ಈ ನಿರ್ಧಾರವಿಲ್ಲದ ಕಾಲದಲ್ಲಿ ಯಾವುದೇ ಒಂದು ಕಡೆಯಲ್ಲಿ ಕೇಂದ್ರೀಕರಿಸುವುದು ಬುದ್ಧಿವಂತಿಕೆಯಲ್ಲ; ಶತ್ರುವು ಯಾವ ಕಡೆ ಬೀಳುತ್ತಾನೋ ಅವನನ್ನು ಎಲ್ಲಾ ಕಡೆಗಳಲ್ಲಿ ಪ್ರತಿಭಟಿಸಲೂ ನಾವು ಸಿದ್ಧರಿರಬೇಕು'

ಎಂದು ಮೇಜರ್ ಅಟ್ಲಿಯವರು ಪಾರ್ಲಿಮೆಂಟಿನಲ್ಲಿ ಭಾಷಣ ಮಾಡುತ್ತಾ ಹೇಳಿದ ಮಾತುಗಳು ಇಂದಿನ ಪರಿಸ್ಥಿತಿಯನ್ನು ಸ್ಪಷ್ಟಪಡಿಸುವಂತಿವೆ ಆಸ್ಟ್ರೇಲಿಯವನ್ನು ಜಪಾನು ಆಕ್ರಮಿಸುವ ಸಂಭವವಂತೂ ಇನ್ನೂ ಇದೆ ಕೋರಲ್ ಸಮುದ್ರದ ಯುದ್ಧದಿಂದಂತೂ ಆಸ್ಟ್ರೇಲಿಯ ಆಕ್ರಮಣ ಭೀತಿ ಹೆಚ್ಚಿದಂತಾಗಿದೆ ಕೋರಲ್ ಯುದ್ಧದಲ್ಲಿ ಗೆದ್ದಿದ್ದರೆ ಜಪಾನರು ಇಷ್ಟರಲ್ಲೇ ಆಸ್ಟ್ರೇಲಿಯಕ್ಕೇ ಕಾಲಿಡುತ್ತಿದ್ದರೆಂದು ಆಸ್ಟ್ರೇಲಿಯದ ವಿದೇಶ ಮಂತ್ರಿಗಳೇ ಹೇಳುತ್ತಾರೆ ಇಷ್ಟರಲ್ಲಿ ಇನ್ನೊಂದು ಸುದ್ದಿ ಬಂದಿದೆ; ಕೋರಲ್ ಯುದ್ಧಕ್ಕೆ ಬಂದಿದ್ದ ಜಪಾನೀ ನೌಕಾದಲಕ್ಕಿಂತ ಮಿಗಿಲಾದೊಂದು ನೌಕಾದಳವು ನೈಋತ್ಯ ಪೆಸಿಫಿಕ್ಕಿನಲ್ಲಿ ಸಂಚರಿಸುತ್ತಿದೆಯಾಗಿ ಅಕ್ಷರಾಷ್ಟ್ರಗಳ ಪ್ರಕಟಣೆಯಿದೆ ಈ ಸುದ್ದಿಗೆ ಬೇರೆ ಕಡೆಯಿಂದ ಆಧಾರ ದೊರಕಿಲ್ಲವಾದರೂ ಆಸ್ಟ್ರೇಲಿಯದ ಸೇನಾಪತಿ ಮೆಕರ್ಥರರು ಎಲ್ಲಾ ತರದ ಜಾಗ್ರತೆ ತೆಗೆದುಕೊಳ್ಳುತ್ತಿದ್ದಾರೆ

ಅಂತೂ ಇತ್ತೀಚೆಗೆ ಕೆಲದಿನಗಳಿಂದ ಭಾರತದ ಆಕ್ರಮಣ ಭೀತಿ ಸ್ವಲ್ಪ ಕಡಿಮೆಯಾಗಿದೆ ಚೀನದ ಕಡೆ ಶತ್ರು ಚಟುವಟಿಕೆ ಹೆಚ್ಚುತ್ತಿರುವ ವಾರ್ತೆ ಬಂದಿದೆ ಬರುವ ವಾರದಿಂದ ಚೀನದಲ್ಲಿ ಮಹಾಯುದ್ಧವು ಆರಂಭವಾಗಬಹುದೆಂದು ಚೀನೀ ಮಂತ್ರಿಗಳೊಬ್ಬರು ಅಭಿಪ್ರಾಯಪಡುತ್ತಾರೆ ಹಿಂದು ಸಾಗರ ಮತ್ತು ಕೋರಲ್ ಸಾಗರದಲ್ಲಿ ತಮ್ಮ ಪ್ರಯತ್ನವು ಅಷ್ಟೊಂದು ಫಲಕಾರಿಯಾಗಿ ತೋರಿ ಬರದಿರಲು, ಈಗ ಜಪಾನರು ಚಂಕಿಂಗ್ ಕರಾವಳಿಯಲ್ಲಿ ಯುದ್ಧವನ್ನು ಆರಂಭಿಸಿದ್ದಾರೆ ಅಲ್ಲಿನ ಪರಿಸ್ಥಿತಿ ಈಗ ಗಂಭೀರವಾಗಿರುವುದು. ಚೆಕಿಯಾಂಗ್ ಪ್ರಾಂತದಲ್ಲಿ ಜಪಾನೀ ದಂಡುಗಳು ಹೊಸ ಧಾಳಿಯನ್ನು ಪ್ರಾರಂಭಿಸಿರುವವೆಂದು ಸುದ್ದಿಯಿದೆ ಪಾರ್ಮೋಸಾ ದ್ವೀಪದಲ್ಲಿ ಜಪಾನರ ಸೈನ್ಯ ಸಂಗ್ರಹಕಾರ್ಯವು ನಡೆಯುತ್ತಿರುವುದು ಚೆಕಿಯಾಂಗ್‌ನಲ್ಲಿ ಪ್ರಧಾನ ಯುದ್ಧವು ಇಷ್ಟರಲ್ಲಿಯೇ ಪ್ರಾರಂಭವಾಗಿರುವುದು 100,000 ಸೈನಿಕರು ಇದರಲ್ಲಿ ಭಾಗ ತೆಗೆದುಕೊಳ್ಳುವರೆಂದು ತಿಳಿಸಲಾಗಿದೆ ಇವರಲ್ಲಿ ಕೆಲವರು ಈಗಾಗಲೇ ರಾಜಧಾನಿಯ ಬಾಗಿಲ ವರೆಗೆ ಬಂದಿದ್ದು, ಸುತ್ತುಗಟ್ಟುವ ಪ್ರಯತ್ನ ಮಾಡುತ್ತಿರುವರಂತೆ! ಈ ಪ್ರಯತ್ನದಲ್ಲಿ ಕೆಲವರು ಸತ್ತು ಹೋಗಿರುವರೆಂದೂ ಹೇಳಲಾಗಿದೆ ಅಂತೂ ಈಗ ಬಂದ ಸುದ್ದಿಯಿಂದ ಜಪಾನರು ಚೀನವನ್ನು ಭರದಿಂದ ಮುತ್ತಲು ಪ್ರಯತ್ನಿಸುತ್ತಿರುವರೆಂಬುದು ನಿಶ್ಚಿತವಾಗಿದೆ.

ಖಾರ್ಕೋವಿನಿಂದ ಈಗ ಬಂದ ಸುದ್ದಿಯಂತೆ, ಅಲ್ಲಿನ ಯುದ್ಧ ಬಹಳ ಭಯಂಕರವಾಗಿದೆಯೆಂದು ತಿಳಿದುಬರುವುದು. ಮಾರ್ಶಲ್ ಟಿಮೊಶೆಂಕೋ ಸೈನ್ಯದ ಮೇಲೆ ಜರ್ಮನರು ಬಲವಂತವಾದ ಮುತ್ತಿಗೆ ಹಾಕಿರುವರು ಇರ್ಝ್ಯುಮ್ ಬರ್ವೆಂಕೊವೊ ಭಾಗದಲ್ಲಂತೂ ಜರ್ಮನರ ಮುತ್ತಿಗೆ ಘೋರವಾಗಿದೆ. ಜರ್ಮನರು ಪ್ರತಿದಿನ ಹೊಸ ಸೈನ್ಯಗಳನ್ನು ಮತ್ತು ಯುದ್ಧ ಸಾಮಗ್ರಿಗಳನ್ನು ತಂದು ಪ್ರತಿಭಟಿಸುತ್ತಿರುವರು. ಕಾಲಿನಿನ್ ಭಾಗದಲ್ಲೂ ಜರ್ಮನರು ಪ್ರತಿ ಧಾಳಿಮಾಡುತ್ತಿದ್ದಾರೆ. ಜರ್ಮನರ ಅಸಂಖ್ಯಾತ ಫಿರಂಗಿ ಟೇಂಕುಗಳು ಮುನ್ನುಗ್ಗಲು ಪ್ರಯತ್ನ ಮಾಡುತ್ತಿವೆ ಆದರೆ ರಶ್ಯನರು ಅವನ್ನು ಎದುರಿಸುತ್ತಿರುವರು. ಡೊನೆಟ್ಸ್ ನದಿಯನ್ನು ದಾಟಿಹೋಗಲು ಉಭಯಸೈನ್ಯಗಳೂ ಸಾಹಸಮಾಡುತ್ತಿವೆ ಖಾರ್ಕೋವ್ ಕಾಳಗವು ಪ್ರಾರಂಭವಾಗಿ ಹತ್ತು ದಿನಗಳ ಮೇಲಾಗಿದ್ದು, ಇದರಲ್ಲಿ ಎರಡು ಕಡೆಯವರಿಗೂ ಅಪಾರ ಹಾನಿಯಾಗಿದೆ ಆದರೆ ಯಾರೂ ದಣಿದಂತೆ ತೋರುವುದಿಲ್ಲ ಹೊಸ ಹೊಸ ಸೈನ್ಯಗಳನ್ನು ತಂದು ಕಾದಾಡುತ್ತಿದ್ದಾರೆ ಅಂತೂ ಖಾರ್ಕೋವ್ ಕಾಳಗವು ಇಂದು ಅತ್ಯಂತ ಭೀಷಣವಾಗಿ ನಡೆಯುತ್ತಿರುವುದೆಂದು ತಿಳಿದುಬಂದಿದೆ ಇದರಲ್ಲಿ ರಶ್ಯದ ಆಗ್ನೇಯ ದಿಕ್ಕಿನಲ್ಲಿ ಮತ್ತೆ ಕೆಲವು ಪ್ರದೇಶಗಳಿಂದ ಜರ್ಮನರನ್ನು ಹಿಮ್ಮೆಟ್ಟಿಸಲಾಗಿದೆಯೆಂದು ಸುದ್ದಿ ಬಂದಿರುವುದು 'ಆಕಾಶದಲ್ಲಿ ವಿಮಾನ ನಿರ್ಘೋಷ, ನೆಲದಲ್ಲಿ ಫಿರಂಗಿಗಳ ಗುಡುಗು ಮತ್ತು ಮೆಶಿನ್‌ಗನ್ನುಗಳ ಸಿಡಿಲುಗಳಿಂದ, ಅಸಂಖ್ಯಾತ ವಿಮಾನಗಳು ಹಕ್ಕಿಗಳಂತೆ ಹಾರಾಡುತ್ತಿರುವುದರಿಂದ ಈ ರಣಕ್ಷೇತ್ರ ಭಯಂಕರವಾಗಿದೆ' ಎಂದು ಒಬ್ಬ ವಿಭಿಟ ಸುದ್ದಿಗಾರನು ಇಲ್ಲಿನ ಸಮರ ಸುದ್ದಿಯನ್ನು ತಿಳಿಸುತ್ತಾನೆ

ಬರ್ಮಾದೇಶದ ಪರಾಜಯದ ಕಾರಣವೇನೆಂದು ಬ್ರಿಟಿಷ್ ವಿಮಾನದಲದ ಭಾಷಣಗಾರನೊಬ್ಬನು ಹೀಗೆಂದು ವಿವರಿಸಿ ಹೇಳುವನು 'ರಂಗೂನ್ ಹಾಗೂ ದಕ್ಷಿಣ ಬರ್ಮದೇಶದ ಜಪಾನರು ಅಧಿಕ ಸಂಖ್ಯೆಯಿಂದ ಒಂದಿಳಿದರು ಅದರಿಂದ ಬ್ರಿಟಿಷ್ ಮತ್ತು ಹಿಂದೀ ಸೈನ್ಯಗಳು ಅತ್ಯುತ್ತಮ ವಿಮಾನ ನಿಲ್ದಾಣಗಳನ್ನು ಬಿಟ್ಟು ಅವಸರದಿಂದ ತಯಾರಿಸಿದ ವಿಮಾನ ನಿಲ್ದಾಣಗಳಿಗೆ ಹಿಂದೆ ಸರಿಯಬೇಕಾಯಿತು ಇದರಿಂದ ಶತ್ರುವಿಗೆ ಒಳ್ಳೆಯ ನಿಲ್ದಾಣಗಳು ದೊರೆತವು. ಅಲ್ಲದೆ ಮಲಯ ಡಚ್ ಇಂಡೀಸ್‌ಗಳಲ್ಲಿಯ ಯುದ್ಧವು ಆಗ ತಾನೇ ಮುಗಿದದ್ದರಿಂದ ಅಲ್ಲಿಂದ ಜಪಾನರಿಗೆ ವಿಪುಲ ಸಹಾಯವು ಬಂತು. ಇವುಗಳ ಸಹಾಯದಿಂದ ಜಪಾನರು ಬ್ರಿಟಿಷ್ ಸೈನಿಕರನ್ನು ಮಧ್ಯ ಬರ್ಮದಿಂದಲೂ ಹಿಂದಕ್ಕಟ್ಟಿದರು ಅಲ್ಲಿ ಬ್ರಿಟಿಷ್ ಸೈನಿಕರಿಗೆ ಬರುತ್ತಿದ್ದ ಸಹಾಯಕ್ಕಿಂತಲೂ ಹಾನಿಯೇ ಅಧಿಕವಾಯಿತು ಅಲ್ಲದೆ ರಂಗೂನನ್ನು ಖಾಲಿಮಾಡಿದ್ದರಿಂದ, ಬಂಗಾಲ ಉಪಸಾಗರದ ಮೇಲೆ ಜಪಾನರಿಗೆ ಪ್ರಭುತ್ವ ದೊರೆತದ್ದರಿಂದ ಹಿಂದುಸ್ತಾನ ಮತ್ತು ಸಿಲೋನ್‌ಗಳಿಗೆ ಹೆಚ್ಚು ಸಹಾಯ ಕಳುಹಿಸಬೇಕಾಯಿತು ಕೊಲೊಂಬೋ ತ್ರಿಂಕಾಮಲೆಗಳ ಮೇಲೆ ಧಾಳಿಯಾದ್ದರಿಂದಲು ಪರಿಸ್ಥಿತಿ ವಿಷಮವಾಯಿತು, ಇದರಿಂದೆಲ್ಲಾ ಬರ್ಮದ ಯುದ್ಧದಲ್ಲಿ ಅಪಜಯವುಂಟಾಯಿತು ಹೀಗಾದರೂ ಅಲ್ಲಿಂದ ನಮ್ಮ ಸೈನ್ಯವನ್ನು ನಾವು ಬಹಳ ಚಲೋ ರೀತಿಯಿಂದ ಹಿಂದಕ್ಕೆ ತಂದಿರುತ್ತೇವೆ'

ರಾಷ್ಟ್ರೀಯ ವಾರ ಪತ್ರಿಕೆ
ಸ್ವದೇಶಾಭಿಮಾನಿಗೆ
— ಇಂದೇ —
ಚಂದಾದಾರರಾಗಿರಿ

ಸ್ವದೇಶಾಭಿಮಾನಿ

ತಾರೀಕು 29—5—1942

ರಾಜಾಜಿ ಭಾಷಣ

ಚಕ್ರವರ್ತಿ ರಾಜಗೋಪಾಲಾಚಾರ್ಯರು ಕಳೆದವಾರ ಮಂಗಳೂರಿಗೆ ಬಂದಿದ್ದು, ಎರಡು ಸಾರ್ವಜನಿಕ ಭಾಷಣ ಮಾಡಿದರು ಅದರಲ್ಲಿ ತಾನು ಬಂದಿರುವ ರಾಜಕೀಯ ಕಾರ್ಯದ ವಿಷಯವನ್ನು ವಿವರಿಸಿ ಹೇಳಿದರು ರಾಜಾಜಿ ಪ್ರಚಾರಕ್ಕೆ ಪ್ರಾರಂಭ ಮಾಡಿದ ಮೇಲೆ, ಅವರ ಬೇರೆಬೇರೆ ಕಡೆಯ ಭಾಷಣಗಳನ್ನು ಓದಿನೋಡಿದ ಮೇಲೆ ಅವರ ಮಾತಿನ ಮಥಿತಾರ್ಥವೇನೆಂಬುದನ್ನು ಜನತೆ ಇಂದು ತಿಳಕೊಳ್ಳಬಲ್ಲದು. ರಾಜಾಜಿ ಇಂದಿನ ಕಾಂಗ್ರೆಸ್ ತತ್ವದಿಂದ ಬಹು ದೂರ ಸೆಟೆದು ನಿಂತಿರುವರೆಂದು ಎಲ್ಲರಿಗೂ ಅರ್ಥವಾಗಿದೆ ಹೀಗಿರುತ್ತಾ ಅವರು ಕಾಂಗ್ರೆಸ್ ಮತ್ತು ತನ್ನಲ್ಲಿರುವ ಮತಭೇದವನ್ನು ಸ್ಪಷ್ಟಗೊಳಿಸದೆ ಕಾಂಗ್ರೆಸ್ಸು ಮತ್ತು ತಾನು ಹೇಳುತ್ತಿರುವುದು ಎರಡೂ ಒಂದೆಯಾಗಿದೆಯೆಂದು ವಾದಿಸುತಿದ್ದಾರೆ ರಾಜಾಜಿ ತಿಳಿದೋ ತಿಳಿಯದೆಯೋ ಈ ರೀತಿ ಮುಚ್ಚುಮರೆಯಿಂದ ಯಾಕೆ ಮಾತನಾಡುತ್ತಿದ್ದಾರೋ ಅರ್ಥವಾಗುವುದಿಲ್ಲ

ಆಚಾರ್ಯರು ಹಿಂದು ಮುಸ್ಲಿಂ ಐಕ್ಯದವಿಷಯ ಹೇಳುತ್ತಾರೆ. ಕಾಂಗ್ರೆಸಿಗಾಗಲಿ, ಗಾಂಧಿಜಿಗಾಗಲಿ, ಪ್ರತಿಯೊಬ್ಬ ಭಾರತೀಯನಿಗಾಗಲಿ ಇದು ಪ್ರಿಯವಾದ ಮಾತು ರಾಜಾಜಿಯೇ ಅಂದಂತೆ, ಹಿಂದೂ ಮುಸ್ಲಿಂ ಐಕ್ಯ ಬೇಡವೆನ್ನುವವನು ಹುಚ್ಚನು, ಆದರೆ ಈ ಐಕ್ಯಸಾದನೋಪಾಯವು ದೇಶ ನಿಘಾತುಕವಿರಬಾರದು ದೇಶವನ್ನು ಹರಿದು ಹಂಚುವ ಮೂಲಕ ಐಕ್ಯವಾಗಬಹುದೆಂದು ರಾಜಾಜಿ ತಿಳಿಯುವುದಿದ್ದರೆ ಇದು ವಿಚಿತ್ರವಾಗಿದೆ ಒಂದು ಅವಿಭಕ್ತ ಕುಟುಂಬದ ಉದಾಹರಣೆಯನ್ನು ಆಚಾರ್ಯರು ಹೇಳಿದರು ಆ ಕುಟುಂಬದ ಪ್ರತಿಯೊಬ್ಬ ವ್ಯಕ್ತಿಗೂ ಬೇರೆಯಾಗಿರಬೇಕೆಂದರೆ ಬೇರೆಯಾಗಲು ಅಧಿಕಾರವುಂಟೆಂದು ಅವರು ಹೋಲಿಸಿ ಹೇಳಿದರು ಅವಿಭಕ್ತ ಕುಟುಂಬದ ಪ್ರತಿಯೊಬ್ಬ ವ್ಯಕ್ತಿಯೂ ಬೇರೆಬೇರೆಯಾದರೆ ಮತ್ತೆ ಕುಟುಂಬದಲ್ಲಿ ಐಕ್ಯವೆಲ್ಲಿದೆ? ಬೇರೆ ಬೇರೆಯಾಗುವ ಹಕ್ಕನ್ನು ವಾದಿಸುತ್ತಾ ರಾಜಾಜಿ ಐಕ್ಯೋಪಾಯವನ್ನು ಕಂಡು ಹುಡುಕಿದ್ದು ಇದು ಬಹಳ ವಿಚಿತ್ರವಾದ ವಾದಸರಣಿಯಾಗಿದೆ!

ತನ್ನೀ ವಾದಕ್ಕೆ ಆಧಾರವಾಗಿ ಆಚಾರ್ಯರು ಹೋದ ಹೋದೆಡೆಗಳಲ್ಲಿ ಗಾಂಧಿಜಿಯವರ ಮಾತನ್ನೆತ್ತಿ ಹೇಳುತ್ತಿದ್ದರು. ಬಹು ಸಂಖ್ಯಾಕ ಮುಸ್ಲಿಮರು ಬೇರೆಯಾಗಬೇಕೆಂದು ಬಯಸಿದರೆ ಅವರನ್ನು ಯಾರೂ ತಡೆಹಿಡಿಯಲಾರರು ಎಂದು ಗಾಂಧಿಜಿ ಹಿಂದೊಮ್ಮೆ ಹೇಳಿದ್ದನ್ನು ತನ್ನ ಪ್ರಚಾರಕ್ಕೆ ಅನುಕೂಲವಾಗಿ ರಾಜಾಜಿ ಎತ್ತಿಕೊಂಡಿದ್ದರು. ಆದರೆ ಗಾಂಧಿಜಿಯವರೇ ಆಚಾರ್ಯರ ಬಾಯಿ ಮುಚ್ಚಿಸಿದ್ದಾರೆ 'ತನ್ನ ಮತ್ತು ರಾಜಾಜಿಯವರ ಅಭಿಪ್ರಾಯಗಳಲ್ಲಿ ಸುಣ್ಣಬೆಣ್ಣೆಗಳ ಭೇದವಿದೆ' ಎಂದು ಅವರು ಸ್ಪಷ್ಟಪಡಿಸಿದ್ದಾರೆ. ಭಾರತ ರಾಷ್ಟ್ರವನ್ನು ತುಂಡುಮಾಡುವ ಹಂಚಿಕೆಯನ್ನು ಗಾಂಧಿಜಿ ಪಾಪವೆಂದು ಬಗೆಯುತ್ತಾರೆ ಆ ಪಾಪವನ್ನು ಯಾರಾದರೂ ಮಾಡುವುದಿದ್ದರೆ ಅದನ್ನು ತಡೆಯಲು ಅವರು ಶಕ್ತರಿಲ್ಲದಿದ್ದರೂ ಅದರಲ್ಲಿ ಆಚಾರ್ಯರಂತೆ ಸಹಭಾಗಿಗಳಾಗಲು ಸರ್ವಥಾ ಒಪ್ಪಲಾರರು! ಗಾಂಧಿಜಿಯ ಅಭಿಪ್ರಾಯವನ್ನು ತಿಳಿದವರೆಂದು ಪ್ರಸಿದ್ಧರಾದ ಆಚಾರ್ಯರು ಹೀಗೆ ಜನತೆಯನ್ನು ವಂಚಿಸುವಂತೆ ಮಾತನಾಡುವುದು ನ್ಯಾಯವಾಗಲಾರದು

ಜಿನ್ನರು ಇನ್ನೂ ತಟಸ್ಥರಿದ್ದಾರೆ ರಾಜಗೋಪಾಲಾಚಾರ್ಯರ ಈ ಸೂಚನೆಗಾದರೂ ಅವರು ಒಪ್ಪುತ್ತಾರೆಂಬುದು ಖಂಡಿತವಿಲ್ಲ ಮುಸಲ್ಮಾನರಿಗೆ ಬೇರೆಯಾಗುವ ಹಕ್ಕು ಉಂಟು ಎಂದು ಕಾಂಗ್ರೆಸು ಒಪ್ಪಿಕೊಂಡ ಮಾತ್ರದಿಂದ ಜಿನ್ನರಾಗಲಿ ಮುಸ್ಲಿಂ ಲೀಗಾಗಲಿ ಸಮಾಧಾನ ಹೊಂದುತ್ತದೋ ಯಾರಿಗೂ ಗೊತ್ತಿಲ್ಲ ಇದೇ ರಾಜಗೋಪಾಲಾಚಾರ್ಯರು ಜಿನ್ನರಿಗೆ ರಾಷ್ಟ್ರೀಯ ಸರಕಾರದ ಪ್ರಧಾನಮಂತ್ರಿ ಸ್ಥಾನವನ್ನು ಕೊಡುವ 'ಉದಾರ ಸೂಚನೆ' ಮಾಡಿದ್ದಾಗ ಅದಕ್ಕೆ ಜಿನ್ನರು ಒಪ್ಪಿಕೊಂಡಿಲ್ಲ ಹೀಗೆ ಜಿನ್ನರು ಇನ್ನೂ ಮೌನವಾಗಿರುವಾಗ, ಆಚಾರ್ಯರು ಲೀಗನ್ನು ಸಮಾಧಾನಪಡಿಸಲು, ಬೇರೆಯಾಗುವ ಹಕ್ಕು ಕೊಡುವುದು ನ್ಯಾಯವೆಂದು ಹೇಳುತ್ತಾ ದೇಶದಾದ್ಯಂತ ಹಾರಾಡುವುದು ಗೌರವಕರವಲ್ಲ

ಯುದ್ಧ ಪ್ರಾರಂಭವಾದಾಗ ನಮ್ಮೊಡನೆ ಒಂದು ಮಾತೂಕೇಳದೆಯೇ ಹಿಂದೂಪೇತವನ್ನುಯುದ್ಧಕ್ಕೆಳೆದಿರಿ ಎಂಬ ತತ್ವದ ಮೇಲೆ ಕಾಂಗ್ರೆಸು ಪ್ರಾಂತಿಕ ಮಂತ್ರಿಮಂಡಳಗಳಿಗೆ ರಾಜಿನಾಮೆ ಕೊಟ್ಟು ಹೊರಟು ಬಂತು! ತಿರುಗಿ ಈಗ ಮದ್ರಾಸಿನಲ್ಲಿ ಪ್ರಾಂತಿಕ ಸರಕಾರವಾಗಬೇಕೆಂದು ರಾಜಾಜಿ ವಾದಿಸುವಾಗ ಹಿಂದಿನ ಆ ತತ್ವ ಎಲ್ಲಿ ಮೂಲೆ ಪಾಲಾಯಿತು? ರಾಜಾಜಿಗೆ ಅಧಿಕಾರಲಾಲಸೆ ಹಿಡಿದಿದೆಯೆಂದು ಯಾರೂ ಸಂದೇಹಪಡುವುದಿಲ್ಲ ಆದರೆ ಅಂಗೀಕರಿಸಿದ ತತ್ವವನ್ನು ಸಡಿಲಿಸಿ ನಡೆಯುತ್ತಿರುವ ಇಂದಿನ 'ಆರೆಮರವಿ'ಗಾಗಿ ಮಾತ್ರ ನಾವು ವಿಷಾದಗೊಂಡಿದ್ದೇವೆ ಪ್ರಾಂತಿಕ ಆಡಳಿತವು, ಮದ್ರಾಸಿನ ಆಡಳಿತವು ನಮ್ಮ ಕೈಯಲ್ಲಿದ್ದರೆ, ಕೇಂದ್ರ ಸರಕಾರವು ಹೇಗಿದ್ದರೂ ಚಿಂತೆಯಿಲ್ಲ, ನಾವು ಅದ್ಭುತ ಮಾಡಿಬಿಡುತ್ತೇವೆ ಎಂದು ರಾಜಾಜಿ ಹೇಳುದೇ ನಮಗೊಂದು ಅದ್ಭುತವಾಗಿತೋರುತ್ತದೆ.

ಜಪಾನು ಆಕ್ರಮಣ ಮಾಡುವುದೆಂಬ ಯೋಚನೆಯಲ್ಲಿ ಆಚಾರ್ಯರು ಭಯಭೀತರಾದಂತೆ ತೋರುತ್ತದೆ. ಹೇಗಿದ್ದರೂ ಜಪಾನಿನ ಧಾಳಿಯ ವಿಷಯವನ್ನು ವಿವರಿಸಿ ಅವರು ಜನರನ್ನಂತೂ ಭಯಭೀತರನ್ನಾಗಿ ಮಾಡುವಂತಿದೆ. ರಾಜಾಜಿ ಜಪಾನ್ ಧಾಳಿಯ ವಿಚಾರ ಉತ್ಪ್ರೇಕ್ಷಿಸಿ ಹೇಳುತ್ತಾರೆಂದು ನಾವು ಹೇಳುವುದಿಲ್ಲ ಆಕ್ರಮಣಗಾರರು ಎಷ್ಟೇ ಅನರ್ಥವನ್ನಾದರೂ ಮಾಡಬಹುದು ಆದರೆ ಜಪಾನ್ ಧಾಳಿಯ ಭೀತಿಯೊಂದು ಬಲವಂತವಾಗಿರುವಾಗ ನಾವು ಏನನ್ನೂ ಮಾಡಲಾರೆವು. ರಾಜಾಜಿ ಹೇಳುವಂತೆ ಜನತೆ ಭೀತಿಗೊಂಡಿದ್ದರೆ ಅವರ ಕೈಯ್ಯಲ್ಲಿ ಕೋವಿ ಕೊಟ್ಟರೂ ಅವರು ಏನೂ ಮಾಡಲಾರರು. ಪರಕೀಯರಿಗೆ ಶರಣಾಗಲಾರೆವೆಂಬ ಧೈರ್ಯವಿದ್ದರೆ ನಾವು ಶಸ್ತ್ರಹೀನರಿದ್ದರೂ ವೈರಿಯು ನಮ್ಮನ್ನು ಗೆಲ್ಲಲಾರನು ಗಾಂಧಿಜಿ ಕಳೆದ ಇಪ್ಪತ್ತು ವರ್ಷಗಳಿಂದ ಸಾರಿದ ಅಹಿಂಸಾ ಅಸಹಕಾರ, ಪ್ರಬಲ ಬ್ರಿಟಿಷ್ ಸಾಮ್ರಾಜ್ಯವೆದುರು ನಿಂತು ಹೂಡಿದ ಹೋರಾಟದ ಆ ದಿವ್ಯಾಸ್ತ್ರವು ಜಪಾನರು ಬರುವಾಗ ನಿರುಪಯೋಗಿಯಾಗುವುದೆಂದು ರಾಜಾಜಿ ಯಾಕೆ ತಿಳಕೊಳ್ಳಬೇಕು?

ಕೊನೆಯದಾಗಿ ಶಿಸ್ತಿನ ವಿಚಾರ ಅಖಿಲಭಾರತ ಕಾಂಗ್ರೆಸ್ ಕಮಿಟಿ ಯಾವ ವರೆಗೆ ರಾಜಾಜಿಯ ಮೇಲೆ ಶಿಸ್ತು ಜಾರಿಮಾಡುವುದಿಲ್ಲವೋ ಅಲ್ಲಿ ವರೆಗೆ ಇತರ ಕಾಂಗ್ರೆಸಿಗರು ರಾಜಾಜಿಯವರನ್ನು ದೂರವಿಡುವ ಅವಶ್ಯವೇನೂ ಇಲ್ಲ ಇತರ ಕಾಂಗ್ರೆಸಿನವರು ರಾಜಾಜಿ ಅಭಿಪ್ರಾಯವನ್ನು ಬೇಕಾದರೆ ಕೇಳಬಹುದು, ಇಲ್ಲವಾದರೆ ಬಿಡಬಹುದು, ಆದರೆ ತನಗೆ ಭಾಷಣ ಸ್ವಾತಂತ್ರ್ಯ ಬೇಕು ಎಂದು ರಾಜಾಜಿ ಹೇಳುವುದರಲ್ಲಿ ಎಷ್ಟರ ಮಟ್ಟಿಗೆ ನ್ಯಾಯವಿದೆಯೋ ನಮಗೆ ತಿಳಿಯಲೊಲ್ಲದು ಕಾಂಗ್ರೆಸು ಸಂಸ್ಥೆಯು ಒಮ್ಮೆ ಒಂದು ನಿರ್ಣಯ ಮಾಡಿದರೆ ಅದರ ವಿರುದ್ಧ ಮಾತನಾಡಲು ಅದರ ಸದಸ್ಯನಿಗೆ ಭಾಷಣ ಸ್ವಾತಂತ್ರ್ಯ ಕೊಡುತ್ತಾ ಬಂದರೆ ಸಂಸ್ಥೆಯ ಶಿಸ್ತು ಉಳಿದೀತೆ? ಹಿಂದೆ ಸುಬಾಸರು ಕಾಂಗ್ರೆಸ್ ನಿರ್ಣಯದ ವಿರುದ್ಧ ಮಾತನಾಡುವಾಗ ಅವರಿಗೆ ಬಾಷಣ ಸ್ವಾತಂತ್ರ್ಯ ಕೊಡಬೇಕೆಂದು ರಾಜಾಜಿ ಸಮ್ಮತಿಸಲಿಲ್ಲವೇಕೆ? ಬೋಸರ ಮೇಲೆ ಶಿಸ್ತು ಜಾರಿಯಾಗುವುದಾದರೆ ರಾಜಾಜಿ ಮೇಲೆ ಆಗಕೂಡದೇಕೆ?

ರಾಜಾಜಿ ಹೀಗೆ ಕಾಂಗ್ರೆಸ್ಸಿನಿಂದ ದೂರ—ಬಹುದೂರ ಹೋಗಿದ್ದರೂ—(ಹಾಗೆ ಹೋಗುವುದು ಅವರ ಇಷ್ಟ—ಅದು ತಪ್ಪೆನಲಾರೆವು) ತಾನೂ ಕಾಂಗ್ರೆಸ್ ಹೇಳಿದ್ದನ್ನೇ ಹೇಳುವುದು, ಕಾಂಗ್ರೆಸಿನಲ್ಲಿದ್ದೇ ಮಾತನಾಡುವುದು, ಕಾಂಗ್ರೆಸು ಧುರೀಣರು ವಾದಿಸುವುದನ್ನೇ ವಾದಿಸುವುದೆಂಬ ರೀತಿ ಮುಚ್ಚುಮರೆಯ ಮಾತೇಕೆ? ಜನತೆಯನ್ನು ಯಾಕೆ ಹೀಗೆ ವಂಚಿಸಬೇಕು? ಧೈರ್ಯದಿಂದ, ಎದೆಗಾರಿಕೆಯಿಂದ ಕಾಂಗ್ರೆಸಿಗೂ ತನಗೂ ಇರುವ ವ್ಯತ್ಯಾಸವನ್ನು ತಿಳಿಸಿ, ತಾನು ಹೀಗೆ ಕಾಂಗ್ರೆಸು ಹೀಗೆ ತನ್ನ ದಾರಿಯಿದು, ಕಾಂಗ್ರೆಸಿನ ದಾರಿಯಿದು ಜನತೆಗೆ ಯಾವುದು ಬೇಕೋ ಅದನ್ನು ಅಂಗೀಕರಿಸಬೇಕೆಂದು ಯಾಕೆ ಸ್ಪಷ್ಟ ಹೇಳುವುದಿಲ್ಲ?

ನೋಟಗಳು....

ರಾಜಾಜಿ ಕಾಂಗ್ರೆಸ್ಸು ನಿರ್ಣಯದ ವಿರುದ್ಧ ಮಾತನಾಡುತ್ತಿದ್ದಾರೆಂದು ಹಲವು ಕಡೆಗಳಿಂದ ಶಿಸ್ತಿನ ಕೂಗು ಕೇಳಿಬರುತ್ತಿದೆ! ಅವರ ಮೇಲೂ ಶಿಸ್ತಿನ ಬಾಣ ಪ್ರಯೋಗಿಸಲ್ಪಡುವುದೆ?

卐

ಬೋಸರೂ ಕಾಂಗ್ರೆಸಿನ ಶಿಸ್ತಿಗೆ ಬಲಿಯಾದರು! ವೀರ ನರಿಮನರಿಗೂ ಕಾಂಗ್ರೆಸು ಅಂಜಲಿಲ್ಲ! ಡಾ. ಖಾರೆಯವರನ್ನೂ, ಕಾಂಗ್ರೆಸು ಮಂತ್ರಿಪಟ್ಟದಿಂದ ತಳ್ಳಿಹಾಕಿತು!

卐

ತನಗೆ ಭಾಷಣ ಸ್ವಾತಂತ್ರ್ಯಬೇಕು, ವಿಚಾರಸ್ವಾತಂತ್ರ್ಯಬೇಕುಎಂದು ಆಚಾರ್ಯರು ವಾದಿಸುತ್ತಾರೆ! ಅದೇ ಸ್ವಾತಂತ್ರ್ಯವನ್ನು ಬೋಸ್, ನರಿಮನ್, ಖಾರೆಯವರಿಗೂ ಕೊಡಲು ರಾಜಾಜಿ ಸಮ್ಮತಿಸಿದ್ದಾರೆಯೆ?

卐

ಕಾಂಗ್ರೆಸು ನಿರ್ಣಯವನ್ನು ರೂಪಾಂತರ ಮಾಡಲು ಕಾಂಗ್ರೆಸಿನಲ್ಲಿದ್ದೇ ಯತ್ನಿಸುತ್ತೇನೆಂದು ರಾಜಾಜಿ ಹೇಳಿದರು! ತರ್ಕಸಿಂಹರೆನಿಸಿದ ಆಚಾರ್ಯರು ಮಾತಿನಲ್ಲಿ ಸಿಕ್ಕಿಬೀಳುವವರಲ್ಲ!

卐

ತಾನು ಮದ್ರಾಸಿನಿಂದ ಯಾವ ಟಿಕೇಟಿನಲ್ಲಿ ಬಂದಿರುವೆನೆಂಬ ವಿಚಾರವನ್ನು ನೀವು ಮಾಡಬೇಕಾದ ಅವಶ್ಯವಿಲ್ಲ, ಅದು ರೈಲ್ವೆ ಅಧಿಕಾರಿಗಳಿಗೂ ನನಗೆ ಟಿಕೆಟು ಕೊಟ್ಟವರಿಗೂ ಸಂಬಂಧಿಸಿದ್ದು ಶಿಸ್ತಿನ ವಿಚಾರವು ನನಗೂ ಕಾಂಗ್ರೆಸು ಅಧಿಕಾರಿ ಮಂಡಳಕ್ಕೂ ಸಂಬಂಧಿಸಿದ್ದಾಗಿದೆ' ಎಂದು ರಾಜಾಜಿ ಹೇಳುತ್ತಾರೆ

卐

ಆಚಾರ್ಯರು ಟಿಕೇಟು ಪಡಕೊಂಡು ಯಾವುದೇ ತರಗತಿಯಲ್ಲಿ ಬಂದಿದ್ದರೂ ಅದರಲ್ಲಿ ಯಾರಿಗೂ ಕುತೂಹಲವಿಲ್ಲ ನಿಜ! ಟಿಕೇಟಿಲ್ಲದೆಯೇ ಬಂದಿದ್ದಾರೋ ಎಂದು ಹಲವರು ಸಂದೇಹಪಡುತ್ತಾರೆ!

卐

ಆಚಾರ್ಯರೊಡನೆ ಅಲೆದಾಡುತ್ತಿರುವ ಬುಲುಸು ಸಾಂಬ ಮೂರ್ತಿಯವರ ಮೇಲೆ ಆಂಧ್ರಪ್ರಾಂತಿಕ ಕಾಂಗ್ರೆಸ್ ಕಮಿಟಿಯು ಶಿಸ್ತು ಜಾರಿಮಾಡುವ ವಿಚಾರ ಮಾಡುತ್ತಿದೆ!

卐

ಸಾಂಬಮೂರ್ತಿಯವರು ಎಸೆಂಬ್ಲಿ ಸ್ಪೀಕರರಾಗಿದ್ದು ಅವರ ಸ್ಥಾನಕ್ಕೆ ಇಂದಿನ ಅವರ ಈ ನಡತೆ ಗೌರವಕರವಲ್ಲವೆಂದೂ ಆಂಧ್ರರ ಆಕ್ಷೇಪವಿದೆ!

卐

ಎಸೆಂಬ್ಲಿ ಸ್ಪೀಕರರಾಗಿದ್ದೇ ಅವರು ಕಾನೂನು ಭಂಗಮಾಡಿ ಸೆರೆಮನೆಗೆ ಹೋದದ್ದು ಸರಕಾರದ ದೃಷ್ಟಿಯಿಂದ ಆಕ್ಷೇಪಕರವಾಗಿತ್ತು!

卐

ಎಸೆಂಬ್ಲಿ ಸ್ಪೀಕರರಾಗಿದ್ದೇ ಅವರು ಆಂಧ್ರಪ್ರಾಂತ ನಿರ್ಮಾಣಕ್ಕಾಗಿ ಲಂಡನಿಗೆ ಹೋಗಲು ಹೊರಟದ್ದು ಆಂಧ್ರೇತರರ ದೃಷ್ಟಿಯಿಂದ ಆಕ್ಷೇಪಕರವಾಗಿತ್ತು!

卐

ಅಭಿಪ್ರಾಯ ಸ್ವಾತಂತ್ರ್ಯ, ಭಾಷಣ ಸ್ವಾತಂತ್ರ್ಯವನ್ನು ಸಾಂಬಮೂರ್ತಿಯವರೂ ಬಯಸುವಂತೆ ತೋರುತ್ತದೆ!

卐

ರಾಜಾಜಿ ಮತ್ತು ಸಾಂಬಮೂರ್ತಿ ಯಾವ ಸ್ವಾತಂತ್ರ್ಯಕ್ಕಾಗಿ ಸರಕಾರದೆದುರು ಸತ್ಯಾಗ್ರಹಮಾಡಿದರೋ, ಅದಕ್ಕಾಗಿ ಕಾಂಗ್ರೆಸಿನೆದುರೂ ಸತ್ಯಾಗ್ರಹ ಹೂಡುವರೆ?

ಹರಿಜನವಾಣಿ

ಸಿಂಧದಲ್ಲಿ ಹುರರ ಬಂಡಾಯ!

ಅರಾಜಕತೆಯ ಕುರಿತು ಗಾಂಧಿಜಿ ಸಲಹೆ

ಪ್ರೊ. ಘನಶ್ಯಾಮದಾಸ್, ಧಾರಶಾಸಕರ ಕಾರ್ಯಕರ್ತರಾದ ಶ್ರೀ ಆಸನದಾಸರೊಡನೆ ಹುರರ ಹಾವಳಿಗೆ ತುತ್ತಾದ ಪ್ರದೇಶದಲ್ಲೆಲ್ಲ ಸಂಚಾರಮಾಡಿ ಬಂದು ವಿಸ್ತೃತವಾದ ವರದಿಯನ್ನು ಸಿದ್ಧಪಡಿಸಿ ನನ್ನ ಕಡೆಗೆ ಕಳಿಸಿರುವರು. ಆ ವರದಿಯ ಮುಖ್ಯಾಂಶವನ್ನು ಕೆಳಗೆ ಕೊಟ್ಟಿರುವೆನು.

ಹುರರು ಪೀರಪಗ್ಗಾರೊ ಪೀರರ ಅನುಯಾಯಿಗಳು. ಅವರನ್ನು ಸರಕಾರದವರು ಸೆರೆಹಿಡಿದು ನಾಗಪುರದಲ್ಲಿ ಸ್ಥಾನಬದ್ಧತೆಯಲ್ಲಿಟ್ಟಿರುವರೆಂದು ಹೇಳಲಾಗುತ್ತದೆ. ಲಕ್ಷಗಟ್ಲೆ ಅವರ ಅನುಯಾಯಿಗಳಿರುವರು. ಅವರು ಕೇಡಿಗಳ ವರ್ಗಕ್ಕೆ ಸೇರಿದವರೆಂದು ತಿಳಿಯಲಾಗುತ್ತದೆ. ಅವರಲ್ಲನೇಕರನ್ನು ಕ್ರಿಮಿನಲ್ ಸೆಟ್ಲಮೆಂಟುಗಳಲ್ಲಿಡಲಾಗಿತ್ತು. ಆದರೆ ಕೆಲವರ್ಷಗಳ ಹಿಂದೆ ಈ ಶಿಬಿರಗಳನ್ನು ವಿಸರ್ಜಿಸಲಾಯಿತು. ಆದರೂ ಅವರು ದಿನಾಲೂ ಪೋಲೀಸರಿಗೆ ಹಾಜರಿ ಕೊಡಬೇಕೆಂದು ವಿಧಿಸಲಾಗಿತ್ತು. ಪೋಲೀಸರ ತಪ್ಪು ವರದಿಗಳಿಂದ ತಮ್ಮ ಪೀರರನ್ನು ಸೆರೆಹಿಡಿಯಲಾಗಿದೆಂದು ಹುರರು ತಿಳಿಯುತ್ತಾರೆ. ಅವರನ್ನು ಭೇಟಿಯಾಗಲು ಯಾರಿಗೂ ಅಪ್ಪಣೆ ಕೊಡುವದಿಲ್ಲೆಂಬುದು ಅವರದೊಂದು ಆಕ್ಷೇಪ. ಪ್ರತಿದಿನ ಪೋಲೀಸ್ ಸ್ಟೇಷನಿಗೆ ಬಂದು ಹಾಜರಿ ಕೊಡಬೇಕೆಂಬದು ಪೋಲೀಸರ ಬಿತ್ತಾಯವೆಂದೂ ಅವರು ಆಕ್ಷೇಪ ಮಾಡುತ್ತಿರುವರೆಂದೂ ಹೇಳಲಾಗುತ್ತದೆ. ಪೀರ ಪಗ್ಗಾರೊ ಇವರನ್ನು ಸೆರೆಹಿಡಿದ ನಂತರ ಸಂಘರದ ಹತ್ತಿರವಿರುವ ಅವರ ಮನೆಯನ್ನು ಶೋಧಿಸಲಾಯಿತು. ಪೀರರ ಅನುಯಾಯಿಗಳಿಗೆ ನೆರೆಯುತ್ತಿದ್ದ ಬಂಗ್ಲೆಯ ಹತ್ತಿರುವ ಗುಡಿಸಲುಗಳಿಗೆಲ್ಲ ಬೆಂಕಿ ಹಚ್ಚಿ ನಾಶಮಾಡಲಾಯಿತು. ಇವೆಲ್ಲದರಿಂದ ಹುರರು ಬಹಳ ರೊಚ್ಚಿಗೆದ್ದಿರುವರು. ಕೊಲೆ, ದರೋಡೆ, ರೈಲ್ವೇ ಸ್ಟೇಶನುಗಳ ಮೇಲೆ ದಾಳಿ, ಪಿ. ಡಬ್ಲ್ಯು. ಡಿ. ಬಂಗ್ಲೆಗಳಲ್ಲಿಯ ಸಾಮಾನುಗಳ ನಾಶ, ಟೆಲಿಫೋನ ಟೆಲಿಗ್ರಾಫ ತಂತಿಗಳನ್ನು ಕತ್ತರಿಸುವದು, ಕಾಲುವೆಗಳನ್ನು ನಾಶಮಾಡುವುದು, ಮೊದಲಾದ ಘಾತಕ ಚಟುವಟಿಕೆಗಳನ್ನು ಅವರು ನಡೆಸಿರುವರು. ಪೀರಸಗ್ಗಾರೊ ಇವರ ಬಿಡುಗಡೆಗಾಗಿ ಹುರರು ಸರಕಾರದ ವಿರುದ್ಧ ಒಂದು ಬಗೆಯ ಕ್ರಾಂತಿಯನ್ನೇ ಹೂಡಿರುವರೆಂದು ಹೇಳಬಹುದಾಗಿದೆ. ಅವರ ಸಲುವಾಗಿ ತಮ್ಮ ಸರ್ವಸ್ವವನ್ನೂ ಸಮರ್ಪಣ ಮಾಡಲು ಪ್ರಾಣ ಕೂಡ ಅರ್ಪಿಸಲು ಅವರು ಸಿದ್ಧರಿರುವರು. ಪೀರರು ಸೆರೆಹಿಡಿಯಲ್ಪಟ್ಟು ಈಗ ಆರು ತಿಂಗಳ ಮೇಲಾಯಿತು. ಹುರರು ತಮ್ಮ ಸ್ವಂತ ಸರಕಾರವನ್ನೇ ಸ್ಥಾಪಿಸಿಕೊಂಡಿರುವರು. ಅವರು ತಮ್ಮ ಧುರೀಣನೊಬ್ಬನನ್ನು ಅರಸನೆಂದು ಕರೆಯುವರು. ಅಲ್ಲದೆ ಸೇನಾಪತಿಗಳು ಕಪ್ತಾನರು ಮೊದಲಾದವರನ್ನು ನೇಮಿಸಿಕೊಂಡಿರುವರು. ಅವರು ತಮ್ಮ ತಮ್ಮೊಳಗೆ ಗುಂಪುಗಳನ್ನು ಮಾಡಿಕೊಂಡಿದ್ದು ಪ್ರತಿಯೊಂದು ಗುಂಪಿಗೂ ಕ್ಷೇತ್ರಗಳನ್ನು ಹಂಚಿಕೊಡಲಾಗಿದೆಯಂತೆ. ಪ್ರಾರಂಭದಲ್ಲಿ ಅವರ ಚಟುವಟಿಕೆಗಳು ಕೇವಲ ಸರಕಾರದ ವಿರುದ್ಧ ಇದ್ದವಲ್ಲದೆ ಪೀರರ ಶತ್ರುಗಳೆಂದೂ ಅವರ ವಿರುದ್ಧ ಸರಕಾರಕ್ಕೆ ಸಹಾಯ ಮಾಡುತ್ತಿರುವರೆಂದೂ ಕಂಡು ಬಂದವರ ವಿರುದ್ಧ ಇದ್ದವು. ಆದರೆ ಅವರೀಗ ತಮ್ಮ ಆ ಧೋರಣೆಯನ್ನು ಬದಲು ಮಾಡಿ ಎಲ್ಲರ ಮೇಲೆಯೂ ಧಾಳಿಯಿಕ್ಕುತ್ತಿರುವರೆಂದು ತಿಳಿಯುತ್ತದೆ. ಜಮೀನುದಾರರಿರಲಿ, ಸೇಟಿಯಾ ಇರಲಿ, ಹಿಂದು ಇರಲಿ ಮುಸಲ್ಮಾನರಿರಲಿ ಸರಕಾರದ ಉಚ್ಚ ಅಧಿಕಾರಿಯಿರಲಿ ಇಲ್ಲವೆ ಸಣ್ಣ ಕೋಟಾರ ಇಲ್ಲವೆ ಬೆಲ್ದಾರನಿರಲಿ, ಶ್ರೀಮಂತನಿರಲಿ ಬಡವನಿರಲಿ ನಿರಪರಾಧಿ ಇರಲಿ ಅಪರಾಧಿಯಿರಲಿ ಯಾರೂ ಇವರ ದಾಳಿಗೆ ಆಹುತಿಯಾಗದಿರರು. ಹೆಣ್ಣು ಮಕ್ಕಳನ್ನು ಕೂಡ ಹಾಗೇ ಬಿಡುವವರಲ್ಲ. ತಮ್ಮ ಚಟುವಟಿಕೆಗಳು ಹೆಚ್ಚು ಪರಿಣಾಮಕಾರಿಯಾಗಬೇಕೆಂದು ಅವರು ಪಿಸ್ತೂಲು, ಬಂದೂಕು ಮದ್ದುಗುಂಡು, ಬಟ್ಟೆ ಮತ್ತು ಹಣ ಮುಂತಾದವುಗಳನ್ನು ಕೂಡಿಸಹತ್ತಿರುವರಂತೆ. ಸೈನಿಕರ ಪದ್ಧತಿಯಿಂದ ಅವರು ದಾಳಿಯನ್ನು ಮಾಡುವರು; ಹಲವು ಸಲ ಅವರು ಖಾಕಿ ಉಡುಪಿನಲ್ಲಿಯೂ ಬರುವರು. ತಾವೇ ಸರಕಾರವಾದ್ದರಿಂದ ತಮಗೇ ಕರವನ್ನು ಕೊಡಬೇಕೆಂದೂ ಹಾಗೆ ಕರಕೊಡದಿದ್ದರೆ ನಿಮ್ಮ ಗೋದಿಯ ಸಂಗ್ರಹ ಸುಟ್ಟು ಹಾಕುವೆವೆಂದೂ ಇಲ್ಲವೆ ಬೇರೆ ರೀತಿಯಿಂದ ತೊಂದರೆ ಕೊಡುವೆವೆಂದೂ ಹೆದರಿಕೆ ಹಾಕಿ ಅವರು ಕರವನ್ನು ವಸೂಲು ಮಾಡುತ್ತಿರುವರಂತೆ. ಸರಕಾರೀ ಅಧಿಕಾರಿಗಳಿಗೆ ಸಹಾಯ ಮಾಡುವವರನ್ನು ಮತ್ತು ಹುರರ ಅಪ್ಪಣೆಗಳಿಗೆ ತಲೆಬಾಗದವರನ್ನು ರಕ್ಷಿಸಲು ಸರಕಾರವು ಶಕ್ತವಿಲ್ಲೆಂಬ ಭಾವನೆ ಆ ಭಾಗದಲ್ಲಿಯ ಜನರಲ್ಲಿ ಸಾಮಾನ್ಯವಾಗಿ ಉಂಟಾಗಿದೆ. ನಡೆಯುತ್ತಿರುವ ಎಲ್ಲ ಕೃತ್ಯಗಳಿಗೆ ಹುರರೆ ಹೊಣೆಗಾರರೆಂದು ಮಾತ್ರ ತಿಳಿಯತಕ್ಕದ್ದಲ್ಲ. ಹುರರ ಈ ಕಿಡಿಗೇಡಿತನದಿಂದುಂಟಾದ ಪರಿಸ್ಥಿತಿಯ ದುರ್ಲಾಭ ಪಡೆದು ಬೇರೆ ಕೇಡಿಗೇಡಿಗಳು ಈ ದುಷ್ಕೃತ್ಯಗಳನ್ನು ಮಾಡುವದುಂಟು. ತಾವು ಮಾಡುತ್ತಿರುವ ಈ ದುಷ್ಕೃತ್ಯಗಳನ್ನೆಲ್ಲ ಹುರರ ಮೇಲೆಯೇ ಹೊರಿಸಲಾಗುವದೆಂದೂ ಇಲ್ಲವೆ ಪೋಲೀಸರು ಹುರರ ಹಾವಳಿಯನ್ನು ಹತ್ತಿಕ್ಕುವದರಲ್ಲಿ ತೊಡಗಿದ್ದರಿಂದ ತಮ್ಮ ಕಡೆಗೆ ಲಕ್ಷ ಕೊಡಲಾರರೆಂದೂ ಈ ಕಾರ್ಯವನ್ನು ಕಿಡಿಗೇಡಿಗಳು ನಡೆಸುವರು. ಈ ಭಾಗದಲ್ಲಿ ಸರಕಾರದ ಯಾವದೇ ಸಾಮಾನ್ಯ ಚಟುವಟಿಕೆ ಕೂಡ ನಡೆಯದೆಂದು ಹೇಳಿದರೆ ಇಲ್ಲಿನ ಪರಿಸ್ಥಿತಿಯ ಭೀಕರತೆಯ ಚಿತ್ರವು ಕಣ್ಮುಂದೆ ಕಟ್ಟಬಹುದು. ಸಂಘರ ತಾಲೂಕಿನಲ್ಲಿ ಎಲ್ಲ ಪೋಲೀಸ ಠಾಣೆಗಳನ್ನು ತೆಗೆದುಹಾಕಿರುವರಂತೆ. ತಾಲೂಕಿನ ಮುಖ್ಯ ಸ್ಥಳದಲ್ಲಿ ಮಾತ್ರ ಒಂದು ಪೋಲೀಸ ಠಾಣೆ ಇದೆಯಂತೆ. ಹುರರು ಪೋಲೀಸ ಠಾಣೆಗಳನ್ನು ಮುತ್ತಿ ಪೋಲೀಸರಲ್ಲಿದ್ದ ಬಂದೂಕ ಪಿಸ್ತೂಲು ಮೊದಲಾದವುಗಳನ್ನು ಕಸಿದುಕೊಂಡು ಹೋಗಬಹುದೆಂಬ ಅಂಜಿಕೆಯಿಂದ ಹೀಗೆ ಮಾಡಲಾಗಿದೆಯಂತೆ. ರಾತ್ರಿಯಲ್ಲಿ ತಮ್ಮ ಮೇಲೆ ದಾಳಿಯಾಗಬಹುದೆಂಬ ಅಂಜಿಕೆಯಿಂದ ಸೂರ್ಯಾಸ್ತದ ನಂತರ ಪೋಲೀಸರು ತಮ್ಮ ಕೆಲಸವನ್ನು ಮಾಡುವ ಧೈರ್ಯಪಡುವದಿಲ್ಲ. ಇದರಿಂದ ಹುರರು ಮತ್ತು ಉಳಿದವರಿಗೆ ಮತ್ತಷ್ಟು ಪ್ರೋತ್ಸಾಹನೆ ಸಿಕ್ಕಂತಾಗಿದೆ. ತಮಗಾಗಿ ಬ್ರಿಟಿಷರ ಸರಕಾರವೆ ಅಸ್ತಿತ್ವದಲ್ಲಿಲ್ಲೆಂದು ಅವರು ತಿಳಿಯುತ್ತಾರೆ. ಪೋಲೀಸರಂತೆ ಕಂದಾಯ ಖಾತೆಯ ಕೆಲಸವೂ ಕೆಲಮಟ್ಟಿಗೆ ನಿಂತುಹೋದಂತಾಗಿದೆ.

ಅಧಿಕಾರಿಗಳು ಮತ್ತು ಕೆಳಗಿನ ನೌಕರರು ಬಹಳ ಗಾಬರಿಯಾಗಿದ್ದು ಸಾಮಾನ್ಯವಾಗಿ ಮಾಡತಕ್ಕ ಕೆಲಸವನ್ನು ಮಾಡದಂತಾಗಿರುವರು. ಜಿಲ್ಲಾ ಮೆಜಿಸ್ಟ್ರೇಟರು ಕೂಡ ಸಂಚಾರ ಮಾಡುವಾಗ ಒಳ್ಳೆ ರಕ್ಷಣೆಯಲ್ಲಿರಬೇಕಾಗುವುದು. ಟೆನಿಸ್ ಆಡಲಿಕ್ಕೆ ಹೋಗುವಾಗ ಕೂಡ ಅವರು ಒಳ್ಳೆ ಭದ್ರ ಕಾವಲಿನಲ್ಲಿ ಹೋಗಬೇಕಾಗುವದು. ಡೆಪ್ಯುಟಿ ಕಲೆಕ್ಟರರ ಸಾಮಾನುಗಳನ್ನು ಒಯ್ಯುತ್ತಿದ್ದ ಒಂಟೆಯವರಿಗೆ ಅವನ್ನು ಒಯ್ಯದಂತೆ ಬೆದರಿಸಲಾಯಿತು. ಪಿ. ಡಬ್ಲ್ಯು. ಡಿ. ಖಾತೆಯ ಗತಿಯು ಈ ಭಾಗದಲ್ಲಿ ಹೀಗೆಯೆ ಆಗಿದೆ. ಜಮೀನುದಾರರು ತಮ್ಮ ರಕ್ಷಣೆಗಾಗಿ ಬಂದೂಕು ಮದ್ದು ಗುಂಡುಗಳನ್ನು ಇಟ್ಟುಕೊಳ್ಳುವದುಂಟು. ಪರಿಸ್ಥಿತಿಯನ್ನು ನಿಯಂತ್ರಣದಲ್ಲಿಡಲು ಸರಕಾರದವರು ಕೆಲ ಉಪಾಯಗಳನ್ನು ಕೈಕೊಂಡಿರುವರು. ಈ ಭಾಗಗಳಲಿ ನೂರುಗಟ್ಲೆ ಸ್ಪೆಶಲ್ ಪೋಲೀಸರನ್ನಿಡಲಾಗಿದೆ. ಸ್ಪೆಶಲ್ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಮತ್ತು ಸ್ಪೆಶಲ್ ಡಿಸ್ಟ್ರಿಕ್ಟ್ ಪೋಲೀಸ್ ಸುಪರಿಂಟೆಂಡೆಂಟರನ್ನೂ ಹುರರನ್ನು ಹತ್ತಿಕ್ಕಲು ನಿಯಮಿಸಲಾಗಿದೆ. ಪೋಲೀಸರ ಸಹಾಯಕ್ಕೆ ಸೈನ್ಯವನ್ನು ಕಳುಹಿಸಿದೆ. ಹುರರ ಈ ಹಾವಳಿಯನ್ನು ಹತ್ತಿಕ್ಕಲು ಸಿಂಧ ಅಸೆಂಬ್ಲಿಯು ಗುಪ್ತರೀತಿಯಿಂದ ಸೇರಿ ಒಂದು ಕಾಯಿದೆ ಪಾಸುಮಾಡಿಕೊಂಡಿದೆ. ಆದರೆ ಇವೆಲ್ಲ ಉಪಾಯಗಳು ಈ ವರೆಗೆ ನಿರುಪಯೋಗಿಯಾಗಿವೆಂದು ಕಂಡುಬಂದಿದೆ. ಪರಿಸ್ಥಿತಿ ದಿನದಿನಕ್ಕೆ ಮತ್ತಷ್ಟು ಕೆಡುತ್ತ ನಡೆದಿದೆ. ತಾಲೂಕು ಮುಖ್ಯ ಸ್ಥಳಗಳಲ್ಲಿ ಪೋಲೀಸರನ್ನು ಕೂಡಿಸಲಾಗಿದೆ. ಸರಕಾರಿ ಕಚೇರಿ ಮತ್ತು ಅಧಿಕಾರಿಗಳನ್ನು ರಕ್ಷಿಸುವುದಕ್ಕಾಗಿ ಈ ಪೋಲೀಸರ ಉಪಯೋಗ ಮಾಡಿಕೊಳ್ಳಲಾಗುತ್ತದೆ. ಇಷ್ಟು ಪೋಲೀಸಪಡೆ ಸಾಲದೆ ಆಕ್ಷೇಪ ಕೇಳಬರುತ್ತದೆ. ವಿಪರೀತ ಗುಪಿತಗಳು ಸಂಭವಿಸುತ್ತಿದ್ದುದರಿಂದ ಎಲ್ಲವನ್ನು ಶೋಧನೆಮಾಡುವದು ಆಗದಂತಾಗಿದೆ. ಸೈನಿಕರು ಆಗಾಗ ಊರಲ್ಲಿ ಅಡ್ಡಾಡುತ್ತಿರುವರು. ಇದರಿಂದ ಹುರರು ಯಾವ ರೀತಿಯಿಂದಲೂ ಗಾಬರಿಗೊಂಡಿಲ್ಲ. ಆದುದರಿಂದ ಈ ಉಪಾಯಗಳಿಂದ ಅವರನ್ನು ಹತ್ತಿಕ್ಕುವದಂತಾಗಿದೆ. ಈ ವರೆಗೆ ವಿಶಿಷ್ಟ ಕೆಲಸಗಳಿಗಾಗಿ ಸೆರೆಹಿಡಿಯಲ್ಪಟ್ಟವರಲ್ಲಿ ಬಹುಸಂಖ್ಯಾಕರು ಪೀರರ ಅನುಯಾಯಿ ವರ್ಗಕ್ಕೆ ಸೇರಿದವರಿರು ದಿಲ್ಲೆಂಬುದನ್ನು ಕೇಳಿ ಅನೇಕರಿಗೆ ಆಶ್ಚರ್ಯವೆನಿಸಬಹುದು. ಹುರರ ಹಾವಳಿಯ ದುರ್ಲಾಭ ಪಡೆದು ಕೆಲವು ಕೇಡಿಗಳು ಈ ಕಾಯಕ ನಡಿಸಿರುವರೆಂದು ನಾನು ಈ ಮೊದಲೇ ಹೇಳಿರುವೆನು.'

ನಿಜವಾಗಿಯೂ ಸರಕಾರದ ಯಂತ್ರವು ಮುರಿದುಬಿದ್ದಿದೆ. ಇದಕ್ಕೆ ನಿಜ ಉಪಾಯವೆಂದರೆ ಅಸೆಂಬ್ಲಿಯಲ್ಲಿಯ ಕಾಂಗ್ರೆಸ್ ಪಕ್ಷದ ಸದಸ್ಯರು ಹೊರಗೆ ಬರುವುದು ಮತ್ತು ಖಾನಬಹದೂರ್ ಅಲ್ಲಾಬಕ್ಷ ಹಾಗು ಅವರ ಸಹಕಾರಿ ಮಂತ್ರಿಗಳು ರಾಜೀನಾಮೆ ಕೊಡುವದಾಗಿದೆ. ಶಿವರು ಶಾಂತಿ ದಳದ ಸ್ವಯಂಸೇವಕರಾಗಿ ನಿರ್ಭೀತಿಯಿಂದ ಹುರರಲ್ಲಿಯೆ ನೆಲಸಿ, ಜೀವವನ್ನು ಗಂಡಾಂತರದಲ್ಲಿ ನೂಕಿಯೂ ತಪ್ಪು ದಾರಿ ಹಿಡಿದ ದೇಶಬಾಂಧವರನ್ನು ಆ ದುಷ್ಕೃತ್ಯಗಳಿಂದ ಪರಾವೃತ್ತ ಮಾಡಬೇಕು. ಪೀರರಿಗೆ ಗೊತ್ತಿದ್ದ ಒಂದು ಶಿಷ್ಟಮಂಡಲವೂ ಅವರ ಕಡೆಗೆ ಹೋಗಿ ಈ ಕೊಲೆಪಾತಕ ಕೃತ್ಯಗಳನ್ನು ಕೂಡಲೆ ಬಿಟ್ಟುಗೊಡಬೇಕೆಂದು ಅವರಿಂದ ಸ್ಪಷ್ಟ ಶಬ್ದಗಳಲ್ಲಿ ಸಂದೇಶ ತರಬೇಕು. ಬಿಡುಗಡೆ ಮಾಡುವೆವೆಂಬ ಕರಾರಿನ ಮೇಲೆ ಮಾತ್ರ ಈ ಬಗೆಯ ಸಂದೇಶ ತರಕೂಡದು. ಅವರಿಗೇನಾದರೂ ಅನ್ಯಾಯವಾಗಿದ್ದರೆ ಆ ಬಗ್ಗೆ ವಿಚಾರಣೆ ನಡೆಸಲು ಕೇಳುವ ಹಕ್ಕು ಅವರಿಗಿದೆ. ಸರಕಾರದವರು ಸಾರ್ವಜನಿಕರನ್ನು ವಿಶ್ವಾಸದಲ್ಲಿ ತೆಗೆದುಕೊಳ್ಳಬೇಕು. ಕಾಂಗ್ರೆಸ್ಸಿಗರು ಹೊರಗೆ ಬರದೆ ಮತ್ತು ಮಂತ್ರಿಗಳು ರಾಜೀನಾಮೆ ಕೊಡದೆ ಇದೆಲ್ಲವನ್ನು ಮಾಡಬಹುದಲ್ಲ ಎಂದು ಕೇಳಬಹುದು. ಆದರೆ ಈ ಕಾರ್ಯದಲ್ಲಿ ಕಾಂಗ್ರೆಸ್ ಸದಸ್ಯರು ಮತ್ತು ಖಾನಬಹದ್ದೂರ್ ಹಾಗು ಅವರ ಸಹಕಾರಿ ಮಂತ್ರಿಗಳು ಎಷ್ಟೊಂದು ಆತುರರಿರುವರೆಂಬುದನ್ನು ಸಿದ್ಧಪಡಿಸಲು ರಾಜೀನಾಮೆ ಕೊಡುವದಕ್ಕಾಗಿದೆ. ಅಸೆಂಬ್ಲಿ ಸದಸ್ಯರಾಗಿದ್ದ ಸೇಟ್ ವಸೀತಲದಾಸರ ಕೊಲೆಯು ಎಷ್ಟೇ ವಿಷಾದಕರವಾಗಿದ್ದರೂ ಪ್ರೊ। ಘನಶ್ಯಾಮರು ಕಳುಹಿಸಿದ ಭಯಾನಕ ವರದಿಯನ್ನು ನೋಡಿದರೆ ಅದು ಕ್ಷುಲ್ಲಕದಾರ್ಥವೆಂದೆನಿಸಬಹುದು. ಈ ಕೊಲೆಯು ಉಳಿದ ಸಭಾಸದರಿಗೆ ಒಂದು ಬಗೆಯ ಪ್ರೋತ್ಸಾಹದಂತೆ ಪರಿಣಮಿಸಿ ಅವರು ಹುರರಲ್ಲಿ ಸಮ್ಮಿಲಿತರಾಗಿ ತಮ್ಮ ಕೊಲೆಯಾದರೂ ಚಿಂತೆಯಿಲ್ಲ ಕಟ್ಟಳೆಗೆಟ್ಟ ಮತ್ತು ಅಮಾನುಷ ಚಟುವಟಿಕೆಗಳಿಂದ ಹುರರನ್ನು ಪರಾವೃತ್ತ ಮಾಡಲು ಮುಂದೆ ಬರಲೆಂದು ಹಾರೈಸುತ್ತೇನೆ.

ಸುಣ್ಣ ಬೆಣ್ಣೆಗಳಷ್ಟು ಭೇದವಿದೆ'

ರಾಜಾಜಿ ಗಾಂಧಿಜಿ ಹೇಳಿಕೆಗಳಲ್ಲಿ

ಮಹಾತ್ಮರ ಸ್ಪಷ್ಟೀಕರಣ

"ನೀವು ಬಹು ಸಂಖ್ಯಾಕ ಮುಸಲ್ಮಾನರು ಬೇರಾಗಬೇಕೆಂದು ಹಠ ಹಿಡಿದರೆ, ಅವರನ್ನು ಯಾರೂ ತಡೆಯಲಾರರೆಂದು ಹೇಳಿದ್ದನ್ನು ರಾಜಾಜಿ ಉದ್ಧರಿಸಿ ಹೇಳುತ್ತಾರೆ. ನಿಮ್ಮ ಮತ್ತು ರಾಜಾಜಿ ಧೋರಣೆಯಲ್ಲಿ ಭೇದವೇನು?" ಹೀಗೆಂದು ಗಾಂಧಿಜಿಯೊಡನೆ ಪ್ರಶ್ನೆ ಕೇಳಿದ್ದಕ್ಕೆ ಅವರು ಹೀಗೆಂದು ಉತ್ತರವೀಯುವರು.

"ತಮ್ಮ ಮಾತಿಗೆ ಪುಷ್ಟಿಸಿಗಬೇಕೆಂದು ಅವರು ನನ್ನ ಮಾತನ್ನು ಉಲ್ಲೇಖಿಸಿದ್ದರೂ ನಮ್ಮ ಅವರ ಧೋರಣದಲ್ಲಿ ಸುಣ್ಣ ಬೆಣ್ಣೆಗಳ ಭೇದವಿದೆ. ಜಪಾನರನ್ನು ಎದುರಿಸಲು, ಐಕ್ಯವಾಗಬೇಕೆಂಬ ಸಲುವಾಗಿ ಅವರು ಈಗ ಬೇರೆಯಾಗುವ ತತ್ವಕ್ಕೆ ತಲೆಬಾಗಿಸಿರುವರು. ಹಿಂದುಸ್ಥಾನವನ್ನು ತುಂಡರಿಸುವುದು ಪಾಪವೆಂದು ನಾನು ತಿಳಿಯುತ್ತೇನೆ. ಈ ಅಪರಾಧ ಮಾಡದಂತೆ ನೆರೆಯುವನನ್ನು ನಾನು ತಡೆಯಲಾರೆನೆಂದು ನನ್ನ ಹೇಳಿಕೆಯ ಅರ್ಥವಾಗುವುದು. ನೆರೆಯವನು ಪಾಪಮಾಡ ಬಯಸಿದರೆ ರಾಜಗೋಪಾಲಾಚಾರ್ಯರು ಅದಕ್ಕೆ ಸಹಭಾಗಿಗಳಾಗುವರು. ನಾನು ಹಾಗಾಗಲಾರೆನು. ಅದಕ್ಕೂ ಹೆಚ್ಚಿನ ವಿಷಯವೆಂದರೆ, ಮೂರನೆಯದೊಂದು ಪಕ್ಷವು ಇಲ್ಲಿದ್ದು ನಮ್ಮಲ್ಲಿ ಐಕ್ಯವಾಗಬೇಕೆಂದರೆ ಅದು ಆಗಲಾರದೆಂದು ನನ್ನ ಸ್ಪಷ್ಟ ಅಭಿಪ್ರಾಯ. ಆ ಪಕ್ಷವು ನಮ್ಮೊಳಗೆ ಕೃತ್ರಿಮ ಭೇದವನ್ನು ಕಲ್ಪಿಸಿದ್ದು ಅದನ್ನು ಹಾಗೆ ಬೆಳೆಸಿಬಿಟ್ಟಿರುವುದು. ಅದು ಇಲ್ಲಿರುವ ವರೆಗೆ ಹಿಂದುಗಳು ಮುಸಲ್ಮಾನರು ತೋರಿಕೆಯಲ್ಲಿ ತಿಕ್ಕಾಟವುಳ್ಳ ಮತ್ತು ಅಸಮಾಧಾನ ಹೊಂದಿದ ಬೇರೆ ಬೇರೆ ಹಿತಸಂಬಂಧಗಳು ಹೆಚ್ಚಿಸುವೆವು, ಐಕ್ಯವಾಗದೆ ಸ್ವಾತಂತ್ರ್ಯವು ಶಕ್ಯವಿಲ್ಲೆಂದು ನಾನು ಹೇಳುತ್ತಿರುವುದನ್ನು ಯಾರೂ ನನಗೆ ನೆನಪು ಮಾಡಿಕೊಡಬೇಕಾಗಿಲ್ಲ. ಅದರಿಂದ ಒಂದು ಶಬ್ದವನ್ನೂ ನಾನಿಂದು ಹಿಂತೆಗೆದುಕೊಳ್ಳುವದಿಲ್ಲ. ಅದು ಪ್ರತ್ಯಕ್ಷ ಸತ್ಯ. ಆ ಸತ್ಯ ಚಿಂತನೆಯಲ್ಲಿ ನಾನಿರುವಾಗಲೇ ಬ್ರಿಟಿಷರು ಹಿಂದುಸ್ಥಾನದಿಂದ ಬಿಟ್ಟುಹೋಗಬೇಕೆಂದು ಯೋಜನೆಯನ್ನು ನಾನು ಕಂಡುಹಿಡಿದಿರುವೆನು. ಅವರು ತೊರಟು ಹೋದ ಮಾತ್ರದಿಂದಲೇ ನಮಗೆ ಸ್ವಾತಂತ್ರ್ಯ ಸಿಗಲಾರದು. ಅವರು ಹೋಗುವುದರಿಂದ ನಮ್ಮಲ್ಲಿ ಐಕ್ಯವಾದರೂ ಆಗಬಹುದು, ಅರಾಜಕತೆಯಾದರೂ ಆಗಬಹುದು. ಖಾಲಿ ಬಿಟ್ಟ ಆ ಸ್ಥಳವನ್ನು ಬೇರೊಂದು ಜನಾಂಗ ಬಂದು ಪೂರ್ಣ ಮಾಡಿದರೂ ಮಾಡಬಹುದು. ಆದರೆ ಬ್ರಿಟಿಷರು ಒಳ್ಳೇ ವ್ಯವಸ್ಥಿತ ರೀತಿಯಿಂದ ಮತ್ತು ಸ್ಪಷ್ಟೀಕರಣೆಯಿಂದ ಹೋದರೆ ಅವರ ನೈತಿಕ ಬಲವು ಹೆಚ್ಚುವುದಲ್ಲದೆ ದೊಡ್ಡದೊಂದು ರಾಷ್ಟ್ರದ ನಿರ್ಮಾತೃರ ಗೆಳೆತನವು ಅವರಿಗೆ ದೊರಕುವುದು. ಹಿಂದುಸ್ಥಾನದಲ್ಲಿರುವ ಬೇರೆಬೇರೆ ಹಿತಸಂಬಂಧವುಳ್ಳ ಮತ್ತು ತಿಕ್ಕಾಡುತ್ತಿರುವ ಹಿತಸಂಬಂಧಗಳು ಪರಕೀಯ ಪ್ರಭುತ್ವವನ್ನು ಎದುರಿಸುವವೆಂದು ನಾನು ನಂಬುತ್ತೇನೆ. ಜಪಾನರು ಹಿಂದುಸ್ಥಾನವನ್ನು ಆಕ್ರಮಿಸುವರೆಂಬ ಭೀತಿಯಲ್ಲಿ ರಾಜಗೋಪಾಲಾಚಾರ್ಯರು ಈ ಸ್ಪಷ್ಟ ಸತ್ಯವನ್ನು ಮರೆತುಬಿಟ್ಟಿರುವರು. ಸ್ವಾತಂತ್ರ್ಯವು ಎಲ್ಲ ಬಗೆಯ ಅಂಜಿಕೆಯನ್ನೂ ಹೊಡೆದೋಡಿಸುವುದು.

HALFTONE & LINE
BLOCK MAKING
UNDERTAKEN
Sharada Press,
MANGALORE.

ಗಾಂಧಿಜಿ ಪುನಃ ಸತ್ಯಾಗ್ರಹ ಪ್ರಾರಂಭಿಸುವರೆ?

ಲಾವಲ್ ಮೇಲೆ ಹಿಟ್ಲರನ ಸಿಟ್ಟು

ಲಾವಲ್ ಫ್ರಾನ್ಸಿನ ಅಧಿಕಾರ ವಹಿಸಿದಂದಿನಿಂದ, ವಿಚಿ-ಜರ್ಮನಿಗಳೊಳಗೆ ಘರ್ಷಣೆಯುಂಟಾಗಿದೆಯೆಂದು ಸುದ್ದಿಯುಂಟು. ಟ್ಯೂನಿಸ್ ಮತ್ತು ಕಾರ್ಸಿಕ್‌ಗಳನ್ನು ಇವರಿಗೆ ಒಪ್ಪಿಸಲು ಫ್ರಾನ್ಸನ್ನು ಒತ್ತಾಯಪಡಿಸಲು ಹಿಟ್ಲರ್ ಇಟಲಿಯ ಬೆನ್ನಟ್ಟುತ್ತಾನಂತೆ. ಇಟಲಿಗೆ ಫ್ರಾನ್ಸಿನ ಭಾಗಗಳು ಸೇರಿದರೆ ಇಟಲಿ ವಶದಲ್ಲಿರುವ ರಶ್ಯದ ಭಾಗಗಳು ತನಗೆ ದೊರೆಯುವವೆಂದು ಹಿಟ್ಲರನ ಯೋಜನೆಯಿರಬೇಕು. ಆದರೆ ಹಿಟ್ಲರನಿಗೆ ತನ್ನ ವಶದಲ್ಲಿರುವ ರಶ್ಯದ ಭಾಗವನ್ನು ಕೊಡಲು ಮುಸಲೋನಿ ಹಿಂದೆ ಮುಂದೆ ನೋಡುತ್ತಿರುವುದಾಗಿ ವದಂತಿ.

ಫ್ರಾನ್ಸ್ ಬೆಲ್ಜಿಯಂಗಳ ಮೇಲೆ ಬ್ರಿಟಿಷ್ ಧಾಳಿ

ಆಕ್ರಮಿತ ಫ್ರಾನ್ಸ್ ಮತ್ತು ಬೆಲ್ಜಿಯಮ್‌ಗಳ ಮೇಲೆ ಬ್ರಿಟಿಷ್ ಯುದ್ಧ ವಿಮಾನಗಳು ಧಾಳಿಮಾಡಿದುವು. ಶತ್ರುಗಳಿಗೆ ಸೇರುವ ಜಲಪ್ರದೇಶಗಳ ಮೇಲೆ ತೋಟೆಗಳನ್ನು ಹಾಕಲಾಗುತ್ತದೆ.

ದ್ವಿತೀಯ ರಣರಂಗದ ಸಿದ್ಧತೆ
ಅಧಿಕಾರಿಗಳಲ್ಲಿ ವಿಚಾರ ವಿನಿಮಯ

ಬ್ರಿಟಿಷ್ ಅಧಿಕಾರಿಗಳೊಳಗೆ ವಿಚಾರವಿನಿಮಯ ಮಾಡುವುದಕ್ಕಾಗಿ ಅಮೆರಿಕದ ಸೇನೆ ಮತ್ತು ನೌಕಾಬಲಗಳ ಕೆಲವು ಅಧಿಕಾರಿಗಳು ಲಂಡನಿಗೆ ಬಂದಿರುವರು. ಮೊದಲು ಆಕಾಶದಲ್ಲಿ ದ್ವಿತೀಯ ರಣಭೂಮಿಯನ್ನು ನಿರ್ಮಿಸುವುದಕ್ಕಾಗಿ ಅಮೆರಿಕ ಮತ್ತು ಬ್ರಿಟನುಗಳು ಪ್ರಯತ್ನಪಡುತ್ತಿವೆ.

ರಶ್ಯದಲ್ಲಿ ಭೀಕರ ಸಂಗ್ರಾಮ
ದಕ್ಷಿಣ ಭಾಗದಲ್ಲಿ ಜರ್ಮನರ ಉಪಟಳ

ಖಾರ್ಕೋವ್ ಭಾಗದಲ್ಲಿ ಕೈವಶಪಡಿಸಿಕೊಂಡ ಪ್ರದೇಶಗಳನ್ನು ಸುಸಜ್ಜಿತ ಮಾಡುವುದರಲ್ಲಿ ರಶ್ಯನ್ ಸೈನ್ಯಗಳು ಮಗ್ನವಾಗಿವೆ; ಇಜಿಯಂ-ಬಾರ್ವೆಂಕೊವೋ ಭಾಗದಲ್ಲಿ ರಶ್ಯನ್ ಸೇನೆಗಳು ಶತ್ರುಗಳ ಟ್ಯಾಂಕು ಮತ್ತು ಫಿರಂಗಿದಳ ವಿರುದ್ಧ ಸಂರಕ್ಷಕ ಯುದ್ಧ ಮಾಡಿದುವು. ಟಿಮುಶಂಕೋ ಸೈನ್ಯದ ಮೇಲೆ ಜರ್ಮನರು ಧಾಳಿಮಾಡಿದರು. ದಕ್ಷಿಣದಲ್ಲಿ ನಾಜಿಗಳ ಒತ್ತಾಟವು ಉಗ್ರವಾಗಿದೆ.

ಸಾಂಬಮೂರ್ತಿಯವರ ಮೇಲೆ ಶಿಸ್ತು ಜಾರಿ?
ಆಂಧ್ರ ಕಾಂಗ್ರೆಸ್ ಕಮಿಟಿ ನಿರ್ಣಯ

ಆಂಧ್ರ ಕಾಂಗ್ರೆಸ್ ಕಮಿಟಿ ಸಭೆ ಶ್ರೀ ಪ್ರಕಾಶಂರವರ ಅಧ್ಯಕ್ಷತೆಯಲ್ಲಿ ಸೇರಿ ಎ. ಐ. ಸಿ. ಸಿ. ನಿರ್ಣಯವನ್ನು ಸಂಪೂರ್ಣ ಅನುಮೋದಿಸಲಾಯಿತು. ಮದ್ರಾಸು ಎಸೆಂಬ್ಲಿ ಸ್ಪೀಕರರಾದ ಶ್ರೀ. ಬುಲುಸು ಸಾಂಬಮೂರ್ತಿಯವರು ರಾಜಾಜಿಯವರೊಡನೆ ಪ್ರಚಾರ ಕಾರ್ಯ ಸಾಗಿಸುವ ವಿಚಾರವಾಗಿ ಅವರ ಸ್ಪೀಕರ್ ಪದವಿ ಮತ್ತು ಗೌರವಕ್ಕೆ ಈ ಕೆಲಸ ತಕ್ಕದಲ್ಲವೆಂದೂ, ಅವರ ಮೇಲೆ ಶಿಸ್ತು ಜಾರಿ ಯಾಕೆ ಮಾಡಬಾರದೆಂದೂ ಆ ಕುರಿತು ಸಾಂಬಮೂರ್ತಿಯವರಿಂದ ಕಾರಣ ಕೇಳಬೇಕೆಂದೂ ಠರಾವಾಯಿತು.

ಸರ್ ಮಿರ್ಜರಿಗೆ ಜಯಪುರದಲ್ಲಿ ಉದ್ಯೋಗ?

ಮೈಸೂರು ದಿವಾನರಾಗಿದ್ದ ಸರ್: ಮಿರ್ಜಾರಿಗೆ ಜಯಪುರ ಸಂಸ್ಥಾನದಲ್ಲಿ ಮಹತ್ವದೊಂದು ಉದ್ಯೋಗ ದೊರೆತಿದ್ದು ಮುಂದಿನ ತಿಂಗಳಲ್ಲಿ ಅವರು ಅಲ್ಲಿಗೆ ತೆರಳುವರೆಂದು ತಿಳಿದುಬಂದಿದೆ.

ಖಾರ್ಕೋವಿನಲ್ಲಿ ವಿಷಮ ಸಂಗ್ರಾಮ
ಚೀನದ ಕಡೆಗೆ ಜಪಾನರ ಮುನ್ನಡೆ

ಈಜಿಪ್ತ್ ಮಂತ್ರಿಮಂಡಲದ ರಾಜಿನಾಮೆ

ಈಜಿಪ್ತ್ ಸರಕಾರವು ರಾಜಿನಾಮೆಯೊಪ್ಪಿಸಿದ್ದು ಮುಖ್ಯ ಮಂತ್ರಿ ನಾಹಸಾಪಾಶಾರವರು ಪುನಃ ತನ್ನ ಮಂತ್ರಿಮಂಡಲವನ್ನು ರಚಿಸಿದ್ದಾರೆ.

ಭದ್ರಾವತಿಯ ಮುಷ್ಕರವು ಮುಕ್ತಾಯವಾಯಿತು

ಈ ತನಕ ೧೮ ದಿನಗಳಿಂದ ನಡೆದು ಬರುತ್ತಿದ್ದ ಭದ್ರಾವತಿ ಕೆಲಸಗಾರರ ಮುಷ್ಕರವು ಈಗ ಕೊನೆಗೊಂಡಿರುವುದು. ಕೆಲಸದಿಂದ ವಜಾಮಾಡಲಾಗಿದ್ದ ೬೪ ಮಂದಿ ಮಜೂರರನ್ನು ಪುನಃ ಕೆಲಸಕ್ಕೆ ಸೇರಿಸಲಾಯಿತು. ಕೂಲಿಗಾರರಿಗೆ ಮುಷ್ಕರ ಸಂಬಂಧಿಸಿ ಯಾವ ಶಿಕ್ಷೆಯೂ ಕೊಡಲ್ಪಡುವುದಿಲ್ಲ. ಗುಂಡಿನೇಟಿನಿಂದ ಮೃತರಾದವರ ಪ್ರತಿ ಕುಟುಂಬಕ್ಕೆ ಐನೂರು ರೂಗಳು ಗಾಯಗೊಂಡವರಿಗೆ ಐವತ್ತು ರೂ. ಗಳೂ ಕೊಡಲ್ಪಟ್ಟವು.

ಹುರ್ ಪುಂಗಡಿಗರ ಉಪಟಳ
ಹದಿಮೂರು ಮಂದಿಯನ್ನು ಕೊಂದರು

ಕಳೆದ ತಾ. ೧೬ನೇ ಮಧ್ಯ ರಾತ್ರಿಯಲ್ಲಿ ಪಂಜಾಬ್ ಮೈಲ್ ರೈಲು ಬಂಡಿಯನ್ನು ಪಳ್ಳಿ ತಪ್ಪಿ ಹೋಗುವಂತೆ ಮಾಡಿ ಅನೇಕರ ಪ್ರಾಣಹಾನಿಗೆ ಕಾರಣಭೂತರಾದ ಹುರ್ ಜನರು ತಾ. ೨೦ನೇ ಬೆಳಿಗ್ಗೆ ಮೀರ್‌ಪುರ್ ಖಾಸ್ರೊ ರಸ್ತೆಯಲ್ಲಿ ಹಾದುಹೋಗುತ್ತಿದ್ದ ಒಂದು ಪ್ರಯಾಣಿಕರ ಬಸ್ಸನ್ನು ನಿಲ್ಲಿಸಿ ಪೋಲಿಸ್ ಇನ್ಸ್‌ಪೆಕ್ಟರರು ಸೇರಿ ಸುಮಾರು ಹದಿಮೂರು ಮಂದಿಯನ್ನು ಕೊಂದು ನಾಲ್ಕು ಮಂದಿಯನ್ನು ಗಾಯಗೊಳಿಸಿ, ಬಸ್ಸನ್ನು ಸುಟ್ಟುಹಾಕಿದರು. ಅಲ್ಲಲ್ಲಿ ಟೆಲಿಗ್ರಾಫ್ ಮತ್ತು ಟೆಲಿಫೋನ್ ತಂತಿಗಳನ್ನು ಕಡಿದು ಹಾಕಿ ಬಹಳ ನಷ್ಟವನ್ನುಂಟು ಮಾಡಿದ್ದಾರೆ. ಮತ್ತು ಮಾಡುತ್ತಲೂ ಇದ್ದಾರೆ. ಪುನಃ ರೈಲುಮಾರ್ಗಗಳನ್ನು ಕಿತ್ತು ಹಾಕುವುದಕ್ಕೆ ಪ್ರಯತ್ನ ಮಾಡಿದ್ದಲ್ಲದೆ ಕೆಲವೆಡೆಗಳಲ್ಲಿ ಮಾರ್ಗವನ್ನು ಹಾಳುಮಾಡುತಿದ್ದಾರೆ.

ಸಿಂಧಿನ ಪ್ರಜೆಗಳು ಹುರ್ ಜನರ ಉಪಟಳವನ್ನು ಅಡಗಿಸಬೇಕೆಂದಿದ್ದಾರೆ. ಸಿಂಧಿನ ಗವರ್ನರರಾದ ಸರ್. ಹ್ಯೂಡ್ ಅವರು ಹೂರ್ ಜನರ ಉಪಟಳವನ್ನು ನಿರ್ನಾಮ ಮಾಡುವುದಕ್ಕೆ ಸರ್ವ ಪ್ರಯತ್ನಗಳನ್ನೂ ಸರಕಾರವು ಮಾಡುವುದು ಎಂದು ಹೇಳಿದ್ದಾರೆ. ಹುರ್ ಜನರ ಉಪಟಳವು ರಾಜಕಾರಣಕ್ಕೆ ಸಂಬಂಧಪಟ್ಟುದಲ್ಲ.

ಎ. ಐ. ಸಿ. ಸಿ. ಕಚೇರಿ ಜಪ್ತಿ

ಪೋಲೀಸರು ತಾ, ೨೦ರಂದು ಅಲಹಾಬಾದಿನ ಸ್ವರಾಜ್ಯಭವನ ಮತ್ತು ಎ. ಐ. ಸಿ. ಸಿ. ಕಚೇರಿಯನ್ನು ಜಪ್ತಿಮಾಡಿದರು. ಅಲಹಾಬಾದಲ್ಲಿ ಸೇರಿದ ಎ. ಐ. ಸಿ. ಸಿ. ಸಭೆಯಲ್ಲಿ ಪಾಸುಮಾಡಿದ ಠರಾವನ್ನು ಪ್ರಕಟಿಸಬಾರದಾಗಿ ಸರಕಾರವು ಪ್ರಸ್ತಾಪಿಸಿದ್ದು, ಆದರ ಪತ್ರಿಕೆಗಳನ್ನು ಇನ್ನಿತರ ಆಕ್ಷೇಪಾರ್ಹ ಪತ್ರಿಕೆಗಳನ್ನು ವಶಪಡಿಸಲು ಜಪ್ತಿಮಾಡಲಾಗಿದೆಯೆಂದು ತಿಳಿದಿದೆ.

ಅಕ್ಷರಾಷ್ಟ್ರಗಳ ಮೇಲೆ ಮೆಕ್ಸಿಕೋ ಯುದ್ಧ ಹೂಡುವುದು

ಅಕ್ಷ ರಾಷ್ಟ್ರಗಳ ಮೇಲೆ ಯುದ್ಧ ಹೂಡಬೇಕೆಂದು ಮೆಕ್ಸಿಕೋ ಕಾಂಗ್ರೆಸ್ ನಿರ್ಣಯಿಸಿರುವರೆಂದು ತಿಳಿದಿದೆ. ಅಟ್ಲಾಂಟಿಕಿನಲ್ಲಿ ಮೆಕ್ಸಿಕೊದ ಎಣ್ಣೆ ಹಡಗನ್ನು ಅಕ್ಷರಾಷ್ಟ್ರಗಳ 'ಜಲಾಂತರ್ಗಾಮಿಗಳು ಮುಳುಗಿಸಿದ್ದು ಈ ಯುದ್ಧದ ಕಾರಣವೆಂದು ಹೇಳಲಾಗಿದೆ.

ಬಗ್ಗೆ ಜರ್ಮನಿಯಿತ್ತ ಉತ್ತರವು ಮೆಕ್ಸಿಕೋಗೆ ಸಮಾಧಾನಕರವಾಗಿಲ್ಲ.

ಜವಾಹರರ ಮಾತಿನ ದುರುಪಯೋಗ

ನೆಹರುಗಳು ಹೇಳಿದ ಕೆಲವು ಮಾತುಗಳನ್ನಿತ್ತ ಇಂಡಿಯಾ ಸರಕಾರದವರು ತಮ್ಮ ಯುದ್ಧ ಪ್ರಚಾರ ಕಾರ್ಯದ ಪ್ರಚಾರಕ್ಕೆ ಉಪಯೋಗಿಸಿಕೊಳ್ಳುವ ವಿಚಾರ ನೆಹರು ಖಂಡಿಸಿ ಹೇಳಿಕೆಯಿತ್ತಿದ್ದಾರೆ. ಈ ಯುದ್ಧಕ್ಕೆ ನಾನು ವಿರುದ್ಧವಿರುವದರಿಂದ, ಅವರೊಂದಿಗೆ ಯಾವದೇ ಪ್ರಕಾರದಲ್ಲೂ ಸಹಕರಿಸಲಾರೆನೆಂದಿರುವರು. ಆದ್ದರಿಂದ ಸರಕಾರದವರು ನನ್ನ ಮಾತನ್ನೆತ್ತಿ ಪ್ರಚಾರಪಡಿಸಿದರೆ ಅದರಲ್ಲಿ ವಿಶ್ವಾಸವಿರಿಸಬಾರದೆಂದು ಅವರು ಹೇಳಿರುವರು. "ನನ್ನ ವಿಚಾರಗಳಿಗೆ ಪ್ರಸಿದ್ಧಿ ಕೊಡುವ ಇಚ್ಛೆಯಿದ್ದರೆ ಅವರು ಅಲಹಾಬಾದಿನ ಎ. ಐ. ಸಿ. ಸಿ. ನಿರ್ಣಯಕ್ಕೆ ರೇಡಿಯೋ ಪ್ರಚಾರಕೊಡಬೇಕು. ಅಥವಾ ಅದಕ್ಕಿಂತ ಉತ್ತಮ ದಾರಿಯೆಂದರೆ 'ಯುದ್ಧನಡೆದಿರಲಿ ಇಲ್ಲವೆ ನಡೆಯದಿರಲಿ ಹಿಂದುಸ್ಥಾನದ ಮೇಲಿನ ಬ್ರಿಟಿಷರ ಅಧಿಕಾರವು ಸರ್ವಸಂಕಟಗಳ ಮೂಲವಿದ್ದು ಅದು ಬೇಗನೇ ನಷ್ಟವಾಗಬೇಕು" ಎಂದು ನಾನು ಮಾಡಿರುವ ದೃಢ ನಿರ್ಣಯವನ್ನು ಅವರು ಆಗಾಗ ಪ್ರಕಟಿಸುತ್ತಾ ಬರಬೇಕು.

ಸಂಧಾನದ್ವಾರ ಮುಚ್ಚಿಲ್ಲವಂತೆ!
ಕ್ರಿಪ್ಸರು ಹೇಳುತ್ತಾರೆ

ಸರ್ ಸ್ಟಾಫೋರ್ಡ್ ಕ್ರಿಪ್ಸರು ಲಂಡನಿನಲ್ಲಿ ಇತ್ತೀಚೆಗೆ ಮಾತನಾಡುತ್ತ ಭಾರತದೊಡನೆ ಸಂಧಾನಮಾಡಲು ಇನ್ನೂ ಕೂಡ ದ್ವಾರ ತೆರೆದಿದೆಯೆಂದರು.

ದಿನ ಒಂದರೆ ೧೫ ಮಿಲ್ಯ ಪವನು ಯುದ್ಧ ವೆಚ್ಚ

ಕಳೆದ ಮಾರ್ಚ ತಿಂಗಳ ಅನಂತರ ೩೨ ದಿನಗಳಲ್ಲಿ ಬ್ರಿಟನಿನ ಯುದ್ಧ ವೆಚ್ಚವು 472,000 ಪವನಾಗಿರುವುದು. ಅಂದರೆ ದಿನಕ್ಕೆ ಸುಮಾರು 15 ಮಿಲ್ಯ ಪವನು. ಎಪ್ರಿಲ್ 29ರಲ್ಲು ಸರಕಾರವು ಪ್ರಕಟಿಸಿದ ಪ್ರಕಟಣೆಯಂತೆ ಇಂಗ್ಲೆಂಡಿನಲ್ಲಿ ಒಟ್ಟು 771,200,000 ಪವನುಗಳಷ್ಟು ನೋಟು ಚಲಾವಣೆ ಮಾಡಲಾಯಿತು. ಅನಂತರ 20,000,000 ಪವನು ಮೌಲ್ಯದ ನೋಟು ಪೇಟೆಗೆ ಹೊರಡಿಸಲಾಗಿದೆ.

ಗಾಂಧಿಜಿ ಪುನಃ ಚಳವಳ ಹೂಡುವರೆ?

ಗಾಂಧಿಜಿಯು ನೆಹರು ಅಜಾದರನ್ನುವಾರ್ಧಕ್ಕೆ ಆಮಂತ್ರಿಸಿರುವರು. ಗಾಂಧಿಜಿ ಪ್ರಾಮುಖ್ಯ ವಿಷಯವೊಂದನ್ನು ಚರ್ಚಿಸಲಿರುವರೆಂದು ತಿಳಿದಿದೆ; ಅವರು ಪುನಃ ಹೊಸ ಚಳವಳವೊಂದನ್ನು ಹೂಡುವರೆಂದು ಮಹರಾಲಿಯವರ ಹೇಳಿಕೆಯಿದೆ. ಕಾಂಗ್ರೆಸು ಇತರರೂ ಕೂಡ ಮನ ಸೋಲುವ ಕಾರ್ಯವೊಂದನ್ನು ಅಹಿಂಸಾ ತಳಹದಿಯಲ್ಲಿ ಗಾಂಧಿಜಿ ಆರಂಭಿಸುವರೆಂದು ಊಹೆ. ನ್ಯೂಡಿಲ್ಲಿಗೆ ಹೊರಟಿದ್ದ ನೆಹರು ವಾರ್ಧಕ್ಕೆ ಹೋಗಿದ್ದಾರೆ.

ನೇಶನಲ್ ಹೆರಾಲ್ಡ್ ಮತ್ತು ಪ್ರೆಸ್ ಮಾಲಿಕರ ದಂಡುಗಳು
೬ ಸಾವಿರ ರೂ. ಜಪ್ತಾದವು

ಲಖನೋದ ನೇಶನಲ್ ಹೆರಾಲ್ಡ್ ಪತ್ರಿಕೆಯ ಪ್ರಕಾಶಕ ಮತ್ತು ಮುದ್ರಕರಿಂದ ಪ್ರತ್ಯಪ್ರತ್ಯೇಕ ಪ್ರತಿಯೊಬ್ಬರೂ 3000 ರೂಪಾಯಿಗಳಂತೆ ಇಟ್ಟ ಠೇವಣಾತಿ ಹಣವನ್ನು ಕೆಲವು ಅಗ್ರಲೇಖಗಳ ಪ್ರಕಟಣೆ ಬಗ್ಗೆ ಸಂಯುಕ್ತ ಪ್ರಾಂತದ ಸರಕಾರವು ಜಪ್ತಿಮಾಡಿಕೊಂಡಿರುವುದು.

ಮಾಲ್ಟಾದ ಮೇಲೆ ೨೪೩೫ ಸಲ ಧಾಳಿ

ಯುದ್ಧಾನಂತರ ಮಾಲ್ಟಾದ ಮೇಲೆ 24 35 ಸಲ ಧಾಳಿ ಆಯಿತು! ಇತ್ತೀಚೆಗೆ ಇಟಲಿ ವಿಮಾನಗಳೇ ಹೆಚ್ಚಾಗಿ ಮಾಲ್ಟಾದ ಮೇಲ್ಗಡೆಯಲ್ಲಿ ಹಾರುತ್ತಿದ್ದವು!

ಹಿಟ್ಲರ್ ರಣಭೂಮಿಗೆ ಓಡಿದನು

ಹಿಟ್ಲರನು ಇನ್ನು ಮುಂದೆ ಜರ್ಮನ್ ಸೇನಾಪತಿತ್ವದ ಉದ್ಯೋಗ ಬಿಟ್ಟುಕೊಡಬೇಕೆಂದು ಜರ್ಮನ್ ಅಧಿಕಾರಿಗಳು ಹೇಳಿದ್ದರಿಂದ ಸಂತಾಪಗೊಂಡು ಉಳಿದ ಸೇನಾಪತಿಗಳೊಡನೆ ವಿಚಾರಮಾಡುವುದಕ್ಕಾಗಿ ಒಮ್ಮೆಲೇ ರಣಭೂಮಿಗೆ ಓಡಿಹೋಗಿರುವನೆಂದು ಸುದ್ದಿ.

ನೆಹರು ವಾರ್ಧಾದಲ್ಲಿ

ಪಂಡಿತ ಜವಾಹರಲಾಲನೇಹರು ತಾ. ೨೬ರಂದು ವಾರ್ಧಕ್ಕೆ ಬಂದು ಗಾಂಧಿಜಿಯವರ ಭೇಟಿಯಾದರು. ಸದ್ಯದ ರಾಜಕೀಯ ವಿಚಾರ ಅವರು ಗಾಂಧಿಜಿಯೊಡನೆ ಚರ್ಚಿಸಿದರು. ಅವರು ಅಲ್ಲಿಂದ ಲಖನೋಗೆ ಹೋಗಿ, ಅಲಹಾಬಾದಿಗೆ ಬಂದು ತಿರುಗಿ ವಾರ್ಧಾಕ್ಕೆ ಬರಲಿರುವರು. ಅಷ್ಟರಲ್ಲಿ ಅಜಾದರು ವಾರ್ಧಾಕ್ಕೆ ಬರುವರೆಂದು ತಿಳಿದಿದೆ. ಜೂನ್ ಮೊದಲನೆಯ ವಾರದಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸೇರಬಹುದು. ನೆಹರುಗಳು ಅಮೆರಿಕಕ್ಕೆ ತೆರಳಿ ರೂಸ್‌ವೆಲ್ಟರೊಡನೆ ಚರ್ಚೆಮಾಡಲಿರುವರೆಂದು ವದಂತಿಯಿದೆ.

ರಾಜಾಜಿಯ ಭಾಷಣವಾಗುವಾಗ ಗಲಭೆ

ಮಧುರೆಯಲ್ಲಿ ಶ್ರೀ. ಸಿ. ರಾಜಗೋಪಾಲಾಚಾರ್ಯರು ಸುಮಾರು ೩೦,೦೦೦ ಜನರ ಸಭೆಯ ಮುಂದೆ ಭಾಷಣಮಾಡಿದರು. ಮೊದಲು ಸಭೆಯಲ್ಲಿ ಶಾಂತತೆಯಿತ್ತು. ಭಾಷಣದ ಅಂತ್ಯದಲ್ಲಿ ಕೆಲವರು ಗಲಭೆಯೆಬ್ಬಿಸಿದರು. ಶ್ರೀ. ಆಚಾರ್ಯರ ಖಾದಿ ಶರ್ಟನ್ನು ಯಾರೋ ಹರಿದುಹಾಕಿದರು. ರಾಜಾಜಿಯವರು ಬಹಳ ಕುಪಿತರಾಗಿ 'ನನ್ನನ್ನು ವಿರೋಧಿಸಲು ನೀವು ಹಿಂಸಾರೀತಿಯನ್ನು ಅನುಸರಿಸಿದರೂ ನಾನು ಭಯಪಡುವುದಿಲ್ಲ'ವೆಂದರು 'ನಿಮಗೆ ಭಯಪಟ್ಟರೆ, ನಾನು ಹೇಗೆ ಜಪಾನರ ಆಕ್ರಮಣವನ್ನು ಇದಿರಿಸಬಲ್ಲೆನು?' ಎಂದು ಹೇಳಿ 'ಸಭೆಯು ಅಂತ್ಯವಾಗುವಾಗ ಗಲಭೆ ಮಾಡಲು ಪ್ರಯತ್ನಪಟ್ಟುದನ್ನು ನೋಡಿ ನನಗೆ ಅಸಹ್ಯವಾಗಿದೆ' ಎಂದರು.

ಗಲಭೆಯು ನಡೆಯುತಿದ್ದಲ್ಲಿಗೆ ರಾಜಾಜಿಯವರು ಭಾಷಣವೇದಿಕೆಯಿಂದ ಹಾರಿದರು. ಆಗ ಅವರನ್ನು ಗಲಭೆಮಾಡಿದ ಜನರು ಸುತ್ತುಗಟ್ಟಿ ಅವರ ಅಂಗಿಯನ್ನು ಹರಿದು ಹಾಕಿದರು. ಶ್ರೀ. ರಾಜಗೋಪಾಲಾಚಾರ್ಯರು, ಜನರು ಶಾಂತತೆಯಿಂದ ತಮ್ಮ ತಮ್ಮ ಮನೆಗಳಿಗೆ ಹೋಗಬೇಕೆಂದೂ, ದೆಯ್ಗುಂಡಬಾರದೆಂದೂ ಹೇಳಿದರು.

ಮಂಗಳೂರು
೧೦೦ ವರ್ಷಗಳ ಹಿಂದೆ ಸಿಂಗಾಪುರಕ್ಕೆ ಹೋದ ಮಂಗಳೂರಿನವರು

ಸಿಂಗಾಪುರದಲ್ಲಿ ವೆಂಕಟೇಶ ಮಾಧವ ಪೈ ಎಂಬವರು ಸುಪ್ರೀಮು ಕೋರ್ಟಿನ ನ್ಯಾಯಾಧೀಶರಿದ್ದರು. ಅವರು ಕುಟುಂಬ ಸಹಿತ ಟೂಟಕ್ಕೆ ಕುಳಿತ ಸಮಯ ಜಪಾನಿಯರ ಬಾಂಬು ಬಿದ್ದು ಸರ್ವನಾಶವಾಯಿತು. ೧೫ ವರ್ಷದ ಹುಡುಗನೊಬ್ಬನೇ ಬದುಕಿ ಉಳಿದನು! ಅವನನ್ನು ಹಿಂದುಸ್ಥಾನ ಸರಕಾರವು ದಿಲ್ಲಿಗೆ ತಂದು ಮಂಗಳೂರಿಗೆ ರವಾನಿಸಿದೆ. ವೆಂಕಟೇಶ ಪೈರ ಭಾವಂದಿರೊಬ್ಬರು ಅತ್ತ ಕಡೆ ಇರುತ್ತಾರಾಗಿ, ಆ ಹುಡುಗನು ಹೇಳಿದ್ದರ ಮೇಲಿಂದ ಸರಕಾರವು ಆ ಹುಡುಗನಿಗೆ ಅತ್ತ ಕಳಿಸಿ ಕೊಟ್ಟ ಹಣ್ಣುತಿಂದಾಗಿದೆ. ಈ ಕುಟುಂಬವು ಸಿಂಗಾಪುರಕ್ಕೆ ಹೋಗಿ ಸ್ಥಾಯಿ ೧೦೦ ವರ್ಷಗಳಾಗುವುದಾಗಿ ಹೇಳುತ್ತಾರೆ.

(ಕಾನಡಾ ವೃತ್ತ)

ಮಂಗಳೂರಲ್ಲಿ ರಾಜಗೋಪಾಲಾಚಾರ್ಯರ ಭಾಷಣಗಳು

'ಶಿಸ್ತಿನ ವಿಚಾರ ವರ್ಕಿಂಗ್ ಕಮಿಟಿ ಮತ್ತು ನನಗೆ ಸಂಬಂಧಿಸಿದ್ದು'

ಬ್ರಿಟಿಷರ ಸ್ಥಾನದಲ್ಲಿ ಜಪಾನರು ಬರಕೂಡದು

ಆಕ್ರಮಣಗಾರರನ್ನು ದಿರಿಸಲು ರಾಷ್ಟ್ರೀಯ ಸರಕಾರ

ರಾಷ್ಟ್ರೀಯ ಸರಕಾರಕ್ಕಾಗಿ ಹಿಂದು-ಮುಸ್ಲಿಂ ಐಕ್ಯ

'ಭಾರತವು ಐಕ್ಯವಾಗಿ, ಅಕ್ಷ ರಾಷ್ಟ್ರಶಕ್ತಿಯನ್ನು ಇದಿರಿಸಬೇಕೆಂದು ನಾನು ಹೇಳಬಂದಿದ್ದೇನೆ. ಇದುವರೆಗೆ ನಾವು ಯುದ್ಧವನ್ನು ಕ್ರಿಕೆಟ್ ಮೇಚಿನಂತೆ ಅಥವಾ ಕುದುರೆ ಪಂದ್ಯಾಟದಂತೆ ನೋಡುವ ಪ್ರೇಕ್ಷಕರಾಗಿದ್ದೆವು. ಗೆದ್ದ ಪಂಗಡದ ಮೇಲೆ ಸಹಜವಾಗಿ ಜನರಿಗೆ ಹೆಚ್ಚಿನ ಅಭಿಮಾನವಿರುತ್ತದೆ. ಅದೇ ರೀತಿ ನಮ್ಮ ಅಭಿಮಾನ ಹರಿದಿತ್ತು. ಆದರೆ ಇಂದು ನಾವು ಪ್ರೇಕ್ಷಕರಾಗಿ ಉಳಿವ ಕಾಲವಲ್ಲ. ನಮ್ಮ ನೆಲದ ಮೇಲೆ ವೈರಿ ಕಾಲಿಟ್ಟಿರುವಾಗ ನಾವಿಂದು ಜೀವನ ಮರಣದ ಹೋರಾಟದಲ್ಲಿರುವೆವು. ಫೇಸಿಸ್ಟ್ ರಾಜ್ಯದಲ್ಲಿ ವ್ಯಕ್ತಿಯ ಮುಖಕ್ಕೆ ಬೀಗಮುದ್ರೆಯಿದೆ. ಬಂದೀಖಾನೆಯಲ್ಲಿರುವ ಕೆಲಸಗಾರರಾಗಬೇಕೆಂದಿದ್ದರೆ ನೀವು ಜಪಾನನ್ನು ಬರಗೊಡಬಹುದು. ಸ್ವತಂತ್ರ ಪ್ರಜಾಪ್ರಭುತ್ವ ರಾಷ್ಟ್ರದ ಸ್ವತಂತ್ರ ಪ್ರಜೆಗಳಾಗಬೇಕೆಂದು ಬಯಸುವುದಿದ್ದರೆ ನೀವು ಜಪಾನನ್ನು ಎದುರಿಸಲೇ ಬೇಕು. ಬ್ರಿಟಿಷ್ ಸರಕಾರವು ನಮಗೆ ಸ್ವಾತಂತ್ರ್ಯವನ್ನು ಕೊಡಲೊಪ್ಪದಿದ್ದ ಪಕ್ಷದಲ್ಲೂ ನಾವದನ್ನು ನಮ್ಮ ಆತ್ಮಶಕ್ತಿಯಿಂದ ಪಡೆದುಕೊಳ್ಳಬಲ್ಲೆವು. ಆದರೆ ಜಪಾನನ್ನು ಒಳಗೊಟ್ಟರೆ ಸ್ವಾತಂತ್ರ್ಯ ಹೋರಾಟವು ನೂರು ಪಾಲು ಕಠಿಣತರವಾಗುವುದು. ಜಪಾನು ನಮ್ಮನ್ನಾಳಲು ನಾನು ಒಪ್ಪಿಗೆ ಕೊಡಲಾರೆ. ಬ್ರಿಟಿಷರಿಂದ ೧೯೪೩, ೪೪, ೪೫ರಲ್ಲಾದರೂ ಸ್ವಾತಂತ್ರ್ಯವನ್ನು ಕಸಿದುಕೊಳ್ಳಬಹುದು. ಆದರೆ ಜಪಾನರಿಂದ ಸಾಧ್ಯವಿಲ್ಲ. ಬ್ರಿಟಿಷರ ದಾಸ್ಯದಿಂದ ನಾನು ನಿಮ್ಮ ಮುರವಣಿಗೆಯಿಂದ ಹೊರಬೀಳುವ ಹಾಗೆ, ಬಿಡುಗಡೆಹೊಂದಬಹುದು. ಆದರೆ ಜಪಾನರ ದಾಸ್ಯವೆಂದರೆ ಬಾವಿಗೆ ತಲೆಕೆಳಗಾಗಿ ಬಿದ್ದಂತೆ. ನಾನು ಕಮ್ಯುನಿಸ್ಟರೊಡನೆ ಮುಸ್ಲಿಂ ಲೀಗಿನವರೊಡನೆ ಕೂಡಿಕೊಂಡಿರುವುದಕ್ಕಾಗಿ ಜನರು ನಕಲಿಮಾಡುತ್ತಾರೆ. ಆದರೆ ಬ್ರಿಟನು ಅಮೇರಿಕಗಳು ರಷ್ಯದೊಡನೆ ಕೂಡಿದ್ದು ನಿಮಗೆ ನೆನಪಿರಬಹುದು. ಜರ್ಮನಿಯ ಆಕ್ರಮಣದ ಅಪಾಯ ಬಂದಿರುವಾಗ ತತ್ವವನ್ನು ಬದಿಗಿಟ್ಟು ಆ ರಾಷ್ಟ್ರಗಳು ಹಾಗೆ ಮಾಡಿದ್ದು ಉಭಯತರಿಗೂ ಹಿತವೇ ಆಯಿತು. ಕಾಂಗ್ರೆಸ್ ಲೀಗುಗಳೊಳಗೆ ಈಗ ಒಪ್ಪಂದವಾಗಬೇಕಾಗಿದೆ. ಆ ಮೂಲಕ ರಾಷ್ಟ್ರೀಯ ಸರಕಾರದ ಸ್ಥಾಪನೆಯಾಗಬೇಕು. ನಾನು ಭಾರತವನ್ನು ಸ್ವತಂತ್ರ ಮಾಡಲು ಹೋರಾಡುತ್ತೇನೆ. ಬ್ರಿಟನದ್ದಾಗಲಿ, ಜಪಾನಿನದ್ದಾಗಲಿ ದಾಸ್ಯವಲ್ಲಿರಕೂಡದು, ಅವುಗಳ ಸಮಾನ ಸ್ವತಂತ್ರರಾಗಿರಬೇಕು.' ಮೇಲಿನ ಮಾತುಗಳು ಶ್ರೀ ರಾಜಗೋಪಾಲಾಚಾರಿಯವರು ಮಂಗಳೂರಲ್ಲಿ ನೆರೆದ ಫೇಸಿಸ್ಟ್ ವಿರೋಧ ಸಮ್ಮೇಳನದ ಉದ್ಘಾಟನಾ ಸಂದರ್ಭದಲ್ಲಿ ಕೊಟ್ಟ ಭಾಷಣದಿಂದ ಆಯ್ದವುಗಳು.

❀ ❀ ❀

'ಕಾಂಗ್ರೆಸಿಗೆ ನಾನು ಅತೀವ ವಿಧೇಯನು. ನಾನು ಭಾಷಣ ಸ್ವಾತಂತ್ರ್ಯವನ್ನು ಬಯಸುತ್ತೇನೆ, ವಿಚಾರ ಸ್ವಾತಂತ್ರ್ಯವನ್ನು ಕೇಳುತ್ತೇನೆ. ಸರಕಾರವಾದರೂ ದರ್ಪದಿಂದ ಕೆಲಸ ಮಾಡಿದರೆ ಜನರಿಗೆ ಹಿತಕರವಾಗುವುದಿಲ್ಲ. ಕಾಂಗ್ರೆಸಿನಂತಹ ಸಂಸ್ಥೆ ದರ್ಪದಿಂದ ಕೆಲಸ ಮಾಡುವುದು ಸರಿಯಲ್ಲ. ಕಾಂಗ್ರೆಸನ್ನು ನಾನು ಗೌರವಿಸುತ್ತೇನೆ. ನಾನು ಕಾಂಗ್ರೆಸಿನ ಏಣಿಯನ್ನೇರಿ ಬೇಕಾದಂತೆ ಅದನ್ನು ಒದೆಯುತ್ತಿದ್ದೇನೆಂದು ಕೆಲವರು ಹೇಳುತ್ತಿದ್ದರು. ಆದರೆ ಕಾಂಗ್ರೆಸ್ಸೆಂಬುದು ನನ್ನ ರಕ್ತ, ಇಪ್ಪತ್ತು ವರ್ಷಗಳ ಸೇವೆಯಿಂದ ಕಾಂಗ್ರೆಸಿನಿಂದ ನಾನು ಭಿನ್ನವಲ್ಲವೆಂದೇ ತಿಳಕೊಂಡಿದ್ದೇನೆ. ನನ್ನ ರಕ್ತದಂತಿದೆ ಕಾಂಗ್ರೆಸು, ರಕ್ತವಾದರೂ ಪುಷ್ಟಿಗೊಳಬೇಕು, ಅದಕ್ಕಾಗಿ ನಾನು ಯತ್ನಮಾಡಬೇಕು. ನಾನೀಗ ಮಾಡುವ ಕೆಲಸ ಕಾಂಗ್ರೆಸಿನ ಮೂಲಕವಾಗಿದೆ. ಕಾಂಗ್ರೆಸಿನಲ್ಲಿ ಗುಪ್ತವೆಂಬುದಿಲ್ಲ. ಅದೊಂದು ಸಾರ್ವಜನಿಕ ಸಂಸ್ಥೆ. ಪ್ರತಿಯೊಂದು ಪತ್ರಿಕೆಯು ಕಾಂಗ್ರೆಸಿನ ಅಭಿಪ್ರಾಯವನ್ನು ಮುದ್ರಿಸುವುದರೊಡನೆ ಅದಕ್ಕೆ ಮಾರ್ಗದರ್ಶಿಯಾಗಿ ಸೂಚನೆ ಕೊಡುತ್ತದೆ. ಹಾಗೆಯೇ ನಾನು ಕಾಂಗ್ರೆಸಿಗೆ ಸೂಚನೆ ಕೊಡುತ್ತೇನೆ. ಕಾಂಗ್ರೆಸಿನಲ್ಲಿದ್ದುಕೊಂಡು ಆಗಾಗ ಕಾಂಗ್ರೆಸಿನ ವಿರುದ್ಧ ಮಾತನಾಡುವ ಅನೇಕ ಪಂಗಡಗಳು ವ್ಯಕ್ತಿಗಳು ಕಾಂಗ್ರೆಸಿನಲ್ಲಿದ್ದಾರೆ, ಅವರು ಹಾಗೆ ಮಾತನಾಡುವ ವಿಷಯ ಜನತೆ ಗಾಬರಿಗೊಳ್ಳುವುದಿಲ್ಲ, ನಾನು ಇದುವರೆಗೆ ಕಾಂಗ್ರೆಸಿನ ನಿಷ್ಠಾವಂತ ಅನುಯಾಯಿಯಾಗಿದ್ದು ಈಗ ಕೆಲವು ಸೂಚನೆ ಕೊಡುಯುತ್ತೇನೆಂಬುದನ್ನು ಸಂದೇಹ ದೃಷ್ಟಿಯಿಂದ ನೋಡುತ್ತಾರೆ. ನಿರಂತರ ಬಂಡಾಯ ಮಾಡುವವನು ಕ್ಷಮಾರ್ಹನು, ಒಮ್ಮೊಮ್ಮೆ ಬಂಡಾಯ ಮಾಡುವವನು ಕ್ಷಮೆಗೆ ಯೋಗ್ಯನಲ್ಲವೆ? ನಾನು ಯಾವ ಟಿಕೇಟಿನಿಂದ ಮದ್ರಾಸಿನಿಂದ ಮಂಗಳೂರಿಗೆ ಬಂದೆನೆಂಬುದು ನಿಮಗೆ ಅವಶ್ಯವಿದ್ದ ವಿಚಾರವಲ್ಲ. ಅದು ರೈಲ್ವೆಯವರಿಗೂ, ನನಗೆ ಟಿಕೆಟುಕೊಟ್ಟವರಿಗೂ ಸಂಬಂಧಿಸಿದ್ದು. ನಾನು ಹೇಳುವುದು ಯೋಗ್ಯವೋ ನ್ಯಾಯವೋ ಅಲ್ಲವೋ ಎಂದಿಷ್ಟು ನೀವು ಆಲೋಚಿಸಿದರೆ ಸಾಕೆಂದು ನಾನು ಕೇಳಿಕೊಳ್ಳುತ್ತೇನೆ. ಶಿಸ್ತಿನ ವಿಚಾರವು ನನಗೂ ಕಾಂಗ್ರೆಸ್ ಅಧಿಕಾರಮಂಡಲಕ್ಕೂ ಸಂಬಂಧಿಸಿದ್ದಾಗಿದೆ.

ಜಪಾನ ಧಾಳಿಯಾದರೆ ನಮ್ಮ ಅವಸ್ಥೆಯೇನು? ಎನ್ನುವವರೊಡನೆ ನಾನು ಮಾತನಾಡುವುದು. ಇತರರೊಡನೆ ನನ್ನ ಚರ್ಚೆಯಿಲ್ಲ. ಬ್ರಿಟನಿನ ಸ್ಥಳದಲ್ಲಿ ಜಪಾನು ನಮ್ಮ ದೇಶದಲ್ಲಿ ನೆಲೆಸುವುದಾದರೆ ಅದು ನಮಗೆ ದೊಡ್ಡದೊಂದು ಗಂಡಾಂತರವಾಗುವುದು. ಅದನ್ನು ತಡೆವುದಕ್ಕಾಗಿ ಸರಕಾರವನ್ನು ಜನತಾ ಸರಕಾರವಾಗಿ ಮಾಡಬೇಕಾಗಿದೆ. ಹಾಗೆ ಮಾಡಿ ಆಕ್ರಮಣಗಾರರೆದುರು ಹೋರಾಡಬೇಕಾಗಿದೆ. ಬ್ರಿಟನನ್ನು ರಾಷ್ಟ್ರೀಯ ಸರಕಾರ ಕೊಡಲು ಒತ್ತಾಯ ಮಾಡಬೇಕಾಗಿದೆ. ಆದರೆ ನಮ್ಮಲ್ಲಿ ಐಕ್ಯವಿಲ್ಲದಿದ್ದರೆ, ಕಾಂಗ್ರೆಸ್ ಲೀಗ್ ಒಮ್ಮತವಿಲ್ಲದಿದ್ದರೆ ನಾವು ಬ್ರಿಟಿಷ್ ಸರ್ಕಾರವನ್ನು, ನಮಗೆ ರಾಷ್ಟ್ರೀಯ ಸರಕಾರವೀಯಲು ಒತ್ತಾಯಪಡಿಸುವುದಾದರೂ ಹೇಗೆ? ನಾನು ಇಂಥ ಸಂದರ್ಭದಲ್ಲಿ ಹೀಗೆ ಆವಸರ ಮಾಡುವುದಕ್ಕೆ ಏನಾದರೂ ಅರ್ಥವಿಲ್ಲವೆ? ಅಸಂಪೂರ್ಣವಾಗಿದ್ದರೂ ಒಂದು ಸಮಸ್ಯಾ ಪರಿಹಾರೋಪಾಯವನ್ನು ಈಗ ನಾವು ಕಂಡುಹುಡುಕಿ ಐಕ್ಯವಾಗಿ, ಜನತಾ ಸರಕಾರವನ್ನು ಸ್ಥಾಪಿಸಿ, ಆಕ್ರಮಣ ಮಾಡುವ ಜಪಾನರನ್ನು ಇದಿರಿಸಬೇಕೆಂದು ಹೇಳುವುದು ಸಮಯೋಚಿತವಲ್ಲವೆ? ಕಾಂಗ್ರೆಸ್ ಲೀಗ್ ಐಕ್ಯ ಬೇಡವೆನ್ನುವವನು ಒಬ್ಬ ಹುಚ್ಚನೆನಬೇಕು. ಕಾಂಗ್ರೆಸಾದರೂ ಈ ಐಕ್ಯವಾಗಬೇಕೆಂದು ಯತ್ನಿಸುವುದಿಲ್ಲವೆ? ನನ್ನೀ ಸೂಚನೆಯಲ್ಲದಿದ್ದರೆ ಇನ್ನು ಯಾವುದೇ ಬೇರೆ ಸೂಚನೆಯಾದರೂ ಒಂದು ನಾವು ಐಕ್ಯವಾಗಬೇಡವೆ? ಬ್ರಿಟಿಷರು ನಮ್ಮನ್ನು ಆಳುವುದಕ್ಕಿಂತ, ಜಪಾನು ನಮ್ಮ ಮೇಲೆ ಧಾಳಿಯಿಡುವುದಕ್ಕಿಂತ ಬೇಗನೆ ಉಪಾಯ ಮಾಡುವುದಾದರೂ ದೊಡ್ಡದಲ್ಲವೆ? ಕಾಂಗ್ರೆಸು ಹೀಗೆ ಉದಾರತೆ ತೋರಿಸಿದ್ದರಿಂದ ಮಾತ್ರ ಜನಪ್ರಿಯವಾಗಿದೆ. ನ್ಯಾಯವಿದ್ದಷ್ಟು ಮಾತ್ರ ಮಾಡುತ್ತೇನೆಂದಿದ್ದರೆ ಅದು ಜನಪ್ರಿಯವಾಗುತ್ತಿರಲಿಲ್ಲ.

ಜಪಾನರನ್ನೆದುರಿಸಲು ನಾವು ಶಕ್ತರಲ್ಲವಾಗಿಲ್ಲವೆಂಬೀ ಭಾವನೆ ಹೊಗಲಾಡಿಸಬೇಕು. ಇಷ್ಟು ಪ್ರಪಂಚದ ಜನ ಸರಕಾರವನ್ನು ಎದುರಿಸಿದರು. ಅವರು ನಮ್ಮದಕ್ಕಿಂತ ಒಂದಂಶದಷ್ಟು ಜನ ಇದ್ದರೆ ಜಪಾನು ನಮ್ಮ ೧/೮ರಷ್ಟು ಜನಸಂಖ್ಯೆಯುಳ್ಳದ್ದಾಗಿ, ಚೀನದೊಡನೆ ಕಾಳಗ ನಡೆಸುತ್ತಲೂ ಆಸ್ಟ್ರೇಲಿಯಕ್ಕೆ ಸೈನ್ಯ ಕಳಿಸುತ್ತಲೂ, ಮಲಯ ಫಿಲಿಪಯಿನ್ಸ್, ಈಸ್ಟ್ ಇಂಡೀಸ್‌ಗಳನ್ನು ಬಿಗಿಗೊಳಿಸುತ್ತಲೂ ಬಂದು ಆ ಮೇಲೆ ನಮ್ಮ ಮೇಲೆಯೂ ಆಕ್ರಮಿಸಬೇಕಾದರೆ ಅವರು ಎಷ್ಟು ಜನ ದ ಎಷ್ಟು ಸಾಮಗ್ರಿಯಿಂದ ಬರಬಹುದೆಂದು ನಾವು ಊಹಿಸಬಹುದು. ಹಾಗೆ ಬಂದರೆ ೪೦ ಕೋಟಿಯ ಮಂದಿ ನಾವು ಅವರಿಗೆ ಶರಣಾಗತರೆಂದು ಹೋರಾಡಿದರೆ ಜಪಾನು ನಮ್ಮ ಯಾವುದೇ ಪಟ್ಟಣವನ್ನಾದರೂ ಸ್ವಾಧೀನ ಪಡಿಸಿ ಮುನ್ನುಗ್ಗಬಹುದೆ? ಆದರೆ ನಾವಿಂದು ಬ್ರಿಟಿಷರ ಮೇಲೆ ಸಿಟ್ಟುಗೊಂಡಿದ್ದೇವೆ. ಈ ಸಿಟ್ಟಿನಿಂದ ಜಪಾನರನ್ನು ಸ್ವಾಗತಿಸುವ ತಪ್ಪು ಮಾಡಕೂಡದು. ಇದು ಜಪಾನಿಗಿಯೂ ಸಿಟ್ಟೆಂಬುದು. ಮಹಾನರ್ಥಕಾರಿಯುದ್ಧವು ಆರಂಭವಾಗುವ ಮೊದಲು ಬ್ರಿಟಿಷರೊಡನೆ ನಾವು ಸಿಟ್ಟುಗೊಳ್ಳುತ್ತಿದ್ದುದು ಸರಿಯೆ. ಸಿಟ್ಟುಗೊಂಡ ನಮ್ಮ ಹಿಂದಿನವರು ಮಾಡಿದ ಪ್ರಮಾದ ಪುನರಾವೃತ್ತಿಯಾಗದಿರಲಿ. ಈಸ್ಟ್ ಇಂಡಿಯಾ ಕಂಪೆನಿ ಬಂದಾಗ, ನಮ್ಮ ಹಿಂದಿನವರು ಅಂದಿದ್ದ ಆಡಳಿತದಲ್ಲಿ ಸಿಟ್ಟುಗೊಂಡವರಾಗಿ ಈಸ್ಟ್ ಇಂಡಿಯಾ ಕಂಪೆನಿಯನ್ನು ಸ್ವಾಗತಿಸಿ ಈ ಪ್ರಮಾದ ತಂದುಕೊಂಡರು. ಅಂತಹ ಪ್ರಮಾದವು ನಮ್ಮಿಂದ ಪುನರಾವೃತ್ತವಾಗಬಾರದು.

ನಾನು ಮದ್ರಾಸು ಪ್ರಾಂತದಲ್ಲಿ ಕೂಡಲೇ ಸಕಲ ಪಕ್ಷದಿಂದ ಕೂಡಿ ಪ್ರಜಾ ಸಮ್ಮತ ಸರಕಾರವಾಗಬೇಕೆಂದು ಹೇಳಿದ ವಿಷಯ ವಿವರಿಸಬೇಕಾಗಿದೆ. ಮದ್ರಾಸ ಮತ್ತು ಆಸಾಮಿಗ ಜಪಾನಿನ ಧಾಳಿಯ ಭೀತಿ ಇತರ ಕಡೆಗಳಿಗಿಂತ ಹೆಚ್ಚಿಗಿದೆ. ಇಂದಿನ ಸರಕಾರವು ದುರ್ಬಲ ಸರಕಾರ. ಅದು ಹಿಂದೆ ಪ್ರಜಾ ಬೆಂಬಲವಿಲ್ಲ. ಅದು ನಿರಂಕುಶ ಪ್ರಭುತ್ವ ನಡೆಸುವುದರಿಂದ ಬಹಳ ದುರ್ಬಲವಾಗಿದೆ. ಯಾವುದೇ ಸರಕಾರವಾದರೂ ಪ್ರಜೆಗಳ ಸಹಾನುಭೂತಿಪರ ಸಂಪರ್ಕವಿಲ್ಲದಿದ್ದರೆ ದೇಶವನ್ನು ರಕ್ಷಿಸಲಾರದು. ಬ್ರಿಟಿಷರು ಗೆಲ್ಲುವರೋ ಸೋಲುವರೋ ಎಂಬುದು ನನಗೆ ಆಸಕ್ತಿಯಿದ್ದ ವಿಚಾರವಲ್ಲ. ಆದರೆ ನನ್ನ ದೇಶದ ಜನರು ಸಂಗಾತಿಯಾಗಬಾರದೆಂಬುದು ನನ್ನ ಇಷ್ಟ. ಗಂಡಾಂತರ ಸಮಯದಲ್ಲಿ ತನ್ನ ಶಕ್ತಿ ಮೀರಿಯಾದರೂ ಒಂದು ಪ್ರಾಣವನ್ನು ಒಬ್ಬನು ಉಳಿಸಬಲ್ಲನಾದರೆ ಅವನ ಹೆಸರು ಶಾಶ್ವತವಾಗುವುದು. ಅಂತಹ ಸಮಯದಲ್ಲಿ ತಟಸ್ಥನಾಗಿದ್ದವನಿಗೆ ಬದುಕುವ ಅರ್ಹತೆಯಿಲ್ಲ. ಇದೀ ಪ್ರಾಂತದ ಜನತೆಯ ಬೆಂಬಲವಿದ್ದರೆ ಮದ್ರಾಸಿನಲ್ಲಿ ಪ್ರಾಂತಿಕ ಸರಕಾರವನ್ನು ಸ್ಥಾಪಿಸಿ ನಾನು ಅತ್ಯದ್ಭುತವನ್ನು ತೋರಿಸಬಲ್ಲೆನು. ಈ ಕಾಲದಲ್ಲಿ ಕೇಂದ್ರ ಸರಕಾರದ ಹತೋಟಿಯಿರುವಾಗ ಪ್ರಾಂತಿಕ ಸರಕಾರದಿಂದ ನಾವೇನು ಮಾಡಬಹುದು ಎಂದು ಹಲವರು ಕೇಳುತ್ತಾರೆ. ಯುದ್ಧ ಸಮಯದಲ್ಲಿ ಕಾನೂನೆಂದರೆ ಪ್ರತಿಯೊಬ್ಬನೂ ಆಗಿದ್ದಾನೆ. ಕಾನೂನಾದರೂ ಮನುಷ್ಯನನ್ನು ಕಟ್ಟಿಹಾಕುವುದಿಲ್ಲ. ಜನರ ಬೆಂಬಲವಿದ್ದರೆ ಪ್ರಾಂತಿಕ ಸರಕಾರವನ್ನು ಸ್ಥಾಪಿಸಿ ನಾವು ಮದ್ರಾಸನ್ನು ಗಂಡಾಂತರದಿಂದ ತಪ್ಪಿಸಬಹುದು. ಇದಕ್ಕೆ ಪ್ರಾಂತಿಕ ಸರಕಾರ ಜನಪ್ರಿಯ ಸರಕಾರಬೇಕು! ಇದು ಕೇವಲ ಅಧಿಕಾರಲಾಲಸೆಯೆ? ಇಂತಹ ಗಂಡಾಂತರ ಕಾಲದಲ್ಲಿ ಯಾರಾದರೂ ಅಧಿಕಾರ ವಹಿಸಲು ಮುಂದೆ ಬಂದಾರೆ? ಈಗ ನನಗಾದರೂ ವ್ಯಕ್ತಿ ಸುಖವನ್ನು ಯೋಚಿಸಿದರೆ, ತಿರುಚಿನಾಪಳ್ಳಿ ಯಾವುದಾದರೂ ಒಬ್ಬ ಜೈಲ್ ಸುಪರಿಂಟೆಂಡೆಂಟರ ಆರೈಕೆಯಲ್ಲಿರುವುದು ಸುಖವಲ್ಲವೆ?—ನಾನು ಈಗ ಮುಂದಿಟ್ಟ ವಿಚಾರದ ಕುರಿತು ನೀವು ಚೆನ್ನಾಗಿ ವಿಚಾರ ಮಾಡಬೇಕೆಂದು ನಾನು ವಿಜ್ಞಾಪಿಸಿಕೊಳ್ಳುತ್ತೇನೆ.' ಇಷ್ಟು ರಾಜಾಜಿ ಸಾರ್ವಜನಿಕ ಮೈದಾನಿನಲ್ಲಿ ಕೊಟ್ಟ ಭಾಷಣದಿಂದ ಆಯ್ದ ಮಾತುಗಳು. ರಾಜಾಜಿಯವರ ಇಂಗ್ಲಿಷ್ ಭಾಷಣವನ್ನು ಶ್ರೀ ನಾರಾಯಣ ಕಿಲ್ಲೆಯವರು ಕನ್ನಡಕ್ಕೆ ಭಾಷಾಂತರಮಾಡಿದರು. ಕನ್ನಡ ಭಾಷಾಂತರವು 'ಅದ್ಭುತ'ವಾಗಿತ್ತೆಂದು ರಾಜಾಜಿ ಕೊಂಡಾಡಿದರು!



ಈ ಮಹಾಲೇಪವು
ಕಲೆಯಿಲ್ಲದೆ
ಗಾಯವನ್ನು
ಗುಣಪಡಿಸುವುದು

ಪ್ರತಿಯೊಂದು ಮನೆಯಲ್ಲಿಯೂ ಜಾಂಬಕ್ ಪೆಟ್ಟಿಗೆ ಇರತಕ್ಕದ್ದು

ನೀವೆಷ್ಟೇ ಜಾಗ್ರತೆಯಿಂದಿರಿ ಮನೆಯಲ್ಲಿ ಏನಾದರೂ ಅವಘಡವು ಆಗಾಗ್ಗೆ ಬಂದೇ ಒದಗುತ್ತದೆ. ಮೊಣಕಾಲು ಗಾಯ ಬಾವು ಸುಡುವುದೇ ಮೊದಲಾದ ಬೇನೆಗಳಿಂದ ಮಕ್ಕಳು ಆಗಾಗ ತೊಂದರೆ ಕೊಡುತ್ತಲೇ ಇರುವರು. ಅಂತಹ ಬೇನೆಗಳು ದವೂ ಆಗಾಗ ಗುಣಪಡಿಸದಿದ್ದರೆ ನಿಜವಾಗಿಯೂ ಅಪಾಯಕಾರಿಗಳೇ ಆಗುವವು. ಕೂಡಲೇ ಅಂತಹ ಗಾಯಗಳಿಗೆ ಜಾಂಬಕ್ ತಾಗಿಸಿರಿ. ಅದು ನಿಜವಾಗಿಯೂ ಚರ್ಮದಲ್ಲಿ ಒಳಕೊಂಡು ನರಗಳನ್ನು ಬಲಗೊಳಿಸಿ, ನೋವನ್ನಿಲ್ಲವಮಾಡಿ, ಶೀಘ್ರವಾಗಿ ಗಾಯವನ್ನು ಗುಣಪಡಿಸುವ ವನೌಷಧಿ ಸತ್ವವಾಗಿದೆ. ಜಾಂಬಕ್ ಲೇಪಕ್ಕೆ ರೂ ಒಂದು

ಇಲ್ಲನೇ ರೂ 2-4-0 ಸೋಪಿಗೆ ಒಂದು ರೂಪಾಯಿ ಪೌಡರಿಗೆ ಒಂದು ರೂಪಾಯಿ

ಏಜಂಟ್ಸ್

ಮೆಸರ್ಸ ರಾಧಾ ಎಂಡ್ ಕೊ.,
ಪಿ. ಟಿ. ಮದರಾಸು

ಯಾವಾಗಲೂ ಜಾಂಬಕನ್ನು ಪಯೋಗಿಸಿರಿ

ZAM-BUK

ಪ್ರಾಣಕೊಬ್ಬು ನಿರಹಿತವಾದುದು

ಜಿಲ್ಲಾ ಸಮಾಚಾರಗಳು

ಮಂಗಳೂರು

ಮಂಗಳೂರಲ್ಲಿ ರಾಜಾಜಿ ಫಾಸಿಸ್ಟ್ ವಿರೋಧ ಸಮ್ಮೇಳನ

ತಾ. ೨೩ನೇ ದಿನ ಆದಿತ್ಯವಾರ ೨—೪೦ಕ್ಕೆ ಸರಿಯಾಗಿ ಬೋಳಾರು ಪೇಟೆ ಪ್ಯಾಸೆಂಜರಿನಲ್ಲಿ ಶ್ರೀ ಸಿ. ರಾಜಗೋಪಾಲಾಚಾರ್ಯರವರೂ, ಶ್ರೀ ಬಿ. ಸಾಂಬ ಮೂರ್ತಿಗಳೂ ಮಂಗಳೂರಿಗೆ ದಯಮಾಡಿಸಿದರು.—ಅವರನ್ನು ಸ್ವಾಗತಿಸಿ ಮೆರವಣಿಗೆಯಿಂದ ಫಾಸಿಸ್ಟ್ ವಿರೋಧ ಸಮ್ಮೇಳನ ನಡೆಯಬೇಕಾಗಿದ್ದ ಗಣಪತಿ ಹೈಸ್ಕೂಲಿನ ಪಟಾಂಗಣಕ್ಕೆ ಕರೆತರಲಾಯಿತು. ಅನಂತರ ಸಮ್ಮೇಳನದ ಕಾರ್ಯಗಳು ಆರಂಭವಾಗಿ ಶ್ರೀ ಎ. ಕೃಷ್ಣ ಶೆಟ್ಟಿಯವರ ಸ್ವಾಗತ ಭಾಷಣವಾದ ಬಳಿಕ ಶ್ರೀ ಆಚಾರ್ಯರು ಸಮ್ಮೇಳನದ ಉದ್ಘಾಟನೆಯನ್ನು ನಡೆಸುತ್ತ, ಎಕ್ಸಿಸ್ ದೇಶಗಳ ಉಪಟಳವನ್ನೂ ಅದರಲ್ಲಿಯೂ ಜಪಾನಿನಿಂದ ಭಾರತಕ್ಕೊದಗಿರುವ ಭೀತಿಯನ್ನೂ ವಿವರಿಸಿ ಈ ಸಮಯದಲ್ಲಿ ಹಿಂದೂ ಮುಸ್ಲಿಮರು, ತೋರಬೇಕಾದ ಒಗ್ಗಟ್ಟನ್ನೂ, ಕಾಂಗ್ರೆಸ್ ಲೀಗುಗಳೊಂದಾಗಬೇಕಾದ ಅವಶ್ಯಕತೆಯನ್ನೂ ವಿಸ್ತರಿಸಿದರು. ರಷ್ಯಾ—ಬ್ರಿಟನುಗಳು ಒಂದಾದ ರೀತಿ, ಲೀಗ್—ಕಾಂಗ್ರೆಸ್‌ಗಳ ಸಮಾವೇಶವೂ ಅಗತ್ಯವೆಂದು ಸಾರಿದರು. ಸಮ್ಮೇಳನದ ಅಧ್ಯಕ್ಷರಾದ ಶ್ರೀ ಎಸ್. ಎಲ್. ಉಪಾಧ್ಯಾಯರು ಫಾಸಿಸ್ಟ್ ವಿರೋಧ ವಿಷಯ ದೀರ್ಘ ಮಾತಾಡಿದರು. ಕೆಲವು ಠರಾವುಗಳ ಮಂಜೂರಾತಿಯೊಡನೆ ಸಮ್ಮೇಳನವು ಕೊನೆಗೊಂಡಿತು.

ಸಾರ್ವಜನಿಕ ಭಾಷಣ

ತಾ. ೨೩ನೇ ದಿನ ಸಂಜೆ ಗಂಟೆ ೬ಕ್ಕೆ ಮೈದಾನಿನಲ್ಲಿ ಶ್ರೀ. ರಾಜಗೋಪಾಲಾಚಾರ್ಯರು ಸಾವಿರದು ಸಾವಿರ ಮಂದಿ ಸಭಿಕರ ಮುಂದೆ ಒಂದು ಸಾರ್ವಜನಿಕ ಭಾಷಣಕೊಟ್ಟರು. ಡಾ. ವಿಠ್ಠಲ ಶೆಟ್ಟಿ ಪ್ರಸ್ತಾವನಾ ಭಾಷಣವಾದ ಮೇಲೆ ಅಧ್ಯಕ್ಷರಾದ ಶ್ರೀ ಬಿ. ವೆಂಕಟರಾಯ ಬಾಳಿಗರು ಶ್ರೀ. ಚಾರ್ಯರ ವಿಚಾರಗಳನ್ನು ತಾಳ್ಮೆಯಿಂದ ಕೇಳಬೇಕೆಂದು ಹೇಳಿ, ಸ್ಥಳೀಯ ಪತ್ರಿಕೆಗಳಲ್ಲಿ, ರಾಜಾಜಿಯವರ ಸಭೆಗಳಿಗೆ ಹೋಗ ಕೂಡದೆಂದು ಜಿಲ್ಲಾ ಕಾಂಗ್ರೆಸಿನವರು ಪ್ರಕಟಿಸಿದ ವಿಷಯವನ್ನೆತ್ತಿ ರಾಜಾಜಿಯವರ ಸ್ಪಷ್ಟೀಕರಣ ಕೇಳಿ ಅವರನ್ನು ಭಾಷಣಮಾಡಲು ಪ್ರಾರ್ಥಿಸಿದರು. ರಾಜಾಜಿಯವರು ಮಾತಾಡುತ್ತಾ, ಭಾಷಣ ಸ್ವಾತಂತ್ರ್ಯ, ಅಭಿಪ್ರಾಯ ಸ್ವಾತಂತ್ರ್ಯಗಳನ್ನು ವಿವರಿಸಿ, ಶಿಸ್ತಿನ ವಿಚಾರವು ತನಗೂ ಕಾಂಗ್ರೆಸ್ ಅಧಿಕಾರ ಮಂಡಲಕ್ಕೂ ನಡುವಣ ಸಂಬಂಧದ್ದೆಂದೂ, ನೀವು ನನ್ನ ವಿಚಾರವು ಸಮಂಜಸವಿದ್ದರೆ ಅಂಗೀಕರಿಸಿ ಇಲ್ಲದಿದ್ದರೆ ಬಿಟ್ಟುಬಿಡಿರೆಂದು ತಿಳಿಸಿ, ಜಪಾನೀಯರ ಹಾವಳಿಯಿಂದ ಭಾರತಕ್ಕೆ ಉಂಟಾದ ಅಪಾಯ, ಅದಕ್ಕಾಗಿ ಮಾಡಬೇಕಾದ ಹಿಂದೂ—ಮುಸ್ಲಿಮರ ಐಕ್ಯ, ಕಾಂಗ್ರೆಸ್ಸಿನವರು ಲೀಗಿನವರ ವಿಷಯದಲ್ಲಿ ತೋರಿಸಬೇಕಾದ ಔದಾರ್ಯ, ಮದ್ರಾಸ್ ಅಧಿಪತ್ಯದಲ್ಲಿ ಜನತಾ ಸರಕಾರವು ಸ್ಥಾಪಿತವಾಗಬೇಕಾದ ಅವಶ್ಯಕತೆ, ಒಗ್ಗಟ್ಟಿನಿಂದ ನಾವು ಜಪಾನರನ್ನು ಎದುರಿಸಬೇಕಾದ ಆವಶ್ಯಕತೆ ಮೊದಲಾದುವುಗಳ ಕುರಿತು ಸುಮಾರು ೧ ಗಂಟೆಗಳ ಕಾಲಕ್ಕೂ ಮಿಕ್ಕಿ ಮಾತಾಡಿದರು. ಬಳಿಕ ಮಂಗಳೂರಿಗೆ ಬಂದಿದ್ದ ಡಾ. ಸುಬ್ಬರಾಯನ್ ಮತ್ತು ಶ್ರೀ. ಬಿ. ಸಾಂಬಮೂರ್ತಿಗಳೂ ಮಾತಾಡಿದ್ದರು. ಶ್ರೀ. ಎಸ್. ಎಸ್. ಶೆಟ್ಟಿಯವರು ಇವೆಲ್ಲ ಭಾಷಣಗಳನ್ನೂ ಕನ್ನಡಿಸಿದರು. ಅಧ್ಯಕ್ಷರ ಕೊನೆಯ ಮಾತು ವಂದನಾರ್ಪಣೆಗಳೊಡನೆ ಸಭೆ ಕೊನೆಗೊಂಡಿತು.

ರಾಷ್ಟ್ರೀಯ ಯುದ್ಧೋದ್ಯಮದ ಮುಖರಂಗ

ಸೆಂಟ್ರಲ್‌ನಿಂದ ಕಳೆದ ತಾ. ೨೩ನೇ ಶನಿವಾರ ೧೦ಕ್ಕೆ ೫—೩೦ಕ್ಕೆ ಮದ್ರಾಸಿನಲ್ಲಿ ರಾಷ್ಟ್ರೀಯ ಯುದ್ಧೋದ್ಯಮದ ಮುಖರಂಗದ ಆರಂಭೋತ್ಸವದ ಸಂದೇಶವನ್ನು ಹೊತ್ತು ಸಂಬಂಧವಾಗಿ, ಮಂಗಳೂರಿನ ಮೈದಾನದ ರೇಡಿಯೋ ಸಮೀಪ ಮಂಗಳೂರು ನ್ಯಾಷನಲ್ ಯುದ್ಧ ಸಮಿತಿಯ ಆಶ್ರಯದಲ್ಲಿ ಒಂದು ಸಾರ್ವಜನಿಕ ಸಭೆ ಜರುಗಿತು. ನಿವೃತ್ತ ಜಿಲ್ಲಾ ಜಡ್ಜರಾದ ದಿ. ಬ. ಪಿ. ಸಿ. ಬೋಬರು ಅಧ್ಯಕ್ಷತೆ ವಹಿಸಿದ್ದರು. ಗವರ್ನರರ ಸಂದೇಶವನ್ನು ಸ್ಥಳೀಯ ರೇಡಿಯೋ ಮೂಲಕ ಕೇಳಿದ ಮೇಲೆ, ಅಧ್ಯಕ್ಷರು ಸಭೆ ಸೇರಿದ ಉದ್ದೇಶವನ್ನು ವಿವರಿಸಿ, ಗವರ್ನರರ ಅಂದಿನ ಸಂದೇಶದ ಕೆಲಕೆಲವು ಪ್ರಾಮುಖ್ಯಾಂಶಗಳನ್ನು ನಿವೇದಿಸಿ, ಈ "ರಾಷ್ಟ್ರೀಯ ಯುದ್ಧೋದ್ಯಮದ ಮುಖರಂಗ"ದ ಚಳವಳಿಯಲ್ಲಿ ಎಲ್ಲರೂ ಭಾಗವಹಿಸಬೇಕೆಂದು ಪ್ರಾರ್ಥಿಸಿದರು. ಶ್ರೀ. ಎಚ್. ರಾಮರಾವ್, ಶ್ರೀ. ಎಂ. ಶಂಕರ ರಾವ್, ಶ್ರೀ. ಎಂ. ಎಸ್. ಶ್ರೀನಿವಾಸ ಜನಾಬ್ ಅಬ್ದುಲ್ ರಹೀಂ ಅಹಮ್ಮದ್ ಅವರು ಭಾಷಣಮಾಡಿದರು.

ಡಿಸ್ಟ್ರಿಕ್ಟ್ ಬೋರ್ಡ್ ಸಭೆ

ದ. ಕ. ಜಿ. ಲ್ಲಾ ಬೋ ರ್ಡು ಸಭೆಯು ತಾ. ೨೭ರಂದು ಪ್ರಾತಃ ೧೧ ಗಂಟೆಗೆ ಪ್ರಾರಂಭವಾಯಿತು. ಮೊದಲು ವರ್ಕ್ಸ್ ಎಂಡ್ ಕಮ್ಯುನಿಕೇಶನ್ ಸ್ಟೇಂಡಿಂಗ್ ಕಮಿಟಿಗೆ ಶ್ರೀ. ಯು. ಶಂಕರ ರಾವ್ ಇವರ ಗೈರುಹಾಜರಿಯಿಂದ ಖಾಲಿಯಿದ್ದ ಸ್ಥಾನಕ್ಕೆ ಡಾ. ಯು. ಪಿ. ಮಲ್ಯರನ್ನು ಚುನಾಯಿಸಲಾಯಿತು. ಸಭಾ ಪ್ರಾರಂಭದಲ್ಲಿ ಹೊಸ ಮೆಂಬರರಾದ ಶ್ರೀ. ನಾಗಪ್ಪಯ್ಯ (ಶ್ರೀ. ಎಂ. ಎಸ್. ಬಿಡೆಯವರ ಗೈರುಹಾಜರಿಯಿಂದ ಖಾಲಿ ಬಿದ್ದ ಸ್ಥಾನಕ್ಕೆ ನೇಮಕವಾದವರು) ಮತ್ತು ಶ್ರೀ ರಮನಾಥ ಮಲ್ಯ (ಶ್ರೀ ಎ. ಕೃಷ್ಣಶೆಟ್ಟಿಯವರ ಗೈರುಹಾಜರಿಯಿಂದ ಖಾಲಿಬಿದ್ದ ಸ್ಥಾನಕ್ಕೆ ನೇಮಕರಾದವರು) ಪ್ರತಿಜ್ಞೆ ತಕ್ಕೊಂಡರು. ಶ್ರೀ ಎಸ್ ಎನ್ ಹೊಳ್ಳರ ಸದಸ್ಯತ್ವವು ಊರ್ಜಿತವಾಯಿತು. ಕೆನರಾ ಪ್ರಿಂಟಿಂಗ್ ವರ್ಕ್ಸಿನ ಪ್ರಿಂಟಿಂಗ್ ಟೆಂಡರ್ ಕಡಿಮೆ ಬಿಡಿಗಾಸಿನದೆಂದು ಅಭಿಪ್ರಾಯವಾಯಿತು. ಯಡ್ಮೇರ್ ಬೋರ್ಡು ಎಲಿಮೆಂಟರಿ ಶಾಲೆಗೆ ಈ ವರ್ಷ ಆರನೆಯ ದರ್ಜೆ ತೆರೆಯಲು ಸಮ್ಮತಿ ಕೊಡಲಾಯಿತು. ಪುತ್ತೂರು ಎಕ್ಸ್‌ಟೆನ್ಸ್ ಬೋರ್ಡು ಕಮಿಟಿಗೆ ಮೆಂಬರರಾದ ಡಿ. ಬೋ. ಮೆಂಬರ್ ಶ್ರೀ ಜತ್ತಪ್ಪ ರೈಗಳ ವಿಷಯ ಸದ್ರಿ ಎಕ್ಸ್‌ಟೆನ್ಸ್ ಬೋರ್ಡ್ ಚೆಯರ್‌ಮೇನ್ ಪತ್ರಿಸಿದ ಪತ್ರವನ್ನು ಕುರಿತು ಅವರು ಬರೆದ ಪತ್ರಕ್ಕೆ ಬೋರ್ಡು ಪ್ರೆಸಿಡೆಂಟರು ಆ ಕುರಿತು ಸದ್ರಿ ಚೆಯರ್‌ಮೆನರಿಗೆ ಪತ್ರ ಬರೆಯಬೇಕಾಗಿ ನಿರ್ಣಯ ಮಾಡಿ ಇತರ ಹಲವು ಬಿಲ್‌ಗಳು ಮಂಜೂರು ಮಾಡಲ್ಪಟ್ಟವು.

ಪುತ್ತೂರು

ಆಭರಣ ಅಪಹಾರ

ಕಳೆದ ತಾ. ೧೫ರಲ್ಲಿ ಇಲ್ಲಿಗೆ ಸಮೀಪದ ನರಿಮೊಗ್ರು ಗ್ರಾಮದ ಹೆಂಡಾರು ಎಂಬಲ್ಲಿ ರಾತ್ರಿ ಸುಮಾರು ಗಂಟೆ ೧ಕ್ಕೆ ಯಾರೋ ಓರ್ವನು ಬೇಪಡಲಟಿ ಗಂಡಸರಿಲ್ಲದ ಸಮಯ ಮನೆಯೊಳಗೆ ಪ್ರವೇಶಿಸಿ, ಬ್ರಾಹ್ಮಣ ಸ್ತ್ರೀಯೋರ್ವರ ಕುತ್ತಿಗೆಯಲ್ಲಿದ್ದ ಸುಮಾರು ೪ ಪವನು ಅಂದಾಜುಳ್ಳ ಮಿಸ್ತ್ರಿ ಮಾಲೆಯನ್ನು ಹೆಂಗಸನ್ನು ಜಬರಿಸಿ ಬಲಾತ್ಕಾರದಿಂದ ಅಪಹರಿಸಿ ಹಾರಿಹೋದನು ತಿಳಿದುಬರುತ್ತದೆ.

ಕೊಸ್ಮೊಪೊಲಿಟನ್ ಎಮೆಚೂರ್ಸ್ ನಾಟಕ ಸಭಾ

ಕೊಸ್ಮೊಪೊಲಿಟನ್ ಗರ್ಲ್ಸ್ ಎಲಿಮೆಂಟರಿ ಶಾಲೆಯ ಬಾಲಕ ಬಾಲಿಕೆಯರು ತಮ್ಮ ಶಾಲೆಯ ಬಡ ವಿದ್ಯಾರ್ಥಿಗಳ ಸಹಾಯಾರ್ಥ ನಿಧಿ ಸಂಗ್ರಹಿಸುವ ಬಗ್ಗೆ ಕಳೆದ ತಾ. ೧೬ನೇ ರಾತ್ರಿ "ಕುಶಲವ" ಎಂಬ ನಾಟಕವನ್ನು ಚಲೋದಾಗಿ ಆಡಿದರು.

ಕಾಸರಗೋಡು

ನೀಲೇಶ್ವರ

ಸೋವಿಯಟ್ ನಿಧಿಗೆ/ಸಂಭಾವನೆ:—ಪಲ್ಲೂರು ಪೈಲಿನಲ್ಲಿ ದಿಗ್ಬಂಧನ ಮಾಡಲ್ಪಟ್ಟಿರುವ ಸುಮಾರು ೧೫೦ ಕೈದಿಗಳು ಸೇರಿ ಲಂಡನಿನಲ್ಲಿರುವ ಸೋವಿಯಟ್ ರಾಯಭಾರಿ ಎಂ. ಮೈಸ್ಕಿಯವರಿಗೆ, ಸೋವಿಯಟ್ಸ್ ಯುದ್ಧ ನಿಧಿಗೆ ತಮ್ಮ ಸಂಭಾವನೆಯಾಗಿ ರೂ. ೩೦೦ರನ್ನು ಕಳುಹಿಸಿರುವರಾಗಿ ತಿಳಿದುಬಂದಿದೆ.

ಸಹಕಾರೀ ಸ್ಟೋರ್ಸಿನ ಮಹಾ ಸಭೆ

ತಾ. ೧೭—೫—೪೨ಕ್ಕೆ ಜರಗಿದ ಸಹಕಾರಿ ಸ್ಟೋರ್ಸಿನ ಮಹಾ ಸಭೆಯಲ್ಲಿ ಸ್ಟೋರ್ಸಿನ ಎಲ್ಲಾ ಚಟುವಟಿಕೆಗಳನ್ನೂ ಬರುವ ಸಪ್ಟಂಬರ್ ತಿಂಗಳ ವರೆಗೆ ಮುಂದುವರಿಸುವುದಾಗಿ ನಿರ್ಣಯವಾಗಿದೆ, ಎಂದು ತಿಳಿದುಬರುತ್ತದೆ.

'ಜಾತ್'ಗಳಿಗೆ ಸ್ವಾಗತ

ತಾ. ೨೭—೫—೪೨ಕ್ಕೆ ಹೊಸದುರ್ಗದಲ್ಲಿ ಸೇರಿದ ಕಾಸರಗೋಡು ತಾಲೂಕು ಸೋವಿಯಟ್ ಗೆಳೆಯರ ಪರಿಷದಕ್ಕೆ ಚಿರ್ವತ್ತೂರು, ಮೊದಲಾದೆಡೆಗಳಿಂದ ಹೊರಟು ಈ ಕಡೆಯಿಂದಾಗಿ ನಡೆದು ಹೋದ ಜಾಥಕ್ಕೆ ಇಲ್ಲಿನ ಕಾಂಗ್ರೆಸ್ ಕೆಲಸಗಾರರು ಯಥೋಚಿತವಾಗಿ ಸ್ವಾಗತವಿತ್ತರುವರು.

ಉಡುಪಿ

ಗುರುವರ್ಯರ ದಿನಾಚರಣೆ

ಶ್ರೀ ಅದಮಾರ್ ಮಠದ ಶ್ರೀ. ವಿಬುಧಮಾನ್ಯ ತೀರ್ಥಸ್ವಾಮಿಗಳವರು ತಮ್ಮ ಗುರುಗಳ ವೃಂದಾವನ ಯಾತ್ರೆ ದಿನವನ್ನು ಕಳೆದ ಗುರುವಾರ ಆಚರಿಸಿದರು.

ಹರಿಜನರಿಗೆ ಪಾಯಸಾನ್ನದಾನ

ಶ್ರೀ. ಕೃಷ್ಣಾಪುರ ಮಠದ ಸ್ವಾಮಿಗಳು ತಮ್ಮ ಜನ್ಮ ದಿನದಲ್ಲಿ ಶ್ರೀ. ಕೃಷ್ಣ ಸನ್ನಿಧಾನದಲ್ಲಿ ವಿಶೇಷ ಸಂತರ್ಪಣೆ ಮಾಡಿಸಿ ಹರಿಜನ ಬಂಧುಗಳಿಗೆ ಪಾಯಸಾನ್ನದಾನವಿತ್ತರು.

ಚಲಚ್ಚಿತ್ರ ಪ್ರದರ್ಶನ

ಮದ್ರಾಸ್ ಪ್ರಾಂತಿಕ ಯುದ್ಧಪ್ರಚಾರ ಕಮಿಟಿಯ ಚಲಚ್ಚಿತ್ರ ಪ್ರದರ್ಶನ ಮೋಟಾರ್ ಬಂಡಿಯು ಉಡುಪಿಗೆ ಬಂದಿದ್ದು ಕೆಲವೆಡೆಗಳಲ್ಲಿ ಪ್ರಚಾರಕ ಕೆಲಸವನ್ನು ಪೂರೈಸಿತು.

ಶಾಲಾ ವರ್ಧಂತಿ ಸಮಾರಂಭಗಳು

ಉತ್ತರಾದಿ ಮ ಠ ದ ಸ್ವಾಮಿಗಳವರಿಂದ ಸ್ಥಾಪಿತವಾದ ಶ್ರೀ. ಮನ್ಮಧ್ವ ಸಿದ್ಧಾಂತ ಬಾಲಿಕಾ ಪಾಠಶಾಲೆಯ ೨೩ನೇ ವರ್ಧಂತಿ ಮಹೋತ್ಸವವು ಇದೇ ತಾ. ೧೬ರಂದು ನಡೆಯಿತು.

ಕಾಡಬೆಟ್ಟು ಮೋಡೆಲ್ ಹಾ. ಎ. ಶಾಲಾ ವರ್ಧಂತಿಯು ಇದೇ ತಾ. ೨೧ರಲ್ಲಿ ಡಿಸಿ ಯು. ಎಲ್. ನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನೆ, ಶಾಲಾ ವರದಿವಾಚನ ಮೊದಲಾದುವು ನಡೆದ ಮೇಲೆ 'ವೀರಅಭಿಮನ್ಯು' ನಾಟಕಾಭಿನಯವಾಯಿತು. ಶ್ರೀ. ಕೆ. ಪಿ. ಪೈಗಳವರು ಬಾಲಾಮುಕ್ಕಳಿಗೆ ತಿಂಡಿ ಹಂಚಿದರು.

ಪದ್ಮಸಾಲಿ ವೈಶ್ಯ ಸಮಾಜ ಸೇವಾ ಸಂಘ ಉಡುಪಿ

ಕಿನ್ನಿಮುಲ್ಕಿ:—ಮೇಲಣ ಸಂಘದ ದ್ವಿತೀಯ ವಾರ್ಷಿಕೋತ್ಸವವು ಇದೇ ಮೇ ತಿಂಗಳ ತಾ. ೩೦ರಂದು ಗ. ೧೩ಕ್ಕೆ ಕಿನ್ನಿಮುಲ್ಕಿ ಶ್ರೀ. ವೀರಭದ್ರ ದೇವರ ಸನ್ನಿಧಿಯಲ್ಲಿ, ಮಂಗಳೂರು ಬೊಂಬೈ ಬಜಾರಿನ ಶ್ರೀಯುತ ಎಂ. ಎಸ್. ಟಿ. ಯಸ್., ಮಾಸ್ಟರ್ ಸೇಟ್, ಇವರ ಅಧ್ಯಕ್ಷತೆಯಲ್ಲಿ ಜರಗಿಸುವುದಾಗಿ ನಿಶ್ಚಯಿಸುತ್ತದೆ.

ಪಡುತೋನ್ಸೆ, ಕೆಮ್ಮಣ್ಣು ಹಳೆಯ ವಿದ್ಯಾರ್ಥಿ ಸಂಘ

ಕೆಮ್ಮಣ್ಣು ಹಾ. ಎ. ಶಾಲೆಯ ಹಳೇ ವಿದ್ಯಾರ್ಥಿಗಳ ಸಂಘದ ವರ್ಧಂತ್ಯುತ್ಸವವು ತಾ. ೧೫ನೇ ಸಾಂ. ಗಂಟೆ ೬ಕ್ಕೆ ಶ್ರೀ. ಕೆ. ಸಂಜೀವ ಭಟ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ವರದಿ ವಾಚನ ಸಭಿಕರ ಭಾಷಣ, ಅಧ್ಯಕ್ಷರ ಭಾಷಣಗಳಾದ ಮೇಲೆ 'ಕುಶ-ಲವ' ನಾಟಕವು ಅಭಿನಯಿಸಲ್ಪಟ್ಟು ಧನ್ಯವಾದಪ್ರಕಟಣೆಯೊಂದಿಗೆ ಉತ್ಸವವು ಕೊನೆಗೊಂಡಿತು.

ಕರ್ನಾಟಕ

ಮಂಗಳೂರು ಜಿಲ್ಲೆಯ ಮಹಾಜನರಿಗೆ ಧನ್ಯವಾದಗಳು

ಸದ್ಯದ ಪರಿಸ್ಥಿತಿಗಾಗಿ ಅನುಸರಿಸಿ ಪ್ರಚಾರ ಹಾಗು ನಿಧಿಸಂಗ್ರಹದ ಕಾರ್ಯಾರ್ಥವಾಗಿ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಪರವಾಗಿ ನಾನು ಮತ್ತು ಶ್ರೀ. ರಂಗರಾವ್ ದಿವಾಕರರು ಕೂಡಿ ಮಂಗಳೂರು ಜಿಲ್ಲೆಯಲ್ಲಿ ಕೈಕೊಂಡ ಪ್ರವಾಸದ ಕಾರ್ಯಕ್ರಮವು ಸಫಲವಾಗಿಯೂ ಸುಖದಾಯಕವಾಗಿಯೂ ಆಗುವಂತೆ ಎಲ್ಲ ಕಡೆಗೂ ಒಳ್ಳೆ ವ್ಯವಸ್ಥೆ ಮಾಡಿದ ಬಗ್ಗೆ ಎಲ್ಲ ಕಾರ್ಯಕರ್ತರಿಗೂ ಮತ್ತು ಉತ್ಸಾಹ ಪೂರ್ವಕವಾಗಿ ಆ ಕಾರ್ಯದಲ್ಲಿ ಸಹಭಾಗಿಗಳಾದ ಯಾವತ್ತು ಜನಸಮಾನ್ಯರಿಗೂ ಕ. ಪ್ರಾಂ. ಕಾಂಗ್ರೆಸ್ ಸಮಿತಿಯ ಪರವಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಮತ್ತು ಪ್ರಸಂಗದ ಮಹತ್ವವನ್ನು ಅರಿತು ಸಂತೋಷದಿಂದಲೂ ಕೊಡಗೈಯಿಂದಲೂ ಶಕ್ತಿ ಮೀರಿ ಹಣದ ಸಹಾಯ ನೀಡಿದ ಮಹಾಜನರೆಲ್ಲರಿಗೂ ಮತ್ತು ಆ ದ ಕ್ಕಾ ಗಿ ಶ್ರಮವಹಿಸಿದವರಿಗೂ ಪ್ರಾಂ. ಕಾ. ಸಭೆಯ ಪರವಾಗಿ ಅಂತಕರಣ ಪೂರ್ವಕವಾದ ಕೃತಜ್ಞತೆಯನ್ನ ಈ ಮೂಲಕ ವ್ಯಕ್ತಪಡಿಸುತ್ತೇನೆ. ಇದರಲ್ಲಿ ನಾವು ನಾಮಮಾತ್ರರಲ್ಲದೆ ಆ ಎಲ್ಲಾ ಕಾರ್ಯದ ಶ್ರೇಯಸ್ಸು ಅಲ್ಲಿಯ ಕಾರ್ಯಕರ್ತರಿಗೆ ಸಲ್ಲತಕ್ಕದ್ದೆಂದು ಬೇರೆ ಹೇಳಬೇಕಾಗಿಲ್ಲ, ಎಂದು ಕೆ. ಪಿ. ಸಿ. ಸಿ. ಕಾರ್ಯದರ್ಶಿ ಬರೆಯುತ್ತಾರೆ.

The Bank of Mangalore Limited

HEAD OFFICE	***BRANCHES***
Mangalore.	Moodabidri & Padubidri

ANNOUNCEMENT

On and from 1st February 1942, fixed deposits will be accepted at the following attractive rates:

One year	4%
Two years or above	4½%

Interest Payable Quarterly

NOTICE

Zenith Life Assurance Co., Ltd., BOMBAY.

Policy no. 3638 on the life of Mr. K. M. Ananda Prabhu having been reported to be lost a Duplicate will be issued by the Company within one month from date of publication of this notice.

Byramjee Hormusjee
General Manager.

29-5-'42.

ಸಿನೆಮಾ ಪುಟ

ಪ್ರಭಾತ್ ಚಿತ್ರ '10 ಓಕ್ಲೋಕ್'

ಪ್ರಭಾತ ಕಂಪನಿಯವರು '10 ಓಕ್ಲೋಕ್' ಎಂಬ ಸಾಮಾಜಿಕ ಚಿತ್ರವನ್ನು ಈಗ ತಯಾರಿಸುತ್ತಿದ್ದಾರೆ. ಇದರಲ್ಲಿ ಕಾಲೇಜಿನ ಹುಡುಗ ಹುಡುಗಿಯರ ಪ್ರಣಯ ಪ್ರಸಂಗಗಳು ಸೇರಿವೆ.

ಸರ್ದಾರರ 'ಶಾಜ್‌ಹಾನ್'

ಸರ್ದಾರ್ ಪ್ರೊಡಕ್ಷನಿನವರು 'ಶಾಜ್‌ಹಾನ್' ಎಂಬೀ ಪ್ರಸಿದ್ಧ ಐತಿಹಾಸಿಕ ಚಿತ್ರವನ್ನು ತಯಾರಿಸುತ್ತಾರೆ.

ಶಾಂತಾರಾಮರ ಕಾರ್ಯಕಲಾಪಗಳು

ನಿರ್ದೇಶಕ ಶಾಂತಾರಾಮರು ಫಿಲ್ಮ್ ಎಡ್ವೈಸರಿ ಬೋರ್ಡಿನ ಮೂಲಕ ಈಗ ಕುಂಟಾ ಕಾರ್ಯಕಲಾಪಗಳಿಗೆ ಕೈಹಚ್ಚಿರುವರೆಂದು ಸುದ್ದಿಯಿದೆ 'ದಿ ನೋಕ್ ಓಫ್ ಫೇಟ್' ಎಂಬ 'ವಿ' ಪ್ರಚಾರ ಚಿತ್ರ, 'ಎಯಿಮಿಂಗ್ ಹೈ' ಎಂಬ ವಿಮಾನ ದಲದ ರಿಕ್ರೂಟ್‌ಮೆಂಟ್ ಪ್ರಚಾರ ಚಿತ್ರ, 'ವಲ್ಡ್ ಕಾಂಬೆಟ್' ಎಂಬ ರಕ್ಷಣಾ ಸಿದ್ಧತೆಯ ಪ್ರಚಾರ ಚಿತ್ರ, 'ನೇವಿ ಫಿಲ್ಮ್' ಎಂಬ ನೌಕಾ ಸಾಹಸ ಚಿತ್ರ, 'ಕವರಿಂಗ್ ವಿತ್ ಎ ಪೆಕ್ಸನ್' ಎಂಬ ಕೈಗಾರಿಕೆ ಮಾಡುವ ವಿಷಯ-ಶೈಕ್ಷಣಿಕ ಚಿತ್ರ, 'ಚೆರ್ ಸ್ವೆಪಾರ್ಡ್' ಎಂಬ ಚಿತ್ರಗಳನ್ನು ಅವರು ರಚಿಸುತ್ತಿರುವರಂತೆ 'ಪ್ಲಿಕ್ ಓಫ್ ದ ಡೇ' ಎಂಬ ಸುದ್ದಿ ಚಿತ್ರಗಳನ್ನು ತಯಾರಿಸುತ್ತಿದ್ದಾರಾಗಿ ಸುದ್ದಿ

ಪ್ರಭಾತ ಫಿಲ್ಮ್ ಕಂಪನಿ

ಇದರ ಪಾಲುಗಾರರಲ್ಲಿ ಕಳೆದ ಎಂಟೊಂಬತ್ತು ತಿಂಗಳುಗಳ ತನಕ ನಡೆಯುತ್ತಿದ್ದ ವಿವಾದವು ಕೊನೆಗೊಂಡಿದೆ, ಶಾಂತಾರಾಮರು ಪ್ರಭಾತದಿಂದ ಸಂಪೂರ್ಣ ತೊಲಗಿದ್ದಾರೆ, ಮುಂದಿನ ಚಿತ್ರಗಳನ್ನು ಈಗ ತಯಾರಿಸಲು ಸಿದ್ಧತೆಗಳಾಗುತ್ತಿವೆ, ದಾಮ್ಲೆ ಮತ್ತು ಫತ್ತೇಲಾಲರು ಸ್ಟುಡಿಯೋದಲ್ಲಿ '10 ಓಕ್ಲೋಕ್' ಮತ್ತು 'ರಾಮಶಾಸ್ತ್ರಿ' ಈ ಎರಡು ಚಿತ್ರಗಳನ್ನು ತಯಾರಿಸಿದ್ದಾರೆ.

ಬೊಂಬೇ ಟಾಕೀಸ್

ಇವರ 'ವಸಂತ್' ಎಂಬ ಸಾಮಾಜಿಕ ಚಿತ್ರವು ತಯಾರಾಗುತ್ತಿದೆ. ಮಮ್ತಾಜ್ ಶಾಂತಿ, ಉಲ್ಲಾಸ್ ದೇವಿಕಾರಾಣಿಯ ಕೈಕೆಳಗೆ ದುಡಿಯುತ್ತಿದ್ದಾರೆ ಅಮಿಯಾ ಚಕ್ರವರ್ತಿ ನಿರ್ದೇಶಕರು, ಲೇಖಕರು.

ನೇಶನಲ್ ಸ್ಟುಡಿಯೋ

ಇವರ 'ನಿರ್ದೋಶ್' ಎನ್ನುವ ಸಾಮಾಜಿಕ ಚಿತ್ರವು ಪ್ರದರ್ಶಿತವಾಗುತ್ತಿದೆ ಸ್ಟುಡಿಯೋದಲ್ಲಿ 'ಬಾಲಾಜಿ ' 'ಅಪ್ನಾಪರಾಯಾ' 'ರೋಟಿ' ಗಳು ತಯಾರಾಗುತ್ತಿವೆ

ಬಾಲಾಜಿ ಟೋಕಿಸಿನಲ್ಲಿ ಸಿಕಂದರ್

ಮಿನೆರ್ವಾ ಮೋವಿಟೋನ್‌ರವರ ಮಿಳಿಯರೂಪಾಯಿಯ ಚಿತ್ರರತ್ನ ಸಿಕಂದರ್, ಸೋಹ್ರಾಬ್‌ಮೋದಿ ಪೃಥ್ವಿರಾಜ್ ವನಮಾಲಾ ಮಿನ, ಶೀಲಾ, ಮೊದಲಾದವರ್ರ ನಟವರ್ಗದವರಿಂದ ಕೂಡಿ ಸ್ಥಳೀಯ ಬಾಲಾಜಿ ಟೋಕಿಸಿನಲ್ಲಿ ಪ್ರದರ್ಶಿತವಾಗುತ್ತಿದೆ.

ವಿಜಯಿ ಸಿಕಂದರನ ಮಹಾ ಸೇನೆಗಳು ಒಂದೊಂದೇ ದೇಶವನ್ನು ಗೆಲ್ಲುತ್ತ ಮುಂದೆ ನುಗ್ಗುತಿದ್ದುವು ಇರಾಣವನ್ನು ಜಯಿಸಿ ಸಿಕಂದರನು ಮುಂದೆ ಸಾಗುವಾಗ, ರುಕ್ಸಾನಾ ಎಂಬ ಇರಾಣೀಬಾಲಿಕೆಯೋರ್ವಳು, ಸಿಕಂದರನ ಮೋಲಿನ ವ್ಯಾಮೋಹದಿಂದ ಅವನನ್ನು ಹಿಂಬಾಲಿಸಿದಳು. ಆಚಾರ್ಯನಾದ ಅರಿಸ್ಟೋಟಲನು "ಸ್ತ್ರೀ ಪಾಶದಿಂದ ದೂರವಾಗಿರು–ಇಲ್ಲದಿದ್ದರೆ ನಿನಗೆ ಕ್ಷೇಮವಿಲ್ಲ' ಎಂದು ಸಿಕಂದರನಿಗೆ ಹಿತವಚನ ಹೇಳಿದ್ದನು ಆದರೂ ಸಿಕಂದರನು, ರುಕ್ಸನಳಲ್ಲಿ ಮನಸ್ಸೋತವನಾಗಿದ್ದನು ಸಿಕಂದರನಸೈನ್ಯವು ಜೇಲಂದಂಡೆಗೆ ಬಂದು, ಧಾಳಿ ಹೊಡೆಯಿತು. ಪುರೂರವನು ಆ ಸೇನೆಗಳಿಗೆ ನದಿದಾಟದಂತೆ ಅಡ್ಡಗಟ್ಟಿದನು ರುಕ್ಸನಳು, ಉಪಾಯದಿಂದ ಪುರೂರವನಲ್ಲಿ ಸೇರಿ, ಸಿಕಂದರನನ್ನು ಪುರೂರವನು ಕೊಲ್ಲದಂತೆ ವಚನ ಪಡೆದಳು ಅಂಭಿ ಎಂಬ ರಾಜನು, ಸಿಕಂದರನೊಡನೆ ಸೇರಿ, ಭಾರತಕ್ಕೆ ದ್ರೋಹ ಒಗೆದನು ಅಂಭಿಯ ಸಹೋದರಿ ಪ್ರಾರ್ಥನೆಯು ತನ್ನ ಅಣ್ಣನಿಗೆ ಬುದ್ಧಿವಾದ ಹೇಳಿ, ಪ್ರಯೋಜನವಾಗದಿರಲು,– ಜುಗುಪ್ಸೆಗೊಂಡು ಪುರೂರವನಲ್ಲಿಗೆ ಬಂದು ನಿಂತಳು ತುಫಾನಿನ ರಾತ್ರೆ–ಜಡಿಮಳೆಯಲ್ಲಿ ಸಿಕಂದರನ ಸೇನೆಗಳಲ್ಲಿ ಒಂದಂಶವು ನದಿಯನ್ನು ಕೆಲಕಡೆಗಳಲ್ಲಿ ದಾಟಿತು ಸಿಕಂದರ್ ಪುರೂರವರೊಳಗೆ ಭೀಷಣ ಕಾಳಗ ನಡೆಯಿತು

ಮುಂದಿನಂಶವನ್ನು ಚಿತ್ರಪಟದಲ್ಲಿ ನೋಡಿರಿ

ಪ್ರಕಾಶ್ ಪಿಕ್ಚರ್ಸ್

ಇವರ 'ಭರೋಮಿಲಾಪ್' ಯಶಸ್ವಿಯಾಗಿ ಯಶಸ್ವಿಯಾಗಿ ನಡೆಯುತ್ತಿದ್ದು, ಮುಂದೆ 'ಲವಕುಶ' ಎಂಬ ಪೌರಾಣಿಕ ಚಿತ್ರವನ್ನು ತಯಾರಿಸುವುದರಲ್ಲಿದ್ದಾರೆ ಇದಲ್ಲದೆ 'ಸ್ಟೇಶನ್ ಮಾಸ್ಟರ್' ಎಂಬ ಸಾಮಾಜಿಕ ಚಿತ್ರ ರಚನೆಗೂ ಕೈ ಹಚ್ಚಿರುವರು.

ನಿರ್ದೋಷ್‌ದಲ್ಲಿ ನಳಿನಿ ಜಯವಂತ್

ನಳಿನೀ ಜಯವಂತ್ ಹೆಸರಿಗೆ ಬರುತ್ತಿರುವ ಹೊಸ ತಾರೆ, ನೇಶನಲ್‌ನವರ ದ್ವಿಭಾಷಾ (ಮರಾಠೀ ಹಿಂದೀ) ಚಿತ್ರ 'ನಿರ್ದೋಷ'ದಲ್ಲಿ ನಳಿನೀ ಜಯವಂತಳು ಅತ್ಯುಜ್ವಲವಾಗಿ ನಟಿಸಿರುವಳು. ನಳಿನಿ ಜಯವಂತಳು ಎಳೆ ಪ್ರಾಯದ ಹುಡುಗಿ, ಬಾಲಿಕಾ ಚಾಪಲ್ಯವುಳ್ಳಾಕೆ ಅವಳ ನಟನೆ, ಗಾಯನ, ಸೌಂದರ್ಯಗಳು ಸಿನೆಮಾ ಲೋಕವನ್ನು ಬೆರಗುಗೊಳಿಸಿವೆ.

The Canara Banking Corporation Ltd.

(Incorporated in British India with limited liability

Estd 1906.

OUR RATES OF INTEREST ON DEPOSITS

Current		1%	p. a.
Savings Bank	..	2½%	„
Short-term		1½%	„
FIXED FOR 3 MONTHS		2%	„
6 „	..	2½%	„
9 „	..	2¾%	„
12 „	..	3%	„
24 „		3½%	„

Advances made at cheap rates of interest against approved securities and Banking business of every description transacted.

ಇಂದ್ರಜಾಲದಂತೆ ಚರ್ಮದ ರೋಗಗಳು ಮಾಯವಾಗುವುದು

ಕುಟಿಕೂರಾ ಮುಲಾಮು (Cuticurra Ointment) ತನ್ನ ವಾಸಿಮಾಡುವಗಾಯದ ವಿಷಯ ಎಂಥಾ ಕಠಿಣ ಸ್ಪರ್ಧೆಗೂ ನಿಲ್ಲುವುದು. ತ್ರಾಸದಾಯಕವಾಗಿ ವೇದನೆಗೊಳಿಸಿ ಪೀಡಿಸುವ ದೀರ್ಘಕಾಲದ ಕಾಲುಳುಕನ್ನು ಖಂಡಿತ ಗುಣಪಡಿಸುವುದು. ಕುಟಿಕೂರಾ(Cuticura)ವು ಕ್ರಿಮಿಗಳನ್ನು ನಾಶಮಾಡಿ ಕಾಲ್ಮುರಕನ್ನು ಅಧಿಕಗೊಳಿಸುವ ವಿಷವನ್ನು ನಾಶಮಾಡಿ, ಬಾಧೆಕೊಡುವ ಭಾಗವನ್ನು ಗುಣಪಡಿಸಿ ವೇದನೆಗೊಳಪಟ್ಟ ದ ಚರ್ಮದ ಬದಲಿಗೆ ಹೊಸ ಚರ್ಮವು ಬರುವಂತೆ ಸಹಾಯಮಾಡುವುದು

ಚರ್ಮವ್ಯಾಧಿಯುಳ್ಳವರು ಕುಟಿಕೂರಾ ಸಾಬೂನನ್ನು (Cuticura Soap) ಮಾತ್ರವೇ ಉಪಯೋಗಿಸಬೇಕು. ಇದು ಗುಣಗೊಳಿಸುವುದು ಮತ್ತು ಕ್ರಿಮಿನಾಶಕ ಗುಣ ಉಳ್ಳದ್ದು.

ಕಜ್ಜಿ, ಕುರು, ತುರಿಕಜ್ಜಿ, ಗಾಯ, ಪಟ್ಟು, ಪರಚುವಿಕೆ, ಸುಟ್ಟಗಾಯ, ಮುದ್ದಣ ಮುಂತಾದ ಎಲ್ಲಾ ಚರ್ಮವ್ಯಾಧಿಗಳಿಗೂ ಕುಟಿಕೂರಾ ಮುಲಮನ್ನೇ (Cuticura Ointment) ಉಪಯೋಗಿಸಿರಿ

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರುಗಳಲ್ಲಿಯೂ ಮಾರಲ್ಪಡುತ್ತದೆ

ಕುಟಿಕೂರಾ ಮುಲಾಮು

CUTICURA OINTMENT

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

'ಪಹಿಲಾ ಪಲ್ಲಾ'ದಲ್ಲಿ ಹುಬ್ಳೀಕರ್

ಹಂಸ್ ಪಿಕ್ಚರ್ಸಿನವರ ಇತ್ತೀಚಿಯ ಚಿತ್ರ 'ಪಹಿಲಾಪಲ್ಲಾ' ಪ್ರಕಾಶಕ್ಕೆ ಬಂದಿದೆ, ಬಾಬುರಾವ್ ಪೆಂಢಾರ್ಕರ್ ಇದರ ನಿರ್ದೇಶಕ, ನಿರ್ಮಾಪಕ ನಟರಾಗಿ ಈ ಚಿತ್ರದ ಹೆಚ್ಚಿನ ಕೀರ್ತಿಗೆ ಪಾತ್ರರಾಗಿದ್ದಾರೆ– ಹೆಸರಾಂತ ಕನ್ನಡಿತಿ ನಟಿ ಶಾಂತಾ ಹುಬ್ಳೀಕರ್ ಇದರಲ್ಲಿ ಪ್ರಧಾನ ಪಾತ್ರ ವಹಿಸುತ್ತಾಳೆ. ದಿನಕರ ಕಾಮಣ್ಣಾ ಇನ್ನೊಬ್ಬ ನಟ.



ಜಾನ್ಸನರ ಪ್ರಯಾಣ
ಹಿಂದುಸ್ಥಾನದ ಬಗ್ಗೆ ರೂಜವೆಲ್ಟರ ಮಧ್ಯಸ್ಥಿಕೆ?
ಜವಹರಲಾಲರ ಸಂದರ್ಶನದ ಪರಿಣಾಮ?

ರೂಜ್‌ವೆಲ್ಟರ ಪ್ರತಿನಿಧಿಯಾಗಿ ಹಿಂದುಸ್ಥಾನಕ್ಕೆ ಬಂದಿರುವ ಕ. ಲುಯಿಸ್ ಜಾನ್ಸನರು ಅನಾರೋಗ್ಯದ ನಿಮಿತ್ತ ಅಮೇರಿಕಕ್ಕೆ ಹಿಂತಿರುಗಿದರೂ ಒಂದು ರಾಜಕೀಯ ಕಾರಣದ ಸಲುವಾಗಿ ಅವರು ಹೋಗುತ್ತಿರಬೇಕೆಂದು ಊಹಿಸಲಾಗಿದೆ. ಹಿಂದುಸ್ಥಾನದ ಸಮಸ್ಯೆಯನ್ನು ಬ್ರಿಟಿಷರು ಸಮಾಧಾನಕರವಾಗಿ ಬಿಡಿಸಿಲ್ಲವಾದ್ದರಿಂದ ಇದರಲ್ಲಿ ಕೈ ಹಾಕುವಂತೆ ಅಧ್ಯಕ್ಷ ರೂಜವೆಲ್ಟರಿಗೆ ಒತ್ತಾಯಪಡಿಸುವುದಕ್ಕಾಗಿ ಅವರು ಹೋಗುತ್ತಿರಬೇಕೆಂದು ನಂಬಲಾಗಿದೆ. ಇತ್ತೀಚೆಗೆ ಪಂ. ಜವಾಹರಲಾಲರು ಕುಲೂಗೆ ಹೋಗುವ ಪೂರ್ವದಲ್ಲಿ ದಿಲ್ಲಿಗೆ ಬಂದಿದ್ದಾಗ ಜಾನ್ಸನರಿಗೆ ಬೇಟಿಯಾಗಿದ್ದಕ್ಕೂ ಅವರು ಮಹತ್ವಕೊಡುವರು. ಸದ್ಯಕ್ಕೆ ಹಿಂದುಸ್ಥಾನಕ್ಕೆ ಅಮೇರಿಕನ್ ಸೈನ್ಯ ಮತ್ತು ವಿಮಾನ ಬಲಗಳು ಬರುತ್ತಿದ್ದು ಈ ಸಮಯದಲ್ಲಿ ಹಿಂದೀ ಜನರು ಯುದ್ಧ ಪ್ರಯತ್ನಗಳಿಗೆ ಹೃತ್ಪೂರ್ವಕವಾಗಿ ಬೆಂಬಲಕೊಡುವುದು ಅತ್ಯವಶ್ಯವಿರುವುದೆಂದು ಅಮೇರಿಕನರ ಅಭಿಪ್ರಾಯವಿರುವುದು.

WANTED

Ordinary Shares of THE CANARA INDUSTRIAL & BANKING SYNDICATE LTD

Quotation solicited with full particulars of the number of shares available for sale and relative paid-up value.

The General Investment & Commercial Corporation Ltd.,
UDIPI S. K.

ರೈಲು ಬಂಡಿಗಳ ಸಮಯ

ಇದೇ ಮೇ ತಾ. 1ರಿಂದ ವ್ಯತ್ಯಾಸವಾದ ರೈಲು ಬಂಡಿಗಳ ಸಮಯಗಳು ಈ ರೀತಿ ನಂತಿವೆ—

ಗಾಡಿಗಳು	ಹೊರಡುವ ಗಂಟೆ	ತಲ್ಪುವ ಗಂಟೆ
ಗೂಡ್ಸು ಬರಿ	6.25 ಬೆಳಿಗ್ಗೆ	7.30 ರಾತ್ರಿ
ಮಲಬಾರು ಎಕ್ಸ್‌ಪ್ರೆಸ್ (ಮೈಲ್)	8.30 ಬೆಳಿಗ್ಗೆ	6.45 ಸಾಯಂ.
ಜಾಲಾರ್ ಪೇಟೆ ಪೆಸೆಂಜರ್	11.30 ಮಧ್ಯಾಹ್ನ	3.45 ಸಾಯಂ.
ಕನ್ನನೂರು	6.0 ಸಾಯಂ.	9.30 ಪೂರ್ವಾಹ್ನ

ವಿಚಿತ್ರ-ವಿಜ್ಞಾನ

ನೂರು ವರ್ಷಗಳೊಳಗೆ ಚಂದ್ರಲೋಕಯಾತ್ರೆ

ನಾವು ಆಕಾಶದಲ್ಲಿರುವ ಚಂದ್ರಲೋಕ ಮೊದಲಾದ ಗ್ರಹಗಳಿಗೆ ಯಾತ್ರೆಮಾಡಲು ಸಾಧ್ಯವಿದೆಯೇ? ಕೆಲವರು ಹೇಳುತ್ತಾರೆ, ನೂರು ವರ್ಷಗಳೊಳಗೆ ಚಂದ್ರಲೋಕಕ್ಕೆ ನಾವು ಯಾತ್ರೆಮಾಡುವುದು ಸಾಧ್ಯವಾದೀತೆಂದು. ಕೆಲಿಫೋರ್ನಿಯ ವಿಶ್ವವಿದ್ಯಾಲಯದಲ್ಲಿ ತಯಾರಿಸುವ ಯುರಾನಿಯಂ ೨೩೫ ಎಂಬ ಹೊಸ ವಸ್ತುವಿನ ಸಂಶೋಧನೆಯಾದರೆ ಮುಂದಿನ ಪ್ರಯಾಣ ವನ್ನು ನಾವು ಮಾಡಬಹುದೆಂದು ಲೋಸ್ ಏಂಜೆಲ್ಸಿನ 'ಗ್ರಿಫಿತ್ ಎಸ್ಟ್ರೋನೋಮಿಕಲ್ ಒಬ್ಸರ್ವೇಟರಿ' ಸಂಸ್ಥೆಯ ಡೈರೆಕ್ಟರ್ ಡಾ| ದಿನಸ್‌ಮೋರ್ ಅಲ್ಟರ್ ಎಂಬವರು ತಿಳಿಸುತ್ತಾರೆ. ಇದಕ್ಕೆ ಹೊಸ ರಾಕೆಟೊಂದನ್ನು ಮಾಡಬೇಕಾಗಿದೆ. ಅದರ ಬೆಲೆ ೩೫,೦೦೦,೦೦೦ ಪವನುಗಳು ಆಗಬಹುದೆಂದು ಅಂದಾಜು ಮಾಡಲಾಗಿದೆ. ಇಲ್ಲಿಗೆ ದೂರ ಸಾಧಾರಣ ೨೨೩,೦೦೦ದಿಂದ ೨೫೨,೦೦೦ ಮೈಲುಗಳಷ್ಟು ಇರಬಹುದೆಂದು ಹೇಳಬರುತ್ತದೆ.

ಐ. ಸಿ. ಎಸ್‌ರ ಹೊಸ ಅಕ್ಷರಮಾಲೆ

ಸಿಂಧಿನ ಎ. ಸೆಕ್ಷನ್ಸ್ ಜಡ್ಜರಾದ ಶ್ರೀ ಯು. ಬಿ. ರಾಜು ಐ. ಸಿ. ಎಸ್. ಇವರು ಹೊಸ ಅಕ್ಷರಮಾಲೆಯೊಂದನ್ನು ತಯಾರಿಸಿದ್ದಾರೆ. ಅವರ ಅಕ್ಷರಮಾಲೆಯನ್ನು ಹಿಂದಿ, ಉರ್ದು, ತೆಲುಗು ಈ ಎಲ್ಲಾ ಭಾಷೆಗಳ ಬದಲು ಬರೆಯಲೂ ಆಗುತ್ತದೆ. ಇದನ್ನು ಕೇವಲ ಐದೇ ಮಿನಿಟುಗಳಲ್ಲಿ ಕಲಿಯಬಹುದಾಗಿದೆ. ಹಿಂದೀ ಮತ್ತು ಉರ್ದು ಸೇರಿ ಆ ಅಕ್ಷರಮಾಲೆಯಲ್ಲಿ ಕೇವಲ ಐದೇ ಅಕ್ಷರಗಳಿವೆ. ಸ್ವರಗಳನ್ನು ಒಂದು ಸೀಟಿ ಗೆರೆಯ ಮೂಲಕ, ಅಲ್ಲಲ್ಲಿ ಚುಕ್ಕಿಗಳನ್ನು ಹಾಕಿ ಬರೆಯಬಹುದಾಗಿದೆ. ಮುಖ್ಯ ಅಕ್ಷರಗಳು ಐದು ಮಾತ್ರ, ೪೦ ವ್ಯಂಜನಗಳಿವೆ. ಇವು ಆ ಮೂಲಾಕ್ಷರಗಳಿಂದ ಹುಟ್ಟುತ್ತವೆ. ಇದರಿಂದ ಮತ್ತೆ ಅಕ್ಷರಗಳು ಹುಟ್ಟುತ್ತವೆ. ಉರ್ದುಭಾಷೆ ಕಲಿಯಲಿಕ್ಕೆ ಇದರಲ್ಲಿ ಮೂರು ಮೂಲ ಅಕ್ಷರಗಳಿವೆ. ಆದರಿಂದ ೧೫ ಅಕ್ಷರಗಳು ಹುಟ್ಟುತ್ತವೆ. ಅದೂ ಕೂಡಾ ಬೇರೆ ಬೇರೆ ಸ್ಥಳದಲ್ಲಿ ಚುಕ್ಕಿಗಳನ್ನು ಹಾಕುವುದರಿಂದ ಆಗುತ್ತದೆ. ಸಿಂಧದ ೫ ಪ್ರತ್ಯೇಕ ಅಕ್ಷರಕ್ಕೆ ಇನ್ನು ಒಂದು ಪ್ರತ್ಯೇಕ ಮೂಲಾಕ್ಷರವಿದೆ. ಅದೂ ಚುಕ್ಕಿಯಿಂದಲೇ ಆಗುವುದು.

ಮಾನಸ ಸರೋವರದ ಶೋಧನೆಗಾಗಿ

ಸ್ವಾಮಿ ಪ್ರಣವಾನಂದರೆಂಬವರು ಕಲ್ಕತ್ತದಿಂದ ಹೊರಡಲಿದ್ದಾರೆ. ಈ ಸರೋವರವು ಹಿಮಾಲಯದಲ್ಲಿ ಸಮುದ್ರ ಮಟ್ಟಕಿಂತ ೧೫,೦೦೦ ಅಡಿ ಎತ್ತರದಲ್ಲಿದೆ. ಇದು ೫೪ ಮೈಲು ಉದ್ದವಿದೆ. ಇದರ ಬಳಿಗೆ ಹೋಗಬೇಕೆಂದು ಹಲವರು ಪ್ರಯತ್ನಮಾಡಿದ್ದರೂ ಕೆಲವರು ಮಾತ್ರ ಆ ಯತ್ನಗಳಲ್ಲಿ ಯಶಸ್ವಿಯಾಗಿದ್ದಾರೆ.

ಸ್ವಾಮಿಪ್ರಣವಾನಂದರು ಈ ಸರೋವರದ ಬಳಿ ಅನೇಕ ಸಲ ಹೋಗಿದ್ದಾರೆ. ಈ ಸರ್ತಿ ಅಲ್ಲಿಗೆ ಹೋಗಿ ವೈಜ್ಞಾನಿಕ ಶೋಧನೆ ನಡೆಸಬೇಕೆಂದು ಅವರ ಉದ್ದೇಶವಾಗಿದ್ದೆ ಆ ಸರೋವರದ ಮಧ್ಯ ಸ್ಥಳವನ್ನು ಹೋಗಿ ನೋಡಲು ಅಲ್ಲಿನ ನಿವಾಸಿಕರು ಯಾರನ್ನೂ ಅಲ್ಲಿಗೆ ಬರಲು ಬಿಡುವುದಿಲ್ಲವಂತೆ! ಏಕೆಂದರೆ ಸರೋವರದ ದೇವತೆ ಅಲ್ಲಿ ವಾಸಮಾಡಿರುವಳೆಂದು ಅವರ ವಿಶ್ವಾಸವಿದೆ.

ವಾಸನೆಯಿಂದ ಹೆದರಿಕೆ ತಿಳಿಯ ಬಹುದು

'ವಾಸನೆಯಿಂದ ಮನುಷ್ಯನು ಹೆದರಿದ್ದಾನೆಂಬ ವಿಷಯ ತಿಳಕೊಳ್ಳಬಹುದು! ಈ ಮಾತು ವಿಚಿತ್ರವಾಗಿ ತೋರಬಹುದು. ಆದರೆ ಲಂಡನಿನ ಒಬ್ಬ ಮಾನಸ ಶಾಸ್ತ್ರಜ್ಞರು ಇದನ್ನು ಆಧಾರ ಕೊಟ್ಟು ಹೇಳುತ್ತಿದ್ದಾರೆ. ಮನುಷ್ಯರು ಇದನ್ನು ಕೆಲವು ಸಲ ಮಾತ್ರ ಪರಿಶೋಧಿಸಬಲ್ಲರು, ಆದರೆ ಪಶುಗಳು ಯಾವಾಗಲೂ ತಿಳಕೊಳ್ಳುತ್ತವೆಯೆಂದು ಅವರ ಅಭಿಪ್ರಾಯವಾಗಿದೆ.

ಶರೀರದಲ್ಲಿ ಮೂರು ಬೇರೆ ಬೇರೆ ನರವರ್ಗಗಳಿವೆ. ಒಂದು ವಿಚಾರ ಮತ್ತು ಚಲನವನ್ನು ಹೊಂದಿಕೊಂಡಿರುವುದು; ಎರಡನೆಯ ಎರಡು ಶರೀರದಲ್ಲಿ ನಮಗೆ ತಿಳಿಯದೆ ಆಗುವ ಬದಲಾವಣೆಗಳನ್ನು ಹೊಂದಿಕೊಂಡಿರುವುದು, ಶ್ವಾಸನೊದಲಾದುವುಗಳಿಗೆ ಸಹಕಾರಿಯಾದುದು. ಇವೆರಡೂ ಜೀವರಿನ ಇಂದ್ರಿಯಕ್ಕೆ ಸಂಬಂಧಿಸಿದ್ದು, ಶರೀರದಲ್ಲಿ ಕೋಪ ಇಲ್ಲವೇ ಭೀತಿ ಹುಟ್ಟುವಾಗ ಅವು ಪ್ರಕೋಪಗೊಳ್ಳುತ್ತವೆ. ಇದರಿಂದ ಬೆವರು ಹೊರಟು ಅದು ಆ ಮೂಲಕ ವಾಸನೆ ಹೊರಡುತ್ತದೆ. ಆ ವಾಸನೆಯಲ್ಲಿ ನಬೀಧದಿಂದ ಶರೀರದಲ್ಲಿ ಭೀತಿಯುಂಟಾಗಿದೆಯೆಂದು ತಿಳಕೊಳ್ಳಬಹುದಾಗಿದೆ.

ಒಂದು ನಾಯಿ, ಇನ್ನೊಂದು ನಾಯಿ ದೂರದಲ್ಲಿದ್ದರೂ ಅದನ್ನು ವಾಸನೆ ಮೂಲಕ ಗುರುತು ಹಚ್ಚುವ ವಿಧಾನವನ್ನು ನೀವು ಅನೇಕ ಸಲ ಕಂಡಿರಬಹುದು, ನಾಯಿ ಹಾಗೆ ವಾಸನೆ ತೆಗೆದುಕೊಳ್ಳಲು ಸುರುಮಾಡಿದಾಗ ನಮಗೆ ಆ ವಿಷಯವೇನೂ ತಿಳಿಯುತ್ತದಿಲ್ಲ, ಅದು ವಾಸನೆ ದೂರದಿಂದಲೇ ತೆಗೆದುಕೊಳ್ಳುತ್ತದೆ. ಕಳ್ಳರು, ಕೊಲೆಪಾತಕಿಗಳು, ಅವರು ಅಪರಾಧಿಗಳೋ ಅಲ್ಲವೋ ಎಂಬುದನ್ನು ಈ ರೀತಿ ಅವರ ವ್ಯಾಸನೆಯ ಮೂಲಕ ತಿಳಿಯಲು ಈ ಶೋಧನೆ ಸಹಾಯವಾಗಬಹುದು. ನಮ್ಮ ಶರೀರದ ಪ್ರಕೃತಿಯಲ್ಲಿ ವ್ಯತ್ಯಾಸವಾಗದೆ ನಾವು ಸುಳ್ಳು ಹೇಳುವುದಂತೂ ಸಾಧ್ಯವೇ ಇಲ್ಲ. ಆದರೆ ಮನುಷ್ಯರಿಗೆ ಪ್ರಾಣಿಗಳಷ್ಟು ಸೂಕ್ಷ್ಮ ವಾಸನೇಂದ್ರಿಯವಿಲ್ಲವಾಗಿದೆ.

ತೆಂಗಿನಕಾಯಿಯೊಳಗೆ ಮುತ್ತು

ಫ್ಲೋರಿಡಾದ ಬೊಟನಿಸ್ಟ್ ಡೇವಿಡ್ ಫೇರ್ ಚೈಲ್ಡ್ ಎಂಬವರು ಇತ್ತೀಚೆಗೆ ತೆಂಗಿನಕಾಯಿಯೊಳಗೆ ಶುಭ್ರ ಮುತ್ತು ಒಂದನ್ನು ಕಂಡಿರುವರೆಂದು ಪ್ರಸಿದ್ಧವಾಗಿದೆ. ಇದು ವಿಜ್ಞಾನಿಗಳಿಗೆ ಬಹಳ ವಿಚಿತ್ರವೆನಿಸಿದೆ. ತೆಂಗಿನಕಾಯಿಯೊಳಗಡೆಯಲ್ಲಿ ಯಾವುದೇ ರೂಪದ ರಸಾಯನಿಕ ಪ್ರಕ್ರಿಯೆಯುಂಟಾಗಿ ಈ ತರದ ರೂಪವನ್ನು ಹೊಂದುವುದೆಯೆಂದು ಅವರ ಊಹನೆಯಾಗಿದೆ.

ಹಿಟ್ಲರನ ಕುರಿತು ೭ನೇ ಶತಮಾನದ ಒಂದು ಭವಿಷ್ಯ!

ಏಳನೇ ಶತಮಾನದ ಫ್ರೆಂಚ್‌ರ್ಸನ್ ಸಿಡ ಸ್ಯಂಟ್ ಬಡಿಲಿಯಾಳು ಬರೆದ ಪತ್ರವನ್ನೆತ್ತಿ ರೆವರೆಂಡ್ ಜೆ. ಸಿ ನ್ಯಾಕ್ ಎಂಬವರು ಬರೆಯುತ್ತಾ ಹಿಟ್ಲರನ ಅಪಜಯವನ್ನು ಆಕೆ ತಿಳಿಸಿರುವಳೆಂದು ಈ ರೀತಿ ಹೇಳುತ್ತಾರೆ —

"ಜರ್ಮನಿ ಇದೀ ಪ್ರಪಂಚಕ್ಕೆ ಮಹಾ ಶತ್ರುರಾಷ್ಟ್ರವಾಗಿ ಪರಿಣಮಿಸಲಿದೆ. ಅಲ್ಲಿ ಒಬ್ಬ ಭಯಂಕರ ಯೋಧನು ಹುಟ್ಟುವನು ಆಕಾಶ, ನೆಲ, ಸಾಗರಗಳಲ್ಲಿ ಆತನು ಘೋರನಾಗಿರುವನು. ಆವನ ಜನರು ಉಗ್ರಮಹೋಗ್ರರಾಗುವರು, ಅವರು ನಕ್ಷತ್ರಲೋಕವನ್ನೂ ಆಕ್ರಮಿಸುವರು, ನಗರಗಳನ್ನು ಧ್ವಂಸಮಾಡುವರು, ಭಯಾನಕ ಬೆಂಕಿಯನ್ನು ಊದುವರು; ಕೊನೆಗೆ ಅವನು ಅಧಿಪತ್ಯಕ್ಕೆ ಒಳುವವನಾಗಿ, ಇಡೀ ಲೋಕವೇ ತನ್ನ ಕಾಲಕೆಳಗೆ ಬರುವಂತೆ ಆಜ್ಞಾಪಿಸುವನು, ಆದರೆ ಲೋಕವು ಅವನಿಗೆ ಶರಣಾಗಲೊಪ್ಪದು ಆ ಯೋಧನು ತನ್ನ ಹಿಂಬಾಲಿಕರ ವಿಶ್ವಾಸವನ್ನು ಕಳಕೊಳ್ಳುವನು, ಅವನ ರಾಷ್ಟ್ರಕ್ಕೆ ಆಕ್ರಮಣವಾಗುವುದು, ಅವನು ಕೊನೆಗೆ ನಿರ್ನಾಮನಾಗುವನು, ಹೀಗೆಂದು ಸ್ಯಂಟ್ ಒಡಿಲಿಯಾ ತನ್ನ ಸೋದರನಿಗೆ ಒಂದು ಪತ್ರ ಬರೆದಿದ್ದಳು

ಕಡಿಮೆ ಖರ್ಚು | ಮಂಗಳೂರಿನಿಂದ - ಬೆಂಗಳೂರು ತಿರುಪತಿ, ಮದರಾಸು. | ಅತಿ ತೀವ್ರ ಪ್ರಯಾಣ

ಬಸ್ಸ್ ಪ್ರಯಾಣವು

ಅತೀ ಸುಖಕರ! ನಿರಾಯಾಸಕರ!! ಮನೋಲ್ಲಾಸಕರವಾಗಿದೆ!!!

ಊರುಗಳ ಬದಲಾವಣೆ! ನೋಟಗಳ ಬದಲಾವಣೆ! ಜನತೆಯ ಸಂಪರ್ಕ ಆಯಾಸ ಅನುಕೂಲತೆಗಳು!

ಇವೆಲ್ಲವೂ ಬಸ್ಸ್ ಪ್ರಯಾಣದಲ್ಲಿವೆ

ಪ್ರಯಾಣಿಕರ ಹೆಚಿನ ಪ್ರೋತ್ಸಾಹದೊಡನೆ ಇನ್ನೂ ಹೆಚ್ಚಿನ ಸೌಕರ್ಯಗಳನ್ನು ಒದಗಿಸುವೆವು.

JOINT MANAGERS;

The Combined Booking Agency, MANGALORE.

The Joint Booking Office, KODIALBAIL.

Regd. No. M 3460
29—5—1943

(Regd)

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಹುಳುಕಡ್ಡಿ ಮದ್ದು

ಜ್ವರ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪ್ಪೋ. ಬೊಂಬ್ಯಾ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಸಂಶಯವೇಕೆ?

ಶತ್ರುಗಳು ವಿಮಾನಗಳ ಮೂಲಕ ಧಾಳಿ ನಡೆಸುವುದರಿಂದಲೂ ಮತ್ತು ಇತರ ವಿಧವಾದ ಶತ್ರು ಚಟುವಟಿಕೆಗಳಿಂದಲೂ ಹಿಂದುಸ್ಥಾನದ ಸಿವಿಲ್ ಪ್ರಜೆಗಳಲ್ಲಿ—ಇದರಲ್ಲಿ ಎ. ಆರ್. ಪಿ. ಕೆಲಸಗಾರರೂ ಸೇರುವರು—ಉಂಟಾಗಬಹುದಾದ ಪ್ರಾಣಹಾನಿಗೆ

ದಿ "ಬಾಂಬೆ ಲೈಫ್" ಪಾಲಿಸಿಗಳು

ಸಂಪೂರ್ಣವಾದ ರಕ್ಷಣೆಯನ್ನು ನೀಡುತ್ತವೆ. ಆದ್ದರಿಂದ ನಿಮ್ಮ ಪ್ರೀತಿಪಾತ್ರರಿಗಾಗಿ

ದಿ ಬಾಂಬೆ ಲೈಫ್ ಅಷ್ಯೂರೆನ್ಸ್ ಕಂಪೆನಿ (ಲಿಮಿಟೆಡ್)

ಯಲ್ಲಿ ಪಾಲಿಸಿಗಳನ್ನು ಪಡೆಯುವುದು ನಿಮ್ಮ ತ್ವರಿತ ಕರ್ತವ್ಯವಾಗಿದೆ

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಸಂಸ್ಥಾನಗಳಾದಿಯಾಗಿ ದಕ್ಷಿಣ ಭಾರತಕ್ಕೆ ಪ್ರಾಮುಖ್ಯ ಏಜೆಂಟರು:

ಉಡುಪಿ

—: ಅಥವಾ ಈ ಕೆಳಗಿನ ಇತರ ಆಫೀಸುಗಳಿಗೆ ಬರೆಯಿರಿ :

ಕಲ್ಲಿಕೋಟೆ | ಬೆಂಗಳೂರು | ಮಂಗಳೂರು
ಮದರಾಸು | ತ್ರಿವೇಂಡ್ರಂ | ಬೊಂಬಾಯಿ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.

ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Bhuvanendra Products Limited,

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitual abortion and other uterine troubles. Must be commensed soon after conception and continued up to the time of delivery.

"ಭುವನೇಂದ್ರ ಗರ್ಭಪಾಲ"

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವವಿಧದ ದೋಷಗಳನ್ನು ಗುಣಪಡಿಸುವ ದಿವ್ಯಔಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವಕಾಲದ ವರೆಗೆ ಸೇವಿಸುವುದು ಅತ್ಯುತ್ತಮ

ಸ್ಥಳೀಯ ಸ್ಟಾಕಿಸ್ಟ್ ವ ಏಜೆಂಟರು:—

(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘವೇಂದ್ರ ಸ್ಟೋ ರಥಬೀದಿ. (3) ದಿ ಕರ್ನಾಟಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ| ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಡಿಪೊ—1. ಮರಾಠ ಗಲ್ಲಿ ಹುಬ್ಬಳ್ಳಿ.
2. 36 ಫ್ಲಾಕ್ರೋಫ್ಟ್ಸ್ ರೋಡ್, ಟ್ರಿಪ್ಲಿಕೇನ್, ಮದರಾಸು.

Edited Printed & Published by the A. S. Kamath at Sharada Press, Car Street, Mangalore.

ESTD. SWADESHABHIMANI 1906

[ಸಂಪುಟ 36] ತಾರೀಕು 5—6—1942 [ಸಂಚಿಕೆ 23]

ಮದ್ರಾಸು ಸರಕಾರದ ಟೆಕ್ಸ್ಟ್ ಬುಕ್ ಕಮಿಟಿಯಿಂದ ಮಂಜೂರಾತಿ ಹೊಂದಿದ

ಶಾಲಾ ಪಠ್ಯ ಪುಸ್ತಕಗಳು

ಮದ್ರಾಸು ಫೋರ್ಟ್ ಸೈಂಟ್ ಜೋರ್ಜ್ ಗಜೇಟು ನಂಬ್ರ 22 A. Part I & Part II (2--6--1942)

ಮಾಧ್ಯಮಿಕ ಶಾಲಾ ಲಘುಗಣಿತ

ಮಾಧ್ಯಮಿಕ ಶಾಲೆಗಳಲ್ಲಿ 1942ನೇ ಜೂನ್ ತಿಂಗಳಿಂದ ಅನುಸರಿಸಬೇಕಾದ ಸರಕಾರದ ಹೊಸ ಪಾಠಪಟ್ಟಿಗನುಸಾರವಾಗಿ ಬರೆಯಲ್ಪಟ್ಟದ್ದು

ಎಂ ಪಿ. ದೇವರಾವ್, ಬಿ ಎ ಎಲ್ ಟಿ ಬೋರ್ಡ್ ಹೈಸ್ಕೂಲ್, ಉಡ್ಪಿ

		ಗಜೇಟು ಪುಟ Part II
Iನೇ ಫೋರ್ಮಿಗೆ	0—12—0	75
IIನೇ ಫೋರ್ಮಿಗೆ	0—12—0	75

ಎಂ ಪಿ ದೇವರಾವ್ ಬಿ ಎ ಎಲ್ ಟಿ ಮತ್ತು ಬಿ ಭವಾನಿರಾವ್ ಬಿ ಎ ಎಲ್ ಟಿ

IIIನೇ ಫೋರ್ಮಿಗೆ 0—12—0 ಗಜೇಟು ಪುಟ 75

ಬಾಲಕರ ಲಘುಗಣಿತ

ಸೆಕೆಂಡರಿ ಶಾಲೆಗಳಿಗೂ ಮಂಜೂರಾತಿ ಹೊಂದಿದೆ

ಬಿ ಭವಾನಿರಾವ್, ಬಿ ಎ, ಎಲ್ ಟಿ

ಸೈಂಟ್ ಏನ್ಸ್ ಹೈಸ್ಕೂಲ್, ಮಂಗಳೂರು

		ಗಜೇಟು ಪುಟ Part I	II
ನಾಲ್ಕನೇ ದರ್ಜೆಗೆ	0—7—0	61	75
ಐದನೇ ದರ್ಜೆಗೆ	0—8—0	61	75

ನವೀನ ಭೂವಿವರಣೆ

ಎಂ ವಾಸುದೇವರಾವ್ ಎಂ ಎ, ಎಲ್ ಟಿ. (Dip Geog)

ಗಣಪತಿ ಹೈಸ್ಕೂಲ್, ಮಂಗಳೂರು

		ಗಜೇಟು ಪುಟ Part I
ನಾಲ್ಕನೇ ದರ್ಜೆಗೆ	0—6—0	50
ಐದನೇ ದರ್ಜೆಗೆ	0—7—0	50

ಪ್ರಾಥಮಿಕ ಲಘುವಿಜ್ಞಾನ

ಎಸ್. ರಾಮಕೃಷ್ಣಾಚಾರ್, ಬಿ. ಎ. ಎಲ್. ಟಿ

ಬೋರ್ಡ್ ಹೈಸ್ಕೂಲ್, ಕಾರ್ಕಳ.

		ಗಜೇಟು ಪುಟ Part I
ಆರನೇ ದರ್ಜೆಗೆ	0—6—0	69
ಏಳನೇ ದರ್ಜೆಗೆ	0—6—0	69
ಎಂಟನೇ ದರ್ಜೆಗೆ	0—6—0	68

ವ್ಯಾಕರಣ ಮತ್ತು ಪ್ರಬಂಧ

ಸೆಕೆಂಡರಿ ಶಾಲೆಗಳಿಗೂ ಮಂಜೂರಾತಿ ಹೊಂದಿದೆ

ಕೆ. ಕೆ. ಕೈ. ವಿದ್ವಾನ್

		ಗಜೇಟು ಪುಟ Part I	II
4 ಮತ್ತು 5ನೇ ದರ್ಜೆಗೆ	0—2—0	112	140
ಆರನೇ ದರ್ಜೆಗೆ ಅಥವಾ I ಫೋರ್ಮಿಗೆ	0—3—0	113	140
ಏಳನೇ ದರ್ಜೆಗೆ ಅಥವಾ II ಫೋರ್ಮಿಗೆ	0—3—6	113	140
ಎಂಟನೇ ದರ್ಜೆಗೆ ಅಥವಾ III ಫೋರ್ಮಿಗೆ	0—4—0	113	140

ಮಕ್ಕಳ ಪದ್ಯಮಂಜರಿ

ಕೆ ಕೆ ಕೈ ವಿದ್ವಾನ್

		ಗಜೇಟು ಪುಟ Part I
ಮೊದಲನೆಯ ಪುಸ್ತಕ ೧ ೨, ೩ನೇ ದರ್ಜೆಗಳಿಗೆ	0-2-0	111
ಎರಡನೆಯ ಪುಸ್ತಕ ೪ ಮತ್ತು ೫ನೇ ದರ್ಜೆಗಳಿಗೆ	0-2-6	111

ಸಿವಿಕ್ಸ್

ಎಂ ಗಣಪತಿರಾವ್ ಐಗಳ್

		ಗಜೇಟು ಪುಟ Part I
ಮೂರನೇ ದರ್ಜೆಗೆ	0—1—6	41
ನಾಲ್ಕನೇ ದರ್ಜೆಗೆ	0—2—0	41
ಐದನೇ ದರ್ಜೆಗೆ	0—2—6	41

ಎಂ ಗಣಪತಿರಾವ್ ಐಗಳ್ ಮತ್ತು ಕೆ ಕೆ ಕೈ ವಿದ್ವಾನ್

ಆರನೇ ದರ್ಜೆಗೆ	0—3—0	42
ಏಳನೇ ದರ್ಜೆಗೆ	0—3—0	42
ಎಂಟನೇ ದರ್ಜೆಗೆ	0—3—0	42

ಚರಿತ್ರೆ ಮತ್ತು ಕಥೆಗಳು

		ಗಜೇಟು ಪುಟ Part I
ಮೂರನೇ ದರ್ಜೆಗೆ	0—2—6	
ನಾಲ್ಕನೇ ದರ್ಜೆಗೆ	0—3—0	54

ನವೀನ ಪ್ರಕೃತಿಶಾಸ್ತ್ರ ಮತ್ತು ತೋಟಗಾರಿಕೆ

ಎಂ ವಾಸುದೇವರಾವ್, ಎಂ ಎ ಎಲ್ ಟಿ

ಗಣಪತಿ ಹೈಸ್ಕೂಲ್, ಮಂಗಳೂರು

	ಕ್ಲಾಸ್ ಲೈಬ್ರೆರಿ	ಗಜೇಟು ಪುಟ
ನಾಲ್ಕನೇ ದರ್ಜೆಗೆ	0—3—0	72
ಐದನೇ ದರ್ಜೆಗೆ	0—3—6	72

ಐದನೇ ದರ್ಜೆಯ ಚರಿತ್ರೆ ಮತ್ತು ಕಥೆಗಳು 0—3—6

ಪ್ರಕೃತಿಶಾಸ್ತ್ರ

ಎಂ. ಗಣಪತಿರಾವ್ ಐಗಳ್

ಮೂರನೇ ದರ್ಜೆಗೆ 0—1—6

ಬೇಗನೇ ಪ್ರಕಟವಾಗಲಿವೆ

ನವೀನ ಭೂವಿವರ

ಎಮ್. ವಾಸುದೇವರಾವ್, ಎಂ. ಎ. ಎಲ್. ಟಿ. (Dip. Geog)

II ಮತ್ತು III ತರಗತಿಗಳಿಗೆ

ಶಾರದಾ ಛಾಪಖಾನೆ ರಥಬೀದಿ, ಮಂಗಳೂರು.

KANNADA ILLUSTRATED WEEKLY

REEL-19

SWADESHABHIMANI

CONTD FROM:

24, JANUARY-1941

TO

29, MAY 1942

D.V.
2.4.80

CONTD. IN NEXT REEL

MICROFILMED BY
NEHRU MEMORIAL MUSEUM AND LIBRARY
TEEN MURTI HOUSE
NEW DELHI